ರೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೨—೧—೪೭ [ಸಂಚಿಕೆ ೧೨೫

ಜವಾಬ್ದಾರಿ ಸರ್ಕಾರಕ್ಕೆ ಪ್ರಭುಗಳಲ್ಲಿ ಕಾಂ॥ ಮೊರೆ

ಪ್ರತಿಬಂಧಕಾಜ್ಞೆ

ಮೈಸೂರು ೨

ರಾಜಧಾನಿಯ ಪುರಸಭೆಯ ಎಲ್ಲೆಯೊಳಗೆ ಇನ್ನೆಯಿಂದ ೬ ತಿಂಗಳ ಕಾಲ ಯಾರೇ ಆಗಲಿ ಪೂರ್ವಭಾವಿ ಅನುಮತಿಯನ್ನು ಪಡೆಯದೆ ಸಭೆ, ಮೆರವಣಿಗೆ ಮುಂತಾದ್ದುವುಗಳನ್ನು ನಡೆಸಕೂಡದು ರಸ್ತೆಗಳಲ್ಲಿ ಸಂಗೀತವನ್ನೂ, ತಮಟೆ, ಟಾಂಟಾಂ, ಲೌಡ್ ಸ್ಪೀಕರ್ ಮತ್ತು ಇತರ ಯಾವುದೇ ವಾದ್ಯಗಳಿಂದಲೂ ಶಬ್ದವನ್ನು ಮಾಡಕೂಡದು—ಎಂಬುದಾಗಿ ಸೂಚಿಸಿ ಮೈಸೂರಿನ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ರಣಜೋಧಸಿಂಗ್‌ರವರು ಒಂದು ಆಜ್ಞೆಯನ್ನು ಹೊರಡಿಸಿರುತ್ತಾರೆ. ಇದು ಮದುವೆ ಮತ್ತು ಶವಗಳ ಮೆರವಣಿಗೆಗಳಿಗೆ ಅನ್ವಯಿಸುವುದಿಲ್ಲ.

ಪುರಂದರ ದಾಸರ ಕೀರ್ತನಾ ಸ್ಪರ್ಧೆ

ಮೈಸೂರು ಶ್ರೀ ತ್ಯಾಗರಾಜ ಸಂಗೀತ ವಿದ್ವತ್ಸಭೆಯ ಆಶ್ರಯದಲ್ಲಿ ೨೨-೧-೪೭ ನೇ ಬುಧವಾರ ಚಾಮರಾಜ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ಶ್ರೀ ಪುರಂದರ ದಾಸರ ಪುಣ್ಯ ದಿನವನ್ನು ಆಚರಿಸಲಾಗುತ್ತದೆ ಇದರ ಅಂಗವಾಗಿ ಶ್ರೀ ದಾಸರ ಕೀರ್ತನೆಗಳನ್ನು ಹಾಡುವ ಸ್ಪರ್ಧೆಯನ್ನು ೧೬ ವರ್ಷಕ್ಕೆ ಮೇಲ್ಪಟ್ಟ ಬಾಲಕಿಯರಿಗಾಗಿ ಜನವರಿ ೧೨ ನೇ ತಾರೀಖು ಬೆಳಗ್ಗೆ ೯ ರಿಂದ ೧೨ ರ ವರೆಗೆ ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವವರು ೧೦ ನೇ ತಾ॥ ನೊಳಗೆ ಎಂಟಾಣೆ ಪ್ರವೇಶಧನದೊಂದಿಗೆ ಕೃಷ್ಣಮೂರ್ತಿಪುರದಲ್ಲಿರುವ ಆ॥ ವಿ॥ ಗಾನವಿಹಾರದ ಶೆಟ್ಟಿ ಕೃಷ್ಣಯ್ಯಂಗಾರ್ಯರವರಿಗೆ ಕಳುಹಿಸಿಕೊಡಬೇಕಾಗಿ ಕೋರಲಾಗಿದೆ

ಕ್ಯಾಲೆಂಡರ್ ಸ್ವೀಕಾರ

ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿಯವರು ವಿಶ್ವಾಸದಿಂದ ಕಳುಹಿಸಿಕೊಟ್ಟಿರುವ ಹೊಸ ವರ್ಷದ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ ಸದರಿ ಕಂಪನಿಯ ಪೇರು ಹೋಲ್ಡರುಗಳು ಕ್ಯಾಲೆಂಡರನ್ನು ಆಫೀಸಿನಿಂದ ಪಡೆಯಬಹುದೆಂದು ಸೂಚಿಸಲಾಗಿದೆ.

ಹರಿಕಥೆ

ಮೈಸೂರು ಚಲುವಾಂಬಾ ಅಗ್ರಹಾರದ ಭಜನಾಗೃಹದಲ್ಲಿನ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದ ಕೀರ್ತನ ಸಮಾಜದ ಆಶ್ರಯದಲ್ಲಿ ನಾಳೆ ವೈಕುಂಠ ಏಕಾದಶಿ ಪ್ರಯುಕ್ತ ರಾತ್ರಿ ೮ ಗಂಟೆಗೆ ಶ್ರೀ ಎಸ್. ಸ್ವಾಮಿಯ್ಯಂಗಾರ್ಯರವರಿಂದ "ಭದ್ರಾಚಲ ರಾಮದಾಸ್" ಎಂಬ ಹರಿಕಥೆಯು ನಡೆಯುವುದು

ಟೆಂಡರ್ ನೋಟೀಸು

ಮೈಸೂರು ಅರಮನೆಗೆ ಬೇಕಾದ ಸುಮಾರು ಮೂರು ಸಾವಿರದ ಮೂರು ನೂರು ಕಿಲ್ಲಾ ಕುರುಳಿಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳನ್ನು ಈ ಕೆಳಗೆ ರುಜುಮಾಡಿರುವವರಲ್ಲಿ ೧೧-೧-೧೯೪೭ ನೇ ಶನಿವಾರ ತೆಗೆದುಕೊಳ್ಳುವುದು.

ನೋಟೀಸಿನ ಮುಖೇನ ಹೆಚ್ಚಿನ ವಿಷಯಗಳನ್ನು ತಿಳಿದುಕೊಳ್ಳಬಹುದು

ಟಿ. ರಾಮಯ್ಯ,
ಹುಜೂರು ಸೆಕ್ರೆಟರಿಯವರು.

ಮೈಸೂರು,
೩೧-೧೨-೪೬

ಜವಾಬ್ದಾರಿ ಸರ್ಕಾರದ ಮೂಲಭೂತ ತತ್ವಗಳು

ಮೂಲಭೂತ ಹಕ್ಕುಬಾಧ್ಯತೆಗಳು ಮತ್ತು ಫೆಡರಲ್ ನ್ಯಾಯಾಸ್ಥಾನಕ್ಕೆ ಸಂಬಂಧಿಸಿದಂತೆ ಸ್ವತಂತ್ರವಾಗಿರುವ ನ್ಯಾಯಾಂಗದಿಂದ ಅವುಗಳ ರಕ್ಷಣೆ; ವಯಸ್ಕರಿಗೆಲ್ಲಾ ಮತದಾನ, ಹರಿಜನರು, ಹೆಂಗಸರು, ಕೂಲಿಗಾರರು ಮತ್ತು ಅಲ್ಪ ಸಂಖ್ಯಾತರಿಗೆ ಸ್ಥಾನಗಳನ್ನು ಮೀಸಲಾಗಿರಿಸಿ, ಸಂಯುಕ್ತ ಚುನಾವಣಾ ಪದ್ಧತಿ, ಪೂರ್ಣ ಚುನಾಯಿತರಿರುವ ಶಾಸನ ಸಭೆ, ಅದಕ್ಕೆ ಜವಾಬ್ದಾರರಾದ ಮಂತ್ರಿಗಳು, ಸ್ವತಂತ್ರವಾದ ಆಡಿಟ್, ಸಂಸ್ಥಾನಾಧೀಶರಿಗೆ ನಿಯಮಿತ ರಾಜ ಸಂಭಾವನೆ. ಈ ರಾಜ ಸಂಭಾವನೆಯು ಪ್ರಾಂತ್ಯದ ಗವರ್ನರುಗಳ ಅಥವಾ ಭಾರತದ ಅಧ್ಯಕ್ಷರ ಸಂಬಳಕ್ಕಿಂತ ಹೆಚ್ಚಾಗಿರಬಾರದು ಅಥವಾ ಸಂಸ್ಥಾನದ ಆದಾಯದಲ್ಲಿ ಶೇಕಡ ೫ರಂತೆ ಲೆಖ್ಖಾಚಾರ ಯಾವುದು ಕಡಿಮೆಯೋ ಅದನ್ನು ಕೊಡುವುದು ಎಂಬ ೧೦ ಅಂಶಗಳನ್ನೊಳಗೊಂಡ ಜವಾಬ್ದಾರಿ ಸರ್ಕಾರದ ಆಧಾರ ರೂಪವಾದ ರಾಜ್ಯಾಂಗ ಪದ್ಧತಿಯು ಸಂಸ್ಥಾನಗಳಲ್ಲಿ ಸ್ಥಾಪನೆಯಾಗಬೇಕೆಂದು ಸಂಸ್ಥಾನ ಪ್ರಜೆಗಳ ಸಮ್ಮೇಳನದ ನಿಪುಣರ ಸಮಿತಿಯವರು ವರದಿಯಲ್ಲಿ ಸೂಚಿಸಿದ್ದಾರೆ

ರಾಜ ಮಹಾರಾಜರುಗಳಲ್ಲಿ ಅಲ್ಲಾಡಿಯವರ ಪ್ರಾರ್ಥನೆ

ಸಂಸ್ಥಾನಾಧೀಶರುಗಳು ರಾಜ್ಯಾಂಗ ಸಭೆಯಲ್ಲಿರುವ ರಾಷ್ಟ್ರೀಯ ಶಕ್ತಿಗಳೊಡನೆ ಸಹಕರಿಸಬೇಕು; ಹಳೆಯ ರಾಜಕೀಯ ಸೂತ್ರಗಳನ್ನು ಆಧಾರವಾಗಿಟ್ಟುಕೊಂಡು ತಮ್ಮ ಸ್ಥಾನಗಳನ್ನು ಉಳಿಸಿಕೊಂಡು ಬರಲು ಪ್ರಯತ್ನಿಸಬಾರದು, ಮಹಾರಾಜರುಗಳು ಸ್ವಾತಂತ್ರ್ಯ ಹೋರಾಟದಲ್ಲಿ ಸೇರಿ ಸ್ವತಂತ್ರ ಭಾರತದ ರಚನೆಯಲ್ಲಿ ಪೂರ್ಣವಾಗಿ ಭಾಗವಹಿಸಬೇಕು—ಎಂಬುದಾಗಿ ರಾಜ್ಯಾಂಗ ಸಭಾಸದಸ್ಯರಾದ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ವರು ಪ್ರಾರ್ಥನೆಯೊಂದನ್ನು ಹೊರಡಿಸಿದ್ದಾರೆ.

ವಾರ್ಷಿಕೋತ್ಸವ

ಶ್ರೀ ವರಲಕ್ಷ್ಮಿ ಸಂಗೀತ ವಿದ್ಯಾ ಮಂದಿರದ ಪ್ರಥಮ ವಾರ್ಷಿಕೋತ್ಸವವು ರಾಜಧಾನಿಯ ಸಹಕಾರ ಭವನದಲ್ಲಿ ನಾಳಿದ್ದು ಸಂಜೆ ೬ ಗಂಟೆಗೆ ಶ್ರೀ ರಾಮಚಂದ್ರರಾವ್ ಬೊಂಡೋರೆಯವರ ಅಧ್ಯಕ್ಷತೆಯಲ್ಲಿ ಜರುಗುವುದು.

ಪ್ಯಾರಮೌಂಟ್ಸಿಯು ಇರುವವರೆಗೆ ಜವಾಬ್ದಾರಿ ಸರ್ಕಾರವಿಲ್ಲ

ಪ್ಯಾರಮೌಂಟ್ಸಿಯು ತೊಲಗಿ ಹೋದ ಮೇಲೆ ಮತ್ತು ಸ್ವತಂತ್ರ ಭಾರತಕ್ಕಾಗಿ ರಾಜ್ಯಾಂಗ ರಚನೆಯಾದ ಮೇಲೆ ಸಂಸ್ಥಾನಗಳೆಲ್ಲಾ ಪೂರ್ಣ ಸ್ವತಂತ್ರವಾಗುವುವು. ಎಂಬುದಾಗಿ ಬರೋಡಾ ದಿವಾನರಾದ ಸರ್ ಬಿ ಎಲ್ ಮಿತ್ರ್‌ರವರು ತಿಳಿಸಿದ್ದಾರೆ. ಪ್ಯಾರಮೌಂಟ್ಸಿ ಇರುವವರೆಗೆ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರವೀಯುವುದು ಅಸಾಧ್ಯವೆಂದೂ ಅವರು ಹೇಳಿದ್ದಾರೆ.

ದಿವಂಗತ ಆರ್. ವಿ. ಭದ್ರಣ್ಣನವರು

ದೊಡ್ಡಬಳ್ಳಾಪುರದಲ್ಲಿ ಮೆರವಣಿಗೆಯ ದೃಶ್ಯ

ಹೊಸ ವರ್ಷದ ಬಿರುದುಗಳಿಲ್ಲ

ಈ ಸಾರಿನ ಬಿರುದು ಬಾವಲಿಗಳ ಪಟ್ಟಿಯಲ್ಲಿ ಬ್ರಿಟಿಷ್ ಇಂಡಿಯಾದ ಪ್ರಜೆಗಳೊಬ್ಬರ ಹೆಸರೂ ಇಲ್ಲ. ಈ ಬಗ್ಗೆ ಸರ್ಕಾರವು ಪ್ರಕಟಣೆಯೊಂದನ್ನು ಹೊರಡಿಸಿದ್ದಾರೆ ಭಾರತದ ರಾಜಕೀಯ ಪಕ್ಷಗಳ ಅಭಿಮತದಿಂದ ಬ್ರಿ॥ ಇಂಡಿಯಾ ಪ್ರಜೆಗಳಿಗೆ ಪ್ರಶಸ್ತಿಗಳನ್ನು ಕೊಡಲು ಸಾರ್ವಭೌಮರಿಗೆ ಹೆಸರನ್ನು ಸೂಚಿಸುವುದು ಬೇಡವೆಂದು ನಿರ್ಧರಿಸಲಾಯಿತು. ಆದರೆ ಸಿವಿಲ್ ಮತ್ತು ಪೋಲೀಸ್ ಅಧಿಕಾರಿಗಳಿಗೆ ಪದಕಗಳನ್ನು ಸಂಸ್ಥಾನಗಳವರಿಗೆ ಬಿರುದುಗಳನ್ನು ಕೊಡಲಾಗುವುದು ಎಂದು ತಿಳಿಸಿದ್ದಾರೆ

ಶ್ರೀಮನ್ಮಹಾರಾಜರಲ್ಲಿ ಕಾಂ॥ ಮನವಿ

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಧಾರ

ಸ್ವಂ ಸು ಪ್ರೋ] ಬೆಂಗಳೂರು ೨

ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವಂತೆ ಶ್ರೀಮನ್ಮಹಾರಾಜರಲ್ಲಿ ಮನವಿ ಮಾಡಿಕೊಳ್ಳಬೇಕೆಂದು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿನ್ನೆ ದಿನ ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತೀರ್ಮಾನಿಸಿತು. ಈ ಬಗ್ಗೆ ಪ್ರಭುಗಳಿಗೆ ಮನವಿಯ ಪತ್ರವನ್ನು ಅರ್ಪಿಸಬೇಕೆಂದೂ ನಿರ್ಧರಿಸಲಾಗಿದೆ

ಪಾರ್ಲಿಮೆಂಟರಿ ಸಮಿತಿ

ಮೈಸೂರು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ಈರೀತಿ ಪುನರ್ರಚಿತವಾಗಿದೆ— ಶ್ರೀಗಳಾದ ಹೆಚ್ ಸಿದ್ದಯ್ಯ, ಕೆ ಟಿ ಭಾಷ್ಯಂ, ಎಸ್ ಚನ್ನಯ್ಯ, ಟಿ ಸಿದ್ದಲಿಂಗಯ್ಯ ಮತ್ತು ಎ ಜಿ. ರಾಮಚಂದ್ರರಾವ್ (ಸಂಚಾಲಕರು)

ಗೋಪಾಲಯ್ಯರ ಪ್ರಕರಣದ ಪ್ರತಿಧ್ವನಿ

ಧರ್ಮ ರಕ್ಷಾಕರ ಶ್ರೀ ಬಿ ಎ ಗೋಪಾಲಯ್ಯರನ್ನು ದರೋಡೆ ಮಾಡಿದರೆಂದು ಆಪಾದಿತರಾಗಿರುವ ಮಂಡಿಪ ಪೋಲೀಸ್ ಅ॥ ಕಮೀಷನರಾದ ಶ್ರೀ ಸರ್ವೋತ್ತಮರಾವ್ ಮತ್ತು ಇಬ್ಬರು ಪೇದೆ ಹಾಕಿರುವ ಮೊಕದ್ದಮೆಯು ಈ ದಿನ ನಗರ ನ್ಯಾಯಾಧೀಶರ ಮುಂದೆ ಬಂದು, ಜನವರಿ ೯ಕ್ಕೆ ಮುಂದೂಡಲಾಯಿತು

ಬಕೆಟ್ ಸ್ಟಾಪ್ ನಡೆಸಿದ್ದಕ್ಕೆ ಜುಲ್ಮಾನೆ

ಮೈಸೂರು ೨

ಜಾನಿಸೇಟ್ ಮಂಡಿಪೇಟೆಯ ಮೆಂಡಿಲಸ್ಸರ್ ಹೋಟೆಲಿನಲ್ಲಿ ಒಕೆಟ್ ಷಾಪ್ ನಡೆಸಿದರೆಂದು ನಗರದ ೨ ನೇ ಮ್ಯಾಜಿಸ್ಟ್ರೇಟರು ಅವರಿಗೆ ಹತ್ತಾರು ೬೦ ರೂಪಾಯಿ ಜುಲ್ಮಾನೆ ತಪ್ಪಿದರೆ ೧೫ ದಿನಗಳ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದ್ದಾರೆ ಅಲ್ಲದೆ ಜಾನಿಸೇಟ್ ಎಂಬುವನು ಮನೆ ಕೊಟ್ಟಿದ್ದರಿಂದ ಅವನಿಗೆ ೭೫ ರೂ ಜುಲ್ಮಾನೆ ತಪ್ಪಿದರೆ ೧೫ ದಿನಗಳು ಸಾದಾ ಸಜಾವನ್ನು ವಿಧಿಸಿದ್ದಾರೆ

ಮಂತ್ರಿಗಳ ಭೇಟಿ

ಆಹಾರ ಮಂತ್ರಿಗಳಾದ ಶ್ರೀ॥ ಒ. ಎಚ್. ಎ ಸಂಗಪ್ಪನವರು ನಿನ್ನೆ ನಗರದ ಹಲವು ಪಡಿತರ ಅಂಗಡಿಗಳಿಗೆ ಭೇಟಿ ಕೊಟ್ಟು ಸೂಲು ಮತ್ತು ಬಟ್ಟೆ, ಸರಬರಾಜಿನ ವಿಷಯ ಸಮಾಲೋಚನೆ ನಡೆಸಿದರು ಪೌರ ಸರಬರಾಜು ಸ್ವಂತ ಶ್ರೀ ಕೆ ಟಿ ಸುಬ್ಬಣ್ಣನವರು ಅಂಗಡಿಗಳ ಭೇಟಿಯಲ್ಲಿ ಎ ಡಿ ಪಟ್ಟಿ ತಯಾರಿ ವಿಷಯದಲ್ಲಿ ಸಮಾನವ ವಿಶೇಷ ಆಸಕ್ತಿಯನ್ನು ವ್ಯಕ್ತಪಡಿಸಿ ಸೂಚನೆಗಳನ್ನೂ ಕೊಟ್ಟರು ಸೀಮೆಎಣ್ಣೆಯವರಿಗೂ ಬೇಕಾದ ಪಡಿತರವನ್ನು ನೀಡ ಬಹುದಾಗಿ ಭರವಸೆಯಿತ್ತರು.

ಹರಿಕಥೆಗಳು

೨ ತಿಪರಾಂಪೇಟೆ ಶ್ರೀ ವಿಠ್ಠಲರಾಮ ಮಂದಿರದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಶ್ರೀ ವೆಂಕಟಸುಬ್ಬಾದಾಸರವರು ಶ್ರೀ ರಾಘವೇಂದ್ರ ಗುರುಗಳ ಚರಿತ್ರೆಯನ್ನು ಹರಿಕಥಾ ರೂಪದಲ್ಲಿ ನಡೆಸುತ್ತಾರೆ

* ಅರಮನೆ ಉತ್ತರ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರೀ ಟಿ. ಕೆ. ವೇಣುಗೋಪಾಲದಾಸರಿಂದ ನಾಳೆ ರಾತ್ರಿ ೮ ಘಂಟೆಗೆ 'ಭಕ್ತ ಸಭಾಮ' ಮತ್ತು ನಾಳಿದ್ದು ರಾತ್ರಿ 'ಸತಿ ಸಾವಿತ್ರಿ' ಎಂಬ ಹರಿಕಥೆಗಳು ನಡೆಯುತ್ತವೆ

ಸಾಧ್ವಿ

ತಾ॥ ೨-೧-೪೭ ಗುರುವಾರ

ಇನ್ನೂ ಪ್ರತಿಬಂಧಕಾಜ್ಞೆಗಳೇ

ಚನ್ನಪಟ್ಟಣದ ಘಟನೆಯು ನಡೆದ ಮೇಲೆ ಅಲ್ಲಲ್ಲಿ ಸಾರ್ವಜನಿಕ ಶಾಂತಿಗೆ ಭಂಗ ಬರಬಹುದೆಂಬ ಶಂಕೆಯಿಂದ ಸಭೆ, ಮೆರವಣಿಗೆಗಳಿಗೆ ಅಡ್ಡಿಯನ್ನು ಹಾಕಲಾಯಿತಷ್ಟೆ. ಸ್ವಲ್ಪ ಹೆಚ್ಚು ಕಡಿಮೆ ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಈಗ ಈ ಬಗೆಯ ನಿರ್ಬಂಧಗಳು ಹಾಕಲ್ಪಟ್ಟಿವೆ. ರಾಜಧಾನಿಯಾದ ಈ ನಗರದಲ್ಲಿ ಮೊದಲು ಹಾಕಿದ್ದ ಪ್ರತಿಬಂಧಕವು ಮೊನ್ನೆಗೆ ಮುಕ್ತಾಯವಾದುದರಿಂದ ಅದನ್ನೇ ಬೇರೆ ಶಾಸನದ ಪ್ರಕಾರ ಮತ್ತೆ ಮೂರು ತಿಂಗಳವರೆಗೆ ಹೆಚ್ಚಿಸಲಾಗಿದೆ.

ಸಾರ್ವತ್ರಿಕವಾಗಿ ಇಡೀ ಸಂಸ್ಥಾನದಲ್ಲೆಲ್ಲಾ ಸರ್ವತೋಮುಖವಾದ ಇಂತಹ ಅಡ್ಡಿಯನ್ನು ಹಾಕುವ ಅಗತ್ಯವು ಇದೆಯೇ ಎಂದು ಪ್ರಶ್ನಿಸುವ ಕಾಲವು ಬಂದಿರುತ್ತದೆ. ಚನ್ನಪಟ್ಟಣದ ಗಲಭೆಗಳು ಅತ್ಯಂತ ವಿಷಾದಕರವಾದುವೇನೋ ಸರಿ. ಅದರಂತೆ ಘಟನೆಗಳು ಬೇರೆ ಕಡೆಗಳಲ್ಲಿ ನಡೆಯುವಂತೆ ಎಚ್ಚರಿಕೆಯಿಂದ ಇರುವುದೂ ಸರಿ. ಆದರೆ ಇಡೀ ಸಂಸ್ಥಾನವೆಲ್ಲಾ ಅಶಾಂತಿ ಮತ್ತು ಅನರ್ಥಗಳ ಅಗ್ನಿಪರ್ವತದ ಮೇಲೆ ಕುಳಿತಿರುವುದೆಂದು ಭಾವಿಸಲು ಲೇಶ ಮಾತ್ರವೂ ಕಾರಣವಿಲ್ಲ. ನಮ್ಮ ಸಂಸ್ಥಾನದಲ್ಲಿ ಅನೇಕ ವರ್ಷಗಳಿಂದಲೂ ಕೋಮುವಾರು ಸೌಹಾರ್ದವು ಬೆಳೆದು ಬಂದಿರುವುದು ಸಕಲರಿಗೂ ವೇದ್ಯವಾಗಿರುವ ವಿಷಯ. ಅಧಿಕಾರಿಗಳೂ, ನಾಗರಜನಿಕರೂ, ಇದನ್ನು ಹೆಮ್ಮೆಯಿಂದ ಸಾರುತ್ತ ಬಂದಿರುವರು. ಆದರೆ ಈಗ ಪ್ರಭುತ್ವದವರು ಅನುಸರಿಸುತ್ತಿರುವ ನೀತಿಯು ಇದಕ್ಕೆ ವ್ಯತಿರೇಕವಾಗಿರುತ್ತದೆ.

ಬ್ರಿಟಿಷ್ ಹಿಂದೂಸ್ಥಾನದಲ್ಲಿಯೂ ಹಲವು ಕಡೆ ಗಲಭೆಗಳು ನಡೆಯುತ್ತಿವೆ. ಆದರೂ ಈ ರೀತಿ ಇಡೀ ಪ್ರಾಂತ್ಯಕ್ಕೆಲ್ಲಾ ಅನ್ವಯಿಸುವಂತೆ ಪ್ರತಿಬಂಧಕಗಳು ಎಲ್ಲಿಯೂ ಹಾಕಲ್ಪಟ್ಟಿರುವುದಿಲ್ಲ. ಗಲಭೆಗಳು ನಡೆಯುವ ಸ್ಥಳಗಳಲ್ಲಿ ಮಾತ್ರ ಬಂದೋಬಸ್ತಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪುಂಡರ ಹಾವಳಿಯನ್ನು ಹತ್ತಿಕ್ಕಲು ಉಗ್ರವಾದ ಕಾರ್ಯಕ್ರಮಗಳನ್ನೂ ಸಹ ಕೈಗೊಳ್ಳಲಾಗಿದೆ.

ನಮ್ಮ ರಾಜಧಾನಿಯಲ್ಲಿಯೂ, ಇನ್ನೂ ಹಲವಾರು ಕಡೆಗಳಲ್ಲಿಯೂ, ಸಾರ್ವಜನಿಕ ಶಾಂತಿ ರಕ್ಷಣೆಗಾಗಿ ಅಧಿಕಾರಿಗಳೂ, ಪ್ರಜಾಪ್ರಮುಖರೂ ಕಲೆತು ಸಮಾಲೋಚನೆಗಳನ್ನು ನಡೆಸಿರುತ್ತಾರೆ. ಶಾಂತಿ ಸಮಿತಿಗಳನ್ನೂ ಸಹ ಏರ್ಪಡಿಸಿರುತ್ತಾರೆ. ಸಕಲ ಕೋಮಿನವರೂ ಪ್ರೀತಿ ವಿಶ್ವಾಸದಿಂದಲೂ, ಪರಸ್ಪರ ಸಹಕಾರದಿಂದಲೂ ಪ್ರವರ್ತಿಸುವರೆಂಬ ಭರವಸೆಯು ಉಂಟಾಗಿರುತ್ತದೆ. ಹೀಗಿರುವಲ್ಲಿ ಇನ್ನು ಮೂರು ತಿಂಗಳ ಕಾಲ ಸಭೆ, ಮೆರವಣಿಗೆ ಮುಂತಾದುವುಗಳಿಗೆ ನಿರ್ಬಂಧವನ್ನು ಹಾಕುವುದು ಅನುಚಿತವೂ, ಅನಾವಶ್ಯಕವೂ ಆಗಿರುತ್ತದೆ. ಇದರಿಂದ ಇಲ್ಲದ ಶಂಕೆಗಳಿಗೆ ಆಸ್ಪದವಾಗಿರುತ್ತದೆ. ವಾತಾವರಣವು ಪ್ರಶಾಂತವಾಗಿರುವುದೆಂದು ಜನರ ಮನಸ್ಸಿನಲ್ಲಿ ಮೂಡಿರುವ ನಂಬಿಕೆಗೆ ಆಘಾತ ಉಂಟಾಗುವಂತಿದೆ. ಮೇಲಾಗಿ ಶಾಂತಿ ರಕ್ಷಣಾ ಕಾರ್ಯಕ್ಕಾಗಿ ಕೈಗೊಳ್ಳುವ ಪ್ರಚಾರ ಕಾರ್ಯಕ್ಕೂ ಸಹ ಈ ಪ್ರತಿಬಂಧಕವು ಅಡಚಣೆಯನ್ನುಂಟುಮಾಡಬಹುದಾಗಿದೆ.

ಪ್ರತಿಬಂಧಕಾಜ್ಞೆಗಳು ಸಾಮಾನ್ಯವಾಗಿ ಶಾಂತವಾಗಿರುವ ವಾತಾವರಣವನ್ನು ಕಲಕಿ, ಜನರ ಮನಸ್ಸನ್ನು ಉದ್ರೇಕಗೊಳಿಸುವುದೆಂಬುದೇ ನಮ್ಮ ಖಚಿತವಾದ ಅಭಿಪ್ರಾಯ. ಅಲ್ಲದೆ ಪರಿಸ್ಥಿತಿಯು ಎಷ್ಟು ಬಿಗಡಾಯಿಸಬಹುದೋ ಅದನ್ನು ಈ ಆಜ್ಞೆಗಳು ಇನ್ನೂ ಇಮ್ಮಡಿಸುತ್ತವೆ. ಪುಂಡು ಪೋಕರಿಗಳ ಹಾವಳಿಯನ್ನು ಅಡಗಿಸಲು ಅಳವಡಿಸಬೇಕಾದ ದಕ್ಷತೆಯನ್ನು ನ್ಯಾಯವಾದ ನಾಗರಿಕ ಚಟುವಟಿಕೆಗಳ ಮೇಲೆ ಪ್ರಯೋಗಿಸುವುದು ಸ್ವಲ್ಪವೂ ಸರಿಯಲ್ಲ. ಇದರಿಂದ ಪುಂಡರಿಗೆ ಪರೋಕ್ಷವಾಗಿ ಉತ್ತೇಜನವೇ ದೊರೆತಂತಾಗುವುದು. ಹೀಗಿರುವ ಸನ್ನಿವೇಶವು ಸಮರ್ಪಕವಲ್ಲ.

ದುಷ್ಟರ ಹಾವಳಿಯನ್ನು ಹತ್ತಿಕ್ಕಿ, ಪ್ರಜೆಗಳ ಸಹಜವಾದ ಕೆಲಸಕಾರ್ಯಗಳು ನಿರಾತಂಕವಾಗಿ ನಡೆಯಲು ಸಕಲ ಸಹಾಯಗಳನ್ನೂ ನೀಡುವ ಭರವಸೆಯು ಸರ್ಕಾರದವರಿಂದ ಪ್ರಜೆಗಳಿಗೆ ಬರಬೇಕು. ಅದು ಬಿಟ್ಟು ಪ್ರಜೆಗಳ ನಿತ್ಯ ಜೀವನದ ಕೆಲಸಕಾರ್ಯಗಳಿಗೆ ಅಡಚಣೆಗಳುಂಟಾಗುವುದು ಪ್ರಭುತ್ವಕ್ಕೆ ಭೂಷಣವಲ್ಲ. ಸಂಸ್ಥಾನದಲ್ಲೆಲ್ಲಾ ಈಗ ಹಾಕಿರುವಂತೆ ಪ್ರತಿಬಂಧಕಗಳನ್ನು ಹಾಕುವ ಪ್ರಮೇಯವಿರುವುದೆಂದು ನಾವು ನಂಬುವುದಿಲ್ಲ. ಶಾಂತಿ ಪ್ರಿಯರಾದ ಪ್ರಜೆಗಳಿಗೆ ಇದರಿಂದ ವೃಥಾ ವ್ಯಾಕುಲವುಂಟಾಗುವುದು. ಆದುದರಿಂದ ಸರ್ಕಾರದವರು ಈ ಆಜ್ಞೆಗಳನ್ನು ಕೂಡಲೇ ರದ್ದುಮಾಡಿ, ಪ್ರಜೆಗಳಿಗೆ ನಿಜವಾದ ನೆಮ್ಮದಿಯನ್ನುಂಟುಮಾಡಲೆಂದು ನಾವು ಪ್ರಕೃತ್ಪೂರ್ವಕವಾಗಿ ಹಾರೈಸುತ್ತೇವೆ.

ವಿಯಟ್‌ನಾಂ ಪ್ರಜಾರಾಜ್ಯಕ್ಕೆ ಬರ್ಮದ ಬೆಂಬಲ

ಇಂಡೋ ಚೀನಾದ ವಿಯಟ್‌ನಾಂ ಪ್ರಜಾರಾಜ್ಯಕ್ಕೆ ಬೆಂಬಲ ಕೊಡಲು ಇಡೀ ಬರ್ಮಾ ದೇಶವು ಸಿದ್ಧವಿದೆಯೆಂದು ಬರ್ಮ ಕೇಂದ್ರ ಸರ್ಕಾರದ ಮಂತ್ರಿಗಳಾದ ಯು ಸಾರವರು ಹೇಳಿಕೆ ಇತ್ತಿದ್ದಾರೆ. ಸಾಮ್ರಾಜ್ಯವಾದದ ಮೋಹವನ್ನು ಫ್ರೆಂಚರು ಕೂಡಲೇ ತೊರೆದು ತಾವು ಹಿಂದೆಯೇ ಪ್ರಜ್ಞಾನ ಮಾಡಿದ್ದಂತೆ ಇಂಡೋ ಚೀನಾಕ್ಕೆ ಸ್ವಾತಂತ್ರ್ಯವೀಯಬೇಕೆಂದು ಅವರು ತಿಳಿಸಿದ್ದಾರೆ.

ಕ್ರಯಕ್ಕಿವೆ

೧ ಮೈಸೂರು ಸಿಟಿ ಸಿಮೆಂಟ್ ಬ್ಲಾಕ್‌ನಲ್ಲಿ ಡೋರ್ ನಂಬರು ೯೫೦ ಉಳ್ಳ ಸಿಮೆಂಟ್ ತಾರಸಿ ಹೊಸ ಕಟ್ಟಡ, ಕಾಂಪೌಡು, ನಲ್ಲಿ, ದೀಪ ಉಳ್ಳ ಮನೆ ಕ್ರಯ- ೧೪೦೦೦ ರೂಪಾಯಿಗಳು.

೨ ಶ್ರೀರಂಗಪಟ್ಟಣದ ತಾಲ್ಲೂಕು ಬೇಗೂರು ಗ್ರಾಮ ವಿರಜಾ ನದಿ ನಾಲಾ ಕೆಳಗೆ ಫಲವತ್ತಾದ ೧ ಎಕರೆ ೨೮ ಗುಂಟೆ ಗದ್ದೆ, ಸರ್ವೆ ನಂ ೫೭ ಮತ್ತು ೫೮. ಕ್ರಯ- ೩೦೦೦ ರೂಪಾಯಿಗಳು.

ವಿವರಗಳಿಗೆ:- ಆರ್. ಗುಂಡೂರಾವ್, ಮೈಸೂರು ಬ್ಯಾಂಕ್ ಬಿಲ್ಡಿಂಗ್ಸ್, ಮೈಸೂರು.

WANTED

An accountant on Rs. 40-4-60 with Rs. 10 D. A. and a Typist clerk on Rs. 25-2-35 with Rs. 8 as D. A. Pay in both cases being according to qualifications and Experience, supported by Testimonials.

Apply sharp to :-
MANAGING DIRECTOR,
Nikhila Karnataka Central Ayurvedic Pharmacy Ltd.,
Vanivilasa Road,
Mysore.

Edited, printed and published by A. R. Nagarajan at the Sadhvi Press D. Subbiah Road, Mysore.

ಹೊಸ ವರ್ಷಕ್ಕಾಗಿ

ಹೊಸ ನಮೂನೆ

ಜವಳಿಗಳು

ಬಂದಿವೆ. ಇಂದೇ ಭೇಟಿ ಕೊಡಿರಿ.

ಬಿ. ಕೆಂಚಪ್ಪ ಸನ್ಸ್,
ಜವಳಿ ಅಂಗಡಿ
ದೊಡ್ಡ ಪೇಟೆ, ಮೈಸೂರು

ಅಪೆರಾ ಟಾಕೀಸ್

ನಾರದ-ನಾರದಿ

(ತೆಲುಗು ಭಾಷೆ)
3-1-47 ರಿಂದ ಮೂರನೇ ವಾರ

Next Change

The Great Magician

With
Bela Lugosi. Maria Alba, Lucian Preijal.

ರಣಜಿತ್ ಟಾಕೀಸ್

ತಾ॥ 3-1-47 ರಿಂದ

ಕಾರವಾನ್

ಪಾತ್ರ:—ಅರುಣ್ ಕೇಸರಿ,
ಕಮಲಾ ಚಟರ್ಜಿ
ಪ್ರತಿ ದಿನ ೩ ಆಟಗಳು

ಶ್ರೀ ಗಣೇಶಾ ಟಾಕೀಸ್

3-1-47 ರಿಂದ 2 ನೇ ವಾರ
ಪ್ರತಿ ದಿನ ಮೂರು ಆಟಗಳು

ರುಕ್ಮಾಂಗದ

(ತಮಿಳು)
ಪ್ರಸಿದ್ಧ ಪೌರಾಣಿಕ ಚಿತ್ರ
ಪಾತ್ರ:- ಜಿ. ಎನ್. ಬಾಲಸುಬ್ರಹ್ಮಣ್ಯಂ, ಯೋಗ ಮಂಗಲಂ, ಪೆರಿಯನಾಯಕಿ
ಪುಣ್ಯಪ್ರದವಾದೀ ಚಿತ್ರವನ್ನು ಇಂದೇ ನಿಮ್ಮ ಬಂಧು ಮಿತ್ರರೊಡನೆ ನೋಡಿರಿ

ನಮ್ಮ ಹಿತೈಷಿಗಳಿಗೆ ನೂತನ ವರ್ಷದ ಶುಭಾಶಯಗಳು

ನಾರ್ಗಾರ್ಡ್ ಫೈರ್ ಮತ್ತು ಜನರಲ್ ಇನ್ಸೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸ್:- ಮದ್ರಾಸು

ಸುರಕ್ಷಿತವಾದ ಕಂಪೆನಿ. ಇಂಡಿಯಾ ಮತ್ತು ಸಿಲೋನಿನಲ್ಲೆಲ್ಲಾ ಶಾಖೋಪಶಾಖೆಗಳಿವೆ. ಫೈರ್, ಮೋಟಾರ್, ಮೆರೀನ್, ಆಕ್ಸಿಡೆಂಟ್, ವರ್ಕ್‌ಮೆನ್ಸ್ ಕಾಂಪೆನ್ಸೇಷನ್, ಲೈಫ್ ಮತ್ತು ಇನ್ನೂ ಎಲ್ಲಾ ತರಹೆಯ ಇನ್ಷೂರೆನ್ಸುಗಳನ್ನು ಕೈಗೊಳ್ಳುವ ಕಂಪೆನಿ.
ಪಾಲಿಸಿದಾರರುಗಳಿಗೆ ಹೆಚ್ಚಿಗೆ ಬೋನಸ್ಸು ಕೊಡಲ್ಪಟ್ಟಿರುತ್ತೆ
ಏಜೆಂಟರುಗಳಿಗೆ ಧಾರಾಳವಾದ ಕಮಿಷನ್.
ಪಾಲಿಸಿ ತೆಗೆದುಕೊಳ್ಳಲೂ ಮತ್ತು ಏಜೆಂಟರುಗಳೂ ಇವರಲ್ಲಿ ವಿಚಾರಿಸಿ:-

ಎಂ. ಸಿ. ಸಂಪತ್ತಯ್ಯಂಗಾರ್,
ಸ್ಪೆಷಲ್ ರೆಪ್ರೆಸೆಂಟೆಟಿವ್, ಲಕ್ಷ್ಮೀಪುರ ಅಗ್ರಹಾರ, ಮೈಸೂರು

ರಾಜ್‌ಕಮಲ್, ಮೈಸೂರು.

3-1-47 ರಿಂದ **2** ನೇ ವಾರ

ಪ್ರಕಾಶ್ ರವರ

‘ಹಮಾರಾ ಸಂಸಾರ್’

ಒಡಹುಟ್ಟಿದವರ ನೈಜ ವಾತ್ಸಲ್ಯವನ್ನು ಚಿತ್ರಿಸಿ, ಸಂಸಾರವನ್ನು ಸ್ವರ್ಗವನ್ನಾಗಿ ಕಲ್ಪಿಸುವ ಮನೋಜ್ಞ ಚಿತ್ರ. ನೀವೂ, ನಿಮ್ಮ ಬಂಧು ಬಳಗದವರೂ ನೋಡಲೇಬೇಕಾದ ನೀತಿಯುತ ಕಥಾವಳಿ.

ಭೂಮಿಕೆ:- ರಂಜನಾ, ಜಿಲ್ಲು, ಜೀವನ್

From 3-1-47 Daily at 10-30 a.m.
Eddie Cantor in **“Kid from Spain”**
(Brand New Print)

ರೀ॥ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೩—೧—೪೭ [ಸಂಚಿಕೆ ೧೨೩

ಪ್ರತಿಬಂಧಕಾಜ್ಞೆಗಳನ್ನು ಮುರಿಯದಂತೆ ಸೂಚನೆ

'ಬಿ' ಕ್ಲಾಸಿಗೆ ಹೆಚ್ಚು ಅಕ್ಕಿ

ಬೆಂಗಳೂರು ೩

ನೆನ್ನೆಯಿಂದ 'ಬಿ' ತರಗತಿ ರೇಷನ್‌ದಾರರಿಗೆ ದಿನ ಒಂದಕ್ಕೆ ತಲಾ ೩ ಚಟಾಕು ಧಾನ್ಯ, ೨ ಚಟಾಕು ಅಕ್ಕಿ ಕೊಡಬಹುದು. ಈ ಅಕ್ಕಿಯಲ್ಲಿ ಬೇಕಾದರೆ ೧ ಚಟಾಕು ಗೋಧಿ ಕೊಡಬಹುದೆಂದೂ ಸರ್ಕಾರದ ಆಜ್ಞೆಯಾಗಿದೆ.

ಗೋಪಾಲರಾಯರ ಅಪೀಲು

ಧರ್ಮಸ್ಥಳದ ಶ್ರೀ ಬಿ. ಎಸ್. ಗೋಪಾಲರಾಯರು ಹೆಚ್ಚಿಗೆ ಜಾಮೀನು ಕೊಡಬೇಕೆಂದು ನಗರ ನ್ಯಾಯಾಧೀಶರು ಮಾಡಿದ ಆಜ್ಞೆಯ ಮೇಲೆ ಅವರ ಪರ ವಕೀಲರು ನಿನ್ನೆ ದಿನ ಸೆಷನ್ ಜಡ್ಜರ ಮುಂದೆ ಅಪೀಲು ಹಾಕಿದ್ದರು. ವಿಚಾರಣೆ ೪ ನೇ ತಾ॥ ನಡೆಯುವುದು ಅಲ್ಲಿಯವರೆವಿಗೆ ಸಿಟಿ ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ತಡೆದಿಡಬೇಕೆಂದು ಸೆಷನ್ ಜಡ್ಜರು ಆಜ್ಞೆ ಮಾಡಿದ್ದಾರೆ.

ಮರುಳಪ್ಪನವರ ಖುಲಾಸೆ

ಕಳೆದ ಬಡ್ಜೆಟ್ ಅಧಿವೇಶನದಲ್ಲಿ ಪ್ರತಿನಿಧಿ ಸಭಾಸದಸ್ಯರಾದ ಶ್ರೀ ಜಿ. ಮರುಳಪ್ಪನವರು ತನ್ನ ವಿಚಾರವಾಗಿ ಆಕ್ಷೇಪಕರವಾದ ಭಾಷಣ ಮಾಡಿದರೆಂದು ದಾವಣಗೆರೆಯ ನಿವೃತ್ತ ಪೊಲೀಸ್ ಅ॥ ಸೂಪರಿಂಟೆಂಡೆಂಟ್ ಶ್ರೀ ಕೆ. ಪೂರ್ಣಚಾರ್‌ರವರು ಹೂಡಿದ್ದ ಮಾನನಷ್ಟ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಅಪಾದಿತರನ್ನು ಖುಲಾಸೆ ಮಾಡಿದ್ದಾರೆ.

ಇಡ್ಲಿ, ದೋಸೆಗಳ ಪ್ರತಿಬಂಧಕ ರದ್ದು

ಮನ್ನಾರ್‌ಗುಡಿಯ ರೇಷನಿಂಗ್ ಅಧಿಕಾರಿಗಳು ಒಂದು ಆಜ್ಞೆಯನ್ನು ಹೊರಡಿಸಿ ಇಡ್ಲಿ ಮತ್ತು ದೋಸೆಗಳನ್ನು ಹೋಟಲುಗಳಲ್ಲಿ ಮಾಡಲು ಇದ್ದ ಪ್ರತಿಬಂಧಕವನ್ನು ತೆಗೆದು ಎಲ್ಲಾ ಹೋಟೆಲುಗಳಲ್ಲೂ ಹಿಟ್ಟಿನಿಂದ ಮೇಲ್ಕಂಡ ಪದಾರ್ಥಗಳನ್ನು ತಯಾರಿಸಬಹುದೆಂದು ತಿಳಿಸಿರುತ್ತಾರೆ.

ಸತ್ಕಾರ

ಸ್ವಂ ವ.] ಚಾಮರಾಜನಗರ ೨

ಇಲ್ಲಿಂದ ವರ್ಗಾಯಿಸಲ್ಪಟ್ಟ ಪೊಲೀಸ್ ಇ॥ ಶ್ರೀ ಗೋಪಾಲಕೃಷ್ಣ ಶೆಟ್ಟರನ್ನು ಸತ್ಕರಿಸಲು ಜವಳಿ ವರ್ತಕ ಮಂಡಲಿಯವರು ಭೋಜನ ಕೂಟವನ್ನು ಮೊನ್ನೆ ಏರ್ಪಡಿಸಿದ್ದರು. ಅಧಿಕಾರಿಗಳೂ, ಸಾರ್ವಜನಿಕರೂ ಸೇರಿ ಸುಮಾರು ಎಪ್ಪತ್ತು ಜನಗಳು ಕೂಟದಲ್ಲಿ ಸೇರಿದ್ದರು.

ಪ್ರಾಣಿಬಲಿ ನಡೆಯಲಿದೆ

ಟಿ. ನರಸೀಪುರದ ತಾಲ್ಲೂಕು ಮೂಗೂರು ಮತ್ತು ಸುತ್ತಮುತ್ತಿನ ಗ್ರಾಮಗಳಲ್ಲಿ ತಾ॥ ೭-೧-೪೭ ನೇ ಮಂಗಳವಾರ ಸುಮಾರು ನಲವತ್ತು ಕೋಣಗಳ ಬಲಿ ನಡೆಯಲಿದೆ. ಸರ್ಕಾರದವರೂ ಸಾರ್ವಜನಿಕರೂ ಬೇಗನೆ ಗಮನ ಕೊಟ್ಟು ಅನೇಕ ಕೆಲಸಗಳಿಗೆ ಬೇಕಾಗುವ ಆ ಕೋಣಗಳನ್ನು ಉಳಿಸಬೇಕಾಗಿ ಪ್ರಾರ್ಥನೆ. ನಮ್ಮ ನಾಡಿನ ಪಶು ಸಂಪತ್ತು ಅರ್ಧ ನಶಿಸಿರುವುದರಿಂದ ಪಶು, ಎತ್ತು, ಎಮ್ಮೆ, ಕೋಣ ಇವುಗಳ ಸಂರಕ್ಷಣೆಯು ತುಂಬಾ ಪ್ರಾಮುಖ್ಯವಾದುದು. ನಲವತ್ತೆಂಟು ಸಾವಿರ ಕೋಣಗಳ ಬಲಿ ಕೊಡುತ್ತಿದ್ದ ನಮ್ಮ ನಾಡಿನಲ್ಲಿ ಈ ಸ್ಥಿತಿಗೆ ಇಪ್ಪತ್ತೆರಡು ಸಾವಿರಕ್ಕೆ ಇಳಿದಿದೆ.

ಗೋಮಾತಾ ಸೇವಕ,

ಬಿ. ಎಂ. ಎ. ಪಾದರ್, ಬೆಳ್ಳೂರು.

ಮಹಾತ್ಮ ಗಾಂಧಿಯವರ ಕಾಲ್ನಡಗೆ ಯಾತ್ರೆ

ನಿನ್ನೆ ಬೆಳಗ್ಗೆ ಮಹಾತ್ಮ ಗಾಂಧಿಯವರು ತಮ್ಮ ಕಾಲ್ನಡಗೆ ಪ್ರವಾಸವನ್ನು ಪುನರಾರಂಭಿಸಿದರು. ಮೊದಲು ೩ ಮೈಲಿ ದೂರದಲ್ಲಿರುವ ಚಾಂದ್‌ಪುರಕ್ಕೆ ಭೇಟಿ ಇತ್ತರು. ಅವರ ರಕ್ಷಣೆಗಾಗಿ ಶಸ್ತ್ರಸಜ್ಜಿತ ಪೋಲೀಸರ ತುಕಡಿಯೊಂದೂ ಅವರ ಹಿಂದೆ ತೆರಳಿದೆ. ಗಾಂಧಿಜಿ ಈ ಯಾತ್ರೆಯಲ್ಲಿ ೨೭ ಗ್ರಾಮಗಳಿಗೆ ಭೇಟಿಕೊಟ್ಟು ಅಲ್ಲಿನ ಸಕಲ ಕೋಮಿನ ಅಬಾಲವೃದ್ಧರನ್ನು ಭೇಟಿಮಾಡಿ ಶಾಂತಿಯ ಸಂದೇಶವನ್ನು ಸಾರುವರು.

ಅಜಿತ್ ಸಿಂಗರ ಆಗಮನ

ಭಗತ್‌ಸಿಂಗರ ಚಿಕ್ಕಪ್ಪಂದಿರೂ ೪೦ ವರ್ಷಗಳ ಹಿಂದೆ ಪಂಜಾಬ್ ದಂಗೆಯ ಸಂಬಂಧದಲ್ಲಿ ಭಾರತದಿಂದ ಗಡೀಪಾರಾಗಿ ಹೋಗಿ ಅಜ್ಞಾತವಾಸದಲ್ಲಿದ್ದು ಇತ್ತೀಚೆಗೆ ಬೋಸರ ಆಜಾದ್ ಹಿಂದ್ ದಳಕ್ಕೆ ಸೇರಿ ಬ್ರಿಟಿಷ್ ಆಕ್ರಮಿತ ಜರ್ಮನಿಯಲ್ಲಿ ಸೆರೆಮನೆಯಲ್ಲಿದ್ದವರೂ ಆದ ಸರ್ದಾರ್ ಅಜಿತ್ ಸಿಂಗರು ಈಗ ಬಿಡುಗಡೆಯಾಗಿ ಲಂಡನ್ನಿಗೆ ಬಂದಿದ್ದಾರೆ. ಮುಂದಿನ ವಾರ ಭಾರತಕ್ಕೆ ಆಗಮಿಸುವರು.

ದಿವಾನ್ ಮಾಧವರಾಯರಿಗೆ ಹೊಸ ಉದ್ಯಮ

ಚಿಟ್ಟೀಸ್‌ಗಢ ಮತ್ತು ಒರಿಸ್ಸಾದಲ್ಲಿರುವ ಪೂರ್ವ ಸಂಸ್ಥಾನಗಳಿಗೆ ಫೆಡರಲ್ ರಾಜ್ಯಾಂಗವನ್ನು ರೂಪಿಸಲು ಮೈಸೂರಿನ ಮಾಜೀ ದಿವಾನರಾದ ಶ್ರೀ॥ ಎನ್. ಮಾಧವ ರಾವ್ ಮತ್ತು ಕೇಂದ್ರ ಶಾಸನ ಸಭೆಯ ಶ್ರೀ ಕೆ. ಸಿ. ನಿಯೋಗಿಯವರು ಆಹ್ವಾನಿತರಾಗಿದ್ದಾರೆ.

ಮುಷ್ಕರ ತಪ್ಪಿತು

ಮಂಡ್ಯ ೨

ನಿನ್ನೆಯಿಂದ ಸಕ್ಕರೆ ಕಾರ್ಖಾನೆ ಕೆಲಸಗಾರರು ನಡೆಸಬೇಕೆಂದಿದ್ದ ಮುಷ್ಕರವನ್ನು ನಿಲ್ಲಿಸಲಾಗಿದೆ. ಕೆಲಸಗಾರರ ಸಂಘಕ್ಕೂ ಗಿರಣಿ ಆಡಳಿತಗಾರರಿಗೂ ಒಪ್ಪಂದವಾಗಿ ಬೇಡಿಕೆಗಳಲ್ಲಿ ಹಲವು ಒಪ್ಪಲ್ಪಟ್ಟಿವೆ. ಉಳಿದವುಗಳನ್ನು ಪಂಚಾಯಿತಿಗೆ ಒಪ್ಪಿಸಲು ಆಡಳಿತಗಾರರು ಸಮ್ಮತಿಸಿರುವರು. ಈ ಬಗ್ಗೆ ಕೆಲಸಗಾರರಿಗೆ ತಿಳುವಳಿಕೆ ಕೊಡಲು ಕೆಲಸಗಾರರ ಭಾರಿ ಬಹಿರಂಗ ಸಭೆಯು ನಿನ್ನೆ ಶ್ರೀ ಮಹಾಬಲರಾವ್‌ರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಮಿಕವರ್ಗದ ಶ್ರೀ ರಾಮಣ್ಣನವರು ಎಲ್ಲ ವಿಷಯಗಳನ್ನೂ ವಿವರಿಸಿದರು.

ಉಪನ್ಯಾಸ

ಮೈಸೂರು ೩

ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ಸಂಸ್ಕೃತ ಪಾಠಶಾಲಾ ಆವರಣದಲ್ಲಿ ೫ ನೇ ತಾ॥ ಭಾನುವಾರ ಸಂಜೆ ೬॥ ಗಂಟೆಗೆ ವಿ॥ ಕೆ. ಶಂಕರನಾರಾಯಣಶಾಸ್ತ್ರಿಗಳು "ಅವಸ್ಥಾತ್ರಯವಿಭಾಗ" ಎಂಬ ವಿಷಯದಲ್ಲಿ ಉಪನ್ಯಾಸಮಾಡುವರು.

ಇಂಟರ್ ನ್ಯಾಷನಲ್ ಟೇಬಲ್ ಟೆನ್ನಿಸ್ ಪಂದ್ಯಕ್ಕೆ ಮೈಸೂರಿನವರು

ಪ್ಯಾರಿಸ್ಸಿನಲ್ಲಿ ಫೆಬ್ರವರಿ ೭ರಿಂದ ಆರಂಭವಾಗಲಿರುವ ಇಂಟರ್ ನ್ಯಾಷನಲ್ ಟೇಬಲ್ ಟೆನ್ನಿಸ್ ಛಾಂಪಿಯನ್‌ಷಿಪ್ ಟೋರ್ನಮೆಂಟಿನಲ್ಲಿ ಭಾಗವಹಿಸಲು ಭಾರತದ ಪರವಾಗಿ ಮೈಸೂರಿನ ಶ್ರೀ ಎಂ. ವಿ. ಎಸ್. ವಿಠಲ್‌ರವರನ್ನು ಆರಿಸಲಾಗಿದೆ.

ಭಾಗವತ ಪಠಣ ಸಪ್ತಾಹ

ರಮಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಅಹೋಬಲ ಮಠದಲ್ಲಿ ಮೊನ್ನೆಯಿಂದ ದಿನವೂ ಸಂಜೆ ೬ ರಿಂದ ೮ ರ ವರೆಗೆ ತತ್ವಪ್ರಬೋಧಕ ಕವಿ ವಿದ್ವಾನ್ ಹೆಚ್. ಭೀಮರಾವ್ ಉರುಫ್ ಶ್ರೀ ಕೃಷ್ಣ ವಿಠಲದಾಸರವರಿಂದ ಶ್ರೀಮದ್ಭಾಗವತ ದಶಮಸ್ಕಂದವನ್ನು ಗಮಕ ಕಲಾರೂಪವಾಗಿ ಪಠಿಸುವ ಸಪ್ತಾಹವೇರ್ಪಡಿಸಲಾಗಿದೆ.

ಪ್ರದೋಷ ಸಂಗೀತ

ಇದೇ ಶನಿವಾರ ೪ನೇ ತಾ॥ ಸಂಜೆ ೬॥ ಗಂಟೆಗೆ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ಆ॥ವಿ॥ ವೆಂಕಟರಮಣಯ್ಯನವರ ಪಿಟೀಲು, ವಿ॥ ವರದಾಚಾರ್ಯರ ಮೃದಂಗದೊಡನೆ ಶ್ರೀಮತಿ ರತ್ನಮ್ಮನವರ ಸಂಗೀತವನ್ನು ಏರ್ಪಡಿಸಿರುತ್ತದೆ. ಸರ್ವರಿಗೂ ಸ್ವಾಗತವಿದೆ.

ಶ್ರೀ ನಾಲಾಬೀದಿ ಶ್ರೀ ದೊಡ್ಡರಾಮದೇವಸ್ಥಾನದಲ್ಲಿ ನಾಳೆ ಸಂಜೆ ೮ ಗಂಟೆಗೆ ಪ್ರದೋಷ ಪ್ರಯುಕ್ತ ಸಂ॥ ವಿ॥ ರಾಚಪ್ಪನವರ ಸಂಗೀತ ಕಛೇರಿಯೂ ಜರುಗುವುದು.

ವೈಸರಾಯ್ ವೇವಲ್ಲರೊಡನೆ ಪಂ॥ ನೆಹರೂರವರ ಭೇಟಿ

ಮಹಾತ್ಮ ಗಾಂಧಿಯವರನ್ನು ಭೇಟಿ ಮಾಡಿ ಹಿಂತಿರುಗಿದ ಪಂ॥ ನೆಹರೂರವರು ಮೊನ್ನೆ ದಿನ ವೈಸರಾಯ್ ವೇವಲ್ಲರನ್ನು ಕಂಡು ಮಾತುಕತೆ ನಡೆಸಿದರು. ವೈಸರಾಯರು ಲಂಡನ್ನಿನಿಂದ ಬಂದಮೇಲೆ ನೆಹರೂರವರೊಡನೆ ಕಲೆತದ್ದು ಇದೇ ಪ್ರಥಮ ಬಾರಿ.

ಹೈದರಾಬಾದ್ ಸಂಸ್ಥಾನ ದಖ್ಖಿನ್ನಿನ ಪಾಕೀಸ್ಥಾನ

ಕಾಂಗ್ರೆಸ್ಸು ರಾಮರಾಜ್ಯವನ್ನು ಸ್ಥಾಪಿಸಲು ಹೊರಟಿದೆ. ಹಿಂದೂ ಮಹಾಸಭೆಗೂ ಅದರಲ್ಲಿ ವ್ಯತ್ಯಾಸವೇ ಇಲ್ಲ. ಪಾಕಿಸ್ಥಾನದಿಂದ ಹಿಂದೂ ಮುಸ್ಲಿಮರಿಗೆ ಸ್ವಾತಂತ್ರ್ಯ ದೊರಕುವುದು. ಹೈದರಾಬಾದ್ ಸಂಸ್ಥಾನವು ಭವಿಷ್ಯದಲ್ಲಿ ದಖ್ಖಿನ್ನಿನ ಪಾಕೀಸ್ಥಾನವಾಗುವುದು - ಎಂಬದಾಗಿ ಗಡಿನಾಡಿನ ಮಿ॥ ಅಬ್ದುಲ್ ಕೈಯೂಮರು ಹೈದರಾಬಾದಿನಲ್ಲಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ.

ಇಂಡೋ ಚೈನಾ ಕದನ

ವಿಯಟ್‌ನಾಂ ರಿಪಬ್ಲಿಕ್ ಸೈನ್ಯಗಳು ಹನೋಯ್ ದ್ವೀಪದ ಮೇಲೆ ಹಲ್ಲೆಗಳಿಂದ ಧಾಳಿ ನಡೆಸುತ್ತಲೇ ಇವೆ. ಫ್ರೆಂಚ್ ಸೈನ್ಯಗಳು ಟನ್‌ಕಿನ್ ನಗರದ ಪ್ರದೇಶದಿಂದ ೩೦ ಮೈಲಿ ಹಿಮ್ಮೆಟ್ಟಿವೆ. ಕದನ ಒಂದೇ ಸಮನೆ ಸಾಗುತ್ತಿರುವುದಾಗಿ ವರದಿ ಬಂದಿದೆ.

ಇಂಡೋಚೀನಾದಲ್ಲಿ ಸಂಧಾನ ಪ್ರಯತ್ನ

ಇಂಡೋಚೀನಾದಲ್ಲಿ ಫ್ರೆಂಚ್ ಸೈನ್ಯಗಳಿಗೂ, ವಿಯಟ್‌ನಾಂ ರಿಪಬ್ಲಿಕ್ ಸೈನ್ಯಗಳಿಗೂ ಒಪ್ಪಂದವಾಗುವ ಸೂಚನೆಗಳು ಕಂಡು ಬಂದಿವೆ. ಉಭಯ ಸೈನ್ಯಗಳು ಕದನ ನಿಲ್ಲಿಸಲು ಒಪ್ಪಿವೆ. ಸಂಧಾನದ ಪ್ರಥಮಾಂಕವು ಸಧ್ಯದಲ್ಲೇ ಆರಂಭವಾಗಲಿದೆ.

ಕಳೆದ ವರ್ಷದ ಉಳಿತಾಯ ಧಾನ್ಯವನ್ನು ಕಟಾಯಿಸಕೂಡದು

ಮೈಸೂರು ೩

ರೇಷನ್ ಪ್ರದೇಶದಲ್ಲಿರುವ ಜಮೀನುದಾರರಿಗೆ ತಲೆ ಒಂದಕ್ಕೆ ಒಂದೂಕಾಲು ಪಾವು ಅಕ್ಕಿ ಅಥವಾ ಎರಡೂವರೆ ಪಾವಿನಂತೆ ಭತ್ತವನ್ನು ಕೊಡಲಾಗುವುದು. ಕಳೆದ ಸುಗ್ಗಿ ಆಜ್ಞೆಯಂತೆ ಗೊತ್ತಾಗಿದ್ದ ಪಡಿಪದಲ್ಲಿ ಉಳಿಕೆಯೇನಾದರೂ ಇದ್ದಲ್ಲಿ ಅದನ್ನು ಈ ಸಲ ಕಟಾಯಿಸಕೂಡದೆಂದು ಎಲ್ಲ ರೇಷನಿಂಗ್ ಅಧಿಕಾರಿಗಳಿಗೆ ತಿಳಿಸಲಾಗಿದೆಯೆಂದು ಡೈರೆಕ್ಟರಿಂದ ಶ್ರೀ ಕೆ. ಸುಂದರ್‌ರವರು ನ್ಯಾಯವಿಧಾಯಕ ಸಭಾ ಸದಸ್ಯರಾದ ಶ್ರೀ ಕೃಷ್ಣಸ್ವಾಮಿಯಾರ್‌ರಿಗೆ ಬರೆದಿದ್ದಾರೆ.

ಆಜ್ಞೋಲ್ಲಂಘನೆ ಮಾಡದಿರಲು ಕಾಂ॥ ಸೂಚನೆ

ಸ್ವಂ ವ ಪ್ರೋ॥] ಬೆಂಗಳೂರು ೩

ದೇಶದ ಅನೇಕ ಭಾಗಗಳಲ್ಲಿ ಜಾರಿಗೆ ತರಲಾಗಿರುವ ಪ್ರತಿಬಂಧಕಾಜ್ಞೆಗಳನ್ನು ಪರಿಶೀಲಿಸಿ, ಅವುಗಳು ನಾಗರಿಕ ಸ್ವಾತಂತ್ರ್ಯಗಳಿಗೆ ಧಕ್ಕೆ ತರುತ್ತವೆಯೆಂದೂ, ಆದಾಗ್ಯೂ ಕಾಂಗ್ರೆಸ್ಸಿನವರು ಆ ಆಜ್ಞೆಗಳನ್ನು ಮುರಿಯದೇ ದೇಶದಲ್ಲಿ ಕೂಡಲೇ ಸಂಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ನಡೆಯಲಿರುವ ಕಡೇ ಹೋರಾಟಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದೂ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿನ್ನೆ ದಿನ ತೀರ್ಮಾನಿಸಿತು.

ಈ ಮೊದಲೇ ನಿರ್ಧರಿಸಿದಂತೆ ಶ್ರೀಮನ್ಮಹಾರಾಜರಿಗೆ ವಿಜ್ಞಾಪನಾ ಪತ್ರವನ್ನು ಕಳುಹಿಸಲು ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು.

* ಹೈದರಾಬಾದ್-ಮೈಸೂರುಗಳಿಗೆ ನಡೆಯಬೇಕಾದ ರಾಂಜಿ ಟ್ರೋಫಿ ಪಂದ್ಯವು ಹೈದರಾಬಾದಿನಲ್ಲಿ ನಡೆಯಲಿದೆ.

ಸಾಧ್ವಿ

ತಾ|| ೩-೧-೪೭ ಶುಕ್ರವಾರ

ಬಿರುದುಗಳಿಗೆ ತಿಲಾಂಜಲಿ

ಹೊಸ ವರ್ಷದಲ್ಲಿ ಬ್ರಿಟಿಷ್ ಸಾರ್ವಭೌಮರು ತಮ್ಮ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿರುವ ಜನರಿಗೆ ಬಿರುದು ಬಾವಲಿಗಳನ್ನು ಕೊಡುವುದು ವಾಡಿಕೆ. ಇದು ವರೆಗೆ ಸಾವಿರಾರು ಜನರು ನಮ್ಮ ದೇಶದಲ್ಲೂ ಈ ಪ್ರಶಸ್ತಿಗಳನ್ನು ಪಡೆದು ಹೆಮ್ಮೆಯಿಂದ ಮೆರೆದಿದ್ದಾರೆ. ಕಾಲಕ್ರಮದಲ್ಲಿ ಈ ಗೌರವಗಳಿಗೆ ಬೆಲೆಯು ಇಳಿಯುತ್ತಾ ಬಂದಿತು. ಇಪ್ಪತ್ತೈದು ವರ್ಷಗಳ ಹಿಂದೆ ಮಹಾತ್ಮ ಗಾಂಧಿಯವರು ಅಸಹಕಾರವನ್ನು ಹೂಡಿದ ಮೇಲೆ ಈ ಬಿರುದುಗಳಿಗೆ ಇದ್ದ ಗೌರವವು ಸಂಪೂರ್ಣವಾಗಿ ನಿರ್ನಾಮವಾಯಿತು. ಅವುಗಳು ಗುಲಾಮಗಿರಿಯ ಚಿಹ್ನೆಗಳೆಂದು ಭಾವಿಸಲು ಉಪಕ್ರಮವಾಯಿತು. ದಿವಾನ್ ಬಹದ್ದೂರುಗಳೂ, ರಾವ್ ಬಹದ್ದೂರುಗಳೂ, ರಾವ್ ಸಾಹೇಬರುಗಳೂ, ಪದಕಧಾರಿಗಳೂ ತಮ್ಮ ತಮ್ಮ ಪ್ರಶಸ್ತಿಗಳನ್ನು ವಾಪಸು ಕೊಡಲು ಮುಂದೆ ಬಂದರು.

ಈಚೆಗೆ ಈ ಗೌರವಗಳು ಕೇವಲ ಸರಕಾರೀ ನೌಕರರುಗಳಿಗೂ, ಅವರ ಹಿಂಬಾಲಕರುಗಳಿಗೂ ದೊರಕುತ್ತವೆಯೆಂಬ ಪ್ರತೀತಿಯು ವಿಶೇಷವಾಗಿ ಹರಡಿತು. ಪ್ರಜೆಗಳಿಗೆ ಯಾವ ಉಪಕಾರವನ್ನೂ ಮಾಡದೆ, ಅಧಿಕೃತ ವರ್ಗದವರ ಆಜ್ಞಾಧಾರಿಗಳಾಗಿ ಕೇವಲ ಜೋಹುಕುಂ ಪಾಲಕರೆಂದೆನಿಸಿದ ಅನಾಮಧೇಯರುಗಳಿಗೂ ಬಿರುದುಗಳು ಬರತೊಡಗಿದವು. ಆದುದರಿಂದ ಅವುಗಳಿಗಿದ್ದ ಬೆಲೆಯು ಇನ್ನೂ ಕಡಿಮೆಯಾಗಲು ಕಾರಣವಾಯಿತು. ಇತ್ತೀಚೆಗೆ ಮುಸ್ಲಿಂ ಲೀಗಿನವರೂ ಪಾಕಿಸ್ತಾನದ ಧೋರಣೆಯ ಆಧಾರದ ಮೇಲೆ ಬ್ರಿಟಿಷ್ ನೀತಿಯ ವಿಚಾರದಲ್ಲಿ ತಮ್ಮ ಅಸಮಾಧಾನವನ್ನು ಸೂಚಿಸಲು ಈ ಬಿರುದುಗಳಿಗೆ ಬಹಿಷ್ಕಾರ ಹಾಕಲು ತೊಡಗಿರುವರು. ಲೀಗಿನ ಪ್ರಮುಖರುಗಳಲ್ಲಿ ಒಬ್ಬರಾದ ಮೇಲೊಬ್ಬರು ತಮ್ಮ ಪ್ರಶಸ್ತಿಗಳನ್ನು ಸರ್ಕಾರಕ್ಕೆ ವಾಪಸು ಕಳುಹಿಸಿಕೊಡುತ್ತಿರುವರು.

ಕೇಂದ್ರ ಸರ್ಕಾರದಲ್ಲಿ ಲೀಗಿನವರು ಸೇರಿದ ಮೇಲೆ ಕಾಂಗ್ರೆಸ್ಸಿನವರಿಗೂ, ಲೀಗಿನವರಿಗೂ, ಉದಾತ್ತವಾದ ಧ್ಯೇಯಸಾಧನೆಗಳ ಬಗ್ಗೆ ಇನ್ನೂ ಒಮ್ಮತವಾದ ಅಭಿಪ್ರಾಯವು ಬಾರದಿರುವುದಿಲ್ಲವಾದರೂ ಬಿರುದು ಬಾವಲಿಗಳ ಬಹಿಷ್ಕಾರದ ಬಗ್ಗೆ ಏಕಕಂಠ್ಯವು ಉಂಟಾಗಿರುವುದು ಒಂದು ವಿಶೇಷದ ಸಂಗತಿ. ಇನ್ನು ಮುಂದೆ ಭಾರತೀಯರಿಗೆ ಈ ಬಿರುದುಗಳನ್ನು ಕೊಡುವಂತೆ ಸರ್ಕಾರದವರು ವೈಸರಾಯರಿಗೆ ಶಿಫಾರಸ್ಸು ಮಾಡಲಾಗದೆಂದು ಉಭಯತ್ರರೂ ನಿರ್ಧರಿಸಿದ್ದಾರೆ. ಅದನ್ನು ಬ್ರಿಟಿಷ್ ಸರ್ಕಾರದವರೂ ಅಂಗೀಕರಿಸಿದ್ದಾರೆ. ಆದುದರಿಂದ ಈ ಸಾರಿ ಯಾವ ಖಾಸಗಿ ಮನುಷ್ಯರುಗಳಿಗೂ ಈ ಸನ್ಮಾನವು ಸಂದಾಯವಾಗಿರುವುದಿಲ್ಲ. ತತ್ಫಲವಾಗಿ ಅಭಿನಂದನಾ ಸಭೆಗಳೂ, ಸತ್ಕಾರ ಕೂಟಗಳೂ, ಬಿನ್ನವತ್ತಳೆಗಳ ಮೆರವಣಿಗೆಗಳೂ, ಸಹ ನಡೆಯುವಂತಿಲ್ಲ.

ಬ್ರಿಟಿಷ್ ಸರ್ಕಾರದವರು ಬಿರುದು ಕೊಡುವುದನ್ನು ನಿಲ್ಲಿಸಿರುವುದು ಅವರು ಹಿಂದೂಸ್ಥಾನವನ್ನು ಬಿಟ್ಟು ಹೊರಡುವ ಪೂರ್ವ ಸೂಚನೆಯೆಂದು ಸಹ ಹೇಳಲಾಗಿದೆ. ಹೇಗೇ ಇರಲಿ, ಸಮಾಜದಲ್ಲಿ ಒಂದು ಟೊಳ್ಳು ಪ್ರಶಸ್ತಿಯ ಮಾಯಾಜಾಲವನ್ನು ಕಲ್ಪಿಸುತ್ತಿದ್ದ ಈ ಪದ್ಧತಿಯು ತೊಲಗಿರುವುದನ್ನು ಭಾರತೀಯರೆಲ್ಲರೂ ಹೃತ್ಪೂರ್ವಕವಾಗಿ ಸ್ವಾಗತಿಸಲೇ ಬೇಕು.

ಪತ್ರಿಕೆ ಹಂಚಲು ಹುಡುಗರು ಬೇಕು

ರಾ ಜ ಧಾ ನಿ ಯ ಕೃಷ್ಣಮೂರ್ತಿಪುರಂ ಮತ್ತು ದೊಡ್ಡ ಪೇಟೆಗಳಲ್ಲಿ ಪತ್ರಿಕೆ ಹಂಚಲು ಹುಡುಗರು ಬೇಕು. ಇಷ್ಟವುಳ್ಳವರು ಕೂಡಲೇ ಬಂದು ವಿಚಾರಿಸಿರಿ.

ವ್ಯವಸ್ಥಾಪಕ, "ಸಾಧ್ವಿ"

ರಣಜಿತ್ ಟಾಕೀಸ್

ತಾ|| 3-1-47 ರಿಂದ

ಕಾರವಾನ್

ಪಾತ್ರ:—ಅರುಣ್ ಕೇಸರಿ, ಕಮಲಾ ಚಟರ್ಜಿ

ಪ್ರತಿ ದಿನ ೩ ಆಟಗಳು

ಪರಸ್ಪರ ಕೊಲೆಯಿಂದ ಪರಿಹಾರವಿಲ್ಲ

ಹಿಂದುಗಳೂ ಮುಸ್ಲಿಮರೂ ಪರಸ್ಪರ ಕೊಲೆಮಾಡುವುದರಿಂದ ಸಮಸ್ಯಾ ಪರಿಹಾರವಾಗುವುದಿಲ್ಲ. ಕೋಮುವಾರು ಗಲಭೆಗಳು ಪೂರ್ಣವಾಗಿ ಅಡಗಬೇಕು. ಜನರ ಇಚ್ಛೆಯ ಪ್ರಕಾರ ರಾಜಕೀಯ ಮತ್ತು ಸಾಂಸ್ಕೃತಿಕ ಆಕಾಂಕ್ಷೆಗಳು ಸಾಧನೆಯಾಗುವುದಕ್ಕೆ ವಾತಾವರಣವನ್ನೇರ್ಪಡಿಸಿಕೊಳ್ಳಬೇಕು—ಎಂಬುದಾಗಿ ಬಂಗಾಳ ಪ್ರಧಾನಿ ಮಿ|| ಸುಹ್ರಾವರ್ಧಿಯವರು ಹೇಳಿಕೆ ಇತ್ತಿದ್ದಾರೆ.

Edited, printed and published by A. R. Nagarajan at the Sadhvi Press D Subbiah Road, Mysore.

ಮುಸ್ಲಿಂ ವರ್ತಕರ ಸತ್ಯಾಗ್ರ

ಬಾಂದ್ರದಿಂದ ಬೊಂಬಾಯಿಗೆ ಸಾ
ಕುರಿ ಮತ್ತು ಆಡುಗಳನ್ನು ರೈಲಿನ
ಲಕ ಸಾಗಿಸಲು ವ್ಯಾಗನ್ನುಗಳನ್ನು
ಲು ರೈಲ್ವೆ ಅಧಿಕಾರಿಗಳು ನಿರಾಕರಿ
ಲ್ಲದ ಆ ಪ್ರಾಣಿಗಳನ್ನು ತುಂಬಿದ್ದ ಗ
ಗಾಡಿಗಳನ್ನು ಸ್ಟೇಷನ್ನಿನಲ್ಲಿಯೇ ಬ
ಮಿಕ್ಕ ಗಾಡಿಗಳನ್ನು ಹೋಗಲು ಸಿಗ್ನ
ಕೊಟ್ಟಿದ್ದರಿಂದ ಅಸಮಾಧಾನಗೊಂಡ
ಸ್ಲಿಂ ವರ್ತಕರೆಲ್ಲರೂ ರೈಲನ್ನು ಮುಂ
ದದೆ ಕಂಬಿಯ ಮೇಲೆ ಮಲಗಿ ಸ
ಹ ಹೂಡಿದರು. ನಂತರ ರೈಲ್ವೆ ಅ
ರಿಗಳು ಒಬ್ಬ ವರ್ತಕನನ್ನು ದಸ್ತಗಿರಿ
ಿ ರೈಲನ್ನು ದೇರಿ ಕಂಬಿಯ ಮ
ಮುಂದೆ ಬಿಡಿಸಿದರು

ರಾಜ್‌ಕಮಲ್, ಮೈಸೂರು.

3-1-47 ರಿಂದ 2 ನೇ ವಾರ

ಪ್ರಕಾಶ್ ರವರ 'ಹಮಾರಾ ಸಂಸಾರ್'

ಒಡಹುಟ್ಟಿದವರ ನೈಜ ವಾತ್ಸಲ್ಯವನ್ನು ಚಿತ್ರಿ
ಸಂಸಾರವನ್ನು ಸ್ವರ್ಗವನ್ನಾಗಿ ಕಲ್ಪಿಸುವ ಮ.ಪ.
ನ್ನತ ಚಿತ್ರ. ನೀವೂ, ನಿಮ್ಮ ಬಂಧು ಬಳಗದವ
ನೋಡಲೇಬೇಕಾದ ನೀತಿಯ, ಕಥಾವಳಿ

★

ಭೂಮಿಕೆ:- ರಂಜನಾ, ಜಿಲ್ಲು, ಜೀವನ್

★

From 3-1-47 Daily at 10-30 a.m.

Eddie Cantor in "Kid from Spain"

(Brand New Print)

ಮೈಸೂರು ಸ್ಟೇಟ್ ರೈಲ್ವೆ

ಆಹಾರ ಸರಬರಾಯಿ ಶಾಖೆ : : ೨೩-೧೨-೧೯೪೬ ನೇ ಮರ್ಮ್ಮ ಪ್ರಕಟಣೆ

ಮೇಲ್ಕಂಡ ಆಹಾರ ಶಾಖೆಗೆ ಸೇರಿದ ಉಪಯೋಗಿಸಲ್ಪಟ್ಟಿರುವ ೧೩೦೦೦ ಗೋಣೀಚೀಲಗಳು ಮಾರಾಟಕ್ಕಿವೆಯೆಂದು ಈ ಮೂಲಕ ಸಾರ್ವಜನಿಕರ ತಿಳುವಳಿಕೆಯ ಬಗ್ಗೆ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೊಂಡುಕೊಳ್ಳಲಿಚ್ಛಿಸುವವರು ೧೫-೧-೧೯೪೭ ನೇ ತಾರೀಖು ಯೊಳಗಾಗಿ ಈ ಕೆಳಗೆ ಸಹಿ ಮಾಡಿರುವವರ ಅಡ್ರೆಸ್ಸಿಗೆ ತಮ್ಮ ಟೆಂಡರಿನ ಎರಡು ಪ್ರತಿಗಳನ್ನು ಸೀಲಾದ ಕವರಿನಲ್ಲಿಟ್ಟು ಕಳುಹಿಸಬೇಕು. ಸೀಲಾದ ಕವರಿನ ಮೇಲೆ "ರೈಲ್ವೆ ಆಹಾರ ಸರಬರಾಯಿ ಶಾಖೆಯ ಗೋಣೀಚೀಲಗಳನ್ನು ಕೊಳ್ಳಲು ಟೆಂಡರು" ಎಂದು ನಮೂದಿಸಬೇಕು. ಮೇಲ್ಕಂಡ ತಾರೀಖಿನ ನಂತರ ಬರುವ ಟೆಂಡರುಗಳನ್ನು ಸ್ವೀಕರಿಸುವುದಿಲ್ಲ. ಈ ಟೆಂಡರುಗಳನ್ನು ಮೈಸೂರಿನಲ್ಲಿ ಮೈಸೂರು ಸ್ಟೇಟ್ ರೈಲ್ವೆಗೆ ಸೇರಿದ ಫುಡ್ ಕಂಟ್ರೋಲರ್ ಕಚೇರಿಯಲ್ಲಿ ೧೬-೧-೧೯೪೭ ನೇ ಮಧ್ಯಾಹ್ನ ೩ ಗಂಟೆಗೆ ಪರಿಶೀಲಿಸಲಾಗುವುದು. ಆ ಕಾಲದಲ್ಲಿ ಟೆಂಡರುಗಳನ್ನು ಕೊಟ್ಟಿರುವವರು ಹಾಜರಿರಬಹುದು.

—: ಟೆಂಡರುಗಳು ಈ ಕೆಳಗಿನ ಕಂಡೀಷನ್ನುಗಳಿಗೆ ಒಳಪಟ್ಟಿರಬೇಕು :—

೧. ಪ್ರತಿಯೊಬ್ಬ ಟೆಂಡರದಾರರೂ ಮೈಸೂರಿನಲ್ಲಿರುವ ಮೈಸೂರು ಸ್ಟೇಟ್ ರೈಲ್ವೆಯ ಚೀಫ್ ಆಡಿಟರ ಬಳಿ ೫೦೦ ರೂ. ಮುಂಗಡ ಹಣವನ್ನು ಪಾವತಿ ಮಾಡಿ ಟೆಂಡರ್ ಅರ್ಜಿಯೊಡನೆ ಹಣ ಪಾವತಿ ಮಾಡಿದ ರಶೀತಿಯನ್ನು ಲಗತ್ತಿಸಿರಬೇಕು.

೨. ಟೆಂಡರುಗಳನ್ನು ಆಖೈರಾಗಿ ಒಪ್ಪುವ ಅಥವಾ ನಿರಾಕರಿಸುವ ಹಕ್ಕು ಮೈಸೂರು ಸ್ಟೇಟ್ ರೈಲ್ವೆಯ ಜನರಲ್ ಮ್ಯಾನೇಜರ ಅಧಿಕಾರಕ್ಕೆ ಒಳಪಟ್ಟಿದೆ. ಯಾವ ಕಾರಣವನ್ನೂ ಕೊಡದೆ ಅವರು ಈ ಕೆಳಗೆ ರುಜು ಮಾಡಿರುವವರು ಒಪ್ಪಿದ ಟೆಂಡರನ್ನು ಒಪ್ಪಬಹುದು ಅಥವಾ ನಿರಾಕರಿಸಬಹುದು. ಹೆಚ್ಚಿಗೆ ಮೊಬಲಗಿನ ಟೆಂಡರನ್ನೇ ಒಪ್ಪಿಕೊಳ್ಳಬೇಕೆಂಬ ನಿರ್ಬಂಧವಿರುವುದಿಲ್ಲ.

೩. ಜನರಲ್ ಮ್ಯಾನೇಜರರು ಟೆಂಡರನ್ನು ಆಖೈರಾಗಿ ಒಪ್ಪಿದ ಕೂಡಲೆ ಫುಡ್ ಕಂಟ್ರೋಲರು ಅಂಥ ಟೆಂಡರರಿಗೆ ತಿಳಿಸುವರು. ಹಾಗೆ ತಿಳಿಸಿದ ಮೂರು ದಿನಗಳೊಳಗಾಗಿ ಮುಂಗಡ ಹಣದ ಬಾಕಿ ಟೆಂಡರು ಮೊಬಲಗನ್ನು ಪೂರ್ತಾ ಪಾವತಿ ಮಾಡಿ ಗೋಣೀಚೀಲಗಳನ್ನೆಲ್ಲಾ ಎಂಟು ದಿನಗಳೊಳಗಾಗಿ ಸಾಗಿಸಬೇಕು. ಹೀಗೆ ಮಾಡಲು ತಪ್ಪಿದಲ್ಲಿ ಮುಂಗಡವಾಗಿ ಪಾವತಿಮಾಡಿದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

೪. ಟೆಂಡರನ್ನು ಗೊತ್ತು ಮಾಡಿದ ನಂತರ, ನಿರಾಕರಿಸಲ್ಪಟ್ಟ ಟೆಂಡರುದಾರರಿಗೆ ಅವರು ಮುಂಗಡವಾಗಿ ಕೊಟ್ಟ ೫೦೦ ರೂ ಡಿಪಾಜಿಟ್ಟು ಮೊಬಲಗನ್ನು, ರೈಲ್ವೆ ಚೀಫ್ ಆಡಿಟರು ಕೊಟ್ಟ ರಶೀತಿಯೊಡನೆ ಫುಡ್ ಕಂಟ್ರೋಲರಿಗೆ ಅರ್ಜಿಯನ್ನು ಹಾಕಿಕೊಂಡಲ್ಲಿ ವಾಪಸು ಕೊಡಲಾಗುವುದು.

೫. ಯಾವುದಾದರೂ ಟೆಂಡರನ್ನು ಒಪ್ಪಿದ ಮೇಲೆ ಟೆಂಡರುದಾರರು ಅದರಂತೆ ನಡೆಯಲು ನಿರಾಕರಿಸಿದರೆ ಸರ್ಕಾರಕ್ಕೆ ಅವರ ಡಿಪಾಜಿಟ್ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಅವರಿಗೆ ಆ ವಿಷಯವನ್ನು ತಿಳಿಸಲಾಗುವುದು.

೬. ಮಾಲನ್ನು, ಕೊಂಡುಕೊಳ್ಳಬೇಕೆಂದಿರುವವರು ಮೈಸೂರಿನಲ್ಲಿರುವ ರೈಲ್ವೆ ಸೆಂಟ್ರಲ್ ಡಿಪೋ ಕೆಲಸ ಮಾಡುವ ದಿನಗಳಲ್ಲಿ ಮಧ್ಯಾಹ್ನ ೩ ಗಂಟೆಯಿಂದ ೫ ಗಂಟೆಯವರೆಗೆ ಪರೀಕ್ಷಿಸಬಹುದು.

(ಸಹಿ) ಬಿ. ಎಂ. ಕೃಷ್ಣನ್, ಫುಡ್ ಕಂಟ್ರೋಲರ್.

ಅಪೆರಾ ಟಾಕೀಸ್

ನಾರದ-ನಾರದಿ

ಮೂರನೇ ವಾರ

From 4-1-47.

Daily 5 Shows

The Great Magician

With

Bela Lugosi, Maria Alba, Lcuian Preijal.

ರೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೪—೧—೪೭ [ಸಂಚಿಕೆ ೧೨೭

ಬ್ರಿಟಿಷ್ ಸೈನ್ಯದ ಮೇಲೆ ಯೆಹೂದ್ಯರ ಧಾಳಿ

ಹೊಸ ವರ್ಷದ ಶಿಲ್ಕು ಧಾನ್ಯವನ್ನು ಕಟಾಯಿಸಕೂಡದು

ಆಹಾರ ಡೈರೆಕ್ಟರವರ ವಿವರಣೆ

ಮೈಸೂರು, ೩

…ಬಗ್ಗೆ ಆಜ್ಞೆಯಂತೆ ದವಸವನ್ನು ಸರ್ಕಾರವು ವಹಪಡಿಸಿಕೊಳ್ಳುವಾಗ್ಗೆ ಉಂಟಾಗಲಿರುವ ಅನಿವಾರ್ಯಗಳ ಬಗ್ಗೆ ನ್ಯಾಯವಿಧಾಯಕ ಸಭಾ ಸದಸ್ಯರಾದ ಶ್ರೀ|| …ಕೃಷ್ಣಸ್ವಾಮಿ ರಾಯರು ಸಂಸ್ಥಾನದ …ದ ಡೈರೆಕ್ಟರಾದ ಶ್ರೀ|| ಕೆ. ಗುರುದ…ರವರೊಡನೆ ವ್ಯವಹರಿಸಲಾಗಿ ಡೈರೆಕ್ಟರವರು ಈ ರೀತಿ ಉತ್ತರವಿತ್ತಿದ್ದಾರೆ:-

…ಗ ಜಾರಿಯಲ್ಲಿರುವ ಕಾನೂನಿನಂತೆ …ಪ್ರದೇಶದಲ್ಲಿ ವಾಸಿಸುವ ಒಡುವಳಿದಾರನು ತನ್ನ ಜಮೀನಿನಲ್ಲಿ ಬೆಳೆದ ದವಸ…ಕೆಲ ಒಂದಕ್ಕೆ, ದಿನ ಒಂದಕ್ಕೆ ೧೨ … ಅಥವಾ ೧। ಪಾವಿನಂತೆಯೂ, ಮ…ಅದರಲ್ಲಿ ಅರ್ಧದಂತೆಯೂ ಉಳಿಸಿಕೊಳ್ಳಬಹುದಾಗಿದೆ. ಭತ್ತದ ವಿಚಾರದಲ್ಲಿ ಪ್ರಮಾಣವು ದ್ವಿಗುಣವಾಗಿರುತ್ತದೆ, …ವಯಸ್ಕರಿಗೆ ೨॥ ಪಾವಿನಂತೆಯೂ …ಕ್ಕಳಿಗೆ ೧। ಪಾವಿನಂತೆಯೂ ಇರುವುದು …ಜಮೀನು ಇಲ್ಲದ ಕೇಸರುದಾರರಿಗೆ ಕೊಡುವಂತೆ ಮುಕ್ಕಾಲು ಪಾವು ಅಕ್ಕಿಯ…ಜಮೀನುದಾರರಿಗೆ ಅನ್ವಯಿಸದೆ …ಸೂಚಿಸಿರುವಂತೆ ೧। ಪಾವಿನಂತೆ ಲೆಕ್ಕ ಹಾಕಬೇಕೆಂದು ಎಲ್ಲಾ ರೇಷನಿಂಗ್ ಅಧಿಕಾರಿಗಳಿಗೂ ಸೂಚನೆ ಕೊಡಲಾಗಿದೆ. ಕಳೆದ ವರ್ಷದ ಸುಗ್ಗಿ ಆಜ್ಞೆಯಂತೆ ಕೊಡಬೇಕಾದ್ದ ದವಸದ ಪೈಕಿ ಲೆಕ್ಕಾಚಾರ ಹಾಕಿ …ಕಳೆಯೋಣವಾದರೂ ಇದ್ದಲ್ಲಿ ಅದನ್ನು ಈ ಸಲದ ಫಸಲಿನಿಂದ ಕಟಾಯಿಸದೆ ಈ ವರ್ಷದ ಪೂರ್ತಿ ಪ್ರಮಾಣದ ಧಾನ್ಯವನ್ನು ಕೊಡಬೇಕೆಂದು ಸೂಚಿಸಲಾಗಿದೆ.

ಈ ಸೂಚನೆಯನ್ನು ಯಾವುದಾದರೂ ಸಂದರ್ಭದಲ್ಲಿ ಅನುಸರಿಸದಿದ್ದಲ್ಲಿ ಅಂಥವುಗಳನ್ನು ಡೈರೆಕ್ಟರ ಗಮನಕ್ಕೆ ತಂದರೆ ಅವಶ್ಯಕವಾದ ಏರ್ಪಾಡನ್ನು ಮಾಡಲಾಗುವುದು.

ಪ್ರತಿಬಂಧಕಾಜ್ಞೆ

(ಸ್ವಂ ಸು] ನಂಜನಗೂಡು ೩

ಪೋಲೀಸ್ ಆಕ್ಟ್ ೮೫ ನೇ ಕಲಂ ಪ್ರಕಾರ ಸಭೆ ಮತ್ತು ಮೆರವಣಿಗೆಗಳನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಅನುಮತಿ ಪಡೆಯದೆ ೩ ತಿಂಗಳ ಕಾಲ ನಡೆಸಕೂಡದೆಂದು ಪ್ರತಿಬಂಧಕಾಜ್ಞೆಯನ್ನು ನಿನ್ನೆಯಿಂದ ಜಾರಿ ಮಾಡಲಾಗಿದೆ.

ದಕ್ಷಿಣೆ ತೆಗೆದುಕೊಳ್ಳಲಾಗದು

ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಇನ್ನು ಮುಂದೆ ಯಾರೂ ದಕ್ಷಿಣೆಗಳನ್ನು ತೆಗೆದುಕೊಳ್ಳಬಾರದೆಂದೂ, ಅಲ್ಲಿರುವ ಗೋಲಕ್ಕೆ ಹಾಕಿಸತಕ್ಕದ್ದೆಂದೂ ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಅಭಾವಗಳು

ಈಗ ಅಭಾವ ವಿಪರೀತವಾಗಿದೆ. ಬೆಲ್ಲ … ದೀಪದ ಕಡ್ಡಿ ಅಭಾವಗಳೂ ಪರಿಸ್ಥಿತಿಯನ್ನು … ಅಧಿಕಾರಿಗಳ ಗಮನ ಕೊಡಲೇ ಅವಶ್ಯಕ.

ನದಿಯಲ್ಲಿ ಮರಣ

…ರಥ ದಾರಿ ನಡೆಯಲು ಬಂದಿದ್ದ …ಕೇಶವ ಮೂರ್ತಿ ಎಂಬ ೨೨ ವರ್ಷ ವಯಸ್ಸಿನ ಯುವಕನೊಬ್ಬನು ನಿನ್ನೆ ಕಪಿಲೆಯಲ್ಲಿ ಸ್ನಾನ ಮಾಡುತ್ತಿದ್ದಾಗ ಮುಳುಗಿ ಪ್ರಾಣ ಬಿಟ್ಟಿದ್ದಾನೆ. ಈ ಸ್ಥಳದ ರಕ್ಷಣೆ ಏರ್ಪಡಿಸಬೇಕಾಗಿದೆ.

ಸಾರ್ವಜನಿಕ ಸತ್ಕಾರ ಸಭೆ

ಮೈಸೂರು ೪

ಪ್ಯಾರಿಸ್ಸಿನಿಂದ ರಾಜಧಾನಿಗೆ ದಯಮಾಡಿಸಿರುವ ಸ್ವಾಮಿ ಸಿದ್ಧೇಶ್ವರಾನಂದರವರನ್ನು ಸತ್ಕರಿಸಲು ನಾಳೆ ಸಂಜೆ ೬ ಘಂಟೆಗೆ ಟೌನ್ ಹಾಲಿನಲ್ಲಿ ಬಹಿರಂಗ ಸಭೆಯನ್ನು ಸ್ವಾಗತ ಸಮಿತಿಯವರು ಏರ್ಪಡಿಸುತ್ತಾರೆ. ಮಾಜಿ ದಿವಾನರಾದ ಸರ್ ಆಲ್ಬಿಯನ್ ರಾಜಕುಮಾರ್ ಬ್ಯಾನರ್ಜಿಯವರು ಅಗ್ರಾಸನವನ್ನು ವಹಿಸುವರು. ವೇದಾಂತ ಪ್ರಚಾರದ ವಿಷಯದಲ್ಲಿ ವಿಶೇಷ ಆಸಕ್ತಿ ವಹಿಸಿರುವ ಫ್ರಾನ್ಸಿನ ಮಹಾ ಜನರಿಗೆ ಒಂದು ಸಾರ್ವಜನಿಕ ಸಂದೇಶವನ್ನು ಕಳುಹಿಸಿಕೊಡಲಾಗುವುದು. ಮಹಾಜನರೆಲ್ಲರೂ ದಯಮಾಡಬೇಕಾಗಿ ಕೋರಲಾಗಿದೆ.

ಕ್ಯಾಲೆಂಡರ್ ಸ್ವೀಕಾರ

ತ್ಯಾಗರಾಜ ರಸ್ತೆಯಲ್ಲಿರುವ "ಮೈಸೂರು ಹುಡುಗರು" ಮಾಲೀಕರು ವಿಶ್ವಾಸದಿಂದ ಕಳುಹಿಸಿಕೊಟ್ಟಿರುವ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ.

ಸಹಕಾರ ನೌಕರರ ಸಂಘ

ಮೈಸೂರು ಕೋ-ಆಪರೇಟಿವ್ ಸ್ಟಾಫ್ ಸಂಘದ ವಾರ್ಷಿಕ ಸಭೆಯು ನೆನ್ನೆ ನಡೆದು ಶ್ರೀ ವೈ. ಶ್ರೀನಿವಾಸಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಆರ್. ಕೃಷ್ಣಮೂರ್ತಿಯವರು ಉಪಾಧ್ಯಕ್ಷರಾಗಿಯೂ, ಎಸ್. ವಿ. ಲಕ್ಷ್ಮೀನಾರಾಯಣರಾಯರವರು ಸೆಕ್ರೆಟರಿರಾಗಿಯೂ ಚುನಾಯಿಸಲ್ಪಟ್ಟರು.

ಮಹದೇವ ಭಾಯಿ ಸ್ಮಾರಕ

ರಾಷ್ಟ್ರೀಯ ಕಾರ್ಯಕರ್ತರನ್ನು ತರಬೇತುಗೊಳಿಸುವುದಕ್ಕಾಗಿ ೪ ಲಕ್ಷ ರೂ ಗಳನ್ನು ಖರ್ಚುಮಾಡಿ ಅಹಮದಾಬಾದಿನಲ್ಲಿ ಮಹದೇವ ದೇಸಾಯಿಯವರ ಹೆಸರಿನಲ್ಲಿ ಕಾಲೇಜೊಂದನ್ನು ಸ್ಥಾಪಿಸಲಾಗುವುದು. ಸದ್ಯಕ್ಕೆ ಇದು ಗುಜರಾತು ವಿದ್ಯಾಪೀಠದಲ್ಲಿ ಆರಂಭವಾಗುವುದು

ಮೈಸೂರಿಗೆ ಫುಟ್‌ಬಾಲ್ ಛಾಂಪಿಯನ್‌ಗಿರಿ

(ಸ್ವಂ ಸು] ಬೆಂಗಳೂರು ೪

ಅಂತರ ಪ್ರಾಂತೀಯ ಫುಟ್‌ಬಾಲ್ ಛಾಂಪಿಯನ್ ಷಿಪ್ ಪಂದ್ಯದ ಫೈನಲ್ಸ್ ಆಟವು ನಿನ್ನೆ ಸಂಜೆ ಮೈಸೂರಿಗೂ ಬಂಗಾಳಕ್ಕೂ ನಡೆದು ಮೈಸೂರಿನವರು ೨-೧ ಗೋಲುಗಳಿಂದ ಗೆದ್ದರು. ಮೈಸೂರಿನ ಕಡೆ ಸತ್ಯಾರ್ ಮತ್ತು ಧನಂಜಯರವರು ತಲಾ ೧ ಗೋಲನ್ನು ಹೊಡೆದರು. ಅಸಂಖ್ಯಾತರಾದ ಜನರು ಈ ಪಂದ್ಯವನ್ನು ನೋಡಲು ಕಿಕ್ಕಿರಿದು ನೆರೆದಿದ್ದರು

ಹನುಮಂತಯ್ಯನವರ ರಾಜದ್ರೋಹದ ಮೊಕದ್ದಮೆ

(ಸ್ವಂ ಸು ಪ್ರೋ] ಬೆಂಗಳೂರು ೪

ಈ ದಿನ ಶ್ರೀ ಕೆ. ಹನುಮಂತಯ್ಯನವರ ಮೇಲಿನ ರಾಜದ್ರೋಹ ಅಪಾದನೆ ಮೊಕದ್ದಮೆಯು ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಬಂದು ಮುಂದಿನ ವಿಚಾರಣೆಗಾಗಿ ಹೊಸದಾಗಿ ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರಾಗಿ ನೇಮಕರಾಗಿರುವ ಶ್ರೀ ಕೆ ಪಿ ರಾಮನಾಥಯ್ಯರವರ ಕೋರ್ಟಿಗೆ ವರ್ಗಾಯಿಸಲ್ಪಟ್ಟಿದೆ. ನಾಳೆ ೫॥ ವಿಚಾರಣೆ ನಡೆಯುತ್ತದೆ.

ಮೈಸೂರು ಕಾಂಗ್ರೆಸ್ಸಿಗೆ ಸ॥ ಪಟೇಲರ ಪತ್ರ

ಮೈಸೂರಿನಲ್ಲಿ ಜನ ಜಾಗೃತಿಯಾಗಿ, ಪ್ರಜೆಗಳಿಂದ ಪ್ರೋತ್ಸಾಹವು ದೊರೆಯುವುದೆಂಬ ನಂಬಿಕೆ ಇದ್ದು, ಕಾಂಗ್ರೆಸ್ಸಿನಲ್ಲಿ ಶಕ್ತ್ಯ ಶಕ್ತಿಯೂ ಇರುವುದಾದರೆ, ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಶಕ್ತಿಹೋರಾಟವನ್ನು ಆರಂಭಿಸುವುದಕ್ಕೆ ಯಾವ ಪ್ರಬಲ ಅಡ್ಡಿಯೂ ಇರಲಾರದೆಂದು ಸ॥ ಪಟೇಲರು ಮೈಸೂರು ಕಾಂಗ್ರೆಸ್ಸಿಗೆ ಉತ್ತೇಜನಕರವಾದ ಪತ್ರ ಬರೆದಿರುವರೆಂದು ಗೊತ್ತಾಗಿದೆ

ಗೋಪಾಲರಾಯರ ಮೊಕದ್ದಮೆ

ಧರ್ಮದತ್ತಿಗಳ(?) ಗೋಪಾಲರಾಯರು ಕೊಡಬೇಕೆಂದು ಕೇಳಲಾಗಿರುವ ಜಾಮೀನು ಮೊತ್ತವು ಅಧಿಕವಾಗಿರುವುದೆಂಬ ವಿಚಾರದಲ್ಲಿ ಜಿಲ್ಲಾ ನ್ಯಾಯಾಧೀಶರ ಮುಂದೆ ವಾದವಿವಾದಗಳು ನಡೆದವು ೭ನೇ ತಾ|| ತೀರ್ಪಿಗೆ ಕಾದಿರಿಸಲಾಗಿದೆ.

ಬಟ್ಟೆ ಸರಬರಾಜು

ಅಖಿಲ ಭಾರತ ಬಟ್ಟೆಕೋಟಿ ಸಮಿತಿಯ ಅಧ್ಯಕ್ಷರಾದ ಶ್ರೀ ಕೃಷ್ಣರಾಜ ಠ್ಯಾಕರ್ಸೆಯವರು ನಿನ್ನೆ ಒಂದು ಪತ್ರಿಕಾ ಸಮ್ಮೇಳನವನ್ನು ನಡೆಸಿ ೭ ತಿಂಗಳಿಗೆ ೨೦ ಸಾವಿರ ಕದರುಗಳನ್ನು ತಯಾರಿಸುವ ಕಾರ್ಖಾನೆಯೊಂದನ್ನು ಹಿಂದೂಸ್ತಾನದಲ್ಲಿ ಸ್ಥಾಪಿಸಲು ಇಂಗ್ಲೆಂಡಿಗೂ, ಹಿಂದೂಸ್ಥಾನಕ್ಕೂ ಒಪ್ಪಂದವಾಗಿದೆಯೆಂದು ತಿಳಿಸಿದರು. ಜನವರಿಗಳೊಳಗೆ ೮೦ ಸಾವಿರ ಕದರುಗಳನ್ನು ತಯಾರು ಮಾಡಲು ಸಾಧ್ಯವೆಂದೂ ಅವರು ತಿಳಿಸಿದರು. ಇದರ ಒಂದು ವಾರ್ಷಿಕ ತಗಲುವ ೧೫೦ ಲಕ್ಷ ರೂಪಾಯಿನ ಪೈಕಿ ೩೮ ಲಕ್ಷ ರೂಪಾಯನ್ನು ಬ್ರಿಟಿಷ್ ಮತ್ತು ಉಳಿದುದನ್ನು ಭಾರತವೂ ಸರಕಾರವು ವಹಿಸುವರೆಂದೂ ತಿಳಿಸಿದರು. ಸ್ಥಳದಲ್ಲಿ ಬಟ್ಟೆ ಸರಬರಾಜಿನ ಸ್ಥಿತಿಯೂ ಇನ್ನೂ ಹದಗೆಡುವ ರೀತಿಯಲ್ಲಿದೆಯೆಂದೂ ಅದುದರಿಂದ ಜನ … ಗಿರಣಿಗಳು ೨ ಸರದಿಗಳಂತೆ ಸದಾ ಕೆಲಸವಾಡುತ್ತಿವೆಯೆಂದು ಹೇಳಿದರು. ಬಟ್ಟೆಕೋಟಿಯು ಇನ್ನೂ … ವರ್ಷ ಕಾಲ ಇರುವುದಾಗಿ ತಿಳಿಸಿದರು.

ಬ್ರಿಟಿಷ್ ಸೈನ್ಯಗಳ ಮೇಲೆ ಯೆಹೂದ್ಯರ ಭಾರಿ ಧಾಳಿ

ಪ್ಯಾಲಸ್ಟೈನ್ ಸಮ್ಮೇಳನದಲ್ಲಿ ಭಾಗವಹಿಸುವ ಬಗ್ಗೆ ಬ್ರಿಟಿಷರಿಂದ ಸರಿಯಾದ ಭರವಸೆಗಳು ಯೆಹೂದ್ಯ ನಾಯಕರಿಗೆ ದೊರೆಯದಿದ್ದುದರಿಂದ ಯೆಹೂದ್ಯರ ಕ್ರಾಂತಿಕಾರರ ತಂಡಗಳು ಪ್ಯಾಲಸ್ಟೈನಿನ ೭೮೦ ಮೈಲಿ ರಣಕ್ಷೇತ್ರದಲ್ಲಿ ಬ್ರಿಟಿಷ್ ಸೈನ್ಯಗಳ ಮೇಲೆ ಭಾರಿ ಧಾಳಿಯನ್ನು ಆರಂಭಿಸಿವೆ. ಈ ಕಾರ್ಯಾಚರಣೆಯಲ್ಲಿ ಯೆಹೂದ್ಯರು ಬಾಂಬುಗಳನ್ನೂ, ಭೂಮಿಯ ಮೇಲೆಯೇ ಸಿಡಿಯುವ ಮೈನುಗಳನ್ನೂ ಇತರ ವಿಧವಾದ ಭಾರಿ ಯಂತ್ರಗಳನ್ನೂ, ಆಯುಧಗಳನ್ನೂ ಉಪಯೋಗಿಸುತ್ತಿದ್ದಾರೆಂದು ವರದಿಯಾಗಿದೆ. ಕದನವು ಬರುಬರುತ್ತಾ ಪ್ರಬಲವಾಗುತ್ತಿದೆ. ಬ್ರಿಟಿಷ್ ಸೈನ್ಯರಾಶಿಗಳನ್ನು ಟೆಂಕಿಯಿಂದ ಸುಡಲಾಗುತ್ತಿದೆ. ಹೈಫಾ, ಜರೂಸಲಂ, ಜಾಫಾ(?) ಕ್ಷೇತ್ರಗಳಲ್ಲಿ ಕ್ರಾಂತಿಕಾರರ ಕೈ ಮೇಲಾಗಿರುವುದಾಗಿ ವಾರ್ತೆ ಬಂದಿದೆ

ಹರಿಜನರು ತಿರುಪತಿ ಬೆಟ್ಟವನ್ನು ಹತ್ತಿದರು

ಪುರಾತನ ಕಾಲದಿಂದಲೂ ಹರಿಜನರ ಪ್ರವೇಶಕ್ಕೆ ನಿಷೇಧಿಸಲಾಗಿದ್ದ ತಿರುಪತಿ ಬೆಟ್ಟವನ್ನು ನಿನ್ನೆ ದಿನ ಸಹಸ್ರಾರು ಮಂದಿ ಹರಿಜನರು ಹತ್ತಿದರು. ಯಾತ್ರಾರ್ಥಿಗಳ ಈ ತಂಡದ ನಾಯಕತ್ವವನ್ನು ಪ್ರೊ|| … ಮತ್ತು ಬಿ. ಎಸ್. ಮೂರ್ತಿ ಮುಂತಾದವರು ವಹಿಸಿದ್ದರು. ಇವರನ್ನು ಬೆಟ್ಟದ ಬುಡದಲ್ಲಿ ಕಮಿಷನರಾದ ಶ್ರೀ ಜಯರಾಮ ನಾಯುಡುರವರು ಸ್ವಾಗತಿಸಿದರು. ದೇವಸ್ಥಾನವನ್ನು ಹರಿಜನರ ಪ್ರವೇಶಕ್ಕಾಗಿ ತೆರೆಯುವ ಬಗ್ಗೆ ಪ್ರಯತ್ನಗಳು ನಡೆಯುತ್ತಿರುವುದಾಗಿ ತಿಳಿದು ಬಂದಿದೆ.

ವೈಕುಂಠ ಏಕಾದಶಿಯಾದ ನಿನ್ನೆ ಸಹಸ್ರಾರು ಮಂದಿ ಹರಿಜನರೂ ಸವರ್ಣ ಹಿಂದುಗಳೂ ಜಾತಿಭೇದವನ್ನು ಮರೆತು … ಭಾಗಿಗಳಾಗಿ ಹರಿನಾಮವನ್ನು ಹಾಡುತ್ತಾ ಬೆಟ್ಟದಿಂದ ಕೆಳಗಿಳಿದು ಮುಖ್ಯ ರಸ್ತೆಗಳಲ್ಲಿ ಹೋಗುತ್ತಿದ್ದ ದೃಶ್ಯವು ವರ್ಣನಾತೀತವಾಗಿದ್ದಿತು.

ಲಂಡನ್ನಿನಲ್ಲಿ ರೈಲ್ವೆ ಅಪಘಾತ

ಲಂಡನ್ನಿನ ಪೂರ್ವಭಾಗದ … ರೈಲ್ವೆ ನಿಲ್ದಾಣದಲ್ಲಿ ಎರಡು ಪ್ಯಾಸೆಂಜರ್ ರೈಲುಗಳಿಗೆ ನೆನ್ನೆರಾತ್ರಿ ಢಿಕ್ಕಿಯಾಯಿತು. ೫ ಜನರು ಸತ್ತು ೬೦ ಮಂದಿ ಗಾಯಗೊಂಡಿದ್ದಾರೆ.

ಹೊಸ ವರ್ಷದ ಸಂದೇಶಕ್ಕೆ ಅಡ್ಡಿ

'ನೂತನ ವರ್ಷವು ಸಂತಸದಾಯಕವಾಗಲಿ ಮತ್ತು ಹೊಸ ಸರ್ಕಾರವು ಸ್ಥಾಪಿತವಾಗಲಿ' ಎಂಬುದಾಗಿ ಬ್ರಿಟನ್ನಿನ(?) … ಸಂಘದವರು ಕಳಿಸಿದ್ದ ನೂತನ ವರ್ಷದ ಸಂದೇಶದ ಕವರುಗಳ ಮೇಲೆ ನಮೂದಿಸಿದ್ದರಿಂದ ಅವುಗಳನ್ನು ತಡೆಯಲಾಗಿದೆಯೆಂದೂ, ಈ ಬಗ್ಗೆ ಕಾಮನ್ಸಿನಲ್ಲಿ ಪ್ರಶ್ನೆ ಕೇಳಲಾಗುವುದೆಂದೂ ಗೊತ್ತಾಗಿದೆ

"ಡಾ|| ಎಂ ಎಚ್. ಕೃಷ್ಣರವರಿಗೆ ೫ ತಿಂಗಳ ಫರ್ಲೋ ರಜಾ ಕೊಡಲಾಗಿದೆ. ಶ್ರೀ ಎಲ್. ನರಸಿಂಹಾಚಾರ್ಯರವರು ಅವರ ರಜಾ ಕಾಲದಲ್ಲಿ ಪ್ರಾಚೀನ ಸಂಶೋಧನಾ ಡೈರೆಕ್ಟರ ಕೆಲಸವನ್ನು ನೋಡಿಕೊಳ್ಳುವರು.

ಸಾಧ್ವಿ

ತಾ॥ ೪-೧-೪೭ ಶನಿವಾರ

ರೇಷನ್ ಅಧಿಕಾರಿಗಳು ಕೂಡಲೇ ಗಮನಿಸಬೇಕು

ಪಡಿತರವು ಜಾರಿಯಲ್ಲಿರುವ ಪ್ರದೇಶಗಳಲ್ಲಿ ವಾಸವಾಗಿರುವ ಜಮೀನುದಾರರಿಗೆ ಸಲ್ಲಬೇಕಾದ ಧಾನ್ಯದ ಪ್ರಮಾಣದ ವಿಷಯದಲ್ಲಿ ಆಹಾರ ಶಾಖೆಯ ಡೈರೆಕ್ಟರವರು ಕೊಟ್ಟಿರುವ ವಿವರಣೆಯನ್ನು ಬೇರೆ ಕಡೆ ಪ್ರಕಟಿಸಿದ್ದೇವೆ. ಆದರೆ ರೇಷನ್ ಅಧಿಕಾರಿಗಳು ಇದಕ್ಕೆ ವ್ಯತಿರೇಕವಾಗಿ ನಡೆಯುತ್ತಿರುವರೆಂದು ತಿಳಿದು ಬಂದಿದೆ. ಬರುವ ವರ್ಷದ ರೇಷನ್ ಪ್ರಮಾಣವನ್ನು ಪೂರ್ತಿಯಾಗಿ ಕೊಡಬೇಕೆಂದು ಮೇಲ್ಕಂಡ ವಿವರಣೆಯು ಸ್ಪಷ್ಟವಾಗಿ ತಿಳಿಸುತ್ತದೆ ಅದರಲ್ಲಿ ಎಷ್ಟು ಮಾತ್ರವನ್ನೂ ಕಡಿಮೆ ಮಾಡಲು ಅವಕಾಶವಿಲ್ಲ

ಕಳೆದ ವರ್ಷದ ಪಡಿತರದಲ್ಲಿ ಹಿಡುವಳಿದಾರರ ಬಳಿ ಇನ್ನೂ ಏನಾದರೂ ಉಳಿದಿರಬಹುದೆಂದು ಲೆಕ್ಕಾಚಾರದಿಂದ ಕಂಡು ಬಂದಾಗ್ಯೂ ಅದನ್ನು ಈ ಸಾರಿ ಕಟಾಯಿಸಲಾಗದೆಂದು ಸ್ಪಷ್ಟವಾಗಿ ತಿಳಿಸಲಾಗಿದೆ ಈ ಬಗ್ಗೆ ಎಲ್ಲಾ ರೇಷನ್ ಅಧಿಕಾರಿಗಳಿಗೂ ತಿಳುವಳಿಕೆಯನ್ನು ಕೊಡಲಾಗಿದೆಯೆಂದೂ, ಸಮಾಧಿಸಲಾಗಿದೆ ಆದರೂ ಸಹ ಸಾವಿರಾರು ಜನ ಹಿಡುವಳಿದಾರರುಗಳಿಗೆ ಅನೇಕ ಸಲ್ಲ ಧಾನ್ಯವನ್ನು ಕಡಿಮೆ ಮಾಡಲಾಗಿದೆ ಸುಮಾರು ಹಂಚರ ನಾಲ್ಕೈದು ಪಲ್ಲ ಧಾನ್ಯವನ್ನು ಒಬ್ಬೊಬ್ಬರಿಂದಲೂ ತೆಗೆದುಕೊಳ್ಳಲಾಗಿದೆ. ನಾವು ಹಿಂದೆಯೇ ಸೂಚಿಸಿದ್ದಂತೆ ಒಂದು ಸಂದರ್ಭದಲ್ಲಿ ಬರುವ ಆಗಸ್ಟ್‌ವರೆಗಿನ ಧಾನ್ಯವನ್ನೆಲ್ಲಾ ಹಿಡಿಯಲಾಗಿದೆ. ಇದು ಶುದ್ಧ ಅಕ್ರಮವೆಂದು ಮೇಲಿನ ಹೇಳಿಕೆಯಿಂದ ವೇದ್ಯವಾಗುತ್ತದೆ.

ಸ್ವಂತ ಜಮೀನಿನಲ್ಲಿ ಬೆಳೆದ ಹಿಡುವಳಿದಾರರು ದಿನಬಳಕೆ ಉಪಯೋಗಳಿಂದ ಕೊಳ್ಳುವವರಂತೆ ಕಟ್ಟುನಿಟ್ಟಾಗಿ ಕ್ಲಿಪ್ತ ಪ್ರಮಾಣದಲ್ಲಿ ಧಾನ್ಯವನ್ನು ಉಪಯೋಗಿಸದೆ ಇರುವುದು ಸ್ವಾಭಾವಿಕ ವರ್ಷದ ದಾಸ್ತಾನು ಹಾಜರಿರುವಾಗ ಸ್ವಲ್ಪ ಧಾರಾಳವಾಗಿ ಬಳಸುವುದೂ ಸಹಜ. ಹೀಗೆ ಮಾಡಿದುದನ್ನು ಒಂದು ಮಹಾಪರಾಧವೆಂದು ಪರಿಗಣಿಸಿ ಬರುವ ವರ್ಷದ ಫಸಲಿನಲ್ಲಿ ಕಡಿಮೆ ಮಾಡುವುದು ಸ್ವಲ್ಪವೂ ನ್ಯಾಯವಲ್ಲ. ಅದು ಯಾವ ರೇಷನ್ ತತ್ವಕ್ಕೂ ಅನುಗುಣವಾಗಿರುವುದಿಲ್ಲ. ಮದುವೆ, ಮುಂಜಿ ಮುಂತಾದ ಶುಭ ಕಾರ್ಯಗಳಿಗೂ ಅಥವಾ ಇತರ ಅಶುಭ ಕಾರ್ಯಗಳಿಗೂ, ಹೆಚ್ಚು ಧಾನ್ಯವು ವಿನಿಯೋಗವಾಗಿರುವ ಸಂದರ್ಭಗಳೂ ಉಂಟು. ಅದಕ್ಕಾಗಿ ಇಡೀ ಸಂಸಾರಗಳನ್ನೇ ಉಪವಾಸಕ್ಕೆ ಗುರಿಪಡಿಸುವ ನೀತಿಯು ಸರಿಯಲ್ಲ

ಹೊಸ ವರ್ಷಕ್ಕಾಗಿ

ಹೊಸ ನಮೂನೆ

ಜವಳಿಗಳು

ಬಂದಿವೆ. ಇಂದೇ ಭೇಟಿ ಕೊಡಿರಿ

ಬಿ. ಕೆಂಚಪ್ಪ ಸನ್ಸ್,

ಜವಳಿ ಅಂಗಡಿ

ದೊಡ್ಡ ಪೇಟೆ, ಮೈಸೂರು

ಆನೆಗಳ ಹಾವಳಿ

ಸ್ವಂ. ವ] ಹೆಗ್ಗಡದೇವನಕೋಟೆ ೩

ಹೆಗ್ಗಡದೇವನ ಕೋಟೆ ತಾಲ್ಲೋಕು ಬಸವನ ಕೋಟೆ ಬಯಲಿನಲ್ಲಿರುವ ಬತ್ತದ ಗದ್ದೆಗಳಿಗೆ ಸುಮಾರು ೩೦ ಆನೆಗಳ ಒಂದು ದೊಡ್ಡ ಹಿಂಡು ನುಗ್ಗಿ ೩೦೦-೪೦೦ ಎಕರೆ ಫಸಲನ್ನೆಲ್ಲಾ ಲೂಟಿ ಮಾಡಿ ಹಾಳು ಮಾಡಿರುತ್ತವೆ. ಈಗ ೩ ವರ್ಷಗಳಿಂದಲೂ ಇದೇ ರೀತಿ ನಡೆಯುತ್ತಿದ್ದು ಸರ್ಕಾರದವರಿಗೆ ಈ ಬಗ್ಗೆ ದೂರು ಕೊಟ್ಟಿದ್ದರೂ ಸಹ ಈ ದಿನವರೆಗೆ ಯಾವ ಬಗೆಯ ಏರ್ಪಾಡುಗಳೂ ಕೈಗೊಳ್ಳಲ್ಪಟ್ಟಿರುವುದಿಲ್ಲ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಇದಕ್ಕೆ ನಿಗಾ ಕೊಡಬೇಕಾಗಿ ಕೋರಲಾಗಿದೆ.

ಪ್ರತಿಬಂಧಕಾಜ್ಞೆ

ಟಿ. ನರಸೀಪುರ ೩

ಈ ಊರು ಮತ್ತು ಸುತ್ತಮುತ್ತಲಿನ ೫ ಮೈಲಿ ಫಾಸಲೆಯೊಳಗೆ ಸಭೆ ಮತ್ತು ಮೆರವಣಿಗೆಗಳನ್ನು ಪರವಾನಿಯಿಲ್ಲದೆ ನಡೆಸದಂತೆ ಪ್ರತಿಬಂಧಕಾಜ್ಞೆಯನ್ನು ಅಮಲ್ದಾರ್ ಮ್ಯಾಜಿಸ್ಟ್ರೇಟರು ಮೊನ್ನೆಯಿಂದ ಜಾರಿಗೆ ತಂದಿದ್ದಾರೆ.

ಇದನ್ನು ಅಂಗೀಕರಿಸಿಯೇ ಆಹಾರದ ಡೈರೆಕ್ಟರವರು ಮೇಲ್ಕಂಡ ವಿವರಣೆಯನ್ನು ಕೊಟ್ಟಿದ್ದಾರೆ ಈಗಾಗಲೇ ಸಾವಿರಾರು ಜನರು ತಮ್ಮ ಪಡಿತರದ ಸರ್ಟಿಫಿಕೇಟುಗಳನ್ನು ತೆಗೆದು ಕೊಂಡು ಧಾನ್ಯವನ್ನು ತರುತ್ತಿದ್ದಾರೆ ಇನ್ನು ಕೆಲವರು ಇನ್ನೂ ತೆಗೆದುಕೊಂಡಿರುವುದಿಲ್ಲ, ಈಗ ಅದನ್ನು ತೆಗೆದು ಕೊಂಡಿರುವವರಿಗೆ ಕಡಿಮೆ ಮಾಡಲ್ಪಟ್ಟಿರುವ ಧಾನ್ಯವನ್ನು ಕೊಡಿಸುವುದಕ್ಕೂ ಇನ್ನು ಮುಂದೆ ಸರ್ಟಿಫಿಕೇಟುಗಳನ್ನು ತೆಗೆದು ಕೊಳ್ಳುವವರು ಪೂರ್ತಿಯಾದ ಧಾನ್ಯವನ್ನು ಪಡೆಯುವುದಕ್ಕೂ ರೇಷನ್ ಅಧಿಕಾರಿಗಳು ಈ ಕೂಡಲೇ ಏರ್ಪಾಡುಮಾಡುವುದು ಅಗತ್ಯವಾಗಿದೆ ಬಡ ಜನರ ಜೀವನಕ್ಕೆ ಸಂಬಂಧಪಟ್ಟ ಈ ವಿಷಯದಲ್ಲಿ ಸ್ವಲ್ಪವೂ ತಾತ್ಸಾರ ಮಾಡದೆ ಬೇಗನೆ ಅಧಿಕಾರಿಗಳು ತಕ್ಕ ಕ್ರಮಗಳನ್ನು ಕೈಗೊಳ್ಳುವರೆಂದು ನಾವು ನಂಬುತ್ತೇವೆ

Edited, printed and published by A. R. Nagarajan at the Sadhvi Press D. Subbiah Road, Mysore.

ಚೀಣಾದಲ್ಲಿ ಹೊಸ ರಾಜ್ಯಾಂಗದ ಜಾರಿ

ಚೀಣದ ರಾಷ್ಟ್ರೀಯ ರಾಜ್ಯಾಂಗ ಸಭೆಯು ತಯಾರಿಸಿದ್ದ ರಾಜ್ಯಾಂಗ ರಚನೆಯ ಪ್ರತಿಗೆ ಜ॥ ಚಿಯಾಂಗ್ ಕೈ ಷೇಕರು ಮೊನ್ನೆ ರುಜು ಹಾಕಿ ಜಾರಿಗೆ ತಂದರು ಈ ಸಮಾರಂಭವನ್ನು ಚೀಣಾ ರಿಪಬ್ಲಿಕ್ ಸ್ಥಾಪನಾಚಾರ್ಯ ಡಾ॥ ಸನ್ ಯತ್ ಸೇನ್ ರವರ ಪ್ರತಿಮೆಯ ಅಡಿಯಲ್ಲಿ ನ್ಯಾನ್‌ಕಿಂಗಿನಲ್ಲಿ ಜರುಗಿಸಲಾಯಿತು

ಚಂದಾದಾರರಲ್ಲಿ ವಿನಂತಿ

ಚಂದಾದಾರುಗಳ ಪೈಕಿ ಮೊಬಲಗನ್ನು ಇನ್ನೂ ಪಾವತಿ ಮಾಡದೆ ಇರುವವರು ಕೂಡಲೇ ಪೂರ್ತಿ ಮೊಬಲಗನ್ನು ಸಾಧ್ವಿ ಆಫೀಸಿಗಾಗಲೀ, ಏಜಂಟರಿಗಾಗಲೀ ಸಲ್ಲಿಸಿ ರಶೀತಿ ಪಡೆಯ ಬೇಕಾಗಿ ಕೋರಿದೆ.

ಏಜೆಂಟ್, "ಸಾಧ್ವಿ"

ಅಂಧಕಾಸುರ ಸಂಹಾರ

ಶ್ರೀ ಶ್ರೀನಯನೇಶ್ವರ ಸ್ವಾಮಿಯವರ ಅಂಧಕಾಸುರ ಸಂಹಾರ ಉತ್ಸವವು ಆಗಮನೆ ಮುಂಭಾಗದಲ್ಲಿ ೬ನೇ ತಾ॥ ಸೋಮವಾರ ರಾತ್ರಿ ೮-೩೦ ಗಂಟೆಗೆ ನಡೆಯುತ್ತದೆ

ನಿಮ್ಮ ಮೈ ಮೊಕವುಲ್ಲಿನಂತೆ ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇಕೆ ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

ಹರಿಕಥೆ

ಡಿ. ಸುಬ್ಬಯ್ಯ ರಸ್ತೆಯಲ್ಲಿ ಶ್ರೀ ಬ್ರಹ್ಮಾನಂದ ಸ್ವಾಮಿಗಳ ಮನೆ ಮುಂಭಾಗ ಹಾಕಿರುವ ಚಪ್ಪರದಲ್ಲಿ ವೇ॥ ಬ್ರ॥ ಸೀತಾರಾಮಾರಾಧನ ದಾಸರಿಂದ ಈ ದಿನ ೯ ಗಂಟೆಗೆ 'ಪುರಂದರ ದಾಸರ' ಎಂಬ ಹರಿಕಥೆಯು ನಡೆಯುವುದು.

ಅಭಿನಂದನಾ ಸಭೆ.

ದಿವಾನರಾದ ಸರ್-ರಾಮಸ್ವಾಮಿ ಮೊದಲಿಯಾರ್, ದಾನಕರ್ತೃಗಳಾದ ಶ್ರೀಮಾನ್ ಕಾಡಪ್ಪ ಮತ್ತು ಹೊಂಬಾಳೆ ರಂಗಣ್ಣನವರಿಗೆ ಸಂಘದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಲು ಇದೇ ೧೨ನೇ ತಾ॥ ಭಾನುವಾರ ಬೆಳಗ್ಗೆ ಬನುಮಯ್ಯನವರ ಛತ್ರದ ಭವನದಲ್ಲಿ ಸಮಾರಂಭವನ್ನು ಕುಂಚಿಟಿಗರ ಸಮಾಜದವರು ಏರ್ಪಡಿಸಿದ್ದಾರೆ

ಟಿ. ಸಿ. ನಟರಾಜ್,

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಆಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳ ಚಿಕಿತ್ಸೆಯು ಬಹು ಸುಲಭ ಛಾರ್ಜಿನಲ್ಲಿ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಪಂಡಿತ ಡಿ. ಗೋಪಾಲಾಚಾರ್ಯರ

ಅರು...

ಗರ್ಭಾಶಯರೋಗ ನಿವಾರಿ...

ಅರುಣ ಋತು ದೋಷಗಳನ್ನು ನಿರ್ಮೂಲಿಸಿ ಪೂರ್ಣ ಸ್ತ್ರೀತ್ವವನ್ನು ಸಾಧಿಸುವ ಸ್ವಯಂ ಪೂರ್ಣವಾದ ದಿವ್ಯೌಷಧವನ್ನು ಬಿಡದೆ ಸೇವಿಸಿದರೆ, ನಿಮ್ಮ ಜೀವನ ಪರಮಾವಧಿಯಾದ ಸಂತಾನಂದವನ್ನು ಒದಗಿಸಬಲ್ಲುದು.

ಆಯುರ್ವೇದಾಶ್ರಮಂ ಲಿಮಿಟೆಡ್

ಟಿ-ನಗರ್, . . . ಮದರಾಸು

ಪೊಂಗಲ್ ಹಬ್ಬಕ್ಕೆ ತರಿಸಿರುವ ಪುರಾಣಿಕ ಚಿತ್ರ

ತಾ॥ 10 - 1 - 47 ರಿಂದ

ಬೆಂಗಳೂರು ಶಿವಾಜಿ ಮತ್ತು ಮೈಸೂರು ನ್ಯೂ ಅಪೆರಾ

— :: ಚಿತ್ರ ಮಂದಿರಗಳಲ್ಲಿ :: —

ಪೊನ್ನುರುವಿ

(ತಮಿಳು)

(ಮಹಾಭಾರತದ ಕಥೆಯ ಕರ್ಣನ ವಿವಾಹ, ಜೀವನ, ಸಹಕೆಗಳನ್ನು ಚಿತ್ರಿಸಿರುವ ಕಥೆ

ಭೂಮಿಕೆಯಲ್ಲಿ: ● ಕೊತ್ತಮಂಗಲಂ ಸೀನು ● ಕೆ. ಟಿ ರುಕ್ಮಿಣಿ

● ಆರ್ ಬಾಲಸುಬ್ರಹ್ಮಣ್ಯಂ, ● ಟಿ ಎಸ್, ದೊರೈರಾಜ್, ● ಟಿ ಎಸ್. ಜಯ

(ಸುಭ)

· FOR BOOKINGS —

Sree Vijaya Pictures,

197 Gandhinagar ::: Bangalore City

ಕೋರ್ಟ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೫—೧—೪೭ [ಸಂಚಿಕೆ ೧೨೮

ಬುಂದೇಲ್ ಖಂಡದಲ್ಲಿ ಸಾಮೂಹಿಕ ಸತ್ಯಾಗ್ರಹ

ರಾಜ್ಯಾಂಗ ಸಭೆಗೆ ಸಂಸ್ಥಾನಗಳು ಸೇರಲು ಒತ್ತಾಯ

ರಾಜ್ಯಾಂಗ ಸಭೆಯಲ್ಲಿರುವ ಪಕ್ಷಗಳೆ ಒಟ್ಟಿಗೆ ಕೆಲಸ ಮಾಡಿ, ಎಲ್ಲರಿಗೂ ಸಮ್ಮತವಾಗುವ ರಾಜ್ಯಾಂಗವನ್ನು ತಯಾರು ಮಾಡುವ ರೀತಿಯಲ್ಲಿ ಕೆಲಸ ಮಾಡಲು ಒಪ್ಪಿ, ಆ ನಿರ್ಧಾರವನ್ನು ತಡೆಗಟ್ಟಬಲ್ಲ ಶಕ್ತಿ ಪ್ರಪಂಚದಲ್ಲಿ ಯಾವುದೂ ಇಲ್ಲವೆಂದಾಗಿ ಗ್ವಾಲಿಯರ್ ದಿವಾನರಾಗಿದ್ದ ಎಸ್. ಬಿ. ರಾಜಗೋಪಾಲಾಚಾರಿಯವರು ತಿಳಿಸಿದ್ದಾರೆ. ರಾಜ್ಯಾಂಗ ಸಭೆ ಸ್ವತಂತ್ರವಾದದ್ದು. ಬ್ರಿಟಿಷ್ ನಿಯೋಗದವರು ಸಂಸ್ಥಾನಗಳಿಗೆ ಅನ್ಯಾಯ ಮಾಡಿದ್ದಾರೆ. ಆದಾಗ್ಯೂ ಭಾರತದ ಪಕ್ಷ ಭಾರತ ಐಕ್ಯತಾ ದೃಷ್ಟಿಯಿಂದಲೂ, ಭಾಗಗಳಲ್ಲೂ ಆಡಳಿತ ಪದ್ಧತಿಯನ್ನು ಏಕರೀತಿಯ ದೃಷ್ಟಿಯಿಂದ ವ್ಯವಸ್ಥೆ ಮಾಡುವ ಉದ್ದೇಶವಾಗಿಯೂ ಸಂಸ್ಥಾನಗಳಿಗೆ ಪೂರ್ಣ ಅವಕಾಶ ಕೊಡಬೇಕು. ಸಂಸ್ಥಾನಗಳು ಸಹ ಇದರ ಸಂಕೇತವನ್ನು ಅರಿತುಕೊಂಡು ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಬೇಕೆಂಬುದಾಗಿಯೂ ಅವರು ತಿಳಿಸಿರುವರು.

ಗಾಂಧಿಜಿಯವರಿಗೆ ಚಲಿಸುವ ಗುಡಿಸಲು

ಪೂರ್ವ ಬಂಗಾಳದಲ್ಲಿ ಕಾಲ್ನಡಿಗೆಯ ಪ್ರವಾಸ ಹೊರಟಿರುವ ಮಹಾತ್ಮ ಗಾಂಧಿಯವರಿಗಾಗಿ ಅವರ ಸಂಗಡ ಅವರ ಹಕ್ಕಿಯವರು ಒಂದು ಮಡಿಚುವ ಗುಡಿಸಲನ್ನೂ ಹೊತ್ತುಕೊಂಡು ಹೋಗುತ್ತಿದ್ದಾರೆ. ಇದು ಬಿದಿರಿನಿಂದ ತಯಾರಿಸಲ್ಪಟ್ಟಿದೆ. ಇದು ೬ ಅಡಿ ಉದ್ದ ಮತ್ತು ೬॥ ಅಡಿ ಅಗಲವಿದೆ. ಇದನ್ನು ಇಬ್ಬರು ಸುಲಭವಾಗಿ ಹೊತ್ತುಕೊಂಡು ಹೋಗಬಹುದು.

ಫ್ರಾನ್ಸಿನಲ್ಲಿ ಭಾರತ ರಾಯಭಾರಿ

ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾಗಿದ್ದ ಡಾ॥ ಬಾಲಕೃಷ್ಣ ಕೇಸ್ಕರರನ್ನು ಫ್ರಾನ್ಸಿನಲ್ಲಿ ನೆಹರು ಸರ್ಕಾರದ ರಾಯಭಾರಿಯಾಗಿ ನೇಮಿಸಲಾಗಿದೆಯೆಂದು ವರದಿಯಾಗಿದೆ. ಯುದ್ಧದ ಮುಂಚೆ ಇವರು ಫ್ರಾನ್ಸಿನಲ್ಲಿ ಅನೇಕ ವರ್ಷಗಳ ಕಾಲ ಇದ್ದರು. ಇನ್ನು ಎರಡು ಮೂರು ವಾರಗಳಲ್ಲಿ ಅಲ್ಲಿಗೆ ಅವರು ತೆರಳುವರೆಂದು ತಿಳಿದುಬಂದಿದೆ.

ಕ್ಯಾಲೆಂಡರ್ ಸ್ವೀಕಾರ

ಮೈಸೂರು ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸಿನ ರವಿ ಆರೋಗ್ಯ ಫಾರ್ಮಸಿ ಮತ್ತು ಧನ್ವಂತರಿ ವೈದ್ಯಶಾಲೆಯವರು ಕಳುಹಿಸಿಕೊಟ್ಟಿರುವ ಸುಂದರವಾದ ೧೯೪೭ನೇ ಇಸವಿಯ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

ಸಂತಾಪ ಸೂಚನೆ

ರಾಜಧಾನಿಯಲ್ಲಿ ಈದಿನ ವೃತ್ತಪತ್ರಿಕೋದ್ಯೋಗಿಗಳ ಸಂಘದ ಸಭೆಯು ಶ್ರೀ ಆರ್. ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸೇರಿತು. ವಾರವಾಣಿ ಪತ್ರಿಕೆಯ ಸಂಪಾದಕರೂ, ಸುಪ್ರಸಿದ್ಧ ಕಾಂಗ್ರೆಸ್ ಕೆಲಸಗಾರರೂ ಆದ ಶ್ರೀ ಆರ್. ವಿ. ಭದ್ರಣ್ಣನವರ ನಿಧನಕ್ಕೆ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಮಾಡಲಾಯಿತು. ಶ್ರೀ ಆರ್. ರಂಗಯ್ಯ ಮತ್ತು ಎ. ರಾಮಣ್ಣನವರು ಶ್ರೀ ಭದ್ರಣ್ಣನವರ ಗುಣಗಾನವನ್ನು ಮಾಡಿದರು.

ತಿರುಪತಿ ಹೋಟೇಲುಗಳಲ್ಲಿ ಹರಿಜನರು

ಮೊನ್ನೆದಿನ ತಿರುಪತಿ ಬೆಟ್ಟವನ್ನು ಹತ್ತುವುದಕ್ಕಾಗಿ ಬೆಟ್ಟದ ಬುಡದಲ್ಲಿರುವ ಗೋವಿಂದರಾಜಪಟ್ಟಣದಲ್ಲಿ ಸೇರಿದ್ದ ಹರಿಜನರೆಲ್ಲರೂ ಅಲ್ಲಿನ ಸವರ್ಣ ಹಿಂದೂ ಹೋಟೆಲುಗಳಲ್ಲಿ ಹೋಗಿ ಫಲಾಹಾರವನ್ನು ತೆಗೆದುಕೊಳ್ಳಲು ಯಾವ ಅಡ್ಡಿಯೂ ಇಲ್ಲದಂತೆ ಏರ್ಪಾಡು ಮಾಡಲಾಗಿತ್ತೆಂದು ತಿಳಿಯಬಂದಿದೆ.

ಅಖಿಲ ಭಾರತ ಕಾಂಗ್ರೆಸ್ ಸಮಿತಿ

ದೆಹಲಿಯಲ್ಲಿ ಈದಿನ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನವು ಸೇರಿ ಪ್ರಾಂತ ವರ್ಗೀಕರಣದ ವಿಷಯವಾಗಿ ಬ್ರಿಟಿಷ್ ಮಂತ್ರಿಮಂಡಲದವರು ಕೊಟ್ಟಿರುವ ವಿವರಣೆಯನ್ನು ಪರಿಶೀಲಿಸುವುದು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕಳೆದ ಎರಡು ದಿನಗಳಿಂದ ಸಮಾಲೋಚನೆ ನಡೆಸಿ ಈ ಬಗ್ಗೆ ಅಭಿಪ್ರಾಯವನ್ನು ಸಿದ್ಧಗೊಳಿಸಿರುವುದ. ಮಂತ್ರಿಮಂಡಲದ ಹೇಳಿಕೆಯನ್ನು ಇಂದಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸು ಅಂಗೀಕರಿಸಬೇಕೆಂದು ಸದರೀ ಸಮಿತಿಯು ನಿರ್ಧರಿಸುವ ನಿರೀಕ್ಷಣೆಯಿದೆ.

ಐ. ಸಿ. ಎಸ್. ನೌಕರರ ನಿವೃತ್ತಿ

ಭಾರತದಲ್ಲಿರುವ ಯೂರೋಪ್ಯ ಸಿವಿಲ್ ಸರ್ವಿಸ್ ಮತ್ತು ಪೊಲೀಸ್ ಸರ್ವಿಸ್‌ಗಳಲ್ಲಿರುವ ನೌಕರರನ್ನು ಅವಧಿಗೆ ಮುಂಚಿತವಾಗಿಯೇ ನಿವೃತ್ತಿ ಮಾಡಿ ಅವರಿಗೆ ಪರಿಹಾರ ಕೊಡುವುದ ವ್ಯವಸ್ಥೆಯನ್ನು ಸಾಂಗವಾಗಿ ನೆರವೇರಿಸಲು ಇಂಡಿಯಾ ಅಂಡರ್ ಸೆಕ್ರೆಟರಿ ಮಿ॥ ಆರ್ಥರ್ ಹೆಂಡರ್‌ಸನ್ನರು ನಿನ್ನೆ ದಿವ ದೆಹಲಿಗೆ ಬಂದಿಳಿದರು.

ಗಾಂಧೀಜಿ ಯಾತ್ರೆಯ ಚಲನ ಚಿತ್ರ

ಕೋಮುವಾರು ಸೌಹಾರ್ದವನ್ನು ಬೆಳೆಸಿ ಮಹಾತ್ಮರ ಪ್ರೇಮದ ಸಂದೇಶವನ್ನು ಗ್ರಾಮಾಂತರಗಳಲ್ಲಿ ಬೀರಲು ಅವರು ಇಂದು ಕೈಗೊಂಡಿರುವ ಕಾಲ್ನಡಿಗೆಯ ಯಾತ್ರೆಯ ಚಲನ ಚಿತ್ರವನ್ನು ತೆಗೆದು ದೇಶದಲ್ಲೆಲ್ಲಾ ಅದನ್ನು ಪ್ರದರ್ಶಿಸಬೇಕೆಂದು ಜಾತಿಯ ಗಾಂಧಿ ಸೇವಾ ಸಂಘದ ಸುಂದರಂರವರು ಸರ್ದಾರ್ ಪಟೇಲರವರಿಗೆ ಸೂಚನೆ ಇತ್ತಿದ್ದಾರೆ.

ಸತ್ಯಾರ್ಥ ಪ್ರಕಾಶ ಸತ್ಯಾಗ್ರಹ

ಆರ್ಯ ಸಮಾಜದ ಸ್ಥಾಪಕರಾದ ಸ್ವಾಮಿ ದಯಾನಂದ ಸರಸ್ವತಿಯವರಿಂದ ಬರೆಯಲ್ಪಟ್ಟಿರುವ ಸತ್ಯಾರ್ಥ ಪ್ರಕಾಶವೆಂಬ ಗ್ರಂಥದ ಹದಿನಾಲ್ಕನೇ ಅಧ್ಯಾಯದಲ್ಲಿ ಆಕ್ಷೇಪಣೀಯವಾದ ವಿಷಯವಿರುವುದೆಂದು ಸಿಂಧೂ ಪ್ರಾಂತ್ಯದ ಲೀಗ್ ಮಂತ್ರಿಮಂಡಲದವರು ಸದರೀ ಗ್ರಂಥದ ಆ ಅಧ್ಯಾಯವನ್ನು ತೆಗೆದುಹಾಕುವಂತೆ ಹಲವು ವರ್ಷಗಳ ಹಿಂದೆ ಮಾಡಿದ್ದ ಆಜ್ಞೆಗೆ ಆಗಿಂದಾಗ್ಗೆ ಬರುತ್ತಿದ್ದ ಪ್ರತಿಭಟನೆಯು ಈಗ ಭಾರಿ ಚಳವಳಿಯ ಸ್ವರೂಪವನ್ನು ತಾಳಿಬಿಟ್ಟಿದೆ. ಈ ನಿರ್ಬಂಧವನ್ನು ರದ್ದುಪಡಿಸಲು ಆರ್ಯಸಮಾಜದ ಮುಂದಾಳುಗಳಾದ ಮಹಾತ್ಮ ನಾರಾಯಣಸ್ವಾಮಿ, ಲಾಲಾ ಖುಶಾಲ್ ಚಂದ್ ಮತ್ತು ರಾಮಗುರು ಧುರೀಂದ್ರಶಾಸ್ತ್ರಿಗಳು ಕರಾಚಿಗೆ ಬಂದಿಳಿದಿದ್ದಾರೆ. ಶಪ್ತಲ್ಲಿ ನಿಷೇಧಿಸಲ್ಪಟ್ಟ ಗ್ರಂಥವು ಇರುವುದರಿಂದ ಆಧೀನ ದಿನಗಳ ತಿಳಿ ಅವರು ಸತ್ಯಾಗ್ರಹವನ್ನು ಆಚರಿಸುತ್ತಾರೆ. ಸ್ಥಳೀಯ ಆರ್ಯಸಮಾಜ ಮತ್ತು ಇತರ ಸಂಸ್ಥೆಗಳು ಅವರಿಗೆ ಬೆಂಬಲವಿತ್ತು ದೊಡ್ಡ ಚಳುವಳಿ ನಡೆಸುವ ಸಂಭವವಿದೆ.

ಮ್ಯಾಜಿಸ್ಟ್ರೇಟರ ದಸ್ತಗಿರಿ

ತಿರುಚನಾಪಳ್ಳಿಯಲ್ಲಿ ಮಾಡರ್ನ್ ಹಿಂದೂ ಹೋಟೇಲ್ ಭವನವಿರುವ ತಮ್ಮ ಕಟ್ಟಡವನ್ನು ಅದರ ಬಾಡಿಗೆ ಸಾಯಿದೆಯು ಮುಗಿದ ಒಡನೆಯೇ ಬಲವಂತದಿಂದ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲು ಇತರ ಅನು ಜನರೊಡನೆ ಅಲ್ಲಿಗೆ ಹೋಗಿ ಕಟ್ಟಡದೊಳಗೆ ಹೋಟೆಲಿನ ಸೇವಕರೂ, ಕೆಲವು ಜನ ಗಿರಾಕಿಗಳೂ ಇರುವಾಗಲೇ ಅದಕ್ಕೆ ಬೀಗ ಹಾಕಿ ಬೋರ್ಡುಗಳನ್ನು ತೆಗೆಸಿದ ರಂಪ ಆಪಾದನೆಯ ಮೇಲೆ ತಿರುಚನಾಪಳ್ಳಿಯ ಪೊಲೀಸರು ಪುದುಕೋಟೆಯ ಅಂಗೀಕೃತ ಚೀಫ್ ಮ್ಯಾಜಿಸ್ಟ್ರೇಟರಾದ ಶ್ರೀ ಟಿ. ಎನ್. ಗೋವಿಂದ ರಾಜುಲು ನಾಯ್ಡು ಮತ್ತು ಅವರ ಅನುಯಾಯಿ ಗಳನ್ನು ದಸ್ತಗಿರಿ ಮಾಡಿ ಮುಂದಿನ ಕ್ರಮ ಜರುಗಿಸುತ್ತಿದ್ದಾರೆ.

ವ್ಯವಸಾಯದ ಆದಾಯ ತೆರಿಗೆ

ಐದು ಸಾವಿರ ರೂಪಾಯಿಗಿಂತ ಹೆಚ್ಚು ವರಮಾನವಿರುವ ಜಮೀನುದಾರರುಗಳಿಗೆ ವ್ಯವಸಾಯದ ವರಮಾನ ತೆರಿಗೆಯನ್ನು ವಿಧಿಸಲು ಮದರಾಸ್ ಸರ್ಕಾರದವರು ಒಂದು ಮಸೂದೆಯನ್ನು ಸಿದ್ಧಗೊಳಿಸಿದ್ದಾರೆ.

ಬುಂದೇಲ್ ಖಂಡದಲ್ಲಿ ಸತ್ಯಾಗ್ರಹ

ಬುಂದೇಲ್ ಖಂಡದ ಕಾಂಗ್ರೆಸ್ ಸಂಸ್ಥೆಯು ಸಾಮೂಹಿಕ ಸತ್ಯಾಗ್ರಹವನ್ನು ಹೂಡಿರುವುದಾಗಿ ತಿಳಿದುಬಂದಿದೆ. ಜವಾಬ್ದಾರೀ ಸರ್ಕಾರದ ತತ್ವದನ್ವಯ ಹೊಸ ರಾಜ್ಯಾಂಗವನ್ನು ರಚಿಸಲು ಒಂದು ಸಮಿತಿಯನ್ನು ಮತ್ತು ಪ್ರಜೆಗಳ ಅಭಿಮತಕ್ಕೆ ಅನುಗುಣವಾದ ಹಂಗಾಮೀ ಸರ್ಕಾರವನ್ನು ಕೂಡಲೇ ಆ ಸಂಸ್ಥಾನದಲ್ಲಿ ಸ್ಥಾಪಿಸಬೇಕೆಂಬ ವಿಚಾರವಾಗಿ ಕಾಂಗ್ರೆಸ್ಸಿನವರು ಮೂರು ದಿವಸಗಳ ಅವಧಿಯನ್ನು ಸರ್ಕಾರದವರಿಗೆ ಕೊಟ್ಟಿದ್ದರು. ಅಷ್ಟರಲ್ಲಿ ಸದುತ್ತರವು ಬಾರದಿದ್ದುದರಿಂದ ಚಳವಳಿಯನ್ನು ಹೂಡಿದರು. ಸ್ವಯಂ ಸೇವಕರುಗಳ ತಂಡಗಳು ಗುಂಪು ಗುಂಪಾಗಿ ಮೆರವಣಿಗೆ ಮಾಡಿಕೊಂಡು ಹೋಗಿ ಅಲ್ಲಿ ಜಾರಿಯಲ್ಲಿದ್ದ ಪ್ರತಿಬಂಧಾಜ್ಞೆಗಳನ್ನು ಮುರಿದರು. ಅವರೆ ಅಧಿಕಾರಿಗಳು ಯಾರನ್ನೂ ದಸ್ತಗಿರಿ ಮಾಡುತ್ತಿಲ್ಲವೆಂದು ತಿಳಿದುಬಂದಿದೆ. ಸಂಸ್ಥಾನದ ಶಾಸನ ಸಭೆ, ಪೌರಸಭೆ, ಜಿಲ್ಲಾ ಬೋರ್ಡ್ ಮತ್ತು ಪಂಚಾಯತಿಗಳಲ್ಲಿರುವ ಕಾಂಗ್ರೆಸ್ ಸದಸ್ಯರುಗಳೆಲ್ಲರೂ ರಾಜೀನಾಮೆ ಇತ್ತಿರುವುದಾಗಿ ತಿಳಿದುಬಂದಿದೆ.

ಮನ್ನಾರಗುಡಿಯಲ್ಲಿ ಲೂಟಿ

ಮದ್ರಾಸ್ ಪ್ರಾಂತ್ಯದ ಮನ್ನಾರಗುಡಿಯಲ್ಲಿ ಲೂಟಿ ಮತ್ತು ದಂಗೆ ಕೃತ್ಯಗಳು ನಡೆಯುತ್ತಿರುವುದಾಗಿ ವರದಿಯಾಗಿದೆ. ಜಮೀನ್ದಾರರನ್ನು ಹೊಡೆಯುವುದು, ಒಕ್ಕಲ ಧಾನ್ಯವನ್ನು ದೋಚಿಕೊಂಡು ಹೋಗುವುದು ಮತ್ತು ಅವನ್ನು ಕದಿಯಲು ಬಂದವರನ್ನು ಕೊಲ್ಲುವುದು ಇವೇ ಮುಂತಾದ ಕೃತ್ಯಗಳು ನಡೆಯುತ್ತಿವೆ. ಸ್ಥಳೀಯ ಅಧಿಕಾರಿಗಳೂ ಸಹ ಇವನ್ನೆಲ್ಲ ಸಹಕಾರಿಗಳಾಗಿದ್ದಾರೆಂದು ಹೇಳಲಾಗಿದೆ. ಕಮ್ಯೂನಿಸ್ಟರುಗಳೂ ಸಹ ಈಗಿನ ಮಂತ್ರಿಮಂಡಲದ ಬಗ್ಗೆ ತಾತ್ಸಾರದ ವರ್ತನೆ ತೋರಿಸುತ್ತಿದ್ದಾರೆ. ಬೇಗನೆ ಈಗಿನ ಮಂತ್ರಿಗಳು ಮತ್ತೆ ರಾಜೀನಾಮೆ ಕೊಟ್ಟು ಕಾಂಗ್ರೆಸ್ಸಿಗೆ ಕೆಲಸ ಮಾಡಬೇಕೆಂದು ಅವರು ಭಾವಿಸಿರುವುದಾಗಿಯೂ ಹೇಳಲಾಗಿದೆ. ಅವರ ಇಂತಹ ಅಭಿಪ್ರಾಯಗಳನ್ನು ತೋರಿಸಿ, ಸರ್ಕಾರದ ಕೆಲಸವನ್ನು ಅವರು ವಿಚಕ್ಷಣೆಯಿಂದ ನಡೆಸಬೇಕೆಂದೂ, ತಪ್ಪಿತಸ್ಥರನ್ನು ನಿರ್ದಾಕ್ಷಿಣ್ಯವಾಗಿ ದಂಡಿಸಲಾಗುವುದೆಂದೂ ರೆವಿನ್ಯೂ ಮಂತ್ರಿಗಳಾದ ಶ್ರೀ ಕೆ. ಆರ್. ಕಾರಂತರವರು ಅವರಿಗೆ ಎಚ್ಚರಿಕೆ ಕೊಟ್ಟಿದ್ದಾರೆ.

ಕಳ್ಳತನ

ಮೈಸೂರು ೪

“ರಮಾವಿಲಾಸ ಅಗ್ರಹಾರದಲ್ಲಿ ವಕೀಲಾಗಿರುವ ಶಂಕರಪ್ಪ ಮಗನಾದ ನಾಗೇಶರಾವ ಶ್ರೀ ಎಂ. ಬಿ. ಬಿ. ಫಣಿವರ್ಮರವರ ಮನೆಗೆ ನಿನ್ನೆ ಕಳ್ಳರು ನುಗ್ಗಿ ಬೆಳ್ಳಿ ತಟ್ಟೆಗಳು ರೆಷ್ಮೆ ಮುತ್ತುವೂ ಉಳಿದ ಹಿತ್ತಾಳೆ, ಪಾತ್ರೆಗಳೇ ಮುಂತಾದ ಬೆಲೆ ಬಾಳುವ ಸಾಮಾನುಗಳನ್ನು ಅಪಹರಿಸಿಕೊಂಡು ಹೋದರೆಂದೂ ಮತ್ತು ಅವರ ಪಕ್ಕದ ಮನೆಯಲ್ಲಿಯೂ ಸಹ ಕಳ್ಳರು ಬೀಗವನ್ನು ಒಡೆದಿರುವರೆಂದೂ, ಕೆಲವು ದಿನಗಳ ಹಿಂದೆ ಅವರ ಪಕ್ಕದ ಮನೆಯಲ್ಲಿಯೂ ಕಳ್ಳತನ ನಡೆದಿದೆಯೆಂದೂ ವರದಿಯಾಗಿದೆ. ಇಂತಹ ಘಟನೆಗಳು ನಡೆಯುತ್ತಿರುವುದು ಆಶ್ಚರ್ಯಕರವಾಗಿದೆ.”

“ಕೇಂದ್ರ ವಿಭಾಗ ಪಲಾಯಿ ಸಮಿತಿ ಸಭೆಯಲ್ಲಿ ಚರ್ಚಿಸಲು ಡಾ॥ ರಾಜನ್ ದಿನವೇ ಇಂದು ರಾತ್ರಿ ಬೆಂಗಳೂರಿನಿಂದ ದೆಹಲಿಗೆ ತೆರಳುವರು.

ಸಾಧ್ವಿ
ತಾ|| ೫-೧-೪೭ ಭಾನುವಾರ

ಬೆಲ್ಲದ ಅಭಾವ

ಸರ್ಕಾರದವರು ಬೆಲ್ಲದ ಹತೋಟಿಯನ್ನೇನೋ ಮಾಡಿರುವರು. ಇದು ಸಂತೋಷದ ಸಂಗತಿ. ಹನ್ನೆರಡು ಹದಿನಾಲ್ಕು ರೂಪಾಯಿಗೆ ಒಂದು ಮಣದಂತೆ ಮಾರುತ್ತಿದ್ದುದಕ್ಕೆ ಆರೂವರೆ ರೂಪಾಯಿನಂತೆ ಗೊತ್ತು ಮಾಡಿದ್ದಾರೆ. ಸಕ್ಕರೆಗಿಂತಲೂ ಬೆಲ್ಲಕ್ಕೆ ಹೆಚ್ಚು ಬೆಲೆಯಾಗಿರುವುದೆಂಬ ಕೂಗು ಇದರಿಂದ ಕಡಿಮೆಯಾಯಿತು.

ಬೆಲೆಯೇನೋ ನಿಗದಿಯಾಗಿದೆ. ಆದರೆ ಸಾಮಾನು ದೊರೆಯುವ ಬಗೆ ಹೇಗೆ? ಅದನ್ನು ಸರ್ಕಾರದವರು ಒತ್ತಾಯ ಪಡಿಸಲು ಕಾರ್ಯಕ್ರಮ ಕೈಕೊಂಡಿರುವರೇ? ಬೆಲೆಯನ್ನು ಅರ್ಧಕ್ಕೆ ಇಳಿಸಿದ ಮೇಲೆ ಆಳ ಸಂತೆಯವರಿಗೆ ಧಕ್ಕೆ ತಗಲಿ ಪೇಟೆಯಲ್ಲಿ ಮಾರಾಟಕ್ಕಿರುವ ಮಾಲುಗಳೆಲ್ಲವೂ ಅಂತರ್ಧಾನವಾಗಲು ಉಪಕ್ರಮವಾಗುವುದು ಪದ್ಧತಿ. ಈಗ ಯಾವ ಅಂಗಡಿಯಲ್ಲಿ ಕೇಳಿದರೂ ಬೆಲ್ಲವೇ ಇಲ್ಲವೆನ್ನುತ್ತಿದ್ದಾರೆ. ಸಕ್ಕರೆಯಾದರೂ ಸಿಕ್ಕೀತು; ಬೆಲ್ಲವು ದೊರಕುವುದಿಲ್ಲ.

ಒಂದು ಅಚ್ಚಿಗೆ ಐದಾಣೆ ಆಣೆಯಂತೆ ಮಾರಾಟವಾಗುತ್ತಿದ್ದ ಬೆಲ್ಲವು ಈಗ ಹಠಾತ್ತಾಗಿ ಪತ್ತೆ ಇಲ್ಲವಾಗಿದೆ. ಕೇಳಿದ ಬೆಲೆಯನ್ನು ಕೊಡುವವರಿಗೆ ಮಾತ್ರ ಸಂದಿಗೊಂದಿಯಲ್ಲಿಂದ ಹೊರಕ್ಕೆ ಬಂದು ಅದು ಸಿಗುವುದೆಂದು ಹೇಳಲಾಗಿದೆ. ಅಂತು ದರವನ್ನು ಹತೋಟಿಯಲ್ಲಿಟ್ಟ ಉದ್ದೇಶವು ನೆರವೇರುತ್ತಿಲ್ಲ. ಇದರಿಂದ ಬಡ ಜನರಿಗೆ ಬ ತೊಂದರೆಯಾಗಿದೆ.

ಕೇವಲ ಕೆಲವು ದಿನಗಳ ಹಿಂದೆ ಬಹಿರಂಗವಾಗಿ ಮಾರಾಟವಾಗುತ್ತಿದ್ದ ಬೆಲ್ಲವೆಲ್ಲವೂ ಏನಾಯಿತೆಂಬ ಪ್ರಶ್ನೆಯು ಸಹಜವಾಗಿಯೇ ಏಳುವುದು. ನೆರೆಯ ಪ್ರಾಂತಗಳಲ್ಲಿ ಹೆಚ್ಚಿನ ಬೆಲೆ ದೊರೆಯುವ ಸ್ಥಳಗಳಿಗೆ ಅದು ಸಾಗಿ ಹೋಗುವುದೂ ಉಂಟು. ಇದನ್ನು ಸಂಸ್ಥಾನದಿಂದ ಹೊರಕ್ಕೆ ಸಾಗಿಸದಿರಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಂಡಿರುವರೋ ತಿಳಿಯದು. ಸಂಸ್ಥಾನದ ಗಡಿ ಪ್ರದೇಶದಲ್ಲಿ ಹೆಚ್ಚು ಬುಸ್ತುವಾರಿಯನ್ನು ಇಡುವುದು ಅವಶ್ಯಕ.

ಅಲ್ಲದೆ ಇಲ್ಲಿಯೇ ಗುಪ್ತವಾಗಿ ಬಚ್ಚಿಟ್ಟು ಸಮಯ ಬಂದಂತೆಲ್ಲಾ ವಿಪರೀತ ಲಾಭಕ್ಕೆ ಮಾರುವ ಪದ್ಧತಿಗಳನ್ನು ಪತ್ತೆ ಹಚ್ಚಿ ತಪ್ಪಿತಸ್ಥರಿಗೆ ತಕ್ಕ ಬಂದೋಬಸ್ತು ಮಾಡಬೇಕು. ಪದಾರ್ಥಗಳನ್ನು ಇಟ್ಟುಕೊಂಡಿದ್ದರೂ ಇಲ್ಲವೆಂದು ಹೇಳಿ ಅದನ್ನೇ ಹೆಚ್ಚಿನ ಬೆಲೆಯು ದೊರೆತಾಗ ಮಾರುವವರನ್ನು ಪತ್ತೆ ಹಚ್ಚಿ ಉಗ್ರವಾಗಿ ದಂಡಿಸಬೇಕು. ಈ ಬಗ್ಗೆ ಸರ್ಕಾರ ಗೂಢಾಚಾರ ವರ್ಗದವರು ಸ್ವಲ್ಪ ಹೆಚ್ಚು ಚಟುವಟಿಕೆಯಿಂದ ಕೆಲಸ ಮಾಡುವುದು ಅವಶ್ಯಕ.

ಪ್ರಕೃತದಲ್ಲಿ ಸಂಕ್ರಾಂತಿ ಹಬ್ಬವು ಬರುತ್ತಿದೆ. ಎಲ್ಲಾ ಪ್ರಜೆಗಳಿಗೂ ಈಗ ಬೆಲ್ಲವು ಅತ್ಯಗತ್ಯವಾಗಿದೆ. ಆದುದರಿಂದ ಅಧಿಕಾರಿಗಳು ಈಗಿನಿಂದಲೇ ಶ್ರದ್ಧೆ ವಹಿಸಿ ಎಲ್ಲೆಲ್ಲಿ ಬೆಲ್ಲದ ದಾಸ್ತಾನು ಇದೆಯೋ ಪತ್ತೆ ಹಚ್ಚಿ, ಅವುಗಳ ಲೆಖ್ಖವನ್ನು ತೆಗೆದುಕೊಂಡು ಅವುಗಳನ್ನು ಹೊರಕ್ಕೆ ತೆಗೆಸಿ ನಿಗದಿಯಾದ ಬೆಲೆಗೆ ಮಾರಾಟವಾಗುವಂತೆ ಮಾಡಬೇಕು. ಮುಖ್ಯ ರೇಷನ್ ಡಿಪೋಗಳಲ್ಲಿಯೂ ಸರ್ಕಾರದವರೇ ಬೆಲ್ಲವನ್ನು ಇಡಿಸಿ ಎಲ್ಲ ಪ್ರಜೆಗಳಿಗೂ ದೊರೆಯುವಂತೆ ಮಾಡಬೇಕು. ಇದಕ್ಕೆ ಅಧಿಕಾರಿಗಳು ತಕ್ಕ ಗಮನ ಕೊಡುವರೆಂದು ನಂಬಿದ್ದೇವೆ.

ಸಿಲೋನಿಗೆ ಭಾರತವೇ ಮಾತೃಭೂಮಿ

ಬೌದ್ಧಮತವು ಅಶೋಕ ಚಕ್ರವರ್ತಿಯ ಮಗನಿಂದ ಸಿಲೋನಿಗೆ ಕೊಡಲ್ಪಟ್ಟ ಉಡುಗರೆ. ಆದಕಾರಣ ಸಿಲೋನು ಮಾತೃಭೂಮಿಯಾದ ಭಾರತದೊಡನೆ ಸೌಹಾರ್ದ ಸಂಪರ್ಕವನ್ನಿಟ್ಟುಕೊಳ್ಳಲು ಕಾತುರವಾಗಿದೆ. ಪಂ|| ನೆಹರುರವರ ನಾಯಕತ್ವದಲ್ಲಿ ಭಾರತವು ಸ್ವಾತಂತ್ರ್ಯಗಳಿಸಿ ಏಷ್ಯಾ ದೇಶಗಳಿಗೆ ಹಾದಿ ತೋರಿಸುವಂತಾಗಲಿ - ಎಂದು ಸಿಲೋನಿನ ವಿದ್ಯಾ ಮಂತ್ರಿಗಳು ಕಾಶಿಯಲ್ಲಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ.

ಕೆಲಸಗಾರರಿಗೆ ರೇಷನ್ ತೊಂದರೆ

ಬಿ. ತರಗತಿ ರೇಷನ್‌ದಾರರಿಗೆ ಅಕ್ಕಿ, ರಾಗಿ ಮತ್ತು ಸಕ್ಕರೆ ಗೊತ್ತಾಗಿದ್ದರೂ, ಸಕ್ಕರೆ ಮತ್ತು ರಾಗಿಯು ಸರಬರಾಜಾಗುತ್ತಲೇ ಇಲ್ಲ. ಆದ್ದರಿಂದ ಸರ್ಕಾರದವರು ರಾಗಿ ಮತ್ತು ಸಕ್ಕರೆಯನ್ನು ಒದಗಿಸಬೇಕು, ಇಲ್ಲವೇ ಬಿ. ತರಗತಿಯಿಂದ ಅಪೇಕ್ಷಿಸುವವರು ಎ ತರಗತಿಗೆ ವರ್ಗಾಯಿಸಿಕೊಳ್ಳಲು ಅನುಮತಿಕೊಡಬೇಕು. ಎಂಬುದಾಗಿ ಮೈಸೂರು ಸೆಂಟ್ರಲ್ ರೈಲ್ವೆ ವರ್ಕ್‌ಷಾಪ್ ಕೆಲಸಗಾರರ ಸಂಘದ ಮಾಜಿ ಉಪಾಧ್ಯಕ್ಷರಾದ ಶ್ರೀ ಜಿ ಎಸ್. ಭೈರೋಜಿರಾಯರು ಬರೆದಿರುತ್ತಾರೆ.

ಭತ್ತದ ಪಡಿತರ

ಚಿತ್ತೂರು ಡಿಸ್ಟ್ರಿಕ್ಟಿನ ರೇಣಿ ಗುಂಟದ ಗ್ರಾಮಸ್ಥರಿಗೆ ಅಕ್ಕಿ ರೇಷನ್ ಬದಲು ಭತ್ತವನ್ನು ಹಂಚಲಾಗುತ್ತಿತ್ತು. ಇದು ಅತ್ಯಂತ ಹೊಲಸಾಗಿದ್ದು ತಿನ್ನಲು ಸಾಧ್ಯವಿಲ್ಲವೆಂದು ಎಲ್ಲಾ ಕಲೆಕ್ಟರಿಗೆ ಅರ್ಜಿ ಹಾಕಿಕೊಂಡುದುದರಿಂದ ಈಗ ಅಕ್ಕಿಯನ್ನೇ ಕೊಡಲಾಗುತ್ತಿದೆ.

ಭಾರತಕ್ಕೆ ವೀರ ಅಜಿತ್ ಸಿಂಗರ ಆಗಮನ

೧೯೦೮ ರಲ್ಲಿ ಪಂಜಾಬ್ ಗವರ್ನರ್ ಮೇಲೆ ನಡೆದ ಧಾಳಿಯಲ್ಲಿ ಅಗ್ರಗಣ್ಯರಾಗಿ ಭಾರತದಿಂದ ಪರಾರಿಯಾಗಿದ್ದ ಸರ್ದಾರ್ ಅಜಿತ್‌ಸಿಂಗರು ಈ ತಿಂಗಳ ಮೂರನೇ ವಾರದಲ್ಲಿ ಭಾರತಕ್ಕೆ ವಾಪಸು ಬರುವರು. ಇವರು ಭಗತ್‌ಸಿಂಗರ ಚಿಕ್ಕಪ್ಪಂದಿರು. ತಮ್ಮ ಅಜ್ಞಾತವಾಸವನ್ನು, ಇರಾಕ್, ರಷ್ಯಾ, ಆಸ್ಟ್ರಿಯಾ, ಜರ್ಮನಿ, ಫ್ರಾನ್ಸ್, ಸ್ವಿಡ್ಜರ್‌ಲೆಂಡುಗಳಲ್ಲಿ ಕಳೆದರು. ೧೮ ವರ್ಷಗಳ ಕಾಲ ಅಮೆರಿಕಾದಲ್ಲಿ ವಾಸಿಸಿದ್ದರು. ಯುದ್ಧವು ಆರಂಭವಾದ ನಂತರ ನೇತಾಜಿಬೋಸರ ಆಜಾದ್ ದಳಕ್ಕೆ ಸೇರಿ ಜರ್ಮನಿಯಲ್ಲಿದ್ದರು. ಮಿತ್ರ ಸೈನಿಕರ ಸೆರೆ ಸಿಕ್ಕಿ ತುರಂಗದಲ್ಲಿ ಕೊಳೆಯುತ್ತಿದ್ದರು. ಪಂ|| ನೆಹರೂರವರು ಸರ್ಕಾರ ರಚಿಸಿದ ಮೇಲೆ ಅವರ ಮಧ್ಯಸ್ತಿಕೆಯಿಂದ ಈಗ ಬಿಡುಗಡೆ ಹೊಂದಿದ್ದಾರೆ. ಇವರಿಗೆ ಈಗ ೬೭ ವರ್ಷ ವಯಸ್ಸು. ಭಾರತಕ್ಕೆ ಬಂದನಂತರ ಸ್ವಲ್ಪ ಕಾಲ ವಿಶ್ರಮಿಸಿಕೊಂಡು ನಂತರ ರಾಜಕೀಯಕ್ಕೆ ಪ್ರವೇಶಿಸಲಿದ್ದಾರೆ. ಪಾಕಿಸ್ಥಾನಕ್ಕೆ ತಮ್ಮ ವಿರೋಧ ಸೂಚಿಸಿದ್ದಾರೆ. ಬ್ರಿಟಿಷರನ್ನು ಭಾರತದಲ್ಲಿ ನೆಲೆಗೊಡಿಸುವುದಿಲ್ಲವೆಂದು ತಿಳಿಸಿದ್ದಾರೆ.

ಶಾಂತಿಗಾಗಿ ಯಜ್ಞ

ಭಾರತದಲ್ಲಿ ಅಖಂಡ ಶಾಂತಿಯನ್ನು ಕರುಣಿಸುವ ಸಲುವಾಗಿ ಶಕ್ತಿ ದೇವಿಯನ್ನು ಪ್ರಾರ್ಥಿಸಲು ಮಹಾ ಯಜ್ಞವನ್ನು ನೆರವೇರಿಸುವುದಕ್ಕಾಗಿ ಭಾರತದ ಎಲ್ಲಾ ಭಾಗಗಳಿಂದಲೂ ೨೫೦೦ ಜನ ಪಂಡಿತರುಗಳು ಬೊಂಬಾಯಿನಲ್ಲಿ ಸೇರಿದ್ದಾರೆ. ಯಜ್ಞವು ನೆನ್ನೆ ದಿನ ಆರಂಭವಾಗಿ ೩೦ ದಿನಗಳ ಕಾಲ ಜರುಗುವುದು. ಇದಕ್ಕಾಗಿ ೩ ಲಕ್ಷ ರೂ. ಗಳ ವೆಚ್ಚವಾಗುವುದು.

ಹಿಟ್ಲರ್ ಬದುಕಿರುವನೇ

ಜರ್ಮನಿಯಲ್ಲಿ ರಸ್ತೆಗಳ ಮೇಲೂ ಟ್ರೈನುಗಳ ಗೋಡೆಗಳ ಮೇಲೂ ಹಿಟ್ಲರ್ ಬದುಕಿದ್ದಾನೆಂಬ ಮಾತುಗಳು ಕಂಡುಬರುತ್ತಿರುವುದಾಗಿ ವರದಿಯಾಗಿದೆ. [illegible]ಲ್ಲೂ ಹರಡಿದ ಈ ವದಂತಿಯನ್ನು ತ[illegible]ಟ್ಟಲು ಮಿತ್ರ ಹತೋಟಿ ಕಮಿಷನ್ನಿನವರು ಅನೇಕ ಪ್ರಯತ್ನಗಳನ್ನು ಮಾಡಿಯೂ ವಿಫಲರಾದರೆಂದು ಹೇಳಲಾಗಿದೆ.

ಫಸಲು ಕುಯ್ಯಲು ಭೂತಾಕಾರದ ಯಂತ್ರ

ಚೆನ್ನಾಗಿ ದುಡಿದು ಕೆಲಸ ಮಾಡುವ [illegible]ಬ್ಬ ರೈತನು ಒಂದು ದಿನದಲ್ಲಿ ಮಾಡು[illegible] ಕುಯ್ಲನ್ನು ೨೦ ನಿಮಿಷಗಳಲ್ಲಿ ಮಾ[illegible]ಮುಗಿಸುವ ಭೂತಾಕಾರದ ಯಂತ್ರವನ್ನು ಅಮೆರಿಕದ ಇಲ್ಲಿನಾಯ್ಸ್ ಎಂಬಲ್ಲಿ ಉಪಯೋಗಿಸಲಾಗಿದೆ ಎಂದು ವರದಿಯಾಗಿದೆ. ಇದರಲ್ಲಿರುವ ೫ ಕೊಕ್ಕೆಗಳೂ ಕಾಪೀ [illegible]ವನ್ನು ಹಿಡಿಸಿಕೊಂಡು ಬೇರೆ ಕಡೆಗೆ [illegible]ಟುತ್ತವೆ.

ವಿಯಟ್‌ನಾಂ ಸಹಾಯಕ್ಕೆ ಭಾರತದ ಸ್ವಯಂ ಸೇವಕರು

ಏಷ್ಯ ಮತ್ತು ಭಾರತದ ಭವಿಷ್ಯವು ವಿಯಟ್‌ನಾಂನಲ್ಲಿ ನಡೆಯುತ್ತಿರುವ ಕದನವನ್ನವಲಂಬಿಸಿದೆ ಎಂಬುದಾಗಿ ಶ್ರೀ ಶರತ್ ಚಂದ್ರಬೋಸರು ಹೇಳಿ ಭಾರತದ ಯುವಕರು ಹೆಚ್ಚು ಸಂಖ್ಯೆಯಲ್ಲಿ ಸ್ವಯಂ ಸೇವಕರಾಗಿ ಮುಂದೆ ಬಂದು ವಿಯಟ್‌ನಾಂ ರಿಪಬ್ಲಿಕ್ ಸೈನ್ಯಕ್ಕೆ ಬೆಂಬಲ ಕೊಟ್ಟು ಫ್ರಾನ್ಸಿನ ವಿರುದ್ಧ ಹೋರಾಟ ನಡೆಸಬೇಕೆಂದು ಪ್ರಾರ್ಥಿಸಿದ್ದಾರೆ.

೩ ವರ್ಷಕ್ಕೊಮ್ಮೆ ಕಾಂಗ್ರೆಸ್ ಅಧಿವೇಶನ

ಕಾಂಗ್ರೆಸ್ಸಿನ ಅಂಗರಚನಾ ಸಮಿತಿಯು ಇನ್ನು ಮುಂದೆ ಪ್ರತಿ ವರ್ಷವೂ ಕಾಂಗ್ರೆಸ್ ಅಧಿವೇಶನವು ವೈಭವದಿಂದ ನಡೆಯಬೇಕಾಗಿಲ್ಲವೆಂದೂ, ಮೂರು ನಾಲ್ಕು ವರ್ಷಕ್ಕೊಮ್ಮೆ ನಡೆದರೆ ಸಾಕೆಂದೂ ಸಲಹೆ ಮಾಡಿರುವುದಾಗಿ ಹೇಳಲಾಗಿದೆ. ಅಲ್ಲದೆ ನಾಲ್ಕಾಣೆ ಸದಸ್ಯತ್ವವನ್ನು ಉಳಿಸಿಕೊಳ್ಳಬೇಕೆಂದು ಸೂಚಿಸಿರುತ್ತದೆ.

ಅಪೆರಾ ಟಾಕೀಸ್
From 4-1-47.
Daily 3 Shows
The Great Magician
With
Bela Lugosi, Maria Alba,
Leuien Preijal.

Edited, printed and published by A. R. Nagarajan at the Sadhvi Press D Subbiah Road, Mysore.

ಆರ್. ಎಸ್. ಪಂಡಿತರ
ನಾಯಿಕೆಮ್ಮಿನ ಔಷಧಿ
7-8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.
ಕ್ರಯ ಬಾಟ್ಲಿಗೆ 1-8-0
ಗೂರ್ಲು—ಉಬ್ಬಸಕ್ಕೆ
(Asthma)
ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ.
(Appendecitis) ಗುಲ್ಮಶೂಲೆ ಮತ್ತು (Tonsils) ಗಲಾಯುಕ ಅವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ.
ಗುಂಡ್ಲುಪೇಟೆ ಆರ್. ಎಸ್. ಪಂಡಿತರು
ಪವಾನ್ಸ್ ರೋಡ್, ಗೊಲ್ಲಗೇರಿ ಮೈಸೂರು

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)
ಜಾಹಿರಾತಿನ ದರಗಳಿಗೆ
ವಿಚಾರಿಸಿರಿ

ಟಿ ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಧಾರಣೆಯಿಂದ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ರಾಜಕಮಲ್, ಮೈಸೂರು.
3-1-47 ರಿಂದ 2 ನೇ ವಾರ
ಪ್ರಕಾಶ್ ರವರ 'ಹಮಾರಾ ಸಂಸಾರ್'
ಭೂಮಿಕೆ:- ರಂಜನಾ, ಜಿಲ್ಲು, ಜೀವನ್
From 3-1-47 Daily at 10-30 a.m.
Eddie Cantor in "Kid from Spain"
(Brand New Print)

ರಿಜಿ. ನಂ. 392 **WEEKLY EDITION** ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೬—೧—೪೭ [ಸಂಚಿಕೆ ೩೩

ಗೋಪಾಲರಾಯರ ಆಸ್ತಿ ಸರ್ಕಾರದ ವಶ

...ನ್ಸಿಗೆ ಮೈಸೂರಿನ ಸಂದೇಶ

ಮೈಸೂರು ೬

...ರಿಸ್ ನಗರದಲ್ಲಿ ವೇದಾಂತ ಪ್ರಚಾ...ರಾಗಿರುವ ಸ್ವಾಮಿ ಸಿದ್ಧೇಶ್ವರಾನಂದರ...ನ್ನು ಸತ್ಕರಿಸಲು ನಿನ್ನೆ ಟೌನ್‌ಹಾಲಿನಲ್ಲಿ ...ಸಮಾರಂಭವು ಜರುಗಿತು. ಮಾಜಿ ...ನರಾದ ಸರ್ ಅಲ್ಬಿಯನ್ ರಾಜಕುಮಾರ ಬ್ಯಾನರ್ಜಿಯವರು ಅಗ್ರಾಸನವನ್ನು ...ದ್ದರು ಪ್ರಾರ್ಥನೆಯ ನಂತರ ...ಕ್ರೆಟರಿ ಶ್ರೀ|| ಎಂ. ಲಕ್ಷ್ಮೀನಾರಾ...ಯಣರಾಯರು ಸ್ವಾಮಿಜೀಯವರ ಮೂಲಕ ಫ್ರಾನ್ಸ್‌ದೇಶದ ಪ್ರಜೆಗಳಿಗೆ ಮೈಸೂರು ...ಗಳ ಪ್ರೀತಿ, ವಿಶ್ವಾಸ ಮತ್ತು ಗೌ...ರವಗಳನ್ನು ಸೂಚಿಸುವ ಸಂದೇಶವೊಂ...ದು ಸುಂದರವಾದ ಗಂಧದ ಪೆಟ್ಟಿಗೆಯಲ್ಲಿ ...ರ್ಪಿಸಿದರು.

...ಧುನಿಕ ಫ್ರಾನ್ಸಿನ ಮೇಲೆ ಭಾರತ ...ಸ್ಕೃತಿಯ ಪ್ರಭಾವ—ಎಂಬ ವಿಷಯ...ವಾಗಿ ಸ್ವಾಮಿಗಳವರು ಹೃದಯಂಗಮವಾದ ...ಭಾಷಣವನ್ನು ಮಾಡಿದರು. ಶ್ರೀ ರಾಮ...ಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾ...ನಂದರು, ಕವಿ ರವೀಂದ್ರನಾಥ ಠಾಕೂರರು ...ಮತ್ತು ಈಚೆಗೆ ಮಹಾತ್ಮ ಗಾಂಧಿಯವರು ...ಅದ್ಭುತವಾದ ಜೀವನದಿಂದ ಫ್ರಾನ್ಸಿ...ನ ಪ್ರಜೆಗಳ ಭಕ್ತಿಗೌರವಗಳಿಗೆ ಪಾತ್ರರಾಗಿ...ರುವರೆಂದು ಹೇಳಿದರು. ಐಹಿಕ ಸುಖಲೋ...ಲುಪ್ತಿಯಲ್ಲಿ ಮುಳುಗಿರುವ ಫ್ರಾನ್ಸ್‌ದೇಶ ...ನಶ್ವರವಾದ ಜಗತ್ತಿನ ಸುಖಗಳನ್ನೇ ...ಧಾನವಾಗಿ ಎಣಿಸದೆ ಪಾರಮಾರ್ಥಿಕ ...ಜೀವನದಲ್ಲಿಯೂ ಮುನ್ನಡೆಯಿಡಲು ಕಲಿ...ಯುವುದೆಂದು ಹೇಳಿದರು. ಭಾರತೀಯ ...ಕ್ರಿಯಾತ್ಮಕವಾದ ಸಹಿಷ್ಣುತೆ ಮತ್ತು ...ಧರ್ಮಮಾರ್ಗಗಳಲ್ಲಿ ಪ್ರವರ್ತಿಸಬೇಕೆಂದು ...ಬೋಧಿಸಿದರು.

...ಅಧ್ಯಕ್ಷರಿಂದ ಸಮಯೋಚಿತವಾದ ಭಾ...ಷಣಾನಂತರ ಸಮಾರಂಭವು ಮುಕ್ತಾ...ಯಗೊಂಡಿತು.

ವೀಣಾವಾದನ

ನಾಳೆ ಸಂಜೆ ೬ ಗಂಟೆಗೆ ಡಿ. ಸುಬ್ಬಯ್ಯ...ಶೆಟ್ಟಿಯ ಸ್ಥಳದಲ್ಲಿರುವ ಖಾದಿ ಆಫೀಸ್ ಮಹಡಿ...ಯಲ್ಲಿ ಪೂರ್ಣಿಮಾ ಪ್ರಯುಕ್ತ ಶ್ರೀಮತಿ...ಯರಾದ ಎಂ ಎಸ್ ಜಯಮ್ಮ ಮತ್ತು ಎಂ. ಎಸ್. ಮನೋರಮಾರವರುಗಳಿಂದ ವೀಣಾ...ವಾದನವು ಎಂ. ಎಸ್. ಮಂಜುಳಾರವರ ...ಪಕ್ಕವಾದ್ಯ ಗಾಯನಿಕೆಯೊಡನೆ ನಡೆಯುವುದು. ...ಎಲ್ಲರಿಗೂ ಸ್ವಾಗತವಿದೆ.

ಟಿ. ಮರಿಯಪ್ಪನವರು ನಾಯಕರು

...ಹೊಸದಾಗಿ ಚುನಾಯಿತವಾದ ಮೈಸೂರು ಪೌರಸಭೆ...ಯ ಕಾಂಗ್ರೆಸ್ ಪಕ್ಷವನ್ನು ರಚಿಸಲು ನಿನ್ನೆ ...ಶ್ರೀ|| ಎಸ್ ಚನ್ನಯ್ಯನವರ ಅಧ್ಯಕ್ಷತೆ...ಯಲ್ಲಿ ಸಭೆ ನಡೆಯಿತು. ಹೊಸ ಸದಸ್ಯರು ...ಎಲ್ಲರೂ ಪಕ್ಷದ ಪ್ರತಿಜ್ಞಾ ವಚನವನ್ನು ...ಸ್ವೀಕರಿಸಿದರು. ಬರುವ ವರ್ಷಕ್ಕೆ ಶ್ರೀ|| ...ಟಿ. ಮರಿಯಪ್ಪನವರು ನಾಯಕರಾಗಿಯೂ ...ಶ್ರೀಮತಿ ಎಂ. ಆರ್ ಲಕ್ಷ್ಮಮ್ಮನವರು ...ಉಪನಾಯಕರಾಗಿಯೂ, ಶ್ರೀ|| ಟಿ. ಗೋ...ಪಾಲಕೃಷ್ಣಶೆಟ್ಟಿಯವರ, ಕಾರ್ಯದರ್ಶಿಗಳಾ...ಗಿಯೂ, ಶ್ರೀ ವಿ ಎ ಬಸಪ್ಪನವರು ...ಖಜಾಂಚಿಯಾಗಿಯೂ ಮತ್ತು ಶ್ರೀ ಟಿ ...ವೆಂಕಟರಮಣಯ್ಯನವರು ವ್ಹಿಪ್ ಆಗಿ...ಯೂ ಆರಿಸಲ್ಪಟ್ಟರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧಿವೇಶನ

ದೆಹಲಿಯ ರಾಜ್ಯಾಂಗ ಸಭಾ ಕ್ಲಬ್ಬಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧಿವೇಶನವು ನಿನ್ನೆ ಆಚಾರ್ಯ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಸಭೆಗೆ ೧೫೦ ಮಂದಿ ಸದಸ್ಯರು ಆಗಮಿಸಿದ್ದರು. ಅಧ್ಯಕ್ಷರು ಮೀರತ್ ಕಾಂಗ್ರೆಸ್ ಅಧಿವೇಶನದಿಂದ ಈಚಲ್ ವರೆವಿಗೆ ನಡೆದ ಕಾರ್ಯಗಳನ್ನು ವಿವರಿಸಿದರು. ಪಂ|| ನೆಹರೂರವರ ಲಂಡನ್ ಯಾತ್ರೆ ಮತ್ತು ಬ್ರಿಟಿಷ್ ಸರ್ಕಾರದ ಡಿ|| ೬ ನೇ ತಾ|| ಹೇಳಿಕೆಗಳನ್ನು ವಿವರಿಸಿದರು ಬ್ರಿಟಿಷರ ಈ ಹೊಸ ವಿವರಣೆ ಅಧಿಕಾರವನ್ನು ಒಂದು ಕೈಲಿ ಕೊಟ್ಟು ಇನ್ನೊಂದು ಕೈಲಿ ಕಸಿದುಕೊಳ್ಳುವಂತಿದೆಯೆಂದು ಟೀಕಿಸಿದರು. ಕೃಪಲಾನಿಯವರು ಮುಂದುವರಿಯುತ್ತಾ ರಾಜ್ಯಾಂಗ ಸಭೆಯ ಬಗ್ಗೆ ಎದ್ದಿದ್ದ ಜಿಜ್ಞಾಸೆಗಳೆಲ್ಲಾ ಮುಕ್ತಾಯವಾಗಿ ಕಾರ್ಯ ಸುಲಲಿತವಾಗಿ ಮುಂದುವರಿಯಬಹುದೆಂದು ಭಾವಿಸಿದ್ದೆವು. ಆದರೆ ಒಬ್ಬ ಮಂತ್ರಗಾರನು ತನ್ನ ಟೋಪಿಯಿಂದ ಪ್ರತಿ ಸಲವೂ ಒಂದೊಂದು ಮೊಲವನ್ನು ತೆಗೆದು ಬಿಡುವಂತೆ ಬ್ರಿಟಿಷರು ಹೊಸ ವಿವರಣೆಗಳನ್ನು ಮತ್ತು ಆತಂಕಗಳನ್ನು ತಂದೊಡ್ಡುತ್ತಿದ್ದಾರೆ” ಎಂಬುದಾಗಿ ತಿಳಿಸಿದರು. ಕಾರ್ಯಕಾರಿ ಸಮಿತಿಯವರು ಬ್ರಿಟಿಷ್ ಹೇಳಿಕೆಯನ್ನು ಅಂಗೀಕರಿಸಿ ಮಾಡಿರುವ ನಿರ್ಣಯವನ್ನು ಪಂ|| ನೆಹರೂರವರು ಸಭೆಯಲ್ಲಿ ಮಂಡಿಸಿದರು. ಶ್ರೀ ಶಂಕರರಾವ್ ದೇವ್ ರವರು ಅದನ್ನು ಸಮರ್ಥಿಸಿದರು. ಚರ್ಚೆ ನಡೆಯುತ್ತಿದೆ.

ಸತ್ಕಾರ ಸಭೆ

ಪೌರಸಭಾ ಉಪಾಧ್ಯಕ್ಷರಾದ ಶ್ರೀ|| ಎ ಕೃಷ್ಣಮೂರ್ತಿರಾಯರನ್ನು ಗೌರವಿಸಲು ಜಿಲ್ಲೆ ಮೊಹಲ್ಲಾದ ಸ್ನೇಹಿತರುಗಳು ಶ್ರೀಗಳಾದ ಎಂ ವೀರಭದ್ರಪ್ಪ ಮತ್ತು ಕೆ. ಆರ್. ವೀರಭದ್ರಪ್ಪನವರೇ ಮೊದಲಾದವರ ಮುಖಂಡತ್ವದಲ್ಲಿ ಕೃಷ್ಣರಾಜಸಾಗರದ ಬೃಂದಾವನ ತೋಟದಲ್ಲಿ ನಿನ್ನೆ ಸತ್ಕಾರ ಸಭೆಯನ್ನು ಏರ್ಪಡಿಸಿದ್ದರು.

ಸಂತಾಪ ಸಭೆ

ಶ್ರೀ ಆರ್. ವಿ ಭದ್ರಣ್ಣನವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲು ಇದಿನ ಸಂಜೆ ೬ ಗಂಟೆಗೆ ರಾಜಧಾನಿಯ ವಿಜಯ ಏಜೆನ್ಸೀಸ್ ಕಛೇರಿಯಲ್ಲಿ ಸಭೆ ನಡೆಯುವುದು. ಕಾಂಗ್ರೆಸ್ ಕೆಲಸಗಾರರೆಲ್ಲರೂ ಬರಬೇಕೆಂದು ಶ್ರೀ|| ಎ ರಾಮಣ್ಣನವರು ಕೋರಿರುತ್ತಾರೆ.

ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಬೇಕು

ಅಖಿಲಭಾರತ ಕಾಂಗ್ರೆಸ್ ಮಹಾಸಭೆಯ ಪ್ರಧಾನ ಕಾರ್ಯದರ್ಶಿಗಳು ಎಲ್ಲಾ ಕಾಂಗ್ರೆಸ್ ಸಮಿತಿಗಳಿಗೂ ಈರೀತಿ ಸೂಚನೆ ಕಳುಹಿಸಿದ್ದಾರೆ—

ಬ್ರಿಟಿಷರಿಂದ ಭಾರತೀಯರಿಗೆ ಅಧಿಕಾರವು ಸೌಮ್ಯರೀತಿಯಲ್ಲಿ ವರ್ಗಾಯಿಸಲ್ಪಡಬೇಕೆಂಬುದು ಕಾಂಗ್ರೆಸ್ಸಿನ ಇಚ್ಛೆ. ಆದರೆ ಇದಕ್ಕಾಗಿ ಹೋರಾಟವು ಅಗತ್ಯವಾದರೆ ಕಾಂಗ್ರೆಸ್ಸು ಹಿಂಜರಿಯುವುದಿಲ್ಲ ಯಾವ ಶಕ್ತಿಯೂ ಅದನ್ನು ತಡೆಗಟ್ಟಲಾರದು. ಅಹಿಂಸಾತ್ಮಕವಾದ ಸಮಾಜ ಕ್ರಾಂತಿಯೇ ಕಾಂಗ್ರೆಸ್ಸಿನ ಗುರಿ ಕಾಂಗ್ರೆಸ್ಸಿಗೆ ಶಕ್ತಿಯೂ, ಜನಾನುರಾಗವೂ ಬೆಳೆಯುತ್ತಿವೆ ಆದರೆ ಸಂಘಟನಾ ಶಕ್ತಿಯು ಸ್ವಲ್ಪ ಕುಂದಿದೆ. ಪ್ರಜೆಗಳ ಅಭೀಷ್ಟವನ್ನು ಪ್ರಭಾವಶಾಲಿಯಾಗಿ ಪ್ರತಿಬಿಂಬಿಸಲು ಕಾಂಗ್ರೆಸ್ ಸಂಸ್ಥೆಯು ಎಲ್ಲಾ ಗ್ರಾಮಗಳಲ್ಲಿಯೂ ಶಾಖೆಗಳನ್ನು ಹೊಂದಿರಬೇಕು, ಪ್ರಜಾಸೇವೆಯನ್ನು ಸದಾಕಾಲದಲ್ಲಿಯೂ ಮಾಡುವ ಒಬ್ಬ ನಿದಸ್ಯನಾದರೂ ಪ್ರತಿಗ್ರಾಮದಲ್ಲಿಯೂ ಇರಬೇಕು.

ಬಟ್ಟೆ ಪರಿಸ್ಥಿತಿ

ಸ್ವಂ ಸ] ಬೆಂಗಳೂರು ೬

ಈ ವರ್ಷ ಬಟ್ಟೆ ಅಭಾವವು ಕಳೆದ ವರ್ಷಕ್ಕಿಂತ ಹೆಚ್ಚುವುದು ಪಾಶ್ಚಾತ್ಯದೇಶಗಳಲ್ಲಿ ಬಟ್ಟೆ ತಯಾರಿಯು ಬಹಳ ಕಡಿಮೆ ಯುದ್ಧ ಅಲ್ಲಿಂದ ಭಾರತಕ್ಕೆ ಬಟ್ಟೆ ಬರುವ ಸಂಭವವಿಲ್ಲ. ನಮ್ಮ ದೇಶದಲ್ಲೂ ಸಹ ಮುಷ್ಕರ, ಕೋಮುವಾರು ಗಲಭೆಗಳಿಂದ ಬಟ್ಟೆ ತಯಾರಿಕೆಯು ಬಹಳವಾಗಿ ಇಳಿದು ಹೋಗಿದೆ ವರ್ಷಕ್ಕೆ ೪೭೦೦ ಮಿಲಿಯನ್ ಗಜ ಬಟ್ಟೆ ತಯಾರಿಸುತ್ತಿದ್ದ ಗಿರಣಿಗಳು ಕೇವಲ ೩೬೦೦ ಮಿಲಿಯನ್ ಗಜ ಬಟ್ಟೆಯನ್ನು ಮಾತ್ರ ತಯಾರಿಸುತ್ತಿವೆ ಈ ಎಲ್ಲಾ ಕಾರಣಗಳಿಂದ ಬಟ್ಟೆ ಅಭಾವವು ಕಳೆದ ವರ್ಷಕ್ಕಿಂತ ಈ ವರ್ಷ ಬಹಳ ಹೆಚ್ಚುವುದು— ಎಂದು ಟೆಕ್ಸ್‌ಟೈಲ್ ಕಂಟ್ರೋಲ್ ಬೋರ್ಡಿನ ಅಧ್ಯಕ್ಷರಾದ ಶ್ರೀ ಕೃಷ್ಣರಾಜ ಥಾಕರ್‌ಸೇಯವರು ನಿನ್ನೆ ಸಂಜೆ ಬೆಂಗಳೂರಿನ ವಾಣಿಜ್ಯ ಭವನದಲ್ಲಿ ಬೆಂಗಳೂರಿನ ಹೋಲ್ ಸೇಲ್ ಬಟ್ಟೆ ವ್ಯಾಪಾರಿ ಸಂಘದ ಅಧ್ಯಕ್ಷರಾದ ಶ್ರೀ|| ಜನಾರ್ಧನಯ್ಯರವರು ಏರ್ಪಡಿಸಿದ್ದ ಸತ್ಕಾರ ಕೂಟದಲ್ಲಿ ಹೇಳಿರುವರು

§ ಬಂಗಾಳ ಟೀಮಿನವರು ಬೆಂಗಳೂರು ಬ್ಲೂಸಿನವರನ್ನು ನಿನ್ನೆ ದಿನ ಫುಟ್‌ಬಾಲ್ ಪಂದ್ಯದಲ್ಲಿ ಒಂದು ಗೋಲಿನಿಂದ ಸೋಲಿಸಿದ್ದಾರೆ.

ಗೋಪಾಲರಾಯರ ಆಸ್ತಿಪಾಸ್ತಿಗಳ ವಶ

ಜಿಲ್ಲಾ ಜಡ್ಜರ ತೀರ್ಪು

ಸ್ವಂ. ಸು ಫೋ] ಬೆಂಗಳೂರು ೬

ಬೆಂಗಳೂರಿನ ಶ್ರೀ ಎಸ್ ಎ. ಗೋಪಾಲರಾವ್ ಎಂಬುವರು ಜಿಲ್ಲಾ ಜಡ್ಜರಲ್ಲಿ ಒಂದು ಅರ್ಜಿ ಸಲ್ಲಿಸಿ ಧರ್ಮರಕ್ಷಕರಾದ ಶ್ರೀ ಬಿ ಎ ಗೋಪಾಲರಾಯರಿಗೆ ತಾವು ಒಂಬತ್ತು ಸಹಸ್ರ ರೂ.ಗಳ ಸಾಲವನ್ನು ಕೊಟ್ಟಿದ್ದರೆಂದೂ, ತಮಗೆ ಅವರು ಅದನ್ನು ಕೊಡಲಿಲ್ಲವೆಂದೂ, ಇದೇ ರೀತಿ ಭಾರತಕ್ಕೆ ಗೋವಾ ಮುಂತಾದ ಪ್ರದೇಶಗಳ ಅನೇಕ ಜನರು ಕೋಟ್ಯಾಂತರ ರೂ ಗಳನ್ನು ಶ್ರೀ ಧರ್ಮರಕ್ಷಕರಿಗೆ ಕೊಟ್ಟಿದ್ದಾರೆಂದೂ, ಅವರು ಯಾವುದನ್ನು ತೀರಿಸಲಿಲ್ಲವೆಂದೂ, ಆದ್ದರಿಂದ ಅವರನ್ನು ದಿವಾಳಿಯೆಂದು ಘೋಷಿಸಬೇಕೆಂದೂ ನಮೂದಿಸಿದ್ದರು. ನ್ಯಾಯಾಧೀಶರು ಅರ್ಜಿಯನ್ನು ಪರಿಶೀಲಿಸಿ ಧರ್ಮರಕ್ಷಕರ ಶ್ರೀ ಬಿ ಎ. ಗೋಪಾಲರಾಯರ ಆಸ್ತಿಪಾಸ್ತಿಗಳನ್ನು ಮುಂದಿನ ಆಜ್ಞೆವರೆಗೆ ಪೂರ್ವಭಾವಿಯಾಗಿ ವಶಪಡಿಸಿಕೊಳ್ಳುವಂತೆ, ಅಫಿಷಿಯಲ್ ರಿಸೀವರಿಗೆ ಸೂಚನೆ ಕೊಟ್ಟಿದ್ದಾರೆ.

§ ಶ್ರೀ ಕೆ. ಜೀವಣ್ಣರಾಯರ ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷರಾಗಿಯೂ, ಶ್ರೀ ಎ ಎಸ್ ಚಿನ್ನಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ ಬಿ ಶ್ರೀನಿವಾಸರವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟಿದ್ದಾರೆ.

ಅಧಿಕಾರಿಗಳ ಪುನಃ ಹಂಚಿಕೆ

ಆಜಾದರು ಕೇಂದ್ರ ಸರ್ಕಾರದ ಮಂತ್ರಿಗಳಾಗಿದ್ದಾರಷ್ಟೆ ಈಗ ಮಂತ್ರಿಮಂಡಲದ ಅಧಿಕಾರಿಗಳ ಪುನರ್ ಹಂಚಿಕೆ ಈ ರೀತಿ ನಡೆಯುವುದೆಂದು ತಿಳಿದುಬಂದಿದೆ. ಮೌ|| ಆಜಾದ್-ವಿದ್ಯಾಭ್ಯಾಸ, ಸಿ ರಾಜಗೋಪಾಲಾಚಾರಿ ಕೈಗಾರಿಕೆ ಮತ್ತು ಸರಬರಾಜು, ಡಾ|| ಜಾನ್ ಮತ್ತಾಯಿ-ಸಂಚಾರ

ಅಮೆರಿಕನ್ ಸೆನೆಟ್ಟಿನಿಂದ ಬಿಲ್ಬೋಗೆ ಬಹಿಷ್ಕಾರ

ನೀಗ್ರೋಗಳ ವಿರುದ್ಧವಾಗಿ ಕಳೆದ ಚುನಾವಣೆಯಲ್ಲಿ ಪ್ರಚಾರ ಮಾಡಿದ್ದಲ್ಲದೆ ಅವರುಗಳು ತಮ್ಮ ಮತ ಚಲಾಯಿಸಲೂ ಆತಂಕ ಪಡಿಸಿ ಅವರನ್ನು ಅಪಮಾನ ಪಡಿಸಿದನೆಂಬ ಆಪಾದನೆ ಮೇಲೆ ಮಿ|| ಥಿಯೋಡೋರ್ ಬಿಲ್ಬೋ ಎಂಬುವನನ್ನು ಅಮೆರಿಕನ್ ಸೆನೆಟ್ ಸಭೆಯ ಸದಸ್ಯತ್ವದಿಂದ ವಜಾ ಮಾಡಿದೆ.

ಹಿಂದೂ-ಮುಸ್ಲಿಂ ಸಖ್ಯಕ್ಕಾಗಿ ಗಾಂಧಿಜಿಯವರ ಪ್ರಯತ್ನ

ನನ್ನ ಜೀವಮಾನದಲ್ಲಿ ಇಂತಹ ಕತ್ತಲೆಯನ್ನು ನಾನು ಎಂದೂ ಕಂಡಿಲ್ಲ ರಾತ್ರಿಗಳು ಬಹಳ ದೀರ್ಘವಾದಂತೆ ಗೋಚರವಾಗುತ್ತವೆ ಇದುವರೆಗೆ ನನಗೆ ನಿರಾಶೆಯಾಗಲೀ ನಿರುತ್ಸಾಹವಾಗಲೀ ಉಂಟಾಗಿಲ್ಲ ನಾನು ಎಲ್ಲಕ್ಕೂ ಸಿದ್ಧನಿದ್ದೇನೆ.” ಎಂಬುದಾಗಿ ಮಹಾತ್ಮ ಗಾಂಧಿಯವರು ತಿಳಿಸಿದ್ದಾರೆ ಬಂಗಾಳದಲ್ಲಿ “ಮಾಡು ಇಲ್ಲವೇ ಮಡಿ” ಎಂಬ ಘೋಷಣೆಯನ್ನು ಪರೀಕ್ಷೆಗಾಗಿ ಪ್ರಯೋಗಿಸುತ್ತೇನೆ. ನನಗೆ ಎಂದರೆ ಹಿಂದೂ-ಮುಸ್ಲಿಮರು ಒಟ್ಟಿಗೆ ಶಾಂತಿ ಮತ್ತು ಸೌಹಾರ್ದದಿಂದ ಬಾಳುವಂತೆ ಮಾಡುವುದು. ಅಲ್ಲವಾದ್ದರಿಂದ ಈ ಪ್ರಯತ್ನದಲ್ಲಿ ನಾನು ಸಾಯುತ್ತೇನೆ” ಎಂಬ ದಾಗಿಯೂ ಗಾಂಧೀಜಿಯವರು ಹೇಳಿದ್ದಾರೆ.

ಸಾಧ್ವಿ

ತಾ|| ೬-೧-೪೭ ಸೋಮವಾರ

ಕಾಂಗ್ರೆಸ್ಸಿನ ಮುಂದಿನ ನೀತಿ

ಬ್ರಿಟಿಷ್ ನಿಯೋಗದವರ ಹೇಳಿಕೆ ಬಗ್ಗೆ ಈಚೆಗೆ ಕೊಡಲಾಗಿರುವ ವಿವರಣೆಯನ್ನು ಅಂಗೀಕರಿಸುವ ವಿಚಾರವಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ದೆಹಲಿ ನಗರದಲ್ಲಿ ಸಮಾಲೋಚನೆ ನಡೆಸುತ್ತಿದೆ. ಕಾಂಗ್ರೆಸ್ ಕಾರ್ಯಕಾರೀ ಮಂಡಳಿಯವರು ಸದರಿ ವಿವರಣೆಯನ್ನು ಅಂಗೀಕರಿಸುವಂತೆ ಅಭಿಪ್ರಾಯವನ್ನು ಸೂಚಿಸಿರುತ್ತಾರೆ. ಆದುದರಿಂದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಇದನ್ನು ಒಪ್ಪುವುದೆಂಬ ಭರವಸೆ ಇರುತ್ತದೆ.

ವರ್ಗೀಕರಣದ ವಿಚಾರದಲ್ಲಿ ಯಾವ ಪ್ರಾಂತದ ಇಷ್ಟಕ್ಕೂ ವಿರುದ್ಧವಾಗಿ ಬಲವಂತದ ಗುಂಪುಗಳನ್ನು ರಚಿಸಕೂಡದೆಂಬ ಅಭಿಪ್ರಾಯವನ್ನು ಬ್ರಿಟಿಷ್ ಸರ್ಕಾರದವರು ಒಪ್ಪಿರುತ್ತಾರೆ. ಆದುದರಿಂದ ಕಾಂಗ್ರೆಸ್ಸಿನವರೂ ಸಹ ಈ ವಿವರಣೆಗೆ ಸಮ್ಮತಿಸಿರುವರು. ಸದ್ಯದಲ್ಲಿ ಬ್ರಿಟಿಷ್ ಸರ್ಕಾರದವರು ಕಲ್ಪಿಸಿರುವ ಗುಂಪುಗಳಲ್ಲಿ ವಿವಿಧ ಪ್ರಾಂತಗಳು ಮೊದಲು ಕುಳಿತು, ತಮಗೆ ವಿಶೇಷ ಅನ್ಯಾಯವಾಗುಬಹುದೆಂದು ತೋರಿಬಂದಾಗ ಈ ಗುಂಪುಗಳನ್ನು ಬಿಟ್ಟು ಆಚೆ ಹೊರಗೆ ಹೋಗಬಹುದೆಂಬುದೇ ಈ ವಿವರಣೆಯಲ್ಲಿ ಅಡಗಿರುವ ಮುಖ್ಯ ತತ್ವ. ಪ್ರಾಂತಗಳನ್ನು ಒಂದೊಂದು ಗುಂಪಿನಲ್ಲಿ ಸೇರಿಸಿರುವುದರಿಂದಲೇ ಮಹಾ ಅನರ್ಥ ಉಂಟಾಗುವುದೆಂದು ಭಾವಿಸುವುದರ ಬದಲು, ಸದರಿ ಗುಂಪುಗಳು ಕೆಲಸ ಮಾಡಲು ತೊಡಗಿದಾಗ ನಿಜವಾಗಿಯೂ ಹಾನಿಯು ಉಂಟಾಗುವುದಾದರೆ ಗುಂಪುಗಳಿಂದ ಹೊರಬೀಳುವುದೇ ಲೇಸೆಂಬ ಅಭಿಪ್ರಾಯವು ಮೂಡಿರುತ್ತದೆ. ಮಹಾತ್ಮ ಗಾಂಧಿಯವರೂ ಸಹಾ ಇದೇ ರೀತಿ ಸಲಹೆಯನ್ನಿತ್ತಿರುವುದಾಗಿ ತಿಳಿದುಬಂದಿದೆ.

ಕಾಂಗ್ರೆಸ್ಸಿನಲ್ಲಿ ಅನೇಕ ಬಗೆಯ ಅಭಿಪ್ರಾಯ ತರಂಗಗಳು ಉತ್ಪನ್ನವಾಗಿರುವುದೇನೋ ನಿಜ. ಶಾಸನ ಬದ್ಧವಾದ ಚಳುವಳಿಯಲ್ಲಿ ನಂಬಿಕೆಯಿಲ್ಲದೆ ಮತ್ತೊಂದು ಹೋರಾಟವನ್ನು ಹೂಡಬೇಕೆಂದು ಹೇಳುವವರೂ ಇದ್ದಾರೆ. ಸಾಧ್ಯವಾದರೆ ಬ್ರಿಟಿಷ್ ಸರ್ಕಾರದವರ ಸಹಕಾರದಿಂದಲೂ, ಇಲ್ಲವಾದರೆ ಹೋರಾಟದಿಂದಲೂ ಸ್ವಾತಂತ್ರ್ಯವನ್ನು ಸಾಧಿಸಬೇಕೆನ್ನುವವರೂ ಇದ್ದಾರೆ. ಆದುದರಿಂದ ಕಾಂಗ್ರೆಸ್ ನಾಯಕರ ಅಭಿಪ್ರಾಯಕ್ಕೆ ಅನೇಕರು ಅಸಮ್ಮತಿಯನ್ನು ಸೂಚಿಸುವುದೂ ಸಹಜವಾಗಿದೆ.

ಪ್ರಕೃತದಲ್ಲಿ ರಾಜ್ಯಾಂಗ ರಚನಾ ಕಾರ್ಯಕ್ಕೆ ಎಲ್ಲಕ್ಕಿಂತಲೂ ಮಿಗಿಲಾದ ಪ್ರಾಮುಖ್ಯತೆಯು ಕೊಡಲ್ಪಟ್ಟಿರುತ್ತದೆ. ಇದಕ್ಕೆ ಬೇರೆ ಸಕಲ ಪಂಗಡಗಳಿಂದಲೂ ಸಾಧ್ಯವಾದಷ್ಟು ಮಟ್ಟಿನ ಬಹುಮತದ ಒಪ್ಪಿಗೆಯನ್ನು ಪಡೆಯುವುದು ಅಗತ್ಯವಾಗಿದೆ. ಮುಸ್ಲಿಂ ಲೀಗಿನವರನ್ನೂ, ಸಂಸ್ಥಾನಗಳ ಪ್ರತಿನಿಧಿಗಳನ್ನೂ ಸಭೆಯೊಳಗೆ ಭಾಗಿಗಳಾಗುವಂತೆ ಮಾಡುವುದು ಆವಶ್ಯಕವಾಗಿದೆ. ಈ ದೃಷ್ಟಿಯಿಂದ ಕಾಂಗ್ರೆಸ್ ಸೂತ್ರಧಾರಿಗಳು ಮೇಲ್ಕಂಡಂತೆ ಸಲಹೆ ಇತ್ತಿರುವರು.

ಕಾಂಗ್ರೆಸ್ಸಿನವರು ಇದರಿಂದ ವಿಪ್ಲವ ವಿಚಾರ ಪ್ರಿಯರನ್ನು ತೋರಿಸಿದಂತಾಗಿದೆ.

ವಾರ ಭವಿಷ್ಯ

ತಾ|| ೬-೧-೪೭ ರಿಂದ ೧೩-೧-೪೭

ಶ್ರೀ ನಿತ್ಯಾನಂದ ಸ್ವಾಮಿಗಳಿಂದ

ಮೇಷ:—ಆರೋಗ್ಯ ಚೆನ್ನಾಗಿರುತ್ತದೆ. ಚಿಂತೆ ಹೆಚ್ಚುವುದು. ಧನಾದಾಯ ಸಾಧಾರಣ. ಉದ್ಯೋಗ ವ್ಯವಹಾರಗಳಲ್ಲಿ ಜಯ. ಶತ್ರುಗಳಿಂದ ತಿರಸ್ಕಾರ. ತಾ|| ೭, ೧೦ ಸಾಧಾರಣ. ಅಧಿಕ ವ್ಯಯ.

ವೃಷಭ:—ಆರೋಗ್ಯ ಸಾಧಾರಣ. ಪ್ರವಾಸದಿಂದ ವಿಶೇಷ ಆಲಸ್ಯ. ವ್ಯಾಪಾರ ಉದ್ಯೋಗಗಳಲ್ಲಿ ಅನಾಸಕ್ತಿ. ಅಧಿಕಾರಿವರ್ಗದವರಿಂದ ಸನ್ಮಾನ. ಚೀಟಾಸಾಹ. ಧಾರ್ಮಿಕ ಕಾರ್ಯಗಳಿಗಾಗಿ ಅಧಿಕ ವೆಚ್ಚ. ತಾ|| ೭, ೯ ೧೨ ಸಾಧಾರಣ ಲಾಭ. ಬಂಧು ದರ್ಶನ.

ಮಿಥುನ:—ಆರೋಗ್ಯ ಕೆಡುತ್ತದೆ. ಉದ್ಯೋಗ ವ್ಯವಹಾರಗಳಲ್ಲಿ ನಷ್ಟ. ಆಪ್ತರಿಂದ ಅಪಮಾನ. ಔಷಧೋಪಚಾರಗಳಿಗಾಗಿ ವಿಶೇಷ ಖರ್ಚು. ಪ್ರವಾಸದಿಂದ ಪ್ರಮುಖ ವ್ಯಕ್ತಿಗಳ ಮೈತ್ರಿ. ತಾ|| ೭, ೮, ೧೧ ಲಾಭ ಶಾಂತಿ

ಕರ್ಕ:—ಪ್ರಾಕೃತಿಕ ಸ್ಥಿತಿ ಕೆಡುತ್ತದೆ. ವ್ಯಾಪಾರದಲ್ಲಿ ಶತ್ರುಗಳಿಂದ ವಿಶೇಷವಾದ ಕಿರುಕುಳ. ರಾಜಕೀಯ ವ್ಯಕ್ತಿಗಳ ಸಹವಾಸದಿಂದ ಕಷ್ಟ. ವ್ಯವಹಾರಗಳಲ್ಲಿ ನಷ್ಟ. ತಾ|| ೧೦, ೧೨ ಲಾಭ. ಮಿತ್ರಭೇಟಿ.

ಸಿಂಹ:—ಆರೋಗ್ಯ ಸಾಧಾರಣ. ಮಾನಸಿಕ ಚಿಂತೆ ಹೆಚ್ಚು. ಧನಲಾಭ ಉತ್ತಮ. ಮಿತ್ರರಿಂದ ಸಹಾಯ. ಅಧಿಕಾರಿ ವರ್ಗದವರಿಂದ ಸನ್ಮಾನ. ತಾ|| ೭, ೯ ಲಾಭ ಪ್ರವಾಸ.

ಕನ್ಯಾ:—ಆರೋಗ್ಯ ಪೂರ್ಣವಾಗಿ ಕೆಡುತ್ತದೆ. ಆರ್ಥಿಕ ಮುಗ್ಗಟ್ಟು ಹೆಚ್ಚು. ಆಪ್ತ ವರ್ಗದವರಿಂದ ತಿರಸ್ಕಾರ. ಅಪಮಾನ. ವ್ಯವಹಾರದಿಂದ ಮಾನಸಿಕ ವ್ಯಥೆ ಹೆಚ್ಚುವುದು. ಅಶುಭವಾರ್ತೆ. ತಾ|| ೭, ೮, ೧೨ ಪ್ರವಾಸ. ಮಿತ್ರ ದರ್ಶನ

ತುಲಾ:—ದೇಹಸ್ಥಿತಿ ಚೆನ್ನಾಗಿರುತ್ತದೆ. ಪ್ರಮುಖವ್ಯಕ್ತಿಗಳ ಸ್ನೇಹದಿಂದ ವಿಶೇಷ ಸನ್ಮಾನ ದೊರೆಯುತ್ತದೆ. ಶತ್ರುಗಳ ಕಿರುಕುಳ ತಪ್ಪುತ್ತದೆ. ಆಪ್ತಜನರ ವಿಶ್ವಾಸದಿಂದ ಕೆಲಸ ಕಾರ್ಯಗಳು ಯಶಸ್ವಿಯಾಗುತ್ತವೆ. ತಾ|| ೯, ೧೧, ೧೨ ಖರ್ಚು

ವೃಶ್ಚಿಕ:—ಆರೋಗ್ಯ ಚೆನ್ನಾಗಿರುತ್ತದೆ. ಕುಟುಂಬದ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುತ್ತದೆ. ಶುಭಕಾರ್ಯಗಳಿಗಾಗಿ ವಿಶೇಷ ಖರ್ಚು. ಬಂಧುಗಳ ಆಗಮನದಿಂದ ಮನಸ್ಸಿಗೆ ಸಮಾಧಾನ. ತಾ|| ೮, ೧೨ ಖರ್ಚು ಜಾಸ್ತಿ.

ಧನು:—ದೇಹಸ್ಥಿತಿ ಚೆನ್ನಾಗಿರುತ್ತದೆ. ಆಪ್ತವರ್ಗದವರಿಂದ ಕಿರುಕುಳ. ಉದ್ಯೋಗ ವ್ಯವಹಾರಗಳಲ್ಲಿ ನಷ್ಟ. ವಿಶೇಷವಾದ ಪ್ರವಾಸ. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ. ತಾ|| ೯, ೧೦, ೧೧ ಲಾಭ, ಮಿತ್ರಭೇಟಿ

ಮಕರ:—ಆರೋಗ್ಯ ಉತ್ತಮ. ವ್ಯವಹಾರದಲ್ಲಿ ಜಯ. ವ್ಯಾಪಾರದಿಂದ ಲಾಭ. ಅಧಿಕಾರಿ ವರ್ಗದವರಿಂದ ಸನ್ಮಾನ. ಸಂತೋಷಕೂಟ ಮತ್ತು ಧಾರ್ಮಿಕ ಕಾರ್ಯಗಳಿಗಾಗಿ ವಿಶೇಷವಾದ ಖರ್ಚು. ತಾ|| ೭, ೯ ೧೨ ಲಾಭ. ಕಲಹ

ಕುಂಭ:—ಆರೋಗ್ಯ ಚೆನ್ನಾಗಿರುತ್ತದೆ. ಉದ್ಯೋಗ ವ್ಯವಹಾರಗಳಿಂದ ಶತ್ರುಗಳ ಕಿರುಕುಳ ಹೆಚ್ಚುತ್ತದೆ. ಅಧಿಕಾರ ವರ್ಗದವರ ಅಸಮಾಧಾನ. ವಿಪರೀತವಾಗಿ ಮಾನಸಿಕ ಚಿಂತೆ ಹೆಚ್ಚುವುದು. ತಾ|| ೭, ೧೦, ೧೨ ವಿಶೇಷ ಖರ್ಚು

ಮೀನ:—ಆರೋಗ್ಯ ಕೆಡುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ. ಅಧಿಕಾರ ವರ್ಗದವರಿಂದ ಸನ್ಮಾನ. ಮಿತ್ರರಿಂದ ತಿರಸ್ಕಾರ. ಕುಟುಂಬದಲ್ಲಿ ಕಲಹ. ತಾ|| ೭, ೯, ೧೨ ಲಾಭ ಸಮಾಧಾನ

ಇನ್ನು ಮುಂದಾದರೂ ಲೀಗಿನವರು ಸಾಪಾರ್ದದಿಂದ ರಾಜ್ಯಾಂಗ ರಚನಾ ಕಾರ್ಯದಲ್ಲಿ ತೊಡಗುವುದು ಅವರ ಕರ್ತವ್ಯ. ಮತ್ತು ಬ್ರಿಟಿಷ್ ಸರ್ಕಾರದವರು ಘೋಷಿಸಿರುವ ತಮ್ಮ ಉದಾತ್ತ ತತ್ವಗಳನ್ನು ಕಾರ್ಯ ರೂಪಕ್ಕೆ ತರುವುದು ಅವರ ಕರ್ತವ್ಯವಾಗಿದೆ.

ಜಿಂದ್ ಸಂಸ್ಥಾನದ ಮುಖ್ಯ ಮಂತ್ರಿ ವಜಾ

ಕಾಶ್ಮೀರದ ಜಿಂದ್ ಸಂಸ್ಥಾನದ ಮುಖ್ಯ ಮಂತ್ರಿಗಳಾದ ಸರ್ ಗಂಗಾ ಕೌಲರ ಬಗ್ಗೆ ವಿಶೇಷ ವಿರೋಧ ಭಾವನೆಯನ್ನು ಪ್ರಜೆಗಳು ಪದೇ ಪದೇ ತೋರುತ್ತಿದ್ದುದರ ಪರಿಣಾಮವಾಗಿ ಅವರನ್ನು ಮಂತ್ರಿ ಪದವಿಯಿಂದ ವಜಾ ಮಾಡಲಾಗಿದೆ. ೨೫ ಸಾವಿರ ರೂ. ಗಳ ವಾರ್ಷಿಕ ವರಮಾನವಿದ್ದ ಅವರ ಜಹಗೀರನ್ನೂ ಸಹ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅವರ ಮಗನೇ ಮೊದಲಾದ ಇತರ ಐದು ಮಂದಿ ದೊಡ್ಡ ದೊಡ್ಡ ಅಧಿಕಾರಿಗಳನ್ನೂ ಸಹ ವಜಾ ಮಾಡಲಾಗಿದೆ ಎಂದು ವರದಿಯಾಗಿದೆ

ಕ್ಯಾಲೆಂಡರ್ ಸ್ವೀಕಾರ

ರಾಜಧಾನಿಯ ರಘುಲಾಲ್ ಕಂಪೆನಿಯವರೂ ಶ್ರೀ ಎಂ. ಎಸ್. ಸಿದ್ದಪ್ಪ ಸೋದರರೂ ಕಳುಹಿಸಿಕೊಟ್ಟಿರುವ ೧೯೪೭ ನೇ ಇಸವಿ ಕ್ಯಾಲೆಂಡರುಗಳನ್ನು ನಾವು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

Edited, printed and published by A. R. Nagarajan at the Sadhvi Press D-Subbiah Road Mysore

ಹೊಸ ವರ್ಷಕ್ಕಾಗಿ
ಹೊಸ ನಮೂನೆ
ಜವಳಿಗಳು
ಬಂದಿವೆ. ಇಂದೇ ಭೇಟಿ ಕೊಡಿರಿ.
ಬಿ. ಕೆಂಚಪ್ಪ ಸನ್ಸ್
ಜವಳಿ ಅಂಗಡಿ
ದೊಡ್ಡ ಪೇಟೆ, ಮೈಸೂರು

ಒರಿಸ್ಸಾಕ್ಕೆ ಹೊಸ ರಾಜಧಾ[ನಿ]

ಕಟಕ್ಕಿನಿಂದ ೨೫ ಮೈಲು ದೂರದಲ್ಲಿ[ರು]ವ ಭುವನೇಶ್ವರದ ಬಳಿಯಲ್ಲಿ ಒರಿ[ಸ್ಸಾ] ಪ್ರಾಂತ್ಯದ ಹೊಸ ರಾಜಧಾನಿಯನ್ನು ನಿರ್ಮಿಸಲು ಅಂದಾಜು ಹಾಕಲಾಗಿದೆ. [ಇದ]ಕ್ಕಾಗಿ ೩ ಕೋಟಿ ರೂ ವೆಚ್ಚವಾಗು[ವು]ದು. ಒರಿಸ್ಸಾ ಸರ್ಕಾರವು ಭಾರತಕೇಂದ್ರ ಸರ್ಕಾ]ರವನ್ನು ರಾಜಧಾನಿಯ ನಿರ್ಮಾಣಕ್ಕೆ ... ೨|| ಕೋಟಿ ರೂ. ಸಾಲ ಕೇಳಿದೆ. ... ಸರ್ಕಾರವು ಇದಕ್ಕಾಗಿ ೩೮ ಲಕ್ಷ ರೂ. ... ನ್ನು ಹಿಂದೆಯೇ ಮಂಜೂರು ಮಾ[ಡಿರು]ತ್ತೆಂದು ವರದಿಯಾಗಿದೆ.

ಇಂಡೋಚೀನಾದಲ್ಲಿ ಶಾಂತಿ[ಗೆ] ಕಾಲವು ಮಿಂಚಿಲ್ಲ

ಫ್ರೆಂಚ್ ಸೈನ್ಯಗಳ ಕಾರ್ಯಕ್ರಮ[ವ]ನ್ನು ಪರಿಶೀಲಿಲು ಇಂಡೋ ಚೀನಾಕ್ಕೆ [ಹೋ]ದಿರುವ ಫ್ರೆಂಚ್ ಜನರಲ್ಲರಿಗೆ ಆಲ್ಲಿನ [ಪ್ರ]ಧಾನಿಯವರು ರೇಡಿಯೋ ಮೂಲಕ [ಸಂ]ದೇಶವೊಂದನ್ನು ಕಳುಹಿಸಿ ಇಂಡೋ[ಚೀ]ನಾದಲ್ಲಿ ಶಾಂತಿ ಸ್ಥಾಪನೆಗೆ ಕಾಲವು ಮಿಂ[ಚಿ]ಲ್ಲವೆಂದೂ ಅದಕ್ಕಾಗಿ ಯುದ್ಧ ನಿಲ್ಲಿ[ಸುವ] ಯತ್ನ ಪಡಬಹುದೆಂದೂ ತಿಳಿಸಿರುವುದಾ[ಗಿ] ವರದಿಯಾಗಿದೆ

ವಯಸ್ಕರ ಶಿಕ್ಷಣ ಸಮಾರಂಭ

ತಾ|| ೪-೧-೪೭ ನೇ ಶನಿವಾ[ರ] ಮೈಸೂರು ನಗರದಲ್ಲಿರುವ ಶ್ರೀ ಕೃಷ್ಣ[ರಾ]ಜೇಂದ್ರ ಗಿರಣಿ ಕೆಲಸಗಾರರ ಪರಿ... ನಡೆಯುತ್ತಿರುವ ವಯಸ್ಕರ ತರಗತಿಯ ವಯಸ್ಕರ ಶಿಕ್ಷಣ ಸಮಾರಂಭವು ನಡೆ[ಯಿ]ತು. ಗಿರಣಿಯ ಜನರಲ್ ಮ್ಯಾನೇಜರ್ ಶ್ರೀ ಎಂ. ಆರ್. ಶ್ರೀನಿವಾಸಯ್ಯಂಗಾರ್‌ರವ[ರು] ಅಧ್ಯಕ್ಷತೆ ವಹಿಸಿದ್ದರು. ನಗರದ ಸಮಿ[ತಿ] ಕಾರ್ಯದರ್ಶಿಯವರೂ ಮತ್ತು ವಯಸ್ಕ[ರ] ತರಗತಿಯ ಮೇಲ್ವಿಚಾರಕರೂ ಬಂದಿದ್ದರು. ಕಾರ್ಯದರ್ಶಿಯವರು ವಯಸ್ಕರ ಶಿಕ್ಷಣ ವಿಚಾರವಾಗಿ ಉಪನ್ಯಾಸ ಮಾಡಿದರು. ಅಧ್ಯಕ್ಷರು ಕೆಲವು ಹಿತೋಕ್ತಿಗಳನ್ನು ಹೇಳಿದ ನಂತರ, ಸಮಾರಂಭವು ಮುಕ್ತಾಯವಾಯಿತು.

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)
ಜಾಹಿರಾತಿನ ದರಗಳಿಗೆ
ವಿಚಾರಿಸಿರಿ

ಆಪೆರಾ ಟಾಕೀಸ್
From 4-1-47
Daily 3 Shows
The Great Magician
With
Bela Lugosi, Maria Alba, Lcuism Preijal.
10-1-47 ರಿಂದ
ಪೊನ್ಮರವಿ (ತಮಿಳು)

ರಾಜಕಮಲ್, ಮೈಸೂರು.
3-1-47 ರಿಂದ 2 ನೇ ವಾರ
ಪ್ರಕಾಶ್ ರವರ 'ಹಮಾರಾ ಸಂಸಾರ್'
ಭೂಮಿಕೆ:- ರಂಜನಾ, ಜಿಲ್ಲು, ಜೀವನ್

ರೀ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೭—೧—೪೭ [ಸಂಚಿಕೆ ೧೪೯

ಸುಮಾತ್ರಾ ದ್ವೀಪದಲ್ಲಿ ಡಚ್ಚರ ಆಕ್ರಮಣ

ವೀಣಾ ವಾದನ

ಮೈಸೂರು ೭

ಸಂಜೆ ೬ ಘಂಟೆಗೆ ಡಿ. ಸುಬ್ಬಯ್ಯನವರ ... ಸ್ಥಿರುವ ಸಾಧ್ವಿ ಆಫೀಸ್ ಮಹಡಿ ..., ಪೂರ್ಣಿಮಾ ಶ್ರಯುಕ್ತ ಶ್ರೀಮತಿ ... ಎಂ. ಎಸ್. ಜಯಮ್ಮ ಮತ್ತು ... ಎಸ್ ಮನೋರಮಾ, ಇವರುಗಳ ... ವಾದನವೂ ಮತ್ತು ಎಂ. ಎಸ್. ... ರವರ ಹಾಡುಗಾರಿಕೆಯೂ ನಡೆ ... ದು ಸರ್ವರಿಗೂ ಸ್ವಾಗತವಿದೆ.

ಸಂತಾಪ ಸೂಚನೆ

...ವಾಣಿ ಪತ್ರಿಕೆಯ ಸಂಪಾದಕರೂ, ... ಕಾಂಗ್ರೆಸ್ ಕೆಲಸಗಾರರೂ ಆದ ... ಆರ್ ವಿ ಭದ್ರಣ್ಣನವರ ನಿಧನಕ್ಕಾಗಿ ... ತಾಪವನ್ನು ಸೂಚಿಸಲು ನಿನ್ನೆಯ ದಿ ... ದಯ ಏಜನ್ಸೀಸ್ ಕಾರ್ಯಾಲಯದ ... ಕಾಂಗ್ರೆಸ್ ಕೆಲಸಗಾರರ ಸಭೆಯನ್ನು ಏ ... ಡಿಸಲಾಗಿತ್ತು. ಶ್ರೀ॥ ಎಸ್. ರಂಗರಾ ... ಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ... ಪಿ. ನಾರಾಯಣ ಸ್ವಾಮಿ, ಎಚ್. ... ದಾಸಪ್ಪ, ಎಚ್. ಎಸ್. ದೊರೆಸ್ವಾಮಿ, ... ಎ. ಜೋಯಿಸ್ ಮತ್ತು ಅಧ್ಯಕ್ಷರು ... ಆರ್ ವಿ ಭದ್ರಣ್ಣನವರ ಗುಣಗಾ ... ಮಾಡಿದರು. ಅಧ್ಯಕ್ಷರು ಅವರ ಆತ್ಮಕ್ಕೆ ... ಶಾಂತಿಯನ್ನು ಕೋರುವ ಠರಾವನ್ನು ಸಭೆ ... ಮಂಡಿಸಿದರು. ಎಲ್ಲರೂ ಎರಡು ನಿ ... ಮಿಷಗಳ ಕಾಲ ಮೌನದಿಂದ ಎದ್ದು ನಿಂತು ... ವನ್ನು ಅನುಮೋದಿಸಿದರು.

ವಾರ್ಷಿಕೋತ್ಸವ

ಮೈಸೂರು ಬ್ರದರ್ಸ್‌ರವರ ಶ್ರೀ ವಸ ... ಸ್ವಾಮಿ ಸಂಗೀತ ವಿದ್ಯಾಮಂದಿರದ ಪ್ರಥ ... ಮ ವಾರ್ಷಿಕೋತ್ಸವವು ಕಳೆದ ಶನಿವಾರ ... ಪುರಭವನದಲ್ಲಿ ಶ್ರೀ ... ರ್. ರಾಮಚಂದ್ರರಾವ್ ಬೊಂಘೋರೆ ... ಯವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭ ... ಣೆಯಿಂದ ನಡೆಯಿತು. ಅಧ್ಯಕ್ಷರು ವೈಣಿಕ ... ರಾದ ಶ್ರೀ ಬಿ. ರಾಮಯ್ಯನವರ ಸ್ಮಾರಕ ... ವಾಗಿ ಈ ಮಂದಿರವನ್ನು ಅವರ ಮಕ್ಕಳಾದ ... ಮೈಸೂರು ಬ್ರದರ್ಸ್‌ರವರು ನಡೆಸುತ್ತಿರು ... ದಕ್ಕಾಗಿ ಅವರನ್ನು ಅಭಿನಂದಿಸಿದರು. ಈ ... ಸಮಾಜಕ್ಕೆ ಮಹಾಜನರು ಹೆಚ್ಚುಹೆಚ್ಚಾಗಿ ... ಪ್ರೋತ್ಸಾಹವೀಯಬೇಕೆಂದು ಪ್ರಾರ್ಥಿಸಿದ ... ರು. ಮಂದಿರದ ಅಧ್ಯಕ್ಷರ ಭಾಷಣ, ವಿದ್ಯಾ ... ರ್ಥಿ ವಿದ್ಯಾರ್ಥಿನಿಯರಿಂದ ಸಂಗೀತ ಮತ್ತು ... ವಾರ್ಷಿಕ ವರದಿಯಾದನಂತರ ಗಾಯಕಿ ... ಶ್ರೀಮತಿ ಮೀನಾಕ್ಷೀಬಾಯಿ ಮತ್ತು ಪಾರ್ಟಿ ... ಯವರಿಂದ ಸುಶ್ರಾವ್ಯವಾದ ಹಿಂದೂಸ್ಥಾನೀ ... ಸಂಗೀತವು ನಡೆಯಿತು.

ಹೈದರಾಬಾದ್ ಸುಧಾರಣೆಗೆ ಬ್ಯಾನರ್ಜಿಯವರ ಸಲಹೆಗಾರರು

ಮೈಸೂರಿನ ಮಾಜಿ ದಿವಾನರಾದ ಸರ್ ಎ ಆರ್ ಬ್ಯಾನರ್ಜಿಯವರು ಹೈದರಾಬಾದಿಗೆ ಬಂದು ಅಲ್ಲಿ ಕೈಗೊಳ್ಳಬಹುದಾದ ಮುಂದಿನ ರಾಜಕೀಯ ಸುಧಾರಣೆಗಳ ಬಗ್ಗೆ ಸಲಹೆ ಕೊಡುವಂತೆ ಸರ್ ಮಿರ್ಜಾರವರು ಅವರನ್ನು ಪ್ರಾರ್ಥಿಸಿರುವರೆಂದು ತಿಳಿದುಬಂದಿದೆ. ಅಲ್ಲದೆ ಆ ಸಂಸ್ಥಾನದ ನೀರಾವರಿ ಮತ್ತು ಕೈಗಾರಿಕೆಗಳ ಅಭಿವೃದ್ಧಿ ವಿಷಯದಲ್ಲಿಯೂ, ಮುಖ್ಯವಾಗಿ ತುಂಗಭದ್ರ ಜಲಾಶಯದ ವಿಷಯದಲ್ಲಿಯೂ ಸಲಹೆ ಕೊಡಲು ಸರ್ ಎಂ ವಿಶ್ವೇಶ್ವರಯ್ಯನವರನ್ನೂ ನಿಜಾಮರು ಆಹ್ವಾನಿಸಿರುವುದಾಗಿ ಹೇಳಲಾಗಿದೆ.

ಬ್ರಿಟಿಷ್ ಹೇಳಿಕೆಗೆ ಒಪ್ಪಿಗೆ

ಸೋಷಲಿಷ್ಟರು ಕಾಂಗ್ರೆಸ್ ಬಿಡುವರೇ?

ರಾಜ್ಯಾಂಗ ಸಭೆಯ ವಿಷಯದಲ್ಲಿ ಬ್ರಿಟಿಷ್ ಸರ್ಕಾರದವರು ಡಿಸೆಂಬರ್ ೬ರಲ್ಲಿ ಇತ್ತಿರುವ ಹೇಳಿಕೆಯನ್ನು ಒಪ್ಪಬೇಕೆಂದು ಪಂಡಿತ ನೆಹರೂರವರು ತಂದ ನಿರ್ಣಯವು ನಿನ್ನೆ ಬೆಳಗ್ಗೆ ದೆಹಲಿಯಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ೯೯ ಜತೆ ಓಟುಗಳಿಂದ ಅಂಗೀಕೃತವಾಯಿತು. ಸೋಷಲಿಷ್ಟರು ನಿರ್ಣಯವನ್ನು ವಿರೋಧಿಸಿದರು. ಕಾಂಗ್ರೆಸ್ಸಿನ ನೀತಿ ಇದೇ ರೀತಿ ಮುಂದುವರಿದರೆ ಅವರು ಕಾಂಗ್ರೆಸ್ ಸಂಸ್ಥೆಯನ್ನೇ ಬಿಟ್ಟುಹೋಗಬೇಕಾಗುವುದೆಂದು ಶ್ರೀ॥ ಜೈಪ್ರಕಾಶ್ ನಾರಾಯಣ್‌ರವರು ತಿಳಿಸಿದರು. ನಿರ್ಣಯದ ಪರವಾಗಿ ಐದು ಮಂದಿಯೂ, ವಿರೋಧವಾಗಿ ೧೬ ಮಂದಿಯೂ ಭಾಷಣ ಮಾಡಿದರು. ಬೆಲೂಚಿಸ್ಥಾನವನ್ನೂ, ಸಿಂಧನ್ನೂ, ಅಸ್ಸಾಂ ಗಡಿನಾಡು ಮತ್ತು ಪಂಜಾಬಿನ ಸಿಖ್ ಪ್ರದೇಶಗಳ ಗುಂಪಿಗೆ ಸೇರಿಸಬೇಕೆಂದೂ, ಬೆಲೂಚಿಸ್ಥಾನದವರು ಪಂಜಾಬಿನ ವರ್ಗಕ್ಕೆ ಸೇರಲು ವಿರೋಧವಾಗಿದ್ದಾರೆಂದೂ ಬಂದ ತಿದ್ದುಪಡಿಯನ್ನು ಮಾತ್ರ ಪಂಡಿತ ನೆಹರೂರವರು ಒಪ್ಪಿದರು. ಇತರ ತಿದ್ದುಪಡಿಗಳೆಲ್ಲವೂ ಬಿದ್ದುಹೋದವು.

ಪ್ಯಾಲಸ್ಟೈನಿನಲ್ಲಿ ಮಾರ್ಷಲ್ ಲಾ

ಪ್ಯಾಲಸ್ಟೈನಿನಲ್ಲಿ ಯಹೂದಿಗಳು ನಡೆಸುತ್ತಿರುವ ಅತ್ಯಾಚಾರಗಳನ್ನು ಮುಂದುವರಿಸಿದುದೇ ಆದಲ್ಲಿ ಅಲ್ಲಿ ಮಾರ್ಷಲ್ ಲಾ ಜಾರಿಗೆ ತರಲಾಗುತ್ತದೆಂದು ಹೇಳಲಾಗಿದೆ. ಬ್ರಿಟಿಷರು ಈ ವಿಚಾರವನ್ನೆಲ್ಲಾ ಸಂಯುಕ್ತ ರಾಷ್ಟ್ರ ಸಂಸ್ಥೆಗೆ ತಿಳಿಸುವರೆಂದು ತಿಳಿದುಬಂದಿದೆ.

ಚನ್ನಪಟ್ಟಣದ ಪ್ರಕರಣ

ಆಪಾದಿತರ ಮೇಲೆ ಮೊಕದ್ದಮೆ

ಕ್ಲೋಸ್‌ಪೇಟೆಯ ಮೊದಲನೆ ಮ್ಯಾಜಿಸ್ಟ್ರೇಟರ ಮುಂದೆ ಚನ್ನಪಟ್ಟಣದ ಗಲಭೆ ಸಂಬಂಧದಲ್ಲಿ ಅನೇಕರಮೇಲೆ ಬೇರೆ ಬೇರೆ ಕಾರಣಗಳಿಗಾಗಿ ೭ ಮೊಕದ್ದಮೆಗಳನ್ನು ಹಾಕಲಾಗಿದೆ. ವಿಚಾರಣೆ ೧೭ನೇ ತಾ॥ ಆರಂಭವಾಗುವುದು. ಆಪಾದಿತರುಗಳನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಅರ್ಜಿ ಸಲ್ಲಿಸಲಾಗಿದೆ. ಈ ದಿನ ಅದರ ಪರಿಶೀಲನೆ ನಡೆಯುವುದು.

ಸಿವಿಲ್ ಸರ್ವೀಸ್ ವಜಾ ಬಗ್ಗೆ

ಬ್ರಿ॥ ಸರ್ಕಾರದ ಸಂಧಾನ

ಭಾರತದಲ್ಲಿರುವ ಸಿವಿಲ್ ಸರ್ವೀಸನ್ನು ವಜಾ ಮಾಡಲು ಬ್ರಿಟಿಷ್ ಸರ್ಕಾರವು ಒಪ್ಪಿಗೆ ಇತ್ತಿದೆಯಷ್ಟೆ. ಆದಂತೆ ಕೆಲಸ ಕಳೆದುಕೊಳ್ಳುವ ಬ್ರಿಟಿಷ್ ಅಧಿಕಾರಿಗಳಿಗೆ ಕೊಡಬೇಕಾಗುವ ಪರಿಹಾರವನ್ನು ಕುರಿತು ಚರ್ಚಿಸಲು ಸ॥ ಪಟೇಲರನ್ನು ಭಾರತದ ಕಾರ್ಯದರ್ಶಿಗಳು ಲಂಡನ್ನಿಗೆ ಆಹ್ವಾನಿಸಿದ್ದರು. ಪಟೇಲರು ಆಹ್ವಾನವನ್ನು ನಿರಾಕರಿಸಿದ್ದರಿಂದ ಭಾರತದ ಉಪಕಾರ್ಯದರ್ಶಿಗಳಾದ ಮಿ॥ ಆರ್ಥರ್ ಹೆಂಡರ್‌ಸನ್ನರು ದೆಹಲಿಗೆ ಮೊನ್ನೆ ಆಗಮಿಸಿದರು. ಈ ಹುದ್ದೆಯನ್ನು ವಜಾ ಮಾಡುವುದರಿಂದ ೧೦೦೦ ಸಿವಿಲ್ ಮತ್ತು ೬೦೦ ಪೊಲೀಸ್ ಅಧಿಕಾರಿಗಳು ಮನೆಗೆ ಹೋಗಬೇಕಾಗಿದೆ. ಇವರುಗಳಿಗೆಲ್ಲಾ ಪರಿಹಾರವನ್ನು ಕೊಡಲು ೧ ಕೋಟಿ ಪೌಂಡು ವೆಚ್ಚವಾಗುವುದೆಂದು ಹೇಳಲಾಗಿದೆ. ಐರ್ಲೆಂಡ್ ಮತ್ತು ದಕ್ಷಿಣ ಆಫ್ರಿಕಗಳು ಸ್ವಾತಂತ್ರ್ಯ ಪಡೆದಾಗ ಅವರು ಪರಿಹಾರವನ್ನು ಕೊಡಲೇ ಇಲ್ಲವೆಂದು ಹೇಳಲಾಗಿದೆ.

ವಿಯಟ್ನಾಮಿನಲ್ಲಿ ಸನ್ನೋಹಕ ವಾಯು ಪ್ರಯೋಗ

ಫ್ರೆಂಚರು ವಿಯಟ್ನಾಮಿನಲ್ಲಿ ಉಸಿರು ಕಟ್ಟಿ ಮೂರ್ಛೆ ಬೀಳಿಸುವ ಸನ್ನೋಹನ ರೂಪದ ವಾಯುವನ್ನು ಪ್ರಯೋಗಿಸುತ್ತಿರುವುದಾಗಿ ವಿಯಟ್ನಾಂ ರೇಡಿಯೋ ತಿಳಿಸುತ್ತದೆ. ಅಲ್ಲದೆ ಅವರು ದೇವಸ್ಥಾನಗಳ ಮೇಲೆ ಗುಂಡು ಹಾರಿಸುತ್ತಿರುವುದಾಗಿ ಆಪಾದನೆ ಮಾಡಲಾಗಿದೆ. ಯುದ್ಧ ಮಾಡುವಂತೆ ಫ್ರೆಂಚ್ ಸಿಪಾಯಿಗಳನ್ನು ಬಲಾತ್ಕರಿಸಲು ಅವರನ್ನು ಸರಪಳಿಗಳಿಂದ ಟ್ಯಾಂಕುಗಳಿಗೆ ಬಿಗಿದು ಕಟ್ಟಲಾಗುತ್ತದೆಯೆಂದೂ ಸಹ ಹೇಳಲಾಗಿದೆ.

ಸುಮಾತ್ರಾದಲ್ಲಿ ಕದನ

ಇಂಡೊನೇಸಿಯಾಕ್ಕೆ ಸೇರಿದ ಸುಮಾತ್ರಾ ದ್ವೀಪದಲ್ಲಿ ಡಚ್ಚರು ತೀವ್ರವಾದ ಕದನವನ್ನು ಆರಂಭಿಸಿದ್ದಾರೆ. ಪಾಲೆಂಬಾಂಗ್ ಮೇಲೆ ಡಚ್ಚರ ಸೈನ್ಯಗಳು ಗುಂಡು ಹಾರಿಸುತ್ತಿವೆಯೆಂದೂ, ಪರಿಸ್ಥಿತಿ ವಿಷಮಿಸಿದೆಯೆಂದೂ ಡಾ॥ ಷರೀಯರ್‌ರವರು ತಿಳಿಸಿದ್ದಾರೆ. ಈ ನಗರವು ಪೆಟ್ರೋಲು ಮತ್ತು ಡಚ್ ಎಣ್ಣೆ ಗಣಿಗಳ ಕೇಂದ್ರವಾಗಿದೆ. ಇದಕ್ಕೆ ಸಂಬಂಧಿಸಿದ ೨೦ ಮೈಲಿ ಪ್ರದೇಶದಿಂದ ಇಂಡೊನೇಸಿಯನ್ನರು ಕೂಡಲೇ ವಾಪಸಾಗಬೇಕೆಂದು ಡಚ್ ಸೈನಿಕರು ಒಪ್ಪಂದ ಮಾಡಿದ್ದರಿಂದಲೇ ಕಲಹವುಂಟಾಗಿದೆಯೆಂದು ವರದಿಯಾಗಿದೆ.

ಪೊಲೀಸ್ ಅಧಿಕಾರಿಗಳಿಂದ ರಾಷ್ಟ್ರಧ್ವಜಕ್ಕೆ ಅಗೌರವ

ನಾಗರ್ ಕೋಯಿಲ್ ಬಳಿ ಇರುವ ಸುಚೀಂದ್ರಂನಲ್ಲಿ ರಥೋತ್ಸವ ನಡೆಯುತ್ತಿದ್ದಾಗ ತೆಗೆದುಕೊಂಡುಹೋಗುತ್ತಿದ್ದ ರಾಷ್ಟ್ರ ಧ್ವಜವನ್ನು ಪೊಲೀಸ್ ಅಧಿಕಾರಿಯೊಬ್ಬನು ಕಸಿದುಕೊಂಡು ಬಾವುಟದ ಕಡ್ಡಿಯನ್ನು ಮುರಿದು ಎಸೆದರೆಂದು ರಥವನ್ನು ಎಳೆಯುತ್ತಿದ್ದ ಜನರು ರೇಗಿಹೋಗಿ ಪೊಲೀಸನನ್ನು ಮುತ್ತಿದರು. ಆ ಅಧಿಕಾರಿಯು ಮನೆಯೊಂದಕ್ಕೆ ನುಗ್ಗಿಕೊಂಡಾಗ ಜನರ ಗುಂಪು ಆ ಮನೆಯನ್ನು ಮುತ್ತಿತು. ಕಾಂಗ್ರೆಸ್ ನಾಯಕರಾದ ಶ್ರೀ ಶಿವಂ ಪಿಳ್ಳೆಯವರ ಮಧ್ಯಸ್ಥಿಕೆಯಿಂದ ಸಮಾಧಾನ ನೆಲೆಸಿತು. ಸಂಜೆ ಸಾರ್ವಜನಿಕ ಸಭೆ ನಡೆದು ಪೊಲೀಸ್ ಅಧಿಕಾರಿಗಳ ವರ್ತನೆಯನ್ನು ಖಂಡಿಸುತ್ತಿದ್ದಾಗ ರಿಜರ್ವ್ ಪೊಲೀಸರು ಬಂದು ಲಾಠಿ ಪ್ರಯೋಗ ನಡೆಸಿ ಜನರನ್ನು ಚದುರಿಸಿದರು. ಪರಿಸ್ಥಿತಿ ಬಿಸಿಯಾಗಿಯೇ ಇದೆ.

ಬೊಂಬಾಯಿಯಲ್ಲಿ ಮಹಾ ಯಾಗದ ಆರಂಭ

ವಿಶ್ವಶಾಂತಿ, ಸುಖ ಮತ್ತು ಸೌಹಾರ್ದಗಳ ಸ್ಥಾಪನೆಗಾಗಿ ಬೊಂಬಾಯಿಯಲ್ಲಿ ಪ್ರಥಮ ಲಕ್ಷ ಚಂಡೀ ಯಜ್ಞವು ನಡೆಯುತ್ತಿದೆ. ಸಹಸ್ರಾರು ಮಂದಿ ಯೋಗಿಗಳೂ, ಪಂಡಿತರೂ, ಭಕ್ತಾದಿಗಳೂ ಬಂದು ನೆರೆದಿದ್ದಾರೆ. ಅಖಿಲ ಭಾರತ ಧರ್ಮ ಸಭೆಯವರೇ ಇದನ್ನು ಏರ್ಪಡಿಸಿದ್ದಾರೆ. ೨೫೦೦ ವರ್ಷಗಳ ಹಿಂದಿನ ... ದೇಶದಲ್ಲಿ 'ಧರ್ಮನಗರ'ವನ್ನು ನಿರ್ಮಿಸಲಾಗಿದೆ. ಶಾಸ್ತ್ರೋಕ್ತವಾದ ಪೂರ್ವಭಾವಿ ಕೆಲಸಗಳೆಲ್ಲಾ ನಡೆಯುತ್ತಿವೆ. ಎರಡು ಸಹಸ್ರ ಮಂದಿ ಕೇಸರಿ ಬಣ್ಣದ ಮೇಲ್ಪಟವನ್ನು ಹೊದ್ದು ಉತ್ತರೀಯವನ್ನು ಧರಿಸಿ ಯಜ್ಞದಲ್ಲಿ ಭಾಗಿಗಳಾಗಿದ್ದಾರೆ. ಈ ಸಂದರ್ಭದಲ್ಲೇ ಸನಾತನ ಧರ್ಮ ಸಂಘ, ಅಖಿಲ ಭಾರತ ಸಮ್ಮೇಳನ, ಅ॥ ಭಾ॥ ಗೋರಕ್ಷಣಾ ಸಮ್ಮೇಳನಗಳೂ ಜರುಗುವುವು. ಯಜ್ಞ ಮತ್ತು ಈ ಸಮ್ಮೇಳನಗಳಿಗಾಗಿ ೩ ಲಕ್ಷ ರೂಪಾಯಿಗಳು ಖರ್ಚಾಗುವುವು.

ತಾಲ್ಲೂಕು ಕಾಂಗ್ರೆಸ್ ಸಮಿತಿ ಸಭೆ

ನಂಜನಗೂಡು ೭

ನಂಜನಗೂಡು ತಾಲ್ಲೂಕು ಕಾಂಗ್ರೆಸ್ ಸಮಿತಿ ಸಭೆಯು ಶ್ರೀ॥ ಎಸ್ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ೧ನೇ ತಾ॥ ನಡೆದು ಪೌರವಾಣಿ ಸಂಪಾದಕರಾದ ಶ್ರೀ॥ ಆರ್ ವಿ ಭದ್ರಣ್ಣ, ಕನ್ನಡ ಪ್ರಪಂಚದ ಪಿತಾಮಹ ಟಿ ಪಿ ಕೈಲಾಸಂ ಮತ್ತು ಚನ್ನಪಟ್ಟಣದ ಗಲಭೆಗಳಲ್ಲಿ ಮೃತರಾದವರ ಆತ್ಮಕ್ಕೆ ಶಾಂತಿಯನ್ನು ಕೋರುವುದು, ಶ್ರೀ॥ ಕೆ. ಹನುಮಂತಯ್ಯನವರ ದಸ್ತಗಿರಿ ಬಗ್ಗೆ ಸರ್ಕಾರವನ್ನು ಖಂಡಿಸುವುದು ಮತ್ತು ಅವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹಾಕಿರುವ ಪ್ರತಿಬಂಧಕಾಜ್ಞೆಯನ್ನು ಪ್ರತಿಭಟಿಸುವುದು, ಹಿಂದೂ-ಮುಸ್ಲಿಂ ಸೌಹಾರ್ದವನ್ನೇರ್ಪಡಿಸಲು ಮಹಾತ್ಮ ಗಾಂಧಿಯವರು ಕೈಗೊಂಡಿರುವ ಯಾತ್ರೆಗೆ ಯಶಸ್ಸನ್ನು ಕೋರುವುದು ಮತ್ತು ರಾಜ್ಯಾಧಿಕಾರಕ್ಕೆ ಪ್ರಜೆಗಳೇ ಮೊದಲಮೊದಲು ರಾಜನೀತಿಜ್ಞರು ಸಾರಿದ ಪ್ರಕೃತಿ ಅವರನ್ನು ಅಭಿನಂದಿಸುವುದು, ಇವೇ ಮುಂತಾದ ನಿರ್ಣಯಗಳನ್ನು ಅಂಗೀಕರಿಸಿತು.

ಸಾಧ್ವಿ

ತಾ|| ೭-೧-೪೭ ಮಂಗಳವಾರ

ಪಡಿತರದ ವ್ಯವಸ್ಥೆ

ಬರುವ ವರ್ಷದ ಪಡಿತರದ ಪ್ರಮಾಣವನ್ನು ಗೊತ್ತು ಮಾಡುವಾಗ ಕಳೆದ ವರ್ಷದ ಶಿಲ್ಕು ಧಾನ್ಯವನ್ನು ಪರಿಗಣಿಸಬೇಕಾಗಿಲ್ಲವೆಂದು ಆಹಾರದ ಇಲಾಖೆಯ ಡೈರೆಕ್ಟರವರು ವಿವರಣೆಯನ್ನು ಕೊಟ್ಟಿರುವರಷ್ಟೆ. ಆದರೂ ಸ್ಥಳೀಯ ರೇಷನ್ ಅಧಿಕಾರಿಗಳಿಗೆ ಈ ವಿಷಯದಲ್ಲಿ ಪ್ರತ್ಯೇಕವಾದ ತಿಳುವಳಿಕೆಯು ಬಂದಿಲ್ಲವೆಂಬ ಕಾರಣದ ಮೇಲೆ ಹಿಡುವಳಿದಾರರಿಗೆ ಸಲ್ಲಬೇಕಾದ ವರ್ಷದ ಪೂರ್ತ ಧಾನ್ಯವನ್ನು ಕೊಡಲಾಗುತ್ತಿಲ್ಲವೆಂದು ತಿಳಿದುಬಂದಿದೆ. ಇದರಿಂದ ಅವರಿಗೆ ಬಹಳ ತೊಂದರೆಯುಂಟಾಗುತ್ತಿದೆ.

ಡೈರೆಕ್ಟರವರ ವಿವರಣೆಯು ಸ್ಪಷ್ಟವಾಗಿರುತ್ತದೆ. ಅಲ್ಲದೆ ಅದರ ವಿಚಾರದಲ್ಲಿ ಮೊದಲೇ ಎಲ್ಲಾ ರೇಷನ್ ಅಧಿಕಾರಿಗಳಿಗೂ ತಕ್ಕ ತಿಳುವಳಿಕೆಯನ್ನು ಕೊಡಲಾಗಿದೆಯೆಂದೂ ಅದರಲ್ಲಿ ನಮೂದಿಸಲಾಗಿದೆ. ಯಾವುದಾದರೂ ಸಂದರ್ಭಗಳಲ್ಲಿ ಅದರಂತೆ ನಡೆಯದಿದ್ದಲ್ಲಿ ಅದನ್ನು ತಮ್ಮ ಗಮನಕ್ಕೆ ತಂದರೆ ಕ್ರಮ ಜರುಗಿಸಲಾಗುವುದೆಂದೂ ಸಹ ಸೂಚಿಸಲಾಗಿದೆ. ಆದರೆ ಹೀಗೆ ವ್ಯತ್ಯಾಸವಾಗಿರುವುದು ಒಂದೆರಡು ಸಂದರ್ಭಗಳಲ್ಲಿ ಅಲ್ಲ. ಈ ನಗರದಲ್ಲಿರುವ ಎಲ್ಲಾ ಜಮೀನುದಾರರುಗಳಿಗೂ ಇದೇ ರೀತಿ ಮಾಡಲ್ಪಟ್ಟಿದೆ. ಕಳೆದ ವರ್ಷದ ಲೆಖ್ಖದಂತೆ ಹೆಚ್ಚುವರಿ ಕಂಡು ಬಂದ ಪ್ರಮಾಣದ ಧಾನ್ಯವನ್ನು ಪ್ರತಿಯೊಬ್ಬರಿಂದಲೂ ಕಡಿಮೆಯಿಸಲಾಗಿದೆ. ಆದುದರಿಂದ ಪ್ರತಿಯೊಬ್ಬರಿಗೂ ಈಗ ಪರಿಹಾರವನ್ನು ಕೊಡಬೇಕಾಗಿದೆ.

ಡೈರೆಕ್ಟರವರ ಮೇಲ್ಕಂಡ ವಿವರಣೆಯು ಪ್ರಕಟವಾದ ಮೇಲೆ ಅನೇಕ ಜನರು ನಗರದ ರೇಷನ್ ಕಛೇರಿಗೆ ಹೋಗಿ ತಮ್ಮ ಲೆಖ್ಖದಲ್ಲಿ ಹೊಡೆದು ಹಾಕಿರುವ ಧಾನ್ಯವನ್ನು ಮತ್ತೆ ಸೇರಿಸಿಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ರೇಷನ್ ಕಛೇರಿಯ ನೌಕರರು ಇನ್ನೂ ತಮಗೆ ಮೇಲಿನಿಂದ ಸೂಚನೆ ಬಂದಿಲ್ಲವೆಂದು ಹೇಳಿ ಕಾಲಕ್ಷೇಪ ಮಾಡುತ್ತಿರುವುದಾಗಿ ತಿಳಿದುಬಂದಿದೆ. ಆದರೂ ಕೆಲವು ಸಂದರ್ಭಗಳಲ್ಲಿ ರೇಷನ್ ಕಾರ್ಡು ಹೋಲ್ಡರುಗಳಿಂದ ಹೇಳಿಕೆಗಳನ್ನು ತೆಗೆದುಕೊಂಡು, ಅವರಲ್ಲಿ ಹಳೆಯ ಧಾನ್ಯದ ದಾಸ್ತಾನು ಮಿಕ್ಕಿಲ್ಲದಿರುವುದರಿಂದ, ಮೊದಲು ಹೊಡೆದು ಹಾಕಿದ್ದ ಧಾನ್ಯದ ಪ್ರಮಾಣವನ್ನು ಮತ್ತೆ ಸೇರಿಸಿಕೊಡುತ್ತಿರುವರೆಂದೂ ಸಹ ವರದಿಯಾಗಿದೆ. ಅಂತೂ ಈ ಕೆಲಸವು ಒಂದು ಕ್ರಮ ಬದ್ಧವಾಗಿ ನಡೆಯುತ್ತಿರುವಂತೆ ಕಾಣುವುದಿಲ್ಲ.

ಈ ಮಧ್ಯೆ ಜಮೀನುಗಳಲ್ಲಿ ಪೈರು ಕಟಾವು ಆಗಿ ರವಾನೆಗಾಗಿ ಬಿದ್ದಿರುತ್ತದೆ. ಸರ್ಕಾರಕ್ಕೆ ಸಲ್ಲಿಸಬೇಕಾದ ಪ್ರಮಾಣದ ಬಗ್ಗೆಯೂ ಮತ್ತು ಧಾನ್ಯಗಳನ್ನು ಸಾಗಿಸಲು ಪರ್ಮಿಟ್ಟುಗಳನ್ನು ಪಡೆಯುವ ವಿಷಯದಲ್ಲಿಯೂ ಈಗಾಗಲೇ ಜನರು ತಾಲ್ಲೂಕು ಕಛೇರಿಗಳಿಗೆ ಅನೇಕ ದಿನಗಳ ಕಾಲ ಯಾತ್ರೆ ನಡೆಸಿ ಬಳಲಿ ಬೆಂಡಾಗುತ್ತಿರುವರು. ಹೀಗಿರುವಲ್ಲಿ ಪಡಿತರ ಪ್ರಮಾಣದ ಲೆಖ್ಖಾಚಾರದಲ್ಲಿ ಆಗಬಹುದಾದ ಈ ವ್ಯತ್ಯಾಸಗಳಿಂದಲೂ ಅವರು ಪರಿತಪಿಸಬೇಕಾದ ಹೊಸ ಕಷ್ಟ ಪರಂಪರೆಗಳು ಸಂಪ್ರಾಪ್ತವಾಗಿರುವುದು ಶೋಚನೀಯವಾಗಿದೆ.

ಒಂದು ಬಾರಿ ಪರ್ಮಿಟ್ಟುಗಳನ್ನು ಪಡೆಯುವುದೇ ಎಷ್ಟೋ ದುಸ್ತರವಾಗಿರುವಾಗ ತಿದ್ದುಪಡಿಯಾದ ಹೊಸ ರೇಷನ್ ಪ್ರಮಾಣದಿಂದ ಮತ್ತೆ ಪರ್ಮಿಟ್ಟುಗಳ ಪರಿವರ್ತನೆಯನ್ನು ಮಾಡಿಸುವುದು ಎಷ್ಟು ಕಷ್ಟವೆಂಬುದನ್ನು ಹೇಳಬೇಕಾಗಿಯೇ ಇಲ್ಲ. ಒಂದು ವೇಳೆ ಹಿಂದಿನ ಲೆಖ್ಖಾಚಾರದಂತೆ ಡಿಪೋಗಳಿಗೆ ಹೆಚ್ಚಿನ ಧಾನ್ಯವನ್ನು ಸಲ್ಲಿಸಿಬಿಟ್ಟಿದ್ದರೆ ವಾಪಸು ಹೆಚ್ಚಿನ ಧಾನ್ಯವನ್ನು ಪಡೆಯುವ ಬಗೆ ಹೇಗೆಂಬುದೂ ಒಂದು ಕಠಿಣವಾದ ಸಮಸ್ಯೆ.

ಇವುಗಳನ್ನೆಲ್ಲಾ ತಪ್ಪಿಸಲು ರೇಷನ್ ಅಧಿಕಾರಿಗಳು ಕೂಡಲೇ ಡೈರೆಕ್ಟರವರ ವಿವರಣೆಯಂತೆ ಬರುವ ವರ್ಷಕ್ಕೆ ಪೂರ್ತ ಪಡಿತರವನ್ನು ಕೊಡುವಂತೆ ಏರ್ಪಡಿಸಬೇಕು. ಹಿಂದೆ ಬರೆದುಕೊಟ್ಟಿರುವ ಲೆಖ್ಖದಲ್ಲಿ ಮೋತಾ ಮಾಡಲಾಗಿರುವ ಪ್ರಮಾಣವನ್ನು ಸೇರಿಸಿಕೊಡಬೇಕು. ಈ ವಿಷಯದಲ್ಲಿ ಯಾವ ಕಾಲ ವಿಳಂಬಕ್ಕೂ ಆಸ್ಪದವಿಲ್ಲ. ತಡವಾದಷ್ಟೂ ಜಮೀನುದಾರರಿಗೂ, ಅಧಿಕಾರಿ ವರ್ಗದವರಿಗೂ ಉಭಯತಾಪ ತೊಡಕುಗಳು ಉಂಟಾಗುವುವು. ಆದುದರಿಂದ ಈ ಕೂಡಲೇ ರೇಷನ್ ಇಲಾಖೆಯವರು ಈ ವಿಷಯಕ್ಕೆ ಪೂರ್ಣ ಗಮನ ಕೊಟ್ಟು ಬರುವ ವರ್ಷದ ಪಡಿತರವು ಪೂರ್ತಿಯಾಗಿ ಸಲ್ಲುವಂತೆ ಏರ್ಪಾಡು ಮಾಡಬೇಕೆಂದು ನಾವು ಕೋರುತ್ತೇವೆ.

ಹಲ್ಲಿನಿಂದ ರೈಲು ಎಳೆತ

ಅಲೆಕ್ಸಾಂಡರ್ ಮಾರ್ಷಲ್ ಎಂಬ ಶ್ರೀ ಡ್ರೈವರ್ ಒಬ್ಬನು ತನ್ನ ಹಲ್ಲಿನಿಂದ ೧೫ ಟನ್ ತೂಕದ ಎ ರೈಲ್ವೆ ವ್ಯಾಗನ್ನುಗಳನ್ನು ೫೦ ಅಡಿ ದೂರ ಎಳೆದಿದ್ದಾನೆ. ಇದು ಅವನ ಐದನೇ ಮಹಾ ಪ್ರಯತ್ನವೆಂದು ಹೇಳಲಾಗಿದೆ.

ಶರತ್‌ಬೋಸರ ರಾಜೀನಾಮೆ

ಬ್ರಿಟಿಷರ ದಿ|| ೬ ನೇ ತಾ|| ಹೇಳಿಕೆಯನ್ನು ಕಾಂಗ್ರೆಸ್ ಒಪ್ಪಿಕೊಂಡಿರುವುದಕ್ಕಾಗಿ ಪ್ರತಿಭಟಿಸಿ ಶ್ರೀ ಶರತ್‌ಚಂದ್ರಬೋಸರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ರಾಜೀನಾಮೆ ಸಲ್ಲಿಸಿದ್ದಾರೆ

ಹರಿಜನರಿಗೆ ವೆಂಕಟೇಶ್ವರನ ಉತ್ಸವಮೂರ್ತಿಯ ದರ್ಶನ

ತಿರುಪತಿ ಬೆಟ್ಟವನ್ನು ಹತ್ತಿದ ಹರಿಜನರ ನಾಯಕರಾದ ಶ್ರೀ ಬಿ ಎಸ್. ಮೂರ್ತಿಯವರು ದೇವಸ್ಥಾನದೊಳಕ್ಕೆ ಹರಿಜನರು ಬಲವಂತವಾಗಿ ಪ್ರವೇಶಿಸದಂತೆ ನೋಡಿಕೊಳ್ಳುವುದಾಗಿ ಭರವಸೆಯಿತ್ತಿದ್ದರಷ್ಟೆ. ಆದರೆ ಹರಿಜನರು ಶ್ರೀ ವೆಂಕಟೇಶ್ವರನ ದರ್ಶನವನ್ನು ಕೋರಿದ್ದರಿಂದ ದೇವಸ್ಥಾನದ ಪ್ರದಕ್ಷಿಣೆ ಮಾಡಿಕೊಂಡು ಬಂದ ಮೇಲೆ ಅವರಿಗೆ ಒಳಗಿದ್ದ ಶ್ರೀ ವೆಂಕಟೇಶ್ವರನ ಉತ್ಸವ ಮೂರ್ತಿಯನ್ನು ಹೊರಗೆ ತಂದು ದರ್ಶನ ಮಾಡಿಸಲಾಯಿತೆಂದು ತಿಳಿದು ಬಂದಿದೆ

ಸುಡಾನ್ ಗ|| ಜನರಲ್ಲನ್ನು ವಜಾಮಾಡಲು ಒತ್ತಾಯ

ಆಂಗ್ಲೋ-ಈಜಿಪ್ಟ್ ಸಂಧಾನಗಳು ಸುಗಮವಾಗಿ ನಡೆಯಲು ಸುಡಾನಿನಲ್ಲಿರುವ ಬ್ರಿಟಿಷ್ ಗವರ್ನರ್ ಜನರಲ್ಲರನ್ನು ಕೂಡಲೇ ವಜಾ ಮಾಡಬೇಕೆಂದು ಈಜಿಪ್ಟ್ ಸರ್ಕಾರವು ಬ್ರಿಟಿಷ್ ಸರ್ಕಾರವನ್ನು ಒತ್ತಾಯಪಡಿಸಿದೆಯೆಂದು ಗೊತ್ತಾಗಿದೆ. ಸುಡಾನಿಗೆ ಪೂರ್ಣ ಸ್ವಾತಂತ್ರ್ಯ ಕೊಡಿಸುವುದಾಗಿ ಆ ಗವರ್ನರ್ ಅಲ್ಲಿನ ದೇಶೀಯರಿಗೆ ಪ್ರೋತ್ಸಾಹವೀಯುತ್ತಿದ್ದಾರೆಂದು ಆರೋಪಿಸಲಾಗಿದೆ

ಹರ್ಡೀಕರ್ ಮಂಜಪ್ಪನವರ ನಿಧನ

ಕರ್ಣಾಟಕದ ಸುಪ್ರಸಿದ್ಧ ಮುಂದಾಳುಗಳೂ, ಕರಣ ಸಾಹಿತ್ಯ ಪತ್ರಿಕೆಯ ಸಂಪಾದಕರೂ ಆದ ಶ್ರೀ|| ಹರ್ಡೀಕರ್ ಮಂಜಪ್ಪನವರು ಕಳೆದ ೪ ನೇ ತಾರೀಖು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಉತ್ತಮ ಭಾಷಣಕಾರರೂ, ಗ್ರಂಥಕರ್ತರೂ ಆಗಿದ್ದರು. ೪೦ ವರ್ಷಗಳ ಕಾಲದಿಂದಲೂ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸುತ್ತಿದ್ದರು. ಅಜನ್ಮ ಬ್ರಹ್ಮಚರ್ಯ ವ್ರತವನ್ನು ಸಾಧಿಸಿದ್ದರು

ಸೈಕಲ್ ಮೇಲಿನ ಹತೋಟಿ ವಜಾ

ಸ್ವಂ. ಮು ಪ್ರೋ] ಬೆಂಗಳೂರು,

ಸೈಕಲ್ ಹಂಚಿಕೆ ಮತ್ತು ದರಗಳ ಮೇಲಿದ್ದ ಹತೋಟಿಯನ್ನು ಸರ್ಕಾರದವರು ಜನವರಿ ೩ ರಿಂದ ವಜಾ ಮಾಡಿರುತ್ತಾರೆ. ಅದರಂತೆ ಸೈಕಲ್ ಸಾಮಾನುಗಳ ಮೇಲಿನ ಹತೋಟಿಯೂ ಹೋಗಿದೆ

ಬಿತ್ತನೆ ಭತ್ತಕ್ಕೆ ರಿಯಾಯಿತಿ

ಬಿತ್ತನೆ ಭತ್ತವನ್ನು ಎಕರೆ ಒಂದಕ್ಕೆ ೩ ಸೇರಿನಂತೆ ಬಿಡಲಾಗುವುದು. ಅದನ್ನು ಅಪೇಕ್ಷಿಸುವವರು ತಾಲ್ಲೂಕು ಅಮಲ್ದಾರರುಗಳಿಗೆ ಈ ತಿಂಗಳು ೩೧ ರೊಳಗೆ ಅರ್ಜಿ ಹಾಕಿ ರಹದಾರಿ ಪಡೆಯಬೇಕೆಂದು ಸೂಚಿಸಲಾಗಿದೆ

ಮಹಾತ್ಮಾ ಟೆಕ್ಸ್‌ಟೈಲ್ಸ್

ಬೆಂಗಳೂರು ಗಾಂಧಿನಗರದಲ್ಲಿರುವ ಮಹಾತ್ಮ ಟೆಕ್ಸ್‌ಟೈಲ್ಸ್ ಕಚೇರಿಯ ಆರಂಭೋತ್ಸವವು ಮೊನ್ನೆ ಬೆಳಗ್ಗೆ ಶ್ರೀ ಕೆ ಟಿ ಭಾಷ್ಯಂರವರಿಂದ ನೆರವೇರಿಸಲ್ಪಟ್ಟಿತು.

ಅಲ್ಯೂಮಿನಂ ಜೋಡುಗಳು

ಸಿಡ್ನಿಯ ಜೋಡು ಅಂಗಡಿಯವರೊಬ್ಬರು ಕೆಟ್ಟುಹೋದ ಬಾಂಬರು ವಿಮಾನಗಳ ಅಲ್ಯೂಮಿನಂನಿಂದ ಜೋಡುಗಳನ್ನು ತಯಾರಿಸುವುದಾಗಿ ಹೇಳಲಾಗಿದೆ. ಅವುಗಳು ೬ ಔನ್ಸ್ ತೂಕ ಮಾತ್ರವಿರುವುವೆಂದೂ, ಅಂದವುಳ್ಳ ಕೆಡದೆ ಚಳಿಗಾಲದಲ್ಲಿ ಕಾವಾಗಿಯೂ, ಬೇಸಿಗೆಯಲ್ಲಿ ತಂಪಾಗಿಯೂ ಇರುವುವೆಂದೂ ಹೇಳಲಾಗಿದೆ

ಉಸಿರಾಡುವ ಸರೋವರ

ನ್ಯೂಜಿಲೆಂಡಿನಲ್ಲಿ ವಾಕಟಿಟು ಎಂಬ ಉಸಿರಾಡುವ ಸರೋವರವಿದೆ. ನೋಡಲು ಇದು ಬಹಳ ಶಾಂತವಾಗಿರುವುದು. ಆದರೆ ಪ್ರತಿ ಐದು ನಿಮಿಷಗಳಿಗೊಮ್ಮೆ ಅದರ ನೀರು ಸುಮಾರು ೬ ಅಂಗುಲಗಳಷ್ಟು ಏರಿ ಇಳಿಯುತ್ತದೆ. ಇದು ಮಲಗಿ ನಿದ್ರಿಸುವ ದೈತ್ಯನು ಉಸಿರಾಡುವಂತೆ ಕಂಡು ಬರುವುದೆಂದು ಹೇಳಲಾಗಿದೆ

ಅಪೆರಾ ಟಾಕೀಸ್
From 4-1-47
Daily 3 Shows
The Great Magician
10-1-47 ರಿಂದ
ಪೊನ್ನುರುವಿ (ತಮಿಳು)
ಪಾತ್ರ:- "ಕೊತ್ತಮಂಗಲಂ ಸೀನು" ಕೆ. ಟಿ. ರುಕ್ಮಿಣಿ "ಆರ್. ಬಾಲಸುಬ್ರಹ್ಮಣ್ಯಂ"

ಆರ್. ಎಸ್. ಪಂಡಿತರ
ನಾಯಿಕೆಮ್ಮಿನ ಔಷಧಿ
7–8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.
ಕ್ರಯ ಬಾಟ್ಲಿಗೆ 1-8-0
ಗೂರಲು—ಉಬ್ಬಸಕ್ಕೆ
(Asthma)
ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ.
(Appendecitis) ಗುಲ್ಮ ಶೂಲೆ ಮತ್ತು (Tonsils) ಗಲಾಯುಕ ಆವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ.
ಗುಂಡ್ಲುಪೇಟೆ ಆರ್. ಎಸ್. ಪಂಡಿತರು ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂರು

ರಾಜಕಮಲ್, ಮೈಸೂರು.
3-1-47 ರಿಂದ 2 ನೇ ವಾರ
ಪ್ರಕಾಶ್ ರವರ 'ಹಮಾರಾ ಸಂಸಾರ್'
ಭೂಮಿಕೆ:- ರಂಜನಾ, ಜಿಲ್ಲು, ಜೀವನ್

ಟಿ. ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೆ ಚಿಕಿತ್ಸೆಯು ಬಹು ಸುಲಭ ಛಾರ್ಜಿನಲ್ಲಿ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ೧೨ ಆಣೆ ಮಾತ್ರ)
ಜಾಹಿರಾತಿನ ದರಗಳಿಗೆ
ವಿಚಾರಿಸಿರಿ

Edited, printed and published A. R. Nagarajan at the Sadhvi Pre[ss] D-Subbiah Road Mysore

ರೋಜ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೮—೧—೪೭ [ಸಂಚಿಕೆ ೧೩೦

ಸತೀ ಕೃಪಲಾನಿಯವರ ಅಪಹರಣ ಪ್ರಯತ್ನ

ಸಂಸ್ಥಾನದಲ್ಲಿ ಜರೂರು ಶಾಸನದ ಜಾರಿಯೇ?

ಸ್ವ. ಫೋ] ಬೆಂಗಳೂರು ೮

ಸಂಸ್ಥಾನದಲ್ಲಿ ಕಾಂಗ್ರೆಸ್ಸಿನ ಪ್ರಭಾವವು ದಿನೇ ಬೆಳೆಯುತ್ತಿರುವುದನ್ನೂ, ಕೋಮು ಕಲಹಗಳನ್ನೂ ಪರಿಶೀಲಿಸಿ, ಶ್ರೀ ... ಅಮೆಂಡ್‌ಮೆಂಟಿನ ಮಾದರಿ ಒಂದು ಜರೂರು ಶಾಸನವನ್ನು ಜಾರಿ ... ವಿಚಾರದಲ್ಲಿ ಸರ್ಕಾರದವರು ಶೀ... ಆಲೋಚನೆಯನ್ನು ಮಾಡುತ್ತಿರು... ಸಂಬಂಧಪಟ್ಟ ಕಡೆಗಳಲ್ಲಿ ಹೇ... ಗುತ್ತಿದೆ

ಮೈಸೂರಿನಲ್ಲಿ ನೀರು ಸರಬರಾಜು

ಮೈಸೂರು ನಗರದಲ್ಲಿ ನೀರು ಸರಬರಾ... ವ್ಯವಸ್ಥೆಯನ್ನು ಮಾಡಲು ಸ... ದವರು ಆಲೋಚಿಸಿ ಒಂದು ಪ್ರಕಟ ... ಹೊರಡಿಸಿದ್ದಾರೆ. ಈ ಬಗ್ಗೆ ಸಲಹೆ, ಮ... ಕಾಶಗಳನ್ನು ಸೂಚಿಸುವವರು ೧೫ ... ದಿನಗಳಾಗಿ ತಿಳಿಸಬೇಕಾಗಿದೆ.

... ಪಾವಗಡ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳಿಂದ, ಹೆಂಡ ಸಾರಾಯಿ ಮ... ಗಾಂಜಾವನ್ನು ಹೊರಕ್ಕೆ ಸಾಗಿಸದಂತೆ ... ನಿಷೇಧಿಸಿ ಸರ್ಕಾರದವರು ಒಂದು ಆಜ್ಞೆ... ಯನ್ನು ಹೊರಡಿಸಿದ್ದಾರೆ.

ಗೋಪಾಲರಾಯರ ಜಾಮೀನನ್ನು ಕಡಿಮೆ ಮಾಡಲಾಯಿತು.

ಧರ್ಮ ರಕ್ಷಕರ ಶ್ರೀ ಬಿ ಎಸ್. ಗೋ... ಪಾಲರಾಯರು ೭೫ ಸಾವಿರ ರೂಗಳ ಸ್ವಂ... ತ ಮುಚ್ಚಳಿಕೆ ಮತ್ತು ಅದೇ ಮೊತ್ತದ ಎ... ರಡು ಜಾಮೀನುಗಳನ್ನು ಕೊಡಬೇಕೆಂದು ... ನ್ಯಾಯಾಧೀಶರು ಆಜ್ಞೆ ಮಾಡಿದ್ದ... ಈ ಬಗ್ಗೆ ಹಾಕಲಾಗಿದ್ದ ಅಪೀಲಿನ ವಿ... ಚಾರಣೆ ನಡೆಸಿದರು. ಅವರು ೭ ಸಾವಿರ ರೂ... ಗಳ ಮುಚ್ಚಳಿಕೆಯನ್ನು ಅದೇ ಮೊತ್ತದ ... ಜಾಮೀನನ್ನು ಕೊಡಬೇಕೆಂದು ... ನ್ಯಾಯಾಧೀಶರು ಆಜ್ಞೆ ಇತ್ತಿದ್ದಾರೆ.

ಗಡೀಪಾರು ಆಜ್ಞೆ

ಸೆಂಟ್ರಲ್ ಜೈಲಿನಲ್ಲಿ ಡಿಟೆನ್ಯೂಗಳಾಗಿದ್ದ ... ಕಾರ್ಮಿಕ ಮುಂದಾಳುಗಳಾದ ... ದಾಸ್ ಮತ್ತು ಶ್ರೀ ಗೋವಿಂದರವ... ರನ್ನು ನಿನ್ನೆ ದಿನ ಖುಲಾಸೆ ಮಾಡಿ ಅವರು ... ಕೂಡಲೇ ಸಂಸ್ಥಾನವನ್ನು ಬಿಟ್ಟು ಹೋಗ... ಬೇಕೆಂದು ಸಾರ್ವಜನಿಕರ ರಕ್ಷಣಾ ಶಾಸ... ನ ಪ್ರಕಾರ ಸರ್ಕಾರದವರು ಗಡೀಪಾರು ಆ... ಜ್ಞೆಯನ್ನು ಅವರ ಮೇಲೆ ಜಾರಿ ಮಾಡಿ... ದ್ದರಿಂದ ಅವರಿಬ್ಬರನ್ನೂ ಸಂಸ್ಥಾನದಾಚೆ ... ಕರೆದುಕೊಂಡು ಹೋಗಿ ಬಿಡಲಾಯಿತು.

ಪ್ರಭುಗಳಿಗೆ ಕಾಂಗ್ರೆಸ್ ಮನವಿ

ಮೈಸೂರು ೮

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ... ಸಮಿತಿ ನಿರ್ಧಾರದಂತೆ ಶ್ರೀಮನ್ಮಹಾರಾಜ ... ರವರಿಗೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರು ... ಕಳಿಸುವ ವಿಜ್ಞಾಪನಾ ಪತ್ರವನ್ನು ನಿನ್ನೆ ... ಶ್ರೀ ಎಸ್. ಚನ್ನಯ್ಯನವರು ಪ್ರಭುಗ... ಳಿಗೆ ಕಾರ್ಯದರ್ಶಿಗಳ ಕಛೇರಿಗೆ ತಲು... ಪಿಸಿದರೆಂದು ತಿಳಿದುಬಂದಿದೆ.

ರಾಷ್ಟ್ರ ಸೇವಾದಳ

ಶಿವಮೊಗ್ಗೆಯಲ್ಲಿ ಸೇರಿದ್ದ ವಿದ್ಯಾರ್ಥಿ ಕಾಂಗ್ರೆಸ್ ಸಮ್ಮೇಳನದ ಸಂದರ್ಭದಲ್ಲಿ ... ಸ್ಥಾನದ ರಾಷ್ಟ್ರ ಸೇವಾದಳದ ಅಧಿಕಾರಿ ... ಮಂಡಳಿಯನ್ನು ರಚಿಸಲಾಗಿದೆ. ದಳದ ... ಕೇಂದ್ರ ಕಾರ್ಯಾಲಯವನ್ನು ಮೈಸೂರು ... ನಗರದ ವಿದ್ಯಾರ್ಥಿ ಕಾಂಗ್ರೆಸ್ ಕಛೇರಿಯ ... ಲ್ಲಿ ಇಡಲಾಗಿದೆಯೆಂದು ಕಾರ್ಯದರ್ಶಿ... ಗಳು ತಿಳಿಸುತ್ತಾರೆ

ಮೈಸೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಮೈಸೂರು ೮

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ಇದೇ ಮಾಹೆ ೧೦ನೇ ತಾ|| ಶುಕ್ರವಾರದಿಂದ ಈ ಜಿಲ್ಲೆಯ ಪ್ರವಾಸವನ್ನು ಕೈಗೊಳ್ಳುವರು. ೧೦ನೇ ತಾ ಶುಕ್ರವಾರ ಬೆಳಗ್ಗೆ ೧೦ ಗಂಟೆಗೆ ಬನ್ನೂರು, ಮಧ್ಯಾಹ್ನ ೪ ಟಿ. ನರಸೀಪುರ, ಸಂಜೆ ೬ಕ್ಕೆ ಯಳಂದೂರು, ರಾತ್ರಿ ೮ಕ್ಕೆ ಕುದೇರು, ೧೧ನೇ ತಾ|| ಶನಿವಾರ ಬೆಳಗ್ಗೆ ೮ಕ್ಕೆ ಸಂತೆ ಮರಹಳ್ಳಿ, ೯ಕ್ಕೆ ಮಂಗಲ, ೧೦ಕ್ಕೆ ಮಾದಾಪುರ, ೧೧ಕ್ಕೆ ದೊಡ್ಡರಾಯ ಪೇಟೆ, ೧೨ಕ್ಕೆ ಚಾಮರಾಜನಗರ, ಮಧ್ಯಾಹ್ನ ೩ಕ್ಕೆ ಅಲೂರು, ೪ಕ್ಕೆ ಕಾಗಲವಾಡಿ, ೬ಕ್ಕೆ ಚಂದಕವಾಡಿ, ವಾಸಸ್ಥಳ ನಗರ. ೧೨ನೇ ತಾ|| ಭಾನುವಾರ ಬೆಳಗ್ಗೆ ೯ಕ್ಕೆ ಗುಂಡ್ಲುಪೇಟೆ, ಮಧ್ಯಾಹ್ನ ೩ಕ್ಕೆ ಕಳಲೆ, ಸಂಜೆ ೫ಕ್ಕೆ ನಂಜನಗೂಡು, ೧೩ನೇ ತಾ|| ಸೋಮವಾರ ಬೆಳಗ್ಗೆ ೮ಕ್ಕೆ ಬದನವಾಳು, ೧೦ಕ್ಕೆ ದೇವನೂರು, ಮಧ್ಯಾಹ್ನ ೧ಕ್ಕೆ ಹುಲ್ಲಹಳ್ಳಿ, ಹುರ, ೩ಕ್ಕೆ ಕಂತೆಸರಗೂರು, ೪ಕ್ಕೆ ಹೆಗ್ಗಡದೇವನ ಕೋಟೆ, ೬-೩೦ಕ್ಕೆ ಹುಣಸೂರು, ೧೪ನೇ ತಾ|| ಮಂಗಳವಾರ ಬೆಳಗ್ಗೆ ೯ಕ್ಕೆ ಕಲ್ಲಹಳ್ಳಿ, ೧೧ಕ್ಕೆ ಗಾವಡಗೆರೆ ೧ಕ್ಕೆ ಕೃಷ್ಣರಾಜನಗರ, ಮಧ್ಯಾಹ್ನ ೩ಕ್ಕೆ ಹೆಬ್ಬಾಳ ಕೊಪ್ಪಲು ೪ಕ್ಕೆ ಸಾಲಿಗ್ರಾಮ ೧೫ನೇ ತಾ|| ಬುಧವಾರ ಬೆಳಗ್ಗೆ ೯ಕ್ಕೆ ಬಿಳಿಕೆರೆ ೧೧ಕ್ಕೆ ಬೆಳಕವಾಡಿ, ನಂತರ ಮೈಸೂರು ನಗರ.

ಜಿಲ್ಲೆಯ ಮಹಾಜನರೂ, ಕಾಂಗ್ರೆಸ್ ಕೆಲಸಗಾರರೂ ಈ ಪ್ರವಾಸದಲ್ಲಿ ಪೂರ್ಣವಾಗಿ ಸಹಕರಿಸಬೇಕೆಂದು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ

ದಿವಾನರಿಗೆ ಬಿನ್ನವತ್ತಳೆ

ಸಂಸ್ಥಾನದ ಗ್ರಾಮಾಧಿಕಾರಿಗಳ ಸಮ್ಮೇಳನದವರು ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರಿಗೆ ಒಂದು ಬಿನ್ನವತ್ತಳೆಯನ್ನು ಈ ಮಾಹೆ ೧೯ನೇ ತಾ|| ಎಗ್ಸಿಬಿಷನ್ ಕಟ್ಟಡದಲ್ಲಿ ಕೊಡಲು ನಿರ್ಧರಿಸಿರುವರು. ಗ್ರಾಮಾಧಿಕಾರಿಗಳ ಸಮ್ಮೇಳನದ ಅಧ್ಯಕ್ಷರೂ ಪ್ರ|| ಪ್ರ|| ಸಭೆ ಮತ್ತು ನಗರ ಸಭೆಯ ಸದಸ್ಯರೂ ಆದ ಶ್ರೀ ಎಫ್. ಸಿ. ದೇವರಾಜೇ ಅರಸಿನವರು ಅಧ್ಯಕ್ಷತೆ ವಹಿಸುವರು. ಆ ದಿವಸದ ಭಾಷಣಗಳನ್ನು ಆಕಾಶವಾಣಿಯ ಮೂಲಕ ಪ್ರಸಾರಮಾಡಲು ಏರ್ಪಡಿಸಿದೆ.

ಸ್ವಾತಂತ್ರ್ಯ ದಿನಾಚರಣೆ

ಜನವರಿ ೨೬ ನೇ ತಾ|| ಸ್ವಾತಂತ್ರ್ಯ ದಿನಾಚರಣೆಯನ್ನು ಗಾಂಭೀರ್ಯದಿಂದಲೂ, ಪವಿತ್ರತೆಯಿಂದಲೂ ರಚನಾತ್ಮಕವಾಗಿಯೂ ಆಚರಿಸಬೇಕು; ಬಹಿರಂಗ ಸಭೆಗಳಾಗಲೀ, ಮೆರವಣಿಗೆಗಳಾಗಲೀ ಭಾಷಣಗಳಾಗಲೀ ನಡೆಯಬೇಕಾಗಿಲ್ಲ—ಎಂಬುದಾಗಿ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಸೂಚನೆಯನ್ನು ಕೊಟ್ಟಿರುವರು.

ಗಾಂಧೀಜಿಗೆ ಸಮಾಧಾನ

ಬಿಹಾರ್ ಸರ್ಕಾರದವರು ಅಲ್ಲಿನ ನಿರಾಶ್ರಿತರ ಬಗ್ಗೆ ಕೈಗೊಂಡಿರುವ ಕಾರ್ಯಕ್ರಮಗಳನ್ನು ಅಲ್ಲಿನ ಹಣಕಾಸಿನ ಮಂತ್ರಿಗಳಾದ ಶ್ರೀ ಕೃಷ್ಣವಲ್ಲಭ ಸಹಾಯ್‌ರವರು ಶ್ರೀರಾಮಪುರದಲ್ಲಿ ಮಹಾತ್ಮ ಗಾಂಧಿಯವರನ್ನು ಭೇಟಿ ಮಾಡಿ ವರದಿ ಮಾಡಿದರು. ಗಾಂಧಿಜಿಯವರು ಬಿಹಾರಿನ ಕಾರ್ಯಕ್ರಮಗಳಿಗೆ ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿದ್ದಾರೆಂದು ತಿಳಿದುಬಂದಿದೆ

ಹೈದರಾಬಾದ್ ಸಂಸ್ಥಾನದಲ್ಲಿ ವಿಮಾನ ಸಂಚಾರ ವ್ಯವಸ್ಥೆ

ಸಂಸ್ಥಾನದೊಳಗೆ ವಿಮಾನ ಸಂಚಾರ ಸೌಕರ್ಯವನ್ನು ಹೆಚ್ಚು ಮಾಡಲು ಹೈದರಾಬಾದ್ ಸರ್ಕಾರವು ಯೋಚನೆಯೊಂದನ್ನು ತಯಾರಿಸುತ್ತಿರುವುದಾಗಿ ತಿಳಿದು ಬಂದಿದೆ. ಇದರಿಂದ ಸಂಸ್ಥಾನದ ಮುಖ್ಯ ಊರುಗಳಿಗೆಲ್ಲಾ ವಿಮಾನವು ಹೋಗುವುದು. ಮೊದಲನೆಯದಾಗಿ ಹೈದರಾಬಾದಿನಿಂದ ೩ ಮೈಲಿ ದೂರವಿರುವ ಔರಂಗಾಬಾದಿಗೆ ಮಾರ್ಗ ಕಲ್ಪಿಸಲಾಗುವುದು. ಪೂರ್ಣ ಯೋಚನೆಯು ಇನ್ನು ೩ ತಿಂಗಳೊಳಗಾಗಿ ಜಾರಿಗೆ ಬರುವುದೆಂದು ಆಶಿಸಲಾಗಿದೆ

ಮುಕ್ಕಾಲು ಪಾವು ಅಕ್ಕಿ!

ಸ್ವಂ ವ] ಚಾಮರಾಜನಗರ ೬

ಜನವರಿ ೧ರಿಂದೀಚೆ ರೇಷನ್ ಪದ್ಧತಿ ಜಾರಿಯಲ್ಲಿರುವ ೮ ದೇಶಗಳಲ್ಲಿ 'ಎ' ತರಗತಿಯ ಕಾರ್ಡ್ ಪಡೆದಿರುವವರಿಗೆ ಒಂದು ಪಾವು ಅಕ್ಕಿಯನ್ನೂ ಕಾಲು ಪಾವು ಗೋಧಿಯನ್ನೂ ಕೊಡತಕ್ಕದ್ದೆಂದು ಸರ್ಕಾರಿ ಆಜ್ಞೆಯು ಆಗಿದ್ದಾಗ್ಯೂ ಇಲ್ಲಿ ಮುಕ್ಕಾಲು ಪಾವು ಅಕ್ಕಿಯನ್ನು ಮಾತ್ರ ಕೊಡಲಾಗುತ್ತಿದೆ. ಒಂದು ಪಾವಿನಂತೆ ಕೊಡಲು ದಾಸ್ತಾನು ಬಂದಿಲ್ಲವೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಸಂಬಂಧಪಟ್ಟವರು ಕೂಡಲೇ ಪರಿಹಾರ ಒದಗಿಸಬೇಕಾಗಿದೆ

ಸುಚೇತಾ ಕೃಪಲಾನಿಯವರ ಅಪಹರಣ ಪ್ರಯತ್ನ

ಶ್ರೀರಾಮಪುರಕ್ಕೆ ೨೦ ಮೈಲಿ ದೂರದಲ್ಲಿರುವ ದತ್ತಾಪುರವೆಂಬ ಹಳ್ಳಿಯಲ್ಲಿ ಪರಿಹಾರ ಕಾರ್ಯದಲ್ಲಿ ನಿರತರಾಗಿದ್ದ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರ ಧರ್ಮಪತ್ನಿ ಶ್ರೀಮತಿ ಸುಚೇತಾರವರನ್ನು ಅಪಹರಿಸಲು ಪ್ರಯತ್ನವೊಂದು ನಡೆದು ವಿಫಲವಾದ ವರದಿ ಹೊರಬಿದ್ದಿದೆ. ಕಳೆದ ಬುಧವಾರ ಒಬ್ಬ ವೃದ್ಧ ಮುಸ್ಲಿಮನು ಈ ರೀತಿ ಪ್ರಯತ್ನ ನಡೆಯುತ್ತಿರುವುದಾಗಿ ಡಾ|| ವಾಸಗುಪ್ತರಿಗೆ ತಿಳಿಸಿದನೆಂದೂ, ಅದರಂತೆ ಅವರು ಮಿಲಿಟರಿ ಅಧಿಕಾರಿಗಳ ಸಂಗಡ ಆ ಸ್ಥಳಕ್ಕೆ ಹೋದರೆಂದೂ, ಆ ವೇಳೆಗೆ ಮುಸ್ಲಿಮರ ಭಾರಿ ಗುಂಪೊಂದು ಶ್ರೀಮತಿ ಸುಚೇತಾ ಮತ್ತು ಇತರ ಹೆಂಗಸರಿದ್ದ ಕಡೆಗೆ ಹೋಗುತ್ತಿದ್ದಿತೆಂದೂ, ಮಿಲಿಟರಿಯವರು ಶಸ್ತ್ರಬಲದಿಂದ ಆ ಗುಂಪನ್ನು ಚದುರಿಸಿ ಶ್ರೀಮತಿ ಸುಚೇತಾರವರನ್ನು ರಕ್ಷಿಸಿದರೆಂದೂ ತಿಳಿಸಿದ್ದಾರೆ.

ಗೋಪಾಲರಾಯರ ಮೇಲೆ ಮತ್ತೊಂದು ಅರ್ಜಿ

ಅವರನ್ನು ದಿವಾಳಿಯೆಂದು ಘೋಷಿಸಬೇಕೆಂದು ಅರಿಕೆ

ಸ್ವಂ. ವ. ಫೋ] ಬೆಂಗಳೂರು ೮

ಹಿಂದೂಸ್ಥಾನ ಕೋ-ಆಪರೇಟಿವ್ ಇನ್‌ಷ್ಯೂರೆನ್ಸ್ ಕಂಪನಿಯ ಬೆಂಗಳೂರು ವ್ಯವಸ್ಥಾಪಕರಾದ ಶ್ರೀ ಕೆ. ಎಸ್. ರಾಮಯ್ಯನವರು ಜಿಲ್ಲಾ ನ್ಯಾಯಾಧೀಶರಲ್ಲಿ ಈ ದಿನ ಈ ರೀತಿ ಒಂದು ಅರ್ಜಿಯನ್ನು ಸಲ್ಲಿಸಿದ್ದಾರೆ ಏನು: "ನಾವು ಧರ್ಮ ರಕ್ಷಕರ ಶ್ರೀ ಬಿ. ಎಸ್. ಗೋಪಾಲರಾಯರಿಗೆ ೧ ಲಕ್ಷದ ೨೦ ಸಾವಿರ ರೂಗಳನ್ನು ಸಾಲವಾಗಿ ಕೊಟ್ಟಿದ್ದೆವು. ಅವರು ಅದನ್ನು ವಾಪಸ್ಸು ಕೊಟ್ಟಿಲ್ಲ. ಸೆಂಟ್ರಲ್ ಬ್ಯಾಂಕ್ ಚೆಕ್ ಒಂದನ್ನು ಮಾತ್ರ ನಮಗೆ ಕೊಟ್ಟಿದ್ದಾರೆ. ಬ್ಯಾಂಕಿನವರು ಅದನ್ನು ತಿರಸ್ಕರಿಸಿದ್ದಾರೆ. ಆದ್ದರಿಂದ ಶ್ರೀ ಗೋಪಾಲರಾಯರ ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳಲು ಒಬ್ಬ ಅಧಿಕಾರಿ ರಿಸೀವರನ್ನು ನೇಮಿಸಿ, ಧರ್ಮ ರಕ್ಷಕರ ಶ್ರೀ ಬಿ. ಎಸ್. ಗೋಪಾಲರಾಯರು ದಿವಾಳಿಯೆಂದು ಘೋಷಿಸಬೇಕೆಂದು ಹೀಗೆ ನಾವು ಕೋರುತ್ತೇನೆ" ಎಂಬುದಾಗಿದೆ

O ಮೈಸೂರು ತಾಲ್ಲೂಕು ಸಮ್ಮೇಳನವು ಇದೇ ಮಾಹೆ ೨೭ ನೇ ತಾ|| ನಡೆಯುವುದು. ಶ್ರೀ ಎಫ್. ಸಿ. ದೇವರಾಜೇ ಅರಸಿನವರ ಅಧ್ಯಕ್ಷತೆ ವಹಿಸುವರು.

LATEST NEWS

ರಣಜೋಧಸಿಂಗರು ಐ. ಜಿ. ಪಿ

ಸ್ವಂ ವ ಫೋ] ಬೆಂಗಳೂರು ೮

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಸಿ. ಎಂ. ಎಸ್. ರಣಜೋಧಸಿಂಗರವರನ್ನು ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ಲಾಗಿಯೂ ಶ್ರೀ ಜಿ. ಎಸ್. ನಾಗರಾಜರಾಯರನ್ನು ಮೈಸೂರು ಜಿಲ್ಲಾಧಿಕಾರಿಗಳನ್ನಾಗಿಯೂ ಶ್ರೀ ಪಿ. ಸೂರ್ಯನಾರಾಯಣಶೆಟ್ಟರನ್ನು ಕೋಲಾರ ಜಿಲ್ಲಾಧಿಕಾರಿಗಳನ್ನಾಗಿಯೂ, ಶ್ರೀ ಎ. ರಾಮಸ್ವಾಮಿಯವರನ್ನು ಆದಾಯ ತೆರಿಗೆ ಡೆಪ್ಯುಟಿ ಕಮೀಷನರನ್ನಾಗಿಯೂ ವರ್ಗ ಮಾಡಲಾಗಿದೆ. ಪೊಲೀಸ್ ಐ. ಜಿ. ಪಿ. ಯವರಾದ ಶ್ರೀ ಜಿ. ಸುಂದರರಾಯರನ್ನು ಸರ್ವೆ ಸೆಟಲ್‌ಮೆಂಟ್ ಮತ್ತು ಲ್ಯಾಂಡ್ ರೆಕಾರ್ಡ್ಸ್ ಕಮೀಷನರಾಗಿ ನೇಮಿಸಲಾಗಿದೆ.

ಸಾಧ್ವಿ

ತಾ|| ೮-೧-೪೭ ಬುಧವಾರ

ಪಡಿತರದ ತ್ರಿಶಂಕು ಸ್ವರ್ಗ

ರೇಷನ್ ಪ್ರದೇಶದಲ್ಲಿರುವ ಜಮೀನುದಾರರುಗಳಿಗೆ ಬರುವ ವರ್ಷಕ್ಕೆ ಪೂರ್ಣ ಪಡಿತರವನ್ನು ಕೊಡಬೇಕೆಂಬ ವಿಚಾರವಾಗಿ ನಾವು ಈಗಾಗಲೇ ಹಲವು ಲೇಖನಗಳನ್ನು ಬರೆದಿರುವೆವಷ್ಟೆ. ಆದರೆ ಇನ್ನೂ ಇದರಿಂದ ಯಾವ ಪರಿಹಾರವೂ ದೊರೆತಂತೆ ಕಾಣುವುದಿಲ್ಲ. ಮೇಲಾಗಿ ಜನರು ರೇಷನ್ ಕಛೇರಿಗೆ ಪ್ರತಿದಿನವೂ ಯಾತ್ರೆ ಮಾಡುವ ಸ್ಥಿತಿ ಬಂದೊದಗಿದೆ. ಅಲ್ಲಿನ ಅಧಿಕಾರಿಗಳು ತಮಗೆ ಯಾವ ಸೂಚನೆಯೂ ಬಂದಿಲ್ಲವೆಂದು ಹೇಳುತ್ತಿರುವುದಾಗಿ ಗೊತ್ತಾಗಿದೆ. ಇದುವರೆಗೆ ಬರೆದುಕೊಟ್ಟಿರುವ ಪ್ರಮಾಣದಂತೆ ಜಮೀನುದಾರರು ಧಾನ್ಯವನ್ನು ತೆಗೆದುಕೊಳ್ಳಬಾರದೆ, ಹೊಸ ವಿವರಣೆಯ ಪ್ರಕಾರ ತಿದ್ದುಪಡಿಯನ್ನು ರೇಷನ್ ಕಛೇರಿಯವರು ಮಾಡಿಕೊಡದೆ ಈ ಪ್ರಶ್ನೆಯು ತ್ರಿಶಂಕು ಸ್ವರ್ಗದಲ್ಲಿ ಇರುತ್ತದೆ

ಕಳೆದ ಶಾಸನ ಸಭೆಯಲ್ಲಿ ಆಹಾರದ ವಿಷಯವಾಗಿ ಒಂದು ಪ್ರತ್ಯೇಕ ದಿವಸವೆಲ್ಲಾ ನಡೆದ ಚರ್ಚೆಯೇ ಮೇಲ್ಕಂಡ ಪ್ರಕರಣದ ಹಿನ್ನೆಲೆ. ಆಹಾರ ಸರಬರಾಜಿನ ವಿಷಯದಲ್ಲಿ ಸಭೆಯ ಸದಸ್ಯರು ಐವತ್ತುನಾಲ್ಕು ನಿರ್ಣಯಗಳನ್ನು ಮಂಡಿಸಿದ್ದರು. ಸುಗ್ಗಿ ಆಜ್ಞೆಯಿಂದ ಕಳೆದ ಸಾಲುಗಳಲ್ಲಿ ಉಂಟಾದ ಅನಿವಾರ್ಯಗಳನ್ನು ಈ ಸಾರಿ ಅವಸ್ಥೆ ಮಟ್ಟಿಗೆ ತಪ್ಪಿಸಬೇಕೆಂಬುದೇ ಇವುಗಳ ಉದ್ದೇಶವಾಗಿತ್ತು. ಬರುವ ವರ್ಷದ ಪ್ರಮಾಣವನ್ನು ನಿರ್ಧರಿಸುವಾಗ ಕಳೆದ ವರ್ಷದ ಪಡಿತರ ಪ್ರಮಾಣದ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳಕೂಡದೆಂಬುದೂ ಮೇಲ್ಕಂಡ ನಿರ್ಣಯಗಳಲ್ಲಿ ಒಂದಾಗಿತ್ತು. ಆಹಾರ ಶಾಖೆಯ ಅಧಿಕಾರಿಗಳು ಇದರ ತತ್ವವನ್ನು ಅಂಗೀಕರಿಸಿ ಸರ್ಕಾರದ ಪರವಾಗಿ ಭರವಸೆಯನ್ನೂ ಇತ್ತಿದ್ದರು. ಅದರಂತೆ ಈಚೆಗೆ ವಿವರಣೆಯನ್ನೂ ಸಹ ಕೊಟ್ಟಿರುವರು. ಇಷ್ಟೆಲ್ಲಾ ನಡೆದಿದ್ದರೂ, ಕೈಗೆ ಬಂದ ತುತ್ತು ಬಾಯಿಗೆ ಬರದಂತೆ ಆಗಿರುವುದು ಶೋಚನೀಯವೇ ಸರಿ.

ಮೇಲ್ಕಂಡ ವಿವರಣೆಯ ಪ್ರಕಾರ ಇದುವರೆಗೆ ಬರುವ ವರ್ಷದ ಪಡಿತರದಲ್ಲಿ ಕಟಾಯಿಸಿಗುವುದು ತಪ್ಪೆಂದು ವೇದ್ಯವಾಗುವುದು. ಅದನ್ನು ಭರ್ತಿ ಮಾಡಿಕೊಡಲು ಏರ್ಪಾಡನ್ನು ಮಾಡಬೇಕೇ ವಿನಾ ಜನರನ್ನು ಇದೇ ರೀತಿ ಅಂತರಾಳದಲ್ಲಿ ಬಿಡುವುದು ಸರಿಯಲ್ಲ.

ಪ್ರಜೆಗಳಿಗೆ ಆಹಾರವನ್ನೊದಗಿಸುವುದು ಆಡಳಿತದವರ ಆದ್ಯ ಕರ್ತವ್ಯ. ಅದರಲ್ಲೂ ಬೆಳೆಯುವವರಿಗೆ ಗೊತ್ತಾಗಿರುವ ಧಾನ್ಯವಾದರೂ ಕೈ ಸೇರುವಂತೆ ಮಾಡುವುದು ಅತ್ಯಗತ್ಯವಾದ ಕೆಲಸ. ಕಳೆದ ವರ್ಷ ಯಾವುದೇ ಕಾರಣದಿಂದ ಹೆಚ್ಚಾಗಿ ದವಸವನ್ನು ವೆಚ್ಚಮಾಡಿದ್ದರೂ, ಅದಕ್ಕಾಗಿ ಈ ವರ್ಷ ಕಟಾಯಿಸುವುದು, ಪ್ರತೀಕಾರ ಭಾವನೆಯೇ ವಿನಾ ಉದಾರ ವರ್ತನೆಯಾಗುವುದಿಲ್ಲ. ವಾಸ್ತವವಾಗಿ ಹೆಚ್ಚು ದಾಸ್ತಾನನ್ನು ಇಟ್ಟುಕೊಂಡಿರುವವರಿಗೆ ಮೋಕಾ ಮಾಡುವುದು ಸಹಜವಾದ ಕ್ರಮ. ಆದರೆ ಏನೂ ಇಲ್ಲದವರಿಗೆ ಸಲವಾಗಿ ಪಡಿತರವನ್ನು ಕಡಿಮೆ ಮಾಡುವುದು ನಿರ್ದಯ ವರ್ತನೆ

ಮೈಸೂರು ಹಿಂದೂ ಮಹಾ ಸಭೆ

ಶ್ರೀ ಭೋಪಟ್ಕರ್‌ರವರಿಂದ ಅಧಿವೇಶನದ ಆರಂಭ

ಸ್ವಂ ಸು] ಬೆಂಗಳೂರು ೮

ತ್ಯಾಮಗೊಂಡ್ಲುವಿನಲ್ಲಿ ಇದೇ ೨೬ ನೇ ತಾ|| ನಡೆಯಲಿರುವ ಸಂಸ್ಥಾನದ ಹಿಂದೂ ಮಹಾ ಸಭೆಯ ಅಧಿವೇಶನದ ಆರಂಭೋತ್ಸವವನ್ನು ನೆರವೇರಿಸಲು ಅಖಿಲ ಭಾರತ ಹಿಂದೂ ಮಹಾ ಸಭೆಯ ಅಧ್ಯಕ್ಷರಾದ ಶ್ರೀ ಎಲ್. ಬಿ. ಭೋಪಟ್ಕರ್‌ರವರು ಒಪ್ಪಿರುವರೆಂದು ಖಚಿತವಾಗಿ ತಿಳಿಸಲಾಗಿದೆ.

ಅ|| ಸರ್ಜನ್‌ಗಳ ವರ್ಗ

ಅ| ಸರ್ಜನ್‌ಗಳಾದ ಡಾ|| ಹೆಚ್. ಎ. ನಾಗರಾಜಾರಾಯರನ್ನು ಬೆಂಗಳೂರು ಟ್ರೂಪ್ಸ್ ಸ್ಪೇರ್ ಆಸ್ಪತ್ರೆಗೂ, ಡಾ|| ಸಿ. ಪಾರ್ಥಸಾರಥಿಯವರನ್ನು ಮೈಸೂರು ಜಿಲ್ಲಾ ವೈದ್ಯಾಧಿಕಾರಿಗಳಾಗಿಯೂ, ಡಾ|| ಎಸ್. ಸಿ. ಎ. ಕೃಷ್ಣಮಾಚಾರ್ಲುರವರನ್ನು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೂ ವರ್ಗಾಯಿಸಲಾಗಿದೆ.

* ಗೃಹಸಚಿವರಾದ ಶ್ರೀ ಎಂ. ಶೇಷಾದ್ರಿಯವರು ಇದೇ ೧೩ ನೇ ತಾ|| ಖನಿಜ ಸಂಪತ್ತು ಸಂಬಂಧದಲ್ಲಿ ದೆಹಲಿಯಲ್ಲಿ ನಡೆಯುವ ಅಖಿಲ ಭಾರತ ಮಂತ್ರಿಗಳ ಸಮ್ಮೇಳನದಲ್ಲಿ ಭಾಗ ವಹಿಸಲು ೯ ನೇ ತಾ|| ಪ್ರಯಾಣ ಮಾಡುವರು.

ಯಾಗುವುದು. ಕೇವಲ ಉದರ ಪೋಷಣೆಗಾಗಿ ಅವರುಗಳನ್ನು ಕಾಳ ಸಂತೆಯೇ ಮುಂತಾದ ಅಕ್ರಮಗಳಿಗೆ ಪ್ರೇರೇಪಿಸಿದಂತೆಯೇ ಸರಿ.

ಎರಡು ವರ್ಷಗಳ ಹಿಂದೆ ಪಡಿತರವನ್ನು ಮುಕ್ಕಾಲು ಪಾಲಿಗೆ ಇಳಿಸಿದಾಗ ಉಳಿಕೆಯ ಧಾನ್ಯವನ್ನು ಆಗಲೇ ಸರ್ಕಾರಕ್ಕೆ ವಾಪಸು ಕೊಡಬೇಕೆಂಬ ಆಜ್ಞೆಯು ಹೊರಟು ದೊಡ್ಡ ಕೋಲಾಹಲವು ಎದ್ದು ಮಹಾ ಜನರು ಅದನ್ನು ಪ್ರತಿಭಟಿಸಲು ಅದು ಹಾಗೆಯೇ ತಣ್ಣಗಾಗಿ ಅಧಿಕಾರಿಗಳು ಯಾವ ಕಾರ್ಯ ಕ್ರಮವನ್ನೂ ಜರುಗಿಸಲಿಲ್ಲ. ಈಗಲೂ ಅದೇ ಪರಿಸ್ಥಿತಿ ಒದಗಿದೆ. ಕಳೆದು ಹೋಗಿರುವ ಧಾನ್ಯಕ್ಕಾಗಿ ಮುಂದೆ ಬರುವ ಫಸಲಿನಲ್ಲಿ ಕಟಾಯಿಸುವುದು ಸರಿಯಲ್ಲವೆಂಬ ಅಂಶವು ಆಗಲೇ ಸ್ಥಿರಪಟ್ಟಿರುತ್ತದೆ. ಆದುದರಿಂದ ಈಗಲೂ ಅದಕ್ಕಾಗಿ ಒತ್ತಾಯ ಪಡಿಸದೆ ಡೈರೆಕ್ಟರರ ವಿವರಣೆಯಂತೆ ಬರುವ ವರ್ಷದ ಧಾನ್ಯವನ್ನು ಪೂರ್ತಿಯಾಗಿ ಕೊಟ್ಟು ಜನರ ಕಷ್ಟವನ್ನು ಕೂಡಲೇ ತಪ್ಪಿಸಬೇಕೆಂದು ನಾವು ಮತ್ತೊಮ್ಮೆ ಕೋರುತ್ತೇವೆ

ಪೊಂಗಲ್ ಹಬ್ಬಕ್ಕಾಗಿ
ಹೊಸ ನಮೂನೆ
ಜವಳಿಗಳು
ಬಂದಿವೆ. ಇಂದೇ ಭೇಟಿ ಕೊಡಿರಿ.
ಬಿ. ಕೆಂಚಪ್ಪ ಸನ್ಸ್,
ಜವಳಿ ಅಂಗಡಿ
ದೊಡ್ಡ ಪೇಟೆ, ಮೈಸೂರು

Edited, printed and published by A. K. Nagarajan at the Sadhvi Press D. Subbiah Road, Mysore.

ಇಂಡೋ ಚೀಣಾದಲ್ಲಿ ಭಾರಿ ಪ್ರಮಾಣದ ಯುದ್ಧವೆ ?

ಇಂಡೋ ಚೀಣಾದ ವಿಯಟ್‌ನಾಂ ಮತ್ತು ಫ್ರೆಂಚರ ಬಿಕ್ಕಟ್ಟು ಪರಿಹಾರವಾಗಬೇಕಾದರೆ ಭಾರಿ ಪ್ರಮಾಣದ ಯುದ್ಧವು ಉಭಯತ್ರರಿಗೂ ನಡೆಯುವುದೊಂದೇ ಮಾರ್ಗವೆಂದು ವಿಶೇಷ ವಾರ್ತೆ ತಿಳಿಸುತ್ತದೆ. ವಿಯಟ್‌ನಾಮಿಗಳನ್ನು ಅಡಗಿಸಬೇಕಾದರೆ ಕಡೇಪಕ್ಷ ೩೦ ಲಕ್ಷ ಸೈನಿಕರು ಬೇಕಾಗುವುದೆಂದು ಡಚ್ ಮಿಲಿಟರಿ ಅಧಿಕಾರಿಗಳು ಅಂದಾಜು ಹಾಕಿದ್ದಾರೆ. ಈಗ ಕೇವಲ ೮೦ ಸಾವಿರ ಮಂದಿ ಸೈನಿಕರು ಮಾತ್ರ ಈ ಪ್ರದೇಶದಲ್ಲಿದ್ದಾರೆ. ಪರಿಸ್ಥಿತಿಯ ಬೆಳವಣಿಗೆಯನ್ನು ಉಭಯತ್ರರೂ ಕಾದು ನೋಡುತ್ತಿದ್ದಾರೆ.

ಎಲ್ಲ ಭಾಷೆಗಳಲ್ಲೂ ಬರೆಯುವ ಟೈಪ್ ರೈಟರು

ಪ್ರಪಂಚದ ಎಲ್ಲ ಭಾಷೆಗಳಲ್ಲೂ ಬರೆಯಬಹುದಾದ ಟೈಪ್ ರೈಟರ್ ಯಂತ್ರವೊಂದು ನ್ಯೂಯಾರ್ಕಿನಲ್ಲಿ ಪ್ರದರ್ಶಿಸಲ್ಪಟ್ಟಿದೆ. ಒಂದು ಭಾಷೆಯಲ್ಲಿ ಟೈಪ್ ಮಾಡುತ್ತಿದ್ದು ಕೂಡಲೇ ಮತ್ತೊಂದು ಭಾಷೆಗೆ ಬದಲಾಯಿಸಬಹುದು. ಇನ್ನೊಂದು ಯಂತ್ರವು ತಾನೇ ಕಾಗದ ಪತ್ರಗಳನ್ನೂ, ಸಂದೇಶಗಳನ್ನು ಗ್ರಹಿಸಿ ಬರೆಯುತ್ತದೆಂದು ವರದಿಯಾಗಿದೆ.

ಸಿಂಧ್‌ನಲ್ಲಿ ಪಾನ ನಿರೋಧ

ಮೊದಲು ಹೆಂಡದಂಗಡಿಗಳನ್ನು ಮುಚ್ಚಿ, ತರುವಾಯ ಹೊರಗಿನಿಂದ ಬರುವ ಮಾದಕ ವಸ್ತುಗಳನ್ನು ನಿಲ್ಲಿಸಿ, ೫ ವರ್ಷಗಳೊಳಗಾಗಿ ಪೂರ್ಣ ಪಾನ ನಿರೋಧವನ್ನು ಸಿಂಧ್ ಪ್ರಾಂತದಲ್ಲೆಲ್ಲಾ ಜಾರಿಗೆ ತರುವುದಾಗಿ ಅಲ್ಲಿನ ರೆವಿನ್ಯೂ ಮಂತ್ರಿಗಳು ತಿಳಿಸಿದ್ದಾರೆ.

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡ ಭವನ

ರಷ್ಯದ ಸೋವಿಯಟ್ಸ್ ಅರಮನೆಯ ಕಾರ್ಯವು ಯುದ್ಧದ ಸಲುವಾಗಿ ನಿಂತು ಹೋಗಿದ್ದಿತು. ಅದನ್ನು ರಚಿಸಲು ಈಗ ಕಾರ್ಯ ಆರಂಭವಾಗಿದೆ. ಇದರ ಎತ್ತರ [illegible] ಅಡಿಗಳಿರುವುದು. ಇದು ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದಾದ ಭವನವಾಗಿರುವುದು.

ಹರಿಕಥೆ

ಮೈಸೂರು ಚಲುವಾಂಬಾ ಅಗ್ರಹಾರದ ಹಿಂಭಾಗದಲ್ಲಿರುವ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಈ ದಿನ ರಾತ್ರಿ ೮ ಘಂಟೆಗೆ ಪಾಲಘಾಟಿನ ಶ್ರೀ ಗಣಪತಿ ಭಾಗವತರವರಿಂದ "ಭಕ್ತ ಪ್ರಹ್ಲಾದ" ಎಂಬ ಹರಿಕಥೆಯು ನಡೆಯುವುದು. ಸರ್ವರಿಗೂ ಆಹ್ವಾನವುಂಟು

ಒಪೆರಾ ಟಾಕೀಸ್
From 4-1-47
The Great Magician
10-1-47 ರಿಂದ
ಪೊನ್ಮುರುವಿ
(ತಮಿಳು)
ಪಾತ್ರ:- * ಕೊತ್ತಮಂಗಲಂ ಸೀನು * ಕೆ. ಟಿ. ರುಕ್ಮಿಣಿ * ಆರ್. ಬಾಲಸುಬ್ರಹ್ಮಣ್ಯಂ.

ಕರ್ನಾಟಕ ಪ್ರಾಂತ ವಿದ್ಯಾ
ಕಾಂಗ್ರೆಸ್

ಕರ್ನಾಟಕ ಪ್ರಾಂತ ವಿದ್ಯಾರ್ಥಿ
ಗ್ರೆಸ್ಸಿನ ಕೇಂದ್ರ ಕಛೇರಿಯನ್ನು
ರು ನಗರದಲ್ಲಿ ತೆರೆಯಲಾಗಿದೆ. ಶ್ರೀ
ಸುಬ್ಬರಾಯರು ಕಾರ್ಯಾಲಯದ
ನೋಡಿಕೊಳ್ಳುವರು. ಎಲ್ಲಾ ಸ
ಹಾರಗಳನ್ನು ಪ್ರಧಾನ ಕಾರ್ಯದ
ರ್ನಾಟಕ ಪ್ರಾಂತ ವಿದ್ಯಾರ್ಥಿ ಕಾಂ
ಕೇಂದ್ರ ಕಾರ್ಯಾಲಯ, ನೂರಡಿ ರಸ್ತೆ
ಸೂರು. ಈ ವಿಳಾಸಕ್ಕೆ ನಡೆಸಬೇ
ಕೋರಲಾಗಿದೆ.

ಪ್ರಸಿದ್ಧ ಪತ್ರಿಕೆ

ಇದರ ಮೂಲಕ ಸಮಸ್ತ ಜನ
ತಿಳಿಯಪಡಿಸುವುದೇನೆಂದರೆ :— ಗು
ಪೇಟೆ ಚಿಲ್ರೆ ಅಂಗಡಿ ಎಂ. ಎಸ್
ಮದ್ ಹುಸೇನ್ ಸಾಹೇಬಿಯಾದ ನನ್ನ
ಳು ರಹಿಮಾ ಬೀಬಿ ಹೆಸರಿಗೆ ಇಷ್ಟೇ
ಡ್ಲುಪೇಟೆ ತಾಲ್ಲೋಕು ಕಲ್ಲಹಳ್ಳಿ ಗ್ರಾ
ದಲ್ಲಿರುವ ಕಾಳಯ್ಯನ ಮಗಳು ಬ
ನಿಂದ ಕಲ್ಲಹಳ್ಳಿಗೆ ಸೇರಿದ ಸರ್ವೆ ನಂ
221 ಎಕರೆ 6 ಗುಂಟೆ ೨೦ ಆಣೆ
ಉಳ್ಳ ಜಮೀನು ಕ್ರಯವಾಗಿ ಸ್ವಾಧೀ
ನುಭವದಲ್ಲಿ ಇರುತ್ತೆ. ಮೇಲ್ಕಂಡ ನನ್ನ
ಗಳು ಈಗ್ಗೆ ಒಂದು ತಿಂಗಳಲ್ಲಿ ಮೃತ
ರುತ್ತಾಳೆ. ಇವಳ ಮಗ 6 ವರ್ಷದ ಅಬ
ಬಾರಿ ಎಂಬ ಮೈನರ್ ಹುಡುಗನು
ಪೋಷಣೆಯಲ್ಲಿಯೇ ಇರುತ್ತಾನೆ. ಮೇ
ಡ ನನ್ನ ಮಗಳ ಗಂಡ ಕೆ. ಶೇಕ್ ನ
ವ್ ಎಂಬುವವರು ಸದರಿ ಜಮೀನನ್ನು
ಭಾರೆ ಮಾಡಬೇಕೆಂದು ಪ್ರಯತ್ನ ಮಾ
ದ್ದಾರೆ. ಹಾಗೆ ಯಾರಾದರೂ ಬ
ಸದರಿ ಜಮೀನನ್ನು ತೆಗೆದುಕೊಂಡ ಪ
ಲ್ಲಿ ಅದು ಊರ್ಜಿತವಾಗುವುದಿಲ್ಲ. ಅ
ಅದರಿಂದ ಉಂಟಾಗುವ ಕಷ್ಟನಷ್ಟಗಳಿ
ಸಹ ಜವಾಬ್ದಾರರಾಗಬೇಕಾಗುತ್ತೆ.

(ಸಹಿ) ಎಂ. ಎಸ್. ಮಹಮ
ಹುಸೇನ್ ಸಾಹೇಬ್.

ಎಲ್ಲಾ ತುಪ್ಪಕ್ಕಿಂತಲು
ಆರ್.ಜಿ. ತುಪ್ಪವೇ
ಚನ್ನಾಗಿರುತ್ತದೆ.

ರೋ. ನಂ. 892 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೧೦—೧—೪೭ [ಸಂಚಿಕೆ ೧೩೩

ಅಸ್ಸಾಮಿನಲ್ಲಿ ಲೀಗಿನ ಅಸಹಕಾರ ಚಳುವಳಿ ?

ಪುರಸಭಾಧಿವೇಶನ

ಮೈಸೂರು ೯

ಪುನರ್ರಚಿತವಾದ ಪುರಸಭೆಯ ಪ್ರಥಮ ಅಧಿವೇಶನವು ನಿನ್ನೆ ಜರುಗಿತು. ಕಾರ್ಯಕಲಾಪಗಳನ್ನು ನಡೆಸುವ ಕೆಳಗೆ ಕಂಡ ಸಮಿತಿಗಳನ್ನು ರಚಿಸಲಾಯಿತು:—

ಹಣಕಾಸಿನ ಸಮಿತಿ—ಶ್ರೀಗಳಾದ ಪಿ. ಗೋಪಾಲಕೃಷ್ಣಶೆಟ್ಟಿ, ಜಿ. ಆರ್. ರಂಗಸ್ವಾಮಿ, ಎಲ್. ರಾಮಚಂದ್ರರಾವ್, ಎಸ್. ಸೂರ್ಯನಾರಾಯಣರಾವ್, ಪಿ. ರಾಮಯ್ಯ, ಎ. ಕೃಷ್ಣಮೂರ್ತಿರಾವ್, ಥಿಯೋಬಾಲ್ಡ್ ಮತ್ತು ಮೀರ್ ... ಹುಸೇನ್.

ಸಂಮತ್ ಸಮಿತಿ:- ಶ್ರೀಗಳಾದ ಟಿ. ವೆಂಕಟರಮಣಯ್ಯ, ವಿ. ಎಸ್. ದಾಸಪ್ಪ, ... ಗೌಡ, ಎಸ್. ಲಿಂಗಣ್ಣ.

ಆರೋಗ್ಯ ಸಮಿತಿ:- ಶ್ರೀಗಳಾದ ಟಿ. ಮರಿಯಪ್ಪ, ಡಾ॥ ಬಿ. ಎಸ್. ಸೂರ್ಯನಾರಾಯಣರಾವ್, ಶ್ರೀಮತಿ ಎಂ. ಎಸ್. ಸೀತಮ್ಮ, ಬಿ. ನಾರಾಯಣಸ್ವಾಮಿ.

ಟೌನ್ ಹಾಲ್ ಸಮಿತಿ:- ಶ್ರೀಗಳಾದ ಆರ್. ರಂಗಯ್ಯ, ಇ. ಪಿ. ನಂಜಪ್ಪ, ಬಿ. ನಾರಾಯಣಸ್ವಾಮಿ, ಬಿ. ಕೆ. ರಾಜಶೇಖರಯ್ಯ.

ಮಾರ್ಕೆಟ್ ಸಮಿತಿ:- ಶ್ರೀಗಳಾದ ಬಿ. ನಾರಾಯಣಸ್ವಾಮಿ, ಎ. ಕೃಷ್ಣಮೂರ್ತಿರಾವ್, ಇ. ಪಿ. ನಂಜಪ್ಪ.

ಲೀಗಲ್ ಸಮಿತಿ:- ಶ್ರೀಗಳಾದ ಬಿ. ಸೀತಾರಾಮಯ್ಯ, ಪಿ. ಗೋಪಾಲಕೃಷ್ಣಶೆಟ್ಟಿ, ನರಸಿಂಹಯ್ಯಂಗಾರ್.

ಪ್ರಚಾರ ಸಮಿತಿ:—ಶ್ರೀಗಳಾದ ಎಂ. ಸೀತಮ್ಮ, ಡಾ॥ ಬಿ. ಎಸ್. ಸೂರ್ಯನಾರಾಯಣರಾವ್, ಟಿ. ನರಸಿಂಹಯ್ಯಂಗಾರ್, ಪಿ. ಗೋಪಾಲಕೃಷ್ಣಶೆಟ್ಟಿ, ಅಗರಂ ರಂಗಯ್ಯ, ಎ. ಎಸ್. ಸೂರ್ಯನಾರಾಯಣರಾವ್, ಮೀರ್ ನೂರ್ ಹುಸೇನ್.

ನೌಕರ ಸರಬರಾಜು ಸಮಿತಿ:-ಶ್ರೀಗಳಾದ ವೆಂಕಟರಮಣಯ್ಯ, ಪಿ. ಸೀತಾರಾಮಯ್ಯ, ಎ. ಕೃಷ್ಣಮೂರ್ತಿರಾವ್, ಬಿ. ಕೆ. ರಾಜಶೇಖರಯ್ಯ, ರಂಗಸ್ವಾಮಯ್ಯ, ದಾಸಪ್ಪ, ಬಿ. ನಾರಾಯಣಸ್ವಾಮಿ.

ಶ್ರೀಗಳಾದ ಟಿ. ಮರಿಯಪ್ಪ ಮತ್ತು ಬಿ. ನಾರಾಯಣಸ್ವಾಮಿಯವರನ್ನು ನಗರಾಭಿವೃದ್ಧಿ ಸಮಿತಿಗೆ ಆರಿಸಲಾಯಿತು.

ತ್ಯಾಗರಾಜ ಜಯಂತಿ

ಕೃಷ್ಣರಾಜ ಮೊಹಲ್ಲ ನಾಲಾ ಬೀದಿ ದೊಡ್ಡ ರಾಮ ದೇವಸ್ಥಾನದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಶ್ರೀ ತ್ಯಾಗರಾಜ ಶತಮಾನೋತ್ಸವವನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಸಂಗೀತ ಕಛೇರಿಯನ್ನು ಏರ್ಪಡಿಸುತ್ತದೆ. ಸರ್ವರಿಗೂ ಸ್ವಾಗತವಿದೆ.

ತ್ಯಾಗರಾಜ ಶತಮಾನೋತ್ಸವ

ಮೈಸೂರು ಬ್ರದರ್ಸ್ ರವರ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದಲ್ಲಿ ಇದೇ ಮಾಹೆ ೧೧, ೧೨ ಮತ್ತು ೧೩ ನೇ ತಾ॥ ಗಳಲ್ಲಿ ಸಂಜೆ ೬ ಗಂಟೆಗೆ ಶ್ರೀ ತ್ಯಾಗರಾಜಸ್ವಾಮಿಗಳ ಶತಮಾನೋತ್ಸವವು ವೈಣಿಕ ಪ್ರವೀಣ, ಸಂಗೀತ ವಿಶಾರದ ವಿ. ವೆಂಕಟಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಲ್ಪಡುವುದು. ೧೧ ನೇ ತಾ॥ ವಿದ್ಯಾರ್ಥಿಗಳಿಂದ ಸಂಗೀತ, ೧೨ ನೇ ತಾ॥ ಮೈಸೂರು ಬ್ರದರ್ಸ್‌ರವರಿಂದ ತ್ಯಾಗರಾಜ ಕೃತಿಗಳ ಗಾಯನ ಮತ್ತು ನೂತನ ಪ್ರಬಂಧ ಸದಸ್ಯರೆಲ್ಲರಿಗೂ ಸತ್ಕಾರ ಕೂಟ ೧೩ ನೇ ತಾ॥ ವಿದ್ವಾಂಸರುಗಳ ಸಂಗೀತ ಕಛೇರಿ. ಸರ್ವರಿಗೂ ಆಹ್ವಾನವುಂಟು.

OPERA TALKIES

Morning shows from
10-1-47 at 10-30 a m

Mutiny in the Big House

Stars :—Chalco
Bick Ford
Barton maclane

ಪೊಂಗಲ್ ಹಬ್ಬಕ್ಕಾಗಿ

ಹೊಸ ನಮೂನೆ

ಜವಳಿಗಳು

ಬಂದಿವೆ ಇಂದೇ ಭೇಟಿ ಕೊಡಿರಿ

ಬಿ. ಕೆಂಚಪ್ಪ ಸನ್ಸ್,

ಜವಳಿ ಅಂಗಡಿ

ದೊಡ್ಡ ಪೇಟೆ, ಮೈಸೂರು

ಪ್ರಭುಗಳ ಸಂದೇಶದ ಬಗ್ಗೆ ಕಾಂ॥ ಅಧ್ಯಕ್ಷರ ಅಭಿಪ್ರಾಯ

ಸ್ವಂ. ಸು. ಸ್ವೇ॥] ಬೆಂಗಳೂರು ೧೦

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರು ಶ್ರೀಮನ್ಮಹಾರಾಜರವರ ಸಂದೇಶದ ಬಗ್ಗೆ ತಮ್ಮ ಅಭಿಪ್ರಾಯವನ್ನು ಸೂಚಿಸಿ ದಿವಾನರು ಕೈಗೊಳ್ಳುವ ಕಾರ್ಯಕ್ರಮವನ್ನೇ ಎಲ್ಲವೂ ಅನುಸರಿಸುವುದೆಂದು ಹೇಳಿದರು. ತಾವು ಪ್ರಭುಗಳಿಗೆ ಕಳುಹಿಸಿದ ಮನವಿಯ ಸಂದರ್ಭದಲ್ಲಿ ಈ ಸಂದೇಶವು ಬಂದಿರುವುದು ಗಮನಾರ್ಹವಾದುದೆಂದು ಸೂಚಿಸುವರು. ಸಂದೇಶದಲ್ಲಿ ಮುಖ್ಯವಾದ ಗುರಿಯನ್ನು ಸಾಧಿಸುವ ದಾರಿಯನ್ನು ಮಾತ್ರ ಹೇಳಲಾಗಿದೆ ಎಂದು ತಿಳಿಸಿರುವರು. ಇಂದಿನ ಪರಿಸ್ಥಿತಿಯ ಸನ್ನಿವೇಶದಲ್ಲಿ ತಮ್ಮ ಕರ್ತವ್ಯವನ್ನು ಮಾಡಲು ಯಾರೂ ಹಿಂಜರಿಯುವುದಿಲ್ಲ. ಸಾತ್ವಿಕ ಅಥವಾ ಘೋಷಣೆಯ ಕ್ರಮಗಳು ದುರಂತದಲ್ಲಿಯೇ ಪರ್ಯವಸಾನಗೊಳ್ಳುವುವು. ಕಾಂಗ್ರೆಸ್ಸಿನ ಗುರಿಯು ಸ್ಪಷ್ಟವಾಗಿದೆ ಅದನ್ನು ಸಾಧಿಸಲು ಸರ್ವ ಪ್ರಯತ್ನವನ್ನೂ ಮಾಡಲಾಗುತ್ತದೆ. ಪ್ರಭುಗಳ ಸಂದೇಶವನ್ನು ಪರಿಶೀಲಿಸಲು ಈ ತಿಂಗಳು ೧೮ ಮತ್ತು ೧೯ ನೇ ತಾ॥ ಗಳಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರುವುದು ಎಂದು ಶ್ರೀ॥ ರೆಡ್ಡಿಯವರು ತಿಳಿಸಿರುವರು.

ಹರಿಕಥೆ

ಬ್ರ॥ ಶ್ರೀ॥ ಪಾಲಘಾಟ್ ಕೀರ್ತನಪಟು ಗಣಪತಿ ಭಾಗವತರವರಿಂದ ಸೀತಾಕಲ್ಯಾಣ ಎಂಬ ಹರಿಕಥೆಯು ಅಶೋಕಾರೋಡಿನಲ್ಲಿರುವ ಗೀತಾಪ್ರಚಾರಿಣಿ ಸಭೆಯಲ್ಲಿ ನಾಳೆ ಸಂಜೆ ೬ ಘಂಟೆಗೆ ನಡೆಯುವುದು.

ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಛೇರ್ಮನ್ನರ ಕಛೇರಿಯಿಂದ-
ಮೈಸೂರು, ತಾ॥ ೭-೧-೪೭.

ಪ್ರಕಟಣೆ

ನಂ. ಬಿ. 1-4 69—46-47,
ತಾ॥ ೭ ೧ ೪೭.

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:-

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರ ತೀರ್ಮಾನದಂತೆ ಹೊಸದಾಗಿ ಬಡಾವಣೆಗೆ "ಜಯಲಕ್ಷ್ಮೀಪುರಂ" ಎಂದು ಹೆಸರಿಡಲಾಗಿದೆ.

ಆರ್. ರಾಮಚಂದ್ರರಾವ್
ಛೇರ್ಮನ್,
ಟ್ರಸ್ಟ್ ಬೋರ್ಡ್,
ಮೈಸೂರು.

ರಾಜಕಮಲ್, ಮೈಸೂರು

10-1-47 ರಿಂದ **3** ನೇ ವಾರ

: ಪ್ರಕಾಶ್ ರವರ : -

ಹಮಾರಾ ಸಂಸಾರ್

ಜೀವನ್ ರಂಜನಾ, ಜಿಲ್ಲು, ಉಮಾಕಾಂತ್,

From 10-1-47 for 4 Days
at 10-30 A M

"Secrets of Scotland Yard"

Starring:- Edgar Barrier, Stephanie, Aubrey Smith etc.

ವೈಸ್‌ಚಾನ್ಸಲರ ಪತ್ನಿಯ ಮೇಲೆ ಮೊಕದ್ದಮೆ

ಪ್ರೋಸೆಸ್ ಕೊಡದಿದ್ದುದರಿಂದ ವಜಾ

ಮೈಸೂರು ೧೦

ಮೈಸೂರು ವಿಶ್ವವಿದ್ಯಾನಿಲಯದ ಸ್ಥಾನಿಕರಾಗಿದ್ದ ಮಿ॥ ಸುಲ್ತಾನ್ ಮೊಹಿಯುದ್ದೀನ್‌ರವರ ಪತ್ನಿಯವರ ಮೇಲೆ ಮೈಸೂರು ಎರಡನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಬಂದಿದ್ದ ಒಂದು ಫಿರ್ಯಾದನ್ನು ಪ್ರೋಸೆಸ್ ಫೀ ಕೊಟ್ಟಿರಲಿಲ್ಲವೆಂಬ ಕಾರಣದ ಮೇಲೆ ಈ ದಿನ ನ್ಯಾಯಾಧೀಶರು ವಜಾ ಮಾಡಿದರು. ಮೊಕದ್ದಮೆ ವಿವರಗಳು ಈ ಕೆಳಗೆ ಕಂಡಂತೆ ಇವೆ:—

ಮೈಸೂರು ಜಯನಗರದ ಮೋಣಿ ಮರಿಗೌಡರ ಮಗ ಕೆಂಪಲಿಂಗಯ್ಯನು ಈ ಮೊಕದ್ದಮೆಯಲ್ಲಿ ಫಿರ್ಯಾದಿ. ಈತನು ವಿಶ್ವವಿದ್ಯಾಲಯದಲ್ಲಿ ಸೇವಕನಾಗಿದ್ದಾನೆ. ಈಗ ಸ್ಥಾನಿಕರಿಗೆ ಮನೆಯ ಕೆಲಸ ಮಾಡುತ್ತಿದ್ದಾನೆ. ಪೇಟೆಯಿಂದ ಸಾಮಾನುಗಳನ್ನು ತರುವುದು, ಹಳೆಯ ಎಕ್ಕಡಗಳನ್ನು ರಿಪೇರಿ ಮಾಡಿಸುವುದೇ ಮುಂತಾದುವು ತನ್ನ ಕೆಲಸಗಳೆಂದು ಫಿರ್ಯಾದಿನಲ್ಲಿ ಸೂಚಿಸಿರುತ್ತಾನೆ. ೧೯-೧೨-೪೬ ರಲ್ಲಿ ಸ್ಥಾನಿಕರ ಪತ್ನಿಯವರು ಐದಾರು ಜೊತೆ ಎಕ್ಕಡಗಳನ್ನು ರಿಪೇರಿ ಮಾಡಿಸಿಕೊಂಡು ಬರುವಂತೆ ಹೇಳಿದರು. ಆತನು ಮಾಡಿಸಿಕೊಂಡು ಬಂದನು. ಅದು ಅವರಿಗೆ ತೃಪ್ತಿಕರವಾಗಿರಲಿಲ್ಲ. ಆದುದರಿಂದ ಅವುಗಳನ್ನು ಅವರು ತೆಗೆದು ಎಸೆದರು. ಒಂದು ಕೆಂಪಲಿಂಗಯ್ಯನ ತಲೆ ಮೇಲೆ ಬಿದ್ದಿತು; ಒಂದನ್ನು ಇವನು ಕೈಗೆ ತೆಗೆದುಕೊಂಡನು; ಇನ್ನೊಂದು ದಾರಿಯಲ್ಲಿ ಬಿತ್ತು. ಆದುದರಿಂದ ಕೆಂಪಲಿಂಗಯ್ಯನ ಅದಕ್ಕಾಗಿ ಜನರೆಲ್ಲ ... ಮಾನನಷ್ಟವಾದುದಕ್ಕಾಗಿ ಆಪಾದಿತರು ತಮ್ಮ ಮನೆಯನ್ನು ಕರೆಯುವಲ್ಲಿ ಕೆಂಪಲಿಂಗಯ್ಯನು ಮತ್ತೆ ಜೋಡುಗಳನ್ನು ಸರಿ ಮಾಡಿಸಿಕೊಂಡು ಬಂದು ಹೋಟೆಲಿನ ... ಶೆಟ್ಟಿ ... ಸೇವಕನು ತಿದ್ದಿಸಲಿಲ್ಲವೆಂದು ... ಕೆಂಪಲಿಂಗಯ್ಯನು ಮತ್ತೆ ಜೋಡುಗಳನ್ನು ರಿಪೇರಿ ಮಾಡಿಸಿ ತಂದಿಟ್ಟು ಸಂಬಳ ... ಕೇಳಲು ಹೋದನು. ಆದರೆ ಅವರು ಕೊಡಲಿಲ್ಲ. ಅನಂತರ ಆತನು ವಕೀಲರ ಮುಖಾಂತರ ವೈಸ್ ಚಾನ್ಸಲರಿಗೆ ಬರೆದ ಪತ್ರಕ್ಕೆ ಯಾವ ಉತ್ತರವೂ ಬಾರದಿದ್ದುದರಿಂದ ಮೊಕದ್ದಮೆಯನ್ನು ಹೂಡಲಾಯಿತು. ಈ ಎಲ್ಲಾ ವಿವರಗಳು ಫಿರ್ಯಾದಿನಲ್ಲಿ ನಮೂದಿಸಲ್ಪಟ್ಟಿವೆ. ಶ್ರೀ॥ ಎ. ವೆಂಕಟೇಶಯ್ಯನವರು ಫಿರ್ಯಾದಿ ಪರ ವಕಾಲತ್ತು ವಹಿಸಿದ್ದರು.

ಅಸ್ಸಾಮಿನಲ್ಲಿ ಲೀಗಿನ ಅಸಹಕಾರ ಚಳುವಳಿಯೇ ?

ವ್ಯವಸಾಯದ ಜಮೀನುಗಳು ಇರುವ ಪ್ರದೇಶದಲ್ಲಿ ವಾಸದ ಮನೆಯನ್ನು ಕಟ್ಟಿಕೊಳ್ಳುವ ಪದ್ಧತಿಯನ್ನು ಪ್ರತಿಬಂಧಿಸಿ ಅಸ್ಸಾಂ ಸರ್ಕಾರದವರು ಮಾಡಿರುವ ಶಾಸನವನ್ನು ಪ್ರತಿಭಟಿಸಲು ಅಲ್ಲಿನ ಮುಸ್ಲಿಂ ಲೀಗಿನವರು ಕಾನೂನು ಭಂಗದ ಚಳವಳಿಯನ್ನು ಕೈಗೊಳ್ಳುವರೆಂದು ಹೇಳಲಾಗಿದೆ. ಇದಕ್ಕಾಗಿ ೧೦,೦೦೦ ಸ್ವಯಂಸೇವಕರನ್ನು ಸೇರಿಸಲು ಪ್ರಯತ್ನಗಳಾಗುತ್ತಿವೆ. ಹೋರಾಟಕ್ಕಾಗಿ ಅಲ್ಲಿನ ಮುಸ್ಲಿಂ ಲೀಗ್ ಸಂಸ್ಥೆಗಳೆಲ್ಲವೂ ಸಿದ್ಧವಾಗಿರುವಂತೆ ಸೂಚನೆ ಕೊಡಲಾಗಿದೆ.

ಸಾಧ್ವಿ
ತಾ|| ೧೦-೧-೪೭ ಶುಕ್ರವಾರ

ಪ್ರಭು ಸಂದೇಶ

ಸಂಸ್ಥಾನದ ಮುಂದಿನ ರಾಜಕೀಯ ಪ್ರಗತಿಯ ಬಗ್ಗೆ ನಮ್ಮ ಮಹಾ ಪ್ರಭುಗಳು ತಮ್ಮ ಸಕಲ ಪ್ರಜೆಗಳಿಗೂ ಇತ್ತಿರುವ ಸಂದೇಶವು ಅತ್ಯಂತ ಸಮಯೋಚಿತವೂ, ಅಭಿನಂದನೀಯವೂ ಆಗಿರುತ್ತದೆ. ಮೈಸೂರು ಕಾಂಗ್ರೆಸ್ ಸಂಸ್ಥೆಯವರು ಮೊನ್ನೆ ತಾನೆ ಮಹಾ ಪ್ರಭುಗಳಿಗೆ ಮನವಿಯನ್ನು ಸಲ್ಲಿಸಿದ ತರುಣದಲ್ಲಿಯೇ ಈ ಸಂದೇಶವು ಬಂದಿರುವುದು ಮತ್ತೂ ಸಂತೋಷದ ವಿಷಯವಾಗಿರುತ್ತದೆ. ತಮ್ಮ ಪ್ರಜೆಗಳ ಆಶೋತ್ತರಗಳನ್ನು ಯಾವ ರೀತಿಯಲ್ಲಿ ಈಡೇರಿಸಬೇಕೆಂಬ ಅಂಶವನ್ನು ತಾವು ಪರಿಶೀಲಿಸುತ್ತಿರುವುದಾಗಿ ಶ್ರೀಮನ್ಮಹಾರಾಜರವರು ತಿಳಿಸಿರುವ ಅಂಶವು ರಾಜಕೀಯ ಪ್ರಗತಿಯಕಾಂಕ್ಷೆಯುಳ್ಳವರೆಲ್ಲರಿಗೂ ಸಮಾಧಾನವನ್ನುಂಟುಮಾಡುವ ಅಂಶವಾಗಿರುತ್ತದೆ.

ಮುಂದೆ ಕೈಗೊಳ್ಳಲಿರುವ ಕಾರ್ಯಕ್ರಮದಲ್ಲಿ ಸಹಕರಿಸಿ ಸೂಕ್ತವಾದ ಸಲಹೆಗಳನ್ನು ನೀಡುವಂತೆ ಸಂಸ್ಥಾನದ ಸಕಲ ಪ್ರಜೆಗಳನ್ನು ಪ್ರಭುಗಳವರು ಕೋರಿರುತ್ತಾರೆ. ಸಂಸ್ಥಾನದ ಸರ್ವತೋಮುಖವಾದ ಅಭ್ಯುದಯವನ್ನೂ, ಪ್ರಭು ಮತ್ತು ಪ್ರಜೆಗಳ ಮಧುರ ಬಾಂಧವ್ಯವನ್ನೂ ಬೆಳೆಸಿ ಚಿರಸ್ಥಾಯಿಯಾದ ಸುಖ, ಶಾಂತಿಗಳನ್ನು ಸ್ಥಾಪಿಸಲು ಸಂಸ್ಥಾನದ ಎಪ್ಪತ್ತೈದು ಲಕ್ಷ ಪ್ರಜೆಗಳೂ ಕಂಕಣ ಬದ್ಧರಾಗಿ ಮುಂದೆ ಬರುವರೆಂಬ ಭರವಸೆಯನ್ನು ನಾವು ಹೊಂದಿರುತ್ತೇವೆ.

ಘೋರ ಯುದ್ಧದ ದುಸ್ಪರಿಣಾಮದಿಂದ ಪಾರಾದ ವಿಶ್ವದ ಜನಾಂಗಗಳು ರಾಷ್ಟ್ರ ಪುನರ್ರಚನೆ ಮತ್ತು ಆರ್ಥಿಕಾಭಿವೃದ್ಧಿಯ ಕಾರ್ಯದಲ್ಲಿ ತೊಡಗಿರುತ್ತವೆ. ರಾಜಕೀಯ ಪ್ರಗತಿಯು ಸಕಲ ವಿಧದ ಉನ್ನತಿಗೂ ಮೂಲಾಧಾರವೆಂಬುದನ್ನು ಎಲ್ಲರೂ ಅಂಗೀಕರಿಸಿರುತ್ತಾರೆ. ಆದುದರಿಂದಲೇ ಹಿಂದೂಸ್ತಾನದಲ್ಲಿಯೂ, ಇತರ ಕಡೆಗಳಲ್ಲಿಯೂ ರಾಜ್ಯಾಂಗ ರಚನೆಗೆ ವಿಶೇಷವಾದ ಗಮನವನ್ನು ಕೊಡಲಾಗಿದೆ. ಇದನ್ನೇ ನಮ್ಮ ಪ್ರಭುಗಳವರೂ ಅಂಗೀಕರಿಸಿರುವುದು ಸಂತೋಷದ ವಿಷಯವಾಗಿದೆ.

ಪ್ರಭುಗಳು ಪಟ್ಟಕ್ಕೆ ಬಂದಾಗ ಅಪ್ಪಣೆ ಕೊಡಿಸಿದ ಅಮೃತವಾಣಿಯು ಸಕಲರ ಕಿವಿಗಳಲ್ಲಿಯೂ ಇನ್ನೂ ಪ್ರತಿಧ್ವನಿತವಾಗುತ್ತಿದೆ. ಪ್ರಜಾ ಪ್ರಭುತ್ವದಲ್ಲಿ ಸಂಪೂರ್ಣವಾದ ನಂಬಿಕೆಯನ್ನೂ, ತಮ್ಮ ಪ್ರಜೆಗಳಲ್ಲಿ ಅಚಲವಾದ ವಾತ್ಸಲ್ಯವನ್ನೂ ಅವರು ಆಗಲೇ ವ್ಯಕ್ತಪಡಿಸಿರುತ್ತಾರೆ. ಆ ಉನ್ನತವಾದ ಆದರ್ಶನ ಮಟ್ಟದಿಂದಲೇ ಪ್ರಜೆಗಳು ಆಡಳಿತದ ಸಮಸ್ತ ಕಾರ್ಯ ಕಲಾಪಗಳನ್ನೂ ಪರಿಶೀಲಿಸುತ್ತಿದ್ದಾರೆ. ಪ್ರಭುಗಳ ಇಂಗಿತವು ಸಂಪೂರ್ಣವಾಗಿ ಈಡೇರುವ ಕಾಲವು ಎಷ್ಟು ಬೇಗ ಸಂಪ್ರಾಪ್ತವಾಗುವುದೆಂಬುದನ್ನು ಕುತೂಹಲದಿಂದ ಇದಿರು ನೋಡುತ್ತಿದ್ದಾರೆ. ರಾಜ್ಯಾಂಗ ಪ್ರಗತಿಯ ದಿವ್ಯ ಜ್ಯೋತಿಯು ತಮಗೆ ವಂಶ ಪಾರಂಪರ್ಯವಾಗಿ ಲಭ್ಯವಾಗಿರುವ ದಿವ್ಯವಾದ ಬಳುವಳಿಯೆಂದು ಪ್ರಭುಗಳು ಅಪ್ಪಣೆ ಕೊಡಿಸಿ, ಆ ಜ್ಯೋತಿಯು ನಂದಿಹೋಗದಂತೆ ನೋಡಿಕೊಳ್ಳುವುದಲ್ಲದೆ ಕಾಲಾನುಗುಣವಾಗಿ ದೇದೀಪ್ಯಮಾನದಿಂದ ಉರಿಯುತ್ತಿರುವಂತೆ ಮಾಡುವುದೇ ತಮ್ಮ ಆಸೆಯೆಂದು ಸೂಚಿಸಿರುವುದು ಪ್ರಜೆಗಳ ಮನಸ್ಸಿನಲ್ಲಿ ಹೊಸ ಸ್ಫೂರ್ತಿಯನ್ನುಂಟುಮಾಡದಿರದು.

ಇಡೀ ಭರತ ಖಂಡದಂತೆ ನಮ್ಮ ಸಂಸ್ಥಾನವೂ ರಾಜಕೀಯ ಬದಲಾವಣೆಗಳ ಸಂದು ಕಟ್ಟಿನ ಪರಿಸ್ಥಿತಿಯಲ್ಲಿ ಇಂದು ಇರುತ್ತದೆ. ಅಲ್ಲಿ ಈ ಮಹಾ ಕಾರ್ಯವು ಒಂದು ನಿರ್ದಿಷ್ಟವಾದ ರೂಪವನ್ನು ತಾಳಿರುತ್ತದೆ. ನಮ್ಮಲ್ಲಿಯಾದರೋ ಇದುವರೆಗೆ ಯಾವ ವಿಧವಾದ ಬಾಹ್ಯ ಸೂಚನೆಗಳೂ ಕಂಡುಬಂದಿರಲಿಲ್ಲ. ಪ್ರಭುತ್ವದವರೊಡನೆ ಪ್ರಜಾ ನಾಯಕರು ನಡೆಸಿದ ಯಾವ ವ್ಯವಹಾರಗಳಿಗೂ ಸಮರ್ಪಕವಾದ ಪ್ರತಿಕ್ರಿಯೆಯು ದೊರೆತಿರಲಿಲ್ಲ. ಶಾಸನ ಸಭೆಗಳ ಎಲ್ಲ ವರ್ಗಗಳ ಸದಸ್ಯರುಗಳೂ ಸರ್ಕಾರದ ಮೂಲಕ ಪ್ರಭುಗಳಿಗೆ ಕಳುಹಿಸಿದ ಮನವಿಯ ಪರಿಣಾಮವು ಏನಾಯಿತೆಂಬುದೇ ಗೊತ್ತಾಗಿರುವುದಿಲ್ಲ. ಈ ಪರಿಸ್ಥಿತಿಯಲ್ಲಿ ನಿರಾಸೆ, ನಿರುತ್ಸಾಹ ಮತ್ತು ಅಸಂತೃಪ್ತಿಯ ಸೂಚನೆಗಳಿಗೂ ಅವಕಾಶವುಂಟಾಗಿತ್ತು.

ರಾಜಕೀಯ ಪ್ರಗತಿಯಲ್ಲಿ ಮುಂದುವರಿದ ಸಂಸ್ಥೆಯಾದ ಮೈಸೂರು ಕಾಂಗ್ರೆಸ್ಸು ಸುಭಾಸ್ ನಗರದ ಅಧಿವೇಶನದಲ್ಲಿ ಹೋರಾಟದ ನಿರ್ಣಯವನ್ನೂ ಸಹ ಮಾಡಿತು. ಹೋರಾಟಕ್ಕೆ ಸಿದ್ಧತೆಗಳೂ ಸಾಗುತ್ತಿವೆ. ಇತ್ತಲಾಗಿ ಆಡಳಿತ ವರ್ಗದವರು ಆ ಸಿದ್ಧತೆಗಳನ್ನು ಸದೆ ಬಡಿಯುವುದಕ್ಕಾಗಿಯೋ ಎಂಬಂತೆ ಹಿಂದೆಂದೂ ಕಂಡು ಕೇಳದ ಪ್ರಮಾಣದಲ್ಲಿ ಸಂಸ್ಥಾನದ ಅದ್ಯಂತದಲ್ಲೂ ಪ್ರತಿಬಂಧಕಾಜ್ಞೆಗಳನ್ನು ಪ್ರಯೋಗಿಸಿರುವರು. ಸದ್ಯಕ್ಕೆ ಈ ಆಜ್ಞೆಯನ್ನು ಮುರಿಯಬಾರದೆಂದು ಕಾಂಗ್ರೆಸ್ಸಿನವರು ನಿರ್ಧರಿಸಿರುವುದೇನೋ ನಿಜ; ಆದರೆ ಹೋರಾಟವನ್ನು ಹೂಡುವ ಪ್ರಯತ್ನದಲ್ಲಿ ಸದ್ಯಕ್ಕೆ ಆಜ್ಞೋಲ್ಲಂಘನೆಯನ್ನು ಮಾಡದಿರುವುದೂ ಒಂದು ಅಂಗ; ಹೋರಾಟವು ನಿಜವಾಗಿ ಆರಂಭವಾದರೆ ಅದು ಯಾವ ರೂಪವನ್ನು ತಾಳುವುದೋ ಹೇಳಲು ಸಾಧ್ಯವಿಲ್ಲ; ಅದರ ಪರಿಣಾಮವು ಪ್ರಜೆಗಳಿಗಾಗಲೀ, ಪ್ರಭುತ್ವದವರಿಗಾಗಲೀ ಹಿತಕರವಾದ ವಿಷಯವಲ್ಲ. ಆದುದರಿಂದ ಹೋರಾಟವನ್ನು ಸರ್ವ ವಿಧದಿಂದಲೂ ತಪ್ಪಿಸುವುದು ಸಕಲ ಹಿತೈಷಿಗಳ ಕರ್ತವ್ಯ. ಸರ್ಕಾರದವರು ಈ ಬಗ್ಗೆ ಯಾವ ಪ್ರಯತ್ನವನ್ನೂ ಮಾಡಿದಂತೆ ಕಾಣುವುದಿಲ್ಲ.

ಇಂತಹ ಸನ್ನಿವೇಶದಲ್ಲಿ ಮಹಾ ಪ್ರಭುಗಳವರ ಸಂದೇಶವು ಹೊಸ ಬೆಳಕನ್ನು ಬೀರುವುದಾಗಿ ನಾವು ಭಾವಿಸುತ್ತೇವೆ. ಇಂದಿನ ಸಮಸ್ಯೆಯನ್ನು ಬಗೆಹರಿಸುವ ಆಶಾ ಕಿರಣದಂತೆ ಇದು ಕಂಡುಬರುತ್ತದೆ. ಸಕಲ ಪಕ್ಷದ ಜನರೂ ಈ ಕಾರ್ಯದಲ್ಲಿ ಸಹಕರಿಸಬೇಕೆಂದು ಪ್ರಭುಗಳು ಅಪೇಕ್ಷಿಸಿರುತ್ತಾರೆ. ಈ ಸಹಕಾರವು ಧಾರಾಳವಾಗಿ ದೊರೆಯುವುದೆಂದು ನಾವು ನಂಬಿರುತ್ತೇವೆ.

ದಿವಾನರವರು ಎಲ್ಲ ವರ್ಗಗಳ ಪ್ರಮುಖರೊಡನೆ ಕಲೆತು ಸಮಾಲೋಚನೆ ನಡೆಸಿ ತಮ್ಮ ಸಲಹೆಗಳನ್ನು ಪ್ರಭುಗಳಿಗೆ ನಿವೇದಿಸಬೇಕೆಂದು ಸೂಚಿಸಲಾಗಿದೆ. ಪ್ರಜೆಗಳ ಆಶೋತ್ತರಗಳನ್ನು ಬಹು ಮಟ್ಟಿಗೆ ಪ್ರತಿಬಿಂಬಿಸುವ ಶಾಸನ ಸಭೆಗಳು ಈಗಾಗಲೇ ಈ ವಿಷಯದಲ್ಲಿ ಮನವಿಯನ್ನು ಮಾಡಿರುತ್ತವೆ. ಈ ಕನಿಷ್ಠಾಂಶದ ಬೇಡಿಕೆಗಳನ್ನೇ ಇತರರೆಲ್ಲರೂ ಪುಷ್ಟೀಕರಿಸುವರೆಂಬುದರಲ್ಲಿ ಸಂದೇಹವಿಲ್ಲ. ದಿವಾನರು ಯಾವ ಭೇದ ಭಾವವೂ ಇಲ್ಲದೆ, ಸಂಸ್ಥಾನದ ಸಕಲ ಪಂಗಡಗಳ ಪ್ರತಿನಿಧಿಗಳೊಡನೆಯೂ ಸಮಾಲೋಚನೆ ನಡೆಸುವುದು ಯುಕ್ತವಾಗಿದೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷರನ್ನೂ
ರು ಆಹ್ವಾನಿಸಿ ಅವರ ಅಭಿಪ್ರಾಯಗ
ಅರಿತುಕೊಳ್ಳುವರೆಂದು ನಾವು ನಂಬ
ಕಾಂಗ್ರೆಸ್ಸಿನವರೂ ಸಹ ಇಂತಹ ಸ
ಲೋಚನೆಯಲ್ಲಿ ತಮ್ಮ ಸಹಕಾರವನ್ನು
ರಾಕರಿಸಲಾರರೆಂದು ನಾವು ಆಶಿಸುತ್ತೇ

ಒಂದು ಅಂಶವನ್ನು ಮಾತ್ರ ಗಮ
ವುದು ಅತ್ಯಂತ ಅಗತ್ಯವಾಗಿದೆ. ಸರ್ಕಾ
ಆಡಳಿತದಲ್ಲಿ ಪ್ರಜೆಗಳ ಪ್ರತಿನಿಧಿಗಳನ್ನು
ಚ್ಚು ಹೆಚ್ಚಾಗಿ ಸೇರಿಸಿಕೊಳ್ಳುವ ನೀತಿ
ಎಷ್ಟೇ ಉತ್ತಮವಾಗಿದ್ದರೂ, ನಮ್ಮ
ಭುಗಳು ಹಿಂದೆ ಘೋಷಿಸಿರುವ ಪ್ರಜಾ
ಭುತ್ವ ಧ್ಯೇಯಕ್ಕೆ ಇದು ಸಾಟಿಯಾಗ
ದು. ಕೇವಲ ನಾಲ್ಕಾರು ಮಂತ್ರಿಗಳ
ನೇಮಿಸುವುದರಿಂದ ಯಾವ ಪ್ರಯೋ
ವೂ ಆಗುವುದಿಲ್ಲ. ಹಲವಾರು ನೌಕರ
ಗಾಗಲೀ, ಪದವಿಗಳಿಗಾಗಲೀ ಪ್ರಜೆ
ಹಾತೊರೆಯುತ್ತಿಲ್ಲ; ನಿಜವಾದ ಅಧಿಕಾ
ಕಾರಕ್ಕಾಗಿ ಅವರು ಕಾತುರರಾಗಿದ್ದಾರೆ
ದನ್ನು ದೊರಕಿಸಿಕೊಡುವುದರಿಂದಲೇ
ಜೆಗಳ ಮತ್ತು ಪ್ರಭುಗಳ ಅಭೀಷ್ಟ
ಡೇರುವುದು. ದಿವಾನರು ಈ ಬಗ್ಗೆ
ಯಾದ ಸಲಹೆಗಳನ್ನು ಕೊಡುವುದು
ಶ್ಯಕ.

ಶ್ರೀಮನ್ಮಹಾರಾಜರವರ ಛತ್ರಚ್ಛಾ
ದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾ
ನ್ನು ಸ್ಥಾಪಿಸುವುದೇ ನಮ್ಮ ಸರ್ಕಾ
ಮುಖ್ಯ ಗುರಿಯೆಂದು ಸಾರುವುದು; ಇ
ಸಾಧನೆಗಾಗಿ ಸೂಕ್ತವಾದ ರಾಜ್ಯಾಂಗ
ಧಾರಣೆಗಳನ್ನು ಮಾಡಲು ಕಾರ್ಯಕ್ರಮ
ಗಳನ್ನು ಕೈಗೊಳ್ಳುವುದು; ಮತ್ತು ಇ
ಪೂರ್ವಭಾವಿಯಾಗಿ ಈಗ ಜಾರಿಯಲ್ಲಿ
ರಾಜ್ಯಾಂಗ ಕ್ರಮದಂತೆಯೇ ಪ್ರಜಾ
ಗಳ್ಗೆ ಪಾತ್ರವಾದ ಹಂಗಾಮಿ ಮಂತ್ರಿ
ಡಲವನ್ನು ರಚಿಸುವುದು:- ಈ ಬಗ್ಗೆ ಪ್ರ
ಭುಗಳವರು ಘೋಷಣೆಯನ್ನು ಹೊರ
ದರೆ ಇಂದಿನ ಸಮಸ್ಯೆಯು ಬಗೆಹರಿದು ಪ್ರ
ಭುಗಳ ಅಪೇಕ್ಷೆಯಂತೆ ಸಂಸ್ಥಾನದಲ್ಲಿ ಸು
ಖ, ಶಾಂತಿ ಮತ್ತು ಸಂತೃಪ್ತಿಗಳು ನೆಲೆಸು
ಳ್ಳಲು ಸಾಧಕವಾಗುವುದೆಂದು ನಾವು ಭಾ
ವಿಸಿಕೊಳ್ಳುತ್ತೇವೆ.

Edited, printed and published by A. R. Nagarajan at the Sadhvi Pre D-Subbiah Road, Mysore

ಕೃಷ್ಣರಾಜಸಾಗರ ಡಿವಿಜನ್
ಪ್ರಸಿದ್ಧ ಪತ್ರಿಕೆ
ಕೃಷ್ಣರಾಜಸಾಗರದ ದಕ್ಷಿಣ ಬೃಂದಾವನದಲ್ಲಿ ಹಿಂದೂ ಫಲಾಹಾರ ಮಂದಿರ ನಡೆಸಲು ಟೆಂಡರು.

ಕೃಷ್ಣರಾಜಸಾಗರದ ದಕ್ಷಿಣ ಬೃಂದಾವನದಲ್ಲಿ ಮೂರು ವರ್ಷಗಳ ಕಾಲ ಹಿಂದೂ ಫಲಾಹಾರ ಮಂದಿರವನ್ನು ನಡೆಸುವ ಸಲುವಾಗಿ ಟೆಂಡರನ್ನು ಕರೆದಿರುವ ೧೯೪೬ ನೇ ಡಿಸೆಂಬರ್ ೧೯ ನೇ ತಾರೀಖಿನ ಗೆಜೆಟ್ ೩ ನೇ ಭಾಗದ ೯೩೩ ನೇ ಪುಟದ ಪ್ರಕಟಣೆಯ ಕಡೆಗೆ ಈ ಮೂಲಕ ಸಾರ್ವಜನಿಕರ ಗಮನವನ್ನು ಕೋರಲಾಗಿದೆ. ಟೆಂಡರ್ ಫಾರಮ್ಮನ್ನು ೪ ಆಣೆ ತೆತ್ತು ಕೃಷ್ಣರಾಜಸಾಗರದ ಡಿವಿಜನ್ನಿನ ಎಗ್ಸಿಕ್ಯೂಟಿವ್ ಇಂಜನಿಯರವರ ಕಛೇರಿಯಲ್ಲಿ ಪಡೆಯಬಹುದು. ಟೆಂಡರುಗಳನ್ನು ೧೯೪೭ ನೇ ಜನವರಿ ೧೩ ನೇ ತಾರೀಖಿನೊಳಗಾಗಿ ಕಳುಹಿಸಿಕೊಡಬೇಕು.

ಎಂ. ಸಿ. ಸಂಪತ್ತೈಯ್ಯಂಗಾರ್,
ಎಗ್ಸಿಕ್ಯೂಟಿವ್ ಇಂಜನಿಯರ್.

ಪೊಂಗಲ್ ಹಬ್ಬಕ್ಕಾಗಿ
ತಾ|| 10-1-47 ರಿಂದ ಅಮೋಘ ಪ್ರಾರಂಭ
ದಿನವಹಿ ಮೂರು ಪ್ರದರ್ಶನ
ಬೆಂಗಳೂರು ಶಿವಾಜಿ ಮತ್ತು ಮೈಸೂರು ನ್ಯೂ ಅಪೆರಾ
ಚಿತ್ರಾಲಯಗಳಲ್ಲಿ
ಪೊನ್ನುರುವಿ
(ತಮಿಳು)
(ಮಹಾಭಾರತದಿಂದ ಆರಿಸಲ್ಪಟ್ಟ ಕರ್ಣನ ವಿವಾಹ, ಜೀವನಗಳನ್ನು ಚಿತ್ರಿಸಿರುವ ಕಥೆ)
ಅಭಿನಯ:— ● ಕೊತ್ತಮಂಗಲಂ ಸೀನು, ● ಕೆ. ಟಿ. ರುಕ್ಮಿಣಿ, ● ಟಿ. ಎಸ್. ದೊರೈರಾಜ್
(ಶುಭ) — FOR BOOKINGS —
Shree Vijaya Pictures,
197 Gandhinagar ::: Bangalore City

ರೀ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧೧—೧—೪೭ [ಸಂಚಿಕೆ ೧೩೬

ಓರ್ಛಾ ಸಂಸ್ಥಾನದಲ್ಲಿ ರಾಜ್ಯಾಂಗ ರಚನಾ ಸಭೆ

ಜಮೀನು ಹಿಡುವಳಿದಾರರ ಕಷ್ಟ

...ಸನ ಸಭಾ ಸದಸ್ಯರೂ, ಅಡ್ವೊಕೇಟರೂ ಆದ ಶ್ರೀ ಎಸ್. ಕೃಷ್ಣಸ್ವಾಮಿರಾಯರು ಈ ರೀತಿ ಬರೆಯುತ್ತಾರೆ:—

ಹೋದ ವರ್ಷ ಸುಗ್ಗಿ ಕಾಲದಲ್ಲಿ ಪಡಿ...ವ ಪ್ರದೇಶಗಳಲ್ಲಿ ವಾಸಿಸುವ ಹಿಡುವಳಿದಾರರುಗಳು ತಮ್ಮ ಜಮೀನುಗಳ ಕುಟುಂಬದಲ್ಲಿರುವ ಜನಗಳ ಲೆಖ್ಖಾಚಾರ ಪ್ರಕಾರ ಪ್ರತಿಯೊಬ್ಬ ದೊಡ್ಡವರಿಗೆ ದಿನ ಒಂದಕ್ಕೆ ೨॥ ಪಾವು ಭತ್ತದಂತೆಯೂ, ಮಕ್ಕಳಿಗೆ ೧। ಪಾವಿನಂತೆಯೂ ಲೆಖ್ಖಾಚಾರ ಹಾಕಿ ಭತ್ತವನ್ನು ತೆಂದುಕೊಳ್ಳಲು ಸರ್ಕಾರದವರು ಪರ್ಮಿಟ್ ಕೊಟ್ಟಿದ್ದರು. ಈ ಸಲವೂ ಅದೇ ರೀತಿ ಆರ್ಡರ್ ಮಾಡಿದ್ದಾರೆ. ಆದರೆ ಹೋದ ವರ್ಷ ...ಕಾಲದಲ್ಲಿ ಪಡಿತರವನ್ನು ಹೊಂದ...ರ್ಕಾರದ ಹಿಡುವಳಿದಾರರಲ್ಲಿ ದಿನವಹಿ ಎರಡು ವೇಳೆ ಅಕ್ಕಿ ಪ್ರಮಾಣವನ್ನು ...ಮಾಡಿ ಈ ಪ್ರಮಾಣಗಳಲ್ಲಿಯೇ ...ಹಿಡುವಳಿದಾರರೂ ಸಹ ತಮ್ಮಲ್ಲಿರುವ ಅ...ವನ್ನು ಈ ವರ್ಷಕ್ಕೆ ಇಟ್ಟುಕೊಳ್ಳಬೇಕೆಂದೂ ವಿಧಾಯಕ ಮಾಡಿ ಈ ವರ್ಷದ ಮಾರ್ಚಿ, ಏಪ್ರಿಲ್, ಜೂನ್ ವರಿವಿಗೂ ಲೆಖ್ಖಾಚಾರ ಪ್ರಕಾರ ಉಪಯೋಗಿಸತಕ್ಕದ್ದೆಂ...ರೇಷನ್ ಕಾರ್ಡುಗಳನ್ನು ತರಿಸಿ ಅದರ ...ತಿ ಬರೆದಿರುತ್ತಾರೆ. ಈ ಸಾರಿ ಭತ್ತವನ್ನು ತರಬೇಕೆಂದು ರೇಷನ್ ಆಫೀಸರುಗಳಲ್ಲಿ ಕೇಳಿದರೆ ಮೇಲ್ಕಂಡಂತೆ ಲೆಖ್ಖಾಚಾರ ...ರುವ ಪ್ರಕಾರ ಆಯಾಯ ತಾರೀಖಿನಿಂದ ಮುಂದೆ ಹೊಸ ಭತ್ತ ಬರುವವರೆಗೆ ...ಆಗುತ್ತೊ ಅದನ್ನು ಮಾತ್ರ ತರಲು ...ನವ ಕೊಡುತ್ತೇವೆಂದು ಹೇಳಿ ಬಾಕಿ ...ರೇಷನ್ ಭತ್ತವನ್ನು ಕಡಿಮೆ ಮಾ...ತ್ತಾ ಇದ್ದಾರೆ.

ಪ್ರಾಯಶಃ ಎಲ್ಲರಲ್ಲೂ ಹೋದ ಸಾರಿ ...ಅವಕಾಶ ಕೊಟ್ಟದ್ದ ಭತ್ತವು ಅನೇಕ ಕಾರಣಗಳಿಂದ ಖರ್ಚಾಗಿ ಹೋಗಿರುತ್ತದೆ. ಗುತ್ತಿಗೆದಾರರು ಮನೆಗೆ ತಂದು ...ಸಿದ ಭತ್ತವು ಹಸಿ ಭತ್ತ, ಜಳ್ಳು, ಮಣ್ಣು, ಕಲ್ಲು ಇವುಗಳಿಂದ ಕೂಡಿದ್ದಾಗಿರುತ್ತದೆ. ಗುತ್ತಿಗೆ ನಡುವ ರೈತರು ಯಾವ ರೀತಿ ಒರಟು ಭತ್ತವನ್ನು ತಂದುಕೊಡುತ್ತಾರೆಂಬುದು ಅನೇಕರಿಗೆ ಅನುಭವದಿಂದ ಗೊತ್ತಿರಬಹುದು. ತಂಥ ಭತ್ತವನ್ನು ಅಳೆಯುವುದರಲ್ಲೂ ಬಹಳ ಪಿತಲಾಟವಾದ್ದಾಗಿ ೫ ಪಲ್ಲ ತಂದಿದ್ದರೂ ಅದನ್ನು ೫॥ ಪಲ್ಲ ಮಾಡುವುದು ಅವರ ಸ್ವಭಾವ. ಅದನ್ನು ಬೇಡವೆಂದು ಹೇಳಿದರೆ ಅವನಿಗ ಪರಮ ಉಪಕಾರ ಮಾಡಿದಂತಾಗುತ್ತದೆ. ಅವನ್ನೇ ಬ್ಲಾಕ್ ಮಾರ್ಕೆಟ್ಟಿನಲ್ಲಿ ಅವನು ೩-೪ ರಷ್ಟು ಹೆಚ್ಚಿಗೆ ಖರೀದಿಗೆ ಮಾರಿಕೊಳ್ಳುತ್ತಾನೆ. ಜಮೀನುದಾರರು ಕೋರ್ಟಿಗೆ ಹೋಗಿ ದಾವಾ ಹಾಕಿದರೆ ...ವರ್ಷ ಆದ ಮೇಲೆ ಸರ್ಕಾರದವರು ನಿರ್ಬಂಧದಿಂದ ಕೊಳ್ಳುವ ಹೀನ ಬೆಲೆಗೆ ...ವಾಗುತ್ತದೆ. ಆ ಹಣವನ್ನು ವಸೂಲು ಮಾಡಿಕೊಳ್ಳುವುದರಲ್ಲಿ ಅನೇಕಾನೇಕ ತೊಂದರೆ ತೊಡಕುಗಳು ಒದಗಬಹುದು.

ಮತ್ತೆ ಗುತ್ತಿಗೆ ಭತ್ತದಲ್ಲಿ ಅನೇಕ ಕಾರಣಗಳಿಂದ ಸೋಡಿ ಕೊಡುವ ನಾಡಿಕೆಯುಂಟು. ಇನ್ನು ಕೆಲವು ಸಂದರ್ಭಗಳಲ್ಲಿ ಮುಂದಿನ ವರ್ಷ ಕೊಡುತ್ತೇನೆಂದು ಹೇಳುವುದೂ ಉಂಟು. ಪರ್ಮಿಟ್ಟಿನಲ್ಲಿ ನಮೂದು ಮಾಡುವ ಪ್ರಮಾಣಕ್ಕಿಂತಲೂ ಕಡಿಮೆಯನ್ನು ಅನೇಕ ವೇಳೆ ತೆಗೆದುಕೊಳ್ಳಬೇಕಾಗುತ್ತದೆ. ರೈತನು ಗುತ್ತಿಗೆ ಭತ್ತವನ್ನು ಹಾಕಿದ ಮೇಲೆ ಅದು ಒಣಪಡಿಸಿದಾಗ ಕಡಿಮೆಯಾಗುತ್ತದೆ. ಇಲಿ, ಹೆಗ್ಗಣ ತಿಂದು ಕೆಲವು ಭಾಗ ಕಡಮೆಯಾಗುತ್ತದೆ.

ಈ ಭತ್ತವನ್ನು ಕೊಟ್ಟಕ್ಕೆ ಕೊಟ್ಟಿಗೆ ಭತ್ತ ಬರಡಾಗಿದ್ದರೆ ೨೮ ಸೇರಿಗೆ ೧೩ ಸೇರು ಅಕ್ಕಿ ಸಿಕ್ಕುತ್ತದೆ. ಪಲ್ಲಕ್ಕೆ ೮-೧೦ ಸೇರು ಈ ರೀತಿ ವಜಾ ಕಟ್ಟಬೇಕು. ಮಿಲ್ಲಿಗೆ ಹಾಕುವುದೆಂದರೆ ಒಟ್ಟಿಗೆ ಎಲ್ಲಾ ಭತ್ತವನ್ನೂ ಅಕ್ಕಿ ಮಾಡಿಸಿಟ್ಟರೆ ಕೆಲವು ದಿವಸಗಳಲ್ಲಿ ಅಕ್ಕಿಯಲ್ಲಿ ಹುಳು ಬಂದು ಅದು ಕೆಟ್ಟು ಹೋಗುತ್ತದೆ. ಸ್ವಲ್ಪ ಸ್ವಲ್ಪ ತೆಗೆದುಕೊಂಡು ಹೋಗಿ ಅಕ್ಕಿ ಮಾಡಿಸೋಣವೆಂದರೆ ಹೋಗಿ ಬರುವ ಬಾಡಿಗೆ ಖರ್ಚು ದುಬಾರಿಯಾಗುತ್ತದೆ. ಅಲ್ಲದೇ ಸ್ವಲ್ಪ ಭತ್ತವನ್ನು ಮಿಲ್ಲಿನವರು ತೆಗೆದುಕೊಳ್ಳುವುದಿಲ್ಲ. ಪ್ರತಿಯೊಂದು ಮಿಲ್ಲಿನಲ್ಲಿಯೂ ಸರಕಾರಿ ಭತ್ತವೇ ವಿಶೇಷ ಬಿದ್ದಿರುವಾಗ ಒಬ್ಬನ ೧ ಪಲ್ಲ ಅಥವಾ ೨ ಪಲ್ಲ ಭತ್ತವನ್ನು ಏತಕ್ಕೆ ಪಡೆಯುತ್ತಾನೆ. ಮತ್ತು ಸ್ವಲ್ಪ ಪ್ರಮಾಣದಲ್ಲಿ ಭತ್ತವನ್ನು ಅಕ್ಕಿ ಮಾಡಿಸಿದರೆ ಇಳುವರಿ ಸರಿಯಾಗಿ ಬರುವುದಿಲ್ಲ. ಮಿಲ್ಲಿನ ಒಳಗೆ ಎಲ್ಲೆಲ್ಲೂ ಅಕ್ಕಿ ನಿಂತು ಬಿಡುತ್ತದೆ. ಇತ್ಯಾದಿ ಕಾರಣದಿಂದ ಭತ್ತವನ್ನು ತರುವ ಹಿಡುವಳಿದಾರರಿಗೆ ೨॥ ಪಾವಿನ ಭತ್ತಕ್ಕೆ ಅನೇಕವೇಳೆ ೧ ಪಾವಿಗಿಂತಲೂ ಕಡಿಮೇ ಅಕ್ಕಿ ಎಂದಂತಾಗುತ್ತದೆ.

ಓರ್ಛಾ ಸಂಸ್ಥಾನದಲ್ಲಿ ರಾಜ್ಯಾಂಗ ಸುಧಾರಣೆ

ಉತ್ತರ ಭಾರತದಲ್ಲಿರುವ ಓರ್ಛಾ ಸಂಸ್ಥಾನದ ಮಹಾರಾಜರು ತಮ್ಮ ಸಂಸ್ಥಾನದಲ್ಲಿ ಒಂದು ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಲು ಸಮ್ಮತಿಸಿರುತ್ತಾರೆ. ಅಲ್ಲಿನ ಕಾಂಗ್ರೆಸ್ ಸಂಸ್ಥೆಯ ಒಬ್ಬ ಪ್ರತಿನಿಧಿಯೂ ತಮ್ಮಿಂದ ನೇಮಿತರಾದ ಇಬ್ಬರೂ ಅದರಲ್ಲಿ ಮಂತ್ರಿಗಳಾಗಿರುವಂತೆ ಗೊತ್ತುಮಾಡಿರುತ್ತಾರೆ. ಮತ್ತು ಸಂಸ್ಥಾನದ ಹೊಸ ರಾಜ್ಯಾಂಗ ಶಾಸನವನ್ನು ಸಿದ್ಧಗೊಳಿಸಲು ಒಂದು ಸಮಿತಿಯನ್ನು ರಚಿಸುವುದಕ್ಕೂ ಸಹ ರಾಜರು ಒಪ್ಪಿರುತ್ತಾರೆ. ಅದರಲ್ಲಿ ಪ್ರಜೆಗಳ ರಾಜರ ಪ್ರತಿನಿಧಿಗಳೂ, ಕಾಂಗ್ರೆಸ್ ಮತ್ತು ಶಾಸನ ಸಭೆಗಳ ಪರವಾಗಿ ಐವ್ವರ ಜನ ಪ್ರತಿನಿಧಿಗಳೂ ಸದಸ್ಯರಾಗಿರುವರು.

ಪರೀಕ್ಷಾ ಫಲಿತಾಂಶ

ಮೈಸೂರು ೧೧

ಕಳೆದ ಡಿಸೆಂಬರಿನಲ್ಲಿ ನಡೆದ ಪ್ರೀ ಮೆಡಿಕಲ್ ಮತ್ತು ಎಂ. ಬಿ. ಬಿ. ಎಸ್. ಡಿಗ್ರಿ ಪರೀಕ್ಷೆಗಳಲ್ಲಿ ಈ ಕೆಳಗೆ ಕಂಡ ನಂಬರಿನವರು ಉತ್ತೀರ್ಣರಾಗಿರುತ್ತಾರೆ:—

ಪ್ರೀ ಮೆಡಿಕಲ್ ಪರೀಕ್ಷೆ:- ಒಂದನೇ ತರಗತಿ ೧೧; ಎರಡನೇ ತರಗತಿ ೧, ೨, ೩, ೬, ೭, ೯, ೧೦, ೧೪, ೧೫, ೧೮, ೨೦, ೨೧, ೨೨, ೨೩, ೨೪, ೨೫, ೨೬, ೨೭, ೩೧, ೩೨, ೩೩ ಮತ್ತು ೩೪, ಪಾಸ್:- ೩೫, ೩೬, ೩೭, ೩೮, ೩೯, ೪೧, ೪೨, ೪೩, ಮತ್ತು ೪೪.

ಎಂ ಬಿ ಬಿ ಎಸ್ ಡಿಗ್ರಿ ಪ್ರಥಮ ಪರೀಕ್ಷೆ:- ಮೊದಲನೇ ತರಗತಿ, ಇಲ್ಲ; ಎರಡನೇ ತರಗತಿ ೪, ೬, ೭, ೯, ೧೨ ಮತ್ತು ೨೧, ಪಾಸ್ ೨೫, ೨೬, ೨೮, ೨೯, ೩೦ ಮತ್ತು ೩೧.

ಎರಡನೇ ಪರೀಕ್ಷೆ (ಪ್ರಥಮ ಭಾಗ) ಮೊದಲನೇ ತರಗತಿ ಇಲ್ಲ. ಎರಡನೇ ತರಗತಿ ೩೩, ೩೬, ೩೮, ೩೯, ೪೦, ೪೧, ೪೨, ೪೩, ೪೪, ೪೫, ೪೬, ೪೭, ೪೮, ೪೯, ೫೦, ೫೨, ೫೩, ೫೪, ೫೫ ಮತ್ತು ೫೬.

ಎರಡನೇ ಪರೀಕ್ಷೆ (ದ್ವಿತೀಯ ಭಾಗ) ಮೊದಲನೇ ತರಗತಿ ಇಲ್ಲ, ಎರಡನೇ ತರಗತಿ ೬೦, ೬೧, ೬೨, ೬೩, ೬೫, ೬೬, ೬೭, ೬೮, ೬೯, ೭೦, ೭೨ ಮತ್ತು ೭೪, ಪಾಸ್ ೭೫ ಮತ್ತು ೭೬.

ಎರಡನೇ ಪರೀಕ್ಷೆ (ತೃತೀಯ ಭಾಗ) ಮೊದಲನೇ ತರಗತಿ ಇಲ್ಲ, ಎರಡನೇ ತರಗತಿ ೭೭, ೭೮. ೮೦, ೮೨, ೮೫, ೮೭, ೮೯, ೯೦, ೯೧, ೯೩, ಪಾಸ್ ೯೫.

ಅಖೈರು ಎಂ ಬಿ ಬಿ ಎಸ್. ಡಿಗ್ರಿ ಪರೀಕ್ಷೆ:- ಮೊದಲನೇ ತರಗತಿ ಇಲ್ಲ, ಎರಡನೇ ತರಗತಿ ೯೬, ೧೦೦, ೧೦೨, ೧೦೬, ೧೦೮, ೧೧೧, ೧೧೩, ೧೧೪, ೧೧೯, ೧೨೦ ಮತ್ತು ೧೨೧, ಪಾಸ್ ೧೨೨

ಗಾಂಧಿಜಿಯವರ ಭಾವಚಿತ್ರ ಅನಾವರಣ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ನಾಳೆ ದಿನ ಸಂಜೆ ೫-೩೦ ಗಂಟೆಗೆ ಮೈಸೂರಿನ ರಸ್ತೆ ಮಲ್ಲಿರುವ ದೆಟ್ಟದಪುರದ ವಿದ್ಯಾರ್ಥಿ ನಿಲಯದ ಒಳ ಆವರಣದಲ್ಲಿ ಮಹಾತ್ಮಾ ಗಾಂಧಿಜಿಯವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಸಿದ್ಧೇಶ್ವರಾನಂದರವರು ನೆರವೇರಿಸುತ್ತಾರೆ. ಎಲ್ಲರಿಗೂ ಸ್ವಾಗತವುಂಟು.

ಗ್ರಾಮಾಧಿಕಾರಿಗಳ ಸ್ಥಾನಮಾನ

ಸತ್ಕಾರ ಸಮಾರಂಭದಲ್ಲಿ ದಿವಾನರ ಭಾಷಣ

ಮೈಸೂರು ೧೧

ಸಂಸ್ಥಾನದ ಗ್ರಾಮಾಧಿಕಾರಿಗಳ ಸಂಘದವರು ಈ ದಿನ ಬೆಳಗ್ಗೆ ಶ್ರೀ ಎಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ವಸ್ತು ಪ್ರದರ್ಶನಾಲಯದ ಆವರಣದಲ್ಲಿ ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು. ಸ್ವಾಗತ ಪದ್ಯಗಳ ನಂತರ ಸಂಘದ ವರದಿಯನ್ನು ಒಪ್ಪಿಸಲಾಯಿತು. ದಿವಾನರು ಉತ್ತರವಿತ್ತು ಸಂಸ್ಥಾನದ ಸೇವೆಯಲ್ಲಿ ಗ್ರಾಮಾಧಿಕಾರಿಗಳ ಪಾತ್ರವನ್ನು ಪ್ರಶಂಸಿಸಿದರು. ಸರ್ಕಾರದ ಸಂಬಳದ ನೌಕರರಂತೆ ಮಾತ್ರವೇ ಅಲ್ಲದೆ ಸೂಕ್ತವಾದ ಮಾನ ಮರ್ಯಾದೆಗಳಿಂದ ಗ್ರಾಮಾಧಿಕಾರಿಗಳನ್ನು ಕಾಣುವುದು ಅವಶ್ಯಕವೆಂದು ಒತ್ತಿ ಹೇಳಿದರು.

ಸರ್ಕಾರಗಳು ಬರಬಹುದು, ಹೋಗಬಹುದು, ದಿವಾನರುಗಳು ಬರಬಹುದು, ಹೋಗಬಹುದು ಆದರೆ ಇಬ್ಬರು ಮಾತ್ರ ಯಾವಾಗಲೂ ಶಾಶ್ವತವಾಗಿ ಇರುವರು. ಒಬ್ಬರು ಶ್ರೀಮನ್ಮಹಾರಾಜರವರು ಮತ್ತು ಅವರ ಪರಿವಾರದವರು; ಮತ್ತೊಬ್ಬರು ಗ್ರಾಮಾಧಿಕಾರಿಗಳು ಎಂಬುದಾಗಿ ದಿವಾನರು ತಿಳಿಸಿದರು. ಪಟೇಲ್, ಶ್ಯಾನಭೋಗರುಗಳು ಸಂಸ್ಥಾನದ ಎರಡು ಆಧಾರ ಸ್ತಂಬಗಳು, ಅವರಿಬ್ಬರ ಸಹಕಾರವೇ ದೇಶದ ಅತ್ಯಗತ್ಯವಾದ ಅಸ್ತಿಭಾರ. ಅವರಿಗೆ ಈಗ ಸಲ್ಲುತ್ತಿರುವ ಪ್ರತಿಫಲವು ಅತ್ಯಲ್ಪವಾಗಿದೆ. ಅವರ ವೇತನಗಳನ್ನು ಉದಾರವಾದ ರೀತಿಯಿಂದ ಏರುಪಡಿಸಲು ಸರ್ಕಾರದವರು ಯೋಚಿಸುತ್ತಿದ್ದಾರೆ. ಹಳ್ಳಿಯ ಜನರಿಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟು ಗ್ರಾಮಾಧಿಕಾರಿಗಳು ಅವರ ಹಿತ ಮಿತ್ರರಂತೆ ವರ್ತಿಸಬೇಕೆಂದು ದಿವಾನರು ತಿಳಿಸಿದರು. ಯುದ್ಧಾನಂತರದ ಪುನಸ್ಸೃಷ್ಟಿಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿರುವ ಗ್ರಾಮಾಭಿವೃದ್ಧಿ ಕಾರ್ಯಕ್ರಮದಲ್ಲಿ ಅವರು ಸಂಪೂರ್ಣವಾದ ಸಹಕಾರವನ್ನು ನೀಡಬೇಕೆಂದು ಕೋರಿದರು.

ಪ್ರಜೆಗಳ ಸಾರ್ವಭೌಮತ್ವಕ್ಕೆ ಕೊಚ್ಚಿ ರಾಜರ ಒಪ್ಪಿಗೆ

ಭಾರತ ರಾಜ್ಯಾಂಗ ಸಮಿತಿ ಸಭೆಯಲ್ಲಿ ಪಂಡಿತ ನೆಹರೂರವರು ಪ್ರಜಾಧಿಪತ್ಯ ರಾಜ್ಯಾಂಗದ ಸ್ಥಾಪನೆಯ ವಿಷಯದಲ್ಲಿ ತಂದಿರುವ ನಿರ್ಣಯವನ್ನು ಕೊಚ್ಚಿ ಸಂಸ್ಥಾನದ ಮಹಾರಾಜರು ಸಂಪೂರ್ಣವಾಗಿ ಅನುಮೋದಿಸಿರುವರೆಂಬುದಾಗಿ ಕೊಚ್ಚಿನ್ ಕಾಂಗ್ರೆಸ್ ನಾಯಕರೂ, ಸರ್ಕಾರದ ನ್ಯಾಯ ಶಾಖೆಯ ಮಂತ್ರಿಗಳೂ ಆದ ಶ್ರೀ ಟಿ. ಕೆ. ನಾಯರ್ ಅವರು ತಿಳಿಸಿರುತ್ತಾರೆ. ಸ್ವತಂತ್ರ ಭಾರತದ ರಾಜ್ಯಾಂಗದ ಸಕಲ ಅಧಿಕಾರವೂ ಪ್ರಜೆಗಳಲ್ಲಿಯೇ ಅಂತರ್ಗತವಾಗಿರುವುದೆಂಬ ತತ್ವವನ್ನು ರಾಜರು ಅಂಗೀಕರಿಸಿರುತ್ತಾರೆ. ...ರು ಪಂಡಿತ ನೆಹರೂರವರಿಗೆ ಒಂದು ಸಂದೇಶವನ್ನೂ ಸಹ ಕಳುಹಿಸಿರುತ್ತಾರೆ. ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ಅವರು ... ಮಾಡಿದ ಹಲವು ದಿವಾನರುಗಳು ... ಸೂಚಿಸಿರುವ ಅಭಿಪ್ರಾಯಗಳು ಕೊಚ್ಚಿ ರಾಜರ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಿಲ್ಲ. ಬ್ರಿಟಿಷ್ ರಾಜನೀತಿ ಅವರಿಗೆ ಏನೂ ಅಷ್ಟು ಅವಶ್ಯವಾಗಿರಲು ಸಿದ್ಧವಿಲ್ಲವೆಂದು ತಿಳಿಸುತ್ತಾರೆ.

ಸಾಧ್ವಿ

ತಾ|| ೧೧-೧-೪೭ ಶನಿವಾರ

ದಿವಾನರ ಪ್ರಥಮ ಕರ್ತವ್ಯ

ನಮ್ಮ ಪ್ರಭುಗಳು ಮೊನ್ನೆ ಇತ್ತಿರುವ ಸಂದೇಶವನ್ನು ಕಾರ್ಯರೂಪಕ್ಕೆ ತರಲು ಶಾಂತ ಮತ್ತು ಸೌಹಾರ್ದಯುತ ವಾತಾವರಣವು ಬೇಕೆಂದು ದಿವಾನರು ಹೇಳಿರುವರು. ಸದ್ಯದಲ್ಲಿ ಸಂಸ್ಥಾನದ ಪರಿಸ್ಥಿತಿಯು ಶಾಂತಿ ಸಮಾಧಾನಗಳನ್ನು ಸೂಚಿಸುವುದಿಲ್ಲವೆಂಬುದನ್ನು ಎಲ್ಲರೂ ಒಲ್ಲರು. ತಮ್ಮ ರಾಜಕೀಯ ಆಕಾಂಕ್ಷೆಗಳು ಈಡೇರದೆ ನಿರಾಶರಾಗಿ ಆಂದೋಳನವನ್ನು ನಡೆಸಲು ಹವಣಿಸುತ್ತಿರುವ ಸಂಗಡವು ಒಂದು ಕಡೆ, ದಿನಚರಿ ವ್ಯವಹಾರಗಳಿಗೆಲ್ಲಾ ಅಡ್ಡಿ, ಆತಂಕಗಳನ್ನು ಒಡ್ಡುವ ಸಾರ್ವತ್ರಿಕವಾದ ಅಡಚಣೆಗಳು ಮತ್ತೊಂದು ಕಡೆ. ಈ ಮಧ್ಯೆ ಸಂಸ್ಥಾನದ ಪ್ರಜೆಗಳು ಅಶಾಂತಿ, ಅಸಮಾಧಾನಗಳಲ್ಲಿ ತೊಳಲುವ ಪರಿಸ್ಥಿತಿಯು ಒದಗಿರುತ್ತದೆ.

ಪ್ರಭುಗಳು ಹೊರಡಿಸಿರುವ ಸಂದೇಶದಿಂದ ಹೊಸ ಸನ್ನಿವೇಶವು ಉದ್ಭವಿಸಿರುತ್ತದೆ. ಅದನ್ನು ಸಾವಧಾನದಿಂದ ಪರಿಶೀಲಿಸಿ ಮುಂದಿನ ಮಾರ್ಗದಲ್ಲಿ ಅಡಿಯಿಡಲು ಪ್ರಶಾಂತವಾದ ವಾತಾವರಣವು ಅತ್ಯಗತ್ಯ. ಇದಕ್ಕೆ ಈಗ ಸಂಸ್ಥಾನದ ಮೂಲೆ ಮೂಲೆಗಳಲ್ಲೂ ಜಾರಿಯಲ್ಲಿರುವ ಪ್ರತಿಬಂಧಾಜ್ಞೆಗಳನ್ನು ರದ್ದು ಮಾಡುವಂತೆ ದಿವಾನರು ಮೊದಲು ಏರ್ಪಡಿಸಬೇಕು. ಇದನ್ನೇ ಸ್ನೇಹ, ಸೌಹಾರ್ದದ ಒರೆಗಲ್ಲೆಂದು ಪ್ರಜೆಗಳು ಭಾವಿಸಿದರೆ ತಪ್ಪಾಗಲಾರದು. ಸಂಸ್ಥಾನದಲ್ಲಿ ಸಕಲ ಕೋಮುಗಳಿಗೂ ಪ್ರೀತಿ ವಿಶ್ವಾಸಗಳೂ, ಅನ್ಯೋನ್ಯ ಭಾವನೆಯೂ ಇರುವುದೆಂಬ ಭರವಸೆಯು ನಮಗೆ ಕೊಡಲ್ಪಟ್ಟಿದೆಯೆಂದು ದಿವಾನರು ಹೇಳಿದ್ದಾರೆ. ಅಲ್ಲಲ್ಲಿ ಕೆಲವು ಘಟನೆಗಳು ಸಂಭವಿಸಿದ್ದರೂ, ನಮ್ಮ ಸಂಸ್ಥಾನದ ಕೋಮುವಾರು ಪರಿಸ್ಥಿತಿಯು ನೆರೆಯ ಪ್ರಾಂತ್ಯಗಳಿಗಿಂತಲೂ ಅತ್ಯಂತ ಸಮರ್ಪಕವಾಗಿರುವುದಾಗಿ ಸೂಚಿಸಿರುತ್ತಾರೆ. ನಿಜವಾಗಿಯೂ ಅವರು ಹಾಗೆ ನಂಬಿರುವುದಾದರೆ ಇನ್ನೂ ಸಂಸ್ಥಾನದ ಮೂಲೆ ಮೂಲೆಗಳಲ್ಲೂ ಈ ಅಡ್ಡಿಗಳನ್ನು ಹಾಕಲು ಕಾರಣವೇನು? ದಿನದಿನವೂ ಪ್ರಬಲಿಸುತ್ತಿರುವ ಕಾಂಗ್ರೆಸ್ಸಿನ ಶಕ್ತಿಯನ್ನು ಅಡಗಿಸಲು ಹೂಡಿರುವ ಹಂಚಿಕೆಯಿದೆಂದು ಭಾವಿಸಲು ಅವಕಾಶವಿರುವುದಲ್ಲವೇ?

ಸಕಲ ಪ್ರಜೆಗಳ ಸಹಕಾರವನ್ನೂ ಕೋರುವಂತೆ ಪ್ರಭುಗಳು ತಮಗೆ ಅಜ್ಞಾಪಿಸಿರುವುದಾಗಿ ದಿವಾನರು ಹೇಳಿರುವರು. ಪ್ರಜೆಗಳೆಲ್ಲರಿಗೂ ಬೇಡವಾದ ಇಂತಹ ಅಡ್ಡಿ, ಆತಂಕಗಳನ್ನು ನಿವಾರಿಸುವುದು ಅವರ ಮೊದಲನೆಯ ಕರ್ತವ್ಯವಲ್ಲವೇ? ಮತ್ತು ರಾಜಕೀಯ ಸಂಗಡಗಳೊಡನೆ ಇದುವರೆಗೆ ಸರ್ಕಾರದವರು ಇಟ್ಟುಕೊಂಡಿರುವ ಸಂಬಂಧವೂ ಸಹ ಸಮರ್ಪಕವಾಗಿರುವುದಿಲ್ಲ. ಮೊನ್ನೆ ತಾನೆ ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ|| ಹನುಮಂತಯ್ಯನವರನ್ನು ದಸ್ತಗಿರಿ ಮಾಡಲಾಯಿತು. ಈಚೆಗೆ ಹಲವು ಜನ ಕಾರ್ಮಿಕ ನಾಯಕರುಗಳನ್ನು ದೇಶದಿಂದ ಗಡೀಪಾರು ಮಾಡಲಾಗಿದೆ. ಇದಕ್ಕೆ ಮಣಿಯದೆ ಹಲವಾರು ಮಂದಿ ಕೆಲಸಗಾರರ ಮೇಲೆ ಹಾಕಲಾಗಿದ್ದ ನಿರ್ಬಂಧಗಳು ಇನ್ನೂ ಹಾಗೆಯೇ ಇವೆ. ಹೀಗಿರುವಲ್ಲಿ ಶಾಂತಿ ವಾತಾವರಣವು ಏರ್ಪಡುವುದೆಂತು?

ಪ್ರಜಾಪ್ರತಿನಿಧಿ ಸಭೆ ಮತ್ತು ಶಾಸನ ಸಭೆಯ ಸದಸ್ಯರುಗಳು ಸರ್ಕಾರದವರ ಮೂಲಕ ಪ್ರಭುಗಳವರಿಗೆ ಸಲ್ಲಿಸಿದ ಮನವಿಗಳಿಗೆ ಸರ್ಕಾರದವರು ಯಾವ ಉತ್ತರವನ್ನೂ ಕೊಟ್ಟಿರುವುದಿಲ್ಲ. ಪದಂ ಮನವಿಗಳನ್ನು ಪ್ರಭುಗಳಿಗೆ ತಲುಪಿಸಿದರೋ, ಇಲ್ಲವೋ ಅದೂ ಗೊತ್ತಾಗಿರುವುದಿಲ್ಲ. ಈ ಕಾರಣಗಳಿಂದ ಆಡಳಿತ ವರ್ಗದವರ ಮೇಲೆ ಪ್ರಮುಖ ರಾಜಕೀಯ ವರ್ಗದವರಿಗೆ ಅಸಮಾಧಾನ ಉಂಟಾಗುವುದು ಸಹಜವಾಗಿಯೇ ಇದೆ. ಆದುದರಿಂದ ಎಲ್ಲ ಪ್ರತಿಬಂಧಕಗಳನ್ನೂ ದಿವಾನರು ಕೂಡಲೇ ರದ್ದು ಮಾಡಿಸಿ, ಶಾಂತ ವಾತಾವರಣವನ್ನು ಕಲ್ಪಿಸುವುದು ಅವರ ಕೈಯಲ್ಲಿಯೇ ಇದೆ.

ಮುಂದಿನ ಸುಧಾರಣೆಗಳ ಬಗ್ಗೆ ದಿವಾನರು ಪ್ರಭುಗಳಿಗೆ ಸಲಹೆ ಕೊಡಬೇಕಾದ ಅಂಶಗಳು ಈಗಾಗಲೇ ನಿರ್ದಿಷ್ಟವಾಗಿ ನಾನಾ ಮುಖದಿಂದ ವ್ಯಕ್ತಪಡಿಸಲ್ಪಟ್ಟಿವೆ. ನಮ್ಮ ಇಂದಿನ ರಾಜ್ಯಾಂಗ ಶಾಸನದಲ್ಲಿ ಸರ್ಕಾರದ ಧ್ಯೇಯವೇನೆಂಬುದನ್ನು ವಿವರಿಸಿರುವುದಿಲ್ಲ. ಜವಾಬ್ದಾರಿ ಸರ್ಕಾರವೇ ಆಡಳಿತದ ಗುರಿಯೆಂಬುದನ್ನು ಘೋಷಿಸಬೇಕಾದುದು ಮೊದಲನೆಯ ಕೆಲಸ. ಇದಕ್ಕೆ ಸ್ವಲ್ಪವೂ ತಾವಕಾಶವಾಗಲು ಕಾರಣವಿಲ್ಲ. ತಾವಕಾಶವಾದರೆ ಪ್ರಜೆಗಳಿಗೆ ಸಮ್ಮತವಾಗುವುದೂ ಇಲ್ಲ. ಆದುದರಿಂದ ನಮ್ಮ ಪ್ರಭುಗಳು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ಘೋಷಣೆಯನ್ನು ಹೊರಡಿಸಿ ಅದನ್ನು ಕಾರ್ಯರೂಪಕ್ಕೆ ತರಲು ರಾಜ್ಯಾಂಗ ಸಭೆಯೊಂದನ್ನು ನಿರ್ಮಿಸಿ, ಇದಕ್ಕೆ ಪೂರ್ವಭಾವಿಯಾಗಿ ಪ್ರಜಾನುರಾಗಕ್ಕೆ ಪಾತ್ರವಾದ ಒಂದು ಹಂಗಾಮಿ ಮಂತ್ರಿಮಂಡಲವನ್ನು ಏರ್ಪಡಿಸುವಂತೆ ಪ್ರಭುಗಳಿಗೆ ನಿವೇದಿಸುವುದೇ ಇಂದಿನ ಸಮಸ್ಯೆಯ ಪರಿಹಾರಕ್ಕೆ ದಿವಾನರು ಕೈಗೊಳ್ಳಬೇಕಾಗಿರುವ ಆದ್ಯ ಕರ್ತವ್ಯ.

ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಛೇರ್ಮನ್ನರ ಕಛೇರಿಯಿಂದ-
ಮೈಸೂರು, ತಾ|| ೭-೧-೪೭

ಪ್ರಕಟಣೆ

ನಂ ಬಿ 1-ಸಿ 169—46-47,
ತಾ|| ೭-೧-೪೭

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:-

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನವರ ತೀರ್ಮಾನದಂತೆ ಪಡುವಾರಹಳ್ಳಿ ಬಡಾವಣೆಗೆ "ಜಯಲಕ್ಷ್ಮೀಪುರಂ" ಎಂದು ಹೆಸರಿಡಲಾಗಿದೆ.

ಆರ್ ರಾಮಚಂದ್ರರಾವ್
ಬೊಂಭೂರೆ,
ಛೇರ್ಮನ್.

Edited, printed and published by A. R. Nagarajan at the Sadhvi Press D Subbiah Road, Mysore.

ಅ|| ಭಾ|| ಮುಸ್ಲಿಂ ಕಾರ್ಯಕಾರಿ ಸಮಿತಿ ಸಭೆ

ಮಿ|| ಎಂ. ಎ. ಜಿನ್ನಾರವರು ಅ|| ಭಾರತ ಮುಸ್ಲಿಂ ಲೀಗ್ ಕಾರ್ಯಕಾರಿ ಸಮಿತಿಯ ಸಭೆಯನ್ನು ಶೀಘ್ರದಲ್ಲಿಯೇ ... ಯುವರೆಂದೂ ಅದುವರೆಗೆ ಯಾವ ... ಪ್ರಾಯವನ್ನೂ ತಾವು ಸೂಚಿಸುವುದಿಲ್ಲ ... ದೂ ಒಂದು ಹೇಳಿಕೆಯಲ್ಲಿ ತಿಳಿಸಿರು...

ನಿಮ್ಮ ಮೈ ಮೊಗ್ಗಮಲ್ಲಿಗೆಯಂತೆ ಹೊಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ. ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ರಾಜಕಮಲ್, ಮೈಸೂರು

10-1-47 ರಿಂದ **3** ನೇ ವಾರ

—: ಪ್ರಕಾಶ್ ರವರ :—

ಹಮಾರಾ ಸಂಸಾರ್

ಜೀವನ್ ರಂಜನಾ, ಜೆಲ್ಲು, ಉಮಾಕಾಂತ್,

From 10-1-47 for 4 Days at 10 30 A M

"Secrets of Scotland Yard"

Starring:- Edgar Barrier, Stephanie, Aubrey Smith etc

ಕೃಷ್ಣರಾಜಸಾಗರ ಡಿವಿಜನ್

ಪ್ರಸಿದ್ಧ ಪತ್ರಿಕೆ

ಕೃಷ್ಣರಾಜಸಾಗರದ ದಕ್ಷಿಣ ಬೃಂದಾವನದಲ್ಲಿ ಹಿಂದೂ ಫಲಾಹಾರ ಮಂದಿರ ನಡೆಸಲು ಟೆಂಡರು.

—: ೦ :—

ಕೃಷ್ಣರಾಜಸಾಗರದ ದಕ್ಷಿಣ ಬೃಂದಾವನದಲ್ಲಿ ಮೂರು ವರ್ಷಗಳ ಕಾಲ ಹಿಂದೂ ಫಲಾಹಾರ ಮಂದಿರವನ್ನು ನಡೆಸುವ ಸಲುವಾಗಿ ಟೆಂಡರನ್ನು ಕರೆದಿರುವ ೧೯೪೬ ನೇ ಡಿಸೆಂಬರ್ ೧೯ ನೇ ತಾರೀಖಿನ ಗೆಜೆಟ್ ೬ ನೇ ಭಾಗದ ೯೩೨ ನೇ ಪುಟದ ಪ್ರಕಟಣೆಯ ಕಡೆಗೆ ಈ ಮೂಲಕ ಸಾರ್ವಜನಿಕರ ಗಮನವನ್ನು ಕೋರಲಾಗಿದೆ. ಟೆಂಡರ್ ಅರ್ಜಿ ಫಾರಮ್ಮನ್ನು ೪ ಆಣೆ ಕೊಟ್ಟು ಕೃಷ್ಣರಾಜಸಾಗರದ ಡಿವಿಜನ್ನಿನ ಎಗ್ಸಿಕ್ಯೂಟಿವ್ ಇಂಜಿನಿಯರ್ ರವರ ಕಛೇರಿಯಲ್ಲಿ ಪಡೆಯಬಹುದು. ಟೆಂಡರುಗಳನ್ನು ೧೯೪೭ ನೇ ಜನವರಿ ೧೩ ನೇ ತಾರೀಖಿನೊಳಗಾಗಿ ಕಳುಹಿಸಿಕೊಡಬೇಕು.

ಎಂ ಸಿ ಸಂಪತ್‌ಕ್ಕಯ್ಯಂಗಾರ್,
ಎಗ್ಸಿಕ್ಯೂಟಿವ್ ಇಂಜಿನಿಯರ್.

ಅಪೆರಾ ಟಾಕೀಸ್

10-1-47 ರಿಂದ

ಪೊನ್ನುರುವಿ

(ತಮಿಳು)

(ಮಹಾಭಾರತದ ಕಥೆಯ ಕರ್ಣನ ವಿವಾಹ, ಜೀವನ, ನಡತೆಗಳನ್ನು ಚಿತ್ರಿಸಿರುವ ಕಥೆ)

ಪ್ರತಿದಿನ ಮೂರು ಆಟಗಳು

ಪಾತ್ರ:- * ಕೊತ್ತಮಂಗಲಂ ಸೀನು * ಕೆ ಟಿ ರುಕ್ಮಿಣಿ * ಆರ್ ಬಾಲಸುಬ್ರಹ್ಮಣ್ಯಂ

Morning shows from 10-1-47 at 10.30 a m

Mutiny in the Big House

ಸಂಪುಟ ೫] ಭಾನುವಾರ ೧೨—೧—೪೬ [ಸಂಚಿಕೆ ೧೩೪

ಅಶೋಕ ಮೆಹತಾರವರ ದಸ್ತಗಿರಿ, ಗಡೀಪಾರು

ಕಾಂಗ್ರೆಸ್ ಅಧ್ಯಕ್ಷರಿಗೆ ಸ್ವಾಗತ

ಮೈಸೂರು ೧೨

ರಾಜಧಾನಿಯಲ್ಲಿ ಪ್ರತಿಬಂಧಕಾಜ್ಞೆಯು ಜಾರಿಯಲ್ಲಿರುವುದರಿಂದ ೧೬ನೇ ತಾ॥ ಬುಧವಾರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರು ಇಲ್ಲಿಗೆ ಬಂದಾಗ ಮಹಾಸಭೆ ... ಯಲ್ಲಿ ನಗರದ ಎಲ್ಲೆಡೆಯೂ ಹೊರಗೆ ... ನ್ನು ಸ್ವಾಗತಿಸಿ ಅಲ್ಲಿಯೇ ಬಹಿರಂಗ ಸಭೆಯನ್ನು ನಡೆಸಲು ನಗರ ಕಾಂಗ್ರೆಸ್ ... ಯವರು ಏರ್ಪಾಡು ಮಾಡಿರುತ್ತಾರೆ ... ಗೆ ಒಂದು ನಿಧಿಯನ್ನು ಸಹ ಒಪ್ಪಿಸಲು ನಿರ್ಧರಿಸಲಾಗಿದೆ. ಮಹಾಜನರು ಇ... ಉದಾರವಾಗಿ ಸಹಾಯ ಮಾಡಬೇಕೆಂದು ... ಕೇಳಲಾಗಿದೆ.

ಸದ್ಗುರು ಜಯಂತಿ

ನಾಳೆಯಿಂದ ೪ ದಿವಸ ಶ್ರೀಮನ್ನಾರಾಯಣ ... ಸಂಸ್ಕೃತ ಮಹಾಪಾಠಶಾಲೆಯ ... ದಲ್ಲಿರುವ ಶ್ರೀ ಗುರುಗಳವರ ದೇ... ಯ ಪಲ್ಲಿ ಶ್ರೀ ವಿದ್ಯಾಭಿನವ ವಾಲುಕೇ... ಭಾರತೀ ಶ್ರೀ ಶ್ರೀಗಳವರ ೭೩ ನೆಯ ... ಮಹೋತ್ಸವವು ಆಚರಿಸಲ್ಪಡುವುದು. ... ಅಂಗವಾಗಿ ನಾಳೆ ಸಂಜೆ ೬॥ ಗಂಟೆಗೆ ... ಆರ್. ನರಸಿಂಹಶಾಸ್ತ್ರಿಗಳವರಿಂದ ... ಧರ್ಮದ ಇಂದಿನ ಪರಿಸ್ಥಿತಿ ಎಂ... ವಿಷಯದ ಮೇಲೆ ಉಪನ್ಯಾಸ ೧೪ ... ತಾ॥ ಸಂಜೆ ಶ್ರೀ ಪಟ್ಟಾಭಿ ಜೋಯಿಸ ... ಮತ್ತು ಶಿಷ್ಯರಿಂದ ಯೋಗಾಸನ ಪ್ರದ... ೧೫ ನೇ ತಾ॥ ಸಂಜೆ ೬॥ ವಿ॥ ಶ್ರೀ ... ಸ್ವಾಮಿಗಳ ಸಂಗೀತ ಮತ್ತು ೧೬ ನೇ ... ಸಂಜೆ ಶ್ರೀ ಗಮಕಿ ರಾಮಕೃಷ್ಣಶಾಸ್ತ್ರಿ ... ವರಿಂದ ಶ್ರೀ ಸದ್ಗುರು ಚರಿತ್ರೆಯ ಕೀ... ನೆಯೂ ನಡೆಯುವುವು

ತ್ಯಾಗರಾಜ ಜಯಂತಿ

ರಾಜಧಾನಿಯ ಪಿಳ್ಳೆಗೊಹಲ್ಲಿ ವೀಣೆ ... ಣ್ಣನವರ ಬೀದಿಯಲ್ಲಿರುವ ಪಾರಮಾ... ಕ ಶ್ರೀನಿವಾಸ ರಾಘವೇಂದ್ರ ಶ್ರೀ ರಾ... ಕೃಷ್ಣ ಸೇವಾ ಮಂದಿರದಲ್ಲಿ ನಿನ್ನೆಯಿಂ... ಮೂರು ದಿನಗಳು ಶ್ರೀ ತ್ಯಾಗರಾಜಸ್ವಾ... ಗಳವರ ಆರಾಧನೆಯನ್ನು ಕಾರ್ಯದರ್ಶಿ... ವರು ನಡೆಸುತ್ತಿದ್ದಾರೆ

ವಿವೇಕಾನಂದರ ಜಯಂತಿ

ನಾಳೆ ಸಂಜೆ ೫ ಗಂಟೆಗೆ ... ಬಸವನಗುಡಿ ... ಪೇಟೆಯಲ್ಲಿ ಶ್ರೀ ರಾಮಕೃಷ್ಣಾಶ್ರಮ ... ದಲ್ಲಿ ಸ್ವಾಮಿ ವಿವೇಕಾನಂದರ ... ಜಯಂತಿಯು ಆಚರಿಸಲ್ಪಡುವುದು ಸ್ವಾ... ಸಿದ್ಧೇಶ್ವರಾನಂದ ಮತ್ತು ಶ್ರೀ ವಿ. ಸೀ... ಮಯ್ಯನವರ ಭಾಷಣಗಳೂ ಮತ್ತು ... ಅನಂತಕೃಷ್ಣಶರ್ಮರ ಗಾಯನ ... ನಡೆಯುವುವು ಸರ್ವರಿಗೂ ಸ್ವಾಗತ...

ಹರಿಕಥೆಗಳು

... ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀ ಬ್ರ... ನಂದ ಸ್ವಾಮಿಗಳ ಮನೆ ಮುಂಭಾಗ... ಲ್ಲಿ ಇದಿನ ರಾತ್ರಿ ೯ ಘಂಟೆಗೆ ಶ್ರೀ॥ ಶಿವ... ಸ್ವಾಮಿ ಹಿರೇಮಠರವರಿಂದ ಭಕ್ತ... ಎಂಬ ಹರಿಕಥೆಯು ನಡೆಸಲ್ಪ... ತ್ತದೆ

ಶ್ರೀ ಚಲುವಾಂಬಾ ಅಗ್ರಹಾರದ ಹಿಂಭಾ... ದ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ... ಸ್ಥಾನದಲ್ಲಿ ಇದಿನ ರಾತ್ರಿ ೮॥ ಘಂಟೆ... ಬಾಲಭಾಟನೆ ಶ್ರೀ ಗಣಪತಿಭಾಗವತರಿಂ... ದ ಶ್ರೀ ಪ್ರಹ್ಲಾದ ಎಂಬ ಹರಿಕಥೆಯು ನಡೆ... ಯುವುದು ಸರ್ವರಿಗೂ ಸ್ವಾಗತವುಂಟು

ಬರೋಡಾ ಸಂಸ್ಥಾನದಲ್ಲಿ ಸುಧಾರಣೆ

ಬರೋಡಾ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳ ಬಗ್ಗೆ ಅಲ್ಲಿನ ಮಹಾರಾಜರು ಒಂದು ಘೋಷಣೆಯನ್ನು ಹೊರಡಿಸಿದ್ದಾರೆ. ಮತದಾರರ ಸಂಖ್ಯೆಯನ್ನು ಹೆಚ್ಚಿಸುವುದು, ಮಂತ್ರಿ ಮಂಡಲಕ್ಕೆ ಇಬ್ಬರು ಶಾಸಗೀ ಮಹನೀಯರನ್ನು ಸೇರಿಸಿಕೊಳ್ಳುವುದ, ಶಾಸನ ಸಭೆಯ ಅಧಿಕಾರವನ್ನು ಹೆಚ್ಚಿಸುವುದು. ಈ ವಿಚಾರಗಳಲ್ಲಿ ಸರ್ಕಾರಿವ್ರು ಸೂಕ್ತ ಸಲಹೆಗಳನ್ನು ಕೊಡಬೇಕೆಂದು ಅವರು ಸೂಚಿಸಿದ್ದಾರೆ. ಭಾರತಕ್ಕೆ ಸ್ವಾತಂತ್ರ್ಯ ಲಭಿಸಲಿದೆ; ಈ ಸಮಯದಲ್ಲಿ ಸಂಸ್ಥಾನದ ಪ್ರಜೆಗಳೂ ಸಹ ಸರ್ಕಾರದ ಆಡಳಿತದಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕಾಗಬೇಕು ಎಂದು ಅವರು ಘೋಷಿಸಿದ್ದಾರೆ. ಅಲ್ಲಿನ ದಿವಾನರಾದ ಸರ್ ಬಿ. ಎಲ್. ಮಿತ್ರರವರು ಮಹಾರಾಜರ ಘೋಷಣೆಯ ಮೇಲೆ ವ್ಯಾಖ್ಯಾನ ಮಾಡುತ್ತಾ, ಒಂದು ವೇಳೆ ಕೂಡಲೇ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಸಾಧ್ಯವಿದ್ದರೂ ಹಾಗೆ ತಕ್ಷಣ ಹಾಗೆ ಮಾಡುವುದು ಅಸಮಂಜಸವಾಗುತ್ತದೆಂದು ಹೇಳಿರುವರು

ಗಾಂಧಿಜೀಯವರಿಗೆ ೧ ಲಕ್ಷ ರೂ. ನಿಧಿ

ಪೂರ್ವ ಬಂಗಾಳದಲ್ಲಿ ಸಂಚರಿಸುತ್ತಿರುವ ಮಹಾತ್ಮ ಗಾಂಧಿಯವರು ಕೆಲವು ಜಿಲ್ಲೆಗಳಲ್ಲಿರುವ ಅಭಯಾಶ್ರಮಕ್ಕೆ ಭೇಟಿಕೊಡುವರೆಂದೂ, ಅಗ್ಗೆ ಅವರಿಗೆ ಒಂದು ಲಕ್ಷ ರೂ. ಹಣದ ನಿಧಿಯನ್ನು ಅರ್ಪಿಸಲಾಗುವುದೆಂದೂ ಆಶ್ರಮದ ಮುಖಂಡರುಗಳಾದ ಶ್ರೀ॥ ಆನಂದ ಪ್ರಸಾದ್ ಚೌಧುರಿಯವರು ಹೇಳಿರುತ್ತಾರೆ

೧೦ ಸಾವಿರ ಸರ್ಕಾರಿ ನೌಕರರ ಮುಷ್ಕರ

ಸರ್ಕಾರದ ಸೇವೆಯ ಕೆಲಸಗಾರರ ಮುಷ್ಕರಕ್ಕೆ ಸಹಾನುಭೂತಿಯನ್ನು ತೋರಿಸುವ ಸಲುವಾಗಿ ಭಾರತ ಸರ್ಕಾರೀ ಕೆಲಸಗಾರರ ಸಂಘದ ೧೦ ಸಾವಿರ ಮಂದಿ ಕಲ್ಕತ್ತಾ ಸರ್ಕಾರಿ ನೌಕರರು ಮೊನ್ನೆ ಒಂದು ದಿನದ ಮುಷ್ಕರವನ್ನು ಆಚರಿಸಿದರು. ಪೋಲೀಸಿನವರು ಸರ್ಕಾರಿ ಕಟ್ಟಡಗಳ ಬಳಿ ನಿಂತು ಪಿಕೆಟಿಂಗ್ ನಡೆಸುತ್ತಿದ್ದವರ ಮೇಲೆ ನಾಲ್ಕು ಬಾರಿ ಲಾಠಿ ಪ್ರಯೋಗ ಮಾಡಿ ೨೪ ಜನ ಮಹಿಳೆಯರನ್ನು ದಸ್ತಗಿರಿ ಮಾಡಿರುತ್ತಾರೆಂದು ವರದಿಯಾಗಿದೆ

೫ ವರ್ಷದ ಹುಡುಗಿಯು ಬಸಿರಾಗಿರುವಳು!

ಬಿಜಾಪುರ ತಾಲ್ಲೂಕಿನ ಅರ್ಜಣ ಗ್ರಾಮದಲ್ಲಿ ವಾಸ ಮಾಡುತ್ತಿರುವ ಅಥಣಿ ತಾಲ್ಲೂಕಿನ ಚಿಕ್ಕ ಪಡಸಲಗಿ ಗ್ರಾಮದ ಹುಲೆಪ್ಪ ಭೀಮಪ್ಪ ಮಾದರನೆಂಬಾತನ ಮಗಳಾದ ಭಾಗವ್ವನೆಂಬ ಐದು ವರ್ಷದ ಹುಡುಗಿಯು ೭-೮ ತಿಂಗಳ ಗರ್ಭಿಣಿಯಾಗಿರುವಳೆಂದೂ, ಇವಳನ್ನು ನೋಡಲು ಸುತ್ತಮುತ್ತಲಿನ ಹಳ್ಳಿಯ ಅನೇಕ ಜನರು ಬರುತ್ತಿರುವುದಾಗಿಯೂ ವರದಿಯಾಗಿದೆ

ಮುಸ್ಲಿಂ ಮಹಿಳೆಯ ಉಪವಾಸ

ಕಳೆದ ಅಕ್ಟೋಬರಿನಲ್ಲಿ ನೌಖಾಲಿಯ ಗಲಭೆ ಸಂದರ್ಭದಲ್ಲಿ ಹಿಂದೂಗಳ ಮನೆಯೊಂದರಿಂದ ಕಸಿದುಕೊಂಡಿದ್ದ ಪೂಜಾ ಕತ್ತಿಯನ್ನು ವಾಪಸು ಕೊಡಬೇಕೆಂಬ ಉದ್ದೇಶದಿಂದ ಶಿರೊಂಧಿ ಹಳ್ಳಿಯ ಆಮ್‌ತೂಷ್ ಸಲೀಂ ಎಂಬ ಮುಸ್ಲಿಂ ಮಹಿಳೆಯೊಬ್ಬರು ಕಳೆದ ೧೩ ದಿನಗಳಿಂದ ಉಪವಾಸ ಮುಷ್ಕರ ನಡೆಸುತ್ತಿದ್ದಾರೆಂದು ವರದಿಯಾಗಿದೆ. ಇವರು ಕಾಂಗ್ರೆಸ್ ಕೆಲಸಗಾರರು ಮತ್ತು ಗಾಂಧಿಜಿ ಮತ ಅನುಯಾಯಿ ದವರು

ಕ್ಯಾಲೆಂಡರ್ ಸ್ವೀಕಾರ

ಸುಲ್ತಾನಪೇಟೆಯಲ್ಲಿರುವ ಶ್ರೀಗಳಾದ ೮೦ ಗಯ್ಯ, ಚಿಟ್ಟಯ್ಯನವರುಗಳು ಕಳುಹಿಸಿಕೊಟ್ಟಿರುವ ನೆಹರು ಭಾವಚಿತ್ರದಿಂದೊಡಗೂಡಿದ ೧೯೪೭ ನೇ ಇಸವಿ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ

ಪ್ರತಿಬಂಧಕಾಜ್ಞೆ

ಸ್ವಂ. ವ.] ಚಾಮರಾಜನಗರ ೧೦

ಇಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಈ ತಾಲ್ಲೂಕಿನಲ್ಲೆಲ್ಲಾ ಪೊ॥ ಆ॥ ೪೫ ನ್ನು ನಿನ್ನೆಯಿಂದ ಜಾರಿ ಮಾಡಿ ಸಭೆ, ಮೆರವಣಿಗೆ ಮುಂತಾದುವುಗಳು ನಡೆಯಕೂಡದೆಂದು ನಿಷೇಧಿಸಿದ್ದಾರೆ

ಕಾಂಗ್ರೆಸ್ ಅಧ್ಯಕ್ಷರಿಗೆ ನಿಧಿ

ಇಲ್ಲಿನ ಪ್ರಜೆಗಳೆಲ್ಲರೂ ಕಾಂಗ್ರೆಸ್ ಅಧ್ಯಕ್ಷರಿಗೆ ಸಮರ್ಪಿಸುವ ನಿಧಿಗಾಗಿ ಹಣ ಕೊಡುತ್ತಿದ್ದಾರೆ. ಮುಸ್ಲಿಂ ಲೀಗಿನವರೂ ಸಹಾಯ ಮಾಡಿರುವುದು ಗಮನಾರ್ಹವಾಗಿದೆ

ಬೆಲ್ಲದ ಬೆಲೆ

ಬೆಲ್ಲವನ್ನು ಒಂದು ರೂ. ಗೆ ೪ ಸೇರ ೩ ತೊಲದಂತೆ ಮಾರುತ್ತಿದ್ದಾರೆ. ಕೇಳಿದರೆ ಈ ರೀತಿ ಮಾರಲು ಅಧಿಕಾರಿಗಳೇ ಅಪ್ಪಣೆ ಕೊಟ್ಟಿರುವರೆಂದು ಹೇಳುವರು

ಅಶೋಕ ಮೆಹತಾರವರ ಬಂಧನ ಮತ್ತು ಬಿಡುಗಡೆ

ತಿರುವಾಂಕೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷತೆಯಲ್ಲಿ ವಹಿಸಲು ಸಮತಾವಾದಿ ನಾಯಕರಾದ ಶ್ರೀ ಅಶೋಕ ಮೆಹತಾರವರು ಅಲ್ಲಿಗೆ ತೆರಳುತ್ತಿದ್ದಾಗ ಮೊನ್ನೆ ದಿನ ಚೆನ್ನಕೋಟಾ ಎಂಬಲ್ಲಿ ತಿರುವಾಂಕೂರು ಪೋಲೀಸರು ಅವರ ಮೇಲೆ ಒಂದು ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿ ಅವರು ಸಂಸ್ಥಾನದೊಳಕ್ಕೆ ಪ್ರವೇಶಿಸಕೂಡದೆಂದು ಸೂಚಿಸಿದರು. ಪ್ರಜೆಗಳಿಂದ ತನ್ನ ಅಧಿಕಾರವನ್ನು ಪಡೆಯದಿರುವ ಯಾವ ಸರ್ಕಾರದ ಆಜ್ಞೆಯನ್ನೂ ತಾವು ಪಾಲಿಸುವುದಿಲ್ಲವೆಂದೂ ಮತ್ತು ಕ್ರೂರ ದಬ್ಬಾಳಿಕೆಗೆ ತುತ್ತಾಗಿರುವ ತಿರುವಾಂಕೂರಿನ ಪ್ರಜೆಗಳಿಗೆ ಸಹಾನುಭೂತಿಯನ್ನು ತೋರಿಸುವುದಕ್ಕಾಗಿ ಆ ಸರ್ಕಾರದ ಆಜ್ಞೆಯನ್ನು ತಾವು ಉಲ್ಲಂಘಿಸುವುದಾಗಿಯೂ ಅವರು ಹೇಳಿ ಪ್ರಯಾಣವನ್ನು ಮುಂದುವರಿಸಿದರು. ಆಗ ಪೋಲೀಸಿನವರು ಅವರನ್ನು ಅವರೊಡನೆ ಇದ್ದ ಕೊಟ್ಟಿ ಸಂಸ್ಥಾನದ ಮಾಣಿಕ್ಯಲಾಲ ಎಂಬುವರನ್ನೂ ದಸ್ತಗಿರಿ ಮಾಡಿದರು. ನಂತರ ಅವರನ್ನು ತೆಂಕಾಶಿ ಎಂಬಲ್ಲಿಗೆ ಕರೆದುಕೊಂಡು ಹೋಗಿ ಬಿಡುಗಡೆ ಮಾಡಿ ಸಂಸ್ಥಾನದೊಳಕ್ಕೆ ಬಾರದಂತೆ ಗಡೀಪಾರು ಆಜ್ಞೆಯನ್ನು ಜಾರಿ ಮಾಡಿದರು

ಆಹಾರ ಶಾಖೆಯ ಬಿಳಿಯ ಅಧಿಕಾರಿಗಳ ವಜಾ

ಕೇಂದ್ರ ಸರ್ಕಾರದ ಆಹಾರ ಶಾಖೆಯಲ್ಲಿರುವ ಎಲ್ಲಾ ಬಿಳಿಯ ಅಧಿಕಾರಿಗಳೂ ಸಹ ಈ ಜೂನ್ ತಿಂಗಳೊಳಗಾಗಿ ನಿವೃತ್ತರಾಗುವರು. ಸರ್ಕಾರದವರು ಅವರ ಅಧಿಕಾರಾವಧಿಯನ್ನು ಪುನಃ ಹೆಚ್ಚಿಸುವುದಿಲ್ಲವೆಂದು ಅವರುಗಳಿಗೆ ತಿಳುವಳಿಕೆ ಕೊಟ್ಟಿರುವರು

ಲೇಬರ್ ಕಮೀಷನರ್

ಸ್ವಂ. ವ. ವೊ.] ಬೆಂಗಳೂರು ೧೨

ಸಂಸ್ಥಾನದಲ್ಲಿ ದಿನದಿನಕ್ಕೂ ಹೆಚ್ಚುತ್ತಿರುವ ಕಾರ್ಮಿಕರ ಸಮಸ್ಯೆಗಳನ್ನು ಜಾಗ್ರತೆಯಾಗಿ ಪರಿಹರಿಸುವ ಸಲುವಾಗಿ ಸರ್ಕಾರದವರು ಒಬ್ಬ ಪ್ರತ್ಯೇಕ ಲೇಬರ್ ಕಮಿಷನರನ್ನು ನೇಮಿಸುವರೆಂದು ತಿಳಿದುಬಂದಿದೆ. ಇದು ಆಗುವವರೆಗೂ ವ್ಯಾಪಾರ ಮತ್ತು ವಾಣಿಜ್ಯ ಡೈರೆಕ್ಟರ್ ಲೇಬರ್ ಕಮಿಷನರರ ಕೆಲಸವನ್ನೂ ಸಹ ನೋಡುತ್ತಿದ್ದರು

ಶ್ರೀ ಡೈಲು ... ಸಮಿತಿಯವರ ಸಲಹೆಯಂತೆ ಸರ್ಕಾರದವರು ಪ್ರಧಾನ ವೈದ್ಯಾಧಿಕಾರಿ ... ಅಧಿಕಾರಿಗಳ ಸ್ಥಾನವನ್ನು ... ನಿರ್ಧರಿಸಿರುವುದಾಗಿ ತಿಳಿದುಬಂದಿದೆ

ಚುಂಚುಕ್ಷೇತ್ರ ಮಹಾತ್ಮೆ

ಶ್ರೀ ಸಿ. ಪಿ. ನ. ... ಎಂಬುವರು ಬರೆದು ಪ್ರಕಾಶಪಡಿಸಿರುವ ಚುಂಚುಕ್ಷೇತ್ರ ಮಹಾತ್ಮೆ ಎಂಬ ಪುಸ್ತಕವು ನಮ್ಮ ಕೈಗೆ ಬಂದಿದೆ. ಇದರಲ್ಲಿ ಚುಂಚನ ಕಟ್ಟೆಯ ಮಹಾತ್ಮೆ ಮತ್ತು ಸ್ಥಳಪುರಾಣವು ... ಸ್ಥಾನಗಳಲ್ಲಿ ... ಕೊಡಲ್ಪಟ್ಟಿದೆ. ಬೆಲೆ ... ಮಾತ್ರ

● ಮೈಸೂರು ... ಎಲ್ಲಿ ... ದಿಂದ ಕಳುಹಿಸಿರುವ ... ಚಿತ್ರದಿಂದೊಡಗೂಡಿದ ೧೯೪೭ ನೇ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಸಾಧ್ವಿ

ತಾ॥ ೧೨-೧-೪೭ ಭಾನುವಾರ

ಬರೋಡದ ಸರದಿ

ಮೊನ್ನೆ ತಾನೆ ಮೈಸೂರಿನಲ್ಲಿ ರಾಜಕೀಯ ಸುಧಾರಣೆಗಳ ಬಗ್ಗೆ ರಾಜ ಘೋಷಣೆಯಾಯಿತಷ್ಟೆ. ಈಗ ಬರೋಡಾ ಸಂಸ್ಥಾನದ ಸರದಿಯು ಬಂದಿರುತ್ತದೆ. ಅಲ್ಲಿನ ಮಹಾರಾಜರೂ ಒಂದು ಘೋಷಣೆಯನ್ನು ಮಾಡಿರುತ್ತಾರೆ. ಸ್ವಲ್ಪ ಹೆಚ್ಚು ಕಡಿಮೆ ಎರಡು ಘೋಷಣೆಗಳೂ ಒಂದೇ ರೀತಿಯಲ್ಲಿವೆ. ಇನ್ನು ಮುಂದೆ ಯಾವ ಸಂಸ್ಥಾನದ ಸರದಿಯು ಬರಲಿದೆಯೋ ನೋಡಬೇಕು.

ಕಾಲಗತಿಯನ್ನೂ, ಪ್ರಜೆಗಳ ಆಕಾಂಕ್ಷೆಯನ್ನೂ ಅರಿತು ರಾಜರುಗಳು ಹೆಚ್ಚಿನ ಸುಧಾರಣೆಗಳನ್ನು ಕೊಡಲು ಮುಂದೆ ಬರುತ್ತಿರುವುದು ಒಳ್ಳೆಯ ಸೂಚನೆಯೇ ಸರಿ. ಇಡೀ ಭರತಖಂಡವು ವಾಯುವೇಗ, ಮನೋವೇಗದಿಂದ ಮುಂದುವರಿಯುತ್ತಿರುವಾಗ ಅದರ ಒಂದು ಅಂಗವಾದ ಸಂಸ್ಥಾನಗಳು ಕಣ್ಣುಮುಚ್ಚಿಕೊಂಡು ಕುಳಿತಿರಲು ಸಾಧ್ಯವಿಲ್ಲ. ಉದಾಸೀನತೆಯಿಂದ ಇರುವವರು ಮುಂದೆ ಬರಲಿರುವ ಘೋರ ಪ್ರವಾಹದಲ್ಲಿ ಸಿಲುಕಿ ಕೊಚ್ಚಿ ಹೋಗಬಹುದು. ಆದುದರಿಂದ ಮೊದಲೇ ಎಚ್ಚೆತ್ತ ಸಂಸ್ಥಾನಾಧೀಶರುಗಳು ಕಾಲ, ದೇಶ, ವರ್ತಮಾನಗಳಿಗೆ ಅನುಗುಣವಾಗಿ ವರ್ತಿಸಲು ತೊಡಗಿರುವುದು ಸಂತೋಷದ ಸಂಗತಿ.

ಸಂಸ್ಥಾನಗಳ ಪ್ರಶ್ನೆಯು ಸಾರ್ವತ್ರಿಕವಾಗಿ ಒಂದೇ ಸ್ವರೂಪದಲ್ಲಿ ಇರುವುದಿಲ್ಲ. ಇದೊಂದು ದೊಡ್ಡ ಕೊರತೆಯೇ ಸರಿ. ಪೂರ್ಣ ನಿರಂಕುಶತ್ವ ಮತ್ತು ಸರ್ವಾಧಿಕಾರಗಳಿಂದ ಮೊದಲುಗೊಂಡು ಅಲ್ಪಸ್ವಲ್ಪ ಶಾಸನಬದ್ಧ ಆಡಳಿತದವರೆಗೆ ಹಲವಾರು ಬಗೆಯಲ್ಲಿ ಈ ಸಂಸ್ಥಾನಗಳ ವ್ಯವಹಾರಗಳು ನಡೆಯುತ್ತಿವೆ. ಬ್ರಿಟಿಷ್ ಹಿಂದೂಸ್ಥಾನದ ಪರಿಸ್ಥಿತಿಯು ಹೀಗಿರುವುದಿಲ್ಲ. ಭರತಖಂಡದ ಒಟ್ಟು ಹನ್ನೆರಡು ಪ್ರಾಂತ್ಯಗಳಲ್ಲಿ ಒಂದೇ ಬಗೆಯ ಆಡಳಿತ ಪದ್ಧತಿಯು ಕಳೆದ ಹತ್ತಾರು ವರ್ಷಗಳಿಂದಲೂ ಜಾರಿಯಲ್ಲಿರುತ್ತದೆ. ಅವುಗಳ ಮಟ್ಟಕ್ಕೂ ಸಹ ಇನ್ನೂ ದೇಶೀಯ ಸಂಸ್ಥಾನಗಳು ಬಂದಿರುವುದಿಲ್ಲ. ಇಡೀ ಹಿಂದೂಸ್ಥಾನಕ್ಕೆ ರಾಜ್ಯಾಂಗ ಶಾಸನವು ರಚಿತವಾಗುತ್ತಿರುವ ಈ ಸಮಯದಲ್ಲಿ ದೇಶೀಯ ರಾಜರುಗಳಲ್ಲಿ ಒಬ್ಬೊಬ್ಬರು ಒಂದೊಂದು ಬಗೆಯಾಗಿ ವರ್ತಿಸುತ್ತಿರಲು ಇದೇ ಕಾರಣವಾಗಿದೆ.

ನರೇಂದ್ರರುಗಳಲ್ಲಿ ಪ್ರಜಾ ಪ್ರಭುತ್ವ ತತ್ವವನ್ನು ಸಂಪೂರ್ಣವಾಗಿ ಅಂಗೀಕರಿಸಿ ಅನುಷ್ಠಾನಕ್ಕೆ ತಂದಿರುವವರೂ ಹಲವರಿದ್ದಾರೆ. ಕೆಲವು ಸಣ್ಣಪುಟ್ಟ ಸಂಸ್ಥಾನಗಳಲ್ಲಿ ಈಗಾಗಲೇ ಜವಾಬ್ದಾರಿ ಸರ್ಕಾರವನ್ನು ಘೋಷಿಸಿ ಜಾರಿಗೆ ತರಲಾಗಿದೆ. ಕೊಚ್ಚಿ ಮುಂತಾದ ಇತರ ಕಡೆಗಳಲ್ಲಿ ಇದಕ್ಕಾಗಿ ಕ್ರಮಬದ್ಧವಾದ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ ಇನ್ನೂ ದೊಡ್ಡ ಸಂಸ್ಥಾನಗಳು ಹಿಂದೆ ಬಿದ್ದಿರುವುದು ವಿಷಾದಕರವಾಗಿದೆ.

ಹೈದರಾಬಾದ್ ಸಂಸ್ಥಾನವು ಹೆಚ್ಚಿನ ಸುಧಾರಣೆಗಳನ್ನು ಕೊಡುವ ವಿಷಯದಲ್ಲಿ ನಮ್ಮ ಸಂಸ್ಥಾನದ ಮಾಜಿ ದಿವಾನರೊಬ್ಬರ ಸಲಹೆಯನ್ನು ಕೇಳಿದೆ. ಅಲ್ಲಿನವರು ಯಾವ ರೀತಿಯ ಸುಧಾರಣೆಗಳನ್ನು ಸೂಚಿಸಲಿರುವರೋ ನೋಡಬೇಕು.

ಒಟ್ಟಿನಲ್ಲಿ ಇದೊಂದು ಸುಧಾರಣೆಗಳ ಯುಗವಾಗಿ ಕಂಡುಬರುತ್ತಿದೆ. ಆದರೆ ಆ ಸುಧಾರಣೆಗಳು ಬರಿಯ ತೋರಿಕೆಯ ಆಟಗಳಾಗಿರದೆ ನಿಜವಾಗಿಯೂ ಪ್ರಜೆಗಳಿಗೆ ಅಧಿಕಾರವನ್ನು ವರ್ಗಾಯಿಸಲು ಸಹಾಯಕವಾಗಲೆಂದು ಸಕಲರೂ ಹಾರೈಸುವರು. ಎಲ್ಲರ ಬಾಯಲ್ಲಿಯೂ ಪ್ರಜಾ ಪ್ರಭುತ್ವದ ಮಂತ್ರವೇನೋ ಜಪಿಸಲ್ಪಡುತ್ತಿದೆ. ಆದರೆ ಅದನ್ನು ಜಾರಿಗೆ ತರುವುದರಲ್ಲಿ ಮಾತ್ರ ಎಲ್ಲರ ಕೈಯೂ ಬಹಳ ಹಿಡಿತದಲ್ಲಿರುತ್ತದೆ. ನಮ್ಮ ದೇಶದಲ್ಲಿರುವ ನೂರಾರು ಸಂಸ್ಥಾನಗಳಲ್ಲಿ ಒಂದೇ ಬಗೆಯ ರಾಜ್ಯಾಂಗವು ಇಲ್ಲದಿರುವುದರಿಂದ ಒಬ್ಬೊಬ್ಬ ರಾಜರು ಒಂದೊಂದು ರೀತಿಯಲ್ಲಿ ವರ್ತಿಸಲು ಅವಕಾಶವಾಗಿದೆ. ಮುಂದೆ ಬರಲಿರುವ ಭಾರತ ರಾಜ್ಯಾಂಗದಲ್ಲಿ ಅವರು ವಹಿಸಬೇಕಾದ ಪಾತ್ರಕ್ಕೆ ಇದು ಒಂದು ದೊಡ್ಡ ಅಡಚಣೆಯಾಗಿರುತ್ತದೆ. ಅಂತೂ ರಾಜರುಗಳ ಕಾರ್ಯನೀತಿಯು ಒಂದಕ್ಕೊಂದು ಭಿನ್ನವಾಗಿರುತ್ತದೆ. ಇದೇ ಅವರ ದುರ್ಬಲತೆಯನ್ನೂ ಸೂಚಿಸುವುದಾಗಿದೆ.

ಈ ಮಧ್ಯೆ ಸಾರ್ವಭೌಮತ್ವವು ಪ್ರಜೆಗಳಲ್ಲಿ ಇರುತ್ತದೆಯೋ, ರಾಜರುಗಳಲ್ಲಿದೆಯೋ ಎಂಬ ಗೊಂದಲವೂ ಎದ್ದಿದೆ. ಈ ವಿಷಯದಲ್ಲಿಯೂ ಸಹ ರಾಜರುಗಳಲ್ಲಿಯೂ, ಅವರ ಪ್ರತಿನಿಧಿಗಳಲ್ಲಿಯೂ ಭಿನ್ನ ಭಿನ್ನವಾದ ಅಭಿಪ್ರಾಯಗಳು ಎದ್ದು ಕಾಣುತ್ತಿವೆ. ಕೊಚ್ಚಿ ಸಂಸ್ಥಾನದ ಅರಸರು ಪ್ರಜೆಗಳಿಂದಲೇ ತಮಗೆ ಸಮಸ್ತ ಅಧಿಕಾರವೂ ಬಂದಿರುವುದೆಂದು ಈಗಾಗಲೇ ಸ್ಪಷ್ಟವಾಗಿ ಹೇಳಿರುತ್ತಾರೆ. ಇದೇ ಅಭಿಪ್ರಾಯವನ್ನೇ ಮುಂದುವರಿದ ಸಕಲ ರಾಜನೀತಿಜ್ಞರೂ ಅಂಗೀಕರಿಸಿದ್ದಾರೆ.

ಮುಖ್ಯವಾಗಿ ಸಣ್ಣಪುಟ್ಟ ಸಂಸ್ಥಾನಗಳು ಒಂದು ಕಾರ್ಯನೀತಿಯನ್ನೂ, ದೊಡ್ಡ ಸಂಸ್ಥಾನಗಳು ಮತ್ತೊಂದನ್ನೂ ಅನುಸರಿಸುತ್ತಿರುವಂತೆ ಕಂಡುಬರುತ್ತಿದೆ. ಚಿಕ್ಕ ಸಂಸ್ಥಾನಗಳು ಪ್ರಜೆಗಳಿಗೆ ಅಧಿಕಾರವನ್ನು ವಹಿಸಿಕೊಟ್ಟು ಆಡಳಿತವು ಪ್ರಜಾ ಪ್ರಮುಖರಿಗೆ ಉತ್ತರವಾದಿಯಾಗಿರುವಂತೆ ಮಾಡಲು ಸಿದ್ಧವಾಗಿರುತ್ತವೆ. ದೊಡ್ಡ ಸಂಸ್ಥಾನಗಳಾದರೋ ಆಡಳಿತದಲ್ಲಿ ಹೆಚ್ಚು ಹೆಚ್ಚಾಗಿ ಪ್ರಜೆಗಳ ಸಂಪರ್ಕವನ್ನು ಬೆಳೆಸುವ ನೀತಿಯನ್ನು ಮಾತ್ರ ತೋರ್ಪಡಿಸುತ್ತಿವೆ. ಇವುಗಳಲ್ಲಿ ಒಂದಕ್ಕೊಂದಕ್ಕೆ ಅಜಗಜಾಂತರ ವ್ಯತ್ಯಾಸವಿರುತ್ತದೆ. ಕೇವಲ ಹಲಕೆಲವು ಮಂತ್ರಿ ಪದವಿಗಳನ್ನು ಹೆಚ್ಚಿಸಿ, ಪ್ರಜೆಗಳನ್ನು ಸಮಾಧಾನಗೊಳಿಸುವ ಕಾಲವು ಕಳೆದುಹೋಯಿತು. ಅವರಿಗೆ ಈಗ ಬೇಕಾಗಿರುವುದು ನಿಜವಾದ ಸ್ವಾತಂತ್ರ್ಯ; ಆಡಳಿತದ ಮೇಲೆ ಸಂಪೂರ್ಣವಾದ ಹತೋಟಿ. ಇದು ಇಂದಿನ ಹಲವು ಸಂಸ್ಥಾನಗಳ ವರ್ತನೆಯಿಂದ ಈಡೇರುವುದಿಲ್ಲ. ಆದುದರಿಂದ ಆಡಳಿತದಲ್ಲಿ ಹೆಚ್ಚಿನ ಸಂಪರ್ಕವನ್ನು ಬೆಳೆಸುವ ನೀತಿಯನ್ನು ತೊರೆದು ಪ್ರಜಾಪ್ರತಿನಿಧಿಗಳಿಗೆ ಆಡಳಿತಾಧಿಕಾರವನ್ನು ವಹಿಸುವುದೇ ಇಂದಿನ ಸಮಸ್ಯೆಯ ಪರಿಹಾರಕ್ಕೆ ಮುಖ್ಯ ಮಾರ್ಗವೆಂಬುದನ್ನು ರಾಜರುಗಳು ಶೀಘ್ರ ಮನಗಾಣುವುದು ಮೇಲು.

Edited printed and published by A. R. Nagaraiho at the Sadhvi Press D-Subbiah Road, Mysore

ಜಮೀನು ಹಿಡುವಳಿದಾರರ ಕಷ್ಟ

(ಕಳೆದ ಸಂಚಿಕೆಯ ಶೇಷ)

ಶಾಸನ ಸಭಾ ಸದಸ್ಯರೂ, ಅಡ್ವೋಕೇಟರೂ ಆದ ಶ್ರೀ ಎಸ್. ಕೃಷ್ಣಸ್ವಾಮಿರಾಯರು ಈ ರೀತಿ ಬರೆಯುತ್ತಾರೆ: —

ಪರ್ಮಿಟ್ ಮಾಡಿಸಲು ಎಷ್ಟು ವರ್ತಿ ತಿರುಗಬೇಕಾಗುತ್ತದೆ ಎಂಬುದು ಅನೇಕರ ಅನುಭವದಲ್ಲಿರುತ್ತದೆ. ಇದಕ್ಕಾಗಿ ಎಷ್ಟು ದುಡ್ಡು ಖರ್ಚು, ಎಷ್ಟು ದೇಹ ಶ್ರಮ? ಸರ್ಕಾರದವರು ಹೇಳಬಹುದು - ಇಷ್ಟೆಲ್ಲಾ ತೊಂದರೆ ಮತ್ತು ಲುಕ್ಸಾನಾಗುವ ಪಕ್ಷದಲ್ಲಿ ಸರ್ಕಾರಕ್ಕೇ ವಹಿಸಿ ಇತರರಂತೆ ರೇಷನ್ ಪಡೆಯಬಾರದು ಎಂದು. ರೇಷನ್ ಡಿಪೋಗಳಲ್ಲಿ ನಮ್ಮ ಜಮೀನಿನಲ್ಲಿ ಬೆಳೆದಂತಹ ಅಕ್ಕಿ ಅನೇಕ ವೇಳೆ ಸಿಕ್ಕುವುದಿಲ್ಲ. ಅನ್ನ ತಿನ್ನುವುದಕ್ಕೂ ಲಾಯಕ್ಕಾಗದ ಮೊಂಡಕ್ಕಿಯನ್ನು ಅನೇಕ ವೇಳೆ ಕೊಡುತ್ತಾರೆ. ಅಲ್ಲದೆ ಅನೇಕ ವೇಳೆ ಅಕ್ಕಿ ಪ್ರಮಾಣವನ್ನು ಬದಲಾಯಿಸಿ ಮುಸುಕಿನ ಜೋಳವನ್ನೋ, ಗೋಧಿಯನ್ನೋ ಅಥವಾ ಇನ್ಯಾವುದಾದರೂ ವಿಜಾತಿ ಧಾನ್ಯವನ್ನೋ ಕೊಡುತ್ತಾರೆ. ಇವೆಲ್ಲಾ ಅನೇಕರಿಗೆ ಒಗ್ಗದೇ ಇರುವುದರಿಂದ ನಮ್ಮ ಸ್ವಂತ ಜಮೀನಿನ ಭತ್ತವನ್ನು ಪಾಯಿಷ್ ಮಾಡುತ್ತೇವೆ. ಇದು ತಪ್ಪೇನು? ಸಾವಿರಾರು ರೂಪಾಯಿ ಕೊಟ್ಟು ಜಮೀನು ಕೊಂಡಿಲ್ಲವೇ? ಈ ಸೌಕರ್ಯವು ಇಲ್ಲದೇ ಇರುವ ಪಕ್ಷ ಜಮೀನು ಇಟ್ಟುಕೊಂಡು ಏನು ಪ್ರಯೋಜನ?

ಹೋದ ವರ್ಷದ ಅಂತ್ಯದಲ್ಲಿ ಹಿಡುವಳಿದಾರನ ಭತ್ತವೆಲ್ಲಾ ಮೇಲ್ಕಂಡ ರೀತಿ ಖರ್ಚಾಗಿ ಬಿಟ್ಟಿದ್ದರೆ ಅವನನ್ನೂ ಅವನ ಹೆಂಡತಿ ಮಕ್ಕಳನ್ನೂ ೨-೩-೪ ತಿಂಗಳು ಉಪವಾಸವಿರಬೇಕೆಂದು ಹೇಳುವುದು ಯಾವ ಧರ್ಮ ಮತ್ತು ಯಾವ ರಾಜನೀತಿ? ಖೂನಿ, ದರೋಡೆ ವಗೈರೆ ಅಪರಾಧ ಮಾಡಿ ಶಿಕ್ಷೆಯನ್ನು ಅನುಭವಿಸುತ್ತಿರುವವನನ್ನೂ ಅನ್ನ ಕೊಡದೆ ಸಾಯಿಸುವುದಿಲ್ಲ. ಬಡ ಜಮೀನುದಾರನ ಮೇಲೆ ಯಾಕೆ ಇಷ್ಟು ಆಗ್ರಹ? ಕ್ಷುದ್ಬಾಧೆಯಿಂದ ೪ ತುತ್ತು ತಿನ್ನುವುದಕ್ಕೆ ಬದಲು ೨ ತುತ್ತು ತಿಂದು ಹಾಗೂ ಅರೆಹೊಟ್ಟೆಯಲ್ಲಿ ಜೀವಿಸಿಕೊಂಡು ಬಂದು ಏನೋ ಆತುರದಿಂದ ಬಾಯಿ ಚಪಲದಿಂದ ಈರೀತಿ ಮಾಡಿದೆ ಎಂದರೆ ಅವನನ್ನೂ ಅವನ ಸಂಸಾರವನ್ನೂ ಮುಂದೆ ಅನ್ನ ಕೊಡದೆ ಸಾಯಿಸುವುದಾದರೆ ಹೇಗೆ? ಇನ್ನೆಲ್ಲಾದರೂ ಆಹಾರ ಸಿಕ್ಕುತ್ತಿದ್ದರೆ ಈ ರೀತಿ ಸರ್ಕಾರದವರಲ್ಲಿ ಅವರು ಅಂಗ
ಬೇಡುತ್ತಿರಲಿಲ್ಲ.

ಈಗ್ಗೆ ೩ ನೇ ವರ್ಷದಲ್ಲಿ ಹಳ್ಳಿ
ಹಿಡುವಳಿದಾರನಿಗೆ ಕೊಟ್ಟಿದ್ದಂತೆಯೇ
ರ್ಷ ಪ್ರದೇಶದಲ್ಲಿ ಇರುವವನಿಗೆ ದಿನ
ಕ್ಕೆ ೧ ಸೇರು ಭತ್ತವನ್ನು ಲೆಖ್ಖಾಚಾ
ಡಿ ಕೊಟ್ಟಿದ್ದರು. ಅನಂತರ ಇದನ್ನು
ಡಿಮೆ ಉಪಯೋಗಿಸಿಕೊಳ್ಳಬೇಕೆಂದು
ರ್ಡರ್ ಹುಟ್ಟಿಸಿ ವರ್ಷಾಂತ್ಯದಲ್ಲಿ
ಯಾಗಿ ಉಳಿಯುವ ಭತ್ತವನ್ನು ಸರ
ಮಾಡಬೇಕೆಂದು ಕಟ್ಟಾಜ್ಞೆ ಕೊಟ್ಟಿರು
ದರಂತೆ ಸರ್ಕಾರದವರಿಗೆ ಶೇಕಡಾ ೬
ಭಾಗ ವಸೂಲಾಯಿತೊ ತಿಳಿಯದು.
ತಿಳಿದಂತೆ ಶೇಕಡಾ ೫ ಭಾಗವೂ ವಸೂ
ಗಲಿಲ್ಲವೆಂದು ಹೇಳಬಹುದು.
ಚ್ಚಿ ಪ್ರಮಾಣದ ಭತ್ತದ ಗತಿ
ಗಾದರೆ ಹೋದ ಸಾರಿ ಬಿಟ್ಟಿದ್ದ ೩॥
ಗತಿಏನು?

ಇದನ್ನೆಲ್ಲಾ ಆಲೋಚಿಸಿ ನೋಡಿ
ಸರ್ಕಾರದವರು ಈ ವರ್ಷ ಪಡಿತರ
ಸ್ಥಳದಲ್ಲಿ ವಾಸಿಸುವ ಹಿಡುವಳಿದಾ
ಬೇಕಾದ ಭತ್ತದ ಮೊತ್ತದಲ್ಲಿ
ತಾವನ್ನು ಮಾಡದೆ ೩॥ ಪಾವು ಭತ್ತ
ಹಿಡುವಳಿದಾರನಿಗೆ ಈ ವರ್ಷವಲ್ಲಾ
ವಂತೆ ಮಾಡುತ್ತಾರೆಂದು ನಂಬಿದ್ದೇನೆ.

ರೇಷನ್ ಏರಿಯಾದಿಂದ ಹೊರಗೆ
ರೆ ನಂಜನಗೂಡು, ಚಾಮರಾಜನ
ಮುಂತಾದ ಪಟ್ಟಣದಲ್ಲಿರುವವನಿಗೂ
ಡ ಹಳ್ಳಿಗಾಡಿನ ಹಿಡುವಳಿದಾರನಿಗೆ
ವ ಪ್ರಮಾಣದಲ್ಲಿ ದಿನಸಿ ಸಿಕ್ಕುತ್ತದೋ
ದೇ ಪ್ರಮಾಣದಲ್ಲಿ ಸಿಕ್ಕುತ್ತದೆ.
ಸೂರು ಡಿಸ್ಟ್ರಿಕ್ಟಿನಲ್ಲೆಲ್ಲಾ ಮೈಸೂರು ಸಿಟಿ
ಲ್ಲಿರುವ ಹಿಡುವಳಿದಾರರಿಗೇ ಈ ತೊಂದ

ಮೇಲೆ ಹೇಳುವ ಕಷ್ಟಪರಂಪರೆಗ
ಲ್ಲಾ ಅರಿತು ಫುಡ್ ಸಪ್ಲೈ ಡೈರೆಕ್ಟರ
ಮ॥ ರಾ॥ ಗುರುದತ್ತರವರು ನ್ಯಾಯಾ
ಮತ್ತು ಸರ್ವಸಮಂಜಸವಾದ ೩೧-೧೨-
ನೇ ಮರ್ಮಂ ಕಾಗದವನ್ನು ನನಗೆ ಬರೆ
ರುತ್ತಾರೆ. ಆದರಂತೆ ಪಡಿತರವಿರುವ
ಳದ ಹಿಡುವಳಿದಾರರಿಗೆ ಹೋದಸಾರಿ
ತರ ಬದಲಾವಣೆ, ಜಮೀನ್ದಾರರಿಗೆ ಪಾ
ರವನ್ನು ಕಡಿಮೆ ಮಾಡದೆ ಪೂರ್ತಿ
ಪಾವು ಭತ್ತವನ್ನು ಕೊಡುವಂತೆ ಏರ್ಪಾ
ಮಾಡಿ ಎಲ್ಲರಿಗೂ ಆರ್ಡರ್ ಕಳುಹಿಸ
ಗುತ್ತೆಂದೂ ಯಾವುದಾದರೂ ಅಪಾ
ಳ ವಿಷಯದಲ್ಲಿ ಸರಿಯಾದಂತೆ ನಡೆಯ
ಇದ್ದ ಪಕ್ಷದಲ್ಲಿ ಅದನ್ನು ತಮಗೆ ತಿಳಿಸ
ಲ್ಲಿ ವಿಚಾರಣೆ ಮಾಡಲಾಗುತ್ತದೆಂದೂ
ದಿರುತ್ತಾರೆ. ಹೀಗಿದ್ದಾಗ್ಯೂ ಸ್ಥಳೀಯ
ರೇಷನ್ ಅಧಿಕಾರಿಗಳು ಇದಕ್ಕೆಗಮನ ಕೊ
ದೆ ಇರುವುದು ಆಶ್ಚರ್ಯವನ್ನುಂಟುಮಾಡಿ

ರಾಜಕಮಲ್, ಮೈಸೂರು
10-1-47 ರಿಂದ 3 ನೇ ವಾರ
—: ಪ್ರಕಾಶ್ ರವರ :—
ಹಮಾರಾ ಸಂಸಾರ್
ಜೀವನ್ ರಂಜನಾ, ಜಿಲ್ಲು, ಉಮಾಕಾಂತ್,
From 10-1-47 for 4 Days at 10-30 A. M.
"Secrets of Scotland Yard"
Sterring:- Edgar Barrier, Stephanie, Aubrey Smith etc.

ಅಪೆರಾ ಟಾಕೀಸ್
10-1-47 ರಿಂದ
ಪೊನ್ನುರುವಿ (ತಮಿಳು)
(ಮಹಾಭಾರತದ ಕಥೆಯ ಕರ್ಣನ ವಿವಾಹ, ಜೀವನ, ನಡತೆಗಳನ್ನು ಚಿತ್ರಿಸಿರುವ ಕಥೆ)
ಪ್ರತಿದಿನ ಮೂರು ಆಟಗಳು
ಪಾತ್ರ:- * ಕೊತ್ತಮಂಗಲಂ ಸೀನು * ಕೆ. ಬಿ. ರುಕ್ಮಿಣಿ * ಆರ್. ಬಾಲಸುಬ್ರಹ್ಮಣ್ಯಂ
Morning shows from 10-1-47 at 10-30 a m
Mutiny in the Big House

ರಿ. ನಂ. 392 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಂಪುಟ ೧೧] ಸೋಮವಾರ ೧೩—೧—೪೭ [ಸಂಚಿಕೆ ೨೪

- ದಕ್ಷಿಣ ಆಫ್ರಿಕದಲ್ಲಿ -
ಬ್ರಿ॥ ಪ್ರಭುಗಳ ಬಹಿಷ್ಕಾರ

...ಬ್ರಾಹ್ಮಣ ಆದರ್ಶವನ್ನು ಅವಲಂಬಿಸಿರಿ

...ಶ್ಯ ವಿಜ್ಞಾನಿಗಳಿಗೆ ನೆಹರೂ ರವರ ಸಂದೇಶ

...ರಿಯಲ್ಲಿ ನಡೆದ ವಿಜ್ಞಾನ ಸಮ್ಮೇ ...ಬಂದಿದ್ದ ಪಾಶ್ಚಿಮಾತ್ಯ ವಿಜ್ಞಾನಿಗ ...ಪಂಡಿತ ನೆಹರೂ ರವರು ಒಂದು ಸಂ...ವನ್ನು ಕೊಟ್ಟು ಈ ರೀತಿ ತಿಳಿಸಿರು ...ಅಧಿಕಾರ ಮತ್ತು ಅಧಿಕ ಲಾಭದ ...ಬರುವ ಆಪಾಯಕರವಾದ ಬಂಕ ...ಭಾವನೆಯೊಂದು ಭರತ ಖಂಡದಲ್ಲಿ ...ಕ್ತಿಪಡುವ ಬ್ರಾಹ್ಮಣ ಜೀವನದ ಆ...ವನ್ನು ವಿಜ್ಞಾನಿಗಳು ಹೆಚ್ಚು ಹೆಚ್ಚು ...ಸಬೇಕೆಂದು ನಾನು ಬಯಸುತ್ತೇನೆ. ...ಒಬ್ಬ ಬ್ರಾಹ್ಮಣನಾಗಿಯೇ ಹುಟ್ಟಿ...ನೆ ಆದರೆ ಅದಕ್ಕೂ ಇದಕ್ಕೂ ಸಂ...ವಿಲ್ಲ ಏಕೆಂದರೆ ಬ್ರಾಹ್ಮಣ್ಯದ ಆದ...ಬೇರೆ, ಬ್ರಾಹ್ಮಣರೇ ಬೇರೆ, ಎಂಬು ...ನಾಪ್ರ ಬಲ್ಲೆವು

...ಮಹಾತ್ಮರ ಪತ್ರಗಳನ್ನು ...ಲು ವಿಶೇಷ ವಿಮಾನ

...ನೋವಾಲಿ ಜಿಲ್ಲೆಯ ಗ್ರಾಮಾಂತರ ಪ್ರ...ದೇಶಗಳಲ್ಲಿ ಸಂಚರಿಸುತ್ತಿರುವ ಮಹಾತ್ಮ...ಜಿಯವರು ದೆಹಲಿ ಮುಂತಾದ ಪ್ರದೇ...ಶಗಳಿಗೆ ತಮ್ಮ ಜರೂರು ಸಂದೇಶ ಕಳುಹಿ...ಸಲು ಅನಾನುಕೂಲವಾಗಿರುವುದನ್ನು ಕಂಡು ...ಮಿಲಿಟರಿ ಅಧಿಕಾರಿಗಳ ಸಹಕಾರ...ದ ಡಾ॥ ಬಿ. ಸಿ ರಾಯರು ಒಂದು ವಿ...ಮಾನವನ್ನು ಅದಕ್ಕಾಗಿಯೇ ಮೀಸಲಾಗಿ ...ಏರ್ಪಾಡು ಮಾಡಿದ್ದಾರೆ

...ವಿದ್ಯಾರ್ಥಿಗಳಿಗೆ ಮದ್ಯವಿಲ್ಲ

...ಮದ್ಯಪಾನ ನಿರೋಧದ ಆಚರಣೆಯ ...ಗಾಗಿ ಪಂಜಾಬ್ ಸರ್ಕಾರದವರು ...ಲು ಮಾಲೀಕರುಗಳಿಗೆ ಒಂದು ತಿ...ಳುವಳಿಕೆ ಕೊಟ್ಟಿದ್ದಾರೆ, ವಿದ್ಯಾರ್ಥಿಗಳಿಗೆ ...ಶೀಯ ಅಥವಾ ವಿದೇಶೀಯವಾದ ಯಾ...ವ ಮದ್ಯವನ್ನೂ ಕೊಡಕೂಡದೆಂದೂ, ...ಹೋಗಿ ಪಾಠಶಾಲೆಗಳ ಸ್ಥಳಗಳಲ್ಲಿ ವಿದ್ಯಾ...ರ್ಥಿಗಳಿಗೆ ಮದ್ಯ ದೊರೆಯುವುದಿಲ್ಲ-ಎಂದು ...ದ ಬೋರ್ಡುಗಳನ್ನು ಹಾಕಬೇಕೆಂದೂ ...ತು ಆಜ್ಞೆ ಮಾಡಿರುತ್ತಾರೆ

...ಗಾಂಧಿಜಿಯವರ ಯಾತ್ರೆಯ ಚಿತ್ರ

ಮಹಾತ್ಮ ಗಾಂಧಿಯವರು ಫಕೀರ್‍ಪುರ...ದ ...ಪುರದ ವರೆಗೆ ಕೈಗೊಂಡ ಸಂ...ಚಾರದ ಮತ್ತು ಪ್ರಾರ್ಥನಾ ಸಭೆಯ ಛಾ...ಯೆಯನ್ನು ಮಿ॥ ಲೆನಾರ್ಡ್ಸ್ ಎಂಬುವರು ಚಿ...ತ್ರಪಟದಲ್ಲಿ ತೆಗೆದಿದ್ದಾರೆ ಈ ಚಿತ್ರವು ...ದೇಶದ ಮತ್ತು ವಿದೇಶದ ಎಲ್ಲಾ ಚಲನ...ಚಿತ್ರ ಮಂದಿರಗಳಲ್ಲೂ ಪ್ರದರ್ಶಿಸಲ್ಪಡು...ವು

...ಪಾಠಶಾಲೆಗೆ ಮೂಗೂರು ಕರ್ನಾಟಕರ ಪ್ರವೇಶ

ಮೂಗೂರು ಕರ್ನಾಟಕ ಬ್ರಾಹ್ಮಣ ವಿ...ದ್ಯಾರ್ಥಿಗಳನ್ನು ಚಾಮರಾಜನಗರದ ವೇ...ದ ಪಾಠಶಾಲೆಗೆ ಸೇರಿಸಿಕೊಳ್ಳಬೇಕೆಂದು ಈ...ಗ ಸರ್ಕಾರದವರು ಇತ್ತ ಆಜ್ಞೆಯ ಪ್ರ...ಕಾರ ಇದೇ ೨೭ ನೇ ಸೋಮವಾರ ೫ ಜನ ವಿ...ದ್ಯಾರ್ಥಿಗಳನ್ನು ಸೇರಿಸಲು ಕರೆದುಕೊಂ...ಡು ಹೋಗುವುದಾಗಿ ಶ್ರೀ॥ ತಗಡೂರು ರಾಮ...ಚಂದ್ರರಾಯರು ಸಂಬಂಧಪಟ್ಟ ಅಧಿಕಾರಿ...ಗಳಿಗೆ ತಿಳಿಸಿರುತ್ತಾರೆ

ಗ್ರಾಮಾಧಿಕಾರಿಗಳಿಗೆ ಪ್ರಭುಗಳ ಭೇಟಿ

ಮೈಸೂರು ೧೩.

ಸಂಸ್ಥಾನದ ಗ್ರಾಮಾಧಿಕಾರಿಗಳ ಸಂಘದ ಪ್ರತಿನಿಧಿಗಳೂ, ಅಧ್ಯಕ್ಷರೂ, ಕಾರ್ಯದರ್ಶಿಗಳೂ ಶ್ರೀ ಎಫ್. ಸಿ ದೇವರಾಜೇ ಅರಸಿನವರ ನೇತೃತ್ವದಲ್ಲಿ ನಿನ್ನೆ ಅರಮನೆಯಲ್ಲಿ ಶ್ರೀಮನ್ಮಹಾರಾಜರವರನ್ನು ಸಂದರ್ಶಿಸಿ ತಮ್ಮ ರಾಜಭಕ್ತಿಯನ್ನು ಸಲ್ಲಿಸಿದರು ಪ್ರಭುಗಳು ಗ್ರಾಮಾಧಿಕಾರಿಗಳ ಹಿತಚಿಂತನೆಯಲ್ಲಿ ತಮ್ಮ ಸಂಪೂರ್ಣವಾದ ಆಸಕ್ತಿಯನ್ನು ವ್ಯಕ್ತಪಡಿಸಿದರೆಂದು ತಿಳಿದುಬಂದಿದೆ.

ಅನಾವರಣೋತ್ಸವ

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ನೆನ್ನೆ ಸಾಯಂಕಾಲ ಚೆಟ್ಟಿದಪುರದ ವಿದ್ಯಾರ್ಥಿನಿಲಯದಲ್ಲಿ ಶ್ರೀ ಸ್ವಾಮಿ ಸಿದ್ಧೇಶ್ವರಾನಂದಜಿಯವರು ಮಹಾತ್ಮಗಾಂಧಿಯವರ ಭಾವಚಿತ್ರ ಅನಾವರಣ ಮಹೋತ್ಸವವನ್ನು ನೆರವೇರಿಸಿದರು. ಪ್ರಾರ್ಥನೆ, ಸ್ವಾಗತ ಭಾಷಣಗಳಾದ ನಂತರ ಸ್ವಾಮಿ ಸಿದ್ಧೇಶ್ವರಾನಂದಜಿಯವರು ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಅನಾವರಣ ಮಾಡುತ್ತಾ ಅಹಿಂಸಾ ತತ್ವದ ವಿಚಾರವಾಗಿ ಮಾತನಾಡಿ, ಸತ್ಯಾಹಿಂಸೆಗಳ ಮುಂದೆ ಎಲ್ಲಾ ಶಸ್ತ್ರಾಸ್ತ್ರಗಳೂ ದುರ್ಬಲವಾಗುವುವೆಂದು ತಿಳಿಸಿದರು

ನೆಹರು ಸಂಘ

ರಾಜಧಾನಿಯ ನೆಹರು ಸಂಘದ ನಾಲ್ಕನೆ ವಾರ್ಷಿಕೋತ್ಸವವು ಬನುಮಯ್ಯನವರ ಕಾಲೇಜು ಭವನದಲ್ಲಿ ಇದೇ ೧೮ ನೇ ಶನಿವಾರ ಸಂಜೆ ೫ ಘಂಟೆಗೆ ನಡೆಯುವುದು ವಿಶ್ವವಿದ್ಯಾಲಯದ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ॥ ಎ ಟಿ. ತಿರುನಾರಣಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು

ಹರಿಕಥೆಗಳು

ಕೀರ್ತನಕಾರ ಮಂಡಲಿಯ ಪರವಾಗಿ ಗಾ॥ ವಿ॥ ಬಿ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಇಂದಿನಿಂದ ೧೨ ದಿನಗಳವರೆವಿಗೆ ಸಂಜೆ ೬ ಗಂಟೆಗೆ ಪ್ರಸಿದ್ಧ ವಿದ್ವಾಂಸರುಗಳಿಂದ ಹರಿಕಥೆಗಳನ್ನು ಏರ್ಪಾಡು ಮಾಡಿದೆ

ನಾಳೆ ರಾತ್ರಿ ೯ ಗಂಟೆಗೆ ಚಲುವಾಂಬ ಅಗ್ರಹಾರದ ಶ್ರೀರಾಮ ಮಂದಿರದಲ್ಲಿ ಶ್ರೀ ಹರಿಸರ್ವೋತ್ತಮದಾಸರಿಂದ ಸತ್ಯಹರಿಶ್ಚಂದ್ರ ಎಂಬ ಕಥೆಯು ನಡೆಯುತ್ತದೆ.

ಸೂಚನೆ

ಉತ್ತರಾಯಣ ಪುಣ್ಯಕಾಲದ ಪ್ರಯುಕ್ತ ನಾಳೆದಿನ "ಸಾಧ್ವಿ" ಪತ್ರಿಕೆಗೆ ರಜಾಕೊಡಲಾಗಿದೆ.

—ವ್ಯವಸ್ಥಾಪಕ

ಲೀಗ್ ಅಧ್ಯಕ್ಷನಿಗೆ ಮರಣದಂಡನೆ

ರಾಣಿಗಂಜಿನ ಮುಸ್ಲಿಂ ಲೀಗ್ ಅಧ್ಯಕ್ಷರಾದ ಗುಮಾಖಾನರು ೪೬ ನೇ ಆಗಸ್ಟ್ ೧೯ ರ ಸೋಮವಾರು ಗಲಭೆಯಲ್ಲಿ ೧೩ ವರ್ಷದ ಬಾಲಕನೊಬ್ಬನನ್ನು ಕೊಲೆಮಾಡಿದರೆಂಬ ಅಪಾದನೆ ಮೇಲೆ ಬರ್ದವಾನ್ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಪಿ ಬಿ. ಜಿ. ವೈದ್ಯನಾಥರವರು ಅವರಿಗೆ ಮರಣ ದಂಡನೆ ವಿಧಿಸಿರುವರು ಅಪಾದಿತರಿಗೆ ಕ್ಷಮೆ ಕೋರಬೇಕೆಂದ ಬಂಗಾಳ ಮಾಜಿ ಪ್ರಧಾನಿ ಮಿ॥ ಫಜುಲುಲ್‌ಹಕ್ಕರು ಅಪಾದಿತರ ಪರ ವಕಾಲತ್ತು ವಹಿಸಿ ಪ್ರಾರ್ಥಿಸಿದ್ದರು. ನ್ಯಾಯಾಧೀಶರು ಅವರ ಪ್ರಾರ್ಥನೆಯನ್ನು ನಿರಾಕರಿಸಿ ಶಿಕ್ಷೆಯನ್ನು ಕಡಮೆ ಮಾಡಲು ಯಾವ ಕಾರಣವೂ ಇಲ್ಲವೆ-ದು ಹೇಳಿದರು.

ಜುನಗಢ ಸಂಸ್ಥಾನದಲ್ಲಿ ಸುಧಾರಣೆ

ಸರ್ಕಾರದಲ್ಲಿ ಪ್ರಜೆಗಳ ಸಂಪರ್ಕವನ್ನು ಉಂಟು ಮಾಡುವ ಉದ್ದೇಶದಿಂದ ಜುನಘಡ ಸಂಸ್ಥಾನದ ನವಾಬರು ತಮ್ಮ ಸಂಸ್ಥಾನದ ಪ್ರಮುಖ ಕೋಮುಗಳಿಂದ ಇಬ್ಬರು ಖಾಸಗಿ ಸದಸ್ಯರನ್ನು ಅಲ್ಲಿನ ಮಂತ್ರಿ ಮಂಡಲಕ್ಕೆ ತೆಗೆದುಕೊಂಡಿರುವರು

ಅ॥ ಭಾ॥ ಮುಸ್ಲಿಂ ಕಾರ್ಯಕಾರಿ ಸಮಿತಿ ಸಭೆ

ಮಿ॥ ಎಂ ಎ. ಜಿನ್ನಾರವರು ಅಖಿಲ ಭಾರತ ಮುಸ್ಲಿಂ ಲೀಗ್ ಕಾರ್ಯಕಾರಿ ಸಮಿತಿಯ ಸಭೆಯನ್ನು ಶೀಘ್ರದಲ್ಲಿಯೇ ಕರೆಯುವರೆಂದೂ ಅದುವರೆಗೆ ಯಾವ ಅಭಿಪ್ರಾಯವನ್ನೂ ತಾವು ಸೂಚಿಸುವುದಿಲ್ಲವೆಂದೂ ಒಂದು ಹೇಳಿಕೆಯಲ್ಲಿ ತಿಳಿಸಿರುವರು.

ಮೂರು ಮಕ್ಕಳ ಜನನ

ಸ್ವಂ ಸು] ಶ್ರೀರಂಗಪಟ್ಟಣ ೧೩

ಶ್ರೀರಂಗಪಟ್ಟಣದ ತಾಲ್ಲೂಕು ಬೆಳಗೊಳದ ದೋಬಿ ಹೊಸಹಳ್ಳಿಯಲ್ಲಿರುವ ಕಲ್ಕೇಗೌಡರ ಕುಟುಂಬ ತಿಮ್ಮಮ್ಮನಿಗೆ ಮೂರು ಗಂಡು ಮಕ್ಕಳ ಜನನವಾಗಿದೆಯೆಂದು ತಿಳಿದು ಬಂದಿದೆ

ದ॥ ಆಫ್ರಿಕದಲ್ಲಿ ಬ್ರಿಟಿಷ್ ದೊರೆಗಳಿಗೆ ಬಹಿಷ್ಕಾರ

ಬ್ರಿಟಿಷ್ ಚಕ್ರವರ್ತಿ ಸಾರ್ವಭೌಮರವರು ಸಧ್ಯದಲ್ಲಿಯೇ ದಕ್ಷಿಣ ಆಫ್ರಿಕಕ್ಕೆ ಭೇಟಿ ಇತ್ತಾಗ ಅವರ ಗೌರವಾರ್ಥವಾಗಿ ನಡೆಯುವ ಎಲ್ಲಾ ಸಮಾರಂಭಗಳಿಗೂ ಅಲ್ಲಿರುವ ಭಾರತೀಯರು ಬಹಿಷ್ಕಾರ ಹಾಕುವಂತೆ ಸತ್ಯಾಗ್ರಹ ನಡೆಸುತ್ತಿರುವವರು ಮನವಿ ಮಾಡುತ್ತಿದ್ದಾರೆ ಶಾಲೆಗಳಿಗೆ ಚಕ್ರವರ್ತಿಗಳು ಭೇಟಿ ಇತ್ತಾಗ ಮಕ್ಕಳನು ಅಲ್ಲಿಗೆ ಕಳುಹಿಸಬಾರದೆಂದು ಪ್ರಾರ್ಥಿಸಲಾಗಿದೆ

ಗಾಂಧಿಜಿಯನ್ನು ನೋಡಲು ಕುರುಡಿಯ ಯತ್ನ

ಚಾಂದ್‌ಪುರ್‌ದಿಂದ ಗಾಂಧೀಜಿಯವರು ತಮ್ಮ ನಿವಾಸಕ್ಕೆ ಹಿಂತಿರುಗುತ್ತಿದ್ದ ದಾರಿಯಲ್ಲಿ ಹೆಂಗಸರ ಗುಂಪನ್ನು ಒತ್ತರಿಸಿಕೊಂಡು ಬಂದ ೯೫ ವರ್ಷದ ಮುದುಕಿಯಾದ ಕುರುಡಿಯೊಬ್ಬಳು ಮಹಾತ್ಮರ ಮುಂದೆ ನಿಂತು ಅವರನ್ನು ನೋಡಲು ಕಣ್ಣುಗಳನ್ನು ವಿಶಾಲವಾಗಿ ತೆರೆದಳು ಆದರೆ ಅವರನ್ನು ತನ್ನ ಕುರುಡು ಕಣ್ಣಿನಿಂದ ನೋಡಲಾಗದೆ ಮಹಾತ್ಮರನ್ನು ದರ್ಶಿಸಲಾಗದ ಈ ಜೀವನವೇತಕ್ಕೆ-ಎಂದಳು. ಮಹಾತ್ಮರು ಮೌನವನ್ನು ಆಚರಿಸುತ್ತಿದ್ದುದರಿಂದ ಅವಳಿಗೆ ಚೀಟಿಯೊಂದರಲ್ಲಿ ಈ ಹೊರ ಕಣ್ಣುಗಳಿಂದ ನೋಡಲಾಗದಿದ್ದರೆ ಒಳ ಕಣ್ಣುಗಳಿಂದ ನೋಡು-ಎಂತ ಬರೆದು ಕಳುಹಿಸಿದರೆಂದು ತಿಳಿದುಬಂದಿದೆ.

ಮೈಸೂರಿನಲ್ಲಿ ಮಂತ್ರಿಮಂಡಲ

ಸ್ವಂ.ಮು.ಪ್ರೇ॥] ಬೆಂಗಳೂರು. ೧೩

೧೫ ನೇ ತಾ॥ ರಾಜಧಾನಿಯಲ್ಲಿ ದಿವಾನರ ಅಧ್ಯಕ್ಷತೆಯಲ್ಲಿ ಮಂತ್ರಿಮಂಡಲದ ಸಭೆಯು ನಡೆಯಲು ಏರ್ಪಾಡಾಗಿದೆ.

ಕೈಗಾರಿಕೆಯ ಡೈರೆಕ್ಟರಾದ ಶ್ರೀ ಬಿ. ಜಿ ಅಪ್ಪಾದೊರೆ ಮೊದಲಿಯಾರರನ್ನು ಕೈಗಾರಿಕಾ ಸಲಹೆಗಾರರನ್ನಾಗಿಯೂ ಭದ್ರಾವತಿ ಜನರಲ್ ಮ್ಯಾನೇಜರ್ ಶ್ರೀ ಬಾಲಕೃಷ್ಣನ್‌ವರನ್ನು ಡೈರೆಕ್ಟರನ್ನಾಗಿಯೂ ಮಾಡುವ ಆಲೋಚನೆ ಇರುವುದಾಗಿ ತಿಳಿದು ಬಂದಿದೆ

ಪ್ರಭುಗಳಿಗೆ ಅಭಿನಂದನೆ

ಬೆಂಗಳೂರು ಪೌರಸಭೆಯು ಮೊನ್ನೆದಿನ ಶ್ರೀಮನ್ಮಹಾರಾಜರಿಗೆ ಅವರ ಇತ್ತೀಚಿನ ಸಂದೇಶಕ್ಕಾಗಿ ಪುರವಾಸಿಗಳ ಧನ್ಯವಾದವನ್ನು ಅರ್ಪಿಸುವ ನಿರ್ಣಯವನು ಮಾಡಿತು ಕೂಡಲೇ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವು ಸ್ಥಾಪಿತವಾಗಿ ಸಂಯುಕ್ತ ಕರ್ನಾಟಕದ ಏಕೀಕರಣಕ್ಕೆ ಪ್ರಮುಖ ಸಾಧನವಾಗಲೆಂದು ಹಾರೈಸಲಾಯಿತು

ರಾಜ್ಯಾಂಗ ರಚನಾ ಸಭೆಯ ಗುರಿಯನ್ನು ಸೂಚಿಸಿ ಪಂಡಿತ ನೆಹರೂರವರು ಮಂಡಿಸಿರುವ ನಿರ್ಣಯಕ್ಕೆ ಸ್ವಾಗತವನ್ನು ಕೋರಿ ಹೊಸ ರಾಜ್ಯಾಂಗವು ಸಂಸ್ಥಾನಗಳ ಹಿತವನ್ನು ಸಂರಕ್ಷಿಸುವುದೆಂದು ಆಶಿಸಲಾಯಿತು.

ಪೌರಸಭೆಯ ಮಾಜಿ ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರ ಮೇಲೆ ಹೂಡಿರುವ ಮೊಕದ್ದಮೆ ಮತ್ತು ಪ್ರತಿಬಂಧಾಜ್ಞೆಗಳ ಖಂಡನೆಗಾಗಿ ಮಂಡಿಸಿದ ಇತರ ಎರಡು ನಿರ್ಣಯಗಳು ಬಿದ್ದುಹೋದವು

ಸಾಧ್ವಿ

ತಾ|| ೧೩-೧-೪೭ ಸೋಮವಾರ

ಬರೋಡಕ್ಕಿಂತಲೂ ಮೈಸೂರು ಹಿಂದೆ ಬೀಳಬಹುದೇ?

ಹೊಸ ಸುಧಾರಣೆಗಳ ವಿಷಯವನ್ನು ಘೋಷಿಸುವಾಗ ಮೊನ್ನೆ ಬರೋಡದ ಮಹಾರಾಜರವರು ತಮ್ಮ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವ ಗುರಿಯಿಂದಲೇ ಹೊಸ ಸುಧಾರಣೆಗಳನ್ನು ರೂಪಿಸಲಾಗುವುದೆಂದು ಸೂಚಿಸಿರುತ್ತಾರೆ ಸರ್ಕಾರದ ಗುರಿಯನ್ನು ಈ ರೀತಿ ಸ್ಪಷ್ಟವಾಗಿ ಹೇಳಿರುವುದು ಅಲ್ಲಿನ ಪ್ರಜೆಗಳಿಗೆ ಸಮಾಧಾನವನ್ನುಂಟುಮಾಡದಿರದು

ನಮ್ಮ ಮೈಸೂರಿನಲ್ಲಿಯಾದರೋ ಈ ಗುರಿಯನ್ನು ಇನ್ನೂ ಘೋಷಿಸಲಾಗಿಲ್ಲ ಹಿಂದೆ ಕಾಂಗ್ರೆಸ್ಸಿಗೂ, ಸರ್ಕಾರದವರಿಗೂ ಆದ ಒಪ್ಪಂದದಲ್ಲಿಯೂ ಸಹ ಜವಾಬ್ದಾರಿ ಸರ್ಕಾರಕ್ಕಾಗಿ ಬೇಡಿಕೆಗಳನ್ನು ಸಲ್ಲಿಸಬಹುದೆಂದು ಹೇಳಲಾಗಿದೆಯೇ ವಿನಾ ಸರ್ಕಾರದವರು ಆ ಧ್ಯೇಯದಿಂದ ತಮ್ಮ ಕಾರ್ಯನೀತಿಯನ್ನು ಅವಲಂಬಿಸುವರೆಂದು ತಿಳಿಸಿರುವುದಿಲ್ಲ ಈಚೆಗೆ ಸಕಲ ಸಂಗಡದವರೂ ಜವಾಬ್ದಾರಿ ಸರ್ಕಾರದ ಬೇಡಿಕೆಗಾಗಿ ಒತ್ತಾಯಪಡಿಸುತ್ತಿದ್ದಾರೆ ಆದರೂ, ಮೊನ್ನೆ ನಮ್ಮ ಪ್ರಭುಗಳವರು ಅಪ್ಪಣೆ ಕೊಡಿಸಿದ ಸಂದೇಶದಲ್ಲಿ ಈ ಅಂಶವು ಕಾಣಬರುವುದಿಲ್ಲ. ಪ್ರಜೆಗಳನ್ನು ಆಡಳಿತದಲ್ಲಿ ಹೆಚ್ಚು ಹೆಚ್ಚಾಗಿ ತೆಗೆದುಕೊಳ್ಳುವ ನೀತಿಯನ್ನು ಮಾತ್ರ ಅನುಮೋದಿಸಲಾಗಿದೆ. ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಬಗ್ಗೆ ದಿವಾನರು ಸಲಹೆ ಕೊಡುವರೇ- ಎಂದು ಮೊನ್ನೆ ನಡೆದ ಪತ್ರಿಕಾ ಸಮ್ಮೇಳನದಲ್ಲಿ ಪ್ರಶ್ನೆ ಬಂದಾಗ ಏನೂ ಹೇಳಲು ಸಾಧ್ಯವಿಲ್ಲವೆಂದು ಅವರು ತಿಳಿಸಿದರು ಇದು ಸಂತೋಷಕರವಾದ ವಿಷಯವಲ್ಲ

ಬರೋಡಾದಲ್ಲಿ ಆಗಿರುವುದು ಇಲ್ಲಿ ಆಗದಿರಲು ಕಾರಣವಿಲ್ಲ. ಆ ಸಂಸ್ಥಾನಕ್ಕಿಂತಲೂ ಮೈಸೂರು ಏಕೆ ಹಿಂದೆ ಬೀಳಬೇಕು? ಮುಂದೆ ಮಾಡಲಿರುವ ಬದಲಾವಣೆಗಳನ್ನು ಸೂಚಿಸುವಾಗ ಜವಾಬ್ದಾರಿ ಸರ್ಕಾರ ಸ್ಥಾಪನೆಯ ವಿಷಯವನ್ನೇ ಗುರಿಯಾಗಿಟ್ಟುಕೊಂಡಿರಬೇಕೆಂದು ಬರೋಡಾ ಮಹಾರಾಜರು ಆಜ್ಞೆ ಮಾಡಿರುತ್ತಾರೆ ಆದರೆ ಇಲ್ಲಿ ಅಂತಹ ನಿರೂಪಣೆಯನ್ನು ಮಾಡಿರುವುದಿಲ್ಲ.

ಬರೋಡಾ ದಿವಾನರು ಆ ಘೋಷಣೆಯ ಮೇಲೆ ವ್ಯಾಖ್ಯಾನ ಮಾಡಿ ಜವಾಬ್ದಾರಿ ಸರ್ಕಾರದ ದಾರಿಯಲ್ಲಿ ಅದು ಒಂದು ಮುಖ್ಯ ಮೆಟ್ಟಿಲೆಂದು ಹೇಳಿರುತ್ತಾರೆ ಕೂಡಲೇ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದು ಕೇಳುವವರು ಸ್ವಲ್ಪ ಶಾಂತರಾಗಿರಬೇಕೆಂದು ಕೋರಿದ್ದಾರೆ ಮತ್ತು ತಾವು ಖಂಡಿತವಾಗಿಯೂ ತಪ್ಪಿಗಿರದೆ ಮುಂದೆ ಮುಂದೆ ಹೋಗುವುದಾಗಿಯೂ ತಿಳಿಸಿದ್ದಾರೆ. ಬ್ರಿಟಿಷರ ಸಾರ್ವಭೌಮಾಧಿಕಾರವು ಇರುವವರೆಗೆ ಅವರಲ್ಲಿರುವ ಅಧಿಕಾರವನ್ನು ಇನ್ನೊಬ್ಬರಿಗೆ ವರ್ಗಾಯಿಸಲು ಸಾಧ್ಯವಿಲ್ಲವೆಂದೂ, ಹಕ್ಕುಗಳನ್ನು ವರ್ಗಾಯಿಸಬಹುದಾದರೂ ಬಾಧ್ಯತೆಗಳನ್ನು ವರ್ಗಾಯಿಸುವುದು ಕಷ್ಟವೆಂದೂ ಸೂಚಿಸಿರುತ್ತಾರೆ ಇವೆಲ್ಲವೂ ಚರ್ಚಾಸ್ಪದವಾದ ವಿಷಯಗಳು.

ಸಕಲ ಭಾರತೀಯರ ಕನಸಿನ ಆಕಾಂಕ್ಷೆಯಾಗಿರುವ ಪೂರ್ಣ ಸ್ವಾತಂತ್ರ್ಯವನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಬ್ರಿಟಿಷ್ ಹಿಂದೂಸ್ಥಾನದೊಡನೆ ಸಂಪೂರ್ಣವಾಗಿ ಸಹಕರಿಸುವುದೇ ಬರೋಡಾ ಮಹಾರಾಜರ ಆಶಯವೆಂದು ಅಲ್ಲಿನ ದಿವಾನರು ಹೇಳಿರುವರು ಇದು ಎಲ್ಲಾ ದೇಶ ಭಕ್ತರುಗಳಿಗೂ ಸಮಾಧಾನವನ್ನುಂಟುಮಾಡುವ ವಿಷಯ.

ಮುಂದೆ ಕೈಗೊಳ್ಳಲಿರುವ ಕಾರ್ಯದಲ್ಲಿ ಮೈಸೂರು ಯಾವ ಸಂಸ್ಥಾನಕ್ಕೂ ಹಿಂದೆ ಬೀಳದಂತೆಯೂ, ನಿಜವಾದ ಪ್ರಜಾ ಪ್ರಭುತ್ವ ಗುರಿಯನ್ನು ಸಾಧಿಸುವಂತೆಯೂ ಕೂಡಲೇ ಕಾರ್ಯಕ್ರಮವನ್ನು ನಮ್ಮ ಆಳರಸರೂ ಕೈಗೊಳ್ಳಬೇಕೆಂದು ನಾವು ಕೋರುತ್ತೇವೆ.

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ

R 1—1946-47

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರೀ ಡಿಪೋ, ಲೈಸೆನ್ಸ್ ಪಡೆದ ವರ್ತಕರ ಡಿಪೋ, ಮೊಹಲ್ಲಾ ಸಬ್ ಗೌಡೌನ್ ಮತ್ತು ಸಹಕಾರ ಸಂಘಗಳು ತಾ|| 14-1-47 ನೇ ಮಂಗಳವಾರ "ಉತ್ತರಾಯಣ ಪುಣ್ಯಕಾಲ" ಪ್ರಯುಕ್ತ ಪೂರ್ತಿ ಮುಚ್ಚಲ್ಪಡುತ್ತವೆ.

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
೯-೧-೪೭, ಮೈಸೂರು ಸಿಟಿ
ಮೈಸೂರು.

ವಾರ ಭವಿಷ್ಯ

ತಾ|| ೧೩-೧-೪೭ ರಿಂದ ೨೦-೧-೪೭ರ ವರೆಗೆ
(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ಆರೋಗ್ಯ ಚೆನ್ನಾಗಿರುತ್ತದೆ ಧನಲಾಭ ಉತ್ತಮ ಉದ್ಯೋಗ ವ್ಯವಹಾರಗಳಲ್ಲಿ ಯಶ ಅಧಿಕಾರಿಗಳಿಂದ ಸನ್ಮಾನ ಮಿತ್ರರಿಂದ ವಿಶೇಷ ಸಹಾಯ ಪ್ರವಾಸದಿಂದ ಬಂಧು ದರ್ಶನ. ತಾ|| ೧೫, ೧೭, ೨೦ ಸಾಧಾರಣ ಮಿತ್ರಾಗಮನ

ವೃಷಭ—ಆರೋಗ್ಯ ಉತ್ತಮ. ಧನಲಾಭ ಸಾಧಾರಣ ಉದ್ಯೋಗ ವ್ಯವಹಾರಗಳಲ್ಲಿ ಶತ್ರುಗಳಿಂದ ಕಿರುಕುಳ ರಾಜಕೀಯ ವ್ಯಕ್ತಿಗಳ ಸಹವಾಸದಿಂದ ತೊಂದರೆ ಮತ್ತು ಅಧಿಕಾರಿ ವರ್ಗದವರಿಂದ ಮನಸ್ತಾಪ. ತಾ|| ೧೭, ೧೮, ಧನಲಾಭ.

ಮಿಥುನ ಆರೋಗ್ಯ ಕೆಡುತ್ತದೆ. ಧನಾದಾಯ ಕಡಿಮೆ ಶತ್ರುಗಳಿಂದ ಕಿರುಕುಳ. ಮಿತ್ರರಿಂದ ತಿರಸ್ಕಾರ. ಉದ್ಯೋಗ ವ್ಯವಹಾರಗಳಲ್ಲಿ ವಿಶೇಷ ಬೇಸರಿಕೆ ವಿಷಯೋಪಭೋಗಗಳಿಗಾಗಿ ಖರ್ಚು. ಪ್ರವಾಸದಿಂದ ತೊಂದರೆ. ತಾ|| ೧೫, ೧೮, ೧೯ ಸಾಧಾರಣ ಲಾಭ ಶಾಂತಿ

ಕಟಕ—ಆರೋಗ್ಯ ಸಾಧಾರಣ. ಧನಾದಾಯ ಹೆಚ್ಚು ನೌಕರಿಯಲ್ಲಿ ಪಾಲುಮಾರಿಕೆ. ವ್ಯಾಪಾರದಲ್ಲಿ ನಷ್ಟ ಶತ್ರುಗಳಿಂದ ತೊಂದರೆ. ವ್ಯವಹಾರದಲ್ಲಿ ಜಯ. ಅಧಿಕಾರಿ ವರ್ಗದವರಿಂದ ಸನ್ಮಾನ ಪ್ರವಾಸದಿಂದ ಬಂಧು ದರ್ಶನ. ತಾ|| ೧೪, ೧೭, ೧೮ ಲಾಭ. ಮಿತ್ರ ದರ್ಶನ

ಸಿಂಹ—ಆರೋಗ್ಯ ಚೆನ್ನಾಗಿರುತ್ತದೆ. ಮಾನಸಿಕ ಚಿಂತೆ ಹೆಚ್ಚು. ಪ್ರವಾಸದಿಂದ ಆರೋಗ್ಯ ಕೆಡುತ್ತದೆ ಉದ್ಯೋಗ ವ್ಯವಹಾರಗಳಲ್ಲಿ ಯಶ ಅಧಿಕಾರಿ ವರ್ಗದವರಿಂದಲೂ ಮಿತ್ರ ವರ್ಗದವರಿಂದಲೂ ವಿಶೇಷ ಸಹಾಯ ತಾ|| ೧೩, ೧೫, ೧೯ ಲಾಭ.

ಕನ್ಯಾ—ದೇಹಸ್ಥಿತಿ ಉತ್ತಮ. ಧನಾದಾಯ ಕಡಿಮೆ. ಖರ್ಚು ಹೆಚ್ಚು. ಮಾನಸಿಕ ಚಿಂತೆ ಹೆಚ್ಚು. ಅಧಿಕಾರಿಗಳಿಂದ ತಿರಸ್ಕಾರ ಶತ್ರುಗಳಿಂದ ವ್ಯಾಪಾರದಲ್ಲಿ ನಷ್ಟ ಆಪ್ತರಿಂದ ತೊಂದರೆ. ತಾ|| ೧೭, ಸಾಧಾರಣ

ತುಲಾ—ಆರೋಗ್ಯ ಸಾಧಾರಣ. ಉದ್ಯೋಗ ವ್ಯವಹಾರಗಳಲ್ಲಿ ಯಶ. ಧನಲಾಭ ಉತ್ತಮ. ಅಧಿಕಾರಿಗಳಿಂದಲೂ, ಮಿತ್ರರಿಂದಲೂ ವಿಶೇಷ ಸಹಾಯ. ಸಂತೋಷ ಕೂಟಕ್ಕಾಗಿ ವಿಶೇಷ ಖರ್ಚು. ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ. ತಾ|| ೧೯, ಸಾಧಾರಣ.

ವೃಶ್ಚಿಕ—ಆರೋಗ್ಯ ಚೆನ್ನಾಗಿರುತ್ತದೆ ಮಾನಸಿಕ ಚಿಂತೆ ಹೆಚ್ಚು. ಉದ್ಯೋಗ ವ್ಯವಹಾರಗಳಲ್ಲಿ ನಷ್ಟ ಬಂಧುಗಳಿಂದ ಮನಸ್ತಾಪ ಕುಟುಂಬದಲ್ಲಿ ಕಾಯಿಲೆ ಸಂಭವ. ತಾ|| ೧೪, ೧೫, ೧೯ ಸಾಧಾರಣ

ಧನಸ್ಸು—ದೇಹಸ್ಥಿತಿ ಉತ್ತಮ. ಮಾನಸಿಕ ಚಿಂತಾನಾಶ. ಧನಲಾಭ ಉತ್ತಮ. ಉದ್ಯೋಗ ವ್ಯವಹಾರಗಳಲ್ಲಿ ಯಶ. ಧಾರ್ಮಿಕ ಕಾರ್ಯಗಳಲ್ಲಿ ವಿಶೇಷವಾದ ಪ್ರವೃತ್ತಿ. ತಾ|| ೧೭, ೧೮ ಲಾಭ ಚಿಂತೆ.

ಮಕರ—ಆರೋಗ್ಯ ಉತ್ತಮ. ಉದ್ಯೋಗ ವ್ಯವಹಾರಗಳಲ್ಲಿ ಅಧಿಕಾರಿಗಳಿಂದ ಮನಸ್ತಾಪ ಖರ್ಚು ಅಧಿಕ. ಹೆಂಡತಿಯ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಬಹಳ ಹೆಚ್ಚುತ್ತದೆ ಮಾನಸಿಕ ಚಿಂತೆ ಹೆಚ್ಚು. ತಾ|| ೧೫, ೧೭, ಲಾಭ ಸನ್ಮಾನ.

ಕುಂಭ—ಪ್ರಕೃತಿ ಚೆನ್ನಾಗಿರುತ್ತದೆ ವ್ಯಾಪಾರ ಉದ್ಯೋಗಗಳಿಗಾಗಿ ವಿಶೇಷ ಪ್ರವಾಸ ಧಾರ್ಮಿಕ ಕಾರ್ಯಗಳಿಗಾಗಿ ಹೆಚ್ಚಿನ ವೆಚ್ಚ. ಧನಲಾಭ ಉತ್ತಮ. ಮಿತ್ರರಿಂದ ಸಹಾಯ. ತಾ|| ೧೩, ಚಿಂತೆ

ಮೀನ—ಆರೋಗ್ಯ ಉತ್ತಮ. ಲಾಭ ಸಾಧಾರಣ. ಪ್ರವಾಸದಿಂದ ಖ... ಅಧಿಕಾರಿ ವರ್ಗದವರಿಂದ ಸನ್ಮಾನ. ಉದ್ಯೋಗ ವ್ಯವಹಾರಗಳಲ್ಲಿ ಜಯ. ...ರಿಂದ ಸಹಾಯ ತಾ|| ೧೭, ೧೮ ...ರಣ ಕಲಹ.

ಆಪೇರಾ ಟಾಕೀಸ್
10-1-47 ರಿಂದ
ಪೊನ್ಮುಡಿ (ತಮಿಳು)
(ಮಹಾಭಾರತದ ಕಥೆಯು ಕರ್ಣನ ವಿವಾಹ, ಜೀವನ, ನಡತೆಗಳನ್ನು ಚಿತ್ರಿಸಿರುವ ಕಥೆ)
ಪ್ರತಿದಿನ ಮೂರು ಆಟಗಳು
ಪಾತ್ರ:- "ಕೊತ್ತಮಂಗಲಂ ಸೀನು" ಕೆ. ಟಿ ರುಕ್ಮಿಣಿ "ಆರ್. ಬಾಲಸುಬ್ರಹ್ಮಣ್ಯಂ

Edited, printed and published by A. R. Nagarajoo at the Sadhvi Press D-Subbiah Road, Mysore.

ರಾಜಕಮಲ್, ಮೈಸೂರು
10-1-47 ರಿಂದ 3 ನೇ ವಾರ
—: ಪ್ರಕಾಶ್ ರವರ :—
ಹಮಾರಾ ಸಂಸಾರ್
ಜೀವನ್ ರಂಜನಾ, ಜಿಲ್ಲು, ಉಮಾಕಾಂತ್,

ವ್ಯಾನ್‌ಗಾರ್ಡ್ ಫೈರ್ ಮತ್ತು ಜನರಲ್
ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್
ಹೆಡ್ ಆಫೀಸ್:- ಮದ್ರಾಸು
ಸುರಕ್ಷಿತವಾದ ಕಂಪೆನಿ. ಇಂಡಿಯಾ ಮತ್ತು ಸಿಲೋನಿನಲ್ಲೆಲ್ಲಾ ಶಾಖೋಪಶಾಖೆಗಳಿವೆ.
ಫೈರ್, ಮೋಟಾರ್, ಮೆರೀನ್, ಆಕ್ಸಿಡೆಂಟ್, ವರ್ಕ್‌ಮೆನ್ಸ್ ಕಂಪೆನ್ಸೇಷನ್, ಲೈಫ್ ಮತ್ತು ಇನ್ನೂ ಎಲ್ಲಾ ತರಹೆಯ ಇನ್ಷೂರೆನ್ಸುಗಳನ್ನು ಕೈಗೊಳ್ಳುವ ಕಂಪೆನಿ.
ಪಾಲಿಸಿದಾರರುಗಳಿಗೆ ಹೆಚ್ಚಿಗೆ ಬೋನಸ್ಸು ಹಂಚಲ್ಪಟ್ಟಿರುತ್ತೆ.
ಏಜೆಂಟರುಗಳಿಗೆ ಧಾರಾಳವಾದ ಕಮೀಷನ್.
ಪಾಲಿಸಿ ತೆಗೆದುಕೊಳ್ಳಲೂ ಮತ್ತು ಏಜೆಂಟರುಗಳೂ ಈ ನಮ್ಮಲ್ಲಿ ವಿಚಾರಿಸಿ:-
ಎಂ. ಸಿ. ಸಂಪತ್ತಯ್ಯಂಗಾರ್,
ಸ್ಪೆಷಲ್ ರೆಪ್ರೆಸೆಂಟೆಟಿವ್, ಕತ್ತವಾಡಿಪುರ ಅಗ್ರಹಾರ, ಮೈಸೂರು

ಪೋ. ರಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫ | ಬುಧವಾರ ೧೫—೧—೪೭ | ಸಂಚಿಕೆ ೧೪೫

ಕಮ್ಯೂನಿಸ್ಟ್ ಕೇಂದ್ರಗಳ ಶೋಧನೆ ಮತ್ತು ದಸ್ತಗಿರಿ

ಮೈಸೂರು ತಾಲ್ಲೂಕಿನಲ್ಲೂ ಪ್ರತಿಬಂಧಕಾಜ್ಞೆ

ಮೈಸೂರು ೧೫

...ಂದ ರಹದಾರಿ ಪಡೆಯದೆ ಮೊನ್ನೆ ... ಮೂರು ತಿಂಗಳ ಕಾಲ ಸಭೆ ಮ...ರವಣಿಗೆಗಳನ್ನು ನಡೆಸದಂತೆ ಮೈ... ತಾಲ್ಲೂಕು ಅಮಲ್ದಾರರವರ ಪೊ...ಶಾಸನದ ೧೪೫ ನೇ ಕಲಮಿನ ಪ್ರಕಾ...ರ ಪ್ರತಿಬಂಧಕಾಜ್ಞೆಯನ್ನು ಹೊರಡಿಸಿರು... ಈ ತಾಲ್ಲೂಕಿಗೆ ಸೇರಿದ ಕಡಕೊಳ, ...ಪುರ, ದೊಡ್ಡ ಕಾಟೂರು, ಇಲವಾಲ, ...ರಿ, ಊಟಗಳ್ಳಿ, ಹಿನಕಲ್ಲು, ನಾಗನ... ಕೆಸ್ತವಾಡಿ ಗುತ್ತು ಸಿದ್ದಲಿಂಗಪುರ ... ಆಜ್ಞೆ ಅನ್ವಯಿಸುವುದು ಯ... ...ನ ಮದುವೆ ಮತ್ತು ಮರಣಗಳ ...ರವಣಿಗೆಗಳಿಗೆ ಈ ಆಜ್ಞೆಯು ಸಂಬಂಧ ...ವಿಲ್ಲ

ಹಿಂದೂ ಮಹಾಸಭಾ

...ಸೂರು ಸಂ|| ಹಿಂದೂ ಮಹಾಸಭಾ ...ರ ಸಮಿತಿಯ ಸಭೆಯು ಬೆಂಗಳೂ...ರ ಮಹಾಸಭಾ ಪ್ರಧಾನ ಕಛೇರಿ... ತಾ| ೨೦-೧-೪೭ ನೇ ಸೋಮವಾರ ... ಘಂಟೆಗೆ ಜರಗುತ್ತದೆ ಅಧಿವೇ... ಸಂಬಂಧಪಟ್ಟ ಮತ್ತು ಇತರ ಬಹು ವಿಷಯಗಳು ತೀರ್ಮಾನವಾಗಲಿವೆ

ಸಂತಾಪ ಸೂಚನಾ ಸಭೆ

...ಪಾರ್ಡೇಕರ್ ಮುಂಡಪ್ಪನವರ ನಿಧ...ನಕ್ಕೆ ಸಂತಾಪ ಸೂಚಿಸಲು ನಾಳೆ ಸಂ... ಘಂಟೆಗೆ ಟೌನ್‌ಹಾಲಿನಲ್ಲಿ ಸಭೆ ... ಏರ್ಪಡಿಸಲಾಗಿದೆ ಅಖಿಲ ಮೈ...ಸೂರು ಹಿಂದೂ ಮಹಾಸಭೆಯ ಅಧ್ಯಕ್ಷ ಶ್ರೀ ಎಂ ಸಿ ಮಲ್ಲಪ್ಪನವರು ಅಗ್ರ... ವಹಿಸುವರು ಸರ್ವರೂ ಭಾಗವಹಿಸ...ಬೇಕಾಗಿ ಕೋರಲಾಗಿದೆ

ಮಂತ್ರಿಮಂಡಲದ ಸಭೆ

...ದಿನ ಬೆಳಿಗ್ಗೆ ದಿವಾನರ ಅಧ್ಯಕ್ಷತೆಯಲ್ಲಿ ...ತ್ರಿ ಮಂಡಲದ ಸಭೆ ಇಲ್ಲಿ ನಡೆಯಿತು. ...ಸಚಿವರಾದ ಶ್ರೀ ಎಂ. ಶೇಷಾದ್ರಿಯ...ವರ ಉಳಿದ ಮಂತ್ರಿಗಳೆಲ್ಲರೂ ಹಾಜ...ರಿದ್ದರು.

Office of the President, City Municipal Council, Mysore,

...ated 13th January 1947.

NOTICE

Applications will be re...ived for the post of the ...unicipal Advocate of the ...sore City Municipality ...om the Advocates of ...ysore of not less than five ...ars standing The period ...ppointment will be co-terminus with the that of the ...resent Municipal Council ...e monthly emoluments ...ill be Rs 150. Other particulars regarding particu...rs of work etc, may be ...certained in the office of ...e undersigned

...d) K Ramachandra Rao Bhombore,

President.

ಪ್ರತಿಬಂಧಕಾಜ್ಞೆಗಳ ಸುರಿಮಳೆ

ಅಡ್ವೋಕೇಟರಾದ ಶ್ರೀ|| ಟಿ ಎಸ್ ರಾಜಗೋಪಾಲಯ್ಯಂಗಾರ್ಯರವರು ಈ ರೀತಿ ಬರೆಯುತ್ತಾರೆ:-

ಸಂಸ್ಥಾನದ ಮೂಲೆ ಮೂಲೆಗೂ ಅನ್ವಯಿಸುವಂತೆ ಪ್ರತಿಬಂಧಕಾಜ್ಞೆಗಳು ಹೊರಬೀಳುತ್ತಿರುವುದು ಇತ್ತೀಚಿನ ನಡವಳಿಕೆಯಾಗಿದೆ ಇದು ಜನ ಜಾಗೃತಿಯಿಂದ ಕೂಡಿದ ಕಾಲ, ನಾವು ಹಿಂದಿನ ಚಳುವಳಿಯ ಯುಗ ಅಭಿಪ್ರಾಯ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ, ಇವು ಕುದಿಗೊಂಡು ಪ್ರತಿಯೊಬ್ಬ ಪೌರನೂ ಸಂಘಟಿತ ರೀತಿಯಲ್ಲಿ ಜಾಗೃತಿಗೊಂಡು, ತನ್ನ ನಾಡಿನ ರಾಜಕೀಯ, ಆರ್ಥಿಕ, ಸಾಮಾಜಿಕ ಬೆಳವಣಿಗೆಗೆ ಪ್ರಬಲವಾಗಿ ಮುಂಬರಿಯಬೇಕಾದ ಸಂದರ್ಭವಿದು ಹೀಗಿರುವಾಗ ಆ ಚಳವಳಿಯಲ್ಲಿರುವ ಸ್ವಾತಂತ್ರ್ಯವನ್ನೇ ದಮ್ಮುಗೊಳಿಸುವುದು ಸರ್ವಥಾ ಸರಿಯಲ್ಲ

ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ ಕ್ರಮವು ಪ್ರತಿಬಂಧಕಾಜ್ಞೆಗಳಿಗೆ ಆಮಂತ್ರಣವಿತ್ತಂತಿದೆ. ರಾಜದ್ರೋಹಕರವಾದ ಭಾಷಣ ಮಾಡಿದವರನ್ನು ನ್ಯಾಯಸ್ಥಾನಕ್ಕೆ ಗುರಿಪಡಿಸುವ ಅವಕಾಶವಿರುವಾಗ ೭೦ ಲಕ್ಷ ಪ್ರಜೆಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಈ ಪ್ರತಿಬಂಧಕಾಜ್ಞೆಗಳಿಂದ ಏನು ಪ್ರಯೋಜನ? ಅತ್ಯ ಗೌರವಪೂರ್ಣ ಪ್ರತಿಷ್ಠೆಪಟ್ಟ ನಾಡಿನ ಸೇವಕರೂ ಇಂತಹ ಆಜ್ಞೆಗಳಿಗೆ ಪ್ರತಿಭಟನೆ ಸೂಚಿಸಲೇ ಬೇಕು ಜನತಾ ಭಾವನೆಯೂ, ಜಾಗೃತಿಯೂ ಮೂಡುತ್ತಿರುವ ಈ ಕಾಲದಲ್ಲಿ ಸರ್ಕಾರವು ಪ್ರಜಾ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಕಾಯಿದೆಗಳನ್ನು ಜಾರಿಗೆ ತೆಯಲ್ಲಿಡಲಾಗದೆಂದು ಒತ್ತಿ ಹೇಳ ಬಯಸುತ್ತೇನೆ

ಫೆಡರಲ್ ನ್ಯಾಯಾಧೀಶರ ಆಗಮನ

ಮೈಸೂರು ೧೫

ಹಿಂದೂಸ್ಥಾನದ ಫೆಡರಲ್ ಕೋರ್ಟ್ ನ್ಯಾಯಾಧೀಶರಾದ ಸರ್ ಮಹಮದ್ ಜಾಫರುಲ್ಲಾ ಖಾನರು ನಿನ್ನೆ ರಾಜಧಾನಿಗೆ ಆಗಮಿಸಿದರು. ದಿವಾನರೂ, ಇತರ ಅಧಿಕಾರಿಗಳೂ ಅವರನ್ನು ರೈಲ್ವೆ ನಿಲ್ದಾಣದಲ್ಲಿ ಸ್ವಾಗತಿಸಿದರು ಅವರು ಸರ್ಕಾರದ ಅತಿಥಿಗಳಾಗಿ ಗೌರ್ನಮೆಂಟ್ ಹೌಸಿನಲ್ಲಿ ತಂಗಿರುವರು ಈ ದಿನ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಅವರಿಗೆ ಭೇಟಿಯನ್ನಿತ್ತರೆಂದು ತಿಳಿದುಬಂದಿದೆ

ಹನುಮಂತಯ್ಯನವರ ಮೊಕದ್ದಮೆ

ಸ್ವ. ಸು. ಪ್ರೋ] ಬೆಂಗಳೂರು ೧೫

ಕಾಂಗ್ರೆಸ್ ನಾಯಕರಾದ ಶ್ರೀ|| ಕೆ ಹನುಮಂತಯ್ಯನವರ ಮೇಲೆ ತಂದಿರುವ ಮೊಕದ್ದಮೆಯು ಕ್ರಮಬದ್ಧವಾಗಿಲ್ಲವೆಂಬುದಾಗಿ ಬಂದಿದ್ದ ವಾದವನ್ನು ನಿರಾಕರಿಸಿ ಈ ದಿನ ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ|| ಕೆ. ಪಿ ರಾಮನಾಥಯ್ಯನವರು ತೀರ್ಪಿತ್ತು ಅದು ಕ್ರಮಬದ್ಧವಾಗಿದೆಯೆಂದು ತಿಳಿಸಿದರು. ಅನಂತರ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾದ ಮಿ|| ಲತೀಫ್‌ರವರ ಸಾಕ್ಷ್ಯವನ್ನು ತೆಗೆದುಕೊಳ್ಳಲಾಯಿತು

* ಬೆಂಗಳೂರು ಡಿವಿಜನ್ ಜಿಯಲಾಜಿಕಲ್ ಸೂಪರಿಂಟೆಂಡೆಂಟರಾದ ಶ್ರೀ|| ಬಿ ಪಿ ಕೃಷ್ಣಾಚಾರ್ಯರವರನ್ನು ಬಿಳ್ಳಾರದ ಚಿನ್ನದ ಗಣಿಯ ಸೂಪರಿಂಟೆಂಡೆಂಟರಾಗಿ ನೇಮಿಸಲಾಗಿದೆ

* ಕಂಟ್ರೋಲರಾದ ಶ್ರೀ|| ಎ ಟಿ ಶ್ರೀನಿವಾಸನ್‌ರವರನ್ನು ಸಂಬಳ ನಿಯಾಮಕದ ಸಮಿತಿಯ ಸದಸ್ಯರಾಗಿ ನೇಮಿಸಲಾಗಿದೆ

† ಮೈಸೂರು ಜಿಲ್ಲಾ ಜಡ್ಜರಾದ ಶ್ರೀ|| ಕೆ.ವಿ. ಅಯ್ಯಂಗಾರ್ಯರಿಗೆ ಮೊನ್ನೆಯಿಂದ ಏಪ್ರಿಲ್ ೫ ರವರೆಗೆ ರಜಾ ಕೊಡಲಾಗಿದೆ

—

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರ

ಮೈಸೂರು ಸೋದರರ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ಆಶ್ರಯದಲ್ಲಿ ಕಳೆದ ೧೨ ನೇ ತಾ|| ಶ್ರೀ ತ್ಯಾಗರಾಜ ಶತಮಾನೋತ್ಸವವೂ, ನೂತನ ಪುರಸಭಾ ಸದಸ್ಯರಿಗೆ ಸತ್ಕಾರವೂ ನಡೆದುವು ವೈಣಿಕ ಪ್ರವೀಣ, ಸಂಗೀತ ವಿಶಾರದ, ಆಸ್ಥಾನ ವಿದ್ವಾನ್ ಶ್ರೀ ವಿ ವೆಂಕಟಗಿರಿಯಪ್ಪನವರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆ ಮತ್ತು ಮಂದಿರದ ಅಧ್ಯಕ್ಷರಿಂದ ಸ್ವಾಗತ ಭಾಷಣವಾದ ಮೇಲೆ ಸಂ| ವಿ| ಪಂಡಿತ ಅರ್ಚಿಸಂತಕೃಷ್ಣಶರ್ಮರವರು ಶ್ರೀ ತ್ಯಾಗರಾಜರ ವಿಷಯವಾಗಿ ಅಮೋಘ ಭಾಷಣ ಮಾಡಿದರು ಅಧ್ಯಕ್ಷರ ಭಾಷಣವಾದನಂತರ ಮೈಸೂರು ಸಹೋದರರು ಶ್ರೀ ತ್ಯಾಗರಾಜರ ಕೆಲವು ಕೃತಿಗಳನ್ನು ಹಾಡಿದರು ಅನಂತರ ಪುರಸಭಾ ಸದಸ್ಯರಾದ ಶ್ರೀ ಟಿ. ಸೀತಾರಾಮಯ್ಯನವರು ಭಾಷಣ ಮಾಡಿದರು. ಮಂಗಳಾರತಿ, ಪ್ರಸಾದ ವಿನಿಯೋಗದೊಡನೆ ಉತ್ಸವವು ಮುಕ್ತಾಯಗೊಂಡಿತು

ಕಮ್ಯೂನಿಸ್ಟರ ಮೇಲೆ ಧಾಳಿ

ಭರತಖಂಡದ ಅನೇಕ ನಗರಗಳಲ್ಲಿ ನಿನ್ನೆ ದಿನ ಪೋಲೀಸಿನವರು 'ಏಕಕಾಲದಲ್ಲಿ ಕಮ್ಯೂನಿಸ್ಟ್ ಕಾರ್ಯಾಲಯಗಳಲ್ಲಿ ಶೋಧನೆಗಳನ್ನು ನಡೆಸಿ ಕಾಗದಪತ್ರಗಳನ್ನು ವಶಪಡಿಸಿಕೊಂಡರು ಬೊಂಬಾಯಿನಲ್ಲಿ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಕಛೇರಿಯನ್ನೂ "ಪೀಪಲ್ಸ್ ಏಜ್" ಎಂಬ ಅವರ ಪತ್ರಿಕೆಯ ಮುದ್ರಣಾಲಯವನ್ನೂ ಮತ್ತು ಪಕ್ಷದ ಪ್ರಮುಖರ ನಿವಾಸಗಳನ್ನೂ ಶೋಧನೆ ಮಾಡಲಾಯಿತು ಬ್ರಿ|| ನಿಯೋಗದವರ ಪ್ರಯತ್ನವು ವಿಫಲವಾದರೆ ದೇಶದಲ್ಲಿ ಉದ್ಭವಿಸಬಹುದಾದ ವಿಪ್ಲವದ ಪರಿಸ್ಥಿತಿಯನ್ನು ಹತೋಟಿಯಲ್ಲಿಡಲು ಸ್ವದೇಶ ಸಂಸ್ಥಾನಿಕರು ತಮ್ಮ ಕೈಕೆಳಗಿನ ನೌಕರರಿಗೆ ಕೊಟ್ಟಿದ್ದರೆಂದು ಹೇಳಲಾದ ಸಲಹೆಗಳನ್ನು ಮೇಲ್ಕಂಡ ಪತ್ರಿಕೆಯ ಲೇಖನದಲ್ಲಿ ಬಹಿರಂಗಪಡಿಸಲಾಗಿತ್ತು. ಸದರಿ ಪತ್ರಿಕೆಯ ಸಂಪಾದಕರಾದ ಡಾ|| ಅಧಿಕಾರಿ ಮತ್ತು ಉಪಸಂಪಾದಕರಾದ ಮಿ|| ರಮೇಶಚಂದ್ರ ಎಂಬುವರನ್ನೂ, ಇತರ ಕೆಲವು ಕಮ್ಯೂನಿಸ್ಟರನ್ನೂ ದಸ್ತಗಿರಿ ಮಾಡಲಾಯಿತು

ಕೊಲ್ಹಾಪುರದಲ್ಲಿ ಸಾರ್ವತ್ರಿಕ ಮುಷ್ಕರ

ಕೊಲ್ಹಾಪುರ ಸಂಸ್ಥಾನದಲ್ಲಿ ಸರ್ಕಾರದ ಕೆಳದರ್ಜೆ ನೌಕರರು, ಸಕ್ಕರೆ ಗಿರಣಿ, ವಿದ್ಯುಚ್ಛಕ್ತಿ ಕಾರ್ಖಾನೆ, ಸೀರೆ ಗಿರಣಿ ... ಆಸ್ಪತ್ರೆಗಳ ಸುಮಾರು ... ನೌಕರರ ಸಾರ್ವತ್ರಿಕ ಮುಷ್ಕರವು ಹೆಚ್ಚು ಸಂಬಳಕ್ಕಾಗಿ, ಒಂದು ವಾರದಿಂದ ನಡೆಯುತ್ತಿದೆ ಈ ಸಂಬಂಧದಲ್ಲಿ ಒಬ್ಬ ಮಹಿಳಾ ಪ್ರೈಸ್ಟ್‌ರೂ ಸೇರಿ ಮೂವರನ್ನು ದಸ್ತಗಿರಿ ಮಾಡಲಾಗಿದೆ ಇತರ ಮೂವರು ೨೪ ಗಂಟೆಯೊಳಗೆ ಕೊಲ್ಹಾಪುರವನ್ನು ಬಿಟ್ಟು ಹೊರಡಬೇಕೆಂದು ತಿಳಿಸಲಾಗಿದೆ ಕಳೆದ ೧೩ ದಿನಗಳಿಂದಲೂ ಮುಷ್ಕರ ನಡೆಸುತ್ತಿರುವ ೧೬೦೦ ಜನ ಪ್ರೈಮರಿ ಉಪಾಧ್ಯಾಯರ ಬೇಡಿಕೆಗಳಿಗೆ ಬೆಂಬಲ ನೀಡುವುದಕ್ಕಾಗಿ ಒಟ್ಟು ಕಾಲೇಜು ಅಧ್ಯಾಪಕರನ್ನು, ಇನ್ನೊಬ್ಬ ಪ್ರಿನ್ಸಿಪಾಲರನ್ನು ಸರ್ಕಾರದವರು ಸಸ್ಪೆಂಡ್ ಮಾಡಿದುದೇ ಮುಷ್ಕರಕ್ಕೆ ಮೂಲ

ದೆಹಲಿಯಲ್ಲಿ ೫೦೦೦ ಉಪಾಧ್ಯಾಯರ ಮುಷ್ಕರ

ಹೆಚ್ಚು ಸಂಬಳ ಮತ್ತು ಉತ್ತಮವಾದ ಸೌಲಭ್ಯಗಳ ಬೇಡಿಕೆಗಾಗಿ ಕಾರ್ಪೊರೇಷನ್ ಸ್ಕೂಲು ... ದೆಹಲಿಯ ೫ ಸಾವಿರ ಜನ ಉಪಾಧ್ಯಾಯರು ನಿನ್ನೆ ದಿನ ಮುಷ್ಕರವನ್ನು ಆರಂಭಿಸಿದರು. ... ತೃಪ್ತಿಕರವಾದ ಪರಿಹಾರವನ್ನು ಕೊಡುವದಾಗಿ ವಿದ್ಯಾ ಇಲಾಖೆಯ ಅಧಿಕಾರಿಗಳು ತಮಗೆ ಕಳುಹಿಸಿದ ಸೂಚನೆಯು ಸಮರ್ಪಕವಾಗಿರಲಿಲ್ಲವೆಂದು ಅವರು ನಿರಾಕರಿಸಿದರು. ಇದರಿಂದ ಮುನಿಸಿಪಾಲಿಟಿ ಶಾಲೆಗಳಲ್ಲಿ ಓದುವ ಸುಮಾರು ಒಂದು ಲಕ್ಷ ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ತೊಂದರೆಯಾಗಿದೆ

ಪ್ರತಿಬಂಧಕಾಜ್ಞೆ

ಸ್ವಂ ಸು] ಶ್ರೀರಂಗಪಟ್ಟಣ ೧೪

ಇಲ್ಲಿನ ಅಮಲ್ದಾರ್ರವರು, ಈ ತಾಲ್ಲೂಕಿನಲ್ಲೂ ಮತ್ತು ಇಲ್ಲಿಂದ ೫ ಮೈಲಿ ಸುತ್ತಮುತ್ತಲ ಪ್ರದೇಶದಲ್ಲೂ ಪೊ|| ಅ|| ಯನ್ನು ಜಾರಿಮಾಡಿ ಜನರು ... ದಿನ ನಾಲ್ಕು ತಿಂಗಳ ಕಾಲ ಸಭೆ, ಮೆರವಣಿಗೆ, ಮುಂತಾದುವುಗಳು ನಡೆಯಕೂಡದೆಂದು ನಿಷೇಧಿಸಿದ್ದಾರೆ

ಸಾಧ್ವಿ

ತಾ॥ ೧೫-೧-೪೭ ಬುಧವಾರ

ವರ್ಣ ದ್ವೇಷಕ್ಕೆ ಅನಾರೋಗ್ಯದ ನೆಪವೇ ?

ದಕ್ಷಿಣ ಆಫ್ರಿಕದ ಸರ್ಕಾರದವರು ವರ್ಣ ಶ್ರೇಷ್ಠತೆಯ ಮದಾಂಧತೆಯಿಂದ ಭಾರತೀಯರನ್ನು ದೂರೀಕರಿಸಲು ಮಾಡುತ್ತಿರುವ ಪ್ರಯತ್ನವು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಭಂಗಗೊಳಿಸಲ್ಪಟ್ಟಿದೆಯಷ್ಟೆ. ಆದರೂ ಸಹ ಅವರು ತಮ್ಮ ದುಷ್ಟ ನೀತಿಯನ್ನೇ ಇನ್ನೂ ಮುಂದುವರಿಸಲು ಒಂದಲ್ಲ ಒಂದು ರೀತಿಯಲ್ಲಿ ಹವಣಿಸುತ್ತಿರುವಂತಿದೆ.

ಸಾಧ್ಯವಾದರೆ ಸಂಯುಕ್ತ ರಾಷ್ಟ್ರ ಸಂಘದ ತೀರ್ಮಾನವನ್ನು ಮುಂದಿನ ಅಧಿವೇಶನದಲ್ಲಿ ಬದಲಾಯಿಸಲು ಪ್ರಯತ್ನಗಳಾಗುತ್ತಿವೆ. ಇಲ್ಲವಾದರೆ ಅದನ್ನು ಮೂಲೆಗೆ ತಳ್ಳುವ ಆಲೋಚನೆಗಳೂ ನಡೆಯುತ್ತಿವೆ. ಅದನ್ನು ಪ್ರತ್ಯಕ್ಷವಾಗಿ ನಿರ್ಲಕ್ಷಿಸಿ ಪ್ರತಿಭಟಿಸುವ ಸೂಚನೆಗಳನ್ನೂ ಸಹ ಅಲ್ಲಿನ ಜವಾಬ್ದಾರಿಯುತರಾದ ಜನರು ಕೊಡುತ್ತಿರುವುದು ಆಶ್ಚರ್ಯಕರವಾಗಿದೆ. ಆ ಬಗ್ಗೆ ಯಾವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂಬುದು ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಸಂಬಂಧಿಸಿದ ವಿಷಯ.

ಈ ಮಧ್ಯೆ ದಕ್ಷಿಣ ಆಫ್ರಿಕದ ವೈದ್ಯಾಧಿಕಾರಿಗಳೊಬ್ಬರು ಮಾಡಿರುವ ಸೂಚನೆಯು ವಿಚಿತ್ರತರವಾಗಿದೆ. ವರ್ಣ ದ್ವೇಷದ ಸಾಧನೆಯ ಪ್ರಯತ್ನದ ಪರಮಾವಧಿಯನ್ನು ಅದು ಸೂಚಿಸುತ್ತದೆ. ಅವರ ಸಲಹೆಯಲ್ಲಿ ಅಲ್ಲಿನ ಸರ್ಕಾರದವರ ಕೈವಾಡವೂ ಸಹ ಇಲ್ಲದಿರದು. ದಕ್ಷಿಣ ಆಫ್ರಿಕದಲ್ಲಿರುವ ಭಾರತೀಯರನ್ನು ಹಿಂದೂಸ್ಥಾನ ಅಥವಾ ಮಧ್ಯ ಆಫ್ರಿಕಗಳಿಗೆ ವರ್ಗಾಯಿಸುವುದು ಆ ದೇಶದ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಅಗತ್ಯವೆಂದು ಅವರು ಸೂಚಿಸಿರುವರು. ಭಾರತೀಯರು ವಾಸಿಸುತ್ತಿರುವ ಪ್ರದೇಶಗಳು ಬಹಳ ಇಕ್ಕಟ್ಟಾಗಿಯೂ, ಕಶ್ಮಲಯುತವಾಗಿಯೂ, ಅನಾರೋಗ್ಯದಿಂದ ಕೂಡಿಯೂ ಇರುವುದೆಂದು ಅವರು ಹೇಳಿರುವರು. ಇದರ ಪರಿಹಾರಕ್ಕಾಗಿ ಇಡೀ ಭಾರತೀಯರನ್ನೆಲ್ಲಾ ಆ ದೇಶದಿಂದಲೇ ರವಾನಿಸುವ ಸಲಹೆಯನ್ನು ಕೊಟ್ಟಿರುವರು. ಹಿಂದೂಸ್ಥಾನ ಮತ್ತು ಮಧ್ಯ ಆಫ್ರಿಕಗಳ ಸರ್ಕಾರಗಳೊಡನೆ ಈ ಬಗ್ಗೆ ಸಂಧಾನ ನಡೆಸಬೇಕೆಂದೂ ಸಹ ತಿಳಿಸಿರುವರು.

ಇಕ್ಕಟ್ಟು, ಅನಾರೋಗ್ಯ ಮತ್ತು ಕಶ್ಮಲಯುತವಾದ ಪ್ರದೇಶಗಳನ್ನು ಸ್ವಾಧೀನಪಡಿಸಿಕೊಂಡು ಅವುಗಳಲ್ಲಿ ಸ್ವಚ್ಛವೂ, ಆರೋಗ್ಯಕರವೂ ಆದ ನಿವಾಸಗಳನ್ನು ನಿರ್ಮಿಸುವ ನೀತಿಯನ್ನು ಎಲ್ಲ ಪೌರಸಭೆಗಳೂ ಅವಲಂಬಿಸುವುದು ವಾಡಿಕೆಯಾಗಿದೆ. ಅದರ ಬದಲಾಗಿ ಇಡೀ ಜನಾಂಗಗಳನ್ನೇ ದೇಶದಿಂದ ಹೊರಕ್ಕೆ ಕಳುಹಿಸುವ ಯೋಜನೆಯು ವಿಜಾತೀಯವಾದುದು. ವರ್ಣ ದ್ವೇಷದ ಕುಟಿಲ ನೀತಿಯಲ್ಲಿ ಇಂತಹ ಅಕೃತ್ಯಗಳಿಗೆಲ್ಲಾ ಅವಕಾಶವು ಇದ್ದೇ ಇರುತ್ತದೆ

ಆರೋಗ್ಯವೆಂಬುದು ಕೇವಲ ರೋಗ ಅಥವಾ ಅಶಕ್ತಿಗಳು ಇಲ್ಲದಿರುವುದೇ ಅಲ್ಲವೆಂದೂ, ಶರೀರ, ಮನಸ್ಸು ಮತ್ತು ಸಮಾಜಗಳ ಸಮಾಧಾನ ಸ್ಥಿತಿಯೇ ಆರೋಗ್ಯದ ಅಸ್ತಿಭಾರವೆಂದೂ ವಿಶ್ವದ ಆರೋಗ್ಯ ಸಂಸ್ಥೆಯವರು ಕೊಟ್ಟಿರುವ ವಿವರಣೆಯನ್ನು ಮೋಲ್ಯಾಂಡ ವೈದ್ಯರು ಉದಹರಿಸುತ್ತಾರೆ. ಶರೀರ ಮತ್ತು ಮನಸ್ಸುಗಳ ನೆಮ್ಮದಿಗಾಗಿ ಜನಾಂಗಗಳನ್ನೇ ದೇಶಭ್ರಷ್ಟರನ್ನಾಗಿ ಮಾಡುವ ಪ್ರಯತ್ನವು ಆರೋಗ್ಯ, ಅಧಿಕಾರ ಮತ್ತು ಸ್ವಾತಂತ್ರ್ಯಗಳ ಸಂಪೂರ್ಣ ದುರುಪಯೋಗವೆಂದು ಧಾರಾಳವಾಗಿ ಹೇಳಬಹುದು.

ವರ್ಣದ್ವೇಷದ ಇಂತಹ ಪ್ರಸಂಗಗಳನ್ನು ಮಟ್ಟಹಾಕಲು ಈಗಾಗಲೇ ವಿಶ್ವಜನಾಂಗ ಸಂಸ್ಥೆಯು ಕಂಕಣವನ್ನು ತೊಟ್ಟಿರುತ್ತದೆ. ಇನ್ನೂ ಅಲ್ಲಲ್ಲಿ ಕಾಣಬರುವ ಇಂತಹ ಅಧಿಕ ಪ್ರಸಂಗಗಳನ್ನು ಸದೆಬಡಿದು ಅದು ಮತ್ತೆ ತಲೆ ಎತ್ತದಂತೆ ಮಾಡಲು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ವಿಶ್ವಶಾಂತಿಗಾಗಿ ದುಡಿಯುವ ಸಕಲ ರಾಷ್ಟ್ರಗಳ ಪವಿತ್ರ ಕರ್ತವ್ಯವಾಗಿರುತ್ತದೆ

ನಿಮ್ಮ ಕುರಿತ 5 ಪ್ರಶ್ನೆಗಳ ಖಚಿತವಾದ ಮತ್ತು ತೃಪ್ತಿಕರವಾದ ಉತ್ತರ ದೇವಿ ಮಹಿಮೆಯಿಂದಲೂ, ಜ್ಯೋತಿಷ್ಯ ಶಾಸ್ತ್ರರೀತಿ ಬರೆದು ಕಳುಹಿಸಲಾಗುವುದು. ಜಾತಕ ವಿವರ ಕಾಗದ ಬರೆಯುವ ಕಾಲ ವಗೈರೆ ಸಹಿತ 0-10-6 ಸ್ಟಾಂಪ್ ಸಹಿತ ಕಳುಹಿಸಿ ಮಾಸ ಭವಿಷ್ಯ-12 ತಿಂಗಳಿಗೆ ವಿಸ್ತಾರವಾದ ವಿಷಯ ಸಹಿತ ರೂ. 3-8-0 ಜಾತಕ ಫಲ ವಿಮರ್ಶೆ ರೂ. 10 ವಿ. ಪಿ. ಇಲ್ಲ ಮುಂಗಡ ಕಳುಹಿಸಿ.

ಕೆ. ಎಸ್. ಶ್ರೀನಿವಾಸಮೂರ್ತಿರಾವ್,
ಶ್ರೀ ಸುಧಾಕರ ಜೋಯಿಸ
ಹಳೆಯೂರು ಪೋಸ್ಟು,
ಎಡತೊರೆ ತಾಲ್ಲೂಕು.

ಕಾಂಗ್ರೆಸ್ ಕೆಲಸಗಾರರಿಗೆ ಸಂಬಳ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮೀರತ್ ಅಧಿವೇಶನದ ನಿರ್ಣಯದಂತೆ ಕಾಂಗ್ರೆಸ್ ನೀತಿ ಪ್ರಚಾರ ಮತ್ತು ಪುನರ್ರಚನಾ ಕಾರ್ಯಕ್ರಮಗಳನ್ನು ನಡೆಸುವ ಸಲುವಾಗಿ ಕೆಲಸಗಾರರಿಗೆ ವೇತನ ಕೊಟ್ಟು ಕೆಲಸ ನಿರ್ವಹಿಸುವ ಏರ್ಪಾಡು ಮಾಡಲು ಪ್ರಾಂತೀಯ ಕಾಂಗ್ರೆಸ್ ಸಮಿತಿಗಳ ಅಭಿಪ್ರಾಯವನ್ನು ಕೋರಿರುತ್ತದೆ.

ದಿ
ಅಭಯ ಆಯುರ್ವೇದಿಕ್
ರಿಸರ್ಚಸ್ ಲಿಮಿಟೆಡ್, ಮೈಸೂರು

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:-

ಅಭಯ ಆಯುರ್ವೇದಿಕ್ ರಿಸರ್ಚಸ್ (೧೯೪೬) ಲಿಮಿಟೆಡ್, ಕಂಪೆನಿಯನ್ನು ಸಾರ್ವಜನಿಕ ಸಂಘವೆಂದು ರಿಜಿಸ್ಟರ್ ಮಾಡಿರುವುದರಿಂದ ತಾ॥ ೭-೧-೪೭ ರಲ್ಲಿ ನಡೆದ ಸಂಘದ ವಿಶೇಷ ಸಭೆಯಲ್ಲಿ ಸದರಿ ಕಂಪೆನಿಯನ್ನು ತಾನಾಗಿಯೇ ಮುಚ್ಚಲು ಮತ್ತು ಬೆಂಗಳೂರು ನಗರದ ಕೆಂಪೇಗೌಡ ರಸ್ತೆಯಲ್ಲಿರುವ ರಿಜಿಸ್ಟರ್ಡ್ ಅಕೌಂಟೆಂಟರಾದ ಶ್ರೀ॥ ಎಂ ಸುಬ್ಬರಾವ್, ಬಿ.ಎ., ಎಲ್.ಎಲ್.ಬಿ., ಜಿ.ಡಿ.ಎ., ಆರ್.ಎ., ಯವರನ್ನು ಕಂಪೆನಿಯ ಲಿಕ್ವಿಡೇಟರನ್ನಾಗಿ ನೇಮಿಸಲು ವಿಶೇಷ ನಿರ್ಣಯವಾಗಿರುತ್ತದೆ.

ಬೋರ್ಡ್ ಆಫ್ ಡೈರೆಕ್ಟರುಗಳ
ಅಪ್ಪಣೆ ಪ್ರಕಾರ,
ವೈ. ಪಾರ್ಥನಾರಾಯಣ ಪಂಡಿತ್,
ಮ್ಯಾನೇಜಿಂಗ್ ಡೈರೆಕ್ಟರು.

Edited, printed and published by A. R. Nagarajan at the Sadhvi Press D. Subbiah Road, Mysore.

THE
ABHAYA AYURVEDIC
RESEARCHES LTD,
MYSORE.

Notice is hereby given that as per the special Resolution passed at the Extraordinary Meeting of the Company held on 7-1-47 it was resolved that the Company be wound up voluntarily in view of the Abhaya Ayurvedic Researches (1946) Limited having been registered as a Public Company, and that Mr. M. Subba Rao, B.A., LL.B., G.D.A., R.A., Registered Accountant, Kempegowda Road, Bangalore City, be appointed the Liquidator.

By order of the Board of Directors,
(Sd) Y. Parthanarayana Pandit,
Managing Director.

ಹೊಸದಾಗಿ ಶಾಲುಗಳೂ, ಇಟಾಲಿಯನ್ ರಗ್ಗುಗಳೂ, ಇಂಗ್ಲಿಷ್ ಕೋಟಿಂಗ್ ಸೂಟಿಂಗುಗಳೂ ಬಂದಿರುತ್ತವೆ. ಬಂದುನೋಡಿ
ಬಾಹುಸಾರ್ ಟ್ರೇಡಿಂಗ್ ಕಂಪೆನಿ,
ಓಲ್ಡ್ ಮೈಸೂರು ಬ್ಯಾಂಕ್ ರೋಡು,
ಮೈಸೂರು

ಸಾಧ್ವಿ
ಕೂಡಲೇ ಚಂದಾದಾರರಾಗಿರಿ

ರಾಜಕಮಲ್, ಮೈಸೂರು
10-1-47 ರಿಂದ 3 ನೇ ವಾರ
—: ಪ್ರಕಾಶ್ ರವರ :—
ಹಮಾರಾ ಸಂಸಾರ್
ಜೀವನ್ ರಂಜನಾ, ಬೆಲ್ಲು, ಉಮಾಕಾಂತ್,

ಐಟಿಯಾಲ್
Trade ITL Mark
ಅತ್ಯುತ್ತಮವಾದ ಕ್ರಿಮಿ ನಾಶಿನಿ

ಕಾರ್ಬಾಲಿಕ್ ದ್ರಾವಕಕ್ಕಿಂತಲೂ ಆರರಷ್ಟು ಶಕ್ತಿಯುತವಾದದ್ದು ವಿಷಮಿಶ್ರಿತವಲ್ಲದ್ದು, ಸವೆಸದಿರುವುದು, ಕಲೆಯನ್ನು ಉಳಿಸದಿರುವುದು ಮತ್ತು ಆಹ್ಲಾದಕರವಾದ ವಾಸನೆಯುಳ್ಳದ್ದು. ಕ್ರಿಮಿಗಳಿಗೆ ಐಟಿಯಾಲ್ ಮೃತ್ಯುಪ್ರಾಯ ಆದರೆ ಸೂಕ್ಷ್ಮ ಚರ್ಮಕ್ಕೆ ಯಾವ ಬಾಧೆಯನ್ನೂ ಉಂಟುಮಾಡುವುದಿಲ್ಲ. ಶಸ್ತ್ರ ಮತ್ತು ಇತರ ಚಿಕಿತ್ಸೆಗಳಲ್ಲಿಯೂ, ಮನೆ ಮತ್ತು ಸ್ವಂತ ಉಪಯೋಗಕ್ಕೂ ಹಳೇ ಕಾಲದ ಕ್ರಿಮಿನಾಶಕಗಳನ್ನು ನಿವಾರಿಸುತ್ತದೆ.

೪, ೮ ಮತ್ತು ೧೬ ಔನ್ಸು ಸೀಸೆಗಳಲ್ಲಿ ದೊರೆಯುತ್ತದೆ.

ಐ. ಟಿ. ಎಲ್. ತಯಾರಿ
—: ತಯಾರಿಸುವವರು :—
ಮೈಸೂರು ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗ್
ಲ್ಯಾಬೋರೇಟರಿ, ಲಿಮಿಟೆಡ್
ಮಲ್ಲೇಶ್ವರಂ, : : ಬೆಂಗಳೂರು

ಮೈಸೂರು ಸ್ಟೇಟ್ ರೈಲ್ವೆ

ಸ್ಥಳೀಯ ಮತ್ತು ಸೀದಾ ಬುಕಿಂಗುಗಳಿಗೆ ರವಾನೆ ದರಗಳು

1947 ನೇ ಫೆಬ್ರವರಿ 1 ನೇ ತಾರೀಖಿನಿಂದ ಮೈಸೂರು ಸ್ಟೇಟ್ ರೈಲ್ವೆ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ಹೊರಗಿನ ರೈಲ್ವೆಗಳಲ್ಲಿ ಪ್ರತಿ ಗೇಜು ಪಾಯಿಂಟಿನ ಬದಲಾವಣೆ ಸ್ಥಳದಲ್ಲಿಯೂ, ವ್ಯಾಗನುಗಳಿಗೆ ವಿನಾ ಉಳಿದ ಎಲ್ಲಾ ಸಾಮಾನುಗಳ ಬಗ್ಗೆ ಈ ಕೆಳಗೆ ಕಂಡಂತೆ ದರವನ್ನು ವಿಧಿಸಲಾಗುವುದು:—

1. ವ್ಯಾಗನ್ನುಗಳ ಶಕ್ತಿಗೆ ಅನುಗುಣವಾಗಿ ಛಾರ್ಜು ಮಾಡತಕ್ಕ ಸಾಮಾನುಗಳಿಗೆ ಮಣ ಒಂದಕ್ಕೆ 2 ಕಾಸು.

2. ಇತರ ಸಾಮಾನುಗಳಿಗೆ ಮಣ ಒಂದಕ್ಕೆ 3 ಕಾಸು.

ಈ ಕೆಳಗೆ ಸಹಿ ಮಾಡಿರುವವರಿಗೆ ಅರ್ಜಿ ಹಾಕಿ ವಿವರಗಳನ್ನು ತಿಳಿಯಬಹುದು.

ಟ್ರಾಫಿಕ್ ಮ್ಯಾನೇಜರವರ ಕಛೇರಿ,
ಮೈಸೂರು,
೧ ನೇ ಜನವರಿ 1947.

ಎಮ್. ಇನಾಯತ್ ಹುಸೇನ್,
ಟ್ರಾಫಿಕ್ ಮ್ಯಾನೇಜರ್.

ರೀ||. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೧೬—೧—೪೭ [ಸಂಚಿಕೆ ೧೪೬

ಮುಸ್ಲಿಂ ಲೀಗಿಗೆ ವೈಸರಾಯರ ಅಪ್ಪಣೆ

ಮಹಾತ್ಮ ಗಾಂಧಿಯವರಿಗೆ ಬಲವಂತದ ರಕ್ಷಣೆ

ನೌಖಾಲಿ ನಡಿಗೆಯಲ್ಲಿ ಮಹಾತ್ಮ ಗಾಂಧಿಯವರು ಪ್ರವಾಸಮಾಡುತ್ತಿರುವಾಗ ಅವರ ರಕ್ಷಣೆಗಾಗಿ ಬಂಗಾಳಾ ಸರ್ಕಾರದವರು ಮಿಲಿಟರಿ ಮತ್ತು ಪೋಲೀಸ್ ಪಡೆಗಳನ್ನು ನೇಮಿಸಿರುವರಷ್ಟೆ. ದೇವರೇ ತಮ್ಮ ಜೀವದ ರಕ್ಷಕನೆಂದೂ ಅವನ ಸಂಕಲ್ಪವಿದ್ದರೆ ಯಾವ ರಕ್ಷಣೆಯೂ ತಮ್ಮನ್ನು ಉಳಿಸಲಾರದೆಂದೂ ಮಹಾತ್ಮರು ಸೂಚಿಸಿ ಈ ರಕ್ಷಣೆಗಳನ್ನು ರದ್ದುಗೊಳಿಸಬೇಕೆಂದು ತಿಳಿಸಿದ್ದರು ಆದರೆ ಬಂಗಾಳಾ ಸರ್ಕಾರದವರು ಈಬಗ್ಗೆ ಯಾವ ಜವಾಬ್ದಾರಿಯನ್ನೂ ಹೊತ್ತುಕೊಳ್ಳಲಾರೆವೆಂದೂ ಮಹಾತ್ಮರ ರಕ್ಷಣೆಗೆ ತಕ್ಕ ವ್ಯವಸ್ಥೆಯನ್ನು ಮಾಡಲೇಬೇಕೆಂದೂ ಹೇಳಿರುತ್ತಾರೆ

ಬರ್ಮದಲ್ಲಿ ದಂಗೆ

ಮಧ್ಯಬರ್ಮದಲ್ಲಿ ೫ ಸಾವಿರ ಚ ಮೈಲಿ ವಿಸ್ತೀರ್ಣದ ಪ್ರದೇಶದಲ್ಲಿ ಡಕಾಯಿತಿ ದಳದವರು ದಂಗೆ ಎದ್ದಿದ್ದಾರೆ. ಸರ್ಕಾರಿ ಸೇನೆಯು ಅವರನ್ನು ಎದುರಿಸುತ್ತಿವೆ ಈ ಢಕಾಯಿತರಿಗೆ ಕಮ್ಯೂನಿಸ್ಟರು ಬೆಂಬಲ ನೀಡಿದ್ದಾರೆ. ಢಕಾಯಿತರು ಆಡಳಿತ ಯಂತ್ರವನ್ನು ನಾಶಮಾಡಿ ಪ್ರತಿ ಸರ್ಕಾರವನ್ನು ರಚಿಸಿ ಜನರಿಂದ ಬಲವಂತವಾಗಿ ಕಂದಾಯಗಳನ್ನು ವಸೂಲ್ಮಾಡುತ್ತಿದ್ದಾರೆ—ಎಂಬುದಾಗಿ ಬರ್ಮ ಮಂತ್ರಿ ಉ ಬಾ ಪೆ ರವರು ಪ್ರಕಟಣೆ ಹೊರಡಿಸಿದ್ದಾರೆ.

ಸರ್ ಆರ್ಕಾಟರು ಭಾರತದ ಪ್ರಧಾನ ಪ್ರತಿನಿಧಿಗಳು

ನ್ಯೂಯಾರ್ಕಿನಲ್ಲಿ ಫೆಬ್ರವರಿ ೨೮ ನೇ ತಾ|| ಆರಂಭವಾಗಲಿರುವ ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ೪ನೇ ಅಧಿವೇಶನಕ್ಕೆ ಮೈಸೂರಿನ ದಿವಾನ್ ಸರ್ ಆರ್ಕಾಟು ರಾಮಸ್ವಾಮಿ ಮೊದಲಿಯಾರರು ಭಾರತದ ಪ್ರಧಾನ ಪ್ರತಿನಿಧಿಯಾಗಿ ಆರಿಸಲ್ಪಟ್ಟಿರುವರು

ಕಾಂಗ್ರೆಸ್‌ನಲ್ಲಿ ಶಿಸ್ತಿನ ಕ್ರಮ

ಸಿಂಧಿಯಾ ಆಚರಣೆ, ಅಶ್ಲೀಲತೆಯ ನೀತಿ, ಜಾತೀಯ ಪ್ರಯತ್ನಗಳಿಗೆ ಬೆಂಬಲಕೊಡುವ ಕಾಂಗ್ರೆಸ್ ಕೆಲಸಗಾರರ ಮೇಲೆ ಕಾರ್ಯಕ್ರಮವನ್ನು ಅಧ್ಯಕ್ಷರು ಕೈಗೊಳ್ಳಬಹುದೆಂದು ಸಂಯುಕ್ತ ಪ್ರಾಂತ್ಯದ ಕಾಂಗ್ರೆಸ್ ಸಮಿತಿಯು ನಿರ್ಣಯಿಸಿರುತ್ತದೆ.

ಶಂಕರಾಚಾರ್ಯರ ವಿಮಾನ ಯಾನ

ಶೃಂಗೇರಿ ಮಠಾಧ್ಯಕ್ಷರಾದ ಶ್ರೀ ಜಗದ್ಗುರು ಶಂಕರಾಚಾರ್ಯಸ್ವಾಮಿಗಳವರು ರಾಮೇಶ್ವರದ ಮೂಲಕ ವಿಮಾನದಲ್ಲಿ ಬೊಂಬಾಯಿಗೆ ಆಗಮಿಸಿ ಅಲ್ಲಿ ನಡೆಯುತ್ತಿರುವ ಸಹಸ್ರ ಚಂಡಿ ಯಾಗದಲ್ಲಿ ಭಾಗವಹಿಸಿದ್ದಾರೆ. ಜಗದ್ಗುರುಗಳ ಪೈಕಿ ವಿಮಾನದಲ್ಲಿ ಪ್ರಯಾಣ ಮಾಡಲು ಇವರೇ ಮೊದಲನೆಯವರೆಂದು ಹೇಳಲಾಗಿದೆ

ವಾರ್ಷಿಕೋತ್ಸವ

ಶ್ರೀರಂಗಪಟ್ಟಣದ ಸ್ಟೂಡೆಂಟ್ಸ್ ಲೀಗಿನವರು ತಮ್ಮ ಸಂಘದ ತೃತೀಯ ವಾರ್ಷಿಕೋತ್ಸವವನ್ನು ಕಳೆದ ೧೨ ನೇ ತಾರೀಕು ಶ್ರೀ ಜಿ ವೀರರಾಘವಾಚಾರ್ಯರವರ ಅಧ್ಯಕ್ಷತೆಯಲ್ಲಿ ನಡೆಸಿದರು. ವಸ್ತು ಪ್ರದರ್ಶನ, ಸಂಗೀತ ಮತ್ತು ವಿವಿಧ ವೇಷ ಸ್ಪರ್ಧೆಗಳು ಏರ್ಪಾಡಾಗಿದ್ದುವು. ಸ್ಪರ್ಧೆಯಲ್ಲಿ ಜಯಶೀಲರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಹಂಚಲಾಯಿತು

ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕ್ಯುಮುಲೆಟಿವ್ ಪದ್ಧತಿ

ಸ್ವಂ.ಸು.ಪ್ರೋ] ಬೆಂಗಳೂರು ೧೬.

ಏಪ್ರಿಲ್ ತಿಂಗಳಲ್ಲಿ ನಡೆಯುವ ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಕ್ಯುಮುಲೆಟಿವ್ ಓಟು ಪದ್ಧತಿಯನ್ನು ಸರ್ಕಾರದವರು ಜಾರಿಗೆ ತರುವಂತೆ ಆಜ್ಞೆಮಾಡಿದ್ದಾರೆ.

‡ ರಜದ ಮೇಲಿರುವ ಮೈಸೂರುಜಿಲ್ಲಾ ಸೆ|| ನ್ಯಾಯಾಧಿಕಶರಾದ ಶ್ರೀ ಶ್ಯಾಮಯ್ಯಂಗಾರ್ಯರ ಜಾಗದಲ್ಲಿ ಶ್ರೀ ಬಿ. ಆರ್. ರಾಮಲಿಂಗಯ್ಯನವರನ್ನು ನೇಮಿಸಲಾಗಿದೆ.

§ ಶ್ರೀಮನ್ಮಹಾರಾಜರವರು ಈದಿನ ರಾಜಸೇವಾಸಕ್ತ ಬಿ. ಟಿ. ಕೇಶವಯ್ಯಂಗಾರ್, ರೇಮಂಡ್ ಬಿ. ಬಸೆಲ ಮತ್ತು ಶ್ರೀ ಬಿ. ಆರ್. ಬಾಲಕೃಷ್ಣಯ್ಯನವರಿಗೆ ಭೇಟಿ ದಯಪಾಲಿಸಿದ್ದರು

§ ಸಿಂಕಲ್ಚರಲ್ ರಿಸರ್ಚ್ ಇನ್ಸ್ಟಿಟ್ಯೂಟಿನ ಪೂರ್ಣಕಾಲದ ಡೈರೆಕ್ಟರನ್ನಾಗಿ ಶ್ರೀ ಹೆಚ್ ಎಸ್ ಗೋವಿಂದರಾವ್‌ರವರನ್ನು ನೇಮಿಸಲಾಗಿದೆ. ಇವರು ಸಂಸ್ಥಾನದ ಸಿಂಕಲ್ಚರಲ್ ಕಾರ್ಯದರ್ಶಿಗಳಾಗಿರುವರು.

† ಕೈಮಗ್ಗದ ಬಟ್ಟೆದರದ ಸಕೋಟಿ ಸಮಿತಿಯು ಸಿವಿಲ್ ಸಪ್ಲೈ ಕಂಟ್ರೋಲರ ಅಧ್ಯಕ್ಷತೆಯಲ್ಲಿ ರಚಿತವಾಗಿದೆ ಮೂವರು ಅಧಿಕಾರಿಗಳೂ ೬೭ ಮಂದಿ ಖಾಸಗೀ ಸದಸ್ಯರೂ ಅದರಲ್ಲಿ ಇದ್ದಾರೆ.

ಸಿಂಧ್ ಸರ್ಕಾರದ ಮೇಲೆ ಕರಾಚಿ ಪುರಸಭೆಯ ದಾವಾ

ಕರಾಚಿ ಟ್ರಾಂ ಮತ್ತು ಬಸ್ ಸಂಚಾರ ವ್ಯವಸ್ಥೆಯನ್ನು ಪುರಸಭೆಯು ಕೊಳ್ಳಬೇಕೆಂದು ಮಾಡಿದ್ದ ನಿರ್ಧಾರವನ್ನು ಸಿಂಧ್ ಸರ್ಕಾರವು ತಿರಸ್ಕರಿಸಿರುವುದರಿಂದ ಅದರ ಮೇಲೆ ದಾವಾ ಹೂಡಲು ಪೌರಸಭೆಯು ನಿರ್ಧರಿಸಿದೆ. ಟ್ರಾಂ ಮತ್ತು ಬಸ್ ಸಂಚಾರ ವ್ಯವಸ್ಥೆಯು ಈಗ ಯೂರೋಪಿಯನ್ ವ್ಯಾಪಾರಿಗಳ ಅಧೀನದಲ್ಲಿ ಸಾಗುತ್ತಿದೆ.

ನೂರು ರೂ ನೋಟುಗಳನ್ನು ರದ್ದು ಮಾಡುವುದಿಲ್ಲ

ಸರ್ಕಾರದವರು ೧೦೦ ರೂ. ನೋಟುಗಳನ್ನು ರದ್ದು ಮಾಡುತ್ತಾರೆಂದು ಬೊಂಬಾಯಿಯಲ್ಲಿ ಮೊನ್ನೆ ದಿನ ಕೋಲಾಹಲವೆದ್ದಿತು. ಇದರ ಬಗ್ಗೆ ರಿಜರ್ವ್ ಬ್ಯಾಂಕಿನವರು ಒಂದು ಪ್ರಕಟಣೆ ಹೊರಡಿಸಿ ನೂರು ರೂ ನೋಟುಗಳನ್ನು ಸರ್ಕಾರದವರು ರದ್ದು ಮಾಡುವುದಿಲ್ಲವೆಂದು ತಿಳಿಸಿದ್ದಾರೆ

ಚನ್ನಪಟ್ಟಣದ ಪ್ರಕರಣ

ಜಾಮೀನು ಅರ್ಜಿಗಳ ತಿರಸ್ಕಾರ

ಸ್ವಂ. ಸು] ಬೆಂಗಳೂರು ೧೬.

ಚನ್ನಪಟ್ಟಣದ ಗಲಭೆ ಸಂಬಂಧದಲ್ಲಿ ಅಪಾದನೆಗೊಳಗಾಗಿ ದಸ್ತಗಿರಿಯಾಗಿರುವವರನ್ನು ಜಾಮೀನು ಮೇಲೆ ಬಿಡಬೇಕೆಂದು ಹಾಕಿಕೊಂಡಿದ್ದ ಅರ್ಜಿಗಳನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ತಿರಸ್ಕರಿಸಿದ್ದಾರೆ. ಉಭಯ ಕೋಮಿನವರೂ ಈ ಬಗ್ಗೆ ಅಡಿಷನಲ್ ಸೆಷನ್ಸ್ ನ್ಯಾಯಾಧೀಶರಲ್ಲಿ ಅಪೀಲು ಹೂಡಿದ್ದಾರೆ ವಿಚಾರಣೆ ೨೦ ನೇ ತಾ|| ನಡೆಯುವುದು

ಬಿ ಎಸ್. ಗೋಪಾಲರಾಯರ ಮೊಕದ್ದಮೆ

ತಮಗೆ ಗೋಪಾಲರಾಯರಿಂದ ಒಂದು ಲಕ್ಷದ ಇಪ್ಪತ್ತು ಸಾವಿರ ರೂ. ಬರಬೇಕೆಂದು ಶ್ರೀ ಕೆ ಎಸ್. ರಾಮಯ್ಯನವರು ಸಲ್ಲಿಸಿದ್ದ ದಾ. ನ ಜೊತೆಗೆ ಶ್ರೀ ಸಿ. ಎಂ. ಸ್ವಾಮಿ ಎಂಬುವರು ತಮಗೆ ೮೦ ಸಾವಿರ ರೂ ಬರಬೇಕೆಂದು ಕೋರ್ಟಿಗೆ ಅರ್ಜಿ ಸಲ್ಲಿಸಿರುತ್ತಾರೆ ಜಿಲ್ಲಾ ಜಡ್ಜರು ಇದೇ ೨೮ ನೇ ತಾ|| ಗೆ ಮೊಕದ್ದಮೆಯನ್ನು ಮುಂದೆ ಹಾಕಿರುತ್ತಾರೆ ರಿಸೀವರ್ ಆಗಿರುವ ಶ್ರೀ ಎ ಕೆ ಗೋವಿಂದರಾಜಲುರವರು ೧೫ ಲಕ್ಷ ರೂ ಬೆಲೆ ಬಾಳುವಷ್ಟು ಗೋಪಾಲರಾಯರ ಆಸ್ತಿಗಳನ್ನು ವಶಪಡಿಸಿಕೊಂಡಿರುತ್ತಾರೆ.

ತಾಲ್ಲೂಕು ಸಮ್ಮೇಳನ

ನಂಜನಗೂಡು ತಾಲ್ಲೂಕು ಸಮ್ಮೇಳನವು ಇದೇ 19ನೇ ಭಾನುವಾರ ಮಧ್ಯಾಹ್ನ 1 ಗಂಟೆಗೆ ರಾವ್ ಬಹದ್ದೂರ್ ಎಂ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಂಜನಗೂಡು ದಳವಾಯಿಯವರ ಕಟ್ಟಡದಲ್ಲಿ ನಡೆಯುವುದು.

ವೈಸರಾಯರಿಂದ ಲೀಗಿಗೆ ಎಚ್ಚರಿಕೆ

ರಾಜ್ಯಾಂಗ ರಚನಾ ಸಭೆಯಲ್ಲಿ ಭಾಗವಹಿಸಬೇಕೆಂದು ಲೀಗ್ ನಾಯಕರಿಗೆ ವೈಸರಾಯರು ಸಲಹೆ ಇತ್ತಿದ್ದಾರೆಂದೂ, ಅವರು ಹಾಗೆ ಮಾಡದಿದ್ದಲ್ಲಿ ಕೇಂದ್ರ ಸರ್ಕಾರದ ಸಚಿವ ಸ್ಥಾನಗಳನ್ನು ಖಾಲಿಮಾಡಬೇಕೆಂದು ಎಚ್ಚರಿಸಿದ್ದಾರೆಂದೂ ವರದಿಯಾಗಿದೆ. ಕಾಂಗ್ರೆಸ್ಸು ಬ್ರಿ|| ಹೇಳಿಕೆಯನ್ನು ಲೀಗಿನ ಅಭಿಮತದಂತೆ ಒಪ್ಪಿದೆ ಲೀಗೂ ಸಹ ಅದನ್ನು ಒಪ್ಪದಿದ್ದಲ್ಲಿ ಕೇಂದ್ರ ಸರ್ಕಾರದಲ್ಲಿ ಇರಲು ಅವರು ಅರ್ಹರಾಗುವುದಿಲ್ಲವೆಂದು ವೈಸರಾಯರು ತಿಳಿಸಿದ್ದಾರೆಂದು ಹೇಳಲಾಗಿದೆ

ಪ್ರಭು ಸಂದೇಶದಿಂದ ಪರಿಸ್ಥಿತಿ ಬದಲಾಯಿಸಿದೆ

ಕಾಂ|| ಅಧ್ಯಕ್ಷರ ವಿವರಣೆ

ಮೈಸೂರು ೧೬

ಈ ತಿಂಗಳ ಅಂತ್ಯದೊಳಗೇ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಮೈಸೂರು ಕಾಂಗ್ರೆಸ್ ಸತ್ಯಾಗ್ರಹವನ್ನು ಆರಂಭಿಸಬೇಕೆಂದು ಏರ್ಪಾಟು ಮಾಡಿದ್ದಿತು. ಆದರೆ ಪ್ರಭುಗಳ ಸಂದೇಶದಿಂದ ಹೊಸ ಪರಿಸ್ಥಿತಿ ಉಂಟಾಗಿದೆ ದಿವಾನರು ತಮಗೆ ವಹಿಸಲ್ಪಟ್ಟಿರುವ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲು ಒಂದು ಅವಕಾಶವನ್ನು ಕೊಡಲಾಗುವುದು ಅವರು ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳದಿದ್ದರೆ ನಮ್ಮ ಗುರಿ ಸಾಧನೆಗಾಗಿ ಹೋರಾಟ ಹೂಡುವುದೇ ಸತ್ಸಿದ್ಧ—ಎಂಬುದಾಗಿ ಶ್ರೀ ಕೆ ಚೆಂಗಲರಾಯರೆಡ್ಡಿಯವರು ಈ ದಿನ ಪತ್ರಿಕೋದ್ಯೋಗಿ ಸಂಘದಲ್ಲಿ ಮಾತನಾಡುತ್ತಾ ತಿಳಿಸಿದರು.

ಶ್ರೀ ರೆಡ್ಡಿಯವರು ಮುಂದುವರಿಯುತ್ತಾ ಈ ರೀತಿ ಹೇಳಿದರು:-ಭಾರತದ ರಾಜ್ಯಾಂಗ ರಚನಾ ಸಭೆಯು ಕಾರ್ಯ ಪೂರ್ಣವಾಗಿ ಅಲ್ಲಿ ಒಂದು ಹೊಸ ರಾಜ್ಯಾಂಗ ಜಾರಿಗೆ ಬರುವವರೆಗೆ ನಾವು ಕಾಯಲು ಸಾಧ್ಯವಿಲ್ಲ ನಾವು ಬಹಳ ಹಿಂದಿನಿಂದ ಜವಾಬ್ದಾರಿ ಸರ್ಕಾರವನ್ನು ಕೇಳುತ್ತಿದ್ದೇವೆ ಆದ್ದರಿಂದ ಆ ಬೇಡಿಕೆ ಸಲ್ಲದಿದ್ದರೆ ಹೋರಾಟ ಸಾಗಿಸುತ್ತೇವೆ. ಮುಸ್ಲಿಂ ಲೀಗಿನ ಜತೆಯಲ್ಲಿ ಒಪ್ಪಂದಕ್ಕೆ ಬರಲು ಪ್ರಯತ್ನವನ್ನು ನಡೆಸಲಾಗುತ್ತಿದೆ. ನಾವು ಮಹಾರಾಜರಿಗೆ ಪತ್ರ ಸಿದ್ಧಮಾಡಿದೆವು ಸಂದೇಶವು ಒಂದ ವಿಧವಾದ ಉತ್ತರದಂತೆಯೇ ಇರಬಹುದಾಗಿದೆ ಆದ್ದರಿಂದ ಈ ವಿಷಯವನ್ನೆಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಪರಿಶೀಲಿಸಲಿದೆ. ಫೆಬ್ರವರಿ ಮೊದಲನೇ ವಾರದಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಸಭೆಯನ್ನು ಕರೆದು ಅವರ ಮುಂದೆಯೂ ಹೊಸ ಪರಿಸ್ಥಿತಿಯನ್ನು ವಿವರಿಸಿ ನಿರ್ಧಾರಕ್ಕೆ ಬರಲಾಗುವುದು.

ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕ್ಯುಮುಲೇಟಿವ್ ಓಟು ಪದ್ಧತಿಯನ್ನು ಜಾರಿಗೆ ತರಲು ಸರ್ಕಾರದವರು ಆಜ್ಞೆ ಇತ್ತಿರುವುದು ಖಂಡನೀಯ ಕಳೆದ ನ್ಯಾಯ ವಿಧಾಯಕ ಸಭೆಯಲ್ಲಿ ಸಚಿವರು ಈ ಪದ್ಧತಿಯನ್ನು ಸ್ಥಳೀಯ ಸಂಸ್ಥೆಗಳ ಜಾರಿಗೆ ತರುವುದಿಲ್ಲವೆಂದು ಹೇಳಿದ್ದರೂ ಈ ಆಜ್ಞೆ ಹೊರಬಿದ್ದಿರುವುದು ಆಶ್ಚರ್ಯವಾಗಿದೆ—ಎಂದರು

ಕಾಂಗ್ರೆಸ್ ಅಧ್ಯಕ್ಷರು ಮೈಸೂರು ಜಿಲ್ಲಾ ಪ್ರವಾಸ ನಡೆಸುತ್ತಿದ್ದು ಇಂದು ನಗರದ ರಾಜಧಾನಿಗೆ ಆಗಮಿಸಿದರು. ಕಾಂಗ್ರೆಸ್ ಕಛೇರಿಯಲ್ಲಿ ಅವರಿಗೆ ಮೈಸೂರು ನಗರದ ಪರವಾಗಿ ೭೦೦ ರೂ ಗಳ ನಿಧಿ ಅರ್ಪಿಸಲಾಯಿತು

ಕೈಲಾಸಂ ಸ್ಮಾರಕ ದಿನಾಚರಣೆ

ಇಂಟರ್ ಮೀಡಿಯೇಟ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಮತ್ತು ನಾಳಿದ್ದು ದಿನಗಳು ಶ್ರೀ ಟಿ. ಪಿ. ಕೈಲಾಸಂರವರ ಸ್ಮಾರಕ ದಿನಾಚರಣೆಯನ್ನು ನಡೆಸಲಾಗುವುದು. ನಾಳೆ ಸಂಜೆ ೫ ಗಂಟೆಗೆ ಪ್ರೊಫೆಸರ್ ಕೆ. ವಿ ಅಯ್ಯರ್‌ರವರಿಂದ ದಿವಂಗತರ ಭಾವಚಿತ್ರದ ಅನಾವರಣೋತ್ಸವವೂ, ಎರಡು ದಿನಗಳಲ್ಲೂ ಸಂಜೆ ೬ ಗಂಟೆಗೆ ಆರ ನಾಟಕ ಸ್ಪರ್ಧೆಯೂ ನಡೆಯುತ್ತವೆ ಟಿಕೆಟ್ ಮೂಲಕ ಪ್ರವೇಶ

ಸಾಧ್ವಿ

ತಾ॥ ೧೬-೧-೪೭ ಗುರುವಾರ

ಇನ್ನೂ ಪ್ರತಿಬಂಧಕಗಳೇ ?

ಕಾಂಗ್ರೆಸ್ ಅಧ್ಯಕ್ಷರ ಪ್ರವಾಸವು ಮುಕ್ತಾಯವಾಗುತ್ತ ಬಂದಿದ್ದರೂ, ಪ್ರತಿಬಂಧಕಾಜ್ಞೆಗಳು ಮಾತ್ರ ಇನ್ನೂ ಮುಗಿದಂತೆ ಕಾಣುವುದಿಲ್ಲ. ಅಧ್ಯಕ್ಷರ ಪ್ರವಾಸ ಕಾರ್ಯಕ್ರಮವು ನಿನ್ನೆ ದಿನಕ್ಕೆ ಮುಕ್ತಾಯವಾಯಿತು. ನಿನ್ನೆ ಮೈಸೂರು ನಗರದ ಗಡಿಯಲ್ಲಿಯೂ, ಬೆಳವಾಡಿ ಕಸ್ತೂರಿಬಾಯಿ ಶಿಬಿರದಲ್ಲಿಯೂ ಅವರ ಆಗಮನಕ್ಕಾಗಿ ಬಹಿರಂಗ ಸಭೆಗಳು ಏರ್ಪಾಡಾಗಿದ್ದುವು. ಅವುಗಳು ನಡೆಯದಂತೆ ತಾಲ್ಲೂಕು ಅಮಲ್ದಾರರು ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿದರು. ಆದುದರಿಂದ ಬಹಿರಂಗ ಸಭೆ ನಡೆಯಲಿಲ್ಲ. ಕೇವಲ ಸ್ವಾಗತ ಸಮಾರಂಭಗಳು ಮಾತ್ರ ಜರುಗಿದುವು.

ಈ ಸಂದರ್ಭದಲ್ಲಿ ಮತ್ತೊಂದು ವಿಶೇಷವೇನೆಂದರೆ ಒಬ್ಬರೇ ಅಧಿಕಾರಿಗಳಾದ ಅಮಲ್ದಾರ್ ಮ್ಯಾಜಿಸ್ಟ್ರೇಟರು ಒಂದೇ ಸಮಯದಲ್ಲಿ ಪರಸ್ಪರ ವಿರುದ್ಧವಾದ ಎರಡು ಪ್ರತಿಬಂಧಕಾಜ್ಞೆಗಳನ್ನು ಹಾಕಿರುವುದು. ಇಡೀ ತಾಲ್ಲೂಕಿನ ಅನೇಕ ಹೋಬಳಿಗಳಲ್ಲಿ ಲೈಸನ್ಸ್ ಪಡೆಯದೆ ಸಭೆ, ಮೆರವಣಿಗೆಗಳನ್ನು ನಡೆಸಕೂಡದೆಂದು ಪೋಲೀಸ್ ಶಾಸನದ ೪೫ ನೇ ವಿಧಿಯಂತೆ ಅವರು ಒಂದು ಆಜ್ಞೆ ಹೊರಡಿಸಿರುವರು. ಇದು ಬೆಳವಾಡಿ ಮುಂತಾದ ಹತ್ತು ಹೋಬಳಿಗಳಿಗೆ ಅನ್ವಯಿಸುತ್ತದೆ. ಸಭೆ, ಮೆರವಣಿಗೆಗಳನ್ನು ಮಾಡಲೇ ಕೂಡದೆಂದು ನಿಷೇಧಿಸಲು ಈ ಶಾಸನದಲ್ಲಿ ಅವಕಾಶವಿಲ್ಲ. ಲೈಸನ್ಸ್ ಪಡೆದು ಅದರ ವಿಧಿ, ನಿಯಮಗಳಿಗೆ ಅನುಸಾರವಾಗಿ ಅವುಗಳನ್ನು ನಡೆಸಬೇಕು. ಮತ್ತು ಲೈಸನ್ಸುಗಳನ್ನು ಮ್ಯಾಜಿಸ್ಟ್ರೇಟರು ನಿರಾಕರಿಸಲೂ ಸಹ ಅವಕಾಶವಿರುವುದಿಲ್ಲ. ಅವಶ್ಯಕವಾದ ಷರತ್ತುಗಳ ಮೇಲೆ ತಕ್ಕ ಸಹಾಯವನ್ನಾದರೂ ಕೊಟ್ಟು ಸಭೆ, ಮೆರವಣಿಗೆಗಳನ್ನು ನೆರವೇರಿಸಲು ಅಧಿಕಾರಿಗಳು ಸೌಕರ್ಯ ಕಲ್ಪಿಸಬೇಕೆಂಬುದೇ ಈ ಶಾಸನದ ಉದ್ದೇಶ.

ಅಮಲ್ದಾರ್ ಮ್ಯಾಜಿಸ್ಟ್ರೇಟರು ಮತ್ತೊಂದು ಆಜ್ಞೆಯನ್ನು ಕ್ರಿ॥ ಪ್ರೊ॥ ಕೋಡಿನ ೧೪೪ ನೇ ಕಲಮಿನ ಪ್ರಕಾರ ಹೊರಡಿಸಿ ಬೆಳವಾಡಿ ಗ್ರಾಮದಲ್ಲೂ ಸುತ್ತಮುತ್ತಲಿನ ಐದು ಮೈಲಿ ಪ್ರದೇಶದಲ್ಲೂ ಮೇಲ್ಕಂಡ ಕಾರ್ಯಕ್ರಮಗಳನ್ನು ಒಂದು ತಿಂಗಳ ಕಾಲ ಪ್ರತಿಬಂಧಿಸಿದ್ದಾರೆ. ಇದರಂತೆ ಸಭೆ, ಮೆರವಣಿಗೆಗಳನ್ನು ಲೈಸನ್ಸ್ ಪಡೆದಾದರೂ ನಡೆಸಲು ಅವಕಾಶವಿರುವುದಿಲ್ಲ. ಹೀಗೆ ಒಂದು ಆಜ್ಞೆಯಲ್ಲಿ ನ್ಯಾಯ ಸಮ್ಮತವೆಂದು ಕಂಡು ಬರುವ ಕಾರ್ಯಕ್ರಮಗಳು ಮತ್ತೊಂದರಲ್ಲಿ ನ್ಯಾಯಬಾಹಿರವೆಂದು ಕಾಣುವಂತೆ ಮಾಡಲಾಗಿದೆ. ಈ ಆಜ್ಞೆಗಳು ಒಂದಕ್ಕೊಂದು ವಿರುದ್ಧವಾಗಿಯೂ, ಅಸಮಂಜಸವಾಗಿಯೂ ಇರುವುವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಈ ವಿವರಗಳು ಕೇವಲ ಕಾನೂನಿನ ವ್ಯಾಪ್ತಿಗೆ ಸಂಬಂಧಪಟ್ಟುವು. ಅವುಗಳಿಂದ ವಾಸ್ತವಿಕ ವಿದ್ಯಮಾನಗಳಿಗೆ ವಿಶೇಷ ಪ್ರಯೋಜನವಾಗಲಾರದು.

ಈಗ ಜಾರಿಯಾಗಿರುವ ಅನೇಕ ಪ್ರತಿಬಂಧಕಾಜ್ಞೆಗಳು ಅಕ್ರಮವಾದುವೆಂಬುದೇ ನ್ಯಾಯ ನೀತಿ ನಿಪುಣರ ಅಭಿಪ್ರಾಯ. ನಿರ್ದಿಷ್ಟವಾದ ಪ್ರದೇಶಗಳಲ್ಲಿ ದೊಂಬಿ, ಕಲಹ ಮತ್ತು ಅಶಾಂತಿಗಳು ಆಗಬಹುದಾದ ಸಂದರ್ಭಗಳಲ್ಲಿ ಅವುಗಳನ್ನು ಸಕಲ ಶಸ್ತ್ರ ಮತ್ತು ಬಲಗಳ ಸಮೇತ ಹತೋಟಿಯಲ್ಲಿ ಇಡಲು ಏರ್ಪಾಡಾಗಿರುವ ಈ ಶಾಸನಗಳನ್ನು ಪ್ರಶಾಂತವಾಗಿರುವ ಇಡೀ ಸಂಸ್ಥಾನದ ಮೂಲೆ ಮೂಲೆಗಳಲ್ಲೂ ಗೊತ್ತುಗುರಿಯಿಲ್ಲದೆ ಪ್ರಯೋಗಿಸುತ್ತಿರುವುದು ಒಂದು ಸೋಜಿಗದ ಸಂಗತಿಯೇ ಸರಿ. ಈ ಶಾಸನ ಬಾಣಗಳು ನಿಜವಾಗಿಯೂ ಅಗತ್ಯವೆನ್ನುವುದಾದರೆ ಮೈಸೂರು ಸಂಸ್ಥಾನವು ಒಂದು ಭಯಂಕರವಾದ ಅಗ್ನಿ ಪರ್ವತದ ತುದಿಯಲ್ಲಿ ನಿಂತಿದೆಯೆಂದು ಭಾಸವಾಗುತ್ತದೆ. ಆದರೆ ಅಂತಹ ಅಲ್ಲೋಲ ಕಲ್ಲೋಲ ಪರಿಸ್ಥಿತಿಯು ಇರುವುದೆಂದು ಯಾರೂ ಭಾವಿಸುವುದಿಲ್ಲ.

ಚನ್ನಪಟ್ಟಣದಲ್ಲಿ ದುರಂತವೇನೋ ನಡೆಯಿತು. ಆಗಬಾರದುದೆಲ್ಲಾ ಆಯಿತು. ಆದರೆ ಮೈಸೂರು ಸಂಸ್ಥಾನವೆಲ್ಲಾ ಚನ್ನಪಟ್ಟಣದ ಮಾದರಿಯಲ್ಲಿಯೇ ಇರುತ್ತದೆಂದು ಭಾವಿಸುವುದು ಸ್ವಲ್ಪವೂ ಸರಿಯಲ್ಲ. ಅಧಿಕಾರಿ ವರ್ಗದವರ ದಕ್ಷತೆಗಾಗಲೀ, ಪ್ರಜೆಗಳ ಆತ್ಮಗೌರವಕ್ಕಾಗಲೀ ಇದು ತಕ್ಕುದಲ್ಲ. ಹಿಂದೆ ಈ ಸಾರಿ ನಮ್ಮ ಸಂಸ್ಥಾನದಲ್ಲಿ ಹಾಕಿರುವಷ್ಟು ಪ್ರತಿಬಂಧಕಾಜ್ಞೆಗಳು ಹಿಂದೆ ಯಾವಾಗಲೂ ಕಂಡು ಕೇಳಿ ಬಂದಿರಲಿಲ್ಲ.

ಕಾಂಗ್ರೆಸ್ ಅಧ್ಯಕ್ಷರ ಪ್ರವಾಸದ ಪ್ರಭಾವವನ್ನು ತಡೆಗಟ್ಟುವ ಉದ್ದೇಶವು ಸರ್ಕಾರದವರಿಗೆ ಇರಬಹುದು. ಆದರೆ ಸಂಸ್ಥಾನದ ಸಕಲ ಪ್ರಜೆಗಳ ದಿನಚರಿಯ ಜೀವನ ಕ್ರಮಗಳಿಗೂ ಇದರಿಂದ ಧಕ್ಕೆ ಬಂದಿರುವುದೆಂಬುದನ್ನು ಅವರು ಮರೆಯಲಾಗದು. ಈ ಬಗ್ಗೆ ಈಗಾಗಲೇ ಎಲ್ಲ ಕಡೆಗಳಿಂದಲೂ ಪ್ರತಿಭಟನೆಗಳು ಬಂದಿರುತ್ತವೆ. ವೃಥಾ ಜನರ ಮನಸ್ಸಿನಲ್ಲಿ ಅಶಾಂತಿಯೂ, ಉದ್ರೇಕವೂ ಉಂಟಾಗಿರುತ್ತದೆ.

ಈ ಪ್ರತಿಬಂಧಕಗಳು ಇದ್ದರೂ, ಅವುಗಳನ್ನು ಸದ್ಯಕ್ಕೆ ಉಲ್ಲಂಘಿಸದಂತೆ ಕಾಂಗ್ರೆಸ್ಸಿನವರು ನಿರ್ಧರಿಸಿರುತ್ತಾರೆ. ನಿರ್ಬಂಧಗಳಿಲ್ಲದ ಕಡೆಗಳಲ್ಲಿ ಸಭೆಗಳನ್ನೂ, ಮೆರವಣಿಗೆಗಳನ್ನೂ ನಡೆಸಿರುತ್ತಾರೆ. ಇವುಗಳಿಂದ ಯಾವ ಅಲ್ಲೋಲ ಕಲ್ಲೋಲವೂ ಆಗಿರುವುದಿಲ್ಲ. ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರು ನಿನ್ನೆ ಬಹಿರಂಗ ಸಭೆಯನ್ನು ನಡೆಸಿ ಕಾಂಗ್ರೆಸ್ ಅಧ್ಯಕ್ಷರಿಗೆ ನಿಧಿಯನ್ನೂ ಸಹ ಅರ್ಪಿಸಿದರು. ಅಧ್ಯಕ್ಷರ ಭಾಷಣವೂ ಆಯಿತು. ಯಾವ ಕೋಲಾಹಲವೂ ನಡೆಯಲಿಲ್ಲ. ಸಾವಿರಾರು ಜನರು ನೆರೆದಿದ್ದ ಈ ಸ್ಥಳದಲ್ಲಿ ಆಗದಿರುವ ಅಶಾಂತಿ ಮೈಸೂರು ನಗರದ ಗಡಿಯಿಂದ ಆಚೆ ... ಅಶೋಕ ರಸ್ತೆಯ ನಿರ್ಜನ ಪ್ರದೇಶದಲ್ಲಿ ಆಗುವುದೆಂದು ಹೇಳುವುದು ಆಭಾಸವಾಗುತ್ತದೆ.

ಮುಖ್ಯವಾಗಿ ಇಂತಹ ಆಜ್ಞೆಗಳು ಸ್ವಾತಂತ್ರ್ಯ... ಸಕಲ ಪ್ರಜೆಗಳಿಗೂ ವಿಷಾದವನ್ನುಂಟುಮಾಡುವುವು. ಶ್ರೀಮನ್ಮಹಾರಾಜರವರು ಸಮಸ್ತ ಪ್ರಜೆಗಳಿಗೂ ಕಳುಹಿಸಿದ ಸಂದೇಶದ ಪರಿಶೀಲನೆಗೆ ಯಾವ ಪ್ರಶಾಂತ ವಾತಾವರಣವು ಬೇಕೆಂದು ದಿವಾನರು ಹೇಳುವರೋ ಅದಕ್ಕೆ ಧಕ್ಕೆಯನ್ನು ತರುವುವು. ಈಗಲಾದರೂ ಈ ಅನುಚಿತವಾದ ಅಡಚಣೆಗಳನ್ನು ರದ್ದುಗೊಳಿಸಿ ಪ್ರಶಾಂತ ಮನಸ್ಥಿತಿಯನ್ನು ಉಂಟುಮಾಡುವಂತೆ ದಿವಾನರು ಕಾರ್ಯಕ್ರಮ ಕೈಗೊಳ್ಳುವರೇ?

ಕಾಂಗ್ರೆಸ್ ಸಂಸ್ಥೆಯ ಶುದ್ಧೀಕರಣ

ಇದೇ 22, 23, ಮತ್ತು 24ನೇ ... ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ... ಕಾರ್ಯದರ್ಶಿಗಳ ಸಭೆಯು ಆಚಾರ್ಯ ಕೃಪಾಲಿನಿಯವರ ಅಧ್ಯಕ್ಷತೆಯಲ್ಲಿ ... ವುದು. ಅದರಲ್ಲಿ ಪ್ರಾಂತೀಯ ಕಾಂಗ್ರೆಸ್ ಸಂಸ್ಥೆಗಳು ಕಾಂಗ್ರೆಸ್ಸಿನ ಕಾರ್ಯಕ್ರಮಗಳನ್ನು ಭಂಗಾವಿಯಾಗಿ ಎಲ್ಲಿ ... ಯಲ್ಲಿದ್ದು ವಿರುದ್ಧ ವರ್ತನೆ ತೋರಿಸು... ರುವ ವ್ಯಕ್ತಿಗಳನ್ನು ಬಹಿಷ್ಕರಿಸಿ ... ಯನ್ನು ಬಲಗೊಳಿಸಲು ಕಾರ್ಯಕ್ರಮಗಳನ್ನು ಸೂಚಿಸಲಾಗುವುದು.

ಮಕ್ಕಳ ತೊಟ್ಟಿಲಿಗೆ

ಹಾಕುವ ರಬ್ಬರ್ ಷೀಟುಗಳು ಬಂದಿವೆ.

ಉತ್ತಮವಾದ ಮಾಲು.

ಬಾಹುಬಲಿ ಟ್ರೇಡಿಂಗ್ ಕಂಪೆನಿ,

ಓಲ್ಡ್ ಮೈಸೂರು ಬ್ಯಾಂಕ್ ರೋಡು,

ಮೈಸೂರು

ರಾಜಕಮಲ್, ಮೈಸೂರು

17-1-47 ರಿಂದ ಅಪೋಘವಾದ

4 ನೇ ವಾರ

—: ಪ್ರಕಾಶ್ ರವರ :—

ಹಮಾರಾ ಸಂಸಾರ್

ಭೂ ಮಿ ಕೆ :- ಜೀವನ್, ಉಮಾಕಾಂತ್, ರಂಜನ, ಜಿಲ್ಲೂ,

From 17-1-47 for 4 days daily at 10-30 a m.

"Michael Stragoff"

based on the adventure classic of Jules Verne.

A Picture Worth its Weight in Gold

ಮೈಸೂರಿನ ಸುಪ್ರಸಿದ್ಧ ರಾಜಕಮಲ್ ಟಾಕೀಸಿನಲ್ಲಿ

ಮುಂದಿನ ಬದಲಾವಣೆ

ಚಿತ್ರ ಪ್ರೊಡಕ್ಷನ್ ರವರ, ಚಿತ್ರಪ್ರೇಮಿಗಳಿಂದ ಮೆಚ್ಚಿಗೆ ಪಡೆದಿರುವ

ಪ್ರತಿಜ್ಞಾ

(ಹಿಂದಿ)

-: ತಾರಾ ಗಣ :-

ಮೋತೀಲಾಲ್, ಸ್ವರ್ಣ ಲತಾ, ಬೇಬಿ ಮೀನಾ, ವೀಣಕುಮಾರಿ, ಹರಿ ಶಿವ ದಾಸಿನಿ, ಸುನೇತ್ರ, ಬುಡೊ ಅಡ್ವಾನಿ, ನಾಗೇಂದ್ರ ಮೊದಲಾದವರು

— C B M. ಚಂದ್ರಯ್ಯ, ಮೈಸೂರು, ರಿಲೀಸ್ —

ಇವರ ಮತ್ತೊಂದು ಚಿತ್ರ ' ವಿ ಶ್ವಾ ಸ್ ' ವಾಣಿಗಣೇಶ ಮೋತಿ ಟಾಕೀಸಿನಲ್ಲಿ 17—1—47 ರಿಂದ ಪ್ರಾರಂಭ.

ಸಾಧ್ವಿ

ಕೂಡಲೇ ಚಂದಾದಾರರಾಗಿರಿ

READ

Your future prospects of life-the book which reveals you many astounding secrets and facts. Send 14 annas by M. O. to:-

K. S Srinivasa Murti Rao, Haliyur P O K R. Nagar Taluk

ಅಪೆರಾ ಟಾಕೀಸ್

17-1-47 ರಿಂದ 2 ನೇ ವಾರ

ಪೊನ್ನುರುವಿ

(ತಮಿಳು)

(ಮಹಾಭಾರತದ ಕಥೆಯ ಕರ್ಣನ ವಿವಾಹ, ಜೀವನ, ನಡತೆಗಳನ್ನು ಚಿತ್ರಿಸಿರುವ ಕಥೆ)

ಪಾತ್ರ:- * ಕೊತ್ತಮಂಗಲಂ ಸೀನು * ಕೆ. ಟಿ. ರುಕ್ಮಿಣಿ * ಆರ್. ಬಾಲಸುಬ್ರಹ್ಮಣ್ಯಂ

ರಣಜಿತ್, ಮೈಸೂರು

17—1—47 ರಿಂದ

ಬನ್ ಸರಿ

ಉತ್ಪಲಲಾಲ್, ಚಾರ್ಲಿ, ಶಾಮಿಮ್,

ಪ್ರತಿ ದಿನ ೩ ಆಟಗಳು

Edited, printed and published by A. R. Nagaraja at the Sadhvi Press D-Subbiah Road, Mysore.

ಪೋ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೧೭—೧—೪೭ [ಸಂಚಿಕೆ ೧೩೭

★ ಭರತ ಪುರದಲ್ಲಿ ಸಂಪೂರ್ಣ ಹರತಾಳ ★

ಸ್ಥಳೀಯ ಸಂಸ್ಥೆಗಳು ತಾಯಿ ಇಲ್ಲದ ತಬ್ಬಲಿಗಳಂತಿವೆ.

ನಗರ ಅಧ್ಯಕ್ಷ ರೆಡ್ಡಿಯವರ ಭಾಷಣ

ಮೈಸೂರು ೧೬

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕ್ಯಾಸಂಬಳ್ಳಿ ಚೆಂಗಲರಾಯರೆಡ್ಡಿಯವರು ನಿನ್ನೆ ಮಧ್ಯಾಹ್ನ ಬೆಳವಾಡಿಯಲ್ಲಿರುವ ಸ್ಕೌಟ್ ಶಿಬಿರಕ್ಕೆ ಭೇಟಿ ಇತ್ತು ಅಲ್ಲಿಂದ ರಾಜಧಾನಿಗೆ ಆಗಮಿಸಿದರು. ನಗರದ ಗಡಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರೂ ಪುರ ಸಭಾ ಸದಸ್ಯರೂ, ಅನೇಕ ಮಂದಿ ವಿದ್ಯಾರ್ಥಿಗಳೂ ಅವರನ್ನು ಸ್ವಾಗತಿಸಿದರು.

ನಂತರ ಶ್ರೀ ರೆಡ್ಡಿಯವರು ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘಕ್ಕೆ ಭೇಟಿ ಇತ್ತು ಅವರನ್ನು ಉದ್ದೇಶಿಸಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿದರು. ಕಾರ್ಮಿಕರು ಅಧ್ಯಕ್ಷರಿಗೆ ೩೦೧ ರೂಗಳ ನಿಧಿ ಅರ್ಪಿಸಿದರು. ರಾಜಧಾನಿಯ ಪುರ ಸಭಾ ಕಾಂಗ್ರೆಸ್ ಪಕ್ಷದ ಸದಸ್ಯರು ತಮ್ಮ ಗೌರವಾರ್ಥವಾಗಿ ಏರ್ಪಡಿಸಿದ್ದ ಸತ್ಕಾರ ಸಮಾರಂಭದಲ್ಲಿ ಅಧ್ಯಕ್ಷರು ಭಾಗವಹಿಸಿದ್ದರು.

ಉಪಾಹಾರಾನಂತರ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಟಿ. ಮರಿಯಪ್ಪನವರು ಅಧ್ಯಕ್ಷರಿಗೆ ಸ್ವಾಗತ ಕೋರಿ, ಪುರಸಭೆಯಲ್ಲಿ ಕಾಂಗ್ರೆಸ್ ಪಕ್ಷದವರು ಕೈಗೊಂಡಿರುವ ಕಾರ್ಯಕ್ರಮಗಳನ್ನು ವಿವರಿಸಿದರು. ಪಕ್ಷದ ಪರವಾಗಿ ೫೦೧ ರೂ. ಗಳ ನಿಧಿ ಅರ್ಪಿಸಿದರು. ಅಧ್ಯಕ್ಷರು ಉತ್ತರವೀಯುತ್ತಾ ಕೇಂದ್ರದಲ್ಲಿ ಅಧಿಕಾರವು ಪ್ರಜೆಗಳಿಗೆ ದೊರಕದ ಹೊರತು ಸ್ಥಳೀಯ ಸಂಸ್ಥೆಗಳಲ್ಲಿ ಸರಿಯಾದ ಸೇವೆಯನ್ನು ಸಲ್ಲಿಸಲು ಸಾಧ್ಯವಿಲ್ಲವೆಂದು ತಿಳಿಸಿ, ಇಂದು ಮೈಸೂರು ಸಂಸ್ಥಾನದಲ್ಲಿ ಸ್ಥಳೀಯ ಸಂಸ್ಥೆಗಳು ತಾಯಿತಂದೆಗಳಿಲ್ಲದ ತಬ್ಬಲಿಗಳಂತೆ ಇವೆಯೆಂದು ಹೇಳಿದರು. ನಗರಕ್ಕೆ ಖಾಸಗೀ ಅಧ್ಯಕ್ಷರನ್ನು ಚುನಾಯಿಸಿಕೊಳ್ಳಲು ಸರ್ಕಾರದವರು ಅವಕಾಶ ಕೊಡದಿರುವುದು ಖಂಡನೀಯವಾಗಿದೆಯೆಂದೂ ಇದಕ್ಕಾಗಿ ಸದಸ್ಯರು ದೊಡ್ಡ ಚಳುವಳಿಯನ್ನೇ ಎಬ್ಬಿಸಬಹುದಾಗಿದೆಯೆಂದೂ ಸೂಚಿಸಿದರು.

ರಾತ್ರಿ ೮ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ಕೆಲಸಗಾರರ ಸಭೆ ಜರುಗಿತು. ಅಧ್ಯಕ್ಷ ರೆಡ್ಡಿಯವರು ಕೆಲಸಗಾರರನ್ನುದ್ದೇಶಿಸಿ ಭಾಷಣ ಮಾಡುತ್ತಾ, ಸುಭಾಷ್ ನಗರದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಹೋರಾಟ ಹೂಡಬೇಕೆಂದು ಮಾಡಿದ್ದ ತೀರ್ಮಾನವನ್ನು ಪ್ರಸ್ತಾಪಿಸಿ, ಹೋರಾಟಕ್ಕೆ ಸಿದ್ಧತೆಗಳನ್ನು ಮಾಡಿಕೊಂಡು ಕಾಂಗ್ರೆಸ್ಸಿನ ಆಜ್ಞೆ ಕರೆ ಬಂದ ಕೂಡಲೇ ಮುನ್ನುಗ್ಗುವಂತೆ ಇಡೀ ದೇಶಕ್ಕೆ ಹೇಳುತ್ತಿದ್ದ ಪರಿಸ್ಥಿತಿಯು ಮಹಾರಾಜರ ಸಂದೇಶದಿಂದ ಸ್ವಲ್ಪ ಬದಲಾವಣೆಯಾಗಿರುವಂತೆ ಆಗಿದೆಯೆಂದರು. ಇದೇ ೨೨ ನೇ ತಾ|| ಬೆಂಗಳೂರಿನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಅವರು ನಿರ್ಧಾರಕ್ಕೆ ಬರಬಹುದೆಂದು ಹೇಳಿದರು. ಈ ಮಧ್ಯಕಾಲದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಬೇಕು, ಶಿಸ್ತು ಸಂಘಟನೆ ಕಡೆ ಗಮನವೀಯಬೇಕು. ನಮ್ಮ ಶಕ್ತಿಯನ್ನು ಹೆಚ್ಚಿಸಿಕೊಂಡು ಹೊಸ ಪರಿಸ್ಥಿತಿಯಿಂದ ಕಷ್ಟನಷ್ಟಗಳಿಲ್ಲದೆ ಜವಾಬ್ದಾರಿ ಸರ್ಕಾರ ಬಂದರೆ ಆಗ ಅದನ್ನು ಸಾರ್ಥಕಗೊಳಿಸಲು ದುಡಿಯಬೇಕು. ಅಥವಾ ಹಾಗೆ ಆಗದಿದ್ದರೆ ಸರ್ವ ಶಕ್ತಿಯಿಂದ ಕೂಡಿ ಹೋರಾಟ ನಡೆಸಲೇ ಬೇಕು ಎಂಬುದಾಗಿ ಹೇಳಿದರು.

ಪ್ರಾರಂಭದಲ್ಲಿ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಮಾತನಾಡಿ, ಮೈಸೂರು ನಗರದ ಪರವಾಗಿ ೧೭೦೦ ರೂ ಗಳ ನಿಧಿ ಅರ್ಪಿಸಿದರು. ಶ್ರೀ ನಿಜಲಿಂಗಪ್ಪನವರಿಗೆ ಕೊಡಬೇಕೆಂದಿದ್ದ ೫೦೦ ರೂ. ಗಳು, ಪುರಸಭಾ ಕಾಂಗ್ರೆಸ್ ಪಕ್ಷ ಮತ್ತು ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಕಾಣಿಕೆಯೂ ಇದರಲ್ಲಿ ಅಡಕವಾಗಿವೆ. ಹಲವು ವಿಷಯಗಳ ಮೇಲೆ ಪ್ರಶ್ನೋತ್ತರಗಳಾದ ನಂತರ ಸಭೆಯು ರಾತ್ರಿ ೧೧-೩೦ ಕ್ಕೆ ಮುಕ್ತಾಯವಾಯಿತು. ಇದೇ ಸಮಾರಂಭದಲ್ಲಿ ಕಳೆದ ಗಾಂಧಿ ಜಯಂತಿ ಸಮಯದಲ್ಲಿ ಏರ್ಪಡಿಸಿದ್ದ ಸ್ಪರ್ಧೆಗಳಲ್ಲಿ ಪ್ರಶಸ್ತಿ ಪಡೆದಿದ್ದವರಿಗೆಲ್ಲಾ ಅಧ್ಯಕ್ಷರು ಬಹುಮಾನಗಳನ್ನು ವಿನಿಯೋಗಿಸಿದರು.

ಪಾಕ್ಷಿಕ ವರದಿ

ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಜಯಂತ್ಯುತ್ಸವದ ಸಮಿತಿಯು ಕಳೆದ ವರ್ಷದ ವರದಿಯನ್ನೂ ಜಮಾ ಖರ್ಚು ಪಟ್ಟಿಯನ್ನೂ ಮುದ್ರಿಸಿ ಪ್ರಕಟಿಸಿದ್ದಾರೆ. ಅದರ ಒಂದು ಪ್ರತಿ ನಮ್ಮ ಹಸ್ತಗತವಾಗಿದೆ.

ಭರತಪುರ ಸಂಸ್ಥಾನದಲ್ಲಿ ದಬ್ಬಾಳಿಕೆ

ಭರತಪುರದಲ್ಲಿನ ಪ್ರಧಾನಿ ಮತ್ತು ಇತರ ಮಂತ್ರಿಗಳನ್ನು ತೆಗೆದು, ಅವರ ಜಾಗದಲ್ಲಿ ಪ್ರಜಾ ವಿಶ್ವಾಸ ಪಡೆದಿರುವ ಪ್ರತಿನಿಧಿಗಳನ್ನು ನೇಮಿಸಬೇಕೆಂದು ಪ್ರಜಾ ಮಂಡಳ ಮತ್ತು ಮುಸ್ಲಿಂ ಲೀಗಿನವರು ಒಂದು ಚಳುವಳಿಯನ್ನು ಆರಂಭಿಸಿದ್ದಾರೆ. ಭರತಪುರ ನಗರದಲ್ಲಿ ಕಳೆದ ೧೪ ದಿನಗಳಿಂದ ಸಂಪೂರ್ಣ ಹರತಾಳ ಜರುಗುತ್ತಿದೆ. ಸಕ್ರೆಟೇರಿಯೆಟ್ಟಿನ ಹೊರ ಬಾಗಿಲಿನಲ್ಲಿ ಪಿಕೆಟಿಂಗ್ ಸಹ ನಡೆಯುತ್ತಿದೆ. ಆ ಸ್ಥಳಕ್ಕೆ ಶಸ್ತ್ರ ಸಜ್ಜಿತ ಪೋಲೀಸರೂ, ಮಿಲಿಟರಿಯವರೂ ಬಂದು ಅಲ್ಲಿ ನೆರೆದಿದ್ದ ೩ ಸಹಸ್ರ ಮಂದಿಯನ್ನು ಎಚ್ಚರಿಕೆ ಸಹ ಕೊಡದೆ, ಏಟು, ಭರ್ಜಿಯಿಂದ ತಿವಿದು, ಬೆತ್ತ ಮತ್ತು ಲಾಠಿಯಿಂದ ಹೊಡೆದು ಚದುರಿಸಿದರು. ೭೦ ಜನರಿಗೆ ಗಾಯಗಳಾಗಿವೆ. ಪ್ರಜಾ ಮಂಡಲ ಲೀಗು, ಕಾರ್ಮಿಕ ಸಂಘ ಮತ್ತು ಜಾಟ ಸಂಘದ ನಾಯಕರಿಗೆ ಏಟು ಬಿದ್ದಿದೆ. ಈ ಸ್ಥೈರ ಮಹಿಳೆಯರೂ ಇದ್ದಾರೆ. ಪ್ರಜಾ ಮಂಡಲದವರು ಪಂ|| ನೆಹರು, ಸರ್ದಾರ್ ಪಟೇಲ್ ಮತ್ತು ಡಾ|| ಪಟ್ಟಾಭಿಯವರಿಗೆ ಈ ಬಗ್ಗೆ ತಂತಿ ಕಳುಹಿಸಿದ್ದಾರೆ.

ತಿರುವಾಂಕೂರು ಸಂಸ್ಥಾನಕ್ಕೆ ಸತ್ಯಾಗ್ರಹಿಗಳ ತಂಡ

ತಿರುವಾಂಕೂರಿನಲ್ಲಿ ಕಾರ್ಮಿಕರ ನಾಗರೀಕ ಹಕ್ಕುಗಳಿಗೆ ಇರುವ ಧಕ್ಕೆಯನ್ನು ಎದುರಿಸಲು ಮಲಬಾರ್, ಕೊಚ್ಚಿ ಮತ್ತು ತಮಿಳು ನಾಡುಗಳಿಂದ ಸತ್ಯಾಗ್ರಹಿಗಳನ್ನು ಫೆಬ್ರವರಿ ೧ ರಿಂದ ಕಳುಹಿಸಲಾಗುವುದು ಎಂಬುದಾಗಿ ಶ್ರೀ|| ಅಶೋಕ ಮೆಹತಾರವರು ತಿಳಿಸಿದ್ದಾರೆ.

ಯೋಗಾಭ್ಯಾಸದಿಂದ ಭಾರತದ ಕೀರ್ತಿ ಬೆಳಗಿತು

ಡಾ|| ರಾಯರ ಭಾಷಣ

ಮೈಸೂರು ೧೬

"ಇಂದಿನ ಬಾಲಕರು ನಾಳಿನ ಪ್ರಜೆಗಳು. ಈಗಿನ ಯುವಕರು ಭಾರತದ ಭವಿಷ್ಯದಲ್ಲಿ ಮಹತ್ತರವಾದ ಕಾರ್ಯ ಭಾಗವನ್ನು ವಹಿಸಬೇಕಾಗಿದೆ. ಆದಕಾರಣ ಅವರು ದೃಢಕಾಯರಾಗಿ ಸಂಪೂರ್ಣ ಆರೋಗ್ಯವಂತರಾಗಬೇಕು. ಯೋಗಾಭ್ಯಾಸವು ದೇಹದ ಸರ್ವಾಂಗಗಳನ್ನೂ, ಉತ್ತಮಪಡಿಸುವುದರಲ್ಲಿ ಸಂದೇಹವಿಲ್ಲ. ನಮ್ಮ ಋಷಿಗಳು ಇದರ ಮರ್ಮವನ್ನು ಅರಿತು ಭಾರತದ ಖ್ಯಾತಿಯನ್ನು ವಿಶ್ವದಲ್ಲಿ ಬೆಳಗಿದರು." ಎಂಬ ಉದಾತ್ತ ಭಾವನೆಗಳನ್ನು ಒಳಗೊಂಡ ಸ್ಫೂರ್ತಿದಾಯಕವಾದ ಮಾತುಗಳನ್ನು ವಿದ್ಯಾ ಮಂತ್ರಿಗಳಾದ ದಿ|| ಬ|| ಡಾ|| ಟಿ. ಸಿ. ಎಂ. ರಾಯರವರು ನಿನ್ನೆ ದಿನ ಅರಮನೆ ಆಶ್ರಯದಲ್ಲಿ ನಡೆಯುತ್ತಿರುವ ಯೋಗ ಶಾಲೆಯ ಹದಿನೈದನೆ ವಾರ್ಷಿಕ ಸಮಾರಂಭದ ಅಧ್ಯಕ್ಷ ಭಾಷಣದಲ್ಲಿ ತಿಳಿಸಿದರು. ಪ್ರಾರ್ಥನೆಯಾದ ನಂತರ ಶಾಲೆಯ ವಿದ್ಯಾರ್ಥಿಗಳು ಯೋಗಾಸನಗಳನ್ನು ಪ್ರದರ್ಶಿಸಿದರು. ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ಅಧ್ಯಕ್ಷರು ಹಂಚಿದರು.

ಭಾರತದಲ್ಲಿ ಪುರಾತನ ಕಾಲದಿಂದಲೂ ಈ ವಿದ್ಯೆಯು ಪ್ರಚಾರವಾಗಿದ್ದು ಭಾರತೀಯ ಸಂಸ್ಕೃತಿಯು ಪ್ರಪಂಚದ ಪ್ರಶಂಸೆಯನ್ನು ಪಡೆದಿದೆ. ಬುದ್ಧ, ಗಾಂಧಿ, ಟಾಗೋರ್ ಎನ್ನದೆ, ನಮ್ಮ ಮಹರ್ಷಿಗಳು ನೂರಾರು ವರ್ಷಗಳ ಹಿಂದೆಯೇ ತಮ್ಮ ತಪಸ್ಸುಗಳನ್ನು ಯೋಗದ ಮೂಲಕ ನಡೆಸಿ ವಿಶ್ವಕಲ್ಯಾಣವನ್ನು ಹಾರೈಸುತ್ತಿದ್ದರು ಎಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಿಳಿಸಿದರು. ಶಾಲೆಯು ದಿನೇ ದಿನೇ ವೃದ್ಧಿಯಾಗುತ್ತಾ ಬಂದು ಯೋಗಾಭ್ಯಾಸವು ಹೆಚ್ಚು ಪ್ರಚಾರವಾಗುತ್ತಿರುವ ಅಂಶದಲ್ಲಿ ಸಂತೋಷವನ್ನು ವ್ಯಕ್ತಪಡಿಸಿದರು. ಈ ಶಾಲೆಯ ಅಭಿವೃದ್ಧಿಗಾಗಿ ಸಾಧ್ಯವಾದ ಎಲ್ಲಾ ಸಹಕಾರ ಸಹಾಯಗಳನ್ನು ನೀಡಲು ತಯಾರಿರುವರೆಂದು ಹೇಳಿ, ಯೋಗಶಾಲೆಯು ಇನ್ನೂ ಹೆಚ್ಚು ಅಭಿವೃದ್ಧಿಯಾಗಲೆಂದು ಹಾರೈಸಿದರು.

ಫ್ರಾನ್ಸಿನ ಪ್ರಧಾನಿ ಮಿ|| ಬ್ಲಂ ರವರು ಲಂಡನ್ನಿಗೆ ಭೇಟಿ ಇತ್ತು ಬ್ರಿ|| ಮಂತ್ರಿಗಳೊಡನೆ ಸಮಾಲೋಚನೆ ನಡೆಸಿದ ಪರಿಣಾಮವಾಗಿ ಆಂಗ್ಲೋ-ಫ್ರೆಂಚ್ ಒಪ್ಪಂದಕ್ಕಾಗಿ ಸಂಧಾನ ಆರಂಭವಾಗುವ ಹಾಗೆ ಸುದ್ದಿ ಹೊರಬಿದ್ದಿದೆ.

ಶ್ರೀ ಹನುಮಂತಯ್ಯನವರ ಮೊಕದ್ದಮೆ

ಸ್ವಂ. ಸು. ಪ್ರೋ] ಬೆಂಗಳೂರು ೧೬

ಶ್ರೀ ಕೆ. ಹನುಮಂತಯ್ಯನವರ ಮೊಕದ್ದಮೆಯು "ಆರ್ಡರ್ಸ್"ಗಾಗಿ ೨೦ ನೇ ತಾ|| ಗೆ ಮುಂದೆ ಹೋಗಿದೆ. ಶ್ರೀ ಹನುಮಂತಯ್ಯನವರು ಕೋರ್ಟಿನಲ್ಲಿ ಹೀಗೆ ಹೇಳಿಕೆ ಇತ್ತಿದ್ದಾರೆ "ನನ್ನ ಭಾಷಣವು ಸರಿಯಾಗಿ ವರದಿಯಾಗಿಲ್ಲ. ನಾನು ಸರ್ಕಾರವನ್ನು ಟೀಕೆ ಮಾಡಿರುವುದು ನಿಜ. ಆದರೆ ಮಹಾರಾಜರ ವಿರುದ್ಧ ಏನನ್ನೂ ಹೇಳಿಲ್ಲ" ಎಂದು ಅವರು ಹೇಳಿದ್ದಾರೆ.

ಸಂಸ್ಥಾನದ ವಾಣಿಜ್ಯಸಂಘದ ಕಾರ್ಯಕಾರಿ ಸಮಿತಿಯು ಪ್ರಭುಗಳ ಸಂದೇಶವನ್ನು ಸ್ವಾಗತಿಸಿ ನಿರ್ಣಯಮಾಡಿ ಪಕ್ಷರಾದ ದಿವಾನರು ಅದನ್ನು ಶೀಘ್ರವಾಗಿ ಜಾರಿಗೆ ತರಲೆಂದು ಹಾರೈಸಿದೆ

Mysore State Adult Education Council,

SARASWATIPURAM, MYSORE: 16th JANUARY 1947

WANTED an accountant for the office of the Council. He must have experience of the office management, Compilation and auditing of accounts with the minimum qulification of Intermediate and Senior Accounts Examination of Mysore Government. Graduates will be preferred. Salary Rs. 100. Applications stating Age, Caste, Qualification, Experience Etc., should reach the **Secretary, Mysore State Adult Education Council, Saraswatipuram, Mysore**, on or before 31st January 1947.

Retired Servants of Government may also apply. Accountants in the service of Government should apply through their official superiors.

SECRETARY.

ಸಾಧ್ವಿ

ತಾ॥ ೧೭-೧-೪೭ ಶುಕ್ರವಾರ

ಮದರಾಸಿನಲ್ಲಿ ಕುದುರೆ ಜೂಜು ರದ್ದು

ಕುದುರೆ ಪಂದ್ಯಗಳ ಸಂದರ್ಭಗಳಲ್ಲಿ ಹಣವನ್ನು ಬಾಜಿ ಕಟ್ಟುವ ಪದ್ಧತಿಯನ್ನು ನಿಷೇಧಿಸಲು ಮದರಾಸ್ ಸರ್ಕಾರದವರು ಶಾಸನವೊಂದನ್ನು ಸಿದ್ಧಗೊಳಿಸಿದ್ದಾರೆ. ರೇಸ್ ಕೋರ್ಸುಗಳಲ್ಲಿಯಾಗಲೀ, ಹೊರಗಡೆಯಾಗಲೀ ಕುದುರೆಗಳ ಮೇಲೆ ಜೂಜಾಡುವುದನ್ನು ಇದರ ಮೂಲಕ ನಿಷೇಧಿಸಲಾಗುವುದು. ಅಲ್ಲದೆ ಈ ಜೂಜುಗಳ ಸಂಬಂಧಪಟ್ಟ ಪ್ರಕಟಣೆಗಳು, ಜಯಿಸುವ ಕುದುರೆಗಳ ಬಗ್ಗೆ ಸಲಹೆಗಳು, ಅವುಗಳ ವಿಷಯವಾಗಿ ಟೀಕೆ ಟಿಪ್ಪಣಿಗಳೇ ಮುಂತಾದ ಜಾಹಿರಾತುಗಳನ್ನೂ ಸಹ ಪ್ರತಿಬಂಧಿಸಲಾಗುವುದು.

ಕಾಂಗ್ರೆಸ್ ಮಂತ್ರಿಮಂಡಲಗಳು ಬಂದ ಮೇಲೆ ಜನರ ಹಿತಕ್ಕಾಗಿ ಕೈಗೊಂಡಿರುವ ಅನೇಕ ಉಪಯುಕ್ತ ಕಾರ್ಯಕ್ರಮಗಳು ಎಲ್ಲರಿಗೂ ವೇದ್ಯವಾಗಿಯೇ ಇವೆ. ಮದರಾಸು ಪ್ರಾಂತವು ಎಲ್ಲವನ್ನೂ ಮೀರಿ ಮುಂದೆ ಹೋಗುತ್ತಿದೆ. ಬಡಜನರ ಕಷ್ಟಾರ್ಜಿತ ಪ್ರವ್ಯವನ್ನು ಸೂರೆಗೊಂಡು ಅವರನ್ನು ದಿವಾಳಿ ಮಾಡಿ ಸಮಾಜದಲ್ಲಿ ಅನಾಹುತವನ್ನುಂಟುಮಾಡಲು ಪಾಶ್ಚಿಮಾತ್ಯ ಸಂಸರ್ಗದಿಂದ ಬಂದು ನೆಲಸಿರುವ ಕುದುರೆ ಜೂಜಿನ ದುಷ್ಟ ಪದ್ಧತಿಯನ್ನು ನಿರ್ಮೂಲಗೊಳಿಸಬೇಕೆಂದು ಪ್ರಜಾ ಹಿತೈಷಿಗಳೆಲ್ಲರೂ ಕೋರುತ್ತಿದ್ದರು. ಇದರ ಹಾವಳಿಯನ್ನು ಸ್ವಲ್ಪ ಮಟ್ಟಿಗೆ ತಡೆಗಟ್ಟಲು ಹಿಂದೆ ಮದರಾಸ್ ಸರ್ಕಾರದವರು ಶಾಸನವನ್ನು ಮಾಡಿದ್ದರು. ಆದರೆ ಜೂಜುಗಳನ್ನು ಸಂಪೂರ್ಣವಾಗಿ ನಿರ್ಮೂಲ ಮಾಡಿರಲಿಲ್ಲ. ಈಗ ಹಾಗೆ ಮಾಡಲಾಗಿದೆ. ಈ ಶಾಸನವನ್ನು ಉಲ್ಲಂಘಿಸುವವರಿಗೆ ಐದು ನೂರು ರೂಪಾಯಿ ಜುಲ್ಮಾನೆ ಮತ್ತು ಸಜಾ ವಿಧಿಸಲಾಗುವುದು.

ಇಂತಹ ಅತ್ಯಗತ್ಯವಾದ ಶಾಸನವನ್ನು ಮದರಾಸ್ ಸರ್ಕಾರದವರು ಮಾಡಿರುವುದಕ್ಕಾಗಿ ಸಕಲರ ಅಭಿನಂದನೆಗೂ ಪಾತ್ರರಾಗಿರುವರು. ಅವರ ಪ್ರಯತ್ನವು ಯಶಸ್ವಿಯಾಗಲೆಂದೂ ಅವರಂತೆಯೇ ಇತರ ಪ್ರಾಂತಗಳೂ, ಸಂಸ್ಥಾನಗಳೂ ಈ ಕೆಟ್ಟ ಚಾಳಿಯನ್ನು ನಮ್ಮ ದೇಶದಿಂದ ಹೊರದೂಡಿ ಸಮಾಜಕ್ಕೆ ಹಿತವನ್ನುಂಟುಮಾಡಲೆಂದೂ ನಾವು ಹಾರೈಸುತ್ತೇವೆ.

ಸಾಲಿಡ್ "ಬಾ" ಎಂದರೆ

ಭದ್ರವಾದ ಬೀಗಗಳು ಬೇಕಾದರೆ

ಬಾಕುಸಾರ್

ಶಿವರಾಂಪೇಟೆ :: ಮೈಸೂರು

ಆಪೆರಾ ಟಾಕೀಸ್

17-1-47 ರಿಂದ 2 ನೇ ವಾರ

ಪೊನ್ನುರುವಿ (ತಮಿಳು)

(ಮಹಾಭಾರತದ ಕಥೆಯು ಕರ್ಣನ ವಿವಾಹ, ಜೀವನ, ನಡತೆಗಳನ್ನು ಚಿತ್ರಿಸಿರುವ ಕಥೆ)

ಪಾತ್ರ:- * ಕೊತ್ತಮಂಗಲಂ ಸೀನು * ಕೆ. ಪಿ. ರುಕ್ಮಿಣಿ * ಆರ್. ಬಾಲಸುಬ್ರಹ್ಮಣ್ಯಂ

ಮಹಾಜನಗಳಲ್ಲಿ ವಿನಂತಿ

ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟು, ಅಶೋಕ ರೋಡ್, ಮೈಸೂರು.

ಪ್ರೊಪ್ರೈಟರ್: ಕೆ. ಎಸ್. ಶ್ರೀಕಂಠಶೆಟ್ಟಿ,

ಸನ್ ೧೯೩೬ ನೇ ಇಸವಿಯಿಂದಲೂ ಮ॥ ರಾ॥ ಕೆ. ನಾಗಪ್ಪಶೆಟ್ಟಿ ಮತ್ತು ನನ್ನ ಇಬ್ಬರ ಪಾಲುಗಾರಿಕೆಯಲ್ಲಿ ನಡೆಯುತ್ತಿದ್ದ ಮೇಲ್ಕಂಡ ಅಂಗಡಿಯಲ್ಲಿ ಮೇಲ್ಕಂಡ ಮ॥ ರಾ॥ ಕೆ. ನಾಗಪ್ಪಶೆಟ್ಟರು ಅವರ ಯಾವತ್ತು ಹಿಸ್ಸೆ ಹಕ್ಕು ಬಾಧ್ಯತೆಗಳನ್ನು ತಾ॥ ೧೨-೧-೧೯೪೭ ನೇ ಮರ್ಯಮಿನ ರಿಜಿಸ್ಟರ್ಡ್ ರಿಲೀಸ್ ಪತ್ರದ ಮೂಲಕ ನನಗೆ ಪೂರ್ಣ ಪ್ರತಿಫಲಕ್ಕೆ ವಹಿಸಿರುತ್ತಾರೆ. ಮೇಲ್ಕಂಡ ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟಿನ ವಿಶಿಷ್ಟ ಮಾಲೀಕತ್ವ ಮತ್ತು ಮ್ಯಾನೇಜ್‌ಮೆಂಟು ಎಲ್ಲಾ ಹಕ್ಕುಬಾಧ್ಯತೆಗಳೂ ನನಗೊಬ್ಬನಿಗೇ ಸೇರಿರುತ್ತವೆ. ಮೊದಲಿನಿಂದ ಮಹಾಜನಗಳಿಗೆ ನ್ಯಾಯವಾದ ಬೆಲೆಗೆ ನಂಬಿಕೆಯಾಗಿ ಆಭರಣಗಳನ್ನೂ ಉಪಯೋಗದ ಚಿನ್ನ, ಬೆಳ್ಳಿ ಪದಾರ್ಥಗಳನ್ನು ಮಾಡಿಕೊಡುತ್ತಿರುವುದನ್ನು ಈ ಮುಂದೆಯೂ ಮಾಡುತ್ತಾ ಮಹಾಜನಗಳಿಗೆ ಸೇವೆಯನ್ನು ಸಲ್ಲಿಸುತ್ತಾ ಬರುತ್ತೇನೆಂದೂ, ಮಹಾಜನಗಳು ಎಂದಿನಂತೆಯೇ ತಮ್ಮ ಪ್ರೀತಿ ವಿಶ್ವಾಸಗಳನ್ನು ಮುಂದೆಯೂ ತೋರುತ್ತಾ ತಮ್ಮ ಘನ ಪ್ರೋತ್ಸಾಹವನ್ನು ಕೊಡುತ್ತಾ ಬರಬೇಕಾಗಿ ವಿನಂತಿ.

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್,

ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,

ಮೈ ಸೂ ರು.

ಮೈಸೂರು, ೧೬-೧-೪೭.

Edited, printed and published by A. R. Nagarajan at the Sadhvi Press D. Subbiah Road, Mysore

ರಾಜಕಮಲ್, ಮೈಸೂರು

17-1-47 ರಿಂದ ಅನೋಘವಾದ

4 ನೇ ವಾರ

—: ಪ್ರಕಾಶ್ ರವರ :—

ಹಮಾರಾ ಸಂಸಾರ್

ಭೂಮಿಕೆ :- ಜೀವನ್ ಉಲ್ಹಾಸ್‌ಕಾಂತ್, ರಂಜನ, ಬೇಬೀ,

From 17-1-47 for 4 days daily at 10-30 a m

"Michael Stragoff"

based on the adventure classic of Jules Verne.

A Picture Worth its Weight in Gold

ನೀವು ಕುಂತ 5 ಪ್ರಶ್ನೆಗಳ ಖಚಿತವಾದ ಮತ್ತು ತೃಪ್ತಿಕರವಾದ ಉತ್ತರ ದೇವಿ ಮಹಿಮೆಯಿಂದಲೂ, ಜ್ಯೋತಿಷ್ಯ ಶಾಸ್ತ್ರರೀತಿ ಬರೆದು ಕಳುಹಿಸಲಾಗುವುದು. ಜಾತಕ ವಿವರ ಕಾಗದ ಬರೆಯುವ ಕಾಲ ವಗೈರೆ ಸಹಿತ 0-10-6 ಸ್ಟಾಂಪ್ ಸಹಿತ ಕಳುಹಿಸಿ. ಮಾಸ ಭವಿಷ್ಯ-12 ತಿಂಗಳಿಗೆ ವಿಸ್ತಾರವಾದ ವಿಷಯ ಸಹಿತ ರೂ 3-8-0 ಜಾತಕ ಫಲ ವಿಮರ್ಶೆ ರೂ. 10 ವಿ. ಪಿ. ಇಲ್ಲ ಮುಂಗಡ ಕಳುಹಿಸಿ.

ಕೆ. ಎಸ್. ಶ್ರೀನಿವಾಸಮೂರ್ತಿರಾವ್,

ಶ್ರೀ ಸುಧಾರಕ ಜೋಯಿಸ್

ಹಳೆಯೂರು ಪೋಸ್ಟು,

Mysore City Municipality.

NOTIFICATION

Regarding the Municipal Advocate's Appointment.

With reference to the Notification published previously regarding the above, it is hereby notified that the last date for receiving applications in this behalf is 27-1-1947 up to 4 P.M.

(Sd) R. Ramachandra Rao Bhombore,
President.

ಬೆಳೆಯುವವರಿಗೆ ಬೋನಸ್ಸು

ಸ್ವಂ ಸು. ಪ್ರೋ॥] ಬೆಂಗಳೂರು ೧೬

ಸರ್ಕಾರಿ ಡಿಪೋಗಳಿಗೆ ಸಲ್ಲಬೇಕಾದ ಧಾನ್ಯಗಳನ್ನು ತಾವಾಗಿಯೇ ತಂದುಕೊಡುವವರಿಗೆ ಒಂದು ಪಲ್ಲಾ ಭತ್ತಕ್ಕೆ ಎಂಟಾಣೆಯೂ, ಕೆ. ಜೂ, ರಾಗಿ ಮತ್ತು ಜೋಳಗಳಿಗೆ ಎರಡು ರೂ. ನಂತೆಯೂ ಬೋನಸ್ಸನ್ನು ಕೊಡುವಂತೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ತುಟ್ಟಿಭತ್ಯ

೨೫೦ ರೂ ಗಳಿಗಿಂತಲೂ ಕಡಮೆ ಸಂಬಳ ಬರುವ ಗೆಜೆಟೆಡ್ ನೌಕರರುಗಳಿಗೂ ೧೯೪೬ ನೇ ಜುಲೈ ಒಂದನೇ ತಾರೀಖಿನಿಂದ ಶೇಕಡ ೫೦ ರಷ್ಟು ತುಟ್ಟಿಭತ್ಯವನ್ನು ಕೊಡುವಂತೆ ಸರ್ಕಾರದ ಆಜ್ಞೆಯಾಗಿದೆ.

ರಣಜಿತ್, ಮೈಸೂರು

17—1—47 ರಿಂದ

ಬನ್ ಸರಿ

ಈಶ್ವರಲಾಲ್, ಚಾರ್ಲಿ, ಶಾಮಿಮ್.

ಪ್ರತಿ ದಿನ 3 ಆಟಗಳು

ಮೈಸೂರಿನ ಸುಪ್ರಸಿದ್ಧ ರಾಜಕಮಲ್ ಟಾಕೀಸಿನಲ್ಲಿ

ಮುಂದಿನ ಬದಲಾವಣೆ

ಚಿತ್ರ ಪ್ರೊಡಕ್ಷನ್ ರವರ, ಚಿತ್ರಪ್ರೇಮಿಗಳಿಂದ ಮೆಚ್ಚಿಗೆ ಪಡೆದಿರುವ

— ಪ್ರತಿಜ್ಞಾ —

(ಹಿಂದಿ)

-: ತಾರಾ ಗಣ :-

ಮೋತೀ ಲಾಲ್, ಸ್ವರ್ಣ ಲತಾ, ಬೇಬಿ ಮೀನಾ, ವೀಣಕುಮಾರಿ, ಹರಿ ಶಿವ ದಾಸಿನಿ, ಸುನೇತ್ರ, ಬುಡೊ ಅದ್ವಾನಿ, ನಾಗೇಂದ್ರ ಮೊದಲಾದವರು.

— C B M ಚಂದ್ರಯ್ಯ, ಮೈಸೂರು, ರಿಲೀಸ್ —

ಇವರ ಮತ್ತೊಂದು ಚಿತ್ರ 'ಏ ಶ್ಯಾ ಸ್ ' ದಾವಣಗೆರೆಯ ಮೋತಿ ಟಾಕೀಸಿನಲ್ಲಿ 17—1—47 ರಿಂದ ಪ್ರಾರಂಭ.

ಮೈಸೂರು ಸ್ಟೇಟ್ ರೈಲ್ವೆ

ಸ್ಥಳೀಯ ಮತ್ತು ಸೀದಾ ಬುಕಿಂಗುಗಳಿಗೆ ರವಾನೆ ದರಗಳು

1947 ನೇ ಫೆಬ್ರವರಿ 1 ನೇ ತಾರೀಖಿನಿಂದ ಮೈಸೂರು ಸ್ಟೇಟ್ ರೈಲ್ವೆ ಮತ್ತು ಅದಕ್ಕೆ ಸಂಬಂಧಪಟ್ಟ ಇತರ ಹೊರಗಿನ ರೈಲ್ವೆಗಳಲ್ಲಿ ಪ್ರತಿ ಗೇಜು ಜಾಯಿಂಟಿನ ಬದಲಾವಣೆ ಸ್ಥಳದಲ್ಲಿಯೂ, ಪ್ಯಾಕಿಗಳಿಗೆ ವಿನಾ ಉಳಿದ ಎಲ್ಲಾ ಸಾಮಾನುಗಳ ಬಗ್ಗೆ ಈ ಕೆಳಗೆ ಕಂಡಂತೆ ದರವನ್ನು ವಿಧಿಸಲಾಗುವುದು:—

1. ವ್ಯಾಗನ್ನುಗಳ ಶಕ್ತಿಗೆ ಅನುಗುಣವಾಗಿ ಛಾರ್ಜು ಮಾಡತಕ್ಕ ಸಾಮಾನುಗಳಿಗೆ ಮಣ ಒಂದಕ್ಕೆ 2 ಕಾಸು

2. ಇತರ ಸಾಮಾನುಗಳಿಗೆ ಮಣ ಒಂದಕ್ಕೆ 3 ಕಾಸು.

ಈ ಕೆಳಗೆ ಸಹಿ ಮಾಡಿರುವವರಿಗೆ ಅರ್ಜಿ ಹಾಕಿ ವಿವರಗಳನ್ನು ತಿಳಿಯಬಹುದು.

ಟ್ರಾಫಿಕ್ ಮ್ಯಾನೇಜರವರ ಕಛೇರಿ, ಮೈಸೂರು, 9 ನೇ ಜನವರಿ 1947.

ಮಿರ್ ಇನಾಯತ್ ಹುಸೇನ್, ಟ್ರಾಫಿಕ್ ಮ್ಯಾನೇಜರ್.

ಫೋನ್. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧೮—೧—೪೭ [ಸಂಚಿಕೆ ೧೪೮

ಬೆಂಗಳೂರು ನಗರಕ್ಕೆ ಬರುವವರ ಮೇಲೆ ತೆರಿಗೆ

...ನಗಳಿಗೆ ಕಾಂಗ್ರೆಸ್ ಪತ್ರ

ಮೈಸೂರು ೧೮

...ಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ...ಗಲರಾಯರೆಡ್ಡಿಯವರು ಪ್ರಭುಗ... ಕಳುಹಿಸಿದ್ದ ಪತ್ರವು ತಲಟದೆಯೆಂದು ...ಪ್ತ ಕಾರ್ಯದರ್ಶಿಗಳು ಕಾಂಗ್ರೆಸ್ ...ಕ್ಷರಿಗೆ ಉತ್ತರ ಕೊಟ್ಟಿರುವರೆಂದು ...ಗಿದೆ. ಅದರಲ್ಲಿ ಶ್ರೀ ಮಹಾರಾ...ರು ಕೊಟ್ಟಿರುವ ಸಂದೇಶಕ್ಕೆ ಅರ್ಥ ...ನವನ್ನು ಸೆಳೆಯಲಾಗಿದೆಯೆಂದು ...ಯಾಗಿದೆ.

ಸಂತಾಪಸೂಚನಾ ಸಭೆ

...ರ್ನಾ ಸಂದೇಶ' ವಾರ ಪತ್ರಿಕೆಯ ...ದಕರಾಗಿದ್ದ ಶ್ರೀ ಹರ್ಡೇಕರ್ ಮಂ...ನವರ ನಿಧನದ ಬಗ್ಗೆ ಸಂತಾಪ ಸೂಚಿ... ಮೊನ್ನೆ ಟೌನ್‌ಹಾಲಿನಲ್ಲಿ ಶ್ರೀ ಎಂ. ಸಿ. ...ಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆ... ದಿವಂಗತರು ಅಖಿಲ ಕರ್ನಾಟಕ ...ಸಿದ ಸೇವೆ ಅವರು ಗೈದಿರುವ ...ಜ ಸುಧಾರಣೆ, ಸಾಹಿತ್ಯಸೇವೆ ಮುಂ... ಅಂಶಗಳನ್ನು ಕುರಿತು ಶ್ರೀಗಳಾದ ...ರ್ಜುನ ಮಾಸ್ತರು, ನಾಗರಾಜ ...ರ್, ಅಲಪ್ಪ ಮತ್ತು ಅಧ್ಯಕ್ಷರು ...ನಾಡಿದರು. ಮೃತರ ಆತ್ಮಕ್ಕೆ ಶಾಂತಿ ...ನ್ನು ಕೋರುವ ನಿರ್ಣಯವನ್ನು ಸರ್ವಾ...ನುಮತದಿಂದ ಅಂಗೀಕರಿಸಲಾಯಿತು.

ನಿಧನ

ಮೈಸೂರು ಚನ್ನೇಗೌಡನ ಕೊಪ್ಪಲಿನ ...ಕ್ಷರಾದ ಶ್ರೀ ಎಲ್. ಬಸವಯ್ಯನ... ಮೊನ್ನೆ ಮಧ್ಯಾಹ್ನ ನಿಧನರಾದರೆಂದು ...ಲು ವಿಷಾದವಾಗುತ್ತದೆ. ದಿವಂಗತರು ...ಗರ ಬನಂಗಡ ವಿದ್ಯಾರ್ಥಿನಿಲಯ... ಸಂಸ್ಥಾಪಕರು. ಬೆಲೆಬಾಳುವ ಭವ...ನ್ನು ಕಟ್ಟಿಸಿಕೊಟ್ಟಿದ್ದಾರೆ. ಅನಾಥಾಲ...ಕ್ಕೆ ೮ ಎಕರೆ ಗದ್ದೆಯನ್ನು ಕೊಟ್ಟಿದ್ದಾರೆ.

ಮೋಟಾರು ಕೆಲಸಗಾರರ ಸಂಘ

...ದಿನ ರಾತ್ರಿ ೮ ಘಂಟೆಗೆ ಮೋಟಾರು ...ಗಾರರ ಸಂಘವನ್ನು ಬಹಿಷ್ಕರಿಸುಮಾಡಿ ...ದ್ದಾಗಿ ಸಭೆಯು ಪರ್ಯಾಜರಾವ್ ...ಲ್ಲಿರುವ ವಿಷಯಾ ವಿಜನ್ನಿಸ್‌ನಲ್ಲಿ ...ಯುತ್ತದೆ. ಕೆಲಸಗಾರರೆಲ್ಲರೂ ದಯ... ಮಾಡಬೇಕಾಗಿ ಕೋರಲಾಗಿದೆ.

...sore City Municipality.

NOTIFICATION

Regarding the Municipal ...vocate's APPOINTMENT.

Applications will be re...ived upto 4 p m. on ...1-47 for the post of the ...unicipal Advocate of the ...ysore City Municipality ...om legal practitioners of ...less than 5 years' stand...g. The period of appoint...ent will be co-extensive ...th that of the present ...unicipal Council. The ...onthly emoluments will be ...s. 150 Other particulars ...ay be ascertained in the ...fice of the undersigned

(Sd) R. Ramachandra Rao Bhombore,
President.

ಫ್ರಾನ್ಸಿಗೆ ಹೊಸ ಅಧ್ಯಕ್ಷರು

ಫ್ರೆಂಚ್ ಶಾಸನ ಸಭೆಗಳ ಸಂಯುಕ್ತ ಅಧಿವೇಶನದಲ್ಲಿ ೪ ನೇ ರಿಪಬ್ಲಿಕ್ಕಿನ ಮೊದಲನೇ ಅಧ್ಯಕ್ಷರಾಗಿ ಮಿ॥ ಎಂ. ಆರಿಯಲ್ ರವರು ಆರಿಸಲ್ಪಟ್ಟಿದ್ದಾರೆ. ಇವರನ್ನು ರಾಜಗೌರವದೊಡನೆ ವರ್ಸೇಲ್ಸಿನಿಂದ ಪ್ಯಾರಿಸ್ಸಿಗೆ ಕರೆತಂದು ಕಳೆದ ಆರುವರ್ಷದಿಂದ ಮುಚ್ಚಲ್ಪಟ್ಟಿದ್ದ ಅಧ್ಯಕ್ಷರ ಅರಮನೆಯಲ್ಲಿ ಇಳಿಸಲಾಗಿದೆ. ಮುಖ್ಯಮಂತ್ರಿ ಮಿ॥ ಎಂ. ಬ್ಲುಮ್‌ರವರೂ ನಡುಗಾಲ ಸರ್ಕಾರದ ಮಂತ್ರಿಗಳೂ ರಾಜೀನಾಮೆ ಸಲ್ಲಿಸಿ ಹೊಸ ಅಧ್ಯಕ್ಷರಿಗೆ ಅಧಿಕಾರ ವಹಿಸಿಕೊಟ್ಟರು.

ಸತ್ಯಾರ್ಥ ಪ್ರಕಾಶ ಸತ್ಯಾಗ್ರಹ

ಸತ್ಯಾರ್ಥ ಪ್ರಕಾಶದ ೧೪ ನೇ ಅಧ್ಯಾಯದ ಮೇಲೆ ಸಿಂಧ್ ಸರ್ಕಾರದವರು ಹಾಕಿರುವ ಪ್ರತಿಬಂಧಕಾಜ್ಞೆಯನ್ನು ವಿರೋಧಿಸಿ ಆರ್ಯ ಸಮಾಜದ ನಾಯಕರು ಮೊನ್ನೆಯಿಂದ ಸತ್ಯಾಗ್ರಹವನ್ನು ಆರಂಭಿಸಿದ್ದಾರೆ. ಸಂಯುಕ್ತ ಪ್ರಾಂತದ ಆರ್ಯ ಸಮಾಜದ ಅಧ್ಯಕ್ಷರಾದ ಶ್ರೀ॥ ರಾಜಗುರು ಧೀರೇಂದ್ರ ಶಾಸ್ತ್ರಿಗಳ ನಾಯಕತ್ವದಲ್ಲಿ ೭ ಮಂದಿ ಸತ್ಯಾಗ್ರಹಿಗಳು ಸದರಿ ಪ್ರತಿಯನ್ನು ಹಿಡಿದು ಈ ವಿಚಾರವನ್ನು ಮ್ಯಾಜಿಸ್ಟ್ರೇಟರಿಗೆ ತಿಳಿಸಿ ಮೆರವಣಿಗೆ ಹೊರಟರು.

ತ್ಯಾಗರಾಜ ಪುರಂದರರ ದಿನಾಚರಣೆ

ಶ್ರೀ ಸರಸ್ವತೀ ಸಂಗೀತ ಸಮಾಜದ ಆಶ್ರಯದಲ್ಲಿ ಇಂದಿನ ಮತ್ತು ನಾಳೆ ಸಂಜೆ ೫ ಘಂಟೆಯಿಂದ ಶ್ರೀ ತ್ಯಾಗರಾಜರ ಶತಮಾನೋತ್ಸವವೂ, ಶ್ರೀ ಪುರಂದರ ದಾಸರ ಪುಣ್ಯದಿನಾಚರಣೆಯೂ, ಚಾಮರಾಜ ರಸ್ತೆಯಲ್ಲಿರುವ ಸಹಕಾರಭವನದಲ್ಲಿ ನಡೆಯುವವು. ಸರ್ವರಿಗೂ ಆಹ್ವಾನವುಂಟು. ಈ ಸಂಬಂಧವಾಗಿ ೨೬ ನೇ ತಾ॥ ಬೆಳಗ್ಗೆ ೯ ರಿಂದ ೧೨ ಗಂಟೆವರೆಗೆ ಸಂಗೀತ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ವಿವರಗಳನ್ನು ಸಂಘದ ಕಾರ್ಯದರ್ಶಿಯವರಿಂದ ತಿಳಿಯಬಹುದು.

ಬೆನಿಫಿಟ್ ನಾಟಕ

ಹಳ್ಳದ ಕೇರಿಯಲ್ಲಿರುವ ಶ್ರೀ ಸ.ಶೀಲಾ ಹಿಂದೀ ಸಮಾಜದ ಆಶ್ರಯದಲ್ಲಿ ಸಮಾಜದ ಚಿಕ್ಕ ಹೆಣ್ಣುಮಕ್ಕಳಿಂದ "ಶ್ರೀ ಕೃಷ್ಣಲೀಲಾ" ಎಂಬ ನಾಟಕವು ನಾಳೆ ಸಂಜೆ ೬॥ ಘಂಟೆಗೆ ಟೌನ್‌ಹಾಲಿನಲ್ಲಿ ನಡೆಯುವುದು. ಅದರಿಂದ ಬಂದ ಉತ್ಪತ್ತಿಯನ್ನು ಸಮಾಜದ ಅಭಿವೃದ್ಧಿಗಾಗಿ ಕೊಡುವುದರಿಂದ ಸರ್ವರೂ ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ.

ಬೆಂಗಳೂರಿಗೆ ಬರುವವರ ಮೇಲೆ ತೆರಿಗೆ

ಸ್ವಂ ಸು ಪ್ರೇ॥] ಬೆಂಗಳೂರು ೧೮

ಬೆಂಗಳೂರಿಗೆ ೫೦ ಮೈಲಿ ದೂರದ ಆಚೆಯಿಂದ ಬರುವ ರೈಲ್ವೆ ಪ್ರಯಾಣಿಕರ ಮೇಲೆ ತೆರಿಗೆಯೊಂದನ್ನು ಹಾಕಬೇಕೆಂದು ಮೊನ್ನೆ ನಡೆದ ಪುರ ಸಭಾಧಿವೇಶನದಲ್ಲಿ ನಿರ್ಣಯವೊಂದು ಚರ್ಚೆಗೆ ಬಂದು, ಅದರ ಸಮಿತಿಗೆ ಅದನ್ನು ಪರಿಶೀಲಿಸಲು ಒಪ್ಪಿಸಲಾಯಿತು. ೩ ನೇ ತರಗತಿ ಪ್ರಯಾಣಿಕರಿಗೆ ತಲಾ ೧ ಆಣೆ, ಇಂಟರ್ ಕ್ಲಾಸಿಗೆ ೧॥ ಆಣೆ ಗೊತ್ತಪಡಿಸಲಾಗಿ, ಮೊದಲನೇ ಮತ್ತು ಎರಡನೇ ತರಗತಿಯವರಿಗೆ ಎರಡಾಣೆಯಂತೆ ತೆರಿಗೆಯನ್ನು ವಿಧಿಸಬೇಕೆಂದು ನಿರ್ಣಯದಲ್ಲಿ ಸೂಚಿಸಲಾಗಿದೆ. ಈ ತೆರಿಗೆಯಿಂದ ೭ ಲಕ್ಷ ರೂ ವರಮಾನ ಬರುವುದೆಂದೂ, ಇದನ್ನು ನಗರಾಭಿವೃದ್ಧಿಗೆ ಉಪಯೋಗಿಸಬಹುದೆಂದೂ ಹೇಳಲಾಗಿದೆ.

ರಕ್ಷಣಾ ಸಂಸ್ಥಾನದಲ್ಲಿ ಸುಧಾರಣೆ

ರಕ್ಷಣಾ ಸಂಸ್ಥಾನದ ನ್ಯಾಯಾಂಗ ಸಚಿವರಾದ ಶ್ರೀ ಎಂ. ಪ್ರೇಕಾಶರವರು ಅಧ್ಯಕ್ಷತೆಯಲ್ಲಿ ಏಳು ಜನರನ್ನೊಳಗೊಂಡ ಸುಧಾರಣಾ ಸಮಿತಿಯೊಂದನ್ನು ಅಲ್ಲಿನ ಮಹಾರಾಜರು ಕಳೆದ ೧೬ನೇ ತಾ॥ ತಮ್ಮ ೭೦ನೇ ವರ್ಷ ವರ್ಧಂತಿ ದಿನದಲ್ಲಿ ನೇಮಿಸಿದ್ದಾರೆ. ಸಂಸ್ಥಾನದಲ್ಲಿ ಜಾರಿಗೆ ತರಬೇಕಾದ ಸುಧಾರಣೆಯನ್ನು ಇನ್ನು ೩ ತಿಂಗಳೊಳಗಾಗಿ ತಯಾರಿಸಿ ತಮಗೆ ಒಪ್ಪಿಸಬೇಕೆಂದು ಸೂಚಿಸಿದ್ದಾರೆ. ರಾಜರ ಸ್ಥಾನ ಮತ್ತು ಹಕ್ಕಿಗೆ ಲೋಪ ಬರದಂತೆ ಸಂಸ್ಥಾನದಲ್ಲಿ ಪೂರ್ಣ ಅಧಿಕಾರವನ್ನು ರಾಜ್ಯಾಂಗ ನಿಯಮದ ಪ್ರಕಾರ ಚಲಾಯಿಸಲಾಗುವುದೆಂದು ಮಹಾರಾಜರು ತಿಳಿಸಿದ್ದಾರೆ.

ಅಪೆರಾ ಟಾಕೀಸ್

17-1-47 ರಿಂದ 2 ನೇ ವಾರ

ಪೊನ್ನುರುವಿ (ತಮಿಳು)

ಪಾತ್ರ:- "ಕೊತ್ತಮಂಗಲಂ ಸೀನು" ಕೆ. ಟಿ. ರುಕ್ಮಿಣಿ "ಆರ್. ಬಾಲಸುಬ್ರಹ್ಮಣ್ಯಂ

Morning shows at 10-30 a.m. from 17-1-47

Man from Morocco

With

Anton Wal Beck & Mary Morris.

ಕೊರಿಯಾ ಸ್ವಾತಂತ್ರ್ಯ ಹೋರಾಟ

ಕೊರಿಯಾಕ್ಕೆ ಕೂಡಲೇ ಸಂಪೂರ್ಣ ಸ್ವಾತಂತ್ರ್ಯವನ್ನು ಈಯಬೇಕೆಂದು ಒತ್ತಾಯಪಡಿಸಲು ಅಮೇರಿಕ ಮತ್ತು ರಷ್ಯಗಳಿಗೆ ನಿಯೋಗ ಕಳಿಸಲು ಕೊರಿಯದ ೩೩ ಸಂಸ್ಥೆಗಳು ನಿರ್ಧರಿಸಿವೆ. ಕೊರಿಯಾವನ್ನು ಟ್ರಸ್ಟಿಷಿಪ್ಪಿಗೆ ಒಳಪಡಿಸಿ ೧೯೪೫ರಲ್ಲಿ ಆದ ಮಾಸ್ಕೋ ತೀರ್ಮಾನವನ್ನು ಆ ಸಂಸ್ಥೆಗಳು ವಿರೋಧಿಸಿವೆ. ಕೊರಿಯಾವನ್ನು ಎರಡು ಭಾಗ ಮಾಡುವ ಮಾಲ್ಪು ನಿರ್ಧಾರವನ್ನು ರದ್ದುಗೊಳಿಸಿ ಕೂಡಲೇ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸಲೇ ಬೇಕೆಂದು ಕೊರಿಯದ ಪ್ರಜೆಗಳು ಮಿತ್ರರನ್ನು ಒತ್ತಾಯಪಡಿಸಿದ್ದಾರೆ.

ಇನ್ನು ಐದು ವರ್ಷಗಳಲ್ಲಿ ಮತ್ತೊಂದು ಯುದ್ಧ

ಫ್ಯಾಸಿಸಂ ಮತ್ತು ನಾಜಿಸಂಗಳ ಮೇಲೆ ಆಕ್ರಮಣವಾದ ಮತ್ತೊಂದು ಯುದ್ಧವು ಇನ್ನು ನಾಲ್ಕು ಅಥವಾ ಐದು ವರ್ಷಗಳಲ್ಲಿ ನಡೆಯುವುದೆಂಬುದಾಗಿ ಜೆಕೊಸ್ಲೊವೇಕಿಯಾ ಅಧ್ಯಕ್ಷರಾದ ಡಾ॥ ಬೆನಿಸ್ ರವರು ಪ್ರಾಗಿನಲ್ಲಿ ಭಾಷಣ ಮಾಡುತ್ತಾ ತಿಳಿಸಿರುತ್ತಾರೆ.

ವಿಯಟ್ ನಾಂ-ಫ್ರೆಂಚ್ ಒಪ್ಪಂದ

ವಿಯಟ್ ನಾಂ ಸರ್ಕಾರದೊಡನೆ ಒಪ್ಪಂದಮಾಡಿಕೊಳ್ಳಲು ಫ್ರೆಂಚ್ ಸರ್ಕಾರವು ಆಶೆಹೊಂದಿದೆಯೆಂದು ಫ್ರೆಂಚ್ ಮಂತ್ರಿಮಂಡಲದ ಪ್ರಕಟಣೆ ಹೊರಬಿದ್ದಿದೆ. ಸಂಧಾನವು ತೃಪ್ತಿಪಡಿಸುವ ಸ್ಥಿತಿಯನ್ನು ಅನುಸರಿಸಿ ಆರಂಭವಾಗಬೇಕೆಂದು ಹೇಳಲಾಗಿದೆ.

ಮದ್ರಾಸ್ ನೌಕರರಿಗೆ ಹೆಚ್ಚು ಸಂಬಳ

ಮದ್ರಾಸ್ ಸರ್ಕಾರದ ನಾನ್ ಗೆಜೆಟೆಡ್ ಮತ್ತು ಕೆಳದರ್ಜೆ ಕೆಲಸಗಾರರ ಸಂಬಳದ ದರವನ್ನು ಹೆಚ್ಚಿಸಲಾಗಿದೆ. ಇದರಿಂದ ಸರಕಾರಕ್ಕೆ ೧೬೩ ಲಕ್ಷ ರೂ ಗಳ ಹೆಚ್ಚು ಖರ್ಚು ಬರುವುದು. ಇದನ್ನು ಜನವರಿ ೧ ರಿಂದಲೇ ಜಾರಿಗೆ ತರಬಹುದು. ತುಟ್ಟಿ ಮತ್ತು ವಸತಿ ಭತ್ಯಗಳು ಈಗಿರುವಂತೆಯೇ ಮುಂದುವರಿಯುವುವು. ೫೦ ಸಾವಿರ ಪ್ರಜಾ ಸಂಖ್ಯೆಗೆ ಹೆಚ್ಚಾಗಿರುವ ನಗರಗಳಲ್ಲಿರುವ ಸರಕಾರಿ ನೌಕರರಿಗೆ ಬಾಡಿಗೆ ಅಲೋಯನ್ಸ್ ಕೊಡಲಾಗುವುದು. ಮೇಸ್ತರಿಗೆ ಸರಕಾರಿ ನೌಕರರಂತೆಯೇ ಸ್ಥಳೀಯ ಸಂಸ್ಥೆಯ ಕೆಲಸಗಾರರಿಗೂ ಸಂಬಳಗಳನ್ನು ಹೆಚ್ಚಿಸಲಾಗಿದೆ.

ಪುರಸಭೆ ಮತ್ತು ನಗರಾಭಿವೃದ್ಧಿ ಸಮಿತಿ ಕೆಲಸಗಾರರ ಸಭೆ

ರಾಜಧಾನಿಯ ಪುರಸಭೆ ಮತ್ತು ನಗರಾಭಿವೃದ್ಧಿ ಸಮಿತಿಯ ನಾನ್ ಗೆಜೆಟೆಡ್ ನೌಕರರು ಕಳೆದ ೧೧ ನೇ ತಾ॥ ಸಭೆ ಸೇರಿ ತಮ್ಮ ಸಂಬಳವನ್ನು ಹೆಚ್ಚಿಸಬೇಕೆಂದು ಪ್ರಾರ್ಥಿಸುವ ದೀರ್ಘವಾದ ಮನವಿಯೊಂದನ್ನು ಸಿದ್ಧಗೊಳಿಸಿ ಪ್ರೆಸಿಡೆಂಟರಿಗೆ ಒಪ್ಪಿಸಿರುತ್ತಾರೆ.

ಸಾಧ್ವಿ
ತಾ॥ ೧೮-೧-೪೭ ಶನಿವಾರ

ಕ್ಯುಮ್ಯುಲೆಟಿವ್ ಓಟಿನ ಪದ್ಧತಿ

ಲೇಖಕರು:—ಶ್ರೀ ಟಿ ಮರಿಯಪ್ಪ ಬಿ ಎ ಎಲ್ ಎಲ್ ಬಿ, ವಕೀಲರು ಮತ್ತು ಶಾಸನ ಸಭಾ ಸದಸ್ಯರು.

ಮೈಸೂರು ಸರ್ಕಾರದವರು ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಕ್ಯುಮ್ಯುಲೆಟಿವ್ ಓಟಿಂಗ್ ಪದ್ಧತಿಯನ್ನು ಜಾರಿಗೆ ತಂದು ದೇಶಕ್ಕೆ ಬಹಳ ಅಪಕಾರ ಮಾಡಿದ್ದಾರೆ. ಸರ್ಕಾರದವರು ಮೈಸೂರು ಕಾಂಗ್ರೆಸ್ಸಿನವರನ್ನು ಚುನಾವಣಾ ಸ್ಥಾನಗಳಿಂದ ದೂರ ಇರಿಸಲು ಹೂಡಿರುವ ತಂತ್ರವಿದೆಂದರೆ ತಪ್ಪಾಗಲಾರದು. ೪೦ ನೇ ಇಸವಿಯಲ್ಲಿ ನಡೆದ ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನವರು ಬಹುಮತದಲ್ಲಿ ಆರಿಸಿ ಬಂದುದನ್ನು ನೋಡಿ ಆಗಿನ ದಿವಾನರಾದ ಸರ್ ಮಿರ್ಜಾರವರು ಈ ಪದ್ಧತಿಯನ್ನು ಸಾರ್ವಜನಿಕರ ಅಭಿಪ್ರಾಯವನ್ನೇ ಕೇಳದೆ ಗುಪ್ತ ರೀತಿಯಲ್ಲಿ ನಿಯಮವನ್ನು ರಚಿಸುವುದರ ಮೂಲಕ ಶಾಸನ ಸಭೆಗಳ ಚುನಾವಣೆಗಳಲ್ಲಿ ಜಾರಿಗೆ ತಂದರು. ಆ ಮಹನೀಯರು ತಮ್ಮ ಕಾರ್ಯದ ಫಲವನ್ನು ಉಪಭೋಗಿಸಲು ಇಲ್ಲಿ ಬಹಳ ಕಾಲ ಉಳಿಯಲೇ ಇಲ್ಲ.

ಜಿಲ್ಲಾ ಬೋರ್ಡುಗಳಲ್ಲಿ ಮೂರನೇ ಒಂದು ಭಾಗ ನಾಮಕರಣದ ಸದಸ್ಯರಿದ್ದಾರೆ. ಈ ನಾಮಕರಣದ ಸದಸ್ಯರ ಪೈಕಿ ಅಧಿಕಾರಿಗಳಿಗೆ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚು[ನಾವಣೆ]ಯಲ್ಲಿ ಓಟು ಮಾಡುವ ಅಧಿಕಾರವು ಹಿಂದೆ ಇರಲಿಲ್ಲ. ಈಚೆಗೆ ಓಟಿನ ಹಕ್ಕನ್ನು ಕೊಟ್ಟು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಸರ್ಕಾರದವರು ತಮ್ಮ ಕೈವಾಡವನ್ನು ತೋರಿಸಿದರು. ಆದರೂ ನಾಲ್ಕು ಜಿಲ್ಲಾ ಬೋರ್ಡುಗಳಲ್ಲಿ ಕಾಂಗ್ರೆಸ್ಸಿನವರೇ ಅಧ್ಯಕ್ಷರಾಗಿದ್ದಾರೆ ಇದನ್ನು ಸರ್ಕಾರದವರು ಸಹಿಸಲಾರದೆ ಈ ಕ್ಯುಮ್ಯುಲೆಟಿವ್ ಓಟಿನ ಪದ್ಧತಿಯನ್ನು ಜಾರಿಗೆ ತಂದು ಪ್ರತಿಗಾಮೀ ಪಂಗಡದವರಿಗೆ ಪ್ರೋತ್ಸಾಹವೀಯುತ್ತಿದ್ದಾರೆ. ಈ ಪದ್ಧತಿಯಲ್ಲಿ ಮತದಾರರು ತಮ್ಮ ಎಲ್ಲಾ ಓಟುಗಳನ್ನೂ ಒಬ್ಬ ಉಮೇದುವಾರನಿಗೇ ಕೊಡಲು ಅವಕಾಶವಿದೆ. ಜನರ ಒಗ್ಗಟ್ಟನ್ನು ಒಡೆಯುವ ಮಹಾ ಪ್ರಯತ್ನವಿದು.

ಈ ಓಟಿನ ಪದ್ಧತಿಯು ಪ್ರಜಾ ಸತ್ತಾತ್ಮಕ ತತ್ವಕ್ಕೆ ವಿರುದ್ಧವಾದುದು. ಪ್ರಜಾಸತ್ತೆಯ ತೌರೂರಾದ ಗ್ರೇಟ್ ಬ್ರಿಟನ್ನಿನಲ್ಲಿ ೧೯ ನೇ ಶತಮಾನದಲ್ಲಿ ಸ್ಕೂಲು ಬೋರ್ಡುಗಳ ಚುನಾವಣೆಯಲ್ಲಿ ಮಾತ್ರ ಇದು ಸ್ವಲ್ಪ ಕಾಲ ಜಾರಿಯಲ್ಲಿದ್ದು ವಜಾಮಾಡಲ್ಪಟ್ಟಿತು. ಪ್ರಪಂಚದ ಮತ್ತಾವ ದೇಶದಲ್ಲಿಯೂ ಇದು ಜಾರಿಯಲ್ಲಿಲ್ಲ. ಕೋಮುವಾರು ಪಂಗಡವನ್ನು ಉತ್ತೇಜಿಸಲು ಬೊಂಬಾಯಿ ಪ್ರಾಂತದ ಕೆಲವು ಜಿಲ್ಲೆಗಳಿಂದ ಶಾಸನ ಸಭಾ ಚುನಾವಣೆಗಳಲ್ಲಿ ಮಾತ್ರ ಬ್ರಿಟಿಷರು ಇದನ್ನು ಜಾರಿಗೆ ತಂದರು. ಜಿಲ್ಲಾ ಬೋರ್ಡುಗಳ ಚುನಾವಣೆಗಳಲ್ಲಿ ಎಲ್ಲಿಯೂ ಈ ವಿಧಾನವನ್ನು ಉಪಯೋಗಿಸುತ್ತಿಲ್ಲ.

ಮೈಸೂರು ದೇಶದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇದನ್ನು ಜಾರಿಗೆ ತರುವ ಪ್ರಯತ್ನವು ಕಳೆದ ನವೆಂಬರಿನಲ್ಲಿ ಪ್ರಾರಂಭವಾಯಿತು. ರಹಸ್ಯವಾಗಿಯೇ ಮಾತುಕತೆಗಳು ನಡೆಯುತ್ತಿದ್ದುವೆಂದೂ ಇದಕ್ಕಾಗಿ ವಾರ್ಡ್ ಪದ್ಧತಿಯ ಚುನಾವಣೆ ಕ್ಷೇತ್ರಗಳನ್ನು ಜಾರಿಗೆ ತರಬೇಕೆಂಬ ಕುಟುನೆಪದ ಮೇಲೆ ಬೆಂಗಳೂರು ನಗರದ ಪುರಸಭೆಯ ಚುನಾವಣೆಯನ್ನು ಮುಂದೆ ಹಾಕಲಾಯಿತೆಂಬ ವದಂತಿ ಹಬ್ಬಿತು. ಕಳೆದ ನ್ಯಾಯವಿಧಾಯಕ ಸಭಾಧಿವೇಶನದಲ್ಲಿ ಈ ಓಟಿನ ಪದ್ಧತಿಯನ್ನು ಜಾರಿಗೆ ತರಲು ರಹಸ್ಯ ಪ್ರಯತ್ನಗಳು ನಡೆಯುತ್ತಿರುವುದು ಶೋಚನೀಯವೆಂದು ಸೂಚಿಸಿದಾಗ ಸಭಾನಾಯಕರೂ ಮತ್ತು ಇನ್‌ಛಾರ್ಜ್ ದಿವಾನರೂ ಆದ ಡಾ॥ ರಾಯ್‌ರವರು ಆ ರೀತಿ ಮಾಡುವುದಿಲ್ಲವೆಂದು ಭರವಸೆ ನೀಡಿದರು. ಈಗ ಆ ಭರವಸೆಯು ಮೂಲೆಯ ಪಾಲಾಗಿ ಈ ಪದ್ಧತಿಯನ್ನೇ ಜಾರಿಗೆ ತಂದಿರುವುದು ಖಂಡನೀಯವಾಗಿದೆ.

ಪ್ರಜಾ ಪ್ರತಿನಿಧಿ ಸಭೆಯನ್ನಾಗಲೀ, ನ್ಯಾಯ ವಿಧಾಯಕ ಸಭೆಯನ್ನಾಗಲೀ ಕೇಳದೆ, ಅಥವಾ ನಮ್ಮ ದೇಶಕ್ಕೆ ಯಾವ ತರಹೆಯ ಓಟಿನ ಪದ್ಧತಿಯು ಸಾಧುವೆಂಬುದನ್ನು ಸಾರ್ವಜನಿಕರ ವಿಮರ್ಶೆಗೆ ಬಿಡದೆ ಸರ್ಕಾರದವರು ಈ ರೀತಿ ವರ್ತಿಸಿರುವುದು ಸರಿಯಲ್ಲ. ಜಿಲ್ಲಾ ಬೋರ್ಡುಗಳು ವಿಸ್ತಾರಗೊಂಡು ಸಂಪೂರ್ಣ ಚುನಾಯಿತ ಸದಸ್ಯರಿಂದ ಕೂಡಿರಬೇಕೆಂದು ಪ್ರಜಾಪ್ರತಿನಿಧಿಗಳು ಒತ್ತಾಯ ಪಡಿಸುತ್ತಲೇ ಇದ್ದಾರೆ. ನಾಮಕರಣ ಸದಸ್ಯರನ್ನೆಲ್ಲಾ ವಜಾ ಮಾಡಬೇಕೆಂದೂ ಕೇಳುತ್ತಿದ್ದಾರೆ. ಇದಕ್ಕೆ ಬದಲಾಗಿ ಹೊಸ ದಿವಾನರು ಬಂದ ಅತ್ಯಲ್ಪ ಕಾಲದಲ್ಲಿಯೇ ಜನರಿಗೆ ಈ ಹೊಸ ವರ್ಷದ ಉಡುಗೊರೆಯು ದೊರೆತಿದೆ. ಇಂತಹ ಪ್ರಯತ್ನಗಳಿಂದ ಸರ್ಕಾರದವರು ತಮ್ಮ ಅಭೀಷ್ಟವನ್ನು ನೆರವೇರಿಸಿಕೊಳ್ಳುತ್ತೇವೆಂದರೆ ಅದು ಕನಸಿನ ಮಾತು.

ಶ್ರೀಮನ್ಮಹಾರಾಜರವರ ಸಂದೇಶವು ಬಂದ ತರುಣದಲ್ಲಿ ದೇಶದ ಮೂಲೆ ಮೂಲೆಗಳಲ್ಲಿ ಪ್ರತಿಬಂಧಕಾಜ್ಞೆಗಳನ್ನು ಜಾರಿ ಮಾಡುತ್ತಿರುವುದೂ ಮತ್ತು ಪ್ರತಿಗಾಮಿ ಪದ್ಧತಿಯಾದ ಕ್ಯುಮ್ಯುಲೆಟಿವ್ ಓಟಿನ ಕ್ರಮವನ್ನು ಜಾರಿಗೆ ತಂದಿರುವುದೂ ಸ್ನೇಹಹಸ್ತದ ಕುರುಹಲ್ಲಿ ದಿವಾನರು ವಜ್ರಮುಷ್ಟಿಹಿಡಿದು ಸಹಕಾರವನ್ನು ಬಲವತ್ಸಂದಿಯಿಂದ ಕೇಳುವಂತಿದೆ. ಈ ಪ್ರಯತ್ನದಲ್ಲಿ ಖಂಡಿತವಾಗಿಯೂ ಇವರು ಕೃತಕೃತ್ಯರಾಗಲಾರರು. ಮೈಸೂರು ದೇಶಕ್ಕೆ ಇನ್ನೂ ಏನೇನು ಬರಲಿದೆಯೋ! ಕಾದು ನೋಡಬೇಕು

ಹೊಸದಾಗಿ ಶಾಲುಗಳೂ, ಇಟಾಲಿಯನ್ ರಗ್ಗುಗಳೂ, ಇಂಗ್ಲೀಷ್ ಕೋಟಿಂಗ್ ಸರ್ಜುಗಳೂ ಬಂದಿರುತ್ತವೆ. ಬಂದು ನೋಡಿ
ಬಾಹುಸಾರ್ ಟ್ರೇಡಿಂಗ್ ಕಂಪೆನಿ,
ಓಲ್ಡ್ ಮೈಸೂರು ಬ್ಯಾಂಕ್ ರೋಡು,
ಮೈಸೂರು

READ
Your future prospects of life-the book which reveals you many astounding secrets and facts. Send 14 annas by M. O. to:-
K. S. Srinivasa Murti Rao
Haliyur P. O.
K. R. Nagar Taluk.

ನಿಮ್ಮ ಮೈ ಮೊಗವುಲ್ಲಿನಂತೆ ಹೊಳೆಯಬೇಕೇ? ನೀವು ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!
ಮೈಸೂರು ಸ್ಯಾಂಡಲ್ ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲುರವರ
ಅಶೋಕಾ
ಗರ್ಭಾಶಯರೋಗ ನಿವಾರಿಣಿ

ಅಶೋಕಾ ನಿಮ್ಮ ದೋಷರಹಿತವಾದ ತನ್ನು ನಿರ್ಮೂಲಿಸಿ ಸಂಪೂರ್ಣ ಸ್ತ್ರೀತ್ವವನ್ನು ಪ್ರಸಾದಿಸುವ ಸ್ವಯಂಸಂಪೂರ್ಣವಾದ ದಿವ್ಯೌಷಧವಿದನ್ನು ಬಿಡದೆ ಸೇವಿಸುವಿರಾದರೆ, ನಿಮ್ಮ ಜೀವನ ಪರಮಾವಧಿಯಾದ ಆ ಮಂದಾನಂದವನ್ನು ತಪ್ಪದೆ ಒದಗಿಸಬಲ್ಲುದು.
ಆಯುರ್ವೇದಾಶ್ರಮಂ ಲಿಮಿಟೆಡ್.
ಟಿ-ನಗರ್.... ಮದರಾಸು.

ರಾಜಕಮಲ್, ಮೈಸೂರು
17-1-47 ರಿಂದ ಅಮೋಘವಾದ
4 ನೇ ವಾರ
—: ಪ್ರಕಾಶ್ ರವರ :—
ಹಮಾರಾ ಸಂಸಾರ್
ಭೂಮಿಕೆ :- ಜೀವನ್ ಉಮಾಕಾಂತ್, ರಂಜನ, ಜಿಲ್ಲೂ,
From 17-1-47 for 4 days daily at 10-30 a m
"Michael Stragoff"
based on the adventure classic of Jules Verne.
A Picture Worth its Weight in Gold

ಹೊಸ ನಮೂನೆಯ
ಬೆನಾರಿಸ್ ಜಾರ್ಜೆಟ್ ಸೀರೆಗಳು, ಮೈಸೂರು ಸಿಲ್ಕು ಟಿಪ್ಪೂ ಸೀರೆಗಳು, ಬೆಂಗಳೂರ್ ಸಿಲ್ಕು ಸೀರೆಗಳು ಮತ್ತು ಕೊಯಮತ್ತೂರು ಮಧುರೆ ಸೀರೆಗಳು ಬಿಕರಿಗೆ ಸಿದ್ಧವಾಗಿವೆ.
ಇಂದೇ ಭೇಟಿ ಕೊಡಿರಿ.
ಬಿ. ಕೆಂಚಪ್ಪ ಸನ್ಸ್,
ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು

ಮೈಸೂರಿನ ಸುಪ್ರಸಿದ್ಧ
ರಾಜಕಮಲ್ ಟಾಕೀಸಿನಲ್ಲಿ
22-1-47 ರಿಂದ ಪ್ರಾರಂಭ
ಚಿತ್ರ ಪ್ರೊಡಕ್ಷನ್ ರವರ ಸುಪ್ರಸಿದ್ಧ ಸಾಮಾಜಿಕ ಹಿಂದೀ ಚಿತ್ರ
- ಪ್ರತಿಜ್ಞ -
-: ತಾರಾ ಗಣ :-
ಮೋತೀ ಲಾಲ್, ಸ್ವರ್ಣ ಲತಾ, ಬೇಬಿ ಮೀನಾ, ವೀಣಕುಮಾರಿ, ಹರಿ ಶಿವ ದಾಸಿನಿ, ಸುನೇತ್ರ, ಬುಡೊ ಅದ್ವಾನಿ, ನಾಗೇಂದ್ರ ಮೊದಲಾದವರು.
C. B. M. ಚಂದ್ರಯ್ಯ, ಮೈಸೂರು, ರಿಲೀಸ್

Edited, printed and published by A. K. Nagarajan at the Sadhvi Press D. Subbiah Road, Mysore.

ರೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೧೯—೧—೪೭ [ಸಂಚಿಕೆ ೧೩೯

ಸಂಯುಕ್ತರಾಷ್ಟ್ರಸಂಸ್ಥೆಗೆ ಹರಿಜನರ ಅಹವಾಲು

...ಕ ಮೆಹತಾರವರು ...ಷ್ಟೆ ಮುರಿಯುವರು

...ರಕೂರು ಸಂಸ್ಥಾನದೊಳಕ್ಕೆ ಪ್ರ...ಕೂಡದೆಂದು ಹಾಕಲಾಗಿರುವ ಪ್ರತಿ...ಷ್ಟೆಯನ್ನು ಶ್ರೀ ಅಶೋಕ ಮೆಹ...ರು ಫೆಬ್ರವರಿ ೧ ನೇ ತಾ|| ಮುರಿದು ...ಸ್ಥಾನದೊಳಕ್ಕೆ ಪ್ರವೇಶಿಸುವುದಾಗಿ ...ಳಿಸಿರುತ್ತಾರೆ.

...ರ್ವ ಸಂಸ್ಥಾನಗಳಿಗೆ ರಾಜ್ಯಾಂಗ ಸಭೆ

...ರ್ವ ಸಂಸ್ಥಾನಾಧೀಶರು ಒಂದು ...ರ್ವ ಸ್ಥಾಪಿಸಿಕೊಳ್ಳಲು ನಿರ್ಧರಿಸಿ ...ಗಿ ಒಂದು ರಾಜ್ಯಾಂಗ ಸಭೆಯನ್ನು ...ರಚಿದ್ದಾರೆ ಈ ಯೂನಿಯನ್ನಿಗೆ ...ಸ್ಥಾನಗಳು ಸೇರಲಿವೆ. ಪ್ರತಿ ೧ ...ಪ್ರಜೆಗಳಿಗೆ ಒಬ್ಬ ಪ್ರತಿನಿಧಿಯಂತೆ ...ಂಗ ಸಭೆಗೆ ಆಯ್ಕೆ ನಡೆಯುವು...ದೆ.

...ಪೂರ್ಥಲ, ಭೂಪಾಲ್ ಗಳಲ್ಲಿ ರಕ್ಷಣಾ ಶಾಸನ

...ಪಾಲ್ ಮತ್ತು ಕಪೂರ್ಥಲ ಸಂ...ಲ್ಲಿ "ಸಾರ್ವಜನಿಕ ರಕ್ಷಣೆ" ಗಾಗಿ ...ಹೊಸ ಜರೂರು ಶಾಸನವನ್ನು ಜಾ...ರಲಾಗಿದೆ ಕಪೂರ್ಥಲ ಸಂಸ್ಥಾನ...ತಿಂಗಳ ಕಾಲ ಸಭೆ, ಮೆರವಣಿಗೆಗಳ ...ಪ್ರತಿಬಂಧಿಸಲಾಗಿದೆ

...ನ ಸಂಭಾಷಾ ಪರಿಷತ್ತು

...ರಿನ್ನೆ ದಿನ ನಿಖಿಲ ಕರ್ನಾಟಕ ...ವೇದ ಸಮ್ಮೇಳನದ ಅಂಗವಾಗಿ ...ನ ಸಂಭಾಷಾ ಪರಿಷತ್ತು ಗದಗಿನಲ್ಲಿ ...೯ ನೇ ತಾ|| ನಂಜನಗೂಡು ಛಪ ...ಬಿ ವಿ ಸ. ಶಿಕರವರ ಮುಕ್ಕಳಾದ ...ಶ್ರೀ ಬಿ. ವಿ. ನಂಜುಂಡಸ್ವಾಮಿ ...ರ ಅಧ್ಯಕ್ಷತೆಯಲ್ಲಿ ಜರುಗಿತು. ಅ...ವರು ತಮ್ಮ ಭಾಷಣದಲ್ಲಿ ಪ್ರಮಾಣಗ...ತತ್ವಗಳು, ಮನಸ್ಸು ಪಂಚಭೂತಗ...ಇಂದ್ರಿಯಗಳು ಆತ್ಮ, ಪುರುಷ ಸ್ವಾತಂ...ಮೋಕ್ಷ, ಮತ್ತು ಪ್ರವೃತ್ತಿ-ನಿವೃತ್ತಿ ...ಗಳು ಇವೇ ಮುಂತಾದ ವಿಷಯಗ...ಹೃದಯಂಗಮವಾಗಿ ವಿವರಿಸಿದ್ದಾರೆ ...ಮಾಜ ಸಮ್ಮೇಳನದ ಅಧ್ಯಕ್ಷತೆಯು ...ವರಿಗೆ ದೊರಕಿದಿದುದು ಮೈಸೂರಿ...ಪೆಮ್ಮೆ ಪಡುವುದಾಗಿದೆ

ಮೈಸೂರಿನ ಸುಪ್ರಸಿದ್ಧ
ರಾಜಕಮಲ್
ಟಾಕೀಸಿನಲ್ಲಿ
22-1-47 ರಿಂದ ಪ್ರಾರಂಭ
...ತ್ರ ಪ್ರೊಡಕ್ಷನ್ ರವರ ಸುಪ್ರಸಿದ್ಧ
ಸಾಮಾಜಿಕ ಹಿಂದೀ ಚಿತ್ರ
ಪ್ರತಿಜ್ಞಾ
-: ತಾರಾ ಗಣ :-
...ತಿ ಲಾಲ್, ಸ್ವರ್ಣ ಲತಾ,
...ಬಿ ಸುನೀನಾ, ವೀಣಕುಮಾರಿ,
ಹರಿ ಶಿವ ದಾಸಿನಿ, ಸುನೇತ್ರ,
...ಡೊ ಅದ್ವಾನಿ, ನಾಗೇಂದ್ರ
ಮೊದಲಾದವರು
B. M ಚಂದ್ರಯ್ಯ, ಮೈಸೂರು,
ರಿಲೀಸ್

ಇಂಡೊ ಚೀಣಾದಲ್ಲಿ ವಿಯಟ್‌ನಾಂಗಳ ಪ್ರಾಬಲ್ಯ

ವಿಯಟ್‌ನಾಂ ರಾಷ್ಟ್ರೀಯರ ಮೇಲೆ ಫ್ರೆಂಚ್ ಸರ್ಕಾರವು ಹೂಡಿರುವ ಕದನದಲ್ಲಿ ದಕ್ಷಿಣದಲ್ಲಿರುವ ಕೊಚಿನ್ ಚೈನಾದ ಕೆಲವು ನಗರಗಳ ಹೊರತಾಗಿ ಮಿಕ್ಕೆಲ್ಲ ಭಾಗಗಳಲ್ಲೂ ಫ್ರೆಂಚರ ಹತೋಟಿ ತಪ್ಪಿಹೋಗಿದೆಯೆಂದು ಸೈಗಾನಿನಿಂದ ವರದಿ ಬಂದಿದೆ. ಶಸ್ತ್ರಸಜ್ಜಿತ ಸೈನ್ಯಗಳನ್ನು ಇಂಡೋಚೈನಾಕ್ಕೆ ಕಳುಹಿಸಲು ನಿರ್ಧರಿಸಿರುವುದಾಗಿ ಫ್ರೆಂಚ್ ಸರ್ಕಾರದ ಪ್ರಕಟಣೆ ಹೊರಟಿದೆ. ಇತ್ತ ವಿಯಟ್‌ನಾಂ ಪಡೆಗಳು ಗೆರಿಲ್ಲಾ ಕದನವನ್ನು ಆರಂಭಿಸಬೇಕೆಂದು ಸೂಚನೆಕೊಡಲಾಗಿದೆ ಫ್ರಾನ್ಸಿನ ಹೊಸಮಂತ್ರಿಮಂಡಲ ರಚನೆಯಾಗುವವರೆಗೂ ಸಂಧಾನದ ಪ್ರಶ್ನೆ ಬದಿಗೊತ್ತಲ್ಪಟ್ಟಿದೆ.

ರಥ ಸಪ್ತಮಿ ದಿನ ತಿರುಪತಿ ದೇವಾಲಯ ಪ್ರವೇಶ

ಬರುವ ರಥಸಪ್ತಮಿ ದಿನ, ಅಂದರೆ ೨೮ ನೇ ತಾ|| ತಿರುಪತಿ ದೇವಾಲಯವನ್ನು ಪ್ರವೇಶಿಸಿ ಶ್ರೀವೆಂಕಟೇಶ್ವರಸ್ವಾಮಿ ದರ್ಶನವನ್ನು ಮಾಡಬೇಕೆಂದು ಹರಿಜನರು ನಿರ್ಧರಿಸಿರುವುದಾಗಿ ವರದಿಯಾಗಿದೆ

ಕಾಲಕ್ಷೇಪ

ವಾಣೀವಿಲಾಸ ಮೊಹಲ್ಲಾ ಶ್ರೀ ಸಂ... ಸೇವಾ ಸಮಿತಿಯ ಆಶ್ರಯದಲ್ಲಿ ಶ್ರೀ ಯಾಮುನ ಮಂದಿರದಲ್ಲಿ ಶ್ರೀ ಕಾಂಚೀಪುರದ ಮಠಾಧೀಶರಾದ ಶ್ರೀ ಅಳಕಿಯ ಮಣವಾಳ ಜೀಯರ್ ಸ್ವಾಮಿಗಳವರು ನೊನ್ನೆಯಿಂದ ಪ್ರತಿದಿನ ಸಂಜೆ ೬ ರಿಂದ ೭ ಗಂಟೆವರೆಗೆ "ಶ್ರೀ ವಚನ ಭೂಷಣ" ಕಾಲಕ್ಷೇಪವನ್ನು ನಡೆಸುತ್ತಿದ್ದಾರೆ ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ

ಬೇಕಾಗಿದ್ದಾರೆ.

(೧) ಕೋರ್ಟು ಕೆಲಸಗಳಲ್ಲಿ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಅನುಭವವುಳ್ಳ ಫುಲ್ ಟೈಂ ಕ್ಲಾರ್ಕ್ ಒಬ್ಬರು, ಸಂಬಳ ತಿಂಗಳಿಗೆ ಯೋಗ್ಯತೆ ಮತ್ತು ಸರ್ವೀಸ್ ಅನುಸರಿಸಿ ಎಂಭತ್ತು ರೂಪಾಯಿಗಳ ವರೆಗೂ (Rs 80) ಗ್ರೇಡ್ ಉಂಟು ಬಾಕಿ ಸಹಾರ ಮೊಖ್ತಾ

(೨) ಅಂಗಡಿ ಮರ್ಚೆಂಟ್ ಕೆಲಸಗಳಿಗೆ ಹೊಸಾದಾರರು ಬೇಕಾಗಿದ್ದಾರೆ ಮೊಖ್ತಾ ಬ ದು ವಿಚಾರಿಸುವುದು.

ಎಸ್, ಮಾಣಿಕಚಂದ್ ಪುಕ್‌ರಾಜ್, ಅಶೋಕಾ ರಸ್ತೆ, ಮೈಸೂರು.

ಉಪಾಧ್ಯಾಯರಿಗೆ ಕೊರತೆಯೇ ?

ನಮ್ಮ ಸಂಸ್ಥಾನದಲ್ಲಿ ಘನ ಸರ್ಕಾರದವರು ವಿದ್ಯಾಭ್ಯಾಸಕ್ಕೆ ಕೊಡುತ್ತಿರುವ ಪ್ರೋತ್ಸಾಹವು ಎಲ್ಲರಿಗೂ ಅತ್ಯಂತ ಸಂತೋಷವನ್ನುಂಟುಮಾಡುವ ವಿಚಾರವೇ ಆಗಿರುತ್ತದೆ. ಆದರೆ ಸಂಸ್ಥಾನದಲ್ಲೆಲ್ಲಾ ಸಾಧಾರಣವಾಗಿ ಶಾಲೆಗಳಲ್ಲಿ ಸಾಕಾದಷ್ಟು ಸಂಖ್ಯೆಯಲ್ಲಿ ಉಪಾಧ್ಯಾಯರುಗಳು ಇಲ್ಲದಿರುವುದರಿಂದ ಪಾಠ ಕ್ರಮಕ್ಕೆ ತೊಂದರೆಯಾಗಿದೆಯೆಂಬ ಕೂಗ ಎಲ್ಲೆಲ್ಲೂ ಕೇಳಿ ಬರುತ್ತಿದೆ ಈ ಸಮಸ್ಯೆಯನ್ನು ಅವರು ಹೇಗೆ ಬಗೆಹರಿಸುವರೋ, ಎಂಬುದನ್ನು ನೋಡಬೇಕಾಗಿದೆ.

ಹೈಸ್ಕೂಲುಗಳಲ್ಲಿ ಟ್ರೈನಿಂಗ್ ಇಲ್ಲದ ಪದವೀಧರರನ್ನು ಉಪಾಧ್ಯಾಯರುಗಳನ್ನಾಗಿ ನೇಮಿಸುತ್ತಿರುವುದು ಉದಾರ ನೀತಿಯನ್ನು ತೋರಿಸುತ್ತದೆ ಸ್ವಂತ ಖರ್ಚಿನಿಂದಲೇ ಟ್ರೈನಿಂಗ್ ಮಾಡಿಕೊಂಡು ನಂತರ ಉಪಾಧ್ಯಾಯ ವೃತ್ತಿಗೆ ಬರುವವರು ತುಂಬಾ ವಿರಳ ... ಶಿಕ್ಷಣ ಪಡೆದು ಬಂದವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದು ನ್ಯಾಯವಾಗಿರುತ್ತದೆ.

ವಿದ್ಯಾಭ್ಯಾಸದ ಇಲಾಖೆಯಲ್ಲಿ ನೂರಾರು ಕೆಲಸಗಳು ಖಾಲಿ ಇವೆ ಎಂಬುದು ಸರ್ವರಿಗೂ ವೇದ್ಯವಾದ ... ಸ ಸ್ಥಿತಿಯಲ್ಲಿ ನಮ್ಮ ... ದ ಪದವೀಧರರಾಗಿ ಟ್ರೈ... ನಿಂಗ್ ಪಡೆ ಮುಗಿಸಿ ... ದು ರಪ್ಪಿಸ್ಪವಶಾತ್ ಇನ್ನೂ ... ಪ ರದಾಡುತ್ತಿರುವ ಅನೇ... ರು ತ್ತದೆ. ಇವರ ಪ್ರಯ... ವಿಫ ಲವಾದುವೋ ತಿಳಿಯ... ಕೂಡಲೇ ಇವಕ್ಕೆ ... ಇಧಿ ಕಾರಿಗಳು ವಿಚಾರ ಮ... ನೆ ಗೆ ಸಿದ್ಧರಾಗಿರುವ ... ದ ಯೋಗ್ಯತೆಯುಳ್ಳವರ... ಪ್ಪಿ ನಿಕೊಟ್ಟು ಈಗ ಉ... ರತೆ ಯನ್ನು ನಿವಾರಿಸ ... ನೆ

ಹೈದರಿಯು... ಗವರ್ನರಾ...

ಸರ್ ಅಕ್ಬರ್ ಹೈ... ನ್ನು ಅಸ್ಸಾಂ ಗವರ್ನರನ್ನಾ... ಡು ವ ಸಂಭವಗಳನೆಯ... ರ ಅಧಿಕಾರ ಅವರೊಡ... ವು ದಾಗಿ ವರದಿಯಾಗಿದೆ

ಹಿಂದೂಗಳ ಮೇಲೆ ವಿಶ್ವ ಸಂಸ್ಥೆಗೆ ಹರಿಜನರ ದೂರು

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಭಾರತದಲ್ಲಿ ಹಿಂದೂಗಳು ತಮ್ಮ ಮೇಲೆ ನಡೆಸುತ್ತಿರುವ ಕ್ರೂರ ದಬ್ಬಾಳಿಕೆಯಿಂದ ನಿಮ್ನ ವರ್ಗದವರು ಅನುಭವಿಸುತ್ತಿರುವ ತೊಂದರೆಯನ್ನು ವಿಶ್ವಸಂಸ್ಥೆಯ ಮುಂದೆ ಮಂಡಿಸಿ ಪರಿಹಾರ ಪಡೆಯಬೇಕೆಂದು ಅಖಿಲ ಭಾರತ ನಿಮ್ನ ವರ್ಗದ ಫೆಡರೇಷನ್ನಿನ ಕಾರ್ಯಕಾರಿ ಸಮಿತಿಯು ಮೊನ್ನೆ ಬೊಂಬಾಯಿಯಲ್ಲಿ ತೀರ್ಮಾನಿಸಿರುತ್ತದೆ. ಒಂದು ನಿಯೋಗ ಗೊತ್ತಿನ್ನನ್ನು ರಚಿಸುವಂತೆಯೂ ಸಮಿತಿಯು ನಿರ್ಧರಿಸಿದೆ. ಹಿಂದೂಗಳು ನಡೆಸುತ್ತಿರುವ ದಬ್ಬಾಳಿಕೆಯು ದಕ್ಷಿಣ ಆಫ್ರಿಕಾದಲ್ಲಿರುವ ಭಾರತೀಯರ ಸ್ಥಿತಿಗಿಂತ ಹೀನಾಯಕರವಾಗಿ ತಮ್ಮನ್ನು ಇಟ್ಟಿವೆಯೆಂದು ಆ ಮನವಿಯಲ್ಲಿ ನಮೂದಿಸಲಾಗಿದೆ ಬ್ರಿಟಿಷರೂ ಸಹ ತಮ್ಮ ರಕ್ಷಣೆಗೆ ಬರಲಿಲ್ಲವೆಂದು ಆಕ್ಷೇಪಣೆ ಸೂಚಿಸಲಾಗಿದೆ.

ಮದ್ರಾಸಿನಲ್ಲಿ ಧೂಮ ಪಾನಕ್ಕೂ ನಿಷೇಧವೇ ?

ಮದ್ಯಪಾನವನ್ನು ನಿಷೇಧಿಸುವಂತೆಯೇ ಧೂಮಪಾನವನ್ನೂ ನಿಷೇಧಿಸುವ ಆಲೋಚನೆಯನ್ನು ಮದ್ರಾಸ್ ಸರ್ಕಾರವು ಪಡೆದಿದೆಯೆಂಬುದಾಗಿ ಅಲ್ಲಿನ ರಚನಾತ್ಮಕ ಶ್ರೀ ಕೋಟಿ ರೆಡ್ಡಿಯವರು ತಿಳಿಸಿದ್ದಾರೆ. ಧೂಮಪಾನದಮೇಲೆ ಇನ್ನೂ ಹೆಚ್ಚಿನ ... ತೆರಿಗೆ ... ಸದ್ಯದಲ್ಲೇ ವಿಧಿಸಲಾಗುವುದೆಂದೂ ಹೇಳಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ

೨೬ ನೇ ತಾ|| ಸ್ವಾತಂತ್ರ್ಯ ದಿನಾಚರಣೆಯನ್ನು, ವಿದ್ಯಾರ್ಥಿಗಳ ಶಿಸ್ತಿನಿಂದಲೂ, ಗಾಂಧೀಯ ಮಾರ್ಗದಿಂದಲೂ ಆಚರಿಸಬೇಕೆಂದೂ, ವಿದ್ಯಾರ್ಥಿ ಕೇಂದ್ರಗಳಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸಾಮೂಹಿಕವಾಗಿ ಸ್ವೀಕರಿಸಿ, ರಚನಾತ್ಮಕ ಕಾರ್ಯಗಳ ವ್ಯವಸ್ಥೆ ಮಾಡಬೇಕೆಂದೂ ಅಖಿಲ ಭಾರತ ವಿ|| ಕಾಂಗ್ರೆಸ್ ಕಾರ್ಯದರ್ಶಿಗಳು ಹೇಳಿಕೆ ಇತ್ತಿದ್ದಾರೆ

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರ ಆಫೀಸಿನಿಂದ

ಹರಾಜು ಇಸ್ತಿಹಾರ್

ಮೈಸೂರು ಸಿಟಿ ಮಿಷ್ಠೆ ... ರಾಮಾನುಜಾ ರಸ್ತೆ ... ದ ಮೈಸೂರು ಸಿಟಿ ಮುನಿಸಿಪಲ್ ... ಕಟ್ಟಿಸಿರುವ ಎಳ ಮಳಿಗೆ ... ಗಳನ್ನು ತಾರೀಕು ೩೦-೧-೧೯೪೭ ನೇ ಸೋಮವಾರ ದಿನ ಹತ್ತು ಗಂಟೆಗೆ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ ಇಷ್ಟವುಳ್ಳವರು ಬಂದು ಹಾಜರಾಗಿ ಹರಾಜಿನಲ್ಲಿ ಭಾಗ ವಹಿಸಿ ... ಮಳಿಗೆಗಳನ್ನು ಪಡೆಯಬಹುದು ಹೆಚ್ಚಿನ ವಿವರಗಳನ್ನು ತಿಳಿಯಬೇಕೆನ್ನುವವರು ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಆಫೀಸಿನಲ್ಲಿ ಬೆಳಗ್ಗೆ ... ಘಂಟೆಯಿಂದ ... ಘಂಟೆಯವರೆಗೆ ಆಫೀಸು ದಿವಸಗಳಲ್ಲಿ ತಿಳಿದುಕೊಳ್ಳಬಹುದು

(ಸಹಿ) ಕೆ. ಜಿ ಶಾಸ್ತ್ರಿ
ಪ್ರೆಸಿಡೆಂಟರಿಗಾಗಿ

ಸಾಧ್ವಿ
ತಾ|| ೧೯-೧-೪೭ ಭಾನುವಾರ

ಕಾಂಗ್ರೆಸ್ ಮನವಿಗೆ ಪ್ರಭುಗಳ ಉತ್ತರ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚಂಗಲರಾಯ ರೆಡ್ಡಿಯವರು ಕಾಂಗ್ರೆಸ್ ಸಂಸ್ಥೆಯ ಪರವಾಗಿ ಶ್ರೀಮನ್ಮಹಾರಾಜರವರಿಗೆ ಮನವಿಯನ್ನು ಸಲ್ಲಿಸಿದ್ದರಷ್ಟೆ. ಅದರ ಬಗ್ಗೆ ಅವರಿಗೆ ಉತ್ತರವೊಂದು ಬಂದಿರುತ್ತದೆ. ಪತ್ರವು ತಲುಪಿರುವುದಾಗಿಯೂ, ಪ್ರಭುಗಳು ಇತ್ತೀಚೆಗೆ ಕೊಟ್ಟಿರುವ ಸಂದೇಶದ ಕಡೆ ಕಾಂಗ್ರೆಸ್ ಅಧ್ಯಕ್ಷರ ಗಮನವನ್ನು ಕೋರಲಾಗಿದೆಯೆಂದೂ ಅದರಲ್ಲಿ ತಿಳಿಸಲಾಗಿದೆ. ಇದು ನಮ್ಮ ಸಂಸ್ಥಾನದ ಇಂದಿನ ರಾಜಕೀಯ ಬಿಕ್ಕಟ್ಟಿನಲ್ಲಿ ಒಂದು ಪ್ರಾಮುಖ್ಯವಾದ ಘಟ್ಟ.

ಪ್ರಭುಗಳ ಉತ್ತರದಿಂದ ಈ ಕೂಡಲೇ ಆರಂಭವಾಗಬೇಕಾಗಿದ್ದ ಸತ್ಯಾಗ್ರಹ ಹೋರಾಟವು ಮುಂದೆ ಹಾಕಲ್ಪಟ್ಟಿರುವುದಾಗಿ ಕಾಂಗ್ರೆಸ್ ಅಧ್ಯಕ್ಷರು ತಿಳಿಸಿರುತ್ತಾರೆ. ಹೋರಾಟದ ಕ್ರಮವು ಮುಂದೆ ಯಾವ ಮಾರ್ಗವನ್ನು ಅವಲಂಬಿಸುವುದೋ ಹೇಳಲು ಸಾಧ್ಯವಿಲ್ಲ. ಆದರೆ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಬಿಡಿಸಿ ಸಂಸ್ಥಾನದ ಭವಿತವ್ಯವನ್ನು ಶಾಂತಿ, ಸಂಯಮಗಳಿಂದ ಸಕಲರೂ ಪರಿಶೀಲಿಸಲು ಪ್ರಭುಗಳವರ ಸಂದೇಶವು ಮಾರ್ಗವನ್ನು ಕಲ್ಪಿಸಿರುವುದಕ್ಕಾಗಿ ಎಲ್ಲರೂ ಸಮಾಧಾನ ಹೊಂದಿರುವರು.

ಹಿಂದೆ ಶಾಸನ ಸಭೆಗಳ ಅನೇಕ ಸದಸ್ಯರು ಏಕೀಭವಿಸಿ ಶ್ರೀಮನ್ಮಹಾರಾಜರವರಿಗೆ ಮನವಿಗಳನ್ನು ಸರ್ಕಾರದವರ ಮೂಲಕ ಸಲ್ಲಿಸಿದ್ದರು. ಆದರೆ ಇದುವರೆಗೆ ಅವುಗಳು ತಲುಪಿರುವುದಕ್ಕಾಗಿಯೂ ಸಹ ಉತ್ತರವು ಬಂದಿರಲಿಲ್ಲ. ಇದಕ್ಕಾಗಿ ಎಲ್ಲಾ ಕಡೆಗಳಲ್ಲಿಯೂ ವಿಶೇಷವಾದ ಅಸಮಾಧಾನವೂ, ಟೀಕೆಗಳೂ ಬರುತ್ತಿದ್ದವು. ಈಗ ಮೌನ ಮುದ್ರೆಯು ಮುರಿಯಿತು. ಪ್ರಭುಗಳು ಇತ್ತ ಸಂದೇಶದಲ್ಲಿ ಶಾಸನ ಸಭೆಗಳವರಿಗೆ ಮಾತ್ರವೇ ಅಲ್ಲದೆ ಕಾಂಗ್ರೆಸ್ಸಿನವರಿಗೂ ಮತ್ತು ಸ್ವತಂತ್ರವಾಗಿ ದೇಶದ ಅಭ್ಯುದಯವನ್ನು ಬಯಸುವ ಸಕಲರಿಗೂ ಉತ್ತರವನ್ನು ಕೊಟ್ಟಿರುತ್ತಾರೆ.

ಕಾಂಗ್ರೆಸ್ಸಿನವರಿಗೆ ಪ್ರತ್ಯೇಕ ರೀತಿಯಲ್ಲಿ ಉತ್ತರವನ್ನು ಕೊಟ್ಟಿರುವುದರಲ್ಲಿ ಬಹಳ ಔಚಿತ್ಯವೂ ಇರುವಂತೆ ಕಾಣುತ್ತದೆ. ಕಾಂಗ್ರೆಸ್ಸು ದೇಶದ ಅತ್ಯಂತ ಪ್ರಧಾನವಾದ ಮತ್ತು ಸುವ್ಯವಸ್ಥಿತವಾದ ಪ್ರಜಾಹಿತ ಸಾಧಕ ಸಂಸ್ಥೆ ; ದೇಶ ಹಿತಕ್ಕಾಗಿ ಅಪಾರವಾದ ಕಷ್ಟನಷ್ಟಗಳನ್ನು ಅನುಭವಿಸಿ ಸೇವೆಯನ್ನು ಸಲ್ಲಿಸುತ್ತದೆ. ಸತ್ಯ ಮತ್ತು ಅಹಿಂಸೆಯ ಮಾರ್ಗಗಳಿಂದ ತನ್ನ ಗುರಿಯನ್ನು ಸಾಧಿಸುವುದಕ್ಕಾಗಿ ಕ್ರಮಬದ್ಧವಾದ ಕಾರ್ಯಕ್ರಮಗಳನ್ನು ನಡೆಸಲು ಪ್ರಭುತ್ವದೊಡನೆ ಒಪ್ಪಂದವನ್ನೂ ಸಹ ಮಾಡಿಕೊಂಡಿರುತ್ತದೆ. ಇಂತಹ ಸ್ಥಾನವು ಇದುವರೆಗೆ ಬೇರೆ ಯಾವ ಸಂಸ್ಥೆಗೂ ದೊರೆತಿರುವುದಿಲ್ಲ. ಇದಕ್ಕೆ ಪ್ರಭುಗಳ ಮನ್ನಣೆಯು ದೊರೆಯುವುದು ಸೂಕ್ತವಾಗಿಯೇ ಇದೆ.

ಶಾಸನ ಸಭೆಗಳು ದಿವಾನರ ಮೂಲಕ ತಮ್ಮ ಮನವಿಗಳನ್ನು ಸಲ್ಲಿಸಿದ್ದುವು. ಆದರೆ ರಾಜಕೀಯ ಪ್ರಗತಿಯು ಪ್ರಕೃತದಲ್ಲಿ ಪ್ರಭುಗಳ ಅಭೀಷ್ಟದಂತೆ ಈಡೇರಬೇಕಾಗಿರುವುದು. ಕಾಂಗ್ರೆಸ್ಸಿನವರು ನೇರವಾಗಿ ಪ್ರಭುಗಳನ್ನೇ ಪ್ರಾರ್ಥಿಸಿದುದರಿಂದ ಅವರಿಗೆ ನೇರವಾದ ಉತ್ತರವು ಬಂದಿರುವುದು ಯುಕ್ತವಾದುದಾಗಿಯೇ ಇದೆ. ಕಾಂಗ್ರೆಸ್ಸಿನವರಾದರೂ ಇದೇ ಪ್ರಯತ್ನವನ್ನು ಇನ್ನೂ ಹಲವಾರು ತಿಂಗಳುಗಳ ಮುಂಚೆಯೇ ಮಾಡಿ ಪ್ರಭುಗಳಿಗೆ ಇದೇ ಬಗೆಯ ಮನವಿಯನ್ನು ಸಲ್ಲಿಸಿದ್ದರೆ ಇನ್ನೂ ಮುಂಚಿತವಾಗಿಯೇ ಅವರಿಂದ ಸದುತ್ತರವು ಬಂದು ಇಷ್ಟು ಹೊತ್ತಿಗೆ ಸಂಸ್ಥಾನದಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳು ಕಾರ್ಯ ರೂಪಕ್ಕೆ ಬರಬಹುದಾಗಿದ್ದಿತೋ ಏನೋ?

ಆದರೆ ಈಗತಾನೆ ಎಲ್ಲದಕ್ಕೂ ಕಾಲವು ಪರಿಪಕ್ವವಾಗಿರುವಂತಿದೆ. ಒಂದು ಕಡೆ ಕಾಂಗ್ರೆಸ್ಸಿನವರು ಸರ್ಕಾರದವರ ರೀತಿನೀತಿಗಳಲ್ಲಿ ಅಸಂತೃಪ್ತರಾಗಿ ದೊಡ್ಡ ಆಂದೋಳನವನ್ನು ಹೂಡಲು ಸಿದ್ಧರಾಗುತ್ತಿದ್ದಾರೆ, ಮತ್ತೊಂದು ಕಡೆ ಆಡಳಿತದವರು ತಮ್ಮ ಬತ್ತಳಿಕೆಯಿಂದ ಬಾಣಗಳನ್ನು ಮೇಲಿಂದ ಮೇಲೆ ಪ್ರಯೋಗಿಸಿ ಪ್ರತಿಬಂಧಕಗಳನ್ನು ಒಡ್ಡುತ್ತಿದ್ದಾರೆ. ಅಲ್ಲದೆ ಪ್ರಭುಗಳ ಸಂದೇಶವು ಬಂದ ಮೇಲೆಯೂ ಪ್ರತಿಗಾಮಿಯಾದ ಓಟಿನ ಪದ್ಧತಿ ಮುಂತಾದ ಕ್ರಮಗಳನ್ನೇ ಅನುಸರಿಸುವ ಮಾರ್ಗವನ್ನು ಹಿಡಿದಿದ್ದಾರೆ. ಹೀಗೆಯೇ ಮುಂದೆ ಸಾಗಿದರೆ ಸಂಸ್ಥಾನದ ರಾಜಕೀಯ ರಂಗವು ಒಂದು ಕುರುಕ್ಷೇತ್ರವಾಗಿ ಪರಿಣಮಿಸಬಹುದು.

ಶ್ರೀಮನ್ಮಹಾರಾಜರವರ ಸಂದೇಶವು ಇಂದಿನ ವಾತಾವರಣವನ್ನು ಪ್ರಶಾಂತಗೊಳಿಸುತ್ತದೆ. ಕಾಂಗ್ರೆಸ್ ಅಧ್ಯಕ್ಷರು ಚಳುವಳಿಯನ್ನು ಸದ್ಯಕ್ಕೆ ಮುಂದುವರಿಸಿರುವುದಾಗಿ ಹೇಳಿರುವುದರಿಂದ ಎಲ್ಲರೂ ಸಮಾಧಾನಗೊಂಡಿರುವರು. ಆದರೆ ಮುಂದಿನ ವಿದ್ಯಮಾನಗಳು ಪ್ರಭುಗಳ ಸಂದೇಶದ ಈಡೇರಿಕೆಯ ಮಾರ್ಗವನ್ನೇ ಅವಲಂಬಿಸಿರುತ್ತವೆ. ಪ್ರಜೆಗಳ ಅಪೇಕ್ಷೆಯೇನೆಂಬುದು ಸರ್ಕಾರದವರಿಗೂ, ಪ್ರಭುಗಳಿಗೂ ಚೆನ್ನಾಗಿ ವೇದ್ಯವಾಗಿಯೇ ಇರುತ್ತದೆ. ಇಂದಿನ ಜವಾಬ್ದಾರಿಯಿಲ್ಲದ ಆಡಳಿತ ಪದ್ಧತಿಯಲ್ಲಿ ಯಾರಿಗೂ ಸಂತೃಪ್ತಿಯಿಲ್ಲ.

ನಮ್ಮ ಶ್ರೀಮನ್ಮಹಾರಾಜರವರು ಬ್ರಿಟಿಷ್ ಸಾರ್ವಭೌಮರಂತೆ ಸಾಂಕೇತಿಕ ಪ್ರಭುಗಳಾಗಿರಬೇಕು; ಸಂಸ್ಥಾನದ ಆಡಳಿತವು ಪ್ರಜಾವಿಶ್ವಾಸಕ್ಕೆ ಪಾತ್ರರಾದ ಪ್ರತಿನಿಧಿಗಳಿಂದ ನಿರ್ವಹಿಸಲ್ಪಡಬೇಕು; ಈ ಬಗ್ಗೆ ನೂತನ ರಾಜ್ಯಾಂಗವನ್ನು ರಚಿಸಲು ಇಂದಿನ ಶಾಸನ ಸಭೆಗಳಿಂದಲೇ ಬ್ರಿಟಿಷ್ ಹಿಂದೂಸ್ಥಾನದಲ್ಲಿರುವಂತೆ ರಾಜ್ಯಾಂಗ ಸಭೆಯನ್ನು ನಿರ್ಮಿಸಬೇಕು; ಅದರ ನಿರ್ಧಾರಗಳಂತೆಯೇ ಸಂಸ್ಥಾನದ ಆಡಳಿತವು ನಡೆಯುವಂತಾಗಬೇಕು. ದಿವಾನರು ಈ ಬಗ್ಗೆ ಸೂಕ್ತವಾದ ಸಲಹೆಗಳನ್ನು ಕೊಟ್ಟು ಬೇಗನೆ ಸಂಸ್ಥಾನದಲ್ಲಿ ಜನಪ್ರಿಯವಾದ ಆಡಳಿತ ಪದ್ಧತಿಯು ಜಾರಿಗೆ ಬಂದು ಪ್ರಭುಗಳ ಆಶಯದಂತೆ ಸಕಲರೂ ಸುಖ, ಶಾಂತಿಗಳಿಂದ ನಡೆಯುವಂತೆ ಮಾಡುವರೆಂದು ಹಾರೈಸೋಣ.

ಹರಿಕಥೆ

ಅಶೋಕಾ ರಸ್ತೆಯಲ್ಲಿರುವ ಗೀತಾಪ್ರ... ಣೀ ಸಭೆಯಲ್ಲಿ ನಾಳೆ ಸಂಜೆ ೬॥ ಗಂ... ವಾಲಘಾಟಿನ ಶ್ರೀ ಗಣಪತಿ ಭಾಗವತ... ತಮಿಳಿನಲ್ಲಿ "ತಿರುತ್ತಾಡುಕನೇಯು" ... ಬ ಹರಿಕಥೆಯು ನಡೆಯುವುದು ಸರ್ವ... ಗೂ ಸ್ವಾಗತವುಂಟು.

ಮಕ್ಕಳ ತೊಟ್ಟಿಲಿಗೆ
ಹಾಕುವ ರಬ್ಬರ್ ಸೀಟುಗಳು ಬಂದಿವೆ.
ಬಾಹುಸಾರ್ ಟ್ರೇಡಿಂಗ್ ಕಂಪೆನಿ,
ಓಲ್ಡ್ ಮೈಸೂರು ಬ್ಯಾಂಕ್ ರೋಡು,
ಮೈಸೂರು

ಮಹಾಜನಗಳಲ್ಲಿ ವಿನಂತಿ.
ಶ್ರೀ ಕೃಷ್ಣಾ ಜ್ಯುಯೆಲರಿ ಮಾರ್ಟ್,
ಅಶೋಕ ರೋಡ್, ಮೈಸೂರು.
ಪ್ರೊಪ್ರೈಟರ್: ಕೆ. ಎಸ್. ಶ್ರೀಕಂಠಶೆಟ್ಟಿ
ಸನ್ ೧೯೩೩ ನೇ ಇಸವಿಯಿಂದಲೂ ನ... ರಾ|| ಕೆ. ನಾಗಪ್ಪಶೆಟ್ಟಿ ಮತ್ತು ನನ್ನ ... ರ ಪಾಲುಗಾರಿಕೆಯಲ್ಲಿ ನಡೆಯುತ್ತಿದ... ಮೇಲ್ಕಂಡ ಅಂಗಡಿಯಲ್ಲಿ ಮೇಲ್ಕಂಡ ... ರಾ|| ಕೆ. ನಾಗಪ್ಪಶೆಟ್ಟರು ಅವರ ಯಾವ... ಹಿಸ್ಸೆ ಹಕ್ಕು ಬಾಧ್ಯತೆಗಳನ್ನು ತಾ|| ೧... ೧೯೪೭ ನೇ ಮಧ್ಯಮಿನ ರಿಜಿಸ್ಟರ್... ಲೀಸ್ ಪತ್ರದ ಮೂಲಕ ನನಗೆ ... ಪ್ರತಿಫಲಕ್ಕೆ ವಹಿಸಿರುತ್ತಾರೆ. ಮೇಲ್ಕಂ... ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟಿನ ಏಕ... ಮಾಲೀಕತ್ವ ಮತ್ತು ಮ್ಯಾನೇಜ್‌ಮೆಂಟ್ ... ಎಲ್ಲಾ ಹಕ್ಕುಬಾಧ್ಯತೆಗಳೂ ನನಗೊಬ್ಬ... ಗೇ ಸೇರಿರುತ್ತದೆಂದೂ, ಅದಾಗ್ಯೂ ... ಲೂ ಮಹಾಜನಗಳಿಗೆ ನ್ಯಾಯವಾದ ಬೆ... ನಂಬಿಕೆಯಾಗಿ ಆಭರಣಗಳನ್ನೂ ಉಪಯೋ... ಗದ ಚಿನ್ನ, ಬೆಳ್ಳಿ ಪದಾರ್ಥಗಳನ್ನು ಮಾ... ಕೊಡುತ್ತಿರುವುದನ್ನು ಈ ಮುಂದೆಯ... ಮಾಡುತ್ತಾ ಮಹಾಜನಗಳಿಗೆ ಸೇವೆಯ... ಸಲ್ಲಿಸುತ್ತಾ ಬರುತ್ತೇನೆ-ದೂ, ಮಹಾಜನ... ಗಳು ಎಂದಿನಂತೆಯೇ ತಮ್ಮ ಪ್ರೀತಿ ವಿ... ಸಗಳನ್ನು ಮುಂದೆಯೂ ತೋರುತ್ತಾ ತ... ಳನ ಪ್ರೋತ್ಸಾಹವನ್ನು ಕೊಡುತ್ತಾ ... ಬೇಕಾಗಿ ವಿನಂತಿ.
ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟ...
ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್
ಮೈಸೂರು.
ಮೈಸೂರು, ೧೩-೧-೪೭.

Edited, printed and published by A. N. Nagarajan at the Sadhvi P... D. Subbiah Road, Mysore.

ರಾಜಕಮಲ್, ಮೈಸೂರು
17-1-47 ರಿಂದ ಅಮೋಘವಾದ
4 ನೇ ವಾರ
—: ಪ್ರಕಾಶ್ ರವರ :—
ಹಮಾರಾ ಸಂಸಾರ್
ಭೂಮಿಕೆ :- ಜೀವನ್ ಉಮಾಕಾಂತ್, ರಂಜನ, ಚಿಲ್ಲೂ,

From 17-1-47 for 4 days daily at 10-30 a.m.
" Michael Stragoff "
based on the adventure classic of Julos Verne.
A Picture Worth its Weight in Gold

ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ
ಪ್ರಸನ್ನ ಸೀತಾರಾಮ ಮಂದಿರಂ, ಮೈಸೂರು.
22-1-47 ನೇ ಬುಧವಾರ ಸಾಯಂಕಾಲ 6-30 ಗಂಟೆಗೆ
ಅರೈಕುಡಿ ರಾಮಾನುಜಯ್ಯಂಗಾರ್ ರವರ ಶಿಷ್ಯರಾದ
ವಿದ್ವಾನ್ ಮಧುರೆ ಟಿ. ವೆಂಕಟೇಶ್ವರರವರ ಗಾನವು
ವಿದ್ವಾನ್ ಬಿ. ಕೇಶವಮೂರ್ತಿಗಳ ಪಿಟೀಲು
ವಿದ್ವಾನ್ ವರದಾಚಾರ್ಯರ ಮೃದಂಗದೊಡನೆ ನಡೆಯುವುದು
ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ ಪ್ರವೇಶ.
ಗಂಡಸರಿಗೆ ೧-೦-೦ ಹೆಂಗಸರಿಗೆ ೦-೮-೦ ಹುಡುಗರಿಗೆ ೦-೪-೦

ಅಪೆರಾ ಟಾಕೀಸ್
17-1-47 ರಿಂದ 2 ನೇ ವಾರ
ಪೊನ್ನರುವಿ (ತಮಿಳು)
ಪಾತ್ರ:- "ಕೊತ್ತಮಂಗಲಂ ಸೀನು" "ಕೆ. ಟಿ. ರುಕ್ಮಿಣಿ" "ಆರ್. ಬಾಲಸುಬ್ರಹ್ಮಣ್ಯಂ."
Morning shows at 10-30 a.m
from 17-1-47
Man from Morocco
With
Anton Wal Book & Mary Morris.

ಜೋ. ನಂ. 392 WEEKLY EDITOIN ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೨೦—೧—೫೭ [ಸಂಚಿಕೆ ೨೫

✶ ವಿಶ್ವದ ರಾಷ್ಟ್ರಗಳಿಗೆ ವಿಯಟ್‌ನಾಂ ಮನವಿ ✶

ಟಿ. ನಾರಾಯಣರವರ ಮೇಲೆ ಛಾರ್ಜ್ ಫ್ರೇಂ ಆಯಿತು

ಮೈಸೂರು ೨೦

...ಟನೇ 'ಮೈಸೂರು ಪತ್ರಿಕೆ' ಯ ಪ್ರಕಟಣೆಯಾಗಿವೇ ಎಂಬ ಶಿರೋನಾಮೆಯಲ್ಲಿ ಪ್ರಕಟವಾಗಿದ್ದ 'ಅಧಿಕ ಪ್ರಸಂಗ' ಲೇಖನದಿಂದ ತಮಗೆ ಮಾನನಷ್ಟವಾಯಿತೆಂದು ಪುರಸಭಾ ಸದಸ್ಯರಾದ ಶ್ರೀ ... ನಂಜಪ್ಪನವರು ಸದರಿ ಪತ್ರಿಕೆ ಸಂಪಾದಕ, ಪ್ರಕಾಶಕರೂ ಆದ ಶ್ರೀ ಟಿ. ನಾರಾಯಣರವರ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ ಕೃಷ್ಣಶೆಟ್ಟರು ಆದಿನ ಕ್ರಿಮಿನಲ್ ಪ್ರೊಸೀಜರ್ ಕೋಡಿನ ೫೦೦ನೇ ಪ್ರಕಾರ ಛಾರ್ಜ್‌ಫ್ರೇಂ ಮಾಡಿರು...

...ನು ದೇವಾಲಯಕ್ಕೆ ಸಹಾಯ

ಮೈಸೂರು ಸರ್ಕಾರಿ ರೇಷ್ಮೆ ಕಾರ್ಖಾನೆ ನೌಕರರು ಸ್ಥಾಪಿಸಿಕೊಂಡಿರುವ ಶ್ರೀ ... ರಕ್ಷಿತ ನಾಟಕ ಸಂಘದವರು ಟೌನ್ ಹಾಲಿನಲ್ಲಿ ಕಳೆದವಾರ ಶ್ರೀ ಎಚ್. ಸಿ ದೇ... ಚೇಲರಸಿನವರ ಅಧ್ಯಕ್ಷತೆಯಲ್ಲಿ ಮೋ... ಲೀಲಾ ಎಂಬ ನಾಟಕವನ್ನು ಅಭಿನಯಿಸಿ ಅದರಿಂದ ಉತ್ಪತ್ತಿಯನ್ನು ಹೊಸ ಇಟ್ಟಿಗೆ ...ನಲ್ಲಿ ಶಿಥಿಲವಾಗಿರುವ ಶ್ರೀರಾಮ ದೇವಾಲಯದ ಕಟ್ಟಡಕ್ಕಾಗಿ ಕೊಟ್ಟಿರುತ್ತಾರೆ

ಪುರಂಧರದಾಸರ ದಿನಾಚರಣೆ

ಚಾಮರಾಜಪುರದಲ್ಲಿರುವ ಮೈಸೂರು ...ರವರ ಶ್ರೀ ವರಲಕ್ಷ್ಮೀ ಸಂಗೀತ ... ಮಂದಿರದಲ್ಲಿ ೨೩ ನೇ ತಾ॥ ಬುಧವಾರ ಸಂಜೆ ೬ ಗಂಟೆಗೆ ಶ್ರೀ ಪುರಂಧರದಾಸರ ಪುಣ್ಯ ದಿನವನ್ನು ಆಚರಿಸಲಾಗುವುದು ಸಂಗೀತ ವಿದ್ವಾಂಸರುಗಳಿಂದ ದಾಸರ ಕೃತಿಗಳು ಹಾಡಲ್ಪಡುವುವು. ವಿದ್ವಾನ್ ... ಇನ್ಸ್‌ಪೆಕ್ಟರ್ ಶ್ರೀ ಸತ್ಯಬೋಧಾಚಾರ್ಯರಿಂದ ದಾಸರ ವಿಷಯವಾಗಿ ಉಪನ್ಯಾಸವೂ ನಡೆಯುವುದು.

ಮಹಾರುದ್ರ ಹೋಮ ವರದಿ

ದುರ್ಮುಖಿನಾಮ ಸಂವತ್ಸರದ ಮಾಘ ಶುದ್ಧ ... ನೇ ಭಾನುವಾರದಿಂದ ೧೧ ದಿನ ... ನಗೂಡು ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಎದುರು ಮಂಟಪದಲ್ಲಿ ನಡೆದ ಮಹಾರುದ್ರ ಹೋಮದ ವರದಿಯು ಪ್ರಕಟವಾಗಿದೆ ಅದರಲ್ಲಿ ಆ ಮಹಾ ಕಾರ್ಯಕ್ಕೆ ಧನ, ಧಾನ್ಯ ಮತ್ತು ಇತರ ವಿಧದ ಸಹಾಯ ಮಾಡಿದ ಮತ್ತು ಹೋಮ ... ಕಾರ್ಯಗಳನ್ನು ಶಾಸ್ತ್ರೋಕ್ತವಾಗಿ ... ವೈದಿಕ ಮಹನೀಯರುಗಳ ... ಜಮಾ, ಖರ್ಚು ವಿವರವೂ ... ವರದಿಯೂ ಅಡಕವಾಗಿವೆ.

ಕನ್ನಡ ಟೈಪ್‌ರೈಟರ್

ಶ್ರೀ ಕೆ ಅನಂತ ಸುಬ್ಬರಾಯರು ತಾವು ... ಕನ್ನಡ ಟೈಪ್‌ರೈಟರನ್ನು ಕರ್ನಾಟಕದ ಪ್ರತಿಯೊಂದು ಮುಖ್ಯ ಪಟ್ಟಣದಲ್ಲಿ ಪ್ರದರ್ಶಿಸಿ, ಬೇಕಾದವರಿಗೆ ಅಯಾ ... ಯೇ ತಯಾರು ಮಾಡಿಕೊಡಲು ... ಕೈಗೊಂಡಿದ್ದಾರೆ ಜನವರಿ ೧೮ ರಿಂದ ೨೩ ನೇ ... ವರೆಗೆ ಬೆಂಗಳೂರು, ೨೩ ರಿಂದ ೨೫ ... ರು, ೨೫ ರಿಂದ ೨೭ ಶಿವಮೊಗ್ಗ ... ರಿಂದ ೩೦ ಚಿತ್ರದುರ್ಗ ಮತ್ತು ಫೆಬ್ರವರಿ ... ರಿಂದ ೮ ರ ವರೆಗೆ ಹುಬ್ಬಳ್ಳಿ ಮ... ಜನರು ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ

ಹನುಮಂತಯ್ಯನವರ ಮೇಲೆ ಛಾರ್ಜು

ಸ್ವಂ. ಸು ವರ್ತಾ] ಬೆಂಗಳೂರು ೨೦

ಆಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ॥ ಕೆ ಬಿ ರಾಮನಾಥಯ್ಯನವರು ಈ ದಿನ ಶ್ರೀ॥ ಹನುಮಂತಯ್ಯನವರ ಮೊಕದ್ದಮೆಯಲ್ಲಿ ೧೨೪ ನೇ 'ಎ' ಕಲಂ ಪ್ರಕಾರ ಛಾರ್ಜು ಫ್ರೇಂ ಮಾಡಿರುತ್ತಾರೆ ಶ್ರೀ॥ ಹನುಮಂತಯ್ಯನವರು ಡಿಫೆನ್ಸ್ ಕೊಡುವುದಿಲ್ಲವಾಗಿ ಮೊದಲೇ ತಿಳಿಸಿದ್ದರು. ೨೩ ನೇ ತಾ॥ ಗೆ ತೀರ್ಪಿಗಾಗಿ ಮೊಕದ್ದಮೆಯನ್ನು ಮುಂದುವರಿಸಲಾಗಿದೆ

‡ ದಿವಾನರು ತಮ್ಮ ಆಪ್ತ ಕಾರ್ಯದರ್ಶಿಗಳ ಸಂಗಡ ನಾಳೆ ರಾತ್ರಿ ದೆಹಲಿಗೆ ತೆರಳಿ ಅಲ್ಲಿ ರಾಜರುಗಳ ಸಂಸ್ಥಾನ ಸಮಿತಿಯಲ್ಲಿ ಭಾಗ ವಹಿಸಲಿದ್ದಾರೆ

§ ಸಹಕಾರ ಸಂಘಗಳ ನಿವೃತ್ತ ರಿಜಿಸ್ಟ್ರಾರರಾದ ಶ್ರೀ॥ ಕೆ ಸುಬ್ಬರಾಯರು ರಿಸರ್ವ್ ಬ್ಯಾಂಕಿನ ರೂರಲ್ ಕೋ-ಆಪರೇಟಿವ್ ಕ್ರೆಡಿಟ್ ಶಾಖೆಯ ಮುಖ್ಯಾಧಿಕಾರಿಗಳಾಗಿ ೧,೬೦೦ ರೂ ಸಂಬಳದ ಮೇಲೆ ನೇಮಿತರಾಗಿದ್ದಾರೆ.

‖ ಮಂಡ್ಯದ ಸಕ್ಕರೆ ಕಂಪನಿಯವರು ಗಿರಣಿ ಬಳಿ ಕಬ್ಬನ್ನು ಟನ್ ೧ಕ್ಕೆ ೩೦ ರೂ. ನಂತೆ ಕೊಳ್ಳುವುದಾಗಿ ಪ್ರಕಟಿಸಿದ್ದಾರೆ

* ಶ್ರೀ ಎಂ. ಶೇಷಾದ್ರಿಯವರು ದೆಹಲಿಯಿಂದ ನಿನ್ನೆ ವಾಪಸು ಆಗಮಿಸಿದರು.

† ಸರ್ವೇಯರುಗಳಾದ ಈ ಮುಂದೆ ಕಂಡವರನ್ನು ಅಸಿಸ್ಟೆಂಟ್ ಇಂಜನಿಯರುಗಳನ್ನಾಗಿ ನೇಮಕ ಮಾಡಲಾಗಿದೆ ಶ್ರೀಗಳಾದ ಎಲ್. ಸುಬ್ಬರಾವ್, ಯು. ರಾಮರಾವ್, ಕೆ. ನಾರಾಯಣಸ್ವಾಮಿ, ಎಂ ಶೇಷಾದ್ರಿ ಶೆಟ್ಟಿ, ಎಂ. ನಾರಾಯಣ, ಕೃಷ್ಣರಾಜು, ಸುಬ್ಬರಾವ್, ರಾಚಪ್ಪ, ಎಂ ಎಸ್. ರಾಮಸ್ವಾಮಿ, ಎಂ. ವಿ. ಪಿ. ಅಯ್ಯಂಗಾರ್, ಹೆಚ್. ಕೆ. ಪಂಡಿತರಾವ್, ಆರ್. ಎಸ್. ಪಳ್ಳಿ, ಎಸ್. ಎ. ಶೆಟ್ಟಿ, ವಿ ಕೆ. ರಾಮಣ್ಣ.

ಒಂದೇ ಸಂಸಾರದ ಆರು ಮಂದಿಯ ಕೊಲೆ

ಫಿರೋಜ್‌ಪುರ ಜಿಲ್ಲೆಯ ಗುರ್ಹರ್ ಎಂಬ ಹಳ್ಳಿಯಲ್ಲಿ ಹಳೇ ಜಿದ್ದನ್ನು ತೀರಿಸಿಕೊಳ್ಳಲು ಇಡೀ ಸಂಸಾರವನ್ನೇ ಕೊಲೆಮಾಡಿದ ವರದಿಯೊಂದು ಬಂದಿದೆ. ತಂದೆ ತಾಯಿ ಮತ್ತು ನಾಲ್ವರು ಮಕ್ಕಳನ್ನು ಗುಂಡು ಹೊಡೆದು ಕೊಂದು, ಮನೆಗೆ ಬೆಂಕಿ ಹಚ್ಚಲಾಗಿದೆಯೆಂಬ ವಿವರ ಹೊರಬಿದ್ದಿದೆ

ಗೃಹಕೈಗಾರಿಕಾ ಸಂಸ್ಥೆ

ಮೈಸೂರು ೨೦

ರಾಜಧಾನಿಯಲ್ಲಿ ಶ್ರೀ ಎಂ. ವಿ ಲಿಂಗಪ್ಪಯ್ಯನವರು ಕೆಲವು ದಿನಗಳಿಂದ ಗೃಹಕೈಗಾರಿಕಾ ಶಿಕ್ಷಣಕ್ಕಾಗಿ ಸಂಸ್ಥೆಯೊಂದನ್ನು ತೆರೆದು ಅದನ್ನು ಈಗ ಪುನರ್ವ್ಯವಸ್ಥೆಗೊಳಿಸಿರುತ್ತಾರೆ. ಇಲ್ಲಿ ವ್ಯಾಸಂಗಪಡೆಯುತ್ತಿರುವ ವಿದ್ಯಾರ್ಥಿಗಳು ತಮ್ಮ ವಿರಾಮಕಾಲದಲ್ಲಿ ಸಂಪಾದನೆಯನ್ನೂ ಸಹ ಮಾಡಿಕೊಳ್ಳುತ್ತಿದ್ದಾರೆ. ಶ್ರೀಯುತರು ೧೦ ಮಂದಿ ಸ್ತ್ರೀಯರಿಗೆ ಉಚಿತ ಶಿಕ್ಷಣ ಕೊಡಲು ಏರ್ಪಡಿಸಿರುತ್ತಾರೆ. ಅಲ್ಲದೆ ಅತ್ಯಂತ ಬಡವರಾದ ಮೈಸೂರಿನ ಮಹಿಳೆಯರಿಗೆ ತಿಂಗಳಿಗೆ ೩೦ ರೂ ಗಳಂತೆಯೂ, ಹೊರಗಿನವರಿಗೆ ೨೫ ರೂ. ಗಳಂತೆಯೂ ವಿದ್ಯಾಭ್ಯಾಸದ ಅವಧಿಯಲ್ಲಿ ಸಹಾಯಮಾಡಲಾಗುವುದೆಂದು ತಿಳಿಸಿರುತ್ತಾರೆ ವಿದ್ಯಾ ಇಲಾಖೆಯ ಡೆ॥ ಡೈರೆಕ್ಟರಾದ ಶ್ರೀ ಎಂ ಎಸ್ ರಾಜಗೋಪಾಲರಾಯರು ಈ ಶಾಲೆಗೆ ಇತ್ತೀಚಿಗೆ ಭೇಟಿಯಿತ್ತಿದ್ದರು. ಗೃಹಕೈಗಾರಿಕೆಯ ಶಿಕ್ಷಣದಲ್ಲಿ ಇವರಿಗಿಂತ ಹೆಚ್ಚಿನ ಅನುಭವ ಪಡೆದಿರುವವರು ಬೇರಾರೂ ಇಲ್ಲವೆಂದು ಅವರು ಹೇಳಿರುವರು.

ಕಾಂ॥ ಅಧ್ಯಕ್ಷರಿಗೆ ಸನ್ಮಾನ

ಸ್ವಂ ಸು] ಗುಂಡ್ಲುಪೇಟೆ ೧೮

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ॥ ಕೆ ಸಿ ರೆಡ್ಡಿಯವರು ಕಳೆದ ೧೭ ನೇ ತಾ॥ ಇಲ್ಲಿಗೆ ಆಗಮಿಸಿದ್ದರು ಇಲ್ಲಿನ ತಾಲ್ಲೂಕು ಕಾಂಗ್ರೆಸ್ ಸಮಿತಿಯವರು ಅವರನ್ನು ಆದರದಿಂದ ಸ್ವಾಗತಿಸಿ ಸತ್ಕರಿಸಿದರು ಶ್ರೀ ರಾಮ ಮಂದಿರದಲ್ಲಿ ಸಭೆ ಜರುಗಿತು, ಶ್ರೀ॥ ವೈ. ಜಿ. ಶ್ರೀಕಂಠಾಚಾರ್ಯರು ಅಧ್ಯಕ್ಷರಿಗೆ ಒಂದು ಭಿನ್ನವತ್ತಳೆ ಉಂಗುರವನ್ನು ಅರ್ಪಿಸಿದರು ಅದನ್ನು ಹರಾಜು ಹಾಕಲಾಗಿ ಬಂದ ೧೧೧ ರೂ. ಗಳನ್ನು ಹರಿಜನರ ಉದ್ಧಾರಕ್ಕಾಗಿ ಉಪಯೋಗಿಸುವುದಾಗಿ ಅಧ್ಯಕ್ಷರು ತಿಳಿಸಿದರು. ತಾಲ್ಲೂಕು ಕಾಂಗ್ರೆಸ್ ಸಮಿತಿ ಪರವಾಗಿ ೨೦೧ ರೂ ಗಳನ್ನು ಅಧ್ಯಕ್ಷರಿಗೆ ಒಪ್ಪಿಸಲಾಯಿತು ಬೋರ್ಡ್ ಗ್ರೌಂಡ್‌ನಲ್ಲಿ ಮತ್ತೊಂದು ಸಭೆ ನಡೆದನಂತರ ಅಧ್ಯಕ್ಷರು ನಂಜನಗೂಡಿಗೆ ಪ್ರಯಾಣ ಬೆಳೆಸಿದರು

ಸೈಗಾಲರ ನಿಧನ

ಸುಪ್ರಸಿದ್ಧ ಚಲನ ಚಿತ್ರ ನಟರೂ, ಸಂಗೀತಗಾರರೂ ಆದ ಶ್ರೀ॥ ಕೆ ಸೈಗಾಲರು ಜಲಂಧರ್ ನಗರದಲ್ಲಿ ನೆನ್ನೆ ದಿನ ನಿಧನರಾದರೆಂದು ವಾರ್ತೆ ಬಂದಿದೆ

ವಿಯಟ್‌ನಾಂ ಸೈನ್ಯದ ಮೇಲೆ ಡೈವ್ ಬಾಂಬ್ ಪ್ರಯೋಗ

ಹೊನಾಯ್ ದಕ್ಷಿಣಭಾಗದ ಬೇಟ್ ವೈ ಕ್ಷೇತ್ರದ ವಿಶ್ವವಿದ್ಯಾನಿಲಯ ನಗರದಲ್ಲಿ ಫ್ರೆಂಚ್ ಸೈನ್ಯಗಳು ವಿಯಟ್‌ನಾಂ ಸೈನ್ಯದ ಮೇಲೆ ಡೈವ್ ಬಾಂಬುಗಳನ್ನು ಪ್ರಯೋಗಿಸಿ ಅತ್ಯುಗ್ರವಾದ ಕದನವನ್ನು ಆರಂಭಿಸಿವೆಯೆಂದು ವರದಿ ಬಂದಿದೆ ಹೊನಾಯ್ ನಗರದಲ್ಲಿ ಮನೆ ಮಠಗಳೆಲ್ಲಾ ಬೆಂಕಿಯಿಂದ ಅಪ್ಪತವಾಗಿವೆ ವಿಯಟ್‌ನಾಂ ಸವಿಯ ಬಳಿ ಆರಂಭವಾಗಿರುವ ಗೆರಿಲ್ಲಾ ಕದನವನ್ನು ಎದುರಿಸಲು ಫ್ರೆಂಚರು ಜರ್ಮನ್ ಸೈನಿಕರನ್ನು ಉಪಯೋಗಿಸುತ್ತಿದ್ದಾರೆಂದು ಗೊತ್ತಾಗಿದೆ. ಈ ವಿಷಮ ಪರಿಸ್ಥಿತಿಯಲ್ಲಿ ಎಲ್ಲ ವಿಶ್ವ ರಾಷ್ಟ್ರಗಳೂ ವಿಯಟ್‌ನಾಮೀಯರಿಗೆ ಪೂರ್ಣ ಬೆಂಬಲ ನೀಡಬೇಕೆಂದು ವಿಯಟ್‌ನಾಂ ಅಧ್ಯಕ್ಷರಾದ ಹೊಚಿಮಿನ್ಹರವರು ಚೈನಾ, ಇಂಡಿಯ, ಬರ್ಮ ಮತ್ತು ಸಯಾಂರಾಷ್ಟ್ರಗಳನ್ನು ಪ್ರಜೆಗಳನ್ನು ಪ್ರಾರ್ಥಿಸಿದ್ದಾರೆ. ತಿರುವಾಂಕೂರಿನಿಂದ ಸೈನ್ಯದಲ್ಲಿ ವಿಸರ್ಜಿತರಾದ ೨೫ಮಂದಿ ವಿಯಟ್‌ನಾಂಗೆ ಸಹಾಯ ಮಾಡಲು ತೆರಳಲು ಮುಂದೆ ಬಂದಿದ್ದಾರೆ. ದೆಹಲಿಯಿಂದ ಪ್ರಥಮ ಸೈಯಂಸೇವಕ ದಳವು ಸಜ್ಜದಲ್ಲೇ ತೆರಳಲಿದೆ ಫ್ರೆಂಚ್ ಸಾಮಾನುಗಳನ್ನು ಬಹಿಷ್ಕರಿಸಬೇಕೆಂದು ಭಾರತದ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧ್ಯಕ್ಷರು ಮನವಿಯನ್ನು ಮಾಡಿಕೊಂಡಿದ್ದಾರೆ

ಮಧ್ಯ ಬರ್ಮದಲ್ಲಿ ದಂಗೆ

ದಕ್ಷಿಣದಿಕ್ಕಿನಿಂದಲೂ ಬರ್ಮ ಪೋಲೀಸರೂ ಮಧ್ಯ ಬರ್ಮದಲ್ಲಿ ನಡೆಯುತ್ತಿರುವ ಕೋಮುವಾರು ದಂಗೆಯು ರೂಪವನ್ನೇ ತಾಳಿದೆಯೆಂದು ತಿಳಿದುಬಂದಿದೆ ಇದು ಇಡೀ ದೇಶದಲ್ಲಿ ಕಾಂಗ್ರೆಸ್ ಯ ಪಕ್ಷಕ್ಕೆ ಹಬ್ಬಬಹುದೆಂದು ರಂಗೂನಿನ ಅಧಿಕಾರಿ ಅವರಣದಲ್ಲಿ ಶಂಕೆ ಪಡಲಾಗಿದೆ ಈ ದಂಗೆಕಾರರು ಫ್ಯಾಸಿಸ್ಟ ವಿರೋಧಿ ಸಂಸ್ಥೆಯ ವಿರೋಧಿಗಳೆಂದೂ, ಈ ಕೋಮುವಾರು ಚಳವಳಿಯು ಕಾರಣಗಳಿಗಾಗಿ ನಡೆಯುತ್ತಿದೆಯೆಂದೂ ಕೆಲವರು ಅಭಿಪ್ರಾಯ ಪಟ್ಟಿದ್ದಾರೆ ದಂಗೆಕಾರರು ಶಸ್ತ್ರಸಜ್ಜಿತರಾಗಿ ಧಾಳಿ ಆರಂಭಿಸಿದ್ದಾರೆ. ಅರಕಾನ್, ಪೆಗು ... ಗಳಿಗೂ ಇದು ವ್ಯಾಪಿಸಬಹುದೆಂದು ಹೇಳಲಾಗುತ್ತಿದೆ. ಬರ್ಮದಲ್ಲಿರುವ ೨೫ ಸಹಸ್ರ ಸೈನಿಕರು ಭಾರತಕ್ಕೆ ವಾಪಸ ಬರಲು ತವಕಗೊಂಡಿದ್ದಾರೆ. ಈ ಒಳ ಕದನದಲ್ಲಿ ಅವರು ಭಾಗವಹಿಸುವುದಿಲ್ಲವೆಂದು ತಿಳಿಸಿದ್ದಾರೆ.

ಢಕ್ಕಾ ಹಿಂದೂಗಳ ಮೇಲೆ ಆರ್ಥಿಕ ಬಹಿಷ್ಕಾರ

ಢಕ್ಕಾ ನಗರದ ಪಾಪನ್ನ ಬಾಗದ ಬಜಾರು ವಠಾರದಲ್ಲಿರುವ ೧೧೨ ಸಭಾಸ ಮುಂದಿ ಹಿಂದುಗಳು ವಹಾತ್ಮ ಗಾಂಧಿ ಮುಖಾಂತರ ಮನವಿಯೊಂದನ್ನು ಕಳುಹಿಸಿ ಬಹು ಸಂಖ್ಯಾತರಾದ ಮುಸ್ಲಿಮರು ತಮ್ಮ ಮೇಲೆ ಆರ್ಥಿಕ ಬಹಿಷ್ಕಾರವನ್ನೂ, ಆಸ್ತಿ ವಿಧ್ವಂಸನವನ್ನೂ ಮಾಡುತ್ತಿದ್ದಾರೆಂದೂ, ತಮ್ಮ ಅಸ್ತಿತ್ವಕ್ಕೇ ಧಕ್ಕೆ ಬಂದಿದೆಯೆಂದೂ ತಿಳಿಸಿದ್ದಾರೆ

LATEST NEWS

ಪುರಸಭಾ ಉಪಾಧ್ಯಕ್ಷತೆ

ಮೈಸೂರು ೨೦

ಈ ದಿನ ನಡೆದ ಪುರಸಭಾ ಉಪಾಧ್ಯಕ್ಷತೆಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಉಮೇದವಾರರಾದ ಶ್ರೀ ಟಿ. ನರಸಿಂಹ ಅಯ್ಯಂಗಾರ್‌ರವರು ಬಹುಮತದಿಂದ ಚುನಾಯಿತರಾಗಿದ್ದಾರೆ

ಸಾಧ್ವಿ

ತಾ|| ೨೦-೧-೪೭ ಸೋಮವಾರ

ಕಂಕುಳಲ್ಲಿ ದೊಣ್ಣೆ; ಕೈಯಲ್ಲಿ ಶರಣಾರ್ತಿ

ದೇಶೀಯ ಸಂಸ್ಥಾನಗಳು ಕಾಲ, ದೇಶ, ವರ್ತಮಾನಗಳಿಗೆ ಅನುಗುಣವಾಗಿ ಮುನ್ನಡೆಯಬೇಕೆಂದು ನರೇಂದ್ರ ಮಂಡಲದವರು ಠರಾವನ್ನೇನೋ ಮಾಡಿರುತ್ತಾರೆ ಆದರೆ ಅನೇಕ ಕಡೆಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಇದಕ್ಕೆ ತೀರಾ ವ್ಯತಿರೇಕವಾಗಿಯೇ ಇರುತ್ತವೆ. ರಾಜಕೀಯ ಸುಧಾರಣೆಗಳಲ್ಲಿ ಎಷ್ಟು ದೂರ ಮುಂದೆ ಹೋಗಬಹುದೆಂಬುದನ್ನು ಭಾರತ ರಾಜ್ಯಾಂಗ ವ್ಯವಸ್ಥೆಯು ನಿರ್ಧರಿಸಲ್ಪಟ್ಟ ಮೇಲೆ ಖಾತ್ರಿ ನಿರ್ಧರಿಸುವುದಾಗಿ ನರೇಂದ್ರರು ಹೇಳುತ್ತಿದ್ದಾರೆ. ಆದರೆ ಈಗಿನ ಕಾಲಕ್ಕೆ ತಕ್ಕಂತೆ ಕನಿಷ್ಠಾಂಶದ ಸುಧಾರಣೆಗಳನ್ನಾದರೂ ಎಲ್ಲ ಕಡೆಗಳಲ್ಲಿಯೂ ಜಾರಿಗೆ ತರಬೇಕೆಂದು ಹೇಳುತ್ತಿದ್ದಾರೆ ಅದಕ್ಕೂ ಮುಂಚಿತವಾಗಿ ನಾಗರಿಕ ಹಕ್ಕುಗಳಿಗೆ ಸಂಪೂರ್ಣವಾದ ರಕ್ಷಣೆಯನ್ನು ಕೊಡುವುದಾಗಿಯೂ ಭರವಸೆ ನೀಡಿದ್ದಾರೆ. ಆದರೆ ಇದೂ ಸಹ ಬರಿಯ ಬಾಯಿ ಮಾತಿನಲ್ಲಿಯೇ ಪರ್ಯವಸಾನಗೊಂಡಿರುತ್ತದೆ.

ನರೇಂದ್ರ ಮಂಡಲದ ಅಧ್ಯಕ್ಷರಾದ ಭೋಪಾಲ್ ನವಾಬರಿಗೆ ಸೇರಿದ ರಾಜ್ಯದಲ್ಲಿಯೇ ಇನ್ನೂ ಪ್ರಜೆಗಳಿಗೆ ನಾಗರಿಕ ಹಕ್ಕುಗಳು ದೊರಕದಿರುವುದು ಸೋಜಿಗದ ಸಂಗತಿ ಸಾಲದುದಕ್ಕೆ ಅಲ್ಲಿ ಸಾರ್ವಜನಿಕ ರಕ್ಷಣಾ ಶಾಸನವೊಂದನ್ನು ಕೂಡ ಈಗತಾನೆ ಜಾರಿ ಮಾಡಲಾಗಿದೆ ಅದರ ಪ್ರಕಾರ ಯಾರನ್ನು ಬೇಕಾದರೂ ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು; ಚಲನ ವಲನಗಳಿಗೆ ಅಡ್ಡಿಯನ್ನು ಹಾಕಬಹುದು; ಕಾಗದ ಪತ್ರಗಳನ್ನು ಶೋಧಿಸಬಹುದು, ಸಭೆ, ಮೆರವಣಿಗೆಗಳನ್ನು ತಡೆಗಟ್ಟಬಹುದು ಹೀಗೆಯೇ ಕಪೂರ್ಥಲಾ ಸಂಸ್ಥಾನದಲ್ಲಿಯೂ ಸಹ ಶಾಸನವೊಂದನ್ನು ಜಾರಿ ಮಾಡಲಾಗಿದೆ. ಇನ್ನೂ ಹಲವು ಕಡೆಗಳಲ್ಲಿ ಸಭೆ, ಮೆರವಣಿಗೆಗಳಿಗೆ ಅಡಚಣೆಗಳು ಒಡ್ಡಲ್ಪಟ್ಟಿವೆ

ಇದರಿಂದ ನರೇಂದ್ರರ ಮೊದಲನೆಯ ಭರವಸೆಯೂ ಸಹ ಈಡೇರಲಿಲ್ಲದಿರುವುದು ಸ್ಪಷ್ಟವಾಗಿ ಎದ್ದು ಕಾಣುತ್ತದೆ. ನೆರೆಯ ಪ್ರಾಂತಗಳಲ್ಲಿ ಇದುವರೆಗೆ ಇರುವ ರಾಜಕೀಯ ಮಟ್ಟಕ್ಕಾದರೂ ಈ ಸಂಸ್ಥಾನಗಳು ಇನ್ನೂ ಬಂದಿರುವುದಿಲ್ಲ. ಇನ್ನು ಕಾಲ, ದೇಶ ವರ್ತಮಾನಗಳಿಗೆ ಅನುಗುಣವಾಗಿ ಅವುಗಳು ವರ್ತಿಸುವುದಾದರೂ ಎಂತು? ಈ ಕಾರಣದಿಂದಲೇ ಸಂಸ್ಥಾನಗಳ ಪ್ರಜೆಗಳು ನಿರಾಶೆಗೊಂಡು ಸಂಘಟನೆಯಿಂದ ಜಾಗೃತರಾಗಿ ತಮ್ಮ ಹಕ್ಕುಬಾಧ್ಯತೆಗಳಿಗಾಗಿ ಘೋರ ಹೋರಾಟವನ್ನು ಹೂಡಲೂ ಸಹ ಸಿದ್ಧರಾಗುತ್ತಿರುವರು ನೆರೆಹೊರೆಯ ಪ್ರಾಂತ್ಯಗಳು ಪ್ರಜಾ ಪ್ರಭುತ್ವ ಮಾರ್ಗದಲ್ಲಿ ತೀವ್ರವಾಗಿ ಮುಂದುವರಿಯುತ್ತಿರುವಾಗ ಸಂಸ್ಥಾನಗಳು ತೆಪ್ಪಗೆ ಕುಳಿತಿರುವುದೆಂತು?

ಮತ್ತೆ ಹಲ ಕೆಲವು ಸಂಸ್ಥಾನಗಳು ಮುನ್ನಡೆಯಿಡುವ ಆಲೋಚನೆಯನ್ನು ಸೂಚಿಸಿರುತ್ತವೆ ತಮ್ಮ ಪ್ರಜೆಗಳು ತಮಗೆ ಈ ಕಾರ್ಯದಲ್ಲಿ ಸಂಪೂರ್ಣವಾದ ನೆರವು ನೀಡಬೇಕೆಂದೂ ಸಹ ಕೋರಿರುತ್ತವೆ ಆದರೆ ಇದೇ ಸಮಯದಲ್ಲಿ ಪ್ರತಿಬಂಧಕಾಜ್ಞೆ, ಕರಾಳ ಶಾಸನ ಪ್ರಯೋಗ ಮತ್ತು ಕ್ರೂರ ದಬ್ಬಾಳಿಕೆಗಳ ನೀತಿಯನ್ನೂ ಸಹ ಅವು ಅನುಸರಿಸುತ್ತಿವೆ ಇದು ಕಂಕುಳಲ್ಲಿ ದೊಣ್ಣೆ; ಕೈಲಿ ಶರಣಾರ್ತಿ-ಎಂಬ ನಾಣ್ಣುಡಿಯಂತೆ ಇರುತ್ತದೆ ಹಿಂದೆ ಬ್ರಿಟಿಷ್ ಸರ್ಕಾರದವರು ಪ್ರಯೋಗಿಸಿ ವಿಫಲವಾದ 'ಸುಧಾರಣೆ ಮತ್ತು ದಬ್ಬಾಳಿಕೆ' ಯ ನೀತಿಯಂತೆ ಈ ವರ್ತನೆಯು ಪರಿಣಮಿಸುತ್ತದೆ. ಅಲ್ಲಿ ನಿರರ್ಥಕವಾದ ನೀತಿಯು ಇಲ್ಲಿ ಸಾರ್ಥಕವಾಗುವುದಿಲ್ಲ. ಆದುದರಿಂದ ನರೇಂದ್ರರು ತಮ್ಮ ನಿಜವಾದ ರಕ್ಷಾ ಕವಚದಂತಿರುವ ಪ್ರಜೆಗಳ ಇಂಗಿತವನ್ನು ಸಕಾಲದಲ್ಲಿ ಮನಗಂಡು ಅದರಂತೆ ವರ್ತಿಸಲು ತೊಡಗುವುದೇ ಶ್ರೇಯಸ್ಕರವಾದ ಮಾರ್ಗ.

ಮದ್ರಾಸಿನಲ್ಲಿ ಸಹಸ್ರ ಚಂಡೀಯಜ್ಞ

ಶಾಂತಿ ಮತ್ತು ಶ್ರೇಯಸ್ಸನ್ನು ಸಾಧಿಸುವ ಸಲುವಾಗಿ ಮದ್ರಾಸಿನ ಮಿಂಟ್ ರಸ್ತೆಯಲ್ಲಿರುವ ಶ್ರೀ ಏಕಾಂಬರೇಶ್ವರ ದೇವಾಲಯದಲ್ಲಿ ಸಹಸ್ರ ಚಂಡೀ ಯಜ್ಞವನ್ನು ಆರಂಭಿಸಲಾಗುವುದೆಂದು ಗೊತ್ತಾಗಿದೆ ಗೋವರ್ಧನ ಪೀಠದ ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯರು ಈ ಯಜ್ಞದ ಮಾರ್ಗದರ್ಶಕರಾಗಿರುವರು

ಬೆಲ್ಲದ ಹಂಚಿಕೆ

ಚಾಮರಾಜನಗರ ೧೬

ಕಳೆದ ೧೩ ನೇ ತಾ|| ರಹದಾರಿ ಇಲ್ಲದೆ ಬೆಲ್ಲ ಸಾಗಿಸುತ್ತಿದ್ದ ಲಾರಿಯೊಂದನ್ನು ಅಧಿಕಾರಿಗಳು ಪತ್ತೆ ಹಚ್ಚಿದರೆಂದೂ ಅದನ್ನು ಎಲ್ಲಾ ಲೈಸೆನ್ಸ್‌ದಾರರಿಗೂ ಹಂಚಿ ಗ್ರಾಮಗಳಲ್ಲಿ ಬೆಲ್ಲವನ್ನು ಕಂಟ್ರೋಲ್ ದರದಲ್ಲಿ ವಿಲೇವಾರಿ ಮಾಡಿಸಿದರೆಂದೂ ತಿಳಿದು ಬಂದಿದೆ. ಇದರಿಂದ ಹಬ್ಬಕ್ಕೆ ಬೆಲ್ಲವು ತೊಂದರೆ ಇಲ್ಲದೆ ದೊರಕಿದಂತಾಯಿತು

Edited, printed and published by A. H. Nagarajan at the Sadhvi Press D-Subbiah Road, Mysore

ವಾರ ಭವಿಷ್ಯ

ತಾ|| ೨೦-೧-೪೭ ರಿಂದ ೨೬-೧-೪೭ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳವರಿಂದ)

ಮೇಷ—ಆರೋಗ್ಯ ಉತ್ತಮ. ಧನಲಾಭ ಸಾಧಾರಣ. ಉದ್ಯೋಗ ವ್ಯವಹಾರಗಳಲ್ಲಿ ಯಶ ಅಧಿಕಾರಿಗಳಿಂದ ಸನ್ಮಾನ. ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ ಪ್ರವಾಸದಿಂದ ಆಲಸ್ಯ ತಾ|| ೨೩, ೨೫ ಚಿಂತೆ, ಕಲಹ

ವೃಷಭ—ಆರೋಗ್ಯ ಸಾಧಾರಣ. ಧನಲಾಭ ಉತ್ತಮ ಉದ್ಯೋಗ ವ್ಯವಹಾರಗಳಿಂದ ಚಿಂತೆ. ಶತ್ರುಗಳಿಂದ ಕಿರುಕುಳ. ಅಧಿಕಾರಿ ವರ್ಗದವರೊಡನೆ ಮನಸ್ತಾಪ. ಮಂಗಳ ಕಾರ್ಯಗಳಲ್ಲಿ ಆಸಕ್ತಿ ಮತ್ತು ಖರ್ಚು. ತಾ|| ೨೨, ೨೪ ಲಾಭ ಮಿತ್ರಾಗಮನ.

ಮಿಥುನ—ಪ್ರಾಕೃತಿಕ ಸ್ಥಿತಿ ಕೆಡುತ್ತದೆ ಧನಲಾಭ ಕಡಿಮೆ ಖರ್ಚು ಹೆಚ್ಚು. ಉದ್ಯೋಗ ವ್ಯವಹಾರಗಳಲ್ಲಿ ಶತ್ರುಗಳ ಕಿರುಕುಳ ಹೆಚ್ಚು. ಮಿತ್ರರಿಂದ ತಿರಸ್ಕಾರ ಪ್ರವಾಸದಿಂದ ಆರೋಗ್ಯ ಕೆಡುತ್ತದೆ ಮತ್ತು ಮಾನಸಿಕ ಚಿಂತೆ ಹೆಚ್ಚುತ್ತದೆ ತಾ|| ೨೩, ೨೪ ಸಾಧಾರಣ.

ಕಟಕ—ಆರೋಗ್ಯ ಸಾಧಾರಣ. ಧನಲಾಭ ಕಡಿಮೆ ಉದ್ಯೋಗ ವ್ಯವಹಾರಗಳಿಂದ ವಿಶೇಷ ನಷ್ಟ. ಶತ್ರುಗಳಿಂದ ಕಿರುಕುಳ ಹೆಚ್ಚುವುದು. ಆಪ್ತ ಜನರ ತಿರಸ್ಕಾರ. ತಾ|| ೨೫, ೨೬ ಚಿಂತಾವಾರ್ತೆ. ಪ್ರವಾಸ

ಸಿಂಹ—ಆರೋಗ್ಯ ಉತ್ತಮ ಚಿಂತೆ ಹೆಚ್ಚು. ಧನಲಾಭ ಕಡಿಮೆ. ಪ್ರವಾಸದಿಂದ ಅಧಿಕ ವ್ಯಯ, ವ್ಯಾಪಾರದಲ್ಲಿ ನಷ್ಟ, ಅಧಿಕಾರಿ ವರ್ಗದವರ ಅಸಮಾಧಾನ ಹೆಚ್ಚು. ಮಿತ್ರರು ನಿಂದಿಸಿ ಅವಮಾನ ಪಡಿಸುವರು. ತಾ|| ೨೪, ೨೬ ಸಾಧಾರಣ. ಧನಲಾಭ.

ಕನ್ಯಾ—ಆರೋಗ್ಯ ಚೆನ್ನಾಗಿರುತ್ತದೆ. ಮಾನಸಿಕ ಚಿಂತೆ ಹೆಚ್ಚು. ಧನಲಾಭ ಉತ್ತಮ. ಯತ್ನಿಸಿದ ಕಾರ್ಯಗಳಲ್ಲಿ ತೊಡಕು. ಮಿತ್ರರಿಂದ ಸಹಾಯ. ಅಧಿಕಾರಿ ವರ್ಗದವರಿಂದ ಸನ್ಮಾನ ತಾ|| ೨೧, ೨೩ ಲಾಭ. ಮಿತ್ರ ಭೇಟಿ.

ತುಲಾ—ಆರೋಗ್ಯ ಚೆನ್ನಾಗಿರುತ್ತದೆ ಧನಲಾಭ ಕಡಿಮೆ ಅಧಿಕಾರಿಗಳಿಂದ ತಿರಸ್ಕಾರ. ಶತ್ರುಗಳ ಕಾಟದಿಂದ ಬೇಸರಿಕೆ, ವ್ಯಾಪಾರದಲ್ಲಿ ನಷ್ಟ. ಆಪ್ತರೊಡನೆ ಕಲಹ ತಾ|| ೨೨, ೨೪ ಸಾಧಾರಣ ಲಾಭ

ವೃಶ್ಚಿಕ—ಆರೋಗ್ಯ ಕೆಡುತ್ತದೆ. ಧನಲಾಭ ಸಾಧಾರಣವಾಗಿರುತ್ತದೆ. ವಿಶೇಷವಾದ ಪ್ರವಾಸದಿಂದ ರಾಜಕೀಯ ಪ್ರಮುಖರ ಪರಿಚಯ. ವ್ಯಾಪಾರದಲ್ಲಿ ಆಸಕ್ತಿ. ಹೆಚ್ಚು ಲಾಭವುಂಟಾಗುತ್ತದೆ. ತಾ|| ೨೫, ೨೬ ಬಂಧು ದರ್ಶನ ವಿನೋದಕ್ಕಾಗಿ ಖರ್ಚು.

ಧನುಸ್ಸು—ಆರೋಗ್ಯ ಸಾಧಾರಣ. ಕುಟುಂಬದವರ ಆರೋಗ್ಯ ಕೆಟ್ಟು ವೈದ್ಯಕೀಯ ಖರ್ಚು ಹೆಚ್ಚುವುದು. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ. ಆಪ್ತರಿಂದಲೂ ಮಿತ್ರರಿಂದಲೂ ತಿರಸ್ಕಾರ ತಾ|| ೨೬, ೨೬ ಸಾಧಾರಣ. ಲಾಭ

ಮಕರ—ಆರೋಗ್ಯ ಕೆಡುತ್ತದೆ ಪ್ರವಾಸದಿಂದ ಅಪಘಾತವುಂಟಾಗುತ್ತದೆ. ವ್ಯಾಪಾರದಲ್ಲಿ ಲಾಭವಿದ್ದರೂ ಪೈಪೋಟಿಯಿಂದ ನಷ್ಟವುಂಟಾಗುವ ಸಂಭವವಿದೆ. ಮಿತ್ರರು ತಿರಸ್ಕರಿಸುವರು. ತಾ|| ೨೫, ೨೬ ಲಾಭ, ಶಾಂತಿ.

ಕುಂಭ—ಆರೋಗ್ಯ ಚೆನ್ನಾಗಿರುತ್ತದೆ. ಧನ ಲಾಭ ಅತ್ಯುತ್ತಮ. ಪ್ರವಾಸದಿಂದ ಲಾಭ ಮತ್ತು ಮಿತ್ರ ದರ್ಶನ. ವ್ಯಾಪಾರ ವ್ಯವಹಾರಗಳು ಅತ್ಯಂತ ಲಾಭದಾಯಕ. ಬಂಧು ಜನರಿಂದ ಸನ್ಮಾನ. ತಾ|| ೨೬, ೨೬, ಚಿಂತೆ ಖರ್ಚು.

ಮೀನ—ಆರೋಗ್ಯ ಕೆಡುತ್ತದೆ. ಧನಲಾಭ ಸಾಧಾರಣ ಮಾನಸಿಕ ಚಿಂತೆ ಹೆಚ್ಚು. ಉದ್ಯೋಗ ವ್ಯವಹಾರಗಳಲ್ಲಿ ನಷ್ಟ. ಆಪ್ತರಿಂದ ಕಿರುಕುಳ ಮತ್ತು ಕಲಹ. ಪ್ರವಾಸದಿಂದ ವ್ಯಥೆ. ತಾ|| ೨೪, ೨೫ ಸಾಧಾರಣ. ಲಾಭ.

ರಾಜಕಮಲ್, ಮೈಸೂರು
17-1-47 ರಿಂದ ಅಮೋಘವಾದ
4 ನೇ ವಾರ
—: ಪ್ರಕಾಶ್ ರವರ :—
ಹಮಾರಾ ಸಂಸಾರ್
ಭೂಮಿಕೆ :- ಜೀವನ್ ಉಮಾಕಾಂತ್, ರಂಜನ, ಜಿಲ್ಲೂ,

ನಿಮ್ಮ ಪ್ರೈವೇಟು ಕಾರು, ಟ್ಯಾಕ್ಸಿ, ಬಸ್ಸು, ಲಾರಿ, ಮೋಟಾರು ಬೈಸಿಕಲ್
ವಗೈರೆಗಳನ್ನು ಇನಷೂರ್ ಮಾಡಿಸಲು ಅತಿ ಶ್ರೇಷ್ಠವಾದ ಕಂಪೆನಿ,
ನಾರ್ಗಾರ್ಡ್ ಫೈರ್ ಮತ್ತು ಜನರಲ್
ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್,
—: ಹೆಡ್ ಆಫೀಸ್:- ಮದ್ರಾಸ್ :—
ಪ್ರೀಮಿಯಂ ಸುಲಭ, ಮಿತಿಯಿಲ್ಲದ ನಷ್ಟದ ಜವಾಬ್ದಾರಿ
ಏಜೆಂಟರುಗಳು ಬೇಕು, ಶಕ್ತಿ ಸಾಮರ್ಥ್ಯದಂತೆ ವರಮಾನವುಂಟು,
-: ವಿವರಗಳಿಗೆ :-
ಎಂ. ಸಿ. ಸಂಪತ್ತಯ್ಯಂಗಾರ್, ಸ್ಪೆಷಲ್ ರೆಪ್ರೆಸೆಂಟೆಟಿವ್
359/1 ಚಲುವಾಂಬಾ ಅಗ್ರಹಾರ, ಮೈಸೂರು.

ನಾಲ್ಕು "ಬಾ" ಎಂದರೆ
ಉತ್ತಮವಾದ ಮಾಲು
ಭದ್ರವಾದ ಬೀಗಗಳು ಬೇಕಾದರೆ
ಬಾಬುಸಾಬ್
ಶಿವರಾಂಪೇಟೆ : : ಮೈಸೂರು

ಮೈಸೂರಿನ ಸುಪ್ರಸಿದ್ಧ
ರಾಜಕಮಲ್
ಟಾಕೀಸಿನಲ್ಲಿ
22-1-47 ರಿಂದ ಪ್ರಾರಂಭ
ಚಿತ್ರ ಪ್ರೊಡಕ್ಷನ್ ರವರ ಸುಪ್ರಸಿದ್ಧ
ಸಾಮಾಜಿಕ ಹಿಂದೀ ಚಿತ್ರ
- ಪ್ರತಿಜ್ಞಾ -
-: ತಾರಾ ಗಣ :-
ಮೋತೀ ಲಾಲ್, ಸ್ವರ್ಣ ಲತಾ, ಬೇಬಿ ಮೀನಾ, ವೀಣಕುಮಾರಿ, ಹರಿ ಶಿವ ದಾಸಿನಿ, ಸುನೇತ್ರ, ಬುಡೊ ಅದ್ವಾನಿ, ನಾಗೇಂದ್ರ ಮೊದಲಾದವರು.
C. E. M. ಚಂದ್ರಯ್ಯ, ಮೈಸೂರು, ರಿಲೀಸ್

ರಿ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೨೧—೧—೪೭ [ಸಂಚಿಕೆ ೧೪೦

ವಿಯಟ್ನಾಂ ಸಹಾಯಕ್ಕೆ ಭಾ॥ಸರ್ಕಾರದ ಹಂಚಿಕೆ?

...ನ ಚಿತ್ರ ನಿರ್ಮಾಪಕರಿಗೆ ಸತ್ಕಾರ

ಮೈಸೂರು ೨೧

...ಧಾನಿಯ ನವಜ್ಯೋತಿ ಸ್ಟುಡಿ... ಮತ್ತು ಮಹಾತ್ಮ ಪಿಕ್ಚರ್ಸ್ ಸಂಸ್ಥೆ... ...ಪಕರುಗಳನ್ನು ಸನ್ಮಾನಿಸಲು ...' ಪತ್ರಿಕೆಯ ಸಂಪಾದಕರೂ, ...ಕರೂ ಆದ ಶ್ರೀ॥ ಎಂ. ಎಸ್. ...ರಾಯರು ನಿನ್ನೆ ತಮ್ಮ ಪತ್ರಿಕಾ ...ಲಯದಲ್ಲಿ ಸತ್ಕಾರ ಕೂಟವನ್ನು ...ಸಿದ್ದರು. ಸಿಲ್ಕ್ ಫಿಲೇಚರ್ಸ್ ...ಟಿಂಗ್ ಏಜೆಂಟರಾದ ಶ್ರೀ॥ ಚ... ...ಯವರು ಸಭಾಧ್ಯಕ್ಷತೆಯನ್ನು ...ರು

...ನ ಕುಮಾರಿಯವರಿಂ... ...ವಾದ ಸಂಗೀತ ಕಛೇರಿ ನಡೆ... ...ಉಪಾಹಾರಾ ನಂತರ ವೇ॥ ಗಮ... ...ಶಾಸ್ತ್ರಿಗಳಿಂದ ವಿರಚಿತವಾದ ...ಕ ಪದ್ಯವನ್ನು ಓದಲಾಯಿತು. ನಗ... ...ಕೋದ್ಯೋಗಿ ಸಂಘದ ಅಧ್ಯಕ್ಷ ಶ್ರೀ॥ ಆರ್. ಗೋಪಾಲಕೃಷ್ಣರಾಯ... ...ಗತ ಭಾಷಣ ಮಾಡುತ್ತಾ ಚಲನ ...ವು ಅಗತ್ಯವಾಗಿ ಗಮನಕೊಡ... ...ದ ಹಲವು ಅಂಶಗಳನ್ನು ವಿವರಿಸಿದ ...ದೇಶದ ಸಾಮಾಜಿಕ ಮತ್ತು ಸಾಂಸ್ಕೃ... ...ವನ್ನು ಚಿತ್ರ ತಯಾರಿಕಾ ಸಂ... ...ಕೈಗೊಳ್ಳಬೇಕೆಂದು ಅವರು ...ದರು

...ವಿದ್ಯಾನಿಲಯದ ಆಂಗ್ಲಭಾಷಾ ...ಧ್ಯಾಪಕರಾದ ಶ್ರೀ॥ ಭರತರಾಜಸಿಂ... ...ವರು ಮಾತಾಡಿ, ಮೈಸೂರಿನ ಪ್ರ... ...ಸೌಂದರ್ಯವನ್ನೂ, ಸಂಸ್ಕೃತಿಯ... ...ತಿಯನ್ನೂ, ಹೊರದೇಶದವರು ...ಕೊಂಡು ಲಾಭ ಸಂಪಾದಿಸುತ್ತಿರುವು... ...ವಿವರಿಸಿ ನಮ್ಮಲ್ಲಿಯೂ ಚಲನ ಚಿ... ...ಸಂಸ್ಥೆಗಳು ವೃದ್ಧಿಗೊಂಡು, ನಮ್ಮ... ...ತ್ತನ್ನು ನಮ್ಮಲ್ಲೇ ಉಪಯೋಗಿಸಿ ...ಗಳಿಸಬೇಕೆಂದು ಹೇಳಿದರು

...ನವಜ್ಯೋತಿ ಸ್ಟುಡಿಯೋ ಪರವಾಗಿ ಶ್ರೀ ...ಆರ್. ರಾಮಯ್ಯನವರೂ, ಮಹಾತ್ಮ ...ಚರ್ಸ್ ಪರವಾಗಿ ಶ್ರೀ ಶಂಕರಸಿಂಗರೂ, ...ವಂದಿಸುತ್ತಾ ಆರ್ಥಿಕ ದೃಷ್ಟಿಯಿಂದ ...ವು ಮೊದಲು ಪೌರಾಣಿಕ ಚಿತ್ರವನ್ನು ...ಯಿಸಿರುವುದಾಗಿಯೂ, ಮುಂದೆ ಸಾ... ...ಜಿಕ ಚಿತ್ರಗಳನ್ನು ತಯಾರಿಸುವುದಾಗಿ ...ತಿಳಿಸಿದರು. ಅಧ್ಯಕ್ಷರು ನಮ್ಮ ಸಂ... ...ನದಲ್ಲಿ ಈ ಕಲೆಯ ಬೆಳವಣಿಗೆಯ ...ಷ್ಟದಲ್ಲಿ ಧೈರ್ಯದಿಂದ ಅಡಿಯಿಟ್ಟವ... ...ನ್ನು ಅಭಿನಂದಿಸಿದರು

...ಶ್ರೀ ಎಂ. ಎಸ್ ಮಾಧವರಾಯರು ...ದಿನಗಳನ್ನರ್ಪಿಸುತ್ತಾ ನಮ್ಮ ದೇಶದ ...ಕೌಶಲ್ಯತೆಯ ಅಭಿವೃದ್ಧಿಗೆ ಅವಕಾ... ...ಕೊಡತಕ್ಕದ್ದಕ್ಕಾಗಿ ಕನ್ನಡ ನಾಡಿನ ಜನರ ...ವಾಗಿ ನಿರ್ಮಾಪಕರಿಗಳನ್ನು ವಂದಿಸಿದರು.

ವಿದ್ಯಾರ್ಥಿಗಳ ಪ್ರವಾಸ

...ರಾಯ ಹೈಸ್ಕೂಲಿನ ನೂರು ವಿದ್ಯಾ... ...ಗಳು ಮುಖ್ಯೋಪಾಧ್ಯಾಯರಾದ ಶ್ರೀ ...ವಿ ನಂಜುಂಡಯ್ಯನವರ ನೇತೃತ್ವದ... ...ನಿನ್ನೆ ದಿನ ಕೃಷ್ಣರಾಜಸಾಗರ ಮುಂತಾ... ...ಡೆ ಪ್ರವಾಸವನ್ನು ಕೈಗೊಂಡಿದ್ದು ಹಿಂ... ...ರುಗಿದರು

* ಗೋಪಾಲಸ್ವಾಮಿ ಕ್ರಿಕೆಟ್ ಪಂದ್ಯ... ...ಲ್ಲಿ ಮೈಸೂರು ಕ್ರಿಕೆಟ್ ಕ್ಲಬ್ಬಿನವರು ...ಸೂರು ಕ್ರಿಕೆಟಿಯರ್ಸರವರನ್ನು ನಿನ್ನೆ ...ನ್ನರ ವಿಕೆಟ್ ಮತ್ತು ೧೩ ರನ್ನಗಳಿಂದ ...ಸೋಲಿಸಿದರು.

ರಾಜ್ಯಾಂಗ ರಚನಾ ಸಭೆ

ಅಖಿಲ ಭಾರತ ರಾಜ್ಯಾಂಗ ರಚನಾಸಭೆಯು ನಿನ್ನೆ ಡಾ॥ ಬಾಬುರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಸಭೆಯು ನಿತ್ಯವ್ಯವಹಾರಗಳನ್ನು ನಿರ್ಧರಿರುವ ಸ್ಟೀರಿಂಗ್ ಸಮಿತಿ ಸ್ಥಾಪನೆ ಬಗ್ಗೆ ಶ್ರೀ ಸತ್ಯನಾರಾಯಣ ಸಿನ್ಹರವರು ಮಂಡಿಸಿದ ನಿರ್ಣಯವು ಅಂಗೀಕಾರವಾಯಿತು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಮಿ॥ ಚರ್ಚಿಲರು ಭಾಷಣ ಮಾಡುತ್ತಾ ರಾಜ್ಯಾಂಗ ಸಭೆಯು ಕೇವಲ ಹಿಂದೂ ಅದರಲ್ಲೂ ಸವರ್ಣ ಹಿಂದೂ ಸಂಸ್ಥೆಯೆಂದು ತಿಳಿಸಿದ್ದನ್ನು ಅಧ್ಯಕ್ಷ ಪ್ರಸಾದರು ವಿರೋಧಿಸಿದರು ಸಭೆಯಲ್ಲಿ ಬಹುಸಂಖ್ಯಾತ ಮುಸ್ಲಿಮರ ವಿನಹ ಇತರ ಎಲ್ಲಾ ಕೋಮುಗಳೂ ಪ್ರಾತಿನಿಧ್ಯವನ್ನು ಪಡೆದಿವೆ ಎಂದು ಹೇಳಿದರು. ಅನಂತರ ಪಂಡಿತ ನೆಹರೂರವರ ಸ್ವತಂತ್ರ ರಿಪಬ್ಲಿಕನ್ ಭಾರತದ ನಿರ್ಣಯದ ಚರ್ಚೆ ಮುಂದುವರಿಯಿತು. ಸರ್ ಸರ್ವಪಲ್ಲಿ ರಾಧಾಕೃಷ್ಣನ್‌ರವರು, ಶ್ರೀಮತಿ ವಿಜಯಲಕ್ಷ್ಮಿ ಪಂಡಿತರೂ, ಪ್ರೊ॥ ರಂಗ, ಡಾ॥ ಗಾಡ್‌ಗಿಲ್ ಮತ್ತು ಬಿ. ಕೆ. ಸೇನ್‌ರವರು ನಿರ್ಣಯಕ್ಕೆ ಬೆಂಬಲವಿತ್ತು ಮಾತನಾಡಿದರು.

ಯಳಂದೂರು ವಿದ್ಯಾರ್ಥಿ ನಿಧಿ

೧೯೪೬ ೪೭ ನೇ ಸಾಲಿನ ಯಳಂದೂರು ವಿದ್ಯಾರ್ಥಿ ಸಹಾಯ ಸಂಘದ ಸಂಕ್ಷಿಪ್ತ ವರದಿಯು ನಮ್ಮ ಹಸ್ತಗತವಾಗಿದೆ ಸದರಿ ಸಾಲಿನಲ್ಲಿ ೧೭೨೩-೪-೦ ಜಮಾ, ೧೬೪೭-೮-೦ ರೂ ಖರ್ಚು ಆಗಿರುವುದಾಗಿ ನಮೂದಿಸಲಾಗಿದೆ. ೭೧ ವಿದ್ಯಾರ್ಥಿಗಳಿಗೆ ಕಳೆದ ಸಾಲಿನಲ್ಲಿ ಸಹಾಯ ಮಾಡಲಾಗಿದೆ ಎಂದಿನಂತೆ ಮಹನೀಯರು ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವೀಯ ಬೇಕೆಂದು ಪ್ರಾರ್ಥಿಸಲಾಗಿದೆ.

ಹೊಸ ಜಿಲ್ಲಾ ಜಡ್ಜರು

ಮೈಸೂರು ಜಿಲ್ಲಾ ಸೆಷನ್ಸ್ ಜಡ್ಜರಾಗಿ ವರ್ಗವಾಗಿ ಬಂದ ಡಾ॥ ಬಿ. ಆರ್ ರಾಮಲಿಂಗಯ್ಯನವರು ನಿನ್ನೆ ದಿನ ತಮ್ಮ ಅಧಿಕಾರವನ್ನು ವಹಿಸಿಕೊಂಡರು. ವಕೀಲ ಸಂಘದ ಅಧ್ಯಕ್ಷರಾದ ಶ್ರೀ ಎಂ ಲಕ್ಷ್ಮೀನಾರಾಯಣರಾಯರು ಸ್ವಾಗತ ಕೋರಿ ಭಾಷಣ ಮಾಡಿದರು

‡ ಮೈಸೂರು ಬಿಲ್ಲೆ ಮೊಹಲ್ಲಾ ವೀಣೆ ಶಾಮಣ್ಣನವರ ಬೀದಿಯಲ್ಲಿರುವ ಪಾರಮಾರ್ಥಿಕ ಶ್ರೀನಿವಾಸ ರಾಘವೇಂದ್ರ ಸೇವಾ ಮಂದಿರದಲ್ಲಿ ನಾಳೆಯಿಂದ ೩ ದಿನಗಳು ಶ್ರೀ ಪುರಂದರದಾಸರ ವಿನಾಚರಣೆ ನಡೆ...

ವಿಯಟ್‌ನಾಂ ಸಹಾಯಕ್ಕೆ ಭಾರತ ಸರ್ಕಾರದ ಹಂಚಿಕೆ?

ಇಂಡೋ ಚೀನಾದಲ್ಲಿ ನಡೆಯುತ್ತಿರುವ ಕದನದಲ್ಲಿ ವಿಯಟನಾಂ ಪಡೆಗಳಿಗೆ ಸಹಾಯ ಮಾಡಲು ಭಾರತದ ವಿದೇಶಾಂಗ ಸಚಿವರಾದ ಪಂ॥ ನೆಹರೂರವರು ರಚನಾತ್ಮಕವಾದ ಯೋಜನೆಯೊಂದನ್ನು ...ಟಿಸುತ್ತಿರುವುದಾಗಿ ಲಂಡನ್ನಿನಲ್ಲಿ ಹೇಳಲಾಗುತ್ತಿದೆ ಲಂಡನ್ನಿನ ಸ್ವರಾಜ್ಯ ಭವನದಲ್ಲಿ ಮೊನ್ನೆ ದಿನ ಭಾರಿ ಸಭೆಯೊಂದು ಜರುಗಿ ವಿಯಟನಾಂ ಪ್ರಜೆಗಳು ಫ್ರೆಂಚ್ ಸಾಮ್ರಾಜ್ಯ ಶಾಹಿಯನ್ನು ಎದುರಿಸಿ ಹೋಡಿಸುವ ಹೋರಾಟದಲ್ಲಿ ವಿಯಟ್‌ನಾಮಿಗಳಿಗೆ ಪೂರ್ಣ ಬೆಂಬಲ ನೀಡುವ ನಿರ್ಣಯವನ್ನು ಮಾಡಲಾಯಿತು

ಹ್ಯೂ ಬಿಡುಗಡೆಗಾಗಿ ಫ್ರೆಂಚರ ಸಂಕಲ್ಪ

ಇಂಡೋ ಚೀನಾದಲ್ಲಿರುವ ಸೈಗಾನ್‌ಗೆ ೪೫೦ ಮೈಲಿ ದೂರದಲ್ಲಿರುವ ಹ್ಯೂ ಪ್ರದೇಶವನ್ನು ವಿಯಟ್‌ನಾಂ ಸೈನ್ಯವು ಆಕ್ರಮಿಸಿ ವಶಪಡಿಸಿಕೊಂಡಿದೆ ಅದನ್ನು ವಾಪಸು ಪಡೆಯಲು ಫ್ರೆಂಚರು ದೃಢ ಸಂಕಲ್ಪ ಮಾಡಿ, ಭೂ, ವಿಮಾನ ಮತ್ತು ಸಮುದ್ರ ಮಾರ್ಗವಾಗಿ ಆ ಪ್ರದೇಶದ ಮೇಲೆ ಭಾರಿ ಮುತ್ತಿಗೆಯನ್ನು ಆರಂಭಿಸಿದ್ದಾರೆ ಫ್ರೆಂಚ್ ಸೈನ್ಯಗಳು ಒಂದೇ ಸಮನೆ ಮುಂದುವರಿಯುತ್ತಿರುವುದಾಗಿ ವರದಿ ಬಂದಿದೆ ವಿಯಟ್‌ನಾಂ ಸೈನ್ಯಗಳಿಗೆ ಸರಬರಾಜು ಸರಿಯಾಗಿಲ್ಲದಿರುವುದರಿಂದ ಅವರ ಕೈ ಹಿಂದಾಗಿದೆಯೆಂದು ಹೇಳಲಾಗಿದೆ ಹನೋಯ್‌ನಲ್ಲಿರುವ ಚೀಣೀಯರ ರಕ್ಷಣೆಗಾಗಿ ಚೀನಾ ಸರ್ಕಾರವು ಫ್ರೆಂಚ್ ಮಿಲಿಟರಿ ಅಧಿಕಾರಿಗಳೊಂದಿಗೆ ಸಂಧಾನ ನಡೆಸುತ್ತಿದೆ

ನಿಧನ

ರಾಜಧಾನಿಯ ಲಾಯರುಗಳ ಗುಮಾಸ್ತೆ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಕೆ ರಾಮಸ್ವಾಮಿಯವರು ವಿಷಮ ಶೀತ ಜ್ವರದಿಂದ ನಿನ್ನೆ ಮಧ್ಯಾಹ್ನ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರ ಆತ್ಮಕ್ಕೆ ಶಾಂತಿ ದೊರಕಿಸುವಂತೆ ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇವೆ

* ದೇವರಾಜ ಮೊಹಲ್ಲಾ ಕಾಟಪ್ಪನ ಗಂಡಿ ಬಳಿ ಯಜಮಾನ್ ಶ್ರೀನಿವಾಸಯ್ಯನವರ ಶ್ರೀ॥ ಸೀತಾರಾಮಾಂಜನೇಯ ಮಂದಿರದಲ್ಲಿ ಕಳೆದ ೧೧ ನೇ ತಾ॥ ನಿಂದ ನಿನ್ನೆ ವರೆಗೆ ಶ್ರೀ॥ ತ್ಯಾಗರಾಜ ಶತಮಾನದ ಪುಣ್ಯದಿನಾಚರಣೆಯು ವೈಭವದಿಂದ ಜರುಗಿತು

ಇಸ್ಮೈಲ್ ಪರೀಕ್ಷರು ಚೀಫ್ ಸೆಕ್ರೆಟರಿಗಳಾಗುವರೇ ?

ಸ್ವಂ. ಸು ಪ್ರೋ.] ಬೆಂಗಳೂರು ೨೧

ಶ್ರೀ ವೇದವ್ಯಾಸಾಚಾರ್ಯರು ನಿವೃತ್ತರಾದ ಬಳಿಕ ಮಿ॥ ಇಸ್ಮೈಲ್ ಪರೀಕ್ಷರು ಚೀಫ್ ಸೆಕ್ರೆಟರಿಗಳಾಗುವರೆಂದು ವದಂತಿ ಹಬ್ಬಿದೆ

ಪಾನ ನಿರೋಧ ಸಮಿತಿ ಸಭೆ

ಸಂಸ್ಥಾನದ ಪಾನ ನಿರೋಧ ಸಮಿತಿ ಸಭೆಯು ಈ ದಿನ ಪ್ರೀಅಬ್ಬಾಸ್‌ಖಾನರ ಅಧ್ಯಕ್ಷತೆಯಲ್ಲಿ ನೆರೆದಿತ್ತು ಸಮಿತಿ ಅಧ್ಯಕ್ಷರಾದ ಮಿ॥ ಇಮಾಂರವರು ಅನಿವಾರ್ಯದಿಂದ ಸಭೆಗೆ ಬಂದಿರಲಿಲ್ಲವಾಗಿ ಅವರು ಕಳಿಸಿದ್ದ ಅಭಿಪ್ರಾಯವನ್ನು ಸಭೆಯಲ್ಲಿ ಓದಲಾಯಿತು. ಮೈಸೂರಿನಲ್ಲಿ ಪೂರ್ಣ ಪಾನ ನಿರೋಧವನ್ನು ಜಾರಿಗೆ ತರುವುದು ಸೂಕ್ತವೆಂದೂ, ಆದರೆ ಮದ್ರಾಸಿನಲ್ಲಿರುವಂತೆ ವ್ಯಾಪಾರ ತೆರಿಗೆ ಮುಂತಾದುವುಗಳನ್ನು ಇಲ್ಲಿ ಜಾರಿಗೆ ತರಬಾರದೆಂದೂ ಮಿ॥ ಇಮಾಂರವರು ತಿಳಿಸಿದ್ದರು ಸಭೆಗೆ ಆಗಮಿಸಿದ್ದ ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರ್‌ರವರು ಮಾತನಾಡಿ, ಪಾನ ನಿರೋಧವನ್ನು ಜಾರಿಗೆ ತರುವುದರಿಂದ ಆದಾಯದಲ್ಲಿ ಬೀಳುವ ಖೋತಾ, ಹಾಲಿ ಆಬ್ಕಾರಿಯಲ್ಲಿ ಕೆಲಸ ಮಾಡುತ್ತಿರುವವರಿಗೆ ಉದ್ಯೋಗ ಮತ್ತು ಪಾನ ನಿರೋಧದಿಂದ ಉಂಟಾಗುವ ಕಳ್ಳ ಭಟ್ಟಿಯನ್ನು ತಪ್ಪಿಸುವುದು-ಇವೇ ಮುಂತಾದ ವಿಷಯಗಳನ್ನು ಸಮಿತಿಯವರು ವಿಶೇಷವಾಗಿ ಪರಿಶೀಲಿಸಿ ವರದಿ ಮಾಡಬೇಕೆಂದು ತಿಳಿಸಿದರು

ಪೂರ್ವ ಆಫ್ರಿಕದಲ್ಲಿ ಹಿಂದೂ-ಮುಸ್ಲಿಂ ಒಪ್ಪಂದ

ಪೂರ್ವ ಆಫ್ರಿಕದ ಶಾಸನ ಸಭೆ, ಪುರಸಭೆ ಮತ್ತು ಜಿಲ್ಲಾಬೋರ್ಡುಗಳಲ್ಲಿನ ಭಾರತೀಯರ ಸ್ಥಾನಗಳಿಗೆ ಜಂಟೀ ಚುನಾವಣಾ ಪದ್ಧತಿಯನ್ನು ಅನುಸರಿಸಬೇಕೆಂದು ಹಿಂದೂ- ಮುಸ್ಲಿಮರಲ್ಲಿ ಒಪ್ಪಂದವಾಗಿರುವುದಾಗಿ ವರದಿ ಬಂದಿದೆ ಹಿಂದೂಗಳಿಗೂ ಮುಸ್ಲಿಮರಿಗೂ ಸ್ಥಾನಗಳನ್ನು ಕಾದಿರಿಸಲಾಗಿದೆ

ಫ್ರೆಂಚರ ವಿರುದ್ಧ ಹೆಂಗಸರ ಕದನ

ಇಂಡೋಚೀನಾದಲ್ಲಿ ಫ್ರೆಂಚರು ನಡೆಸುತ್ತಿರುವ ಘಾಳಿಯಲ್ಲಿ ಅನ್ನಾಮಿ ಹೆಂಗಸರು ವಿಯಟ್‌ನಾಂ ಸೈನ್ಯದಲ್ಲಿ ಸೇರಿ ಹೋರಾಟ ನಡೆಸುತ್ತಿದ್ದಾರೆಂದು ಗೊತ್ತಾಗಿದೆ. ಮಿಲಿಟರಿ ಉಡ ...ನಲ್ಲಿದ್ದು ಪ್ರಕಟಪಟ್ಟ ೨೦ ವರ್ಷದ ಮಹಿಳೆಯೊಬ್ಬಳ ಶವವು ಪತ್ತೆಯಾಗಿದೆ

ವಿವಿಧ ವಿನೋದಾವಳಿ

ರಾಜಧಾನಿಯ ನೆಹರೂ ಸಂಘದ ಸಹಾಯಾರ್ಥವಾಗಿ ನಾಳೆ ಸಂಜೆ ೬ ಘಂಟೆಗೆ ತಿ ಬಸುವಯ್ಯನವರ ಹೈ ಸ್ಕೂಲ್ ಭವನದಲ್ಲಿ ವಿವಿಧ ವಿನೋದಾವಳಿಯೊಂದನ್ನು ಏರ್ಪಡಿಸಲಾಗಿದೆ. ಪುರಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಟಿ ಮರಿಯಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸುವರು ಸಾರ್ವಜನಿಕರು ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ.

ಆರಾಧನೆ

ಶ್ರೀ ಪುರಂದರದಾಸರ ಆರಾಧನೆ ಪ್ರಯುಕ್ತ ಶ್ರೀ॥ ವೇ॥ ವೆಂಕಟಸುಬ್ಬ ದಾಸರವರು ನಾಳೆ ಸಂಜೆ ೫॥ ಗಂಟೆಗೆ ೩. ಸಬ್ಬಯ್ಯ ರಸ್ತೆಯಲ್ಲಿರುವ ಸಾಧ್ವಿ ಆಫೀಸಿನ ' ಮಹಡಿಯ ಮೇಲೆ ವಿದ್ವಾಂಸರುಗಳ ಸಂಗೀತವನ್ನು ಏರ್ಪಡಿಸುತ್ತಾರೆ ! ಸರ್ವರಿಗೂ ಆಹ್ವಾನವುಂಟು.

ಸಾಧ್ವಿ

ತಾ|| ೨೧-೧-೪೭ ಮಂಗಳವಾರ

ಹೊಸ ಉಪಾಧ್ಯಕ್ಷರು

ರಾಜಧಾನಿಯ ಪೌರಸಭೆಗೆ ಶ್ರೀ ಟಿ ನರಸಿಂಹಯ್ಯಂಗಾರ್‌ರವರು ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವುದಕ್ಕಾಗಿ ಅವರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ಇದುವರೆಗೆ ಕೆಲವು ವರ್ಷಗಳಿಂದೀಚೆಗೆ ನಡೆದ ಉಪಾಧ್ಯಕ್ಷ ಚುನಾವಣೆಯು ಪ್ರತಿಸ್ಪರ್ಧಿಯಿಲ್ಲದೆ ನಡೆಯುತ್ತಿತ್ತು. ಕಾಂಗ್ರೆಸ್ ಪಕ್ಷದ ಉಮೇದುವಾರರು ಸರ್ವಾನುಮತದಿಂದ ಆರಿಸಲ್ಪಡುತ್ತಿದ್ದರು ಆದರೆ ಈ ಸಾರಿ ಇಬ್ಬರು ಸದಸ್ಯರು ಪ್ರತಿಸ್ಪರ್ಧಿಗಳಾಗಿದ್ದರು ಅವರ ಪೈಕಿಯೂ ಹಜರತ್ ಮಿರ್‌ನೂರ್ ಹುಸೇನರವರು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡರು. ಮತ್ತೊಬ್ಬರಾದ ಶ್ರೀ ಥಿಯೊಬಾಲ್ಡರವರು ಸಭೆಗೆ ಬಂದೇ ಇರಲಿಲ್ಲ ಅಲ್ಲದೆ ಚುನಾವಣಾ ಕಾಲದಲ್ಲಿ ನಾಮಕರಣದ ಪತ್ರ ಸ್ವೀಕೃತವಾದ ಉಮೇದುವಾರರೊಬ್ಬರೂ ಹಾಜರಿರಲಿಲ್ಲ ಶ್ರೀ ನರಸಿಂಹಯ್ಯಂಗಾರ್‌ರವರು ಅವಿರೋಧವಾಗಿ ಆರಿಸಲ್ಪಟ್ಟರು.

ಖಾಸಗಿ ಅಧ್ಯಕ್ಷರನ್ನು ಹೊಂದುವ ಅವಕಾಶವನ್ನು ಸರ್ಕಾರದವರು ಈ ಸಭೆಗೆ ಇನ್ನೂ ಕೊಟ್ಟಿಲ್ಲದಿರುವುದರಿಂದ ಉಪಾಧ್ಯಕ್ಷಸ್ಥಾನವೇ ಸಭೆಯ ಸದಸ್ಯರಿಗೆ ಸದ್ಯಕ್ಕೆ ದೊರೆಯುವ ಅತ್ಯುನ್ನತವಾದ ಗೌರವದ ಸ್ಥಾನವಾಗಿರುತ್ತದೆ ತಮ್ಮ ಸೇವೆ, ಅನುಭವ ಮತ್ತು ತ್ಯಾಗಗಳಿಂದ ಶ್ರೀ ಐಯ್ಯಂಗಾರ್ಯರು ಈ ಸ್ಥಾನಕ್ಕೆ ಸಂಪೂರ್ಣವಾದ ಅರ್ಹತೆಯನ್ನು ಹೊಂದಿರುತ್ತಾರೆ ದೇಶಸೇವೆಯಲ್ಲಿ ಅನೇಕ ಬಾರಿ ಕಾರಾಗೃಹವಾಸವನ್ನು ಅನುಭವಿಸಿರುತ್ತಾರೆ ಕಾಂಗ್ರೆಸ್ಸಿನ ಕೆಲಸಕಾರ್ಯಗಳನ್ನೆಲ್ಲಾ ಯಶಸ್ವಿಯಾಗಿ ನಿರ್ವಹಿಸುತ್ತಿರುತ್ತಾರೆ. ಈಗ ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳೂ ಆಗಿರುತ್ತಾರೆ ಕಳೆದ ಆರು ವರ್ಷಗಳಿಂದ ಪೌರಸಭೆಯಲ್ಲಿ ಉತ್ತಮವಾದ ಪಾತ್ರವನ್ನು ವಹಿಸಿ ಕೆಲಸ ಮಾಡಿರುತ್ತಾರೆ

ಶ್ರೀ ನರಸಿಂಹಯ್ಯಂಗಾರ್ಯರು ಅತ್ಯಂತ ಸರಳ ಸ್ವಭಾವದವರು, ನಿಗರ್ವಿಗಳು ಮತ್ತು ಸೇವಾ ತತ್ಪರರು, ಪದವೀಧರರೂ ಮತ್ತು ವಕೀಲರೂ ಆಗಿರುತ್ತಾರೆ. ಯಾವ ಆಡಂಬರವೂ ಇಲ್ಲದೆ ಪ್ರಶಸ್ತಿ ಅಥವಾ ಪ್ರತಿಷ್ಠೆಗಳಿಗೆ ಆಶಿಸದೆ ನಿರ್ವಂಚನೆಯಿಂದ ಸಾರ್ವಜನಿಕ ಕೆಲಸಗಳಲ್ಲಿ ತೊಡಗುವವರಾಗಿದ್ದಾರೆ. ಬಡವರು, ಬಲ್ಲಿದರೆಂಬ ಭೇದವಿಲ್ಲದೆ ಸರ್ವರಿಗೂ ಸುಲಭ ಸಾಧ್ಯರಾಗಿದ್ದಾರೆ. ಇಂತಹವರನ್ನು ಪೌರಸಭೆಯು ಉಪಾಧ್ಯಕ್ಷ ಸ್ಥಾನಕ್ಕೆ ಆರಿಸಿರುವುದು ಎಲ್ಲರಿಂದಲೂ ಮೆಚ್ಚಲ್ಪಡತಕ್ಕ ವಿಷಯವೇ ಆಗಿದೆ ಇವರ ಮೇಲ್ವಿಚಾರಣೆಯಲ್ಲಿ ಪೌರಸಭಾ ಕಾರ್ಯಕಲಾಪಗಳು ಇನ್ನೂ ಶ್ರೇಯಸ್ಕರವಾಗಿ ನಡೆಯಲೆಂದು ನಾವು ಹಾರೈಸುತ್ತೇವೆ

ಪ್ರಸ್ತುತದ ನಿಯಮದಂತೆ ಉಪಾಧ್ಯಕ್ಷರಿಗೆ ನೇರವಾಗಿ ಯಾವ ಇಲಾಖೆಯು ಅಧಿಕತವೂ ವಹಿಸಲ್ಪಟ್ಟಿರುವುದಿಲ್ಲ ಅಧ್ಯಕ್ಷರು ಯಾವುದನ್ನು ಅವರಿಗೆ ಒಪ್ಪಿಸುತ್ತಾರೋ ಅದನ್ನು ಮಾತ್ರ ಅವರು ನಿರ್ವಹಿಸಬೇಕಾಗಿದೆ ಈಚೆಗೆ ಅಧ್ಯಕ್ಷರು ನೀರಿನ ಇಲಾಖೆ, ಮಾರ್ಕೆಟ್ಟು, ವಾಹನಗಳೇ ಮುಂತಾದ ಭಾಗಗಳನ್ನು ಉಪಾಧ್ಯಕ್ಷರಿಗೆ ವಹಿಸುತ್ತಿದ್ದಾರೆ ಅವುಗಳನ್ನು ಉಪಾಧ್ಯಕ್ಷರುಗಳು ಅತ್ಯಂತ ಜವಾಬ್ದಾರಿಯಿಂದ ನಡೆಸಿಕೊಂಡು ಬರುತ್ತಿದ್ದಾರೆ. ಶ್ರೀ|| ನರಸಿಂಹಯ್ಯಂಗಾರ್ಯರು ಈ ಬಾಬುಗಳಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳನ್ನು ಮಾಡಿ ಪೌರ ಸಭೆಗೂ, ಸಾರ್ವಜನಿಕರಿಗೂ ಹೆಚ್ಚು ಪ್ರಯೋಜನವನ್ನು ಉಂಟುಮಾಡಬೇಕೆಂದು ನಾವು ಕೋರುತ್ತೇವೆ

ಕೇವಲ ಉಪಾಧ್ಯಕ್ಷರ ಚುನಾವಣೆಯಲ್ಲಿಯೇ ಸಂತೃಪ್ತರಾಗುವ ಕಾಲವು ಕಳೆದುಹೋಯಿತು. ಅಧ್ಯಕ್ಷರನ್ನೂ ಸಹ ಆರಿಸಿಕೊಳ್ಳಲು ಅವಕಾಶ ಬೇಕೆಂದು ಪೌರ ಸಭೆಯವರು ಸರ್ಕಾರದವರನ್ನು ಬೇಡಿ,ಬೇಡಿ ಬೇಸತ್ತಿರುವರು ನಗರ ನಿವಾಸಿಗಳಿಗೂ ಸಹ ಇದೊಂದು ಕಳಂಕ ಪ್ರಾಯವಾಗಿದೆ. ಪೌರ ಸಭೆಯ ಸದಸ್ಯರಾಗಲೀ, ಸಾರ್ವಜನಿಕರಾಗಲೀ ಅಧ್ಯಕ್ಷರನ್ನು ಆರಿಸಿಕೊಳ್ಳುವ ಕಾಲವು ಬಂದಿರುತ್ತದೆ ದೊಡ್ಡ ದೊಡ್ಡ ರಾಜಕೀಯ ಸುಧಾರಣೆಗಳು ನಡೆಯುತ್ತಿರುವ ಈ ಸಮಯದಲ್ಲಿ ಸಂಸ್ಥಾನದ ರಾಜ್ಯಾಂಗವನ್ನೇ ಪರಿಷ್ಕರಣ ಮಾಡಲು ಪ್ರಭುಗಳು ಸಕಲ ಪ್ರಜೆಗಳಿಗೂ ಸಂದೇಶವನ್ನಿತ್ತಿರುವಲ್ಲಿ, ರಾಜಧಾನಿಯ ಪೌರ ಸಭೆಗೆ ಚುನಾಯಿತ ಅಧ್ಯಕ್ಷರನ್ನು ಆರಿಸಿಕೊಳ್ಳಲು ಸರ್ಕಾರದವರು ಕೂಡಲೇ ಅವಕಾಶ ಕಲ್ಪಿಸಲೆಂದು ನಾವು ಹಾರೈಸಿ, ನೂತನ ಉಪಾಧ್ಯಕ್ಷರಿಗೆ ಮತ್ತೊಮ್ಮೆ ನಮ್ಮ ಆದರಪೂರ್ವಕವಾದ ಸುಸ್ವಾಗತವನ್ನು ನೀಡುತ್ತೇವೆ

ಚಲನ ಚಿತ್ರವನ್ನು ನೋಡದ ಮಂತ್ರಿವರ್ಯ

ಮಧ್ಯಪ್ರಾಂತ್ಯದ ವಿದ್ಯಾಭ್ಯಾಸದ ಮಂತ್ರಿಗಳಾದ ಶ್ರೀ ಎಸ್ ವಿ. ಗೋಖಲೆಯವರು ತಮ್ಮ ಜೀವಮಾನದಲ್ಲಿ ತಾವು ಒಂದು ಚಲನ ಚಿತ್ರವನ್ನೂ ನೋಡಿಲ್ಲವೆಂದೂ, ತಮಗೆ ಚಲನ ಚಿತ್ರ ಪ್ರಪಂಚದ ಅರಿವೇ ಇಲ್ಲವೆಂದೂ ತಿಳಿಸಿರುತ್ತಾರೆ.

Edited, printed and published by A. R. Nagarajan at the Sadhvi Press D Subbiah Road, Mysore

ಹೊಸದಾಗಿ ಶಾಲುಗಳೂ, ಇಟಾಲಿಯನ್ ರಗ್ಗುಗಳೂ, ಇಂಗ್ಲೀಷ್ ಕೋಟಿಂಗ್ ಸರಕುಗಳೂ ಬಂದಿರುತ್ತವೆ. ಬಂದು ನೋಡಿ
ಚಾಮುಸಾರ್ ಟ್ರೇಡಿಂಗ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡು, ಮೈಸೂರು

ಹೊಸ ನಮೂನೆಯ

ಬೆನಾರಿಸ್ ಜಾರ್ಜೆಟ್ ಸೀರೆಗಳು, ಮೈಸೂರು ಸಿಲ್ಕ್ ಟಿಪ್ಪೂ ಸೀರೆಗಳು. ಬೆಂಗಾಲ್ ಸಿಲ್ಕ್ ಸೀರೆಗಳು ಮತ್ತು ಕೊಯಮತ್ತೂರು ಮಧುರೆ ಸೀರೆಗಳು
ಬಿಕರಿಗೆ ಸಿದ್ಧವಾಗಿವೆ
ಇಂದೇ ಭೇಟಿ ಕೊಡಿರಿ.

ಬಿ. ಕೆಂಚಪ್ಪ ಸನ್ಸ್,
ಜವಳೀ ಅಂಗಡಿ — : ದೊಡ್ಡಪೇಟೆ, ಮೈಸೂರು.

ಚಾಮುಂಡೇಶ್ವರಿಯಲ್ಲಿ ಮುಂದಿನ ಬದಲಾವಣೆ

ಪುಕಾರ್ ಮತ್ತು ಸಿಕಂದರ್ ಚಿತ್ರಗಳನ್ನು ನಿರ್ಮಿಸಿದ
ಸೊಹರಾಬ್ ಮೋದಿಯವರಿಂದ ನಿರ್ದೇಶಿಸಲ್ಪಟ್ಟ ಮತ್ತೊಂದು ಚಿತ್ರ ರತ್ನ
ಏಕ್-ದಿನ್-ಕ-ಸುಲ್ತಾನ್
(ಹಿಂದಿ)
ಭೂಮಿಕೆ:-ಮೆಹತಾಬ್-ವಾಸ್ತಿ ಸಾದಿಕ್ ಆಲಿ ಮತ್ತು ಗುಲಾಂ ಮಹಮದ್
Contact :—OSWAL FILMS, Chickpet, Bangalore City

ರಾಜಕಮಲ್, ಮೈಸೂರು. .... ನಾಳೆಯಿಂದ ಅಮೋಘ ಪ್ರಾರಂಭ!

ಜೀವನ ಮತ್ತು ಜ್ಯೋತಿಯ ಜೀವನ ಸಂಗ್ರಾಮದ ಘಟನೆಗಳು ಜನ ಜೀವನದ ಸ್ಪಷ್ಟ ಚಿತ್ರ!

ಪ್ರತಿಜ್ಞಾ

-: ತಾರಾ ಗಣ :-
ಮೋತೀ ಲಾಲ್, ಸ್ವರ್ಣ ಲತಾ, ಬೇಬಿ ಮೀನಾ, ವೀಣಕುಮಾರಿ, ಹರಿ ಶಿವ ದಾಸಿನಿ, ಸುನೇತ್ರ, ಬುಡೊ ಅದ್ವಾನಿ, ನಾಗೇಂದ್ರ ಮೊದಲಾದವರು (ಹಿಂದಿ)

ಪ್ರತಿ ದಿನ 3 ಪ್ರದರ್ಶನಗಳು

C B M ಚಂದ್ರಯ್ಯ, ಮೈಸೂರು, ರಿಲೀಸ್

ನೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨೨—೧—೪೭ [ಸಂಚಿಕೆ ೧೪೧

ಕಲ್ಕತ್ತ ವಿದ್ಯಾರ್ಥಿಗಳ ಮೇಲೆ ಟಿಯರ್ ಗ್ಯಾಸ್

ಉಪಾಧ್ಯಕ್ಷ ಚುನಾವಣೆ

ಮೈಸೂರು ೨೧

೪೭ ನೇ ಸಾಲಿಗೆ ಉಪಾಧ್ಯಕ್ಷರನ್ನು ... ನಿನ್ನೆ ಪುರಸಭಾಧಿವೇಶನವು ... ಅಧ್ಯಕ್ಷ ಶ್ರೀ॥ ರಾಮಚಂದ್ರ ರಾ... ಯವರು ಅನಾರೋಗ್ಯದ ... ಸಭೆಗೆ ಬಾರದಿದ್ದುದರಿಂದ ಶ್ರೀ॥ ... ಸೀತಾರಾಮಯ್ಯನವರು ಅಗ್ರಾ... ವಹಿಸಿ ಚುನಾವಣಾ ಕಾರ್ಯವ... ನಡೆಸಿದರು. ಮಿ॥ ಮೀರ್ ನೂ... ನರು ತಮ್ಮ ಉಮೇದುವಾರಿಕೆ... ವಾಪಸು ಪಡೆದುದರಿಂದ, ಉಳಿದ ... ಉಮೇದುವಾರರುಗಳಾದ ಶ್ರೀ॥ ... ಅಯ್ಯಂಗಾರ್ ಮತ್ತು ಮಿ॥ ಧ... ರಿಗೆ ಚುನಾವಣೆ ನಡೆಯಿತು. ... ಸಭೆಯಲ್ಲಿದ್ದ ಹಜರತ್ ಗ... ಮೀರ್ ನೂರ್ ಹುಸೇನ್ ಮತ್ತು ಮ... ಸೇಟ್ ರವರುಗಳು ಹೊರಟು... ದರು. ಶ್ರೀ॥ ನರಸಿಂಹ ಅಯ್ಯಂಗಾ... ರಿಗೆ ೨೩ ಓಟುಗಳು ಬಂದು, ಅವರು ... ಧ್ಯಕ್ಷರಾಗಿ ಆರಿಸಲ್ಪಟ್ಟರು. ಮಿ॥ ಧ... ರು ಸಭೆಗೆ ಬಂದಿರಲಿಲ್ಲ, ಅವ... ಒಂದು ಓಟೂ ಬರಲಿಲ್ಲ.

ಹರಿಕಥೆಗಳು

...ಯು ಉತ್ತರ ಭಾಗದ ಕೋಟೆ ಆಂಜನೇಯ ಸ್ವಾಮಿಯವರ ದೇವ... ಸ್ಥಾನದಲ್ಲಿ ನಾಳೆ ರಾತ್ರಿ ೮-೩೦ ಘಂಟೆಗೆ ... ಟಿ. ಕೆ. ವೇಣುಗೋಪಾಲ ದಾಸರ... 'ಶ್ರೀನಿವಾಸ ಕಲ್ಯಾಣ' ಎಂಬ ಹರಿ... ಕಥೆ ನಡೆಯುವುದು.

ಪುರಂದರ ದಾಸರ ಪುಣ್ಯ ದಿನಾಚರಣೆ ... ತುಳಸೀ ಅಗ್ರಹಾರದ ವೀಣೆ ವೆಂ... ಕಟಸುಬ್ಬಯ್ಯನವರ ಪರಿವಾರದ ವೇ॥ ರಾಮ... ರ ಮನೆಯಲ್ಲಿ ಇಂದಿನಿಂದ ನಾಲ್ಕು ದಿ... ನ ಸಂಜೆ ೬॥ ಘಂಟೆಗೆ ಹರಿಕಥೆಗಳು ... ನಡೆಯುತ್ತವೆ.

ಸಂಗೀತ ಸ್ಪರ್ಧೆ

ಸರಸ್ವತೀ ಸಂಗೀತ ಸಮಾಜದ ಆಶ್ರಯ... ಶ್ರೀ ಪುರಂದರದಾಸರ ಪುಣ್ಯ ದಿನಾಚ... ರಣೆ ಸಂಬಂಧವಾಗಿ ೨೬ ನೇ ತಾ॥ ಭಾ... ನುವಾರ ಬೆಳಗ್ಗೆ ೯ ಘಂಟೆಯಿಂದ ಚಾಮ... ರಾಜಪೇಟೆಯಲ್ಲಿರುವ ಸಹಕಾರ ಭವನದಲ್ಲಿ ... ಸಂಗೀತ ಸ್ಪರ್ಧೆಯೊಂದು ನಡೆಯುವುದು. ... ವರ್ಷಕ್ಕೆ ಮೀರದ ಬಾಲಕರು ಮತ್ತು ... ಬಾಲಕಿಯರು ಈ ಸ್ಪರ್ಧೆಯಲ್ಲಿ ಭಾಗ ವ... ಹಿಸಬಹುದು. ಕೃತಿಗಳನ್ನು ಹಾಡುವವ... ರಿಗೆ ಬಹುಮಾನಗಳನ್ನಿಟ್ಟಿದೆ. ಸ್ಪರ್ಧಿ... ಅರ್ಜಿಯನ್ನು ಎಂಟು ಆಣೆ ಪ್ರವೇಶ ... ಕೊಡನೆ ಸಮಾಜದ ಕಾರ್ಯದರ್ಶಿಯ... ರಿಗೆ ೨೫ ನೇ ತಾ॥ ಒಳಗಾಗಿ ತಲುಪಿಸ... ಬೇಕು.

ನಗರಾಭಿವೃದ್ಧಿ ಸಮಿತಿಗೆ ನಾಮಕರಣ

ಮೈಸೂರು ನಗರಾಭಿವೃದ್ಧಿ ಸಮಿತಿಗೆ ... ಸರ್ ಮೋರಿಸ್ ಕ್ರೇಗ್ ನರ್ ರವರ ಸ್ಥಾ... ನದಲ್ಲಿ ನಿವೃತ್ತ ಇಂಜನೀಯರಾದ ಶ್ರೀ ... ಕೃಷ್ಣಯ್ಯಂಗಾರ್ ರವರನ್ನು ಸರ್ಕಾರ... ದವರು ನಾಮಕರಣ ಮಾಡಿದ್ದಾರೆ.

... ಟಿಬೆಟ್ಟಿನ ಸಿಲ್ ಕನೊ ಪ್ರಾಂ... ತದ ಗವರ್ನರು ಕ್ರೂರಿಯೆಂದೂ, ಅಲ್ಲದೆ ... ಪ್ರಾಂತ್ಯದಲ್ಲೆಲ್ಲಾ ಅಫೀಮು ಹಂಚುವುದರ ... ಪ್ರಮುಖನೆಂದೂ, ಆದ್ದರಿಂದ ಅವನನ್ನು ... ಸರ್ಕಾರದವರು ಕೆಲಸದಿಂದ ಪ... ಗೊಳಿಸಿದ್ದರೆ, ಶಸ್ತ್ರ ಸಜ್ಜಿತ ದಳಗಳಿಂದ ಅ... ವನ್ನು ಓಡಿಸುವುದಾಗಿ ೫ ಲಕ್ಷ ಜನರು ... ಎದ್ದಿರುವುದಾಗಿ ತಿಳಿದುಬಂದಿದೆ.

ಪಶು ಸಂಪದಭಿವೃದ್ಧಿ

ದನಗಳ ಪ್ರದರ್ಶನದಲ್ಲಿ ದಿವಾನರ ಭಾಷಣ.

ಕಳೆದ ೧೭ ನೆಯ ತಾರೀಖು ಚುಂಚನಕಟ್ಟೆಯಲ್ಲಿ ನಡೆದ ದನಗಳ ಪ್ರದರ್ಶನದಲ್ಲಿ ಬಹುಮಾನಗಳನ್ನು ಹಂಚುತ್ತಾ ದಿವಾನರಾದ ಸರ್ ಏ. ರಾಮಸ್ವಾಮಿ ಮೊದಲಿಯಾರರು ಸಂಸ್ಥಾನದಲ್ಲಿ ಪಶು ಸಂಪತ್ತನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರದವರು ಪಂಚ ವಾರ್ಷಿಕ ಯೋಜನೆಯೊಂದನ್ನು ಮಂಜೂರು ಮಾಡಿರುವರೆಂದು ತಿಳಿಸಿದರು. ಸುಮಾರು ಒಂದು ಲಕ್ಷ ರಾಸುಗಳು ಪ್ರದರ್ಶನದಲ್ಲಿ ಭಾಗವಹಿಸಿದ್ದುವು. ಪ್ರದರ್ಶನ ಸಮಿತಿಯ ಪರವಾಗಿ ಶ್ರೀ ವೈ. ವಿ. ಗುಂಡೂರಾಯರು ದಿವಾನರಿಗೆ ಬಿನ್ನವತ್ತಳೆಯನ್ನರ್ಪಿಸಿದರು.

ದಿವಾನರು ಉತ್ತಮವಾದ ದನಗಳ ಮಾಲೀಕರುಗಳಿಗೆ ೪೦ ಬಹುಮಾನಗಳನ್ನು ಹಂಚಿದರು. ಅಖಿಲ ಭಾರತ ದನಗಳ ಪ್ರದರ್ಶನ ಸಮಿತಿಯವರೂ ಸಹ ಈ ಪ್ರದರ್ಶನಕ್ಕೆ ದ್ರವ್ಯ ರೂಪವಾದ ಬಹುಮಾನವನ್ನು ಕಳುಹಿಸಿಕೊಟ್ಟಿದ್ದರು. ದಿವಾನರು ಆಂಗ್ಲ ಭಾಷೆಯಲ್ಲಿ ಮಾಡಿದ ಭಾಷಣವನ್ನು ಶ್ರೀ ಎಚ್. ಸಿ. ದೇವರಾಜೇ ಅರಸಿನವರು ಭಾಷಾಂತರ ಮಾಡಿ ಕನ್ನಡದಲ್ಲಿ ತಿಳಿಸಿದರು.

ಬರ್ಮಾದಲ್ಲಿ ಕಮ್ಯೂನಿಸ್ಟರ ಪ್ರದರ್ಶನ

ರಂಗೂನ್ ನಗರದಲ್ಲಿ ಸೆಕ್ರೆಟೇರಿಯಟ್ಟಿನ ಮುಂಭಾಗದಲ್ಲಿ ಕಮ್ಯೂನಿಸ್ಟರು ಭಾರಿ ವಿರೋಧ ಪ್ರದರ್ಶನ ಮಾಡಲು ಏರ್ಪಾಡು ಮಾಡುತ್ತಿದ್ದಾರೆ. ಮೊನ್ನೆ ಅವರ ಮೇಲೆ ಲಾಠಿ ಪ್ರಯೋಗ ನಡೆಸಲಾಯಿತು. ತಮ್ಮ ಬೇಡಿಕೆಗಳನ್ನು ಅಂಗೀಕರಿಸುವವರೆಗೆ ಮತ್ತು ಪತ್ತಿಗಿರಿಯಾಗಿ ಉಪವಾಸ ಮುಷ್ಕರ ನಡೆಸುತ್ತಿರುವ ಕಮ್ಯೂನಿಸ್ಟರನ್ನು ಬಿಡುಗಡೆ ಮಾಡುವವರೆಗೆ ತಾವು ವಾಪಸಾಗುವುದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಸೆಕ್ರೆಟೇರಿಯಟ್ಟನ್ನು ಸಹಸ್ರ ಮಂದಿ ಪೋಲೀಸರೂ, ಸೈನಿಕರು ರಕ್ಷಿಸುತ್ತಿದ್ದಾರೆ.

ಸಂಧಾನ ಸಮಿತಿ ವಿಸ್ತರಣೆ

ಸಂಸ್ಥಾನಗಳ ಸಂಧಾನ ಸಮಿತಿಯನ್ನು ದೊಡ್ಡದು ಮಾಡಬೇಕೆಂದು ನರೇಂದ್ರ ಮಂಡಲಿಯವರು ನಿರ್ಧರಿಸಿದ್ದಾರೆ. ಸರ್ ವಿ. ಟಿ. ಕೃಷ್ಣಮಾಚಾರಿ, ಸರ್ ಬಿ. ಎಲ್. ಮಿತ್ತರ್ ಮತ್ತು ರಾಮಚಂದ್ರಕಾಕ್ ರವರನ್ನು ಅದಕ್ಕೆ ಹೊಸದಾಗಿ ಸೇರಿಸಿಕೊಳ್ಳಲಾಗುವುದು.

ಬಿ. ಎಸ್. ಪುಟ್ಟಸ್ವಾಮಿಯವರು ಸುಧಾರಣಾಧಿಕಾರಿಗಳು

ಸ್ವಂ. ವು. ವ್ಯ.] ಬೆಂಗಳೂರು ೨೧

ಶ್ರೀಮನ್ಮಹಾರಾಜರವರ ಸಂದೇಶದಂತೆ ಸಂಸ್ಥಾನದಲ್ಲಿ ಸುಧಾರಣೆಯೊಂದನ್ನು ಜಾರಿಗೆ ತರಲು ಅಗತ್ಯವಾದ ಸಲಹೆಗಳನ್ನು ಮಂಡಿಸುವ ವಿಚಾರದಲ್ಲಿ ಸರ್ಕಾರದವರು ಪಬ್ಲಿಕ್ ಸರ್ವಿಸ್ ಕಮೀಷನರಾದ ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರನ್ನು ಸುಧಾರಣಾ ಅಧಿಕಾರಿಗಳನ್ನಾಗಿ ನೇಮಿಸಿದ್ದಾರೆ. ಇವರು ದಿವಾನರ ಆಜ್ಞಾನುಸಾರವಾಗಿ ಕೆಲಸ ನೋಡತಕ್ಕದ್ದೆಂದು ಸೂಚಿಸಲಾಗಿದೆ.

ಚಿನ್ನದ ಗಣಿ ಮಾಲೀಕರಿಗೆ ಪರಿಹಾರ

ಚಿನ್ನದ ತೆರಿಗೆ ಸಮಿತಿಯವರು ನಿನ್ನೆ ಮಿ॥ ಟಿ. ಎಸ್. ಎನ್. ಹಂಫ್ರೆರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ೧೯೪೭ ನೇ ಅಕ್ಟೋಬರಿಗೆ ಅಂತ್ಯವಾಗುವ ಹಾಲು ವರ್ಷಕ್ಕೆ ೧೧,೭೫,೦೦೦ ರೂ. ಪರಿಹಾರವನ್ನು ಗಣಿ ಮಾಲೀಕರಿಗೆ ಕೊಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.

ಬಲದೇವಸಿಂಗರ ಆಗಮನ

ಕೇಂದ್ರ ಸರ್ಕಾರದ ರಕ್ಷಣಾ ಸಚಿವ ಸ॥ ಬಲದೇವಸಿಂಗರು ದಂಡ ನಾಯಕರಾದ ಆಕಿನ್ ಲೆಕ್ ರವರೊಡಗೂಡಿ ಇದೇ ೨೬ ನೇ ತಾ॥ ಬೆಂಗಳೂರಿಗೆ ಬರುವರೆಂದು ತಿಳಿದು ಬಂದಿದೆ.

* ದಿವಾನರು ತಮ್ಮ ಅಲ್ಪ ಕಾಲದ ರಜೆಗಳೊಡನೆ ನಿನ್ನೆ ದೆಹಲಿಗೆ ತೆರಳಿದರು. ಫೆಬ್ರವರಿ ೨ ನೇ ತಾ॥ ವಾಪಸು ಬರುವರು. ಅಲ್ಲಿನವರೆಗೆ ಡಾ॥ ರಾಮಸ್ವಾಮಿಯವರು ದಿವಾನರ ಅಧಿಕಾರವನ್ನೂ ನೋಡಿಕೊಳ್ಳುವರು.

* ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ದಿನ ಸಮಾವೇಶಗೊಂಡಿದೆ. ಸಭೆಯ ವಿಶೇಷ ಅಧಿವೇಶನವೊಂದು ಇದೇ ೨೫ ನೇ ತಾ॥ ಸೇರುವುದೆಂದು ಗೊತ್ತಾಗಿದೆ. ನಂತರ ಅಧ್ಯಕ್ಷ ರೆಡ್ಡಿ ಯವರು ಬೆಂಗಳೂರು ಜಿಲ್ಲಾ ಪ್ರವಾಸವನ್ನು ಮುಂದುವರಿಸುವರು. ಅವರು ಕೊಳ್ಳೇಗಾಲ ಮತ್ತು ಅನೇಕ ಮುಂತಾದ ಪ್ರದೇಶಗಳಿಗೂ ಭೇಟಿ ಕೊಡುವರೆಂದು ಗೊತ್ತಾಗಿದೆ.

* ಮಂತ್ರಿ ಮಂಡಲದ ಸಭೆ ನಿನ್ನೆಯೂ ನಡೆದು ಯುದ್ಧಾನಂತರ ಪುನರ್ರಚನೆಗೆ ಸಂಬಂಧಪಟ್ಟ ಹಲವು ಯೋಜನೆಗಳನ್ನು ಪರಿಶೀಲಿಸಿತು. ವ್ಯವಸಾಯ ಮತ್ತು ಪಶುವೈದ್ಯ ಶಾಖೆಗೆ ಸಂಬಂಧಪಟ್ಟ ೧ ಕೋಟಿ ರೂ. ಯೋಜನೆಯೊಂದನ್ನು ಅಂಗೀಕರಿಸಲಾಯಿತು.

ಕಲ್ಕತ್ತಾ ವಿದ್ಯಾರ್ಥಿಗಳ ಮೇಲೆ ಟಿಯರ್ ಗ್ಯಾಸ್ ಪ್ರಯೋಗ

ಅಖಿಲ ಭಾರತ ವಿದ್ಯಾರ್ಥಿ ಕಾಂಗ್ರೆಸ್ಸಿನ ತೀರ್ಮಾನದಂತೆ ಕಲ್ಕತ್ತ ವಿದ್ಯಾರ್ಥಿಗಳು ನಿನ್ನೆ ವಿಯಟ್ನಾಂ ದಿನಾಚರಣೆ ಪ್ರಯುಕ್ತ ಮೆರವಣಿಗೆ ನಡೆಸಿದರು. ಮೆರವಣಿಗೆ ಮತ್ತು ಸಭೆಗಳನ್ನು ನಡೆಸಕೂಡದೆಂದು ಹಾಕಿದ್ದ ಆಜ್ಞೆಯನ್ನು ವಿರೋಧಿಸಿ ಮೆರವಣಿಗೆ ನಡೆಸಿದ್ದರಿಂದ ಗುಂಪನ್ನು ಚದುರಿಸಲು ಪೋಲೀಸರು ಮೂರು ಬಾರಿ ಟಿಯರ್ ಗ್ಯಾಸ್ ಪ್ರಯೋಗಿಸಿದರು. ನಿನ್ನೆ ಮಧ್ಯಾಹ್ನದ ವರೆಗೆ ೬೦ ಮಂದಿ ವಿದ್ಯಾರ್ಥಿಗಳ ಬಂಧನವಾಗಿದೆ. ಇದಕ್ಕಿಂತ ಮುಂಚೆ ಮೆರವಣಿಗೆಯಲ್ಲಿದ್ದವರ ಮೇಲೆ ಪೋಲೀಸರು ಲಾಠಿ ಪ್ರಯೋಗ ನಡೆಸಿದರೆಂದೂ, ಇದರಿಂದ ೧೧ ಜನಕ್ಕೆ ಪೆಟ್ಟುಬಿದ್ದು ಗಾಯಗಳಾದುವೆಂದೂ, ಮೂವರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ. ವಿಶ್ವವಿದ್ಯಾನಿಲಯದ ದ್ವಾರಗಳನ್ನು ಪೋಲೀಸರು ಕಾಯುತ್ತಿದ್ದಾರೆ.

ಕೇರಳದಲ್ಲಿ ಕಾಂಗ್ರೆಸ್ ಮಹಾಧಿವೇಶನ

ಮುಂದಿನ ಕಾಂಗ್ರೆಸ್ ಮಹಾಧಿವೇಶನವು ಕೇರಳದಲ್ಲಿ ನಡೆಯುವುದೆಂದು ವರದಿಯಾಗಿದೆ. ಮಿಕ್ಕ ಪ್ರಾಂತಗಳ ಕಾಂಗ್ರೆಸ್ ಸಮಿತಿಯವರು ಕೇರಳದ ಪರವಾಗಿ ತಮ್ಮ ಆಹ್ವಾನಗಳನ್ನು ವಾಪಸ್ ತೆಗೆದುಕೊಂಡಿರುವರು.

ಶಾಂತಿ ಸ್ಥಾಪನೆಗಾಗಿ ವಿಯಟ್ನಾಂ ಅಧ್ಯಕ್ಷರ ಪ್ರಾರ್ಥನೆ

ಫ್ರಾನ್ಸಿನ ನೂತನ ಅಧ್ಯಕ್ಷರಾದ ಆರಿಯೋಲರವರನ್ನು ಅಭಿನಂದಿಸುತ್ತಾ, ಇಂಡೋಚೈನಾದಲ್ಲಿ ಕೂಡಲೇ ಶಾಂತಿ ಏರ್ಪಡಬೇಕೆಂದೂ, ವಿಯಟ್ನಾಂ-ಫ್ರಾನ್ಸ್ ಸಂಧಾನವು ಬೇಗನೆ ಆರಂಭವಾಗಬೇಕೆಂದು ವಿಯಟ್ನಾಂ ಅಧ್ಯಕ್ಷರಾದ ಡಾ॥ ಹೊ.ಚಿ.ಮಿನ್ ರವರು ಪ್ರಾರ್ಥನೆಯನ್ನು ಹೊರಡಿಸಿದ್ದಾರೆ. ಫ್ರೆಂಚ್ ಯೂನಿಯನ್ ಒಳಗೆ ಇಂಡೋಚೈನಾಕ್ಕೆ ಪೂರ್ಣ ಸ್ವಾತಂತ್ರ್ಯ ಬೇಕೆಂದು ಅವರು ಕೋರಿದ್ದಾರೆ.

ಶ್ರೀಮತಿ ಸಲಾಂ ರವರ ಉಪವಾಸ ನಿಂತಿತು

ಹಿಂದೂ-ಮುಸ್ಲಿಂ ಐಕ್ಯತೆಗಾಗಿ ಕಳೆದ ೨೫ ದಿನಗಳಿಂದ ಉಪವಾಸ ವ್ರತವನ್ನು ಆಚರಿಸುತ್ತಿದ್ದ ಶ್ರೀಮತಿ ಸಲಾಂರವರು ನೋವಾಖಾಲಿ ತಮ್ಮ ಉಪವಾಸವನ್ನು ಮುಕ್ತಾಯಗೊಳಿಸಿ, ಮಹಾತ್ಮ ಗಾಂಧಿಯವರು ಕೊಟ್ಟ ಕಿತ್ತಳೆಹಣ್ಣಿನ ರಸವನ್ನು ಸೇವಿಸಿದರೆಂದು ವರದಿ ಬಂದಿದೆ.

ರೈಲ್ವೆ ದರ ಹೆಚ್ಚುವ ಸಂಭವವಿಲ್ಲ

ಮೂರನೇ ತರಗತಿ ಪ್ರಯಾಣಿಕರಿಗೆ ಹೆಚ್ಚು ಸೌಕರ್ಯಗಳನ್ನು ಕಲ್ಪಿಸುವುದು ಮತ್ತು ರೈಲ್ವೇ ದರವನ್ನು ಹೆಚ್ಚಿಸದಿರುವುದು ಇವೇ ಮುಂದಿನ ರೈಲ್ವೇ ಬಜೆಟ್ಟಿನಲ್ಲಿ ಪ್ರಧಾನ ಅಂಶಗಳಾಗಿ ಕಂಡುಬಂದಿವೆ. ವರಮಾನ ೨೦೪ ಕೋಟಿ ರೂಪಾಯಿಗಳು ಬರುವುದೆಂದು ಅಂದಾಜು ಮಾಡಲಾಗಿದೆ.

ವೇಶ್ಯೆಯರ ಪ್ರತಿಬಂಧಕ

ಮದ್ರಾಸ್ ಪ್ರಾಂತ್ಯದಲ್ಲಿ ವೇಶ್ಯೆಯರ ಕಾಟವನ್ನು ತಪ್ಪಿಸಲು ಶ್ರೀಮತಿ ಮುಮ್ಮಲಕ್ಷ್ಮಮ್ಮ ಎಂಬ ಶಾಸನ ಸಭಾ ಸದಸ್ಯರು ಸಭೆಯ ಮುಂದಿನ ಅಧಿವೇಶನದಲ್ಲಿ ಖಾಸಗಿ ಮಸೂದೆಯೊಂದನ್ನು ಮಂಡಿಸಲು ಸೂಚನೆ ಕೊಟ್ಟಿದ್ದಾರೆ.

ಸಾಧ್ವಿ

ತಾ|| ೨೨-೧-೪೭ ಬುಧವಾರ

ವಿದ್ಯಾರ್ಥಿಗಳೂ, ರಾಜಕೀಯವೂ

ರಾಜಕೀಯ ವಿಷಯಗಳಲ್ಲಿ ವಿದ್ಯಾರ್ಥಿಗಳು ಪ್ರವರ್ತಿಸಲೇ ಕೂಡದೆಂದು ಹೇಳುವ ಕಾಲವೊಂದಿತ್ತು. ಈಚೆಗೆ ಅದು ಬದಲಾಯಿಸಿ ರಾಜಕೀಯ ವಿಚಾರ ವಿಮರ್ಶೆಯಲ್ಲಿ ವಿದ್ಯಾರ್ಥಿಗಳು ತೊಡಗಬಹುದೆಂದೂ, ಆದರೆ ರಾಜಕೀಯ ಚಳುವಳಿಯಲ್ಲಿ ಮಾತ್ರ ಭಾಗ ವಹಿಸಬಾರದೆಂದೂ ಹೇಳಲು ಉಪಕ್ರಮವಾಗಿದೆ. ಆದರೆ ಯಾವುದು ರಾಜಕೀಯ, ಯಾವುದು ಅಲ್ಲ ಎಂಬುದನ್ನು ನಿರ್ಧರಿಸುವುದು ಕಷ್ಟಸಾಧ್ಯವಾದ ವಿಷಯ.

ತಮಗೆ ಬೇಡದ ವಿಷಯಗಳೆಲ್ಲಾ ರಾಜಕೀಯವೆಂದು ಹೇಳಿ ಅವುಗಳನ್ನು ಪ್ರತಿಬಂಧಿಸುವುದು ನಿರಂಕುಶ ಆಡಳಿತಗಾರರ ಪದ್ಧತಿಯಾಗಿದೆ. ವಿದ್ಯಾರ್ಥಿಗಳು ತಮ್ಮ ಹಿತಸಾಧನೆಗಾಗಿ ಸಮ್ಮೇಳನವನ್ನು ನಡೆಸಿಕೊಂಡರೆ ಅದನ್ನೂ ಸಹ ರಾಜಕೀಯವೆಂದು ಕರೆದು ಅದನ್ನು ತಿರುವಾಂಕೂರಿನ ಸರಕಾರದವರು ಪ್ರತಿಬಂಧಿಸಿದ್ದಾರೆ. ಮತ್ತು ಸಮ್ಮೇಳನದ ಅಧ್ಯಕ್ಷರನ್ನೂ, ಇತರ ಕೆಲವು ನಾಯಕರನ್ನೂ ಬಂಧನದಲ್ಲಿಟ್ಟಿರುತ್ತಾರೆ ಇದು ವಿದ್ಯಾರ್ಥಿಗಳ ಸಹಜವಾದ ಕಾರ್ಯಕ್ರಮಗಳಿಗೆ ಧಕ್ಕೆಯನ್ನುಂಟುಮಾಡಿರುತ್ತದೆ. ಸಮ್ಮೇಳನಾಧ್ಯಕ್ಷರಾದ ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನದ ಅಧ್ಯಕ್ಷರನ್ನು ತಿರುವಾಂಕೂರು ಸರ್ಕಾರದವರು ದಸ್ತಗಿರಿ ಮಾಡಿರುವುದರಿಂದ ಈ ಬಗ್ಗೆ ಅಸಮಾಧಾನವು ಇಡೀ ಹಿಂದೂಸ್ಥಾನದಲ್ಲೆಲ್ಲಾ ಹರಡಿ ಎಲ್ಲೆಲ್ಲೂ ಪ್ರತಿಭಟನೆಗಳು ಆಗುತ್ತಿವೆ. ತಿರುವಾಂಕೂರಿನಲ್ಲಿ ನಾಗರಿಕ ಹಕ್ಕುಗಳಿಗೆ ಉಂಟಾಗಿರುವ ಅಪ್ಪಿಯನ್ನು ಪ್ರತಿಭಟಿಸಲು ಮುಂದಿನ ತಿಂಗಳಿಂದ ಅಲ್ಲಿ ದೊಡ್ಡ ಆಂದೋಳನವೇ ಏಳುವಂತಿದೆ. ಈ ಸಮಯದಲ್ಲಿ ತಿರುವಾಂಕೂರಿನವರು ಇಷ್ಟಕ್ಕೆಲ್ಲಾ ಅವಕಾಶ ಕೊಟ್ಟಿರುವುದು ವಿಷಾದಕರ

ತಮ್ಮ ಶಾಲಾ ಆವರಣಗಳಲ್ಲಿ ವಿದ್ಯಾರ್ಥಿಗಳು ಯಾವ ಬಗೆಯ ರಾಜಕೀಯವನ್ನು ಬೇಕಾದರೂ ಚರ್ಚಿಸಿಕೊಳ್ಳಬಹುದೆಂದು ಸರ್ ಸಿ. ಪಿ. ರಾಮಸ್ವಾಮಿ ಐಯ್ಯರ್‌ರವರು ಹೇಳಿರುವರು. ಅದೇ ವಿಷಯಗಳನ್ನೇ ವಿದ್ಯಾರ್ಥಿಗಳು ಬೇರೆ ಒಂದು ಸ್ಥಳದಲ್ಲಿ, ಪ್ರತ್ಯೇಕವಾದ ವಾತಾವರಣದಲ್ಲಿ ವಿಮರ್ಶಿಸಿದರೆ ಆಗುವ ನಷ್ಟವೇನೋ ಗೊತ್ತಾಗುವುದಿಲ್ಲ. ವಿದ್ಯಾರ್ಥಿ ಸಮ್ಮೇಳನಗಳಲ್ಲಿ ಕೇವಲ ರಾಜಕೀಯ ವಿಚಾರಗಳು ಮಾತ್ರ ಬರುತ್ತವೆಂದು ಅಧಿಕಾರಿಗಳು ಭಾವಿಸುವುದೂ ಒಂದು ಭ್ರಾಂತಿಯಾಗಿದೆ. ಶಾಲಾ ಶುಲ್ಕ, ಪಾಠಕ್ರಮ, ಪಠ್ಯ ಪುಸ್ತಕಗಳು, ಪರೀಕ್ಷಾ ವಿಧಾನ, ಅಶನವಸನ ಸೌಲಭ್ಯ-ಇವೇ ಮುಂತಾದ ಹಲವಾರು ಪ್ರಶ್ನೆಗಳೂ ಅಲ್ಲಿ ಚರ್ಚೆಗೆ ಬರುತ್ತವೆ. ಎಲ್ಲವೂ ರಾಜಕೀಯವೆಂದೇ ಭಾವಿಸುವುದು ಸರಿಯಲ್ಲ.

ದೇಶಾಭಿಮಾನವೇ ಒಂದು ರಾಜಕೀಯ ಚಳುವಳಿಯೆಂದು ಹೇಳಿ ಅದನ್ನು ತಡೆಗಟ್ಟುವ ಪ್ರಯತ್ನಗಳನ್ನು ಅನೇಕ ಸರಕಾರಗಳು ಮಾಡಿರುತ್ತವೆ. ಗಾಂಧಿ ಟೋಪಿಯನ್ನೂ ಖಾದಿ ಬಟ್ಟೆಯನ್ನೂ ಪ್ರತಿಬಂಧಿಸುತ್ತಿದ್ದ ಕಾಲವೂ ಇತ್ತು. ಗಾಂಧಿ-ನೆಹರೂ ಮುಂತಾದವರ ಹೆಸರುಗಳನ್ನು ಹೇ

ಉಪನಿಷತ್ಸಾರ ಮತ್ತು ವೇದಸಾರ ಶಿವಸ್ತೋತ್ರ

ನಂಜನಗೂಡು ಶ್ರೀ ಶ್ರೀಕಂಠೇಶ್ವರಾದ್ವೈತ ಸಭೆಯವರು ತಮ್ಮ ಉದ್ದೇಶಗಳಲ್ಲೊಂದಾದ ಗ್ರಂಥ ಪ್ರಕಟನೆಯನ್ನು ಅನುಸರಿಸಿ ಮೇಲ್ಕಂಡ ನಾಮಾಂಕಿತದ ಅದ್ವೈತ ಗ್ರಂಥ ಮಾಲೆಯನ್ನು ಪ್ರಕಟಿಸಿದ್ದಾರೆ. ಪಾರ್ಥಿವ ಸಂವತ್ಸರದ ವಾರ್ಷಿಕೋತ್ಸವದಲ್ಲಿ ಅ|| ಮಹಾ ವಿದ್ವಾನ್ ವೇ|| ಪಾಲಘಾಟ್ ನಾರಾಯಣ ಶಾಸ್ತ್ರಿಗಳು ಮಾಡಿದ ಭಾಷಣವೇ ಉಪನಿಷತ್ಸಾರವೆಂಬ ಭಾಗವಾಗಿದೆ. ಎರಡನೆಯದಾದ ವೇದಸಾರ ಶಿವಸ್ತೋತ್ರವೆಂಬ ಶ್ರೀಮಚ್ಛಂಕರಾಚಾರ್ಯ ಕೃತ ಶ್ಲೋಕಗಳಿಗೆ ಅ|| ಮಹಾ ವಿದ್ವಾನ್ ವೇದರತ್ನಂ ನವೀನಂ ವೆಂಕಟೇಶ ಶಾಸ್ತ್ರಿಗಳು ತಾತ್ಪರ್ಯವನ್ನು ಬರೆದಿದ್ದಾರೆ ಪುಸ್ತಕದ ಬೆಲೆ ಕೇವಲ ೧೦ ಆಣೆ. ಈ ಗ್ರಂಥದ ಪ್ರತಿಯೊಂದನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ.

೩ ವರ್ಷದಿಂದ ಒಂದೇ ಚಿತ್ರ

ಕಲ್ಕತ್ತ ನಗರದ 'ರಾಕ್ಸಿ' ಚಿತ್ರ ಮಂದಿರದಲ್ಲಿ ಬೊಂಬಾಯಿ ಟಾಕೀಸಿನವರ 'ಕಿಸ್ಮತ್' ಎಂಬ ಚಿತ್ರವು ೧೯೪೩ ನೇ ಸೆಪ್ಟೆಂಬರ್ ತಿಂಗಳಿನಿಂದ ಇನ್ನೂ ನಡೆಯುತ್ತಿದೆ ೪೦ ತಿಂಗಳಿಂದ ಏಕಪ್ರಕಾರವಾಗಿ ನಡೆದು ಇದುವರೆಗಿನ ರಿಕಾರ್ಡುಗಳನ್ನೆಲ್ಲಾ ಇದು ಮೀರಿಸಿದೆ.

ಳುವುದು ಮಹಾಪರಾಧವಾಗಿತ್ತು. ವಂದೇ ಮಾತರಂ ಗೀತೆಯನ್ನು ಹಾಡುವುದಕ್ಕೆ ಇನ್ನೂ ಅಡಚಣೆಗಳಿದ್ದೇ ಇವೆ. ಇವನ್ನೆಲ್ಲಾ ರಾಜಕೀಯವೆಂದು ಹೇಳಿದರೆ ಯಾರೂ ಅಂಗೀಕರಿಸುವುದಿಲ್ಲ. ಇವುಗಳನ್ನು ತಡೆಗಟ್ಟುವುದು ಸಾಧ್ಯವೂ ಅಲ್ಲ

ವಿದ್ಯಾರ್ಥಿಗಳು ಸ್ವಾಭಾವಿಕವಾಗಿ ಉತ್ಸಾಹ ಶಾಲಿಗಳು ಸ್ಫೂರ್ತಿಯಿಂದ ಮುಂದುವರೆಯುವವರು. ದೇಶಾಭಿಮಾನದ ಉದ್ರೇಕದಿಂದ ಅವರು ಮುನ್ನುಗ್ಗುವವರು. ಅವರ ಉತ್ಸಾಹವು ಸರಿಯಾದ ದಾರಿಯಲ್ಲಿ ಪ್ರವಹಿಸುವಂತೆ ಮಾಡುವುದು ಹಿರಿಯರ ಕರ್ತವ್ಯ. ಅದು ಬಿಟ್ಟು ಇಲ್ಲದ ಅಡ್ಡಿಗಳನ್ನು ಒಡ್ಡಿದರೆ ಅದೇ ಒಂದು ದೊಡ್ಡ ಘರ್ಷಣೆಗೆ ಕಾರಣವಾಗುವುದು. ತಿರುವಾಂಕೂರಿನಲ್ಲಿ ಇಂತಹ ಪರಿಸ್ಥಿತಿಯು ಈಗ ಉದ್ಭವಿಸಿರುತ್ತದೆ ಅಲ್ಲಿನ ಸುಸಂಸ್ಕೃತರಾದ ಅರಸರೂ ಮತ್ತು ಬುದ್ಧಿ ಶಾಲಿಗಳಾದ ದಿವಾನರೂ ಮುಂದಾಲೋಚನೆಯಿಂದ ಪ್ರವರ್ತಿಸಿ ವಿದ್ಯಾರ್ಥಿಗಳ ಕಾರ್ಯ ಚಟುವಟಿಕೆಗೆ ಇರುವ ಅಡಚಣೆಯನ್ನು ನಿವಾರಿಸಿ ಈ ಪ್ರಕರಣವು ಸಮಾಧಾನಕರವಾಗಿ ಪರ್ಯವಸಾನಗೊಳ್ಳುವಂತೆ ಮಾಡುವುದು ವಿಹಿತವಾಗಿದೆ.

Edited, printed and published by A. R. Nagarajan at the Sadhvi Press D Subbiah Road, Mysore.

೮೦೦ ವರ್ಷಗಳ ಹೆಬ್ಬಾವು

ಯುದ್ಧ ಸಾಮಗ್ರಿಗಳನ್ನು ಕೊಂಡೊಯ್ಯುತ್ತಿದ್ದ ಟ್ರಾಕೊಂದು ಬರ್ಮಾ ರಸ್ತೆಯಲ್ಲಿ ಅಡ್ಡಲಾಗಿ ಮಲಗಿದ್ದ ಭಾರಿ ಹೆಬ್ಬಾವೊಂದನ್ನು ಕಂಡು ಹಿಡಿದು ಕೊಂದ ಕಥೆಯೊಂದು ಹೊರಬಿದ್ದಿದೆ. ಸಾಮಗ್ರಿಗಳನ್ನು ಕೊಂಡೊಯ್ಯುತ್ತಿದ್ದ ಲಾರಿಯೊಂದು ರಸ್ತೆಯಲ್ಲಿ ಹೋಗುತ್ತಿದ್ದಾಗ ಅದರ ಮೇಲೆ ಹತ್ತಿದುದರ ಪರಿಣಾಮವಾಗಿ ಕುಕ್ಕರಿಸಿ ನಿಂತಿತು ಕಾರಣವನ್ನು ಹುಡುಕಲು ಹೊರಟಾಗ ಭಾರಿ ಹೆಬ್ಬಾವೊಂದು ಅಡ್ಡಲಾಗಿ ಮಲಗಿದ್ದುದು ಕಂಡು ಬಂದಿತು ಅದು ಪೂರ್ಣ ಮತ್ತಿನಲ್ಲಿದ್ದು ಅದರ ತಲೆ ಬಾಲಗಳೆಲ್ಲಿರುವುದೆಂಬುದೇ ಗೊತ್ತಾಗಲಿಲ್ಲ ನಂತರ ಅದರ ಮೇಲೆ ಪೂರ್ಣ ವೇಗದಿಂದ ೧೭ ಟನ್ ತೂಕದ ಟ್ರಾಕೊಂದನ್ನು ಓಡಿಸಲಾಯಿತು. ಇದರಿಂದ ಅದು ಸ್ವಲ್ಪ ಅಲುಗಾಡಿ ಪುನಃ ಹಾಗೆಯೇ ಮಲಗಿತು ಕುತೂಹಲಗೊಂಡ ಕೆಲವು ಜನ ಅಮೆರಿಕ ಯೋಧರು ಅದರ ಉದ್ದಕ್ಕೂ ಹೋಗಿ ಅದರ ತಲೆಯನ್ನು ಕಂಡು ಹಿಡಿಯಲು ಪ್ರಯತ್ನಪಟ್ಟರು. ಕೆಲವು ನೂರು ಹೆಜ್ಜೆಗಳು ಮುಂದೆ ಹೋದಾಗ ಕಾಡಿನ ಮಧ್ಯದಲ್ಲಿ ದೊಡ್ಡ ಬಂಡೆಯ ಮೇಲಿದ್ದ ಅದರ ತಲೆ ಗೋಚರವಾಯಿತು. ಕಾರ್ಟಿಂಗ್‌ಸ್ ಎಂಬ ಅಮೆರಿಕ ಯೋಧನು ಮರದ ಮೇಲೆ ಹತ್ತಿ ತನ್ನಲ್ಲಿದ್ದ ಬಂದೂಕಿನಿಂದ ಅದನ್ನು ಹೊಡೆದನು ಆ ಶಬ್ದದಿಂದ ಎಚ್ಚರಗೊಂಡ ಹಾವು ದೊಡ್ಡದಾಗಿ ಬಾಯನ್ನು ಬಿಟ್ಟಿತು. ಅದರ ಬಾಯಿಯು ಈ ಯುವಕನ ತೀರ ಸಮೀಪಕ್ಕೆ ಬಂದಿತು, ಆಗ ಅವನು ಗಾಬರಿಗೊಂಡು ಮರದಿಂದ ಅದರೊಳಕ್ಕೇ ಬಿದ್ದು ಸತ್ತು ಹೋದನು. ಈ ಹಾವಿನಿಂದ ಒದಗಬಹುದಾದ ತೊಂದರೆಗಳನ್ನು ಪರಿಹರಿಸುವ ಸಲುವಾಗಿ ಅಧಿಕಾರಿಗಳು ಅದನ್ನು ಕೊಲ್ಲಲು ಅಪ್ಪಣೆ ಮಾಡಿದರು ಅದರ ವಧೆಗೆ ೧೦ ಬಾಂಬುಗಳನ್ನು ಉಪಯೋಗಿಸಲಾಯಿತು. ನಂತರ ಅದರ ಚರ್ಮವನ್ನು ಕೊಯ್ದಾಗ ಅದರ ಶರೀರದೊಳಗೆ ೧೦ ಶಿರಸ್ತ್ರಾಣಗಳು, ರೈಫಲ್ಲುಗಳು ಮತ್ತು ಗುಂಡುಗಳು ಕಂಡು ಬಂದವು. ಇದು ೮೦೦ ವರ್ಷಗಳಿಂದ ಬದುಕಿರುವ ಹಾವೆಂದು ಪ್ರಾಣಿ ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ರಾಜಕಮಲ್, ಮೈಸೂರು

22-1-47 ರಿಂದ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

— ಪ್ರತಿಜ್ಞಾ —

-: ಭೂಮಿಕೆ :-

ಸ್ವರ್ಣಲತಾ, ಸುನೇತ್ರ, ಮೀನಾಕುಮಾರಿ

ಬೇಬಿ ಮೀನಾ, ಬುಡೊ ಅದ್ವಾನಿ

ನರಸಿಂಹಾಚಾರ್ಯ ಸ್ನಾ[ನ] ಸಮಿತಿಗೆ ಸಹಾಯ

ಮೈಸೂರು ಮಹಾಜನ ಸಭೆಯ ... ಯದಲ್ಲಿ ನಿರ್ಮಿತವಾದ ಜ್ಯೋತಿಷ ಮ... ವಿದ್ವಾನ್ ಟಿ. ಪಿ. ನರಸಿಂಹಾಚಾರ್ಯ... ಸ್ನಾನ ಸಮಿತಿಗೆ ಈ ಮುಂದೆ ಕಂಡ ಮ... ನೀಯರು ಉದಾರವಾಗಿ ಸಹಾಯ ಮಾ... ರುವುದಕ್ಕಾಗಿ ಕಾರ್ಯದರ್ಶಿಗಳಾದ ... ಜಿ ಆರ್. ರಾಮಯ್ಯನವರು ಅವರ... ವಂದಿಸಿದ್ದಾರೆ

ಶ್ರೀಗಳಾದ ಸಂಗೀತ ರತ್ನ ಟಿ. ಚೌ... ಯ್ಯ, ರೈಸ್ ಮಿಲ್ ಪುಟ್ಟಸ್ವಾಮಯ... ತಲಾ ೧೦೧ ರೂ. ಲಟ್ಟೆಹಳ್ಳಿ ರಾಮ... ೫೧ ರೂ. ಜಿ ಆರ್. ಜೋಷ್ಯರ್, ನಾರಾಯಣ, ಎಂ ಸಿ ಮಹದೇವಪ್ಪ... ವಿ. ಗುರಪ್ಪ, ರಾಮರಾಜಪ್ಪ, ತಲಾ ... ರೂ. ದಿ|| ಅಪ್ಪಾಶೆಟ್ಟರ ಕುಟುಂಬ ... ವ್ವ, ೨೦ ರೂ. ಎಫ್. ಸಿ ದೇವರ... ಅರಸ್, ೧೫ ರೂ. ಬಾಗೂರ್ ಜೋ... ದಾರ್ ಆರ್. ಎಸ್. ನರಸಿಂಹಾಚಾ... ಕರಡಿಂ ಲಕ್ಷ್ಮೀನಾರಾಯಣ ಶೆಟ್ಟರು, ... ಬಿ. ಕೋಠೀ ಶಾಮಯ್ಯ, ಪರಶುರಾಜ... ಸಾ|| ತಿಬ್ಬಣ್ಣನವರು ತಲಾ ೧೦ ರೂ; ... ಮಾರ್ಥಿಕಾರಿ ಜ್ಯೋ|| ಕರೂರು ಶೇಷಾ... ರ್, ನರಸಿಂಹಮೂರ್ತಿ, ಎಂ. ಎಸ್ ... ಕೃಷ್ಣಯ್ಯನವರು, ತಲಾ ೫ ರೂ. ವ... ತೊಕ್ಕಣ್ಣಯ್ಯಂಗಾರ್ ೧ ರೂ.

ಗ್ರೀಸ್ ಬಳಿ ಹಡಗು ಮುಳು[ಗಿ] ೪೦೦ ಮಂದಿ ಸತ್ತರು.

ಗ್ರೀಸಿನ ಸಮುದ್ರ ತೀರದಲ್ಲಿ ಹಡ[ಗೊಂ]ದು ಮುಳುಗಿ ಒಳಗಿದ್ದ ೪೦೦ ಮಂದಿ ಯಾತ್ರಿಕರು ಮುಳುಗಿ ಹೋದರು. ... ನು ತಗಲಿದ್ದೆ ಹಡಗು ಮುಳುಗಲು ... ಬವಾಯಿತೆಂದು ಹೇಳಲಾಗಿದೆ. ಗಂ... ತರದಿಂದ ಪಾರಾಗಿ ಬಂದವರು ಕೇವಲ ... ಮಂದಿ ಮಾತ್ರ.

ಸಾಧ್ವಿ

ಕೂಡಲೇ ಚಂದಾದಾರರಾಗಿರಿ

ಮಕ್ಕಳ ತೊಟ್ಟಿಲಿಗೆ ಹಾಸುವ ರಬ್ಬರ್ ಷೀಟುಗಳು ಬಂದಿ[ವೆ] ಬಾಹುಸಾರ್ ಟ್ರೇಡಿಂಗ್ ಕಂಪೆನಿ ಓಲ್ಡ್ ಮೈಸೂರು ಬ್ಯಾಂಕ್ ರೋಡು, ಮೈಸೂರು.

ಆರ್. ಎಸ್. ಪಂಡಿತರ

ನಾಯಿಕೆಮ್ಮಿನ ಔಷಧಿ

7—8 ದಿವಸಗಳಲ್ಲೇ ಖಾತರಿಯ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರ್ಲು—ಉಬ್ಬಸಕ್ಕೆ (Asthma)

ಖಾತರಿಯಾದ ಔಷಧಿ ದೊರೆಯ... ಅನೇಕ ದೊಡ್ಡ ಮನುಷ್ಯರು ಬಂಗಾ[ರ]ದ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊ[ಟ್ಟಿ]ದ್ದಾರೆ.

(Appendecitis) ಗೆ ಅಲ್ಸರ ಮತ್ತು (Tonsils) ಗಳಾಯಿಲೆ ಅವ... ಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸು... ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್. ಎಸ್. ಪಂಡಿತ ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂ[ರು]

ಹೊಸ ನಮೂನೆಯ

ಬನಾರಸ್ ಜಾರ್ಜೆಟ್ ಸೀರೆಗಳು, ಮೈಸೂರು, ಸಿಲ್ಕು ಟಿಷ್ಯೂ ಸೀರೆಗಳು, ಬೆಂಗಾಲ್ ಸಿಲ್ಕು ಸೀರೆಗಳು ಮತ್ತು ಕೊಯಮತ್ತೂರು ಮಧುರೆ ಸೀರೆಗಳು

ಬೇಕಾದಷ್ಟು ಸಿದ್ಧವಾಗಿವೆ.

ಇಂದೇ ಭೇಟಿ ಕೊಡಿರಿ

ಬಿ. ಕೆಂಚಪ್ಪ ಸನ್ಸ್,

ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು.

ರಿಜಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ.೫] ಗುರುವಾರ ೨೩—೧—೪೭ [ಸಂಚಿಕೆ ೧೪೨

ಹನುಮಂತಯ್ಯನವರಿಗೆ ೧೫ ತಿಂಗಳ ಕಠಿಣ ಶಿಕ್ಷೆ

ಹನುಮಂತಯ್ಯನವರಿಗೆ ಕಠಿಣ ಶಿಕ್ಷೆ

ಸ್ವಂ. ಸು ಪ್ರೋ॥] ಬೆಂಗಳೂರು ೨೨

ರಾಜದ್ರೋಹದ ಆಪಾದನೆಗೆ ಗುರಿಯಾಗಿರುವ ಕಾಂಗ್ರೆಸ್ ನಾಯಕರಾದ ಶ್ರೀ ಕೆ ಹನುಮಂತಯ್ಯನವರಿಗೆ ಅಡೀಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಕೆ. ಟಿ ರಾಮನಾಥಯ್ಯನವರು ಈ ದಿನ ೧೫ ತಿಂಗಳ ಕಠಿಣ ಸಜ ಮತ್ತು ೫೦೦ ರೂ ಜುಲ್ಮಾನೆಯನ್ನು ವಿಧಿಸಿ ತೀರ್ಪಿತ್ತರು. ಜುಲ್ಮಾನೆ ಕೊಡಲು ತಪ್ಪಿದರೆ ಮತ್ತೆ ೩ ತಿಂಗಳ ಸಜಾ ಅನುಭವಿಸಬೇಕೆಂದು ಆಜ್ಞೆ ಮಾಡಿರುವರು

ವಿದ್ಯಾರ್ಥಿ ಮುಷ್ಕರ

ವಿಯಟ್‌ನಾಮ್ ದಿನಾಚರಣೆ ಸಂಬಂಧದಲ್ಲಿ ಕಲ್ಕತ್ತಾ ಪೋಲೀಸರು ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿ ಲಾಠಿ ಮತ್ತು ಟಿಯರ್ ಗ್ಯಾಸ್ ಪ್ರಯೋಗ ಮಾಡಿದುದನ್ನು ಪ್ರತಿಭಟಿಸಲು ಬೆಂಗಳೂರು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಈ ದಿನ ಮುಷ್ಕರ ಹೂಡಿ ಮೆರವಣಿಗೆ ನಡೆಸಿದರು.

ಮದ್ರಾಸಿನ ನ್ಯಾಯಾಂಗ ಮಂತ್ರಿ ಶ್ರೀ ಕೆ. ಭಾಷ್ಯಂ ವರು ಇಲ್ಲಿನ ವಿಶ್ವವಿದ್ಯಾಲಯ ಸಂಘದ ಆರಂಭ ಭಾಷಣವನ್ನು ನಿನ್ನೆ ಮಾಡಿ ವಿದ್ಯಾರ್ಥಿಗಳು ಪಾಠ ಪ್ರವಚನಗಳನ್ನು ಚೆನ್ನಾಗಿ ಅಭ್ಯಾಸ ಮಾಡಿ ಬುದ್ಧಿ ಶಕ್ತಿಯನ್ನು ಬೆಳೆಸಿ ಮುಂದೆ ದೇಶ ಸೇವೆಗೆ ಸಿದ್ಧರಾಗುವಂತೆ ಮಾಡಿಕೊಳ್ಳಬೇಕೆಂದು ತಿಳಿಸಿದರು. ನಮ್ಮ ನ್ಯಾಯಾಂಗ ಮಂತ್ರಿಗಳಾದ ಡಾ॥ ಒ. ಎಸ್. ಎನ್. ಸೇಟ್ ರವರು ಅಧ್ಯಕ್ಷರಾಗಿದ್ದರು

ಇಂಡೋ-ಚೀನಾ ಕದನ

ಹನಾಯ್ ಬಳಿ ವಿಯಟ್‌ನಾಂ ಪಡೆಗಳ ಅಧೀನದಲ್ಲಿರುವ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಫ್ರೆಂಚರು ಮೂರು ದಿಕ್ಕುಗಳಿಂದ ಮುನ್ನುಗ್ಗುತ್ತಿದ್ದಾರೆ. ಹನಾಯ್ ಸುತ್ತ ಇರುವ ರಸ್ತೆಗಳನ್ನೆಲ್ಲಾ ಫ್ರೆಂಚರು ಆಕ್ರಮಿಸಿದ್ದಾರೆ. ಕೊಚಿನ್ ಚೀನಾದಲ್ಲಿನ ಸಂಚಾರ ಸೌಕರ್ಯಗಳನ್ನೆಲ್ಲಾ ವಿಯಟ್‌ನಾಂ ಗೆರಿಲ್ಲಾ ಪಡೆಗಳು ನಾಶ ಪಡಿಸುತ್ತಿವೆ. ಸದ್ಯದಲ್ಲೇ ಅನಾಮಿನ ಪ್ರಜಾ ಪ್ರತಿನಿಧಿಗಳೊಡನೆ ಸಂಧಾನವನ್ನಾರಂಭಿಸಲಾಗುವುದೆಂದೂ, ಫ್ರಾನ್ಸ್ ಮತ್ತು ಅನಾಮ್ ಯೂನಿಯನ್ನಿಗಾಗಿ ವ್ಯವಸ್ಥೆ ಮಾಡಲಾಗುವುದೆಂದೂ ಫ್ರಾನ್ಸಿನ ಪ್ರಧಾನಿ ಎ॥ ರಾಮಡಿಯರು ಹೇಳಿಕೆ ಇತ್ತಿದ್ದಾರೆ

ನಗರದ ಮಹಾ ಜನರಿಂದ ವಸೂಲಾದುದು ೧,೪೫೦ ರೂ. ಹೀಗೆ ಒಟ್ಟು ೨,೬೦೧ ರೂ.

ಕಲ್ಕತ್ತದಲ್ಲಿ ಗುಂಡಿನೇಟು

ಮೊನ್ನೆ ದಿನ ಕಲ್ಕತ್ತ ನಗರದಲ್ಲಿ ವಿದ್ಯಾರ್ಥಿಗಳು ವಿಯಟ್ನಾಂ ದಿನಾಚರಣೆ ಪ್ರಯುಕ್ತ ಮೆರವಣಿಗೆ ನಡೆಸಿ ವಿಶ್ವ ವಿದ್ಯಾಲಯದ ಆವರಣದ ಒಳಕ್ಕೆ ಪ್ರವೇಶಿಸುತ್ತಿದ್ದಾಗ ಅವರ ಮೇಲೆ ಪೋಲೀಸರು ಗುಂಡು ಹಾರಿಸಿದರೆಂದು ಗೊತ್ತಾಗಿದೆ. ಸಂಜೆಯವರೆಗೆ ೨೦೦ ಮಂದಿ ವಿದ್ಯಾರ್ಥಿಗಳಿಗೆ ಸಾವು ನೋವುಗಳಾಗಿರುವುದಾಗಿ ವರದಿಯಾಗಿದೆ. ೧೫ ವಿದ್ಯಾರ್ಥಿನಿಯರನ್ನೊಳಗೊಂಡು ೨೦೦ ಜನರ ದಸ್ತಗಿರಿಯಾಗಿದೆ

೩೦ ರೂ. ಸಂಬಳಕ್ಕಾಗಿ ಅಡಿಗೆಯವರ ಒತ್ತಾಯ

ಮದ್ರಾಸ್ ಪ್ರಾಂತ್ಯದ ವೈಷ್ಣವ ಅಡಿಗೆ ಬ್ರಾಹ್ಮಣರ ಸಮ್ಮೇಳನವು ಕುಂಭಕೋಣದಲ್ಲಿ ಕಳೆದ ಸೋಮವಾರ ಜರುಗಿ ದೇವಸ್ಥಾನಗಳು ಮತ್ತು ಖಾಸಗೀ ಮನೆಗಳಲ್ಲಿ ಕೆಲಸ ಮಾಡುವ ಅಡಿಗೆಯವರಿಗೆ ಪ್ರಾರಂಭ ಸಂಬಳವು ೩೦ ರೂ. ಗಳಿರಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಿದೆ

ಭಾರತದ ರಾಜತಾಂತ್ರಿಕರ ನೇಮಕ

ಸರ್ ಎಸ್ ರಾಧಾಕೃಷ್ಣನ್‌ರನ್ನು ಲಂಡನ್, ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ಮಾಸ್ಕೋ, ಶ್ರೀ॥ ಬಾಲಕೃಷ್ಣ ಕೇಸ್ಕರ್‌ರವರನ್ನು ಪ್ಯಾರಿಸ್ ರಾಯಭಾರಿಗಳನ್ನಾಗಿ ಭಾರತ ಸರ್ಕಾರವು ನೇಮಿಸಬಹುದೆಂದು ನ್ಯೂಯಾರ್ಕಿನಿಂದ ಸುದ್ದಿ ಹೊರಬಿದ್ದಿದೆ. ಸರ್ ಅಕ್ಬರ್ ಹೈದರಿಯವರನ್ನು ಲಂಡನ್ ಮತ್ತು ಸರ್ ಸಾಫತ್ ಅಹಮದ್‌ರನ್ನು ಕೆನಡಾ ಹೈಕಮಿಷನರನ್ನಾಗಿಯೂ ನೇಮಿಸಲಾಗುವುದೆಂದೂ ಊಹಿಸಲಾಗಿದೆ. ಶ್ರೀ॥ ಬಿ ಆರ್ ಸೇನ್ ರವರನ್ನು ವಾಷಿಂಗ್ಟನ್ನಿಗೆ ಮೊದಲನೇ ಕಾರ್ಯದರ್ಶಿಯನ್ನಾಗಿ ಕಳುಹಿಸಬಹುದೆಂದೂ ಹೇಳಲಾಗಿದೆ

ಸಾಂಗ್ಲಿಯಲ್ಲಿ ಜವಾಬ್ದಾರಿ ಸರ್ಕಾರದ ಆರಂಭ

ಹಿಕೆಮಯೇ ವಾಗ್ದಾನ ಮಾಡಿದ್ದಂತೆ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಿ, ಸಾಂಗ್ಲಿ ಮಹಾರಾಜರು ಅಲ್ಲಿನ ಹೊಸ ಶಾಸನ ಸಭೆಯ ಆರಂಭೋತ್ಸವವನ್ನು ಮೊನ್ನೆ ದಿನ ನೆರವೇರಿಸಿದರು. ಆ ಸಭೆಗೆ ಮಂತ್ರಿಮಂಡಲವು ಜವಾಬ್ದಾರಿಯುಳ್ಳದ್ದಾಗಿರುವುದೆಂದು ಅವರು ತಿಳಿಸಿದರು.

ನ್ಯುಟಿಟಿವ್ ಓಟಿನ ಪದ್ಧತಿಗೆ ಪ್ರತಿಭಟನೆ

ಮೈಸೂರು ೨೨

ಮೈಸೂರು ನಗರ ಕಾಂಗ್ರೆಸ್ ಸಮಿತಿ ಸಭೆಯು ಕಳೆದ ಸೋಮವಾರ ಶ್ರೀ॥ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ಸರ್ಕಾರದವರು ದೇಶದ ಪ್ರತಿಬಂಧಕಾಜ್ಞೆಗಳನ್ನು ಜಾರಿಗೆ ತಂದು ನಾಗರಿಕ ಹಕ್ಕು ಬಾಧ್ಯತೆಗಳಿಗೆ ಧಕ್ಕೆಯುಂಟುಮಾಡುತ್ತಿರುವುದನ್ನು ಖಂಡಿಸಿ, ಕೂಡಲೇ ಆ ಆಜ್ಞೆಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸಿತು. ಬೋರ್ಡ್ ಚುನಾವಣೆಯಲ್ಲಿ ಕ್ಯುಮುಲೆಟಿವ್ ಓಟಿನ ವಿಧಾನವನ್ನು ಜಾರಿಗೆ ತರುವುದನ್ನು ಖಂಡಿಸಿ, ಇದು ಐಕ್ಯತೆಯನ್ನು ಒಡೆಯಲು ಸರ್ಕಾರದವರು ಹೂಡಿರುವ ತಂತ್ರವೆಂದೂ, ರಾಜಕೀಯ ಪ್ರಗತಿಯನ್ನು ತಡೆಯಲು ಕೈಗೊಂಡಿರುವ ಸಂಚು, ಶ್ರೀಮನ್ಮಹಾರಾಜರವರು ಇತ್ತ ಸಂದೇಶವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಇದು ಅಡ್ಡಿಯಾಗಿದೆಯೆಂದೂ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಇನ್ನು ಮುಂದೆ ಯಾವ ನಗರದ ಕಾಂಗ್ರೆಸ್ ಸದಸ್ಯರೂ ಅನಧಿಕಾರಯುತವಾಗಿ "ಕಾಂಗ್ರೆಸ್ ಸದಸ್ಯರು" ಎಂಬ ಹೆಸರಿನಲ್ಲಿ ಸಭೆಯನ್ನು ಕರೆಯಬಾರದೆಂದೂ ನಿರ್ಣಯಿಸಿತು.

ಲೈಸನ್ಸ್ ರದ್ದು

ಮಂಡಿ ರಸ್ತೆಯಲ್ಲಿರುವ ಶ್ರೀ॥ ಎಂ. ನಾಗಣ್ಣನವರ ರೇಷನ್ ಅಂಗಡಿಯಿಂದ ವರಂ ಶೆಟ್ಟಿ ಎಂಬುವರಿಗೆ ಒಂದು ಮೂಟೆ ಅಕ್ಕಿಯನ್ನು ಅಧಿಕ ಲಾಭಕ್ಕಾಗಿ ಮಾರಲಾಗಿದೆಯೆಂದು ತಿಳಿದುಬಂದಮೇಲೆ ಪೋಲೀಸ್ ಅಧಿಕಾರಿಗಳು ಸದರಿ ಸಾಮಾನನ್ನು ವಶಪಡಿಸಿಕೊಂಡು, ಮೇಲ್ಕಂಡ ಅಂಗಡಿಯವರ ಲೈಸನ್ಸನ್ನು ಹಂಗಾಮಿಯಾಗಿ ರದ್ದು ಮಾಡಿ, ಮುಂದಿನ ತನಿಖೆ ಕ್ರಮವನ್ನು ನಡೆಸುತ್ತಿರುವರೆಂದು ತಿಳಿದುಬಂದಿದೆ.

ನೆಹರೂ ಸಂಘ

ನೆಹರೂ ಸಂಘದ ನಾಲ್ಕನೇ ವಾರ್ಷಿಕೋತ್ಸವವು ಕಳೆದ ಶನಿವಾರ ಡಿ ಬನುಮಯ್ಯನವರ ಶಾಲೆಯಲ್ಲಿ ನಡೆಯಿತು. ಮಹಾರಾಜಾ ಕಾಲೇಜಿನ ಸಂಸ್ಕೃತ ಅಧ್ಯಾಪಕರಾದ ಶ್ರೀ॥ ಎ. ಟಿ ಅರುಣಾಚಲಂ ಅಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಉದ್ದೇಶಗಳನ್ನು ಕಾರ್ಯದರ್ಶಿಗಳು ತಿಳಿಸಿದರು. ಶ್ರೀ॥ ಆರ್. ಕೆ ಶ್ರೀಕಂಠನ್ ಮತ್ತು ಪಾರ್ಟಿಯವರ ಸಂಗೀತ, ತ್ರಿವೇಣಿ ಫ್ರೆಂಡ್ಸ್ ರವರ ಆರ್ಕೆಸ್ಟ್ರಾ, ಶ್ರೀ॥ ಎಂ. ಸಿ ಪೀಟರ್ ಮತ್ತು ಪಾರ್ಟಿಯವರಿಂದ ನೃತ್ಯ, ಸಂಘದ ಸದಸ್ಯರಿಂದ ನಾಟಕ ಪ್ರದರ್ಶನಗಳು ನಡೆದುವು

ಕಾಂಗ್ರೆಸ್ ಅಧ್ಯಕ್ಷರಿಗೆ ಒಪ್ಪಿಸಿದ ನಿಧಿ

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ॥ ಕೆ. ಚೆಂಗಲರಾಯ ರೆಡ್ಡಿಯವರು ರಾಜಧಾನಿಗೆ ಕಳೆದ ವಾರ ಆಗಮಿಸಿದ್ದಾಗ ನಗರದ ಪರವಾಗಿ ಒಪ್ಪಿಸಿದ ನಿಧಿಯ ವಿವರ ಈ ರೀತಿ ಇದೆ:- ನಗರ ಕಾಂಗ್ರೆಸ್ ಪಕ್ಷದಿಂದ ೫೦೦ ರೂ, ಹಿಂದೆ ೧೯೪೫ರಲ್ಲಿ ಮೈಸೂರು ನಗರದಲ್ಲಿ ನಡೆಯಬೇಕಾಗಿದ್ದ ಕಾಂಗ್ರೆಸ್ ಅಧಿವೇಶನದ ಬಾಬ್ತು ಉಳಿದಿದ್ದುದು ೫೦೦ ರೂ, ಶ್ರೀ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರಿಂದ ೧೦ ರೂ, ಪವರ್ ಲೂಂ ಕಾರ್ಖಾನೆ ಕೆಲಸಗಾರರಿಂದ ೧೧ ರೂ. ಮತ್ತು ಮೈಸೂರು

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೨೨

ಜ॥ ೨೬-೧-೪೭ ನೇ ಭಾನುವಾರ ಸ್ವಾತಂತ್ರ್ಯ ದಿನಾಚರಣೆಯನ್ನು ಬಹಿರಂಗವಾಗಿ ಆಚರಿಸಲು ನಗರದಲ್ಲಿ ಸಭೆ, ಮೆರವಣಿಗೆಗಳ ಮೇಲೆ ಪ್ರತಿಬಂಧಕಾಜ್ಞೆ ಜಾರಿಯಲ್ಲಿರುವುದರಿಂದ, ಮೈಸೂರು ಕಾಂಗ್ರೆಸ್ ಪ್ರಧಾನ ಕಛೇರಿಯ ೧೮-೧-೪೭ ರ ೨೭೩ ನೇ ನಂಬರ್ ಸೂಚನೆಯಂತೆ ಕಾಂಗ್ರೆಸ್ ಸದಸ್ಯರೆಲ್ಲರೂ ೨೬-೧-೪೭ ನೇ ಭಾನುವಾರ ಸಾಯಂಕಾಲ ೭ ಘಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಸೇರಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಮತ್ತು ಜವಾಬ್ದಾರಿ ಸರ್ಕಾರದ ಪ್ರತಿಜ್ಞೆಯನ್ನು ಸ್ವೀಕರಿಸಲು ತಪ್ಪದೆ ದಯಮಾಡಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಟಿ. ನರಸಿಂಹಯ್ಯಂಗಾರ್ಯರು ಕೋರಿರುತ್ತಾರೆ

ಮದ್ರಾಸ್ ಗವರ್ನರ ಆಗಮನ

ನಿನ್ನೆ ಮಧ್ಯಾಹ್ನ ರಾಜಧಾನಿಗೆ ಮದ್ರಾಸ್ ಗವರ್ನರಾದ ಸರ್ ಆರ್ಚಿಬಾಲ್ಡ್ ನೈ ರವರು ಪತ್ನಿ ಮತ್ತು ಪರಿವಾರ ಸಮೇತರಾಗಿ ಆಗಮಿಸಿದರು

ಹೈದರಾಬಾದಿನ ವಿಜಯ

ದಕ್ಷಿಣ ಭಾರತ ರಾಂಜಿ ಕ್ರಿಕೆಟ್ ಫೈನಲ್ಸ್ ಪಂದ್ಯದಲ್ಲಿ ಹೈದರಾಬಾದ್ ಟೀಮಿನವರು ಮೈಸೂರಿನವರನ್ನು ೪೧೯ ರನ್ನುಗಳಿಂದ ಸೋಲಿಸಿದರು.

ಪುರಂಧರದಾಸರ ದಿನಾಚರಣೆ

ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ಆಶ್ರಯದಲ್ಲಿ ನಿನ್ನೆ ಶ್ರೀ ಪುರಂದರದಾಸರ ಪುಣ್ಯ ದಿನಾಚರಣೆಯು ನಡೆಯಿತು. ರಾವ್ ಬಹದ್ದೂರ್ ಎಂ. ರಾಮಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆ ಮತ್ತು ಪುರಂಧರದಾಸರ ಕೃತಿಗಳನ್ನು ಹಾಡಿದ ಮೇಲೆ ಅವರ ಜೀವನ ಚರಿತ್ರೆ ಮತ್ತು ಸಂಗೀತ ಕಲಾ ವೈಭವದ ವಿಷಯವಾಗಿ ಸಂಸ್ಕೃತ ಕಾಲೇಜಿನ ದಾಸ.ದೇವಾಚಾರ್ಯರು ಶ್ರೀ ಬಿ. ನಾಗೇಶರಾವ್ ಮತ್ತು ಶ್ರೀ ಸತ್ಯಬೋಧಾಚಾರ್ಯರು ಮಾತನಾಡಿದರು.

ಬರ್ಮದ ಹಲವು ಕಡೆ ಆಡಳಿತ ಯಂತ್ರ ಕುಸಿದಿದೆ?

ಬರ್ಮದ ಕಾಡುಗಳಲ್ಲಿರುವ ಶಸ್ತ್ರ ಸಜ್ಜಿತ ದರೋಡೆಕಾರರ ಸರ್ಕಾರದ ವಿರುದ್ಧವಾದ ದಂಗೆ ಪ್ರಬಲವಾಗುತ್ತಿದೆ. ಹಲವು ಜಿಲ್ಲೆಗಳಲ್ಲಿ ಆಡಳಿತ ಯಂತ್ರವು ಕುಸಿದುಬಿದ್ದಿದೆಯೆಂದೂ, ದರೋಡೆಕಾರರು ಜನರಿಂದ 'ರಕ್ಷಣೆ ತೆರಿಗೆ' ವಸೂಲು ಮಾಡುತ್ತಿದ್ದಾರೆಂದೂ ಹೇಳಲಾಗಿದೆ

ಸ್ಮಟ್ಸರ ಪ್ರತಿಭಟನೆ

ದಕ್ಷಿಣಾ ಆಫ್ರಿಕಾದಲ್ಲಿ ಭಾರತೀಯರ ವಿರೋಧ ಶಾಸನವು ಅಗತ್ಯ ಎಂಬುದಾಗಿ ಫೀ॥ ಮಾ॥ ಸ್ಮಟ್ಸ್ ನಿನ್ನೆ ದಃ॥ ಆ॥ ಯೂನಿಯನ್ ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ಪ್ರಪಂಚ ಸಂಸ್ಥೆಯ ಜನರಲ್ ಅಸೆಂಬ್ಲಿಯ ಆಜ್ಞೆಯ ನಿರ್ಣಯವನ್ನು ಖಂಡಿಸಿದರು. ನೈಋತ್ಯ ಆಫ್ರಿಕದ ಮೇಲಿನ ಆಡಳಿತವನ್ನು ಯೂನಿಯನ್ ಸರಕಾರವೇ ವಹಿಸುವುದೆಂದೂ ಅವರು ಹೇಳಿದ್ದಾರೆ.

ಸಾಧಿ

ಜಿವ

ಕೊಡಲೇ ಚಂದ್ರಾದಾರರಾಗಿರಿ

ಸಾಧ್ವಿ

ತಾ|| ೨೩-೧-೪೭ ಗುರುವಾರ

ಸ್ವತಂತ್ರ ಪ್ರಜಾ ರಾಜ್ಯ

ರಾಜ್ಯಾಂಗ ಶಾಸನ ಸಭೆಯು ತನ್ನ ಗುರಿಯನ್ನು ಘೋಷಿಸಿ ನಿನ್ನೆ ನಿರ್ಣಯವನ್ನು ಅಂಗೀಕರಿಸಿತು. ಪಂಡಿತ ನೆಹರೂರವರ ನಿರ್ಣಯವು ಸರ್ವಾನುಮತದಿಂದ ಅನುಮೋದಿಸಲ್ಪಟ್ಟಿತು. ಸಂಪೂರ್ಣ ಸ್ವಾತಂತ್ರ್ಯವುಳ್ಳ ಮತ್ತು ಸಾರ್ವಭೌಮಾಧಿಕಾರವನ್ನು ಪಡೆದಿರುವ ಪ್ರಜಾರಾಜ್ಯದ ಸ್ಥಾಪನೆಯೇ ಭಾರತೀಯರ ಧ್ಯೇಯವೆಂದು ಸಾರಲಾಯಿತು. ಇಂತಹ ಗಂಭೀರವೂ, ಪವಿತ್ರವೂ ಆದ ನಿರ್ಧಾರಕ್ಕೆ ತಮ್ಮ ಮನ್ನಣೆಯನ್ನು ಸೂಚಿಸಲು ಸದಸ್ಯರೆಲ್ಲರೂ ಎದ್ದು ನಿಂತು ಅದನ್ನು ಸ್ವಾಗತಿಸಿದರು. ನಲವತ್ತು ಕೋಟಿ ಭಾರತೀಯರ ಜೀವನಾಕಾಂಕ್ಷೆಯ ಪ್ರತಿಬಿಂಬವಾದ ಈ ನಿರ್ಣಯವನ್ನು ರಾಜ್ಯಾಂಗ ಸಭೆಯು ಅಂಗೀಕರಿಸಿರುವುದಕ್ಕಾಗಿ ಸಕಲ ದೇಶಾಭಿಮಾನಿಗಳೂ ಅತ್ಯಂತ ಹರ್ಷಚಿತ್ತರಾಗಿರುವರು.

ರಾಜ್ಯಾಂಗ ಸಭೆಯು ತನ್ನ ಮೊಟ್ಟಮೊದಲನೆಯ ಕರ್ತವ್ಯವಾದ ಧ್ಯೇಯ ನಿರೂಪಣೆಯನ್ನು ಯಶಸ್ವಿಯಾಗಿಯೂ, ಸರ್ವಸಮ್ಮತವಾಗಿಯೂ ನಿರ್ವಹಿಸಿರುವುದು ಅಭಿನಂದನೀಯವಾದ ಅಂಶ. ಅನೇಕ ಬಗೆಯ ಜಾತಿ, ಮತ, ಕೋಮು, ಸಂಸ್ಕೃತಿ, ಭಾಷೆ ಮತ್ತು ಆಚಾರ ವ್ಯವಹಾರಗಳನ್ನು ಒಳಗೊಂಡ ಈ ದೊಡ್ಡ ರಾಷ್ಟ್ರಕ್ಕೆ ರಾಜ್ಯಾಂಗವನ್ನು ನಿರ್ಮಿಸುವ ಕಾರ್ಯವು ಅತ್ಯಂತ ಮಹತ್ತರವಾದುದು. ಸಕಲರಿಗೂ ಸಮ್ಮತವಾಗುವ ಗುರಿಯನ್ನು ಗೊತ್ತುಮಾಡುವುದು ಅತ್ಯಂತ ಪ್ರಾಮುಖ್ಯವಾದ ಕೆಲಸ. ಇದನ್ನು ಈ ಸಭೆಯು ನಿರ್ವಿಘ್ನಗೊಳಿಸಿ ತನ್ನ ಮುಂದಿರುವ ಕಾರ್ಯದ ಪ್ರಥಮ ಸೋಪಾನವನ್ನು ಏರಿರುತ್ತದೆ. ಇನ್ನು ಮುಂದೆ ನಿರ್ವಹಿಸಬೇಕಾದ ಇತರ ಕಾರ್ಯಕಲಾಪಗಳು ಸುಗಮವಾಗಿ ಸಾಗಲು ಇದು ಶುಭ ಚಿಹ್ನೆ ಎಂದು ಭಾವಿಸಬಹುದು.

ನೆಹರೂರವರ ನಿರ್ಣಯಕ್ಕೆ ಮೊದಲು ಹಲವಾರು ತಿದ್ದುಪಡಿಗಳು ಬಂದುವು. ಬ್ರಿಟಿಷ್ ಸರ್ಕಾರವನ್ನು ಗಮನಿಸದೆ ಈ ಸಭೆಯು ತನ್ನ ಸ್ವತಂತ್ರ ಅಧಿಕಾರವನ್ನು ಚಲಾಯಿಸಿ ಹಿಂದೂಸ್ಥಾನವು ಒಂದು ಸ್ವತಂತ್ರ ರಾಷ್ಟ್ರವೆಂದು ಇಂದೇ ಘೋಷಿಸಿ, ಈಗಿರುವ ಹಂಗಾಮಿ ಸರ್ಕಾರವು ಸ್ವತಂತ್ರ ಸರ್ಕಾರವಾಗಿ ವರ್ತಿಸಬೇಕೆಂಬ ಸೂಚನೆಯೂ ಬಂದಿತ್ತು. ಆದರೆ ವಿಷಯ ವಿಮರ್ಶೆಯ ನಂತರ ತಿದ್ದುಪಡಿಗಳು ವಾಪಸು ತೆಗೆದುಕೊಳ್ಳಲ್ಪಟ್ಟುವು.

ಮುಸ್ಲಿಂ ಲೀಗಿನವರೂ, ಸಂಸ್ಥಾನದ ಪ್ರತಿನಿಧಿಗಳೂ ಸಭೆಯಲ್ಲಿ ಭಾಗವಹಿಸಲು ಅನುಕೂಲಿಸುವಂತೆ ನಿರ್ಣಯದ ಚರ್ಚೆಯನ್ನು ಮುಂದುವರಿಸಬೇಕೆಂದು ಡಾ|| ಜಯಕರರು ತಂದಿದ್ದ ಸೂಚನೆಯಂತೆ ಸಭೆಯು ಇದುವರೆಗೆ ಕಾದು ನೋಡಿತು. ಪ್ರಾಂತ ವರ್ಗೀಕರಣದ ವಿಚಾರದಲ್ಲಿ ಬ್ರಿಟಿಷ್ ಸರ್ಕಾರದವರು ಕೊಟ್ಟಿರುವ ವಿವರಣೆಯನ್ನೇ ಕಾಂಗ್ರೆಸ್ಸು ಅಂಗೀಕರಿಸಿದ್ದರೂ ಸಹ ಲೀಗಿನವರು ಇನ್ನೂ ಸಭೆಗೆ ಬಂದಿರುವುದಿಲ್ಲ. ಸಂಸ್ಥಾನಗಳವರೋ ಇನ್ನೂ ಸಂಧಾನದಲ್ಲಿಯೇ ತೊಳಲುತ್ತ ತಮ್ಮ ಪ್ರತಿನಿಧಿಗಳನ್ನೇ ಆರಿಸಿರುವುದಿಲ್ಲ. ಇದು ರಾಜ್ಯಾಂಗ ಸಭೆಯ ತಪ್ಪಲ್ಲ. ಇನ್ನು ಮುಂದೆಯೂ ಕಾಯುವುದು ಸರಿಯಲ್ಲ. ಆದುದರಿಂದ ಡಾ|| ಜಯಕರರು ತಮ್ಮ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಂಡರು. ನೆಹರೂರವರ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಸಾರ್ವಭೌಮತ್ವವು ಪ್ರಜೆಗಳಲ್ಲಿ ಅಂತರ್ಗತವಾಗಿರುವುದೆಂಬ ವಿಷಯದ ಮೇಲೆ ಹಲವು ಸಂಸ್ಥಾನಗಳ ದಿವಾನರುಗಳು ಚರ್ಚೆಯನ್ನು ಎತ್ತಿದ್ದರು. ಇದಕ್ಕೆ ಇನ್ನು ಕೆಲವು ಮಾಜಿ ದಿವಾನರುಗಳೇ ಉತ್ತರವಿತ್ತಿದ್ದಾರೆ. ನೆಹರೂರವರು ನಿನ್ನೆ ಇದಕ್ಕೆ ಸಮರ್ಪಕ ಉತ್ತರವನ್ನು ಕೊಟ್ಟಿದ್ದಾರೆ. ರಾಜರುಗಳು ದೈವಾಂಶ ಸಂಭೂತರೆಂಬ ಹಿಂದಿನ ಕಾಲದ ನಂಬಿಕೆಯು ಮಣ್ಣುಪಾಲಾಗಿ ಎಷ್ಟೋ ದಿನಗಳಾದುವೆಂದು ಅವರು ತಿಳಿಸಿದ್ದಾರೆ. ಆದರೆ ಪ್ರಜೆಗಳ ಸಾರ್ವಭೌಮತ್ವದಲ್ಲಿ ರಾಜರುಗಳಿಗೂ ಸ್ಥಾನವೀಯಲು ಅವಕಾಶವಿರುವುದೆಂಬುದನ್ನು ಸ್ಪಷ್ಟವಾಗಿ ಹೇಳಿದ್ದಾರೆ. ರಾಜರುಗಳು ಕಾಲಕ್ಕೆ ತಕ್ಕಂತೆ ತಮ್ಮ ವರ್ತನೆಯನ್ನು ಮಾರ್ಪಡಿಸಿಕೊಳ್ಳಬೇಕಾಗಿದೆಯೆಂದು ಸೂಚಿಸಿದ್ದಾರೆ. ಆದುದರಿಂದ ಸಂಸ್ಥಾನಗಳೂ, ಅವುಗಳ ರಾಜರುಗಳೂ ನಿರಾತಂಕವಾಗಿ ಭವಿಷ್ಯ ಭಾರತದ ಸ್ವತಂತ್ರ ಪ್ರಜಾರಾಜ್ಯದಲ್ಲಿ ನೆಮ್ಮದಿಯಿಂದ ಇರಲು ಸಂಪೂರ್ಣ ಅವಕಾಶವಿರುತ್ತದೆ. ಇಂತಹ ಸರ್ವ ಸಮರ್ಪಕವಾದ ಭಾರತ ರಾಜ್ಯಾಂಗ ರಚನೆಯಲ್ಲಿ ಭರತ ಖಂಡದ ರಾಜಮಹಾರಾಜರುಗಳೂ, ಸಕಲ ಪಂಗಡಗಳ ನಾಯಕರುಗಳೂ ಉದಾತ್ತ ಭಾವನೆಯಿಂದ ತಮ್ಮ ಪಾತ್ರವನ್ನು ನಿರ್ವಹಿಸಲೆಂಬುದೇ ಎಲ್ಲ ದೇಶಾಭಿಮಾನಿಗಳ ಹಾರೈಕೆಯಾಗಿದೆ.

ಏಷ್ಯಾ ರಾಷ್ಟ್ರಗಳ ಸಭೆಗೆ ಅರಬ್ ಲೀಗ್ ಸಹಕಾರ

ಮಾರ್ಚಿಯಲ್ಲಿ ನಡೆಯುವ ಏಷ್ಯಾ ರಾಷ್ಟ್ರಗಳ ಆರ್ಥಿಕ ಮತ್ತು ಸಾಂಸ್ಕೃತಿಕ ಸಮ್ಮೇಳನದಲ್ಲಿ ಭಾಗವಹಿಸಲು ಅರಬ್ ಲೀಗಿನವರು ಸಮ್ಮತಿಸಿ ಪತ್ರ ಬರೆದಿದ್ದಾರೆ. ಮಿ|| ಜಿನ್ನಾರವರು ಇದಕ್ಕೆ ವಿರೋಧವಾಗಿದ್ದರೂ ಅರಬ್ ಲೀಗು ತನ್ನ ಸಹಕಾರ ನೀಡಿದೆ.

ಅಖಿಲ ಭಾರತ ಸಂಸ್ಕೃತ ವಿಶ್ವವಿದ್ಯಾನಿಲಯ

ಭಾರತ ವಿದ್ಯಾ ಪ್ರಚಾರ ಸಮಿತಿ ಅಧ್ಯಕ್ಷರಾದ ಡಾ|| ಲಕ್ಷ್ಮಣರವರು ಅಖಿಲ ಭಾರತ ಸಂಸ್ಕೃತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಬಗ್ಗೆ ೫ ಕೋಟಿ ರೂ. ಗಳ ಯೋಜನೆಯನ್ನು ತಯಾರು ಮಾಡಿದ್ದಾರೆ. ಇದಕ್ಕಾಗಿ ಅಳ್ವಾರ್ ಸಂಸ್ಥಾನಾಧೀಶರು ೧ ಕೋಟಿ ರೂ. ಬೆಲೆ ಬಾಳುವ ಆಸ್ತಿಯನ್ನೂ ವರ್ಷಂಪ್ರತಿ ೫೦ ಸಾವಿರ ರೂ. ಗ್ರಾಂಟನ್ನೂ ಕೊಡಲು ಒಪ್ಪಿದ್ದಾರೆ.

ಸೆಂಟ್‌ಫಿಲೋಮಿನಾ ವಿದ್ಯಾರ್ಥಿಗಳಿಗೆ ಬಸ್ಸಿನ ಅನಾನುಕೂಲ

ಮೈಸೂರು ೨೩

ರಾಜಧಾನಿಯಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಸೇಂಟ್‌ಫಿಲೋಮಿನ ಕಾಲೇಜಿಗೆ ನಗರದ ನಾನಾ ಭಾಗಗಳಿಂದ ವಿದ್ಯಾರ್ಥಿಗಳು ಬರಲು ಬಸ್ಸಿನ ಸೌಕರ್ಯವನ್ನು ವಿದ್ಯಾರ್ಥಿಗಳ ಖರ್ಚಿನಲ್ಲೇ ಏರ್ಪಡಿಸಲಾಗಿತ್ತು. ಆದರೆ ಕ್ರಿಸ್‌ಮಸ್ ಆದನಂತರ ಇದ್ದಕ್ಕಿದ್ದಂತೆಯೇ ಪೂರ್ವಭಾವಿ ಸೂಚನೆಯನ್ನೂ ಸಹ ಕೊಡದೆ ಬಸ್ ಸೌಕರ್ಯವನ್ನು ನಿಲ್ಲಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳು ಬಿಸಿಲಿನಲ್ಲಿ ದಿನವೂ ೧೦-೧೧ ಮೈಲಿಗಳು ನಡೆದುಕೊಂಡು ಹೋಗುವ ಕಠಿಣ ಪರಿಸ್ಥಿತಿ ಒದಗಿದೆ. ತಮಗೆ ಕೊಡುತ್ತಿದ್ದ ಪೆಟ್ರೋಲ್ ರೇಷನ್ನನ್ನು ಸರ್ಕಾರದವರು ಕಡಿಮೆ ಮಾಡಿರುವುದರಿಂದ ಈ ರೀತಿಯಾಗಿರುವುದಾಗಿ ಕಾಲೇಜು ಅಧಿಕಾರಿಗಳು ತಿಳಿಸುತ್ತಿದ್ದಾರೆ. ಆದ್ದರಿಂದ ಈ ಕಾಲೇಜಿಗೆ ಮಾತೃಪ್ರಾಯವಾಗಿರುವ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಕೂಡಲೇ ಈ ವಿಷಯದ ಕಡೆ ಗಮನಕೊಟ್ಟು ವಿದ್ಯಾರ್ಥಿಗಳಿಗೆ ಒದಗಿರುವ ಈ ಅನಾನುಕೂಲತೆಯನ್ನು ಪರಿಹರಿಸಬೇಕಾಗಿ ಕೋರಲಾಗಿದೆ.

§ ರಾಜಧಾನಿಯ ಕೃಷ್ಣಾ ಯೂನಿಯರ್ ಕ್ಲಬ್ಬಿನವರು ಶಾರದಾ ವಿದ್ಯಾಶಾಲೆಯವರನ್ನು ಕ್ರಿಕೆಟ್ ಪಂದ್ಯದಲ್ಲಿ ೪ ವಿಕೆಟ್ ಮತ್ತು ೫೧ ರನ್ನು ಗಳಿಂದ ನಿನ್ನೆ ದಿನ ಸೋಲಿಸಿದರು.

ನಾಲ್ಕು "ಬ" ಎಂದರೆ

ಭದ್ರವಾದ ಬೀಗಗಳು ಬೇಕಾದರೆ

ಬಾಬುಸಾಬ್

ಶಿವರಾಂಪೇಟೆ :: ಮೈಸೂರು

ರಾಜಕಮಲ್, ಮೈಸೂರು

22-1-47 ರಿಂದ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

— ಪ್ರತಿಜ್ಞಾ —

-: ಭೂಮಿಕೆ :-

ಸ್ವರ್ಣಲತಾ, ಸುನೇತ್ರ, ವೀಣಕುಮಾರಿ

ಬೇಬಿ ಮೀನಾ, ಬುದ್ದೊ ಅದ್ವಾನಿ

Morning Shows at 10-30 A. M.

—: For 4 Days :—

From 24-1-47

Wild West Days

(Full Serial.)

ಗಂಜಿ ಹತೋಟಿ ಆಜ್ಞೆ

ಮೈಸೂರು ಸರ್ಕಾರದವರು ಹ[ತ್ತಿ] ಬಗ್ಗೆ ಒಂದು ಹೊಸ ಆಜ್ಞೆಯನ್ನು [ಹೊರ]ಡಿಸಿದ್ದಾರೆ. ಅದರ ಪ್ರಕಾರ ಯಾರೂ ... ಗಲ ಗಿಡದಿಂದ ತಯಾರಾದ ಗಂಜಿ[ಯ]ನ್ನಾ ಇತರ ವಿಧವಾದ ಯಾವ ಗಂಜಿಯ[ನ್ನಾ] ಟೆಕ್ಸ್‌ಟೈಲ್ ಕಮಿಷನರ ಅನುಮತಿ ... ತಯಾರಿಸಕೂಡದು. ಮಾರುವವರೂ ... ತ್ತು ಕೊಳ್ಳುವವರೂ ರಹದಾರಿ ಪ[ಡೆಯ]ಬೇಕು. ಷೆಡ್ಯೂಲ್ ಪದಾರ್ಥಗಳ... ಯನ್ನು ನಿರ್ಧರಿಸುವ ಅಧಿಕಾರವನ್ನು [ಟೆ]ಕ್ಸ್‌ಟೈಲ್ ಕಮಿಷನರಿಗೆ ಕೊಡಲಾ[ಗಿದೆ]. ಈ ಆಜ್ಞೆ ಜನವರಿ ೧೫ ರಿಂದ ಜಾರಿ[ಗೆ ಬಂ]ದಿರುತ್ತದೆ.

ಪ್ರಯಾಣಿಕರಿಗೆ ತೊಂ[ದರೆ]

ಸ್ವಂ.ವ.]. ಶ್ರೀರಂಗಪಟ್ಟಣ

ಈ ಊರಿಗೆ ಬರುವ ಮತ್ತು ಇ[ಲ್ಲಿಂದ] ಹೊರಗಡೆಗೆ ಹೋಗುವ ಬಸ್ ಪ್ರಯಾ[ಣಿ]ಕರು ಸಾಮಾನ್ಯವಾಗಿ ಬಸ್ ನಿಲ್ದಾಣ[ದ ಹ]ತ್ತಿ ಇಳಿಯುವ ಪದ್ಧತಿ ಜಾರಿಯ[ಲ್ಲಿದೆ]. ಆದರೆ ಕೆಲವು ಅಧಿಕಾರಿಗಳು ಬಸ್ಸ[ನ್ನು ತ]ಮ್ಮ ಮನೆ ಅಥವಾ ಆಫೀಸು ಬಾಗ[ಿಲಿಗೆ] ತರಿಸುತ್ತಾರೆ. ಅವರ ಕೆಲಸಗಳೆಲ್ಲಾ [ಮು]ಗಿಯುವ ತನಕ ಬಸ್ಸು ಕಾಯುತ್ತಿ[ರ]ುತ್ತೆ. ಇದರಿಂದ ಪ್ರಯಾಣಿಕರು ... ರ ತೊಂದರೆಯನ್ನು ಅನುಭವಿಸುತ್ತಿ[ದ್ದಾರೆ]. ಆದಕಾರಣ ಬಸ್ ಮಾಲೀಕರುಗಳೂ, [ಸಂ]ಬಂಧಪಟ್ಟ ಅಧಿಕಾರಿಗಳೂ ಈ ವಿಷ[ಯದ] ಕಡೆ ಗಮನವನ್ನು ಕೊಟ್ಟು ಇನ್ನು ಮುಂದೆ ಈ ರೀತಿಯಾಗದಂತೆ ನೋಡಿಕೊಳ್ಳಬೇಕಾಗಿದೆ.

ಪ್ಲೇಗು

ಸ್ವಂ.ವ.] ಚಾಮರಾಜನಗರ

ಈ ತಾಲ್ಲೂಕಿನ ಅನೇಕ ಹಳ್ಳಿ[ಗಳಲ್ಲಿ] ಪ್ಲೇಗು ಉಪದ್ರವವು ತಲೆದೋರಿದೆ ... ಗಿಗಳ ಸಂಖ್ಯೆ ಹೆಚ್ಚುತ್ತಾ ಇದೆ ... ಸ್ಯಾನಿಟರಿ ಏರ್ಪಾಟು ಉತ್ತಮಗೊಳ್ಳಬೇಕಾಗಿದೆ.

ಬೆಲ್ಲ ಇಲ್ಲ

ಬೆಲ್ಲವನ್ನು ರೂ. ೧ಕ್ಕೆ ೨|| ಪೌಂ[ಡಿನಿಂ]ದ ೩ ಪೌಂಡಿಗೆ ಹೆಚ್ಚಿಸಲಾಗಿದೆ ... ಸಿಕ್ಕುವುದೇ ದುಸ್ತರ. ಅಧಿಕಾರಿಗಳು ... ದರ ಕಡೆ ಕೂಡಲೇ ಗಮನ ಕೊಡಬೇ[ಕು].

ಹೊಸ ನಮೂನೆಯ

ಬೆನಾರಿಸ್ ಜಾರ್ಜೆಟ್ ಸೀರೆಗಳು, ಮೈಸೂರು ಸಿಲ್ಕು ಟಿಷ್ಯೂ ಸೀರೆಗಳು, ಬೆಂಗಾಲ್ ಸಿಲ್ಕು ಸೀರೆಗಳು ಮತ್ತು ಕೊಯಮುತ್ತೂರು ಮಧುರೆ ಸೀರೆಗಳು

ಬಿಕರಿಗೆ ಸಿದ್ಧವಾಗಿವೆ.

ಇಂದೇ ಭೇಟಿ ಕೊಡಿರಿ.

●

ಬಿ. ಕೆಂಚಪ್ಪ ಸನ್ಸ್,

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

OPERA TALKIES

Daily 3 Shows from 24-1

JUNGLE - - GODDES

Stars:-

Noah Berry, Dorothy Sh

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ... ಕ್ಷರ ಔಷಧಿಗಳೂ ಸದಾ ಕಾಲದಲ್ಲಿ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳ ಚಿಕಿತ್ಸೆಯು ಬಹು ಸುಲಭ ಛಾರ್ಜಿನಲ್ಲಿ ಮಾಡಲ್ಪಡುತ್ತದೆ.

ಝುಂಡೂರವರ ಆಯುರ್ವೇದೀಯ ದ್ರವ್ಯೌಷಧಿಗಳೆಲ್ಲವೂ ದೊರೆಯುತ್ತವೆ.

Edited, printed and published ... A. R. Nagarajan at the Sadhvi Pr... D. Subbiah Road, Mysore.

ರೇ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೪—೧—೪೭ [ಸಂಚಿಕೆ ೧೪೩

ಮೈಸೂರಿನಲ್ಲಿ ತಾತ್ಕಾಲಿಕ ಸರ್ಕಾರ ಸ್ಥಾಪನೆಯಾಗಲಿ

೧೩ ವರ್ಷ ವಯಸ್ಸಿನ ಹುಡುಗನೊಡನೆ ಗಾಂಧಿಜಿ ಭೇಟಿ

ನೌಖಾಲಿ ಜಿಲ್ಲೆಯ ಆಟಿಪೋರ ಎಂಬಲ್ಲಿ ಗಾಂಧಿಜಿಯವರು ಸಂಚರಿಸುತ್ತಿದ್ದಾಗ ಅಲ್ಲಿ ೧೦೦ ವರ್ಷದ ಒಬ್ಬ ವೃದ್ಧರು ೧೩ ವರ್ಷ ವಯಸ್ಸಿನ ಹುಡುಗನೊಡನೆ ಗಾಂಧಿಜಿಯವರನ್ನು ಭೇಟಿ ಮಾಡಿದರು. ಆದರೆ ಅವರಿಗೆ ಗಾಂಧಿಜಿಯವರ ಗುಡಿಸಲಿಗೆ ನಡೆದು ಬರಲು ಶಕ್ತಿಯಿಲ್ಲದ ಕಾರಣ ಗಾಂಧಿಜಿಯವರೇ ಸ್ವಾರ್ಥನೆ ನಂತರ ಅವರ ಮನೆಗೆ ಹೋಗಿ ಅವರಿಗೆ ದರ್ಶನವಿತ್ತರೆಂದು ತಿಳಿದಿದೆ.

ಗ್ರೀಕ್ ರಾಜಕುಮಾರಿಯ ಬಿರುದು ವಜಾ

ಗ್ರೀಸಿನಲ್ಲಿರುವ ಬ್ರಿಟಿಷ್ ಸೈನ್ಯಗಳನ್ನು ಹಿಂತೆಗೆದುಕೊಳ್ಳಬೇಕೆಂದು ಅಮೆರಿಕೆಯ ಪತ್ರದಲ್ಲಿ ಗ್ರೀಸಿನ ರಾಜಕುಮಾರಿಯವರು ಹೇಳಿದುದಕ್ಕಾಗಿ ಅವರ ಬಿರುದನ್ನು ವಜಾ ಮಾಡಿರುವುದಾಗಿ ಅಥೆನ್ಸ್ ನಿಂದ ತಿಳಿಸುತ್ತದೆ. ಗ್ರೀಕ್ ಪ್ರಜೆಗಳ ಸ್ವತಂತ್ರ ವಿಚಾರವಾಗಿರುವ ಅಭಿಪ್ರಾಯಕ್ಕೆ ಇದೇ ನಿದರ್ಶನವಾಗಿದೆ.

ಕೊಳದಲ್ಲಿ ಜಡ್ಜರ ಶವ

ಸೇಲಂನ ಸಬಾರ್ಡಿನೇಟ್ ಜಡ್ಜ್ ಶ್ರೀ ಪಿ ಎ ರಂಗರಾವ್ ಎಂಬುವರ ಶವ ಮದ್ರಾಸಿನ ಮೈಲಾಪುರ ಕೊಳದಲ್ಲಿ ತೇಲುತ್ತಿದ್ದುದು ಪತ್ತೆಯಾಗಿದೆ ಶ್ರೀ ರಂಗರಾಯರವರು ತಮ್ಮ ಮೇಲೆ ಬಂದಿರುವ ವ್ಯವಹಾರವೊಂದರ ಬಗ್ಗೆ ಜನವರಿ ೨೪ ರಂದು ಹೈ ಕೋರ್ಟಿನ ೩ ಜಡ್ಜರ ಸಮ್ಮುಖದಲ್ಲಿ ನಡೆದ ತನಿಖೆಗಾಗಿ ಮದ್ರಾಸಿಗೆ ಬಂದಿದ್ದರು, ಅದೇ ಸಂಬಂಧದಲ್ಲಿ ಅವರು ಆತ್ಮಹತ್ಯ ಮಾಡಿಕೊಂಡರೆಂದೂ ಹೇಳಲಾಗುತ್ತದೆ.

ಮಿಲಿಟರಿ ಪದಕಕ್ಕೆ ಡಿಗಾಲೆಯವರ ತಿರಸ್ಕಾರ

ಫ್ರಾನ್ಸಿನ ಸರ್ಕಾರವು ಜ॥ ಡಿಗಾಲೆ, ಜ॥ ಲೆಕ್ಲೆರ್, ಮಾ॥ ಸ್ಟಾಲಿನ್ ಮತ್ತು ಡಿ॥ ಐಸೆನ್ ಹೋವರ್ ಪ್ರತಿನಿಧಿಗಳಿಗೆ ಕೊಡಬೇಕೆಂದಿದ್ದ ಮಿಲಿಟರಿ ಗೌರವದ ಪದಕವನ್ನು ಡಿಗಾಲೆಯವರು ತಿರಸ್ಕರಿಸಿದ್ದಾರೆ. ಜಯ ಮತ್ತು ಸ್ವಾತಂತ್ರ್ಯವು ಹಸ್ತಗತವಾಗುವವರೆಗೆ ಫ್ರಾನ್ಸ್ ಮತ್ತು ಫ್ರೆಂಚ್ ಯೂನಿಯನ್ನಿನ ಮುಖ್ಯ ವಹಿಸಿ ಮುಂದೆ ಸಾಗಿದವನಿಗೆ ಇಲ್ಲಿ ಗಳಿಸಿದ ಜಯಕ್ಕಿಂತ ಬೇರೆ ಗೌರವ ಮತ್ತೊಂದು ಅನವಶ್ಯಕ ಎಂಬುದಾಗಿ ಅವರು ತಿಳಿಸಿದ್ದಾರೆ

ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ಸಂಬಳ

೧೯೪೧ ರಲ್ಲಿ ಸರ್ಕಾರದವರು ಹೈ ಸ್ಕೂಲು ಮತ್ತು ಮಿಡಲ್ ಸ್ಕೂಲ್ ಉಪಾಧ್ಯಾಯರುಗಳಲ್ಲಿ ಪದವೀಧರರು ಮತ್ತು ಪದವೀಧರರಲ್ಲದವರೆಂಬ ಎರಡು ಭಾಗ ಮಾಡಿ ಸಂಬಳ ನಿಗದಿ ಪಡಿಸಿದ್ದಾರೆ. ಅದರಂತೆಯೇ ಪ್ರೈಮರಿ ಸ್ಕೂಲ್ ಉಪಾಧ್ಯಾಯರುಗಳಲ್ಲಿ ಟ್ರೈನಿಂಗಾದವರಿಗೂ, ಆಗದವರಿಗೂ ವ್ಯತ್ಯಾಸವನ್ನೇ ಕಲ್ಪಿಸದೆ ಸೀನಿಯಾರಿಟಿ ಮೇಲೆ ಮಾತ್ರ ಸಂಬಳ ಹೆಚ್ಚಿಸಿರುವುದು ಅನೇಕ ವಿದ್ಯಾವಂತ ಉಪಾಧ್ಯಾಯರಿಗೆ ಏನೂ ಪ್ರಯೋಜನವಾದಂತಾಗಲಿಲ್ಲ. ಆದ್ದರಿಂದ ಸರ್ಕಾರದವರು ಈ ಸಮಸ್ಯೆಯ ವಿಷಯದಲ್ಲಿ ಟ್ರೈನ್ಡ್ ಉಪಾಧ್ಯಾಯರ ಬಗ್ಗೆ ಗಮನ ಹರಿಸಿ ನ್ಯಾಯ ಕೊಡಬೇಕೆಂದು ಪ್ರಾರ್ಥನೆ."

ನೊಂದ ಉಪಾಧ್ಯಾಯ.

ಮದ್ರಾಸಿನಲ್ಲಿ ಸಾರ್ವಜನಿಕ ರಕ್ಷಣಾ ಕಾನೂನು

ಪ್ರಾಂತ್ಯದಲ್ಲೆಲ್ಲಾ ಕಮ್ಯೂನಿಸ್ಟರ ದಸ್ತಗಿರಿ

ಸಾರ್ವಜನಿಕ ಶಿಸ್ತನ್ನು ಕಾಪಾಡುವ ಸಲುವಾಗಿ ಹೊಸ ಜರೂರು ಶಾಸನವನ್ನು ಮದ್ರಾಸ್ ಸರ್ಕಾರವು ನಿನ್ನೆಯಿಂದ ಜಾರಿಗೆ ತಂದಿದೆ. ಇದರಂತೆ ಮದ್ರಾಸು, ಕನ್ನಾನೂರು, ಬೆಜವಾಡ, ಕಲ್ಲಿಕೋಟೆ, ಗುಂಟೂರು ಮತ್ತು ಇತರಭಾಗಗಳಲ್ಲಿ ಅನೇಕ ಶೋಧನೆಗಳೂ, ದಸ್ತಗಿರಿಗಳೂ ನಡೆದಿವೆ ೧೨ ಮಂದಿ ಪ್ರಮುಖ ಕಮ್ಯೂನಿಸ್ಟರನ್ನು ದಸ್ತಗಿರಿ ಮಾಡಿ ಅವರನ್ನು ಯಾವುದೋ ಗುಪ್ತ ಪ್ರದೇಶಕ್ಕೆ ಕರೆದೊಯ್ಯಲಾಗಿದೆ ಕಮ್ಯೂನಿಸ್ಟರ ಸಂಘದ ಸಂಪರ್ಕ ಪಡೆದಿರುವ ಕಾರ್ಮಿಕ ಸಂಘಗಳು, ಪತ್ರಿಕಾ ಕಛೇರಿಗಳ ಶೋಧನೆ ಸಹ ನಡೆಯಿತು. ಇದು ತಿಳಿದ ಕೂಡಲೇ ಟ್ರಾಂ ವೇ ಕೆಲಸಗಾರರು ನಿನ್ನೆ ಮಧ್ಯಾಹ್ನ ಮುಷ್ಕರ ಹೂಡಿದ್ದರು.

ಬೊಂಬಾಯಿಯಲ್ಲಿ ಗುಂಡಿನೇಟು

ಸುಭಾಷ್ ಚಂದ್ರಬೋಸರ ಜನ್ಮ ದಿನೋತ್ಸವ ಸಂಬಂಧವಾಗಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದ ಎರಡು ಗುಂಪಿನವರಿಗೂ ಬೊಂಬಾಯಿನ ಗೋಲ್ ಪೀಠದ ಬಳಿ ಘರ್ಷಣೆಯುಂಟಾಯಿತು ಪೋಲೀಸಿನವರು ಘರ್ಷಣೆಯನ್ನು ಅಡಗಿಸಲು ಗುಂಡು ಹಾರಿಸಿದರೆಂದು ವರದಿಯಾಗಿದೆ.

ರಾಷ್ಟ್ರೀಯ ಸೇವಾದಳ

ನಂಜನಗೂಡು ೨೩

೨೩ ನೇ ತಾ॥ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಮಧ್ಯಾಹ್ನ ೪ ಘಂಟೆಗೆ ಪಾಳದ ಹಳೆಯ ಮತ್ತು ಹೊಸ ಸೈನಿಕರೆಲ್ಲರೂ ತಮ್ಮ ತಮ್ಮ ಉಡುಪಿನೊಡನೆ ಧ್ವಜದಾ ವೈಭವಾನಕ್ಕೆ ತಪ್ಪದೆ ಹಾಜರಾಗಬೇಕೆಂಬುದಾಗಿ ದಳದ ನಾಯಕರು ಕೋರಿದ್ದಾರೆ ಅಂದು ಧ್ವಜಾರೋಹಣವಾದ ನಂತರ ಸ್ವಾತಂತ್ರ್ಯ ಪ್ರತಿಜ್ಞೆಯು ಸ್ವೀಕರಿಸಲ್ಪಡುವುದು

ಸುಭಾಷರ ಜನ್ಮ ದಿನಾಚರಣೆ

ನಿನ್ನೆ ದಿನ ತಿಲಕ್ ಸಂಘದಲ್ಲಿ ಸುಭಾಷರ ಜನ್ಮ ದಿನವನ್ನು ಆಚರಿಸಲಾಯಿತು ಶ್ರೀ॥ ಗಳಾದ ರಾಮಚಂದ್ರ ಜೋಯಿಸ್, ಮಂಜಯ್ಯ, ಭೂಪಾಲ್ ಮತ್ತು ಸುಬ್ರಹ್ಮಣ್ಯಂರವರುಗಳು ಬೋಸರ ವಿಷಯವಾಗಿ ಮಾತನಾಡಿದರು.

ಚನ್ನಪಟ್ಟಣದ ಪ್ರಕರಣ

ಜಾಮೀನಿನ ಮೇಲೆ ಹಲವರ ಬಿಡುಗಡೆ

ಸ್ವಂ ಸು] ಬೆಂಗಳೂರು ೨೪

ಚನ್ನಪಟ್ಟಣದ ಗಲಭೆಯ ಸಂಬಂಧದಲ್ಲಿ ದಸ್ತಗಿರಿಯಾಗಿರುವ ಹಿಂದೂ-ಮುಸ್ಲಿಂ ಆಪಾದಿತರನ್ನು ಜಾಮೀನಿನ ಮೇಲೆ ಬಿಡುಗಡೆಮಾಡಲು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಸ್ಥಾನದಲ್ಲಿ ಹಾಕಿದ್ದ ಅಪೀಲಿನ ಬಗ್ಗೆ ನಿನ್ನೆ ತೀರ್ಪು ಕೊಡಲ್ಪಟ್ಟು ೨೫ ಜನ ಮುಸ್ಲಿಮರಲ್ಲಿ ೭ ಮಂದಿಯನ್ನೂ, ೧೪ ಜನ ಹಿಂದೂಗಳಲ್ಲಿ ನಾಲ್ಕರನ್ನೂ ತಲಾ ೫೦೦ ರೂ ಗಳ ಸ್ವಂತ ಮುಚ್ಚಳಿಕೆ ಮತ್ತು ಅದೇ ಮೊಬಲಗಿನ ಎರಡು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.

ಹನುಮಂತಯ್ಯನವರು ಜೈಲಿಗೆ ತೆರಳಿದರು

ನಿನ್ನೆದಿನ ನ್ಯಾಯಾಧೀಶರು ತೀರ್ಪಿತ್ತ ಕೂಡಲೇ ಶ್ರೀ ಹನುಮಂತಯ್ಯನವರು "ಪ್ರಜಾಪ್ರಭುತ್ವಕ್ಕೆ ಜಯವಾಗಲಿ" ಎಂದು ನ್ಯಾಯಮಂದಿರದಲ್ಲೇ ಘೋಷಿಸಿದರು. ಆಪಾದಿತರು ದೇಶ ಮತ್ತು ಪ್ರಭುಗಳಿಗೆ ದ್ರೋಹವೆಸಗಿ ಗುರುತರವಾದ ಎರಡು ಅಪರಾಧಗಳನ್ನು ಮಾಡಿದ್ದಾರೆಂದು ನ್ಯಾಯಾಧೀಶರು ತೀರ್ಪಿನಲ್ಲಿ ತಿಳಿಸಿದ್ದಾರೆ ಕಾಂಗ್ರೆಸ್ ಅಧ್ಯಕ್ಷರಾದಿಯಾಗಿ ಅನೇಕ ಮುಖಂಡರು ಶ್ರೀಯುತರನ್ನು ಸನ್ಮಾನಿಸಿ ಬೀಳ್ಕೊಟ್ಟರು

ಪಬ್ಲಿಕ್ ಸರ್ವೀಸ್ ಕಮೀಷನರ್

ಮಂಡ್ಯದ ಶ್ರೀ ಹೊಂಬೇಗೌಡರನ್ನು ಪಬ್ಲಿಕ್ ಸರ್ವಿಸ್ ಕಮೀಷನರನ್ನಾಗಿ ನೇಮಿಸಲಾಗಿದೆಯೆಂದು ಗೊತ್ತಾಗಿದೆ.

ಕ್ವಿ ಒಣಗಿದ ಆಲೂಗೆಡ್ಡೆಯ ಬೆಲೆಯನ್ನು ಪೌಂಡಿಗೆ ೧ ರೂ ೨ ಆಣೆಯಿಂದ ೦-೧೦-೬ ಗೆ ಸರ್ಕಾರದವರು ಇಳಿಸಿದ್ದಾರೆ.

ವಾರ್ಷಿಕೋತ್ಸವ

ಬ್ರಾಹ್ಮಣ ಧರ್ಮ ಸಹಾಯ ಸಭೆಯ ೨೦ ನೇ ವಾರ್ಷಿಕಾಧಿವೇಶನವು ನಾಳೆ ಮಧ್ಯಾಹ್ನ ೪ ಗಂಟೆಗೆ ಮೈಸೂರು ಸಹಕಾರ ಭವನದಲ್ಲಿ ಶ್ರೀ॥ ಕಾಬಳೆ ಸುಬ್ರಹ್ಮಣ್ಯ ಅಯ್ಯರ್ ರವರ ಅಧ್ಯಕ್ಷತೆಯಲ್ಲಿ ಜರುಗುವುದು.

ನಿಧನ

ಶಿವರಾಂಪೇಟೆ ಸರಸ್ವತಿ ಅಂಗಡಿ ವರ್ತಕರಾದ ಶ್ರೀ ಸಾಮಾ ಗೋವಿಂದಶೆಟ್ಟರ ಮಕ್ಕಳಾದ ಶ್ರೀ॥ ಗೋವಿಂದರಾಜ ಶೆಟ್ಟರು ತಮ್ಮ ೭೦ ನೇ ವಯಸ್ಸಿನಲ್ಲಿ ನಿನ್ನೆ ಬೆಳಿಗ್ಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಕೂಡಲೇ ತಾತ್ಕಾಲಿಕ ಸರಕಾರ ಸ್ಥಾಪನೆಯಾಗಬೇಕು

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯ

ಸ್ವಂ ಸು. ಪ್ರ॥] ಬೆಂಗಳೂರು ೨೪

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಕಳೆದ ಎರಡು ದಿನಗಳಿಂದ ಶ್ರೀ॥ ಕೆ ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು, ಶ್ರೀಮನ್ಮಹಾರಾಜರವರು ಇತ್ತಿರುವ ಸಂದೇಶವನ್ನು ದೀರ್ಘವಾಗಿ ಪರಿಶೀಲಿಸಿ ಒಂದು ಪ್ರಕಟಣೆಯನ್ನು ಹೊರಡಿಸಿದೆ. ಪ್ರಭು ಸಂದೇಶವು ಅಸ್ಪಷ್ಟವೂ, ಅನಿರ್ದಿಷ್ಟವೂ ಆಗಿರುವುದೆಂದು ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ ಭಾರತ ರಾಜ್ಯಾಂಗ ಸಭೆಯಲ್ಲಿ ಮೊನ್ನೆ ದಿನ ಅಂಗೀಕಾರವಾಗಿರುವ ಪಂ॥ ನೆಹರೂ ರವರ ನಿರ್ಣಯವನ್ನು ಪ್ರಸ್ತಾಪಿಸಿ, ಮೈಸೂರು ಸಂಸ್ಥಾನದಲ್ಲಿ ಪ್ರಜೆಗಳು ರಾಜ್ಯಾಡಳಿತದಲ್ಲಿ ಭಾಗವಹಿಸಿ, ಜವಾಬ್ದಾರಿಯನ್ನು ಪೂರ್ಣವಾಗಿ ನಿರ್ವಹಿಸಲು ಅಗತ್ಯವಾದ ಶಿಕ್ಷಣವನ್ನು ಕಳೆದ ೫೫ ವರ್ಷಗಳಿಂದ ಪಡೆದಿದ್ದಾರೆಂದು ತಿಳಿಸಲಾಗಿದೆ. ಆದ್ದರಿಂದ ಶೀಘ್ರತೆಯಾಗಿ ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ತತ್ವದಂತೆ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲಾಗುವುದೆಂದು ಘೋಷಣೆಯನ್ನು ಹೊರಡಿಸಿ, ಸಹಕಾರ ವಾತಾವರಣವನ್ನು ಕಲ್ಪಿಸಬೇಕೆಂದು ಸೂಚಿಸಲಾಗಿದೆ ಸಂದೇಶವನ್ನು ಕಾರ್ಯ ರೂಪಕ್ಕೆ ತರುವ ಪೂರ್ವಭಾವಿಯಾಗಿ ಪ್ರಜಾ ಮುಖಂಡರನ್ನೊಳಗೊಂಡ ತಾತ್ಕಾಲಿಕ ಸರ್ಕಾರವನ್ನು ರಚಿಸಬೇಕೆಂದು ಒತ್ತಾಯಪಡಿಸಲಾಗಿದೆ. ಸಾರ್ವಜನಿಕರು, ಒಮ್ಮತವಾಗಿ ಕಾಂಗ್ರೆಸ್ಸಿನವರು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಂಡು ತಮ್ಮ ಗುರಿಯಾದ ಜವಾಬ್ದಾರಿ ಸರ್ಕಾರವನ್ನು ಮುಟ್ಟಲು ತಯಾರಾಗಿರಬೇಕೆಂದು ಸೂಚನೆ ಕೊಡಲಾಗಿದೆ.

ಸಂಸ್ಥಾನದಲ್ಲೆಲ್ಲಾ ಪ್ರತಿಬಂಧಕಾಜ್ಞೆಯನ್ನು ಜಾರಿಗೆ ತಂದಿರುವುದನ್ನು ಖಂಡಿಸುವ ನಿರ್ಣಯವನ್ನು ಸಭೆ ಅಂಗೀಕರಿಸಿದೆ ಶ್ರೀ ಕೆ ಹನುಮಂತಯ್ಯನವರಿಗೆ ವಿಧಿಸಿರುವ ಶಿಕ್ಷೆಯು ಸರಿಯಾದದ್ದಲ್ಲವೆಂದೂ, ದೇಶದಲ್ಲಿ ಶಾಂತಿ ವಾತಾವರಣವನ್ನು ಸ್ಥಾಪಿಸಲು ಅವರ ಮೇಲಿನ ಶಿಕ್ಷೆಯನ್ನು ರದ್ದು ಮಾಡಬೇಕೆಂದೂ ನಿರ್ಣಯ ಮಾಡಲಾಗಿದೆ ಜಿಲ್ಲಾಬೋರ್ಡ್ ೫ ನೇ ನವೆಂಬರ್ ನಲ್ಲಿ ಕ್ಷಮಾ ಪಿಟಿಷನ್ ಒಟ್ಟಿನ ವಿಧಾನವನ್ನು ಜಾರಿಗೆ ತಂದಿರುವುದು ಸರ್ಕಾರದವರು ಶಾಸನ ಸಭೆಯಲ್ಲಿ ಕೊಟ್ಟ ವಾಗ್ದಾನವನ್ನು ಮೀರಿದಂತೆ ಇದೆಯೆಂದೂ, ಇದು ಪ್ರಜಾಭಿಪ್ರಾಯವನ್ನು ಪ್ರತಿಬಂಧಿಸುವುದಾಗಿದೆಯೆಂದೂ ಆದ್ದರಿಂದ ಇದನ್ನು ಕೂಡಲೇ ವಾಪಸು ತೆಗೆದುಕೊಳ್ಳಬೇಕೆಂಬ ನಿರ್ಣಯವನ್ನೂ ಅಂಗೀಕರಿಸಲಾಯಿತು.

ಸತ್ಕಾರ ಕೂಟ

ಮೈಸೂರು ೨೪

ಸೆಂಟ್ ಜೋಸೆಫ್ಸ್ ಮಾಧ್ಯಮಿಕ ಶಾಲೆಯ ನಾಲ್ಕನೇ ತರಗತಿಯ ಕೆಲವು ವಿದ್ಯಾರ್ಥಿಗಳು ಅಲ್ಲಿ ಉಪಾಧ್ಯಾಯರಾಗಿದ್ದ ಶ್ರೀ॥ ಗಳಾದ ಎಂ. ಆರ್. ಸುಬ್ಬಣ್ಣನವರಿಗೂ ಮತ್ತು ಜನಾರ್ದನ ಸಾಮಯ್ಯ ನಾಯುಡುರವರಿಗೂ ಮೊನ್ನೆ ದಿನ ದಾರಾ ಪ್ರಕಾಶ ಭವನದಲ್ಲಿ ಒಂದು ಸತ್ಕಾರ ಕೂಟವನ್ನೇರ್ಪಡಿಸಿದ್ದರು.

ಪ್ಲೇಗು

ಮೈಸೂರಿಗೆ ೬ ಮೈಲಿ ದೂರದಲ್ಲಿರುವ ಸಾತಗಳ್ಳಿ ಹುಂಡಿಯಲ್ಲಿ ಒಂದು ಕಿಂಗ ಪ್ಲೇಗಿನ ಉಪದ್ರವವಿದೆ.

ಸಾಧ್ವಿ
ತಾ॥ ೨೪-೧-೪೭ ಶುಕ್ರವಾರ

ದಕ್ಷಿಣ ಆಫ್ರಿಕದಲ್ಲಿ ವಿಶ್ವ ಸಂಸ್ಥೆಯ ಸತ್ವ ಪರೀಕ್ಷೆ

ವಿಶ್ವ ಸಂಸ್ಥೆಯವರು ದಕ್ಷಿಣ ಆಫ್ರಿಕದ ವರ್ಣ ವಿಭೇದದ ನೀತಿಯನ್ನು ಪ್ರತಿಭಟಿಸಿ ಮಾಡಿರುವ ನಿರ್ಧಾರಕ್ಕೆ ಈಗಾಗಲೇ ತಿರಸ್ಕಾರದ ಸೂಚನೆಗಳು ಎದ್ದು ಕಾಣುತ್ತಿವೆ. ಸದರಿ ನಿರ್ಣಯವನ್ನು ನಿರ್ಲಕ್ಷಿಸಿ ಅದಕ್ಕೆ ಅನುಗುಣವಾದ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲಾಗದೆಂದು ದಕ್ಷಿಣ ಆಫ್ರಿಕದ ಪಾರ್ಲಿಮೆಂಟ್ ಸಭೆಯಲ್ಲಿ ಡಾಕ್ಟರ್ ಮಲ್ಲರವರು ಒಂದು ನಿರ್ಣಯವನ್ನು ತಂದಿದ್ದಾರೆ. ಅಲ್ಲಿನ ಪ್ರಧಾನಿಗಳಾದ ಜನರಲ್ ಸ್ಮಟ್ಸರೂ ಸಹ ಅವರ ರಾಗಕ್ಕೆ ತಾಳವನ್ನು ಹಾಕುತ್ತಿದ್ದಾರೆ. ದಕ್ಷಿಣ ಆಫ್ರಿಕವು ವಿಶ್ವ ಜನಾಂಗ ಸಂಸ್ಥೆಯ ಸತ್ವ ಪರೀಕ್ಷೆಗೆ ಒರೆಗಲ್ಲಾಗಿ ಪರಿಣಮಿಸುತ್ತಿದೆ.

ಏಷ್ಯಾ ಖಂಡದ ಬಣ್ಣದ ಜನರನ್ನು ಹೊರದೂಡಲು ದಕ್ಷಿಣ ಆಫ್ರಿಕದ ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮವು ಬಿಳಿಯ ನಾಗರಿಕತೆಯ ಕುಂದಾಗಿದೆಯೆಂದೂ ಅದನ್ನು ರದ್ದು ಮಾಡದಿದ್ದರೆ ಆ ನಾಗರಿಕತೆಯೇ ನಶಿಸಿ ಹೋಗುವುದೆಂದೂ ಸಾರಿಸಲಾಗಿದೆ. ದಕ್ಷಿಣ ಆಫ್ರಿಕದ ಒಳ ಆಡಳಿತದಲ್ಲಿ ಯಾರೂ ಪ್ರವೇಶಿಸಲಾಗದೆಂದು ಜನರಲ್ ಸ್ಮಟ್ಸರು ಹೇಳುತ್ತಿದ್ದಾರೆ. ಈಗಿರುವ ಶಾಸನವನ್ನು ತೆಗೆದು ಹಾಕಿದರೆ ಭಾರತೀಯರ ವಿರುದ್ಧವಾಗಿ ಇನ್ನೂ ಕಠಿಣವಾದ ಶಾಸನವು ಬರುವುದೆಂದು ಇನ್ನು ಕೆಲವರು ಬೆದರಿಸುತ್ತಿದ್ದಾರೆ.

ದಕ್ಷಿಣ ಆಫ್ರಿಕದ ಪಾರ್ಲಿಮೆಂಟಿನ ಸದಸ್ಯರಲ್ಲಿ ಈ ವಿಚಾರವಾಗಿ ಒಮ್ಮತಾಭಿಪ್ರಾಯವಿರುವುದಿಲ್ಲ. ಸರ್ಕಾರದವರ ಪ್ರಯತ್ನವನ್ನು ಅನೇಕರು ಪ್ರತಿಭಟಿಸುತ್ತಿದ್ದಾರೆ. ಭಾರತೀಯರನ್ನೆಲ್ಲಾ ಆ ದೇಶದಿಂದ ಹೊರಕ್ಕೆ ಕಳುಹಿಸುವ ಪ್ರಯತ್ನವು ಯೂರೋಪಿನ ಹೊರಗಿರುವ ಐರೋಪ್ಯರನ್ನೆಲ್ಲಾ ವಾಪಸು ತಮ್ಮ ದೇಶಕ್ಕೆ ಹೋಗಬೇಕೆಂದು ಹೇಳುವಷ್ಟೇ ಸಾಧುವಾಗಿದೆಯೆಂದೂ ಸಹ ವಾದಿಸುವವರು ಆ ಸಭೆಯಲ್ಲಿದ್ದಾರೆ. ಇದುವರೆಗೆ ಭಾರತೀಯರು ನಡೆಸಿರುವ ಸತ್ಯಾಗ್ರಹ, ಹಿಂದೂಸ್ತಾನ ಸರ್ಕಾರದ ಪ್ರತೀಕಾರ, ವಿಶ್ವ ಸಂಸ್ಥೆಯ ನಿರ್ಧಾರ-ಇವುಗಳೊಂದೂ ದಕ್ಷಿಣ ಆಫ್ರಿಕದ ಸರ್ಕಾರದ ಮೇಲೆ ಪರಿಣಾಮವನ್ನುಂಟುಮಾಡಿರುವಂತೆ ಕಾಣುವುದಿಲ್ಲ. ಸಾಧ್ಯವಾದರೆ ಈ ಪ್ರಶ್ನೆಯನ್ನು ಮೂಲೆಗೆ ತಳ್ಳಿ ತಮ್ಮ ಹಾದಿಯನ್ನೇ ಹಿಡಿಯಲು ಅಲ್ಲಿನ ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಯುದ್ಧದ ಅನಂತರ ಪ್ರಪಂಚದಲ್ಲಿ ವರ್ಣದ್ವೇಷ, ಆರ್ಥಿಕ ಸುಲಿಗೆ, ಸಾಮಾಜಿಕ ಪಕ್ಷಪಾತ ಮತ್ತು ಸಾಮ್ರಾಜ್ಯಶಾಹಿಯ ಸಂಕೋಲೆಗಳಿಂದ ಸಣ್ಣ ಪುಟ್ಟ ರಾಷ್ಟ್ರಗಳನ್ನು ಪಾರು ಮಾಡುವ ಮಹೋದ್ದೇಶದಿಂದ ಯಾವ ಸಂಸ್ಥೆಯು ಸ್ಥಾಪಿಸಲ್ಪಟ್ಟಿತೋ ಅದರ ಉನ್ನತ ಆಶಯಗಳು ಮಣ್ಣು ಪಾಲಾಗುವ ಸ್ಥಿತಿಯು ಬಂದಿರುತ್ತದೆ.

ಹಲಕೆಲವು ಪ್ರಬಲ ರಾಷ್ಟ್ರಗಳು ಅನುಮೋದಿಸಿದ ವರ್ಣ ಪಕ್ಷಪಾತದ ನೀತಿಯನ್ನು ಧಿಕ್ಕರಿಸಿ ವಿಶ್ವ ಸಮಾನತೆಯ ಧ್ವಜವನ್ನು ಎತ್ತಿ ಹಿಡಿದ ಸಂಸ್ಥೆಯು ಒಂದು ಸಣ್ಣ ರಾಷ್ಟ್ರದ ಪ್ರತಿಭಟನೆಯನ್ನು ಸಹಿಸಿ ಅದರ ಸ್ವೇಚ್ಛಾ ಪ್ರವರ್ತನೆಗೆ ಅವಕಾಶವೀಯುವುದೆಂದು ನಂಬಲು ಕಾರಣವಿಲ್ಲ. ಇದುವರೆಗಿನ ಪ್ರತೀಕಾರಗಳಿಂದ ದಕ್ಷಿಣ ಆಫ್ರಿಕಕ್ಕೆ ಇನ್ನೂ ಜ್ಞಾನೋದಯವಾಗದಿದ್ದರೆ ಇಡೀ ಏಷ್ಯಾಖಂಡದ ರಾಷ್ಟ್ರಗಳೇ ಅಲ್ಲದೆ ಪ್ರಪಂಚದ ಜನಾಂಗಗಳೆಲ್ಲವೂ ಎದ್ದು ನಿಂತು ಅದಕ್ಕೆ ತಕ್ಕ ಶಾಸ್ತಿಯನ್ನು ಮಾಡಿ ಬುದ್ಧಿಯನ್ನು ಕಲಿಸುವ ಕಾಲವು ಬಂದೀತು!

ಶ್ರೀ ಜಯಲಕ್ಷ್ಮಿ ಜ್ಯೂಯೆಲರಿ ಮಾರ್ಟ್,

ಅಶೋಕಾ ರಸ್ತೆ, ಮೈಸೂರು.

ಹಳೇ ದಾರಿಯಲ್ಲಿ ಹೊಸ ಹೆಜ್ಜೆ.

ನಮ್ಮ ಎಲ್ಲಾ ಅಭಿಮಾನಿಗಳಲ್ಲಿಯೂ ವಿನಂತಿ.

ಶ್ರೀ ಕೃಷ್ಣ ಜ್ಯೂಯಲರಿ ಮಾರ್ಟಿನಲ್ಲಿ ಭಾಗಸ್ಥನಾಗಿ ವ್ಯಾಪಾರಮಾಡುತ್ತಿದ್ದ ನಾನು ಇದೇ ೨೭-೧-೪೭ ರ ಲಾಗಾಯತು ಮೈಸೂರು ಸಿಟಿ ಅಶೋಕಾ ರೋಡಿನಲ್ಲಿ "ಶ್ರೀ ಜಯಲಕ್ಷ್ಮಿ ಜ್ಯೂಯಲರಿ ಮಾರ್ಟ್" ಎಂಬ ಹೆಸರಿನ ವ್ಯಾಪಾರದ ಅಂಗಡಿಯನ್ನು ತೆರೆಯಲು ನಿಶ್ಚಯಿಸಿರುವುದರಿಂದ ಆ ವೇಳೆಗೆ ದಯಮಾಡಿಸಿ, ಫ... ತಾಂಬೂಲ ಸ್ವೀಕರಿಸಬೇಕಾಗಿ ಕೋರುತ್ತೇನೆ. ತಾವುಗಳು ಹಿಂದೆ ತೋರುತ್ತಿದ್ದ... ಕ್ಕಿಂತಲೂ ಅತಿಶಯವಾದ ಪ್ರೋತ್ಸಾಹವನ್ನುಂಟುಮಾಡುವುದರ ಮೂಲಕ ತಮ... ಗಳ ಹೆಚ್ಚಿಗೆ ಸೇವೆಗೆ ಅವಕಾಶವನ್ನು ಕಲ್ಪಿಸಬೇಕಾಗಿ ಪ್ರಾರ್ಥಿಸುವ,

ತಮ್ಮ ನಂಬಿಕೆಗೆ ಪಾತ್ರನಾದ,
ಕೆ. ನಾಗಪ್ಪಶೆಟ್ಟಿ, ಮೈಸೂರು.

ಮಹಾಜನಗಳಲ್ಲಿ ವಿನಂತಿ

ಸನ್ 1932 ನೇ ಇಸವಿಯಿಂದಲೂ ಮಿ॥ ರಾ॥ ಕೆ. ನಾಗಪ್ಪಶೆಟ್ಟಿ ಮತ್ತು ನನ್ನ ಇಬ್ಬರ ಪಾಲುಗಾರಿಕೆಯಲ್ಲಿ ನಡೆಯುತ್ತಿದ್ದ ಮೇಲ್ಕಂಡ ಅಂಗಡಿಯಲ್ಲಿ ಮೇಲ್ಕಂಡ ಮಿ॥ ರಾ॥ ಕೆ. ನಾಗಪ್ಪಶೆಟ್ಟರು ಅವರ ಯಾವತ್ತೂ ಹಕ್ಕು ಬಾಧ್ಯತೆಗಳನ್ನು ತಾ॥ 12-1-1947 ನೇ ಮಧ್ಯಾಹ್ನ ರಿಜಿಸ್ಟರ್ಡ್ ರಿಲೀಸ್ ಪತ್ರದ ಮೂಲಕ ನನಗೆ ಪೂರ್ಣ ಪ್ರತಿಫಲಕ್ಕೆ ವಹಿಸಿರುತ್ತಾರೆ. ಮೇಲ್ಕಂಡ ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟಿನ ಎಲ್ಲ ಮಾಲೀಕತ್ವ ಮತ್ತು ಮ್ಯಾನೇಜ್‌ಮೆಂಟೂ ಎಲ್ಲಾ ಹಕ್ಕುಬಾಧ್ಯತೆಗಳೂ ನನಗೇ ಸೇರಿರುತ್ತದೆಂದೂ, ಲಾಗಾಯ್ತಿನಿಂದಲೂ ಮಹಾಜನಗಳಿಗೆ ನ್ಯಾಯವಾದ ಬೆಲೆಗೆ ನಂಬಿಕೆಯಾಗಿ ಆಭರಣಗಳನ್ನೂ ಉಪಯೋಗದ ಚಿನ್ನ, ಬೆಳ್ಳಿ ಪದಾರ್ಥಗಳನ್ನೂ ಮಾಡಿ ಕೊಡುತ್ತಿರುವುದನ್ನು ಈ ಮುಂದೆಯೂ ಮಾಡುತ್ತಾ ಮಹಾಜನಗಳಿಗೆ ಸೇವೆಯನ್ನು ಸಲ್ಲಿಸುತ್ತಾ ಬರುತ್ತೇನೆಂದೂ, ಮಹಾಜನಗಳು ಎಂದಿನಂತೆಯೇ ತಮ್ಮ ಪ್ರೀತಿ ವಿಶ್ವಾಸವನ್ನು ಮುಂದೆಯೂ ತೋರುತ್ತಾ ತಮ್ಮ ಘನ ಪ್ರೋತ್ಸಾಹವನ್ನು ಕೊಡುತ್ತಾ ಬರಬೇಕಾಗಿ ವಿನಂತಿ.

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್,
ಶ್ರೀ ಕೃಷ್ಣಾ ಜ್ಯೂಯೆಲರಿ ಮಾರ್ಟ್, ಮೈಸೂರು.

ರಾಜಕಮಲ್, ಮೈಸೂರು

22-1-47 ರಿಂದ ಪ್ರತಿ ದಿನ ಮೂರು ಆಟಗಳು
ಸ್ವರ್ಣಲತಾ, ಮೋತೀಲಾಲ್ ನಟಿಸಿರುವ

- ಪ್ರತಿಜ್ಞಾ -

ವಿದ್ಯಾವಂತರಾದರೂ ಕುಡುಕತನದಿಂದ, ಹಾಗೆ ಕುಡುಕರ ಸಹವಾಸದಿಂದ ಹೆಂಡತಿ ಮಕ್ಕಳನ್ನೂ, ... ದ ಹುಟ್ಟಿದವರನ್ನೂ ಮನೆಯಿಂದ ಅಟ್ಟುತ್ತಾರೆ. ... ದೆ ಮನೆಮಠಗಳನ್ನು ಕಳೆದುಕೊಳ್ಳುತ್ತಾರೆಂಬುದನ್ನು ಈ ಚಿತ್ರದಲ್ಲಿ ಕಾಣಬಹುದು.

Morning Shows at 10-30 A.M. For 4 Days From 24-1-47

Wild West Days (Full Serial)

ಹೊಸ ನಮೂನೆಯ

ಬನಾರಿಸ್ ಬಾರ್ಡರ್ ಸೀರೆಗಳು, ಮೈಸೂರು ಸಿಲ್ಕು ಟಿಷ್ಯೂ ಸೀರೆಗಳು, ಬೆಂಗಾಲ್ ಸಿಲ್ಕು ಸೀರೆಗಳು ಮತ್ತು ಕೊಯಮತ್ತೂರು ಮಧುರೆ ಸೀರೆಗಳು
ಬಿಕರಿಗೆ ಸಿದ್ಧವಾಗಿವೆ.
ಇಂದೇ ಭೇಟಿ ಕೊಡಿರಿ.

ಬಿ. ಕೆಂಚಪ್ಪ ಸನ್ಸ್,

ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು.

Collegians and School Boys!

Here is your chance to see one of the greatest Historical events in Indian History, The story of EMPEROR HUMAYUN & WATER-BEARER

Sohrab Modi's

EK - DIN - KA - SULTAN

(ಏಕ್-ದಿನ್-ಕ-ಸುಲ್ತಾನ್)

Starring:-
Mehtab, Sadiq Ali and Wasti

Gala Release from 1-2-47 at CHAMUNDESWARI

An OSWAL FILMS Release, Bangalore City

OPERA TALKIES
Daily 3 Shows from 24-1-47

JUNGLE - GODDESS

Stars:-
Noah Berry, Dorothy Short

● ಪಂಜಾಬಿನ ಪ್ರಸಿದ್ಧ ಕಮ್ಯೂನಿಸ್ಟ್ ಮುಖಂಡರಾದ ಶ್ರೀ॥ ಬಿ. ಪಿ. ಎಲ್ ವೇದಿ ಮತ್ತು ಅವರ ಪಂಜಾಬ್ ಪತ್ನಿ ಶ್ರೀಮತಿ ಫ್ರೀಡಾಬೇದಿಯವರು ಕಮ್ಯೂನಿಸ್ಟ್ ಪಕ್ಷಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಹೊಸದಾಗಿ ಶಾಲುಗಳೂ, ಇಟಾಲಿಯನ್ ರಗ್ಗುಗಳೂ, ಇಂಗ್ಲೀಷ್ ಕೋಟಿಂಗ್ ಸರ್ಜುಗಳೂ ಬಂದಿರುತ್ತವೆ. ಬಂದು ನೋಡಿ.

ಬಾಹುಸಾರ್ ಟ್ರೇಡಿಂಗ್ ಕಂಪೆನಿ,
ಓಲ್ಡ್ ಮೈಸೂರು ಬ್ಯಾಂಕ್ ರೋಡು,
ಮೈಸೂರು.

Edited, printed and published by A. K. Nagarajan at the Sadhvi Press, D. Subbiah Road, Mysore.

ಪೋ. ರ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆಯ ಕಾಸು

ಸಂಪುಟ ೫] ಶನಿವಾರ ೨೫—೧—೪೭ [ಸಂಚಿಕೆ ೧೪೪

ತಿರುವಾಂಕೂರಿನಲ್ಲಿ ಸುಧಾರಣೆ ಸಿದ್ಧವಾಗಿದೆ

ಪೋಲೀಸಿನವನ ದುಂಡಾವರ್ತಿಯೇ?

ಮೈಸೂರು ೨೫

ಚಾಮರಾಜನಗರದ ಪತ್ರಿಕೋದ್ಯೋಗಿಗಳೂ, ಮಾಜಿ ಪೌರಸಭಾ ಸದಸ್ಯರೂ ಆದ ಶ್ರೀ ಗೋಪಾಲರಾಯರು ನಿನ್ನೆ ಮಧ್ಯಾಹ್ನ ತಮ್ಮ ಮನೆಯವರನ್ನು ಕೈಲಿಗೆ ಕರೆದುಕೊಂಡು ಹೋಗುತ್ತಿದ್ದಾಗ ಖಿಲ್ಲೆ ಮೊಹಲ್ಲದಲ್ಲಿ ಪೋಲೀಸ್ ಕಾನ್ಸ್ಟೇಬಲನೊಬ್ಬ ಅವರು ನಗುವನ ಹಳ್ಳಿ ಮೊಕದ್ದಮೆಗೆ ಸಂಬಂಧಪಟ್ಟವರೆಂದು ಭಾವಿಸಿ, ಅಗೌರವದ ಮಾತನಾಡಿ, ಅವರ ರಟ್ಟೆ ಹಿಡಿದು ಎಳೆದು ಪೋ|| ಸ|| ಇ|| ಶ್ರೀ ಸುಬ್ರಹ್ಮಣ್ಯಯವರ ಮನೆಗೆ ಎಳೆದುಕೊಂಡು ಹೋದನೆಂದೂ, ಅಲ್ಲಿ ಮಾತುಕತೆಗಳು ನಡೆದು ಶ್ರೀ ಗೋಪಾಲರಾಯರು ಸದರಿ ಮೊಕದ್ದಮೆಗೆ ಸಂಬಂಧಪಟ್ಟವರಲ್ಲವೆಂದು ತಿಳಿದ ಮೇಲೆ ಕಳುಹಿಸಲ್ಪಟ್ಟರೆಂದೂ ಹೀಗೆ ತಮ್ಮನ್ನು ಅಗೌರವದಿಂದ ಕಂಡು, ಅಕ್ರಮ ಬಂಧನಕ್ಕೊಳಪಡಿಸಿದುದಕ್ಕಾಗಿ ಸದರಿ ಕಾನ್ಸ್ಟೇಬಲನು ಅವರ ಕ್ಷಮೆ ಬೇಡಿಕೊಳ್ಳತಕ್ಕ ಏರ್ಪಾಡವನ್ನು ಕೊಡದಿದ್ದಲ್ಲಿ ಅವನ ಮೇಲೆ ಶ್ರೀ ಗೋಪಾಲರಾಯರು ಮುಂದಿನ ಕ್ರಮ ಕೈಕೊಳ್ಳುವುದಾಗಿ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಿಗೆ ತಿಳಿಸಿರುವರೆಂದು ತಿಳಿದುಬಂದಿದೆ.

ತಿದ್ದುಪಡಿ

ನಿನ್ನೆಯ ದಿನ ಪ್ರಕಟವಾಗಿರುವ ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟಿನ ಜಾಹಿರಾತಿನಲ್ಲಿ ಮಹಾಜನಗಳಲ್ಲಿ ವಿನಂತಿ ಎಂಬುದರ ಕೆಳಗೆ ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್, ಅಶೋಕಾರೋಡ್, ಮೈಸೂರು ಪ್ರೊಪ್ರೈಟರ್ ಕೆ. ಎಸ್. ಶ್ರೀಕಂಠಶೆಟ್ಟಿ ಎಂಬುದನ್ನು ಸೇರಿಸಿ ಓದಿಕೊಳ್ಳಬೇಕಾಗಿ ಕೋರಲಾಗಿದೆ.

ಬೋಸರು ಭಾರತದಲ್ಲೇ ಇರುವರೇ?

ಕಲಕತ್ತಾಬಾದಿನಲ್ಲಿರುವ ಅಖಿಲ ಭಾರತ ಕಾಂಗ್ರೆಸ್ ಕಛೇರಿಗೆ ಕಳೆದ ಬುಧವಾರ ಮಾರಿಯೋ ಒಬ್ಬರು ಸಾಧು ವೇಷ ಧರಿಸಿ ಬಂದು ಬಹಳ ಹೊತ್ತು ಮಾತುಕತೆ ನಡೆಸಿ ಹೋದರು. ಕಛೇರಿಯ ವಿದೇಶಾಂಗ ಶಾಖಾ ಕಾರ್ಯದರ್ಶಿ ಶ್ರೀ|| ರಾಜಕುಮಾರರಿಗೆ ಆಗಂತುಕರು ನೇತಾಜಿ ಬೋಸರೇ ಇದ್ದಿರಬಹುದೆಂದು ಶಂಕೆ ಉಂಟಾಗಿರುವುದಾಗಿ ವರದಿಯಾಗಿದೆ.

ಜಿಲ್ಲಾ ಬೋರ್ಡು ಚುನಾವಣೆ

ಕಾಂಗ್ರೆಸ್ಸು ಭಾಗವಹಿಸುವುದು

ಸ್ವ ಸು. ಫೋ] ಬೆಂಗಳೂರು ೨೫

ಬರುವ ಏಪ್ರಿಲ್ ತಿಂಗಳಲ್ಲಿ ನಡೆಯಲಿರುವ ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಮೈಸೂರು ಕಾಂಗ್ರೆಸ್ ಪರವಾಗಿ ಉಮೇದುವಾರರನ್ನು ನಿಲ್ಲಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿನ್ನೆ ತೀರ್ಮಾನ ಮಾಡಿತು.

ವ್ಯವಸಾಯ ಸಂಶೋಧನಾ ಕೇಂದ್ರ

ಯುದ್ಧಾನಂತರ ಪುನಶ್ಚರಚನಾ ಕಾರ್ಯಕ್ರಮದಲ್ಲಿ ಸರ್ಕಾರದವರು ವ್ಯವಸಾಯ, ಪಶುವೈದ್ಯ ಮತ್ತು ಜಾನುವಾರು ಅಭಿವೃದ್ಧಿ ಬಗ್ಗೆ ಪಂಚ ವಾರ್ಷಿಕ ಯೋಜನೆಯನ್ನು ಅಂಗೀಕರಿಸಿದ್ದಾರೆ. ವ್ಯವಸಾಯದ ಯೋಜನೆಗೆ ೧೬ ಲಕ್ಷ ರೂ ಗಳ ಆವೃತ ಮತ್ತು ೭೬.೨೮ ಲಕ್ಷ ಅನಾವೃತ ವೆಚ್ಚಗಳಾಗಲಿವೆ. ಇದರಂತೆ ಸಂಸ್ಥಾನದಲ್ಲಿ ವ್ಯವಸಾಯ ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸಲಾಗುವುದು.

ವಿಶ್ವ ವಿದ್ಯಾನಿಲಯ ಸಂಘ

ಮೈಸೂರು ೨೫

ಮೈಸೂರು ವಿಶ್ವ ವಿದ್ಯಾನಿಲಯ ಸಂಘದ ವಾರ್ಷಿಕೋತ್ಸವವು ಇದೇ ೩೦ ನೇ ತಾ|| ಗುರುವಾರ ಮಹಾರಾಜಾ ಕಾಲೇಜ್ ಆವರಣದಲ್ಲಿ ಜರುಗುವುದು. ಬೊಂಬಾಯಿಯ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಕೆ. ಎಫ್. ಪಾಟೀಲ್‌ರವರು ಭಾಷಣ ಮಾಡುವರು.

ತಿರುವಾಂಕೂರಿನ ಹೊಸ ರಾಜ್ಯಾಂಗ

ಇದೇ ೨೭ ನೇ ತಾ|| ಸೋಮವಾರ ತಿರುವಾಂಕೂರು ಹೊಸ ರಾಜ್ಯಾಂಗ ಸುಧಾರಣೆಗಳ ರೂಪುರೇಷೆಗಳನ್ನು ಪ್ರಸಿದ್ಧಪಡಿಸಲಾಗುವುದು. ಫೆಬ್ರವರಿ ೩ ನೇ ವಾರದಲ್ಲಿ ದಿವಾನರು ರಾಜಕೀಯ ಪಕ್ಷಗಳ ಮತ್ತು ಇತರ ಪ್ರಮುಖರನ್ನು ಕರೆಸಿ ಸಮ್ಮೇಳನವನ್ನು ನಡೆಸುವರು. ಸಾರ್ವಜನಿಕಾಭಿಪ್ರಾಯವನ್ನು ತಿಳಿದುಕೊಂಡು ಮಾರ್ಚಿ ಆರಂಭದಲ್ಲಿ ಹೊಸ ರಾಜ್ಯಾಂಗವನ್ನು ಘೋಷಿಸಲಾಗುವುದೆಂದು ತಿಳಿದುಬಂದಿದೆ.

ಸ್ವಾತಂತ್ರ್ಯ ದಿನಾಚರಣೆಗೆ ಮದ್ರಾಸ್ ಸರ್ಕಾರದ ಸೌಲಭ್ಯ

ಪ್ರತಿಬಂಧಕಾಜ್ಞೆಗಳು ಜಾರಿಯಲ್ಲಿದ್ದರೂ ನಾಳೆದಿನ ಸ್ವಾತಂತ್ರ್ಯದಿನಾಚರಣೆ ಸಂಬಂಧದಲ್ಲಿ ಧ್ವಜವಂದನೆ ನಡೆಸಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸಲು ಅವಕಾಶ ಮಾಡಿಕೊಡುವಂತೆ ಮದ್ರಾಸ್ ಸರ್ಕಾರವು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆಜ್ಞೆ ಇತ್ತಿದೆ. ಮದ್ರಾಸ್ ನಗರದಲ್ಲೂ ಪೋಲೀಸರಿಗೆ ಇದೇ ರೀತಿ ಸೂಚನೆ ಕೊಡಲಾಗಿದೆ.

ಶಾಲಾ ಕಾಲೇಜುಗಳ ಮುಷ್ಕರ

ಮೈಸೂರು ೨೫

ಇಂಡೋ ಚೀಣಾದಲ್ಲಿ ವಿಯಟ್‌ನಾಂ ಪ್ರಜಾಸರ್ಕಾರ ಸ್ಥಾಪನೆಯ ಹೋರಾಟಕ್ಕೆ ಸಹಾನುಭೂತಿ ಸೂಚಿಸಲು, ಕಲ್ಕತ್ತಾ ವಿದ್ಯಾರ್ಥಿಗಳ ಮೇಲೆ ನಡೆದ ಪೋಲೀಸ್ ಅತ್ಯಾಚಾರವನ್ನು ಖಂಡಿಸಲು ಮತ್ತು ಶ್ರೀ ಕೆ. ಹನುಮಂತಯ್ಯನವರ ಮೇಲೆ ವಿಧಿಸಿರುವ ಶಿಕ್ಷೆಯನ್ನು ಖಂಡಿಸಲೂ ಇದೇ ೨೭ ನೇ ತಾ|| ಸೋಮವಾರ ಮೈಸೂರು ನಗರದ ಶಾಲಾ ಕಾಲೇಜುಗಳಲ್ಲಿ ಮಹಾ ಮುಷ್ಕರವನ್ನು ಆಚರಿಸಲು ವಿದ್ಯಾರ್ಥಿ ಕಾಂಗ್ರೆಸ್ಸಿನವರು ಏರ್ಪಾಡುಮಾಡಿದ್ದಾರೆ.

ತರುಣ ಹಿಂದೂ ಮಹಾಸಭೆ

ನಾಳೆ ಬೆಳಗ್ಗೆ ೧೦ ಘಂಟೆಗೆ ಮೈಸೂರು ತರುಣ ಹಿಂದೂ ಮಹಾಸಭೆಯ ಕಾರ್ಯಕಾರಿ ಸಮಿತಿ ಮತ್ತು ಸಾಮಾನ್ಯ ಸದಸ್ಯರ ಸಭೆಯು ಶ್ರೀರಾಮಪೇಟೆಯಲ್ಲಿರುವ ಸಭೆಯ ಕಛೇರಿಯಲ್ಲಿ ನಡೆಯಲಿರುವುದರಿಂದ ಸದಸ್ಯರುಗಳೆಲ್ಲಾ ತಪ್ಪದೆ ದಯಮಾಡಿಸಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

ಆರಾಧನೆ

ರಾಜಧಾನಿಯ ಪಿಳ್ಳೆ ಮೊಹಲ್ಲಾ ವೀಣೆ ಶಾಮಣ್ಣನವರ ಬೀದಿಯಲ್ಲಿರುವ ಶ್ರೀನಿವಾಸ ರಾಘವೇಂದ್ರ ಸೇವಾಮಂದಿರದಲ್ಲಿ ತಾ|| ೨೨ ನೇ ಬುಧವಾರದಿಂದ ಈದಿನದವರೆಗೆ ಮಹನೀಯ ಪುರಂದರದಾಸರವರ ವಿರಾಚರಣೆಯನ್ನ ಭಕ್ತಮಂಡಲಿಯವರು ನಡೆಸುತ್ತಿರುವರು.

ಲೀಗ್ ಮುಖಂಡರ ದಸ್ತಗಿರಿ

ವೈಸರಾಯ್ ಕೌನ್ಸಿಲಿನ ಮಾಜಿ ಸದಸ್ಯರಾದ ಸರ್ ಫಿರೋಜ್ ಖಾನ್ ನೂನ್, ಮಮ್ದೋಟಿನ ನವಾಬ್, ಮಿಯಾನ್ ಇಫ್ತಿಕಾರುದ್ದೀನ್ ಮತ್ತು ಇತರ ಕೆಲವು ಮುಸ್ಲಿಂ ಲೀಗ್ ನಾಯಕರನ್ನು ನಿನ್ನೆದಿನ ಪಂಜಾಬ್ ಸರ್ಕಾರವು ದಸ್ತಗಿರಿ ಮಾಡಿದೆ. ಮುಸ್ಲಿಂ ಲೀಗ್ ನ್ಯಾಷನಲ್ ಗಾರ್ಡ್ ಮತ್ತು ರಾಷ್ಟ್ರೀಯ ಸ್ವಯಂಸೇವಕಸಂಘಗಳನ್ನು ಅಕ್ರಮ ಕೂಟಗಳೆಂದು ಸಾರಿ ಅವುಗಳ ಕಛೇರಿಗಳನ್ನು ಶೋಧನೆಮಾಡಿ ಸಮಸ್ತ ಬಗ್ಗೆಯ ಶಿರಸ್ತ್ರಾಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಶ್ರೀ ಜಯಲಕ್ಷ್ಮಿ ಜ್ಯೂಯೆಲರಿ ಮಾರ್ಟ್,

ಅಶೋಕಾ ರಸ್ತೆ, ಮೈಸೂರು.

ಹಳೇ ದಾರಿಯಲ್ಲಿ ಹೊಸ ಹೆಜ್ಜೆ.

ನಮ್ಮ ಎಲ್ಲಾ ಅಭಿಮಾನಿಗಳಲ್ಲಿಯೂ ವಿನಂತಿ.

ಶ್ರೀ ಕೃಷ್ಣ ಜ್ಯುಯಲರಿ ಮಾರ್ಟಿನಲ್ಲಿ ಭಾಗಸ್ಥನಾಗಿ ವ್ಯಾಪಾರವಾಡ ತ್ತಿದ್ದ ನಾನು ಇದೇ ೨೭-೧-೪೭ ರ ಲಾಗಾಯಿತು ಮೈಸೂರು ಸಿಟಿ ಅಶೋಕಾ ರೋಡಿನಲ್ಲಿ "ಶ್ರೀ ಜಯಲಕ್ಷ್ಮಿ ಜ್ಯುಯಲರಿ ಮಾರ್ಟ್" ಎಂಬ ಸರಾಫ್ ವ್ಯಾಪಾರದ ಅಂಗಡಿಯನ್ನು ತೆರೆಯಲು ನಿಶ್ಚಯಿಸಿರುವುದರಿಂದ ಆ ವೇಳೆಗೆ ದಯಮಾಡಿಸಿ, ಫಲ ತಾಂಬೂಲ ಸ್ವೀಕರಿಸಬೇಕಾಗಿ ಕೋರುತ್ತೇನೆ. ತಾವುಗಳು ಹಿಂದೆ ತೋರುತ್ತಿದ್ದ ಪ್ರೀತಿಯೂ ಆತ್ಮೀಯವಾದ ಪ್ರೋತ್ಸಾಹವನ್ನುಂಟುಮಾಡುವುದರ ಮೂಲಕ ತಮ್ಮಗೆ ಹೆಚ್ಚಿಗೆ ಸೇವೆಗೆ ಅವಕಾಶವನ್ನು ಕಲ್ಪಿಸಬೇಕಾಗಿ ಪ್ರಾರ್ಥಿಸುವ,

ತಮ್ಮ ನಂಬಿಕೆಗೆ ಪಾತ್ರನಾದ,

ಕೆ. ನಾಗಪ್ಪಶೆಟ್ಟಿ, ಮೈಸೂರು.

ಪ್ರಕಟಣೆ

ಇಂಗ್ಲೀಷ್ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಮುಗಿಸಿ ಕಂಪಾಜಿಟರ್ ವೃತ್ತಿಯಲ್ಲಿ ಶಿಕ್ಷಣ ಪಡೆಯಲು ಇಚ್ಛೆಯುಳ್ಳ ಉಮೇದವಾರರು ಇದೇ ೩-೨-೪೭ ರ ಒಳಗೆ ಈ ಕೆಳಗೆ ರುಜು ಮಾಡಿರುವವರಿಗೆ ಅರ್ಜಿ ಸಲ್ಲಿಸಬೇಕೆಂದು ಕೋರಲಾಗಿದೆ. ಶಿಕ್ಷಣವು 9 ತಿಂಗಳ ಕಾಲ ಕೊಡಲ್ಪಟ್ಟು, ಆ ಅವಧಿಯ ನಂತರ ಅವರನ್ನು ಕಂಪೋಸಿಂಗ್ ಥಿಯರಿ ಮತ್ತು ಪ್ರಾಕ್ಟೀಸುಗಳಲ್ಲಿ ಪರೀಕ್ಷಿಸಲಾಗುವುದು. ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನು ಅವರವರ ಯೋಗ್ಯತಾನುಸಾರ ಖಾಲಿ ಬೀಳುವ ಜಾಗಗಳಿಗೆ ಸರ್ಕಾರದಿಂದ ನಿಗದಿ ಮಾಡಲ್ಪಟ್ಟಿರುವ ಸಂಬಳದ ಮೇಲೆ ತೆಗೆದುಕೊಳ್ಳಲಾಗುವುದು. ಮೇಲ್ಕಂಡ ಅವಧಿಯ ನಂತರ ಬರತಕ್ಕ ಅರ್ಜಿಗಳನ್ನು ಪರಿಶೀಲಿಸಲಾಗುವುದಿಲ್ಲ. ಅವರುಗಳಿಗೆ ಶಿಕ್ಷಣದ ಅವಧಿಯಲ್ಲಿ ತಿಂಗಳಿಗೆ 20 ರೂ ನಂತೆ ವೇತನ ಕೊಡಲಾಗುವುದು. ಈ ಅಪ್ರೆಂಟಿಸರು ಅಪೇಕ್ಷಿಸಿದಲ್ಲಿ ಸರ್ಕಾರದಿಂದ ಮಂಜೂರಾಗಿರುವ ಸಂಬಳದ ದರದಂತೆ ಪೀಸ್‌ವರ್ಕ್ ಮಾಡಲು, ಬದ್ಧರಾಗಿರಲು ಅಥವಾ ಹಾಗೆ ಮಾಡಲು ಇಷ್ಟವಿಲ್ಲದಿದ್ದಲ್ಲಿ ಅವರು ಶಿಕ್ಷಣದ ಅವಧಿಯಲ್ಲಿ ವೇತನವಾಗಿ ಪಡೆದಿರುವ ಪೂರ್ತಿ ಮೊಬಲಗನ್ನು ವಾಪಸು ಕೊಡಲು ಸಿದ್ಧರಾಗಿರುವುದಾಗಿ ಮುಚ್ಚಳಿಕೆಯನ್ನು ಬರೆದು ಕೊಡಬೇಕು. ಅರ್ಜಿಗಳು ಈ ಕೆಳಗೆ ಕಂಡ ವಿವರಗಳನ್ನೊಳಗೊಂಡಿರಬೇಕು.—

(1) ಹೆಸರು (2) ತಂದೆಯ ಹೆಸರು (3) ಜಾತಿ (4) ವಾಸಸ್ಥಳ ವಿಳಾಸ (5) ಅಂಗೀಕೃತವಾದ ಮಾಧ್ಯಮಿಕ ಶಾಲೆಯಲ್ಲಿ ಮಿಡಲ್ ಸ್ಕೂಲ್ ಶಿಕ್ಷಣವನ್ನು ಮುಗಿಸಿರುವ ಬಗ್ಗೆ ಸರ್ಟಿಫಿಕೇಟನ್ನು ಲಗತ್ತಿಸಿದೆಯೇ? (6) ಸರ್ಟಿಫಿಕೇಟಿನಲ್ಲಿ ನಮೂದಾಗಿರುವಂತೆ ವಯಸ್ಸು

ಬಿ. ಕೃಷ್ಣಸ್ವಾಮಿ ಶೆಟ್ಟಿ

ಸೂಪರಿಂಟೆಂಡೆಂಟ್, ಗವರ್ನಮೆಂಟ್ ಪ್ರಿಂಟಿಂಗ್, ಬೆಂಗಳೂರು.

ಸಾಧ್ವಿ

ತಾ|| ೨೫-೧-೪೭ ಶನಿವಾರ

ಸ್ವಾತಂತ್ರ್ಯ ದಿನಾಚರಣೆ

ನಾಳೆ ದಿನ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಭಾರತೀಯರೆಲ್ಲರೂ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸುವರು. ದೇಶ ಮಾತೆಯನ್ನು ದಾಸ್ಯ ಶೃಂಖಲೆಗಳಿಂದ ಪಾರು ಮಾಡಲು ಮತ್ತೊಮ್ಮೆ ಪಣವನ್ನು ತೊಡುವರು. ಪೂರ್ಣ ಸ್ವರಾಜ್ಯ ಸ್ಥಾಪನೆಯೇ ನಲವತ್ತು ಕೋಟಿ ಭಾರತೀಯರ ಜೀವನದ ಗುರಿಯೆಂದು ಸಾರುವರು.

ಈ ಸಾರಿ ದೇಶಬಾಂಧವರು ಸ್ವಾತಂತ್ರ್ಯ ದಿನಾಚರಣೆಯನ್ನು ಗಂಭೀರವಾಗಿಯೂ, ಶ್ರದ್ಧೆಯಿಂದಲೂ ನೆರವೇರಿಸುವಂತೆ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಆಜ್ಞೆ ಮಾಡಿರುತ್ತಾರೆ. ಆಸೇತು ಹಿಮಾಚಲ ಪರ್ಯಂತ ಅಖಂಡ ಹಿಂದೂಸ್ಥಾನದಲ್ಲಿ ಮಾತ್ರವೇ ಅಲ್ಲದೆ ಇಡೀ ಜಗತ್ತಿನಲ್ಲಿ ಭಾರತೀಯರು ವಾಸಿಸುವ ಕಡೆಗಳಲ್ಲೆಲ್ಲಾ ಈ ದಿನಾಚರಣೆಯನ್ನು ನಾಳೆ ದಿನ ನಡೆಸಲಾಗುವುದು. ಇಂದಿನ ಪರಿಸ್ಥಿತಿಯಲ್ಲಿ, ಕೋಮುವಾರು ಭಿನ್ನಭಾವಗಳು ಪ್ರಾಬಲ್ಯ ಹೊಂದಿರುವ ಈ ಸಮಯದಲ್ಲಿ ಯಾವ ಆಡಂಬರವೂ ಇಲ್ಲದೆ ಸರಳ ರೀತಿಯಲ್ಲಿ ಈ ದಿನಾಚರಣೆಯನ್ನು ನಡೆಸಬೇಕೆಂದು ರಾಷ್ಟ್ರನಾಯಕರು ತಿಳಿಸಿರುತ್ತಾರೆ. ಸಭೆ, ಮೆರವಣಿಗೆ, ಅಥವಾ ಪ್ರದರ್ಶನಗಳ ಅಗತ್ಯವಿಲ್ಲವೆಂದು ಹೇಳಿರುತ್ತಾರೆ. ವೈಯಕ್ತಿಕವಾಗಿಯಾಗಲೀ, ಗುಂಪುಗಳಲ್ಲಿಯಾಗಲೀ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸಬಹುದೆಂದು ಸೂಚಿಸಿರುತ್ತಾರೆ. ಆದುದರಿಂದ ಭಾಷಣಗಳಾಗಲೀ, ಆಡಂಬರ ಪ್ರದರ್ಶನಗಳಾಗಲೀ ಅವಕಾಶವಿರುವುದಿಲ್ಲ. ಪೂರ್ಣ ಸ್ವಾತಂತ್ರ್ಯ ಸಾಧನೆಯ ಧ್ಯೇಯವು ಸಕಲರ ಹೃದಯದಲ್ಲಿಯೂ ನಾಟಿರುವುದರಿಂದ ಅದಕ್ಕಾಗಿ ಭಾಷಣ ಮತ್ತು ಪ್ರದರ್ಶನಗಳ ಅವಶ್ಯಕತೆಯು ಇನ್ನು ಉಳಿದಿರುವುದಿಲ್ಲ.

ರಾಜ್ಯಾಂಗ ರಚನಾ ಸಮಿತಿಯನ್ನು ಸ್ಥಾಪಿಸಿ ಭಾರತೀಯರು ಸ್ವಾತಂತ್ರ್ಯದ ಹೆಬ್ಬಾಗಿಲನ್ನು ಈಗಾಗಲೇ ಮುಟ್ಟಿರುವರು. ಬ್ರಿಟಿಷರು ಗಂಟು ಮೂಟೆಗಳನ್ನು ಕಟ್ಟಿ ವಾಪಸು ಹೋಗಲು ಸಿದ್ಧರಾಗುತ್ತಿರುವರು. ಪೂ

ಹಾವಿನ ವಿಷಕ್ಕೆ ಚಿಕಿತ್ಸೆ

ಕಳೆದ ೨೦ ನೇ ತಾ|| ಬೆಳವಾಡಿ ಗ್ರಾಮದ ಹಮೀಲದಕ್ಕ ಮಾದಯ್ಯ ಎಂಬುವನಿಗೆ ಹಾವು ಕಡಿಯಿತು. ಕಸ್ತೂರಿ ಬಾ ಶಿಬಿರದ ಆಯುರ್ವೇದ ಉಪಾಧ್ಯಾಯರಾದ ಶ್ರೀ ಎಂ. ಜಿ. ಶಿಂಗ್ರಿಯಂಗಾರ್ ಮತ್ತು ಅವರ ಶಿಷ್ಯರು ತಮ್ಮ ಕಾರ್ತೀಬೀರಿನ ಚಿಕಿತ್ಸೆಯಿಂದ ಮಾದಯ್ಯನನ್ನು ಪಾರು ಮಾಡಿದರು. ಆ ಚಿಕಿತ್ಸೆ ಕ್ರಮ ಈ ರೀತಿ ಇದೆ:—ಕಾರ್ತೀಬೀರನ್ನು ನಿಂಬೆಹುಳಿಯಲ್ಲಿ ತೇದಿ ಹೊಟ್ಟೆಗೆ ಪದೇ ಪದೇ ಕುಡಿಯಿಸುವುದು. ಹಾವು ಕಡಿದ ಜಾಗವನ್ನು ರಕ್ತ ಬರುವಂತೆ ಗೀರಿ ಆ ಗಾಯಕ್ಕೂ ಅದನ್ನು ಹಚ್ಚತಕ್ಕದ್ದು.

ಪೂರ್ಣ ಸ್ವಾತಂತ್ರ್ಯ ಸ್ಥಾಪನೆಯ ಘೋಷಣೆಯು ಆಗುವುದು ಮಾತ್ರ ಉಳಿದಿದೆ. ಇದಕ್ಕಾಗಿ ಭಾರತೀಯರೆಲ್ಲರೂ ನಾಳೆ ದೃಢ ಸಂಕಲ್ಪ ಮಾಡಿ ಬರುವ ವರ್ಷ ಸ್ವತಂತ್ರ ಪ್ರಜಾ ಸರ್ಕಾರದ ಸ್ಥಾಪನೆಯನ್ನು ಘೋಷಿಸಲು ನೆರವಾಗಲೆಂದು ನಾವು ಹಾರೈಸುತ್ತೇವೆ.

OPERA TALKIES

Daily 3 Shows from 24-1-17

JUNGLE - - GODDESS

Stars:-
Noah Berry, Dorothy Short

ಮಕ್ಕಳ ತೊಟ್ಟಿಲಿಗೆ

ಹಾಸುವ ರಬ್ಬರ್ ಷೀಟುಗಳು ಬಂದಿವೆ.
ಬಾಬುಸಾಬ್ ಟ್ರೇಡಿಂಗ್ ಕಂಪೆನಿ,
ಓಲ್ಡ್ ಮೈಸೂರು ಬ್ಯಾಂಕ್ ರೋಡು,
ಮೈಸೂರು

ಮಹಾಜನಗಳಲ್ಲಿ ವಿನಂತಿ

ಶ್ರೀ ಕೃಷ್ಣಾ ಜ್ಯುಯೆಲರಿ ಮಾರ್ಟ್,
ಅಶೋಕ ರೋಡ್, ಮೈಸೂರು
ಪ್ರೊಪ್ರೈಟರ್—ಕೆ. ಎಸ್. ಶ್ರೀಕಂಠಶೆಟ್ಟಿ

ಸ್ 1932 ನೇ ಇಸವಿಯಿಂದಲೂ ಮ|| ರಾ|| ಕೆ. ನಾಗಪ್ಪಶೆಟ್ಟಿ ಮತ್ತು ನನ್ನ ಇಬ್ಬರ ಪಾಲುಗಾರಿಕೆಯಲ್ಲಿ ನಡೆಯುತ್ತಿದ್ದ ಮೇಲ್ಕಂಡ ಅಂಗಡಿಯಲ್ಲಿ ಮೇಲ್ಕಂಡ ಮ|| ರಾ|| ಕೆ. ನಾಗಪ್ಪ ಶೆಟ್ಟರು ಅವರ ಯಾವತ್ತು ಹಕ್ಕು ಬಾಧ್ಯತೆಗಳನ್ನು ತಾ|| 12-1-1947 ನೇ ಮರ್ಜುವಿನ ರಿಜಿಸ್ಟರ್ಡ್ ರಿಲೀಸ್ ಪತ್ರದ ಮೂಲಕ ನನಗೆ ಪೂರ್ಣ ಪ್ರತಿ ಫಲಕ್ಕೆ ವಹಿಸಿರುತ್ತಾರೆ. ಮೇಲ್ಕಂಡ ಶ್ರೀ ಕೃಷ್ಣಾ ಜ್ಯುಯೆಲರಿ ಮಾರ್ಟಿನ ವಿಶಿಷ್ಟ ಮಾಲೀಕತ್ವ ಮತ್ತು ಮ್ಯಾನೇಜ್‌ಮೆಂಟೂ, ಎಲ್ಲಾ ಹಕ್ಕುಬಾಧ್ಯತೆಗಳೂ ನನಗೊಬ್ಬನಿಗೇ ಸೇರಿರುತ್ತದೆಂದೂ, ರಾಗಾಯ್ತಿನಿಂದಲೂ ಮಹಾಜನಗಳಿಗೆ ನ್ಯಾಯವಾದ ಬೆಲೆಗೆ ನಂಬಿಕೆಯಾಗಿ ಆಭರಣಗಳನ್ನೂ, ಉಪಯೋಗದ ಚಿನ್ನ, ಬೆಳ್ಳಿ ಪದಾರ್ಥಗಳನ್ನೂ ಮಾಡಿ ಕೊಡುತ್ತಿರುವುದನ್ನು ಈ ಮುಂದೆಯೂ ಮಾಡುತ್ತಾ ಮಹಾಜನಗಳಿಗೆ ಸೇವೆಯನ್ನು ಸಲ್ಲಿಸುತ್ತಾ ಬರುತ್ತೇನೆಂದೂ, ಮಹಾಜನಗಳು ಎಂದಿನಂತೆಯೇ ತಮ್ಮ ಪ್ರೀತಿ ವಿಶ್ವಾಸಗಳನ್ನು ಮುಂದೆಯೂ ತೋರುತ್ತಾ, ತಮ್ಮ ಘನ ಪ್ರೋತ್ಸಾಹವನ್ನು ಕೊಡುತ್ತ ಬರಬೇಕಾಗಿ ವಿನಂತಿ.

ಕೆ. ಎಸ್. ಶ್ರೀಕಂಠಶೆಟ್ಟಿ,
ಪ್ರೊಪ್ರೈಟರ್,

Edited, printed and published by A. R. Nagarajan at the Sadhvi Press D Subbiah Road Mysore

§ ಒಂಟಿಕೊಪ್ಪಲು ತಿಲಕ ... ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ... ಯದಲ್ಲಿ ಸ್ವಾತಂತ್ರ್ಯ ದಿನಾಚರಣೆ... ನಾಳೆ ಬೆಳಗ್ಗೆ ೯ ಗಂಟೆಗೆ ನಡೆಸ... ವಿದ್ಯಾರ್ಥಿಗಳೆಲ್ಲರೂ ಹಾಜರಾಗಿ ... ಯನ್ನು ಸ್ವೀಕರಿಸಬೇಕಾಗಿ ಕಾರ್ಯ... ಗಳು ಕೋರಿರುತ್ತಾರೆ

ನಿಮ್ಮ ಮೈ ಮೊಶವುಲ್ಲಿನಂ...
ಹೊಳೆಯಬೇಕೆ ? ನೀವು
ಲಾವಣ್ಯ ಮೂರ್ತಿಗಳಾಗಬೇ...
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮ...
ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿ
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು

ಹೊಸ ನಮೂನೆಯ

ಬನಾರಿಸ್ ಜಾರ್ಜೆಟ್ ಸೀರೆಗಳು, ಮೈಸೂರು ಸಿಲ್ಕು ಟಿಷ್ಯೂ ಸೀರೆಗಳು, ಬೆಂಗಾಲ್ ಸಿಲ್ಕು ಸೀರೆಗಳು ಮತ್ತು ಕೊಯಮುತ್ತೂರು ಮಧುರೆ ಸೀರೆಗಳು
ಬಿಕರಿಗೆ ಸಿದ್ಧವಾಗಿವೆ.
ಇಂದೇ ಭೇಟಿ ಕೊಡಿರಿ.

ಬಿ. ಕೆಂಚಪ್ಪ ಸನ್ಸ್

ಜವಳಿ ಅಂಗಡಿ : — ದೊಡ್ಡಪೇಟೆ, ಮೈಸೂರು.

ಹರಾಜು ಇಸ್ತಿಹಾರ್

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಆಫೀಸಿನಿಂದಾ —

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಸಿಟಿ ದೇವರಾಜ ಮೊಹಲ್ಲಾ ಹೊಸದಾಗಿ ಕಟ್ಟುತ್ತಿರುವ ಸ್ಟ್ಯಾಚು ಹತ್ತಿರ ಟ್ರಸ್ಟ್ ಬೋರ್ಡಿನವರು ಆಕ್ವೈರ್ ಮಾಡಿಕೊಂಡಿರುವ ಮನೆಗಳ ಸಾಮಾನುಗಳನ್ನು ತಾ|| ೨೬-೧-೪೭ ರ ಸೋಮವಾರ ಬೆಳಗ್ಗೆ ೯ ಘಂಟೆಯಿಂದ ೧೨ ಘಂಟೆಯವರೆಗೂ ಬಹಿರಂಗವಾಗಿ ಹರಾಜು ಹಾಕಲಾಗುತ್ತದೆ. ಇಷ್ಟವುಳ್ಳವರು ಭರದರಖಾಸ್ತು ಮಾಡಿ ಸಾಮಾನನ್ನು ಪಡೆಯಬಹುದು.

ಆರ್. ಎಲ್. ರಾಜು,
ಅಧ್ಯಕ್ಷರಿಗಾಗಿ.

ರಾಜಕಮಲ್, ಮೈಸೂರು

22-1-47 ರಿಂದ
ಪ್ರತಿ ದಿನ ಮೂರು ಆಟಗಳು
: ಚಿತ್ರಾರವರ .

— ಪ್ರತಿಜ್ಞಾ —

(ಹಿಂದಿ)

—: ಭೂಮಿಕೆ : —
ಸ್ವರ್ಣಲತಾ, ಸುನೇತ್ರಾ
ಬೇಬಿ ನಿರ್ಮಾ, ಮೋತೀ
ಲಾಲ್, ಬುಡೋ ಅಡ್ವಾನಿ
ಮುಂತಾದವರು

Morning Shows at 10 30 A.M For 4 Days From 24-1-47

Wild West Days (Full Serial.)

ಈ ಐವತ್ತು ವರ್ಷಗಳು ಮಾನವ ಲೋಕಕ್ಕೆ ಆರೋಗ್ಯ ಸಂಪದಗಳನ್ನು ನೀಡುತ್ತಾ ಬಂದವಾಗಿ, ಅವಿಚ್ಛಿನ್ನವಾಗಿ ಮಾಡಿ, ದಿನ ದಿನಾ ವಿಪ್ಲ ಹೊಂದುತ್ತಿರುವುದ ... ಎಷ್ಟೋ ಗರ್ವಿಸುತ್ತಿದೆ



EASTERNS 379

ಪು. ಸಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೨೬—೧—೪೭ [ಸಂಚಿಕೆ ೧೮೫

— ರಾಜಧಾನಿಯಲ್ಲಿ — ಮುಸ್ಲಿಮರ ಹರತಾಳ

...ರಾಜ್ಯಾಂಗ ಸಭಾ ಉಪಾಧ್ಯಕ್ಷತೆ

...ರತ ರಾಜ್ಯಾಂಗ ರಚನಾ ಸಭೆಯ ಉ...ಧ್ಯಕ್ಷರಾಗಿ ಡಾ॥ ಎಚ್. ಸಿ ಮುಖರ್ಜಿ...ವರು ಸರ್ವಾನುಮತದಿಂದ ಆರಿಸಲ್ಪಟ್ಟ...ರೆ ಸಭೆಯು ನಿನ್ನೆ ದಿನ ವಿಷಯ ನಿ...ಣ ಸಮಿತಿಗೆ ೧೬ ಮಂದಿಯನ್ನು ಚು...ಯಿಸಿತು. ಸಭೆಯನ್ನು ಏಪ್ರಿಲ್ ತಿಂಗಳ ಮುಂದುವರಿಸಲಾಗಿದೆ.

ಸಾರವಾಕ್ ದ್ವೀಪದಲ್ಲಿ ...ಧಿಕಾರಿಗಳ ರಾಜೀನಾಮೆ

...ಬ್ರಿಟನ್ನಿಗೆ ಸರವಾಕ್ ದ್ವೀಪವನ್ನು ಸೇ...ಕೊಂಡಿರುವುದರಿಂದ ಸದರಿ ಸರ್ಕಾರದ ...ಕೆಲಸ ಮಾಡುತ್ತಿದ್ದ ೩೩೪ ಮಂದಿ ಮ...ಯ ಜನಾಂಗದ ಅಧಿಕಾರಿಗಳು ತಮ್ಮ ಕೆ...ಸಗೆ ರಾಜೀನಾಮೆ ಸಲ್ಲಿಸಿದ್ದಾರೆ.

ಅಮೆರಿಕದಿಂದ ಭಾರತಕ್ಕೆ ಇಂಜನ್ನುಗಳು

ಭಾರತ ಸರ್ಕಾರದ ರೈಲ್ವೆ ಬೋರ್ಡಿನವ...ಅಮೆರಿಕಾ ಸಂಯುಕ್ತ ಸಂಸ್ಥಾನದ ರೈ...ಇಂಜನ್ ತಯಾರಿಕಾ ಕಾರ್ಖಾನೆಯೊಂ...ಒಪ್ಪಂದವನ್ನು ಮಾಡಿಕೊಂಡು ೧೫...ಕ್ಷ ಡಾಲರ್ ಬೆಲೆ ಬಾಳುವ ೧೬ ರೈಲ್ವೆ ...ಜನ್ನುಗಳನ್ನು ಕೊಳ್ಳಲಿದ್ದಾರೆ ಇವುಗ...ಳು ಆಗಸ್ಟ್ ಮತ್ತು ಸಪ್ಟೆಂಬರ್ ಗಳಲ್ಲಿ ...ರತಕ್ಕೆ ಬರುವುವೆಂದು ಹೇಳಲಾಗಿದೆ.

ಲಂಚಕ್ಕಾಗಿ ೧ ವರ್ಷ ಶಿಕ್ಷೆ

ಬೆಳಗಾಂ ಸಬ್ ರಿಜಿಸ್ಟ್ರಾರ್ ಕಛೇರಿಯ ...ನಾಸ್ತೆ ಶ್ರೀ॥ ಸಿಕಾರಪುರ ಎಂಬುವರು ...ಳೆದ ಜುಲೈನಲ್ಲಿ ಒಬ್ಬ ಹೆಂಗಸಿನಿಂದ ಒಂ...ದು ಪತ್ರವನ್ನು ರಿಜಿಸ್ಟರು ಮಾಡುವುದಕ್ಕೆ ...ರೂ ೬-೬-೦ ಲಂಚವನ್ನು ತೆಗೆದುಕೊಂಡ...ರು ಆಪಾದನೆ ಮೇಲೆ ಶ್ರೀಸ್ಪ ನ್ಯಾಯಾ...ಲಯದ ತೀರ್ಪಿತ್ತು ಸೆಷನ್ಸ್ ಜಡ್ಜರು ವಿಧಿ...ಸಿದ್ದ ೩ ತಿಂಗಳ ಶಿಕ್ಷೆಯನ್ನು ಅಪರಾಧಿಯ ...ಕ್ಷೆ ಸಾಲದಾದದ್ದೆಂದು ಹೇಳಿ ೧ ವ...ರ್ಷಕ್ಕೆ ಹೆಚ್ಚಿಸಿದ್ದಾರೆ

ಆಂಗ್ಲೋ-ಈಜಿಪ್ಟ್ ಒಪ್ಪಂದ

ಈಜಿಪ್ಟ್ ಮತ್ತು ಬ್ರಿಟನ್‌ಗಳಲ್ಲಿ ಒಪ್ಪಂದವಾಗುವುದು ಅಸಾಧ್ಯವಾಗಿದೆಯೆಂದು ಸಂ...ಧಾನದಲ್ಲಿ ಭಾಗವಹಿಸಿದ್ದ ಪ್ರಮುಖರೊಬ್ಬರು ತಿಳಿಸಿರುವುದಾಗಿ ವರದಿಯಾಗಿದೆ. ಇನ್ನು ಉಳಿದಿರುವ ಮಾರ್ಗವೆಂದರೆ ವಿಶ್ವಸಂಸ್ಥೆಗೆ ಹೋಗುವುದೊಂದೇ ಆಗಿದೆಯೆಂದು ಹೇಳಲಾಗಿದೆ.

ಲೀಗಿನವರಿಂದ ಕಾಯಿದೆ ಭಂಗ

ಲಾಹೋರಿನಲ್ಲಿ ೫ ಜನಕ್ಕಿಂತ ಹೆಚ್ಚು ಜನ ಗುಂಪುಕೂಡಿ ಹೋಗಕೂಡದೆಂದು ವಿಧಿಸಿರುವ ಪ್ರತಿಬಂಧಕಾಜ್ಞೆಯನ್ನು ಪಂಜಾಬು ಮುಸ್ಲಿಂ ಲೀಗು ಉಲ್ಲಂಘಿಸಲು ತೀರ್ಮಾನಿಸಿದೆ ನಿನ್ನೆ ಮಧ್ಯಾಹ್ನ ಏಳುಮಂದಿ ಅಸೆಂಬ್ಲಿ ಸದಸ್ಯರು ಮೆರವಣಿಗೆ ಹೋಗಿ ದಸ್ತಗಿರಿಯಾಗಿದ್ದಾರೆ.

ಅಕ್ಕಿ ಗಿರಣಿ ನಿಲ್ಲಿಸಿದ್ದಾರೆ

ಸ್ವಂ ಸು.] ಚಾಮರಾಜನಗರ ೨೩

ಇಲ್ಲಿನ ಅಕ್ಕಿ ಗಿರಣಿಗಳನ್ನು ಸರ್ಕಾರದವರು ನಿಲ್ಲಿಸಿದ್ದಾರೆ ಇದರಿಂದ ಬಹಳ ತೊಂದರೆಯಾಗಿದೆ ಕೊಟ್ಟಣ ಕುಟ್ಟುವವರು ಸೇರು ಭತ್ತಕ್ಕೆ ೧೦ ಸೇರು ಅಕ್ಕಿಕೊಡುತ್ತಾರೆ. ಕೂಲಿಗಾಗಿ ಧಾನ್ಯವನ್ನೇ ಅಪೇಕ್ಷಿಸುತ್ತಾರೆ

ರಾಜದಂಪತಿಗಳ ಆಫ್ರಿಕ ಪ್ರವಾಸ ನಿಲ್ಲಬೇಕು

ವಿಶ್ವ ಸಂಸ್ಥೆಯ ನಿರ್ಣಯವನ್ನು ಧಿಕ್ಕರಿಸಿ ಭಾರತೀಯರ ಮೇಲೆ ದಬ್ಬಾಳಿಕೆ ನಡೆಸುತ್ತಾ ಬಿಳಿಯರ ಶ್ರೇಷ್ಠತೆಯನ್ನು ಪ್ರತಿಷ್ಠಾಪಿಸಲು ಸಂಕಲ್ಪಿಸಿರುವ ಜ॥ ಸ್ಮಟ್ಸರಿಗೆ ಸರಿಯಾದ ಪಾಠವನ್ನು ಬ್ರಿಟನ್ನು ಈಗ ಕಲಿಸಬೇಕಾಗಿದೆ. ಬ್ರಿಟಿಷ್ ರಾಜದಂಪತಿಗಳು ಈಗ ದಕ್ಷಿಣ ಆಫ್ರಿಕಾಕ್ಕೆ ಭೇಟಿ ಇತ್ತರೆ ವರ್ಣದ್ವೇಷಕ್ಕೆ ಅವರ ಬೆಂಬಲವೂ ಇದೆಯೆಂಬ ಅರ್ಥ ಕಲ್ಪಿಸಲು ಅವಕಾಶವಾಗುವುದು. ಆದ್ದರಿಂದ ರಾಜದಂಪತಿಗಳು ತಮ್ಮ ಪ್ರವಾಸವನ್ನು ಸದ್ಯಕ್ಕೆ ನಿಲ್ಲಿಸಬೇಕು-ಎಂಬುದಾಗಿ ಲಂಡನ್ನಿನ 'ಡೈಲಿ ವರ್ಕರ್' ಪತ್ರಿಕೆಯು ಅಗ್ರ ಲೇಖನದಲ್ಲಿ ತಿಳಿಸಿದೆ.

ಲಂಚಕೋರತನ ತಪ್ಪಿಸಲು ಬೊಂಬಾಯಿ ಸರ್ಕಾರದ ಕ್ರಮ

ಬೊಂಬಾಯಿ ಪ್ರಾಂತ್ಯದ ಸರ್ಕಾರಿ ಅಧಿಕಾರಿಗಳಲ್ಲಿ ಲಂಚಕೋರತನವನ್ನು ತಪ್ಪಿಸುವ ಬಗ್ಗೆ ಒಂದು ಕ್ರಮವನ್ನು ಜಾರಿಗೆ ತರಲು ಆಲೋಚನೆ ನಡೆದು ಅದಕ್ಕಾಗಿ ನಿಯಮಗಳು ತಯಾರಾಗಿವೆಯೆಂದು ತಿಳಿದು ಬಂದಿದೆ ಅದರಂತೆ ಸರ್ಕಾರಿ ನೌಕರರು ತಮ್ಮ ಹೊಸ ಆಸ್ತಿಪಾಸ್ತಿಗಳ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಬೇಕಾಗುವುದು ಅಲ್ಲದೆ ೨೫೦ ರೂ ಗಳಿಗಿಂತ ಹೆಚ್ಚು ಸಂಬಳ ಪಡೆಯುವ ಅಧಿಕಾರಿಗಳು ತಮ್ಮ ಆಯವ್ಯಯದ ವಿವರಗಳನ್ನು ಆದಾಯ ತೆರಿಗೆ ರಿಜಿಸ್ಟರಿನಂತೆ ಸಿದ್ಧಗೊಳಿಸಿ ಪ್ರತಿ ವರ್ಷವೂ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ

ವೈಸರಾಯರಿಗೆ ಲೀಗಿನ ಬೆದರಿಕೆ

ಕಳೆದ ಸೋಮವಾರ ನಡೆದ ರಾಜ್ಯಾಂಗ ಸಭೆಯನ್ನು ವೀಕ್ಷಿಸಲು ವೈಸರಾಯ್ ವೇವಲ್ಲರು ಏರ್ಪಾಡುಮಾಡಿಕೊಂಡಿದ್ದರು. ಕೇಂದ್ರಸರ್ಕಾರದ ಲೀಗ್ ಮಂತ್ರಿಗಳು ಅವರಿಗೆ ಬೆದರಿಕೆ ಹಾಕಿ ಅವರು ಸಭೆಗೆ ಹೋದರೆ ಕಾಂಗ್ರೆಸ್ಸಿಗೆ ಪಕ್ಷಪಾತ ತೋರಿಸಿದಂತಾಗುವುದೆಂದೂ ರಾಜ್ಯಾಂಗ ಸಭೆಯನ್ನು ಅಂಗೀಕರಿಸಿದಂತಾಗುವುದೆಂದೂ ಹೇಳಿದರೆಂದೂ ಆದ್ದರಿಂದ ವೈಸರಾಯರು ಸಭೆಗೆ ಬರಲಿಲ್ಲವೆಂದೂ ತಿಳಿದುಬಂದಿದೆ.

ಬಕೆಟ್ ಷಾಪ್ ಪತ್ತೆ

ಮೈಸೂರು ೨೬

ಮಂಡಿ ಮಾರ್ಕೆಟ್‌ನಲ್ಲಿ ಸೈಯದ್ ಅಬ್ದುಲ್‌ವಾಜಿದ್ ಎಂಬುವರ ಬೈಸಿಕಲ್ ಅಂಗಡಿಗೆ ಮಂಡಿ ಪೊಲೀಸ್ ಸ॥ ಇ॥ ಶ್ರೀ ಡಿ ಸುಬ್ಬರಾಯರು ಸಿಬ್ಬಂದಿಯೊಡನೆ ನಿನ್ನೆ ಮುತ್ತಿಗೆ ಹಾಕಿ ಕುದುರೆ ಜೂಜಿಗೆ ಸಂಬಂಧಪಟ್ಟ ಪುಸ್ತಕ ವಗೈರೆಗಳನ್ನೂ, ನಗದು ೧೭೫-೧೧-೦ ರೂ. ಗಳನ್ನು ವಶಪಡಿಸಿಕೊಂಡು ಸದರಿ ಅಬ್ದುಲ್‌ವಾಜಿದ್ ಮತ್ತು ಇನ್ನಿಬ್ಬರ ಮೇಲೆ ಮೊಕದ್ದಮೆ ಹೂಡಿರುತ್ತಾರೆ.

ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್

ಮೈಸೂರು ಸಂಸ್ಥಾನದ ರಾಷ್ಟ್ರಸೇವಾದಳದ ಕೇಂದ್ರ ಅಧಿಕಾರ ಮಂಡಲಿಯು ಫೆಬ್ರವರಿ ೨ನೇ ತಾ॥ ಮೈಸೂರಿನಲ್ಲಿ ಶ್ರೀ ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಜರುಗುವುದು ಕರ್ನಾಟಕ ಪ್ರಾಂತ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಫೆಬ್ರವರಿ ೧ ಮತ್ತು ೨ನೇ ತಾ॥ ಮೈಸೂರಿನ ವಿ॥ ಕಾಂ॥ ಕಾರ್ಯಾಲಯದಲ್ಲಿ ಜರುಗುವುದು. ಸದಸ್ಯರು ತಪ್ಪದೆ ಬರಬೇಕೆಂದು ಪ್ರ॥ ಕಾರ್ಯದರ್ಶಿಗಳು ಕೋರಿದ್ದಾರೆ

ಸಿದ್ದಲಿಂಗಯ್ಯನವರಿಗೆ ಪತ್ನಿವಿಯೋಗ

ಮೈಸೂರು ಕಾಂಗ್ರೆಸ್ ಮಾಜಿ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರ ಧರ್ಮಪತ್ನಿಯವರು ಕಳೆದ ಕೆಲವು ದಿನಗಳಿಂದ ಕ್ಷಯರೋಗದಿಂದ ನರಳುತ್ತಿದ್ದು ನಿನ್ನೆ ಬೆಳಗ್ಗೆ ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ವಧೆಗಾಗಿ ರಾಸುಗಳ ರವಾನೆ

ತಿಪಟೂರು ಇತ್ಯಾದಿ ಸಂತೆಗಳಿಂದ ಗುಂಡ್ಲುಪೇಟೆ ಮಾರ್ಗವಾಗಿ ಉತ್ತಮವಾದ ಸಾವಿರಾರು ದನಗಳು ವಧೆಗಾಗಿ ಉದಕಮಂಡಲಕ್ಕೆ ಪ್ರತಿವಾರವೂ ಹೋಗುತ್ತಿವೆಯೆಂದೂ, ಸರ್ಕಾರದವರು ಕೂಡಲೇ ಇದನ್ನು ತಪ್ಪಿಸಬೇಕೆಂದೂ ಅ॥ ಭಾ॥ ಪಶುರಕ್ಷಣಾ ಮಂಡಲಿಯ ಮೈ॥ ಭಾರತ ವ್ಯವಸ್ಥಾಪಕರಾದ ಡಾ॥ ಪಿ ಎಸ್. ನಾರಾಯಣರವರು ಪ್ರಾರ್ಥಿಸಿದ್ದಾರೆ.

ಕ್ರಯ ಕ್ಕೆ ದೆ

ಮೈಸೂರು ಸಿಟಿ ದಿವಾನ್ಸ್ ರೋಡಿನಲ್ಲಿ ಭಾರಿ ಮನೆ ಕ್ರಯಕ್ಕಿದೆ ಕಂಡ್ಲೆ ವಿಚಾರಿಸಿರಿ- ಆರ್. ಗುಂಡೂರಾವ್, ಪಕ್ಕೇ ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು

ಮುಸ್ಲಿಮರ ಹರತಾಳ

ಮೈಸೂರು ೨೬

ಪಂಜಾಬಿನಲ್ಲಿ ಮುಸ್ಲಿಂಲೀಗ್ ನಾಯಕರನ್ನು ದಸ್ತಗಿರಿ ಮಾಡಿರುವುದನ್ನು ಪ್ರತಿಭಟಿಸಲು ನಗರದ ಮುಸ್ಲಿಂ ವರ್ತಕರುಗಳು ಈ ದಿನ ತಮ್ಮ ಅಂಗಡಿಗಳನ್ನು ಮುಚ್ಚಿ ಹರತಾಳವನ್ನಾಚರಿಸಿದ್ದಾರೆ

ಸಚಿವರಲ್ಲಿ ನಿಯೋಗ

ಬೆಂಗಳೂರು ಮತ್ತು ಮೈಸೂರಿನಲ್ಲಿರುವ ಸರ್ಕಾರಿ ಮುದ್ರಣಾಲಯಗಳ ಕೆಲಸಗಾರರ ಸಂಘಗಳ ಪ್ರತಿನಿಧಿಗಳು ನಿನ್ನೆ ಬೆಂಗಳೂರಿನಲ್ಲಿ ಗೃಹ ಸಚಿವರಾದ ಶ್ರೀ ಎಂ. ಶೇಷಾದ್ರಿಯವರಲ್ಲಿ ನಿಯೋಗ ಹೋಗಿ ತಮ್ಮ ಸಂಬಳ, ರಜಾ ಮತ್ತು ಇತರ ವಿಷಯಗಳಲ್ಲಿ ಅಹವಾಲುಗಳನ್ನು ಹೇಳಿಕೊಂಡರು. ಸೂಕ್ತವಾದ ಪರಿಹಾರವನ್ನು ಒದಗಿಸಿಕೊಡುವುದಾಗಿ ಸಚಿವರು ಭರವಸೆಯಿತ್ತರು

ನಿರ್ಗಮನ

ಮದರಾಸ್ ಗವರ್ನರರಾದ ಸರ್ ಆರ್ಚಿಬಾಲ್ಡ್‌ನೈರವರು ಈ ದಿನ ಪರಿವಾರ ಸಮೇತರಾಗಿ ತಮ್ಮ ಸ್ಥಳಕ್ಕೆ ಹಿಂದಿರುಗಿದರು ಅವರ ಗೌರವಾರ್ಥವಾಗಿ ೧೭ ಕುಶಾಲ ತೋಪುಗಳು ಹಾರಿಸಲ್ಪಟ್ಟುವು

ಕರ್ನಾಟಕದಲ್ಲಿ ಆಚಾರ್ಯ ಕೃಪಲಾನಿಯವರ ಪ್ರವಾಸ

ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರು ಫೆಬ್ರವರಿ ೨೧ ರಿಂದ ೧೨ ದಿನಗಳ ಕಾಲ ಕರ್ನಾಟಕ ಪ್ರಾಂತದಲ್ಲಿ ಸಂಚರಿಸುವರೆಂದು ತಿಳಿದುಬಂದಿದೆ

ಸುಲಂಪೂರದಲ್ಲಿ ಭಾರತದ ಪ್ರತಿನಿಧಿ

ಮದ್ರಾಸಿನ ಶ್ರೀಮತಿ ಅಮ್ಮು ಸ್ವಾಮಿನಾಥನ್‌ರವರನ್ನು ಮಲಯದಲ್ಲಿ ಭಾರತದ ಪ್ರತಿನಿಧಿಯನ್ನಾಗಿ ನೇಮಿಸಲಾಗಿದೆಯೆಂದು ತಿಳಿದುಬಂದಿದೆ ಅವರು ಮಾರ್ಚಿ ತಿಂಗಳಲ್ಲಿ ಅಲ್ಲಿಗೆ ತೆರಳುವರು

ಅಸ್ಸಾಂ ಗವರ್ನರಾಗಿ ಹೈದರಿಯವರ ನೇಮಕ

ಸರ್ ಮಹಮದ್ ಅಕ್ಬರ್ ಹೈದರಿಯವರನ್ನು ಅಸ್ಸಾಂ ಗವರ್ನರನ್ನಾಗಿ ನೇಮಿಸಲಾಗಿದೆಯೆಂದು ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ ಇವರು ವೈಸರಾಯ್ ಕೌನ್ಸಿಲ್ಲಿನ ಮಾಜಿ ಸದಸ್ಯರು. ಹಿಂದೆ ಬಂದು ಮೇಜಿನ ಸಮ್ಮೇಳನದಲ್ಲಿ ಭಾಗ ವಹಿಸಿದ್ದರು.

ಲಾಹೋರಿನಲ್ಲಿ ಮುಸ್ಲಿಂ ಮಹಿಳೆಯರ ಪ್ರದರ್ಶನ

ಮುಸ್ಲಿಂ ಲೀಗ್ ನಾಯಕರನ್ನು ದಸ್ತಗಿರಿ ಮಾಡಿದ್ದನ್ನು ಪ್ರತಿಭಟಿಸಲು ನಿನ್ನೆ ದಿನ ಲಾಹೋರಿನಲ್ಲಿ ಮುಸ್ಲಿಮರ ಮೆರವಣಿಗೆಗಳು ನಡೆದವು ಪೊಲೀಸರು ಟಿಯರ್ ಗ್ಯಾಸ್ ಪ್ರಯೋಗಿಸಿ ಪ್ರದರ್ಶನಕಾರರನ್ನು ಚದುರಿಸಿದರು ಸ್ತ್ರೀ ಪ್ರದರ್ಶನಕಾರರು ಅಸೆಂಬ್ಲಿ ಭವನಕ್ಕೆ ನುಗ್ಗಲು ಪ್ರಯತ್ನಿಸಿ ವಿಫಲರಾದರು ಇದುವರೆಗೆ ೫೧ ಜನರ ಬಂಧನಗಳಾಗಿವೆ. ಲಾಹೋರು ಪುರಸಭೆಯು ಸರ್ಕಾರದ ವರ್ತನೆಯನ್ನು ಖಂಡಿಸಿ ನಿರ್ಣಯ ಮಾಡಿದೆ ಪ್ರಾಂತೀಯ ಲೀಗಿನ ಸಹಾಯಕ ಅಧ್ಯಕ್ಷರು ಒಂದು ಪ್ರಕಟಣೆಯನ್ನು ಹೊರಡಿಸಿ ಜನರು ಶಾಂತಿಯಿಂದಿರಬೇಕೆಂದೂ, ತಮ್ಮ ಅಧ್ಯಕ್ಷರನ್ನು ಬಿಡುಗಡೆ ಮಾಡಬೇಕೆಂದೂ ತಿಳಿಸಿದ್ದಾರೆ.

ಸಾಧ್ವಿ

ತಾ|| ೨೬-೧-೪೭ ಭಾನುವಾರ

ಮೈಸೂರಿನಲ್ಲಿಯೂ ತಾತ್ಕಾಲಿಕ ಮಂತ್ರಿಮಂಡಲ ಏರ್ಪಡಲಿ

— —

ನಮ್ಮ ಸಂಸ್ಥಾನದಲ್ಲಿ ಹೊಸ ಸುಧಾರಣೆಗಳನ್ನು ಜಾರಿಗೆ ತರುವ ಅಭಿಪ್ರಾಯವನ್ನು ಶ್ರೀಮನ್ಮಹಾರಾಜರವರು ಸೂಚಿಸಿರುವರಷ್ಟೆ. ಹೊಸ ರಾಜ್ಯಾಂಗವು ಸಿದ್ಧವಾಗುವುದಕ್ಕೆ ಮುಂಚೆ ಈಗಿರುವ ಶಾಸನವು ಸಂಪೂರ್ಣವಾಗಿ ಸಾಫಲ್ಯ ಹೊಂದುವಂತೆ ಮಾಡುವುದು ಅವಶ್ಯಕ. ಪ್ರಜೆಗಳ ಅನುರಾಗಕ್ಕೆ ಪಾತ್ರರಾದ ಎಲ್ಲ ರಾಜಕೀಯ ವರ್ಗಗಳ ಪ್ರಮುಖರಿಂದ ಕೂಡಿದ ಮಂತ್ರಿಮಂಡಲವನ್ನು ರಚಿಸುವುದರಿಂದಲೇ ಇದು ಸಾಧ್ಯ. ಭಾರತ ಕೇಂದ್ರ ಸರ್ಕಾರದಲ್ಲಿ ಮಾಡಿರುವಂತೆ ಇಲ್ಲಿಯೂ ಕೂಡಲೇ ಒಂದು ಹಂಗಾಮಿ ಆಡಳಿತ ಮಂಡಲಿಯನ್ನು ನೇಮಿಸಬೇಕು. ಇದು ಈಗಿರುವ ಶಾಸನದಿಂದಲೇ ಸಾಧ್ಯ.

ಆರು ವರ್ಷದ ಹಿಂದೆ ನಮ್ಮ ಸಂಸ್ಥಾನದಲ್ಲಿ ಸುಧಾರಣೆಗಳು ಜಾರಿಗೆ ಬಂದುವು. ಆಗ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲರೇ ಆ ಸುಧಾರಣೆಗಳ ವ್ಯಾಪ್ತಿಯ ವಿಷಯವಾಗಿ ಅಧಿಕಾರ ವಾಣಿಯಿಂದ ಅರ್ಥವಿವರಣೆಯನ್ನು ಕೊಟ್ಟಿರುತ್ತಾರೆ. ದಿವಾನರೂ ಸೇರಿ ಎಲ್ಲ ಮಂತ್ರಿಗಳೂ ಚುನಾಯಿತ ಖಾಸಗಿ ಸದಸ್ಯರೇ ಆಗಿರಲು ಈಗಿನ ಶಾಸನದಲ್ಲಿಯೇ ಸಂಪೂರ್ಣ ಅವಕಾಶವಿರುವುದೆಂದು ಅವರು ಹೇಳಿರುವರು. ಎರಡಕ್ಕೆ ಕಡಮೆ ಇಲ್ಲದಂತೆ ಖಾಸಗಿ ಮಂತ್ರಿಗಳಿರಬೇಕೆಂದು ಶಾಸನವು ವಿಧಿಸುತ್ತದೆ. ಎಲ್ಲರೂ ಖಾಸಗಿಯವರೇ ಆಗಿರಲು ಯಾವ ಅಡ್ಡಿಯೂ ಇರುವುದಿಲ್ಲ.

ಸರ್ ಮಿರ್ಜಾರವರು ಈ ಹೇಳಿಕೆಯನ್ನಿತ್ತು ಆರು ವರ್ಷಗಳ ಮೇಲಾಯಿತು. ಆದರೆ ಇನ್ನೂ ಅದರಂತೆ ನಡೆಯಲು ಏರ್ಪಾಡಾಗಿಲ್ಲ. ಮಂತ್ರಿಮಂಡಲದಲ್ಲಿ ಇನ್ನೂ ಅನೇಕರು ಅಧಿಕಾರಿ ವರ್ಗದವರೇ ಇದ್ದಾರೆ. ದಿವಾನರು ಶಾಸನ ಸಭೆಗಳಿಂದ ಚುನಾಯಿತರಾದವರೂ ಸಹ ಅಲ್ಲ. ಹೊರಗಿನಿಂದ ಬಂದವರಾಗಿರುತ್ತಾರೆ. ಈ ಪರಿಸ್ಥಿತಿಯಲ್ಲಿ ಇಂದು ಚಾಲಿಯಲ್ಲಿರುವ ರಾಜ್ಯಾಂಗ ಶಾಸನವೇ ತನ್ನ ಪರಿಪೂರ್ಣ ಸಾರ್ಥಕ್ಯವನ್ನು ಪಡೆದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಈಗ ಇರುವುದು ಜವಾಬ್ದಾರಿ ಸರ್ಕಾರವೂ ಅಲ್ಲ, ಜನಾನುರಾಗೀ ಸರ್ಕಾರವೂ ಅಲ್ಲ, ಖಾಸಗಿ ಮಂತ್ರಿಮಂಡಲವೂ ಅಲ್ಲ, ಸಂಮಿಶ್ರ ಮಂತ್ರಿ ಮಂಡಲವಂತೂ ಅಲ್ಲವೇ ಅಲ್ಲ. ಹೊಸ ಸುಧಾರಣೆಗಳ ಹಂತವನ್ನು ಹತ್ತುವ ಮೊದಲು ಇಂದಿನ ಸುಧಾರಣೆಗಳ ಕಡೆಯ ಮೆಟ್ಟಿಲನ್ನು ಹತ್ತಬೇಕೆಂದು ಅಪೇಕ್ಷಿಸುವುದು ಸಹಜವಾಗಿಯೇ ಇದೆ. ಇದಕ್ಕಾಗಿಯೇ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ಮೊನ್ನೆ ನಿರ್ಣಯವನ್ನು ಮಾಡಿ ಸಂಸ್ಥಾನದಲ್ಲಿ ಕೂಡಲೇ ತಾತ್ಕಾಲಿಕ ಸರ್ಕಾರವು ಏರ್ಪಡಬೇಕೆಂದು ಕೋರಿರುತ್ತದೆ. ಇದನ್ನು ಈಡೇರಿಸಿದರೆ ಇಂದಿನ ರಾಜ್ಯಾಂಗ ಶಾಸನಕ್ಕೆ ಸಂಪೂರ್ಣ ಮನ್ನಣೆಯನ್ನು ಕೊಟ್ಟಂತಾಗುವುದಲ್ಲದೆ ಮುಂದಿನ ಸುಧಾರಣೆಗೆ ದಾರಿಯನ್ನು ಸುಗಮ ಮಾಡಿದಂತಾಗುತ್ತದೆ. ಕಾಲ ದೇಶ ವರ್ತಮಾನಗಳಿಗೆ ಅನುಗುಣವಾಗಿ ವರ್ತಿಸಲು ಆಸಕ್ತಿಯನ್ನು ತೋರಿರುವ ನಮ್ಮ ಪ್ರಭುಗಳು ಈ ಬಗ್ಗೆ ಕೂಡಲೇ ಕಾರ್ಯಕ್ರಮ ಕೈಗೊಳ್ಳಲೆಂದು ನಾವು ಆಶಿಸುತ್ತೇವೆ.

ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕು

ಸಂಸ್ಥಾನಗಳ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಒಂದು ಹೇಳಿಕೆಯನ್ನು ಹೊರಡಿಸಿ, ಕಳೆದ ಪ್ರತಿನಿಧಿ ಸಭಾಧಿವೇಶನದಲ್ಲಿ, ಪ್ರಜೆಗಳು ಅತಿಕ್ರಮಿಸಿದರೆ ಕೊಟ್ಟಿರುವ ಸುಧಾರಣೆಗಳನ್ನೂ ವಾಪಸು ತೆಗೆದುಕೊಳ್ಳಲಾಗುವುದೆಂದು ದಿವಾನರು ಹೇಳಿದ್ದಕ್ಕೆ ಮಹಾರಾಜರ ಸಂದೇಶವು ಉತ್ತರದಂತಿದೆಯೆಂದು ತಿಳಿಸಿದ್ದಾರೆ. ದಿವಾನರಾದ ಸರ್ ಮೊದಲಿಯಾರರು ಭಾರತದಲ್ಲೂ, ಹೊರಗೂ ತಾವು ಪಡೆದಿರುವ ಅನುಭವವನ್ನು, ಮೈಸೂರು ರಾಜಕೀಯವನ್ನು ಫಲವತ್ತಾಗಿ ಮಾಡಿ, ಜವಾಬ್ದಾರಿ ಸರ್ಕಾರದ ಫಲವನ್ನು ಪಡೆಯಲು ಉಪಯೋಗಿಸಿ ಮೈಸೂರು ಪ್ರಜೆಗಳ ಸೇವೆ ಮಾಡಲಿ. ಎಂದು ಆಶಿಸಿದ್ದಾರೆ.

ಜವಾಬ್ದಾರಿ ಸರ್ಕಾರತ್ತ

ಈ ದಿನ ಸ್ವಾತಂತ್ರ್ಯ ದಿನಾ
ಬಂಧವಾಗಿ ಸ್ವಾತಂತ್ರ್ಯ ಪ್ರತಿಜ್ಞೆ
ಸ್ವೀಕರಿಸುವ ಸಮಯದಲ್ಲಿ ಕೆ
ಜವಾಬ್ದಾರಿ ಸರ್ಕಾರದ ಪ್ರತಿಜ್ಞೆ
ಸ್ವೀಕರಿಸಬೇಕೆಂದು ಮೈಸೂರು
ನವರು ಕೋರಿರುವರು :—

ಭಾರತದಲ್ಲಿ ತಮ್ಮ ಆಡಳಿತ
ಲು ಬ್ರಿಟಿಷರು ದೇಶೀಯ ಸಂಸ್ಥಾ
ಮತ್ತು ಪ್ರಾಂತಗಳು ಎಂದು ಭಾ
ವಿಂಗಡಿಸಿರುವುದು ಅಸ್ವಾಭಾವಿಕ
ಡೀ ಭಾರತ ಒಂದೆಂದೂ ನಾವು
ವೆ. ಭಾರತಕ್ಕೆ ಸ್ವಾತಂತ್ರ್ಯ ಲಭಿ
ಯರುತವನ್ನು ಏಳಿಗೆಯನ್ನು ತಾವೇ
ಕೊಳ್ಳುವ ಈ ಸುಸಮಯದಲ್ಲಿ ಸಂ
ಲ್ಲಿ ಆಜನ್ಮಸಿದ್ಧ ಹಕ್ಕುಗಳಿಗೆ ಅವ
ರುವುದೂ ಪ್ರಜಾಭಿಪ್ರಾಯದಂತೆ
ಡಳಿತ ನಡೆಯದಿರುವುದೂ ಅಕ
ವೆಂದು ನಾವು ನಂಬುತ್ತೇವೆ. ಸಂ
ಜವಾಬ್ದಾರಿ ಸರ್ಕಾರ ಪದ್ಧತಿ ಸ್ಥಾ
ದ ಹೊರತು ಜನರ ಏಳಿಗೆಯಾ
ಬುದು ನಮ್ಮ ಖಚಿತಾಭಿಪ್ರಾಯ
ದರಿಂದ ಮೈಸೂರಿನಲ್ಲಿ ಶ್ರೀಮನ್
ರ ಆಶ್ರಯದಲ್ಲಿ ಜವಾಬ್ದಾರಿ ಸ
ವನೆಯಾಗುವುದು ಅತ್ಯವಶ್ಯಕವ
ಕಷ ಸರ್ಕಾರ ಪಡೆಯುವುದು
ಕ್ಕೆಂದೂ ನಾವು ಘೋಷಿಸುತ್ತೇ
ನಮ್ಮ ಹಕ್ಕನ್ನು ಸಾಧಿಸಲು ನಾ
ಮಾಡಿಯುತ್ತೇವೆಂದೂ ಈ ಧ್ಯೇ
ನೆಗಾಗಿ ಹೋರಾಟ ಅನಿವಾ
ಅದರಲ್ಲಿ ಭಾಗವಹಿಸಲು ಸಿದ್ಧ
ದೂ ಈ ಮೂಲಕ ಪ್ರತಿಜ್ಞೆಮಾ

ಹೊಸ ನಮೂನೆಯ

ಬನಾರಸ್ ಜಾರ್ಜೆಟ್ ಸೀರೆಗಳು, ಮೈಸೂರು ಸಿಲ್ಕು ಟಿಷ್ಯೂ ಸೀರೆಗಳು, ಬೆಂಗಾಲ್ ಸಿಲ್ಕು ಸೀರೆಗಳು ಮತ್ತು ಕೊಯಮುತ್ತೂರು ಮಧುರೆ ಸೀರೆಗಳು

ಬ ಕ ರಿ ಗೆ ಸಿ ದ್ಧ ವಾ ಗಿ ವೆ .

ಇಂದೇ ಭೇಟಿ ಕೊಡಿರಿ.

●

ಬಿ. ಕೆಂಚಪ್ಪ ಸನ್ಸ್,

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

ರಾಜಕಮಲ್, ಮೈಸೂರು

22-1-47 ರಿಂದ ಪ್ರತಿ ದಿನ ಮೂರು ಆಟಗಳು

ಮೋತೀಲಾಲ್, ಸ್ವರ್ಣಲತಾ, ಬೇಬೀ ನಿಮಾ ನಟಿಸಿರುವ

ಪ್ರತಿಜ್ಞಾ (ಹಿಂದಿ) :: ಪ್ರತಿಜ್ಞಾ (ಹಿಂದಿ)

Morning Shows at 10-30 A.M. For 4 Days From 21-1-47

Wild West Days (Full Serial.)

To all Friends and Well-Wishers

K. NAGAPPA SETTY,

Proprietor: Sri Jayalakshmi Jewellery Mart

Diamond Merchants, Jewellers and Silversmiths,

ASOKA ROAD, MYSORE.

requests the pleasure of your company

on the occasion of

the opening ceremony of

Sri Jayalakshmi Jewellery Mart

ASOKA ROAD, MYSORE.

on Monday the 27th January 1947.

Muhurtham 10-20 to 11-30 A.M. : : Reception between 4 and 8 P.M.

OPERA TALKIES

Daily 3 Shows from 24-1-47

JUNGLE - GODDESS

Stars:-
Noah Berry, Dorothy Short

Morning Shows from 24-1-47

EARL CARROL VANITIES

ನಾಲ್ಕು "ಬ" ಎಂ

ಭದ್ರವಾದ ಬೀಗಗಳು ಬೇ

ಬಾಡುಸಾಬ್

ಶಿವರಾಂಪೇಟೆ : : ಮೈಸ

ಎಲ್ಲಾತುಪ್ಪಕ್ಕಿಂತ

ಆರ್.ಜಿ.ತುಪ್ಪ

ಚೆನ್ನಾಗಿರುತ್ತ

Edited, printed and publ... ... Nagarajan at the Sadh... ... Sadhvi ... Mysore

ರೀ. ನಂ. 392 WEEKLY EDITION ಬಿಡಿ ಪತ್ರಿಕೆ ೧ ಕಾಸು

ಸಂಪುಟ ೧೧] ಸೋಮವಾರ ೨೭—೧—೪೭ [ಸಂಚಿಕೆ ೨೭

ತಿರುವಾಂಕೂರಿನಲ್ಲಿ ಸುಧಾರಣೆ ಹೊರಬಿತ್ತು

ಸ್ಕೌಟ್ ರ್‍ಯಾಲಿ ಸಮಾರಂಭ

ಮೈಸೂರು ೨೭

ರಾಜಧಾನಿಯ ಬಾಲ ಚಮೂ ದಳದವ ರ್‍ಯಾಲಿಯೊಂದು ನಿನ್ನೆ ಮತ್ತು ಮೊನ್ನೆ ಸ್ಕೌಟ್ ಮೈದಾನದಲ್ಲಿ ನಡೆಯಿತು. ನಿನ್ನೆ ಸಂಜೆ ಸಮಾರಂಭದ ಮುಕ್ತಾಯ ಸಮಾರಂಭ ಮುಜರಾಯಿ ಸೆಕ್ರೆಟರಿಗಳಾದ ಶ್ರೀ|| ರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಪುರ ಸಭಾಧ್ಯಕ್ಷರಾದ ಶ್ರೀ|| ರಾಮಚಂದ್ರ ರಾವ್ ಬೋಂಬೋರೆಯವರು ಸ್ವಾಗತ ಭಾಷಣವನ್ನು ಮಾಡಿದರು. ಪ್ರಭುಗಳಿಗೆ ಪುತ್ರೀರತ್ನ ಜನನವಾದುದಕ್ಕೆ ಸಂತೋಷವನ್ನು ವ್ಯಕ್ತಪಡಿಸಲಾಯಿತು. ರಾಜ್ಯದ ಸುಧಾರಣೆಗಳ ಬಗ್ಗೆ ಶ್ರೀಮನ್ಮಹಾರಾಜರವರು ಇತ್ತಿರುವ ಸಂದೇಶಕ್ಕಾಗಿ ಅಭಿನಂದನೆಗಳನ್ನು ಶ್ರೀ|| ಸಿ. ನರಸಿಂಹಯ್ಯನವರು ಸಲ್ಲಿಸಿದರು. ರ್‍ಯಾಲಿಯ ವರದಿಯನ್ನು ರಾ|| ಎಂ. ರಾಮಸ್ವಾಮಿಯವರು ಒಪ್ಪಿಸಿದರು. ಆಟ ಪಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಅಧ್ಯಕ್ಷರು ಹಂಚಿದರು. ಸತ್ಯ, ಒಳ್ಳೆಯ ನಡವಳಿಕೆ, ಸೌಹಾರ್ದ ಭಾವನೆ, ಇವೇ ಮುಂತಾದುವು ಬಾಲಕರಲ್ಲಿ ಚೆನ್ನಾಗಿ ಮೂಡಿ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡುವುದೇ ಸ್ಕೌಟ್ ಚಳುವಳಿಯ ಮುಖ್ಯ ತತ್ವವೆಂದು ಅಧ್ಯಕ್ಷರು ತಿಳಿಸಿ ಇದರ ಪ್ರಭಾವವು ಮತ್ತಷ್ಟು ಹೆಚ್ಚಿ ದೇಶೋದ್ಧಾರವಾಗಲೆಂದು ಹಾರೈಸಿದರು.

ಶ್ರೀ|| ಡಿ. ಬಿ. ಕೃಷ್ಣಪ್ಪನವರು ಇಟ್ಟಿದ್ದ ಬೆಳ್ಳಿಯ ಪಾರಿತೋಷಕವು ಜಯಾ ದಳದವರಿಗೆ ಕೊಡಲ್ಪಟ್ಟಿತು. ಬಾಡಿ ಗಾರ್ಡ್ಸ್ ಪ್ರಾಥಮಿಕ ಶಾಲೆಯ ಕಬ್ಸ್ ಬಾಲಕರಿಗೆ ಚುರುಕು ಸ್ಪರ್ಧೆಯಲ್ಲಿ ಮೊದಲನೆಯ ಮತ್ತು "ಜಂಗಲ್ ಡ್ಯಾನ್ಸ್" ನಲ್ಲಿ ಎರಡನೇ ಬಹುಮಾನಗಳು ಬಂದುವು.

ಸತ್ಕಾರ ಕೂಟ

ದೇವರಾಜ ಮಾರ್ಕೆಟ್ ವರ್ತಕರೂ, ದಿನ ಸಿಗೆ ಕಂಟ್ರಾಕ್ಟರರೂ ನಿನ್ನೆ ಸಂಜೆ ಚಾಮುಂಡೇಶ್ವರಿ ಭವನದಲ್ಲಿ ಮಾಜಿ ಪುರ ಸಭಾ ಉಪಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿಯವರನ್ನು ಸತ್ಕರಿಸಿದರು. ಪುರ ಸಭಾ ಸದಸ್ಯರೂ ಇತರ ಪ್ರಮುಖ ಮಹನೀಯರೂ ಆಹ್ವಾನಿತರಾಗಿದ್ದರು. ಉಪಾಹಾರಾನಂತರ ಜ|| ಅಬ್ದುಲ್ ರಹಮಾನ್ ರವರು ಅತಿಥಿಗಳನ್ನು ಸ್ವಾಗತಿಸಿ ಶ್ರೀ ಕೃಷ್ಣಮೂರ್ತಿರಾಯರು ತಮ್ಮ ಅಧಿಕಾರಾವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಕೊಂಡಾಡಿದರು. ಶ್ರೀ ಕೃಷ್ಣಮೂರ್ತಿರಾಯರು ಉತ್ತರವಿತ್ತು ತಮಗೆ ದೊರೆತ ಗೌರವವು ತಮ್ಮನ್ನು ಚುನಾಯಿಸಿದ ಸಂಸ್ಥೆಗೆ ಸಲ್ಲತಕ್ಕದ್ದೆಂದು ಹೇಳಿದರು. ಮಾರ್ಕೆಟ್ ಅಭಿವೃದ್ಧಿಯಲ್ಲಿ ತಮ್ಮೊಡನೆ ಸಹಕರಿಸಿದ ಸಕಲರಿಗೂ ವಂದನೆಗಳನ್ನರ್ಪಿಸಿದರು.

ಅಮೆರಿಕಕ್ಕೆ ಪ್ರಯಾಣ

ಬೊಂಬಾಯಿ ೨೭

ಪತ್ರಿಕೋದ್ಯಮದಲ್ಲಿ ವಿಶೇಷ ಶಿಕ್ಷಣವನ್ನು ಪಡೆಯಲು ಅಮೆರಿಕಕ್ಕೆ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಈ ದಿನ ಜಹಜ ಸ್ನೇರಿ ತೆರಳಿದರು. ಇವರ ಕೂಡ ಕರ್ಣಾಟಕದಿಂದ ಒಟ್ಟು ೧೨ ಮಂದಿ ಪ್ರಯಾಣ ಬೆಳೆಸಿದರು. ಅಮೆರಿಕಾದ ಹಾರ್‌ವರ್ಡ್ ವಿಶ್ವವಿದ್ಯಾನಿಲಯದ ಫೆಲೋ ಆಗಿ ನೇಮಕವಾಗಿರುವ ಡಾ|| ಬಿ. ಜಿ. ಎಲ್. ಸ್ವಾಮಿಯವರೂ ಈ ಗುಂಪಿನಲ್ಲಿದ್ದಾರೆ. ಇವರು ಶ್ರೀ ಬಿ. ಎ. ಗುಂಡಪ್ಪನವರ ಮಕ್ಕಳು. ಬೆಂಗಳೂರು ಬಲ್ಪಿನ ಶ್ರೀ ಜಿ. ಎ. ಆಚಾರ್ಯರವರು ಶ್ರೀ ನಾಡಿಗರಿಗೆ ೧ ಸಹಸ್ರ ರೂ. ಸಹಾಯವನ್ನು ಉದಾರವಾಗಿ ನೀಡಿದ್ದಾರೆ.

ವಿದ್ಯಾರ್ಥಿಗಳ ಮುಷ್ಕರ

ಮೈಸೂರು ೨೭

ವಿಯಟ್‌ನಾಮಿಗೆ ಸಹಾನುಭೂತಿಗಾಗಿಯೂ, ಕಲ್ಕತ್ತಾ ಮುಂತಾದೆಡೆ ವಿದ್ಯಾರ್ಥಿಗಳ ಮೇಲೆ ನಡೆಸಿದ ದೌರ್ಜನ್ಯವನ್ನೂ ಮತ್ತು ಮೈಸೂರು ಕಾಂಗ್ರೆಸ್ ಮುಖಂಡರಾದ ಶ್ರೀ ಕೆ. ಹನುಮಂತಯ್ಯನವರಿಗೆ ಶಿಕ್ಷೆ ವಿಧಿಸಿರುವುದನ್ನೂ ಪ್ರತಿಭಟಿಸುವುದಕ್ಕಾಗಿಯೂ ಈ ದಿನ ವಿದ್ಯಾರ್ಥಿ ಕಾಂಗ್ರೆಸ್ಸಿನ ಸೂಚನೆಯಂತೆ, ಮಹಾರಾಜಾ, ಇಂಟರ್, ಸೆಂಟ್ ಫಿಲೋಮಿನ ಮತ್ತು ಶಾರದಾವಿಲಾಸ ಕಾಲೇಜು ವಿದ್ಯಾರ್ಥಿಗಳು ಮುಷ್ಕರವನ್ನಾಚರಿಸಿದರು. ಮಹಾರಾಜಾ ಕಾಲೇಜ್ ಮುಂಭಾಗದಲ್ಲಿ ಶ್ರೀ ಪ್ರಾಣೇಶರಾಯರ ಅಧ್ಯಕ್ಷತೆಯಲ್ಲಿ ಭಾರಿ ಸಭೆ ನಡೆಯಿತು. ಶ್ರೀಗಳಾದ ಹೆಚ್. ಕೆ. ಶಿವರಾಮಸ್ವಾಮಿ, ನಾರಾಯಣರಾವ್, ಸತ್ಯನಾರಾಯಣಶೆಟ್ಟಿ, ಮುಂತಾದವರು ಭಾಷಣ ಮಾಡಿದರು. ಮೇಲೆ ಸೂಚಿಸಿರುವ ಮತ್ತು ಮೈಸೂರು ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿಗಳಿಂದ ಕೂಡಿದ ಸರ್ಕಾರ ಸ್ಥಾಪನೆಯಾಗಬೇಕೆಂಬ ನಿರ್ಣಯಗಳು ಅಂಗೀಕಾರವಾದವು.

ಶ್ರೀ ಅನಂತಸ್ವಾಮಿಗಳ ಪುಣ್ಯ ತಿಥಿ

ಪಡುವಾರಹಳ್ಳಿ ಜಯಲಕ್ಷ್ಮಿ ಬಡಾವಣೆಯಲ್ಲಿ ಶ್ರೀ ಅನಂತ ಸ್ವಾಮಿಗಳ ಆಶ್ರಮದಲ್ಲಿ ಇಂದಿನಿಂದ ೩ ದಿನಗಳು ಶ್ರೀ ಸದ್ಗುರುಗಳ ಆರಾಧನೋತ್ಸವವು ಜರುಗುವುದು. ಈ ದಿನ ಸಂಜೆ ಗೀತಾ ವಿಚಾರದಲ್ಲಿ ಉಪನ್ಯಾಸ, ನಾಳೆ ಹರಿಕಥೆ, ನಾಳಿದ್ದು ಮಹಾ ಮಂಗಳಾರತಿ, ಸಂತರ್ಪಣೆ ಮತ್ತು ವೇ|| ಹರಿಹರಾನಂದ ಭಾರತೀ ಸ್ವಾಮಿಜಿಯವರಿಂದ ಹರಿಕಥೆ ಸಹ ನಡೆಯುವುವು.

ವಿಯಟ್‌ನಾಂ ಸೈನ್ಯದ ಮೇಲೆ ವಾಯು ಪ್ರಯೋಗ

ಜನವರಿ ೨೦ ನೇ ತಾ|| ಹನಾಯ್ ಮತ್ತು ಹಡಾಂಗ್ ಕ್ಷೇತ್ರದಲ್ಲಿ ಮುನ್ನುಗ್ಗಲು ಫ್ರೆಂಚ್ ಸೈನ್ಯಗಳು ವಿಯಟ್‌ನಾಂ ಪಡೆಗಳ ಮೇಲೆ ವಾಯು ಪ್ರಯೋಗ ನಡೆಸಿದರೆಂದು ವಿಯಟ್‌ನಾಂ ರೇಡಿಯೊ ತಿಳಿಸಿದೆ.

ಕೊಚ್ಚಿಯಲ್ಲಿ ಪತ್ರಿಕಾ ಶಾಸನದ ರದ್ದು

ಪತ್ರಿಕೆಯನ್ನು ಪ್ರಕಟಿಸಲು ಸಂಪಾದಕರು ಸರ್ಕಾರದಿಂದ ರಹದಾರಿ ಪಡೆಯಬೇಕೆಂಬುದಾಗಿ ಕಳೆದ ೧೨ ವರ್ಷದಿಂದ ಜಾರಿಯಲ್ಲಿದ್ದ ಪತ್ರಿಕಾಶಾಸನವನ್ನು ಕೊಚ್ಚಿ ಸರ್ಕಾರವು ಈಗ ರದ್ದುಮಾಡಿದೆ.

ಅಶೋಕಮೆಹ್ತಾರವರ ಮೇಲಿದ್ದ ಪ್ರತಿಬಂಧಕಾಜ್ಞೆ ವಜಾ

ತಿರುವಾಂಕೂರು ಸರ್ಕಾರವು ಶ್ರೀ ಅಶೋಕಮೆಹತಾ ಮುಂತಾದ ಮೂವರು ಸಂಸ್ಥಾನದೊಳಕ್ಕೆ ಪ್ರವೇಶಿಸದಂತೆ ನಿರ್ಬಂಧಿಸಿದ್ದ ಆಜ್ಞೆಯನ್ನು ಈಗ ವಾಪಸು ತೆಗೆದುಕೊಂಡಿರುವುದಾಗಿ ಪ್ರಕಟಿಸಿದೆ. ಆದ್ದರಿಂದ ಸಂಸ್ಥಾನದೊಳಕ್ಕೆ ಸ್ವಯಂ ಸೇವಕ ದಳವನ್ನು ಮುಂಚೆ ಯೋಚಿಸಿದ್ದಂತೆ ಕಳುಹಿಸುವುದಿಲ್ಲವೆಂದು ಶ್ರೀ ಮೆಹತಾರವರು ತಿಳಿಸಿದ್ದಾರೆ.

ಬ್ರಿಟಿಷ್ ಯೋಜನೆಗೆ ಈಜಿಪ್ಟಿನ ತಿರಸ್ಕಾರ

ಸೂಡಾನಿನ ವಿಚಾರದಲ್ಲಿ ಬ್ರಿಟಿಷ್ ಸರಕಾರದವರು ಸೂಚಿಸಿರುವ ಯೋಜನೆಯನ್ನು ಈಜಿಪ್ಟ್ ಮಂತ್ರಿ ಮಂಡಲವು ತಿರಸ್ಕರಿಸಿದೆ. ಇದರಿಂದ ಸಂಧಾನವು ಆಕಸ್ಮಿಕವಾಗಿ ಭಗ್ನವಾಗಿದೆ. ವಿಶ್ವ ಸಂಸ್ಥೆಗೆ ಮನವಿ ಮಾಡಿಕೊಳ್ಳಲು ಈಜಿಪ್ಟ್ ಸರ್ಕಾರವು ನಿರ್ಧರಿಸಿದೆ.

೧೯೪೮ರಲ್ಲಿ ಸ್ವಾತಂತ್ರ್ಯ

ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ|| ಸಿ. ರಾಜಗೋಪಾಲಾಚಾರಿಯವರು ಮೊನ್ನೆ ದಿನ ದೆಹಲಿಯಲ್ಲಿ ಮಾತನಾಡುತ್ತಾ, ೧೯೪೮ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆಯುವುದು ಶತಸ್ಸಿದ್ಧವೆಂಬುದಾಗಿ ತಿಳಿಸಿದ್ದಾರೆ. ಮುಸ್ಲಿಂ ಲೀಗಿನವರು ಕ್ರಮೇಣ ಪಾಕಿಸ್ತಾನದ ಕೂಗನ್ನು ಮರೆತು, ಸ್ವತಂತ್ರ ಭಾರತದ ನಿರ್ಮಾಣಕ್ಕಾಗಿ ಸಹಕರಿಸುವರೆಂದೂ ಹೇಳಿದ್ದಾರೆ.

ಬರ್ಮದಲ್ಲೂ ಕಮ್ಯೂನಿಸ್ಟರ ವಿರುದ್ಧ ಧಾಳಿ

ಬರ್ಮದ ಕಮ್ಯೂನಿಸ್ಟ್ ಪಕ್ಷ ಮತ್ತು ಕೆಂಪು ಬಾವುಟದ ವ್ಯವಸಾಯ ಸಂಘವನ್ನು ಬರ್ಮಾ ಸರ್ಕಾರವು ಅಕ್ರಮ ಕೂಟವೆಂದು ಸಾರಿದೆ. ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಥೇಕಿನ್ ಸೋಯ್ ಮತ್ತು ಇತರ ೨೫ ಮಂದಿಯನ್ನು ದಸ್ತಗಿರಿ ಮಾಡಲಾಗಿದೆ.

ಉಪನಯನ

ಮದ್ರಾಸಿನ ಪ್ರಸಿದ್ಧ ಹೋಟೇಲ್ ಮಾಲೀಕರಾದ ಶ್ರೀ ಕೆ. ಅನಂತಚಾರ್ಯರವರ ತಮ್ಮ, ಶ್ರೀ ಸೀತಾರಾಮಾಚಾರ್ಯರ ಎರಡನೇ ಮಗ ಚಿ|| ಬಾಲಕೃಷ್ಣನ ಉಪನಯನ ಮಹೋತ್ಸವವು ಈ ದಿನ ಮದ್ರಾಸಿನಲ್ಲಿ ವೈಭವದಿಂದ ಜರುಗಿತು.

ತಿರುವಾಂಕೂರು ಹೊಸ ಸುಧಾರಣೆಗಳ ಸ್ವರೂಪ

ತಿರುವಾಂಕೂರು ಸಂಸ್ಥಾನದಲ್ಲಿ ಜಾರಿಗೆ ತರಬೇಕೆಂದಿರುವ ಸುಧಾರಣೆಗಳ ಸ್ವರೂಪವನ್ನು ನಿನ್ನೆ ದಿನ ಬಹಿರಂಗಪಡಿಸಲಾಗಿದೆ. ಸಂಸ್ಥಾನದಲ್ಲಿ ಎರಡು ಶಾಸನ ಸಭೆಗಳಿರುವುವು. ಪ್ರತಿನಿಧಿ ಸಭೆಯ ಚುನಾವಣೆಯಲ್ಲಿ ಪ್ರಾಪ್ತ ವಯಸ್ಕರೆಲ್ಲರಿಗೂ ಮತ ಚಲಾಯಿಸುವ ಅಧಿಕಾರವನ್ನು ಕೊಡಲಾಗಿದೆ.

ಶ್ರೇಷ್ಠ ಸಭೆಯಾದ ಶ್ರೀ ಚಿತ್ರಾ ಸ್ಸಿಲಿಗೆ, ಔದ್ಯೋಗಿಕ ಮತ್ತು ವಿಶೇಷ ಅರ್ಹತೆಯ ಮೇಲೆ ಚುನಾವಣೆ ಏರ್ಪಡಿಸಲಾಗುವುದು. ಕೆಲವು ಗೊತ್ತಾದ ಅಂಶಗಳ ಹೊರತಾಗಿ ಸರ್ಕಾರದ ಮಿಕ್ಕೆಲ್ಲಾ ಆಡಳಿತದ ಮೇಲೆ ಶಾಸನ ಸಭೆಗೆ ಅಧಿಕಾರವಿರುವುದು. ಎರಡು ಸಭೆಗಳೂ ಅಧ್ಯಕ್ಷ, ಉಪಾಧ್ಯಕ್ಷರನ್ನು ತಾವೇ ಆರಿಸಿಕೊಳ್ಳುವುವು.

ಸಂಸ್ಥಾನದ ಕಾರ್ಯಾಂಗ ಆಡಳಿತವು ದಿವಾನರ ಹತೋಟಿಗೊಳಪಟ್ಟಿರುತ್ತದೆ. ದಿವಾನರು ಮಹಾರಾಜರಿಂದ ನೇಮಕ ಮಾಡಲ್ಪಡುವರು. ಮಹಾರಾಜರ ಅಭಿಲಾಷೆ ಇರುವವರೆಗೆ ಅಧಿಕಾರದಲ್ಲಿರುವರು.

ಸರ್ಕಾರದ ಇಲಾಖೆಗಳ ಮೇಲೆ ಶಾಸನ ಸಭೆಗಳಿಗೆ ಇರುವ ಅಧಿಕಾರವನ್ನು ನೋಡಿಕೊಳ್ಳಲು ಶಾಸನ ಸಭೆಯಿಂದ ಚುನಾಯಿತರಾದ ಜನರನ್ನೊಳಗೊಂಡ ಬೇರೆ-ಬೇರೆ ಆಡಳಿತ ಸಮಿತಿಗಳಿರುವುವು.

ದಿವಾನರು ಈ ಸಮಿತಿಗಳ ಸಭೆಗಳನ್ನು ಕರೆದು ಸಮಾಲೋಚನೆ ನಡೆಸಬಹುದು. ಈ ಸಮಿತಿಗಳ ಸಲಹೆಯನ್ನು, ಕಾರಣಗಳನ್ನು ಬರಹ ಮೂಲಕ ತಿಳಿಸಿ ತಿರಸ್ಕರಿಸುವ ವಿಶೇಷಾಧಿಕಾರವು ದಿವಾನರಿಗೆ ಇರುವುದು.

ಈ ಪ್ರಕಟನೆಯಲ್ಲಿರುವ ಅಂಶಗಳಿಗೆ ಅರ್ಥ ನಿರೂಪಿಸಲು ಅಧಿಕಾರವನ್ನು ಶ್ರೇಷ್ಠ ನ್ಯಾಯಾಸ್ಥಾನಕ್ಕೆ ಕೊಡಲಾಗಿದೆ.

ಪಂಜಾಬಿನಲ್ಲಿ ದಸ್ತಗಿರಿಗಳು

ಪ್ರಾಂತ್ಯದಲ್ಲೆಲ್ಲಾ ದಸ್ತಗಿರಿಗಳು ಆರಂಭವಾಗಿವೆ. ನಿನ್ನೆ ದಿನ ಲಾಹೋರಿನಲ್ಲಿ ೧೫ ಮಂದಿ ಶಾಸನ ಸಭಾ ಸದಸ್ಯರೂ ಸೇರಿ ೫೩ ಮಂದಿ ಮುಸ್ಲಿಮರು ದಸ್ತಗಿರಿಯಾಗಿದ್ದಾರೆ.

ದಕ್ಷಿಣ ಆಫ್ರಿಕದಿಂದ ಭಾರತೀಯರನ್ನು ವಾಪಸು ಕಳುಹಿಸಬೇಕೆಂದೂ ಮತ್ತು ಅವರಿಗೆ ಇತ್ತಿರುವ ಓಟಿನ ಹಕ್ಕನ್ನು ವಜಾ ಮಾಡತಕ್ಕದ್ದೆಂದೂ ದಕ್ಷಿಣಾಫ್ರಿಕದ ಯೂನಿಯನ್ ಅಸೆಂಬ್ಲಿಯಲ್ಲಿ ವಿರೋಧ ಪಕ್ಷದ ನಾಯಕರಾದ ಡಾ|| ಮಲಾನರವರು ಮಂಡಿಸಿದ್ದ ನಿಲುವಳಿ ತಿದ್ದುಪಡಿಯು ಬಹುಮತದಿಂದ ಬಿದ್ದುಹೋಯಿತು.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೨೭

ನಿನ್ನೆ ದಿನ ರಾಜಧಾನಿಯ ಅನೇಕ ಕಡೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಜರುಗಿತು. ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಒಂಟಿಕೊಪ್ಪಲು ತಿಲಕ ಸಂಘದಲ್ಲೂ ಸುತ್ತೂರು ವಿದ್ಯಾರ್ಥಿ ನಿಲಯದಲ್ಲೂ ಹರಿಜನ ಕೇರಿಯಲ್ಲೂ ದೇಶೀಯ ವಿದ್ಯಾಶಾಲೆಯಲ್ಲೂ ಧ್ವಜಾರೋಹಣವು ನಡೆದು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳಲಾಯಿತು.

ಸಂಜೆ ೭ ಗಂಟೆಗೆ ಕಾಂಗ್ರೆಸ್ ಭವನದಲ್ಲಿ ಪ್ರತಿಜ್ಞಾ ಸ್ವೀಕಾರವು ಜರುಗಿತು. ಸ್ವಾತಂತ್ರ್ಯ ಮತ್ತು ಜವಾಬ್ದಾರಿ ಸರ್ಕಾರದ ಪ್ರತಿಜ್ಞೆಗಳನ್ನು ಶ್ರೀ ಬಿ. ನಾರಾಯಣಸ್ವಾಮಿಯವರು ಪಠಿಸಿದುದನ್ನು ನೆರೆದಿದ್ದವರೆಲ್ಲರೂ ಉಚ್ಚರಿಸಿ ಸ್ವೀಕರಿಸಿದರು.

ಸಾಧ್ವಿ

ತಾ॥ ೨೭-೧-೪೭ ಸೋಮವಾರ

ಸ್ವಾತಂತ್ರ್ಯ ದಿನಾಚರಣೆಗೆ ಸೌಲಭ್ಯ

ನಿನ್ನೆ ದಿನ ಹಿಂದೂಸ್ಥಾನದ ಅದ್ಯಂತದಲ್ಲೂ ಸ್ವಾತಂತ್ರ್ಯ ದಿನಾಚರಣೆಯು ನಡೆಯಿತು ಇಂದಿನ ಕೋಮುವಾರು ಪರಿಸ್ಥಿತಿಯಲ್ಲಿ ಸಭೆ, ಮೆರವಣಿಗೆಗಳಿಗೆ ಎಲ್ಲೆಲ್ಲಿಯೂ ಅಡ್ಡಿಗಳು ಹಾಕಲ್ಪಟ್ಟಿವೆಯಷ್ಟೆ ಆದರೂ ಸಹ ಮದರಾಸ್ ಸರ್ಕಾರದವರು ಈ ದಿನಾಚರಣೆಗೆ ವಿಶೇಷವಾದ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದುದು ಒಂದು ಪ್ರಶಂಸನೀಯವಾದ ಸಂಗತಿ

ಯಾವ ಬಗೆಯ ಪ್ರತಿಬಂಧಕಾಜ್ಞೆಗಳು ಜಾರಿಯಲ್ಲಿದ್ದರೂ ಸ್ವಾತಂತ್ರ್ಯ ದಿನಾಚರಣೆಯ ಸಂದರ್ಭದಲ್ಲಿ ಅವುಗಳನ್ನು ಒತ್ತಾಯ ಪಡಿಸದೆ ಧ್ವಜಾರೋಪಣ ಮತ್ತು ಸ್ವಾತಂತ್ರ್ಯ ಪ್ರತಿಜ್ಞಾ ಸ್ವೀಕಾರಗಳಿಗೆ ಸಂಪೂರ್ಣವಾದ ಅವಕಾಶವೀಯುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಮದರಾಸ್ ಸರ್ಕಾರದವರು ಆಜ್ಞೆಯಿತ್ತಿದ್ದರು

ಇದುವರೆಗೆ ಪಂಕ್ತಿಯ ಆಡಳಿತವು ನಡೆಯುತ್ತಿದ್ದಾಗ ಅನೇಕ ವರ್ಷಕಾಲ ಈ ದಿನಾಚರಣೆಯ ಸಂಬಂಧದಲ್ಲಿ ಪ್ರತಿಬಂಧಕಾಜ್ಞೆಗಳು ಜಾರಿಯಾಗಿ ಅವುಗಳನ್ನು ಜನರು ಪ್ರತಿಭಟಿಸಿ ಅನೇಕ ಕೋಲಾಹಲಗಳು ನಡೆಯುತ್ತಿದ್ದುವು ಈಗ ಕಾಲವು ಬದಲಾಯಿಸಿರುತ್ತದೆ ಪ್ರಾಂತಗಳಲ್ಲಿ ಪ್ರಜೆಗಳ ಪ್ರತಿನಿಧಿಗಳು ಆಡಳಿತವನ್ನು ನಡೆಸುತ್ತಿದ್ದಾರೆ ನಾಗರಿಕ ಹಕ್ಕುಗಳಿಗೆ ಇದ್ದ ಅಡ್ಡಿಗಳನ್ನು ನಿವಾರಿಸುತ್ತಿದ್ದಾರೆ ಇಷ್ಟೇ ಅಲ್ಲದೆ ತಾತ್ಕಾಲಿಕವಾಗಿ ಇರಬಹುದಾದ ಪ್ರತಿಬಂಧಕಗಳು ನ್ಯಾಯವಾದ ಕೆಲಸಗಳಿಗೆ ಅಡಚಣೆಯನ್ನುಂಟುಮಾಡದಂತೆ ನೋಡಿಕೊಳ್ಳುತ್ತಿದ್ದಾರೆ.

ಸ್ವತಂತ್ರ ಆಡಳಿತಗಳು ಜಾರಿಗೆ ಬಂದರೆ ಪ್ರಜೆಗಳ ಹಕ್ಕುಬಾಧ್ಯತೆಗಳು ಹೇಗೆ ಸಂರಕ್ಷಿಸಲ್ಪಡುವುವೆಂಬುವಕ್ಕೆ ಇದು ಉತ್ತಮ ನಿದರ್ಶನವಾಗಿದೆ ಇನ್ನು ಸಂಪೂರ್ಣ ಸ್ವಾತಂತ್ರ್ಯವು ದೊರೆತ ಮೇಲೆ ಪ್ರಜೆಗಳ ಅಭೀಷ್ಟವು ಎಷ್ಟು ಮಟ್ಟಿಗೆ ಈಡೇರುವುದೆಂಬುದನ್ನು ಇದರಿಂದಲೇ ಊಹಿಸಬಹುದು ಸ್ವಾತಂತ್ರ್ಯ ದಿನಾಚರಣೆಗೆ ಈ ರೀತಿ ಅವಕಾಶವನ್ನು ಕಲ್ಪಿಸುವಂತೆ ತನ್ನ ಕೈ ಕೆಳಗಿನ ಅಧಿಕಾರಿಗಳಿಗೆ ಅಪ್ಪಣೆಯನ್ನು ಮಾಡಿ ಮದರಾಸ್ ಸರ್ಕಾರವು ಇತರ ಪ್ರಾಂತಗಳಿಗೂ ಮೇಲ್ಪಂಕ್ತಿಯನ್ನು ಹಾಕಿರುತ್ತದೆ ಇಂತಹ ಒಳ್ಳೆಯ ಪದ್ಧತಿಗಳು ಎಲ್ಲಾ ಕಡೆಗಳಲ್ಲೂ ಜಾರಿಗೆ ಬರಲೆಂದು ನಾವು ಹಾರೈಸುತ್ತೇವೆ

ವಾರ ಭವಿಷ್ಯ

ತಾ॥ ೨೭-೧-೪೭ ರಿಂದ ೩-೨-೪೭ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ — ಆರೋಗ್ಯ ಉತ್ತಮ. ಆದಾಯ ವ್ಯಯಗಳು ಸಮ ಉದ್ಯೋಗ ವ್ಯವಹಾರಗಳಿಂದ ಚೇತರಿಕೆ. ಮಿತ್ರ ಸಹಾಯ ತಾ॥ ೨೭, ೨೮ ಧನ ಲಾಭ ಸಂತೋಷ

ವೃಷಭ — ಆರೋಗ್ಯ ಸಾಧಾರಣ ಉದ್ಯೋಗ ವ್ಯವಹಾರಗಳಲ್ಲಿ ಕಿರುಕುಳ ಮಾನಸಿಕ ಚಿಂತೆ ಹೆಚ್ಚು ಧನಾದಾಯ ಕಡಿಮೆ. ಅಧಿಕಾರಿಗಳಿಂದ ತಿರಸ್ಕಾರ. ತಾ॥ ೩೦, ೧ ಸಾಧಾರಣ

ಮಿಥುನ — ಆರೋಗ್ಯ ಚೆನ್ನಾಗಿರುತ್ತದೆ ಧನಾದಾಯ ಉತ್ತಮ ಉದ್ಯೋಗ ವ್ಯವಹಾರಗಳಲ್ಲಿ ಜಯ ಅಧಿಕಾರಿಗಳಿಂದ ಸನ್ಮಾನ ಮಿತ್ರರಿಂದ ಸಹಾಯ ತಾ॥ ೨೮, ೩೧, ೨ ಖರ್ಚು ಹೆಚ್ಚು ಚಿಂತೆ

ಕಟಕ — ಆರೋಗ್ಯ ಉತ್ತಮ ಸಾಂಸಾರಿಕ ಸ್ಥಿತಿ ಕೆಡುತ್ತದೆ ವ್ಯಾಪಾರ ಉದ್ಯೋಗಗಳಲ್ಲಿ ಜಯ ಮಾನಸಿಕ ಚಿಂತೆ ಹೆಚ್ಚುತ್ತದೆ ತಾ॥ ೨೮, ೩೧, ೧ ಖರ್ಚು ವ್ಯಸನ

ಸಿಂಹ — ಆರೋಗ್ಯ ಚೆನ್ನಾಗಿರುತ್ತದೆ ಧನಾದಾಯ ಉತ್ತಮವಿರುತ್ತದೆ ಖರ್ಚು ಹೆಚ್ಚು ಉದ್ಯೋಗ ವ್ಯವಹಾರಗಳಿಂದ ಯಶಸ್ಸು ಅಧಿಕಾರಿಗಳಿಂದ ಗೌರವ ದೊರೆಯುತ್ತದೆ. ತಾ॥ ೩೦, ೧ ಮಿತ್ರಾಗಮನ ಧನಲಾಭ

ಕನ್ಯಾ — ಆರೋಗ್ಯ ಸಾಧಾರಣ ಧನಾದಾಯ ಕಡಿಮೆ ಮಿತ್ರರಿಂದ ತಿರಸ್ಕಾರ ಅಧಿಕಾರಿಗಳಿಂದ ತೊಂದರೆ ಶತ್ರುಗಳಿಂದ ವಿಶೇಷ ಕಿರುಕುಳ ತಾ॥ ೩೦, ೩೧ ಸಾಧಾರಣ ಶಾಂತಿ ಸಂತೋಷ

ತುಲಾ — ಆರೋಗ್ಯ ಉತ್ತಮ ಧನಾದಾಯ ಸಾಧಾರಣವಾಗಿರುತ್ತದೆ. ಪ್ರವಾಸದಿಂದ ಯಶ ಉದ್ಯೋಗ ವ್ಯವಹಾರಗಳಿಂದ ಲಾಭ ತಾ॥ ೧, ೨, ಧನ ಲಾಭ ಚಿಂತೆ

ವೃಶ್ಚಿಕ — ಆರೋಗ್ಯ ಕೆಡುತ್ತದೆ. ಮಾನಸಿಕ ಚಿಂತೆ ಹೆಚ್ಚು, ಕೆಲಸ ಕಾರ್ಯಗಳಲ್ಲಿ ಅಡಚಣೆ ಪ್ರವಾಸದಿಂದ ಆರ್ಥಿಕ ತೊಂದರೆ. ಪ್ರಗತಿಗೆ ಧಕ್ಕೆ ಬರುತ್ತದೆ ಸಹನ ಶಕ್ತಿ ಕಡಿಮೆಯಾಗಿ ಉದ್ಯೋಗ ವ್ಯವಹಾರಗಳಿಂದ ನಷ್ಟ

ಧನಸ್ಸು — ಆರೋಗ್ಯ ಕೆಡುತ್ತದೆ ಕೈಗೊಂಡ ಕೆಲಸ ಕಾರ್ಯಗಳು ಮುಂದಕ್ಕೆ ಹೋಗುವುವು. ಧನಾದಾಯ ಕಡಿಮೆಯಾಗುತ್ತದೆ ಮಿತ್ರರೊಡನೆ ಮನಸ್ತಾಪ, ಮಾನಸಿಕ ಚಿಂತೆ ಹೆಚ್ಚುವುದು. ವ್ಯಸನದಿಂದ ವಿಶೇಷ ತೊಂದರೆ ತಾ॥ ೨೮, ಖರ್ಚು, ವ್ಯಸನ.

ಮಕರ — ಆರೋಗ್ಯ ಉತ್ತಮವಾಗಿರುತ್ತದೆ. ಉದ್ಯೋಗ ವ್ಯವಹಾರಗಳಲ್ಲಿ ಲಾಭ. ಮಿತ್ರರಿಂದ ಸಹಾಯ ಅಧಿಕಾರಿಗಳಿಂದ ಸನ್ಮಾನ. ಪ್ರವಾಸ. ತಾ॥ ೩೦, ೧ ಮಿತ್ರ ಭೇಟಿ ಲಾಭ

ಕುಂಭ — ಆರೋಗ್ಯ ಚೆನ್ನಾಗಿರುತ್ತದೆ ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ ಆರ್ಥಿಕ ಸ್ಥಿತಿ ಉತ್ತಮ ಧನಲಾಭ ಮಿತ್ರಸಹಾಯ. ಧಾರ್ಮಿಕ ಕಾರ್ಯಗಳಲ್ಲಿ ವಿಶೇಷ ಆಸಕ್ತಿ ತಾ॥ ೩೧, ೨ ಸಾಧಾರಣ ಲಾಭ

ಮೀನ — ಆರೋಗ್ಯ ಚೆನ್ನಾಗಿರುತ್ತದೆ ಉತ್ಸಾಹದಿಂದ ಕೆಲಸ ಕಾರ್ಯಗಳು ನಡೆಯುವುವು. ಮಾನಸಿಕ ಚಿಂತೆ ಕಡಿಮೆಯಾಗುವುದು ಉದ್ಯೋಗ ವ್ಯವಹಾರಗಳಲ್ಲಿ ಧನಲಾಭ ಸನ್ಮಾನ ಧಾರ್ಮಿಕ ಮತ್ತು ಸಾರ್ವಜನಿಕ ಕಾರ್ಯಗಳಿಂದ ಮನ್ನಣೆ ದೊರೆಯುವುದು ತಾ॥ ೨೮, ೩೦, ಸಾಧಾರಣ ವಿಶೇಷ ಲಾಭ.

ರಾಜಕಮಲ್, ಮೈಸೂರು

೨೭-೧-೪೭ ರಿಂದ

ಪ್ರತಿ ದಿನ ಮೂರು ಆಟಗಳು

ಮೋತೀಲಾಲ್, ಸ್ವರ್ಣಲತಾ, ಬೇಬಿ ಮೀನಾ ನಟಿಸಿರುವ

— ಪ್ರತಿಜ್ಞಾ — (ಹಿಂದಿ)

★ ★ ★

To all Friends and Well Wishers

K. NAGAPPA SETTY,

Proprietor Sri Jayalakshmi Jewellery Mart

Diamond Moechants, Jewellers and Silversmiths,

ASOKA ROAD, MYSORE

requests the pleasure of your company

on the occasion of

the opening ceremony of

'Sri Jayalakshmi Jewellery Mart'

ASOKA ROAD, MYSORE

on Monday the 27th January 1947,

Muhurtham 10 20 to 11-39 A M : : Reception between 4 and 9 P M

ಇಂಗ್ಲಿಷ್ ಸರ್ಜ್ ಕೋಟಿಂಗ

ಅನೇಕ ನಮೂನೆಗಳಲ್ಲಿ ಪುನಃ ಬಂದಿ. ಬಾಹುಸಾರ್ ಟ್ರೇಡಿಂಗ್ ಕಂಪೆನಿ ಓಲ್ಡ್ ಮೈಸೂರು ಬ್ಯಾಂಕ್ ರೋಡು ಮೈಸೂರು

ಉಚಿತ! ನೀವು ಕುಂಕುಮ ಪ್ರಶ್ನೆಗೆ ಖಚಿತವಾದ ಉತ್ತರ! ಜಾತಕ ಯಾ ಹುಟ್ಟಿದ ಗಳಿಯುವ ಕಾಲ ವಗೈರೆ ಸಹಿತ ೭ಕ್ಕೆ ಪೋಸ್ಟಲ್ ಸ್ಟಾಂಪು ಕಳುಹಿಸಿ ವಾರ್ಷಿಕ ಭವಿಷ್ಯ ರೂ ೩॥. ಜಾತಕ ಫಲ ೬॥. ಸುಧಾಕರ ಜೋಯಿಸ, ಹಳೆಯೂರು, ಪಿ. (ಕೃಷ್ಣರಾಜನಗರ ತಾಲ್ಲೂಕು)

ಕ್ರಯಕ್ಕಿದೆ

ಮೈಸೂರು ಸಿಟಿ ದಿವಾನ್ಸ್‌ರೋಡಿನ ಭಾಂ ಮನೆ ಕ್ರಯಕ್ಕಿದೆ, ಕೂಡಲೆ ವಿಚಾರಿಸಿ.— ಆರ್. ಗುಂಡೂರಾವ್, ಪ ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು

Edited, printed and published A. R. Nagarajan at the Sadhvi Pr D Subbiah Road, Mysore

ಹೊಸ ನಮೂನೆಯ

ಬನಾರಿಸ್ ಜಾರ್ಜೆಟ್ ಸೀರೆಗಳು, ಮೈಸೂರು ಸಿಲ್ಕ್ ಟಿಸ್ಯೂ ಸೀರೆಗಳು, ಬೆಂಗಾಲ್ ಸಿಲ್ಕ್ ಸೀರೆಗಳು ಮತ್ತು ಕೊಯಮತ್ತೂರು ಮಧುರೆ ಸೀರೆಗಳು

ಬಿಕರಿಗೆ ಸಿದ್ಧವಾಗಿವೆ

ಇಂದೇ ಭೇಟಿ ಕೊಡಿರಿ

●

ಬಿ. ಕೆಂಚಪ್ಪ ಸನ್ಸ್

ಜವಳೀ ಅಂಗಡಿ . — . ದೊಡ್ಡಪೇಟೆ, ಮೈಸೂರು

ನಾರ್ಗಾಡ್ ಫೈರ್ ಮತ್ತು ಜನರಲ್

ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್,

—: ಹೆಡ್ ಆಫೀಸ್.. ಮದ್ರಾಸ್ :—

ಇಂಡಿಯಾ ಮತ್ತು ಸಿಲೋನಿನಲ್ಲೆಲ್ಲಾ ಶಾಖೋಪಶಾಖೆಗಳಿವೆ.

ಬೆಂಕಿ ಅನಾಹುತಗಳಿಂದ ರಕ್ಷಿಸಿಕೊಳ್ಳಲು ನಮ್ಮಲ್ಲಿ ಈ ಕೂಡಲೇ ಪಾಲಿಸಿ ಪಡೆಯಿರಿ. ಪ್ರೀಮಿಯಂ ಸುಲಭ

-: ವಿವರಗಳಿಗೆ -

ಎಂ. ಸಿ. ಸಂಪತ್ತಯ್ಯಂಗಾರ್, ಸ್ಪೆಷಲ್ ರೆಪ್ರೆಸೆಂಟೆಟಿವ್

869/1 ಚಲುವಾಂಬಾ ಅಗ್ರಹಾರ, ಮೈಸೂರು

ರೀ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೫] ಮಂಗಳವಾರ ೨೮—೧—೪೭ [ಸಂಚಿಕೆ ೧೪೬

ಬರ್ಮಾ ಸಂಧಾನದಲ್ಲಿ ಬಿಕ್ಕಟ್ಟು ಉಂಟಾಗಿದೆ

...ಗ್ ಮುಖಂಡರ ಬಿಡುಗಡೆ

...॥ ಫಿರೋಜ್ ಖಾನ್ ನೂನ್ ಮುಂತಾ... ಮುಂದಿ ಲೀಗ್ ಮುಖಂಡರನ್ನು ಪಂ... ಸರ್ಕಾರವು ದಸ್ತಗಿರಿ ಮಾಡಿದ್ದಿತ... ನಿನ್ನೆ ಅವರನ್ನೆಲ್ಲಾ ಬಿಡುಗಡೆ ಮಾ... ಯಿತು. ಸೆರೆಮನೆಯಿಂದ ಅವರು ಹೊ... ಬಂದ ಒಡನೆಯೇ ಪ್ರತಿಬಂಧಕಾಜ್ಞೆ... ಮುಂದು ಸಾರ್ವಜನಿಕ ಸಭೆಯ... ಭಾಷಣ ಮಾಡಿ "ನಮ್ಮನ್ನು ಬಲವಂ... ಜೈಲಿನಿಂದ ಹೊರಕ್ಕೆ ಕಳುಹಿಸಲಾ... ನಾವು ಕಾನೂನು ಉಲ್ಲಂಘಿಸುತ್ತೇವೆ ...ಲೀಸಿನವರು ನಮ್ಮನ್ನು ಮತ್ತೆ ದಸ್ತಗಿ...ಬಹುದು" ಎಂಬುದಾಗಿ ತಿಳಿಸಿದರು. ಅ... ಅವರೆಲ್ಲಾ ಗುಪ್ತ ಸಮಾಲೋಚನೆ... ಪ್ರಾಂತ್ಯದಲ್ಲೆಲ್ಲಾ ಸಭೆಗಳನ್ನು ನ... ಕಾನೂನು ಉಲ್ಲಂಘಿಸಬೇಕೆಂದು ತೀ...ರ್ಮಾನಿಸಿದ್ದಾರೆ.

...ಪೋಲೀಸಿನವನ ದುರ್ವರ್ತನೆ

...ಚು] ಚಾಮರಾಜನಗರ ೨೭

...ಸರ್ವೀಸ್ ಬಸ್ಸಿನಲ್ಲಿದ್ದುದಕ್ಕೂ ಗಾಡಿಯುಕ್ತಿದ್ದ ...ಕ್ಕೂ ವ್ಯತ್ಯಾಸವಿದ್ದಿತೆಂಬ ಕಾರಣದಿಂದ ...ನ ಪೋಲೀಸ್ ಕಾನ್ಸ್‌ಟೇಬಲನೊಬ್ಬನು ...ಬಸ್ಸು ನಡೆಸುವವನನ್ನು ಮನಸ್ಸು ಬಂದಂ... ಹೊಡೆದನೆಂದೂ, ಗಾಡಿಯವನು ...ತಾಳಲಾರದೆ ಕೆಳಗೆ ಬಿದ್ದನೆಂದೂ ...ಲೀಸ್ ಠಾಣೆಯಲ್ಲಿ ಉಪಚಾರ ನಡೆದು ...ನು ಕುಮಾರದನೆಂದೂ ಗೊತ್ತಾಗಿದೆ ...ರಸಭಾ ಸದಸ್ಯರಾದ ಶ್ರೀ॥ ಕೆ. ವಿ. ಕೃಷ್ಣ...ಯ್ಯರ್‌ಯವರು ಈ ಬಗ್ಗೆ ಫಿರ್ಯಾದು ...ಮಾಡಿರುತ್ತಾರೆ

ಕಚೇರಿಯ ಮೇಲೆ ರಾಷ್ಟ್ರ ಧ್ವಜ

ಸಂಯುಕ್ತ ಪ್ರಾಂತ್ಯದ ಸೆಕ್ರೆಟೇರಿಯ... ಭವನದ ಮೇಲೆ ವಿದ್ಯಾರ್ಥಿಗಳು ರಾ...ಷ್ಟ್ರಧ್ವಜವನ್ನು ಮೊನ್ನೆ ಸ್ವಾತಂತ್ರ್ಯ ದಿ...ನಾಚರಣೆ ಸಂದರ್ಭದಲ್ಲಿ ಹಾರಿಸಿದರು. ವಿ...ದ್ಯಾರ್ಥಿಗಳ ಒಂದು ತಂಡವು ಕಾವಲುಗಾ...ರೊಡನೆ ಸಂಭಾಷಣೆ ನಡೆಸುತ್ತಿದ್ದಾಗ ಇ...ತರ ವಿದ್ಯಾರ್ಥಿಗಳು ಉಪ್ಪರಿಗೆಯ ಬೀಗ ...ಮುರಿದು ಧ್ವಜ ಹಾರಿಸಿದರು. ಸ್ವಲ್ಪ ...ಕಾಲಾನಂತರ ಅಧಿಕಾರಿಗಳು ಅದನ್ನು ತೆಗೆ...ದುಬಿಟ್ಟರು

—

ಶ್ರೀರಂಗಪಟ್ಟಣದ, ಸ್ಟೇ॥ ಫ॥ ಪ್ಲೀಡರ್ ...ರಾದ ಶ್ರೀ ಎಂ. ಎಸ್. ಭೀಮರಾ...ಯರು ತಮ್ಮ ಕುಮಾರಿ ಸೌ॥ ಲೀಲಾವತಿ...ಯನ್ನು ತೊಂಡೇಭಾವಿ ಗೈಲ್ಸ್ ಸ್ಕೂಲ್ ...ಮಾಸ್ಟರ್ ಶ್ರೀ ಎಸ್. ರಂಗರಾಯರ ಪುತ್ರ ಶ್ರೀ ಎಸ್. ಆರ್. ಶ್ಯಾಮರಾಯರಿಗೆ ಕೊ...ಟ್ಟು ಕಳೆದ ಶನಿವಾರ ಶ್ರೀರಂಗಪಟ್ಟಣದಲ್ಲಿ ವಿವಾಹವನ್ನು ಜರುಗಿಸಿದರು.

ಮೈಸೂರು ಸಿಟಿ ರೇಷನಿಂಗ್

No R 6-81—1946-47.

—

1947 ನೇ ಇಸವಿ ಜನವರಿ ಮಾಹೆ 31 ನೇ ತಾರೀಖು ಶುಕ್ರವಾರದ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ಮೊಹಲ್ಲಾ ಸಬ್ ಗೋಡೌನ್, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು.

ಸೂಚನೆ

ರಥಸಪ್ತಮಿ ಪ್ರಯುಕ್ತ ನಾಳೆ ದಿನ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ.

ಮತ್ತೆ ಅಧಿಕಾರಕ್ಕೆ ಬರಲು ನಾಜಿಗಳ ಪ್ರಯತ್ನ

ಜರ್ಮನಿಯಲ್ಲಿ ನಾಜಿ ಚಳುವಳಿಯು ರಹಸ್ಯವಾಗಿ ನಡೆಯುತ್ತಿದೆ. ನಾಜೀ ಪಕ್ಷವು ಪುನಃ ತಲೆಯೆತ್ತಿ ಅಧಿಕಾರವನ್ನು ಆಕ್ರಮಿಸಲು ಪ್ರಯತ್ನ ನಡೆಸುತ್ತಿದೆ- ಎಂಬುದಾಗಿ ಯೂರೋಪಿನ ಪರಿಸ್ಥಿತಿಯನ್ನು ಪರಿಶೀಲಿಸಲು ನೇಮಕವಾಗಿದ್ದ ಅಂತರ ರಾಷ್ಟ್ರೀಯ ಸಮಿತಿಯು ಎಚ್ಚರಿಕೆಯನ್ನಿತ್ತಿದೆ. ಈ ಸಂಘಗಳು ಸ್ವಿಟ್ಜರ್ಲೆಂಡ್, ಅರ್ಜೆಂಟೈನಾ ಮತ್ತು ಸ್ವೀಡನ್‌ಗಳಲ್ಲಿ ಪಶ್ಚಿಮ ಜರ್ಮನಿಯಲ್ಲಿರುವ ಪ್ರಜೆಗಳಿಗೆ ಇನ್ನು ೩ ವರ್ಷಗಳಿಗೆ ಬೇಕಾಗುವಷ್ಟು ಆಹಾರವನ್ನು ಕೊಳ್ಳಲು ಆಗತ್ಯವಾದಷ್ಟು ಧನವನ್ನು ಪಡೆದಿವೆಯೆಂಬುದಾಗಿ ಸಮಿತಿಯು ತಿಳಿಸಿದೆ

೪೫ ಸಹಸ್ರ ಉಪಾಧ್ಯಾಯರ ಮುಷ್ಕರ

ಕನಿಷ್ಠ ಸಂಬಳವನ್ನು ೪೫ ರೂ.ಗೆ ಏರಿಸುವವರೆಗೂ ಮುಷ್ಕರವನ್ನು ನಡೆಸಬೇಕೆಂದು ಬೊಂಬಾಯಿ ಪ್ರಾಂತ್ಯದ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ಸಂಘದವರು ತೀರ್ಮಾನಿಸಿದ್ದಾರೆ. ಮಾರ್ಚಿ ೧ನೇ ರಿಂದ ಪ್ರಾಂತ್ಯದ ೪೫ ಸಾವಿರ ಉಪಾಧ್ಯಾಯರುಗಳು ಮುಷ್ಕರವನ್ನು ಹೂಡಲಿರುವರು

ಗ್ರಾಮಾಭಿವೃದ್ಧಿ ಯೋಜನೆ

ನಂಜನಗೂಡು ೨೬

ಮೈಸೂರು ಜಿಲ್ಲಾ ಗ್ರಾಮಾಭಿವೃದ್ಧಿ ಸಮಿತಿ ಸಭೆಯು ನಿನ್ನೆ ದಿನ ನಂಜನಗೂಡು ತಾ॥ ಕಸುವನಹಳ್ಳಿ ಗ್ರಾಮದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ॥ ಜಿ. ಎಸ್. ನಾಗರಾಜಾಚಾರ್ಯರ ಅಧ್ಯಕ್ಷತೆಯಲ್ಲಿ ಜರುಗಿತು. ಸಭೆಗೆ ಸಬ್ ಡಿವಿಜನ್ ಅಧಿಕಾರಿಗಳೂ, ಅಮಲ್ದಾರರೂ, ಡೆವಲಪ್‌ಮೆಂಟ್ ಅಧಿಕಾರಿಗಳೂ ಸಮಿತಿಯ ಸದಸ್ಯರಾಗಿ ಹೊಸದಾಗಿ ನೇಮಕವಾಗಿರುವ ನಂಜನಗೂಡು ಪುರಸಭಾ ಉಪಾಧ್ಯಕ್ಷರಾದ ಶ್ರೀ॥ ವೈ. ಕೆ. ಎಸ್. ಲಿಕ್ಕಣಶೆಟ್ಟರೂ ಇತರ ಸದಸ್ಯರೂ ಬಂದಿದ್ದರು. ಭಾವಿ, ಆಸ್ಪತ್ರೆ, ಶಾಲಾ ಕಟ್ಟಡ ಮತ್ತು ರಸ್ತೆ ಇವುಗಳನ್ನು ಮಾಡಿಸಿಕೊಡಬೇಕೆಂದು ಗ್ರಾಮಸ್ಥರು ಜಿಲ್ಲಾಧಿಕಾರಿಗಳನ್ನು ಪ್ರಾರ್ಥಿಸಿದರು. ಅವರು ಅವುಗಳನ್ನು ಮಾಡಿಸಿಕೊಡುವುದಾಗಿ ಭರವಸೆ ಇತ್ತರು.

ಮಕ್ಕಳ ವಾರ

ಮೈಸೂರು ೨೭

ನಗರದ ನಾನಾ ಮೊಹಲ್ಲಾಗಳಲ್ಲಿ ಫೆಬ್ರವರಿ ೮ ರಿಂದ ೧೫ ನೇ ತಾ॥ ವರೆವಿಗೆ ಮಕ್ಕಳ ವಾರವನ್ನು ರೆಡ್ ಕ್ರಾಸ್ ಸಂಘದ ನಗರ ಶಾಖೆಯವರು ಆಚರಿಸುವರು. ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ, ಉತ್ತಮ ಸ್ಥಾನ ಗಳಿಸುವ ಮಕ್ಕಳಿಗೆ ಬಹುಮಾನವನ್ನು ಹಂಚುವರು.

ಪೌರಸಭಾ ವಕೀಲರು

ರಾಜಧಾನಿಯ ಪೌರಸಭಾ ವಕೀಲರ ಸ್ಥಾನಕ್ಕೆ ಕೆಳಗೆ ಕಂಡ ಮಹನೀಯರುಗಳು ಉಮೇದವಾರಿ ಅರ್ಜಿಯನ್ನು ಸಲ್ಲಿಸಿರುವರು—ಶ್ರೀಗಳಾದ ಕೆ. ಎಸ್. ಸುಬ್ಬರಾವ್, ಮೈಸೂರುವಾಲಾ, ಜಿ. ವೆಂಕಟರಾವ್, ಎಂ. ವಿ. ಗೋಪಾಲರಾವ್ ಮತ್ತು ಎಸ್. ರಂಗರಾಮಯ್ಯ

ಹಿಂದೂ ಮಹಾಸಭೆ

ಮೈಸೂರು ಹಿಂದೂ ಮಹಾಸಭೆಯ ನಗರಶಾಖೆಯು ನಿನ್ನೆ ದಿನ ಶ್ರೀ ಎಂ. ಸಿ. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಶಿವರಾಮಪೇಟೆಯಲ್ಲಿ ಸ್ಥಾಪಿಸಲ್ಪಟ್ಟಿತು. ಶ್ರೀ ಕೆ. ಶೇಷಾದ್ರಿಯವರು ಆರಂಭೋತ್ಸವವನ್ನು ನೆರವೇರಿಸಿದರು. ಶ್ರೀ ಮಲ್ಲಪ್ಪನವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಎಂ. ಕೆ. ಲಿಂಗಯ್ಯ ಮತ್ತು ಎಂ. ಎನ್. ವೆಂಕಟಪ್ಪನವರು ಜಂಟೀ ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು

ಚರ್ಚಾಸ್ಪರ್ಧೆ

ಸೂತ್ತೂರು ವಿದ್ಯಾರ್ಥಿನಿಲಯ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫-೩೦ ಘಂಟೆಗೆ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ಅಂತರ ವಿದ್ಯಾರ್ಥಿನಿಲಯಗಳ ಚರ್ಚಾಸ್ಪರ್ಧೆ ನಡೆಯುತ್ತದೆ. ಸರ್ವರಿಗೂ ಸ್ವಾಗತವಿದೆ

ಜಯಲಕ್ಷ್ಮಿ ಜ್ಯೂಯಲರಿ ಮಾರ್ಟ್

ಶ್ರೀ ಕೆ. ನಾಗಪ್ಪಸೆಟ್ಟರವರು ಅಶೋಕ ರಸ್ತೆಯಲ್ಲಿ ನೂತನವಾಗಿ ತೆರೆದಿರುವ ತಮ್ಮ ಶ್ರೀ ಜಯಲಕ್ಷ್ಮಿ ಜ್ಯೂಯಲರಿ ಮಾರ್ಟಿನ ಪ್ರಾರಂಭೋತ್ಸವವನ್ನು ನಿನ್ನೆ ವೈಭವದಿಂದ ನೆರವೇರಿಸಿದರು. ಅನೇಕ ಮಹನೀಯರನ್ನು ಆಹ್ವಾನಿಸಿ ಸತ್ಕರಿಸಿದರು.

ಸ್ವೀಡನ್ ರಾಜಪುತ್ರರ ನಿಧನ

ಕೋಪನ್‌ಹೇಗನ್ ಬಳಿ ಮೊನ್ನೆ ರಾತ್ರಿ ವಿಮಾನ ಅಪಘಾತವೊಂದು ಜರುಗಿ ಸ್ವೀಡನ್ನಿನ ರಾಜಪುತ್ರರಾದ ಗುಸ್ತಾವ್ ರವರೂ ಸೇರಿ ೨೨ ಜನರು ಮರಣ ಹೊಂದಿದರೆಂದು ತಿಳಿದು ಬಂದಿದೆ.

ಬರ್ಮಾ-ಬ್ರಿಟನ್ ಸಂಧಾನದಲ್ಲಿ ಬಿಕ್ಕಟ್ಟು

ಬ್ರಿಟಿಷ್ ಮಂತ್ರಿಗಳೊಡನೆ ಬರ್ಮಾದ ನಾಯಕರು ಲಂಡನ್ನಿನಲ್ಲಿ ನಡೆಸುತ್ತಿರುವ ಸಂಧಾನದಲ್ಲಿ ಬಿಕ್ಕಟ್ಟು ಉಂಟಾಗಿರುವುದಾಗಿ ವರದಿಯಾಗಿದೆ. ರಾಜ್ಯಾಂಗ ಸಭೆಗೆ ನೇರವಾದ ಚುನಾವಣೆಯನ್ನು ಏರ್ಪಡಿಸಲೂ, ಭಾರತದಲ್ಲಿರುವಂತೆ ತಾತ್ಕಾಲಿಕ ಸರ್ಕಾರಕ್ಕೆ ಅಧಿಕಾರವನ್ನು ಕೊಡಲೂ ಬ್ರಿಟಿಷ್ ಸರ್ಕಾರವು ಒಪ್ಪಿಗೆ ಇತ್ತಿದೆ. ಆದರೆ ಯು ಸ. ಮತ್ತು ಒನ್‌ಸೇನರವರು ಒಪ್ಪಂದದ ಕೆಲವು ಅಂಶಗಳ ವಿಚಾರದಲ್ಲಿ ವಿರೋಧ ಸೂಚಿಸಿರುವುದರಿಂದ ಬಿಕ್ಕಟ್ಟು ಪ್ರಾಪ್ತವಾಗಿದೆ. ಇವರಿಬ್ಬರೂ ಆ ಒಪ್ಪಂದಕ್ಕೆ ರುಜು ಹಾಕುವ ಬಗ್ಗೆ ಸಂದೇಹ ಉಂಟಾಗಿದೆ. ಪ್ರಧಾನಿ ಅಟ್ಲೀಯವರು ಒಪ್ಪಂದವು ಪೂರ್ಣವಾದೊಡನೆಯೇ ಅಧಿಕೃತವಾದ ಹೇಳಿಕೆಯೊಂದನ್ನು ಹೊರಡಿಸುವರು

ಜುಲೈನೊಳಗೇ ಹೊಸ ರಾಜ್ಯಾಂಗ

ಭಾರತ ರಾಜ್ಯಾಂಗ ಸಭೆಯ ಕೆಲಸಕಾರ್ಯಗಳು ಇಂದಿನಂತೆಯೇ ಮುಂದುವರಿದರೆ ಜುಲೈತಿಂಗಳ ಅಂತ್ಯದೊಳಗಾಗಿ ಭಾರತದ ಹೊಸ ರಾಜ್ಯಾಂಗವು ತಯಾರಾಗುವುದೆಂದು ಅಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ತಿಳಿಸಿದ್ದಾರೆ. ಏಪ್ರಿಲಿನಲ್ಲಿ ನೇರುವ ಅಧಿವೇಶನವು ಬಹಳ ಅಲ್ಪಕಾಲ ನಡೆದು ಸಭೆಯು ಗುಂಪುಗಳಲ್ಲಿ ಕೂಡಲು ವಿಂಗಡವಾಗುವುದೆಂದೂ ಹೇಳಿದ್ದಾರೆ

ಪಂಜಾಬಿನಲ್ಲಿ ದಸ್ತಗಿರಿಗಳು

ಲಾಹೋರ್ ನಗರದಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದರೆಂಬ ಕಾರಣದಿಂದ ಮೊನ್ನೆ ದಿನ ಅನೇಕ ದಸ್ತಗಿರಿಗಳಾದುವು. ಅನೇಕ ಕಡೆ ಟಿಯರ್ ಗ್ಯಾಸನ್ನು ಪ್ರಯೋಗಿಸಲಾಯಿತು. ಲಾಹೋರಿನಲ್ಲಿ ಇದುವರೆವಿಗೆ ೧೨೫ ದಸ್ತಗಿರಿಗಳಾಗಿವೆ. ಜಲಂಧರ್ ನಗರದಲ್ಲಿ ಬಂಧಿತರಾಗಿದ್ದ ೩೪ ಮಂದಿಯನ್ನು ಬಿಡಿಸಿಕೊಳ್ಳಲು ಸುಮಾರು ಮಂದಿ ಮುಸಲ್ಮಾನರು ಜೈಲು ಖಾನೆಯನ್ನು ಮುತ್ತಿದಾಗ ಪೋಲೀಸರು ಲಾಠಿಪ್ರಯೋಗದಿಂದ ಗುಂಪನ್ನು ಚದರಿಸಿದರು. ಮಿ॥ ಜಿನ್ನಾರವರು ಹೇಳಿಕೆಯೊಂದನ್ನಿತ್ತು ಮೈಸೂರಾಯರು ಮಧ್ಯ ಪ್ರವೇಶಿಸಬೇಕೆಂದು ನಡೆಯುವ ಅನ್ಯಾಯ ತಕ್ಕ ... ಜವಾಬ್ದಾರರಾಗಬೇಕೆಂದು ತಿಳಿಸಿದ್ದಾರೆ

ವಿವಾಹ ಮಹೋತ್ಸವ

ಶ್ರೀರಂಗಪಟ್ಟಣದ ... ಅಸಿಸ್ಟೆಂಟ್ ಸೆಕ್ರೆಟರಿಯವರಾದ ಶ್ರೀ ಕೆ. ನರಸಿಂಹಯ್ಯಂಗಾರ್ಯರು ತಮ್ಮ ಕುಮಾರಿ ಚಿ॥ ಸೌ॥ ... ರನ್ನು ... ರಾಮಸ್ವಾಮಿ ... ಶ್ರೀ ಬಿ. ಶ್ರೀನಿವಾಸಯ್ಯಂಗಾರವರ ದ್ವಿತೀಯ ಪುತ್ರ ಶ್ರೀ ಬಿ. ಎಸ್. ಕೇಶವಯ್ಯಂಗಾರ್‌ರಿಗೆ ಕೊಟ್ಟು ನಿನ್ನೆ ವಿಜೃಂಭಣೆಯಿಂದ ವಿವಾಹವನ್ನು ನೆರವೇರಿಸಿದರು

ಅಗ್ರತಾಂಬೂಲದ ವ್ಯಾಜ್ಯ

ಅಳ್ವಾರ್ ತಿರುನಗರಿ ದೇವಸ್ಥಾನದಲ್ಲಿ ಅಗ್ರತಾಂಬೂಲವನ್ನು ತಮಗೆ ಸಲ್ಲಿಸಬೇಕೆಂದು ಶ್ರೀ ಶ್ರೀ ಎಂಬೆರುಮಾನಾರ್ ಸ್ವಾಮಿಗಳು ತಿರುನಲ್ವೇಲಿ ಜಿಲ್ಲಾ ನ್ಯಾಯಾಧೀಶರಲ್ಲಿ ವಾನಮಾಮಲೈ ಜೀಯರ್ ಮತ್ತು ತಿರುಕುರುಂಗುಡಿ ಸ್ವಾಮಿಗಳ ವಿರುದ್ಧವಾಗಿ ಹೂಡಿದ್ದ ವ್ಯಾಜ್ಯದಲ್ಲಿ ನ್ಯಾಯಾಧೀಶರು ತೀರ್ಪಿತ್ತು ಅಗ್ರತಾಂಬೂಲದ ಮರ್ಯಾದೆಯು ಶ್ರೀ ಶ್ರೀ ಎಂಬೆರುಮಾನಾರ್ ಸ್ವಾಮಿಗಳಿಗೆ ಸಲ್ಲಬೇಕೆಂದು ತಿಳಿಸಿದ್ದಾರೆ

ಸಾಧ್ವಿ

ತಾ॥ ೨೮-೧-೪೭ ಮಂಗಳವಾರ

ಸುಧಾರಣೆಯೋ, ಸರ್ವಾಧಿಕಾರವೋ ?

ಅಮೇರಿಕದ ಮಾದರಿಯಲ್ಲಿ ರಾಜ್ಯಾಂಗವನ್ನು ಸೃಷ್ಟಿಸುವುದಾಗಿ ಭರವಸೆಯಿತ್ತಿದ್ದ ತಿರುವಾಂಕೂರು ದಿವಾನರು ಸುಧಾರಣೆಯೆಂಬ ಒಂದು ಭೂತವನ್ನು ಕಲ್ಪಿಸಿದ್ದಾರೆ. ಅದರಲ್ಲಿ ಮಂತ್ರಿಗಳೇ ಇರುವುದಿಲ್ಲ. ಆಡಳಿತ ಸಮಿತಿಗಳ ಮೂಲಕ ಸರ್ಕಾರವು ನಡೆಸಲ್ಪಡುವುದು. ದಿವಾನರಲ್ಲಿಯೇ ಸಕಲ ಅಧಿಕಾರವೂ ಅಂತರ್ಗತವಾಗಿರುವುದು. ಮಹಾರಾಜರ ಪ್ರತಿನಿಧಿಯಾಗಿ ಅವರ ಸಕಲ ಅಧಿಕಾರವನ್ನೂ ಅಥವಾ ಅದಕ್ಕಿಂತ ಹೆಚ್ಚಿನ ಅಧಿಕಾರವನ್ನೂ ದಿವಾನರೇ ಚಲಾಯಿಸುವರು. ಇದನ್ನು ಸುಧಾರಣೆಯೆಂದು ಕರೆಯುವ ಬದಲು ಸರ್ವಾಧಿಕಾರವೆಂದು ಹೇಳಿದರೆ ತಪ್ಪಾಗಲಾರದು.

ಈಗಾಗಲೇ ಸರ್ವಾಧಿಕಾರವನ್ನು ಚಲಾಯಿಸುತ್ತಿರುವ ಸರ್ ಸಿ ಪಿ ರಾಮಸ್ವಾಮಯ್ಯರವರು ವಸ್ತುತಃ ತಿರುವಾಂಕೂರಿನ ಎರಡನೇ ರಾಜರಂತೆಯೇ ವರ್ತಿಸುತ್ತಿರುವರು. ಅವರ ಶಾಸನಪತ್ರಗಳಿಗೆ ಎದುರೇ ಇಲ್ಲ. ಅಲ್ಲಿನ ರಾಜರು ಅವರಿಗೆ ಸರ್ವಾಧಿಕಾರವನ್ನೂ ವಹಿಸಿರುವಂತಿದೆ. ಇತ್ತೀಚೆಗೆ ಸೈನ್ಯಗಳ ಮೇಲಿನ ಪಟ್ಟಿಯನ್ನೂ ತಾವೇ ವಹಿಸಿ ಮಾರ್ಷಲ್ ಲಾ ವನ್ನೂ ಸಹ ಅವರು ಜಾರಿ ಮಾಡಿದರು. ಇನ್ನು ಮುಂದೆ ರಾಜ್ಯಾಂಗದ ಸಕಲ ಸೂತ್ರಗಳನ್ನೂ ತಮ್ಮ ಕೈಯಲ್ಲಿ ಇಟ್ಟುಕೊಳ್ಳಲು ಈಗ ಹವಣಿಸಿರುವರು.

ವಯಸ್ಕರೆಲ್ಲರೂ ಓಟು ಕೊಡುವ ಅವಕಾಶವನ್ನು ಈಗ ಕೊಡಲಾಗಿದೆ. ಇದರಲ್ಲಿ ಅಮೇರಿಕದ ವಿಧಾನವನ್ನು ಅನುಸರಿಸಲಾಗಿದೆ. ಕಂದಾಯ ಕೊಡುವ ಪ್ರಜೆಗಳೆಲ್ಲರೂ ತಮಗೆ ಓಟು ಕೊಡುವ ಅವಕಾಶವಿದೆಯೆಂಬ ಮಾನಸಿಕ ಸಮಾಧಾನವನ್ನು ಹೊಂದಲು ಇದರಿಂದ ಆಸ್ಪದವೇನೋ ಆಗಿರುತ್ತದೆ. ಶಾಸನ ಸಭೆಗಳ ಅಧ್ಯಕ್ಷರುಗಳೂ ಚುನಾಯಿತರಾಗಿಯೇ ಬರುವರು. ಇವುಗಳಿಂದ ಚರ್ಚಾಕೂಟಗಳಂತಿರುವ ಈ ಸಭೆಗಳ ವ್ಯಾಪ್ತಿಯು ಹೆಚ್ಚಿರುವುದೆಂಬ ಸಂತೃಪ್ತಿಯೂ ಉಂಟಾಗುತ್ತದೆ. ಆದರೆ ಅವುಗಳ ನಿರ್ಧಾರಗಳ ಬಗ್ಗೆ ಯಾವ ಭರವಸೆಯೂ ಇರುವುದಿಲ್ಲ. ಸಭೆಗಳಲ್ಲಿ ಆದ ತೀರ್ಮಾನಗಳನ್ನು ದಿವಾನರು ತಳ್ಳಿಹಾಕಬಹುದು. ಆಗದ ನಿರ್ಣಯಗಳನ್ನು ಅವುಗಳ ಮೇಲೆ ಹೊರಿಸಬಹುದು. ಇದರಿಂದ ಈ ಸಭೆಗಳ ಅಸ್ತಿತ್ವವೇ ಮಣ್ಣುಪಾಲಾಗುವುದರಲ್ಲಿ ಸಂದೇಹವಿಲ್ಲ.

ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಂಡಿರುವ ಈ ಸಮಯದಲ್ಲಿ ಪದೇ ಪದೇ ಬದಲಾಯಿಸಬಹುದಾದ ಮತ್ತು ಶಾಸನ ಸಭೆಗಳಿಗೆ ಉತ್ತರವಾದಿಯಾದ ಮಂತ್ರಿಮಂಡಲವನ್ನು ಸ್ಥಾಪಿಸುವುದು ಹಿತಕರವಲ್ಲವೆಂದು ಸರ್ ಸಿ. ಪಿ ಯವರು ಹೇಳಿದ್ದಾರೆ. ಈ ಕಾರಣದಿಂದ ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಜಾರಿಗೆ ತಂದಿಲ್ಲವೆಂದು ತಿಳಿಸುತ್ತಾರೆ. ಇದು ಕೇವಲ ಕುಯುಕ್ತಿಯ ಮಾತೇ ವಿನಾ ಸಾಧುವಾದ ವಿಷಯವಲ್ಲ. ಈಗ ಹಿಂದೂಸ್ಥಾನದಲ್ಲಿ ಬಹು ಮಟ್ಟಿಗೆ ಶಾಸನ ಸಭೆಗಳಿಗೆ ಉತ್ತರವಾದಿಗಳಾದ ಆಡಳಿತಗಳೇ ಜಾರಿಯಲ್ಲಿರುತ್ತವೆ. ಶಾಶ್ವತ ಕೇಂದ್ರ ಸರ್ಕಾರವೂ ಶಾಸನ ಸಭೆಗಳ ವಿಶ್ವಾಸವನ್ನೇ ಅವಲಂಬಿಸಿರುತ್ತದೆ. ಅವುಗಳು ಪ್ರಜೆಗಳ ಹಿತಸಾಧನೆಗೆ ಬೇಕಾದ ಅನೇಕ ಭಾರಿ ಯೋಜನೆಗಳನ್ನು ಕೈಗೊಂಡಿವೆ. ಹಿಂದೆ ಜಾರಿಯಲ್ಲಿದ್ದ ಯೋಜನೆಗಳನ್ನು ಮುಂದುವರಿಸುತ್ತಿವೆ. ಇನ್ನೂ ನೂತನವಾದ ಉದ್ಯಮಗಳಲ್ಲಿ ತೊಡಗುತ್ತಿವೆ.

ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ಪದೇ ಪದೇ ಆಡಳಿತ ಮಂಡಲಗಳು ಬದಲಾವಣೆ ಹೊಂದುತ್ತಲೇ ಇರುತ್ತವೆ. ಆದರೆ ಇದರಿಂದ ಅಲ್ಲಿನ ಕೈಗಾರಿಕೆ, ವ್ಯಾಪಾರ ಮುಂತಾದ ಯೋಜನೆಗಳಿಗೆ ಯಾವ ಅಪ್ರೋಹವೂ ಉಂಟಾಗುವುದಿಲ್ಲ. ಮೇಲಾಗಿ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾದವರ ಆಡಳಿತದಿಂದ ಹೆಚ್ಚಿನ ಪ್ರಜಾಮನ್ನಣೆಯು ಉಂಟಾಗಿ ಇವ್ಮಡಿಯಾದ ಹುರುಪಿನಿಂದ ಕೆಲಸಗಳು ಸಾಗುತ್ತವೆ.

ಅಮೇರಿಕದಲ್ಲಿ ಅಧ್ಯಕ್ಷರು ಸಕಲ ಪ್ರಜೆಗಳ ಓಟಿನಿಂದ ಚುನಾಯಿತರಾಗಿರುವರು. ಅವರಿಗೆ ರಾಷ್ಟ್ರದ ಸಾರ್ವಭೌಮಾಧಿಕಾರವೂ ಕೊಡಲ್ಪಡುವುದು. ನಾಲ್ಕು ವರ್ಷ… ಅವರನ್ನು ಕದಲಿಸುವಂತಿಲ್ಲ. ಆದರೆ… ರು ಪ್ರಜೆಗಳ ಪ್ರೀತಿಗೆ ಪಾತ್ರರಾಗಿ, ಅ… ದ ಆರಿಸಿ ಬಂದವರು. ಆದುದರಿಂದ … ಜಾಭಿಪ್ರಾಯಕ್ಕೆ ಅನುಗುಣವಾಗಿ ವರ್ತಿ… ವರು. ತಿರುವಾಂಕೂರಿನಲ್ಲಿಯಾದ… ಅನುವಂಶಿಕವಾಗಿ ಬಂದ ಅರಸರಿಲ್ಲದ… ರು ನೇಮಿಸುವ ದಿವಾನರೂ ಇರುವ… ದಿವಾನರನ್ನು ನೇಮಿಸುವುದಕ್ಕಾಗಲೀ, … ಯುವುದಕ್ಕಾಗಲೀ ಪ್ರಜೆಗಳಿಗೆ ಅವಕಾ… ಇರುವುದಿಲ್ಲ. ಇದು ಯಾವ ರೀತಿ… ಅಮೇರಿಕದ ರಾಜ್ಯಾಂಗಕ್ಕೆ ಹೋಲಿಕೆ… ಗುವುದೋ ದೇವರೇ ಬಲ್ಲ. ಅಮೇರಿಕ… ಒಬ್ಬ ಚುನಾಯಿತ ಅಧ್ಯಕ್ಷರಿದ್ದರೆ, … ಇಬ್ಬರು ನಿರಂಕುಶ ಪರಮಾಧ್ಯಕ್ಷರು… ಹಾಗಿದೆ.

ಈಗ ಜಾರಿಗೆ ತರಬೇಕೆಂದಿರುವ ಸು… ರಣೆಗಳಿಂದ ಯಾರೂ ಮರುಳಾಗುವು… ಪ್ರಜೆಗಳಿಗೆ ಅಧಿಕಾರವನ್ನು ವಹಿಸಲು ಇ… ವಿಲ್ಲದಿರುವುದನ್ನು ಇದು ಸ್ಪಷ್ಟವಾಗಿ ಸಾ… ಸುತ್ತದೆ. ಜನ ಜಾಗೃತಿಯು ಇಷ್ಟು ಬೆ… ದಿರುವ ಈ ಕಾಲದಲ್ಲಿಯೂ ಮುಂದು… ದುವೆಂದು ಹೇಳಲಾದ ಸಂಸ್ಥಾನಗಳು … ಗೆ ವರ್ತಿಸುತ್ತಿರುವುದು ಸರಿಯಲ್ಲ. ಇ… ನೀತಿಯು ಸಂಸ್ಥಾನಗಳ ಮುಂದಿನ ಪ್ರ… ರ್ತನೆಯು ಕುರುಹಾಗಿದ್ದರೆ ಅಲ್ಲಿನ ಪ್ರಜೆ… ಳಗೂ ಅಳರಸರಿಗೂ ಒಂದು ಘೋರ ಘ… ಣೆಯು ಸಂಪ್ರಾಪ್ತವಾಗುವುದು ಖಂಡಿ… ಅವ್ಯಕ್ಷವಶಾತ್ ರಾಜರುಗಳಲ್ಲಿ ವಿ… ಲ ಬುದ್ಧಿಯಿಂದಲೂ ಉದಾರ ಭಾವ… ಯಿಂದಲೂ ವರ್ತಿಸುವವರು ಹಲವರಿದ್ದಾ… ಅವರ ಮೇಲ್ಪಂಕ್ತಿಯು ಇತರರನ್ನು ಪ್ರೇ… ರೇಪಿಸುವುದು ಕ್ಷೇಮಕರ.

ಉಚಿತ! ನೀವು ಕುಂತ ೩ ಪ್ರಶ್ನೆಗಳ… ಖಚಿತವಾದ ಉತ್ತರ! ಜಾತಕ ಯಾ ಜ… ದ ಬರೆಯುವ ಕಾಲ ವಗೈರೆ ಸಹಿತ ೬॥ … ಣೆ ಪೋಸ್ಟಲ್ ಸ್ಟಾಂಪು ಕಳುಹಿಸಿ ವರ್ಷ… ಭವಿಷ್ಯ ರೂ ೩॥. ಜಾತಕ ಫಲ ೬॥. ಶ್ರೀ… ಸುಧಾರಕ ಜೋಷಿ, ಹಳೆಯೂರು, ಪಿ. ಒ. (ಕೃಷ್ಣರಾಜನಗರ ತಾಲ್ಲೂಕು.)

ಕ್ರಯಕ್ಕಿದೆ

ಮೈಸೂರು ಸಿಟಿ ದಿವಾನ್ಸ್‌ರೋಡಿನಲ್ಲಿ… ಭಾರಿ ಮನೆ ಕ್ರಯಕ್ಕಿದೆ. ಕೂಡ್ಲೆ ವಿಚಾರಿಸಿರಿ:—ಆರ್. ಗುಂಡೂರಾವ್, ಪ… ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು.

ಹುಡುಗ ತಪ್ಪಿಸಿಕೊಂಡಿದ್ದಾನೆ

ಹೆಸರು ರಾಜಣ್ಣ, ವಯಸ್ಸು 13, ಮಿಡ್ಲ್ ಸ್ಕೂಲ್ ವಿದ್ಯಾರ್ಥಿ. ಬಣ್ಣ ಕಪ್ಪು… ಬಿಳೀ ಷರ್ಟ್, ನೀಲಿ ನಿಕ್ಕರ್ ಮತ್ತು ನೀಲಿ ಬಾರ್ಡರಿನ ಚೌಕ ಧರಿಸಿರುತ್ತಾನೆ. ಕನ್ನಡ, ಇಂಗ್ಲಿಷ್, ತೆಲುಗು, ತಮಿಳು ಮತ್ತು ಹಿಂದೀ ಭಾಷೆಗಳಲ್ಲಿ ಓದಿಬರೆಯಲು ಬರುತ್ತದೆ. ಬೆನ್ನಿನ ಬಲ ಭಾಗದಲ್ಲಿ ಮಚ್ಚೆ ಇದೆ. ಕ್ರಾಪ್ ಬಿಟ್ಟಿರುತ್ತಾನೆ. ಯಾರಾದರೂ ಕಂಡಲ್ಲಿ ಈ ಕೆಳಗಿನ ವಿಳಾಸಕ್ಕೆ ತಿಳಿಸಿದರೆ ಬಹಳ ಪುಣ್ಯ ಬರುತ್ತದೆ.

ಕೆ. ಧರ್ಮಲಿಂಗ ಶೆಟ್ಟಿಯಾರ್,
ಚಾಮಲಾಪುರ, ನಂಜನಗೂಡು

ಇಂಗ್ಲಿಷ್ ಸರ್ಜ್ ಕೋಟಿಂಗ್

ಅನೇಕ ನಮೂನೆಗಳಲ್ಲಿ ಪುನಃ ಬಂದಿವೆ
ಬಾಹುಸಾರ್ ಟ್ರೇಡಿಂಗ್ ಕಂಪೆನಿ,
ಓಲ್ಡ್ ಮೈಸೂರು ಬ್ಯಾಂಕ್ ರೋಡು,
ಮೈಸೂರು

ಟೆಂಡರ್ ನೋಟೀಸು

ಮೈಸೂರು ಅರಮನೆಗೆ 1947—48ನೇ ಸಾಲಿಗೆ ಸಪ್ಲೈ ಆಗಬೇಕಾದ ದಿನಸಿ ವಗೈರೆ ಸಾಮಾನುಗಳಿಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳು ಈ ಕೆಳಗೆ ರುಜು ಮಾಡುವವರಿಂದ 10-2-1947 ನೇ ಸೋಮವಾರ ಮಧ್ಯಾಹ್ನ ಮೂರು ಘಂಟೆ ವರೆಗೆ ತೆಗೆದುಕೊಳ್ಳಲ್ಪಡುತ್ತೆ.

ಮೋತೀಖಾನೆ ಮುನ್ಸೀಬರಿಂದ ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಬಹುದು.

ಟಿ. ರಾಮಯ್ಯ,
31-1-47 ಹುಜೂರು ಸೆಕ್ರೆಟರಿ,

ಹೊಸ ನಮೂನೆಯ

ಬೆನಾರಿಸ್ ಜಾರ್ಜೆಟ್ ಸೀರೆಗಳು, ಮೈಸೂರು ಸಿಲ್ಕು ಟಿಷ್ಯೂ ಸೀರೆಗಳು, ಬೆಂಗಾಲ್ ಸಿಲ್ಕು ಸೀರೆಗಳು ಮತ್ತು ಕೊಯಮುತ್ತೂರು ಮಧುರೆ ಸೀರೆಗಳು
ಬಿಕರಿಗೆ ಸಿದ್ಧವಾಗಿವೆ.
ಇಂದೇ ಭೇಟಿ ಕೊಡಿರಿ.

ಬಿ. ಕೆಂಚಪ್ಪ ಸನ್ಸ್

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

ರಾಜಕಮಲ್, ಮೈಸೂರು

೨೯-೧-೪೭ ರಿಂದ ಆನೋಘ ಎರಡನೇ ವಾರ

ಬೇಬೀ ಮೀನಾ ಮೋತೀಲಾಲ್, } — ಪ್ರತಿಜ್ಞಾ (ಹಿಂದಿ) — { ಬುಡೊ ಅಬ್ಬಾನಿ ಸ್ವರ್ಣಲತಾ ನಾಗ

Edited, printed and published by A. R. Nagarajan at the Sadhvi Press D. Subbiah Road, Mysore!

ರೀ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೩೦—೧—೪೭ [ಸಂಚಿಕೆ ೧೪೭

ಪಂಜಾಬ್ ಪ್ರಾಂತ್ಯದಲ್ಲಿ ಹಲವು ದಸ್ತಗಿರಿಗಳು

ಶ್ರೀ. ಎಸ್. ಪಾಟೀಲರ ಆಗಮನ

ಮೈಸೂರು ೩೦

ಮುಂಬಾಯಿ ಸರ್ಕಾರದ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಕೆ. ಎಸ್. ಪಾಟೀಲರು ಈ ದಿನ ಅರಸೀಕೆರೆ ರೈಲಿನಲ್ಲಿ ಬಂದರು. ರೈಲ್ವೆ ನಿಲ್ದಾಣದಲ್ಲಿ ನಗರ ಕಾಂಗ್ರೆಸ್ ಸಮಿತಿಯವರು, ವಿದ್ಯಾರ್ಥಿ ಕಾಂಗ್ರೆಸ್ಸಿನವರು, ಹೋಟೇಲು ಮತ್ತು ಬಟ್ಟೆ ಕೆಲಸಗಾರರ ಸಂಘದವರು ಮತ್ತು ಶ್ರೀ ಮೂರ್ತಿ ಮಹರ್ಷಿಯವರು ಅವರನ್ನು ಸ್ವಾಗತಿಸಿದರು. ಬೆಳವಾಡಿಯಲ್ಲಿರುವ ಕಲ್ಯಾಣ ಶಿಬಿರಕ್ಕೆ ಶ್ರೀ ಪಾಟೀಲರು ಭೇಟಿಕೊಟ್ಟು ಶಿಬಿರದ ಕಾರ್ಯಕಲಾಪಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ ನಂತರ ಸಂಸ್ಥಾನದ ಮಹಾರಾಜರ ಪಿ... ಗೆ ಆಗಮಿಸಿ ಅಕ್ಷರ ಪ್ರಚಾರದ ... ಸಂಸ್ಥಾನದವರು ಕೈಗೊಂಡಿರುವ ಈ ... ವನ್ನು ಪ್ರಶಂಸಿಸಿದರು.

ಕರ್ನಾಟಕದ ಆರ್ಥಿಕ ಸ್ಥಿತಿ ಎಂಬ ವಿಷಯವನ್ನು ಕುರಿತು ಶ್ರೀ ಪಾಟೀಲರು ಈ ರಾತ್ರಿ ೯-೪೫ ಕ್ಕೆ ಆಕಾಶವಾಣಿಯಲ್ಲಿ ಭಾಷಣ ಮಾಡುವರು.

ಅಂಬಾ ಪ್ರತಿಷ್ಠೆ

... ಹೊಸಹಳ್ಳಿ ಆನೆಗುಂದಿ ಅರಸಿನ ಬೀದಿಯಲ್ಲಿ ನೂತನವಾಗಿ ಕಟ್ಟಿರುವ ದೇವಾಲಯದಲ್ಲಿ ಇಂದಿನಿಂದ ಫೆ॥ ೫ ನೇ ವರೆಗೆ ಶ್ರೀ ಉಲ್ಲಮಾಂಬಾ ಮತ್ತು ಚಂದ್ರಗುಪ್ತಾಂಬಾ ದೇವಿಯವರನ್ನು ಆಗಮರೀತ್ಯಾ ಪ್ರತಿಷ್ಠಿಸುವ ಮಹೋತ್ಸವನ್ನು ನಡೆಸಲಾಗುವುದು. ಮಹಾಜನರು ದಯಮಾಡಿಸಬೇಕಾಗಿ ಕೋರಲಾಗಿದೆ.

ಕೆ. ಬಿ. ಅಯ್ಯಂಗಾರ್ಯರ ನಿಧನ

ಮೈಸೂರು ವಿದ್ಯುಚ್ಛಕ್ತಿ ಇಲಾಖೆಯ ಸೂಪರಿಂಟೆಂಡೆಂಟರಾದ ಶ್ರೀ॥ ಎಸ್ ... ಅಯ್ಯಂಗಾರ್ಯರು ಮೊನ್ನೆ ಮಧ್ಯಾಹ್ನ ೬೫ ನೇ ವಯಸ್ಸಿನಲ್ಲಿ ನಿಧನರಾದ ರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಗಣನೀಯವಾದ ಕಾರ್ಯಗಳನ್ನು ಮಾಡಿ ಪ್ರಖ್ಯಾತರಾಗಿ... ಚಾಮುಂಡಿ ಬೆಟ್ಟಕ್ಕೆ ದೀಪವನ್ನು ... ಇವರ ನೇತೃತ್ವದಲ್ಲಿಯೇ.

ಅಯ್ಯಾ ಘನಪಾಠಿಗಳ ನಿಧನ

ಶ್ರೀ ಚಾಮರಾಜಾ ಸಂಸ್ಕೃತ ಮಹಾಪಾಠಶಾಲೆಯ ನಿವೃತ್ತ ಅಧ್ಯಾಪಕರಾದ ... ದಕ್ಷಿಣ ಅಯ್ಯಾ ಘನಪಾಠಿಗಳವರು ... ಸಂಜೆ ೫ ಘಂಟೆಯಲ್ಲಿ ತಮ್ಮ ೭೭ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸ... ವಿಷಾದಿಸುತ್ತೇವೆ. ಇವರು ವೇದ, ಧರ್ಮಶಾಸ್ತ್ರ ಮುಂತಾದುವುಗಳಲ್ಲಿ ಮಹಾ ಪಂಡಿತರಾಗಿದ್ದರು. ಅವರ ಖ್ಯಾತಿಯು ... ದಕ್ಷಿಣ ಭಾರತದಲ್ಲೆಲ್ಲಾ ಪ್ರಸಿದ್ಧವಾಗಿತ್ತು. ವೈದಿಕ ಮಂಡಲಿಯ ಕಿರೀಟದಂತಿದ್ದ ಇವರ ನಿಧನದಿಂದ ಬ್ರಾಹ್ಮಣ ಸಮೂಹಕ್ಕೇ ಅಪಾರ ನಷ್ಟ ಸಂಭವಿಸಿದೆ.

ಮೃತರುಗಳ ಆತ್ಮಕ್ಕೆ ಶಾಂತಿಯನ್ನೀಯಲು ಪರಮಾತ್ಮನನ್ನು ಪ್ರಾರ್ಥಿಸುತ್ತೇವೆ. ಬಂಧು ವರ್ಗದವರಿಗೆ ನಮ್ಮ ಹೃತ್ಪೂರ್ವಕವಾದ ಅನುತಾಪವನ್ನು ಸೂಚಿಸುತ್ತೇವೆ.

ಮತ್ತೆ ಲೀಗ್ ನಾಯಕರ ದಸ್ತಗಿರಿ

ಪಂಜಾಬಿನ ಲೀಗ್ ಮುಖಂಡರುಗಳಾದ ಸರ್ ಫಿರೋಜ್ ಖಾನ್ ನೂನ್, ಇಫ್ತಿಕಾರ್ ಹುಸೇನ್, ಬೇಗಂ ಷಾ ನವಾಜ್ ಮುಂತಾದ ಹನ್ನೆರಡು ಮಂದಿಯನ್ನು ನೆನ್ನೆ ರಾತ್ರಿ ಲಾಹೋರಿನ ಪೊಲೀಸಿನವರು ಪುನಃ ದಸ್ತಗಿರಿ ಮಾಡಿ ಗೊತ್ತಿಲ್ಲದ ಸ್ಥಳಕ್ಕೆ ಸಾಗಿಸಿರುವರು. ಪ್ರತಿಬಂಧಕಾಜ್ಞೆಗಳನ್ನು ಇವರುಗಳು ಮುರಿದುದೇ ದಸ್ತಗಿರಿಗೆ ಕಾರಣ. ಪಂಜಾಬಿನಲ್ಲಿ ಇದುವರೆಗೆ ಒಟ್ಟು ೫೮೭ ದಸ್ತಗಿರಿಗಳಾಗಿವೆ. ಅವರ ಪೈಕಿ ಸರ್ ಫಿರೋಜ್ ಖಾನ್ ನೂನರ ಆಂಗ್ಲ ಮಡದಿಯೂ ಸಹ ಇದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮತ್ತು ಮುಸ್ಲಿಂ ನ್ಯಾಷನಲ್ ಗಾರ್ಡ್ಸ್ ಸಂಸ್ಥೆಗಳ ಮೇಲೆ ಹಾಕಿದ್ದ ಪ್ರತಿಬಂಧಕಗಳನ್ನು ಸರ್ಕಾರದವರು ರದ್ದುಗೊಳಿಸಿದ್ದಾರೆ. ಆದರೂ ಆಜ್ಞೋಲ್ಲಂಘನೆಗಳೂ, ದಸ್ತಗಿರಿಗಳೂ ಆಗುತ್ತಿವೆ.

ಪಾಠಶಾಲೆಗೆ ಪ್ರವೇಶ

೨೭-೧-೪೭ನೇ ಸೋಮವಾರ ಬೆಳಗ್ಗೆ ೫ ಜನ ಮೂಗರು ಕರ್ನಾಟಕ ವಿದ್ಯಾರ್ಥಿಗಳು ಮತ್ತು ಇತರರೊಡನೆ ಚಾಮರಾಜನಗರದ ವೇದಪಾಠಶಾಲೆಗೆ ಪ್ರವೇಶಮಾಡಲಾಯಿತು. ಅಗ್ಗೆ ಸಬ್‌ಡಿವಿಜನ್ ಅಧಿಕಾರಿಗಳೂ, ಅ॥ ಪೊ॥ ಸೂಪರಿಂಟೆಂಡೆಂಟರೂ, ತಾ॥ ಅಮಲ್ದಾರರೂ, ಇತರ ಹಲವು ಅಧಿಕಾರಿಗಳೂ ಹಾಜರಿದ್ದು ತಕ್ಕ ವ್ಯವಸ್ಥೆಯನ್ನು ಮಾಡಿದ್ದರು. ಸದರಿ ಅಧಿಕಾರಿಗಳು ಪಾಠಶಾಲಾ ಅಧ್ಯಾಪಕರುಗಳಿಗೆ ಸರಿಯಾದ ತಿಳುವಳಿಕೆಯನ್ನು ಕೊಟ್ಟು, ವಿದ್ಯಾರ್ಥಿಗಳನ್ನು ಪಾಠಶಾಲೆಗೆ ಸೇರಿಸಿಕೊಂಡರು— ಪ್ರತಿದಿನವೂ ಪಾಠಪ್ರವಚನಗಳು ನಡೆಯುತ್ತಿರುವ ಬಗ್ಗೆ ತಮಗೆ ವರದಿಮಾಡಬೇಕೆಂದು ಹೇಷ್ಕಾರರಿಗೆ ಅಮಲ್ದಾರರು ಆಜ್ಞಾಪಿಸಿದ್ದಾರೆ—ಎಂಬುದಾಗಿ ಶ್ರೀ ಹಗಡೂರು ರಾಮಚಂದ್ರರಾಯರು ಬರೆಯುತ್ತಾರೆ.

ಕೀರ್ತನೆ

ಮೈಸೂರು ೩೦

ಲೋಕ ಕಲ್ಯಾಣವನ್ನು ಬಯಸಿ ನಾಳೆಯಿಂದ ಪ್ರತಿ ದಿನ ಸಾಯಂಕಾಲ ೭ ರಿಂದ ೯ ರ ವರೆಗೆ ಶ್ರೀಮದ್ರಾಮಾಯಣ ಕೀರ್ತನವನ್ನು ಶ್ರೀರಾಮಸೇವಾ ಶ್ರೀ ರಾಮಚಂದ್ರಸ್ವಾಮಿ ದೇವಾಲಯದಲ್ಲಿ ಗಮಕಿ ಶ್ರೀ ಹೆಚ್ ರಾಮಕೃಷ್ಣಶಾಸ್ತ್ರಿಯವರು ನೆರವೇರಿಸುವರು.

ಬರ್ಮಾದಲ್ಲಿ ಹೊಸ ರಾಜ್ಯಾಂಗ

ಬ್ರಿಟಿಷ್ ಮಂತ್ರಿಮಂಡಲದವರಿಗೂ ಬರ್ಮಾನಿಯೋಗದವರಿಗೂ ಒಪ್ಪಂದವು ನಡೆದು ಲಂಡನ್ನಿನಿಂದ ವೈಟ್ ಪೇಪರ್ ಪ್ರಕಟಣೆ ಹೊರಟಿದೆ. ಏಪ್ರಿಲ್ ತಿಂಗಳಲ್ಲಿ ರಾಜ್ಯಾಂಗಸಭೆಗೆ ವಯಸ್ಕರೆಲ್ಲರಿಂದ ಚುನಾವಣೆ ನಡೆಯುವುದು. ಅನಂತರ ಭಾರತದಲ್ಲಿರುವಂತೆ ತಾತ್ಕಾಲಿಕ ಸರ್ಕಾರದ ರಚನೆಯಾಗುವುದು. ಬರ್ಮಾದ ಇಬ್ಬರು ನಾಯಕರು ಮಾತ್ರ ಈ ಒಪ್ಪಂದಕ್ಕೆ ಸಹಿ ಹಾಕಿಲ್ಲ. ಹೊಸ ಸರ್ಕಾರಕ್ಕೆ ಹಂಗಾಮಿನ ಪೂರ್ಣ ಸ್ವಾತಂತ್ರ್ಯವನ್ನು ಕೊಡಲಾಗುವುದು.

ಶಸ್ತ್ರಾಗಾರದಲ್ಲಿ ದರೋಡೆ

ಕೊಲಂಬೋದಿನ ಶಸ್ತ್ರಾಗಾರದ ಮಿಲಿಟರಿ ಗುಮಾಸ್ತರುಗಳನ್ನು ಹೆದರಿಸಿ ಸಶಸ್ತ್ರರಾದ ೫ ಜನರು ಅವರಿಂದ ೧೩ ಸಹಸ್ರ ರೂ ಗಳ ೧೨ ಚೀಲಗಳನ್ನು ಅಪಹರಿಸಿ ಬಳಿಯಲ್ಲೇ ನಿಂತಿದ್ದ ಕಾರಿನಲ್ಲಿ ಪರಾರಿಯಾದರೆಂದೂ ಮಿಲಿಟರಿ ಪೊಲೀಸಿನವರು ಅಟ್ಟಿಸಿಕೊಂಡು ಹೋದರೂ ಸಹ ಅವರನ್ನು ಹಿಡಿಯಲಾಗಲಿಲ್ಲವೆಂದೂ ವರದಿಯಾಗಿದೆ.

ಭಾರಿ ವಿಮಾನ ಅಪಘಾತ

ದಕ್ಷಿಣ ಆಫ್ರಿಕಕ್ಕೆ ಪ್ರಯಾಣಿಕರನ್ನು ಒಯ್ಯುತ್ತಿದ್ದ ಡಕೋಟ ವಿಮಾನವೊಂದು ನೆನ್ನೆ ಮತ್ತೊಂದು ವಿಮಾನಕ್ಕೆ ಕ್ರಾಯ್‌ಡನ್ ಬಳಿ ಡಿಕ್ಕಿ ಹೊಡೆದುದರಿಂದ ಸುಮಾರು ೨೦ ಮಂದಿ ಮೃತಪಟ್ಟಿದ್ದಾರೆಂದು ವರದಿಯಾಗಿದೆ. ಎರಡು ವಿಮಾನಗಳೂ ಪೂರ್ಣವಾಗಿ ನಾಶಗೊಂಡಿವೆ.

ಬ್ರಿಟಿಷ್ ಆರ್ಥಿಕ ನಿಯೋಗದ ಆಗಮನ

ಭಾರತದ ಸ್ಟರ್ಲಿಂಗ್ ನಿಧಿಯ ಬಗ್ಗೆ ಮಾತುಕತೆ ನಡೆಸಲು ಬ್ರಿಟಿಷ್ ನಿಯೋಗವೊಂದು ನವದೆಹಲಿಗೆ ಆಗಮಿಸಿದೆ. ಭಾರತ ಸರ್ಕಾರದೊಂದಿಗೆ ೧೫ ದಿನಗಳ ಕಾಲ ಸಂಧಾನ ನಡೆಸಲು ಏರ್ಪಾಟಾಗಿದೆ.

LATEST NEWS

ಸ್ವಂ ಸು ಪ್ರೋ] ಬೆಂಗಳೂರು ೩೦

ಮಂಡ್ಯ ಜಿಲ್ಲೆಯ ಪಬ್ಲಿಕ್ ಪ್ರಾಸಿಕ್ಯೂಟರಾಗಿರುವ ಶ್ರೀ ಹೆಚ್ ಬೊಮ್ಮೇಗೌಡರನ್ನು ಪಬ್ಲಿಕ್ ಸರ್ವೀಸ್ ಕಮಿಷನರನ್ನಾಗಿ ನೇಮಿಸಲಾಗಿದೆ.

ಶ್ರೀ ಜೆ ಪಿ ಮಲ್ಲಾರಾಧ್ಯರನ್ನು ವಿದ್ಯಾ ಇಲಾಖೆಯ ಅಡಿಷನಲ್ ಡೈರೆಕ್ಟರನ್ನಾಗಿ ನೇಮಿಸಲಾಗಿದೆ.

ಧರ್ಮ ರತ್ನಾಕರ ಗೋಪಾಲರಾಯರ ವ್ಯವಹಾರ

ಸ್ವಂ.ಸು.ಪ್ರೋ] ಬೆಂಗಳೂರು ೩೦

ಒಂದು ಲಕ್ಷ ರೂ. ಬೆಲೆ ಬಾಳುವ ಒಡವೆ ವಸ್ತುಗಳನ್ನು ತಮ್ಮಿಂದ ಅಪಹರಿಸಿದರೆಂದು ಮುಂತಾಗಿ ಧರ್ಮ ರತ್ನಾಕರ ಬಿ. ಎಸ್. ಗೋಪಾಲರಾಯರು ದಂಡಿನ ಪೊಲೀಸ್ ಅಧಿಕಾರಿಗಳಾದ ಶ್ರೀ ಸರ್ವೋತ್ತಮರಾವ್ ಮತ್ತು ಇನ್ನಿಬ್ಬರ ಮೇಲೆ ಕೊಟ್ಟಿರುವ ಫಿರ್ಯಾದಿನಲ್ಲಿ ಈ ದಿನವೂ ಗೋಪಾಲರಾಯರ ವಿಚಾರಣೆ ಮುಂದುವರಿಯಿತು. ಅವರು ಈ ಕೆಳಗೆ ಕಂಡಅಂಶಗಳನ್ನು ತಿಳಿಸಿದರು.

ನನ್ನೊಡನೆ ದೊಡ್ಡ ಮನುಷ್ಯರುಗಳೆಲ್ಲರೂ ಲೇವಾದೇವಿ ನಡೆಸುತ್ತಿದ್ದರು. ಡಿಸೆಂಬರ್ ೯ ನೇ ತಾ॥ ಶ್ರೀಮತಿ ಸಾಕಮ್ಮ, ಶ್ರೀಗಳಾದ ಜೇವಿಯರ್, ಮಾಧವ ಕೃಷ್ಣಯ್ಯ, ಎಸ್. ತಂಬೂಚೆಟ್ಟಿ, ಎಚ್ ವಿ ನಾರಾಯಣರಾವ್ ಮುಂತಾದವರು ನಮ್ಮ ಮನೆಗೆ ಬಂದು ಶೋಧನೆ ಮಾಡಿಸಿದರು. ಅದರೆ ಏನೂ ಸಿಕ್ಕಲಿಲ್ಲ. ಪೆಟ್ಟಿಗೆಯಲ್ಲಿ ೪೩ ರೂ. ಮಾತ್ರ ಇತ್ತು. ನನಗೆ ಹಿಂಸೆಯಾಗುವುದೆಂಬ ಭೀತಿಯಿಂದ ನಾನು ಅವಿತುಕೊಂಡಿದ್ದೆ. ಅನಂತರ ಪೊಲೀಸರ ರಕ್ಷಣೆಯನ್ನು ಪಡೆದೆ.

ನನ್ನ ಮೇಲೆ ಮೊಕದ್ದಮೆ ಬರುವವರಿವಿಗೂ ನನ್ನನ್ನು ಗೌರವಿಸುತ್ತಿದ್ದರು. ಈಗ ಪ್ರಪಂಚದವರೆಲ್ಲಾ ಶತ್ರುಪ್ರಾಯವಾಗಿದ್ದಾರೆ. ನನ್ನ ವ್ಯವಹಾರದಲ್ಲಿ ಯಾವ ದೋಷವೂ ನನಗೆ ಕಾಣಬರುತ್ತಿರಲಿಲ್ಲ. ಶೇ॥ ೩೦೦ ದ ೬೦೦ ರವರೆಗೆ ನಾನು ಬಡ್ಡಿಯನ್ನು ಕೊಡುತ್ತಿದ್ದೆ. ಈ ಲೇವಾದೇವಿಗಳಿಗೆ ನಾನು ಯಾವ ಲೆಕ್ಕವನ್ನೂ ಇಟ್ಟಿಲ್ಲ. ಬ್ಯಾಂಕುಗಳ ಚೆಕ್ಕು ಮತ್ತು ಪಾಸ್ ಬುಕ್ಕುಗಳೇ ನನ್ನ ದಾಖಲೆಗಳು. ಕಳೆದ ಐದು ವರ್ಷಗಳಿಂದ ೪೦,೦೦೦ ರೂ ಗಳವರೆಗಿನ ಮೇಲೆ ೩,೬೦೦ ರೂ ತೆರಿಗೆ ಕೊಡುತ್ತಿದ್ದೇನೆ. ಚೆಕ್ಕುಗಳನ್ನು ಕೊಡುವಾಗ ಬ್ಯಾಂಕಿನಲ್ಲಿ ಹಣವಿದೆಯೋ, ಇಲ್ಲವೋ ನೋಡುತ್ತಿರಲಿಲ್ಲ.

ಆಪಾದಿತರ ಪರ ವಕೀಲರಾದ ಶ್ರೀ॥ ಎಲ್ ಎಸ್ ರಾಜು ರವರು ಒಂದು ಚೀಟಿಯನ್ನು ತೋರಿಸಿ ಅದರಲ್ಲಿ "೬ ಕಂಬಳಿ, ೫ ಲಕ್ಷ" ಎಂದು ಇದ್ದುದರ ವಿವರಣೆಯನ್ನು ಕೇಳಿದರು. ಅದು ಶ್ರೀಮನ್ಮಹಾರಾಜರ ಆಪ್ತ ಕಾರ್ಯದರ್ಶಿಗಳಾದ ಶ್ರೀ॥ ಟಿ ತಂಬೂಚೆಟ್ಟಿಗೆ ಸೇರಿದ್ದೆಂದೂ, ಅದನ್ನು ಅವರೇ ನೇರವಾಗಿ ಯಾವ ವ್ಯವಹಾರವನ್ನೂ ಮಾಡುತ್ತಿರಲಿಲ್ಲವೆಂದೂ ಅವರ ಅಳಿಯಂದಿರಾದ ಶ್ರೀ ಎಸ್ ತಂಬೂಚೆಟ್ಟಿರ ಹೆಸರಿನಲ್ಲಿ ನಡೆಯುತ್ತಿತ್ತೆಂದೂ ಗೋಪಾಲರಾಯರು ಈ ದಿವಸ ಹೇಳಿದ್ದಾರೆ. ವಿಚಾರಣೆ ಮುಂದೆ ಹೋಯಿತು.

ವಿಶ್ವವಿದ್ಯಾನಿಲಯಕ್ಕೆ ದಾನ

ಮಾಜೀ ಸ್ಥಾನಪತಿಗಳಾದ ವಿ.॥ ಕೆ. ಚಾಂಡಿಯವರ ಪತ್ನಿಯವರು ದೆ ಆರು ಸಾವಿರ ರೂ ಮತ್ತು ವಿದ್ಯಾರ್ಥಿ ... ರಾಮಕೃಷ್ಣಯ್ಯಂಗಾರ್ಯರವರ ಹೆಸರಿನಲ್ಲಿ ೧೦೦೦ ರೂ ನ ಬಗ್ಗೆ ಬಡ್ಡಿಯ ಪಾರಿತೋಷಕಗಳ ಪ್ರಮಾಣಪತ್ರಗಳನ್ನು ವಿಶ್ವವಿದ್ಯಾನಿಲಯದ ಅಕಡಮಿಕ್ ಕೌನ್ಸಿಲ್‌ನವರು ಈ ದಿನ ಅಂಗೀಕರಿಸಿದರು. ಕೋಮುವಾರು ಒಪ್ಪಂದಗಳಿಗೆ ಸಂಬಂಧಪಟ್ಟ ಎರಡು ಪ್ರಮಾಣಪತ್ರಗಳು ತಿರಸ್ಕರಿಸಲ್ಪಟ್ಟವು.

ಸಾಧ್ವಿ

ತಾ|| ೩೦-೧-೪೭ ಗುರುವಾರ

ಕೊಚ್ಚಿ ಸಂಸ್ಥಾನದಲ್ಲಿ ಪತ್ರಿಕಾ ಸ್ವಾತಂತ್ರ್ಯ

ಪ್ರಜಾಪ್ರಭುತ್ವದ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಕೊಚ್ಚಿ ಸಂಸ್ಥಾನವು ಪತ್ರಿಕಾ ಸ್ವಾತಂತ್ರ್ಯದ ವಿಷಯದಲ್ಲಿಯೂ ಇಡೀ ಹಿಂದೂಸ್ಥಾನಕ್ಕೆ ಮೇಲ್ಪಂಕ್ತಿಯನ್ನು ಹಾಕಿರುತ್ತದೆ. ಅಲ್ಲಿ ಜಾರಿಯಲ್ಲಿದ್ದ ಪತ್ರಿಕಾ ಶಾಸನವನ್ನು ರದ್ದು ಮಾಡಿರುತ್ತದೆ. ಈ ಬಗ್ಗೆ ಅಲ್ಲಿನ ಶಾಸನ ಸಭೆಯಲ್ಲಿ ಬಂದಿದ್ದ ನಿರ್ಣಯವು ಅಂಗೀಕಾರ ಪಡೆದಿರುತ್ತದೆ. ಪತ್ರಿಕೆಗಳ ಮೇಲೆ ಹತೋಟಿಯನ್ನು ಚಲಾಯಿಸಲು ಕೊಚ್ಚಿ ಸಂಸ್ಥಾನದಲ್ಲಿ ಇನ್ನು ಮುಂದೆ ಯಾವ ಪ್ರತ್ಯೇಕ ಶಾಸನವೂ ಇರುವುದಿಲ್ಲ.

ನಮ್ಮ ಸಂಸ್ಥಾನದಲ್ಲಿಯೂ, ಬ್ರಿಟಿಷ್ ಹಿಂದೂಸ್ಥಾನದಲ್ಲಿಯೂ ಹಿಂದೆ ಜಾರಿಯಲ್ಲಿದ್ದಂತೆ ಅಲ್ಲಿಯೂ ಒಂದು ಶಾಸನವು ಇದುವರೆಗೆ ಇತ್ತು. ಪತ್ರಿಕೆಗಳನ್ನು ಹೊರಡಿಸಬೇಕಾದರೆ ಪೂರ್ವಭಾವಿಯಾಗಿ ಸರ್ಕಾರದವರ ಸಮ್ಮತಿಯನ್ನು ಪಡೆಯಬೇಕೆಂದು ಅದು ನಿರ್ಬಂಧಪಡಿಸುತ್ತಿತ್ತು. ಮತ್ತು ಅಧಿಕಾರಿಗಳು ತಮಗೆ ತೋರಿದಾಗ ಠೇವಣಿಯನ್ನು ಕಿತ್ತುಕೊಳ್ಳಲೂ ಸಹ ಅವಕಾಶವಿತ್ತು. ಇವುಗಳಿಂದ ಪತ್ರಿಕೆಗಳ ನಿರಾತಂಕವಾದ ಪ್ರಕಟಣೆಗೆ ವಿಶೇಷ ಅಪಾಯವುಂಟಾಗುತ್ತಿತ್ತು. ಇಂತಹ ಕರಾಳ ಶಾಸನವನ್ನು ತೆಗೆದುಹಾಕುವಂತೆ ಇಡೀ ದೇಶದಲ್ಲೆಲ್ಲಾ ಅನೇಕ ವರ್ಷಗಳಿಂದ ಚಳವಳಿ ನಡೆಯಿತು.

ಬ್ರಿಟಿಷ್ ಹಿಂದೂಸ್ಥಾನದಲ್ಲೂ, ಮೈಸೂರು ಸಂಸ್ಥಾನದಲ್ಲೂ ಮೊದಲಿನ ಶಾಸನವು ಹೋಗಿ ಮತ್ತೊಂದು ಶಾಸನವು ಜಾರಿಗೆ ಬಂದಿತು. ಪತ್ರಿಕೆಗಳನ್ನು ನಡೆಸಲು ಠೇವಣಿ ಪಡೆಯಬೇಕೆಂಬ ನಿರ್ಬಂಧವು ಹೋಗಿ, ಪತ್ರಿಕೆ ಹೊರಡಿಸುವ ಕಾಲದಲ್ಲಿ, ಅಥವಾ, ಅನಂತರ ಸಾವಿರಾರು ರೂಪಾಯಿನ ಠೇವಣಿ ಕೇಳಲು ಅವಕಾಶ ಕಲ್ಪಿಸಲ್ಪಟ್ಟಿತು. ಇದಕ್ಕೆ ಈಗಾಗಲೇ ಅನೇಕ ಪತ್ರಿಕೆಗಳು ತುತ್ತಾಗಿವೆ. ಇಂತಹ ಕ್ರೂರ ಶಾಸನವನ್ನು ರದ್ದು ಮಾಡಬೇಕೆಂದು ಇನ್ನೂ ಒತ್ತಾಯವು ಬರುತ್ತಲೇ ಇದೆ.

ಭಾರತ ಕೇಂದ್ರ ಸರ್ಕಾರದ ಮಂತ್ರಿಗಳಾದ ಸರ್ದಾರ್ ಪಟೇಲರು ಪತ್ರಿಕಾ ಸ್ವಾತಂತ್ರ್ಯದ ತತ್ವವನ್ನು ಅಂಗೀಕರಿಸಿ ಈಗಿರುವ ಶಾಸನವನ್ನೂ ರದ್ದು ಮಾಡುವುದಾಗಿ ತಿಳಿಸಿದ್ದಾರೆ. ಈ ಬಗ್ಗೆ ಒಂದು ಸಮಿತಿಯನ್ನೂ ಸಹ ನೇಮಿಸಲಿದ್ದಾರೆ. ಆದರೆ ಕೊಚ್ಚಿ ಸಂಸ್ಥಾನವು ಅವೆಲ್ಲಕ್ಕಿಂತಲೂ ಮುಂದುವರಿದು ಕರಾಳ ಶಾಸನವನ್ನು ಸಂಪೂರ್ಣವಾಗಿ ವಜಾ ಮಾಡಿರುತ್ತದೆ. ಇದಕ್ಕಾಗಿ ಪತ್ರಿಕೋದ್ಯಮದಲ್ಲಿ ತೊಡಗಿರುವವರೆಲ್ಲ ಅಲ್ಲಿನ ಸರ್ಕಾರದವರಿಗೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ.

ಪತ್ರಿಕೆಗಳ ಮೇಲಿನ ಹತೋಟಿಗಾಗಿ ಯಾವ ಪ್ರತ್ಯೇಕವಾದ ಶಾಸನವೂ ಅಗತ್ಯವಿಲ್ಲವೆಂಬುದೇ ಎಲ್ಲ ಮುಂದುವರಿದ ರಾಷ್ಟ್ರಗಳ ಅಭಿಪ್ರಾಯವಾಗಿದೆ. ಇಂಗ್ಲೆಂಡ್, ಅಮೆರಿಕ ಮುಂತಾದ ದೇಶಗಳಲ್ಲಿ ಪ್ರತ್ಯೇಕವಾದ ದೇಶಗಳಲ್ಲಿ ಪ್ರತ್ಯೇಕವಾದ ಪತ್ರಿಕಾ ಶಾಸನವು ಬೇರೆ ಇರುವುದಿಲ್ಲ. ಸಾಮಾನ್ಯವಾದ ಶಾಸನಗಳೇ ಪತ್ರಿಕಾ ಕರ್ತರುಗಳಿಗೂ ಅನ್ವಯಿಸುವುವು. ನಮ್ಮ ದೇಶದಲ್ಲಿ ಜಾರಿಯಲ್ಲಿರುವ ಇಂಡಿಯನ್ ಪೀನಲ್ ಕೋಡು ಮತ್ತು ಕ್ರಿಮಿನಲ್ ಪ್ರೊಸೀಜರ್ ಕೋಡುಗಳ ವ್ಯಾಪ್ತಿಗೆ ಸಂಬಂಧಪಡದ ಅಂಶಗಳೇ ಇಲ್ಲವೆಂದು ಅರಿತವರು ಹೇಳುತ್ತಾರೆ. ಲಾರ್ಡ್ ಮೆಕಾಲೆಯವರು ತಮ್ಮ ಬುದ್ಧಿಯನ್ನೆಲ್ಲಾ ವಿನಿಯೋಗಿಸಿ ಈ ಶಾಸನಗಳನ್ನು ರಚಿಸಿದ್ದಾರೆ. ಆದುದರಿಂದ ಬೇರೆ ಕರಾಳ ಶಾಸನಗಳ ಅಗತ್ಯವೇ ಇರುವುದಿಲ್ಲ.

ನಮ್ಮ ಸಂಸ್ಥಾನದ ಶಾಸನ ಸಭೆಯಲ್ಲಿಯೂ ಪತ್ರಿಕಾ ಕಾನೂನನ್ನು ವಜಾ ಮಾಡಬೇಕೆಂದು ಬಂದಿದ್ದ ನಿರ್ಣಯವು ಬಹುಮತ ದೊರೆಯದೆ ಬಿದ್ದು ಹೋಯಿತು. ಪ್ರತಿಗಾಮಿ ವ್ಯಕ್ತಿಗಳಿಂದಲೂ, ನಾಮಕರಣದ ಸದಸ್ಯರಿಂದಲೂ ಕೂಡಿ ನಿರಂಕುಶಾಡಳಿತದ ಪ್ರತಿಬಿಂಬವಾಗಿರುವ ಇಂತಹ ಸಭೆಯಲ್ಲಿ ಪ್ರಗತಿಪರವಾದ ಪ್ರಯತ್ನಗಳಿಗೆ ಬೆಂಬಲ ದೊರೆಯುವುದು ಕಷ್ಟಸಾಧ್ಯವೇ ಸರಿ. ಕೊಚ್ಚಿ ಸಂಸ್ಥಾನವು ಅನುಸರಿಸುತ್ತಿರುವ ವಿಶಾಲ ನೀತಿಯಿಂದಲಾದರೂ ಕಾಲಕ್ರಮದಲ್ಲಿ ಇತರರ ಕಣ್ಣು ತೆರೆಯದಿರಲಾರದೆಂಬುದೇ ನಮ್ಮ ನಂಬಿಕೆ.

ಮೈಸೂರು ೧ ನೇ ಮುನ್ಸೀಫ್ ರವರ ಕೋರ್ಟಿನಲ್ಲಿ

O S. 272—46 47.

ವಾದಿಗಳು.- (೧) ಚಿಕ್ಕತಂಬೇಗೌಡ, (೨) ಪುಟ್ಟಮಾದೇಗೌಡ, (೩) ದೊಡ್ಡ ನಂಜಯ್ಯ ಉರುಫ್ ದೊಡ್ಡವಾಪಣ್ಣ, (೪) ಚೆನ್ನೇಗೌಡ (೫) ಬಂದೀಗೌಡ (೬) ರಾಮೇಗೌಡ

ಪ್ರತಿವಾದಿಗಳು - (೧) ಕೆ ಎಲ್ ಮಾದೇಗೌಡ (೨) ರಂಗೇಗೌಡ (೩) ಚಿಕ್ಕಮಾದಯ್ಯ ಉರುಫ್ ಭೂಪಣ್ಣ.

ಈ ಕೇಸಿನಲ್ಲಿ ವಾದಿಗಳು ತಮ್ಮ ಮತ್ತು ಮೈಸೂರು ಕನ್ನೇಗೌಡನಕೊಪ್ಪಲು ಕೆಳಗಲ ಬೀದಿಗರಡಿಯು ಪಂಚಜನಗಳದೆನ್ನುವವರ ಪರವಾಗಿ ಡಿಟೋ ಗರಡಿಯು ತಮ್ಮಗಳದು ಮಾತ್ರವೆನ್ನುವ ಪ್ರತಿವಾದಿಗಳ ಮತ್ತು ಇತರರ ಮೇಲೆ ಸದರಿ ವಿಷಯದ ಇತ್ಯರ್ಥಕ್ಕಾಗಿ, ಪ್ರಾತಿನಿಧ್ಯರೂಪವಾದ ದಾವಾ ಮಾಡಿ, ಅದು ೧೨-೨-೪೭ ಕ್ಕೆ ಹೀರಿಂಗಿದೆ. ಆ ದಿನ ಅಥವಾ ಅದರೊಳಗಾಗಿ ಡಿಟೋ ಕೆಳಗಣ ಬೀದಿಯವರ್ಯಾರು ಬೇಕಾದರೂ ಘನಕೋರ್ಟಿನವರ ಅನುಮತಿಯಿಂದ ಈ ಕೇಸಿಗೆ ಪಾರ್ಟಿಯಾಗಿ ಸೇರಿ ತಮ್ಮ ಅಹವಾಲನ್ನು ಹೇಳಿಕೊಳ್ಳಬಹುದು ತಪ್ಪಿದಲ್ಲಿ ಅದಿಲ್ಲದೆಯೇ ತೀರ್ಮಾನವಾಗುತ್ತೆ

ಕೆ ಶೇಷಾದ್ರಿ,
ವಾದಿಗಳ ಅಡ್ವೊಕೇಟ್

ಉಚಿತ! ನೀವು ಕುರಿತ ೩ ಪ್ರಶ್ನೆಗಳಿಗೆ ಖಚಿತವಾದ ಉತ್ತರ! ಜಾತಕ ಯಾ ಕಾಗದ ಬರೆಯುವ ಕಾಲ ವಗೈರೆ ಸಹಿತ ೬|| ಆಣೆ ಪೋಸ್ಟಲ್ ಸ್ಟಾಂಪು ಕಳುಹಿಸಿ ವರ್ಷ ಭವಿಷ್ಯ ರೂ ೩||. ಜಾತಕ ಫಲ ೬||. ಶ್ರೀ ಸುಧಾಕರ ಜೋಷಿ, ಪಳೆಯೂರು, ಪಿ. ಒ (ಕೃಷ್ಣರಾಜನಗರ ತಾಲ್ಲೂಕು.)

ಕ್ರಯಕ್ಕಿದೆ

ಮೈಸೂರು ಸಿಟಿ ದಿವಾನ್ಸ್ ರೋಡಿನಲ್ಲಿ ಭಾರಿ ಮನೆ ಕ್ರಯಕ್ಕಿದೆ. ಕೂಡಲೆ ವಿಚಾರಿಸಿರಿ :— ಆರ್. ಗುಂಡೂರಾವ್, ಹಳೇ ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು.

ಪ್ರಸಿದ್ಧ ಪತ್ರಿಕೆ

ಚಾಮರಾಜನಗರದ ಮೇಲು ಸಕ್ಕರೆ ಕಟ್ಟಿರ ಚಿಕ್ಕ ರಂಗಶೆಟ್ಟಿ ಮತ್ತು ಇವನ ಮಗ ಮಾರಶೆಟ್ಟಿಯು ತಿಳಿಯಪಡಿಸುವುದೇನೆಂದರೆ - ಷೆಡ್ಯೂಲ್ ಸ್ವತ್ತು ನಮ್ಮ ಹಕ್ಕಿಗೆ ಒಳಪಟ್ಟು ನಮ್ಮ ಸ್ವಾಧೀನಾನುಭವದಲ್ಲಿರುವುದರಿಂದಲೂ ಹಿಸ್ಸೆ ಪಡೆಯತಕ್ಕ ವ್ಯನರುಗಳಿರುತ್ತಾರೆ. ಸದರಿ ಸ್ವತ್ತನ್ನು ನಮ್ಮ ಚಿಕ್ಕಪ್ಪಂದಿರಾದ ಚೆನ್ನಿಗಶೆಟ್ಟಿ, ದಾಸಶೆಟ್ಟಿ ಎಂಬುವರು ದುರುದ್ದೇಶದಿಂದ ತಮ್ಮ ಹಕ್ಕಿಗೆ ಸೇರಿದ್ದೆಂದು ಕರಾರು ಮಾಡಲು ಉದ್ದೇಶಪಟ್ಟಿರುತ್ತಾರೆ. ಯಾರಾದರೂ ಕ್ರಯ ವಗೈರೆ ಮಾಡಿಕೊಂಡಲ್ಲಿ ಅಂಥವರಿಗೆ ಸ್ವತ್ತು ಊರ್ಜಿತವಾಗತಕ್ಕದ್ದಲ್ಲ. ಅಲ್ಲದೆ ಕಷ್ಟನಷ್ಟಗಳಿಗೆ ಜವಾಬ್ದಾರರಾಗಬೇಕಾಗುತ್ತೆ.

ಷೆಡ್ಯೂಲ್ -

ಚಾಮರಾಜನಗರಕ್ಕೆ ಸೇರಿದ್ದ ಸ ನಂ. ೪೪೪-೧ ಖುಷ್ಕಿ ೧ ಎ ೬ ಗುಂ ಆಕಾರ ೫-೮-೦ ಉಳ್ಳದ್ದು ಮಾತ್ರ

೧ ● ಚಿಕ್ಕರಂಗಶೆಟ್ಟಿ ಎಡಗೈ ಹೆಬ್ಬೆಟ್ಟಿನ ರುಜು
೨ ಮಾರಶೆಟ್ಟಿಯ ರುಜು

§ ಕಾಶಿಯ ಬಳಿ ಇರುವ ರಾಮನಗರದ ಒಂದು ಹಿಂದೂ ಶವವನ್ನು ಗಂಗಾ ತೀರದಲ್ಲಿ ದಹನ ಕಾರ್ಯಕ್ಕಾಗಿ ... ಯಿತು. ಮಂತ್ರೋಚ್ಚಾರಣೆಯಾಗು... ವಾಗ ಗಂಗಾ ತೀರ್ಥವನ್ನು ಶವದ ಬಾಯಿಗೆ ಹಾಕಲು ಪ್ರಯತ್ನಪಟ್ಟದ್ದವನು ಕಣ್ಣು ಬಿಟ್ಟುಕೊಂಡು ಎದ್ದು ಕುಳಿತನು ... ಅತನು ಆರೋಗ್ಯವಾಗಿದ್ದಾನೆಂಬುದಾಗಿ ... ಳದು ಬಂದಿದೆ.

† ರಾಜಧಾನಿಯ ದೇಶಪ್ರೇಮಿ ... ದವರು ಪೂರ್ವ ಬಂಗಾಳಾ ನಿಧಿಗಾಗಿ ... ೧೧-೫-೦ ಯನ್ನು ಶ್ರೀ ಶರತ್ ಚಂದ್ರ ... ಸರಿಗೆ ಕಳುಹಿಸಿಕೊಟ್ಟಿರುತ್ತಾರೆ

ಇಂಗ್ಲಿಷ್ ಸರ್ಜ್ ಕೋಟಿಂ...
ಅನೇಕ ನಮೂನೆಗಳಲ್ಲಿ ಪುನಃ ಬಂ...
ಬಾಪೂಸಾರ್ ಟ್ರೇಡಿಂಗ್ ಕಂಪ...
ಓಲ್ಡ್ ಮೈಸೂರು ಬ್ಯಾಂಕ್ ರೋಡ್,
ಮೈಸೂರು

OPERA TALKIES
2nd week from 31-1-47
JUNGLE - - GODDES[S]
Stars:-
Noah Berry, Dorothy Sh...

ಐತಿಹಾಸಿಕ ಚಿತ್ರಗಳಲ್ಲಿ ಗಣ್ಯಸ್ಥಾನವನ್ನು ಪಡೆದಿರುವ
ಕಾರ್ದಾರ್ರವರ
ಷಹಜಹಾನ್
ತಾರಾಗಣ :-
ಸೈಗಾಲ್, ರಾಗಿಣಿ, ಜೈರಾಜ್,
ನಸ್ರೀನ್, ಕನ್ವರ್ ಮುಂತಾದವ...
ರಣಜಿತ್
31-1-47 ರಿಂದ ಪ್ರತಿ ದಿನ
ಮೂರು ಆಟಗಳು

Edited, printed and published by A. K. Nagarajan at the Sadhvi Press, D Subbiah Road Mysore

ಹೊಸ ನಮೂನೆಯ
ಬನಾರಿಸ್ ಜಾರ್ಜೆಟ್ ಸೀರೆಗಳು, ಮೈಸೂರು ಸಿಲ್ಕು ಟಿಸ್ಯೂ ಸೀರೆಗಳು, ಬೆಂಗಳೂರ್ ಸಿಲ್ಕು ಸೀರೆಗಳು ಮತ್ತು ಕೊಯಮತ್ತೂರು ಮಧುರೆ ಸೀರೆಗಳು
ಬಳಕೆಗೆ ಸಿದ್ಧವಾಗಿವೆ
ಇಂದೇ ಭೇಟಿ ಕೊಡಿರಿ.
●
ಬಿ. ಕೆಂಚಪ್ಪ ಸನ್ಸ್,
ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು.

ರಾಜಕಮಲ್, ಮೈಸೂರು
೩೧-೧-೪೭ ರಿಂದ ಅಮೋಘ ಎರಡನೇ ವಾರ
ಬೇಬಿ ನಿರಾನಾ, ಮೋತೀಲಾಲ್, — ಪ್ರತಿಜ್ಞಾ (ಹಿಂದಿ) — ಮೀನಾಕುಮಾರಿ, ಸ್ವರ್ಣಲತಾ, ಸುನೇತ್ರ ಮಿತ್ರ

From 31-1 47 for 4 days at 10.30 a m
Errol Flynn & John Boles in 'One Heavenly Night'
A classical picture released for your entertainment

ಎಲ್ಲಾ ತುಪ್ಪಕ್ಕಿಂತಲೂ
ಆರ್.ಜಿ. ತುಪ್ಪವೇ
ಚನ್ನಾಗಿರುತ್ತದೆ

ರಿಜಿ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೩೧—೧—೪೭ [ಸಂಚಿಕೆ ೧೪೮

ನಿಧಾನವಾಗಿ ಸಾಗಲು ರಾಜರುಗಳಿಗೆ ಸೂಚನೆ

ಭಾವಚಿತ್ರ ಅನಾವರಣ

ಮೈಸೂರು ೩೧

ಮೈಸೂರು ಇಂಟರ್ ಕಾಲೇಜಿನ ...ಟಕ ಸಂಘದ ವಾರ್ಷಿಕೋತ್ಸವವು ೧ ಮತ್ತು ೨ ನೇ ತಾ॥ ಶ್ರೀ॥ ...ವು ಕಾರಂತರ ಅಧ್ಯಕ್ಷತೆಯಲ್ಲಿ ...ಯುವುದು. ೧ ನೇ ತಾ॥ ಶನಿವಾರ ಅಧಿ... ಕಾಳಿದಾಸ ಬಸಪ್ಪ ಶಾಸ್ತ್ರಿಗಳ ಮತ್ತು ... ತಾ॥ ಭಾನುವಾರ ಶ್ರೀ॥ ಬಸವೇಶ್ವರ ಭಾವಚಿತ್ರಗಳ ಅನಾವರಣೋತ್ಸವವು ...ಯುವುವು.

ಚರ್ಚಾ ಸ್ಪರ್ಧೆ

ಶ್ರೀ ಶಿವರಾತ್ರೀಶ್ವರ ವಿದ್ಯಾರ್ಥಿ ನಿಲಯ ಆಶ್ರಯದಲ್ಲಿ ಅಂತರ ವಿದ್ಯಾರ್ಥಿ ನಿಲಯ ಚರ್ಚಾ ಸ್ಪರ್ಧೆಯು ಮೊನ್ನೆ ಶ್ರೀ॥ ...ಬಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ...ಯಿತು "ಬಲಶಾಲಿಗಳು ಮಾತ್ರ ಬಾಳಲು ...ರು. ದುರ್ಬಲರು ಅಳಿಯುವುದೇ ...ಲು" ಎಂಬುದೇ ಚರ್ಚೆಯ ವಿಷಯ ...ವಿ॥ ನಿಲಯದ ಶ್ರೀ॥ ರಾಮಚಂ...ದ್ರನವರು, ಎಂ ಎಲ್. ಜೈನ್ ವಿ॥ ನಿಲ...ಯದ ಶ್ರೀ॥ ಜಯೇಂದ್ರರವರು, ಕೇಸಣ್ಣ ...ಯದ ಶ್ರೀ॥ ರಂಗನಾಯಕ, ಶ್ಯಾಕನಹ... ನಿಲಯದ ಶ್ರೀ ಗಂಗಾಧರಪ್ಪನವರು, ...ತ್ತೂರು ವಿ॥ ನಿಲಯದ ಶ್ರೀ॥ ಶಂಕರಾ...ಚಾರ್ಯ ಮತ್ತು ವಿದ್ಯಾಶ್ರಮದ ಶ್ರೀ॥ ಲಿಂ...ಗೌಡರು ಇವರುಗಳಿಗೆ ಅನುಕ್ರಮವಾಗಿ ...ಬಹುಮಾನಗಳನ್ನೂ, ಕೇಸಣ್ಣ ವಿದ್ಯಾರ್ಥಿ ನಿಲಯಕ್ಕೆ ಸಂಸ್ಥಾ ಬಹುಮಾನವನ್ನೂ ...ಕೊಡಲಾಯಿತು

ಉಚಿತ ಶಿಕ್ಷಣ

ರಾಜಧಾನಿಯ ಹಳೇ ಬಂಡೀಕೇರಿಯ ...ರುವ ಶ್ರೀ ರಾಮಾ ಲೀಗಿನ ಆಶ್ರಯದಲ್ಲಿ ...ಪ್ರತಿವರ್ಷದಂತೆ ಈ ಸಾರಿಯೂ ಮಿಡಲ್ ಸ್ಕೂಲ್ ಪರೀಕ್ಷೆಗೆ ಕುಳಿತುಕೊಳ್ಳುವ ವಿ...ದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಫೆಬ್ರವರಿ ೩ ನೇ ತಾ॥ ನಿಂದ ಉಚಿತವಾಗಿ ಪಾಠಪ್ರವಚನಗಳು ಜರುಗುವುವು. ಅಪೇಕ್ಷಿಸುವವರು ಕಾರ್ಯದರ್ಶಿಯವರನ್ನು ಭೇಟಿಮಾಡಬಹುದು

ವಾರ್ಷಿಕೋತ್ಸವ

ನಾಳೆ ಸಂಜೆ ೪ ಘಂಟೆಗೆ ಮಹಾರಾಜಾ ಹೈಸ್ಕೂಲ್ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶಾಲಾ ಆವರಣದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ॥ ಜಿ ಎಸ್ ನಾಗರಾಜರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು.

ವೆಂಕಣ್ಣಯ್ಯನವರ ಸ್ಮಾರಕ ಚರ್ಚೆ

ಮಹಾರಾಜಾ ಕಾಲೇಜು ಕರ್ಣಾಟಕ ಸಂಘದಾಶ್ರಯದಲ್ಲಿ ಮೊನ್ನೆ ಸಂಜೆ ದಿ॥ ...ಎಸ್. ವೆಂಕಣ್ಣಯ್ಯನವರ ಸ್ಮಾರಕ ಚರ್ಚಾ ಸ್ಪರ್ಧೆಯು ಜರುಗಿತು ಮಹಾ...ರಿಜಿಸ್ಟ್ರಾರ್‌ಗಳಾದ ಶ್ರೀ॥ ಟಿ ರಾಮಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಜಗತ್ತಿನ ಎಲ್ಲಾ ಕೇಡಿಗೂ ಸ್ವಾತಂತ್ರ್ಯವೇ ...ಮೂಲ ಕಾರಣ" ಎಂಬ ವಿಷಯದ ಮೇಲೆ ಚರ್ಚೆ ನಡೆಯಿತು. ನಗರದ ಅನೇಕ ಕಾಲೇಜಿನ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು ಶಾರದಾ ವಿಲಾಸ ಕಾಲೇಜಿನ ಶ್ರೀ॥ ...ವಿಶ್ವನಾಥ್, ಇಂ॥ ಕಾಲೇಜಿನ ಶ್ರೀ॥ ...ಸ್ ರಾಧಾಕೃಷ್ಣನ್, ಸಂಸ್ಕೃತ ಕಾಲೇಜಿನ ಶ್ರೀ॥ ಬಾಲಗಣಪತಿಭಟ್ಟ, ಟ್ರೈನಿಂಗ್ ಕಾಲೇಜಿನ ಶ್ರೀ॥ ಬಿ. ಘಂಟಾಚಾರ್ ...ರವರುಗಳಿಗೆ ೧, ೨, ೩, ಮತ್ತು ೪ ನೇ ಬಹುಮಾನಗಳೂ, ಮಹಾರಾಜಾ ಕಾಲೇಜಿನ ಶ್ರೀಮತಿ ಸತ್ಯವತಿಯವರಿಗೆ ಮಹಿಳೆಯರ ವಿಶೇಷ ಬಹುಮಾನವೂ ಕೊಡಲ್ಪಟ್ಟವು.

ಕ್ವಿಟ್ ಇಂಡಿಯಾ ನಿರ್ಣಯಕ್ಕೆ ಗವರ್ನರರ ಪುರಸ್ಕಾರ

ಮದ್ರಾಸ್ ಮಂತ್ರಿ ಮಂಡಲವು ನನ್ನನ್ನು ಒಬ್ಬ ಸಹೋದ್ಯೋಗಿಯನ್ನಾಗಿ ತಿಳಿದುಕೊಂಡಿದೆ. ಈ ಮಂತ್ರಿ ಮಂಡಲವು ಪ್ರಜೆಗಳ ಸೇವೆಗಾಗಿ ತನ್ನ ಕೈಲಾದಷ್ಟನ್ನೆಲ್ಲಾ ನಿಸ್ವಾರ್ಥತೆಯಿಂದ ಗೈಯುತ್ತಿದೆ ಇದು ಹೊಗಳಿಕೆಯಲ್ಲ, ಭಾರತದಲ್ಲಿ ಯಾವ ಸರ್ಕಾರವೂ ನನಗೂ ಮಂತ್ರಿ ಮಂಡಲಕ್ಕೂ ಇರುವಷ್ಟು ಸಹಕಾರ, ಸೌಹಾರ್ದವನ್ನು ಪಡೆದಿಲ್ಲವೆಂದು ಧಾರಾಳವಾಗಿ ಹೇಳುತ್ತೇನೆ" ಎಂಬುದಾಗಿ ಮದ್ರಾಸ್ ಗೌರ್ನರಾದ ಸರ್ ಆರ್ಚಿಬಾಲ್ಡ್ ನೈ ರವರು ಸರ್ಕಾರಿ ಭವನವನ್ನು ಮದ್ರಾಸ್ ಮಂತ್ರಿ ಮಂಡಲಕ್ಕೆ ಒಪ್ಪಿಸುವ ಸಮಾರಂಭದಲ್ಲಿ ತಿಳಿಸಿದರು ಅಲ್ಲದೆ "ಕ್ವಿಟ್ ಇಂಡಿಯ" ಚಳುವಳಿಯಲ್ಲಿ ವೈಯಕ್ತಿಕ ಆಕ್ರೋಶವೇನೂ ಇಲ್ಲವೆಂಬುದನ್ನು ಮನಗಂಡಿರುವುದಾಗಿಯೂ ಹೇಳಿದರು.

ಉಪಾಧ್ಯಾಯರುಗಳ ಪ್ರಾರ್ಥನಾ ಮುಷ್ಕರ

ಕೊಳ್ಳೆಗಾಲ ಎಂಬಲ್ಲಿನ ಜಿಲ್ಲಾ ಬೋರ್ಡ್ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳು ತಮ್ಮ ಸಂಬಳವನ್ನು ಹೆಚ್ಚಿಸಬೇಕೆಂದು ಅಧಿಕಾರಿಗಳನ್ನು ಪ್ರಾರ್ಥಿಸಿದ್ದಾರೆ. ತಮ್ಮ ಬೇಡಿಕೆಯು ಸಲ್ಲದಿದ್ದರೆ ತರಗತಿಗಳಲ್ಲಿ ಪಾಠ ಹೇಳದೆ ತಮ್ಮ ಸಂಬಳ ಹೆಚ್ಚಿಸುವಂತೆ ಪ್ರಾರ್ಥನೆ ಮಾಡುತ್ತಾ ಕುಳಿತಿರಲು ಅವರೆಲ್ಲರೂ ನಿರ್ಧರಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಉಪಾಹಾರ

ನಂಜನಗೂಡು ೨೭

ಇಲ್ಲಿನ ಸರ್ಕಾರಿ ಮಾಧ್ಯಮಿಕ ಶಾಲೆಯ ಸುಮಾರು ೪೦ ಬಡ ವಿದ್ಯಾರ್ಥಿಗಳಿಗೆ ದಿನವಹಿ ಉಪಾಹಾರವನ್ನು ಏರ್ಪಡಿಸುವ ಸಮಾರಂಭವು ಉಪಾಧ್ಯಕ್ಷರಾದ ಶ್ರೀ ವೈ. ಕೆ. ಎಸ್ ಲಕ್ಷ್ಮಣಶೆಟ್ಟರ ಅಧ್ಯಕ್ಷತೆಯಲ್ಲಿ ಮೊನ್ನೆ ದಿನ ಜರುಗಿತು ಶ್ರೀ ಗಳಾದ ಸಿ. ವೆಂಕಟರಮಣಪ್ಪ, ಎಸ್. ಸುಬ್ಬಯ್ಯ, ಪುಟ್ಟಯ್ಯ, ಬಿ ವಿ. ಪಂಡಿತರು ಕೆಲವು ೧೦೦ ರೂ ಗಳನ್ನೂ, ಪುರಸಭೆಯವರು ೬೦ ರೂ, ಜಮಾನು ಅಡಮಾನು ಸಹಕಾರ ಸಂಘದವರು ೫೦ ರೂ. ಗಳನ್ನೂ ಉದಾರವಾಗಿ ಇತ್ತಿದ್ದಾರೆ

LATE NEWS

ಅಡ್ವೊಕೇಟರಾದ ಶ್ರೀ ಎಸ್ ರಂಗರಾಮಯ್ಯನವರು ಈ ದಿನ ಬಹುಮತದಿಂದ ರಾಜಧಾನಿಯ ಪುರಸಭೆಯ ವಕೀಲರಾಗಿ ಚುನಾಯಿಸಲ್ಪಟ್ಟರು.

ನಿಧಾನವಾಗಿ ಹೋಗುವಂತೆ ರಾಜರುಗಳಿಗೆ ಸೂಚನೆ

ತಮ್ಮ ಸಂಸ್ಥಾನಗಳಲ್ಲಿ ರಾಜ್ಯಾಂಗ ಸುಧಾರಣೆಗಳನ್ನು ಜಾರಿಗೆ ತರಬೇಕೆಂದೂ, ತಮ್ಮ ಖರ್ಚಿನ ಬಾಬನ್ನು ಕಡಮೆ ಮಾಡಿಕೊಳ್ಳಬೇಕೆಂದೂ ಮತ್ತು ಕಾಲಧರ್ಮಕ್ಕನುಗುಣವಾಗಿ ಮುಂದೆ ವರಿಯಬೇಕೆಂದೂ ಭಾರತ ರಾಜಕೀಯ ಇಲಾಖೆಯವರು ಸಂಸ್ಥಾನಾಧೀಶರುಗಳಿಗೆ ಈಗ್ಗೆ ಕೆಲವು ಕಾಲದ ಹಿಂದೆ ಸೂಚನೆಯನ್ನು ಕೊಟ್ಟಿದ್ದರಷ್ಟೆ. ಈಗ ಆ ಮನೋಭಾವವನ್ನು ಬದಲಾಯಿಸಿ 'ನಿಧಾನವಾಗಿ ಸಾಗಿ' ಎಂಬುದಾಗಿ ಹೊಸ ಸೂಚನೆಯನ್ನಿತ್ತಿರುವರೆಂದು ಹೇಳಲಾಗಿದೆ. ಮೊನ್ನೆ ಸಂಸ್ಥಾನಾಧೀಶರುಗಳು ಸಭೆ ಸೇರಿ ತೀರ್ಮಾನಿಸಿರುವ ಧೋರಣೆಯು ಇದಕ್ಕನುಸಾರವಾಗಿದೆಯೆಂದು ದೆಹಲಿಯಲ್ಲಿ ಹೇಳಲಾಗುತ್ತಿದೆ

ತಿರುವಾಂಕೂರು ಸುಧಾರಣೆಗಳ ತಿರಸ್ಕಾರ

ಈಗ ಜಾರಿಗೆ ತರಬೇಕೆಂದಿರುವ ಹೊಸ ಸುಧಾರಣೆಗಳು ಜಾರಿ ಚಲಾಯಿಸಲಾಗುತ್ತಿರುವ ಸರ್ವಾಧಿಕಾರವನ್ನೇ ಮುಂದುವರಿಸಿಕೊಂಡು ಅದನ್ನು ಮತ್ತಷ್ಟು ಭದ್ರಪಡಿಸಲು ಸಹಾಯಕವಾಗಿವೆ. ಅವು ಸಂಸ್ಥಾನದ ಸರ್ವಾಧಿಕಾರವನ್ನು ದಿವಾನರಿಗೆ ವಹಿಸಿಕೊಡುತ್ತವೆ- ಎಂಬುದಾಗಿ ಹೇಳಿ ತಿರುವಾಂಕೂರು ಕಾಂಗ್ರೆಸ್ಸು ಅದನ್ನು ತಿರಸ್ಕರಿಸಿದೆ ಈ ಬಗ್ಗೆ ನಡೆಯುವ ಮಾತುಕತೆಗಳಲ್ಲಿ ಭಾಗವಹಿಸಬಾರದುದಿಲ್ಲವೆಂದೂ ತೀರ್ಮಾನಿಸಿದೆ.

* ಮದ್ರಾಸ್ ವಿಶ್ವವಿದ್ಯಾನಿಲಯದ ಪ್ರೊ॥ ವಿಲಿಯಂ ಎಚ್ ಎಡ್ವರ್ಡ್ಸ್‌ರವರು ಫೆ॥ ೧ ನೇ ತಾ॥ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ 'ಅಮೆರಿಕಾ ರಾಜ್ಯಾಂಗದ ಪಾಠಗಳು' ಎಂಬ ವಿಚಾರವಾಗಿ ಉಪನ್ಯಾಸವೀಯುವರು.

ಎಲ್ಲಮ್ಮಾಂಬಾ ಪ್ರತಿಷ್ಠೆ

ಮಂಡಿಮೊಹಲ್ಲಾ ಆನೆಗೊಂದಿ ಅರಸಿನವರ ಬೀದಿಯಲ್ಲಿ ನೂತನವಾಗಿ ಕಟ್ಟಿರುವ ದೇವಾಲಯದಲ್ಲಿ ೩೦-೧-೪೭ ರಿಂದ ೫-೨-೪೭ ರ ವರೆಗೆ ಶ್ರೀ ಯಲ್ಲಮ್ಮಾಂಬಾ ಮತ್ತು ಶ್ರೀ ಚಂದ್ರಗುಪ್ತಾಂಬಾ ದೇವಿಯವರನ್ನು ವೈದಿಕಾಗಮೋಕ್ತ ಪ್ರತಿಷ್ಠಿಸುವ ಮಹೋತ್ಸವವನ್ನು ನಡೆಸಲಾಗುವುದು. ಮಹಾಜನರು ದಯಮಾಡಿಸಬೇಕಾಗಿ ಕೋರಲಾಗಿದೆ.

ಭಕ್ತಮಂಡಲಿಯ ಪರವಾಗಿ,
ಎಚ್ ಆರ್ ನಂಜುಂಡಯ್ಯ,
ಎಸ್ ಗೋವಿಂದ್,
ಕಾರ್ಯದರ್ಶಿಗಳು.

ಬಿ. ಎಸ್. ಗೋಪಾಲರಾಯರ ವ್ಯವಹಾರ

ಸ್ವಂ ಸು ಪ್ರೋ] ಬೆಂಗಳೂರು ೩೧

ಧರ್ಮರಕ್ಷಾಕರ ಬಿ ಎಸ್ ಗೋಪಾಲರಾಯರ ವಿಚಾರಣೆಯು ನಿನ್ನೆ ಮುಂದುವರಿದಾಗ ಅವರು ಈ ಕೆಳಗೆ ಕಂಡ ಅಂಶಗಳನ್ನು ತಿಳಿಸಿದರು:-

ಅಪಹಾರವಾದ ಒಡವೆಗಳು ನನ್ನ ಪತ್ನಿಗೆ ಸಂಬಂಧಪಟ್ಟವು. ನನಗೆ ಅನೇಕ ಶತ್ರುಗಳಿರು ದಂಡಿನಲ್ಲಿ ಇರುವರಾದರೂ ಅಲ್ಲಿ ನಾನು ಯಾವ ವರಮಾನ ತೆರಿಗೆಯನ್ನೂ ಕೊಡುತ್ತಿಲ್ಲ ಕೇವಲ ಬಡತನದಲ್ಲಿಯೆ ನಾನು ಹುಟ್ಟಿಬೆಳೆದವನು ಸ್ವಲ್ಪ ಮಟ್ಟಿಗೆ ಜ್ಯೋತಿಷ್ಯವೂ ನನಗೆ ಗೊತ್ತು. ಮೊದಲು ದುನ್ನರ್ ಮಿಲ್ಲಿನಲ್ಲಿ ೪೦ ರೂ. ಸಂಬಳದ ಮೇಲೆ ಸ್ಟೋರ್ ಕೀಪರ್ ಆಗಿ ಸೇರಿದೆ. ನಂತರ ಅದೇ ಸಂಬಳಕ್ಕೆ ಇಂಪೀರಿಯಲ್ ಬ್ಯಾಂಕಿಗೆ ಸೇರಿದೆ. ೩೨ ನೇ ಇಸವಿಯವರೆಗೆ ವ್ಯಾಪಾರ ಮಾಡುತ್ತಿದ್ದೆ. ಸುಖ ಸಂತೃಪ್ತಿಗಳಿಂದ ಇರುತ್ತಿದ್ದೆ ಈ ಮಧ್ಯೆ ಕುಳ್ಳ...ಯುವವರ ಸಹವಾಸಕ್ಕೆ ಬಿದ್ದೆ. ಅಪ್ಪಯ್ಯನಾಯ್ಡು ಮತ್ತು ರೆಡ್ಡಿಲ್ಲೋ ಎಂಬುವರು ನನ್ನ ಸಹವಾಸಿಗಳು

ಡಿಸೆಂಬರ್ ೫ ನೇ ತಾ॥ ಮದ್ರಾಸಿಗೆ ನಾನು ಹೋದೆ ೬ ನೇ ತಾ॥ ಹಿಂದಿರುಗಿದೆ ರಾಮನಾಡ್ ರಾಜರಿಂದ ೧ ಲಕ್ಷ ರೂ. ಗಳಿಗೂ, ಚಿದಂಬರಂ ಚೆಟ್ಟಿಯಾರ್ ರಿಂದ ೭೫ ಸಹಸ್ರ ರೂ ಗಳಿಗೂ ಚೆಕ್ಕುಗಳನ್ನು ತಂದೆ ಅವುಗಳನ್ನು ಬ್ಯಾಂಕಿಗೆ ಜಮಾ ಮಾಡಿದೆ ನವೆಂಬರ್ ೨೯ ರಲ್ಲಿ ಮಂಡ್ಯದಲ್ಲಿ ನನಗೊಂದು ಮೊಹರುಪತ್ರವು ಕೊಡಲ್ಪಟ್ಟಿತು ಅದು ಹಣವೇನೂ ವಸೂಲಾಗಲಿಲ್ಲ ೩ ನೇ ತಾ॥ ಮೈಸೂರಿಗೆ ಹೋದೆ ಅಲ್ಲಿ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ॥ ರಣಜೋಧಸಿಂಗರಿಂದ ೨ ಸಾವಿರ ರೂ. ಗಳ ಚೆಕ್ಕನ್ನು ತಂದೆ. ಬ್ಯಾಂಕಿನಲ್ಲಿ ಹಾಕಿದೆ

ಅಕ್ಟೋಬರ್ ೧೦ ನೇ ತಾ॥ ಸರ್ ಸಿ ಪಿ ರಾಮಸ್ವಾಮಿಯವರು ಧರ್ಮ ಕಾರ್ಯಕ್ಕಾಗಿ ಸಹಾಯ ಕೇಳಲು ನನ್ನ ಮನೆಗೆ ಬಂದರು ನಾನು ಏನೂ ಕೊಡಲಿಲ್ಲ. ಸರ್ ರಾಮನ್‌ರವರು ನನ್ನಲ್ಲಿ ೧ ಲಕ್ಷದ ೮೫ ಸಾವಿರ ರೂ ಡಿಪಾಜಿಟ್ ಕೊಟ್ಟರು. ನಾನು ಮುಂದೆ ಮಾಡಬೇಕೆಂದಿದ್ದ ರೇಷ್ಮೆ ವ್ಯಾಪಾರದ ಲಾಭದ ಬಗ್ಗೆ ಪ್ರತಿ ವಾರವೂ ಸರ್ ರಾಮನ್‌ರವರಿಗೆ ೩೬೦ ರೂ ನಂತೆ ವಾರದ ಲಾಭವನ್ನು ಸಲ್ಲಿಸಿದ್ದೇನೆ. ಸರ್ ತಂಬೂಚೆಟ್ಟಿಯವರ ಮುಖಾಂತರದಿಂದ ಸರ್ ರಾಮನ್‌ರವರು ಕಾಗದಗಳನ್ನು ತಂದಿದ್ದರು. ಸರ್ ಟಿ ತಂಬೂಚೆಟ್ಟಿಯವರ ಮೂಲಕ ರಿಂದ ನನಗೆ ಗೊತ್ತು ಇನ್ನೂ ಅನೇಕ ದೊಡ್ಡ ಮನುಷ್ಯರೂ ಗೊತ್ತು.

ನನ್ನ ಪೇಟೆಗಳನ್ನು ಗೊತ್ತು ಮಾಡುವುದಕ್ಕಾಗಿ ಒಂದು ಸಮಿತಿಯನ್ನು ನೇಮಿಸಿದ್ದೆ. ಆಭರಣಗಳ ಕಳುವಿನ ವಿಷಯವನ್ನು ಅವರಿಗೆ ಹೇಳಲಿಲ್ಲ ಏಕೆಂದರೆ ವಾದಿಗಳೂ ಅಲ್ಲಿ ಇದ್ದರು

ಮಾನದ ಮೇಲೆ ನಿಮಗೆ ಬಹಳ ಗಮನವಿರುವುದಲ್ಲವೇ? ಎಂಬ ಪ್ರಶ್ನೆಗೆ ಉತ್ತರವಾಗಿ ಪ್ರಾಣವನ್ನು ಎಲ್ಲಕ್ಕಿಂತಲೂ ಮುಖ್ಯವಾಗಿ ನಾನು ಪ್ರೀತಿಸುತ್ತೇನೆ-ಎಂಬುದಾಗಿ ಗೋಪಾಲರಾಯರು ಉತ್ತರವಿತ್ತರು. ನನಗೆ ಪ್ರಾಣ ಭಯ ಉಂಟಾದುದರಿಂದ ಆಭರಣದ ಕಳುವಿನ ವಿಷಯವನ್ನು ತಿಳಿಸಲಿಲ್ಲವೆಂದು ಹೇಳಿದರು ಅದನ್ನೂ ಸಹ ಶಾಸ್ತ್ರೀಯವರಿಗೆ ಈ ವಿಚಾರವನ್ನು ತಿಳಿಸಿದುದಾಗಿಯೂ ಹೇಳಿದರು.

ಸಾಧ್ವಿ

೩೧-೧-೪೭ ಶುಕ್ರವಾರ

ನರೇಂದ್ರರ ಷರತ್ತುಗಳು

ಸಂಯುಕ್ತ ಭಾರತ ರಾಜ್ಯಾಂಗದಲ್ಲಿ ಸೇರಲು ನರೇಂದ್ರ ಮಂಡಲಿಯವರು ಮುಂದಿಟ್ಟಿರುವ ಷರತ್ತುಗಳು ಸಮಸ್ಯೆಯ ಪರಿಹಾರಕ್ಕೆ ಸಹಕಾರಿಯಾಗಿರುವುದಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ರಾಜ್ಯಾಂಗ ರಚನಾ ಸಭೆಯು ವಿಶೇಷ ಶ್ರಮದಿಂದ ಇದುವರೆಗೆ ಸಾಧಿಸಿರುವ ಕೆಲಸವನ್ನೆಲ್ಲಾ ನಿರರ್ಥಕವಾಗುವಂತೆ ಮಾಡುವ ಸೂಚನೆಗಳು ಕಂಡು ಬರುತ್ತಿವೆ. ಇಂದಿನ ಕಾಲಕ್ಕೆ ಅನುಗುಣವಾಗಿಲ್ಲದ ಮತ್ತು ಬಹಳ ಹಿಂದೆಯೇ ತಿರಸ್ಕರಿಸಲ್ಪಟ್ಟಿರುವ ಹಿಂದಿನ ಕಾಲದ ತತ್ವಗಳನ್ನೇ ಅವರು ಇನ್ನೂ ಪ್ರತಿಪಾದಿಸಿರುವರು. ಪ್ರಜೆಗಳಿಗೆ ಅಧಿಕಾರವನ್ನು ವಹಿಸಿಕೊಟ್ಟು, ತಾವು ಸಾಂಕೇತಿಕ ಪ್ರಭುಗಳಾಗಿ ಶಾಸನ ಬದ್ಧರಾಗಿ ಆಡಳಿತ ನಡೆಸುವ ಸೂಚನೆಗಳನ್ನು ಕೊಟ್ಟಿಲ್ಲ. ಎಂದಿನಂತೆ ಮುಂದೆಯೂ ನಿರಂಕುಶವಾದ ಆಡಳಿತಗಳನ್ನೇ ಸಂಸ್ಥಾನಗಳಲ್ಲಿ ಇನ್ನು ಮೇಲೆಯೂ ಮುಂದುವರಿಸಲು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದನ್ನು ಯಾರೂ ಮೆಚ್ಚುವಂತಿಲ್ಲ.

ಭವಿಷ್ಯ ಭಾರತದ ಯೂನಿಯನ್ ಸ್ಥಾಪನೆಗಾಗಿ ಸರ್ವಸಮ್ಮತವಾದ ರಾಜ್ಯಾಂಗವನ್ನು ರೂಪಿಸಲು ನರೇಂದ್ರರು ಸಂಪೂರ್ಣ ಆಸಕ್ತಿಯುಳ್ಳವರಾಗಿರುವರೆಂದು ಹೇಳಲಾಗಿದೆ. ಆದರೆ ಅವರು ಹಾಕಿರುವ ಷರತ್ತುಗಳು ಈ ಸಮಸ್ಯೆಯನ್ನು ಜಟಿಲ ಸ್ಥಿತಿಗೆ ತೊಡಕು ಮಾಡಲು ಮಾತ್ರ ಸಹಕಾರಿಯಾಗಿವೆ.

ಪ್ರತಿಯೊಂದು ಸಂಸ್ಥಾನಕ್ಕೂ ಪರಮಾಧಿಕಾರವಿರಬೇಕು, ಸಂಸ್ಥಾನಗಳ ಮೇಲೆ ಯೂನಿಯನ್ ಸರ್ಕಾರಕ್ಕೆ ಯಾವ ಅಧಿಕಾರವೂ ಇರಬಾರದು; ಸಂಸ್ಥಾನಗಳ ರಾಜ್ಯಾಂಗ, ಎಲ್ಲೆಗಳು, ರಾಜವಂಶದ ಹಕ್ಕುಗಳು ಮತ್ತು ಸಂಪ್ರದಾಯಗಳ ಬಗ್ಗೆ ಬದಲಾವಣೆಯಾಗಬೇಕಾದರೆ ರಾಜರ ಒಪ್ಪಿಗೆ ಪಡೆಯಬೇಕು; ಯೂನಿಯನ್ನಿಗೆ ಸೇರುವ ಬಗ್ಗೆ ಕಡೆಯ ತೀರ್ಮಾನವು ಆಯಾ ಸಂಸ್ಥಾನಗಳಿಗೇ ಸೇರಿದುದಾಗಿದೆ; ಮುಂದಿನ ರಾಜ್ಯಾಂಗದ ಪೂರ್ಣ ಸ್ವರೂಪವು ಗೊತ್ತಾದ ಮೇಲೆಯೇ ನರೇಂದ್ರರು ಅದರೊಳಗೆ ಸೇರುವುದನ್ನೂ, ಬಿಡುವುದನ್ನೂ ನಿರ್ಧರಿಸುವರು-ಎಂಬುದಾಗಿ ಹಲವು ಷರತ್ತುಗಳನ್ನು ಹಾಕಲಾಗಿದೆ.

ಮುಸ್ಲಿಂ ಲೀಗಿನವರು ಬೇಡುತ್ತಿರುವ ಪಾಕಿಸ್ತಾನದ ಕೋರಿಕೆಯಂತೆಯೇ ನರೇಂದ್ರರ ಷರತ್ತುಗಳೂ ಇರುತ್ತವೆ. ಅಖಂಡ ಭಾರತದ ಸಂಯುಕ್ತ ರಾಜ್ಯಾಂಗದಲ್ಲಿ ತಾವೂ, ಇತರ ಪ್ರಾಂತಗಳಂತೆ ಸರಿಸಮಾನವಾದ ಪಾತ್ರವನ್ನು ವಹಿಸಿ ಇಡೀ ರಾಷ್ಟ್ರದ ಏಳಿಗೆಯಲ್ಲಿ ಸಹಕರಿಸುವುದಾಗಿ ರಾಜರುಗಳು ಹೇಳುತ್ತಿದ್ದ ಕಾಲವೂ ಇತ್ತು. ಈಗ ಅದು ಹೋಗಿ ಒಬ್ಬೊಬ್ಬರೂ ಸ್ವತಂತ್ರ ಪರಮಾಧಿಕಾರವನ್ನು ಕೇಳಲು ತೊಡಗಿರುವುದು ಆಶ್ಚರ್ಯಕರವಾಗಿದೆ. ಐನೂರಕ್ಕೆ ಮೇಲ್ಪಟ್ಟಿರುವ ಸಣ್ಣ ಪುಟ್ಟ ಸಂಸ್ಥಾನಗಳೆಲ್ಲವೂ ಸಂಪೂರ್ಣ ಸಾರ್ವಭೌಮತ್ವವನ್ನು ಅಪೇಕ್ಷಿಸಿದರೆ ಸಂಯುಕ್ತ ಭಾರತದ ಸಂಘಟನೆಯಾಗುವುದಾದರೂ ಎಂತು? ಐರ್ಲೆಂಡಿನಲ್ಲಿ ಉತ್ತರ ಭಾಗದಲ್ಲಿ ಕೃತಕವಾಗಿ ಕಲ್ಪಿತವಾಗಿರುವ ಅಲ್ಸ್ಟರ್ ಪ್ರದೇಶದಿಂದ ಆ ರಾಷ್ಟ್ರಕ್ಕೆ ಎಷ್ಟು ಅನರ್ಥ ಪರಂಪರೆಗಳು ಈಗಲೂ ಸಂಪ್ರಾಪ್ತವಾಗುತ್ತಿವೆಯೆಂಬುದು ಸಕಲರಿಗೂ ತಿಳಿದ ಅಂಶವಾಗಿದೆ.

ನರೇಂದ್ರರುಗಳ ಅಭಿಪ್ರಾಯದಂತೆ ನಡೆದರೆ ನಮ್ಮ ದೇಶದಲ್ಲಿ ಒಂದು ಅಲ್ಸ್ಟರಿಗೆ ಬದಲಾಗಿ ನೂರಾರು ಅಲ್ಸ್ಟರುಗಳು ಸೃಷ್ಟಿಯಾಗುತ್ತವೆ. ಒಂದು ಪಾಕಿಸ್ತಾನಕ್ಕೆ ಬದಲಾಗಿ ಅಸಂಖ್ಯಾತವಾದ ಪಾಕಿಸ್ತಾನಗಳು ಹುಟ್ಟಿಕೊಳ್ಳುತ್ತವೆ. ಭಾರತದ ಏಕತ್ವಕ್ಕೆ ಇವರಿಂದ ಭಂಗವುಂಟಾಗಿ ಪರಸ್ಪರ ಘರ್ಷಣೆಗಳಿಗೆ ಕಾರಣವಾಗಿ ಪರಕೀಯರ ಆಕ್ರಮಣಗಳಿಗೆ ತುತ್ತಾಗುವ ಸಂಭವವಿರುತ್ತದೆ.

ಭಾರತದ ನರೇಂದ್ರರು ತಮ್ಮ ಸಹಜದ ದೇಶಾಭಿಮಾನವನ್ನೂ, ಸ್ವಾತಂತ್ರ್ಯ ಪ್ರೇಮವನ್ನೂ, ಕ್ಷಾತ್ರ ಧರ್ಮವನ್ನೂ ಚೋದನಗೊಳಿಸಿ ನಮ್ಮೆಲ್ಲರ ಮಾತೃಭೂಮಿಯಾದ ಭಾರತ ಮಾತೆಯ ಬಿಡುಗಡೆ ವಿಮೋಚನೆಗೆ ಅವಶ್ಯಕವಾದ ತ್ಯಾಗಗಳನ್ನಾದರೂ ಮಾಡಲು ಸಿದ್ಧರಾಗಲೆಂದು ಆಶಿಸೋಣ.

ನಾಳೆಯಿಂದ ಅಮೋಘ ಪ್ರಾರಂಭ

ಚಾಮುಂಡೇಶ್ವರಿ

ಟಾಕೀಸಿನಲ್ಲಿ

-: ದಿನವಹಿ ಮೂರು ಆಟಗಳು :-

ಮಿನರ್ವಾರವರ ಐತಿಹಾಸಿಕ ಚಿತ್ರರತ್ನ

ಏಕ್-ದಿನ್ ಕ-ಸುಲ್ತಾನ್

(EK-DIN-KA-SULTAN)

ಡೈರೆಕ್ಟರ್:-ಸೊಹರಾಬ್ ಮೋದಿ

(ಪುಕಾರ್ ಮತ್ತು ಸಿಕಂದರ್ ಚಿತ್ರಗಳ ನಿರ್ದೇಶಕರು)

—; ಭೂಮಿಕೆ ;—

ಮೆಹತಾಬ್, ಶಾಂತಾರಿನ್, ವಾಸ್ತಿ, ಗುಲಾಂ ಮಹಮದ್ ಮತ್ತು ಘೋರಿ.

N B No Reservations by Phone

An Orwal Films Release BANGALORE CITY.

ಐತಿಹಾಸಿಕ ಚಿತ್ರಗಳಲ್ಲಿ ಗಣ್ಯಸ್ಥಾನವನ್ನು ಪಡೆದಿರುವ

ಕಾರ್ದಾರ್‌ರವರ

ಷಹಜಹಾನ್

-: ತಾರಾಗಣ :-

ಸೈಗಾಲ್, ರಾಗಿಣಿ, ಜೈರಾಜ್, ನಸ್ರೀನ್, ಕನ್ವರ್ ಮುಂತಾದವರು

ರಣಜಿತ್

31-1-47 ರಿಂದ ಪ್ರತಿ ದಿನ ಮೂರು ಆಟಗಳು

OPERA TALKIES

2nd week from 31-1-47.

JUNGLE - - GODDESS

Stars:-
Noah Berry, Dorothy Short

Edited, printed and published by A R. Nagarajan of the Sadhvi Press D Subbaiah Road, Mysore

ಡರ್ಬಿಸ್ವೀಪ್ ಟಿಕೇಟು ಪಡೆದು 10 ರೂ. ನಿಂದ ಒಂದು ಲಕ್ಷ ರೂ ವರೆಗಿನ ಬಹುಮಾನ ಪಡೆಯಿರಿ! ಪ್ರತಿ ಟಿಕೇಟಿಗೆ ರೂ. 2-8-0 ಮನಿಆರ್ಡರ್ ಮಾಡಿ. ಎ. ಟಿ. ತಾಳ್ಯ. ಶ್ರೀ ಸುಧಾಕರ ಜೋಷಿ, ಹಳೆಯೂರು ಪೋಸ್ಟ್ (ಎಡತೊರೆ ತಾಲ್ಲೂಕು) ಫಲಿತಾಂಶ 26-3-17 ರಲ್ಲಿ ತಿಳಿಸಲಾಗುತ್ತೆ.

ಕೆನಡ ವಿಜ್ಞಾನಿಗಳ ಆಗಮನ

ಕೆನಡಾ ದೇಶದ ಸುಪ್ರಸಿದ್ಧ ವಿಜ್ಞಾನಿಗಳಾದ ಡಾ|| ಟೌರ್ಟರು ಫೆಬ್ರವರಿ ೪ನೆ ತಾ|| ಬೆಂಗಳೂರಿಗೆ ಬಂದು ಹಲವು ದಿನ ಇರುವರು.

ಮಕ್ಕಳ ತೊಟ್ಟಲಿಗೆ

ಹಾಸುವ ರಬ್ಬರ್ ಸೀಟುಗಳು ಬಂದಿವೆ

ಬಾಹುಸಾರ್ ಟ್ರೇಡಿಂಗ್ ಕಂಪನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡು, ಮೈಸೂರು

ಹೊಸ ನಮೂನೆಯ

ಬನಾರಸ್ ಜಾರ್ಜೆಟ್ ಸೀರೆಗಳು, ಮೈಸೂರು ಸಿಲ್ಕು ಟಿಸ್ಯೂ ಸೀರೆಗಳು, ಬೆಂಗಾಲ್ ಸಿಲ್ಕು ಸೀರೆಗಳು ಮತ್ತು ಕೊಯಮುತ್ತೂರು ಮಧುರೆ ಸೀರೆಗಳು ಬಿಕರಿಗೆ ಸಿದ್ಧವಾಗಿವೆ.

ಇಂದೇ ಭೇಟಿ ಕೊಡಿರಿ.

ಬಿ. ಕೆಂಚಪ್ಪ ಸನ್ಸ್,

ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು.

ರಾಜಕಮಲ್, ಮೈಸೂರು

೩೧-೧-೪೭ ರಿಂದ ಅಮೋಘ ಎರಡನೇ ವಾರ

ಬೇಬಿ ಮೀನಾ, ಮೋತೀಲಾಲ್, } — ಪ್ರತಿಜ್ಞಾ (ಹಿಂದಿ) — { ವೀಣಾಕುಮಾರಿ, ಸ್ವರ್ಣಲತಾ, ಸುಶೀತ್ರ ಪಾತ್ರ

From 31-1-47 for 4 days at 10-30 a. m.

Samuel Goldwyn's 'One Heavenly Night

A classical picture re-released for your entertainment.

ಪೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧—೩—೪೭ [ಸಂಚಿಕೆ ೧೪೯

ಚಕ್ರವರ್ತಿಗಳ ಅರಮನೆಗೆ ಮತ್ತೆ ಬಾಂಬಿನ ಭೀತಿ

ವಿಶ್ವಶಾಂತಿಗೆ ಭಾರತ ಸ್ವಾತಂತ್ರ್ಯ ಅಗತ್ಯ

ಕೆ. ಎಫ್. ಪಾಟೀಲರ ಭಾಷಣ

ಮೈಸೂರು ೩೦

ವಿಶ್ವವಿದ್ಯಾನಿಲಯ ಸಂಘದ ವಾರ್ಷಿಕೋತ್ಸವವು ನಿನ್ನೆ ದಿನ ಮಹಾರಾಜಾ ಕಾಲೇಜ್ ಅಂಗಳದಲ್ಲಿ ಪ್ರೊ॥ ಡಿಸೋಜರವರ ಅಧ್ಯಕ್ಷತೆಯಲ್ಲಿ ಜರುಗಿತು.

ಮುಂಬಾಯಿ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾದ ಶ್ರೀ ಕೆ. ಎಫ್. ಪಾಟೀಲ್‌ರವರು ಭಾಷಣ ಮಾಡುತ್ತಾ ಈ ರೀತಿ ಹೇಳಿದರು. "ಯುದ್ಧ ಕಾಂಡವು ಅಂತ್ಯವಾಗಿ ವಿಶ್ವ ಶಾಂತಿ ಸ್ಥಾಪನೆಯಾಗಲು ಕಾರ್ಯ ಆರಂಭವಾಗಿದೆ. ಆದರೆ ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ದೊರಕದೆ ವಿಶ್ವಶಾಂತಿಯು ಸಾಧ್ಯವಿಲ್ಲ.

ಬ್ರಿಟನ್ನಿನಲ್ಲಿ ಲೇಬರ್ ಸರ್ಕಾರವು ಬಂದ ಮೇಲೆ ಭಾರತದ ಸ್ವಾತಂತ್ರ್ಯದ ಅರುಣೋದಯವಾದಂತೆ ಭಾಸವಾಯಿತು. ಆದರೆ ಇತ್ತೀಚಿನ ಬ್ರಿ॥ ನಡವಳಿಕೆಯು ಸಂದೇಹಾಸ್ಪದವಾಗಿದೆ. ದೇಶದ ಸ್ವತಂತ್ರ ರಾಜ್ಯಾಂಗದ ನಿರ್ಮಾಣವು ಆರಂಭವಾಗಿದೆ. ದೇಶೀ ಸಂಸ್ಥಾನಗಳು, ಅಲ್ಪ ಸಂಖ್ಯಾತರು ಇವೇ ಮುಂತಾದ ನೆಪದಿಂದ ಅದಕ್ಕೆ ವಿಘ್ನ ಒಡ್ಡಬಹುದೆಂಬ ಸೂಚನೆಗಳು ಕಾಣಬರುತ್ತವೆ.

ಸ್ವತಂತ್ರ ಭಾರತದಲ್ಲಿ ಅಖಂಡ ಕರ್ನಾಟಕ ಪ್ರಾಂತ್ಯದ ನಿರ್ಮಾಣವಾಗಲಿದೆ. ಅದರಿಂದ ಮೈಸೂರಿನವರು ಅದಕ್ಕಾಗಿ ಹೆಚ್ಚು ಶ್ರಮ ಕೊಡಬೇಕಾಗಿದೆ ಎಂದರು.

ವಿಶ್ವವಿದ್ಯಾನಿಲಯ ಸಂಘದ ಇತಿಹಾಸದಲ್ಲಿ ವಾರ್ಷಿಕ ಅಧಿವೇಶನದಲ್ಲಿ ಭಾಷಣವನ್ನು ಇಂಗ್ಲೀಷಿನಲ್ಲಿ ಇದುವರೆವಿಗೂ ನಡೆಸುತ್ತಿದ್ದ ಸಂಪ್ರದಾಯವನ್ನು ಮುರಿದು ಶ್ರೀ ಪಾಟೀಲರು ಕನ್ನಡದಲ್ಲಿ ಭಾಷಣಮಾಡಿದರು. ವೇಷಭೂಷಣಗಳ ಸ್ಪರ್ಧೆ, ಬಹುಮಾನ ವಿನಿಯೋಗಗಳು ನಡೆದುವು.

ತಿಲಕ ಸಂಘ

ರಾಜಧಾನಿಯ ಒಂಟಿಕೊಪ್ಪಲು ತಿಲಕ ಸಂಘದವರು ಒಂದು ಪ್ರಕಟಣೆ ಹೊರಡಿಸಿ ಸಂಘದ ಎರಡನೇ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ನಗರದಲ್ಲಿ ಜಾರಿಯಲ್ಲಿರುವ ಪ್ರತಿಬಂಧಕಾಜ್ಞೆಯಿಂದ ಸಾಧ್ಯವಾಗಿಲ್ಲವಾಗಿ ವಿಷಾದವನ್ನು ವ್ಯಕ್ತಪಡಿಸಿ ಮಹಾಜನರು ಎಂದಿನಂತೆ ಸಂಘಕ್ಕೆ ತಮ್ಮ ಸಹಕಾರಗಳನ್ನು ನೀಡಬೇಕೆಂದು ಪ್ರಾರ್ಥಿಸಿದ್ದಾರೆ.

† ಎ. ಬನುಮಯ್ಯನವರ ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಪಿ. ಸುಬ್ಬರಾಯರು ತಮ್ಮ ಕುಮಾರಿ ಸೌ॥ ನಾಗಲಕ್ಷ್ಮಿಯನ್ನು ಆನೇಕಲ್ ಪೇಟೆಯ ಸರ್ಜನ್ ಶ್ರೀ ಯಂ. ಸುಬ್ಬರಾಯರ ಮಗ ಶ್ರೀ ಎಂ. ಎಸ್. ಶ್ರೀನಿವಾಸಮೂರ್ತಿಯವರಿಗೆ ಕೊಟ್ಟು ವಿವಾಹವನ್ನು ನೆರವೇರಿಸಿದರು.

ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧಿಸುವುದು

ನಂಜನಗೂಡು ೧

ಇಲ್ಲಿ ನಡೆಯಲಿರುವ ಪುರಸಭಾ ಚುನಾವಣೆಗೆ ಕಾಂಗ್ರೆಸ್ ಪರವಾಗಿ ೧೭ ಮಂದಿ ಅಭ್ಯರ್ಥಿಗಳನ್ನು ನಿಲ್ಲಿಸಲು ತಾ॥ ಕಾಂಗ್ರೆಸ್ ಸಮಿತಿಯು ಶ್ರೀ॥ ಎಸ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿರುತ್ತದೆ.

ಮದ್ರಾಸ್ ಹರಿಜನರಿಗೆ ದೇವಾಲಯ ಪ್ರವೇಶ

ಮದ್ರಾಸ್ ಪ್ರಾಂತ್ಯದಲ್ಲಿರುವ ಎಲ್ಲಾ ಹಿಂದೂ ದೇವಾಲಯಗಳಿಗೂ ಹರಿಜನರು ಪ್ರವೇಶಿಸಲು ಅಧಿಕಾರ ಕೊಡುವ ಮಸೂದೆಯೊಂದನ್ನು ಅಲ್ಲಿನ ಸರ್ಕಾರವು ಪ್ರಕಟಿಸಿದೆ.

ಮೈಸೂರು ಹೋರಾಟಕ್ಕೆ ದಕ್ಷಿಣ ಕನ್ನಡಿಗರ ಬೆಂಬಲ

ಪುತ್ತೂರು ೩೦

ದಕ್ಷಿಣ ಕನ್ನಡ ವಿದ್ಯಾರ್ಥಿ ಕಾಂಗ್ರೆಸ್ಸಿನ ಎಂಟನೇ ಸಮ್ಮೇಳನವು ಇಲ್ಲಿ ಶ್ರೀ ಸಿದ್ದವ್ವನಹಳ್ಳಿ ಕೃಷ್ಣಶರ್ಮರ ಅಧ್ಯಕ್ಷತೆಯಲ್ಲಿ ಕಳೆದವಾರ ಜರುಗಿತು. ಮೈ॥ ಕಾಂ॥ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ. ಎಸ್. ಕುಮಾರ್‌ರವರು ಆರಂಭೋತ್ಸವವನ್ನು ನೆರವೇರಿಸಿದರು. ಶ್ರೀಗಳಾದ ಕೆ. ಜೆ. ಒಡೆಯರ್, ನಾರಾಯಣಪಿಳ್ಳೆ, ಅಧಿಕಾರಿ, ಶ್ರೀಕಂಠಪ್ಪ ಮುಂತಾದವರು ವಿದ್ಯಾರ್ಥಿಗಳನ್ನು ಕುರಿತು ಭಾಷಣಮಾಡಿದರು. ಮೈಸೂರು ಕಾಂಗ್ರೆಸ್ಸು ಜವಾಬ್ದಾರಿ ಸರ್ಕಾರಕ್ಕಾಗಿ ಹೂಡಲಿರುವ ಚಳುವಳಿಯಲ್ಲಿ ದಕ್ಷಿಣಕನ್ನಡ ವಿದ್ಯಾರ್ಥಿಗಳು ನೇರವಾಗಿ ಭಾಗವಹಿಸಬೇಕೆಂಬ ನಿರ್ಣಯವು ಅಂಗೀಕಾರವಾಯಿತು. ಮೈಸೂರಿನ ಭಾವಿ ಚಳುವಳಿಯಲ್ಲಿ ದ॥ಕ॥ ಪ್ರಜೆಗಳೆಲ್ಲರ ಸಹಕಾರ, ಬೆಂಬಲ ನೀಡುವುದಾಗಿ ಸ್ಥಳೀಯ ಕಾಂಗ್ರೆಸ್ ಮುಂದಾಳುಗಳು ಭರವಸೆ ಇತ್ತರು.

ಬಕಿಂಗ್ ಹ್ಯಾಂ ಅರಮನೆಗೆ ಬಾಂಬ್ ಧಾಳಿ ಭೀತಿ

ಬ್ರಿಟಿಷ್ ರಾಜದಂಪತಿಗಳು ದಕ್ಷಿಣ ಆಫ್ರಿಕಕ್ಕೆ ತೆರಳಲು ಮೊನ್ನೆ ರಾತ್ರಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾಗ, ಬಕಿಂಗ್ ಹ್ಯಾಂ ಅರಮನೆಗೆ ಬಾಂಬು ಹಾಕಲಾಗುವುದೆಂಬ ಎಚ್ಚರಿಕೆಯೊಂದು ಪೋಲೀಸಿನವರಿಗೆ ಬಂದಿತು. ಕೂಡಲೇ ಗುಪ್ತದಳದವರಿಗೆ ಎಚ್ಚರಿಕೆಯನ್ನು ಕೊಡಲಾಯಿತು. ಅರಮನೆಯ ಕಾವಲನ್ನು ಭದ್ರಪಡಿಸಿ ಎಲ್ಲಾ ಕಡೆಯೂ ಶೋಧನೆ ಮಾಡಲಾಯಿತು. ಆದರೆ ಏನೂ ಸಿಗಲಿಲ್ಲ. ಇದೇ ರೀತಿ ಹಿಂದೆ ಅನೇಕ ಸಲ ಬೆದರಿಕೆಯು ಬಂದಿದ್ದಿತೆಂದೂ, ಈ ವಿಚಾರವು ಲಂಡನ್ ಪೋಲೀಸರನ್ನು ಬಹಳವಾಗಿ ಬಾಧಿಸುತ್ತಿದೆಯೆಂದೂ ತಿಳಿದುಬಂದಿದೆ.

‡ ಚನ್ನರಾಯ ಪಟ್ಟಣದ ವಿದ್ಯಾರ್ಥಿ ಕಾಂಗ್ರೆಸ್ಸಿನವರು ಕಳೆದ ೨೬ ನೇ ತಾ॥ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಸ್ವೀಕರಿಸಿ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳುವುದಾಗಿ ತೀರ್ಮಾನಮಾಡಿರುತ್ತಾರೆ.

ಗೋಪಾಲರಾಯರ ಪ್ರಕರಣ

ಸ್ವಂ ಸು ಪ್ರೋ] ಬೆಂಗಳೂರು ೧

ಧರ್ಮರಕ್ಷಾಕರ ಬಿ. ಎಂ. ಗೋಪಾಲರಾಯರನ್ನು ದರೋಡೆ ಮಾಡಿದರೆಂಬ ಆಪಾದನೆಯ ಮೊಕದ್ದಮೆಯಲ್ಲಿ ಈ ದಿನ ಎರಡನೇ ಆಪಾದಿತ ಮಿ॥ ಆರ್. ಮೋಸಸ್‌ರವರ ವಕೀಲರಾದ ಎ.॥ ಜೇವಿಯರ್‌ರವರು ಪಾಟೀಸವಾಲು ಮಾಡಿದಾಗ ಶ್ರೀ॥ ಗೋಪಾಲರಾಯರು ಈ ರೀತಿ ತಿಳಿಸಿದರು:-

೧೯೩೯ ರಿಂದ ನಾನು ಮಲ್ಲೇಶ್ವರದ ೮ ನೇ ರಸ್ತೆಯಲ್ಲಿರುವ ನನ್ನ ಮನೆಯಲ್ಲಿ ವಾಸಿಸುತ್ತಿದ್ದೇನೆ. ನನ್ನಲ್ಲಿ ೩ ಸೂಟ್ ಕೇಸುಗಳಿವೆ. ಒಂದರಲ್ಲಿ ನನಗೆ ಬಂದ ಬಹುಮಾನಗಳನ್ನೂ, ಪ್ರಶಸ್ತಿ ವಸ್ತುಗಳನ್ನೂ; ಇನ್ನೊಂದರಲ್ಲಿ ನಗ ನಾಣ್ಯಗಳನ್ನೂ ಇಡುತ್ತಿದ್ದೆ. ನನ್ನ ವ್ಯಾಪಾರದ ಬಗ್ಗೆ ಪ್ರಶಂಸಿಸಿ ಅನೇಕ ದೊಡ್ಡ ಮನುಷ್ಯರೂ, ಸರ್ಕಾರೀ ಅಧಿಕಾರಿಗಳೂ ಪ್ರಶಸ್ತಿ ಪತ್ರಗಳನ್ನಿತ್ತಿದ್ದರು. ಅವುಗಳ ಬಗ್ಗೆ ನನಗೆ ನಿಜವಾಗಿಯೂ ಹೆಮ್ಮೆ, ಆದರೆ ನಾನೇ ಅವನ್ನು ಯಾರಿಗೂ ತೋರಿಸುತ್ತಿರಲಿಲ್ಲ. ಯಾರಾದರೂ ಕೇಳಿದರೆ ತೋರಿಸುತ್ತಿದ್ದೆ.

೩॥ ಏಪ್ರಿಲ್ ತಾ॥ ತಿಕಾಸ್ವಾಮಿ ರವರ ಮನೆಯಲ್ಲಿ ನಡೆದ ಸಭೆಯನ್ನು ನಾನು ಕರೆದಿರಲಿಲ್ಲ. ಅವರ ಆಹ್ವಾನದ ಮೇಲೆ ಅಲ್ಲಿಗೆ ಹೋಗಿದ್ದೆ. ಅಲ್ಲಿ ನನ್ನ ಆಸ್ತಿ ಪಾಸ್ತಿ ಮತ್ತು ಸಾಲಗಳ ವಿವರವಾದ ಪಟ್ಟಿ ಕೊಡಬೇಕೆಂತ ಅವರು ಕೇಳಿದರು. ನಾನು ಅದನ್ನು ಕೊಡಲು ತಯಾರಿರಲಿಲ್ಲ. ಅವರೇ ಒಂದನ್ನು ಸಿದ್ಧಪಡಿಸಿದರು. ಅದು ಸ್ವಲ್ಪ ಮಟ್ಟಿಗೆ ಸರಿ ಇದ್ದಿರಬಹುದು. ನನ್ನ ಆಸ್ತಿ ೭೭ ಲಕ್ಷವೆಂದೂ, ಸಾಲ ೧ ಕೋಟಿ ರೂ ಎಂದೂ ಅದರಲ್ಲಿ ನಮೂದಿಸಿದ್ದರು. ಆ ಮೊಬಲಗು ಸರಿಯೋ ಇಲ್ಲವೋ ಹೇಳಲಾರೆ. ಜಿಲ್ಲಾ ಕೋರ್ಟಿನಲ್ಲಿ ನನ್ನ ಮೇಲೆ ಅರ್ಜಿ ಬಂದಾಗಲೂ ಸಹ ನನ್ನ ಲೇಣೆ ದೇಣೆಗಳು ಇಷ್ಟೇ ಎಂದು ನನಗೆ ಗೊತ್ತಿರಲಿಲ್ಲ.

ಎರಡನೇ ಆಪಾದಿತರು ನನ್ನಿಂದ ೭ ಲಕ್ಷ ರೂ. ಇಟ್ಟಿದ್ದರು. ಆಪಾದಿತರುಗಳು ನನ್ನ ಮನೆಯಿಂದ ನಗವನ್ನು ದೋಚಿಕೊಂಡು ಹೋದಾಗ ನಾನು ಕೇಳಿಲ್ಲ. ಬರಲಿಲ್ಲ.

ಆ ನೇ ತಾ॥ ಡಾ॥ ತಿಕಾಸ್ವಾಮಿಯವರ ಮನೆಯಲ್ಲಿ ನಡೆದ ಸಭೆಯಲ್ಲಿ ಶ್ರೀಮತಿ ಸಾಕಮ್ಮ, ಶ್ರೀ॥ ಭಾಸ್ಕರರಾವ್, ಮತ್ತು ಶ್ರೀ॥ ಮಾಧವಕೃಷ್ಣಯ್ಯ ಮುಂತಾದವರಿದ್ದರು. ವಿಕ್ಟೋರಿಯ ಭವನವನ್ನು ಶ್ರೀ॥ ಮಾಧವಕೃಷ್ಣಯ್ಯನವರು ೭ ಲಕ್ಷದ ೨೫ ಸಾವಿರಕ್ಕೆ ತೆಗೆದುಕೊಳ್ಳಲು ಒಪ್ಪಿದ್ದರು.

ಪುರಸಭಾ ನೌಕರರನ್ನು ಖಗಾಯಿಸಬೇಕು

ಮೈಸೂರು ೧

ಪುರಸಭಾಧಿವೇಶನವು ಶ್ರೀ ರಾಮಚಂದ್ರರಾವ್ ಬೊಂಬೋರೆಯವರ ಅಧ್ಯಕ್ಷತೆಯಲ್ಲಿ ನಿನ್ನೆ ನಡೆಯಿತು. ಟಾಂಗಾ ಗಾಡಿ ಬಾಡಿಗೆ ದರಗಳನ್ನು ನಿಗದಿ ಮಾಡಿ ಪ್ರಕಟಿಸಲಾಗಿದೆಯೆಂದೂ, ಆ ದರಗಳನ್ನು ಮೀರಿ ವಸೂಲ್ಮಾಡುವವರ ಮೇಲೆ ಕಾರ್ಯಕ್ರಮಗಳು ತೆಗೆದುಕೊಳ್ಳಲ್ಪಡುತ್ತಿವೆಯೆಂದೂ, ಈ ಅಂಶದಲ್ಲಿ ಸಹಕರಿಸುವಂತೆ ಪೋಲೀಸರನ್ನು ಸಹ ಪ್ರಾರ್ಥಿಸಲಾಗಿದೆಯೆಂದೂ, ಎ.॥ ಧಿಯೋಬಾಲ್ಡ್‌ರವರ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರವನ್ನು ಕೊಟ್ಟರು. ಹಾ॥ ಮೀರ್ ನೂರ್ ಹುಸೇನರವರು ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ೧೯೪೧ ನೇ ಗಣತಿ ಪ್ರಕಾರ ಮೈಸೂರು ಜನಸಂಖ್ಯೆ ೧೫೦೫೪೦ ಇದೆಯೆಂದೂ ನಗರದಲ್ಲಿ ಒಟ್ಟು ೨೨೭೯ ದೀಪಗಳೂ, ೫೦೦, ನಲ್ಲಿಗಳೂ ಇವೆಯೆಂದೂ, ೪೫೭ ರೂಡವಾಲಿಗಳನ್ನು ನೇಮಿಸಿಕೊಳ್ಳಲಾಗಿದೆಯೆಂದೂ ಅಧ್ಯಕ್ಷರು ತಿಳಿಸಿದರು. ಶ್ರೀ॥ ಅಗರಂ ರಂಗಯ್ಯನವರ ಪ್ರಶ್ನೆಗಳಿಗೆ ಉತ್ತರವಾಗಿ "೧೯೩೭ ರಿಂದ ೪೭ ರ ವರೆವಿಗೆ ೧೧ ಬಾರಿ ಮೈಸೂರು ಪುರಸಭೆಗೆ ಖಾಸಗೀ ಅಧ್ಯಕ್ಷರನ್ನು ಆರಿಸಿಕೊಳ್ಳುವ ಹಕ್ಕನ್ನು ಕೊಡಬೇಕೆಂದು ನಿರ್ಣಯ ಮಾಡಲಾಯಿತು. ಪುರಸಭೆಯ ನಿರ್ಣಯವನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದು ಸರ್ಕಾರದವರು ತಿಳಿಸಿದ್ದಾರೆ. ಇತ್ತೀಚಿನ ಎರಡು ನಿರ್ಣಯಗಳಿಗೆ ಈ ವರೆವಿಗೆ ಉತ್ತರವು ಬಂದಿಲ್ಲ ಎಂಬುದಾಗಿ ತಿಳಿಸಲಾಯಿತು. ಹಾಮಾ ಡೀಪ್ರಂ ಮತ್ತು ಸೀಸೀರುಕಟ್ಟೆಗಳಲ್ಲಿ ಒಳಚರಂಡಿ ವ್ಯವಸ್ಥೆಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಶ್ರೀ॥ ಎಂ. ಸೂರ್ಯನಾರಾಯಣರಾಯರು ಕೇಳಿದರು. ೧೯೪೭ ಮನೆಗಳಲ್ಲಿ ಈ ವ್ಯವಸ್ಥಾ ಕ್ರಮ ನಡೆದಿದೆಯೆಂದೂ, ೧೦೨೫ ಮನೆಗಳಿಗೆ ನೋಟೀಸು ಕೊಟ್ಟಿದೆಯೆಂದೂ ತಿಳಿಸಲಾಯಿತು.

ಪುರಸಭೆಯಲ್ಲಿ ಕೆಲಸಕಾರ್ಯಗಳು ಸುವ್ಯವಸ್ಥೆಯಿಂದ ನಡೆಯಲು ಅವರಲ್ಲಿ ಮೂರು ವರ್ಷಕ್ಕಿಂತ ಹೆಚ್ಚು ಕೆಲಸಮಾಡುತ್ತಿರುವ ಸರ್ಕಾರಿ ನೌಕರರನ್ನು ಕೂಡಲೇ ವರ್ಗಾಯಿಸಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ಶ್ರೀ ಬಿ. ನಾರಾಯಣಸ್ವಾಮಿಯವರ ನಿರ್ಣಯವು ಬಹುಮತದಿಂದ ಅಂಗೀಕೃತವಾಯಿತು.

ಮೈಸೂರು ನಗರದಲ್ಲಿ ವಾರ್ಡ್ ಪದ್ಧತಿಯ ಚುನಾವಣೆಯನ್ನು ಜಾರಿಗೆ ತರಲು ಅವಕಾಶ ಕಲ್ಪಿಸುವಂತೆ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳಬೇಕೆಂದು ಮಿ॥ ಮಹಮದ್ ಸೇಟ್‌ರವರು ಮಂಡಿಸಿದ್ದ ನಿರ್ಣಯವು ತಿರಸ್ಕೃತವಾಯಿತು.

ಸಂಸ್ಥಾನದಲ್ಲಿ ಸಭಾ ಕೂಟಗಳನ್ನು ಸೇರಿಸಬಾರದೆಂಬ ಅಂಶದಲ್ಲಿ ಮ ಹಾತ್ಮಗಳು ಸಂದೇಶವನ್ನು ಕೊಟ್ಟಿದ್ದಕ್ಕಾಗಿ ಅವರನ್ನು ರಾಜಭಕ್ತಿ ... ದಿವಾನರು ... ದಕ್ಷಿಣದ ಕಾರ್ಯಭಾರವನ್ನು ... ಸಭೆಯ ... ತಿಳಿಸುವ ನಿರ್ಣಯವು ಮುಂದಿನ ಅಧಿವೇಶನಕ್ಕೆ ಹಾಕಲ್ಪಟ್ಟಿತು.

ಸಾಧ್ವಿ

ತಾ॥ ೧-೨-೪೭ ಶನಿವಾರ

ಮಹಾತ್ಮರ ಪ್ರವಾಸದ ಪರಿಣಾಮ

ಬಂಗಾಳಾ ಪ್ರಾಂತ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಮಹಾತ್ಮ ಗಾಂಧಿಯವರು ಕೈಗೊಂಡಿರುವ ಕಾಲ್ನಡಿಗೆಯ ಪ್ರವಾಸದಿಂದ ಒಳ್ಳೆಯ ಪರಿಣಾಮವುಂಟಾಗಿದೆಯೆಂದು ಅಲ್ಲಿನ ಮುಖ್ಯ ಮಂತ್ರಿಗಳಾದ ಮಿ॥ ಸುಹ್ರವರ್ದಿಯವರು ಹೇಳಿರುವರು. ಮುಸ್ಲಿಂ ಲೀಗಿನ ಪಕ್ಷದವರು ಮಂತ್ರಿ ಮಂಡಲಗಳನ್ನು ನಿರ್ವಹಿಸುತ್ತಿರುವ ಕಡೆಗಳಲ್ಲಿಯೂ ಲೀಗಿನವರಲ್ಲದ ನಾಯಕರುಗಳು ಯಾವ ರೀತಿ ಪ್ರಜಾ ನೆಮ್ಮದಿಗೆ ಸಹಾಯಕರಾಗಬಹುದೆಂಬುದನ್ನು ಇದು ಸೂಚಿಸುತ್ತದೆ,

ಜನರ ಹಿತ ಸಾಧನೆಗೆ ಕೇವಲ ರಾಜ್ಯಾಡಳಿತವೇ ಮುಖ್ಯ ಆಧಾರವಲ್ಲವೆಂದೂ, ತಮ್ಮ ಹಿತ ಸಾಧನೆಯನ್ನು ಪ್ರಜೆಗಳೇ ಪರಸ್ಪರ ಸಹಕಾರ ಮತ್ತು ಸಂಘಟನೆಯಿಂದ ಸಾಧಿಸಬೇಕೆಂದೂ ಮಹಾತ್ಮರು ಬೋಧಿಸುತ್ತಿದ್ದಾರೆ. ಆತ್ಮ ರಕ್ಷಣೆಗಾಗಿ ಅನ್ಯರನ್ನು ಅವಲಂಬಿಸುವ ಪದ್ಧತಿಯನ್ನು ಬಿಟ್ಟು ತಾವೇ ತಕ್ಕ ವ್ಯವಸ್ಥೆಗಳನ್ನು ಮಾಡಿಕೊಳ್ಳಬೇಕೆಂದೂ ಸಹ ಹೇಳುತ್ತಿದ್ದಾರೆ. ಮಹಾತ್ಮರು ಪ್ರತಿ ದಿನವೂ ನಡೆಸುತ್ತಿರುವ ಪ್ರಾರ್ಥನಾ ಕೂಟಗಳೂ, ಹೇಳುತ್ತಿರುವ ಹಿತ ವಚನಗಳು ಮುಸ್ಲಿಮರ ಮೇಲೂ, ಹಿಂದುಗಳ ಮೇಲೂ ಸತ್ಪರಿಣಾಮಗಳನ್ನುಂಟು ಮಾಡುತ್ತಿವೆ. ಅವರು ಹೋದ ಕಡೆಗಳಲ್ಲೆಲ್ಲಾ ಮುಖ್ಯವಾಗಿ ಮುಸಲ್ಮಾನರ ಆತ್ರಯವನ್ನೇ ಪಡೆದು ಅವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದಾರೆ. ಅವರ ಸಂದೇಶವನ್ನು ಸಾರಲು ಮುಸಲ್ಮಾನ ಮುಖಂಡರುಗಳೇ ಮುಂದೆ ಬರುತ್ತಿದ್ದಾರೆ.

ಮಾನವ ಜೀವನದ ಮುಖ್ಯ ಧ್ಯೇಯಗಳನ್ನು ಮಹಾತ್ಮರು ಪ್ರತಿ ದಿನವೂ ಬೋಧಿಸಿ, ಎಲ್ಲ ಜನರೂ ಒಬ್ಬನೇ ಪರಮಾತ್ಮನ ಮಕ್ಕಳೆಂದೂ, ಸಕಲರೂ ಸಹೋದರರಂತೆ ವರ್ತಿಸಬೇಕೆಂದೂ ಹೇಳುತ್ತಿರುವರು. ಎಲ್ಲ ಮತ ತತ್ವಗಳೂ, ಧರ್ಮ ಗ್ರಂಥಗಳೂ ಇದೇ ವಿಚಾರಗಳನ್ನೇ ಹೇಳಿಕೊಡುತ್ತಿವೆ. ಒಬ್ಬರನ್ನೊಬ್ಬರು ಕೊಂದು, ಅವರೊಡನೆ ಹೋರಾಡಿ, ಆಸ್ತಿ ಪಾಸ್ತಿಗಳನ್ನು ಲೂಟಿ ಮಾಡಿ ತಾವು ಬದುಕಬೇಕೆಂದು ಯಾವ ಧರ್ಮವೂ ಹೇಳುವುದಿಲ್ಲ. ತಮ್ಮ ಸ್ವಂತ ಜೀವನದಲ್ಲಿಯೇ ಸಕಲ ಸದ್ಗುಣಗಳನ್ನೂ ಕಾರ್ಯ ರೂಪಕ್ಕೆ ತಂದು ಮಾನವ ಕಲ್ಯಾಣವನ್ನು ಸಾಧಿಸುತ್ತಿರುವ ಮಹಾತ್ಮರ ಪ್ರಭಾವವು ಬಂಗಾಳದ ಪ್ರಜೆಗಳ ಮೇಲೂ ಸರ್ಕಾರದ ಮೇಲೂ ಉತ್ತಮ ಪರಿಣಾಮವನ್ನು ಉಂಟು ಮಾಡಿರುವುದರಲ್ಲಿ ಆಶ್ಚರ್ಯವಿಲ್ಲ.

ಅತ್ತಲಾಗಿ ಬಿಹಾರ್ ಪ್ರಾಂತದಲ್ಲಿ ಗಡಿನಾಡಿನ ಗಾಂಧಿಯವರೆನಿಸಿದ ಖಾನ್ ಅಬ್ದುಲ್ ಗಫಾರ್ ಖಾನರೂ ಮಹಾತ್ಮರ ಮೇಲ್ಪಂಕ್ತಿಯನ್ನೇ ಅನುಸರಿಸಿ, ಕೋಮುವಾರು ಸೌಹಾರ್ದವನ್ನು ಬೆಳೆಸುತ್ತಿರುವರು. ಅವರ ಪ್ರಯತ್ನವೂ ಸಹ ಇದುವರೆಗೆ ವಿಶೇಷ ಯಶಸ್ವಿಯಾಗುತ್ತಿದೆ.

ಕೋಮುವಾರು ಐಕಮತ್ಯಕ್ಕೆ ಪರಸ್ಪರ ತಿಳುವಳಿಕೆಯೇ ಮುಖ್ಯ ಆಧಾರ. ಇದನ್ನು ಸಾಧಿಸಲು ಮೇಲ್ಕಂಡ ರೀತಿಯ ಪ್ರವಾಸಗ

ಶ್ರೀಷ್ಠ ನ್ಯಾಯಾಧೀಶರನ್ನು ಬೀಳ್ಕೊಡುವ ಸಮಾರಂಭವಿಲ್ಲ

ಮದ್ರಾಸ್ ವಕೀಲರುಗಳ ಸಂಘದ ಸಭೆಯು ಮೊನ್ನೆ ದಿನ ಜರುಗಿ ನಿವೃತ್ತರಾಗಲಿರುವ ಶ್ರೇಷ್ಠ ನ್ಯಾಯಾಧೀಶರನ್ನು ಬೀಳ್ಕೊಡುವ ಸಮಾರಂಭವನ್ನು ನೆರವೇರಿಸಬೇಕಾಗಿಲ್ಲವೆಂದೂ, ಅಡ್ವೊಕೇಟ್ ಜನರಲ್ಲಾಗಲೀ ಅಥವಾ ವಕೀಲ ಸಂಘದ ಯಾರೊಬ್ಬರಾಗಲೀ ಅವರ ಸೇವೆಯನ್ನು ಪ್ರಶಂಸಿಸಕೂಡದೆಂದೂ ನಿರ್ಣಯಿಸಿತು.

ಸ್ವಾತಂತ್ರ್ಯ ದಿನಾಚರಣೆ

ಸ್ವಂ ವ.] ಶ್ರೀರಂಗಪಟ್ಟಣ ೨೮

ಮೊನ್ನೆ ದಿನ ಬೆಳಿಗ್ಗೆ ಚೌಬೀನೆ ಸುಬ್ಬಯ್ಯನವರ ಬಂಗಲೆಯ ಆವರಣದಲ್ಲಿ ರಾಷ್ಟ್ರಧ್ವಜದಡಿಯಲ್ಲಿ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತಾ॥ ಕಾಂ॥ ಸಮಿತಿ ಅಧ್ಯಕ್ಷರಿಂದಲ್ಲಿ ಸ್ವೀಕರಿಸಲಾಯಿತು. ಅದೇ ದಿನ ಸಂಜೆ ತಾ॥ ಕಾಂ॥ ಸಮಿತಿಯು ಸಭೆ ಸೇರಿ ಶ್ರೀ॥ ಆರ್ ವಿ ಭದ್ರಣ್ಣ, ಶ್ರೀ ಟಿ ಸಿದ್ದಲಿಂಗಯ್ಯನವರ ಪಕ್ಷ ಶ್ರೀಮತಿ ಪಾರ್ವತಮ್ಮನವರ ನಿಧನದ ಬಗ್ಗೆ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಯಿತು, ಶ್ರೀ ಕೆ. ಹನುಮಂತಯ್ಯನವರನ್ನು ಅಭಿನಂದಿಸಲಾಯಿತು. ಮಂಡ್ಯ ಜಿಲ್ಲೆಯಲ್ಲಿ ಪ್ರತಿಬಂಧಕಾಜ್ಞೆ ಜಾರಿಗೆ ತಂದಿರುವುದನ್ನು ಖಂಡಿಸಲಾಯಿತು

ಕೂ, ವಿ ಚಾರವೂ ಅತ್ಯಂತ ಅವಶ್ಯಕ. ಈ ಇಬ್ಬರು ನಾಯಕರ ಮೇಲ್ಪಂಕ್ತಿಯನ್ನೇ ಅನುಸರಿಸಿ ಇತರ ಮುಖಂಡರುಗಳೂ ತಮ್ಮ ತಮ್ಮ ಪ್ರಾಂತಗಳ ಗ್ರಾಮಾಂತರ ಪ್ರದೇಶಗಳಲ್ಲಿ ಆಗಿಂದಾಗ್ಗೆ ಪ್ರವಾಸವನ್ನು ಕೈಗೊಂಡು ಎಲ್ಲ ಕೋಮಿನವರನ್ನೂ ಒಟ್ಟಿಗೆ ಕಲೆಯುವಂತೆ ಮಾಡಿ ಅವರುಗಳ ಕಷ್ಟ ಸುಖಗಳನ್ನು ವಿಚಾರಿಸಿ, ಅವುಗಳಿಗೆ ಸೂಕ್ತ ಪರಿಹಾರಗಳನ್ನು ಮಾಡಿಕೊಟ್ಟರೆ ಇಡೀ ದೇಶದಲ್ಲಿ ಈ ಸಮಸ್ಯೆಯು ತೃಪ್ತಿಕರವಾಗಿ ಬಗೆಹರಿಯುವುದರಲ್ಲಿ ಸಂಶಯವಿಲ್ಲ.

ಎಲ್ಲಮಾಂಬಾ ಪ್ರತಿಷ್ಠೆ

ನಂಜಿ ಮೊಹಲ್ಲಾ, ಮಿಷನ್ ಆಸ್ಪತ್ರೆ ಬೀದಿಯಲ್ಲಿ ನೂತನವಾಗಿ ಕಟ್ಟಿರುವ ದೇವಾಲಯದಲ್ಲಿ ೩೦-೧-೪೭ ರಿಂದ ೫-೨-೪೭ ರ ವರೆಗೆ ಶ್ರೀ ಯಲ್ಲಮಾಂಬಾ ಮತ್ತು ಶ್ರೀ ಚಂದ್ರಗುಪ್ತಾಂಬಾ ದೇವಿಯವರನ್ನು ವೈದಿಕಾಗಮೋಕ್ತ ಪ್ರತಿಷ್ಠಿಸುವ ಮಹೋತ್ಸವವನ್ನ ನಡೆಸಲಾಗುವುದು. ಮಹಾಜನರು ದಯಮಾಡಿಸಬೇಕಾಗಿ ಕೋರಲಾಗಿದೆ.

ಭಕ್ತಮಂಡಲಿಯ ಪರವಾಗಿ,
ಎಚ್. ಆರ್. ನಂಜುಂಡಯ್ಯ,
ಎರ್ ಗೋವಿಂದ್,
ಕಾರ್ಯದರ್ಶಿಗಳು

ರಾಷ್ಟ್ರಧ್ವಜ ಹಾರಿಸಿದುದಕ್ಕೆ ವಿದ್ಯಾರ್ಥಿಗಳಿಗೆ ದಂಡ

ಸ್ವಾತಂತ್ರ್ಯ ದಿನಾಚರಣೆ ಸಂಬಂಧದಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಆಜ್ಞೆಗೆ ವಿರುದ್ಧವಾಗಿ ರಾಷ್ಟ್ರಧ್ವಜವನ್ನು ಕಾಲೇಜಿನ ಮೇಲೆ ಹಾರಿಸಿದುದಕ್ಕಾಗಿ ವಿಶ್ವವಿದ್ಯಾನಿಲಯದ ಆಡಳಿತ ಸಮಿತಿಯವರು ವಿಶ್ವವಿದ್ಯಾನಿಲಯ ಸಂಘದ ಮೇಲೆ ೩೦೦ ರೂ ಗಳ ದಂಡವನ್ನು ವಿಧಿಸಿದ್ದಾರೆ. ಈ ಆಜ್ಞೆಯನ್ನು ಪ್ರತಿಭಟಿಸಲು ೩೦೦೦ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆ

ಪಾಠಶಾಲೆಯಲ್ಲಿ ಮುಷ್ಕರ

'ಹಳೇನಾಡು ಕರ್ನಾಟಕ ಬ್ರಾಹ್ಮಣ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಚಾಮರಾಜನಗರದ ಪಾಠಶಾಲಾ ಅಧ್ಯಕ್ಷರು ಒಪ್ಪಲಿಲ್ಲ. ಆಗಾಗಲೇ ವರ್ಷದ ಅಂತ್ಯವಾಗುತ್ತಿದೆಯೆಂದೂ, ಈ ಪ್ರವೇಶಾಧಿಕಾರವನ್ನು ವಜಾ ಮಾಡಬೇಕೆಂದು ಮಹಾಸ್ವಾಮಿಯವರಲ್ಲಿ ಮನವಿ ಮಾಡಕೊಂಡಿದ್ದಾರೆಂದೂ, ಆದ್ದರಿಂದ ಈಗ ಸೇರಿಸಿಕೊಳ್ಳುವುದಿಲ್ಲವೆಂದೂ ಅವರು ತಿಳಿಸಿದರು. ಕೊನೆಗೆ ಅಮಲ್ದಾರರೇ ಅವರ ಹೆಸರನ್ನು ರಿಜಿಸ್ಟರಿನಲ್ಲಿ ಬರೆಸಿದರು. ವೈದಿಕ ಬ್ರಾಹ್ಮಣ ವಿದ್ಯಾರ್ಥಿಗಳು ಇವರ ಕೂಡ ಪಾಠ ಪ್ರವಚನವನ್ನು ಮಾಡುವುದಿಲ್ಲವೆಂದು ಹೇಳಿ ಶಾಲೆಯಿಂದ ಹೊರಗಡೆ ಹೊರಟು ಹೋದರು. ಹಳೇನಾಡು ಕರ್ನಾಟಕ ವಿದ್ಯಾರ್ಥಿಗಳಿಗೆ ಪಾಠ ಹೇಳುವುದಿಲ್ಲವೆಂದು ಉಪಾಧ್ಯಾಯರುಗಳೂ ನೇವಸ್ಥಾನದಿಂದ ಹೊರಟುಹೋದರು' ಎಂದಾಗಿ ನಂಜನಗೂಡಿನ ಶ್ರೀ ವಿ ರಂಗಣ್ಣನವರು ಬರೆಯುತ್ತಾರೆ

ಚಾಮುಂಡೇಶ್ವರಿ

ಟಾಕೀಸಿನಲ್ಲಿ

1-2-47 ರಿಂದ ದಿನವಹಿ 3 ಆಟಗಳು

ಮಿನರ್ವಾರವರ ಐತಿಹಾಸಿಕ ಚಿತ್ರ ರತ್ನ

ಏಕ್-ದಿನ್-ಕ-ಸುಲ್ತಾನ್

(EK DIN-KA-SULTAN)

ಡೈರೆಕ್ಟರ್ - ಸೊಹರಾಬ್ ಮೋದಿ

(ಪುಕಾರ್ ಮತ್ತು ಸಿಕಂದರ್ ಚಿತ್ರಗಳ ನಿರ್ದೇಶಕರು)

-: ಭೂಮಿಕೆ :-

ಮೆಹತಾಬ್, ಶಂತಾರ್, ವಾಸ್ತಿ, ಗುಲಾಂ ಮಹಮದ್ ಮತ್ತು ಸೋರಾಬಿ

N B No Reservations by Phone

An Oswal Films Release

BANGALORE CITY

ವಿಶ್ವಕರ್ಮರಿಗೆ ಪ್ರಾತಿನಿಧ್ಯ

ಆಡಳಿತದಲ್ಲಿ ವಿಶ್ವಕರ್ಮ ಜನಾಂಗಕ್ಕೆ ಸರಿಯಾದ ಪ್ರಾತಿನಿಧ್ಯವು ಇದುವರೆಗೂ ದೊರೆತಿಲ್ಲವೆಂದೂ ಹೊಸ ಸುಧಾರಣೆ ಪ್ರಕಾರ ಜಂಟೀ ಚುನಾವಣಾ ಕ್ಷೇತ್ರ ಸ್ಥಾನಗಳನ್ನು ಈ ಜನಾಂಗಕ್ಕೆ ಮೀಸಲಿರಿಸಿ ತನ್ಮೂಲಕ ಆಡಳಿತ ಸ್ಥಾನಗಳಲ್ಲಿ ಪ್ರಾತಿನಿಧ್ಯವನ್ನು ಏರ್ಪಡಿಸಬೇಕೆಂದು ಶ್ರೀರಂಗಪಟ್ಟಣದ ವಿಶ್ವಕರ್ಮ ಸಭೆಯ ಕಾರ್ಯದರ್ಶಿಗಳಾದ ಶ್ರೀ ವಿ ಆರ್ ವೀರಬ್ರಹ್ಮಾಚಾರ್ಯರು ಬರೆಯುತ್ತಾರೆ

ಸುಧಾರಣಾ ಸಮಿತಿ ನೇಮಕವಾಗಲಿ

ಪ್ರಜಾಪ್ರತಿನಿಧಿ ಸಭಾ ಸದಸ್ಯರಾದ ಶ್ರೀ॥ ಟಿ ಎಸ್ ಶೇಷಗಿರಿ...ಯವರು ಮಹಾರಾಜರವರ ಸಂದೇಶದ ಬಗ್ಗೆ ಪತ್ರಿಕೆಯಲ್ಲಿ ಹೇಳಿಕೆಯೊಂದನ್ನು ಕೊಡುತ್ತಾ ಸಂಸ್ಥಾನದ ಮಹಾಜನರ ಅಭಿಪ್ರಾಯವನ್ನು ಪಡೆಯುವ ಸಲುವಾಗಿ ದಿವಾನರು ಸುಧಾರಣಾ ಸಮಿತಿಯೊಂದನ್ನು ನೇಮಿಸಬೇಕೆಂದು ಸಲಹೆ ಇತ್ತಿದ್ದಾರೆ

§ ಶ್ರೀರಂಗಪಟ್ಟಣದ ಹೈಸ್ಕೂಲಿನ ಹಿಸ್ಟರಿ ಸಂಘದಾಶ್ರಯದಲ್ಲಿ ಜಳೆದ ೨೭ ತಾ॥ ಬೊಂಬಾಯಿನ ಶ್ರೀ ಬಿ ಟಿ ... ಯರವರು ಭಾರತ ಪಾಚಿನ ನಡಿತ... ಅಮಲ್ದಾರರಾದ ಶ್ರೀ ಕೃಷ್ಣಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು

Edited, printed and published by A. N. Nagarajan at the Sadhvi Press, D Subbiah Road, Mysore

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲು...

ಅರ್ಕ

ಗರ್ಭಾಶಯರೋಗ ನಿವಾರಿ...

ಅರುಣ ಸುತು ದೋ... ಗಳ್ಳ ನಿವಾರಿಸಿ... ಪೂರ್ಣ ಸ್ತ್ರೀತ್ವನ... ಸಾಧಿಸುವಷ್ಟರಲ್ಲಿ... ರ್ಣವಾದ ದಿವ್ಯೌಷಧ... ದನ್ನು ಬಿಡದೆ ಸೇವಿ... ರಾದರೆ, ನಿಮ್ಮ ಜೀ... ಕರಮಾನಂದಿಯಾನ... ಮಂದಾನಂದವನ್ನು... ದೆ ಒದಗಿಸಲ್ಪಡುವು.

ಆಯುರ್ವೇದಾಶ್ರಮಂ ಲಿಮಿಟೆಡ್

ಟಿ-ನಗರ್.... ಮದರಾಸು

ರಾಜಕಮಲ್, ಮೈಸೂರು

೩೧-೧-೪೭ ರಿಂದ ಅಮೋಘ ಎರಡನೇ ವಾರ

ಬೇಬಿ ಮೀನಾ, ಮೋತೀಲಾಲ್, — ಪ್ರತಿಜ್ಞಾ — (ಹಿಂದಿ) — ವೀಣಕುಮಾರಿ, ಸ್ವರ್ಣಲತಾ, ಸುನೇತ್ರ ಪಾತ್ರ

From 31-1-47 for 4 days at 10-30 a m

Samuel Goldwyn's 'One Heavenly Night'

A classical picture re-released for your entertainment

ಪೋ. ಸಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೨—೨—೪೭ [ಸಂಚಿಕೆ ೧೫೦

ಸದ್ಯದಲ್ಲೇ ಇಂಗ್ಲೆಂಡಿನಲ್ಲಿ ಸರ್ವ ಪಕ್ಷಗಳ ಸರ್ಕಾರ

...ೀಕರ ಮಂಜಪ್ಪನವರ ...ನಚಿತ್ರ ಅನಾವರಣ

ಮೈಸೂರು ೧

...ಟಕದ ಗಾಂಧಿ ಹರ್ಡೇಕರ ಮಂ...ರ ಭಾವ ಚಿತ್ರದ ಅನಾವರಣವ...ನ್ನೆ ಮಧ್ಯಾಹ್ನ ಶ್ರೀ|| ಸುಕ್ರೂರು ...ನಿಲಯ ಸಂಘದಲ್ಲಿ ಬೊಂಬಾ...ರದ ಪಾರ್ಲಿಮೆಂಟರಿ ಸೆಕ್ರೆಟರಿ ಶ್ರೀ|| ಕೆ. ಎಫ್ ಪಾಟೀಲ್‌ರವರು ...ಪ್ತ ದಿವಂಗತರ ಜೀವನ ಚರಿತ್ರೆ ...ಸಂಕ್ಷೇಪವಾಗಿ ತಿಳಿಸಿದರು ಮಂ...ರು ತಮ್ಮ ಬಾಲ್ಯದಿಂದಲೂ ನಿಷ್ಠೆ ನಡೆದುಕೊಂಡು ಸಿದ್ಧ ಪುರುಷರಾ...ರ್ಥಿ ವೃಂದಕ್ಕೆ ಆದರ್ಶಪ್ರಾಯ ...ದು ಹೇಳಿ, ವಿದ್ಯಾರ್ಥಿಗಳೆಲ್ಲರೂ ...ಪ್ಪನವರಂತೆ ಆದರ್ಶ ಪುರುಷರಾಗ...ಸಿ ಭಾರತದ ಸ್ವಾತಂತ್ರ್ಯ ಸಾಧ...ರಾಗಬೇಕೆಂದು ಹಾರೈಸಿದರು.

ಗಾಂಧಿ ಸೇವಾ ಸಂಘ

...ಕ್ಯಂಡ ಸಂಘದ ವಾರ್ಷಿಕ ಸಭೆಯು ...ಶ್ರೀ ಪ್ರಿಯವ್ರತರ ಅಧ್ಯಕ್ಷತೆ ...ಜರುಗಿ ಮುಂದಿನ ಸಾಲಿಗೆ ಶ್ರೀಗಳಾ...ಎ. ಸೂರ್ಯನಾರಾಯಣರಾಯರು ...ನಿಯೂ ಎಂ ಕೆ ರಾಜಗೋಪಾ...ರ್ಯದರ್ಶಿಯಾಗಿಯೂ ಆರಿಸಲ್ಪಟ್ಟ...ದ ವರ್ಷದ ಆದಾಯ ೧೧೯೧-೫-೦ ...೭೪೨-೬-೩, ಶಿಲ್ಕು ೪೪೮-೧೩-೯.

ಉಪನ್ಯಾಸ

...ರ ಆಸ್ಪತ್ರೆ ರಸ್ತೆಯುಲ್ಲಿ ಹೊಸದಾಗಿ ...ವಾಗಿರುವ ಶ್ರೀ ಯಲ್ಲಮ್ಮನವರ ...ಯದಲ್ಲಿ ನಾಳೆ ಸಂಜೆ ೭ ಘಂಟೆಗೆ ...ಮಹಾತ್ಮೆ" ಎಂಬ ವಿಚಾರದಲ್ಲಿ ...ಸಾಹಿತ್ಯ ವಿದ್ವಾನ್ ವಿಶ್ವನಾಥ ಶಾಸ್ತ್ರಿ ...ಉಪನ್ಯಾಸ ಮಾಡುವರು.

ಪ್ರದೋಷ ಸಂಗೀತಗಳು

...ರಾಮ ಕೃಷ್ಣಪ್ಪನವರ ರಾಮಮಂದಿ... ಪ್ರದೋಷ ಪ್ರಯುಕ್ತ ೩ ನೇ ತಾ|| ...ವಾರ ಸಂಜೆ ೬|| ಘಂಟೆಗೆ ಶ್ರೀಮತಿ ...ಸದ್ಮಮ್ಮನವರ ಸಂಗೀತ ಕಛೇರಿ ನ...ಯುತ್ತದೆ.

...ಸ್ವಾಮಿಜವರೊಹಲ್ಲಾ ನಾಲಾಬೀದಿ ರಾ...ಮಂದಿರದಲ್ಲಿ ಅದೇ ದಿನ ಶ್ರೀಮತಿ ಡಿ ...ಮಂಜುಳಾಬಾಯಿಯವರಿಂದ ಸಂ...ತ ನಡೆಯುವುದು

...ರಕ್ಷೀಯರಿಗೇ ಪ್ರತ್ಯೇಕ ಉಪನಗರ

...ರಕ್ಷೀಯರಿಗಾಗಿಯೇ ಪ್ರತ್ಯೇಕ ಉಪ...ವನ್ನು ರಚಿಸಲು ಡರ್ಬಾನ್ ಪುರಸಭೆ ...ರ್ಧರಿಸಿ ಅದಕ್ಕಾಗಿ ೨೦ ಲಕ್ಷ ಪೌಂ...ಗ್ರಾಂಟನ್ನು ಕೊಡುವಂತೆ ದ|| ಆಫ್ರಿಕ ...ರವನ್ನು ಕೇಳಿದೆ. ಇದು " ಸಿ ಕಾಲೇ...'ಟಿ ನಿರ್ಮಾಣವಾಗುವುದು ೫ ಸಾ...ಎಕರೆ ವಿಸ್ತೀರ್ಣವುಳ್ಳದ್ದಾಗಿರುವುದು.

...ಂಡ ಸತ್ತನೆಂಬ ಊಹೆಯಿಂದ ಆತ್ಮಹತ್ಯ

...ನ್ನ ಗಂಡನು ಮೂರ್ಛೆ ಬಂದು ಬಿದ್ದಾ...ಅವನು ಸತ್ತುಹೋಗಿರಬಹುದೆಂದು ...ಸಿ, ವಿರಹವನ್ನು ತಾಳಲಾರದೆ ಮನೆ ...ಪಕ್ಕದ ಕೊಳವೊಂದರಲ್ಲಿ ಬಿದ್ದು ಶ್ರೀ...ನಿ ಎಂಬ ೨೦ ವರ್ಷದ ಮಹಿಳೆಯು ...ತ್ಯೆ ಮಾಡಿಕೊಂಡ ವರದಿಯೊಂದು ...ಕೋಟೆಯು ಪೊನ್ನಾನಿ ಎಂಬಲ್ಲಿಂದ ಬಂ... ಹುಡುಗಿಯು ನೀರು ಮುಳುಗಿ ಪ್ರಾ...ಬಿಟ್ಟಳು ಆದರೆ ಅವಳ ಗಂಡ ಮೂರ್ಛೆ...ದ ಎಚ್ಚೆತ್ತು ಈಗ ಬದುಕಿದ್ದಾನೆ.

ನೆಹರೂರವರ ನಿರ್ಣಯಕ್ಕೆ ಸಂಸ್ಥಾನಾಧೀಶರ ವಿರೋಧ

ಸಂಸ್ಥಾನಾಧೀಶರ ಮತ್ತು ಮಂತ್ರಿಗಳ ಸಮ್ಮೇಳನದಲ್ಲಿ ಅಧ್ಯಕ್ಷರಾದ ಭೂಪಾಲ್ ನವಾಬರು ಮಾತನಾಡುತ್ತ ಸಂಸ್ಥಾನಾಧೀಶರಾದ ತಾವು ಅವರ ಕೃಪೆಗೆ ಒಳಗಾಗದಿದ್ದಲ್ಲಿ ಅಧಿಕಾರ ತ್ಯಜಿಸುವಂತೆ ಬ್ರಿ|| ಇಂಡಿಯದ ರಾಜಕೀಯ ಪಕ್ಷವೊಂದು ಬೆದರಿಸುತ್ತಿದೆಯೆಂದು ಹೇಳಿದರು. ಅರಸರು ಇದುವರೆಗೆ ಅನೇಕ ಕ್ಷೇತ್ರಗಳಲ್ಲಿ ಪ್ರಗತಿಯ ದೀವಿಗೆಯನ್ನು ಹಿಡಿದು ಸಾಗಿದ್ದಾರೆಂದು ಹೇಳಿದರು ಪಂ|| ನೆಹರೂರವರು ರಾಜ್ಯಾಂಗ ಸಭೆಯಲ್ಲಿ ಮಾಡಿದ ಭಾಷಣವು ಬ್ರಿ|| ಮಂತ್ರಿಗಳ ನಿಯೋಗದವರ ಯೋಜನೆಗೆ ವಿರೋಧವಾಗಿದೆಯೆಂದೂ ಸಂಸ್ಥಾನಗಳ ಒಳಾಡಳಿತದ ವಿಚಾರದಲ್ಲಿ ಭಾರತದ ಯೂನಿಯನ್ ಕೈ ಹಾಕುವುದನ್ನು ಸರ್ ಸಿ ಪಿ. ಯವರು ಟೀಕಿಸಿದರು ಪಂ|| ನೆಹರೂರವರ ರಿಪಬ್ಲಿಕ್ ನಿರ್ಣಯವು ಅನ್ಯಾಯಕರವಾದುದೆಂದೂ, ಬಹುಮತ ಪಕ್ಷದವರು ತಮ್ಮ ಅಭೀಷ್ಟದಂತೆ ನಡೆಯುವುದನ್ನು ನರೇಂದ್ರರು ಎದುರಿಸಬೇಕೆಂದೂ ಮೈಸೂರಿನ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ತಿಳಿಸಿದರು

ಶ್ರೀರಂಗದ ದೇವಾಲಯಕ್ಕೆ ಹರಿಜನರ ಪ್ರವೇಶ

ಶ್ರೀರಂಗದ ಶ್ರೀ ರಂಗನಾಥಸ್ವಾಮಿ ದೇವಾಲಯವನ್ನು ನಿನ್ನೆ ಬೆಳಗ್ಗೆ ೧೧ ಗಂಟೆ ಸಮಯದಲ್ಲಿ ಹರಿಜನರು ಪ್ರವೇಶಿಸಿದರು. ಮಂತ್ರಿಗಳಾದ ಶ್ರೀ ಕೋಟಿರೆಡ್ಡಿಯವರೇ ನಾಯಕತ್ವವನ್ನು ವಹಿಸಿದ್ದರು ಈ ಸಮಾರಂಭದಲ್ಲಿ ೧೦ ಸಹಸ್ರ ಮಂದಿ ಭಾಗವಹಿಸಿದ್ದರು

ರಥೋತ್ಸವ

ಹೊಳೆನರಸೀಪುರದ ಹತ್ತಿರವಿರುವ ಮಾವಿನಕೆರೆ ಕ್ಷೇತ್ರದಲ್ಲಿ ಇದೇ ೫-೨-೪೭ ನೇ ಬುಧವಾರ ಶ್ರೀ ವೆಂಕಟರಮಣಸ್ವಾಮಿ ರಥೋತ್ಸವವು ಜರುಗುತ್ತದೆ ಮಾಮೂಲಿನಂತೆ ಪೈರ್ಸ್ಯ ಮಹಾಜನರಿಗೆ ಸಂತರ್ಪಣೆ ಏರ್ಪಡಿಸಲಾಗಿದೆ

ಉಪಾಧ್ಯಕ್ಷರ ಚುನಾವಣೆ

ಸ್ವಂ ವ] ಚನ್ನರಾಯಪಟ್ಟಣ ೫ ೩೧ ಇಲ್ಲಿನ ಪುರ ಸಭಾ ಉಪಾಧ್ಯಕ್ಷನಿಗೆ ಶ್ರೀ|| ಸಿ. ಎನ್ ಸಿಂಗೇಗೌಡರು ೧೧ ಓಟುಗಳಿಂದ ಚುನಾಯಿತರಾದರು ಪ್ರತಿ ಸ್ಪರ್ಧಿಗಳಾಗಿದ್ದ ಶ್ರೀ| ಸಿ ಟಿ ರಾಮಕೃಷ್ಣಶೆಟ್ಟರು ಕೇವಲ ೩ ಓಟುಗಳನ್ನು ಪಡೆದು ಪರಾಜಿತರಾದರು

ಚರ್ಚಿಲ್ಲರಲ್ಲಿ ಜಿನ್ನಾರವರ ಭರವಸೆ

ಚರ್ಚಿಲ್‌ರವರ ಸರ್ಕಾರವು ಬ್ರಿಟನ್ನಿನಲ್ಲಿ ಸ್ಥಾಪಿತವಾಗುವವರೆಗೆ ಕಾಲಹಾಕನ್ನು ನೂಕಲು ಮಿ|| ಜಿನ್ನಾರವರು ಪ್ರಯುಕ್ತಿ ಸುತ್ತಿರುವಂತೆ ಕಂಡುಬರುತ್ತಿದೆಯೆಂದು ಲಂಡನ್ನಿನ ಸಾರ್ವಜನಿಕ ಸಭೆಯೊಂದರಲ್ಲಿ ಸುಪ್ರಸಿದ್ಧ ಪತ್ರಿಕೋದ್ಯೋಗಿಗಳಾದ ಮಿ|| ಬ್ರೇಲ್ಸ್‌ಫರ್ಡ್‌ರವರು ತಿಳಿಸಿದ್ದಾರೆ ಮುಸ್ಲಿಂ ಲೀಗು ನಾಜಿ ಪಕ್ಷದಂತೆ ಇದೆ; ಅವರು ಯೆಹೂದ್ಯರಿಗೆ ಚಿತ್ರಹಿಂಸೆ ಕೊಟ್ಟಂತೆ ಲೀಗಿನವರು ಹಿಂದೂಗಳ ಮೇಲೆ ಧಾಳಿ ನಡೆಸುತ್ತಿದ್ದಾರೆ ಎಸೇ ಆಗಲಿ ಬ್ರಿಟಿಷರು ಒಂದು ಗೊತ್ತಾದ ದಿನವನ್ನು ಘೋಷಿಸಿ ಆ ದಿನದೊಳಗೆ ಸಂಪೂರ್ಣವಾಗಿ ಭಾರತವನ್ನು ತ್ಯಜಿಸಿ ಬಂದು ತಮ್ಮ ಪ್ರಾಮಾಣಿಕತೆಯನ್ನು ಪ್ರಕಾಶಪಡಿಸಬೇಕಾಗಿದೆ - ಎಂಬ ದಾಗಿ ಅವರು ಹೇಳಿದ್ದಾರೆ.

ಅಲಹಾಬಾದಿನಲ್ಲಿ ಆಜ್ಞೋಲ್ಲಂಘನೆ

ಸಭೆ, ಮೆರವಣಿಗೆಗಳನ್ನು ನಡೆಸಕೂಡದೆಂದು ವಿಧಿಸಲಾಗಿದ್ದ ಪ್ರತಿಬಂಧಾಜ್ಞೆಯನ್ನು ಮುರಿದು ಜವಾಹರ್ ಪಕ್ಷದ ಪ್ರಯುಕ್ತ ಮೆರವಣಿಗೆ ನಡೆಸಿದರೆಂದು ೧೨೮ ಮಂದಿ ವಿದ್ಯಾರ್ಥಿಗಳನ್ನು ಅಲಹಾಬಾದಿನಲ್ಲಿ ದಸ್ತಗಿರಿ ಮಾಡಲಾಗಿದೆ ಇದೇ ರೀತಿ ಪ್ರತಿದಿನವೂ ೫ ಮಂದಿಗೆ ಮೀಲ್ಪಟ್ಟು ಮೆರವಣಿಗೆ ಹೊರಟು ಪ್ರತಿಬಂಧಾಜ್ಞೆಯನ್ನು ಮುರಿಯಲು ವಿದ್ಯಾರ್ಥಿಗಳು ನಿರ್ಧರಿಸಿದ್ದಾರೆ.

ಉಪ್ಪಿನ ತೆರಿಗೆ ಬಡವರಿಗೆ ಭಾರವಾಗಿಲ್ಲವಂತೆ

ಬಡವರಿಗೆ ಉಪ್ಪಿನ ತೆರಿಗೆಯು ಭಾರವಾಗಿಲ್ಲ, ಆದ್ದರಿಂದ ಅದನ್ನು ತೆಗೆದುಹಾಕಬಾರದು ಎಂಬುದಾಗಿ ಮುಸ್ಲಿಂ ಲೀಗ್ ಸದಸ್ಯರಾದ ಮಿ|| ಆಹಮದ್ ಈ. ಎಚ್. ಜಾಫರರು ನಾಳೆಯಿಂದ ಆರಂಭವಾಗುವ ಕೇಂದ್ರ ಶಾಸನ ಸಭೆಗೆ ನಿರ್ಣಯವೊಂದನ್ನು ಕಳುಹಿಸಿದ್ದಾರೆ

ಆಸ್ಟ್ರೇಲಿಯಾದ ಗೌರ್ನರ್ ಜನರಲ್

ಹಿಂದೆ "ಬಾಯಿಲರ್" ಗಳನ್ನು ತಯಾರಿಸುತ್ತಿದ್ದ ಮಿ|| ವಿಲಿಯಂ ಜಾನ್ ಮೆಕೆಲ್ ರವರನ್ನು ಆಸ್ಟ್ರೇಲಿಯಾದ ಹೊಸ ಗೌರ್ನರ್ ಜನರಲ್ಲರನ್ನಾಗಿ ನೇಮಿಸಲಾಗಿದೆ ಇವರು ಈಗ ನ್ಯೂಸೌತ್‌ವೇಲ್ಸಿನ ಪ್ರಧಾನಿಗಳಾಗಿದ್ದಾರೆ

ಬ್ರಿಟನ್ನಿನಲ್ಲಿ ಸರ್ವ ಪಕ್ಷಗಳ ಸರ್ಕಾರ

ಇಂಗ್ಲೆಂಡಿನಲ್ಲಿ ಎಲ್ಲ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಸರ್ಕಾರವೊಂದನ್ನು ಸ್ಥಾಪಿಸುವ ಟೋರಿ ಪಕ್ಷದ ನಾಯಕರೊಬ್ಬರು ಒಂದು ಯೋಜನೆಯನ್ನು ತಯಾರಿಸಿದ್ದಾರೆಂದು ಪಾರ್ಲಿಮೆಂಟಿನ ಲೇಬರ್ ಸದಸ್ಯರೊಬ್ಬರು ತಿಳಿಸಿದ್ದಾರೆ. ಬ್ರಿಟನ್ನಿನ ಆರ್ಥಿಕ ಪರಿಸ್ಥಿತಿಯು ಕಠಿಣವಾಗುವ ಸಂದರ್ಭದಲ್ಲಿ ಸರ್ಕಾರವು ಇತರ ಪಕ್ಷಗಳ ಸಹಾಯಕರನ್ನು ಆಹ್ವಾನಿಸಿ ಒಂದು ಹೊಸ ಸರ್ಕಾರವನ್ನು ರಚಿಸಲು ಒಪ್ಪಂದ ಮಾಡಿಕೊಳ್ಳಬಹುದಾಗಿದೆ ಟೋರಿ ಪಕ್ಷದ ನಾಯಕರಾಗಿ ಮಿ|| ಚರ್ಚಿಲ್ ರವರು ಇರುವುದರಿಂದ ಮಿಶ್ರ ಮಂತ್ರಿ ಮಂಡಲವು ಸಾಧ್ಯವಿಲ್ಲವೆಂದೂ, ಆದಕ್ಕಾಗಿಯೆ ಎಲ್ಲ ಪಕ್ಷಗಳ 'ಕೌನ್ಸಿಲ್ ಆಫ್ ಸ್ಟೇಟ್' ಎಂಬ ಸರ್ಕಾರವನ್ನು ರಚಿಸಲಾಗುವುದೆಂದೂ ಊಹಿಸಲಾಗಿದೆ ಈಗಾಗಲೇ ಏಳು ಮಂದಿ ಮಂತ್ರಿಗಳ ಒಂದು ಪಟ್ಟಿಯನ್ನು ಪಕ್ಷದ ನಾಯಕರೊಬ್ಬರು ಸಿದ್ಧಗೊಳಿಸಿದ್ದಾರೆ ಎಂದೂ ಸಹ ಅವರು ತಿಳಿಸಿರುವರು

ರಾಜರುಗಳೊಡನೆ ನೆಹರೂರವರ ಭೇಟಿ

ನರೇಂದ್ರ ಮಂಡಲದವರು ಭಾರತ ರಾಜ್ಯಾಂಗದಲ್ಲಿ ಸೇರಲು ಷರತ್ತುಗಳನ್ನು ಸೂಚಿಸಿ ನಿರ್ಣಯವನ್ನು ಮಾಡಿದನಂತರ ಪಂಡಿತ ನೆಹರೂರವರು ತಮ್ಮ ಸಹಪಾಠಿಗಳೊಡನೆ ಹಲವು ಜನ ರಾಜರುಗಳನ್ನೂ, ಮಂತ್ರಿಗಳನ್ನೂ ಭೇಟಿ ಮಾಡಿದರು. ಅನೇಕ ಸಂಸ್ಥಾನಗಳು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವಂತೆ ಮಾಡಲು ಇದು ಬಹಳ ಸಹಾಯಿಯಾಗಿದ್ದಿತು ರಾಜ್ಯಾಂಗ ಸಭೆಯ ಕೆಲಸಕ್ಕೆ ಅಡಚಣೆಯನ್ನುಂಟುಮಾಡುವ ಪ್ರಯತ್ನವನ್ನು ಸಂಸ್ಥಾನಗಳ ಮುಖ್ಯ ಪ್ರತಿನಿಧಿಗಳು ಖಂಡಿಸುತ್ತಿರುವರೆಂದು ಹೇಳಲಾಗಿದೆ

ಮದ್ರಾಸ್ ಮಂತ್ರಿಮಂಡಲಕ್ಕೆ ಡಾ|| ರಾಜನ್, ಮೆನನ್?

ಡಾ|| ಟಿ ಎಸ್ ಎಸ್. ರಾಜನ್ ಮತ್ತು ಶ್ರೀ ಮಾಧವ ಮೆನನ್‌ರವರು ಮಂತ್ರಿ ಸ್ಥಾನಗಳನ್ನು ವಹಿಸಿಕೊಳ್ಳುವಂತೆ ಸ್ವಾಗತಿಸಲಾಗಿದೆಯೆಂದು ಗೊತ್ತಾಗಿದೆ ಡಾ|| ರಾಜನ್‌ರವರು ಈ ಆಹ್ವಾನವನ್ನು ಅಂಗೀಕರಿಸಿದರೆ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವರೆಂದು ಹೇಳಲಾಗಿದೆ

ಭಾರತಕ್ಕೆ ಬರಲು ರಹದಾರಿ ಇಲ್ಲ

ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ನಾಯಕರಾಗಿರುವ ಡಾ|| ದಾದೂ ಮತ್ತು ಡಾ|| ನಾಯಕರ್ ರವರು ದೆಹಲಿಯಲ್ಲಿ ನಡೆಯುವ ಏಷ್ಯಾ ರಾಷ್ಟ್ರಗಳ ಸಮ್ಮೇಳನಕ್ಕೆ ತೆರಳಲು ರಹದಾರಿಯನ್ನು ಕೊಡಲು ಅಲ್ಲಿನ ಸರ್ಕಾರವು ನಿರಾಕರಿಸಿದೆ.

ಮತ್ತೆ ಎಂಟು ಜಿಲ್ಲೆಗಳಲ್ಲಿ ಪಾನ ನಿರೋಧ

ಮದ್ರಾಸ್ ಪ್ರಾಂತ್ಯದಲ್ಲಿ ಈಗಾಗಲೇ ಆರು ಜಿಲ್ಲೆಗಳಲ್ಲಿ ಮದ್ಯಪಾನ ನಿರೋಧವನ್ನು ಜಾರಿಗೆ ತರಲಾಗಿದೆ ಅದರ ಜೊತೆಗೆ ಈಗ ಮತ್ತೆ ಎಂಟು ಜಿಲ್ಲೆಗಳಲ್ಲಿ ಈ ನಿರೋಧವನ್ನು ಜಾರಿಮಾಡಲು ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ನಿರ್ಧರಿಸಿದೆ.

ಸಾಧ್ವಿ

ತಾ|| ೨-೨-೪೭ ಭಾನುವಾರ

ಲೀಗಿನ ಗುಟ್ಟು ರಟ್ಟಾಯಿತು

ರಾಜ್ಯಾಂಗ ಸಭೆಯಲ್ಲಿ ಸೇರುವ ವಿಚಾರವಾಗಿ ಮುಸ್ಲಿಂ ಲೀಗು ಅನ್ಯೈರು ನಿರ್ಧಾರವನ್ನು ಮಾಡಿರುತ್ತದೆ. ಆ ಸಭೆಯಲ್ಲಿ ಸೇರುವುದಿಲ್ಲವೆಂದು ಸೂಚಿಸಿರುವುದಲ್ಲದೆ ಸಭೆಯನ್ನೇ ರದ್ದುಗೊಳಿಸಬೇಕೆಂಬ ಸಲಹೆಯನ್ನೂ ಮಾಡಿರುತ್ತದೆ. ಈ ಬಗ್ಗೆ ಕರಾಚಿಯಲ್ಲಿ ಲೀಗಿನ ಕಾರ್ಯಕಾರಿ ಸಮಿತಿಯು ಸೇರಿ ದೀರ್ಘವಾದ ನಿರ್ಣಯವನ್ನು ಮಾಡಿರುತ್ತದೆ. ಪ್ರಾಂತಗಳ ವರ್ಗೀಕರಣದ ವಿಷಯದಲ್ಲಿ ಬ್ರಿಟಿಷ್ ಸರ್ಕಾರದವರು ಕೊಟ್ಟಿರುವ ವಿವರಣೆಯು ಸಮರ್ಪಕವಲ್ಲವಾದರೂ ಅದನ್ನು ಅಂಗೀಕರಿಸಿರುವುದಾಗಿ ಕಾಂಗ್ರೆಸ್ಸು ಈಗಾಗಲೇ ನಿರ್ಧರಿಸಿರುತ್ತದೆ. ಮುಸ್ಲಿಂ ಲೀಗಿನವರು ರಾಜ್ಯಾಂಗ ಸಭೆಯಲ್ಲಿ ಬಂದು ಸೇರುವಂತೆ ಮಾಡುವುದೇ ಈ ಅಂಗೀಕಾರದ ಉದ್ದೇಶ. ಆದರೆ ಸಭೆಯೊಳಗೆ ಬಂದು ಕುಳಿತರೆ ಅಖಂಡ ಭಾರತದ ತತ್ವವನ್ನು ಅಂಗೀಕರಿಸಬೇಕಾಗುತ್ತದೆ ಮತ್ತು ನಿಯೋಗದವರ ಹೇಳಿಕೆಯ ಪ್ರಕಾರ ಪಾಕೀಸ್ತಾನವನ್ನು ಕೈ ಬಿಡಬೇಕಾಗುತ್ತದೆ ಆದುದರಿಂದ ಹೇಗಾದರೂ ಮಾಡಿ ಆ ಸಭೆಯಲ್ಲಿ ಭಾಗ ವಹಿಸದಂತೆ ಇರಲು ಲೀಗು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದೆ. ಅದಕ್ಕಾಗಿ ಕಾಂಗ್ರೆಸ್ಸಿನ ಮೇಲೆ ಇಲ್ಲದ ಸಲ್ಲದ ಕುಂಟು ನೆಪಗಳನ್ನು ಹೂಡುತ್ತಿದೆ.

ಅತ್ತಲಾಗಿ ಕಾಂಗ್ರೆಸ್ ಮತ್ತು ಇತರ ಸಂಘಗಳವರು ನಿಜವಾಗಿಯೂ ಲೀಗಿನ ಸಹಕಾರವನ್ನು ಬಯಸಿ ಬ್ರಿಟಿಷ್ ಸರ್ಕಾರದವರ ವಿವರಣೆಗೆ ಸಮ್ಮತಿಯನ್ನಿತ್ತಿದ್ದಾರೆ. ತನಗೆ ಇಷ್ಟವಿಲ್ಲವೆಂಬುದನ್ನು ಲೀಗು ಸೂಚಿಸುವ ಬದಲು ಇತರರ ಮೇಲೆ ದೋಷಾರೋಪಣೆ ಮಾಡಲು ತೊಡಗಿರುತ್ತದೆ ಕಾಂಗ್ರೆಸ್ಸಿನವರು ಇದುವರೆಗೆ ಬ್ರಿಟಿಷರ ಘೋಷಣೆಯನ್ನಾಗಲೀ, ವಿವರಣೆಯನ್ನಾಗಲೀ ನಿರಾಕರಿಸಿರುವರೆಂಬುದಕ್ಕೆ ಯಾವ ಆಧಾರವೂ ಇರುವುದಿಲ್ಲ. ಬ್ರಿಟಿಷ್ ಸರಕಾರದವರೇ ಹಾಗೆ ಹೇಳಿರುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ಪಾತ್ರವನ್ನು ವಹಿಸಿರುವುದಲ್ಲದೆ ರಾಜ್ಯಾಂಗ ಸಭೆಯ ಕಾರ್ಯಕಲಾಪಗಳನ್ನೂ ಕಾಂಗ್ರೆಸ್ಸಿನವರು ನಿರ್ವಹಿಸುತ್ತಿರುವುದೇ ಇದಕ್ಕೆ ಸಾಕ್ಷಿಯಾಗಿದೆ

ರಾಜ್ಯಾಂಗ ಸಭೆಯಲ್ಲಿ ಲೀಗಿನವರು ಭಾಗ ವಹಿಸಲು ಕಾಂಗ್ರೆಸ್ಸಿನವರ ಅಭಿಪ್ರಾಯವು ಆಧಾರವಲ್ಲ. ಬ್ರಿಟಿಷ್ ಸರ್ಕಾರದವರ ಘೋಷಣೆಯನ್ನು ಅವರು ಅಂಗೀಕರಿಸುವರೇ ಅಥವಾ ಇಲ್ಲವೇ ಎಂಬುದೇ ಆಧಾರ. ಈ ಸಭೆಯಲ್ಲಿ ಭಾಗ ವಹಿಸಲು ಇದುವರೆಗೆ ಅವರು ಒಪ್ಪದೆ ಇರುವುದರಿಂದ ಘೋಷಣೆಯನ್ನು ಅವರು ಅಂಗೀಕರಿಸಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ ಅಲ್ಲದೆ ಅದನ್ನು ಒಪ್ಪುವುದಿಲ್ಲವೆಂದು ಅವರ ಕೌನ್ಸಿಲ್ಲಿನವರು ಹಿಂದೆ ಮಾಡಿದ ನಿರ್ಣಯವು ಇನ್ನೂ ಹಾಗೆಯೇ ಇದೆ. ಅದನ್ನು ಬದಲಾಯಿಸಲು ಆ ಸಭೆಯನ್ನು ಮತ್ತೆ ಕರೆಯುವುದಿಲ್ಲವೆಂದೂ ಸಹ ಈಗ ನಿರ್ಧರಿಸಲಾಗಿದೆ. ಆದುದರಿಂದ ತಾವು ಅಂಗೀಕರಿಸದಿರುವ ಅಂಶಗಳನ್ನು ಲೀಗು ಕಾಂಗ್ರೆಸ್ಸಿನ ಮೇಲೆ ಹೊರಿಸುತ್ತಿದೆ

ರಾಜ್ಯಾಂಗ ಸಭೆಯಲ್ಲಿ ಭಾಗವಹಿಸದಿದ್ದರೆ ಕೇಂದ್ರ ಸರ್ಕಾರದಿಂದಲೂ ಲೀಗಿನವರು ಹೊರಗೆ ಹೋಗಬೇಕೆಂಬ ವಿಚಾರದಲ್ಲಿ ಮಾತ್ರ ಲೀಗಿನವರು ಮೌನವಾಗಿರುವುದು ಆಶ್ಚರ್ಯಕರವಾಗಿದೆ ಬ್ರಿಟಿಷ್ ಘೋಷಣೆಯ ಒಂದು ಭಾಗವನ್ನು ಅಂಗೀಕರಿಸಿ ಮತ್ತೊಂದು ಭಾಗವನ್ನು ನಿರಾಕರಿಸಿರುವವರು ಲೀಗಿನವರು ಅವರು ನಿಜವಾಗಿಯೂ ಸದರಿ ಘೋಷಣೆಯನ್ನು ಒಪ್ಪುವುದಾದರೆ ಈಗ ರಾಜ್ಯಾಂಗ ಸಭೆಗೆ ಬರಬೇಕು; ಇಲ್ಲವಾದರೆ ಕೇಂದ್ರ ಸರ್ಕಾರವನ್ನು ಬಿಡಬೇಕು ಆದರೆ ಅವರು ಯಾವುದನ್ನೂ ಮಾಡದೆ ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಎಂಬ ನೀತಿಯನ್ನು ಅನುಸರಿಸುತ್ತಿರುವರು.

ಭಾರತ ರಾಜಕೀಯ ಕ್ಷೇತ್ರವು ಒಂದು ದೊಡ್ಡ ಚದುರಂಗದ ಆಟದಂತೆ ಪರಿಣಮಿಸಿದೆ. ಬ್ರಿಟಿಷ್ ಸರ್ಕಾರದವರು ಈ ಆಟದ ಸೂತ್ರಧಾರಿಗಳಾಗಿರುವರು ಅವರು ಇನ್ನೂ ಲೀಗಿನ ರಾಗಕ್ಕೇ ತಾಳ ಹಾಕುವರೋ ಅಥವಾ ತಮ್ಮ ಮಾತಿನಂತೆ ನಡೆದುಕೊಳ್ಳುವರೋ ಎಂಬುದರ ಮೇಲೆ ಮುಂದಿನ ವಿದ್ಯಮಾನಗಳು ಅವಲಂಬಿಸುತ್ತವೆ.

ಎಲ್ಲಮಾಂಬಾ ಪ್ರತಿಷ್ಠೆ

ಮಂಡಿ ಮೊಹಲ್ಲಾ ಮಿಷನ್ ಆಸ್ಪತ್ರೆ ಬೀದಿಯಲ್ಲಿ ನೂತನವಾಗಿ ಕಟ್ಟಿರುವ ದೇವಾಲಯದಲ್ಲಿ ೩೦-೧-೪೭ ರಿಂದ ೩೧-೨-೪೭ ರ ವರೆಗೆ ಶ್ರೀ ಯಲ್ಲಮಾಂಬಾ ಮತ್ತು ಶ್ರೀ ಚಂದ್ರಗುಪ್ತಾಂಬಾ ದೇವಿಯವರನ್ನು ವೈದಿಕಾಗಮೋಕ್ತ ಪ್ರತಿಷ್ಠಿಸುವ ಮಹೋತ್ಸವವನ್ನು ನಡೆಸಲಾಗುವುದು. ಮಹಾಜನರು ದಯಮಾಡಿಸಬೇಕಾಗಿ ಕೋರಲಾಗಿದೆ. ಭಕ್ತಮಂಡಲಿಯ ಪರವಾಗಿ,

ಎಚ್ ಆರ್ ನಂಜುಂಡಯ್ಯ,
ಎಸ್ ಗೋವಿಂದ್,
ಕಾರ್ಯದರ್ಶಿಗಳು.

ಬ್ರಿಟಿಷ್ ದೊರೆಗಳಿಗೆ ವಿದ್ಯಾರ್ಥಿಗಳ ಮನವಿ

ದಕ್ಷಿಣ ಆಫ್ರಿಕದಲ್ಲಿ ಜಾರಿಗೆ ತರಲಾಗಿರುವ ವರ್ಣ ವಿಭೇದ ನೀತಿಯನ್ನು ಪ್ರತಿಭಟಿಸಿ ಲಂಡನ್ನಿನ ಸಹಸ್ರಾರು ವಿದ್ಯಾರ್ಥಿಗಳು ಬ್ರಿಟಿಷ್ ದೊರೆಗಳಿಗೆ ಅವರು ದ|| ಆಫ್ರಿಕಕ್ಕೆ ತೆರಳುವ ಮುನ್ನ ಮನವಿಯೊಂದನ್ನು ಒಪ್ಪಿಸಿದ್ದಾರೆ

ಪಾಲಸ್ತೈನಿನಿಂದ ಬ್ರಿಟಿಷ್ ಹೆಂಗಸರು ಮಕ್ಕಳ ರವಾನೆ

ಜೆರುಸಲೆಮ್ಮಿನಲ್ಲಿರುವ ಬ್ರಿಟಿಷ್ ಸೈನ್ಯಾಧಿಪನರು ಒಂದು ಆಜ್ಞೆಯನ್ನು ಹೊರಡಿಸಿ ಬ್ರಿಟಿಷ್ ಹೆಂಗಸರು ಮತ್ತು ಮಕ್ಕಳು ಕೂಡಲೇ ಪ್ಯಾಲಸ್ತೈನನ್ನು ಬಿಟ್ಟು ಹೋಗಬೇಕೆಂದು ತಿಳಿಸಿದ್ದಾರೆ. ಇತ್ತೀಚಿನ ಘಟನೆಗಳೇ ಇದಕ್ಕೆ ಕಾರಣ.

ಆಜಾದ್ ಹಿಂದ್ ಪಕ್ಷ

ನೇತಾಜಿ ಸುಭಾಷ್ ಚಂದ್ರಬೋಸರ ತತ್ವಗಳನ್ನು ಒಪ್ಪಿ ಅವರ ಗುರಿಗಳನ್ನೇ ಆಧಾರವಾಗಿಟ್ಟುಕೊಂಡು ಆಜಾದ್ ಹಿಂದ್ ಪಕ್ಷವೆಂಬ ಹೊಸ ರಾಜಕೀಯ ಪಕ್ಷವನ್ನು ಶ್ರೀ ಶರತ್ ಚಂದ್ರ ಬೋಸರು ಸ್ಥಾಪಿಸಿದ್ದಾರೆ.

ಜಿಲ್ಲಾ ಬೋರ್ಡ್ ಚುನಾವಣೆ

ನಂಜನಗೂಡು ೩೧

ಈ ತಾಲ್ಲೂಕಿನ ಎಲ್ಲಾ ಹೋಬಳಿ ಪ್ರತಿನಿಧಿಗಳ ಸಭೆಯು ತಾಲ್ಲೂಕು ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ನಿನ್ನೆ ದಿವಸ ಶ್ರೀ|| ಲಿಂಗಣ್ಣನವರ ಛತ್ರದಲ್ಲಿ ಜರುಗಿತು ಶ್ರೀ ಕೆ. ವಿಶ್ವೇಶ್ವರಗೌಡರು ಅಧ್ಯಕ್ಷತೆಯನ್ನು ವಹಿಸಿದ್ದರು. ಜಿಲ್ಲಾಬೋರ್ಡ್ ಚುನಾವಣೆಗೆ ಈ ತಾಲ್ಲೂಕಿನಿಂದ ಮೂವರನ್ನು ಕಾಂಗ್ರೆಸ್ ಪರವಾಗಿ ನಿಲ್ಲಿಸಬೇಕೆಂದು ತೀರ್ಮಾನಿಸಲಾಯಿತು ಪಾರ್ಲಿಮೆಂಟರಿ ಸಮಿತಿಗೆ ಆರು ಮಂದಿಯ ಹೆಸರನ್ನು ಸೂಚಿಸಿ ಈ ಪೈಕಿ ಯಾವ ಮೂರು ಮಂದಿಯನ್ನಾದರೂ ಚುನಾಯಿಸಬಹುದೆಂದು ನಿರ್ಣಯಿಸಲಾಯಿತು. ಶ್ರೀಗಳಾದ ಎಚ್. ಲಿಂಗಣ್ಣ, ಎಚ್ ಲಿಂಗಪ್ಪ, ಮಡುವನಹಳ್ಳಿ ಚೆನ್ನಮಲ್ಲಪ್ಪ, ಪಟೇಲ್ ಮಲ್ಲಪ್ಪ, ಮಹದೇವಯ್ಯ ಮತ್ತು ಎಚ್ ಎಂ ನಾಗಣ್ಣ.

ಪ್ರತಿಬಂಧಕಾಜ್ಞೆಗಳು

ಸ್ವಂ ಸು] ಶ್ರೀರಂಗಪಟ್ಟಣ ೩೦

ಈ ತಾಲ್ಲೂಕಿನಲ್ಲೂ ಪ್ರತಿಬಂಧಕಾಜ್ಞೆ ಜಾರಿಯಲ್ಲಿದೆ ಆದರೆ ಇದು ಸರ್ಕಾರಿ ಅಧಿಕಾರಿಗಳಿಗೆ ಮಾತ್ರ ಅನ್ವಯಿಸುವುಲ್ಲದೆಂದು ಕಂಡು ಬರುತ್ತದೆ. ಅಧಿಕಾರಿಗಳ ಮೆರವಣಿಗೆಗಳು ಬಾಜಾ ಭಜಂತ್ರಿಯೊಡನೆ ಹಲವು ಕಡೆ ಸಾಗುತ್ತಲೇ ಇವೆ. ಸರ್ಕಾರಕ್ಕೆ ಬೇರೆ, ಪ್ರಜೆಗಳಿಗೆ ಬೇರೆ ನ್ಯಾಯವೇ?

ಪಂಜಾಬು ಶಾಂತವಾಗುತ್ತಿ

ಲಾಹೋರ್, ಅಮೃತಸರ ಮು... ಕಡೆ ಪರಿಸ್ಥಿತಿ ಶಾಂತವಾಗುತ್ತಿದೆ, ... ದಾಗಿ ಪಂಜಾಬ್ ಸರ್ಕಾರದ ಪ್ರಕಟ... ತಿಳಿಸಿರುತ್ತದೆ. ಮುಸ್ಲಿಮರ ಅಂಗ... ಲ್ಲಾ ತೆರೆದಿವೆ. ಪಂಜಾಬನ್ನು ಕೋ... ನಾರು ಮತ್ತು ರಾಜಕೀಯ ಅರಾಜ... ಈಡು ಮಾಡುವುದಾಗಿ ಹೇಳುವಂ... ರಿಕೆಗೆ ಬಗ್ಗಿ ನಡೆಯಲು ಸಾಧ್ಯವಿಲ್ಲ... ಪ್ರಧಾನಿ ಮಲಿಕ್ ಹಯಾತ್ ... ಹೇಳಿದ್ದಾರೆ

'ವಾರ್ತಾ' ಏಜ...

ಫೆಬ್ರವರಿ ೧ ನೇ ತಾ|| ನಿಂದ ನಮ್ಮ... 'ವಾರ್ತಾ' ಪತ್ರಿಕೆಯು ಮೈಸೂರು ... ರದ ಏಜೆಂಟರನ್ನಾಗಿ ನೇಮಿಸಲಾ... ಮಹಾಜನರು ಈ ನಮ್ಮ ಹೊಸ ಉದ್ಯ... ದಲ್ಲಿ ನೆರವು ನೀಡಿ ಪ್ರೋತ್ಸಾಹಿಸಬೇ... ಗಿ ಕೋರುತ್ತೇವೆ

ಕೆ. ಎಸ್ ಸತ್ಯನಾರಾಯಣರಾವ...
ಕಾಲೇಜು ರಸ್ತೆ, ಮೈಸೂರು.

OPERA TALKIES

2nd week from 31-1-47

JUNGLE - GODDES...

Stars:- Noah Berry, Dorothy Sha...

From 4-2-47

'The Secret Code'

(Full Serial)

City Municipal Office, Mysore, Dated 24th Jan. ...

NOTIFICATION

No. M 5 P 10816-47.

Notice is hereby given ... the public that the Munic... pal Council have resolve... to frame the Toll Bye-law... under section 49 (h) of th... City Municipalities Act.

Any person having an... objection in respect of th... above may prefer the sam... in writing to the unde... signed within one mont... from this date after whic... no objection will be re... ceived.

Copies of the detailed no... tification referred to abov... may be seen in the Cit... Municipal Office or th... Octroi Office during offic... hours on working days.

(Sd) R. Ramachandra Rao
Bhombor...
President

ಹೊಸ ನಮೂನೆಯ

ಬನಾರಿಸ್ ಜಾರ್ಜೆಟ್ ಸೀರೆಗಳು, ಮೈಸೂರು ಸಿಲ್ಕು ಟಿಷ್ಯೂ ಸೀರೆಗಳು, ಬೆಂಗಳೂರ್ ಸಿಲ್ಕು ಸೀರೆಗಳು ಮತ್ತು ಕೊಯಮುತ್ತೂರು ಮಧುರೆ ಸೀರೆಗಳು

ಬಿಕರಿಗೆ ಸಿದ್ಧವಾಗಿವೆ.

ಇಂದೇ ಭೇಟಿ ಕೊಡಿರಿ.

ಬಿ. ಕೆಂಚಪ್ಪ ಸನ್ಸ್,

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

ರಾಜಕಮಲ್, ಮೈಸೂರು

೩೧-೧-೪೭ ರಿಂದ ಅಪೋಹ್ ಎರಡನೇ ವಾರ

ಬೇಬೀ ವಿನಾ, ನೋತೀಲಾಲ್, — **ಪ್ರತಿಜ್ಞಾ** (ಹಿಂದಿ) — ವೀಣಾಕುಮಾರಿ, ಸ್ವರ್ಣಲತಾ, ಸುನೇತ್ರ ಪಾತ್ರ.

From 31-1-47 for 4 days at 10 30 a. m

Samuel Goldwyn's **'One Heavenly Night'**

A classical picture re-released for your entertainment.

Edited, printed and published ... A. R. Nagarajan at the Sadhvi Pre... D Subbiah Road, Mysore.

ರೀ. ನಂ. 392 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಂಪುಟ ೧೧] ಸೋಮವಾರ ೩—೩—೪೭ [ಸಂಚಿಕೆ ೫೭

ಕೇಂದ್ರಸರ್ಕಾರದ ಲೀಗ್ ಮಂತ್ರಿಗಳ ಉಚ್ಚಾಟನೆ?

ವಾರ ಭವಿಷ್ಯ

೩-೩-೪೭ ರಿಂದ ೧೦-೩-೪೭ ರ ವರೆಗೆ
(ಶ್ರೀ ಸಚ್ಚಿದಾನಂದ ಸ್ವಾಮಿಗಳಿಂದ)

ಮೇಷ:-ಆರೋಗ್ಯ ಚೆನ್ನಾಗಿರುತ್ತದೆ ಹೆಚ್ಚುವುದು. ಧನಾದಾಯ ಸಾಧಾ ಉದ್ಯೋಗ ವ್ಯವಹಾರಗಳಲ್ಲಿ ಜ ಶತ್ರುಗಳಿಂದ ಕಿರುಕುಳ ತಾ॥ ೫, ಸಾಧಾರಣ. ಅಧಿಕವ್ಯಯ.

ವೃಷಭ:-ಆರೋಗ್ಯ ಸಾಧಾರಣ, ಶ್ರಮಾ ವಿಶೇಷ ಆಲಸ್ಯ ವ್ಯಾಪಾರ ಉ ಗಗಳಲ್ಲಿ ಅನಾಸಕ್ತಿ ಅಧಿಕಾರಿವರ್ಗ ದಿಂದ ಸನ್ಮಾನ ಚಿಂತಾನಾಶ, ಧಾ ಕಾರ್ಯಗಳಿಂದ ಅಧಿಕವೆಚ್ಚ. ತಾ॥ ೬, ೯ ಸಾಧಾರಣ ಲಾಭ ಬಂಧು

ಮಿಥುನ:-ಆರೋಗ್ಯ ಕೆಡುತ್ತದೆ ಉ ಗ ವ್ಯವಹಾರಗಳಲ್ಲಿ ನಷ್ಟ. ಆಪ್ತರಿಂ ಅಪಮಾನ. ಔಷಧೋಪಚಾರಗಳಿ ವಿಶೇಷ ಖರ್ಚು. ಪ್ರವಾಸದಿಂದ ಮುಖ ವ್ಯಕ್ತಿಗಳ ಮೈತ್ರಿ ತಾ॥ ೬, ೯ ಶಾಂತಿ. ಲಾಭ.

ಕರ್ಕ:-ಪ್ರಾಕೃತಿಕ ಸ್ಥಿತಿ ಕೆಡುತ್ತದೆ. ಹಾರದಲ್ಲಿ ಶತ್ರುಗಳಿಂದ ವಿಶೇಷ ಗಿರು ರ. ರಾಜಕೀಯ ವ್ಯಕ್ತಿಗಳ ಸಹವಾಸ ದ ಕಷ್ಟ. ವ್ಯವಹಾರಗಳಿಂದ ನಷ್ಟ ೬, ೮ ಲಾಭ. ಮಿತ್ರ ಭೇಟಿ.

ಸಿಂಹ:- ಆರೋಗ್ಯ ಸಾಧಾರಣ ಮಾ ರ ಚಿಂತೆ ಹೆಚ್ಚು ಧನಲಾಭ ಉತ್ತ ಮಿತ್ರರಿಂದ ಸಹಾಯ. ಅಧಿಕಾರಿ ರ್ಗದವರಿಂದ ಸನ್ಮಾನ. ತಾ॥ ೬, ೮ ಭ. ಪ್ರವಾಸ.

ಕನ್ಯಾ:-ಆರೋಗ್ಯ ಪೂರ್ಣ ಕೆಡುತ್ತದೆ ಕ ಖರ್ಚು ಹೆಚ್ಚು ಆಪ್ತ ವ ರ್ಗದವರಿಂದ ತಿರಸ್ಕಾರ, ಅಪಮಾನ, ವ್ಯ ಪಾರದಿಂದ ಮಾನಸಿಕ ಚಿಂತೆ ಹೆಚ್ಚುವು ಅನುಭವಾರ್ಹ. ತಾ॥ ೬, ೮, ೯ ಪ್ರವಾಸ, ಬಂಧು ದರ್ಶನ

ತುಲಾ:-ದೇಹಸ್ಥಿತಿ ಚೆನ್ನಾಗಿರುತ್ತದೆ ಮುಖ ವ್ಯಕ್ತಿಗಳ ಸ್ನೇಹದಿಂದ ವಿಶೇಷ ಮ್ಮಾನ, ಶತ್ರುಗಳ ಕಿರುಕುಳ ತಪ್ಪುತ್ತದೆ, ಷ್ಟ ಜನರ ವಿಶ್ವಾಸದಿಂದ ಕೆಲಸ ಕಾರ್ಯ ಳು ಸುಸೂತ್ರವಾಗಿ ನಡೆಯುತ್ತವೆ. ತಾ॥ ೬, ೮ ಖರ್ಚು.

ವೃಶ್ಚಿಕ:-ಆರೋಗ್ಯ ಚೆನ್ನಾಗಿರುತ್ತದೆ, ಟುಂಬದ ಆರೋಗ್ಯ ಕೆಟ್ಟು ವೈದ್ಯಕೀಯ ಚ್ಚ ಹೆಚ್ಚುತ್ತದೆ, ಶುಭ ಕಾರ್ಯಗಳಿಗಾ ವಿಶೇಷ ಖರ್ಚು, ಬಂಧುಗಳ ಆಗಮನ ದ ಮನಸ್ಸಿಗೆ ಶಾಂತಿ. ತಾ॥ ೫, 7 ಲಾ ಕಲಹ

ಧನುಸ್ಸು:-ದೇಹಸ್ಥಿತಿ ಚೆನ್ನಾಗಿರುತ್ತದೆ ಷ್ಟ ವರ್ಗದವರಿಂದ ಕಿರುಕುಳ, ಉದ್ಯೋ ವ್ಯವಹಾರಗಳಲ್ಲಿ ನಷ್ಟ, ವಿಶೇಷವಾದ ವಾಸ, ಧಾರ್ಮಿಕ ಕಾರ್ಯದಲ್ಲಿ ಆಸಕ್ತಿ ೬, ೮ ಲಾಭ, ಮಿತ್ರ ಭೇಟಿ.

ಮಕರ:-ಆರೋಗ್ಯ ಉತ್ತಮ, ವ್ಯವಹಾ ರಲ್ಲಿ ಜಯ, ವ್ಯಾಪಾರದಿಂದ ಲಾಭ, ಅಧಿ ರಿ ವರ್ಗದವರಿಂದ ಸನ್ಮಾನ, ಸಂತೋಷ ಟ ಮತ್ತು ಧಾರ್ಮಿಕ ಕಾರ್ಯಗಳಿಗಾ ಚರ, ತಾ॥ ೫, ೭ ಖರ್ಚು, ಚಿಂತೆ.

ಕುಂಭ:-ಆರೋಗ್ಯ ಚೆನ್ನಾಗಿರುತ್ತದೆ, ಉ ದ್ಯೋಗ ವ್ಯವಹಾರಗಳಲ್ಲಿ ಶತ್ರುಗಳಿಂದ ಕಿ ಳ, ಅಧಿಕಾರಿ ವರ್ಗದವರ ಅಸಮಾ ನ ಹೆಚ್ಚಿ ಮಾನಸಿಕ ಚಿಂತೆ ವಿಪರೀತ ಗುವುದು, ತಾ॥ ೬, ೭, ೮ ವಿಶೇಷ ರ್ಚು.

ಸಾಲ ತೀರಿಸಲು ಮಗಳ ಮಾರಾಟ

ಫ್ರಾನ್ಸಿನ ಗೇಬ್ರಿಯಲ್ ಪಿಲ್ಲೇ ಎಂಬ ವೈಮಾನಿಕನಿಗೆ ತಾನು ಕೊಡಬೇಕಾಗಿದ್ದ ಮೊಬಲಗಿಗಾಗಿ ಕಮಿಲ್ಲೆ ಎಂಬಾತನ ತನ್ನ ೧೪ ವರ್ಷದ ಮಗಳನ್ನು ಮಾರಿದನೆಂಬ ವಾರ್ತೆ ಬಂದಿದೆ. ಅನಂತರ ಆ ಹುಡುಗಿಯು ವೈಮಾನಿಕನ ಕಾಟವನ್ನು ತಡೆಯಲಾರದೆ ಓಡಿಹೋದಳೆಂದು ಗೇಬ್ರಿಯಲನು ಕೋರ್ಟಿನಲ್ಲಿ ದಾವಾ ಹೂಡಲು, ವಿಚಾರಣೆಯಾಗಿ ಅವನನ್ನು ದಸ್ತಗಿರಿ ಮಾಡಲಾಯಿತೆಂದೂ ವರದಿಯಾಗಿದೆ

ರಾಜರುಗಳಿಗೆ ಎಚ್ಚರಿಕೆ

'ಸಂಸ್ಥಾನಾಧೀಶರುಗಳು ಕಾಲಧರ್ಮಕ್ಕನುಗುಣವಾಗಿ ವರ್ತಿಸದಿದ್ದರೆ ಮತ್ತು ಸಾರ್ವಭೌಮಾಧಿಕಾರವು ಪ್ರಜೆಗಳಲ್ಲೇ ಇದೆಯೆಂಬುದನ್ನು ಒಪ್ಪಿಕೊಳ್ಳದಿದ್ದರೆ ರಾಜ್ಯತ್ಯಾಗ ಮಾಡುವಂತೆ ಅವರನ್ನು ಒತ್ತಾಯಪಡಿಸಲಾಗುವುದು ಮತ್ತು ಅವರ ಯೋಚನೆಯನ್ನೇ ಮರೆತು ಬಿಡಲಾಗುವುದು'- ಎಂಬುದಾಗಿ ರಾಜ್ಯಾಂಗ ಸಭೆಯ ಶ್ರೀ ಅನಂತಶಯನಂ ಅಯ್ಯಂಗಾರ್ಯರು ಹೇಳಿಕೆಯೊಂದನ್ನಿತ್ತಿದ್ದಾರೆ- ಬ್ರಿಟಿಷರು ಭಾರತವನ್ನು ತ್ಯಜಿಸುವಂತೆ ಮಾಡಿದವರು ಬ್ರಿ॥ ಭಾರತದವರು ಅದ್ದರಿಂದ ಆಡಳಿತಾಧಿಕಾರ ಪ್ರಜೆಗಳಿಗೆ ಒರಬೇಕಾದುದು ಸ್ವಾಭಾವಿಕ ಸಂಸ್ಥಾನಗಳಲ್ಲಿ ರಾಜರುಗಳು ಈ ಸ್ವಾತಂತ್ರ್ಯ ಸಂಗ್ರಾಮವನ್ನು ಮೊದಲಿಂದಲೂ ಅಡುಮಾಡಲು ಪ್ರಯತ್ನಿಸುತ್ತಿದ್ದಾರೆ. ಆ ಕಾಲ ಕಳೆದು ಹೋಯಿತು ಎಂಬುದಾಗಿ ತಿಳಿಸಿದ್ದಾರೆ.

೭ ವರ್ಷ ಹಾಸಿಗೆಯಲ್ಲಿ

ಸಂಯುಕ್ತ ಸಂಸ್ಥಾನಗಳ ಜಾನ್ ಪ್ರೈಸ್ ಎಂಬಾತನು ೭ ವರ್ಷಗಳ ಕಾಲ ಹಾಸಿಗೆಯಲ್ಲಿ ಮಲಗಿದ್ದವನು ಎದ್ದೇಳಲಿಲ್ಲ ವಿಚಾರಿಸಲಾಗಿ ತನಗೆ ಖಾಯಿಲೆಯೆಂದು ಹೇಳುತ್ತಿದ್ದನು. ಆತನ ಹೆಂಡತಿಯು ವೈದ್ಯರನ್ನು ಕರೆದು ಪರೀಕ್ಷಿಸಲು ಅವನಿಗೆ ಖಾಯಿಲೆಯೇನೂ ಇಲ್ಲವೆಂದೂ, ಸೋಮಾರಿತನದಿಂದ ಎದ್ದೇಳದ ಕಾರಣದಿಂದ ನಿಶ್ಶಕ್ತನಾಗಿರುವನೆಂದೂ ಹೇಳಿದರು. ಇದರಿಂದ ಅವಳು ಗಂಡನನ್ನು ತ್ಯಜಿಸಿರುತ್ತಾಳೆಂದು ವರದಿಯಾಗಿದೆ

ಮೀನ:-ಆರೋಗ್ಯ ಕೆಡುತ್ತದೆ, ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ, ಅಧಿಕಾರಿ ವರ್ಗದವರಿಂದ ಸನ್ಮಾನ, ಮಿತ್ರರಿಂದ ತಿರಸ್ಕಾರ, ಕುಟುಂಬದಲ್ಲಿ ಕಲಹ; ತಾ॥ ४, ೫, ೭ ಲಾಭ, ಅಸಮಾಧಾನ.

ಬೆಂಗಳೂರಿನಲ್ಲಿ ಪತ್ರಿಕೋದ್ಯೋಗಿಗಳ ಸಮ್ಮೇಳನ

ಸ್ವಂ. ಸು. ಫೋ] ಬೆಂಗಳೂರು ೩

ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದ ಸಭೆಯು ನಿನ್ನೆ ದಿನ ಶ್ರೀ ಜೀವಣ್ಣರಾಯರ ಅಧ್ಯಕ್ಷತೆಯಲ್ಲಿ ನಡೆದು ಪತ್ರಿಕೋದ್ಯೋಗಿಗಳ ಐದನೇ ಸಮ್ಮೇಳನವನ್ನು ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆಸಬೇಕೆಂದು ತೀರ್ಮಾನಿಸಲಾಯಿತು

ಹೊಸ ವ್ಯವಸಾಯ ಯೋಜನೆ

ವ್ಯವಸಾಯಾಭಿವೃದ್ಧಿ ವಿಚಾರದಲ್ಲಿ ಪಾಂಚವಾರ್ಷಿಕ ಯೋಜನೆಯೊಂದನ್ನು ಸರ್ಕಾರದವರು ಜಾರಿಗೆ ತರಲು ಆಜ್ಞೆ ಮಾಡಿದ್ದಾರೆ. ಇದರ ಮೇಲ್ವಿಚಾರಣೆಯನ್ನು ಹೆಚ್ಚು ಆಹಾರ ಬೆಳೆವಣಿಗೆಯ ಅಧಿಕಾರಿಗಳೇ ನೋಡಿಕೊಳ್ಳುವರು. ಪ್ರತಿ ಜಿಲ್ಲೆಯಲ್ಲೂ ೪೦ ಎಕರೆ ಪ್ರದೇಶದಲ್ಲಿ 'ಪರೀಕ್ಷಾ ಕೇಂದ್ರಗಳನ್ನು' ಸ್ಥಾಪಿಸಲಾಗುವುದು. ರೈತರಿಗೆ ಉತ್ತಮ ಬೀಜಗಳನ್ನು ಸುಲಭ ದರದಲ್ಲಿ ಒದಗಿಸಲಾಗುವುದು ಅಲ್ಲದೆ ಉತ್ತಮ ಮಾದರಿ ಗೊಬ್ಬರವನ್ನು ಅಸಲು ಬೆಲೆಗಿಂತ ಶೇ॥ ೨೫ ರಷ್ಟು ಕಡಮೆ ಬೆಲೆಗೆ ಮಾರಲಾಗುವುದು

ವಿಶ್ವದ ನಾವಿಕ ಪಿತಾಮಹನ ಮರಣ

ಪ್ರಪಂಚದ ನಾವಿಕರಲ್ಲೆಲ್ಲಾ ಅತ್ಯಂತ ಹಿರಿಯನಾದ ಪರ್ಲೀಡಿನ ಕ್ಯಾ॥ ಥಾಮಸ್ ಡೊರಾ ಎಂಬಾತನು ತನ್ನ ೧೦೦ ನೇ ವಯಸ್ಸಿನಲ್ಲಿ ಕಳೆದ ಗುರುವಾರ ಮರಣ ಹೊಂದಿದನೆಂದು ವಾರ್ತೆ ಬಂದಿದೆ ಬ್ರಿಟಿಷ್ ಆಡಳಿತದಲ್ಲಿರುವ ಅತ್ಯಂತ ಹಳೆಯದಾದ ಪ್ರಶಸ್ತಿ ಪತ್ರವು ೧೮೭೧ ರಲ್ಲಿ ಇವನಿಗೆ ಕೊಡಲ್ಪಟ್ಟಿದ್ದಿತು. ಈತನು ಅನೇಕ ಬಾರಿ ವಿಶ್ವವನ್ನೆಲ್ಲಾ ಸಮುದ್ರದಲ್ಲಿ ತಿರುಗಿದ್ದಾನೆ

ಕೇಂದ್ರಸರ್ಕಾರವನ್ನು ಬಿಡಲು ಲೀಗ್ ಮಂತ್ರಿಗಳಿಗೆ ಸೂಚನೆ

ಮುಸ್ಲಿಂ ಲೀಗು ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಲು ನಿರಾಕರಿಸಿರುವುದರಿಂದ ಲೀಗ್ ಪ್ರತಿನಿಧಿಗಳು ಕೇಂದ್ರ ತಾತ್ಕಾಲಿಕ ಸರ್ಕಾರದಲ್ಲಿ ಇರಲು ಅರ್ಹರಲ್ಲವೆಂದೂ, ಅವರು ತಮ್ಮ ಸ್ಥಾನಗಳನ್ನು ತ್ಯಜಿಸುವಂತೆ ವೈಸರಾಯರು ಕೂಡಲೇ ಸೂಚನೆಯನ್ನು ಕೊಡುವಂತೆ ಒತ್ತಾಯದ ಕಾರ್ಯಕ್ರಮಗಳು ನಡೆಯುತ್ತಿರುವುದಾಗಿಯೂ ದೆಹಲಿಯಲ್ಲಿ ಹೇಳಲಾಗುತ್ತಿದೆ

ಗೋಪಾಲರಾಯರ ಪ್ರಕರಣ

ಸ್ವಂ ಸು. ಫೋ] ಬೆಂಗಳೂರು ೩

ಧರ್ಮರಕ್ಷಕರ ಬಿ. ಎ. ಗೋಪಾಲರಾಯರ ಪಾಟೀ ಸವಾಲನ್ನು ಈ ದಿನ ಶ್ರೀ॥ ಎಲ್. ಎಸ್ ರಾಜುರವರು ಮುಂದುವರಿಸಿದರು. ಅದರ ಸಾರಾಂಶ ಈ ರೀತಿ ಇದೆ:-

ಪಾಸ್ ಬುಕ್ಕುಗಳಲ್ಲಿ ಇರುವ ಜಮಾಖರ್ಚುಗಳ ವಿವರ ನನಗೆ ಜ್ಞಾಪಕವಿಲ್ಲ ಆದಾಯ ತೆರಿಗೆ ಖರ್ಚು ಬಿದ್ದಿರುವ ವಿಚಾರವು ಸರಿಯಾಗಿ ಜ್ಞಾಪಕವಿಲ್ಲ: ಪೋಲೀಸರು ಇವೆಲ್ಲವನ್ನೂ ವಶಪಡಿಸಿಕೊಂಡಿರುವರು. ಆ ಪುಸ್ತಕಗಳನ್ನು ಹಾಜರುಪಡಿಸಿದರೆ ಹೇಳಬಹುದು.

ನನಗೆ ಸರ್ ಟಿ. ತಂಬೂಚೆಟ್ಟರು ಒಂದು ಕ್ಯಾಸೆಟ್ಟನ್ನೂ, ಮಿ॥ ರೊಟಲಿಸ ಮತ್ತು ಇತರರು ಇನ್ನೊಂದನ್ನೂ, ಮಂಡ್ಯದ ಸಮಾರಂಭದಲ್ಲಿ ಒಂದನ್ನೂ, ಕೊಟ್ಟಿರುವರು. ಮಂಡ್ಯದ ಸಮಾರಂಭಕ್ಕೆ ನಾನು ದುಡ್ಡು ಕೊಡಲಿಲ್ಲ. ಯಾರು ಕೊಟ್ಟರೋ ಗೊತ್ತಿಲ್ಲ. ಬಹುಶಃ ಅದನ್ನೆಲ್ಲಾ ವೆಂಕಟಸುಬ್ಬಯ್ಯ ಎಂಬುವರು ಏರ್ಪಾಟು ಮಾಡಿದ್ದಿರಬಹುದೆಂದು ಜ್ಞಾಪಕ

ರಣಜೋಧಸಿಂಗರನ್ನು ಕಳೆದ ನವೆಂಬರ್ ತಿಂಗಳಿನಲ್ಲಿ ಬಸವನಗುಡಿಯಲ್ಲಿ ಕಂಟ್ರಾಕ್ಟರಾಗಿರುವ ಶ್ರೀ ಸೀತಾರಾಂ ಎಂಬುವರು ಪರಿಚಯ ಮಾಡಿಸಿಕೊಟ್ಟರು. ಶ್ರೀ ಜಿ. ಸುಂದರರಾಯರು ನನ್ನಲ್ಲಿ ೫ ಅಥವಾ ೧೦ ಸಾವಿರ ರೂ ಇಟ್ಟಿದ್ದರೆಂಬುದು ಜ್ಞಾಪಕವಿಲ್ಲ ೧೯೪೪ ನೇ ನವೆಂಬರ್ ನಲ್ಲಿ ಅವರು ಹಣ ಇಟ್ಟಿದ್ದರು ೧೯೪೬ ರಲ್ಲಿ ವಾಪಸು ಪಡೆದರು

ಲೇಡಿ ಮೆಡಿಕಲ್ ಆಫೀಸರಾಗಿರುವ ಆಲ್ಬುಕರ್ಕ್‌ರವರೂ ನನ್ನಲ್ಲಿ ಹಣ ಇಟ್ಟಿದ್ದರು. ಮೊಬಲಗು ಮರೆತು ಹೋಗಿದೆ ಡಿಸೆಂಬರ್ ೨೦ ನೇ ತಾ॥ ಅವರನ್ನು ಇತ್ತೀಚೆಗೆ ಭೇಟಿ ಮಾಡಿದ್ದೆ. ಆಗ್ಯೆ ಅವರು ಗೋವಾದಿಂದ ಹಿಂತಿರುಗಿದ್ದರು ಶ್ರೀ ದೇವರಾಜ ಶಿವರಾಂರವರ ಪರಿಚಯ ಮಾಡಿಸಿಕೊಡಲು ಅವರ ಮನೆಗೆ ನನ್ನನ್ನು ಡಿ॥ ೫ ನೇ ತಾ॥ ಮಿಸ್ ಅಲ್ಬುಕರ್ಕ್‌ರವರೇ ಕರೆದುಕೊಂಡು ಹೋಗಿದ್ದರು, ಅಲ್ಲಿ ನಾವು ೩ ಲಕ್ಷ ರೂ. ಬೇಕೆಂದು ಕೇಳಲಿಲ್ಲ ನಾನು ವಿಪರೀತ ಕುಡಿಯುತ್ತಿದ್ದೇನೆಂದೂ, ನನಗೆ ಸ್ವಲ್ಪ ಬುದ್ಧಿ ಹೇಳಬೇಕೆಂದೂ ನನ್ನ ಪತ್ನಿಯು ಮಿಸ್ ಅಲ್ಬುಕರ್ಕ್‌ರವರ ಕೂಡ ಹೇಳಿದ್ದರೆಂಬುದು ಸುಳ್ಳು,

ಡಿ॥ ೮ ನೇ ತಾ॥ ಡಾ॥ ಮಿಸ್ಕರ್ನರವರ ಮನೆಯಲ್ಲಿ ನಡೆದ ಸಭೆಗೆ ನಾನು ಹೋಗಿದ್ದೆ ಅವರೆಲ್ಲಾ ಸೇರಿ ಒಂದು ಪಟ್ಟಿ ಮಾಡಿ ನನ್ನ ಆಸ್ತಿ ೧ ಕೋಟಿ ೯೦ ಲಕ್ಷದ ೬೦ ಸಾವಿರ ಇದೆಯೆಂದೂ ನಾನು ಕೊಡಬೇಕಾದವರಿಗೆಲ್ಲಾ ಪ್ರೋನೋಟು ಬರೆದುಕೊಡಬೇಕೆಂದೂ ತೀರ್ಮಾನ ಮಾಡಿಕೊಂಡರು; ಆ ಆಸ್ತಿಯ ಪಟ್ಟಿಯಲ್ಲಿ ಕಳವಾದ ಒಡವೆಗಳನ್ನು ಸೇರಿಸಿರಲಿಲ್ಲ. ಆ ಪಟ್ಟಿಗೆ ನಾನು ರುಜು ಹಾಕಿದ್ದೇನೆ.

ರಥೋತ್ಸವ

ಮೈಸೂರು ೩

ಇದೇ ಮಾಘಶುದ್ಧ ಚತುರ್ದಶಿ ಮಂಗಳವಾರ, (ತಾ॥ ४-೩-೪೭) ಬೆಳಿಗ್ಗೆ ೧೦-೩೦ ಕ್ಕೆ ಶ್ರೀ ತ್ರಿನಯನೇಶ್ವರ ಸ್ವಾಮಿಯವರ ರಥೋತ್ಸವವು ಅರಮನೆ ಕೋಟೆಯಲ್ಲಿ ನಡೆಯುತ್ತದೆ.

ಸಾಧ್ವಿ

ತಾ॥ ೩-೨-೪೭ ಸೋಮವಾರ

ಪತ್ರಿಕೆಗಳ ಕಾಗದದ ಬಿಕ್ಕಟ್ಟು

ನಮ್ಮ ಸಂಸ್ಥಾನದ ವರ್ತಮಾನ ಪತ್ರಿಕೆಗಳಿಗೆ ಬೇಕಾಗುವ ಕಾಗದವು ಸಾಕಾದಷ್ಟು ದೊರೆಯದೆ ಅತ್ಯಂತ ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗಿರುತ್ತದೆ. ಹೊರಗಡೆಯಿಂದ ಸರಬರಾಜಾಗುತ್ತಿದ್ದ ಕೆನೆಡಿಯನ್ ಕಾಗದವು ಕಳೆದ ಒಂದೆರಡು ತಿಂಗಳಿಂದ ಸಂಪೂರ್ಣವಾಗಿ ನಿಂತುಹೋಗಿದೆ. ಈ ಕಾಗದವನ್ನು ಒದಗಿಸುತ್ತಿದ್ದ ಮದರಾಸಿನ ವರ್ತಕರು ಪೂರ್ವಭಾವಿಯಾದ ತಿಳುವಳಿಕೆಯನ್ನೇ ಕೊಡದೆ ಹಠಾತ್ತಾಗಿ ಸರಬರಾಜನ್ನು ನಿಲ್ಲಿಸಿರುತ್ತಾರೆ. ಇದರಿಂದ ಅನೇಕ ಪತ್ರಿಕೆಗಳು ವಿಧಿಯಿಲ್ಲದೆ ನಾಲ್ಕು ಪುಟದಿಂದ ಎರಡು ಪುಟಗಳಿಗೆ ಇಳಿದಿವೆ. ಇನ್ನು ಕೆಲವು ಪತ್ರಿಕೆಗಳು ಸಾಕಾದಷ್ಟು ಸಂಖ್ಯೆಯಲ್ಲಿ ಪ್ರಕಟವಾಗಲು ಅವಕಾಶವಿರುವುದಿಲ್ಲ. ನಮ್ಮ ಪತ್ರಿಕೆಗಳ ಸ್ಥಿತಿಯು ಅತ್ಯಂತ ಕಳವಳಕ್ಕೆ ಆಸ್ಪದ ಉಂಟುಮಾಡಿದೆ.

ಪತ್ರಿಕಾ ಕರ್ತರುಗಳ ಸಂಘದ ಅಧ್ಯಕ್ಷರಾದ ಶ್ರೀ ಪಿ. ಆರ್. ರಾಮಯ್ಯನವರು ಈ ಬಗ್ಗೆ ಒಂದು ಹೇಳಿಕೆಯನ್ನು ಹೊರಡಿಸಿ ಸರ್ಕಾರದವರು ಕೂಡಲೇ ನಮ್ಮ ಪತ್ರಿಕೆಗಳ ನೆರವಿಗೆ ಬರಬೇಕೆಂದು ಕೋರಿದ್ದಾರೆ. ಈ ವಿಷಯದಲ್ಲಿ ಪರ್ಯಾಲೋಚನೆ ನಡೆಸಲು ನ್ಯಾಯಾಂಗ ಸಚಿವರ ಬರುವ ಸೋಮವಾರ ಸಭೆಯೊಂದನ್ನು ಕರೆದಿದ್ದಾರೆ. ಆದರೆ ಇದುವರೆಗೆ ಇಂತಹ ಸಭೆಗಳು ಅನೇಕವಾಗಿ ಜರುಗಿದುವು. ಅವುಗಳಲ್ಲಿ ಸಚಿವರೂ, ಸಿವಿಲ್ ಸಪ್ಲೈ ಅಧಿಕಾರಿಗಳೂ ಭಾಗವಹಿಸಿದ್ದರು. ಪತ್ರಿಕೆಗಳಿಗೆ ಅವರು ಮುಕ್ತಕಂಠದಿಂದ ಸಹಾನುಭೂತಿಯನ್ನೇನೋ ಸೂಚಿಸಿದರು. ಆದರೆ ವಾಸ್ತವವಾಗಿ ಅಗತ್ಯವಾದ ಪರಿಹಾರವು ದೊರೆತಿರುವುದಿಲ್ಲ.

ನಮ್ಮ ಸಂಸ್ಥಾನದಲ್ಲಿ ಒಂದು ದೊಡ್ಡ ಕಾಗದದ ಕಾರ್ಖಾನೆಯಿರುತ್ತದೆ. ಅದರಲ್ಲಿ ತಯಾರಾಗುವ ಕಾಗದವು ನಮ್ಮ ಸಂಸ್ಥಾನಕ್ಕೆ ಮಾತ್ರವೇ ಅಲ್ಲದೆ ಹೊರಗಡೆಗೂ ಸರಬರಾಜಾಗುತ್ತಿದೆ. ನಾಲ್ಕು ವರ್ಷಗಳ ಹಿಂದೆ ಬ್ರಿಟಿಷ್ ಹಿಂದೂಸ್ಥಾನದಲ್ಲಿ ಕಾಗದಕ್ಕೆ ಬಿಕ್ಕಟ್ಟು ಬಂದಾಗ ನಮ್ಮ ಕಾಗದದ ಕಾರ್ಖಾನೆಯಿಂದ ಮದರಾಸಿನ ಹಿಂದೂ ಮತ್ತು ಎಕ್ಸ್‌ಪ್ರೆಸ್ ಮುಂತಾದ ಪತ್ರಿಕೆಗಳಿಗೆ ನೂರಾರು ಟನ್ನುಗಳಷ್ಟು ಕಾಗದವು ಸರಬರಾಜಾಗಿರುತ್ತದೆ. ಇಂಡಿಯಾ ಸರ್ಕಾರದವರ ಅಪೇಕ್ಷೆಯಂತೆಯೇ ಅದನ್ನು ಒದಗಿಸಲಾಯಿತು. ನಮ್ಮ ಸಂಸ್ಥಾನದಲ್ಲಿ ಈಗ ಪತ್ರಿಕೆಗಳಿಗೆ ಅಭಾವವುಂಟಾಗಿರುವಾಗ ಇಂಡಿಯಾ ಸರ್ಕಾರದವರನ್ನು ನಮ್ಮ ಅಧಿಕಾರಿಗಳು ಒತ್ತಾಯಪಡಿಸಿ ಕಾಗದವನ್ನೇಕೆ ತರಿಸಿಕೊಳ್ಳಬಾರದು?

ಇಡೀ ಹಿಂದೂಸ್ಥಾನಕ್ಕೆ ತಿಂಗಳಿಗೆ ಸುಮಾರು ಎರಡು ಸಾವಿರದ ಏನೂರು ಟನ್ ಕಾಗದವು ಬೇಕಾಗುವುದೆಂದು ಹೇಳಲಾಗಿದೆ. ಪ್ರಕೃತದಲ್ಲಿ ನಮ್ಮ ಸಂಸ್ಥಾನಕ್ಕೆ ಕೇವಲ ಹದಿನೈದು ಟನ್ನಿನಷ್ಟು ಮಾತ್ರ ಹೊರಗಿನಿಂದ ಬರುತ್ತಿದೆ. ನಮಗೆ ಬೇಕಾಗಿರುವುದು ನಲವತ್ತೆರಡು ಟನ್ನು. ಅಖಿಲ ಭಾರತದ ಪ್ರಮಾಣದಲ್ಲಿ ಇದು ಅತ್ಯಲ್ಪ ಭಾಗವಾಗಿರುವಲ್ಲಿ ಈಗ ಕೊಟ್ಟಿರುವಷ್ಟು ಪ್ರಮಾಣವನ್ನೂ ಸಹ ಸರಿಯಾಗಿ ಒದಗಿಸದಿರುವುದು ಬಹಳ ಖಂಡನೀಯವಾಗಿದೆ. ಈ ಬಗ್ಗೆ ನಮ್ಮ ಸರ್ಕಾರದವರು ತಕ್ಕ ಒತ್ತಾಯವನ್ನು ಹಾಕಬೇಕೆಂದು ನಾವು ಕೋರುತ್ತೇವೆ.

ನಮ್ಮ ಸಂಸ್ಥಾನದಲ್ಲಿರುವ ಕಾರ್ಖಾನೆಯಿಂದಲಾದರೂ ಪತ್ರಿಕೆಗಳಿಗೆ ಬೇಕಾದಷ್ಟು ಕಾಗದವನ್ನು ಒದಗಿಸುವಂತೆ ಏರ್ಪಾಡು ಮಾಡದಿರುವುದು ಸಮಾಧಾನಕರವಾದ ವಿಷಯವಲ್ಲ. ಇಲ್ಲಿನ ಕಾಗದವು ಒಹಳ ಕೀಳು ದರ್ಜೆಯಲ್ಲಿದ್ದರೂ ಹೊರಗಿನ ಕಾಗದಕ್ಕಿಂತ ಒಂದೂವರೆಯಷ್ಟು ಬೆಲೆಯನ್ನು ಅದಕ್ಕೆ ತೆಗೆದುಕೊಳ್ಳಲಾಗುತ್ತಿದೆ. ಬೇರೆ ಕಾಗದವನ್ನು ಮಾಡಿದರೆ ಕಾರ್ಖಾನೆಗೆ ಇನ್ನೂ ಹೆಚ್ಚಿನ ಲಾಭ ಬರಬಹುದು. ಆದರೆ ಸಂಸ್ಥಾನದ ಪತ್ರಿಕೆಗಳಿಗೆ ನೆರವು ನೀಡುವುದು ಎಲ್ಲಕ್ಕಿಂತಲೂ ಹೆಚ್ಚಿನ ಲಾಭದಾಯಕವಾದ ಕೆಲಸವೆಂಬುದನ್ನು ಸರ್ಕಾರದವರೂ ಕಾರ್ಖಾನೆಯವರೂ ಅರಿಯುವುದು ಮೇಲು. ಅತ್ಯಂತ ಮಹತ್ತರವಾದ ಸಮಾಜದ ಸಮಸ್ಯೆಗಳ ಪರಿಹಾರಕ್ಕೆ ಪತ್ರಿಕೆಗಳ ನೆರವನ್ನು ಕೋರುವವರು ಪತ್ರಿಕೆಗಳ ನಿರಾತಂಕ ಜೀವನಕ್ಕೂ ಸಹಕಾರಿಗಳಾಗುವುದು ಆವಶ್ಯಕ. ನಾಲ್ಕು ವರ್ಷದ ಹಿಂದೆ ಇನ್ನೂ ಹೆಚ್ಚಿನ ಲಾಭವು ಬರುತ್ತಿದ್ದಾಗ ಸರ್ಕಾರದವರು ಒಂದು ನಿಯತವಾದ ಬೆಲೆಗೆ ನಮ್ಮ ಕಾರ್ಖಾನೆಯಿಂದ ಪತ್ರಿಕೆಗಳಿಗೆ ಕಾಗದವನ್ನು ಒದಗಿಸುವಂತೆ ಮಾಡಿದ್ದರು. ಈ ಬಗ್ಗೆ ಕಾರ್ಖಾನೆಯವರು ಸ್ವಲ್ಪ ತ್ಯಾಗವನ್ನು ಮಾಡಬೇಕಾದರೆ ಅದೊಂದು ಸಾರ್ಥಕವಾದ ತ್ಯಾಗವೆಂದು ಭಾವಿಸಬೇಕು.

ಬ್ರಿಟಿಷ್ ಇಂಡಿಯದ ಪತ್ರಿಕೆಗಳು ದಿನೇ ದಿನೇ ಪುಟಗಳನ್ನು ಹೆಚ್ಚಿಸುತ್ತಿರುವಾಗ ನಮ್ಮ ಸಂಸ್ಥಾನದ ಪತ್ರಿಕೆಗಳು ಕ್ಷೀಣಿಸುತ್ತಿರುವುದು ಲಾಘವವಾದ ವಿಚಾರ. ನಮ್ಮ ಸರ್ಕಾರದವರೂ, ಕಾರ್ಖಾನೆಯವರೂ ಈ ಬಗ್ಗೆ ಕೂಡಲೇ ಸರಿಯಾದ ಕಾರ್ಯಕ್ರಮವನ್ನು ಕೈಗೊಂಡು ನಮ್ಮ ಸಂಸ್ಥಾನಕ್ಕೆ ಬರಬೇಕಾದ ಹೊರಗಿನ ಕಾಗದದ ಸಂಪೂರ್ಣ ಪ್ರಮಾಣವನ್ನು ದೊರಕಿಸಿಕೊಳ್ಳುವಂತೆಯೂ, ಈ ಮಧ್ಯೆ ನಮ್ಮ ಕಾರ್ಖಾನೆಯಿಂದ ಅಗತ್ಯವಾದಷ್ಟು ಕಾಗದವನ್ನು ಕೊಡುವಂತೆಯೂ ಮಾಡಬೇಕೆಂದು ನಾವು ಒತ್ತಾಯ ಪೂರ್ವಕವಾಗಿ ಕೋರುತ್ತೇವೆ.

ಸಾಧ್ವಿ

(ತಿಂಗಳಿಗೆ ೦-೧೦-೦ ಮಾತ್ರ)

ಕೂಡಲೇ ಚಂದಾದಾರರಾಗಿರಿ

OPERA TALKIES

From 4-2-47

The

SECRET CODE

(Full Serial)

Daily three Shows

'The Secret Code'

Edited, printed and published by A. S. Nagarajan at the Sadhvi Press D Subbiah Road, Mysore

ಇಂಗ್ಲಿಷ್ ಸರ್ಜ್ ಕೋಟಿಂಗ್

ಅನೇಕ ನಮೂನೆಗಳಲ್ಲಿ ಪುನಃ ಬಂದಿವೆ.

ಬಾಹುಸಾರ್ ಟ್ರೇಡಿಂಗ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡು, ಮೈಸೂರು

ಟೆಂಡರ್ ನೋಟೀಸು

ಮೈಸೂರು ಅರಮನೆಗೆ 1947—48ನೇ ಸಾಲಿಗೆ ಸಪ್ಲೈ ಆಗಬೇಕಾದ ದಿನಸಿ ವಸ್ತುಗಳ ಸಾಮಾನುಗಳಿಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳು ಈ ಕೆಳಗೆ ರುಜು ಮಾಡಿರುವವರಿಂದ 10-2-1947 ನೇ ಸೋಮವಾರ ಮಧ್ಯಾಹ್ನ ಮೂರು ಘಂಟೆ ವರೆಗೆ ತೆಗೆದುಕೊಳ್ಳಲ್ಪಡುತ್ತೆ.

ನೋಟೀಸಿನ ಮುನ್ನೀಟರಿಂದ ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಬಹುದು.

ಟಿ. ರಾಮಯ್ಯ,

31-1-47 ಹುಜೂರು ಸೆಕ್ರೆಟರಿ,

೧೧ ವರ್ಷಗಳು ಕೋಳಿ ಗೂಡಿನಲ್ಲಿ !

ಫ್ರಾನ್ಸಿನ ವಿಕ್ಟರ್ ಗ್ರಿವಿನ್ ಎಂ... ೧೧ ವರ್ಷಗಳು ೩ ಅಡಿ ಎತ್ತರ, ... ಉದ್ದ ಮತ್ತು ೬ ಅಡಿ ಅಗಲವಾದ... ಯ ಗೂಡಿನಲ್ಲಿ ಒಬ್ಬರ ಕಣ್ಣಿಗೂ... ದಂತೆ ಅಡಗಿದ್ದನು. ಇವನು ಕ... ಗಿದ್ದು ಬರಿಯ ಶಬ್ದ ಮಾಡುತ್ತಿದ್ದ... ಗ ಅವನು ೧೧ ವರ್ಷಗಳನಂತರ... ಬಂದಿದ್ದಾನೆಂದು ವರದಿಯಾಗಿದೆ.

ಎಲ್ಲಮಾಂಬಾ ಪ್ರತಿ...

ಮಂಡಿ ಮೊಹಲ್ಲಾ ಸುಸ... ಸ್ತೆಯಲ್ಲಿ ನೂತನವಾಗಿ ... ದೇವಾಲಯದಲ್ಲಿ ೩೦-೧-೪೭ ರಿಂದ ... ೪೭ ರ ವರೆಗೆ ಶ್ರೀ ಯಲ್ಲಮಾಂಬಾ ... ಶ್ರೀ ಚಂದ್ರಗುಪ್ತಾಂಬಾ ದೇವಿಯ... ವೈದಿಕಾಗಮರೀತ್ಯಾ ಪ್ರತಿಷ್ಠಾಪನಾ ... ತ್ಸವವನ್ನು ನಡೆಸಲಾಗುವುದು. ಜನರು ದಯಮಾಡಿಸಬೇಕಾಗಿ ಕೋ... ಗಿದೆ. ಭಕ್ತಮಂಡಲಿಯ ಪರವಾಗಿ

ಎಚ್. ಆರ್. ನಂಬು...

ಎಂ. ಗೋವಿಂದ್,

ಕಾರ್ಯದರ್ಶಿ

ಟಿ. ಸಿ. ನಟರಾ...

ಔ ಷ ಧಾ ಲ ಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ... ಷ್ಟ್ ಔಷಧಿಗಳೂ ಸದಾ ಕಾಲ... ದೊರೆಯುವುದಲ್ಲದೆ ಸಮಸ್ತ ವ್ಯಾಧಿ... ಚಿಕಿತ್ಸೆಯು ಬಹು ಸುಲಭ ... ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದ... ದ್ಯೌಷಧಗಳೆಲ್ಲವೂ ದೊರೆಯುತ್ತ...

ಆರ್. ಎಸ್. ಪಂಡಿತ...

ನಾಯಿಕೆಮ್ಮಿನ ಔಷ...

7–8 ದಿವಸಗಳಲ್ಲೇ ... ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-6-0

ಗೂರ್ಲು—ಉಬ್ಬಸ

(Asthma)

ಖಾತರಿಯಾದ ಔಷಧಿ ದೊ... ಅನೇಕ ದೊಡ್ಡ ಮನುಷ್ಯರು ... ಪಡೆದ ಮತ್ತು ಸರ್ಟಿಫಿಕೇಟ್‌ಗಳನ್ನು ... ದ್ದಾರೆ.

(Appendecitis) ಗ... ಮತ್ತು (Tonsils) ಗಳಾದ... ಗಳನ್ನು ಆಪರೇಷನ್ ಇಲ್ಲದೆ ಗುಣ... ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್. ಎಸ್. ... ದಿವಾನ್ಸ್‌ರೋಡ್, ಗೊಲ್ಲಗೇರಿ ...

ಹೊ ಸ ಜ ವ ಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!

ಬಿ. ಕೆಂಚಪ್ಪ ಸನ್ಸ್,

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

ರಾಜಕಮಲ್, ಮೈಸೂರು

೨೯-೧-೪೭ ರಿಂದ ಅಮೋಘ ಎರಡನೇ ವಾರ

ಬೇಬೀ ಮೀನಾ, ಮೋತೀಲಾಲ್, — ಪ್ರ ತಿ ಜ್ಞಾ (ಹಿಂದಿ) — ವೀಣಕುಮಾರಿ, ಸ್ವರ್ಣಲತಾ, ಸುನೇತ್ರ ಪಾತ್ರ.

4-2-47 ನೇ ಮಂಗಳವಾರ ಮಧ್ಯಾಹ್ನ 3-30 ಕ್ಕೆ ಸ್ಪೆಷಲ್ ಮ್ಯಾಟಿನಿ ಉಂಟು

ವ್ಯಾನ್‌ಗಾರ್ಡ್ ಫೈರ್ ಮತ್ತು ಜನರ...

ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್,

-:- ಹೆಡ್ ಆಫೀಸ್:- ಮದ್ರಾಸ್ -:-

ಇಂಡಿಯಾ ಮತ್ತು ಸಿಲೋನಿನಲ್ಲೆಲ್ಲಾ ಶಾಖೋಪಶಾಖೆಗಳಿವೆ.

ಬೆಂಕಿ ಅನಾಹುತಗಳಿಂದ ರಕ್ಷಿಸಿಕೊಳ್ಳಲು ನಮ್ಮಲ್ಲಿ ಈ ಕೂಡಲೇ ಪಾಲಿ... ಪಡೆಯಿರಿ. ಪ್ರೀಮಿಯಂ ಸುಲಭ.

-: ವಿವರಗಳಿಗೆ :-

ಎಂ. ಸಿ. ಸಂಪತ್ತಯ್ಯಂಗಾರ್, ಸ್ಪೆಷಲ್ ರೆಪ್ರೆಸೆಂಟೇ...

519/3 ಚಲುವಾಂಬಾ ಅಗ್ರಹಾರ, ಮೈ...

ಫೋ: ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೪—೨—೪೭ [ಸಂಚಿಕೆ ೧೫೧

ನರೇಂದ್ರ ಮಂಡಲದಲ್ಲಿ ಒಡಕು ಹುಟ್ಟಿದೆಯೇ ?

ಟ್ರೈಲ್ಸ್ ವರ್ಕ್ ಷಾಪಿನಲ್ಲಿ ಮುಷ್ಕರ

ಮೈಸೂರು ೪

ನಿನ್ನೆ ದಿನ ಟ್ರೈಲ್ಸ್ ವರ್ಕ್ ಷಾಪಿನ ಒಬ್ಬ ನೌಕರನನ್ನು ಕಳ್ಳತನದ ಅಪಾದನೆ ಮೇಲೆ ಕೆಲಸದಿಂದ ವಜಾ ಮಾಡಿದರೆಂದೂ, ಆ ನಿಜವಾಗಿಯೂ ತಪ್ಪಿತಸ್ಥನಲ್ಲವೆಂದು ನೌಕರರಿಗೆ ಮನವರಿಕೆಯಾಗಿ ಸುಮಾರು ೩೦೦ ಮಂದಿ ಕಾರ್ಮಿಕರು ಮಧ್ಯಾಹ್ನ ೧॥ ಯಿಂದ ೨ ಘಂಟೆ ವರೆವಿಗೆ ಕೆಲಸ ಮಾಡದೆ ಹೊರಗಡೆಯೇ ಇದ್ದು ಮುಷ್ಕರ ನಡೆಸಿದರೆಂದೂ ವರದಿ ಬಂದಿದೆ. ಸಂಬಂಧಪಟ್ಟ ಅಧಿಕಾರಿಗಳು ವಿಚಾರಣೆ ನಡೆಸಿ ಆತನನ್ನು ಕೆಲಸಕ್ಕೆ ವಾಪಸು ತೆಗೆದುಕೊಳ್ಳುವುದಾಗಿ ಭರವಸೆ ಇತ್ತನಂತರ ಮುಷ್ಕರ ಮುಕ್ತಾಯವಾಯಿತೆಂದು ಹೇಳಲಾಗಿದೆ

ಹಿಂದೀ ತರಗತಿಗಳು

ಆಗಸ್ಟ್ ತಿಂಗಳಲ್ಲಿ ನಡೆಯಲಿರುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗೆ ಕೂಡುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ನಾಳೆಯಿಂದ ಪ್ರತಿದಿನ ಸಾಯಂಕಾಲ ೫॥ ಗಂಟೆಗೆ ತರಗತಿಗಳು ಹಿಂದೀ ಪ್ರಚಾರ ಸಭಾ ಕಾರ್ಯಾಲಯದಲ್ಲಿ ನಡೆಸಲಾಗುವುದು. ಫೆಬ್ರವರಿ ೧೫, ೧೬ ನೇ ತಾರೀಖುಗಳಲ್ಲಿ ದ॥ ಭಾರತ ಹಿಂದೀ ಪ್ರಚಾರ ಸಭೆಯ ಪರೀಕ್ಷೆಗಳು ತಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆಯುತ್ತವೆ. ಈ ಪರೀಕ್ಷೆಗಳಿಗೆ ನಾಗರಿ ಲಿಪಿ ಜ್ಞಾನದ ಆವಶ್ಯಕತೆ ಇಲ್ಲ

ಕಾರ್ಮಿಕ ಸಂಘಗಳ ಸಭೆ

ನಗರದ ಎಲ್ಲಾ ಕಾರ್ಮಿಕ ಸಂಘಗಳ ಫೆಡರೇಷನ್ನನ್ನು ಸ್ಥಾಪಿಸುವ ಮತ್ತು ಕೆಲಸಗಾರರ ಕುಂದು ಕೊರತೆಗಳನ್ನು ಪರಿಶೀಲಿಸುವ ಸಲುವಾಗಿ ಇದೇ ೯ ನೇ ತಾ॥ ಭಾನುವಾರ ಸಂಜೆ ೬॥ ಗಂಟೆಗೆ ಮೈಸೂರು ನಗರ ಕಾಂಗ್ರೆಸ್ ಕಛೇರಿಯಲ್ಲಿ ನಗರದ ಎಲ್ಲಾ ಕಾರ್ಮಿಕ ಸಂಘಗಳ ಅಧಿಕಾರಿ ವರ್ಗದವರ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳ ಸಭೆಯೊಂದನ್ನು ಕರೆಯಲಾಗಿದೆ ಶ್ರೀ ಟಿ. ಮರಿಯಪ್ಪನವರು ಅಧ್ಯಕ್ಷತೆಯನ್ನು ವಹಿಸುವರು.

ಮದರಾಸಿನವರೆಗೆ ಗಂಗಾ ನದಿ

ಆಸ್ಸಾಂ-ಮದ್ರಾಸ್ ಕಾಲುವೆ ಮಾರ್ಗದ ಒಂದು ಯೋಜನೆಯೊಂದನ್ನು ಕೇಂದ್ರ ಸರ್ಕಾರವು ಪರಿಶೀಲಿಸುತ್ತಿದೆ. ಇದಕ್ಕಾಗಿ ನೇಮಕವಾಗಿದ್ದ ಒಂದು ಸಮಿತಿಯು ತನ್ನ ವರದಿಯಲ್ಲಿ ಗಂಗಾನದಿಯು ಸಂಬಂಧ ಪಡೆದಿರುವ ಮಹಾನದಿಯು ಕಾಲುವೆ ಸಂಚಾರ ವ್ಯವಸ್ಥೆಯನ್ನು ಹೂಗ್ಲಿ ಮತ್ತು ಧರ್ಮನದಿಗಳೊಡನೆ ಸೇರಿಸಿ ಸಮುದ್ರ ತೀರದಲ್ಲೇ ಒಂದು ಭಾರಿ ಕಾಲುವೆಯನ್ನು ಮದ್ರಾಸಿನವರೆಗೂ ತೆರೆಯಲು ಸಲಹೆ ಕೊಟ್ಟಿದೆ

ಹೇಡಿತನಕ್ಕಿಂತಲೂ ಹಿಂಸೆಯೇ ಮೇಲು

ನವಗ್ರಾಮಕ್ಕೆ ಮಹಾತ್ಮ ಗಾಂಧಿಯವರು ಮೊನ್ನೆ ದಿನ ಭೇಟಿ ಇತ್ತಿದ್ದಾಗ ಒಬ್ಬ ಮಹಿಳೆಯು ಅವರನ್ನು ಕಂಡು "ಪುಂಡರು ನಮ್ಮ ಮೇಲೆ ಧಾಳಿ ಮಾಡಿದಾಗ ನಾವು ಅವರನ್ನು ಎದುರಿಸಬೇಕೋ ಅಥವಾ ಓಡಿ ಹೋಗಬೇಕೋ" ಎಂಬುದಾಗಿ ಕೇಳಲು 'ಹೇಡಿತನಕ್ಕಿಂತಲೂ ಹಿಂಸೆಯನ್ನು ಕೈಗೊಳ್ಳುವುದೇ ಉತ್ತಮವಾದುದೆಂದು' ಮಹಾತ್ಮರು ಉತ್ತರವಿತ್ತರು.

ಬ್ರಿಟಿಷ್ ಧ್ವಜಕ್ಕೆ ಒರಿಸ್ಸಾ ಸರ್ಕಾರದ ಪ್ರತಿಬಂಧಕ

ಒರಿಸ್ಸಾ ಪ್ರಾಂತ್ಯದಲ್ಲಿ ಯಾವ ಶಿಕ್ಷಣ ಸಂಸ್ಥೆಗಳ ಮೇಲೆಯೂ ಇನ್ನು ಮುಂದೆ ಇಂಗ್ಲೆಂಡಿನ ಯೂನಿಯನ್ ಜಾಕ್ ಬಾವುಟವನ್ನು ಹಾರಿಸಲಾಗದೆಂದು ಅಲ್ಲಿನ ಸರ್ಕಾರವು ಆಜ್ಞೆಯಿತ್ತಿದೆ. ಅಲ್ಲಿನ ಒಂದು ಕಾಲೇಜಿನ ಮೇಲೆ ಹಾರಿಸಿದ್ದ ಯೂನಿಯನ್ ಜಾಕ್ ಬಾವುಟವನ್ನು ವಿದ್ಯಾರ್ಥಿಗಳು ಸ್ವಾತಂತ್ರ್ಯ ಕೂಟದ ದಿನ ಕಿತ್ತೊಗೆದರೆಂದು ಕಾಲೇಜಿನ ಅಧಿಕಾರಿಗಳು ಅವರ ಮೇಲೆ ಕ್ರಮ ಜರುಗಿಸಿದ್ದರು. ಇದನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರು. ಈ ಸಂಬಂಧದಲ್ಲಿ ೩೨ ವಿದ್ಯಾರ್ಥಿಗಳನ್ನು ಬಂಧಿಸಲಾಗಿದ್ದಿತು. ಈಗ ಕಾಂಗ್ರೆಸ್ ನಾಯಕರ ಮಧ್ಯಸ್ಥಿಕೆಯಿಂದ ಮುಷ್ಕರವು ಮುಕ್ತಾಯವಾಗಿದೆ. ವಿದ್ಯಾರ್ಥಿಗಳ ಮೇಲೆ ವಿಧಿಸಿದ್ದ ದಂಡವನ್ನೂ ವಜಾ ಮಾಡಲಾಗಿದೆ. ಬಂಧಿತರನ್ನೆಲ್ಲಾ ಬಿಡುಗಡೆ ಮಾಡಲಾಗಿದೆ.

ಮತ್ತೊಂದು ಯುದ್ಧಕ್ಕೆ ಪ್ರಜೆಗಳು ಒಪ್ಪುವುದಿಲ್ಲ

ಅಮೇರಿಕಕ್ಕೂ ರಷ್ಯಕ್ಕೂ ಮನಸ್ತಾಪವಿರುವುದಾಗಿ ಹೇಳುತ್ತಿರುವುದು ಸರಿಯಲ್ಲ ವಿಶ್ವದ ಯಾವ ಪ್ರಬಲ ರಾಷ್ಟ್ರವೂ ಇಂದು ಯುದ್ಧ ಹೂಡಲು ತಯಾರಾಗಿಲ್ಲ, ಏಕೆಂದರೆ ಆ ಸರ್ಕಾರಗಳು ಎಷ್ಟೇ ಸಿದ್ಧತೆಗಳನ್ನು ಮಾಡಿಕೊಂಡಿದ್ದರೂ ಜನರು ಮಾತ್ರ ಮತ್ತೊಂದು ಯುದ್ಧಕ್ಕೆ ಬೆಂಬಲ ಕೊಡಲಾರರು. ಜನಬೆಂಬಲವಿಲ್ಲದ ಯುದ್ಧಪ್ರಯತ್ನಕ್ಕೆ ಬೆಲೆ ಇಲ್ಲದ್ದಾಗುವುದು—ಎಂಬುದಾಗಿ ರಷ್ಯದ ಮಾ॥ ಸ್ಟಾಲಿನ್‌ರವರು ತಿಳಿಸಿದ್ದಾರೆ

ಲೀಗೇತರ ಮುಸ್ಲಿಮರ ಸಂಘಟನೆ

ಮೋಮಿನ್, ಮಜ್ಲೀಸ್, ಅಹ್ರಾರ್, ಶಿಯಾ, ಜಮಾಯಿತ್ ಮುಂತಾದ ಲೀಗೇತರ ಮುಸ್ಲಿಂ ಸಂಸ್ಥೆಗಳು ಒಗ್ಗಟ್ಟಾಗಿ ಕಾರ್ಯಕ್ರಮವನ್ನು ಹಾಕಿಕೊಂಡು ಒಂದು ಸಂಘಟಿತ ಪಕ್ಷವನ್ನು ಸ್ಥಾಪಿಸಿಕೊಳ್ಳುವ ಬಗ್ಗೆ ಸದರಿ ಸಂಸ್ಥೆಗಳ ಪ್ರತಿನಿಧಿಗಳು ಮೌಲಾನಾ ಆಜಾದರ ಕೂಡ ಮೊನ್ನೆ ದೆಹಲಿಯಲ್ಲಿ ಸಮಾಲೋಚನೆ ನಡೆಸಿದರು. ಮುಂದಿನ ತಿಂಗಳಲ್ಲಿ ಈ ಬಗ್ಗೆ ಅವರು ಒಂದು ಸಮ್ಮೇಳನವನ್ನು ಸೇರಿಸಬೇಕೆಂದು ತೀರ್ಮಾನಕ್ಕೆ ಬಂದಿದ್ದಾರೆ.

ಗೋಪಾಲರಾಯರ ಪತ್ನಿಯವರ ಸಾಕ್ಷ್ಯ

ಸ್ವಂ. ಸು ಪ್ರ(ಗ] ಬೆಂಗಳೂರು ೪

ಧನ್ವಂತ್ರಿ ರಸ್ತೆ ಕೇಸ ಬಿ. ಎಸ್. ಗೋಪಾಲ ರಾಯರ ಸಾಕ್ಷ್ಯವು ನಿನ್ನೆ ಮುಕ್ತಾಯಗೊಂಡಿತು. ಕೊನೆಯಲ್ಲಿ ಸ॥ ಪ್ರಾಸಿಕ್ಯೂಟರವರು ಪಾಟೀ ಸವಾಲು ನಡೆಸಿದಾಗ ಅವರು ಈ ರೀತಿ ಹೇಳಿದರು:—

ನಾನು ದರೋಡೆ ಬಗ್ಗೆ ಪೋಲೀಸರಲ್ಲಿ ದೂರು ಕೊಟ್ಟ ನಂತರವೇ ನನ್ನನ್ನು ದಿವಾಳಿಯೆಂದು ಘೋಷಿಸಬೇಕೆಂದ ಕೆಲವರು ನನ್ನ ಮೇಲೆ ನ್ಯಾಯಾಸ್ಥಾನದಲ್ಲಿ ಅರ್ಜಿ ಹಾಕಿದ ವಿಚಾರ ನನಗೆ ಗೊತ್ತು. ನನ್ನ ತಮ್ಮ ಶ್ರೀ ಗೋವಿಂದರಾವ್ ಮತ್ತು ಇತರ ಬಂಧುಗಳಿಗೂ ನಾನು ಸಾಲ ಕೊಡಬೇಕು. ದರೋಡೆ ವಿಚಾರ ನಾನು ಯಾರಿಗೂ ತಿಳಿಸಲಿಲ್ಲ. ಪೋಲೀಸ್ ಸಹಾಯ ಕೇಳಿ ಬರೆದಿದ್ದ ಅರ್ಜಿಯಲ್ಲೂ ನಮೂದಿಸಲಿಲ್ಲ. ಕಾರಣ ಅವರು ಸಹಾಯ ಮಾಡುವರೋ ಇಲ್ಲವೋ ಎಂಬ ಭೀತಿಯೇ. ಸರ್. ಟಿ ತಂಬೂಚೆಟ್ಟಿಯೊಡನೆ ನಾನು ಪ್ರತ್ಯಕ್ಷವಾಗಿಯಾಗಲೀ ಪರೋಕ್ಷವಾಗಿಯಾಗಲೀ ವ್ಯವಹಾರವನ್ನಿಟ್ಟುಕೊಂಡಿರಲಿಲ್ಲ. ಅಸಲು ಬಡ್ಡಿ ಸೇರಿ ನಾನು ಸಾಹುಕಾರ್ ನರಸಮ್ಮನವರಿಗೆ ೩೦ ಲಕ್ಷ ರೂ ಕೊಡಬೇಕು. ಅವರಿಗೆ ಪ್ರತಿ ತಿಂಗಳೂ ೨ ಲಕ್ಷ ರೂ ಬಡ್ಡಿ ಕೊಡುತ್ತಿದ್ದೆ

ಲಕ್ಷ್ಮೀಬಾಯಿಯವರ ಸಾಕ್ಷ್ಯ

ಶ್ರೀ॥ ಗೋಪಾಲ ರಾಯರ ಪತ್ನಿ ಶ್ರೀಮತಿ ಲಕ್ಷ್ಮೀಬಾಯಿಯವರ ತಮ್ಮ ಸಾಕ್ಷ್ಯದಲ್ಲಿ ಈ ರೀತಿ ಹೇಳಿದರು:-

"ನಾನು ಗೋಪಾಲರಾಯರ ಎರಡನೇ ಹೆಂಡತಿ, ನನ್ನ ಮದುವೆ ಆಗಿ ೧೭ ವರ್ಷವಾಯಿತು. ಡಿಸೆಂಬರ್ ೭ ನೇ ತಾ॥ ರಾತ್ರಿ ೧೧ ಘಂಟೆ ಸಮಯದಲ್ಲಿ ನನ್ನ ಯಜಮಾನರೂ, ಈ ಮೂವರು ಆಪಾದಿತರೂ ಮನೆಗೆ ಬಂದರು. ನಾನೇ ಬಾಗಿಲು ತೆಗೆದೆ. ನಾಲ್ವರೂ ಮೇಲೆ ಹೋದರು. ೨ ನಿಮಿಷಗಳಾದ ಮೇಲೆ ನನ್ನ ಯಜಮಾನರು ಕೆಳಗಿಳಿದುಬಂದು ಬೀಗದ ಕೈ ಗೊಂಚಲು ಕೇಳಿದರು, ಕೊಟ್ಟೆ. ೫೦ ನಿಮಿಷಗಳನಂತರ ಮೂವರು ಆಪಾದಿತರೂ ಕೆಳಗಿಳಿದುಬಂದರು. ೨ ಮತ್ತು ೩ನೇ ಆಪಾದಿತರು ಮುಂದುಗಡೆ ಬಂದರು. ಒಬ್ಬರ ಕೈಯಲ್ಲಿ ಬೆಳ್ಳಿ ತಟ್ಟೆಯೊಂದೂ, ಮತ್ತೊಬ್ಬರ ಕೈಯಲ್ಲಿ ಒಂದು ಗಂಟೂ ಇದ್ದುವು. ಸರ್ವೋತ್ತಮ ರಾಯರ ಕೈಯಲ್ಲಿ ಒಂದು ಚಿತ್ರ ಇತ್ತು. ಅವರೆಲ್ಲಾ ಹೊರಟುಹೋದರು.

ಯಜಮಾನರು ಕೆಳಕ್ಕೆ ಬರಲಿಲ್ಲ. ನಾನೇ ಮೇಲೆ ಹೋಗಿ ನೋಡಿದೆ. ತಲೆ ಮೇಲೆ ಕೈಯಿಟ್ಟುಕೊಂಡ ಯೋಚನೆ ಮಾಡುತ್ತ ಕುಳಿತಿದ್ದರು. ಬೀರು, ಡ್ರಾಗಳೆಲ್ಲಾ ಖಾಲಿಯಾಗಿದ್ದವು. ಗಾಬರಿಯಾಗಿ ಕೇಳಿದೆ. ಎಲ್ಲವನ್ನೂ ಬಂದವರು ದೋಚಿಕೊಂಡುಹೋದರೆಂದು ಹೇಳಿದರು. ಸುಂದರರಾಯರು ತಮ್ಮ ಬಂಧುಗಳೆಂದೂ, ಈ ವಿಚಾರ ಬಾಯಿ ಬಿಟ್ಟರೆ ಪ್ರಾಣ ತೆಗೆಯುವುದಾಗಿ ಆಪಾದಿತರು ಹೆದರಿಸಿದರೆಂದೂ ನನ್ನ ಯಜಮಾನರು ಹೇಳಿದರು. ಯಾರಿಗೂ ಹೇಳದಂತೆ ನನಗೂ ತಿಳಿಸಿದರು. ನಂತರ ಊಟದ ಶಾಸ್ತ್ರ ಮಾಡಿ ಮಲಗಿದರು. ಹೊರಗೆ ಹೋದವರು ಭಾನುವಾರ ಬರಲಿಲ್ಲ. ಸಾಹುಕಾರರ ಮನೆಯಲ್ಲಿರುವರೆಂದು ತಿಳಿದು ರಾತ್ರಿ ನಾನೇ ಅಲ್ಲಿಗೆ ಹೋದೆ. ಬಹಳ ಹೊತ್ತಾಗಿದೆಯೆಂದು ಹೇಳಿ ನನ್ನನ್ನು ಅಲ್ಲಿಯೇ ಮಲಗಿಕೊಳ್ಳುವಂತೆ ಸಾಹುಕಾರರು ಹೇಳಿದರು. ನಾವಿಬ್ಬರೂ ಅಲ್ಲೇ ಮಲಗಿದ್ದೆವು, ಮಾರನೇ ದಿನ ನನ್ನ ಯಜಮಾನರು ಸಾಹುಕಾರರ ಜತೆಯಲ್ಲಿ ಬಂದರು. ಎರಡನೇ ಮಂಗಳವಾರ ರಾತ್ರಿ ೧೦॥ ಯಲ್ಲಿ ಸಾಹುಕಾರರು ಹೊರಟುಹೋದರು

ಸೋಮವಾರ ಈ ಒಡವೆಗಳಲ್ಲಿ ಕೆಲವು ನನ್ನ ಮದುವೆಯಲ್ಲಿ ಬಂದುವು. ಕೆಲವನ್ನು ಡಾ॥ ಡಾಮಿನಿಕ್, ಡಾ॥ ಡಿಸೋಜಾ, ಎಸ್. ತಂಬೂಚೆಟ್ಟಿ, ಡಾ॥ ಎಸ್. ನಾರಾಯಣರಾವ್, ಸುಂದರ ವೆಲ್ ಮುಂತಾದವರು ಬಹುಮಾನವಾಗಿ ಕೊಟ್ಟಿದ್ದಾರೆ.

ನಮ್ಮ ಯಜಮಾನರು ಮೊದಲನೇ ಹೆಂಡತಿಗೆ ಒಬ್ಬ ಮಗ ಇದ್ದಾರೆ. ಅವರು ಅವರ ಅಜ್ಜಿ ಮನೆಯಲ್ಲಿದ್ದಾರೆ. ೧೫ ದಿವಸಗಳಿಗೊಮ್ಮೆ ಬಂದು ಹೋಗುತ್ತಿದ್ದರು. ನಮ್ಮ ಮನೆಯಲ್ಲಿ ಆದ ದರೋಡೆ ವಿಚಾರವನ್ನು ನಾನು ಮೊದಲು ನನ್ನ ತಾಯಿಗೂ ನಂತರ ತಂದೆಗೂ ತಿಳಿಸಿದ್ದೆ. ಅವರ ಮನೆ ಮಲ್ಲೇಶ್ವರದಲ್ಲೇ ಇದೆ. ಇದನ್ನು ಮತ್ಯಾರಿಗೂ ಹೇಳಲಿಲ್ಲ.

ನರೇಂದ್ರ ಮಂಡಲದಲ್ಲಿ ಒಡಕು

ರಾಜ್ಯಾಂಗ ರಚನಾ ಸಭೆಗೆ ರಾಜರುಗಳು ಪ್ರವೇಶಿಸುವ ಬಗ್ಗೆ ಭೂಪಾಲ್ ನವಾಬರು ನರೇಂದ್ರಮಂಡಲದ ಸಭೆಯಲ್ಲಿ ಮಂಡಿಸಿದ ನಿರ್ಣಯದ ಪರಿಣಾಮವಾಗಿ ಕೆಲವು ರಾಜರುಗಳಿಗೂ ಭೂಪಾಲದ ನವಾಬರಿಗೂ ಭಿನ್ನಾಭಿಪ್ರಾಯ ಉಂಟಾಗಿದೆಯೆಂದು ಗೊತ್ತಾಗಿದೆ. ಕೆಲವು ರಾಜರುಗಳು ಪಂಡಿತ ನೆಹರೂ, ಸರ್ದಾರ್ ಪಟೇಲ್ ಮುಂತಾದ ಕಾಂಗ್ರೆಸ್ ನಾಯಕರೊಡನೆ ವ್ಯಾಪಕವಾಗಿ ನಡೆಸಿ ರಾಜ್ಯಾಂಗ ರಚನಾ ಸಭೆಯ ಬಗ್ಗೆ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿ ತಾವುಗಳೂ ಸಹ ಭಾರತದ ರಾಜಕೀಯ ಪ್ರಗತಿಗೆ ಬೆಂಬಲ ನೀಡುವುದಾಗಿ ತಿಳಿಸಿರುವರು. ಭೂಪಾಲ್ ನವಾಬರು ತಾವು ನರೇಂದ್ರಮಂಡಲದ ಅಧ್ಯಕ್ಷತೆಗೆ ರಾಜೀನಾಮೆಯನ್ನು ಸಲ್ಲಿಸುವುದಾಗಿ ಬೆದರಿಸುತ್ತಿರುವರೆಂದೂ ಸಹ ಹೇಳಲಾಗಿದೆ. ಬರೋಡದ ದಿವಾನರಾದ ಶ್ರೀ ಬಿ ಎಲ್ ಮಿತ್ತರ್‌ರವರು ಪ್ರತ್ಯೇಕವಾಗಿ ವೈಸರಾಯ್ ಮತ್ತು ಸಂಧಾನ ಸಮಿತಿಯವರೊಡನೆ ಮಾತುಕಥೆ ನಡೆಸುವರೆಂದೂ ಸಹ ನಂಬಲಾಗಿದೆ. ಪ್ರಮುಖ ದಿವಾನರುಗಳಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ಮತ್ತು ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರುಗಳೂ ಸಹ ಭೂಪಾಲ್ ನವಾಬರೊಡನೆ ಭಿನ್ನಾಭಿಪ್ರಾಯ ಹೊಂದಿರುವರೆಂದೂ ವರದಿಯಾಗಿದೆ.

ಸಾಧ್ವಿ

ತಾ|| ೪-೨-೪೭ ಮಂಗಳವಾರ

ತೊಗರಿ ಬೇಳೆ ಬೆಲೆ

ಆಹಾರ ಸಾಮಗ್ರಿಗಳ ಬೆಲೆಯು ವಿಪರೀತವಾಗಿ ಏರಿ ಬಡ ಜನರು ಬದುಕುವುದೇ ಕಷ್ಟವಾಗುತ್ತಿದೆ. ಅಕ್ಕಿ, ರಾಗಿ ಮುಂತಾದುವುಗಳನ್ನೇನೋ ಪಡಿತರದ ಪಟ್ಟಿಗೆ ಸೇರಿಸಿ ಸರ್ಕಾರದವರು ಒಂದು ಗೊತ್ತಾದ ಬೆಲೆಗೆ ಮಾರಲು ಏರ್ಪಾಡು ಮಾಡಿರುತ್ತಾರೆ. ಆದರೆ ತೊಗರಿಬೇಳೆಯ ಮೇಲೆ ಪ್ರಕೃತದಲ್ಲಿ ಯಾವ ಹತೋಟಿಯೂ ಇಲ್ಲದೆ ಅದು ವಿಪರೀತ ಏರುತ್ತಿದೆ.

ಹಲ್ಲು ಒಂದಕ್ಕೆ ನೂರು ರೂ. ನಂತೆ ಈಗ ಬೇಳೆಯು ಮಾರಾಟವಾಗುತ್ತಿದೆ. ಇಷ್ಟು ದುಬಾರಿ ಬೆಲೆಯನ್ನು ಯಾವಾಗಲೂ ಯಾರೂ ಕಂಡು ಕೇಳರಲಿಲ್ಲ. ಕಳೆದ ಘೋರ ಯುದ್ಧದ ಸಮಯದಲ್ಲಿಯೂ ಆಹಾರ ಪದಾರ್ಥಗಳಿಗೆ ಇಂತಹ ದುಃಸ್ಥಿತಿಯು ಬಂದಿರಲಿಲ್ಲ. ಯುದ್ಧವು ಮುಗಿದು ಎಷ್ಟೋ ದಿನಗಳಾಗಿ ಶಾಂತಿಯು ನೆಲೆಸಿರುವದೆಂದು ಹೇಳುತ್ತಿರುವಾಗಲೂ ಯುದ್ಧ ಕಾಲಕ್ಕಿಂತ ಹೆಚ್ಚಿನ ಬೆಲೆಯು ಇರುವುದು ಬಡ ಪ್ರಜೆಗಳ ದುರ್ದೈವವೆಂದೇ ಹೇಳಬೇಕು. ಯುದ್ಧ ಕಾಲದ ಕ್ಷಾಮಕ್ಕಿಂತಲೂ ಶಾಂತಿ ಕಾಲದ ದುರ್ಭಿಕ್ಷವೇ ಹೆಚ್ಚು ಘೋರವಾಗಿರುವುದು.

ಆಹಾರ ಧಾನ್ಯವನ್ನು ಹೆಚ್ಚಾಗಿ ಬೆಳೆಸಲು ಎಲ್ಲ ಸರ್ಕಾರಗಳೂ ವಿಶೇಷ ಯೋಜನೆಗಳನ್ನು ಕೈಗೊಂಡಿರುವುವಾದರೂ, ಬಡ ಜನರಿಗೆ ಸೂಕ್ತವಾದ ಪರಿಹಾರ ಮಾತ್ರ ದೊರೆಯುತ್ತಿಲ್ಲ. ಯಾವ ಪದಾರ್ಥವನ್ನು ನೋಡಿದರೂ ಒಂದಕ್ಕೆ ನಾಲ್ಕರಷ್ಟು ಬೆಲೆಯಾಗಿರುತ್ತದೆ. ಹೆಚ್ಚು ಹಣವನ್ನು ಕೊಟ್ಟರೂ ಹಲವು ಸಾಮಾನುಗಳು ದೊರೆಯುತ್ತಿಲ್ಲ. ಹೀಗೆ ಸರ್ವ ವಿಧದಿಂದಲೂ ಪ್ರಜೆಗಳು ಪರಿತಪಿಸುತ್ತಿರುವರು.

ಒಂದು ರೂ ಗೆ ಒಂದು ಸೇರು ಬೇಳೆಯೂ ದೊರೆಯುವುದು ದುರ್ಲಭವಾಗುತ್ತಿದೆ. ಇದು ಇನ್ನೂ ಎಷ್ಟರ ಮಟ್ಟಿಗೆ ಏರುವುದೋ ತಿಳಿಯದು. ಹಿಂದೆ ಹೈದರಾಬಾದ್ ಮುಂತಾದ ಕಡೆಗಳಿಂದ ಬೇಳೆಯನ್ನು ತರಿಸಿ ಬೆಲೆಯನ್ನು ಹತೋಟಿಯಲ್ಲಿಡಲಾಗಿತ್ತು. ಆದರೆ ಆ ಬೇಳೆಯು ಸ್ವಲ್ಪ ದಿನಗಳಲ್ಲಿಯೇ ಕೆಟ್ಟುಹೋದುದರಿಂದ ಅದನ್ನೆಲ್ಲಾ ಹರಾಜು ಮೂಲಕ ವಿಲೇ ಮಾಡಲಾಯಿತು. ಈಗ ಅದರ ಮೇಲೆ ಬೆಲೆ ಹತೋಟಿ ಇರುವುದಿಲ್ಲ. ವರ್ತಕರು ಹೇಳಿದ್ದೇ ಬೆಲೆಯಾಗಿದೆ. ಇದರಿಂದ ಬಡ ಜನರ ಕಷ್ಟ ಹೇಳತೀರದು. ಅಧಿಕಾರಿ ವರ್ಗದವರು ಕೂಡಲೇ ಇದಕ್ಕೆ ಗಮನ ಕೊಟ್ಟು, ವರ್ತಕರಲ್ಲಿರುವ ಬೇಳೆಯ ದಾಸ್ತಾನಿನ ಲೆಖ್ಖವನ್ನು ಸಂಗ್ರಹಿಸಿ ನಿಗದಿಯಾದ ಬೆಲೆಗೆ ಅದು ಮಾರಾಟವಾಗುವಂತೆ ಮಾಡುವುದು ಅಗತ್ಯವಾಗಿದೆ.

ಅಂದವಾದ ಬಣ್ಣಗಳಲ್ಲಿ
ವಂಗ ದೇಶದ ರೇಷ್ಮೆ ಸೀರೆಗಳು (Bengal Silk Saries) ಹೇರಳವಾಗಿ ಬಂದಿವೆ. ಬೇಕಾದ್ದನ್ನು ಆರಿಸಿ
ಬಾಹುಸಾರ್ ಟ್ರೇಡಿಂಗ್ ಕಂಪೆನಿ,
ಓಲ್ಡ್ ಮೈಸೂರು ಬ್ಯಾಂಕ್ ರೋಡು,
ಮೈಸೂರು

ಹೆಚ್ಚು ಹಾಲು ಪಡೆಯಲು ಉಪಾಯ

ಬಿಸಿಲು ಕಾಲದಲ್ಲಿ ಹಸುಗಳ ಮೈಮೇಲೆ ನೀರಿನಲ್ಲಿ ನೆನೆಯಿಸಿದ ರಬ್ಬರ್ ಸ್ಪಂಜಿನ ವಸ್ತ್ರವನ್ನು ಹಾಕುವುದರಿಂದ ಅವುಗಳು ತಮ್ಮ ದೇಹದಲ್ಲಿರುವ ಶಾಖವನ್ನು ಹೊರ ಹಾಕಿ ಹೆಚ್ಚು ಹಾಲು ಕೊಡುವುವೆಂಬುದಾಗಿ ಗೋವಿನ ಪಶು ಸಂರಕ್ಷಣಾ ಶಾಖೆಯ ಸ್ಯಾಮ್ಯುಯಲ್ ಬ್ರಾಡಲ್ ಎಂಬುವರು ತಿಳಿಸಿರುವನು.

ಕನ್ನಡಕ ಧರಿಸುವವರ ಸಂಖ್ಯೆ

ಕಳೆದ ಯುದ್ಧಕ್ಕಿಂತ ಮುಂಚೆ ೧ ಕೋಟಿ ೭೦ ಲಕ್ಷ ಬ್ರಿಟಿಷರೂ, ೪|| ಕೋಟಿ ಅಮೆರಿಕನ್ನರೂ, ೨|| ಕೋಟಿ ಜಪಾನಿಗಳೂ ಮತ್ತು ೧ ಕೋಟಿ ೮೦ ಲಕ್ಷ ಜರ್ಮನರೂ ಕನ್ನಡಕಗಳನ್ನು ಹಾಕಿಕೊಳ್ಳುತ್ತಿದ್ದರೆಂದು ಗೊತ್ತಾಗಿದೆ.

ಉಪನ್ಯಾಸ

ಗುಂಜನಗೂಡು ೨

ಇದೇ ೫ ನೇ ತಾ|| ಬುಧವಾರ ಸಾಯಂಕಾಲ ೫|| ಗಂಟೆಗೆ ಶ್ರೀ ಶಂಕರ ಮಠದಲ್ಲಿ ಆಸ್ಥಾನ ಮಹಾವಿದ್ವಾನ್ ವೇ|| ಕನ್ನಂಬಾಡಿ ಗೋಪಾಲಕೃಷ್ಣಶಾಸ್ತ್ರಿಗಳು "ಜೀವೇಶ್ವರ ವಿಭಾಗ" ಎಂಬ ವಿಷಯವಾಗಿ ಉಪನ್ಯಾಸ ಮಾಡುತ್ತಾರೆ. ಸರ್ವರಿಗೂ ಆಹ್ವಾನವಿರುವುದಾಗಿ ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ವಿದ್ಯುಚ್ಛಕ್ತಿ ಹುಡುಗಿ

ಇಟಲಿಯಲ್ಲಿ "ವಿದ್ಯುಚ್ಛಕ್ತಿ ಹುಡುಗಿ" ಎಂದು ಪ್ರಸಿದ್ಧಿ ಪಡೆದಿರುವ ಅಗಸ್ಟ ಬಸ್ಸಿ ಎಂಬ ೧೫ ವರ್ಷದ ಹುಡುಗಿಯು ವೈಜ್ಞಾನಿಕರಿಂದ ಪರೀಕ್ಷಿಸಲ್ಪಡಲು ಸದ್ಯದಲ್ಲೇ ಸ್ವಿಡ್ಜರ್ಲೆಂಡಿಗೆ ತೆರಳಲಿದ್ದಾಳೆ. ಈಕೆ ತನ್ನ ಮೈಗೆ ಬಟ್ಟೆಯನ್ನು ಸಂಪರ್ಕಗೊಳಿಸುವುದರಿಂದ ಹೆಚ್ಚು ಪ್ರಭೆಯುಳ್ಳ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವಳೆಂದು ಹೇಳಲಾಗಿದೆ. ಕೆಲವು ದಿನಗಳ ಹಿಂದೆ ಇಟಲಿಯಲ್ಲಿ ಕಲ್ಲಿದ್ದಲಿನ ಅಭಾವ ಬಂದಿದ್ದಾಗ ತಾನು ಉತ್ಪತ್ತಿಮಾಡುವ ವಿದ್ಯುಚ್ಛಕ್ತಿಯಿಂದ ಕಾಫಿ ಮತ್ತು ಟೀ ಯನ್ನೂ ತಯಾರಿಸಿಕೊಳ್ಳುತ್ತಿದ್ದಳೆಂದು ತಿಳಿಸಲಾಗಿದೆ. ಈ ವೈಲಕ್ಷಣ್ಯದ ಪರೀಕ್ಷೆಗಾಗಿಯೇ ಇವಳು ಈಗ ಸ್ವಿಡ್ಜರ್ಲೆಂಡಿನ ವೈಜ್ಞಾನಿಕ ಸಂಘದ ಆಹ್ವಾನದಂತೆ ಅಲ್ಲಿಗೆ ತೆರಳಲಿರುವಳು.

ಸೇನಾಪತಿಗಳು ರಾಜೀನಾಮೆ ಕೊಡುವರೇ?

ಸೆರೆಮನೆಯಲ್ಲಿರುವ ಆಜಾದ್ ಹಿಂದ್ ದಳದವರನ್ನು ಕೂಡಲೇ ಖುಲಾಸೆ ಮಾಡಬೇಕೆಂದು ಕೇಂದ್ರ ಶಾಸನ ಸಭೆಯಲ್ಲಿ ನಿರ್ಣಯವೊಂದನ್ನು ಮಂಡಿಸಲಾಗಿದೆ. ಈ ನಿರ್ಣಯವು ಅಂಗೀಕಾರವಾಗಿ ಕೇಂದ್ರ ಸರ್ಕಾರವು ಅವರನ್ನು ಖುಲಾಸೆ ಮಾಡುವುದೇ ಆದರೆ ತಾವು ರಾಜೀನಾಮೆ ಸಲ್ಲಿಸುವುದಾಗಿ ಭಾರತದ ಸೇನಾಪತಿಗಳಾದ ಸರ್ ಕ್ಲಾಡ್ ಆಚಿನ್‌ಲೆಕ್‌ರವರು ಬೆದರಿಸಿದ್ದಾರೆಂದು ಗೊತ್ತಾಗಿದೆ.

ರೈಲ್ವೆ ಕೆಲಸಗಾರರಿಗೆ ಪರಿಹಾರ ಅಗತ್ಯ

ನೌಕರರ ಸಂಬಳವನ್ನು ಪರಿಶೀಲಿ... ರದಿ ಮಾಡಲು ಒಂದು ಸಮಿತಿಯನ್ನು ... ರ್ಕಾರದವರು ನೇಮಕ ಮಾಡಿದ್ದಾರೆ... ಅದರ ವರದಿ ಹೊರ ಬೀಳುವ ಮುನ್ನ... ನೇಕ ಇಲಾಖೆಗಳಲ್ಲಿರುವವರ ಸಂಬಳವ... ಹೆಚ್ಚಿಸಲಾಗಿದೆ. ರೈಲ್ವೆ ಕೆಲಸಗಾರರ ... ಬಳ ಸಾರಿಗೆ ಬಗ್ಗೆಯೂ ಈ ಸಮಿತಿಯ... ರು ಪೂರ್ಣ ಗಮನ ಕೊಡಬೇಕು ... ಕ್ಕೆ ರೈಲ್ವೆ ಕೆಲಸಗಾರರಿಗೆ ತಲಾ ೧೦೦ ... ಪಾಯಿಗಳ ಪರಿಹಾರವನ್ನು ಒದಗಿ... ಟ್ಟು ಅವರಿಗೆ ಒದಗಿರುವ ಕಷ್ಟವನ್ನು ... ರ್ಕಾರದವರು ನೀಗಿಸಬೇಕು ಎಂಬು... ವರ್ಕ್‌ಷಾಪ್ ಕೆಲಸಗಾರರ ಸಂಘದ ... ಉಪಾಧ್ಯಕ್ಷರಾದ ಶ್ರೀ ಭೈರೋಜ... ರು ಬರೆಯುತ್ತಾರೆ.

ರಾಜ್ಯಾಂಗ ಸಭೆಯ ಜಯ... ಕ್ಕಾಗಿ ಪ್ರಾರ್ಥನೆ

ಭಾರತ ಸ್ವಾತಂತ್ರ್ಯ, ಐಕಮತ್ಯ ... ತ್ತು ರಾಜ್ಯಾಂಗ ಸಭೆಯ ಜಯಕ್ಕಾಗಿ ... ಹೋರಿನ ಟ್ರಿನಿಟಿ ಚರ್ಚಿನಲ್ಲಿ ಏಳು ದಿ... ಗಳು ಎಡೆಬಿಡದೆ ಪ್ರಾರ್ಥನೆ ನಡೆಸಲಾ... ವುದೆಂದು ಗೊತ್ತಾಗಿದೆ.

ಆರಂಭೋತ್ಸವ

ಮೈಸೂರು

ರಾಜಧಾನಿಯ ಕುರುಬರ ವಿದ್ಯಾ... ಸಂಘದ ಆರಂಭೋತ್ಸವವು ಶ್ರೀ ಎ. ... ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಮು... ಳ್ಳಪ್ಪನವರ ಬಾಲಾ ಆವರಣದಲ್ಲಿ ವೈ... ...ಂಜೆ ಜರುಗಿತು. ಶ್ರೀ ಗಳಾದ ಬಿ. ... ಬೋರಯ್ಯ, ಸಿ ಕಂಪಣ್ಣ ಬಿ. ಎಸ್ಸಿ ... ರ್ಣವರೂ ಮತ್ತು ಅಧ್ಯಕ್ಷರೂ ವಿದ್ಯಾರ್ಥಿ... ಗಳಿಗೆ ಉಪದೇಶವಿತ್ತರು.

ನಿಮ್ನ ವರ್ಗದವರಿಗೆ ವಿಶೇಷ ರಕ್ಷಣೆ ಬೇಕು

೧೯೪೦ ರ ರಾಜಕೀಯ ಸುಧಾರಣೆಯಿಂದ ನಿಮ್ನ ವರ್ಗದವರಿಗೆ ಆವಶ್ಯಕವಾದಷ್ಟು ಮತ್ತು ಸರಿಯಾದ ಪ್ರಾತಿನಿಧ್ಯವು ದೊರಕಲಿಲ್ಲ. ಆದ್ದರಿಂದ ಮುಂದಿನ ಸುಧಾರಣೆಗಳನ್ನು ಜಾರಿಗೆ ತರುವ ಮುನ್ನ ದಿವಾನರು ಆದಿಕರ್ನಾಟಕರ ಮುಖಂಡರೊಡನೆ ಸಮಾಲೋಚನೆ ನಡೆಸಿ ಅವರ ಸಂರಕ್ಷಣೆ ಬಗ್ಗೆ ಸೂಕ್ತ ಸಲಹೆಯನ್ನು ಹಾತ್ರಭುಗಳಿಗೆ ಒಪ್ಪಿಸಬೇಕೆಂದು ಆದಿಕರ್ನಾಟಕ ಅಭಿವೃದ್ಧಿ ಸಂಘದ ಕಾರ್ಯದರ್ಶಿ ಶ್ರೀ ಎಸ್. ಎಂ. ಸಿದ್ದಯ್ಯನವರು ಪ್ರಾರ್ಥಿಸಿದ್ದಾರೆ.

ತಿದ್ದುಪಡಿ

ನಿನ್ನೆ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ವಾನ್‌ಗಾರ್ಡ್ ಫೈರ್ ಮತ್ತು ಜನರಲ್ ಇನ್ಶೂರೆನ್ಸ್ ಕಂಪೆನಿಯ ಜಾಹಿರಾತಿನಲ್ಲಿ ಬಿದ್ದಿರುವ ೨೮೯-೩ ಎಂಬ ನಂಬರನ್ನು ೨೪೯-೧ ಎಂದು ಓದಿಕೊಳ್ಳಬೇಕು.

ಹೊಸ ಜವಳಿ
ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ
ಇಂದೇ ಭೇಟಿ ಕೊಡಿ!
ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!
ಬಿ. ಕೆಂಚಪ್ಪ ಸನ್ಸ್,
ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

ರಾಜಕಮಲ್, ಮೈಸೂರು
೫-೨-೪೭ ರಿಂದ ಅಮೋಘ ಮೂರನೇ ವಾರ
ಬೇಬೀ ಮೀನಾ ಮೋತೀಲಾಲ್, } — ಪ್ರತಿಜ್ಞ — (ಹಿಂದಿ) { ವೀಣಾಕುಮಾರಿ, ಸ್ನೇಹಲತಾ, ಸುನೇತ್ರ ಪಾತ್ರ

All our patrons and friends are cordially invited to be present on the occasion of the Opening Ceremony of our Branch at 2915, Irwin Road, Mysore on Wednesday the 5th February 1947 between 9 and 10-30 a. m.
N. M. Palaniappa Chettiar
& SONS: GHEE MERCHANTS,
Cottonpet :: Bangalore City

OPERA TALKIES
From 4-2-47
The
SECRET CODE
(Full Serial)
Daily three Shows

Edited, printed and published by A. R. Nagarajan at the Sadhvi Press, D-Subbiah Road, Mysore.

ಸಂಪುಟ ೫] ಬುಧವಾರ ೫—೩—೪೭ [ಸಂಚಿಕೆ ೧೫೨

— ಈಜಿಪ್ಟ್ ದೇಶಕ್ಕೆ — ಅಮೆರಿಕದ ಬೆಂಬಲ

ಗ್ರಾಮಾಭಿವೃದ್ಧಿಗೆ ವಿದ್ಯಾರ್ಥಿಗಳು ದುಡಿಯಬೇಕು

ಮೈಸೂರು ೫

ವ ಮಹಾರಾಜಾ ಕಾಲೇಜು ವಿದ್ಯಾರ್ಥಿನಿಲ ದ ದಿನಾಚರಣೆಯು ನಿನ್ನೆ ಸಂಜೆ ಸೇವಾ ಸದ ಜ ಕಾಳಿದಾಸ ಸಭಾದ ಕಾರ್ಯದರ್ಶಿ ಜ ರಾಮಚಂದ್ರರವರ ಅಧ್ಯಕ್ಷತೆ ಲ್ಲಿ ಜರುಗಿತು. ಶ್ರೀ ರಾಮಚಂದ್ರರವ ರವರು ಭಾಷಣಮಾಡುತ್ತಾ ರಚನಾತ್ಮಕ ಕಾರ್ಯಗಳ ಕಡೆ ವಿದ್ಯಾರ್ಥಿಗಳು ಹೆಚ್ಚು ಗಮನ ಕೊಡಬೇಕೆಂದು ಹೇಳಿದರು. ಗ್ರಾಮ ಅಭಿವೃದ್ಧಿಗಾಗಿ ತಮ್ಮ ಜ್ಞಾನವನ್ನು ವಿದ್ಯಾರ್ಥಿಗಳು ವಿನಿಯೋಗಿಸಬೇಕೆಂದು ಹೇಳಿದರು. ದಿನಾಚರಣೆಯ ಅಂಗವಾಗಿ, ಕ್ರೀಡೆಗಳ ಸ್ಪರ್ಧೆ, ವಾರ್ಷಿಕವರದಿ, ಬಹುಮಾನ ವಿನಿಯೋಗ ನಡೆಯಿತು.

ರಾಷ್ಟ್ರಸೇವಾದಳ

ಮೈಸೂರು ನಗರದಲ್ಲಿ ರಾಷ್ಟ್ರಸೇವಾ ದಳ ಕೇಂದ್ರ ಅಧಿಕಾರಿ ಮಂಡಲಿಯ ಸಭೆ ನಿನ್ನೆ ಶ್ರೀ|| ಸರ್ದಾರ್ ಕೃಷ್ಣಯ್ಯಂಗಾರ್ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಸೇವಾದಳದ ಘಟನಾವಳಿಯನ್ನು ರಚಿಸಲಾಯಿತು. ಜಿಲ್ಲಾ ಸಂಘಟಕರನ್ನು ನೇಮಿಸಲಾಯಿತು. ಬೇಸಿಗೆಯಲ್ಲಿ ಸೇವಾದಳದ ಶಿಬಿರವೊಂದನ್ನು ತೆರೆಯಬೇಕೆಂದು ನಿರ್ಧರಿಸಲಾಯಿತು.

ಶ್ರೀರಾಮ ಎಲೆಕ್ಟ್ರಿಕ್ ಸ್ಟೋರ್ಸ್

ಬಿ.ಎಂ. ಕೃಷ್ಣಪ್ಪನವರ ಮಂದಿರದ ರಸ್ತೆಯಲ್ಲಿರುವ ಮೇಲ್ಕಂಡ ಸ್ಟೋರಿನ ಹೊಸ ಶಾಖೆಯೊಂದನ್ನು ಶಿವರಾಂಪೇಟೆ ವಿದ್ಯಾರಣ್ಯಪುರ ರಾಮಮಂದಿರದ ಮಳಿಗೆಯಲ್ಲಿ ಮೊನ್ನೆ ದಿನ ತೆರೆಯಲಾಯಿತು. ಮಾಲೀಕರು ಸಮಾರಂಭಕ್ಕೆ ಅನೇಕ ಮಹನೀಯರನ್ನು ಆಹ್ವಾನಿಸಿ ಸತ್ಕರಿಸಿದರು.

ಆಸ್ತಿಯಲ್ಲಿ ಪೌರ್ಸ್ಟಿಕಾಂಗವನ್ನು ಉಳಿಸಿಕೊಳ್ಳುವುದು

ಮೇಲ್ಕಂಡ ವಿಷಯದ ಮೇಲೆ ಮಹಾರಾಜಾ ಕಾಲೇಜಿನಲ್ಲಿ ನಾಳೆ ಸಂಜೆ ೬ ಗಂಟೆಗೆ ಎಸ್. ಬಿ. ಸಂಜೀವರಾಯರು ಭಾಷಣಮಾಡಲಿದ್ದಾರೆ.

ಗೀತಾ ಉಪನ್ಯಾಸ

ಶ್ರೀ ಶಂಕರಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ಇದೇ ೬ನೇ ತಾ|| ಗುರುವಾರ ಸಂಜೆ ೬|| ಘಂಟೆಗೆ ಸಂಸ್ಕೃತಪಾಠಶಾಲೆಯಲ್ಲಿ ವೇ|| ವಿ|| ಕೆ. ರಾಮಚಂದ್ರ ಶಾಸ್ತ್ರಿಗಳು ಗೀತೆಯ ೧೮ನೇ ಅಧ್ಯಾಯದ ೮೦ನೇ ಶ್ಲೋಕದ ಮೇಲೆ ಉಪನ್ಯಾಸ ಮಾಡುವರು.

ಹನುಮಂತಯ್ಯನವರ ಶಿಕ್ಷೆ

ಶ್ರೀ ಕೆ ಹನುಮಂತಯ್ಯನವರಿಗೆ ಸರಕಾರ ವಿಧಿಸಿರುವ ಶಿಕ್ಷೆಯನ್ನು ಖಂಡಿಸಿ ಆನೇಕ ಬೆದರಿಕೆಗಳಿಂದ ವೀರ ದೇಶಾಭಿಮಾನಿಗಳು ತಮ್ಮ ದೇಶಸೇವೆಯಲ್ಲಿ ಹಿಂಜರಿಯಲಾರರೆಂದು ನವಭಾರತ ಸಂಘದ ಕಾರ್ಯದರ್ಶಿ ಶ್ರೀ|| ಕೆ. ಎಸ್. ಬಂದೀಗೌಡ ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

೫೭ ಸಾವಿರ ಗುಮಾಸ್ತರ ಮುಷ್ಕರ

ಪಂಜಾಬ್ ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ೫೭ ಸಾವಿರ ಮಂದಿ ಗುಮಾಸ್ತರು ತಮ್ಮ ಸಂಬಳವನ್ನು ಹೆಚ್ಚು ಮಾಡದೇ ಇರುವದರಿಂದ ಮಾರ್ಚಿ ೭ನೇ ತಾರೀಖಿನಿಂದ ಲೇಖನಿ ಕೆಳಗಿಡುವುದನ್ನು ನಿಲ್ಲಿಸಬೇಕೆಂದು ನಿರ್ಧರಿಸಿದ್ದಾರೆ.

ರಾಜ ದಂಪತಿಗಳ ಸತ್ಕಾರಕ್ಕೆ ಭಾರತೀಯರ ಬಹಿಷ್ಕಾರ

ದ|| ಆಫ್ರಿಕದಲ್ಲಿ ಬ್ರಿಟಿಷ್ ರಾಜ ದಂಪತಿಗಳಿಗೆ ಕೊಡಲಾಗುವ ಸತ್ಕಾರ ಸಮಾರಂಭಗಳಲ್ಲಿ ಭಾರತೀಯರು ಭಾಗ ವಹಿಸುವುದು ಅವಮಾನಕರವಾದುದೆಂದು ಮಹಾತ್ಮರ ಮಕ್ಕಳಾದ ಶ್ರೀ|| ಮಣಿಲಾಲ್ ಗಾಂಧಿಯವರು "ಇಂಡಿಯನ್ ಒಪೀನಿಯನ್" ಎಂಬ ಪತ್ರಿಕೆಯಲ್ಲಿ ಬರೆದಿದ್ದಾರೆ. ಭಾರತೀಯರು ಈ ಸತ್ಕಾರಗಳಲ್ಲಿ ಸೇರದೆ ಬೇರೆ ಅನುಚಿತ ಪ್ರದರ್ಶನಗಳನ್ನು ನಡೆಸದೆ ರಾಜ ದಂಪತಿಗಳು ಬಂದಾಗ ತಮ್ಮ ಮನೆಗಳಲ್ಲಿದ್ದ ಬಿಡಬೇಕು. ಮಕ್ಕಳನ್ನು ಶಾಲೆಗಳಿಗೆ ಕಳುಹಿಸಬಾರದು- ಎಂದು ಸೂಚಿಸಿದ್ದಾರೆ.

ಹೈದ್ರಾಬಾದಿನಲ್ಲಿ ರಾಜಕೀಯ ಖೈದಿಗಳ ಬಿಡುಗಡೆ

ಹೊಸ ಸುಧಾರಣೆಗಳ ಪ್ರಕಾರ ಶಾಸನ ಸಭೆಯ ಅಧಿವೇಶನವು ಪ್ರಾರಂಭವಾಗುವ ವೇಳೆಗೆ ಹೈದರಾಬಾದಿನಲ್ಲಿ ರಾಜಕೀಯ ಅಥವಾ ಕೋಮುವಾರು ಕಾರಣಗಳಿಂದ ಶಿಕ್ಷೆ ಅನುಭವಿಸುತ್ತಿರುವ ಅಥವಾ ವಿಚಾರಣೆಗೊಳಗಾಗಿರುವವರನ್ನು ಬಹು ಮಟ್ಟಿಗೆ ಬಿಡುಗಡೆ ಮಾಡಲಾಗುವುದೆಂದು ನೈಜಾಂ ಸರಕಾರದ ಪ್ರಕಟಣೆ ಹೊರಟಿದೆ.

ಸಿಖ್ ಸಂಸ್ಥಾನಗಳ ಫೆಡರೇಷನ್

ಪಾಟಿಯಾಲಾ, ನಾಭಾ, ಜೀಂದ್, ಫರೀದ್‌ಕೋಟ್, ಕಪೂರ್ಥಲಾ ಮತ್ತು ಮಲೇರ್ ಕೋಟ್ಲಾ ಮುಂತಾದ ಸಿಖ್ ಸಂಸ್ಥಾನಗಳ ಪ್ರತಿನಿಧಿಗಳು ಮೊನ್ನೆ ಪಾಟಿಯಾಲಾದಲ್ಲಿ ಸಭೆ ಸೇರಿ ಪಂಜಾಬ್ ಸಂಸ್ಥಾನಗಳ ಫೆಡರೇಷನ್ ಸ್ಥಾಪಿಸಲು ತೀರ್ಮಾನಿಸಿದರು. ಆ ಬಗ್ಗೆ ಯೋಜನೆಗಳನ್ನು ತಯಾರಿಸಲು ಒಂದು ಸಮಿತಿಯನ್ನು ರಚಿಸಿದರು.

ಇಂಜನ್ನುಗಳ ತಯಾರಿ

೧೧ ಕೋಟಿ ೪೦ ಲಕ್ಷ ರೂ. ಗಳ ವೆಚ್ಚದಲ್ಲಿ ಕಾಂಚರಪುರ ಎಂಬಲ್ಲಿ ರೈಲ್ವೆ ಇಂಜನ್ನುಗಳ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಲಾಗುವುದೆಂದು ಕೇಂದ್ರ ಸರ್ಕಾರದ ಮಂತ್ರಿ ಡಾ|| ಜಾನ್ ಮಥಾಯಿಯವರು ತಿಳಿಸಿದ್ದಾರೆ. ಪ್ರತಿ ವರ್ಷವೂ ಈ ಕಾರ್ಖಾನೆಯಲ್ಲಿ ೧೨೦ ಇಂಜನ್ನುಗಳನ್ನು, ೫೦ ಬಾಯಿಲರ್ ಗಳನ್ನು ತಯಾರಿಸಲಾಗುವುದು. ಆರು ತಿಂಗಳ ಅವಧಿಯೊಳಗೆ ಯಂತ್ರಗಳನ್ನು ತರಿಸಿಕೊಂಡು ಅನಂತರ ಕಾರ್ಯವನ್ನು ಆರಂಭಿಸಲಾಗುವುದು.

ಗೋಪಾಲರಾಯರ ಪ್ರಕರಣ

ಸ್ವಂ.ವ ವರದಿಗಾರ] ಬೆಂಗಳೂರು ೫

ಧರ್ಮ ರಕ್ಷಕರ ಗೋಪಾಲರಾಯರ ದರೋಡೆ ಮೊಕದ್ದಮೆಯು ಈ ದಿನ ಮುಂದುವರಿಯಿತು. ನಿನ್ನೆ ಸಂಜೆ, ಕಳುವಾದ ಒಡವೆಗಳನ್ನು ಮಾಡಿಕೊಟ್ಟ ಜ್ಯುಯಲರ್ ಶ್ರೀ|| ಗುರುನಾಥ್ ರವರ ಮತ್ತು ಮಲ್ಲೇಶ್ವರದ ಪೊಲೀಸ್ ದಫೇದಾರ್ ವೆಂಕೋಬರಾಯರ ಸಾಕ್ಷ್ಯಗಳು ನಡೆದುವು.

ಈ ದಿನ ಸೆಂಟ್ರಲ್ ಬ್ಯಾಂಕ್ ಏಜೆಂಟ್ ರಾದ ಶ್ರೀ|| ಸಿದ್ದ್ಯರವರು ಸಾಕ್ಷ್ಯ ಹೇಳುತ್ತಾ:- ಡಿ|| ೭ನೇ ತಾರೀಕು ನಡೆದ ಸಭೆಗೆ ನಾನು ಸಂಜೆ ೭||ಗೆ ಹೋದೆ. ೯||ಗೆ ವಾಪಸ್ ಬಂದೆ. ಗೋಪಾಲರಾಯರಿಗೆ ನಾನು ಆಸಾಮಿ ರೂ ಕೊಟ್ಟಿದ್ದೆ. ಒಂದು ಕಾಸೂ ವಾಪಸು ಬಂದಿಲ್ಲ. ಆ ದಿನದ ಸಭೆಯಲ್ಲಿ ಗೋಪಾಲರಾಯರ ಆಸ್ತಿಪಾಸ್ತಿ ಮತ್ತು ಸಾಲಗಳನ್ನು ಪಟ್ಟಿ ಮಾಡಿ, ಅವರ ಖರ್ಚೆಗಾಗಿ ಚರ್ಚೆ ನಡೆಯಿತು. ತೀರ್ಮಾನ ಮಾಡಿದ್ದಿತು. ಅಲ್ಲಿ ನೆರೆದಿದ್ದವರೆಲ್ಲಾ ೧ ಲಕ್ಷ ರೂ. ನೀಡಿ ಗೋಪಾಲರಾಯರ ಸಲ್ಲಾಪಟ್ಟೆ ಲೇವಾದೇವಿಗಾರರಿಗೆ ವಾಪಸು ಕೊಡಬೇಕೆಂದೂ, ಗೋಪಾಲರಾಯರು ತಮ್ಮ ಒಡವೆಗಳನ್ನೆಲ್ಲಾ ಉಳಿದವರಿಗೆ ಹಂಚಬೇಕೆಂದೂ ಮಾತುಕತೆ ನಡೆಯಿತು. ಮಾರನೇ ದಿನ ನಾನು ಬೆಳಗ್ಗೆ ರಾಯರವರನ್ನು ಸಭೆಯ ಪರಿಣಾಮದ ಬಗ್ಗೆ ಕೇಳಿದೆ. ಏನೂ ತೀರ್ಮಾನವಾಗಲಿಲ್ಲ, ಚರ್ಚೆಯಲ್ಲೇ ಕಳೆದು ಹೋಯಿತು. ಎಂದರು.

ನಾನು ಆಗಾಗ್ಗೆ ಗೋಪಾಲರಾಯರ ಮನೆಗೆ ಹೋಗುತ್ತಿದ್ದೆ. ಅವರು ತಮ್ಮ ಬಗ್ಗೆ ಹಲವಾರು ಬರೆದಿದ್ದ ಪತ್ರಗಳನ್ನು ನನಗೆ ತೋರಿಸಿದ್ದರು. ಅದರ ಮೇಲೆ ಅವರಲ್ಲಿ ನನಗೆ ನಂಬಿಕೆ ಹುಟ್ಟಿತು. ಅದ್ದರಿಂದ ನಾನು ಅವರಿಗೆ ಸಾಲಕೊಟ್ಟಿದ್ದೆ.

ಬ್ಯಾಂಕಿನಲ್ಲಿ ಅವರು ಓವರ್‌ಡ್ರಾಫ್ಟ್ ತೆಗೆದುಕೊಳ್ಳುತ್ತಿದ್ದರು. ನಾನು ಒದಗಿಸುವ ಕೈಂತ ಮುಂಚಿತವಾಗಿಯೂ ಪಡೆಯುತ್ತಿದ್ದರು. ಅವರ ಸ್ವಂತ ನಂಬಿಕೆಯ ಮೇಲೆ ಅದನ್ನು ಕೊಡಲಾಗುತ್ತಿದ್ದಿತು. ಹಣವನ್ನು ಎಷ್ಟು ತೆಗೆದುಕೊಂಡಿದ್ದಾರೆಂಬುದು ನನಗೆ ಜ್ಞಾಪಕವಿಲ್ಲ. ನಾನು ಆ ಲೆಖ್ಖಗಳನ್ನು ನೋಡುತ್ತಿರಲಿಲ್ಲ.

ನಂತರ ಮಲ್ಲೇಶ್ವರ ಪೊಲೀಸ್ ಸಬ್ ಇನ್ಸ್‌ಪೆಕ್ಟರಾದ ಶ್ರೀ ರಾಮ ಸ್ವಾಮಿಯವರ ಸಾಕ್ಷ್ಯ, ವಿಚಾರಣೆ ನಡೆಯಿತು. ... ಆರೋಪಿಗಳ ಪರ ವಕೀಲರು ಅವರಿಗೆ ಒಂದೆರಡು ಪ್ರಶ್ನೆಗಳನ್ನು ಕೇಳಿದರು.

ಈಜಿಪ್ಟಿಗೆ ಅಮೆರಿಕದ ಬೆಂಬಲ

ಈಜಿಪ್ಟಿನಿಂದ ಬ್ರಿಟಿಷ್ ಸೈನ್ಯಗಳನ್ನು ಕೂಡಲೇ ವಾಪಸು ಕರೆಸಬೇಕು ಮತ್ತು ೧೯೩೬ನೇ ಒಪ್ಪಂದವನ್ನು ರದ್ದುಮಾಡಬೇಕು- ಎಂಬುದಾಗಿ ಈಜಿಪ್ಟ್ ಸರ್ಕಾರವು ಬ್ರಿಟನ್ನಿನ ವಿರುದ್ಧವಾಗಿ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಮುಂದೆ ಮಂಡಿಸಿರುವ ದೂರಿನ ಸಂಬಂಧದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನವು ಈಜಿಪ್ಟಿಗೆ ಬೆಂಬಲ ನೀಡುವುದಾಗಿ ತಿಳಿದುಬಂದಿದೆ. ಸೂಡಾನ್ ಪ್ರಶ್ನೆಯ ವಿಚಾರದಲ್ಲಿ ೫ ವರ್ಷಗಳ ಕಾಲ ಸಂಯುಕ್ತ ಮೇಲ್ವಿಚಾರಣೆಯು ಆಡಳಿತ ಸಾಗಲೆಂದೂ, ಅನಂತರ ಪ್ರಜಾಭಿಪ್ರಾಯ ಪಡೆದು ಅದರಂತೆ ಸೂಡಾನಿನ ರಾಜ್ಯಭಾರ ನಡೆಯಬೇಕೆಂದೂ ಅಮೆರಿಕವು ಸೂಚಿಸುವುದಾಗಿ ಹೇಳಲಾಗಿದೆ.

ರತ್ಲಮ್ ಮಹಾರಾಜರ ನಿಧನ

ಜವಾಬ್ದಾರಿ ಸರ್ಕಾರದ ಆಧಾರದ ಮೇಲೆ ಇತ್ತೀಚೆಗೆ ಹೊಸ ಸುಧಾರಣೆಗಳನ್ನು ಘೋಷಿಸಿದ್ದ ರತ್ಲಂ ಮಹಾರಾಜರಾದ ಸರ್ ಸಜ್ಜನ್ ಸಿಂಘ್ ಬಹದೂರ್ ರವರು ಮೊನ್ನೆ ಬೊಂಬಾಯಿಯಲ್ಲಿ ನಿಧನರಾದರೆಂಬ ವಾರ್ತೆ ಬಂದಿದೆ. ಅವರ ಕಳೇಬರವನ್ನು ಸ್ಪೆಷಲ್ಲಿಗೆ ಮೆರವಣಿಗೆಯಲ್ಲಿ ಕೊಂಡೊಯ್ದು ಅಲ್ಲಿಂದ ಪ್ರತ್ಯೇಕ ರೈಲಿನಲ್ಲಿ ರತ್ಲಂ ಸಂಸ್ಥಾನಕ್ಕೆ ಒಯ್ಯಲಾಯಿತು.

ಅಂಚೆ ಸೌಕರ್ಯ

ಮೈಸೂರು ೫

ಬೆಂಗಳೂರು ನಗರಕ್ಕೆ ರಾತ್ರಿ ೧೦-೫೦ ಕ್ಕೆ ಹೋಗುವ ಬೈಸಿಕಲ್ ಅಂಚೆಯನ್ನು ಸಾಗಿಸಲು ಹೊಸ ವ್ಯವಸ್ಥೆಯನ್ನು ಮಾಡಲಾಗಿದೆ. ಇದರಿಂದ ಲೇಟ್ ಫೀಯನ್ನು ಕಟ್ಟಿ ಮಾಡಿ ಕಾಗದ ಪತ್ರಗಳನ್ನು ರೈಲಿಗೆ ಲಗತ್ತಿಸುವ ಪೆಟ್ಟಿಗೆಗೆ ಹಾಕಬಹುದಾಗಿದೆ.

ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್

ನಿನ್ನೆ ಕ|| ವ್ಯಾ|| ವಿ|| ಕಾಂ|| ಕಾರ್ಯಕಾರಿ ಸಮಿತಿ ಸಭೆ ರಾಜಧಾನಿಯಲ್ಲಿ ಜರುಗಿತು. ಶ್ರೀ. ಜೈಪ್ರಕಾಶ ನಾರಾಯಣ್ ರವರು ಮಾರ್ಚಿ ತಿಂಗಳಲ್ಲಿ ಕರ್ನಾಟಕದಲ್ಲಿ ಪ್ರವಾಸ ಮಾಡುವಾಗ ಅವರಿಗೆ ೧೦,೦೦೦ ರೂ ಗಳ ನಿಧಿ ಅರ್ಪಿಸಬೇಕೆಂದು ನಿರ್ಧರಿಸಲಾಯಿತು. ಪ್ರಜೆಗಳೇ ಸಂಸ್ಥಾನಗಳ ಸ್ವಾಮಿತ್ವಕ್ಕೆ ಬಾಧ್ಯರೆಂದು ಘೋಷಿಸಿದ ಮೈಸೂರು ಕಾಂಗ್ರೆಸ್ಸನ್ನು, ಜವಾಬ್ದಾರಿ ಸರ್ಕಾರ ದೊರಕಿಸಲು ಕೂಡಲೇ ಚಳುವಳಿ ಹೂಡಬೇಕೆಂದೂ ಒತ್ತಾಯ ಪಡಿಸುವ ನಿರ್ಣಯಗಳಾದುವು.

ರಪ್ಪಿನ ಮೇಲೆ ತೆರಿಗೆ

ಸಂಸ್ಥಾನದಿಂದ ಹೊರಗಡೆಗೆ ಸಾಗುವ ಹತ್ತಿಬೀಜಗಳಿಂದ ತಯಾರಾದ ಸಾಮಗ್ರಿಗಳ ಮೇಲಿನ ತೆರಿಗೆಯನ್ನು ರೂ. ೧ ಕ್ಕೆ ೩ ಆಣೆಯಿಂದ ೪ ಆಣೆಗೆ ಹೆಚ್ಚಿಸಲಾಗಿದೆಯೆಂದೂ ಸರ್ಕಾರಿ ಪ್ರಕಟಣೆ ಹೊರಟಿದೆ. ಈ ತೆರಿಗೆಯು ಸಕ್ಕರೆ ಚೀಲಕ್ಕೆ ಅನ್ವಯಿಸುವುದಿಲ್ಲ.

ಚುನಾವಣಾ ತಕರಾರು

ಹೊಳೆನರಸೀಪುರ, ಅರಕಲಗೂಡು ಕ್ಷೇತ್ರದಿಂದ ನಡೆದ ಪ್ರಜಾಪ್ರತಿನಿಧಿ ಸಭಾ ಚುನಾವಣೆಯ ವಿಚಾರದಲ್ಲಿ ಶ್ರೀ ಹೆಚ್. ಸಿ. ಶಿವಣ್ಣನವರ ವಿರುದ್ಧ ಶ್ರೀ ಬಿ. ಡಿ. ಕೃಷ್ಣ. ನಾರಾಯಣ ಸ್ವಾಮಿಯವರು ... ಶ್ರೀ ... ತಕರಾರನ್ನು ... ಜಿಲ್ಲಾ ... ನ್ಯಾಯಾಲಯದಲ್ಲಿ ಜರುಗುವುದು.

ಸಾಧ್ವಿ
ತಾ|| ೫-೨-೪೭ ಬುಧವಾರ

ಪೌರಸಭಾಧ್ಯಕ್ಷತೆಗಾಗಿ ಪ್ರಭುಗಳಲ್ಲಿ ಮನವಿಯೇ?

ರಾಜಧಾನಿಯ ಪೌರಸಭೆಗೆ ಚುನಾಯಿತ ಅಧ್ಯಕ್ಷರಿರಬೇಕೆಂಬ ವಿಚಾರವು ಹತ್ತಾರು ವರ್ಷಗಳಿಂದ ಬರುತ್ತಲೇ ಇದೆ. ಪೌರಸಭೆಯವರು ಮಾಡಿಕೊಂಡಿರುವ ಪ್ರಾರ್ಥನೆಗೆ ಸರ್ಕಾರದವರು ಕಿವಿಗೊಟ್ಟಿರುವುದಿಲ್ಲ. ತಮ್ಮ ನಿರಾಕರಣೆಗೆ ಕಾರಣವನ್ನೂ ಸಹ ತಿಳಿಸಿರುವುದಿಲ್ಲ. ವಸ್ತುತಃ ಅದನ್ನು ನಿರಾಕರಿಸಲು ಯಾವ ಕಾರಣವೂ ಇರುವುದಿಲ್ಲ.

ಪೌರಸಭೆಯವರ ತಾಳ್ಮೆಯು ಮೇರೆ ಮೀರಿರುವಂತಿದೆ. ಈ ಬಗ್ಗೆ ಪ್ರಭುಗಳಲ್ಲಿಯೇ ನೇರವಾಗಿ ಮನವಿಯನ್ನು ಸಲ್ಲಿಸಲು ಅವರು ತೊಡಗಿರುವುದಾಗಿ ತಿಳಿದು ಬಂದಿರುತ್ತದೆ. ಸರ್ಕಾರದವರಿಗೆ ಅನೇಕ ಬಾರಿ ಮಾಡಿಕೊಂಡ ವಿಜ್ಞಾಪನೆಯು ನಿರರ್ಥಕವಾಗಿರುವುದನ್ನೂ, ಪ್ರಭುತ್ವದವರ ವರ್ತನೆಯು ಕಾಲಧರ್ಮಕ್ಕೆ ವಿರುದ್ಧವಾಗಿರುವುದನ್ನೂ, ಮಾದರಿ ಸಂಸ್ಥಾನದ ಮಾದರಿ ನಗರದ ಪೌರಸಭೆಗೆ ಚುನಾಯಿತ ಅಧ್ಯಕ್ಷರಿರಬೇಕಾದ ಆವಶ್ಯಕತೆಯನ್ನೂ ಶ್ರೀಮನ್ಮಹಾರಾಜರವರಿಗೆ ನಿವೇದಿಸಿ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಲು ಪೌರಸಭೆಯು ಒಂದು ವಿಶೇಷ ಅಧಿವೇಶನವನ್ನು ಕರೆಯಲು ಪ್ರಯತ್ನಗಳಾಗುತ್ತಿವೆ.

ಇನ್ನು ಮಹಾ ಪ್ರಭುಗಳಲ್ಲೇ ನೇರವಾಗಿ ಮೊರೆಯಿಡುವ ಕಾಲವಾಗಿ ಪರಿಣಮಿಸುತ್ತಿದೆ. ಶಾಸನ ಸಭೆಗಳವರು ರಾಜ್ಯಾಂಗ ಬದಲಾವಣೆಗಳಿಗಾಗಿ ಪ್ರಭುಗಳಿಗೆ ಸಾಮೂಹಿಕ ಮನವಿಯನ್ನು ಸಲ್ಲಿಸಿದರು. ಇತ್ತೀಚೆಗೆ ಮೈಸೂರು ಕಾಂಗ್ರೆಸ್ ಸಂಸ್ಥೆಯವರೂ ಸಹ ನೇರವಾಗಿ ಮಹಾಸ್ವಾಮಿಯವರಿಗೆ ಮನವಿಯೊಂದನ್ನು ಅರ್ಪಿಸಿದರು. ಇದರ ಪ್ರತಿಕ್ರಿಯೆಯು ಈಗಾಗಲೇ ಸಾರ್ವಜನಿಕ ಕ್ಷೇತ್ರದಲ್ಲಿ ಕಾಣಬರುತ್ತಿದೆ. ಈಗ ಮೈಸೂರು ಪೌರಸಭೆಯವರ ಸರದಿಯು ಬಂದಿರುವಂತಿದೆ.

ವಾಸ್ತವವಾಗಿ ನೋಡಿದರೆ ಪೌರಸಭೆಯ ಅಧ್ಯಕ್ಷತೆಯ ವಿಷಯವು ಅತ್ಯಲ್ಪವಾದ ವಿಚಾರ. ಇದು ಪೌರಸಭೆಯ ಕಾನೂನಿನಲ್ಲಿಯೇ ಅಡಕವಾಗಿರುತ್ತದೆ. ಹೊಸದಾಗಿ ಸರ್ಕಾರದವರು ಕರುಣಿಸಬೇಕಾದ ವರಪ್ರಸಾದವೇನೂ ಅಲ್ಲ. ಅವರು ತಮ್ಮ ಅನುಮೋದನೆಯನ್ನು ಮಾತ್ರ ಕೊಡಬೇಕಾಗಿದೆ. ಇಂತಹ ಸಣ್ಣ ವಿಷಯವನ್ನು ಹಲವಾರು ವರ್ಷಗಳಿಂದ ಅಕಾರಣವಾಗಿ ಅವರು ತಡೆಗಳೆಯುತ್ತ ಬಂದು ಈಗ ಈ ಅಲ್ಪ ವಿಚಾರಕ್ಕಾಗಿ ದೊರೆಯ ವರೆಗೆ ದೂರು ಹೋಗಲು ಅವಕಾಶವಿತ್ತಿರುವುದು ಸರ್ವಥಾ ಯುಕ್ತವಲ್ಲ. ತಮಗಿರುವ ಅವಕಾಶವನ್ನು ಸರ್ಕಾರದವರು ಉಪಯೋಗಿಸಿಕೊಳ್ಳದೆ ಪ್ರಭುಗಳ ವರೆಗೆ ಇಂತಹ ಸಣ್ಣ ಪುಟ್ಟ ವಿಷಯಗಳು ಹೋಗುವಂತೆ ಮಾಡುವುದರಿಂದ ಅವರ ಪ್ರತಿಷ್ಠೆಗೆ ಕೊರತೆಯುಂಟಾಗುವುದು.

ಸರ್ಕಾರದವರು ಈ ಕೋರಿಕೆಯನ್ನು ಈಡೇರಿಸದಿದ್ದರೆ ಮಹಾ ಪ್ರಭುಗಳನ್ನೇ ನೇರವಾಗಿ ಪ್ರಾರ್ಥಿಸಬೇಕಾಗುವುದೆಂದು ಕಾಂಗ್ರೆಸ್ ಪಕ್ಷದ ನಾಯಕರು ಈ ಮೊದಲೇ ಪೌರಸಭೆಯಲ್ಲಿ ಸೂಚಿಸಿದ್ದರು. ಈ ಬಗ್ಗೆ ಅಗತ್ಯವಾದರೆ ಒಂದು ಚಳುವಳಿಯನ್ನೇ ಹೂಡಬೇಕೆಂದು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚಂಗಲರಾಯರೆಡ್ಡಿಯವರು ತಿಳಿಸಿರುವರು. ಹೊರಗಿನಿಂದ ಬಂದು ಹೋಗುವವರೆಲ್ಲರೂ, ಇಂತಹ ದೊಡ್ಡ ಪಟ್ಟಣಕ್ಕೆ ಖಾಸಗಿ ಅಧ್ಯಕ್ಷರಿಲ್ಲದಿರುವುದನ್ನು ಕಂಡು ಪರಿಹಾಸ್ಯ ಮಾಡುತ್ತಿರುವರು. ಇಂತಹ ಪರಿಸ್ಥಿತಿಯಲ್ಲಿ ಈ ಸಮಸ್ಯೆಯು ತೀವ್ರವಾದ ಆಸಕ್ತಿಯನ್ನು ಉಂಟುಮಾಡಿರುವುದರಲ್ಲಿ ಆಶ್ಚರ್ಯವೇನೂ ಇರುವುದಿಲ್ಲ.

ಇಡೀ ಸಂಸ್ಥಾನಕ್ಕೆಲ್ಲಾ ಅನ್ವಯಿಸುವ ರಾಜ್ಯಾಂಗದಲ್ಲಿಯೇ ಬದಲಾವಣೆಗಳನ್ನು ಮಾಡಲು ಮಹಾಸ್ವಾಮಿಯವರು ಆಸಕ್ತಿ ವಹಿಸಿರುವ ಈ ಸಮಯದಲ್ಲಿ ಸರ್ಕಾರದವರು ಈ ನಗರಕ್ಕೆ ಚುನಾಯಿತ ಅಧ್ಯಕ್ಷರನ್ನು ಕೊಡುವ ವಿಚಾರದಲ್ಲಿ ಸಂಕುಚಿತ ಭಾವನೆಯನ್ನು ತೋರಿಸುತ್ತಿರುವುದು ಸರಿಯಲ್ಲ. ಈ ಮಧ್ಯೆ ಹಲವು ವದಂತಿಗಳು ಹರಡಿವೆ. ಸರ್ಕಾರದವರು ಈ ವಿಷಯದಲ್ಲಿ ಅನುಕೂಲವಾದ ನಿರ್ಧಾರವನ್ನು ಮಾಡಿರುವುದಾಗಿಯೂ ಸುದ್ದಿಗಳು ಬರುತ್ತಿವೆ. ಪೌರಸಭೆಯ ಸದಸ್ಯರುಗಳಾಗಲೀ, ಇಡೀ ನಗರ ಮಹಾಜನರಾಗಲೀ, ಅಧ್ಯಕ್ಷರನ್ನು ಚುನಾಯಿಸಲು ಈಗಲೂ ಸರ್ಕಾರದವರು ಕೂಡಲೇ ಅವಕಾಶವನ್ನು ಕಲ್ಪಿಸಿ ಈ ವಿಚಾರವು ಅರಮನೆಯ ವರೆಗೆ ಮುಟ್ಟದಂತೆ ಮಾಡುವುದು ವಿಹಿತವಾಗಿರುತ್ತದೆ.

ಮಹಾತ್ಮರು ಶಾಂತಿವಾದಿಗಳ ಸಮ್ಮೇಳನ ಸೇರಿಸುವರು

ಮಹಾತ್ಮ ಗಾಂಧೀಜಿಯವರು ಭಾರತ, ಅಮೇರಿಕ ಮತ್ತು ಯೂರೋಪಿನಲ್ಲಿರುವ ತಮ್ಮ ಆಪ್ತ ಮಿತ್ರರುಗಳೊಡನೆ ಈ ವರ್ಷದಲ್ಲಿ ಶಾಂತಿವಾದಿಗಳ ಸಮ್ಮೇಳನವೊಂದನ್ನು ಕರೆಯಲು ಆಲೋಚಿಸುತ್ತಿರುವರೆಂದು ವರದಿಯಾಗಿದೆ. ಪ್ರಪಂಚದಲ್ಲಿ ಶಾಶ್ವತವಾದ ಶಾಂತಿಯನ್ನೇರ್ಪಡಿಸುವ ಬಗ್ಗೆ ಚರ್ಚೆ ಮತ್ತು ಪ್ರಾರ್ಥನೆಗಳನ್ನು ನಡೆಸುವುದೇ ಅಧಿವೇಶನದ ಕಾರ್ಯಕ್ರಮವೆಂದು ಗೊತ್ತಾಗಿದೆ. ಮಹಾತ್ಮ ಗಾಂಧಿಜಿಯವರು ಪ್ರಪಂಚದಲ್ಲಿ ಶಾಂತಿಯನ್ನೇರ್ಪಡಿಸಲು ಸತತವಾಗಿ ದುಡಿಯುತ್ತಿರುವ ಶಾಂತಿವಾದಿಗಳಿಗೆಲ್ಲಾ ಆಹ್ವಾನಗಳನ್ನು ಕಳುಹಿಸುವರೆಂದೂ ಸಹ ಊಹಿಸಲಾಗಿದೆ. ಬಹುಶಃ ಸಮ್ಮೇಳನವು ಶಾಂತಿನಿಕೇತನದಲ್ಲಾಗಲೀ ಅಥವಾ ಸೇವಾಗ್ರಾಮದಲ್ಲಾಗಲೀ ನಡೆಯಬಹುದು.

ಕೊಚ್ಚಿಯಲ್ಲಿ ವಯಸ್ಕರಿಗೆಲ್ಲಾ ಓಟಿನ ಹಕ್ಕು

ಕೊಚ್ಚಿ ಸಂಸ್ಥಾನದಲ್ಲಿ ಪ್ರಾಪ್ತ ವಯಸ್ಕರಿಗೆಲ್ಲಾ ಶಾಸನ ಸಭೆಯ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಸರ್ಕಾರದವರು ಇತ್ತಿದ್ದಾರೆ. ಈಗಿರುವ ಪ್ರತಿನಿಧಿ ಸಭೆಯ ಜೊತೆಗೆ ಮತ್ತೊಂದು ಶಾಸನ ಸಭೆಯನ್ನು ಸ್ಥಾಪಿಸುವ ವಿಚಾರವನ್ನೂ ರಾಜ್ಯಾಂಗ ಸಲಹಾ ಸಮಿತಿಗೆ ಒಪ್ಪಿಸಲಾಗಿದೆ.

ದಂಡಿನ ದೇವಾಲಯಗಳೆಲ್ಲಾ ಹರಿಜನರಿಗೆ ತೆರೆಯಲ್ಪಟ್ಟವು

ಬೆಂಗಳೂರು ದಂಡಿನಲ್ಲಿರುವ ಎಲ್ಲ ದೇವಾಲಯಗಳೂ ಈಗ ಹರಿಜನರಿಗಾಗಿ ತೆರೆಯಲ್ಪಟ್ಟಿವೆ. ಮುಜರಾಯಿಗೆ ಸೇರಿದ ಆಂಜನೇಯ, ಸೋಮೇಶ್ವರ ಮತ್ತು ಸುಬ್ರಹ್ಮಣ್ಯ ಸ್ವಾಮಿ ದೇವಾಲಯಗಳೂ ಕಳೆದ [illegible]ನೇ ತಾರೀಕಿನಿಂದ ತೆರೆಯಲ್ಪಟ್ಟವು.

ಹರಿಕಥೆ

ರಾಜಧಾನಿಯ ಉತ್ತರ ಕೋಟೆ ಬಳಿ[illegible] ಶ್ರೀ ಆಂಜನೇಯ ಸ್ವಾಮಿಯವರ ದೇವಸ್ಥಾನದಲ್ಲಿ ಈ ರಾತ್ರಿ ಶ್ರೀಮಾನ್ ಬಿ. ವೇಣುಗೋಪಾಲದಾಸರಿಂದ ಸೀತಾಕಲ್ಯಾಣವೆಂಬ ಕಥೆಯು ನಡೆಯುತ್ತದೆ.

ನಿಮ್ಮ ಮೈ ಮೊಕವುಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!
ಮೈಸೂರು ಸ್ಯಾಂಡಲ್ ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು.

ನಾಲ್ಕು "ಬ" ಎಂದರೆ
ಭದ್ರವಾದ ಬೀಗಗಳು ಬೇಕಾದರೆ
ಬಾಹುಸಾರ್
ಶಿವರಾಂಪೇಟೆ : : ಮೈಸೂರು

The Annual Auction Sale
ಹರಾಜು ನೋಟೀಸು
1947 ನೇ ಫೆಬ್ರವರಿ 6 ನೇ ತಾರೀಖಿನಿಂದ ಪ್ರತಿ ದಿನವೂ 9 ಘಂಟೆಯಿಂದ 12 ಘಂಟೆಯ ವರೆಗೆ
ಜಗನ್ಮೋಹನ ಬಂಗಲೆಯಲ್ಲಿ
ಬೈಸಿಕಲ್‌ಗಳು, ಹೊಲಿಗೆ ಮಿಷನ್, ರೇಡಿಯೋ ಮುಂತಾದ ಸಾಮಾನುಗಳು ಹರಾಜು ಮಾಡಲ್ಪಡುತ್ತವೆ.
ವೈ. ಎಂ. ಪುಟ್ಟಸ್ವಾಮಿ,
ಆಕ್ಷನೀರ್, ಸ್ಟಾಪ್ ಕೀಪರ್, ಸಯ್ಯಾಜಿ ರಾವ್ ರೋಡ್, ಮೈಸೂರು.

ಶ್ರೀ
ಗಣೇಶಾ ಟಾಕೀಸ್
೫-೨-೪೭ ರಿಂದ ಪ್ರತಿದಿನ
ಮೂರು ಆಟಗಳು
ಮಂಗಳ ಸೂತ್ರಂ
(ತೆಲುಗು ಚಿತ್ರ)
ಪಾತ್ರ:- ಪ್ರಭಾಕರ್, ರಾಜ್ಯಂ, ಸ್ನೇಹಲತಾ ದೇವಿ, ಬಾಲ ಸರಸ್ವತಿ

OPERA TALKIES
From 4-2-47
The
SECRET CODE
(Full Serial)
Daily three Shows

Edited, printed and published by A. S. Nagarajan at the Sadhvi Press, D. Subbiah Road, Mysore.

ಖರೀದಿಗಿವೆ
ವಾಣೀವಿಲಾಸ ರಸ್ತೆಯಲ್ಲಿ
ಸುಮಾರು 100'x60' ಜಾಗದಲ್ಲಿ ನಲ್ಲಿ, ದೀಪ, ಕಾಂಪೌಂಡ್ ಇರುವ ಮನೆ, ರೂ. 20,000 ಕ್ಕೆ ಮೇಲ್ಪಟ್ಟು
ರಮಾವಿಲಾಸ ಅಗ್ರಹಾರದ
ಸುಮಾರು 110'x30' ಜಾಗದಲ್ಲಿ ಹಳೆ ಮನೆ, ನಲ್ಲಿ, ದೀಪ ಎಲ್ಲಾ ಇದೆ.
ಬೆಲೆ 22,000 ರೂ.
ನರಸಿಂಹರಾಜಪುರಂನಲ್ಲಿ
ಪೋಲೀಸ್ ಔಟ್ ಪೋಸ್ಟ್ ಮನೆ, ಸುಮಾರು 90'x70' ಜಾಗ, ದೀಪ, ನಲ್ಲಿ, ಕಾಂಪೌಂಡ್ ಎಲ್ಲಾ ಇದೆ
ರೂ 7,500.
ವಾಣೀವಿಲಾಸಪುರಂನಲ್ಲಿ
160'x100' ಸೈಟಿನಲ್ಲಿ ಸುಮಾರು 40'x15' ತಾರಸಿ ಮನೆ,
ಬೆಲೆ 16,000 ರೂ.
ಮಂಡಿ ಮೊಹಲ್ಲಾ
ಕಿಲ್ಲದ ಮೂಗರ ಪಾಠಶಾಲೆ ಬಳಿ[illegible]ದ. ಹೊಸ ಮನೆ, ಗರಡಿ ಮಾಲೀಕ[illegible] ಅನುಕೂಲ.
ಬೆಲೆ 13,750 ರೂ.
ಬಿ. ಎಸ್. ಸುಬ್ಬರಾವ್
ಜಗನ್ಮೋಹನ ಬಂಗ್ಲೆ ಬೀದಿ, ಮೈಸೂರು

ಹೊಸ ಜವಳಿ
ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ
ಇಂದೇ ಭೇಟಿ ಕೊಡಿ!
ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!
ಬಿ. ಕೆಂಚಪ್ಪ ಸನ್ಸ್,
ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು.

ರಾಜಕಮಲ್, ಮೈಸೂರು
೫-೨-೪೭ ರಿಂದ ಅಪೇಕ್ಷಾ ಮೂರನೇ ವಾರ
ಬೇಬೀ ಮೀನಾ, ಮೋತೀಲಾಲ್, — ಪ್ರತಿಜ್ಞಾ (ಹಿಂದಿ) — ವೀಣಾಕುಮಾರಿ, ಸ್ವರ್ಣಲತಾ, ಸುನೇತ್ರ ಪಾತ್ರ.

ಪೋಸ್ಟ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೬—೨—೪೭ [ಸಂಚಿಕೆ ೧೫೪

೩ನೇ ತರಗತಿ ರೈಲ್ವೆ ದರ ಶೇ॥ ೧೦ರಷ್ಟು ಹೆಚ್ಚುತ್ತದೆ

...ಮುಟೆಟಿವ್ ಓಟಿನ ಪದ್ಧತಿ ...ಗಾಗಿ ಸರ್ಕಾರದ ಖಂಡನೆ

...ಸಭೆಯಲ್ಲಿ ವಿಮರ್ಶೆ

ಮೈಸೂರು ೬

...ನ್ನೆ ಸಂಜೆ, ಪ್ರಜಾಸಭೆಯ ಮುಂದುವರಿ ...ಧಿವೇಶನವು ಶ್ರೀ ರಾಮಚಂದ್ರರಾವ್ ...ಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆ ... ಅಲ್ಪ ಸಂಖ್ಯಾತರ ಹಕ್ಕುಬಾಧ್ಯತೆ ...ನ್ನು ಕಾಯ್ದಿಡುವ ಸಲುವಾಗಿ ಸರ್ಕಾರದ ... ಬೋರ್ಡುಗಳಲ್ಲಿ ಕ್ಯುಮುಲೆ ...ವ್ ವೋಟಿಂಗ್ ಪದ್ಧತಿಯನ್ನು ಜಾರಿಗೆ ... ಆಜ್ಞೆ ಹೊರಡಿಸಿರುವುದಕ್ಕೆ ಮೆಚ್ಚಿ ...ಗೆ ವ್ಯಕ್ತಪಡಿಸುವುದಲ್ಲದೆ ಆ ಪದ್ಧ ...ನ್ನು ಸಿಟಿ ಮತ್ತು ಟೌನ್ ಮುನಿಸಿಪಾ ...ಗಳಲ್ಲಿಯೂ ತರಬೇಕೆಂದು ಪ್ರಾರ್ಥಿಸಿ ...ವ ನಿರ್ಣಯವನ್ನು ಹಾ॥ ಮೀರ್ ...ರ್ ಹುಸೇನರವರು ಮಂಡಿಸಿದರು. ಬ ...ಮತ ಪಡೆದು ಬಂದಿರುವ ಒಂದು ಕಂಗ ...ದ ಸದಸ್ಯರು ಅಲ್ಪಸಂಖ್ಯಾತರ ಹಕ್ಕುಬಾ ...ಗಳನ್ನು ರಕ್ಷಿಸುತ್ತಿಲ್ಲವೆಂದು ತಿಳಿಸಿದರು. ...ವ.ಪವ.ಡ್ ಸೇಟರವರು ನಿರ್ಣಯ ...ನ್ನು ಅನುಮೋದಿಸಿದರು. ಶ್ರೀಗಳಾದ ಬಿ. ...ರಾಯಣಸ್ವಾಮಿ, ಪಿ. ಸೀತಾರಾಮಯ್ಯ ...ಲಂ ರಂಗಯ್ಯ ಮತ್ತು ಟಿ. ಮರಿಯಪ್ಪ ...ವರು ಮಾತನಾಡಿ ನಿರ್ಣಯವನ್ನು ವಿರೋ ...ಸಿದರು. ಈ ಪದ್ಧತಿಯು ಎಲ್ಲಾ ರಾಜ ...ಕ್ಷಗಳಿಂದಲೂ ಖಂಡಿಸಲ್ಪಟ್ಟಿದೆ. ಅದ ...ಪ್ರಜಾಪ್ರಭುತ್ವದ ಮನ್ನಣೆ ಸಹ ಇರು ...ವುದಿಲ್ಲ. ಇಲ್ಲದ ವೈಷಮ್ಯ ಮತ್ತು ಅನೀತಿ ...ಗೆ ಎಡೆ ಕೊಡುತ್ತದೆ. ಶಾಸನ ಸಭೆಯ ...ಸದಸ್ಯರು ಕೊಟ್ಟ ಭರವಸೆಗೂ ಇದು ...ವಿರೋಧವಾಗಿದೆ. ಸರ್ಕಾರದವರು ಈ ವಿ ...ಷಯದಲ್ಲಿ ಖಂಡನಾರ್ಹರೇ ವಿನಾ, ವಂದ ...ನಾರ್ಹರಲ್ಲ. ಈ ಪದ್ಧತಿ ಒಂದೆರಡು ಕಡೆ ...ಗಳಿಗೆ ತರಲ್ಪಟ್ಟು ತಿರಸ್ಕೃತವಾಗಿದೆ ಎಂ ... ಭಾಷಣಕಾರರು ತಿಳಿಸಿದರು.

೧೫-೩ ರಿಂದ ನಿರ್ಣಯವು ಬಿದ್ದುಹೋ ...ಯಿತು.

ಮೈಸೂರು ನಗರದಲ್ಲಿ ನಿವೇಶನಗಳನ್ನು ...ಜನರಿಗೆ ಮಾರುವ ಸಂಬಂಧದಲ್ಲಿ, ...ಬಡಾವಣೆಗಳನ್ನು ನಿರ್ಮಿಸುವಾಗ, ಅಲ್ಲಿನ ...ವಾಸಿಗಳಿಗೆ, ನೀರು ಒಳಚರಂಡಿ ಮೊದ ...ಲಾದ ಸೌಕರ್ಯಗಳನ್ನು ಕಲ್ಪಿಸಿ, ಆ ವೆಚ್ಚ ...ವನ್ನು ಸಹಾಯಮಾಡಿ ಪ್ರಕಾರ ನಿವೇಶನ ...ಗಳ ಬೆಲೆಗೆ ಸೇರಿಸಿ ಹಂಚಬೇಕು. ಖುಷ್ ಖರೀದಿಗೆ ...ಕೊಡುವಾಗ ಅದನ್ನು ಜಾಹಿರಾತು ಮಾಡಿ ...ಅರ್ಜಿಗಳನ್ನು ಬರಮಾಡಿಕೊಂಡು ಪುರಸಭೆ ...ಯ ಸಲಹೆಯೊಡನೆ ವಿಲೇವಾರಿಮಾಡಬೇ ...ಕು—ಎಂಬ ನಿರ್ಣಯವು ಅಂಗೀಕೃತ ...ವಾಯಿತು.

ಎಲ್ಲಾ ರೇಷನ್ ಡಿಪೋಗಳಲ್ಲಿಯೂ ಬೆ ...ಲೆಯನ್ನು ಹಾಕಲು ರೇಷನ್ ಅಧಿಕಾರಿಗಳು ...ಆಜ್ಞೆ ಮಾಡಬೇಕೆಂದು ಪ್ರಾರ್ಥಿಸಲು ಶ್ರೀ॥ ಚೌ ...ಡಯ್ಯನವರು ತಂದಿದ್ದ ನಿರ್ಣಯವು ಅಂ ...ಗೀಕೃತವಾಯಿತು. ಈ ಬಗ್ಗೆ ಈಗಾಗಲೇ ಕ ...ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ ...ಎಂದು ಅಧ್ಯಕ್ಷರು ತಿಳಿಸಿದರು.

...ಸೇರಿನ ಮೂಟೆಯೊಂದಕ್ಕೆ ೩ ರೂ ...ಕೆ ಇಳಿಸಲು ಸರಬರಾಜು ಮಾಡಲು ...ದಿರುವ ಬಸವಯ್ಯನವರು ಕಳುಹಿಸಿದ್ದ ...ದನ್ನು ಅಂಗೀಕರಿಸಲಾಯಿತು.

ಎಕ್ಸೈಜ್ ಲೈಸೆನ್ಸಿಂಗ್ ಸಮಿತಿಗೆ ಶ್ರೀ॥ ...ಳ ಪಿ ಗೋಪಾಲಕೃಷ್ಣ ಶೆಟ್ಟಿ ಮತ್ತು ...ಕೃಷ್ಣಮೂರ್ತಿ ರಾಯರನ್ನೂ, ಗುಣಾಂ ...ಗರ್ಭಿಣಿ ಮತ್ತು ಶಿಶು ಸಂರಕ್ಷಣಾ ಸಮಿ...

ನೀತಿಯನ್ನು ಬದಲಾಯಿಸದಿದ್ದರೆ ಉಚ್ಚಾಟನೆ

ಕರಾಚಿಯಲ್ಲಿ ಲೀಗು ಮಾಡಿರುವ ನಿರ್ಣಯದಿಂದ ವೈಟ್ ಹಾಲ್ ಕ್ಷೇತ್ರದಲ್ಲಿ ಕೋಲಾಹಲದ ವಾತಾವರಣ ಉಂಟಾಗಿದೆಯೆಂದು ಲಂಡನ್ನಿನಿಂದ ವರದಿ ಬಂದಿದೆ. ಲೀಗಿನ ಆಟ ಕೊನೆಗೂ ಖಚಿತವಾಗಿ ಬ್ರಿ॥ ಸರ್ಕಾರಕ್ಕೆ ಈ ನಿರ್ಧಾರದ ಮೂಲಕ ವೇದ್ಯವಾದಂತಾಗಿದೆ. ಡಿಸೆಂಬರ್ ೬ ರ ವಿವರಣೆಯನ್ನು ಕಾಂಗ್ರೆಸ್ಸು ಒಪ್ಪಿಕೊಂಡಿದೆಯೆಂದೂ, ಅದು ಮಾಡಿರುವ ಟೀಕೆಯು ಅಷ್ಟು ಪ್ರಾಧಾನ್ಯವಾದದ್ದಲ್ಲವೆಂದೂ ಅಭಿಪ್ರಾಯ ಪಡಲಾಗಿದೆ. ಲೀಗು ತನ್ನ ನೀತಿಯನ್ನು ಬದಲಾಯಿಸಿ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸದಿದ್ದಲ್ಲಿ ಕೇಂದ್ರ ಸರ್ಕಾರದಲ್ಲಿ ಐಕ್ಯತೆಯನ್ನು ದೂಷಿಸುವುದಕ್ಕಾದರೂ ಲೀಗು ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ಬ್ರಿ॥ ಸರ್ಕಾರವು ಒತ್ತಾಯಪಡಿಸುತ್ತದೆಂದು ಹೇಳಬಹುದಾಗಿದೆ. ಇಲ್ಲದಿದ್ದರೆ ಭಾರತದ ಸಿವಿಲ್ ಆಡಳಿತವು ಛಿದ್ರವಾಗುತ್ತೆಂಬ ಭೀತಿಯು ಲಂಡನ್ನಿನಲ್ಲಿ ಮೂಡಿದೆ. ಲೀಗು ಸರ್ಕಾರದಲ್ಲಿ ಪ್ರವೇಶಿಸಿದಂದಿನಿಂದ ಆಡಳಿತದಲ್ಲಿ ಕೋಮುವಾರು ಜಾಡ್ಯ ತಲೆದೋರಿ ಪತ್ರಿ... ಮುಖ್ಯವಾದ ವಿಚಾರಗಳಲ್ಲಾ ಮುಂದು ಹಾಕಲ್ಪಡುತ್ತಿವೆಯೆಂದೂ, ಆದ್ದರಿಂದ ಲೀಗ್ ಪ್ರತಿನಿಧಿಗಳನ್ನು ಕೇಂದ್ರ ಸರ್ಕಾರದಿಂದ ಹೊರಹಾಕದೆ ವಿಧಿ ಇಲ್ಲವೆಂದೂ ಬ್ರಿ॥ ಸರ್ಕಾರಕ್ಕೆ ಮನವರಿಕೆಯಾಗಿರುವುದಾಗಿ ತಿಳಿದುಬಂದಿದೆ.

ಸಂಧಾನವನ್ನು ಆರಂಭಿಸಲು ರಾಜರುಗಳಿಗೆ ಸೂಚನೆ?

ಸಂಸ್ಥಾನಾಧಿಪತಿಗಳು ಕೂಡಲೇ ರಾಜ್ಯಾಂಗ ಸಮಿತಿಯಿಂದ ನೇಮಕವಾಗಿರುವ ಸಂಧಾನ ಸಮಿತಿಯೊಂದಿಗೆ ಮಾತುಕತೆಗಳನ್ನು ಆರಂಭಿಸಬೇಕೆಂದೂ, ಈ ವಿಚಾರದಲ್ಲಿ ಅಗತ್ಯವಾದ ಸಲಹೆಗಳನ್ನು ಲಂಡನ್ನಿನಿಂದ ಕೊಡಲಾಗುವುದೆಂದೂ ಬ್ರಿ॥ ಸರ್ಕಾರವು ಸದ್ಯದಲ್ಲೇ ನರೇಂದ್ರ ಸಮಿತಿಗೆ ಸೂಚನೆಯನ್ನು ಕೊಡುವುದೆಂದು ತಿಳಿದು ಬಂದಿದೆ. ರಾಜ್ಯಾಂಗ ಸಭೆಯ ಮುಂದಿನ ಅಧಿವೇಶನದಲ್ಲಿ ಸಂಸ್ಥಾನದ ಪ್ರತಿನಿಧಿಗಳು ಭಾಗವಹಿಸುವಂತಾಗಬೇಕೆಂದು ಸೂಚಿಸಲಾಗುವುದೆಂದೂ ಹೇಳಲಾಗಿದೆ.

ತಿಗೆ ಶ್ರೀಮತಿ ಎಂ ಎ ಸೀತಮ್ಮ ಮತ್ತು ಪಿ ಸೀತಾರಾಮಯ್ಯನವರನ್ನೂ ಸದಸ್ಯರನ್ನಾಗಿ ಚುನಾಯಿಸಲಾಯಿತು. ಬರುವ ತಿಂಗಳಲ್ಲಿ ನಗರದಲ್ಲಿ ಆರೋಗ್ಯ ಪ್ರದರ್ಶನವೊಂದನ್ನು ನಡೆಸುವಂತೆ ನಿರ್ಧರಿಸಲಾಯಿತು.

ಗೋಪಾಲರಾಯರ ಪ್ರಕರಣ

ಸ್ವಂ.ಸು.ವ್ರೋ(] ಬೆಂಗಳೂರು ೬

ಧರ್ಮರಕ್ಷಾಕರ ಗೋಪಾಲರಾಯರ ಮೊಕದ್ದಮೆಯು ಇದನ ಮುಂದುವರಿದಾಗ ದಂಡಿನ ಪೋಲೀಸ್ ಇನ್ಸ್‌ಪೆಕ್ಟರಾದ ಶ್ರೀ ಮೋಹರವರು ಸಾಕ್ಷ್ಯವಿತ್ತರು—"೧೨ನೇ ತಾ॥ ೩ ಘಂಟೆಗೆ ಶ್ರೀ ಧ್ರುವರಾಯರು ನನ್ನ ಮನೆಗೆ ಬಂದರು. ಸರ್ವೋತ್ತಮರಾಯರ ಮನೆಗೆ ಬರುವಂತೆ ಕೇಳಿದರು. ಅವರ ಜೊತೆಯಲ್ಲಿ ಹೋದೆ. ಸರ್ವೋತ್ತಮರಾಯರ ಮನೆಯಲ್ಲಿ ೨ ಮತ್ತು ೩ನೇ ಅಪಾದಿತರು ಇದ್ದರು. ಒಡವೆಗಳನ್ನು ತೋರಿಸಬೇಕೆಂದೂ ಮತ್ತು ಪತ್ರಗಳನ್ನು ಕೊಡಬೇಕೆಂದೂ ಧ್ರುವರಾಯರು ಅವರನ್ನು ಕೇಳಿದರು. ಅದರಂತೆ ಅವರು ಕೊಟ್ಟರು. ಮೂರನೇ ದಿನ ಮೂರು ಜನ ಅಪಾದಿತರೊಡನೆ ಮತ್ತು ನಾನು ಧ್ರುವರಾಯರ ಜತೆಯಲ್ಲಿ ಆಲಸೂರು ಪೋಲೀಸ್ ಠಾಣೆಗೆ ಬಂದೆವು. ಅಲ್ಲಿ ಮಹಜರ್ ನಡೆಯಿತು. ಈ ಮೂವರು ಅಪಾದಿತರನ್ನೂ ದಂಡಿನ ಸರಹದ್ದು ಬಿಟ್ಟು ಹೊರಕ್ಕೆ ಕರೆದು ಕೊಂಡು ಬರಲು ನಾನು ಯಾವ ನ್ಯಾಯಾಸ್ಥಾನದ ಅನುಮತಿಯನ್ನೂ ಪಡೆದಿರಲಿಲ್ಲ. ಅಪಾದಿತರುಗಳು ಆನಾಗಿಯೇ ಬಂದರು.

ನಂತರ ಶ್ರೀಮತಿ ಲಿಜೋ ಎಂಬುವರು ಈ ರೀತಿ ಸಾಕ್ಷ್ಯವಿತ್ತರು—ನನಗೆ ಗೋಪಾಲರಾಯರು ೩ ವರ್ಷದಿಂದ ಗೊತ್ತು. ನನ್ನ ಒಡವೆಗಳನ್ನು ಮಾರಿಕೊಡುವಂತೆ ನಾನು ಅವರಿಗೆ ಕೊಟ್ಟಿದ್ದೆ. ಅದಕ್ಕೆ ರಶೀತಿ ನಾಸಿದಲ್ಲಿ ಅವರು ಸೆಂಟ್ರಲ್ ಬ್ಯಾಂಕಿಗೆ ೪ ಸಾವಿರ ರೂ ಗಳಿಗೆ ಒಂದು ಚಕ್ಕನ್ನು ಕೊಟ್ಟಿದ್ದರು. ನಾನು ಅದಕ್ಕೆ ಒಪ್ಪಿ ಕೊಡುತ್ತಿರಲಿಲ್ಲ. ಅವರು ಒಡವೆ ಮಾರಿ ದುಡ್ಡು ಕೊಟ್ಟಿಲ್ಲ. ದಸರಾ ೧೫ ನೇ ತಾ॥ ನಾನು ಅವರ ಮನೆಗೆ ಹೋಗಿ ಈ ವಿಚಾರ ಪ್ರಸ್ತಾಪಿಸಿದೆ. ಅವರು ಬೆಂಗಳೂರು ನಗರದ ೩ ಎಸ್ ಪಿ ಗಳಿಗೆ ಒಂದು ಪತ್ರ ಬರೆದುಕೊಟ್ಟರು. ಅದನ್ನು ಅವರಿಗೆ ಕಳುಹಿಸಿದೆ. ಇಮವರೆವಿಗೂ ಆ ವಿಚಾರವೇನಾಯಿತೆಂಬುದು ಗೊತ್ತಿಲ್ಲ.

ನಂತರ ವಕೀಲರಾದ ಶ್ರೀ॥ ವೀರಪ್ಪನವರ ಸಾಕ್ಷ್ಯವು ನಡೆಯಿತು.

"ಒಬ್ಬ ಹಿಂದೂ" ಅಥವಾ "ಹಬೀಬುರ್ ರಹಮಾನ್" ಎಂಬ ಹೆಸರಿನಿಂದ ಹೊರಟಿರುವ ಕಲ್ಲು ಅಚ್ಚಿನ ಪತ್ರ ಪ್ರತಿಗಳನ್ನು ನಿಷೇಧಿಸ ಮಟ್ಟುಗೋಲು ಸರ್ಕಾರದವರು ಆಜ್ಞೆ ಇತ್ತಿದ್ದಾರೆ.

ರೈಲ್ವೆ ದರ ಹೆಚ್ಚುವುದು

೩ನೇ ತರಗತಿ ಪ್ರಯಾಣಿಕರ ರೈಲ್ವೆದರವನ್ನು ಶೇಕಡ ೧೦ರಷ್ಟು ಹೆಚ್ಚಿಸಲಾಗುವುದು. ಈ ಬಗ್ಗೆ ಸಂಚಾರ ಮಂತ್ರಿಗಳಾದ ಡಾ॥ ಮಥಾಯಿಯವರು ಕೇಂದ್ರಶಾಸನ ಸಭೆಯಲ್ಲಿ ೧೭ ನೇ ತಾ॥ ಮಸೂದೆಯೊಂದನ್ನು ಮಂಡಿಸುವರು. ಇಂಟರ್ ಕ್ಲಾಸ್ ದರವನ್ನು ಹೆಚ್ಚಿಸಲಾಗುವುದೆಂದೂ, ಮೊದಲನೇ ಮತ್ತು ಎರಡನೇ ತರಗತಿ ದರಗಳನ್ನು ಬದಲಾಯಿಸುವುದಿಲ್ಲವೆಂದೂ ಹೇಳಲಾಗಿದೆ.

ವಾನ್ ಪೇಪನ್‌ರವರ ದಸ್ತಗಿರಿ

ಹಿಟ್ಲರನ ಪ್ರಧಾನ ರಾಜತಾಂತ್ರಿಕ ಸಲಹೆಗಾರರಾಗಿದ್ದ ವಾನ್‌ಪೇಪನ್‌ರವರು ಕೋರ್ಟಿನಲ್ಲಿ ತಪ್ಪು ಹೇಳಿಕೆಯನ್ನು ಕೊಟ್ಟರೆಂಬ ಅಪಾದನೆಯ ಮೇಲೆ ಅವರನ್ನು ದಸ್ತಗಿರಿ ಮಾಡಲು ನೂರೆಂಬರ್ಗ್‌ನ ನ್ಯಾಯಾಧೀಶರು ಆಜ್ಞೆ ಮಾಡಿರುವರು. ಹಿಂದೆ ಜರ್ಮನಿಯ ಸರ್ವಾಧಿಕಾರಿಯಾಗಿದ್ದ ಹಿಂಡನ್‌ಬರ್ಗ್‌ರವರ ನಂತರ ಹಿಟ್ಲರನೇ ಆ ಸ್ಥಾನಕ್ಕೆ ಬರಬೇಕೆಂದು ಹಿಂಡನ್‌ಬರ್ಗ್‌ರವರು ಬರೆದ ಶಾಸನದಲ್ಲಿ ಒಂದು ಸೂಚನೆಯನ್ನು ವಾನ್‌ಪೇಪನ್ನರು ಬರೆದಿದ್ದರೆಂಬುದೇ ಅವರ ಮೇಲಿನ ಅಪಾದನೆಯೆಂದು ವರದಿಯಾಗಿದೆ. ಹಿಟ್ಲರನ ಮಂತ್ರಿಯಾಗಿದ್ದ ಸ್ಪಿರ್ಟ್‌ರವರನ್ನೂ ಸಹ ಯುದ್ಧ ಪಾತಕಿಯೆಂದು ಪರಿಗಣಿಸಿ ಅವರನ್ನೂ ಸಹ ದಸ್ತಗಿರಿ ಮಾಡಲಾಗಿದೆ.

ಕಲ್ಲಿದ್ದಲು ಅಭಾವದಿಂದ ಮೋಟಾರು ಕಾರ್ಖಾನೆ ಮುಚ್ಚಿದೆ

ಜಗತ್ಪ್ರಸಿದ್ಧವಾದ ಆಸ್ಟಿನ್, ರೋಲ್ಸ್‌ರಾಯ್ಸ್ ಮೋಟಾರು ಕಾರ್ಖಾನೆಗಳೂ, ಡನಲಪ್ ಟೈರ್ ಕಂಪೆನಿಯೂ ಕಲ್ಲಿದ್ದಲಿನ ಅಭಾವದಿಂದ ಮುಚ್ಚಲ್ಪಟ್ಟಿರುವುದಾಗಿ ಇಂಗ್ಲೆಂಡಿನಿಂದ ಸುದ್ದಿ ಬಂದಿದೆ. ಇದಲ್ಲದೆ ಅನೇಕ ಇತರ ಬಟ್ಟೆ ಕಾರ್ಖಾನೆಗಳೂ ಮುಚ್ಚಲ್ಪಟ್ಟಿವೆ.

ಪಶ್ಚಿಮ ಬಂಗಾಳಕ್ಕೆ ಮುಸ್ಲಿಮರ ವಲಸೆ

ಈಗ ಪಶ್ಚಿಮ ಬಂಗಾಳವು ಹಿಂದೂಗಳ ಬಹುಮತವನ್ನು ಪಡೆದಿದೆ. ಬಂಗಾಳಾ ಲೀಗ್ ಸರ್ಕಾರವು ಇದನ್ನು ತಪ್ಪಿಸಿ ಇಡೀ ಬಂಗಾಳಾ ಪ್ರಾಂತ್ಯವನ್ನು ಮುಸ್ಲಿಂ ಬಹುಸಂಖ್ಯಾತ ಪ್ರದೇಶವನ್ನಾಗಿ ಮಾಡಿಕೊಳ್ಳಲು ಬಿಹಾರಿನ ಮುಸ್ಲಿಮರಿಗೆ ವಲಸೆ ಬರಲು ಅವಕಾಶ ಕೊಟ್ಟಿದೆ—ಎಂಬುದಾಗಿ ಅಖಿಲ ಭಾರತ ಹಿಂದೂ ಮಹಾಸಭಾ ಕಾರ್ಯದರ್ಶಿಗಳು ಹೇಳಿಕೆ ಇತ್ತಿದ್ದಾರೆ.

ಹೊಸಪತ್ರಿಕೆಗಳಿಗೆ ಅನುಮತಿ ಇಲ್ಲ

ಸ್ವಂ.ಸು.ವ್ರೋ(] ಬೆಂಗಳೂರು ೬.

ಸಂಸ್ಥಾನದಲ್ಲಿ ಬರುವ ಜುಲೈ ೧ನೇ ತಾ॥ ವರೆವಿಗೂ ಹೊಸ ಪತ್ರಿಕೆಗಳನ್ನು ಪ್ರಕಟಿಸಲು ಸರ್ಕಾರವು ಅನುಮತಿ ಕೊಡುವುದಿಲ್ಲವೆಂದು ಒಂದು ಪ್ರಕಟನೆ ಹೊರಟಿದೆ. ಆ ಕಾಲದೊಳಗೆ ಪತ್ರಿಕೆಗಳಿಗೆ ಹೆಚ್ಚು ಕಾಗದವನ್ನು ಕೊಡಬೇಕೆಂದು ಬರುವ ಅರ್ಜಿಗಳನ್ನೂ ಸಹ ಪರಿಶೀಲಿಸುವುದಿಲ್ಲವೆಂದು ಅದರಲ್ಲಿ ತಿಳಿಸಲಾಗಿದೆ.

೦ ಬಿಹಾರ್ ಪ್ರಾಂತ್ಯದಲ್ಲಿ ೧೦ ಸಾವಿರ ಮಂದಿ ಹಿಂದೂಗಳು ಇಸ್ಲಾಂ ಮತಕ್ಕೆ ಸೇರಿದ್ದಾರೆಂದು ತಿಳಿದುಬಂದಿದೆ. ಪಾಟ್ನಾ ನಗರದ ನಾಲ್ಕು ಮಂದಿ ವಿದ್ಯಾರ್ಥಿನಿಯರು ನಿಜ್ಜಲರಾಗಿದ್ದರೆ ... ವ ಶಾಂತರ ಹೊಂದಿದವರ ಪೈಕಿ ... ಕೆಲ ಸರಗಳು ಹಿಂದೂಗಳೇ ಹೆಚ್ಚು

ಸಾಧ್ವಿ

ತಾ|| ೬-೨-೪೭ ಗುರುವಾರ

ಕ್ಯುಮುಲೆಟಿವ್ ಓಟಿನ ಖಂಡನೆ

ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಕ್ಯುಮ್ಯುಲೆಟಿವ್ ಓಟಿನ ಪದ್ಧತಿಯನ್ನು ಸರ್ಕಾರದವರು ಜಾರಿಗೆ ತಂದಿರುವುದನ್ನು ಖಂಡಿಸಿ ರಾಜಧಾನಿಯ ಪೌರಸಭೆಯು ನಿನ್ನೆ ನಿರ್ಣಯವನ್ನು ಮಾಡಿರುತ್ತದೆ. ಇದು ಸಹಜವೂ ಸಮಯೋಚಿತವೂ ಆದ ತೀರ್ಮಾನವಾಗಿರುತ್ತದೆ ಮತ್ತು ಪ್ರಜಾಭಿಪ್ರಾಯವನ್ನು ಸಂಪೂರ್ಣವಾಗಿ ಪ್ರತಿಬಿಂಬಿಸುತ್ತದೆ.

ಈ ಓಟಿನ ಪದ್ಧತಿಯನ್ನು ಜಾರಿಗೆ ತಂದುದಕ್ಕಾಗಿ ಸರ್ಕಾರಕ್ಕೆ ಮೆಚ್ಚಿಗೆಯನ್ನು ಸೂಚಿಸಿ ಟೌನ್ ಮತ್ತು ನಗರ ಪೌರಸಭೆಗಳಿಗೂ ಇದೇ ಕ್ರಮವನ್ನು ಅನುಸರಿಸಬೇಕೆಂದು ಮಿ|| ನೂರ್‌ಹುಸೇನ್‌ರವರು ನಿರ್ಣಯವನ್ನು ತಂದಿದ್ದರು. ಇದರ ಮೇಲೆ ವಿಶೇಷ ಚರ್ಚೆ ನಡೆಯಿತು ಪ್ರಸಂಗದಲ್ಲಿ ವಿವಿಧ ಮತದಾನ ಪದ್ಧತಿಗಳ ವಿಮರ್ಶೆಯು ಜರುಗಿತು. ಎಲ್ಲಕ್ಕಿಂತಲೂ ಈ ಕ್ರಮವು ಅತ್ಯಂತ ಪ್ರತಿಗಾಮಿಯೂ ಮತ್ತು ಅನುಪಯುಕ್ತವೂ ಆದುದೆಂದು ತಿಳಿಸಲಾಯಿತು. ವಿಶೇಷ ಬಹುಮತದಿಂದ ನಿರ್ಣಯವು ಬಿದ್ದುಹೋಯಿತು.

ಇಂತಹ ಹಾನಿಕರವಾದ ಪದ್ಧತಿಯನ್ನು ಜಾರಿಗೆ ತರಬಾರದೆಂದು ಶಾಸನ ಸಭೆಯಲ್ಲಿ ಹಲವು ಸದಸ್ಯರು ಸೂಚಿಸಿದ್ದರು. ಅದನ್ನು ಜಾರಿಗೆ ತರುವುದಿಲ್ಲವೆಂದೂ ಸಹ ಮಂತ್ರಿಗಳಾದ ಮಿ|| ರಾಯರವರು ಭರವಸೆಯಿತ್ತಿದ್ದರು. ಆದರೆ ಆ ಭರವಸೆಯನ್ನು ಮೂಲೆಗೊತ್ತರಿಸಿ, ಶಾಸನ ಸಭೆಗಳ ಅಭಿಪ್ರಾಯವನ್ನು ನಿರ್ಲಕ್ಷಿಸಿ ಪ್ರಜಾಭಿಪ್ರಾಯವನ್ನು ತಿಳಿದುಕೊಳ್ಳದೆ ಹಟಕ್ಕಾಗಿ ಈ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಶಾಸನ ಸಭೆಗಳಿಗೇ ಬೇಡವಾದ ಈ ಕ್ರಮವು ಸ್ಥಳೀಯ ಸಂಸ್ಥೆಗಳಿಗೆ ಇನ್ನೂ ಹೆಚ್ಚು ಅನಗತ್ಯವಾಗಿರುತ್ತದೆ.

ಪ್ರತ್ಯೇಕ ಚುನಾವಣೆ ಮತ್ತು ಕ್ಯುಮ್ಯುಲೆಟಿವ್ ಓಟಿನ ಪದ್ಧತಿಯನ್ನು ನಮ್ಮ ಸರ್ಕಾರದವರು ಶಾಸನ ಸಭೆಗಳ ಚುನಾವಣೆಗಳಲ್ಲಿ ಜಾರಿಗೆ ತಂದು ಈಗಾಗಲೇ ವಿಶೇಷ ಅಸಮಾಧಾನಕ್ಕೆ ಗುರಿಯಾಗಿದ್ದಾರೆ. ಕೋಮುವಾರು ಭಿನ್ನತೆಗೂ, ವ್ಯಕ್ತಿಗಳ ಸ್ವೇಚ್ಛೆಗೂ ಇದು ಅವಕಾಶವಿತ್ತಿರುವುದೆಂಬ ಪ್ರಮಾಣಗಳು ಬಂದಿವೆ. ಇಂತಹ ವಿಷಬೀಜವನ್ನು ಸ್ಥಳೀಯ ಸಂಸ್ಥೆಗಳಲ್ಲಿಯೂ ಬಿತ್ತುವುದು ಸ್ವಲ್ಪವೂ ಹಿತಕರವಲ್ಲ. ಟೌನ್ ಮ್ಯುನಿಸಿಪಾಲಿಟಿಗಳಿಗೆ ಅನೇಕ ಕಡೆ ಒಟ್ಟಿಗೆ ಎಲ್ಲಾ ಸದಸ್ಯರುಗಳನ್ನೂ ಮತದಾರರು ಚುನಾಯಿಸಬೇಕಾಗಿರುವ ಸಂದರ್ಭಗಳಲ್ಲಿ ಎಲ್ಲ ಓಟುಗಳನ್ನೂ ಒಬ್ಬರಿಗೇ ಕೊಡುವಂತೆ ಹೇಳುವುದು ಸ್ವಲ್ಪವೂ ಸಮಂಜಸವಲ್ಲ. ಇದರಿಂದ ಪ್ರಜೆಗಳ ವಿಶ್ವಾಸಕ್ಕೆ ಪಾತ್ರರಾಗದಿದ್ದರೂ, ಕೇವಲ ಹಲವಾರು ಜನರ ಬೆಂಬಲದಿಂದ ಪ್ರಬಲರಾದ ಕೆಲವು ವ್ಯಕ್ತಿಗಳು ಅಧಿಕಾರ ಸ್ಥಾನಗಳನ್ನು ಆಕ್ರಮಿಸಲು ಅವಕಾಶವಾಗುವುದು.

ಅಲ್ಪ ಸಂಖ್ಯಾತರ ಹಿತವು ಈ ಪದ್ಧತಿಯಿಂದ ಸಾಧಿಸಲ್ಪಡುವುದೆಂಬುದು ಬರಿಯ ಭ್ರಾಂತಿ. ಅಲ್ಪಸಂಖ್ಯಾತರೆಂದರೆ ಯಾರು? ಮುಸಲ್ಮಾನರೆ, ಕ್ರೈಸ್ತರೆ, ಯಹೂದ್ಯರೆ, ಪಾರ್ಶಿಗಳೆ, ಬ್ರಾಹ್ಮಣರೆ, ಬ್ರಾಹ್ಮಣೇತರರೆ? ಇಂತಹ ಅಲ್ಪ ಸಂಖ್ಯಾತರ ಗುಂಪುಗಳಿಗೆ ಮಿತಿ ಮೇರೆಯೇ ಇಲ್ಲ. ಮುಖ್ಯವಾಗಿ ಕೋಮುವಾರು ಪ್ರಮಾಣದ ಮೇಲೆ ರಾಜಕೀಯ ಸಂಸ್ಥೆಗಳನ್ನು ರಚಿಸುವುದು ಅತ್ಯಂತ ಹಾನಿಕರವಾದ ಅಂಶ. ಅದನ್ನು ತಡೆಗಟ್ಟುವುದಕ್ಕಾಗಿಯಾದರೂ ಈ ದುಷ್ಟ ಪದ್ಧತಿಯನ್ನು ತ್ಯಜಿಸಬೇಕು. ಇನ್ನಾದರೂ ಸರ್ಕಾರದವರು ತಮ್ಮ ಆಜ್ಞೆಯನ್ನು ವಾಪಸು ತೆಗೆದುಕೊಂಡು ಮಾಮೂಲಿನಂತೆ ಚುನಾವಣೆಗಳು ನಡೆಯಲು ಏರ್ಪಡಿಸಬಾರದೇ?

ವಿಯಟ್ ನಾಂ ಸೈನಿಕರ ಮುನ್ನಡೆ

ಇಂಡೋ ಚೀನಾದ ಕದನವು ಮತ್ತೆ ಬಿರುಸಾಗಿ ಸಾಗುತ್ತಿರುವ ವರದಿ ಬಂದಿದೆ. ಹಾನಾಯಿನ ಆಗ್ನೇಯಕ್ಕೆ ೩೦ ಮೈಲಿಯಲ್ಲಿರುವ ನಾಮ್‌ಡಿನ್ ಎಂಬ ಪಟ್ಟಣದ ಬಳಿ ವಿಯಟ್ ನಾಂ ಸೈನಿಕರು ಒಂದೇ ಸಮನೆ ಮುನ್ನುಗ್ಗುತ್ತಿರುವುದಾಗಿ ತಿಳಿದು ಬಂದಿದೆ. ಫ್ರೆಂಚ್ ಶಾಸನಕಾರರುಗಳ ಒಂದು ಸಭೆಯು ಸೈಗಾನಿನಲ್ಲಿ ನಡೆದು ಪರಿಸ್ಥಿತಿಯನ್ನು ಪರಿಶೀಲಿಸಿತು

ಇನ್ನೂ ಬಹಳ ಕಾಲ ರೇಷನ್

ಭಾರತದಲ್ಲಿ ಜಾರಿಯಲ್ಲಿರುವ ರೇಷನ್ ಪದ್ಧತಿಯನ್ನು ಇನ್ನೂ ಬಹಳ ಕಾಲ ಮುಂದುವರಿಸಿಕೊಂಡು ಹೋಗಬೇಕಾಗುವುದೆಂದು ಕೇಂದ್ರ ಸರ್ಕಾರದ ಆಹಾರ ಇಲಾಖಾ ಸಲಹೆಗಾರರಾದ ಮಿ|| ಕರ್ಬಿಯವರು ತಿಳಿಸಿದ್ದಾರೆ. ರೇಷನ್ ಪ್ರಮಾಣವನ್ನು ಸಾಧ್ಯವಾದಷ್ಟು ಹೆಚ್ಚಿಸಿ, ಸರಬರಾಜು ಸಮೃದ್ಧಿಯಾಗಿ ದೊರೆತು ಅಭಾವದ ಸೊಲ್ಲು ಅಡಗಿಹೋದಾಗ ಈ ಪದ್ಧತಿಯನ್ನು ವಜಾ ಮಾಡಬೇಕೆಂದು ತಿಳಿಸಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಸಮಿತಿ

ಮಂಡ್ಯ ೫

ಇದೇ ಮಾಹೆ ೧೬ ನೇ ತಾ|| ಭಾನುವಾರ ಮಂಡ್ಯ ಜಿಲ್ಲಾ ಕಾಂ ಕಾರ್ಯಕಾರಿಸಮಿತಿ ಸಭೆಯು ಕೊತ್ತಹಳ್ಳಿ ಗ್ರಾಮದಲ್ಲಿ ಸಂಜೆ ೭ ಘಂಟೆಗೆ ಜರುಗುವುದು. ಸದಸ್ಯರೆಲ್ಲರೂ ತಪ್ಪದೆ ದಯಮಾಡಿಸಬೇಕಾಗಿ ಕಾರ್ಯದರ್ಶಿಗಳು ಕೋರಿರುತ್ತಾರೆ.

—

ಶಾಖಾ ಆರಂಭೋತ್ಸವ

ಅರ್. ಜಿ. ಬ್ರಾಂಡ್ ಕುಪ್ಪದ ತಯಾರಕೇಂದ್ರದ ಮಾಲಿಕರಾದ ಶ್ರೀ ಎ. ಎಂ. ಪಳನಿಯಪ್ಪ ಚೆಟ್ಟಿಯಾರ್ ಅಂಡ್ ಸನ್ಸ್ ರವರು ರಾಜಧಾನಿಯ ಇರ್ವಿನ್ ರಸ್ತೆಯ ೨೧೩ ನೇ ನಂಬರು ಮಳಿಗೆಯಲ್ಲಿ ತಮ್ಮ ಶಾಖೆಯೊಂದನ್ನು ನಿನ್ನೆದಿವ ಬೆಳಗ್ಗೆ ತೆರೆದರು ಅನೇಕ ಮಾನ್ಯರನ್ನು ಆಹ್ವಾನಿಸಿ ಸತ್ಕರಿಸಿದರು

ಪತ್ರಿಕಾ ಮುದ್ರಣ ಕಾಗದಕ್ಕೆ ಹತೋಟಿ ಆಜ್ಞೆ

ಮೈಸೂರು ಸರ್ಕಾರದವರು ವೃತ್ತ ಪತ್ರಿಕೆಗಳು ಮುದ್ರಿತವಾಗುವ ಕಾಗದದ ಬಗ್ಗೆ ಒಂದು ಹೊಸ ಆಜ್ಞೆಯನ್ನು ಹೊರಡಿಸಿದ್ದಾರೆ. ಇದುವರಿವಿಗೆ ಮುದ್ರಿತವಾಗುತ್ತಿರುವ ಪ್ರತಿಗಳಿಗಿಂತ ಹೆಚ್ಚಾಗಿ ಮುದ್ರಿಸಲಾಗದು. ಅನುಮತಿ ಇಲ್ಲದೆ ಬೇರೆ ಕಾಗದವನ್ನು ಬಳಸಕೂಡದು. ನ್ಯೂಸ್ ಪ್ರಿಂಟ್ ಕಾಗದವನ್ನು ಬೇರೆಯವರಿಗೆ ಮಾರುವುದನ್ನು ಅಥವಾ ಕೊಳ್ಳುವುದನ್ನು ನಿಷೇಧಿಸಲಾಗಿದೆಯೆಂದು ಈ ಆಜ್ಞೆಯು ತಿಳಿಸುತ್ತದೆ.

ಸೈದಾಪುರದಲ್ಲಿ ಮತ್ತೆ ಅಕೃತ್ಯಗಳು

"ಬಂಗಾಳಾ ಪ್ರಾಂತ್ಯದ ಸೈದಾಪುರದಲ್ಲಿ ಮತ್ತೆ ಕ್ರೂರಕೃತ್ಯಗಳು ನಡೆಯುತ್ತಿರುವುದಾಗಿ ವರದಿಬಂದಿದೆ. ಇದನ್ನು ತಡೆಗಟ್ಟಲು ಸರ್ಕಾರದವರು ಕಾರ್ಯಕ್ರಮಗಳನ್ನು ಕೈಗೊಳ್ಳದಿರುವುದು ಆಶ್ಚರ್ಯಕರ. ಆ ಸ್ಥಳದಲ್ಲಿ ಸಶಸ್ತ್ರ ಬಲವಿದ್ದರೂ ಈ ದಾಂಧಲೆ ನಡೆಯಿತು. ಸೈದಾಪುರ ಕ್ಷೇತ್ರದಿಂದ ಜನರು ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದಾರೆ"— ಎಂಬುದಾಗಿ ಅ|| ಭಾ|| ಹಿಂದೂ ಮಹಾಸಭೆಯ ಕಾರ್ಯದರ್ಶಿ ಶ್ರೀ ಅಶುತೋಷ ಲಹಿರಿಯವರು ಪತ್ರಿಕೆಗಳಿಗೆ ಹೇಳಿಕೆ ಇತ್ತಿದ್ದಾರೆ.

ಹೈಸ್ಕೂಲಿಗಾಗಿ ಪ್ರಯತ್ನ

ಸ್ವಂ.ಸು] ಯಳಂದೂರು

ಈ ಊರಿನಲ್ಲಿ ಹೈಸ್ಕೂಲು ಸ್ಥಾಪಿಸಲು ಸ್ಥಳೀಯ ಮಹನೀಯರು ಸರ್ಕಾರವನ್ನೂ ಮತ್ತು ಶ್ರೀಮಂತ ಜಹಗೀರ್‌ದಾರರನ್ನೂ ಸಹಾಯ ಕೋರಬೇಕೆಂದು ಪ್ರಯತ್ನ ನಡೆಸುತ್ತಿದ್ದಾರೆ

ಮಿಡಲ್ ಸ್ಕೂಲ್ ಪರೀಕ್ಷೆಗೆ ಈ ಊರನ್ನೂ ಒಂದು ಕೇಂದ್ರವನ್ನಾಗಿ ಸರ್ಕಾರದವರು ಅಂಗೀಕರಿಸಿದ್ದಾರೆ ಹೊರಗಿನಿಂದ ಬರುವ ವಿದ್ಯಾರ್ಥಿಗಳಿಗೆ ಊಟೋಪಚಾರಗಳಿಗಾಗಿ ಸಾ|| ಬಸವಣ್ಣದೇವರು ಮತ್ತು ಸಾ|| ರೇವಣ್ಣದೇವರು ರವರು ತಲಾ ೧೦೦ ರೂ ಕೊಡಲು ವಾಗ್ದಾನ ಮಾಡಿರುತ್ತಾರೆ.

ಈ ಊರಿನ ಪರಸ್ಪರ ಸಹಾಯ ಸಂಘದ ವಾರ್ಷಿಕ ಸಭೆ ನಡೆದು ಮೂರು ನಾಲ್ಕು ವರ್ಷಗಳಾದುವು. ಹಳೇ ಲೆಕ್ಕಗಳ ತನಿಖೆ ಆಗಿಲ್ಲವೆಂಬ ಕಾರಣದಿಂದ ಮುಂದಿನ ಕೆಲಸ ಕಾರ್ಯಗಳಿಗೆ ಅಡಚಣೆಯಾಗಿದೆ.

ಸೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:-

ಮೈಸೂರು ಸಿಟಿ ವಾಣೀ ವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಶ್ಚಿಮ ದಿಕ್ಕಿನಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ|| ೧೨-೨-೪೭ ನೇ ಮಂಗಳವಾರ ಹರಾಜು ಇಸಿ ಹಾಲ್ ನಾನೆಯು ಪರಿಸ್ಥಿತಿಗೆ ಮಿಲಿಟರಿ ಬಳಸಿ ತಾ|| ೧೬-೨-೪೭ ನೇ ಭಾನುವಾರ ಬೆಳಗ್ಗೆ ೯-೩೦ ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ನಡೆಸಲಾಗುತ್ತೆ. ಇತರ ವಿವರಗಳನ್ನು ಆಫೀಸಿನಲ್ಲಿ ರಜಾ ದಿನಗಳಲ್ಲದ ಇತರ ದಿನಗಳಲ್ಲಿ ೧೧ ಘಂಟೆಯಿಂದ ೫ ಘಂಟೆಯವರೆಗೆ ತಿಳಿಯಬಹುದು.

(ಸಹಿ) ಕೆ. ವೆಂಕಟೇಶ ಐಯ್ಯಂಗಾರ್,
ಛೇರ್ಮನ್ನರಿಗಾಗಿ
ನಗರಾಭಿವೃದ್ಧಿ ಸಮಿತಿ, ಮೈಸೂರು.

ಶ್ರೀ
ಗಣೇಶಾ ಟಾಕೀಸ್
5-2-47 ರಿಂದ ಪ್ರತಿ ದಿನ
ಮೂರು ಆಟಗಳು
ಪಾತ್ರ:- ಪ್ರಭಾಕರ್, ರಾಜ್ಯಂ, ಸ್ನೇಹಲತಾ ದೇವಿ, ಬಾಲ ಸರಸ್ವತಿ
ಮಂಗಳ ಸೂತ್ರಂ
ಅದ್ಭುತ ಕಲಾಪ್ರದರ್ಶನದಿಂದೊಡಗೂಡಿದ ಅಮೋಘವಾದ ತೆಲುಗು ಚಿತ್ರ
Morning Shows on
7, 8, 9, & 10th, at 10-30 a. m.
"Lisbon Story"

ಹೊಸ ಜವಳಿ
ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ
ಇಂದೇ ಭೇಟಿ ಕೊಡಿ!
ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ !!
ಬಿ. ಕೆಂಚಪ್ಪ ಸನ್ಸ್,
ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು.

ಇಂಗ್ಲಿಷ್ ಸರ್ಜ್ ಕೋಟಿಂಗ್
ಅನೇಕ ನಮೂನೆಗಳಲ್ಲಿ ಪುನಃ ಬಂದಿವೆ
:ಬಾಹುಸಾರ್ ಟ್ರೇಡಿಂಗ್ ಕಂಪೆನಿ,
ಓಲ್ಡ್ ಮೈಸೂರು ಬ್ಯಾಂಕ್ ರೋಡು,
ಮೈಸೂರು

Rajkamal, Mysore
From 7-2-47 Daily Three Shows
'GARDEN OF ALLAH'
IN FULL LENGTH : : TECHNICOLOR
Morning Shows from 7-2-47 at 10.30 a. m. for 4 days
TOPTER
A Halroach Hilarious Comedy.

OPERA TALKIES
From 4-2-47
The
SECRET CODE
(Full Serial)
Daily three Shows

Edited, printed and published by A. R. Nagarajan at the Sadhvi Press D. Subbiah Road, Mysore.

ರಿಜಿ. ನಂ. 592 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೭—೨—೪೭ [ಸಂಚಿಕೆ ೧೫೪

ಗಾಂಧಿಜಿ ಹಿಂತಿರುಗಲು ಮುಸ್ಲಿಮರ ಒತ್ತಾಯ

...ರ್ಥಿಯವರನ್ನು ನೌಖಾಲಿ ಯಿಂದ ಓಡಿಸಿ

—

...ರ್ಥಿಯವರನ್ನು ನೌಖಾಲಿಯಿಂದ ...ಲೇ ನಾಳು ಹಿಂಬಲಿಸಿ ... ಒತ್ತಾಯಪಡಿಸಲು ನೂರಾರು ... ವಿದ್ಯಾರ್ಥಿಗಳು ನಿನ್ನೆ ಬಂಗಾ... ಸಭೆಯ ಆವರಣದಲ್ಲಿ ಪ್ರದರ್ಶ... ನಡೆಸಿದರು. ಆಗ ನೂರು ಮಂದಿ ...ರ್ಥಿಗಳನ್ನು ದಸ್ತಗಿರಿ ಮಾಡಲಾಯಿತು

...ಟೀಷ ಮಂತ್ರಿಯ ನಿಧನ

...ಟಿಷ್ ಮಂತ್ರಿ ಮಂಡಲದ ಏಕ ಮಾ... ಸದಸ್ಯರಾದ ಮಿ. ಎ... ಎಲ್ಲೀ ವಿ... ನಿನ್ನೆ ದಿನ ಲಂಡನ್ ಆಸ್ಪ... ನಿಧನರಾದರೆಂದು ತಿಳಿದು ಬಂದಿದೆ

...ಂದ್ರ ಶಾಸನ ಸಭೆಯಲ್ಲಿ ಲೀಗಿಗೆ ಸೋಲು

...ಸತ್ತ ಗುಜರ ಪ್ರದೇಶದ ನಂದೀಹಾರ್ ...ಮೇಲೆ ಪುಂಡುಗಂಡಾಯವನ್ನು ವಿ... ಅವರಿಂದ ಜಾಮೀನಿಗಾಗಿ ಜನರನ್ನು ...ವನ್ನು ಖಂಡಿಸಿ ಮುಸ್ಲಿಂ ಲೀಗಿ... ಕೇಂದ್ರ ಶಾಸನ ಸಭೆಯಲ್ಲಿ ಮಂಡಿ... ಸೂಚನೆಯು ... ಮತಗಳಿಂದ ಬಿದ್ದುಹೋಯಿತು

ವಿವಾಹ ವಿಚ್ಛೇದನಕ್ಕೆ ಅನುಮತಿ

...ದೂ ಮಹಿಳೆಯರಿಗೆ ವಿವಾಹ ವಿ...ದನ ಮಾಡಿಕೊಳ್ಳಲು ಕಾನೂನಿನ ಪ್ರ... ಅವಕಾಶ ಕೊಡುವ ಮಸೂದೆಯೊ... ಬೊಂಬಾಯಿನಲ್ಲಿ ಸಧ್ಯದಲ್ಲೇ ಜಾರಿ... ಬರುವುದಾಗಿ ಅಲ್ಲಿನ ಒಳಾಡಳಿತ ಮಂ... ಮಹಿಳೆಯರ ನಿಯೋಗ ಒಂದಕ್ಕೆ ...ವಸೆ ಇತ್ತಿದ್ದಾರೆ

...ದ್ರಾಸ್ ಪ್ರಾಂತ್ಯದಲ್ಲಿ ತೆಂಗಿನಕಾಯಿ ಬೆಲೆ ಕಂಟ್ರೋಲ್

ಮಲಬಾರ್ ಮತ್ತು ದ|| ಕನ್ನಡ ಜಿಲ್ಲೆ...ಗಳ ತೆಂಗಿನಕಾಯಿಗೆ ಎರಡೂವರೆ ...ಕೊಬ್ಬರಿ ಎಣ್ಣೆ ಒಂದು ವೀಸೆಗೆ ರೂ... ಇತರ ಜಿಲ್ಲೆಗಳಲ್ಲಿ ತೆಂಗಿನಕಾಯಿ ... ಮೂರಾಣೆ ಕೊಬ್ಬರಿ ಎಣ್ಣೆ ವೀಸೆ ... ರೂ ಗಳಿರಬೇಕೆಂದು ಮದ್ರಾಸ್ ...ರದವರು ಕಂಟ್ರೋಲ್ ಆಜ್ಞೆಯನ್ನು ...ರಿಸಿದ್ದಾರೆ

...ಟುಗಳ ಹರಾಜು

ಸಕಲ ಸಮಸ್ತ ಜನರಿಗೂ ತಿಳಿಸುವುದೇನೆಂದರೆ:-

ಮೈಸೂರು ಸಿಟಿ ರಾಣೀ ವಿಲಾಸ ಮೊಹ...ಲ್ಲಿ ಗೋಕುಲಂ ರೋಡಿನ ಪಶ್ಚಿಮ... ಕಾಟೇಜ್ ಮತ್ತು ಬಂಗ್ಲೋ... ನಂ ... ನೇ ... ...ರಾಜು ಇನ್ಸ್‌ಪೆಕ್ಟರ್ ನಾಮೆಯ... ನಡಸಿ ತಾ|| ೧೭-೨-೪೭ ...ವಾರ ಬೆಳಗ್ಗೆ ೯-೩೦ ಘಂಟೆಗೆ ... ಬಹಿರಂಗವಾಗಿ ಹರಾಜು ...ಸುತ್ತೆ. ಇತರ ವಿವರಗಳನ್ನು ...ನಲ್ಲಿ ರಜಾ ದಿನಗಳಲ್ಲದ ಇತರ ದಿವ... ಘಂಟೆಯಿಂದ ೫ ಘಂಟೆಯ... ತಿಳಿಯಬಹುದು

(ಸಹಿ) ಕೆ. ವೆಂಕಟೇಶ ಅಯ್ಯಂಗಾರ್, ಛೇರ್ಮನ್ನರಿಗಾಗಿ
ನಗರಾಭಿವೃದ್ಧಿ ಸಮಿತಿ, ಮೈಸೂರು.

—

ಪ್ರೈಸಿಡೆಂಟರಿಗೆ ಕಾಂಗ್ರೆಸ್ ನಾಯಕರ ಒತ್ತಾಯ

ಲೀಗು ರಾಜ್ಯಾಂಗ ಸಭೆಗೆ ಸೇರಲು ನಿರಾಕರಿಸಿರುವುದರಿಂದ ಕೇಂದ್ರ ಸರ್ಕಾರದಲ್ಲಿರುವ ಲೀಗ್ ಮಂತ್ರಿಗಳು ತಮ್ಮ ಸ್ಥಾನವನ್ನು ಖಾಲಿ ಮಾಡಬೇಕೆಂದು ಪಂ|| ನೆಹರು ಮತ್ತು ಸ|| ಪಟೇಲರು ವೈಸರಾಯರೊಡನೆ ಮಾತುಕತೆ ನಡೆಸಿದಾಗ ಒತ್ತಾಯ ಪಡಿಸಿದರೆಂದು ತಿಳಿದುಬಂದಿದೆ. ವೈಸರಾಯರಾದರೋ ಡಿಸ್ಮಿಸ್ ಕೋರಿದುದಕ್ಕೆ ಇದ್ದಾರೆಂದೂ, ಲಂಡನ್ನಿನಿಂದ ಸಲಹೆಗಾಗಿ ಕಾಯುತ್ತಿರುವರೆಂದೂ ಹೇಳಲಾಗಿದೆ

ಟೆಂಡರ್ ನೋಟೀಸು

ಮೈಸೂರು ಅರಮನೆಗೆ 1947—48ನೇ ಸಾಲಿಗೆ ಸಪ್ಲೈ ಆಗಬೇಕಾದ ವಿವಿಧ ವಸ್ತುಗಳ ಸಾಮಾನುಗಳಿಗಾಗಿ ಮೊಹರು ಮಾಡಲ್ಪಟ್ಟ ಟೆಂಡರುಗಳು ಈ ಕೆಳಗೆ ರುಜು ಮಾಡಿದವರಿಂದ 10-2-1947 ನೇ ಸೋಮವಾರ ಮಧ್ಯಾಹ್ನ ಮೂರು ಘಂಟೆ ವರಿವಿಗೆ ತೆಗೆದುಕೊಳ್ಳಲ್ಪಡುತ್ತೆ.

ಮೋತೀಖಾನೆ ಮ್ಯಾನೇಜರಿಂದ ಹೆಚ್ಚು ವಿಷಯಗಳನ್ನು ತಿಳಿದುಕೊಳ್ಳಬಹುದು.

ಟಿ. ರಾಮಯ್ಯ,
31-1-47 ಹುಜೂರು ಸೆಕ್ರೆಟರಿ,

ಸಂಯುಕ್ತ ಯೂರೋಪ್ ಸಮಿತಿಗೆ ಕಾರ್ಮಿಕರ ಅಸಹಕಾರ

ಮಿ|| ಚರ್ಚಿಲರ ನಾಯಕತ್ವದಲ್ಲಿ ಏರ್ಪಡಿಸಿರುವ ಸಂಯುಕ್ತ ಯೂರೋಪಿನ ಸಮಿತಿಯಲ್ಲಿ ರಷ್ಯಕ್ಕೆ ಸ್ಥಾನ ಕೊಡದೇ ಇರುವುದರಿಂದ ಬ್ರಿಟಿಷ್ ಲೇಬರ್ ಪಕ್ಷದ ಕಾರ್ಯಕಾರಿ ಸಮಿತಿಯವರು ಸದರಿ ಸಮಿತಿಯಲ್ಲಿ ಭಾಗ ವಹಿಸಕೂಡದೆಂದು ನಿರ್ಧರಿಸಿದ್ದಾರೆ

ಉನ್ನತ ವ್ಯಾಸಂಗಕ್ಕಾಗಿ ಚೀಣಾಕ್ಕೆ ಮೈಸೂರಿನವರು

ಮೈಸೂರು ವಿಶ್ವವಿದ್ಯಾನಿಲಯದ ತತ್ವಶಾಸ್ತ್ರ ಪದವೀಧರರಾದ ಶ್ರೀ ವೆಂಕಟರಮಣನ್‌ರವರು ಕಾಶಿ ಹಿಂದು ವಿದ್ಯಾಲಯದಲ್ಲಿ ಸಂಶೋಧನಾ ಕಾರ್ಯ ನಡೆಸುತ್ತಿದ್ದರು. ಈಗ ಅವರು ಉನ್ನತ ವ್ಯಾಸಂಗಕ್ಕಾಗಿ ಚೀನಾಕ್ಕೆ ತೆರಳಲಿದ್ದಾರೆ

— —

ವಾರ್ಷಿಕೋತ್ಸವ

ಮೈಸೂರು ೭

ವೈಶ್ಯ ಯುವಜನ ಸಂಘದ ವಾರ್ಷಿಕೋತ್ಸವವು ಇದೇ ೯ ನೇ ತಾ|| ಭಾನುವಾರ ಸಂಜೆ ೫ ಗಂಟೆಗೆ ಕೌಶಾಲಿನಲ್ಲಿ ನ್ಯಾಯ ವಿಧಾಯಕ ಸಭೆ ಮತ್ತು ಪುರಸಭೆಯ ಸದಸ್ಯರಾದ ಶ್ರೀಮತಿ ಎಂ ಆರ್ ಲಕ್ಷ್ಮಮ್ಮನವರ ಅಧ್ಯಕ್ಷತೆಯಲ್ಲಿ ಜರುಗುವುದು. ಪ್ರತಿನಿಧಿ ಸಭಾ ಸದಸ್ಯರಾದ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಭಾಷಣ ಮಾಡುವರು. ಇದರ ಅಂಗವಾಗಿ ಅಖಿಲ ಮೈಸೂರು ಅಂತರ ವೈಶ್ಯ ಸಂಸ್ಥೆಗಳ ಚರ್ಚಾಕೂಟವೊಂದು ೮ ನೇ ತಾ|| ಸಂಜೆ ಶ್ರಾವೇರಿ ಪಟ್ಟಣಂ ಸುಬ್ಬರಾಯಶೆಟ್ಟರು ವಿದ್ಯಾರ್ಥಿ ನಿಲಯದಲ್ಲಿ ಜರುಗುವುದು

ಜಿಲ್ಲಾ ಕಾಂಗ್ರೆಸ್ ಸಮಿತಿ

ಇದೇ ಮಾರ್ಚ್ ೯ ನೇ ತಾ|| ಭಾನುವಾರ ಮಧ್ಯಾಹ್ನ ೧ ಗಂಟೆಗೆ ದೇವರಾಜ ಮಾರ್ಕೆಟ್ ಮೇಲ್ಭಾಗದಲ್ಲಿರುವ ಪುರ ಸಭಾ ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಜರುಗುವುದು. ಜಿಲ್ಲಾ ಬೋರ್ಡ್ ಚುನಾವಣೆ ಮುಂತಾದ ಪ್ರಾಮುಖ್ಯ ವಿಷಯಗಳ ಚರ್ಚೆ ನಡೆಯಲಿರುವುದರಿಂದ ಸದಸ್ಯರೆಲ್ಲರೂ ತಪ್ಪದೆ ದಯಮಾಡಿಸಬೇಕಾಗಿ ಕಾರ್ಯದರ್ಶಿಗಳಾದ ಶ್ರೀ ಕೆ ... ... ಮಾರಸ್ವಾಮಿಯವರು ಪ್ರಾರ್ಥಿಸಿದ್ದಾರೆ

ಗೋಪಾಲರಾಯರ ಪ್ರಕರಣ

ಸ್ವಂ ಸು ವರ್ದಿ] ಬೆಂಗಳೂರು ೭

ಧರ್ಮರತ್ನಾಕರ ಬಿ ಎನ್ ಗೋಪಾಲರಾಯರ ಆಭರಣಗಳ ಅಪಹರಣದ ಮೊಕದ್ದಮೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ|| ಧ್ರುವರಾಯರು ಈ ರೀತಿ ಸಾಕ್ಷ್ಯವಿತ್ತರು

ಡಿಸೆಂಬರ್ ೧೨ ನೇ ತಾ|| ರಾತ್ರಿ ದಫೇದಾರ್ ವೆಂಕಟಾಚಲರಾವ್ ಮತ್ತು ಸಬ್ ಇನ್ಸ್‌ಪೆಕ್ಟರ್ ರುದ್ರಪ್ಪನವರನ್ನು ಗೋಪಾಲರಾಯರ ಮನೆಗೆ ಕಳುಹಿಸಿ ಗೋಪಾಲರಾವ್, ಅವರ ಪತ್ನಿ, ಡ್ರೈವರ್ ಮತ್ತು ಕಾವಲುಗಾರನನ್ನು ತನಿಖೆ ಮಾಡಿಸಲಾಯಿತು. ಮಾರನೇ ದಿನ ಡಿ. ಎಸ್ ಪಿ ಯವರಿಗೆ ವಿವರಗಳನ್ನು ತಿಳಿಸಲಾಯಿತು. ನಗರದ ಇನ್ಸ್‌ಪೆಕ್ಟರಾದ ಪುಟ್ಟವೀರಯ್ಯನವರ ಸಹಾಯದಿಂದ ಅಪಾದಿತರುಗಳನ್ನು ಮೊದಲನೇ ಅಪಾದಿತರ ಮನೆಯಲ್ಲಿ ನಾನೇ ದಸ್ತಗಿರಿ ಮಾಡಿದೆನು. ಒಡವೆಗಳನ್ನೂ ಕಾಗದ ಪತ್ರಗಳನ್ನೂ ವಶಪಡಿಸಿಕೊಂಡೆನು. ಅವರನ್ನು ನಗರದ ಅಲ್ಸೂರ್ ಪೊಲೀಸ್ ಸ್ಟೇಷನ್ನಿಗೆ ಕರೆತರಲಾಯಿತು. ಸರ್ವೋತ್ತಮರಾಯರ ಅಪೇಕ್ಷೆಯಂತೆ ಗೋಪಾಲರಾವ್, ಅವರ ಹೆಂಡತಿ ಮತ್ತು ಡ್ರೈವರನ್ನು ಅಲ್ಲಿಗೆ ಕರೆಸಲಾಯಿತು. ಅವರು ಒಡವೆಗಳನ್ನು ಗುರ್ತು ಹಚ್ಚಿದರು

ಅನಂತರ ಪೊಲೀಸ್ ನೌಕರರಾದ ಮೂರ್ತಿ ಮತ್ತು ನಂಜುಂಡಯ್ಯನವರನ್ನೂ, ಡಾಕ್ಟರ್ ನರೋನಾ, ಮಿಸೆಸ್ ಆಕ್ಸರ್ ಮೇಜರ್ ಭರ್ಟ್, ಮಾಧವಕೃಷ್ಣಯ್ಯ, ಎಂ ಪಿ ವೆಂಕಟರಾವ್ ಮುಂತಾದವರನ್ನು ತನಿಖೆ ಮಾಡಲಾಯಿತು

ಕೆಲವು ಜನ ಸಾಕ್ಷಿಗಳು ವಿರೋಧವಾಗಿ ತಿರುಗಿರುವುದರಿಂದ ಅವರುಗಳನ್ನು ಪರೀಕ್ಷಿಸುವುದಿಲ್ಲವೆಂದು ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ|| ರಾಜರತ್ನಂರವರು ತಿಳಿಸಿದರು

ಪಾನ ನಿರೋಧ ಸಮಿತಿ

ನಿನ್ನೆ ಮತ್ತು ಮೊನ್ನೆ ಪಾನ ನಿರೋಧ ಸಲಹಾ ಸಮಿತಿಯು ಹಾ|| ಇಮಾಂರವರ ಅಧ್ಯಕ್ಷತೆಯಲ್ಲಿ ಸೇರಿ ಪಾನ ನಿರೋಧಕ್ಕಾಗಿ ಇದುವರೆವಿಗೆ ನಡೆದಿರುವ ಕಾರ್ಯಕ್ರಮಗಳನ್ನು ಪರಿಶೀಲಿಸಿತು. ಸಾರ್ವಜನಿಕ ಅಭಿಪ್ರಾಯವನ್ನು ತಿಳಿಯಲು ಒಂದು ಪ್ರಶ್ನಾವಳಿಯನ್ನು ಸಿದ್ಧಗೊಳಿಸಬೇಕೆಂದು ತೀರ್ಮಾನಿಸಿತು

ಸ್ಯಾ|| ಇನ್ಸ್‌ಪೆಕ್ಟರ ಸಂಬಳ

ಸೀನಿಯರ್ ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ಸಂಬಳವನ್ನು ೬೦-೪-೧೧೦ ಮತ್ತು ಜೂನಿಯರ್‌ಗಳ ಸಂಬಳವನ್ನು ... ೨-೫೦ ರೂಗಳಿಗೂ ಹೆಚ್ಚಿಸಲಾಗಿದೆ

ಶಸ್ತ್ರ ತ್ಯಾಗಕ್ಕಾಗಿ ಹೊಸ ಯೋಜನೆ

ವಿಶ್ವದ ಎಲ್ಲ ರಾಷ್ಟ್ರಗಳಿಗೂ ಸಮನಾಗಿ ಅನ್ವಯವಾಗುವಂತೆ ಶಸ್ತ್ರ ತ್ಯಾಗ ಯೋಜನೆಯನ್ನು ತಯಾರಿಸುವುದಕ್ಕಾಗಿ ಸಂಯುಕ್ತ ಸಂಸ್ಥಾನ, ರಷ್ಯ, ಫ್ರಾನ್ಸ್, ಆಸ್ಟ್ರೇಲಿಯಾ ಮತ್ತು ಕೊಲಂಬಿಯ ರಾಷ್ಟ್ರಗಳ ಪ್ರತಿನಿಧಿಗಳು ನ್ಯೂಯಾರ್ಕಿನಲ್ಲಿ ಸಭೆ ಸೇರಿದ್ದಾರೆ. ಈ ಸಭೆಯಲ್ಲಿ ಒಮ್ಮತದ ತೀರ್ಮಾನವಾದಲ್ಲಿ ಅದನ್ನು ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯ ಮುಂದೆ ಮಂಡಿಸಲಾಗುವುದೆಂದು ಗೊತ್ತಾಗಿದೆ

● ರಾಜಧಾನಿಯ ವಿ. ಪಿ. ಆಸ್ಪತ್ರೆ ರೋಡಿನಲ್ಲಿ ನೂತನವಾಗಿ ಸ್ಥಾಪಿತವಾಗಿರುವ ಶ್ರೀ ಎಲ್ಲಮ್ಮನ ದೇವಸ್ಥಾನದ ಮಂಭಾಗದಲ್ಲಿ ಶ್ರೀ|| ವೆಂಕಟಸುಬ್ಬಶರ್ಮರಿಂದ ... ... ಈ ದಿನ ಸಂಜೆ ೭ ಘಂಟೆಗೆ ನಡೆಯುತ್ತದೆ.

ಸಾಧ್ವಿ

ತಾ|| ೭-೨-೪೭ ಶುಕ್ರವಾರ

ರಾಜಧಾನಿಯ ನೀರು ಸರಬರಾಜು

ಮೈಸೂರು ನಗರದ ನೀರು ಸರಬರಾಜು ವ್ಯವಸ್ಥೆಯನ್ನು ಸುಧಾರಿಸಿ ಅದರಲ್ಲಿರುವ ನಿಯಮಗಳನ್ನು ಪರಿಷ್ಕರಿಸಿ, ಹೊಸ ನಿಯಮಗಳನ್ನು ಸರ್ಕಾರದವರು ಪ್ರಕಟಪಡಿಸಿದ್ದಾರೆ. ಇವುಗಳ ಬಗ್ಗೆ ಆಕ್ಷೇಪಣೆಗಳಿದ್ದರೆ ನಾಳೆಯ ದಿವಸದೊಳಗೆ ಸಾರ್ವಜನಿಕರು ತಿಳಿಸಬಹುದೆಂದು ಸೂಚಿಸಲಾಗಿದೆ. ಈ ಸಲಹೆಗಳು ಪೂರ್ವಭಾವಿಯಾಗಿ ಪೌರಸಭೆಯವರಿಂದಲೂ, ನೀರು ಸರಬರಾಜಿಗಾಗಿ ಏರ್ಪಡಿಸಿದ್ದ ವಿಶೇಷ ಸಮಿತಿಯವರಿಂದಲೂ ಪರಿಷ್ಕರಿಸಲ್ಪಟ್ಟಿರುತ್ತವೆ.

ರಾಜಧಾನಿಯ ನೀರು ಸರಬರಾಜಿನ ವ್ಯವಸ್ಥೆಯು ಸಮರ್ಪಕವಾಗಿಲ್ಲವೆಂದೂ, ಅದನ್ನು ಕ್ರಮಪಡಿಸಬೇಕೆಂದೂ ಬಹಳ ದಿನಗಳಿಂದ ಕೂಗುಗಳು ಕೇಳಬರುತ್ತಿದ್ದುವು. ಈಚೆಗೆ ಸರ್ಕಾರದವರು ಇದಕ್ಕಾಗಿ ಆರು ಲಕ್ಷ ರೂ. ಗಳನ್ನು ಸಾಲವಾಗಿ ಕೊಟ್ಟು ಸದ್ಯಕ್ಕೆ ಇರುವ ತೊಂದರೆಗಳನ್ನು ತಪ್ಪಿಸಲು ನೆರವು ನೀಡಿರುತ್ತಾರೆ. ಈಗಾಗಲೇ ಅಲ್ಲಲ್ಲಿ ಕಾಮಗಾರಿ ಕೆಲಸಗಳೂ ನಡೆದಿವೆ. ದೂರ ಪ್ರದೇಶಗಳಲ್ಲಿ ಟ್ಯಾಂಕುಗಳನ್ನು ಕಟ್ಟಿ ನೀರನ್ನು ಒದಗಿಸಲು ಏರ್ಪಾಡು ಮಾಡಲಾಗುತ್ತಿದೆ. ಮೊದಲಿಗಿಂತಲೂ ಸ್ವಲ್ಪ ಮಟ್ಟಿಗೆ ಉತ್ತಮವಾದ ರೀತಿಯಲ್ಲಿ ನೀರು ಸರಬರಾಜಾಗುತ್ತಿದೆ. ಆದರೂ ಸಹ ಎಲ್ಲಾ ಪ್ರದೇಶಗಳಿಗೂ ಕ್ಲಪ್ತವಾದ ರೀತಿಯಲ್ಲಿ ನೀರು ಒದಗುತ್ತಿಲ್ಲ. ಒಂದೊಂದು ಕಡೆಗೆ ಒಂದೊಂದು ರೀತಿಯಲ್ಲಿ ಆಗುತ್ತಿದೆ. ಕೆಲವು ಕಡೆ ದಿನಕ್ಕೆ ಒಂದೆರಡು ಗಂಟೆಗಳ ಕಾಲವೂ ದೊರೆಯುತ್ತಿಲ್ಲ.

ಇನ್ನು ಮುಂದೆ ಬೇಸಿಗೆ ಕಾಲವು ಬರುತ್ತಿದೆ. ಆಗ ಇನ್ನೂ ಹೆಚ್ಚಿನ ನೀರು ಸರಬರಾಜು ಆವಶ್ಯಕವಾಗಿರುತ್ತದೆ. ವಾಣಿವಿಲಾಸ ನೀರು ಸರಬರಾಜಿನ ಕೇಂದ್ರದಲ್ಲಿ ಹೆಚ್ಚು ನೀರನ್ನು ಸಂಗ್ರಹಿಸಲು ಇನ್ನೂ ದೊಡ್ಡ ವಿದ್ಯುಚ್ಛಕ್ತಿ ಯಂತ್ರಗಳು ಬೇಕಾಗಿವೆ. ಅವುಗಳನ್ನು ತರಿಸಲು ಪ್ರಯತ್ನಗಳಾಗುತ್ತಿವೆ. ಈ ಮಧ್ಯೆ ಎಲ್ಲಾ ಮನೆಗಳಿಗೂ ಮೀಟರುಗಳನ್ನು ಹಾಕಲು ಸರ್ಕಾರದವರು ಏರ್ಪಾಡು ಮಾಡಿರುತ್ತಾರೆ. ಇದರಿಂದ ನೀರು ಪೋಲಾಗುವುದು ಬಹಳ ಮಟ್ಟಿಗೆ ಕಡಿಮೆಯಾಗುವುದು.

ನೀರಿನ ಸಂಗ್ರಹದಲ್ಲಿಯೂ, ವಿನಿಯೋಗದಲ್ಲಿಯೂ ಸರಿಯಾದ ಎಚ್ಚರಿಕೆಯಿರಲು ಪುರನಿವಾಸಿಗಳೂ ಸಹ ಇಲಾಖೆಯವರೊಡನೆ ಸಹಕರಿಸುವುದು ಅಗತ್ಯವಾಗಿದೆ. ಮನೆಗಳಲ್ಲಿರುವ ಭಾವಿಗಳಿಗೆ ನಲ್ಲಿಯ ನೀರನ್ನು ಹಲವರು ದಿನವೆಲ್ಲಾ ತಿರುಗಿಸಿ ಬಿಟ್ಟುಕೊಳ್ಳುವರೆಂದು ದೂರುಗಳು ಬರುತ್ತಿವೆ. ಇನ್ನು ಕೆಲವರು ತಮ್ಮ ಮನೆಯ ಚಮೂಟಿಗಳಿಗೂ, ತೋಟಗಳಿಗೂ ನಲ್ಲಿಯ ನೀರನ್ನು ಹಾಯಿಸುವರೆಂಬ ಆಕ್ಷೇಪಣೆಗಳೂ ಇರುತ್ತವೆ. ಮತ್ತೆ ಕೆಲವರು ನಲ್ಲಿಗಳನ್ನು ತಿರುಗಿಸಿ ಬಚ್ಚಲಿಗೆ ವ್ಯರ್ಥವಾಗಿ ನೀರನ್ನು ಬಿಟ್ಟುಬಿಡುತ್ತಿರುವ ಸಂದರ್ಭಗಳೂ ಇವೆಯೆಂದು ಹೇಳಲಾಗಿದೆ. ಮೀಟರುಗಳನ್ನು ಇಡುವುದರಿಂದ ನೀರಿನ ದುಂದು ವೆಚ್ಚವು ತಪ್ಪುವುದು.

ಸರ್ಕಾರಿ ಉದ್ಯಾನವನಗಳಿಗೂ, ರಸ್ತೆಗಳಿಗೂ, ತೋಟಗಳಿಗೂ ನಲ್ಲಿಯ ನೀರನ್ನು ಉಪಯೋಗಿಸಿ ವ್ಯರ್ಥಪಡಿಸುವರೆಂಬ ಆಕ್ಷೇಪಣೆಯೂ ಕೇಳಿಬರುತ್ತಿದೆ. ಇದನ್ನು ತಪ್ಪಿಸಿ ಕೆರೆ ಅಥವಾ ಭಾವಿಗಳ ನೀರನ್ನು ಇವುಗಳಿಗೆ ಉಪಯೋಗಿಸುವಂತೆ ಮಾಡುವುದು ಯುಕ್ತವಾಗಿದೆ. ಆಸ್ಪತ್ರೆ, ಕಾರ್ಖಾನೆ ಮತ್ತು ಇತರ ಸಾರ್ವಜನಿಕ ಕಟ್ಟಡಗಳಲ್ಲಿ ನೀರು ವಿಶೇಷವಾಗಿ ಪೋಲಾಗುತ್ತಿರುವುದು ಕಂಡುಬಂದಿದೆ. ಹೋಟಲುಗಳಲ್ಲಿಯೂ ಸಹ ವಿಪರೀತವಾಗಿ ನೀರು ವೆಚ್ಚವಾಗುತ್ತದೆ. ಅವುಗಳ ತನಿಖೆಯು ತೃಪ್ತಿಕರವಾಗಿ ನಡೆಯುತ್ತಿಲ್ಲವೆಂಬ ದೂರುಗಳೂ ಬಂದಿರುತ್ತವೆ. ಇವುಗಳನ್ನು ಇಲಾಖೆಯವರು ಕ್ರಮಪಡಿಸಬೇಕು.

ವಿದ್ಯುಚ್ಛಕ್ತಿಯ ಇಲಾಖೆಯಂತೆ ಇದರಲ್ಲಿಯೂ ಮಾಹೆಯಾನ ಹಣದ ವಸೂಲಿ ಕ್ರಮವನ್ನು ಏರ್ಪಡಿಸುವುದು ಸರಿಯಲ್ಲ. ಇದಕ್ಕಾಗಿ ಬಿಲ್ಲು ಬರೆಯುವುದು ಮತ್ತು ರಶೀತಿ ಕೊಡುವುದೇ ಮುಂತಾದ ಕೆಲಸ ಕಾರ್ಯಗಳು ಬಹಳವಾಗಿ ಹೆಚ್ಚುವುವು. ಕೇವಲ ಅಲ್ಪ ಪ್ರಮಾಣದಲ್ಲಿ ನೀರಿನ ತೆರಿಗೆಯನ್ನು ಕೊಡುವವರು ಅನೇಕರಿರುತ್ತಾರೆ. ಬರಿಯ ಮೀಟರು ತೆರಿಗೆ ನಾಲ್ಕಾಣೆಯನ್ನು ಮಾತ್ರ ಕೊಡುವವರೂ ಇರುವರು. ವಿದ್ಯುಚ್ಛಕ್ತಿ ಇಲಾಖೆಯಂತೆ ನೂರಾರು ರೂ. ಗಳನ್ನು ಪ್ರತಿ ತಿಂಗಳು ಕೊಡುವವರು ವಿರಳ. ಆಂತಹವರಿಗೆ ಮಾಹೆಯಾನ ವಸೂಲಿ ಕ್ರಮವನ್ನು ಜಾರಿ ಮಾಡಬಹುದು. ಸಣ್ಣ ಪುಟ್ಟ ತೆರಿಗೆದಾರರಿಗೆ ಈಗಿನಂತೆ ಮೂರು ತಿಂಗಳಿಗೊಮ್ಮೆ ವಸೂಲು ಮಾಡುವುದೇ ಲೇಸು.

ಈ ಹೊಸ ವ್ಯವಸ್ಥೆಯಿಂದ ಪ್ರದೇಶಗಳಿಗೆಲ್ಲರಿಗೂ ಕನಿಷ್ಠಾಂಶದ ಪ್ರಮಾಣದಲ್ಲಿಯಾದರೂ ನೀರು ದೊರೆತು ಈಗಿರುವ ನ್ಯೂನಾತಿರೇಕಗಳು ಪರಿಹಾರವಾಗಲೆಂದು ನಾವು ಹಾರೈಸುತ್ತೇವೆ.

Edited, printed and published by A. R. Nagarajan at the Sadhvi Press D Subbiah Road, Mysore.

OPERA TALKIES

From **4-2-47**

The

SECRET CODE

(Full Serial)

Daily three Shows

Morning shows from 7-2-47

DISNEY PRODUCTION

Pino-cchio

(Technicolor)

ಅಂದವಾದ ಬಣ್ಣಗಳಲ್ಲಿ

ವಂಗ ದೇಶದ ರೇಷ್ಮೆ ಸೀರೆಗಳು (Bengal Silk Saries) ಸಿದ್ಧವಾಗಿವೆ. ಬೇಕಾದ್ದನ್ನು ಆರಿಸಿ.

ಬಾಹುಸಾರ್ ಟ್ರೇಡಿಂಗ್ ಕಂಪೆನಿ

ಓಲ್ಡ್ ಮೈಸೂರು ಬ್ಯಾಂಕ್ ರೋಡು, ಮೈಸೂರು

ತಾ|| **8-2-47** ರಿಂದ ಯಶಸ್ವಿ **2** ನೆಯ ವಾರ

ಚಾಮುಂಡೇಶ್ವರಿಯಲ್ಲಿ

ಪ್ರತಿ ದಿನ ೩ ಆಟಗಳು

ಸೊಹ್ರಾಬ್ ಮೋದಿಯವರ ಅನೋಖ ಸಂಗೀತ ಚಾರಿತ್ರಿಕ ಕಲಾಕೃತಿ

ಏಕ್-ದಿನ್-ಕ-ಸುಲ್ತಾನ್

(EK-DIN-KA-SULTAN)

(The Picture that has captivated the hearts of MYSORE PUBLIC)

ಭೂಮಿಕೆ:- ಮೆಹತಾಬ್, ವಾಸ್ತಿ, ಸಾದಿಕ್ ಆಲಿ ಮತ್ತು ಗುಲಾಂ ಮಹಮದ್

An Oswal Films Release, B' City

ರೂ 4000 ಗಳಿರಿ.

ಬಹುಮಾನಗಳು:- ಸರಿಯುತ್ತರಕ್ಕೆ ೨೦೦೦ ರೂ ಒಂದು ತಪ್ಪಿಗೆ ೧೦... ರೂ. ಎರಡು ತಪ್ಪಿಗೆ ೫೦೦ ರೂ ಮೂರು ತಪ್ಪಿಗೆ ೩೦೦ ರೂ ತಾ|| ೨೦-೨-೪೭ ಒಳಗೆ ತಲಪುವ ಸರಿಯುತ್ತರಕ್ಕೆ ೧೦೦ ರೂ. ಹೆಚ್ಚಿಗೆ ಉತ್ತರ ಕಳುಹಿಸುವವರಿಗೆ ೧ ರೂಪಾಯಿ

ಉತ್ತರಗಳು ತಲಪುವ ಕಡೆಯ ತಾರೀಖು ೫-೩-೪೭ ಉತ್ತರ, ಬಹುಮಾನ ಮುಂದಿನ ಸ್ಪರ್ಧೆ ತಾ|| ೯-೩-೪೭ ನೇ ಸಾಧ್ವಿ

— ಸುಲಭ ಸ್ಪರ್ಧೆ ನಂ ೧ —

೧. ದೇವರು ಹ —

೨. ವೃಕ್ಷ — ರ —

೩. ಇದರಿಂದ ಬಹಳ ಜನ ಜೀವಿಸುತ್ತಾರೆ — ವ್ಯ

೪. ಹಣ್ಣು — — ಳಿ

೫. .ಗಳೇ ಹೆಚ್ಚು

— — ಹಾರಿ

೬. ಒಂದು ಸಂಖ್ಯೆ

ಹ — — ರು

೭. ಇದನ್ನು ಪಾತ್ರೆಯಾಗಿ ಉಪಯೋಗಿಸುತ್ತಾರೆ

— ರ —

೮. ಒಂದು ಪ್ರಾಣಿ

ಕೋ —

ಉತ್ತರಕ್ಕೆ ಈ ಪದಗಳನ್ನು ಉಪಯೋಗಿಸಿ:- ೧) ಹರಿ, ಹರ, ೨) ಅರಳಿ, ನೇ... ಹೇರಳೆ; ೩) ವಿದ್ಯ, ವೈದ್ಯ; ೪) ... ನೇರಳೆ, ಹೇರಳೆ; ೫) ಫಲಾಹಾರಿ, ... ಸಾಹಾರಿ, ಜಲಾಹಾರಿ, ಧಾನ್ಯಾಹಾರಿ, ... ಹದಿಮೂರು, ಹದಿನಾರು, ಹತ್ತು ... ೭) ಕರಟ, ಕರಗ, ಬೆಂಳು, ೮) ಕೆ... ಕೋಣ, ಕೋತಿ.

ನಿಯಮಗಳು:- ಚಂದಾ ನೊ... ಕೂಪನ್ನಿಗೆ 1 ರೂ, ನಂತರ ಪ್ರತಿ ... ೮ ಆಣೆ. ಮೊಬಲಗು M O. ... I. P O. ಮೂಲಕ ಕಳುಹಿಸಿ ... ಲಾದ ಮೊಬಲಗು ಪೈಕಿ ಶೇ|| ೮೦ ... ಮಾನವಾಗಿ ಹಂಚಲ್ಪಡುತ್ತ... ... ಹಿಂಭಾಗ ಮತ್ತು M. O. ... ಮೇಲೆ ನಿಮ್ಮ ವಿಳಾಸ ಮತ್ತು ಕೂಪ... ಪೈ ಸ್ಪುಟವಾಗಿ ಬರೆದು

ಸುಲಭ ಸ್ಪರ್ಧೆ ನಂ. 1, ಜಿ. ರಾಮಯ್ಯ, ೫೫೩, ನಜರ್‌ಬಾದ್, ಮೈ... ರು ಇವರಿಗೆ ಕಳುಹಿಸಿ. ಮ್ಯಾನೇಜರ ತೀರ್ಮಾನವೇ ಕಡೆಯದು.

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿ !!

ಬಿ. ಕೆಂಚಪ್ಪ ಸನ್ಸ್

ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು

Rajkamal, Mysore

From 7-2-47 Daily Three Shows

'GARDEN OF ALLAH'

IN FULL LENGTH :: TECHNICOLOR

Morning Shows from 7-2-47 at 10.30 a. m for 4 days

TOPPER

A Halroach Hilarious Comedy.

ರಿ॥ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೮—೨—೪೭ [ಸಂಚಿಕೆ ೧೫೫

ಭೂಪಾಲ್ ಸಂಸ್ಥಾನಕ್ಕೆ ಖಾಸಗಿ ಮಂತ್ರಿಗಳು

ಸಂಧಾನ ಪ್ರಾರಂಭ

ಭಾರತ ರಾಜ್ಯಾಂಗ ಸಭೆಯು ಚುನಾಯಿಸಿರುವ ಸಂಧಾನ ಸಮಿತಿಯೊಡನೆ ನರೇಂದ್ರ ಮಂಡಲಿಯವರು ಏರ್ಪಡಿಸಿರುವ ಸಮಿತಿಯವರು ಇಂದು ನವ ದೆಹಲಿಯಲ್ಲಿ ಮಾತುಕತೆಗಳನ್ನು ಆರಂಭಿಸಿದರು. ಸಂಸ್ಥಾನಗಳು, ಭಾರತದ ಯೂನಿಯನ್ನಿಗೆ ಸೇರುವ ವಿಚಾರ, ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಸಂಸ್ಥಾನಗಳಿಂದ ಆರಿಸಿ ಕಳಿಸುವ ವಿಚಾರಗಳ ಪೀಠಿಕಾ ಚರ್ಚೆ ಇಂದು ನಡೆಯುವುದೆಂದು ತಿಳಿದುಬಂದಿದೆ.

ನೌಖಾಲಿ ಹತ್ಯಾಕಾಂಡದವರ ಉಪವಾಸ ಮುಷ್ಕರ

ನೌಖಾಲಿ ದುರಂತದ ಮುಖ್ಯ ಪುರುಷನಾದ ಸೈಯುದ್ ಗುಲಾಂ ಸಾರವಾರ ಎಂಬ ಲೀಗಿನವರನ್ನು ದಸ್ತಗಿರಿ ಮಾಡಿ ಸೆರೆಮನೆಗೆ ಕಳುಹಿಸಲಾಗಿದೆಯಷ್ಟೆ. ಆತನೂ ಅವನೊಡನೆ ೧೦೦ ಮಂದಿ ಇತರ ಖೈದಿಗಳೂ ಉಪವಾಸ ಮುಷ್ಕರ ಹೂಡಿರುವರೆಂದೂ ತಿಳಿದು ಬಂದಿದೆ.

ಬಲೀ ದ್ವೀಪಸ್ತೋಮದಲ್ಲಿ ದಂಗೆ

ಇಂಡೋನೇಷಿಯಾದ ೭ ಕೋಟಿ ಜನರಿಗೆ ಡಚ್ಚರು ಸ್ವಾತಂತ್ರ್ಯವನ್ನು ಕೊಡುವುದು ಬರೀ ಬೂಟಾಟಿಕೆಯೆಂದೂ, ಆದ್ದರಿಂದ ಅವರ ವಿರುದ್ಧ ಹೋರಾಟ ಅನಿವಾರ್ಯವೆಂದೂ ಸಾರಿ ಬಲೀ ದ್ವೀಪ ಮತ್ತು ಸುತ್ತಮುತ್ತಲಿನ ಇತರ ದ್ವೀಪದ ಜನರು ದಂಗೆ ಎದ್ದಿದ್ದಾರೆಂದು ವಾರ್ತೆ ಬಂದಿದೆ,

೧೦ ಕೋಟಿ ರೂಪಾಯಿನ ನೋಟು ಹೊರಬಿದ್ದಿಲ್ಲ

ನೂರು ರೂಪಾಯಿಗೆ ಮೇಲ್ಪಟ್ಟ ನೋಟುಗಳ ವಿಚಾರದಲ್ಲಿ ಹಿಂದೆಯೇ ಒಂದು ಶಾಸನ ಹೊರಡಿಸಿ ಅವುಗಳನ್ನೆಲ್ಲಾ ಗೊತ್ತಾದ ಅವಧಿಯೊಳಗೆ ಸರ್ಕಾರಕ್ಕೆ ವಶಪಡಿಸಬೇಕೆಂದು ತಿಳಿಸಲಾಗಿದ್ದಿತಷ್ಟೆ. ಆದರೆ ೧೦ ಕೋಟಿ ರೂ. ಗಳ ಭಾರಿ ನೋಟುಗಳು ಹಣ ಪಡೆಯದೆ ಹಾಗೆಯೇ ಅಂತರಂಗವಾಗಿ ಅಡಗಿಕೊಂಡಿರುವುವೆಂದು ಅರ್ಥಸಚಿವರು ಕೇಂದ್ರ ಶಾಸನ ಸಭೆಯಲ್ಲಿ ತಿಳಿಯಪಡಿಸಿದ್ದಾರೆ.

ಕಲ್ಕತ್ತಾ ಬಂದರಿನಲ್ಲಿ ಮುಷ್ಕರ

ಕೆಲಸಗಾರರನ್ನು ಕಡಮೆ ಮಾಡಬಾರದು ಮತ್ತು ತಮ್ಮ ಕೂಲಿ ದರವನ್ನು ಹೆಚ್ಚು ಮಾಡಬೇಕು-ಎಂಬ ಬೇಡಿಕೆಗಳು ಈಡೇರಲಿಲ್ಲವೆಂದು ಕಲ್ಕತ್ತಾ ಬಂದರಿನ ೬೦ ಸಹಸ್ರ ಕೆಲಸಗಾರರು ಮೊನ್ನೆಯಿಂದ ಮುಷ್ಕರ ಆರಂಭಿಸಿದ್ದಾರೆ

ಶ್ರೀ
ಗಣೇಶಾ ಟಾಕೀಸ್
೯-೨-47 ರಿಂದ ಪ್ರತಿ ದಿನ
ಮೂರು ಆಟಗಳು
ಪಾತ್ರ:- ಪ್ರಭಾಕರ್, ರಾಧ್ಯಾ, ಸ್ನೇಹಲತಾ ದೇವಿ, ಬಾಲ ಸರಸ್ವತಿ
ಮಂಗಳ ಸೂತ್ರಂ
ಅದ್ಭುತ ಕಲಾಪ್ರದರ್ಶನದಿಂದೊಡಗೂಡಿದ
ಅನೋಘವಾದ ತೆಲುಗು ಚಿತ್ರ
Morning Shows on
7, 8, 9, & 10th, at 10-30 a m.
"Lisbon Story"

ಎಫ್. ಜಿ. ನಟೇಶರವರು

ಮೈಸೂರು ೮

ದಕ್ಷಿಣ ಭಾರತ ರೈಲ್ವೆಯ ನಿವೃತ್ತ ಜಿಲ್ಲಾ ಟ್ರಾಫಿಕ್ ಸೂಪರಿಂಟೆಂಡೆಂಟರಾದ ಶ್ರೀ ಎಫ್. ಜಿ. ನಟೇಶನ್‌ರವರು ಈ ದಿನ ಬೆಳಗ್ಗೆ ರಾಜಧಾನಿಗೆ ಆಗಮಿಸಿದರು. ಶಾರದಾವಿಲಾಸ ಕಾಲೇಜ್ ವಿದ್ಯಾರ್ಥಿಗಳ ಸಭೆಯಲ್ಲಿ "ಷೇಕ್ಸ್‌ಪಿಯರ್" ಮಹಾಕವಿಯ ವಿಚಾರವಾಗಿ ಉಪನ್ಯಾಸವಿತ್ತರು. ಮೈಸೂರು ಪತ್ರಿಕೋದ್ಯೋಗಿ ಸಂಘಕ್ಕೆ ನಾಳೆ ಬೆಳಗ್ಗೆ ೧೦ ಗಂಟೆಗೆ ಭೇಟಿ ಕೊಡುವರು.

ಜೂಜುಕೋರರ ಪತ್ತೆ

ಅಶೋಕ ರಸ್ತೆಯ ೪೬೮ ನೇ ನಂ ಮನೆಯಲ್ಲಿ ಡಾ ಮಹಮದ್ ಇಬ್ರಾಹಿಂ ಸೇಟ್ ಮುಂತಾದ ನಾಲ್ವರೂ, ಮಿಸೆಸ್ ಅಪ್ಪೆಸ್ವಾಮಿ ಎಂಬ ಸ್ತ್ರೀಯು ಎವರು ರಾತ್ರಿ ೧೦ ಮಂದಿಯೂ ಜೂಜಾಟದಲ್ಲಿ ಭಾಗವಹಿಸಿದ್ದರಿಂದೂ ಮಂದಿ ಪೊಲೀಸರು ದಸ್ತಗಿರಿ ಮಾಡಿ ಸ್ಥಳದಲ್ಲಿದ್ದ ೪೦-೧೮-೦ ರೂ ಗಳನ್ನು ವಶಪಡಿಸಿಕೊಂಡು ಮೊಕದ್ದಮೆ ಹೂಡಿದ್ದಾರೆ.

† ತಾ॥ ೧೦-೨-೪೭ ರಿಂದ ದೊಡ್ಡಪೇಟೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಪ್ರತಿದಿನ ಸಾಯಂಕಾಲ ೬-೩೦ ರಿಂದ ೮ ಘಂಟೆಯವರೆವಿಗೆ ಶ್ರೀ ವೇಣುಗೋಪಾಲದಾಸರವರ ಶಿಷ್ಯರಾದ ವೇ॥ ಹೆಚ್ ಟಿ. ರಾಮಣ್ಣನವರಿಂದ ಶ್ರೀಮದ್ರಾಮಾಯಣವು ಹರಿಕಥಾರೂಪದಲ್ಲಿ ನಡೆಯುತ್ತದೆ ಆಸ್ತಿಕ ಮಹಾಶಯರು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಸೈಟುಗಳ ಹರಾಜು

೮

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ.-

ಮೈಸೂರು ಸಿಟಿ ವಾಣೀ ವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಶ್ಚಿಮ ದಿಕ್ಕಿನಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ॥ ೧೨-೧-೪೭ ನೇ ಮಕರಂ ಹರಾಜು ಇಶ್ತಿಹಾರ್ ನಾಮೆಯ ಷರತ್ತುಗಳಿಗೆ ಒಳಪಡಿಸಿ ತಾ॥ ೧೬-೨-೪೭ ನೇ ಭಾನುವಾರ ಬೆಳಗ್ಗೆ ೯-೩೦ ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇತರ ವಿವರಗಳನ್ನು ಆಫೀಸಿನಲ್ಲಿ ರಜಾ ದಿನಗಳಲ್ಲದ ಇತರ ದಿವಸಗಳಲ್ಲಿ ೧೧ ಘಂಟೆಯಿಂದ ೫ ಘಂಟೆಯ ಒಳಗೆ ತಿಳಿಯಬಹುದು

(ಸಹಿ) ಕೆ. ವೆಂಕಟೇಶ ಅಯ್ಯರ್,
ಛೇರ್ಮನ್ನರಿಗಾಗಿ
ನಗರಾಭಿವೃದ್ಧಿ ಸಮಿತಿ, ಮೈಸೂರು.

ಸಂಗೀತ ಕಛೇರಿ

ಮೈಸೂರು ೮

ಡಿ ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವಿ' ಕಛೇರಿ ಮಹಡಿಯ ಮೇಲೆ ಈ ದಿನ ರಾತ್ರಿ ೯ ಗಂಟೆಗೆ ಸಾಹಿತ್ಯ ಸಂಗೀತ ವಿದ್ವಾನ್ ಎಚ್. ರಾಮಾನುಜಾಚಾರ್ಯರಿಂದ ಸಂಗೀತವು ನಡೆಯುವುದು ಸರ್ವರಿಗೂ ಸ್ವಾಗತವಿದೆ

ಸಿಟಿ ಲೇಬರ್ ಸಬ್ ಫೆಡರೇಷನ್

ಮೊನ್ನೆ ದಿನ ಮೈಸೂರು ನಗರದ ಲೇಬರ್ ಸಬ್ ಫೆಡರೇಷನ್ನಿನ ಆಶ್ರಯದಲ್ಲಿ ವಿವಿಧ ಕಾರ್ಮಿಕ ಸಂಘಗಳ ಪ್ರತಿನಿಧಿಗಳ ಸಭೆಯು ಶ್ರೀ॥ ಟಿ ಎಸ್ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಜರುಗಿ ಶ್ರೀಗಳಾದ ಎಂ. ಎಸ್. ಜೋಯ್ಸರನ್ನು ಅಧ್ಯಕ್ಷರನ್ನಾಗಿಯೂ ಟಿ ಎಸ್ ಸುಬ್ಬಣ್ಣನವರನ್ನು ಉಪಾಧ್ಯಕ್ಷರನ್ನಾಗಿಯೂ ಬಿ ತಿ ಕೆಂಚಪ್ಪ ಮತ್ತು ಸೀತಾರಾಮಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಯಿತೆಂದು ತಿಳಿದು ಬಂದಿದೆ

—

ಸಂಸ್ಥಾನ ಪ್ರತಿನಿಧಿಗಳನ್ನು ಆರಿಸುವ ಹಕ್ಕು ಪ್ರಜೆಗಳದು

ಭಾರತ ರಾಜ್ಯಾಂಗ ರಚನಾ ಸಮಿತಿಗೆ ಸಂಸ್ಥಾನದ ಪರವಾಗಿ ಪ್ರತಿನಿಧಿಗಳನ್ನು ಪ್ರಜೆಗಳೇ ಆರಿಸಬೇಕು, ರಾಜರುಗಳಲ್ಲ ಎಂಬುದಾಗಿ ಸಂಸ್ಥಾನ ಪ್ರಜೆಗಳ ಸಂಧಾನ ಸಮಿತಿಯವರು ಬ್ರಿ॥ ಇಂಡಿಯಾ ಸಂಧಾನ ಸಮಿತಿಗೆ ಕಳುಹಿಸಿರುವ ಪತ್ರದಲ್ಲಿ ತಿಳಿಸಿರುತ್ತಾರೆ. ಸಂಸ್ಥಾನಾಧೀಶರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದೇ ಪ್ರಜಾ ಸಮ್ಮೇಳನಗಳ ಗುರಿಯಾಗಿರುವುದರಿಂದ ರಾಜರುಗಳು ಭಯಪಡುವ ಕಾರಣವೇ ಇಲ್ಲವೆಂದೂ, ನಿರಂಕುಶ ಆಡಳಿತವು ಮುಂದುವರಿದರೆ ಮಾತ್ರ ಅವರಿಗೆ ಕ್ಷೇಮವಿಲ್ಲವೆಂದೂ, ಡಾ॥ ಪಟ್ಟಾಭಿಯವರು ತಿಳಿಯಪಡಿಸಿದ್ದಾರೆ

ಅರಬ್ಬರಿಗೆ ಗಾಂಧೀಜಿಯಲ್ಲಿ ಗೌರವ

ಅಹಿಂಸೆಯಲ್ಲಿ ಅರಬ್ಬರಿಗೆ ನಂಬಿಕೆ ಇಲ್ಲದಿದ್ದರೂ, ಮಹಾತ್ಮ ಗಾಂಧಿಯ ವರನ್ನು ಅವರು ಗೌರವಿಸುವರು ... ಸ್ವತಂತ್ರ ಭಾರತವು ಬನೆಸಬೇಕಾಗಿದೆ ... ಎಂಬುದಾಗಿ ... ಆಗಮಿಸಿ ... ನಿಯೋಗದವರು ಲಂಡನ್ನಿನಲ್ಲಿ ತಿಳಿಸಿರುತ್ತಾರೆ.

ಭೂಪಾಲ್ ಸಂಸ್ಥಾನದಲ್ಲಿ ಸುಧಾರಣೆ

ಭೂಪಾಲ್ ಸಂಸ್ಥಾನದಲ್ಲಿ ಮಂತ್ರಿಮಂಡಲವನ್ನು ಪುನಸ್ಸಂಘಟಿಸಲಾಗುವುದು. ಅದರಲ್ಲಿ ಮುಖ್ಯ ಮಂತ್ರಿ ಮತ್ತು ನಾಲ್ವರು ಸಚಿವರಿರುವರು. ಈ ಮೂವರು ಮಂತ್ರಿಗಳು ವಿವಿಧ ರಾಜಕೀಯ ಪಕ್ಷಗಳನ್ನು ಪ್ರತಿನಿಧಿಸುವ ಖಾಸಗಿಯವರು. ಈ ಹೊಸ ಮಂತ್ರಿಮಂಡಲವನ್ನು ಮಾರ್ಚಿ ತಿಂಗಳಲ್ಲಿ ನೇಮಿಸುವುದಾಗಿ ಮಹಾರಾಜರು ಘೋಷಿಸಿದ್ದಾರೆ. ಕೋಮು ವಾರು ಆಧಾರದ ಮೇಲೆ ಮಂತ್ರಿಗಳನ್ನು ಚುನಾಯಿಸುವುದಿಲ್ಲವೆಂದು ಹೇಳಲಾಗಿದೆ

ವೈಸರಾಯರಿಗೆ ತಾತ್ಕಾಲಿಕ ಮಂತ್ರಿಗಳ ಒತ್ತಾಯ

ಮುಸ್ಲಿಂಲೀಗು ರಾಜ್ಯಾಂಗ ಸಭೆಯನ್ನು ಬಹಿಷ್ಕರಿಸಿರುವುದಾಗಿ ಮತ್ತು ಕೇಂದ್ರ ಶಾಸನ ಸಭೆಯಲ್ಲಿ ಸರ್ಕಾರದ ವಿರುದ್ಧ ಗುಂಪಾಗಿ ಮತ ಚಲಾಯಿಸುತ್ತಿರುವುದು. ಇವುಗಳನ್ನು ಪರಿಶೀಲಿಸಿ, ಲೀಗ್ ಮಂತ್ರಿಗಳು ಕೇಂದ್ರಸರ್ಕಾರದಲ್ಲಿರುವ ಬಗ್ಗೆ ವೈಸರಾಯರು ಕೂಡಲೇ ವಿವರಣೆಯನ್ನು ಕೊಡಬೇಕೆಂದು ಕೇಂದ್ರ ತಾತ್ಕಾಲಿಕ ಸರ್ಕಾರದ ಕಾಂಗ್ರೆಸ್ ಮತ್ತು ಇತರ ಮೂವರು ಮಂತ್ರಿಗಳು ರುಜುಹಾಕಿ ಒಂದು ಪತ್ರವನ್ನು ವೈಸರಾಯರಿಗೆ ಕಳುಹಿಸಿದ್ದಾರೆಂದು ಗೊತ್ತಾಗಿದೆ. ವೈಸರಾಯರು ಪತ್ರವನ್ನು ಸ್ವೀಕರಿಸಿ ಲಂಡನ್ನಿಗೆ ರವಾನಿಸಿದ್ದಾರೆಂದು ಹೇಳಲಾಗಿದೆ.

ಕೊಚ್ಚಿಯಲ್ಲಿ ಕಾಂಗ್ರೆಸ್ ಸಮಾಜವಾದಿಗಳ ಖುಲಾಸೆ

ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ದೊಡ್ಡ ಅಪಾದನೆ ಮೇಲೆ ಶಿಕ್ಷೆಗೆ ಗುರಿಯಾಗಿದ್ದ ಶ್ರೀ ಮಥಾಯಿ ಮಂಜೂರನ್ ಎಂಬ ಕಾಂಗ್ರೆಸ್ ಸಮಾಜವಾದಿ ಮುಖಂಡರನ್ನು ಕೊಚ್ಚಿ ಸರ್ಕಾರವು ಖುಲಾಸೆ ಮಾಡಿದೆ. ಈ ಬಗ್ಗೆ ಸರ್ಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ ಜಿಲ್ಲಾ ಮ್ಯಾಜಿಸ್ಟ್ರೇಟರು ಪೋಲೀಸರ ವರದಿಯನ್ನು ಪರಿಶೀಲಿಸದೆ ಬಾತಗೀಯವರ ಹೇಳಿಕೆಯ ಮೇಲೆ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿರುವುದು ತಪ್ಪೆಂದು ತಿಳಿಸಿ, ಪ್ರತಿಬಂಧಕಾಜ್ಞೆಗಳನ್ನೆಲ್ಲಾ ಹಿಂದಕ್ಕೆ ತೆಗೆದುಕೊಳ್ಳುವಂತೆ ಆಜ್ಞಾಪಿಸಿದೆ

● ಬ್ರಿಗೇಡಿಯರ್ ಕರಿಯಪ್ಪನವರು ಸ್ವತಂತ್ರ ಹಿಂದೂಸ್ಥಾನದ ಸೇನಾಪತಿಗಳಾಗುವ ಸಂಭವವಿದೆಯೆಂದು ಲಂಡನ್ನಿನ ಒಂದು ಪತ್ರಿಕೆಯು ಪ್ರಕಟಿಸಿದೆ. ಬ್ರಿ॥ ಕರಿಯಪ್ಪನವರು ಈಗ ಚೌಧರಿಯವರೊಡನೆ ಲಂಡನ್ನಿನಲ್ಲಿ ಪ್ರವಾಸಮಾಡುತ್ತಿದ್ದಾರೆ.

ಚನ್ನಪಟ್ಟಣದ ಅಪರಾಧಿಗಳು ಶರಣಾಗತರಾದರು

ಸ್ವಂ. ವಾ ಫೋ॥] ಬೆಂಗಳೂರು ೮

ಚನ್ನಪಟ್ಟಣದ ಬಾಂಬು ಮೊಕದ್ದಮೆಯಲ್ಲಿ ಪರಾರಿಯಾಗಿದ್ದ ಆರು ಮಂದಿ ಈದಿನ ಜಿಲ್ಲಾ ಸ್ಪೆ॥ ನ್ಯಾಯಾಧೀಶರ ಮುಂದೆ ಶರಣಾಗತರಾದರು ಅವರನ್ನೆಲ್ಲಾ ಜಾಮೀನಿನ ಮೇಲೆ ಬಿಡಲಾಯಿತು.

ಧನ ... ಕರ ಗೋಪಾಲರಾವ್‌ರು ದಿನ ... ಶ್ರೀ ... ಎನ್ ಗೋ ... ಜಿಕ್ಕೆ ಪಟೆ ... ವ ತಿ ಸೂಚಿಸಿ ಮೊಕದ್ದಮೆಯನ್ನು ೧೦ನೇ ತಾ॥ ಗೆ ಮುಂದುವರಿಸಲಾಗಿದೆ.

ಸಾಧ್ವಿ

ತಾ॥ ೮-೨-೪೭ ಶನಿವಾರ

ಸೌದೆ ಸರಬರಾಜಿನ ದುಸ್ಥಿತಿ

ಪುನಃ ರಾಜಧಾನಿಯಲ್ಲಿ ಸೌದೆಗಾಗಿ ಹಾಹಾಕಾರವು ಎದ್ದಿರುವಂತಿದೆ. ರೂಪಾಯಿಗೆ ಎರಡು ಮಣ ದೊರೆಯುವುದೂ ದುಸ್ತರವಾಗಿದೆ. ಹಲವು ಕಡೆಗಳಲ್ಲಿ ಒಂದೂವರೆ ಮಣದಂತೆಯೂ ಮಾರಾಟವಾಗುತ್ತಿರುವುದಾಗಿ ಹೇಳಲಾಗಿದೆ. ಜನರ ಜೀವನಕ್ಕೆ ಅತ್ಯಗತ್ಯವಾದ ಈ ವಿಷಯದಲ್ಲಿ ಅಧಿಕಾರಿಗಳು ವಹಿಸಿರುವ ಶ್ರದ್ಧೆಯು ಸರ್ವಥಾ ಸಮರ್ಪಕವಿಲ್ಲವಾಗಿದೆ.

ನಗರದ ಸೌದೆ ಸರಬರಾಜು ವಿಚಾರವು ಒಂದು ದೊಡ್ಡ ಪ್ರಕರಣವೇ ಆಗಿರುತ್ತದೆ. ಕಳೆದ ನಾಲ್ಕೈದು ವರ್ಷಗಳಿಂದ ಇದಕ್ಕಾಗಿ ವಿಶೇಷ ಪ್ರಯತ್ನಗಳು ನಡೆದಿವೆ. ಪೌರಸಭೆಯವರು ಪ್ರತ್ಯೇಕ ಸಮಿತಿಯೊಂದನ್ನು ನೇಮಿಸಿ ಜಿಲ್ಲಾಧಿಕಾರಿಗಳು, ಅರಣ್ಯಾಧಿಕಾರಿಗಳೇ ಮುಂತಾದವರ ಸಹಾಯವನ್ನು ಸಹ ತೆಗೆದುಕೊಂಡಿರುತ್ತಾರೆ. ಸರ್ಕಾರದವರಿಂದ ಮೋಟಾರು ಲಾರಿಗಳೂ ದೊರೆತಿವೆ. ಅವುಗಳಿಗೆ ಬೇಕಾದ ಪೆಟ್ರೋಲು ಮತ್ತು ಇತರ ಸಾಮಗ್ರಿಗಳು ದೊರೆಯಲು ಏರ್ಪಾಡು ಮಾಡಿದೆ. ಹೀಗಿದ್ದರೂ ಸಹ ಈ ತೊಂದರೆಯು ತಪ್ಪದಿರುವುದು ವಿಷಾದಕರ.

ಈ ಹೊಸ ವ್ಯವಸ್ಥೆಯು ಆದ ತರುಣದಲ್ಲಿ ಸ್ವಲ್ಪ ಉತ್ಸಾಹವು ಕಂಡು ಬಂದಿತು. ಡಿಪೋಗಳಲ್ಲಿ ನಿಯಮಿತವಾದ ದರದಂತೆ ಮಾರಾಟವೂ ಆಗುತ್ತಿತ್ತು. ಆದರೆ ಸ್ವಲ್ಪ ಕಾಲದಲ್ಲಿಯೇ ಇದು ತಣ್ಣಗಾಯಿತು. ನಗರದೊಳಕ್ಕೆ ಬೇಕಾದಷ್ಟು ಸೌದೆಯು ಬರುವುದೆಂದು ಅಧಿಕಾರಿಗಳೂ ಹೇಳುತ್ತಿದ್ದರು. ಆದರೆ ಜನರಿಗೆ ಮಾತ್ರ ಅದು ದೊರೆಯುತ್ತಿರಲಿಲ್ಲ. ಪೌರಸಭೆಯ ಮುಖಾಂತರ ಏರ್ಪಾಡಾಗಿರುವ ಡಿಪೋಗಳು ವಿಶೇಷವಾಗಿ ಬರಿದಾಗಿಯೇ ಇರುತ್ತವೆ. ಯಾವಾಗ ನೋಡಿದರೂ ಸೌದೆಯೇ ಇಲ್ಲವೆಂದು ಹೇಳುತ್ತ ಮೋಟಾರು ಲಾರಿಗಳು ಕೆಟ್ಟು ಹೋಗಿರುವುವೆಂದು ವಗೈರೆ ಹೇಳುತ್ತಿರುವ ಸಂದರ್ಭಗಳೂ ಇವೆ. ಹಂಗಾಮದಲ್ಲಿ ಪುರನಿವಾಸಿಗಳು ಕಷ್ಟಕ್ಕೆ ಈಡಾಗುವುದು ತಪ್ಪಿಲ್ಲ.

ಸರ್ಕಾರದವರೂ, ಪೌರಸಭೆಯವರೂ ಇಷ್ಟು ಪ್ರಯತ್ನದಿಂದ ಮಾಡಿರುವ ಈ ವ್ಯವಸ್ಥೆಯು ಹೀಗೆ ಅಪ್ರಯೋಜಕವಾಗಿರುವುದು ಸರಿಯಿಲ್ಲ. ಬೆಂಗಳೂರಿನಲ್ಲಿ ಸರ್ಕಾರದವರು ಇದಕ್ಕಾಗಿ ವಿಶೇಷವಾದ ವ್ಯವಸ್ಥೆಯನ್ನು ಮಾಡಿ, ನಿಗದಿಯಾದ ಬೆಲೆಗೆ ಸೌದೆಯು ದೊರೆಯುವಂತೆ ಮಾಡಿರುತ್ತಾರೆ. ಇಲ್ಲಿಯೂ ಅದೇ ರೀತಿ ಏರ್ಪಾಡು ಮಾಡುವುದು ಅವಶ್ಯಕ. ಕೆಟ್ಟುಹೋಗಿರುವ ಲಾರಿಗಳಿಗೆ ಬದಲಾಗಿ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಒಳ್ಳೆಯ ಲಾರಿಗಳನ್ನು ಕೊಡಿಸಬೇಕು; ಸೌದೆಯ ಮಾರಾಟದ ಬೆಲೆಯನ್ನು ನಿಗದಿ ಮಾಡಬೇಕು; ವಿಶೇಷವಾಗಿ ಸೌದೆಯನ್ನು ದಾಸ್ತಾನು ಮಾಡುವುದು ಅಪರಾಧವೆಂದು ಪ್ರಕಟಿಸಬೇಕು; ಮತ್ತು ಅಧಿಕ ಲಾಭವನ್ನು ಪಡೆಯುವ ಮಧ್ಯವರ್ತಿಗಳಾದ ದಳ್ಳಾಳಿಗಳ ಮೇಲೆ ಹತೋಟಿಯನ್ನಿಡಲು ಅವರುಗಳಿಗೆ ರಹದಾರಿಯನ್ನು ವಿಧಿಸಬೇಕು; ಹತ್ತಿರದಲ್ಲಿರುವ ಅರಣ್ಯದಲ್ಲಿನ ಸೌದೆಯನ್ನು ಸುಲಭವಾಗಿ ತರಲು ಸೌಕರ್ಯಗಳನ್ನು ಕಲ್ಪಿಸಬೇಕು ಮತ್ತು ನಗರಕ್ಕೆ ಬರುವ ಸೌದೆಯೆಲ್ಲವೂ ಪುರನಿವಾಸಿಗಳಿಗೆ ಸರದಿಯಿಂದ ವಿನಿಯೋಗವಾಗುವಂತೆ ಮಾಡಬೇಕು. ಈ ಅಂಶಗಳಿಗೆ ಕೂಡಲೇ ಅಧಿಕಾರಿಗಳು ಗಮನ ಕೊಟ್ಟು ಈಗ ಒದಗಿರುವ ತೊಂದರೆಯನ್ನು ತಪ್ಪಿಸಬೇಕೆಂದು ನಾವು ಕೋರುತ್ತೇವೆ.

Edited, printed and published by A. K. Nagarajan at the Sadhvi Press D-Subbiah Road, Mysore.

○ ಪಂಜಾಬ್ ಶಾಸನ ಸಭೆಯ ೭೯ ಲೀಗ್ ಸದಸ್ಯರ ಪೈಕಿ ೭೪ ಮಂದಿ ಸಾರ್ವಜನಿಕ ರಕ್ಷಣಾ ಶಾಸನವನ್ನು ಪ್ರತಿಭಟಿಸಿ ಕಾರಾಗೃಹವನ್ನು ಸೇರಿದ್ದಾರೆ.

ಗೃಹಕೃತ್ಯದ ನೋಟೀಸು

ಮಳವಳ್ಳಿ ತಾಲ್ಲೂಕು ಬೊಪ್ಪೇಗೌಡನಪುರದ ಹೋಬಳಿ ಕಲ್ಯಾಣಿಕೊಪ್ಪಲಿನ ಕುರುಬರ ದಾಸಿ ರಾಚಯ್ಯನ ಮಗ ಕರಗೇಗೌಡನು ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಕಲ್ಯಾಣಿ ಕೊಪ್ಪಲು ಗ್ರಾಮದ ಸರ್ವೆ ನಂ. ೧೮೬-೪, ೧೮೬-೫ ನೇ ಖುಷ್ಕಿ ಜಮೀನುಗಳು ನನ್ನ ಮಾಲೀಕತೆಗೆ ಒಳಪಟ್ಟು ಬಹಳ ವರ್ಷಗಳಿಂದಲೂ ನನ್ನ ಸ್ವಾಧೀನಾನುಭವದಲ್ಲಿವೆ. ನಾನು ಬಾಲ್ಯದಲ್ಲಿಯೇ ಅನಾಥನಾಗಿ ನನ್ನ ತಂಗಿ ಗಂಡನ ಣೆಕಹಳ್ಳಿ ಗ್ರಾಮದ ಮಾದಯ್ಯ ಮತ್ತು ಇವನ ತಂದೆ ತಿಂಗಿ ಮಾದೇಗೌಡರೊಡನೆ ಅವರ ಪೋಷಣೆಯಲ್ಲಿದ್ದು ಈಗ ಪ್ರತ್ಯೇಕವಾಗಿರುತ್ತೇನೆ. ಮೇಲ್ಕಂಡ ಮಾದಯ್ಯ ಮತ್ತು ಈತನ ತಂದೆ ತಿಂಗಿ ಮಾದೇಗೌಡ ಸಹ ಮೋಸದ ಉದ್ದೇಶ್ಯ ನೆಪಮಾತ್ರದ ಮತ್ತು ಪ್ರತಿಫಲರಹಿತವಾದ ದಾಖಲೆಗಳನ್ನು ಮುಂದು ಮಾಡಿಕೊಂಡು ಮೇಲ್ಕಂಡ ಜಮೀನುಗಳನ್ನು ಪರಭಾರೆ ಮಾಡಿ ವ್ಯವಹಾರಗಳಿಗೆ ಕಾರಣ ಮಾಡಲಿರುತ್ತಾರೆಂದು ತಿಳಿಯುತ್ತೇನೆ. ಸದರಿ ಮಾದಯ್ಯ ಮತ್ತು ತಿಂಗಿ ಮಾದೇಗೌಡರಿಂದ ಮೇಲ್ಕಂಡ ಜಮೀನುಗಳನ್ನು ಯಾರಾದರೂ ಪರಭಾರೆ ಮಾಡಿಸಿಕೊಂಡಲ್ಲಿ ಅವರಿಗೆ ಹಕ್ಕು ಬಾಧ್ಯತೆಗಳೇನೂ ಉಂಟಾಗುವುದಿಲ್ಲವೆಂದು ಈ ಮೂಲಕ ಪ್ರಚುರಪಡಿಸಿದೆ.

● ಈ ಎಡಗೈ ಹೆಬ್ಬೆಟ್ಟಿನ ಗುರ್ತಿನ ರುಜು ಕರಗೇಗೌಡನದು

೧ ಲಕ್ಷ ರೂ.ಗಾಗಿ ಪಂಜಾಬ್ ಸರ್ಕಾರದ ಮೇಲೆ ದಾವೆ

ಮುಸ್ಲಿಂಲೀಗ್ ಮುಖಂಡರಾದ ಫಿರೋಜ್ ಖಾನ್ ನೂನರ ಆಂಗ್ಲ ಹೆಂಡತಿ ಬೇಗಂ ನೂರ್ ಉನ್ನಿಸ್ಸಾ ಪಂಜಾಬ್ ಸರ್ಕಾರದ ಮೇಲೆ ೧ ಲಕ್ಷ ರೂ. ಗಳ ಪರಿಹಾರಕ್ಕಾಗಿ ದಾವಾ ಹೂಡಿ... ಮೊನ್ನೆ ಅವರನ್ನು ದಸ್ತಗಿರಿ ಮಾಡಿ... ಟಿಯರ್ ಗ್ಯಾಸ್ ಪ್ರಯೋಗಿಸಿದಾಗ... ರ ಮುಖದ ಮೇಲೆ ಗಾಯಗಳಾದವೆಂದು... ಮಾನಸಿಕ ಹಾನಿ ಉಂಟಾಗಿದೆಯೆಂದು... ಅದಕ್ಕಾಗಿ ಪರಿಹಾರ ಕೊಡಬೇಕೆಂದು... ರ್ಜಿಯಲ್ಲಿ ನಮೂದಿಸಲಾಗಿದೆ.

ಮೈಸೂ...

† ಲಕ್ಷ್ಮೀಪುರಂ ಪೋಲೀಸರು ನಿನ್ನೆ... ನ ಸ॥ ರಂಗೇಗೌಡ ಎಂಬುವರ... ನ್ನು ಮುತ್ತಿ ಅಲ್ಲಿ ಜೂಜಾಡುತ್ತಿದ್ದ... ರನ್ನು ವಶಪಡಿಸಿಕೊಂಡು ಅವರ... ಮೊಕದ್ದಮೆ ಹೂಡಿದ್ದಾರೆ.



ನಾಲ್ಕು "ಬ" ಎಂದರೆ
ಭದ್ರವಾದ ಬೀಗಗಳು ಬೇಕಾದರೆ
ಬಾಬುಸಾಬ್
ಶಿವರಾಂಪೇಟೆ :: ಮೈಸೂರು

OPERA TALKIES
From 4-2-47
The
SECRET CODE
(Full Serial)
Daily three Shows
Morning shows from 7-2-47
DISNEY PRODUCTION
Pinocchio
(Technicolor)

ತಾ॥ 8-2-47 ರಿಂದ ಯಶಸ್ವಿ 2 ನೆಯ ವಾರ
ಚಾಮುಂಡೇಶ್ವರಿಯಲ್ಲಿ
ಪ್ರತಿ ದಿನ ೩ ಆಟಗಳು
ಸೊಹ್ರಾಬ್ ಮೋದಿಯವರ ಅನುಪಮ ಸಂಗೀತ
ಚಾರಿತ್ರಿಕ ಚಲಚ್ಚಿತ್ರ

ಏಕ್-ದಿನ್-ಕ-ಸುಲ್ತಾನ್

(EK-DIN-KA-SULTAN)
(The Picture that has captivated the hearts of MYSORE PUBLIC)
ಭೂಮಿಕೆ:- ಮೆಹತಾಬ್, ವಾಸ್ತಿ, ಸಾದಿಕ್ ಆಲಿ ಮತ್ತು ಗುಲಾಂ ಮಹಮದ್
An Oswal Films Release, 'B' City

Rajkamal, Mysore
From 7-2-47 Daily Three Shows
'GARDEN OF ALLAH'
IN FULL LENGTH :: TECHNICOLOR.
Morning Shows from 7-2-47 at 10.30 a.m. for 4 days
TOPPER
A Halroach Hilarious Comedy.

ಹೊಸ ಜವಳಿ
ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ
ಇಂದೇ ಭೇಟಿ ಕೊಡಿ!
ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!
ಬಿ. ಕೆಂಚಪ್ಪ ಸನ್ಸ್,
ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

ರೀ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಆಣೆ

ಸಂಪುಟ ೫] ಭಾನುವಾರ ೯—೨—೪೭ [ಸಂಚಿಕೆ ೧೫೬

ರಾಜ್ಯಾಂಗ ಸಭೆಗೆ — — ಬರೋಡದ ಪ್ರವೇಶ

...ನಸಪ್ಪ ಮೊಕದ್ದಮೆ ವಜಾ

ಮೈಸೂರು ೯

...ಸೂರಿನ ಟಿಂಬರ್ ವ್ಯಾಪಾರಿಗಳಾದ ...ಜ ಮಹಮ್ಮದ್ ಯೂಸಫ್ ಎಂ ...ನು ಪಿರಿಯಾಪಟ್ಟಣದಲ್ಲಿರುವ ಜಿಲ್ಲಾ ...ರ್ಜಿ ಮತ್ತು ನ್ಯಾಯವಿಧಾಯಕ ಸ ...ಸದಸ್ಯರಾದ ಶ್ರೀ ಹೆಚ್. ಎಂ. ಚ ...ಪ್ಪನವರ ಮೇಲೆ ತಾ॥ ೯-೧-೪೭ ರಲ್ಲಿ ...ರು ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾ ...ಟೇಟವರ ಕೋರ್ಟಿನಲ್ಲಿ ಇಂ. ಪಿ ...೫೦೦ ನೇ ಸೆಕ್ಷನ್ ಪ್ರಕಾರ ಒಂದು ...ನಸಪ್ಪ ಮೊಕದ್ದಮೆಯನ್ನು ಹೂಡಿದ್ದ ಫಿರ್ಯಾದುದಾರರು ಮೈಸೂರು ಸಿಟಿ ...ಲ್ಲಿ ತಾವು ವಂಶಪಾರಂಪರ್ಯವಾಗಿ ನಾ ...ವ್ಯಾಪಾರ ಮಾಡುತ್ತಿರುವರೆಂದೂ, ಹ ... ಸೇರಿದ ಮಂಚೀದೇವನ ಹಳ್ಳಿಯು ...ನ ಪಕ್ಕದಲ್ಲಿ ಸರ್ಕಾರಕ್ಕೆ ಸೇರಿದ ಕಾ ...ಲ್ಲಿ ನೂರಾರು ೧೫೫ ಎಕರೆ ಪ್ರದೇಶದ ...ಸು ಮಾರು ೨೫,೦೦೦ ರೂ. ...ಬಾಳುವ ಮರಗಳನ್ನು ಕಡಿದು ಮೋ ...ವ ರೀತಿಯಲ್ಲಿ ತಾವು ಸಾಗಿಸುತ್ತಿ ...ದು ಆಪರಾಧಿಯು ಕೆಲವು ದಿನಪತ್ರಿ ...ಕೆಲ್ಲಿ ಪ್ರಕಟಿಸಿಯೂ, ಸರ್ಕಾರದ ನಾ ...ಅಧಿಕಾರಿಗಳಲ್ಲಿ ದೂರು ಕೊಟ್ಟುದರಿಂದ ...ಕ್ಕಾಲಿಕವಾಗಿ ತಮ್ಮ ವ್ಯಾಪಾರದ ಲೈಸ ...ನ್ಸ ರದ್ದಾಗಿತ್ತೆಂದೂ, ಇದರಿಂದ ಸಾ ...ಜನಿಕರಲ್ಲಿ ತಮಗಿದ್ದ ಗೌರವ ನಶಿಸಿ ...ಗಿ ತಮ್ಮ ವ್ಯಾಪಾರಕ್ಕೆ ತುಂಬಾ ಧಕ್ಕೆ ...ಬಂದುದಾಗಿಯೂ ವಗೈರೆ ನಮೂದಿಸಿ ...ರಾಧಿಗೆ ತಕ್ಕ ಶಿಕ್ಷೆ ವಿಧಿಸಬೇಕೆಂದು ಫಿ ...ದಿನಲ್ಲಿ ನಮೂದಿಸಿದ್ದರು.

ಮೈಸೂರು ಸ್ಪೆಷಲ್ ಫ॥ ಮ್ಯಾಜಿಸ್ಟ್ರೇ ...ದ ಶ್ರೀಯುತ ಆರ್ ಕೃಷ್ಣಶೆಟ್ಟರು ...ಕದ್ದಮೆಯನ್ನು ವಿಚಾರಣೆಮಾಡಿ ತೀ ...ನಲ್ಲಿ ಅಪರಾಧಿಗೆ ಫಿರ್ಯಾದಿಯ ಮೇಲೆ ...ನ ವಿಧವಾದ ದುರಭಿಮಾನವೂ ಇರ ...ಲ್ಲವೆಂದೂ ಅಪರಾಧಿಯು ಸಾರ್ವಜನಿಕ ...ದೃಷ್ಟಿಯಿಂದ ಈ ರೀತಿ ವರ್ತಿಸಿರುವುದಾ ...ಯೂ ಅಪರಾಧಿಯು ರಕ್ಷಣೆ ಹೊಂದಲು ...ರ್ಹನೆಂದೂ ತಿಳಿಸಿ ಕ್ರಿ॥ ಪ್ರೊ॥ ಕೋಡು ...೨೫೮ (೧) ನೇ ಸೆಕ್ಷನ್ ಪ್ರಕಾರ ಅಪರಾಧಿ ...ಯನ್ನು ಖುಲಾಸೆ ಮಾಡಿ ಫಿರ್ಯಾದನ್ನು ವ ...ಜಾ ಮಾಡಿರುತ್ತಾರೆ

ಕಾಂಗ್ರೆಸ್ ನಿಧಿಗೆ ಸಹಾಯ

ಕಾಂಗ್ರೆಸ್ ಮೆಂಬರೂ ಮತ್ತು ಮುನಿಸಿ ...ಪಲ್ ಕೌನ್ಸಿಲರೂ ಆದ ಶ್ರೀ ಜಿ ಆರ್. ...ರಂಗಸ್ವಾಮಯ್ಯನವರು ಈ ದಿವಸ ನಡೆದ ...ತಮ್ಮ ಲಗ್ನದಲ್ಲಿ ಮೈಸೂರು ಕಾಂಗ್ರೆಸ್ ...ನಿಧಿಗೆ ೧೦ ರೂ. ಮತ್ತು ಮೈಸೂರು ಕುಂ ...ಚಿಟಿಗರ ಸಂಘದ ವಿದ್ಯಾಭಿವೃದ್ಧಿ ಫಂಡಿಗೆ ...೫-೦-೦ ರೂ. ಕೊಟ್ಟಿರುವರೆಂದು ಕುಂಚಿಟಿ ...ಗರ ಸಂಘದ ಕಾರ್ಯದರ್ಶಿಗಳು ತಿಳಿಸಿರು ...ತ್ತಾರೆ

ಭಾರತದಿಂದ ಪರಿಹಾರ ಕೇಳುವುದು ನ್ಯಾಯವಲ್ಲ

ಭಾರತದಲ್ಲಿರುವ ಸಿವಿಲ್ ಸರ್ವಿಸ್ ಅಧಿ ...ಕಾರಿಗಳು ಬ್ರಿಟಿಷ್ ಸರ್ಕಾರದಿಂದ ನೇಮ ...ಕವಾದವರು. ಆದ್ದರಿಂದ ಅವರು ಭಾರತ ...ಸರ್ಕಾರದಿಂದ ಪರಿಹಾರ ಕೇಳುವುದು ನ್ಯಾ ...ಯವಲ್ಲ ಆ ಹೊರೆಯನ್ನು ಭಾರತೀಯರ ...ಮೇಲೆ ಹೇರುವುದು ಯೋಗ್ಯವಲ್ಲ — ಎಂ ...ಬುದಾಗಿ ಪೇಶ್ವಾ ಹೈಕೋರ್ಟಿನ ...ನ್ಯಾಯಾಧೀಶರಾದ ಮಿ॥ ಮೆಂಡಿಥರವರು ...ಬಿಹಾರ್ ಐ ಸಿ.ಎಸ್ ಸಂಘದ ಅಧ್ಯಕ್ಷತೆಗೆ ...ರಾಜೀನಾಮೆ ಸಲ್ಲಿಸಿದ್ದಾರೆ.

ಅಮೆರಿಕಕ್ಕೆ ಆಸಫ್ ಆಲಿ

ಅಮೆರಿಕಾಕ್ಕೆ ಭಾರತದ ರಾಯಭಾರಿಯಾಗಿ ನೇಮಕವಾಗಿರುವ ಮಿ॥ ಅಸಫ್ ಆಲಿಯವರು ಮೊನ್ನೆದಿನ ದೆಹಲಿಯಿಂದ ಕರಾಚಿಗೆ ತೆರಳಿ ನಿನ್ನೆ ಅಲ್ಲಿಂದ ಕೈರೋವಿಗೆ ಪ್ರಯಾಣಮಾಡಿದರು ಕೈರೋವಿನಲ್ಲಿ ೩ ದಿನಗಳು ತಂಗಿದ್ದು ಲಂಡನ್ನಿಗೆ ೧೨ ನೇ ತಾ॥ ತಲಪುವರು. ೧೬ನೇ ತಾ॥ ಅಲ್ಲಿಂದ ಅಮೆರಿಕಕ್ಕೆ ಪ್ರಯಾಣಮಾಡುವರು. ಆಸಫ್ ಆಲಿಯವರು ದೆಹಲಿಯನ್ನು ಬಿಡುವ ಮುನ್ನ ಭಾರತಕ್ಕೆ ಈ ರೀತಿ ಸಂದೇಶವನ್ನಿತ್ತಿದ್ದಾರೆ ನಮ್ಮ ಮಾತೃಭೂಮಿಯು ಶಾಶ್ವತವಾಗಿ ಸ್ವಾತಂತ್ರ್ಯ ಧ್ವಜವನ್ನು ಹಾರಿಸಿ ಪ್ರಪಂಚದ ಮಹಾರಾಷ್ಟ್ರಗಳಲ್ಲೊಂದಾಗಲಿ, ನಮ್ಮ ನಾಡಿನ ಸೋದರ ಬಾಂಧವರು ವ್ಯರ್ಥವಾದ ವಿವಾದದಲ್ಲಿ ಕಾಲಹರಣಮಾಡದಿರಲಿ. ರಚನಾತ್ಮಕ ಕಾರ್ಯದಲ್ಲಿ ಎಲ್ಲರೂ ಕೂಡಿ ನಮ್ಮ ಸಂಪತ್ತಿನ ಸುಗ್ಗಿಯನ್ನು ಹಿಗ್ಗಿಸಲಿ"—ಎಂದು ಅವರು ತಿಳಿಸಿದ್ದಾರೆ.

ಅಮೆರಿಕಾ ಅಧ್ಯಕ್ಷತೆ

ಅಮೆರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷರು ಎರಡು ಸಲ ಮಾತ್ರ ಅಂದರೆ ೮ ವರ್ಷಕಾಲ ಅಧಿಕಾರದಲ್ಲಿರಬಹುದೆಂದು ರಾಜ್ಯಾಂಗ ಘಟನೆಯಲ್ಲಿ ತಿದ್ದುಪಾಟು ಮಾಡಬೇಕೆಂಬ ನಿರ್ಣಯವು ೨೮೫-೧೨೧ ಓಟುಗಳಿಂದ ಅಂಗೀಕೃತವಾಯಿತು.

ನೂಲಿಗಾಗಿ ಉಪವಾಸವ್ರತ

ಮದ್ರಾಸ್ ಪ್ರಾಂತ್ಯದ ಕೈಮಗ್ಗದ ನೆಯ್ಗೆ ಕಾಂಗ್ರೆಸ್ ಉಪಾಧ್ಯಕ್ಷರೂ ಮತ್ತು ಕಾರ್ಯದರ್ಶಿಗಳೂ ನಿನ್ನೆ ಬೆಳಗಿನಿಂದ ಮದ್ರಾಸ್ ಶಾಸನ ಸಭೆಯ ಮುಂದೆ, ಹೆಚ್ಚು ನೂಲು ಸರಬರಾಯಿ ಬೇಕೆಂಬ ಬೇಡಿಕೆಯನ್ನು ಸಮರ್ಥಿಸಲು ಉಪವಾಸವ್ರತವನ್ನು ಆರಂಭಿಸಿದ್ದಾರೆ

ಆಹಾರ ಪರಿಸ್ಥಿತಿ

೪೭ ನೇ ಡಿಸೆಂಬರ್ ಆದನಂತರ ಪ್ರಪಂಚದ ಆಹಾರ ಪರಿಸ್ಥಿತಿಯು ಉತ್ತಮಗೊಳ್ಳುವುದೆಂದು ಭಾರತ ಸರ್ಕಾರದ ಆಹಾರ ಸಲಹೆಗಾರರಾದ ಡಾ॥ ರಾವ್‌ರವರು ತಿಳಿಸಿದ್ದಾರೆ. ಈ ವರ್ಷದ ಮಧ್ಯಭಾಗದಲ್ಲಿ ಸ್ವಲ್ಪ ಕಷ್ಟ ಅಧಿಕವಾಗಬಹುದೆಂದು ಹೇಳಲಾಗಿದೆ.

೧೯೪೪ ರಲ್ಲಿ ಸ್ಟಾಲಿನ್ನರನ್ನು ಕೊಲೆ ಮಾಡಲು ನಾಜಿಗಳು ಭಾರಿ ಒಳಸಂಚು ನಡೆಸಿದ್ದರೆಂದು ಬ್ರಿಟಿಷ್ ವಿಮಾನ ಮಂತ್ರಿಗಳು ತಿಳಿಸಿದ್ದಾರೆ. ಈ ಸಂಚಿನ ವಿವರ ಗೊತ್ತಾಗಲು ಸಾಧ್ಯವಿಲ್ಲವೆಂದೂ ಅವರು ಹೇಳಿದ್ದಾರೆ.

ಪತ್ರಿಕಾ ಸೇವೆಯು ಅತ್ಯಂತ ಗೌರವಯುತವಾದುದು

ಶ್ರೀ ಎಫ್ ಜಿ ನಟೇಶನ್‌ರವರ ಭಾಷಣ

ಮೈಸೂರು ೯

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘಕ್ಕೆ ಶ್ರೀ ಎಫ್ ಜಿ ನಟೇಶನ್‌ರವರು ಈ ದಿನ ಬೆಳಿಗ್ಗೆ ಭೇಟಿ ಇತ್ತರು. ಪತ್ರಿಕಾ ವೃತ್ತಿಯು ಅತ್ಯಂತ ಗೌರವಯುತವಾದುದು, ಎಷ್ಟೇ ಎಡರು ತೊಡರುಗಳು ಬಂದರೂ ಅವೆಲ್ಲವನ್ನೂ ಎದುರಿಸಿ ಧೈರ್ಯದಿಂದ ತಮ್ಮ ವೃತ್ತಿಯನ್ನು ಮುಂದುವರಿಸಬೇಕು. ಪತ್ರಿಕೋದ್ಯಮಕ್ಕೆ ಒಳ್ಳೆಯ ಭವಿಷ್ಯವಿದೆ. ಎಂಬುದಾಗಿ ಶ್ರೀ॥ ನಟೇಶನ್‌ರವರು ಭಾಷಣ ಮಾಡುತ್ತಾ ತಿಳಿಸಿದರು. ಅಲ್ಲದೆ ಪತ್ರಿಕಾ ಪ್ರಪಂಚದಲ್ಲಿ ತಮ್ಮ ಪಾತ್ರವನ್ನೂ ಸಹ ಸೂಕ್ಷ್ಮವಾಗಿ ವಿವರಿಸಿದರು.

ಹಿಂದೂ ಮಹಾ ಸಭೆ

ನಾಳೆ ಮಧ್ಯಾಹ್ನ ೪ ಘಂಟೆಗೆ ಶಿವರಾಂಪೇಟೆಯಲ್ಲಿರುವ ಹಿಂದೂ ಮಹಾ ಸಭೆಯ ಕಛೇರಿಯಲ್ಲಿ ಶ್ರೀ॥ ಭೂಪಾಳಂ ಚಂದ್ರಶೇಖರಯ್ಯನವರು 'ಹಿಂದೂಗಳ ದೃಷ್ಟಿಯಲ್ಲಿ ಮೈಸೂರಿನ ಸುಧಾರಣೆಗಳು' ಎಂಬ ವಿಷಯದ ಮೇಲೆ ಭಾಷಣ ಮಾಡುವರು ಶ್ರೀ ಎಂ ಸಿ ವ ಲ್ಲಪ್ಪನವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ

ಭಾರತಕ್ಕೆ ಬೌದ್ಧ ಮತದ ಅವಶೇಷಗಳು

ಭಾರತದಿಂದ ೧೮೫೧ ರಲ್ಲಿ ತೆಗೆದುಕೊಂಡು ಹೋಗಿದ್ದ ಬೌದ್ಧಮತದ ಅವಶೇಷಗಳನ್ನು ಲಂಡನ್ ಮ್ಯೂಸಿಯಮ್ಮಿನಿಂದ ಭಾರತಕ್ಕೆ ವಾಪಸ್ಸು ತರಲಾಗುವುದೆಂದೂ ಅವನ್ನು ಸಾಂಚಿಯಲ್ಲಿ ಇಡಲು ಏರ್ಪಡಿಸಲಾಗುವುದೆಂದೂ ಸಹ ವರದಿಯಾಗಿದೆ

ಒರಿಸ್ಸಾ ಮಂತ್ರಿಮಂಡಲದಲ್ಲಿ ಬಿಕ್ಕಟ್ಟು

ಒರಿಸ್ಸಾ ಪ್ರಾಂತ್ಯದಲ್ಲಿ ಅಭಿವೃದ್ಧಿ ಮತ್ತು ಯೋಜನೆಗಳ ಸಂಬಂಧವಾಗಿ ಅಲ್ಲಿನ ಮಂತ್ರಿಮಂಡಲದಲ್ಲಿ ಬಿಕ್ಕಟ್ಟು ಉದ್ಭವಿಸಿರುತ್ತದೆ ಪ್ರಧಾನಿ ಶ್ರೀ ಹರಿಕೃಷ್ಣಮೆಹತಾಬರು ಪರಿಸ್ಥಿತಿಯನ್ನು ತಿಳಿಗೊಳಿಸುವ ಸಲುವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಪರಿಶೀಲನೆಗೆ ತಮ್ಮ ರಾಜೀನಾಮೆ ಪತ್ರವನ್ನು ಕಳುಹಿಸಿರುತ್ತಾರೆಂದು ಗೊತ್ತಾಗಿದೆ ಈ ಅಂಶವು ಇದೇ ೧೧ ನೇ ತಾ॥ ಸೇರಲಿರುವ ಕಾಂ॥ ಕಾರ್ಯಕಾರೀ ಸಮಿತಿಯಲ್ಲಿ ತೀರ್ಮಾನವಾಗಬೇಕೆಂದು ಒತ್ತಾಯಪಡಿಸಿರುತ್ತಾರೆಂದೂ ಹೇಳಲಾಗಿದೆ

ರಾಜ್ಯಾಂಗ ಸಭೆಗೆ ಬರೋಡ ಸಂಸ್ಥಾನದ ಪ್ರವೇಶ

ರಾಜ್ಯಾಂಗ ಸಭೆಯಿಂದ ರಚಿತವಾದ ಸಂಧಾನ ಸಮಿತಿಗೂ ಬರೋಡದ ದಿವಾನರಿಗೂ ನಡೆದ ಮಾತುಕಥೆಗಳ ಪರಿಣಾಮವಾಗಿ ಬರೋಡ ಸಂಸ್ಥಾನವು ರಾಜ್ಯಾಂಗ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬಹುದೆಂದು ಊಹಿಸಲಾಗಿದೆ.

ಭಾರತೀಯರಿಗೆ ಓಟಿನ ಹಕ್ಕು

ನೇಟಾಲ್ ಪ್ರಾಂತದಲ್ಲಿ ವಾಸಿಸುವ ಭಾರತೀಯರಿಗೆ ಅಲ್ಲಿನ ಪೌರಸಭೆಯ ಚುನಾವಣೆಗಳಲ್ಲಿ ಓಟು ಚಲಾಯಿಸುವ ಹಕ್ಕನ್ನು ಕೊಡುವರೆಂದೂ ಈ ಬಗ್ಗೆ ಒಂದು ವಿಶೇಷ ಕಾನೂನು ಮಾರ್ಚಿ ೬ ರೊಳಗೆ ಹೊರಬೀಳುವುದೆಂದೂ ನೇಟಾಲ್ ಮುಖ್ಯಾಧಿಕಾರಿಗಳು ಹೇಳಿರುತ್ತಾರೆ

ಹೊಗೆಸೊಪ್ಪಿನ ಗಿಡದಿಂದ ಎಣ್ಣೆ

ರಷ್ಯಾಕ್ಕೆ ಸೇರಿದ ಜರ್ಮನಿಯ ಕೆಲವು ಪ್ರಾಂತಗಳಲ್ಲಿರುವ ೩೩೦,೫೦೦ ಎಕರೆಗಳಲ್ಲಿ ಬೆಳೆಯುವ ಹೊಗೆಸೊಪ್ಪಿನಿಂದ ಆಹಾರಕ್ಕೆ ಉಪಯುಕ್ತವಾಗುವಂತಹ ಎಣ್ಣೆಯನ್ನು ತಯಾರಿಸಲು ಸಿದ್ಧತೆಗಳು ನಡೆದಿವೆಯೆಂದು ಹೇಳಲಾಗಿದೆ.

ಆಜಾದರು ವಿವರಣೆ ಕೊಡಬೇಕು

ಗುರ್ಗಾಂವ್ ಪ್ರದೇಶದ ಸಂಬಂಧವಾಗಿ ಲೀಗಿನವರು ಕೇಂದ್ರಶಾಸನ ಸಭೆಯಲ್ಲಿ ತಂದಿದ್ದ ನಿಲುವಳಿ ಸೂಚನೆಯನ್ನು ಓಟಿಗೆ ಹಾಕಿದಾಗ ಮೌಲಾನಾ ಆಜಾದರು ಓಟು ಚಲಾಯಿಸದೆ ಸಭೆಯಿಂದ ಗೈರುಹಾಜರಾಗಿದ್ದರಷ್ಟೆ. ಈ ವಿಚಾರದಲ್ಲಿ ಆಜಾದರು ತಮ್ಮ ವಿವರಣೆಯನ್ನು ಕೊಡಬೇಕೆಂದು ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ನಿರ್ಧಾರವಾಗಿರುವುದಾಗಿ ಗೊತ್ತಾಗಿದೆ. ಅಲ್ಲದೆ ಸರ್ಕಾರದ ಮಂತ್ರಿಗಳೆಲ್ಲಾ ಒಂದುಗೂಡಿ ಮತ ಚಲಾಯಿಸಬೇಕೆಂಬ ಸಂಪ್ರದಾಯವು ಇದರಿಂದ ಭಗ್ನವಾಗಿದೆಯೆಂದೂ, ಲೀಗಿನವರು ಬೇಕೆಂತಲೇ ಗೈರುಹಾಜರಾದ ಬಗ್ಗೆ ಪ್ರತಿಭಟನೆ ಸೂಚಿಸುವ ಅವಕಾಶವನ್ನು ಕಾಂಗ್ರೆಸ್ಸು ಕಳೆದುಕೊಂಡಂತಾಗಿದೆಯೆಂದೂ ಅಭಿಪ್ರಾಯ ಪಡಲಾಗಿದೆ.

ಮೇಕೆ ಹಾಲು ಲಾಭದಾಯಕ

ಒಂದು ಹಸುವನ್ನು ಸಾಕುವ ಖರ್ಚಿನಲ್ಲಿ ೭-೮ ಮೇಕೆಗಳನ್ನು ಸಾಕಬಹುದು ಹಾಲಿನ ಸತ್ವವೂ ಹೆಚ್ಚು ಪುಷ್ಟಿಕರವಾಗಿರುತ್ತದೆ. ನ್ಯೂಯಾರ್ಕ್ ಸಂಸ್ಥಾನದ ಗ್ರಾಮಸ್ಥರು ಮೇಕೆ ಹಾಲು ಕುಡಿಯಲು ಆರಂಭಿಸಿದ್ದಾರೆ. ೧ ಮೇಕೆ ನಾಲ್ಕು ಜನರಿಗೆ ೮ ತಿಂಗಳು ಹಾಲು ಒದಗಿಸುತ್ತದೆಯೆಂದ ಹೇಳಲಾಗಿದೆ

೩೭,೫೦೦ ಮೈಲಿಗಳ ದೂರ ಪ್ರಾರ್ಥನಾ ಸಂಚಾರ

ಸ್ಪೇನಿನ ೧೭ ವರ್ಷದ ಯುವಕನೊಬ್ಬನು ಕಳೆದ ದಂಗೆಯಲ್ಲಿ ತಾನು ಬದುಕಿದರೆ ಸ್ಪೇನನ್ನೆಲ್ಲಾ ಸಂಚರಿಸುವುದಾಗಿ ಪ್ರತಿಜ್ಞೆ ಮಾಡಿದ್ದನು. ಅದರಂತೆ ಅವನು ದಾರಿಯಲ್ಲಿ ಸಿಕ್ಕಿದ ಚರ್ಚುಗಳಲ್ಲೆಲ್ಲಾ ಪ್ರಾರ್ಥನೆಮಾಡುತ್ತ ೩೭,೫೦೦ ಮೈಲುಗಳ ದೂರ ಸಂಚರಿಸಿದ್ದಾನೆಂದು ವರದಿಯಾಗಿದೆ.

ಸಾಧ್ವಿ

ತಾ|| ೯-೨-೪೭ ಭಾನುವಾರ

ಕಾಗದದ ಅಭಾವದಿಂದ ಪತ್ರಿಕೆ ನಿಲ್ಲಬೇಕೆ ?

ಮುದ್ರಣ ಕಾಗದವು ದೊರೆಯದೆ 'ದೇಶಬಂಧು' ಪತ್ರಿಕೆಯು ಸದ್ಯಕ್ಕೆ ತನ್ನ ಪ್ರಕಟಣೆಯನ್ನು ನಿಲ್ಲಿಸಿರುತ್ತದೆ. ವಾರ ಪತ್ರಿಕೆಯನ್ನು ಮಾತ್ರ ಹೊರಡಿಸುವುದಾಗಿ ಹೇಳಲಾಗಿದೆ. ಹಲವು ದಿನಗಳ ಹಿಂದೆಯೇ ಕಾಗದದ ಅಭಾವವು ತಲೆದೋರಿ ಈ ಪತ್ರಿಕೆಯು ನಾಲ್ಕು ಪುಟಗಳಿಂದ ಎರಡು ಪುಟಕ್ಕೆ ಇಳಿಯಿತು. ಈಗ ಅದಕ್ಕೂ ಅವಕಾಶವಿಲ್ಲದೆ ದಿನ ಪತ್ರಿಕೆ ನಿಲ್ಲಿಸಲ್ಪಟ್ಟಿದೆ.

ಈ ಪ್ರಕರಣದ ಹಿನ್ನೆಲೆಯು ಅತ್ಯಂತ ಶೋಚನೀಯವಾಗಿದೆ. ಇದು ನಮ್ಮ ಸಂಸ್ಥಾನದ ಪತ್ರಿಕೆಗಳ ದುಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಕಾಗದವಿಲ್ಲದೆ ಈ ರೀತಿಯಲ್ಲಿ ಪತ್ರಿಕೆಯು ಪೂರ್ಣವಾಗಿ ನಿಂತುಹೋಗಿರುವುದು ಮೈಸೂರು ವೃತ್ತ ಪತ್ರಿಕೆಗಳ ಇತಿಹಾಸದಲ್ಲಿ ಇದೇ ಮೊದಲು. ಈ ಪರಿಸ್ಥಿತಿಯು ನಮ್ಮ ಸರ್ಕಾರದವರಿಗಾಗಲೀ, ಕಾಗದದ ಕಾರ್ಖಾನೆಗಾಗಲೀ ಮತ್ತು ಪತ್ರಿಕಾ ವೃತ್ತಿಗಾಗಲೀ ಗೌರವವನ್ನು ತರುವಂತಹುದಲ್ಲ. ನಾಳೆ ಮಂತ್ರಿಗಳು ಕರೆದಿರುವ ಪತ್ರಿಕಾಕರ್ತರುಗಳ ಸಮ್ಮೇಳನದಲ್ಲಿಯಾದರೂ ಈ ಅಂಶವು ಎಲ್ಲರ ಕಣ್ಣನ್ನೂ ತೆರೆಯಿಸಲು ಸಹಕಾರಿಯಾಗುವುದೆಂದು ನಾವು ನಂಬುತ್ತೇವೆ.

ಹೊರಗಿನ ದೇಶದ ಕಾಗದವು ಬ್ರಿಟಿಷ್ ಇಂಡಿಯದ ಪತ್ರಿಕೆಗಳಂತೆಯೇ ನಮ್ಮ ಸಂಸ್ಥಾನದ ಪತ್ರಿಕೆಗಳಿಗೂ ಪಡಿತರದ ಪ್ರಮಾಣದ ಮೇಲೆ ಒದಗಿಸಲ್ಪಡುತ್ತಿದೆ. ಮದರಾಸ್, ಬೊಂಬಾಯಿ, ಕಲ್ಕತ್ತ ನಂತಹ ಕಡೆಗಳಲ್ಲಿರುವ ವರ್ತಕರುಗಳು ಈ ಕಾಗದವನ್ನು ಹಂಚುತ್ತಾರೆ. ಅದೇ ವರ್ತಕರೇ ನಮ್ಮ ಸಂಸ್ಥಾನದ ಪತ್ರಿಕೆಗಳಿಗೂ ಅವುಗಳನ್ನು ಇದುವರೆಗೆ ಒದಗಿಸುತ್ತಿರುವರು.

ಈಚೆಗೆ ಬ್ರಿಟಿಷ್ ಹಿಂದೂಸ್ಥಾನದ ಪತ್ರಿಕೆಗಳ ಪುಟಸಂಖ್ಯೆಯು ಏರುತ್ತಿದೆ. ಅವುಗಳಿಗೆ ನಿರಾತಂಕವಾಗಿ ಕಾಗದವು ದೊರೆಯುತ್ತಿದೆ. ಆದರೆ ಅದೇ ವರ್ತಕರು ನಮ್ಮ ಸಂಸ್ಥಾನದ ಪತ್ರಿಕೆಗಳಿಗೆ ಕಾಗದವು ಇಲ್ಲವೆಂದು ಹೇಳುತ್ತಿದ್ದಾರೆ. ಇದು ಕೇವಲ ಪಕ್ಷಪಾತದ ವರ್ತನೆಯಾಗಿರುತ್ತದೆ. ಅಲ್ಲಿನ ಪತ್ರಿಕೆಗಳಿಗೆ ದೊರೆತ ಕಾಗದವು ಇಲ್ಲಿಯೂ ಏಕೆ ದೊರೆಯಬಾರದೆಂಬುದು ನಮಗೆ ಅರ್ಥವಾಗುವುದಿಲ್ಲ. ಸಂಸ್ಥಾನದ ಅನೇಕ ಪತ್ರಿಕೆಗಳು ಈ ರೀತಿ ಪರಾವಲಂಬನದಲ್ಲಿ ಸಿಲುಕಿ ತೊಳಲುತ್ತಿರುವುದು ಸಮರ್ಪಕವಲ್ಲ.

ನಮ್ಮ ಸಂಸ್ಥಾನದಲ್ಲಿರುವ ಕಾಗದದ ಕಾರ್ಖಾನೆಯವರು ದೇಶಬಂಧು ಪತ್ರಿಕೆಗೆ ಕಾಗದವನ್ನು ಸರಬರಾಜು ಮಾಡಬೇಕೆಂದು ಸರ್ಕಾರದವರು ಕೊಟ್ಟಿರುವ ಸೂಚನೆಗೂ ಸಹ ಪುರಸ್ಕಾರ ದೊರೆತಿಲ್ಲವೆಂದು ತಿಳಿದು ಬಂದಿದೆ. ಹೀಗೆ ನಮ್ಮ ಪತ್ರಿಕೆಗಳ ಸ್ಥಿತಿಯು ಒಂದು ತ್ರಿಶಂಕು ಸ್ವರ್ಗದಲ್ಲಿರುವುದು ನಮ್ಮ ಸಂಸ್ಥಾನಕ್ಕೆ ಕಳಂಕವನ್ನುಂಟುಮಾಡುವ ಅಂಶವಾಗಿದೆ. ದೇಶಬಂಧುವು ಸದ್ಯಕ್ಕೆ ನಿಲ್ಲಿಸಲ್ಪಟ್ಟಿರುವುದಾದರೂ ಇತರ ಪತ್ರಿಕೆಗಳ ಮೇಲೆಯೂ ಇಂದಿನ ಅಭಾವದ ಪ್ರಭಾವವು ಆಗದೆ ಇಲ್ಲ. ಅವುಗಳೂ ಸಹ ಕುಂಟಿಕೊಂಡು ನಡೆಯುತ್ತಿವೆ. ಪತ್ರಿಕೆಗಳ ಹಿತಸಾಧನೆಗೆ ಸರ್ಕಾರದವರು ಎಷ್ಟು ನೆರವು ನೀಡಬೇಕೋ ಅಷ್ಟನ್ನು ನೀಡುತ್ತಿಲ್ಲವೆಂದೂ ಧಾರಾಳವಾಗಿ ಹೇಳಬಹುದು. ಈ ಸಂದರ್ಭದಲ್ಲಿ ಪತ್ರಿಕಾಕರ್ತರುಗಳ ಕರ್ತವ್ಯವೂ ಸಹ ಗುರುತರವಾಗಿರುತ್ತದೆ. ಅವರು ಐಕಮತ್ಯದಿಂದಲೂ ಆತ್ಮಾವಲಂಬನೆಯಿಂದಲೂ ವರ್ತಿಸುವ ಕಾಲವು ಈಗ ಬಂದಿರುತ್ತದೆ. ಸಂಸ್ಥಾನದ ಪತ್ರಿಕೆಗಳಿಗೆಲ್ಲಾ ಬೇಕಾಗುವಷ್ಟು ಕಾಗದವನ್ನು ಪಡೆಯಲು ಸರ್ಕಾರದೊಡನೆಯೂ, ಕಾರ್ಖಾನೆಯವರೊಡನೆಯೂ ಸಂಧಾನ ನಡೆಸಲು ಅವರು ಕೈಗೊಂಡಿರುವ ಕಾರ್ಯವು ಸ್ತುತ್ಯವಾದುದೇ ಸರಿ. ಆದರೆ ಅಷ್ಟಕ್ಕೇ ತೃಪ್ತರಾಗುವುದು ಸರಿಯಲ್ಲ. ಹಲವಾರು ಪತ್ರಿಕೆಗಳಿಗೆ ಕಾಗದವು ದೊರೆತು ಒಂದು ಪತ್ರಿಕೆಯು ಮಾತ್ರ ನಿಂತುಹೋಗಲು ಅವಕಾಶ ಕೊಡುವುದು ಉಚಿತವಲ್ಲ. ಕೆಲವು ಪತ್ರಿಕೆಗಳು ಅನೇಕ ಪುಟಗಳನ್ನು ಹೊರಡಿಸಲು ಅವಕಾಶವಿರುವಾಗ ಇನ್ನು ಕೆಲವಕ್ಕೆ ಎರಡು ಪುಟಗಳಿಗೂ ಅವಕಾಶವಿಲ್ಲದಿರುವುದು ಸರಿಯಲ್ಲ. ದಲ್ಲಾಳಿಗಳಾದ ಹೊರಗಿನ ವರ್ತಕರ ಮೂಲಕ ಕಾಗದದ ಸರಬರಾಜು ಆಗುತ್ತಿರುವುದೇ ಈ ಅನರ್ಥಗಳಿಗೆಲ್ಲಾ ಮುಖ್ಯ ಕಾರಣ. ಅದನ್ನು ಸರ್ಕಾರದವರಾಗಲೀ, ನಮ್ಮ ಕಾಗದದ ಕಾರ್ಖಾನೆಯವರಾಗಲೀ ಅಥವಾ ಪತ್ರಿಕಾಕರ್ತರುಗಳ ಸಂಸ್ಥೆಯವರಾಗಲೀ ತಮ್ಮ ಕೈಗೆ ತೆಗೆದುಕೊಂಡು ವಿನಿಯೋಗಿಸುವುದರಿಂದ ಈಗಿನ ತೊಂದರೆಯು ಬಹಳ ಮಟ್ಟಿಗೆ ನಿವಾರಿಸಲ್ಪಡುವುದು.

ಈ ಮಧ್ಯೆ ಪತ್ರಿಕಾಕರ್ತರೆಲ್ಲರೂ ಸ್ವಲ್ಪ ಮಟ್ಟಿಗೆ ತ್ಯಾಗವನ್ನು ಮಾಡಿ ತಮ್ಮ ಕಾಗದದ ಪ್ರಮಾಣದಲ್ಲಿ ಅಲ್ಪ ಸ್ವಲ್ಪವನ್ನಾದರೂ ತೆಗೆದಿಟ್ಟು ನಿಂತು ಹೋಗಲಿರುವ ಪತ್ರಿಕೆಗಳಿಗೆ ಜೀವನಾಧಾರವನ್ನು ನೀಡಿ ಅವುಗಳೂ ಸಹ ತಮ್ಮಂತೆಯೇ ಸೇವೆಸಲ್ಲಿಸಲು ಅವಕಾಶ ಕಲ್ಪಿಸಬೇಕೆಂದು ನಾವು ಕೋರುತ್ತೇವೆ.

ಇಂಗ್ಲಿಷ್ ಸರ್ಜ್ ಕೋಟಿಂಗ್
ಅನೇಕ ನಮೂನೆಗಳಲ್ಲಿ ಪುನಃ ಬಂದಿವೆ.
ಬಾಹುಸಾರ್ ಟ್ರೇಡಿಂಗ್ ಕಂಪೆನಿ,
ಓಲ್ಡ್ ಮೈಸೂರು ಬ್ಯಾಂಕ್ ರೋಡು,
ಮೈಸೂರು

ಸೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:-

ಮೈಸೂರು ಸಿಟಿ ವಾಣೀ ವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಶ್ಚಿಮ ದಿಕ್ಕಿನಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ|| ೧೨-೧-೪೭ ನೇ ಮರ್ತಿಂ ಹರಾಜು ಇಸ್ತಿಹಾರ್ ನಾಮೆಯ ಪರತ್ತುಗಳಿಗೆ ಒಳಪಡಿಸಿ ತಾ|| ೧೬-೨-೪೭ ನೇ ಭಾನುವಾರ ಬೆಳಿಗ್ಗೆ ೯-೩೦ ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇತರ ವಿವರಗಳನ್ನು ಆಫೀಸಿನಲ್ಲಿ ರಜಾ ದಿನಗಳಲ್ಲದ ಇತರ ದಿವಸಗಳಲ್ಲಿ ೧೧ ಘಂಟೆಯಿಂದ ೫ ಘಂಟೆಯ ಒಳಗೆ ತಿಳಿಯಬಹುದು.

(ಸಹಿ) ಕೆ. ವೆಂಕಟೇಶ ಐಯ್ಯಂಗ್,
ಛೇರ‍್ಮನ್ನರಿಗಾಗಿ.
ನಗರಾಭಿವೃದ್ಧಿ ಸಮಿತಿ, ಮೈಸೂರು.

ಮೈಸೂರಿನ ಮಹಾಜನರಲ್ಲಿ ವಿನಂತಿ

"ಪ್ರತಿಜ್ಞಾ" ಚಿತ್ರ ಈ ಊರಿನ ರಾಜಕಮಲ್ ಥಿಯೇಟರಿನಲ್ಲಿ ಪ್ರದರ್ಶಿಸಲಾಗುತ್ತಿದ್ದು, ಕಾರಣಾಂತರದಿಂದ ನಿಲ್ಲಿಸಲ್ಪಟ್ಟಿತು. ಪುರ ಜನರಲ್ಲಿ ಅನೇಕರು ಇಷ್ಟು ಬೇಗ ನಿಲ್ಲಿಸಿದುದಕ್ಕೆ ಅತೃಪ್ತಿ ಸೂಚಿಸಿರುತ್ತಾರೆ. ಕಾತುರರಾಗಿದ್ದ ಜನ 3-4ನೇ ವಾರದಲ್ಲಿ ನೆ ... ಸುವುದೆಂದಿದ್ದರೆಂದೂ ತಿಳಿದುಬಂದಿದೆ.

ಇಷ್ಟರಲ್ಲೇ ಮತ್ತೆ "ಪ್ರತಿಜ್ಞಾ" ಚಿತ್ರವನ್ನು ಪ್ರದರ್ಶಿಸುವ ಏರ್ಪಾಡಿಡಲಾಗುವುದೆಂದು ಚಿತ್ರ ಪ್ರೇಮಿಗಳಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಸಿ. ಬಿ. ಎಂ. ಚಂದ್ರಯ್ಯ,
ಅಶೋಕ ರಸ್ತೆ, ಮೈಸೂರು

ರಷ್ಯ ಅಮೆರಿಕಗಳಿಗೆ ಭಿನ್ನಾಭಿಪ್ರಾಯ

ಶಸ್ತ್ರಸನ್ಯಾಸ ಸಮಿತಿಯು ಅಣುಶಕ್ತಿ ಮತ್ತು ಇತರ ಎಲ್ಲ ಶಸ್ತ್ರಗಳ ಬಗ್ಗೆ ನ... ಹತೋಟಿ ಹೊಂದಿರಬೇಕೆಂದು ರಷ್ಯಾ ಹೇಳುತ್ತಿದೆ. ಅಣುಶಕ್ತಿಗೇ ಬೇರೆ ಪ್ರತಿ ... ಇರಬೇಕೆಂದು ಅಮೆರಿಕ ವಾದಿಸುತ್ತಿದೆ. ಹೀಗಾಗಿ ಈ ಎರಡು ರಾಷ್ಟ್ರಗಳಲ್ಲಿ ಭಿನ್ನಾಭಿಪ್ರಾಯ ಮೂಡಿದೆಯೆಂದು ವರದಿಯಾಗಿದೆ.

ಪ್ರಜಾ ಪರಮಾಧಿಕಾರ ದಿನಾಚರಣೆ

ರಾಜ್ಯಾಂಗ ಸಭೆಯು ಮೂಲ ನಿ... ಯಕ್ಕನುಗುಣವಾಗಿ, ಪ್ರಜೆಗಳೇ ಸಂಸ್ಥಾನದ ಸ್ವಾಮಿತ್ವಕ್ಕೆ ಪರಮಾಧಿಕಾರಿಗಳೆಂ... ಸಾರಲು ಇದೇ ೧೪ ನೇ ತಾ|| ಶುಕ್ರವಾರ ಕರ್ನಾಟಕದಾದ್ಯಂತ ವಿದ್ಯಾರ್ಥಿ ಕಾಂಗ್ರೆಸ್ ಸಂಸ್ಥೆಗಳು ಪ್ರಜಾ ಪರಮಾಧಿಕಾರ ದಿನಾಚರಣೆ ನಡೆಸಬೇಕೆಂದು ಅ|| ಕ... ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

Edited, printed and published by A. R. Nagarajan at the Sadhvi Press, D. Subbiah Road, Mysore.

ಹೊಸ ಜವಳಿ
ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ
ಇಂದೇ ಭೇಟಿ ಕೊಡಿ!
ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿ!!
ಬಿ. ಕೆಂಚಪ್ಪ ಸನ್ಸ್,
ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು

Rajkamal, Mysore
From 7-2-47 Daily Three Shows
'GARDEN OF ALLAH'
A FULL LENGTH : : TECHNICOLOR
Morning Shows from 7-2-47 at 10.30 a. m. for 4 days
TOPPER
A Halroach Hilarious Comedy.

ಪ್ರಕಟಣೆ
ತ್ವರೆ ಮಾಡಿರಿ! ವಿಳಂಬ ಮಾಡಬೇಡಿರಿ!! ಸುವರ್ಣ ಸಂಧಿ!!
ಪ್ರತಿ ಮೂರು ತಿಂಗಳಿಗೆ ಒಂದಾವರ್ತಿ ನಡೆಯುವ (ಗೋವಾ ಸಿಸ್ಟಂ) ಡಂಬ್ ಬೆಲ್ಸ್ ಚಾರಿಟಿ ಟಿಕೆಟ್, ಪೂರ್ತಿ 0-4-0; ಸಿಂಗಲ್ ೧ಕ್ಕೆ 0-1-0 ಕ್ಲೋಸಿಂಗ್ 28-2-47, ಡ್ರಾಯಿಂಗ್ 25-3-47. 25 ಟಿಕೆಟ್ ಉಳ್ಳ ಪುಸ್ತಕ ೧ಕ್ಕೆ 6-4-0, (... ಗಳ್ 100 ಟಿಕೆಟ್‌ಗಳು) ಒಂದು ಪುಸ್ತಕ ಪೂರ್ತಿ ತೆಗೆದುಕೊಳ್ಳುವವರಿಗೆ ಮಾತ್ರ ರವಾನಿಸಿ ಕಳುಹಿಸುತ್ತೇವೆ. ಇತರರು ಒಂದಾಣೆ ಸ್ಟಾಂಪು ಕಳುಹಿಸಿ ರಸಲ್ಟ್ ತರಿಸಿಕೊಳ್ಳಿರಿ. ... ದು ಬುಕ್ಕಿಗೆ ಒಂದು ಗ್ಯಾರಂಟಿ ಪ್ರೈಸು ಕೊಡುತ್ತೇವೆ. 500 ರೂ. ಟಾಪು ... ಪ್ರೈಸು 1-8-0 ರೂ ವರೆವಿಗೆ 3,000 ಟಿಕೆಟ್ಟುಗಳನ್ನು ತೆಗೆಯುವರು. ಮಾರಾಟಕ್ಕೆ ಇಟ್ಟಿರುವ ಎಲ್ಲಾ ಟಿಕೆಟ್ಟುಗಳೂ ಬಿಕರಿ ಆಗದಿದ್ದಲ್ಲಿ ಬಹುಮಾನಗಳಿಗಾಗಿ ಇಟ್ಟಿರುವ ಹಣವನ್ನು ವಸೂಲಾದ ಹಣಕ್ಕನುಸಾರವಾಗಿ ಪ್ರಿಂಟಿಂಗ್, ಅಡ್ವರ್ಟೈಸ್‌ಮೆಂಟ್, ಸೆಲ್ಲಿಂಗ್ ಕಮಿಷನ್, ಈ ಸಲ ಹರಿಜನ, ಡೆಲ್ಲಿಯಲ್ಲಿರತಕ್ಕ ಲಂಡರ್ ಚರ್ಚಿಗೆ ಕೊಟ್ಟು ಉಳಿಯುವ ಮೊಬಲಗನ್ನು ಬಹುಮಾನದ ನಂಬರ್‌ಗಳಿಗೆ ಹಂಚಲಾಗುತ್ತದೆ. ಸ್ಕೂಲ್ ವಿದ್ಯಾರ್ಥಿಗಳು ಕಾರ್ಖಾನೆಯವರು; ರಿಟೈರ್ಡ್ ಪೆನ್ಷನ್‌ದಾರರು, ಪಟೇಲರು, ಗ್ರಾಮ ಸುಧಾರಕರು, ಖಾಸಗೀ ಜನಗಳು, ಎಲ್ಲರೂ ಸಹಕರಿಸಿ ಈ ಟಿಕೆಟ್‌ಗಳನ್ನು ಕೊಂಡು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ. ಈ ಟಿಕೆಟ್‌ಗಳು ಎಲ್ಲಾ ಊರುಗಳಲ್ಲಿಯೂ ದೊರೆಯುತ್ತವೆ.
ಟಿಕೆಟ್ ದೊರೆಯುವ ಸ್ಥಳಗಳು:- ಎಂ. ಶ್ರೀನಿವಾಸ ಶೆಟ್ಟಿ ಬ್ರದರ್ಸ್, ಜನರಲ್ ಮರ್ಚೆಂಟ್ಸ್, ಶೃಂಗೇರಿ; ಟಿ. ಎ. ಉಡುಪ, ಶ್ರೀ ರಾಮ ಫಾರ್ಮಸಿ, ಕೃಷ್ಣರಾಜನಗರ; ಎಂ. ಆರ್. ಕೃಷ್ಣರಾವ್, ಪ್ರೊಪ್ರೈಟರ್, ಮ್ಯಾಂಗಳೋರ್ ರೆಸ್ಟೋರೆಂಟ್, ಚಿಕ್ಕಬಳ್ಳಾಪುರ; ಬಿ. ಮಂಚಪ್ಪನವರು, ಕಂಟ್ರಾಕ್ಟರ್, ಮುನಿನಾತು ಫ್ರೋಸ್ಟ್, ಪಿ. ಕುರ್ಗ್, ... ಸಿಂಹ ಸ್ಟೋರ್ಸ್, ಚಾಮರಾಜನಗರ; ಕೆ. ಜಿ. ನಾರಾಯಣರಾವ್, ಗೋಪಾಲಕೃಷ್ಣ ವರ್, ಮೈಸೂರು ರೋಡ್, ಬೆಂಗಳೂರು ಸಿಟಿ; ಎಸ್. ಬೋರಲಿಂಗಯ್ಯ ಅಂಡ್ ಸನ್ಸ್ ಮರ್ಚೆಂಟ್ಸ್, ಶ್ರೀರಂಗಪಟ್ಟಣ; ಎ. ಕೆ. ವಿ. ಶೆಟ್ಟಿ, 846, ಹಳ್ಳದ ಕೇರಿ, ಮೈಸೂರು; ಎ. ಕೆ. ಭಾಸ್ಕರರಾವ್, 24, ಈಸ್ಟ್ ರೋಡ್, ಬಸವನ ಗುಡಿ, ಬೆಂಗಳೂರು ಸಿಟಿ.

ಪೋ॥ ಸಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೧೦—೩—೪೭ [ಸಂಚಿಕೆ ೨೮

ಲಂಡನ್ನಿನಿಂದ ಲೀಗಿಗೆ ಆಖೈರು ಉತ್ತರವೇ ?

ವಾರ ಭವಿಷ್ಯ

೧೦-೩-೪೭ರಿಂದ ೧೬-೩-೪೭ರ ವರೆಗೆ
(ನಿತ್ಯಾನಂದ ಸ್ವಾಮಿಗಳಿಂದ)

ಮೇಷ:- ಆರೋಗ್ಯ ಕೆಡುತ್ತದೆ. ಧನವು ಉತ್ತಮವಾಗಿರುತ್ತದೆ. ಖರ್ಚು ಉದ್ಯೋಗ ವ್ಯವಹಾರಗಳಲ್ಲಿ ಅಧಿಕಾರದವರಿಂದ ಸನ್ಮಾನ. ಶತ್ರುಗಳ ... ಕಡಿಮೆಯಾಗುತ್ತದೆ. ತಾ॥ ... ಸಾಧಾರಣ ಲಾಭ. ಬಂಧುದ

ವೃಷಭ:- ಆರೋಗ್ಯ ಸಾಧಾರಣವಾಗಿ ... ಯೋಚಿಸಿದ ಕಾರ್ಯಗಳು ಸುಗಮವಾಗಿ ನೆರವೇರುವುವು. ಮಂಗಳಕಾರ್ಯಗಳು ನಡೆಯುವುವು. ಧನಲಾಭವಿರುತ್ತದೆ ಮಿತ್ರರಿಂದ ವಿಶೇಷ ಸಹಾಯವಾಗುವುದು. ತಾ॥ ೧೩, ೧೪, ... ಲಾಭ, ಪ್ರವಾಸ

ಮಿಥುನ:- ಆರೋಗ್ಯ ಕೆಡುವ ಸಂಭವ ಉದ್ಯೋಗ ವ್ಯವಹಾರಗಳಲ್ಲಿ ಸೋಲು ಶತ್ರುಗಳಿಂದ ಕಿರುಕುಳ ಧನಾ... ಕಡಿಮೆ. ಔಷಧೋಪಚಾರಗಳಿಗೆ ಹೆಚ್ಚಿನ ಖರ್ಚು ಮಿತ್ರರಿಂದ ತಿರ... ತಾ॥ ೧೫, ೧೬ ಲಾಭ ಶಾಂತಿ.

ಕರ್ಕಾಟಕ:- ಆರೋಗ್ಯ ಸಾಧಾರಣ. ಮಾನಸಿಕ ಚಿಂತೆ ಹೆಚ್ಚು. ಉದ್ಯೋಗ ವ್ಯವಹಾರಗಳಲ್ಲಿ ಅಧಿಕಾರ ವರ್ಗದವರಿಂದ ಸ... ಶತ್ರುಗಳಿಂದ ವ್ಯಾಪಾರಕ್ಕೆ ಧಕ್ಕೆ ... ಗಲುವುದು. ಶುಭ ಕಾರ್ಯಗಳಿಗಾಗಿ ... ವೆಚ್ಚ. ತಾ॥ ೧೩, ೧೪ ಲಾಭ. ಪ್ರ

ಸಿಂಹ — ಆರೋಗ್ಯ ಉತ್ತಮ. ಉದ್ಯೋಗ ವ್ಯವಹಾರಗಳಲ್ಲಿ ಸೋಲು, ಮನೆಯವರಿಗೆ ಆರೋಗ್ಯ ಕೆಟ್ಟು ಔಷಧೋಪಚಾರಗಳಿಗಾಗಿ ಹೆಚ್ಚಿನ ವೆಚ್ಚ. ಪ್ರವಾಸ ... ಆಲಸ್ಯ. ಮಿತ್ರರಿಂದ ತಿರಸ್ಕಾರ. ... ೧೧, ೧೨, ೧೬ ಸಾಧಾರಣ. ಸಂ...

ಕನ್ಯಾ:— ಆರೋಗ್ಯ ಉತ್ತಮ, ವ್ಯಾಪಾರದಿಂದ ಲಾಭ ಮತ್ತು ಯಶ. ಮಂಗಳ ಕಾರ್ಯಗಳು ನಡೆಯುತ್ತವೆ ರಾಜಕೀಯ ವ್ಯವಹಾರದಿಂದ ಪ್ರಮುಖ ವ್ಯಕ್ತಿಗಳ ಸ್ನೇಹ. ಪ್ರವಾಸದಿಂದ ಮಿತ್ರರ ಭೇಟಿ. ... ೧೩, ೧೫, ೧೬, ಸಂತೋಷ ಕೂಟ... ವ್ಯಯ

ತುಲಾ :— ಆರೋಗ್ಯ ಸಾಧಾರಣವಿರು... ಮಾನಸಿಕ ಚಿಂತೆ ಹೆಚ್ಚು ಧನಲಾಭ ಕಡಿಮೆ, ಖರ್ಚು ಹೆಚ್ಚು. ಉದ್ಯೋಗ ವ್ಯವಹಾರಗಳಲ್ಲಿ ಶತ್ರುಗಳಿಂದ ಕಿರುಕುಳ ಧಾರ್ಮಿಕ ಕಾರ್ಯಗಳಲ್ಲಿ ವಿಶೇಷ ... ತಾ॥ ೧೫, ೧೬ ಪ್ರವಾಸ, ಅಧಿಕಾರಿಗಳಿಂದ ಮನ್ನಣೆ.

ವೃಶ್ಚಿಕ :— ಆರೋಗ್ಯ ಕೆಡುತ್ತದೆ ಯು... ಕಾರ್ಯಗಳಲ್ಲಿ ಮಿತ್ರರಿಂದ ಸಹಾಯ ... ಉದ್ಯೋಗ ವ್ಯವಹಾರಗಳಲ್ಲಿ ಯಶ. ...ದಲ್ಲಿ ಕಲಹ ಸಂಭವಿಸಿ ಮಾನಸಿಕ ಚಿಂತೆ ಹೆಚ್ಚುವುದು ತಾ॥ ೧೧, ೧೪ ಸಾಧಾರಣ ಲಾಭ, ಸನ್ಮಾನ

ಧನಸ್ಸು :- ಆರೋಗ್ಯ ಕೆಡುತ್ತದೆ. ಉದ್ಯೋಗ ವ್ಯವಹಾರಗಳಲ್ಲಿ ಯಶ, ಅಧಿಕಾರಿ ವರ್ಗದವರಿಂದ ಸನ್ಮಾನ, ಮಾನಸಿಕ ಚಿಂತೆ ಹೆಚ್ಚು. ಧನವ್ಯಯ ಅಧಿಕ ಪರದೇಶ ಪ್ರವಾಸವೊದಗುವುದು ತಾ॥ ೧೩, ... ಅಪ್ರಿಯವಾರ್ತೆ, ಅಶಾಂತಿ

ಶ್ವೇತ ಭವನದಿಂದ ಲೀಗಿಗೆ ಆಖೈರು ಉತ್ತರ

ಮುಸ್ಲಿಂ ಲೀಗು ರಾಜ್ಯಾಂಗ ಸಭೆಯ ಬಗ್ಗೆ ಕೈಕೊಂಡ ನಿರ್ಧಾರವನ್ನು ಪುನಃ ಪರಿಶೀಲಿಸಬೇಕೆಂಬುದಾಗಿ ಲಂಡನ್ನಿನಿಂದ ಬಂದಿರುವ ಅಭಿಪ್ರಾಯವನ್ನು ವೈಸರಾಯ್ ಮಿ॥ ಲಿಯಾಕತ್ ಅಲಿ ಖಾನರಿಗೆ ತಿಳಿಸಿರುವರೆಂದು ದಹಲಿಯಲ್ಲಿ ನಂಬಲಾಗಿದೆ ಶನಿವಾರದ ದಿನ ಮಿ॥ ಖಾನರು ವೈಸರಾಯರ ಭವನಕ್ಕೆ ಹೋಗಿ ಹೊರಗೆ ಬಂದರೆಂದೂ, ಲೀಗ್ ವಲಯದಲ್ಲಿ ನಿರಾಸೆ, ನಿರುತ್ಸಾಹಗಳು ಮೂಡಿರುವುದಾಗಿಯೂ ವರದಿಯಾಗಿದೆ ವೈಸರಾಯರೂ, ಬ್ರಿ॥ ಮಂತ್ರಿ ಮಂಡಲವೂ ೨೦ನೇ ಫೆಬ್ರವರಿ ಹೇಳಿಕೆಯನ್ನು ಕಾಂಗ್ರೆಸ್ಸು ಪೂರ್ಣವಾಗಿ ಒಪ್ಪಿದೆಯೆಂದು ಲೀಗಿಗೆ ತಿಳಿಸಿರುವರೆಂದು ಗೊತ್ತಾಗಿದೆ ಲೀಗು ತನ್ನ ನಿರ್ಧಾರವನ್ನು ಬದಲಾಯಿಸದಿದ್ದಲ್ಲಿ ಬ್ರಿ॥ ಸರ್ಕಾರದವರು ಹೊಸ ಯೋಜನೆಯೊಂದನ್ನು ಹೊರಡಿಸಬೇಕಾಗುವುದೆಂದೂ ಲಂಡನ್ನಿನ ಅಧಿಕಾರಿಗಳೊಬ್ಬರು ಅಭಿಪ್ರಾಯಪಟ್ಟಿರುವುದಾಗಿ ವರದಿಯಾಗಿದೆ.

ಘೂರ್ಕರಿಗೆ ದಂಡ

ಮೊನ್ನೆ ದಿನ ರಾತ್ರಿ ಸಯ್ಯಾಜಿರಾವ್ ರಸ್ತೆಯಲ್ಲಿ ಅಂಗಡಿಗಳ ಕಾವಲು ಕಾಯುವ ಘೂರ್ಕರಾದ ಮಹಾಬೀರ್ ಸಿಂಗ್, ಬಹದ್ದೂರ್ ಸಿಂಗ್ ಮುಂತಾದವರು ಜೂಜಾಡುತ್ತಿದ್ದರೆಂದು ದೇವರಾಜ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಎರಡನೇ ಮ್ಯಾಜಿಸ್ಟ್ರೇಟರು ೭ ಮಂದಿ ಅಪರಾಧಿಗಳಿಗೂ ತಲಾ ೮ ರೂ. ಗಳ ದಂಡ ವಿಧಿಸಿದರು

ಮಕರ :- ಆರೋಗ್ಯ ಸಾಧಾರಣ, ಧನಾದಾಯ ಉತ್ತಮ, ಉದ್ಯೋಗ ವ್ಯವಹಾರಗಳಲ್ಲಿ ಜಯ. ಅಧಿಕಾರಿ ವರ್ಗದವರಿಂದಲೂ, ಪ್ರಮುಖ ವ್ಯಕ್ತಿಗಳಿಂದಲೂ ಸನ್ಮಾನ ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು ತಾ॥ ೧೪, ೧೬ ಪ್ರವಾಸ, ಚಿಂತೆ.

ಕುಂಭ :- ಆರೋಗ್ಯ ಕೆಡುತ್ತದೆ, ಖರ್ಚು ಅಧಿಕ, ಉದ್ಯೋಗ ವ್ಯವಹಾರಗಳಲ್ಲಿ ಸೋಲು, ಶತ್ರುಗಳಿಂದ ಕಿರುಕುಳ ಬಂಧುಗಳಿಂದ ತಿರಸ್ಕಾರ, ಖರ್ಚು ಅಧಿಕ. ತಾ॥ ೧೨, ೧೫ ಸಾಧಾರಣ ಲಾಭ, ಶಾಂತಿ.

ಮೀನ :- ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಅಧಿಕಾರಿ ವರ್ಗದವರ ಮತ್ತು ರಾಜಕೀಯ ವ್ಯಕ್ತಿಗಳ ಸ್ನೇಹ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಮಂಗಳ ಕಾರ್ಯಗಳಿಗಾಗಿ ವಿಶೇಷ ಪ್ರವಾಸ, ತಾ॥ ೧೩, ೧೫ ಲಾಭ, ಮಿತ್ರ ಭೇಟಿ.

ಜಿಲ್ಲಾ ಕಾಂಗ್ರೆಸ್ ಸಮಿತಿ

ಮೈಸೂರು ೧೦

ನಿನ್ನೆ ದಿನ ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಶ್ರೀ ಎಂ. ಎಲ್ ನಂಜರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಜರುಗಿ ಜಿಲ್ಲಾ ಬೋರ್ಡ್ ಚುನಾವಣೆಗೆ ಉಮೇದುವಾರರನ್ನು ನಿಲ್ಲಿಸಲು ಶ್ರೀಗಳಾದ ನಂಜರಾಜೇ ಅರಸ್, ಹೆಚ್ ಮಾದಪ್ಪ ಮತ್ತು ಅಗರಂ ಸೂರ್ಯನಾರಾಯಣ ಪಂಡಿತರನ್ನೊಳಗೊಂಡ ಸಮಿತಿಯೊಂದನ್ನು ರಚಿಸಿತು. ಕಾಂಗ್ರೆಸ್ ಪರವಾಗಿ ಸ್ಪರ್ಧಿಸಲು ಅಪೇಕ್ಷಿಸುವವರು ಫೆಬ್ರವರಿ ೨೫ ನೇ ತಾ॥ ನೊಳಗೆ ಜಿಲ್ಲಾ ಕಾಂಗ್ರೆಸ್ ಕಛೇರಿಗೆ ೫೫ ರೂ ಗಳೊಡನೆ ಅರ್ಜಿ ಹಾಕಿಕೊಳ್ಳಬೇಕು. ಮಾರ್ಚ ೨ ನೇ ತಾ॥ ಅವುಗಳನ್ನು ಪರಿಶೀಲಿಸಿ ೬ ನೇ ತಾ॥ ಪರಿಣಾಮವನ್ನು ಪ್ರಕಟಿಸಲಾಗುವುದು ೭ ನೇ ತಾ॥ ವರೆಗೆ ಕಾಂಗ್ರೆಸ್ ಅಧ್ಯಕ್ಷರಿಗೆ ಅಪೀಲು ಮಾಡಿಕೊಳ್ಳಬಹುದು. ತಾ॥ ೯-೩-೪೭ ನೇ ದಿನ ಉಮೇದುವಾರರ ಅಖೈರು ಪಟ್ಟಿಯನ್ನು ಬಹಿರಂಗಪಡಿಸಲಾಗುತ್ತದೆ.

ವಾರ್ಷಿಕೋತ್ಸವ

ರಾಜಧಾನಿಯ ವೈಶ್ಯ ಯುವ ಜನ ಸಂಘದ ೧೧ ನೇ ವಾರ್ಷಿಕೋತ್ಸವವು ಟೌನ್ ಹಾಲಿನಲ್ಲಿ ನಿನ್ನೆ ಸಂಜೆ ಶ್ರೀಮತಿ ಎಂ ಆರ್. ಲಕ್ಷಮ್ಮನವರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀ॥ ಭೂಪಾಳಂ ಚಂದ್ರಶೇಖರಯ್ಯನವರು ಮಾತನಾಡಿ, ಯುವಕರ ಜವಾಬ್ದಾರಿಯನ್ನು ವಿವರಿಸಿದರು ಹಳ್ಳಿಗಳ ಉದ್ಧಾರಕ್ಕಾಗಿ ಸರ್ವರೂ ಪ್ರಯತ್ನಿಸಬೇಕು, ವಾಣಿಜ್ಯದ ಅಭಿವೃದ್ಧಿಯ ಕಡೆ ಗಮನ ಕೊಡಬೇಕು, ಕೋಮುವಾರು ಐಕ್ಯತೆಗಾಗಿ ಶ್ರಮಿಸಬೇಕು. ಎಂದು ಹೇಳಿದರು ಮೈಸೂರಿನಲ್ಲಿ ಪ್ರಜಾ ಪ್ರತಿನಿಧಿಗಳ ಸರ್ಕಾರವನ್ನು ಪ್ರಭುಗಳು ಕೂಡಲೇ ರಚಿಸಬೇಕೆಂದು ಪ್ರಾರ್ಥಿಸಿದರು. ದೇಶದಲ್ಲಿ ಮಧುರ ವಾತಾವರಣವನ್ನು ಕಲ್ಪಿಸಲು ಪ್ರತಿಬಂಧಕಾಜ್ಞೆಗಳನ್ನೆಲ್ಲಾ ರದ್ದು ಮಾಡಿ, ಬಂಧನದಲ್ಲಿರುವ ನಾಯಕರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯ ಪಡಿಸಿದರು. ಅಧ್ಯಕ್ಷರು ಮಾತನಾಡಿ ವೈಶ್ಯ ಮಹಿಳೆಯರಲ್ಲಿ ಅವಿದ್ಯಾವಂತರ ಸಂಖ್ಯೆ ಅಧಿಕವಾಗಿರುವುದಕ್ಕಾಗಿ ವಿಷಾದಿಸಿ, ಸ್ತ್ರೀಯರ ವಿದ್ಯಾಭ್ಯಾಸದಿಂದಲೇ ಸಮಾಜದ ಪ್ರಗತಿಯು ಸಾಧ್ಯ ಎಂದು ಹೇಳಿದರು.

ಬ್ರಿಟನ್ನಿನಲ್ಲಿ ಕಲ್ಲಿದ್ದಿಲ ಅಭಾವ

ಕಲ್ಲಿದ್ದಿಲ ಅಭಾವ ತೀವ್ರವಾಗಿರುವುದರಿಂದ ಕಾರ್ಖಾನೆಗಳಿಗೆ ಬೇಕಾದ ವಿದ್ಯುಚ್ಛಕ್ತಿಯನ್ನು ಒದಗಿಸಲು ಅಸಾಧ್ಯವಾಗಿದೆಯೆಂದು ಬ್ರಿಟನ್ನಿನ ಕೈಗಾರಿಕಾ ಮಂತ್ರಿಗಳು ಪ್ರಕಟಿಸಿದ್ದಾರೆ ಇಂದಿನಿಂದ ಲಂಡನ್ ನಗರ, ಆಗ್ನೇಯ, ಈಶಾನ್ಯ ಮತ್ತು ಮಧ್ಯ ಇಂಗ್ಲೆಂಡುಗಳ ಕಾರ್ಖಾನೆಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವುದನ್ನು ನಿಲ್ಲಿಸಲಾಗಿದೆ. ಇದರಿಂದಾಗಿ ೩೦ ಲಕ್ಷ ಮಂದಿ ನಿರುದ್ಯೋಗಿಗಳಾಗಿದ್ದಾರೆ ಈ ಸಮಸ್ಯೆ ಇನ್ನು ಕೆಲವು ಕಾಲ ಮುಂದುವರಿದರೆ ಬ್ರಿಟನ್ನಿನಲ್ಲಿ ಆರ್ಥಿಕ ಬಿಕ್ಕಟ್ಟು ಪ್ರಾಪ್ತವಾಗುವ ಹೆದರಿಕೆ ಉಂಟಾಗಿದೆ.

ಬರ್ಮಾ ಮಂತ್ರಿಗಳ ರಾಜೀನಾಮೆ

ಬ್ರಿಟನ್-ಬರ್ಮಾ ಒಪ್ಪಂದವು ಸಮರ್ಪಕವಾಗಿಲ್ಲವೆಂದು ಮಂತ್ರಿಗಳಾದ ಯುಸಾ ಮತ್ತು ಥಕಿನ್ ಬಾಸೇನ್‌ರವರು ರಾಜೀನಾಮೆಯನ್ನು ಸಲ್ಲಿಸಿದ್ದಾರೆ

ಮಲಬಾರಿನಲ್ಲಿ ಗಲಭೆ

ಉತ್ತರ ಮಲಬಾರಿನ ಚಿರಕ್ಕಲ್ ತಾಲ್ಲೂಕಿನಲ್ಲಿ ಲೂಟಿ, ಮರೋಡೆಗಳು ವಿಪರೀತವಾಗಿ ಹೆಚ್ಚಿವೆ ಇದುವರೆಗೆ ೪೪೪ ಮಂದಿ ದಸ್ತಗಿರಿಯಾಗಿದ್ದಾರೆ

ಈಜಿಪ್ಟ್ ದೊರೆಗಳ ವರ್ಧಂತಿ ಉತ್ಸವವಿಲ್ಲ

ಈಜಿಪ್ಟ್ ದೇಶದ ಆಶೆ ಆಕಾಂಕ್ಷೆಗಳು ಈಡೇರುವ ವರೆಗೆ ಫರೂಕ್ ದೊರೆಗಳ ಜನ್ಮದಿನೋತ್ಸವವನ್ನು ಮುಂದಕ್ಕೆ ಹಾಕಲಾಗಿದೆಯೆಂದು ಅಧಿಕೃತ ಪ್ರಕಟಣೆ ಹೊರಟಿದೆ.

ಬರೋಡದ ಉದಾರತೆ

ರಾಜ್ಯಾಂಗ ರಚನಾ ಸಮಿತಿಗೆ ತಮ್ಮ ಸಂಸ್ಥಾನದಿಂದ ಮೂವರು ಪ್ರತಿನಿಧಿಗಳನ್ನು ಶಾಸನ ಸಭೆಗಳಿಂದ ಚುನಾಯಿಸಿ ಕಳುಹಿಸಲು ಬರೋಡ ದಿವಾನರು ಒಪ್ಪಿದ್ದಾರೆಂದು ಗೊತ್ತಾಗಿದೆ. ಈ ಚುನಾವಣೆಯು ಬ್ರಿಟಿಷ್ ಮೇ ೧೬ರ ಪ್ರಣಾಳಿಕೆಯಂತೆ 'ಸಿಂಗಲ್ ಟ್ರಾನ್ಸ್‌ಫರಬಲ್' ಪದ್ಧತಿಯಂತೆ ಇರಲೂ, ಅಧಿಕಾರಿ ಮತ್ತು ನಾಮಕರಣ ಸದಸ್ಯರಿಗೆ ಮತ ಚಲಾವಣೆ ಹಕ್ಕಿಲ್ಲದಂತೆಯೂ ಒಪ್ಪಿರುವುದಾಗಿ ತಿಳಿದುಬಂದಿದೆ.

* ಪಂಜಾಬಿನ ಸೆರೆಮನೆಗಳಲ್ಲಿರುವ ಲೀಗ್ ನಾಯಕರನ್ನು ಭೇಟಿ ಮಾಡಲು ಕೇಂದ್ರ ಸರ್ಕಾರದ ಮಂತ್ರಿಗಳಾದ ಮಿ॥ ಘಜನ್‌ಫರ್ ಅಲಿ ಖಾನರಿಗೆ ಪಂಜಾಬ್ ಸರ್ಕಾರವು ಅನುಮತಿಯನ್ನು ನಿರಾಕರಿಸಿದೆ.

ಲೇಬರ್ ಫೆಡರೇಷನ್

ಕೃಷ್ಣರಾಜೇಂದ್ರ ಗಿರಣಿ, ಗಂಧದೆಣ್ಣೆ, ರೇಷ್ಮೆ ಫಿಲೇಚರ್ಸ್, ಪವರ್ ಆಫೀಸು, ಫ್ರೆಂಡ್ಸ್ ಟೈಲರ್ಸ್, ಸಾ॥ ಮುದ್ರಣಾಲಯ, ಕೆ ಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಾರ್ಖಾನೆಗಳ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ನಿನ್ನೆ ಸಂಜೆ ನಗರ ಕಾಂಗ್ರೆಸ್ ಭವನದಲ್ಲಿ ಸಭೆ ಸೇರಿ ಲೇಬರ್ ಫೆಡರೇಷನನ್ನು ಸ್ಥಾಪಿಸಿಕೊಂಡರು. ಅಧಿಕಾರಿ ವರ್ಗದ ಆಯ್ಕೆ ಈ ರೀತಿ ನಡೆಯಿತು:- ಶ್ರೀ॥ ಟಿ. ವಿ ... ಅಧ್ಯಕ್ಷ, ಎಂ ಎಸ್ ರಾಮಸ್ವಾಮಿ, ... ಮುದ್ದೇಗೌಡ ಉಪಾಧ್ಯಕ್ಷರು. ಟಿ. ಎಸ ರಾಘವನ್ ಸ್ವಾಮಿ- ಕಾರ್ಯದರ್ಶಿ, ಎ ... ಸಹ ಕಾರ್ಯದರ್ಶಿ ಮತ್ತು ಎಲ್ ರಾಮಯ್ಯ- ಖಜಾಂಚಿ.

ಸಾಧ್ವಿ

ತಾ|| ೧೦-೨-೪೭ ಸೋಮವಾರ

ಸಮಿತಿಗಳಿಂದ ಸುಧಾರಣೆ?

ಇದು ಸುಧಾರಣೆಗಳ ಕಾಲ. ರಾಜಕೀಯದಲ್ಲಿಯೂ ಸಾಮಾಜಿಕವಾಗಿಯೂ, ಸಂಸ್ಕೃತಿಯ ಬೆಳವಣಿಗೆಗೂ ಸುಧಾರಣೆಗಳನ್ನು ಜಾರಿಗೆ ತರುವ ಕಾಲ. ಯುದ್ಧಾನಂತರದ ಪುನರ್ರಚನೆಗಾಗಿ ಅನೇಕ ಸುಧಾರಣಾ ಯೋಜನೆಗಳು ಸಿದ್ಧವಾಗಿವೆ. ಇವೆಲ್ಲವೂ ವಿಶೇಷವಾಗಿ ಆರ್ಥಿಕ ಮತ್ತು ಔದ್ಯೋಗಿಕ ಉದ್ಯಮಗಳಿಗೆ ಸಂಬಂಧಪಟ್ಟವು. ಅವುಗಳಲ್ಲಿ ಇರುವಷ್ಟು ಆಸಕ್ತಿಯು ಇತರ ವಿಷಯಗಳಲ್ಲಿ ಇರುವಂತೆ ಕಂಡುಬರುವುದಿಲ್ಲ.

ಸುಧಾರಣೆಯೆಂದರೆ ಸಮಿತಿಗಳನ್ನು ನೇಮಿಸಿಬಿಡುವುದೊಂದು ಚಟವಾಗಿರುವಂತೆ ಕಾಣುತ್ತದೆ. ನಮ್ಮ ಸಂಸ್ಥಾನದಲ್ಲಿ ಪಾನನಿರೋಧಕ್ಕಾಗಿ ಒಂದು ಸಮಿತಿಯನ್ನು ನೇಮಿಸಲಾಗಿದೆ. ಈ ಸಮಿತಿಯವರು ಕೆಲವು ಸಮಾಲೋಚನೆಗಳನ್ನು ನಡೆಸುತ್ತಿದ್ದಾರೆ. ಪಾನನಿರೋಧದ ಸಾಧಕ ಬಾಧಕಗಳನ್ನು ಪರಿಶೀಲಿಸುತ್ತಿದ್ದಾರೆ. ಸಂಪೂರ್ಣವಾಗಿ ಮದ್ಯಪಾನವನ್ನು ತಪ್ಪಿಸಿಬಿಟ್ಟರೆ ಆಗಬಹುದಾದ ನಷ್ಟವನ್ನು ಭರ್ತಿ ಮಾಡುವ ಕ್ರಮವನ್ನೂ ಪರಿಶೀಲಿಸುತ್ತಿದ್ದಾರೆ. ಇವನ್ನೆಲ್ಲಾ ಸಾರ್ವಜನಿಕರಿಂದ ತಿಳಿಯಲು ಒಂದು ಪ್ರಶ್ನಾವಳಿಯನ್ನು ತಯಾರು ಮಾಡಿದ್ದಾರೆ. ಅದರ ಮೇಲೆ ಮಹಾಜನರ ಅಭಿಪ್ರಾಯವನ್ನು ಅರಿತು ಆನಂತರ ತಮ್ಮ ಸಲಹೆಗಳನ್ನು ಕೊಡಲಿದ್ದಾರೆ.

ನೆರೆಯ ಪ್ರಾಂತದಲ್ಲಿ ಇಂತಹ ಯಾವ ಕಲಾಪಗಳೂ ಇಲ್ಲದೆ ಈಗಾಗಲೇ ಅನೇಕ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಈ ಕಾರ್ಯವನ್ನು ಜಾರಿಗೆ ತರಲಾಗಿದೆ. ಇನ್ನೂ ಹಲವು ಜಿಲ್ಲೆಗಳಿಗೆ ಅದನ್ನು ವಿಸ್ತರಿಸಲಾಗುತ್ತಿದೆ. ಅಗತ್ಯವಾದ ಇಂತಹ ಕೆಲಸವನ್ನು ಕೈಗೊಳ್ಳಲು ಅವರು ಪೂರ್ವಭಾವಿಯಾಗಿ ಸಮಿತಿಗಳನ್ನು ನೇಮಿಸಲಿಲ್ಲ.

ಸರ್ಕಾರಿ ನೌಕರರ ಸಂಬಳವನ್ನು ಹೆಚ್ಚಿಸುವುದಕ್ಕೂ ಮತ್ತೊಂದು ಸಮಿತಿಯನ್ನು ನೇಮಿಸಲಾಗಿದೆ. ಈ ಸಮಿತಿಯ ಒಂದೆರಡು ಅಧಿವೇಶನಗಳು ಮಾತ್ರ ಇದುವರೆಗೆ ನಡೆದಿವೆ. ಇನ್ನೆಷ್ಟು ಅಧಿವೇಶನಗಳು ಆಗಬೇಕೋ ತಿಳಿಯದು. ನೌಕರರು ಮಾತ್ರ ತಮಗೆ ಅನುಕೂಲವು ಎಂದಿಗೆ ಆಗುವುದೋ ಎಂದು ಬಾಯಿ ಬಿಟ್ಟುಕೊಂಡು ಕುಳಿತಿರುವರು.

ರಾಜಕೀಯ ಸುಧಾರಣೆಯ ವಿಷಯವೂ ಹೀಗೆಯೇ. ಪ್ರಿನ್ಸರುಗಳು ಸಂದೇಶವಿತ್ತು ತಿಂಗಳಾಯಿತು. ದಿವಾನರು ಕಾಲಹರಣಕ್ಕೆ ಅವಕಾಶವೀಯುವುದಿಲ್ಲವೆಂದೂ ಹೇಳಿದುದಾಯಿತು. ಆದರೆ ಇದುವರೆಗೆ ಯಾವ ಕಾರ್ಯವೂ ನಡೆದಿಲ್ಲ. ಸುಧಾರಣಾಧಿಕಾರಿಗಳಾಗಿ ಶ್ರೀ ಬಿ. ಎನ್. ಪುಟ್ಟಸ್ವಾಮಿಯವರ ನೇಮಕವು ಆಗಿರುವುದೊಂದೇ ಕೆಲಸ. ಇನ್ನೂ ಈ ಕಾರ್ಯವು ಸಾಂಗವಾಗಿ ಮುಕ್ತಾಯವಾಗುವುದೆಂತೋ!

ಮುಖ್ಯವಾಗಿ ಸಮಿತಿಗಳಿಂದ ಇಂತಹ ಕೆಲಸಗಳು ಆಗುವುದಿಲ್ಲ. ಮಿಂಚಿನ ವೇಗದಿಂದ ಕಾಲವು ಸಾಗುತ್ತಿದೆ. ಮಹಾಜನರಿಗೆ ಬೇಕಾದ ಸುಧಾರಣೆಗಳು ಏನೆಂಬುದು ಎಲ್ಲರಿಗೂ ಗೊತ್ತು. ಇವುಗಳನ್ನು ಅನೇಕ ರೀತಿಯಲ್ಲಿ ಇದುವರೆಗೆ ವ್ಯಕ್ತಪಡಿಸಲಾಗಿದೆ. ಇನ್ನೂ ಇವುಗಳ ವಿಮರ್ಶೆಗಾಗಿ ಕಾಲಹರಣಮಾಡದೆ ಅವುಗಳನ್ನು ಕಾರ್ಯರೂಪಕ್ಕೆ ತರುವುದೇ ಉತ್ತಮವಾದ ನೀತಿಯಾಗಿದೆ.

ಅಂದವಾದ ಬಣ್ಣಗಳಲ್ಲಿ

ವಂಗದೇಶದ ರೇಷ್ಮೆ ಸೀರೆಗಳು (Bengal Silk Saries) ಹೇರಳವಾಗಿ ಬಂದಿವೆ. ಬೇಕಾದ್ದನ್ನು ಆರಿಸಿ.

ಬಾಹುಸಾರ್ ಟ್ರೇಡಿಂಗ್ ಕಂಪೆನಿ,
ಓಲ್ಡ್ ಮೈಸೂರು ಬ್ಯಾಂಕ್ ರೋಡು,
ಮೈಸೂರು

ಸೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ -

ಮೈಸೂರು ಸಿಟಿ ವಾಣೀವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಶ್ಚಿಮ ದಿಕ್ಕಿನಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ|| ೧೩-೮-೪೬ ನೇ ಮರ್ಕಂ ಹರಾಜು ಇಸಿ ಹಾರ್ ನಾಮೆಯ ಷರತ್ತುಗಳಿಗೆ ಒಳಪಡಿಸಿ ತಾ|| ೧೬-೨-೪೭ ನೇ ಭಾನುವಾರ ಬೆಳಗ್ಗೆ ೯-೩೦ ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇತರ ವಿವರಗಳನ್ನು ಆಫೀಸಿನಲ್ಲಿ ರಜಾ ದಿನಗಳಲ್ಲದ ಇತರ ದಿವಸಗಳಲ್ಲಿ ೧೧ ಘಂಟೆಯಿಂದ ೫ ಘಂಟೆಯ ಒಳಗೆ ತಿಳಿಯಬಹುದು.

(ಸಹಿ) ಕೆ. ವೆಂಕಟೇಶ ಐಯ್ಯಂಗಾರ್,
ಛೇರ್ಮನ್ನರಿಗಾಗಿ.
ನಗರಾಭಿವೃದ್ಧಿ ಸಮಿತಿ, ಮೈಸೂರು.

ನಗಡೂರರ ಉಪವಾಸ?

ಸ್ವಂ ಸು] ಚಾಮರಾಜನಗರ,

ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದ ವೇದಪಾಠಶಾಲೆಯಲ್ಲಿ ಮೂಗೂರು ಕ[illegible]ಲೇನಾಡು ಕರ್ನಾಟಕ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡಲು ಶಾಲೆಯ ಅಧ್ಯಾಪಕರು ನಿರಾಕರಿಸಿರುವುದರಿಂದಲೂ, ಶಾಲೆಯನ್ನೇ ಮುಚ್ಚಲು ಏರ್ಪಾಡುಗಳು ಸಾಗುತ್ತಿರುವುದರಿಂದಲೂ, ಎಲ್ಲರ ಹೃದಯ ಪರಿವರ್ತನೆಗಾಗಿ ಶ್ರೀ|| ನಗಡೂರು ರಾಮಚಂದ್ರ ರಾಯರು ಇದೇ ೧೭ ನೇ ತಾ|| ನಿಂದ ಉಪವಾಸ ವ್ರತವನ್ನು ಆರಂಭಿಸಲಿದ್ದಾರೆ.

§ ಯಳಂದೂರು ತಾಲ್ಲೂಕು ಸಮ್ಮೇಳನವು ಇದೇ ೧೪ ನೇ ತಾ|| ಶುಕ್ರವಾರ ಅಡ್ವೋಕೇಟ್ ಮಿ|| ಖಲೀಲುಲ್ಲಾರವರ ಅಧ್ಯಕ್ಷತೆಯಲ್ಲಿ ಜರುಗುವುದು.

ಮೈಸೂರಿನ ಮಹಾಜನರಲ್ಲಿ ವಿನಂತಿ

"ಪ್ರತಿಜ್ಞ" ಚಿತ್ರ ಈ ಊರಿನ ರಾಜಕಮಲ್ ಥಿಯೇಟರಿನಲ್ಲಿ ಪ್ರದರ್ಶಿಸಲಾಗುತ್ತಿದ್ದು, ಕಾರಣಾಂತರದಿಂದ ನಿಲ್ಲಿಸಲ್ಪಟ್ಟಿತು. ಪುರಜನರಲ್ಲಿ ಅನೇಕರು ಇಷ್ಟುಬೇಗ ನಿಲ್ಲಿಸಿದುದಕ್ಕೆ ಅತೃಪ್ತಿ ಸೂಚಿಸಿರುತ್ತಾರೆ. ಕಾತುರರಾಗಿದ್ದ ಜನ 3-4ನೇ ವಾರದಲ್ಲಿ ನೋಡುವುದೆಂದಿದ್ದರೆಂದೂ ತಿಳಿದುಬಂದಿದೆ.

ಇಷ್ಟರಲ್ಲೇ ಮತ್ತೆ "ಪ್ರತಿಜ್ಞ" ಚಿತ್ರವನ್ನು ಪ್ರದರ್ಶಿಸುವ ಏರ್ಪಾಡಾಗುವುದೆಂದು ಚಿತ್ರಪ್ರೇಮಿಗಳಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಸಿ. ಬಿ. ಎಂ. ಚಂದ್ರಯ್ಯ,
ಅಶೋಕ ರಸ್ತೆ, ಮೈಸೂರು

Edited, printed and published by A. H. Nagaraiah at the Sadhvi Press, D. Subbiah Road, Mysore.

Rajkamal, Mysore

From 7-2-47 Daily Three Shows

'GARDEN OF ALLAH'

IN FULL LENGTH : : TECHNICOLOR

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿ!!

ಬಿ. ಕೆಂಚಪ್ಪ ಸನ್ಸ್,

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು

ರಾಜ್‌ಕಮಲ್, ಮೈಸೂರು

14-2-47ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಕನ್ನಡ ನಾಡಿನ ಮೊದಲನೇ ಸ್ಟುಡಿಯೋದಲ್ಲಿ ತಯಾರಾದ

ಮಹಾತ್ಮಾ ಪಿಕ್ಚರ್ಸ್‌ರವರ ಪ್ರಥಮ ಕಾಣಿಕೆ

★ ಕೃಷ್ಣಲೀಲಾ ★

(ಕನ್ನಡ ಚಿತ್ರ)

ದುಷ್ಟ ರಾಜನ ದರ್ಪವನ್ನು ಮುರಿದ ವೀರ ಬಾಲಕ ಶ್ರೀ ಕೃಷ್ಣನ ಲೀಲೆಗಳ ಅದ್ಭುತ ದೃಶ್ಯಗಳನ್ನು ತೋರಿಸುವ ಪೌರಾಣಿಕ ಚಿತ್ರ

-: ಭೂಮಿಕೆ :-

ಕುಮಾರಿ ಉಷಾ (ಗೆಸ್ಟ್ ಆರ್ಟಿಸ್ಟ್), ಕೆಂಪರಾಜ್, ರತ್ನಮಾಲಾ, ಬಳ್ಳಾರಿ ಲಲಿತ, ಸಂಗೀತ ವಿದುಷಿ ನಾಗರತ್ನಮ್ಮ, ಮರಿ ರಾಜ್, ರಾಜಕುಮಾರಿ ಮುಂತಾದವರು.

WARDEN MARCHES AHEAD

ANOTHER YEAR OF RECORD BUSINESS.

Youngest working on Surplus of Funds.

Progress of the past Three Years:-

	1944	1945	1946
Business Introduced:-	Rs 1,20,57,513	1,56,19,295	2,04,53,27
Business Completed:-	Rs. 1,04,77,346	1,32,87,620	1,72,12,48

THE WARDEN INSURANCE

Company Limited, Head Office:- BOMBAY.

Organisation All Over India, Ceylon & East Africa

Wide scope for energetic young men as Agents, Special Agents and Paid Organisers under our New Expansion Scheme:

Apply to:-

K. C. KARIMBAYA,
Branch Secretary,

Branch Office for Mysore State and Coorg,
142, Gandhi Nagar,
Bangalore City.

ವಾರ್ಡನ್ ಇನ್ಶೂರೆನ್ಸ್ ಕಂಪೆನಿ

ಲಿಮಿಟೆಡ್, ಹೆಡ್-ಆಫೀಸು:- ಬೊಂಬಾಯಿ.

ಮೈಸೂರು ಮತ್ತು ಕೊಡಗು ಶಾಖೆ:-

142, ಗಾಂಧಿ ನಗರ : : ಬೆಂಗಳೂರು ಸಿಟಿ.

ರಿ. ನಂ. 392 ‖ ವಂದೇ ಮಾತರಂ ‖ ಬಿಡಿಪ್ರತಿಗೆ 3 ಕಾಸು

ಸಂಪುಟ ೫] ಮಂಗಳವಾರ ೧೮—೨—೪೭ [ಸಂಚಿಕೆ ೧೫೭

ಕೇಂದ್ರ ಸರ್ಕಾರ ಬಿಡಲು ಲೀಗ್ ನಿರಾಕರಣೆ

ಪ್ರತಿನಿಧಿಗಳ ಆಯ್ಕೆ

ಮೈಸೂರು ೧೧

...ಡಿಯರ್ ಸಂಸ್ಥಾನದಲ್ಲಿ ಏಪ್ರಿಲ್ ...ಲ್ಲಿ ನಡೆಯಲಿರುವ ಅಖಿಲ ಭಾರತ ಸಮ್ಮೇಳನದ ಪ್ರತಿನಿಧಿಗಳ ಆಯ್ಕೆ ...ದೇ ೧೫ ನೇ ತಾ॥ ನಡೆಯಲಿದೆ. ...ರು ಜಿಲ್ಲೆಗೆ ಇರುವ ೯ ಸ್ಥಾನಗಳಿಗೆ ...ದುವಾರಂಗ ಬಯಸುವವರು ... ೩ ನೇ ತಾ॥ ನೊಳಗಾಗಿ ಜಿಲ್ಲಾ ...ಸ್ ಕಾರ್ಯದರ್ಶಿಗಳಿಗೆ ಅರ್ಜಿ ಸಲ್ಲಿ... ...ಂದು ಶ್ರೀ ಹೆಚ್. ಕೆ ಕುಮಾರ ...ಯವರು ಪ್ರಕಟಿಸಿದ್ದಾರೆ

...ಸೂರು ನಗರದ ಎರಡು ಸ್ಥಾನಗಳಿಗೆ ...ೇ ತಾ॥ ನೊಳಗಾಗಿ ಅರ್ಜಿ ಸಲ್ಲಿಸ...ಂದು ನಗರ ಕಾಂಗ್ರೆಸ್ ಸಮಿತಿ ಅಧ್ಯ...ದ ಶ್ರೀ ಎಸ್ ಚನ್ನಯ್ಯನವರು ಪ್ರ...ಟ್ಟಾರೆ

ವಿ ವಿ ಧ ವಿ ನೋ ದಾ ವ ಳಿ

...ದೇ ಮಾಹೆ ೧೪ ನೇ ಶುಕ್ರವಾರ ಸಂ... ಘಂಟೆಗೆ ಆಕಾಶವಾಣಿಯ ಡೈರೆಕ್ಟರಾ...ಎಂ ನಟೇಶಮೊದಲಿಯಾರ್‌ರವರ ...ಕ್ಷತೆಯಲ್ಲಿ ಶಾಲೆಯ ಬಡ ವಿದ್ಯಾರ್ಥಿ ...ಸಹಾಯಾರ್ಥವಾಗಿ ಬನುಮಯ್ಯನವರ ...ಯ ಸಭಾಂಗಣದಲ್ಲಿ "ವಿವಿಧ ವಿನೋ...ವಳಿಯನ್ನು" ಏರ್ಪಡಿಸಿದೆ ಎಲ್ಲರೂ ಪ್ರೋ...ಹಿಸಬೇಕೆಂದು ಕಾರ್ಯದರ್ಶಿಗಳು ಪ್ರಾ...ಸಿರುತ್ತಾರೆ.

ನೀರಿನ ಅಭಾವ

ಮೈಸೂರು ಸಿಟಿ ದೇವರಾಜ ಮೊಹಲ್ಲಾ ...ತ್ತ ಇತರೇ ಮೊಹಲ್ಲಾಗಳಲ್ಲಿ ನೀರು ...ಯಾದ ಕಾಲಗಳಲ್ಲಿ ಸರಬರಾಜು ಆಗದೆ ...ಜನರು ಕಷ್ಟಪಡುತ್ತಿದ್ದಾರೆ. ವಾಣಿ ...ಾಸ ವಾಟರ್ ವರ್ಕ್ಸ್ ಇಲಾಖೆಯವ... ಉದಾಸೀನವಾಗಿ ವರ್ತಿಸುತ್ತಿರುವುದು ...ಚಾ ಶೋಚನೀಯವಾಗಿರುತ್ತೆ. ನೀರ... ಸಕಾಲದಲ್ಲಿ ಬಿಡದೆ ರಾತ್ರಿ ಅವೇಳೆ...ಲ್ಲಿ ಬಿಟ್ಟು ಅನೇಕ ಮನೆಯ ನಲ್ಲಿಗಳ...ೂ ಮತ್ತು ಸಾರ್ವಜನಿಕ ಕಚ್ಚಿಸುಗಳಲ್ಲೂ ...ರ್ಥವಾಗಿ ನೀರು ಪೋಲು ಆಗುತ್ತಿದ್ದ... ಮೇಲ್ಕಂಡ ಇಲಾಖೆಯವರು ಸದರಿ ...ಂದರೆಗಳನ್ನು ಸರಿಪಡಿಸದೆ ಇರುತ್ತಾರೆ ...ದು ಇಲಾಖೆಯವರು ಇನ್ನು ಮುಂದೆ ...ದರೂ ಸರಿಯಾದ ಕಾಲಗಳಲ್ಲಿ ನೀರ... ಬಿಟ್ಟು ಪುರ ಜನರುಗಳಿಗೆ ಅದಕ್ಕು ...ರ್ಯವನ್ನು ಕಲ್ಪಿಸಿಕೊಡುವರೆಂದು ...ಬುತ್ತೇನೆ.

ಗೌಡಯ್ಯ, ಪುರಸಭಾ ಸದಸ್ಯ

ಸರ್ಕಾರದ ಅಲಕ್ಷ್ಯ

ಪುರಸಭೆಯ ಪ್ರತಿನಿಧಿಯಾಗಿ ರಾಜಧಾ...ಯ ನೀರಿನ ಸರಬರಾಜು ಮೇಲ್ವಿಚಾರಣೆ ...ಲ್ಲಿಸುಬೇಕಾದ ಉಪಾಧ್ಯಕ್ಷರ ಸ್ಥಾನ ಖಾ...ಬಿದ್ದಿದೆ. ಚುನಾವಣೆ ನಡೆದು ಒಂದು ...ಗಳವೇ ಆದರೂ, ಸರ್ಕಾರದವರು ಅ...ನ್ನು ಮಂಜೂರು ಮಾಡದೆ ಅಲಕ್ಷ್ಯದಿಂ... ಇರುವುದು ಸರಿಯಲ್ಲ ಈ ಊರಿನಲ್ಲಿ ...ರಿನ ಅಭಾವ ತಲೆದೋರಿ ಸಾರ್ವಜನಿಕ... ಪಡಲಿರುವರೂ ಪರಿತಪಿಸುತ್ತಿದ್ದಾರೆ ಈ ...ಗ್ಗೆ ಅಧಿಕಾರಿಗಳಲ್ಲಿ ಎಷ್ಟು ಮೊರೆ ಇಟ್ಟ...ೂ ಸಾರ್ಥಕವಾಗಿಲ್ಲ ನೀರಿನ ಸರಬರಾ...ಜು ವ್ಯವಸ್ಥೆಗಾಗಿ ಕೂಡಲೇ ಉಪಾಧ್ಯಕ್ಷ ...ಚುನಾವಣೆಯನ್ನು ಅಂಗೀಕರಿಸಿ ಸರ್ಕಾರದವರು ಪುರಜನರ ಕಷ್ಟವನ್ನು ನೀಗಿಸಬೇಕಾಗಿದೆ

ಓರ್ವ ಪುರವಾಸಿ

ಸರಬರಾಜು ಸಚಿವರಲ್ಲಿ ಪತ್ರಿಕಾ ಮಾಲಿಕರ ನಿಯೋಗ

ಸ್ವಂ ಸು ಪ್ರೋ] ಬೆಂಗಳೂರು ೧೧

ಮೈಸೂರು ಸಂಸ್ಥಾನದ ಪತ್ರಿಕಾ ಸಂಪಾದಕರ ಮತ್ತು ಮಾಲೀಕರ ಪ್ರತಿನಿಧಿಗಳು ಇಂದು ಮಧ್ಯಾಹ್ನ ೧೨ ಘಂಟೆಗೆ ಸರಬರಾಜು ಸಚಿವರಾದ ಡಾ॥ ಒ ಎಸ್ ಎ. ಷರೀಫರವರಲ್ಲಿ ನಿಯೋಗ ಹೋಗಿದ್ದರು. ಈ ಸಮಯದಲ್ಲಿ ಸಿವಿಲ್ ಸಪ್ಲೈ ಕಂಟ್ರೋಲರಾದ ಮಿ॥ ಖಲೀಲ್‌ರವರೂ ಹಾಜರಿದ್ದರು ಸಂಸ್ಥಾನಕ್ಕೆ ತಿಂಗಳಿಗೆ ೪೦ ಟನ್ ಕೆನಡಿಯನ್ ನ್ಯೂಸ್ ಪ್ರಿಂಟನ್ನು ತರಿಸಿಕೊಳ್ಳಲು ಸೂಕ್ತ ಏರ್ಪಾಡು ಮಾಡಬೇಕೆಂದು ನಿಯೋಗದವರು ಸಚಿವರನ್ನು ಪ್ರಾರ್ಥಿಸಿದರು. ಮೈಸೂರು ಕಾಗದವನ್ನು ಕಡೇಪಕ್ಷ ೬ ತಿಂಗಳಿಗಾಗುವಷ್ಟನ್ನು ದಾಸ್ತಾನುಮಾಡಿ ಸರಬರಾಜು ಮಾಡಬೇಕೆಂದು ಸೂಚಿಸಿದರು.

ಸಚಿವರು ಉತ್ತರವೀಯುತ್ತಾ ಸದ್ಯಕ್ಕೆ ಮೈಸೂರು ಕಾಗದವನ್ನು ಒಂದು ತಿಂಗಳಿಗಾಗುವಷ್ಟನ್ನು ದಾಸ್ತಾನುಮಾಡಲಾಗುವುದು. ಕ್ರಮೇಣ ಅದನ್ನು ೩ ತಿಂಗಳ ದಾಸ್ತಾನಿಗೆ ಹೆಚ್ಚಿಸಲಾಗುವುದು. ಕೆನಡಿಯನ್ ಕಾಗದದ ವಿಚಾರವನ್ನು ಪರಿಶೀಲಿಸಿ ವ್ಯವಹರಿಸಲಾಗುವುದು ಎಂದು ತಿಳಿಸಿದರು.

§ ಧರ್ಮರಕ್ಷಾಕರ ಬಿ. ಎಸ್ ಗೋಪಾಲರಾಯರ ಮೊಕದ್ದಮೆಯು ಅಪರಾಧಿಗಳ ಪರ ಪುನಃ ಪಾಟೀಸವಾಲು ನಡೆಸಬೇಕಾಗಿರುವುದರಿಂದ ನಾಳೆಗೆ ಮುಂದುವರಿಯಿತು.

ಪುರಸಭಾ ಅವಿಶ್ವಾಸದ ಠರಾವು

ಸ್ವಂ ಸು] ಚಾಮರಾಜನಗರ ೧೦

ಇಲ್ಲಿನ ಪೌರಸಭಾ ಅಧ್ಯಕ್ಷ ಉಪಾಧ್ಯಕ್ಷರುಗಳ ಮೇಲೆ ೧೦ ಮಂದಿ ಪೌರಸಭಾ ಸದಸ್ಯರು ಅವಿಶ್ವಾಸದ ಠರಾವನ್ನು ಮಂಡಿಸುವುದಾಗಿ ತಿಳಿದುಬಂದಿದೆ

ತಲೆಗೆಷ್ಟು ಬಟ್ಟೆ?

ತಲೆಗೆ ೫ ಗಜ ಬಟ್ಟೆಯೆಂದು ನಿಗದಿಯಾಗಿದ್ದರೂ, ಹಾಲಿ ಈ ತಾಲ್ಲೋಕಿಗೆ ಸರಬರಾಜಾಗುತ್ತಿರುವ ಬಟ್ಟೆ ತಲೆಗೆ ೨॥ ಗಜದಂತೆ ಹಂಚುವುದೂ ದುಸ್ಸಾಧ್ಯವೆಂದು ಮೊನ್ನೆ ಇಲ್ಲಿ ನಡೆದ ಬಟ್ಟೆ ಹಂಚುವ ಸಮಿತಿಯಲ್ಲಿ ಚರ್ಚಿಸಲ್ಪಟ್ಟಿತು

ಪೌರಸಭಾ ಚುನಾವಣೆ

ಇಲ್ಲಿನ ಪೌರಸಭೆಗೆ ಇದೇ ಮಾರ್ಚಿ ತಿಂಗಳಿನಲ್ಲಿ ಚುನಾವಣೆ ನಡೆಯಲಿದೆ ಈ ಬಗ್ಗೆ ಓಟರು ಪಟ್ಟಿಗಳು ಹೊರಬಿದ್ದಿವೆ ತಿದ್ದುಪಡಿಗೆ ಈ ತಿಂಗಳು ೧೪ ನೇ ತಾ॥ ಕೊನೆ ದಿನ

ಮೈಸೂರಿನ ಹೋರಾಟಕ್ಕೆ ಕರ್ನಾಟಕದ ಬೆಂಬಲ

ಸ್ವಂ ಸು ಪ್ರೋ] ಬೆಂಗಳೂರು ೧೧

ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಹೋರಾಟ ನಡೆದರೆ ಕರ್ನಾಟಕದ ಏಕೀಕರಣ ದೃಷ್ಟಿಯಿಂದ ಪೂರ್ಣ ಬೆಂಬಲವನ್ನು ನೀಡಬೇಕೆಂದು ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯಲ್ಲಿ ತೀರ್ಮಾನವಾಗಿರುವುದಾಗಿ ಗೊತ್ತಾಗಿದೆ ಕರ್ನಾಟಕದಲ್ಲಿ ಕಾರವಾರ ಬಂದರು ರಚನೆಯಾಗುವುದರಿಂದ ಭಟ್ಕಲ್ ಬಂದರನ್ನು ಮೈಸೂರಿಗೆ ಕೊಡಬಹುದೆಂದು ಸಮಿತಿಯು ಅಭಿಪ್ರಾಯಪಟ್ಟಿದೆ

† ಶ್ರೀಗಳಾದ ಕೆ. ಎಸ್ ಗಂಗಾಧರ್ ಮತ್ತು ಬಿ ಆರ್ ಮಾಣಿಕ್ಯಂರವರು ನಿರಾವರಿ ಪದ್ಧತಿ ವಿಚಾರದಲ್ಲಿ ಹೆಚ್ಚು ಪರಿಶ್ರಮ ಪಡೆದು ಬರಲು ಇದೇ ೧೬ ನೇ ಅಮೇರಿಕಾಕ್ಕೆ ತೆರಳಲಿದ್ದಾರೆ

† ಫಾರೆಸ್ಟ್ ರೀಸರ್ಚ್ ಶಾಲೆಯ ಮುಖ್ಯಾಧಿಕಾರಿಗಳಾಗಿರುವ ಡಾ॥ ಎಸ್ ಎ. ಕಬೀರ್‌ರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವರೆಂದು ತಿಳಿದುಬಂದಿದೆ

ವಿಶ್ವ ಸಂಸ್ಥೆಗೆ ವಿಯಟ್ ನಾಮ್ ದೂರು

ಫ್ರೆಂಚರು ಯುದ್ಧ ನಿಲ್ಲಿಸಿ ಸಂಧಾನಕ್ಕೆ ಬಾರದಿದ್ದರೆ ವಿಯಟ್‌ನಾಂ ಸರ್ಕಾರವು ವಿಶ್ವಸಂಸ್ಥೆಯ ನೆರವನ್ನು ಕೋರುವುದು ವಿಯಟ್‌ನಾಮಿನಲ್ಲಿ ಜನಾಂಗ ವೈವಾದವೂ ಇಲ್ಲ. ಕಮ್ಯೂನಿಸ್ಟರ ಪ್ರಭಾವವೂ ಇಲ್ಲ ಎಂಬುದಾಗಿ ವಿಯಟ್‌ನಾಂ ಅಧ್ಯಕ್ಷರು ಪ್ರಕಟಣೆಯೊಂದನ್ನು ಹೊರಡಿಸಿದ್ದಾರೆ

ವಿ ಮ ರ್ಶೆ

ಕಥಾಲೇಖಕರಾದ ಶ್ರೀ॥ ಎಸ್ ಎನ್ ಗುರುರಾಜಾಚಾರ್ಯರಿಂದ ರಚಿತವಾಗಿರುವ "ಅದೃಶ್ಯನಾದ ಅಪರಾಧಿ" ಎಂಬ ಪತ್ತೇದಾರಿ ಕಾದಂಬರಿಯು ನಮ್ಮ ಹಸ್ತಗತವಾಗಿದೆ ಶ್ರೀಯುತರು ಚೋರರ ಸಾಹಸ, ಅವರುಗಳನ್ನು ಕಂಡು ಹಿಡಿಯುವ ಪತ್ತೇದಾರರ ತಂತ್ರ ಇವುಗಳನು ಬಹಳ ಹೃದಯಂಗಮವಾಗಿ, ಉತ್ತಮವಾದ ಕನ್ನಡ ಶೈಲಿಯಲ್ಲಿ ಬರೆದಿರುತ್ತಾರೆ ಶ್ರೀ॥ ಎಂ ಕೆ ರಾಜರತ್ನಂಶೆಟ್ಟಿ, ಶ್ರೀ ವಾಮನ ಪ್ರೆಸ್, ಬುಕ್ ಡಿಪೋ, ಬಳೇಪೇಟೆ, ಬೆಂಗಳೂರು ಸಿಟಿ ಇವರು ಇದರ ಪ್ರಕಾಶಕರು ಬೆಲೆ ೦-೪-೦ ಕನ್ನಡಾಭಿಮಾನಿಗಳು ಪ್ರೋತ್ಸಾಹವೀಯಬೇಕು

ಕೇಂದ್ರಸರ್ಕಾರವನ್ನುಬಿಡಲು ಲೀಗ್ ಸದಸ್ಯರ ನಿರಾಕರಣೆ

ಬ್ರಿಟಿಷರ ಮೇ ೧೬ ನೇ ತಾ॥ ಪ್ರಕಟಣೆಯನ್ನು ಮುಸ್ಲಿಂ ಲೀಗು ಒಂದೇ ಮೊದಲು ಅಂಗೀಕರಿಸಿದ್ದಿತು ಇತರ ಪಕ್ಷಗಳಾವು ಪೂಒಪ್ಪದುದರಿಂದ ಅದನ್ನು ನಿರಾಕರಿಸಿತು. ಕಾಂಗ್ರೆಸ್ಸು ಸಹ ಬ್ರಿಟಿಷ್ ಯೋಜನೆಯನ್ನು ಒಪ್ಪಲಿ ಅದ್ದರಿಂದ ಕೇಂದ್ರಸರ್ಕಾರದಲ್ಲಿ ಕಾಂಗ್ರೆಸ್ಸು ಇರಲು ಅಧಿಕಾರ ಹೊಂದಿರುವಷ್ಟೇ ಲೀಗಿಗೂ ಅಧಿಕಾರವಿದೆ ಲೀಗ್ ಸದಸ್ಯರು ಮಂತ್ರಿಪದವಿಗೆ ರಾಜೀನಾಮೆಕೊಡಬೇಕೆಂದು ಕಾಂಗ್ರೆಸ್ಸು ಕೇಳುವುದು ದುರಭಿಮಾನದಿಂದ ಕೂಡಿದೆ— ಎಂಬುದಾಗಿ ಕೇಂದ್ರಸರ್ಕಾರದ ಲೀಗ್ ಮಂತ್ರಿಗಳು ವೈಸರಾಯರಿಗೆ ಪತ್ರಬರೆದಿದ್ದಾರೆಂದು ಗೊತ್ತಾಗಿದೆ ಈ ಪತ್ರವನ್ನು ಶ್ವೇತಭವನಕ್ಕೆ ಕಳಿಸಲಾಗಿದೆಯೆಂದು ಗೊತ್ತಾಗಿದೆ

ಲಾಹೋರ್ ಪ್ರಕರಣ

ಮೊನ್ನೆ ಲಾಹೋರಿನಲ್ಲಿ ಹೋಗುತ್ತಿದ್ದ ಮೆರವಣಿಗೆಯ ಮೇಲೆ ಕಲ್ಲು ಬಿದ್ದುದರಿಂದ ಒಬ್ಬಾತನು ಸತ್ತುಹೋದನೆಂದು ತಿಳಿದು ಬಂದಿದೆ ಅದೇ ದಿನ ೧೨೦ ಮಂದಿ ಮುಸ್ಲಿಮರ ಬಂಧನವಾಗಿದೆ ಬೋರ್ಸ್ಟಾಲ್ ಜೈಲಿನಲ್ಲಿ ಅಧಿಕಾರಿಗಳು ತಮಗೆ ಹಿಂಸೆಯಿತ್ತರೆಂಬ ಕಾರಣದ ಮೇಲೆ ೬೪ ಜನ ಲೀಗ್ ಖೈದಿಗಳು ಉಪವಾಸ ಮುಷ್ಕರವನ್ನು ಆರಂಭಿಸಿದ್ದಾರೆ.

* ಅರಬ್ ಮತ್ತು ಯೆಹೂದ್ಯ ಪ್ರತಿನಿಧಿಗಳಿಬ್ಬರೂ ಪ್ಯಾಲಸ್ಟೈನಿನ ಬಗ್ಗೆ ಬ್ರಿಟಿಷರ ಹೊಸ ಯೋಜನೆಯನ್ನು ತಿರಸ್ಕರಿಸಿದ್ದಾರೆ

ಕಲ್ಕತ್ತ ನಗರದಲ್ಲಿ ಸ್ವದೇಶಿ ಬಾಂಬುಗಳು

ಕಲ್ಕತ್ತ ನಗರದ ರೈಲ್ವೆ ನಿಲ್ದಾಣದಲ್ಲಿ ೧೫ ದೇಶೀಯ ಬಾಂಬುಗಳನ್ನು ಪಡೆದಿದ್ದ ಒಬ್ಬಾತನನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ ನಗರದ ಹಲವು ಭಾಗಗಳಲ್ಲಿ ಶೋಧನೆ ನಡೆಸಿ ನೂರಾರು ಬಾಂಬುಗಳನ್ನು ಪತ್ತೆಮಾಡಿ ಮೂವರನ್ನು ಸೆರೆ ಹಿಡಿದಿದ್ದಾರೆ

ಹಿಂದೂ ಮಹಾಸಭೆ

ಮೈಸೂರು ನಗರದ ಹಿಂದೂ ಮಹಾಸಭೆಯ ಆಶ್ರಯದಲ್ಲಿ ನಿನ್ನೆ ಸಂಜೆ ಶಿವರಾಂಪೇಟೆ ಶ್ರೀ ಕನ್ನಿಕಾ ಪರಮೇಶ್ವರೀ ದೇವಸ್ಥಾನದಲ್ಲಿ ಸಭೆ ನಡೆಯಿತು ಶ್ರೀ ಕೆ. ಶೇಷಾದ್ರಿಯವರು ಅಧ್ಯಕ್ಷತೆ ವಹಿಸಿದ್ದರು. ಹಿಂದೂ ದೃಷ್ಟಿಯಲ್ಲಿ ಮೈಸೂರಿನ ರಾಜಕೀಯ ಸುಧಾರಣೆಗಳು ಎಂಬ ವಿಷಯವಾಗಿ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಭಾಷಣ ಮಾಡಿದರು ಚನ್ನಪಟ್ಟಣದಲ್ಲಿ ಪುಂಡರಿಂದ ವ್ಯಕ್ತ್ಯವಿಗೀಡಾದ ಶ್ರೀ ವೆಂಕಟ್ ಶ್ರೀನಿವಾಸಾಚಾರ್ಯರ ಕುಟುಂಬದವರಿಗೆ ಸರ್ಕಾರದವರು ಪರಿಹಾರ ಒದಗಿಸಬೇಕ, ಒಟ್ಟೆ ಸೌಟಿಕೆಯ, ಕನಿಷ್ಟ ಪ್ರಮಾಣವನ್ನು ೧೦ ಗಜಕ್ಕೆ ಏರಿಸಬೇಕೆಂಬ ನಿರ್ಣಯಗಳು ಅಂಗೀಕೃತವಾದವು

ಮಾಸಿಕಾಧಿವೇಶನ

ರಾಜಧಾನಿಯ ಕೀರ್ತನಕಾರರ ... ಯ ಮಾಸಿಕ ಅಧಿವೇಶನವು ನೆನ್ನೆ ಶ್ರೀ ... ಗಸ್ವಾಮಿ ದೇವಾಲಯದಲ್ಲಿ ನಡೆಯಿತು ಪ್ರತಿ ತಿಂಗಳಲ್ಲೂ ಎರಡು ಭಾನುವಾರ ಕೀರ್ತನೆ ನಡೆಸಬೇಕೆಂದು ನಿರ್ಧರಿಸಲಾಯಿತು ಈ ಉದ್ಯಮಕ್ಕಾಗಿ ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದು ಪ್ರಾರ್ಥಿಸುವ ನಿರ್ಣಯವು ಅಂಗೀಕಾರವಾಯಿತು.

ಸಾಧ್ವಿ

ತಾ॥ ೧೧-೨-೪೭ ಮಂಗಳವಾರ

ಕಾಂಗ್ರೆಸ್ಸಿನ ಮನವಿ

ಮೈಸೂರು ಕಾಂಗ್ರೆಸ್ ಅಧ್ಯಕ್ಷರು ಶ್ರೀ ಮನ್ನಹಾರಾಜರವರಿಗೆ ಬರೆದ ಪತ್ರದ ವಿವರಗಳು ಹೊರಬಿದ್ದಿವೆ. ಇಡೀ ಹಿಂದೂಸ್ಥಾನವು ರಾಜಕೀಯ ಸ್ವಾತಂತ್ರ್ಯದಲ್ಲಿ ಮುನ್ನಡೆಯುತ್ತಿರುವಾಗ ಮೈಸೂರು ಸಂಸ್ಥಾನವೂ ಕಾಲಕ್ಕನುಗುಣವಾಗಿ ವರ್ತಿಸಬೇಕೆಂದು ಅದರಲ್ಲಿ ಪ್ರಾರ್ಥಿಸಲಾಗಿದೆ. ಪ್ರಜಾ ವಿಶ್ವಾಸಕ್ಕೆ ಪಾತ್ರವಾದ ಅಧಿಕಾರವರಿಂದಲೇ ಇಂದಿನ ಸಮಸ್ಯೆಗಳು ಯಶಸ್ವಿಯಾಗಿ ಬಗೆಹರಿಯಬಲ್ಲುವೆಂದು ಸೂಚಿಸಲಾಗಿದೆ.

ಇದಕ್ಕೆ ಉತ್ತರವಾಗಿ ಶ್ರೀಮನ್ಮಹಾರಾಜರವರು ಇತ್ತೀಚೆಗೆ ಹೊರಡಿಸಿದ ಘೋಷಣೆಯ ಕಡೆಗೆ ಕಾಂಗ್ರೆಸ್ಸಿನ ಅಧ್ಯಕ್ಷರ ಗಮನವನ್ನು ಸೆಳೆಯಲಾಗಿದೆ. ಆದರೆ ಆ ಘೋಷಣೆಯಲ್ಲಿ ಮುಂದಿನ ರಾಜಕೀಯ ಪ್ರಗತಿಯ ಧ್ಯೇಯವನ್ನು ಖಚಿತವಾಗಿ ಸೂಚಿಸಿಲ್ಲವೆಂಬ ಆಕ್ಷೇಪಣೆಗಳು ಈಗಾಗಲೇ ಬಂದಿವೆ. ಜವಾಬ್ದಾರಿ ಸರ್ಕಾರದ ಗುರಿಯನ್ನು ಅದರಲ್ಲಿ ಘೋಷಿಸಿಲ್ಲ ಮತ್ತು ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಪೂರ್ವಭಾವಿಯಾಗಿ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸುವ ಅಂಶವೂ ಖಚಿತವಾಗಿ ಗೊತ್ತಾಗಿಲ್ಲ. ಈ ಬಗ್ಗೆ ದಿವಾನರು ಸಲಹೆಗಳನ್ನು ಕೊಡಲು ಯಾವ ಅಡ್ಡಿಯೂ ಇಲ್ಲವೆಂದು ಹೇಳಲಾಗಿದೆ.

ದಿವಾನರು ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಕಾಲವು ವೃಥಾ ಕಾಲಹರಣಕ್ಕೆ ಅವಕಾಶವೀಯುವುದಿಲ್ಲವೆಂದು ಹೇಳಿದ್ದಾರೆ. ಆದರೆ ಇದುವರೆಗೆ ಯಾವ ಕ್ರಮವನ್ನೂ ಅವರು ಕೈಗೊಂಡಂತೆ ಕಾಣುವುದಿಲ್ಲ. ಈಗಾಗಲೇ ಒಂದು ತಿಂಗಳು ಕಳೆದು ಹೋಯಿತು. ದಿವಾನರು ದೆಹಲಿ ಮತ್ತು ಬೊಂಬಾಯಿಗಳಿಗೆ ಪ್ರವಾಸ ಮಾಡಿರುವರು. ಅಲ್ಲಿಂದ ಬಂದ ಮೇಲೆ ಅಮೂರ್ತದ ಪ್ರಯಾಣವೊಂದು ಕಾದಿರುವುದು. ಆದುದರಿಂದ ಆಲೋಚಿಸಿರುವದನ್ನು ಜಾಗ್ರತೆಯಾಗಿ ಕೆಲಸಕ್ಕೆ ನಡೆಯುತ್ತಿಲ್ಲ.

ಅಕ್ತಲಾಗಿ ಸಂಸ್ಥಾನಗಳು ರಾಜ್ಯಾಂಗ ಸಂಸ್ಥೆಯಲ್ಲಿ ಭಾಗ ವಹಿಸುವ ವಿಷಯವು ಮುಖ್ಯವಾಗಿ ಬಗೆ ಹರಿಸಲ್ಪಡುತ್ತಿರುವಂತೆ ಕಾಣುತ್ತದೆ. ಬರೋಡಾ ಸಂಸ್ಥಾನವು ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸಲು ಒಪ್ಪಿ ಇತರರಿಗೆ ಮೇಲ್ಪಂಕ್ತಿಯನ್ನು ಹಾಕಿದೆ.

ಮೈಸೂರು ಈಗಲೂ ಮುಂದೆ ಹೋಗಿ ಮಾರ್ಗದರ್ಶನ ಮಾಡುವ ಸದವಕಾಶ ದೊರೆತಿದೆ. ರಾಜ್ಯಾಂಗ ಸಭೆಗೆ ಶಾಸನ ಸಭೆಗಳ ಚುನಾಯಿತ ಸದಸ್ಯರ ಪ್ರತಿನಿಧಿಗಳನ್ನೇ ಕಳುಹಿಸುವುದು; ಜವಾಬ್ದಾರಿ ಸರ್ಕಾರವೇ ರಾಜ್ಯಾಂಗ ಸುಧಾರಣೆಯ ಗುರಿಯೆಂದು ಸಾರುವುದು, ಇದಕ್ಕೆ ಪೂರ್ವಭಾವಿಯಾಗಿ ಪ್ರಜಾ ವಿಶ್ವಾಸಕ್ಕೆ ಪಾತ್ರರಾದವರಿಂದ ಕೂಡಿದ ತಾತ್ಕಾಲಿಕ ಸರ್ಕಾರವನ್ನು ರಚಿಸುವುದು-ಇವುಗಳನ್ನು ಮಾಡಿ ಮೈಸೂರು ತನ್ನ ಪ್ರಭಾವವನ್ನು ಇತರರ ಮೇಲೆ ಬೀರಲು ಅವಕಾಶವಿದೆ. ಇದು ಕಾಂಗ್ರೆಸ್ಸಿನವರ ಮತ್ತು ದೇಶದ ಎಲ್ಲ ಪ್ರಜೆಗಳ ಇಷ್ಟಾರ್ಥವನ್ನೂ ಈಡೇರಿಸುತ್ತದೆ. ಈ ಬಗ್ಗೆ ಕೂಡಲೇ ನಮ್ಮ ಪ್ರಭುಗಳು ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಅಪ್ಪಣೆ ಕೊಡಲೆಂದು ನಾವು ಹಾರೈಸುತ್ತೇವೆ.

ನಾಲ್ಕು "ಬ" ಎಂದರೆ

ಭದ್ರವಾದ ಬೀಗಗಳು ಬೇಕಾದರೆ

ಬಾಡುಸಾರ್

ಅವೆನ್ಯೂ ರೋಡ್ :: ಮೈಸೂರು

Edited, printed and published by A. R. Nagarajan at the Sadhvi Press D Subbiah Road, Mysore.

ಸೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಸುವುದೇನೆಂದರೆ -

ಮೈಸೂರು ಸಿಟಿ ವಾಣೀ ವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ದಕ್ಷಿಣಕ್ಕಿರುವ ಕಾಟೇಜ್ ಮತ್ತು ಬಂಗಲೆ ಸೈಟುಗಳನ್ನು ತಾ॥ ೧೨-೧-೪೭ ನೇ ... ಹರಾಜು ಇಸ್ತಿಹಾರ್ ನಾಮೆ ... ಷರತ್ತುಗಳಿಗೆ ಒಳಪಟ್ಟು ತಾ॥ ೧೬-... ನೇ ಭಾನುವಾರ ಬೆಳಿಗ್ಗೆ ೯-೩೦ ... ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇತರ ವಿವರಗಳನ್ನು ಆಫೀಸಿನಲ್ಲಿ ರಜಾ ದಿನಗಳಲ್ಲದೆ ಇತರ ದಿವಸಗಳಲ್ಲಿ ೧೧ ಘಂಟೆಯಿಂದ ೫ ಘಂಟೆಯವರೆಗೆ ತಿಳಿಯಬಹುದು.

(ಸಹಿ) ಕೆ. ವೆಂಕಟೇಶ ಅಯ್ಯ...

ಛೇರ್ಮನ್ನರಿಗಾಗಿ

ನಗರಾಭಿವೃದ್ಧಿ ಸಮಿತಿ, ಮೈಸೂರು

OPERA TALKIES

2 WEEK From 11-2-...

The

SECRET COD...

(Full Serial)

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್, ಮೈಸೂರು.

ಟೆಂಡರ್ ನೋಟೀಸ್

ಲೇಬರ್ ಕಂಟ್ರಾಕ್ಟಿನ ಪ್ರಕಾರ ೫೦ ಅಡಿ ಎತ್ತರದ ಕಟ್ಟಡದ ವೇದಿಕೆಯಿಂದರ ಮೇಲೆ ಒಂದು ಉಕ್ಕಿನ ಕೊಳಾಯಿಯನ್ನು (೨೪'x೨೪'x೮') ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಲಿಮಿಟೆಡ್‌ನ ಒಳಾಂಗಣದಲ್ಲಿ ಅಡಿಪಾಯ ಹಾಕಿ ಕಟ್ಟಲು ಸೀಲಾದ ಟೆಂಡರುಗಳನ್ನು ಮಿಲ್ಲಿನ ಜನರಲ್ ಮ್ಯಾನೇಜರವರ ಆಫೀಸಿನಲ್ಲಿ ತಾರೀಖು ೨೦-೨-೪೭ ನೇ ಸಾಯಂಕಾಲ ೫ ಘಂಟೆಯ ವರೆಗೂ ತೆಗೆದುಕೊಳ್ಳಲಾಗುತ್ತೆ. ಟೆಂಡರುಗಳ ಜೊತೆಯಲ್ಲಿ ನೂರು ರೂಪಾಯಿಗಳ ಠೇವಣಿ ಹಣವನ್ನು ಕೊಡಬೇಕು. ಸಂಪೂರ್ಣಾಂಶಗಳ ವಿವರಗಳನ್ನೂ ಮತ್ತು ಬೇಕಾಗುವ ಸಾಮಾನುಗಳ ಪಟ್ಟಿಯನ್ನೂ ಮಿಲ್ಲಿನ ಆಫೀಸಿನಲ್ಲಿ ಪಡೆಯಬಹುದು. ಮತ್ತು ಅದರ ನಕ್ಷೆಯನ್ನು ಮಿಲ್ಲಿನ ಕೆಲಸದ ದಿನದಲ್ಲಿ ಯಾವತ್ತು ಬೇಕಾದರೂ ಬಂದು ಪರೀಕ್ಷಿಸಬಹುದು. ಟೆಂಡರ್ ಒಪ್ಪಿಕೊಂಡ ತಾರೀಖಿನಿಂದ ಎರಡು ತಿಂಗಳೊಳಗೆ ಪೂರ್ತಿ ಕೆಲಸವನ್ನು ಮುಗಿಸಬೇಕು.

ಜನರಲ್ ಮ್ಯಾನೇಜರ್

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ಬನ್ನಿ ಅಂಗಡಿಗೆ ಬಂದು ಪರೀಕ್ಷಿಸಿರಿ!!

ಬಿ. ಕೆಂಚಪ್ಪ ಸನ್ಸ್

ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು

ರಾಜಕಮಲ್, ಮೈಸೂರು

11-2-47 ರಿಂದ 3 ದಿನಗಳು ಮಾತ್ರ

ಪ್ರತಿದಿನ ಎರಡು ಆಟಗಳು

ನಯಿ - ಜಿಂದಗಿ

ಭೂಮಿಕೆ:

★

ಶೇಕ್ ಮುಖ್ತಾರ್, ಅಸೀಸ್ ಬಾತ್ತರ್ಥ ಮತ್ತು ಯಾಕೂಬ್.

★

ರಾಜ್‌ಕಮಲ್, ಮೈಸೂರು

14-2-47 ರಿಂದ ಪ್ರತಿ ದಿನ 3 ಆಟಗಳು

ಮಹಾತ್ಮಾ ಪಿಕ್ಚರ್ಸ್‌ರವರ

★ ಕೃಷ್ಣಲೀಲಾ ★

(ಕನ್ನಡ ಚಿತ್ರ)

(ಜಿ. ಆರ್. ರಾಮಯ್ಯ ಮತ್ತು ಅಯ್ಯನಾರ್ರವರ ಕಾಣಿಕೆ)

-: ಭೂಮಿಕೆ :-

ಕೆಂಪರಾಜ್, ಬಳ್ಳಾರಿ ಲಲಿತ, ರತ್ನಮಾಲಾ, ಕಾ... ರಾಘವೇಂದ್ರ ರಾವ್, ಮಾಧವರಾವ್, ಮಹಾಬಲ ರಾ... ಮುಂತಾದವರು.

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೧೨—೨—೪೭ [ಸಂಚಿಕೆ ೧೫೯

ಬ್ರಿಟಿಷ್ ಮಂತ್ರಿಗಳು ಮತ್ತೆ ಬರುವರೇ ?

...ಪಾಲರಾಯರ ಮೇಲೆ ...ಟ್ಟು ೨೦ ಅರ್ಜಿಗಳು

...] ಬೆಂಗಳೂರು ೧೨

...ರಕ್ಷಾಕರ ಬಿ. ಎಲ್. ಗೋಪಾಲ ...ಂದ ಹಣ ಬರಬೇಕೆಂಗು ಇದು ಬೆಂಗಳೂರು ಜಿಲ್ಲಾ ಜಡ್ಜರಲ್ಲಿ ...ರ್ಜಿಗಳು ಸಂದಾಯವಾಗಿವೆ. ಈ ಶ್ರೀ ಭಭೂತ್‌ಮಲ್‌ರವರ ಅ ...ಲ್ಲಿ ೩,೭೫,೦೦೦ ರೂ.ಗಳು ನಮೂ ನ್ಯಾಯಾಧೀಶರ ಆಜ್ಞೆಯಂತೆ ...ಯಲ್ ರಿಸೀವರ್ ಶ್ರೀ ಗೋಪಾಲ ...ರ ಆಸ್ತಿ ಪಾಸ್ತಿಗಳನ್ನು ವಶಪಡಿಸಿ ...ದ್ದಾರೆ. ಅವುಗಳ ಮೊತ್ತ ೬-೮ ...ರೂ.ಗಳಾಗುವುದೆಂದು ಹೇಳಲಾಗಿದೆ.

ವಾರ್ಡ್ ಪದ್ಧತಿ

...ಗಳೂರು ಪುರಸಭೆಗೆ ವಾರ್ಡ್‌ಪದ್ಧ ...ಬೇಕೆಂದು ಪ್ರಾರ್ಥಿಸಿದ್ದನ್ನು ಸರ್ಕಾ ...ರು ಅಂಗೀಕರಿಸಿದ್ದಾರೆ. ಈ ವಿಚಾರ ...ಷ್ಟರು ಸಲಹೆಗಳನ್ನೀಯಲು ಪುರ ...ಸೂಚನೆ ಕೊಡಲಾಗಿದೆ.

...ಗೂರಿನಲ್ಲಿ ಮೈಸೂರಿನವರಿಗೆ ಹುದ್ದೆ

...ನಿಯರ್ ಅಸಿಸ್ಟೆಂಟ್ ಕನ್‌ಸರ್ವೇಟ ...ಶ್ರೀ ಡಿ. ನರಸಿಂಹಮೂರ್ತಿರಾಯರ ...ಹಾಡೂನಿನ ಅರಣ್ಯಕಾಲೇಜಿನ ಅಸಿ ...ರನ್ನಾಗಿ ೯೦೦ ರೂ ಸಂಬಳದ ಮೇ ...ೂ, ಸ|| ಅ|| ಕನ್ಸರ್‌ವೇಟರಿಂದ ಶ್ರೀ ...ನಾರಾಯಣಶರ್ಮರನ್ನು ಅದೇ ಕಾ ...ದಲ್ಲಿ ೬೦೦ ರೂ ಸಂಬಳದ ಮೇರೆ ...ಟರನ್ನಾಗಿಯೂ, ನೇಮಕ ಮಾಡಲಾ...

...ದಿವಾನರು ನಿನ್ನೆ ಸಂಜೆ ದೆಹಲಿಯಿಂ ...ಮದ್ರಾಸಿಗೆ ಬಂದರು. ನಾಳೆ ಬೆಳಿಗ್ಗೆ ...ಗಳೂರಿಗೆ ಬರಲಿದ್ದಾರೆ.

...ನಸ್ಪತಿ ತುಪ್ಪಕ್ಕೆ ಬಹಿಷ್ಕಾರ

...ಮುಂಬಾಯಿ ಸರ್ಕಾರವು ವನಸ್ಪತಿ ತು ...ತಯಾರಿಸುವುದನ್ನು ಪ್ರತಿಬಂಧಿಸಲೂ, ...ಲೇಣಾಯಿ ಎಣ್ಣೆ ಮೇಲಿನ ನಿರ್ಬಂಧ ...ಳ್ಳ ರದ್ದುಮಾಡಲೂ ತೀರ್ಮಾನಿಸಿದೆ. ...ಕ್ರ ಸರ್ಕಾರದ ಅನುಮತಿ ಸಿಕ್ಕಿದ ಕೂ ...ೀ ಇದನ್ನು ಜಾರಿಗೆ ತರಲಾಗುವುದೆಂ ...ಹೇಳಲಾಗಿದೆ.

...ಮದ್ರಾಸ್ ರಕ್ಷಣಾ ಶಾಸನಕ್ಕೆ ಬೆಂಬಲ

ಮದ್ರಾಸ್ ಪ್ರಾಂತ್ಯದಲ್ಲಿ ಜಾರಿಗೆ ತರಲಾ ...ದ ಹೊಸ ರಕ್ಷಣಾ ಶಾಸನವನ್ನು ವಾಪ ...ತೆಗೆದುಕೊಳ್ಳಬೇಕೆಂದು ಕಮ್ಯೂನಿಸ್ಟ್ ...ಸ್ಯರು ಮಂಡಿಸಿದ್ದ ನಿರ್ಣಯವನ್ನು ಮ ...ಕ್ರಿಸ್ ಶಾಸನ ಸಭೆಯು ತಿರಸ್ಕರಿಸಿದೆ. ನಿ ...ಯದ ಪರವಾಗಿ ಕಮ್ಯೂನಿಸ್ಟರ ಕೂಡ ...ಿಸನಕೂ ವಿರೋಧವಾಗಿ ಕಾಂಗ್ರೆಸ್ಸಿನೊ ...ೆ ಯೂರೋಪಿಯನ್ ಸದಸ್ಯರೂ ಮತ ...ಡಾಯಿಸಿದರು

...ಮದ್ರಾಸಿನ ಶ್ರೀ ಪ್ರಕಾಶಂರವರ ಮಂ ಮಂಡಲದ ಮೇಲೆ ಅವಿಶ್ವಾಸ ಸೂಚಿಸಿ ...ಮ ಮಂದಿ ಶಾಸನ ಸಭಾ ಸದಸ್ಯರು ...ಕವರ್ನರಿಗೆ ಅರ್ಜಿ ಹಾಕಿದ್ದಾರೆ.

---

* ಡರ್ಬಿ ಸ್ವೀಪು ಟಿಕೆಟು ಪಡೆದು ...ರೂಪಾಯಿನಿಂದ ಒಂದು ಲಕ್ಷ ರೂ ...ವಿನ ಬಹುಮಾನ ಪಡೆಯಿರಿ ! ಪ್ರತಿ ...ಕೆಟಿಗೆ ೨-೧೨-೦. ಮಣಿ ಆರ್ಡರ್‌ಮಾ ...ವಿ. ಪಿ. ಇಲ್ಲ ಶ್ರೀ ಸು ಧಾ ರ ಕ ...ಯೀಸ್, ಹಳೆಯೂರು ಪೋಸ್ಟು, (ಎಡ ...ತೊರೆ ತಾಲ್ಲೂಕು) ಫಲಿತಾಂಶ ೨೬-೨-೪೭ ...ರಲ್ಲಿ ತಿಳಿಸಲಾಗುತ್ತೆ.

ಆಯುರ್ವೇದ ಕಾಲೇಜಿನಲ್ಲಿ ಮುಷ್ಕರ

ಮೈಸೂರು ೧೨

ತಮ್ಮ ಕುಂದುಕೊರತೆಗಳನ್ನು ಅಧಿಕಾರಿಗಳಿಗೆ ಆರು ತಿಂಗಳ ಹಿಂದೆಯೇ ತಿಳಿಸಿದ್ದರೂ, ಅವರು ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲವೆಂದು ಹೇಳಿ ರಾಜಧಾನಿಯ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳೆಲ್ಲರೂ ಈ ದಿನದಿಂದ ಮುಷ್ಕರವನ್ನು ಆರಂಭಿಸಿದ್ದಾರೆ. ಒಟ್ಟು ಕಾಲೇಜಿನಲ್ಲಿ ಆಯುರ್ವೇದದ ೬೫ ವಿದ್ಯಾರ್ಥಿಗಳೂ, ಯುನಾನಿಯ ೧೧ ವಿದ್ಯಾರ್ಥಿಗಳೂ ಇದ್ದಾರೆ.

ಪುರಸಭಾ ವಿಶೇಷಾಧಿವೇಶನ

ಮೈಸೂರು ಪುರಸಭೆಗೆ ಖಾಸಗೀ ಅಧ್ಯಕ್ಷರನ್ನು ದಯಪಾಲಿಸುವಂತೆ ಶ್ರೀಮನ್ಮಹಾರಾಜರಲ್ಲಿ ಮನವಿ ಸಲ್ಲಿಸುವ ಬಗ್ಗೆ ಕಳುಹಿಸಿರುವ ನಿರ್ಣಯವನ್ನು ಚರ್ಚಿಸಲು ನಾಳೆ ಮಧ್ಯಾಹ್ನ ೪ ಘಂಟೆಗೆ ಪುರಸಭೆಯ ವಿಶೇಷ ಅಧಿವೇಶನವನ್ನು ಕರೆಯಲಾಗಿದೆ.

ಕೈಲಾಸಂ ಸ್ಮಾರಕ ಚರ್ಚೆ

ರಾಜಧಾನಿಯ ಸೆಂಟ್ ಫಿಲೋಮಿನ ಕಾಲೇಜು ಕರ್ಣಾಟಕ ಸಂಘದಾಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ದಿ|| ಕೈಲಾಸಂರವರ ಸ್ಮಾರಕಾರ್ಥವಾಗಿ ಅಂತರ ಕಾಲೇಜುಗಳ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಶ್ರೀ ಎಂ. ಯಾಮುನಾಚಾರ್ಯರು ಅಧ್ಯಕ್ಷತೆ ವಹಿಸುವರು.

ಅರಸು ಯುವಕ ಸಂಘ

ಟಿ. ನರಸೀಪುರ ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ರಾಜಧಾನಿಯ ಅರಸು ಯುವಕ ಸಂಘದವರು ಕಳೆದ ವಾರ ಸಂಚರಿಸಿ ಅನೇಕ ಕಡೆ ಸಭೆಗಳನ್ನು ಮಾಡಿ ಪ್ರಚಾರ ಕಾರ್ಯವನ್ನು ನಡೆಸಿದರು. ಆ ಪ್ರದೇಶದ ೫೦ ಮಂದಿ ಅರಸು ಜನಾಂಗದವರು ಸಂಘಕ್ಕೆ ಸದಸ್ಯರಾದರು. ಅಧ್ಯಕ್ಷರಿಗೆ ೫೦೦ ರೂ. ಗಳ ನಿಧಿ ಅರ್ಪಿಸಿದರು. ಇನ್ನು ಒಂದು ತಿಂಗಳೊಳಗಾಗಿ ಒಂದು ಸಾವಿರ ರೂ. ಗಳನ್ನು ಕಳುಹಿಸಿಕೊಡುವುದಾಗಿ ವಾಗ್ದಾನ ಮಾಡಿದರು

ಕೋರ್ಟಿನ ಮೇಲೆ ಲೀಗ್ ಧ್ವಜ !

ಲಾಹೋರ್ ಹೈಕೋರ್ಟಿನ ಮೇಲೆ ಲೀಗ್ ಧ್ವಜವನ್ನು ಹಾರಿಸಲು ವಿದ್ಯಾರ್ಥಿಗಳು ಪ್ರಯತ್ನಪಟ್ಟಾಗ ಗಲಭೆಯಾಗಿ ಟಿಯರ್ ಗ್ಯಾಸ್ ಬಾಂಬನ್ನು ಪೋಲೀಸರು ಪ್ರಯೋಗಿಸಿದರೆಂದು ತಿಳಿದು ಬಂದಿದೆ.

ಭಾರತಕ್ಕೆ ಬ್ರಿಟಿಷ್ ಮಂತ್ರಿಗಳ ಆಗಮನ

ಭಾರತದಲ್ಲಿ ಇಂದು ತಲೆದೋರಿರುವ ವಿಶೇಷ ಪರಿಸ್ಥಿತಿಯನ್ನು ಗಮನಿಸಿ ಬ್ರಿಟಿಷ್ ಸರ್ಕಾರವು ಹೊಸ ಯೋಜನೆಯೊಂದನ್ನು ಸೂಚಿಸಬಹುದೆಂದೂ ಅಥವಾ ಒಬ್ಬ ಮಂತ್ರಿಗಳನ್ನು ಭಾರತಕ್ಕೆ ಕಳುಹಿಸಿ ಪುನಃ ಸಂಧಾನ ಆರಂಭಿಸುವಂತೆ ಪ್ರಯತ್ನಿಸಬಹುದೆಂದೂ ದೆಹಲಿಯಲ್ಲಿ ವಾರ್ತೆ ಹಬ್ಬಿದೆ.

ಇಂಡೋ-ಚೀಣಾದಲ್ಲಿ ಫ್ರೆಂಚರ ಕಾರ್ಯಕ್ರಮ

ಫ್ರಾನ್ಸಿನ ಪರ ರಾಷ್ಟ್ರ ಮಂತ್ರಿಗಳಾದ ಬಿಡೋರವರು ಇಂಡೋ-ಚೀಣಾದಲ್ಲಿ ಯಥೇಚ್ಛವಾದ ಹಣ ಮತ್ತು ಸಾಮಗ್ರಿಗಳಿಂದ ಕೂಡಿದ ಮಿಲಿಟರಿ ಕಾರ್ಯಕ್ರಮಗಳು ಅಗತ್ಯವಾಗಿದೆಯೆಂದು ತಿಳಿಸಿದ್ದಾರೆ. ವಿಯಟ್‌ನಾಮಿನವರು ಶಾಂತಿಗಾಗಿ ಪ್ರಾರ್ಥಿಸುವ ವರೆಗೂ ಫ್ರಾನ್ಸು ಬಿಗಿಯಾಗಿರಬೇಕೆಂದು ಎಂ. ಆರ್. ಪಿ. ಪಕ್ಷದ ನಾಯಕರಾದ ಮಾರ್ಕ್ಸ್ ಅಂಡ್ರೆಯವರು ಹೇಳಿದ್ದಾರೆ

ಗೋಕೃಷ್ಣಮೂರ್ತಿಪುರಂ ಶ್ರೀ ವ್ಯಾಸರಾಯಮಠದಲ್ಲಿ ನಾಳೆ ಸಂಜೆ ೬-೩೦ ಕ್ಕೆ ಪಂ|| ಟಿ ನಾಗೇಶರಾಯರು ಮಧ್ವಾಚಾರ್ಯರ ತತ್ವದ ವಿಚಾರವಾಗಿ ಉಪನ್ಯಾಸ ಮಾಡುವರು.

ಪೋಲೀಸಿನವನ ಮುಂದಾವರ್ತಿಯೇ ?

ಮೇಲ್ಕಂಡ ಶಿರೋನಾಮೆಯಲ್ಲಿ ೨೫ ೧-೪೭ರ 'ಸಾಧ್ವಿ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿಯಲ್ಲಿ ನನ್ನನ್ನು ಪೋಲೀಸಿನವನು (ಈತನು ಕ್ರೈಂಬ್ರಾಂಚ್ ಪೋಲೀಸ್ ಕಾನ್ಸ್‌ಟೇಬಲ್ ನಂಜಪ್ಪಾಜೀ ಅಂಸ್ ಎಂದು ತಿಳಿದು ಬಂದಿದೆ) ಎಳೆದುಕೊಂಡು ಹೋದುದು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಸುಬ್ರಹ್ಮಣ್ಯಶಾಸ್ತ್ರಿಗಳವರ ಮನೆಗೆ ಎಂದು ದಾಗಿ ನಮೂದಾಗಿದೆ. ಆತನು ನನ್ನನ್ನು ಎಳೆದು ಕೊಂಡು ಹೋದುದು ಮೈಸೂರು ಗುರುಕಾರ್ ಪುಟ್ಟಮಲ್ಲಪ್ಪನವರ ಬೀದಿ ೪೮೭ ನೇ ನಂ ಮನೆಯಲ್ಲಿರುವ ಕ್ರೈಂ ಬ್ರಾಂಚ್ ಪೋ|| ಸ|| ಇ|| ಶ್ರೀ ಪುಟ್ಟಮಲ್ಲಯ್ಯನವರ ಮನೆಗೆ. ಶ್ರೀ ಶಾಸ್ತ್ರಿಗಳ ಹೆಸರು ನನಗೆ ಆ ದಿನ ತಪ್ಪಾಗಿ ತಿಳಿಸಲ್ಪಟ್ಟಿತು. ಅದಕ್ಕಾಗಿ ವಿಷಾದಿಸುತ್ತೇನೆ. ಅಲ್ಲದೆ ಶ್ರೀ ಶಾಸ್ತ್ರಿಗಳ ಕ್ಷಮೆ ಬೇಡುತ್ತೇನೆ. ಈ ವಿಷಯವನ್ನು ಮೇಲಧಿಕಾರಿಗಳಿಗೂ ತಿಳಿಸಿದ್ದೇನೆ.

ಸಿ. ಗೋಪಾಲರಾವ್,

ಚಾಮರಾಜನಗರ.

ಗೋಪಾಲರಾಯರೇ ಒಡವೆಗಳನ್ನು ಕೊಟ್ಟರು

ಸ್ವಂ ಸು ಫೋ] ಬೆಂಗಳೂರು ೧೨

ಧರ್ಮರಕ್ಷಾಕರ್ ಗೋಪಾಲರಾಯರ ಮೇಲೆ ಹೂಡಿದ ಮೊಕದ್ದಮೆಯ ವಿಚಾರಣೆಯು ಇಂದಿಗೆ ಮುಕ್ತಾಯಗೊಂಡಿತು. ಸರ್ಕಾರೀ ಶ್ರಮರಾವ್ ಮುಂತಾದ ಮೂವರು ಅಪರಾಧಿಗಳು ಈರೀತಿ ಹೇಳಿಕೆಯೊಂದನ್ನು ಈದಿನ ಸಲ್ಲಿಸಿದರು—

" ನಾವು ನಿರಪರಾಧಿಗಳು. ೭ನೇ ತಾ|| ರಾತ್ರಿ ಶ್ರೀ ಗೋಪಾಲರಾಯರು ನಮ್ಮನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಿ ಶಾಮೇ ಗೈಯಾರ ಒಡವೆಗಳನ್ನು ನಮಗೆ ಕೊಟ್ಟರು. ಮಹಡಿಯಿಂದ ಕೆಳಗಿಳಿದು ಬಂದು ನಮ್ಮನ್ನು ಕಾರಿನಲ್ಲಿ ಕೂರಿಸಿ ಹಸ್ತಲಾಘವವಿತ್ತರು. ಸ್ನೇಹಿತರೊಬ್ಬರಿಗೂ ಮೋಸ ಮಾಡುವುದಿಲ್ಲವೆಂದೂ ಒಂದು 'ಪೂಲ್' ಮಾಡಿ ಸಾಧ್ಯವಾದಷ್ಟನ್ನು ಎಲ್ಲರಿಗೂ ಹಂಚಲು ಆಲೋಚಿಸಿರುವುದಾಗಿ ಶ್ರೀ ಗೋಪಾಲರಾಯರು ನಮ್ಮಲ್ಲಿ ತಿಳಿಸಿದರು

* ಸೆಕ್ರೆಟೇರಿಯಟ್ಟಿನ ೧೫೦ ಅಧಿಕಾರಿಗಳು ಕಾಶ್ಮೀರದ ಪರಿಹಾರದ ಬಗ್ಗೆ ಮಾತುಕತೆ ನಡೆಸಲು ನಾಳೆ ದಿವಾನರ ಬಳಿ ನಿಯೋಗ ಹೋಗುವರು.

ವಿಯಟ್‌ನಾಮಿನವರು ಮಕ್ಕಳ ಸೆರೆ ಹಿಡಿದಿದ್ದಾರೆ

ಇಂಡೋಚೀಣಾದಲ್ಲಿ ೫೦೦ ಮಂದಿ ಫ್ರೆಂಚ್ ಸಿವಿಲಿಯನ್ನರು ಪತ್ತೆ ಇಲ್ಲವಾಗಿದ್ದಾರೆ. ಈ ಪೈಕಿ ೨೦೦ ಮಂದಿ ಮಾತ್ರ ಬದುಕಿದ್ದಾರೆಂದು ನಂಬಲಾಗಿದೆ. ವಿಯಟ್‌ನಾಮಿನವರು ಸೆರೆ ಹಿಡಿದಿರುವ ಫ್ರೆಂಚರ ಪೈಕಿ ೬೭ ಮಕ್ಕಳಿದ್ದಾರೆ. ಉಳಿದವರು ಹೆಂಗಸರು ಮತ್ತು ಮುದುಕರು. ಇದು ಮಾನವ ನ್ಯಾಯ ಶಾಸ್ತ್ರದ ವಿರುದ್ಧವಾದ ನಡವಳಿಕೆ-ಎಂಬುದಾಗಿ ಫ್ರಾನ್ಸ್ ಮಂತ್ರಿಮಂಡಲದ ಪ್ರಚಾರಕರೊಬ್ಬರು ತಿಳಿಸಿದ್ದಾರೆ

ಭಾರತದ ವಿಚಾರದಲ್ಲಿ ಹೇಳಿಕೆ

ಭಾರತದ ಪರಿಸ್ಥಿತಿಯ ವಿಚಾರದಲ್ಲಿ ಈ ವಾರದೊಳಗೇ ಬ್ರಿಟಿಷ್ ಸರ್ಕಾರವು ಕಾಮನ್ಸ್ ಸಭೆಯಲ್ಲಿ ಹೇಳಿಕೆಯೊಂದನ್ನು ಹೊರಡಿಸುವುದೆಂದು ತಿಳಿದುಬಂದಿದೆ.

ಸ್ಟಾಲಿನ್ ಚುನಾವಣೆ

ಜ|| ಸ್ಟಾಲಿನ್‌ರವರು ಸೋವಿಯಟ್ ಸುಪ್ರೀಂನ ಡೆಪ್ಯುಟಿಗಳಾಗಿ ಚುನಾಯಿತರಾದರು. ಇವರ ಚುನಾವಣಾ ಕ್ಷೇತ್ರದಲ್ಲಿ ಶೇ|| ೧೦೦ ರಷ್ಟು ಓಟುದಾರರು ಭಾಗವಹಿಸಿದ್ದು ಒಂದು ಮತವೂ ಕುಲಗೆಟ್ಟಿಲ್ಲವೆಂದು ವರದಿಯಾಗಿದೆ.

ಗಂಜಿ ಹಾಕಲು ಪ್ರತಿಬಂಧಕ

...ದಲ್ಲೆಲ್ಲಾ ... ... ಪ್ರದಾಂದ ... ... ಬಟ್ಟೆಗಳಿಗೆ ಗಂಜಿ ಹಾಕ ಕೂಡದೆಂದು ... ...ದ್ದಾರೆ.

ಹೊಸ ರೈಸ್ ಮಿಲ್ಲುಗಳಿಗೆ ಪ್ರತಿಬಂಧಕ

ಕೈಕುಟ್ಟಣದಲ್ಲಿ ಅಕ್ಕಿಯನ್ನು ಕುಟ್ಟುವ ದಕ್ಕೆ ಹೆಚ್ಚು ಪ್ರೋತ್ಸಾಹವನ್ನು ಕೊಡುವ ದೃಷ್ಟಿಯಿಂದ ಹೊಸ ಅಕ್ಕಿ ಗಿರಣಿಗಳಿಗೆ ಪರವಾನಗಿ ಕೊಡುವುದನ್ನು ನಿಲ್ಲಿಸಲಾಗಿದೆಯೆಂದು ಮದ್ರಾಸ್ ಸರ್ಕಾರವು ಪ್ರಕಟಣೆ ಹೊರಡಿಸಿದೆ.

ಸಾಧ್ವಿ

ತಾ॥ ೧೨-೨-೪೭ ಬುಧವಾರ

ಪತ್ರಿಕೆಗಳಿಗೆ ಕಾಗದ

ನಮ್ಮ ಸಂಸ್ಥಾನದ ಪತ್ರಿಕೆಗಳಿಗೆ ಬೇಕಾದ ಕಾಗದವನ್ನು ಒದಗಿಸುವ ಬಗ್ಗೆ ಸ್ಪ್ಯಾಯಾಂಗ ಸಚಿವರು ನಡೆಸಿದ ಸಮ್ಮೇಳನದಿಂದ ವಿಶೇಷ ಪ್ರಯೋಜನವುಂಟಾಗಿರುವುದೆಂಬುದರಲ್ಲಿ ಸಂದೇಹವಿಲ್ಲ. ಹೊರಗಿನಿಂದ ಬರಬೇಕಾದ ಕಾಗದವು ಸರಿಯಾಗಿ ಬಾರದಿದ್ದುದರಿಂದ ಈ ಬಿಕ್ಕಟ್ಟಿನ ಪರಿಸ್ಥಿತಿಯುಂಟಾಯಿತು. 'ದೇಶಬಂಧು' ಪತ್ರಿಕೆಯು ಹಂಗಾಮಿಯಾಗಿ ನಿಲ್ಲಬೇಕಾಗಿ ಬಂದ ಪ್ರಸಂಗವು ಎಲ್ಲರ ಕಣ್ಣನ್ನು ತೆರೆಯಿಸಿತು. ಸರ್ಕಾರದವರೂ ಪತ್ರಿಕಾ ಕರ್ತರೂ ಕಾಗದದ ಕಾರ್ಖಾನೆಯವರೂ ಎಲ್ಲ ವಿದ್ಯಮಾನಗಳನ್ನೂ ಪರಿಶೀಲಿಸಲು ಅವಕಾಶವುಂಟಾಯಿತು.

ಈ ಸಮ್ಮೇಳನದ ಫಲವಾಗಿ ಇಂದಿನಿಂದ 'ದೇಶಬಂಧು' ಪತ್ರಿಕೆಯು ಮತ್ತೆ ಹೊರಡಲು ಅನುಕೂಲವಾಗಿರುವುದಕ್ಕಾಗಿ ನಾವು ಸಂತೋಷಿಸುತ್ತೇವೆ. ಎಲ್ಲರೂ ಪರಸ್ಪರ ಕಲೆತು ಕಷ್ಟಸುಖಗಳನ್ನು ಪರಿಶೀಲಿಸುವುದರಿಂದ ಪ್ರಯೋಜನವುಂಟೆಂಬುದು ಇದರಿಂದಲೇ ವೇದ್ಯವಾಗುತ್ತದೆ. ಸರ್ಕಾರದವರು ಸಾರ್ವಜನಿಕರಿಗೆ ಸಂಬಂಧಪಟ್ಟ ವಿಚಾರಗಳ ಬಗ್ಗೆ ಆಗಿಂದಾಗ್ಗೆ ಪತ್ರಿಕಾ ಸಮ್ಮೇಳನಗಳನ್ನು ನಡೆಸಿ ತಮ್ಮ ಕಾರ್ಯಕ್ರಮಗಳನ್ನು ತನ್ಮೂಲಕ ಪ್ರಚಾರ ಮಾಡುವರಷ್ಟೆ. ಹಾಗೆಯೇ ಪತ್ರಿಕೆಗಳಿಗೆ ಇರುವ ಕಷ್ಟಸುಖಗಳನ್ನೂ ವಿಚಾರಿಸಿ ಅವುಗಳನ್ನೂ ಬಗೆಹರಿಸಲು ಇಂತಹ ಸಮಾಲೋಚನೆಗಳನ್ನು ಆಗಾಗ್ಗೆ ನಡೆಸಬೇಕು. ಪತ್ರಿಕಾ ಸಲಹಾ ಸಮಿತಿಯಂತೂ ಅಂತರ್ಧಾನವಾಗಿರುತ್ತದೆ. ಅದಕ್ಕಾಗಿ ಯಾರೂ ಪರಿತಾಪ ಪಡುವುದಿಲ್ಲ. ಪತ್ರಿಕೆಗಳ ಹಿತಸಾಧನೆಗಾಗಿ ಖಾಸಗಿಯಾಗಿಯಾಗಲೀ ಕಾನೂನು ಬದ್ಧವಾಗಿಯಾಗಲೀ ಒಂದು ಸಮಿತಿಯನ್ನು ರಚಿಸುವುದು ಅಗತ್ಯ.

ಪತ್ರಿಕೆಗಳಲ್ಲಿ ಅನೇಕ ದರ್ಜೆಗಳಿವೆ. ದಿನ, ವಾರ, ಪಕ್ಷ ಮತ್ತು ಮಾಸ ಪತ್ರಿಕೆಗಳಿವೆ. ಕೆಲವಕ್ಕೆ ಕೆನೇಡಿಯನ್ ಕಾಗದದ ರಹದಾರಿಯಿದೆ, ಕೆಲವಕ್ಕೆ ಮೈಸೂರು ಕಾಗದದ ರಹದಾರಿ ಇದೆ. ಇನ್ನು ಕೆಲವಕ್ಕೆ ಎರಡೂ ಇಲ್ಲ. ನಮ್ಮ ಸಂಸ್ಥಾನದಲ್ಲಿ ಒಂದು ದೊಡ್ಡ ಕಾಗದದ ಕಾರ್ಖಾನೆ ಇದ್ದೂ ಈ ಅವಸ್ಥೆಯು ಇರುವುದು ಸರಿಯಲ್ಲ.

ಸಚಿವರು ಸೂಚಿಸಿದಂತೆ ಇನ್ನು ಮುಂದೆ ಯಾವ ಪತ್ರಿಕೆಯೂ ಕಾಗದದ ಅಭಾವದಿಂದ ನಿಂತುಹೋಗದಂತೆ ನೋಡಿಕೊಳ್ಳುವ ಭಾರವನ್ನು ಸರ್ಕಾರದವರು ವಹಿಸುವರೆಂದು ನಾವು ನಂಬಿದ್ದೇವೆ.

ಇಂಗ್ಲಿಷ್ ಸರ್ಜ್ ಕೋಟಿಂಗ್

ಅನೇಕ ನಮೂನೆಗಳಲ್ಲಿ ಪುನಃ ಬಂದಿದೆ

ಬಾಹುಸಾರ್ ಟ್ರೇಡಿಂಗ್ ಕಂಪೆನಿ,

ಓಲ್ಡ್ ಮೈಸೂರು ಬ್ಯಾಂಕ್ ರೋಡು,

ಮೈಸೂರು.

ಸೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:-

ಮೈಸೂರು ಸಿಟಿ ವಾಣೀ ವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಶ್ಚಿಮ ದಿಕ್ಕಿನಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ॥ ೧೨-೧-೪೭ ನೇ ಮಹಜರು ಹರಾಜು ಇಶ್ತಿಹಾರ್ ನಾಮೆಯ ಷರತ್ತುಗಳಿಗೆ ಒಳಪಡಿಸಿ ತಾ॥ ೧೬-೨-೪೭ ನೇ ಭಾನುವಾರ ಬೆಳಗ್ಗೆ ೯-೩೦ ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇತರ ವಿವರಗಳನ್ನು ಆಫೀಸಿನಲ್ಲಿ ರಜಾ ದಿನಗಳಲ್ಲದ ಇತರ ದಿವಸಗಳಲ್ಲಿ ೧೧ ಘಂಟೆಯಿಂದ ೫ ಘಂಟೆಯ ಒಳಗೆ ತಿಳಿಯಬಹುದು.

(ಸಹಿ) ಕೆ ವೆಂಕಟೇಶ ಐಯ್ಯಂಗ್,

ಛೇರ್ಮನ್ನರಿಗಾಗಿ.

ನಗರಾಭಿವೃದ್ಧಿ ಸಮಿತಿ, ಮೈಸೂರು.

Edited, printed and published by K. S. Narasimha at the Sadhvi Press, [illegible] Road, Mysore.

ಬಟ್ಟೆ ಅಭಾವ

ಸ್ವಂ ಸು] ಮಾಂಬಳ್ಳಿ, ೧೧

ಅಗರ-ಮಾಂಬಳ್ಳಿಯಲ್ಲಿರುವ ಜವಳಿ ಅಂಗಡಿಗಳಲ್ಲಿ ಬಟ್ಟೆಗಳನ್ನು ಕೇಳಿದರೆ ಸ್ಟಾಕು ಇಲ್ಲವೆಂದು ಸಬೂಬು ಹೇಳುತ್ತಾರೆ. ಸ್ವಲ್ಪ ಕಾಲ ಬಿಟ್ಟು ಹೋದರೆ ಬಟ್ಟೆಯೇ ಇಲ್ಲ ಎನ್ನುತ್ತಾರೆ. ಇದರಿಂದ ಬಡವರ ಗೋಳು ಅಧಿಕವಾಗಿದೆ. ಕೂಡಲೇ ಅಧಿಕಾರಿಗಳು ಇದರ ಕಡೆ ಗಮನ ಕೊಡಬೇಕಾಗಿ ಕೋರಲಾಗಿದೆ.

OPERA TALKIES

2 WEEK From 11-2-47

The

SECRET CODE

(Full Serial)

Next Change:-

Stage Door Canteen

Morning Shows from 14-2-47

The Jade Mask

ನಿಮ್ಮ ಮೈ ಮೊಗವು ಹೇಗೆ ಹೊಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ರಾಜ್‌ಕಮಲ್, ಮೈಸೂರು

11-2-47 ರಿಂದ 3 ದಿನಗಳು ಮಾತ್ರ

ಪ್ರತಿದಿನ ಮೂರು ಆಟಗಳು

ನಯೀ - ಜಿಂದಗಿ

-: ಭೂಮಿಕೆ :-

ಷೇಕ್ ಮುಕ್ತಾರ್, ಅನೀಸ್ ಖಾತೂನ್ ಮತ್ತು ಯಾಕೂಬ್.

ರಾಜ್‌ಕಮಲ್, ಮೈಸೂರು

14-2-47 ರಿಂದ ಪ್ರತಿ ದಿನ 3 ಆಟಗಳು

ಮಹಾತ್ಮಾ ಪಿಕ್ಚರ್ಸ್‌ರವರ

★ ಕೃಷ್ಣಲೀಲಾ ★

(ಕನ್ನಡ ಚಿತ್ರ)

(ಜಿ ಆರ್. ರಾಮಯ್ಯ ಮತ್ತು ಅಯ್ಯನಾರ್ರವರ ಕಾಣಿಕೆ)

-: ಭೂಮಿಕೆ :-

ಕೆಂಪರಾಜ್, ಬಳ್ಳಾರಿ ಲಲಿತ, ರತ್ನಮಾಲಾ, ಕಾಂತಾ, ರಾಘವೇಂದ್ರ ರಾವ್, ಮಾಧವರಾವ್, ಮಹಾಬಲ ರಾವ್ ಮುಂತಾದವರು.

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿ!!

ಬಿ. ಕೆಂಚಪ್ಪ ಸನ್ಸ್

ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು.

ಸಂಪುಟ ೫] ಗುರುವಾರ ೧೩—೨—೪೭ [ಸಂಚಿಕೆ ೧೬೦

ಕೇಂದ್ರ ಸರ್ಕಾರದೊಡನೆ ಲೀಗ್ ಪ್ರಾಂತ್ಯ ಘರ್ಷಣೆ

ದಿವಾನರಲ್ಲಿ ನೌಕರರ ನಿಯೋಗ

ಫೋ॥] ಬೆಂಗಳೂರು ೧೩

ದಿನ ದಿವಾನರು ದೆಹಲಿಯಿಂದ ಹಿಂದಿರು ಬೆಳಗ್ಗೆ ೧೧ ಗಂಟೆಗೆ ಅವರು ಕಛೇರಿಗೆ ಬಂದಾಗ ಎಲ್ಲಾ ಇಲಾಖೆಯ ನೂರಾರು ಸಾವಿರ ಜನ ನೌಕರರೂ ಅವರನ್ನು ಕಂಡು ಅಹವಾಲು ಹೇಳಲು ಕಾದಿದ್ದರು. ಅವರ ಪೈಕಿ ... ಜನರು ತಮ್ಮಲ್ಲಿಗೆ ಬಂದು ... ದರೆಂದು ದಿವಾನರು ಹೇಳಿದರು. ... ಮಾತುಕತೆಗಳು ನಡೆದುವು.

ಪ್ರತಿನಿಧಿಗಳು ದಿವಾನರಿಗೆ ಒಂದು ... ಯನ್ನು ಸಲ್ಲಿಸಿದ್ದಾರೆ. ಅದರಲ್ಲಿ ...ಗಳನ್ನು ನಮೂದಿಸಿದ್ದಾರೆ. ... ಪರಿಹಾರವಾಗಿ ಎರಡು ತಿಂಗಳ ... ಕೊಡಿಸಿಕೊಡಬೇಕು ತುಟ್ಟಿಭತ್ಯೆ ... ಜನವರಿ ೧ನೇ ತಾ॥ ನಿಂದ ... ರಷ್ಟು ಹೆಚ್ಚು ಮಾಡಬೇಕು ಮ... ನಗರಗಳಲ್ಲಿ ವಾಸ ಮಾಡುವವರಿಗೆ ...ದಲ್ಲಿ ಶೇ॥ ೧೦ ರಷ್ಟು ಮಾಸದ ಮನೆ ...ವನ್ನು ಕೊಡಿಸಿಕೊಡಬೇಕು. ದಿವಾನರು ಈ ಮನವಿಯನ್ನು ಸಾವಧಾನದಿಂದ ... ಸಾಧ್ಯವಾದಷ್ಟು ಪರಿಹಾರಗಳನ್ನು ...ಕೊಡುವುದಾಗಿ ಭರವಸೆ ಇತ್ತಿದ್ದಾರೆ.

ದಿವಾಳಿ ಮೊಕದ್ದಮೆ

ಧರ್ಮರಕ್ಷಾಕರ ಗೋಪಾಲರಾಯರು ದಿವಾಳಿಯಾಗಿರುವರೆಂದು ತೀರ್ಪು ಕೊಡಬೇಕೆಂದು ಬಂದಿರುವ ಮೊಕದ್ದಮೆಯು ಈ ... ಜಿಲ್ಲಾ ನ್ಯಾಯಾಧೀಶರ ಮುಂದೆ ಬಂದು ... ನೇ ತಾ॥ ಗೆ ಮುಂದುವರಿಯಿತು. ...ರಿಗೆ ಒಟ್ಟು ...೭ ದಿವಾಳಿ ಅರ್ಜಿಗಳು ...ವೆ. ನಿವೃತ್ತ ಎಕ್ಸೈಜ್ ಕಮೀಷನರ್ ಶ್ರೀ ಹೆಚ್. ವಿ ರಾಮಸ್ವಾಮಿಯವರು ...೨೦, ಹೆಚ್. ವಿ ವಿಶ್ವೇಶ್ವರಯ್ಯ ...೦೦೦ ಮತ್ತು ಮಂಡ್ಯದ ಶ್ರೀ ಎ. ಸೀನಪ್ಪನವರು ೧೩೬೭೮ ರೂ. ತಮಗೆ ಬರಬೇಕೆಂದು ಈಚೆಗೆ ಅರ್ಜಿ ಸಲ್ಲಿಸಿದ್ದಾರೆ.

ದೆಹಲಿಯಲ್ಲಿ ಅಮೇರಿಕ ಶಸ್ತ್ರಾಸ್ತ್ರಗಳ ಪತ್ತೆ

ಅಮೇರಿಕದಲ್ಲಿ ತಯಾರಾದ ಶಸ್ತ್ರಾಸ್ತ್ರಗಳ ನೇಕವು ದೆಹಲಿಯ ಒಂದು ಮನೆಯಲ್ಲಿ ಆರ್ ಎ ಎಫ್ ಪೋಲೀಸರಿಗೆ ಸಿಕ್ಕಿವೆ. ಅವುಗಳಲ್ಲಿ ರಿವಾಲ್ವರುಗಳೂ, ...ಡುಗಳೂ, ಮೆಷಿನ್ ಗನ್ನುಗಳೂ ಮತ್ತು ...ರ ಕೆಲವು ಅಸ್ತ್ರಗಳೂ ಇರುವುವೆಂದು ತಿಳಿದು ಬಂದಿದೆ. ಇವು ಆ ಪ್ರದೇಶದಲ್ಲಿ ...ಡು ವರ್ಷಗಳಿಂದ ಹುದುಗಿಡಲ್ಪಟ್ಟಿದ್ದವೆಂದು ಹೇಳಲಾಗಿದೆ.

ಕಾಂಪೌಂಡರುಗಳ ಸ್ಥಿತಿ

ಮೈಸೂರು ವೈದ್ಯ ಇಲಾಖೆಯಲ್ಲಿರುವ ಕಾಂಪೌಂಡರುಗಳ ಸ್ಥಿತಿಯು ಅತ್ಯಂತ ಶೋಚನೀಯವಾಗಿರುತ್ತದೆ. ಇವರ ಸಂಬಳ ೩೦ ರೂ ಗಳಿಂದ ಆರಂಭವಾಗಿ ೩೦ ರೂ ಗಳಲ್ಲಿ ಅಂತ್ಯವಾಗುತ್ತಿದೆ. ಆಸ್ಪತ್ರೆಗಳಲ್ಲಿ ಡಾಕ್ಟರು ಇಲ್ಲದ ವೇಳೆ ಇವರು ಅತ್ಯಂತ ಗುರುತರವಾದ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ. ಆದಾಗ್ಯೂ ಇವರುಗಳ ವಿಚಾರದಲ್ಲಿ ಸರ್ಕಾರದ ಗಮನವು ಸರಿಯಾಗಿ ಬಾರದಿರುವುದು ಆಶ್ಚರ್ಯವೇ ಸರಿ. ಈಗ ಸಂಬಳ ಸಮಿತಿಯು ನಿಯಾಮಕವಾಗಿದೆ. ಅವರುಗಳಾದರೂ ಈ ಸಮಾಜಸೇವಕರ ಗೋಳನ್ನು ಆಲಿಸಿ ಅವರ ಸಂಬಳ ಸಾರಿಗೆಗಳನ್ನು ಹೆಚ್ಚುಮಾಡಬೇಕಾಗಿ ಕೋರಲಾಗಿದೆ.

ಹಿತೈಷಿ.

ಎಂಬಾರ್ ಶ್ರೀನಿವಾಸಾಚಾರ್ ಕುಟುಂಬಕ್ಕೆ ಪರಿಹಾರ

ಸ್ವಂ ಸು ಫೋ॥] ಬೆಂಗಳೂರು ೧೩

ಚನ್ನಪಟ್ಟಣದ ಗಲಭೆಯಲ್ಲಿ ಕೊಲೆಯಾದ ಹೆಡ್ ಮಾಸ್ಟರ್ ಶ್ರೀ॥ ಎಂಬಾರ್ ಶ್ರೀನಿವಾಸಾಚಾರ್ಯರವರ ಪತ್ನಿಯವರಿಗೆ ಸರ್ಕಾರದವರು ಮಾಹೆಯಾನ ೧೦೦ ರೂ ವಿಶೇಷ ಪೆನ್ಷನನ್ನು ಆಜೀವ ಪರ್ಯಂತ ಕೊಡುವುದಾಗಿ ಆಜ್ಞೆ ಮಾಡಿದ್ದಾರೆ ಮತ್ತು ಅವರ ೫ ಜನ ಗಂಡು ಮಕ್ಕಳಿಗೆ ಅವರ ವಿದ್ಯಾಭ್ಯಾಸವು ಪೂರೈಸುವ ವರೆಗೆ ತಲಾ ಪ್ರತಿ ತಿಂಗಳೂ ೧೦ ರೂ ವೇತನ ಕೊಡುವಂತೆಯೂ ಆಜ್ಞೆ ಮಾಡಿದ್ದಾರೆ. ಮತ್ತು ಗರ್ಭಿಣಿಯಾಗಿದ್ದ ಆಕೆಯ ಬಾಣಂತನದ ವೆಚ್ಚಕ್ಕಾಗಿ ೨೦೦ ರೂ ಗಳನ್ನೂ ಮಂಜೂರು ಮಾಡಿರುತ್ತಾರೆ.

ಗೋಪಾಲರಾಯರ ಮೊಕದ್ದಮೆಯಲ್ಲಿ ಸ್ಥಳ ಪರೀಕ್ಷೆ

ಧರ್ಮರಕ್ಷಾಕರ ಬಿ. ಎ. ಗೋಪಾಲರಾಯರ ಒಡವೆಗಳ ಅಪಹರಣದ ಮೊಕದ್ದಮೆಯಲ್ಲಿ ಈ ದಿನ ಬೆಳಗ್ಗೆ ಮ್ಯಾಜಿಸ್ಟ್ರೇಟರೂ, ವಕೀಲರುಗಳೂ ಗೋಪಾಲರಾವ್, ದಿವಾಕ್ಷ, ಬೆಳಗಾಂ ವಾಲಾ ಮುಂತಾದವರ ಮನೆಗಳಿಗೆ ಹೋಗಿ ಸ್ಥಳವನ್ನು ಆಜಮಾಯಿಷಿ ಮಾಡಿದರು.

ಭಾಷಾವಾರು ಪ್ರಾಂತರಚನೆ

ಮದ್ರಾಸಿನ ಮಂತ್ರಿಗಳಾದ ಶ್ರೀ ಪ್ರಕಾಶಂರವರು ಭಾಷಾವಾರು ಪ್ರಾಂತರಚನೆಯ ಬಗ್ಗೆ ಮದ್ರಾಸ್ ಶಾಸನ ಸಭೆಯಲ್ಲಿ ನಿರ್ಣಯವೊಂದನ್ನು ಮಂಡಿಸಲಿದ್ದಾರೆ. ಭಾರತಕ್ಕೆ ಹೊಸ ರಾಜ್ಯಾಂಗವನ್ನು ರಚಿಸುವಾಗ ಪ್ರಾಂತಗಳು ಭಾಷಾನುಗುಣವಾಗಿ ವಿಂಗಡವಾಗಬೇಕೆಂದು ರಾಜ್ಯಾಂಗ ಸಭೆಗೆ ಆ ನಿರ್ಣಯವು ಶಿಫಾರ್ಸು ಮಾಡಲಿದೆ.

LATE NEWS

ದಿವಾನರು ಅಮೇರಿಕಾಕ್ಕೆ

ಸ್ವಂ ಸು. ಫೋ॥] ಬೆಂಗಳೂರು ೧೩

ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರು ವಿಶ್ವ ಸಂಸ್ಥೆಯ ಆರ್ಥಿಕ ಸಮಿತಿಯಲ್ಲಿ ಭಾಗ ವಹಿಸಲು ಇದೇ ಮಾಹೆ ೧೭ನೇ ತಾ॥ ಬೊಂಬಾಯಿಗೆ ಕ್ಲಿಪ್ಪರ್ ವಿಮಾನದಲ್ಲಿ ಹೊರಟು ಅಲ್ಲಿಂದ ವಿಮಾನದಲ್ಲಿ ಅಮೇರಿಕಾಕ್ಕೆ ಪ್ರಯಾಣ ಮಾಡುವರೆಂದು ಗೊತ್ತಾಗಿದೆ. ೬ ವಾರಗಳ ನಂತರ ದಿವಾನರು ಬೆಂಗಳೂರಿಗೆ ಹಿಂತಿರುಗುವರು.

ಕೇಂದ್ರದೊಡನೆ ಲೀಗ್ ಪ್ರಾಂತಗಳ ಘರ್ಷಣೆ

ಲೀಗ್ ಅಧಿಕಾರವಿರುವ ಪ್ರಾಂತ್ಯಗಳು ಕೇಂದ್ರ ಸರ್ಕಾರದೊಡನೆ ನೇರವಾಗಿ ಘರ್ಷಣೆ ಹೂಡುವುದು, ಲೀಗ್ ಸದಸ್ಯರಿಲ್ಲದೆ ಸೇರಿಕೊಂಡ ಪ್ರತ್ಯೇಕ ರಾಜ್ಯಾಂಗ ಸಭೆಯನ್ನು ಕರೆಯುವುದು ಮತ್ತು ಪ್ರಾಂತ್ಯಗಳಿಂದ ಜನರನ್ನು ವರ್ಗಾಯಿಸುವುದು- ಇವೇ ಮುಂತಾದ ವಿಷಯಗಳಲ್ಲಿ ಒಂದು ಯೋಜನೆಯನ್ನು ಕರಾಚಿ ಬಳಿ ಇರುವ ಮಿ॥ ಜಿನ್ನಾರವರ ನಿವಾಸದಲ್ಲಿ ಗುಪ್ತವಾಗಿ ತಯಾರಿಸಲಾಗುತ್ತಿದೆಯೆಂದು ವರದಿ ಹೊರಬಿದ್ದಿದೆ. ಲೀಗ್ ಸದಸ್ಯರನ್ನು ಕೇಂದ್ರ ಸರ್ಕಾರದಿಂದ ಹೊರದೂಡಿದಲ್ಲಿ ಈ ಯೋಜನೆಯು ಕಾರ್ಯರೂಪಕ್ಕೆ ಬರುವುದೆಂದು ಹೇಳಲಾಗಿದೆ. ಕಾಂಗ್ರೆಸ್ ಮತ್ತು ಲೀಗ್ ಬಿಕ್ಕಟ್ಟನ್ನು ಹೋಗಲಾಡಿಸಲು ಬ್ರಿ॥ ಸರ್ಕಾರವು ಮತ್ತೊಮ್ಮೆ ಪ್ರಯತ್ನಪಡುವುದೆಂದೂ ಈ ಬಗ್ಗೆ ಸಂಧಾನ ಆರಂಭಿಸಲು ಪ್ರಧಾನಿ ಮಿ॥ ಅಟ್ಲೀಯವರೇ ಭಾರತಕ್ಕೆ ಬರಬಹುದೆಂದೂ ಲೀಗ್ ವಲಯದಲ್ಲಿ ಹೇಳಲಾಗುತ್ತಿದೆ.

ಇಂಡೋನೇಷಿಯಾಕ್ಕೆ ಭಾರತದ ಸ್ವಯಂಸೇವಕ ಪಡೆ

ಇಂಡೋನೇಷಿಯದ ರಿಪಬ್ಲಿಕ್ ಪಕ್ಷದವರಿಗೆ ಸಹಾಯ ನೀಡಲು ಭಾರತದಿಂದ ೭೦೦ ಮಂದಿ ಸ್ವಯಂಸೇವಕರನ್ನೂ, ವೈದ್ಯದಳದವರನ್ನೂ ಕಳುಹಿಸಲಾಗುವುದೆಂದೂ ಅವರುಗಳಿಗೆ ವಾಹನ ಸೌಕರ್ಯವನ್ನು ಏರ್ಪಡಿಸಲು ಪಂ॥ ನೆಹರೂರವರನ್ನು ಪ್ರಾರ್ಥಿಸಲಾಗಿದೆಯೆಂದೂ ಶ್ರೀ ಶರತ್ ಚಂದ್ರಬೋಸರು ತಿಳಿಸಿದ್ದಾರೆ.

ವಿಶ್ವ ಸಂಸ್ಥೆಗೆ ಪ್ಯಾಲಸ್ಟೈನ್ ಪ್ರಶ್ನೆ

ಅರಬ ಮತ್ತು ಯಹೂದ್ಯ ಪ್ರತಿನಿಧಿಗಳು ಪ್ಯಾಲಸ್ಟೈನಿನ ಹೊಸ ಯೋಜನೆಯನ್ನು ನಿರಾಕರಿಸಿರುವುದರಿಂದ ಆ ಯೋಜನೆಯ ಹಲವು ಅಂಶಗಳನ್ನು ವಿಶ್ವ ಸಂಸ್ಥೆಯ ಮುಂದೆ ಮಂಡಿಸಲು ಬ್ರಿಟಿಷ್ ಸರ್ಕಾರ ನಿರ್ಧರಿಸಲಿದೆಯೆಂದು ತಿಳಿದುಬಂದಿದೆ.

ಬೋಸರು ಒದಗಿಸಿದ್ದಾರೆ!

ನೇತಾಜಿ ಬೋಸರು ಬದುಕಿದ್ದಾರೆ, ಆರೋಗ್ಯವಾಗಿದ್ದಾರೆ, ಹಿಂದಿಯಾದ ಕಾಲಕ್ಕೆ ಅವರು ಬಂದು ನಮಗೆ ಸಂಪೂರ್ಣ ಸ್ವಾತಂತ್ರ್ಯ ದೊರಕಿಸಿಕೊಡುವರು ಎಂಬುದಾಗಿ ಫಾರ್ವರ್ಡ್ ಬ್ಲಾಕಿನ ಕಾರ್ಯನಿರ್ವಾಹಕ ಸಮಿತಿ ಸದಸ್ಯರಾದ ಶ್ರೀ॥ ಗಂಗೂಲಿಯವರು ಹೇಳುತ್ತಿದ್ದಾರೆ.

ಲಂಡನ್ನಿಗೆ ಆಸಫ್‌ಅಲಿಯವರ ಮೂಲಕ ಪತ್ರ

ಭಾರತದ ಪರಿಸ್ಥಿತಿಯ ಬಗ್ಗೆ ಹೊಸ ವರದಿಯೊಂದನ್ನು ಪಂ॥ ನೆಹರೂರವರು ಶ್ರೀಯುತ ಮಿ॥ ಆಸಫ್‌ಅಲಿಯವರ ಮೂಲಕ ಲಂಡನ್ನಿಗೆ ಕಳುಹಿಸಿ ಕೊಟ್ಟಿದ್ದಾರೆಂದು ವದಂತಿ ಹುಟ್ಟಿದೆ. ಆಸಫ್‌ಅಲಿಯವರು ಲಂಡನ್ನನ್ನು ತಲಪುವ ವರೆಗೆ ಬ್ರಿಟಿಷ್ ಸರ್ಕಾರವು ಭಾರತದ ಬಗ್ಗೆ ಯಾವ ಹೇಳಿಕೆಯನ್ನು ಹೊರಡಿಸುವುದಿಲ್ಲವೆಂದು ಹೇಳಲಾಗಿದೆ. ನಾಳೆ ಸಂಜೆ ಅವರ ಗೌರವಾರ್ಥವಾಗಿ ಲಂಡನ್ನಿನಲ್ಲಿ ಒಂದು ಭೋಜನ ಕೂಟ ಏರ್ಪಡಿಸಲಾಗಿದೆ.

ವಿದ್ಯಾರ್ಥಿಗಳ ಮುಷ್ಕರ

ಮೈಸೂರು ೧೩

ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರದ ಸಂಬಂಧವಾಗಿ ಶ್ರೀ ಟಿ. ಮರಿಯಪ್ಪನವರು ಹೇಳಿಕೆಯೊಂದನ್ನು ಇತ್ತು ಸದರಿ ವಿದ್ಯಾರ್ಥಿಗಳ ಕುಂದುಕೊರತೆಗಳ ಬಗ್ಗೆ ತಾವು ಮುಜರಾಯಿ ಕಮೀಷನರನ್ನು, ಸಚಿವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದಾಗ್ಯೂ ಯಾವ ಪರಿಹಾರವೂ ಒದಗಿಲ್ಲವೆಂದೂ ವಿದ್ಯಾರ್ಥಿಗಳು ಅನಿವಾರ್ಯವಾಗಿ ಮುಷ್ಕರ ಹೂಡಿದ್ದಾರೆಂದೂ ತಿಳಿಸಿರುತ್ತಾರೆ. ಸರ್ಕಾರದವರು ಕೂಡಲೇ ಎಚ್ಚೆತ್ತು ವಿದ್ಯಾರ್ಥಿಗಳ ಕೋರಿಕೆಯನ್ನು ಮಾನ್ಯಮಾಡಬೇಕೆಂದು ಸಲಹೆ ಇತ್ತಿದ್ದಾರೆ.

ಇದೇ ವಿಚಾರದಲ್ಲಿ ಈ॥ ಪ್ರಾಂತ ವಿ॥ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಗಳು ತಮ್ಮ ಬೆಂಬಲವನ್ನು ಸೂಚಿಸಿ ಒಂದು ಹೇಳಿಕೆ ಹೊರಡಿಸಿದ್ದಾರೆ. ಸರ್ಕಾರದವರು ಕೂಡಲೇ ಈ ವ್ಯವಸ್ಥೆಯನ್ನು ಸರಿಪಡಿಸದಿದ್ದಲ್ಲಿ ನಾಡಿನ ವಿದ್ಯಾರ್ಥಿಗಳೆಲ್ಲಾ ನೇರವಾಗಿ ಇದರಲ್ಲಿ ಭಾಗವಹಿಸಬೇಕಾಗಬಹುದೆಂದು ಎಚ್ಚರಿಸಿದ್ದಾರೆ.

ವಿದ್ಯಾರ್ಥಿ ಕಾಂಗ್ರೆಸ್

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸಭೆಯೊಂದು ನಾಳೆ ಬೆಳಗ್ಗೆ ೯ ಗಂಟೆಗೆ ಅದರ ಕಾರ್ಯಾಲಯದಲ್ಲಿ ಜರುಗುವುದು. ಸದಸ್ಯರೆಲ್ಲಾ ತಪ್ಪದೆ ದಯಮಾಡಿಸಬೇಕಾಗಿ ಕಾರ್ಯದರ್ಶಿಗಳು ಕೋರಿದ್ದಾರೆ.

ಉದಾರ ದಾನ

ರಾಜಧಾನಿಯ ದೇವಾಂಗ ಜನಾಂಗದ ಶ್ರೀಮಂತರಾದ ಶ್ರೀ॥ ಎಲ್. ದೊಡ್ಡನಾಗಪ್ಪನವರು ದೇವಾಂಗ ವಿದ್ಯಾರ್ಥಿ ನಿಲಯಕ್ಕೆ ೫ ಸಾವಿರ ರೂ ಬೆಲೆಬಾಳುವ ನಿವೇಶನವನ್ನೂ, ಹಿಂದೆ ಕೊಟ್ಟಿದ್ದ ೧೦೦೦ ರೂ ಗಳ ಜತೆಗೆ ಈಗ ೧,೦೦೦ ರೂ ಗಳನ್ನೂ ದಾನವಾಗಿ ಕೊಟ್ಟಿರುವರೆಂದು ತಿಳಿದುಬಂದಿದೆ.

ಕಥಾ ಪ್ರವಚನ

ಬಂಡೀಕೇರಿ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ಕಾಲಭೈರವ ಶ್ರೀ ಗಣಪತಿಭಾಗವತರವರಿಂದ ತಮಿಳಿನಲ್ಲಿ ಶ್ರೀಮದ್ರಾಮಾಯಣ ಕಥಾಪ್ರವಚನವು ಇಂದಿನಿಂದ ಪ್ರತಿದಿನವೂ ರಾತ್ರಿ ೮ ಘಂಟೆಗೆ ಒಂದು ತಿಂಗಳು ಕಾಲ ನಡೆಯುತ್ತದೆ.

ಸಚಿವರ ಭೇಟಿ

... ಶ್ರೀ ... ಯವರು ನಿನ್ನೆ ಮೈಸೂರ ... ಸಚಿವರ ಭೇಟಿಯಿತ್ತು ... ಅವರ ... ಗಳನ್ನು ಒದಗಿಸಿಕೊಡುವುದಾಗಿ ಭರವಸೆ ಇತ್ತರು.

ಸಾಧ್ವಿ

ತಾ॥ ೧೩-೨-೪೭ ಗುರುವಾರ

ಲೀಗಿನ ಅಪಚಾರ ನೀತಿ

ದನದ ಕೊಟ್ಟಿಗೆಯಲ್ಲಿ ನಾಯಿಯೊಂದು ಸೇರಿಕೊಂಡು ದನಗಳು ಹುಲ್ಲು ಮೇಯುವುದಕ್ಕೆ ಅಡ್ಡಿಪಡಿಸುತ್ತಿತ್ತೆಂಬುದು ಇಂಗ್ಲಿಷಿನ ಒಂದು ನಾಣ್ನುಡಿ. ನಾಯಿ ಹುಲ್ಲನ್ನು ತಿನ್ನುವುದಿಲ್ಲ; ದನಗಳು ಮೇಯಲೂ ಬಿಡುವುದಿಲ್ಲ. ದನಗಳು ಬಂದರೆ ಬೊಗಳಿ ಅವುಗಳನ್ನು ದೂರಕ್ಕೆ ಓಡಿಸಿಬಿಡುತ್ತಿತ್ತು. ಇಂದು ಕೇಂದ್ರ ತಾತ್ಕಾಲಿಕ ಸರ್ಕಾರದಲ್ಲಿ ಮುಸ್ಲಿಂ ಲೀಗಿನ ಮಂತ್ರಿಗಳ ವರ್ತನೆಯು ಇದೇ ರೀತಿ ಇರುತ್ತದೆ.

ರಾಷ್ಟ್ರದ ಹಿತಕ್ಕಾಗಿ ಹಲವಾರು ವರ್ಷಗಳಿಂದ ಸಿದ್ಧಗೊಳಿಸಿದ್ದ ಯೋಜನೆಗಳನ್ನೆಲ್ಲಾ ಅದು ಮೂಲೆಗೆ ತಳ್ಳುತ್ತಿದೆ. ಅಷ್ಟೇ ಅಲ್ಲದೆ ಇತರ ಮಂತ್ರಿಗಳೊಡನೆ ಸಹಕರಿಸಿ ವರ್ತಿಸಲು ನಿರಾಕರಿಸುತ್ತಿದೆ. ಕೇಂದ್ರ ಸರ್ಕಾರದ ಜಂಟಿ ಜವಾಬ್ದಾರಿ ತತ್ವವನ್ನು ಮೊದಲಿನಿಂದಲೂ ಅಂಗೀಕರಿಸಿರುವುದಿಲ್ಲ. ಹೀಗಾಗಿ ಕೇಂದ್ರ ಸರ್ಕಾರದ ಆಡಳಿತವು ಅವ್ಯವಸ್ಥೆಗೆ ಇಟ್ಟುಕೊಂಡಿರುತ್ತದೆ.

ಕಾಂಗ್ರೆಸ್ಸಿನವರು ಬ್ರಿಟಿಷ್ ನಿಯೋಗದ ಘೋಷಣೆಯನ್ನೂ ಅದರ ವಿವರಣೆಯನ್ನೂ ಸಂಪೂರ್ಣವಾಗಿ ಅಂಗೀಕರಿಸಿಲ್ಲವೆಂದು ಲೀಗಿನವರು ಹೇಳುತ್ತಿದ್ದಾರೆ. ಲೀಗಿನವರು ಅದನ್ನು ಅಂಗೀಕರಿಸಿಲ್ಲದಿರುವುದು ರಾಜ್ಯಾಂಗ ಸಭೆಯೊಡನೆ ಅವರು ಮಾಡುತ್ತಿರುವ ಅಸಹಕಾರದಿಂದಲೇ ವೇದ್ಯವಾಗಿರುತ್ತದೆ. ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸುವುದು ಕೇಂದ್ರ ಸರ್ಕಾರದಲ್ಲಿ ಪ್ರವೇಶಿಸಲು ಒಂದು ಮುಖ್ಯ ಷರತ್ತೆಂಬುದಾಗಿ ಕಾಂಗ್ರೆಸ್ಸಿನವರು ಮೊದಲೇ ವೈಸರಾಯರಿಗೆ ಸ್ಪಷ್ಟವಾಗಿ ತಿಳಿಯಪಡಿಸಿದ್ದರು. ಆದರೆ ಆಗ ಲೀಗಿನವರು ರಾಜ್ಯಾಂಗ ಸಭೆಗೆ ಬರುವರೆಂಬ ಭರವಸೆಯನ್ನು ವೈಸರಾಯರು ನೀಡಿದ್ದರು. ಆದರೆ ಈಗ ಲೀಗಿನವರು ತಮ್ಮ ದಾರಿಯನ್ನೇ ಹಿಡಿದಿದ್ದಾರೆ. ತಮ್ಮ ಸ್ವಂತ ಹಕ್ಕಿನ ಮೇಲೆ ಮಂತ್ರಿಮಂಡಲದಲ್ಲಿ ಇರುವುದಾಗಿಯೂ ರಾಜೀನಾಮೆ ಕೊಡುವುದಿಲ್ಲವೆಂದೂ ಹೇಳುತ್ತಿದ್ದಾರೆ. ಪುನಃ ಮತ್ತೊಂದು ಬಿಕ್ಕಟ್ಟು ಪ್ರಾಪ್ತವಾಗಿ ಬ್ರಿಟಿಷ್ ನಿಯೋಗದವರೇ ಇದನ್ನು ಬಗೆ ಹರಿಸಬೇಕಾದ ಪರಿಸ್ಥಿತಿಯು ಒದಗಬಹುದೆಂಬ ನಿರೀಕ್ಷಣೆ ಇದೆ.

ಕೇಂದ್ರ ಸರ್ಕಾರವು ರಚನೆಯಾದಾಗ ಜನರ ಆಶಾ ಭಾವನೆಗಳು ಮೂಡಿದವು. ಪ್ರೋತ್ಸಾಹವುಗಳೆಲ್ಲವೂ ಮಣ್ಣು ಪಾಲಾಗುತ್ತಿವೆ. ಎಲ್ಲ ಕೆಲಸಗಳಿಗೂ ಮುಸ್ಲಿಂ ಲೀಗ್ ಅಡ್ಡಿಯ ನೀತಿಯನ್ನು ಲೀಗು ಅನುಸರಿಸುತ್ತಿದೆ. ಇದು ದೇಶಕ್ಕೆ ಸ್ವಲ್ಪವೂ ಹಿತಕರವಲ್ಲ. ಮೂರನೆಯವರ ಪಕ್ಷವು ಬೆಳೆಯಲು ಮಾತ್ರ ಇದು ಸಹಾಯವಾಗಿದೆ. ಇ-

ಇಂಡೋ ಚೀನಾದಲ್ಲಿ ಫ್ರೆಂಚರ ಮುನ್ನಡೆ

ವಿಯಟ್‌ನಾಂ ಪ್ರಜಾ ರಾಜ್ಯದ ರಾಜಧಾನಿಯಾದ ಹ್ಯೂ ಎಂಬ ಪಟ್ಟಣವನ್ನು ಇಂಡೋ ಚೀನಾದಲ್ಲಿರುವ ಫ್ರೆಂಚ್ ಸೈನ್ಯಗಳು ಹಿಡಿದಿರುವುದಾಗಿ ಸುದ್ದಿ ಬಂದಿದೆ. ಮಿಲಿಟರಿ ಪರಿಸ್ಥಿತಿ ಉತ್ತಮಗೊಂಡಿರುವುದಾಗಿ ಫ್ರೆಂಚ್ ಸರ್ಕಾರದ ಪ್ರಕಟಣೆ ಹೊರಟಿದೆ.

ಬೆಲ್ಲದ ಹಂಚಿಕೆ

ಸ್ವಂ ಸು.] ಚಾಮರಾಜನಗರ ೧೧

ಈ ಊರಿನಲ್ಲಿ ಬೆಲ್ಲದ ಅಭಾವ ಮತ್ತೆ ತಲೆದೋರಿದೆ. ದಾಸ್ತಾನು ಮಾಡಿರುವ ಬೆಲ್ಲವನ್ನು ಸರ್ಕಾರಿ ಮತ್ತು ವರ್ತಕರ ಡಿಪೋಗಳಲ್ಲಿ ರೇಷನ್ ಕಾರ್ಡುದಾರರಿಗೆ ಬಿಕರಿ ಮಾಡಿಸಲು ಅಧಿಕಾರಿಗಳು ಏರ್ಪಾಡು ಮಾಡಬೇಕಾಗಿದೆ.

ಈ ವಿಘಾತಕರವಾದ ನೀತಿಯನ್ನು ಎಲ್ಲರೂ ಖಂಡಿಸುವರು. ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾಗಿ ಹಂಗಾಮಿ ಸರ್ಕಾರವು ನಡೆಯಲು ಅವಕಾಶ ಕಲ್ಪಿಸುವುದಾಗಿ ಬ್ರಿಟನರು ಇತ್ತ ಭರವಸೆಯ ಸತ್ವ ಪರೀಕ್ಷೆಯು ಈಗ ನಡೆಯಲಿದೆ. ಇದರಲ್ಲಿ ಅವರು ಗೌರವದಿಂದ ಉತ್ತೀರ್ಣರಾಗಲೆಂದು ಹಾರೈಸಬೇಕಾಗಿದೆ.

ಹಿಂದೀ ಪರೀಕ್ಷೆಗಳು

ಇದೇ ಫೆಬ್ರವರಿ ಮಾಹೆ ೧೫ ಮತ್ತು ೧೬ ನೇ ತಾ॥ಗಳಲ್ಲಿ ಹಿಂದೀ ಪರೀಕ್ಷೆಗಳು ಡಿ. ಬನುಮಯ್ಯನವರ ಸ್ಕೂಲಿನಲ್ಲಿ ಬೆಳಗ್ಗೆ ೧೧-೩೦ ಘಂಟೆಗೆ ಪ್ರಾರಂಭವಾಗುತ್ತವೆ.

ಮೈಸೂರು ಸಿಟಿ ಮುನಿಸಿಪಲ್ ಆಫೀಸ್ ತಾ॥ 11-2-1947

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿ ಪುರನಿವಾಸಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಎಲೆಕ್ಟ್ರಿಕ್ ಇಲಾಖೆಯವರು ಬೆಳಗೊಳ ಮತ್ತು ಫಿಲ್ಟರ್ಸ್‌ಗಳಲ್ಲಿರುವ ಏಳು ಎಲೆಕ್ಟ್ರಿಕ್ ಮೋಟಾರುಗಳನ್ನು ತಾ॥ 10-2-47 ರ ಬಾಗಾಯ್ತು ಹದಿನೈದು ದಿವಸಗಳ ಕಾಲದಲ್ಲಿ ಓವರ್‌ಹಾಲ್ ಮಾಡುತ್ತಾರಾದ್ದರಿಂದ ಸದರಿ ಕಾಲದಲ್ಲಿ ನೀರು ಸರಬರಾಜು ಕಮ್ಮಿಯಾಗುತ್ತೆ. ನೀರು ಸಪ್ಲೈ ಆಗತಕ್ಕ ಕಾಲದಲ್ಲಿ ಎಲ್ಲರೂ ಸಾಕಾದಷ್ಟು ನೀರನ್ನು ಶೇಖರಿಸಿಕೊಳ್ಳತಕ್ಕದ್ದು.

ರಿಪೇರಿ ಮುಗಿದ ನಂತರ ಮಾಮೂಲಿ ಪ್ರಕಾರ ನೀರು ಸರಬರಾಜು ಮಾಡಲಾಗುತ್ತೆ.

(ಸಹಿ)
ಆರ್. ರಾಮಚಂದ್ರರಾವ್ ಬೊಂಬೋರಿ
ಪ್ರೆಸಿಡೆಂಟ್

ತ್ರಿಕಾಲ ಫಲಾಫಲ ನಿಮ್ಮ ಜಾತಕ ತಿಳಿದು ಕಾರ್ಯಸಿದ್ಧಿ, ಜಯ ಪಡೆಯಿರಿ. ನವೀನ ಜ್ಯೋತಿಷ್ಯ! ರೂ 3-80 ಮ. ಮಾಡಿ; ಹುಟ್ಟು ವಿವರ ಸಹಿತ ನೀವು ಕಾರಣ ೨ ಪ್ರಶ್ನೆಗಳಿಗೆ ಉತ್ತರ; 0-3-6 ಆಣೆ ಸ್ಟಾಂಪಟ್ಟು ಶ್ರೀ ಸುಧಾರಕ ಜೋಸಿ, ಹಳೆಯೂರು, (ಎಡತೊರೆ ತಾಲ್ಲೂಕು)

ಸೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಸುವುದೇನೆಂದರೆ.-

ಮೈಸೂರು ಸಿಟಿ ವಾಣೀ ವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ... ದಿಕ್ಕಿನಲ್ಲಿರುವ ಕಾಟೇಜ್ ಮತ್ತು ... ಸೈಟುಗಳನ್ನು ತಾ॥ ೧೨-೧-೪೭ ... ಕರ್ಾಂ ಹರಾಜು ಇಸ್ತಿಹಾರ್ ... ಷರತ್ತುಗಳಿಗೆ ಒಳಪಡಿಸಿ ತಾ॥ ೧೭-... ನೇ ಭಾನುವಾರ ಬೆಳಗ್ಗೆ ೯-೩೦ ... ಸೈಟುಗಳ ಬಳಿ ಬಹಿರಂಗವಾಗಿ ... ಮಾಡಲಾಗುತ್ತೆ. ಇತರ ವಿವರ ... ಆಫೀಸಿನಲ್ಲಿ ರಜಾ ದಿನಗಳಲ್ಲದ ... ಸಗಳಲ್ಲಿ ೧೧ ಘಂಟೆಯಿಂದ ೫ ... ಒಳಗೆ ತಿಳಿಯಬಹುದು.

(ಸಹಿ) ಕೆ. ವೆಂಕಟೇಶ ...
ಛೇರ್ಮನ್ನರಿಗಾಗಿ
ನಗರಾಭಿವೃದ್ಧಿ ಸಮಿತಿ, ಮೈ...

ರಾಜ್ ಕಮಲ್ ನಲ್ಲಿ

14-2-47 ರಿಂ...
ಅನೋಖಾ ಪ್ರಾರಂಭ
ಪ್ರತಿದಿನ ಮೂರು ಆಟಗಳು
೧೪-೨-೪೭ ನೇ ಶುಕ್ರವಾರ ಎರಡು
ಪ್ರದರ್ಶನಗಳು ಮಾತ್ರ
ಮಹಾತ್ಮರವರ

ಕೃಷ್ಣಲೀಲ

(ಕನ್ನಡ...)
(ಜಿ. ಆರ್. ರಾಮಯ್ಯ ಮತ್ತು ಅಯ್ಯನಾರ್ರವರ ಕಾಣಿಕೆ)
-: ಭೂಮಿಕೆ :-
ಕೆಂಪರಾಜ್, ಬಳ್ಳಾರಿ ಲ...
ರತ್ನಮಾಲಾ, ಕಾಂತಾ...
ರಾಘವೇಂದ್ರ ರಾವ್,
ಮುಂತಾದವರು.

ದ ಸ್ವರಾಜನು ಸ್ವಾರ್ಥಾಭಿಲಾಷೆಯಿ... ತನ್ನ ಒಡಹುಟ್ಟಿದ ತಂಗಿಯ ಗಂಡ... ಬಂಧನದಲ್ಲಿರಿಸಿ, ಅವಳ ಹೊಟ್ಟೆಯ... ಹುಟ್ಟಿದ ಮಕ್ಕಳನ್ನು ಕೊಲೆ ಮಾಡಿ... ಕಥೆಯನ್ನು ತೋರಿಸುವ ಪೌರಾಣಿಕ... ಕನ್ನಡಿಗರ ಹೆಮ್ಮೆಯ ಕಾಣಿಕೆ.

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ !

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ !!

ಬಿ. ಕೆಂಚಪ್ಪ ಸನ್ಸ್

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು

Rajkamal,
MYSORE

Morning Shows from 14-2-47 at 10 a. m

The
DIVORCE of LADY X

ಪ್ರಯತ್ನಿಸಿ

1) 984, ಗೀತಾ ರೋಡ್,
2) 1405, ಕೃಷ್ಣಮೂರ್ತಿ...
ಆರ್. ಗುಂಡೂರಾವ್, ಹಳೇ ...
ಬ್ಯಾಂಕ್ ಹತ್ತಿರ, ಮೈಸೂ...

Edited, printed and publ... A. S. Nagarajan at the Sadh... D-Subbiah Road, Mysore.

ರೋ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೧೪—೨—೪೭ [ಸಂಚಿಕೆ ೧೬೧

ಪ್ರಭುಗಳಿಗೆ ಕರ್ಣಾಟಕ ಕಾಂಗ್ರೆಸ್ ಸಮಿತಿ ಪತ್ರ

...ಾಸ್ ಮಂತ್ರಿಮಂಡಲದ ಮೇಲೆ ಅವಿಶ್ವಾಸ

...ಟಿ. ಪ್ರಕಾಶಂರವರ ಮದ್ರಾಸ್ ...ಮಂಡಲದ ಮೇಲೆ ಅವಿಶ್ವಾಸ ಸೂ... ನಿರ್ಣಯವನ್ನು ಶಾಸನ ಸಭೆಯ ...ಮಂದಿ ಸದಸ್ಯರು ಸೂಚಿಸುವ ಸಲು ...ಕಾಂಗ್ರೆಸ್ ಪಕ್ಷದ ಸಭೆಯೊಂದನ್ನು ...ಕರೆಯುವಂತೆ ಪ್ರಾರ್ಥಿಸಿದ್ದಾರೆ. ...ಪತ್ರವನ್ನು ಕಾಂಗ್ರೆಸ್ ಅಧ್ಯಕ್ಷರಿಗೂ, ...ಲರಿಗೂ ತಂತೀ ಮೂಲಕ ತಿಳಿ...ಸಿದ್ದಾರೆ. ಇದೇ ೧೬ನೇ ತಾ॥ ದೆಹ...ಲ್ಲಿ ನಡೆಯುವ ಆಹಾರ ಸಮ್ಮೇಳನದ ...ಭಾಗವಹಿಸಲು ಶ್ರೀ ಪ್ರಕಾಶಂರವರು ...ಗೆ ತೆರಳಲಿರುವುದರಿಂದ ಅವರು ಮ...ಗೆ ಹಿಂತಿರುಗಿದ ಮೇಲೆ ಪಕ್ಷದ ಸಭೆ ...ಯುವುದೆಂದು ಹೇಳಲಾಗಿದೆ. ಈ ...ಸದ ನಿರ್ಣಯಕ್ಕೆ ಶ್ರೀಗಳಾದ ಕಾಮ...ನಾದರ್, ಡಾ॥ ರಾಜನ್, ಗೋಪಾಲ..., ಶಾಸ್ತ್ರೀಶ್ವರರಾವ್, ಮಾಧವಮೆನನ್ ...ತಾದ ಪ್ರಮುಖರು ರುಜುಮಾ...ರೆ

...ರತದ ಸಮಸ್ಯೆ ಬಗ್ಗೆ ಸದ್ಯಕ್ಕೆ ಗಮನವಿಲ್ಲ?

...ಬ್ರಿಟನ್ನಿನಲ್ಲಿ ಕಲ್ಲಿದ್ದಲಿನ ಅಭಾವದಿಂ...ದಾಗಿ, ವಿದ್ಯುಚ್ಛಕ್ತಿಯ ಸರಬರಾಜು ...ಕ ಕಡೆ ನಿಂತುಹೋಗಿ ಭಾರಿ ಬಿಕ್ಕಟ್ಟು ...ಉಂಟಾಗಿದೆಯಷ್ಟೆ ಇದರ ಸಲುವಾಗಿ ಮಿ॥ ...ಲೀಯವರ ಸರ್ಕಾರವೇ ಅಳ್ಳಾಡುವ ಸ್ಥಿತಿ ...ಉಂಟಾಗಿದೆಯೆಂದೂ, ಆದ್ದರಿಂದ ಈ ಬಿಕ್ಕಟ್ಟು ಪರಿಹಾರವಾಗುವವರೆಗೆ ಭಾರತದ ... ಬ್ರಿಟಿಷ್ ಸರ್ಕಾರವು ಯಾವ ಗಮನ...ವನ್ನು ಕೊಡುವುದು ಅಸಂಭವವೆಂದು ಲಂ...ಡನ್ನಿನಲ್ಲಿ ಹೇಳಲಾಗುತ್ತಿದೆ. ಮಿ॥ ಅಸಫ್ ...ಲಿಯವರು ಈದಿನ ಲಾರ್ಡ್ ಪೆಥಿಕ್ ಲಾ...ರೆನ್ಸರನ್ನು ಕಂಡು ಮಾತುಕತೆ ನಡೆಸಿದರು.

ಮದ್ರಾಸ್ ಗಿರಣಿ ಮುಷ್ಕರ

...ತಮಿಳು ನಾಡಿನ ೩೨ ಬಟ್ಟೆ ಗಿರಣಿಗಳ ...೦ ಸಾವಿರ ಕೆಲಸಗಾರರು ತಮಗೆ ೬ ತಿಂ...ಳ ಸಂಬಳವನ್ನು ಬೋನಸ್ಸಾಗಿ ಕೊಡ...ಬೇಕೆಂದು ಕೇಳಿಕೊಂಡ ವಿಚಾರದಲ್ಲಿ ಮಾ...ಲೀಕರೊಡನೆ ಒಪ್ಪಂದಕ್ಕೆ ಬರಲು ಸಾಧ್ಯವಿ...ಲ್ಲದುದರಿಂದ ಮೊನ್ನೆಯಿಂದ ಮುಷ್ಕರವ...ನ್ನು ಆರಂಭಿಸಿದ್ದಾರೆ.

ಶ್ರೀ॥ ನಾರಾಯಣರಾಯರ ರಾಜೀನಾಮೆ

ಸ್ವಂ ಸು.] ಚಾಮರಾಜನಗರ ೧೩

ಇಲ್ಲಿನ ಪುರಸಭೆಯ ಪ್ರಥಮ ಚುನಾ...ಯಿತ ಅಧ್ಯಕ್ಷರಾದ ಶ್ರೀ॥ ಸಿ ಪಿ. ...ನಾರಾಯಣ ರಾಯರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿದ್ದಾರೆಂದು ವರದಿಯಾಗಿದೆ. ಹಲವು ಭಿನ್ನಾಭಿಪ್ರಾಯಗಳ ಸಲುವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಮೇಲೆ ಅವಿಶ್ವಾಸ ಠರಾವನ್ನು ೧೦ ಮಂದಿ ಸದಸ್ಯರು ಕಳುಹಿಸಿದ್ದಾರೆ.

ಪುರಸಭಾ ಚುನಾವಣೆ

ಸ್ವಂ.ಸು.] ನಂಜನಗೂಡು ೧೬

ಇಲ್ಲಿನ ಪುರಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಸ್ಪರ್ಧಿಸಲು ಇದುವರೆಗೆ ೧೭ ಅರ್ಜಿಗಳು ಬಂದಿವೆ. ಈ ಪೈಕಿ ಒಬ್ಬರು ಮುಸ್ಲಿಮರು. ಹರಿಜನರಿಗೆ ಒಂದು ಸ್ಥಾನವನ್ನು ಮೀಸಲಾಗಿಡಲು ಕಾಂಗ್ರೆಸ್ಸಿನವರು ನಿರ್ಧರಿಸಿದ್ದಾರೆ. ಅರ್ಜಿ ಸ್ವೀಕರಿಸುವ ಕಡೇ ತಾರೀಖನ್ನು ೨೩ರ ವರೆಗೆ ಹೆಚ್ಚಿಸಲಾಗಿದೆ.

ಪುರಸಭೆಗೆ ಚುನಾಯಿತ ಅಧ್ಯಕ್ಷರು ಬೇಕು

ಮಹಾಪ್ರಭುಗಳಲ್ಲಿ ಮನವಿ ಸಲ್ಲಿಸಲು ಸಮಿತಿ ರಚನೆ

ಮೈಸೂರು ೧೪

ಪುರಸಭೆಯ ವಿಶೇಷ ಅಧಿವೇಶನವು ನಿನ್ನೆ ಶ್ರೀ ರಾಮಚಂದ್ರರಾವ್ ಬೊಂಭೋರೆಯವರ ಅಧ್ಯಕ್ಷತೆಯಲ್ಲಿ ನಡೆದಿದ್ದಿತು.

೨೯-೫-೩೭ ರಿಂದ ೨೩-೧೨-೪೬ ರ ವರೆಗೆ ೧೧ ಬಾರಿ ಈ ಪುರಸಭೆಗೆ ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವ ಹಕ್ಕನ್ನು ಕೊಡುವಂತೆ ಸರ್ಕಾರದವರನ್ನು ಪ್ರಾರ್ಥಿಸಿದಾಗ್ಯೂ ಅದು ಸಫಲವಾಗಲಿಲ್ಲವಾದುದರಿಂದ ಒಂದು ಮನವಿಯನ್ನು ತಯಾರಿಸಲೂ ಮತ್ತು ಅದನ್ನು ಶ್ರೀಮನ್ಮಹಾರಾಜರವರಿಗೆ ಒಪ್ಪಿಸಲು ಸೂಕ್ತ ಏರ್ಪಾಡುಗಳನ್ನು ಮಾಡಲೂ ಶ್ರೀಗಳಾದ ಉಪಾಧ್ಯಕ್ಷರ, ಪಿ ಸೀತಾರಾಮಯ್ಯ, ಟಿ ಮರಿಯಪ್ಪ, ಬಿ ನಾರಾಯಣಸ್ವಾಮಿ, ಅಗರಂ ರಂಗಯ್ಯ ಮತ್ತು ಟಿ ಗೋಪಾಲಕೃಷ್ಣಶೆಟ್ಟಿಯವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಬೇಕೆಂಬ ನಿರ್ಣಯವನ್ನು ಶ್ರೀ ಟಿ ಸೀತಾರಾಮಯ್ಯನವರು ಸಭೆಯಲ್ಲಿ ಮಂಡಿಸಿದರು. ಶ್ರೀ ಟಿ ವೆಂಕಟರಮಣಯ್ಯನವರು ಸಮರ್ಥಿಸಿದರು.

ಶ್ರೀ ಎ ವೆಂಕಟೇಶಯ್ಯನವರು ಅಧ್ಯಕ್ಷರನ್ನು ಚುನಾಯಿಸಿಕೊಳ್ಳುವುದು ಪುರಸಭೆಯ ಹಕ್ಕೆಂದು ತಿಳಿಸಿದರು. ಶ್ರೀ ಎಸ್. ಸಿ. ದೇವರಾಜೇ ಅರಸಿನವರು ವಿರೋಧಿಸಿ ಮಾತನಾಡಿದರು. ನಿರ್ಣಯವು ೧೮-೧ ಓಟುಗಳಿಂದ ಅಂಗೀಕಾರವಾಯಿತು.

ಪಾಠಶಾಲೆ ಮುಚ್ಚಿದರು

ಚಾಮರಾಜನಗರ ೧೪

ಪ್ಲೇಗು ಉಪದ್ರವವೆಂಬ ಸಬೂಬಿನಿಂದ ಇಲ್ಲಿನ ಸಂಸ್ಕೃತ ಪಾಠಶಾಲೆಯನ್ನು ಮುಚ್ಚಿದ್ದಾರೆ. ಆದರೆ ಇತರ ಸ್ಕೂಲುಗಳೆಲ್ಲಾ ಮಾಮೂಲಿನಂತೆ ನಡೆಯುತ್ತಿವೆ.

ಮೈಸೂರಿನ ಬಗ್ಗೆ ಪಟೇಲರು

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ॥ ಶಂಕರಲಿಂಗೇ ಗೌಡರು ಮಹಾರಾಜರ ಸಂದೇಶದ ವಿಚಾರವಾಗಿ ಬರೆದಿದ್ದ ಪತ್ರಕ್ಕೆ ಸ॥ ಪಟೇಲರು ಉತ್ತರವಿತ್ತು ಮೈಸೂರು ಸರ್ಕಾರದವರು ಜವಾಬ್ದಾರಿ ಸರ್ಕಾರವನ್ನು ಜಾರಿಗೆ ತರುವ ವಿಚಾರದಲ್ಲಿ ನಿಧಾನ ಮಾಡಿದರೆ ಸಂಸ್ಥಾನವು ಇಪ್ಪರಲ್ಲೇ ಭಾರಿ ತೊಂದರೆಯಲ್ಲಿ ಸಿಕ್ಕಿಬೀಳುವುದೆಂದು ತಿಳಿಸಿದ್ದಾರೆಂದು ವರದಿಯಾಗಿದೆ

ಪುರಸಭಾ ಉಪಾಧ್ಯಕ್ಷತೆ ಬಗ್ಗೆ ಸರ್ಕಾರದ ಉದಾಸೀನ

ಮೈಸೂರು ಪುರಸಭೆಯ ಉಪಾಧ್ಯಕ್ಷ ಚುನಾವಣೆಯ ವಿಚಾರದಲ್ಲಿ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ॥ ಎಸ್. ಚನ್ನಯ್ಯನವರು ಈ ರೀತಿ ಹೇಳಿಕೆ ಇತ್ತಿರುವರು:-

ಮೈಸೂರು ನಗರದ ಪುರಸಭಾ ಉಪಾಧ್ಯಕ್ಷರ ಚುನಾವಣೆ ನಡೆದು ಮೂರು ವಾರಗಳ ಮೇಲಾಯಿತು. ಆದರೂ ಸರ್ಕಾರದವರು ಅದನ್ನು ಮಂಜೂರು ಮಾಡದೆ ಸದರಿ ಸ್ಥಾನವನ್ನು ಖಾಲಿ ಇರುವಂತೆ ಮಾಡುದುವುದು ತೀರ ವಿಷಾದಕರ. ಇದು ಸರ್ಕಾರದ ಉದಾಸೀನ ಭಾವನೆಯನ್ನು ಎತ್ತಿ ತೋರಿಸುತ್ತದೆ. ಚುನಾಯಿತ ಸದಸ್ಯರ ಹಿತವನ್ನು ಎಷ್ಟರ ಮಟ್ಟಿಗೆ ಈ ಸರ್ಕಾರವು ಪಾಲಿಸುತ್ತಿದೆಯೆಂಬುದು ಇದರಿಂದಲೇ ವೇದ್ಯವಾಗುವುದು. ಸರ್ಕಾರದ ಅನುಮತಿಗಾಗಿ ಕಾಯದೆ ಇನ್ನು ಮುಂದೆ ಮಿಕ್ಕ ಕಡೆಯಲ್ಲಿರುವಂತೆ ಚುನಾವಣೆ ಆದಕೂಡಲೇ ಅಧಿಕಾರ ವಹಿಸಿಕೊಳ್ಳುವ ರೀತಿಯಲ್ಲಿ ನಿಯಮಾವಳಿಯಲ್ಲಿ ಬದಲಾವಣೆಯಾಗಬೇಕು. ಜವಾಬ್ದಾರಿ ಸರ್ಕಾರವಿಲ್ಲದಿರುವುದೇ ಇವಕ್ಕೆಲ್ಲಾ ಕಾರಣ. ಆದುದರಿಂದ ಶ್ರೀಮನ್ಮಹಾರಾಜರವರು ದೇಶದ ಆಡಳಿತವನ್ನು ಚುನಾಯಿತ ಪ್ರಜೆಗಳಿಗೆ ವಹಿಸಿ ಈ ಮೂಲಕ ಜವಾಬ್ದಾರಿ ಸರ್ಕಾರವನ್ನು ಏರ್ಪಡಿಸಬೇಕಾಗಿ ಪ್ರಾರ್ಥಿಸುತ್ತೇನೆ

ಇಂಡೋನೇಷಿಯಾದಲ್ಲಿ ಕದನ ನಿಲ್ಲಿಸಲು ಆಜ್ಞೆ

ಇಂಡೋನೇಷಿಯಾದ ಎಲ್ಲೆಡೆಯಲ್ಲೂ ಕದನ ನಿಲ್ಲಿಸಲು ರಿಪಬ್ಲಿಕ್ಕಿನ ಪ್ರಧಾನಿ ಡಾ॥ ಷೇರಿಯರ್ ರವರು ಪ್ರಕಟಿಸಿದ್ದಾರೆ. ಇದೇ ೨೫ ನೇ ತಾ॥ ಮೌಲಾಂಗಿನಲ್ಲಿ ಇಂಡೋನೇಷಿಯಾ ಪಾರ್ಲಿಮೆಂಟ್ ಸೇರಿ ಹಾಲೆಂಡಿನೊಡನೆ ಆಗಲಿರುವ ಒಪ್ಪಂದದ ಬಗ್ಗೆ ತನ್ನ ನೀತಿಯನ್ನು ನಿರ್ಧರಿಸಲಿದೆ

ನ್ಯೂಸ್ ಪ್ರಿಂಟ್ ಹತೋಟಿ ವಜಾ

ಏಪ್ರಿಲ್ ೧ ನೇ ತಾ॥ ನಿಂದ ಪತ್ರಿಕೆಗಳ ಮುದ್ರಣ ಕಾಗದದ ಹತೋಟಿಯನ್ನು ವಜಾ ಮಾಡಲು ಕೇಂದ್ರ ಸರ್ಕಾರವು ನಿರ್ಧರಿಸಿರುವುದಾಗಿ ವರದಿಯಾಗಿದೆ. ಅಲ್ಲದೆ ಪತ್ರಿಕೆಗಳನ್ನು ಹೊರಡಿಸಲು ರಹದಾರಿ ಪಡೆಯಬೇಕಾದ ನಿರ್ಬಂಧವನ್ನು ಸಹ ರದ್ದು ಮಾಡಲಾಗುವುದೆಂದು ತಿಳಿದು ಬಂದಿದೆ

ಬರೋಡ ದಿವಾನರೂ ಉಮೇದುವಾರರು

ಬರೋಡ ಸಂಸ್ಥಾನದಿಂದ ೩ ಜನರನ್ನು ಭಾರತ ರಾಜ್ಯಾಂಗ ರಚನಾ ಸಭೆಗೆ ಚುನಾಯಿಸಿ ಕಳುಹಿಸಲಾಗುವುದು. ಶಾಸನ ಸಭೆಯಿಂದಲೇ ಈ ಆಯ್ಕೆ ನಡೆಯುವುದು. ಈ ಚುನಾವಣೆಯಲ್ಲಿ ಬರೋಡ ಸಂಸ್ಥಾನದ ದಿವಾನರಾದ ಶ್ರೀ॥ ಮಿತ್ತರ್ ರವರೂ ಉಮೇದುವಾರರಾಗಿ ನಿಲ್ಲುವರು

ವಾರ್ಷಿಕೋತ್ಸವ

ಮೈಸೂರು ೧೪

ರಾಜಧಾನಿಯ ಕನ್ಯಕಾ ಪರಮೇಶ್ವರೀ ಸಹಕಾರ ಸಂಘದ ವಾರ್ಷಿಕೋತ್ಸವವು ಇದೇ ೧೬ ನೇ ತಾ॥ ಭಾನುವಾರ ಸಂಜೆ ೬ ಘಂಟೆಗೆ ಶ್ರೀ ಕಾವೇರಿ ಪಟ್ಟಂ ಪುಟ್ಟರಾಯ ಶೆಟ್ಟರ ಛತ್ರದಲ್ಲಿ ಜರುಗುವುದು. ಶ್ರೀ॥ ಸಿ. ನರಸಿಂಹಯ್ಯನವರು ಅಧ್ಯಕ್ಷತೆ ವಹಿಸುವರು. ದಿ॥ ಕೆ ಗೋವಿಂದರಾಜ ಶೆಟ್ಟರ ಭಾವಚಿತ್ರ ಅನಾವರಣ ಸಮಾರಂಭವೂ ಈ ಸಂದರ್ಭದಲ್ಲಿ ನಡೆಯುವುದಾಗಿದೆ.

ವಿದ್ಯಾರ್ಥಿಗಳ ಪ್ರತಿಜ್ಞೆ

ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳು ಮುಷ್ಕರ ಹೂಡಿ ಇಂದಿಗೆ ಮೂರು ದಿನಗಳಾದುವು. ವಿದ್ಯಾರ್ಥಿ ವೇತನವನ್ನು ಕಿತ್ತುಹಾಕುವುದಾಗಿಯೂ, ಕಾಲೇಜಿಗೆ ಈ ದಿನದೊಳಗಾಗಿ ಬರದಿದ್ದರೆ ಪರೀಕ್ಷೆ ಕೂರಿಸುವುದಿಲ್ಲವೆಂದಾಗಿಯೂ ಅಧಿಕಾರಿಗಳು ಬೆದರಿಸಿರುವುದನ್ನು ಖಂಡಿಸಿ, ತಮ್ಮ ಕೋರಿಕೆಗಳು ಪೂರ್ಣವಾಗುವವರೆಗೆ ಮುಷ್ಕರವನ್ನು ಮುಂದುವರಿಸಿಕೊಂಡು ಹೋಗಲು ವಿದ್ಯಾರ್ಥಿಗಳೆಲ್ಲಾ ಈ ದಿನ ಪ್ರತಿಜ್ಞೆಯನ್ನು ಸ್ವೀಕರಿಸಿದರು

ಮೊಹಲ್ಲಾ ಪರಿಶೀಲನೆ

ಪುರಸಭೆಯ ಕಾಂಗ್ರೆಸ್ ಪಕ್ಷದವರು ನಾಳೆ ಬೆಳಿಗ್ಗೆ ೮ ಗಂಟೆಯಿಂದ ೧೧ ಗಂಟೆವರೆವಿಗೆ ಅನ್ವರ್ ಮೊಹಲ್ಲಾದ ಅಶೋಕ ರಸ್ತೆ, ಹಳ್ಳದಕೇರಿ, ಕುಂಬಾರಕೇರಿ, ಕೆ॥ ಗೋಪಾಲಯ್ಯನ ಬೀದಿ, ಮುಂತಾದ ಪ್ರದೇಶಗಳಿಗೆ ಭೇಟಿ ಕೊಡುವರು. ಮೊಹಲ್ಲಾ ನಿವಾಸಿಗಳು ಸಹಕರಿಸಬೇಕಾಗಿ ಕೋರಲಾಗಿದೆ

LATE NEWS

ಜವಾಬ್ದಾರಿ ಸರ್ಕಾರ ಕರುಣಿಸುವಂತೆ ಪ್ರಾರ್ಥನೆ

ಕರ್ಣಾಟಕ ಪ್ರಾಂತ ಕಾಂಗ್ರೆಸ್ಸಿನಿಂದ ಮಹಾ ಪ್ರಭುಗಳಿಗೆ ಪತ್ರ

ಸ್ವಂ ಸು.ಫೋ॥] ಬೆಂಗಳೂರು ೧೪

ಮೈಸೂರು ಸಂಸ್ಥಾನದಲ್ಲಿ ಕೂಡಲೇ ಜವಾಬ್ದಾರಿ ಸರ್ಕಾರವನ್ನು ಕರುಣಿಸಬೇಕೆಂದು ಕರ್ಣಾಟಕ ಕಾಂಗ್ರೆಸ್ ಸಮಿತಿಯ ಕೌನ್ಸಿಲ್ಲು ನಿರ್ಣಯವನ್ನು ಮಾಡಿ ಮೈಸೂರು ಶ್ರೀಮನ್ಮಹಾರಾಜರವರಿಗೆ ಪತ್ರ ಬರೆದಿರುವುದಾಗಿ ತಿಳಿದು ಬಂದಿದೆ.

ಮುಖಂಡರುಗಳ ಬಗ್ಗೆ ಸಲಹೆ ಕೊಡಲು ವ್ಯಕ್ತಿಶಃವಾಗಿ ದಿವಾನರು ಎಷ್ಟೇ ಪ್ರಭಾವ ಶಾಲಿಗಳಾಗಿದ್ದರೂ, ಅವರನ್ನು ನೇಮಿಸಿರುವುದು ಸರಿಯಾಗಿಲ್ಲವೆಂದು ಸಮಿತಿಯ ಅಭಿಪ್ರಾಯ ಪಟ್ಟಿದೆ. ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಒಂದು ರಾಜ್ಯಾಂಗ ನಿಬಂಧನೆಯನ್ನು ನಿರ್ಮಾಣ ಮಾಡಬೇಕೆಂದೂ, ಪ್ರಜಾಪ್ರತಿನಿಧಿಗಳನ್ನೊಳಗೊಂಡ ಸರ್ಕಾರವನ್ನು ರಚಿಸಬೇಕೆಂದೂ ಸೂಚಿಸಿದೆ. ಕರ್ಣಾಟಕದ ಏಕೀಕರಣಕ್ಕೆ ಇದು ಅಗತ್ಯವೆಂದು ನಮೂದಿಸಲಾಗಿದೆ.

ಸಾಧ್ವಿ

ತಾ॥ ೧೪-೨-೪೭ ಶುಕ್ರವಾರ

ಪುರ ಸಭಾಧ್ಯಕ್ಷತೆ

ರಾಜಧಾನಿಯ ಪೌರಸಭೆಗೆ ಚುನಾಯಿತ ಅಧ್ಯಕ್ಷರನ್ನು ಕೊಡುವ ಬಗ್ಗೆ ಪ್ರಭುಗಳಿಗೆ ಮನವಿಯೊಂದನ್ನು ಸಲ್ಲಿಸಲು ನಿನ್ನೆ ಪೌರಸಭೆಯು ಸಮಿತಿಯೊಂದನ್ನು ರಚಿಸಿತು. ಈ ವಿಷಯವು ಹತ್ತಾರು ವರ್ಷಗಳಿಂದಲೂ ಸರ್ಕಾರದವರ ಮೇಲೆ ಒತ್ತಾಯಪಡಿಸಲ್ಪಡುತ್ತಿತ್ತು. ಆದರೆ ಅವರು ಪೌರಸಭೆಗೆ ಈ ಅವಕಾಶವನ್ನು ಇನ್ನೂ ಕೊಟ್ಟಿರುವುದಿಲ್ಲ. ಆದುದರಿಂದ ಪ್ರಭುಗಳಲ್ಲೇ ಮನವಿಯನ್ನು ಸಲ್ಲಿಸಲು ಪೌರಸಭೆಯವರು ನಿರ್ಧರಿಸಿರುವುದು ಸಹಜವೂ, ಸಮಯೋಚಿತವೂ ಆಗಿರುತ್ತದೆ.

ಒಂದು ರೀತಿಯಲ್ಲಿ ನೋಡಿದರೆ ಪೌರಸಭೆಯ ಅಧ್ಯಕ್ಷತೆಯಂತಹ ಸಣ್ಣ ವಿಚಾರವು ಮಹಾಸ್ವಾಮಿಯವರ ವರೆಗೆ ಹೋಗಬೇಕಾಗಿರುವುದು ಅನುಚಿತ. ಆದರೆ ಸರ್ಕಾರದವರು ನಿಸ್ಕಾರಣವಾಗಿ ಈ ಅವಕಾಶವನ್ನು ನಿರಾಕರಿಸುತ್ತಾ ಬಂದಿರುವುದರಿಂದ ವಿಧಿ ಇಲ್ಲದೆ ಪೌರಸಭೆಯವರು ಈ ನಿರ್ಧಾರಕ್ಕೆ ಬಂದಿರುವರು. ಸಂಸ್ಥಾನದ ರಾಜಧಾನಿಯಾದ ಈ ನಗರಕ್ಕೆ ಚುನಾಯಿತ ಅಧ್ಯಕ್ಷರನ್ನು ಕೊಡಬಹುದೆಂದು ಎಲ್ಲ ಕಡೆಗಳಿಂದಲೂ ಪ್ರತಿಭಟನೆಗಳು ಬಂದಿರುತ್ತವೆ. ಸಂಸ್ಥಾನದಲ್ಲಿ ಕೇವಲ ಎರಡು ನಗರದ ದರ್ಜೆಯ ಪೌರಸಭೆಗಳು ಮಾತ್ರ ಇರುತ್ತವೆ. ಒಂದು ಬೆಂಗಳೂರಿನಲ್ಲಿ; ಮತ್ತೊಂದು ಮೈಸೂರಿನಲ್ಲಿ. ಈ ಊರಿಗಿಂತಲೂ ಅತ್ಯಂತ ದೊಡ್ಡದಾಗಿರುವ ಬೆಂಗಳೂರು ನಗರಕ್ಕೆ ಚುನಾಯಿತ ಅಧ್ಯಕ್ಷರನ್ನು ಕೊಟ್ಟು ಅನೇಕ ವರ್ಷಗಳಾದುವು. ಇಲ್ಲಿಗೆ ಕೊಡದಿರುವುದು ಎಲ್ಲರಿಗೂ ಅಸಮಾಧಾನ ಉಂಟುಮಾಡಿರುತ್ತದೆ.

ಮಹಾ ಪ್ರಭುಗಳ ನಿವಾಸ ಸ್ಥಾನವಾದ ಈ ನಗರಕ್ಕೆ ಚುನಾಯಿತ ಪೌರಸಭಾಧ್ಯಕ್ಷರಿಲ್ಲದಿರುವುದು ಒಂದು ಕಳಂಕವೇ ಸರಿ. ಆದುದರಿಂದ ಈ ಅಂಶವನ್ನು ಮಹಾಸ್ವಾಮಿಯವರಿಗೆ ಅರಿಕೆ ಮಾಡಲು ಈಗ ತೀರ್ಮಾನವಾಗಿರುತ್ತದೆ. ಈಗಲೂ ಸರ್ಕಾರದವರು ತಾವಾಗಿಯೇ ಕೂಡಲೇ ಪೌರಸಭೆಯ ಕೋರಿಕೆಯನ್ನು ಈಡೇರಿಸಿ ಅವರ ಮೆಚ್ಚಿಗೆಗೆ ಪಾತ್ರರಾಗುವುದು ಉಚಿತವಾಗಿದೆ. ಇಲ್ಲದಿದ್ದರೆ ಮಹಾ ಪ್ರಭುಗಳವರು ಬಹಳ ದಿನಗಳಿಂದ ಈಡೇರದೇ ಉಳಿದಿರುವ ಈ ಪ್ರಶ್ನೆಯನ್ನು ಈ ನಗರಕ್ಕೆ ಅನುಗ್ರಹಿಸಬೇಕೆಂದು ನಾವು ಪ್ರಾರ್ಥನಾಪೂರ್ವಕವಾಗಿ ಬೇಡುತ್ತೇವೆ.

೧೯೪೨ ರ ಆಗಸ್ಟ್ ವಿದ್ಯಾರ್ಥಿಗಳಿಗೆ ಸೌಲಭ್ಯ

೧೯೪೨ ರಿಂದ ೪೫ ರ ವರೆಗೆ ರಾಜಕೀಯದಲ್ಲಿ ಭಾಗ ವಹಿಸಿದ್ದಕ್ಕಾಗಿ ಶಾಲಾ ಕಾಲೇಜುಗಳಿಂದ ತೆಗೆದುಹಾಕಲ್ಪಟ್ಟಿರುವ ವಿದ್ಯಾರ್ಥಿಗಳು ಮತ್ತೆ ತಮ್ಮ ವ್ಯಾಸಂಗವನ್ನು ಮುಂದುವರಿಸಲು ಅಪೇಕ್ಷೆ ಪಟ್ಟರೆ ಅವರುಗಳನ್ನು ಶಾಲಾ ಕಾಲೇಜಿಗೆ ಸೇರಿಸಿಕೊಳ್ಳಬೇಕು. ವಿದ್ಯಾರ್ಥಿ ವೇತನ ಮುಂತಾದ ಸೌಲಭ್ಯಗಳನ್ನು ಎಂದಿನಂತೆ ಕೊಡಬೇಕು. ಇದೇ ರೀತಿ ವಜಾ ಮಾಡಲ್ಪಟ್ಟ ಉಪಾಧ್ಯಾಯರುಗಳಿಗೂ ಅವರವರ ಕೆಲಸವನ್ನು ಕೊಡಬೇಕು ಎಂಬುದಾಗಿ ಕೇಂದ್ರ ಸರ್ಕಾರದ ಆಜ್ಞೆಯಾಗಿದೆ.

ಜಾತಿ ಭೇದ ಹೋದರೆ ಹಿಂದೂ ಧರ್ಮದ ಉಳಿವು

ತಾವು ಯಾವ ಜಾತಿಯವರು ಎಂಬುದೇ ತಮಗೆ ಮರೆತು ಹೋಗಿದೆ ಎಂಬುದಾಗಿ ಮಹಾತ್ಮ ಗಾಂಧಿಯವರು ಕಥೀಲಪಾಲಿ ಎಂಬ ಗ್ರಾಮದಲ್ಲಿ ಪ್ರಾರ್ಥನಾ ಸಭೆಯಲ್ಲಿ ತಿಳಿಸಿದರು. ಜಾಡಮಾಲಿಯ ಕೆಲಸ ಮಾಡಲು ತಮಗೆ ಸಂತೋಷವಾಗುತ್ತದೆಂದು ಅವರು ಹೇಳಿದರು. ಹಿಂದೂ ಧರ್ಮವು ಉಳಿಯಬೇಕಾದರೆ ಅದರಲ್ಲಿ ಜಾತಿ ಭೇದ ಹೋಗಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಗೋವಾಕ್ಕೆ ಹೊಸ ರಾಜ್ಯಾಂಗ

ಗೋವಾಕ್ಕೆ ಹೊಸ ರಾಜ್ಯಾಂಗವನ್ನು ಸಿದ್ಧಗೊಳಿಸಲು ೫ ಮಂದಿಯನ್ನೊಳಗೊಂಡ ಸುಧಾರಣಾ ಸಮಿತಿಯೊಂದನ್ನು ಪೋರ್ಚುಗೀಸ್ ಸರ್ಕಾರವು ನೇಮಿಸಿದೆ. ಈ ಪೈಕಿ ಇಬ್ಬರು ಹಿಂದೂಗಳು ಇರುವರು. ಇವರು ತಯಾರಿಸುವ ರಾಜ್ಯಾಂಗವನ್ನು ನಿರಾಕರಿಸುವುದಾಗಿ ಗೋವಾ ಕಾಂಗ್ರೆಸ್ ಘೋಷಿಸಿದೆ.

ಬಿಹಾರ್ ಮಂತ್ರಿ ಮಂಡಲದ ಮೇಲೆ ಲೀಗಿನ ಅವಿಶ್ವಾಸ

ಬಿಹಾರಿನ ಕಾಂಗ್ರೆಸ್ ಮಂತ್ರಿ ಮಂಡಲದ ಮೇಲೆ ಲೀಗ್ ಪಕ್ಷದವರು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ. ಅದರ ಮೇಲಿನ ಚರ್ಚೆಯು ನಿನ್ನೆ ದಿನ ಆರಂಭವಾಗಿದೆ.

ಬಿಹಾರ್ ವಿಚಾರಣೆ

ಇತ್ತೀಚೆಗೆ ನಡೆದ ಕೋಮುವಾರು ಗಲಭೆಯ ಬಗ್ಗೆ ವಿಚಾರಣೆ ಸಮಿತಿಯೊಂದನ್ನು ನೇಮಿಸುವುದಾಗಿ ಬಿಹಾರಿನ ಪ್ರಧಾನ ಮಂತ್ರಿಗಳು ತಿಳಿಸಿದ್ದಾರೆ.

ಫ್ರಾನ್ಸಿನಲ್ಲೂ ಪಾನ ನಿರೋಧ

ಪಾನ ನಿರೋಧವನ್ನು ಕ್ರಮವಾಗಿ ಜಾರಿಗೆ ತರಲು ತಕ್ಕ ಕಾನೂನೊಂದನ್ನು ಫ್ರಾನ್ಸಿನಲ್ಲಿ ಜಾರಿಗೆ ತರಲಾಗುವುದೆಂದು ತಿಳಿದು ಬಂದಿದೆ. ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಚಿಕ್ಕ ವಯಸ್ಸಿನವರನ್ನು ಮದ್ಯ ಪಾನದ ಅಭ್ಯಾಸವಿರುವ ಹಿರಿಯರ ಸಂಘದಿಂದ ದೂರ ಮಾಡಲು ಮೊದಲು ಏರ್ಪಾಡು ನಡೆಯುವುದು.

ಕ್ರಯಕ್ಕಿದೆ

1) 984, ಗೀತಾ ರೋಡ್.

2) 1405, ಕೃಷ್ಣಮೂರ್ತಿಪುರಂ

ಆರ್. ಗುಂಡೂರಾವ್, ಹಳೇ ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು.

ನೌಖಾಲಿಯಿಂದ ಗಾಂಧೀ... ಕಳುಹಿಸಲು ಪ್ರಯತ್ನ...

ಪೂರ್ವ ಬಂಗಾಳದ ನೌಖಾಲಿ ... ತಪ್ಪೇರಾಗಳಲ್ಲಿ ಗಾಂಧೀಜಿಯವರು ... ದನ್ನು ಮಿ॥ ಫಜಲುಲ್ ಹಕ್ಕರು ... ದ್ದಾರೆ. ಅಲ್ಲಿಂದ ಅವರನ್ನು ಹೊರ... ಹಿಸುವಂತೆಯೂ, ಅಲ್ಲಿರುವ ಪೋಲೀ... ದೋಬಸ್ತನ್ನು ರದ್ದುಗೊಳಿಸುವಂತೆ ... ತಾವು ಒತ್ತಾಯಪಡಿಸುವುದಾಗಿ ... ದ್ದಾರೆ.

ತ್ರಿಕಾಲ ಫಲಾಫಲ ನಿಮ್ಮ ... ತಿಳಿದು ಕಾರ್ಯ ಸಿದ್ಧಿ, ಜಯ ... ನವೀನ ಜ್ಯೋತಿಷ್ಯ! ರೂ 3-80 ... ಮಾಡಿ; ಹೆಚ್ಚು ವಿವರ ಸಹಿತ ... ನೀವು ಬರೆತ ೩ ಪ್ರಶ್ನೆಗಳಿಗೆ ಉತ್ತ... ಚಿತ, 0-3-6 ಆಣೆ ಸ್ಟಾಂಪಿಟ್ಟು ಬ... ಶ್ರೀ ಸುಧಾಕರ ಜೋಷಿ, ಹಳೆಯೂರು ... ಸ್ಟು, (ಎಡತೊರೆ ತಾಲ್ಲೂಕು)

ನಗರಾಭಿವೃದ್ಧಿ ಸಮಿತಿ, ಮೈಸೂ...
ತಾರೀಖು 12-2-...

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿಯ ಅನೇಕ ... ಲ್ಲಾಗಳಲ್ಲಿ ಅನೇಕ ವರ್ಷಗಳಿಂದಲೂ ... ವಸತಿಗೋಸ್ಕರ ಜಾಗಗಳನ್ನು ಕ... ವುದು ಸರಿಯಷ್ಟೆ. ಇದರಲ್ಲಿ ಅನೇಕ ... ಗಳು ಮನೆ ಕಟ್ಟದೆ ಖಾಲಿಯಾಗಿ ... ಕೊಂಡಿರುವುದು ತಿಳಿದು ಬಂದಿರುತ್ತ... ರಿಂದ ಮೈಸೂರು ಸಿಟಿಯಲ್ಲಿ ಸಾಕ... ಮನೆಗಳಿಲ್ಲದೆ ಬಹಳ ತೊಂದರೆಯು... ದುತ್ತದೆ. ಈ ಕಾರಣಗಳಿಂದ ಮನೆ ... ಖಾಲಿ ಜಾಗವನ್ನು ಖಾಲಿಯಾಗಿಟ್ಟ... ಮೇಲೆ ನೂತ್ರ ಕಾರ್ಯಕ್ರಮವ... ಕೆಳಗೆ ಕಂಡ ರೀತಿಯಲ್ಲಿ ತೆಗೆದು... ಲಾಗುತ್ತೆ.

ಈ ಪ್ರಸಿದ್ಧ ಪತ್ರಿಕೆಯ ತಾರೀ... ಒಂದು ತಿಂಗಳೊಳಗೆ ಖಾಲಿ ಜಾಗ... ಲೀಕರು ಮನೆಯನ್ನು ಕಟ್ಟ್ಟ... ಆರಂಭ ಮಾಡದಿದ್ದಲ್ಲಿ 1916 ನೇ ... ಮುಂಚೆ ಕೊಂಡಿರುವುದರ ಸೈ... ಖಾಲಿಯಾಗಿರುವ ಜಾಗವನ್ನೆಲ್ಲಾ ... ಬೋರ್ಡಿಗೆ ಪುನಃ ಅಪ್ಪೈರ್ ಮ... ಳ್ಳುವುದರ ಮೂಲ್ಯ ವಾಪಸ್ಸು ತೆ... ಳ್ಳಲಾಗುತ್ತೆ. ಮತ್ತು 1916 ರಿಂದ ... ನೇ ಡಿಸೆಂಬರ್ ಆಖೈರ್ ವರೆಗೆ ... ಬೋರ್ಡಿನಿಂದ ಪಡೆದು ಖಾಲಿ ... ಗಿರುವ ಜಾಗವನ್ನು ವಾಪಸ್ಸು ... ತೆಗೆದುಕೊಳ್ಳಲಾಗುತ್ತದೆ.

ಇದರ ಮೇಲೆ ಇನ್ನು ಯಾವ ... ತಿಳುವಳಿಕೆಯನ್ನೂ ಜನಗಳಿಗೆ ... ಗುವುದಿಲ್ಲವೆಂದು ಈ ಮೂಲಕ ತಿ...

(ಸಹಿ)

ಆರ್ ರಾಮಚಂದ್ರರಾವ್ ಬಾ...
ಅಧ್ಯಕ್ಷರು
ನಗರಾಭಿವೃದ್ಧಿ ಸಮಿತಿ, ಮೈ...

ಸೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ.-

ಮೈಸೂರು ಸಿಟಿ ವಾಣೀ ವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಶ್ಚಿಮ ದಿಕ್ಕಿನಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ॥ ೧೨-೧-೪೭ ನೇ ಮುಕರ್ರರ್ ಹರಾಜು ಇಸ್ತಿಹಾರ್ ನಾಮೆಯು ಪರತ್ತುಗಳಿಗೆ ಒಳಪಡಿಸಿ ತಾ॥ ೧೬-೨-೪೭ ನೇ ಭಾನುವಾರ ಬೆಳಗ್ಗೆ ೯-೩೦ ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇತರ ವಿವರಗಳನ್ನು ಆಫೀಸಿನಲ್ಲಿ ರಜಾ ದಿನಗಳಲ್ಲದ ಇತರ ದಿವಸಗಳಲ್ಲಿ ೧೧ ಘಂಟೆಯಿಂದ ೫ ಘಂಟೆಯ ಒಳಗೆ ತಿಳಿಯಬಹುದು.

(ಸಹಿ) ಕೆ ವೆಂಕಟೇಶ ಐಯ್ಯಂಗ್,
ಛೇರ್ಮನ್ನರಿಗಾಗಿ
ನಗರಾಭಿವೃದ್ಧಿ ಸಮಿತಿ, ಮೈಸೂರು

Edited, printed and published by A. Nagarajan at the Sadhvi Press, D. Subbiah Road, Mysore.

ರಾಜಕಮಲ್, ಮೈಸೂರು

11-2-47 ರಿಂದ
ಪ್ರತಿದಿನ ಮೂರು ಆಟಗಳು

ನಯಿ - ಜಿಂದಗಿ

-: ಭೂಮಿಕೆ :-

ನೀಶಾ ಮುಕರ್ಜಿ, ಜಸೀನ್ ಖಾತೂನ್ ಮತ್ತು ಯಾಕೂಬ್

Rajkamal,
MYSORE

Morning Shows from
14-2-47 at 10 a. m

The
DIVORCE of
LADY X

ಹೊ ಸ ಜ ವ ಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿ!!

ಬಿ. ಕೆಂಚಪ್ಪ ಸನ್ಸ್,

ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು

-: ನ್ಯೂ ಕೃಷ್ಣಾ ಟಾಕೀಸ್ :-

14—2—1947 ರಿಂದ ಪ್ರತಿ ದಿನ ಮೂರು ಆಟಗಳು

"ಲೆಫ್ಟಿನೆಂಟ್"

(ಹಿಂದಿ)

ಪಾತ್ರ:—ಬೆಂಜಮಿನ್, ಶಾರದ

OPERA TALKIE...
From 15-2-47 Daily 3 S...

Stage Door
Cant...

-:Starring:-
JUDITH ANDERSON, K...
AAKER, RALPH BELLA...

ರೋ॥ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧೫—೨—೪೭ [ಸಂಚಿಕೆ ೧೬೨

ವೈಸರಾಯರಿಗೆ ಮತ್ತೆ — ಕಾಂಗ್ರೆಸ್ಸಿನ ಪತ್ರ —

ಕರ್ನಾಟಕ ವಿಶ್ವವಿದ್ಯಾಲಯ

ಹಲವು ದಿನಗಳಿಂದ ನಡೆಯುತ್ತಿದ್ದ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆಯ ಚಳವಳಿಯು ಈಗ ಫಲಕಾರಿಯಾಗುವ ಹಂತಕ್ಕೆ ಬಂದಿದೆ. ಈ ಬಗ್ಗೆ ಒಂದು ಯೋಜನೆಯನ್ನು ತಯಾರಿಸಲು ಮುಂಬಾಯಿ ಸರ್ಕಾರದವರು ಸಮಿತಿಯೊಂದನ್ನು ನೇಮಿಸಿದ್ದಾರೆ. ಇದೀ ಚಳುವಳಿಯ ಸೂಕ್ಷ್ಮ ಚರಿತ್ರೆಯು ಮತ್ತು ಉಳಿಕೆಯಾಗಿರುವ ಮತ್ತು ಕಾರ್ಯದ ಸಂಪೂರ್ಣಚಿತ್ರವನ್ನು ಧಾರವಾಡದ ಪ್ರೊ॥ ಶ್ರೀ ಮಾಳವಾಡರು 'ಕರ್ನಾಟಕ ವಿಶ್ವವಿದ್ಯಾಲಯ' ಎಂಬ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಇದರ ಪ್ರತಿಯನ್ನು ಆದರದಿಂದ ಸ್ವೀಕರಿಸಿದ್ದೇವೆ. ಕರ್ನಾಟಕ ವಿದ್ಯಾಪೀಠದವರು ಇತರ ಪ್ರಕಾಶನ ಕನ್ನಡಿಗರೆಲ್ಲರೂ ಈ ವಿಷಯದ ಪರಿಚಯ ಮಾಡಿಕೊಳ್ಳುವುದು ಅಗತ್ಯವಾಗಿದೆ.

ಕೆಲಸಗಾರರೇ ಮಾಲೀಕರು

ಕಾನ್ಪೂರಿನ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ಆಚಾರ್ಯ ಕೃಪಲಾನಿಯವರು ಸ್ವತಂತ್ರ ಭಾರತದಲ್ಲಿ ಕಾರ್ಮಿಕರು ಗಿರಣಿಗಳ ಮಾಲೀಕರಾಗಿರುವರೆಂದೂ ಜಮೀನುಗಳ ಮಾಲೀಕರು ರೈತರೆಂದೂ ಹೇಳಿರುವರೆ.

ಕ್ಯಾಲೆಂಡರ್ ಸ್ವೀಕಾರ

ಮೈಸೂರು ೧೪

ದೊಡ್ಡಪೇಟೆ ಶ್ರೀ ಬಿ. ಕೆಂಚಪ್ಪನವರೂ ಮತ್ತು ಶಿವರಾಂಪೇಟೆ ಶ್ರೀರಾಮ ಎಲೆಕ್ಟ್ರಿಕ್ ಸ್ಟೋರ್ಸಿನವರೂ ವಿಶ್ವಾಸದಿಂದ ಕಳುಹಿಸಿಕೊಟ್ಟಿರುವ ೧೯೪೭ ರ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿರುತ್ತೇವೆ.

ಸೈಟುಗಳ ಹರಾಜು

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:-

ಮೈಸೂರು ಸಿಟಿ ವಾಣೀ ವಿಲಾಸ ಮೊಹಲ್ಲಾದಲ್ಲಿ ಗೋಕುಲಂ ರೋಡಿನ ಪಶ್ಚಿಮ ಪಕ್ಕದಲ್ಲಿರುವ ಕಾಟೇಜ್ ಮತ್ತು ಬಂಗ್ಲೋ ಸೈಟುಗಳನ್ನು ತಾ॥ ೧೨-೧-೪೭ ನೇ ಮಹಾ ಹರಾಜು ಇಸ್ತಿಹಾರ್ ನಾಮೆಯ ಪತ್ರಿಕೆಗಳಿಗೆ ವಿಳಂಬಿಸಿ ತಾ॥ ೧೬-೨-೪೭ ಭಾನುವಾರ ಬೆಳಿಗ್ಗೆ ೯-೩೦ ಘಂಟೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇತರ ವಿವರಗಳನ್ನು ಆಫೀಸಿನಲ್ಲಿ ರಜಾ ದಿನಗಳಲ್ಲದ ಇತರ ದಿವಸಗಳಲ್ಲಿ ೧೧ ಘಂಟೆಯಿಂದ ೫ ಘಂಟೆಯವರೆಗೆ ತಿಳಿಯಬಹುದು.

(ಸಹಿ) ಕೆ. ವೆಂಕಟೇಶ ಐಯ್ಯಂಗ್,
ಛೇರ‍್ಮನ್ನರಿಗಾಗಿ
ನಗರಾಭಿವೃದ್ಧಿ ಸಮಿತಿ, ಮೈಸೂರು.

ಗೌರವಸ್ಥರೆಂದು ಡಿಸ್‌ಛಾರ್ಜ್ ಮಾಡಿ

ದರೋಡೆ ಮೊಕದ್ದಮೆಯಲ್ಲಿ ಆಪಾದಿತರ ವಕೀಲರುಗಳ ಪ್ರಾರ್ಥನೆ

ಸ್ವಂ ಸು] ಬೆಂಗಳೂರು, ೧೫

ಧರ್ಮ ರಕ್ಷಾ ಕರ ಬಿ. ಎನ್. ಗೋಪಾಲರಾಯರ ಒಡವೆಗಳ ಅಪಹರಣದ ಮೊಕದ್ದಮೆಯ ವಾದ ವಿವಾದಗಳು ನಿನ್ನೆ ಮುಗಿದುವು. ಈ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಪರ ಪರೀಕ್ಷಿಸಲ್ಪಟ್ಟ ಶ್ರೀ ಬಿ. ಎನ್. ಗೋಪಾಲರಾಯರ ಸಾಕ್ಷ್ಯವೇ ಮುಖ್ಯವಾದುದು. ಇದೇ ಪ್ರಾಸಿಕ್ಯೂಷನ್ನಿಗೆ ಕಳವಾದಿ. ಇದನ್ನು ವಿಮರ್ಶಿಸಿದರೆ ಇದರಲ್ಲಿ ತಿರುಳಿಲ್ಲವೆಂಬುದು ವಿದಿತವಾಗುತ್ತದೆ. ಸಾಕ್ಷಿಯು ಒಡವೆಗಳ ದರೋಡೆಯಾದುದೆಂದು ಆಪಾದಿಸಿರುವುದು ಡಿಸೆಂಬರ್ ೭ ನೇ ತಾ॥ ರಾತ್ರಿ ಆದಾದ ಮೇಲೆ ೧೩ ನೇ ತಾ॥ ವರೆಗೆ ಅವರಿಗೆ ದುಡ್ಡು ಕೊಟ್ಟ ಅನೇಕ ಮಿತ್ರರನ್ನೂ, ಇತರರನ್ನೂ ಸಾಕ್ಷಿಯು ನೋಡಿದ್ದಾರೆ. ಯಾರೊಡನೆಯೂ ಅವರು ದರೋಡೆ ವಿಚಾರವನ್ನೇ ಹೇಳಿಲ್ಲ ಹಾಗೆಂದು ಅವರ ಸಾಕ್ಷವನ್ನು ನಂಬುವುದು ಹೇಗೆ? ದರೋಡೆ ನಡೆದಿದ್ದ ಪಕ್ಷದಲ್ಲಿ ಅದನ್ನು ಯಾರೊಡನೆಯೂ ಹೇಳದೆ ಇರುತ್ತಿರಲಿಲ್ಲ. ಸಾಕ್ಷಿಯ ನಡೆತೆಯು ಮೊದಲಿನಿಂದ ಸಂಶಯದಿಂದ ಕೂಡಿದೆ. ಅಲ್ಲದೆ ಪ್ರಾಸಿಕ್ಯೂಷನ್ನಿನ ವಿಧಾನವೂ ವಿಚಿತ್ರವಾಗಿದೆ. ಗೌರವಯುತರಾದ ಮತ್ತು ನಂಬಲರ್ಹರಾದ ಅನೇಕ ಮಹನೀಯರನ್ನು ಮೊದಲು ಸಾಕ್ಷಿ ಪಟ್ಟಿಯಲ್ಲಿ ಸೇರಿಸಿ ಅನಂತರ ಅವರ ಕೈ ಬಿಡಲಾಗಿದೆ. ಅವರನ್ನು ಪರೀಕ್ಷಿಸದಿರುವುದು ಖಂಡನೀಯ-ಎಂದು ಆಪಾದಿತರುಗಳಾದ ಸರ್ವೋತ್ತಮರಾವ್, ಆರ್. ಮೋಸೆಸ್ ಮತ್ತು ಬೆಳಗಾಂ ವಾಲಾರವರ ಪರ ವಕೀಲರುಗಳು ವಾದಿಸಿ ಮುಂ

ವೈಸ್ ಛಾನ್ಸಲರಿಗೆ ಖಾಯಂ

ಮೈಸೂರು ೧೫

ವಿಶ್ವವಿದ್ಯಾಲಯದ ಸ್ಥಾನಪತಿಗಳಾದ ಸರ್ ಮಿರ್ಜಾ ಸುಲ್ತಾನ್ ಮೊಹಿಯುದ್ದೀನ್‌ರವರನ್ನು ಕಳೆದ ಅಕ್ಟೋಬರ್ ತಿಂಗಳಿಂದ ಅವರ ಸ್ಥಾನದಲ್ಲಿ ಖಾಯಂ ಮಾಡಲಾಗಿದೆ.

ವರು ಆಪಾದಿತರಿಗೂ ಅನಾವಶ್ಯಕ ಹಾನಿ ತೊಂದರೆಯಾಗಿದೆ ಎಂದು ಕೋರ್ಟಿಗೆ ಸೂಚಿಸಿ ಅವರುಗಳನ್ನು ಆನರಬಲ್ ಆಗಿ ಡಿಸ್‌ಛಾರ್ಜ್ ಮಾಡಬೇಕೆಂದು ಪ್ರಾರ್ಥಿಸಿದರು. ೨೦ ನೇ ತಾ॥ ಆರ್ಡರ್ ಮಾಡುವುದಾಗಿ ಕೋರ್ಟಿನ ಆಜ್ಞೆಯಾಗಿದೆ.

ದಿವಾನರು

ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಈ ದಿನ ಬೆಳಿಗ್ಗೆ ಮೋಟಾರಿನಲ್ಲಿ ರಾಜಧಾನಿಗೆ ಹೊರಟರು.

ಸೂ॥ ಇಂಜನಿಯರಾಗಿ ಬಡ್ತಿ

ಎಕ್ಸಿಕ್ಯೂಟಿವ್ ಇಂಜನಿಯರುಗಳಾದ ಶ್ರೀ ಎಂ. ಎನ್. ಲಕ್ಷ್ಮಣರಾಯರನ್ನು ಸೂ॥ ಇಂಜನಿಯರನ್ನಾಗಿ ಭಡ್ತಿ ಮಾಡಿ ಲಕ್ಕವಳ್ಳಿ ಯೋಜನೆಯ ಛಾರ್ಜಿಗೂ ಶ್ರೀ ಎಂ. ಆರ್. ಶೇಷಾದ್ರಿ ಅಯ್ಯಂಗಾರ್‌ರನ್ನು ಸೂ॥ ಇಂಜನಿಯರನ್ನಾಗಿ ಭಡ್ತಿ ಮಾಡಿ ನೀರಾವರಿ ಸರ್ಕಲ್ಲಿಗೂ ನೇಮಕ ಮಾಡಲಾಗಿದೆ.

ವೈಸರಾಯರಿಗೆ ಕಾಂಗ್ರೆಸ್ಸಿನ ಪತ್ರ

ಮುಸ್ಲಿಂ ಲೀಗಿನವರು ರಾಜ್ಯಾಂಗ ಸಭೆಯನ್ನು ರದ್ದು ಮಾಡಬೇಕೆಂದು ಕೋರಿ ನಿರ್ಣಯ ಮಾಡುವುದರ ಬಗ್ಗೆ ತಮ್ಮ ನೀತಿಯೇನೆಂಬುದನ್ನು ಅಷ್ಟರೊಳಗಾಗಿ ಬ್ರಿಟಿಷ್ ಸರ್ಕಾರವು ತಿಳಿಸಬೇಕೆಂದು ಸೂಚಿಸಿ ಕಾಂಗ್ರೆಸ್ಸಿನ ನಾಯಕರು ವೈಸರಾಯರಿಗೆ ಮತ್ತೊಂದು ಪತ್ರವನ್ನು ಬರೆದಿರುವುದಾಗಿ ತಿಳಿದುಬಂದಿದೆ. ಮತ್ತು ಮುಂದಿನ ಕಾರ್ಯಕ್ರಮದ ಬಗ್ಗೆ ಮಹಾತ್ಮ ಗಾಂಧಿಯವರೊಡನೆ ಅವರು ಸಮಾಲೋಚನೆ ನಡೆಸುತ್ತಿರುವುದಾಗಿಯೂ ಹೇಳಲಾಗಿದೆ. ಮುಸ್ಲಿಂ ಲೀಗಿನವರು ಬ್ರಿಟಿಷ್ ಘೋಷಣೆಯನ್ನು ಅಂಗೀಕರಿಸದೆ ತಾತ್ಕಾಲಿಕ ಸರ್ಕಾರದಲ್ಲಿ ಇರುವುದರಿಂದ ಬಿಕ್ಕಟ್ಟು ಉಂಟಾಗಿ ಪರಿಸ್ಥಿತಿಯು ವಿಷಮಿಸುವಂತಿದೆ.

೪೦ ಸಹಸ್ರ ಗಿರಣಿ ಕೆಲಸಗಾರರ ಮುಷ್ಕರ

ಬೋನಸ್ಸನ್ನು ಹೆಚ್ಚು ಮಾಡಬೇಕು, ಕೂಲಿ ದರವನ್ನು ಏರಿಸಬೇಕು- ಎಂಬ ಕಾರಣದ ಮೇಲೆ ಕೊಯಮತ್ತೂರಿನ ೩೨ ಬಟ್ಟೆ ಗಿರಣಿಗಳ ೪೦ ಸಹಸ್ರ ಮಂದಿ ಕೆಲಸಗಾರರು ಮೊನ್ನೆಯಿಂದ ಕೆಲಸಕ್ಕೆ ಹೋಗದೆ ಮುಷ್ಕರವನ್ನು ಪ್ರಾರಂಭಿಸಿದ್ದಾರೆ. ಮದರಾಸಿನ ಪ್ರಧಾನಿ ಶ್ರೀ ಪ್ರಕಾಶಂ ರವರು ಮುಷ್ಕರವನ್ನು ಕೊನೆಗಾಣಿಸಲು ಕೆಲಸಗಾರರ ಸಂಘದವರ ಮತ್ತು ಗಿರಣಿ ಮಾಲೀಕರ ಜಂಟಿ ಸಭೆಯೊಂದನ್ನು ಕರೆದಿದ್ದಾರೆ.

ಬ್ರಿಟನ್ನಿಗೆ ಅಮೆರಿಕದ ಕಲ್ಲಿದ್ದಲು

ಬ್ರಿಟಿಷ್ ದ್ವೀಪಸ್ತೋಮದ ಸಮುದ್ರದಲ್ಲಿ ಸಂಚರಿಸುತ್ತಿರುವ ಪಾಶ್ಚಾತ್ಯ ದೇಶಗಳ ಕಲ್ಲಿದ್ದಲಿನ ಹಡಗುಗಳನ್ನೆಲ್ಲಾ ಬ್ರಿಟನ್ನಿಗೆ ಕಳುಹಿಸಲಾಗುವುದು. ಬ್ರಿಟನ್ನಿನ ಜನಗಳ ಕಳವಳವನ್ನು ಪರಿಹರಿಸಲು ಸಂಯುಕ್ತ ಸಂಸ್ಥಾನವು ತನ್ನಿಂದ ಸಾಧ್ಯವಾದ ಸಹಾಯ ಮಾಡಲು ಸದಾ ಕಾಲದಲ್ಲೂ ಸಿದ್ಧವಾಗಿದೆ- ಎಂದು ಅಧ್ಯಕ್ಷ ಟ್ರೂಮನ್ನರು ಹೇಳಿದ್ದಾರೆ.

● ಹಿಂದೂಸ್ಥಾನದಿಂದ ತಮ್ಮ ಸೈನ್ಯವನ್ನು ವಾಪಸು ಕರೆಸಿಕೊಳ್ಳುವ ಕಾಲವನ್ನು ಕ್ಲಿಪ್ತ ಮಾಡಲು ಬ್ರಿ॥ ಸರ್ಕಾರದವರು ನಿರಾಕರಿಸಿರುವುದಾಗಿ ವರದಿಯಾಗಿದೆ.

ಐಟಿಯಾಲ್

TRADE ITL MARK

ಅತ್ಯುತ್ತಮವಾದ ಕ್ರಿಮಿನಾಶಿನಿ

ಕಾರ್ಬಾಲಿಕ್ ದ್ರಾವಕಕ್ಕಿಂತಲೂ ಅನೇಕ ಪಟ್ಟು ಶಕ್ತಿಶಾಲಿಯಾದದ್ದು. ವಿಷಮ ಕ್ರಿಮಿಗಳನ್ನೆಲ್ಲಾ ನಿರ್ನಾಮ ಮಾಡುವುದು [illegible] ವಾದ ವಾಸನೆಯುಳ್ಳದ್ದು. ಕ್ರಿಮಿಗಳಿಗೆ [illegible] ದೇಹಕ್ಕೆ ಯಾವ ಬಾಧೆಯನ್ನೂ ಉಂಟು [illegible] ಚಿಕಿತ್ಸೆಗಳಲ್ಲಿಯೂ ಮನೆ ಮತ್ತು ಸ್ನಾನ ಉಪಯೋಗಗಳಿಗೆ [illegible] ಗಳನ್ನು ನಿವಾರಿಸುತ್ತದೆ

೪, ೮, ಮತ್ತು ೧೬ ಔನ್ಸ್ ಸೀಸೆಗಳಲ್ಲಿ ದೊರೆಯುತ್ತದೆ

ಐ. ಟಿ. ಎಲ್. ತಯಾರಿ

— ತಯಾರಿಸುವವರು —

ಮೈಸೂರು ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗ್ ಲ್ಯಾಬೋರೇಟರಿ, ಲಿಮಿಟೆಡ್

ಮಲ್ಲೇಶ್ವರಂ : : ಬೆಂಗಳೂರು.

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ

೧೬-೨-೪೭ ನೇ ಭಾನುವಾರ ಮಧ್ಯಾಹ್ನ ೩-೩೦ ಘಂಟೆಯಿಂದ

ಶ್ರೀ ಕೃಷ್ಣಲೀಲಾ (ಕನ್ನಡ ಚಿತ್ರ)

ಪ್ರಥಮ ಪ್ರದರ್ಶನ ಆರಂಭೋತ್ಸವ

ಮಹಾರಾಜರವರ ಹುಜೂರ್ ಸೆಕ್ರೆಟರಿ ಶ್ರೀ T. ರಾಮಯ್ಯ, B.A. ಯವರ ಅಮೃತ ಹಸ್ತದಿಂದ ನೆರವೇರಿಸಲ್ಪಡುವುದು.

ಪ್ರತಿದಿನವೂ ಮೂರು ಪ್ರದರ್ಶನಗಳು

ಸಾಧ್ವಿ

ತಾ|| ೧೫-೨-೪೭ ಶನಿವಾರ

ನಮ್ಮ ದಿವಾನರೂ ಹೀಗೆ ಮಾಡಬಾರದೇ ?

ಬರೋಡಾ ಸಂಸ್ಥಾನದ ದಿವಾನರಾದ ಸರ್ ಬಿ ಎಲ್ ಮಿತ್ರರವರು ಭಾರತ ಸ್ವಾತಂತ್ರ್ಯ ಮತ್ತು ಪ್ರಜಾ ಪ್ರಭುತ್ವ ವಿಚಾರದಲ್ಲಿ ಆದರ್ಶ ಪ್ರಾಯವಾದ ಮಾರ್ಗವನ್ನು ಅವಲಂಬಿಸಿದ್ದಾರೆ ಭಾರತ ರಾಜ್ಯಾಂಗ ಸಭೆಗೆ ಬರೋಡದಿಂದ ತೆಗೆದುಕೊಳ್ಳಲಾಗುವ ಮೂರು ಜನ ಪ್ರತಿನಿಧಿಗಳನ್ನೂ ಸಹ ಚುನಾವಣಾ ಮೂಲಕವೇ ಆರಿಸಲಾಗುವುದೆಂದು ಅವರು ಹೇಳಿದ್ದಾರೆ ಅಲ್ಲದೆ ಚುನಾವಣೆಗೆ ತಾವೂ ಒಬ್ಬ ಉಮೇದುವಾರರಾಗಿ ನಿಲ್ಲುವುದಾಗಿ ತಿಳಿಸಿದ್ದಾರೆ

ಸಂಸ್ಥಾನಗಳ ಇತಿಹಾಸದಲ್ಲಿಯೇ ಇದು ಒಂದು ನೂತನವಾದ ಪ್ರಕರಣ. ಎಲ್ಲ ಪ್ರಮುಖ ಸ್ಥಾನಗಳನ್ನೂ ನಾಮಕರಣದ ಮೂಲಕವೇ ಭರ್ತಿ ಮಾಡುವ ಹಳೆಯ ಪದ್ಧತಿಯನ್ನು ಮುಂದು ಚುನಾವಣಾ ಕ್ರಮವನ್ನು ಸಂಪೂರ್ಣವಾಗಿ ಅನುಸರಿಸುವುದು ಬರೋಡ ಸಂಸ್ಥಾನದ ಹಿರಿಮೆಯ ಸಂಗತಿಯೇ ಸರಿ ದಿವಾನರಾಗಿರುವವರು ತಾವಾಗಿಯೇ ಸಂಸ್ಥಾನವನ್ನು ಪ್ರತಿನಿಧಿಸುದಾಗಿ ಹೇಳುವುದರ ಬದಲು ಪ್ರಜಾ ವಿಶ್ವಾಸವನ್ನು ಗಳಿಸಲು ಚುನಾವಣೆಗೆ ನಿಲ್ಲುವುದಾಗಿ ಹೇಳಿರುವುದು ದಿಟ್ಟತನದ ವಿಷಯ

ಬರೋಡೆಯ ದಿವಾನರಿಗೆ ಎಷ್ಟು ಮಟ್ಟಿನ ಆತ್ಮವಿಶ್ವಾಸವೂ, ಜನ ಬೆಂಬಲವೂ ಇರುವುದೆಂಬುದು ಇದರಿಂದಲೇ ವೇದ್ಯವಾಗುತ್ತದೆ. ಅವರಲ್ಲಿ ತಮಗೆ ಸಂಪೂರ್ಣವಾದ ನಂಬಿಕೆಯಿರುವುದೆಂದು ಅಲ್ಲಿನ ಪ್ರಜಾ ಮಂಡಲಿಯವರು ಪಂಡಿತ ನೆಹರೂರವರಿಗೆ ಬರೆದಿರುವ ಪತ್ರವು ಇದನ್ನು ಪುಷ್ಟೀಕರಿಸುತ್ತದೆ. ಪ್ರಜೆಗಳ ವಿಶ್ವಾಸವನ್ನು ಈ ರೀತಿಯಲ್ಲಿ ಗಳಿಸಿ ಇಷ್ಟು ಮಟ್ಟಿನ ಪ್ರಶಸ್ತಿಯನ್ನು ಪಡೆದಿರುವವರಲ್ಲಿ ಸರ್ ಮಿತ್ರರವರಿಗೆ ಅಗ್ರಸ್ಥಾನವು ದೊರೆಯದಿರದು ಇದರಿಂದ ಅವರು ಪ್ರಜೆಗಳ ಇಷ್ಟಾರ್ಥವನ್ನು ಈಡೇರಿಸಲು ಎಷ್ಟು ಮಟ್ಟಿಗೆ ಬದ್ಧಕಂಕಣರಾಗಿರುವರೆಂಬ ಭಾವನೆಯನ್ನು ಉಂಟು ಮಾಡಿರುವರೆಂಬುದನ್ನು ಊಹಿಸಿ ತಿಳಿಯಬೇಕು

ಇಡೀ ದೇಶದ ಸ್ವಾತಂತ್ರ್ಯವೇ ಇಂದು ಪ್ರಧಾನವಾದ ವಿಚಾರವೆಂದೂ, ಸಂಸ್ಥಾನಗಳ ಸ್ಥಾನಮಾನಗಳ ಪ್ರಶ್ನೆಯು ಎರಡನೆಯದೆಂದೂ ಸರ್ ಮಿತ್ರರವರು ಹೇಳಿರುವರು. ರಾಜ್ಯಾಂಗ ಸಭೆಯೊಡನೆ ಸಂಪೂರ್ಣವಾಗಿ ಸಹಕರಿಸುವುದಾಗಿಯೂ ತಿಳಿಸಿರುವರು ಈ ಸಭೆಯ ಕೆಲಸಕಾರ್ಯಗಳಿಗೆ ಅಡಚಣೆಯುಂಟುಮಾಡಲು ನರೇಂದ್ರ ಮಂಡಲದಲ್ಲಿ ನಡೆದ ಪ್ರಯತ್ನಗಳನ್ನು ಬಯಲಿಗೆಳೆದಿರುವರು. ಬರೋಡ ಸ್ವತಂತ್ರ ಮಾರ್ಗವನ್ನು ಹಿಡಿದುದರಿಂದ ಇನ್ನೂ ಅನೇಕ ಸಣ್ಣ ಪುಟ್ಟ ರಾಜ್ಯಗಳು ಧೈರ್ಯವಾಗಿ ಮುಂದೆ ಬರಲು ಸಾಧಕವಾಯಿತೆಂದು ತಿಳಿಸಿರುವರು ಇದರಿಂದ ದೇಶದ ಸ್ವಾತಂತ್ರ್ಯಕ್ಕೆ ವಿಶೇಷ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ.

ತಮ್ಮ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಸಹಕಾರಿಯಾದ ಸಲಹೆಗಳನ್ನು ಕೊಡುವಂತೆ ಬರೋಡದ ರಾಜರು ದಿವಾನರಿಗೆ ಆಜ್ಞೆ ಮಾಡಿರುವರು ಅದಕ್ಕೆ ಅನುಗುಣವಾಗಿ ದಿವಾನರು ವರ್ತಿಸುತ್ತಿರುವರು ಇದರಿಂದ ಅವರು ಎಲ್ಲರ ಮೆಚ್ಚಿಗೆಗೂ ಪಾತ್ರರಾಗಿರುವರು

ನಮ್ಮ ದಿವಾನರಾದ ಸರ್ ಆರ್ಕಾಟ್‌ರವರಿಗೂ ಇಂತಹ ಭಾಗ್ಯವು ಲಭಿಸಬಾರದೇ? ಸರ್ ಮಿತ್ರರಂತೆ ಅವರು ಚುನಾವಣೆಗೆ ಉಮೇದುವಾರರಾಗಿ ನಿಲ್ಲಬಾರದೇ? ದೇಶದ ಮುಖ್ಯ ಸಂಸ್ಥೆಗಳ ವಿಶ್ವಾಸವನ್ನು ಗಳಿಸಬಾರದೇ? ತಮ್ಮ ನಾಯಕತ್ವದಲ್ಲಿ ಮೈಸೂರಿನ ಪ್ರತಿನಿಧಿಗಳನ್ನು ಕೊಂಡೊಯ್ಯುವುದಾಗಿ ಹೇಳುವ ಬದಲು ಪ್ರಜೆಗಳ
ವಿಶ್ವಾಸಕ್ಕೆ ಪಾತ್ರರಾದವರ ನಾಯಕ
ತಾವು ಹೋಗಲು ಸಿದ್ಧರಾಗಿರುವು
ಹೇಳಬಾರದೇ ?

ಇತ್ತೀಚೆಗೆ ನಡೆದಿರುವ ಕಂ ಧಾ
ಪ್ರಕಾರ ಸಂಸ್ಥಾನಗಳಿಂದ ಚುನಾ
ಸದಸ್ಯರನ್ನೇ ರಾಜ್ಯಾಂಗ ಸಭೆಗೆ ಕ
ಬೇಕೆಂಬ ಅಭಿಪ್ರಾಯವು ದೃಢವಾ
ಗುತ್ತದೆ ನಮ್ಮ ದಿವಾನರು ಬರೋ
ದಿವಾನರ ಮಾರ್ಗವನ್ನೇ ಅನುಸರಿಸಿ
ಮೆಚ್ಚಿಗೆಗೂ ಪಾತ್ರರಾಗಬಾರದೇ?

ಕೃತಕ ಮಳೆ

ಕೃತಕ ರೀತಿಯಲ್ಲಿ ಹಿಡವಾದ ಮ
ಳೆ ಸುರಿಸುವ ಕಾರ್ಯದಲ್ಲಿ ಆಸ್ಟ್ರೇಲಿ
ವಿಜ್ಞಾನಿಗಳು ಜಯಗಳಿಸಿದ್ದಾರೆ,
ನಗರಕ್ಕೆ ೫೦ ಮೈಲಿ ದೂರದಲ್ಲಿ ವಿ
ದಲ್ಲಿ ಸಂಚರಿಸಿ ಅವರು ಮೊನ್ನೆ ಮ
ರಿಸಿದರು

Edited, printed and publishe
A. R. Nagarajan at the Sadhvi
D Subbiah Road Mysore

→ ನ್ಯೂ ಕೃಷ್ಣಾ ಟಾಕೀಸ್ :←
೧೪—೨—1947ರಿಂದ ಪ್ರತಿ ದಿನ ಮೂರು ಆಟಗಳು
"ಲೆಫ್ಟಿನೆಂಟ್"
(ಹಿಂದಿ)
ಪಾತ್ರ —ಬೆಂಜಮಿನ್, ಶಾರದ

ಹೊಸ ಜವಳಿ
ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ
ಇಂದೇ ಭೇಟಿ ಕೊಡಿ !
ಒಂದು ಸಲ ನಮ್ಮ ಅಂಗಡಿಗೆ ಒಂದು ಪರೀಕ್ಷಿಸಿ !!
ಬಿ. ಕೆಂಚಪ್ಪ ಸನ್ಸ್,
ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು

Rajkamal,
Mysore
Morning Shows from
14-2-47 at 10 a m
The
DIVORCE of
LADY X

ರಾಜ್‌ಕಮಲ್ ಟಾಕೀಸಿನಲ್ಲಿ

16-2-47 ರಿಂದ
ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
★
ಮಹಾತ್ಮರವರ
ಕೃಷ್ಣಲೀಲಾ
(ಜಿ ಆರ್ ರಾಮಯ್ಯ ಮತ್ತು
ಅಯ್ಯನಾರ್ರವರ ಕಾಣಿಕೆ)
- ಭೂಮಿಕೆ -
ಕೆಂಪರಾಜ್, ಬಳ್ಳಾರಿ ಲಲಿತ,
ರತ್ನಮಾಲಾ, ಕಾಂತಾ,
ರಾಘವೇಂದ್ರ ರಾವ್,
ಮುಂತಾದವರು
★
ದ ಕ್ಷಂಸನು ಸ್ವಾರ್ಥಾಭಿಲಾಷೆಯಿಂದ
ತನ್ನ ಒಡಹುಟ್ಟಿದ ತಂಗಿಯ ಗಂಡನನ್ನು
ಬಂಧನದಲ್ಲಿರಿಸಿ, ಅವಳ ಹೊಟ್ಟೆಯಲ್ಲಿ
ಹುಟ್ಟಿದ ಮಕ್ಕಳನ್ನು ಕೊಲೆ ಮಾಡಿಸಿದ
ಕಥೆಯನ್ನು ತೋರಿಸುವ ಪೌರಾಣಿಕ ಚಿತ್ರ
ಕನ್ನಡಿಗರ ಹೆಮ್ಮೆಯ ಕಾಣಿಕೆ

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ ಗೋಪಾಲಾಚಾರ್ಲು
ಅರುಣ
ಗರ್ಭಾಶಯರೋಗ ನಿವಾ

ಅರುಣ ಋತು ದೋ
ಷವನ್ನು ನಿರ್ಮೂಲಿ
ಪೂರ್ಣ ಸ್ತ್ರೀತ್ವವ
ಸಾಧಿಸುವಪ್ಪಯಂ
ರ್ಣವಾದ ದಿವ್ಯಾಷ
ಧವನ್ನು ಬಿಡದೆ ಸೇ
ರಾದರೆ, ನಿಮ್ಮ
ಧರೆಮಾವಧಿಯ
ಮುಂದಾನಂದವನ್ನು
ದೆ ಒದಗಿಸಬಲ್ಲುದು
ಆಯುರ್ವೇದಾಶ್ರಮಂ ಲಿಮಿಟೆಡ್
ಟಿ-ನಗರ್. . . . ಮದರಾಸ್

ಪೋ. ಕಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಭಾನುವಾರ ೧೬—೨—೪೭ [ಸಂಚಿಕೆ ೧೬೩

ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ತ್ಯಜಿಸುವುದೆ?

ಮೂಢ ನಂಬಿಕೆಗಳು ಮಾಯವಾಗುತ್ತಿವೆ

ಮಕ್ಕಳ ಪ್ರದರ್ಶನದಲ್ಲಿ ದಿವಾನರ ಭಾಷಣ

ಮೈಸೂರು, ೧೬.

ಕಳೆದ ಒಂದು ವಾರದಿಂದ ರೆಡ್‌ಕ್ರಾಸ್ ಸಂಸ್ಥೆಯವರು ರಾಜಧಾನಿಯ ನಾನಾ ಭಾಗಗಳಲ್ಲಿ ಮಕ್ಕಳ ಪ್ರದರ್ಶನವನ್ನು ನಡೆಸಿ ನಿನ್ನೆ ವಾಣೀವಿಲಾಸ ಗರ್ಭಿಣಿ ಮತ್ತು ಶಿಶು ಸಂರಕ್ಷಣಾಲಯದಲ್ಲಿ ಬಹುಮಾನ ವಿನಿಯೋಗ ಸಮಾರಂಭವನ್ನು ಏರ್ಪಡಿಸಿದರು. ದಿವಾನರಾದ ಸರ್. ರಾಮಸ್ವಾಮಿ ಮೊದಲಿಯಾರರು ಸಭಾಧ್ಯಕ್ಷತೆ ವಹಿಸಿದ್ದರು. ಗುಣಾಂಬ ಸಂಘದ ಅಧ್ಯಕ್ಷರಾದ ಶ್ರೀ ಟಿ ರಾಮಯ್ಯನವರು ಸ್ವಾಗತ ಭಾಷಣ ಮಾಡಿದರು. ಡಾ॥ ಬಿ ರಾಮಸ್ವಾಮಿಯವರು ಪ್ರದರ್ಶನದ ವರದಿಯನ್ನು ಓದಿದರು.

ದಿವಾನರು ಬಹುಮಾನಗಳನ್ನು ವಿನಿಯೋಗಿಸಿದ ನಂತರ ಭಾಷಣ ಮಾಡುತ್ತಾ ಗುಣಾಂಬ ಗರ್ಭಿಣಿ ಮತ್ತು ಶಿಶು ಸಂರಕ್ಷಣಾಲಯದವರು ಸಲ್ಲಿಸುತ್ತಿರುವ ಸೇವೆಯನ್ನು ಪ್ರಶಂಸಿಸಿ ಪ್ರದರ್ಶನಕ್ಕೆ ಮಕ್ಕಳನ್ನು ಕರೆತಂದರೆ ದೃಷ್ಟಿಯಾಗುತ್ತದೆಂಬುದಾಗಿ ಇದ್ದ ಮೂಢ ನಂಬಿಕೆಯು ಈಗ ಮಾಯವಾಗುತ್ತಿರುವುದೆಂದು ಹೇಳಿದರು. ಈ ಕಷ್ಟ ಕಾಲದಲ್ಲೂ ತಂದೆತಾಯಿಗಳು ಮಕ್ಕಳನ್ನು ಈ ರೀತಿ ಪೋಷಿಸುತ್ತಿರುವುದನ್ನು ಅಭಿನಂದಿಸಿದರು. ರೆಡ್ ಕ್ರಾಸ್ ಸಂಸ್ಥೆಯ ಶ್ರಮದ ಫಲವಾಗಿ ಮಕ್ಕಳ ಮರಣಗಳು ಬಹುಮಟ್ಟಿಗೆ ಕಡಿಮೆಯಾಗಿವೆ. ಮೈಸೂರು ಈ ಕಾರ್ಯಕ್ರಮದಲ್ಲಿ ಬಹುಮಟ್ಟಿಗೆ ಮುಂದುವರಿದು ಖ್ಯಾತಿಯನ್ನು ಪಡೆದಿದೆ ಎಂದು ಹೇಳಿ ಈ ಸಂಘದ ಆಶ್ರಯದಲ್ಲಿ ದಾದಿಯರನ್ನು ತಯಾರಿಸಲು ಏರ್ಪಾಡು ನಡೆಯಬೇಕೆಂದು ಸೂಚಿಸಿದರು.

ಜೈ ಪ್ರಕಾಶ್ ನಿಧಿ

ಏಪ್ರಿಲ್ ೫ ರಿಂದ ಕರ್ಣಾಟಕದಲ್ಲಿ ಸಂಚರಿಸಲಿರುವ ಶ್ರೀ॥ ಜೈಪ್ರಕಾಶ್ ನಾರಾಯಣ್ ರವರಿಗೆ ನಿಧಿಯೊಂದನ್ನು ಅರ್ಪಿಸಲಾಗುವುದು. ಇದರ ವಸೂಲಿ ಬಗ್ಗೆ ವ್ಯವಸ್ಥೆ ಮಾಡಲು ಮೈಸೂರು ಸಂಸ್ಥಾನಕ್ಕೆ ಶ್ರೀಗಳಾದ ಎಸ್. ಚನ್ನಯ್ಯ (ಕನ್‌ವೀನರ್) ಕೆ. ಆರ್. ರಾಮಯ್ಯ, ಪಾರ್ಥನಾರಾಯಣ ಪಂಡಿತ್, ನಾಗಭೂಷಣ ಮತ್ತು ಶ್ರೀಕಂಠಪ್ಪನವರುಗಳನ್ನೊಳಗೊಂಡ ಸಮಿತಿಯೊಂದನ್ನು ನೇಮಿಸಲಾಗಿದೆ. ಮಹಾಜನರು ಉದಾರವಾಗಿ ಸಹಾಯಮಾಡಬೇಕೆಂಬುದಾಗಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಪ್ರಾರ್ಥಿಸಿದ್ದಾರೆ.

ಐ. ಎನ್. ಎ ದಿನಾಚರಣೆ

ರಾಜಧಾನಿಯ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ಒಂದೂವರೆ ಗಂಟೆಗೆ ಮಹಾರಾಜಾ ಕಾಲೇಜ್ ಮುಂಭಾಗದಲ್ಲಿ ಆಜಾದ್ ಹಿಂದ್ ಫೌಜಿನ ದಿನಾಚರಣೆಯನ್ನು ನಡೆಸಲಾಗುವುದು. ವಿದ್ಯಾರ್ಥಿಗಳೆಲ್ಲರೂ ಭಾಗವಹಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ಶ್ರೀ ಮಹಾರಾಜಾ ಕಾಲೇಜಿನ ರಾಜನೀತಿಶಾಸ್ತ್ರ ಸಂಘದ ವಾರ್ಷಿಕ ಭಾಷಣವನ್ನು ಶ್ರೀ ಡಿ ವಿ ಗುಂಡಪ್ಪನವರು ನಾಳೆ ಸಂಜೆ ೬ ಗಂಟೆಗೆ ನೆರವೇರಿಸುವರು. ಪ್ರೊ॥ ಡಿ ಟಿ... ರವರು ಅಧ್ಯಕ್ಷತೆ ವಹಿಸುವರು.

ಹಿಚ್‌ಕಾಕ್ ಸ್ಮಾರಕ ತೆಗೆಯಲು ಆಜ್ಞೆ

ದಕ್ಷಿಣ ಮಲಬಾರಿನಲ್ಲಿರುವ ಹಿಚ್ ಕಾಕ್ ಸ್ಮಾರಕವನ್ನು ತೆಗೆಯುವಂತೆ ಮದ್ರಾಸ್ ಸರ್ಕಾರವು ಆಜ್ಞೆ ಇತ್ತಿದೆ. ೧೯೨೧ರ ಮಾಪಿಳ್ಳೆ ದಂಗೆಯಲ್ಲಿ ಮಲಬಾರ್ ಪೋಲೀಸ್ ಸೂಪರಿಂಟೆಂಡೆಂಟರಾಗಿ ಸೇವೆ ಸಲ್ಲಿಸಿದ್ದರೆಂದು ಅವರ ಸ್ಮಾರಕ ಏರ್ಪಟ್ಟಿತ್ತು. ಮುಸ್ಲಿಮರು ವಿಶೇಷ ಪ್ರತಿಭಟನೆ ತೋರಿಸಿದ್ದರಿಂದ ಈ ಪ್ರತಿಮೆಯನ್ನು ಪೋಲೀಸ್ ಕಛೇರಿಯ ಆವರಣಕ್ಕೆ ಸಾಗಿಸಲಾಗಿದೆ.

ಬಿಹಾರ್ ಮಂತ್ರಿಮಂಡಲದ ಮೇಲೆ ಅವಿಶ್ವಾಸ

ಮುಸ್ಲಿಂ ಲೀಗ್ ಪಕ್ಷದವರು ಬಿಹಾರಿನ ಕಾಂಗ್ರೆಸ್ ಮಂತ್ರಿ ಮಂಡಲದ ಮೇಲೆ ತಂದಿದ್ದ ಅವಿಶ್ವಾಸ ನಿರ್ಣಯವು ೨೭-೯೨ ಓಟುಗಳಿಂದ ಬಿದ್ದುಹೋಯಿತು.

ಆಸಫ್ ಆಲಿಯವರಿಗೆ ರಾಜ ಸೋದರರ ಸನ್ಮಾನ

ಅಮೇರಿಕಾದಲ್ಲಿ ಭಾರತದ ಪ್ರತಿನಿಧಿಯಾಗಿ ನೇಮಕವಾಗಿರುವ ಮಿ॥ ಆಸಫ್ ಆಲಿಯವರನ್ನು ರಾಜ ಸೋದರರಾದ ಗ್ಲೋಸೆಸ್ಟರ್ ರವರು ಮೊನ್ನೆ ದಿನ ಸ್ವಾಗತಿಸಿ ಸನ್ಮಾನಿಸಿದರು.

ವಿಶ್ವವಿದ್ಯಾನಿಲಯದಲ್ಲಿ ಕಲಾಶಾಖೆ ಆರಂಭವಾಗಲಿ

ಮೈಸೂರು ೧೬

ಮಹಾರಾಜಾ ಕಾಲೇಜಿನ ಕಲಾಸಂಘದ ವಾರ್ಷಿಕೋತ್ಸವವು ನಿನ್ನೆ ಸಂಜೆ ದಿವಾನರಾದ ಸರ್. ಎ. ರಾಮಸ್ವಾಮಿ ಮೊದಲಿಯಾರ್ ರವರ ಅಧ್ಯಕ್ಷತೆಯಲ್ಲಿ ಕಾಲೇಜಿನ ಒಳ ಅಂಗಳದಲ್ಲಿ ಜರುಗಿತು. ಅಧ್ಯಕ್ಷರು ಮಾತನಾಡುತ್ತಾ ಕಲಾ ಸಂಘಗಳ ಆವಶ್ಯಕತೆಗಳನ್ನು ವಿವರಿಸಿ ಮೈಸೂರು ಸಂಸ್ಥಾನವು ಕಲಾ ಪ್ರಪಂಚದಲ್ಲಿ ಪಡೆದಿರುವ ಅಗ್ರಸ್ಥಾನವನ್ನು ಕೊಂಡಾಡಿದರು. ಕರ್ನಾಟಕ ಸಂಗೀತ ವಿಶ್ವಮನ್ನಣೆ ಪಡೆದಿರುವುದನ್ನು ಶ್ಲಾಘಿಸಿ ವಿಶ್ವವಿದ್ಯಾನಿಲಯದವರು ಈ ಕಲಾಭಿವೃದ್ಧಿಗಾಗಿ ಡಿಪ್ಲೊಮಾ ಶಾಖೆಯನ್ನು ಆರಂಭಿಸಬೇಕೆಂದು … ಇತ್ತರು. ಭಾರತದಲ್ಲಿ ಶೀಘ್ರವಾದ ಮಾರ್ಪಾಡುಗಳಾಗುತ್ತಿವೆ. … ಆನಂದ … ಎಲ್ಲರೂ ಕಾರ್ಯೋನ್ಮುಖರಾಗಬೇಕೆಂಬುದಾಗಿ ಅವರು ಕೊನೆಯಲ್ಲಿ ಹೇಳಿದರು.

ದಿವಾನರು ಕಾಲಹರಣ ಮಾಡುತ್ತಿದ್ದಾರೆ

ಶ್ರೀಮನ್ಮಹಾರಾಜರವರ ಸಂದೇಶದ ಬಗ್ಗೆ ದಿವಾನರ ಕಾರ್ಯಕ್ರಮದ ವಿಚಾರವಾಗಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ॥ ಎಸ್ ಚನ್ನಯ್ಯನವರು ಈ ರೀತಿ ಹೇಳಿಕೆ ಹೊರಡಿಸಿದ್ದಾರೆ:

ದಿವಾನರು ಅಮೇರಿಕಾಕ್ಕೆ ತೆರಳಿ ಸುಮಾರು ೩ ತಿಂಗಳನಂತರ ಹಿಂತಿರುಗುವರೆಂದು ತಿಳಿದುಬಂದಿದೆ. ಪ್ರಭುಗಳು ಸಂದೇಶವನ್ನಿತ್ತು ಆರು ವಾರಗಳ ಮೇಲಾದುವು. ಆದರೂ ಈ ಬಗ್ಗೆ ದಿವಾನರು ಸರಿಯಾದ ಯಾವ ಏರ್ಪಾಡುಗಳನ್ನೂ ಮಾಡಿಲ್ಲ. ಅವರ ವರ್ತನೆಯು ಆಶ್ಚರ್ಯವನ್ನುಂಟುಮಾಡುತ್ತಿದೆ. ಈ ತಾತ್ಸಾರ ಭಾವದಿಂದ ದೇಶವು ಮುನ್ನಡೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮಹಾಜನರು ಇದಕ್ಕೆ ಅವಕಾಶ ಕೊಡಬಾರದು. ಜವಾಬ್ದಾರಿ ಸರ್ಕಾರ ಸ್ಥಾಪನೆಯನ್ನೇ ಗುರಿಯಾಗಿಟ್ಟುಕೊಂಡು, ಈ ಸಲಹೆಗಾರರೆಂದೆನಿಸಿಕೊಂಡಿರುವವರನ್ನು ನಿವೃತ್ತಗೊಳಿಸಲು ಒತ್ತಾಯಪಡಿಸಬೇಕು.

ಮಕ್ಕಳ ಪ್ರದರ್ಶನ

೪॥ ತಿಂಗಳ ಮಗುವಿಗೆ ಛಾಂಪಿಯನ್ ಸ್ಥಾನ

ಮೈಸೂರು ೧೬

ರಾಜಧಾನಿಯಲ್ಲಿ ಕಳೆದ ಒಂದು ವಾರದಿಂದ ನಡೆದ ಮಕ್ಕಳ ಪ್ರದರ್ಶನದಲ್ಲಿ ಬಹುಮಾನಗಳು ಈ ರೀತಿ ಹಂಚಲ್ಪಟ್ಟವು:—

ಪ್ರಥಮಸ್ಥಾನ ಮತ್ತು ಛಾಂಪಿಯನ್‌ಶಿಪ್ ಹುಲ್ಲಿನ ಬೀದಿ ರುದ್ರಪ್ಪನವರ ಮಗ ಮಹದೇವ, ೪॥ ತಿಂಗಳು, ೧೯ ಪೌಂಡು ತೂಕ, ೩೦ ಇಂಚು ಎತ್ತರ. ಎರಡನೇ ಸ್ಥಾನ, ಸುಣ್ಣದ ಕೇರಿಯ ಶ್ರೀ॥ ಮರಿಯಪ್ಪ ಶೆಟ್ಟರ ಮಗ ಬಾಲರಾಂ, ೬ ತಿಂಗಳು, ೧೮ ಪೌಂಡು, ೨೮ ಇಂಚು ಎತ್ತರ. ಮೂರನೇ ಸ್ಥಾನ, ವಾಣೀ ವಿಲಾಸ ಮೊಹಲ್ಲಾ ಶ್ರೀ॥ ನಂಗಪ್ಪ ರವರ ಮಗ ಬಾಲರಾಜ್, ೧೨ ತಿಂಗಳು, ೨೧ ಪೌಂಡು, ೨೭ ಇಂಚು ಎತ್ತರ.

ಅಣು ಬಾಂಬಿನ ತಯಾರಿಕೆ ನಿಲ್ಲಲಿ

[illegible] ಸೋವಿಯಟ್ ಪ್ರತಿನಿಧಿಗಳು ಸೆಕ್ಯೂರಿಟಿ ಕೌನ್ಸಿಲಿನಲ್ಲಿ ಒತ್ತಾಯ ಪಡಿಸಿದ್ದಾರೆ.

ಕೇಂದ್ರ ಸರ್ಕಾರ ತ್ಯಜಿಸಲು ಕಾಂಗ್ರೆಸ್ ಸಿದ್ಧತೆ

ಕಾಂಗ್ರೆಸ್ಸಿನವರು ಕಳುಹಿಸಿರುವ ಪತ್ರಕ್ಕೆ ಉತ್ತರವನ್ನು ಕೊಡಲು ಬ್ರಿಟಿಷ್ ಸರಕಾರದವರು ನಿಧಾನ ಮಾಡಿದರೆ ವಿಶೇಷ ಬಿಕ್ಕಟ್ಟು ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲವೆಂದು ದೆಹಲಿಯಿಂದ ವಾರ್ತೆ ಬಂದಿದೆ. ಈಗಿನ ತಾತ್ಕಾಲಿಕ ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ಸು ತ್ಯಜಿಸಲೂ ಸಿದ್ಧವಾಗಿದೆಯೆಂದು ಹೇಳಲಾಗುತ್ತಿದೆ. ಕಾಂಗ್ರೆಸ್ ಹೈ ಕಮ್ಯಾಂಡಿನವರು ಈ ವಿಷಮ ಪರಿಸ್ಥಿತಿಯ ಬಗ್ಗೆ ಮಹಾತ್ಮ ಗಾಂಧಿಯವರೊಡನೆ ಸಂಬಂಧ ಪಡೆದು ಮಾತುಕತೆ ನಡೆಸುತ್ತಿದ್ದಾರೆಂದೂ ತಿಳಿದುಬಂದಿದೆ. ಬ್ರಿಟನ್ನಿನಲ್ಲಿ ಆವರಿಗೆ ತೊಂದರೆ ಇದ್ದಾಗ್ಯೂ ಭಾರತದ ವಿಚಾರದಲ್ಲಿ ಈಗ ನಿಧಾನ ಮಾಡಿದರೆ ನಂತರ ಅದು ಬಿಡಿಸಲಾರದ ಜಟಿಲ ಸಮಸ್ಯೆಯಾಗುವುದೆಂದು ಊಹಿಸಲಾಗಿದೆ. ಲೀಗ್ ಮಂತ್ರಿಗಳನ್ನು ಕೇಂದ್ರ ಸರ್ಕಾರದಿಂದ ತೆಗೆದುಹಾಕಲು ಬ್ರಿಟಿಷರು ಒಪ್ಪುವುದಿಲ್ಲವೆಂದು ಹೇಳಲಾಗುತ್ತಿದೆ.

ತಗಡೂರರ ಉಪವಾಸ

ಚಾಮರಾಜನಗರ ೧೬

ಪ್ಲೇಗು ತಲೆದೋರಿದೆಯೆಂಬ ಕಾರಣ ಸೂಚಿಸಿ ಚಾಮರಾಜೇಶ್ವರ ವೇದ ಪಾಠಶಾಲೆಯನ್ನು ಈ ತಿಂಗಳ ಅಂತ್ಯದ ವರೆಗೆ ಮುಚ್ಚಬಿಡುವಂತೆ ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿದ್ದಾರೆ. ಈ ಊರಿನಲ್ಲಿರುವ ಇತರ ೧೨ ಸ್ಕೂಲುಗಳು ಮಾತ್ರ ಮಾಮೂಲಿನಂತೆ ನಡೆಯುತ್ತಿವೆ. ನಗರದ ೧೬ ಸಾವಿರ ಪ್ರಜಾ ಸಂಖ್ಯೆಗೆ ಇಲ್ಲದ ಪ್ಲೇಗು ಪಾಠಶಾಲೆಯ ೩೦ ವಿದ್ಯಾರ್ಥಿಗಳಿಗೆ ಮಾತ್ರ ಬಗತ್ತಾಗಿದೆ. ಮೊದಲೇ ತಿಳಿಸಿದ್ದಂತೆ ಶ್ರೀ॥ ತಗಡೂರು ರಾಮಚಂದ್ರ ರಾಯರು ದೇವಾಲಯದ ಮುಂಭಾಗದಲ್ಲಿ ನಾಳೆ ಬೆಳಗ್ಗೆ ೮ ಘಂಟೆಯಿಂದ ಉಪವಾಸ ವ್ರತ ಆರಂಭಿಸುವರು.

ಪ್ರಪಂಚದ ಶಾಂತಿಗೆ ಭಾರತದ ಸಹಾಯಕತ್ವ

ಭಾರತವು ಪ್ರಪಂಚ ಶಾಂತಿಗೆ ಬೇಗದ ಸೈನ್ಯದಂತಿದೆ. ಇದನ್ನು ಸರಿಯಾಗಿ ಉಪಯೋಗಿಸಿದಲ್ಲಿ ಪ್ರಪಂಚದ ಶಾಂತಿಯು ಇನ್ನು ೧೦೦ ವರ್ಷಗಳಕಾಲ ಸುರಕ್ಷಿತವಾಗಿರುವುದು. ಭಾರತೀಯರು ಒಳ ಜಗಳಗಳನ್ನು ಬಿಟ್ಟು ಶಾಂತಿಯುತ ಮಾರ್ಗದಿಂದ ರಾಜ್ಯಾಂಗವನ್ನು ರಚಿಸಿ ಪ್ರಪಂಚಕ್ಕೇ ಮಾರ್ಗದರ್ಶಿಗಳಾಗಬೇಕು. ಎಂಬುದಾಗಿ ಬ್ರಿಟನ್ನಿನ ವಿದೇಶಾಂಗ ಸಚಿವ ಮಿ॥ ಬೆವಿನ್ ರವರು ಮಿ॥ ಅಸಫ್ ಆಲಿಯವರಿಗೆ ಇತ್ತ ಸತ್ಕಾರ ಕೂಟದಲ್ಲಿ ತಿಳಿಸಿದ್ದಾರೆ.

* ಮದ್ರಾಸಿನ ಪ್ರಧಾನಿ ಶ್ರೀ॥ ಟಿ ಪ್ರಕಾಶಂ ರವರು ತಮ್ಮ ಸಹೋದ್ಯೋಗಿ ಮಂತ್ರಿಗಳಿಂದ ರಾಜೀನಾಮೆ ಪತ್ರವನ್ನು ಬರೆಸಿಕೊಂಡಿದ್ದಾರೆಂದು ಗೊತ್ತಾಗಿದೆ.

ಬೆಂಕಿ ಅನಾಹುತ

ಮೈಸೂರು ೧೬

[illegible]

* ದರ್ಬಾ ಸ್ವೀಪ್ಸ್ ಟಿಕೆಟು ಪಡೆದು ೧೦ ರೂಪಾಯಿನಿಂದ ಒಂದು ಲಕ್ಷ ರೂ ವರೆಗಿನ ಬಹುಮಾನ ಪಡೆಯಿರಿ! ಪ್ರತಿ ಟಿಕೇಟಿಗೆ ೨-೮-೦ ಮನಿ ಆರ್ಡರ್ ಮೂ ಡಿ. ವಿ. ಪಿ ಇಲ್ಲ. ಶ್ರೀ ಸುಧಾರಕ ಜೋ ಷಿ, ಹಳೆಯೂರು ಪೋಸ್ಟು (ಎಡಕೊರೆ ಜಾ ಲ್ಲೂಕು)

Rajkamal,
MYSORE

Morning Shows from 14-2-47 at 10 a. m.

The
DIVORCE of LADY X

ಕಂಟ್ರೋಲ್ ಬೆಲೆ! ಸುಸಮಯ!

ಹೊಸ ಜವಳಿ!

ನಮ್ಮಲ್ಲಿ ಈಗತಾನೆ ಹೊಸದಾಗಿ ಬಂದಿರುವ ಬೆನಾರಿಸ್, ಕಾಂಜೀವರಂ, ಕರಾಚಿ ಸೀರೆಗಳು.

ನೂಲಿನ ಫ್ಯಾನ್ಸಿ ಸೀರೆಗಳು

ಕಾಶ್ಮೀರ್ ಶಾಲುಗಳು ದೊರೆಯುತ್ತವೆ

M. P. V., M. V. ಶ್ರೀನಿವಾಸಯ್ಯ, ಬಿ. ಎ.,

ಅಂಡ್ ಬ್ರದರ್ಸ್

ಒಲಂಪಿಯಾ ಸಿನಿಮಾ ಚೌಕ, ಮೈಸೂರು

Edited, printed and published by A. R. Nagarajau at the Sadhvi Press, D. Subbiah Road, Mysore.

OPERA TALKIES
From 15-2-47 Daily 3 Shows

Stage Door Canteen

-:Starring:-
JUDITH ANDERSON, KENNY

ಮುಂದಿನ ಬದಲಾವಣೆ:-
ತಾ|| ೧೯-೨-೪೭ರಿಂದ

ವಿದ್ಯಾಪತಿ

ಪ್ರತಿ ದಿನ ಮೂರು ಆಟಗಳು

ಗರ್ಭರಕ್ಷಣೆ

ಅನೇಕ ಅನುಭವ ಸಿದ್ಧವಾದ ಔಷಧಿ:—

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸುವಾಗುವುದು

ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ. ವಿ. ವೆಂಕಟೇಶಯ್ಯ, ಡಿ|| ಬೋರ್ಡ್ ವೈದ್ಯ, ಅರಕಲಗೂಡು ತಾ|| ರಾಮನಾಥಪುರ ...

ಆರ್. ಎಸ್. ಪಂಡಿತರ ನಾಯಿಕೆಮ್ಮಿನ ಔಷಧಿ

7—8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.
ಕ್ರಯ ಬಾಟ್ಲಿಗೆ 1-8-0

ಗೂರ್ಲು—ಉಬ್ಬಸಕ್ಕೆ
(Asthma)

ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ.
(Appendecitis) ಗುಲ್ಮಶೂಲೆ ಮತ್ತು (Tonsils) ಗಲಾಯಿಲಿ ಅವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ.
ಖುದ್ದು ಬಂದು ನೋಡಿ.
ಗುಂಡ್ಲುಪೇಟೆ ಆರ್. ಎಸ್. ಪಂಡಿತರು ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂರು

ಕ್ರಯಕ್ಕಿದೆ

1) 984, ಗೀತಾ ರೋಡ್,

2) 1405, ಕೃಷ್ಣಮೂರ್ತಿಪುರಂ

ಆರ್. ಗುಂಡೂರಾವ್, ಹಳೇ ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು.

ಟಿ. ಸಿ. ನಟರಾಜ್
ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳ ಚಿಕಿತ್ಸೆಯು ಬಹು ಸುಲಭ ಛಾರ್ಜಿನಲ್ಲಿ ಮಾಡಲ್ಪಡುತ್ತದೆ.
ಝಂಡೂರವರ ಆಯುರ್ವೇದಿಕ್ ಔಷಧಗಳೆಲ್ಲವೂ ದೊರೆಯುತ್ತವೆ.

ಸಾಧ್ವಿ
ಈ
ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ) ಕೂಡಲೇ ಚಂದಾದಾರರಾಗಿ
ಜಾಹಿರಾತಿನ ದರಗಳಿಗೆ ವಿಚಾರಿಸಿರಿ

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!

ಬಿ. ಕೆಂಚಪ್ಪ ಸನ್ಸ್

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು

ನಗರಾಭಿವೃದ್ಧಿ ಸಮಿತಿ, ಮೈಸೂರು
ತಾರೀಖು 12-2-1947

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿಯ ಅನೇಕ ಬಡಾವಣೆಗಳಲ್ಲಿ ಅನೇಕ ವರ್ಷಗಳಿಂದಲೂ ಗೃಹವಸತಿಗೋಸ್ಕರ ಜಾಗಗಳನ್ನು ಕೊಟ್ಟಿರುವುದು ಸರಿಯಷ್ಟೆ. ಇದರಲ್ಲಿ ಅನೇಕ ಜಾಗಗಳು ಮನೆ ಕಟ್ಟದೆ ಖಾಲಿಯಾಗಿ ಬಿಟ್ಟುಕೊಂಡಿರುವುದು ತಿಳಿದು ಬಂದಿರುತ್ತೆ. ಇದರಿಂದ ಮೈಸೂರು ಸಿಟಿಯಲ್ಲಿ ಸಾಕಾದಷ್ಟು ಮನೆಗಳಿಲ್ಲದೆ ಬಹಳ ತೊಂದರೆಯುಂಟಾಗುತ್ತದೆ. ಈ ಕಾರಣಗಳಿಂದ ಮನೆ ಕಟ್ಟದೆ ಖಾಲಿ ಜಾಗವನ್ನು ಖಾಲಿಯಾಗಿಟ್ಟಿರುವವರ ಮೇಲೆ ಸೂಕ್ತ ಕಾರ್ಯಕ್ರಮವನ್ನು ಕೆಳಗೆ ಕಂಡ ರೀತಿಯಲ್ಲಿ ತೆಗೆದುಕೊಳ್ಳಬೇಕಾಗಿರುತ್ತೆ.

ಈ ಪ್ರಸಿದ್ಧ ಪತ್ರಿಕೆಯು ಪ್ರಕಟವಾದ ಒಂದು ತಿಂಗಳೊಳಗೆ ಖಾಲಿ ಜಾಗದ ಮಾಲೀಕರು ಮನೆಯನ್ನು ಕಟ್ಟುವುದನ್ನು ಆರಂಭ ಮಾಡದಿದ್ದಲ್ಲಿ 1916 ನೇ ಇಸವಿ ಮುಂಚೆ ಕೊಂಡಿರುವುದರ ಪ್ರಕಾರ ಖಾಲಿಯಾಗಿರುವ ಜಾಗವನ್ನು ಅಲ್ಲಾಟ್ಮೆಂಟ್ ಬೋರ್ಡಿಗೆ ಪುನಃ ಅಕ್ವೈರ್ ಮಾಡಿಕೊಳ್ಳುವುದರ ಮೂಲ್ಯ ವಾಪಸ್ಸು ತೆಗೆದುಕೊಳ್ಳಲಾಗುತ್ತೆ. ಮತ್ತು 1916 ರಿಂದ 1946 ನೇ ಡಿಸೆಂಬರ್ ಆಖೈರ್ ವರೆಗೆ ಟ್ರಸ್ಟ್ ಬೋರ್ಡಿನಿಂದ ಪಡೆದು ಖಾಲಿ ಬಿಟ್ಟಿರುವ ಜಾಗವನ್ನು ವಾಪಸ್ಸು (resume) ತೆಗೆದುಕೊಳ್ಳಲಾಗುತ್ತದೆ.

ಇದರ ಮೇಲೆ ಇನ್ನು ಯಾವ ಪ್ರತ್ಯೇಕ ತಿಳುವಳಿಕೆಯನ್ನೂ ಜನಗಳಿಗೆ ಕೊಡಲಾಗುವುದಿಲ್ಲವೆಂದು ಈ ಮೂಲಕ ತಿಳಿಸಿದೆ.

(ಸಹಿ)
ಆರ್. ರಾಮಚಂದ್ರರಾವ್ ಬಾಂಭೊರೆ
ಅಧ್ಯಕ್ಷರು
ನಗರಾಭಿವೃದ್ಧಿ ಸಮಿತಿ, ಮೈಸೂರು

ರಾಜ್‌ಕಮಲ್ ಟಾಕೀಸಿನಲ್ಲಿ

16-2-47 ರಿಂದ
ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು

ಮಹಾತ್ಮರವರ

ಕೃಷ್ಣಲೀಲಾ

(ಜಿ. ಆರ್. ರಾಮಯ್ಯ ಮತ್ತು ಅಯ್ಯನಾರ್ರವರ ಕಾಣಿಕೆ)

-: ಭೂಮಿಕೆ :-

ಕೆಂಪರಾಜ್, ಬಳ್ಳಾರಿ ಲಲಿತ, ರತ್ನಮಾಲಾ, ಕಾಂತಾ, ರಾಘವೇಂದ್ರ ರಾವ್, ಮುಂತಾದವರು.

ದ ಪ್ರದರ್ಶನ. ಸ್ವಾರ್ಥಾಭಿಲಾಷೆಯಿಂದ ತನ್ನ ಒಡಹುಟ್ಟಿದ ತಂಗಿಯು ಗಂಡನನ್ನು ಬಂಧನದಲ್ಲಿರಿಸಿ, ಅವಳ ಹೊಟ್ಟೆಯುಲ್ಲಿ ಹುಟ್ಟಿದ ಮಕ್ಕಳನ್ನು ಕೊಲೆ ಮಾಡಿಸಿದ ಕಂಸನನ್ನು ಕೊಂದ ಪೌರಾಣಿಕ ಚಿತ್ರ ಕನ್ನಡಿಗರ ಮೆಚ್ಚಿಯ ಕಾಣಿಕೆ.

ಕ್ರಮ ಸಂ. 392 WEEKLY EDITION ಇಂದಿನ ಪತ್ರಿಕೆ 6 ಪುಟ

ಸಂಪುಟ ೧೧] ಸೋಮವಾರ ೧೭—೨—೪೭ [ಸಂಚಿಕೆ ೫೯

ವೈಸರಾಯ್ ವೇವೆಲ್ಲರು ರಾಜಿನಾಮೆ ಕೊಡುವರೆ

...ರು ಪುರಸಭಾ ಉಪಾ...
...ಕ್ಷತೆಯ ಅಂಗೀಕಾರ

...ಫೋನ್] ಬೆಂಗಳೂರು ೧೭

...ನಿರ್ವಾಚಿತವಾದ ಮೈಸೂರು ಪುರಸಭೆ ...ಧ್ಯಕ್ಷರಾಗಿ ಶ್ರೀ ಟಿ. ನರಸಿಂಹಯ್ಯಂ...ರು ಚುನಾಯಿತರಾಗಿರುವುದನ್ನು ...ರವರು ಅಂಗೀಕರಿಸಿರುತ್ತಾರೆ.

...ಪೆನ್ಷನ್‌ದಾರರ ಬೇಡಿಕೆ

...ರ ನೌಕರಿಯಲ್ಲಿದ್ದು ನಿವೃತ್ತರಾ...ರೂ, ಸ್ಥಳೀಯ ಸಂಸ್ಥೆಯಿಂದ ನಿವೃ...ರವರಿಗೂ ವ್ಯತ್ಯಾಸವನ್ನು ಕಲ್ಪಿಸಿರು... ಕರಿಯಲ್ಲ. ಸರ್ಕಾರಿ ಪೆನ್ಷನ್‌ದಾರರಿ...ಗೊಂದು ಅಲೋಯನ್ಸು ಕೊಡುವ ವ... ಮತ್ತು ೬ ರೂ ಗಳಂತೆ ಅಲೋ...ಸ್ಸ ಕೊಡಲಾಗುತ್ತಿದೆ. ಮೈಸೂರಿನಲ್ಲಿ ಸ್ಥಳೀಯ ಸಂಸ್ಥೆಯ ನಿವೃತ್ತ ನೌಕ... ಮತ್ತು ೮ ರೂ ಗಳನ್ನು ಕೊಡಲಾ...ದೆ. ಬೇರೆ ಕಡೆ ಈ ಭೇದಭಾವವಿಲ್ಲ. ...ನಮ ಈ ವ್ಯತ್ಯಾಸವನ್ನು ಹೋಗಲಾ...ಡಬೇಕಾಗಿ ಮೈಸೂರಿನಲ್ಲಿರುವ ಸ್ಥಳೀಯ ...ಗಳ ಪೆನ್ಷನ್‌ದಾರರುಗಳ ಪರವಾಗಿ ...ಕೇಳುತ್ತೇನೆ. ನೊಂದ ಪೆನ್ಷನ್‌ದಾರ

...ತಿ ಗ್ರಾಮದಲ್ಲೂ ೩ ಎಕರೆ ಆಟದ ಮೈದಾನ

ಮದ್ರಾಸ್ ಪ್ರಾಂತ್ಯದ ಪ್ರತಿ ಗ್ರಾಮದ... ಆಟದ ಮೈದಾನಕ್ಕಾಗಿ ೩ ಎಕರೆ ಪ್ರ...ಶವನ್ನು ಮೀಸಲಾಗಿಡಲು ಸರ್ಕಾರದ ...ಹೊರಟಿದೆಯೆಂದು ಮದ್ರಾಸಿನ ವಿ... ಮಂತ್ರಿಗಳು ತಿಳಿಸಿದ್ದಾರೆ.

...ನೆಯ ಪುಟದಿಂದ ಮುಂದುವರಿದುದು)

...ಮಾನಸಿಕ ಚಿಂತೆ ಹೆಚ್ಚುವುದು, ...೨೦, ೨೨ ಸಾಧಾರಣ ಶಾಂತಿ, ಲಾಭ.

...ಧನು:- ಆರೋಗ್ಯ ಕೆಡುತ್ತದೆ, ಧನ... ಸಾಧಾರಣ ಖರ್ಚು ಅಧಿಕ, ಉ...ಗದ ವ್ಯವಹಾರಗಳಲ್ಲಿ ನಷ್ಟ, ಪ್ರವಾ...ಸದ ಮಾನಸಿಕ ಚಿಂತೆ ಜಾಸ್ತಿ, ತಾ|| ...೨೦, ೨೧ ಸಾಧಾರಣ ಲಾಭ, ಬಂಧು...ರನ, ಶಾಂತಿ.

ಮಕರ:- ಪ್ರಾಕೃತಿಕ ಸ್ಥಿತಿ ಉತ್ತಮ, ...ನಸಿಕ ಚಿಂತೆ ಕಡಿಮೆಯಾಗುವುದು; ...ವ್ಯಾಪಾರದಲ್ಲಿ ಪ್ರಗತಿ, ಶತ್ರುಗಳ ಕಿರು...ಕ ಕಡಿಮೆಯಾಗುವುದು, ಮಿತ್ರರು ...ಶೇಷ ಸಹಾಯ ಮಾಡುವರು, ಅಧಿ...ರ ವರ್ಗದವರಿಂದ ಸಹಾಯ, ಬಂಧು...ಆಗಮನ, ತಾ|| ೧೮, ೨೨ ಲಾಭ, ...ಗಳ ಕಾರ್ಯಕ್ಕಾಗಿ ಖರ್ಚು.

ಕುಂಭ:- ಆರೋಗ್ಯ ಸಾಧಾರಣ, ಧ...ಲಾಭ ಕಡಿಮೆ, ಖರ್ಚು ಹೆಚ್ಚು, ವ್ಯಾ...ರದಿಂದ ನಷ್ಟ, ಪ್ರವಾಸದಿಂದ ಅಧ...ಕ, ಮರಣವಾರ್ತೆ, ತಾ|| ೨೦, ...೨ ಚಿಂತಾನಾಶ, ಧನಲಾಭ, ಶಾಂತಿ.

ಮೀನ:- ಆರೋಗ್ಯ ಚೆನ್ನಾಗಿರುತ್ತದೆ, ...ಕೈಗೊಂಡ ಕಾರ್ಯಗಳಲ್ಲಿ ಜಯ, ವ್ಯಾಪಾ...ರದ ಲಾಭ, ಅಧಿಕಾರಿ ವರ್ಗದವರ ಸ್ನೇ...ಮಿತ್ರರಿಂದ ಮನ್ನಣೆ, ಪ್ರವಾಸದಿಂದ ...ಲಾಭವೃದ್ಧಿ ಮತ್ತು ವಿಶೇಷ ಲಾಭ. ...೨೦, ೨೨ ಚಿಂತೆ, ಅಪ್ರಿಯ ವಾರ್ತೆ.

ಡರ್ಬಿ ಸ್ವೀಪು ಟಿಕೆಟು ಪಡೆದು ...ರೂಪಾಯಿನಿಂದ ಒಂದು ಲಕ್ಷ ರೂ. ...ದನ ಬಹುಮಾನ ಪಡೆಯಿರಿ! ಪ್ರತಿ ...ಟಿಕೇಟಿಗೆ ೨-೮-೦. ಮಣಿ ಆರ್ಡರ್ ಮಾ... ವಿ ಪಿ ಇಲ್ಲ. ಶ್ರೀ ಸುಧಾಕರ ಜೋ...ಹಳೆಯೂರು ಪೋಸ್ಟು, (ಎಡತೊರೆ ತಾ...)

ಸುಧಾರಣೆಗಳ ಬಗ್ಗೆ ಪ್ರಶ್ನಾವಳಿ

ಸ್ವಂ. ಸು ಫೋನ್] ಬೆಂಗಳೂರು ೧೭

ಮೈಸೂರು ಸಂಸ್ಥಾನದ ಒಕ್ಕಲಿಗರ ಸಂಘದವರು ದಿನ್ನೆ ಸಂಜೆ ಲಾಲ್‌ಬಾಗಿನಲ್ಲಿ ದಿವಾನರಾದ ಸರ್ ಎ ರಾಮಸ್ವಾಮಿ ಮೊದಲಿಯಾರರ ಗೌರವಾರ್ಥವಾಗಿ ಒಂದು ಸಮಾರಂಭವನ್ನು ಏರ್ಪಡಿಸಿ ಬೆಳ್ಳಿಯ ಕರಂಡದಲ್ಲಿ ಬಿನ್ನವತ್ತಳೆಯನ್ನು ಒಪ್ಪಿಸಿದರು. ಮಂತ್ರಿಗಳೂ, ಪ್ರಮುಖ ಅಧಿಕಾರಿಗಳೂ, ೨ ಸಹಸ್ರ ಮಂದಿ ಪ್ರೇಕ್ಷಕರೂ ಸಮಾರಂಭದಲ್ಲಿ ಭಾಗ ವಹಿಸಿದ್ದರು.

ಒಕ್ಕಲಿಗ ಸಂಘದವರು ತಮ್ಮ ಬಿನ್ನವತ್ತಳೆಯಲ್ಲಿ, ಇಂಥಾ ದಿವಾನರು ತಮಗೆ ದೊರೆತಿರುವುದು ನಮ್ಮ ದೇಶದ ಸೌಭಾಗ್ಯವೆಂದೂ, ಇದುವರೆವಿಗೆ ದಿವಾನರು ಮಾಡಿರುವ ಅನೇಕ ಉಪಕಾರಗಳೇ ಇದಕ್ಕೆ ಸಾಕ್ಷಿಯೆಂದೂ ತಿಳಿಸಿದ್ದರು. ಒಕ್ಕಲಿಗ ಜನಾಂಗದವರು ಸಾಮಾನ್ಯವಾಗಿ ವ್ಯವಸಾಯಗಾರರೆಂದೂ ಅವರ ವಿದ್ಯಾಭಿವೃದ್ಧಿಯನ್ನು ಹೆಚ್ಚಿಸುವ ಬಗ್ಗೆ ದಿವಾನರು ಎಲ್ಲ ಸಹಾಯಗಳನ್ನು ಒದಗಿಸಬೇಕೆಂದೂ ಪ್ರಾರ್ಥಿಸಿದ್ದರು. ದಿವಾನರ ಅಮೆರಿಕಾ ಪ್ರಯಾಣವು ಸುಖಮಯವಾಗಿ ಸಾಗಲೆಂದು ಹಾರೈಸಿದ್ದರು.

ದಿವಾನರು ಉತ್ತರ ಕೊಡುತ್ತಾ ಈ ರೀತಿ ಹೇಳಿದರು:-

ದಹಲಿಯಲ್ಲಿ ನಡೆದ ಸಂಧಾನಗಳ ಸಮಯದಲ್ಲಿ ನಾನು ಏನೇನೋ ಹೇಳಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಅದರೆ ಅವುಗಳೆಲ್ಲಕ್ಕೂ ಉತ್ತರ ಕೊಡುವ ಅವಶ್ಯಕತೆ ಇಲ್ಲ. ಒಟ್ಟಿನಲ್ಲಿ ಸಂಸ್ಥಾನ ಮತ್ತು ಪ್ರಭುಗಳ ಆಸಕ್ತಿಯನ್ನು ಕಾಪಾಡಲು ಪ್ರಯತ್ನಪಟ್ಟಿದ್ದೇನೆ.

ರಾಜಕೀಯ ಸುಧಾರಣೆಗಳ ಬಗ್ಗೆ ಪ್ರಭುಗಳು ಇತ್ತಿರುವ ಸಂದೇಶವನ್ನು ಚಾಚೂ ತಪ್ಪದೆ ನೆರವೇರಿಸಲು ಕೈಲಾದುದನ್ನೆಲ್ಲಾ ಮಾಡುತ್ತೇನೆ. ಇನ್ನು ಒಂದೆರಡು ದಿನಗಳಲ್ಲಿ ಸಾರ್ವಜನಿಕರು ಸಲಹೆಗಳನ್ನು ಕಳುಹಿಸಲು ಅನುಕೂಲವಾಗುವಂತೆ ಪ್ರಶ್ನಾವಳಿಯನ್ನು ಹೊರಡಿಸಲಾಗುವುದು. ಎಲ್ಲ ವಿಧದಲ್ಲೂ ಮಹಾಜನಗಳು ಸಲಹೆ ಕಳುಹಿಸಿಕೊಡಬಹುದು. ಅವುಗಳನ್ನು ನಾನು ಅಮೆರಿಕಕ್ಕೆ ತರಿಸಿಕೊಂಡು ಅಲ್ಲೇ ಆಲೋಚನೆ ಮಾಡುತ್ತೇನೆ. ಈ ವಿಚಾರದಲ್ಲಿ ಕಾಲ ಯಾಪನೆ ನಡೆಯುವುದಿಲ್ಲ. ಒಕ್ಕಲಿಗರ ವಿದ್ಯಾರ್ಥಿಗಳಿಗೆ ಎಲ್ಲ ವಿಧದಲ್ಲೂ ಪ್ರೋತ್ಸಾಹ, ಸೌಕರ್ಯಗಳನ್ನು ಕಲ್ಪಿಸಿಕೊಡಲಾಗುವುದು- ಎಂದು ಹೇಳಿದರು.

ದತಿಯಾ ಸಂಸ್ಥಾನದಲ್ಲಿ ಸುಧಾರಣಾ ಸಮಿತಿ

ದತಿಯಾ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳನ್ನು ರೂಪಿಸಲು ಸಮಿತಿಯೊಂದನ್ನು ರಚಿಸಲಾಗಿದೆ. ಇದರಲ್ಲಿ ೧೧ ಮಂದಿ ಸದಸ್ಯರಿರುವರು. ಅದಕ್ಕೆ ಅಲ್ಲಿನ ಮಹಾರಾಜರೇ ಅಧ್ಯಕ್ಷರು. ದಿವಾನರೇ ಉಪಾಧ್ಯಕ್ಷರು

ವೈಸರಾಯರು ರಾಜೀನಾಮೆ ಕೊಡುವರೇ ?

ಕೇಂದ್ರ ಸರ್ಕಾರದಲ್ಲಿರುವ ಲೀಗ್ ಸದಸ್ಯರು ರಾಜೀನಾಮೆ ಕೊಡಬೇಕೆಂದು ಕಾಂಗ್ರೆಸ್ಸು ಸೂಚಿಸಿರುವ ವಿಷಯದಲ್ಲಿ ವೈಸರಾಯರಿಗೂ ಬ್ರಿ|| ಪ್ರಧಾನಿ ಮಿ|| ಅಟ್ಲಿಯವರಿಗೂ ಭಿನ್ನಾಭಿಪ್ರಾಯ ತಲೆದೋರಿದೆಯೆಂದೂ, ಆದ್ದರಿಂದ ವೈಸರಾಯರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಲಿದ್ದಾರೆಂದೂ, ಲೇಬರ್ ಪಕ್ಷದ ಪಾರ್ಲಿಮೆಂಟರಿ ಕ್ಷೇತ್ರಗಳಲ್ಲಿ ಸುದ್ದಿ ಹಬ್ಬಿರುವುದಾಗಿ ಲಂಡನ್ನಿನಿಂದ ವಾರ್ತೆ ಬಂದಿದೆ. ಭಾರತವು ಸ್ವಾತಂತ್ರ್ಯವನ್ನು ಸಾಧಿಸುವ ವಿಚಾರದಲ್ಲಿ ಅಲ್ಪ ಸಂಖ್ಯಾತರು ಬಹು ಸಂಖ್ಯಾತರ ಪ್ರಗತಿಗೆ ಅಡ್ಡಿ ಬರುವುದನ್ನು ಸಹಿಸಲಾಗುವುದಿಲ್ಲವೆಂದು ಅಟ್ಲಿಯವರು ಹೇಳಿರುವುದನ್ನು ಬ್ರಿ|| ಮಂತ್ರಿ ಮಂಡಲವು ಎತ್ತಿ ಹಿಡಿಯುವುದಾಗಿ ನಂಬಲಾಗಿದೆ. ಕಾಂಗ್ರೆಸ್ಸು ಬ್ರಿ|| ಪ್ರಣಾಳಿಕೆಯನ್ನು ಒಪ್ಪಿರುವುದರಿಂದ ಅವರ ಪರವಾಗಿಯೇ ಲೇಬರ್ ಸರ್ಕಾರವು ವಾಲಿದೆಯೆಂದು ವ್ಯಕ್ತಪಡುತ್ತಿದೆ. ವೇವೆಲ್ಲರ ಜಾಗದಲ್ಲಿ ಬ್ರಿ|| ಮಂತ್ರಿ ಮಂಡಲದಲ್ಲಿರುವ ಒಬ್ಬರನ್ನು ನೇಮಿಸಲಾಗುವುದೆಂದೂ ಊಹಿಸಲಾಗಿದೆ.

ಕಗದೂರ್ರವರ ಉಪವಾಸ ಮುಂದೆ ಹೋಯಿತು

ಚಾಮರಾಜನಗರ ೧೭

ವೇದ ಪಾಠಶಾಲೆಗೆ ಮೂಗೂರು ಹಳೇನಾಡು ಕರ್ಣಾಟಕ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಸರ್ಕಾರದವರು ಹೊರಡಿಸಿರುವ ಆಜ್ಞೆಯನ್ನು ಜಾರಿಗೆ ತರುವ ವಿಚಾರದಲ್ಲಿ ಜಿಲ್ಲಾಧಿಕಾರಿಗಳೂ, ಸಬ್ ಡಿವಿಜನ್ ಆಫೀಸರೂ, ಅಮಲ್ದಾರರೂ ನಿನ್ನೆ ಇಲ್ಲಿಗೆ ಬಂದು ಭರವಸೆ ಇತ್ತಿರುವುದರಿಂದ ಶ್ರೀ ಕಗದೂರು ರಾಮಚಂದ್ರರಾಯರು ಇಂದಿನಿಂದ ಆರಂಭಿಸಲಿದ್ದ ಉಪವಾಸ ವ್ರತವನ್ನು ತಾತ್ಕಾಲಿಕವಾಗಿ ಮುಂದುವರಿಸಿದ್ದಾರೆ.

ವಿದ್ಯಾರ್ಥಿಗಳ ದಸ್ತಗಿರಿ ಮತ್ತು ಬಿಡುಗಡೆ

ದಿವಾನರ ಮಕ್ಕಳ ವಿರುದ್ಧ ಪ್ರದರ್ಶನ

ಸ್ವಂ.ಸು.ಫೋನ್] ಬೆಂಗಳೂರು ೧೭

ನಿನ್ನೆ ಸಂಜೆ ಬೆಂಗಳೂರು ವಿಶ್ವವಿದ್ಯಾನಿಲಯ ಸಂಘದ ವಾರ್ಷಿಕೋತ್ಸವವು ಟೌನ್ ಹಾಲಿನಲ್ಲಿ ನಡೆಯಲೇರ್ಪಾಡಾಗಿದ್ದಿತು. ದಿವಾನರ ಮಕ್ಕಳಾದ ಡಾ|| ಕೃಷ್ಣಸ್ವಾಮಿಯವರು ಮುಖ್ಯ ಭಾಷಣ ಮಾಡಲು ಆಹ್ವಾನಿತರಾಗಿದ್ದರು. ಸಭೆಯ ಕಾರ್ಯಕಲಾಪಗಳು ಪ್ರಾರಂಭವಾಗುವ ಮುನ್ನ ಡಾ|| ಕೃಷ್ಣಸ್ವಾಮಿಯವರ ವಿರುದ್ಧ ಕಪ್ಪು ಬಾವುಟದ ಪ್ರದರ್ಶನ ನಡೆಸಿದ ೧೦ ಮಂದಿ ವಿದ್ಯಾರ್ಥಿಗಳನ್ನು ಪೋಲೀಸರು ದಸ್ತಗಿರಿ ಮಾಡಿದರು. ಸಭೆ ಆರಂಭವಾಗಲು ಸಹಸ್ರಾರು ವಿದ್ಯಾರ್ಥಿಗಳು ಅವಕಾಶವನ್ನೇ ಕೊಡಲಿಲ್ಲ. ಎಲ್ಲೆಲ್ಲೂ ವಿರುದ್ಧ ಕೂಗುಗಳೇ ಕೇಳಿ ಬರುತ್ತಿದ್ದುವು. ಅಧ್ಯಕ್ಷತೆ ವಹಿಸಲು ಬಂದಿದ್ದ ಶ್ರೀ ಗುರುದತ್ತರೂ ಹಿಂತಿರುಗಿ ಹೋದರು. ಕಾಲೇಜು ಅಧಿಕಾರಿಗಳು ಶಾಂತಿ ಸ್ಥಾಪಿಸಲು ಪಟ್ಟ ಪ್ರಯತ್ನವೆಲ್ಲವೂ ವ್ಯರ್ಥವಾದುವು. ಕೊನೆಗೆ ಸಭೆಯನ್ನು ಮುಕ್ತಾಯಗೊಳಿಸಿರುವುದಾಗಿ ಹೇಳಿ ಯೂನಿಯನ್ ಅಧ್ಯಕ್ಷರೂ ಹೊರಟು ಹೋದರು. ಸಭೆಯೂ ಚದುರಿತು. ಇದಾದ ಸ್ವಲ್ಪ ಕಾಲಾನಂತರ ಸುಮಾರು ೧೦೦ ವಿದ್ಯಾರ್ಥಿಗಳು ಬೇರೆ ಸಂಘವನ್ನು ಸ್ಥಾಪಿಸಿಕೊಂಡಿರುವುದಾಗಿ ಘೋಷಿಸಿ, ಡಾ|| ಕೃಷ್ಣಸ್ವಾಮಿಯವರ ಭಾಷಣವನ್ನು ಕೇಳಿಕೊಂಡು ಹೋದರು. ಅಲ್ಲಿ ಪೋಲೀಸ್ ಕಾವಲು ಬಲವಾಗಿದ್ದಿತು. ದಸ್ತಗಿರಿಯಾದ ವಿದ್ಯಾರ್ಥಿಗಳನ್ನು ಆಮೇಲೆ ಬಿಡುಗಡೆ ಮಾಡಲಾಗಿದೆ.

ಸರ್ಕಾರದಲ್ಲಿ ಲೀಗು ಇದ್ದರೆ ಕಾಂಗ್ರೆಸ್ ರಾಜೀನಾಮೆ

ರಾಜ್ಯಾಂಗ ರಚನಾ ಸಭೆಯಲ್ಲಿ ಲೀಗು ಭಾಗ ವಹಿಸಬೇಕು. ಇಲ್ಲದಿದ್ದರೆ ಕೇಂದ್ರ ಸರ್ಕಾರವನ್ನು ತ್ಯಜಿಸಬೇಕು. ಹಾಗಿಲ್ಲದೆ ಲೀಗಿನವರು ಕೇಂದ್ರ ಸರ್ಕಾರದಲ್ಲಿರಲು ಅವಕಾಶ ಕೊಟ್ಟರೆ ಕಾಂಗ್ರೆಸ್ಸು ತನ್ನ ಪ್ರತಿನಿಧಿಗಳನ್ನು ವಾಪಸು ಕರೆಸುವುದಾಗಿ ಸರ್ದಾರ್ ಪಟೇಲರು ತಿಳಿಸಿದ್ದಾರೆ

ಪ್ರದೋಷ ಸಂಗೀತಗಳು

ಮೈಸೂರು ೧೭

ಬಿಡಾರಂ ಕೃಷ್ಣಪ್ಪನವರ ಮಂದಿರದಲ್ಲಿ ಪ್ರದೋಷ ಪ್ರಯುಕ್ತ ನಾಳೆ ಸಂಜೆ ೬|| ಗಂಟೆಗೆ ಟೈಗರ್ ವರದಾಚಾರ್ಯರ ಶಿಷ್ಯರಾದ ಸಂಗೀತ ಭೂಷಣ ಶ್ರೀ ಕೆ. ಆರಾವಮುದನ್‌ರವರ ಹಾಡುಗಾರಿಕೆ, ಆ|| ವಿ|| ವೆಂಕಟರಮಣಯ್ಯನವರ ಪಿಟೀಲು, ಶ್ರೀ ರಾ| ನಾರ್ಣರವರ ಮೃದಂಗವನ್ನೂ ಏರ್ಪಡಿಸಿರುತ್ತೆ.

ಕೃಷ್ಣರಾಜ ಮೊಹಲ್ಲಾ ನಾಟಾ ಬೀದಿ ಶ್ರೀರಾಮ ಮಂದಿರದಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀಮತಿ ಆರ್ ಜಲಜಾಕ್ಷಮ್ಮನವರ ಸಂಗೀತ ಕಚೇರಿಯು ನಡೆಯುತ್ತದೆ.

ಹೊಡೆದಾಟ

ಬಾಕಿ ಕೊಡಬೇಕೆಂಬ ಕಾರಣದ ಮೇಲೆ ಜಗಳವಾಗಿ ನಾರಾಯಣಶಾಸ್ತ್ರಿ ರಸ್ತೆಯ ಬೀಡಿ ಅಂಗಡಿ ಚಿಕ್ಕವೆಂಕಟಯ್ಯನೆಂಬುವನು ಗೊಲ್ಲಗೇರಿಯ ಮಲ್ಲಯ್ಯನೆಂಬುವನನ್ನು ನಿನ್ನೆ ರಾತ್ರಿ ಮಚ್ಚಿನಿಂದ ಹೊಡೆದು ಗಾಯಪಡಿಸಿದನೆಂದೂ, ಮಲ್ಲಯ್ಯನನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ, ಪೋಲೀಸಿನವರು ತನಿಖೆ ನಡೆಸುತ್ತಿರುವುದಾಗಿಯೂ ತಿಳಿದು ಬಂದಿದೆ.

ಸಾಧ್ವಿ

ತಾ|| ೧೭-೨-೪೭ ಸೋಮವಾರ

ಅಮೇರಿಕದಲ್ಲಿ ಮೈಸೂರು ಸುಧಾರಣೆಗಳ ಸಿದ್ಧತೆ

ಶ್ರೀಮನ್ಮಹಾರಾಜರವರ ಘೋಷಣೆಯು ಹೊರಟು ಬಹಳ ದಿನಗಳಾದರೂ ದಿವಾನರು ಇನ್ನೂ ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲವೆಂದು ಅನೇಕ ಪುಕಾರುಗಳು ಏಳುತ್ತಿವೆಯಷ್ಟೆ. ಇದಕ್ಕೆ ದಿವಾನರು ನಿನ್ನೆ ಒಂದು ಬಗೆಯಲ್ಲಿ ಉತ್ತರವಿತ್ತಿದ್ದಾರೆ. ಒಕ್ಕಲಿಗ ಜನಾಂಗದ ಪರವಾಗಿ ಅವರಿಗೆ ಒಪ್ಪಿಸಿದ ಬಿನ್ನವತ್ತಳೆಯ ಸಮಾರಂಭದಲ್ಲಿ ಸುಧಾರಣೆಗಳ ವಿಷಯವನ್ನೂ ಅವರು ಪ್ರಸ್ತಾಪಿಸಿದ್ದಾರೆ.

ಈ ದಿನ ತಾವು ಅಮೇರಿಕಕ್ಕೆ ತೆರಳಿ ಅಲ್ಲಿ ಆರು ವಾರ ಕಾಲ ಇರುವರೆಂದೂ, ಈ ಕಾಲದಲ್ಲಿಯೂ ಸಹ ಅವರು ಮೈಸೂರು ಸುಧಾರಣೆಗಳ ವಿಷಯವನ್ನು ಗಮನದಲ್ಲಿಟ್ಟು ಅದಕ್ಕೆ ಬೇಕಾದ ಸಿದ್ಧತೆಗಳನ್ನು ಅಲ್ಲಿಂದಲೇ ಮಾಡುವುದಾಗಿಯೂ ಹೇಳಿರುವರು. ಪ್ರಭುಗಳ ಸಂದೇಶವು ಬಂದ ಮೇಲೆ ಕಾಲಹರಣ ಮಾಡದೆ ಬೇಗನೆ ಕಾರ್ಯಕ್ರಮ ಕೈಗೊಳ್ಳುವುದಾಗಿ ದಿವಾನರು ಹೇಳಿದ್ದರು. ಇಷ್ಟು ದಿವಸ ಕಳೆದುದಕ್ಕಾಗಿ ಅನೇಕರು ಅಸಮಾಧಾನವನ್ನು ವ್ಯಕ್ತಪಡಿಸುತ್ತಿದ್ದರು. ಪ್ರಭುಗಳ ಆಜ್ಞೆಯನ್ನು ಈಡೇರಿಸಲು ಇಷ್ಟು ಸಾವಕಾಶವೇಕೆಂದೂ ಸಹ ಪ್ರಶ್ನಿಸುತ್ತಿದ್ದರು. ಆದರೆ ದಿವಾನರು ಹೇಳಿರುವ ಮಾತುಗಳಿಂದ ಈಗ ಎಷ್ಟು ಮಟ್ಟಿಗೆ ಸಮಾಧಾನವಾಗುವುದೆಂಬುದನ್ನು ಹೇಳಲು ಸಾಧ್ಯವಿಲ್ಲ.

ಅಮೇರಿಕದಿಂದ ದಿವಾನರು ಹಿಂತಿರುಗಲು ಎರಡು ತಿಂಗಳಾದರೂ ಬೇಕು. ಆ ನಂತರ ಅವರು ಪ್ರಭುಗಳಿಗೆ ಸಲಹೆಗಳನ್ನು ಕೊಡಬೇಕು. ಆದರೆ ಅವರು ಬಂದ ಮೇಲೂ ಸಹ ನೇರವಾಗಿ ತಮ್ಮ ಸಲಹೆಯನ್ನು ಕೊಡದೆ ಒಂದು ಪ್ರಶ್ನಾವಳಿಯನ್ನು ಹೊರಡಿಸುವುದಾಗಿ ಸೂಚಿಸಿದ್ದಾರೆ. ಈ ಪ್ರಶ್ನಾವಳಿಗಳಿಗೆ ಉತ್ತರಗಳು ಸಿದ್ಧವಾಗುವುದು ಎಂದಿಗೋ? ಅಂತೂ ಈ ಪ್ರಕರಣವು ಯಾವಾಗ ಒಂದು ಘಟ್ಟವನ್ನು ಮುಟ್ಟುವುದೋ ಹೇಳಲು ಸಾಧ್ಯವಿಲ್ಲ.

ಪ್ರಭುಗಳ ಘೋಷಣೆಯು ಹೊರಟಾಗ ಎಷ್ಟು ಬೇಗ ಅದು ಕಾರ್ಯರೂಪಕ್ಕೆ ಬರಬಹುದೆಂದು ನಿರೀಕ್ಷಿಸಲಾಗಿತ್ತೋ, ಅಷ್ಟು ಬೇಗ ಆಗುತ್ತಿಲ್ಲ. ಮಹಾಜನರ ಆಪೇ-ಕ್ಷೆ(?)

ತ್ರರಗಳಿಗೆ ಧಕ್ಕೆ ಉಂಟಾಗುತ್ತಿದೆ. ಮೈಸೂರಿಗೆ ಮುಂದೆ ಆಗಬೇಕಾದ ಸುಧಾರಣೆ ಏನೆಂಬುದು ಎಲ್ಲರಿಗೂ ಗೊತ್ತಾಗಿದೆ. ಇದನ್ನು ನಾನಾ ರೀತಿಯಲ್ಲಿ ಈಗಾಗಲೇ ವ್ಯಕ್ತಪಡಿಸಲಾಗಿದೆ. ಇದಕ್ಕಾಗಿ ದೊಡ್ಡ ವಿಚಾರಣೆ, ತನಿಖೆ, ಪ್ರಶ್ನೋತ್ತರ ಮುಂತಾದುವುಗಳ ಆಗತ್ಯವಿಲ್ಲ.

ಅಮೇರಿಕದ ವಾತಾವರಣದಲ್ಲಿ ಮೈಸೂರಿನ ಸುಧಾರಣೆಗಳ ಪರಿಶೀಲನೆಯು ನಡೆಯುವುದು ಒಂದು ವಿಶೇಷವೇ ಸರಿ. ಸರ್ ಸಿ. ಪಿ. ರಾಮಸ್ವಾಮಯ್ಯರವರ ತಿರುವಾಂಕೂರಿಗೆ ಅಮೇರಿಕದ ಮಾದರಿಯ ರಾಜ್ಯಾಂಗವನ್ನು ದೊರಕಿಸಿಕೊಡುವುದಾಗಿ ಹೇಳಿ ಒಂದು ಪೇಚಾಟವನ್ನು ಸೃಷ್ಟಿಸಿರುವರು. ಪ್ರಜಾ ಪ್ರಭುತ್ವ ತತ್ವದ ತೌರೂರಾದ ಅಮೇರಿಕದಲ್ಲಿಯೇ ಕುಳಿತು ನಮ್ಮ ದಿವಾನರು ಮೈಸೂರಿಗಾಗಿ ಅಲ್ಲಿ ಸಿದ್ಧಗೊಳಿಸಲಿರುವ ಸುಧಾರಣೆಗಳ ಮೇಲೆ ಅಮೇರಿಕದ ಗಾಳಿಯು ಯಾವ ರೀತಿ ಬೀಸಿ ಇವರು ಎಂತಹ ಸಲಹೆಗಳನ್ನು ಕೊಡಲಿರುವರೆಂಬುದನ್ನು ಕಾದು ನೋಡಬೇಕಾಗಿದೆ.

ಮೈಸೂರು ಸಿಟಿ ರೇಷನಿಂಗ್

No. R—1188—1946-47

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

1947 ನೇ ಇಸವಿ ಫೆಬ್ರವರಿ ಮಾಹೆ 19 ನೇ ತಾ|| ದಿವಸ ಮಧ್ಯಾಹ್ನ ಮಾತ್ರ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಲೈಸೆನ್ಸ್ ಪಡೆದ ವರ್ತಕರ ಡಿಪೋ, ಮೊಹಲ್ಲಾ ಸಬ್ ಗೋಡೌ ಮತ್ತು ಸಹಕಾರ ಸಂಘಗಳೂ ಸಹಾ ಮಹಾಶಿವರಾತ್ರಿ ಪ್ರಯುಕ್ತ ಮುಚ್ಚಲ್ಪಡುತ್ತವೆ.

(ಸಹಿ) ಅಬ್ದುಲ್ ರಜಾಕ್,
ಮೈಸೂರು, ರೇಷನಿಂಗ್ ಆಫೀಸರ್
೮-೨-೪೭ ಮೈಸೂರು ಸಿಟಿ.

ವಾರ ಭವಿಷ್ಯ

(೧೭-೨-೪೭ ರಿಂದ ೨೪-೨-೪೭ ರ ವರೆಗೆ)

(ಶ್ರೀ ನಿತ್ಯಾನಂದಸ್ವಾಮಿಗಳಿಂದ)

ಮೇಷ:- ಆರೋಗ್ಯ ಚೆನ್ನಾಗಿರುತ್ತದೆ. ಧನಾದಾಯ ಉತ್ತಮ. ವೆಚ್ಚ ಅಧಿಕ. ಉದ್ಯೋಗ ವ್ಯವಹಾರಗಳಲ್ಲಿ ಯಶ. ಪ್ರವಾಸದಿಂದ ಉದ್ದೇಶಸಾಧನೆ. ಮಾನ್ಯವ್ಯಕ್ತಿಗಳಿಂದ ಸನ್ಮಾನ. ತಾ|| ೧೯, ೨೧ ಮಿತ್ರಾಗಮನ ಸನ್ಮಾನ.

ವೃಷಭ:- ಆರೋಗ್ಯ ಉತ್ತಮ. ಮಿತ್ರಾಗಮನ. ಧನಲಾಭ ಉತ್ತಮ. ಉದ್ಯೋಗ ವ್ಯವಹಾರಗಳಲ್ಲಿ ಅಧಿಕಾರಿ ವರ್ಗದವರಿಂದ ಸಹಾಯ. ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು. ಪ್ರವಾಸದಿಂದ ಮಾನಸಿಕ ಚಿಂತೆ. ಶತ್ರುಗಳ ಕಿರುಕುಳ ಹೆಚ್ಚು. ಖರ್ಚು ಅಧಿಕ. ತಾ|| ೨೦, ೨೧, ೨೩ ಸಾಧಾರಣ ಲಾಭ. ಮಹತ್ವ ಪತ್ರಾಗಮನ.

ಮಿಥುನ:- ಆರೋಗ್ಯ ಸಾಧಾರಣ. ಧನಲಾಭಕ್ಕಿಂತ ಖರ್ಚು ಅಧಿಕ. ಮಾನಸಿಕ ಚಿಂತೆ ಜಾಸ್ತಿ. ಉದ್ಯೋಗ ವ್ಯವಹಾರಗಳಲ್ಲಿ ಸೋಲು. ಮಿತ್ರರಿಂದ ತಿರಸ್ಕಾರ. ಪ್ರವಾಸದಿಂದ ಅಪಘಾತ. ಮಂಗಳಕಾರ್ಯಗಳಿಗಾಗಿ ಹೆಚ್ಚಿನ ವ್ಯಯ. ತಾ|| ೧೯, ೨೧ ಸಾಧಾರಣ ಲಾಭ ಶಾಂತಿ.

ಕಟಕ:- ಆರೋಗ್ಯ ಕೆಡುತ್ತದೆ. ಧನಲಾಭ ಸಾಧಾರಣ. ವ್ಯಾಪಾರದಲ್ಲಿ ನಷ್ಟ. ಉದ್ಯೋಗ ವ್ಯವಹಾರಗಳಲ್ಲಿ ಅಪಯಶ. ಬಂಧುವರ್ಗದವರಿಂದ ತಿರಸ್ಕಾರ. ಪ್ರವಾಸದಿಂದ ಅಪಮಾನ. ತಾ|| ೧೮, ೨೦ ಸಾಧಾರಣ ಶಾಂತಿ ಮಿತ್ರದರ್ಶನ.

ಸಿಂಹ:- ಆರೋಗ್ಯ ಉತ್ತಮ. ಮಾನಸಿಕ ಚಿಂತೆ ಹೆಚ್ಚು. ಧನ ಲಾಭ ಉತ್ತಮ. ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ. ವ್ಯಾಪಾರದಲ್ಲಿ ಅನಿರೀಕ್ಷಿತ ಲಾಭ. ಧಾರ್ಮಿಕ ಕಾರ್ಯಗಳಿಗಾಗಿ ವಿಶೇಷ ಖರ್ಚು. ಅಧಿಕಾರ ವರ್ಗದವರ ಸ್ನೇಹ. ತಾ|| ೧೯, ೨೧, ೨೩ ಲಾಭ ಪ್ರವಾಸ ಶಾಂತಿ.

ಕನ್ಯಾ:- ಆರೋಗ್ಯ ಕೆಡುತ್ತದೆ. ಧನಾದಾಯ ಸಾಧಾರಣ. ಉದ್ಯೋಗ ವ್ಯವಹಾರಗಳಿಂದ ಅಶಾಂತಿ ಹೆಚ್ಚು. ಶತ್ರುಗಳ ಕಿರುಕುಳದಿಂದ ವ್ಯಾಪಾರದಲ್ಲಿ ನಷ್ಟ. ಮಂಗಳಕಾರ್ಯ ಮತ್ತು ಧಾ[…]ರ್ಯಗಳಿಗಾಗಿ ವಿಶೇಷ ಧನವ್ಯ[…] ವಾಸದಿಂದ ಅಪಮಾನ. ತಾ|| ೧[…] ೨೨ ಸಾಧಾರಣ ಲಾಭ. ಶಾಂತಿ.

ತುಲಾ:- ಆರೋಗ್ಯ ಉತ್ತಮ. […] ಲಾಭಕ್ಕಿಂತ ಖರ್ಚು ಹೆಚ್ಚು. […]ಗ ವ್ಯವಹಾರಗಳಲ್ಲಿ ಪ್ರಗತಿ. ವ್ಯಾ[…]ಲ್ಲಿ ಲಾಭ. ಅಧಿಕಾರಿಗಳಲ್ಲಿ ಮನ್ನ[…]ಣೆಯುತ್ತದೆ. ರಾಜಕೀಯ ಕ್ಷೇ[…] ಪ್ರವೇಶ. ತಾ|| ೨೦, ೨೨ ಖಚಿ[…]

ವೃಶ್ಚಿಕ:- ಆರೋಗ್ಯ ಸಾಧಾರ[…]ನಲಾಭ ಉತ್ತಮ, ವ್ಯಾಪಾರ ವ್ಯ[…]ರಗಳಿಂದ ಕಲಹ, ಮಿತ್ರರಿಂದ ಅ[…] ಶತ್ರುಗಳ ಕಿರುಕುಳ ಹೆಚ್ಚು, ಮ[…] ಚಿಂತೆ ಜಾಸ್ತಿ, ಕೌಟುಂಬಿಕ […]

(ಹಿಂದಿನ ಪುಟಕ್ಕೆ ಮುಂದುವ[…])

ರಾಜ್‌ಕಮಲ್

ಮೈಸೂರು

16-2-47 ರಿಂದ

ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಮ್ಯಾಟಿನಿ ಮಧ್ಯಾಹ್ನ 2-30,

1ನೇ ಆಟ ಸಂಜೆ 6, 2ನೇ ಆಟ ರಾತ್ರಿ 9-30

ಮಹಾತ್ಮರವರ

ಕೃಷ್ಣಲೀಲಾ

(ಟಿ. ಆರ್. ರಾಮಯ್ಯ ಮತ್ತು ಅಯ್ಯನಾರ್ರವರ ಕಾಡಿಕೆ)

-: ಭೂಮಿಕೆ :-

ಕೆಂಪರಾಜ್, ಬಳ್ಳಾರಿ ಲಲಿತ, ರತ್ನಮಾಲಾ, ಕಾಂತಾ, ರಾಘವೇಂದ್ರ ರಾವ್, ಮುಂತಾದವರು.

ದುಷ್ಟರಾಜನು ಸ್ವಾರ್ಥಾಭಿಲಾಷೆಯಿಂದ ತನ್ನ ಒಡಹುಟ್ಟಿದ ತಂಗಿಯ ಗಂಡನನ್ನು ಬಂಧನದಲ್ಲಿರಿಸಿ, ಅವಳ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳನ್ನು ಕೊಲೆ ಮಾಡಿಸಿದ ಕಥೆಯನ್ನು ತೋರಿಸುವ ಪೌರಾಣಿಕ ಚಿತ್ರ ಕನ್ನಡಿಗರ ಹೆಮ್ಮೆಯ ಕಾಣಿಕೆ.

Please note the alterations in Timings

ಆಪೆರಾ ಟಾಕೀ[ಸ್]

19-2-47 ರಿಂ[ದ]

ವಿ ದ್ಯಾ ಪ[…]

ಪ್ರತಿ ದಿನ ಮೂರು ಆಟಗಳ[ು] […]

: ಪಾತ್ರ :-

ಟಿ. ಆರ್. ರಾಮಚಂದ್ರನ್, ಕೆ. ಶ[…]

ಡಿ. ಬಾಲಸುಬ್ರಹ್ಮಣ್ಯಂ, ಪ್ರೇಮ[…]

ನಗರಾಭಿವೃದ್ಧಿ ಸಮಿತಿ, ಮೈಸೂ[ರು]

ತಾರೀಖು 12-2[…]

ಪ್ರಸಿದ್ಧ ಪತ್ರಿ[ಕೆ]

ಮೈಸೂರು ಸಿಟಿಯ ಅನೇಕ […]ಲ್ಲಾಗಳಲ್ಲಿ ಅನೇಕ ವರ್ಷಗಳಿಂದಲ[…] ವಸತಿಗೋಸ್ಕರ ಜಾಗಗಳನ್ನು […]ವುದು ಸರಿಯಷ್ಟೆ. ಇದರಲ್ಲಿ ಅನೇ[…]ಗಳು ಮನೆ ಕಟ್ಟದೆ ಖಾಲಿಯಾಗಿ […]ಕೊಂಡಿರುವುದು ತಿಳಿದು ಬಂದಿದ್ದ[…]ರಿಂದ ಮೈಸೂರು ಸಿಟಿಯಲ್ಲಿ ಸಾ[…] ಮನೆಗಳಿಲ್ಲದೆ ಬಹಳ ತೊಂದರೆಯ[…]ರುತ್ತದೆ. ಈ ಕಾರಣಗಳಿಂದ ಮನೆ[…] ಖಾಲಿ ಜಾಗವನ್ನು ಖಾಲಿಯಾಗಿಟ್ಟ[…] ಮೇಲೆ ಸೂಕ್ತ ಕಾರ್ಯಕ್ರಮವ[…] ಕೆಳಗೆ ಕಂಡ ರೀತಿಯಲ್ಲಿ ತೆಗೆದುಕೊ[…]ಕಾಗಿರುತ್ತೆ.

ಈ ಪ್ರಸಿದ್ಧ ಪತ್ರಿಕೆಯ ತಾ[…] ಒಂದು ತಿಂಗಳೊಳಗೆ ಖಾಲಿ ಜಾಗ[…]ದೀರರು ಮನೆಯನ್ನು ಕಟ್ಟ[…] ಆರಂಭ ಮಾಡದಿದ್ದಲ್ಲಿ 1913 ನೇ[…] ಮುಂಚೆ ಕೊಂಡಿರುವುದರ ವೈ[…] ಖಾಲಿಯಾಗಿರುವ ಜಾಗವನ್ನೆಲ್ಲಾ […] ಬೋರ್ಡಿಗೆ ಪುನಃ ಅಕ್ವೈರ್ ಮ[…]ಳ್ಳುವುದರ ಮೌಲ್ಯ ವಾಪಸ್ಸು ತೆ[…]ಳ್ಳಲಾಗುತ್ತೆ. ಮತ್ತು 1916 ರಿಂದ […] ನೇ ಡಿಸೆಂಬರ್ ಆಖೈರ್ ವರೆಗೆ […] ಬೋರ್ಡಿನಿಂದ ಪಡೆದು ಖಾಲಿ ಖಾ[…]ಗಿರುವ ಜಾಗವನ್ನು ವಾಪಸ್ಸು (re[…]) ತೆಗೆದುಕೊಳ್ಳಲಾಗುತ್ತದೆ.

ಇದರ ಮೇಲೆ ಇನ್ನು ಯಾವ […] ತಿಳುವಳಿಕೆಯನ್ನೂ ಜನಗಳಿಗೆ ಕೊ[…]ಗುವುದಿಲ್ಲವೆಂದು ಈ ಮೂಲಕ ತಿ[…]

(ಸಹಿ)

ಆರ್. ರಾಮಚಂದ್ರರಾವ್ ಬಾ[…]

ಅಧ್ಯಕ್ಷರು

ನಗರಾಭಿವೃದ್ಧಿ ಸಮಿತಿ, ಮೈ[ಸೂರು]

ವ್ಯಾನ್‌ಗಾರ್ಡ್ ಫೈರ್ ಮತ್ತು ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಮತ್ತು ವ್ಯಾನ್‌ಗಾರ್ಡ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

—: ಹೆಡ್ ಆಫೀಸ್:- ಮದ್ರಾಸ್ :—

ಇಂಡಿಯಾ ಮತ್ತು ಸಿಲೋನಿನಲ್ಲೆಲ್ಲಾ ಶಾಖೋಪಶಾಖೆಗಳಿವೆ.

ಫೈರ್, ಮೋಟಾರ್, ಮೆರೀನ್, ಆಕ್ಸಿಡೆಂಟ್, ವರ್ಕ್‌ಮೆನ್ಸ್ ಕಂಪೆನ್ಸೇಷನ್, ಲೈಫ್ ಮತ್ತು ಇನ್ನೂ ಅನೇಕ ತರಹೆಯ ಇನ್ಶೂರೆನ್ಸುಗಳನ್ನು ಕೈಗೊಳ್ಳುವ ಕಂಪೆನಿ.

ಪಾಲಿಸಿದಾರರುಗಳಿಗೆ ಹೆಚ್ಚಿಗೆ ಬೋನಸ್ಸು ಹಂಚಲ್ಪಟ್ಟಿರುತ್ತೆ.

ಏಜೆಂಟರುಗಳಿಗೆ ಧಾರಾಳವಾದ ಕಮಿಷನ್.

ಪಾಲಿಸಿ ತೆಗೆದುಕೊಳ್ಳಲೂ ಮತ್ತು ಏಜೆಂಟರುಗಳೂ ಇವರಲ್ಲಿ ವಿಚಾರಿಸಿ:-

ಎಂ. ಸಿ. ಸಂಪತ್ತಯ್ಯಂಗಾರ್,

ಸ್ಪೆಷಲ್ ರೆಪ್ರೆಸೆಂಟೆಟಿವ್, ಕೃಷ್ಣರಾಜಪುರಂ ಎಕ್ಸ್‌ಟೆನ್ಷನ್, ಹಾಸನ

ಸಂಪುಟ ೫] ಮಂಗಳವಾರ ೧೮—೩—೪೭ [ಸಂಚಿಕೆ ೧೬೪

ಭಾರತ-ಫ್ರಾನ್ಸುಗಳಿಗೆ – ರಾಯಭಾರಿಗಳು –

...ವಕಾಶಕ್ಕಾಗಿ ದಿವಾನರ ವಿಷಾದ

...ಸು ಬಂದಮೇಲೆ ಮಾತುಕತೆಯ ಭರವಸೆ

...ಪ್ರೋ॥] ಬೆಂಗಳೂರು ೧೮
...ಮೆರಿಕಕ್ಕೆ ತೆರಳುವ ಮುನ್ನ ದಿವಾನ
...ರಿಗೂ ಪ್ರಾರ್ಥನೆಯೊಂದನ್ನು ಮಾ
...ಡಿರುವರು. ಇದುವರೆಗೆ ಕಾರ್ಯ
...ವಗಳ ಪ್ರಯುಕ್ತ ಪ್ರಭುಗಳ ಸಂದೇಶ
...ಕಾರ್ಯಕ್ರಮವನ್ನು ಕೈಗೊಳ್ಳದಿದ್ದು
...ಗೆ ತನ್ನ ವಿಷಾದವನ್ನು ವ್ಯಕ್ತಪಡಿಸಿ
...ದೆ ಅನೇಕ ಕೆಲಸ ಕಾರ್ಯಗಳ ಮ
...ತುರದಲ್ಲಿ ಮಾತುಕತೆಗಳನ್ನು ನಡೆಸಿ
... ಅದು ತಮಗೇ ಸಮರ್ಪಕವಾಗಿರು
...ಲ್ಲವೆಂದು ಅವರು ಹೇಳುತ್ತಾರೆ.
...ರಕದಿಂದ ವಾಪಸು ಬಂದ ಮೇಲೆ ಎಲ್ಲ
...ಖಂಡರನ್ನೂ ಕರೆಸಿ ಮಾತುಕತೆ ನಡೆಸು
...ಗೆ ಸೂಚಿಸಿರುತ್ತಾರೆ. ಈ ಮಧ್ಯೆ ಹೊ
...ವ ಪ್ರಶ್ನಾವಳಿಗಳಿಗೆ ಮಹಾ ಜನರು
...ರವನ್ನೂ, ಸಲಹೆಗಳನ್ನೂ ಮಾರ್ಚ
...ನೇ ತಾರೀಖಿನ ವರೆಗೆ ಕಳುಹಿಸಿಕೊಡ
...ವೆಂದು ತಿಳಿಸಿರುತ್ತಾರೆ. ಇದರಲ್ಲಿ ಸಕ
... ಸಹಕರಿಸಬೇಕೆಂದು ಮತ್ತೊಮ್ಮೆ
...ರುತ್ತಾರೆ.
...ಇಂಟರ್ಮೀಡಿಯೇಟ್ ಕಾಲೇಜಿನ ಸಂಘ
...ವಾರ್ಷಿಕೋತ್ಸವದ ಭಾಷಣವನ್ನು ದಿವಾನರು
... ದಿನ ಮಾಡಿ, ಸಂಯುಕ್ತ ರಾಜ್ಯ ಸಂ
...ಮು ಸಮಿತಿಗಳ ಕಾರ್ಯ ಕಲಾಪವನ್ನು
...ಶಂಸಿದರು. ಇಡೀ ವಿದ್ಯಾರ್ಥಿಗಳ ಸಹಾ
...ಕ್ಕಾಗಿ ಏರ್ಪಡಿಸಿರುವ ನಿಧಿಯ ವಿಷಯ
...ಲ್ಲಿ ಪ್ರಶಂಸಿಸಿದರು. ಪರಸ್ಪರ ಸಹಿಷ್ಣು
...ತೆಯನ್ನು ವಿದ್ಯಾರ್ಥಿಗಳು ಬೆಳೆಸಬೇಕೆಂದು
...ಬೋಧಿಸಿದರು

...ಕಾರಿ ನೌಕರರಿಗೆ ಪರಿಹಾರ

...ಸು.ಪ್ರೋ॥] ಬೆಂಗಳೂರು ೧೮
ಇನ್ನು ಒಂದೆರಡು ದಿನಗಳಲ್ಲಿ, ಸರ್ಕಾರಿ
...ಕರರಿಗೆ ಕೊಡಲಾಗುವ ತಾತ್ಕಾಲಿಕ ಪರಿ
...ಹಾರದ ಬಗ್ಗೆ ಆಜ್ಞೆಯು ಹೊರಬೀಳಲಿದೆ
...ದು ಗೊತ್ತಾಗಿದೆ.
ದಿವಾನರು ಅಮೆರಿಕಕ್ಕೆ ತೆರಳಲು ನಿ
...ರಾತ್ರಿ ಇಲ್ಲಿಂದ ಪ್ರಯಾಣ ಬೆಳೆಸಿದ
... ನೂರಾರು ಜನ ಅಧಿಕಾರಿಗಳೂ, ಸಾ
...ರ್ವಜನರೂ ಹಾರ ತುರಾಯಿ ಗಳನ್ನು ಅ
...ರ್ಪಿಸಿ ಬೀಳ್ಕೊಟ್ಟರು. ಡಾ॥ ರಾಯ್ ರವ
... ಅವರು ಬರುವವರೆಗೆ ದಿವಾನಗಿರಿಯ
...ಕಾರ್ಯನಿರ್ವಹಣದಲ್ಲಿರುವರು.
ಶ್ರೇಷ್ಠ ನ್ಯಾಯಾಧೀಶರಿಗೆ ಈ ತಿಂಗ
...೨೦ ರಿಂದ ಮಾರ್ಚ ೧೫ ರ ವರೆಗೆ ರಜ
...ಕೊಡಲಾಗಿದೆ. ಶ್ರೀ॥ ಎಸ್. ವೆಂಕಟರಂಗ
...ಯ್ಯಂಗಾರ್ಯರು ಅವರ ಕೆಲಸವನ್ನು
...ನೋಡುವರು.

ಇಂಗ್ಲೆಂಡಿನಲ್ಲಿ ಮಿಶ್ರ ಸರ್ಕಾರವಿಲ್ಲ

ಇಂಗ್ಲೆಂಡಿನಲ್ಲಿ ಮಿಶ್ರ ಸರ್ಕಾರವೇರ್ಪ
...ಡುವೆಂಬುದು ಶುದ್ಧ ಸುಳ್ಳೆಂದೂ, ತಮ
...ಗೆ ಆ ಯೋಚನೆಯೇ ಇಲ್ಲವೆಂದೂ, ಪ್ರ
...ಧಾನಿ ಅಟ್ಲಿಯವರು ಹೇಳಿಕೆಯೊಂದರಲ್ಲಿ
...ತಿಳಿಸಿರುವರು. ಯುದ್ಧ ಕಾಲದಲ್ಲಿ ಜಯ
...ಗಳಿಸುವುದಕ್ಕಾಗಿ ಲೇಬರ್ ಪಕ್ಷದವರು ಕ
...ನ್ಸರ್ವೇಟಿವ್ ಸರ್ಕಾರದಲ್ಲಿ ಸೇರಿದರೆಂ
...ದೂ, ಕನ್ಸರ್ವೇಟಿವ್ ಪಕ್ಷದವರು ತಮ್ಮ
...ಸರ್ಕಾರವನ್ನು ಸೇರಿದರೆ ಸಾಮ್ಯವಾದ ಮಾ
...ರ್ಗವನ್ನೇ ಅವರು ಅನುಸರಿಸಬೇಕಾಗು
...ವುದೆಂದೂ ಹೇಳಿರುವರು.

ಸತ್ಯಾಗ್ರಹವಲ್ಲದೆ ಬೇರೆ ಮಾರ್ಗವಿಲ್ಲ

ಮೈಸೂರು ಕಾಂಗ್ರೆಸ್ಸಿನ ನಿರ್ಧಾರ

ಸ್ವಂ ಸು.ಪ್ರೋ॥] ಬೆಂಗಳೂರು ೧೮

ನಿನ್ನೆ ಮತ್ತು ಮೊನ್ನೆ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಭೆ ಸೇರಿ ರಾಜಕೀಯ ಪರಿಸ್ಥಿತಿಯನ್ನು ದೀರ್ಘವಾಗಿ ಪರಿಶೀಲಿಸಿತು. ಸುಭಾಷ್ ನಗರದ ಅಧಿವೇಶನದಲ್ಲಿ ಕೂಡಲೇ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಸತ್ಯಾಗ್ರಹ ಚಳುವಳಿಯನ್ನು ಕೈಗೊಳ್ಳುವ ನಿರ್ಣಯ, ಅನಂತರ ಅಧ್ಯಕ್ಷರು ಕೈಗೊಂಡ ಪ್ರವಾಸ, ಪ್ರಜೆಗಳು ನೀಡಿದ ಬೆಂಬಲ, ಪ್ರಭುಗಳಿಗೆ ಒಪ್ಪಿಸಿದ ಮನವಿ ಮುಂತಾದ ಅಂಶಗಳನ್ನು ಪರಿಶೀಲಿಸಿ ಪ್ರಭುಗಳ ಸಂದೇಶದ ಬಗ್ಗೆ ಕಾಂಗ್ರೆಸ್ಸಿನವರು ಕೇಳಿದ್ದ ಅಧಿಕೃತ ವಿವರಣೆಯು ಇದುವರೆಗೆ ಬಾರದಿರುವುದನ್ನು ಸೂಚಿಸಿ, ಇದಕ್ಕೆ ಯಾವ ಪ್ರತಿಕ್ರಿಯೆಯೂ ಬಾರದಿರುವುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿ ನಿರ್ಣಯ ಮಾಡಿತು. ದಿವಾನರು ಧೋರಣೆಯು ಮತ್ತು ಅಡ್ಡದಾರಿಯ ಮಾರ್ಗಗಳನ್ನು ಹಿಡಿದು ಕಾಲಹರಣ ಮಾಡುತ್ತಿರುವುದನ್ನು ಖಂಡಿಸಲಾಯಿತು. ಆಡಳಿತದಲ್ಲಿರುವ ದೌರ್ಬಲ್ಯವನ್ನು ನಿವಾರಿಸಲು ಸಂಪೂರ್ಣ ಪ್ರಜಾ ಪ್ರಭುತ್ವವು ಸ್ಥಾಪಿತವಾಗಬೇಕೆಂದೂ, ಜವಾಬ್ದಾರಿಯುತವಾದ ಮಂತ್ರಿಮಂಡಲವು ಏರ್ಪಡಬೇಕೆಂದೂ ನಮೂದಿಸಲಾಯಿತು ಈ ಗುರಿಯನ್ನು ಸಾಧಿಸಲು ಸತ್ಯಾಗ್ರಹವನ್ನು ಕೈಗೊಳ್ಳದೆ ಬೇರೆ ಮಾರ್ಗವೇ ಇಲ್ಲವೆಂದೂ ಸಹ ನಿರ್ಧರಿಸಲಾಯಿತು. ಮಾರ್ಚ ೧೧ ಮತ್ತು ೨ ನೇ ತಾ॥ ಗಳಲ್ಲಿ ಕೋಲಾರದಲ್ಲಿ ನಡೆಯುವ ಅಖಿಲ ಮೈಸೂರು ಕಾಂಗ್ರೆಸ್ ಕಮಿಟಿ ಅಧಿವೇಶನದ ಸಮಯಕ್ಕೆ ಸತ್ಯಾಗ್ರಹದ ಕಾಲವನ್ನು ಗೊತ್ತು ಮಾಡುವಂತೆಯೂ ತೀರ್ಮಾನವಾಗಿರುತ್ತದೆ.

ಈ ನಿರ್ಣಯದ ಪ್ರತಿಗಳನ್ನು ಶ್ರೀಮನ್ಮಹಾರಾಜರವರ ಆಪ್ತ ಕಾರ್ಯದರ್ಶಿಗಳಿಗೂ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೂ ಕಳುಹಿಸಿಕೊಡಲಾಗಿದೆ

ನೆಹರೂರವರಿಗೆ ಮಹಾತ್ಮರ ಪತ್ರ

ಅತ್ಯಂತ ಮುಖ್ಯ ವಿಷಯಗಳಿಂದ ಕೂಡಿದ ಎರಡು ಪತ್ರಗಳನ್ನು ಗಾಂಧೀಜಿಯವರು ದೆಹಲಿಗೆ ಕಳುಹಿಸಿರುತ್ತಾರೆಂದೂ, ಅವುಗಳಲ್ಲಿ ಒಂದು ನೆಹರೂರವರಿಗಿದೆಯೆಂದೂ ಹೇಳಲಾಗಿದೆ.

ಫ್ರಾನ್ಸಿನೊಡನೆ ಭಾರತದ ರಾಜತಾಂತ್ರಿಕ ಸಂಬಂಧ

ಪರಸ್ಪರ ಸ್ನೇಹ, ಸೌಹಾರ್ದ ಸಂಬಂಧವನ್ನು ಬೆಳೆಸುವುದಕ್ಕಾಗಿ ಫ್ರಾನ್ಸ್ ಮತ್ತು ಭಾರತ ಸರ್ಕಾರಗಳು ಉಭಯ ರಾಷ್ಟ್ರಗಳಲ್ಲಿ ರಾಯಭಾರಿಗಳ ವಿನಿಮಯವನ್ನು ಮಾಡಿಕೊಳ್ಳಲು ಒಪ್ಪಂದ ಮಾಡಿಕೊಂಡಿವೆ. ರಾಯಭಾರಿಗಳ ಹೆಸರುಗಳು ಇನ್ನೂ ನಿರ್ಧರವಾಗಿಲ್ಲ

ರೈಲ್ವೆ ದರ ರೂ. ಗೆ ಒಂದಾಣೆಯಂತೆ ಹೆಚ್ಚುವುದು

ಭಾರತದಲ್ಲಿ ರೈಲ್ವೆ ಪ್ರಯಾಣಿಕರ ಟಿಕೆಟ್ ದರವನ್ನು ರೂ ಗೆ ಒಂದಾಣೆಯಂತೆ ಮಾರ್ಚ ೧ ರಿಂದ ಹೆಚ್ಚಿಸಲಾಗುವುದು. ಏಪ್ರಿಲ್ ೧ ರಿಂದ ಗೂಡ್ಸ್ ದರಗಳನ್ನೂ ಸ್ವಲ್ಪ ಹೆಚ್ಚು ಮಾಡಲಾಗುವುದು ೪೭-೪೮ ರಲ್ಲಿ ೧೮೩ ಕೋಟಿ ರೂ ಆದಾಯ ಬಂದು ೧೭೫ ಕೋಟಿ ರೂ ಖರ್ಚಿನ ಅಂದಾಜು ಮಾಡಲಾಗಿದೆ. ಪ್ರಯಾಣಿಕರ ದರ ಹೆಚ್ಚಿಸುವುದರಿಂದ ನಾಲ್ಕುವರೆ ಕೋಟಿ ರೂ ಬರುತ್ತದೆ

ಐ. ಎನ್. ಎ. ದಿನಾಚರಣೆ

ಮೈಸೂರು ೧೮

ನೆನ್ನೆ ದಿನ ಇಲ್ಲಿನ ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಐ ಎನ್. ಎ. ದಿನಾಚರಣೆಯು ಕಾಲೇಜ್ ಮುಂಭಾಗದಲ್ಲಿ ನಡೆಯಿತು. ಭಾರತದ ಹೊರಗೆ ಹೋಗಿ ನೇತಾಜಿ ಬೋಸರ ನಾಯಕತ್ವದಲ್ಲಿ ಸರ್ವಸ್ವವನ್ನೂ ತ್ಯಾಗ ಮಾಡಿದ ವೀರರ ಧ್ಯೇಯ ಸಾಧನೆಗಾಗಿ ಈ ಸಭೆಯು ಸದಾ ಸಿದ್ಧವಾಗಿರುತ್ತದೆ; ಐ ಎನ್. ಎ ದಳಕ್ಕೆ ಸೇರಿದ ಅನೇಕ ಯೋಧರು ಇನ್ನೂ ಬಂಧನದಲ್ಲಿರುವುದನ್ನು ಖಂಡಿಸಿ ಅವರೆಲ್ಲರನ್ನೂ ಕೂಡಲೇ ಬಿಡುಗಡೆ ಮಾಡಲು ಸರ್ಕಾರವನ್ನು ಒತ್ತಾಯಪಡಿಸುತ್ತದೆ; ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳು ಒಂದು ವಾರದಿಂದ ಮುಷ್ಕರ ಹೂಡಿದ್ದರೂ ಸಹ ಅವರ ಕೋರಿಕೆಗಳನ್ನು ಸರ್ಕಾರದವರು ಇನ್ನೂ ಪೂರೈಸದಿರುವುದನ್ನು ಖಂಡಿಸಿ ಕೂಡಲೇ ಅವರ ಕೋರಿಕೆಗಳು ಪೂರೈಸಲ್ಪಡಬೇಕೆಂದು ಸರ್ಕಾರದವರನ್ನು ಒತ್ತಾಯಪಡಿಸುತ್ತದೆ; ತನ್ನ ಹಕ್ಕುಬಾಧ್ಯತೆಗಳ ಸಾಧನೆಗೋಸ್ಕರ ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳು ಹೂಡಿರುವ ಮುಷ್ಕರಕ್ಕೆ ತನ್ನ ಸಂಪೂರ್ಣ ಬೆಂಬಲವನ್ನು ನೀಡುತ್ತದೆ ಎಂಬಿವೇ ಮುಂತಾದ ನಿರ್ಣಯಗಳು ಸಭೆಯಲ್ಲಿ ಮಂಜೂರಾದುವು

ಇನ್ನು ಒಂದು ವಾರದಲ್ಲಿ ಬ್ರಿ॥ ಮಂತ್ರಿಮಂಡಲದ ಉತ್ತರ

ವೈಸರಾಯರು ಪಂಡಿತ ನೆಹರೂ ಮತ್ತು ಮಿ॥ ಲಿಯಾಖತ್ ಆಲಿ ಖಾನರಿಗೆ ಬ್ರಿಟಿಷ್ ಮಂತ್ರಿ ಮಂಡಲದಿಂದ ಈ ವಾರಾಂತ್ಯದಲ್ಲಿ ಪ್ರತ್ಯುತ್ತರ ಬರುವ ನಿರೀಕ್ಷಣೆಯಿದೆಯೆಂದು ಹೇಳುತ್ತಾರೆಂದು ವರದಿಯಾಗಿದೆ

೪ ಮಕ್ಕಳ ಜನನ

ಇತ್ತೀಚೆಗೆ ನಾಲ್ಕು ಮಕ್ಕಳು ಒಂದೇ ಸಾರಿ ಹುಟ್ಟುವ ಸಂಭವಗಳು ಹೆಚ್ಚುತ್ತಿವೆ ಮೊದಲು ೧೦ ಲಕ್ಷಕ್ಕೆ ಒಂದರಂತೆ ಇದ್ದುದು ಈಗ ೨॥ ಲಕ್ಷಕ್ಕೆ ಒಂದರಂತೆ ಹೆಚ್ಚಿದೆ ಕಳೆದ ಶನಿವಾರ ನ್ಯೂ ಯಾರ್ಕಿನ ೨೨ ವಯಸ್ಸಿನ ಜ್ಯಾಡಿತ್ ಮೆಸ್ಸೀ ಎಂಬಾಕೆಯು ೮ ನೇ ತಿಂಗಳಲ್ಲಿಯೇ ನಾಲ್ಕು ಮಕ್ಕಳನ್ನು ಹೆತ್ತಳು ಮೂರು ಮಕ್ಕಳು ಕೂಡಲೇ ಸತ್ತವು, ಇನ್ನೊಂದು ಉಳಿದಿರುತ್ತದೆ

ಬ್ರಿ॥ ಮಂತ್ರಿಮಂಡಲದಲ್ಲಿ ಭಾ॥ ಬಗ್ಗೆ ಭಿನ್ನಾಭಿಪ್ರಾಯ

ಭಾರತದ ಇಂದಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ಲಾರ್ಡ್ ಪೆಥಿಕ್ ಲಾರೆನ್ಸರೂ ಮತ್ತು ಸರ್ ಕ್ರಿಪ್ಸರೂ ಪಂಡಿತ ನೆಹರೂರವರ ಹೇಳಿಕೆಗೆ ಬೆಂಬಲವಿತ್ತಿದ್ದಾರೆಂದೂ ಆದರೆ ಪ್ರಧಾನಮಾತ್ಯ ಮಿ॥ ಅಟ್ಲಿಯವರೂ ಮತ್ತು ಮಿ॥ ಎ. ವಿ ಅಲೆಗ್ಸಾಂಡರರೂ ಇನ್ನೂ ಯಾವ ನಿರ್ಧಾರಕ್ಕೂ ಬಂದಿರುವುದಿಲ್ಲವೆಂದೂ ಅಂತರ ರಾಷ್ಟ್ರ ಸಭೆಯ ಭಾರತ ಪ್ರತಿನಿಧಿ ಶ್ರೀ ಲಂಕಾ ಸುಂದರಂರವರು ಹೇಳುತ್ತಾರೆ

ನಿಕ್ಕಲ್ ರೂಪಾಯಿಗಳು

ಈಗಿರುವ ನಾಲ್ಕಾಣೆ ಎಂಟಾಣೆಗಳಂತೆ ರೂಪಾಯಿನ ನಾಣ್ಯಗಳನ್ನೂ ನಿಕ್ಕಲಿನಲ್ಲೆ ತಯಾರಿಸುವ ಬಗ್ಗೆ ಮಸೂದೆಯೊಂದನ್ನು ಭಾರತ ಸರ್ಕಾರದ ಅರ್ಥ ಸಚಿವರಾದ ಮಿ॥ ಲಿಯಾಖತ್ ಅಲಿಖಾನರು ಕೇಂದ್ರ ಶಾಸನ ಸಭೆಯಲ್ಲಿ ಮಂಡಿಸಿದ್ದಾರೆ.

ಟ್ರಾಕ್ಟರುಗಳ ಕಾರ್ಖಾನೆ

ವಿಶಾಲವಾದ ಭೂಮಿಗಳ ವ್ಯವಸಾಯಕ್ಕೆ ಸಹಾಯಕವಾದ ಟ್ರಾಕ್ಟರ್ ಯಂತ್ರಗಳನ್ನು ತಯಾರಿಸಲು ೨ ಕೋಟಿ ರೂ ವೆಚ್ಚದಲ್ಲಿ ಮದರಾಸ್ ಸರ್ಕಾರದವರು ಕಾರ್ಖಾನೆಯೊಂದನ್ನು ಸ್ಥಾಪಿಸಲಿರುವರು. ದಿನಕ್ಕೆ ಒಂದರಂತೆ ಈ ಯಂತ್ರಗಳು ಅಲ್ಲಿ ತಯಾರಾಗುವುವು

ಕಾಂಗ್ರೆಸ್ಸಿಗೆ ಕಾಣಿಕೆ

ಹೆಗ್ಗಡದೇವನಕೋಟೆ ತಾಲ್ಲೂಕು ಹೊಸಹಳ್ಳಿ ಗ್ರಾಮದ ಚಿಕ್ಕಣ್ಣೇಗೌಡರ ಮೊಮ್ಮಗಳ ವಿವಾಹದಲ್ಲಿ ತಾಲ್ಲೂಕು ಕಾಂಗ್ರೆಸ್ಸಿಗೆ ಹತ್ತು ರೂ ಕಾಣಿಕೆ ಬಂದಿರುತ್ತದೆ. ಕಾಂಗ್ರೆಸ್ ತಾಂಬೂಲದ ಬಾಬ್ತು ಹೊಮ್ಮರಗಳ್ಳಿ ತಿಮ್ಮಯ್ಯನವರಿಂದ ಎರಡು ರೂ. ಬಂದಿರುತ್ತದೆ- ಎಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಸದಸ್ಯರಾದ ಶ್ರೀ॥ ಎಂ ಡಿ. ಕಿಟ್ಟಪ್ಪನವರು ತಿಳಿಸಿರುತ್ತಾರೆ.

ಪ್ರ॥ ಪ್ರ॥ ಸಭಾಧಿವೇಶನ

ಬರುವ ಫೆ॥ ೨೬ ನೇ ತಾರೀಖು ಬುಧವಾರ ಬೆಂಗಳೂರಿನಲ್ಲಿ ಪ್ರಜಾ ಪ್ರತಿನಿಧಿ ಸಭೆಯು ಬಜೆಟ್ ಅಧಿವೇಶನವು ಸೇರುವಂತೆ ವಿಧಾನವಾಗಿದೆ.

ಸಾಧಿ
ವ
ಕೂಡಲೇ ಚಂಪಾವಾರಾಗಿರಿ

ಸಾಧ್ವಿ

ತಾ|| ೧೮-೨-೪೭ ಮಂಗಳವಾರ

ಸತ್ಯಾಗ್ರಹದ ಸಂಭವ

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ಸತ್ಯಾಗ್ರಹದ ನಿರ್ಣಯವನ್ನು ಮಾಡಿರುತ್ತದೆ ಸತ್ಯಾಗ್ರಹದ ಕಾಲವನ್ನು ಗೊತ್ತು ಮಾಡುವುದು ಮಾತ್ರ ಉಳಿದಿದೆ. ಅದನ್ನೂ ಪಥ್ಯದಲ್ಲಿಯೇ ನಿರ್ಣಯಿಸಲಾಗುವುದು ಈ ಪರಿಸ್ಥಿತಿಗೆ ಆವ ಕಾಲ ಬಂದೊದಗಿದುದಕ್ಕಾಗಿ ಮೈಸೂರಿನ ನಿಜವಾದ ಹಿತೈಷಿಗಳೆಲ್ಲರೂ ವಿಷಾದಿಸಬೇಕಾಗಿದೆ.

ಶ್ರೀಮನ್ಮಹಾರಾಜರವರ ಸಂದೇಶವು ಬಂದ ಮೇಲೆ ಯಾವ ಬಗೆಯ ಆಶಾ ಜ್ಯೋತಿಯು ಸಕಲ ಪ್ರಜೆಗಳಲ್ಲಿಯೂ ಉದ್ಭವವಾಗಿದ್ದಿತೋ ಅದು ಇಂದು ಮಾಯವಾಗುತ್ತಿರುವುದು ವಿಷಾದದ ಸಂಗತಿ. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚೆಂಗಲರಾಯರೆಡ್ಡಿಯವರೂ ಸಹ ಪ್ರಭುಗಳ ಸಂದೇಶದಿಂದ ಪರಿಸ್ಥಿತಿಯು ಬದಲಾಯಿಸಿರುವುದಾಗಿ ಹೇಳಿದ್ದರು. ಅಂದೇ ಆರಂಭವಾಗಬೇಕಾಗಿದ್ದ ಸತ್ಯಾಗ್ರಹವು ಸದ್ಯಕ್ಕೆ ನಡೆಯುವುದಿಲ್ಲವೆಂದೂ ಸಹ ತಿಳಿಸಿದ್ದರು. ಮತ್ತು ದಿವಾನರು ಕೈಗೊಳ್ಳುವ ಕಾರ್ಯಕ್ರಮವನ್ನೇ ಮುಂದಿನ ವಿದ್ಯಮಾನಗಳು ಅವಲಂಬಿಸುವುವೆಂದೂ ಸೂಚಿಸಿದ್ದರು

ಆದರೆ ದಿವಾನರು ಇದುವರೆಗೆ ಯಾವ ವ್ಯವಸ್ಥೆಯನ್ನೂ ಮಾಡಿರುವುದಿಲ್ಲ. ಶ್ರೀಮನ್ಮಹಾರಾಜರವರ ಘೋಷಣೆಗೆ ಎಷ್ಟು ತ್ವರಿತವಾದ ಗಮನವನ್ನು ಕೊಡಬೇಕೋ, ಅಷ್ಟನ್ನು ಕೊಟ್ಟಂತೆ ಕಾಣುವುದಿಲ್ಲ ಈ ಮಧ್ಯೆ ಅವರಿಗೆ ದೆಹಲಿ, ಅಮೆರಿಕ, ಮುಂತಾದ ಕಡೆಗಳ ಪ್ರವಾಸಗಳು ಬೇರೆ ಪ್ರಾಪ್ತವಾಗುತ್ತಿವೆ ಅವುಗಳ ಸಂದಿನಲ್ಲಿಯೇ ಸುಧಾರಣೆಗಳ ಕೆಲಸವನ್ನೂ ನಿರ್ವಹಿಸುವುದಾಗಿ ಅವರು ಹೇಳಿರುತ್ತಾರೆ. ಆದರೆ ಸಾವಿರಾರು ಮೈಲಿ ದೂರದಿಂದ ಅವರು ಯಾವ ಯಾವ ಕೆಲಸಗಳನ್ನು ತಾನೆ ಗಮನಿಸಬಲ್ಲರು?

ಆರ್ಡಿನೆನ್ಸ್ ಮುಂತಾದ ಆವಸರದ ಶಾಸನಗಳು ಘೋಷಿಸಲ್ಪಟ್ಟಾಗ ಇಪ್ಪತ್ತನಾಲ್ಕು ಗಂಟೆಗಳೊಳಗೆ ಅವುಗಳನ್ನು ಜಾರಿಗೆ ತರುವುದರಲ್ಲಿ ಸರ್ಕಾರದ ಸೂತ್ರಧಾರಿಗಳು ಸರ್ವ ಶಕ್ತಿಯನ್ನೂ ಪ್ರಯೋಗಿಸುವುದನ್ನು ಸಕಲರೂ ಬಲ್ಲರು ಅದಕ್ಕಿಂತಲೂ ಮಿಗಿಲಾದ ಮಹಾಪ್ರಭುಗಳವರ ಸಂದೇಶವನ್ನು ಕಾರ್ಯ ರೂಪಕ್ಕೆ ತರಲು ಆಗುತ್ತಿರುವ ಕಾಲ ವಿಳಂಬವು ಯಾರಿಗೂ ಸಮ್ಮತವಲ್ಲ ಯಾವ ಪಕ್ಷ, ಪಂಗಡ ಮತ್ತು ಕೋಮುಗಳ ಭೇದವೂ ಇಲ್ಲದೆ ಸಕಲ ಪ್ರಜೆಗಳಿಗೂ ಸಾರಲ್ಪಟ್ಟಿರುವ ಪ್ರಭು ಸಂದೇಶಕ್ಕೆ ಈ ಬಗೆಯ ತಾತ್ಸಾರ ವರ್ತನೆಯು ಸ್ವಲ್ಪವೂ ಅನುರೂಪವಾಗಿರುವುದಿಲ್ಲ ಅದು ಹೊರಟ ಇಪ್ಪತ್ತನಾಲ್ಕು ಗಂಟೆಗಳೊಳಗೆ ದಿವಾನರು ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿತ್ತು ಇತರರು ಅದನ್ನು ಹೇಳುವುದಕ್ಕೆ ಮೊದಲೇ ಅವರು ಈ ಕೆಲಸವನ್ನು ಮಾಡಬೇಕಾಗಿತ್ತು ಆದರೆ ಇಷ್ಟು ದಿನಗಳು ವ್ಯರ್ಥವಾಗಿ ಕಳೆದುಹೋದುವು ಇನ್ನು ಮುಂದೆಯೂ ಸಹ ಪ್ರಶ್ನಾವಳಿಗಳೇ ಮುಂತಾದ ಗೊತ್ತುಗುರಿಯಿಲ್ಲದ ಮಾರ್ಗಗಳಲ್ಲಿಯೇ ಕಾಲಹರಣವಾಗುವ ಸೂಚನೆಗಳು ಕಂಡುಬರುತ್ತಿವೆ ಇವು ಮೈಸೂರಿನ

ಪೂರ್ವ ರಾಷ್ಟ್ರಗಳಿಗೆ ಭಾರತದ ನಿಯೋಗ

ಹಂಗಾಮಿ ಸರಕಾರದ ನಾಯಕತ್ವದಲ್ಲಿ ಪರ್ಷಿಯಾ, ಅರೇಬಿಯಾ, ಇರಾಕ್, ಈಜಿಪ್ಟ್ ಮತ್ತು ಟರ್ಕಿ ದೇಶಗಳಿಗೆ ಸೌಹಾರ್ದ ನಿಯೋಗವೊಂದನ್ನು ಕಳುಹಿಸಲು ಭಾರತದ ಸರ್ಕಾರವು ತೀರ್ಮಾನಮಾಡಿರುವುದಾಗಿ ತಿಳಿದು ಬಂದಿದೆ ಇದೇ ರೀತಿ ವಾಣಿಜ್ಯ ನಿಯೋಗವೊಂದನ್ನು ಕಳುಹಿಸಲಾಗುವುದೆಂದು ಹೇಳಲಾಗಿದೆ.

ಬ್ರಿ|| ರಾಷ್ಟ್ರಗೀತೆ ರದ್ದು

ಮದ್ರಾಸಿನ ಸ್ಕೂಲ್ ಫೈನಲ್ ಪಠ್ಯ ಪುಸ್ತಕಗಳಲ್ಲಿ ಬ್ರಿಟಿಷ್ ರಾಷ್ಟ್ರಗೀತೆಯನ್ನು ಹಾಕುವುದನ್ನು ನಿಲ್ಲಿಸಲಾಗುವುದೆಂದು ಮದ್ರಾಸ್ ಸರ್ಕಾರದವರು ನಿರ್ಧರಿಸಿದ್ದಾರೆ

ದೊಡ್ಡ ಅಧಿಕಾರಿಗಳೇ ಲಂಚಕೋರರು

ಲಂಚಕೋರತನದ ತನಿಖೆಗಾಗಿ ಸಿಂಧ್ ಸರ್ಕಾರದಿಂದ ನೇಮಿಸಲ್ಪಟ್ಟಿದ್ದ ವಿಶೇಷಾಧಿಕಾರಿಯಾದ ಮಿ|| ಬರ್ಡ್ ರವರು ತಮ್ಮ ತನಿಖೆಯ ವಿವರಣೆಯನ್ನು ತಯಾರಿಸಿದ್ದಾರೆ ದೊಡ್ಡ ದೊಡ್ಡ ಅಧಿಕಾರಿಗಳೇ ಲಂಚ ತೆಗೆದುಕೊಳ್ಳುತ್ತಿದ್ದಾರೆ. ಮಂತ್ರಿಗಳೂ ಮತ್ತು ಅಧಿಕಾರಿಗಳೂ ತಮ್ಮ ಆಸ್ತಿ ಪಾಸ್ತಿಗಳ ವಿವರಗಳನ್ನು ಕೊಡಬೇಕು, ಸಚಿವರ ಕಾರ್ಯದರ್ಶಿಗಳ ಕೆಲಸ ಸದಾ ನೋಡಲ್ಪಡಬೇಕು, ವ್ಯಾಪಾರ ಸಂಘಗಳೊಡನೆಯೂ ಮತ್ತು ದೊಡ್ಡ ದೊಡ್ಡ ವರ್ತಕರುಗಳೊಡನೆಯೂ ಸಚಿವರ ಮಕ್ಕಳೇ ಮೊದಲಾದ ಬಂಧುಗಳು ವ್ಯವಹರಿಸುವುದನ್ನು ತಡೆಯಬೇಕು. ಇವನ್ನು ಕಾರ್ಯರೂಪಕ್ಕೆ ತಂದರೆ ಲಂಚಕೋರತನವು ತಾನಾಗಿಯೇ ನಿರ್ಮೂಲವಾಗುವುದೆಂದು ಅವರು ತಮ್ಮ ವರದಿಯಲ್ಲಿ ಸೂಚಿಸಿದ್ದಾರೆ.

ಯಾವ ಪ್ರಜೆಗಳಿಗೂ ಒಪ್ಪಿಗೆಯಿಲ್ಲ

ಕಾಂಗ್ರೆಸ್ಸಿನವರು ಮುಂದುವರಿದು ಸತ್ಯಾಗ್ರಹವನ್ನು ಆರಂಭಿಸಿದರೆ ಅದರ ಜ್ವಾಲೆಯು ಸಮಾಜದ ಇತರ ಶಾಖೆಗಳಿಗೂ ತಟ್ಟದೆ ಇರುವುದಿಲ್ಲ ನಮ್ಮ ಸಂಸ್ಥಾನದಲ್ಲಿ ರಾಜಕೀಯ ಘರ್ಷಣೆಗೆ ಅವಕಾಶವಿಲ್ಲದಿರಲೆಂಬ ಘನವಾದ ಉದ್ದೇಶದಿಂದಲೇ ಪ್ರಭುಗಳು ತಮ್ಮ ಸಂದೇಶವನ್ನು ಇತ್ತರೆಂದು ನಾವು ನಂಬಿದ್ದೇವೆ. ಆದರೆ ಆ ಉದಾತ್ತವಾದ ಧ್ಯೇಯವನ್ನು ದಿವಾನರು ಇದುವರೆಗೆ ಅಪೇಕ್ಷಿಸದಿರುವುದು ಶೋಚನೀಯ. ಈಗ ಪರಿಸ್ಥಿತಿಯನ್ನು ಮತ್ತೆ ಶಾಂತತೆಗೆ ತರುವುದು ಮಹಾಸ್ವಾಮಿಯವರ ಕೈಯಲ್ಲಿಯೇ ಇರುತ್ತದೆ ಅವರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚೆಂಗಲರಾಯರೆಡ್ಡಿಯವರನ್ನು ಕರೆಸಿ, ಅವರೊಡನೆ ಮಾತುಕತೆ ನಡೆಸಿ ಕೂಡಲೇ ಸಂಸ್ಥಾನದಲ್ಲಿ ಪ್ರಜಾ ವಿಶ್ವಾಸಕ್ಕೆ ಪಾತ್ರವಾದ ಮಂತ್ರಿಮಂಡಲವನ್ನು ರಚಿಸಿ ರಾಜ್ಯಾಂಗ ಸಭೆಯೊಂದನ್ನು ನಿರ್ಮಿಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ನಾವು ಬೇಡುತ್ತೇವೆ. ಪ್ರಭುಗಳು ತಮ್ಮ ರಾಜನೀತಿ ನೈಪುಣ್ಯವನ್ನೂ, ದೂರದೃಷ್ಟಿಯನ್ನೂ, ಇದೇ ಸಂಸ್ಥಾನದ ಹಿತ ಸಾಧನೆಯನ್ನೂ ದೃಷ್ಟಿಯಲ್ಲಿಟ್ಟು ತಾವಾಗಿಯೇ ಈ ವಿಷಯದಲ್ಲಿ ಪ್ರವೇಶಿಸಿ ಸಂಸ್ಥಾನದಲ್ಲಿ ಶಾಂತಿ ಸಮಾಧಾನಗಳನ್ನು ನೆಲೆಗೊಳಿಸಬೇಕೆಂದು ನಾವು ಮತ್ತೊಮ್ಮೆ ಪ್ರಾರ್ಥಿಸುತ್ತೇವೆ.

ನೂಲಿನ ಹಂಚಿಕೆಯಲ್ಲಿ ನ್ಯೂನತೆ

ಮೈಸೂರು ೧೭

ಮೈಸೂರು ನಗರದಲ್ಲಿ ನೂಲಿನ ಹಂಚಿಕೆಯ ಬಗ್ಗೆ ಶ್ರೀ ಟಿ. ಮರಿಯಪ್ಪನವರು ಈ ರೀತಿ ಹೇಳಿಕೆ ಹೊರಡಿಸಿದ್ದಾರೆ:-

ಮೈಸೂರು ನಗರದಲ್ಲಿ ೧೫೦೦೦ ಕೈ ಮಗ್ಗದ ನೇಕಾರರಿದ್ದಾರೆ. ಹಿಂದೆ ಇವರಿಗೆ ತಲಾ ನಾಲ್ಕು ಕಟ್ಟು ನೂಲು ಕೊಡಲ್ಪಡುತ್ತಿತ್ತು. ಅದು ೩ ಕಟ್ಟಿಗೆ ಇಳಿದು ಈಗ ಕೇವಲ ೨ ಕಟ್ಟುಗಳನ್ನು ಕೊಡಲಾಗುತ್ತಿದೆ. ಇದು ಬಹಳ ಅನ್ಯಾಯ. ಬಡವರಾದ ಈ ಜನರ ಗೋಳು ಸರ್ಕಾರದವರ ಕಿವಿಗೆ ಮುಟ್ಟಿಲ್ಲವೆಂದು ಕಾಣುತ್ತದೆ ನೂಲಿನ ಹಂಚಿಕೆಯಲ್ಲಿ ನ್ಯೂನತೆಗಳಿವೆಯೆಂದೂ, ಪಕ್ಷಪಾತವಿದೆಯೆಂದೂ ಕೂಗು ಎದ್ದಿದೆ. ಸಾಲದುದಕ್ಕೆ ಹಕೋಟೆ ಅಜ್ಞೆ. ಈ ಜನರನ್ನು ಬಾಧಿಸುತ್ತಿದೆ. ಇಲಾಖಾ ಇನ್ಸ್ಪೆಕ್ಟರವರ ಕಛೇರಿ ಈ ಜನರಿರುವ ಮೊಹಲ್ಲಾಗಳಿಗೆ ದೂರದಲ್ಲಿದೆ. ಅಲ್ಲಿಗೆ ಹೋಗಿ ಸೀಲು ಹಾಕಿಸಲು ೨-೩ ದಿನಗಳ ಕೆಲಸ ಬಿಟ್ಟು ಕಾಯಬೇಕಾಗಿದೆ ಆದ್ದರಿಂದ ಸರ್ಕಾರದವರು ಈ ನೇಕಾರರ ಕುಂದುಕೊರತೆಗಳನ್ನು ಕೂಡಲೇ ಪರಿಹರಿಸುವರೆಂದು ನಂಬಿರುತ್ತೇನೆ.

ಗರ್ಭ ರಕ್ಷಿಣಿ

ಆರ್ಷೇಯ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು

ಆಯುರ್ವೇದ ವೈದ್ಯ ಭೂಷಣ

ಪಂಡಿತ್ ಕೆ. ವಿ. ವೆಂಕಟರಾಮಯ್ಯ,

ಡಿ|| ಬೋರ್ಡ್ ವೈದ್ಯ, ಅರಕಲವಾಡಿ.

ಚಾಮರಾಜನಗರ ತಾ||

ಮೈಸೂರು ಸಿಟಿ ರೇಷನಿಂಗ್

No. R-1-188-1946-47

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ :—

1947 ನೇ ಇಸವಿ ಫೆಬ್ರವರಿ ಮಾಹೆ 19 ನೇ ತಾ|| ದಿವಸ ಮಧ್ಯಾಹ್ನ ಮಾತ್ರ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಲೈಸೆನ್ಸ್ ಪಡೆದ ವರ್ತಕರ ಡಿಪೋ, ಮೊಹಲ್ಲಾ ಸಬ್ ಗೋಡೌ ಮತ್ತು ಸಹಕಾರ ಸಂಘಗಳೂ ಸಹಾ ಮಹಾಶಿವರಾತ್ರಿ ಪ್ರಯುಕ್ತ ಮುಚ್ಚಲ್ಪಡುತ್ತವೆ.

(ಸಹಿ) ಅಬ್ದುಲ್ ರಜಾಕ್,

ಮೈಸೂರು, ರೇಷನಿಂಗ್ ಆಫೀಸರ್

೮-೨-೪೭ ಮೈಸೂರು ಸಿಟಿ.

Edited, printed and published by A. R. Nagaraian at the Sadhvi Press D. Subbiah Road, Mysore

ಮದ್ರಾಸ್ ಬಿಕ್ಕಟ್ಟಿನಲ್ಲಿ ನಾಯಕರು ಕೈ ಹಾಕುವುದಿಲ್ಲ

ಮದ್ರಾಸ್ ಸರ್ಕಾರದಲ್ಲಿ ಉಂಟಾಗುವ ಬಿಕ್ಕಟ್ಟಿನಲ್ಲಿ ಕಾಂಗ್ರೆಸ್ ಹೈಕಮ್ಯಾಂಡಿನವರು ಕೈ ಹಾಕುವುದಿಲ್ಲವೆಂದು ಸರ್ದಾರ್ ವಲ್ಲಭಾಯಿ ಪಟೇಲರು ತಿಳಿಸಿರುವರು

ಸಿಟಿ ಲೇಬರ್ ಫೆಡರೇಷನ್

ಮೈಸೂರು ನಗರದ ಲೇಬರ್ ಫೆಡರೇಷನ್ನಿನ ಕಾರ್ಯ ನಿರ್ವಾಹಕ ಸಮಿತಿಯ ಸಭೆಯು ಇದೇ ೨೨ ನೇ ತಾ|| ಶನಿವಾರ ಸಂಜೆ ೭ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ಸೇರುತ್ತದೆ. ಸದಸ್ಯರೆಲ್ಲರೂ ತಪ್ಪದೆ ಹಾಜರಿರಬೇಕೆಂದು ಕಾರ್ಯದರ್ಶಿಗಳಾದ ಬಿ. ನಾರಾಯಣಸ್ವಾಮಿಯವರು ತಿಳಿಸಿದ್ದಾರೆ

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳ ಚಿಕಿತ್ಸೆಯು ಬಹು ಸುಲಭ ಧಾರಣೆಯಲ್ಲಿ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ದ್ರಾವಕಗಳೆಲ್ಲವೂ ದೊರೆಯುತ್ತವೆ

ಅಪೆರಾ ಟಾಕೀಸ್

19-2-47 ರಿಂದ

ವಿದ್ಯಾಪತಿ

ಪ್ರತಿ ದಿನ ಮೂರು ಆಟಗಳು

: ಪಾತ್ರ :-

ಟಿ ಆರ್ ರಾಮಚಂದ್ರನ್, ಕೆ. ತವ... ಡಿ. ಬಾಲಸುಬ್ರಹ್ಮಣ್ಯಂ, ಪ್ರೇಮಾ...

ಆರ್. ಎಸ್. ಪಂಡಿತರ ನಾಯಿಕೆಮ್ಮಿನ ಔಷಧಿ

7-8 ದಿವಸಗಳಲ್ಲೇ ಖಾಯಂ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರ್ಲು—ಉಬ್ಬಸಕ್ಕೆ

(Asthma)

ಖಾತರಿಯಾದ ಔಷಧಿ ದೊರೆಯುತ್ತದೆ ಅನೇಕ ದೊಡ್ಡ ಮನುಷ್ಯರು ಬಹುಮಾನ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ.

(Appendecitis) ಗುಲ್ಮ ಮತ್ತು (Tonsils) ಗಲಾಯುಕೆಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸಲಾಗುವುದು ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್. ಎಸ್. ಪಂ... ದಿವಾನ್ಸ್ ರೋಡ್, ಗೊಲ್ಲಗೇರಿ ಮೈಸೂರು

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ

೧೯-೨-೪೭ ರಿಂದ : : ಪ್ರತಿ ದಿನ ೩ ಆಟ

ಶ್ರೀ ಕೃಷ್ಣಲೀಲಾ

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೧೯—೨—೪೭ [ಸಂಚಿಕೆ ೧೬೫

ವೈಸ್ರಾಯರು ಲಂಡನ್ನಿಗೆ -ಹೋಗುವರೇ?-

ಸ್ವೈ॥ ಪತ್ರಿಕೋದ್ಯೋಗಿಗಳ ಸಮ್ಮೇಳನ

...ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನದ ೫ ನೇ ಅಧಿವೇಶನದ ಅ... ಚುನಾವಣೆಯ ವೇಳಾ ಪಟ್ಟಿಯು ... ಕಳಗೆ ಕಂಡಂತೆ ಕಾರ್ಯದರ್ಶಿ ... ಟಿ ಶ್ರೀನಿವಾಸರವರು ಪ್ರಕಟಿಸಿ...

...೭ ನೇ ತಾ॥ ವರೆಗೆ ಬಂದ ಅರ್ಜಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. ಇವು ... ಇದೇ ೨೪ ನೇ ತಾ॥ ಪ್ರದರ್ಶಿಸ... ಪುದು. ಅಧ್ಯಕ್ಷ ಚುನಾವಣೆಗೆ ಹೆ...ನ್ನು ಸೂಚಿಸಲು ಕಡೆಯ ತಾ॥ ...೪೭. ಉಮೇದುವಾರರ ಹೆಸರುಗ... ೬-೩-೪೭ ನೇ ತಾ॥ ಪ್ರಕಟಿಸಲಾಗು... ವಾಪಸು ತೆಗೆದುಕೊಳ್ಳುವ ಕಡೇ ೧೩-೩-೪೭. ಅಬ್ಸೆಂಟ್ ಬ್ಯಾಲಟ್ ೧-೪-೪೭. ಫಲಿತಾಂಶವನ್ನು ...೭ ನೇ ತಾ॥ ಪ್ರಕಟಿಸಲಾಗುವುದು.

ಜಿ. ಪಿ. ಯವರಿಗೆ ಯಾವ ಪರೀಕ್ಷೆಯೂ ಆಗಿಲ್ಲ

...ಸಂಯುಕ್ತ ಪ್ರಾಂತ್ಯದ ಪೋಲೀಸ್ ಇ...ರ್ ಜನರಲ್ಲರಾದ ಮಿ॥ ಜಿ. ಎ. ಪಿಯ... ಯಾವ ಪರೀಕ್ಷೆಯಲ್ಲೂ ಉತ್ತೀರ್ಣ...ಲ್ಲ ಅವರುಗಳಿಗೆ ಅಧಿಕಾರ ಕೊಡ... ಅವರ ವಿದ್ಯೆ ಏನೆಂಬುದರ ಪರಿಶೀಲ...ನೆ ನಡೆದಿರುವುದಿಲ್ಲ - ಎಂದು ಸಂಯುಕ್ತ ಪ್ರಾಂತ್ಯದ ಗೃಹ ಸಚಿವರಾದ ಮಿ॥ ಅಹಮ್ಮದ್ ಕಿದ್ವಾಯಿಯವರು ಹೇಳಿದ್ದಾರೆ

ಸತ್ಯಾಗ್ರಹಿಯ ಮೇಲೆ ಬಸ್ಸು ಹರಿಸಲ್ಪಟ್ಟಿತು

ಕಾಂಗ್ರೆಸ್ಸಿನವರಿಗೆ ಬಸ್ಸಿನಲ್ಲಿ ಸ್ಥಳ ಕೊಡದ್ದರಿಂದ ಭರತಪುರದ ರಮೇಶಸ್ವಾಮಿ ... ಸತ್ಯಾಗ್ರಹಿಯು ಬಸ್ಸಿನ ಮುಂದೆ ಮಲಗಿದ್ದು, ಹಾಗೆಯೇ ಬಸ್ಸನ್ನು ನಡೆಸಬೇಕೆಂದು ಅಧಿಕಾರಿಗಳು ಮಾಡಿದ ಆಜ್ಞೆಯನ್ನು ...ವರನು ನಿರಾಕರಿಸಿದುದರಿಂದ ಮಾಲೀಕನೇ ಬಸ್ಸನ್ನು ಹರಿಸಿ ಆ ಸತ್ಯಾಗ್ರಹಿಯನ್ನು ಕೊಂದ ಕಥೆಯನ್ನು ಸಂಸ್ಥಾನ ಪ್ರಜಾ ಸಮ್ಮೇಳನದ ಅಧ್ಯಕ್ಷರಾದ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ವಿವರಿಸುವರು.

ಹಿಂದುಗಳಿಗೇ ಪ್ರತ್ಯೇಕ ಪ್ರಾಂತ್ಯ

ಬಂಗಾಳದಲ್ಲಿನ ಹಿಂದುಗಳಿಗೇ ಒಂದು ಪ್ರತ್ಯೇಕ ಪ್ರಾಂತ್ಯವನ್ನು ರಚಿಸುವ ಬಗ್ಗೆ ...ರ್ಚಿಸುವುದಕ್ಕಾಗಿ ಅಲ್ಲಿನ ಹಿಂದೂ ಮಹಾಸಭೆಯವರು ಅಖಿಲ ಬಂಗಾಳ ಹಿಂದು ... ಸಮ್ಮೇಳನವೊಂದನ್ನು ಬರುವ ೧೫ ... ೧೭ ರಲ್ಲಿ ಕರೆದಿರುತ್ತಾರೆ

ಕೋಣಗಳ ಬಲಿ ನಿಲ್ಲಿಸಬೇಕು

ಪಟ್ಟಣ ಪರ್ಲಾಟ ಒಳಗೆ ಇರುವ ಕೋಣಗಳನ್ನು ಗ್ರಾಮದೇವತೆ ಹಬ್ಬ; ಮಾರೀ ... ಅಥವಾ ಇತರ ಯಾವ ಸಂದರ್ಭದಲ್ಲಿ ಬಲಿ ಕೊಟ್ಟರೆ ಸರ್ಕಾರದ ಕಾನೂನು ಭಂಗ ಮಾಡಿದಂತಾಗುತ್ತದೆ ಮತ್ತು ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ-ಎಂದು ...ವಾಗಿ ರಾಜಧಾನಿಯ ಗೋ ಸೇವಾ ಸಂಘದ ಶ್ರೀ ರಂಗೇಗೌಡರು ತಿಳಿಸುತ್ತಾರೆ

ಉಪಾಧ್ಯಕ್ಷರು

ಮೊನ್ನೆ ನಡೆದ ಹೆಗ್ಗಡದೇವನಕೋಟೆ ...ನ ಮುನಿಸಿಪಲ್ ಉಪಾಧ್ಯಕ್ಷ ಚುನಾವಣೆಯಲ್ಲಿ ಶ್ರೀ ಹೆಚ್. ಎ. ದಾಸರಾಜುರವರು ಜಯಶಾಲಿಗಳಾಗಿರುತ್ತಾರೆ.

ಆಯುರ್ವೇದ ಕಾಲೇಜು

ಮೈಸೂರು ೧೯

ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಸ್ಥಿತಿಯನ್ನು ಉತ್ತಮಗೊಳಿಸಬೇಕೆಂದು ಅನೇಕ ವೇಳೆ ಸರ್ಕಾರದವರನ್ನು ಪ್ರಾರ್ಥಿಸಿದರೂ ಇಲ್ಲಿಯವರೆಗೂ ಯಾವ ಕಾರ್ಯಕ್ರಮಗಳನ್ನೂ ಕೈಗೊಳ್ಳದೆ ಈಗ ಪರೀಕ್ಷಾ ಸಮಯದಲ್ಲಿ ಪಾಠ ಪ್ರವಚನಗಳು ನಡೆಯದೆ ತೊಂದರೆಗೆ ಈಡಾಗಿ ಮುಷ್ಕರ ಹೂಡಿರುವ ಸ್ಥಿತಿಗೆ ಬಂದಿರುವುದು ಶೋಚನೀಯವಾಗಿದೆ. ಈಗಲಾದರೂ ಸರ್ಕಾರದವರು ಕಾಲೇಜಿನ ಸ್ಥಿತಿಯನ್ನು ಪರಿಶೀಲಿಸಿ ಕೂಡಲೇ ಹೆಚ್ಚು ಸಂಖ್ಯೆಯಲ್ಲಿ ಅಧ್ಯಾಪಕರನ್ನು ನೇಮಿಸಿ ವಿದ್ಯಾರ್ಥಿಗಳಿಗೆ ಸೌಕರ್ಯವನ್ನುಂಟುಮಾಡಿ ಕೊಡುತ್ತಾರೆಂದು ನಂಬಿರುತ್ತೇನೆ. ವಿದ್ಯಾರ್ಥಿಗಳೂ ಸಹ ಕಾಲೇಜಿನ ಗೌರವಕ್ಕೆ ಕುಂದು ತರದಂತೆ ವರ್ತಿಸುವರೆಂದೂ ಆಶಿಸುತ್ತೇನೆ- ಎಂಬುದಾಗಿ ಆಯುರ್ವೇದ ಮತ್ತು ಯುನಾನಿ ಕಾಲೇಜು ಪದವೀಧರರ ಸಂಘದ ಅಧ್ಯಕ್ಷರು ಬರೆದಿದ್ದಾರೆ

ದನಗಳ ಪ್ರದರ್ಶನ

ಸ್ವಂ. ಸು.] ಚೆನ್ನರಾಯಪಟ್ಟಣ ೧೭

ಈ ಊರಿನಲ್ಲಿ ದನಗಳ ಪ್ರದರ್ಶನವು ಪೌರ ಸಭೆಯವರಿಂದ ಏರ್ಪಟ್ಟು ಕಳೆದ ೪ ನೇ ತಾ॥ ಪ್ರಾರಂಭ ಮಹೋತ್ಸವವು ತಾಲ್ಲೂಕಿನ ಅಮಲ್ದಾರ್ ಶ್ರೀ ಬ್ರಹ್ಮರಾಯಪ್ಪನವರ ಅಧ್ಯಕ್ಷತೆಯಲ್ಲಿಯೂ, ೮ ನೇ ತಾ॥ ಬಹುಮಾನ ವಿನಿಯೋಗವು ಹಾಸನ ಜಿಲ್ಲಾಧಿಕಾರಿಗಳಾದ ಶ್ರೀ ಹೆಚ್. ನಿರಂಜನರಾಜೇ ಅರಸಿನವರ ಅಧ್ಯಕ್ಷತೆಯಲ್ಲಿಯೂ ನೆರವೇರಿತು. ಪ್ರದರ್ಶನಕ್ಕೆ ೧೦,೦೦೦ ಕ್ಕೆ ಮೇಲ್ಪಟ್ಟು ರಾಸುಗಳು ಬಂದು ಸೇರಿದ್ದವು ಉತ್ತಮವಾದ ೨೪ ರಾಸುಗಳಿಗೆ ಬಹುಮಾನ ಹಂಚಲ್ಪಟ್ಟಿತು

ಪ್ರಜಾ ಸಮ್ಮೇಳನಕ್ಕೆ ಪ್ರತಿನಿಧಿಗಳು

ಸ್ವಂ. ಸು.] ಚಿಕ್ಕಮಗಳೂರು ೧೭

ನಿನ್ನೆ ದಿನ ಇಲ್ಲಿನ ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಪ್ರತಿನಿಧಿಗಳ ಸಭೆ ಸೇರಿ ಕಡೂರು ಜಿಲ್ಲೆಯಿಂದ ಶ್ರೀಗಳಾದ ಟಿ. ಸೀತಾರಾಮಯ್ಯ, ಬಿ ಕೆ ನರಸಿಂಹಮೂರ್ತಿ, ವೈ ಎಂ ಚಂದ್ರಶೇಖರಯ್ಯ ಮತ್ತು ಎಸ್ ಅಣ್ಣಪ್ಪಶೆಟ್ಟಿ ಇವರುಗಳು ಅಖಿಲ ಭಾರತ ಸಂಸ್ಥಾನ ಪ್ರಜೆಗಳ ಪರಿಷತ್ತಿಗೆ ಪ್ರತಿನಿಧಿಗಳಾಗಿ ಹೋಗಬೇಕೆಂದು ತೀರ್ಮಾನಿಸಲಾಯಿತು

ಬ್ರಿಟಿಷ್ ಸರ್ಕಾರದ ತಾಕೀತು

ಸಂಸ್ಥಾನ ನೌಕರರಿಗೆ ಇಂಡಿಯಾ ಸೆಕ್ರೆಟರಿಯವರು ಪತ್ರವನ್ನು ಬರೆದು ಈ ವಾರಾಂತ್ಯದಲ್ಲಿ ಅವರು ಕೇಳಿರುವ ವಿಷಯಗಳಿಗೆ ಬ್ರಿ॥ ಸರ್ಕಾರದವರು ಉತ್ತರ ಕಳುಹಿಸುವುದಾಗಿ ತಿಳಿಸಿದ್ದಾರೆ. ಈ ಮಧ್ಯೆ ಯಾವ ಅಪ್ಪಣೆಯೂ ನಿರ್ಧಾರವಾಗಬಾರದೆಂದೂ ಸಹ ಅವರು ಕೋರಿದ್ದಾರೆ. ರಾಜ್ಯಾಂಗ ಸಭೆ ಮತ್ತು ತಾತ್ಕಾಲಿಕ ಸರ್ಕಾರಗಳ ಬಗ್ಗೆ ಬ್ರಿ॥ ಸರ್ಕಾರದವರು ತಾಟಸ್ಥ್ಯ ನೀತಿಯನ್ನು ಅನುಸರಿಸುವಂತೆ ಸೂಚಿಸಿ ಈ ಸಂಸ್ಥೆಗಳು ತಮ್ಮ ನಿಯಮಿತ ಕಾರ್ಯಗಳಲ್ಲಿ ಮುಂದುವರಿಯುವಂತೆ ಬ್ರಿ॥ ಸರ್ಕಾರದ ಹೇಳಿಕೆಯಲ್ಲಿ ಕೋರಲಾಗುವುದೆಂದೂ ಸಹ ಹೇಳಲಾಗಿದೆ

ರೈಲಿಗೆ ಲೀಗ್ ಧ್ವಜ

ಪಂಜಾಬಿನಲ್ಲಿ ಮುಸ್ಲಿಂ ಲೀಗಿನವರು ರೈಲು ಸಂಚಾರಕ್ಕೆ ಬಹಳ ಅಡಚಣೆಯುಂಟುಮಾಡುತ್ತಿರುವರು ಲಾಹೋರ್ ಬಳಿ ಫ್ರಾಂಟಿಯರ್ ಮೇಲ್ ಟ್ರೈನನ್ನು ಮುಸ್ಲಿಂ ವಿದ್ಯಾರ್ಥಿಗಳು ಮೊನ್ನೆ ನಿಲ್ಲಿಸಿ ಇಂಜನ್ನಿನ ಮೇಲೆ ಲೀಗ್ ಧ್ವಜವನ್ನು ಏರಿಸಿದರು. ರೈಲ್ವೆ ಗಾರ್ಡ್ ಮತ್ತು ಡ್ರೈವರರು ಅದಕ್ಕೆ ಸಲಾಮು ಹೊಡೆದ ನಂತರವೇ ರೈಲು ಮುಂದೆ ಹೋಗಲು ಅವಕಾಶ ಕೊಡಲಾಯಿತು. ಪೂರ್ವಭಾವಿಯಾಗಿ ಪರಿಶೀಲಿಸಲ್ಪಡದ ಕೋಮುವಾರು ಸುದ್ದಿಗಳನ್ನು ಪ್ರಕಟಿಸದಂತೆ ಪಂಜಾಬ್ ಸರ್ಕಾರದವರು ಹೊರಡಿಸಿರುವ ಆಜ್ಞೆಗಳನ್ನು ಉಲ್ಲಂಘಿಸುವುದಾಗಿ ಲೀಗಿನ ಪತ್ರಿಕೆಗಳು ಹೇಳುತ್ತಿವೆ.

ವಾರ್ಷಿಕೋತ್ಸವ

ಸ್ವಂ. ಸು.] ಶ್ರೀರಂಗಪಟ್ಟಣ ೧೭

ನಿನ್ನೆ ಶ್ರೀ ಜಯಲಕ್ಷ್ಮೀ ನಿನಿಮಾ ಥಿಯೇಟರಿನಲ್ಲಿ ಪ್ರೌಢ ವಿದ್ಯಾಶಾಲೆಯ ವಾರ್ಷಿಕೋತ್ಸವವು ಜಿಲ್ಲಾಧಿಕಾರಿಗಳಾದ ವಿ ಗಿ ಕೆ. ಮಹಮದ್ ಆಹಮದ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿಯೂ, ಮಂಜನಾಥ್ ಪಾರ್ಟಿಯವರಿಂದ ಮ್ಯಾಜಿಕ್ ಟೊಂಬಿ ಮತ್ತು ಸಿವಿಲ್ ಮ್ಯಾರೇಜ್ ಎಂಬ ನಾಟಕಗಳೂ ಶ್ರೀ ಎಸ್ ಶ್ರೀನಿವಾಸರಾವ್‌ರವರಿಂದ ಚಲನ ಚಿತ್ರದ ಗೀತೆಗಳೂ ಆದನಂತರ ರಾಷ್ಟ್ರಗೀತೆಯೊಡನೆ ವಾರ್ಷಿಕೋತ್ಸವವು ಮುಕ್ತಾಯವಾಯಿತು

ವೈಸರಾಯರು ಲಂಡನ್ನಿಗೆ

ಈ ತಿಂಗಳು ೨೦ ನೇ ತಾ॥ ನಡೆಯುವ ತಮ್ಮ ಮಗಳ ಮದುವೆಯ ನಂತರ ಕೆಲ ಕಾರ್ಯದ ಮಾತುಕತೆಗಳಿಗಾಗಿ ವೈಸರಾಯರು ಲಂಡನ್ನಿಗೆ ಬರುವಂತೆ ಆಹ್ವಾನಿಸಲ್ಪಟ್ಟಿದ್ದಾರೆಂದು ತಿಳಿದು ಬಂದಿದೆ. ಅವರು ವಿಮಾನದಲ್ಲಿ ತೆರಳುವರೆಂದು ಹೇಳಲಾಗಿದೆ. ಅವರು ರಾಜೀನಾಮೆ ಕೊಡುವರೆಂಬ ಸುದ್ದಿಗೆ ಸಮರ್ಥನೆ ದೊರೆತಿಲ್ಲ.

ಮದರಾಸಿನಲ್ಲಿ ಹೆಚ್ಚು ಅಕ್ಕಿ ರೇಷನ್

ಇದುವರೆಗೆ ಐದು ಜಿಲ್ಲೆಗಳಲ್ಲಿ ಹೆಚ್ಚಿಸಿರುವಂತೆ ಇನ್ನೂ ಏಳು ಜಿಲ್ಲೆಗಳಲ್ಲಿ ಇನ್ನು ಮುಂದೆ ಹನ್ನೆರಡು ಔನ್ಸ್ ಅಕ್ಕಿಯ ಪಡಿತರವನ್ನು ಕೊಡಲು ಮದರಾಸ್ ಸರ್ಕಾರದವರು ನಿರ್ಧರಿಸಿರುತ್ತಾರೆ.

○ ಕೆಲವು ದಿನಗಳಿಂದಲೂ ಕೊಯಮುತ್ತೂರು ಗಿರಣಿಗಳಲ್ಲಿ ನಡೆಯುತ್ತಿದ್ದ ಮುಷ್ಕರಗಳನ್ನು ಮುಕ್ತಾಯಗೊಳಿಸಲು ಮಾಲಿಕರು ಮಾಡಿದ ಪ್ರಯತ್ನಗಳು ನಿರರ್ಥಕವಾದುದರಿಂದ ಮಿಲ್ಲುಗಳ ಬಾಗಿಲುಗಳನ್ನು ಈಗ ಮಾಲೀಕರೇ ಮುಚ್ಚಿರುವರೆಂದು ತಿಳಿದು ಬಂದಿದೆ.

(ಹಿಂದಿನ ಪುಟದಿಂದ ಮುಂದುವರಿದಿದೆ)

ಮಹಾ ಸಂಸ್ಥಾನದವರು ಈ ರೀತಿ ಶ್ರೀಮುಖವನ್ನು ದಯಪಾಲಿಸಿ, ಆ ವಿಷಯವನ್ನು ಇತರ ಸ್ಮಾರ್ತ ಬ್ರಾಹ್ಮಣ ಶಿಷ್ಯ ಮಂಡಲಿಯವರಿಲ್ಲರಿಗೂ ತಿಳಿಸಿರುತ್ತಾರೆ:- ನಿಮ್ಮ ಜನಗಳು ಬ್ರಾಹ್ಮಣರು; ನಿಮ್ಮ ಜನಗಳು ಸ್ಮಾರ್ತ ಮತದಲ್ಲಿ ಹಳೇನಾಡು ಕರ್ನಾಟಕರು, ಇನ್ನು ಮುಂದೆ ನಿಮ್ಮ ವಿಷಯದಲ್ಲಿ ಅಪ ಶಬ್ದವನ್ನು ಯಾರೊಬ್ಬರೂ ಹೇಳಕೂಡದೆಂತಲೂ, ದೂಷಣೆ ಮಾಡಿದ್ದು ಮಾಡಕೂಡದೆಂತಲೂ ಸಹ ಶಿಷ್ಯರಿಗೆಲ್ಲಾ ಅಪ್ಪಣೆ ಕೊಡಿಸಿದೆ ನಿಮ್ಮ ವಿಷಯ ಸರ್ಕಾರದ ಲೆಕ್ಕದಲ್ಲಿ ವಿವರಿಸುವ ವಿಚಾರದಲ್ಲಿ, ನಿಮ್ಮ ಜನರು ಸರ್ಕಾರದಲ್ಲಿ ಹೇಳಿಕೊಂಡದ್ದರ ಮೇಲೆ ಇಲ್ಲಿನ ಅಭಿಪ್ರಾಯ ತಿಳಿಯಬೇಕಾಗಿ ಬಂದಲ್ಲಿ ಮೇಲ್ಕಂಡಂತೆ ವಿಶದವಾಗಿ ಅಪ್ಪಣೆ ಕೊಟ್ಟು ಬರೆಸಿ ಕಳುಹಿಸಲಾಗುತ್ತೆ'.

ಈ ರೀತಿ ಸಂಸ್ಥಾನದವರು ಅಪ್ಪಣೆ ಕೊಟ್ಟ ಮೇಲೆ ಇವರು ಸರ್ಕಾರಕ್ಕೆ ತಿಳಿಸಿ ಆಗ ಈ ಜನಗಳಿಗೆ ಬಂದಿದ್ದ ತೊಂದರೆಯನ್ನೂ, ಭೀತಿಯನ್ನೂ ತಪ್ಪಿಸಿದರು. ಅಂದರೆ, ಇವರನ್ನು ಸ್ಮಾರ್ತ ಬ್ರಾಹ್ಮಣರ ಗುಂಪಿನಲ್ಲಿ ಸೇರಿಸಿದರು. ಆ ಬಳಿಕ ಯಾರಿಂದಲೂ ಯಾವ ಆಕ್ಷೇಪಣೆಯೂ ಇಲ್ಲದೆ ತಮ್ಮ ಕೈಲಾದಷ್ಟು ಬ್ರಾಹ್ಮಣೋಚಿತ ಕರ್ಮಗಳನ್ನು ಇವರು ಮಾಡಿಕೊಂಡು ಬರುತ್ತಾ ಇರುತ್ತಾರೆ

ಮೇಲ್ಕಂಡ ಶ್ರೀ ಮುಖದವರು ಈಚೆಗೆ ಈ ಹಳೇನಾಡು ಕರ್ನಾಟಕ ಪಂಗಡದವರನ್ನು ಮೇಲಕ್ಕೆ ಎತ್ತಬೇಕೆಂದು ಅನೇಕ ಪ್ರಯತ್ನಗಳನ್ನು ಮಾಡುತ್ತಾ ಇದ್ದಾರೆ ಹೀಗಿರುವಲ್ಲಿ ಬ್ರಾಹ್ಮಣ ಮಹಾ ಜನರಲ್ಲಿ ಕೆಲವರು ವಿಷಯಗಳನ್ನು ತಿಳಿಯದೆ ಅಥವಾ ತಿಳಿದಿದ್ದರೂ ಇವರ ಏಳಿಗೆಗೆ ಅಸ್ತಿಬಾರ ... ಇವರು ಒಟ್ಟು ಬ್ರಾಹ್ಮಣ ಮಂಡಲಿಯವರಿಗೇನೇ ಶ್ರೇಯಸ್ಕರವಲ್ಲ.

ಸೂಚನೆ

ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ. -ವ್ಯವಸ್ಥಾಪಕ.

ಸಾಧ್ವಿ

ತಾ॥ ೧೯-೨-೪೭ ಬುಧವಾರ

ಹಿಂದೂ ಪಾಕಿಸ್ಥಾನವೇ ?

ಮುಸ್ಲಿಂ ಲೀಗಿನವರು ಹಿಂದೂಸ್ತಾನವನ್ನು ಇಬ್ಭಾಗ ಮಾಡಲು ತೊಡಗಿರುವ ಪ್ರಯತ್ನಕ್ಕೆ ಪ್ರತಿಕ್ರಿಯೆಯು ನಾನಾ ರೂಪಗಳಲ್ಲಿ ಹೊರಡುತ್ತಿದೆ. ಒಂದು ರಾಷ್ಟ್ರದಲ್ಲಿ ಎರಡು ಸ್ವತಂತ್ರ ಕೋಮುವಾರು ರಾಜ್ಯಗಳಿರುವುದು ಉಚಿತವಲ್ಲವೆಂದು ಎಲ್ಲರೂ ಹೇಳುತ್ತಿರುವರು. ಆದರೂ ಸಹ ಲೀಗಿನವರು ತಮ್ಮ ಹಠವನ್ನೇ ಸಾಧಿಸಲು ಉದ್ಯುಕ್ತರಾಗಿರುವರು

ಪಾಕೀಸ್ಥಾನದ ಸಾಧನೆಗಾಗಿ ಮುಸ್ಲಿಂ ಲೀಗಿನವರು ಈಗಾಗಲೇ ಹಲವು ಬಗೆಯ ಪ್ರಚಾರಗಳನ್ನು ಕೈಗೊಂಡಿದ್ದಾರೆ. ಇವು ಇನ್ನೂ ಯಾವ ಕಾರ್ಯ ರೂಪವನ್ನೂ ತಾಳದಿರುವುದಿಲ್ಲ. ಇನ್ನೂ ವಿರೋಧ ಪ್ರದರ್ಶನ, ಪೇಗಾಡಂಬರ ಮತ್ತು ಭಯೋತ್ಪಾದನೆಗಳಲ್ಲಿಯೇ ಅಡಕವಾಗಿರುತ್ತವೆ ಹಿಂದುಗಳು ಬಹು ಸಂಖ್ಯೆಯಲ್ಲಿರುವ ಪ್ರದೇಶಗಳಿಂದ ಮುಸ್ಲಿಮರನ್ನೂ, ಮುಸ್ಲಿಮರು ಹೆಚ್ಚಾಗಿರುವ ಕಡೆಗಳಿಂದ ಹಿಂದುಗಳನ್ನೂ ವಾಪಸು ಕರೆಸಿ ಪರಸ್ಪರ ಸಂಖ್ಯೆಗಳನ್ನು ವಿನಿಮಯ ಮಾಡುವ ಹಗಲುಗನಸಿನ ಸಲಹೆಯೊಂದನ್ನೂ ಲೀಗಿನವರು ಮುಂದಿಡುತ್ತಿದ್ದಾರೆ ಅಲ್ಲದೆ ಮುಸ್ಲಿಮರು ಗುಂಪಾಗಿರುವ ಕಡೆಗಳಲ್ಲಿ ಅವರಿಗಾಗಿ ಪ್ರತ್ಯೇಕ ವಸತಿಗಳನ್ನು ಕಲ್ಪಿಸಬೇಕೆಂದು ಕಾಂಗ್ರೆಸ್ ಮಂತ್ರಿಮಂಡಲಗಳನ್ನು ಒತ್ತಾಯಪಡಿಸುತ್ತಿದ್ದಾರೆ.

ಇವೆಲ್ಲಕ್ಕಿಂತಲೂ ಮಿಗಿಲಾದ ಪ್ರಯತ್ನವೊಂದು ನಡೆಯುತ್ತಿರುವುದಾಗಿಯೂ ವರದಿಯಾಗಿದೆ ಮುಸ್ಲಿಂ ಲೀಗಿನವರೇ ಆಳುತ್ತ ನಡೆಸುತ್ತಿರುವ ಬಂಗಾಳ ಪ್ರಾಂತ್ಯದಲ್ಲಿ ಮೋಲ್ಯಾಂಡ ಸಲಹೆಗಳನ್ನು ಜಾರಿಗೆ ತರುವ ಪ್ರಯತ್ನಗಳು ನಡೆಯುತ್ತಿರುವುದಾಗಿಯೂ ಹೇಳಲಾಗಿದೆ ಬಿಹಾರ್ ಪ್ರಾಂತ್ಯದಿಂದ ಅನೇಕ ಸಂಖ್ಯೆಯಲ್ಲಿ ಮುಸ್ಲಿಮರನ್ನು ಪಶ್ಚಿಮ ಬಂಗಾಳಕ್ಕೆ ವಲಸೆ ಬರುವಂತೆ ಬಂಗಾಳ ಸರ್ಕಾರದವರು ಏರ್ಪಾಡುಗಳನ್ನು ಮಾಡುತ್ತಿರುವರೆಂದೂ ಅಲ್ಲಿ ಸಣ್ಣದೊಂದು ಪಾಕಿಸ್ತಾನವು ನಿರ್ಮಿತವಾಗುತ್ತಿದೆಯೆಂದೂ ಹಿಂದೂ ಮಹಾಸಭೆಯವರು ಹೇಳಿದ್ದಾರೆ. ಇದನ್ನು ಪ್ರತಿಭಟಿಸಲು ಅವರು ಮತ್ತೊಂದು ಯೋಜನೆಯನ್ನು ಸೂಚಿಸಿರುತ್ತಾರೆ, ಹಿಂದುಗಳು ಒಂದಾಗಿರುವ ಪ್ರದೇಶಗಳಲ್ಲಿ ಪ್ರತ್ಯೇಕ ಸ್ವತಂತ್ರ ಹಿಂದೂ ಪ್ರಾಂತವನ್ನು ರಚಿಸಬೇಕೆಂಬ ಸಲಹೆಯನ್ನು ಅವರು ಮುಂದಿಡುತ್ತಾರೆ. ಈ ವಿಷಯವು ಬಂಗಾಳ ಪ್ರಾಂತ್ಯದ ಹಿಂದೂ ಮಹಾಸಭೆಯಲ್ಲಿ ಬೆಳೆದಿದೆ. ಪಾಕಿಸ್ತಾನದ ಪ್ರತಿಧ್ವನಿಯು ಯಾವ ಯಾವ ಅನರ್ಥವನ್ನು ಉಂಟುಮಾಡುವುದೆಂಬುದಕ್ಕೆ ಇದು ಒಂದು ನಿದರ್ಶನ.

ಆದರೆ ರಾಷ್ಟ್ರವನ್ನು ಇಬ್ಭಾಗ ಮಾಡಲು ವಿರೋಧಿಸುವ ರಾಷ್ಟ್ರ ನಾಯಕರು ಈ ಬಗೆಯಲ್ಲಿ ಪ್ರತ್ಯೇಕ ಹಿಂದೂಸ್ತಾನವೊಂದನ್ನು ನಿರ್ಮಿಸುವುದಕ್ಕೆ ಒಪ್ಪಲು ಸಾಧ್ಯವಿಲ್ಲ. ಪಾಕಿಸ್ತಾನದ ಸ್ಥಾಪನೆಯಿಂದ ಆಗಬಹುದಾದ ಅನರ್ಥಗಳು ಸಂಕುಚಿತ ಮತ್ತು ಪ್ರತ್ಯೇಕ ಕೋಮುವಾರು ಭಾಗವಾದ ಇಂತಹ ಮತ್ತೊಂದು ಪ್ರದೇಶದ ಸ್ಥಾಪನೆ ಯಿಂದಲೂ ಉಂಟಾಗದಿರದು, ಇಡೀ ಭರತಖಂಡವೆಲ್ಲವೂ ಒಂದೇ ರಾಷ್ಟ್ರವಾಗಿ ಇರಬೇಕೆಂಬ ಆದರ್ಶವು ಸಕಲರಿಗೂ ಮಾನ್ಯವಾದುದು. ಇದಕ್ಕೆ ವ್ಯತಿರೇಕವಾದ ಭಾವನೆಗಳು ಹಾನಿಕರವಾದುವು. ತಾತ್ಕಾಲಿಕವಾಗಿ ಒದಗುವ ಕಷ್ಟ, ನಷ್ಟಗಳಿಗಾಗಿ ಪ್ರತ್ಯೇಕತೆಯ ನೀತಿಯನ್ನು ಅನುಸರಿಸುವುದು ಸೋಲಿನ ಮನೋಭಾವವೇ ಸರಿ. ಪಾಕಿಸ್ತಾನವಾದಕ್ಕೂ ಸಹ ಇದು ಸಮರ್ಥನೆಯನ್ನು ಕೊಡಲು ಕಾರಣವಾಗುವುದು. ಅಖಂಡ ಹಿಂದೂಸ್ತಾನದ ವಾದಿಗಳೂ, ಬಂಗ ವಿಭಜನೆಯ ವಿರೋಧಿಗಳೂ ಆದ ಬಂಗಾಳದ ಹಿಂದುಗಳು ರಾಷ್ಟ್ರ ವಿಘಾತಕವಾದ ಇಂತಹ ಸೂಚನೆಗಳಿಗೆ ಮನ ಸೋಲಲಾರರೆಂದು ನಾವು ಹಾರೈಸುತ್ತೇವೆ.

ಗ್ವಾಲಿಯರಿಗೆ ಪ್ರತಿನಿಧಿಗಳು

ಗ್ವಾಲಿಯರಿನಲ್ಲಿ ನಡೆಯಲಿರುವ ಅಖಿಲ ಭಾರತ ಪ್ರಜಾ ಸಮ್ಮೇಳನದಲ್ಲಿ ಭಾಗ ವಹಿಸಲು ಶ್ರೀಗಳಾದ ಹೆಚ್. ಕೆ ವೀರಣ್ಣಗೌಡ, ಎ ಜಿ. ಗೌಡ, ಎ ಸಿ. ಮಾದೇಗೌಡ, ಕೆ. ಎ ವೀರಪ್ಪ, ಎಂ ಪುಟ್ಟೇಗೌಡ, ಎಸ್ ಕೆ. ಸಿದ್ದೇಗೌಡ ಮತ್ತು ಹೆಚ್ ಸಿದ್ದರಾಮಯ್ಯ ಇವರುಗಳು ಮಂಡ್ಯ ಜಿಲ್ಲೆಯ ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿರುತ್ತಾರೆ

ಬರ್ಮಾ ಸ್ವಾತಂತ್ರ್ಯಕ್ಕಾಗಿ ಪೊಲೀಸರ ಹೋರಾಟ

ನವೆಂಬರ್ ೧ ನೇ ತಾ॥ ನೊಳಗೆ ಬರ್ಮಾವು ಸ್ವತಂತ್ರ ರಾಷ್ಟ್ರವೆಂದು ಘೋಷಿಸಬೇಕು ; ಇಲ್ಲದಿದ್ದರೆ ಅಲ್ಲಿನ ಪೊಲೀಸ್ ದಳದವರು ಸಂಪೂರ್ಣವಾದ ಹೋರಾಟವನ್ನು ಹೂಡುವರು - ಎಂಬುದಾಗಿ ರಂಗೂನಿನಲ್ಲಿ ೧೦ ಸಹಸ್ರ ಪೊಲೀಸ್ ನೌಕರರ ಸಭೆಯಲ್ಲಿ ಪೊಲೀಸರ ಸಂಘದ ಅಧ್ಯಕ್ಷರಾದ ವಾ ಮಾಂಗರು ಹೇಳಿರುವರು.

ಮೂಗೂರು ಕರ್ನಾಟಕರಿಗೆ ವೇದಾಧ್ಯಯನದ ಅಗತ್ಯ

ಮೈಸೂರಿನ ವಕೀಲರೂ ನ್ಯಾಯವಿಧಾಯಕ ಸಭಾ ಸದಸ್ಯರೂ ಆದ ಶ್ರೀ॥ ಎಸ್. ಕೃಷ್ಣಸ್ವಾಮಿರಾಯರು ಈ ರೀತಿ ಬರೆಯುತ್ತಾರೆ:-

ಚಾಮರಾಜ ನಗರದಲ್ಲಿ ಮ॥ ರಾ॥ ಕಗಡೂರು ರಾಮಚಂದ್ರರಾಯರು ಉಪವಾಸ ವ್ರತವನ್ನು ಆರಂಭಿಸುವರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುದು ಸರಿಯಷ್ಟೆ. ಇವರು ಯಾವ ಗೋಸ್ಕರ ಉಪವಾಸವನ್ನು ಪ್ರಾರಂಭಿಸುತ್ತಾರೆಂಬುದು ಮಹಾಜನಗಳ ಗೋಚರಕ್ಕೆ ಬರುವುದು ಅಗತ್ಯವಾಗಿದೆ

ಬ್ರಾಹ್ಮಣ ಸಂಘದಲ್ಲಿ, ಕಾರಣಾಂತರದಿಂದ ಹಿಂದೆ ಬಿದ್ದಿರುವ ಮೂಗೂರು ಕರ್ನಾಟಕರನ್ನು ಮೇಲಕ್ಕೆ ಎತ್ತಬೇಕೆಂಬ ಅಭಿಪ್ರಾಯದಿಂದ ಮ॥ ರಾ॥ ಕಗಡೂರರು ಪ್ರಯತ್ನ ಪಡುತ್ತಿದ್ದಾರೆ. ಈ ಮೂಗೂರು ಕರ್ನಾಟಕರು ಹಳೇನಾಡು ಕರ್ನಾಟಕರೆಂಬ ಸಂಘದಲ್ಲಿ ಒಂದು ಒಳಪಂಗಡದವರಾಗಿರುತ್ತಾರೆ. ಈ ಹಳೇನಾಡು ಕರ್ನಾಟಕರು ಮೊಟ್ಟ ಮೊದಲು ಈ ದೇಶಕ್ಕೆ ರಾಜಾಶ್ರಿತರಾಗಿ ಬಂದ ಬ್ರಾಹ್ಮಣ ಪಂಗಡದವರಾಗಿ, ಇವರು ಪೂರ್ವದಲ್ಲಿ ದೊಡ್ಡ ದೊಡ್ಡ ಕೆಲಸದಲ್ಲಿದ್ದರು. ಈಚೆಗೆ ಈ ದೇಶಕ್ಕೆ ಬಂದ ಇತರ ಬ್ರಾಹ್ಮಣರು ಇವರ ಏಳಿಗೆಗೆ ಸ್ವಲ್ಪ ಅಡ್ಡಿಯಾಗಿ ಇವರಿಗೆ ವಿರೋಧಿಗಳಾಗಿ ಪರಿಣಮಿಸಿದರು

ಹಳೇನಾಡು ಕರ್ನಾಟಕ ಪಂಗಡದವರ ಬಹು ಸಂಖ್ಯೆಯ ಜನಗಳು ಲೌಕಿಕರಾಗಿದ್ದರು ಇವರಲ್ಲಿ ವೈದಿಕರ ಸಂಖ್ಯೆ ಕಡಿಮೆಯಾಗಿತ್ತು. ಈ ಕಾರಣಗಳಿಂದ ಇತರ ಬ್ರಾಹ್ಮಣರು ಕೆಲವರು ಇವರನ್ನು ಕಂಡರೆ ತಿರಸ್ಕಾರ ಭಾವವನ್ನು ಹೊಂದಿದ್ದರು. ವಿಷ್ಯಮಾನಗಳು ಈ ರೀತಿ ಇರುವಲ್ಲಿ ಮೈಸೂರು ದೇಶದಲ್ಲಿ ಮೊದಲನೆ ಸೆನ್ಸಸ್ ... ಪುದಕ್ಕೆ ಮುನ್ನ ಪ್ರಬಲವಾದ ಸ್ಥಳ... ಆಕ್ರಮಿಸಿಕೊಂಡಿದ್ದ ಇತರ ಬ್ರಾ... ಈ ಹಳೇನಾಡು ಕರ್ನಾಟಕ ಜ... ಬ್ರಾಹ್ಮಣೇತರ ಗುಂಪಿನಲ್ಲಿ ಸೇರಿ... ಯತ್ನ ನಡೆಸಲು ಪ್ರಾರಂಭ ಮಾ...

ಆಗ ಹಳೇನಾಡು ಕರ್ನಾಟಕ ... ಸೇರಿದ ಜನಗಳು ತಮಗೂ, ... ಹ್ಮಣರಿಗೂ ಗುರುಗಳಾದ ಶ್ರೀ ಶೃಂಗೇ... ರದ ಜಗದ್ಗುರುಗಳಲ್ಲಿ ೧೮೬೭ ನೇ ... ಯಲ್ಲಿ ಅಹವಾಲನ್ನು ಹೇಳಿಕೊಳ್ಳ...

(ಹಿಂದಿನ ಪುಟಕ್ಕೆ ಮುಂದುವರಿ...)

The
MYSORE DRUG HOUSE
(Opposite to K. R. Hospital)
Sayaji Rao Road, Mysore.
Dealers in Medicines & Medical requirements, Your Patronage is solicited.

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ
೧೬-೨-೪೭ ರಿಂದ :: ಪ್ರತಿ ದಿನ ೩ ಆಟಗಳು
ಶ್ರೀ ಕೃಷ್ಣಲೀಲಾ
(ಕನ್ನಡ ಚಿತ್ರ)
ಮ್ಯಾಟಿನಿ ಮಧ್ಯಾಹ್ನ 3, 1ನೇ ಆಟ ಸಂಜೆ 6-15, 2ನೇ ಆಟ ರಾತ್ರಿ 9-30

ಹೊಸ ಜವಳಿ
ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ -
ಇಂದೇ ಭೇಟಿ ಕೊಡಿ !
ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ ॥
ಬಿ. ಕೆಂಚಪ್ಪ ಸನ್ಸ್
ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು.

ಕಂಟ್ರೋಲ್ ಬೆಲೆ! ಸುಸ...
ಹೊಸ ಜವಳಿ!
ನಮ್ಮಲ್ಲಿ ಈಗ ತಾನೆ ಹೊಸದಾಗಿ ಬ...
ಬೆನಾರಿಸ್, ಕಂಚಿ, ಆರ್ಣಿ, ಕ...
ಸೀರೆಗಳು.
●
ನೂಲಿನ ಪೂನಾ ರಂಗಿನ ಸೀ...
●
ಕಾಶ್ಮೀರ್ ಶಾಲುಗಳು ದೊರೆಯು...
●
M. P V., M. V. ಭೋ...
ಅಂಡ್ ಬ್ರದರ್ಸ್
ಒಲಂಪಿಯಾ ಸಿನಿಮಾ ಚಾಕ, ಮೈ...

ಅಪೆರಾ ಟಾಕೀ...
19-2-47 ರಿಂ...
ವಿದ್ಯಾಪ...
ಪ್ರತಿ ದಿನ ಮೂರು ಆಟಗಳು
: ಪಾತ್ರ :-
ಟಿ ಆರ್ ರಾಮಚಂದ್ರ, ಕೆ. ...
ಬಿ ಬಾಲಸುಬ್ರಹ್ಮಣ್ಯಂ, ಪ್ರೇ...

ನಿಮ್ಮ ಮೈ ಮೋಹಮಲ್ಲಿನ...
ಹೊಳೆಯಬೇಕೆ ? ನಿಮ್ಮ...
ಲಾವಣ್ಯ ಮೂರ್ತಿಗಳಾಗಬೇ...
ಹಾಗಾದರೆ
ನಮ್ಮ ಮೈಸೂರು ಸ್ಯಾಂಡ...
ಸೋಪನ್ನೇ ಉಪಯೋಗಿಸಿ...
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವ...
ಸಂಪಾದಿಸಿ ಕೊಟ್ಟಿದೆ. ನಿ...
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ
ಎಲ್ಲೆಲ್ಲೂ ದೊರೆಯುತ್ತದೆ
ಗವರ್ನಮೆಂಟ್ ಸೋಪ್ ಫ್ಯಾ...
ಬೆಂಗಳೂರು.

Edited, printed and publ...
A. R. Nagarajan at the Sadh...
D Subbiah Road, Mysore.

ರೇ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೧—೨—೪೭ [ಸಂಚಿಕೆ ೧೩೬

೧೫ ತಿಂಗಳಲ್ಲಿ ಬ್ರಿಟಿಷರು ಭಾರತವನ್ನು ಬಿಡುವರು

ಮೌಂಟ್‌ಬ್ಯಾಟನ್ನರು ಮುಂದಿನ ವೈಸರಾಯರು

ಭಾರತದ ವೈಸರಾಯರಾಗಿರುವ ಲಾರ್ಡ್ ವೇವಲ್ಲರ ಅಧಿಕಾರದ ಅವಧಿಯು ಮಾರ್ಚ್ ತಿಂಗಳಿಗೆ ಅಂತ್ಯವಾಗುವುದು. ಅದರ ನಂತರ ಆಗ್ನೇಯ ಏಷ್ಯಾದ ಮುಖ್ಯ ಸೇನಾಧಿಪತಿಗಳಾಗಿದ್ದ ಲಾರ್ಡ್ ಮೌಂಟ್ ಬ್ಯಾಟನ್ನರನ್ನು ವೈಸರಾಯರಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ.

ಮಾನ ನಷ್ಟ ಮೊಕದ್ದಮೆ

ತನ್ನನ್ನು ಜಾತಿಯಿಂದ ಬಹಿಷ್ಕರಿಸಿರುವುದಾಗಿ ಅಪಪ್ರಚಾರ ಮಾಡಿ ಮಾನ ನಷ್ಟ ಉಂಟು ಮಾಡಿರುವರೆಂದು ಕುಂಬಾರ ಗುಸ್ತಲಿನ ಕೆಂಪೇಗೌಡ ಮುಂತಾದ ೮ ಜನರ ಮೇಲೆ ನಂಜೀಪುರದ ಮಾದಮ್ಮ ಎಂಬಾಕೆಯು ಹೂಡಿದ್ದ ಮೊಕದ್ದಮೆಯಲ್ಲಿ ಆಪಾದನೆಯು ಸಾಬೀತಾಗಿ ೮ ಮಂದಿ ಆಪಾದಿತರಿಗೂ ತಲಾ ೨೫ ರೂ. ಜುಲ್ಮಾನೆ ತಪ್ಪಿದರೆ ೧೫ ದಿನಗಳ ಸಾದಾ ಸಜಾವನ್ನು ಮೈಸೂರು ನಗರದ ನ್ಯಾಯಾಧೀಶರು ವಿಧಿಸಿದ್ದಾರೆ.

ಬಡ ಜನರಿಗೆ ತೊಂದರೆ

ರಾಜಧಾನಿಯ ದೇವರಾಜ ಮೊಹಲ್ಲಾ ಧನ್ವಂತರಿ ರೋಡಿನಲ್ಲಿರುವ ರಸ್ತೆಗಾಗಿಯೂ, ಫುಟ್‌ಪಾತಿಗೂ ಮನೆಗಳನ್ನೆಲ್ಲಾ ಅಕ್ವೈರ್ ಮಾಡಿಕೊಳ್ಳಲಾಗಿದೆ. ಪುನಃ ಮಳಿಗೆಗಳನ್ನು ಕಟ್ಟುವುದಕ್ಕೂ ಮತ್ತು ಗಲ್ಲಿ ಬಿಡುವುದಕ್ಕೂ ಮನೆಗಳನ್ನು ಅಕ್ವೈರ್ ಮಾಡಿಕೊಳ್ಳಲು ನೋಟೀಸು ಬಂದು ಈಗ ಅವಾರ್ಡ್ ನೋಟೀಸು ಸಹ ಅಲ್ಲಿಯ ನಿವಾಸಿಗಳಿಗೆ ಕೊಟ್ಟಿರುತ್ತಾರೆ. ಮಳಿಗೆಗಳ ಗೋಸ್ಕರ ೫೦ ಅಡಿ ಮತ್ತು ಕನ್‌ಸರ್‌ವೇಸಿಗೆ ೨೦ ಅಡಿ ಒಟ್ಟು ಎಪ್ಪತ್ತು ಅಡಿಗಳನ್ನು ತೆಗೆದುಕೊಳ್ಳುವುದಾಗಿ ತಿಳಿದುಬಂದಿರುತ್ತೆ.

ಈಗ ಹಾಲಿ ಹೊಸದಾಗಿ ಆಗಲಿರುವ ಸ್ಯಾಂಕಿ ರಸ್ತೆಗೆ ಮಳಿಗೆ ಸೈಟನ್ನು ೩೦ ಅಡಿ ಮಾತ್ರ ಇಟ್ಟಿರುತ್ತಾರೆ. ಅದರ ಹಿಂದೆ ಕನ್‌ಸರ್‌ವೇಸಿ ಇರುವುದಿಲ್ಲಾ. ಅಂಥಾ ದೊಡ್ಡ ರಸ್ತೆಗೇ ಕನ್‌ಸರ್‌ವೇಸಿ ಇಲ್ಲದಿರುವಾಗ ಮತ್ತು ಅಂಗಡಿಗಾಗಿ ೩೦ ಅಡಿಗಳು ಮಾತ್ರ ಸಾಕಾಗಿರುವಾಗ ಧನ್ವಂತರಿ ರಸ್ತೆಗೆ ೫೦ ಅಡಿಯನ್ನು ಮಳಿಗೆಗೂ ಮತ್ತು ೨೦ ಅಡಿಯನ್ನು ಕನ್‌ಸರ್‌ವೇಸಿಗೂ ತೆಗೆದುಕೊಳ್ಳುವುದರಿಂದ ಅಲ್ಲಿರುವ ಬಡಜನಗಳಿಗೆ ತುಂಬಾ ತೊಂದರೆಯಾಗುತ್ತದೆ. ಅದೂ ಅಲ್ಲದೆ ಇಂತಹ ಕಷ್ಟ ಕಾಲದಲ್ಲಿ ಮನೆಗಳೇ ಸಿಕ್ಕದಿರುವಾಗ ಅಲ್ಲಿರುವ ನಿವಾಸಿಗಳು ಬೇರೆ ಮನೆಗೆ ಹೋಗಲು ಅವಕಾಶವಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ಮಳಿಗೆಗಾಗಿ ೩೦ ಅಡಿ ಮಾತ್ರ ತೆಗೆದುಕೊಂಡು ಅದರ ಹಿಂದೆ ಕನ್‌ಸರ್‌ವೇಸಿಯನ್ನು ತಪ್ಪಿಸಿದಲ್ಲಿ ಅಲ್ಲಿರುವ ಬಡ ಜನಗಳಿಗೆ ಮನೆಯನ್ನು ಉಳಿಸಿದಂತಾಗುವುದಲ್ಲದೆ ಅನೇಕ ಹೊಸ ಮನೆಗಳು ಸಹ ಉಳಿಯುತ್ತವೆ. ಅದೂ ಅಲ್ಲದೆ ಸೀಬಯ್ಯನವರ ರಸ್ತೆಗೂ ಹೊಸ ರಸ್ತೆಗೂ ಮಧ್ಯೆ ೧೦೦ ಅಡಿಗಳು ಮಾತ್ರ ಇರುವುದಲ್ಲದೆ ಮಧ್ಯೆ ಅನೇಕ ಅಡ್ಡ ರಸ್ತೆಗಳೂ ಸಹ ಇರುತ್ತವೆ. ಆದ್ದರಿಂದ ಮಧ್ಯೆ ಕನ್‌ಸರ್‌ವೇಸಿಯೇ ಬೇಕಾಗಿರುವುದಿಲ್ಲ. ಮೇಲ್ಕಂಡ ಅಂಶಗಳನ್ನು ಘನ ಸರ್ಕಾರದವರೂ, ಟ್ರಸ್ಟುಬೋರ್ಡಿನವರೂ ಸಹ ಪರಿಶೀಲಿಸಿ ನಡುವೆ ಕನ್‌ಸರ್‌ವೇಸಿಯನ್ನು ವಜಾ ಮಾಡಿಸಬೇಕಾಗಿ ಅಲ್ಲಿಯ ನಿವಾಸಿಗಳ ಪರವಾಗಿ ಕೋರಲಾಗಿದೆ.

ಹಿತೈಷಿ.

ಧರ್ಮ ರತ್ನಾಕರರ ದರೋಡೆ ಪ್ರಕರಣ

ಸರ್ವೋತ್ತಮರಾವ್ ಮುಂತಾದವರ ಮೇಲೆ ಛಾರ್ಜ್ ಫ್ರೇಂ ಆಯಿತು

ಸ್ವಂ. ಸು. ಪ್ರೋ] ಬೆಂಗಳೂರು ೧೮

ಧರ್ಮ ರತ್ನಾಕರ ಬಿ. ಎಸ್. ಗೋಪಾಲರಾಯರ ದರೋಡೆ ಮೊಕದ್ದಮೆಯಲ್ಲಿ ಆಪಾದಿತರಾಗಿದ್ದ ಶ್ರೀಗಳಾದ ಸರ್ವೋತ್ತಮರಾವ್, ಆರ್. ಮೋಸಸ್ ಮತ್ತು ಬೆಳಗಾಂವಾಲಾ ಇವರುಗಳ ಮೇಲೆ ವಿಶೇಷ ನ್ಯಾಯಾಧೀಶರಾದ ಶ್ರೀ ಕೆ. ಪಿ. ರಾಮನಾಥಯ್ಯನವರು ದರೋಡೆ ಮತ್ತು ಮೋಸದ ಆಪಾದನೆಗಳನ್ನು ನಮೂದಿಸಿ ಛಾರ್ಜ್ ಫ್ರೇಂ ಮಾಡಿರುತ್ತಾರೆ.

'ಅಲ್ ಇಸ್ಲಾಂ' ಪ್ರತಿಗಳನ್ನು ವಶಪಡಿಸಿಕೊಳ್ಳಲು ಆಜ್ಞೆ

ಬೆಂಗಳೂರಿನಿಂದ ಹೊರಡುವ 'ಅಲ್ ಇಸ್ಲಾಂ' ಎಂಬ ಉರ್ದು ಮಾಸ ಪತ್ರಿಕೆಯ ಜನವರಿ ಸಂಚಿಕೆಗಳನ್ನೆಲ್ಲಾ ವಶಪಡಿಸಿಕೊಳ್ಳಲು ಸರ್ಕಾರದ ಆಜ್ಞೆಯಾಗಿದೆ. 'ಬಿಹಾರಿನ ರಕ್ತ ಪ್ರವಾಹ' ಎಂಬ ಶಿರೋನಾಮೆಯಲ್ಲಿ ದಂಡಿನ ಮಹಮದ್ ಮುಸ್ತಫ ಸಾಹೇಬ್ ಫಸಿ ಎಂಬುವರು ಪ್ರಕಟಿಸಿರುವ ಲೇಖನವು ಆಕ್ಷೇಪಣಾರ್ಹವಾಗಿರುವುದೇ ಇದಕ್ಕೆ ಕಾರಣವೆಂದು ತಿಳಿಸಲಾಗಿದೆ.

ಇನ್ನು ೧೫ ತಿಂಗಳಲ್ಲಿ ಬ್ರಿಟನ್ನು ಭಾರತವನ್ನು ತ್ಯಜಿಸುವುದೇ?

ನ್ಯೂ ಯಾರ್ಕಿನ ಪತ್ರಿಕೆಗಳು ಭಾರತದ ವಿಚಾರವಾಗಿ ನಿನ್ನೆ ಅನೇಕ ಊಹಾಪೋಹಗಳನ್ನು ಪ್ರಕಟಿಸಿವೆ. ವೇವೆಲ್ಲರು ಅಧಿಕಾರ ತ್ಯಜಿಸುವರು ಮತ್ತು ಬ್ರಿಟಿಷರು ಭಾರತವನ್ನು ಇನ್ನು ೧೫ ತಿಂಗಳೊಳಗಾಗಿ ಬಿಟ್ಟು ಹೋಗುವುದಾಗಿ ಕೂಡಲೇ ಘೋಷಣೆ ಹೊರಡಿಸುವರು ಎಂಬುದಾಗಿ ವರದಿಗಳು ತೊರಬಿದ್ದಿವೆ. ವೇವೆಲ್ಲರ ಜಾಗದಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ನರ ನೇಮಕವು ನಿಶ್ಚಿತವೆಂದೂ ಹೇಳಲಾಗಿದೆ.

ಮದ್ರಾಸಿನಲ್ಲಿ ಅಕ್ಕಿ ಪಡಿತರ ಹೆಚ್ಚುವುದು

ಮದ್ರಾಸ್ ಪ್ರಾಂತ್ಯದಲ್ಲಿ ಅಕ್ಕಿಯ ರೇಷನ್ ಪ್ರಮಾಣವನ್ನು ಮಾರ್ಚ್ ತಿಂಗಳಿಂದ ೧೨ ಔನ್ಸುಗಳಿಗೆ ಹೆಚ್ಚಿಸಲಾಗುವುದೆಂದು ಹೇಳಲಾಗಿದೆ. ಭತ್ತದ ಬೆಲೆಯನ್ನು ಹೆಚ್ಚಿಸುವ ಮತ್ತು ಬೆಳೆಯುವವರಿಗೆ ಬೋನಸ್ ಕೊಡುವ ವಿಚಾರಗಳನ್ನು ಸರ್ಕಾರದವರು ಆಲೋಚಿಸುವುದಿಲ್ಲವೆಂದು ತಿಳಿದು ಬಂದಿದೆ.

ಪ್ರಿನ್ಸಿಪಾಲರ ಬಂಧನ ಶಾಸನ ವಿರುದ್ಧವಾದುದು

ಲಾಹೋರಿನ ಇಸ್ಲಾಮಿಯಾ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಮಲ್ಲಿಕ್ ಉಮರ್ ಹಯಾತ್ ರವರನ್ನು ಪಂಜಾಬಿನ ರಕ್ಷಣಾ ಶಾಸನದಂತೆ ದಸ್ತಗಿರಿ ಮಾಡಿ ಬಂಧನದಲ್ಲಿಟ್ಟಿರುವುದು ಶಾಸನ ಬದ್ಧವಾಗಿಲ್ಲವೆಂದು ಲಾಹೋರ್ ಹೈಕೋರ್ಟು ತೀರ್ಪಿತ್ತು ಅವರನ್ನು ಖುಲಾಸೆ ಮಾಡಿಸಿತು. ಅವರನ್ನು ಬೇರೆ ಕಾನೂನಿನ ಪ್ರಕಾರ ಸರ್ಕಾರವು ಪುನಃ ದಸ್ತಗಿರಿ ಮಾಡಿದೆ.

ಮುಷ್ಕರ ನಿಂತಿತು

ಕೊಯಮತ್ತೂರು ಕಾರ್ಖಾನೆಗಳ ಮುಷ್ಕರವು ಪ್ರಧಾನಿ ಪ್ರಕಾಶಂ ರವರ ಭರವಸೆ ಮೇಲೆ ಮುಕ್ತಾಯಗೊಂಡಿರುವುದಾಗಿ ತಿಳಿದುಬಂದಿದೆ. ಬೋನಸ್ ಹಂಚಿಕೆ ವಿಚಾರದಲ್ಲಿ ಪ್ರಧಾನಿಗಳ ಸಲಹೆಯನ್ನು ಕಾರ್ಮಿಕರೂ, ಮಾಲೀಕರೂ ಒಪ್ಪಿದ್ದಾರೆ.

ಹಿಂದೂ-ಸಿಖ್ ಬೋರ್ಡಿನ ಪ್ರತಿಕ್ರಿಯೆ

ಬಿಹಾರಿನಿಂದ ಬಂದು ಪಶ್ಚಿಮ ಬಂಗಾಳದಲ್ಲಿ ನೆಲೆಸಿರುವ ಮುಸ್ಲಿಮರನ್ನು ಬಂಗಾಳಾ ಸರ್ಕಾರದವರು ವಾಪಸು ಕಳುಹಿಸದಿದ್ದಲ್ಲಿ ಪೂರ್ವಬಂಗಾಳದಿಂದ ತಾವು ಹಿಂದೂಗಳನ್ನು ಅಧಿಕ ಸಂಖ್ಯೆಯಲ್ಲಿ ಬಂಗಾಳಕ್ಕೆ ಕರೆತರುವುದಾಗಿ ಹಿಂದೂ-ಸಿಖ್ ಅಲ್ಪ ಸಂಖ್ಯಾತರ ರಕ್ಷಣಾ ಬೋರ್ಡಿನವರು ಪ್ರಕಟಿಸಿದ್ದಾರೆ.

ಸಂಬಳ ಹೆಚ್ಚಿಸಬೇಕೆಂದು ಒತ್ತಾಯ

ಸ್ವಂ. ಸು] ನಂಜನಗೂಡು ೨೦

ಇಲ್ಲಿರುವ ವಿದ್ಯಾ ಇಲಾಖೆಯವರೂ, ಸಾರ್ವಜನಿಕರೂ ಈ ದಿನ ಪುರಸಭಾಧ್ಯಕ್ಷರಾದ ಶ್ರೀ ಎ. ಪಿ. ಕೃಷ್ಣರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ವಿದ್ಯಾ ಇಲಾಖೆಯ ಕೆಳದರ್ಜೆ ನೌಕರರ ಸಂಬಳವನ್ನು ಹೆಚ್ಚಿಸಬೇಕೆಂದೂ, ಮಾರ್ಚಿ ೧ ರೊಳಗೆ ತಾತ್ಕಾಲಿಕ ಪರಿಹಾರವನ್ನು ಒದಗಿಸಬೇಕೆಂದೂ ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಿ ಇಲಾಖಾ ಮುಖ್ಯಾಧಿಕಾರಿಗಳಿಗೂ, ಸಂಬಳ ಸಮಿತಿಯವರಿಗೂ ಕಳುಹಿಸಿದ್ದಾರೆ.

ಕಾರ್ಡು ತಲುಪಲು ೧೦ ವರ್ಷ

ತುಮಕೂರಿನ ವಿದ್ಯುಚ್ಛಕ್ತಿ ಇಲಾಖೆಯವರು ಅದೇ ಊರಿನ ವರ್ತಕರೊಬ್ಬರಿಗೆ ೨-೧-೧೯೩೭ ರಲ್ಲಿ ಬರೆದ ಪೋಸ್ಟ್ ಕಾರ್ಡು ೧೮-೨-೧೯೪೭ ರಲ್ಲಿ ಅವರಿಗೆ ತಲುಪಿರುವುದಾಗಿ ವರದಿಯಾಗಿದೆ.

ಭಾರತ ಕಾರ್ಯದರ್ಶಿಗಳ ಮೇಲೆ ದಾವಾ

೧೯೪೨ ರ ಚಳುವಳಿ ಕಾಲದಲ್ಲಿ ಅಸ್ಸಾಂ ಪ್ರಾಂತದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರಾಗಿ ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸಲಿಲ್ಲವೆಂದು ವಜಾ ಮಾಡಲ್ಪಟ್ಟಿದ್ದ ಶ್ರೀ ಜೆ. ಸಿಗಂ ಎಂಬ ಐ. ಸಿ. ಎಸ್. ಅಧಿಕಾರಿಗಳು ಭಾರತದ ಕಾರ್ಯದರ್ಶಿ ಲಾರ್ಡ್ ಪೆಥಿಕ್ ಲಾರೆನ್ಸರ ಮೇಲೆ ೩ ಲಕ್ಷ ರೂ. ಗಳ ಪರಿಹಾರಕ್ಕಾಗಿ ದಾವಾವನ್ನು ಹೂಡಿದ್ದಾರೆ.

ಬ್ರಿ|| ನಿಯೋಗಕ್ಕೆ ೩೧೨೫೦ ಪೌಂಡುಗಳ ವೆಚ್ಚ

ಭಾರತಕ್ಕೆ ಆಗಮಿಸಿದ್ದ ಬ್ರಿಟಿಷ್ ಮಂತ್ರಿತ್ರಯರಿಗಾಗಿ ೨೧೨೫೦ ಪೌಂಡುಗಳೂ, ಲಂಡನ್ನಿಗೆ ಬಂದಿದ್ದ ವೈಸರಾಯ್ ಮತ್ತು ಭಾರತ ನಾಯಕರಿಗಾಗಿ ೯೦೭೦ ಪೌಂಡುಗಳೂ ವೆಚ್ಚ ತಗಲಿರುವುದಾಗಿ ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ. ಭಾರತಕ್ಕೆ ಆಗಮಿಸಿದ್ದ ಪಾರ್ಲಿಮೆಂಟರಿ ನಿಯೋಗದ ಖರ್ಚು ೪೮೦೦ ಪೌಂಡುಗಳೆಂದು ವರದಿಯಾಗಿದೆ.

ಯೂನಿಯನ್ನಿಗೆ ದಖನ್ ರಾಜರುಗಳ ಒಪ್ಪಿಗೆ

ದಖನ ಸಂಸ್ಥಾನಗಳ ಯೂನಿಯನ್ನೊಂದನ್ನು ಸ್ಥಾಪಿಸುವ ಯೋಜನೆಯನ್ನು ಅಲ್ಲಿನ ರಾಜರುಗಳೂ ಒಪ್ಪಿದ್ದಾರೆ. ಸದ್ಯದಲ್ಲೇ ಪ್ರಜಾಪ್ರತಿನಿಧಿಗಳ ಸಭೆಯನ್ನು ಕರೆದು ಯೋಜನೆಯನ್ನು ಚರ್ಚಿಸಲಾಗುವುದು. ಎಲ್ಲ ಹಕ್ಕುಬಾಧ್ಯತೆಗಳೂ ಪ್ರಜೆಗಳಿಂದಲೇ ಬಂದುದು ಎಂಬುದಾಗಿ ರಾಜರು ಘೋಷಿಸಬೇಕು; ಪ್ರತಿ ಲಕ್ಷ ಪ್ರಜೆಗಳಿಗೆ ಇಬ್ಬರಂತೆ ಚುನಾಯಿತರಾದ ಪ್ರತಿನಿಧಿಗಳನ್ನೊಳಗೊಂಡ ರಾಜ್ಯಾಂಗ ಸಭೆಯನ್ನು ನಿರ್ಮಿಸಿ ಅದರ ತೀರ್ಮಾನವನ್ನು ಒಪ್ಪಿಕೊಳ್ಳತಕ್ಕದ್ದು; ರಾಜ್ಯಾಂಗದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರ ಎಂಬ ಎರಡು ಅಂಗಗಳಿದ್ದು ಭಾರತವು ಪ್ರಾಂತ್ಯವಾಗಿ ವಿಂಗಡವಾದಾಗ ಈ ಭಾಗಗಳು ಅವುಗಳಲ್ಲಿ ಸೇರಬಹುದು; ರಾಜರುಗಳ ಹಕ್ಕುಭಾದ್ಯತೆಗಳನ್ನು ಕಾಪಾಡತಕ್ಕದ್ದು; ಎಂಬಿವೇ ಮುಂತಾದ ಮುಖ್ಯ ವಿಷಯಗಳು ಆಲೋಚನೆಯಲ್ಲಿ ಅಡಕವಾಗಿವೆ.

ಬ್ರಿ|| ದೊರೆಗಳ ಭಾವಚಿತ್ರ ತೆಗೆದುಹಾಕಲು ತೀರ್ಮಾನ

ಬ್ರಿಟಿಷ್ ರಾಜ ಅಥವಾ ರಾಣಿಯರ ಭಾವಚಿತ್ರವನ್ನು ತಮಗೆ ಸೇರಿದ ಎಲ್ಲಾ ಕಟ್ಟಡಗಳಿಂದಲೂ ತೆಗೆದುಹಾಕಬೇಕೆಂದು ತಿರುವಣ್ಣಾಮಲೆ ಪುರಸಭೆಯವರು ತೀರ್ಮಾನಿಸಿದ್ದಾರೆ. ಬ್ರಿಟಿಷರು ಭಾರತವನ್ನು ತ್ಯಜಿಸುವವರೆಗೆ ಆ ಭಾವಚಿತ್ರಗಳು ಇರಲೆಂದು ಜಸ್ಟಿಸ್ ಪಕ್ಷದವರು ತಂದ ಸೂಚನೆ ಬಿದ್ದುಹೋಯಿತು.

ಅಕ್ಕಿ ಸಮ್ಮೇಳನ

ಬರುವ ಜುಲೈ ತಿಂಗಳಲ್ಲಿ ವಿಶ್ವದ ಅಕ್ಕಿ ಸಮ್ಮೇಳನವನ್ನು ಭಾರತದಲ್ಲಿ ನಡೆಸಲಾಗುವುದೆಂದು ತಿಳಿದುಬಂದಿದೆ.

ನೂತನ ಉಪಾಧ್ಯಕ್ಷರು

ಮೈಸೂರು ೨೧

ಮೈಸೂರು ಪುರ ಸಭಾ ನೂತನ ಉಪಾಧ್ಯಕ್ಷರಾದ ಶ್ರೀ ಟಿ. ನರಸಿಂಹಯ್ಯಂಗಾರ್ಯರು ನಿನ್ನೆ ಅಧಿಕಾರವನ್ನು ವಹಿಸಿಕೊಂಡರು

ಸಾಧ್ವಿ

ತಾ|| ೨೧-೨-೪೭ ಶುಕ್ರವಾರ

ಸುಧಾರಣೆಗಳಿಗೆ ಪ್ರಶ್ನಾವಳಿ ಯೇಕೆ?

(ಲೇಖಕರು:- ಶ್ರೀ|| ಟಿ. ಮರಿಯಪ್ಪ, ಬಿ ಎ, ಎಲ್. ಎಲ್ ಬಿ., ವಕೀಲರು ಮತ್ತು ಶಾಸನ ಸಭಾ ಸದಸ್ಯರು)

ದಿವಾನ್ ಸರ್ ಆರ್ಕಾಟ್ ರವರು ಪ್ರಕಟಣೆಯೊಂದನ್ನು ಹೊರಡಿಸಿ ಸುಧಾರಣೆಗಳ ವಿಷಯದಲ್ಲಿ ಜನರ ಅಭಿಪ್ರಾಯ ಕೇಳಿದ್ದಾರೆ ಇವರು ಹಿಡಿದಿರುವ ಮಾರ್ಗ ಸಾಧುವಲ್ಲ. ಪ್ರಶ್ನಾವಳಿಗಳ ಮೇಲೆ ಜನರ ಅಭಿಪ್ರಾಯ ಪಡೆದು ಮುಂದಿನ ಸುಧಾರಣೆಗಳ ರೂಪುರೇಷೆಯನ್ನು ನಿರ್ಧರಿಸುವ ಕಾಲ ಕಳೆದುಹೋಗಿ ಎಷ್ಟೋ ವರ್ಷಗಳಾದುವು.

ಮೈಸೂರಿನಲ್ಲಿ ಬ್ರಿಟಿಷ್ ಭಾರತಕ್ಕಿಂತ ಮೊದಲೇ ಪ್ರಜಾಪ್ರತಿನಿಧಿ ಸಭೆ ಸ್ಥಾಪನೆಯಾಯಿತು. ಅಲ್ಲಿಂದ ಇದುವರೆಗೆ ರಾಜಕೀಯ ಜಾಗೃತಿ ಒಂದೇ ಸಮನೆ ಅವಿಚ್ಛಿನ್ನವಾಗಿ ಬೆಳೆದುಬಂದಿದೆ. ಜನರು ಜಾಗೃತರಾಗಿ ರಾಜಕೀಯ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಿದ್ದಾರೆ; ಅವುಗಳನ್ನು ಸ್ವಲ್ಪಮಟ್ಟಿಗೆ ಪಡೆದಿದ್ದಾರೆ ಈ ಚಳವಳಿಯ ಫಲವಾಗಿ ಪ್ರಜಾಪ್ರತಿನಿಧಿ ಸಭೆ, ನ್ಯಾಯ ವಿಧಾಯಕ ಸಭೆಗಳು ರಾಜ್ಯಾಂಗದಲ್ಲಿ ನಿರ್ದಿಷ್ಟ ಸ್ಥಾನ ಪಡೆದಿವೆ ಜನಕೀಯ ಮಂತ್ರಿಗಳು ಆಡಳಿತದಲ್ಲಿ ಭಾಗ ವಹಿಸುತ್ತಿದ್ದಾರೆ. ಈ ಎಲ್ಲಾ ಪ್ರಶ್ನೆಗಳೂ ೧೯೩೮ ನೇ ಇಸವಿಯಲ್ಲಿ ನೇಮಿತವಾದ ಸುಧಾರಣಾ ಸಮಿತಿಯವರ ಮುಂದೆ ಬಂದು ಅವರು ಮೈಸೂರಿನ ಗುರಿ ಶ್ರೀಮನ್ಮಹಾರಾಜರವರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಪಡೆಯುವುದೇ ಎಂದು ಖಚಿತವಾಗಿ ಹೇಳಿದ್ದಾರೆ ಸಂಶಯಕ್ಕೆ ಎಡೆಗೊಡದ ರೀತಿಯಲ್ಲಿ ಮೈಸೂರಿನ ಜನತೆಯು ಮೇಲಿಂದಮೇಲೆ ಆಳರಸರನ್ನು ಒತ್ತಾಯಪಡಿಸುತ್ತಲೇ ಬಂದಿದೆ.

ಕಳೆದ ಸುಧಾರಣೆಗಳಿಂದ ಯಾರಿಗೂ ತೃಪ್ತಿಯಾಗಲಿಲ್ಲ ಈ ಮಧ್ಯೆ ಬ್ರಿಟಿಷ್ ಭಾರತದಲ್ಲಿ ರಾಜಕೀಯವು ವಿದ್ಯುದ್ವೇಗದಲ್ಲಿ ಹರಿದು, ತಾತ್ಕಾಲಿಕ ಸರ್ಕಾರ ಸ್ಥಾಪನೆಯಾಗಿ ರಾಜ್ಯಾಂಗ ರಚನೆಯ ಕಾರ್ಯ ಮುಂದೆ ಸಾಗುತ್ತಿದೆ ಭಾರತದ ಭವಿಷ್ಯವು ರೂಪುಗೊಳ್ಳುವ ಕಾಲದಲ್ಲಿ ನರೇಂದ್ರರು ರಾಜ್ಯಾಂಗ ರಚನೆಯಲ್ಲಿ ಭಾಗ ವಹಿಸುವ ತೀರ್ಮಾನವನ್ನು ಮಾಡಿದ್ದಾರೆ. ಆ ತೀರ್ಮಾನಕ್ಕೆ ಅನುಗುಣವಾಗಿ ಸಂಸ್ಥಾನಗಳಲ್ಲಿ ರಾಜರುಗಳ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದೊಂದೇ ಉಳಿದಿರುವ ಮಾರ್ಗ

ಇಷ್ಟು ದೂರ ಮುಂದೆ ಸಾಗಿರುವ ಕಾಲದಲ್ಲಿ ಸರ್ ಆರ್ಕಾಟ್ ರವರು ಪ್ರಶ್ನಾವಳಿಗಳ ಮೂಲಕ ಜನರ ಅಭಿಪ್ರಾಯ ಪಡೆಯಲೆತ್ನಿಸುವುದು ರಾಜಕೀಯ ಸೈಪುಣ್ಯತೆಯಲ್ಲ. ಮೈಸೂರಿನ ಜನತೆಯ ಮನೋಧರ್ಮವನ್ನು ಅರಿಯದವರಂತೆ ಅವರು ವರ್ತಿಸುತ್ತಿದ್ದಾರೆ ಮೈಸೂರಿನ ಕೆಚ್ಚೆದೆಯ ವೀರಭಕ್ತರಿಗೆ ಈ ಮಾರ್ಗವು ಅವಮಾನಕರ. ಬ್ರಿಟಿಷರು ಇಂತಹ ಮಾರ್ಗಗಳನ್ನು ಅನುಸರಿಸಿ ಹಿಂದೆ ವಿಫಲರಾದುದು ಸರ್ ಆರ್ಕಾಟ್ ರವರಿಗೆ ಗೊತ್ತಿಲ್ಲದೆ ಇಲ್ಲ. ಬ್ರಿಟಿಷ್ ಮಂತ್ರಿತ್ರಯರು ಭಾರತಕ್ಕೆ ಬಂದು ಜನರ ಹಿರಿಯ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆಸಿ ಪ್ರಣಾಳಿಕೆಯನ್ನು ಹೊರಡಿಸಿ

೨೦ ಸಾವಿರ ಮುಸ್ಲಿಮರು ಕಾಂಗ್ರೆಸ್ ಸೇರಿದರು

ಬೆಲೂಚಿಸ್ತಾನದ ಡೇರಾ ಜಿಲ್ಲೆಯ ಸಾನ ಅಧಿ ಸರದಾರರಾದ ಖಾನ ಸಾಹೇಬ ಮೀರ್ ಮಹಮದ್ ಮುಂತಾದವರು ತಮ್ಮ ೨೦ ಸಹಸ್ರ ಅನುಯಾಯಿಗಳೊಂದಿಗೆ ಅಖಿಲ ಭಾರತ ಕಾಂಗ್ರೆಸ್ಸಿನ ಅಂಗವಾದ ಅಂಜುಮಾನೆ ವರ್ತ ಸಂಸ್ಥೆಯನ್ನು ಸೇರಿದ್ದಾರೆಂದು ತಿಳಿದುಬಂದಿದೆ.

ಭಾರತ ಸ್ವಾತಂತ್ರ್ಯವನ್ನು ಅಂಗೀಕರಿಸಿದುದು ಎಲ್ಲರಿಗೂ ಗೊತ್ತಿದೆ ದಿವಾನರು ಶ್ರೀಮನ್ಮಹಾರಾಜರವರ ಸಂದೇಶ ಹೊರಬಿದ್ದ ಮೇಲೆ ಮೌನದಿಂದಿದ್ದು ಅಮೆರಿಕಾಕ್ಕೆ ಹೊರಡುವ ಮುನ್ನ ಈ ಮಾರ್ಗವನ್ನು ಅನುಸರಿಸಿದುದು ಖಂಡನೀಯ ಆತ್ಮ ಗೌರವವುಳ್ಳ ಮೈಸೂರಿನವರು ಈ ಪ್ರಶ್ನಾವಳಿಗಳಿಗೆ ಉತ್ತರ ಕೊಡುವ ಗೋಜಿಗೆ ಹೋಗಬಾರದು. ಇದರ ಉದ್ದೇಶವೇನೇ ಇರಲಿ, ನಾನಾ ರೀತಿಯಲ್ಲಿ ಉತ್ತರಗಳು ಬಂದು ರಾಜಕೀಯ ಗೊಂದಲ ಹೆಚ್ಚಿ ಜವಾಬ್ದಾರಿ ಸರ್ಕಾರ ಸ್ಥಾಪನೆ ದೂರ ಸರಿಯಲು ಇದರಿಂದ ಮಾರ್ಗವಾಗಬಹುದು. ಜನರು ಎಚ್ಚೆತ್ತು ಈ ಬಲೆಗೆ ಬೀಳದಿರುವುದು ಅಗತ್ಯ.

ಶ್ರೀಮನ್ಮಹಾರಾಜರವರ ಸಂದೇಶದ ವ್ಯಾಪನೆ ವಿಶಾಲವಾದುದೆಂದು ಹೇಳಿ ದಿವಾನರು ಈ ಮಾರ್ಗ ಹಿಡಿದಿರುವುದು ಸರಿಯಲ್ಲ ಮೈಸೂರಿನಲ್ಲಿ ಜನಾಭಿಪ್ರಾಯವು ಸರಿಯಾಗಿ ರೂಪುಗೊಂಡಿದೆ. ಈ ಅಭಿಪ್ರಾಯದಲ್ಲಿ ತೀವ್ರತೆ ದಿನೇ ದಿನೇ ಹೆಚ್ಚುತ್ತಿದೆ ಕಾಲ ಕಳೆದಂತೆಲ್ಲಾ, ಸಮಸ್ಯೆ ಬಿಗಡಾಯಿಸುವುದು ಖಂಡಿತ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಹೋರಾಟ ಅನಿವಾರ್ಯವೋ ಏನೋ ಎಂದೆನಿಸುತ್ತದೆ ಜನತೆಯನ್ನು ಕಷ್ಟಕ್ಕೆ ಸಿಕ್ಕಿಸದೆ ಸುಗಮವಾಗಿ ಸಮಸ್ಯೆಗಳನ್ನು ಪರಿಹರಿಸುವುದು ಈಗ ಅತ್ಯಗತ್ಯ. ವಿಧಿ ಇಲ್ಲದೆ ಹೋರಾಟ ನಡೆದರೆ ಮೈಸೂರಿನ ಭವಿಷ್ಯ ಏನಾಗುವುದೋ ಯಾರು ಬಲ್ಲರು? ಜನತೆಗೆ ಅಂತು ಸೋಲೇ ಇಲ್ಲವೆಂಬುದು ಇತಿಹಾಸದಿಂದ ಅರಿವಾಗುವುದು.

ಬಿಹಾರಿಗೆ ಸುಚೇತಾ ಕೃಪಲಾನಿ

ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರ ಧರ್ಮಪತ್ನಿ ಶ್ರೀಮತಿ ಸುಚೇತರವರು ಇಂದಿನಿಂದ ಬಿಹಾರಿನಲ್ಲಿ ಪ್ರವಾಸಮಾಡಲಿರುವರು. ಅಲ್ಲದೆ ಅವರ ಕೂಡ ಮಹಾತ್ಮ ಗಾಂಧಿಯವರು ತಾತ್ಕಾಲಿಕ ಸರ್ಕಾರದ ಮಂತ್ರಿಗಳಿಗೆ ಪತ್ರವೊಂದನ್ನು ಕಳುಹಿಸಿಕೊಟ್ಟಿರುವರೆಂದು ಗೊತ್ತಾಗಿದೆ.

ಆಳ್ವಾರಿನಲ್ಲಿ ಲಂಚ ನಿರೋಧ

ಲಂಚವನ್ನು ತಪ್ಪಿಸಲು ಆಳ್ವಾರ್ ಸಂಸ್ಥಾನದ ರಾಜರು ಸಮಿತಿಯೊಂದನ್ನು ಸ್ಥಾಪಿಸಿದ್ದಾರೆ ಅದರಲ್ಲಿ ಒಬ್ಬ ಮಂತ್ರಿಗಳೂ ಮೂವರು ಅಧಿಕಾರಿಗಳೂ ಇರುವರು ಅವರಿಗೆ ಮ್ಯಾಜಿಸ್ಟ್ರೇಟರ ಅಧಿಕಾರವನ್ನು ಕೊಡಲಾಗಿದೆ ಪ್ರಧಾನ ಮಂತ್ರಿಗಳ ನೇತೃತ್ವದಲ್ಲಿ ಈ ಸಮಿತಿಯು ಕೆಲಸ ಮಾಡುವುದು

ಆಸ್ಪತ್ರೆಗಾಗಿ ದಾನ

ಸ್ವಂ.ಸು.] ಗುಂಡ್ಲುಪೇಟೆ ೧೯

ಈ ತಾಲ್ಲೂಕಿನ ದಕ್ಷಿಣ ಕೇಂದ್ರ ಒಂದರಲ್ಲಿ ತಮ್ಮ ತಂದೆಯವರಾದ ದಿ|| ಕರಿಯಪ್ಪನವರ ಹೆಸರಿನಲ್ಲಿ ಆಸ್ಪತ್ರೆಯನ್ನು ನಿರ್ಮಿಸಲು ಪ್ರ|| ಪ್ರ|| ಸಭಾ ಸದಸ್ಯರಾದ ಶ್ರೀ|| ಹೆಚ್. ಕೆ. ಶಿವರುದ್ರಪ್ಪನವರು ೫ ಸಹಸ್ರ ರೂ. ಗಳನ್ನು ಉದಾರವಾಗಿ ದಾನ ಮಾಡಿದ್ದಾರೆ

ಶ್ರೀ ದೊಡ್ಡಹುಂಡಿ ಭೋಗಪ್ಪನವರ ಹೈಸ್ಕೂಲು ದಿನೋತ್ಸವವು ಮೊನ್ನೆ ದಿನ ಜಿಲ್ಲಾಧಿಕಾರಿಗಳಾದ ಶ್ರೀ ಜಿ ಎ. ನಾಗರಾಜರಾಯರ ಅಧ್ಯಕ್ಷತೆಯಲ್ಲಿ ವೈಭವದಿಂದ ಜರುಗಿತು

ಭತ್ತ ಮತ್ತು ಬಲ್ಲದ ಪತ್ತೆ

ಸ್ವಂ.ಸು.] ಚಾಮರಾಜನಗರ ೧೯

ನಾಗವಳ್ಳಿಯಿಂದ ನಗರದ ಕಡೆಗೆ ರಹದಾರಿಗಿಂತ ಹೆಚ್ಚಾಗಿ ಭತ್ತ ತರುತ್ತಿದ್ದ ಗಾಡಿಯೊಂದನ್ನೂ, ತೆರಕಣಾಂಬಿ ಕಡೆಗೆ ಸಾಗುತ್ತಿದ್ದ ಬೆಲ್ಲದಗಾಡಿಯೊಂದನ್ನೂ ಅಧಿಕಾರಿಗಳು ಪತ್ತೆ ಹಚ್ಚಿ ಮುಂದಿನ ಕ್ರಮ ಜರುಗಿಸುತ್ತಿದ್ದಾರೆಂದು ವರದಿಯಾಗಿದೆ.

ತಾಲ್ಲೂಕು ಸಮ್ಮೇಳನ

ಸ್ವಂ.ಸು.] ಯಳಂದೂರು

ಈ ತಾಲ್ಲೂಕಿನ ಸಮ್ಮೇಳನವು ... ತಾ|| ಹ|| ಖಲೀಲುಲ್ಲಾರವರ ಅಧ್ಯಕ್ಷತೆಯಲ್ಲಿ ಜರುಗಿತು. ಗುಂಬಳ್ಳಿ ಶ್ಯಾನುಭೋಗರಾದ ಶ್ರೀ ಹರಿಸರ್ವೋತ್ತಮರಾಯರ... ಪರವಾಗಿ ಅನೇಕ ವಿಷಯಗಳನ್ನು ... ಚರ್ಚಿಸಿದರು

ಬಟ್ಟೆ ಅಂಗಡಿಗೆ ರಜಾ

ರಾಜಧಾನಿಯ ಪೀಸ್‌ಗುಡ್ಸ್ ಮರ್ಚೆಂಟ್ಸ್ ಅಸೋಸಿಯೇಷನ್ನಿನ ಮೂರನೇ ವಾರ್ಷಿಕೋತ್ಸವವು ಇದೇ ೨೪ ನೇ ಸೋಮವಾರ ಜಿಲ್ಲಾಧಿಕಾರಿಗಳಾದ ಜಿ ಎ ನಾಗರಾಜರಾಯರ ಅಧ್ಯಕ್ಷತೆಯಲ್ಲಿ ನಡೆಯುವುದರಿಂದ ಆ ದಿನ ನಗರದ ಎಲ್ಲಾ ಬಟ್ಟೆ ಅಂಗಡಿಗಳೂ ಮುಚ್ಚಲ್ಪಡುವುವೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ

ದಿ ಮೈಸೂರ್ ಡ್ರಗ್ ಹೌಸ್

(ಕೃಷ್ಣರಾಜೇಂದ್ರ ಆಸ್ಪತ್ರೆ ಎದುರು,)

ಸಯ್ಯಾಜಿರಾವ್ ರಸ್ತೆ, ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಔಷಧಿಗಳೂ ದೊರೆಯುತ್ತವೆ.

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ

೧೬-೨-೪೭ ರಿಂದ :: ಪ್ರತಿ ದಿನ ೩ ಆಟಗಳು

ಶ್ರೀ ಕೃಷ್ಣಲೀಲಾ

(ಕನ್ನಡಚಿತ್ರ)

ಮ್ಯಾಟಿನಿ ಮಧ್ಯಾಹ್ನ 3, 1ನೇ ಆಟ ಸಂಜೆ 6-15, 2ನೇ ಆಟ ರಾತ್ರಿ 9-30

From Friday the 21st Feb 1947 for 4 days daily at 10-30 a m

FIGHTING SEA-BEES

A Romance of the Seven Seas.

ಗರ್ಭ ರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು

ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ. ವಿ. ವೆಂಕಟರಾಮ... ಡಿ|| ಬೋರ್ಡ್ ವೈದ್ಯ, ಅರಕಲವಾಡಿ ಚಾಮರಾಜನಗರ ತಾ||

ಕಂಟ್ರೋಲ್ ಬೆಲೆ! ಸುಸಮಯ

ಹೊಸ ಜವಳಿ!

ನಮ್ಮಲ್ಲಿ ಈಗತಾನೆ ಹೊಸದಾಗಿ ಬಂದಿರುವ ಬೆನಾರಿಸ್, ಕಂಚಿ, ಆರ್ಣಿ, ಧರ್ಮಾವರಂ ಸೀರೆಗಳು

ನೂಲಿನ ಪೂನಾ ರಾಜಮಂಡ್ರಿ ಸೀರೆಗಳು

ಕಾಶ್ಮೀರ್ ಶಾಲುಗಳು ದೊರೆಯುತ್ತವೆ

M P. V., M. V. ಭೋಜಯ್ಯ ... ಅಂಡ್ ಬ್ರದರ್ಸ್

ಒಲಂಪಿಯಾ ಸಿನಿಮಾ ಚೌಕ, ಮೈಸೂರು

ಅಪೆರಾ ಟಾಕೀಸ್

19-2-47 ರಿಂದ

ವಿದ್ಯಾಪತಿ

(ಹಿಂದಿ)

ಪ್ರತಿ ದಿನ ಮೂರು ಆಟಗಳು

:: ಪಾತ್ರ :-

ಟಿ ಆರ್. ರಾಮಚಂದ್ರ, ಕೆ. ತವಮಣಿ ಬಾಲಸುಬ್ರಹ್ಮಣ್ಯಂ, ಪ್ರೇಮಾ...

Morning shows from 21-2-

"I Killed That Man"

And

"So's Your Aunt Emma"

(Double Attraction)

Edited, printed and published A. K. Nagarajan at the Sadhvi Press, D Subbiah Road, Mysore

ರೀ. ನಂ. 392 | ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೨೨—೨—೪೭ [ಸಂಚಿಕೆ ೧೩೭

ಮತ್ತೆ ಲೀಗಿಗೆ ಕಾಂಗ್ರೆಸ್ ಸಹಕಾರ ಹಸ್ತವೇ?

ಕೂಲಿಗಾರ ಮುಖಂಡರಿಗೆ ಗಡೀಪಾರು ಆಜ್ಞೆ

ಭದ್ರಾವತಿಯ ಮೈಸೂರು ಕಿರ್ಲೋಸ್ಕರ್ ಕಂಪನಿಯ ಕೂಲಿಗಾರ ಸಂಘದ ಅಧ್ಯಕ್ಷ ಶ್ರೀ ಸಿ. ಎಸ್. ಶರ್ಮರವರನ್ನು ಮೈಸೂರು ಸರ್ಕಾರದವರು ಸಂಸ್ಥಾನದಿಂದ ಗಡೀಪಾರು ಮಾಡಿದ್ದಾರೆ. ಅವರನ್ನು ಹುಬ್ಬಳ್ಳಿಗೆ ಕರೆದುಕೊಂಡು ಹೋಗಲಾಯಿತು.

ಕರ್ನಾಟಕದಲ್ಲಿ ಫಾರ್ವರ್ಡ್ ಬ್ಲಾಕ್ ನಾಯಕರ ಪ್ರವಾಸ

ಮಾರ್ಚಿ ೫ ರಿಂದ. ೧೧ನೇ ತಾ|| ವರೆಗೆ ಅಖಿಲ ಭಾರತ ಫಾರ್ವರ್ಡ್ ಬ್ಲಾಕಿನ ಮುಖಂಡರುಗಳಾದ ಸರ್ದಾರ್ ಶಾರ್ದೂಲ ಸಿಂಗ್ ಕವೀಶ್ವರ್, ಶ್ರೀ|| ಇಶಾನ್ ಖಾದಿರ್, ಸತ್ಯಪ್ರಿಯಾಜ ಮುಂತಾದವರು ಕರ್ನಾಟಕದಲ್ಲಿ ಪ್ರವಾಸ ಮಾಡಲಿದ್ದಾರೆ

ಗಡಿನಾಡಿನಲ್ಲಿ ಅಬ್ದುಲ್ ಘಫಾರರವರ ದಸ್ತಗಿರಿ

ಗಡಿನಾಡು ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾದ ಖಾನ್ ಅಬ್ದುಲ್ ಘಫಾರರು ಮತ್ತು ೧೭ ಮಂದಿ ಲೀಗ್ ಮುಖಂಡರನ್ನು ಅಲ್ಲಿನ ಸರ್ಕಾರವು ದಸ್ತಗಿರಿ ಮಾಡಿದೆ ಸಿಖ್ ಹುಡುಗಿಯೊಬ್ಬಳ್ಳನ್ನು ಮುಸ್ಲಿಮನೊಬ್ಬನಿಗೆ ಬಲವಂತದಿಂದ ವಿವಾಹ ಮಾಡಿಸುವ ಕಾರ್ಯದಲ್ಲಿ ನೆರವಾದ್ದರಿಂದ ಕಾರಣದ ಮೇಲೆ ಈ ಬಂಧನ ನಡೆಸಿದೆ.

೪೦೦ ಚ. ಮೈಲಿ ನಾಶ ಪಡಿಸುವ ಆಟಂ ಬಾಂಬು

ಈಗ ತಯಾರಾಗುತ್ತಿರುವ ಆಟಂಬಾಂಬು ೪ ಚದರ ಮೈಲಿಗಳನ್ನು ಮಾತ್ರ ನಾಶಪಡಿಸುವುದು. ಇನ್ನು ಮುಂದೆ ತಯಾರಿಸುವ ಆಟಂಬಾಂಬು ಸುಮಾರು ೪೦೦ ಚದರ ಮೈಲಿಗಳನ್ನು ನಾಶಪಡಿಸಬಹುದೆಂದೂ, ಜಪಾನಿನ ಮೇಲೆ ಹಾಕಿದ ಆಟಂಬಾಂಬಿಗಿಂತಲೂ ಅದು ೧೦೦೦ ದಷ್ಟು ಬಲಯುತವಾಗಿರುವುದೆಂದೂ ಹೇಳಲಾಗಿದೆ.

ವಿ ವಾ ಹ

ನಂಜನಗೂಡಿನ ಶ್ರೀ ಸುಬ್ರಹ್ಮಣ್ಯಯ್ಯನವರ ಕುಮಾರ ಶ್ರೀ ಎ ಎಸ್. ಪ್ರಸನ್ನಕುಮಾರ್ ರವರಿಗೆ ಪಟ್ಟಹಳ್ಳಿ ಶ್ರೀ ಆರ್. ಲಕ್ಷ್ಮೀನಾರಾಯಣರಾಯರ ಪುತ್ರಿ ಶ್ರೀಮತಿ ರಾಜೇಶ್ವರಿಯವರನ್ನು ಕೊಟ್ಟು ವಿವಾಹ ಮಹೋತ್ಸವವು ನಾಳೆದ್ದು ಬೆಂಗಳೂರಿನಲ್ಲಿ ನೆರವೇರುವುದು

ಶ್ರೀ ಗಣೇಶಾ ಟಾಕೀಸ್

21-2-47ರಿಂದ ಪ್ರತಿದಿನ ೩ಆಟಗಳು

ನೃತ್ಯ ಮತ್ತು ಸಂಗೀತದಿಂದ ಕೂಡಿದ ವರ್ಣರಂಜಿತ ತಮಿಳು ಚಿತ್ರ

"ಶ್ರೀವಳ್ಳಿ"

ಭೂಮಿಕೆ:-ಟಿ ಆರ್. ಮಹಾಲಿಂಗಂ ರುಕ್ಮಿಣಿ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ.

Morning Shows on 22, 23 and 24th at 10-30 a. m.

LADIES COURAGEOUS'

Starring: Loretta Young.

ಪುರಸಭಾ ಸದಸ್ಯರ ರಾಜೀನಾಮೆ

ಮೈಸೂರು ೨೨

ಮೈಸೂರು ಪುರಸಭೆಯ ನಾಮಕರಣ ಸದಸ್ಯರಾದ ಮಿ|| ಟಿ ಎಸ್. ಅಲ್ಲಿಖಾನರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವುದನ್ನು ಸರ್ಕಾರದವರು ಅಂಗೀಕರಿಸಿ ಅವರ ಜಾಗದಲ್ಲಿ ಹಾಜಿ ಜಿ ಅಹಮದ್ ಖಾನರನ್ನು ಸದಸ್ಯರನ್ನಾಗಿ ನೇಮಿಸಿದ್ದಾರೆ

ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವ

ಮೈಸೂರು ತಾಲ್ಲೂಕು ಪ್ರೈಮರಿ ಸ್ಕೂಲ್ ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ಬರುವ ಮಾಹೆ ೫ ನೇ ತಾ|| ನಜರ್‌ಬಾದ್ ಪ್ರೈಮರಿ ಸ್ಕೂಲಿನಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಟಿ. ಎಸ್. ರಾಜರತ್ನಂ ರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಪರಮಹಂಸರ ಜನ್ಮದಿನ

ವಾಣೀ ವಿಲಾಸ ಮೊಹಲ್ಲೆಯ ಶ್ರೀರಾಮಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೫ ಘಂಟೆಗೆ ಶ್ರೀ ರಾಮಕೃಷ್ಣ ಪರಮಹಂಸರ ದಿನಾಚರಣೆಯನ್ನು ಆಚರಿಸಲಾಗುವುದು. ಸರ್ವರಿಗೂ ಸ್ವಾಗತವುಂಟು

೧೦ ಹೊಸ ಆಕಾಶವಾಣಿ ಕೇಂದ್ರಗಳು

ಬರುವ ೮ ವರ್ಷಗಳಲ್ಲಿ ಭಾರತದಲ್ಲಿ ೧೦ ಹೊಸ ಆಕಾಶವಾಣಿ ಕೇಂದ್ರಗಳನ್ನು ಸ್ಥಾಪಿಸಲಾಗುವುದೆಂದು ಸರ್ದಾರ್ ಪಟೇಲರು ಕೇಂದ್ರ ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಅಪ್ಸರಾ ಟಾಕೀಸ್

19-2-47 ರಿಂದ

ವಿ ದ್ಯಾ ಪ ತಿ

(ತಮಿಳು)

ಪ್ರತಿ ದಿನ ಮೂರು ಆಟಗಳು

: ಪಾ ತ್ರ :-

ಟಿ ಆರ್. ರಾಮಚಂದ್ರನ್, ಕೆ. ತವಮಣಿ

ಟಿ ಬಾಲಸುಬ್ರಹ್ಮಣ್ಯಂ, ಪ್ರೇಮಾವತಿ

Morning shows from 21-2-47

"I Killed That Man"

And

"So's Your Aunt Emma"

(Double Attraction)

ಧರ್ಮ ರತ್ನಾಕರರ ದರೋಡೆ ಮೊಕದ್ದಮೆ

ಸ್ವಂ. ಸು. ಫ್ರೋ] ಬೆಂಗಳೂರು ೨೨

ಧರ್ಮ ರತ್ನಾಕರ ಗೋಪಾಲರಾಯರ ದರೋಡೆ ಪ್ರಕರಣದಲ್ಲಿ ಆಪಾದಿತರುಗಳಾದ ಸರ್ವೋತ್ತಮರಾವ್ ಮುಂತಾದವರ ಮೇಲೆ ಛಾರ್ಜ್ ಶೀಟ್ ಮಾಡಲಾಗಿದೆಯಷ್ಟೆ. ಅದರಂತೆ ವಿಚಾರಣೆಯು ನಿನ್ನೆಯಿಂದ ಆರಂಭವಾಗಿದೆ ಆಪಾದಿತರ ಪರ ವಕೀಲರು ಈ ದಿನ ನ್ಯಾಯಾಧೀಶರಲ್ಲಿ ಅರ್ಜಿಯೊಂದನ್ನು ಸಲ್ಲಿಸಿ ಛಾರ್ಜ್ ಶೀಟಿನಲ್ಲಿ ಮೊದಲು ನಮೂದಾಗಿ ವಿಚಾರಣೆಗೆ ಕರೆಸಲ್ಪಡದೆ ಹೋದ ಈ ಮುಂದೆ ಕಂಡವರುಗಳನ್ನು ಕೋರ್ಟಿಗೆ ಬರಮಾಡಿಕೊಂಡು ಸಾಕ್ಷಿ ತನಿಖೆ ನಡೆಯಿಸಬೇಕೆಂದು ಪ್ರಾರ್ಥಿಸಿದ್ದಾರೆ ಶ್ರೀಗಳಾದ ಇಂಪೀರಿಯಲ್ ಬ್ಯಾಂಕ್ ಸಬ್ ಅಕೌಂಟೆಂಟ್ ಮೂರ್ತಿ; ಅಕ್ಟಿಂಗ್ ಅಕೌಂಟೆಂಟ್ ಎಂ. ಆರ್. ನಂಜುಂಡಯ್ಯ, ಡಾ|| ನರಸಿಂಹನ್, ಮಾಧವ ಕೃಷ್ಣಯ್ಯ, ಎಂ. ಎ ವೆಂಕಟರಾವ್, ಕಾಂಟ್ರಾಕ್ಟರ್, ಹ್ಯಾಕೆಟ್, ಮೇಜರ್ ಭಟ್ ಭಾಸ್ಕರರೆಡ್ಡಿ, ಜಿ. ಸುಂದರರಾವ್ ಮತ್ತು ಶ್ರೀಮತಿ ಸಾಕಮ್ಮ. ಅರ್ಜಿಯನ್ನು ಪರಿಶೀಲಿಸಿ ತೀರ್ಪು ಕೊಡಲು ಮೊಕದ್ದಮೆಯನ್ನು ೨೫ ನೇ ತಾ|| ಗೆ ಮುಂದುವರಿಸಲಾಯಿತು.

ನ್ಯಾಯಾಧೀಶರ ವರ್ಗ

ದಾವಣಗೆರೆ ಮುನ್ಸಿಫರಾದ ಶ್ರೀ ಹೆಚ್. ವೆಂಕಟಕೃಷ್ಣಶೆಟ್ಟರನ್ನು ಹಾಸನದಲ್ಲಿ ಹೊಸದಾಗಿ ಸ್ಥಾಪಿಸಲಾಗಿರುವ ನ್ಯಾಯಾಸ್ಥಾನದ ಅಸಿಸ್ಟೆಂಟ್ ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ವರ್ಗಾಯಿಸಲಾಗಿದೆ ದಾವಣಗೆರೆ ಸ್ಪೆಷಲ್ ಕೋರ್ಟನ್ನು ವಜಾ ಮಾಡಲಾಗಿದೆ

ಭಾರತೀಯ ವ್ಯಾಪಾರಕ್ಕೆ ಐರೋಪ್ಯರ ಬಹಿಷ್ಕಾರ

ಭಾರತೀಯರ ಅಂಗಡಿಗಳಿಂದ ಸಾಮಾನುಗಳನ್ನು ಕೊಳ್ಳದಂತೆ ದ|| ಆಫ್ರಿಕದ ಟ್ರಾನ್ಸ್‌ವಾಲಿನಲ್ಲಿ ಐರೋಪ್ಯರು ಜನರನ್ನು ಪ್ರೇರೇಪಿಸುತ್ತಿದ್ದಾರೆ. ಈ ಬಹಿಷ್ಕಾರ ದಿನದಿನಕ್ಕೆ ಬಲಗೊಳ್ಳುತ್ತಿದೆಯೆಂದು ಹೇಳಲಾಗಿದೆ.

ಆಕಾಶದಲ್ಲೇ ವಿವಾಹ

ಸ್ವೀಡನ್ನಿನ ಪತ್ರಿಕೋದ್ಯೋಗಿಯೊಬ್ಬನು ವಿಮಾನ ಸಂಚಾರದಲ್ಲೇ ಮದುವೆಯಾಗಿ ಪತ್ನೀ ಸಮೇತನಾಗಿ ಪ್ಯಾರಿಸಿನಲ್ಲಿ ವಿಮಾನದಿಂದಿಳಿದುದಾಗಿ ವರದಿಯಾಗಿದೆ.

ಲೀಗಿಗೆ ಕಾಂಗ್ರೆಸ್ ಸಹಕಾರ ಹಸ್ತ ನೀಡುವುದೇ?

ಮಿ|| ಅಟ್ಲೀಯವರ ಹೇಳಿಕೆಯು ದೆಹಲಿಯ ಕಾಂಗ್ರೆಸ್ ಆವರಣದಲ್ಲಿ ಜಾಗ್ರತೆಯನ್ನುಂಟುಮಾಡಿದೆ. ಭಾರತದ ಸ್ವತಂತ್ರ ರಾಜ್ಯಾಂಗವನ್ನು ನಿರ್ಣಯಿಸುವ ವಿಚಾರದಲ್ಲಿ ಲೀಗಿನ ಸಹಕಾರಕ್ಕಾಗಿ ಮತ್ತೊಮ್ಮೆ ಕಾಂಗ್ರೆಸ್ಸು ಪ್ರಯತ್ನಪಡುವುದೆಂದು ಊಹಿಸಲಾಗಿದೆ ಲೀಗು ಸಹಕರಿಸದಿದ್ದಲ್ಲಿ ಇನ್ನು ೧೭ ತಿಂಗಳುಗಳಲ್ಲಿ ಬರಲಿರುವ ಪೂರ್ಣ ಸ್ವಾತಂತ್ರ್ಯವನ್ನು ಅನುಭವಿಸಲು ರಾಷ್ಟ್ರವನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ಕಾಂಗ್ರೆಸ್ಸು ತೊಡಗುವುದೆಂದು ಹೇಳಲಾಗಿದೆ

ಮೈಸೂರಿನ ಹೋರಾಟಕ್ಕೆ ಕರ್ನಾಟಕದ ಬೆಂಬಲ

ಮೈಸೂರು ಕರ್ನಾಟಕದ ಮುಖ್ಯ ಅಂಗ; ಮೈಸೂರಿನಲ್ಲಿ ರಾಜಕೀಯ ಸುಧಾರಣೆಗಳಾಗದೆ ಕರ್ನಾಟಕ ಏಕೀಕರಣ ಸಾಧ್ಯವಿಲ್ಲ; ಅದು ಮುಂದುವರಿದ ರಾಜ್ಯವೆಂದೆನಿಸಿಕೊಂಡಿದ್ದರೂ ಅಲ್ಲಿ ಪ್ರಜೆಗಳ ಅಧಿಕಾರಸೂತ್ರಗಳು ಇರುವುದಿಲ್ಲ. ಅಲ್ಲಿನ ದಿವಾನರು ಮಹಾರಾಜರ ಸಂದೇಶಕ್ಕೆ ಮಹತ್ವ ಕೊಡದೆ ಅವರ ಇಚ್ಛೆಗೆ ವಿರೋಧ ತೋರಿಸಿರುವುದು ಅತ್ಯಂತ ವಿಷಾದಕರ ಮೈಸೂರು ಕಾಂಗ್ರೆಸ್ಸು ಹೋರಾಟ ಹೂಡಲು ನಿರ್ಧರಿಸುವುದಕ್ಕೆ ಕರ್ನಾಟಕದ ಪೂರ್ಣ ಬೆಂಬಲವಿದೆ- ಎಂದು ಶ್ರೀ ರಂಗನಾಥ ದಿವಾಕರರು ಹೇಳಿರುತ್ತಾರೆ.

ಭಾರತವನ್ನು ತ್ಯಜಿಸುವುದಾಗಿ ಬ್ರಿ|| ಪ್ರಧಾನಿಗಳ ಹೇಳಿಕೆ

೧೯೪೮ ನೇ ಜೂನ್ ತಿಂಗಳೊಳಗಾಗಿ ಬ್ರಿಟಿಷರು ಭಾರತವನ್ನು ತ್ಯಜಿಸುವರು. ಆ ವೇಳೆಯೊಳಗೆ ರಾಜಕೀಯ ಪಕ್ಷಗಳಲ್ಲಿ ಒಡಂಬಡಿಕೆ ಮೂಡಿದರೆ ಅವರ ಪ್ರತಿನಿಧಿಗಳನ್ನೊಳಗೊಂಡ ಕೇಂದ್ರ ಸರ್ಕಾರಕ್ಕೆ ಅಧಿಕಾರವನ್ನು ವರ್ಗಾಯಿಸಲಾಗುವುದು ಹಾಗಿಲ್ಲದಿದ್ದಲ್ಲಿ ಪ್ರತ್ಯೇಕವಾಗಿ ಪ್ರಾಂತ್ಯಗಳಿಗೆ ಅಧಿಕಾರವನ್ನು ವಹಿಸಿಕೊಡಲು ಅವಶ್ಯಕವಾದ ಏರ್ಪಾಡುಗಳನ್ನು ಮಾಡಲಾಗುವುದು. ಅಷ್ಟರಾಗಿ ಅಧಿಕಾರವನ್ನು ವರ್ಗಾಯಿಸುವ ಬಗ್ಗೆ ಶಾಸನವನ್ನು ಈ ಮಧ್ಯೆ ತಯಾರಿಸಲಾಗುವುದು. ದೇಶೀಯ ಸಂಸ್ಥಾನಗಳ ಸಾರ್ವಭೌಮಾಧಿಕಾರವನ್ನು ಯಾವ ಬ್ರಿ|| ಭಾರತದ ಸರ್ಕಾರಕ್ಕೂ ವಹಿಸುವುದಿಲ್ಲ. ಸಂಸ್ಥಾನಗಳೇ ಅನಂತರ ಸ್ವತಂತ್ರವಾಗುವುವು ಎಂಬುದಾಗಿ ಬ್ರಿಟಿಷ್ ಪ್ರಧಾನಿಗಳಾದ ಮಿ|| ಅಟ್ಲೀಯವರು ಮೊನ್ನೆ ದಿನ ಕಾಮನ್ಸ್ ಸಭೆಯಲ್ಲಿ ಒಂದು ಘೋಷಣೆಯನ್ನು ಮಾಡಿರುತ್ತಾರೆ ವೈಸರಾಯ್ ವೇವೆಲ್ಲರ ಜಾಗದಲ್ಲಿ ಲಾರ್ಡ್ ಮೌಂಟ್ ಬೇಟನ್ನರನ್ನು ನೇಮಕ ಮಾಡಲಾಗಿದೆಯೆಂದು ತಿಳಿಸಿದ್ದಾರೆ

ಪತ್ರಿಕೋದ್ಯೋಗಿ ಸಮ್ಮೇಳನ

ಅಖಿಲ ಮೈಸೂರು ಪತ್ರಿಕೋದ್ಯೋಗಿಗಳ ೪ ನೇ ಸಮ್ಮೇಳನದ ಸದಸ್ಯರ ಪಟ್ಟಿಯು ಪ್ರಕಟವಾಗಿದೆ ಇದರಲ್ಲಿ ೯೭ ಮಂದಿ ಸದಸ್ಯರ ಹೆಸರುಗಳು ನಮೂದಾಗಿವೆ. ಅಧ್ಯಕ್ಷ ಸ್ಥಾನಕ್ಕೆ ಉಮೇದುವಾರಿಕೆ ಸೂಚಿಸಲು ಮಾರ್ಚಿ ೫ ನೇ ತಾ|| ಕಡೇ ದಿವಸ.

ಸಾಧ್ವಿ

ತಾ॥ ೨೨-೨-೪೭ ಶನಿವಾರ

ಬ್ರಿಟಿಷರು ಹೊರಡುವ ಕಾಲ ನಿರ್ಣಯವಾಯಿತು

ಹಿಂದೂಸ್ಥಾನದ ಬಗ್ಗೆ ಬ್ರಿಟಿಷ್ ಪ್ರಧಾನ ಮಂತ್ರಿಗಳು ಕೊಟ್ಟಿರುವ ಹೇಳಿಕೆಯಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟು ಹೊರಡುವ ಕಾಲವು ನಿರ್ದಿಷ್ಟವಾಗಿ ಗೊತ್ತಾಗಿರುವುದು ಒಂದೇ ಪ್ರಾಮುಖ್ಯವಾದ ಅಂಶ. ಇತರ ವಿಷಯಗಳಲ್ಲಿ ಅವರ ಹೇಳಿಕೆಯು ಅಷ್ಟೇನೂ ಉತ್ಸಾಹಜನಕವಾಗಿರುವುದಿಲ್ಲ. ಹಿಂದೂಸ್ಥಾನವನ್ನು ಬಿಟ್ಟು ಹೋಗುವುದಾಗಿ ಅವರು ಹಲವು ದಿನಗಳಿಂದಲೂ ಹೇಳುತ್ತಲೇ ಇದ್ದಾರೆ. ಆದರೆ ಎಂದಿಗೆ ಹೋಗುವರೆಂಬ ಬಗ್ಗೆ ಖಚಿತವಾದ ಸೂಚನೆಯು ಇರಲಿಲ್ಲ. ಅಲ್ಲದೆ ಈಚಿನ ವಿದ್ಯಮಾನಗಳಿಂದ ಅವರು ಸುಲಭವಾಗಿ ಹೊರಟು ಹೋಗುವರೋ ಅಥವಾ ಇನ್ನೂ ಅಡಚಣೆಗಳನ್ನು ತಂದೊಡ್ಡುವರೋ ಎಂಬ ಸಂದೇಹಕ್ಕೂ ಅವಕಾಶವಿತ್ತು.

ತಮ್ಮ ಅಧಿಕಾರವನ್ನು ಭಾರತೀಯರಿಗೆ ಸಂಪೂರ್ಣವಾಗಿ ವಹಿಸಿ ತಾವು ಹಿಂದಿರುಗುವ ದಿವಸವನ್ನು ಅವರು ಸ್ಪಷ್ಟ ಮಾಡಬೇಕೆಂದು ಎಲ್ಲರೂ ಕೇಳುತ್ತಿದ್ದರು. ಅದಕ್ಕೆ ಈಗ ಉತ್ತರವು ದೊರೆತಿರುತ್ತದೆ. ಎರಡು ಪತ್ರಗಳ ತಮ್ಮ ಆಡಳಿತ ಸಂಪರ್ಕವನ್ನು ನಿಲ್ಲಿಸುವ ದಿನದಿಂದ ಬ್ರಿಟಿಷರು ಈಗ ಕಾಲಾವಧಿಯನ್ನು ಗೊತ್ತುಮಾಡಿರುತ್ತಾರೆ. ಇನ್ನು ಹದಿನೈದು ತಿಂಗಳಲ್ಲಿ ಅವರ ಅಧಿಕಾರವು ಭಾರತದಿಂದ ತಪ್ಪಿ ಭಾರತೀಯರೇ ತಮ್ಮ ದೇಶದ ಆಡಳಿತವನ್ನು ನಡೆಸಿಕೊಳ್ಳುವಂತಾಗುವುದು ಭಾರತಕ್ಕೂ ಬ್ರಿಟನ್ನಿಗೂ ಇರುವ ಸಂಬಂಧದ ಇತಿಹಾಸದಲ್ಲಿ ಇದೊಂದು ಪ್ರಾಮುಖ್ಯವಾದ ಘಟ್ಟ.

ಬ್ರಿಟಿಷರು ತಮ್ಮ ವಾಗ್ದಾನದಂತೆ ಬರುವ ವರ್ಷದ ಜೂನ್ ತಿಂಗಳ ಹೊತ್ತಿಗೆ ಶುಭಲಗ್ನದಲ್ಲಿ, ಒಳ್ಳೆಯ ಸನ್ನಿವೇಶದಲ್ಲಿ, ಭಾರತೀಯರ ಪ್ರೀತಿ, ವಿಶ್ವಾಸಗಳೊಡನೆ ಸ್ವದೇಶಕ್ಕೆ ತೆರಳಿ, ಅಲ್ಲಿ ಸಾಧ್ಯವಾಗಿರಲೆಂದು ಹಾರೈಸೋಣ. ಪ್ರಧಾನ ಮಂತ್ರಿಗಳು ಕೋರಿರುವಂತೆ ಬ್ರಿಟನ್ನಿಗೂ, ಭಾರತಕ್ಕೂ ಇನ್ನು ಮುಂದೆಯೂ ಶಾಶ್ವತವಾದ ಮಧುರ ಬಾಂಧವ್ಯವು ಮುಂದುವರೆಯಲು ಯಾವ ಅಡ್ಡಿಯೂ ಇರುವುದಿಲ್ಲ. ಭಾರತದ ಸಂಪೂರ್ಣ ಸ್ವಾತಂತ್ರ್ಯದ ಸಾಧನೆಯಲ್ಲಿ ಬ್ರಿಟನ್ನು ಎಷ್ಟರ ಮಟ್ಟಿಗೆ ಸಹಕರಿಸುವುದೆಂಬುದನ್ನೇ ಇದು ಅವಲಂಬಿಸುವುದು. ಸ್ವತಂತ್ರ ಹಿಂದೂಸ್ಥಾನವು ಸಕಲ ರಾಷ್ಟ್ರಗಳೊಡನೆಯೂ ಸ್ನೇಹ, ಸೌಹಾರ್ದಯುತವಾದ ಸಂಪರ್ಕವನ್ನು ಇಟ್ಟುಕೊಂಡಿರುವುದೆಂಬುದನ್ನು ರಾಷ್ಟ್ರ ನಾಯಕರು ಈಗಾಗಲೇ ಸಾರಿದ್ದಾರೆ. ಬ್ರಿಟನ್ನಿನೊಡನೆಯೂ ಸಹ ಅದು ಪ್ರೀತಿ, ವಿಶ್ವಾಸಗಳನ್ನು ಬೆಳೆಸಿಕೊಂಡು ಬರುವುದರಲ್ಲಿ ಯಾವ ಅಡ್ಡಿಯೂ ಇರುವುದಿಲ್ಲ.

ಬ್ರಿಟಿಷರು ಬರುವ ವರ್ಷ ಹೊರಟು ಹೋಗುವುದಾಗಿ ಹೇಳಿರುವರಷ್ಟೆ; ಆದರೆ ಯಾವ ವಿಷ ಬೀಜವನ್ನೂ ಉಳಿಸದೆ ಅವರು ಹೋಗುವರೆಂದು ಆಶಿಸಬೇಕಾಗಿದೆ. ಈಜಿಪ್ಟಿನಿಂದ ಅವರು ತಮ್ಮ ಅಧಿಕಾರವನ್ನು ಅರ್ಧ ಶತಮಾನಕ್ಕೆ ಮುಂಚೆಯೇ ವಾಪಸು ತೆಗೆದುಕೊಂಡಿದ್ದರೂ ಸೈನ್ಯವನ್ನು ಮಾತ್ರ ಇನ್ನೂ ಹಿಂದಕ್ಕೆ ತೆಗೆದುಕೊಳ್ಳದೆ, ಇದಕ್ಕಾಗಿ ಅನೇಕ ವರ್ಷ ಘರ್ಷಣೆಯು ನಡೆಯುತ್ತಲೇ ಇತ್ತು. ಇನ್ನೂ ಈ ಸಮಸ್ಯೆಯು ಬಗೆಹರಿದಿರುವುದಿಲ್ಲ. ಐರ್ಲೆಂಡಿಗೆ ಸ್ವತಂತ್ರ ರಾಜ್ಯಾಧಿಕಾರವನ್ನು ಕೊಟ್ಟು ಒಪ್ಪಂದ ಮಾಡಿಕೊಂಡಿದ್ದರೂ ಅಲ್ಲಿ ಅಲ್ಸ್ಟರ್ ಎಂಬ ಪ್ರತ್ಯೇಕ ಪ್ರಾಂತ್ಯವನ್ನು ನಿರ್ಮಾಣ ಮಾಡಿ ಅಖಂಡ ಐರ್ಲೆಂಡಿನ ಸಾಮ್ರಾಜ್ಯ ಶಕ್ತಿ ಲೋಪ ಬರುವಂತೆ ಮಾಡಲಾಗಿದೆ. ಈ ವರ್ತನೆಯು ಹಿಂದೆ ಅಧಿಕಾರದಲ್ಲಿದ್ದ ಲಿಬರಲ್ ಮತ್ತು ಕನ್ಸರ್ವೇಟಿವ್ ಪಂಗಡಗಳಿಂದ ಅನುಸರಿಸಲ್ಪಟ್ಟ ಕುತಂತ್ರಗಳು ಉದಾತ್ತ ಧ್ಯೇಯಗಳಿಂದ ಕೂಡಿ ಅವುಗಳನ್ನು ಕಾರ್ಯರೂಪಕ್ಕೆ ತರಲು ತೊಡಗಿರುವ ಕಾರ್ಮಿಕ ಪಕ್ಷದವರು ಆ ಬಗೆಯ ನೀತಿಯನ್ನು ಅನುಸರಿಸುವುದಿಲ್ಲವೆಂದು ಆಶಿಸಬೇಕಾಗಿದೆ.

ನಮ್ಮ ದೇಶದಲ್ಲಿ ಈ ಬಗೆಯ ಸೋಂಕುಗಳು ಉಳಿಯದಂತೆ ಮಾಡುವುದು ಅಗತ್ಯ. ಭಾರತೀಯರ ಅಭಿಪ್ರಾಯದಂತೆ ರಾಜ್ಯಾಂಗ ರಚನೆಗೆ ಅವಕಾಶ ಕಲ್ಪಿಸಿರುವುದರಿಂದ ತಮ್ಮ ಮಾತಿನಂತೆ ಬ್ರಿಟಿಷರು ರಾಜ್ಯಾಂಗ ರಚನಾ ಸಭೆಯ ನಿರ್ಧಾರಗಳನ್ನು ಶಿರಸಾವಹಿಸಿ ಪಾಲಿಸುವುದು ಅವರ ಪರಮ ಕರ್ತವ್ಯ. ಆದರೆ ಪ್ರಧಾನ ಮಂತ್ರಿಗಳು ಈ ಬಗ್ಗೆ ನುಡಿದಿರುವ ಮಾತುಗಳು ಸಮರ್ಪಕವಾಗಿಲ್ಲ. ರಾಜ್ಯಾಂಗ ಸಭೆಯು ಸರ್ವ ಪಕ್ಷಗಳ ಬೆಂಬಲದಿಂದ ಕೆಲಸ ಮಾಡುತ್ತಿಲ್ಲವೆಂಬ ಆಕ್ಷೇಪವನ್ನು ಅವರು ನುಡಿದಿದ್ದಾರೆ. ಪ್ರಕೃತದಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳು ಒಂದು ವ್ಯವಸ್ಥಿತವಾದ ನೀತಿಯನ್ನು ಅನುಸರಿಸದ ಸ್ವೇಚ್ಛೆಯಾಗಿ ಪ್ರವರ್ತಿಸುತ್ತಿರುವ ವಿಷಯದಲ್ಲಿ ಮೌನವನ್ನು ತಾಳಿದ್ದಾರೆ. ಲೀಗಿನವರು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸದಿರುವ ವಿಷಯದಲ್ಲಿ ಯಾವ ಕಾರ್ಯನೀತಿಯನ್ನೂ ಸೂಚಿಸಿದ್ದವುದಿಲ್ಲ. ಇವೆಲ್ಲವೂ ಪ್ರಧಾನ ಮಂತ್ರಿಗಳ ಹೇಳಿಕೆಯ ಲೋಪದೋಷಗಳು. ಹೊಸದಾಗಿ ಬರುವ ವೈಸರಾಯರು ದಕ್ಷತೆಯಿಂದ ಆಡಳಿತದಲ್ಲಿ ಹೆಚ್ಚು ಸ್ಥೈರ್ಯದಿಂದ ವರ್ತಿಸಿ ರಾಜ್ಯಭಾರವು ಸುಗಮವಾಗಿ ನಡೆಯುವಂತೆ ಮಾಡುವರೆಂದು ಆಶಿಸಬೇಕಾಗಿದೆ.

ಮುಂದಿನ ವಿದ್ಯಮಾನಗಳು ಬ್ರಿಟಿಷರ ಪ್ರಾಮಾಣಿಕತೆಯನ್ನೇ ಅನುಸರಿಸುತ್ತವೆ. ಬಾಯಿ ಮಾತಿನಲ್ಲಿ ಭಾರತ ಸ್ವಾತಂತ್ರ್ಯಕ್ಕೆ ಅವರು ಸಹಾನುಭೂತಿಯನ್ನು ತೋರಿ ಕಾರ್ಯತಃ ಅದಕ್ಕೆ ವ್ಯತಿರೇಕವಾಗಿ ವರ್ತಿಸಿದರೆ ಅವರ ನವಿ ನುಡಿಗಳೆಲ್ಲವೂ ನಿರರ್ಥಕವಾಗುವುವು. ತಮ್ಮ ಘೋಷಣೆಗಳಲ್ಲಿ ಸೂಚಿಸಿರುವಂತೆ ನಿಜವಾಗಿಯೂ ಭಾರತದ ಮೇಲಿನ ತಮ್ಮ ಹಿಡಿತವನ್ನು ತ್ಯಜಿಸಿ ಭಾರತದ ಸಹಜವಾದ ಮಿತ್ರರಂತೆ ಅವರು ನಡೆದುಕೊಂಡರೆ ಬ್ರಿಟನ್ನಿಗೂ, ಹಿಂದೂಸ್ಥಾನಕ್ಕೂ ಶಾಶ್ವತವಾದ ಪ್ರೀತಿ ವಿಶ್ವಾಸಗಳು ಬೆಳೆಯುವುದರಲ್ಲಿ ಸಂದೇಹವಿಲ್ಲ. ಬ್ರಿಟಿಷರ ಆಡಳಿತವನ್ನು ಭಾರತದಿಂದ ಹೊರಡಿಸುವ ಈ ಪ್ರಯತ್ನದಲ್ಲಿ ಇಂದು ಒಂದು ಪ್ರಾಮುಖ್ಯವಾದ ನೈತಿಕ ಮಟ್ಟವು ಮುಟ್ಟಲ್ಪಟ್ಟಿರುವುದೆಂದು ಧಾರಾಳವಾಗಿ ಹೇಳಬಹುದು.

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ

೨೨-೨-೪೭ ರಿಂದ :: ಎರಡನೇ ವಾರ

ಶ್ರೀ ಕೃಷ್ಣಲೀಲಾ

(ಕನ್ನಡಚಿತ್ರ)

ಪ್ರತಿದಿನ ಮಧ್ಯಾಹ್ನ 3, 1ನೇ ಆಟ ಸಂಜೆ 6-15, 2ನೇ ಆಟ ರಾತ್ರಿ 9-30

From Friday the 21st Feb 1947 for 4 days daily at 10-30 a.m.

FIGHTING SEA-BEES

A Romance of the Seven Seas

ಈ ಐವತ್ತು ವರ್ಷಗಳಿಂದ ಮಾನವ ಲೋಕಕ್ಕೆ ಆರೋಗ್ಯಾನಂದಗಳನ್ನು ನೀಡುತ್ತಾ ಅನರ್ಘ್ಯವಾಗಿ, ಅವಿಚ್ಛಿನ್ನವಾಗಿ ಸೇವೆ ಮಾಡಿ, ದಿನ ದಿನಾಭಿವೃದ್ಧಿ ಹೊಂದುತ್ತಿರುವುದಕ್ಕಾಗಿ ಎಲ್ಲೋರೂ ಸ್ತವಿಸುತ್ತಿದೆ.

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ

ನೋಟಿಫಿಕೇಷನ್ ನಂಬರು R I -ಆರ್.- 1946-47. ತಾ॥ 14-2-1947

ಇದರಿಂದ ಮೈಸೂರು ನಗರದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:- 1947 ನೇ ಜುಲೈ ಮಾಹೆಯಿಂದ ಹೊಸ ರೇಷನ್ ಕಾರ್ಡುಗಳು ಕೊಡಲ್ಪಡಬೇಕಾದ್ದರಿಂದ ಮೈಸೂರು ನಗರದ ಪ್ರತಿಯೊಬ್ಬ ರೇಷನ್ ಕಾರ್ಡು ಹೋಲ್ಡರಿಗೂ ಬರುವ ಮಾಹೆ ಮಾರ್ಚಿ 1 ನೇ ತಾರೀಖಿನೊಳಗಾಗಿ ಡಿಪೋಗೆ ಒಪ್ಪಿಸತಕ್ಕ ಪ್ರಮಾಣ ಪತ್ರಿಕೆಯಲ್ಲಿ ತಮ್ಮ ಕುಟುಂಬದಲ್ಲಿರತಕ್ಕ ದೊಡ್ಡವರು ಮತ್ತು ಮಕ್ಕಳ ಸಂಖ್ಯೆ ಮತ್ತು ವಾಸಸ್ಥಳದ ಡೋರ್ ನಂಬರುಗಳು ಸಹ, ನಮೂದಿಸಿ ವಿವರವನ್ನು ತಿಳಿಸಬೇಕು.

1 ಇದೇ ಮಾಹೆ 25 ನೇ ತಾರೀಖಿನ ಆರಂಭದಿಂದ 1-3-47 ವರೆವಿಗೂ ಡಿಕ್ಲರೇಷನ್ ನಮೂನೆ ಫಾರಂಗಳು ಪ್ರತಿ ಸರ್ಕಾರಿ, ಕೋ ಆಪರೇಟಿವ್, ಮತ್ತು ಪ್ರೈವೇಟ್ ಡಿಪೋಗಳಲ್ಲಿ ದೊರೆಯಲ್ಪಡುತ್ತೆ.

2 ಈ ಫಾರಂಗಳನ್ನು ಪ್ರತಿಯೊಬ್ಬ ರೇಷನ್ ಕಾರ್ಡ್ ಹೋಲ್ಡರುಗಳೂ ತಮ್ಮ ತಮ್ಮ ರೇಷನ್ ಡಿಪೋಗಳಲ್ಲಿಯೇ ಪಡೆಯಬಹುದು.

3 ಭರ್ತಿ ಮಾಡಲ್ಪಟ್ಟ ಫಾರಂಗಳನ್ನು ಬರುವ ಮಾಹೆ ಮಾರ್ಚಿ 10 ನೇ ತಾರೀಖಿನೊಳಗಾಗಿ ಸಂಬಂಧಪಟ್ಟ ಡಿಪೋಗಳಿಗೆ ವಾಪಸು ಮಾಡತಕ್ಕದ್ದು.

4 ಹಾಗೆ ವಾಪಸು ಮಾಡದೆ ತಾರೀಖು (10-3-47) ಮಾಡದೆ ಇದ್ದ ಪಕ್ಷದಲ್ಲಿ ಅಂಥಾ ಕಾರ್ಡ್ ಹೋಲ್ಡರುಗಳಿಗೆ ರೇಷನ್ ದೊರಕುವುದಿಲ್ಲ.

ಮೈಸೂರು 14-2-47

(ಸಹಿ) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ, ಮೈಸೂರು ಸಿಟಿ.

ಸಾಧ್ವಿ

ಮೈಸೂರು
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

Edited, printed and published by A. S. Nagaraj at the Sadhvi Press, D. Subbiah Road, Mysore.

ಹೊಸ ಜವಳಿ

ಈಗ ತಾನೇ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!

ಬಿ. ಕೆಂಚಪ್ಪ ಸನ್ಸ್,

ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು.

ಸಂಪುಟ ೫] ಭಾನುವಾರ ೨೩—೨—೪೭ [ಸಂಚಿಕೆ ೧೩೭

ಲಾರ್ಡ್ ವೇವೆಲ್ಲರನ್ನು ವಾಪಸು ಕರೆಸಿದ್ದೇಕೆ?

ಹೊಸ ವೈಸರಾಯರಿಗೆ ಏನ್ನಿನಿಂದ ಸಲಹೆಗಳೇ?

ಮಿ॥ ಅಟ್ಲಿಯವರು ಭಾರತದ ತಾತ್ಕಾಲಿಕ ಸರ್ಕಾರದ ವಿಚಾರವನ್ನೇ ಪ್ರಸ್ತಾಪಿಸಿರುವ ಬಗ್ಗೆ ಅನೇಕ ಊಹಾಪೋಹಗಳಿವೆ. ಲೀಗನ್ನು ಕೇಂದ್ರ ಸರ್ಕಾರದಿಂದ ಹೊರದೂಡಲು ಕಾರ್ಯಕಾರಿ ಸರ್ಕಾರ ತಪ್ಪಿಲ್ಲವೆಂದೂ ಇದುವರೆಗೆ ತಾಳ್ಮೆ ವಹಿಸಿದಂತೆ ಕಾಂಗ್ರೆಸ್ಸು ಇನ್ನೂ [illegible]ಂಗಳುಗಳನ್ನು ಕಳೆಯುವುದಾಗಿ [illegible] ಆಶಿಸಲಾಗಿದೆ. ಹೊಸ ವೈಸರಾಯರಿಗೆ ಕೇಂದ್ರ ಸರ್ಕಾರದ ವಿಚಾರದಲ್ಲಿ [illegible]ವಾದ ಸಲಹೆಗಳನ್ನು ಬ್ರಿಟಿಷ್ ಸರ್ಕಾರ ಕೊಟ್ಟು ಕಳುಹಿಸುವುದಾಗಿ ತಿಳಿದುಬಂದಿದೆ. ಇನ್ನು ಮುಂದೆ ಕೇಂದ್ರ ಸರ್ಕಾರವು ಡೊಮಿನಿಯನ್ ಸರ್ಕಾರದಂತೆ ನಡೆಯುವುದೆಂದೂ, ಪಂ॥ ನೆಹರೂ ರವರೇ ಅದರ ನಾಯಕರೆಂದು ಪರಿಗಣಿಸಲ್ಪಡುವರೆಂದೂ ಹೇಳಲಾಗಿದೆ. ಈ ಹೊಸ ಸರ್ಕಾರವು ಸಂಯುಕ್ತ ಜವಾಬ್ದಾರಿಯಿಂದ [illegible] ಸಾಗಬೇಕೆಂದೂ ಲೀಗಿನವರು ಈ [illegible]ವನ್ನು ಅಂಗೀಕರಿಸದಿದ್ದಲ್ಲಿ ಅವರೇ [illegible]ದಿಂದ ಹೊರಬೀಳಬೇಕೆಂದೂ, ಈ [illegible] ವೇವೆಲ್ಲರು ಕಾಲದಲ್ಲಿದ್ದಂತೆ ಪ್ರತ್ಯೇಕ [illegible] ವರ್ತಿಸಲು ಅವಕಾಶವನ್ನು ಕೊಡ[illegible]ವುದಿಲ್ಲವೆಂದೂ ಹೇಳಲಾಗಿದೆ.

ದೇಶೀಯ ಸಂಸ್ಥಾನಗಳೊಡನೆ ಸಂಧಾನ

೧೯೪೮ ರ ಜೂನ್ ತಿಂಗಳೊಳಗೆ ಭಾರತವನ್ನು ಬ್ರಿಟಿಷರು ಬಿಟ್ಟು ಹೋಗುವುದಾಗಿ ಮಿ॥ ಅಟ್ಲಿಯವರು ತಿಳಿಸಿದಾಗ್ಯೂ ಅವರು ಸಂಸ್ಥಾನಗಳ ವಿಚಾರವಾಗಿ ಮಾತನಾಡುತ್ತಾ, ದೇಶೀಯ ಸಂಸ್ಥಾನಗಳ ಮೇಲಿನ ಸಾರ್ವಭೌಮತ್ವವನ್ನು ಯಾವ ಬೇರೆ ಸರ್ಕಾರಕ್ಕೆ ವಹಿಸಿಕೊಡುವುದಿಲ್ಲ [illegible] ಭಾರತೀಯರಿಗೆ ವಹಿಸಿಕೊಳ್ಳುವುದರ ಸಂಸ್ಥಾನಗಳು ಸ್ವತಂತ್ರವಾಗುವುವು. ಈ ಮಧ್ಯವರ್ತಿ ಕಾಲದಲ್ಲಿ ಬ್ರಿಟಿಷ್ ಸರ್ಕಾರ ಮತ್ತು ದೇಶೀಯ ಸಂಸ್ಥಾನಗಳ ಭವಿಷ್ಯ ಸಂಬಂಧವನ್ನು ಸಂಧಾನಗಳ ಮೂಲಕ ಪರಿಹರಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿದ್ದಾರೆ.

ಗಾಂಧೀಜಿಗೆ ವಿಶ್ರಾಂತಿ

ಮಹಾತ್ಮಾ ಗಾಂಧಿಯವರು ಪೂರ್ವ ಬಂಗಾಳದ ತಿಪ್ಪೇರಾ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಅವರು ನಾಳೆಯಿಂದ ಒಂದು ವಾರ ಕಾಲ ಕಾಲ್ನಡಿಗೆ ಪ್ರವಾಸವನ್ನು ರದ್ದು ಮಾಡಿ ವಿಶ್ರಾಂತಿ ಪಡೆಯುವರು. ಇದೇ ಸಮಯದಲ್ಲಿ ಮಿ॥ ಪರ್ಕರವರು ನಿವರ ಭೇಟಿ ಮಾಡಲಿದ್ದಾರೆ.

ಒಪೆರಾ ಟಾಕೀಸ್
19-2-47 ರಿಂದ
ವಿದ್ಯಾಪತಿ (ತಮಿಳು)
ಪ್ರತಿ ದಿನ ಮೂರು ಆಟಗಳು
: ಪಾತ್ರ :-
ಟಿ. ಆರ್. ರಾಮಚಂದ್ರನ್, ಕೆ. ಶಿವಮಣಿ
ವಿ. ಬಾಲಸುಬ್ರಹ್ಮಣ್ಯಂ, ಪ್ರೇಮಾವತಿ
Morning shows from 21-2-47
"I Killed That Man"
And
"So's Your Aunt Emma"
(Double Attraction)

ದಿವಂಗತ ವಿಠಲರಾಯರು

ಮೈಸೂರು ೨೨

ರಾಜಧಾನಿಯಲ್ಲಿ ಸುಪ್ರಸಿದ್ಧ ಸೀಮೆಎಣ್ಣೆ ಕಂಟ್ರಾಕ್ಟರರಾಗಿದ್ದ ಶ್ರೀ॥ ಎಸ್. ವಿಠಲರಾಯರು ನಿನ್ನೆ ಬೆಳಗ್ಗೆ ತಮ್ಮ ೯೧ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಬಹಳ ದಿನಗಳಿಂದಲೂ ಎಣ್ಣೆ ಕಂಟ್ರಾಕ್ಟರಾಗಿದ್ದು ತಮ್ಮ ಸ್ವಂತ ಪ್ರಯತ್ನದಿಂದ ಸಂಪಾದಿಸಿದ ಹೇರಳವಾದ ದ್ರವ್ಯವನ್ನು ಅನೇಕ ಧರ್ಮ ಕಾರ್ಯಗಳಿಗೆ ವಿನಿಯೋಗಿಸಿರುವರು. ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಅನ್ನ, ವಸನಗಳಿಗೂ ನಿವಾಸಕ್ಕೂ ಸೌಲಭ್ಯಗಳನ್ನು ಕಲ್ಪಿಸಿದ್ದರು. ಇವರು ವಿಶೇಷ ದೈವಭಕ್ತಿಯುಳ್ಳವರಾಗಿ ಸಾರ್ವಜನಿಕ ಕಾರ್ಯಗಳಲ್ಲಿ ತುಂಬಾ ಆಸಕ್ತಿ ವಹಿಸುತ್ತಿದ್ದರು. ಆಗಿಂದಾಗ್ಗೆ ಬಡ ಜನಗಳಿಗೆ ಅನ್ನದಾನದ ವ್ಯವಸ್ಥೆಯನ್ನೂ ನಡೆಸುತ್ತಿದ್ದರು. ಸಕಲ ಧರ್ಮಕಾರ್ಯಗಳಿಗೂ ಉದಾರವಾಗಿ ಸಹಾಯ ನೀಡುತ್ತಿದ್ದರು. ತಿಪಟೂರು ಪೇಟೆಯಲ್ಲಿ ಶ್ರೀ ರಾಮಚಂದ್ರ ಮಂದಿರವೊಂದನ್ನು ನಿರ್ಮಿಸಿ ಅಲ್ಲಿ ಭಗವತ್ಸೇವೆಯು ನಿರಂತರವಾಗಿ ನಡೆಯಲು ಏರ್ಪಡಿಸಿರುವರು. ದಿವಂಗತರಿಗೆ ಭಗವಂತನು ಚಿರಶಾಂತಿ ನೀಡಲೆಂದು ಬೇಡುತ್ತೇವೆ. ಅವರ ಬಂಧುವರ್ಗದವರಿಗೆ ಹೃತ್ಪೂರ್ವಕವಾದ ಅನುತಾಪವನ್ನು ಸೂಚಿಸುತ್ತೇವೆ.

* ಭಾರತದ ಕಮ್ಯೂನಿಸ್ಟ್ ಪಕ್ಷದಲ್ಲಿ ೫೩೦೦೦ ಸದಸ್ಯರಿದ್ದಾರೆಂದೂ ಈ ಪೈಕಿ ೧೫೦೦ ಮಂದಿಯನ್ನು ದಸ್ತಗಿರಿ ಮಾಡಲಾಗಿದೆಯೆಂದೂ ಸ॥ ಪಟೇಲರು ಹೇಳಿದ್ದಾರೆ.

ಶ್ರೀ ಗಣೇಶ ಟಾಕೀಸ್
21-2-47 ರಿಂದ ಪ್ರತಿದಿನ ೩ ಆಟಗಳು
ನೃತ್ಯ ಮತ್ತು ಸಂಗೀತದಿಂದ ಕೂಡಿದ
ವರ್ಣರಂಜಿತ ತಮಿಳು ಚಿತ್ರ
"ಶ್ರೀವಳ್ಳಿ"
ಭೂಮಿಕೆ :- ಟಿ. ಆರ್. ಮಹಾಲಿಂಗಂ
ರುಕ್ಮಿಣಿ, ಎನ್. ಎಸ್. ಕೃಷ್ಣನ್,
ಟಿ. ಎ. ಮಧುರಂ
Morning Shows on 22, 23
and 24th at 10-30 a. m.
'LADIES COURAGEOUS'
Starring: Loretta Young.

ಮೈಸೂರು ಸಂಸ್ಥಾನದಲ್ಲಿ ಸತ್ಯಾಗ್ರಹ

ಹುಬ್ಬಳ್ಳಿಯಿಂದ ಹೊರಡುವ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯು ಈ ರೀತಿ ಅಗ್ರಲೇಖನವೊಂದನ್ನು ಪ್ರಕಟಿಸಿದೆ:-

ಜವಾಬ್ದಾರಿ ರಾಜ್ಯ ಸ್ಥಾಪನೆಗಾಗಿ ಮೈಸೂರು ಸಂಸ್ಥಾನದ ಕಾಂಗ್ರೆಸ್ ಸಮಿತಿಯವರು ಸತ್ಯಾಗ್ರಹ ಪ್ರಾರಂಭಿಸುವ ನಿರ್ಧಾರ ಮಾಡುವ ಪ್ರಸಂಗ ಬಂದುದು ವಿಷಾದಕರವಿದೆ. ಸಾಂಗಲಿ, ಮುಧೋಳದಂಥ ಸಣ್ಣ ಸಂಸ್ಥಾನಗಳಲ್ಲಿ ಕೂಡ ಜವಾಬ್ದಾರ ರಾಜ್ಯ ಸ್ಥಾಪನೆಯ ಘೋಷಣೆ ಮಾಡಲ್ಪಟ್ಟಿರುವಾಗ ಪ್ರಗತಿಪರವಾದ ಮತ್ತು ರಾಮರಾಜ್ಯವೆಂದು ಗಾಂಧಿಜಿಯವರಿಂದ ಕೂಡ ಹೊಗಳಿಕೊಂಡ ಮೈಸೂರು ಸಂಸ್ಥಾನ ಈ ಹಿಂದೆ ಬೀಳುವುದು ಪಶ್ನನ್ನು ಕೀಳು ನೀಯ. ಭಾರತದಲ್ಲಿ ಸ್ವಾತಂತ್ರ್ಯದ ಕೈಸೆ ಹೆಚ್ಚಾಗುತ್ತ ನಡೆದಂತೆ ಸಂಸ್ಥಾನಗಳಲ್ಲಿ ಜವಾಬ್ದಾರ ರಾಜ್ಯ ಸ್ಥಾಪನೆಯು ಕಂಬಲ ಹೆಚ್ಚುವುದು ಸ್ವಾಭಾವಿಕ. ಇವನ್ನರಿತ ಸಂಸ್ಥಾನಿಕರು ತಮ್ಮ ಘೋಷಣೆಯನ್ನು ಬದಲಿಸಿ ಜವಾಬ್ದಾರ ರಾಜ್ಯ ಸ್ಥಾಪಿಸಲು ಸಿದ್ಧರಾಗುವ ಕರ್ತವ್ಯ ಅವಶ್ಯಕ. ಆದರೆ ಮೈಸೂರು ಸಂಸ್ಥಾನದವರು ಹಾಗೆ ಜವಾಬ್ದಾರ ರಾಜ್ಯ ಸ್ಥಾಪನೆಗೆ ಸಿದ್ಧರಾಗದೆ ಹೊಸ ಸುಧಾರಣೆಗಳ ಅಸ್ಪಷ್ಟ ಘೋಷಣೆಯನ್ನು ಮಾಡಿರುವರು. ಇದರಿಂದ ಸಂಸ್ಥಾನ ಪ್ರಜೆಗಳು ಸಮಾಧಾನ ಹೊಂದಲಾರರು. ಅವರ ಆಶೆ ಆಕಾಂಕ್ಷೆಗಳು ಈಡೇರಲಾರವು. ಆದುದರಿಂದ ಶ್ರೀಮನ್ಮಹಾರಾಜ ಸರ್ಕಾರದವರು ಪ್ರಜೆಗಳ ನಿರ್ಧಾರವನ್ನು ಲಕ್ಷಿಸಿ ಜವಾಬ್ದಾರ ಸರ್ಕಾರ ಸ್ಥಾಪನೆಯ ಘೋಷಣೆ ಮಾಡಿ ಘಟನಾ ಸಮಿತಿಯನ್ನು ನೇಮಿಸಿ ಪ್ರಜೆಗಳ ಸತ್ಯಾಗ್ರಹದಂಥ ಕೊನೆಯ ಉಪಾಯ ಕೈಗೊಳ್ಳುವುದನ್ನು ತಪ್ಪಿಸಬೇಕು. ಪ್ರಗತಿಪರವಾದ ಮೈಸೂರು ಸಂಸ್ಥಾನಕ್ಕೆ ಇದೇ ಭೂಷಣವಾದುದು. ಮೈಸೂರು ಕಾಂಗ್ರೆಸ್ಸಿಗೆ ಐಕ್ಯ ಕರ್ನಾಟಕದ ಬೆಂಬಲವಿದೆಯೆಂಬುದನ್ನು ಬೇರೆ ಹೇಳಬೇಕಿಲ್ಲ."

ಕಾಂಪೌಂಡರುಗಳ ಮುಷ್ಕರವೇ?

ಚಿತ್ರದುರ್ಗ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳ ಕಾಂಪೌಂಡರುಗಳು ತಮ್ಮ ಸಂಬಳವನ್ನು ಹೆಚ್ಚು ಮಾಡದಿರುವುದರಿಂದ ಮಾರ್ಚಿ ೧ ರಿಂದ ಮುಷ್ಕರವನ್ನು ಹೂಡಲು ನಿರ್ಧಾರ ಮಾಡಿದ್ದಾರೆಂದು ತಿಳಿದುಬಂದಿದೆ.

ನೆಹರು-ವೇವಲ್ ಭೇಟಿ

ಪಂ॥ ನೆಹರೂರವರು ವೇವಲ್ಲರನ್ನು ನೆನ್ನೆ ಸಂಜೆ ಭೇಟಿ ಮಾಡಿ ಮಿ॥ ಅಟ್ಲಿಯವರ ಹೇಳಿಕೆಯ ಬಗ್ಗೆ ಕಾಂಗ್ರೆಸ್ ಮಂತ್ರಿಗಳ ಅಭಿಪ್ರಾಯವನ್ನು ತಿಳಿಸಿದರೆಂದೂ, ಆ ಹೇಳಿಕೆಯ ವಿಚಾರದಲ್ಲಿ ಹಲವು ವಿವರಣೆಗಳು ಬೇಕೆಂದು ಕೇಳಿದರೆಂದೂ ತಿಳಿದುಬಂದಿದೆ. ಮತ್ತೊಮ್ಮೆ ನೆಹರು-ಜಿನ್ನಾರವರ ಭೇಟಿ ನಡೆಯಲೆಂದು ಲೀಗಿನ ಹಲವು ಪ್ರಮುಖರು ಹಾರೈಸುತ್ತಿದ್ದಾರೆ. ಆದರೆ ಗಾಂಧೀಜಿಯವರ ಅಭಿಪ್ರಾಯ ತಿಳಿಯುವ ತನಕ ಈ ಬಗ್ಗೆ ನಿರ್ಧಾರ ಹೊರಬೀಳಲಾರದೆಂದು ಹೇಳಲಾಗಿದೆ. ಭಾರತ ರಾಜ್ಯಾಂಗ ಸಭೆಯು ಮಾಮೂಲಿನಂತೆ ಮುಂದುವರಿಯುವುದೆಂದೂ ತಿಳಿದುಬಂದಿದೆ.

ಪಂಜಾಬ್ ಸರ್ಕಾರಕ್ಕೆ ನೋಟೀಸ್

ಜೈಲಿನಲ್ಲಿ ತಮ್ಮನ್ನು ಹೊಡೆದರೆಂದೂ, ಸೀರೆಯನ್ನು ಹರಿದರೆಂದೂ, ಅದಕ್ಕಾಗಿ ೫೦ ಸಹಸ್ರ ರೂ. ಗಳನ್ನೂ, ಸೀರೆಗಾಗಿ ೧೫೦ ರೂ. ಗಳನ್ನೂ ಪರಿಹಾರ ಕೊಡಬೇಕೆಂದೂ ಬೇಗಂ ಷಾ ನವಾಜರವರ ಮಗಳು ಪಂಜಾಬ್ ಸರ್ಕಾರವನ್ನು ಕೇಳಿರುವುದಾಗಿ ವರದಿಯಾಗಿದೆ.

ಭಿನ್ನಾಭಿಪ್ರಾಯವೇ ವೈಸರಾಯರ ಬದಲಾವಣೆಗೆ ಕಾರಣ

ದಿನೇ ದಿನೇ ಹದಗೆಡುತ್ತಿರುವ ಭಾರತದ ರಾಜಕೀಯ ಪರಿಸ್ಥಿತಿಯ ಬಗ್ಗೆ ಬ್ರಿಟಿಷ್ ಸರ್ಕಾರಕ್ಕೂ ಲಾರ್ಡ್ ವೇವೆಲ್ಲರವರಿಗೂ ತೀವ್ರವಾದ ಭಿನ್ನಾಭಿಪ್ರಾಯವಿದ್ದುದೇ ವೈಸರಾಯರನ್ನು ಹಠಾತ್ತಾಗಿ ವಾಪಸು ಕರೆಸಲು ಕಾರಣವೆಂದು ರಾಯಟರ್ ಸಂಸ್ಥೆಯ ರಾಜಕೀಯ ಬಾತ್ಮೀದಾರರಾದ ಶ್ರೀ ಜಾನ್ ವೈಟನ್‌ರವರು ವರದಿ ಮಾಡಿರುತ್ತಾರೆ.

ಬರ್ಮಾದಲ್ಲಿ ಸಹಸ್ರ ಸೈನಿಕರ ದಂಗೆ

ಬರ್ಮಾದ ಪೆಗು ನಿಲ್ದಾಣದಲ್ಲಿರುವ ಕ್ವಿಫಲ್ ದಳಕ್ಕೆ ಸೇರಿದ ಒಂದು ಸಹಸ್ರ ಸೈನಿಕರು ಕಳೆದ ೩ ದಿನಗಳಿಂದ ದಂಗೆ ಎದ್ದಿದ್ದಾರೆಂದು ರಂಗೂನಿನಿಂದ ಸುದ್ದಿ ಬಂದಿದೆ.

ನೂಲು ಮತ್ತು ಬಟ್ಟೆ ಪತ್ತೆ

ಮೈಸೂರು ೨೨

ಮಾರ್ಕೆಟಿನಿಂದ ಬೆಂಗಳೂರಿಗೆ ರವಾನೆಯಾಗಲಿದ್ದ ನೂಲಿನ ೧೫ ಪೆಟ್ಟಿಗೆ, ೧೧೦ ಥಾನುಗಳ ೮ ಬೇಲು ಬಟ್ಟೆಗಳನ್ನು ರೈಲ್ವೆ ಪೋಲೀಸರು ವಶಪಡಿಸಿಕೊಂಡು ನಗರದ ಪೆಂಡಲನ್ ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತಾರೆ. ಶಾಸನ ಕ್ರಮ ಸಾಗುತ್ತಿದೆ.

ಸಂತಾಪ ಪ್ರದರ್ಶನ

ರಾಜಧಾನಿಯ ಆಯುರ್ವೇದ ವೈದ್ಯ ಸಂಘದ ವಿಶೇಷ ಸಭೆಯೊಂದು ನೆನ್ನೆ ಆ॥ ವ ಆಯುರ್ವೇದ ಸಾಹಿತ್ಯರತ್ನಂ ವೇ॥ ಬೆಟ್ಟದ ಪುರ ವೆಂಕಟರಮಣಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿ ಭಿಷಕ್ ಚೂಡಾಮಣಿ ಡಾ॥ ವೈ. ಲಕ್ಷ್ಮೀನರಸಿಂಹ ಶಾಸ್ತ್ರಿಗಳ ಮರಣಕ್ಕೆ ಒಮ್ಮತದ ಶೋಕ ವಿಯೋಗಕ್ಕಾಗಿ ಸಂತಾಪ ಸೂಚಕವಾದ ನಿರ್ಣಯವನ್ನು ಅಂಗೀಕರಿಸಿತು.

ಸಾಧ್ವಿ
ತಾ|| ೨೩-೨-೪೭ ಭಾನುವಾರ

ಪರಮಹಂಸರ ಪುಣ್ಯಸ್ಮರಣೆ

ಲೇಖಕರು: ಜಿ. ಎಸ್. ಸುಬ್ರಹ್ಮಣ್ಯಂ

ಜಗತ್ತಿನಲ್ಲಿರುವ ಎಲ್ಲ ಧರ್ಮಗಳೂ, ಮತಗಳೂ ಒಂದೇ. ಅವು ದೇವರನ್ನು ಕಾಣಲು, ಸಾಕ್ಷಾತ್ಕಾರ ಮಾಡಿಕೊಳ್ಳಲು ಇರುವ ಅನೇಕ ಹಾದಿಗಳು - ಎಂಬ ಸರ್ವ ಧರ್ಮ ಸಮನ್ವಯ ತತ್ವವನ್ನು ಪ್ರಪಂಚಕ್ಕೆ ಸಾರಿದ ವಿಭೂತಿ ಪುರುಷರು ರಾಮಕೃಷ್ಣರು. ತಮ್ಮ ತಮ್ಮ ಮತ ಧರ್ಮಗಳು ಅತ್ಯುತ್ತಮವಾದವು, ಬೇರೆಯವು ಕೀಳು ಎಂಬ ಮನೋಭಾವನೆ ಇಂದು ಎಲ್ಲರಲ್ಲಿಯೂ ಬೇರೂರಿದೆ. ಭಾರತದಲ್ಲಂತೂ ಕ್ರೈಸ್ತ ಪಾದ್ರಿಗಳು ಹಿಂಡು ಹಿಂಡಾಗಿ ಬಂದು ತಮ್ಮ ಮತ ಪ್ರಚಾರ ಮಾಡುತ್ತಾ ಹಿಂದೂ ಧರ್ಮವನ್ನು ತುಳಿಯುತ್ತ ಬಂದರು. ಪಾಶ್ಚಾತ್ಯ ಸಂಸ್ಕೃತಿಗೆ ಬೆರಗಾದ ಅಂದಿನ ಭಾರತೀಯರು ಹಿಂದೂ ಧರ್ಮದ ತತ್ವವನ್ನು ಮರೆಯುತ್ತ ಪರರ ನಡೆನುಡಿಗಳ ಅನುಕರಣೆ ಪ್ರಾರಂಭ ಮಾಡಿದರು. ಹಿಂದೂ ಧರ್ಮಕ್ಕೆ ಈ ಪಾಶ್ಚಾತ್ಯ ವೈಜ್ಞಾನಿಕ ಯುಗದ ತತ್ವಗಳ ಮುಂದೆ ತನ್ನ ತತ್ವಗಳನ್ನುಳಿಸಿಕೊಳ್ಳುವ ಶಕ್ತಿಯನ್ನು ಹೊಂದಿದೆಯೆ? ಎಂಬ ಪ್ರಶ್ನೆಯು ಎಲ್ಲರಲ್ಲಿ ಮೂಡಿತು. ಅಂತಹ ಸಮಯದಲ್ಲಿ ಸರ್ವ ಧರ್ಮ ಸಮನ್ವಯವನ್ನು ಹಿಂದೂ ಧರ್ಮದಿಂದ ಎಲ್ಲರೂ ತಿಳಿಯುವಂತೆ ಭಗವಾನ್ ರಾಮಕೃಷ್ಣರು ಮಾಡಿದರು.

ಗಗನದಿಂದ ಬಿದ್ದ ಮಳೆಯ ನೀರು ಯಾವ ರೀತಿ ಅನೇಕ ನದಿಗಳ ಮೂಲಕ ಸಮುದ್ರವನ್ನೇ ಸೇರುತ್ತದೋ ಅಂತೆಯೇ ಎಲ್ಲ ದೇವರಿಗೂ ಮಾಡಿದ ನಮಸ್ಕಾರಗಳು ಒಬ್ಬನೇ ದೇವರಾದ ಆ ಕೇಶವನಿಗೆ ಸಲ್ಲುತ್ತವೆ ಎಂಬ ತತ್ವವನ್ನು ಸಾರಿದರು.

ಶ್ರೋತ್ರಿಯರೂ ಧರ್ಮನಿಷ್ಠರೂ ಆದ ಬ್ರಾಹ್ಮಣರ ಮನೆತನದಲ್ಲಿ ಹುಟ್ಟಿ ಚಿಕ್ಕಂದಿನಿಂದಲೂ ದೇವರ ವಿಷಯದಲ್ಲೇ ಗಮನವಿಟ್ಟು, ಕಾಳೀ ಗುಡಿಯ ಸಾಧಾರಣ ಪೂಜಾರಿಯಾಗಿ ದೇವಿಯನ್ನು ಸಾಕ್ಷಾತ್ಕಾರ ಮಾಡಿಕೊಂಡು ಪ್ರಪಂಚಕ್ಕೆ ಸರ್ವ ಧರ್ಮ ಸಮನ್ವಯವನ್ನು ಸಾರಿದರು.

ದೇವರೆಂಬುವನುಂಟೆ? ಎಂದು ಸಂಶಯಗ್ರಸ್ತರಾಗಿದ್ದವರಿಗೆ ದೇವರುಂಟು ಎಂದು ದೇವಿ ತೋರಿಸಿಕೊಡುತ್ತಿದ್ದರು. ಇಂತಹವರಲ್ಲಿ ನರೇಂದ್ರ ಬಾಬು ಒಬ್ಬರು. ಪಾಶ್ಚಾತ್ಯವಿದ್ಯಾಭ್ಯಾಸ ಮಾಡಿ ದೇವರಿದ್ದಾನೆಯೆಂಬ ಸಂಶಯದಿಂದ ತೊಳಲುತ್ತಿದ್ದ ನರೇಂದ್ರನಿಗೆ ದೇವರು ಇದ್ದಾನೆಂದು ಬೋಧಿಸಿ ತಮ್ಮ ಪಟ್ಟದ ಶಿಷ್ಯನನ್ನಾಗಿ ಮಾಡಿಕೊಂಡರು. ಆತನೇ ಸ್ವಾಮಿ ವಿವೇಕಾನಂದರು. ಗುರುಗಳ ಈ ಒಂದು ಸರ್ವ ಧರ್ಮ ಸಮನ್ವಯ ತತ್ವವನ್ನು ಪಾಶ್ಚಿಮಾತ್ಯ ದೇಶಗಳಿಗೆ ಹೋಗಿ, ಅಮೆರಿಕಾ, ಇಂಗ್ಲೆಂಡ್ ಮುಂತಾದ ಕಡೆಗಳಲ್ಲಿ ಬಿತ್ತಿದ ಮಹಾವ್ಯಕ್ತಿ ವಿವೇಕಾನಂದರು.

ಈ ರೀತಿಯಾಗಿ ಶ್ರೀ ರಾಮಕೃಷ್ಣರು ಅನೇಕ ವರ್ಷಗಳಿಂದ ಧೂಳಿನಿಂದ ಮುಚ್ಚಿಹೋಗಿದ್ದ ಹಿಂದೂ ಧರ್ಮದ ಮುಕುಟವನ್ನು ಒರಸಿ ಅದು ಪುನಃ ಪ್ರಕಾಶಿಸುವಂತೆ ಮಾಡಿದರು. ಹಿಂದೂ ಸಂಸ್ಕೃತಿಯ ಶ್ರೇಷ್ಠತೆ ಎಲ್ಲರಿಗೂ ಅದರ ಹಿರಿಮೆ ತಿಳಿಯುವಂತೆ ಮಾಡಿದರು. ಇತರರೆಲ್ಲರಿಗೂ ಅದು ಮಾರ್ಗದರ್ಶಿಯೆಂಬುದನ್ನು ತೋರಿಸಿದರು. ಅಧರ್ಮವನ್ನು ನಿವಾರಿಸಿ ಧರ್ಮ ಸಂಸ್ಥಾಪನೆ ಮಾಡಿದರು. ನಮ್ಮ ಭಾರತ ಭೂಮಿ ಇಂದು ಅನೇಕ ಪುಣ್ಯ ಪುರುಷರ ನಾಡಾಗಿರುವುದು. ಶ್ರೀ ರಾಮಕೃಷ್ಣರು ಒಬ್ಬ ಅವತಾರ ಪುರುಷರು ಎಂಬುದರಲ್ಲಿ ಸಂದೇಹವಿಲ್ಲ. ಇಂದಿಗೆ ಅವರು ಅವತರಿಸಿ ೧೧೨ ವರ್ಷಗಳು ಸಂದವು. ಆ ಮಹಾಪುರುಷರ ದಿವ್ಯ ಸಂದೇಶವು ಇಂದು ಎಲ್ಲರನ್ನೂ ಸ್ಫೂರ್ತಿಗೊಳಿಸಲೆಂದು ಹಾರೈಸೋಣ.

ಕ್ರಯಕ್ಕಿವೆ

341, ರಾಮಾನುಜ ರೋಡ್,
788-122, ಡಿಟೋ

ಆರ್. ಗುಂಡೂರಾವ್, ಹಳೇ ಮೈಸೂರು ಬ್ಯಾಂಕ್ ಬಿಲ್ಡಿಂಗ್, ಮೈಸೂರು.

Edited, printed and published by A. R. Nagarajan at the Sadhvi Press, D. Subbiah Road, Mysore.

ಮೈಸೂರಿನಲ್ಲಿ ವಯಸ್ಕ ವಿದ್ಯಾಭ್ಯಾಸ

ಕಳೆದ ಡಿಸೆಂಬರಿನಲ್ಲಿ ತಿರುಪಾ… ಲ್ಲಿ ನಡೆದ ಅಖಿಲ ಭಾರತ ವಯ… ದ್ಯಾಭ್ಯಾಸದ ನಾಲ್ಕನೇ ಸಮ್ಮೇ… ಮೈಸೂರು ಸಮಿತಿಯ ಪರವಾಗಿ… ದರ್ಶಿಗಳಾದ ಶ್ರೀ ಎಸ್. ವಿ. ಕೃ… ರಾಯರು ಒಪ್ಪಿಸಿದ ಆಂಗ್ಲ ವರದಿ… ತಿಯನ್ನು ಆದರದಿಂದ ಸ್ವೀಕರಿಸ…

ಕಂಟ್ರೋಲ್ ಬೆಲೆ! ಸುವ…

ಹೊಸ ಜವಳಿ!

ನಮ್ಮಲ್ಲಿ ಈಗತಾನೆ ಹೊಸದಾಗಿ ಬ…
ಬೆನಾರಸ್, ಕಂಚಿ, ಆರ್ನಿ, ಕ…
ಸೀರೆಗಳು

●

ನೂಲಿನ ಪೂನಾ ರುಮಾಲು ಸೀ…

●

ಕಾಶ್ಮೀರ್ ಶಾಲುಗಳು ದೊರೆಯುತ್ತ…

●

M P V., M. V ಭೋಜ…

ಅಂಡ್ ಬ್ರದರ್ಸ್
ಒಲಂಪಿಯಾ ಸಿನಿಮಾ ಹಾಲ್, ಮೈ…

ಶ್ರೀ ನರಹರಿ ಪ್ರೆಸ್, ಮೈಸೂರು.

— ಪ್ರೆಸ್ ಬದಲಾವಣೆ

ದಿವಂಗತರಾದ ಕೆ. ವೆಂಕಟಪ್ಪನ… ರಿಂದ ೧೯೦೬ ರಲ್ಲಿ ಸ್ಥಾಪಿತವಾ… ನಿಂದ ಮಹಾಜನರ ಸೇವೆಯನ್ನು ಮ… ತ್ತಿರುವ ಶ್ರೀ ನರಹರಿ ಪ್ರೆಸ್ಸನ್ನು ತೇರಿನಬೀದಿಯಲ್ಲಿರುವ ಕುಂಚಿಟಿಗರ ಛ… ಮುಮುಂದಿರದ ಕಟ್ಟಡದಿಂದ ಚಾಮ… ಅಗ್ರಹಾರದಲ್ಲಿರುವ ೧೪೮-೧ ಸ್ವ… ಟ್ಟಡಕ್ಕೆ ಬದಲಾಯಿಸಿರುತ್ತೆ.

ಮಹನೀಯರು ಎಂದಿನಂತೆ ವಿ… ವಿಶ್ವಾಸವಿಟ್ಟು ಪ್ರೋತ್ಸಾಹಿಸಬೇ… ವಿನಂತಿ.

ವಿ. ಕೃಷ್ಣಸ್ವಾಮಿ…
ಪ್ರೊಪ್ರೈಟರ್…

The
MYSORE DRUG HOUSE

(Opposite to K. R Hospital)
Sayajirao Road, Mysore.

Dealers in Medicines & Medical requirements

Your Patronage is solicited

WARDEN MARCHES AHEAD

ANOTHER YEAR OF RECORD BUSINESS.
Youngest working on Surplus of Funds.

Progress of the past Three Years -

		1944	1945	1946
Business Introduced:-	Rs	1,20,57,513	1,56,19,295	3,04,53,277
Business completed:-	Rs.	1,04,77,316	1,32,87,529	1,72,12,480

THE WARDEN INSURANCE

Company Limited, Head Office:- BOMBAY.

Organisation All Over India, Ceylon & East Africa.

Wide scope for energetic young men as Agents, Special Agents and Paid Organisers under our New Expansion Scheme:

Apply to -

K. C. KARMBAYA, Branch Secretary,

Branch Office for Mysore State and Coorg, 142, Gandhi Nagar, Bangalore City.

ವಾರ್ಡನ್ ಇನ್ಸೂರೆನ್ಸ್ ಕಂಪೆನಿ

ಲಿಮಿಟೆಡ್, ಹೆಡ್-ಆಫೀಸು:- ಬೊಂಬಾಯಿ.

ಮೈಸೂರು ಮತ್ತು ಕೊಡಗು ಶಾಖೆ:-

142, ಗಾಂಧಿ ನಗರ : . ಬೆಂಗಳೂರು ಸಿಟಿ.

ಸಾಧ್ವಿ

ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ

೨೩-೨-೪೭ ರಿಂದ : : ಎರಡನೇ ವಾ…

ಶ್ರೀ ಕೃಷ್ಣಲೀಲಾ

(ಕನ್ನಡ ಚಿತ್ರ…)

ಮ್ಯಾಟಿನಿ ಮಧ್ಯಾಹ್ನ 3, 1ನೇ ಆಟ ಸಂಜೆ 6-15, 2ನೇ ಆಟ ರಾತ್ರಿ 9-30

ಪ್ರತಿ ದಿನ ಮೂರು ಆಟಗಳು

ಇಂದಿನವರು, ಸಂದುಹೋದ ಮತ್ತು ಸಾರಿದ ತತ್ವಗಳನ್ನು ಅನುಕರಿಸುತ್ತಿರುವ ಅಮರವಾದ ಪುಣ್ಯ ಪುರಾಣಗಳ ಕಥಾ ಭಾಗಗಳ ದೀಪಸ್ತಂಭಗಳನ್ನು ಪ್ರಜ್ವಲಿಸುತ್ತಿರುವರು. ಇದರ ನಿದರ್ಶನವು ಇಂದು ನಾವು ಹೆಮ್ಮೆಯಿಂದ ಜನಸ್ತೋಮಕ್ಕೆ ಪ್ರದರ್ಶಿಸುತ್ತಲಿರುವ

"ಶ್ರೀ ಕೃಷ್ಣ ಲೀಲಾ"

ಶತ್ರು ಮರ್ದನಕ್ಕೆಂದು ಶತ್ರು ತತ್ವವನ್ನು ಭವರೋಗಕ್ಕೆ ದ್ರವ್ಯ ಸಂತೋಷದ ಸ್ಮಾರಕ ಸಂಭ್ರಮವೇ

"ಶ್ರೀ ಕೃಷ್ಣ ಲೀಲಾ"

ದ ರಸವತ್ತಾದ ಕಥಾ ಭಾಗ. ನೀವು ಇದುವರೆವಿಗೂ ನೋಡದಿದ್ದರೆ ಇಂದೇ ಬಂದು ನೋಡಿ ಆನಂದಿಸಿ.

From Friday the 21st Feb. 1947 for 4 days daily at 10-30 a.m.

FIGHTING SEA-BEES

A Romance of the Seven Seas.

ರಿ. ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೨೪—೨—೪೭ [ಸಂಚಿಕೆ ೩೦

ಹೊಸ ವೈಸರಾಯರಿಂದ ಮತ್ತೆ ಸಂಧಾನಾರಂಭವೆ

ಚನ್ನಪಟ್ಟಣದ ಖೂನಿ ಅಪಾದನೆಗಾಗಿ ದಸ್ತಗಿರಿ

ಸ್ವಂ. ಟು ಫೋ.] ಬೆಂಗಳೂರು ೨೪

ಚನ್ನಪಟ್ಟಣದ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ವೆಂಕಟ ಶ್ರೀನಿವಾಸಾಚಾರ್ಯರನ್ನು ಕೊಲೆ ಮಾಡಿದ ಆಪಾದನೆ ಮತ್ತು ಲೂಟಿ ಮಾಡಿದ ಆಪಾದನೆ ಮೇಲೆ ಚನ್ನಪಟ್ಟಣದ ಪೋಲೀಸಿನವರು ಜೋಟು ಮತ್ತು ಬಾಬ್ಲಾ ಎಂಬಿಬ್ಬರನ್ನು ಈಚೆಗೆ ದಸ್ತಗಿರಿ ಮಾಡಿ ಅಡೀಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಹಾಜರ್ಪಡಿಸಿ ರಿಮ್ಯಾಂಡ್ ಪಡೆದಿದ್ದಾರೆ. ಚನ್ನಪಟ್ಟಣದ ಮೊಕದ್ದಮೆಯಲ್ಲಿ ಒಟ್ಟು ೯೭ ಜನ ಆಪಾದನೆಗೆ ಒಳಗಾಗಿದ್ದಾರೆ.

ಗೋಪಾಲರಾಯರ ದಿವಾಳಿ ಮೊಕದ್ದಮೆ

ಶ್ರೀ|| ಎಸ್. ಎ. ಗೋಪಾಲರಾಯರೇ ಮುಂತಾದವರು ಧರ್ಮರಕ್ಷಾಕರ ಟಿ. ಎ. ಗೋಪಾಲರಾಯರನ್ನು ದಿವಾಳಿಯೆಂದು ನಿರ್ಧರಿಸುವಂತೆ ಹಾಕಿರುವ ಮೊಕದ್ದಮೆಯಲ್ಲಿ ಈ ಸಂಜೆ ತೀರ್ಪು ಕೊಡಲ್ಪಡಲಿದೆ.

ಬಟ್ಟೆ ಹಂಚಿಕೆ

ಫೆಬ್ರವರಿ ಮತ್ತು ಮಾರ್ಚಿ ತಿಂಗಳುಗಳಿಗೆ ಸಂಸ್ಥಾನದ ಎಲ್ಲ ಜಿಲ್ಲೆಗಳಲ್ಲಿಯೂ ೨೩೦೦ ಬೇಲು ಬಟ್ಟೆಗಳನ್ನು ಹಂಚಲು ಸರ್ಕಾರದವರು ಏರ್ಪಾಡು ಮಾಡಿರುತ್ತಾರೆ. ಮೈಸೂರು ಜಿಲ್ಲೆಗೆ ೫೫೫ ಬೇಲು ಕೊಡಲ್ಪಟ್ಟಿದೆ.

• ಮಂಡ್ಯದ ಸಬ್ ಜಡ್ಜರ ಕೋರ್ಟಿಗೆ ದಿವಾಳಿ, ಸಕ್ಸೆಗಳಿಗೆ ಸಂಬಂಧಪಟ್ಟ ಮೊಕದ್ದಮೆಗಳನ್ನು ವಿಚಾರಿಸಲು ಅಧಿಕಾರ ಕೊಡಲಾಗಿದೆ.

ಬ್ರಿ|| ಹೇಳಿಕೆಯು ಜಾಣತನ ಮತ್ತು ಧೈರ್ಯದಿಂದ ಕೂಡಿದೆ

ಪಂ|| ನೆಹರೂರವರ ಹೇಳಿಕೆ

ಬ್ರಿಟಿಷ್ ಪ್ರಧಾನಿಗಳ ಘೋಷಣೆಯು ಜಾಣತನದಿಂದಲೂ, ಧೈರ್ಯದಿಂದಲೂ ಕೂಡಿದುದಾಗಿದೆ. ಕೆಲವು ವಿಚಾರಗಳು ಅಸ್ಪಷ್ಟವಾಗಿವೆ. ಆದರೂ ಅಧಿಕಾರ ಸ್ಥಿರ ಸುವ ಆಶೆಯು ದಿನವು ಗೊತ್ತಾಗಿದೆ. ಮುಂದಿನ ಜವಾಬ್ದಾರಿಯನ್ನು ಪೂರ್ಣವಾಗಿ ವಹಿಸಿಕೊಳ್ಳಲು ಇದು ನಮ್ಮೆಲ್ಲರಿಗೂ ಕೊಟ್ಟಿರುವ ಆಹ್ವಾನದಂತಿದೆ. ಇದುವರೆಗಿನ ನಮ್ಮ ಪ್ರಯತ್ನಗಳನ್ನು ವಿಫಲಗೊಳಿಸಿ, ನಮ್ಮ ಪ್ರಗತಿಗೆ ಕಂಟಕವಾಗಿದ್ದ ಅಂತರಿಕ ತಕ್ಕಾಟಗಳನ್ನು ನಾವು ಈ ಕೂಡಲೇ ಕೊನೆಗಾಣಿಸಬೇಕು. ಸ್ವತಂತ್ರ ಭಾರತದಲ್ಲಿ ಎಲ್ಲರಿಗೂ ಸಮವಾದ ಪರಿಹಾರ ಹಾಗೂ

ಗೂಡ್ಸು ಬೆದರಿಕೆಯಿಂದ ಪ್ರಯೋಜನವಿಲ್ಲ

ಗಡಿನಾಡಿನಲ್ಲಿ ಲೀಗಿನವರು ಪ್ರಧಾನಿ ಡಾ|| ಖಾನ್ ಸಾಹೇಬರ ಮನೆಗೆ ನುಗ್ಗಿ ಮುತ್ತಿಗೆ ಹೊಂದಿದ ಸಿಖ್ ಸ್ತ್ರೀಯನ್ನು ವಾಪಸು ಕೊಡಿ, ಇಲ್ಲದಿದ್ದರೆ ಅಧಿಕಾರ ತ್ಯಜಿಸಿ ಎಂಬುದಾಗಿ ಘೋಷಿಸುತ್ತಾ ಕಿಟಕಿ, ಬಾಗಿಲುಗಳನ್ನೆಲ್ಲಾ ಮುರಿದು, ಕಾಂಗ್ರೆಸ್ ಧ್ವಜವನ್ನು ಹರಿದು ಅವಾಂತರ ಮಾಡಿದರು. ಇಂತಹ ಗೂಡ್ಸು ಬೆದರಿಕೆಗಳಿಂದ ಯಾವ ಪ್ರಯೋಜನವೂ ಆಗಲಾರದೆಂದು ಪ್ರಧಾನಿಗಳು ತಿಳಿಸಿದ್ದಾರೆ.

ಭಾವಚಿತ್ರ ಅನಾವರಣ

ಮೈಸೂರು ೨೪

ಬಿ. ಹನುಮಯ್ಯನವರ ಹೈಸ್ಕೂಲ್ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಜಿ. ರಂಗಣ್ಣ ಮತ್ತು ಸೈನ್ಸ್ ಉಪಾಧ್ಯಾಯರಾಗಿದ್ದ ಧರ್ಮ ಪ್ರವರ್ತ ಶ್ರೀ ಎ. ಎಸ್. ರಂಗಸ್ವಾಮಿ ಅಯ್ಯಂಗಾರ್ಯರವರ ಭಾವಚಿತ್ರಗಳ ಅನಾವರಣ ಮಹೋತ್ಸವವು ಮೊನ್ನೆ ದಿನ ಸದರಿ ಶಾಲೆಯಲ್ಲಿ ರಾಜಸೇವಾಪ್ರಸಕ್ತ ಲಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ವೈಭವದಿಂದ ಜರುಗಿತು. ಈ ಮಹನೀಯರುಗಳ ಸೇವೆಯನ್ನು ಕೊಂಡಾಡಿ ಭಾಷಣಗಳಾದುವು.

ಶಾರದಾ ಪೂಜೆ

ಮೈಸೂರು ವಿಶ್ವಕರ್ಮ ವಿದ್ಯಾರ್ಥಿ ನಿಲಯದಲ್ಲಿ ನಿನ್ನೆ ಶ್ರೀ|| ಟಿ. ಯಾಲಕ್ಕಾಚಾರ್ಯರ ಅಧ್ಯಕ್ಷತೆಯಲ್ಲಿ ಶಾರದಾ ಪೂಜೆಯು ನಡೆಯಿತು. ವಿ|| ಎ. ಸಂಬಂಧಮೂರ್ತಿ ಮತ್ತು ಅವರ ಶಿಷ್ಯರಿಂದ ಸಂಗೀತ ಕಛೇರಿ ಜರುಗಿತು. ಶ್ರೀ|| ವೀರಪ್ಪಾಚಾರ್ಯರೂ, ಅಧ್ಯಕ್ಷರೂ ವಿದ್ಯಾರ್ಥಿಗಳಿಗೆ ಹಿತೋಪದೇಶವಿತ್ತರು.

ಅವಕಾಶಗಳನ್ನು ದೊರಕಿಸಿಕೊಡುವಂತಹ ರಾಜ್ಯಾಂಗವನ್ನು ನಾವೇ ಸಿದ್ಧಗೊಳಿಸಬೇಕಾಗಿದೆ. ಈ ಮಹತ್ಕಾರ್ಯದಲ್ಲಿ ಭಾಗಿಗಳಾಗದೆ ದೂರವಿದ್ದವರನ್ನೆಲ್ಲಾ ಪತ್ರಿ ಸ್ವಾಗತಿಸುವೆವು. ಈ ಸಂಯುಕ್ತ ಮತ್ತು ಐತಿಹಾಸಿಕ ಕಾರ್ಯದಲ್ಲಿ ಎಲ್ಲರೂ ಶಂಕೆಗಳನ್ನು ಬಿಡಬೇಕೆಂದು ಪ್ರಾರ್ಥಿಸುವೆವು. ಸ್ವಾತಂತ್ರ್ಯವು ಸಮೀಪಿಸಿರುವ ಈ ಸಮಯದಲ್ಲಿ ಸಂಶಯ ... ವರ್ತಿಸುವುದು ಸ್ವಾತಂತ್ರ್ಯದ ನವಗೆ ಭೂಷಣವಲ್ಲ—ಎಂಬುದಾಗಿ ಪಂ|| ನೆಹರೂರವರು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

ಹೊಸ ವೈಸರಾಯರಿಂದ ಸಂಧಾನಾರಂಭವೇ?

೧೯೪೮ ನೇ ಜೂನ್ ವಳಗೆ ಭಾರತೀಯರಿಗೆ ಅಧಿಕಾರವನ್ನು ವರ್ಗಾಯಿಸಿ ಕೊಡುವ ಬಗ್ಗೆ ರೀತಿನೀತಿಗಳನ್ನು ಗೊತ್ತುಮಾಡಲು ಸಂಧಾನಗಳನ್ನು ಹೊಸ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ಭಾರತಕ್ಕೆ ಬಂದ ಕೂಡಲೇ ಆರಂಭಿಸುವುದಾಗಿ ಹೇಳಲಾಗಿದೆ. ಕಾಂಗ್ರೆಸ್ ಪಕ್ಷದ ನಿರ್ಧಾರದಂತೆ, ಲೀಗ್ ಸಹಕರಿಸದಿದ್ದರೂ ಭಾರತದ ಹೊಸ ರಾಜ್ಯಾಂಗವು ೧೯೪೭ ರ ಅಂತ್ಯದೊಳಗೆ ತಯಾರಾಗುವುದು. ಇದನ್ನು ಅಂಗೀಕರಿಸುವಂತೆ ಬ್ರಿಟಿಷ್ ಸರ್ಕಾರವನ್ನು ಪ್ರಾರ್ಥಿಸಲಾಗುವುದು. ಈ ಹೊಸ ರಾಜ್ಯಾಂಗವು ಎಗುಂತನೊಳಗಿರುವ ೬ ಪ್ರಾಂತ್ಯಗಳಿಗೂ, ಅಸ್ಸಾಂ ಮತ್ತು ಗಡಿನಾಡುಗಳು ಒಪ್ಪಿಗೆ ಇತ್ತರೆ ಆ ಪ್ರಾಂತ್ಯಗಳಿಗೂ ಅನ್ವಯವಾಗುವುದು. ಈ ಸಮೂಹದ ಕೇಂದ್ರಕ್ಕೆ ಹೊರಗೆ ಉಳಿಯುವ ಪ್ರಾಂತ್ಯಗಳಿಗೂ ಬ್ರಿಟಿಷರು ಅಧಿಕಾರವನ್ನು ವಹಿಸಿಕೊಡಬಹುದೆಂದು ಊಹಿಸಲಾಗಿದೆ. ಸಂಧಾನಾರಂಭವಾದ ನಂತರ ಇತರ ವಿವರಗಳು ತೋರಬೇಕಾಗುವ ನಿರೀಕ್ಷಣೆಯಿದೆ.

ನೆಹರೂ-ಜಿನ್ನಾ ಭೇಟಿಯೇ?

ಕಾಂಗ್ರೆಸ್ಸು ಮತ್ತೆ ಲೀಗಿಗೆ ಸಹಕಾರ ಹಸ್ತವನ್ನು ನೀಡುವ ಬಗ್ಗೆ ದೆಹಲಿಯಲ್ಲಿ ಕುತೂಹಲ ಉಂಟಾಗಿದೆ. ಪಂ|| ನೆಹರು ಮತ್ತು ಸ|| ಪಟೇಲರೊಡನೆ ಜಿನ್ನಾರವರ ಭೇಟಿಯೊಂದನ್ನು ಏರ್ಪಾಡು ಮಾಡಲು ಹಲವು ಮಧ್ಯಸ್ಥಗಾರರು ಪ್ರಯತ್ನ ನಡೆಸುತ್ತಿದ್ದಾರೆಂದು ತಿಳಿದುಬಂದಿದೆ.

ರಾಜರುಗಳಿಗೂ ಪ್ರಜೆಗಳಿಗೂ ಸಮಾನ ಸ್ಥಾನ

ರಾಜ್ಯಾಂಗ ಸಭೆಗೆ ಸಂಸ್ಥಾನಗಳಿಂದ ಕಳುಹಿಸಿಕೊಡಲಾಗುವ ಪ್ರತಿನಿಧಿಗಳ ಆಯ್ಕೆಯ ಬಗ್ಗೆ ಸಂಧಾನ ಸಮಿತಿಗಳಲ್ಲಿ ಒಂದು ವಿಧವಾದ ಒಪ್ಪಂದಕ್ಕೆ ಬರಲಾಗಿದೆಯೆಂದು ಗೊತ್ತಾಗಿದೆ. ಇದರಂತೆ ಪ್ರಜೆಗಳಿಗೂ, ರಾಜರುಗಳಿಗೂ ಸಮನಾದ ಸ್ಥಾನಗಳನ್ನು ಕೊಡಲಾಗುವುದೆಂದೂ, ಪ್ರಜಾ ಸಂಖ್ಯೆ ಕಡಿಮೆ ಇರುವ ಸಂಸ್ಥಾನಗಳ ಗುಂಪನ್ನು ೨ ಸ್ಥಾನಗಳು ಬರುವಂತೆ ಮಾಡಿ ಒಂದನ್ನು ರಾಜರೂ, ಮತ್ತೊಂದನ್ನು ಪ್ರಜೆಗಳೂ ಪ್ರತಿನಿಧಿಸುವಂತೆ ಮಾಡಲಾಗುವುದೆಂದು ಹೇಳಲಾಗಿದೆ.

○ ಫ್ರಾನ್ಸ್-ವಿಯಟ್ನಾಮುಗಳ ದ್ವಂದ್ವದಲ್ಲಿ ಭಾರತದ ಮಧ್ಯಸ್ಥಿಕೆಯನ್ನು ಒಪ್ಪಿಕೊಳ್ಳುವುದಾಗಿ ವಿಯಟ್ನಾಮಿನ ಮುಖಂಡರೊಬ್ಬರು ತಿಳಿಸಿದ್ದಾರೆ. ಅಧ್ಯಕ್ಷ ಡಾ|| ಹೊ ಚಿಮಿನ್‌ರವರಿಗೆ ಚಿಯಾಂಗ್ ಕೈಷೇಕರಿಗಿಂತ ಪಂ|| ನೆಹರೂರವರ ಸಂಗಡ ಹೆಚ್ಚು ವಿಶ್ವಾಸ ಮತ್ತು ಪ್ರೇಮ ವಿರುವುದಾಗಿ ಅವರು ಹೇಳಿದ್ದಾರೆ.

LATE NEWS

ಸರ್ಕಾರಿ ನೌಕರರಿಗೆ ತಾತ್ಕಾಲಿಕ ಪರಿಹಾರ

ಸ್ವಂ. ಟು ಫೋ.] ಬೆಂಗಳೂರು ೨೪

೨೫೦ ರೂಪಾಯಿ ವರೆವಿಗೆ ಸಂಬಳವಿರುವ ಎಲ್ಲಾ ಸರ್ಕಾರಿ ನೌಕರರುಗಳಿಗೂ ಒಂದು ತಿಂಗಳ ಸಂಬಳವನ್ನು ಮುಂಗಡ ಪರಿಹಾರ ರೂಪದಲ್ಲಿ ಕೊಡುವಂತೆ ಈ ದಿನ ಸರ್ಕಾರದ ಆಜ್ಞೆಯಾಗಿರುತ್ತದೆ.

...ಂಟ್ ಬ್ಯಾಟನ್ನರ ನೇಮಕ ...ನೆಹರೂರವರ ಸಲಹೆಯೇ

...ತೀಯರಿಗೆ ಸಂಪೂರ್ಣವಾಗಿ ಅಧಿಕಾರವನ್ನು ವಹಿಸಿಕೊಡುವ ವರೆಗೆ ಲಾರ್ಡ್ ...ಟ್ ಬ್ಯಾಟನ್ನರನ್ನು ವೈಸರಾಯರಾಗಿ ...ಸುವ ಬಗ್ಗೆ ಬ್ರಿಟಿಷ್ ಸರ್ಕಾರವು ...ನೆಹರೂರವರ ಸಲಹೆ ಪಡೆದಿತ್ತೆಂದು ...ಯಾಗಿದೆ. ನೆಹರೂರವರು ಕಳೆದ ವ... ಸಿಂಗಪ್ಪೂರಕ್ಕೆ ಭೇಟಿ ಇತ್ತಿದ್ದಾಗ ಈ ವಿ...ಯಲ್ಲಿ ಬ್ಯಾಟನ್ನರ ಕೂಡ ಸಂಬಂಧ ...ದ್ದರೆಂದೂ ತಿಳಿಸಲಾಗಿದೆ.

ಸ್ಟಾಲಿನ್ನರ ವಿಜಯ

...ಕ್ಷದ ಪ್ರಧಾನ ನಾಯಕರಾಗಿ ಮಾ|| ...ಲಿನ್ನರು ಸರ್ವಾನುಮತದಿಂದ ಆರಿಸ...ದ್ದಾರೆ. ಇವರ ಪರವಾಗಿ ೧೧೧೪೯೧ ...ಗಳು ಬಂದುವು. ವಿರೋಧವಾಗಿ ...ದು ಓಟೂ ಬರಲಿಲ್ಲ.

...ರ್ಕಾರಿ ನೌಕರರ ಪರವಾಗಿ ...ಜಾಮುಖಂಡರ ಉಪವಾಸ

...ಕೊಲ್ಲಾಪುರದ ಸರ್ಕಾರಿ ನೌಕರರ ಕಷ್ಟ...ವನ್ನು ನಿವಾರಿಸುವ ವಿಚಾರದಲ್ಲಿ ಮಂತ್ರಿ...ಮಂಡಲದಯು ಪರಿವರ್ತನೆ ಮಾಡುವ ಸ...ವಾಗಿ ಅಲ್ಲಿನ ಪ್ರಜಾ ಪರಿಷತ್ತಿನ ಅಧ್ಯಕ್ಷ ...ದ ಶ್ರೀ ಮಾಧವರಾವ ಬಾಗಲ ರವರು ...ನ್ನೆಯಿಂದ ಉಪವಾಸ ವ್ರತವನ್ನು ಆ...ಭಿಸಿದ್ದಾರೆ.

...ಪಾಧ್ಯಕ್ಷರೂ ರಾಜೀನಾಮೆ ಸಲ್ಲಿಸಿದರು

...ವು] ಚಾಮರಾಜನಗರ ೨೩

...ಲ್ಲಿನ ಪುರಸಭಾ ಉಪಾಧ್ಯಕ್ಷರಾದ ಶ್ರೀ ...ವಿ. ರಾಮ...ರವರ ಮೇಲೆ ೧೦ ಮಂದಿ ...ಸ್ಯರು ಅವಿಶ್ವಾಸದ ನಿರ್ಣಯವನ್ನು ...ಸಿರುವುದರ ಪರಿಣಾಮವಾಗಿ ನಿನ್ನೆ ...ವರೂ ಸಹ ತಮ್ಮ ಸ್ಥಾನಕ್ಕೆ ರಾಜೀನಾಮೆ ...ಇತ್ತರು.

ಕಾರ್ಮಿಕರ ಸಭೆ

ರಾಜಧಾನಿಯ ಲೇಬರ್ ಫೆಡರೇಷನ್ನಿನ ...ರ್ಯಕಾರಿ ಸಮಿತಿ ಸಭೆಯು ಮೊನ್ನೆ ಕಾಂ...ಗ್ರೆಸ್ ಭವನದಲ್ಲಿ ಶ್ರೀ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ನಗರದಲ್ಲಿ ಎರಡು ಕಾರ್ಮಿಕ ಸಂರಕ್ಷಣಾ ಕೇಂದ್ರಗಳನ್ನು ಸ್ಥಾಪಿಸುವಂತೆಯೂ, ಸರ್ಕಾರಿ ಕಾರ್ಖಾನೆಗಳಲ್ಲಿರುವ ಕಾರ್ಮಿಕರಿಗೆ ತಲಾ ...೦ ರೂ ಗಳಿಗೆ ಕಡಮೆ ಇಲ್ಲದಂತೆ ತಾತ್ಕಾಲಿಕ ಪರಿಹಾರವನ್ನು ಒದಗಿಸಿಕೊಡುವಂತೆಯೂ, ಸರ್ಕಾರದವರನ್ನು ಪ್ರಾರ್ಥಿಸುವ ನಿರ್ಣಯಗಳು ಅಂಗೀಕಾರವಾದುವು. ...ಲ್ಲಿ ಕೆಲಸಗಾರರ ಪ್ರತಿನಿಧಿಗಳಾಗಿ ಆರಿಸಿದ ...ಜನ ಮಂದಿಯನ್ನು ಸಮಿತಿಗೆ ತೆಗೆದುಕೊಳ್ಳಲಾಯಿತು.

ಕಸ್ತೂರಿ ಬಾ ದಿನಾಚರಣೆ

ಮೊನ್ನೆ ರಾಜಧಾನಿಯ ಮಕ್ಕಳ ಕೂಟದಲ್ಲಿ 'ಪೂಜ್ಯ ಕಸ್ತೂರಿ ಬಾ' ರವರ ದಿನವನ್ನು ಆಚರಿಸಲಾಯಿತು. ಕಸ್ತೂರಿ ಬಾ ...ರ ವಿಚಾರವಾಗಿ ಟಿ|| ರಮಾದೇವಿ, ಜಿ. ...ಜ್. ಲೀಲಾ ಇವರುಗಳೂ, ಕೂಟದ ಕಾರ್ಯದರ್ಶಿನಿಯವರೂ ಭಾಷಣ ಮಾಡಿದರು. ಗಾಂಧಿ ಜಯಂತಿಯ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನವನ್ನು ಕೊಡಲಾಯಿತು.

• ವಿವಿಧ ಮಾದರಿಗಳ ಸಿಮೆಂಟಿನ ಬೆಲೆಯನ್ನು ನಿಗದಿ ಮಾಡಿ ಸರ್ಕಾರದವರು ಆಜ್ಞೆ ಹೊರಡಿಸಿರುತ್ತಾರೆ.

ಸಾಧ್ವಿ

ತಾ॥೨೪-೨-೪೭ ಸೋಮವಾರ

ಪತ್ರಿಕಾ ಹತೋಟಿ ಶಾಸನವು ನಮ್ಮಲ್ಲಿಯೂ ರದ್ದಾಗಲಿ

ಬರುವ ಏಪ್ರಿಲ್ ತಿಂಗಳಿಂದ ಬ್ರಿಟಿಷ್ ಹಿಂದೂಸ್ಥಾನದಲ್ಲಿ ಪತ್ರಿಕಾ ಹತೋಟಿ ಶಾಸನವು ರದ್ದಾಗುವುದು. ಹೊಸ ಪತ್ರಿಕೆಗಳನ್ನು ಹೊರಡಿಸುವವರು ಸರ್ಕಾರದಿಂದ ಪೂರ್ವಭಾವಿಯಾಗಿ ಅನುಮತಿ ಪಡೆಯಬೇಕಾದ ಆವಶ್ಯಕತೆಯಿರುವುದಿಲ್ಲ. ಪತ್ರಿಕೆಗಳು ಮಾಮೂಲಿನ ವೃತ್ತ ಪತ್ರಿಕಾ ಶಾಸನದ ನಿಯಮಗಳಿಗೆ ಮಾತ್ರ ಒಳಗಾಗಿರುವುವು. ಪತ್ರಿಕೆಗಳ ಕಾಗದದ ಸರಬರಾಜಿನ ಬಗ್ಗೆ ಭಾರತ ಸರ್ಕಾರದವರು ಏರ್ಪಡಿಸಿದ್ದ ಸಲಹಾ ಸಮಿತಿಯವರ ಸೂಚನೆಯಂತೆಯೇ ಈ ಶಾಸನವನ್ನು ರದ್ದು ಮಾಡಲಾಗಿದೆ.

ಯುದ್ಧ ಕಾಲದಲ್ಲಿ ಕಾಗದದ ಸರಬರಾಜಿಗೆ ಉಂಟಾದ ಅಭಾವದಿಂದ ಎಲ್ಲ ಪತ್ರಿಕೆಗಳಿಗೂ ಅತ್ಯವಶ್ಯವಾದಷ್ಟು ಕಾಗದವನ್ನೊದಗಿಸಲು ರಕ್ಷಣಾ ಶಾಸನದ ಆಶ್ರಯದಲ್ಲಿ ನ್ಯೂಸ್ ಪ್ರಿಂಟ್ ಕಂಟ್ರೋಲ್ ಎಂಬ ಹೆಸರಿನಿಂದ ಶಾಸನವೊಂದನ್ನು ರಚಿಸಲಾಯಿತು. ಇದು ಪತ್ರಿಕೆಗಳಿಗೆ ಸ್ವಲ್ಪ ಮಟ್ಟಿನ ಸಹಾಯವನ್ನೇನೋ ನೀಡಿತು. ಆದರೂ ಕಾಗದದ ಹಂಚಿಕೆಯಲ್ಲಿ ವಿಶೇಷ ತಾರತಮ್ಯಗಳೂ, ಅಸಂಗತಗಳೂ, ಉಂಟಾಗಿದ್ದುವು. ಇದಲ್ಲದೆ ಕಾಳಸಂತೆಗೂ ಸಹ ಕಾಗದವು ಹೋಗಲು ಅವಕಾಶವಾಗಿತ್ತು.

ಬ್ರಿಟಿಷ್ ಹಿಂದೂಸ್ಥಾನದಲ್ಲಿ ಮುದ್ರಣ ಕಾಗದದ ಹತೋಟಿಯ ಶಾಸನವನ್ನು ಮಾಡಿದೊಡನೆಯೇ ನಮ್ಮ ಸಂಸ್ಥಾನದಲ್ಲಿಯೂ ಅದನ್ನು ಜಾರಿ ಮಾಡಲಾಯಿತು. ಅಲ್ಲಿ ನಂತೆಯೇ ಇಲ್ಲಿಯೂ ವಿಶೇಷವಾಗಿ ಪುಕಾರುಗಳು ಬಂದುವು. ನ್ಯಾಯವಾದ ಸಂದರ್ಭಗಳಲ್ಲಿ ಅಗತ್ಯವಾದಷ್ಟು ಸೌಲಭ್ಯಗಳು ದೊರೆಯದೆ ಪಕ್ಷಪಾತ ಮತ್ತು ಅನುಚಿತ ಪ್ರೋತ್ಸಾಹಗಳು ದೊರೆಯುತ್ತಿರುವುವೆಂಬ ಕೂಗುಗಳು ಕೇಳಿ ಬಂದುವು. ಈ ಸಮಯದಲ್ಲಿ ಮೈಸೂರು ಕಾಗದದ ಕಾರ್ಖಾನೆಯವರು ಪತ್ರಿಕೆಗಳ ನೆರವಿಗೆ ಬಂದು ನೀಡಿದ ಸಹಾಯವು ಸ್ಮರಣೀಯವಾದುದು.

ಈಗ ಪತ್ರಿಕೆಗಳ ಕಾಗದದ ಮೇಲಿನ ಹತೋಟಿಯು ಅಗತ್ಯವಿಲ್ಲವೆಂದು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ. ಆದರೆ ನಮ್ಮ ಸಂಸ್ಥಾನದಲ್ಲಿ ಮೊನ್ನೆ ಹಾನಿ ಹಳೆಯ ಹತೋಟಿ ಶಾಸನವನ್ನು ತೆಗೆದು ಹೊಸದೊಂದನ್ನು ಜಾರಿ ಮಾಡಲಾಗಿದೆ. ಹಳೆಯ ಶಾಸನದಲ್ಲಿದ್ದ ನಿಯಮಗಳನ್ನೆಲ್ಲಾ ಸಾಮಾನ್ಯವಾಗಿ ಇದರಲ್ಲಿ ಸೇರಿಸಲಾಗಿದೆ. ಪತ್ರಿಕೆಗಳ ಪುಟ ಸಂಖ್ಯೆಗೆ ಇದ್ದ ಮಿತಿಯನ್ನು ತೆಗೆದುಹಾಕಲಾಗಿದೆ. ಆದರೆ ಕಾಗದಕ್ಕೆ ಅಭಾವವಿರುವ ಈ ಕಾಲದಲ್ಲಿ ಈ ಮಿತಿಯನ್ನು ತೆಗೆದಿರುವುದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ.

ಬ್ರಿಟಿಷ್ ಇಂಡಿಯಾದಲ್ಲಿ ಇನ್ನು ಮುಂದೆ ಪತ್ರಿಕೆಗಳ ಮಾರಾಟದ ಕನಿಷ್ಠಾಂಶದ ಬೆಲೆಯನ್ನು ನಿಗದಿ ಮಾಡಲಾಗಿದೆ. ಗೊತ್ತಾದ ಪುಟ ಸಂಖ್ಯೆಯ ಪತ್ರಿಕೆಯನ್ನು ಎರಡಾಣೆಗಿಂತ ಕಡಿಮೆ ಬೆಲೆಗೆ ಮಾರಲಾಗದೆಂದು ಅದರಲ್ಲಿ ನಿರ್ಧಾರಮಾಡಲಾಗಿದೆ. ಆದರೆ ನಮ್ಮಲ್ಲಿ ಎರಡಾಣೆಗಿಂತ ಹೆಚ್ಚು ಬೆಲೆ ಇಡಲಾಗದೆಂದು ತಿಳಿಸಲಾಗಿದೆ. ಹೀಗೆ ಬ್ರಿಟಿಷ್ ಭಾರತಕ್ಕೂ, ನಮ್ಮ ಸರ್ಕಾರಕ್ಕೂ ಪತ್ರಿಕಾ ಹತೋಟಿಯ ಬಗ್ಗೆ ಒಂದು ಸಮನ್ವಯವಾದ ನೀತಿಯು ಇಲ್ಲದಿರುವುದು ಶೋಚನೀಯವಾದ ಅಂಶ.

ಬ್ರಿಟಿಷ್ ಭಾರತದಲ್ಲಿ ಇನ್ನು ಮುಂದೆ ಪತ್ರಿಕೆಗಳ ಕಾಗದದ ಪಡಿತರ ಪದ್ಧತಿಯು ಹೋಗುವುದು. ಪತ್ರಿಕೆಗಳ ಪ್ರಸಾರವನ್ನು ಎಷ್ಟು ಪ್ರಮಾಣದಲ್ಲಿ ಬೇಕಾದರೂ ಬೆಳೆಸಲು ಅವಕಾಶವಿರುವುದು. ನಮ್ಮಲ್ಲಿ ಯಾದರೋ ನಿರ್ದಿಷ್ಟವಾದ ಪ್ರಮಾಣಕ್ಕಿಂತ ಹೆಚ್ಚು ಪತ್ರಿಕೆಗಳನ್ನು ಮುದ್ರಿಸಲು ಹೊಸ ಶಾಸನವೂ ಸಹ ಪ್ರತಿಬಂಧಿಸುತ್ತದೆ. ಹೀಗೆ ಎಲ್ಲ ವಿಧಗಳಲ್ಲಿಯೂ ಮೈಸೂರಿನ ಪತ್ರಿಕೆಗಳು ನೆರೆಯ ಪ್ರಾಂತಗಳ ಪತ್ರಿಕೆಗಳಿಗಿಂತಲೂ ಹೆಚ್ಚು ಅನಾನುಕೂಲವಾದ ಪರಿಸ್ಥಿತಿಯಲ್ಲಿರುವುವು.

ಬ್ರಿಟಿಷ್ ಹಿಂದೂಸ್ಥಾನದಲ್ಲಿ ಜಾರಿಗೆ ಬಂದ ಶಾಸನಗಳನ್ನು ನಮ್ಮಲ್ಲಿಯೂ ಒಡನೆಯೇ ಅನುಸರಿಸುವುದರಲ್ಲಿ ನಮ್ಮ ಸರ್ಕಾರದವರು ತೋರಿಸುತ್ತಿರುವ ಉತ್ಸಾಹವನ್ನು ಅಲ್ಲಿ ರದ್ದಾದ ಕಾನೂನುಗಳ ಬಗ್ಗೆಯೂ ತೋರದಿರುವುದು ಒಂದು ಸೋಜಿಗದ ಸಂಗತಿ. ಪತ್ರಿಕೆಗಳ ಮೇಲೆ ಯಾವಾಗಲೂ ಯಾವ ಒಂದು ನಿರ್ಬಂಧಗಳೂ ಇರಬಾರದೆಂದು ಎಲ್ಲ ದೇಶಾಭಿಮಾನಿಗಳೂ ಹೇಳುತ್ತಿರುವರು. ದೇಶದ ಏಳಿಗೆಗೆ ಪತ್ರಿಕೆಗಳ ಸ್ವಾತಂತ್ರ್ಯವೇ ಅಸ್ತಿಭಾರ. ಆದುದರಿಂದ ಭಾರತ ಸರ್ಕಾರದ ಮೇಲ್ಪಂಕ್ತಿಯನ್ನೇ ಅನುಸರಿಸಿ, ನಮ್ಮ ಸರ್ಕಾರದವರೂ ಪತ್ರಿಕಾ ಹತೋಟಿ ಶಾಸನವನ್ನು ಕೂಡಲೇ ರದ್ದು ಮಾಡಿ, ಎಲ್ಲ ಪತ್ರಿಕೆಗಳ ಬೆಳವಣಿಗೆಗೆ ಅವಕಾಶ ಮಾಡಲೆಂದು ಹಾರೈಸುತ್ತೇವೆ.

ವಾರ ಭವಿಷ್ಯ

ತಾ॥ ೨೪-೨-೪೭ ರಿಂದ ೩-೩-೪೭ ರವರೆಗೆ

(ಶ್ರೀ ಸಚ್ಚಿದಾನಂದಸ್ವಾಮಿಗಳಿಂದ)

ಮೇಷ:- ಆರೋಗ್ಯ ಉತ್ತಮ. ಉದ್ಯೋಗ, ವ್ಯವಹಾರ, ವ್ಯಾಪಾರಗಳಲ್ಲಿ ಪ್ರಗತಿ. ಮಹತ್ವದ ಪತ್ರಾಗಮನ. ಮಂಗಳ ಕಾರ್ಯಗಳು ಜರುಗುವುವು. ಧನ ಲಾಭ ಚೆನ್ನಾಗಿರುವುದು. ಖರ್ಚು ಅಧಿಕ. ಮಿತ್ರರಿಂದ ಸಹಾಯ. ತಾ॥ ೨೫, ೨೭ ಪ್ರವಾಸ, ಖರ್ಚು

ವೃಷಭ:- ಆರೋಗ್ಯ ಚೆನ್ನಾಗಿರುವುದು. ಪ್ರಿಯ ಜನರ ಸಹವಾಸ ಸಹಾ ದೊರೆಯುವುದು. ಉದ್ಯೋಗ ವ್ಯವಹಾರಗಳಲ್ಲಿ ಪರಿಸ್ಥಿತಿಯು ಉತ್ತಮವಾಗುವುದು. ವಿವಾಹಾದಿ ಶುಭ ಕಾರ್ಯಗಳು ಜರುಗುವುವು. ಧನ ಲಾಭ ಉತ್ತಮ. ಅಧಿಕಾರ ವರ್ಗದವರಿಂದ ಸನ್ಮಾನ. ತಾ॥ ೨೭, ೨೮, ೧ ಶಾಂತಿ ಲಾಭ.

ಮಿಥುನ:- ಆರೋಗ್ಯ ಉತ್ತಮ. ಧನ ಲಾಭ ಸಾಧಾರಣ. ಔದ್ಯೋಗಿಕ ಪ್ರಗತಿಯುಂಟಾಗುವುದು. ಮಾನಸಿಕ ಚಿಂತೆ ಕಡಿಮೆಯಾಗುವುದು. ಆರ್ಥಿಕ ಪರಿಸ್ಥಿತಿ ಸುಧಾರಿಸುವುದು. ಮಿತ್ರರಿಂದಲೂ ಅಧಿಕಾರಿಗಳಿಂದಲೂ ಸಹಾಯವಾಗುವುದು. ಬಂಧುಗಳಿಂದ ಸನ್ಮಾನ ದೊರೆಯುವುದು. ಶುಭಕಾರ್ಯಗಳಿಗಾಗಿ ಖರ್ಚು. ತಾ॥ ೨೫, ೨೭, ೨೮ ಲಾಭ, ಪ್ರವಾಸ

ಕಟಕ:- ಆರೋಗ್ಯ ಕೆಡುತ್ತದೆ. ಮಾನಸಿಕ ಚಿಂತೆ ಹೆಚ್ಚು. ಕೆಲಸ ಕಾರ್ಯಗಳಲ್ಲೆಲ್ಲಾ ಅಡ್ಡಿಯೊದಗುವುದು. ಆರ್ಥಿಕ ಪರಿಸ್ಥಿತಿಯಲ್ಲಿ ಮುಗ್ಗಟ್ಟು. ಉದ್ಯೋಗ, ವ್ಯಾಪಾರಗಳಲ್ಲಿ ಶತ್ರುಗಳಿಂದ ಕಿರುಕುಳ ಮಿತ್ರರಿಂದ ತಿರಸ್ಕಾರ. ಪ್ರವಾಸ... ಪ್ಪ ತಾ॥ ೨೪, ೨೬, ೧ ... ಕಲಹ

ಸಿಂಹ:- ಆರೋಗ್ಯ ಉತ್ತಮ. ... ಸಿಕ ಚಿಂತೆ ಜಾಸ್ತಿ. ಉದ್ಯೋಗ, ... ಪಾರಗಳಿಂದ ನಷ್ಟ. ಮನೆಯಲ್ಲಿ ... ರ ಖಾಯಿಲೆಯಿಂದ ವೈದ್ಯಕೀಯ ... ಮಿತಿಮೀರಿ ಹೆಚ್ಚುವುದು. ಮಿ... ಸಹಾಯವಾಗುವುದು. ಅಧಿಕಾರಿ... ವರಿಂದ ತೊಂದರೆ. ತಾ॥ ೨೬, ... ಭ, ಪ್ರವಾಸ

ಕನ್ಯಾ:- ಆರೋಗ್ಯ ಚೆನ್ನಾಗಿ... ಆರ್ಥಿಕ ಸ್ಥಿತಿ ಸುಧಾರಿಸುವುದು. ...ದ್ಯೋಗ, ನೌಕರಿಗಳಲ್ಲಿ ಪ್ರಗತಿ ... ಸದಿಂದ ಲಾಭ. ಧರ್ಮ ಕಾರ್ಯ... ಯಶ. ವಿವಾಹಾದಿ ಮಂಗಳ ... ಗಳು ನಡೆಯುವುವು. ತಾ॥ ೨೭, ...ಕ ಪ್ರವಾಸ ಅಶಾಂತಿ.

ತುಲಾ:- ಆರೋಗ್ಯ ಉತ್ತಮ. ...ಪಾರದಿಂದ ಧನಲಾಭ ಅಧಿಕ. ... ದಲೂ ಅಧಿಕಾರವರ್ಗದವರಿಂದಲೂ ... ಷ ಸನ್ಮಾನ. ಪ್ರವಾಸದಿಂದ ಮಿ... ವಾಗದು. ಧಾರ್ಮಿಕ ಕಾರ್ಯಗ... ಖರ್ಚು ತಾ॥ ೨೪, ೨೭. ಸಂತೆ ಧನ ಲಾಭ.

ವೃಶ್ಚಿಕ:- ಆರೋಗ್ಯ ಕೆಡುತ್ತದೆ ... ಲಾಭ ಕಡಿಮೆ. ಖರ್ಚು ಹೆಚ್ಚು. ... ಗಳಿಂದ, ಕಿರುಕುಳ ಬಂಧುಗಳಿ... ಸ್ಕಾರ ಪ್ರವಾಸದಿಂದ ಅಪಘಾತ ... ನಸಿಕ ಚಿಂತೆ ಹೆಚ್ಚು ತಾ॥ ... ಸಾಧಾರಣ ಲಾಭ, ಶಾಂತಿ

ಧನಸ್ಸು:- ಆರೋಗ್ಯ ಚೆನ್ನಾಗಿ... ಆರ್ಥಿಕ ಪರಿಸ್ಥಿತಿ ಉತ್ತಮ ... ಆಗಮನ ಉದ್ಯೋಗ ವ್ಯವಹಾ... ಯಶ. ಮಂಗಳ ಕಾರ್ಯಗಳಿ... ಚು ತಾ॥ ೨೫, ೨೭ ಲಾಭ, ... ಸ. ಅಧಿಕಾರಿಗಳ ಸ್ನೇಹ

ಮಕರ:- ಆರೋಗ್ಯ ಚೆನ್ನಾಗಿ... ಮಂಗಳ ಕಾರ್ಯಗಳಿಗಾಗಿ ಖರ್ಚು ... ತ್ರರಿಂದ ಸಹಾಯ ಉದ್ಯೋಗ ... ಹಾರಗಳಲ್ಲಿ ಪ್ರಗತಿ. ಧನಾದಾಯ... ಮ. ಮಿತ್ರರ ಮತ್ತು ಬಂಧುಗ... ಕಾರದಿಂದ ಶಾಂತಿ ತಾ॥ ೨೫, ... ವಾಸ, ಲಾಭ

ಕುಂಭ:- ಆರೋಗ್ಯ ಉತ್ತಮ. ... ಲಾಭ ಸಾಧಾರಣ ಮಾನಸಿಕ ... ಚ್ಚು. ಉದ್ಯೋಗ, ವ್ಯವಹಾರ... ತ್ರುಗಳ ಕಿರುಕುಳ. ಧಾರ್ಮಿಕ ... ಗಳಿಗಾಗಿ ಅಧಿಕ ವೆಚ್ಚ. ಪ... ಪ್ರವಾಸ ತಾ॥ ೨೬, ೨ ಸಾಧಾ... ಭ ಶಾಂತಿ.

ಮೀನ:- ಆರೋಗ್ಯ ಉತ್ತಮ ... ಲಾಭ ಚೆನ್ನಾಗಿರುತ್ತದೆ. ಉದ್ಯೋ... ವಹಾರಗಳಲ್ಲಿ ಪ್ರಗತಿ. ಅಧಿಕಾ... ದವರಿಂದ ಸಹಾಯ. ರಾಜಕೀ... ಯಗಳಿಗಾಗಿ ಮತ್ತು ಮಂಗಳ ಕಾ... ಗಾಗಿ ವಿಶೇಷ ಖರ್ಚು. ಅಧಿಕ... ವಾಸದಿಂದ ಮನಃಕ್ಲೇಶ ತಾ॥ ... ೧ ಸಾಧಾರಣ ಲಾಭ ಶಾಂತಿ.

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ

೨೩-೨-೪೭ ರಿಂದ :: ಎರಡನೇ ವಾರ

ಶ್ರೀ ಕೃಷ್ಣಲೀಲಾ

(ಕನ್ನಡಚಿತ್ರ)

ಮ್ಯಾಟಿನಿ ಮಧ್ಯಾಹ್ನ 3, 1ನೇ ಆಟ ಸಂಜೆ 6-15, 2ನೇ ಆಟ ರಾತ್ರಿ 9-30

ಪ್ರತಿದಿನ ಮೂರು ಆಟಗಳು

ಇಂದಿನವರು, ಸಂದುಹೋದ ಮತ್ತು ಸಾರಿದ ತತ್ವಗಳನ್ನು ಅನುಕರಿಸುತ್ತಿರುವರು. ಅಮರವಾದ ಪುಣ್ಯ ಪುರಾಣಗಳ ಕಥಾ ಭಾಗಗಳ ದೀಪಸ್ತಂಭಗಳನ್ನು ಪ್ರಜ್ವಲಿಸುತ್ತಿರುವರು. ಇದರ ನಿದರ್ಶನವು ಇಂದು ನಾವು ಕೆಲ್ಲಿಂದ ಜನಸ್ತೋಮಕ್ಕೆ ಪ್ರದರ್ಶಿಸುತ್ತಲಿರುವ

"ಶ್ರೀ ಕೃಷ್ಣ ಲೀಲಾ"

ಶತ್ರು ಮರ್ದನಕ್ಕೆಂದು ಶತ್ರು ಪಕ್ಷವನ್ನು ಧೂಳಿಧೂಸರಗೈದ ಕ್ಷಾತ್ರ ಸಂತೋಷದ ಸ್ಮಾರಕ ಸಂಭ್ರಮವೇ

"ಶ್ರೀ ಕೃಷ್ಣ ಲೀಲಾ"

ದ ರಸವತ್ತಾದ ಕಥಾ ಭಾಗ. ನೀವು ಇದುವರೆವಿಗೂ ನೋಡದಿದ್ದರೆ ಇಂದೇ ಬಂದು ನೋಡಿ ಆನಂದಪಡಿ

ದಿ

ಮೈಸೂರ್ ಡ್ರಗ್ ಹೌಸ್

(ಕೃಷ್ಣರಾಜೇಂದ್ರ ಆಸ್ಪತ್ರೆ ಎದುರು,)

ಸಯ್ಯಾಜಿರಾವ್ ರಸ್ತೆ, ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಔಷಧಿಗಳೂ ದೊರೆಯುತ್ತವೆ.

ಕ್ರಯ ಕ್ಕಿ ಪ...

341, ರಾಮಾನುಜ...

788-123, ಟೋ...

ಆರ್. ಗುಂಡೂರಾವ್, ಹಳೆ...

ರು ಬ್ಯಾಂಕ್ ಬಿಲ್ಡಿಂಗ್, ಮೈಸೂ...

Edited, printed and publi...
A. R. Nagarajan at the Sadh...
D. Subbiah Road, Mysore.

ಟೆ. ಫೋ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೨೫—೩—೪೭ [ಸಂಚಿಕೆ ೧೬೯

ಗುಪ್ತ ನಾಜಿ ಸಂಸ್ಥೆಯ ಮೇಲೆ ಭಾರಿ ಧಾಳಿ

ಭಾ॥ ಪ್ರಜಾ ಸಮ್ಮೇಳನಕ್ಕೆ ಚುನಾವಣೆ

ಮೈಸೂರು ೨೪

...ಲಿಯರ್ ಸಂಸ್ಥಾನದಲ್ಲಿ ಏಪ್ರಿಲ್ ...ಲ್ಲಿ ನಡೆಯಲಿರುವ ಅಖಿಲ ಭಾರತ ...ಯ ಸಂಸ್ಥಾನಗಳ ಪ್ರಜಾ ಸಮ್ಮೇಳ... ...ಮೈಸೂರಿನಿಂದ ಇಬ್ಬರು ಪ್ರತಿನಿಧಿಗಳ ...ರಿಸಲು ಇದೇ ೨೭ ನೇ ತಾ॥ ಗುರು... ...ಸಂಜೆ ೭ ರಿಂದ ೯ ಗಂಟೆ ವರೆಗೆ ಕಾಂ... ...ಕಛೇರಿಯಲ್ಲಿ ಚುನಾವಣೆ ನಡೆಯು...

ಶ್ರೀಮತಿ ಎಂ. ಆರ್. ಲಕ್ಷಮ್ಮ, ...ನಾಥ ಎಸ್. ಚನ್ನಯ್ಯ, ಎ. ರಾಮ... ...ಸ್ವಾಮಿ ಹೆಚ್. ಸಿ. ದಾಸಪ್ಪನವರು ...ದುವಾರರಾಗಿ ಸ್ಪರ್ಧಿಸಿದ್ದಾರೆ ಮೈ... ...ಕಾಂಗ್ರೆಸ್ಸಿನ ೭ ನೇ ಅಧಿವೇಶನದ ...ರು ನಗರದ ಪ್ರತಿನಿಧಿಗಳೆಲ್ಲರೂ ದ... ...ರಾಡಿಸಿ ಚುನಾವಣೆಯಲ್ಲಿ ಭಾಗಿಗಳಾ... ...ಕೆಂದು ಚುನಾವಣಾಧಿಕಾರಿಗಳಾದ ...ಶ್ರೀ ನರಸಿಂಹಯ್ಯಂಗಾರ್ಯರು ತಿಳಿ...ದ್ದಾರೆ.

...ಸ್ವತ್ತುಗಳನ್ನು ವಶಪಡಿಸಿಕೊಳ್ಳುವ ನೀತಿ

೧೯೪೭ ನೇ ಏಪ್ರಿಲ್ ೧೭ ನೇ ತಾ॥ ನ ...ರು ಗೆಜೆಟ್ ಪ್ರಕಟಣೆಯು ಪ್ರಕಾರ ...ಸ್ಥಾನದ ಧನ್ವಂತರಿ ರಸ್ತೆಯಲ್ಲಿ ೭... ...೭ ಸ್ವತ್ತುಗಳನ್ನು ಅಂಗಡಿ ಮಳಿಗೆ... ...ಅಕ್ವೈರ್ ಮಾಡಿಕೊಳ್ಳಬೇಕಾಗಿತ್ತು. ...ಈ ರಸ್ತೆಯು ಒಟ್ಟು ಉದ್ದವು ಶೇಷಾದ್ರಿ... ...ಯರ್ ರೋಡಿನಿಂದ ಮಾರ್ಕೆಟ್ ಹಿಂ...ದ ರಸ್ತೆಯ ವರೆಗೆ ಸುಮಾರು ೧೦೦೦ ...ಗಳಾಗುತ್ತವೆ. ಅದರಲ್ಲಿ ೫೦೦ ಅಡಿ ...ಕ್ಕೆ ಬೇರೆ ಬೇರೆಯಾಗಿ ಅಂಗಡಿ ಮಳಿ... ...ಮತ್ತು ಮನೆಗಳನ್ನು ಕಟ್ಟಿಕೊಳ್ಳಲು ...ನ್ಸ್ ಕೊಟ್ಟು ಕೆಲಸಗಳೂ ಸಹ ನಡೆ...ತ್ತಿವೆ. ಉಳಿದಿರುವ ೫೦೦ ಅಡಿಗಳ ...ಸುಮಾರು ೨೫೦ ಅಡಿಗಳು ಟ್ರಸ್ಟ್ ...ಡಿಗೆ ಸೇರುತ್ತವೆ. ಬಾಕಿ ಅಂಗಡಿ ...ಗೆಗಾಗಿ ಅಕ್ವೈರ್ ಮಾಡಿಕೊಳ್ಳುವ ...ವು ಸುಮಾರು ೨೫೦ ಅಡಿಗಳಾಗುತ್ತ... ಈ ೨೫೦ ಅಡಿ ಜಾಗದ ಮಾಲೀಕರು ...ಸ್ಥ ಜಾಗದಲ್ಲಿ ತಾವೇ ಅಂಗಡಿಗಳನ್ನು ...ಸ್ಟ್ ಬೋರ್ಡಿನವರ ಪ್ಲಾನಿನಂತೆ ಕಟ್ಟಿ... ...ಸಿದ್ಧರಾಗಿರುತ್ತಾರೆ. ಮತ್ತು ಕೆಲವರು ...ನ್ಸಿಗಾಗಿ ಅರ್ಜಿಗಳನ್ನೂ ಸಹ ಕೊಟ್ಟಿ...ದ್ದಾರೆ. ಆದರೆ ಲೈಸನ್ಸಿಗೆ ಬದಲು ಅನಾ... ...ನೋಟೀಸು ಬಂದಿರುತ್ತದೆ. ಮೇ... ...೭೭ ಸ್ವತ್ತುಗಳಲ್ಲಿ ೮ ಸ್ವತ್ತುಗಳನ್ನು ...ಅಂಗಡಿಯ ಮಳಿಗೆಗಾಗಿಯೂ, ೧೭ ಸ್ವ...ತ್ತುಗಳನ್ನು ಗಲ್ಲಿಗಾಗಿಯೂ ತೆಗೆದುಕೊಂ... ...ಉಳಿಯುವ ೧೨ ಸ್ವತ್ತುಗಳನ್ನು ಕಾರ... ...ಣದಿಂದ ಖುಲಾಸೆ ಮಾಡುವುದಾಗಿ ...ದುಬಂದಿರುತ್ತದೆ ಗಲ್ಲಿಯನ್ನು ಬಿಟ್ಟರೆ ...೧೭ ಸ್ವತ್ತುಗಳು ಹೋಗುವುದಲ್ಲದೆ ನ... ...ಜೆಗೆ ಅವಕಾಶವಾಗುತ್ತದೆಂದು ಅಲ್ಲಿನ ...ಸಿಗಳು ಅರ್ಜಿಯನ್ನೂ ಸಹ ಕೊಟ್ಟಿರ...ತ್ತಾರೆ ಈ ವಿಚಾರವನ್ನೆಲ್ಲಾ ಸರ್ಕಾರದವ...ರೂ, ಟ್ರಸ್ಟ್ ಬೋರ್ಡಿನವರೂ ಪರಿಶೀಲಿಸಿ ...ಅಂಗಡಿ ಮಳಿಗೆಗಳನ್ನು ಕಟ್ಟಿಕೊಳ್ಳಲು ಆ... ...ಯ ಮಾಲೀಕರಿಗೇ ಅವಕಾಶ ಕೊಡುವು... ...ಲ್ಲದೆ, ಗಲ್ಲಿಯನ್ನು ತಪ್ಪಿಸುವುದರ ಮೂ...ಲಕ ಬಾಕಿ ೧೭ ಸ್ವತ್ತುಗಳನ್ನೂ ಉಳಿಸಬೇ...ಕಾಗಿ ಅಲ್ಲಿಯ ನಿವಾಸಿಗಳು ಪ್ರಾರ್ಥಿಸು...ತ್ತಾರೆ

ಹಿತೈಷಿ.

ರಾಜ್ಯಾಂಗ ಸಭೆಯಿಂದ ಸಂಸ್ಥಾನಗಳು ಹೊರಗಿರಲಿ

೧೯೪೮ರ ಜೂನ್ ವೇಳೆಗೆ ಅಧಿಕಾರವನ್ನು ಭಾರತೀಯ ಪ್ರಾಂತ್ಯ ಅಥವಾ ಕೇಂದ್ರ ಸರ್ಕಾರಕ್ಕೆ ವಹಿಸಲಾಗುವುದಷ್ಟೆ ಈ ವಿಚಾರವು ನಿರ್ಧರವಾಗುವವರೆಗೆ ಸಂಸ್ಥಾನಗಳು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದರಿಂದ ಪ್ರಯೋಜನವಾಗಲಾರದು- ಎಂಬುದಾಗಿ ಸರ್ ಸಿ ಪಿ ರಾಮಸ್ವಾಮಿ ಅಯ್ಯರ್ರವರು ಹೇಳಿಕೆ ಇತ್ತಿದ್ದಾರೆ

ಮಾರ್ಚಿ ೧೫ ಕ್ಕೆ ಹೊಸ ವೈಸರಾಯರ ಆಗಮನ

ನೂತನ ವೈಸರಾಯರಾದ ಲಾರ್ಡ್ ಮೌಂಟ್‌ಬ್ಯಾಟನ್ನರು ಲಂಡನ್ನಿನಲ್ಲೀಗ ಭಾರತ ಕಛೇರಿಗೆ ಭೇಟಿ ಕೊಟ್ಟು ವಿಚಾರಗಳ ಅನುಭವ ಪಡೆಯುತ್ತಿದ್ದಾರೆ ಅವರು ಮಾರ್ಚಿ ೧೦ ನೇ ತಾ॥ ಲಂಡನ್ನಿಂದ ಹೊರಟು ೧೫ ನೇ ತಾ॥ ಭಾರತಕ್ಕೆ ಆಗಮಿಸುವರೆಂದು ತಿಳಿದು ಬಂದಿದೆ.

ಕಾಂಗ್ರೆಸ್ಸಿಗೇ ಅಧಿಕಾರ ವಹಿಸಬೇಕಾಗುವುದು

ಭಾರತದ ಹಿಂದೂ-ಮುಸ್ಲಿಮರಲ್ಲಿ ಒಪ್ಪಂದವಾಗದಿದ್ದಲ್ಲಿ ಬ್ರಿಟಿಷರು ಬೇರೆ ಮಾರ್ಗವಿಲ್ಲದೆ ಪೂರ್ಣ ಅಧಿಕಾರವನ್ನು ಕಾಂಗ್ರೆಸ್ಸಿಗೇ ವಹಿಸಿಕೊಡಬೇಕಾಗುವುದು-ಎಂಬುದಾಗ ಬ್ರಿಟನ್ನಿನ 'ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯು ಅಗ್ರ ಲೇಖನವನ್ನು ಬರೆದಿದೆ. ಪ್ರಾಂತ್ಯಗಳಿಗೆ ಅಧಿಕಾರ ವಹಿಸಿಕೊಡುವುದು ಕ್ಷೇಮಕರವಲ್ಲವೆಂದೂ, ಬಹು ಸಂಖ್ಯಾತರ ವಿಶ್ವಾಸವನ್ನು ಗಳಿಸಿರುವ ಕಾಂಗ್ರೆಸ್ ಪ್ರತಿನಿಧಿಗಳಿರುವ ಕೇಂದ್ರ ಸರ್ಕಾರಕ್ಕೆ ಅಧಿಕಾರ ವಹಿಸಿಕೊಡುವುದೇ ಸರಿಯಾದ ಮಾರ್ಗವೆಂದು ಅದು ವಾದಿಸಿರುತ್ತದೆ.

ಅರಮನೆ ಸುದ್ದಿ

ಸೋಮವಾರ ೨೪-೩-೧೯೪೭

ಈ ದಿನ ಶ್ರೀಮನ್ಮಹಾರಾಜರವರು ಸರ್ ವಿಲಿಯಂ ಬಾರ್ಟನ್‌ರವರಿಗೆ ಭೇಟಿಯನ್ನು ದಯಪಾಲಿಸಿದರು

ಉದಾರ ದಾನ

ಗುಂಡಲುಪೇಟೆಯ ಸಾಹುಕಾರರೂ, ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಆದ ಜನಾಬ್ ಜೆ ಎ. ಅಬ್ದುಲ್‌ಗಫೂರ್ ಸಾಹೇಬರು ಶಾರದಾ ವಿಲಾಸ ಕಾಲೇಜಿನ ಕಟ್ಟಡದ ನಿಧಿಗಾಗಿ ಐದು ಸಾವಿರ ರೂ ಗಳನ್ನು ಉದಾರವಾಗಿ ದಾನ ಮಾಡಿರುತ್ತಾರೆ.

ಸ್ಥಳೀಯ ಸಂಸ್ಥೆಗಳ ಸಮ್ಮೇಳನಕ್ಕೆ ಪ್ರತಿನಿಧಿಗಳು

ಸ್ವಂ. ಸು ಪ್ರೋ] ಬೆಂಗಳೂರು ೨೫

ಏಪ್ರಿಲ್‌ನಲ್ಲಿ ಡೆಹಲಿಯಲ್ಲಿ ನಡೆಯಲಿರುವ ಸ್ಥಳೀಯ ಸಂಸ್ಥೆಗಳ ಸಮ್ಮೇಳನಕ್ಕೆ ನಮ್ಮ ಸಂಸ್ಥಾನದ ಜಿಲ್ಲಾ ಬೋರ್ಡುಗಳಿಂದ ಒಬ್ಬೊಬ್ಬ ಪ್ರತಿನಿಧಿಯು ಹೋಗುವಂತೆ ಬಂದಿದ್ದ ಸಲಹೆಯನ್ನು ಸರ್ಕಾರದವರು ಅಂಗೀಕರಿಸಿದ್ದಾರೆ

ಟೆಕ್ಸ್‌ಟೈಲ್ ಕಮಿಷನರ ಆಗಮನ

ಬೊಂಬಾಯಿ ಜಂಟಿ ಟೆಕ್ಸ್‌ಟೈಲ್ ಕಮಿಷನರಾದ ಶ್ರೀ॥ ಭರತ್‌ರವರು ಬೆಂಗಳೂರಿಗೆ ಬಂದು ಸರ್ಕಾರದ ಅತಿಥಿಗಳಾಗಿದ್ದಾರೆ

ಆಹಾರದ ಹೆಚ್ಚಿನ ಡೈರೆಕ್ಟರು

ಈಗ ಖಾಲಿ ಇರುವ ಆಹಾರದ ಹೆಚ್ಚಿನ ಡೈರೆಕ್ಟರ ಸ್ಥಾನಕ್ಕೆ ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮಿ॥ ಅಬ್ದುಲ್ ಖಾದರ್ ರವರನ್ನು ಡೆಪ್ಯುಟಿ ಕಮಿಷನರನ್ನಾಗಿ ಬಡ್ತಿ ಮಾಡಿ ನೇಮಿಸಲಾಗುವುದೆಂದು ಗೊತ್ತಾಗಿದೆ.

ಡೆ॥ ಕಮಿಷನರಾಗಿ ಬಡ್ತಿ

ಡೆಪ್ಯುಟಿ ಕಂಟ್ರೋಲರಾಗಿ ಕೆಲಸ ಮಾಡುತ್ತಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮಿ॥ ಅಬ್ದುಲ್ಲಾ ಹುಸೇನ್ ಷರೀಫರನ್ನು ಡೆಪ್ಯುಟಿ ಕಮಿಷನರನ್ನಾಗಿ ಬಡ್ತಿ ಮಾಡಿ ವಿದ್ಯುಚ್ಛಕ್ತಿ ಇಲಾಖೆಯ ಆಡಿಟರನ್ನಾಗಿ ನೇಮಕ ಮಾಡುವುದಾಗಿ ಗೊತ್ತಾಗಿದೆ

ಎಸ್. ಮಾಧವರಾಯರಿಗೆ ಹೊಸ ಹುದ್ದೆ

ಆರ್ಥಿಕ ಸಮ್ಮೇಳನದ ಹೆಚ್ಚಿನ ಕಾರ್ಯದರ್ಶಿಗಳಾದ ಶ್ರೀ॥ ಎಸ್. ಮಾಧವರಾಯರನ್ನು ಮೈಸೂರು ರೈಲ್ವೆ ಆಡಿಟರನ್ನಾಗಿ ನೇಮಕ ಮಾಡಲಾಗುವುದೆಂದು ನಂಬಲರ್ಹವಾದ ಕಡೆಗಳಿಂದ ತಿಳಿದುಬಂದಿದೆ ಆರ್ಥಿಕ ಸಮ್ಮೇಳನದ ಹೆಚ್ಚಿನ ಕಾರ್ಯದರ್ಶಿಗಳ ಸ್ಥಾನವನ್ನು ಸಧ್ಯಕ್ಕೆ ಭರ್ತಿ ಮಾಡುವುದಿಲ್ಲವೆಂದು ಹೇಳಲಾಗಿದೆ.

ಗೋಪಾಲರಾಯರ ದಿವಾಳಿ ಅರ್ಜಿಯ ಅಂಗೀಕಾರ

ಧರ್ಮರಕ್ಷಾಕರ ಶ್ರೀ॥ ಬಿ. ಎಸ್. ಗೋಪಾಲರಾಯರು ದಿವಾಳಿಗಳೆಂಬುದಾಗಿ ಪರಿಗಣಿಸಬೇಕೆಂದು ಅವರ ಮೇಲೆ ಶ್ರೀ॥ ಎಸ್. ಎಸ್. ಗೋಪಾಲರಾಯರು ಸಲ್ಲಿಸಿದ್ದ ಅರ್ಜಿಯನ್ನು ಅಂಗೀಕರಿಸಿ ಪ್ರಿನ್ಸಿಪಲ್ ಜಿಲ್ಲಾ ಜಡ್ಜರಾದ ಶ್ರೀ॥ ಕಂದಸ್ವಾಮಿ ಪಿಳ್ಳೆಯವರು ನಿನ್ನೆ ಸಂಜೆ ತೀರ್ಪಿತ್ತಿರುತ್ತಾರೆ. ಗೋಪಾಲರಾಯರು ತಮ್ಮ ಸಾಲಗಳಿಂದ ವಿಮೋಚನೆ ಹೊಂದಲು ಆರು ತಿಂಗಳ ಅವಧಿಯನ್ನು ಕೊಡಲಾಗಿದೆ.

ಜರ್ಮನಿಯಲ್ಲಿ ಮತ್ತೊಂದು ನಾಜಿ ಒಳಸಂಚು

ರಷ್ಯದ ವಿರುದ್ಧವಾಗಿ ಯೂರೋಪ್ ರಾಷ್ಟ್ರಗಳನ್ನು ಎತ್ತಿ ಕಟ್ಟುವುದಕ್ಕಾಗಿ ಜರ್ಮನಿಯ ನಾಜಿ ಸರ್ಕಾರವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸುತ್ತಿದ್ದ ಮತ್ತೊಂದು ಹೊಸ ನಾಜಿ ಗುಪ್ತ ಚಟುವಟಿಕೆಯನ್ನು ಬ್ರಿಟಿಷ್ ಮತ್ತು ಅಮೇರಿಕ ಗುಪ್ತ ದಳದವರು ಪತ್ತೆ ಹಚ್ಚಿದ್ದಾರೆ. ಈ ಚಳುವಳಿಯ ನಾಯಕರನ್ನೆಲ್ಲಾ ದಸ್ತಗಿರಿ ಮಾಡಲಾಗಿದೆ. ಈ ಸಮಸ್ಥೆಯು ಇಡೀ ಜರ್ಮನಿಯಲ್ಲೆಲ್ಲಾ ಶಾಖೆಗಳನ್ನು ಪಡೆದು, ಮಿತ್ರರು ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ, ವಿಷ ಕ್ರಿಮಿಗಳಿಂದ ಕೂಡಿದ ಸರ್ವಧ್ವಂಸಕವಾದ ಹೊಸ ಆಯುಧಗಳನ್ನು ಉಪಯೋಗಿಸುವುದಾಗಿ ಹೆದರಿಸುತ್ತಿದ್ದುವೆಂದು ಹೇಳಲಾಗಿದೆ

ಅಮೃತಸರದಲ್ಲಿ ಕಳವಳ ಪರಿಸ್ಥಿತಿ

ಪಂಜಾಬ್ ಪ್ರಾಂತ್ಯದ ಲೀಗಿನವರು ಸಾರ್ವಜನಿಕ ರಕ್ಷಣಾ ಶಾಸನದ ವಿರುದ್ಧವಾಗಿ ಹೂಡಿರುವ ಹೋರಾಟದ ಫಲವಾಗಿ ಅಮೃತಸರದಲ್ಲಿ ಅತ್ಯಂತ ಕಳವಳಕರವಾದ ಪರಿಸ್ಥಿತಿ ಉಂಟಾಗಿದೆ ಪೋಲೀಸರಿಗೂ, ಲೀಗಿನವರಿಗೂ ಘರ್ಷಣೆಗಳಾಗಿ ನಿನ್ನೆ ದಿನ ಹಲವು ಬಾರಿ ಗುಂಡು ಹಾರಿಸಲಾಯಿತು- ಸೈನ್ಯವನ್ನೂ ಸಹ ಕರೆಸುವ ಸನ್ನಿವೇಶ ಒದಗಿರುವುದಾಗಿ ಹೇಳಲಾಗಿದೆ.

೨೦ ಸೆಕೆಂಡುಗಳಿಗೆ ಒಂದು ರೇಡಿಯೋ

ಪ್ರತಿ ೨೦ ಸೆಕೆಂಡುಗಳಿಗೊಂದು ರೇಡಿಯೋ ಸೆಟ್ಟನ್ನು ತಯಾರಿಸುವ ವಿಧಾನವನ್ನು ಲಂಡನ್ನಿನ ಮಿ॥ ಜಾನ್ ಸಾರ್‌ಗ್ರೋವ್‌ರವರು ಕಂಡು ಹಿಡಿದಿದ್ದಾರೆ ಇವರು ಈ ಬಗ್ಗೆ ಕಳೆದ ೧೦ ವರ್ಷಗಳಿಂದ ಸಂಶೋಧನೆಯನ್ನು ಕೈಗೊಂಡಿದ್ದರು.

ವಾರ್ಷಿಕೋತ್ಸವ

ರಾಜಧಾನಿಯ ಚಲ್ಲರೆ ಬಟ್ಟೆ ವರ್ತಕರ ಸಂಘದ ವಾರ್ಷಿಕೋತ್ಸವವು ನಿನ್ನೆ ಶ್ರೀ॥ ಚಾಮುಂಡೇಶ್ವರಿ ಭವನದಲ್ಲಿ ಜಿಲ್ಲಾಧಿಕಾರಿಗಳಾದ ಶ್ರೀ॥ ಜಿ ಎಸ್. ನಾಗರಾಜರಾಯರ ಅಧ್ಯಕ್ಷತೆಯಲ್ಲಿ ಜರುಗಿತು.

ಪೋಷಕರ ದಿನಾಚರಣೆ

ಮೈಸೂರು ಹಾರ್ಡ್ವಿಕ್ ಹೈಸ್ಕೂಲು ಪೋಷಕರ ದಿನಾಚರಣೆಯು ನಾಳಿದ್ದು ಸಂಜೆ ೫ ೩೦ ಕ್ಕೆ ಸದರಿ ಶಾಲಾ ಆವರಣದಲ್ಲಿ ಶ್ರೀ ಛಾರ್ಜ್ ದಿವಾನರಾದ ಡಾ॥ ರಾಯರವರ ಅಧ್ಯಕ್ಷತೆಯಲ್ಲಿ ಜರುಗುವುದು. ಪೋಷಕರೂ, ಹಳೇ ವಿದ್ಯಾರ್ಥಿಗಳೂ ದಯಮಾಡಿಸಬೇಕಾಗಿ ಕೋರಲಾಗಿದೆ.

LATE NEWS

ಪುರಿ ಹುರಿಯುವವರ ಮುಷ್ಕರ

ಮೈಸೂರು ೨೫

ನಗರದಲ್ಲಿ ಪುರಿ ಹುರಿಯುವವರೆಲ್ಲಾ ಇಂದಿನಿಂದ ಮುಷ್ಕರ ಹೂಡಿದ್ದಾರೆ ಅವರ ಕೂಲಿ ದರವನ್ನು ಹೆಚ್ಚು ಮಾಡದಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ ಇಂದು ಮಧ್ಯಾಹ್ನ ಅವರೆಲ್ಲಾ ಕರ್ಜನ್‌ಪಾರ್ಕಿನಲ್ಲಿ ಸಭೆ ಸೇರಿ ಮುಷ್ಕರ ಮುಂದುವರಿಸಿಕೊಂಡು ಹೋಗಲು ನಿರ್ಧರಿಸಿದರು

ಸಾಧ್ವಿ

ತಾ॥೨೫-೨-೪೭ ಮಂಗಳವಾರ

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ

(ಬರೆದು ಬಂದುದು)

ರಾಜಧಾನಿಯ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಶಿಕ್ಷಣ ಕ್ರಮವು ದಿನೇ ದಿನೇ ಕೆಡುತ್ತ ಬಂದಿರುವ ಸಂಗತಿಯನ್ನು ಅನೇಕ ತಿಂಗಳಿಂದ ಎಷ್ಟೋ ಬಾರಿ ಸರ್ಕಾರದ ಗಮನಕ್ಕೆ ತಂದಾಗ್ಯೂ ಯಾವ ವಿಧವಾದ ಪ್ರತಿಕ್ರಿಯೆಯೂ ಆಗದೆ ಇದ್ದುದರಿಂದ ವಿದ್ಯಾರ್ಥಿಗಳು ೧೨ ನೇ ತಾರೀಖಿನಿಂದ ಮುಷ್ಕರ ಹೂಡಿದ್ದಾರೆಂದು ತಿಳಿದು ಬಂದಿದೆ. ಅವರ ಮುಖ್ಯವಾದ ಕುಂದು ಕೊರತೆಗಳು ಈ ರೀತಿಯಲ್ಲಿವೆ:-

೧ ಸಾಕಾದಷ್ಟು ಉಪಾಧ್ಯಾಯರುಗಳು ಇಲ್ಲದಿರುವುದರಿಂದ ಪಾಠ ಪ್ರವಚನಗಳು ಕ್ರಮವಾಗಿ ನಡೆಯುತ್ತಿಲ್ಲ. ೨ ಪ್ರಾಯೋಗಿಕ ಶಿಕ್ಷಣದ ವ್ಯವಸ್ಥೆ ಸರಿಯಾದ ರೀತಿಯಲ್ಲಿಲ್ಲ. ೩ ಹೊರಗಡೆಯಲ್ಲದೆ ಮೈಸೂರು ಸಂಸ್ಥಾನದಲ್ಲಿ ಕೂಡ ಪದವೀಧರರಿಗೆ ಯೋಗ್ಯವಾದ ಸ್ಥಾನಮಾನಗಳಿಲ್ಲ.

ಮೇಲ್ಕಂಡ ಈ ಕುಂದು ಕೊರತೆಗಳನ್ನು ನಿವಾರಿಸಲು ಈ ಕೂಡಲೇ ಈ ಕ್ರಮಗಳನ್ನು ಸರ್ಕಾರವು ಕೈ ಕೊಳ್ಳಬೇಕು:-

೧ "ಆಯುರ್ವೇದಾಚಾರ್ಯ" ಮುಂತಾದ ಉಚ್ಚ ಶಿಕ್ಷಣ ಪಡೆದ ಆಯುರ್ವೇದ ವೈದ್ಯರುಗಳನ್ನು ಆಯುರ್ವೇದವನ್ನು ಬೋಧಿಸುವುದಕ್ಕಾಗಿಯೂ, ಎಂ.ಬಿ.ಬಿ.ಎಸ್ ಗೆ ಕಡಿಮೆಯಿಲ್ಲದ ಅಲೋಪಥಿಕ್ ಪದವೀಧರರನ್ನು ಅಲೋಪಥಿಕ್ ಶಾಸ್ತ್ರವನ್ನು ಬೋಧಿಸುವುದಕ್ಕೂ ನಿಯಮಿಸಬೇಕು. ೨ ಪ್ರಾಯೋಗಿಕ ಶಿಕ್ಷಣವನ್ನು ಸುಧಾರಿಸುವುದಕ್ಕಾಗಿ ವಿದ್ಯಾರ್ಥಿಗಳು ಭಸ್ಮ, ಸಿಂಧೂರ ಮುಂತಾದ ಔಷಧಿಗಳನ್ನು ಸ್ವತಃ ಮಾಡುವುದಕ್ಕೆ ಪ್ರತ್ಯೇಕ ಏರ್ಪಾಡುಗಳನ್ನು ಮಾಡುವುದು; ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳಲ್ಲಿರುವ ಹಾಸಿಗೆಗಳನ್ನು ಹೆಚ್ಚಿಸಿ ಆಯುರ್ವೇದ ಮತ್ತು ಯುನಾನಿಯ ವಿಶಿಷ್ಟ ಚಿಕಿತ್ಸೆಗಳಾದ ಪಂಚಕರ್ಮ, ಧಾರಾ, ಶಸ್ತ್ರ ಮತ್ತು ಹಮಾಮ್ ಮುಂತಾದುವುಗಳಿಗೆ ತಕ್ಕ ಏರ್ಪಾಡುಗಳನ್ನು ಮಾಡುವುದು. ಸುಸಜ್ಜಿತವಾದ ರೋಗ ನಿದಾನ ಮತ್ತು ಶರೀರ ರಚನೆಯ ಪ್ರಯೋಗ ಶಾಲೆಗಳನ್ನು ಏರ್ಪಡಿಸುವುದು. ಈಗಿರತಕ್ಕ ಶವವಿಚ್ಛೇದನ ಶಾಲೆಯ ಅವ್ಯವಸ್ಥೆಯನ್ನು ಹೋಗಲಾಡಿಸಿ ಸುಸಜ್ಜಿತವಾದ ರೀತಿಯಲ್ಲಿ ಇಡುವುದು. ವನಸ್ಪತಿ ತೋಟದಲ್ಲಿ ದಿನ ದಿನಕ್ಕೆ ಒಣಗಿ ಹೋಗುತ್ತಿರುವ ವನಸ್ಪತಿಗಳನ್ನು ಪೋಷಿಸುವುದಲ್ಲದೆ ಹೊಸ ಹೊಸ ವನಸ್ಪತಿಗಳನ್ನು ಬೆಳೆಸಿ ವಿದ್ಯಾರ್ಥಿಗಳು ಅದರಿಂದ ಪ್ರಯೋಜನವನ್ನು ಹೊಂದುವಂತೆ ಮಾಡುವುದು. ೩ ಮೈಸೂರು ಸಂಸ್ಥಾನದಲ್ಲಿ ಕೂಡಲೇ 'ರಿಜಿಸ್ಟ್ರೇಷನ್' ಮತ್ತು ಹೊರಗಡೆ 'ಅಂಗೀಕಾರ' ಪಡೆಯಲು ವ್ಯವಸ್ಥೆ ಮಾಡುವುದು. ಆಯುರ್ವೇದ ಮತ್ತು ಯುನಾನಿ ಕಾಲೇಜ್ ಪದವೀಧರರಿಗೆ ಅಲೋಪಥಿಕ್ ವೈದ್ಯರಂತೆ ವೇತನ ಮತ್ತು ಸ್ಥಾನಮಾನಗಳನ್ನು ಕೊಡುವುದು.

ಇಡೀ ಭರತ ಖಂಡದಲ್ಲಿಯೇ ಮೊದಲು ಮಾದರಿಯಾಗಿ ಸ್ಥಾಪಿತವಾದ ಈ ಕಾಲೇಜು ದಿನೇ ದಿನೇ ಕ್ಷೀಣಿಸಿ ಅಧೋಗತಿಗೆ ಬರುತ್ತಿರುವುದು ಶೋಚನೀಯ ವಿಚಾರ. ವೈದ್ಯ ವಿದ್ಯಾಭ್ಯಾಸವು ಜೀವನ ಮರಣದ ಸಮಸ್ಯೆಗೆ ಸಂಬಂಧಿಸಿರುವುದರಿಂದ ಅದನ್ನು ಅಲಕ್ಷ್ಯ ಮಾಡಿದಲ್ಲಿ ರಾಷ್ಟ್ರಕ್ಕೆ ವಿಘಾತವೆಂದು ಬೇರೆ ಹೇಳಬೇಕಾಗಿಲ್ಲ. ಆದ್ದರಿಂದ ಸರ್ಕಾರದವರು ತಕ್ಷಣವೇ ಮೇಲ್ಕಂಡ ಕಾರ್ಯಕ್ರಮಗಳನ್ನು ಕೈಗೊಂಡು ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಕೊಟ್ಟು ಮುಂದೆ ಅವರು ರಾಷ್ಟ್ರಕ್ಕೆ ಹೆಚ್ಚಿನ ಸೇವೆಯನ್ನು ಮಾಡಲು ಅವಕಾಶ ಕೊಡುವರೆಂದು ನಂಬಲಾಗಿದೆ.

ತಿರುಪತಿ ದೇವಾಲಯಕ್ಕೆ ಹರಿಜನರ ಪ್ರವೇಶ

ತಿರುಮಲೈ ತಿರುಪತಿ ದೇವಸ್ಥಾನಕ್ಕೆ ಪ್ರವೇಶಿಸಲು ಹರಿಜನರಿಗೆ ಅವಕಾಶ ಕೊಡಬಹುದೆಂದು ೧೦ ಸಹಸ್ರ ಭಕ್ತಾದಿಗಳು ಪ್ರಾರ್ಥಿಸಿರುವುದನ್ನು ಸಂಗಣಿಸಿ ದೇವಸ್ಥಾನದ ಧರ್ಮ ದರ್ಶಿಗಳು ಆ ರೀತಿ ಅಧಿಕಾರ ಕೊಡಬಹುದೆಂದು ತೀರ್ಮಾನಿಸಿ ಸರ್ಕಾರದವರ ಅನುಮತಿಗಾಗಿ ಪ್ರಾರ್ಥಿಸಿದ್ದಾರೆ.

ಬರ್ಮ ದಂಗೆ ನಿಂತಿತು

ಬರ್ಮ ಮತ್ತು ಬ್ರಿಟಿಷ್ ಸಂಧಾನಗಳು ವಿಫಲವಾದರೆ ಭಾರಿ ಪ್ರಮಾಣದಲ್ಲಿ ದಂಗೆ ನಡೆಸುವ ಕಾರ್ಯವು ಮುಂಚೆಯೇ ಸಿದ್ಧವಾಗಿದ್ದಿತು. ಈ ಸಂಧಾನವು ಸಫಲವಾದ ಸುದ್ದಿ ಸರಿಯಾಗಿ ಕೆಲವು ಕಡೆಗೆ ತಿಳಿಯದಿದ್ದುದರ ಪರಿಣಾಮವಾಗಿ ಹೆಂಜಾಡ ಮುಂತಾದ ಜಿಲ್ಲೆಗಳಲ್ಲಿ ಸೈನಿಕರು ದಂಗೆ ಎದ್ದಿದ್ದರು. ಈಗ ಜ॥ ಆಂಗ್ ಸಾನರ ಮನವಿಯಂತೆ ಅವರೆಲ್ಲರೂ ಧಾಳಿಯನ್ನು ನಿಲ್ಲಿಸಿದ್ದಾರೆಂದು ಗೊತ್ತಾಗಿದೆ.

ಬಿಹಾರಿಗೆ ಗಾಂಧಿಜಿ

ಮಾರ್ಚಿ ತಿಂಗಳ ಮಧ್ಯ ಭಾಗದಲ್ಲಿ ಮಹಾತ್ಮ ಗಾಂಧಿಯವರು ಕೆಲವು ದಿನಗಳ ಕಾಲ ಬಿಹಾರಿಗೆ ತೆರಳಿ ಅನಂತರ ನೌಖಾಲಿಗೆ ಹಿಂತಿರುಗುವರೆಂದು ತಿಳಿದು ಬಂದಿದೆ.

ಡಿಶಂಬರ್ ತಿಂಗಳೊಳಗೆ ಹೊಸ ರಾಜ್ಯಾಂಗ

ಭಾರತದ ಹೊಸ ರಾಜ್ಯಾಂಗವನ್ನು ೪೭ ನೇ ಡಿಶಂಬರ್ ತಿಂಗಳೊಳಗಾಗಿ ರಚಿಸಿ ಸಿದ್ಧಗೊಳಿಸಬೇಕಾದ ಆವಶ್ಯಕತೆಯನ್ನು ಪಂಡಿತ ನೆಹರೂರವರು ನಿನ್ನೆ ಕೇಂದ್ರ ಶಾಸನ ಸಭಾ ಸದಸ್ಯರಿಗೆ ವಿವರಿಸಿದರು.

ನೆಹರೂರವರ ಕಂ[ಚಿನ]

ಪ್ರತಿಮೆ

ಪಂಡಿತ ಜವಹರಲಾಲ ನೆಹ... ಪ್ರತಿಮೆಯನ್ನು ಕಂಚಿನಲ್ಲಿ ತ... ಹಾಲೆಂಡಿನ ಶ್ರೀಮತಿ ಕ್ರೀನಕೆಂಬು... ದಗಿರುವುದಾಗಿ ವರದಿಯಾಗಿದೆ... ಮಣ್ಣಿನಲ್ಲಿ ವಿಗ್ರಹವು ಸಿದ್ಧವಾಗಿ... ದನ್ನು ಹಸ್ತ್ಯಾಂರಿಗೆ ತೆಗೆದುಕೊಂಡು... ಕಂಚಿನಲ್ಲಿ ಎರಕ ಹುಯ್ಯುವ... ರೂಪವರನ್ನು ಆಕೆಯು ಕೆಲವು ... ಗಳ ಸಮಯದಲ್ಲಿ ಮಾತ್ರ ನೆ... ಳಂತೆ ಇದೇ ರೀತಿ ಮಹಾತ್ಮ... ಯನ್ನೂ ತಯಾರಿಸಿರುವುದಾಗಿ... ಗಿದೆ

ದುಂಡು ಮೇಜಿನ ಸ[ಮ್ಮೇಳ]ನಕ್ಕೆ ಸಿಂಧ್ ನಾಯ[ಕರ] ಪ್ರಯತ್ನ

ಇತ್ತೀಚಿನ ಪರಿಸ್ಥಿತಿಯನ್ನು ... ಭಾರತದ ಪ್ರಧಾನ ಕೋಮುಗಳ... ಯನ್ನು ಕುದುರಿಸಿ ಬ್ರಿಟಿಷರಿಂದ ... ವನ್ನು ವಹಿಸಿಕೊಳ್ಳುವ ಬಗ್ಗೆ ... ಯೋಜನೆಯನ್ನು ತಯಾರಿಸಲ... ಮೇಜಿನ ಸಮ್ಮೇಳನವೊಂದನ್ನು ... ಬೇಕೆಂದು ಕಾಂಗ್ರೆಸ್ ಮತ್ತು ... ಯಕರನ್ನು ಸಿಂಧ್ ಪ್ರಾಂತ್ಯದ ... ಮಜೀದ್, ಜಿ. ಎಂ. ಸೈಯದ ... ಮೌಲಾ ಭಕ್ಸರವರು ಪ್ರಾರ್ಥಿ...

ಕ್ರಯ ಕ್ಕೆ ವೆ...

341, ರಾಮಾನುಜ...
788-122, ಒಟ್ಟೊ...
ಆರ್. ಗುಂಡೂರಾವ್, ...ರು ಬ್ಯಾಂಕ್ ಬಿಲ್ಡಿಂಗ್, ಮೈಸ...

ನೋಟೀಸು

ಮೈಸೂರು ಸಿಟಿ ರೇ...

No. R 6-81—46

1947 ನೇ ಇಸವಿ ಫೆಬ್ರ... 28 ನೇ ತಾ॥ ಶುಕ್ರವಾರದ ದಿ... ರು ಸಿಟಿಯಲ್ಲಿರುವ ಎಲ್ಲಾ ಸರ... ಮೊಹಲ್ಲಾ ಸಬ್ ಗೋಡೌ... ಡಿಪೋ, ಮತ್ತು ಸಹಕಾರ ಸ... ವ ದಿನಸಿಗಳ ಎಣಿಕೆ ಮಾಡಬ... ದರಿಂದ, ಆ ದಿವಸ ಡಿಪೋಗಳ... ಲ್ಪಡುತ್ತವೆ.

(ಸಹಿ) ಎಸ್. ಎಚ್. ಸುಬ್ರ...
ರೇಷನಿಂಗ್ ಆಫೀಸರ್, ...
ಮೈಸೂರು, 18-3-47. ಮೈಸೂ...

The
MYSORE DRUG HOUSE
(Opposite to K. R. Hospital)
Sayajirao Road, Mysore.
Dealers in Medicines & Medical requirements.
Your Patronage is solicited

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ
೨೩-೨-೪೭ ರಿಂದ : : ಎರಡನೇ ವಾರ
ಶ್ರೀ ಕೃಷ್ಣಲೀಲಾ
(ಕನ್ನಡಚಿತ್ರ)
ಮ್ಯಾಟಿನಿ ಮಧ್ಯಾಹ್ನ 3, 1ನೇ ಆಟ ಸಂಜೆ 6-15, 2ನೇ ಆಟ ರಾತ್ರಿ 9-30
ಪ್ರತಿ ದಿನ ಮೂರು ಆಟಗಳು
ಇಂದಿನವರು, ಸಂದುಹೋದ ಮತ್ತು ಸಾರಿದ ತತ್ವಗಳನ್ನು ಅನುಕರಿಸುತ್ತಿರುವರು. ಅಮರವಾದ ಪುಣ್ಯ ಪುರಾಣಗಳ ಕಥಾ ಭಾಗಗಳ ದೀಪಸ್ತಂಭಗಳನ್ನು ಪ್ರಜ್ವಲಿಸುತ್ತಿರುವರು. ಇದರ ನಿದರ್ಶನವು ಇಂದು ನಾವು ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿಸುತ್ತಿರುವ
"ಶ್ರೀ ಕೃಷ್ಣ ಲೀಲಾ"
ಶತ್ರು ಮರ್ದನಕ್ಕೆಂದು ಶತ್ರು ಸತ್ವವನ್ನು ಧೂಳಿಧೂಸರಗೈದ ಕ್ಷಾತ್ರ ಸಂತೋಷದ ಸ್ಮಾರಕ ಸಂಭ್ರಮವೇ
"ಶ್ರೀ ಕೃಷ್ಣ ಲೀಲಾ"
ದ ನವನವೀನ ಕಥಾ ಭಾಗ. ನೀವು ಇದುವರೆವಿಗೂ ನೋಡದಿದ್ದರೆ ಇಂದೇ ಬಂದು ನೋಡಿ ಆನಂದಪಡಿ

ಹೊಸ ಜವಳಿ
ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ
ಇಂದೇ ಭೇಟಿ ಕೊಡಿ!
ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!
ಬಿ. ಕೆಂಚಪ್ಪ ಸನ್ಸ್,
ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು.

ಆಪೆರಾ ಟಾಕಿ...
೨೬-೨-೪೭ ರಿಂದ ೨ ನೆ...
ವಿದ್ಯಾಪ[ತಿ]
ಪ್ರತಿ ದಿನ ಮೂರು ಆಟ...
: ಪಾತ್ರ :-
ಟಿ. ಆರ್. ರಾಮಚಂದ್ರ, ಕೆ. ...
ಡಿ. ಬಾಲಸುಬ್ರಹ್ಮಣ್ಯಂ, ...
Morning shows from
BRAZI...

Edited, printed and pu... A. R. Nagarajan at the Sa... D-Subbiah Road, Mysore

...ಂದ ಭಾರತದ ಅವಶ್ಯಕತೆ

...ತದ ಪ್ರಜೆಗಳು ತಮ್ಮ ತಮ್ಮಲ್ಲೇ ... ಒಪ್ಪಂದಕ್ಕೆ ಬಾರದೇ ಹೋದರೆ ... ವಿಶ್ವ ' ತತ್ವಕ್ಕೆ ವಿಪತ್ತುಂಟಾಗುವು... ಂದಿತ. ಭಾರತೀಯರು ವಿಶಾಲವಾ... ದ ಒಂದು ಆತ್ಮಾರ್ಥಕ್ಕೆ ಬರಲು ಸಂ... ಕ್ತ ರಾಷ್ಟ್ರ ಪರಿಷತ್ತು ಭಾರತೀಯರಿ... ವಾಗದೇಕು - ಎಂಬುದಾಗಿ ವಿಶ್ವ ಸ... ನದ ಫಿಲಿಫೈನ್ ಪ್ರತಿನಿಧಿಗಳಾದ ಜ... ನರಲ್ ರೊಮುಲೊ. ರವರು ಭಾರ... ಬಗ್ಗೆ ಹೇಳಿಕೆ ಇತ್ತಿದ್ದಾರೆ.

...ಡೋ ಚೀನಾದಲ್ಲಿ ಜರ್ಮನ್ ಸೈನ್ಯಗಳು

...ಇಂಡೋ ಚೀನಾದಲ್ಲಿ ವಿಯಟನಾಮ್ ...ಗದ ವಿರುದ್ಧವಾಗಿ ಫ್ರೆಂಚರು ಜರ್ಮ... ಸೈನಿಕರನ್ನು ಉಪಯೋಗಿಸುತ್ತಿದ್ದಾ... ವಿಶ್ವದ ಮಹಿಳಾ ಸಮ್ಮೇಳನದ ...ಟ್ನಾಂ ಪ್ರತಿನಿಧಿಗಳಾದ ಮಿಸ್ ದಾ... ವಾನ್ ಸೆ ರವರು ಪ್ಯಾರಿಸಿನಲ್ಲಿ ತಿಳಿಸಿ...ರೆ

...ಮಿಷಕ್ಕೊಂದು ಫೋಟೋ

...ಂದು ನಿಮಿಷಕ್ಕೆ ೧ ಫೋಟೋ ತೆಗೆ... ...ದನ್ನು ತೊಳೆದು, ಪ್ರಿಂಟ್ ಮಾಡಿ, ... ಬಾಕಲು ಸಜ್ಜಾಗಿರುವಂತೆ ಭಾವ ಚಿ... ...ಗಳನ್ನು ಹೊರಬರಿಸುವ ಕ್ಯಾಮರಾವ... ನ್ಯೂಯಾರ್ಕಿನ ಆಪ್ಟಿಕಲ್ ಸೊಸೈಟಿ... ...ಲ್ಲಿ ಮಿ॥ ಎಡ್ವಿನ್ ಎಂಬುವರು ಪ್ರದರ್ಶಿಸಿ...ದ್ದಾರೆ

ಕಳ್ಳತನಗಳು

ದೇವರಾಜ ಮೊಹಲ್ಲಾದಲ್ಲಿ ಕಳೆದ ನಾ... ...ದ. ವರ್ಷಗಳಿಂದ ಕಳ್ಳತನದ ಹೆಸರೇ ...ರಲಿಲ್ಲ ಈಗ ಒಂದು ವಾರದಿಂದ ಮನೆ... ...ಲ್ಲೂ ಅಂಗಡಿಗಳಲ್ಲೂ ಅವು ಆರಂಭವಾ...ವೆ. ಪೊಲೀಸ್ ಅಧಿಕಾರಿಗಳು ಈ ಕಡೆ ...ತೀವ್ರ ಗಮನ ಕೊಟ್ಟು ಸೂಕ್ತ ಕ್ರಮ ಗಳ... ...ಕೈಗೊಳ್ಳಬೇಕಾಗಿದೆ-ಎಂಬುದಾಗಿ ಸದ... ಮೊಹಲ್ಲಾದ ನಿವಾಸಿಗಳೊಬ್ಬರು ಪತ್ರಿ...ಸಿದ್ದಾರೆ.

ಬುಡವಿಲ್ಲದ ಅಪಪ್ರಚಾರ

ಶ್ರೀರಂಗಪಟ್ಟಣದ ಮತದಾರರಲ್ಲಿ ಡಾ॥ ...ಸಿ. ಬಂದೀಗೌಡರ ಪ್ರಾರ್ಥನೆ:-

ಮುಂದಿನ ತಿಂಗಳು ೧೦ನೆಯ ತಾರೀಖು ಶ್ರೀರಂಗಪಟ್ಟಣದಲ್ಲಿ ನಡೆಯಲಿರುವ ಮ್ಯುನಿಸಿಪಲ್ ಚುನಾವಣೆಗೆ ನಾನು ಉಮೇದುವಾರನಾಗಿದ್ದೇನೆ ನನ್ನ ವಿಚಾರವಾಗಿ ಸುಳ್ಳು ಸುದ್ದಿಗಳನ್ನು ಹರಡಿ ಒಬ್ಬೊಬ್ಬರು ಉಮೇದುವಾರರು ಅಪಪ್ರಚಾರಕ್ಕೆ ತೊಡಗಿರುವುದು ಶೋಚನೀಯ. ನಾನು 'ಶ್ರೀರಂಗಪಟ್ಟಣದ ಜನರು ಅಯೋಗ್ಯರು(Loafers)' ಎಂದು ದೂಷಿಸುತ್ತಿದ್ದೇನೆಂದು ಇವರು ಮೊನ್ನೆ ರಾತ್ರಿ ಶ್ರೀರಂಗಪಟ್ಟಣದಲ್ಲಿ ಸೇರಿದ್ದ ಒಕ್ಕಲಿಗರ ಕುಲದ ಪಂಚಾಯಿತಿಯಲ್ಲಿ ತಿಳಿಸಿದರೆಂದು ನನಗೆ ಖಚಿತವಾದ ವರ್ತಮಾನ ಬಂದಿದೆ. ನಾನು ಶ್ರೀರಂಗಪಟ್ಟಣದ ಮಹಾಜನಗಳ ಮೇಲೆ ಯಾವ ಆರೋಪಣೆಯನ್ನೂ ಮಾಡಿಲ್ಲ ಮತ್ತು ನಾನು ಹಾಗೆ ಮಾಡಲು ಯಾವ ಕಾರಣವೂ ಇಲ್ಲ. ಮಹಾಜನರು ಇಂಥ ಸುಳ್ಳು ಸುದ್ದಿಗಳನ್ನು ನಂಬಬಾರದೆಂದೂ ಮತ್ತು ಅಪಪ್ರಚಾರದಲ್ಲಿ ತೊಡಗಿರುವ ವ್ಯಕ್ತಿಗಳು ಚುನಾವಣೆಯಲ್ಲಿ ಜಯಗಳಿಸಲು ಇಂಥಹ ಅಡ್ಡ ದಾರಿಗಳನ್ನು ಹಿಡಿಯಬಾರದೆಂದೂ ಪ್ರಾರ್ಥಿಸುತ್ತೇನೆ

ಡಾ॥ ಸಿ. ಬಂದೀಗೌಡ.

ರೇ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨೬—೨—೪೭ [ಸಂಚಿಕೆ ೧೭೦

ಪಂಜಾಬಿನಲ್ಲಿ ಒಪ್ಪಂದ; ಸತ್ಯಾಗ್ರಹ ನಿಲ್ಲುವುದು

ಪಂಜಾಬಿನಲ್ಲಿ ಗುಂಡಿನೇಟು

ಮುಸ್ಲಿಂ ಲೀಗಿನವರು ಪಂಜಾಬ್ ಪ್ರಾಂತ್ಯದಲ್ಲಿ ಆರಂಭಿಸಿರುವ ಚಳುವಳಿಯು ದಿನ ದಿನಕ್ಕೆ ಭೀಕರ ರೂಪವನ್ನು ತಾಳುತ್ತಿದೆ. ಲಾಹೋರ್, ಅಮೃತಸರ ಮತ್ತು ಜಲಂಧರ್‌ಗಳಲ್ಲಿ ಗಲಭೆಗಳಾಗಿ ಪೊಲೀಸರೂ, ಮಿಲಿಟರಿಯವರೂ ಗುಂಡು ಹಾರಿಸಿದ್ದಾರೆ ಲಾಹೋರಿನಲ್ಲಿ ೪ ಜನರು ದಸ್ತಗಿರಿಯಾಗಿದೆ.

ರಾಮಸ್ವಾಮಿ ಮೊದಲಿಯಾರರಿಗೆ ಆಸಫ್ ಅಲಿಯವರಿಂದ ಸಲಹೆ

ವಿಶ್ವಸಂಸ್ಥೆಯ ಆರ್ಥಿಕ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಅಮೆರಿಕಕ್ಕೆ ತೆರಳಿರುವ ಮೈಸೂರು ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ರು ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿರುವ ಮಿ॥ ಆಸಫ್ ಅಲಿಯವರಿಂದ ಸಲಹೆಗಳನ್ನು ಪಡೆಯಬೇಕೆಂದು ಭಾರತದ ಕೇಂದ್ರ ಸರ್ಕಾರವು ತಿಳಿಸಿರುವುದಾಗಿ ಗೊತ್ತಾಗಿದೆ ಸರ್ ಮೊದಲಿಯಾರರು ಅಮೆರಿಕಾದಲ್ಲಿರುವವರೆಗೆ ದಿನಕ್ಕೆ ೨೫ ಡಾಲರ್ ಭತ್ಯವನ್ನೂ, ಚಿಲ್ಲರೆ ಖರ್ಚಿಗೆ ೧೦ ಡಾಲರನ್ನೂ ಪಡೆಯುವರು. ಅಲ್ಲದೆ ಒಟ್ಟು ಮೊತ್ತದ ೨ ಸಾವಿರ ರೂ ಗಳನ್ನು ಪಡೆಯುವರು ಅವರು ಮೊನ್ನೆ ದಿನ ನ್ಯೂಯಾರ್ಕ್ ನಗರವನ್ನು ತಲುಪಿದರು. ಭಾರತದಲ್ಲಿ ಕೋಮುವಾರು ಕಲಹ ನಡೆಯುವುದಲ್ಲವೇ ಎಂದು ಕೇಳಿದ ಪ್ರಶ್ನೆಯೊಂದಕ್ಕೆ ಅವರು ಉತ್ತರವೀಯುತ್ತಾ "ನನ್ನಂತೆಯೇ ನೀವೂ ಊಹಿಸಿದ್ದೀರಿ. ಆದರೆ ನಾನು ಆ ರೀತಿ ಯೋಚಿಸುವುದಿಲ್ಲ" ಎಂದು ತಿಳಿಸಿದ್ದಾರೆ. ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವ ಮುನ್ನ ಭಾರತದ ಗುಂಪುಗಳು ಒಂದಾಗುವುವೆಂದು ಹೇಳಿದ್ದಾರೆ.

ಸಿಂಧ್ ವಿಶ್ವವಿದ್ಯಾನಿಲಯ

ಎಷ್ಟೇ ಪ್ರತಿಭಟನೆ ಬಂದರೂ ಸಿಂಧ್ ಪ್ರಾಂತ್ಯದಲ್ಲಿ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಲಾಗುವುದೆಂದು ಅಲ್ಲಿನ ಸರ್ಕಾರವು ನಿರ್ಧರಿಸಿದೆ ಅದರ ಸೆನೆಟ್ಟಿನಲ್ಲಿ ಮುಸ್ಲಿಮರಿಗೆ ಶೇ ೬೦ ರಷ್ಟು ಸ್ಥಾನಗಳನ್ನು ಕಾದಿಡಲಾಗಿದೆ ವಿಶ್ವವಿದ್ಯಾನಿಲಯದಲ್ಲಿ ಕೋಮುವಾರು ಪ್ರಾತಿನಿಧ್ಯ ಕೊಡುವುದನ್ನು ಕಾಂಗ್ರೆಸ್ಸಿನವರು ವಿರೋಧಿಸುವರು

○ ಪಂಜಾಬ್ ಪ್ರಾಂತ್ಯದಲ್ಲಿ ವಿದ್ಯುಚ್ಛಕ್ತಿ ರೇಡಿಯನ್ನು ಜಾರಿಗೆ ತರಲಾಗ ವುದೆಂದು ಅಲ್ಲಿನ ಕೈಗಾರಿಕಾ ಸಚಿವರು ತಿಳಿಸಿದ್ದಾರೆ. ಭಾರತದಲ್ಲಿ ಈ ಪದ್ಧತಿ ಜಾರಿಗೆ ಬರುವುದು ಈ ಪ್ರಾಂತ್ಯದಲ್ಲಿಯೇ ಮೊದಲು.

ಪಂಜಾಬಿನಲ್ಲಿ ಒಪ್ಪಂದ

ಮಿ॥ ಜಿನ್ನಾರವರು ಕಾಂಗ್ರೆಸಿನಲ್ಲಿರುವ ಪಂಜಾಬಿನ ನಾಯಕರುಗಳಿಗೆ ಕಳುಹಿಸಿದ ಸಲಹೆಯಂತೆ ಪಂಜಾಬಿನಲ್ಲಿ ಸರ್ಕಾರದವರಿಗೂ ಲೀಗ್ ನಾಯಕರಿಗೂ ಒಪ್ಪಂದವಾಗಿರುವುದಾಗಿ ತಿಳಿದು ಬಂದಿದೆ ಇದರ ಪರಿಣಾಮವಾಗಿ ಅಲ್ಲಿ ಜಾರಿಯಲ್ಲಿದ್ದ ರಕ್ಷಣಾ ಶಾಸನವನ್ನು ರದ್ದು ಮಾಡಲಾಗುವುದು. ಬಂಧನದಲ್ಲಿದ್ದವರನ್ನೆಲ್ಲಾ ಬಿಡುಗಡೆ ಮಾಡಲಾಗುವುದು. ಆದರೆ ಮೆರವಣಿಗೆ ಮೇಲಿನ ಪ್ರತಿಬಂಧಕಾಜ್ಞೆಗಳು ಮಾತ್ರ ಇನ್ನು ಮುಂದೆಯೂ ಇರುವುವು ಕೆಲ ದಿನಗಳ ಕಾನೂನು ಭಂಗದ ನಂತರ ಮುಸ್ಲಿಂ ಲೀಗಿನವರು ತಮ್ಮ ಚಳುವಳಿಯನ್ನು ನಿಲ್ಲಿಸಿರುವುದಾಗಿಯೂ ತಿಳಿದು ಬಂದಿದೆ

ತ್ಯಾಗರಾಜ ಭಾಗವತರ್, ಕೃಷ್ಣನ್‌ರವರ ಅಪೀಲು

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆಯಲ್ಲಿ ಆಜೀವ ಶಿಕ್ಷೆಗೆ ಗುರಿಯಾಗಿರುವ ಶ್ರೀ ತ್ಯಾಗರಾಜ ಭಾಗವತರ್ ಮತ್ತು ಎನ್. ಎಸ್. ಕೃಷ್ಣನ್‌ರವರು ಪ್ರೀವಿ ಕೌನ್ಸಿಲಿಗೆ ಅಪೀಲು ಮಾಡಿದ್ದಾರೆ ಅದರ ವಿಚಾರಣೆಯು ಮೊನ್ನೆ ದಿನ ಲಂಡನ್ನಿನಲ್ಲಿ ಆರಂಭವಾಗಿದೆ.

ರೈಲಿನಲ್ಲಿ ಮೊದಲನೇ ತರಗತಿ ಸೌಕರ್ಯ ವಜಾ

ಇನ್ನು ಮೇಲೆ ರೈಲುಗಳಲ್ಲಿ ೩ ತರಗತಿಗಳನ್ನು ಮಾತ್ರ ಇಡಲಾಗುವುದು. ಇದುವರೆವಿಗೆ ಇದ್ದ ಮೊದಲನೇ ತರಗತಿಯ ಸೌಕರ್ಯವನ್ನು ವಜಾ ಮಾಡಿ, ೨, ಇಂಟರ್ ಮತ್ತು ೩ ನೇ ತರಗತಿಗಳನ್ನೇ ಕ್ರಮವಾಗಿ ೧, ೨ ಮತ್ತು ೩ ನೇ ತರಗತಿಗಳನ್ನಾಗಿ ಪರಿವರ್ತಿಸಲಾಗುವುದು ಎಂಬುದಾಗಿ ರೈಲ್ವೆ ಮಂತ್ರಿಗಳಾದ ಡಾ॥ ಮತ್ತಾಯಿ ಯವರು ತಿಳಿಸಿದ್ದಾರೆ

ಭಾರತ ರಾಯಭಾರಿಗಳ ಸ್ಥಾನಮಾನ

ಬ್ರಿಟಿಷ್ ಸರ್ಕಾರದ ರಾಯಭಾರಿಗಳಿಗಿರುವಷ್ಟೇ ಅಧಿಕಾರ ಮತ್ತು ಸ್ಥಾನಮಾನಗಳ, ಭಾರತ ಸರ್ಕಾರದ ರಾಯಭಾರಿಗಳಿಗೂ ಇರುತ್ತವೆ ಅವರುಗಳು ಸ್ವತಂತ್ರ ... ರಾಷ್ಟ್ರಗಳೊಡನೆ ವ್ಯವಹರಿಸುವ ಅಧಿಕಾರ ಪಡೆದಿರುತ್ತಾರೆ ಎಂಬುದಾಗಿ ಕಾಮನ್ಸ್ ಸಭೆಯಲ್ಲಿ ಭಾರತದ ಉಪಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಗೋಪಾಲರಾಯರು ೯೯ ಲಕ್ಷ ರೂ. ಬಚ್ಚಿಟ್ಟಿದ್ದಾರೆ

ಸ್ವಂ. ವಾ. ಫೋ.] ಬೆಂಗಳೂರು ೨೬

ಧರ್ಮರಕ್ಷಾಕರ ಗೋಪಾಲರಾಯರ ದರೋಡೆ ಮೊಕದ್ದಮೆಯಲ್ಲಿ ಶ್ರೀ ಸರ್ವೋತ್ತಮರಾವ್ ಮಂಜಾದವರ ಮೇಲೆ ಹೂಡಲಾಗಿರುವ ಅಪಾದನೆಯ ವಿಚಾರಣೆ ಈ ದಿನ ಮತ್ತೆ ಆರಂಭವಾಯಿತು. ಶ್ರೀ ಜೇವಿಯರ್‌ರವರ ಪಾಟೀಸವಾಲಿಗೆ ಧರ್ಮರಕ್ಷಾಕರರು ಉತ್ತರವೀಯುತ್ತಾ ಈರೀತಿ ತಿಳಿಸಿದ್ದಾರೆ ಇದುವರೆವಿಗೆ ೯೯ ಲಕ್ಷ ರೂ.ಗಳ ಬಚ್ಚಿ ಹಂಚಿದ್ದೇನೆ ಅದರ ವಿವರ ಈರೀತಿ ಇದೆ ಶ್ರೀಮತಿ ಸಾಕಮ್ಮ ೨ ಲಕ್ಷ, ಡಾ॥ ಡಾಮನಿಕ್ ೨ ಲಕ್ಷ, ಎಫ್ ತಂಬೂಚೆಟ್ಟಿ ೧ ಲಕ್ಷ, ಆರನ್ ಮೋಸೆಸರ ತಾಯಿಗೆ ೬೦ ಸಾವಿರ, ಡಿಸೋಜ ೩೦, ಡಿಕಾಸ್ಟ ೨೫, ಸಿ. ಪೆರುಮಾಳಚೆಟ್ಟಿ ೫೦, ಮಾಧವಕೃಷ್ಣಯ್ಯ ೬೦ ಸಾವಿರ ರೂ.ಗಳು

ವೈದ್ಯಾಧಿಕಾರಿಗಳ ವರ್ಗ

ಡಾ॥ ಸಿ. ಎಸ್. ದೇವಿದಾಸ್‌ರವರನ್ನು ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಯ ಕಿವಿ, ಮೂಗು, ಮತ್ತು ಗಂಟಲು ಶಾಖೆಗೆ ವರ್ಗಾಯಿಸಲಾಗಿದೆ.

† ವ್ಯವಸಾಯ ಇಲಾಖೆಯ ಡೆಪ್ಯುಟಿ ಡೈರೆಕ್ಟರವರನ್ನಾಗಿ ಡಾ॥ ಬಿ. ಟಿ ನಾರಾಯಣ್‌ರವರನ್ನು ನೇಮಿಸಲಾಗಿದೆ.

ಉಪ್ಪಿನ ತೆರಿಗೆ ರದ್ದು

ಈ ತಿಂಗಳ ೨೮ ನೇ ತಾ॥ ಕೇಂದ್ರ ಶಾಸನ ಸಭೆಯಲ್ಲಿ ಅರ್ಥಿಕ ಸಚಿವರಾದ ಮಿ॥ ಲಿಯಾಕತ್ ಆಲಿಖಾನರವರು ಆಯವ್ಯಯ ಪಟ್ಟಿಯನ್ನು ಮಂಡಿಸುವಾಗ ಉಪ್ಪಿನ ತೆರಿಗೆಯು ರದ್ದಾಗಿರುವ ಅಂಶವನ್ನು ಪ್ರಮಾಣಿಸುವರೆಂದೂ, ಆಯವ್ಯಯದಲ್ಲಿ ೫೦ ಕೋಟಿ ರೂ ನಷ್ಟವನ್ನು ಸೂಚಿಸುವರೆಂದೂ ವರದಿಯಾಗಿರುತ್ತದೆ

ಸಿಂಧ್ ಪ್ರಧಾನಿ ಪತ್ನಿಯವರಿಂದ ಸತ್ಯಾಗ್ರಹ

ಪಂಜಾಬಿನಲ್ಲಿ ಜಾರಿಯಲ್ಲಿರುವ ಪ್ರತಿಬಂಧಕಾಜ್ಞೆಗಳನ್ನು ವಿರೋಧಿಸಿ ಸಿಂಧೂ ಪ್ರಾಂತ್ಯದ ಪ್ರಧಾನಿ ಸರ್ ಗುಲಾಂಹುಸೇನ್ ಹಿದಾಯತುಲ್ಲಾರವರ ಪತ್ನಿಯವರು ಇತರ ಹಲವು ಮಹಿಳೆಯರೊಡನೆ ಲಾಹೋರಿನಲ್ಲಿ ಮೆರವಣಿಗೆಯನ್ನು ನಡೆಸಿದರು ಪೊಲೀಸಿನವರು ಅವರನ್ನು ದಸ್ತಗಿರಿ ಮಾಡಿ ಸ್ವಲ್ಪ ಹೊತ್ತಿನ ಮೇಲೆ ಬಿಡುಗಡೆ ಮಾಡಿದರು

ಇಂಡೋ ಚೀಣಾದಲ್ಲಿ ಮತ್ತೆ ಉಗ್ರ ಕದನ

ಕಳೆದ ೪೮ ಗಂಟೆಗಳಿಂದ ಇಂಡೋಚೀನದ ಕದನವು ... ರೂಪವನ್ನು ತಾಳಿದ್ದು ... ಫ್ರೆಂಚ್ ಸೈನ್ಯವನ್ನು ವಿಯಟ್ನಾಮ್ ಪಡೆಗಳು ... ಪ್ರದೇಶದಲ್ಲಿ ಫ್ರೆಂಚ್ ಸೈನ್ಯ ... ತಿಳಿದು ಬಂದಿದೆ

... ವಿನಾಯಿತಿ

ಸ್ವಂ. ವಾ.] ... ೨೬

... ಮೈಸೂರು ವಿಶ್ವವಿದ್ಯಾನಿಲಯದ ... ಪರೀಕ್ಷೆ ... ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ಹಳೇ ವಿದ್ಯಾರ್ಥಿಗಳೆಲ್ಲಾ ಸಹಕರಿಸಬೇಕಾಗಿ ಕೋರಲಾಗಿದೆ.

ಸಾಧ್ವಿ

೨೬-೨-೪೭ ಬುಧವಾರ

ಸಣ್ಣ ನೌಕರರಿಗೆ ಪರಿಹಾರ ಸಾಲದು

ಸಂಬಳದ ಪ್ರಮಾಣವನ್ನು ಪುನರ್ವಿಮರ್ಶಿಸಲು ಸರ್ಕಾರದವರು ನೇಮಿಸಿರುವ ಸಮಿತಿಯ ವರದಿಯು ಬರುವುದಕ್ಕೆ ಪೂರ್ವಭಾವಿಯಾಗಿ ನೌಕರರಿಗೆ ತಾತ್ಕಾಲಿಕ ಪರಿಹಾರವನ್ನು ಸರ್ಕಾರದವರು ಮಂಜೂರ್ ಮಾಡಿರುವರಷ್ಟೆ. ಇದು ಮಧ್ಯಮ ಮತ್ತು ಮೇಲ್ತರಗತಿಯ ನೌಕರರಿಗೆ ತಕ್ಕಮಟ್ಟಿನ ಪರಿಹಾರವನ್ನು ನೀಡುವುದಾದರೂ, ಕೆಳದರ್ಜೆಯ ನೌಕರರಿಗೆ ಸ್ವಲ್ಪವೂ ಸಹಾಯವನ್ನುಂಟುಮಾಡುವುದಿಲ್ಲ.

ಕೆಳದರ್ಜೆಯ ನೌಕರರು ಹಲವು ದಿನಗಳಿಂದ ಸಭೆ, ಮುಂತಾದುವುಗಳನ್ನು ನಡೆಸಿ ಸರ್ಕಾರದವರಿಗೆ ತಮ್ಮ ಅಹವಾಲುಗಳನ್ನು ಹೇಳಿಕೊಳ್ಳುತ್ತಿದ್ದರು. ಕಡೆಯ ಪಕ್ಷ ನೂರು ರೂ ಸಂಬಳವಾದರೂ ಎಲ್ಲರಿಗೂ ದೊರೆಯಬೇಕೆಂದು ಅವರು ಕೇಳುತ್ತಿದ್ದರು. ಧಾನ್ಯ ಸಾಮಾನುಗಳೂ, ಮನೆ ಬಾಡಿಗೆ ಮುಂತಾದವುಗಳು ವಿಪರೀತ ಏರಿರುವ ಈ ಸಮಯದಲ್ಲಿ ತಮಗೆ ಬರುವ ಸಂಬಳ ಸಾರಿಗೆಗಳಿಂದ ಜೀವನ ನಡೆಸುವುದೇ ಕಷ್ಟವೆಂದು ಅರಿಕೆ ಮಾಡಿಕೊಂಡಿದ್ದರು. ತಮಗೆ ಸೂಕ್ತವಾದ ಸಹಾಯವು ದೊರೆಯುವುದೆಂದು ಎಲ್ಲರೂ ಕಾತುರದಿಂದ ನಿರೀಕ್ಷಿಸಿಕೊಂಡಿದ್ದರು. ಆದರೆ ಯಾರಿಗೆ ಅತ್ಯಗತ್ಯವಾಗಿಯೂ ಮತ್ತು ಹೆಚ್ಚು ಪ್ರಮಾಣದಲ್ಲಿಯೂ ಪರಿಹಾರವು ದೊರೆಯಬೇಕೋ ಅವರಿಗೆ ಸರ್ಕಾರದ ಹೊಸ ಆಜ್ಞೆಯಿಂದ ಯಾವ ಪ್ರಯೋಜನವೂ ಆಗಿರುವುದಿಲ್ಲ.

ಸಂಸ್ಥಾನದಲ್ಲಿ ಕೇವಲ ಹತ್ತು ಹದಿನೈದು ರೂಪಾಯಿ ಸಂಬಳದ ನೌಕರರು ಸಾವಿರಾರು ಜನರಿದ್ದಾರೆ. ಅನ್ನ ಬಟ್ಟೆಗಳಿಗೆ ಸಾಲದೆ ಪರಿತಾಪ ಪಡುತ್ತಿರುವ ಬಡ ಶಾಲಾ ಉಪಾಧ್ಯಾಯರುಗಳ ಮತ್ತು ಗುಮಾಸ್ತರುಗಳ ಸ್ಥಿತಿಯನ್ನಂತೂ ಹೇಳತೀರದು. ಇವರುಗಳಿಗೆ ಈಗ ಕೊಡಲಾಗುವ ಒಂದು ತಿಂಗಳ ಸಂಬಳದಿಂದ ಯಾವ ಸಹಾಯವೂ ಆಗುವುದಿಲ್ಲ. ಕಡೇ ಪಕ್ಷ ಅವರುಗಳಿಗೆ ಐವತ್ತು ರೂಪಾಯಿಗಳನ್ನಾದರೂ ಕೊಟ್ಟಿದ್ದರೆ ಸ್ವಲ್ಪ ಮಟ್ಟಿನ ಪರಿಹಾರವಾಗುತ್ತಿತ್ತು.

ಇನ್ನೂರೈವತ್ತು ರೂಪಾಯಿ ಸಂಬಳ ಬರುವವರಿಗೆ ಕೊಡುವ ಒಂದು ತಿಂಗಳ ಹೆಚ್ಚಿನ ಸಂಬಳವು ಅವರ ಮೇಲು ಖರ್ಚಿಗೆ ಸಹಾಯವಾಗುತ್ತದೆ. ಅದನ್ನು ಕೊಡದಿದ್ದರೆ ಅವರು ಉಪವಾಸವಿರುತ್ತಿರಲಿಲ್ಲ. ಮತ್ತು ಆ ಹಣವು ಅವರಿಗೆ ಒಂದು ವಿಶೇಷ ಸಹಕಾರಿಯೂ ಆಗುವುದಿಲ್ಲ. ಮೇಲ್ತರಗತಿಯ ನೌಕರರಿಗೆ ನೂರೈವತ್ತು ರೂಪಾಯಿಯ ಪರಮಾವಧಿಯ ಪರಿಹಾರವನ್ನು ಗೊತ್ತುಮಾಡಿ, ಕೆಳದರ್ಜೆಯವರಿಗೆ ಇನ್ನೂ ಹೆಚ್ಚಿನ ಸಹಾಯವನ್ನು ನೀಡಿದ್ದರೆ ಸರ್ಕಾರದವರು ಸಾವಿರಾರು ಮಂದಿ ಬಡ ಸಂಸಾರಗಳ ಕೃತಜ್ಞತೆಗೆ ಪಾತ್ರರಾಗುತ್ತಿದ್ದರು.

ಹಲವು ಇಲಾಖೆಗಳ ನೌಕರರಿಗೆ ಪರಿಹಾರವು ಅನ್ವಯಿಸುವುದಿಲ್ಲವೆಂದೂ ಸಹ ತಿಳಿದುಬಂದಿದೆ. ಅರಮನೆ ಇಲಾಖೆಯವರಿಗೂ ಸಹ ಈ ಸಹಾಯವು ದೊರೆತಿಲ್ಲವೆಂದು ಹೇಳಲಾಗಿದೆ. ಸರ್ಕಾರಿ ನೌಕರರಂತೆಯೇ ಅವರೂ ಸಹ ಸರ್ವ ವಿಧದಲ್ಲಿಯೂ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಇಂತಹವರಿಗೂ ಸಹಾಯ ದೊರೆಯುವುದು ಅಗತ್ಯ.

ಆಯುರ್ವೇದ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಅಖಿಲ ಕರ್ನಾಟಕ ಆಯುರ್ವೇದ ಮಂಡಲದ ಕಾರ್ಯದರ್ಶಿಗಳಾದ ಶ್ರೀ|| ಕೆ. ಟಿ. ಪುರಾಣಿಕರು ಈ ರೀತಿ ಹೇಳಿಕೆಯಿತ್ತಿದ್ದಾರೆ:-

ಮೈಸೂರು ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು ಮುಷ್ಕರ ಹೂಡಿ ಒಂದು ವಾರದ ಮೇಲಾಯಿತು. ವಿದ್ಯಾರ್ಥಿಗಳು ತಮ್ಮ ಕುಂದು ಕೊರತೆಗಳನ್ನು ಈ ಮೊದಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಸರಿಯಾಗಿ ವಿದ್ಯಾರ್ಜನೆಮಾಡಿ ನಾನೊಬ್ಬ ಗಣ್ಯವ್ಯಕ್ತಿಯಾಗಬೇಕೆಂಬ ಮಹತ್ವಾಕಾಂಕ್ಷೆಯುಳ್ಳ ವಿದ್ಯಾರ್ಥಿಯ ಪ್ರತಿಯೊಂದು ದಿನವೂ ಅತ್ಯಮೂಲ್ಯವಾದುದು. ಸರ್ಕಾರದವರು ವಿದ್ಯಾರ್ಥಿಗಳ ಕೋರಿಕೆಯ ವ್ಯವಸ್ಥೆಯನ್ನು ಮಾಡದೆ ಉದಾಸೀನ ಭಾವವನ್ನು ತೋರಿಸುತ್ತಿರುವುದು ಬಹು ವಿಷಾದಕರವಾಗಿದೆ.

ಸಾಕಷ್ಟು ಉಪಾಧ್ಯಾಯರುಗಳಿಲ್ಲದೆ ಪಾಠಗಳು ಸರಿಯಾಗಿ ನಡೆಯುತ್ತಾ ಇಲ್ಲವೆಂಬುದು ವಿದ್ಯಾರ್ಥಿಗಳ ಮುಷ್ಕರಕ್ಕೆ ಮುಖ್ಯ ಕಾರಣವೆಂದು ಕೇಳಿ ಬರುತ್ತಿದೆ. ಆಯುರ್ವೇದ ಕಾಲೇಜಿನಲ್ಲಿ ಉಪಾಧ್ಯಾಯರುಗಳು ಈಗ ೭-೮ ಕಡಿಮೆ ಇರುತ್ತಾರೆ. ಪ್ರತ್ಯಕ್ಷಾನುಭವ ಸಂಪಾದನೆಗೆ ತಕ್ಕ ಸೌಕರ್ಯವಿಲ್ಲ. ಇರುವ ಸ್ವಲ್ಪ ಮಂದಿ ಉಪಾಧ್ಯಾಯರುಗಳಿಗೂ ಇತರ ನಾನಾ ಕೆಲಸಗಳಿವೆ. ಆಸ್ಪತ್ರೆ ಕೆಲಸ, ಮೂಲಿಕಾ ತೋಟದ ಕೆಲಸ ಇವುಗಳೆಲ್ಲವನ್ನೂ ಮಾಡುವುದರ ಜೊತೆಗೆ ಪಾಠ ಹೇಳುವ ಕೆಲಸವನ್ನೂ ಮಾಡಬೇಕಾಗಿದೆ. ಉಪಾಧ್ಯಾಯರು ಬೇರೆ ಯಾವ ಕೆಲಸದಲ್ಲಿಯೂ ತೊಡಗಕೂಡದೆಂದೂ, ಅವರಿಗೆ ಇತರ ಕೆಲಸ ಕೊಡಕೂಡದೆಂದೂ ವಿದ್ಯಾ ಇಲಾಖೆಯ ನಿಯಮವಿದೆ. ಆದರೂ ಸರ್ಕಾರದವರು ಈ ಕಾಲೇಜಿನ ಉಪಾಧ್ಯಾಯರಿಗೆ ಇತರ ಕೆಲಸಗಳನ್ನು ವಹಿಸುವುದೂ, ಪಾಠ ಹೇಳಲು ಸಾಕಷ್ಟು ಪಂಡಿತರನ್ನು ನೇಮಿಸದೇ ಇರುವುದೂ, (ಅದೂ ಎರಡು ತಿಂಗಳುಗಳಿಂದ) ನೋಡಿದರೆ ಕಾಲೇಜಿನ ವಿಷಯದಲ್ಲಿ ಅಧಿಕಾರಿಗಳಿಗೆ ಸಾಕಷ್ಟು ಮುತುವರ್ಜಿ ಇಲ್ಲವೆಂದೇ ಹೇಳಬೇಕಾಗುತ್ತದೆ.

ವಿದ್ಯಾವ್ಯಾಸಂಗಕ್ಕೆ ಆತಂಕವನ್ನುಂಟುಮಾಡುವುದು ನ್ಯಾಯವೂ ಅಲ್ಲ; ಧರ್ಮವೂ ಅಲ್ಲ. ಒಳ್ಳೆಯ ಶಾಸ್ತ್ರಜ್ಞರಾದ ಪಂಡಿತರನ್ನು ಉಪಾಧ್ಯಾಯರನ್ನಾಗಿ ನೇಮಿಸಿ ವಿದ್ಯಾರ್ಥಿಗಳಿಗೆ ಪಾಠಗಳು ಸರಿಯಾಗಿ ನಡೆಯುವಂತೆ ಏರ್ಪಡಿಸುವುದಲ್ಲದೆ ಅವರಿಗೆ ಇರತಕ್ಕ ಕುಂದು ಕೊರತೆಗಳನ್ನೂ ಕೂಡಲೇ ನಿವಾರಿಸಬೇಕು.

ತೆಹರಿ ಸಂಸ್ಥಾನದಲ್ಲಿ ಬಂದಿಗಳ ಬಿಡುಗಡೆ

ಮಧ್ಯಪ್ರಾಂತ್ಯದ ಬಳಿ ಇರುವ ತೆಹರಿ ಸಂಸ್ಥಾನದ ರಾಜಕೀಯ ಬಂದಿಗಳನ್ನೆಲ್ಲಾ ಬಿಡುಗಡೆ ಮಾಡಲಾಗಿದೆಯೆಂದು ಅಲ್ಲಿನ ಪ್ರಜಾ ಮಂಡಲದ ಪ್ರಕಟಣೆಯೊಂದು ಹೊರಟಿದೆ

ಗಂಗಾ ನದಿಯ ಪಾತ್ರ ಬದಲಾವಣೆಯಾಗಿದೆ

ಬಿಹಾರ್ ಮತ್ತು ಸಂಯುಕ್ತ ಪ್ರಾಂತ್ಯಗಳ ಮಧ್ಯದಲ್ಲಿ ಹರಿಯುತ್ತಿದ್ದ ಗಂಗಾ ನದಿಯು ತನ್ನ ಪಾತ್ರವನ್ನು ಬದಲಾಯಿಸಿರುವುದಾಗಿ ವರದಿಯಾಗಿದೆ.

WANTED

One Manager, One Accountant and one Typist Only

Experianced men need apply. Salary according to qualification. For particulars, apply to the Managing Director, The Premier Chemical Industries Ltd., 368-1, New Sayajirow Road, Mysore.

ಮೈಸೂರು ಸತ್ಯಾಗ್ರ[...]

ಕೊಚ್ಚಿಯ ಬೆಂಬ[...]

ಜವಾಬ್ದಾರಿ ಸರ್ಕಾರ ಸ್ಥಾಪನೆ[...] ತ್ಯಾಗ್ರಹ ಹೂಡಬೇಕೆಂಬ ಮೈಸೂ[...] ಗ್ರೆಸ್ಸಿನ ನಿರ್ಧಾರವನ್ನು ಕೊಚ್ಚಿಯ[...] ಮಂಡಲವು ಸ್ವಾಗತಿಸಿ, ತನ್ನ [...]ನ್ನು ವ್ಯಕ್ತಪಡಿಸಿದೆ.

ಪುರಸಭಾ ಚುನಾವ[...]

ಸ್ವಂ ಸು.] ಶ್ರೀರಂಗಪಟ್[...]

ಮಾರ್ಚಿ ೧೦ ನೇ ತಾ|| ನಡೆಯ[...] ಇಲ್ಲಿನ ಪುರಸಭಾ ಚುನಾವಣೆಗೆ [...] ಭಾಗದ ೮ ಸ್ಥಾನಗಳಿಗೆ ೧೭ ಜನ[...] ಜಾಮಿನ ೭ ಸ್ಥಾನಗಳಿಗೆ ೧೧ [...]ರ್ಧಿಸಿದ್ದಾರೆ. ಈ ಸಲದ ಚುನಾ[...] ಬಹಳ ಭರಾಟೆಯಿಂದ ನಡೆಯು[...]

ರಣಜಿ[...]

27-2-47 ರಿಂ[...]

ಚಾಂದ[...]

ಪಾತ್ರ:- ಕುರ್ಷಿದ್, [...] ಲಾಲ್, ಮತ್ತು ದೀಕ್[...]

ಪ್ರತಿ ದಿನ ಮೂರು ಆಟಗಳ[...]

ಒಪೆರಾ ಟಾಕೀ[...]

೨೬-೨-೪೭ ರಿಂದ ೨ ನೇ[...]

ವಿದ್ಯಾಪ[...]

ಶ್ರೀ (

ಪ್ರತಿ ದಿನ ಮೂರು ಆಟಗ[...]

: ಪಾತ್ರ :-

ಟಿ ಆರ್. ರಾಮಚಂದ್ರನ್, ಕೆ. [...]

ಬಿ. ಬಾಲಸುಬ್ರಹ್ಮಣ್ಯಂ, ಶ್ರೀ[...]

Morning shows from 2[...]

BRAZI[...]

ನಿಮ್ಮ ಮೈ ಮೊಗದಲ್ಲಿನ[...] ಹೊಳೆಯಬೇಕೆ ? ನೀವು[...] ಲಾವಣ್ಯ ಮೂರ್ತಿಗಳಾಗಬೇ[...] ಹಾಗಾದರೆ ನಮ್ಮ ಮೈಸೂರು ಸ್ಯಾಂಡ[...] ಸೋಪನ್ನೇ ಉಪಯೋಗಿ[...]

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವ[...] ಸಂಪಾದಿಸಿ ಕೊಟ್ಟಿದೆ. ನಿ[...] ಸಂಪಾದಿಸಿ ಕೊಡುತ್ತದೆ ಪರೀಕ್ಷಿಸಿ ನೋಡಿರಿ. ಎಲ್ಲೆಲ್ಲೂ ದೊರೆಯುತ್ತ[...]

ಗವರ್ನಮೆಂಟ್ ಸೋಪ್ ಫ್ಯಾ[...] ಬೆಂಗಳೂರು.

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ

೨೩-೨-೪೭ ರಿಂದ ಎರಡನೇ ವಾರ; ಪ್ರತಿ ದಿನ ೩ ಆಟಗಳು

ಶ್ರೀ ಕೃಷ್ಣಲೀಲಾ

(ಕನ್ನಡ ಭಾಷೆಯಲ್ಲಿ)

ಮ್ಯಾಟಿನಿ ಮಧ್ಯಾಹ್ನ 3, 1ನೇ ಆಟ ಸಂಜೆ 6-15, 2ನೇ ಆಟ ರಾತ್ರಿ 9-30

ಜಲ ಕ್ರೀಡೆ, ರಾಸಲೀಲಾ, ಕಾಳಿಂಗ ಮರ್ದನ, ಮುಂತಾದುವುಗಳಿಂದ ಒಡಗೂಡಿ ನಿಮ್ಮ ಮನಸ್ಸನ್ನ ಸೆಳೆಯುವ ಈ ಚಲನ ಚಿತ್ರವನ್ನು ಇಂದೇ ನೋಡಲು ಮರೆಯಬೇಡಿ.

ದಿ

ಮೈಸೂರ್ ಡ್ರಗ್ ಹೌಸ್

(ಕೃಷ್ಣರಾಜೇಂದ್ರ ಆಸ್ಪತ್ರೆ ಎದುರು)

ಸಯ್ಯಾಜಿರಾವ್ ರಸ್ತೆ, ಮೈಸೂರು.

ನಮ್ಮಲ್ಲಿ ಎಲ್ಲಾ ವಿಧವಾದ ಔಷಧಿಗಳೂ ದೊರೆಯುತ್ತವೆ.

Edited, printed and publ[...] A. R. Nagarajan at the Sadh[...] D. Subbiah Road, Mysore.

ರೀ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೨೭—೨—೪೭ [ಸಂಚಿಕೆ ೧೭೧

ಜಯಪುರಸಂಸ್ಥಾನದಲ್ಲಿ ರಾಜ್ಯಾಂಗ ಸುಧಾರಣೆ

ಭಾವಿ ಭಾರತದ ರಕ್ಷಣೆ ಬ್ರಿಟಿಷರಿಗೆ ಸೇರಿಲ್ಲ!

೧೯೪೮ ನೇ ಜೂನ್ ತಿಂಗಳು ಭಾರತಕ್ಕೆ ... ಅಧಿಕಾರವನ್ನು ವಹಿಸಲಾಗುವ ... ಅನಂತರ ವಿದೇಶಗಳ ಧಾಳಿಯಿಂದ ... ಸಂರಕ್ಷಿಸಿಕೊಳ್ಳುವ ಜವಾಬ್ದಾರಿ ... ಅಲ್ಲಿನ ಸರ್ಕಾರಕ್ಕೇ ಸೇರಿದ್ದಾಗಿರುತ್ತ... ಭಾರತವು ಬ್ರಿಟಿಷ್ ಸಾಮ್ರಾಜ್ಯದಲ್ಲೇ ... ಯುವ ಹಾಗಿದ್ದರೆ ಕಾಮನ್‌ವೆಲ್ತಿನ ಇ... ರಾಷ್ಟ್ರಗಳಂತೆ ಅದರ ಸಂಬಂಧವೂ ಇ... ವುದು ಎಂಬುದಾಗಿ ಪ್ರಧಾನಿ ಅಟ್ಲೀಯವ(ರು) ಹೇಳಿದ್ದಾರೆ

ಡ|| ಕಲೆಕ್ಟರಿಗೆ ಕಾರಾಗೃಹ

... ಜಿಲ್ಲೆಯ ಡೆಪ್ಯೂಟಿ ಕಲೆಕ್ಟರಾದ ... ಶಾಂತಿಲಾಲ ಹರಿಲಾಲ ವೋರಾ ಎಂ... ಲಂಚ ತಿಂದರೆಂಬ ಆಪಾದನೆ ಸಾ... ದುದರಿಂದ ೯ ತಿಂಗಳ ಕಠಿಣ ಶಿಕ್ಷೆ ... ೧ ಸಹಸ್ರ ರೂ. ಗಳ ದಂಡ ತೆಟ್ಟ... ೪|| ತಿಂಗಳ ಶಿಕ್ಷೆಗೆ ಗುರಿಯಾಗಿದ್ದಾರೆ.

...ಲಕ್ಕೆ ಬದಲಾಗಿ ದ್ವೀಪಗಳು

... ರಿಕಾ ಸಂಯುಕ್ತ ಸಂಸ್ಥಾನವು ... ರಾಷ್ಟ್ರಗಳಿಗೆ ಕೊಟ್ಟಿರುವ ಸಾಲಕ್ಕೆ ... ಬದಲಾಗಿ ಆಯಾ ರಾಷ್ಟ್ರಗಳು ಪೆಸಿಫಿಕ್, ... ಅಟ್ಲಾಂಟಿಕ್ ಮತ್ತು ಕೆರೀಬಿಯನ್ ಕ್ಷೇತ್ರ... ಲ್ಲಿ ಪಡೆದಿರುವ ದ್ವೀಪಗಳನ್ನು ಪಡೆಯು... ವ ಬಗ್ಗೆ ಸಂಧಾನ ಆರಂಭಿಸಬೇಕೆಂದು ಅ... ಮೆರಿಕದ ಪ್ರತಿನಿಧಿ ಸಭೆಯಲ್ಲಿ ನಿರ್ಣಯ... ವೊಂದನ್ನು ಮಂಡಿಸಲಾಗಿದೆ.

ಜಪಾನಿನಲ್ಲಿ ಭಾರಿ ರೈಲ್ವೆ ಅನಾಹುತ

ಜಪಾನಿನ ಚರಿತ್ರೆಯಲ್ಲೇ ಬಹಳ ದೊಡ್ಡದಾದ ರೈಲ್ವೆ ಅಪಘಾತವೊಂದು ಮೊನ್ನೆ ... ನಡೆದಿದೆ. ಟೋಕಿಯೋವಿಗೆ ೪೦ ಮೈಲಿ ದಕ್ಷಿಣದಲ್ಲಿ ಪ್ರಯಾಣಿಕರ ರೈಲೊಂದು ಮೊಗಚಿಕೊಂದು ೧೭೦ ಮಂದಿ ಪ್ರಾಣ ಬಿಟ್ಟಿದ್ದಾರೆ. ೩೦೦ ಮಂದಿಗೆ ಗಾಯಗಳಾಗಿವೆ

ಪ್ರಥಮ ಮಹಿಳಾ ಅಧ್ಯಕ್ಷರು

ಕೇಂದ್ರ ಶಾಸನ ಸಭೆಯ ಅಧ್ಯಕ್ಷತೆಯನ್ನು ಮೊನ್ನೆ ದಿನ ಮದ್ರಾಸಿನ ಶ್ರೀಮತಿ ...ಮ್ಮು ಸ್ವಾಮಿನಾಥನ್‌ರವರು ವಹಿಸಿದ್ದರು ... ರೀತಿ ಮಹಿಳೆಯೊಬ್ಬರು ಆ ಅಧ್ಯಕ್ಷ ...ದ್ದುಗೆಯಲ್ಲಿ ಮಂಡಿಸಿದ್ದುದು ಇದೇ ಮೊ...ದಲನೆಯ ಬಾರಿ ಇವರನ್ನು 'ಸರ್' ಎಂ...ದು ಸಂಬೋಧಿಸಿದಾಗ ಸಭೆಯಲ್ಲಿ ಕೋಲಾ...ಹಲವೆದ್ದಿತು. ಕೊನೆಗೂ ಹಲವು ಸದಸ್ಯ...ರು 'ಸರ್' ಎಂದೇ ಕರೆದರು

ಸರ್ಪವನ್ನೂ ತೊಂದರೆಗೊಳಿಸದ ಗಡಿನಾಡಿನ ಗಾಂಧಿ

ಬಿಹಾರಿನಲ್ಲಿ ಖಾನ್ ಅಬ್ದುಲ್ ಗಫಾರ್ ಖಾನರು ಮಣ್ಣು ಗುಡ್ಡೆಯೊಂದನ್ನು ತೆಗೆಯುತ್ತಿದ್ದಾಗ ಒಂದು ಸರ್ಪ ಪೊಟರೆಯಿಂದ ಬಂದು ಬುಸುಗುಟ್ಟಿತು ಅಕ್ಕ ಪಕ್ಕದ ಜನರು ಅದನ್ನು ಸಾಯಿಸಲು ಪ್ರಯತ್ನಪಟ್ಟರು. ಖಾನ್ ಸಾಹೇಬರು ಅದಕ್ಕೆ ಅವಕಾಶ ಕೊಡಲಿಲ್ಲ ನಸುನಗುತ್ತ ಅದನ್ನೇ ನೋಡತೊಡಗಿದರು ಸರ್ಪವು ಸಮಾಧಾನಗೊಂಡು ಹಿಂತಿರುಗಿತು. ನಮ್ಮ ಉದ್ದೇಶವು ನಿಷ್ಕಲ್ಮಷವಾಗಿಯೂ, ಶುದ್ಧವಾಗಿಯೂ ಇದ್ದರೆ ಎಂತಹ ಶತ್ರುವನ್ನಾದರೂ ಗೆಲ್ಲಬಹುದೆಂಬುದಕ್ಕೆ ಇದೇ ನಿದರ್ಶನವೆಂದು ಖಾನ್ ಸಾಹೇಬರು ನೆರೆದಿದ್ದವರಿಗೆ ತಿಳಿಸಿದರು.

ಲೀಗಿನ ಬಗ್ಗೆ ಬ್ರಿ|| ಸರ್ಕಾರದ ಖಚಿತ ಧೋರಣೆ

ಬ್ರಿಟಿಷ್ ಧೋರಣೆಯನ್ನನುಸರಿಸಿ ಕಾಂಗ್ರೆಸ್ ಮತ್ತು ಲೀಗ್‌ಗಳಲ್ಲಿ ಒಪ್ಪಂದವೇರ್ಪಡಿಸಲು ಹೊಸ ವೈಸರಾಯರು ಪ್ರಯತ್ನಪಡಲಿದ್ದಾರೆ ಲೀಗು ತನ್ನ ನೀತಿಯನ್ನು ಬದಲಾಯಿಸಿ ಸೌಹಾರ್ದಕ್ಕೆ ಒಡಂಬಡದಿದ್ದರೆ, ಬಹುಮತ ಅಭಿಪ್ರಾಯಕ್ಕೆ ಕಂಟಕರಾಗಿ ಇನ್ನು ಮುಂದೆಯೂ ವರ್ತಿಸಿದರೆ ಅವರ ಪ್ರತಿನಿಧಿಗಳನ್ನು ಕೇಂದ್ರ ಸರ್ಕಾರದಿಂದ ಹೊರದೂಡಿ ಪಂಡಿತ ಜವಹರಲಾಲರನ್ನು ಹೊಸ ಮಂತ್ರಿಮಂಡಲವನ್ನು ರಚಿಸುವಂತೆ ಪ್ರಾರ್ಥಿಸಬೇಕೆಂದೂ ಲಾರ್ಡ್ ಮೌಂಟ್ ಬ್ಯಾಟನ್ನರಿಗೆ ಬ್ರಿಟಿಷ್ ಸರ್ಕಾರವು ಖಚಿತವಾದ ಸೂಚನೆಗಳನ್ನು ಕೊಡುವುದಾಗಿ ಹೇಳಲಾಗಿದೆ ಪ್ರಧಾನಿ ಅಟ್ಲೀಯವರ ಹೇಳಿಕೆಯನ್ನು ಪ್ರಶಂಸಿಸಿ ನೆಹರೂರವರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಇಡೀ ಬ್ರಿಟಿಷ್ ಸರ್ಕಾರವೇ ಆನಂದದಿಂದ ಸ್ವಾಗತಿಸಿದೆ ಮಿ|| ಜಿನ್ನಾರವರ ಧೋರಣೆಯಿಂದ ಬ್ರಿಟಿಷ್ ರಾಜಕಾರಣಿಗಳು ಕೆರಳಿಹೋಗಿದ್ದಾರೆಂದು ವರದಿಯಾಗಿದೆ.

ಕಾಂಗ್ರೆಸ್ಸಿನೊಳಗೆ ಪಕ್ಷಗಳು ಇರಕೂಡದು

ಕಾಂಗ್ರೆಸ್ಸಿನೊಳಗೆ ವ್ಯವಸ್ಥಿತವಾದ ಯಾವ ಪಕ್ಷವೂ ಇರಕೂಡದೆಂದೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕೆಂದೂ ಪ್ರಾರ್ಥಿಸುವ ನಿರ್ಣಯವನ್ನು ಪ್ರಾಂತ್ಯಗಳ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಸಭೆಯಲ್ಲಿ ಅಂಗೀಕರಿಸಲಾಗಿದೆ

○ ಮದ್ರಾಸ್ ಸರ್ಕಾರದವರು ವ್ಯವಸಾಯಕ್ಕಾಗಿ ಬಾವಿಗಳನ್ನು ತೆಗೆಸಲು ೧|| ಕೋಟಿ ರೂ ಗಳನ್ನು ಒದಗಿಸುವುದಾಗಿ ಅರ್ಥಿಕ ಮಂತ್ರಿಗಳಾದ ಶ್ರೀ ಕೆ. ಅರ್. ಕಾರಂತರವರು ಕೃಷಿಕರ ಸಭೆಯೊಂದರಲ್ಲಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ

ಬ್ರಿಟನ್ನಿನ ಗೌರವ ಉಳಿಸಲು ಅಧಿಕಾರದ ವರ್ಗ

೧೯೪೮ ರ ಜೂನ್ ವೇಳೆಗೆ ಭಾರತೀಯರಿಗೆ ಅಧಿಕಾರ ವಹಿಸಿ ಬ್ರಿಟಿಷರು ಹಿಂತಿರುಗಬೇಕೆಂದಿರುವುದಾಗಿ ಹೊರಡಿಸಿರುವ ಹೇಳಿಕೆಯ ಬಗ್ಗೆ ಲಾರ್ಡ್ಸ್ ಸಭೆಯಲ್ಲಿ ನಡೆದ ಚರ್ಚೆಗೆ ಉತ್ತರವೀಯುತ್ತಾ ಭಾರತದ ಕಾರ್ಯದರ್ಶಿ ಲಾರ್ಡ್ ಪೆಥಿಕ್ ಲಾರೆನ್ಸರು ಈ ರೀತಿ ಹೇಳಿದ್ದಾರೆ:—"೪೮ ರ ಜೂನ್ ನಂತರ ಈಗಿನಂತೆಯೇ ನಾವು ಭಾರತವನ್ನು ಆಳಲು ಸಾಧ್ಯವಿಲ್ಲ ಅಧಿಕಾರ ನಿರ್ವಹಣೆಯ ಶಕ್ತಿ ಭಾರತೀಯರಿಗೆ ಇದೆ ಭಾರತದ ಬಗ್ಗೆ ಬ್ರಿಟನ್ನಿನ ಸದುದ್ದೇಶವನ್ನು ವ್ಯಕ್ತಪಡಿಸಲೂ, ಅವರೇ ತಮ್ಮ ಸಮಸ್ಯೆಗಳನ್ನು ಬಗೆ ಹರಿಸಿಕೊಳ್ಳಲೂ ಸಹ ಈ ರೀತಿ ಗೊತ್ತಾದ ಕಾಲದೊಳಗೆ ಅಧಿಕಾರದ ವರ್ಗ ಅವಶ್ಯಕವಾಗಿದೆ. ಈಗ ನಮ್ಮ ಮುಂದಿರುವುದು ಎರಡೇ ಮಾರ್ಗ. ಧೈರ್ಯವಾಗಿ ಮುನ್ನಡಿ ಇಡುವುದು ಇಲ್ಲವೇ ಭಾರತೀಯರನ್ನು ದಸ್ತಗಿರಿ ಮಾಡಿ ಜೈಲಿಗೆ ತಳ್ಳಿ, ನಮ್ಮ ಅಧಿಕಾರವನ್ನು ಬಲೋದ್ಯಂದಿಯಿಂದ ಚಲಾಯಿಸುತ್ತಾ, ನಿಶ್ಚಿತ ಮನಸ್ಸಿನಿಂದ, ಸ್ವಾತಂತ್ರ್ಯ ಪಡೆಯುವ ಸತ್ಯಸಂಕಲ್ಪದಿಂದ ಕೂಡಿ ಮುಂದುವರಿಯುತ್ತಿರುವ ಭಾರತವನ್ನು ಎದುರಿಸುವುದು ಈ ಎರಡೇ ಮಾರ್ಗದಿಂದ ನಾವು ಇನ್ನು ೧೦-೧೫ ವರ್ಷಗಳು ಮಾತ್ರ ಕಾಲಯಾಪನೆ ಮಾಡಬಹುದು. ಬ್ರಿಟಿಷ್ ಸರ್ಕಾರವು ಕಾಂಗ್ರೆಸ್ಸಿನ ಕ್ರಾಂತಿ ಮಾರ್ಗದ ಪ್ರಭಾವವನ್ನು ಈಗ ಅರಿತಿದೆ. ರಾಜ್ಯಾಂಗ ಸಭೆಯಲ್ಲಿ ಅಂಗೀಕಾರವಾದ ಪಂ|| ನೆಹರೂರವರ ನಿರ್ಣಯವು ಭಾರತದ ಅಲ್ಪ ಸಂಖ್ಯಾತರ ನವಜ್ಯೋತಿಯಂತಿದೆ ಕಾಂಗ್ರೆಸ್ಸು ಸೌಹಾರ್ದದಿಂದ ವರ್ತಿಸುತ್ತಿದೆ. ಬ್ರಿಟನ್ನಿನ ಗೌರವವನ್ನು ಕಾಪಾಡಲು ನಾವು ಹೊಸ ಮಾರ್ಗವನ್ನು ಹಿಡಿಯಬೇಕಾಯಿತು. ಪ್ರಧಾನಿಗಳ ಹೇಳಿಕೆಗೆ ವಿರೋಧ ಸೂಚಿಸಿದ್ದ ನಿರ್ಣಯವನ್ನು ಚರ್ಚೆಯನಂತರ ಟೋರಿ ಪಂಗಡದವರು ವಾಪಸು ತೆಗೆದುಕೊಂಡರು

ಜೈಪುರದಲ್ಲಿ ಸುಧಾರಣೆ

ಜಯಪುರಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯಲ್ಲಿಯೂ ಹೊರಗೂ ರಾಜಕೀಯ ಸುಧಾರಣೆಗಳಿಗಾಗಿ ಮಾಡಿಕೊಂಡ ಅರಿಕೆಗಳನ್ನು ಅಲ್ಲಿನ ಅರಸರು ಸಹಾನುಭೂತಿಯಿಂದ ಪರಿಶೀಲಿಸಿರುವರೆಂದೂ ಪ್ರಜೆಗಳ ಮೆಚ್ಚಿಗೆಗೆ ಪಾತ್ರವಾಗುವ ಸಲಹೆಗಳನ್ನು ಸರ್ಕಾರದವರು ಸದ್ಯದಲ್ಲಿಯೇ ಪ್ರಕಟಿಸುವುದಾಗಿಯೂ ಅಲ್ಲಿನ ದಿವಾನರಾದ ಸರ್ ವಿ. ಟಿ. ಕೃಷ್ಣಮಾಚಾರಿಯವರು ಪ್ರ|| ಪ್ರ|| ಸಭೆಯಲ್ಲಿ ಹೇಳಿರುವರು ರಾಜರು ಅನುಸರಿಸುತ್ತಿರುವ ಪ್ರಗತಿ ಪರ ಆಡಳಿತ ನೀತಿಯ ಫಲವಾಗಿ ಜನರು ಕೇಳುತ್ತಿರುವ ಅಧಿಕಾರಗಳನ್ನು ವಿಶೇಷ ಒತ್ತಾಯವಿಲ್ಲದೆಯೇ ಕೊಡಲು ರಾಜರು ಸಿದ್ಧರಾಗಿರುವುದಾಗಿಯೂ ಅವರು ತಿಳಿಸಿರುವರು.

ಲಕ್ಷ್ಮೀಕಾಂತಂ ಮೊಕದ್ದಮೆ ಮತ್ತೆ ಮದರಾಸ್ ಕೋರ್ಟಿಗೆ

ಸುಪ್ರಸಿದ್ಧ ಸಿನಿಮಾ ನಟರಾದ ಎಂ. ಕೆ. ತ್ಯಾಗರಾಜಭಾಗವತರ್ ಮತ್ತು ಎನ್ ಎಸ್ ಕೃಷ್ಣನ್‌ರವರು ಪ್ರೀವಿಕೌನ್ಸಿಲ್ಲಿಗೆ ಹಾಕಿಕೊಂಡಿದ್ದ ಅಪೀಲಿನ ಮೇಲೆ ನ್ಯಾಯಾಧೀಶರು ತೀರ್ಪಿತ್ತು ಪುನರ್ ತೀರ್ಮಾನಕ್ಕಾಗಿ ಮತ್ತೆ ಮದರಾಸ್ ಹೈಕೋರ್ಟಿಗೇ ಹಾಕಿದ್ದಾರೆ ಜೂರಿಗಳ ಅಭಿಪ್ರಾಯವನ್ನು ಬದಲಾಯಿಸುವ ಅಧಿಕಾರವು ತಮಗೆ ಇಲ್ಲವೆಂದು ಹೈಕೋರ್ಟಿನವರು ತೀರ್ಮಾನಿಸಿರುವುದಕ್ಕೆ ವಿರುದ್ಧವಾಗಿ ಈಗ ಅವರು ಮೊಕದ್ದಮೆಯ ಸಾಕ್ಷ್ಯ ಮತ್ತು ನ್ಯಾಯಾಂಶ ಇವೆರಡನ್ನೂ ಸ್ವತಂತ್ರವಾಗಿ ಪರಿಶೀಲಿಸಬಹುದೆಂದು ತಿಳಿಸಲಾಗಿದೆ.

ಅಪಾದಿತರನ್ನು ಜಾಮೀನು ಮೇಲೆ ಬಿಡಲು ಪ್ರೀವಿ ಕೌನ್ಸಿಲ್ಲು ನಿರಾಕರಿಸಿರುತ್ತದೆ.

ಬ್ರಿಟಿಷ್ ಯೋಜನೆ ಬಗ್ಗೆ ಅಮೆರಿಕದ ಪ್ರಶಂಸೆ

"ಅಧಿಕಾರವನ್ನು ಆಷ್ಟರಾಗಿ ವರ್ಗಾಯಿಸಿಕೊಡಲು ಬ್ರಿಟನ್ನು ನಿರ್ಧರಿಸಿರುವುದರಿಂದ ಭಾರತದ ಪ್ರಧಾನ ಕೋಮುಗಳು ತಮ್ಮೊಳಗೆ ಸಹಕರಿಸಿ ಮುಂದುವರಿಯಲು ಅನುಕೂಲ ಕಲ್ಪಿಸುವಂತಾಗಿದೆ. ಭಾರತದಲ್ಲಿ ಫೆಡರಲ್ ರಾಜ್ಯಾಂಗವನ್ನು ರೂಪಿಸುವುದಕ್ಕೆ ಬ್ರಿಟನ್ನು ಸಹಜವಾಗಿ ಪ್ರಯತ್ನಿಸುತ್ತಿದೆ ಇದು ಪ್ರಶಂಸನೀಯವಾದ ವಿಚಾರ ಭಾರತದ ಮುಖಂಡರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲಿ" ಎಂಬುದಾಗಿ ಅಮೆರಿಕಾ ಸೆಕ್ರೆಟರಿ ಆಫ್ ಸ್ಟೇಟ್ ಮಿ|| ಜಾರ್ಜ್ ಮಾರ್ಷಲ್‌ರವರು ತಿಳಿಸಿದ್ದಾರೆ

The
MYSORE DRUG HOUSE
(Opposite to K. R. Hospital)
Sayajirao Road, Mysore.
Dealers in Medicines & Medical requirements
Your Patronage is solicited

ಬರಲಿರುವ ಶ್ರೀರಂಗಪಟ್ಟಣದ ಪುರಸಭೆಯ ಚುನಾವಣೆಯ ಓಟಿನ ಮತದಾರರಲ್ಲಿ
ಕೆ. ರಾಮಯ್ಯ ಉರುಫ್ ಅಂಬಾಜಿರಾವ್
ಪ್ರಾರ್ಥನೆ.
ತಾ|| ೧೦-೩-೪೭ ನೇ ದಿವಸ ನಡೆಯುವ ಚುನಾವಣೆಗೆ ನಾನೂ ಒಬ್ಬ ಉಮೇದುವಾರನಾಗಿ ನಿಂತಿರುವುದರಿಂದ
ಗಣಪತಿ ಗುರ್ತಿಗೆ
ಓಟುಮಾಡಿ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.
ಕೆ. ರಾಮಯ್ಯ ಉರುಫ್ ಅಂಬಾಜಿರಾವ್.

Edited, printed and published by A. R. Nagarajan at the Sadhvi Press D-Subbiah Road, Mysore.

ಸಾಧ್ವಿ

೨೭-೨-೪೭ ಗುರುವಾರ

ರಾಜರುಗಳಿಗೆ ದೈವದತ್ತವಾದ ಹಕ್ಕುಗಳಿರುವುದಿಲ್ಲ

ರಾಜರುಗಳ ಸ್ಥಾನಮಾನಗಳ ವಿಷಯವಾಗಿ ಈಗ ಹಲವು ಬಗೆಯ ಪ್ರಶ್ನೆಗಳು ಎದ್ದಿರುತ್ತವೆ. ರಾಜ್ಯದ ಮೇಲಿನ ಪರಮಾಧಿಕಾರವು ರಾಜರುಗಳಿಗೆ ಸೇರಿದ್ದೋ, ಪ್ರಜೆಗಳಿಗೆ ಸೇರಿದುದೋ ಎಂಬ ವಿಚಾರವು ವಿಶೇಷವಾಗಿ ಚರ್ಚಿಸಲ್ಪಟ್ಟಿರುತ್ತದೆ. ರಾಜರುಗಳಿಗೆ ದೈವಾಂಶ ಸಂಭೂತವಾದ ಹಕ್ಕುಗಳಿವೆಯೆಂಬ ವಾದವೂ ಸಹ ಅಲ್ಲಲ್ಲಿ ಏಳುತ್ತಿದೆ. ಸಾಂಡೂರಿನ ಮಹಾರಾಜರವರು ಮೊನ್ನೆ ಬೆಂಗಳೂರಿನಲ್ಲಿ ಮಾಡಿದ ಭಾಷಣವೊಂದರಲ್ಲಿ ಈ ವಾದಗಳಿಗೆ ಸ್ಪಷ್ಟವಾದ ಉತ್ತರವನ್ನಿತ್ತಿದ್ದಾರೆ.

“ಹಿಂದೂ ಧರ್ಮದ ಯಾವ ಗ್ರಂಥಗಳಲ್ಲಿಯೂ ರಾಜರುಗಳ ದೈವಾಂಶ ಸಂಭೂತವಾದ ಹಕ್ಕನ್ನು ಸಮರ್ಥಿಸಿರುವುದಿಲ್ಲ; ಪ್ರಜೆಗಳ ಸಾಮೂಹಿಕವಾದ ಕರ್ತವ್ಯದ ಸಮುದಾಯವೇ ರಾಜರುಗಳ ಹಕ್ಕಾಗಿರುತ್ತದೆ; ರಾಜರುಗಳ ದೈವಾಂಶ ಸಂಭೂತ ಹಕ್ಕುಗಳ ಕಲ್ಪನೆಯು ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಬಂದುದಾಗಿರುತ್ತದೆ; ಇತರರಿಂತಲೂ ರಾಜನ ಮೇಲೆ ಹೆಚ್ಚಿನ ಜವಾಬ್ದಾರಿಯನ್ನು ನಮ್ಮ ಸಂಸ್ಕೃತಿಯು ಹೊರಿಸಿರುತ್ತದೆ; ನಮ್ಮ ಸಂಸ್ಕೃತಿಯಲ್ಲಿ ನಿಯುಕ್ತವಾಗಿರುವ ಕರ್ತವ್ಯಗಳನ್ನು ನಮ್ಮಲ್ಲಿ ಪ್ರತಿಯೊಬ್ಬರೂ ಪಾಲಿಸಿದರೆ ಇಂದು ನಾವು ಅನುಭವಿಸುತ್ತಿರುವ ಘರ್ಷಣೆಗಳೂ, ದ್ವೇಷಗಳೂ, ಹಕ್ಕಿನ ಸಾಧನೆಗಾಗಿ ಪರಸ್ಪರ ಕೊಲೆಯೂ ನಡೆಯಲು ಕಾರಣವಿರುವುದಿಲ್ಲ ಮತ್ತು ಭಾರತವು ತನ್ನ ನಿಜವಾದ ಸ್ಥಾನಮಾನವನ್ನು ಗಳಿಸುವ ಕಾಲವು ಬಹಳ ದೂರವಾಗಿರುವುದಿಲ್ಲ; ವಿದೇಶೀಯರ ಧ್ಯೇಯಗಳನ್ನೂ, ಸಂಸ್ಕೃತಿಯನ್ನೂ ಆಮದು ಮಾಡಿಕೊಳ್ಳುವುದರಿಂದ ಹಿಂದೂಸ್ಥಾನವನ್ನು ನಾವು ಹಿರಿದಾಗಿ ಮಾಡಲು ಸಾಧ್ಯವಿಲ್ಲ; ನಮ್ಮ ರಾಷ್ಟ್ರದ ಭದ್ರತೆಯನ್ನು ಸಂರಕ್ಷಿಸಬೇಕಾದರೆ ಭಿನ್ನ ಭಾವಗಳನ್ನು ತೊರೆದು, ಐಕ್ಯಮತ್ಯದಿಂದ ಕೂಡಿ, ನಮ್ಮ ಸ್ವಂತ ರಾಜ್ಯಾಂಗವನ್ನು ನಾವೇ ಸಿದ್ಧಗೊಳಿಸಬೇಕು”. ಎಂಬುದಾಗಿ ಅವರು ಹೇಳಿರುವರು

ರಾಜರುಗಳ ಸ್ಥಾನಮಾನಗಳ ವಿಷಯವಾಗಿ ರಾಜರೊಬ್ಬರಿಂದ ಬಂದಿರುವ ಈ ಅಭಿಪ್ರಾಯಗಳು ಅತ್ಯಂತ ಪ್ರಾಮುಖ್ಯವಾದುವು. ಪಾಶ್ಚಿಮಾತ್ಯರ ಸಂಸ್ಕೃತಿಯಲ್ಲಿ ಮಾತ್ರವೇ ಅಲ್ಲದೆ, ಪೌರ್ವಾತ್ಯರ ಮತಧರ್ಮಗಳಲ್ಲಿಯೂ ರಾಜರುಗಳು ದೈವಾಂಶ ಸಂಭೂತರೆಂಬ ಭಾವನೆಯು ಒಂದು ಕಾಲದಲ್ಲಿ ಪ್ರಬಲವಾಗಿ ಅಂಕುರಿಸಿತ್ತು. ಜಪಾನ್ ಚಕ್ರವರ್ತಿಗಳು ಸೂರ್ಯನಿಂದ ಉತ್ಪನ್ನರಾದವರೆಂದು ಅಲ್ಲಿನ ಪ್ರಜೆಗಳು ಇದುವರೆಗೂ ನಂಬಿದ್ದರು. ನಮ್ಮ ದೇಶದಲ್ಲಿಯೂ ಸೂರ್ಯ ಚಂದ್ರರುಗಳಿಂದ ಉತ್ಪನ್ನರಾದವರೆಂದು ಹೇಳಿಕೊಳ್ಳುವ ರಾಜ ಸಂತತಿಗಳು ಹೇರಳವಾಗಿವೆ. ಋಷಿ, ಮುನಿಗಳಿಂದ ಪ್ರತಿಯೊಬ್ಬರೂ ತಮ್ಮ ವಂಶದ ಮೂಲವನ್ನು ನಿರ್ಣಯಿಸುವುದು ಭಾರತೀಯರ ಹೆಮ್ಮೆ. ಆದರೆ ಈ ವಿಷಯಗಳ ಮೂಲವನ್ನು ನಿರ್ಧರಿಸುವುದು ಇಂದು ಸ್ವಲ್ಪ ಕಠಿಣವಾದ ಪ್ರಸಂಗವೇ ಸರಿ.

ಆದರೆ ದೈವದತ್ತವಾದ ಹಕ್ಕುಗಳು ಯಾವ ಮನುಷ್ಯನಿಗಾದರೂ ಇರುವ ವಿಚಾರವು ಈಗಿನ ಕಾಲಕ್ಕೆ ಅನ್ವಯಿಸಲಾರದು. ಇಷ್ಟು ಮಾತ್ರವೇ ಅಲ್ಲದೆ ರಾಜರುಗಳು ಪ್ರಜಾಸಮುದಾಯಕ್ಕಿಂತಲೂ ಹೆಚ್ಚಿನವರೆಂದು ಹೇಳುವ ಕಾಲವು ಕಳೆದುಹೋಯಿತು. ರಾಜ್ಯದ ಮೇಲಿನ ಪರಮಾಧಿಕಾರವು ಪ್ರಜೆಗಳಿಗಿದೆಯೇ ಹೊರತು ರಾಜರುಗಳಿಗ[ಲ್ಲ]ದು ವಾದಿಸುವ ಕಾಲವು ಬಂದಿರುತ್ತ[ದೆ]. [ಪ್ರ]ಜೆಗಳಿಗಿರುವ ಸಾರ್ವಭೌಮಾಧಿಕಾ[ರವನ್ನು] ಅವರ ಪರವಾಗಿ ಮತ್ತು ಅವರುಗಳ [ಪ್ರತಿ]ನಿಧಿಯಾಗಿ ರಾಜರುಗಳು ಚಲಾಯ[ಿಸಬೇ]ಕೆಂಬ ತತ್ವವು ಈಗ ರೂಢವಾಗು[ತ್ತಿ]ದೆ. ರಾಜರುಗಳು ಸಾಂವಿಧಾನಿಕ ಪ್ರ[ಭು]ಗಳಾಗಿಯೂ, ಶಾಸನಬದ್ಧರಾಗಿಯೂ [ವ]ರ್ತಿಸುವುದು ಅಗತ್ಯವಾಗಿರುತ್ತದೆ. [ರಾಜರು]ರೂ ಸೇರಿ ಸಕಲ ಮಾನವರೂ ಸ್ವಾ[...] ಸನಕ್ಕೆ ಬದ್ಧರೆಂದು ಅಂಗೀಕರಿಸಲಾ[...] ತತ್ವವನ್ನು ಅವರುಗಳು ಎಷ್ಟು ಬೇಗ [...] ಆಚರಣೆಗೆ ತಂದರೆ ಅಷ್ಟು [...] ಅವರಿಗೂ ಕ್ಷೇಮ, ಪ್ರಜೆಗಳಿಗೂ ಕ್ಷೇ[ಮ].

ಮೈಸೂರು ಸ್ಟೇಟ್ ರೈಲ್ವೆ
ನೋಟೀಸು

1947 ನೇ ಮಾರ್ಚಿ 1 ನೇ ತಾರೀಖು ಮತ್ತು ಅಲ್ಲಿಂದ ಮುಂದೆ, ಎಲ್ಲಾ ತರಗತಿಗಳ ರೈಲ್ವೆ ಪ್ರಯಾಣಿಕರ ಟಿಕೆಟ್ಟುಗಳ ಮತ್ತು ಸೀಸನ್ ಟಿಕೆಟ್ಟುಗಳ ದರವನ್ನು ಹಾಲಿ ಇರುವ ದರದ ಮೇಲೆ ರೂಪಾಯಿಗೆ ಒಂದಾಣೆಯಂತೆ ಹೆಚ್ಚಿಸಲಾಗುವುದು. ಹೊರಗಿನ ರೈಲ್ವೆ ಪ್ರಯಾಣದ ಟಿಕೆಟ್ಟಿನ ದರವನ್ನೂ ಸಹ ಹೆಚ್ಚಿಸಲಾಗುವುದು.

ಆದರೆ ಎಂಟಾಣೆಗಿಂತಲೂ ಕಡಿಮೆ ಬೆಲೆಯ ಟಿಕೆಟ್ಟುಗಳ ದರವನ್ನು ಹೆಚ್ಚಿಸಲಾಗುವುದಿಲ್ಲ.

ಟ್ರಾಫಿಕ್ ಮ್ಯಾನೇಜರ ಕಛೇರಿ, ಮೈಸೂರು, ತಾ॥ 22-2-1947,

ಮೀರ್ ಇನಾಯತ್ ಹುಸೇನ್,
ಟ್ರಾಫಿಕ್ ಮ್ಯಾನೇಜರ್

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ

೨೪-೨-೪೭ ರಿಂದ ಎರಡನೇ ವಾರ; ಪ್ರತಿ ದಿನ ೩ ಆಟಗಳು

ಶ್ರೀ ಕೃಷ್ಣಲೀಲಾ

(ಕನ್ನಡ ಭಾಷೆಯಲ್ಲಿ)

ಮ್ಯಾಟಿನಿ ಮಧ್ಯಾಹ್ನ 3, 1ನೇ ಆಟ ಸಂಜೆ 6-15, 2ನೇ ಆಟ ರಾತ್ರಿ 9-30

ಜಲ ಕ್ರೀಡೆ, ರಾಸಲೀಲಾ, ಕಾಳಿಂಗ ಮರ್ದನ, ಮುಂತಾದುವುಗಳಿಂದ ಒಡಗೂಡಿ ನಿಮ್ಮ ಮನಸ್ಸನ್ನೆಳೆಯುವ ಈ ಚಲನ ಚಿತ್ರವನ್ನು ಇಂದೇ ನೋಡಲು ಮರೆಯಬೇಡಿ.

From 28-2-47 for 4 days daily at 10-30 a m

‘Flame of Barbary Coast’

Starring:- John Wayne, Ann Doorak, Joseph Schildkrant and others.

The Lusty Saga of a Devil-may-care adventurer who rose to power and glory on a woman's faith and his own hot-headed Courage.

ರಣಜಿತ್
27-2-47 ರಿಂದ
ಚಾಂದನಿ

ಪಾತ್ರ:- ಕುರ್ಷಿದ್, ಈಶ್ವರ್ ಲಾಲ್, ಮತ್ತು ದೀಕ್ಷಿತ್.

ಪ್ರತಿ ದಿನ ಮೂರು ಆಟಗಳು

WANTED

One Manager, One Accountant and one Typist Only

Experianced men [can] apply. Salary according [to] qualification. For particulars, apply to the Manag[ing] Director, The Prem[ier] Chemical Industries L[td.] 368-1, New Sayajirow Ro[ad] Mysore.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್, ಮೈಸೂರು.
ಟೆಂಡರ್ ನೋಟೀಸು.

ಶ್ರೀ ಕೃಷ್ಣರಾಜೇಂದ್ರ ಗಿರಣಿಯ ಅಧಿಕಾರಿಗಳಿಂದ ಗಿರಣಿಯ ಆವರಣದಲ್ಲಿ ಗೊತ್ತುಮಾಡಲ್ಪಟ್ಟಿರುವ ನಿವೇಶನಗಳಲ್ಲಿ ಮೂರು ಗಡಂಗುಗಳನ್ನು ಕಟ್ಟುವ ಸಲು[ವಾಗಿ] ಮೊಹರಾದ ಟೆಂಡರುಗಳು ೧೯೪೭ ನೇ ಮಾರ್ಚಿ ತಿಂಗಳು ೧೦ ನೇ ತಾರೀಖು ೫ ಘಂಟೆಯ ವರೆಗೆ ಗಿರಣಿಯ ಜನರಲ್ ಮ್ಯಾನೇಜರವರಿಂದ ಅಂಗೀಕರಿಸಲ್ಪಡುವು. ಟೆಂಡರುಗಳೊಡನೆ ೫೦೦ ರೂ ಗಳನ್ನು ಠೇವಣಿಯಾಗಿ ಕಳುಹಿಸಿಕೊಡಬೇಕು.

ಅಳತೆಯ ವಿವರಗಳೂ ಮತ್ತು ಬೇಕಾದ ಸಾಮಗ್ರಿಗಳ ಪ್ರಮಾಣದ ಪಟ್ಟಿ ಮತ್ತು ಕಟ್ಟಡದ ನಕಾಶೆ, ಒಪ್ಪಂದದ ಫಾರಮ್ಮುಗಳೂ ಸಹ ಗಿರಣಿಯ ಕೆಲಸದ ದಿನಗಳಲ್ಲಿ ಮಿಲ್ಲಿನ ಕಛೇರಿಯಲ್ಲಿ ದೊರೆಯುತ್ತವೆ.

ಮೂರು ಗಡಂಗುಗಳೂ ಸಹ ಟೆಂಡರು ಅಂಗೀಕೃತವಾದ ದಿನದಿಂದ ಮೂರು ತಿಂಗಳೊಳಗೆ ಕಟ್ಟಲ್ಪಡಬೇಕು.

ಎಂ. ಆರ್. ಶ್ರೀನಿವಾಸ ಐಯ್ಯಂಗಾರ್
ಜನರಲ್ ಮ್ಯಾನೇಜರ್.

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್, ಲಿಮಿಟೆಡ್, ಮೈಸೂರು.
ನೋಟೀಸು.

೧೯೪೬ ನೇ ಡಿಸೆಂಬರ್ ೩೧ ಕ್ಕೆ ಅಂತ್ಯವಾದ ಅರ್ಧ ವರ್ಷಕ್ಕೆ ತಾತ್ಕಾಲಿಕ ನ[ಫೆ]

೧೯೪೭ ನೇ ಫೆಬ್ರವರಿ ೨೫ ನೇ ತಾರೀಖಿನಲ್ಲಿ ನಡೆದ ಗಿರಣಿಯ ಡೈರೆಕ್ಟರ್ ಸಭೆಯಲ್ಲಿ, ಡೈರೆಕ್ಟರುಗಳು ಪ್ರತಿ ಪೂರ್ತಿಯಾಗಿ ಪಾವತಿಯಾದ ಷೇರುಗಳಿಗೂ [...] ಆದಾಯ ತೆರಿಗೆ ರಹಿತವಾದ ಒಂದು ರೂ ಎಂಟಾಣೆ ತಾತ್ಕಾಲಿಕ ನಫೆ ಮತ್ತು ಎಂಟಾ[ಣೆ] ಬೋನಸನ್ನು ೧೯೪೬ ನೇ ಡಿಸೆಂಬರ್ ೩೧ ನೇ ತಾರೀಖಿಗೆ ಅಂತ್ಯವಾದ ಆರು ತಿಂ[ಗಳಿಗೆ] ಕೊಡಲು ನಿರ್ಧರಿಸಿರುತ್ತಾರೆ.

ಕಂಪೆನಿಯ ಟ್ರಾನ್ಸ್‌ಫರ್ ಪುಸ್ತಕಗಳು ೧೯೪೭ ನೇ ಮಾರ್ಚಿ ೨೫ ರಿಂದ [...] ಪೂರ್ತಾ ಎರಡು ದಿನಗಳೂ ಸೇರಿ ಮುಚ್ಚಲ್ಪಡುತ್ತವೆ

೧೯೪೭ ನೇ ಮಾರ್ಚಿ ೨೫ ನೇ ತಾರೀಖಿನ ದಿನ ಕಂಪನಿಯ ರಿಜಿಸ್ಟರಿನಲ್ಲಿ [...] ಬರುವ ಎಲ್ಲಾ ಷೇರು ಹೋಲ್ಡರುಗಳಿಗೂ ತಾತ್ಕಾಲಿಕ ನಫೆ ಮತ್ತು ಬೋನಸ್ ವಾ[...]ಟುಗಳನ್ನು ೧೯೪೭ ನೇ ಏಪ್ರಿಲ್ ೧೫ ನೇ ತಾರೀಖು ಮತ್ತು ಅದರ ನಂತರ ರವಾನಾಗುವುದು.

ಬೋರ್ಡಿನ ಅಪ್ಪಣೆ ಪ್ರಕಾರ,

ಮೈಸೂರು, ೨೫-೨-೪೭.

ಬಿ. ಎಸ್. ವಿಶ್ವೇಶ್ವರಯ್ಯ.
ಸೆಕ್ರೆಟರಿ.

[illegible]. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೮—೨—೪೭ [ಸಂಚಿಕೆ ೧೬೨

ಕ್ಯಾ॥ ಲಕ್ಷ್ಮಿ-ಸೈಗಾಲ್‌ರ ವಿವಾಹ ಮಾರ್ಚಿ ೮ ಕ್ಕೆ

ಲೀಗ್ ಸೇನೆಗೆ ಶಸ್ತ್ರಗಳು

...ಬ್ ಪ್ರಾಂತದ ಹತ್ತು ಸಾವಿರ ಮು... ಲೀಗ್ ನ್ಯಾಷನಲ್ ಗಾರ್ಡ್ ದಳದವ... ಶಸ್ತ್ರಾಸ್ತ್ರಗಳನ್ನು ಕೊಟ್ಟು ಸೈನಿಕರಂತೆ ...ಗೊಳಿಸುವ ಸಲಹೆಯನ್ನು ಪ್ರಾಂತ... ...ಸ್ಲಿಂ ಲೀಗಿನವರು ಅಲ್ಲಿನ ಸರ್ಕಾರಕ್ಕೆ ...ಪ್ಪಿದ್ದಾರೆ ದಳಾಯಿತರನ್ನು ಅಡಗಿಸು... ...ಲ್ಲೂ ಅನಾಯಕತ್ವವನ್ನು ತಡೆಗಟ್ಟು... ...ಲ್ಲೂ ಇವರನ್ನು ಉಪಯೋಗಿಸಲಾಗು...ಂದು ಹೇಳಲಾಗಿದೆ

...ಗು ಮಂತ್ರಿಗಳ ರಾಜೀನಾಮೆಗೆ ಒತ್ತಾಯವಿಲ್ಲ

...ರಾದ್ಯಾಂಗ ಸಭೆಯನ್ನು ಮುಸ್ಲಿಂ ಲೀ...ವರು ಬಹಿಷ್ಕರಿಸಿದ್ದುದರಿಂದ ಕೇಂದ್ರ ...ರ್ಕಾರವನ್ನೂ ಅವರು ಬಿಡಬೇಕೆಂದು ...ಗ್ರೆಸ್ ಮಂತ್ರಿಗಳು ಕೇಳಿದ್ದುದನ್ನು ... ವಾಪಸು ತೆಗೆದುಕೊಂಡಿರುವುದಾಗಿ ವ...ಯವಾಗಿದೆ. ಈಚಿನ ಬ್ರಿಟಿಷ್ ಘೋಷ...ಣೆಯಿಂದ ಲೀಗಿನವರನ್ನು ಕೇಂದ್ರ ಸರ್ಕಾ...ರದ ಬಿಡಿಸುವ ಅಗತ್ಯವು ನಿವಾರಣೆ...ಯಾಗಿರುವುದಾಗಿ ಹೇಳಲಾಗಿದೆ.

...ರಮನೆ ನೌಕರರ ಮನವಿ

ಮೈಸೂರು ೨೮

ನಿನ್ನೆ ಸಾಯಂಕಾಲ ಅರಮನೆಯ ಎ...ಲ್ಲ ಇಲಾಖೆಗಳ ಗುಮಾಸ್ತರುಗಳೂ, ಆ...ಳುಗಳೂ ಸಾಮೂಹಿಕವಾಗಿ ಸೇರಿ ...ಮನ್ಮಹಾರಾಜರವರ ಆಪ್ತ ಕಾರ್ಯದರ್ಶಿ...ಯವರ ಅಮಾತ್ಯಶಿರೋಮಣಿ ಸರ್ ಟಿ ...ಚೆಟ್ಟಿಯವರಲ್ಲಿಯೂ ಮತ್ತು ಹುಜೂರು ...ತಿನಿಧಿಗಳಾದ ಶ್ರೀ॥ ಟಿ ರಾಮಯ್ಯನವ...ರಲ್ಲಿಯೂ ಹೋಗಿ ತಮಗೆ ಸಲ್ಲುತ್ತಿರುವ ...ಲ್ಪ ಸಂಬಳ ಮತ್ತು ಅಲೋಯನ್ಸುಗಳ...ನ್ನು ವಿಮರ್ಶಿಸಿ ಸರ್ಕಾರದ ನೌಕರರಿಗೆ ...ಸಲ್ಲುತ್ತಿರುವಂತೆಯೇ ತಮಗೂ ಮಂಜೂ...ರು ಮಾಡಿಸಿ ಕೊಡಬೇಕೆಂದು ಮನವಿಮಾ...ಡಿಕೊಂಡರು. ಪ್ರಭುಗಳ ಸ್ವಂತಸೇವೆಯಲ್ಲಿ ...ನಿರತರಾಗಿರುವ ಈ ಬಡ ನೌಕರರ ಪ್ರಾರ್ಥನೆಯನ್ನು ಅಧಿಕಾರಿಗಳು ಸಾವಧಾ...ನದಿಂದ ಆಲಿಸಿ ಬೇಗನೆ ಸೂಕ್ತ ಪರಿಹಾರ...ವನ್ನು ಕೊಡಿಸಿಕೊಡುವುದಾಗಿ ಭರವಸೆಯಿತ್ತರೆಂದು ತಿಳಿದುಬಂದಿದೆ.

ಬಟ್ಟೆ ವರ್ತಕರ ಸಂಘ

ರಾಜಧಾನಿಯ ಬಟ್ಟೆ ವರ್ತಕರ ಸಂಘಕ್ಕೆ ಬರುವ ಸಾಲಿಗೆ ಜ॥ ಹಾಜಿ ಗುಲಾಂ ಮಹಮದ್ ಖಾನರು ಅಧ್ಯಕ್ಷರಾಗಿಯೂ, ಶ್ರೀ ಜಿ ಎ. ಸೂರ್ಯನಾರಾಯಣ ಶೆಟ್ಟರು ಉಪಾಧ್ಯಕ್ಷರಾಗಿಯೂ ಶ್ರೀಗಳಾದ ಕೆ. ಜಿ. ರಂಗಸ್ವಾಮಿ ಮತ್ತು ಬಿ. ಎಸ್. ರುದ್ರಪ್ಪನವರು ಜಂಟಿ ಕಾರ್ಯದರ್ಶಿಗಳಾಗಿಯೂ ಹಾಜಿ ಹಾಸಿಂ ಮಹಮದ್ ಸೇಟರು ಖಜಾಂಚಿಗಳಾಗಿಯೂ ಚುನಾಯಿಸಲ್ಪಟ್ಟಿರುವರು.

ಶ್ರೀ ಗಣೇಶಾ ಟಾಕೀಸ್
28-2-47 ರಿಂದ ಎರಡನೇ ವಾರ
ವರ್ಣರಂಜಿತ ತಮಿಳು ಚಿತ್ರ
"ಶ್ರೀವಳ್ಳಿ"

Morning Shows on 28th Feb, 1, 2, and 3 March at 10-30 a m
'North to the Klondike'
-:Starring:-
Brod Crawford, Andy Divine.

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ

ಮೈಸೂರು ೨೮

ವಿದ್ಯಾ ಮಂತ್ರಿಗಳಾದ ಡಾ॥ ರಾಯ..ರವರು ನಿನ್ನೆ ಆಯುರ್ವೇದ ಮತ್ತು ಯುನಾನಿ ಕಾಲೇಜಿಗೆ ಭೇಟಿ ಇತ್ತು, ವಿದ್ಯಾರ್ಥಿಗಳ ಕುಂದು ಕೊರತೆಗಳನ್ನು ವಿಚಾರಿಸಿ ತಿಳಿದುಕೊಂಡರು. ವಿದ್ಯಾರ್ಥಿಗಳು ಮುಷ್ಕರ ಮಾಡದೆ ತರಗತಿಗಳಿಗೆ ಹೋಗಬೇಕೆಂದು ಸೂಚಿಸಿದರು. ಮಧ್ಯಾಹ್ನದ ಮೇಲೆ ವಿದ್ಯಾರ್ಥಿಗಳು ಮುಖಂಡರು [illegible]ನ್ನು ಭೇಟಿ ಮಾಡಿದ್ದರೆಂದೂ ಆದರೆ ಇದರಿಂದ ಯಾವ ಪ್ರಯೋಜನವೂ ಆಗಲಿಲ್ಲವೆಂದೂ ಹೇಳಿ ಮತ್ತೆ ನಿನ್ನೆ ರಾತ್ರಿ ವಿದ್ಯಾ ಮಂತ್ರಿಗಳನ್ನು ಕಂಡಿದ್ದರು. ಸದ್ಯದಲ್ಲಿ ಯಾವ ಸೌಲಭ್ಯಗಳನ್ನು ಕಲ್ಪಿಸಬಹುದೋ ಅದನ್ನು ಪರಿಶೀಲಿಸಲಾಗುವುದೆಂದು ಮಂತ್ರಿಗಳು ತಿಳಿಸಿದರು. ಇದರಿಂದ ಸಮಾಧಾನವಾಗದೆ ವಿದ್ಯಾರ್ಥಿಗಳು ಇನ್ನೂ ಕಾಲೇಜಿಗೆ ಹೋಗಿಲ್ಲವೆಂದು ತಿಳಿದುಬಂದಿದೆ

ಪ್ರಜಾ ಸಮ್ಮೇಳನಕ್ಕೆ ಪ್ರತಿನಿಧಿಗಳು

ಗ್ವಾಲಿಯರ್ ಸಂಸ್ಥಾನದಲ್ಲಿ ನಡೆಯಲಿರುವ ಅಖಿಲ ಭಾರತ ದೇಶೀಯ ಸಂಸ್ಥಾನಗಳ ಪ್ರಜಾ ಸಮ್ಮೇಳನಕ್ಕೆ ಮೈಸೂರು ಜಿಲ್ಲೆಯಿಂದ ಶ್ರೀಗಳಾದ ಹೆಚ್. ಕೆ ಕುಮಾರಸ್ವಾಮಿ, ಪುಟ್ಟನಂಜಪ್ಪ, ಶಂಕರಪ್ಪ, ಎಂ. ಎಲ್. ನಂಜರಾಜೇ ಅರಸ್, ಸೂರ್ಯನಾರಾಯಣ ಪಂಡಿತ್, ಎಂ ಎ ಜೋಯಿಸ್, ಟಿ ಮರಿಯಪ್ಪ, ಎ ಶಿವಣ್ಣ ಮತ್ತು ಹಿರಿಹಳ್ಳಿ ದಾಸಪ್ಪನವರು ಪ್ರತಿನಿಧಿಗಳಾಗಿ ಚುನಾಯಿತರಾಗಿರುತ್ತಾರೆ

ನಗರದಿಂದ ಶ್ರೀಮತಿ ಎಂ ಆರ್ ಲಕ್ಷ್ಮಮ್ಮನವರೂ, ಶ್ರೀ ಎಸ್ ಚನ್ನಯ್ಯನವರೂ ಚುನಾಯಿಸಲ್ಪಟ್ಟಿದ್ದಾರೆ.

ಮುಷ್ಕರ ಮುಕ್ತಾಯ

ಮೈಸೂರು ನಗರದ ಕಡಲೆಪುರಿ ಮಾರುವವರು ಕಳೆದ ೨೫ ನೇ ತಾ॥ ನಿಂದ ತಮ್ಮ ಕೂಲಿದರವನ್ನು ಹೆಚ್ಚಿಸಬೇಕೆಂಬ ಕಾರಣದ ಮೇಲೆ ಮುಷ್ಕರ ಹೂಡಿದ್ದರಷ್ಟೆ. ನಗರದ ೧೧ ಕಡಲೆ ಪುರಿ ಅಂಗಡಿ ಮಾಲೀಕರ ಪೈಕಿ ೯ ಅಂಗಡಿಯವರು ಕೂಲಿಗಾರರ ಹಿತಚಿಂತನೆಯಿಂದ ಕೂಲಿದರವನ್ನು ಹೆಚ್ಚಿಸಿರುವುದಾಗಿಯೂ, ಕಡಲೆ ಪುರಿ ಹುರಿಯುವ ಕೂಲಿಗಾರರು ನೆನ್ನೆಯಿಂದ ಮುಷ್ಕರವನ್ನು ನಿಲ್ಲಿಸಿ ಕೆಲಸಕ್ಕೆ ಹಿಂದಿರುಗಿರುವುದಾಗಿಯೂ ಗೊತ್ತಾಗಿದೆ ಇನ್ನೆರಡು ಅಂಗಡಿ ಮಾಲೀಕರು ಕೂಲಿಯನ್ನು ಹೆಚ್ಚಿಸದೆ ಇನ್ನೂ ಹಟಮಾರಿಗಳಾಗಿರುವರೆಂದು ಗೊತ್ತಾಗಿದೆ.

ರೇಷನ್ ಡಿಪೋಗಳಲ್ಲಿ ತೊಗರಿ ಬೇಳೆ ಸರಬರಾಜು

ಪೌರಸಭೆಯಲ್ಲಿ ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯ

ಮೈಸೂರು ೨೮

ಪುರಸಭಾಧಿವೇಶನವು ನಿನ್ನೆ ಶ್ರೀ ರಾಮಚಂದ್ರರಾವ್ ಬೋಂಘೋರೆಯವರ ಅಧ್ಯಕ್ಷತೆಯಲ್ಲಿ ಜರುಗಿತು

ನಗರದ ರೇಷನ್ ಡಿಪೋಗಳಲ್ಲಿ ೧ ಸೇರು ಅಕ್ಕಿಗೆ ಅರ್ಧ ಪಾವಿನಂತೆ ತೊಗರಿಬೇಳೆ ಸರಬರಾಜು ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಿ ಶ್ರೀ ಚೌಡಯ್ಯನವರು ಮಂಡಿಸಿದ ನಿರ್ಣಯವೂ, ನಾನಾ ಮೊಹಲ್ಲಾಗಳಲ್ಲಿ ಅತ್ಯವಶ್ಯಕವಾಗಿ ಬೇಕಾಗಿರುವ ಸಾರ್ವತ್ರಿಕ ಕಕ್ಕಸು ಮತ್ತು ಸ್ನಾನ ಗೃಹಗಳ ಪಟ್ಟಿಯೊಂದನ್ನು ತಯಾರಿಸಿ ಮುಂದಿನ ಬಡ್ಜೆಟ್ ಅಧಿವೇಶನದಲ್ಲಿ ಮಂಡಿಸಬೇಕೆಂಬ ಶ್ರೀ ಎಸ್. ಲಿಂಗಣ್ಣನವರ ನಿರ್ಣಯವೂ ಅಂಗೀಕೃತವಾದುವು

ಚಾಮರಾಜ ರಸ್ತೆಯ ಉತ್ತರ ಪಾರ್ಶ್ವದಲ್ಲಿ, ಸುಬ್ಬರಾಯನಕೆರೆಯಿಂದ ಬರುವ ದೊಡ್ಡ ಚರಂಡಿಗೆ ಚಪ್ಪಡಿ ಹಾಕಿಸಿ ವ್ಯವಸ್ಥೆಗೊಳಿಸಬೇಕೆಂದು ನಗರಾಭಿವೃದ್ಧಿ ಸಮಿತಿಯನ್ನು ಪ್ರಾರ್ಥಿಸಬೇಕೆಂಬ ಡಾ॥ ಸೂರ್ಯನಾರಾಯಣರಾಯರ ನಿರ್ಣಯವೂ ಅವಿರೋಧವಾಗಿ ಒಪ್ಪಲ್ಪಟ್ಟಿತು.

ಕೆಂಗೇರಿಯಲ್ಲಿ ನಡೆಯುತ್ತಿರುವ ಮೂಲಶಿಕ್ಷಣ ಕೇಂದ್ರಕ್ಕೆ ೬೦೦ ರೂ. ಗಳ ಸಹಾಯ ಕೊಡಬಹುದೆಂಬ ಸೂಚನೆಯೂ ಅಂಗೀಕೃತವಾಯಿತು. ಶ್ರೀ ಎ. ವೆಂಕಟೇಶಯ್ಯನವರು ಮಾತ್ರ ಇದನ್ನು ವಿರೋಧಿಸಿದರು.

ಡಿ. ಸುಬ್ಬಯ್ಯನವರ ರಸ್ತೆಯಲ್ಲಿನ ವನರ್ಸರಿ ಶಾಲೆಗೆ ಈಗ ಕೊಡುತ್ತಿರುವ ೬೦೦ ರೂ ಗಳ ಗ್ರಾಂಟನ್ನು ೨೦೦ ಕ್ಕೆ ಇಳಿಸುವ ಬಗ್ಗೆ ನೋಟೀಸನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು

ನಗರದಲ್ಲಿ ಪ್ಲೇಗಿನ ಬಗ್ಗೆ ಎಚ್ಚರ ವಹಿಸಬೇಕಾದುದನ್ನು ಹಲವು ಸದಸ್ಯರು ಸಭೆಯಲ್ಲಿ ವಿಶದಿಸಿದರು. ಸದ್ಯದಲ್ಲೇ ಎಲ್ಲವನ್ನೂ ಪರಿಶೀಲಿಸುವುದಾಗಿ ಅಧ್ಯಕ್ಷರು ಭರವಸೆಯಿತ್ತರು.

ಸಾಂಡೂರು ಮಹಾರಾಜರು

ಸಾಂಡೂರ ಸಂಸ್ಥಾನದ ಮಹಾರಾಜರು ನಿನ್ನೆ ರಾಜಧಾನಿಗೆ ಆಗಮಿಸಿ ವಸಂತಮಹಲಿನಲ್ಲಿ ರಾಜಅತಿಥಿಗಳಾಗಿ ಬಿಡಾರಮಾಡಿದ್ದರು ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಇತ್ತಿದ್ದರು ಇಂದಿನ ಅವರು ವಾಪಸು ತಮ್ಮ ಸಂಸ್ಥಾನಕ್ಕೆ ಹಿಂತಿರುಗಿದರು

ಕ್ಯಾ॥ ಲಕ್ಷ್ಮಿ-ಸೈಗಾಲ್‌ರವರ ವಿವಾಹ

ಆಜಾದ್ ಹಿಂದ್ ದಳದ ಝಾನ್ಸಿ ರಾಣಿ ರೆಜಿಮೆಂಟಿನ ಮುಖ್ಯಾಧಿಕಾರಿಯಾಗಿದ್ದ ಕ್ಯಾಪ್ಟನ್ ಲಕ್ಷ್ಮಿಯವರು ಆಜಾದ್ ದಳದ ಕ್ಯಾ॥ ಪ್ರೇಮಕುಮಾರ ಸೈಗಾಲ್‌ರವರನ್ನು ಮಾರ್ಚಿ ೮ ನೇ ತಾ॥ ಲಾಹೋರಿನಲ್ಲಿ ವಿವಾಹವಾಗಲಿದ್ದಾರೆ

ಗಡಿನಾಡಿನಲ್ಲೂ ಸಂಧಾನ

ಕೇಂದ್ರಸರ್ಕಾರದ ಲೀಗ್ ಮಂತ್ರಿಗಳಾದ ಮಿ॥ ಅಬ್ದುಲ್ ರಬ್ ನಿಸ್ತಾರ್‌ರವರು ಗಡಿನಾಡಿನ ಗವರ್ನರ್ ಮತ್ತು ಪ್ರಧಾನಿ ಡಾ॥ ಖಾನ್ ಸಾಹೇಬರವರ ಕೂಡ ಅಲ್ಲಿನ ಮುಸ್ಲಿಂ ಲೀಗಿನವರು ಹೂಡಿರುವ ಚಳುವಳಿಯ ಸಂಬಂಧದಲ್ಲಿ ಸಂಧಾನದ ಮಾತುಕತೆಗಳನ್ನು ಆರಂಭಿಸಿದ್ದಾರೆ

ಮದುವೆ ಮನೆಗಳಲ್ಲಿ ೧೦೦ ಜನಕ್ಕೆ ರೇಷನ್

ಮದುವೆ ಮನೆಗಳಲ್ಲಿ ೫೦ ಜನಗಳಿಗಿಂತ ಹೆಚ್ಚು ಮಂದಿಗೆ ಭೋಜನ ಕೂಟವನ್ನು ಏರ್ಪಡಿಸಕೂಡದೆಂದು ಇದ್ದ ನಿಯಮವನ್ನು ಮದ್ರಾಸ್ ಸರ್ಕಾರದವರು ೧೦೦ ಮಂದಿಗೆ ವರೆಗೆ ಏರ್ಪಡಿಸಿದ್ದಾರೆ ಗುಂಟೂರು, ನೆಲ್ಲೂರು, ಚಿತ್ತೂರು, ತಿರುಚನಾಪಳ್ಳಿ ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಗಳಲ್ಲಿ ತಲೆ ಒಕ್ಕೆ ೧೩ ಔನ್ಸ್ ಅಕ್ಕಿ ರೇಷನ್ ಕೊಡುವಂತೆ ಆಜ್ಞೆಯಾಗಿದೆ

ಸಕ್ಕರೆ ಗಿರಣಿ ಕೆಲಸಗಾರರ ಮುಷ್ಕರ

ಮಂಡ್ಯ ೨೭

ಕೆಲಸಗಾರರಿಗೂ, ಗಿರಣಿ ಆಡಳಿತಗಾರರಿಗೂ ಉಂಟಾಗಿರುವ ಭಿನ್ನಾಭಿಪ್ರಾಯವನ್ನು ಪರಿಶೀಲಿಸಲು ಪಂಚಾಯಿತಿಯೊಂದನ್ನು ನೇಮಿಸಬೇಕೆಂದು ಸಲ್ಲಿಸಿದ್ದ ಬೇಡಿಕೆಯು ಇನ್ನೂ ನೆರವೇರದಿದ್ದುದರಿಂದ ನಾಳೆ ಸಂಜೆಯೊಳಗಾಗಿ ಅದು ಫಲಿಸದಿದ್ದರೆ ಮಾರ್ಚಿ ೩ ರಿಂದ ಮುಷ್ಕರ ಹೂಡಬೇಕೆಂದು ಮೈಸೂರು ಸಕ್ಕರೆ ಕಂಪೆನಿಯ ಕೆಲಸಗಾರರ ಸಂಘದವರು ತೀರ್ಮಾನಿಸಿದ್ದಾರೆ

ಭಾರತದಲ್ಲಿ ದಸ್ಯುಕ್ಕೆ ವಿರುದ್ಧವಾಗಿ ಬ್ರಿಟಿಷ್ ಯೋಜನೆ

೬ ಲಾಂಗ್ ರೇಂಜ್ ಬಾಂಬರ್ ದಳಗಳನ್ನೊಳಗೊಂಡ ೧೮ ವಿಮಾನದಳಗಳನ್ನು ಭಾರತದ ಆಯಕಟ್ಟು ಸ್ಥಳಗಳಲ್ಲಿ ಇಡುವ ಕಾರ್ಯವು ೧೯೫೦ ಜುಲೈ ತಿಂಗಳೊಳಗೆ ಪೂರೈಸಬೇಕೆಂದು ಬ್ರಿಟಿಷ್ ವಿಮಾನ ಮಂತ್ರಿಮಂಡಲವು ಆಜ್ಞೆ ಇತ್ತಿದ್ದಿತೆಂದು ಶ್ರೀ ಆರ್ ಪಾಮಿದತ್ತರು ಮೊನ್ನೆ ಲಂಡನ್ನಿನಲ್ಲಿ ನಡೆದ ಕಮ್ಯೂನಿಸ್ಟ್ ಸಮ್ಮೇಳನದಲ್ಲಿ ಬಹಿರಂಗಪಡಿಸಿದ್ದಾರೆ.

೧೯೪೭ ರ ವೇಳೆಗೆ ೧೧ ವಿಶೇಷ ದಳಗಳನ್ನು ರಚನೆ ಮಾಡಬೇಕೆಂದೂ ಕಟ್ಟಪ್ಪಣೆಯಾಗಿದ್ದಿತೆಂದು ಅವರು ತಿಳಿಸಿದ್ದಾರೆ. ಇವು [illegible] ಬ್ರಿಟಿಷರ [illegible] ವಿರುದ್ಧವಾಗಿ ಸೇನೆಯನ್ನು [illegible] ಕಾರ್ಯವೆಂದು ಅವರು ಹೇಳಿದ್ದಾರೆ

ಡೈರೆಕ್ಟರ ಹುದ್ದೆ ರಚನೆ

ಸ್ವಂ ಸು ಪ್ರೋ] ಬೆಂಗಳೂರು ೨೮

ಟೆಕ್ಸ್ಟೈಲ್ ಡೈರೆಕ್ಟರ ಹುದ್ದೆಯನ್ನು ರದ್ದುಮಾಡಿ ಆ ಕೆಲಸವನ್ನು ಕೈಗಾರಿಕಾ ಇಲಾಖೆಯ ಡೈರೆಕ್ಟರಿಗೆ ಸೇರಿಸಲಾಗಿದೆ. ಇಬ್ಬರು ಅಸಿಸ್ಟೆಂಟ್ ಡೈರೆಕ್ಟರುಗಳನ್ನು ಹೊಸದಾಗಿ ನೇಮಕ ಮಾಡಲಾಗಿದೆ

ಸ್ಥಾ ಧ್ವಿ

ತಾ|| ೨೮-೨-೪೭ ಶುಕ್ರವಾರ

ರಾಜ್ಯಾಂಗ ಸಭೆಯ ಸುರಿಗೆ ಭಾರತ ಕಾರ್ಯದರ್ಶಿಗಳ ಮನ್ನಣೆ

ಭಾರತ ರಾಜ್ಯಾಂಗ ರಚನಾ ಸಮಿತಿಯ ಸಭೆಯವರು ಸ್ವತಂತ್ರ ಪ್ರಜಾ ಸರ್ಕಾರವೇ ಭಾರತೀಯರ ಗುರಿಯೆಂದು ಘೋಷಿಸಿ ಮಾಡಿರುವ ನಿರ್ಣಯಕ್ಕೆ ಇಂಡಿಯಾ ಸೆಕ್ರೆಟರಿಯವರಾದ ಲಾರ್ಡ್ ಪೆಥಿಕ್ ಲಾರೆನ್ಸರು ತಮ್ಮ ಮೆಚ್ಚಿಗೆಯನ್ನು ಸೂಚಿಸಿರುವರು. ಈ ನಿರ್ಣಯವು ಅಲ್ಪ ಸಂಖ್ಯಾತರ ದಿವ್ಯ ಚ್ಯೋತಿಯಂತಿರುವುದೆಂದು ಹೇಳಿರುವರು. ಮತ್ತು ಪಂಡಿತ ನೆಹರೂರವರು ಮಾಡುತ್ತಿರುವ ಭಾಷಣಗಳು ಉತ್ತೇಜನಕರವಾಗಿರುವುವೆಂದೂ ಸಹ ತಿಳಿಸಿರುವರು.

ಇಂಡಿಯಾ ಸೆಕ್ರೆಟರಿಯವರಿಗೆ ಈ ವಿಷಯದಲ್ಲಿ ಇರುವ ವಿಶಾಲ ದೃಷ್ಟಿಯು ನಮ್ಮ ದೇಶದಲ್ಲಿಯೇ ಇರುವ ಹಲವು ಪಕ್ಷಗಳಿಗೂ ಗುಂಪುಗಳಿಗೂ ಬರಬಾರದೆ? ಮುಸ್ಲಿಂ ಲೀಗಿನವರು ರಾಜ್ಯಾಂಗ ಸಭೆಯಲ್ಲಿ ಇನ್ನೂ ಪ್ರವೇಶಿಸಿಯೇ ಇರುವುದಿಲ್ಲವಾದ್ದರಿಂದ ರಾಜ್ಯಾಂಗ ಸಭೆಯ ಗುರಿಯ ಬಗ್ಗೆ ಅವರ ಪ್ರತಿಕ್ರಿಯೆಯ ಪ್ರಶ್ನೆಯೂ ಸದ್ಯಕ್ಕೆ ಏಳುವುದಿಲ್ಲ. ಆದರೆ ಆ ಸಭೆಯೊಡನೆ ಸಂಪರ್ಕ ವನ್ನಿಟ್ಟುಕೊಂಡು ತಮ್ಮ ಭಾರತದ ರಚನೆಗೆ ಸಹಕರಿಸುವುದಾಗಿ ಹೇಳುತ್ತಿರುವ ಸಂಸ್ಥಾನಗಳ ಮಂಡಲದ ಹಲವು ಪ್ರತಿನಿಧಿಗಳಿಗೆ ಮಾತ್ರ ಈ ಗುರಿಯು ಇನ್ನೂ ಮಾನ್ಯವಾಗದಿರುವುದು ವಿಷಾದಕರವಾಗಿದೆ.

ಪ್ರಜೆಗಳ ಸಾರ್ವಭೌಮಾಧಿಕಾರವನ್ನು ಪಡೆದ ಸರ್ವ ತಂತ್ರ ಸ್ವತಂತ್ರ ಪ್ರಜಾ ರಾಜ್ಯದ ಸ್ಥಾಪನೆಯೇ ಇಂದು ಭಾರತೀಯರೆಲ್ಲರ ಗುರಿಯಾಗಿರುವುದು. ಇಂತಹ ಉತ್ತಮವಾದ ಧ್ಯೇಯವು ಮುಂದುವರೆದ ಸಕಲ ಜನಾಂಗಗಳಿಗೂ ಮಾನ್ಯವಾದುದೇ ಸರಿ. ಹೊಸ ರಾಜ್ಯಾಂಗದಲ್ಲಿ ರಾಜರುಗಳಿಗೂ ಸಹ ಉಚಿತವಾದ ಸ್ಥಾನ, ಮಾನಗಳನ್ನು ಕಲ್ಪಿಸಲಾಗುವುದೆಂದು ಖಚಿತವಾಗಿ ತಿಳಿಸಲಾಗಿದೆ. ಪ್ರಜೆಗಳೇ ರಾಜ್ಯದ ಮೂಲಾಧಿಕಾರಿಗಳೆಂಬ ತತ್ವದ ಮೇಲೆ ಶಾಸನಬದ್ಧರಾದ ರಾಜರುಗಳನ್ನೂ ಒಳಗೊಂಡ ಅಖಂಡ ಭಾರತದ ಸ್ವತಂತ್ರ ರಾಜ್ಯಾಂಗ ರಚನೆಯು ವಿಶ್ವದಲ್ಲಿ ಒಂದು ನೂತನ ರಾಜಕೀಯ ಪ್ರಯೋಗವಾಗಿ ಪರಿಣಮಿಸುವುದೇನೋ ನಿಜ; ಭಾರತೀಯರ ರಾಜನೀತಿ ನೈಪುಣ್ಯವು ಇಂತಹ ಸರ್ವ ಸಮನ್ವಯಕರವಾದ ಹೊಸ ರಾಜ್ಯ ಪದ್ಧತಿಯನ್ನು ಜಾರಿಗೆ ತಂದು ಜಗತ್ತಿಗೆ ಒಂದು ಮಾದರಿಯನ್ನು ಕಲ್ಪಿಸಬೇಕಾಗಿದೆ.

ರಾಜತ್ವಕ್ಕೂ, ಪ್ರಜಾ ಪ್ರಭುತ್ವಕ್ಕೂ ಪರಸ್ಪರ ವಿರೋಧವಿಲ್ಲವೆಂಬ ಅಂಶವು ಈಗಾಗಲೇ ಅನೇಕ ಸಾಂಕೇತಿಕ ಪ್ರಭುತ್ವವಿರುವ ರಾಷ್ಟ್ರಗಳಲ್ಲಿ ಪ್ರತ್ಯಕ್ಷಾನುಭವಕ್ಕೆ ಬಂದಿರುತ್ತದೆ. ಆ ಪದ್ಧತಿಯನ್ನೇ ಇನ್ನೂ ವಿಸ್ತರಿಸಿ ಭರತಖಂಡದಲ್ಲಿ ಸಂಸ್ಥಾನಗಳ ಮತ್ತು ಸ್ವತಂತ್ರ ಪ್ರಾಂತ್ಯಗಳ ಸಮ್ಮಿಳನವು ಒಂದು ಸಾರ್ವಭೌಮಾಧಿಕಾರವುಳ್ಳ ಕೇಂದ್ರಾಡಳಿತದ ನೆರವಿನಲ್ಲಿ ಆಗಬೇಕಾಗಿದೆ.

ಈಗಾಗಲೇ ಅನೇಕ ರಾಜ, ಮಹಾರಾಜರುಗಳು ಮುಂದುವರೆದು ಕಾಲದೇಶಗಳಿಗನುಗುಣವಾಗಿ ಈ ತತ್ವವನ್ನು ಜಾರಿಗೆ ತರಲು ಉದ್ಯುಕ್ತರಾಗಿರುವುದು ಸಂತೋಷದ ಸಂಗತಿ. ಉಳಿದವರೂ ಸಹ ಅವರಂತೆಯೇ ಮುಂದೆ ಬಂದು ನಲವತ್ತು ಕೋಟಿ ಭಾರತೀಯರಿಗೂ ಸಮಾನ ಮಾತೃಭೂಮಿಯಾದ ಭರತಖಂಡದ ಸ್ವಾತಂತ್ರ್ಯ ಸಾಧನೆಗೆ ನೆರವಾಗಬೇಕಾದುದು ಅವರ ಪರಮ ಕರ್ತವ್ಯ. ಇಂಡಿಯಾ ಸೆಕ್ರೆಟರಿಗಳ ಮೆಚ್ಚಿಗೆಗೆ ಪಾತ್ರವಾಗಿರುವ ಭಾರತ ರಾಜ್ಯಾಂಗ ಸಭೆಯ ಧ್ಯೇಯಕ್ಕೆ ನಮ್ಮ ರಾಜ, ಮಹಾರಾಜರುಗಳೂ, ಅವರ ಪ್ರತಿನಿಧಿಗಳೂ, ಇತರ ಅಲ್ಪ ಸಂಖ್ಯಾತರುಗಳೂ ಬೆಂಬಲ ಕೊಡಲಾರರೇ?

Edited, printed and published by A. R. Nagarajan at the Sadhvi Press D. Subbiah Road, Mysore

ಶ್ರೀ ದೇವರಕೋಟೆಯ ಮಹಿಳೆಯರ ವಿದ್ಯೆಯ ಆಸ್ಪತ್ರೆಯಲ್ಲಿದ್ದ ಚಕ್ರವರ್ತಿ ಭಾರತದ ಪ್ರತಿಮೆಯು ತಳಿಯಾರೋ ತೆಗೆದು ಹಾಕಿ ಬಿಟ್ಟಿದ್ದು ತಿಳಿದು ಬಂದಿದೆ.

ಮುಂದೆ ಬ... ಶ್ರೀರಂಗಪಟ್ಟಣ ಸಭೆಯ ... ಯ ಓಟರು ... ಕೆ. ರಾಮ...

ಉಂಬ್ರ್ ಅಂಬಾಜಿರಾವ್ ಸ್ವಾ... ತಾ|| ೧೦-೩-೪೭ನೇ ದಿವಸ ನಡೆ... ಚುನಾವಣೆಗೆ ನಾನೂ ಒ... ಉಮೇದುವಾರನಾಗಿ ನಿಂತಿರುವ... ಗಣಪತಿ ಗುರ್ತಿಗೆ ಓಟು ... ಪ್ರೋತ್ಸಾಹಿಸಬೇಕಾಗಿ ಪ್ರಾರ್ಥ... ಕೆ ರಾಮಯ್ಯ ಉ|| ಅಂಬಾಜಿ... (ಚುನಾವಣಾ ಓಟರು ಲಿಸ್ಟಿನಲ್ಲಿ ರಾಮಯ್ಯ ಎಂಬುದಾಗಿದ್ದು ... ಕವಾಗಿ ಅಂಬಾಜಿರಾವ್ ಎಂದು ... ಸ್ಟರುತ್ತೆ. ಕೆ. ರಾಮಯ್ಯ ಎಂದು ... ಮಾರ್ಕರುವುದನ್ನೇ ಅಂಬಾಜಿರಾವ್ ಭಾವನೆಮಾಡಿಕೊಂಡು ಓಟನ್ನು ...

WANTED

One Manager, One Accountant and one Typist Only

Experianced men need apply. Salary according to qualification. For particulars, apply to the Managing Director, The Premier Chemical Industries Ltd., 368-1, New Sayajirow Road, Mysore.

CANARA BANK LIMITED,

(Estd. 1906)

(Incorporated in British India with limited liability)

ANNOUNCEMENT

The Office of the Bank has been shifted from 1530, Shivarampet to: 1748, Sayyaji Rao Road Mys... (Upstairs of MYSORE HALL)

All kinds of banking business transacted.

Head Office: LIGHT HOUSE HILL, MANGALO...

OFFICES AT:– Akola, Alleppey, Amraoti, Arsik... Bel-gaum, Bangalore, Bombay-Fort, Bombay-Man... Bombay-Girgaum, Bombay-Kalbadevi, Kalyan, Bant... Calicut, Cannanore, Chikamagalur, Cochin, Coondap... Coimbatore, Davangere, Dharwar, Erode, Ernakul... Ganguli, Hubli, Karachi, Karkala, Kasaragod, Mangal... City, Mangalore-Bunder, Madras, Moolky, Mysoro, Na...pur, Payyanur, Poona, Puttur, Quilon, Salem, Secund...bad, Shimoga, Sholapur, Tuticorin, Trichinopoly, Udipi.

U. HARI SHENOY, B. ...
Agent.

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ

೨೪-೨-೪೭ ರಿಂದ ಎರಡನೇ ವಾರ; ಪ್ರತಿ ದಿನ ೩ ಆಟಗಳು

ಶ್ರೀ ಕೃಷ್ಣಲೀಲಾ

(ಕನ್ನಡ ಭಾಷೆಯಲ್ಲಿ)

ಮ್ಯಾಟಿನಿ ಮಧ್ಯಾಹ್ನ 3, 1ನೇ ಆಟ ಸಂಜೆ 6-15, 2ನೇ ಆಟ ರಾತ್ರಿ 9-30

ಬಾಲ ಕ್ರೀಡೆ, ರಾಸಲೀಲಾ, ಕಾಳಿಂಗ ಮರ್ದನ, ಮುಂತಾದುವುಗಳಿಂದ ಒಡಗೂಡಿ ನಿಮ್ಮ ಮನಸ್ಸನ್ನು ಸೆಳೆಯುವ ಈ ಚಲನ ಚಿತ್ರವನ್ನು ಇಂದೇ ನೋಡಲು ಮರೆಯದಿರಿ.

From 28-2-47 for 4 days daily at 10-30 a. m.

'Flame of Barbary Coast'

Starring:- John Wayne, Ann Doorak, Joseph Schildkrant and others.

The Lusty Saga of a Devil-may-care adventurer who rose to power and glory on a woman's faith and his own hot-headed Courage.

ಮೈಸೂರು ಸ್ಟೇಟ್ ರೈಲ್ವೆ

ನೋಟೀಸು

1947 ನೇ ಮಾರ್ಚಿ 1 ನೇ ತಾರೀಖು ಮತ್ತು ಅಲ್ಲಿಂದ ಮುಂದೆ, ಎಲ್ಲಾ ... ಗಳ ರೈಲ್ವೆ ಪ್ರಯಾಣಿಕರ ಟಿಕೆಟ್ಟುಗಳ ಮತ್ತು ಸೀಸನ್ ಟಿಕೆಟ್ಟುಗಳ ದರವನ್ನು ಇರುವ ದರದ ಮೇಲೆ ರೂಪಾಯಿಗೆ ಒಂದಾಣೆಯಂತೆ ಹೆಚ್ಚಿಸಲಾಗುವುದು ... ರೈಲ್ವೆ ಪ್ರಯಾಣದ ಟಿಕೆಟ್ಟಿನ ದರವನ್ನೂ ಸಹ ಹೆಚ್ಚಿಸಲಾಗುವುದು.

ಆದರೆ ಎಂಟಾಣೆಗಿಂತಲೂ ಕಡಿಮೆ ಬೆಲೆಯ ಟಿಕೆಟ್ಟುಗಳ ದರವನ್ನು ಹೆಚ್ಚಿಸುವುದಿಲ್ಲ.

ಟ್ರಾಫಿಕ್ ಮ್ಯಾನೇಜರ ಕಛೇರಿ, ಮೈಸೂರು, ತಾ|| 22-2-1947.

ಮೀರ್ ಇನಾಯತ್ ಹುಸೇ...
ಟ್ರಾಫಿಕ್ ಮ್ಯಾನೇಜರ್

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ತಮ್ಮ ಅಂಗಡಿಗೆ ಬಂದು ಪರೀಕ್ಷಿಸಿ !!

ಬಿ. ಕೆಂಚಪ್ಪ ಸನ್ಸ್

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

ಪುಟ. ಸಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧—೩—೪೭ [ಸಂಚಿಕೆ ೧೭೩

ಹಾಲ್ಮಹೇರಾ ದ್ವೀಪದಲ್ಲಿ ಡಚ್ಚರ ವಿರುದ್ಧ ದಂಗೆ

ಪ್ರಕಾಶಂರವರ ಮೇಲೆ ಅವಿಶ್ವಾಸದ ಅಂಗೀಕಾರ

...ಮದ್ರಾಸ್ ಪ್ರಧಾನಿಗಳಾದ ಶ್ರೀ ಟಿ. ಪ್ರಕಾಶಂರವರ ಮೇಲೆ ತರಲಾಗಿದ್ದ ಅವಿಶ್ವಾಸ ನಿರ್ಣಯವನ್ನು ನಿನ್ನೆ ನಡೆದ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ತೆಗೆದುಕೊಳ್ಳಲಾಯಿತು. ಇಂತಹ ನಿರ್ಣಯಗಳನ್ನು ತೆಗೆದುಕೊಳ್ಳಲು ಕಾನೂನಿನಲ್ಲಿ ಅವಕಾಶವಿಲ್ಲವೆಂದು ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ಪ್ರಕಾಶಂರವರು ಅದನ್ನು ತಳ್ಳಿಹಾಕಿ ಸಭೆಯನ್ನು ಮುಕ್ತಾಯಗೊಳಿಸಿದರು. ನಂತರ ಸಭಾಂಗಣದಲ್ಲಿ ಅವಿಶ್ವಾಸ ನಿರ್ಣಯದ ಪರ ಸದಸ್ಯರು ಸಭೆಸೇರಿ, ಶ್ರೀ ಪ್ರಕಾಶಂರವರಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಿ ಶ್ರೀ ಓಮಂದೂರು ರಾಮಸ್ವಾಮಿರೆಡ್ಡಿಯಾರ್ ರವರನ್ನು ನಾಯಕರನ್ನಾಗಿ ಆರಿಸಿಕೊಂಡರು. ಈ ಸಭೆಯಲ್ಲಿ ಅ|| ಭಾ|| ಕಾಂ|| ಜನರಲ್ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ್ ದೇವ್ ಮತ್ತು ಪ್ರಕಾಶಂರವರು ಪ್ರೇಕ್ಷಕರಾಗಿ ಹಾಜರಿದ್ದರು. ಪ್ರಕಾಶಂರವರು ತಮ್ಮ ನಿನ್ನೆ ರಾಜೀನಾಮೆ ಕೊಡುವರೆಂದು ಹೇಳಲಾಗಿದೆ. ಹೊಸ ಮುಖ್ಯಮಂತ್ರಿಯು ನೇಮಕವಾಗುವವರೆಗೆ ಶ್ರೀ ಪ್ರಕಾಶಂರವರೇ ಪ್ರಧಾನಿಗಳಾಗಿರುವರೆಂದು ಗೊತ್ತಾಗಿದೆ.

ಸೀಮೆ ಎಣ್ಣೆ ಅಭಾವ

(ಸ್ವಂ. ವ.) ಶ್ರೀರಂಗಪಟ್ಟಣ ೨೭ ಇಲ್ಲಿ ೨-೩ ತಿಂಗಳಿಂದಲೂ ಸರಿಯಾಗಿ ಸೀಮೆ ಎಣ್ಣೆ ದೊರೆಯುತ್ತಿಲ್ಲ. ಈ ಊರಿಗೆ ಬರುವ ಎಣ್ಣೆ ವಿಲೇವಾರಿ ಯಾವ ರೀತಿ ಆಗುತ್ತಿದೆಯೋ ತಿಳಿಯದು. ಸರ್ವರಿಗೂ ಎಣ್ಣೆ ದೊರೆಯುವಂತೆ ಅಧಿಕಾರಿಗಳು ಏರ್ಪಾಡು ಮಾಡಬೇಕಾಗಿದೆ.

ಕಳ್ಳರ ಹಾವಳಿ

ಈ ಊರಿನಲ್ಲಿ ಕಳ್ಳರ ಹಾವಳಿ ಹೆಚ್ಚಿದೆ. ಮೊನ್ನೆ ದಿನ ಶ್ರೀ ಜ್ಯೋತಿರ್ಮಹೇಶ್ವರ ಮತ್ತು ಪೇಟೆ ಮಾರಮ್ಮನ ದೇವಸ್ಥಾನದಲ್ಲಿ ಒಡವೆಗಳು ಕಳುವಾಗಿವೆ. ದೇವರ ಒಡವೆಗಳನ್ನೆಲ್ಲಾ ಗಂಟು ಕಟ್ಟಿ ಅಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ಇನ್ನೂ ಅನೇಕ ಕಡೆ ಇವರ ಹಾವಳಿ ಹೆಚ್ಚಿದೆ. ಅಧಿಕಾರಿಗಳು ಕೂಡಲೇ ಗಮನ ಕೊಡಬೇಕಾಗಿದೆ.

ಮಂತ್ರಿಗಳಲ್ಲಿ ಭೇಟಿ

ಮೈಸೂರು ಸರ್ಕಾರಿ ರೇಷ್ಮೆ ನೇಯ್ಗೆ ಕಾರ್ಖಾನೆಯ ಕಾರ್ಮಿಕ ಸಂಘದ ಅಧ್ಯಕ್ಷರಾದ ಶ್ರೀ ಕೆ. ಆರ್. ಪ್ರಸಾದ್ ಮತ್ತು ಕಾ|| ಕಾ|| ಸಮಿತಿ ಸದಸ್ಯರಾದ ಶ್ರೀ ನರಸಿಂಹಯ್ಯನವರು ಈದಿನ ಇನ್-ಛಾರ್ಜ್ ದಿವಾನರಾದ ಡಾ|| ರಾಯರವರನ್ನು ಭೇಟಿಮಾಡಿ ತಮ್ಮ ಕಾರ್ಖಾನೆಯ ಕಾರ್ಮಿಕರಿಗೆ ಇದುವರೆವಿಗೆ ಯಾವ ಪರಿಹಾರವನ್ನೂ ಸಲ್ಲಿಸಿಲ್ಲವೆಂದೂ, ಈಗ ನೂರು ರೂ. ಗಳಿಗೆ ಕಡಿಮೆ ಇಲ್ಲದಂತೆ ತಾತ್ಕಾಲಿಕ ಪರಿಹಾರವನ್ನು ಕೊಡಿಸಬೇಕೆಂದೂ ಪ್ರಾರ್ಥಿಸಿದರು. ಮಂತ್ರಿಗಳು ಸಾವಧಾನದಿಂದ ಪರಿಶೀಲಿಸುವುದಾಗಿ ಭರವಸೆ ಇತ್ತರು.

ಹರಿಕಥೆ

ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ದೇವಾಲಯದಲ್ಲಿ ಕೀರ್ತನಕಾರ ಮಂಡಳಿಯ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ನಂಜನಗೂಡಿನ ಕೀರ್ತನ ವಿದ್ವಾನ್ ಗಂಗಾಚಾರ್‌ರವರಿಂದ ಭೀಷ್ಮಪ್ರತಿಜ್ಞೆ ಎಂಬ ಹರಿಕಥೆ ನಡೆಯುವುದು. ಸಂಘದ ಸಾಮಾನ್ಯ ಸಭೆಯನ್ನು ೯-೩-೪೭ ನೇ ಭಾನುವಾರ ಬೆಳಗ್ಗೆ ೯ ಗಂಟೆಗೆ ಅದೇ ಸ್ಥಳದಲ್ಲಿ ಕರೆಯಲಾಗಿದೆ. ಸದಸ್ಯರೆಲ್ಲರೂ ತಪ್ಪದೆ ಬರಬೇಕೆಂದು ಕೋರಲಾಗಿದೆ.

ಲೋವರ ಸೆಕೆಂಡರಿ ಪರೀಕ್ಷೆಗೆ ಉಚಿತ ಪಾಠ

ಮೈಸೂರು ೧

ರಾಜಧಾನಿಯ ಸದ್ವಿದ್ಯಾ ಪಾಠಶಾಲೆಯ ಸಭಾಂಗಣದಲ್ಲಿ ಯಂಗ್‌ಮೆನ್ಸ್ ಲೀಗಿನ ಆಶ್ರಯದಲ್ಲಿ ಇದೇ ೩ನೇ ತಾ|| ಸೋಮವಾರ ಸಂಜೆ ೫|| ಗಂಟೆಯಿಂದ ಲೋವರ್ ಸೆಕೆಂಡರಿ ಪರೀಕ್ಷೆಗೆ ಕುಳಿತಿರುವ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಪಾಠಗಳನ್ನು ಏರ್ಪಡಿಸಲಾಗಿದೆ.

ಕಾಲೇಜ್ ದಿನಾಚರಣೆ

ಸೆಂಟ್ ಫಿಲೋಮಿನ ಕಾಲೇಜಿನ ವಾರ್ಷಿಕೋತ್ಸವವು ನಿನ್ನೆ ದಿವಾನ್ ಬಹದ್ದೂರ್ ಡಾ|| ರಾಘವೇಂದ್ರರಾವ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಉಪಹಾರಾನಂತರ ಕಾಲೇಜಿನ ಪ್ರಿನ್ಸಿಪಾಲರು ಸ್ವಾಗತಭಾಷಣವಾಡಿದರು. ನಾನಾ ಸಂಘಗಳ ಕಾರ್ಯದರ್ಶಿಗಳು ಕಳೆದ ಸಾಲಿನ ಕಾರ್ಯಕಲಾಪಗಳ ವರದಿಯನ್ನು ಒಪ್ಪಿಸಿದರು. ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಅಧ್ಯಕ್ಷರು ಹಂಚಿದರು. ಅಧ್ಯಕ್ಷರು ಮಾತನಾಡಿ ಕಾಲೇಜಿನ ಸ್ಥಾಪನೆಯಿಂದ ನೂರಾರು ವಿದ್ಯಾರ್ಥಿಗಳಿಗೆ ಆಗಿರುವ ಉಪಕಾರವನ್ನು ಕೊಂಡಾಡಿ ವಿದ್ಯಾರ್ಥಿಗಳಿಗೆ ಹಿತಬೋಧನೆ ಮಾಡಿದರು.

ಪ್ರತಿಷ್ಠಾಪನೋತ್ಸವ

ಒಂಟಿಕೊಪ್ಪಲು ಶ್ರೀ ರಾಮಕೃಷ್ಣಾಶ್ರಮ ವಿದ್ಯಾರ್ಥಿನಿಲಯದ ಮುಂಭಾಗದಲ್ಲಿ ನಿರ್ಮಾಣವಾಗಿರುವ ದೇವಾಲಯದಲ್ಲಿ ಶ್ರೀ ಪ್ರಸನ್ನ ಆಂಜನೇಯ ಆದಿತ್ಯಾದಿ ನವಗ್ರಹ ಆದಿ ನಾರಾಯಣ ಮಹಾಪ್ರತಿಷ್ಠಾಪನಾ ಮಹೋತ್ಸವವು ನಿನ್ನೆಯಿಂದ ವೈಭವಯುತವಾಗಿ ಆರಂಭವಾಗಿದೆ. ಕುಂಭಾಭಿಷೇಕ ಮತ್ತು ಮಹಾಪೂಜೆಯು ನಾಳೆ ನಡೆಯುವುವು. ಇದರ ಅಂಗವಾಗಿ ೫ನೇ ತಾ|| ಬೆಳಗ್ಗೆ ೧೧|| ಗಂಟೆಗೆ ಮಹಾಜನ ಸಂತರ್ಪಣೆಯೂ, ಮಹಾಪ್ರಸಾದ ವಿನಿಯೋಗವೂ ಜರುಗುವುವು.

ರೆಡ್ಡಿಯಾರರಿಗೆ ಪ್ರಕಾಶಂರವರ ಆಶೀರ್ವಾದ

ಮದ್ರಾಸ್ ಶಾಸನ ಸಭೆಯ ನಾಯಕರಾಗಿ ಚುನಾಯಿತರಾದ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯಾರ್‌ರವರನ್ನು ಸಭೆಯ ಸದಸ್ಯರಲ್ಲಿ ಅತ್ಯಂತ ಹಿರಿಯರಾದ ಶ್ರೀ ಟಿ. ಪ್ರಕಾಶಂರವರು ಆಶೀರ್ವದಿಸಬೇಕೆಂದು ಸರ್ದಾರ್ ವೇದರತ್ನಂ ಪಿಳ್ಳೆಯವರು ಪ್ರಾರ್ಥಿಸಿದರು. 'ನಿಮಗೆ ಶುಭ ಮುನ್ನಡೆ ದೊರಕಲಿ' ಎಂದು ಶ್ರೀ ಪ್ರಕಾಶಂರವರು ಅವರನ್ನು ಆಶೀರ್ವದಿಸಿದರು.

ಸರ್ಕಾರದವರಿಂದಲೇ ಸೌದೆ ಮಾರಾಟ

(ಸ್ವಂ. ವ. ಪೋ.) ಬೆಂಗಳೂರು ೧

ಖಾಸಗೀ ಕಂಪನಿಯವರೊಬ್ಬರು ಕಂಟ್ರಾಕ್ಟ್ ಮೂಲಕ ಈಗ ನಗರದಲ್ಲಿ ಸೌದೆ ಹಂಚಿಕೆಯನ್ನು ನಡೆಸುತ್ತಿದ್ದಾರೆ. ಏಪ್ರಿಲ್ ೧ನೇ ತಾ|| ನಿಂದ ಸರಬರಾಜು ಇಲಾಖೆಯ ಮೂಲಕ ಸರ್ಕಾರದವರೇ ಸೌದೆ ಹಂಚಿಕೆಯನ್ನು ನಡೆಸುವರೆಂದು ಗೊತ್ತಾಗಿದೆ.

ಎಣ್ಣೆಬೆಲೆ ಹತೋಟಿ ಸಮಿತಿ

ಎಣ್ಣೆ ಮತ್ತು ಎಣ್ಣೆ ಬೀಜಗಳ ಬೆಲೆ ಹತೋಟಿ ಮತ್ತು ಹಂಚಿಕೆ ವಿಚಾರಗಳನ್ನು ಪರಿಶೀಲಿಸಲು ಸರ್ಕಾರದವರು ನ್ಯಾಯಾಂಗ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ನೇಮಿಸಿದ್ದಾರೆ. ಇದರಲ್ಲಿ ಹಲವು ಸರ್ಕಾರಿ ಅಧಿಕಾರಿಗಳೂ ೧೩ ಮಂದಿ ಪ್ರಮುಖ ವರ್ತಕರೂ ಇದ್ದಾರೆ.

ಕಳೆದ ನವಂಬರ್ ಮತ್ತು ಡಿಸಂಬರ್ ತಿಂಗಳಲ್ಲಿ ಮಳೆಯಿಂದ ಬೆಳೆಗೆ ನಷ್ಟವಾದ ಮೈಸೂರು ಜಿಲ್ಲೆಯ ರೈತರು ಡಿಪೋಗಳಿಗೆ ಕೊಡುವ ದವಸದ ಮೇಲೆ ಪರಿಹಾರ ಕೊಡಲು ಮೈಸೂರು ಸರ್ಕಾರದ ಆಜ್ಞೆಯಾಗಿದೆ. ಭತ್ತ, ರಾಗಿಗೆ ಖಂಡುಗಕ್ಕೆ ಎಂಟಾಣೆ, ರಾಗಿ ಮತ್ತು ಜೋಳಕ್ಕೆ ೩ ರೂ. ಸಾಮೆ ಮತ್ತು ನವಣೆ ೧ ರೂ. ೧೫ ಆಣೆ ಏಪ್ರಿಲ್ ತಿಂಗಳ ಕೊನೆಯವರೆಗೆ ಡಿಪೋಗಳಿಗೆ ತಂದುಕೊಡುವ ಧಾನ್ಯಗಳಿಗೆ ಮಾತ್ರ ಇದು ಅನ್ವಯಿಸುವುದು.

ತಾತ್ಕಾಲಿಕ ಸರ್ಕಾರದ ಪ್ರಥಮ ಖೋತಾ ಬಡ್ಜೆಟ್

ಭಾರತ ಕೇಂದ್ರ ತಾತ್ಕಾಲಿಕ ಸರ್ಕಾರದ ಪ್ರಥಮ ಬಡ್ಜೆಟ್ಟನ್ನು ಕೇಂದ್ರ ಶಾಸನ ಸಭೆಯಲ್ಲಿ ಮಿ|| ಲಿಯಾಖತ್ ಆಲಿಖಾನರು ಮಂಡಿಸಿದ್ದಾರೆ. ೧೯೪೭-೪೮ ರ ಆದಾಯ ೨೮೯ ಕೋಟಿ ೧೫ ಲಕ್ಷ ವೆಚ್ಚ ೩೨೭ ಕೋಟಿ ೮೮ ಲಕ್ಷ ಉಪ್ಪಿನ ತೆರಿಗೆಯನ್ನು ವಜಾಮಾಡುವುದರಿಂದ ಆಕೋಟಿ ರೂ ನಷ್ಟವಾಗುವುದು. ಇದೂ ಸೇರಿ ೪೮ ಕೋಟಿ ೭೦ ಲಕ್ಷ ರೂ. ಗಳ ಖೋತಾ ಬೀಳುವುದು. ಆದಾಯ ತೆರಿಗೆಯ ಕನಿಷ್ಠ ಮಿತಿಯನ್ನು ೨೦೦೦ ದಿಂದ ೨೫೦೦ ಕ್ಕೆ ಏರಿಸಲಾಗಿದೆ. ಹೊಸ ತೆರಿಗೆಗಳಿಂದ ೪೦ ಕೋಟಿ ರೂ ಗಳು ಬರುವುವೆಂದೂ ರಿಜರ್ವ್ ಬ್ಯಾಂಕನ್ನು ರಾಷ್ಟ್ರೀಯವನ್ನಾಗಿ ಮಾಡಲಾಗುವುದೆಂದೂ ಅವರು ಹೇಳಿದ್ದಾರೆ. ಐಶ್ವರ್ಯವು ಕೆಲವೆಡೆ ಕೇಂದ್ರೀಕೃತವಾಗಿರುವುದನ್ನು ತನಿಖೆ ಮಾಡಲು ಒಂದು ಸಮಿತಿಯನ್ನು ನೇಮಿಸಲಾಗುವುದೆಂದೂ ಹೇಳಲಾಗಿದೆ.

ಹಾಲ್ಮಹೇರಾದಲ್ಲಿ ದಂಗೆ

ಡಚ್ಚರ ಅಧಿಕಾರಿಗಳ ವಿರುದ್ಧವಾಗಿ ಹಾಲ್ಮಹೇರಾ ದ್ವೀಪದ ಜನರು ದಂಗೆ ಎದ್ದಿದ್ದಾರೆಂದು ಬಟೇವಿಯಾದಿಂದ ಸುದ್ದಿ ಬಂದಿದೆ. ಆ ದ್ವೀಪದ ಹಲವು ಸಾವಿರ ಜನಗಳು ಡಚ್ ಸೈನ್ಯವನ್ನು ಮುತ್ತಿ ಅಧಿಕಾರವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಇಲ್ಲಿನ ದಂಗೆಯನ್ನು ಅಡಗಿಸಲು ಡಚ್ಚರು ಸೈನ್ಯಗಳನ್ನೂ ಯುದ್ಧ ಹಡಗುಗಳನ್ನೂ ಕಳುಹಿಸುತ್ತಿದ್ದಾರೆಂದು ಮಾಸ್ಕೋ ರೇಡಿಯೋ ವರದಿಮಾಡಿದೆ.

ಪಾಕಿಸ್ಥಾನ ಪ್ರಾಂತ್ಯಗಳಿಗೆ ಸಿದ್ಧತೆ

ಸ್ವತಂತ್ರ ಸಿಂಧ್ ಪ್ರಾಂತ್ಯಕ್ಕೆ ರಾಜ್ಯಾಂಗವನ್ನು ತಯಾರಿಸಲು ಸಮಿತಿಯೊಂದನ್ನು ರಚಿಸುವಂತೆ ಸಿಂಧ್ ಮಂತ್ರಿ ಮಿ|| ಪೀರ್ ಇಲಾಹಿ ಬಕ್ಷ್‌ರವರು ಮಿ|| ಜಿನ್ನಾರವರಿಗೆ ಪತ್ರ ಬರೆದಿದ್ದಾರೆ. ಬ್ರಿಟಿಷರು ಹೊರಟುಹೋಗವಾಗ ನಾವು ಅಧಿಕಾರ ವಹಿಸಿಕೊಳ್ಳಲು ಈಗಿನಿಂದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಇದೇ ರೀತಿ ಇತರ ಪಾಕಿಸ್ಥಾನ ಪ್ರಾಂತ್ಯಗಳಲ್ಲೂ ಸಮಿತಿಗಳ ರಚನೆ ಆಗಬೇಕು—ಎಂಬುದಾಗಿ ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಖಾದಿ ಕೇಂದ್ರಕ್ಕೆ ಸ್ಕೌಟ್ ದಳದವರ ಭೇಟಿ

ರಾಜಧಾನಿಯ ಮರಿಮಲ್ಲಪ್ಪನವರ ಶಾಲೆಯ ಸ್ಕೌಟ್ ದಳದವರು ಕಳೆದ ೨೬ನೇ ತಾ|| ಬದನವಾಳ ಖಾದಿ ಕೇಂದ್ರಕ್ಕೆ ಭೇಟಿ ಕೊಟ್ಟಿದ್ದರು. ಅಲ್ಲಿನ ಮ್ಯಾನೇಜರಾದ ಶ್ರೀ ಬಸವಯ್ಯನವರು ದಳದವರನ್ನು ಸ್ವಾಗತಿಸಿ, ಹತ್ತಿ, ನೂಲು, ಜಮಖಾನೆ, ತಯಾರಿಸುವುದು, ನೆಯ್ಗೆ ಇಲಾಖೆ ಮುಂತಾದುವುಗಳನ್ನೆಲ್ಲಾ ವಿವರಿಸಿದರು. ಅನಂತರ ಸತ್ಕಾರ ನಡೆಸಿ ಬೀಳ್ಕೊಟ್ಟರು.

ವಂದೇ ಮಾತರಂ ಹಾಡಲು ಅವಕಾಶ ಕಲ್ಪಿಸಬೇಕು

(ಸ್ವಂ. ವ. ಪೋ.) ಬೆಂಗಳೂರು ೧

ಮಲ್ಲೇಶ್ವರದ ಶಾಲೆಯ ಘಟನೆಯ ಬಗ್ಗೆ ಈದಿನ ಪುರಸಭೆಯಲ್ಲಿ ಚರ್ಚೆ ನಡೆಯಿತು. ವಂದೇ ಮಾತರಂ ಹಾಡಲು ವಿದ್ಯಾರ್ಥಿಗಳಿಗೆ ಅಡ್ಡಿಬಾರದೆ ಅವಕಾಶ ಕಲ್ಪಿಸಿಕೊಡಬೇಕೆಂಬ ಶ್ರೀ ಬಿ. ಎಸ್. ಗುಪ್ತರ ನಿರ್ಣಯವು ಸಭೆಯಲ್ಲಿ ಅವಿರೋಧವಾಗಿ ಅಂಗೀಕರಿಸಲ್ಪಟ್ಟಿತು. ಪುರಸಭೆಯ ಶಾಲೆಯಲ್ಲಿ ಎಂದಿನಂತೆ ಬೆಳಿಗ್ಗೆಯಿಂದ ಈ ದಿನ ತರಗತಿಗಳು ನಡೆದುವು.

ಕೋರ್ಟಿನ ಸಾಕ್ಷಿಗಳು

ಸರ್ವೋತ್ತಮನ್ಯಾಯಾಲಯದ ಮೊಕದ್ದಮೆಯು ಶ್ರೀ ಶ್ರೀರಂಗ ಮೂರ್ತಿ, ನಂಜುಂಡಯ್ಯ, ಡಾ|| ನವೀನ ಶ್ರೀಮತಿ ಪಾರ್ವತಮ್ಮ ಮತ್ತು ಡಾ|| ದೇವಪ್ಪನವರನ್ನು ಕೋರ್ಟಿನ ಸಾಕ್ಷಿಗಳನ್ನಾಗಿ ಪರಿಗಣಿಸಬೇಕೆಂದು ನ್ಯಾಯಾಧೀಶರು ಕ್ರಿ. ಪ್ರೊ. ಕೋಡ್ ರ ವಿಧಿಯಂತೆ ಆಜ್ಞೆ ಮಾಡಿದ್ದಾರೆ. ಮೊಕದ್ದಮೆಯನ್ನು ನೋಮವಾರಕ್ಕೆ ಮುಂದೆ ಹಾಕಿದ್ದಾರೆ.

ಶ್ರೀ ಚಿ|| ವೆಂಕಟರಂಗಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಹಿಂದೂ ಶಾಸನ ತಿದ್ದುಪಡಿ ಸಮಿತಿಯ ಪೂರ್ಣಕಾಲದ ಕಾರ್ಯದರ್ಶಿಗಳನ್ನಾಗಿ, ಶಾಸನ ಇಲಾಖೆಯ ಉಪಕಾರ್ಯದರ್ಶಿಗಳಾಗಿರುವ ಶ್ರೀ ಜಿ. ಎಸ್. ವೆಂಕಟರಮಣನ್‌ರವರನ್ನು ನೇಮಿಸಲಾಗಿದೆ.

ಸಾಧ್ವಿ

ತಾ|| ೧-೩-೪೭ ಶನಿವಾರ

ಉಪ್ಪಿನ ತೆರಿಗೆ ರದ್ದು

ಕೇಂದ್ರ ಶಾಸನ ಸಭೆಯಲ್ಲಿ ನಿನ್ನೆ ಅರ್ಥ ಸಚಿವರಾದ ನವಾಬ್‌ಜಾದ ಲಿಯಾಖತ್ ಅಲಿಖಾನ್ ರವರು ಬರುವ ವರ್ಷದ ಆಯವ್ಯಯದ ಪಟ್ಟಿಯನ್ನು ಮಂಡಿಸಿ ಉಪ್ಪಿನ ತೆರಿಗೆಯನ್ನು ಇನ್ನು ಮುಂದೆ ರದ್ದು ಮಾಡಲಾಗುವುದೆಂದು ತಿಳಿಸಿದರು. ರಾಷ್ಟ್ರೀಯ ಮಂತ್ರಿಗಳಿಂದ ಕೂಡಿದ ಭಾರತ ಕೇಂದ್ರ ಸರ್ಕಾರದ ಪ್ರಥಮ ಆಯವ್ಯಯದ ಪಟ್ಟಿಯಲ್ಲಿ ಸರ್ವಜನಾದರಣೀಯವಾದ ಇಂತಹ ಸೂಚನೆಯನ್ನು ಮಾಡಿರುವುದನ್ನು ಭಾರತೀಯರೆಲ್ಲರೂ ಅತ್ಯಂತ ಆನಂದದಿಂದ ಸ್ವಾಗತಿಸುವರು.

ಇತ್ತೀಚಿಗೆ ಮುಸ್ಲಿಂ ಲೀಗಿನವರು ಅನುಸರಿಸುತ್ತಿರುವ ವರ್ತನೆಯಿಂದ ಈ ತೆರಿಗೆಯನ್ನು ರದ್ದು ಮಾಡುವ ವಿಷಯವಾಗಿ ಸಂಶಯಗಳು ಉದ್ಭವಿಸಿದ್ದುವು. ತಾತ್ಕಾಲಿಕ ಸರ್ಕಾರದ ರಚನೆಯಾದ ಕೂಡಲೇ ಈ ತೆರಿಗೆಯನ್ನು ರದ್ದು ಮಾಡಲು ಸರ್ವ ಸಿದ್ಧತೆಗಳೂ ಆಗಿದ್ದುವು. ಆದರೆ ಲೀಗಿನವರು ಮಂತ್ರಿ ಮಂಡಲಕ್ಕೆ ಬಂದನಂತರ ಈ ಪ್ರಶ್ನೆಯು ಕಷ್ಟವಾಗಿದ್ದಿತು. ಲೀಗಿನ ಪ್ರತಿನಿಧಿಗಳಾದ ಮಿ|| ಲಿಯಾಖತ್ ಅಲಿಖಾನರವರು ಮಂಡಿಸಿರುವ ಆಯವ್ಯಯ ಪಟ್ಟಿಯಲ್ಲಿ ಅವರೇ ಇದನ್ನು ವಜಾ ಮಾಡಲು ನಿರ್ಧರಿಸಿರುವುದು ಶುಭ ಸೂಚನೆಯೇ ಸರಿ. ಬ್ರಿಟಿಷ್ ಆಳರಸರು ಬರುವ ವರ್ಷ ಭಾರತವನ್ನು ಬಿಟ್ಟು ಹೊರಡಲು ನಿರ್ಧರಿಸಿ ಘೋಷಣೆಯನ್ನು ಮಾಡಿದ ಮೇಲೆ ಭಾರತದ ವಿವಿಧ ಪಂಗಡಗಳು ಹೆಚ್ಚು ಜವಾಬ್ದಾರಿಯಿಂದಲೂ, ಐಕಮತ್ಯದಿಂದಲೂ ಪ್ರವರ್ತಿಸಬೇಕೆಂಬ ಭಾವನೆಯು ಮೂಡಿರುವುದಕ್ಕೆ ಇದೂ ಒಂದು ಪ್ರತೀಕ್ಷೆಯಾದರೆ ಅದು ಮುಂದಿನ ಕಾರ್ಯನೀತಿಗೆ ಉತ್ತಮ ಪೀಠಿಕೆಯೆಂದೇ ಭಾವಿಸಬಹುದು.

ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ಎರಡು ಶತಮಾನದಿಂದ ಭರತಖಂಡದ ಮೇಲೆ ಹೊರಿಸಿದ್ದ ದಾಸ್ಯ ಶೃಂಖಲೆಗಳ ಒಂದು ಪ್ರಮುಖ ಅಂಗವೇ ಈ ಉಪ್ಪಿನ ತೆರಿಗೆ. ಪ್ರಪಂಚದ ಯಾವ ನಾಗರಿಕ ರಾಷ್ಟ್ರದ ಮೇಲೆಯೂ ಹೊರಿಸಲ್ಪಡದ ಈ ತೆರಿಗೆಯು ಬಡ ಭಾರತದ ಪರಾವಲಂಬನೆಯ ಪ್ರತ್ಯಕ್ಷ ಪ್ರತಿಬಿಂಬವಾಗಿ ಎದ್ದು ಕಾಣುತ್ತಿತ್ತು. ಮಾನವನಿಗೆ ಅತ್ಯಗತ್ಯವಾದ ವಸ್ತುಗಳ ಮೇಲೆ ತೆರಿಗೆಗಳನ್ನು ಹಾಕದೆ ಸುಖಭೋಗಗಳಿಗೆ ಸಂಬಂಧಿಸಿದ ಪದಾರ್ಥಗಳ ಮೇಲೆ ಮಾತ್ರ ಅದನ್ನು ಹೊರಿಸಬೇಕೆಂಬ ಅರ್ಥಶಾಸ್ತ್ರದ ಮೂಲ ನೀತಿಯ ವಿರುದ್ಧವಾಗಿ ಹೇರಿದ್ದ ಈ ಹೊರೆಯು ಹಿಂದೂಸ್ಥಾನದಲ್ಲಿ ಬ್ರಿಟಿಷರ ಆಡಳಿತಕ್ಕೆ ಕಳಂಕಪ್ರಾಯವಾಗಿತ್ತು.

ಉಪ್ಪಿಲ್ಲದೆ ಊಟವಿಲ್ಲ. ಉಪ್ಪು ಬಡವರಿಗೂ ಬಲ್ಲಿದರಿಗೂ ಮೂಲಾಧಾರ. ದನಕರುಗಳಿಗೂ ಸಹ ಇದರ ಆವಶ್ಯಕತೆಯು ಬಹಳವಾಗಿ ಇರುತ್ತದೆ. ಉಪ್ಪು ಊಟಕ್ಕೆ ಪ್ರತಿನಿಧಿ ಸ್ವರೂಪದಲ್ಲಿರುತ್ತದೆ. ಆದುದರಿಂದಲೇ ಉಪ್ಪಿಟ್ಟವರನ್ನು ಮುಪ್ಪಿನವರೆಗೆ ನೆನೆಯಿರಿ-ಎಂಬ ನಾಣ್ಣುಡಿಯು ಜಾರಿಯಲ್ಲಿರುತ್ತದೆ. ಮಾನವರ ಮತ್ತು ಪಶು, ಪ್ರಾಣಿಗಳ ಜೀವನಾಧಾರಕ್ಕೆ ಅತ್ಯಗತ್ಯವಾದ ಇಂತಹ ವಸ್ತುವಿನ ಮೇಲೆ ಬ್ರಿಟಿಷರು ಹಾಕಿದ ತೆರಿಗೆಯು ಭರತಖಂಡದಲ್ಲಿ ಅವರು ಮಾಡಿದ ಸಕಲ ಅಪರಾಧಗಳನ್ನೂ ಮೀರಿಸುತ್ತದೆ. ಪ್ರತಿ ದಿನವೂ, ಪ್ರತಿಯೊಬ್ಬ ಮಾನವನೂ ಪರಕೀಯ ಸರಕಾರಕ್ಕೆ ತನ್ನ ಜೀವನದಲ್ಲಿ ಒಂದು ಅಂಶವನ್ನು ಅನೈಚ್ಛಿಕವಾಗಿ ಸಲ್ಲಿಸುವ ಪದ್ಧತಿಯು ಇದರಿಂದ ಬೆಳೆದು ಬಂದಿರುತ್ತದೆ.

ಇಂತಹ ಅನಾಗರಿಕವೂ, ಅಸ್ವಾಭಾವಿಕವೂ ಆದ ತೆರಿಗೆಯ ಮೇಲೆ ಮಹಾತ್ಮ ಗಾಂಧಿಯವರು ತಮ್ಮ ಘೋರ ಅಸಹಕಾರ ಸಂಗ್ರಾಮದಲ್ಲಿ ಪ್ರಥಮ ಗದಾ ಪ್ರಹಾರವನ್ನು ಮಾಡಿದರು. ಉಪ್ಪಿನ ಸತ್ಯಾಗ್ರಹವನ್ನು ಆಸೇತುಹಿಮಾಚಲ ಪರ್ಯಂತರವೂ ನಡೆಸಿ ಈ ತೆರಿಗೆಯ ವಿರುದ್ಧವಾಗಿ ಆಂದೋಳನವನ್ನು ನಡೆಸಿದರು. ಸಹಸ್ರಾರು ಜನರು ತಂಡೋಪತಂಡವಾಗಿ ಸಮುದ್ರದಲ್ಲಿಯೂ, ಉಪ್ಪಿನ ಮೋರಿಗಳಲ್ಲಿಯೂ ಕಾನೂನಿಗೆ ವಿರುದ್ಧವಾಗಿ ಉಪ್ಪನ್ನು ತಯಾರಿಸಿ ಬೀದಿ ಬೀದಿಗಳಲ್ಲಿ ಹಂಚಿದರು. ಇದರ ಪರಿಣಾಮವಾಗಿ ಬ್ರಿಟಿಷ್ ಸರ್ಕಾರಕ್ಕೂ, ಮಹಾತ್ಮರಿಗೂ ಒಪ್ಪಂದವುಂಟಾಗಿ ಈ ಶಾಸನದ ಕಟ್ಟುಗಳು ಸಡಿಲಿಸಲ್ಪಟ್ಟವು. ಆದರೆ ತೆರಿಗೆಯು ಮಾತ್ರ ಪೂರ್ತಿಯಾಗಿ ನಿವಾರಣೆಯಾಗಿರಲಿಲ್ಲ.

ಪ್ರಜಾ ಪ್ರಮುಖರಿಂದ ಕೂಡಿದ ಕೇಂದ್ರ ಸರ್ಕಾರದ ಸತ್ವ ಪರೀಕ್ಷೆಗಾಗಿ ಉಪ್ಪಿನ ತೆರಿಗೆಯನ್ನು ವಜಾ ಮಾಡುವುದನ್ನೇ ಮೊದಲನೆಯ ಒರೆಗಲ್ಲಾಗಿ ಮಹಾತ್ಮ ಗಾಂಧಿಯವರು ಗೊತ್ತು ಮಾಡಿದರು. ಇದುವರೆಗಿನ ಕೇಂದ್ರ ಸರ್ಕಾರದ ಗೊಂದಲದಲ್ಲಿ ಇದಕ್ಕೆ ಅವಕಾಶ ದೊರೆತಿರಲಿಲ್ಲ. ಈಗ ಈ ಕಾರ್ಯದ ಸಾಧನೆಯಾಗಿರುವುದು ಸಂತೋಷದ ವಿಷಯವೇ ಸರಿ. ಹಿಂದೂಸ್ಥಾನದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಅತ್ಯಾಚಾರಗಳಲ್ಲಿ ಪ್ರಾಮುಖ್ಯವಾದ ಈ ತೆರಿಗೆಯು ರದ್ದಾಗಿರುವುದು ಇಂತಹ ಇತರ ಶೃಂಖಲೆಗಳನ್ನೂ ಕಡಿದು ಹಾಕಿ, ಬರುವ ವರ್ಷ ಸ್ವತಂತ್ರ ಭಾರತದ ರಾಜ್ಯ ಸೂತ್ರಗಳನ್ನು ಸಕಲ ಭಾರತೀಯರೂ ನಿರ್ವಹಿಸಲು ಅನುಕೂಲಿಸುವುದಕ್ಕೆ ಸಹಕಾರಿಯಾದ ಪೂರ್ವ ಪೀಠಿಕೆಯಾಗಲೆಂದು ಹಾರೈಸೋಣ.

ಕಾಂಗ್ರೆಸ್ ಸಮತಾವಾದಿ ಪಕ್ಷದ ಹೊಸ ನಿರ್ಧಾರ

ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದವರು ಕಾಂಗ್ರೆಸ್ ಎಂಬುದನ್ನು ತೆಗೆದುಹಾಕಬೇಕೆಂದು ನಿರ್ಧರಿಸಿದ್ದಾರೆ. ಕಾಂಗ್ರೆಸ್ ನಾಯಕರಿಗೂ, ತಮಗೂ ಉಂಟಾಗಿರುವ ಘರ್ಷಣೆಯನ್ನು ಹೆಚ್ಚು ಮಾಡಬಾರದೆಂದೂ, ತಾವು ಕಾಂಗ್ರೆಸ್ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುತ್ತಿಲ್ಲವೆಂಬುದನ್ನು ತೋರಿಸುವ ಸಲುವಾಗಿಯೂ, ಈ ನಿರ್ಧಾರ ಮಾಡಿರುವುದಾಗಿ ಹೇಳಿದ್ದಾರೆ. ಆದರೆ ಅವರು ಕಾಂಗ್ರೆಸ್ ಸಂಸ್ಥೆಯನ್ನು ಬಿಡುವುದಿಲ್ಲವೆಂದು ತೀರ್ಮಾನಿಸಿದ್ದಾರೆ.

ಹೊಸ ವೈಸರಾಯರಿಗೆ ಮೋಟಾರು ಅಪಘಾತ

ಹ್ಯಾಂಪ್‌ಷೈರಿನಿಂದ ಲಂಡನ್ನಿಗೆ ಲಾರ್ಡ್ ಮೌಂಟ್ ಬ್ಯಾಟನ್ನರು ಮೊನ್ನೆ ಮೋಟಾರಿನಲ್ಲಿ ಹೋಗುತ್ತಿದ್ದಾಗ ಮಂಜುಗಡ್ಡೆಯ ಮೇಲೆ ಮೋಟಾರು ಚಕ್ರವು ಜಾರಿ ಕಾರಿಗೆ ಬಹಳ ನಷ್ಟವುಂಟಾಯಿತು. ಅವರಿಗೆ ಮಾತ್ರ ಯಾವ ತೊಂದರೆಯೂ ಆಗಲಿಲ್ಲ. ಹಿಂದೆ ಬರುತ್ತಿದ್ದ ಮತ್ತೊಂದು ಮೋಟಾರಿನಲ್ಲಿ ಅವರು ಲಂಡನ್ ತಲುಪಿದರು.

ಮಾತೃ ಭಾಷೆಯ ಮೂಲಕವೇ ಶಿಕ್ಷಣ

ಭಾರತದಲ್ಲಿ ವಿದ್ಯಾಭ್ಯಾಸವು ಮಾತೃಭಾಷೆಯ ಮೂಲಕವೇ ನಡೆಯಬೇಕು. ಇಂಗ್ಲಿಷ್ ಭಾಷೆ ಐಚ್ಛಿಕವಾಗಿರಬೇಕು; ಭಾರತದ ಆಡಳಿತ ನಮ್ಮ ಕೈಯಲ್ಲಿ ಬರಲಿದೆ; ನಮಗೆ ಇಂಗ್ಲೀಷ್ ಭಾಷೆಯ ಪರಿಚಯವಿದ್ದರೆ ಸಾಕು - ಎಂಬುದಾಗಿ ಮೌಲಾನಾ ಆಜಾದರು ತಿಳಿಸಿದ್ದಾರೆ.

§ ಗ್ವಾಲಿಯರ್ ಸಂಸ್ಥಾನದ ದಿವಾನರಾದ ಶ್ರೀ|| ಎಂ. ಎ. ಶ್ರೀನಿವಾಸರವರನ್ನು ಸಂಸ್ಥಾನಗಳ ಸಂಧಾನ ಸಮಿತಿಯ ಸದಸ್ಯರನ್ನಾಗಿ ತೆಗೆದುಕೊಳ್ಳಲಾಗಿದೆ.

Edited, printed and published by A. K. Nagarajan at the Sadhvi Press D. Subbiah Road, Mysore

ದನಗಳ ಪ್ರದರ್ಶನ

ಹುಣಸೂ[ರು]

ಈ ತಾಲ್ಲೂಕು ಹಳೇ ಬೀಡಿನ ಮಹದೇಶ್ವರ ಸ್ವಾಮಿಯವರ ರಥೋ[ತ್ಸವ]ದ ಅಂಗವಾಗಿ ಮೊನ್ನೆ ದನಗಳ ಪ್ರ[ದರ್ಶನ]ವು ಜರುಗಿತು. ೫೦-೬ ಸಾವಿರ ...ರಾಸುಗಳು ಬಂದಿದ್ದವು. ವೈ[ದ್ಯ]... ಬ್ ಡಿವಿಜ಼ನ್ ಅಧಿಕಾರಿಗಳು ಬಹು... ವಿನಿಯೋಗಿಸಿದರು.

ಮುಂದೆ ಬ...
ಶ್ರೀರಂಗಪಟ್ಟ[ಣ]...
ಸಭೆಯ ...
ಯ ಓಟರು ...
ತಯಾರಿ...
ಕೆ. ರಾಮ[ಯ್ಯ]

ಉರುಫ್ ಅಂಬಾಜಿರಾವ್ ಸ್ವಾ...
ತಾ|| ೧೦-೩-೪೭ನೇ ದಿವಸ ನಡೆ...
ಚುನಾವಣೆಗೆ ನಾನೂ ಒಬ್ಬ
ಉಮೇದುವಾರನಾಗಿ ನಿಂತಿರುವು...
ಗಣಪತಿ ಗುರ್ತಿಗೆ ಓಟು ...
ಪ್ರೋತ್ಸಾಹಿಸಬೇಕಾಗಿ ಪ್ರಾರ್ಥ...
ಕೆ. ರಾಮಯ್ಯ ಉ|| ಅಂಬಾಜಿರಾ[ವ್]
(ಚುನಾವಣಾ ಓಟರು ಲಿಸ್ಟಿನಲ್ಲಿ
ರಾಮಯ್ಯ ಎಂಬುದಾಗಿರುತ್ತೆ. ...
ಕವಾಗಿ ಅಂಬಾಜಿರಾವ್ ಎಂದು ...
ಲ್ಲಿರುತ್ತೆ. ಕೆ. ರಾಮಯ್ಯ ಎಂದು ...
ಮಾರ್ಕಿರುವುದನ್ನೇ ಅಂಬಾಜಿರಾವ್ ...
ಭಾವನೆಮಾಡಿಕೊಂಡು ಓಟನ್ನು ಮ...

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲು...
ಅರ್ಕ...
ಗರ್ಭಾಶಯರೋಗ ನಿವಾ[ರಿಣಿ]

ಅರುಣ ಋತು ದೋ...
ಕನ್ನು ನಿರ್ಮೂಲಿ...
ಪೂರ್ಣ ಸ್ತ್ರೀತ್ವವ...
ಸಾಧಿಸುವಸ್ತ್ರಯು...
ರ್ಣವಾದ ದಿವ್ಯಾಪ...
ದನ್ನು ಬಿಡದೆ ಸೇ...
ರಾದರೆ, ನಿಮ್ಮ ...
ಹರಮೂವಧಿಯಾದ ...
ಮಂದಾನಂದವನ್ನು...
ದೆ ಒದಗಿಸಬಲ್ಲುದು.

ಆಯುರ್ವೇದಾಶ್ರಮಂ ಲಿಮಿಟೆಡ್
ಟಿ-ನಗರ್.... ಮದರಾಸ್

ಮೈಸೂರು ರಾಜ್‌ಕಮಲ್ ಟಾಕೀಸಿನಲ್ಲಿ

2-3-47 ರಿಂದ ಮೂರನೇ ವಾರ

ಶ್ರೀ ಕೃಷ್ಣಲೀಲಾ

(ಕನ್ನಡ ಭಾಷೆಯಲ್ಲಿ)

From 28-2-47 for 4 days daily at 10-30 a. m.

'Flame of Barbary Coast'

Starring:- John Wayne, Ann Doorak, Joseph Schildkrant and others.

The Lusty Saga of a Devil-may-care adventurer who rose to power and glory on a woman's faith and his own hot-headed Courage

ಕಂಟ್ರೋಲು ದರ! ಸುಸಮಯ!

ಹೊಸ ಜವಳಿ

ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಬೆನಾರಸ್, ಕಂಚಿ, ಆರ್ನಿ,
ಕರಾಚಿ ಸೀರೆಗಳೂ, ನೂಲಿನ ಪೂನಾ ಧರ್ಮಾವರ ಸೀರೆಗಳೂ,
ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.

M. P. V., M. V. ಭೋಜಯ್ಯ B. A. ಅಂಡ್ ಬ್ರದರ್ಸ್
ಬೊಂಬಾಯಿ ಆನಂದ ಭವನ ಹೋಟೆಲ್ ಲೈನ್ ಬಲಭಾಗದ ಕೊನೆ
ಜವಳಿ ಅಂಗಡಿ, ಮೈಸೂರು.

ರಿಜಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಭಾನುವಾರ ೨—೩—೪೭ [ಸಂಚಿಕೆ ೧೭೪

ಭಾರತ-ಬ್ರಿಟನ್ನುಗಳ ಕೌಲುಕರಾರಿನ ಸಿದ್ಧತೆ

ಕೆ. ಸಿ. ರೆಡ್ಡಿಯವರು ದೆಹಲಿಗೆ

ಬೆಂಗಳೂರು ೨ ಮಾ.]

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚಂಗಲರಾಯರೆಡ್ಡಿಯವರು ರಾಷ್ಟ್ರಪತಿ ಕೃಪಲಾನಿ, ಪಂ|| ನೆಹರು, ಸ|| ಪಟೇಲ್, ಡಾ|| ಪಟ್ಟಾಭಿ ಇವರುಗಳೊಡನೆ ಮೈಸೂರು ಪರಿಸ್ಥಿತಿಯ ಬಗ್ಗೆ ಮಾತುಕತೆ ನಡೆಸುವ ಸಲುವಾಗಿ ನಿನ್ನೆ ರಾತ್ರಿ ಮದ್ರಾಸಿ ಮೈಲಿನಲ್ಲಿ ತೆರಳಿ ಅಲ್ಲಿಂದ ವಿಮಾನದಲ್ಲಿ ಇಂದಿನ ದೆಹಲಿಗೆ ಪ್ರಯಾಣ ಬೆಳಸಿದರು.

ಸಂಸ್ಥಾನ ಪ್ರಜಾಸಮ್ಮೇಳನದ ಅಧ್ಯಕ್ಷತೆಗೆ ಷೇಕ್ ಅಬ್ದುಲ್ಲಾ

ಗ್ವಾಲಿಯರ್ ಸಂಸ್ಥಾನದಲ್ಲಿ ಏಪ್ರಿಲ್‌ನ ನಡೆಯಲಿರುವ ಸಂಸ್ಥಾನಗಳ ಪ್ರಜಾಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಮೈಸೂರು ಸಂಸ್ಥಾನದ ಪ್ರತಿನಿಧಿಗಳು, ಬಂಧನದಲ್ಲಿರುವ ಕಾಶ್ಮೀರದ ನಾಯಕರಾದ ಷೇಕ್ ಅಬ್ದುಲ್ಲಾರವರನ್ನು ಸೂಚಿಸಿರುತ್ತಾರೆ. ನಿನ್ನೆ ದಿನ ಈ ಪ್ರತಿನಿಧಿಗಳ ಸಭೆಯು ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದು ಮೇಲ್ಕಂಡ ಸೂಚನೆಯನ್ನು ಮಾಡಲಾಯಿತು. ಅಲ್ಲದೆ ಶ್ರೀಗಳಾದ ಚನ್ನಿಗರಾಮಯ್ಯ, ಜನಾಬ್ ಅನ್ವರ್ ಸಾಹೆಬ್, ದೇವದಾಸ್, ಎಚ್. ಸಿದ್ದಯ್ಯ, ಕೆ. ಆರ್. ಮಾಧವರಾವ್, ಕೆ. ಪಟ್ಟಾಭಿರಾಮಯ್ಯ, ಕೆ. ಎಸ್. ಕುಮಾರ ಮತ್ತು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರನ್ನು ಸದಸ್ಯರುಗಳನ್ನಾಗಿ ಸೇರಿಸಿಕೊಳ್ಳಲಾಯಿತು.

ಸರ್ ಆರ್ಕಾಟರು ಮತ್ತೆ ಅಧ್ಯಕ್ಷರಾದರು

ಮೈಸೂರು ದಿವಾನರೂ, ಭಾರತ ಸರ್ಕಾರದ ಪ್ರತಿನಿಧಿಗಳೂ ಆದ ಸರ್ ರಾಮಸ್ವಾಮಿ ಮೊದಲಿಯಾರ್‌ರವರು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ಅಧ್ಯಕ್ಷರಾಗಿ ಮತ್ತೆ ಚುನಾಯಿತರಾಗಿದ್ದಾರೆ.

ಜಮಖಂಡಿ ಸಂಸ್ಥಾನದಲ್ಲಿ ಸುಧಾರಣೆಗಳು

ಯುಗಾದಿ ಹಬ್ಬದ ದಿನ ಜಮಖಂಡಿ ಸಂಸ್ಥಾನದಲ್ಲಿ ಹೊಸ ಸುಧಾರಣೆಗಳನ್ನು ಅಲ್ಲಿನ ರಾಜಸಾಹೇಬರು ಘೋಷಿಸಲಿದ್ದಾರೆ. ಈ ವಿಚಾರದಲ್ಲಿ ಪ್ರಜಾಪರಿಷತ್ತಿನವರೊಡನೆ ಮಾತುಕತೆಗಳೆಲ್ಲಾ ಪೂರ್ಣಗೊಂಡಿವೆ. ಶಾಸನ ಸಭೆಯಲ್ಲಿ ಸರ್ಕಾರಿ ಅಧಿಕಾರಿಗಳಿಗೆ ಮತಾಧಿಕಾರವಿರಕೂಡದು, ಎಲ್ಲಾ ಖಾತೆಗಳನ್ನೂ ಶಾಸನಸಭೆಯಿಂದ ಚುನಾಯಿತರಾದ ಮತ್ತು ಅದಕ್ಕೆ ಜವಾಬ್ದಾರರಾದ ಮೂವರು ಮಂತ್ರಿಗಳಿಗೆ ವಹಿಸಬೇಕು; ಶಾಸನಸಭೆಯ ಅಧ್ಯಕ್ಷ ಉಪಾಧ್ಯಕ್ಷರು ಚುನಾಯಿಸಲ್ಪಡತಕ್ಕದ್ದು, ಅರಸರ ಖಾಸಗೀ ವೆಚ್ಚವು ಸಂಸ್ಥಾನದ ಒಟ್ಟು ಉತ್ಪನ್ನದ ೧೨ನೇ ಪಾಲಿಗಿಂತ ಅಂದರೆ ೮೧೭೦೦ ರೂ.ಗಳಿಗಿಂತ ಕಡಮೆ ಇರಬೇಕು, ವಿದೇಶ, ರಾಜಕೀಯ ಖಾತೆ ಮತ್ತು ಇನಾಮುಗಳ ವಿಷಯಗಳನ್ನೆಲ್ಲಾ ದಿವಾನರು ಅಥವಾ ರಾಜಕೀಯ ಕಾರ್ಯದರ್ಶಿಗಳ ಮೂಲಕ ನಡೆಸತಕ್ಕದ್ದು- ಎಂಬುದಾಗಿ ಪ್ರಜಾಪರಿಷತ್ತಿನವರು ತಮ್ಮ ಮನವಿಯಲ್ಲಿ ತಿಳಿಸಿರುತ್ತಾರೆ. ರಾಜಾಸಾಹೇಬರು ಬೊಂಬಾಯಿನ ಮಾಜಿ ಕಾಂಗ್ರೆಸ್ ಮಂತ್ರಿಗಳಾದ ಶ್ರೀ ಎ. ಬಿ. ಲಠ್ಠೆಯವರ ಸಲಹೆ ಪಡೆದು ಸುಧಾರಣೆಗಳನ್ನು ಘೋಷಿಸುವವರಾಗಿದ್ದಾರೆ.

ಪ್ರಭುಗಳಿಂದ ನಗರ ಪರಿಶೀಲನೆ

ಮೈಸೂರು ೨

ಶ್ರೀಮನ್ಮಹಾರಾಜರವರು ನಿನ್ನೆ ತಮ್ಮ ಆಪ್ತಕಾರ್ಯದರ್ಶಿಗಳಾದ ಸರ್ ಕಂಪಾಚೆಟ್ಟಿ ರು, ಇನ್-ಚಾರ್ಜ್ ದಿವಾನರಾದ ಡಾ|| ರಾಯ್ ಮತ್ತು ಪುರಸಭಾಧ್ಯಕ್ಷರೊಡನೆ ನಿನ್ನೆ ಮಧ್ಯಾಹ್ನ ಅದಿಕರ್ನಾಟಕಪುರ ವಗೈರೆ ಜಲಪುರಿಗೆ ಭೇಟಿ ಇತ್ತು ಪರಿಶೀಲನೆ ನಡೆಸಿದರು. ಅದಿಕರ್ನಾಟಕಪುರದಲ್ಲಿ ವಸತಿ ಸೌಲಭ್ಯಗಳನ್ನು ಹೆಚ್ಚಿಸುವ ಅಂಶವು ಪ್ರಭುಗಳಿಗೆ ಅರಿಕೆಮಾಡಲ್ಪಟ್ಟಿತು. ಇದಕ್ಕಾಗಿ ನಗರಾಭಿವೃದ್ಧಿ ಸಮಿತಿಯವರ ಮೂರು ಲಕ್ಷ ರೂಪಾಯಿನ ಅಂದಾಜನ್ನು ಸಿದ್ಧಗೊಳಿಸುವುದಾಗಿಯೂ ತಿಳಿಸಲಾಯಿತು. ಅಲ್ಲಿಂದ ಪ್ರಭುಗಳು ಗುಡಿಸಲವರ ವಸತಿಗಳನ್ನು ಪರಿಶೀಲಿಸಿದರು. ಅಲ್ಲಿಂದ ಪರಂದೆ ಸೆಂಟ್ ಮೇರಿ ಆಸ್ಪತ್ರೆಗೆ ಭೇಟಿಕೊಟ್ಟರು. ಧರ್ಮರತ್ನಾಕರ ಶ್ರೀ ಸಿ. ಪೆರಿಸ್‌ವಾಳ್‌ಚೆಟ್ಟಿರವರು ಈ ಆಸ್ಪತ್ರೆಯಲ್ಲಿ ವಾರ್ಡುಗಳನ್ನು ಕಟ್ಟಿಸಲು ೧೫ ಸಾವಿರ ರೂ ಗಳನ್ನು ದಾನಮಾಡಿರುವುದಾಗಿ ತಿಳಿದುಬಂದಿದೆ. ತರುವಾಯ ಪ್ರಭುಗಳು ಚಾಮರಾಜ ರಸ್ತೆಯಲ್ಲಿ ಮಹಾರಾಜಾ ಕಾಲೇಜು ವಿದ್ಯಾರ್ಥಿ ನಿಲಯದ ಮೂಲಕ ದಯಮಾಡಿಸಿ ಆಪ್ತ ಹ್ಯಾರ್ ಭವನ ಮತ್ತು ಸ್ಕೌಟ್ ಕೇಂದ್ರಗಳ ಕಟ್ಟಡಗಳನ್ನು ಪರಿಶೀಲಿಸಿದರು. ವಿದ್ಯಾರ್ಥಿ ನಿಲಯದಿಂದ ರೈಲ್ವೆ ಕಂಬಿಯವರೆಗೆ ಒಂದು ಬೌಲೀವಾರ್ಡನ್ನು ರಚಿಸುವುದಾಗಿ ಅರಿಕೆಮಾಡಲಾಯಿತು. ನಂಜರಾಜ ಬಹದ್ದೂರ್ ಛತ್ರದ ಬಳಿ ರಚಿತವಾಗಲಿರುವ ವಿದ್ಯಾರ್ಥಿ ನಿಲಯದ ಪ್ರದೇಶವನ್ನು ಪ್ರಭುಗಳು ಪರಾಂಬರಿಸಿದರು. ಲಲಿತಪುರಿಯಲ್ಲಿ ಹರಿಜನರಿಗಾಗಿ ಕಟ್ಟಲಾಗಿರುವ ವಸತಿಗಳನ್ನು ವೀಕ್ಷಿಸಿದರು. ಬನ್ನಿಮಂಟಪದ ಬಳಿ ಕಟ್ಟಲಾಗುವ ಔದ್ಯೋಗಿಕ ಶಾಲೆಯ ವಿವರಗಳನ್ನು ಪ್ರಭುಗಳಿಗೆ ಅರಿಕೆಮಾಡಲಾಯಿತು. ಶ್ರೀಮನ್ಮಹಾರಾಜರವರ ಈ ಪರಿಶೀಲನೆಯು ನಗರದ ಅಭಿವೃದ್ಧಿ ವಿಷಯದಲ್ಲಿ ಉತ್ತಮ ಪರಿಣಾಮವನ್ನುಂಟುಮಾಡುವುದೆಂದು ಆಶಿಸಲಾಗಿದೆ.

ಮುಸ್ಲಿಮರ ವಿಜಯೋತ್ಸವ

ಪಂಜಾಬ್ ಮುಸ್ಲಿಂ ಲೀಗಿನವರು ರಕ್ಷಣಾ ಶಾಸನದ ವಿರುದ್ಧವಾಗಿ ಹೂಡಿ ನಡೆಸಿದ ಚಳುವಳಿಯ ಜಯದ ಅಂಗವಾಗಿ ಇಂದಿನ ವಿಜಯೋತ್ಸವವನ್ನು ಆಚರಿಸಿದರು. ಪ್ರಾಂತ್ಯದಲ್ಲೆಲ್ಲಾ ಸಭೆಗಳು ಜರುಗಿದವು.

ಬ್ರಿಟಿಷ್ ಸಾಮ್ರಾಜ್ಯವು ಅಳಿಸಿಹೋಗುತ್ತಿದೆ

"ಬ್ರಿಟನ್ನಿನ ಆರ್ಥಿಕ ಭದ್ರತೆಯು ಕಾರ್ಮಿಕ ಸರ್ಕಾರದ ದೂರದೃಷ್ಟಿ ಇಲ್ಲದ ಕಾನೂನುಗಳು ಮತ್ತು ಆಡಳಿತದಿಂದ ನಡುಗಿಹೋಗುತ್ತಿದೆ. ನಮ್ಮ ಸಾಮ್ರಾಜ್ಯವು ಅಳಿಸಿಹೋಗುತ್ತಿದೆ. ಕಾಲಹರಣ ಮಾಡದೆ ಸಾರ್ವಜನಿಕರು ಎಚ್ಚೆತ್ತು ಈ ಕಾರ್ಮಿಕ ಸರ್ಕಾರವನ್ನು ಅಂತ್ಯಗೊಳಿಸಬೇಕಾಗಿದೆ" ಎಂಬುದಾಗಿ ಮಿ|| ಚರ್ಚಿಲರು ಟೋರಿಗಳ ರಾಜಕೀಯ ಕೌನ್ಸಿಲ್ ಕ್ಲಬ್ಬಿನ ವಾರ್ಷಿಕ ಅಧಿವೇಶನಕ್ಕೆ ಸಂದೇಶವನ್ನು ಕಳುಹಿಸುತ್ತಾ ಬೊಬ್ಬೆ ಇಕ್ಕಿದ್ದಾರೆ.

ಮಲಯ ರಬ್ಬರ್ ತೋಟಗಳಲ್ಲಿ ದಂಗೆ

ಉತ್ತರ ಮಲಯ ಕೆಡ್ಡಾ, ಪೆನಾಂಗ್ ಮುಂತಾದ ಪ್ರದೇಶಗಳ ರಬ್ಬರ್ ತೋಟಗಳಲ್ಲಿ ಕೆಲಸ ಮಾಡುವ ಭಾರತದ ಕಾರ್ಮಿಕರು ದಂಗೆ ಎದ್ದಿದ್ದಾರೆಂದು ಸಿಂಗಪುರದಿಂದ ಸುದ್ದಿ ಬಂದಿದೆ. ಕಾರ್ಮಿಕರು ಹೆಚ್ಚು ಸಮಯ ಕೆಲಸವನ್ನು ಧಿಕ್ಕರಿಸಿ ಯೂರೋಪಿಯನ್ ಎಸ್ಟೇಟುಗಳನ್ನು ತಮ್ಮ ಹತೋಟಿಗೆ ತೆಗೆದುಕೊಂಡಿರುವರು. ಆ ಪ್ರದೇಶಗಳ ಯೂರೋಪಿಯನ್ ಮಾಲೀಕರಿಗೆಲ್ಲಾ ಹೊರಗಡೆಗೆ ಹೊರಟು ಹೋಗುತ್ತಿರುವರೆಂದೂ, ಪರಿಸ್ಥಿತಿ ಕಠಿಣವಾಗಿದೆಯೆಂದೂ ವರದಿಯಾಗಿದೆ.

ಸಂಗೀತ ಕಛೇರಿಗಳು

ಮೈಸೂರು ೨

ಮೈಸೂರಿನ ಶ್ರೀ ಸರಸ್ವತಿ ಸಂಗೀತ ಸಮಾಜದ ಆಶ್ರಯದಲ್ಲಿ ಇದೇ ೬ನೇ ತಾರೀಖು ಸಂಜೆ ೬ ಗಂಟೆಗೆ ಕೊಲಂಬರ್ಸ್‌ಹಾಲಿನಲ್ಲಿ ಮದ್ರಾಸಿನ ಶ್ರೀ ಎಂ. ಎಲ್. ವಸಂತಕುಮಾರಿ ಮತ್ತು ಪಾರ್ಟಿಯವರ ಮತ್ತು ೮ನೇ ತಾ|| ಸಂಜೆ ೬ ಗಂಟೆಗೆ ಕಲ್ಲಿಕೋಟೆಯ ಶ್ರೀಮತಿ ಶಾರದ ಅನಂತರಾವ್ ರವರ ವೀಣೆಯ ಸಂಗೀತ ಕಛೇರಿಗಳು ಏರ್ಪಾಡಾಗಿವೆ. ಮೆಂಬರುಗಳಲ್ಲದವರಿಗೆ ಟಿಕೆಟ್ ಮೂಲಕ ಪ್ರವೇಶ.

ನಿಧನ

ಲೋಕಸೇವಾನಿರತ ಆಂಧ್ರ ಅಣ್ಣಾಪ್ಯ ಪಂಡಿತರ ಕಿರಿಯ ಮಗಳಾದ ಶ್ರೀಮತಿ ಮರಿಯಮ್ಮನವರು ತಮ್ಮ ೭೫ನೇ ವಯಸ್ಸಿನಲ್ಲಿ ಇದಿನ ಬೆಳಗ್ಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ಇಬ್ಬರು ಗಂಡುಮಕ್ಕಳೂ ೪ ಮಂದಿ ಹೆಣ್ಣುಮಕ್ಕಳೂ ಇದ್ದಾರೆ.

ಭಾರತ ಮತ್ತು ಬ್ರಿಟನ್ನುಗಳ ಕೌಲು ಕರಾರಿನ ಸಿದ್ಧತೆ

ಲಂಡನ್ನಿನ ಭಾರತ ಕಛೇರಿಯಲ್ಲಿ ಹೊಸ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ೧೯೪೮ರ ಜೂನ್ ನಂತರ ಭಾರತದೊಡನೆ ಬ್ರಿಟನ್ ಮಾಡಿಕೊಳ್ಳಬೇಕಾದ ಕರಾರುಗಳ ಬಗ್ಗೆ ಅವಶ್ಯಕವಾದ ಸಿದ್ಧತೆಗಳನ್ನು ಮಾಡುತ್ತಿದ್ದಾರೆಂದೂ, ಈ ವಿಚಾರದಲ್ಲಿ ಅವರಿಗೆ ಸಲಹೆ ಕೊಡಲು ಇಂಪೀರಿಯಲ್ ಜನರಲ್ ಸ್ಟಾಫಿನ ಪ್ರಧಾನಿಗಳಾದ ಲಾರ್ಡ್ ಮಾಂಟಗೊಮರಿಯವರು ಲಂಡನ್ನಿಗೆ ಬರಲಿದ್ದಾರೆಂದೂ ವರದಿಯಾಗಿದೆ. ಭಾರತದಲ್ಲಿ ಮುಂದೆ ಏರ್ಪಡುವ ಸರ್ಕಾರ ಅಥವಾ ಸರ್ಕಾರಗಳೊಡನೆ ಆಗಬೇಕಾದ ಸ್ನೇಹದ ಕರಾರಿನ ಅಂಶಗಳ ಬಗ್ಗೆ ಬ್ರಿಟಿಷ್ ಸರ್ಕಾರದ ಅಭಿಪ್ರಾಯವನ್ನು ಇವರೇ ರೂಪಿಸಲಿದ್ದಾರೆ. ಈಗಾಗಲೇ ಒಂದು ವರದಿಯು ಸಿದ್ಧವಾಗಿದೆಯೆಂದೂ ಅದರಲ್ಲಿ ಬ್ರಿಟಿಷ್ ಕಾರ್ಮಿಕವರ್ಗದ, ಮುಖ್ಯವಾಗಿ ಆಸ್ಟ್ರೇಲಿಯದ ಅಭಿಪ್ರಾಯಗಳೂ ಅಡಕವಾಗಿವೆಯೆಂದೂ ಹೇಳಲಾಗಿದೆ.

ಈ ಬೇಸಿಗೆಯಿಂದ ಬ್ರಿಟಿಷ್ ಸೇನೆಗಳು ವಾಪಸಾಗುವುವು

ಭಾರತದಲ್ಲಿರುವ ಬ್ರಿಟಿಷ್ ಸೇನೆಗಳನ್ನು ವಾಪಸು ಕರೆಸಿಕೊಳ್ಳುವ ಕಾರ್ಯವು ಈ ಬೇಸಿಗೆಯಿಂದ ಆರಂಭವಾಗುವುದಾಗಿ ಬ್ರಿಟನ್ನಿನಿಂದ ವಾರ್ತೆ ಬಂದಿದೆ. ಬ್ರಿ|| ಪಾರ್ಲಿಮೆಂಟಿಗೆ ಅಧೀನವಾಗಿರದ ಯಾವ ಸರ್ಕಾರದ ವಶದಲ್ಲೂ ಬ್ರಿ|| ಸೈನ್ಯವನ್ನು ಒಂದು ದಿನವೂ ಬಿಡಲಾಗುವುದಿಲ್ಲವೆಂದೂ ಆದ್ದರಿಂದ ಈಗಲೇ ಈ ಕೆಲಸವು ಆರಂಭವಾಗುವುದೆಂದು ಹೇಳಲಾಗಿದೆ. ಭಾರತೀಯ ಸೈನ್ಯಕ್ಕೆ ತರಬೇತು ಕೊಡಲು ತಕ್ಕ ಸೌಕರ್ಯಗಳನ್ನು ಈಗಲೇ ಕಲ್ಪಿಸಲಾಗುವುದು. ವಿಶೇಷ ಸಂದರ್ಭದಲ್ಲಿ ಸಹಾಯ ಒದಗಿಸುವ ಬಗ್ಗೆ ಬ್ರಿಟನ್-ಭಾರತಗಳಲ್ಲಿ ಒಪ್ಪಂದವಾಗಬಹುದೆಂದೂ ಆಶಿಸಲಾಗಿದೆ.

ಬ್ರಿ|| ಮೋರೆಗಳ ಭೇಟಿಗೆ ಭಾರತೀಯರ ಬಹಿಷ್ಕಾರ

ದಕ್ಷಿಣ ಆಫ್ರಿಕಾದಲ್ಲಿ ಪ್ರವಾಸ ಮಾಡುತ್ತಿರುವ ಬ್ರಿಟಿಷ್ ರಾಜರಾಣಿಯರ ಕಾರ್ಯಕ್ರಮಗಳಿಗೆ ಅಲ್ಲಿರುವ ಭಾರತೀಯರು ಬಹಿಷ್ಕಾರ ಹಾಕುವುದನ್ನು ಮಹಾತ್ಮರು ಸಮರ್ಥಿಸಿದ್ದಾರೆ. ದಕ್ಷಿಣ ಆಫ್ರಿಕಾ ದೇಶೀಯರನ್ನು ದಬ್ಬಾಳಿಕೆಯಿಂದ ಆಳುತ್ತಿರುವ ಬಿಳಿಯರ ಸಂತೋಷ ಸಮಾರಂಭದಲ್ಲಿ ಭಾಗವಹಿಸುವುದು ರಾಷ್ಟ್ರೀಯವೂ ಮತ್ತು ಗೌರವವೂ ಅಲ್ಲವೆಂದು ಗಾಂಧೀಜಿಯವರು ಹೇಳಿದ್ದಾರೆ.

ಮದ್ರಾಸ್ ಆಯವ್ಯಯ

ಶ್ರೀ|| ಟಿ. ಪ್ರಕಾಶಂರವರು ನಿನ್ನೆ ಮದ್ರಾಸ್ ಶಾಸನ ಸಭೆಯಲ್ಲಿ ೧೯೪೭-೪೮ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಮಂಡಿಸಿದರು. ಆದಾಯ- ೪೯ ಕೋಟಿ, ೭೬ ಲಕ್ಷದ ೬೦ ಸಾವಿರ ವ್ಯಯ- ೪೯ ಕೋಟಿ, ೭೭ ಲಕ್ಷದ ೮೧ ಸಾವಿರ ರೂ ಗಳು ೯೯ ಸಾವಿರ ರೂ ಕಮ್ಮಿ ನಿವ್ವಳವಾದವನ್ನು ತೋರಿಸಲಾಗಿದೆ. ವ್ಯವಸಾಯ ವರಮಾನ ತೆರಿಗೆಯನ್ನು ಜಾರಿಗೆ ತರಲಾಗಿದೆ. ಮೋಟಾರ್ ಸ್ಪಿರಿಟ್ ಮೇಲಿನ ತೆರಿಗೆಯ ದರವನ್ನು ಹೆಚ್ಚಿಸಲಾಗಿದೆ. ಕುದುರೆ ಜೂಜಿನ ಮೇಲೆ ಬಾಜಿ ಕಟ್ಟುವುದನ್ನು ವಜಾ ಮಾಡಲಾಗಿದೆ.

ತಾ|| ೨-೩-೪೯ ಬುಧವಾರ

ಪುನಃ ಸೌದೆ ಅಭಾವ

ರಾಜಧಾನಿಯಲ್ಲಿ ಮತ್ತೆ ಸೌದೆ ಗಾಗಿ ಹಾಹಾಕಾರವುಂಟಾಗಿದೆ. ರೂಪಾಯಿಗೆ ಒಂದೊವರೆ ಮಣ ದೊರೆಯುವುದೂ ದುಸ್ತರವಾಗಿದೆ. ಪೌರಸಭೆಯವರು ಏರ್ಪಡಿಸಿರುವ ಡಿಪೋಗಳಲ್ಲಿ ಸೌದೆಯೇ ಇರುವುದಿಲ್ಲವೆಂಬ ಪುಕಾರುಗಳು ಬರುತ್ತಿವೆ. ಇತರ ಡಿಪೋಗಳಲ್ಲಿ ಮಾರಾಟವಾಗುವ ಸೌದೆಯ ಬೆಲೆಯ ಮೇಲೆ ಯಾವ ಹತೋಟಿಯೂ ಇರುವುದಿಲ್ಲ. ಇದರಿಂದ ಬಡ ನಿವಾಸಿಗಳಿಗೆ ಉಂಟಾಗಿರುವ ಕಷ್ಟವು ಅಷ್ಟಿಷ್ಟಲ್ಲ. ಸಂಸ್ಥಾನದ ಮುಖ್ಯ ಪಟ್ಟಣವಾದ ಈ ನಗರದ ಸೌದೆ ಸರಬರಾಜಿನ ಸಮಸ್ಯೆಯನ್ನು ಪರಿಹರಿಸಲು ಇದುವರೆಗೆ ಅನೇಕ ಪ್ರಯತ್ನಗಳು ನಡೆದಿವೆ. ಸರ್ಕಾರದವರೂ, ಪೌರಸಭೆಯವರೂ ಕಳೆದ ಹೊಸ ಯೋಜನೆಯೊಂದನ್ನು ಮಾಡಿ ಹಲವು ವರ್ತಕರುಗಳಿಗೆ ಮೋಟಾರು ಲಾರಿ, ಪೆಟ್ರೋಲ್ ರಹದಾರಿ ಮುಂತಾದ ಸೌಲಭ್ಯಗಳನ್ನೆಲ್ಲಾ ಒದಗಿಸಿಕೊಟ್ಟರು. ಆದರೆ ಇದರಿಂ... ಸೌದೆ ... ಒಗಿದಂತೆ ಮಾತ್ರ ಆಗುತ್ತಿದೆ. ಪ್ರಾರಂಭದಲ್ಲಿ ಮಾತ್ರ ... ಸ್ವಲ್ಪಮಟ್ಟಿಗೆ ದೊರೆಯುತ್ತಿತ್ತು. ... ತಣ್ಣಗಾಯಿತು.

ಪೌರಸಭೆಯ ಸಭೆಯಲ್ಲೂ ಸಹ ಈ ವಿಚಾರವು ಆಗಿಂದಾಗ್ಗೆ ಚರ್ಚೆಗೆ ಬಂದಿರುತ್ತದೆ. ಬೇರೆ ಬೇರೆ ಮೊಹಲ್ಲಾಗಳಲ್ಲಿ ಏರ್ಪಡಿಸಿರುವ ಡಿಪೋಗಳ ಮತ್ತು ಇತರ ವ್ಯವಸ್ಥೆಗಳ ವಿವರಗಳನ್ನೇನೋ ಅಧ್ಯಕ್ಷರು ಒದಗಿಸುತ್ತಿದ್ದಾರೆ. ಆದರೆ ಪ್ರಜೆಗಳಿಗೆ ಮಾತ್ರ ಅವಶ್ಯಕವಾದ ಪರಿಹಾರವು ದೊರೆಯುತ್ತಿಲ್ಲ. ಮನಸ್ಸು ಬಂದ ಬೆಲೆಗೆ ಮಾರುತ್ತಿರುವ ಡಿಪೋಗಳ ಮೇಲೆ ಯಾವ ಹತೋಟಿಯೂ ಇರುವುದಿಲ್ಲ. ಈ ಕಾರಣಗಳಿಂದ ನಗರದಲ್ಲಿ ಈಗ ಪುನಃ ಸೌದೆಗೆ ವಿಶೇಷ ಅಭಾವ ಉಂಟಾಗಿರುತ್ತದೆ.

ಪೌರಸಭೆಯ ಡಿಪೋಗಳಿಗೆ ಕಾಡುಗಳಿಂದ ಸೌದೆಯನ್ನು ಒದಗಿಸಲು ಈಗ ಇರುವ ಮೋಟಾರು ಲಾರಿಗಳು ಸಾಲದೆಂದೂ ಇನ್ನೂ ಕಡೆಯ ಪಕ್ಷ ಹತ್ತು ಹನ್ನೆರಡು ಲಾರಿಗಳಾದರೂ ಬೇಕೆಂದೂ ಹೇಳಲಾಗಿದೆ. ಆದರೆ ಇದುವರೆಗೆ ದೊರೆತಿರುವ ಲಾರಿಗಳಿಂದ ಒದಗುತ್ತಿರುವ ಸೌದೆಯು ಸದ್ವಿನಿಯೋಗವಾಗುತ್ತಿರುವುದೇ ಎಂಬ ಪ್ರಶ್ನೆಯೂ ಅಲ್ಲಲ್ಲಿ ಕೇಳಬರುತ್ತಿದೆ. ಲಾರಿಗಳು ದೊರಕಿದಾಗ ಎಣ್ಣೆ ಇರುವುದಿಲ್ಲ; ಎಣ್ಣೆ ಬಂದಾಗ ಮೋಟಾರಿನ ಟೈರುಗಳಿರುವುದಿಲ್ಲ; ಟೈರುಗಳಿದ್ದರೆ ಇತರ ಉಪಕರಣಗಳಿರುವುದಿಲ್ಲ; ಇವೆಲ್ಲವೂ ಇದ್ದರೆ ಕಾಡಿನಲ್ಲಿ ಮಳೆಯು ಬಿದ್ದು ಲಾರಿಗಳು ಹೋಗಲು ಅವಕಾಶವಿರುವುದಿಲ್ಲ — ಹೀಗೆ ಒಂದಲ್ಲ, ಒಂದು ಕಾರಣದಿಂದ ತೊಂದರೆಯಾಗುತ್ತಿದೆ. ಸದ್ಯದಲ್ಲಿ ಇನ್ನೂ ಹೆಚ್ಚಿನ ಲಾರಿಗಳು ಬೇಕೆಂಬ ಅಭಿಪ್ರಾಯಗಳು ಬರುತ್ತಿವೆ. ಹೇಗಾದರೂ ಪುರನಿವಾಸಿಗಳ ಕಷ್ಟವು ನಿವಾರಣೆಯಾಗುವುದು ಮುಖ್ಯ.

ಬೆಂಗಳೂರು ನಗರದಲ್ಲಿ ಇದುವರೆಗೆ ಸ... ಸಮರ್ಪಕವಾಗಿ ನಡೆಯುತ್ತಿದ್ದ ಸೌದೆ ಸರಬರಾಜನ್ನು ಇನ್ನೂ ಪರಿಷ್ಕರಿಸುವುದಕ್ಕಾಗಿ, ಸರ್ಕಾರದವರೇ ಸೌದೆ ಹಂಚಿ

ರಾಜರು ಮತ್ತು ರಾಜ್ಯಾಂಗ

(ಲೇಖಕರು:- ಶ್ರೀ ಟಿ. ಎಸ್ ರಾಜಗೋಪಾಲಯ್ಯಂಗಾರ್)

ಭಾರತದ ರಾಜ್ಯಾಂಗ ಸಭೆಯು ಪ್ರಾರಂಭವಾದಾಗಿನಿಂದ ಅದರಲ್ಲಿ ಸಂಸ್ಥಾನಗಳ ಪಾತ್ರದ ಬಗ್ಗೆ ಅನೇಕ ಊಹಾಪೋಹಗಳೆದ್ದುವು. ಕೊನೆಗೂ ರಾಜರುಗಳು ಸಂಧಾನ ಸಮಿತಿ ರಚಿಸಿ ಕಾರ್ಯಾರಂಭ ಮಾಡಿದರು. ಆದರೆ ಸಭೆಗೆ ಇನ್ನೂ ನೇರವಾಗಿ ಪ್ರವೇಶಿಸಿಲ್ಲ. ಸಂಸ್ಥಾನಗಳ ಪ್ರಾತಿನಿಧ್ಯ, ರಾಜ್ಯದ ಪರಮಾಧಿಕಾರ ಮುಂತಾದ ವಿಷಯಗಳೂ ಇತ್ಯರ್ಥವಾಗಬೇಕಾದ ಕಾಲವಿದು. ಈ ಸಮಯದಲ್ಲಿ ರಾಜಧಾನಿಯ ವಕೀಲರಾದ ಶ್ರೀ ರಾಜಗೋಪಾಲಯ್ಯಂಗಾರ್ಯರು ಈ ಪುಸ್ತಕವನ್ನು ಪ್ರಕಟಿಸಿರುವುದು ಸೂಕ್ತವಾಗಿದೆ. ಶ್ರೀಯುತರು ಮೇಲ್ಕಂಡ ವಿಷಯಗಳನ್ನೆಲ್ಲಾ ವಿವರವಾಗಿ ಚರ್ಚಿಸಿ ಅದರ ಪರಿಹಾರಕ್ಕೆ ತಮ್ಮ ಸಲಹೆಯನ್ನಿತ್ತಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿರುವವರೆಲ್ಲರೂ ಈ ಪುಸ್ತಕವನ್ನು ಪರಿಶೀಲಿಸುವುದು ಒಳ್ಳೆಯದು.

ಕೆಯ ವ್ಯವಸ್ಥೆಯನ್ನು ತಮ್ಮ ಕೈಗೆ ತೆಗೆದುಕೊಂಡು ಸಿವಿಲ್ ಸರಬರಾಜು ಇಲಾಖೆಯವರ ಮೂಲಕ ಜನರಿಗೆ ಹಂಚಲು ಏರ್ಪಾಡು ಮಾಡುವುದಾಗಿ ತಿಳಿದುಬಂದಿದೆ. ಇಂಗ್ಲೆ... ಸಹ ಕಲ್ಲಿದ್ದಲಿನ ಅಭಾವದಿಂದ ಉಂಟಾಗಿರುವ ವಿಶೇಷ ಪರಿಸ್ಥಿತಿಯಲ್ಲಿ ಸರ್ಕಾರದವರೇ ಪ್ರವೇಶಿಸಿ ಪ್ರಜೆಗಳೆಲ್ಲರಿಗೂ ಅತ್ಯಗತ್ಯವಾದ ಪ್ರಮಾಣದಲ್ಲಿ ಅದನ್ನು ಒದಗಿಸಲು ತಕ್ಕ ಏರ್ಪಾಡು ಮಾಡಿರುವರು. ರಾಜಧಾನಿಯಾದ ಈ ನಗರದಲ್ಲಿಯೂ ಸಹ ಸರ್ಕಾರದವರೇ ಈ ಬಗ್ಗೆ ಸೂಕ್ತವಾದ ಏರ್ಪಾಡುಗಳನ್ನು ಕೂಡಲೇ ಕೈಗೊಳ್ಳುವುದು ಅತ್ಯಂತ ಜರೂರಾದ ವಿಷಯವಾಗಿರುತ್ತದೆ.

ರಾಜ್‌ಕಮಲ್, ಮೈಸೂರು

೨-೩-೪೯ ರಿಂದ ೩ ನೇ ವಾರ

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ (ಕನ್ನಡಚಿತ್ರ)

ಇಂಪಾದ ಗಾನಗಳು! ಸೊಂಪಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!!

ಇವೆಲ್ಲವನ್ನೂ ಇಂದೇ ನೋಡಿ.

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

Edited, printed and published by A. R. Nagarajan at the Sadhvi Press D. Subbiah Road, Mysore.

ಕೈ ಮಗ್ಗದವರ ಅಹವಾಲು

ಸ್ವಂ ಸು] ಚಾಮರಾಜನಗರ ೨೭

ಸರ್ಕಾರದವರು ಕೈಮಗ್ಗದ ಬಟ್ಟೆಗಳ ಬೆಲೆ ಹತೋಟಿಗೆ ಸಂಬಂಧಿಸಿ ಹೊರಡಿಸಿರುವ ಕಾನೂನಿಂದ ತಮಗುಂಟಾಗಿರುವ ತೊಂದರೆಗಳನ್ನು ಕುರಿತು, ನೇಯ್ಗೆಕಾರರು ಜಿಲ್ಲಾಧಿಕಾರಿಗಳಿಗೂ, ಸಚಿವರಿಗೂ ಅರ್ಜಿ ಸಲ್ಲಿಸಿದ್ದಾರೆ. ಅವರ ಅಹವಾಲಿನಲ್ಲಿ ಈ ಅಂಶಗಳು ನಮೂದಾಗಿವೆ :-

ಚಾಮರಾಜನಗರವೊಂದೇ ಈ ಕ್ಷೇತ್ರ ಕ್ಕೆಲ್ಲಾ 'ಸೀಲಿಂಗ್ ಕೇಂದ್ರ'. ೩೦ ಮೈಲಿ ದೂರದಿಂದ ಇಲ್ಲಿಗೆ ಬರಬೇಕಾಗಿದೆ. ಅಧಿಕಾರಿಗಳು ಸೀಲು ಮಾಡಲು ೧೦ ದಿನಗಳನ್ನು ತೆಗೆದುಕೊಳ್ಳುತ್ತಾರೆ. ಇದರಿಂದ ೨ ಸಲ ಬಂದು ಹೋಗಬೇಕಾಗುವುದು. ಇದಕ್ಕೆ ತಗಲುವ ವೆಚ್ಚ ಆದಾಯಕ್ಕಿಂತ ಏರುವುದು. ಆದ್ದರಿಂದ ೨ ದಿನಗಳೊಳಗೆ ಸೀಲ್ ಮಾಡಿಸುವಂತೆ ಮಾಡಬೇಕು. ಮಗ್ಗ ೧ ಕ್ಕೆ ೩ ಕಟ್ಟಿನಂತೆ ಕೊಡುತ್ತಿದ್ದ ನೂಲನ್ನು ಈಗ ೨ ಕಟ್ಟಿಗೆ ಇಳಿಸಲಾಗಿದೆ. ಇದು ಕೇವಲ ೧೦ ದಿನಗಳಿಗೆ ಮಾತ್ರ ಸಾಕು. ಈ ಪ್ರಮಾಣವನ್ನು ಹೆಚ್ಚಿಸಬೇಕು. ಕಾನೂನಿನ ಪ್ರಕಾರ ನೇಕಾರರು ತಮ್ಮ ಬಟ್ಟೆಯನ್ನು ತಮಗಿಷ್ಟ ಬಂದವರಿಗೆ ಮಾರಲು ಅವಕಾಶವಿದ್ದರೂ ಹಲವು ವರ್ತಕರು ತಮಗೇ ಮಾರಬೇಕೆಂದು ಬಲವಂತಪಡಿಸುತ್ತಿದ್ದಾರೆ. ಇದು ತಪ್ಪಬೇಕು. ಕಾನೂನು ಜಾರಿಗೆ ಬರುವುದಕ್ಕಿಂತ ಮುಂಚಿನ ಕೋಟಾವನ್ನು ಕೆಲವರಿಗೆ ಇನ್ನೂ ಕೊಟ್ಟಿಲ್ಲ. ಅದಕ್ಕೂ ಅಧಿಕಾರಿಗಳ ಸರ್ಟಿಫಿಕೇಟ್ ಬೇಕೆಂದು ಒತ್ತಾಯ ನಡೆಯುತ್ತಿದೆ. ಕೂಡಲೇ ಇವುಗಳನ್ನು ವಿಮರ್ಶಿಸಿ ಬಡ ಜನರ ಕಷ್ಟವನ್ನು ನೀಗಿಸಬೇಕಾಗಿದೆ.

ಮುಂದೆ ಬರಲಿರುವ ಶ್ರೀರಂಗಪಟ್ಟದ ಪುರಸಭೆಯ ಚುನಾವಣೆಯ ಓಟರು ಮಹಾಶಯರಲ್ಲಿ

ಕೆ. ರಾಮಯ್ಯ

ಉರುಫ್ ಅಂಬಾಜಿರಾವ್ ಪ್ರಾರ್ಥನೆ.

ತಾ|| ೧೦-೩-೪೯ನೇ ದಿವಸ ನಡೆಯುವ ಚುನಾವಣೆಗೆ ನಾನೂ ಒಬ್ಬ ಉಮೇದುವಾರನಾಗಿ ನಿಂತಿರುವುದರಿಂದ ಗಣಪತಿ ಗುರ್ತಿಗೆ ಓಟು ಮಾಡಿ ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಕೆ. ರಾಮಯ್ಯ ಉ|| ಅಂಬಾಜಿರಾವ್.

(ಚುನಾವಣಾ ಓಟರು ಲಿಸ್ಟಿನಲ್ಲಿ ಕೆ. ರಾಮಯ್ಯ ಎಂಬುದಾಗಿರುತ್ತೆ. ರೂಢಿವಾಚಕವಾಗಿ ಅಂಬಾಜಿರಾವ್ ಎಂದು ಚಾಲ್ತಿಯಲ್ಲಿರುತ್ತೆ. ಕೆ. ರಾಮಯ್ಯ ಎಂದು ಗಣಪತಿ ಮಾರ್ಕಿರುವುದನ್ನೇ ಅಂಬಾಜಿರಾವ್ ಎಂದು ಭಾವನೆಮಾಡಿಕೊಂಡು ಓಟನ್ನು ಮಾಡಿ)

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಜಾಹಿರಾತಿನ ದರಗಳಿಗೆ ವಿಚಾರಿಸಿರಿ

ಪ್ರಕಾಶಂ ರಾಜೀನಾಮೆ ಇತ್ತಿಲ್ಲ

ತಮಿಳು ನಾಡಿನ ೫ ಜನ ಗ... ಸಲ್ಲಿಸಿದ್ದ ರಾಜೀನಾಮೆಯನ್ನು ಶ್ರೀ ... ಶಂಕರವರು ಅಂಗೀಕರಿಸಿ ಅವರ ... ನ್ನು ಸದ್ಯದಲ್ಲೇ ಇತರರಿಗೆ ಹಂಚಲಿ... ತಾವು ರಾಜೀನಾಮೆ ಸಲ್ಲಿಸುವರೆಂಬ ... ರ ಸುಳ್ಳೆಂದೂ, ಸರಿಯಾದ ಕಾಲದಲ್ಲಿ... ಗೆ ರಾಜೀನಾಮೆ ಸಲ್ಲಿಸಬೇಕೆಂಬುದು ... ಗೆ ಗೊತ್ತೆಂದೂ ಶ್ರೀ ಪ್ರಕಾಶಂರವರು ... ಸಿದ್ದಾರೆ.

ಟ್ರಾನ್ಸ್ ಜೋರ್ಡಾನಿಯ ದೊರೆಗಳ ಮೇಲೆ ಬಾಂ...

ಫೆಬ್ರವರಿ ೨ ನೇ ತಾ|| ಅಮ್ಮಾ... ಗರದಲ್ಲಿ ಟ್ರಾನ್ಸ್ ಜೋರ್ಡ್ ಅರಸ... ವಿ|| ಅಬ್ದುಲ್ಲಾರವರ ಮೇಲೆ ಬಾ... ಪ್ರಯೋಗ ನಡೆಯಿತೆಂದು ಮಾಸ್ಕೋ ... ಡಿಯೋ ಪ್ರಕಟಿಸಿದೆ.

ಗೂರಲಿಗೆ ಭಾವಿ ನೀರೇ ಔಷಧಿ

ಹಿಂದೂಪುರದ ಬಳಿ ಇರುವ ... ಲ್ಲಿ ಎಂಬಲ್ಲಿನ ಭಾವಿಯೊಂದರ ನೀ... ಕುಡಿದರೆ ಗೂರಲೂ, ಹೊಟ್ಟೆ ಸಂಬ... ದ ರೋಗಗಳೂ ಕೂಡಲೇ ಗುಣವಾ... ದೆಂದು ಹೇಳಲಾಗಿದೆ. ಆ ಭಾವಿ... ಗಾಗಿ ಸಹಸ್ರಾರು ಜನರು ಅಲ್ಲಿಗೆ ಹೋ... ತ್ತಿದ್ದಾರೆಂದು ಸುದ್ದಿ ಬಂದಿದೆ. ... ಳಲ್ಲಿ ಆ ನೀರನ್ನು ತೆಗದುಕೊಂಡು ... ಲೆಯುವರಿಗೆ ಕೊಡಲಾಗುತ್ತಿದೆ.

ಗರ್ಭ ರಕ್ಷಿಣಿ

ಅರ್ವೇಯ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ... ದೃಢವಾಗಿ ಬೆಳೆದು ಗರ್ಭಸ್ರಾವವಾಗ... ನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ... ತೊಂದರೆಯೂ ಇಲ್ಲದೆ ಸರಾಗವಾಗಿ ... ವಾಗುವುದು.

ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ. ವಿ. ವೆಂಕಟರಾಮ... ಡಿ|| ಬೋರ್ಡ್ ವೈದ್ಯ, ಅರಕಲವಾ... ಚಾಮರಾಜನಗರ ತಾ||

ನಾಯಿಕೆಮ್ಮಿನ ಔಷಧಿ

7—8 ದಿವಸಗಳಲ್ಲೇ ಖಾತರಿ... ವಾಸಿಯಾಗುತ್ತೆ

ಕ್ರಯ ಬಾಟ್ಲಿಗೆ 1-8-0

ಗೂರ್ಲು—ಉಬ್ಬಸಕ್ಕೆ (Asthma)

ಖಾತರಿಯಾದ ಔಷಧಿ ದೊರೆವ... ಅನೇಕ ದೊಡ್ಡ ಮನುಷ್ಯರು ಬ... ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ... ದ್ದಾರೆ.

ದ(Appendecitis) ಗು ... ಮತ್ತು (Tonsils) ಗಳಾಯುಕ... ಳನ್ನು ಆಪರೇಷನ್ ಇಲ್ಲದೆ ಗುಣಪಡಿ... ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್. ಎಸ್ ಪಂಡಿ... ದಿವಾನ್ಸ್‌ರೋಡ್, ಗೊಲ್ಲಗೇರಿ ವೈದ...

ರಿ. ನಂ. 392 **WEEKLY EDITION** ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೩—೩—೪೭ [ಸಂಚಿಕೆ ೩೧

ಮೌಂಟ್ ಬ್ಯಾಟನ್ನರೇ ಕಡೆಯ ವೈಸರಾಯರು

ಸಕ್ಕರೆ ಕಾರ್ಖಾನೆ ಪಂಚಾಯಿತಿ

ಮೈಸೂರು ೩

...ದಿಂದ ವಜಾ ಮಾಡಿದ್ದ ಕಾಳಯ್ಯ ...ನ್ನು ಕೆಲಸಕ್ಕೆ ತೆಗೆದುಕೊಂಡು ಆ ...ಕ್ಕೆ ಪರಿಹಾರ ಕೊಡುವ ಮತ್ತು ...ರಿಗೆ ಒಂದು ತಿಂಗಳ ಸಂಬಳವ ...ಬೋನಸ್ಸಾಗಿ ಕೊಡುವ ವಿಚಾರ ...ಮಂಡ್ಯದ ಸಕ್ಕರೆ ಗಿರಣಿ ಮಾಲೀಕ ...ತ್ತು ಕಾರ್ಮಿಕರಿಗೂ ಉಂಟಾಗಿದ್ದ ...ಪ್ರಾಯಗಳನ್ನು ನಿವಾರಿಸುವ ಸ ...ನ ಸರ್ಕಾರದವರು ಪಂಚಾಯಿತಿ ...ಯೊಂದನ್ನು ರಚಿಸಿರುತ್ತಾರೆ ಇದ ...ವೃತ್ತ ನ್ಯಾಯಾಧೀಶರಾದ ಶ್ರೀ ಟಿ. ...ವೇಲು ಮೊದಲಿಯಾರರು ಅಧ್ಯಕ್ಷ ...ರೂ, ಶ್ರೀ ಎಸ್ ಸೀತಾರಾಂರವರು ...ು ಮಾಲೀಕರ ಪ್ರತಿನಿಧಿಗಳಾಗಿ ...ಶ್ರೀ ಟಿ. ಮರಿಯಪ್ಪನವರು ಕಾ ...ರ ಪ್ರತಿನಿಧಿಗಳಾಗಿಯೂ ನೇಮಕ ...ವಲ್ಪಟ್ಟಿದ್ದಾರೆ

...ನಿಸಿಪಲ್ ಕೆಲಸಗಾರರ ಸಂಘ

...ಲ್ಯಾಂಡ ಸಂಘದ ಕಾರ್ಯಕಾರಿ ಸ ...ು ಸಭೆಯು ನೆನ್ನೆ ಸಂಘದ ಕಛೇರಿ ...ಸೇರಿದ್ದಿತು. ಇದೇ ೧ ನೇ ತಾ॥ ...ದಿನ ಜಾಡಮಾಲಿಗಳು ಆರಂಭ ...ಸಬೇಕೆಂದಿದ್ದ ಮುಷ್ಕರವನ್ನು ಮುರಿ ...ು ಮೈಸೂರಿನಿಂದ ಜಾಡಮಾಲಿಗಳ ...ಕರೆತರುವುದನ್ನು ಖಂಡಿಸಿ, ಈ ರೀತಿ ...ರದವರು ಕೂಲಿಗಾರರ ವಿರುದ್ಧ ನಡೆ ...ಸುವ ಕ್ರಮಗಳನ್ನು ತಡೆಯುವಂ ...ಾಂಗ್ರೆಸ್ ಮತ್ತು ಇತರ ಪೌರಸಭಾ ಸ ...ರನ್ನು ಪ್ರಾರ್ಥಿಸುವ ಮತ್ತು ಸರ್ಕಾರಿ ...ರಿಗೆ ಮಂಜೂರಾಗಿರುವಂತೆ ಪೌರದ ಕೆಲಸಗಾರರಿಗೂ ಸಹ ತಾತ್ಕಾಲಿಕ ಪ ...ರವನ್ನು ಕೊಡಲು ಪೌರಸಭೆಯನ್ನು ...ತ್ತಿಯ ಪಡಿಸುವ ನಿರ್ಣಯಗಳು ಅಂಗೀ ...ರವಾದವು

ಪ್ರದೋಷ ಸಂಗೀತ

...ಗನವಿಶಾರದ ಬಿಡಾರಂ ಕೃಷ್ಣಪ್ಪನವರ ...ನ್ನ ಸೀತಾರಾಮ ಮಂದಿರದಲ್ಲಿ ಪ್ರದೋ ...ಪ್ರಯುಕ್ತ ನಾಳೆ ಸಂಜೆ ೬॥ ಘಂ ...ಶ್ರೀಮತಿ ಮಂಜುಳಾಬಾಯಿಯವರ ...ೀತ ಕಛೇರಿಯನ್ನು ಪಿಟೀ. ಕೆ. ವಿ ರಾಜ ...ಂಗಾಚಾರ್ಯರ ಪಿಟೀಲು ಮತ್ತು ವಿ॥ ಎಚ್ ...ವರದಾಚಾರ್ಯರ ಮೃದಂಗಗಳೊಡನೆ ...ಡಿಸಿರುತ್ತದೆ. ಸರ್ವರಿಗೂ ಆಹ್ವಾನ ...ಟು

ಉಚಿತ ಶಿಕ್ಷಣ

ಕೋವರ್ಸೆಕೆಂಡರಿ ಪರೀಕ್ಷೆಗೆ ಕುಳಿತ ...ತ ವಿದ್ಯಾರ್ಥಿಗಳಿಗೆ ಸದ್ವಿದ್ಯಾಪಾಠಶಾಲೆ ...ಲ್ಲಿ ಯಂಗ್‌ಮೆನ್ಸ್ ಲೀಗಿನ ಆಶ್ರಯದ ...ನಡೆಸಬೇಕಾಗಿದ್ದ ಉಚಿತ ತರಗತಿಗಳು 'ವಾಯ್ ಹೈಸ್ಕೂಲಿನ ಸಭಾಂಗಣದಲ್ಲಿ ...ಯುವುವೆಂದು ಸಂಘದ ಕಾರ್ಯದರ್ಶಿಗಳು ...ಸಿರುತ್ತಾರೆ

ಕಾಳಸಂತೆ ಪತ್ತೆ

...ಸು] ಚಾಮರಾಜನಗರ ೧

ಇಲ್ಲಿನ ಅಮಲ್ದಾರರಾದ ಶ್ರೀ॥ ಹಾಲಪ್ಪ ...ವರೂ, ಪೋಲೀಸ್ ಇನ್ಸ್‌ಪೆಕ್ಟರೂ, ತಮ್ಮ ...ಟುಂಬಿಗಳೊಡನೆ ಟೌನ್ ಜವಳಿ ವರ್ತಕ ...ರದ ಶ್ರೀ ಸತ್ಯನಾರಾಯಣ ಹಾಲ್, ನಗ ...ರ್ ಸ್ಟೋರ್ಸ್, ಎ ಶ್ರೀನಿವಾಸಶೆಟ್ಟಿಪ್ಪ ...ಂಡ್ ಸನ್ಸ್ ಇವರುಗಳ ಅಂಗಡಿಯಲ್ಲಿ ...ಳ ಸಂತೆಯ ಮಾರಾಟಕ್ಕಾಗಿ ಇಟ್ಟಿದ್ದ ...ಜವಳಿಗಳನ್ನು ಪತ್ತೆಹಚ್ಚಿ ಮೊಕದ್ದಮೆ ದಾ ...ಖಲ್ ಮಾಡಿದ್ದಾರೆ.

ಪ್ರಾ॥ ಪ್ರಾ॥ ಸಭೆಯ ವರದಿಯ ರದ್ದು

ಸ್ವಂ ಸು] ಬೆಂಗಳೂರು ೩

ಕಳೆದ ವರ್ಷ ಬಡ್ಜೆಟ್ ಅಧಿವೇಶನದಲ್ಲಿ ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾಪರಿತ್ಯಾಗಮಾಡಿದ್ದಾಗ ಸಭೆಯಲ್ಲಿ ಕೋರಂ ಇಲ್ಲದಿದ್ದ ಸಮಯದಲ್ಲಿ ನಡೆದ ಕಾರ್ಯಕಲಾಪಗಳನ್ನು ಸಭೆಯ ವರದಿಯಲ್ಲಿ ಸೇರಿಸಲಾಗದೆಂದು ಮೊನ್ನೆ ದಿನ ನ್ಯಾಯಾಂಗ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಹಕ್ಕುಬಾಧ್ಯತಾ ಸಮಿತಿಯಲ್ಲಿ ಬಹುಮತದಿಂದ ತೀರ್ಮಾನಿಸಲಾಯಿತು

ಸಂಬಳ ಸಮಿತಿ

ಸಂಬಳ ಸಮಿತಿಯವರು ಇದುವರೆಗೆ ರೆವಿನ್ಯೂ, ಸರ್ವೆ, ಪೋಲೀಸ್, ನ್ಯಾಯಾಂಗ ಮತ್ತು ಶಿಕ್ಷಣ ಇಲಾಖೆಗಳ ನೌಕರರ ಸಂಬಳ ಸಾರಿಗೆಗಳ ವಿಷಯವನ್ನು ಪರಿಶೀಲಿಸಿರುವುದಾಗಿ ತಿಳಿದುಬಂದಿದೆ ಸಮಿತಿಯ ಮುಂದಿನ ಸಭೆಯು ಇದೇ ೧೦ ನೇ ತಾ॥ ನಡೆಯುವದು.

ಮದರಾಸ್ ಸಂಸ್ಥಾನಗಳ ರೆಸಿಡೆಂಟರು

ಮದರಾಸ್ ಸಂಸ್ಥಾನಗಳ ರೆಸಿಡೆಂಟರಾದ ಕರ್ನಲ್ ಎಡ್ವರ್ಡ್ಸ್‌ರು ಪತ್ನೀಸಮೇತ ಬೆಂಗಳೂರಿಗೆ ೫ ನೇ ತಾ॥ ಭೇಟಿಕೊಟ್ಟು ನಾಲ್ಕಾರು ದಿನಗಳು ಇರುವುದಾಗಿ ಗೊತ್ತಾಗಿದೆ

ಸರ್ಕಾರಿ ಭವನದ ಮೇಲೆ ಮುಸ್ಲಿಂ ಲೀಗಾ ಧ್ವಜ!

ಮದ್ರಾಸ್ ಸರ್ಕಾರಕ್ಕೆ ಸೇರಿದ 'ಬ್ಯಾಂಕ್ವೆಟಿಂಗ್ ಭವನದ ಮೇಲ್ಭಾಗದಲ್ಲಿ ಮುಸ್ಲಿಂ ಲೀಗಿನ ಧ್ವಜವು ಮೊನ್ನೆ ಹಾರಾಡುತ್ತಿದ್ದುದು ಕಂಡುಬಂದಿತು ಯಾವರೀತಿ ಅದು ಅಲ್ಲಿಗೆ ಬಂದಿತೆಂಬುದು ತಿಳಿದುಬಂದಿಲ್ಲ

ಜೆರುಸಲೆಮ್ಮಿನಲ್ಲಿ ಯೆಹೂದ್ಯರ ಧಾಳಿ

ಯೆಹೂದ್ಯರನ್ನು ಪ್ಯಾಲೆಸ್ಟೈನಿಂದ ಹೊರಗೆ ಕಳುಹಿಸುತ್ತಿರುವ ನೀತಿಯನ್ನು ವಿರೋಧಿಸಿ ಅವರು ಘೋರ ಕದನವನ್ನೇ ಹೂಡಿದ್ದಾರೆ. ಬ್ರಿಟಿಷ್ ಅಧಿಕಾರಿಗಳ ಕ್ಲಬ್ಬಿನ ಭವನವನ್ನು ಒಡೆಯಿಸಿದ್ದಾರೆ ಟೆಲ್ ಅವಿವ್ ಮತ್ತು ಇತರ ಕಡೆಗಳಲ್ಲಿ ಉಗ್ರ ಧಾಳಿಯನ್ನು ನಡೆಸುತ್ತಿದ್ದಾರೆ ಹಲವರು ಜನರು ಮರಣ ಹೊಂದಿ ೧೪ ಜನರಿಗೆ ಗಾಯಗಳಾಗಿವೆ ಇಬ್ಬರು ಪೋಲೀಸರೂ ಸಹ ಮಡಿದಿದ್ದಾರೆ ಮಾರ್ಷಲ್ ಲಾ ವನ್ನು ಆ ಪ್ರಾಂತ್ಯದಲ್ಲಿ ಜಾರಿ ಮಾಡಲಾಗಿದೆ

ಬ್ರಿಟಿಷರ ಅಧಿಕಾರವನ್ನು ವರ್ಗಾಯಿಸಲು ಸಿದ್ಧತೆ

ಭಾರತವನ್ನು ಬ್ರಿಟಿಷರು ಬಿಟ್ಟುಹೋಗುವ ಕಾಲವು ಸ್ಪಷ್ಟವಾಗಿ ನಿರ್ಧಾರಿತವಾಗಿರುವುದರಿಂದ ಅವರು ಭಾರತೀಯರಿಗೆ ಶಾಶ್ವತವಾಗಿ ತಮ್ಮ ಅಧಿಕಾರವನ್ನು ವರ್ಗಾಯಿಸಲು ಮುಂದೆ ಬರುವ ಹದಿನಾಲ್ಕು ತಿಂಗಳುಗಳಲ್ಲಿ ತೀವ್ರವಾದ ಚಟುವಟಿಕೆಗಳನ್ನು ನಡೆಸುವರೆಂದು ಲಂಡನ್ ರಾಜಕೀಯ ವಲಯಗಳಲ್ಲಿ ನಂಬಲಾಗಿದೆ. ರಾಜ್ಯಾಂಗವನ್ನು ನಿರ್ಮಿಸುವುದರಲ್ಲಿ ಸಕಲ ಭಾರತೀಯ ಪಂಗಡಗಳನ್ನು ಒಂದುಗೂಡಿಸಲು ಬ್ರಿಟಿಷ್ ಸರ್ಕಾರದವರು ಕಟ್ಟಕಡೆಯವರೆಗೂ ಸರ್ವಪ್ರಯತ್ನಗಳನ್ನೂ ಮಾಡುವರೆಂದು ಹೇಳಲಾಗಿದೆ ಭದ್ರವಾದ ಮತ್ತು ಸ್ಥಿರವಾದ ರಾಷ್ಟ್ರೀಯ ಸರ್ಕಾರಕ್ಕೆ ಅಧಿಕಾರವನ್ನು ವರ್ಗಾಯಿಸಲು ಹೊಸ ವೈಸರಾಯರು ಮಾಡುವ ಸಕಲ ಪ್ರಯತ್ನಗಳಿಗೂ ಬ್ರಿಟಿಷ್ ಸರ್ಕಾರದ ಪೂರ್ಣ ಬೆಂಬಲವಿರುತ್ತದೆಂದು ಹೇಳಲಾಗಿದೆ

ಹೈದರಾಬಾದಿಗೆ ಖಾಸಗೀ ಮಂತ್ರಿಗಳು

ನೂತನ ಸುಧಾರಣೆಗಳ ಪ್ರಕಾರ ಹೈದರಾಬಾದಿನಲ್ಲಿ ರಚಿತವಾಗಿರುವ ಶಾಸನ ಸಭೆಗೆ ಚುನಾಯಿತರಾಗಿ ಬಂದಿರುವ ಒಬ್ಬ ಹಿಂದೂ ಮತ್ತು ಒಬ್ಬ ಮುಸ್ಲಿಂ ಸದಸ್ಯರನ್ನು ಮಂತ್ರಿಯಾಗಿ ತೆಗೆದುಕೊಳ್ಳುವ ಉದ್ದೇಶವನ್ನು ನೈಜಾಮರು ಪ್ರಕಟಪಡಿಸಿರುತ್ತಾರೆ.

ಕೃಷ್ಣರಾಜ ಮತ್ತು ಬಿಲ್ಲೆ ಚಿಲ್ಲರೆ ಅಂಗಡಿ ವರ್ತಕರ ಸಂಘ

ಮೈಸೂರು ೩

ಮೇಲ್ಕಂಡ ಸಂಘವನ್ನು ವರ್ತಕರುಗಳು ನಿನ್ನೆ ದಿನ ಶ್ರೀ ಗೌಡ ತಿಮ್ಮಪ್ಪನವರ ಮನೆಯಲ್ಲಿ ಪೌರಸಭಾ ಸದಸ್ಯರಾದ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಸ್ಥಾಪಿಸಿರುತ್ತಾರೆ ಮೊಹಲ್ಲಾ ನಿವಾಸಿಗಳಿಗೆ ಕಂಟ್ರೋಲ್ ಪದಾರ್ಥಗಳನ್ನು ಸುಲಭವಾಗಿ ದೊರಕಿಸಿಕೊಡುವುದೇ ಸಂಘದ ಮುಖ್ಯೋದ್ದೇಶ ...ದ್ದೇಶ...ಯೇ ಸಂಘದವರು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ತಮ್ಮ ...ವನ್ನು ಹೇಳಿಕೊಳ್ಳಲಾಗಿ ...ದ್ದಾರೆ

ಪರೀಕ್ಷೆ

ಈ ...ನ ...ತ್ರಿ ... ...ಗೆ ಏಕಾದಶೀ ಪ್ರಯುಕ್ತ ಶಿವರಾಂಪೇಟೆಯಲ್ಲಿರುವ ಶ್ರೀ ವಿಠ್ಠಲರಾಯರ ರಾಮಮಂದಿರದಲ್ಲಿ ಶ್ರೀ ವೆಂಕಟಸುಬ್ಬದಾಸರಿಂದ ಪ ...ರೀಕ್ಷಾ ...ಎಂಬ ಹರಿಕಥೆಯು ನಡೆಯುತ್ತದೆ ಸರ್ವರಿಗೂ ಸ್ವಾಗತವಿದೆ

ಕೊನೆಯ ವೈಸರಾಯರು

ಮುಂದೆ ಬರಲಿರುವ ಅಡ್ಮಿರಲ್ ಲೂಯಿ ಮೌಂಟ್‌ಬ್ಯಾಟನ್ನರವರೇ ಹಿಂದೂಸ್ಥಾನದ ಕಟ್ಟಕಡೆಯ ವೈಸರಾಯರಾಗುವರೆಂದು ಹೇಳಲಾಗಿದೆ. ಬರುವ ವರ್ಷ ಬ್ರಿಟಿಷರು ಹಿಂದೂಸ್ಥಾನವನ್ನು ಬಿಟ್ಟು ಹೋಗುವುದರಿಂದ, ಅಲ್ಲಿಂದ ಮುಂದೆ ಬ್ರಿ॥ ವೈಸರಾಯರುಗಳಾಗಲೀ, ಗವರ್ನರುಗಳಾಗಲೀ ಇರುವ ಅಗತ್ಯವಿರುವುದಿಲ್ಲ ಹೊಸ ವೈಸರಾಯರ ಅವಧಿಯೂ ಸಹ ಅತ್ಯಂತ ಕಡಿಮೆಯಾಗಿರುತ್ತದೆ ವೈಸರಾಯರಾಗಿರುವಾಗಲೂ ಅವರು ತಾಂದು ರಾಯಲ್ ನೌಕಾ ದಳದಲ್ಲಿ ಹೊಂದಿರುವ ರಿಯರ್ ಅಡ್ಮಿರಲ್ ರವರ ಉದ್ಯೋಗವನ್ನೇ ಧರಿಸುವರೆಂದು ತಿಳಿದುಬಂದಿದೆ ಅವರ ಅವಧಿಯು ಅಲ್ಪವಾಗಿರುವುದು ಮಾತ್ರವೇ ಅಲ್ಲದೆ ವೈಸರಾಯರ ಉಡುಪನ್ನು ತಯಾರಿಸಲು ಬೇಕಾದ ಸಾಮಗ್ರಿಗಳ ಅಭಾವವೂ ಇದಕ್ಕೆ ಮುಖ್ಯ ಕಾರಣವೆಂದು ಹೇಳಲಾಗಿದೆ

ರಾಜ್ಯಾಂಗಸಭೆಯ ಪ್ರವೇಶಕ್ಕೆ ಕೊಚ್ಚಿಸಂಸ್ಥಾನವು ಸಿದ್ಧ

ಭಾರತ ರಾಜ್ಯಾಂಗ ಸಭೆಯು ಅಪೇಕ್ಷಿಸಿದಾಗ ಕೊಚ್ಚಿಸಂಸ್ಥಾನವು ಅದರಲ್ಲಿ ಪ್ರವೇಶಿಸಲು ಸಿದ್ಧವಿರುವುದಾಗಿ ಅಲ್ಲಿನ ಮಂತ್ರಿ ಶ್ರೀ ಗೋವಿಂದಮೆನನ್ನರು ತಿಳಿಸಿರುತ್ತಾರೆ. ರಾಜ್ಯಾಂಗ ರಚನೆಗೆ ಸಾವಕಾಶವನ್ನುಂಟುಮಾಡಲು ನಾವು ಬಯಸುವುದಿಲ್ಲವೆಂದೂ, ಭಾರತದ ನಾಯಕರಿಗೆ ನೆರವು ನೀಡಲು ನಾವು ಅತ್ಯಂತ ಆಸಕ್ತಿಯುಳ್ಳವರಾಗಿರುವರೆಂದೂ ಅವರು ಹೇಳಿರುವರು ಭಾರತ ರಾಷ್ಟ್ರೀಯ ಶಕ್ತಿಗಳೊಡನೆ ನಾವು ಸೇರುವೆವು; ನಮಗೆ ಯಾವ ತೊಂದರೆಗಳೂ ಇರುವುದಿಲ್ಲ, ನಮಗೆ ಸಂಪೂರ್ಣ ಜವಾಬ್ದಾರಿ ಸರ್ಕಾರವು ದೊರೆಯುವುದೆಂದು ಈಗಾಗಲೇ ನಾವು ಘೋಷಿಸಿದ್ದೇವೆ, ರಾಜ್ಯಾಂಗ ಸಭೆಗೆ ಚುನಾಯಿತ ಖಾಸಗೀ ಸದಸ್ಯರನ್ನೇ ಕಳುಹಿಸುವುದಾಗಿ ಕೊಚ್ಚಿ ಮಹಾರಾಜರು ಹೇಳಿರುತ್ತಾರೆ ಎಂಬುದಾಗಿ ಅವರು ತಿಳಿಸಿರುವರು

ಹನುಮಂತಯ್ಯನವರ ಅಪೀಲು

ಸ್ವಂ. ಸು ಫೋ] ಬೆಂಗಳೂರು ೩

ಶ್ರೀ॥ ಕೆ ಹನುಮಂತಯ್ಯನವರು ತಮ್ಮ ರಾಜದ್ರೋಹದ ಅಪೀಲು ಮೊಕದ್ದಮೆಯಲ್ಲಿ ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ॥ ಎಸ್. ವೆಂಕಟರಂಗಯ್ಯಂಗಾರ್ಯರ ಮುಂದೆ ಈದಿನ ತಾವೇ ಇದಕ್ಕಾಗಿ ಕಾರಾಗೃಹದಿಂದ ಬಂದು ವಾದವಿವಾದಗಳನ್ನು ನಡೆಸಿದರು ತೀರ್ಪಿಗಾಗಿ ಕಾದಿರಿಸಲಾಗಿದೆ

ದರೋಡೆ ಮೊಕದ್ದಮೆ

ಧರ್ಮಾರ್ಥ ...ರ ಬಿ ಎಸ್. ಗೋಪಾಲರಾಯರ ಆಭರಣಗಳ ದರೋಡೆಯ ಅಪಾದನೆ ಮೊಕದ್ದಮೆಯಲ್ಲಿ ಈದಿನ ಕೋರ್ಟಿನ ಪರವಾಗಿ ಡಾ॥ ಡಿಸೋಜ ಮತ್ತು ಡಾ॥ ನ ...ರವರ ಸಾಕ್ಷ್ಯಗಳನ್ನು ತೆಗೆದುಕೊಳ್ಳಲಾಯಿತು ವಿಚಾರಣೆ ನಾಳೆ ಮುಂದುವರಿಯುತ್ತದೆ

ಚನ್ನಪಟ್ಟಣದ ಮೊಕದ್ದಮೆ

...ರಿಗೆ ಪೋಲೀಸ ...ರವಾದ ೧೦ ಜನ ಅಪರಾಧಿಗಳನ್ನು ... ಫಿರ್ಯಾದ್ ... ನಡೆಸಬೇಕೆಂದ ಪೋಲೀಸ್ ... ಮೇಲ್ವಿಚಾರಣೆಯಿಂದ ಸಿಟಿ ಜಿಲ್ಲಾ ಮ್ಯಾಜಿಸ್ಟ್ರೇಟರು ಈ ದಿನ ನಡೆಸಬೇಕಾಗಿದ್ದ ಚನ್ನಪಟ್ಟಣದ ಮೊಕದ್ದಮೆಯನ್ನು ೧೭ ತಾ॥ ನೆ ಮುಂದುವರಿಸಿದ್ದಾರೆ

ಸಾಧ್ವಿ

ತಾ|| ೩-೩-೪೭ ಸೋಮವಾರ

ಯುಗಾದಿ ಹಬ್ಬಕ್ಕೆ ಬಟ್ಟೆ ಸರಬರಾಜು

ಸಂಸ್ಥಾನದ ಹಳ್ಳಿಗಳಲ್ಲಿ ಹಂಚಲು ಸರ್ಕಾರದವರು ಬಟ್ಟೆಯ ಪ್ರಮಾಣವನ್ನು ನಿಗದಿ ಮಾಡಿರುವರಷ್ಟೆ. ಆದರೆ ಮಹಾಜನರಿಗೆ ಬಟ್ಟೆಯ ಸರಬರಾಜು ಸರಿಯಾಗಿ ಆಗುತ್ತಿಲ್ಲವೆಂಬ ಫಿರ್ಯಾದುಗಳು ಬಹಳವಾಗಿ ಕೇಳಬರುತ್ತಿವೆ. ಹಲವು ಕಡೆಗಳಲ್ಲಿ ಇನ್ನೂ ಹೊಸ ಕಾರ್ಡುಗಳನ್ನೇ ಬರೆದು ಕೊಟ್ಟಿಲ್ಲವೆಂದೂ ಸಹ ತಿಳಿದುಬಂದಿದೆ. ಇದಕ್ಕಾಗಿ ಜನರು ಪ್ರತಿದಿನವೂ ಅಲೆದು ವ್ಯರ್ಥವಾಗಿ ಹಿಂದಿರುಗಬೇಕಾಗಿದೆ.

ಸದ್ಯದಲ್ಲಿಯೇ ಯುಗಾದಿ ಹಬ್ಬವು ಬರಲಿದೆ. ಇದು ಸಮಸ್ತ ಹಿಂದೂಗಳಿಗೂ ಅತ್ಯಂತ ಪ್ರಾಮುಖ್ಯವಾದ ರಾಷ್ಟ್ರೀಯ ಹಬ್ಬ. ಅಷ್ಟು ಹೊತ್ತಿಗಾದರೂ ಎಲ್ಲರಿಗೂ ಬಟ್ಟೆಯು ಸಮರ್ಪಕವಾಗಿ ದೊರೆಯುವಂತೆ ಮಾಡಬೇಕಾದುದು ಅಗತ್ಯವಾಗಿದೆ. ಹಬ್ಬಕ್ಕಾಗಿ ಬಟ್ಟೆಯನ್ನು ಕೊಳ್ಳುವ ಕಾತುರವು ಜನರಲ್ಲಿ ದಿನೇ ದಿನೇ ಹೆಚ್ಚುವುದು ಸಹಜವಾಗಿಯೇ ಇದೆ. ಆದರೆ ಅದನ್ನು ಸಂಬರಾಜು ಮಾಡಲು ಸರಿಯಾದ ವ್ಯವಸ್ಥೆಯು ಮಾತ್ರ ಇನ್ನೂ ಆಗಿರುವುದಿಲ್ಲ. ಡಿಪೋಗಳ ಮುಂದೆ ಜನರು ತಂಡೋಪತಂಡವಾಗಿ ಗಂಟೆಗಟ್ಟಲೆ ಕಾಯುವ ದುಸ್ಥಿತಿಯು ತಪ್ಪಿರುವುದಿಲ್ಲ.

ಕಳೆದ ವರ್ಷ ಗೌರೀ ಗಣೇಶನ ಹಬ್ಬದ ಸಮಯದಲ್ಲಿ ಬಟ್ಟೆ ವರ್ತಕರೂ, ಅಧಿಕಾರಿಗಳೂ, ಪೌರಸಭೆಯ ಸದಸ್ಯರೂ ಕಲೆತು ಒಂದು ವ್ಯವಸ್ಥೆಯನ್ನು ಮಾಡಿದ್ದರು. ವರ್ತಕರಲ್ಲಿ ಹಾಜರಿರುವ ಬಟ್ಟೆಯ ಪ್ರಮಾಣವನ್ನು ಲೆಕ್ಕ ಮಾಡಿ, ಅವುಗಳನ್ನು ಎಲ್ಲಾ ಮೊಹಲ್ಲೆಗಳಲ್ಲಿಯೂ ಜನಗಳಿಗೆ ಹಂಚಿಸಲು ಏರ್ಪಾಡು ಮಾಡಲ್ಪಟ್ಟಿತ್ತು. ಪೌರಸಭೆಯ ಸದಸ್ಯರುಗಳು ಈ ಕಾರ್ಯದಲ್ಲಿ ಸ್ವತಃ ಶ್ರದ್ಧೆ ವಹಿಸಿ ನಿಂತು ಮಹಾಜನರಿಗೆ ಬಟ್ಟೆಗಳನ್ನು ವಿನಿಯೋಗ ಮಾಡಿಸಿದರು. ಸುಮಾರು ಐವತ್ತು ಸಾವಿರ ರೂ ನ ಬಟ್ಟೆಯು ಈ ರೀತಿ ಸಾರ್ವಜನಿಕರಿಗೆ ಹಂಚಲ್ಪಟ್ಟಿತು. ಈಗಲೂ ಇಂತಹ ವ್ಯವಸ್ಥೆಯೊಂದನ್ನು ಮಾಡುವುದು ಅತ್ಯವಶ್ಯಕವಾಗಿದೆ.

ಹಬ್ಬವು ಸಮೀಪಿಸುತ್ತಿರುವುದರಿಂದ ಬೇಗನೆ ಸೂಕ್ತವಾದ ಕಾರ್ಯಕ್ರಮಗಳನ್ನು

ಕಂಟ್ರೋಲ್ ಧಾರಣೆಯಂತೆ

ಹುರಿಗಡಲೆಯು

ಬೇಕಾದಷ್ಟು

ಬೆಳಿಗ್ಗೆ 10 ರಿಂದ 1 ಘಂಟೆ, ಸಾಯಂಕಾಲ 4 ರಿಂದ 7 ಘಂಟೆ ವರೆಗೂ ದೊರೆಯುತ್ತದೆ

ರೂ 1ಕ್ಕೆ 1ನೇ ನಂ. 2½ ಸೇರು.

ರೂ. 1ಕ್ಕೆ 2ನೇ ನಂ. 2¾ ಸೇರು.

ಸಿ. ವೆಂಕಟ ನರಸಿಮ್ಹಯ್ಯ,

L. No. 584.

ಕಡಲೆ ಅಂಗಡಿ, ಸಂತೇಪೇಟೆ, ಮೈಸೂರು.

Edited, printed and published by A. R. Nagarajan at the Sadhvi Press D-Subbiah Road, Mysore.

ವಾರ ಭವಿಷ್ಯ

(ಶ್ರೀ ವಿದ್ಯಾನಂದಸ್ವಾಮಿಗಳಿಂದ)

ತಾ|| ೩-೩-೪೭ ರಿಂದ ೯-೩-೪೭ ರ ವರೆಗೆ

ಮೇಷ- ಆರೋಗ್ಯ ಚೆನ್ನಾಗಿರುತ್ತದೆ; ಧನಲಾಭ ಉತ್ತಮ. ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ. ವ್ಯಾಪಾರದಲ್ಲಿ ಲಾಭ. ಮಿತ್ರರಿಂದ ಸಹಾಯ, ಮಂಗಳ ಕಾರ್ಯಗಳಿಗಾಗಿ ಖರ್ಚು, ಮತ್ತು ಪ್ರವಾಸ, ತಾ|| ೪, ೬, ೯ ಲಾಭ, ಕಲಹ.

ವೃಷಭ- ಆರೋಗ್ಯ ಸಾಧಾರಣವಾಗಿರುತ್ತದೆ, ಧನಾದಾಯ ಉತ್ತಮ, ವ್ಯವಹಾರಗಳಲ್ಲಿ ಅಧಿಕಾರಿವರ್ಗದವರಿಂದ ಸಹಾಯ, ವ್ಯಾಪಾರದಲ್ಲಿ ಶತ್ರುಗಳಿಂದ ತೊಂದರೆ, ಪ್ರವಾಸದಿಂದ ನಷ್ಟ, ತಾ|| ೫, ೭ ನಷ್ಟ, ಚಿಂತೆ, ಅಪವಾದ.

ಮಿಥುನ- ಪ್ರಾಕೃತಿಕ ಸ್ಥಿತಿ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ಸೋಲು, ಶತ್ರುಗಳಿಂದ ತೊಂದರೆ, ವ್ಯಾಪಾರದಲ್ಲಿ ನಷ್ಟ, ಮಿತ್ರರಿಂದ ತಿರಸ್ಕಾರ, ಬಂಧುಜನರ ಶತ್ರುಗಮನ, ತಾ|| ೩, ೫, ೭ ಸಾಧಾರಣ ಲಾಭ ಶಾಂತಿ.

ಕಟಕ- ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ವ್ಯಾಪಾರದಲ್ಲಿ ಆಸಕ್ತಿ, ಮಿತ್ರರಿಂದ ಸಹಾಯ, ತಾ|| ೫, ೮ ಪ್ರವಾಸ, ಸಂತೋಷ.

ಸಿಂಹ- ಆರೋಗ್ಯ ಚೆನ್ನಾಗಿರುತ್ತದೆ. ಧನಲಾಭ ಉತ್ತಮವಾಗಿರುತ್ತದೆ, ಉದ್ಯೋಗ ವ್ಯವಹಾರಗಳಲ್ಲಿ ಬೇಸರಿಕೆ, ಬಂಧುಗಳಿಂದ ತಿರಸ್ಕಾರ, ವ್ಯಾಪಾರದಿಂದ ಪ್ರವಾಸ ಮತ್ತು ಲಾಭ, ರಾಜಕೀಯ ಕಾರ್ಯಗಳಿಗಾಗಿ ಖರ್ಚು, ತಾ|| ೪, ೬, ೭ ಕಲಹ, ಚಿಂತೆ.

ಕನ್ಯಾ- ಆರೋಗ್ಯ ಉತ್ತಮ; ಧನಾದಾಯ ಸಾಧಾರಣ, ಉದ್ಯೋಗ, ವ್ಯವಹಾರಗಳಿಂದ ಮೇಲ್ಪಟ್ಟವರೊಡನೆ ಅಸಮಾಧಾನ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು; ಶುಭ ಕಾರ್ಯಗಳಿಗಾಗಿ ಪ್ರವಾಸ, ತಾ|| ೫, ೬, ೮ ಲಾಭ, ಶಾಂತಿ, ಮಿತ್ರಭೇಟಿ.

ತುಲಾ- ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ, ವ್ಯವಹಾರಗಳಲ್ಲಿಯೂ, ವ್ಯಾಪಾರದಲ್ಲಿಯೂ ಶತ್ರುಗಳಿಂದ ವಿಶೇಷ ತೊಂದರೆ, ಆಪ್ತಜನರಿಂದ ತಿರಸ್ಕಾರ, ಪ್ರವಾಸದಿಂದ ಆಘಾತ, ತಾ|| ೪, ೬, ೮ ಶಾಂತಿ; ಮಿತ್ರಸಹಾಯ.

ವೃಶ್ಚಿಕ- ಪ್ರಾಕೃತಿಕ ಸ್ಥಿತಿ ಕೆಟ್ಟು ವೈದ್ಯರ ನೆರವು ಬೇಕಾಗುತ್ತದೆ, ಧನಲಾಭ ಸಾಧಾರಣ, ಯುಕ್ತಿಸಿದ ಕಾರ್ಯಗಳಲ್ಲಿ ಜಯ, ಮಂಗಳ ಕಾರ್ಯಗಳಿಗಾಗಿ ಖರ್ಚು ಮತ್ತು ಪ್ರವಾಸ, ಬಂಧು ದರ್ಶನ, ತಾ|| ೫, ೭ ಲಾಭ, ಶಾಂತಿ, ಸಂತೋಷ.

ಧನುಸ್ಸು- ಆರೋಗ್ಯ ಉತ್ತಮ, ಧನಲಾಭ ಚೆನ್ನಾಗಿರುತ್ತದೆ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ರಾಜಕೀಯ ಜನಗಳ ಸ್ನೇಹ, ವ್ಯಾಪಾರದಲ್ಲಿ ಮಿತ್ರ ಸಹಾಯ, ತಾ|| ೪, ೫, ೯ ಲಾಭ, ಪ್ರವಾಸ, ಬಂಧುಜನರ ಶತ್ರುಗಮನ.

ಮಕರ- ಆರೋಗ್ಯ ಚೆನ್ನಾಗಿರುತ್ತದೆ. ಧನಲಾಭ, ಧಾರ್ಮಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಮುನ್ನಡೆ, ಶುಭಕಾರ್ಯಗಳಿಗಾಗಿ ಓಡಾಟ, ವ್ಯಾಪಾರ, ಉದ್ಯೋಗಗಳಲ್ಲಿ ವಿಶೇಷ ಪ್ರಗತಿ, ಮಿತ್ರರಿಂದಲೂ ಅಧಿಕಾರಿಗಳಿಂದಲೂ ಸನ್ಮಾನ, ತಾ|| ೪ ... ಚಿಂತೆ, ಪ್ರವಾಸ.

ಕುಂಭ- ಆರೋಗ್ಯ ಉತ್ತಮ, ಧನಲಾಭ ಕಡಿಮೆ, ಪತ್ನೀ ಪುತ್ರರ ಅಭಿವೃದ್ಧಿಗೆ ಕುರಿತು ಖರ್ಚು ಮತ್ತು ಚಿಂತೆ ಹೆಚ್ಚುತ್ತದೆ, ಉದ್ಯೋಗ, ವ್ಯವಹಾರಗಳಲ್ಲಿ ಅಡಚಣೆ, ಅನಿರೀಕ್ಷಿತವಾಗಿ ದೂರದೇಶ ಪ್ರವಾಸ, ತಾ|| ೬, ೯ ಲಾಭ, ...

ಮೀನ- ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ಅಧಿಕಾರಿಗಳೊಡನೆ ಮೈತ್ರಿ, ಉದ್ಯೋಗದಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಪ್ರವಾಸ ೩, ೫, ೮ ಲಾಭ, ಶಾಂತಿ.

ಕೈಗೊಳ್ಳಬೇಕಾಗಿದೆ. ಈಗಿರುವ ಕ್ರಮದಂತೆ ಜನರಿಗೆ ಸರಿಯಾಗಿ ಸಕಾಲದಲ್ಲಿ ಬಟ್ಟೆಗಳು ದೊರೆಯಲು ಅವಕಾಶವಿರುವುದಿಲ್ಲ. ಹಬ್ಬಕ್ಕಾಗಿ ವಿಶೇಷ ಮುತುವರ್ಜಿ ವಹಿಸಿ ಜಿಲ್ಲಾಧಿಕಾರಿಗಳೂ, ಪೌರಸಭೆಯ ಸದಸ್ಯರೂ, ಬಟ್ಟೆ ವರ್ತಕ ಸಂಘದವರೂ ಕಲೆತು ಸರಿಯಾದ ಏರ್ಪಾಡುಗಳನ್ನು ಕೈಗೊಳ್ಳಬೇಕೆಂದು ನಾವು ಕೋರುತ್ತೇವೆ.

CANARA BANK LIMITED.

(Estd. 1906)

(Incorporated in British India with limited liability).

ANNOUNCEMENT

The Office of the Bank has been shifted from 1530, Shivarampet to: 1748, Sayyaji Rao Road Mysore.

(Upstairs of MYSORE HALL)

All kinds of banking business transacted.

Head Office: LIGHT HOUSE HILL, MANGALORE.

OFFICES AT:- Akola, Alleppey, Amraoti, Arsikere, Bel-gaum, Bangalore, Bombay-Fort, Bombay-Mandvi, Bombay-Girgaum, Bombay-Kalbadevi, Kalyan, Bantwal, Calicut, Cannanore, Chikamagalur, Cochin, Coondapoor, Coimbatore, Davangere, Dharwar, Erode, Ernakulam, Ganguli, Hubli, Karachi, Karkala, Kasaragod, Mangalore-City, Mangalore-Bunder, Madras, Moolky, Mysore, Nagapur, Payyanur, Poona, Puttur, Quilon, Salem, Secunderabad, Shimoga, Sholapur, Tuticorin, Trichinopoly, AND Udipi.

U. HARI SHENOY, B. A.,
Agent.

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ದಯಮಾಡಿ ಅಂಗಡಿಗೆ ಬಂದು ಪರೀಕ್ಷಿಸಿ!!

ಬಿ. ಕೆಂಚಪ್ಪ ಸನ್ಸ್,

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

ಎರಡು ಘನವಾದ ಸಂಗೀತ ಕಛೇರಿಗಳು

ಶ್ರೀ ಸರಸ್ವತೀ ಸಂಗೀತ ಸಮಾಜ, ಮೈಸೂರು

ಕೋ ಆಪರೇಟರ್ಸ್ ಹೋಂ...

7-3-1947 ನೇ ಶುಕ್ರವಾರ

ಸಂಜೆ 6 ಘಂಟೆಗೆ

ಜಿ. ಎ ಬಿ ರವರ ಪ್ರಖ್ಯಾತ ...

ಮದ್ರಾಸಿನ ಶ್ರೀಮತಿ

ಎಂ. ಎಲ್. ವಸಂತಕುಮಾರಿ

ಮತ್ತು ಅವರ ಪಾರ್ಟಿಯವರಿಂದ

=: ಮತ್ತು :=

8-3-1947 ನೇ ಶನಿವಾರ

ಸಂಜೆ 6 ಘಂಟೆಗೆ

ಕಲ್ಲಿಕೋಟೆಯ ಶ್ರೀಮತಿ

ಶಾರದಾ ಅನಂತರಾಮ

ಮತ್ತು ಪಾರ್ಟಿಯವರಿಂದ

ಸಂಗೀತ ಕಛೇರಿಗಳನ್ನು ಏರ್ಪಡಿಸಲಾಗಿದೆ

ರಾಜ್‌ಕಮಲ್, ಮೈಸೂರು

೨-೩-೪೭ ರಿಂದ ೩ ನೇ ವಾರ

I ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ

(ಕನ್ನಡ)

ಇಂಪಾದ ಗಾನಗಳು! ಸೊಂಪಾದ ನೃತ್ಯಗಳು!! ಮನರಂಜಕವಾದ ದೃಶ್ಯಗಳು!!! ಇವೆಲ್ಲವನ್ನೂ ಇಂದೇ ನೋಡಿ.

ಶ್ರೀರಂಗಪಟ್ಟಣ ಸಭಾ ಚುನಾವಣೆ ಮತದಾರರಲ್ಲಿ

ಕೆ. ರಾಮಯ್ಯ

ಅವರ ಅಂಬಾಜಿ ಪ್ರಾರ್ಥನೆ.

10-3-47 ರ ಚುನಾವಣೆಯಲ್ಲಿ ದಯವಿಟ್ಟು ಗಣಪತಿ ಗುರುತಿಗೆ ಓಟು ಮಾಡಿ

(ಓಟರು ಲಿಸ್ಟಿನಲ್ಲಿ ಕೆ. ರಾಮಯ್ಯ ಎಂಬುದಾಗಿ ... ಅಂಬಾಜಿರಾವ್ ... ಚಾಲ್ತಿಯಲ್ಲಿರುತ್ತೆ.)

ರಿಜಿ. ನಂ. 392 || ವಂದೇ ಮಾತರಂ || ಅಂದಿನ ಪ್ರತಿ ೩ ಕಾಸು

ಸಂಪುಟ ೫] ಮಂಗಳವಾರ ೪—೬—೪೭ [ಸಂಚಿಕೆ ೧೭೫

- ಅಮೆರಿಕದೊಡನೆ -
ಇಂಗ್ಲೆಂಡಿನ ಐಕ್ಯವೇ ?

ವರ್ಣದ್ವೇಷಕ್ಕೆ ಅಟ್ಲೀ ಸೋದರಿಯವರ ವಿರೋಧ

ದಕ್ಷಿಣ ಆಫ್ರಿಕದಲ್ಲಿ ದೇಶೀಯರ ವಿರುದ್ಧವಾಗಿ ಬಿಳಿಯರು ನಡೆಸುತ್ತಿರುವ ದಬ್ಬಾಳಿಕೆಯನ್ನು ಬ್ರಿಟಿಷ್ ದೊರೆಗಳಿಗೆ ತಿಳಿಸಲು ಬ್ರಿಟಿಷ್ ವಿದ್ಯಾರ್ಥಿ ಲೇಬರ್ ಫೆಡರೇಷನ್ನಿನವರು ಮನವಿಯೊಂದಕ್ಕೆ ಸಾರ್ವಜನಿಕರ ರುಜುವನ್ನು ಸಂಗ್ರಹಿಸುತ್ತಿದ್ದಾರೆ. ಪ್ರಧಾನಿ ಅಟ್ಲಿಯವರ ಸೋದರಿ ಮಿಸ್ ಮೇರಿ ಎ ಬಿ. ಅಟ್ಲಿಯವರು ಈ ಯೋಜನೆಗೆ ಬೆಂಬಲವಿತ್ತಿದ್ದಾರೆ

ಇಂಡಿಯಾ ಸೆಕ್ರೆಟರಿಗಳ ಹುದ್ದೆ ವಜಾ

ಬ್ರಿಟಿಷರ ಅಧಿಕಾರವನ್ನು ಭಾರತೀಯರಿಗೆ ವರ್ಗಾಯಿಸಲು ಹೊಸ ನಿಯಮಾವಳಿಯನ್ನು ಗೊತ್ತು ಮಾಡಿದೊಡನೆಯೇ ಇಂಡಿಯಾ ಸೆಕ್ರೆಟರಿ ಲಾರ್ಡ್ ಪೆಥಿಕ್ ಲಾರೆನ್ಸ್ ತಮ್ಮ ಸ್ಥಾನದಿಂದ ನಿವೃತ್ತರಾಗುವರು ಎಂದು ಅಧಿಕಾರಯುತವಾಗಿ ಹೇಳಲ್ಪಟ್ಟಿದೆ. ಹಲವು ಶತಮಾನಗಳಿಂದ ಭರತಖಂಡದ ಆಡಳಿತವನ್ನು ನಡೆಸುತ್ತಿದ್ದ ಇಂಡಿಯಾ ಆಫೀಸೂ ವಜಾ ಮಾಡಲ್ಪಡುತ್ತದೆ

ರಾಜಕೀಯ ಬಂದಿಗಳ ಉಪವಾಸ

ಉತ್ತಮವಾದ ಆಹಾರ ಮತ್ತು ಸಂಬಳ ಕೊಡಬೇಕೆಂಬ ಕಾರಣದ ಮೇಲೆ ಶ್ರೀನಗರದ ೫ ಮಂದಿ ರಾಜಕೀಯ ಬಂದಿಗಳು ನಾಲ್ಕು ದಿನದಿಂದ ಉಪವಾಸ ವ್ರತವನ್ನು ಕೈಗೊಂಡಿರುವುದಾಗಿ ವರದಿಯಾಗಿದೆ. ಇವರ ಜೊತೆಗೆ ಇನ್ನೂ ೫ ಮಂದಿ ಸೇರಿರುವುದಾಗಿಯೂ ಇನ್ನೂ ಅನೇಕ ಮಂದಿ ಸೇರಬಹುದೆಂಬೂ ಹೇಳಲಾಗಿದೆ

೪೨ ವರ್ಷಗಳ ನಂತರ ವಿಜ್ಞಾನಿಯ ವಾಪಸು

೬೩ ವರ್ಷದ ಡಾ|| ಅಬ್ದುಲ್ ಹಫೀಜ್ ಖಾನ್ ಮಟ್ ಎಂಬ ಭಾರತೀಯ ವೈಜ್ಞಾನಿಕರು ೪೨ ವರ್ಷಗಳ ಅನಂತರ ಈಗ ಭಾರತಕ್ಕೆ ವಾಪಸು ಬಂದಿರುವುದಾಗಿ ತಿಳಿದು ಬಂದಿದೆ. ಇವರ ಮೇಲೆ ಇದ್ದ ಪ್ರತಿಬಂಧಾಜ್ಞೆಯನ್ನು ಕೇಂದ್ರ ಸರ್ಕಾರವು ತೆಗೆದು ಹಾಕಿದೆ. ೧೯೧೩ ರಲ್ಲಿ ಭಾರತವನ್ನು ಬಿಟ್ಟು ಇವರು ಇದುವರೆಗೂ ಜರ್ಮನಿ, ಟರ್ಕಿ ಮತ್ತು ಆಫ್ಘಾನಿಸ್ಥಾನಗಳಲ್ಲಿ ಇದ್ದುದಾಗಿ ವರದಿಯಾಗಿದೆ.

೨ ಅಡಿ ಎತ್ತರದ ಕುದುರೆ !

ಪ್ರಪಂಚದಲ್ಲಿ ಅತ್ಯಂತ ಚಿಕ್ಕದಾದ ಕುದುರೆ ಮರಿಯೊಂದು ಸದ್ಯದಲ್ಲೇ ಬ್ರಿಟನ್ನಿನಿಂದ ಬೆಲ್ಜಿಯಮ್ಮಿಗೆ ಹೋಗಲಿದೆ. ಇದು ೬ ತಿಂಗಳ ಮರಿ. ಕೇವಲ ೨೩ ಅಂಗುಲ ಎತ್ತರವಾಗಿರುತ್ತದೆ. ರಹದಾರಿ ದೊರೆತ ಕೂಡಲೇ ಪ್ರತ್ಯೇಕ ವಿಮಾನವೊಂದರಲ್ಲಿ ಇದನ್ನು ಬೆಲ್ಜಿಯಮ್ಮಿಗೆ ಸಾಗಿಸಲಾಗುವುದೆಂದು ವರದಿಯಾಗಿದೆ.

ಅದ್ಭುತ ಶಿಶು ಜನನ

ಪೂರ್ಣ ೧೨ ತಿಂಗಳು ಗರ್ಭದಲ್ಲಿದ್ದು ಅನಂತರ ಜನನವಾದ ಶಿಶುವಿನ ವಿಚಿತ್ರ ಕಥೆಯೊಂದನ್ನು ಅಸ್ಸಾಮಿನ ಡಾ|| ಗಾಂಗುಲಿಯವರು ಹೇಳಿದ್ದಾರೆ. ತಲೆಯ ತುಂಬಾ ಕೂದಲೂ, ಬಾಯಿ ತುಂಬಾ ಹಲ್ಲುಗಳೂ ಇದ್ದು ೧೮ ಪೌಂಡ್ ತೂಕವಿದ್ದ ಶಿಶುವೊಂದು ೧೨ ತಿಂಗಳ ಪೂರ್ಣ ಗರ್ಭದ ನಂತರ ಜನನವಾಯಿತೆಂದು ಅವರು ಹೇಳುತ್ತಾರೆ.

ಜೈ ಪ್ರಕಾಶ್ ನಿಧಿ

ಮೈಸೂರು ೪

ಕ್ರಾಂತಿಯ ಸಿಡುಗಲಿ ಶ್ರೀ|| ಜೈ ಪ್ರಕಾಶ್ ನಾರಾಯಣ್ ರವರಿಗೆ ಅರ್ಪಿಸಲ್ಪಡುವ ನಿಧಿ ಸಂಗ್ರಹ ಕಾರ್ಯವು ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ನಾಳೆಯಿಂದ ಆರಂಭವಾಗುವುದು. ಅವರು



ಈ ತಿಂಗಳಿನಲ್ಲಿ ಮೈಸೂರಿಗೆ ಬಂದಾಗ ಈ ನಿಧಿಯನ್ನು ಅರ್ಪಿಸಲಾಗುವುದು. ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದು ಶಿ|| ಪ್ರಾಂ|| ವಿದ್ಯಾರ್ಥಿ ಕಾಂಗ್ರೆಸ್ಸಿನವರು ಪ್ರಾರ್ಥಿಸಿದ್ದಾರೆ.

ಕೆಲಸಗಾರರ ಸಂಘ

ಮೈಸೂರು ನಗರದ ಕೂರ್ಗ್ ಟಿಂಬರ್ ಮತ್ತು ಪ್ಲೈವುಡ್ ಕಾರ್ಪೊರೇಷನ್ನಿನ ಕೆಲಸಗಾರರು ನಿನ್ನೆ ಕಾಂಗ್ರೆಸ್ ಭವನದಲ್ಲಿ ಶ್ರೀ ಟಿ ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಮ್ಮ ಸಂಘವನ್ನು ಸ್ಥಾಪಿಸಿಕೊಂಡರು. ತುಟ್ಟಿಭತ್ಯ ಮತ್ತು ವಾರ್ಷಿಕ ಬಡ್ತಿಯನ್ನು ಹೆಚ್ಚಿಸಿಕೊಡಬೇಕೆಂದು ಕೇಳುವುದಕ್ಕಾಗಿ ಕಾರ್ಯಕಾರಿ ಸಮಿತಿಯನ್ನು ಮುಂಚಿತವಾಗಿ ಕಳಿತ ವರ್ಗದವರ ವರ್ತನೆಯನ್ನು ಖಂಡಿಸಿ, ಕೂಡಲೇ ಕಾರ್ಖಾನೆಯನ್ನು ತೆರೆಯಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ಟಿ ಮರಿಯಪ್ಪನವರನ್ನು ಅಧ್ಯಕ್ಷರನ್ನಾಗಿಯೂ ಮಹಮದ್ ಬುರಾಢ್ಡೀನರನ್ನು ಉಪಾಧ್ಯಕ್ಷರನ್ನಾಗಿಯೂ ಬಿ. ಲಿಂಗಯ್ಯನವರನ್ನು ಕಾರ್ಯದರ್ಶಿಗಳಾಗಿ ಆರಿಸಲಾಯಿತು

ರೇಷ್ಮೆ ಡಿಪೋ ವರ್ತಕರ ಸಂಘ

ಕಳೆದ ಶುಕ್ರವಾರ ಮೇಲ್ಕಂಡ ಸಂಘದ ಸಭೆಯು ಸೇರಿ ಬರುವ ಸಾಲಿಗೆ ಶ್ರೀಗಳಾದ ಮಹಮ್ಮದ್ ಫಜುಲುಲ್ ರಹಮಾನರನ್ನು ಅಧ್ಯಕ್ಷರಾಗಿಯೂ, ಟಿ ಆರ್. ರಂಗಸ್ವಾಮಯ್ಯನವರನ್ನು ಉಪಾಧ್ಯಕ್ಷರಾಗಿಯೂ, ಎಂ. ರಂಗಾಚಾರ್ಯರು ಮತ್ತು ಗೌತದ ಶಿವಪ್ಪನವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಿತು.

ಗೋಪಾಲರಾಯರೇ ಆಭರಣಗಳನ್ನು ಕೊಟ್ಟರೇ ?

ಡಾ|| ದೀಕ್ಷಿತರ ಸಾಕ್ಷ್ಯ

ಸ್ವಂ. ವ.] ಬೆಂಗಳೂರು ೪

ಧರ್ಮದತ್ತ್ವಾತರ ಗೋಪಾಲರಾಯರ ಆಭರಣಗಳ ವರೋಡೆ ಮೊಕದ್ದಮೆಯ ವಿಚಾರಣೆಯಲ್ಲಿ ನಿನ್ನೆ ಡಾ|| ದೀಕ್ಷಿತ್‌ರವರು ತಮ್ಮ ಸಾಕ್ಷ್ಯ ನುಡಿದು ಈರೀತಿ ಹೇಳಿದರು. ಶ್ರೀ ಗೋಪಾಲರಾಯರು ಡಿಸೆಂಬರ್ ೭ನೇ ತಾ|| ನನ್ನ ಮನೆಗೆ ಬಂದು ನನ್ನ ಸಹಾಯವನ್ನು ಅಪೇಕ್ಷಿಸಿದರು. ನಾನು ಸಹಾಯ ಮಾಡಲಾಗದೆಂದು ಹೇಳಿದುದರಿಂದ ತಮ್ಮ ಕ್ರೆಡಿಟರುಗಳ ಸಭೆಯನ್ನು ಅಂದೇ ಕರೆಸಬೇಕೆಂದು ಕೋರಿದರು. ಅದರಂತೆ ಸಭೆಯನ್ನು ಕರೆಯಲಾಯಿತು. ಕ್ರೆಡಿಟರುಗಳು ಶ್ರೀ ಗೋಪಾಲರಾಯರಿಗೆ ಸಹಾಯ ಮಾಡಬೇಕಾದರೆ ಅವರು ತಮ್ಮ ಆಸ್ತಿಪಾಸ್ತಿಗಳ ವಿಷಯದಲ್ಲಿ ನಿಜವನ್ನು ಹೇಳಬೇಕೆಂದು ತಿಳಿಸಿದೆನು. ಶ್ರೀ ಗೋಪಾಲರಾಯರು ಹೀಗೇಕೆ ಹೇಳುವಿರಿ ? ಎಂದು ಪ್ರಶ್ನಿಸಿದರು. ಚೆಕ್ಕುಗಳೆಲ್ಲವೂ ಡಿಸ್‌ಆನರ್ ಆಗುತ್ತಿರುವುದರಿಂದ ನಿಮ್ಮಲ್ಲಿ ನಂಬಿಕೆ ಕೆಟ್ಟುಹೋಯಿತೆಂದು ಹೇಳಿದೆನು. ಅವರು ತಮಗೆ ೩-೪ ಲಕ್ಷ ರೂ ಬೇಕೆಂದು ಕೋರಿದರು. ವಿಮ್ಯಾಕ್ಟಿಕ್ ಬಿಲ್ಡಿಂಗನ್ನು ಮಾರಿ, ತಮ್ಮ ಆಭರಣಗಳನ್ನು ಗಿರವಿಗಿಟ್ಟು ಆ ದುಡ್ಡನ್ನು ಬ್ಯಾಂಕಿಗೆ ಕಟ್ಟಬೇಕೆಂದು ಸಲಹೆ ಕೊಟ್ಟೆನು. ಶ್ರೀ ಗೋಪಾಲರಾಯರು ಒಡವೆಗಳ ವಿಚಾರ ಎತ್ತಬೇಡಿ, ಎಂದರು. ಏಕೆಂದು ಕೇಳಲು ಅವರು ಒಡವೆಗಳನ್ನು ಶ್ರೀ ಸರ್ವೋತ್ತಮರಾವ್ ಮತ್ತು ಇತರರಿಗೆ ಕೊಟ್ಟಿದ್ದೇನೆ-ಎಂದು ಹೇಳಿದರು.

ಸೀತಾಕಲ್ಯಾಣ ಮಹೋತ್ಸವ

ಮೈಸೂರು ೪

ಶ್ರೀ ... ಸೀತಾಕಲ್ಯಾಣ ಮಹೋತ್ಸವವು ... ಘಂಟೆಗೆ ನಡೆಯುವುದು. ಸರ್ವರೂ ದಯಮಾಡಿಸಬೇಕೆಂದು ಪ್ರಾರ್ಥಿಸಲಾಗಿದೆ.

ಕಸದ ತೊಟ್ಟಿಗಳು

ನಗರದ ಎಲ್ಲಾ ಮೊಹಲ್ಲಾಗಳಲ್ಲಿಯೂ ಕಸದ ತೊಟ್ಟಿಗಳನ್ನು ನಿರ್ಮಿಸಲು ೧೧೧೦೦ ರೂ ಗಳ ಅಂದಾಜನ್ನು ನೆನ್ನೆ ನಡೆದ ಮುಂದುವರಿದ ಪುರಸಭಾಧಿವೇಶನದಲ್ಲಿ ಮಂಜೂರ್ ಮಾಡಲಾಯಿತು.

ಚೀಣಾದಲ್ಲಿ ಹೊಸ ಮಂತ್ರಿಮಂಡಲ

ಚೀಣಾದ ಮುಖ್ಯ ಮಂತ್ರಿಗಳಾಗಿದ್ದ ಟಿ. ವಿ. ಸೂಂಗ್‌ರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರಿಂದ ಚಿಯಾಂಗ್ ಕೈಷೇಕರನ್ನು ಪ್ರಧಾನಿಗಳನ್ನಾಗಿ ಆರಿಸಲಾಗಿದೆ

ಕೃಪಲಾನಿಯವರ ಆಗಮನ

ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರು ಇದೇ ೧೧ ನೇ ತಾ|| ಸಂಜೆ ವಿಮಾನದಲ್ಲಿ ಮದ್ರಾಸಿಗೆ ಬರುವರು. ೧೨ ನೇ ತಾ|| ಬೆಳಗ್ಗೆ ವಿಮಾನದಲ್ಲೇ ತಿರುವಾಂಕೂರಿಗೆ ತೆರಳುವರು. ಕೇರಳ ಮತ್ತು ಕರ್ಣಾಟಕ ಪ್ರವಾಸವನ್ನು ಮುಗಿಸಿಕೊಂಡು ಈ ತಿಂಗಳ ಅಂತ್ಯದಲ್ಲಿ ಬೊಂಬಾಯಿಗೆ ಹೋಗುವರು. ಬೆಂಗಳೂರು ಮತ್ತು ಕೋಲಾರ್ ಪ್ರದೇಶಗಳಿಗೂ ಇವರು ಭೇಟಿ ಕೊಡಲಿದ್ದಾರೆ.

ಸ್ವತಂತ್ರ ಬಂಗಾಳದ ಆರ್ಥಿಕ ಭದ್ರತೆ

ಬಂಗಾಳದಿಂದ ಈಗ ಕೇಂದ್ರಸರ್ಕಾರವು ಉತ್ಪನ್ನ ತೆರಿಗೆ ೧೭ ಕೋಟಿ, ಸೆಣಬಿನ ಮೇಲಿನ ತೆರಿಗೆ ೨ ಕೋಟಿ ಅಲ್ಲದೆ ಕಲ್ಕತ್ತಾ ಮತ್ತು ಚಿಟ್ಟಗಾಂಗ್ ಬಂದರುಗಳಿಂದ ಸುಂಕದ ರೂಪದಲ್ಲಿ ೬೬ ಕೋಟಿ ಮತ್ತು ಆಂಟಿ ಕಾಯಿದೆಯಿಂದ ೨ ಕೋಟಿ ರೂ ಗಳನ್ನು ಪಡೆಯುತ್ತಿದೆ. ಬಂಗಾಳ ಪ್ರಾಂತ್ಯವು ಸ್ವತಂತ್ರವಾದರೆ ... ಕೋಟಿ ರೂ. ಗಳು ಪ್ರಾಂತ್ಯಕ್ಕೇ ... ಆರ್ಥಿಕ ದೃಷ್ಟಿಯಿಂದ ... ಬಂಗಾಳದ ಆರ್ಥಿಕ ಮಂತ್ರಿ ಮಿ. ಸುಹ್ರಾವರ್ದಿ ಅಲ್ಲಿಯವರು ತಿಳಿಸಿದ್ದಾರೆ

ಉಪಾಧ್ಯಾಯರ ಮುಷ್ಕರವಿಲ್ಲ

ಇದೇ ೧೨ ನೇ ತಾ|| ನಿಂದ ಬೊಂಬಾಯಿ ಪ್ರಾಂತ್ಯದ ೪೫ ಸಾವಿರ ಪ್ರಾಥಮಿಕ ಉಪಾಧ್ಯಾಯರ ಮುಷ್ಕರವು ಆರಂಭವಾಗಬೇಕಾಗಿದ್ದಿತು. ಆದರೆ ಇವರಿಗೆ ತಾತ್ಕಾಲಿಕ ಪರಿಹಾರವನ್ನು ಒದಗಿಸಿಕೊಡುವುದಾಗಿಯೂ ಸಂಬಳ ಸಮಿತಿಯ ಸಲಹೆಗಳು ಇವರಿಗೆ ಸರಿ ತೋರದಿದ್ದರೆ ಪಂಚಾಯಿತಿಗೆ ಒಪ್ಪಿಸಲು ಪ್ರಧಾನಿ ಖೇರರು ಒಪ್ಪಿಕೊಂಡದ್ದರಿಂದ ಉಪಾಧ್ಯಾಯರುಗಳ ಮುಷ್ಕರವು ನಡೆಯುವುದಿಲ್ಲವೆಂದು ಪ್ರಕಟಿಸಲಾಗಿದೆ.

ಅಮೆರಿಕಾ ಸಂ|| ಸಂಸ್ಥಾನದೊಡನೆ ಬ್ರಿಟನ್ನಿನ ಐಕ್ಯವೇ ?

ಇಂಗ್ಲೆಂಡ್, ಐರ್ಲೆಂಡ್, ಸ್ಕಾಟ್ಲೆಂಡ್ ಮತ್ತು ವೇಲ್ಸ್‌ಗಳನ್ನು ಅಮೆರಿಕಾ ಸಂಯುಕ್ತ ಸಂಸ್ಥಾನದ ಸದಸ್ಯ ರಾಷ್ಟ್ರಗಳನ್ನಾಗಿ ಸೇರಿಸಿಕೊಳ್ಳಬೇಕೆಂದು ಅಮೆರಿಕದ ಸೆನೆಟ್ ಸದಸ್ಯರಾದ ರಿಚರ್ಡ್‌ಸನ್‌ರವರು ಒಂದು ಸಲಹೆಯನ್ನಿತ್ತಿದ್ದಾರೆ. ಬ್ರಿಟನ್ನಿನ ... ತಮ್ಮ ... ಡಿಸೆಂಬರ್ ... ಬ್ರಿಟಿಷ್ ... ತನ್ನ ... ಸೇರಿಸಿಕೊಳ್ಳಬೇಕು ... ಆದ ... ಸ್ವಾತಂತ್ರ್ಯ ... ದ ... ಈ ಸಲಹೆಯನ್ನು ಕೊಟ್ಟಿರುವುದಾಗಿ ಅವರು ಹೇಳುವರು

೦ ವೇಟ್ಟಾ ... ಮದ್ರಾಸ್ ಸರ್ಕಾರವು ... ಕೋಟಿ ... ಕೊಳ್ಳೆಯನ್ನು ... ವರ್ಷ ... ಕಾಲ ...

ಸಾಧ್ವಿ

ತಾ|| ೪-೩-೪೭ ಮಂಗಳವಾರ

ಪಂಜಾಬಿನ ಪ್ರಹಸನ

ಮುಸ್ಲಿಂ ಲೀಗಿನ ಸೈನಿಕ ಶಿಕ್ಷಣ ಸಿದ್ಧತೆ ಮುಂತಾದ ಕಾರ್ಯಾಚರಣೆಗಳನ್ನು ಪ್ರತಿಬಂಧಿಸಿ, ಅದರ ನಾಯಕರನ್ನೆಲ್ಲಾ ಒಂದು ತಿಂಗಳ ಕಾಲ ಸೆರೆಗಟ್ಟಲಿಸಿ, ಇಡೀ ಪ್ರಾಂತ್ಯದಲ್ಲೆಲ್ಲಾ ಮುಸ್ಲಿಂ ಲೀಗಿನವರ ಪ್ರತಿಭಟನೆಗೆ ಗುರಿಯಾಗಿ ಲಾಠೀ ಪ್ರಯೋಗ, ಗುಂಡಿನ ಸುರಿಮಳೆಗಳಲ್ಲೂ ತೊಡಗಿದ್ದ ಪಂಜಾಬಿನ ಮಿಶ್ರ ಮಂತ್ರಿ ಮಂಡಲವು ಇಂದು ತನ್ನ ಸ್ಥಾನವನ್ನು ಅದೇ ಲೀಗಿನ ಸೂತ್ರಧಾರಿಗಳಿಗೆ ಬಿಟ್ಟು ಕೊಡಲು ಮುಂದೆ ಬಂದಿರುವುದು ಆಧುನಿಕ ಭಾರತದ ರಾಜಕೀಯ ಇತಿಹಾಸದಲ್ಲಿ ಅತ್ಯಂತ ಸೋಜಿಗದ ಪ್ರಕರಣವೇ ಸರಿ. ಒಂದು ವರ್ಷದ ಹಿಂದೆ ಯಾವ ಮಹೋದ್ದೇಶದಿಂದ ಮಿಶ್ರಮಂತ್ರಿ ಮಂಡಲವನ್ನು ಅಲ್ಲಿ ಸ್ಥಾಪಿಸಲಾಯಿತೋ ಅದು ಈಡೇರಿಲ್ಲವೆಂದು ಪ್ರಧಾನ ಮಂತ್ರಿಗಳಾದ ಸರ್ ಮಲ್ಲಿಕ್ ಖಿಸರ್ ಹಯಾತ್ ಖಾನರು ಹೇಳಿರುತ್ತಾರೆ. ಮುಸ್ಲಿಂ ಲೀಗಿನವರಿಲ್ಲದ ಮಂತ್ರಿ ಮಂಡಲವು ಪ್ರಾಂತ್ಯದ ಸರ್ವತೋಮುಖವಾದ ಶಾಂತಿ, ಸಮಾಧಾನಗಳನ್ನು ಸಾಧಿಸಲಾರದೆಂದು ತಿಳಿಸಿರುತ್ತಾರೆ. ಬಹುಮತವುಳ್ಳ ಮುಸ್ಲಿಂ ಲೀಗಿನವರೇ ಪಂಜಾಬಿನ ರಾಜಕೀಯ ಪರಿಸ್ಥಿತಿಯನ್ನು ಪರಿಷ್ಕರಿಸುವ ಕೆಲಸವನ್ನು ವಹಿಸಬೇಕೆಂದೂ ಸಹ ಸೂಚಿಸಿದ್ದಾರೆ.

ತತ್ಕಾಲಕ್ಕೆ ಲೀಗಿನವರೂ ಆಡಳಿತ ಸೂತ್ರವನ್ನು ವಹಿಸಿಕೊಳ್ಳಲು ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಅವರ ನಾಯಕರಾಗಿ ಇದುವರೆಗೆ ಕಾರಾಗೃಹದಲ್ಲಿದ್ದ ಮಿ|| ಇಫ್ತಿಕಾರ್ ಉದ್ದೀನರು ಈಗಾಗಲೇ ಗವರ್ನರರನ್ನು ಭೇಟಿ ಮಾಡಿ ಮಂತ್ರಿಮಂಡಲವನ್ನು ರಚಿಸುವುದಾಗಿ ತಿಳಿಸಿದ್ದಾರೆ. ಇನ್ನು ಕೆಲವು ದಿನಗಳಲ್ಲಿಯೇ ಪಂಜಾಬಿನಲ್ಲಿ ಲೀಗಿನವರ ಮಂತ್ರಿಮಂಡಲವು ಏರ್ಪಡುವುದು. ಮತ್ತು ಲೀಗಿನ ವರ್ತನೆಗೆ ಅನುಗುಣವಾಗಿ ಆಡಳಿತದ ರೀತಿನೀತಿಗಳು ಮಾರ್ಪಾಡು ಹೊಂದುವುವು.

ಕೇವಲ ಒಂದು ತಿಂಗಳ ಹಿಂದೆ ಮುಸ್ಲಿಂ ಲೀಗಿನವರ ಮೇಲೆ ಗದಾ ಪ್ರಹಾರವನ್ನು ಮಾಡಿದ್ದ ಪಂಜಾಬಿನ ಪ್ರಧಾನ ಮಂತ್ರಿಗಳು ಇಂದು ಅವರಿಗೇ ತಮ್ಮ ಸ್ಥಾನವನ್ನು ಬಿಟ್ಟು ಕೊಡಲು ಸಿದ್ಧರಾಗಿರುವುದಕ್ಕೆ ಬೇರೆ ಪ್ರಬಲವಾದ ಕಾರಣಗಳಿರಬೇಕು. ಅನಾಯಕತ್ವ ಮತ್ತು ಶಾಸನ ಭಂಗವನ್ನು ಮಾಡುವವರನ್ನು ಮಟ್ಟ ಹಾಕುವುದಾಗಿ ಹೇಳುತ್ತಿದ್ದವರು ಅವರಿಗೇ ಇಂದು ಆಮಂತ್ರಣವನ್ನಿತ್ತಿರುವರು. ಪಂಜಾಬಿನ ರಾಜಕೀಯವು ಒಂದು ದೊಡ್ಡ ಪ್ರಹಸನವಾಗಿ ಪರಿಣಮಿಸಿರುತ್ತದೆ.

ಇತ್ತೀಚೆಗೆ ಪ್ರಧಾನ ಮಂತ್ರಿಗಳು ಕೊಟ್ಟಿರುವ ಹೇಳಿಕೆಯಲ್ಲಿ ಗುಟ್ಟನ್ನು ರಟ್ಟು ಮಾಡಿದ್ದಾರೆ. ಬರುವ ವರ್ಷ ಬ್ರಿಟಿಷರು ಹೊರಟು ಹೋಗುವಾಗ ಪ್ರಾಂತ್ಯಗಳಿಗೂ ಅಧಿಕಾರವನ್ನು ವಹಿಸುವುದಾಗಿ ಹೇಳಿರುವರಷ್ಟೆ. ಅದಕ್ಕಾಗಿ ಪಂಜಾಬು ಪ್ರಾಂತ್ಯವನ್ನು ಸಿದ್ಧಗೊಳಿಸಲು ಹೀಗೆ ಮಾಡಿರುವುದಾಗಿ ಅವರು ಹೇಳಿರುವರು. ಬರುವ ವರ್ಷ ಬ್ರಿಟಿಷರು ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ವಹಿಸುವರೋ, ಪ್ರಾಂತ್ಯಗಳಿಗೆ ವಹಿಸುವರೋ ಅಥವಾ ಬೇರೆ ಒಂದು ಹೊಸ ವ್ಯವಸ್ಥೆಗೆ ಒಪ್ಪಿಸುವರೋ ಅದು ಇನ್ನೂ ಖಚಿತವಾಗಿ ಗೊತ್ತಾಗಿರುವುದಿಲ್ಲ. ಆದರೂ ಈಗಾಗಲೇ ಅಧಿಕಾರವನ್ನು ವಹಿಸಿಕೊಳ್ಳಲು ವಿವಿಧ ಪಕ್ಷಗಳು ಕಾತುರಗೊಳ್ಳುತ್ತಿರುವುದು ಆಶ್ಚರ್ಯದ ಸಂಗತಿ.

ಪಂಜಾಬಿನ ಪ್ರಕರಣದ ಹಿಂದೆ ಯಾರ್ಯಾರ ಕೈವಾಡಗಳು ನಡೆದಿವೆಯೋ ಅವು ಮುಂದೆ ಬಯಲಿಗೆ ಬರಬೇಕಾಗಿದೆ. ಇನ್ನು ಒಂದು ವರ್ಷದೊಳಗೆ ಇಂತಹ ಪ್ರಸಂಗಗಳು ಇನ್ನೂ ಹಲವಾರು ನಡೆದರೆ ಆಶ್ಚರ್ಯವಿಲ್ಲ. ಅಧಿಕಾರ ಲಾಲಸೆಯಿಂದ ವರ್ತಿಸುವವರ ಬಾಳೆಲ್ಲಾ ಹೀಗೆಯೇ ಸರಿ. ಭಾರತೀಯರು ಇಡೀ ರಾಷ್ಟ್ರದ ಜವಾಬ್ದಾರಿಯನ್ನು ನಿರ್ವಹಿಸಬೇಕಾದ ಈ ಸಮಯದಲ್ಲಿ ಕೇವಲ ಸಂಕುಚಿತ ಸ್ವಾರ್ಥ ಸಾಧನೆಗಿಂತಲೂ, ರಾಷ್ಟ್ರದ ಏಳಿಗೆ, ಉದಾತ್ತ ತತ್ವಗಳ ಆಧಾರದ ಮೇಲೆ ಹೆಚ್ಚು ಗಮನವನ್ನು ಕೊಡುವುದು ಅತ್ಯಗತ್ಯವಾಗಿದೆ.

ಸಂಸ್ಥಾನಗಳ ಪ್ರತಿನಿಧಿಗಳ ಚುನಾವಣೆ ಬಗ್ಗೆ ಒಪ್ಪಂದ

ಭಾರತ ರಾಜ್ಯಾಂಗ ಸಭೆಗೆ ಸಂಸ್ಥಾನಗಳ ಶಾಸನ ಸಭೆಗಳ ಚುನಾಯಿತ ಸದಸ್ಯರು ಶೇ. ೫೦ ಮಂದಿ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬಹುದೆಂಬುದಾಗಿ ನರೇಂದ್ರಮಂಡಲದ ಸಂಧಾನ ಸಮಿತಿಯವರೂ ನರೇಂದ್ರರುಗಳ ಸಮಿತಿಯವರೂ ಒಪ್ಪಿರುತ್ತಾರೆ. ಡಾ|| ಪಟ್ಟಾಭಿ ಸೀತಾರಾಮಯ್ಯ, ಸರ್ ಎನ್. ಗೋಪಾಲಸ್ವಾಮಿ ಐಯ್ಯಂಗಾರ್ ಮತ್ತು ರಾಜ್ಯಾಂಗ ಸಭೆಯ ಕಾರ್ಯದರ್ಶಿಗಳಾದ ಶ್ರೀ ಹೆಚ್. ವಿ. ಆರ್. ಐಯ್ಯಂಗಾರ‍್ರವರನ್ನೊಳಗೊಂಡ ಒಂದು ಸಮಿತಿಯು ಸಂಸ್ಥಾನ ಪ್ರತಿನಿಧಿಗಳ ಸಂಖ್ಯೆಯನ್ನು ಗೊತ್ತುಮಾಡುವ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲು ನೇಮಿಸಲ್ಪಟ್ಟಿರುತ್ತದೆ.

ಶ್ರೀರಂಗಪಟ್ಟಣದ ಪುರಸಭಾ ಚುನಾವಣೆಯ ಮತದಾರರಲ್ಲಿ

ಕೆ. ರಾಮಯ್ಯ

ಉ|| ಅಂಬಾಜಿರಾವ್ ಪ್ರಾರ್ಥನೆ.

10-3-47 ರ ಚುನಾವಣೆಯಲ್ಲಿ ದಯವಿಟ್ಟು ಗಣಪತಿ ಗುರ್ತಿಗೆ ಓಟು ಮಾಡಿ (ಓಟರು ಲಿಸ್ಟಿನಲ್ಲಿ ಕೆ. ರಾಮಯ್ಯ ಎಂದಿದೆ ರೂಢಿವಾಚಕವಾಗಿ ಅಂಬಾಜಿರಾವ್ ಎಂದು ಚಾಲ್ತಿಯಲ್ಲಿರುತ್ತೆ.)

ಪಂಜಾಬ್ ಮಂತ್ರಿಮಂಡಲದ ರಾಜೀನಾಮೆ

ಪಂಜಾಬಿನಲ್ಲಿರುವ ಯೂನಿಯನಿಸ್ಟ್ ಕಾಂಗ್ರೆಸ್ ಮತ್ತು ಸಿಖ್ ಮಿಶ್ರ ಮಂತ್ರಿಮಂಡಲದ ಪ್ರಧಾನಿಗಳಾದ ಸರ್ ಖಿಸರ್ ಹಯಾತ್ ಖಾನ್ ತಿವಾನರವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಗವರ್ನರಿಗೆ ಸಲ್ಲಿಸಿದ್ದಾರೆ. ಈ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ. ಹೊಸ ಮಂತ್ರಿಮಂಡಲವನ್ನು ರಚಿಸುವ ಬಗ್ಗೆ ಮುಸ್ಲಿಂ ಲೀಗ್ ಪಕ್ಷದ ನಾಯಕರಾದ ನವಾಬ್ ಇಫ್ತಿಕಾರ್ ಹುಸೇನರವರನ್ನು ನಿನ್ನೆ ಗವರ್ನರು ಕರೆಯಿಸಿ ಮಾತುಕತೆ ನಡೆಸಿ[illegible] ನೂತನ ಮಂತ್ರಿಮಂಡಲವು ರಚನೆಯಾಗುವವರೆಗೂ ಈಗಿರುವವರೇ ಅಧಿಕಾರದಲ್ಲಿರುವರು. ಪಂಜಾಬ್ ಪ್ರಾಂತ್ಯದ [illegible] ರಾಜಕೀಯ ಪಕ್ಷಗಳು ಒಟ್ಟಿಗೆ ಸೇರಿ ಪ್ರಾಂತ್ಯದ ಸಮಸ್ಯೆಗಳನ್ನು ಬಗೆ ಹರಿಸಬೇಕೆಂದು ಸಾರ್ವಭೌಮ ಸರ್ಕಾರದಿಂದ ಸೂಚನೆ ಬಂದಿದೆಯೆಂದೂ, ಆದ್ದರಿಂದ ಬಹು ಸಂಖ್ಯಾತ ಮುಸ್ಲಿಮರ ಪ್ರತಿನಿಧಿಯಾದ ಮುಸ್ಲಿಂ ಲೀಗ್ ಇತರ ಪಕ್ಷಗಳೊಡನೆ ಸಮಾಲೋಚನೆ ನಡೆಸಲು ಅನುಕೂಲವಾಗುವಂತೆ ತಾವು ಅಧಿಕಾರವನ್ನು ಬಿಟ್ಟು ಕೊಟ್ಟಿರುವುದಾಗಿ ಯೂನಿಯನಿಸ್ಟ್ ಪ್ರಧಾನಿ ಸರ್ ಹಯಾತ್ ಖಾನ್ ತಿಳಿಸಿದ್ದಾರೆ.

◯ ಹೊಸ ಪೈಸಾಯಿಗೆ ನಾನೂರು ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ. [illegible] ಶಕ್ತಿ ಯವರಿಗೆ ಇನ್ನೂರು ರೂಪಾಯಿಗಳ[illegible] ಕೊಡಲಾಗಿದೆ. ಅವರ ಸಲಹೆಗಾರರಿಗೂ, ತಲಾ ೨೦೦ ರೂಪಾಯಿಗಳನ್ನು [illegible]ದಲಾಗಿದೆ. ಇಂಗ್ಲೆಂಡಿನಲ್ಲಿರುವ ಪ್ರತಿ[illegible]ಟ್ಟ ಸಾಮಾನ್ಯ ಪ್ರಜೆಗೂ ಹಲವು [illegible] ಲಿ ರೂಪಾಯಿಗಳನ್ನು ಕೊಡಲಾಗುತ್ತ[illegible]

WARDEN
MARCHES AHEAD

ANOTHER YEAR OF RECORD BUSINESS.

Progress of the past Three Years:-

	1944	1945	1946
Business Introduced:-	Rs 1,20,57,513	1,56,19,295	2,04,53,277
Business completed:-	Rs. 1,04,77,346	1,32,87,529	1,72,12,480

Warden Insurance Company Ltd.,

Head Office:- BOMBAY.

Organisation All Over India, Ceylon & East Africa.

Wide scope for energetic young men as Agents, Special Agents and Paid Organisers under our New Expansion Scheme:

Apply to:-

P. C. KARAMBAYA, Branch Secretary,

Branch Office for Mysore State and Coorg, 142, Gandhi Nagar, Bangalore City.

ವಾರ್ಡನ್ ಇನ್ಸೂರೆನ್ಸ್ ಕಂಪೆನಿ

ಲಿಮಿಟೆಡ್, ಹೆಡ್ ಆಫೀಸು:- ಬೊಂಬಾಯಿ

ಮೈಸೂರು ಮತ್ತು ಕೊಡಗು ಶಾಖೆ:-

142, ಗಾಂಧಿ ನಗರ : : ಬೆಂಗಳೂರು ಸಿಟಿ.
ತುಧ.

ಕಂಟ್ರೋಲು ಬೆಲೆ! ಶುಭಮಯ!

ಹೊಸ ಜವಳಿ

ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಬನಾರಸ್, ಶಲ್ಯ, ಅರ್ಗ, ಕರಾಚಿ ಸೀರೆಗಳೂ, ನೂಲಿನ ಪೂನಾ ರುಮಾಲು ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.

M. P. V., M. V. ಭೋಜಯ್ಯ B. A. ಅಂಡ್ ಬ್ರದರ್ಸ್ ಬೊಂಬಾಯಿ ಆನಂದ ಭವನ ಹೋಟಲ್ ಸೈಡ್ ಬಲಭಾಗದ ಕೊನೆ ಜವಳಿ ಅಂಗಡಿ, ಮೈಸೂರು.

ರಾಜ್‌ಕಮಲ್, ಮೈಸೂರು

೨-೩-೪೭ ರಿಂದ ೩ ನೇ ವಾರ

1 ನೇ ಆಟ 6 ಘಂಟೆಗೆ,
2 ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ

ಸ[illegible] (ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಂಪಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!! ಇವೆಲ್ಲವನ್ನೂ ಇಂದೇ ನೋಡಿ.

ಕಂಟ್ರೋಲ್ ಧಾರಣೆಯಂ[illegible]

ಹುರಿಗಡಲೆಯು

ಬೇಕಾದಲ್ಲಿ

ಬೆಳಗ್ಗೆ 9 ರಿಂದ 12 ಘಂಟೆ, ಮತ್ತು ಮಧ್ಯಾಹ್ನ 3 ರಿಂದ ೬ ಘಂಟೆ ವರೆಗು ದೊರೆಯುತ್ತದೆ.

ರೂ. 1ಕ್ಕೆ 1ನೇ ನಂ. 2½ ಸೇ[illegible]
ರೂ 1ಕ್ಕೆ 2ನೇ ನಂ. 2½ ಸೇ[illegible]

ಡಿ. ಪಾಪಯ್ಯ

L. No. 524-42-43

ಕಡಲೆ ಅಂಗಡಿ,

ಸಯಾಜಿ ರೋಡ್, ಮಂಡಿಮೊಹಲ್ಲಾ ಮೈಸೂರು.

ಅಪೆರಾ ಟಾಕೀಸ್

೫-೩-೪೭ ರಿಂದ ೩ ನೇ ವಾ[illegible]

ವಿ ದಾ ಪ ತಿ

(ತಮಿ[illegible]

ಪ್ರತಿ ದಿನ ಮೂರು ಆಟಗಳು

: ಪಾತ್ರ :-

ಟಿ. ಆರ್. ರಾಮಚಂದ್ರ, ಕೆ. ತವಮ[illegible]
ಡಿ. ಬಾಲಸುಬ್ರಹ್ಮಣ್ಯಂ, ಪ್ರೇಮಾವ[illegible]

—: MORNING SHOWS :—
From 7-3-47

The Right Man

Edited, printed and published by A. R. Nagaraja at the Sadhvi Pr[illegible] D. Subbiah Road, Mysore.

ಘೋ. ನಂ. 392 || ವಂದೇ ಮಾತರಂ || ಬಿಡಿಪ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೫—೩—೪೭ [ಸಂಚಿಕೆ ೧೬೬

ಪಂಜಾಬ್ ಪ್ರಕರಣಕ್ಕೆ ಬ್ರಿ|| ಸರ್ಕಾರದ ಬೆಂಬಲ?

ಲಾಹೋರಿನಲ್ಲಿ ಗುಂಡಿನೇಟು

೬ ಜನರ ಮರಣ

ಲಾಹೋರಿನಲ್ಲಿ ಸಿಖ್ ಮತ್ತು ಹಿಂದೂ ಸ್ಪರ್ಧಿಗಳು ನಿನ್ನೆ ಭಾರಿ ಮೆರವಣಿಗೆ ನಡೆಸಿದಾಗ ಪೋಲೀಸರಿಗೂ, ಅವರಿಗೂ ಘರ್ಷಣೆ ನಡೆದು, ಪೋಲೀಸರು ಲಾಠಿ ಪ್ರಯೋಗ ಮಾಡಿ ಗುಂಡು ಹಾರಿಸಿದರೆಂದು ತಿಳಿದುಬಂದಿದೆ. ಇದುವರೆಗೆ ಬಂದಿರುವ ವರದಿಯಂತೆ ೬ ಮಂದಿ ವಿದ್ಯಾರ್ಥಿಗಳು ಮರಣ ಹೊಂದಿದರೆಂದೂ, ನೂರಾರು ಮಂದಿಗೆ ಗಾಯಗಳಾಗಿವೆಯೆಂದೂ ಹೇಳಲಾಗಿದೆ.

ರೇವಾ ಸಂಸ್ಥಾನದಲ್ಲಿ ಗುಂಡಿನ ಪ್ರಕರಣ

ಅಧಿಕಾರವನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ರೇವಾ ಸಂಸ್ಥಾನದ ಬದ್ವಾರ್ ಹಳ್ಳಿಯಲ್ಲಿ ರಿವಾಲ್ವರ್ ಮತ್ತು ಲಾಠಿಯಿಂದ ಕೂಡಿದ ಜನರಿಗೂ, ಪೋಲೀಸರಿಗೂ ಘರ್ಷಣೆ ನಡೆದು ಪೋಲೀಸರು ಗುಂಡು ಹಾರಿಸಿದ್ದಾರೆ. ಒಬ್ಬನು ಸತ್ತು ಅನೇಕರಿಗೆ ಗಾಯಗಳಾಗಿವೆ. ಸರ್ಕಾರದವರು ಸಾರ್ವಜನಿಕ ರಕ್ಷಣಾ ಶಾಸನವನ್ನು ಜಾರಿಗೆ ತಂದಿದ್ದಾರೆ.

ಮುದ್ರಣಾಲಯದಿಂದ ಸಿಲೋನ್ ಚುನಾವಣೆಗೆ ಧಕ್ಕೆ

ಸಿಲೋನಿನ ಸಾರ್ವತ್ರಿಕ ಚುನಾವಣೆಯ ಓಟರು ಪಟ್ಟಿಯನ್ನು ಮುದ್ರಿಸಲು ಲಂಡನ್ನಿನ ಮುದ್ರಣಾಲಯವೊಂದಕ್ಕೆ ಆರ್ಡರ್ ಕೊಡಲಾಗಿದ್ದಿತು. ಆದರೆ ಇಂಗ್ಲೆಂಡಿನಲ್ಲಿ ಉಂಟಾಗಿರುವ ವಿದ್ಯುಚ್ಛಕ್ತಿ ಅಭಾವದಿಂದ ಅವು ಇನ್ನೂ ಮುದ್ರಿತವಾಗಿಲ್ಲ. ಆದ್ದರಿಂದ ಚುನಾವಣೆಗಳನ್ನೆಲ್ಲಾ ಮುಂದೆ ಹಾಕಲಾಗುವುದೆಂದು ಹೇಳಲಾಗಿದೆ.

ವಿಶ್ವಸಂಸ್ಥೆಯ ಆಡಳಿತಕ್ಕೆ ಜಪಾನ್

ಟೋಕಿಯೋವಿನೊಡನೆ ಶಾಂತಿ ಕರಾರು ಆದ ನಂತರ, ಸಂಯುಕ್ತ ಭದ್ರತೆಯನ್ನು ರಕ್ಷಿಸುವ ಸಲುವಾಗಿ ಜಪಾನಿನ ಪೂರ್ಣ ಆಡಳಿತಾಧಿಕಾರವನ್ನು ವಿಶ್ವ ಸಂಸ್ಥೆಗೆ ವಹಿಸುವುದೆಂದು ಜ|| ಮೆಕಾರ್ಥರ್‌ರವರು ಸೂಚಿಸಿದ್ದಾರೆ.

ಮಜ್ಜಿಗೆಯಿಂದ ಕಾಲರಾ ನಿವಾರಣೆ

ಕಾಲರಾ ಕ್ರಿಮಿಗಳನ್ನು ನಿರ್ಮೂಲಗೊಳಿಸುವ ಪೆನಿಸಿಲಿನ್ ಅಂಶವು ಮಜ್ಜಿಗೆಯಲ್ಲಿ ಹೇರಳವಾಗಿದೆಯೆಂದೂ ಒಂದಕ್ಕೆ ೫೦೦ ರಷ್ಟು ನೀರನ್ನು ಮಜ್ಜಿಗೆಗೆ ಬೆರಸಿದರೂ ಅದು ಇತರ ದ್ರಾವಕಗಳಿಗಿಂತಲೂ ಹೆಚ್ಚು ಗುಣಕಾರಿಯಾಗಿರುವುದೆಂದೂ ಡಾ|| ಲಕ್ಷ್ಮೀಪತಿಯವರು ಕಾನ್‌ಪುರದಲ್ಲಿ ನಡೆದ ಅಖಿಲ ಭಾರತ ಆಯುರ್ವೇದ ಸಮ್ಮೇಳನದಲ್ಲಿ ತಿಳಿಸಿರುತ್ತಾರೆ.

ಹೊಸ ವೈಸರಾಯರು

ನೂತನ ವೈಸರಾಯರಾದ ಲಾರ್ಡ್ ಲೂಯಿ ಮೌಂಟ್‌ಬ್ಯಾಟನ್ನರು ಇದೇ ೨೨ನೇ ತಾ|| ಭಾರತಕ್ಕೆ ಬರುವರು. ೨೬ನೇ ತಾ|| ಲಾರ್ಡ್ ವೇವೆಲ್ಲರು ಲಂಡನ್ನಿಗೆ ಹಿಂದಿರುಗುವರು. ನೂತನ ವೈಸರಾಯರು ಪ್ರಧಾನಿ ಅಟ್ಲೀಯವರ ಹೇಳಿಕೆಯ ಬಗ್ಗೆ ಭಾರತದಲ್ಲಿ ಉಂಟಾಗಿರುವ ಪ್ರತಿಕ್ರಿಯೆಯನ್ನು ಜಾಗರೂಕತೆಯಿಂದ ಪರಿಶೀಲಿಸಿ, ಬ್ರಿಟಿಷ್ ಸರ್ಕಾರಕ್ಕೆ ಅದನ್ನು ಕೂಡಲೇ ವರದಿ ಮಾಡಲಿದ್ದಾರೆಂದು ಗೊತ್ತಾಗಿದೆ.

ಡೆಪ್ಯುಟಿ ಕಮಿಷನರುಗಳಾಗಿ ಬಡ್ತಿ

ಸ್ವಂ. ಸು. ಪ್ರೋ॥] ಬೆಂಗಳೂರು ೫

ಅಸಿಸ್ಟೆಂಟ್ ಕಮಿಷನರುಗಳಾದ ಮ|| ಅಬ್ದುಲ್ಲಾ ಹುಸೇನ್ ಷರೀಫ್, ಸಯ್ಯದ್ ಅಬ್ದುಲ್ ಖಾದರ್ ಮತ್ತು ಎಚ್. ಎನ್. ಪಾಳೇಗಾರ್‌ರವರನ್ನು ಡೆಪ್ಯುಟಿ ಕಮಿಷನರುಗಳನ್ನಾಗಿ ಬಡ್ತಿ ಮಾಡಿ ಅನುಕ್ರಮವಾಗಿ ವಿದ್ಯುಚ್ಛಕ್ತಿ ಇಲಾಖೆಯ ಆಡಿಟರಾಗಿಯೂ, ಆಹಾರ ಇಲಾಖೆಯ ಡೈರೆಕ್ಟರಾಗಿಯೂ ಮತ್ತು ರೆವಿನ್ಯೂ ಸೆಕ್ರೆಟರಿಯಾಗಿಯೂ ನೇಮಿಸಲಾಗಿದೆ.

ಶ್ರೀ|| ಎನ್. ಮಾಧವರಾಯರನ್ನು ಮೈಸೂರು ರೈಲ್ವೆ ಚೀಫ್ ಆಡಿಟರಾಗಿ ವರ್ಗ ಮಾಡಲಾಗಿದೆ. ಶ್ರೀ|| ಪಿ. ರಾಜಮನ್ನಾರ್ ನಾಯ್ಡುರವರನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಆರ್ಥಿಕ ಸಲಹೆಗಾರರಾಗಿ ನೇಮಿಸಲಾಗಿದೆ. ಮಿ|| ವಜೀರ್ ಅಹಮದ್‌ರವರನ್ನು ಹುಜೂರ್ ಟ್ರೆಜರಿಗೆ ಮೊಕರೂರ್ ಮಾಡಲಾಗಿದೆ.

ರಜದ ಮೇಲಿರುವ ಪ್ರೊ|| ಈಗಲ್‌ಟನ್ ರವರ ಸ್ಥಾನದಲ್ಲಿ ಏಪ್ರಿಲ್ ೧ ನೇ ತಾ|| ವರೆಗೆ ಶ್ರೀ|| ಎ. ಎನ್. ಮೂರ್ತಿರಾಯರನ್ನು ಪ್ರೊಫೆಸರಾಗಿ ನೇಮಿಸಲಾಗಿದೆ. ಅದೇ ಕಾಲದಲ್ಲಿ ಶ್ರೀ|| ಎಂ. ಆ. ಭರತರಾಜ ಸಿಂಗ್ ರವರು ಅಸಿಸ್ಟೆಂಟ್ ಪ್ರೊಫೆಸರಾಗಿರುವರು.

ಪಾಕಿಸ್ತಾನ ವಿರುದ್ಧ ದಿನಾಚರಣೆ

ಮಾರ್ಚಿ ೧೧ ನೇ ತಾರೀಖು ಪಂಜಾಬ್ ಪ್ರಾಂತ್ಯದಲ್ಲೆಲ್ಲಾ ಪಾಕೀಸ್ತಾನ ವಿರುದ್ಧ ದಿನವನ್ನು ಆಚರಿಸಲಾಗುವುದೆಂದು ಕಾಂಗ್ರೆಸ್ ನಾಯಕರಾದ ಡಾ|| ಭಾರ್ಗವರವರು ತಿಳಿಸಿದ್ದಾರೆ. ಒಂದೇ ಕೋಮಿನ ಸರ್ಕಾರವನ್ನು ಪಂಜಾಬಿನಲ್ಲಿ ಸ್ಥಾಪಿಸುವುದನ್ನು ಕಾಂಗ್ರೆಸ್ ಮತ್ತು ಸಿಖ್ ನಾಯಕರು ವಿರೋಧಿಸಿದ್ದಾರೆ. ಮಾಜಿ ಮಂತ್ರಿಗಳಾದ ಶ್ರೀ ಭೀಮಸೇನ ಸಾಚಾರ್‌ರವರು ಲಾಠಿ ಮೆರವಣಿಗೆಯೊಂದನ್ನು ನಿನ್ನೆ ನಡೆಸಿದರು. ಮಂತ್ರಿ ಮಂಡಲದ ರಚನೆಯಲ್ಲಿ ಸಹಕರಿಸಬೇಕೆಂದು ಮುಸ್ಲಿಂ ಲೀಗಿನವರು ಅಕಾಲಿ ಸಿಖ್ ಪಂಗಡದವರನ್ನು ಪ್ರಾರ್ಥಿಸಿದ ಮೇಲೆ ಸಿಖ್ ನಾಯಕರು ತಿರಸ್ಕರಿಸಿರುತ್ತಾರೆ. ಸದ್ಯದಲ್ಲೇ ಪಾಕೀಸ್ತಾನ ವಿರುದ್ಧ ಸಮ್ಮೇಳನವೊಂದು ಲಾಹೋರಿನಲ್ಲಿ ಜರುಗಲಿದೆ.

ಲೀಗ್ ಚಳುವಳಿಗೆ ಬ್ರಿಟಿಷರ ಬೆಂಬಲವೇ?

೧೯೪೮ ರ ಜೂನ್ ತಿಂಗಳೊಳಗೆ ಭಾರತೀಯರಿಗೆ ಅಧಿಕಾರವನ್ನು ವಹಿಸಿಕೊಡುವ ಬಗ್ಗೆ ಮಿ|| ಜಿನ್ನಾರವರ ಪಾಕೀಸ್ತಾನ ಸಲ್ಲಿಗೆ ಅಡ್ಡಿಯಾಗಿರುವ ಆತಂಕಗಳನ್ನು ಬಿಡಿಸಲು ಬ್ರಿಟಿಷ್ ಸರ್ಕಾರವು ಭರವಸೆ ಇತ್ತಿದೆಯೆಂದು ಹೇಳಲಾಗಿದೆ. ಭಾರತದ ಉಪ ಕಾರ್ಯದರ್ಶಿಗಳಾದ ಮಿ|| ಹೆಂಡರ್ಸನ್ನರು ಕೆಲವು ದಿನಗಳ ಹಿಂದೆ ಲಾಹೋರಿಗೆ ಭೇಟಿ ಕೊಟ್ಟಿದ್ದರೂ, ಅವರು ಲಂಡನ್ನಿಗೆ ಹಿಂತಿರುಗಿದ ಕೂಡಲೇ ಲೀಗಿನವರ ಚಳುವಳಿ ಆರಂಭವಾದುದೂ ಸಹ ಈ ಊಹೆಗೆ ಬೆಂಬಲವಾದ ಅಂಶಗಳೆಂದು ಹೇಳಲಾಗಿದೆ. ಭಾರತದಲ್ಲಿ ಅಧಿಕಾರವನ್ನು ಸರಿಯಾದ ಪ್ರಾತಿನಿಧ್ಯವುಳ್ಳ ಕೇಂದ್ರ ಸರ್ಕಾರ ಅಥವಾ ಪ್ರಾಂತ್ಯ ಸರ್ಕಾರಗಳಿಗೇ ವಹಿಸಿಕೊಡುವುದಾಗಿ ಪ್ರಧಾನಿ ಅಟ್ಲೀಯವರು ಹೇಳಿರುವುದನ್ನು ನೋಡಿದರೆ ಲೀಗಿಗೂ, ಲೇಬರ್ ಸರ್ಕಾರಕ್ಕೂ ಪಾಕೀಸ್ತಾನದ ವಿಚಾರದಲ್ಲಿ ಅಂತರಂಗ ಸಂಧಾನಗಳು ನಡೆದಿರಬಹುದೆಂದು ಮೆಹಲಿಯ ರಾಜಕೀಯ ಆವರಣಗಳಲ್ಲಿ ಹೇಳಲಾಗುತ್ತಿದೆ.

ಲಾಹೋರಿನಲ್ಲಿ ಕರ್ಫ್ಯೂ

ಲಾಹೋರ್ ನಗರದಲ್ಲಿ ನಿನ್ನೆ ಸಂಜೆ ಮತ್ತೆ ಪೋಲೀಸರು ಗುಂಡು ಹಾರಿಸಿದರೆಂದು ವರದಿಯಾಗಿದೆ. ಪರಿಸ್ಥಿತಿ ಹತೋಟಿ ಮೀರಿದೆಯೆಂದು ಹೇಳಲಾಗುತ್ತಿದೆ. ಕರ್ಫ್ಯೂ ಆಜ್ಞೆಯನ್ನು ಜಾರಿಗೆ ತರಲಾಗಿದೆಯೆಂದೂ, ಮಿಲಿಟರಿಯನ್ನು ಆಯಕಟ್ಟು ಸ್ಥಳಗಳಲ್ಲಿ ಕೇಂದ್ರೀಕರಿಸಲಾಗಿದೆಯೆಂದೂ ಗೊತ್ತಾಗಿದೆ.

ಫಾರ್ಮೋಸಾದಲ್ಲಿ ದಂಗೆ

ಫಾರ್ಮೋಸಾ ದ್ವೀಪದ ದಕ್ಷಿಣ ಭಾಗದಲ್ಲಿ ದಂಗೆ ಬಹಳ ಉಗ್ರವಾಗಿದೆ. ಗವರ್ನರು ಅಲ್ಲಿನ ಪ್ರಮುಖರೊಡನೆ ದಂಗೆಯನ್ನಡಗಿಸಲು ಮಾತುಕತೆ ನಡೆಸುತ್ತಿದ್ದಾರೆ. ಇದುವರೆಗೆ ಮೂರು ನಾಲ್ಕು ಸಾವಿರ ಮಂದಿ ಮರಣ ಹೊಂದಿದ್ದಾರೆಂದು ವರದಿಯಾಗಿದೆ.

ರೈಲ್ವೆ ಕೆಲಸಗಾರರ ಸಂಘ

ಮೈಸೂರು ... ರೈಲ್ವೆ ಕೆಲಸಗಾರರ ಸಭೆಯು ... ನೇ ತಾ|| ... ರೈಲ್ವೆ ನಿಲ್ದಾಣದ ... ಸಮಾರಂಭದಲ್ಲಿ ... ಅಧ್ಯಕ್ಷ ... ಜ|| ... ಶ್ರೀ ... ಎಂ. ... ಎಂ. ... ಮತ್ತು ಎಂ ... ಬಲ್ಲಾ - ಖಜಾಂಚಿ [illegible]

ಗೋಪಾಲರಾಯರ ಆಭರಣದ ವ್ಯವಹಾರ

ಸ್ವಂ. ಸು. ಪ್ರೋ॥] ಬೆಂಗಳೂರು ೫

ಧರ್ಮರಕ್ಷಕರ ಗೋಪಾಲರಾಯರ ಆಭರಣಗಳ ಅಪಹಾರದ ಮೊಕದ್ದಮೆಯಲ್ಲಿ ನಿನ್ನೆ ಶ್ರೀ ಡಿಕಾಸ್ಟರವರು ಸಾಕ್ಷ್ಯ ನುಡಿದು ಹೀಗೆ ಹೇಳಿದರು—

ಎರಡು ಸ್ವತ್ತುಗಳನ್ನು ವಿಲೇವಾರಿ ಮಾಡುವಂತೆ ಗೋಪಾಲರಾಯರು ಡಿಸೆಂಬರ್ ೪೬ರಲ್ಲಿ ನನಗೆ ಹೇಳಿ ಸಂಬಂಧಪಟ್ಟ ಕಾಗದ ಪತ್ರಗಳನ್ನು ಕೊಟ್ಟಿದ್ದರು. ಈ ವಿಷಯವನ್ನು ತನಿಖೆ ಅಧಿಕಾರಿಗಳಾದ ಧ್ರುವರಾಯರಿಗೆ ನಾನು ಹೇಳಿದ್ದೆನು: ಶ್ರೀ ಹಾಮಿನಿಕ್ ರವರ ಮನೆಯಲ್ಲಿ ಸಭೆ ನಡೆಸಿ ಅವರೇ ಬಾಕಿದಾರರ ಪಟ್ಟಿಯನ್ನು ಬರೆದರು. ಒಡವೆಗಳ ವಿಚಾರ ಅದರಲ್ಲಿ ನಮೂದಾಗಿರಲಿಲ್ಲ. ಅದನ್ನು ಬರೆಯುವ ಪ್ರಮೇಯವೇ ಇರಲಿಲ್ಲ.

ಶ್ರೀ ಮಾಧವಕೃಷ್ಣ ಮೈಯವರಿಗೆ ಎಷ್ಟ್ಯಾಟಿನ್ ಆಟ್ಸ್‌ತವನ್ನು ಮಾರಲು ಗೋಪಾಲರಾಯರು ಒಪ್ಪಿದ್ದರು. ಡಿಸೆಂಬರ್ ೧೧ ರಲ್ಲಿ ಗೋಪಾಲರಾಯರ ಮನೆಯಲ್ಲಿ ರಾಜಸೇವಾಪ್ರಸಕ್ತ ವೀರರಾಜೇ ಅರಸ್, ಎಚ್. ವಿ. ನಾರಾಯಣರಾವ್ ಮತ್ತು ಇತರರೆದುರಿಗೆ ಪರಾರಿಯನ್ನು ಕರೆಯಲಾಯಿತು. ಮಿ|| ಜೇಮಿಸನ್‌ರವರು ಅದರ ಬೀಗದ ಕೈಯನ್ನು ಕೊಟ್ಟರು.

ಗೋಪಾಲ ನಿವೃತ್ತ ನ್ಯಾಯಾಧೀಶರಾದ ಸಿಗ್ಗ್ಯಾಡರೋ ಎಂಬುವನು ತನ್ನ ಮೇಲೆ ಫಿರ್ಯಾದು ಮಾಡುವುದಾಗಿಯೂ ತನಗೆ ಜಾಮೀನು ಕೊಡಬೇಕೆಂದೂ ಸೂಚಿಸಿ ತಾರೀಖು ಇಲ್ಲದ ಕಾಗದವೊಂದನ್ನು ಗೋಪಾಲರಾಯರು ನನಗೆ ಬರೆದಿದ್ದರು. ಆಗುವುದಿಲ್ಲವೆಂದು ನಾನು ಹೇಳಿದೆ. ಡಿಸೆಂಬರ್ ೯ ನೇ ತಾ|| ಗೋಪಾಲರಾಯರ ಮೇಲೆ ಮೋಸದ ಫಿರ್ಯಾದನ್ನು ನಾನು ಐ. ಜಿ. ಪಿ. ಯವರಿಗೆ ಕೊಟ್ಟೆನು. ಅನಂತರ ತನಿಖೆ ಅಧಿಕಾರಿಗಳು ನನ್ನನ್ನು ಪರೀಕ್ಷಿಸಿದರು. ವರಮಾನ ತೆರಿಗೆಯನ್ನು ತಪ್ಪಿಸಿಕೊಳ್ಳಲು ನಾನು ಪ್ರಯತ್ನಿಸಿಲ್ಲ. ಶೇ|| ೬ಕ್ಕಿಂತ ಹೆಚ್ಚು ಬಡ್ಡಿಯನ್ನು ನಾನು ಹಲವು ವೇಳೆ ತೆಗೆದುಕೊಂಡಿದ್ದೇನೆ. ೨೦-೧೦-೪೬ ರಲ್ಲಿ ಕೊಟ್ಟ ಒಂದು ಲಕ್ಷ ರೂಪಾಯಿಗೆ ೪-೧೧-೪೬ ರಲ್ಲಿ ೧೫ ದಿನದ ಬಡ್ಡಿಗಾಗಿ ೧೦ ಸಾವಿರ ರೂ. ಸಹಿತ ಒಂದು ಲಕ್ಷದ ಹತ್ತು ಸಾವಿರ ರೂ. ಗಳಿಗೆ ಚೆಕ್ಕನ್ನು ಗೋಪಾಲರಾಯರಿಂದ ಪಡೆದಿದ್ದೇನೆ. ಅವರು ನಡೆಸುತ್ತಿದ್ದ ರೇಷ್ಮೆ ವ್ಯಾಪಾರದಿಂದ ಈ ಲಾಭವನ್ನು ಕೊಟ್ಟಿರುವರು. ೫-೧೧-೪೬ ರಲ್ಲಿ ಮತ್ತೆ ಅವರಿಗೆ ಒಂದು ಲಕ್ಷದ ಇಪ್ಪತ್ತು ಸಾವಿರ ರೂ. ಗಳನ್ನು ಕೊಟ್ಟೆ. ... ನಂತರ ಅವರು ಒಂದು ಲಕ್ಷದ ಇಪ್ಪತ್ತು ಸಾವಿರ ರೂ. ಗೆ ... ಚೆಕ್ ... ಹನ್ನೆರಡು ಸಾವಿರ ... ಗೆ ಇನ್ನೊಂದು ಚೆಕ್ಕನ್ನು ಕೊಟ್ಟರು. ... ಬ್ಯಾಂಕಿನಲ್ಲಿ ಹಣವಿಲ್ಲದಿದ್ದ ಕಾರಣದಿಂದ ಅವುಗಳನ್ನು ... ಮಾಡಿಸಲಿಲ್ಲ. ... ಹಣವನ್ನು ... ಕೊಡುವುದಾಗಿ ... ಹೇಳಿದ್ದರು.

[illegible]

ಸ್ವಂ. ...] [illegible]

ಶ್ರೀ ಶ್ರೀ ... [illegible] ... ವಾಗ್ದಾನ ... ಆಗುವುದು.

ಸಾಧ್ವಿ

ತಾ|| ೫-೩-೪೭ ಬುಧವಾರ

ರಾಷ್ಟ್ರಪತಿಗಳ ಆಗಮನವನ್ನು ಸದುಪಯೋಗಪಡಿಸಿ ಕೊಳ್ಳಬೇಕು

ಈ ತಿಂಗಳಲ್ಲಿ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ನಮ್ಮ ಸಂಸ್ಥಾನಕ್ಕೆ ಬರಲಿರುವರಷ್ಟೆ. ಅವರ ಆಗಮನದ ಸುಸಂದರ್ಭವನ್ನು ನಮ್ಮ ಸರ್ಕಾರದವರೂ, ಪ್ರಜಾ ಪ್ರಮುಖರೂ ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೆಂದು ನಾವು ಕೋರುತ್ತೇವೆ. ಈ ವಿಷಯಕ್ಕೆ ಸಂಬಂಧಪಟ್ಟವರು ಕೂಡಲೇ ಗಮನ ಕೊಡುವರೆಂದೂ ಸಹ ನಾವು ನಂಬಿದ್ದೇವೆ.

೧೯೩೭ ನೇ ಇಸವಿಯಲ್ಲಿ ವಿದುರಾಶ್ವತ್ಥದ ದುರ್ಘಟನೆಗಳು ನಡೆದಮೇಲೆ ಮೈಸೂರಿನ ರಾಜಕೀಯ ಬಿಕ್ಕಟ್ಟನ್ನು ಬಿಡಿಸಲು ಅಂದು ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಆಹ್ವಾನದ ಮೇರೆ ಸರ್ದಾರ್ ವಲ್ಲಭಭಾಯಿ ಪಟೇಲರೊಡನೆ ಆಚಾರ್ಯ ಕೃಪಲಾನಿಯವರೂ ಸಂಸ್ಥಾನಕ್ಕೆ ಭೇಟಿ ಕೊಟ್ಟಿದ್ದರು. ಕಾರಾಗೃಹದಲ್ಲಿದ್ದ ಕಾಂಗ್ರೆಸ್ ನಾಯಕರುಗಳನ್ನು ಕಂಡು ಮಾತನಾಡಿ, ಸರಕಾರದೊಡನೆ ಸಮಾಲೋಚನೆ ನಡೆಸಿ, ಕಾಂಗ್ರೆಸ್ಸಿಗೂ, ಪ್ರಭುತ್ವದವರಿಗೂ ಒಂದು ಗೌರವಯುತವಾದ ಒಪ್ಪಂದವನ್ನು ಮಾಡಿಸಿದರು. ಮಿರ್ಜಾ-ಪಟೇಲ್ ಒಪ್ಪಂದವೆಂಬ ಹೆಸರಿನಿಂದ ಪ್ರಖ್ಯಾತವಾಗಿರುವ ಈ ಪ್ರಕರಣವು ಇಂದಿಗೂ ಕಾಂಗ್ರೆಸ್ ಮತ್ತು ಸರಕಾರದವರುಗಳಿಗೆ ಮಾನ್ಯವಾಗಿ, ಅದರಂತೆ ಕಾರ್ಯಕಲಾಪಗಳು ನಡೆದುಕೊಂಡು ಬರುತ್ತಿವೆ. ಕಾಂಗ್ರೆಸ್ ಸಂಸ್ಥೆಗೆ ಅಂದಿನಿಂದ ಸರ್ಕಾರದವರ ಅಂಗೀಕಾರವೂ ಸಹ ದೊರೆತಿರುತ್ತದೆ. ವಿದುರಾಶ್ವತ್ಥದ ಗುಂಡಿನ ಪ್ರಕರಣದಿಂದ ಕಲುಷಿತವಾಗಿದ್ದ ವಾತಾವರಣವು ಪ್ರಶಾಂತವಾಗಿ, ಶಾಂತಿ ಸೌಹಾರ್ದಗಳ ಅಂಕುರವು ಅಂದು ಮೂಡಿತು.

ಈಚೆಗೆ ಮತ್ತೆ ಪರಿಸ್ಥಿತಿಯು ಬಿಗಡಾಯಿಸಿ, ಸತ್ಯಾಗ್ರಹದ ಸಂಭವವು ಸಂಪ್ರಾಪ್ತವಾಗಿರುತ್ತದೆ. ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚೆಂಗಲರಾಯ ರೆಡ್ಡಿಯವರು ರಾಷ್ಟ್ರ ನಾಯಕರುಗಳ ಸಲಹೆಯನ್ನು ಕೇಳಲು ದೆಹಲಿಗೆ ತೆರಳಿರುತ್ತಾರೆ. ಸಂಸ್ಥಾನದ ಇಂದಿನ ಸನ್ನಿವೇಶವೂ ಸಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿರುತ್ತದೆ. ದೂರದೃಷ್ಟಿಯಿಂದಲೂ, ವಿವೇಚನೆಯಿಂದಲೂ ವರ್ತಿಸುವುದು ಅತ್ಯಂತ ಅಗತ್ಯವಾಗಿದೆ. ಇಂತಹ ಸನ್ನಿವೇಶದಲ್ಲಿ ಆಚಾರ್ಯ ಕೃಪಲಾನಿಯವರ ಭೇಟಿಯು ನಮ್ಮ ಸಂಸ್ಥಾನಕ್ಕೆ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸಬೇಕು.

ಅಂದು ಶ್ರೀ ಕೃಪಲಾನಿಯವರು ಕಾಂಗ್ರೆಸ್ಸಿನ ಸಂಚಾಲಕರಾಗಿ ಮಾತ್ರ ಬಂದಿದ್ದರು. ಇಂದು ಕಾಂಗ್ರೆಸ್ಸಿನ ಅಧಿಕಾರಿಗಳಾಗಿ ಬರುತ್ತಿರುವರು. ರಾಷ್ಟ್ರದ ಪ್ರಮುಖ ರಾಜಕೀಯ ಸಂಘಟನೆಯಾದ ಕಾಂಗ್ರೆಸ್ಸಿನ ಸೂತ್ರಧಾರಿಗಳಾಗಿದ್ದು ಅವರು ಇಂದು ಇಡೀ ಭರತಖಂಡದ ರಾಜ್ಯ ಸೂತ್ರಗಳ ಮೇಲೆಲ್ಲಾ ತಮ್ಮ ಪ್ರಭಾವವನ್ನು ಬೀರಲು ಸಮರ್ಥರಾಗಿರುವರು. ಭಾರತ ಸರ್ಕಾರದಿಂದ ಸಂಸ್ಥಾನಗಳಿಗೆ ಆಗಬೇಕಾದ ಸೌಲಭ್ಯಗಳ ವಿಚಾರದಲ್ಲೆಲ್ಲಾ ಕಾಂಗ್ರೆಸ್ ಸಂಸ್ಥೆಯ ಪ್ರಭಾವವು ಬೀಳಲೇ ಬೇಕಾಗುವುದು. ಹೀಗಿರುವಲ್ಲಿ ಅಂತಹ ಸಂಸ್ಥೆಯ ನಾಯಕರ ಆಗಮನವನ್ನು ಇಂದಿನ ನಮ್ಮ ಸಂಸ್ಥಾನದ ಸಮಸ್ಯೆಗಳನ್ನು ಬಗೆ ಹರಿಸಲು ಉಪಯೋಗಿಸಿಕೊಳ್ಳುವುದು ಅತ್ಯಂತ ಸಾಧುವಾಗಿರುತ್ತದೆ.

ನಮ್ಮ ಸರ್ಕಾರದವರು ಈಗಿನಿಂದಲೇ ಆಚಾರ್ಯರೊಡನೆ ಪತ್ರ ವ್ಯವಹಾರ ಬೆಳೆಸಿ, ಅವರ ಕಾರ್ಯಕ್ರಮಗಳನ್ನು ಅರಿತುಕೊಳ್ಳಬೇಕು; ಅವರನ್ನು ಸಂಸ್ಥಾನದ ಅತಿಥಿಗಳನ್ನಾಗಿ ಆಹ್ವಾನಿಸಬೇಕು; ಶ್ರೀಮನ್ಮಹಾರಾಜರವರಿಗೂ, ಅವರಿಗೂ ಭೇಟಿಯನ್ನು ಏರ್ಪಡಿಸಬೇಕು; ಕಾಂಗ್ರೆಸ್ ನಾಯಕರುಗಳೂ, ಸರ್ಕಾರದ ಪ್ರತಿನಿಧಿಗಳೂ ಆಚಾರ್ಯರ ಸಮ್ಮುಖದಲ್ಲಿ ಸಮ್ಮಿಳಿತರಾಗಬೇಕು; ಸರ್ ಮಿರ್ಜಾರವರ ಕಾಲದಲ್ಲಿ ಉಭಯತ್ರರೂ ಸಮರ್ಪಕವಾದ ಒಪ್ಪಂದಕ್ಕೆ ಬಂದಂತೆ ಈಗಲೂ ಬರಲು ಏರ್ಪಾಡು ಮಾಡಬೇಕು.

ಸಂಸ್ಥಾನದ ಮುಂದೆ ಇಂದು ಅನೇಕ ಸಮಸ್ಯೆಗಳಿರುತ್ತವೆ. ರಾಜಕೀಯ ಸ್ವಾತಂತ್ರ್ಯವನ್ನು ಪ್ರಜೆಗಳು ಪಡೆಯುವ ವಿಷಯದಲ್ಲಿ ಅತ್ಯಂತ ಕಾತುರರಾಗಿರುತ್ತಾರೆ. ಮತ್ತು ಭಾರತ ರಾಜ್ಯಾಂಗ ನಿರ್ಮಾಣ ಕಾರ್ಯದಲ್ಲಿ ಭಾಗಿಗಳಾಗಲೂ ತವಕಿಸುತ್ತಿದ್ದಾರೆ. ಆದರೆ ಶ್ರೀಮನ್ಮಹಾರಾಜರವರಿಂದ ಘೋಷಣೆಯು ಬಂದ ಮೇಲೆ ಇದುವರೆಗೆ ನಡೆದಿರುವ ಕೆಲಸಕಾರ್ಯಗಳು ಸ್ವಲ್ಪವೂ ತೃಪ್ತಿಕರವಾಗಿರುವುದಿಲ್ಲ. ಯಾವ ತ್ವರಿತದಿಂದ ಪ್ರಭುಗಳ ಘೋಷಣೆಯು ಈಡೇರಿಸಲ್ಪಡಬೇಕಾಗಿತ್ತೋ, ಆ ಬಗೆಯ ಚಟುವಟಿಕೆಗಳು ಕಾಣದೆ ಉದಾಸೀನ ಪ್ರವೃತ್ತಿಯೇ ಎದ್ದು ಕಾಣುತ್ತಿದೆ. ಇದರಿಂದ ಅಸಮಾಧಾನಗೊಂಡು ಸಂಸ್ಥಾನದ ಪ್ರಮುಖ ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್ಸಿನವರು ಹೋರಾಟದಲ್ಲಿ ಧುಮುಕಲೂ ಸಹ ನಿರ್ಧರಿಸಿರುತ್ತಾರೆ. ಸಂಸ್ಥಾನವನ್ನೆಲ್ಲಾ ಭಯಂಕರವಾದ ಅಗ್ನಿ ಜ್ವಾಲೆಗೆ ಸಿಲುಕಿಸುವ ಯಾವ ಆಂದೋಳನಕ್ಕೂ ಅವಕಾಶವೀಯಲು ಇದು ಸಮಯವಲ್ಲ. ಪ್ರಭುಗಳ ಘೋಷಣೆಯಿಂದ ಯಾವ ಸತ್ಫಲವು ಲಭಿಸೀತೆಂಬ ಆಶಾಭಾವನೆಯು ಉಂಟಾಗಿತ್ತೋ ಅದನ್ನು ಎಲ್ಲರೂ ಸಾರ್ಥಕಪಡಿಸುವುದು ಅಗತ್ಯವಾಗಿದೆ.

ಬ್ರಿಟಿಷರು ಬರುವ ವರ್ಷ ಭಾರತದ ಪ್ರಜೆಗಳಿಗೆ ಸ್ನೇಹ, ಸೌಹಾರ್ದಗಳಿಂದ ಅಧಿಕಾರವನ್ನು ವಹಿಸಿ ಸ್ವಸ್ಥಾನಕ್ಕೆ ತೆರಳಲು ಸಿದ್ಧರಾಗಿರುವಾಗ, ನಮ್ಮ ಸಂಸ್ಥಾನದಲ್ಲಿ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟ ಮತ್ತು ಸತ್ಯಾಗ್ರಹಗಳಿಗೆ ಅವಕಾಶ ಕೊಡಬಹುದೇ? ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರ ಆಗಮನದ ಸುಸಮಯವನ್ನು ಸದುಪಯೋಗ ಪಡಿಸಿಕೊಂಡು ಪ್ರಜೆಗಳೂ ಪ್ರಭುತ್ವದವರೂ ಸಂಸ್ಥಾನದ ಇಂದಿನ ಬಿಕ್ಕಟ್ಟನ್ನು ಬಗೆ ಹರಿಸಲು ಹೃತ್ಪೂರ್ವಕವಾದ ಪ್ರಯತ್ನವನ್ನು ನಡೆಸಲೆಂದು ನಾವು ಹಾರೈಸುತ್ತೇವೆ.

ಕೇಂದ್ರ ಸರ್ಕಾರದ ಬಡ್ಜೆಟ್ಟಿನ ಮೇಲೆ ಪ್ರತಿಭಟನೆ

ಕೇಂದ್ರ ಸರ್ಕಾರದ ಬಡ್ಜೆಟ್ಟಿನಲ್ಲಿ ವ್ಯಾಪಾರದ ಲಾಭದ ಮೇಲೆ ಶೇ|| ೨೫ ರಷ್ಟು ತೆರಿಗೆ ಹಾಕಿರುವುದನ್ನೂ, ಸೂಪರ್ ತೆರಿಗೆ ವಿಧಿಸಿರುವುದನ್ನೂ ಪ್ರತಿಭಟಿಸಿ ಮದ್ರಾಸ್ ಸ್ಟಾಕ್ ಎಕ್ಸ್‌ಚೇಂಜಿನವರು ಅನಿರ್ದಿಷ್ಟಕಾಲದವರೆಗೆ ವ್ಯಾಪಾರವನ್ನು ನಿಲ್ಲಿಸಿದ್ದಾರೆ. ಬೊಂಬಾಯಿಯಿಂದಲೂ ಪ್ರತಿಭಟನೆ ತೋರಿಬರುತ್ತಿದೆ. ಕಲ್ಕತ್ತೆಯ ವ್ಯಾಪಾರಿಗಳು ಪಂ|| ನೆಹರೂರವರಿಗೆ ತಂತಿ ಕಳುಹಿಸಿ, ಹೊಸ ತೆರಿಗೆಯು ದೇಶದ ಕೈಗಾರಿಕೆಗೆ ಹಾನಿಕರವಾಗಿದೆಯೆಂದು ತಿಳಿಸಿದ್ದಾರೆ.

ಖಾನ್ ಸಾಹೇಬರೂ ರಾಜೀನಾಮೆ ಕೊಡಲಿ

ಪಂಜಾಬ್ ಪ್ರಧಾನಿಗಳ ರಾಜೀನಾಮೆಯು ಸಾಧುವಾಗಿದೆ. ಗಡಿನಾಡಿನ ಮುಖ್ಯಮಂತ್ರಿ ಡಾ|| ಖಾನ್ ಸಾಹೇಬರೂ ಇದೇ ರೀತಿ ರಾಜೀನಾಮೆ ಸಲ್ಲಿಸಿ ಮುಸ್ಲಿಮರಲ್ಲಿ ಐಕ್ಯತೆ ಉಂಟುಮಾಡಬೇಕೆಂದು ಮಿ|| ಜಿನ್ನಾರವರು ಹೇಳಿಕೆ ಇತ್ತಿದ್ದಾರೆ.

ನಾಯಿಗಳಿಗೆ ಶಿಕ್ಷಣ

ರಸ್ತೆಗಳಲ್ಲಿ ನಡೆಯುವ ಅಪಘಾ... ಶೇ|| ೨೫ ರಷ್ಟಕ್ಕೆ ನಾಯಿಗಳೇ ಕಾ... ದು ಹೇಳಲಾಗಿದೆ. ಇದರ ನಿ... ಗಿ ಲಂಡನ್ ನಗರದಲ್ಲಿ ೩೦ ಲಕ್ಷ... ಳಿಗೆ ಶಿಕ್ಷಣವನ್ನು ಕೊಡಲಾಗುವು... ದಿನ ಸಂಜೆಯೂ ಮತ್ತು ಭಾ... ದಿನ ಬೆಳಗ್ಗೆಯೂ ಸಹ ತರಗತಿ... ಡುವುವು. ಈ ಶಿಕ್ಷಣದಿಂದ ನಾ... ರಸ್ತೆಗಳಲ್ಲಾಗಬಹುದಾದ ಅಪ... ನ್ನು ತಪ್ಪಿಸಬಲ್ಲುವೆಂದು ಹೇಳಲಾ...

ಫ್ರೆಂಚ್ ಡಾಕ್ಟರುಗ... ಮುಷ್ಕರದ ಬೆದರಿ...

ತಮ್ಮ ಉಪಯೋಗಕ್ಕೆ ಕಾ... ರುಗಳನ್ನು ಒದಗಿಸದಿದ್ದಲ್ಲಿ ಮುಷ್ಕ... ಡುವುದಾಗಿ ಫ್ರಾನ್ಸಿನ ಡಾಕ್ಟರುಗಳು... ರಕ್ಕೆ ತಿಳಿಸಿದ್ದಾರೆ. ಅನೇಕ ನ... ರಗಳಲ್ಲಿ ಪ್ರದರ್ಶನವನ್ನೂ ನಡೆ... ೧೯೪೫ ರ ಜೂನಿನಿಂದ ಫ್ರಾನ್ಸಿನ... ವರ ಡಾಕ್ಟರುಗಳ ಪೈಕಿ ೭೦೫... ಮಾತ್ರ ಕಾರುಗಳು ದೊರಕಿವೆ... ನಲ್ಲಿರುವ ೭ ಸಾವಿರ ಡಾಕ್ಟರುಗ... ೬೩ ಮಂದಿಗೆ ಮಾತ್ರ ರಹದಾರಿ...

ರಾಜ್‌ಕಮಲ್, ಮೈಸೂರು
೨-೩-೪೭ ರಿಂದ ೩ ನೇ ವಾರ
ಹೋಳಿ ಹಬ್ಬದ ಪ್ರಯುಕ್ತ 6-3-47ನೇ
:- ಗುರುವಾರ ಮೂರು ಆಟಗಳು :-
ಮ್ಯಾಟಿನಿ ಮಧ್ಯಾಹ್ನ ೩ ಕ್ಕೆ
1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ
ಶ್ರೀ ಕೃಷ್ಣಲೀಲಾ
(ಕನ್ನಡ ಚಿತ್ರ)
ಇಂಪಾದ ಗಾನಗಳು! ಸೊಗಸಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!!
ಇವೆಲ್ಲವನ್ನೂ ಇಂದೇ ನೋಡಿ.

ಅಪೆರಾ ಟಾಕೀಸ್
೫-೩-೪೭ ರಿಂದ ೩ ನೇ ವಾರ
ವಿ ದ್ಯಾ ಪ ತಿ (ತಮಿಳು)
ಪ್ರತಿ ದಿನ ಮೂರು ಆಟಗಳು
: ಪಾತ್ರ :-
ಟಿ ಆರ್. ರಾಮಚಂದ್ರನ್, ಕೆ ತವಮಣಿ
ಡಿ. ಬಾಲಸುಬ್ರಹ್ಮಣ್ಯಂ, ಪ್ರೇಮಾವತಿ
—: MORNING SHOWS :—
From 7—3—47
'The Right Man'

ಶ್ರೀರಂಗಪಟ್ಟಣದ ಪುರಸಭಾ ಚುನಾವಣೆಯ ಮತದಾರರಲ್ಲಿ
ಕೆ. ರಾಮಯ್ಯ
ಉ|| ಅಂಬಾಜಿರಾವ್
ಪ್ರಾರ್ಥನೆ.
10-3-47 ರ ಚುನಾವಣೆಯಲ್ಲಿ ದಯವಿಟ್ಟು ಗಣಪತಿ ಗುರ್ತಿಗೆ ಓಟು ಮಾಡಿ
(ಓಟರು ಲಿಸ್ಟಿನಲ್ಲಿ ಕೆ. ರಾಮಯ್ಯ ಎಂದಿದೆ. ರೂಢಿವಾಚಕವಾಗಿ ಅಂಬಾಜಿರಾವ್ ಎಂದು ಚಾಲ್ತಿಯಲ್ಲಿರುತ್ತೆ.)

ರಣಜಿತ್ ಟಾಕೀಸ್
ಮೈ ಸೂ ರು : : 6-3-47ರಿಂದ
ರಾಜಲಕ್ಷ್ಮಿ
ಪ್ರ ತಿ ದಿನ ಮೂರು ಆಟಗಳು
-: ಪಾತ್ರ :-
ಕರ್ನಣಬಾಲಾ, ಚಬ್ಬಿ, ಬಿಸ್ವಾಸ್

ಕಂಟ್ರೋಲ್ ಧಾರಣೆಯ
ಹುರಿಗಡಲೆಯ
ಬೇಕಾದಲ್ಲಿ
ಬೆಳಗ್ಗೆ 10 ರಿಂದ 1 ಘಂಟೆ, ಸಾಯ...
4 ರಿಂದ 7 ಘಂಟೆ ವರೆಗೂ ದೊರೆಯ...
ರೂ 1ಕ್ಕೆ 1ನೇ ನಂ. 2¼ ...
ರೂ. 1ಕ್ಕೆ 2ನೇ ನಂ. 2½ ...
ಪಿ. ವೆಂಕಟ ನರಸಿಹ್ಮಯ...
L. No. 584.
ಕಡಲೆ ಅಂಗಡಿ,
ಸಂತೇಪೇಟೆ,] [ಮೈ...

ನಿಮ್ಮ ಮೈ ಮೋಹಕವಲ್ಲವೆಂತೆ ಹೊಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!
ಮೈಸೂರು ಸ್ಯಾಂಡಲ್ ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮ... ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟ...
ಬೆಂಗಳೂರು.

Edited, printed and publishe... A. R. Nagarajan at the Sadhvi ... D. Subbiah Road, Mysore.

ರೀಜಿ. ನಂ. 392 || ವಂದೇ ಮಾತರಂ || ಬಿಡಿ ಪ್ರತಿಗೆ 3 ಕಾಸು

ಸಂಪುಟ ೫] ಗುರುವಾರ ೬—೩—೪೭ [ಸಂಚಿಕೆ ೧೬೭

ಪಂಜಾಬ್ ಪ್ರಾಂತ್ಯದಲ್ಲಿ ಗೌರ್ನರರ ಆಡಳಿತ

ಕೈಗಾರಿಕಾ ವಸತಿಗಳು

ಪ್ರ.ಪ್ರೋ] ಬೆಂಗಳೂರು ೬

ಬೆಂಗಳೂರು ನಗರದ ಉತ್ತರ ಭಾಗದಲ್ಲಿ ಯಶವಂತಪುರ ಮತ್ತು ಕೇಶವಮಾನಹಳ್ಳಿಗ ೫೩೦ ಎಕರೆ ಜಮೀನನ್ನು ಕೂಡಲೇ ವಹಿಸಿಕೊಂಡು ಸಾಬೂನು ಕಾರ್ಖಾನೆ ... ಮಂಜೂರಾದ ಸಣ್ಣ ಕಾರ್ಖಾನೆ ನಿವಸತಿಯನ್ನು ನಿರ್ಮಿಸುವ ಯೋಜ ಸರ್ಕಾರದವರು ಒಪ್ಪಿಗೆ ಇತ್ತಿದ್ದಾರೆ. ಯೋಜನೆಯ ಎರಡನೆಯ ಅಂಶವಾಗಿ ೧೫೦೦೦ ರೂ.ಗೆ ೫೭೯ ಎಕರೆ ಬೇರೆ ಸ್ಥಳವನ್ನು ವಶಪಡಿಸಿಕೊಂಡು ದೊಂಬರ್, ಟಿಂಬರ್ ಯಾರ್ಡ್ ಮುಂತಾದವುಗಳಿಗೆ ಮೀಸಲಾಗಿಡುವಂತೆ ಆಜ್ಞೆಯಾಗಿದೆ. ಮೂರನೆಯದಾಗಿ ಬಡಾವಣೆ ಬಡವ ಬಡಜನರ ಮತ್ತು ಕೂಲಿಗಾರರ ಸಹಾಯಾರ್ಥವಾಗಿ ೪೦೦೦ ಸೈಟುಗಳನ್ನು ನಿರ್ಮಿಸುವಂತೆ ಅಪ್ಪಣೆಯಾಗಿದೆ

... ಎಂಬ ಮಾದಕ ಪದಾರ್ಥದ ಬೆಲೆಯನ್ನು ೧೧೦ ಆಣೆಯಿಂದ ೧೨ ... ಏರಿಸಲಾಗಿದೆ. ಮದರಾಸಿನಿಂದ ಬರುವ ವಿದೇಶೀ ಮದ್ಯದ ಪೀಪಾಯಿ ಬೆಲೆಯು ಗ್ಯಾಲನ್ ಒಂದಕ್ಕೆ ೩೦ ರಿಂದ ೩೫ ರೂ ಹೆಚ್ಚಿಸಲಾಗಿದೆ.

ತುಂಗಭದ್ರಾ ಅಣೆಕಟ್ಟು

ಮದ್ರಾಸ್ ಸರ್ಕಾರದವರು ರಚಿಸಲಿರುವ ತುಂಗಭದ್ರಾ ಅಣೆಕಟ್ಟಿನ ಯೋಜನೆಯಿಂದ ಬಳ್ಳಾರಿ ಮತ್ತು ಕರ್ನೂಲ್ ಜಿಲ್ಲೆಯ ೩ ಲಕ್ಷ ಎಕರೆ ಪ್ರದೇಶದಲ್ಲಿ ಕೃಷಿ ಸಾಗುವಳಿ ನಡೆಯುವುದು. ಈ ಹೊಸ ಯೋಜನೆಯ ಪ್ರಕಾರ ಹೊಸಪೇಟೆಯ ಬಳಿ ಒಂದು ಜಲಾಶಯವನ್ನು ನಿರ್ಮಿಸಲಾಗುವುದು. ಮದ್ರಾಸ್ ಮತ್ತು ಹೈದರಾಬಾದ್ ಪ್ರದೇಶಗಳಲ್ಲಿ ಎರಡು ಭಾರಿ ಕಾಲುವೆಗಳ ರಚಿಸಲಾಗುವುದು. ಈ ಯೋಜನೆ ಮುಗಿಯಲು ೮ ವರ್ಷಗಳು ಬೇಕಾಗುವುವು ಮತ್ತು ೧೦ ಕೋಟಿ ರೂ ಗಳು ವೆಚ್ಚವಾಗುವುದು

ಶ್ರೀ ರಾಮಕೃಷ್ಣ ಜಯಂತಿ

ಕೊಳ್ಳೇಗಾಲ ೪

ಈ ಊರಿನಲ್ಲಿ ರಾಮಕೃಷ್ಣ ಸದನದಲ್ಲಿ ರಾಮಕೃಷ್ಣ ಪರಮಹಂಸರ ಜಯಂತ್ಯುತ್ಸವವು ಮೊನ್ನೆ ದಿನ ವೈಭವದಿಂದ ಜರುಗಿತು. ಶ್ರೀಮತಿ ಯಶೋಧಮ್ಮ ದಾಸಪ್ಪನವರು ಶ್ರೀ ಶಾರದಾಮಣಿದೇವಿ ಮತ್ತು ಕಸ್ತೂರಿ ಬಾ ರವರ ವಿಚಾರವಾಗಿಯೂ, ಶ್ರೀ ಸಿ. ಜಿ. ದೇವನಾಥ್‌ರವರು ಸ್ವಾಮಿ ವಿವೇಕಾನಂದರ ವಿಚಾರವಾಗಿಯೂ, ಶ್ರೀ ... ದಾಸಪ್ಪನವರು ಪರಮಹಂಸ ಮತ್ತು ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮದ ಮೇಲೂ ಭಾಷಣ ಮಾಡಿದರು

ಚುನಾವಣಾ ಭರಾಟೆ

ಸ್ವಂ.ಸು] ಶ್ರೀರಂಗಪಟ್ಟಣ ೫

ಇಲ್ಲಿನ ಪುರಸಭಾ ಚುನಾವಣೆಗೆ ಇನ್ನು ... ದಿನಗಳು ಮಾತ್ರ ಉಳಿದಿವೆ. ಓಟಿನ ... ಪ್ರಬಲವಾಗಿ ಸಾಗುತ್ತಿದೆ. ಹೊಸ ಉಮೇದುವಾರರ ಪರವಾಗಿ ಹಲವು ಜನರು ಅಲ್ಲಲ್ಲೇ ಅಪಪ್ರಚಾರ ಮಾಡುತ್ತಿರುವುದು ಕಂಡು ಬರುತ್ತಿದೆ. ಯುವಕ ಮುಂದಾಳುಗಳೂ, ವಿಶಾಲ ದೃಷ್ಟಿಯುಳ್ಳವರೂ ಆದ ಹೊಸ ಉಮೇದುವಾರರು ಆರಿಸಿ ಬರಬೇಕೆಂದು ನಗರದ ಹಿತಚಿಂತಕರು ಹಾರೈಸುತ್ತಿದ್ದಾರೆ

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ

ಅಭಯ ಆಯುರ್ವೇದಿಕ್ ರೀಸರ್ಚ್ ಸಂಸ್ಥೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾದ ಶ್ರೀ ಹೆಚ್. ಸಿ. ಬಸವಯ್ಯನವರು ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಮುಷ್ಕರದ ಬಗ್ಗೆ ಈ ರೀತಿ ಹೇಳಿಕೆ ಕೊಟ್ಟಿದ್ದಾರೆ:—

ವಿದ್ಯಾರ್ಥಿಗಳು ಮುಷ್ಕರ ಹೂಡಿ ೨೩ ದಿನಗಳಾದವು. ಇದು ಬರೀ ವಿದ್ಯಾರ್ಥಿಗಳಲ್ಲದೆ ಸಾರ್ವಜನಿಕರಿಗೂ ಸಂಬಂಧಪಟ್ಟ ವಿಷಯ. ಈ ಕಾಲೇಜಿನಿಂದ ಹೊರಬೀಳುವ ವಿದ್ಯಾರ್ಥಿಗಳು ಸ್ವತಂತ್ರವಾಗಿ ವೃತ್ತಿಯನ್ನು ಮುಂದುವರಿಸುವಾಗ ಚಿಕಿತ್ಸೆಗಾಗಿ ಬರುವ ಪ್ರಾಣಗಳ ಅಳಿವು ಮತ್ತು ಉಳಿವು ಇವರನ್ನೆ ಅವಲಂಬಿಸಬೇಕಾಗಿರುತ್ತದೆ. ಆದ್ದರಿಂದ ಇವರುಗಳು ಉತ್ತಮ ಪಾಂಡಿತ್ಯ ಪಡೆದಿರುವ ಉಪಾಧ್ಯಾಯರಿಂದ ಶಿಕ್ಷಣವು ಬೇಕೆಂದು ಕೇಳುತ್ತಿರುವುದು ಸಹಜವಾದ ವಿಷಯವೇ ಆಗಿದೆ. ಕೂಡಲೇ ಸರ್ಕಾರದವರು ವಿದ್ಯಾರ್ಥಿಗಳ ಬೇಡಿಕೆಯನ್ನು ಅಂಗೀಕರಿಸಿ ಮುಷ್ಕರವು ಕೊನೆಗಾಣುವಂತೆ ಮಾಡಲು ಸಾರ್ವಜನಿಕರು ಒತ್ತಾಯಪಡಿಸಬೇಕಾಗಿದೆ

ಕೈಗಾರಿಕಾ ಮಾಲೀಕರಿಗೆ ಲಿಯಾಖತ್‌ರವರ ಎಚ್ಚರಿಕೆ

ಕೇಂದ್ರ ಸರ್ಕಾರದ ಆಯವ್ಯಯವನ್ನು ವಿರೋಧಿಸಿ ಹಲವು ಪ್ರಮುಖ ಕೈಗಾರಿಕಾ ಸಂಸ್ಥೆಗಳ ಮಾಲೀಕರು ವ್ಯಕ್ತಪಡಿಸಿರುವ ಪ್ರತಿಭಟನೆಯನ್ನು ಪ್ರಸ್ತಾಪಿಸಿ, ಸರ್ಕಾರದೊಡನೆ ಅವರುಗಳು ಸಹಕರಿಸದಿದ್ದಲ್ಲಿ ಸರ್ಕಾರವೇ ಭಾರಿ ಕೈಗಾರಿಕೆಗಳನ್ನು ನಡೆಸಬೇಕಾಗಬಹುದೆಂದು, ನಿನ್ನೆ ಕೇಂದ್ರ ಶಾಸನ ಸಭೆಯಲ್ಲಿ ಹಣಕಾಸಿನ ಸಚಿವರಾದ ಮಿ|| ಲಿಯಾಖತ್ ಆಲಿ ಖಾನರು ಒಂದು ಎಚ್ಚರಿಕೆಯನ್ನಿತ್ತಿದ್ದಾರೆ.

ಗ್ರಾಮಾಧಿಕಾರಿಗಳ ಸಭೆ

ಸ್ವಂ.ಸು] ಚಾಮರಾಜನಗರ ೩

ಈ ತಾಲ್ಲೂಕಿನ ಗ್ರಾಮಾಧಿಕಾರಿಗಳ ಸಭೆಯು ಜಮಲ್ದಾರರಾದ ಶ್ರೀ ... ಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಂದೆ ಬರುವ ಜಿಲ್ಲಾ ಬೋರ್ಡ್ ಚುನಾವಣೆಗೆ ಶ್ರೀ|| ಶ್ರೀ ಶ್ರೀನಿವಾಸರ್ ಮತ್ತು ಸ|| ಶ್ರೀ ಚಿಕ್ಕಸಿದ್ದಪ್ಪನವರನ್ನು ಉಮೇದುವಾರರನ್ನಾಗಿ ನಿಲ್ಲಿಸಬೇಕೆಂದು ತೀರ್ಮಾನಿಸಲಾಯಿತು. ತಾಲ್ಲೂಕ ಸಂಘವನ್ನು ಸ್ಥಾಪಿಸಿ ಶ್ರೀ ಎಲ್. ವೆಂಕಟನಾರಣಪ್ಪನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಶ್ರೀನಿವಾಸಮೂರ್ತಿಗಳನ್ನು ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಯಿತು

ಗೋಪಾಲರಾವ್ ಮತ್ತು ಬ್ಯಾಂಕ್ ಗುಮಾಸ್ತರ ಸಂಬಂಧ

ಮೂರ್ತಿ ಮತ್ತು ನಂಜುಂಡಯ್ಯನವರ ಸಾಕ್ಷಿ

ಸ್ವಂ.ಸು] ಬೆಂಗಳೂರು ೫

ಧರ್ಮ ರತ್ನಾಕರ ಗೋಪಾಲರಾಯರ ದರೋಡೆ ಮೊಕದ್ದಮೆಯಲ್ಲಿ ಈ ದಿನ ಇಂಪೀರಿಯಲ್ ಬ್ಯಾಂಕಿನ ಗುಮಾಸ್ತರಾದ ಶ್ರೀ ಮೂರ್ತಿಯವರು ಈ ರೀತಿ ಸಾಕ್ಷ್ಯವಿತ್ತರು:—

೬ ನೇ ತಾ|| ರಾತ್ರಿ ಹಲವು ಚಕ್ಕುಗಳು ತಿದ್ದುಪಡಿಯಾದುದನ್ನು ತಿಳಿಸಲು ನಾವು ಗೋಪಾಲರಾಯರ ಮನೆಗೆ ಹೋದೆವು. ರಾಯರು ರಾತ್ರಿ ೧೧ ಗಂಟೆ ವೇಳೆಗೆ ಮಿ|| ಆರ್ಥರ್ ಮೋಸೆಸ್ ಮತ್ತು ಶ್ರೀ ಬೆಳಗಾಂ ವಾಲಾರವರ ಜತೆಯಲ್ಲಿ ಬಂದುದನ್ನು ನೋಡಿದೆವು. ತಮಗೆ ಜಗ ಪ್ಪವೂ ಆಗಿರುವುದಾಗಿ ಹೇಳಿ ನಮ್ಮನ್ನು ಅವರು ಕಳಿಸಿಬಿಟ್ಟರು. ೧೯೪೫ ರಿಂದ ನಾನು ಗೋಪಾಲರಾಯರನ್ನು ಬಲ್ಲೆ. ನಾನು ಅವರಲ್ಲಿ ನನ್ನ ಕುಟುಂಬಕ್ಕೆ ಸೇರಿದ ೧೫ ಸಾವಿರ ರೂ ಗಳನ್ನಿಟ್ಟಿದ್ದೇನೆ. ಅವರನ್ನು ರಾತ್ರಿ ವೇಳೆ ಆಗಾಗ್ಗೆ ನೋಡುತ್ತಿದ್ದೆ. ನನಗೆ ಶೇ|| ೩೦ ರಿಂದ ೫೦ ರ ವರೆಗೆ ಬಡ್ಡಿ ಕೊಟ್ಟಿದ್ದಾರೆ

ಮದ್ರಾಸ್ ಪ್ರಧಾನಿ ಪಟ್ಟಕ್ಕೆ ರಾಜಾಜಿಯೋ ?

ಶ್ರೀ ಪ್ರಕಾಶಂರವರು ಬಹು ಮಂದಿ ಕಾಂಗ್ರೆಸ್ಸಿನವರ ವಿಶ್ವಾಸವನ್ನು ಕಳೆದುಕೊಂಡಿರುವುದರಿಂದ; ಭಾರತದ ಇಂದಿನ ವಿಷಮ ಪರಿಸ್ಥಿತಿಯಲ್ಲಿ ಆ ಸ್ಥಾನಕ್ಕೆ ಪೂರ್ಣ ಅರ್ಹರಾದ ಬೇರೊಬ್ಬರನ್ನು ಮದ್ರಾಸ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದಲ್ಲಿ ಹುಡುಕುವುದು ಕಷ್ಟದ ಕೆಲಸವೆಂದು ಹೇಳಲಾಗಿದೆ. ಇದೇ ನೆರದಿಂದ ಗವರ್ನರರು ಮರು ಚುನಾವಣೆ ... ... ರಾಜಗೋಪಾಲಾಚಾರ್ಯರನ್ನು ... ಪ್ರಧಾನಿಗಳನ್ನಾಗಿ ... ... ಹೇಳಲಾಗುತ್ತಿದೆ.

... ಸ್ವತಂತ್ರ ... ಸರ್ಕಾರದ ... ... ಮಿ|| ಬೂಯುನ್‌ರವರನ್ನು ... ಅಧ್ಯಕ್ಷ ... ಮಿನಿಸ್ಟರರು ನೇಮಿಸುತ್ತಾರೆ.

ಪಂಜಾಬಿನಲ್ಲಿ ೯೩ ನೇ ಸೆಕ್ಷನ್

೧೫ ಮಂದಿ ಸತ್ತರು ೧೩೦ ಮಂದಿ ಗಾಯಗೊಂಡಿದ್ದಾರೆ

೧೯೩೫ ನೇ ರಾಜ್ಯಾಂಗದಂತೆ ಪಂಜಾಬ್ ಗವರ್ನರು ತಮ್ಮ ಪ್ರಾಂತ್ಯದಲ್ಲಿ ೯೩ ನೇ ಸೆಕ್ಷನನ್ನು ಜಾರಿಗೆ ತಂದು ಅಧಿಕಾರವನ್ನು ತಾವೇ ವಹಿಸಿಕೊಂಡಿದ್ದಾರೆ. ಮಂತ್ರಿಮಂಡಲವ್ಯಾವುದೂ ರಚಿತವಾಗಲಿಲ್ಲವಾಗಿ ಶಾಸನ ಸಭೆಯನ್ನು ಮುಂದಕ್ಕೆ ಹಾಕಿದ್ದಾರೆ. ನಿನ್ನೆ ಮಧ್ಯಾಹ್ನ ಗುರು ಬಜಾರ್ ಮತ್ತು ಬಲಿಯರ್ ಮಾರ್ಕೆಟ್ ಪ್ರದೇಶಗಳಲ್ಲಿ ಜನರ ಗುಂಪು ಅನೇಕ ಮನೆಗಳಿಗೆ ಬೆಂಕಿ ಹಚ್ಚಿದ್ದರು. ಈವರೆವಿಗೆ ೧೫ ಮಂದಿ ಸತ್ತಿದ್ದಾರೆಂದೂ ೧೩೦ ಮಂದಿಗೆ ಗಾಯಗಳಾಗಿವೆಯೆಂದೂ ವರದಿ ಹೊರಬಿದ್ದಿದೆ. ಲಾಹೋರ್ ನಗರದಲ್ಲಿ ಮಿಲಿಟರಿಯನ್ನು ಕರೆಸಲಾಗಿದೆ. ಮುಸ್ಲಿಮೇತರ ಮುಖಂಡರ ಸಭೆಯೊಂದು ಜರುಗಿ ಒಂದು ಕ್ರಿಯಾ ಸಮಿತಿಯನ್ನು ರಚಿಸಲಾಗಿದೆ. ಮಾ|| ತಾರಾಸಿಂಗರನ್ನು ಸರ್ವಾಧಿಕಾರಿಗಳನ್ನಾಗಿ ಆರಿಸಲಾಗಿದೆ

೮ ಮೈಲಿ ಎತ್ತರದಿಂದ ಧುಮುಕಲಾಯಿತು

ಸೋವಿಯಟ್ ಪ್ಯಾರಾಚೂಟ್ ದಳದ ಕ|| ಧೂವರ್ಯೋಕ್ ಎಂಬುವನು ಆಕಾಶದಲ್ಲಿ ವಾಯುಮಂಡಲದೊಳಗೆ ೮ ಮೈಲಿ ಎತ್ತರದಿಂದ ಪ್ಯಾರಾಚೂಟ್ ಸಹಾಯದೊಡನೆ ಧುಮುಕಿದನೆಂದು ವರದಿಯಾಗಿದೆ. ಇದು ಪ್ರಪಂಚದ ಇದುವರೆಗಿನ ರಿಕಾರ್ಡುಗಳನ್ನೆಲ್ಲಾ ಮೀರಿಸಿದೆ.

ಭಾರತಕ್ಕೆ ಬರಲು ರಹದಾರಿ ಸಿಕ್ಕಿತು

ದಕ್ಷಿಣ ಆಫ್ರಿಕದ ಭಾರತೀಯ ಮುಖಂಡರಾದ ಡಾ|| ಡಾಡೂ ಮತ್ತು ಡಾ|| ನಾಯಕರ್‌ರವರು ಭಾರತಕ್ಕೆ ಬರಲು ರಹದಾರಿಯನ್ನು ಕೊಡಲು ದ|| ಆಫ್ರಿಕ ಸರ್ಕಾರವು ನಿರಾಕರಿಸಿದ್ದಿತು. ನಿನ್ನೆ ದಿನ ಆ ಬಗ್ಗೆ ರಹದಾರಿಯನ್ನು ಕೊಡಲಾಗಿದೆಯೆಂದು ಸುದ್ದಿ ಬಂದಿದೆ

—

ಶ್ರೀ ಭಗವದ್ಗೀತಾ ಕಾಲಕ್ಷೇಪ

ಸುಬ್ಬರಾಯನಕೆರೆ ಪಕ್ಕದಲ್ಲಿರುವ ಶ್ರೀ ಗೋಪಾಲಕೃಷ್ಣಸ್ವಾಮಿ ದೇವಸ್ಥಾನದಲ್ಲಿ ಶ್ರೀ ಧರ್ಮ ಭೂಷಣ, ಮಯೂರು ಚಕ್ರವರ್ತಿಯವರು ಇಂದಿನಿಂದ ಪ್ರತಿನಿತ್ಯವೂ ಶ್ರೀ ಭಗವದ್ಗೀತಾ ಕಾಲಕ್ಷೇಪವನ್ನು ನಡೆಸುವರು. ಮಹಾಜನರೆಲ್ಲಾ ದಯಮಾಡಿಸಬೇಕೆಂದು ಶ್ರೀ ಹೆಬ್ಬಾರ್ ಶ್ರೀ ವೈಷ್ಣವ ಸಭೆಯವರು ಪ್ರಾರ್ಥಿಸಿದ್ದಾರೆ

ಪ್ರಭಾತ್ ಟಾಕೀಸ್
೫-೩-೪೭ ರಿಂದ ೨ ನೇ ವಾರ
ಪಿ ದಾ ಪ ತಿ
ಶ್ರೀ (ತಮಿಳು)
ಸತಿ ಇನ ಮಾ... ಆಟಗಳು
ಪಾತ್ರ:-
ಟಿ ಆರ್ ರಾಮಚಂದ್ರನ್, ... ಕುಮಾರಿ ... ಬಾಲಸುಬ್ರಹ್ಮಣ್ಯಂ, ...

—: Morning Shows : —
From 7 ... 47
'The Right Man'

ಸಾಧ್ವಿ

ತಾ|| ೬-೩-೪೭ ಗುರುವಾರ

ಪಂಜಾಬಿನ ದುಸ್ಥಿತಿ

ಪುರಾತನ ಆರ್ಯರ ಮೂಲನಿವಾಸವೆಂದೂ, ಪಂಚಮಹಾನದಿಗಳ ಪುಣ್ಯಕ್ಷೇತ್ರವೆಂದೂ ಪ್ರಖ್ಯಾತಿಗೊಂಡ ಪಂಜಾಬ್ ಪ್ರಾಂತ್ಯವು ಇಂದು ಕೋಮುವಾರು ರಾಜಕೀಯದ ಗೊಂದಲಕ್ಕೆ ಸಿಕ್ಕಿ ಗುಂಡಿನೇಟು, ಲಾಠಿ ಪೆಟ್ಟು ಮತ್ತು ರಕ್ತಪಾತಗಳಿಗೆ ತುತ್ತಾಗಿರುವ ಅಂಶವು ಸಕಲ ಭಾರತೀಯರ ಹೃದಯವನ್ನೂ ಕರಗಿಸುತ್ತಿರುತ್ತದೆ. ರಾಜಕೀಯ ರಂಗಗಳಲ್ಲಿ ಇದುವರೆಗೆ ನಡೆಯದಿರುವ ಹೊಸ ಪ್ರಯೋಗಗಳೆಲ್ಲವೂ ಅಲ್ಲಿ ಆಗುತ್ತಿವೆ. ವಿದ್ಯಮಾನಗಳು ಹೀಗೆಯೇ ಮುಂದುವರಿದರೆ ಪರಿಸ್ಥಿತಿಯು ಇನ್ನೂ ಹತೋಟಿ ತಪ್ಪಿ ಪಂಜಾಬು ಸಧ್ಯದಲ್ಲಿಯೇ ಒಂದು ಆಧುನಿಕ ಕೋಮುವಾರು ಕುರುಕ್ಷೇತ್ರವಾಗಿ ಪರಿಣಮಿಸುವುದರಲ್ಲಿ ಸಂದೇಹವಿಲ್ಲ

ರಾಜಕೀಯ ಕ್ಷೇತ್ರದಲ್ಲಿ ಕೋಮುವಾರು ಪ್ರಾಬಲ್ಯವನ್ನು ಬೆಳೆಸಿದಂತೆಲ್ಲಾ ಇಂತಹ ಅನರ್ಥಗಳು, ಪದೇ ಪದೇ ಸಂಭವಿಸುವುದು ಸಹಜವಾಗಿದೆ. ಇದೆ ಮೂರ ನೇಮವಾದ ಪರಕೀಯರು ತಮ್ಮ ಆಡಳಿತವನ್ನು ಬಲಪಡಿಸಿಕೊಳ್ಳಲು ಭೇದೋಪಾಯನೀತಿಯಿಂದ ಕೋಮುವಾರು ಪ್ರಾಬಲ್ಯಕ್ಕೆ ಪ್ರಾಧಾನ್ಯವನ್ನು ಕೊಡುವುದು ಪದ್ಧತಿಯಾಗಿರುತ್ತದೆ. ಆದರೆ ಬ್ರಿಟಿಷರು ಬಿಟ್ಟು ಹೋಗುವುದಾಗಿ ಹೇಳುತ್ತಿರುವ ಈ ಸಮಯದಲ್ಲಿ ಇಂತಹ ಪ್ರಸಂಗಗಳು ನಡೆಯುವುದು ಕೇವಲ ಅನುಚಿತ

ಅಧಿಕಾರವನ್ನು ಬರುವ ವರ್ಷ ಕೇಂದ್ರ ಅಥವಾ ಪ್ರಾಂತ ಸರ್ಕಾರಗಳಿಗೆ ವಹಿಸುವುದಾಗಿ ಬ್ರಿಟಿಷರು ಹೇಳಿರುವುದೇ ಇಂತಹ ಘರ್ಷಣೆಗಳಿಗೆ ಕಾರಣವೆಂಬುದು ಮತ್ತೊಂದು ವಾದ. ಇದಕ್ಕೆ ಆಧಾರವಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಹಿಂದೆ ಇದೇ ಬಗೆಯ ಸನ್ನಿವೇಶಗಳು ಬಂದಿದ್ದಾಗಲೂ ಸಹ ಅಧಿಕಾರ ಗ್ರಹಣಕ್ಕಾಗಿ ಅನೇಕ ರೀತಿಯ ಪೈಪೋಟಿಗಳು ನಡೆದಿರುತ್ತವೆ. ಇನ್ನು ಒಂದು ವರ್ಷದೊಳಗೆ ಇನ್ನೂ ಅನೇಕ ರಾಜಕೀಯ ಗೊಂದಲಗಳು ಅಲ್ಲಲ್ಲಿ ಸಂಭವಿಸಿದರೆ ಆಶ್ಚರ್ಯವಿಲ್ಲ

ರಾಜಕೀಯ ತಂತ್ರದ ದೃಷ್ಟಿಯಿಂದ ಪಂಜಾಬು ಮಂತ್ರಿ ಮಂಡಲದ ರಾಜೀನಾಮೆಯು ಇಂತಹ ಪ್ರಕರಣಗಳನ್ನೆಲ್ಲಾ ಮೀರಿಸುತ್ತದೆ. ಸರ್ಕಾರದಮೇಲೆ ಧಾಳಿ ನಡೆಸುತ್ತಿದ್ದವರ ಹುಟ್ಟನ್ನಡಗಿಸುವುದಾಗಿ ಹೇಳುತ್ತಿದ್ದ ಅಲ್ಲಿನ ಪ್ರಧಾನ ಮಂತ್ರಿಗಳು ಅದೇ ಗುಂಪಿನವರಿಗೆ ಆಡಳಿತವನ್ನು ವಹಿಸಲು ಮಾರ್ಗವನ್ನು ಮಾಡಿರುವುದು ಅತ್ಯಂತ ಆಶ್ಚರ್ಯದ ಸಂಗತಿ

ರಾಜೀನಾಮೆ ಕೊಟ್ಟಮೇಲೆಯೂ ಸಧ್ಯದ ಮಂತ್ರಿ ಮಂಡಲದ ಪರಿಸ್ಥಿತಿಯು ಅಸಹನೀಯವಾಗುವಂತೆ ಆಗಿ ಬೇರೆ ಮಂತ್ರಿ ಮಂಡಲವು ಬರುವವರೆಗೂ ಸಹ ಅವರು ಅಧಿಕಾರವನ್ನು ವಹಿಸದಂತೆ ಇರುವ ಅಂಶವು ಮತ್ತೂ ವಿಸ್ಮಯಕರವಾದುದು. ಮಂತ್ರಿಗಳಾಗಿರುವವರ ಇದಿರಿನಲ್ಲಿಯೇ ಅವರ ಇಷ್ಟಕ್ಕೆ ವಿರುದ್ಧವಾಗಿ ದಬ್ಬಾಳಿಕೆಯು ನಡೆಯುತ್ತಿದ್ದರೆ ಯಾರು ತಾನೆ ತಮ್ಮ ಸ್ಥಾನದಲ್ಲಿ ಇರಲು ಸಾಧ್ಯ? ಇಂತಹ ದೃಷ್ಟಾಂತವು ಆಧುನಿಕ ಭಾರತದಲ್ಲಿ ಬೇರೊಂದಿರುವುದಿಲ್ಲ

ಕೋಮುವಾರು ಮಂತ್ರಿ ಮಂಡಲವು ಸ್ಥಾಪಿತವಾಗಲು ಅವಕಾಶ ಕೊಡುವುದಿಲ್ಲವೆಂದು ಪಂಜಾಬಿನ ಹಿಂದೂಗಳೂ, ಸಿಖ್ಖರೂ ಬದ್ಧಕಂಕಣರಾಗಿದ್ದಾರೆ. ಆದರೆ ಲೀಗಿನ ಮಂತ್ರಿ ಮಂಡಲವನ್ನೇ ಪ್ರತಿಷ್ಠಿಸಲು ಸರ್ವ ಪ್ರಯತ್ನಗಳೂ ಆಗುತ್ತಿವೆ. ಈ ಮಧ್ಯೆ ಆ ದುರದೃಷ್ಟದ ಪ್ರಾಂತವು ಇನ್ನೂ ಯಾವಯಾವ ದುಃಸ್ಥಿತಿಗಳಿಗೆ ಈಡಾಗಬೇಕೋ ತಿಳಿಯದು. ಕೋಮುವಾರು ತತ್ವದ ಆಧಾರದಮೇಲೆ ರಾಜಕೀಯ ರೀತಿನೀತಿಗಳನ್ನು ಅವಲಂಬಿಸುವ ಪದ್ಧತಿಯು ನಿರ್ಮೂಲವಾದಲ್ಲದೆ ಇಂತಹ ದುರವಸ್ಥೆಗಳು ಕೊನೆಗಾಣುವುದಿಲ್ಲ.

ಲೀಗ್ ನಾಯಕರ ಆಕಸ್ಮಿಕ ಮರಣ

ಪಂಜಾಬಿನಲ್ಲಿ ಲೀಗು ಗಳಿಸಿದ ವಿಜಯದ ದಿನಾಚರಣೆಯ ಸಂದರ್ಭದಲ್ಲಿ ಮಸೀತಿಯನ್ನು ದೀಪಗಳಿಂದ ಅಲಂಕರಿಸಲು ಸಿದ್ಧತೆಗಳನ್ನು ಮಾಡುತ್ತಿದ್ದಾಗ ಕಪೂರ್ಥಲದ ಮುಸ್ಲಿಂ ಲೀಗು ಉಪಾಧ್ಯಕ್ಷರಾದ ಷೇಕ್ ಮಹಮದ್ ಸೈಯದ್‌ರವರು ಮಸೀದಿ ಗೋಪುರದಿಂದ ಕಾಲು ಜಾರಿ ಬಿದ್ದು ಪ್ರಾಣ ಬಿಟ್ಟರೆಂದು ವರದಿಯಾಗಿದೆ.

ಶ್ರೀರಂಗಪಟ್ಟಣದ ಪುರಸಭಾ ಚುನಾವಣೆಯ ಮತದಾರರಲ್ಲಿ

ಕೆ. ರಾಮಯ್ಯ

ಉ|| ಅಂಬಾಜಿರಾವ್

ಪ್ರಾರ್ಥನೆ.

10-3-47 ರ ಚುನಾವಣೆಯಲ್ಲಿ ದಯವಿಟ್ಟು ಗಣಪತಿ ಗುರ್ತಿಗೆ ಓಟು ಮಾಡಿ

(ಓಟರು ಲಿಸ್ಟಿನಲ್ಲಿ ಕೆ. ರಾಮಯ್ಯ ಎಂದಿದೆ. ರೂಢಿವಾಚಕವಾಗಿ ಅಂಬಾಜಿರಾವ್ ಎಂದು ಜಾಲ್ತಿಯಲ್ಲಿರುತ್ತೆ.)

ರಾಜಕಮಲ್

೨-೩-೪೭ ರಿಂದ ೩ ನೇ ವಾರ

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ (ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಂಪಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!!

ಇವೆಲ್ಲವನ್ನೂ ಇಂದೇ ನೋಡಿ.

on 7th, 8th, and 10th March 1947 Daily at 10-30 A.M.

Eddie Cantor in

"P.lmy Days."

a glorious comedy punctuated with Fun and Frolic.

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!

ಬಿ. ಕೆಂಚಪ್ಪ ಸನ್ಸ್,

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

ಶ್ರೀ ಗಣೇಶಾ ಟಾಕೀಸ್

7-3 47 ರಿಂದ ಮೂರನೇ ವಾರ

ವರ್ಣರಂಜಿತ ತಮಿಳು ಚಿತ್ರ

"ಶ್ರೀವಳ್ಳಿ"

Morning Shows on 7, 8 and 10th at 10-30 a.m.

In the Navy

Starring:—Bud Abbott and Lou Costello

ಕಂಟ್ರೋಲ್ ಧಾರಣೆಯ...

ಹುರಿಗಡಲೆಯ...

ಬೇಕಾದಲ್ಲಿ

ಬೆಳಗ್ಗೆ 9 ರಿಂದ 12 ಘಂಟೆ, ...

ಮಧ್ಯಾಹ್ನ 3 ರಿಂದ ೬ ಘಂಟೆ ...

ದೊರೆಯುತ್ತದೆ.

ರೂ. 1ಕ್ಕೆ 1ನೇ ನಂ. 2¼ ...

ರೂ 1ಕ್ಕೆ 2ನೇ ನಂ. 2¾ ...

ಡಿ. ಪಾಪಯ್ಯ

L. No. 524-42-43

ಕಡಲೆ ಅಂಗಡಿ,

ನವಾಬ್ ರೋಡ್, ಮಂಡಿಮೊಹಲ್ಲ...

ಮೈಸೂರು

ರಣಜಿತ್ ಟಾಕೀಸ್

ಮೈಸೂರು :: 6-3-47...

ರಾಜಲಕ್ಷ್ಮಿ...

ಪ್ರತಿ ದಿನ ಮೂರು ಆಟಗ...

:: ಪಾತ್ರ ::

ಕನ್ನಬಾಲ, ಚಿಬ್ಬಿ, ಬಿಸ್ಸ...

Edited, printed and published ... A. R. Nagarajan at the Sadhvi P... D. Subbiah Road, Mysore.

UNIVERSITY OF MYSORE.

Notification No A 3.500'-45-47

Dated 25-2-1947.

Applications are invited from duly qualified MYSOREANS for the post of Assistant Professor of Banking and Currency in the University on a salary of Rs. 250—25/2—350. The post is permanent, and the selected candidate will be on probation for two years in the first instance on the initial salary of Rs. 250. The minimum academic qualification required is a good Master's Degree in Commerce with specialisation in Banking and Currency, or a good degree of a British University in Economics and Banking. Preference will be given to candidates who have had experience in teaching and or have practical experience in a leading banking institution.

2. The post is pensionable. It is subject to the rules of the Mysore Service Regulations as regards salary, leave, pension, etc. and subject also to the rules of the University as regards discipline. The person selected will be required to join duty immediately after receipt of orders of appointment.

3. Applications should co... tain the following inform... tion:—

Age, Caste or Communi... Qualifications (including e... minations passed and na... of University, date of pa... ing and class), present p... tion, salary and previ... service, if any, as well works published and oth... particulars, if any

Copies of testimon... (which will not be return... should accomyany the ap... cations. Six sets of the app... cation and of the testimo... als are required. Applica... already in service must f... ward their applicati... through their official ... periors.

4. If required, candida... must be prepared to be int... viewed at their own expe...

5. Applications should ... addressed to the Registr... University of Mysore, M... sore, and submitted so as reach him on or BEFORE ... MARCH 1947.

(Sd) D. S. GORDO...
Registrar.

ಪು. ಸಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೭—೩—೪೭ [ಸಂಚಿಕೆ ೧೭೭

ಲಾಹೋರ್ ನಗರದಲ್ಲಿ ಸಶಸ್ತ್ರ ಕದನ

ಸಿಂಧಿನಲ್ಲಿ ಪಾಕೀಸ್ತಾನ ಪ್ರಾರಂಭ

ಬಿಹಾರ್ ಮುಸ್ಲಿಮರನ್ನು ಸಿಂಧ್ ಪ್ರಾಂತ್ಯಕ್ಕೆ ಕರೆತರಲು ಅವಶ್ಯಕವಾದ ಏರ್ಪಾಡುಗಳನ್ನು ಮಿ॥ ಜಿನ್ನಾರವರು ಕಳೆದ ೩ ತಿಂಗಳ ಮಾಡಿದ್ದಾರೆಂದು ವರದಿಯಾಗಿದೆ. ಪಾಕೀಸ್ತಾನದ ಪ್ರಧಾನ ಆಯಕಟ್ಟಿನ ಸ್ಥಳವಾಗಿರಬೇಕೆಂದು ಅವರ ಹಂಬಲ ... ಹೇಳಲಾಗಿದೆ. ಇದುವರೆವಿಗೆ ಬಿಹಾರಿನಿಂದ ೧೦೦೦೦ ಮಂದಿ ಮುಸ್ಲಿಂ ನಿರಾಶ್ರಿತರು ಮಾತ್ರ ಅಲ್ಲಿಗೆ ಬಂದಿದ್ದಾರೆ. ಅವರಿಗೆ ಸೌಕರ್ಯಗಳನ್ನು ಕಲ್ಪಿಸಲು ಸಿಂಧ್ ಸರ್ಕಾರವು ಏರ್ಪಾಡು ಮಾಡುತ್ತಿದೆ. ಪ್ರತಿ ನಿರಾಶ್ರಿತರಿಗೂ ೩೦ ಎಕರೆ ಜಮೀನುಗಳನ್ನು ಕೊಡಲಾಗುವುದು.

ಬಜೆಟ್ ಅಧಿವೇಶನದಲ್ಲಿ ಮಂತ್ರಿಗಳ-ತೂಕಡಿಕೆ

ಒರಿಸ್ಸಾ ಶಾಸನ ಸಭೆಯಲ್ಲಿ ಪ್ರಧಾನಿ ಶ್ರೀ ಹರಿಕೃಷ್ಣ ಮೆಹತಾಬ್‌ರವರು ಮುಂದಿನ ಸಾಲಿನ ಆಯವ್ಯಯ ಪಟ್ಟಿಯನ್ನು ಮಂಡಿಸುತ್ತಿದ್ದಾಗ, ಕೆಲವು ಸದಸ್ಯರೂ, ಇತರರು ಮಂತ್ರಿಗಳೂ ತೂಕಡಿಸುತ್ತಿದ್ದರೆಂದು ವರದಿಯಾಗಿದೆ

ದಕ್ಷಿಣೆ ಹೆಚ್ಚಿಸಲು ಪುರೋಹಿತರುಗಳ ಪ್ರಯತ್ನ

ತಮಗೆ ಸಲ್ಲುತ್ತಿರುವ ದಕ್ಷಿಣೆಯನ್ನು ಹೆಚ್ಚಿಸಿಕೊಳ್ಳಲು ಕಾರ್ಮಿಕ ಸಂಘಗಳ ಮಾದರಿಯಲ್ಲಿ ತಾವೂ ಸಂಘಗಳನ್ನು ಸ್ಥಾಪಿಸಲು ಮುಂಬಯಿನ ಪುರೋಹಿತರುಗಳು ನಿರ್ಧರಿಸಿರುವುದಾಗಿ ವರದಿಯಾಗಿದೆ.

ಹಾಲು ಕರೆಯುವ ಹೋತ

ಹೋತವೊಂದು ಹಾಲು ಕರೆಯುವ ಅಪೂರ್ವ ವಿಷಯವನ್ನು ಸೂರತ್ ಕಾಲೇಜಿನ ಶ್ರೀ ಸಿ ಎಂ ದೇಸಾಯಿಯವರು ತಿಳಿಸಿದ್ದಾರೆ. ಮೊದಲು ಇದು ೭-೭ ಔನ್ಸ್ ಹಾಲು ಕರೆಯಿತೆಂದೂ ಈಗ ಅದು ಮುಕ್ಕಾಲು ಪೈಂಟಿಗೆ ಇಳಿದಿದೆಯೆಂದೂ ಹೇಳಲಾಗಿದೆ. ಮೇಕೆಯ ಹಾಲಿನಲ್ಲಿರುವ ಅಂಶಗಳೇ ಇದರಲ್ಲಿಯೂ ಇವೆ.

ಜಿಲ್ಲಾಬೋರ್ಡ್ ಚುನಾವಣೆ

ಮಂಡ್ಯ ೪

ಏಪ್ರಿಲ್ ೨೮ ನೇ ತಾ॥ ನಡೆಯಲಿರುವ ಮಂಡ್ಯ ಜಿಲ್ಲಾಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಸ್ಪರ್ಧಿಸಲಪೇಕ್ಷಿಸುವವರು ಮಾರ್ಚಿ ೧೦ ನೇ ತಾ॥ ಸಂಜೆ ೭ ಗಂಟೆಯೊಳಗೆ ಅರ್ಜಿಯನ್ನು ಜಿಲ್ಲಾ ಚುನಾವಣಾ ಸಂಚಾಲಕರಿಗೆ ತಲುಪಿಸಬೇಕೆಂದು ಕೋರಲಾಗಿದೆ

WANTED

A part-time Physical Culture Instructor having full experience to work between 6 a.m and 8-30 a.m and 5 p.m and 8-30 p.m Pay RS 20 per month Applications should reach the under-signed on or before the 1st of April 47.

The Secretary,
V. D. S. Naidu Physical Culture Institute, Mysore.

Edited, printed and published by A. R. Nagarajan at the Sadhvi Press D Subbiah Road, Mysore

ಭಾರತ ರಾಜಕೀಯ ಸಲಹೆಗಾರರ ಆಗಮನ

ಮೈಸೂರು. ೭

ಇಂಡಿಯಾ ಸರ್ಕಾರದ ರಾಜಕೀಯ ಸಲಹೆಗಾರರಾದ ಸರ್ ಕಾನ್ರಾಡ್ ಕೋರ್‌ಫೀಲ್ಡ್‌ರವರು ನಾಳೆ ದೆಹಲಿಗೆ ರೆಸಿಡೆಂಟರೊಡನೆ ಬೆಂಗಳೂರಿನಿಂದ ವಿಮಾನದಲ್ಲಿ ಇಲ್ಲಿಗೆ ಬರುವರು ನಿನ್ನೆ ಬೆಂಗಳೂರಿಗೆ ಬಂದರು ೯ನೇ ತಾ॥ ದೆಹಲಿಗೆ ತೆರಳುವರು.

ನೀರಿನ ಅಭಾವ

ಚಾಮುಂಡಿಪುರದಲ್ಲಿರುವ, ೨೦೦, ೨೦೧ ಮೊದಲಾದ ಕ್ರಮಸಂಖ್ಯೆಯ ೧೦-೧೨ ಮನೆಗಳಿಗೆ ನೀರು ಸರಿಯಾಗಿ ಬಾರದೆ, ಅಲ್ಲಿನ ಜನಗಳಿಗೆ ಬಹಳ ಕಷ್ಟವಾಗಿದೆ. ರಾತ್ರಿ ಸುಮಾರು ೯॥ ಗಂಟೆಗೆ ಹಂಚಿ ಕಡ್ಡಿಯ ಗಾತ್ರದಲ್ಲಿ ಬಂದು ೧೧ ಗಂಟೆಗೇ ನಿಂತುಹೋಗುವುದು. ಒಂದೆರಡು ಕೊಡ ನೀರು ಸಿಕ್ಕುವುದೂ ಬಹಳ ಕಷ್ಟವಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ತಕ್ಕ ಕ್ರಮವನ್ನು ಕೈಗೊಂಡು, ನೀರನ್ನು ಒದಗಿಸಬೇಕೆಂದು ಅಲ್ಲಿನ ನಿವಾಸಿಗಳು ಕೋರುತ್ತಾರೆ

ಬೆಂಕಿ ಪೊಟ್ಟಣವನ್ನು ಅಧಿಕ ಬೆಲೆಗೆ ಮಾರಿದ್ದಕ್ಕೆ ಮೊಕದ್ದಮೆ

ಮಂಡಿ ಮಾರ್ಕೆಟ್ ಪಕ್ಕದ ಸಾಬ್‌ದಾರ್ ಎಂಬುವರ ಚಿಲ್ಲರೆ ಅಂಗಡಿಯಲ್ಲಿ ಸಾಬ್‌ಜಾನರವರ ಪತ್ನಿ ರಹೀಂಬಿ ಎಂಬಾಕೆಯು ಬೆಂಕಿಕಡ್ಡಿ ಪೆಟ್ಟಿಗೆಯನ್ನು ಒಂದು ಆಣೆಗೆ ಮಾರಿದವೆಂಬ ಆಪಾದನೆ ಮೇಲೆ ಮಂಡಿ ಪೊಲೀಸ್ ಸ್ಟೇಷನ್ನಿನವರು ಆಕೆಯ ಮೇಲೆ ಮೊಕದ್ದಮೆ ಹೂಡಿದ್ದಾರೆ.

ಉಪನ್ಯಾಸ

ಹರಿದ್ವಾರದ ಶ್ರೀಮಠ್ ಪರಮಹಂಸ ಶ್ರೀ ಮಹಾಮಂಡಲೇಶ್ವರಸ್ವಾಮಿ ಮಹೇಶ್ವರಾನಂದಜೀಯವರು ದೊಡ್ಡಪೇಟೆಯಲ್ಲಿರುವ ಶ್ರೀ ಗೀತಾಪ್ರಚಾರಿಣೀ ಸಭೆಯಲ್ಲಿ ತಾ॥ ೭-೩-೪೭ ನೇ ಶನಿವಾರ ಸಾಯಂಕಾಲ ೬ ಗಂಟೆಗೆ ಗೀತೆಯ ವಿಷಯದಲ್ಲಿ ಉಪನ್ಯಾಸ ಮಾಡುತ್ತಾರೆ

ಕಾಫಿ ಬೀಜದ ಅಭಾವ

ರಾಜಧಾನಿಯ ಚಿಲ್ಲರೆ ವ್ಯಾಪಾರಸ್ಥರಿಗೆ ಕೋಟಾ ಪದ್ಧತಿ ನಿಂತು ಹೋಗಿ ಕಾಫಿ ಬೀಜ ಸಿಕ್ಕುವುದು ಕಷ್ಟವಾಗಿದೆ. ಹರಾಜಿನಲ್ಲಿ ಬೀಜವನ್ನು ಕೊಳ್ಳುವವರು ಮಾಲನ್ನು ನೇರವಾಗಿ ಇಲ್ಲಿಗೆ ತರಿಸಿ ಎಲ್ಲ ವ್ಯಾಪಾರಿಗಳಿಗೂ ಸ್ವಲ್ಪ ಸ್ವಲ್ಪ ಹಂಚಿಕುವ ಏರ್ಪಾಡನ್ನು ಮಾಡಬೇಕಾಗಿದೆಯೆಂದು ಚಿಲ್ಲರೆ ವ್ಯಾಪಾರಿಗಳೊಬ್ಬರು ಪ್ರಾರ್ಥಿಸಿದ್ದಾರೆ

ಕುದರೆ ಜೂಜಿಲ್ಲ

ಸ್ವಂ.ಸು.ಪ್ರೋ॥] ಬೆಂಗಳೂರು ೭

ಆಹಾರ ಮತ್ತು ಮೇವಿನ ಅಭಾವದಿಂದ ಕಳೆದ ೫-೬ ವರ್ಷಗಳಿಂದಲೂ ನಮ್ಮ ಸಂಸ್ಥಾನದಲ್ಲಿ ಕುದುರೆ ಜೂಜನ್ನು ನಿಲ್ಲಿಸಲಾಗಿತ್ತಷ್ಟೆ. ಈಸಾರಿ ಜೂನ್, ಜುಲೈ ತಿಂಗಳಲ್ಲಿ ಅದನ್ನು ನಡೆಸಲು ಪ್ರಯತ್ನಗಳಾಗುತ್ತಿದ್ದುವು. ಆದರೆ ಈ ಸಾರಿಯೂ ಅದನ್ನು ನಡೆಸುವುದಿಲ್ಲವೆಂದು ಸಂಬಂಧಪಟ್ಟ ಅಧಿಕಾರಿಗಳು ನಿರ್ಧರಿಸಿ ಕಲ್ಯಾಣ ಕ್ಷೇತ್ರಕ್ಕೆ ಟರ್ಫ್ ಕ್ಲಬ್ಬಿಗೆ ತಿಳಿಸಿದ್ದಾರೆ.

ಮಂತ್ರಿಗಳು ತನಿಖೆಗೆ

೧೧ ನೇ ತಾ॥ ನಿಂದ ೧೭ರ ವರೆಗೆ ಮಂತ್ರಿಗಳಾದ ಶ್ರೀ ಜೆ. ಅಪ್ಪಾಜಿಗೌಡರು ಮಂಡ್ಯ ಮತ್ತು ಕೋಲಾರ ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು. ೧೯ನೇ ತಾ॥ ಅವರು ತಿರುಪತಿಗೆ ಭೇಟಿ ಇತ್ತು, ಅಲ್ಲಿರುವ ಮೈಸೂರಿನ ಧರ್ಮ ಸಂಸ್ಥೆಗಳ ಪರಿಶೀಲನೆಯನ್ನು ನಡೆಸುವರು

ಆಭರಣಗಳ ಅಪಹಾರದ ಮೊಕದ್ದಮೆ

ಧರ್ಮ ರಕ್ಷಾಕರ ಬಿ. ಎಲ್. ಗೋಪಾಲರಾಯರ ಆಭರಣದ ಅಪಹಾರದ ಮೊಕದ್ದಮೆಯಲ್ಲಿ ಕೋರ್ಟ್ ಸಾಕ್ಷಿಗಳಾದ ಶ್ರೀಗಳು ಡಾ॥ ಶಿವಪ್ಪ ಮತ್ತು ನಟೇಶ್ವರಾರವರ ಪಾಟೀ ಸವಾಲು ಮುಗಿಯಿತು. ಏನಾದರೂ ಹೇಳುವುದಿದೆಯೇ ಎಂದು ಕೇಳಲು ಆಪಾದಿತರಾದ ಪ್ರೊ॥ ಕೃಷ್ಣರಾವ್ ಮತ್ತು ಇತರರು ಇಲ್ಲವೆಂದೂ ಹೇಳಿಕೆಗಳನ್ನು ಒಪ್ಪಿಸುವುದಾಗಿಯೂ ಹೇಳಿದರು. ಮತ್ತು ತಮ್ಮ ಸಾಕ್ಷಿಗಳ ಪಟ್ಟಿಯನ್ನು ನಾಳೆ ಕೊಡುವುದಾಗಿಯೂ ಹೇಳಿದರು.

ಶ್ರೀ ಡಾ॥ ರಾಯರವರು ೧೮ ನೇ ತಾ॥ ನಿಂದ ಒಂದು ವಾರ ಶಿವಮೊಗ್ಗ ಮತ್ತು ತುಮಕೂರುಗಳಲ್ಲಿಯೂ, ಮಿ॥ ಸೇಠ್‌ರವರು ೧೮ ರಿಂದ ೨೭ ರ ವರೆಗೆ ಕಡೂರಿನಲ್ಲಿಯೂ ಸಂಚರಿಸುವರು

ಕೈಗಾರಿಕಾ ಶಾಖೆಯ ಅಸಿಸ್ಟೆಂಟ್ ಪ್ರೊಫೆಸರ್ ಡಾ॥ ಬಿ ಆರ್. ಶೇಷಾಚಾರ್ಯರನ್ನು ಪ್ರೊಫೆಸರನ್ನಾಗಿ ನೇಮಿಸಲಾಗಿದೆ

ಬ್ರಿ॥ ನೌಕೆಯಲ್ಲಿ ಖೋತಾ

ಇಂಗ್ಲೆಂಡಿನ ನೌಕಾದಳವನ್ನು ಶೇ॥ ೫೦ ರಷ್ಟು ಕಡಮೆಮಾಡಲಾಗುವುದೆಂದು ಗೊತ್ತಾಗಿದೆ. ೨೫ ಕೋಟಿ ಪೌಂಡಿನಿಂದ ೧೯ ಕೋಟಿಗೆ ನೌಕಾವೆಚ್ಚವು ಇಳಿಸಲ್ಪಡುವುದು ಸೈನಿಕರ ಸಂಖ್ಯೆಯನ್ನು ಬಹಳವಾಗಿ ಕಡಮೆಮಾಡಲಾಗುವುದು.

ಲಾಹೋರ್ ಕದನ

ಕೋಮುವಾರು ಘರ್ಷಣೆಯು ಮಿತಿಮೀರಿದುದರಿಂದ ಲಾಹೋರಿನಲ್ಲಿ ಕರ್ಫ್ಯೂ ಆಜ್ಞೆಯನ್ನು ಜಾರಿ ಮಾಡಲಾಗಿದೆ. ರಸ್ತೆಗಳಲ್ಲಿ ಸಂಚಾರಗಳೆಲ್ಲವೂ ನಿಂತುಹೋಗಿವೆ. ಶಸ್ತ್ರಸಜ್ಜಿತ ಸೈನಿಕರೂ, ಪೋಲೀಸರೂ ಶಾಂತಿಯನ್ನು ಕಾಪಾಡುತ್ತಿದ್ದಾರೆ. ಕೋಮುವಾರು ಗುಂಪುಗಳು ಶಸ್ತ್ರಗಳನ್ನು ಹಿಡಿದು ಹೋರಾಡಿದುವು. ಪೋಲೀಸರು ಗುಂಡು ಹಾರಿಸಿ ಗುಂಪುಗಳನ್ನು ಚದುರಿಸಿದರು. ಮೊನ್ನೆ ೧೭ ಜನರು ಮಡಿದು ೪೯ ಜನರಿಗೆ ಗಾಯಗಳಾದುವು. ಅನೇಕ ಕಡೆ ಬೆಂಕಿ ಲೂಟಿಗಳು ನಡೆದುವು. ಕಟ್ಟಡಗಳಿಗೆ ಬೆಂಕಿ ಹಚ್ಚಲಾಯಿತು. ಹಿಂದೂ ಮತ್ತು ಸಿಖ್ ಪ್ರದೇಶಗಳಲ್ಲಿ ಹರತಾಳವನ್ನಾಚರಿಸಲಾಯಿತು. ಅಂಗಡಿ ಬಾಗಿಲುಗಳನ್ನು ಹಾಕಲಿಲ್ಲ. ಅಮೃತಸರ ಮತ್ತು ಮುಲ್ತಾನುಗಳಲ್ಲೂ ಗಲಭೆಯು ಹರಡಿ ಪೋಲೀಸರು ಗುಂಡು ಹಾರಿಸಿದರು. ಪ್ರಜೆಗಳು ಶಾಂತಿಯಿಂದಿರಬೇಕೆಂದು ನಾಯಕರುಗಳು ಮನವಿ ಮಾಡಿದ್ದಾರೆ. ಪರಿಸ್ಥಿತಿ ಉತ್ತಮವಾಗುತ್ತಿದೆ.

ಸಭೆಯಲ್ಲಿ ನಶ್ಯಹಾಕಬಹುದು ಸಿಗರೇಟ್ ಸೇದಕೂಡದು

ಮದರಾಸ್ ಶಾಸನ ಸಭೆಯಲ್ಲಿ ಬಜೆಟ್ ಭಾಷಣ ಮಾಡುವಾಗ, ವಿರೋಧ ಪಕ್ಷದ ನಾಯಕರಾದ ಮಿ॥ ಮಹಮದ್ ಇಸ್ಮೇಲ್‌ರವರು ಒಂದು ಚಿಟುಕೆ ನಶ್ಯವನ್ನು ತೆಗೆದುಕೊಂಡು ಮೂಗಿಗೆ ಏರಿಸುತ್ತಿರಲಿದ್ದಾಗ ಅದು ಕ್ರಮಬದ್ಧವೇ?-ಎಂಬ ಪ್ರಶ್ನೆಯನ್ನು ಎತ್ತಲಾಯಿತು. ಸಭೆಯವರೆಲ್ಲರೂ ನಕ್ಕರು. ಅದರಲ್ಲೇನೂ ತಪ್ಪಿಲ್ಲವೆಂದೂ, ಕೋರ್ಟುಗಳಲ್ಲಿಯೂ ನಶ್ಯ ಸೇದಲು ಅವಕಾಶವಿರುವುದಾಗಿಯೂ ಅಧ್ಯಕ್ಷರು ತಿಳಿಸಿದರು. ಹಾಗೆ ಬೀಡಿ ಸೇದಲೂ ಅವಕಾಶವುಂಟೇ?-ಎಂಬ ಪ್ರಶ್ನೆಗೆ, ಇಲ್ಲವೆಂದು ಅಧ್ಯಕ್ಷರು ಉತ್ತರವಿತ್ತರು.

ಪತ್ರಿಕೋದ್ಯೋಗಿ ಸಮ್ಮೇಳನದ ಅಧ್ಯಕ್ಷತೆ

ಬರುವ ತಿಂಗಳು ಬೆಂಗಳೂರಿನಲ್ಲಿ ನಡೆಯುವ ಪತ್ರಿಕೋದ್ಯೋಗಿಗಳ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ಶ್ರೀಗಳಾದ ಮೈಸೂರಿನ ಎ. ಶ್ರೀನಿವಾಸಮೂರ್ತಿ, ಕುರುಬೇಕೆರೆಯ ಶ್ರೀ ಟಿ ರಾಮಪುರಾಣಿಕರು ಮತ್ತು ಬೆಂಗಳೂರು ಮಾತೃಭೂಮಿ ಸಂಪಾದಕರಾದ ಶ್ರೀ ಎಂ ಎಲ್. ಶ್ರೀಕಂಠಯ್ಯನವರು ಉಮೇದುವಾರರಾಗಿದ್ದಾರೆ.

೧೯೪೮ರ ವರ್ಷ ಭಾರತವನ್ನು ಬ್ರಿಟಿಷರು ಬಿಟ್ಟುಹೋಗುವ ಘೋಷಣೆಗೆ ಅಂಗೀಕಾರವನ್ನು ಪಡೆಯಲು ಕಾಮನ್ಸ್ ಸಭೆಯಲ್ಲಿ ಎರಡು ದಿನಗಳ ಚರ್ಚೆಯನ್ನು ಸರ್ ಸ್ಟಾಫರ್ಡ್ ಕ್ರಿಪ್ಸರು ಮೊನ್ನೆ ಆರಂಭಿಸಿದರು. ಬ್ರಿ॥ ಸರ್ಕಾರದ ನಿರ್ಧಾರವನ್ನು ಸಮರ್ಥಿಸಿದರು. ಚರ್ಚಿಲರನ್ನು ಗೆದ್ದ ನಾನ್ ... ಭಾರತಕ್ಕೆ ಭಿನ್ನಾಭಿಪ್ರಾಯಗಳ ತಿದ್ದುಪಡಿಗಳನ್ನು ಸೂಚಿಸಿದ್ದರು.

[illegible]

ಮೈಸೂರಿನ ಓಲ್ಡ್ ಮೈಸೂರು ಬ್ಯಾಂಕ್ ರೋಡಿನಲ್ಲಿರುವ ಬಾಪೂಸಾಹೇಬ್ ಕಂಪೆನಿಯವರಲ್ಲಿ ಬೆಂಗಾಲ್ ಸಿಲ್ಕ್ ಸೀರೆಗಳ ಬೀಚಾದಲ್ಲಿ ನಮೂನೆಯಲ್ಲಿ ಬಂದಿವೆ ಬೇಕಾದವರು ಹೋಗಿ ನೋಡುವುದು ಉತ್ತಮ ಈಗ ಅರು ತಿಂಗಳ ಕೆಳಗೆ ಬಂದ ಇದ್ದ ಸೀರೆಗಳು ಈಗ ಸಂಗಾಹ ದರಗಳಿಗೆ ಇಳಿದಿವೆ

[illegible]

ಸಾಧ್ವಿ

ತಾ|| ೭-೩-೪೭ ಶುಕ್ರವಾರ

ಹೊಡೆಯಲು ಹೋದವರು ಶರಣಾಗತರಾದರು

ಕೋಮುವಾರು ಶಾಂತಿ ಸೌಹಾರ್ದವನ್ನು ಬೆಳೆಸಲು ಮಹಾತ್ಮ ಗಾಂಧಿಯವರು ಕೈಗೊಂಡಿರುವ ಕಾಲ್ನಡಿಗೆಯ ಪ್ರವಾಸದ ಮಹಿಮೆಯು ಈಗೀಗ ವೇದ್ಯವಾಗುತ್ತಿದೆ. ಅವರನ್ನು ವಿರೋಧಿಸುತ್ತಿದ್ದವರೂ ಈಗ ಹೊಗಳಲು ಆರಂಭಿಸಿದ್ದಾರೆ. ಇತರ ಪ್ರಾಂತಗಳಲ್ಲಿಯೂ ಇದೇ ರೀತಿ ಅವರು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ಹೇಳತೊಡಗಿದ್ದಾರೆ.

ನೌಖಾಲಿ ಮತ್ತು ತಿಪ್ಪೆರಾ ಪ್ರಾಂತಗಳಲ್ಲಿ ಪ್ರವಾಸ ಮಾಡುವುದಾಗಿ ಮಹಾತ್ಮರು ನಿರ್ಧರಿಸಿದಾಗ ಅನೇಕ ಮುಸಲ್ಮಾನ ಪ್ರಜೆಗಳು ಗಾಬರಿಯನ್ನು ಸೂಚಿಸಿದ್ದರು. ಇದರಿಂದ ತಮಗೆ ಯಾವ ವಿಪತ್ತು ಬರುವುದೋ ಎಂದು ಶಂಕಿಸಿದ್ದರು. ಗಾಂಧಿಜಿಯವರು ಅಲ್ಲಿಂದ ಹಿಂದಕ್ಕೆ ಹೋಗಬೇಕೆಂದು ಹೇಳಿ ಹಲವು ಕಡೆ ಮುಸ್ಲಿಂ ತರುಣರೂ, ಇತರರೂ ಪ್ರದರ್ಶನಗಳನ್ನು ಸಹಾ ನಡೆಸಿದರು. ಮಹಾತ್ಮರಿಗೆ ಇಂತಹವರಿಂದ ಏನಾದರೂ ಅಪಾಯ ಸಂಭವಿಸಬಹುದೆಂಬ ಆತಂಕವೂ ಸಹ ಬಂಗಾಳದ ಪ್ರಧಾನಿಗಳಿಗೆ ಉಂಟಾಗಿತ್ತು. ಆದ್ದರಿಂದ ಮಹಾತ್ಮರ ಕಾವಲಿಗಾಗಿ ಅವರು ವಿಶೇಷ ರಕ್ಷಣೆಯ ಏರ್ಪಾಡನ್ನೂ ಮಾಡಿದ್ದರು.

ಮಹಾತ್ಮರನ್ನು ಬಂಗಾಳದಿಂದ ಹೊರಕ್ಕೆ ಕಳುಹಿಸಲು ಅಲ್ಲಿನ ಮಾಜಿ ಪ್ರಧಾನಿಗಳಾದ ಸರ್ ಫಜಲುಲ್ ಹಕ್ಕರು ಪಣವನ್ನೇ ತೊಟ್ಟಿದ್ದರು. ಇದಕ್ಕಾಗಿ ಗಾಂಧಿಜಿಯವರನ್ನು ಅನೇಕ ಬಾರಿ ಒತ್ತಾಯಪಡಿಸಿದರು. ತಾವು ಅಲ್ಲಿರುವುದು ಅನುಚಿತವೆಂದು ತನ್ನನ್ನು ಒಪ್ಪಿಸುವುದಾದರೆ ಹೊರಟು ಹೋಗುವುದಾಗಿ ಗಾಂಧೀಜಿಯವರೂ ಹೇಳಿದ್ದರು. ಅನಂತರ ಇಬ್ಬರಿಗೂ ಭೇಟಿ ನಡೆಯಿತು. ಎಲ್ಲ ಕೋಮುಗಳಲ್ಲಿಯೂ ಪ್ರೀತಿ ವಿಶ್ವಾಸಗಳನ್ನು ಬೆಳೆಸುವುದೇ ತಮ್ಮ ಸಂಕಲ್ಪವೆಂಬುವದನ್ನು ಮಹಾತ್ಮರು ಸರ್ ಹಕ್ಕರಿಗೆ ಮನದಟ್ಟು ಮಾಡಿಕೊಟ್ಟರು. ಹಕ್ಕರ ಹೃದಯವು ಕರಗಿ ಅವರ ಪಕ್ಷನೆಯು ಸಂಪೂರ್ಣವಾಗಿ ಪರಾವರ್ತಿತು ಹೊಂದಿತು. ಬಂಗಾಳದಲ್ಲಿ ಮಹಾತ್ಮರು ಮಾಡಿರುವ ಕಾರ್ಯವು ನಿಜವಾಗಿಯೂ ಪ್ರಶಂಸನೀಯವಾಗಿರುವುದೆಂದೂ, ಅವರಂತೆಯೇ ಹಿಂದೂ ಮುಸಲ್ಮಾನರಲ್ಲಿ ಸ್ನೇಹವನ್ನು ಬೆಳೆಸಲು ತಮ್ಮ ಆಯುಷ್ಯವನ್ನೆಲ್ಲಾ ವಿನಿಯೋಗಿಸುವುದು ತಮ್ಮ ಇಚ್ಛೆಯೆಂದೂ ಅವರು ಈಗ ಸಾರಿರುವರು ಮಹಾತ್ಮರ ಸಾನ್ನಿಧ್ಯದ ಪ್ರಭಾವವು ಎಂತಹ ಕಠಿಣ ಹೃದಯವನ್ನೂ ಕರಗಿಸಬಲ್ಲುದಲ್ಲವೇ? ಹೊಡೆಯಲು ಬಂದವರು ಶರಣಾಗತರಾಗಿ ಹಿಂದಿರುಗಿವ ನಿದರ್ಶನಗಳು ಸಾಧು ಸತ್ಪುರುಷರ ಜೀವನದಲ್ಲಿ ಅಸಂಖ್ಯಾತವಾಗಿ ಕಾಣುವುದಿಲ್ಲವೇ?

ಮೈಸೂರು ಸಿಟಿ ಮ್ಯುನಿಸಿಪಲ್ ಆಫೀಸು, ತಾ|| ೪-೩-೧೯೪೭

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿ ಪುರವಾಸಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ತಾರೀ ಮಾರ್ಚ್ ೯ ನೇ ಭಾನುವಾರ ಬೆಳಿಗ್ಗೆ ೮ ಗಂಟೆಯಿಂದ ಮಧ್ಯಾಹ್ನ ೧ ಗಂಟೆವರೆಗೆ ವಿದ್ಯುಚ್ಛಕ್ತಿಯು ಸರಬರಾಜು ನಿಲ್ಲಿಸಲ್ಪಡುತ್ತಿರುವುದರಿಂದ ಸದರಿ ಕಾಲದಲ್ಲಿ ಮೈಸೂರು ಸಿಟಿಯಲ್ಲಿ ನೀರು ಸರಬರಾಜು ನಿಲ್ಲಿಸಲಾಗುತ್ತೆ. ನೀರು ನಿಲ್ಲುವ ಮೊದಲೇ ಎಲ್ಲರೂ ಸಾಕಾದಷ್ಟು ನೀರನ್ನು ಶೇಖರಿಸಿಕೊಳ್ಳಬೇಕಾಗಿ ಕೋರಿದೆ.

(ಸಹಿ) ಆರ್. ರಾಮಚಂದ್ರರಾವ್ ಚಾಂಘೋರೆ, ಪ್ರೆಸಿಡೆಂಟ್.

ಕಂಟ್ರೋಲ್ ಧಾರಣೆಯಂತೆ

ಹುರಿಗಡಲೆಯು

ಬೇಕಾದಲ್ಲಿ

ಬೆಳಿಗ್ಗೆ 10 ರಿಂದ 1 ಘಂಟೆ, ಸಾಯಂಕಾಲ 4 ರಿಂದ 7 ಘಂಟೆ ವರೆಗೂ ದೊರೆಯುತ್ತದೆ

ರೂ 1ಕ್ಕೆ 1ನೇ ನಂ. 2½ ಸೇರು.
ರೂ. 1ಕ್ಕೆ 2ನೇ ನಂ. 2¾ ಸೇರು.

ಪಿ. ವೆಂಕಟ ನರಸಿಹ್ಮಯ್ಯ,
L. No. 581
ಕಡಲೆ ಅಂಗಡಿ,
ಸಂತೇಪೇಟೆ] [ಮೈಸೂರು

ಶ್ರೀರಂಗಪಟ್ಟಣದ ಪುರಸಭಾ ಚುನಾವಣೆಯ ಮತದಾರರಲ್ಲಿ
ಕೆ. ರಾಮಯ್ಯ
ಉ|| ಅಂಬಾಜಿರಾವ್
ಪ್ರಾರ್ಥನೆ.
10-3-47 ರ ಚುನಾವಣೆಯಲ್ಲಿ ದಯವಿಟ್ಟು ಗಣಪತಿ ಗುರ್ತಿಗೆ ಓಟು ಮಾಡಿ
(ಓಟರು ಲಿಸ್ಟಿನಲ್ಲಿ ಕೆ. ರಾಮಯ್ಯ ಎಂದಿದೆ. ರೂಢಿಯಾಗಿ ಅಂಬಾಜಿರಾವ್ ಎಂದು ಕಾಲ್ಲಿಯಲ್ಲಿರುತ್ತೆ.)

ಕ್ರಯಕ್ಕಿವೆ
ಡೋರ್ ನಂಬರು
೪೪೪ ಮತ್ತು ೪೪೫
ಡಿ. ಸುಬ್ಬಯ್ಯ ರೋಡ್ ಕ್ರಾಸ್
ಸೂಕ್ತ ವಿಚಾರಿಸಿ:
ಆರ್. ಗುಂಡೂರಾವ್,
ಹಳೇ ಮೈಸೂರು ಬ್ಯಾಂಕ್ ಕಟ್ಟಡ,
ಮೈಸೂರು.

ರಾಜಕಮಲ್
೨-೩-೪೭ ರಿಂದ ೩ ನೇ ವಾರ
1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ
ಶ್ರೀ ಕೃಷ್ಣಲೀಲಾ
(ಕನ್ನಡ ಚಿತ್ರ)
ಇಂಪಾದ ಗಾನಗಳು! ಸೊಂಪಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!!
ಇವೆಲ್ಲವನ್ನೂ ಇಂದೇ ನೋಡಿ.

on 7th, 8th, 10th and 11th March 1947
Daily at 10-30 A.M
Eddie Cantor in
"Palmy Days"
a glorious comedy punctuated with Fun and Frolic.

ಕಂಟ್ರೋಲು ಬೆಲೆ!

ಹೊಸ ಜವಳಿ

ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಪೈಜಾಮಿನ್, ಶಂಟಿ, ಚೀಟಿ, ರಾಂಪು ಹುಬ್ಬಳ್ಳಿ ಸೀರೆಗಳೂ, ಕರಾಚಿ ಸೀರೆಗಳೂ, ಜರಿನ ಪೂಣಾ ಕಾಂಬಾ ಸೀರೆಗಳೂ, ಶಾಲ್ಕ್ಲಾತ್ ಶಾಲುಗಳೂ, ದೊರೆಯುತ್ತವೆ.

M P. V., M. V. ಭೋಜಯ್ಯ B. A ಅಂಡ್ ಬ್ರದರ್ಸ್
ಬೊಂಬಾಯಿ ಆನಂದ ಭವನ ಹೋಟೆಲ್ ಎದುರು ಬಲಭಾಗದ ಕೊನೆ,
ಜವಳಿ ಅಂಗಡಿ, ಮೈಸೂರು.

ಶ್ರೀ ಪ್ರದರ್ಶನ ದಿನಗಳಲ್ಲಿ ಪ್ರದರ್ಶಿಸಲ್ಪಡುವುದು

ಮೈಸೂರು ನ್ಯೂ ಅಪೇರಾ ದಲ್ಲಿ

★ ಕುಂಡಲ ಕೀರ್ತಿ ★

(ತಮಿಳು)

—: ಭೂಮಿಕೆಯಲ್ಲಿ :—

ಹೊನ್ನಪ್ಪ ಭಾಗವತರ್, ಕೆ. ಎಲ್. ವಿ. ವಸಂತ, ಎಸ್. ಸಿ. ವಸಂತ ಕೋಕಿಲಂ, ಟಿ. ಆರ್. ರಾಮಚಂ

ಮುಂತಾದವರು

—: ಹಂಚಿಕೆಗಾರರು :—

ಶ್ರೀ ವಿಜಯಾ ಪಿಕ್ಚರ್ಸ್,

197, ಗಾಂಧಿ ನಗರ, : : ಬೆಂಗಳೂರು
(ಶುಭ)

UNIVERSITY OF MYSORE

Notification No. A. 3. 500-45/47

Dated 25-2-194

Applications are invited from duly qualified MYSOREANS for the post of Assistant Professor of Banking and Currency in the University on a salary of Rs. 250–25/2–350. The post is permanent, and the selected candidate will be on probation for two years in the first instance on the initial salary of Rs. 250. The minimum academic qualification required is a good Master's Degree in Commerce with specialisation in Banking and Currency, or a good degree of a British University in Economics and Banking. Preference will be given to candidates who have had experience in teaching and or have practical experience in a leading banking institution.

2. The post is pensionable. It is subject to the rules of the Mysore Service Regulations as regards salary, leave, pension, etc. and subject also to the rules of the University as regards discipline. The person selected will be required to join duty immediately after receipt of orders of appointment.

3 Applications shoul tain the following info tion :—

Age, Caste or Comm Qualifications (includin minations passed and of University, date of ing and class), present tion, salary and pre service, if any, as w works published and particulars, if any

Copies of testim (which will not be retu should accompany the cations. Six sets of the cation and of the testi als are required. Appli already in service mus ward their applic through their officia periors.

4. If required, cand must be prepared to be viewed at their own ex

5 Applications sho addressed to the Regi University of Mysore, sore, and submitted so reach him on or BEFO MARCH 1947.

(Sd) D. S. GO
Regist

ರಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೮—೩—೪೭ [ಸಂಚಿಕೆ ೧೭೯

ಮದ್ರಾಸ್ ಬಿಕ್ಕಟ್ಟಿನ ಬಗ್ಗೆ ರಾಷ್ಟ್ರಪತಿಗೆ ಅಧಿಕಾರ

ಆಗಮನ

ಮೈಸೂರು ೮ ರ

ಮೈಸೂರಿನ ರಾಜಕೀಯ ಸಲಹೆಗಾರ ಸರ್ ಕಾರ್ ಫೀಲ್ಡ್‌ರವರು ಈದಿನ ರಾಜಧಾನಿಗೆ ಆಗಮಿಸಿ ಸರ್ಕಾರಿ ಭವನದಲ್ಲಿ ತಂಗಿದ್ದಾರೆ. ಈದಿನ ದೇಶಗ್ಗೆ ಪ್ರಭುಗಳು ಅವರಿಗೆ ಭೇಟಿಯಿತ್ತಿದ್ದರು.

ಶುಭಸ್ವೀಕಾರ

ಮೈಸೂರು ಬರ್ಮಾ ಷೆಲ್ ಕಂಪೆನಿ ಏಜೆಂಟರಾದ ಶ್ರೀ ವಿ. ನಾರಾಯಣರಾಯರು ಪ್ರಾಜ್ಞ ಟಕ್ಕವರ್ಮ ಶ್ರೀ ಎಸ್. ಏಕ... ರಾಯರು ದಿವಂಗತರಾದ ಬಗ್ಗೆ ಶುಭಸ್ವೀಕಾರ ವೃತವನ್ನು ಶ್ರೀರಾಮಪೇಟೆ ಶ್ರೀರಾಮಚಂದ್ರ ದೇವಸ್ಥಾನದಲ್ಲಿ ನಿನ್ನೆ ಸಂಜೆ ನೆರವೇರಿಸಿದರು. ಶ್ರೀ ರಾಮಚಂದ್ರರಾವ್ ...ಭೋರೆರಿಯವರು ಸಭಾಧ್ಯಕ್ಷತೆಯನ್ನು ವಹಿಸಿದ್ದರು.

ವಿವಾಹ

ರಾಜಧಾನಿಯ ಶ್ರೀ ಕೃಷ್ಣ ಫ್ಲೋರ್ ಮತ್ತು ಸ್ಟೀಲ್ಸ್ ರೋಗ್ರೂವಿಂಗ್ ವರ್ಕ್ಸ್‌ನ ಮಾಲೀಕರಾದ ಶ್ರೀ ಎಂ. ಹೆಚ್. ತಿಮ್ಮಪ್ಪನವರಿಗೆ ಆದಿಕಟ್ಟೆಹಳ್ಳಿಯ ಶ್ರೀ ಬೋರೇಗೌಡರ ಮಗಳು ಶ್ರೀ ಕೆಂಪಮ್ಮನವರನ್ನು ಕೊಟ್ಟು ವಿವಾಹವು ೧೦ ನೇ ತಾ|| ಸೋಮವಾರ ನಡೆಯುವುದು.

ಕೀರ್ತನಕಾರ ಮಂಡಲಿ

ಮೈಸೂರು ಟೌನ್‌ಹಾಲಿನಲ್ಲಿರತಕ್ಕ ರೇಡಿಯೋದಲ್ಲಿ 'ಮೈಸೂರು ಆಕಾಶವಾಣಿ'ಯಲ್ಲಿ ಪ್ರತಿ ಶನಿವಾರವೂ ನಡೆಯತಕ್ಕ ಕೀರ್ತನೆಗಳನ್ನು ಹಾಕುವುದಿಲ್ಲ. ಬೇರೆ ಕಡೆಯಿಂದ ಬರತಕ್ಕ ಕಾರ್ಯಕ್ರಮಗಳಿಗೆ ಬದಲಾಯಿಸಿ ಬಿಡುತ್ತಾರೆ. ಅಥವಾ ನಿಲ್ಲಿಸುತ್ತಾರೆ. ಹೀಗೆ ಮಾಡುತ್ತಿರುವುದರಿಂದ ಸಾರ್ವಜನರು ಈ ವಿಷಯದಲ್ಲಿ ದೂರು ಹೇಳುತ್ತಿದ್ದಾರೆ. ಆದಕಾರಣ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ದಯವಿಟ್ಟು ಹಾಗೆ ಬದಲಾವಣೆ ಮಾಡುವುದಾಗಲಿ ಅಥವಾ ಸಮಯಕ್ಕೆ ನಿಲ್ಲಿಸಿಬಿಡುವುದಾಗಲಿ ಮಾಡದಂತೆ ದಯಪಾಲಿಸಿ ಸರ್ವರಿಗೂ ಕೀರ್ತನೆ ಕೇಳುವ ಸದವಕಾಶವನ್ನುಂಟುಮಾಡಿಕೊಡಬೇಕೆಂದು ಮಂಡಲಿಯ ಕಾರ್ಯದರ್ಶಿಗಳಾದ ಶ್ರೀ|| ಆರ್. ಎಸ್. ಶೇಷಗಿರಿದಾಸ್‌ರವರು ಪ್ರಾರ್ಥಿಸಿರುತ್ತಾರೆ.

ಪ್ರೆಸ್ ಕೆಲಸಗಾರರ ಸಭೆ

ಪ್ರೆಸ್ ಕೆಲಸಗಾರರ ಸಂಘವನ್ನು ಸ್ಥಾಪಿಸುವ ಸಲುವಾಗಿ ನಗರದ ಎಲ್ಲಾ ಪ್ರೆಸ್ ಕೆಲಸಗಾರರ ಸಭೆಯು ನಾಳೆ ಸಂಜೆ ೩ ಘಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ವಿಶ್ವ ನ್ಯೂಸ್ ಏಜೆನ್ಸೀಸ್ ಕಾರ್ಯಾಲಯದಲ್ಲಿ ಸೇರುತ್ತದೆ. ಎಲ್ಲಾ ಕೆಲಸಗಾರರೂ ಬರಬೇಕೆಂದು ಸಂಚಾಲಕರಾದ ಶ್ರೀ|| ಟಿ. ಎಸ್. ಸುಬ್ಬಣ್ಣನವರು ಕೋರಿರುತ್ತಾರೆ.

ನೇಕಾರರ ಸಂಘ

ಈ ತಾಲ್ಲೂಕು ನೇಕಾರರು ಮೊನ್ನೆ ತಮ್ಮ ಸಂಘವನ್ನು ಸ್ಥಾಪಿಸಿಕೊಂಡರು. ಶ್ರೀ ಎ. ರಾಜಪ್ಪನವರು ಅಧ್ಯಕ್ಷರಾಗಿಯೂ ಶ್ರೀ ಬಿ. ಎ. ರಾಮಲಿಂಗಯ್ಯನವರು ಕಾರ್ಯದರ್ಶಿಗಳಾಗಿಯೂ, ಶ್ರೀ ನಂಜುಂಡಸ್ವಾಮಿಯವರು ಖಜಾಂಚಿಗಳಾಗಿಯೂ ಚುನಾಯಿಸಲ್ಪಟ್ಟರು.

ಪ್ರಭುಗಳೊಡನೆ ಸುಧಾರಣಾಧಿಕಾರಿಗಳ ಭೇಟಿ

ಸುಧಾರಣಾಧಿಕಾರಿಗಳಾದ ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರಿಗೆ ಶ್ರೀಮನ್ಮಹಾರಾಜರವರು ಮೊನ್ನೆದಿನ ಭೇಟಿ ದಯಪಾಲಿಸಿದರು.

ಕೃಪಲಾನಿಯವರಿಂದ ಮದ್ರಾಸ್ ಬಿಕ್ಕಟ್ಟಿನ ಪರಿಶೀಲನೆ

ಮದ್ರಾಸ್ ಮಂತ್ರಿಮಂಡಲದ ಬಿಕ್ಕಟ್ಟನ್ನು ಖುದ್ದಾಗಿ ಪರಿಶೀಲಿಸಿ ಇತ್ಯರ್ಥ ಮಾಡಲು ರಾಷ್ಟ್ರಪತಿ ಕೃಪಲಾನಿಯವರಿಗೆ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಧಿಕಾರವನ್ನು ಕೊಟ್ಟಿದೆ. ಕೃಪಲಾನಿಯವರು ೧೦ ನೇ ತಾ|| ಮದ್ರಾಸಿಗೆ ಬರುವರು. ಅವರು ಕರ್ನಾಟಕ ಪ್ರವಾಸವನ್ನು ರದ್ದುಗೊಳಿಸಿದ್ದಾರೆ.

ಲಾಹೋರ್ ಪರಿಸ್ಥಿತಿ

ಅಮೃತಸರದಲ್ಲಿ ಸಂಸ್ಥಾನ ಹತೋಟಿ ಮೀರಿದೆ. ನಗರವು ನರಕ ಸದೃಶವಾಗಿರುವುದಾಗಿ ವರದಿಯಾಗಿದೆ. ಲಾಹೋರಿನಲ್ಲಿ ರೇಷ್ಮೆ ಅಂಗಡಿಗಳ ಪ್ರದೇಶಕ್ಕೆ ಬೆಂಕಿ ಬಿದ್ದು ೮ ಲಕ್ಷ ರೂ ಗಳ ನಷ್ಟ ಸಂಭವಿಸಿದೆ. ಅಮೃತಸರದಲ್ಲಿ ೭೨ ಘಂಟೆಗಳ ಕಾಲ ಕರ್ಫ್ಯೂ ಆಜ್ಞೆ ಜಾರಿಯಲ್ಲಿದೆ. ಅಂಚೆ ಮತ್ತು ತಂತಿ ಹಂಚುವುದನ್ನು ನಿಲ್ಲಿಸಲಾಗಿದೆ. ಎಲ್ಲ ಪಂಗಡಗಳ ಪ್ರತಿನಿಧಿಗಳನ್ನೊಳಗೊಂಡ ಶಾಂತಿ ಸಮಿತಿಯೊಂದು ರಚಿತವಾಗಿದೆ.

ಮಿಶ್ರ ಮಂತ್ರಿಮಂಡಲಗಳ ಬಗ್ಗೆ ಬಂಗಾಳಾ ಪ್ರಧಾನಿಗಳು

ಬಂಗಾಳಾ ಮತ್ತು ಇತರ ಪ್ರಾಂತ್ಯಗಳಲ್ಲಿ ಒಂದೇ ಪಕ್ಷದವರು ಅಧಿಕಾರ ನಡೆಸುವುದು ಕೊನೆಗಾಣಬೇಕಾದ ಕಾಲವು ಬಂದಿದೆಯೆಂದು ಬಂಗಾಳದ ಪ್ರಧಾನಿ ಮಿ|| ಸುಹ್ರವರ್ದಿಯವರು ತಿಳಿಸಿದ್ದಾರೆ. ಸ್ವಾತಂತ್ರ್ಯವನ್ನು ಗಳಿಸಿ ಅದನ್ನು ಉಳಿಸಿಕೊಂಡು ಬರುವುದರಲ್ಲೇ ನಮ್ಮ ಅಭಿವೃದ್ಧಿಯೂ ಆಗಬೇಕಾಗಿರುವುದರಿಂದ ಎಲ್ಲ ಕೋಮುಗಳ ಪ್ರತಿನಿಧಿಗಳನ್ನೊಳಗೊಂಡಂತೆ ಮಂತ್ರಿಮಂಡಲಗಳು ಪುನರ್ರಚಿತವಾಗಬೇಕಾಗಿದೆ.

ರಹದಾರಿ ರದ್ದು

ಭಾರತಕ್ಕೆ ಬರಲು ದಕ್ಷಿಣ ಆಫ್ರಿಕದ ಭಾರತೀಯ ನಾಯಕರಾದ ಡಾ|| ನಾಯಕ‌ರ್ ಮತ್ತು ಡಾ|| ದಾದೂರವರಿಗೆ ಕೊಡಲಾಗಿದ್ದ ರಹದಾರಿಯನ್ನು ಅವರು ದ|| ಆಫ್ರಿಕದ ಕಾನೂನನ್ನು ಮುರಿದು ಶಿಕ್ಷೆಗೆ ಗುರಿಯಾಗಿದ್ದರೆಂಬ ಕಾರಣದ ಮೇಲೆ ರದ್ದು ಮಾಡಲಾಗಿದೆ.

‡ ಮೈಸೂರು ಜಗನ್ಮೋಹನಬಂಗಲೆ ರಸ್ತೆಯಲ್ಲಿರುವ ಪದಕಿಯವರ ಜಯಾಸ್ಟೋರ್ಸಿನವರು ವಿಶ್ವಾಸದಿಂದ ಕಳುಹಿಸಿರುವ ನೇಕಾರ ಕ್ಯಾಲೆಂಡರನ್ನು ಸ್ವೀಕರಿಸಿದ್ದೇವೆ.

ಭಾರತದ ಘೋಷಣೆಗೆ ಕಾಮನ್ಸ್ ಸಭೆಯ ಬೆಂಬಲ

——

೧೯೪೮ ರ ಜೂನ್ ಅಂತ್ಯದೊಳಗೆ ಭಾರತೀಯರಿಗೆ ಅಧಿಕಾರ ವಹಿಸಿಕೊಡಲಾಗುವುದೆಂದು ಪ್ರಧಾನಿ ಅಟ್ಲೀಯವರು ಘೋಷಿಸಿರುವುದನ್ನು ಕಾಮನ್ಸ್ ಸಭೆಯು ಸರ್ವಾನುಮತದಿಂದ ಒಪ್ಪಿರುತ್ತದೆ. ಸರ್ಕಾರದ ವರ್ತನೆಯು ನಿರಂಕುಶವಾಗಿದೆಯೆಂದು ಟೋರಿ ಪಂಗಡದವರು ಸೂಚಿಸಿದ್ದ ತಿದ್ದುಪಡಿಯು ೩೩೭-೧೮೫ ಓಟುಗಳಿಂದ ಬಿದ್ದುಹೋಯಿತು. ಮುಂದೆ ಬರುವ ಅಪಾಯವನ್ನು ತಪ್ಪಿಸುವ ಸಲುವಾಗಿ ಈ ರೀತಿಯನ್ನು ಅನುಸರಿಸಲಾಗಿದೆ; ಮುನ್ನಡಿ ಇಟ್ಟಿರುವುದನ್ನು ಈಗ ಹಿಂತೆಗೆದುಕೊಳ್ಳಲು ಸಾಧ್ಯವಿಲ್ಲ- ಎಂದು ಪ್ರಧಾನಿ ಅಟ್ಲೀಯವರು ತಿಳಿಸಿದ್ದಾರೆ. ಅಲ್ಪಸಂಖ್ಯಾತರನ್ನು ನಡುನೀರಿನಲ್ಲಿ ಬಿಟ್ಟಂತಾಗಿದೆ; ಸವರ್ಣ ಹಿಂದೂ ಪ್ರತಿನಿಧಿಗಳಾದ ಪಂ|| ನೆಹರೂ ರವರಿಗೆ ಅಧಿಕಾರ ವಹಿಸುವುದು ಅಪಾಯಕರ; ಪ್ಯಾಲೆಸ್ಟೈನಿನಂತೆ ಭಾರತದ ಪ್ರಶ್ನೆಯನ್ನು ವಿಶ್ವಸಂಸ್ಥೆಯ ಮುಂದೆ ತರಬೇಕು- ಎಂಬುದಾಗಿ ಮಿ|| ಚರ್ಚಿಲ್ ರವರು ಹೇಳಿದರು. ಸರ್ ಎ. ವಿ. ಅಲೆಗ್ಸಾಂಡರ್ ರವರು ಪಂ|| ನೆಹರೂ ರವರನ್ನು ಪ್ರಶಂಸಿಸಿ, ಇತರ ಕೋಮಿನವರೊಡನೆ ಸಹಕರಿಸಲು ಅವರಿಗೆ ಅವಕಾಶ ಮಾಡಿಕೊಟ್ಟರೆ, ಭಾರತದ ಇಂದಿನ ತೊಂದರೆಗಳನ್ನೆಲ್ಲಾ ಅವರು ನಿವಾರಿಸಿ ಅದನ್ನು ಕೀರ್ತಿಯ ಶಿಖರಕ್ಕೆ ಏರಿಸುವರು- ಎಂದು ಹೇಳಿದರು.

ಸರ್ಕಾರದ ತಾತ್ಸಾರವೇ?

——

ರಾಜಧಾನಿಯ ಪೌರಸಭೆಯವರು ತಮ್ಮ ಹೊಸ ವಕೀಲರನ್ನು ಒಂದು ವಿಶೇಷ ಅಧಿವೇಶನದಲ್ಲಿ ಚುನಾಯಿಸಿ ಸುಮಾರು ಒಂದೂವರೆ ತಿಂಗಳಾಗುತ್ತ ಬಂದಿತು. ಅದನ್ನು ಸರ್ಕಾರದ ಅಂಗೀಕಾರಕ್ಕಾಗಿ ಕಳುಹಿಸಿರುವುದಾಗಿಯೂ ಅಧ್ಯಕ್ಷರು ಹೇಳಿರುವರು. ಆದರೂ ಇನ್ನೂ ಸರ್ಕಾರದಿಂದ ಉತ್ತರವೇ ಬಂದಿರುವುದಿಲ್ಲವೆಂದು ತಿಳಿದುಬಂದಿದೆ. ಹೀಗೆ ತಿಂಗಳುಗಟ್ಟಲೆ ಸರ್ಕಾರದವರು ಇಂತಹ ವಿಷಯಗಳಲ್ಲಿಯೂ ತಾತ್ಸಾರಮಾಡುವುದರಿಂದ ಕೆಲಸಕಾರ್ಯಗಳಿಗೆ ಎಷ್ಟು ತಡೆಯುಂಟಾಗುವುದೆಂಬುದನ್ನು ಅವರು ಮನಗಂಡು ಬೇಗನೆ ವಿಲೇ ಮಾಡಬೇಕೆಂದು ಒಬ್ಬ ಮಾನ್ಯ ಗೃಹಸ್ಥರು ಬರೆದಿರುತ್ತಾರೆ.

ದರೋಡೆ ಮೊಕದ್ದಮೆಯಲ್ಲಿ ಆಪಾದಿತರ ಸಾಕ್ಷಿಗಳು

ಸ್ವಂ. ಸು. ಪ್ರೋ] ಬೆಂಗಳೂರು ೮

ಧರ್ಮರತ್ನಾಕರ ಗೋಪಾಲರಾಯರ ಆಭರಣ ಅಪಹಾರದ ಮೊಕದ್ದಮೆಯಲ್ಲಿ ಆಪಾದಿತರ ಪರವಾಗಿ ಸಾಕ್ಷಿಗಳ ಪಟ್ಟಿಯನ್ನು ಇಂದು ಕೋರ್ಟಿಗೆ ಹಾಜರು ಮಾಡಲಾಯಿತು. ಮೊದಲನೇ ಆಪಾದಿತರಾದ ಶ್ರೀ|| ಸರ್ವೋತ್ತಮರಾಯರ ಕಡೆ ಶ್ರೀ|| ಗಳಾದ ಕೆ. ಎಸ್. ರಾಮಯ್ಯ, ಧರ್ಮಪ್ರಕಾಶ ದೇವರಾವ್ ಶಿವರಾಂ, ಜಿ. ಸುಂದರರಾವ್, ಬ್ಯಾರಿಸ್ಟರ್, ಬ್ಯಾ|| ದಸ್ತೂರ್, ಇಂಪೀರಿಯಲ್ ಬ್ಯಾಂಕ್ ಮ್ಯಾ|| ಹ್ಯಾಮೆಟ್, ನಿವೃತ್ತ ಪ್ರೊ|| ಕಾ|| ಮಹಮದ್ ಫಜ್ಲು ಇವರುಗಳನ್ನು ಸಾಕ್ಷಿಗಳಾಗಿ ಕೋರಲಾಗಿದೆ. ೨ ನೇ ಆಪಾದಿತರಾದ ಆರ್ಚ ಮೋರಿಸ್ ರವರ ಪರವಾಗಿ ಶ್ರೀ|| ಗಳಾದ ಭಾಸ್ಕರರೆಡ್ಡಿ, ಎಂ. ಎ. ವೆಂಕಟರಾವ್, ಮೇ|| ಭಟ್- ಇವರುಗಳನ್ನು ಕೋರಲಾಗಿದೆ. ಇವರುಗಳ ವಿಚಾರಣೆ ಸೋಮವಾರ ನಡೆಯುವುದು. ೩ ನೇ ಆಪಾದಿತರ ಸಾಕ್ಷಿ ಪಟ್ಟಿಯು ಇನ್ನೂ ಸಿದ್ಧವಾಗಿಲ್ಲ.

• ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಶ್ರೀ ಚಂಗಲರಾಯರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯುತ್ತಿದೆ. ಅಧ್ಯಕ್ಷರು ದೆಹಲಿಗೆ ತೆರಳಿ ನಾಯಕರುಗಳೊಡನೆ ನಡೆಸಿದ ಸಮಾಲೋಚನೆಯನ್ನು ವಿವರಿಸಿದ ನಂತರ ಸಭೆಯು ಮುಂದಿನ ಕಾರ್ಯಕಲಾಪಗಳನ್ನು ಪರಿಶೀಲಿಸುತ್ತಿದೆ. ಸಂಸ್ಥಾನದ ಪರಿಸ್ಥಿತಿಯನ್ನೂ, ಅಖಿಲ ಭಾರತದ ವಿದ್ಯಮಾನಗಳನ್ನೂ ಗಮನಿಸಿ ಮುಂದಿನ ಕಾರ್ಯಕ್ರಮಗಳನ್ನು ಗೊತ್ತು ಮಾಡುವಂತೆ ನಾಯಕರು ಶ್ರೀ ರೆಡ್ಡಿಯವರಿಗೆ ಸಲಹೆ ಇತ್ತಿರುವುದಾಗಿ ಹೇಳಲಾಗಿದೆ.

• ಮಂಡ್ಯದ ಸರ್ವೇ ಅಧಿಕಾರಿಗಳಾದ ಶ್ರೀ ಎಸ್. ಶ್ರೀರಾಮಪ್ಪನವರನ್ನು ಮೈಸೂರು ಕಾಲೇಜಿನ ಹುನಾರಿ ಸಿವಿಲ್ ಇಂಜನೀಯರಿಂಗ್ ಅ| ಪ್ರೊಫೆಸರನ್ನಾಗಿ ನೇಮಕ ಮಾಡಲಾಗಿದೆ.

• ಸರ್ಕಾರದವರು ಮಾಸಗೀಯವರಿಗೆ ಕೊಡುವ ಕೈಗಾರಿಕೆ ಸಾಲ ಮತ್ತು ಆದ್ಯಾಯಗಳಿಗೆ ಸರ್ಕಾರಿ ನೌಕರರು ಜಾಮೀನು ಆಗಕೂಡದೆಂದು ಸರ್ಕಾರಿ ಆಜ್ಞೆ ಹೊರಟಿರುತ್ತದೆ.

ಹೆಚ್. ವಿ. ರಾಮಸ್ವಾಮಿಯವರ ನಿಧನ

ನಿವೃತ್ತ ಎಕ್ಸೈಜ್ ಕಮೀಷನರಾದ ಶ್ರೀ ಎಚ್. ವಿ. ರಾಮಸ್ವಾಮಿಯವರು ಈ ದಿನ ಮಲ್ಲೇಶ್ವರದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ೬೪ ವರ್ಷ ವಯಸ್ಸಾಗಿತ್ತು. ಇವರಿಗೆ ಪತ್ನಿಯೂ, ಇಬ್ಬರು ಗಂಡು ಮಕ್ಕಳೂ, ಮೂವರು ಹೆಣ್ಣು ಮಕ್ಕಳೂ ಇದ್ದಾರೆ. ದಿವಂಗತರ ಆತ್ಮಕ್ಕೆ ಶಾಂತಿ ದೊರಕಲೆಂದು ಹಾರೈಸುತ್ತೇವೆ.

ಗ್ರಾಮಾಧಿಕಾರಿಗಳ ಸಂಘ

ಸ್ವಂ. ಸು.] ನಂಜನಗೂಡು ೮

ನಾಳೆ ಮಧ್ಯಾಹ್ನ ಇಲ್ಲಿನ ರೆಸಿಡೆನ್ಸಿ ಬಂಗಲೆಯಲ್ಲಿ ಮೇಲ್ಕಂಡ ಸಂಘದ ಪ್ರಾರಂಭೋತ್ಸವವು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಟಿ. ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಎಲ್ಲಾ ಗ್ರಾಮಾಧಿಕಾರಿಗಳೂ ಈ ಸಮಾರಂಭದಲ್ಲಿ ಭಾಗವಹಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ.

ಸಾಧ್ವಿ

ತಾ|| ೮-೩-೪೭ ಶನಿವಾರ

ದೇವಾಸ್ ಸಂಸ್ಥಾನದಲ್ಲಿ ಸುಧಾರಣೆ

ಕಿರಿಯ ದೇವಾಸ್ ಸಂಸ್ಥಾನದ ಮಹಾರಾಜರು ಹೊಸ ಸುಧಾರಣೆಗಳನ್ನು ಘೋಷಿಸಿದ್ದಾರೆ. ಇದರಂತೆ ೩೮ ಚುನಾಯಿತ ಸದಸ್ಯರನ್ನೊಳಗೊಂಡ ಒಂದು ಶಾಸನ ಸಭೆಯನ್ನು ರಚಿಸಲಾಗುವುದು. ವಯಸ್ಕರಿಗೆಲ್ಲಾ ಓಟಿನ ಹಕ್ಕು ದೊರೆಯುವುದು. ಶಾಸನ ಸಭೆಗೆ ಚುನಾಯಿತ ಅಧ್ಯಕ್ಷರಿರುತ್ತಾರೆ. ಸಭೆಯಿಂದ ಚುನಾಯಿತರಾದ ಸದಸ್ಯರ ಪಟ್ಟಿಯಿಂದ ಇಬ್ಬರನ್ನು ಮಂತ್ರಿಗಳನ್ನಾಗಿ ತೆಗೆದುಕೊಳ್ಳಲಾಗುವುದು. ಪ್ರಜೆಗಳಿಗೆ ಮೂಲಭೂತ ಹಕ್ಕುಬಾಧ್ಯತೆಗಳು ಇರುವುವೆಂದು ಮಹಾರಾಜರು ಒಪ್ಪಿಕೊಂಡಿದ್ದಾರೆ. ಸಂಸ್ಥಾನದ ಆಯವ್ಯಯದ ಅಂದಾಜನ್ನು ಶಾಸನ ಸಭೆಯ ಅಂಗೀಕಾರಕ್ಕಾಗಿ ಒಪ್ಪಿಸಲಾಗುವುದು.

ಸಣ್ಣಪುಟ್ಟ ಸಂಸ್ಥಾನಗಳೆಲ್ಲವೂ ಮುಂದುವರಿಯುತ್ತಿವೆ. ನಮ್ಮ ಮಾದರಿ ಮೈಸೂರು ಮಾತ್ರ ಇನ್ನೂ ಪ್ರಶ್ನಾವಳಿಗಳಲ್ಲಿಯೇ ತೊಳಲುತ್ತಿದೆ. ಈ ರೀತಿ ಪ್ರಶ್ನಾವಳಿಗಳನ್ನು ಹಾಕುತ್ತ ಯಾವ ಸಂಸ್ಥಾನವೂ ಇಂದು ಕಾಲಯಾಪನೆ ಮಾಡುತ್ತಿಲ್ಲ. ಹಲವು ಸಂಸ್ಥಾನಗಳು ಪೂರ್ಣ ಜವಾಬ್ದಾರಿ ಸರ್ಕಾರವನ್ನೇ ಘೋಷಿಸಿವೆ. ಇನ್ನು ಕೆಲವು ಅದಕ್ಕೆ ದಾರಿಯನ್ನು ಮಾಡುತ್ತಿವೆ

ದೇವಾಸ್ ಸಂಸ್ಥಾನದಲ್ಲಿ ಈಗ ಘೋಷಿಸಲಾಗಿರುವಷ್ಟು ಸುಧಾರಣೆಗಳು ಸಹ ನಮ್ಮಲ್ಲಿ ಇನ್ನೂ ಇಲ್ಲದಿರುವುದು ಶೋಚನೀಯವಾಗಿದೆ. ನಮ್ಮ ಸಂಸ್ಥಾನದ ವಯಸ್ಕರಿಗೆಲ್ಲಾ ಓಟಿನ ಹಕ್ಕು ಇನ್ನೂ ದೊರೆತಿರುವುದಿಲ್ಲ. ಪ್ರಜಾಪ್ರತಿನಿಧಿ ಸಭೆಗೆ ಚುನಾಯಿತ ಅಧ್ಯಕ್ಷರಿರುವುದಿಲ್ಲ. ಅಲ್ಲದೆ ಶಾಸನ ಸಭೆಯ ಸದಸ್ಯರಿಂದ ಚುನಾಯಿತರಾದವರು ಮಂತ್ರಿಗಳಾಗುತ್ತಿಲ್ಲ. ಸಂಸ್ಥಾನದಲ್ಲಿ ನಾಗರಿಕ ಹಕ್ಕುಗಳಿಗೆ ಇನ್ನೂ ಅನೇಕ ಕಡೆ ಅಡ್ಡಿ ಇದ್ದೇ ಇರುತ್ತದೆ.

ಹೊಸ ಸುಧಾರಣೆಗಳ ಮಾತು ಹಾಗಿರಲಿ; ಹಳೆಯ ಸುಧಾರಣೆಗಳಲ್ಲಿ ಇರುವಷ್ಟು ಅವಕಾಶವನ್ನೂ ಸಹ ನಮ್ಮಲ್ಲಿ ಇನ್ನೂ ಉಪಯೋಗಿಸಿಕೊಂಡಿರುವುದಿಲ್ಲ. ದಿವಾನರನ್ನೂ ಒಳಗೊಂಡು ಎಲ್ಲ ಮಂತ್ರಿಗಳೂ ಶಾಸನ ಸಭೆಗಳ ಚುನಾಯಿತ ಸದಸ್ಯರೇ ಆಗಿರಲು ಈಗಲೇ ಅವಕಾಶವಿರುವುದೆಂದು ಅಂದಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲರು ಹೇಳಿ ಅನೇಕ ವರ್ಷಗಳಾದುವು. ನೂತನ ಸುಧಾರಣೆಗಳನ್ನು ಉದಾರವಾದ ರೀತಿಯಲ್ಲಿ ಪ್ರಯೋಗಿಸಲಾಗುವುದೆಂದು ಅವುಗಳ ಆರಂಭ ಕಾಲದಲ್ಲಿ ದಿವಾನರಾಗಿದ್ದ ಶ್ರೀ ಎನ್ ಮಾಧವರಾಯರು ಹೇಳಿದ್ದರು

ಆದರೆ ಇತ್ತೀಚೆಗೆ ನಡೆದ ವಿದ್ಯಮಾನಗಳು ಅವಕ್ಕೆ ವ್ಯತಿರೇಕವಾಗಿಯೇ ಇದ್ದುವು. ಪ್ರತಿಗಾಮಿಯಾದ ಕಾರ್ಯಕ್ರಮಗಳು ಇಂದಿಗೂ ನಡೆಯುತ್ತಲೇ ಇವೆ.

ಶ್ರೀಮನ್ಮಹಾರಾಜರವರು ಇತ್ತೀಚೆಗೆ ಕೊಟ್ಟ ಸಂದೇಶವು ಸಾರ್ಥಕವಾಗಬೇಕಾದರೆ ನಮ್ಮ ಸಂಸ್ಥಾನದಲ್ಲಿ ಬೇಗನೆ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದೇ ಪ್ರಭುತ್ವದ ಗುರಿಯೆಂದು ಸಾರಬೇಕು. ಹೊಸ ರಾಜ್ಯಾಂಗವನ್ನು ನಿರ್ಮಿಸಲು ಪ್ರಜೆಗಳಿಂದ ಚುನಾಯಿತರಾದ ಸದಸ್ಯರ ಸಭೆಯೊಂದನ್ನು ನಿರ್ಮಿಸಬೇಕು. ಇದಕ್ಕೆ ಪೂರ್ವಭಾವಿಯಾಗಿ ಪ್ರಜಾ ವಿಶ್ವಾಸಕ್ಕೆ ಪಾತ್ರರಾದವರಿಂದ ಕೂಡಿದ ಮಂತ್ರಿಮಂಡಲವೊಂದನ್ನು ರಚಿಸಬೇಕು.

ಕೊಚ್ಚಿ ಸಂಸ್ಥಾನವು ಈ ವಿಷಯದಲ್ಲಿ ಈಗಾಗಲೇ ದಾರಿಯನ್ನು ತೋರಿರುತ್ತದೆ. ಮುಂದುವರಿದ ಮೈಸೂರು ಇನ್ನೂ ಹಿಂದೆ ಬಿದ್ದಿರಬಹುದೇ?

ಕ್ರಯಕ್ಕಿವೆ

ಡೋರ್ ನಂಬರು
೩೪೪೪ ಮತ್ತು ೩೪೪೫
ಡಿ. ಸುಬ್ಬಯ್ಯ ರೋಡ್ ಕ್ರಾಸ್
ಕೂಡಲೆ ವಿಚಾರಿಸಿ:
ಆರ್. ಗುಂಡೂರಾವ್,
ಹಳೇ ಮೈಸೂರು ಬ್ಯಾಂಕ್ ಕಟ್ಟಡ,
ಮೈಸೂರು.

ಅಮೃತ

ತಮ್ಮ ಭಾವನೆಗೆ ಸಿಲುಕದೆಂದೂ ಮತ್ತು ಅಸಾಧ್ಯವೆಂದೂ ತಪ್ಪು ಕಲ್ಪನೆಯುಳ್ಳ ಜನರಿಗೆ 'ಅಮೃತ'ವು ತಮ್ಮ ಜೀವನದಲ್ಲೇ ಅಡಗಿರುವುದೆಂದು ತೋರಿಸಿಕೊಡುವ ಈ ಗ್ರಂಥವು ಸರ್ವರ ಅವಗಾಹನೆಗೆ ಪಾತ್ರವಾದುದಾಗಿದೆ. ಬೆಂಗಳೂರಿನ ಶ್ರೀ ಕೆ. ಗುಂಡಣ್ಣನವರೇ ಇದರ ಕರ್ತರು. ಮುದ್ರಣ ಮುದ್ದಾಗಿದೆ. ಬೆಲೆ ೧೨ ಆಣೆ. ಜಗನ್ಮೋಹನ ಬಂಗಲೆ ರಸ್ತೆಯ ಶ್ರೀ|| ಪದಕಿಯವರ ಜನತಾ ಸ್ಟೋರ್ಸಿನಲ್ಲಿ ದೊರೆಯುತ್ತದೆ.

ಪಟೇಲರಿಂದ ನೇತಾಜಿ ಚಿತ್ರ ಪ್ರಕಟಣೆ

ನೇತಾಜಿ ಸುಭಾಸ್ ಚಂದ್ರ ಬೋಸ್‌ರವರ ಜೀವನ ಚರಿತ್ರೆಯನ್ನು ಚಲನ ಚಿತ್ರದಲ್ಲಿ ಸರ್ದಾರ್ ಪಟೇಲರು ತಯಾರಿಸಿರುತ್ತಾರೆ. ಇದು ೮ ಸಾವಿರ ಅಡಿ ಉದ್ದವಿರುತ್ತದೆ. ಮೊನ್ನೆ ಅದರ ಪ್ರಥಮ ಪ್ರದರ್ಶನವು ಪಂ|| ನೆಹರು, ಸ|| ಪಟೇಲ್ ಮತ್ತು ಶಾಸನ ಸಭಾ ಸದಸ್ಯರ ಮುಂದೆ ದೆಹಲಿಯಲ್ಲಿ ಜರುಗಿತು

ಶ್ರೀರಂಗಪಟ್ಟಣ ಪುರಸಭಾ ಚುನಾವಣೆಯ ಮತದಾರರಲ್ಲಿ
ಕೆ. ರಾಮಯ್ಯ
ಉ|| ಅಂಬಾಜಿರಾವ್
ಪ್ರಾರ್ಥನೆ.
10-3-47 ರ ಚುನಾವಣೆಯಲ್ಲಿ ದಯವಿಟ್ಟು ಗಣಪತಿ ಗುರ್ತಿಗೆ ಓಟು ಮಾಡಿ
(ಓಟಿನ ಲಿಸ್ಟಿನಲ್ಲಿ ಕೆ. ರಾಮಯ್ಯ ಎಂದಿದೆ ರೂಢಿವಾಚಕವಾಗಿ ಅಂಬಾಜಿರಾವ್ ಎಂದು ಚಾಲ್ತಿಯಲ್ಲಿರುತ್ತೆ.)

ಉಪಾಧ್ಯಾಯರ ವೇದಿಕೆ

ಮೈಸೂರು ೮

ಮೈಸೂರು ತಾಲ್ಲೂಕು ಪ್ರೈಮರಿ ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ಕಳೆದ ಬುಧವಾರ ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಟಿ ಎಸ್ ರಾಜರತ್ನಂರವರ ಅಧ್ಯಕ್ಷತೆಯಲ್ಲಿ ನೆರವೇರಿತು. ದೇವತಾ ಪ್ರಾರ್ಥನೆ, ಸಂಘದ ವರದಿಯೇ ಮೊದಲಾದ ಕಾರ್ಯಕ್ರಮಗಳು ಆದುವು. ಪ್ರೈಮರಿ ಉಪಾಧ್ಯಾಯರ ಸಂಬಳವನ್ನು ಮಾಹೆ ಒಂದಕ್ಕೆ ೩೦ ರೂ ಗಳಿಗೆ ಕಡಿಮೆ ಇಲ್ಲದಂತೆ ಮಾಡಿಕೊಡುವುದಲ್ಲದೆ ೩೦—೨—೬೦ ಮತ್ತು ೬೦—೫—೭೫ ರೂ ಗಳಿಗೆ ಏರುವಂತೆ ಒಂದು ರನ್ನಿಂಗ್ ಗ್ರೇಡನ್ನು ಮಾಡಿಕೊಟ್ಟು ಪ್ರತಿ ಉಪಾಧ್ಯಾಯರೂ ಪ್ರಥಮದಲ್ಲಿ ೩೦ ರೂ. ಗೆ ಕಡಿಮೆ ಇಲ್ಲದೆ ಕೆಲಸಕ್ಕೆ ಸೇರಿ ಪೆನ್ಷನ್ ಆಗುವ ಹೊತ್ತಿಗೆ ೭೫ ರೂ. ಸಂಬಳವನ್ನು ಪಡೆದು ತನ್ನ ಜೀವನ ಕ್ರಮವನ್ನು ಉತ್ತಮಪಡಿಸಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಇಲಾಖಾ ಅಧಿಕಾರಿಗಳನ್ನೂ ಮತ್ತು ಪೇ ಕಮೀಷನ್ ಕಮಿಟಿಯವರನ್ನೂ ಸಂಘದ ಮೆಂಬರುಗಳು ಪ್ರಾರ್ಥಿಸಿಕೊಂಡು ನಿರ್ಣಯಮಾಡಿದರು

ನಿಧನ

ಶ್ರೀಮನ್ಮಹಾರಾಜರವರಿಗೂ, ಯುವರಾಜಕುಮಾರಿಯರುಗಳಿಗೂ ಅನೇಕ ವರುಷಗಳ ಕಾಲ ಉಪಾಧ್ಯಾಯರಾಗಿ ಸೇವೆ ಸಲ್ಲಿಸಿ ವಿಶ್ರಾಂತಿ ಹೊಂದಿದ್ದ ಶ್ರೀ ಸಿ. ಶ್ರೀರಂಗಾಚಾರ್ಯರು ನಿನ್ನೆ ಬೆಳಗ್ಗೆ ತಮ್ಮ ೫೯ ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಪತ್ನಿಯೂ ೯ ಮಂದಿ ಮಕ್ಕಳೂ ಇದ್ದಾರೆ. ಮೃತರ ಆತ್ಮಕ್ಕೆ ಶಾಂತಿ ದೊರಕಲೆಂದು ಕೋರುತ್ತೇವೆ.

ಘನವಾದ ಸಂಗೀತ ಕಛೇರಿ
ಬಿಡಾರಂ ಕೃಷ್ಣಪ್ಪನವರ ಪ್ರಸನ್ನ
ಸೀತಾರಾಮ ಮಂದಿರಂ
ಮೈಸೂರು
9-3-47 ನೇ ಭಾನುವಾರ
ಸಾಯಂಕಾಲ 6 ಘಂಟೆಗೆ
ಮದ್ರಾಸಿನ ವಿದ್ವಾನ್
ಆರ್. ಕನ್ನನ್‌ರವರ
ಹಾಡುಗಾರಿಕೆಯು
ಎ. ವಿ. ವಿದ್ವಾನ್ ಕೃಷ್ಣಮಾಚಾರ್ಯರ
ಪಿಟೀಲು,
ವಿದ್ವಾನ್ ಸಿ. ವಿ. ರಂಗನಾಥನ್
ರವರ ಮೃದಂಗದೊಡನೆ
ನಡೆಯುತ್ತದೆ
ಮೆಂಬರುಗಳಲ್ಲದವರಿಗೆ ಟಿಕೆಟ್
ಮೂಲಕ ಪ್ರವೇಶ

ದೇವಸ್ಥಾನದಲ್ಲಿ ಕಳುವು

ಸ್ವಂ. ವ.] ಚಾಮರಾಜನ

ಕಳೆದ ೨ ನೇ ತಾ|| ಇಲ್ಲಿನ ಶ್ರೀ ... ಯಣಸ್ವಾಮಿಯವರ ದೇವಸ್ಥಾನದ... ವರಿಗೆ ಧರಿಸಿದ್ದ ಆಭರಣಗಳು ಮತ್ತು ... ಟ್ಟಿಗೆಗಳೆಲ್ಲವನ್ನೂ ಯಾರೋ ಕದ್ದುಕೊಂ... ಹೋಗಿರುವುದಾಗಿ ವರದಿಯಾಗಿದೆ. ... ನಡೆಯುತ್ತಿದೆ.

EASTERNS 379

ರಾಜಕಮಲ್
೨-೩-೪೭ ರಿಂದ ೩ ನೇ ವಾ
1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ
ಶ್ರೀ ಕೃಷ್ಣಲೀಲಾ
(ಕನ್ನಡ ಚಿ
ಇಂಪಾದ ಗಾನಗಳು! ಸೊಂಪಾದ ಸನ್ನಿ
ಶಗಳು!! ಮನರಂಜಕವಾದ ದೃಶ್ಯಗಳು!
ಇವೆಲ್ಲವನ್ನೂ ಇಂದೇ ನೋಡಿ.

on 7th, 8th, 10th and 11t
March 1947
Daily at 10-30 A.M
Eddie Cantor in
"Palmy Days"
a glorious comedy punctua
ted with Fun and Frolic.

Just Arrived
Baby MUFFLERS
Elastic SWEATERS
Mill DRAWERS
BANIANS
--: Also in Stock :--
READY-MADE DRESS.
G. V. Suryanarayana Chetty & Sons
Jewellers and Ready-made Dress Emporium
Sayaji Rao Road : : Mysore

Edited, printed and published b
A. R. Nagarajan at the Sadhvi Pre

ರಿಜಿ. ನಂ. 392 ॥ ವಂದೇ ಮಾತರಂ ॥ ಬಿಡಿ ಪ್ರತಿಗೆ 3 ಕಾಸು

ಸಂಪುಟ ೫] ಭಾನುವಾರ ೯—೩—೪೭ [ಸಂಚಿಕೆ ೧೮೦

ಮತ್ತೊಮ್ಮೆ ಲೀಗಿಗೆ ಕಾಂಗ್ರೆಸ್ ಸಹಕಾರಹಸ್ತ

ಭಾರತ ವಾಚನ

ಮೈಸೂರು

ಕೃಷ್ಣರಾಜೇಂದ್ರ ರಸ್ತೆಯಲ್ಲಿರುವ ಸಾಧ್ವಿ ಸ್ಕೂಲ್ ಮಹಡಿಯ ಮೇಲೆ ಈ ದಿನ ರಾತ್ರಿ ೭ ಗಂಟೆಗೆ ಹರಿಕಥಾ ವಿದ್ವಾನ್ ವೇ॥ ಗರುಡ ಎಚ್. ರಾಮಕೃಷ್ಣ ಶಾಸ್ತ್ರಿಗಳವರಿಂದ ಭಾರತ ಪಠಣವನ್ನು ಏರ್ಪಡಿಸಿರುತ್ತೆ. ಎಲ್ಲರಿಗೂ ಆಹ್ವಾನವುಂಟು.

ಆಗ್ರಾ ವಿದ್ಯಾರ್ಥಿಗಳ ಮುಷ್ಕರ

ಆಗ್ರಾ, ೮॥ ಯು॥ ಕಾಲೇಜು ಪದವೀಧರರ ಸಂಘದ ಕಾರ್ಯದರ್ಶಿಯವರು ಹೇಳಿಕೆಯೊಂದನ್ನಿತ್ತು ತಮ್ಮ ಸಂಘದ ಪ್ರತಿನಿಧಿಗಳು ಇಂ-ಛಾರ್ಜ್ ದಿವಾನರಾದ ಡಾ॥ ದಾರುವಾಲರವರನ್ನು ಭೇಟಿ ಮಾಡಿದ್ದರೆಂದೂ, ವಿದ್ಯಾರ್ಥಿಗಳ ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಅವರಿಂದ ಭರವಸೆ ಪಡೆದರೆಂದೂ ತಿಳಿಸುತ್ತಾರೆ. ವಿದ್ಯಾರ್ಥಿಗಳು ಕಾಲೇಜಿಗೆ ಹೋಗಿ ಸರ್ಕಾರದವರು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಲು ಅವಕಾಶ ಕೊಡಬೇಕೆಂದೂ, ಸರ್ಕಾರದವರೂ ಸಹ ಶಾಲೆ ಇದರ ಬಗ್ಗೆ ವಿವರವಾದ ಪ್ರಕಟಣೆ ಹೊರಡಿಸಿ, ವಿದ್ಯಾರ್ಥಿಗಳ ತೊಂದರೆಯನ್ನು ಪರಿಹರಿಸಬೇಕೆಂದೂ ಪ್ರಾರ್ಥಿಸಿದ್ದಾರೆ.

ಕಲ್ಲು, ಗಾರೆ ಮತ್ತು ಮರದ ಕೆಲಸಗಾರರ ಸಭೆ

ಮೈಸೂರು ನಗರದಲ್ಲಿರುವ ಕಲ್ಲು, ಗಾರೆ ಮತ್ತು ಮರದ ಕೆಲಸಮಾಡುವವರ ಸ್ಥಿತಿಗತಿಗಳನ್ನು ಉತ್ತಮಪಡಿಸುವ ಸಲುವಾಗಿ ಸಂಘವೊಂದನ್ನು ಸ್ಥಾಪಿಸಲು ಇದೇ ೧೬ನೇ ತಾ॥ ಭಾನುವಾರ ಸಂಜೆ ಕಾಂಗ್ರೆಸ್ ಕಛೇರಿಯಲ್ಲಿ ಸಭೆಯೊಂದನ್ನು ಕರೆಯಲಾಗಿದೆ. ಶ್ರೀ ಟಿ. ಮರಿಯಪ್ಪನವರು ಸಭಾಧ್ಯಕ್ಷತೆಯನ್ನು ವಹಿಸಲೂ, ಶ್ರೀ ಹಿರಿಹಳ್ಳಿ ಬಸಪ್ಪನವರು ಉದ್ದೇಶ ಭಾಷಣಮಾಡಲೂ ಒಪ್ಪಿರುತ್ತಾರೆ. ಮೇಲ್ಕಂಡ ಕೆಲಸಗಾರರೆಲ್ಲರೂ ತಪ್ಪದೆ ಬರಬೇಕೆಂದು ಸಂಚಾಲಕರಾದ ಮೇಸ್ತ್ರಿ ತಿಮ್ಮಯ್ಯನವರು ಪ್ರಾರ್ಥಿಸಿದ್ದಾರೆ

ಉಪನ್ಯಾಸ

ಶ್ರೀ ಮಾಧ್ವ ಸಂಘದಾಶ್ರಯದಲ್ಲಿ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ವ್ಯಾಸರಾಜಮಠದಲ್ಲಿ ೧೦ನೇ ತಾ॥ ಸೋಮವಾರ ಸಂಜೆ ೬॥ ಗಂಟೆಗೆ ಆ॥ ವಿ॥ ಶ್ರೀ ಅವರೂರು ವ್ಯಾಸಾಚಾರ್ಯರು ಶ್ರೀ ವಾದಿರಾಜರ ಸಂದೇಶ ಎಂಬ ವಿಷಯವಾಗಿಯೂ ೧೧ನೇ ತಾ॥ ಸಂಜೆ ಶ್ರೀ ಚಂದ್ರಿಕಾಚಾರ್ಯರ ಮಹಿಮೆ ಎಂಬ ವಿಷಯವಾಗಿಯೂ ಉಪನ್ಯಾಸಮಾಡುವರು. ನಾಗರಕಟ್ಟೆಯ ಶ್ರೀ ಪ್ರದ್ಯುಮ್ನ ತೀರ್ಥ ಪಾದಂಗಳವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಆಹ್ವಾನವುಂಟು

ಪುಣ್ಯದಿನಾಚರಣೆ

ಚಿಲ್ಲ ಮೊಹಲ್ಲದಲ್ಲಿರುವ ಶ್ರೀನಿವಾಸ ರಾಘವೇಂದ್ರ ಶ್ರೀ ರಾಮಕೃಷ್ಣಸೇವಾಮಂದಿರದಲ್ಲಿ ಶ್ರೀ ಟಿ ಕೆ. ಸುಬ್ಬಾಚಾರ್ಯರು ಈ ದಿನ ಶ್ರೀ ವಾದಿರಾಜಸ್ವಾಮಿಗಳ ಮತ್ತು ನಾಳೆ ಶ್ರೀ ವ್ಯಾಸರಾಯ ಸ್ವಾಮಿಗಳ ಪುಣ್ಯದಿನಾಚರಣೆ ನಡೆಸುವರು

ಹೂವಿನ ಪಲ್ಲಕ್ಕಿ ಉತ್ಸವ

ಸಂತೇಪೇಟೆ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನದಿಂದ ಹೂವಿನ ಪಲ್ಲಕ್ಕಿ ಉತ್ಸವವು ಈದಿನ ಸಂಜೆ ೭ ಘಂಟೆಗೆ ಹೊರಡುವುದು ಸರ್ವರೂ ದಯಮಾಡಿಸಬೇಕಾಗಿ ಧರ್ಮದರ್ಶಿಗಳಾದ ಶ್ರೀ ಕೆ ನಂಜಿಬಸಪ್ಪನವರು ಕೋರುತ್ತಾರೆ

ಸಂಸ್ಥಾನಗಳಲ್ಲಿ ರಾಜಕೀಯ ಶಾಖೆಯ ಕೈವಾಡ

ಈ ತಿಂಗಳು ನಡೆಯಲಿರುವ ಸಂಸ್ಥಾನಗಳ ರಾಜರ ಸಮ್ಮೇಳನದ ನಿರ್ಧಾರಕ್ಕೆ ಮುಂಚಿತವಾಗಿ ಸಂಸ್ಥಾನಗಳು ರಾಜ್ಯಾಂಗ ಸಭೆಗೆ ಪ್ರವೇಶಿಸಕೂಡದೆಂಬ ಸಲಹೆಯು ರಾಜಕೀಯ ಶಾಖೆಯಿಂದ ಬಂದಿರುವುದಾಗಿ ವರದಿಯಾಗಿದೆ ಆದರೆ ರಜಪುಟಾಣದ ಕೆಲವು ಸಂಸ್ಥಾನಗಳು ಈಗಾಗಲೇ ಚುನಾವಣೆ ಮೂಲಕ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವ ಏರ್ಪಾಡುಗಳನ್ನು ಮಾಡುತ್ತಿರುವುದಾಗಿ ತಿಳಿದುಬಂದಿದೆ. ಮೈಸೂರು ಮತ್ತು ಹೈದರಾಬಾದ್ ಸಂಸ್ಥಾನಗಳು ಈ ವಿಷಯದಲ್ಲಿ ನಿರ್ದಿಷ್ಟವಾದ ಯಾವ ಕ್ರಮವನ್ನೂ ಕೈಗೊಳ್ಳಲು ಇಷ್ಟವಿಲ್ಲದಂತೆ ವರ್ತಿಸುತ್ತಿವೆಯೆಂದು ವರದಿಯಾಗಿದೆ ಸಂಸ್ಥಾನಗಳಲ್ಲಿ ಕೆಲವು ಈಗಲೇ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಬೇಕೆಂದೂ, ಇನ್ನು ಕೆಲವು ಮುಂದೆ ಬರುವ ಪರಿಸ್ಥಿತಿಗಳನ್ನು ಪರಿಶೀಲಿಸಿ ಅನಂತರ ನಿರ್ಧಾರಕ್ಕೆ ಬರಬೇಕೆಂದು ಅಭಿಪ್ರಾಯಪಡುತ್ತಿವೆ ಎಲ್ಲವೂ ವೈಸರಾಯ್ ಲಾರ್ಡ್ ವವೇಲ್ ಬ್ಯಾಟನ್ನರು ಅನುಸರಿಸುವ 'ನೀತಿಯನ್ನವಲಂಬಿಸುತ್ತವೆಯೆಂದು ಹೇಳಲಾಗಿದೆ

ಸರ್ ಬಾಜಪೈರವರು ಫ್ರಾನ್ಸಿನಲ್ಲಿ ರಾಯಭಾರಿ

ಅಮೇರಿಕಾ ಸಂಯುಕ್ತ ಸಂಸ್ಥಾನದ ಭಾರತದ ಹೈ ಕಮಿಷನರಾಗಿದ್ದ ಸರ್ ಗಿರಿಜಾಶಂಕರ್ ಬಾಜಪಯರವರು ಫ್ರಾನ್ಸಿನಲ್ಲಿ ಭಾರತದ ರಾಯಭಾರಿಗಳಾಗಿ ನೇಮಿಸಲ್ಪಡುವರೆಂದು ಹೇಳಲಾಗಿದೆ. ಇವರ ಸೋದರರು ಈಗ ಪ್ಯಾರಿಸ್ಸಿನಲ್ಲಿ ಭಾರತದ ಟ್ರೇಡ್ ಕಮಿಷನರಾಗಿದ್ದಾರೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಶ್ರೀ॥ ಜೈಪ್ರಕಾಶ್ ನಾರಾಯಣರವರು ಸಲ್ಲಿಸಿರುವ ರಾಜೀನಾಮೆಯನ್ನು ರಾಷ್ಟ್ರಪತಿ ಕೃಪಲಾನಿಯವರು ಅಂಗೀಕರಿಸಿದ್ದಾರೆ.

ಪುರಸಭಾ ಚುನಾವಣೆ

ಸ್ವಂ ವ] ಶ್ರೀರಂಗಪಟ್ಟಣ ೯

ನಾಳೆ ನಡೆಯಲಿರುವ ಪುರಸಭಾ ಚುನಾವಣೆಯಲ್ಲಿ ತರುಣರೂ, ವಿದ್ಯಾವಂತರೂ, ರಾಷ್ಟ್ರಪ್ರೇಮಿಗಳೂ ಆದ ಹೊಸ ಉಮೇದುವಾರರನ್ನು ಆರಿಸಿ ಕಳುಹಿಸಬೇಕೆಂದೂ, ಈ ಬಾರಿಗೆ ಪಿಲ್ಲಾಗಳು ಬರಲು ಹಲವರು ತಡೆಯುಂಟುಮಾಡಿದುದನ್ನು ಮರೆಯಬಾರದೆಂದೂ, ಪ್ರಚಾರವು ಬಿರುಸಾಗಿ ನಡೆಯುತ್ತಿದೆ.

ಪಂಜಾಬ್ ಪರಿಸ್ಥಿತಿ

ಲಾಹೋರಿನಲ್ಲಿ ಶಾಂತಿ ನೆಲೆಸುತ್ತಿರುವುದಾಗಿ ಸರ್ಕಾರಿ ಪ್ರಕಟಣೆ ಹೊರಬಿದ್ದಿದ್ದರೂ ಪಿಂಡಿಯಲ್ಲಿ ಕಳೆದೆರಡು ದಿನಗಳಿಂದ ೫೧ ಮಂದಿ ಸತ್ತಿದ್ದಾರೆಂದೂ, ೭೦೦ ಮಂದಿಗೆ ಗಾಯಗಳಾಗಿವೆಯೆಂದೂ ವರದಿಯಾಗಿದೆ. ಮುಲ್ತಾನಿನಲ್ಲಿ ಇದುವರೆವಿಗೆ ೯೦ ಹೆಣಗಳು ಬಿದ್ದಿವೆ ಇನ್ನೂ ಅನೇಕ ಕಡೆ ಹೆಣಗಳ ರಾಶಿಗಳು ಪತ್ತೆಯಾಗುತ್ತಿವೆಯೆಂದು ಹೇಳಲಾಗಿದೆ ಪ್ರಸಿದ್ಧ ಜೋಡೀದಾರರೊಬ್ಬರನ್ನು ಪುಂಡರು ಜೀವಸಹಿತ ಸುಟ್ಟುಹಾಕಿದ್ದಾರೆ ಅಮೃತಸರದ ಬೆಂಕಿಯ ಜ್ವಾಲೆಗಳು ದೂರಪ್ರದೇಶಕ್ಕೂ ಕಾಣಬರುತ್ತಿವೆ. ಅಲ್ಲಿ ೩೦ ಮಂದಿ ಸತ್ತಿರುವುದಾಗಿ ವರದಿಯಾಗಿದೆ ಶಾಂತಿ ಸಮಿತಿಯವರು ವಿಮಾನದಿಂದ ಪತ್ರಪತ್ರಿಕೆಗಳನ್ನು ಹಂಚಿಸಿದ್ದಾರೆ. ಜಲಂಧರಿನಲ್ಲಿ ಶಿರೋಮಣಿ ಅಕಾಲಿದಳದ ಮಾಜಿ ಅಧ್ಯಕ್ಷರಾದ ಬಾಬು ಲಾಭಸಿಂಗ್ ರವರು ಇರಿತಕ್ಕೆ ಗುರಿಯಾಗಿದ್ದಾರೆ ಅವರ ಸ್ಥಿತಿ ಚಿಂತಾಜನಕವಾಗಿದೆ

ಪಾರ್ಲಿಮೆಂಟ್ ಸಭೆಯಲ್ಲಿ ಕಿತ್ತಳೆ ಹಣ್ಣನ್ನು ತಿನ್ನಬಹುದೇ ?

ಶಾಸನ ಸಭೆಗಳಲ್ಲಿ ಪಕ್ಷವನ್ನು ಹಾಕುವ ಮತ್ತು ಹೊರಗೆ ಬತ್ತಿ ಸೇದುವ ಬಗ್ಗೆ ಪ್ರಶ್ನೆಯು ಮೊನ್ನೆ ಮದರಾಸ್ ಶಾಸನ ಸಭೆಯಲ್ಲಿ ಎದ್ದು ಅಧ್ಯಕ್ಷರು ಪಕ್ಷವನ್ನು ಹಾಕಬಹುದೆಂದೂ ಆದರೆ ಹೊಗೆ ಬತ್ತಿ ಸೇದಕೂಡದೆಂದೂ ತೀರ್ಪಿತ್ತಿದ್ದರಷ್ಟೆ ಈಗ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಸದಸ್ಯರು ಕಿತ್ತಳೆ ಹಣ್ಣನ್ನು ತಿನ್ನಬಹುದೇ ? ಎಂಬ ಪ್ರಶ್ನೆಯು ಎದ್ದು ಅಧ್ಯಕ್ಷರು ಇದು ಸಿಯಮಬದ್ಧವಲ್ಲವೆಂದು ಹೇಳಿದರು. ಆಗ ಸಭೆಯಲ್ಲಿ ಕಿತ್ತಳೆ ಹಣ್ಣನ್ನು ತಿನ್ನುತ್ತಿದ್ದ ಸೋಷಲಿಸ್ಟ್ ಪಂಗಡದ ಎ.॥ ಟಿ. ಮಾರ್ಲೇ ಎಂಬುವರು, ತಮ್ಮ ಬಳಿಯಿದ್ದ ಅರ್ಧಭಾಗ ಹಣ್ಣನ್ನು ಜೇಬಿಗೆ ತುರುಕಿ ಬಾಯಿಯಲ್ಲಿದ್ದ ಭಾಗವನ್ನು ಶೀಘ್ರವಾಗಿ ಬಿತ್ತದ ಸಂತಾಪವಾಗಿ ನುಂಗಿದರೆಂದು ವರದಿಯಾಗಿದೆ

ಮಡಗಾಸ್ಕರಿನಲ್ಲಿ ದಂಗೆ

ದಕ್ಷಿಣ ಆಫ್ರಿಕದ ಪೂರ್ವ ತೀರದಲ್ಲಿ ಫ್ರೆಂಚರ ಅಧಿಕಾರಕ್ಕೊಳಪಟ್ಟಿರುವ ಮಡಗಾಸ್ಕರ್ ದ್ವೀಪದಲ್ಲಿ ರಾಷ್ಟ್ರೀಯ ಚಳವಳಿಗಾರರು ಪ್ರಬಲರಾಗಿ ಫ್ರೆಂಚ್ ಸರ್ಕಾರದ ವಿರುದ್ಧವಾಗಿ ದಂಗೆ ಎದ್ದಿರುವರೆಂದು ವರದಿಯಾಗಿದೆ.

ಚುನಾವಣಾ ಕೇಂದ್ರಗಳಿಗೆ ಬೆಂಕಿ

ಈಗ ನಡೆದಿರುವ ಬರ್ಮಾ-ಬ್ರಿಟಿಷ್ ಒಪ್ಪಂದವು ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಕುತಂತ್ರವೆಂದು ಹೇಳಿ ಮುಂದೆ ಅಲ್ಲಿನ ರಾಜ್ಯಾಂಗ ಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಚುನಾವಣಾ ಕೇಂದ್ರಗಳನ್ನು ಸುಟ್ಟು, ಪಿಕೆಟಿಂಗ್ ನಡೆಸಿ, ಚುನಾವಣೆಗೆ ಅಡ್ಡಿಪಡಿಸಲು ಅಲ್ಲಿನ ಫ್ಯಾಸಿಸ್ಟ್ ವಿರೋಧಿ ಪಕ್ಷದವರು ನಿರ್ಧರಿಸಿರುವರು

ಸಿಂಧಿನ ಹಿಂದೂಗಳಿಗೆ ಪ್ರತ್ಯೇಕ ಪ್ರಾಂತ್ಯ

ಮುಸ್ಲಿಮರ ಬೇಡಿಕೆಯಂತೆ ಪಾಕೀಸ್ಥಾನ ದೊರೆಯುವುದಾದರೆ ಸಿಂಧು ಪ್ರಾಂತ್ಯವನ್ನು ವಿಭಾಗ ಮಾಡಿ, ಕರಾಚಿ, ಹೈದರಾಬಾದ್ ಮತ್ತು ಮೀರ್‌ಪುರಖಾಸ ಜಿಲ್ಲೆಗಳನ್ನು ಹಿಂದೂ ಪ್ರಾಂತ್ಯವನ್ನಾಗಿ ಮಾಡುವ ಯೋಜನೆಯೊಂದನ್ನು ಕಾಂಗ್ರೆಸ್ ನಾಯಕರಾದ ಶ್ರೀ॥ ಜಯರಾಂದಾಸ್ ದೌಲತ್ ರಾಂರವರು ತಯಾರಿಸಿದ್ದಾರೆಂದು ಗೊತ್ತಾಗಿದೆ

ಲೀಗಿಗೆ ಕಾಂಗ್ರೆಸ್ಸಿನಿಂದ ಮತ್ತೊಮ್ಮೆ ಕರೆ

ಭಾರತೀಯರಿಗೆ ಸಂಪೂರ್ಣ ಅಧಿಕಾರವನ್ನು ಬ್ರಿಟಿಷರು ವಹಿಸಿಕೊಡಲು ಕಾಲಗೊತ್ತುಮಾಡಿರುವುದನ್ನು ಸ್ವಾಗತಿಸಿ, ಈ ಜವಾಬ್ದಾರಿಯನ್ನು ಸಂಘಟಿತ ರೀತಿಯಲ್ಲಿ ವಹಿಸಿಕೊಳ್ಳುವ ಬಗ್ಗೆ ತಕ್ಕ ಏರ್ಪಾಡನ್ನು ಮಾಡಲು ಲೀಗು ಸಹ ತನ್ನ ಪ್ರತಿನಿಧಿಗಳನ್ನು ಕಳುಹಿಕೊಡಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಣಯಿಸಿರುವುದಾಗಿ ವರದಿಯಾಗಿದೆ

ಪಂಜಾಬಿನಲ್ಲಿ ಮಿಶ್ರ ಮಂತ್ರಿಮಂಡಲವೇ ?

ವೈಸರಾಯ್ ಮಾರ್ಡ್ ವೇವಲ್ಲರೂ ಮತ್ತು ಅವರ ಆಪ್ತ ಕಾರ್ಯದರ್ಶಿಗಳಾದ ಮಿ॥ ಅಬೆಲ್‌ರವರೂ ಸಹ ಪಂಜಾಬಿನಲ್ಲಿ ಲೀಗ್ ಮಂತ್ರಿ ಮಂಡಲವನ್ನು ರಚಿಸುವಂತೆ ಅಲ್ಲಿನ ಗೌರ್ನರಿಗೆ ಉಚಿತವಾದ ಸಲಹೆ ಇತ್ತಿದ್ದಾರೆಂದು ಹೇಳಲಾಗಿದೆ. ಆದರೆ ಪಂಜಾಬ್ ಗೌರ್ನರಾದ ಸರ್ ಇವಾನ್ಸ್‌ರವರು ಸಿಖ್ ಪಕ್ಷ ಸಿಪಾಯಿದವರೂ ಲೀಗಿನೊಡನೆ ಸೇರಿ ಮಿಶ್ರಸರ್ಕಾರವನ್ನು ರಚಿಸುವಂತೆ ಪ್ರಯತ್ನ ಮಾಡುತ್ತಿದ್ದಾರೆ

ಪೆರುಗ್ವೆಯಲ್ಲಿ ದಂಗೆ

ದಕ್ಷಿಣ ಅಮೆರಿಕದಲ್ಲಿರುವ ಪೆರುಗ್ವೆಯಲ್ಲಿ ಸೈನ್ಯದವರು ದಂಗೆ ಎದ್ದಿರುವರೆಂಬ ಸುದ್ದಿ ಬಂದಿದೆ ಅಧಿಕಾರವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಮಿಲಿಟರಿ ನಾಯಕರು ಪ್ರಯತ್ನಿಸಿದ್ದಾರೆಂದು ಹೇಳಲಾಗಿದೆ.

ಜಿಲ್ಲಾಧಿಕಾರಿಗಳಿಂದ ಪರಿಶೀಲನೆ

ಮೈಸೂರು

ಜಿಲ್ಲಾಧಿಕಾರಿಗಳಾದ ಶ್ರೀ॥ ಜಿ ಎಸ್. ನಂಜುಂಡರಾವ್ ರವರು ಈ ದಿನ ಶ್ರೀ ರಾಮಪೇಟೆ, ರಘುನಾಥರಾವ್ ರಸ್ತೆ ಮುಂತಾದ ಕಡೆಯ ಅನೇಕ ಬಟ್ಟೆ ಅಂಗಡಿಗಳಿಗೆ ಭೇಟಿ ಇತ್ತು ಪರಿಶೀಲನೆ ನಡೆಸಿದರು. ಶ್ರೀ ರಾಮಪೇಟೆಯ ಅಂಗಡಿಯೊಂದನ್ನು ಸೀಲ್ ಮಾಡಿರುವುದಾಗಿ ಹೇಳಲಾಗಿದೆ

ಸಾಧ್ವಿ

ತಾ॥ ೯-೩-೪೭ ಭಾನುವಾರ

ಕ್ಷಣಚಿತ್ತ; ಕ್ಷಣಪಿತ್ತ.

ನವದೆಹಲಿಯಲ್ಲಿ ನಡೆಯುವ ಏಷ್ಯಾ ರಾಷ್ಟ್ರಗಳ ಸಮ್ಮೇಳನಕ್ಕೆ ದಕ್ಷಿಣ ಆಫ್ರಿಕ ದಿಂದ ಬರಲಿದ್ದ ಭಾರತೀಯ ಪ್ರತಿನಿಧಿಗಳಾದ ಡಾ॥ ದಾದೂ ಮತ್ತು ಡಾ॥ ನಾಯಕರವರ ರಹದಾರಿಯನ್ನು ಕಡೆಯ ಘಳಿಗೆಯಲ್ಲಿ ಅಲ್ಲಿನ ಸರ್ಕಾರವು ರದ್ದುಗೊಳಿಸಿರುತ್ತದೆ. ಅವರು ಇಲ್ಲಿಗೆ ಹೊರಡಲು ಸಿದ್ಧರಾಗುತ್ತಿದ್ದಾಗ ಈ ಸುದ್ದಿಯನ್ನು ಅವರಿಗೆ ತಿಳಿಸಲಾಯಿತು. ದಕ್ಷಿಣ ಆಫ್ರಿಕದಲ್ಲಿ ನಡೆಯುತ್ತಿರುವ ಚಳುವಳಿಯಲ್ಲಿ ಭಾಗವಹಿಸಿ ಅವರು ಕಾನೂನನ್ನು ಮುರಿದು ಶಿಕ್ಷೆಗೆ ಗುರಿಯಾಗಿದ್ದರೆಂಬುದೇ ಇದಕ್ಕೆ ನೆಪವಾಗಿದೆ. ಆದ್ದರಿಂದ ಸದರಿ ಸಮ್ಮೇಳನದಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ಪರವಾಗಿ ಪ್ರತಿನಿಧಿಗಳು ಭಾಗವಹಿಸಲು ಅವಕಾಶವಿರುವುದಿಲ್ಲ.

ವರ್ಣದ್ವೇಷದ ನೀತಿಯನ್ನು ದಕ್ಷಿಣ ಆಫ್ರಿಕವು ಅನುಸರಿಸಿಕೊಂಡು ಬರುತ್ತಿರುವ ಅಭ್ಯಾಸದಿಂದ ಈ ರಹದಾರಿಯ ಪ್ರಸಂಗವೂ ಒಂದು ಪ್ರಮುಖವಾದ ಅಂಗ. ಇದಕ್ಕೆ ಮೊದಲು ಸಮ್ಮೇಳನದ ಪ್ರಸ್ತಾಪವು ಎದ್ದಾಗಲೇ ಇವರುಗಳಿಗೆ ರಹದಾರಿಯನ್ನು ನಿರಾಕರಿಸಲಾಗಿತ್ತು. ಇದು ಬೇರೆ ಎಲ್ಲೆಲ್ಲೂ ವಿಪರೀತವಾದ ಕೋಪ್ಪಿಯು ಎದ್ದಿತು. ಈ ಸುದ್ದಿ ವಿಶ್ವ ಸಂಸ್ಥೆಯಲ್ಲಿ ಭಾರತದ ಪ್ರಶ್ನೆಯು ದಕ್ಷಿಣ ಆಫ್ರಿಕಕ್ಕೆ ವಿರುದ್ಧವಾಗಿ ತೀರ್ಮಾನವಾಯಿತು. ಆ ತೀರ್ಮಾನದಿಂದ ಆ ಸರ್ಕಾರದ ಮೇಲೆ ಇನ್ನೂ ಯಾವ ಸ್ಥಿರವಾದ ಪರಿಣಾಮವೂ ಆದಂತೆ ಕಂಡು ಬರುವುದಿಲ್ಲ. ಆ ದರೂ ಪಸ ಸಮ್ಮೇಳನಕ್ಕೆ ಬರಲು ಮೊಲ್ಲಂತ ಇಬ್ಬರಿಗೆ ಅನುಮತಿಯನ್ನು ಕೊಡುವುದಾಗಿ ಆ ಸರಕಾರವು ತೀರ್ಮಾನಿಸಿತು. ಅಷ್ಟರಲ್ಲಿ ಯಾವ ಮಹತ್ತರವಾದ ಘಟನೆಗಳು ಸಂಭವಿಸಿದುವೋ ತಿಳಿಯದು.

ಏಷ್ಯದ ಜನರ ಮೇಲೆ ದಕ್ಷಿಣ ಆಫ್ರಿಕವು ಹೂಡಿರುವ ವರ್ಣ ಸಂಗ್ರಾಮವು ಎಲ್ಲಿಯವರೆಗೆ ಬರುವುದೋ ಎಂಬ ಭೀತಿಯಿಂದ ಅವರು ಹೀಗೆ ಮಾಡಿರಬಹುದು. ಈ ಇಬ್ಬರು ಮುಖಂಡರುಗಳಿಗೆ ಶಿಕ್ಷೆಯಾಗಿರುವುದೆಂಬುದು ಕೇವಲ ಒಂದು ನೆಪವೇ ಸರಿ. ಏಕೆಂದರೆ ಮೊದಲು ರಹದಾರಿಯನ್ನು ಕೊಡುವುದಿಲ್ಲವೆಂದು ಹೇಳಿದಾಗಲೂ ಸಹ ಅವರಿಗೆ ಶಿಕ್ಷೆಯು ಆಗಿದ್ದಿತು. ದಕ್ಷಿಣ ಆಫ್ರಿಕದ ಕುಟಿಲ ನೀತಿಯನ್ನು ಇದೀಗ ಜಗತ್ತೇ ಖಂಡಿಸಿರುತ್ತದೆ. ಆ ದೇಶದಿಂದ ಹೊರಗಡೆ ಇರುವ ಬಣ್ಣದ ಜನಗಳೆಲ್ಲರೂ ಏಷ್ಯಾ ಸಮ್ಮೇಳನದಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ಪರವಾಗಿ ಹೋರಾಡಲು ಸಿದ್ಧರಾಗಿರುವರು. ದಕ್ಷಿಣ ಆಫ್ರಿಕವು ಕಾಲದಲ್ಲಿ ಎಚ್ಚೆತ್ತುಕೊಳ್ಳದಿದ್ದರೆ ಪ್ರಪಂಚದ ಜನಾಂಗದವರೆಲ್ಲರೂ ಅದರ ಮೇಲೆ ಇನ್ನೂ ಪ್ರಬಲವಾದ ಗದಾ ಪ್ರಹಾರವನ್ನು ಮಾಡುವುದರಲ್ಲಿ ಸಂಶಯವಿಲ್ಲ.

ಡಾ॥ ದಾದೂ ಮತ್ತು ನಾಯಕರ ಗೈರುಹಾಜರಿಯೇ ಆ ದೇಶದ ಸಮಸ್ಯೆಯನ್ನು ಸಮ್ಮೇಳನದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಪ್ರದರ್ಶಿಸಲು ಸಹಾಯಕವಾಗುವುದು. ವಿಶ್ವ ಸಂಸ್ಥೆಯಲ್ಲಿ ಆದ ಪರಾಜಯದ ನಂತರವೂ ದಕ್ಷಿಣ ಆಫ್ರಿಕವು ಇಂತಹ ವರ್ತನೆಯನ್ನು ಅನುಸರಿಸುತ್ತಿರುವುದು ಆಶ್ಚರ್ಯಕರವಾಗಿದೆ. ವರ್ಣಭೇದದ ನೀತಿಯಿಂದ ಮದೋನ್ಮತ್ತರಾಗಿ ಕರಿಯ ಜನರು ಬಿಳಿಯರ ದಾಸಾನುದಾಸರಾಗಿ ಇರಬೇಕೆಂದು ಬಯಸುವವರಿಂದ ಬೇರೆ ಯಾವ ನ್ಯಾಯವನ್ನು ನಿರೀಕ್ಷಿಸಲಾದೀತು? ಇಂತಹ ಕ್ಷಣಚಿತ್ತ; ಕ್ಷಣಪಿತ್ತದ ವರ್ತನೆಗೆ ಏಷ್ಯದ ಸಮ್ಮೇಳನವು ತಕ್ಕ ಪ್ರತೀಕಾರವನ್ನು ಮಾಡಿ ಬುದ್ಧಿಯನ್ನು ಕಲಿಸುವುದೆಂದು ಹಾರೈಸೋಣ.

ಗರ್ಭ ರಕ್ಷಿಣಿ

ಅನೇಕ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು.

ಆಯುರ್ವೇದ ವೈದ್ಯ ಭೂಷಣ

ಪಂಡಿತ್ ಕೆ. ವಿ. ವೆಂಕಟರಾಮಯ್ಯ, ಡಿ॥ ಬೋರ್ಡ್ ವೈದ್ಯ, ಅರಕಲವಾಡಿ. ಚಾಮರಾಜನಗರ ತಾ॥

ಕ್ರಯಕ್ಕಿವೆ

ಡೋರ್ ನಂಬರು ೩೪೪ ಮತ್ತು ೩೪೫

ಡಿ. ಸುಬ್ಬಯ್ಯ ರೋಡ್ ಕ್ರಾಸ್

ಕೂಡ್ಲೆ ವಿಚಾರಿಸಿ:

ಆರ್. ಗುಂಡೂರಾವ್,

ಹಳೆ ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು.

ರಾಜಕಮಲ್

೭-೩-೪೭ ರಿಂದ ೩ ನೇ ವಾರ

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ

೨ ನೇ ಛ (ಕನ್ನಡ ಚಿತ್ರ)

ಇಂಪಾದ ಗಾನಗಳು! ನೋಟದ ನೃತ್ಯಗಳು!! ಮನರಂಜಕವಾದ ದೃಶ್ಯಗಳು!!! ಇವೆಲ್ಲವನ್ನೂ ಇಂದೇ ನೋಡಿ.

on 7th, 8th, 10th and 11th March 1947

Daily at 10-30 A.M.

Eddie Cantor in

"Palmy Days"

a glorious comedy punctuated with Fun and Frolic.

ರೋಗ ನಿವಾರಣೆಗೆ ಭಾವಿ ನೀರು

ಹಿಂದೂಪುರದ ಬಳಿ ಮುದಿಹಳ್ಳಿಯಲ್ಲಿರುವ ಒಂದು ಭಾವಿಯ ನೀರಿನಿಂದ ಉಬ್ಬಸ, ಯಕೃತ್ತು, ಕ್ಷಯ, ನರಗಳ ದುರ್ಬಲತೆ ಮೊದಲಾದ ರೋಗಗಳು ನಿವಾರಣೆಯಾಗುವುವೆಂದು ಹಿಂದೆ ವರದಿಯಾಗಿತ್ತಷ್ಟೆ. ಇದು ಮೈಸೂರು ಸಂಸ್ಥಾನದ ಎಲ್ಲೆಯೊಳಗಿರುವುದರಿಂದ ಇದರ ರಕ್ಷಣೆಗೆ ಮೈಸೂರು ಸರ್ಕಾರದವರು ಏರ್ಪಾಡು ಮಾಡಿರುತ್ತಾರೆಂದು ಗೊತ್ತಾಗಿದೆ. ಶ್ರೀಮನ್ ಮಹಾರಾಜರವರೂ ಸಹ ಈ ನೀರನ್ನು ಉಪಯೋಗಿಸುತ್ತಿರುವರೆಂದು ವರದಿಯಾಗಿದೆ. ಈ ನೀರನ್ನು ಖಾಯಿಲೆಯವರಿಗೆ ಹಂಚುವ ಸಲುವಾಗಿ ಗಾಡಿಗಳಲ್ಲಿಯೂ, ಲಾರಿಗಳ ಮೂಲಕವೂ ಸಹ ಅದನ್ನು ಸಾಗಿಸುತ್ತಿರುವುದಾಗಿ ತಿಳಿದು ಬಂದಿದೆ.

ಸಂಡೂರು ಸಂಸ್ಥಾನದ ನೌಕರರ ಮುಷ್ಕರ

ಸಂಡೂರು ಸಂಸ್ಥಾನದ ೫ ಸಹಸ್ರ ಮಂದಿ ಕೆಳ ದರ್ಜೆಯ ಸರ್ಕಾರಿ ನೌಕರರು ತಮ್ಮ ಸಂಬಳಗಳ ಪುನರ್ವಿಮರ್ಶೆಯಾಗದೆ ಹೋದರೆ ನಾಳೆಯಿಂದ ಮುಷ್ಕರವನ್ನು ಆರಂಭಿಸಲು ನಿರ್ಧರಿಸಿರುತ್ತಾರೆ.

ಶ್ರೀರಂಗಪಟ್ಟಣದ ಪುರಸಭಾ ಚುನಾವಣೆಯ ಮತದಾರರಲ್ಲಿ

ಕೆ. ರಾಮಯ್ಯ

ಬಿ॥ ಅಂಬಾಜಿರಾವ್

ಪ್ರಾರ್ಥನೆ.

10-3-47 ರ ಚುನಾವಣೆಯಲ್ಲಿ ದಯವಿಟ್ಟು ಗಣಪತಿ ಗುರ್ತಿಗೆ ಓಟು ಮಾಡಿ

(ಓಟಿನ ಲಿಸ್ಟಿನಲ್ಲಿ ಕೆ. ರಾಮಯ್ಯ ಎಂದಿದೆ. ದೂಷ್ಯವಾಗಿ ಅಂಬಾಜಿರಾವ್ ಎಂದು ಚಾರ್ಟಿಯಲ್ಲಿರುತ್ತೆ.)

ಪ್ರಕಟಣೆ.

ಗೋವು ರಕ್ಷಣಾ ಜಾಗ್ರತೆ ತರಿಸಿಕೊಳ್ಳಿ

ಬುಕ್ ೧ ಕ್ಕೆ ೩-೪-೧

ಡಂಬ್ ಅನಿಮಲ್ ಚಾರಿಟಿ ಟಿಕೆಟ್ ಡ್ರಾಯಿಂಗ್ ತಾ॥ ೨೫-೩-೪೭ಕ್ಕೆ ಇರುವುದನ್ನು ತಾ॥ ೨೦-೪-೪೭ ಕ್ಕೆ ಬದಲಾಯಿಸಿರುತ್ತೆ. ಒಂದುಬುಕ್ ಪೂರ್ತಿಯಾಗಿ ಮನಿಆರ್ಡರ್ ಮಾಡಿ ತರಿಸಿದವರಿಗೆ ಮಾತ್ರ ರಿಜಲ್ಟ್ ಕಳುಹಿಸುತ್ತೇವೆ. ಇತರರು ಪೇಪರಿನಲ್ಲಿ ರಿಜಲ್ಟ್ ನೋಡತಕ್ಕದ್ದು. ಈ ಸಲ ಹರಿಜನ ಮತ್ತು ಬಂಡರ ಚಳೆಗೆ ಧರ್ಮಾರ್ಥ ವಹಿಸಿಕೊಂಡಿರುತ್ತೇವೆ. ನಿಧಾನಮಾಡಿದರೆ ಟಿಕೆಟ್ ದೊರೆಯುವುದಿಲ್ಲ.

Address.

HON SECRETARY,

All India Dumb Animals Charity Fund Office,

2813. Halladakeri, MYSORE.

ಕೊಲ್ಲಾಪುರದಲ್ಲಿ ಸುಧಾರಣೆ

ಹಿಂದು 'ದೇವಾನ್' ರ ಸ್ಥಾನ ಮಹಾರಾಜರನ್ನು ಕೊಲ್ಲಾಪುರ ರಾಣಿಯವರು ದತ್ತು ತೆಗೆದುಕೊಂಡು ಗೊತ್ತಾಗಿದೆ. ದತ್ತು ಸ್ವೀಕಾರ ರಂಭವು ಈ ತಿಂಗಳ ಕೊನೆಯ ಬಹುದೆಂದು ಹೇಳಲಾಗಿದೆ. ಹಾರಾಜರು ಈಗಾಗಲೇ ಸಿದ್ಧ ಸುಧಾರಣೆಗಳನ್ನು ಕೊಲ್ಲಾಪುರಕ್ಕೆ ಗೆ ತಂದು ಮೂವರು ಚುನಾಯಿತ ಧಿಗಳನ್ನು ಮಂತ್ರಿಗಳನ್ನಾಗಿ ನೇ ಸ್ಟುವರೆಂದು ಗೊತ್ತಾಗಿದೆ.

ಪ್ರೀವಿ ಕೌನ್ಸಿಲ್ಲಿಗೆ ಅ

ಬ್ರಿಟಿಷರು ಪಂಜಾಬ್ ಪ್ರಾ ರಣಜಿತ್ ಸಿಂಗ್ ರವರ ವಂಶಸ್ಥ ಮಹಾರಾಜಾ ದಿಲೀಪ್ ಸಿಂಗರಿಂದ ಆದ್ದರಿಂದ ಅವರು ಪಂಜಾಬನ್ನು ದವರಿಗೇ ಕೊಡಬೇಕು- ಎಂಬುದ ಪ್ರಮುಖರು ಪ್ರೀವಿ ಕೌನ್ಸಿಲಿನಲ್ಲಿ ರ ನಡೆಸುವರೆಂದು ತಿಳಿದುಬಂದಿ

ನಾಯಿಕೆಮ್ಮಿನ ಔ

7–8 ದಿವಸಗಳಲ್ಲೇ ಪು ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-

ಗೂರ್ಲು—ಉಬ್ಬ

(Asthma)

ಖಾತರಿಯಾದ ಔಷಧಿ ದೊ ಅನೇಕ ದೊಡ್ಡ ಮನುಷ್ಯರು ದದಕ ಮತ್ತು ಸರ್ಟಿಫಿಕೇಟ್‌ಗಳನ್ನ ಪ್ಪಾರೆ.

ದ(Appendecitis) ... ಮತ್ತು (Tonsils) ಗಳಾಯ ಕನ್ನು ಆಪರೇಷನ್ ಇಲ್ಲದೆ ಗುಣ ಮುಟ್ಟ ಬಂದು ನೋಡಿ.

ಗುಂಡ್ಲುಪೇಟೆ ಆರ್. ಎಸ್. ಪ ದಿವಾನ್ಸ್‌ರೋಡ್, ಗೊಲ್ಲಗೇರಿ ಸ

ಟಿ. ಪಿ. ನಟರಾ

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತ ಮಾಡಲ್ಪಡುತ್ತದೆ.

ಅಗತ್ಯವಾಗಿ ದೇಹದ ಎಲ್ಲ ಕ್ಕ ಔಷಧಿಗಳೂ ಸದಾ ಕಾಲ ದೊರೆಯುವುದಲ್ಲದೆ ಸಮಸ್ತವ್ಯಾ ಚಿಕಿತ್ಸೆಯು ಬಹು ಸುಲಭ ಧ ಮಾಡಲ್ಪಡುತ್ತದೆ.

ಯುಂಡೂರವರ ಆಯುರ್ವೇ ದ್ಯಾಷಧಗಳೆಲ್ಲವೂ ದೊರೆಯುತ್ತ

ಸಾಧ್ವಿ

ರಾಜಧಾನಿಯ ರಾಷ್ಟ್ರೀ

ದಿನ ಪತ್ರಿಕೆ

ಕೂಡಲೇ ಚಂದಾದಾರರಾ

(ತಿಂಗಳಿಗೆ ಚಂದಾ ಒಂದು

ಜಾಹಿರಾತಿನ ದರಗ

ವಿಚಾರಿಸಿರಿ

Just Arrived

MUFFLERS

Baby SWEATERS

Elastic DRAWERS

Mill BANIANS

—: Also in Stock :—

READY-MADE DRESS.

G. V. Suryanarayana Chetty & Sons

Jewellers and Ready-made Dress Emporium

Sayaji Rao Road : : Mysore

Edited, printed and publ... A. R. Nagarajan at the Sadh... D. Subbiah Road, Mysore

ಪು. ಸಂ. 392 WEEKLY EDITION ಇಂದಿನ ಪತ್ರಿಕೆ 6 ಪುಟ

ಸಂಪುಟ ೧೯] ಸೋಮವಾರ ೧೦—೩—೪೭ [ಸಂಚಿಕೆ ೩೨

ಪಂಜಾಬ್ ವಿಭಜನೆಗೆ - ಕಾಂಗ್ರೆಸ್ ಸೂಚನೆ -

ದಸರಾ ವಸ್ತುಪ್ರದರ್ಶನ

ಮೈಸೂರು ೧೦

ಸೆಪ್ಟೆಂಬರ್ ತಿಂಗಳಿನಲ್ಲಿ ದಸರ ವಸ್ತುಪ್ರದರ್ಶನವು ನಡೆಯುವುದೆಂದು ಖಚಿತವಾಗಿ ತಿಳಿದುಬಂದಿದೆ

ವಿವಾಹ ಮಹೋತ್ಸವ

ಸರ್ದಾರ್ ಶ್ರೀ ನಾಯಬ್ ಶ್ರೀನಿವಾಸಯ್ಯನವರ ಮಕ್ಕಳು ಶ್ರೀ ನಾಯಬ್ ರಾಘವರಾಯರಿಗೆ ರಿಟೈರ್ಡ್ ಹೆಡ್ಮಾಸ್ಟರ್ ಶ್ರೀ ಜಿ ಬಿ ಕೇಶವರಾಯರ ಮಗಳು ಸೌ|| ಕುಂದರಾಬಾಯಿಯವರನ್ನು ಕೊಟ್ಟು ವಿವಾಹಮಹೋತ್ಸವವು ಬರುವ ೧೩ನೇ ಭಾನುವಾರ ಚಿಂತಾಮಣಿಯಲ್ಲಿ ನಡೆಯುವುದು

ಆರತಕ್ಷತೆ

ದಿವಿಪೇಟೆ ವರ್ತಕರಾದ ಶ್ರೀ ಕೆ ಎಸ್. ರಾಜಶೆಟ್ಟರವರು ತಮ್ಮ ಮಗಳು ಚಿ|| ನಾಗಸುಂದರಮ್ಮನನ್ನು ಬೆಂಗಳೂರಿನ ಶ್ರೀ ರಾವ ಎ ಸೀತಾರಾಮಶೆಟ್ಟರ ಮಗ ಶ್ರೀ ಲಕ್ಷ್ಮೀ ವೆಂಕಟಸುಬ್ಬಯ್ಯಶೆಟ್ಟಿಗೆ ಕೊಟ್ಟು ನೆರವೇರಿಸಿದ ವಿವಾಹದ ಅಂಗ ನಿನ್ನೆ ಆರತಕ್ಷತೆಯನ್ನು ಏರ್ಪಡಿಸಿದ್ದರು. ಅನೇಕ ಮಹನೀಯರು ಆಹ್ವಾನಿತರಾಗಿ ಸತ್ಕರಿಸಲ್ಪಟ್ಟರು

ಚಿಲ್ಲರೆ ವರ್ತಕರ ಸಂಘ

ಕೃಷ್ಣರಾಜ ಮತ್ತು ವಿಲ್ಲಿಮೊಹಲ್ಲಾಗಳ ಚಿಲ್ಲರೆ ವರ್ತಕರ ಸಂಘದ ಸಾಮಾನ್ಯ ಸಭೆ ನಿನ್ನೆ ದಿನ ನಡೆಯಿತು. ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷರಾಗಿಯೂ, ಶ್ರೀ ತಮ್ಮಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಗೌಡರ ಎಂ ಎಸ್. ತಿಪ್ಪ ಮತ್ತು ಕೆ ಆರ್ ವೀರಭದ್ರಪ್ಪನವರು ಜಂಟಿ ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. ಸಂಘದ ಪ್ರತಿನಿಧಿಗಳು ಅಧಿಕಾರಿಗಳಲ್ಲಿ ಸಧ್ಯದಲ್ಲಿಯೇ ನಿಯೋಗವೊಂದನ್ನು ತೆಗೆದುಕೊಂಡು ಹೋಗುವರೆಂದು ತಿಳಿದುಬಂದಿದೆ.

ನೇತಾಜಿಯವರು ಈ ತಿಂಗಳಲ್ಲಿ ಬರುವರು

ನೇತಾಜಿ ಬೋಸರು ೨೩-೧-೧೮೯೭ರ ವೃಷಭ ಲಗ್ನದಲ್ಲಿ ಜನಿಸಿದರು. ಈಗ ಅವರಿಗೆ ಶನಿಮಹರ್ದಶೆ ಪ್ರಾರಂಭವಾಗಿದೆ. ಅವರು ಈ ತಿಂಗಳಿನ ಅಂತ್ಯದೊಳಗಾಗಿ ಕಾಣಿಸಿಕೊಳ್ಳುವರು ಎಂಬುದಾಗಿ ಜ್ಯೋತಿಷ್ಯದ ಪುಣಾಸೂರಿನ ವಿದ್ವಾನ್ ಹೆಚ್. ವಿ. ನಾರಾಯಣಜೋಯಿಸರು ತಿಳಿಸಿದ್ದಾರೆ

ರಾ ಜ ಕ ಮ ಲ್

-೩-೪೭ ರಿಂದ ೪ ನೇ ವಾರ

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕಪ್ಪಲೀಲಾ

(ಕನ್ನಡ ಚಿತ್ರ)

ಸೊಗಸಾದ ಗಾನಗಳು! ಸೊಂಪಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!!

ಇವೆಲ್ಲವನ್ನೂ ಇಂದೇ ನೋಡಿ.

on 7th, 8th, 10th and 11th March 1947

Daily at 10-30 A.M

Eddie Cantor in

"Palmy Days"

a glorious comedy punctuated with Fun and Frolic.

ಪಂಜಾಬ್ ವಿಭಜನೆಗೆ ಕಾಂಗ್ರೆಸ್ಸಿನ ಸೂಚನೆ

ಪಂಜಾಬಿನ ಇತ್ತೀಚಿನ ಘಟನೆಗಳ ಪರಿಣಾಮವಾಗಿ ಅಲ್ಲಿ ಉದ್ಭವಿಸಿರುವ ಪರಿಸ್ಥಿತಿಯನ್ನು ಪರಿಹರಿಸಲು ಪಂಜಾಬನ್ನು ಮುಸ್ಲಿಮರು ಬಹುಸಂಖ್ಯಾತರಾಗಿರುವ ಪ್ರದೇಶ ಮತ್ತು ಮುಸ್ಲಿಮೇತರರು ಬಹುಸಂಖ್ಯಾತರಾಗಿರುವ ಪ್ರದೇಶಗಳನ್ನಾಗಿ ವಿಭಜಿಸುವುದೊಂದೇ ಮಾರ್ಗವೆಂದು ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಶಿಫಾರಸು ಮಾಡಿದೆ. ಹಿಂಸೆ ಮತ್ತು ಬಲಾತ್ಕಾರದಿಂದ ಸಮಸ್ಯೆಯನ್ನು ಇತ್ಯರ್ಥಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ ಬಹಳ ಕಡಮೆ ಒತ್ತಾಯದಿಂದ ಹೊಸ ಮಾರ್ಗವೊಂದನ್ನು ಅನುಸರಿಸಬೇಕಾಗಿದೆ. ಪಂಜಾಬನ್ನು ಯೋಗ್ಯರೀತಿ ಭಜಿಸುವುದೇ ಆ ಮಾರ್ಗ. ಇದರಿಂದ ಎಲ್ಲ ಪಕ್ಷಗಳಿಗೂ ಅನುಭವಿಸುವುದು ಮತ್ತು ಪರಸ್ಪರ, ಸಂಶಯ ಮತ್ತು ಕಿರುಕುಳಗಳು ಕಡಮೆಯಾಗುವುವು ಎಂದು ತಿಳಿಸಲಾಗಿದೆ ಕೊಲೆ, ಸುಲಿಗೆಗಳನ್ನು ನಿಲ್ಲಿಸಿ ಯಾವ ಪಕ್ಷದವರೂ ಬಲಾತ್ಕಾರವೆಸಗದಂತೆ ಉಪಾಯದಿಂದ ಪರಿಸ್ಥಿತಿಯನ್ನು ಎದುರಿಸಿರೆಂದು ಪಂಜಾಬಿನ ಜನರನ್ನು ಪ್ರಾರ್ಥಿಸಲಾಗಿದೆ.

(ಹಿಂದಿನ ಪುಟದಿಂದ ಮುಂದುವರಿದುದು)

ಪ್ರಮುಖ ವ್ಯಕ್ತಿಗಳಿಂದ ಸನ್ಮಾನವಾಗುವುದು, ಮಂಗಳಕಾರ್ಯಗಳು ಜರುಗುವುವು. ತಾ|| ೧೨, ೧೪, ೧೫ ಲಾಭ, ಪ್ರವಾಸ

ಮಕರ- ಆರೋಗ್ಯ ಉತ್ತಮ, ಮಾನಸಿಕ ಚಿಂತೆ ಜಾಸ್ತಿ, ವ್ಯಾಪಾರದಲ್ಲಿ ನಷ್ಟ, ಅಧಿಕಾರ ವರ್ಗದವರಿಂದ ಕಿರುಕುಳ, ಆರಂಭಿಸಿದ ಕಾರ್ಯಗಳಲ್ಲಿ ಸೋಲು, ಧನಲಾಭ ಕಡಿಮೆ, ಖರ್ಚು ಅಧಿಕ, ತಾ|| ೧೩, ೧೫ ಸಾಧಾರಣ, ಶಾಂತಿ, ಲಾಭ

ಕುಂಭ- ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಉತ್ತಮ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ಖರ್ಚು ಅಧಿಕ, ಕೌಟುಂಬಿಕ ಆರೋಗ್ಯಕ್ಕೆ ಧಕ್ಕೆ ತಗುಲಿ ಚಿಂತೆ ಹೆಚ್ಚುವುದು, ಮಂಗಳ ಕಾರ್ಯಗಳು ಜರುಗುವುವು, ತಾ|| ೧೨, ೧೪, ಸಾಧಾರಣ ಶಾಂತಿ, ಪ್ರವಾಸ

ಮೀನ- ಆರೋಗ್ಯ ಕೆಡುತ್ತದೆ. ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ಸೋಲು, ವ್ಯಾಪಾರದಲ್ಲಿ ನಷ್ಟ ಶತ್ರುಗಳಿಂದ ಕಿರುಕುಳ, ಬಂಧುಗಳಿಂದ ತಿರಸ್ಕಾರ, ಪ್ರವಾಸದಿಂದ ಅಪಘಾತ, ತಾ|| ೧೩, ೧೪, ೧೬ ಲಾಭ, ಶಾಂತಿ

ಪ್ರಮುಖ ಅಧಿಕಾರಿಗಳ ತನಿಖೆ ಅಗತ್ಯ

ಗೋಪಾಲರಾಯರ ಪ್ರಕರಣದ ಬಗ್ಗೆ ಕಾಂಗ್ರೆಸ್ಸಿನ ಒತ್ತಾಯ

ಸ್ವಂ ಸು. ಪ್ರೋ|] ಬೆಂಗಳೂರು ೧೦

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ನಿನ್ನೆ ಮತ್ತು ಮೊನ್ನೆ ಶ್ರೀ ಕೆ. ಚೆಂಗಲರಾಯರೆಡ್ಡಿಯವರ ಅಧ್ಯಕ್ಷತೆಯಲ್ಲಿ ಜರುಗಿ ಬ್ರಿಟಿಷ್ ಪ್ರಧಾನಿ ಅಟ್ಲೀಯವರ ಇತ್ತೀಚಿನ ಹೇಳಿಕೆಯನ್ನು ಸ್ವಾಗತಿಸಿ ನಿರ್ಣಯವನ್ನು ಮಾಡಿತು ಸಂಸ್ಥಾನಗಳು ಕೂಡಲೇ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವಂತೆ ಏರ್ಪಾಡಾಗಬೇಕೆಂದು ಮತ್ತೊಂದು ನಿರ್ಣಯವನ್ನೂ ಅಂಗೀಕರಿಸಲಾಯಿತು ಧರ್ಮರಕ್ಷಕರ ಶ್ರೀ ಬಿ ಎ. ಗೋಪಾಲರಾಯರ ಮೊಕದ್ದಮೆಯಲ್ಲಿ ಸಂಸ್ಥಾನದ ಅನೇಕ ಪ್ರಮುಖ ಅಧಿಕಾರಿಗಳು ಸಂಬಂಧಪಟ್ಟಿರುವರೆಂದು ಹೊರ ಬಿದ್ದಿರುವ ಅಂಶವನ್ನು ತನಿಖೆ ಮಾಡಲು ನಿಷ್ಪಕ್ಷಪಾತವಾದ ವಿಚಾರಣಾ ಸಮಿತಿಯೊಂದನ್ನು ನೇಮಿಸಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವೂ ಅಂಗೀಕೃತವಾಯಿತು ಸಂಸ್ಥಾನದಲ್ಲಿ ರಾಜಕೀಯ ಸಂಸ್ಥೆಗಳನ್ನು ಜಾರಿಗೆ ತರುವ ವಿಚಾರದಲ್ಲಿ ದಿವಾನರು ಕೈಗೊಂಡಿರುವ ಕಾರ್ಯಕ್ರಮಗಳು ಪ್ರಜಾಪ್ರಭುತ್ವ ತತ್ವಕ್ಕೆ ವಿರುದ್ಧವಾಗಿರುತ್ತದೆಯೆಂದೂ, ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ರಾಜ್ಯಾಂಗ ರಚನಾ ಸಭೆಯ ಮೂಲಕವೇ ಸುಧಾರಣೆಗಳನ್ನು ರೂಪಿಸಬೇಕೆಂದೂ ನಿರ್ಣಯವನ್ನು ಮಾಡಲಾಯಿತು

ಯುಗಾದಿಗೆ ಬಟ್ಟೆ ಇಲ್ಲ

ಸಂಸ್ಥಾನದಲ್ಲಿ ಬಟ್ಟೆ ಅಭಾವ ಒಂದೇ ಸಮನಾಗಿರುವುದರಿಂದ ಈಸಲ ಯುಗಾದಿ ಹಬ್ಬಕ್ಕೆ ವಿಶೇಷ ಬಟ್ಟೆಯನ್ನು ಒದಗಿಸಲು ಸಾಧ್ಯವಿಲ್ಲವೆಂದೂ, ಆದರೆ ಒಂದು ತಿಂಗಳ ಬಟ್ಟೆಯನ್ನು ಮುಂಗಡವಾಗಿ ಹಂಚಲು ಏರ್ಪಾಡು ಮಾಡಲಾಗಿದೆಯೆಂದೂ ಕಂಟ್ರೋಲವಾದ ಮಿ|| ಖಲೀಲರು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದ್ದಾರೆ.

ಎ ಎಂ. ಸಿ. ಸಿ ಸಭೆ

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಸಭೆಯು ೨೨ ಮತ್ತು ೨೩ ರ ಬದಲಾಗಿ ೨೯ ಮತ್ತು ೩೦ ನೇ ತಾ|| ಗೋರೂರಿನ ಸಮೀಪದಲ್ಲಿ ನಡೆಯತಕ್ಕದ್ದೆಂದು ನಿರ್ಧರಿಸಲಾಗಿದೆ

ಗಾಂಧಿಜಿಯವರು ಉಪವಾಸ ಮಾಡುವರೇ?

ಬಿಹಾರಿನ ಹಿಂದೂಗಳ ಮನಸ್ಸಿನಲ್ಲಿ ಪರಿವರ್ತನೆಯುಂಟಾಗದಿದ್ದಲ್ಲಿ ಗಾಂಧಿಜಿಯವರು ಆಮರಣಾಂತ ಉಪವಾಸ ಕೈಗೊಳ್ಳುವ ಬಗ್ಗೆ ಆಲೋಚಿಸುತ್ತಿದ್ದಾರೆಂದು ವರದಿಯಾಗಿದೆ ಈ ವಿಚಾರವನ್ನು ದೆಹಲಿಯಲ್ಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಿಗೆ ತಿಳಿಸಲಾಗಿದೆಯೆಂದೂ ಹೇಳಲಾಗಿದೆ

ಪಂಜಾಬ್ ಪರಿಸ್ಥಿತಿ

ಅಮೃತಸರದಲ್ಲಿ ಪರಿಸ್ಥಿತಿ ಪೂರ್ಣ ಹತೋಟಿಗೆ ಬಂದಿರುವುದಿಲ್ಲ ಇದುವರೆವಿಗೆ ೩ ಕೋಟಿ ರೂ. ಗಳ ನಷ್ಟ ಸಂಭವಿಸಿದೆ. ಸಿಖ್ಖರ ಸುವರ್ಣ ದೇವಾಲಯದಲ್ಲಿ ೫೦ ಸಹಸ್ರ ಹಿಂದೂಗಳು ಆಶ್ರಯ ಪಡೆದಿರುವರು ಮುಲ್ತಾನಿನಲ್ಲಿ ೧೩ ಕಟ್ಟಡಗಳು ಭಸ್ಮವಾಗಿವೆ ವ್ಯಾಪಕ ಕರ್ಫ್ಯೂಗಳ ಪರಿಣಾಮದ ಲಕ್ಷ್ಯವೇ ಸಿಗ. ಶ್ರೀನಗರ ರಾವಲ್ಪಿಂಡಿ ಮತ್ತು ಜಲಂಧರಗಳಲ್ಲಿ ಸಹ ಪರಿಸ್ಥಿತಿ ನಿಧಾನವಾಗಿ ಸುಧಾರಿಸಲು ಆರಂಭವಾಗಿದೆ

ಚಿನ್ನದ ಬೆಲೆ ಇಳಿಯುವುದು?

ಚಿನ್ನವನ್ನು ಪರದೇಶದಿಂದ ಆಮದು ಮಾಡಲು ಸರ್ಕಾರದವರು ಲೈಸೆನ್ಸ್ ಕೊಡುತ್ತಿಲ್ಲವಾದುದರಿಂದಲೂ, ಕೇಂದ್ರ ಸರ್ಕಾರದ ಇತ್ತೀಚಿನ ಆದಾಯವ್ಯಯದ ಪ್ರಕಟಣೆಯಿಂದಲೂ, ಚಿನ್ನದ ಬೆಲೆಯು ಇನ್ನೂ ಏರಬಹುದೆಂದು ಬೊಂಬಾಯಿನ ಪ್ರಮುಖ ಚಿನ್ನದ ವ್ಯಾಪಾರಿಗಳಾದ ಮೆಸರ್ಸ್ ಮೆಕಲಾಜರ್ ರವರು ತಿಳಿಸಿದ್ದಾರೆ.

ಮಾಜಿ ದೊರೆಯ ಆಸ್ತಿ ಸರ್ಕಾರದ ವಶ

ಯುಗೋಸ್ಲಾವಿಯಾ ಮಾಜಿ ದೊರೆ ಪೀಟರ್‌ರವರ ಆಸ್ತಿಯನ್ನೆಲ್ಲ ವಶಪಡಿಸಿ, ಅವರ ಮತ್ತು ಅವರ ಸಮೀಪ ಬಂಧುಬಳಗಗಳ ಆಸ್ತಿಗಳನ್ನು ವಶಪಡಿಸಿಕೊಳ್ಳಬೇಕೆಂದು ಯುಗೋಸ್ಲಾವಿಯಾ ರಾಷ್ಟ್ರೀಯ ಪ್ರತಿನಿಧಿ ಸಭೆಯು ಪ್ರಕಟಣೆಯನ್ನು ಹೊರಡಿಸಿದೆ

ಅಧಿಕಾರಿಗಳ ಸಮಾರಂಭದಲ್ಲಿ ಕಾಂ|| ಮತ್ತು ಲೀಗ್ ಧ್ವಜ

ನೊನ್ನೆ ದೆಹಲಿಯಲ್ಲಿ ನಡೆದ ಮಿಲಿಟರಿ ನೃತ್ಯ ಪ್ರದರ್ಶನದ ಸಮಾರಂಭದಲ್ಲಿ ವಿಶ್ವಸಂಸ್ಥೆಗಳ ಧ್ವಜಗಳ ಜೊತೆಯಲ್ಲಿ ಕಾಂಗ್ರೆಸ್ ಮತ್ತು ಲೀಗ್ ಧ್ವಜವನ್ನು ಹಾರಿಸಲಾಗಿತ್ತು ಭಾರತದ ಇತಿಹಾಸದಲ್ಲಿ ಈ ರೀತಿಯಲ್ಲಿ ಬ್ರಿಟಿಷರ ಆಳ್ವಿಕೆಯಲ್ಲೇ ಕಾಂಗ್ರೆಸ್ ಮತ್ತು ಲೀಗ್ ಧ್ವಜಗಳನ್ನು ಹಾರಿಸಿದ್ದುದು ಇದೇ ಮೊದಲನೆಯ ಬಾರಿ.

ಉಪನಯನ

ನಂಜನಗೂಡು ೧೦

ಸಾಧ್ವಿ ಪತ್ರಿಕೆಯ ಏಜೆಂಟರಾದ ಶ್ರೀ ಕೆ. ಎಸ್. ರಾಮಯ್ಯನವರು ನಿನ್ನೆ ತಮ್ಮ ತೃತೀಯ ಕುಮಾರ ಚಿ|| ಶ್ರೀಕಂಠಯ್ಯನಿಗೆ ಉಪನಯನವನ್ನು ನೆರವೇರಿಸಿದರು ಅನೇಕ ಮಹನೀಯರು ಆಹ್ವಾನಿತರಾಗಿ ಸತ್ಕರಿಸಲ್ಪಟ್ಟರು.

ಕೆನರಾ ಬ್ಯಾಂಕ್ ಶಾಖೆ

ಮೈಸೂರು ೧೦

ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಹಾಲ್ ಸಮೀಪದಲ್ಲಿ ಕೆನರಾ ಬ್ಯಾಂಕ್ ಶಾಖೆಯನ್ನು ಪ್ರಾರಂಭಿಸಲಾಗಿದೆ. ಮೊನ್ನೆ ಈ ಸಂದರ್ಭದಲ್ಲಿ ಬ್ಯಾಂಕಿನ ಮ್ಯಾನೇಜರ್ ಅನೇಕ ಮಾನ್ಯ ಮಹನೀಯರುಗಳನ್ನು ಆಹ್ವಾನಿಸಿ ಸತ್ಕರಿಸಿದರು.

ಸಾಧ್ವಿ

ತಾ|| ೧೦-೩-೪೭ ಸೋಮವಾರ

ಲೀಗಿಗೆ ಮತ್ತೊಮ್ಮೆ ಕಾಂಗ್ರೆಸ್ಸಿನ ಸಹಕಾರ ಹಸ್ತ

ಭಾರತ ರಾಜಕೀಯ ಸಮಸ್ಯೆಯ ಪರಿಹಾರಕ್ಕಾಗಿ ಕಾಂಗ್ರೆಸ್ಸು ಮುಸ್ಲಿಂ ಲೀಗಿಗೆ ಅನೇಕ ಬಾರಿ ಸಹಕಾರ ಹಸ್ತವನ್ನು ನೀಡಿರುತ್ತದೆ. ಲೀಗನ್ನು ಒಲಿಸಲು ದಾರಿಯನ್ನೂ ಬಿಟ್ಟು ಹೋಗಿ ಅದಕ್ಕೆ ಇಲ್ಲದ ಸಲ್ಲದ ರಿಯಾಯಿತಿಗಳನ್ನು ಕೊಡಲು ಮುಂದೆ ಬಂದಿದೆ. ಇದಕ್ಕಾಗಿ ಹಿಂದೂ ಮಹಾಸಭೆ ಮತ್ತು ಇತರ ಸ್ವತಂತ್ರ ಸಂಸ್ಥೆಗಳ ನಿಷ್ಠುರಕ್ಕೂ ಪಾತ್ರವಾಗಿರುತ್ತದೆ. ಆದರೆ ರಾಷ್ಟ್ರಹಿತದ ಮೂಲ ತತ್ವವನ್ನು ಬಿಟ್ಟುಕೊಡದೆ, ಯಾವುದಾದರೊಂದು ಗುಂಪಿನವರಿಗೆ ಸ್ವಲ್ಪ ಹೆಚ್ಚಿನ ರಿಯಾಯಿತಿಯು ದೊರೆಯುವುದಾದರೆ ಅದಕ್ಕಾಗಿ ಅಸೂಯೆ ಪಟ್ಟುಕೊಂಡು ತನ್ನ ಪ್ರಯತ್ನದಲ್ಲಿ ಹಿಂದೆಗೆದಿರುವುದಿಲ್ಲ.

ಇಂದು ಮುಸ್ಲಿಂ ಲೀಗಿನ ಸಹಕಾರವನ್ನು ಕೋರಿರುವುದರಲ್ಲಿಯೂ ಕಾಂಗ್ರೆಸ್ಸು ಇದೇ ನೀತಿಯನ್ನೇ ಅನುಸರಿಸಿರುತ್ತದೆ. ಬ್ರಿಟನರು ಬರುವ ವರ್ಷ ಹೊರಟುಹೋಗುವುದಾಗಿ ಹೇಳಿರುವ ಈ ಸಮಯದಲ್ಲಿ ರಾಜಕೀಯ ರಂಗದಲ್ಲಿ ದೊಡ್ಡ ಸಮುದ್ರಮಥನವೇ ಆಗುತ್ತಿದೆ. ಪಂಜಾಬಿನಲ್ಲಿ ನಡೆಯುತ್ತಿರುವಂತೆ ಹಲವು ಕಡೆ ಘೋರ ದುರಂತಗಳೂ ಸಂಭವಿಸುವುವು. ಎಲ್ಲ ರಾಜಕೀಯ ಪಕ್ಷಗಳೂ ಕಲಿತ ಬುದ್ಧಿಯನ್ನೆಲ್ಲಾ ಉಪಯೋಗಿಸಿ ತಮ್ಮ ತಮ್ಮ ಪಂಗಡಗಳಿಗೆ ಆದಷ್ಟು ಹೆಚ್ಚಿನ ಪ್ರಯೋಜನವನ್ನು ಪಡೆಯಲು ಪ್ರಯತ್ನಿಸುತ್ತವೆ. ಇಡೀ ರಾಷ್ಟ್ರದ ಸರ್ವತೋಮುಖವಾದ ಅಭ್ಯುದಯವನ್ನು ಬಯಸುವವರು ವಿರಳ. ಈ ಕಾರ್ಯವು ಕಾಂಗ್ರೆಸ್ ಸಂಸ್ಥೆಯಿಂದಲೇ ನಡೆಯಬೇಕು.

ತನ್ನ ಉದಾರ ನೀತಿಗೆ ಅನುಗುಣವಾಗಿ ಕಾಂಗ್ರೆಸ್ಸು ಲೀಗಿಗೆ ಮತ್ತೊಮ್ಮೆ ಸಹಕಾರ ಹಸ್ತವನ್ನು ನೀಡಿರುತ್ತದೆ. ಈಚಿನ ತನ್ನ ವರ್ತನೆಯಿಂದ ಲೀಗು ಇಂತಹ ಸೌಹಾರ್ದದ ಅರ್ಹತೆಯನ್ನೆಲ್ಲಾ ಕಳೆದುಕೊಂಡಿರುವುದಾದರೂ ಅದಕ್ಕೆ ಮತ್ತೆ ಮನ್ನಣೆ ಕೊಡಲು ಹೊರಟಿರುವ ಕಾಂಗ್ರೆಸ್ಸಿನ ಮನೋಭಾವವು ಅದರ ವಿಶಾಲ ಹೃದಯವನ್ನು ಸೂಚಿಸುತ್ತದೆ. ಆದರೆ ಲೀಗು ಈ ಅವಕಾಶವನ್ನು ಗ್ರಹಿಸುವುದೆಂಬ ಭರವಸೆಯು ಮಾತ್ರ ಇರುವುದಿಲ್ಲ. ಪಾಕಿಸ್ತಾನದ ಯೋಜನೆಯನ್ನು ಅಂಗೀಕರಿಸದಲ್ಲದೆ ಸಹಕಾರವಿಲ್ಲವೆಂದು ಅದು ಸಾರುತ್ತಿದೆ. ಅಲ್ಲದೆ ಕಾಂಗ್ರೆಸ್ಸು ಇಂದು ಮಾಡಿರುವ ಹೊಸ ಸಲಹೆಗಳೂ ಸಹ ಲೀಗಿಗೆ 'ಕಹಿ ಗುಳಿಗೆಗಳಾಗಿ' ಪರಿಣಮಿಸುವುದರಲ್ಲಿ ಸಂಶಯವಿಲ್ಲ.

ಪಂಜಾಬ್ ಪ್ರಾಂತದಲ್ಲಿ ಮುಸ್ಲಿಂ ಬಹುಮತವಿರುವ ಪ್ರದೇಶಗಳೂ ಉಳಿದ ಪ್ರಾಂತಗಳೂ ಪ್ರತ್ಯೇಕ ರಾಜ್ಯಗಳಾಗಿ ವಿಂಗಡವಾಗಬೇಕೆಂದು ಕಾಂಗ್ರೆಸ್ಸು ಸೂಚಿಸಿದೆ. ಬಂಗಾಳದಲ್ಲಿಯೂ ಸಹ ಇದೇ ಬಗೆಯ ವಿಭಜನೆಯ ಅಗತ್ಯವನ್ನೂ ಪರಿಶೀಲಿಸಲಾಗುವುದೆಂದು ಸೂಚಿಸಿದೆ. ಸಿಂಧು ಪ್ರಾಂತವನ್ನೂ ಹೀಗೆಯೇ ವಿಭಜಿಸಬೇಕೆಂದು ಅಲ್ಲಿನ ಕಾಂಗ್ರೆಸ್ ನಾಯಕರು ಈ ಮೊದಲೇ ಸೂಚನೆಯಿತ್ತಿದ್ದಾರೆ. ಈ ಹೊಸ ಸನ್ನಿವೇಶವು ಲೀಗಿಗೆ ನೂತನ ಸಮಸ್ಯೆಯನ್ನು ಸೃಷ್ಟಿಸುವುದರಲ್ಲಿ ಸಂದೇಹವಿಲ್ಲ.

ಯಾವ ಕೋಮುವಾರು ಆಧಾರದ ಮೇಲೆ ಲೀಗು ಪಾಕಿಸ್ತಾನದ ರಚನೆಯನ್ನು ಕೇಳುತ್ತಿದೆಯೋ ಅದೇ ತತ್ವವನ್ನನುಸರಿಸಿ ಕಾಂಗ್ರೆಸ್ಸು ಮೇಲ್ಕಂಡ ಪ್ರಾಂತಗಳ ವಿಭಜನೆಯನ್ನೂ ಸೂಚಿಸುತ್ತಿದೆ. ತನಗೆ ಬೇಕಾದುದನ್ನು ಲೀಗು ಇತರರಿಗೆ ಇಲ್ಲವೆನ್ನುವುದೆಂತು? ಆದರೆ ತನ್ನ ಇಚ್ಛೆಯಂತೆ ನಡೆದರೆ ಮಾತ್ರ ಸಹಕಾರ; ಇಲ್ಲವಾದರೆ ಸಂಗ್ರಾಮ-ಎಂಬ ಲೀಗಿನ ನೀತಿಗೆ ಇಂದಿನ ಕಾಂಗ್ರೆಸ್ಸಿನ ಸೌಹಾರ್ದ ಪ್ರಯತ್ನವೂ ಸಹ ರುಚಿಸದಿರುವುದರಲ್ಲಿ ಆಶ್ಚರ್ಯವಿಲ್ಲ. ಆದುದರಿಂದ ರಾಷ್ಟ್ರದ ಪ್ರಗತಿ ಪರ ಶಕ್ತಿಗಳು ಪ್ರತಿಗಾಮಿಯಾದ ಲೀಗನ್ನು ನಿರ್ಲಕ್ಷಿಸಿ ತಮ್ಮ ಮಾರ್ಗದಲ್ಲಿ ಮುಂದುವರೆದರೆ ಅದು ತಾನಾಗಿಯೇ ದಾರಿಗೆ ಬರುವುದು.

ವಾರ ಭವಿಷ್ಯ

ತಾ|| ೧೦-೩-೪೭ ರಿಂದ ೧೬-೩-೪೭ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ- ಆರೋಗ್ಯ ಉತ್ತಮವಾಗಿರುತ್ತದೆ, ಧನಲಾಭ ಅಧಿಕ, ಉದ್ಯೋಗ ವ್ಯವಹಾರಗಳಲ್ಲಿ ಯಶ, ವ್ಯಾಪಾರದಲ್ಲಿ ಲಾಭ ಮಂಗಳ ಕಾರ್ಯಗಳಿಗಾಗಿ ಪ್ರವಾಸ, ಅಧಿಕಾರಿವರ್ಗದವರಿಂದ ಸನ್ಮಾನ, ತಾ|| ೧೨, ೧೪ ಲಾಭ, ಸಂತೋಷ

ವೃಷಭ- ಆರೋಗ್ಯ ಚೆನ್ನಾಗಿರುತ್ತದೆ, ಸಾಂಪತ್ತಿಕ ಸ್ಥಿತಿ ಉತ್ತಮ, ವ್ಯಾಪಾರ, ಉದ್ಯೋಗಗಳಲ್ಲಿ ನೂತನ ಕಾರ್ಯ ಕ್ರಮಗಳಿಂದ ಪ್ರಗತಿ, ಮಿತ್ರರಿಂದ ಸನ್ಮಾನ, ಪ್ರವಾಸದಿಂದ ಅಶಾಂತಿ, ಬಂಧುಗಳಿಂದ ಕಿರುಕುಳ ಮತ್ತು ವ್ಯಥೆ, ತಾ|| ೧೩, ೧೫ ಸಾಧಾರಣ ಶಾಂತಿ, ಬಂಧು ದರ್ಶನ.

ಮಿಥುನ- ಆರೋಗ್ಯ ಚೆನ್ನಾಗಿರುತ್ತದೆ, ಆರ್ಥಿಕ ದುರ್ಗಟ್ಟು ನಿವಾರಣೆಯಾಗುವುದು ವ್ಯಾಪಾರ, ಉದ್ಯೋಗಗಳಲ್ಲಿ ಯಶ, ಮಾನಸಿಕ ಚಿಂತಾನಾಶ, ಪ್ರವಾಸದಿಂದ ಕಾರ್ಯಸಿದ್ಧಿ, ತಾ|| ೧೨, ೧೬ ಧನಲಾಭ, ಪ್ರವಾಸ.

ಕಟಕ- ಆರೋಗ್ಯ ಸಾಧಾರಣ, ಉದ್ಯೋಗ ವ್ಯವಹಾರಗಳಲ್ಲಿ ಶತ್ರುಗಳಿಂದ ಕಿರುಕುಳ, ವ್ಯಾಪಾರದಲ್ಲಿ ನಷ್ಟ, ಧನಲಾಭ, ಸಾಧಾರಣ, ಖರ್ಚು ಅಧಿಕ, ಮಿತ್ರರಿಗಾಗಿ ವಿಶೇಷ ಧನ ವ್ಯಯ, ಅನಿರೀಕ್ಷಿತ ಪ್ರವಾಸದಿಂದ ಮಾನಸಿಕ ಚಿಂತೆ, ತಾ|| ೧೧, ೧೫ ಶಾಂತಿ, ಸಂತೋಷ

ಸಿಂಹ- ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ವ್ಯವಹಾರಗಳಲ್ಲಿ ಯಶ ಕೌಟುಂಬಿಕ ಆರೋಗ್ಯ ಕೆಟ್ಟು ಔಷಧೋಪಚಾರಗಳಿಗಾಗಿ ವಿಶೇಷ ಧನವ್ಯಯ, ಆದಾಯ ಕಡಿಮೆ, ತಾ|| ೧೩, ೧೫, ಚಿಂತೆ, ಅಪ್ರಿಯ ವಾರ್ತೆ.

ಕನ್ಯಾ- ಆರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಜಾಸ್ತಿ, ಉದ್ಯೋಗ ವ್ಯವಹಾರಗಳಲ್ಲಿ ಯಶ, ವ್ಯಾಪಾರದಲ್ಲಿ ಪ್ರಗತಿ, ಧನಲಾಭ ಉತ್ತಮ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಶತ್ರುಗಳಿಂದ ವಿಶೇಷ ಕಿರುಕುಳ, ಅಧಿಕಾರಿ ವರ್ಗದವರಿಂದ ಸನ್ಮಾನ, ತಾ|| ೧೨, ೧೪, ೧೬ ಪ್ರವಾಸ, ಮಂಗಳ ಕಾರ್ಯಗಳಿಗಾಗಿ ಖರ್ಚು.

ತುಲಾ- ಆರೋಗ್ಯ ಉತ್ತಮವಾಗಿರುತ್ತದೆ, ಧನ ಲಾಭ ಸಾಧಾರಣ, ಖರ್ಚು ಅಧಿಕ, ಮಿತ್ರರಿಂದ ತಿರಸ್ಕಾರ, ವ್ಯಾಪಾರದಲ್ಲಿ ಲಾಭ ಮತ್ತು ಪ್ರಗತಿ, ಉದ್ಯೋಗ ವ್ಯವಹಾರಗಳಲ್ಲಿ ಅಧಿಕಾರಿಗಳಿಂದ ಸನ್ಮಾನ, ತಾ|| ೧೩, ೧೫ ಪ್ರವಾಸ, ಅಪಘಾತ, ಚಿಂತೆ.

ವೃಶ್ಚಿಕ- ಆರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಹೆಚ್ಚುವುದು, ಆರ್ಥಿಕ ನ[ಷ್]ಟ್ಟು ಜಾಸ್ತಿ. ಮಿತ್ರರಿಂದಲೂ, ಅಧಿಕಾ[ರಿ ವ]ರ್ಗದವರಿಂದಲೂ ತಿರಸ್ಕಾರ, ಧನಲಾ[ಭ ಕ]ಡಿಮೆ, ಖರ್ಚು ಮಿತಿಮೀರುವುದು, [ವಿ]ನೋದಕ್ಕಾಗಿ ವಿದೇಶ ಪ್ರವಾಸವ[ಾಗು]ವುದು, ಬಂಧುಗಳಿಂದ ಅಪಮಾನ, [ತಾ||] ೧೩, ೧೫ ಸಾಧಾರಣ, ಶಾಂತಿ.

ಧನಸ್ಸು- ಆರೋಗ್ಯ ಚೆನ್ನಾಗಿರು[ತ್ತದೆ], ಧನಲಾಭ ಉತ್ತಮ, ಖರ್ಚು ಕ[ಡಿಮೆ], ವ್ಯಾಪಾರದಲ್ಲಿ ಲಾಭ, ವ್ಯವಹಾರದಲ್ಲಿ[…] ಧಾರ್ಮಿಕ ಕಾರ್ಯಗಳಿಗಾಗಿ ಖ[ರ್ಚು]…

(ಹಿಂದಿನ ಪುಟಕ್ಕೆ ಮುಂದುವರಿದಿ[ದೆ])

Edited, printed and published by A. K. Nagarajan at the Sadhvi P[ress], D. Subbiah Road, Mysore.

ಮೈಸೂರು ಡಿಸ್ಟ್ರಿಕ್ಟು ಬೋರ್ಡು ಪ್ರೆಸಿಡೆಂಟರವರ ಆಫೀಸು

ನೋಟಿಫಿಕೇಷನ್

೧೯೪೭ ನೇ ಮಾರ್ಚಿ ಮಾಹೆ ೧೨ ನೇ ತಾರೀಕು ಬುಧವಾರ ಮಧ್ಯಾಹ್ನ ೪ […] ಯವರಿಗೆ ಈ ಕೆಳಗೆ ನಮೂದು ಮಾಡಿರತಕ್ಕ ಕೆಲಸಗಳಿಗಾಗಿ ಸೀಲು ಮಾಡಿ[ದ] ಟೆಂಡರುಗಳನ್ನು ಮೈಸೂರು ಡಿಸ್ಟ್ರಿಕ್ಟು ಬೋರ್ಡು ಆಫೀಸಿನಲ್ಲಿ ತೆಗೆದುಕೊಳ್ಳಲಾಗ[ುವುದು].

ಟೆಂಡರುಗಳನ್ನು ಸೀಲು ಮಾಡಿದ ಕವರಿನಲ್ಲಿಟ್ಟು ಮೇಲುಗಡೆಯಲ್ಲಿ ಆಯಾ ಕೆಲಸದ ಟೆಂಡರು ಎಂದು ಬರೆದು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ[ರವರಿಗೆ] ಎಂದು ಅಡ್ರೆಸ್ ಬರೆದು ಕಳುಹಿಸತಕ್ಕದ್ದು. ಪ್ರತಿಯೊಂದು ಕೆಲಸಕ್ಕೂ ಬೇರೆ[ಬೇರೆ] ಟೆಂಡರು ಇರಬೇಕು.

ಠೇವಣಿಗಾಗಿ ಪ್ರತಿಯೊಂದು ಕೆಲಸಕ್ಕೂ ೧೦೦ ರೂಪಾಯಿಗಳನ್ನು ಖಜಾನೆ[ಯಲ್ಲಿ] ಮೈಸೂರು ಡಿಸ್ಟ್ರಿಕ್ಟು ಫಂಡಿಗೆ ಡಿಪಾಜಿಟ್ ಮಾಡಿ ಸದರಿ ಡೂಪ್ಲಿಕೇಟು ಚಲನ[ನ್ನು] ಟೆಂಡರು ಜೊತೆಯಲ್ಲಿ ಹಾಜರು ಮಾಡಬೇಕು.

ಹೆಚ್ಚಿಗೆ ವಿಷಯಗಳನ್ನು ಡಿಸ್ಟ್ರಿಕ್ಟು ಬೋರ್ಡು ಆಫೀಸಿನಲ್ಲಿ ಆಫೀಸು ದಿನ[ಗಳಲ್ಲಿ] ಮಧ್ಯಾಹ್ನ ೧೨ ರಿಂದ ಸಾಯಂಕಾಲ ೫ ಗಂಟೆಯವರಿಗೆ ಇಷ್ಟವುಳ್ಳ ಕಂಟ್ರಾಕ್ಟರ[ುಗಳು] ತಿಳಿಯಬಹುದು.

ಯಾವ ಟೆಂಡರನ್ನು ಅಥವಾ ಒಪ್ಪಿಕೊಳ್ಳುವುದು ಡಿಸ್ಟ್ರಿಕ್ಟ್ ಬೋರ್ಡು ಪ್ರೆ[ಸಿಡೆಂ]ಟರ ಅಧಿಕಾರಕ್ಕೆ ಒಳಪಟ್ಟಿರುತ್ತೆ ಮತ್ತು ಅಂಗೀಕಾರ ಮಾಡದೆ ಇರತಕ್ಕ ಟೆಂಡರು ಕಾರಣವನ್ನೂ ಸಹ ಸೂಚಿಸಲಾಗುವುದಿಲ್ಲ.

೧. ಪಿರಿಯಾಪಟ್ಟಣದ ತಾಲ್ಲೂಕು ಕಟ್ಟೆಮಳಲವಾಡಿ - ರಾವಂದೂರು ಅತ್ತಿಗೋಡು ರಸ್ತೆಯಲ್ಲಿ ೩ ಕಂಡಿಯ ಮೋರಿಯನ್ನು ಕಟ್ಟುವುದು.	ರೂ. 75[…]
೨. ಹುಣಸೂರು ತಾಲ್ಲೂಕು ಬಿಳಿಕೆರೆಪುರದಿಂದ ಅರೇನಹಳ್ಳಿಗೆ ಹೋಗತಕ್ಕ ರಸ್ತೆ ರಿಪೇರಿ.	,, 174[…]
೩. ಮೈಸೂರು ತಾಲ್ಲೂಕು ಜಯಪುರ - ಕಡಕೊಳ ರಸ್ತೆಗೆ ಜಲ್ಲಿ ಹಾಕುವುದು	,, 883[…]
೪. ಚಾಮರಾಜನಗರದ ತಾಲ್ಲೂಕು ಕಮರವಾಡಿಯಿಂದ ಸಂತೆಮರಹಳ್ಳಿ ದೊಡ್ಡ ರಸ್ತೆಗೆ ಸೇರುವಂತೆ ಒಂದು ರಸ್ತೆಯನ್ನು ಮಾಡುವುದು	,, 300[…]

ಟಿ. ಸಿ. ಹೊನ್ನ[…]

ಪ್ರೆಸಿಡೆಂಟ್,

ಡಿಸ್ಟ್ರಿಕ್ಟು ಬೋರ್ಡು, ಮೈ[ಸೂರು]

Just Arrived
MUFFLERS
Baby SWEATERS
Elastic DRAWERS
Mill BANIANS
—: Also in Stock :—
READY-MADE DRESS.
G. V. Suryanarayana Chetty & S[ons]
Jewellers and Ready-made Dress Emporium
Sayaji Rao Road : : My[sore]

ಬೆಲೆ ಕಡಿಮೆ, ಉತ್ತಮವಾದ ಮಾಲು, ಅನೇಕ ನಮೂನೆಗಳು.
ಬೆಂಗಾಲ್ ಸಿಲ್ಕ್ ಸೀರೆಗಳು ಬೇಕಾದರೆ
ಸಿಲ್ಕ್ ಮೈ[…] ಬ್ಯಾಂಕ್ […] ಮೈಸೂ[ರು]
★ ಬಾಬು ಸಾಬ್ ಕಂಪೆನಿಗೆ ಹೋಗಿ ★

ರೆ. ನಂ. 392 ॥ ವಂದೇ ಮಾತರಂ ॥ ಒಂದು ಪ್ರತಿಗೆ 3 ಕಾಸು

ಸಂಪುಟ ೫] ಮಂಗಳವಾರ ೧೧—೩—೪೭ [ಸಂಚಿಕೆ ೧೮೧

ಪಂಜಾಬ್ ಪ್ರಾಂತದಲ್ಲಿ ಗಡಿನಾಡಿನವರ ಮುತ್ತಿಗೆ

ಅರಮನೆ ನೌಕರರಿಗೆ ಪರಿಹಾರ

ಮೈಸೂರು ೧೧

೨೧೦ ರೂ ಗಳಿಗೆ ಕಡಿಮೆ ಸಂಬಳ ಬರುತ್ತಿರುವ ಅರಮನೆ ನೌಕರರೆಲ್ಲರಿಗೂ ಅವರು ಪಡೆಯುತ್ತಿರುವ ಸಂಬಳದ ಮೂರನೇ ಒಂದು ಭಾಗದಷ್ಟನ್ನು ತಾತ್ಕಾಲಿಕ ಪರಿಹಾರ ಕೊಡಲು ಆಜ್ಞೆಯಾಗಿರುವುದಾಗಿ ತಿಳಿದುಬಂದಿದೆ

ಬೆಂಕಿ ಪೆಟ್ಟಿಗೆ ರೇಷನ್

ದೇಶದ ಪೆಟ್ಟಿಗೆ ಅಭಾವವು ಹೆಚ್ಚುತ್ತಿರುವುದರಿಂದ ಇನ್ನು ಮುಂದೆ ಪ್ರತಿ ಸಂಸಾರಕ್ಕೂ ತಿಂಗಳೊಂದಕ್ಕೆ ೩ ಬೆಂಕಿ ಪೆಟ್ಟಿಗೆಗಳ ಆಧಾರದ ರೇಷನ್ ಡಿಪೋಗಳಲ್ಲಿ ಹಂಚಲಾಗುವುದೆಂದು ಹೇಳಲಾಗಿದೆ.

ಹಿಂದೂ ಮಹಾ ಸಭೆ

ನಗರ ಹಿಂದೂ ಮಹಾ ಸಭೆಯ ಕಾರ್ಯಕಾರಿ ಸಭೆಯು ನಾಳೆ ಸಂಜೆ ೬॥ ಗಂಟೆಗೆ ಕಾರ್ಯಾಲಯದಲ್ಲಿ ಶ್ರೀ ಕೆ ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಜರುಗುವುದು ಕೆಲವು ಮುಖ್ಯ ವಿಷಯಗಳ ಚರ್ಚೆ ನಡೆಯುವುದರಿಂದ ಸದಸ್ಯರೆಲ್ಲರೂ ತಪ್ಪದೆ ಹಾಜರಾಗಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ.

ಪವರ್ ಮತ್ತು ಲೈಟ್ ಕೆಲಸಗಾರರ ಸಂಘ

ಮೈಸೂರು ಸಿಟಿ ಲೇಬರ್ ಫೆಡರೇಷನ್ನಿನ ಕಛೇರಿಯಲ್ಲಿ ಮೊನ್ನೆ ಶ್ರೀ ಟಿ ಎಸ್ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಪವರ್ ಮತ್ತು ಲೈಟ್ ಕೆಲಸಗಾರರು ಸಭೆ ಸೇರಿ ತಮ್ಮ ಸಂಘವನ್ನು ಸ್ಥಾಪಿಸಿಕೊಂಡರು ಶ್ರೀಗಳಾದ ಎಂ ಎ ಜೋಯ್ಸ್ ಅಧ್ಯಕ್ಷರಾಗಿಯೂ, ಮಹಮದ್ ಹುಸೇನರವರು ಉಪಾಧ್ಯಕ್ಷರಾಗಿಯೂ ಹೆಚ್. ಎಂ. ಚನ್ನಬಸಪ್ಪ ಮತ್ತು ಕೆ. ವಿಶ್ವನಾಥ್‌ರವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು.

ಬೇಸಿಗೆ ಅಕ್ಷರ ಪ್ರಚಾರ

ಎಂದಿನಂತೆ ಈ ಸಾರಿಯೂ ಬೇಸಿಗೆಯಲ್ಲಿ ಅಕ್ಷರ ಪ್ರಚಾರ ಕಾರ್ಯವನ್ನು ಕೈಗೊಳ್ಳಲು ಕರ್ನಾಟಕ ಪ್ರಾಂತ್ಯ ವಿದ್ಯಾರ್ಥಿ ಕಾಂಗ್ರೆಸ್ಸು ನಿರ್ಧರಿಸಿದೆ. ಈ ಕಾರ್ಯಕ್ಕೆ ಸಹಾಯಮಾಡಬೇಕೆನ್ನಿಸುವ ಸ್ವಯಂ ಸೇವಕರೆಲ್ಲರೂ ಕಾರ್ಯದರ್ಶಿ ವಿದ್ಯಾರ್ಥಿ ಬೇಸಿಗೆ ಅಕ್ಷರ ಪ್ರಚಾರ ಚಳುವಳಿ, ಅಕ್ಷರ ಪ್ರಚಾರ ಸಮಿತಿ, ಕೃಷ್ಣಮೂರ್ತಿಪುರಂ, ಮೈಸೂರು. ಈ ವಿಳಾಸಕ್ಕೆ ಕೂಡಲೇ ತಿಳಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ

ಪೋಲೀಸಿನವರಿಂದ ಕಳ್ಳತನ?

ಸ್ವಂ ಸು] ಚಾಮರಾಜನಗರ ೯

ಇಲ್ಲಿನ ಟಿ ಬಿ. ಯಲ್ಲಿ ಬಿಟ್ಟಿದ್ದ ಮರ್ಚೆಂಟ್ ಬಾಬಿಗೆ ಸೇರಿದ ಲಾರಿಯಲ್ಲಿದ್ದ ಲೈಟಿನ ಬಲ್ಬು ಮತ್ತು ಗ್ಲಾಸುಗಳನ್ನು ಬ್ರಿಟಿಷ್ ಪೋಲೀಸಿಗೆ ಸೇರಿದ ಕುಪ್ಪಸ್ವಾಮಿ ಎಂಬುವನು ಎಂ ಡಿ. ಸಿ. ೨೧೮೩ ನೇ ನಂಬರಿನ ಬಸ್ಸಿನಲ್ಲಿ ಬಂದು ರಾತ್ರಿ ೧೦ ಗಂಟೆಯಲ್ಲಿ ಕಳುವು ಮಾಡಿದನೆಂದೂ, ಇದನ್ನು ಮರ್ಚೆಂಟ್ ಬಾಬಿ ಲಾರಿ ಡ್ರೈವರ್ ನಾರಾಯಣರಾವ್ ಎಂಬುವರು ಪತ್ತೆ ಹಚ್ಚಿ, ಮಾಲುಗಳನ್ನು ವಶಪಡಿಸಿಕೊಂಡು ಪೋಲೀಸರಿಗೆ ದೂರು ಕೊಟ್ಟಿದ್ದಾರೆಂದೂ ಗೊತ್ತಾಗಿದೆ

ರಾಬರ್ಟ್ ಕಾಚೆಸ್ಸ್ ಎಂಬ ೪೮ ವರ್ಷ ವಯಸ್ಸಿನ ಆಂಗ್ಲೇಯರೊಬ್ಬರು ಬ್ರಿಟನ್ನಿನ ಸುತ್ತ ೩ ಸಾವಿರ ಮೈಲಿಗಳನ್ನು ೧೧೨ ದಿನಗಳಲ್ಲಿ ಕಾಲ್ನಡಗೆಯಲ್ಲಿ ಮುಗಿಸಿದರೆಂದು ವರದಿಯಾಗಿದೆ

ಷೇಕ್ ಅಬ್ದುಲ್ಲಾರವರೇ ಪ್ರಜಾಪರಿಷತ್ತಿನ ಅಧ್ಯಕ್ಷರು

ಗ್ವಾಲಿಯರ್ ಸಂಸ್ಥಾನದಲ್ಲಿ ಮುಂದಿನ ತಿಂಗಳು ನಡೆಯಲಿರುವ ದೇಶೀಯ ಸಂಸ್ಥಾನಗಳ ಪ್ರಜಾಪರಿಷತ್ತಿನ ಅಧ್ಯಕ್ಷತೆಗೆ ಕಾಶ್ಮೀರದ ನಾಯಕರಾದ ಷೇಕ್ ಅಬ್ದುಲ್ಲಾರವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ. ಡಾ॥ ಪಟ್ಟಾಭಿ, ಶಂಕರರಾವ್ ದೇವ್, ಪಂ॥ ನೆಹರು ಮತ್ತು ಡಾ॥ ಪಟ್ಟಾಭಿಯವರು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡಿದ್ದಾರೆ ಷೇಕ್ ಅಬ್ದುಲ್ಲಾರವರು ೩ ವರ್ಷಗಳ ಕಠಿಣ ಶಿಕ್ಷೆಗೆ ಗುರಿಯಾಗಿ ಈಗ ಕಾಶ್ಮೀರದ ಸೆರೆಮನೆಯಲ್ಲಿದ್ದಾರೆ

ಕಾಂಗ್ರೆಸ್ ಸೇವಾದಳ

ಕಾಂಗ್ರೆಸ್ಸಿನ ಗುರಿಗನುಸಾರವಾಗಿ ರಾಷ್ಟ್ರಕ್ಕೆ ಸುಸಂಘಟಿತವಾಗಿ ಶಿಸ್ತಿನಿಂದ ಸೇವೆ ಸಲ್ಲಿಸಲು ಅನುಕೂಲವಾಗುವಂತೆಯೂ, ಅವಶ್ಯಕ ಸಂದರ್ಭಗಳಲ್ಲಿ ಜನರ ಗೌರವ, ಆಸ್ತಿ ಮತ್ತು ಪ್ರಾಣರಕ್ಷಣೆಯ ಹೊಣೆ ಹೊತ್ತು ಶಾಂತಿದಳದಂತೆ ದುಡಿದು ಪರಿಹಾರ ನಡೆಸುವುದಕ್ಕಾಗಿಯೂ ಸೇವಾದಳವೊಂದನ್ನು ಡಾ॥ ಹಾ ನವಾಜರ ನಾಯಕತ್ವದಲ್ಲಿ ಸ್ಥಾಪಿಸಲು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತೀರ್ಮಾನಿಸಿರುತ್ತದೆ

ಬರ್ಮಾ ಖೈದಿಗಳ ದಂಗೆ

ಬರ್ಮದ ತುರಂಗಗಳಲ್ಲಿರುವ ಖೈದಿಗಳು ಅಧಿಕಾರಿಗಳ ಆಜ್ಞೆಯನ್ನು ಉಲ್ಲಂಘಿಸಿ ಆಹಾರವನ್ನು ತೆಗೆದುಕೊಳ್ಳಲು ನಿರಾಕರಿಸಿದ್ದಾರೆ. ತಮ್ಮನ್ನೆಲ್ಲಾ ಸಾರ್ವತ್ರಿಕವಾಗಿ ಬಿಡುಗಡೆ ಮಾಡಬೇಕೆಂದು ಪ್ರಾರ್ಥಿಸಿದ್ದುದನ್ನು ಸರ್ಕಾರದವರು ನಿರಾಕರಿಸಿರುವುದರಿಂದ ಕಮ್ಯೂನಿಸ್ಟರ ಚಿತಾವಣೆಗೊಳಗಾಗಿ ಈ ರೀತಿ ದಂಗೆ ಎದ್ದಿರುವುದಾಗಿ ವರದಿಯಾಗಿದೆ

ಪಾನನಿರೋಧ ಪ್ರಶ್ನಾವಳಿ

ಸರ್ಕಾರದವರಿಂದ ನೇಮಿತವಾಗಿರುವ ಪಾನನಿರೋಧ ಸಮಿತಿಯವರು ಪ್ರಶ್ನಾವಳಿಯೊಂದನ್ನು ಸಿದ್ಧಗೊಳಿಸಿ ಸಾರ್ವಜನಿಕರಿಗೂ, ಸಂಸ್ಥೆಗಳಿಗೂ ಕಳುಹಿಸಿದ್ದಾರೆ. ಅಂತಹ ಅಭಿಪ್ರಾಯಗಳನ್ನು ಸಂಗ್ರಹಿಸಿ ಜನರಲ್ಲಿ ಮದ್ಯಪಾನದ ಅಭ್ಯಾಸವನ್ನು ಬಿಡಿಸುವ ಮತ್ತು ಪಾನನಿರೋಧವನ್ನು ಜಾರಿಗೆ ತರುವ ವಿಧವನ್ನು ಪರಿಶೀಲಿಸುವುದೇ ಇದರ ಉದ್ದೇಶ ಉತ್ತರಗಳನ್ನೊಳಗೊಂಡ ಪ್ರಶ್ನಾವಳಿಯನ್ನು ಈ ಮಾಹೆ ೨೫ ನೇ ತಾ॥ ನೊಳಗಾಗಿ ವಾಪಸು ಕಳುಹಿಸಬೇಕೆಂದು ಸಮಿತಿಯ ಕಾರ್ಯದರ್ಶಿಯವರು ಕೋರಿರುತ್ತಾರೆ.

ಬಂಗಾಳವನ್ನು ವಿಭಜಿಸುವ ಪ್ರಶ್ನೆ ಏಳಲಿದೆ

ಶಂಭಾಬಿನಂತೆಯೇ ಬಂಗಾಳದಲ್ಲೂ ಪರಿಸ್ಥಿತಿ ಮುಂದ ವರಿದರೆ ಆಗ್ಗೆ ಬಂಗಾಳವನ್ನು ಬೇರೆ ಬೇರೆ ಭಾಗಗಳನ್ನಾಗಿ ಮಾಡಲು ಸೂಚನೆಯನ್ನು ಕೊಡಲಾಗುವುದೆಂದು ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಮದ್ರಾಸಿನಲ್ಲಿ ತಿಳಿಸಿದ್ದಾರೆ

ಡಚ್ ವಿಮಾನ ಇಳಿಯಲು ಭಾ॥ ಸರ್ಕಾರದ ಪ್ರತಿಬಂಧಕ

ಡಚ್ ರಾಯಲ್ ಪ್ಯಾಸೆಂಜರ್ ವಿಮಾನಗಳು ಭಾರತದ ನಿಲ್ದಾಣದಲ್ಲಿ ಇಳಿಯುವುದನ್ನು ಭಾರತ ಕೇಂದ್ರ ಸರ್ಕಾರವು ಪ್ರತಿಬಂಧಿಸಿ ಆಜ್ಞೆಯನ್ನು ಹೊರಡಿಸಿದೆಯೆಂದು ಗೊತ್ತಾಗಿದೆ ನೆದರ್‌ಲೆಂಡ್ಸಿನೊಡನೆ ಭಾರತವು ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳಲು ನಿರಾಕರಿಸಿದೆಯೆಂದೂ, ಇಂಡೋನೇಷಿಯಾದೊಡನೆ ಭಾರತವು ವ್ಯಾಪಾರ ಸಂಬಂಧವನ್ನು ಬೆಳಸಲು ಇಷ್ಟಪಡುವದೆಯೆಂದೂ ತಿಳಿದುಬಂದಿದೆ.

ಕಾಂ॥ ಕಾರ್ಯಕಾರಿ ಸಮಿತಿಗೆ ಜೆ. ಸಿ. ಕುಮಾರಪ್ಪನವರು

ಶ್ರೀ ಜೈಪ್ರಕಾಶನಾರಾಯಣ್‌ರವರ ಸ್ಥಾನದಲ್ಲಿ ಶ್ರೀ ಜೆ. ಸಿ. ಕುಮಾರಪ್ಪನವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಸದಸ್ಯರನ್ನಾಗಿ ನೇಮಿಸಲಾಗುವುದೆಂದು ಗೊತ್ತಾಗಿದೆ

ಸದ್ಯಕ್ಕೆ ಗಾಂಧಿಜಿಯವರ ಉಪವಾಸವಿಲ್ಲ

'ಸದ್ಯಕ್ಕೆ ನಾನು ಆಮರಣಾಂತ ಉಪವಾಸವನ್ನು ಕೈಗೊಳ್ಳುವ ಉದ್ದೇಶ್ಯಹೊಂದಿಲ್ಲ ಆದರೆ ಈಗ ನನಗೆ ಗೋಚರವಾಗದೇ ಇರುವಂತಹ ಯಾವುದಾದರೂ ಸಂದರ್ಭವು ಮುಂದೆ ಒದಗುವುದಾದರೆ ಆ ಕಾಲಕ್ಕೆ ಉಪವಾಸ ಕೈಗೊಳ್ಳಬೇಕಾಗಿ ಬರಬಹುದು' ಎಂದು ಗಾಂಧಿಜಿಯವರು ತಿಳಿಸಿದ್ದಾರೆ

ಕಮ್ಯೂನಿಸ್ಟ್ ಮೇಲೆ ಮೊಕದ್ದಮೆ

ಮೈಸೂರು ೧೧

ಮುನಿಸಿಪಲ್ ಅಧಿಕಾರಿಗಳಿಗೆ ಧಿಕ್ಕಾರ, ಕಮ್ಯೂನಿಸ್ಟ್ ಪಕ್ಷಕ್ಕೆ ಜಯ ... ಮುನಿಸಿಪಲ್ ಅಧಿಕಾರಿಗಳ ಆಜ್ಞೆಯನ್ನು ಮುರಿದಿದ್ದಕ್ಕಾಗಿ ಕಮ್ಯೂನಿಸ್ಟ್ ಪಕ್ಷದ ಶ್ರೀಗಳಾದ ಬಿ ಎಲ್. ರಾಮಮೂರ್ತಿ ವಕೀಲ ಎ ಪಿ ಶಂಕರನಾರಾಯಣರವರ ಮೇಲೆ ಪೋಲೀಸರು ಎಫ್ ಐ. ಆರ್. ಹಾಕಿದ್ದಾರೆ. ಮುಂದೆ ಹೂಡಿರುವ ಮೊಕದ್ದಮೆಯು ಇದೇ ೨೧ನೇ ತಾ॥ಗೆ ಮುಂದುವರಿಯಿತು.

ಮರ್ರಿ ಕ್ಷೇತ್ರದ ಮೇಲೆ ಹಜಾರ ಜನಗಳ ಧಾಳಿ

ಪಂಜಾಬ್ ಪ್ರಾಂತ್ಯದ ಮರ್ರಿ ಜಿಲ್ಲೆಯ ಪ್ರದೇಶದ ಮೇಲೆ ಗಡಿನಾಡಿನ ಹಜಾರಾ ಜಿಲ್ಲೆಯ ಜನಗಳು ಮುತ್ತಿಗೆ ಹಾಕಿ, ಧಾಳಿ ನಡೆಸಿರುವ ವಾರ್ತೆ ಬಂದಿದೆ ಅಲ್ಲಿನ ಅಂಗಡಿಗಳನ್ನೆಲ್ಲಾ ಅವರು ಸುಟ್ಟು ಭಸ್ಮ ಮಾಡಿದ್ದಾರೆ. ಮುಲ್ತಾನ್ ಹಳ್ಳಿಗಳಲ್ಲಿ ಆಸ್ತಿಪಾಸ್ತಿಗಳ ಲೂಟಿ ನಡೆದಿದೆ. ಮನೆ ಮಠಗಳು ಅಗ್ನಿಗೆ ಆಹುತಿಯಾಗಿವೆ ದರೋಡೆ, ಲೂಟಿಗಳು ಒಂದೇ ಸಮನೆ ಸಾಗುತ್ತಿವೆ. ರಾವಲ್ಪಿಂಡಿಗೆ ಗೂರ್ಖರು ವಿಮಾನದಲ್ಲಿ ತೆರಳಿದ್ದಾರೆ. ತಕ್ಷಶಿಲೆಯಲ್ಲಿ ಧಾಳಿಕಾರರ ಕೃತ್ಯಗಳು ಪರಮಾವಧಿಯನ್ನೇರಿವೆ ಗಲಭೆ ಕ್ಷೇತ್ರಗಳಿಗೆ ವಿಮಾನ ಸೈನ್ಯಗಳನ್ನು ಕಳುಹಿಸಲಾಗಿದೆ ದಕ್ಷಿಣ ಭಾರತದಿಂದ ಹೆಚ್ಚು ಮಿಲಿಟರಿ ಕರೆಸಲಾಗುವುದೆಂದು ತಿಳಿದುಬಂದಿದೆ ಆಜ್ಞೋಲ್ಲಂಘನೆ ಮಾಡುವವರನ್ನು ಕಂಡಕಡೆಯೇ ಗುಂಡಿನಿಂದ ಸುಡಲು ಸೈನಿಕರಿಗೆ ಆಜ್ಞೆ ಕೊಡಲಾಗಿದೆ.

ಗೋಪಾಲರಾಯರ ಮೊಕದ್ದಮೆ

ಸ್ವಂ ಸು. ಪ್ರೋ] ಬೆಂಗಳೂರು ೧೧

ಧರ್ಮರಕ್ಷಕರ ಗೋಪಾಲರಾಯರ ದರೋಡೆ ಮೊಕದ್ದಮೆಯಲ್ಲಿ ಶ್ರೀ ಟಿ. ಆರ್ ಮಾಧವಕೃಷ್ಣಯ್ಯನವರು ಈದಿನ ಈರೀತಿ ಸಾಕ್ಷ್ಯವಿತ್ತರು—

೧೯೪೫ ರಿಂದ ಗೋಪಾಲರಾಯರನ್ನು ಬಲ್ಲೆ. ತನ್ನ ಬಗ್ಗೆ ಪ್ರಮುಖರು ಬರೆದಿದ್ದ ಪ್ರಶಂಸಾಪತ್ರಗಳನ್ನು ಅವರು ನನಗೆ ತೋರಿಸಿದರು. ರೈಸ್ಟೆ ಏಜನ್ಸಿ ತೆಗೆದುಕೊಳ್ಳುತ್ತೇನೆಂದು ಅವರು ನನ್ನಲ್ಲಿ ಹೇಳಿದ್ದರು. ನಾನು ಅವರಿಗೆ ೪॥ ಲಕ್ಷ ರೂ. ಗಳನ್ನು ಕೊಟ್ಟಿದ್ದೇನೆ ೮ ನೇ ತಾ॥ ನಡೆದ ಸಭೆಯಲ್ಲಿ ನರಸಿಂಹರಾವ್ ಮುಂತಾದವರಿಗೆ ನಾನೇ ಒಡವೆಗಳನ್ನು ಕೊಟ್ಟಿರುವುದಾಗಿ ಅವರು ಹೇಳಿದ್ದರು. ಈ ವಿಚಾರವನ್ನು ನಾನು ಶ್ರೀ ಸೋಮಪ್ಪನವರಿಗೆ ಬರೆದ ಕಾಗದದಲ್ಲಿ ತಿಳಿಸಿದ್ದೆನು.

ಸೆನೆಟ್ಟಿಗೆ ನಾಮಕರಣ

ದಿವಂಗತರಾದ ಡಾ॥ ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್‌ರವರ ಸ್ಥಾನದಲ್ಲಿ ಫೆಡರಲ್ ಇಂಡಿಯಾ ಮತ್ತು ಇಂಡಿಯನ್ ಸ್ಟೇಟ್ಸ್ ಪತ್ರಿಕಾ ಸಂಪಾದಕರಾದ ಶ್ರೀ ಎಚ್. ಶ್ರೀಕಂಠಯ್ಯನವರನ್ನು ಸೆನೆಟ್ಟಿಗೆ ಘನಸರಕಾರದವರು ನಾಮಕರಣಮಾಡಿದ್ದಾರೆ.

§ ಸಕ್ಕರೆ ಮತ್ತು ಬೆಲ್ಲದ ದರದ ಹತೋಟಿ ಬಗ್ಗೆ ನ್ಯಾಯಾಂಗ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ಸರ್ಕಾರದವರು ರಚಿಸಿದ್ದಾರೆ

ಕಾಶ್ಮೀರದೊಳಕ್ಕೆ ಪಂಜಾಬ, ನಿರಾಶ್ರಿತರ ನುಗ್ಗುವಿಕೆ

ಪಂಜಾಬಿನಿಂದ ೫೦ ಮಂದಿ ನಿರಾಶ್ರಿತರು ಕಾಶ್ಮೀರದ ಗಡಿ ದಾಟಿ ಸಂಸ್ಥಾನದೊಳಕ್ಕೆ ಪ್ರವೇಶಿಸಿದ್ದಾರೆ ಅವರೆಲ್ಲರೂ ಗಲಭೆ ಪೀಡಿತ ಹಳ್ಳಿಗಳಿಂದ ಬಂದವರು ಶ್ರೀನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಚಾರವನ್ನು ನಿಷೇಧಿಸಲಾಗಿದೆ. ಮೋಟಾರ್ ಸಂಚಾರವೂ ನಿಂತು ಹೋಗಿದೆ ಮರ್ರಿ ಬಳಿ ೩ ಹಳ್ಳಿಗಳನ್ನು ಧಾಳಿಕಾರರು ಸುಟ್ಟು ಹಾಕಿದ್ದಾರೆ ಪ್ರತ್ಯಕ್ಷ ಘರ್ಷಣೆ ... ಸ್ಥಾನದ ಗಡಿಯೊಳಕ್ಕೆ ಪ್ರವೇಶಿಸದಂತೆ ಮಿಲಿಟರಿ ಕಾವಲನ್ನು ಹಾಕಲಾಗಿದೆ

ಸಾಧ್ವಿ
ತಾ|| ೧೧-೩-೪೭ ಮಂಗಳವಾರ

ಬಟ್ಟೆ ಇಲ್ಲ

ಹಿಂದೆ ಗೌರಿ, ಗಣೇಶ, ರಂಜಾನ್ ಮುಂತಾದ ಹಬ್ಬಗಳ ಕಾಲದಲ್ಲಿ ಹೆಚ್ಚಿನ ಬಟ್ಟೆ ಸರಬರಾಜನ್ನು ಏರ್ಪಡಿಸಲಾಗಿತ್ತಷ್ಟೆ. ಅದರಂತೆಯೇ ಬರುವ ಯುಗಾದಿಗೂ ಏರ್ಪಾಡು ಮಾಡಬೇಕೆಂದು ಸಾರ್ವಜನಿಕರು ಒತ್ತಾಯಪಡಿಸುತ್ತಿದ್ದರು. ಸಿವಿಲ್ ಸಪ್ಲೈ ಅಧಿಕಾರಿಗಳು ಕೊಟ್ಟಿರುವ ಹೇಳಿಕೆಯಿಂದ ಹೊಸ ವರ್ಷಕ್ಕೆ ಬಟ್ಟೆ ಸರಬರಾಜಿನ ವಿಶೇಷ ಏರ್ಪಾಡು ಯಾವುದೂ ಇಲ್ಲವೆಂದು ತಿಳಿದು ಬಂದಿದೆ. ಇದರಿಂದ ಮಹಾಜನರಿಗೆ ಬಹಳ ಆಶಾಭಂಗಕ್ಕೆ ಕಾರಣವಾಗಿರುತ್ತದೆ.

ಹೆಚ್ಚಿನ ಪ್ರಮಾಣದಲ್ಲಿ ಬಟ್ಟೆಯನ್ನು ಒದಗಿಸಲು ಅವಕಾಶವಿಲ್ಲವಾದರೂ ಒಂದು ತಿಂಗಳ ಬಟ್ಟೆಯನ್ನು ಮುಂಗಡವಾಗಿಯೇ ತೆಗೆದುಕೊಳ್ಳಲು ಸೌಲಭ್ಯವನ್ನು ಕಲ್ಪಿಸುವುದಾಗಿ ಅಧಿಕಾರಿಗಳು ಹೇಳಿರುವುದು ಅಷ್ಟು ಪ್ರಮಾಣವೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ಸಮಸ್ತ ಪದಾರ್ಥಗಳಿಗೂ ಉಂಟಾಗಿರುವ ದುರ್ಭಿಕ್ಷದ ಈ ಸಮಯದಲ್ಲಿ ಬಟ್ಟೆಗೂ ಬರಗಾಲ ಬಂದಿರುವುದರಿಂದ ಇರುವುದನ್ನೇ ಸದುಪಯೋಗಪಡಿಸಿಕೊಂಡು ಸಾರ್ವಜನಿಕರು ಸಂತೃಪ್ತರಾಗಬೇಕಾಗಿದೆ.

ಪಾಲಿ ಇರತಕ್ಕ ದಾಸ್ತಾನು ಅತ್ಯಂತ ಕಡಿಮೆಯಾಗಿರುವುದೇನೋ ನಿಜ. ಆದರೆ ಇರುವಷ್ಟನ್ನಾದರೂ ಸರಿಯಾಗಿ ವಿನಿಯೋಗಿಸದೆ ವಿಶೇಷ ಲೋಭ ದೋಷಗಳೂ, ಪಕ್ಷಪಾತಗಳೂ, ಕಾರ್ಕತವ್ಯಗಳೂ, ಮೋಸ ಮಾರಿಗಳೂ ನಡೆಯುತ್ತಿವೆಯೆಂಬ ದೂರುಗಳು ಬಹಳವಾಗಿ ಬರುತ್ತಿವೆ. ಮೊನ್ನೆ ಜಿಲ್ಲಾಧಿಕಾರಿಗಳು ನಡೆಸಿದ ಪರಿಶೀಲನೆಯಲ್ಲಿ ಹಲವು ವರ್ತಕರು ನಡೆಸುತ್ತಿರುವ ವಂಚನೆಯು ಎಷ್ಟರ ಮಟ್ಟಿಗೆ ಇರುವುದೆಂಬುದು ವೇದ್ಯವಾಯಿತು. ಇನ್ನೂ ಇಂತಹ ಪ್ರಸಂಗಗಳು ಹೇರಳವಾಗಿರುತ್ತವೆ. ಆದುದರಿಂದಲೇ ಪ್ರಜೆಗಳಿಗೆ ಬೇಕಾದ ಸಾಮಗ್ರಿಗಳೂ ಸರಿಯಾದ ದರದಲ್ಲಿ ದೊರೆಯದೆ ವಿಶೇಷ ತೊಂದರೆಗೆ ಕಾರಣವಾಗಿರುತ್ತದೆ. ಹಳೆಯ ವರ್ಷವು ಕಳೆದು, ಹೊಸ ವರ್ಷವು ಬರಲಿರುವ ಈ ಸಮಯದಲ್ಲಿಯಾದರೂ ಇಂತಹ ದುರ್ವ್ಯಾಪಾರಗಳು ತಪ್ಪಿ ನಿಯಮಿತವಾದ ರೀತಿಯಲ್ಲಿ ಮಹಾಜನರಿಗೆ ಸಾಮಗ್ರಿಗಳು ದೊರೆಯುವಂತಾಗಲೆಂದು ಆಶಿಸಲಾಗಿದೆ.

ಮುಖ್ಯವಾಗಿ ಬಟ್ಟೆಯ ಕೂಪನ್ನುಗಳು ಇದ್ದರೂ ಅವುಗಳಲ್ಲಿ ಅವಕಾಶವಿರುವಷ್ಟು ಬಟ್ಟೆಯೂ ಸಹ ಈಗ ಸರಿಯಾಗಿ ದೊರೆಯುತ್ತಿಲ್ಲವೆಂಬ ಕೂಗುಗಳು ಬಹಳವಾಗಿ ಕೇಳಿ ಬರುತ್ತಿವೆ. ಬಟ್ಟೆಯನ್ನು ಪಡೆಯಲು ಅಂಗಡಿಗಳಿಗೂ ಸೊಸೈಟಿಗಳಿಗೂ ಗೊತ್ತು ಗುರಿಯಿಲ್ಲದಂತೆ ಯಾತ್ರೆ ನಡೆಸಿ, ಗಂಟೆಗಟ್ಟಲೆ ಕಾಯಬೇಕಾಗಿದೆಯೆಂದೂ ಸಹ ಹೇಳಲಾಗಿದೆ. ಇವುಗಳನ್ನು ತಪ್ಪಿಸಿ ಪ್ರತ್ಯಕ್ಷದಲ್ಲಿ ಕೂಪನ್ನುಗಳ ಪ್ರಕಾರ ಅವಕಾಶವಿರುವಷ್ಟು ಬಟ್ಟೆಯಾದರೂ ಎಲ್ಲರಿಗೂ ಸುಲಭವಾಗಿ ದೊರೆಯುವಂತೆ ಮಾಡುವುದು ಅಧಿಕಾರಿಗಳ ಮುಖ್ಯ ಕರ್ತವ್ಯ.

ಪ್ರಕಾಶಂ ಮಂತ್ರಿಮಂಡಲದ ರಾಜೀನಾಮೆ

ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಕಾರ್ಯದರ್ಶಿ ಶಂಕರರಾವ್ ದೇವ್‌ರವರೊಡನೆ ಮದ್ರಾಸಿಗೆ ಆಗಮಿಸಿ ಮಂತ್ರಿಮಂಡಲದ ಬಿಕ್ಕಟ್ಟನ್ನು ಪರಿಶೀಲಿಸುತ್ತಿದ್ದಾರೆ. ಪ್ರಮುಖ ಶಾಸನ ಸಭಾ ಸದಸ್ಯರಿಗೆ ಅವರು ಭೇಟಿಯನ್ನಿತ್ತಿದ್ದರು. ಸಮಸ್ಯೆಯನ್ನು ಸುಗಮವಾಗಿ ಬಗೆಹರಿಸಲು ಸಹಾಯ ಮಾಡುವ ಸಲುವಾಗಿ ಪ್ರಧಾನಿ ಶ್ರೀ ಟಿ. ಪ್ರಕಾಶಂರವರು, ತಮ್ಮ ಮತ್ತು ಇತರ ಮಂತ್ರಿಗಳ ರಾಜೀನಾಮೆ ಪತ್ರವನ್ನು ಅಧ್ಯಕ್ಷ ಕೃಪಲಾನಿಯವರ ವಶಕ್ಕೆ ಒಪ್ಪಿಸಿದ್ದಾರೆ.

ವಿದೇಶಾಂಗ ಮಂತ್ರಿಗಳ ಸಭೆ

ಮಾಸ್ಕೋ ನಗರದಲ್ಲಿ ಮಿ|| ಮೊಲಟೊವರವರ ಅಧ್ಯಕ್ಷತೆಯಲ್ಲಿ ಚತುರ್‌ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳ ಸಭೆಯು ನಿನ್ನೆಯಿಂದ ಆರಂಭವಾಯಿತು. ಜರ್ಮನಿ ಮತ್ತು ಆಸ್ಟ್ರಿಯ ಕೌಲಿನ ವಿಚಾರವಾಗಿ ಒಪ್ಪಂದವಾಗುವ ಸೂಚನೆಗಳು ಕಂಡು ಬಂದಿವೆಯೆಂದೂ, ಇದರಿಂದ ಪ್ರಪಂಚದ ಶಾಂತಿಯ ವ್ಯವಸ್ಥೆ ಮಾಡಲು ಅನುಕೂಲವಾಗುವುದೆಂದೂ ಅಮೆರಿಕದ ಸ್ಟೇಟ್ ಸೆಕ್ರೆಟರಿ ಜಾರ್ಜ್ ಮಾರ್ಷಲ್‌ರವರು ತಿಳಿಸಿದ್ದಾರೆ.

ಅಜಿತ್ ಸಿಂಗರ ಆಗಮನ

೩೮ ವರ್ಷಗಳ ಕಾಲ ಅಜ್ಞಾತವಾಸದಲ್ಲಿದ್ದು ಇತ್ತೀಚೆಗೆ ಜರ್ಮನಿಯಲ್ಲಿ ಬಂಧನದಲ್ಲಿದ್ದು ಬಿಡುಗಡೆಯಾದ ಭಾರತದ ಕ್ರಾಂತಿಕಾರ ಸ|| ಅಜಿತ್ ಸಿಂಗರು ಮೊನ್ನೆ ಕರಾಚಿಗೆ ಆಗಮಿಸಿದರು

ಕ್ರಿಕೆಟ್ ಆಟಗಾರರಿಗೆ ೫೦ ಸಾವಿರ ಪೌಂಡು

ಆಸ್ಟ್ರೇಲಿಯದಲ್ಲಿ ಆಟವಾಡುತ್ತಿದ್ದ ಇಂಗ್ಲೆಂಡಿನ ಎಂ. ಸಿ. ಸಿ ಕ್ರಿಕೆಟ್ ಆಟಗಾರರಿಗೆ ಪಂದ್ಯಗಳ ಒಟ್ಟು ಲಾಭದಲ್ಲಿ ೫೦ ಸಹಸ್ರ ಪೌಂಡನ್ನು ಕೊಡಲಾಗುವುದು.

ಬರ್ಮಾದಲ್ಲಿ ಎರಡನೇ ರೈಲ್ವೆ ಅಪಘಾತ

ಮಧ್ಯ ಬರ್ಮಾದ ಬಳಿ ಸರ್ಕಾ[ರ] ವಿರೋಧ ಪಕ್ಷದವರ ಚಳುವಳಿಯ ಫ[ಲ]ವಾಗಿ ಎರಡನೇ ರೈಲ್ವೆ ಅಪಘಾ[ತ]ವು ನಡೆದು ೨೫ ಜನರು ಸತ್ತರೆಂ[ದೂ ಅ]ನೇಕರಿಗೆ ಗಾಯಗಳಾಗಿವೆಯೆಂದೂ [ವರದಿ]ಯಾಗಿದೆ

Edited, printed and publish[ed by] A. R. Nagarajan at the Sadhvi [Press] D. Subbiah Road, Mysore

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರ ಆಫೀಸು

ನೋಟಿಫಿಕೇಷನ್

೧೯೪೭ ನೇ ಮಾರ್ಚಿ ಮಾಹೆ ೧೨ ನೇ ತಾರೀಕು ಬುಧವಾರ ಮಧ್ಯಾಹ್ನ ೪ [ಘಂಟೆ]ಯವರಿಗೆ ಈ ಕೆಳಗೆ ನಮೂದು ಮಾಡಿರತಕ್ಕ ಕೆಲಸಗಳಿಗಾಗಿ ಸೀಲು ಮಾಡಿ[ದ] ಟೆಂಡರುಗಳನ್ನು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ತೆಗೆದುಕೊಳ್ಳಲಾ[ಗುವುದು].

ಟೆಂಡರುಗಳನ್ನು ಸೀಲು ಮಾಡಿದ ಕವರಿನಲ್ಲಿಟ್ಟು ಮೇಲುಗಡೆಯಲ್ಲಿ ಆಯಾ ಕೆಲಸದ ಟೆಂಡರು ಎಂದು ಬರೆದು ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟ್[ರವರಿಗೆ] ಎಂದು ಅಡ್ರೆಸ್ ಬರೆದು ಕಳುಹಿಸತಕ್ಕದ್ದು. ಪ್ರತಿಯೊಂದು ಕೆಲಸಕ್ಕೂ ಬೇರೆ ಟೆಂಡರು ಇರಬೇಕು.

ಠೇವಣಿಗಾಗಿ ಪ್ರತಿಯೊಂದು ಕೆಲಸಕ್ಕೂ ೧೦೦ ರೂಪಾಯಿಗಳನ್ನು ಖಜಾನೆ[ಯಲ್ಲಿ] ಮೈಸೂರು ಡಿಸ್ಟ್ರಿಕ್ಟ್ ಫಂಡಿಗೆ ಡಿಪಾಜಿಟ್ ಮಾಡಿ ಸದರಿ ಡೂಪ್ಲಿಕೇಟು ಚಲ[ನ್ನನ್ನು] ಟೆಂಡರು ಜೊತೆಯಲ್ಲಿ ಹಾಜರು ಮಾಡಬೇಕು.

ಹೆಚ್ಚಿಗೆ ವಿಷಯಗಳನ್ನು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸಿನಲ್ಲಿ ಆಫೀಸು ದಿನ[ಗಳಲ್ಲಿ] ಮಧ್ಯಾಹ್ನ ೧೨ ರಿಂದ ಸಾಯಂಕಾಲ ೫ ಗಂಟೆಯವರೆವಿಗೆ ಇಷ್ಟವುಳ್ಳ ಕಂಟ್ರಾಕ್ಟ[ರುಗಳು] ತಿಳಿಯಬಹುದು.

ಯಾವ ಟೆಂಡರನ್ನು ಅಖೈರಾಗಿ ಒಪ್ಪಿಕೊಳ್ಳುವುದು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಅಧಿಕಾರಕ್ಕೆ ಒಳಪಟ್ಟಿರುತ್ತೆ ಮತ್ತು ಅಂಗೀಕಾರ ಮಾಡದೆ ಇರತಕ್ಕ ಟೆಂಡರ[ುಗಳಿಗೆ] ಕಾರಣವನ್ನೂ ಸಹ ಸೂಚಿಸಲಾಗುವುದಿಲ್ಲ.

೧. ಪಿರಿಯಾಪಟ್ಟಣದ ತಾಲ್ಲೂಕು ಕಟ್ಟೆಮಳಲವಾಡಿ - ರಾವಂದೂರು ಅತ್ತಿಗೋಡು ರಸ್ತೆಯಲ್ಲಿ ೩ ಕಂಡಿಯ ಮೋರಿಯನ್ನು ಕಟ್ಟುವುದು ರೂ. 7

೨. ಹುಣಸೂರು ತಾಲ್ಲೂಕು ಬಸಲಾಪುರದಿಂದ ಅರೇನಹಳ್ಳಿಗೆ ಹೋಗತಕ್ಕ ರಸ್ತೆ ರಿಪೇರಿ ,, 17

೩. ಮೈಸೂರು ತಾಲ್ಲೂಕು ಜಯಪುರ - ಕಡಕೊಳ ರಸ್ತೆಗೆ ಜಲ್ಲಿ ಹಾಕುವುದು ,, 88

೪ ಚಾಮರಾಜನಗರದ ತಾಲ್ಲೂಕು ಕಮರವಾಡಿಯಿಂದ ಸಂತೆಮರಹಳ್ಳಿ ದೊಡ್ಡ ರಸ್ತೆಗೆ ಸೇರುವಂತೆ ಒಂದು ರಸ್ತೆಯನ್ನು ಮಾಡುವುದು ,, 30

ಟಿ. ಸಿ. ಹೊನ್ನ
ಪ್ರೆಸಿಡೆಂಟ್,
ಡಿಸ್ಟ್ರಿಕ್ಟ್ ಬೋರ್ಡ್, ಮೈ

ಪ್ರಕಟಣೆ.

ಗೋಮಾ ಸಿಸ್ಟಂ ಜಾಗ್ರತೆ ತರಿಸಿಕೊಳ್ಳಿ
ಬುಕ್ ೧ ಕ್ಕೆ ೬-೪-೧

ಡಂಬ್ ಅನಿಮಲ್ ಚಾರಿಟಿ ಟಿಕೆಟ್ ಡ್ರಾಯಿಂಗ್ ತಾ|| ೨೫-೩-೪೭ಕ್ಕೆ ಇರುವುದನ್ನು ತಾ|| ೨೦-೪-೪೭ಕ್ಕೆ ಬದಲಾಯಿಸಿರುತ್ತೆ. ಒಂದು ಬುಕ್ ಪೂರ್ತಿಯಾಗಿ ಮನಿಆರ್ಡರ್ ಮಾಡಿ ತರಿಸಿದವರಿಗೆ ಮಾತ್ರ ರಿಜಲ್ಟ್ ಕಳುಹಿಸುತ್ತೇವೆ. ಇತರರು ಪೇಪರಿನಲ್ಲಿ ರಿಜಲ್ಟ್ ನೋಡತಕ್ಕದ್ದು. ಈ ಸಲ ಹಂಚಿನ ಮತ್ತು ಲಂಡನ್ ಚರ್ಚಿಗೆ ಧರ್ಮಾರ್ಥವಾಗಿ ಕೊಡುತ್ತೇವೆ. ನಿಧಾನವಾಡಿದರೆ ಟಿಕೆಟ್ ದೊರೆಯುವುದಿಲ್ಲ

Address.
HON. SECRETARY,
All India Dumb Animals
Charity Fund Office,
2812, Halladakeri, MYSORE

ರಾಜಕಮಲ್
೯-೩-೪೭ ರಿಂದ ೪ ನೇ ವಾರ
1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ
ಶ್ರೀ ಕೃಷ್ಣಲೀಲಾ
(ಕನ್ನಡ ಚಿತ್ರ)
ಇಂಪಾದ ಗಾನಗಳು! ಸೊಗಸಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!!
ಇವೆಲ್ಲವನ್ನೂ ಇಂದೇ ನೋಡಿ.

ಕರ್ನಾಟಕದಲ್ಲೆಲ್ಲಾ ಅತ್ಯಂತ ವಿಜಯ ಹೊಂದಿರುವ ಮೈಸೂರು
ಎಸ್. ಎಸ್. ನಾಟಕ ಮಂಡಳಿಯವರ ಕನ್ನಡ ಚಿತ್ರ
★ ಹರಿಶ್ಚಂದ್ರ ★ (ಹೊಸ
ಅನೇಕ ಭಾಗಗಳಲ್ಲಿ ವಿವಿಧ ವರ್ಣಗಳಿಂದ ಚಿತ್ರಿಸಿರುತ್ತೆ
ಪಾತ್ರ:- ಸುಬ್ಬಯ್ಯ ನಾಯ್ಡು, ಲಕ್ಷ್ಮೀಬಾಯಿ, ನಾಗೇಂದ್ರರಾವ್
—: ಮುಂದಿನ ಬದಲಾವಣೆ :—
ಮೈಸೂರು ಶ್ರೀ ಗಣೇಶ ಟಾಕೀಸಿನಲ್ಲಿ
ಕುಥ] [Krishna Pictures Release

ಯುಗಾದಿ ಹಬ್ಬಕ್ಕೆ { ಹೊಸ ಹೊಸ ನಮೂನೆಯಲ್ಲಿ ಹೊಸ ಹೊ
ಸೀರೆಗಳು ಸಾವಿರಾರು ಬಂದಿವೆ.
★ ಬಾಬುಸಾರ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು. ★

ರಿಜಿ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೧೨—೩—೪೭ [ಸಂಚಿಕೆ ೧೮೨

ಹೊಸವೈಸರಾಯರಿಂದ ಕೇಂದ್ರ ಸರ್ಕಾರದ ರದ್ದು

ರಾಜಧಾನಿಗೆ ಆಚಾರ್ಯ ಕೃಪಲಾನಿಯವರ ಆಗಮನ

ಮೈಸೂರು ೧೨

ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವ ರು ಈ ದಿನ ಮದರಾಸಿನಿಂದ ವಿಮಾನದಲ್ಲಿ ಬೆಂಗಳೂರಿನ ಮಾರ್ಗವಾಗಿ ತಿರುವಾಂಕೂ ರಿಗೆ ತೆರಳುವರು. ಇದೇ ೧೯ ನೇ ತಾ॥ ಬೆಂಗಳೂರಿಗೆ ಆಗಮಿಸಿ ೨೦ ನೇ ತಾ॥ ಸಂ ಸ್ಥಾನದ ಪತ್ರಿಕೋದ್ಯೋಗಿ ಸಂಘಕ್ಕೆ ಭೇಟಿ ಕೊಡುವರೆಂದೂ ಅನಂತರ ಸಂಸ್ಥಾನದಲ್ಲಿ ಪ್ರವಾಸ ಮಾಡುವರೆಂದೂ ಗೊತ್ತಾಗಿದೆ. ಇದಕ್ಕಾಗಿ ಕರ್ನಾಟಕ ಪ್ರಾಂತ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪ ನವರು ಮದರಾಸಿಗೆ ಹೋಗಿ ಅವರನ್ನು ಪ್ರಾರ್ಥಿಸಿದ್ದರು. ೧೯ನೇ ತಾ॥ ಬೆಳಗ್ಗೆ ಆ ಚಾರ್ಯರು ತಲಚೇರಿಯಿಂದ ಮೈಸೂರು ನ ಗರಕ್ಕೆ ದಯಮಾಡಿಸುವರು. ಅದೇ ದಿನ ರಾತ್ರಿ ಬೆಂಗಳೂರಿಗೆ ತೆರಳುವರು.

ಕೀರ್ತನಕಾರ ಮಂಡಲಿ

ಕಳೆದ ಭಾನುವಾರ ಮೇಲ್ಕಂಡ ಸಂಘದ ಮಹಾಸಭೆಯು ಕಬೀರ್ ರಸ್ತೆಯ ಶ್ರೀ ಪಾಂಡುರಂಗಸ್ವಾಮಿ ದೇವಾಲಯದಲ್ಲಿ ಸೇರಿ ಸಂಘದ ಕಾರ್ಯ ನಿರ್ವಾಹಕ ಸಮಿತಿಯನ್ನು ರಚಿಸಿತು. ಶ್ರೀಗಳಾದ ಹೆಚ್. ಆರ್. ಗಮಕಿಯವರು ಅಧ್ಯಕ್ಷರಾಗಿಯೂ, ನಾರಕೀಯವರು ಉಪಾಧ್ಯಕ್ಷರಾಗಿಯೂ, ಶ್ರೀ ನ ಗಿರಿ ದಾಸರು ಕಾರ್ಯದರ್ಶಿಗಳಾಗಿ ಯೂ ಎಂ. ವಿ. ಶರ್ಮರು ಉಪಕಾರ್ಯದ ರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು.

ಪ್ರೆಸ್ ಕೆಲಸಗಾರರ ಸಭೆ

ಕಳೆದ ಭಾನುವಾರ ಮೇಲ್ಕಂಡ ಕೆಲಸ ಗಾರರ ಸಭೆಯು ವಿಜಯ ಏಜೆನ್ಸಿ ಕಟ್ಟಡ ದಲ್ಲಿ ಶ್ರೀ ಸೂರ್ಯನಾರಾಯಣ ಪಂಡಿತರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಶ್ರೀಗಳಾದ ಟಿ ಎಸ್ ಸುಬ್ಬಣ್ಣ ಮತ್ತು ಎ ರಾಮಣ್ಣ ನವರು ಸಂಘದ ಅವಶ್ಯಕತೆಯನ್ನು ಕುರಿ ತು ಭಾಷಣ ಮಾಡಿದರು. ಶ್ರೀಗಳಾದ ಸೂರ್ಯನಾರಾಯಣ ಪಂಡಿತರು ಅಧ್ಯಕ್ಷ ರಾಗಿಯೂ, ಸಿ ವೆಂಕಟಪ್ಪನವರು ಉಪಾ ಧ್ಯಕ್ಷರಾಗಿಯೂ, ಪಿ. ಕೃಷ್ಣಸ್ವಾಮಿಯವರು ಕಾರ್ಯದರ್ಶಿಗಳಾಗಿಯೂ, ಎಂ ಜೆ ಬೈ ರಪ್ಪನವರು ಉಪಕಾರ್ಯದರ್ಶಿಗಳಾಗಿ ಯೂ ಮತ್ತು ಶ್ರೀ ಪೊನ್ನುರಂಗಂರವರು ಖಜಾಂಚಿಗಳಾಗಿಯೂ ಚುನಾಯಿಸಲ್ಪ ಟ್ಟರು.

ರಾಗಿ ಸಾಗಿಸಿದ್ದಕ್ಕೆ ಶಿಕ್ಷೆ

ರಹದಾರಿಯಿಲ್ಲದೆ ೨೫೩॥ ಸೇರು ರಾಗಿ ಯನ್ನು ದೇವರಾಜ ಮೊಹಲ್ಲಾದಲ್ಲಿ ಸಾಗಿ ಸುತ್ತಿದ್ದ ಅಬ್ದುಲ್ ರಜಾಕ್ ಎಂಬುವನಿಗೆ ನಗರದ ಮ್ಯಾಜಿಸ್ಟ್ರೇಟರು ೧೫೦ ರೂ. ಜುಲ್ಮಾನೆ, ತಪ್ಪಿದರೆ ೩ ತಿಂಗಳ ಕಠಿಣ ಶಿಕ್ಷೆ ಯನ್ನು ನೆನ್ನೆ ವಿಧಿಸಿದರು.

ಗ್ರಂಥ ಸಮರ್ಪಣೆ

ಮೈಸೂರು ಶಿವಶರಣ ವಾಙ್ಮಯ ಪ್ರಕಾ ಶ ಕಾರ್ಯಾಲಯದವರು ಭಾರತದ ಶುಭಸೂ ಚನೆಯನ್ನು ಅತಿ ಸರಳವಾಗಿ ಬೋಧಿಸುವ "ಕಾಲಜ್ಞಾನ ಸಂಗ್ರಹ ಭಾಗ-೧" ಎಂಬ ಪ್ರಾಚೀನ ಗ್ರಂಥವನ್ನು ಪರಿಶೋಧಿಸಿ ಪ್ರಕ ಟಿಸಿರುತ್ತಾರೆ. ಈದಿನ ದೇವನೂರು ಮಠದ ಶ್ರೀ ಮುಮ್ಮಡಿ ರಂಜನ ಮುಪ್ಪಿನ ಮಹಾಸ್ವಾ ಮಿಯವರ ಸ್ಮಾರಕವಾಗಿ ಅವರ ಅಡಿದಾವ ರೆಗಳಿಗೆ ಸಂಪಾದಕರಾದ ಶ್ರೀ ಶಿವಬಸವ ಸ್ವಾಮಿ ಗಳವರು ಅದನ್ನು ಅರ್ಪಿಸುತ್ತಾರೆ.

? ನ್ಯಾಯವಿಧಾಯಕಸಭೆಯ ಬಜೆಟ್ ಅಧಿವೇಶನವು ಜೂನ್ ೧೯ನೇ ತಾ॥ ಆರಂಭ ವಾಗುವುದು.

ಚುನಾಯಿತ ಅಧ್ಯಕ್ಷರ ಬಗ್ಗೆ ಪ್ರಭುಗಳಿಗೆ ಮನವಿ

ಮೈಸೂರು ೧೨

ರಾಜಧಾನಿಯ ಪೌರಸಭೆಗೆ ಚುನಾಯಿತ ಅಧ್ಯಕ್ಷರನ್ನು ಕೊಡುವಂತೆ ಸರ್ಕಾರದ ವರಿಗೆ ಆಜ್ಞೆ ಮಾಡಲು ಮಹಾಸ್ವಾಮಿಯ ವರನ್ನು ಪ್ರಾರ್ಥಿಸುವ ಮನವಿಯು ಪೌರ ಸಭೆಯ ಉಪ ಸಮಿತಿಯವರಿಂದ ಈ ದಿನ ಸಮರ್ಪಿಸಲ್ಪಟ್ಟಿತೆಂದು ತಿಳಿದುಬಂದಿದೆ.

ತಾತ್ಕಾಲಿಕ ಸರ್ಕಾರದ ರಾಜೀನಾಮೆಯೋ?

ಹೊಸ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರವರ ಮೊದಲನೆಯ ಕೆಲಸ ವೆಂದರೆ ಇಂದಿನ ಭಾರತ ಕೇಂದ್ರ ತಾತ್ಕಾ ಲಿಕ ಸರ್ಕಾರದ ರಾಜೀನಾಮೆಯನ್ನು ತೆಗೆ ದುಕೊಳ್ಳುವುದೇ, ಎಂಬುದಾಗಿ ಅಧಿಕಾರ ವಲಯಗಳಿಂದ ವರದಿಯಾಗಿರುತ್ತದೆ. ಬ್ರಿ ಟಿಷ್ ಸರ್ಕಾರದ ಸೂಚನೆಯಂತೆಯೇ ಹೀ ಗೆ ಮಾಡಲಾಗುವುದು. ಹಳೆಯ ಕೊಳೆಯ ನ್ನೆಲ್ಲಾ ಕಳೆದು ಹೊಸ ಅಧ್ಯಾಯವನ್ನು ಆ ರಂಭಿಸಲು ನೂತನ ವೈಸರಾಯರೇ ಈರೀತಿ ಸಲಹೆಕೊಟ್ಟರೆಂದೂ ಹೇಳಲಾಗಿದೆ. ಎರಡ ನೆಯದಾಗಿ ತಾತ್ಕಾಲಿಕ ಸರ್ಕಾರದ ಮಂತ್ರಿ ಗಳನ್ನು ಮತ್ತೆ ನೇಮಿಸಲಾಗುವುದು. ಆದರೆ ಮುಸ್ಲಿಂ ಲೀಗ್ ಪ್ರತಿನಿಧಿಗಳನ್ನು ತೆಗೆದು ಕೊಳ್ಳುವಾಗ ಅವರು ರಾಜ್ಯಾಂಗರಚನಾ ಸಭೆಯಲ್ಲಿ ಭಾಗವಹಿಸುವ ಭರವಸೆಯನ್ನು ಸಹ ಹೊಂದಲಾಗುವುದು. ಮೂರನೆಯ ದಾಗಿ ಪ್ರಾಂತೀಯ ಗವರ್ನರುಗಳ ಸಭೆ ಯನ್ನು ಸೇರಿಸಿ ಹೊಸ ವೈಸರಾಯರು ಬ್ರಿ॥ ಸರ್ಕಾರದ ಉದ್ದೇಶವನ್ನು ಸೂಚಿಸಿ ಅವ ರುಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವ ರು. ತಾತ್ಕಾಲಿಕ ಸರ್ಕಾರವು ಬ್ರಿ॥ ಸರ್ಕಾ ರದೊಡನೆ ಡೊಮಿನಿಯನ್ ಮಟ್ಟದಲ್ಲಿ ವ್ಯವ ಹರಿಸುವುದೆಂದು ಹೇಳಲಾಗಿದೆ. ಭಾರತದ ವಿಭಜನೆಯನ್ನು ತಪ್ಪಿಸುವುದೇ ಬ್ರಿ॥ ಸರ್ಕಾ ರದ ಮುಖ್ಯ ಗುರಿಯೆಂದೂ ಸಹ ತಿಳಿದು ಬಂದಿದೆ.

ಜಯಪುರದಲ್ಲಿ ಖಾಸಗಿ ಮಂತ್ರಿಗಳು

ಶಾಸನ ಸಭೆಯಿಂದ ಚುನಾಯಿತರಾದ ಇಬ್ಬರು ಸದಸ್ಯರನ್ನು ಜಯಪುರ ಸಂಸ್ಥಾನ ದ ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಲಾಗಿ ದೆ. ಶಾಸನ ಸಭೆಯ ವಿವಿಧ ಪಕ್ಷಗಳ ಪ್ರತಿ ನಿಧಿಗಳನ್ನೊಳಗೊಂಡ ಒಂದು ಸಲಹಾ ಸ ಮಿತಿಯನ್ನೂ ಸಹ ರಚಿಸಲಾಗಿದೆ.

ಜಿಲ್ಲಾ ಬೋರ್ಡ್ ಉಮೇದುವಾರರು

ಕೆಲವು ಸ್ಥಾನಗಳಲ್ಲಿ ಕಾಂಗ್ರೆಸ್ಸಿಗೆ ಪ್ರತಿಸ್ಪರ್ಧೆ ಇಲ್ಲ

ಮೈಸೂರು ತಾಲ್ಲೂಕು—(೨ ಸ್ಥಾನಗ ಳು) ಶ್ರೀಗಳಾದ ಶಿವಣ್ಣ ಮತ್ತು ಶಿವನಂ ಜೇಗೌಡರು (ಕಾಂ) ಟಿ ಸಿ ಹೊನ್ನಪ್ಪ (ಹಾಲಿ ಬೋರ್ಡಿನ ಅಧ್ಯಕ್ಷರು) ವ ಕ್ಕಲಿಗ ಮಲ್ಲಣ್ಣನವರು (ಇವರು ಕಳೆದಸಲ ಕಾಂ ಗ್ರೆಸ್ ಟಿಕೆಟ್ಟಿನ ಮೇಲೆ ಚುನಾಯಿತರಾಗಿ ಹಾಲಿ ಸದಸ್ಯರಾಗಿ ಈಗ ಸ್ವತಂತ್ರವಾಗಿ ಸ್ಪ ರ್ಧಿಸಿದ್ದಾರೆ)

ಕೃಷ್ಣರಾಜನಗರ ತಾಲ್ಲೂಕು—(೨ ಸ್ಥಾನ ಗಳು) ಶ್ರೀಗಳಾದ ಎಸ್ ಎಚ್ ತಮ್ಮಯ್ಯ, ಬಳಿ ಮಾದಪ್ಪ ಮತ್ತು ಎಂ ಎಸ್ ಕೋಟೆಗೌಡರು (ಕಾಂ) ಎಸ್ ಕೆ. ಸಿದ್ದಪ್ಪ ನವರು (ಸ್ವ)

ಹುಣಸೂರು—(೨ ಸ್ಥಾನಗಳು) ಶ್ರೀಗ ಳಾದ ವೃಷಭೇಂದ್ರಪ್ಪ, ಟಿ ಎಸ್. ಸುಬ್ಬ ರಾವ್ ಘಾಟಿಕೆ ಮತ್ತು ಚನ್ನಬಸಪ್ಪ (ಕಾಂ) ಹೆಚ್. ಆರ್. ಟಿ ರಾಜಗೋಪಾಲ ಮೊದ ಲಿಯಾರ್ (ಸ್ವ)

ಹೆಗ್ಗಡದೇವನಕೋಟೆ — (೨ ಸ್ಥಾನಗ ಳು) ಶ್ರೀಗಳಾದ ಎಚ್. ಕೆ. ತಿಮ್ಮಯ್ಯ, ಎಂ. ಡಿ. ಶಿವಸ್ವಾಮಿ ಮತ್ತು ಸಿ. ಎಂ. ಸು ಬ್ಬಣ್ಣ (ಕಾಂ) ಹೆಚ್ ವಿ ಸುಬ್ರಾಮ ಯ್ಯ ಮತ್ತು ದಾಸೇಗೌಡರು (ಸ್ವ)

ಪಿರಿಯಾಪಟ್ಟಣ— (೨ ಸ್ಥಾನಗಳು) ಶ್ರೀಗಳಾದ ಹೆಚ್. ಎಂ. ಚನ್ನಬಸಪ್ಪ, ಟಿ ವೆಂಕಟರಾಂ (ಕಾಂ) ದೊಡ್ಡಣ್ಣಶೆಟ್ಟಿ, ಕೆ ಕೆ ದೇವರಾಜೇ ಅರಸ್, ರಿಯಾಜುಲ್ ಆ ಲಿಖಾನ್ ಮತ್ತು ವೆಂಕಟಸುಬ್ಬಯ್ಯ, (ಸ್ವ)

ನಂಜನಗೂಡು—(೩ ಸ್ಥಾನಗಳು) ಶ್ರೀ ಗಳಾದ ಎಚ್. ಲಿಂಗಪ್ಪ, ಎಚ್ ಎಂ ನಾ ಗಪ್ಪ, ಎಂ ಲಿಂಗಣ್ಣ ಮತ್ತು ಮಲ್ಲಪ್ಪ (ಕಾಂ) ಮಹಂತದೇವರು ಮತ್ತು ಎಸ್ ರಾಮಚಂದ್ರರಾವ್ (ಸ್ವ)

ಚಾಮರಾಜನಗರ—(೩ ಸ್ಥಾನಗಳು) ಶ್ರೀ ಗಳಾದ ಎಸ್. ಪುಟ್ಟನಂಜಪ್ಪ (ಕಾಂ) ಕೆ ಪಿ ವೀರಣ್ಣನವರು, ಸಿದ್ದವೀರಪ್ಪನವರು, ಶ್ರೀನಿವಾಸಮೂರ್ತಿ, ಗುರುಮಲ್ಲಪ್ಪ ಮತ್ತು ಕೆ ಎಸ್ ಪುಟ್ಟಣ್ಣನವರು (ಸ್ವ)

ಟಿ ನರಸೀಪುರ—(೩ ಸ್ಥಾನಗಳು) ಶ್ರೀ ಗಳಾದ ಟಿ. ಪಿ ಬೋರಯ್ಯ, ಚಿಕ್ಕೇಗೌಡ ಮತ್ತು ಶಿವಾನಂದಪ್ಪ (ಕಾಂ), ಗುರುಪಾ ದಸ್ವಾಮಿ ಮತ್ತು ಪಿ ಸಿದ್ದೇಗೌಡ (ಸ್ವ)

ಗುಂಡ್ಲುಪೇಟೆ (೨ ಸ್ಥಾನಗಳು) ಶ್ರೀಗ ಳಾದ ಬಿ. ದೊಡ್ಡಯ್ಯ (ಕಾಂ), ದೇವಪ್ಪ, ಶಿವರುದ್ರಪ್ಪ, ಸಿ ಎಸ್. ಮಾದಪ್ಪ ಮತ್ತು ಎಂ ಸುಬ್ಬಣ್ಣ (ಸ್ವ)

ಯಳಂದೂರು— (೧ ಸ್ಥಾನ) ಶ್ರೀ ಸೋ ಮಾರಾಧ್ಯರು (ಕಾಂ) ಶ್ರೀ ಕೆ ಬಟ್ಟಯ್ಯ (ಸ್ವ)

ರಾಷ್ಟ್ರಪತಿಗಳು ಬಂದರು

ಸ್ವಂ ಸು. ವರದಿ] ಬೆಂಗಳೂರು ೧೨

ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃ ಪಲಾನಿಯವರು ಈ ಬೆಳಗ್ಗೆ ಸ್ಪೆಷಲ್ ಸರ್ವೀ ಸ್ ನ ವಿಮಾನದಲ್ಲಿ ಇಲ್ಲಿಗೆ ಬಂದು ಅರ್ಧ ಗಂಟೆಯ ನಂತರ ತಿರುವಾಂಕೂರಿಗೆ ಪ್ರ ಯಾಣ ಬೆಳಸಿದರು. ನೂರಾರು ಜನರು ಅವರಿಗೆ ಸ್ವಾಗತವನ್ನು ಬಯಸಿದರು. ಶ್ರೀ ಗಳಾದ ಕೆ ಟಿ ಭಾಷ್ಯಂ, ಕೆ. ಎಸ್. ಕುಮಾ ರನ್ ಮುಂತಾದ ಕಾಂಗ್ರೆಸ್ ನಾಯಕರು ಪುಷ್ಪಹಾರವನ್ನರ್ಪಿಸಿದರು. ನೆರೆದಿದ್ದವರ ನ್ನು ಕುರಿತು ಆಚಾರ್ಯರು ಮಾತನಾಡಿ ಎಲ್ಲರೂ ಶಿಸ್ತಿನಿಂದ ವರ್ತಿಸಬೇಕೆಂದು ಸೂ ಚಿಸಿದರು. ಸ್ವರಾಜ್ಯಕ್ಕೆ ಶಿಸ್ತೇ ಅಸ್ತಿಭಾರ ವೆಂದು ಹೇಳಿದರು. ದೇಶವು ಸ್ವತಂತ್ರವಾ ಗಬೇಕಾದರೆ ಶಿಸ್ತು ಅತ್ಯಗತ್ಯವೆಂದು ಕೆಲಸ ಗಾರರನ್ನು ಕುರಿತು ಅವರು ತಿಳಿಸಿದರು.

• ಗೋಪಾಲರಾಯರ ಆಭರಣಗಳ ಮೊ ಕದ್ದಮೆಯಲ್ಲಿ ಅಪಾದಿತರ ಪರವಾಗಿ ಮೋಜ ರ್ ಭಟ್‌ರವರು ಇಂದು ಸಾಕ್ಷಿ ಮತ್ತು ಶ್ರೀ ಮಾಧವಕೃಷ್ಣಯ್ಯನವರ ಅಭಿಪ್ರಾಯ ಗಳನ್ನೇ ಸಮರ್ಥಿಸಿದರು.

• ಡಾ॥ ರಾಯರವರು ಈ ತಿಂಗಳು ೩ ನೇ ವಾರದಲ್ಲಿ ಕೈಗೊಂಡಿದ್ದ ಶಿವಮೊಗ್ಗ ಜಿ ಲ್ಲಾ ಪ್ರವಾಸವನ್ನು ರದ್ದು ಮಾಡಿರುತ್ತಾರೆ.

• ಶ್ರೀ ಅಪ್ಪಾಜಿಗೌಡರೂ ಸಹ ಕೋಲಾ ರ ಮತ್ತು ತಿರುಪತಿಗಳ ಪ್ರವಾಸವನ್ನು ರ ದ್ದು ಮಾಡಿದ್ದಾರೆ.

ಹೈದರಾಬಾದಿಗೆ ಖಾಸಗಿ ಮಂತ್ರಿಗಳು

ಹೊಸ ಸುಧಾರಣೆಗಳ ಪ್ರಕಾರ ರಚಿತ ವಾಗಿರುವ ಹೈದರಾಬಾದು ಶಾಸನ ಸಭೆಯ ಚುನಾಯಿತ ಸದಸ್ಯರಾದ ಶ್ರೀ॥ ಪಿಂಗಳಿ ವೆಂಕಟರಾಮರೆಡ್ಡಿ ಮತ್ತು ಹ॥ ಅಬ್ದುಲ್ ರಹಮಾನ್‌ರವರನ್ನು ನೈಜಾಮರು ತಮ್ಮ ಮಂತ್ರಿಮಂಡಲದ ಸದಸ್ಯರಾಗಿ ಆರಿಸಿದ್ದಾರೆ.

ಕುಮಾರಪ್ಪನವರ ಆಗಮನ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಶ್ರೀ ಜಯಪ್ರಕಾಶ ನಾರಾಯಣರ ವರ ಸ್ಥಾನದಲ್ಲಿ ಸದಸ್ಯರಾಗಿ ನೇಮಿಸಲ್ಪಟ್ಟಿ ರುವ ಗ್ರಾಮೋದ್ಯೋಗ ಸಂಘದ ಕಾರ್ಯ ದರ್ಶಿ ಶ್ರೀ ಜೆ ಸಿ ಕುಮಾರಪ್ಪನವರು ನಿನ್ನೆ ಬೆಂಗಳೂರಿಗೆ ಆಗಮಿಸಿದರು. ೧೬ನೇ ತಾ॥, ಮೈಸೂರಿಗೆ ಭೇಟಿಕೊಡುವರು. ಬೇವಾಡಿ ಯ ಕಸ್ತೂರಿಬಾ ಶಿಕ್ಷಣ ಶಿಬಿರದಲ್ಲಿ ತಂಗಿ ಅಲ್ಲಿ ಶಿಕ್ಷಣ ಪಡೆಯುತ್ತಿರುವವರಿಗೆ ಕೆಲವು ಉಪನ್ಯಾಸಗಳನ್ನು ಕೊಡುವರೆಂದೂ ತಿಳಿ ದು ಬಂದಿದೆ.

ಪುರಸಭಾ ಚುನಾವಣೆ

ಸ್ವ ಸು.] ಶ್ರೀರಂಗಪಟ್ಟಣ ೧೨

ಮೊನ್ನೆ ನಡೆದ ಇಲ್ಲಿನ ಪುರಸಭೆಯ ಚುನಾವಣೆಗೆ ಶ್ರೀರಂಗಪಟ್ಟಣದ ಡಿವಿಜನ್ನಿ ನ ೮ ಸ್ಥಾನಗಳಿಗೆ ೧೭ ಮಂದಿ ಉಮೇದು ವಾರರು ನಿಂತಿದ್ದು ಡಾ॥ ಸಿ. ಬಂಡೀಗೌಡ ರು, ಶ್ರೀ ಎಂ ಸುಬ್ಬಯ್ಯ, ಕಂ ರುದ್ರಪ್ಪ, ಶ್ರೀಗಳಾದ ಸಿ ಸುಬ್ಬರಾವ್, ಎಸ್. ಸಿ. ರಾಜಶೇಖರ್, ಎಸ್ ಪಿ. ಚಂದ್ರಶೇಖರ ಯ್ಯ, ಜೆ. ಪಟೇಲ್ ಷಣ್ಮುಖಸ್ವಾಮಯ್ಯ, ಮ ತ್ತು ಎಸ್ ದೇವಯ್ಯನವರೂ, ಗಂಜಾಂನ ಸ್ಥಾನಗಳಿಗೆ ೧೦ ಮಂದಿ ಉಮೇದುವಾರ ರು ನಿಂತಿದ್ದು ಶ್ರೀಗಳಾದ ಪುಟ್ಟಲಿಂಗಯ್ಯ, ಅಬ್ದುಲ್ ಮಜೀದ್, ಕೋದಂಡರಾಮು, ಸೋಮಯ್ಯ, ಟಿ ತಿಮ್ಮಯ್ಯ, ಕೆ ಮಾಚ ಯ್ಯ, ರಾಘವೇಂದ್ರನ ೫ ಜನರುಗಳೂ ಜಯಶಾಲಿಗಳಾಗಿದ್ದಾರೆ.

ಸಾಧ್ವಿ

ತಾ|| ೧೨-೩-೪೭ ಬುಧವಾರ

ಅರಮನೆ ನೌಕರರಿಗೆ ಪರಿಹಾರ ಸಾಲದು

ಧಾರಣೆವಾಸಿಗಳು ವಿಪರೀತವಾಗಿ ಏರಿರುವ ಈ ಸಮಯದಲ್ಲಿ ನೌಕರರ ಸಂಬಳ ಸಾರಿಗೆಗಳನ್ನು ಹೆಚ್ಚಿಸಲು ಬಹಳವಾಗಿ ಒತ್ತಾಯಗಳು ಮಾಡಲ್ಪಡುತ್ತಿವೆಯಷ್ಟೆ. ಈ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಸಲಹೆಗಳನ್ನು ಕೊಡಲು ಸರ್ಕಾರದವರು ಸಮಿತಿಯೊಂದನ್ನು ರಚಿಸಿರುವರು. ಈ ಸಮಿತಿಯವರು ಸಭೆಗಳನ್ನು ನಡೆಸುತ್ತಿರುವರು. ಅವರ ಕೆಲಸ ಕಾರ್ಯಗಳು ಮುಗಿಯಲು ಇನ್ನೂ ಹಲವು ತಿಂಗಳುಗಳಾಗಬಹುದೆಂದು ಕಂಡು ಬರುತ್ತದೆ. ಆದುದರಿಂದ ಸರ್ಕಾರದವರು ತಮ್ಮ ನೌಕರರಿಗೆ ತಾತ್ಕಾಲಿಕವಾದ ಪರಿಹಾರವನ್ನು ಮಂಜೂರು ಮಾಡಿರುತ್ತಾರೆ. ಇದರ ವಿವರಗಳು ಈಗಾಗಲೇ ಪ್ರಕಟವಾಗಿವೆ.

ಅರಮನೆ ಇಲಾಖೆಯ ನೌಕರರೂ ಸಹ ತಮಗೂ ತಾತ್ಕಾಲಿಕ ಪರಿಹಾರವನ್ನು ದೊರಕಿಸಿಕೊಡಬೇಕೆಂದು ಮೇಲಧಿಕಾರಿಗಳಲ್ಲಿ ಹೋಗಿ ಮೊರೆಯಿಟ್ಟರು. ಅವರಿಗೆ ಒಂದು ತಿಂಗಳ ಸಂಬಳದಲ್ಲಿ ಮೂರನೇ ಎರಡು ಭಾಗದಷ್ಟನ್ನು ಮಾತ್ರ ಪರಿಹಾರ ರೂಪದಲ್ಲಿ ಕೊಡುವುದಾಗಿ ವರದಿಯಾಗಿದೆ. ಸರ್ಕಾರದವರು ತಮ್ಮ ನೌಕರರಿಗೆ ಒಂದು ತಿಂಗಳ ಸಂಬಳವನ್ನು ಮಂಜೂರು ಮಾಡಿರುವರು. ಕೆಳ ದರ್ಜೆಯ ನೌಕರರಿಗೆ ಇದು ಸ್ವಲ್ಪವೂ ಸಹಾಯವಾಗುವುದಿಲ್ಲವೆಂದು ನಾವು ಮೊದಲೇ ಸೂಚಿಸಿದ್ದೇವೆ. ಇವರುಗಳಿಗೆ ಕಡೆಯ ಪಕ್ಷ ಐವತ್ತು ರೂಪಾಯಿಗಳನ್ನಾದರೂ ಕೊಡಬೇಕೆಂದು ಕೋರಿದ್ದೆವು.

ಅರಮನೆ ನೌಕರರು ಮಹಾಸ್ವಾಮಿಯವರ ಪ್ರತ್ಯಕ್ಷ ಸಾನ್ನಿಧ್ಯದಲ್ಲಿಯೇ ಕೆಲಸ ಮಾಡುವವರು. ಸರ್ಕಾರದ ನೌಕರರಿಗಿಂತಲೂ ಹೆಚ್ಚಿನ ಔದಾರ್ಯಕ್ಕೆ ಪಾತ್ರರು. ಹೀಗಿರುವಲ್ಲಿ ಸರ್ಕಾರಿ ನೌಕರರಿಗಿಂತಲೂ ಕಡಿಮೆಯ ಪರಿಹಾರವು ಅವರಿಗೆ ಕೊಡಲ್ಪಡಲು ಕಾರಣವೇನೋ ತಿಳಿಯದು. ಅರಮನೆ ಇಲಾಖೆಯಲ್ಲಿ ಕೇವಲ ಆರು ಅಥವಾ ಎಂಟು ರೂಪಾಯಿನ ಸಂಬಳದ ನೌಕರರೂ ಇರುತ್ತಾರೆ. ಅವರುಗಳಿಗೆ ಮೂರನೇ ಎರಡು ಭಾಗ, ಎಂದರೆ ನಾಲ್ಕೈದು ರೂಪಾಯನ್ನು ಮಾತ್ರ ಕೊಟ್ಟರೆ ಯಾವ ಸಹಾಯವಾದೀತು?

ಮುಖ್ಯವಾಗಿ ಈ ನೌಕರರನ್ನು ಸರ್ಕಾರಿ ನೌಕರರಿಗಿಂತ ಕಡಿಮೆ ದರ್ಜೆಯಿಂದ ಕಾಣುವುದು ಸರಿಯಲ್ಲ. ಸಕಲರನ್ನೂ ಬಾಧಿಸುತ್ತಿರುವ ದುರ್ಭಿಕ್ಷದ ಈ ಕಾಲದಲ್ಲಿ ಬಡ ಪ್ರಜೆಗಳಿಗೆ ಆದಷ್ಟು ಪರಿಹಾರವನ್ನು ಕಲ್ಪಿಸುವುದು ಅಗತ್ಯವಾಗಿದೆ. ಅರಮನೆ ಇಲಾಖೆಯ ಮುಖ್ಯಾಧಿಕಾರಿಗಳು ಈ ವಿಷಯವನ್ನು ಸೂಕ್ಷ್ಮವಾಗಿ ವಿಮರ್ಶೆ ಮಾಡಿ, ತಮ್ಮ ನೌಕರರಿಗೂ ಸರಿಯಾದ ಸಹಾಯವು ದೊರೆಯುವಂತೆ ಮಾಡಬೇಕೆಂದು ನಾವು ಕೋರುತ್ತೇವೆ.

ನಂಜನಗೂಡು ರಥೋತ್ಸವ

ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ದೊಡ್ಡ ಜಾತ್ರೆ ಪ್ರಯುಕ್ತ, ಬರುವ ೩ ನೇ ತಾ|| ಬುಧವಾರ ರಥೋತ್ಸವವು ನಡೆಯುವುದು. ಇದರ ಅಂಗವಾಗಿ ಇದೇ ೨೬ ನೇ ತಾ|| ಅಂಕುರಾರ್ಪಣವೂ, ೩೦ ನೇ ತಾ|| ಶ್ರೀಕಂಠಮುಡಿ ಉತ್ಸವವೂ, ಬರುವ ೮ ನೇ ತಾ|| ತೀರ್ಥಸ್ನಾನ, ತೆಪ್ಪೋತ್ಸವಗಳೂ ನಡೆಯುವುವು.

ಚಂದ್ರಮಂಡಲಕ್ಕೆ ಪ್ರಯಾಣ

ಇನ್ನು ೫೦-೬೦ ವರ್ಷದೊಳಗೆ ಚಂದ್ರಲೋಕಕ್ಕೆ ಹೋಗುವ ಯೋಜನೆಯನ್ನು ಬ್ರಿಟನ್ನಿನ ಪ್ರೊಫೆಸರ್ ಎ. ಎಂ. ಲೋ ರವರು ತಯಾರಿಸಿರುವುದಾಗಿ ವರದಿಯಾಗಿದೆ. ವಿಪರೀತ ಛಳಿ ಅಥವಾ ಬಿಸಿಲಿನಿಂದ ರಕ್ಷಣೆ ಪಡೆಯಲು ಮತ್ತು ಉಸಿರಾಡಲು ಬೇಕಾದ ಉಪಕರಣಗಳೊಡನೆ ಅಣು ಶಕ್ತಿಯ ಸಹಾಯದಿಂದ ಬಹಳ ವೇಗವಾಗಿ ಹೋಗುವ ವಿಮಾನದಲ್ಲಿ ಈ ಪ್ರಯಾಣವನ್ನು ನಡೆಸುವುದಾಗಿ ಹೇಳಲಾಗಿದೆ. ಅಲ್ಲದೆ ಭೂಮಿಯಿಂದ ಸ್ವಲ್ಪ ದೂರ ಬಿಟ್ಟು ಉಳಿದ ಸುಮಾರು ೪೦,೦೦೦ ಮೈಲಿಗಳ ಪ್ರಯಾಣವನ್ನು ನಾಲ್ಕು ದಿನಗಳಲ್ಲೇ ಮುಗಿಸುವುದಾಗಿಯೂ ಅವರು ತಿಳಿಸಿರುತ್ತಾರೆ.

ಭಾರತದಿಂದ ಬ್ರಿ|| ಪ್ರಜೆಗಳ ರವಾನೆ

ಬ್ರಿಟಿಷರು ಭಾರತಕ್ಕೆ ಅಧಿಕಾರವನ್ನು ವರ್ಗಾಯಿಸುವ ಮುನ್ನ ಭಾರತದಲ್ಲಿರುವ ಬ್ರಿಟಿಷ್ ಪ್ರಜೆಗಳಲ್ಲಿ ಇಷ್ಟಪಟ್ಟವರು ಇಂಗ್ಲೆಂಡಿಗೆ ವಾಪಸು ಬರಬಹುದೆಂದೂ, ಈ ಬಗ್ಗೆ ಸರಿಯಾದ ವ್ಯವಸ್ಥೆಯನ್ನು ಮಾಡುವುದಾಗಿಯೂ ಇಂಡಿಯಾ ಅಂಡರ್ ಸೆಕ್ರೆಟರಿ ಮಿ|| ಆರ್ಥರ್ ಹೆಂಡರ್‌ಸನರವರು ಕಾಮನ್ಸ್ ಸಭೆಯಲ್ಲಿ ತಿಳಿಸಿರುತ್ತಾರೆ.

ಕಡಲೆಪುರಿ ಹುರಿಯುವವರಿಗೆ ಪರಿಹಾರ

ರಾಜಧಾನಿಯ ಕಡಲೆ ಪುರಿ ಅಂಗಡಿಗಳಲ್ಲಿ ಕೆಲಸಮಾಡುತ್ತಿದ್ದ ಕಡಲೆಪುರಿ ಹುರಿಯುವ ಕೆಲಸಗಾರರು ಈಗ್ಗೆ ಕೆಲವು ದಿನಗಳ ಹಿಂದೆ ತಮ್ಮ ಕೂಲಿದರವನ್ನು ಹೆಚ್ಚಿಸಬೇಕೆಂದು ಮುಷ್ಕರ ಹೂಡಿದ್ದರಷ್ಟೆ. ಇತರ ಕೆಲ ಅಂಗಡಿಗಳ ಮಾಲೀಕರ ಸೈತ ೯ ಮಂದಿ ಅಂಗಡಿಗಳ ಮಾಲೀಕರು ಕೂಲಿಗಾರರ ಹಿತದೃಷ್ಟಿಯಿಂದ ದರವನ್ನು ಹೆಚ್ಚಿಸಿ ತಮ್ಮ ಉದಾರತೆಯನ್ನು ವ್ಯಕ್ತಪಡಿಸಿರುವರು. ಉಳಿದ ೩ ಅಂಗಡಿಗಳ ಮಾಲೀಕರು ಇನ್ನೂ ಕೂಲಿ ದರವನ್ನು ಹೆಚ್ಚಿಸದೆ ಹಟಸ್ಥರಾಗಿರುವರೆಂದು ದುಃಖಿಸಲಾಗಿದೆ. ಇವರುಗಳೂ ಮೇಲ್ಕಂಡ ೯ ಮಂದಿ ಮಾಲೀಕರ ಆದರ್ಶವನ್ನನುಸರಿಸುವುದು ಸೂಕ್ತವಾಗಿದೆ.

ಕೂಲಿ ದರವನ್ನು ಈ ಕೆಳಕಂಡ ಮಹನೀಯರು ಹೆಚ್ಚಿಸಿರುವುದಾಗಿ ತಿಳಿದು ಬಂದಿರುತ್ತದೆ:- ಶ್ರೀಗಳಾದ ೧. ಎಂ. ಕೃಷ್ಣಪ್ಪ, ೨. ಬಿ. ಪಾಪಣ್ಣ, ೩. ವೆಂಕಟೇಶ ಶೆಟ್ಟಿಯಾರ್, ೪. ಎಂ. ವೆಂಕಟನರಸಿಂಹಯ್ಯ, ೫. ಡಿ. ಪುಟ್ಟಯ್ಯ, ೬. ಕರಿಯಪ್ಪ, ೭. ಜವರಯ್ಯ, ೮. ಸೈಯದ್ ಹುಸೇನ್, ೯. ಮಹದೇವಯ್ಯ ಮತ್ತು ೧೦. ರಾಜಮಾಣಿಕ್ಯಂ.

ಅಸ್ಸಾಂ ಲೀಗ್ ಅಧ್ಯಕ್ಷ ದಸ್ತಗಿರಿ

೧೪೪ ನೇ ಸೆಕ್ಷನ್ ಉಲ್ಲಂಘಿಸಿ, ಶೀಲಾಂಗಿನಲ್ಲಿ ಅಸ್ಸಾಮಿನ ಮುಸ್ಲಿ... ಗ್ ಅಧ್ಯಕ್ಷರಾದ ಮೌ|| ಅಬ್ದುರ... ದ್ ಖಾನರವರು ಮೊನ್ನೆ ದಸ್ತಗಿರಿಯಾದ... ಟ್ಟರೆಂದು ವರದಿಯಾಗಿದೆ. ಇದ... ಡಿಸಲು ಶಾಸನ ಸಭೆಯ ಲೀಗ್... ಲ್ಲರೂ ಸಭೆಯನ್ನು ಬಹಿಷ್ಕರಿಸ... ಅಲ್ಲಿಯ ಲೀಗ್ ಕಾರ್ಯಕಾರಿ ಸ... ವರು ಸೂಚನೆಯಿತ್ತಿದ್ದಾರೆ.

೫೦ ವರ್ಷದ ಮಾತನಾ... ಬಾತು ಕೋಳಿ

ಈಜಿಪ್ಟಿನಲ್ಲಿ ೫೦ ವರ್ಷದ ಬಾ... ಳಿಯೊಂದು ತನಗೆ ಆಹಾರ, ನೀರು ... ದಾಗ ೧೨೦ ವರ್ಷ ವಯಸ್ಸಿನ ತನ್ನ ... ಮಾಲಿ ಭಾದ್ರ ವಿಂಟುವಳನ್ನು ಹೆ... ಡಿದು ಕರೆಯುವುದಾಗಿ ವರದಿಯ... ಗಳಿಗಿಂತಲ್ಲಿ ಅವಳ ಹಿರಿಯ ಮ... ಗುವು ಹುಟ್ಟಿದ ದಿನವೇ ೮ ಬಾತು... ಯೊಡೆದು ಬಂದಿತೆಂದೂ ಹೇಳಲಾ...

ರಾಜಕಮಲ್

೯-೩-೪೭ ರಿಂದ ೪ ನೇ ವಾರ

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ (ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಂಪಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!!

ಇವೆಲ್ಲವನ್ನೂ ಇಂದೇ ನೋಡಿ.

Edited, printed and published by A. R. Nagarajan at the 'Sadhvi Press' D. Subbiah Road, Mysore.

ಅಪೆರಾ ಟಾಕೀಸ್

೧೨-೩-೪೭ ರಿಂದ ೪ನೇ ವಾರ

ವಿದ್ಯಾಪತಿ (ಹಿಂದಿ)

೧೩-೩-೪೭ ರಿಂದ

ಸ್ಕೂಲ್ ಮಾಸ್ಟರ್ (ಹಿಂದಿ ಚಿತ್ರ)

ಪ್ರತಿ ದಿನ ಮೂರು ಆಟಗಳು

ಪಾತ್ರ :- ಜೀವನ್, ಕೌಶಲ್ಯ, ಮಾಯಾ ಬ್ಯಾನರ್ಜಿ ಮುಂತಾದವರು

ನಿಮ್ಮ ಮೈ ಮೊಕವುಲ್ಲಿನಿ... ಹೊಳೆಯಬೇಕೆ ? ನೀವು ಲಾವಣ್ಯ ಮೂರ್ತಿಗಳಾಗಬೇ... ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮ... ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ. ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾ... ಬೆಂಗಳೂರು

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಿಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!

ಬಿ. ಕೆಂಚಪ್ಪ ಸನ್ಸ್,

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

ಕಂಟ್ರೋಲು ಬೆಲೆ! ಸುಸ...

ಹೊಸ ಜವಳಿ

ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಬನಾರಿಸ್, ಕಂಚಿ, ಆರ್ನಿ, ಕಾಂಚಿ... ಹುಬ್ಬಳ್ಳಿ ಸೀರೆಗಳೂ, ಕರಾಚಿ ಸೀರೆಗಳೂ, ನೂಲಿನ ಪೂನಾ ರವಿಕಾಖಾನ ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.

M. P. V., M. V. ಭೋಜಯ್ಯ B. A. ಅಂಡ್ ಬ್ರದರ್ಸ್

ಬೊಂಬಾಯಿ ಆನಂದ ಭವನ ಹೋಟೆಲ್ ಲೈನ್ ಬಲಭಾಗದ ಕೊನೇ ಜವಳಿ ಅಂಗಡಿ, ಮೈಸೂರು.

ಇಂಗ್ಲಿಷ್ ಪುಲ್ಲರ್ ಕೋಟಿಂಗ್

ಕಳೆದ ವರ್ಷಕ್ಕಿಂತ ಅರ್ಧ ಬೆಲೆಯಲ್ಲಿ ಸ... ಪಾಪ್ಲಿನ್, ಜಾಬರ್ಡೀನ್, ವಾಟರ್... ಫ್ಲಾನಲ್‌ಗಳು ಅನೇಕ ನಮೂನೆಗಳಲ್ಲಿ ಬಂ...

★ ಮೈಸೂರಿನ ಒಬ್ಬ ಮೈಸೂರು ಬ್ಯಾಂಕ್ ರೋಡಿನಲ್ಲಿರುವ ಬಾಯುಸಾರಾ ಕಂಪೆನಿಯಲ್ಲಿ ನೋಡಿರಿ. ★

ಸಂಪುಟ ೫] ಗುರುವಾರ ೧೩—೩—೪೭ [ಸಂಚಿಕೆ ೧೮೩

ಪಂಜಾಬ್ ಗೌರ್ನರನ್ನು ವಜಾ ಮಾಡಬೇಕು

ಮುಸ್ಲಿಂ ಲೀಗಿಗೆ ಗುಪ್ತವಾಗಿ ಶಸ್ತ್ರಾಸ್ತ್ರಗಳ ಆಮದು

ಮುಸ್ಲಿಂ ಲೀಗಿಗೋಸ್ಕರ ಕರಾಚಿಯ ಆ ... ಇತರ ವರ್ಗಗಳ ಸಹಾಯ ಪಡೆದು ... ಮತ್ತು ಅಮೇರಿಕಾಗಳಿಂದ ಗುಪ್ತ ... ಶಸ್ತ್ರಾಸ್ತ್ರಗಳು ಆಮದಾಗುತ್ತಿರುವಾಗಿ ವರದಿಯಾಗಿದೆ. ಯುದ್ಧಾನುಭವವಿರುವ ಮುಸ್ಲಿಂ ಲೀಗ್ ಹಿತೈಷಿಗಳು ... ಮತ್ತು ನಾಹಿಂಗ್ಟರ್‌ಗಳಿಂದ ಸ... ಸಿದ್ಧರಿರುವುದಾಗಿ ಹೇಳಲಾಗಿದೆ. ಹೈದರಾಬಾದು ಕೂಡ ತಾನು ಬ್ರಿಟನ್ ಮತ್ತು ಅಮೇರಿಕಕ್ಕೆ ಕಳುಹಿಸಿದ ನಿಯೋಗದ ಮೂಲಕ ಗುಪ್ತವಾಗಿ ಶಸ್ತ್ರಗಳನ್ನು ತರಿಸಿಕೊಳ್ಳಲು ನಿರ್ಧರಿಸಿರುವುದಾಗಿ ಸೂಚಿಸಲಾಗಿದೆ.

೨ ಉಪಪ್ರಾಂತಗಳಾಗಿ ಪಂಜಾಬಿನ ವಿಭಾಗವೇ

ಪಂಜಾಬಿನ ಮಂತ್ರಿ ಮಂಡಲದ ಸಮಸ್ಯೆಯನ್ನು ಬಗೆಹರಿಸಲು ಆ ಪ್ರಾಂತವನ್ನು ಕೋಮುವಾರು ಆಧಾರದ ಮೇಲೆ ಎರಡು ಉಪ ಪ್ರಾಂತಗಳನ್ನಾಗಿ ವಿಭಾಗಿಸುವ ಹೊಸ ಸಲಹೆಯು ಪರಿಶೀಲನೆಯಲ್ಲಿದೆ. ಆದರಂತೆ ಪೂರ್ವ ಮತ್ತು ಪಶ್ಚಿಮ ಪಂಜಾಬು ಪ್ರಾಂತಗಳಿಗೆ ಬೇರೆ ಬೇರೆ ಶಾಸನ ಸಭೆ ಮತ್ತು ಮಂತ್ರಿ ಮಂಡಲಗಳು ಇರುವುವು. ಆದರೆ ಇವೆರಡಕ್ಕೂ ಒಬ್ಬರೇ ಗೌರ್ನರರು ಇರುವರು. ಎರಡು ಪ್ರಾಂತ್ಯಗಳೂ ತಮ್ಮ ತಮ್ಮ ಸಮಸ್ಯೆಗಳನ್ನು ತಾವೇ ಗೌರ್ನರರ ಮೂಲಕ ಬಗೆಹರಿಸಿಕೊಳ್ಳುವುವು. ಈ ವಿಧವಾದ ಎರಡು ಮಂತ್ರಿಗಳ ನೇಮಕದ ಪ್ರಸ್ತಾಪಗಳನ್ನು ಪರಿಶೀಲಿಸಲು ಭಾರತ ಸರ್ಕಾರದ ರಾಜ್ಯಾಂಗ ರಚನಾ ಸಲಹೆಗಾರರಾದ ಸರ್ ಬಿ. ಎನ್. ರಾವ್‌ರವರನ್ನು ಪ್ರಾರ್ಥಿಸಲಾಗಿದೆ.

ಮಧ್ಯ ಬರ್ಮಾದಲ್ಲಿ ಪ್ರತಿ ಸರ್ಕಾರ

ಮಧ್ಯಬರ್ಮಾದಲ್ಲಿ ಯೇನಾಂಗ್ ಯಾಂಗಿನ ಎಣ್ಣೆ ಪ್ರದೇಶಗಳ ಹತ್ತಿರವಿರುವ ನಾಟ್‌ಮಾಕನ್ನು ಕೇಂದ್ರವಾಗಿಟ್ಟುಕೊಂಡು ಈಗಿರುವ ಸರ್ಕಾರಕ್ಕೆ ಪ್ರತಿಯಾಗಿ ದಂಗೆಕಾರರು ಬೇರೆ ಸರ್ಕಾರವನ್ನು ಸ್ಥಾಪಿಸಿರುವುದಾಗಿ ವರದಿಯಾಗಿದೆ. ಆ ಸರ್ಕಾರವು ಕಂದಾಯ ವಸೂಲಿ ಮಾಡುವುದಲ್ಲದೆ ತನ್ನದೇ ಸ್ವಂತವಾದ ಪೋಲೀಸು ದಳ ಮತ್ತು ನ್ಯಾಯಸ್ಥಾನಗಳನ್ನು ಸ್ಥಾಪಿಸಿಕೊಂಡಿರುವದಾಗಿಯೂ ಗೊತ್ತಾಗಿದೆ.

ಗಿರಣಿ ಕೆಲಸಗಾರರ ಸಂಘ

ಮೈಸೂರು, ೧೩

ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘಕ್ಕೆ ಶ್ರೀಗಳಾದ ಟಿ. ಮರಿಯಪ್ಪನವರು ಅಧ್ಯಕ್ಷರಾಗಿಯೂ, ಎಸ್. ರಾಮಯ್ಯನವರು ಉಪಾಧ್ಯಕ್ಷರಾಗಿಯೂ, ರಾಮರಾವ್ ಅರಸಿನವರು ಕಾರ್ಯದರ್ಶಿಗಳಾಗಿಯೂ, ತಿಂಮರಾಮಯ್ಯನವರು ಕೋಶಾಧ್ಯಕ್ಷರಾಗಿಯೂ ಚುನಾಯಿಸಲ್ಪಟ್ಟಿರುವರು.

ಹಬ್ಬಕ್ಕೆ ಬಟ್ಟೆ ಕೊಡಬೇಕು

ಬರುವ ಅನೇಕ ಹಬ್ಬಗಳ ಸಮಯದಲ್ಲಿ ಮಹಾಜನಗಳಿಗೆ ವಿಶೇಷ ಬಟ್ಟೆಯ ಕೂಪನ್ನುಗಳನ್ನು ಕೊಟ್ಟಂತೆ ಈಗ ಬರಲಿರುವ ಯುಗಾದಿ ಹಬ್ಬಕ್ಕೂ ಸಹ ಕೊಡಬೇಕೆಂದು ಸೂಚಿಸಿ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘದವರು ನಿರ್ಣಯವನ್ನು ಮಾಡಿರುತ್ತಾರೆ. ಕೈಗಾರಿಕೆಯ ಕೆಲಸಗಾರರಿಗೆ ದೇಹಾಲಸ್ಯವಾದ ಸಮಯದಲ್ಲಿ ಪರಿಹಾರವನ್ನು ಒದಗಿಸಲು ಒಂದು ವಿಮಾ ಯೋಜನೆಯನ್ನೂ ಸಹ ಅನುಮೋದಿಸಿರುತ್ತಾರೆ.

ಆಯುರ್ವೇದ ಮತ್ತು ಯುನಾನಿ ಸಮಿತಿ

ಬೆಂಗಳೂರು ೧೩

ಸ್ವಂ ಪು.] ಇದೇ ಮಾರ್ಚಿ ೧ ರಿಂದ ಮತ್ತೊಂದು ವರ್ಷಕಾಲ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಆಯುರ್ವೇದ ಮತ್ತು ಯುನಾನಿ ವೈದ್ಯ ಪದ್ಧತಿಗಳ ಪರಿಶೀಲನಾ ಸಮಿತಿಯನ್ನು ಪುನರ್ರಚಿಸಲಾಗಿದೆ. ಸಮಿತಿಯಲ್ಲಿ ಮೈಸೂರು ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಪ್ರಿನ್ಸಿಪಾಲರು, ಧರ್ಮಪ್ರಕಾಶ ವೆಂಕಟರಾವ್ ಶಿವರಾಂ, ವಿ॥ ಮಹಧೀಶಸ್ತ್ರ॥ ದೇವರಾವ್ ಶಿವರಾಂ, ವಿ॥ ಮಹಮದ್ ಅಬ್ಬಾಸ್‌ಖಾನ್, ಧರ್ಮ ಪ್ರವರ್ತಕ ಡಾ॥ ಟಿ ಎಸ್ ಸಿದ್ದಪ್ಪ, ಆ॥ ವಿ॥ ಭಿಷಗ್‌ರತ್ನ ಬಿ. ವಿ ಪಂಡಿತ್, ಹಕೀಂ ಅಬ್ದುಲ್ ಮುಂತಾಜ್ ಖಾನ್, ಮಿಸೆಸ್ ರತ್ನಮ್ಮ ಎಸ್ಕ್ವೈರ್, ವಿ ಸಸ್ ಲಕ್ಷ್ಮೀದೇವಿ ರಾಮಣ್ಣ ಮೊದಲಾಗಿ ೧೬ ಮಂದಿ ಸದಸ್ಯರಿದ್ದಾರೆ.

ಚನ್ನಪಟ್ಟಣದ ಗಲಭೆಗಳ ಪ್ರತಿಧ್ವನಿ

ಚನ್ನಪಟ್ಟಣದ ಗಲಭೆಗಳ ಸಂಬಂಧವಾಗಿ ೧೬-೧೦-೪೬ ರಲ್ಲಿ ಚನ್ನಪಟ್ಟಣದ ತಾಲ್ಲೂಕು ಕಛೇರಿಯ ಮುಂದೆ ಉಮ್ಮರ್ ಸಾಬ್ ಎಂಬವರ ಗಾಡಿಯನ್ನು ಸುಡಲು ಗಾಡಿಗೆ ನಷ್ಟಪಡಿಸಿದರೆಂದು ಆಪಾದಿಸಲ್ಪಟ್ಟಿರುವ ಕರಿಯ ಮತ್ತು ಇತರ ಮೂವರ ಮೇಲಿನ ಮೊಕದ್ದಮೆಯಲ್ಲಿ ನಿನ್ನೆ ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರ ಮುಂದೆ ಪ್ರಾಸಿಕ್ಯೂಷನ್ ಪರ ಫಿರ್ಯಾದಿ ಉಮ್ಮರ್ ಸಾಹೇಬರೂ ಸೇರಿ ನಾಲ್ಕು ಮಂದಿಯ ವಿಚಾರಣೆಯಾಯಿತು. ಮುಂದಿನ ವಿಚಾರಣೆ ೨೦ ನೇ ತಾ॥ ನಡೆಯುವುದು.

ಮುಷ್ಕರದ ಮುಕ್ತಾಯ

ಮೈಸೂರು ೧೩

ಗ॥ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳ ಒಂದು ನಿಯೋಗವು ಇದೇ ತಿಂಗಳು ೧೦ ನೇ ತಾರೀಖು ವಿದ್ಯಾಶಾಖೆಯ ಡಾ॥ ಟಿ ಸಿ ಎಂ ರಾಯ್ ಮತ್ತು ಕಾಲೇಜಿನ ಆಡಳಿತ ಸಮಿತಿಯ ಅಧ್ಯಕ್ಷರಾದ ಎಸ್ ನಾರಾಯಣರಾಯರನ್ನು ಬೆಂಗಳೂರಿನಲ್ಲಿ ಭೇಟಿಮಾಡಿತ್ತು. ವಿದ್ಯಾರ್ಥಿಗಳು ಕಾಲೇಜಿಗೆ ಹಿಂತಿರುಗಿದರೆ ಕೂಡಲೇ ಅವರ ಕೋರಿಕೆಗಳನ್ನು ಈಡೇರಿಸುತ್ತೇವೆಂದು ಅಧಿಕಾರಿಗಳು ಸಂಪೂರ್ಣ ಭರವಸೆಯನ್ನು ಇತ್ತಿದ್ದರಿಂದ ಒಂದು ತಿಂಗಳ ಹಿಂದೆ ಪ್ರಾರಂಭಿಸಿದ್ದ ಮುಷ್ಕರವನ್ನು ಇಂದು ಮುಕ್ತಾಯಗೊಳಿಸಿ ವಿದ್ಯಾರ್ಥಿಗಳು ಕಾಲೇಜಿಗೆ ಹಿಂದಿರುಗಿದ್ದಾರೆ.

ರಾಷ್ಟ್ರಪತಿಗಳಿಗೆ ಪೌರಸಭೆಯ ಬಿನ್ನವತ್ತಳೆ

ಮೈಸೂರು ೧೩

ರಾಜಧಾನಿಯ ಪೌರಸಭೆಯವರು ಈ ತಿಂಗಳು ೧೯ ನೇ ತಾ॥ ಆಚಾರ್ಯ ಕೃಪಲಾನಿಯವರಿಗೆ ಬಿನ್ನವತ್ತಳೆಯನ್ನು ಅರ್ಪಿಸಲು ಏರ್ಪಾಡುಮಾಡುವುದಕ್ಕಾಗಿ ಒಂದು ವಿಶೇಷ ಸಭೆಯನ್ನು ಕರೆಯುವಂತೆ ಅಧ್ಯಕ್ಷರನ್ನು ಹಲವು ಸದಸ್ಯರು ಪ್ರಾರ್ಥಿಸಿರುವರು. ರಾಷ್ಟ್ರಪತಿಗಳ ಪ್ರವಾಸದ ಕಾರ್ಯಕ್ರಮವನ್ನು ಗೊತ್ತುಮಾಡಲು ಶ್ರೀ ಎಸ್ ಸಿದ್ದಲಿಂಗಪ್ಪನವರು ನಿನ್ನೆದಿನ ಡಿಲ್ಲಿಗೆ ದಯಮಾಡಿಸಿದ್ದರು.

ಪ್ರೆಸ್ ಕೆಲಸಗಾರರ ಬೇಡಿಕೆ

ರಾಜಧಾನಿಯ ಸರ್ಕಾರಿ ಮುದ್ರಣಾಲಯದ ಕೆಲಸಗಾರರಿಗೆ ಹಂಗಾಮಿ ಪರಿಹಾರದ ಮೊಬಲಗನ್ನು ಜಾರಿಮಾಡಬೇಕೆಂತೆ ಪ್ರಾರ್ಥಿಸಲು ಮುದ್ರಣಾಲಯದ ಅಧಿಕಾರಿಗಳ ಬಳಿಗೆ ಕೆಲಸಗಾರರ ಸಂಘದ ಪ್ರತಿನಿಧಿಗಳು ನಿನ್ನೆ ಹೋಗಿದ್ದರೆಂದು ತಿಳಿದುಬಂದಿದೆ. ಯುಗಾದಿಹಬ್ಬವು ಸಮೀಪಿಸುತ್ತಿರುವುದರಿಂದ ಅದನ್ನು ಬೇಗನೆ ಕೊಡಿಸಿಕೊಡುವಂತೆ ನೌಕರರು ಪ್ರಾರ್ಥಿಸುತ್ತಾರೆ.

ಶ್ರೀ ದುರ್ಗಾದೇವಿ ಕರಗ

ನಜರುಬಾದಿನಲ್ಲಿರುವ ಶ್ರೀ ದುರ್ಗಾದೇವಿ ಅವರ ನವರ ದೇವತೆಯ ಕರಗ ಮತ್ತು ಉತ್ಸವಗಳು ಇದೇ ೧೬ ಮತ್ತು ೧೮ ನೇ ತಾ॥ ಜರುಗುತ್ತವೆ. ೧೮ ನೇ ತಾ॥ ಮಧ್ಯಾಹ್ನ ೧೨॥ ಗಂಟೆಗೆ ಕಾರಂಜಿ ಕೆರೆಯಿಂದ ದೇವರ ಉತ್ಸವವು ದೇವಸ್ಥಾನಕ್ಕೆ ಬರುವುದು. ಸಂಜೆ ೭॥ ಗಂಟೆಗೆ ಬೆಂಗಳೂರು ಕನಕ ಪಟ್ಟಿಯವರಿಂದ ವಾದ್ಯ ಸಮೇತ ಉತ್ಸವವು ಜರುಗುವುದು. ೨೧ ನೇ ತಾ॥ ಶುಕ್ರವಾರ ಸಂಜೆ ೬॥ ಗಂಟೆಗೆ ಮರು ಪೂಜೆ ನಡೆಯುವುದು. ಮಹಾಜನಗಳು ಭಾಗಿಗಳಾಗಬೇಕೆಂದು ಕೋರಲಾಗಿದೆ.

ಬಂಗಾಳದ ವಿಭಾಗಕ್ಕೆ ಬ್ಯಾರಿಷ್ಟರುಗಳ ಒತ್ತಾಯ

ಮುಸ್ಲಿಂ ಲೀಗು ಕೋಮುವಾರು ಚುನಾವಣಾ ಪದ್ಧತಿಯನ್ನು ಸದ್ಬಳಕೆ ಮಾಡದೇ ಇರುವುದರಿಂದಲೂ, ರಾಷ್ಟ್ರೀಯ ಮಂತ್ರಿಮಂಡಲವನ್ನು ರಚಿಸಲು ನಿರಾಕರಿಸಿರುವುದರಿಂದಲೂ, ಬಂಗಾಳದಲ್ಲಿ ಮುಸ್ಲಿಮೇತರರು ಬಹುಸಂಖ್ಯಾತರಾಗಿರುವ ಪ್ರದೇಶಗಳನ್ನು ಪ್ರತ್ಯೇಕಮಾಡಿ, ಒಂದು ಪ್ರಾಂತ್ಯವನ್ನು ರಚಿಸಬೇಕೆಂದು ಒತ್ತಾಯಪಡಿಸಿ ಕಲ್ಕತ್ತಾ ಶ್ರೇಷ್ಠ ನ್ಯಾಯಾಸ್ಥಾನದ ೫೦ ಮಂದಿ ಬ್ಯಾರಿಷ್ಟರುಗಳು ಹೇಳಿಕೆಯೊಂದನ್ನು ಹೊರಡಿಸಿದ್ದಾರೆ.

ಪಾಕಿಸ್ತಾನ ವಿರೋಧ ದಿನಾಚರಣೆಯು ದೆಹಲಿ, ಕಲ್ಕತ್ತಾ, ಪಾಟ್ನಾ, ಅಲಹಾಬಾದ್, ಕಾನ್ಪುರ, ಮದ್ರಾಸು ಮುಂತಾದ ಕಡೆಗಳಲ್ಲಿ ಮೊನ್ನೆ ದಿನ ಜರುಗಿತು. ದೆಹಲಿಯಲ್ಲಿ ಸೇರಿದ್ದ ಭಾರಿ ಸಭೆಯಲ್ಲಿ ಪಂಜಾಬಿನ ಗೌರ್ನರರನ್ನು ಕೂಡಲೇ ವಜಾ ಮಾಡಿ, ಅವರ ಆಡಳಿತದ ತನಿಖೆ ನಡೆಸಲು ವಿಚಾರಣಾ ಸಮಿತಿಯೊಂದನ್ನು ನೇಮಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಪಂಜಾಬಿನಿಂದ ದೆಹಲಿಗೆ ಬಂದಿರುವ ದಿವಾನ್ ಚಮನಲಾಲರು ಹೇಳಿಕೆಯೊಂದನ್ನಿತ್ತು ಪಂಜಾಬ್ ಮಿಶ್ರ ಮಂತ್ರಿಮಂಡಲದ ರಾಜೀನಾಮೆಗೆ ಅಲ್ಲಿನ ಗೌರ್ನರೇ ಕಾರಣರೆಂದು ತಿಳಿಸಿದ್ದಾರೆ.

ಜನರ ಗುಂಪಿನಿಂದ ರೈಲು ಹಿಂತಿರುಗಿತು

ಪೆಷಾವರಿನ ಬಳಿ ರೈಲ್ವೆ ಲೈನನ್ನು ಅಡ್ಡಿಪಡಿಸಿ, ಕಂಬಗಳನ್ನು ಕಿತ್ತೊಗೆದು, ವಿ.ರೋಧಿಸುವರ ಮೇಲೆ ಕಲ್ಲು ಎಸೆದ ಗುಂಪೊಂದರ ಮೇಲೆ ಗುಂಡುಹಾರಿಸಲಾಗಿ ಒಬ್ಬನು ಸತ್ತು ೧೦ ಮಂದಿಗೆ ಗಾಯಗಳಾಗಿರುವುದಾಗಿ ವರದಿಯಾಗಿದೆ. ಪೆಷಾವರಿನಿಂದ ಹೊರಟಿದ್ದ ಫ್ರಾಂಟಿಯರ್ ಮೇಲ್ ಗಾಡಿಯು ಇದರಿಂದ ಹಿಂತಿರುಗಬೇಕಾಯಿತು.

ಪಂಜಾಬ್ ಪರಿಸ್ಥಿತಿ

ಪಾಕಿಸ್ತಾನ ವಿರೋಧ ದಿನಾಚರಣೆಯು ಪಂಜಾಬಿನ ನಾನಾಭಾಗಗಳಲ್ಲಿ ಮೊನ್ನೆ ಜರುಗಿತು. ಲಾಹೋರಿನಲ್ಲಿ ಯಾವ ಗಲಭೆಯೂ ನಡೆಯಲಿಲ್ಲ. ಮುಲ್ತಾನ್ ಮತ್ತು ರಾವಲ್ಪಿಂಡಿ ಪ್ರದೇಶಗಳಲ್ಲಿ ಲೂಟಿ ಮತ್ತು ಬೆಂಕಿ ಹಚ್ಚುವುದು ನಡೆಯುತ್ತಲೇ ಇವೆ. ಕ್ಯಾಂಬೆಲ್ ಪುರಕ್ಕೆ ಈಗ ಗಲಭೆ ಹರಡಿದೆ. ಕೇಂದ್ರಸರ್ಕಾರದ ರಕ್ಷಣಾ ಸಚಿವರಾದ ಸ॥ ಬಲದೇವಸಿಂಗರು ಮೊನ್ನೆ ಗವರ್ನರರ ಭೇಟಿ ಮಾಡಿದ್ದಾರೆ. ಅಮೃತಸರದಲ್ಲಿ ಇದುವರೆಗೆ ೮ ಕೋಟಿ ರೂ. ಗಳ ನಷ್ಟ ಸಂಭವಿಸಿದೆ.

ರಾಜ್ಯಾಂಗ ಸಭೆಗೆ ನಾಲ್ಕು ಸಂಸ್ಥಾನಗಳು

ಜೋಧಪುರ, ಗ್ವಾಲಿಯರ್, ಜೈಪುರ ಮತ್ತು ಭಾವನಗರ ಸಂಸ್ಥಾನಗಳು ರಾಜ್ಯಾಂಗ ಸಭೆಗೆ ಸೇರುವುದಾಗಿ ಪ್ರಕಟಿಸಿವೆ. ತಮ್ಮ ಪ್ರತಿನಿಧಿಗಳನ್ನು ಸಧ್ಯದಲ್ಲಿ ಚುನಾಯಿಸುವುವು. ಶಾಸನ ಸಭೆಯಿಂದ ಇಬ್ಬರು ಪ್ರತಿನಿಧಿಗಳನ್ನು ಜೈಪುರ ಸಂಸ್ಥಾನದ ಮಂತ್ರಿಮಂಡಲಕ್ಕೆ ದುಕೊಳ್ಳಲಾಗಿದೆ. ಶಾಸನ ಸಭೆಯ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ರಾಜ್ಯಾಂಗ ಸಲಹಾ ಸಮಿತಿಯೊಂದನ್ನು ನೇಮಿಸಲಾಗಿದೆ.

ಹಬ್ಬಕ್ಕೆ ಲಾರಿಗಳಲ್ಲಿ ನೀರ ಸರಬರಾಜು

ಮೈಸೂರು

ಯುಗಾದಿ ಹಬ್ಬಕ್ಕಾಗಿ ನೀರನ್ನು ಸರಬರಾಜು ಮಾಡಲು ನೀರಿನ ಕಾಲುವೆ ವಿಶೇಷ ಏರ್ಪಾಡುಗಳನ್ನು ಮಾಡಿ ಇದ್ದಲ್ಲದೆ ಸರಬರಾಜು ಸರಿಯಾಗಿ ಇರುವ ಪ್ರದೇಶಗಳಿಗೆ ಲಾರಿಗಳಲ್ಲಿ ನೀರನ್ನು ತೆಗೆದುಕೊಂಡು ಸರಬರಾಜು ಮಾಡುವ ಏರ್ಪಾಡು ಮಾಡಲಾಗುವುದೆಂದು ತಿಳಿದು.

ಸಾಧ್ವಿ

ತಾ॥ ೧೩-೩-೪೭ [illegible]

ಪ್ರಕಾಶಂ ಪ್ರ[illegible]ದ ಪರಿಸ್ಥಿತಿ

ಆಚಾರ್ಯ ಕೃಪಲಾನಿಯವರು ಮದರಾಸ್ ಮಂತ್ರಿಮಂಡಲದ ಬಿಕ್ಕಟ್ಟನ್ನು ಬಿಡಿಸಲು ನಡೆಸಿದ ಪ್ರಯತ್ನಗಳು ಸಫಲವಾದಂತೆ ಕಂಡು ಬರುವುದಿಲ್ಲ. ಆದುದರಿಂದ ಪ್ರಧಾನ ಮಂತ್ರಿ ಪ್ರಕಾಶಂರವರು ತಮ್ಮ ಅನುಯಾಯಿಗಳೊಡನೆ ರಾಜೀನಾಮೆ ಕೊಡಲು ನಿರ್ಧರಿಸಿರುವರು. ಈ ದಿನ ಗೌರ್ನರರಿಗೆ ಅವರು ಅದನ್ನು ಒಪ್ಪಿಸುವರು. ಕಾಂಗ್ರೆಸ್ ಪಕ್ಷದ ಹೊಸ ನಾಯಕರನ್ನು ಆರಿಸಲು ಇಪ್ಪತ್ತೊಂದನೇ ತಾರೀಖು ಸಭೆ ನಡೆಯುವುದು. ರಾಷ್ಟ್ರಪತಿಗಳು ಅಗ್ಗೆ ಮತ್ತೆ ಹಾಜರಿರುವರು. ಮದರಾಸ್ ಮಂತ್ರಿಮಂಡಲದ ಪ್ರಕರಣದ ಒಂದು ಅಂಕವು ಈಗ ಮುಕ್ತಾಯವಾಗಿರುತ್ತದೆ.

ಹೊಸ ಮಂತ್ರಿಮಂಡಲವನ್ನು ಮತ್ತೆ ರಚಿಸುವಾಗ ಎರಡನೇ ಅಂಕವು ಆರಂಭವಾಗುತ್ತದೆ. ಆಂಧ್ರ, ತಮಿಳು, ಕೇರಳ, ಕರ್ನಾಟಕವೇ ಮುಂತಾದ ವಿವಿಧ ಭಾಗಗಳಿಂದ ಕೂಡಿದ ಮದರಾಸಿನ ಮಂತ್ರಿಮಂಡಲದಲ್ಲಿ ಇಂತಹ ಭಿನ್ನಾಭಿಪ್ರಾಯಗಳೂ, ಬಿಕ್ಕಟ್ಟುಗಳೂ ಹುಟ್ಟುವುದು ಸಹಜವೇ ಆಗಿರುತ್ತದೆ. ಆದರೆ ಒಂದೇ ಮಹಾ ಸಂಸ್ಥೆಗೆ ಸೇರಿದ ಜನರು, ಒಂದೇ ಗುರಿಯಿಂದ ಸಂಘಟಿತರಾಗಿ, ಶಿಸ್ತು, ವ್ಯವಸ್ಥೆಗಳಿಂದ ವರ್ತಿಸುವುದು ಅಸಾಧ್ಯವಾಗಿರಲಿಲ್ಲ. [illegible]ರೂ ರಾಜಕೀಯ ಇತಿಹಾಸದಲ್ಲೇ [illegible] ದಾದ ಪ್ರಕರಣಗಳು ಮದರಾಸಿನಲ್ಲಿ [illegible] ನಡೆದು ಹೋಗಿವೆ.

ಶ್ರೀ ಪ್ರಕಾಶಂರವರ [illegible]ಗೆಸ್ಸಿನ ಮ[illegible] ಹಿಡಿಸ್ದ[illegible] ನನ್ನ ಬದಿಗೂ [illegible] ಮಂಡಲವನ್ನು ರಚಿಸಿದಾಗಲೇ ವಿವಿಧ ಕೋಲಾಹಲವು ಎದ್ದಿತ್ತು. [illegible] ಕರ್ನೆಯು ಶಾಸನ ಒದ್ದವಾಗಿರುವ ಸಭೆ[illegible]ದಲ್ಲಿ ಬಹಳ ಜಿಜ್ಞಾಸೆಯು ಹುಟ್ಟಿತ್ತು. ಆದರೂ ಅವರು ದಿಟ್ಟತನದಿಂದ ಮುಂದುವರಿದು ಸರ್ವರ ಮೆಚ್ಚಿಗೆಗೂ ಪಾತ್ರವಾದ ರೀತಿಯಲ್ಲಿ ಕೆಲಸಕಾರ್ಯಗಳನ್ನು ನಿರ್ವಹಿಸಿದರು. ಮಹಾತ್ಮರ ಒಪ್ಪಿಗೆಯನ್ನೂ ಸಹ ಪಡೆದಿದ್ದರು. ಅವರು ಸ್ವತಂತ್ರವಾಗಿಯೂ, ಧೈರ್ಯದಿಂದಲೂ ಮುಂದುವರಿದು ನಡೆಸಿದ ಕೆಲವು ಕಾರ್ಯಗಳಿಂದ ಪ್ರತಿಗಾಮಿಗಳಾದ ಗುಂಪಿನವರು ಗಾಬರಿಗೊಂಡು ಅವರಿಗೆ ವಿರೋಧವಾಗಿ ವರ್ತಿಸಲು ಆರಂಭಿಸಿದರು. ಹೊರಗಿನವರ ವಿರೋಧವೂ, ಒಳಗಿನವರ ಅಸಮಾಧಾನಕ್ಕೂ ಎಡೆಗೊಟ್ಟು ಅವಿಶ್ವಾಸದ ಪ್ರಸಂಗದಲ್ಲಿ ಪರಿಣಮಿಸಿತು. ಕಡೆಗೆ ಪ್ರಕಾಶಂರವರು ರಾಜೀನಾಮೆಯನ್ನೂ ಸಹ ಸಲ್ಲಿಸಿರುವರು.

ಮುಂದೆ ಮದರಾಸ್ ಮಂತ್ರಿಮಂಡಲಕ್ಕೆ ಯಾರೇ ಬರಲಿ ಅವರು ಪ್ರಕಾಶಂ ಮಂತ್ರಿಮಂಡಲದ ಒಳ್ಳೆಯ ಕೆಲಸಗಳನ್ನು ನಿರ್ಲಕ್ಷಿಸಿ ಬಿಡಲಾಗುವುದಿಲ್ಲವೆಂದು ಹಾರೈಸಬೇಕಾಗಿದೆ. ಪ್ರಕಾಶಂರವರಂತಹ ಧೀರರೂ, ವೀರರೂ, ತ್ಯಾಗಿಗಳೂ ಮದರಾಸಿನಲ್ಲಿ ದೊರೆಯುವುದು ದುರ್ಲಭ. ಶ್ರೀ ಸಿ. ರಾಜಗೋಪಾಲಾಚಾರಿಯವರು ನ[illegible] [illegible] ಕೆಲಸಕಾರ್ಯಗಳನ್ನು ಸಾಧಿಸುತ್ತಿದ್ದರು. ಶ್ರೀ ಪ್ರಕಾಶಂರವರೋ ದಿಟ್ಟತನದಿಂದ [illegible] ದಿಂದಲೂ, ನಿರ್ಭಯದಿಂದಲೂ ಕೆಲಸ ಮಾಡುತ್ತಿದ್ದರು.

ಶ್ರೀ ಪ್ರಕಾಶಂರವರ ರಾಜೀನಾಮೆಯಿಂದ ಖಾಲಿಯಾಗಿರುವ ಸ್ಥಾನವನ್ನು ಭರ್ತಿ ಮಾಡುವುದು ಸುಲಭವಲ್ಲ. ಹೊಸ ಮಂತ್ರಿಮಂಡಲದವರೂ ಅವರ ನಾಯಕತ್ವವನ್ನೇ ಅಂಗೀಕರಿಸಿದರೆ ಸರ್ವೋತ್ತಮ; ಅಥವಾ ಅವರ ಸಲಹೆ ಮತ್ತು ಸೂಚನೆಗಳಂತೆಯೇ ಮುಂದಿನ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಮೇಲು.

[illegible]ಜಕುಮಾರಿ ಎಲಿಜಬೆತ್ತರ ವಿವಾಹ

ಇಂಗ್ಲೆಂಡ್ ಸಿಂಹಾಸನದ ಉತ್ತರಾಧಿಕಾರಿಣಿಯವರಾದ ರಾಜಕುಮಾರಿ ಎಲಿಜಬೆತ್ತರು ಗ್ರೀಸಿನ ರಾಜಕುಮಾರ ಫಿಲಿಪ್ಪರವರನ್ನು ಈ ವರ್ಷ ಮದುವೆ ಮಾಡಿಕೊಳ್ಳಬಹುದೆಂದು ಗೊತ್ತಾಗಿದೆ. ಅವರ ತಂದೆ ತಾಯಿಯರು ಫಿಲಿಪ್ಪರೊಡನೆ ರಾಜಕುಮಾರಿಯ ಸಂಪರ್ಕವನ್ನು ತಡೆಯಲು ಯತ್ನಿಸುತ್ತಿದ್ದರೂ ಸಹ ಆಕೆಯು ವಾರಕ್ಕೆ ಮೂರಾವರ್ತಿ ಅವರಿಗೆ ಕಾಗದ ಬರೆಯುತ್ತಿರುವರೆಂದೂ ಮತ್ತು ಅವರು ಲಂಡನ್ ನಗರಕ್ಕೆ ಬಂದಾಗ ತಮ್ಮ ಅತಿಥಿಗಳನ್ನಾಗಿ ಅರಮನೆಯಲ್ಲಾಗಲಿ ಅಥವಾ ವಿಂಡ್ಸರ್ ಭವನದಲ್ಲಾಗಲೀ ಅವರನ್ನು ಆಹ್ವಾನಿಸುವರೆಂದೂ ಸಹ ಗೊತ್ತಾಗಿದೆ. ರಾಜಕುಮಾರಿಯವರಿಗೆ ಈಗ ೬೦೦೦ ಪೌಂಡ್ ವಾರ್ಷಿಕ ವೇತನ ಸಲ್ಲುತ್ತಿದೆ. ಬರುವ ಏಪ್ರಿಲ್ ೨೧ಕ್ಕೆ ಅಂತ್ಯವಾಗುವ ಅವರ ೨೧ನೇ ವರ್ಷದ ನಂತರ ಅವರಿಗೆ ೧೫ ಸಹಸ್ರ ಪೌಂಡು ಸಲ್ಲುವುದು. ಎಲಿಜಬೆತ್ತರು ತಮಗೆ ಸಿಂಹಾಸನದ ಮೇಲೆ ಆಸೆಯಿಲ್ಲವೆಂದೂ, ತಮ್ಮ ತಂದೆಯವರು ಅನುಭವಿಸುತ್ತಿರುವ ಸಾಮ್ರಾಟ್ ಪದವಿಯಿಂದ ನಿವೃತ್ತರಾಗುವುದು ತಮಗೆ ಸರಿ ತೋರುವುದಿಲ್ಲವೆಂದೂ ಸಹ ಹೇಳಿರುವುದಾಗಿ ವರದಿಯಾಗಿದೆ. ಈಗ ಅವರು ದ॥ ಆಫ್ರಿಕಕ್ಕೆ ತೆರಳಿರುವರು. ಅಲ್ಲಿಂದ ಹಿಂದಿರುಗಿದ ಮೇಲೆ ಆಸ್ಟ್ರೇಲಿಯಾ ಮತ್ತು ಕೆನಡಾಗೆ ಹೋಗಬಹುದೆಂದು ಗೊತ್ತಾಗಿದೆ.

§ ಆಸ್ಟ್ರೇಲಿಯದ ಪ್ರತಿಯೊಬ್ಬ ನಾಗರಿಕನಿಗೂ ವಯಸ್ಸಾದ ಮೇಲೆ ವಿಶ್ರಾಮ ವೇತನವನ್ನು ಕೊಡುವಂತೆ ಮಾಡುವ ಯೋಜನೆಯೊಂದನ್ನು ಅಲ್ಲಿನ ಸರ್ಕಾರವು ಪರಿಶೀಲಿಸುತ್ತಿದೆ.

ಭಾರತದಲ್ಲಿರುವ ಬ್ರಿಟಿ[illegible] ಪ್ರಜೆಗಳ ಸಂಖ್ಯೆ ಎಷ್ಟು[illegible]

ಭಾರತದಲ್ಲಿರುವ ಬ್ರಿಟಿಷ್ ಪ್ರಜೆ[illegible] ಟ್ಟ ಸಂಖ್ಯೆಯು ಒಂದು ಲಕ್ಷವೆಂದು[illegible] ರೆ ಯಾವ ಯಾವ ಉದ್ಯೋಗದ[illegible] ಷ್ಟು ಮಂದಿ ಇರುವರೆಂಬುದು ತಿಳಿ[illegible] ತ್ತಿಲ್ಲವೆಂದೂ ಭಾರತದ ಅಂಡರ್ [illegible] ಮಿ॥ ಆರ್ಥರ್ ಹೆಂಡರ್‌ಸನ್‌ರವರು[illegible] ರ್ಲಮೆಂಟ್ ಸಭೆಯಲ್ಲಿ ಪ್ರಶ್ನೆಯ[illegible] ಉತ್ತರವಾಗಿ ಹೇಳಿರುವರು.

ಹರಾಜು ಇಸ್ತಿಹಾರ್

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಫೀಸಿನಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ.—

ಮೈಸೂರು ಸಿಟಿ ದೇವರಾಜ ಮೊಹಲ್ಲಾದಲ್ಲಿ ಹೊಸದಾಗಿ ಕಟ್ಟಿಸುತ್ತಿರುವ ಸ್ವಾತಂತ್ರ್ಯ ಸ್ಕ್ವೇರ್ ಬಳಿ ಟ್ರಸ್ಟ್ ಬೋರ್ಡಿನವರು ಆಕ್ವೈರ್ ಮಾಡಿಕೊಂಡಿರುವ ಮನೆಯ ಸಾಮಾನುಗಳನ್ನು ಅಂದರೆ ಕಬ್ಬಿಣದ ಗರ್ಡರ್ ಮತ್ತು ಟ್ರಸ್ಸುಗಳು ವಗೈರೆ ಸಾಮಾನುಗಳನ್ನು ತಾ॥ ೧೬-೩-೪೭ ಭಾನುವಾರ ಬೆಳಗ್ಗೆ ೯ ಗಂಟೆಯಿಂದ ೧೨ ಗಂಟೆಯವರೆಗೆ ಬಹಿರಂಗವಾಗಿ ಹರಾಜು ಹಾಕಲಾಗುತ್ತೆ. ಇಷ್ಟವುಳ್ಳವರು ಭರ್ತಿದರಖಾಸ್ತು ಮಾಡಿ ಸಾಮಾನುಗಳನ್ನು ಪಡೆಯಬಹುದು.

ಆರ್. ಎಲ್. ರಾಜು,
ಛೇರ್ಮನ್ನರಿಗಾಗಿ,
ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್,
ಮೈಸೂರು

ಮೈಸೂರು ಶ್ರೀ ಗಣೇಶ ಟಾಕೀಸಿನಲ್ಲಿ

14-3-47 ರಿಂದ ಪ್ರತಿ ದಿನ ಮೂರು ಆಟಗಳು

ಕನ್ನಡ ಚಿತ್ರಗಳಲ್ಲೆಲ್ಲಾ ಶ್ರೇಷ್ಠವಾದ ವರ್ಣರಂಜಿತ ಸನ್ನಿವೇಶಗಳಿಂದ ಕೂಡಿದ

ಕನ್ನಡ

★ ಹರಿಶ್ಚಂದ್ರ ★

ಪಾತ್ರ:- ಸುಬ್ಬಯ್ಯ ನಾಯ್ಡು, ನಾಗೇಂದ್ರರಾವ್, ಮರಿಗಾವ್, ಲಕ್ಷ್ಮೀಬಾಯಿ.

Morning Shows on 14, 15, 16, 17 at 10.30 A. M.

"NIGHT-MARE"

— Starring :—

Diana — Barrymore — Brian — Donlevy

ರಾಜ್‌ಕಮಲ್[illegible]
ಮೈಸೂರು

ತಾ॥ ೧೪-೩-೪೭ ರಿಂ[illegible]
೪ ದಿನಗಳು ಮಾತ್ರ ಬೆಳಗಿನ ಪ್ರ[illegible]
೧೦-೩೦ ಗಂಟೆಗೆ

ಚಿತ್ರಲೇ[illegible]
(ಹಿಂದಿ ಚಿತ್ರ)

ಪಾತ್ರ :- ಮೆಹತಾಬ್, ಸಂಗೀ[illegible]

ರಣಜಿತ್
೧೪-೩-೪೭ ರಿಂದ

ತಕ್ರಾ[illegible]

-: ಪಾತ್ರ :-
• ಜಮುನ, • ನ[illegible]
ಪ್ರತಿ ದಿನ ಮೂರು ಆಟ[illegible]

ರಾಜಕಮ[illegible]
೯-೩-೪೭ ರಿಂದ ೪ನೇ [illegible]
1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀ[illegible]
(ಕನ್ನಡ[illegible])

[illegible]ವಾದ ಗಾನಗಳು! ಸೊಂಪಾದ [illegible]ಕಗಳು!! ಮನರಂಜಕವಾದ ದೃಶ್ಯ[illegible]
ಇವೆಲ್ಲವನ್ನೂ ಇಂದೇ ನೋ[illegible]

ಅಪೆರಾ ಟಾಕೀ[illegible]
೧೩-೩-೪೭ ರಿಂದ

ಸೂಲ್‌ಮಾಸ್ಟರ (ಹಿಂದಿ ಚಿತ್ರ)

ಪ್ರತಿ ದಿನ ಮೂರು ಆಟಗಳು
ಪಾತ್ರ :- ಜೀವನ್, ಕೌಶಲ್ಯ[illegible]
ಮಾಯಾ ಬ್ಯಾನರ್ಜಿ ಮುಂತಾ[illegible]

Morning Shows fr[illegible]
14-3-47 at 10-30 a.[illegible]

BAMBI
(Technicolor)

Edited, printed and publ[illegible] A. R. Nagaraja[illegible] at the Sadhv[illegible] D. Subbiah Road, Mysore

★ ಸೀರೆಗಳ ತವರುಮನೆ ಯಾವುದು? ಬಾಹುಸಾರ್ ಕಂಪೆನಿ

ಸಾವಿರ ಸೀರೆಗಳ ಅಂಗಡಿ ಯಾವುದು? ಬಾಹುಸಾರ್ ಕಂಪೆನಿ

ನಿಮ್ಮ ಯುಗಾದಿ ಹಬ್ಬದ ಸೀರೆಯನ್ನು ಎಲ್ಲಿ ತೆಗೆಯುವಿರಿ? ಬಾಹುಸಾರ್ ಕಂಪೆನಿಯಲ್ಲಿ

—: ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು :—

ರೆಜಿ. ನಂ. 392 ॥ ವಂದೇ ಮಾತರಂ ॥ ಬಿಡಿ ಪ್ರತಿಗೆ 3 ಕಾಸು

ಸಂಪುಟ ೫] ಶುಕ್ರವಾರ ೧೮—೪—೪೭ [ಸಂಚಿಕೆ ೧೮೪

ಪ್ರಾಂತ್ಯಗಳ ವಿಭಜನೆಗೆ ಮಹಾತ್ಮರ ವಿರೋಧ

ಹಲವು ರಾಜರ ವರ್ತನೆ ಬೋನಿನಲ್ಲಿದ್ದ ಸಿಂಹದಂತೆ ಇದೆ

ಬ್ರಿಟಿಷರು ಬರುವ ವರ್ಷ ಹಿಂದೂಸ್ಥಾನವನ್ನು ಬಿಟ್ಟು ಹೋಗಿ ಅವರ ಅಧಿಕಾರ ನಿವೃತ್ತಿಯಾಗಲಿರುವುದಷ್ಟೆ. ಆದರೂ ಸ್ವತಂತ್ರ ಭಾರತ ರಾಜ್ಯಾಂಗ ನಿರ್ಮಾಣ ಕಾರ್ಯದಲ್ಲಿ ಸೇರಲು ಹಲವು ದೇಶೀ ರಾಜರುಗಳು ಹಿಂದು ಮುಂದು ನೋಡುತ್ತಿರುವರು. ಇದನ್ನು ಕುರಿತು ಗ್ವಾಲಿಯರ್ ಸಂಸ್ಥಾನದ ಪ್ರಧಾನ ಮಂತ್ರಿ ಶ್ರೀ ಎ. ಶ್ರೀನಿವಾಸರವರು ಒಂದು ಹೇಳಿಕೆಯಿತ್ತು ಬಹಳ ಕಾಲ ಬಂಧನದಲ್ಲಿದ್ದ ಮೃಗರಾಜನು ತನ್ನ ಬೋನಿನ ಬಾಗಿಲನ್ನು ತೆರೆದು ಹಾಕಿದ ಮೇಲೆಯೂ ಸಹ ಅದರ ಹೊರಗೆ ಬರಲೊಲ್ಲದೆ ಒಳಗೇ ಇರಲು ಬಯಸಿದಂತೆ ಇಂತಹ ರಾಜರುಗಳ ವರ್ತನೆಯು ಇದೆ-ಎಂದು ಹೇಳಿದ್ದಾರೆ. ಗ್ವಾಲಿಯರ್ ಸಂಸ್ಥಾನವು ಶ್ರೀಮನ್ಮಹಾರಾಜರ ಛತ್ರದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದೆಂದೂ, ಅಖಂಡ ಭಾರತದ ರಾಜ್ಯಾಂಗ ರಚನೆಯಲ್ಲಿ ಸಹಕರಿಸುವುದೆಂದೂ ಸಹ ಅವರು ತಿಳಿಸಿರುವರು.

ಆಸ್ಟ್ರಿಯಾದಲ್ಲಿ ನಾಜಿಗಳ ಭಾರಿ ಒಳಸಂಚು

ಆಸ್ಟ್ರಿಯದ ಪ್ರಮುಖ ಅಧಿಕಾರ ಸ್ಥಾನಗಳಲ್ಲಿ ನಾಜಿಗಳನ್ನು ತಂದು ಕೂರಿಸಲು ನಡೆದಿದ್ದ ಭಾರಿ ಒಳಸಂಚು ಒಂದು ಪತ್ತೆಯಾಗಿದೆಯೆಂದು ಆಸ್ಟ್ರಿಯಾ ಸರ್ಕಾರದ ಪ್ರಕಟಣೆ ಹೊರಟಿದೆ. ನಾಜೀ ಪ್ರಮುಖರು ಸಾರ್ವಜನಿಕ ರಂಗದಲ್ಲಿ ಯಾವ ರೀತಿ ಪ್ರಭಾವವನ್ನು ಬೀರಿ ಅಧಿಕಾರ ಸ್ಥಾನಗಳನ್ನು ಗಳಿಸಬಹುದೆಂದು ಆ ಯೋಜನೆಯಲ್ಲಿ ನಮೂದಿಸಲಾಗಿದ್ದಿತೆಂದು ಹೇಳಲಾಗಿದೆ.

ಪ್ರಷ್ಯಾ ರಾಷ್ಟ್ರದ ಅಂತ್ಯ

ಚತುರ್ರಾಷ್ಟ್ರ ವಿದೇಶಾಂಗ ಸಚಿವರ ಸಮ್ಮೇಳನದಲ್ಲಿ ಪ್ರಷ್ಯಾ ರಾಜ್ಯವನ್ನು ಕೊನೆಗಾಣಿಸುವ ವಿಷಯವು ಎಲ್ಲರಿಂದಲೂ ಅಂಗೀಕರಿಸಲ್ಪಟ್ಟಿತು. ಜರ್ಮನಿಯು ಆಕ್ರಮಣ ನಡೆಸುವುದನ್ನು ತಪ್ಪಿಸಲು ನಾಲ್ಕು ಮಹಾರಾಷ್ಟ್ರಗಳೂ ೨೦ ವರ್ಷದ ಒಪ್ಪಂದವನ್ನು ಮಾಡಿಕೊಳ್ಳಲು ತೀರ್ಮಾನವಾಯಿತು.

ಪುಸ್ತಕಾಲಯದ ಅವ್ಯವಸ್ಥೆ

ನಂಜನಗೂಡು ೧೩

ಶ್ರೀಗಳಾದ ಟಿ. ಎನ್. ವಿ. ರಾಮ್, ಎನ್. ಕಸ್ತೂರಿ ಮತ್ತು ಎ. ಎಸ್. ರಾವ್-ಮುಂತಾದವರು ಈ ರೀತಿ ಬರೆಯುತ್ತಾರೆ:-

ಈ ಊರಿನ ಪುರಸಭೆಯ ಪುಸ್ತಕ ಭಂಡಾರದ ಅವ್ಯವಸ್ಥೆಯು ಪರಮಾವಧಿಯನ್ನೇರಿರುವುದು ಶೋಚನೀಯವಾದ ವಿಚಾರವು. ಇರುವ ಸ್ಥಳ ಅನಾರೋಗ್ಯಕರವಾದುದು. ಗಾಳಿ, ಬೆಳಕುಗಳ ಅಭಾವವೂ ಇದೆ. ಪತ್ರಿಕೆಗಳು ಸಕಾಲಕ್ಕೆ ಬರುತ್ತಿಲ್ಲ. ಅನೇಕ ಪುಸ್ತಕಗಳೂ ಮಾಯವಾಗುತ್ತಿವೆ. ಚಂದಾ ವಸೂಲಿ ಸರಿಯಾಗಿ ನಡೆಯುತ್ತಿಲ್ಲ. ಚುನಾಯಿತ ಪ್ರತಿನಿಧಿಗಳಿದ್ದೂ ಈ ರೀತಿಯಾಗಿದೆ. ಮುಂದೆ ನಡೆಯಲಿರುವ ಚುನಾವಣೆಯಲ್ಲಿ ಮಹಾಜನರು ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಕಾರ್ಯತತ್ಪರರಾದ ಉಮೇದುವಾರರು ಚುನಾಯಿತರಾಗುವಂತೆ ಮಾಡಬೇಕಾಗಿದೆ.

ಹಬ್ಬಕ್ಕಾಗಿ ಬಟ್ಟೆ ಮತ್ತು ಬೆಲ್ಲ ಬೇಕು

ಮೈಸೂರು ೧೮

ನಗರದ ಹಿಂದೂ ಮಹಾಸಭೆಯ ಕಾರ್ಯಕರ್ತರು ಮೊನ್ನೆ ಸಂಜೆ ಶ್ರೀ ಕೆ. ಕೇಶವಾದ್ರಿಯವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಾಲಯದಲ್ಲಿ ಸೇರಿ ಯುಗಾದಿಯು ಹಿಂದುಗಳಿಗೆ ಪವಿತ್ರವೂ, ಪ್ರಾಮುಖ್ಯವೂ ಆದ ಹಬ್ಬವಾದುದರಿಂದ, ಅದಕ್ಕಾಗಿ ಹೊಸಬಟ್ಟೆಯನ್ನೂ, ಬೆಲ್ಲವನ್ನೂ ಒದಗಿಸಬೇಕೆಂದೂ, ಹಬ್ಬದ ೩ ದಿನಗಳೂ ನೀರಿನ ಸರಬರಾಜನ್ನು ಉತ್ತಮಪಡಿಸಬೇಕೆಂದೂ ಪ್ರಾರ್ಥಿಸುವ ನಿರ್ಣಯಗಳನ್ನು ಅಂಗೀಕರಿಸಿದರು. ಜನ ಪಟ್ಟಣದ ಪ್ರಾಥಮ್ಯಕಳಂಕದ ದಿ॥ ವೆಂಬಾರ್‌ರವರ ಕುಟುಂಬಕ್ಕೆ ಪರಿಹಾರ ಒದಗಿಸಿಕೊಟ್ಟದ್ದಕ್ಕಾಗಿ ಸರ್ಕಾರದವರನ್ನು ಅಭಿನಂದಿಸಿದರು. ಈ ಸಲ ರಾಗಿ ಫಸಲು ಚೆನ್ನಾಗಿ ಬಂದಿರುವುದರಿಂದ ಪ್ರಜೆಗಳಿಗೆ ರಾಗಿಯನ್ನು ಪೂರ್ಣಪ್ರಮಾಣದಲ್ಲಿ ಸರಬರಾಜು ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ಠರಾವನ್ನು ಅಂಗೀಕರಿಸಿದರು.

ಅಲಂಪತ್ತಿದ್ದ ಮಹಿಳೆಯರಿಗೆ ಸರ್ ಮಿರ್ಜಾರವರ ಸಮಾಧಾನ

ಹೈದರಾಬಾದಿನ ಪ್ರಧಾನಿಗಳ ಸರ್ ಮಿರ್ಜಾ ಇಸ್ಮೈಲ್‌ರವರು ನಲಗೊಂಡ ಹಳ್ಳಿಗೆ ಭೇಟಿ ಇತ್ತಿದ್ದಾಗ ಅಲ್ಲಿನ ಹೆಂಗಸರೆಲ್ಲರೂ ಕಣ್ಣೀರಿಡುತ್ತಾ ಬಂಧನದಲ್ಲಿರುವ ತಮ್ಮ ಗಂಡಸರುಗಳನ್ನು ಖುಲಾಸೆ ಮಾಡಬೇಕೆಂದು ಪ್ರಾರ್ಥಿಸಿದರು. ಸೆರೆಯಲ್ಲಿರುವ ಅವರುಗಳ ಪೈಕಿ ಬಹು ಮಂದಿಯನ್ನು ಖುಲಾಸೆ ಮಾಡಿಸಲು ಸರ್ ಮಿರ್ಜಾರವರು ಒಪ್ಪಿ ಇತ್ತಿದ್ದಾರೆ.

ಹೆಣದ ಬಟ್ಟೆ ಕಳ್ಳರಿಂದ ಸತ್ತ ಮಗು ಬದುಕಿತು

ಗಯಾದಲ್ಲಿ ಬಟ್ಟೆ ಅಭಾವ ಹೆಚ್ಚಿ ಗೋರಿಗಳಲ್ಲಿ ಹೆಣದ ಮೇಲೆ ಹೊದಿಸಿದ್ದ ಬಟ್ಟೆಗಳನ್ನು ಕಳವು ಮಾಡಲಾಗುತ್ತಿದೆಯೆಂದು ತಿಳಿದುಬಂದಿದೆ. ಕ್ರೈಸ್ತ ಅಂಚೆ ನೌಕರನೊಬ್ಬನ ಸತ್ತ ಮಗುವನ್ನು ಶವ ಪೆಟ್ಟಿಗೆಯಲ್ಲಿ ಹಾಕಿ ಸಮಾಧಿ ಮಾಡಲಾಗಿದ್ದಿತು. ಈ ಗೋರಿಯನ್ನು ಅಗೆದು ಕಳ್ಳರು ಬಟ್ಟೆಯನ್ನು ಅಪಹರಿಸಲು ಪ್ರಯತ್ನಿಸುತ್ತಿದ್ದಾಗ ಮಗುವು ಬದುಕಿದ್ದುದು ಕಂಡು ಬಂದಿತು. ಅನಂತರ ತಂದೆತಾಯಿಗಳ ವಶಕ್ಕೆ ಆ ಮಗುವನ್ನು ಕಳುಹಿಸಲಾಯಿತು.

ಪಂಜಾಬಿನಲ್ಲಿ ರಕ್ತ ಸ್ನಾನ

ಹಳ್ಳಿಗಳಲ್ಲಿ ಬೆಂಕಾಜನಕ ಪರಿಸ್ಥಿತಿ

ಪಂಜಾಬ್ ಪ್ರಾಂತ್ಯದ ಮುಖ್ಯ ನಗರಗಳಲ್ಲಿ ಪರಿಸ್ಥಿತಿ ಕ್ರಮೇಣ ಸುಧಾರಿಸುತ್ತಿದೆ. ಆದರೆ ಗಲಭೆಯು ಹಳ್ಳಿಗಳ ಕಡೆ ಪ್ರವಹಿಸುತ್ತಿದೆ. ರಾವಲ್ಪಿಂಡಿಯ ಸುತ್ತಲೂ ಇರುವ ಹಳ್ಳಿಗಳ ಸ್ಥಿತಿ ಚಿಂತಾಜನಕವಾಗಿದೆ. ಅಟಕ್ ಜಿಲ್ಲೆಯಲ್ಲಿ ಅರಾಜಕತೆ ತಾಂಡವವಾಡುತ್ತಿದೆ. ಪರಾರಿ ತಂಡವೊಂದು ವಿಮಾನವಾಲಿ ಪಟ್ಟಣವನ್ನು ಮುತ್ತಿ ಸುಲಿಗೆ ನಡೆಸಿತು. ಪಂಜಾಬು ಪ್ರಾಂತ್ಯ ರಕ್ತಸ್ನಾನದಲ್ಲಿ ತೊಳಲುತ್ತಿರುವಾಗ ಅಖಿಲ ಭಾರತ ಮುಖಂಡರುಗಳೆಲ್ಲಿದ್ದಾರೆ? ಅವರ ಸಹಾಯಕ್ಕಾಗಿ ಧಾವಿಸಿ ಬರುವುದಿಲ್ಲವೇ ಎಂದು ಸಿ ಡಾಬ್ ಟ್ರಿಬ್ಯೂನ್ ಪತ್ರಿಕೆ ಆರ್ತನಾದ ಮಾಡಿದೆ. ರೋಹ್‌ಟಕ್ ನಗರದಲ್ಲಿ ವಿಷಮ ಪರಿಸ್ಥಿತಿ ತಲೆದೋರಿದೆ. ರಾವಲ್ಪಿಂಡಿ, ಮುಲ್ತಾನ್ ಮತ್ತು ಕ್ಯಾಂಬೆಲ್ ಪ್ರದೇಶಗಳಿಗೆ ಹೆಚ್ಚಿಗೆ ಮಿಲಿಟರಿ ಕಳುಹಿಸಲು ಸ॥ ಬಲದೇವಸಿಂಗರು ಒಪ್ಪಿ ಇತ್ತಿದ್ದಾರೆ. ಪಂಜಾಬಿನ ಪ್ರಕರಣವು ನೌಖಾಲಿಗಿಂತ ಅತ್ಯಂತ ಭಯಾನಕವಾಗಿದೆಯೆಂದು ಅವರು ತಿಳಿಸಿದ್ದಾರೆ.

ಶೀಘ್ರದಲ್ಲಿಯೇ ದಂಡು ಮೈಸೂರಿಗೆ

ಸ್ವಂ ಸ.] ಬೆಂಗಳೂರು ೧೮

ದಂಡನ್ನು ಮೈಸೂರು ಸಂಸ್ಥಾನಕ್ಕೆ ವಹಿಸಿಕೊಡುವ ಬಗ್ಗೆ ಮಾತುಕತೆಗಳೆಲ್ಲಾ ಮುಕ್ತಾಯಗೊಂಡಿವೆಯೆಂದೂ, ಈ ಬಗ್ಗೆ ಅಧಿಕೃತ ಹೇಳಿಕೆಯು ಸದ್ಯದಲ್ಲೇ ಹೊರಬೀಳುವುದೆಂದೂ, ತಿಳಿದುಬಂದಿದೆ. ಇತ್ತೀಚೆಗೆ ರಾಜಧಾನಿಗೆ ಬಂದಿದ್ದ ವೈಸರಾಯರ ರಾಜಕೀಯ ಸಲಹೆಗಾರರು ಶ್ರೀಮನ್ಮಹಾರಾಜರವರೊಡನೆ ನಡೆಸಿದ ಭೇಟಿಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದರೆಂದು ಹೇಳಲಾಗಿದೆ. ಏಪ್ರಿಲ್ ತಿಂಗಳ ಮಧ್ಯಭಾಗದಲ್ಲಿ ಈ ವರ್ಗ ನಡೆಯಬಹುದೆಂದು ಊಹಿಸಲಾಗಿದೆ.

* ಜಿಲ್ಲಾ ರೈಲ್ವೆ ಟ್ರಾಫಿಕ್ ಸೂಪರಿಂಟೆಂಡೆಂಟಾದ ಶ್ರೀ ಎಂ. ನಾರಾಯಣ್‌ರವರನ್ನು ಬೆಂಗಳೂರಿಗೂ, ಶ್ರೀ ಬಿ. ಜಿ. ಆರ್. ನಾಯ್ಡುರವರನ್ನು ಮೈಸೂರಿಗೂ ವರ್ಗಾಯಿಸಲಾಗಿದೆ.

§ ಬೆಂಗಳೂರು ಮೆಡಿಕಲ್ ಶಾಲೆಯಲ್ಲಿರುವ ಎಲ್. ಎಂ. ಪಿ. ಶಾಖೆಯನ್ನು ವಜಾ ಮಾಡಿ ಅದನ್ನು ಕಾಲೇಜು ದರ್ಜೆಗೆ ಏರಿಸಲಾಗುವುದೆಂದು ತಿಳಿದುಬಂದಿದೆ.

ಹನುಮಂತಯ್ಯನವರ ಶಿಕ್ಷೆ ಇಳಿಯಿತು

ಸ್ವಂ ಸ ಪ್ರೋ॥] ಬೆಂಗಳೂರು ೧೮

ರಾಜದ್ರೋಹದ ಅಪಾದನೆ ಮೇಲೆ ೧೮ ತಿಂಗಳ ಕಠಿಣಶಿಕ್ಷೆ, ೫೦೦ ರೂ ಗಳ ಜುಲ್ಮಾನೆ ತಪ್ಪಿದರೆ ೩ ತಿಂಗಳ ಶಿಕ್ಷೆಗೆ ಗುರಿಯಾಗಿದ್ದ ಶ್ರೀ ಕೆ. ಹನುಮಂತಯ್ಯನವರ ಅಪೀಲಿನ ಬಗ್ಗೆ ಶ್ರೀ ಹೈಕೋರ್ಟಿನಲ್ಲಿ ನ್ಯಾಯಮೂರ್ತಿಗಳು ಈದಿನ ತೀರ್ಪಿತ್ತು ಗುಂಡೂರಿನಲ್ಲಿ ಅವರು ಮಾಡಿರುವ ಭಾಷಣವು ಸರ್ಕಾರವನ್ನು ಅವಹೇಳನಮಾಡುವಂತಿದೆಯೆಂದೂ, ರಾಜದ್ರೋಹಕರವಾಗಿದೆಯೆಂದೂ ಹೇಳಿ, ಈಗ ವಿಧಿಸಿರುವ ಶಿಕ್ಷೆಯು ಹೆಚ್ಚೆಂದು ಅಭಿಪ್ರಾಯಪಟ್ಟು ಶ್ರೀ ಹನುಮಂತಯ್ಯನವರು ೧ ವರ್ಷ ಕಠಿಣ ಶಿಕ್ಷೆಯನ್ನು ಮಾತ್ರ ಅನುಭವಿಸಬೇಕೆಂದು ತಿಳಿಸಿದ್ದಾರೆ. ಜುಲ್ಮಾನೆಯನ್ನು ರದ್ದುಮಾಡಿರುತ್ತಾರೆ.

ದರೋಡೆ ಮೊಕದ್ದಮೆಯಲ್ಲಿ ಸುಂದರರಾಯರ ಸಾಕ್ಷ್ಯ

ಧರ್ಮರತ್ನಾಕರ ಗೋಪಾಲರಾಯರ ಆಭರಣಗಳ ದರೋಡೆ ಮೊಕದ್ದಮೆಯಲ್ಲಿ ಶ್ರೀ ಜಿ. ಸುಂದರರಾಯರು ಈದಿನ ಈರೀತಿ ಸಾಕ್ಷ್ಯವಿತ್ತರು. ಸಂಸ್ಥಾನದ ಬಹಳ ಪ್ರಾಮುಖ್ಯವಾದ ಗುಟ್ಟಿನ ವಿಷಯವೊಂದನ್ನು ತನಿಖೆಮಾಡಲು ಸರ್ಕಾರದವರು ವಿ. ಜಿ. ಪಿ. ಯಾಗಿದ್ದ ನನ್ನನ್ನು ನೇಮಿಸಿದ್ದರು. ಆಗ ಶ್ರೀ ಪುಟ್ಟಣ್ಣಶೆಟ್ಟಿಯವರು ಪೊಲೀಸ್ ಖಾತೆಯ ಮಂತ್ರಿಗಳಾಗಿದ್ದರು. ನಾನು ಅದನ್ನು ವಿಚಾರಣೆ ನಡೆಸಿ ಆಗಿಂದಾಗ್ಗೆ ಬಾಯಿಮಾತಿನಲ್ಲಿ ಸರ್ಕಾರಕ್ಕೆ ವರದಿ ಒಪ್ಪಿಸಿದ್ದೇನೆ. ಆ ಸಮಯದಲ್ಲಿ ನಾನು ಶ್ರೀ ಸರ್ವೋತ್ತಮರಾವ್ ಮತ್ತು ದಂಡಿನ ವಿ॥ ಮಹಮದ್ ಫಜಲುಲ್ಲಾರವರ ಸಹಾಯ ಪಡೆದಿದ್ದೆ. ಇದಕ್ಕಾಗಿ ಸಂಸ್ಥಾನದ ಸೀಕ್ರೆಟ್ ಫಂಡಿನಿಂದ ೬೦ ರೂ ಗಳನ್ನು ಕೊಡಿಸಿದ್ದೇನೆ.

† ೩೦ ನೇ ತಾ॥ ಬೆಂಗಳೂರಿಗೆ ಆಗಮಿಸುವ ರಾಷ್ಟ್ರಪತಿ ಕೃಪಲಾನಿಯವರಿಗೆ ಬಿನ್ನವತ್ತಳೆಯನ್ನರ್ಪಿಸಲು ತಕ್ಕ ಏರ್ಪಾಡುಗಳನ್ನು ಮಾಡುವ ಬಗ್ಗೆ ಪುರಸಭಾ ವಿಶೇಷ ಅಧಿವೇಶನವು ನಾಳೆ ಸೇರಲಿದೆ.

‡ ಆಹಾರ ಪದಾರ್ಥಗಳ ಬೆಲೆಗೆ ಬೇಕಾದ ವಿದ್ಯುಚ್ಛಕ್ತಿಯನ್ನು ಇನ್ನು ಮುಂದೆಯೂ ಯೂನಿಟಿಗೆ ೩ ಕಾಣೆಯಂತೆ ಒದಗಿಸಲು ಸರ್ಕಾರದ ಆಜ್ಞೆಯಾಗಿದೆ. ಇತರ ಬೆಳಗಳಿಗೆ ಯೂನಿಟ್ಟಿಗೆ ಒಂದಾಣೆಯಂತೆ ಕೊಡಲಾಗುವುದು.

ವಿಭಜನೆಗೆ ಗಾಂಧೀಜಿಯವರ ವಿರೋಧ

ಪಂಜಾಬ್, ಬಂಗಾಳಾ ಅಥವಾ ಯಾವುದಾದರೂ ಪ್ರಾಂತ್ಯಗಳ ವಿಭಜನೆಗೆ ತಮ್ಮ ಒಪ್ಪಿಗೆ ಕೊಡಲು ಸಾಧ್ಯವಿಲ್ಲವೆಂದು ಮಹಾತ್ಮ ಗಾಂಧೀಜಿಯವರು ತಿಳಿಸಿದ್ದಾರೆ. ವಿಭಜನೆ ಮಾಡಿದರೆ ಕೋಮುವಾರು ಕಲಹ ಬೇರೂರಿ ನಿಲ್ಲುವುದೆಂದು ಅವರು ಹೇಳಿದ್ದಾರೆ. ಬ್ರಿಟಿಷರು ಭಾರತವನ್ನು ಬಿಟ್ಟು ಹೋಗುವುದರಲ್ಲಿ ಸಂಶಯವಿಲ್ಲ. ಭಾರತೀಯರು ತಮ್ಮತಮ್ಮಲ್ಲೇ ಕಲಹ ಮಾಡುತ್ತಿದ್ದರೆ ಭಾರತದ ಭವಿಷ್ಯವೇನು? ಯಾರು ಕದನವನ್ನೇ ನಿರಂತರವಾಗಿ ನೋಡುವರನ್ನು ಕೊಲೆ ಮಾಡುತ್ತಿರುವರೋ ಅವರುಗಳು ಭಾರತದ ಶತ್ರುಗಳು-ಎಂಬುದಾಗಿ ಗಾಂಧೀಜಿಯವರು ತಿಳಿಸಿದ್ದಾರೆ.

ಸಾಧ್ವಿ

ತಾ|| ೧೪-೩-೪೭ ಶುಕ್ರವಾರ

ವಿದ್ಯಾಧಿಕಾರಿಗಳಿಂದ ಮತ ದೂಷಣೆಯೇ?

ಸಂಸ್ಥಾನದ ವಿದ್ಯಾಶಾಖೆಯ ಡೆಪ್ಯುಟಿ ಡೈರೆಕ್ಟರಾದ ಹಜರತ್ ಅಬ್ದುಲ್ ವಾಹಬ್ ರವರು ಮಹಮುದ್ ಪೈಗಂಬರ್‌ರವರ ದಿನಾಚರಣೆಯ ಸಂಬಂಧದಲ್ಲಿ ತುಮಕೂರಿನಲ್ಲಿ ಮಾಡಿದ ಭಾಷಣವು ಅತ್ಯಂತ ಆಕ್ಷೇಪಣೀಯವಾಗಿದೆ. ಸರಕಾರದ ಉನ್ನತ ಅಧಿಕಾರ ಸ್ಥಾನದಲ್ಲಿರುವ ಇವರು ಪರಮತ ದೂಷಣೆಯಲ್ಲಿ ಪ್ರವರ್ತಿಸಿರುವುದು ಕೇವಲ ಖಂಡನಾರ್ಹವಾಗಿದೆ. ದೇಶದ ಮಕ್ಕಳ ಜ್ಞಾನಾರ್ಜನೆಗೆ ನಿರ್ಮಾಣವಾಗಿರುವ ಸಂಸ್ಥೆಯ ಅಧಿಕಾರಿಗಳಾಗಿರಲು ಇವರು ಅರ್ಹರೇ ?-ಎಂಬ ಪ್ರಶ್ನೆಯೂ ಉದ್ಭವಿಸುತ್ತದೆ ಅವರು ಆಡಿರುವ ಮಾತುಗಳು ಎಲ್ಲ ದೃಷ್ಟಿಗಳಿಂದಲೂ ಆಕ್ಷೇಪಾರ್ಹವಾಗಿರುತ್ತವೆ. ಇವರ ವರ್ತನೆಯನ್ನು ಕೂಲಂಕಷವಾಗಿ ವಿಚಾರಣೆ ಮಾಡಿ ಇಂತಹ ಅಧಿಕ ಪ್ರಸಂಗಗಳು ಇನ್ನು ಮುಂದೆ ಅವರ ಜ್ಞಾನಿಯಸ್ಥ ಸರ್ಕಾರಿ ನೌಕರರಿಂದ ನಡೆಯದಂತೆ ಸರ್ಕಾರದವರು ಏರ್ಪಡಿಸುವುದು ಅತ್ಯಗತ್ಯ.

ಹಜರತ್ ವಾಹಬ್‌ರವರು ಆಡಿದ ಮಾತುಗಳು ಈ ರೀತಿ ವರದಿಯಾಗಿವೆ: —

"ಕ್ರೈಸ್ತಮತವು ಒಬ್ಬನೇ ಈಶ್ವರನೆಂಬ ಸಿದ್ಧಾಂತದ ತತ್ವದ ಮೇಲೆ ಆರಂಭವಾಯಿತು; ಆದರೆ ಕ್ರಮೇಣ ಪಾದ್ರಿಗಳ ತತ್ವದಲ್ಲಿ ಬದಲಾವಣೆಗೊಂಡಿತು. ಹಿಂದೂ ಮತವೂ ಅದೇ ರೀತಿಯಲ್ಲಿಯೇ ಆರಂಭವಾಯಿತು; ಆದರೆ ಆ ದೊಡ್ಡ ಧರ್ಮಕ್ಕೆ ಇಂದಿನ ಜನಾಂಗವು ಅರ್ಪಿತೆಯನ್ನು ಕಳೆದುಕೊಳ್ಳುವ ಮಟ್ಟಿಗೆ ಅದು ಕಲುಷಿತವಾಗಿರುತ್ತದೆ. ಶ್ರೀ ಶಂಕರ ಮತ್ತು ರಾಮಾನುಜರ ಬೋಧನೆಗೆ ವಿರುದ್ಧವಾಗಿ ಹಿಂದುಗಳು ವಿಗ್ರಹಾರಾಧನೆಯಲ್ಲಿ ತೊಡಗಿರುವರು. ಇದಕ್ಕೆ ಅವರ ಮತ ಗ್ರಂಥಗಳಲ್ಲಿಯಾಗಲೀ, ಮಹಾಚಾರ್ಯರ ಬೋಧನೆಗಳಲ್ಲಿಯಾಗಲೀ ಸಮರ್ಥನೆ ಇರುವುದಿಲ್ಲ ತನ್ನನು ಪ್ರಾಪ್ತ ವಯಸ್ಕನಾದ ಮೇಲೆ ಅಣ್ಣನಿಂದ ಪಿತ್ರಾರ್ಜಿತ ಸ್ವತ್ತಿನಲ್ಲಿ ಆದಾಯ ಭಾಗವನ್ನು ಕೇಳುವ ರೀತಿಯೇ ಪಾಕೀಸ್ಥಾನದ ಬೇಡಿಕೆಯಲ್ಲಿ ಅಡಕವಾಗಿರುತ್ತದೆ. ಪವಿತ್ರ ಕೊರಾನಿನಂತೆಯೇ ಹಿಂದುಗಳ ವೇದಗಳೂ ವಿಷ್ಯ ವೈಭವದಲ್ಲಿ ಬರೆಯಲ್ಪಟ್ಟಿವೆ-ದು ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ನನಗೆ ಹೇಳಿರುತ್ತಾರೆ.

"ಮುಸ್ಲಿಂ ವಿದ್ಯಾರ್ಥಿಗಳು ಇತರ ಮತದವರನ್ನು ಹೀನಾಯವಾಗಿ ಕಾಣಲಾಗದು; ಇಸ್ಲಾಂ ಎಂದರೆ ಶಾಂತಿ. ಅದರ ಅನುಯಾಯಿಗಳು ಶಾಂತಿಯಿಂದಿರಬೇಕು; ಹಿಂದುಗಳು ವಂದೇಮಾತರಂ ಗೀತೆಯನ್ನು ಹಾಡಲಾಗದು ಅದು ತಮ್ಮ ಮತ ತತ್ವಗಳಿಗೆ ವಿರುದ್ಧವೆಂದು ಮುಸ್ಲಿಮರು ಭಾವಿಸುತ್ತಾರೆ ಆದರಿಂದ ಅವರ ಮನಸ್ಸಿಗೆ ನೋವಾಗುತ್ತದೆ ಮುಸ್ಲಿಮರು ಶಾಂತಿಪ್ರಿಯರಾಗಿರಬೇಕೆಂದು ಅವರ ಮತವೂ ಹೇಳುತ್ತದೆ ಆದರೆ ಅವರು ಹೇಡಿಗಳಲ್ಲ."

ಒಂದು ಕೆನ್ನೆಗೆ ಹೊಡೆದರೆ ಮತ್ತೊಂದನ್ನು ತೋರುವಂತೆ ಕ್ರೈಸ್ತರಿಗೆ ಬೋಧಿಸಿರುವ ಬೈಬಲ್ ಗ್ರಂಥದ ವಾಕ್ಯವನ್ನೂ ಸಹ ಹಜರತ್ ವಾಹಬ್‌ರವರು ಹೀಯಾಳಿಸಿ ಮಾತನಾಡಿದರೆಂದು ವರದಿಯಾಗಿದೆ. ಅವರ ಈ ಭಾಷಣವು ಸಕಲರನ್ನೂ ಉದ್ರೇಕಗೊಳಿಸುವುದಾಗಿದೆ. ಖಾಸಗಿ ಜನರು ಯಾವ ಮಾತುಗಳನ್ನು ಆಡಿದರೆ ಮಹಾಪರಾಧವಾಗುತ್ತಿತ್ತೋ ಅವುಗಳನ್ನು ಸರ್ಕಾರಿ ನೌಕರರಾದ ಇವರು ಆಡಿ ಇನ್ನೂ ಹೆಚ್ಚಿನ ಅಪರಾಧವನ್ನು ಮಾಡಿರುತ್ತಾರೆ. ಕೋಮು, ಜಾತಿ ಮತ್ತು ಮತಗಳ ಸೌಹಾರ್ದವು ಎಂದಿಗಿಂತಲೂ ವಿಶೇಷ ಅಗತ್ಯವಿರುವ ಈ ಸಮಯದಲ್ಲಿ ಇಂತಹ ವರ್ತನೆಯಲ್ಲಿ ಇವರು ತೊಡಗಿರುವುದು ಅತ್ಯಂತ ಹಾನಿಕರವಾದುದು ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಇರುವ ಶಾಲಾ ಬಾಲಕ, ಬಾಲಕಿಯರ ಮತ್ತು ಉಪಾಧ್ಯಾಯರುಗಳ ಮೇಲೆ ಇದು ಬಹಳ ದುಷ್ಪರಿಣಾಮವನ್ನುಂಟುಮಾಡುವುದರಲ್ಲಿ ಸಂದೇಹವಿಲ್ಲ

ಮಿ|| ವಾಹಬ್‌ರವರು ಹಿಂದೂ ಮತ, ಹಿಂದೂ ಜನಾಂಗ, ಹಿಂದೂ ಮತಗ್ರಂಥ, ವಂದೇ ಮಾತರಂ ಗೀತೆ, ಮೂರ್ತಿಪೂಜೆ, ಕ್ರೈಸ್ತ ಮತ ತತ್ವ-ಇವುಗಳ ವಿಷಯವಾಗಿ ಹೇಳಿರುವ ಒಂದೊಂದು ಅಭಿಪ್ರಾಯವೂ ತೀವ್ರವಾದ ಖಂಡನೆಗೆ ಪಾತ್ರವಾಗಿರುತ್ತದೆ.

ರಾಜ್ ಕಮಲ್,

ಮೈಸೂರು

ತಾ|| ೧೪-೩-೪೭ ರಿಂದ

೪ ದಿನಗಳು ಮಾತ್ರ ಬೆಳಗಿನ ಪ್ರದರ್ಶನ ೧೦-೩೦ ಗಂಟೆಗೆ

ಚಿತ್ರಲೇಖ

(ಹಿಂದಿ ಚಿತ್ರ)

ಪಾತ್ರ :-ಮೆಹತಾಬ್, ನಂದೇಕರ್, ನೂರ್ ದೇಸಾಯಿ ಮುಂತಾದವರು

ಫ್ರಾನ್ಸ್ ಪ್ರತಿನಿಧಿ ಸಭೆಯಲ್ಲಿ ಹೊಡೆದಾಟ

ಇಂಡೋ ಚೀಣದ ಸಮಸ್ಯೆಯ ಬಗ್ಗೆ ಫ್ರೆಂಚ್ ಶಾಸನ ಸಭೆಯಲ್ಲಿ ಚರ್ಚೆ ನಡೆಯುತ್ತಿದ್ದಾಗ, ಕಮ್ಯೂನಿಸ್ಟ್ ಪಕ್ಷದವರಿಗೂ, ಸ್ವತಂತ್ರ ಪಕ್ಷದವರಿಗೂ, ಬಿಸಿ ಬಿಸಿ ಚರ್ಚೆ ನಡೆದು ಕೊನೆಗೆ ಹೊಡೆದಾಟವೂ ಆಯಿತೆಂದು ವರದಿಯಾಗಿದೆ

ಮುಸ್ಲಿಮರು ಶಾಂತಿಪ್ರಿಯರಾದರೂ, ಹೇಡಿಗಳಲ್ಲವೆಂದು ಅವರು ಹೇಳಿರುವುದು ಅತ್ಯಂತ ಅಪ್ರಾಸಂಗಿಕವೆಂದು ಹೇಳಲೇಬೇಕು. ಇಂತಹವರು ಸಂಸ್ಥಾನದ ವಿದ್ಯಾಸಂಸ್ಥೆಯ ಮುಖ್ಯಸ್ಥಾನದಲ್ಲಿರಲು ಸ್ವಲ್ಪವೂ ಅರ್ಹರಲ್ಲ. ಅವರನ್ನು ಕೂಡಲೇ ಆ ಸ್ಥಾನದಿಂದ ತೆಗೆದು ಹಾಕಿ ಅವರ ವರ್ತನೆಯನ್ನು ನಿಷ್ಪಕ್ಷಪಾತವಾದ ವಿಚಾರಣೆಗೆ ಗುರಿಪಡಿಸಿ ಮುಂದೆ ಇಂತಹ ಪ್ರಸಂಗಗಳು ನಡೆಯದಂತೆ ಸರ್ಕಾರದವರು ಏರ್ಪಡಿಸಬೇಕೆಂದು ನಾವು ಕೋರುತ್ತೇವೆ

ಅಪೆರಾ ಟಾಕೀಸ್

೧೪-೩-೪೭ ರಿಂದ

ಸ್ಕೂಲ್ ಮಾಸ್ಟರ್

(ಹಿಂದಿ ಚಿತ್ರ)

ಪ್ರತಿ ದಿನ ಮೂರು ಆಟಗಳು

ಪಾತ್ರ:-ಜೀವನ್, ಕೌಶಲ್ಯ, ಮಾಯಾ ಬ್ಯಾನರ್ಜಿ ಮುಂತಾದವರು

Morning Shows from 14-3-47 at 10-30 a. m.

BAMBI

(Technicolor)

ಗಡಿನಾಡು ಮಂತ್ರಿಗಳ ಕೊಲೆ ಪ್ರಯತ್ನ

ಗಡಿನಾಡು ಸರ್ಕಾರದ ಹಣಕಾಸು ಮಂತ್ರಿಗಳಾದ ಶ್ರೀ ಮೆಹರ್ ಚಂದ್ ಖನ್ನಾ ರವರು ಮೊನ್ನೆ ಸಂಜೆ ಅವರ ಮನೆಯ ಅಂಗಳದಲ್ಲಿ ಕುಳಿತಿದ್ದಾಗ, ಇದ್ದಕ್ಕಿದ್ದಹಾಗೆ ಅವರ ಮೇಲೆ ಗುಂಡಿನ ಸುರಿಮಳೆ ಸುರಿಯಿತು. ಆದರೆ ದೈವವಶಾತ್ ಖನ್ನಾರವರಿಗೆ ತಗುಲಲಿಲ್ಲ. ಈ ಪ್ರಯತ್ನದ ಬಗ್ಗೆ ಪೋಲೀಸ್ ತನಿಖೆ ಆರಂಭವಾಗಿದೆ.

ಪಂಜಾಬಿಗೆ ಪಂ|| ನೆಹರು

ಪಂ|| ನೆಹರೂರವರು ಈ ದಿನ ಪಂಜಾಬಿಗೆ ವಿಮಾನದಲ್ಲಿ ತೆರಳಿದರು. ಅವರು ಲಾಹೋರ್, ರಾವಲ್‌ಪಿಂಡಿ, ಮುಲ್ತಾನ್ ಮತ್ತು ಅಮೃತಸರಗಳಿಗೆ ಭೇಟಿಯಿತ್ತು ಲೀಗ್ ಮುಖಂಡರನ್ನೂ ಭೆಟ್ಟಿ ಮಾಡುವರೆಂದು ಹೇಳಲಾಗುತ್ತಿದೆ.

ರಣಜಿತ್

೧೪-೩-೪೭ ರಿಂದ

ತಕ್‌ರಾರ

-:ಪಾತ್ರ:-

ಜಮುನ, ನವಾಬ

ಪ್ರತಿ ದಿನ ಮೂರು ಆಟಗಳು

ರಾಜಕಮಲ್

೯-೩-೪೭ ರಿಂದ ೪ ನೇ ವಾರ

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ

(ಕನ್ನಡ)

ಇಂಪಾದ ಗಾನಗಳು! ಸೊಂಪಾದ ನೃತ್ಯಗಳು!! ಮನರಂಜಕವಾದ ದೃಶ್ಯಗಳು ಇವೆಲ್ಲವನ್ನೂ ಇಂದೇ ನೋಡಿ.

ಹರಾಜು ಇಶ್ತಿಹಾರ

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಫೀಸಿನಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ದೇವರಾಜ ಮೊಹಲ್ಲಾದಲ್ಲಿ ಹೊಸದಾಗಿ ಕಟ್ಟಿಸುತ್ತಿರುವ ಮ್ಯುನಿಸಿಪಲ್ ಬಿಲ್ಡಿಂಗ್ ಟ್ರಸ್ಟ್ ಬೋರ್ಡಿನವರು ಅಕ್ವೈರ್ ಮಾಡಿಕೊಂಡಿರುವ ಹಳೆಯ ಸಾಮಾನುಗಳನ್ನು ಅಂದರೆ ಕಬ್ಬಿಣದ ಗರ್ಡರ್ ಮತ್ತು ಟ್ರಸ್ಸುಗಳು ವಗೈರೆ ಸಾಮಾನುಗಳನ್ನು ತಾ|| ೧೭-೩-೪೭ ಸೋಮವಾರ ಬೆಳಗ್ಗೆ ೯ ಗಂಟೆಯಿಂದ ೧೧ ಗಂಟೆಯವರೆಗೆ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇಷ್ಟವುಳ್ಳವರು ಭರ್ತಿ ಮಾಡಿ ಸಾಮಾನುಗಳನ್ನು ತೆಗೆದುಕೊಳ್ಳಬಹುದು.

ಆರ್. ಎಲ್. ರಾವ್

ಛೇರ್ಮನ್ನರಿಗಾಗಿ,

ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್

ಮೈಸೂರು

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!

ಬಿ. ಕೆಂಚಪ್ಪ ಸನ್ಸ್,

ಜವಳಿ ಅಂಗಡಿ : — : ದೊಡ್ಡಪೇಟೆ, ಮೈಸೂರು.

ಮೈಸೂರು ಶ್ರೀ ಗಣೇಶ ಟಾಕೀಸಿನಲ್ಲಿ

14-3-47 ರಿಂದ ಪ್ರತಿ ದಿನ ಮೂರು ಆಟಗಳು

ಕನ್ನಡ ಚಿತ್ರಗಳಲ್ಲೆಲ್ಲಾ ಶ್ರೇಷ್ಠವಾದ ವರ್ಣರಂಜಿತ ಸನ್ನಿವೇಶಗಳಿಂದ ಕೂಡಿದ

ಕನ್ನಡ



ಹರಿಶ್ಚಂದ್ರ

ಪಾತ್ರ:- ಸುಬ್ಬಯ್ಯ ನಾಯ್ಡು, ನಾಗೇಂದ್ರರಾವ್, ಮರಿರಾವ್, ಲಕ್ಷ್ಮೀಬಾಯಿ.

Morning Shows on 14, 15, 16, 17 at 10 30 A. M

"NIGHT-MARE"

— Starring :—

Diana — Barrymore — Brian — Donlevy

Edited, printed and published by A. K. Nagarajan at the Sadhvi D. Subbiah Road, Mysore

ಕ್ರಮ ಸಂ. ೨೪೨ || ವಂದೇ ಮಾತರಂ || ಬಿಡಿ ಪತ್ರಿಕೆ ೩ ಕಾಸು

ಸಂಪುಟ ೫] ಶನಿವಾರ ೧೫—೩—೪೭ [ಸಂಚಿಕೆ ೧೮೬

ಪಂಜಾಬಿನ ಹಳ್ಳಿಗಳು ಖಾಲಿಯಾಗುತ್ತಿವೆ

ಹಬ್ಬಕ್ಕೆ ಬಟ್ಟೆ ಹಂಚಿಕೆ

ಮೈಸೂರು ೧೫

ಯುಗಾದಿ ಹಬ್ಬಕ್ಕಾಗಿ ಮಹಾಜನಗಳಿಗೆ ಬಟ್ಟೆ ಹಂಚಲು ವ್ಯವಸ್ಥೆ ಮಾಡಲಾಗಿದೆಯೆಂದು ಪುರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಬೋರೆಯವರು ತಿಳಿಸಿದ್ದಾರೆ. ಪುರಸಭಾ ಸದಸ್ಯರುಗಳು ತಮ್ಮ ಡಿವಿಜನ್ನಿನ ಅಂಗಡಿಗಳವರಿಗೆ ಸಹಕಾರ ನೀಡಿ ಸರಬರಾಜು ಸರಿಯಾಗಿ ನಡೆಯುವಂತೆ ನೆರವು ನೀಡಬೇಕೆಂದು ಪ್ರಾರ್ಥಿಸಿದ್ದಾರೆ. ಹಬ್ಬದ ಸಲುವಾಗಿ ಪ್ರತ್ಯೇಕ ಮಳಿಗೆಗಳನ್ನು ತೆರೆಯಲಾಗಿದೆ

ಶಾಲಾ ದಿನಾಚರಣೆ

ಸದ್ವಿದ್ಯಾ ಆಂಗ್ಲೋ-ಸಂಸ್ಕೃತ ಪಾಠಶಾಲೆಯ ವಾರ್ಷಿಕೋತ್ಸವವು ನಿನ್ನೆ ಸಂಜೆ ಹುಜೂರ್ ಸೆಕ್ರೆಟರಿಗಳಾದ ಶ್ರೀ ಟಿ ರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು

ಮಹಿಳೆಯರ ಆಕ್ಷರ ಪ್ರಚಾರ

ಈ ದಿನ ಸಂಜೆ ೭ ಗಂಟೆಗೆ ಮೈಸೂರು ಆಕಾಶವಾಣಿಯ ಮೂಲಕ "ದೇಶದಲ್ಲಿ ಮಹಿಳೆಯರ ಅಕ್ಷರ ಪ್ರಚಾರ" ಎಂಬ ವಿಷಯದ ಮೇಲೆ ಶ್ರೀಮತಿಗಳಾದ ಎಂ. ಆರ್. ಲಕ್ಷ್ಮಮ್ಮ ಮತ್ತು ಎಂ ಎಸ್ ಸೀತಮ್ಮನವರು ಚರ್ಚೆಯನ್ನೇರ್ಪಡಿಸಿದ್ದಾರೆ

ಅರಸು ಯುವಕ ಸಂಘ

ಮೈಸೂರು ಅರಸು ಯುವಕ ಸಂಘದ ಅಧ್ಯಕ್ಷರೂ, ಕಾರ್ಯಕಾರಿ ಸಮಿತಿ ಸದಸ್ಯರೂ ಕೃಷ್ಣರಾಜನಗರದ ತಾಲ್ಲೂಕು ಬ್ಯಾಡರಹಳ್ಳಿ ಮತ್ತು ಕಗ್ಗಳ ಗ್ರಾಮಗಳಿಗೆ ಭೇಟಿ ಇತ್ತು ಸಂಘದ ವಿಚಾರವಾಗಿ ಪ್ರಚಾರ ನಡೆಸಿದರು. ಅಲ್ಲಿನ ಮಹನೀಯರುಗಳು ಸಂಘಕ್ಕಾಗಿ ೨೦೦ ರೂ. ಗಳನ್ನು ಅರ್ಪಿಸಿದರು. ಅಲ್ಲದೆ ಹಲವು ಪ್ರಮುಖರು ಸುಮಾರು ೧೯೬೫ ರೂ.ಗಳ ವರೆಗೆ ಸಹಾಯ ಮಾಡಲು ಭರವಸೆ ಇತ್ತರು

ಕಾಲೇಜು ದಿನಾಚರಣೆ

ಮೈಸೂರು ಮಹಾರಾಣೀ ಇಂಟರ್‌ಮೀಡಿಯೆಟ್ ಕಾಲೇಜಿನವರು ಇದೇ ೧೬ ನೇ ತಾ|| ಭಾನುವಾರ ಸಂಜೆ ೫-೩೦ಕ್ಕೆ ಕಾಲೇಜು ದಿನಾಚರಣೆಯನ್ನು ಶ್ರೀ ಚಲುವಾಂಬಾ ವಿಲಾಸದಲ್ಲಿ ನಡೆಸುವರು. ವಿದ್ಯಾಧಿಕಾರಿಗಳಾದ ದಿವಾನ್ ಬಹದ್ದೂರ್ ಡಾ|| ಟಿ. ಸಿ. ಎಂ. ರಾಯ್ಗರವರು ಅಧ್ಯಕ್ಷತೆ ವಹಿಸುವರು

ಕೃಷ್ಣರಾಜನಗರದ ಏಜೆಂಟರು

ಶ್ರೀ|| ಜಿ ಎಸ್. ಭೈರೋಜಿರಾಯರವರನ್ನು ಕೃಷ್ಣರಾಜನಗರದಲ್ಲಿ ಇಂದಿನಿಂದ ಸಾಧ್ವಿ ಪತ್ರಿಕೆಯ ಏಜೆಂಟರನ್ನಾಗಿ ನೇಮಿಸಲಾಗಿದೆ. ಮಹಾಜನರು ಇವರೊಡನೆ ಸಹಕರಿಸಬೇಕಾಗಿ ಕೋರಲಾಗಿದೆ

ವ್ಯವಸ್ಥಾಪಕ

'ಸಾಧ್ವಿ'

ರಾಜಕಮಲ್

೧೬-೩-೪೭ ರಿಂದ ೫ ನೇ ವಾರ

1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ

ಶ್ರೀ ಕಷ್ಟಲೀಲಾ

(ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಂಪಾದ ಸನ್ನಿವೇಶಗಳು! ಮನರಂಜಕವಾದ ದೃಶ್ಯಗಳು!!!

ಎಲ್ಲವನ್ನೂ ಇಂದೇ ನೋಡಿ.

ಪರೀಕ್ಷೆಗೆ ಹೆದರಿ ಮೂರು ಹುಡುಗಿಯರ ಆತ್ಮಹತ್ಯೆ

ಕೊಯಮತ್ತೂರಿನ ರುಕ್ಮಿಣಿ, ಜ್ಞಾನಮಣಿ ಮತ್ತು ವೇದವಲ್ಲಿ ಎಂಬ ಮೂವರು ಹುಡುಗಿಯರು ಪರೀಕ್ಷೆಯಲ್ಲಿ ತಮಗೆ ತೇರ್ಗಡೆಯಾಗುವುದಿಲ್ಲವೆಂದು ತಿಳಿದು ಊರಿನ ಬಳಿ ಇರುವ ನೊಯಲ್ ನದಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದರು ರುಕ್ಮಿಣಿಯು ತನ್ನ ಸ್ನೇಹಿತನೊಬ್ಬನನ್ನು ಜತೆಯಲ್ಲಿ ಕರೆತಂದಳು. ದೇವಸ್ಥಾನವೊಂದರಲ್ಲಿ ಪ್ರಾರ್ಥನೆ ನಡೆಸಿದ ನಂತರ ನಾಲ್ವರೂ ನದಿ ದಡಕ್ಕೆ ಹೋದರು. ನದಿ ದಡದಲ್ಲಿ ಆ ಹುಡುಗನನ್ನು ಅವರು ನದಿಗೆ ನೂಕಿ ತಾವೂ ನೀರಿನಲ್ಲಿ ಮುಳುಗಿದರು ಹುಡುಗ ಹೇಗೋ ಬದುಕಿದ. ಮೂವರು ಹುಡುಗಿಯರೂ ಗಂಗೆಯ ಪಾಲಾದರು.

ಅವಿಶ್ವಾಸ ನಿರ್ಣಯ ಬಿದ್ದುಹೋಯಿತು

ಬ್ರಿಟಿಷ್ ಕಾರ್ಮಿಕ ಸರ್ಕಾರದ ಮೇಲೆ ಆರ್ಥಿಕ ಸಮಸ್ಯೆಯ ವಿಚಾರದಲ್ಲಿ ವಿರೋಧ ಪಕ್ಷದವರು ಮಂಡಿಸಿದ್ದ ಅವಿಶ್ವಾಸ ನಿರ್ಣಯವು ೩೭೪-೧೯೮ ಓಟುಗಳಿಂದ ಬಿದ್ದುಹೋಯಿತು

ಭಾರತದಲ್ಲಿ ೧೫೦೦ ಬ್ರಿಟಿಷ್ ಅಧಿಕಾರಿಗಳು

ಭಾರತದ ಸಿವಿಲ್ ಸರ್ವೀಸ್ಸಿನಲ್ಲಿ ೫೦೦, ಪೊಲೀಸಿನಲ್ಲಿ ೩೫೦ ಮತ್ತು ಇತರ ಇಲಾಖೆಗಳಲ್ಲಿ ೬೫೦ ಮಂದಿ ಬ್ರಿಟಿಷರೂ ಇದ್ದಾರೆಂದೂ, ಅವರ ಮುಂದಿನ ಗತಿ ಇನ್ನೂ ನಿರ್ಧಾರವಾಗಿಲ್ಲವೆಂದೂ ಭಾರತದ ಸಹಾಯಕ ಕಾರ್ಯದರ್ಶಿಯವರು ತಿಳಿಸಿದ್ದಾರೆ.

WANTED

(1) A Clerk and (2) A Librarian for the Sarada Vilas High School, Mysore Pay Rs 25/- plus D A 10 Minimum qulification S S L C Knowledge of Type-writing will be deemed an additional qualification Retired officials may also apply.

Please apply to :-

The Hon: Secretary,
Saradavilas High School
MYSORE

on or before 25-3-1947.

ಪಂಜಾಬಿನಲ್ಲಿ ದೇವಾಲಯಗಳ ಭಸ್ಮ

ಪಶ್ಚಿಮ ಮತ್ತು ಈಶಾನ್ಯ ಪಂಜಾಬಿನಲ್ಲಿ ಪರಿಸ್ಥಿತಿಯು ಹತೋಟಿಮೀರಿದೆ ರಾವಲ್ಪಿಂಡಿ, ಅಟಕ್ ಮತ್ತು ಕ್ಯಾಂಬೆಲ್ ಪ್ರದೇಶಗಳಲ್ಲಿ ಗಲಭೆ ಉಗ್ರವಾಗಿದೆ ಶ್ರೀನಗರ ಮತ್ತು ರಾವಲ್ಪಿಂಡಿ ರಸ್ತೆಗಳು ಬಂದಾಗಿವೆ ಕಾಶ್ಮೀರ ಸಂಸ್ಥಾನವು ಹೊರದೇಶದಿಂದ ಬೇರ್ಪಟ್ಟಿದೆ. ಅಖಿಲ ಭಾರತ ಹಿಂದೂ ಮಹಾಸಭೆಯ ಪ್ರಧಾನ ಕಾರ್ಯದರ್ಶಿಗಳು ಪಂಜಾಬಿಗೆ ಬರದಂತೆ ಪ್ರತಿಬಂಧಕಾಜ್ಞೆಯನ್ನು ಗೌರ್ನರು ಜಾರಿಮಾಡಿದ್ದಾರೆ ಮುಲ್ತಾನಿನಲ್ಲಿ ೮ ದೇವಸ್ಥಾನಗಳೂ, ೧೫ ಗುರುದ್ವಾರಗಳೂ ಭಸ್ಮವಾಗಿವೆ. ಕ್ಯಾಂಬೆಲ್ ಬಳಿ ೭ ಹಳ್ಳಿಗಳು ಬೂದಿಯಾಗಿವೆ. ಮಿಲಿಟರಿಯವರು ಅನೇಕ ಹಳ್ಳಿಗರನ್ನು ಖಾಲಿಮಾಡಿಸುತ್ತಿದ್ದಾರೆ

ನಗರ ಕಾಂಗ್ರೆಸ್ ಸಮಿತಿ ಸಭೆ

ಮೈಸೂರು ೧೫

ಆಚಾರ್ಯ ಕೃಪಲಾನಿಯವರ ಆಗಮನ ಸಂದರ್ಭದಲ್ಲಿ ಮಾಡಬೇಕಾದ ಏರ್ಪಾಡುಗಳನ್ನು ಕುರಿತು ಚರ್ಚಿಸಲು ನಾಳೆ ಸ-ಜೆ ೫|| ಘಂಟೆಗೆ ನಗರ ಕಾಂಗ್ರೆಸ್ ಸಮಿತಿಯ ಸಭೆಯು ನಡೆಯುತ್ತದೆ ಸದಸ್ಯರೆಲ್ಲರೂ ಬರಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ರಾಜಧಾನಿಯಲ್ಲಿ ಕಟ್ಟಲಾಗುತ್ತಿರುವ ಭಾರತಾಂಬ ಕ್ಷೇತ್ರಿಯ ಸೋಷಿಯಲ್ ಇನ್ಸ್‌ಟ್ಯೂಟ್ ಕಟ್ಟಡಕ್ಕೆ ವಾಣಿಯುಬಾಡಿಯ ಜವಳಿ ವರ್ತಕರಾದ ಶ್ರೀ ವಿ ಆರ್ ಹೀರೋಜಿರಾಯರು ೧೧೧೧ ರೂ ಗಳನ್ನು ದಾನವಾಗಿ ಇತ್ತಿದ್ದಾರೆ

ಚಿರತೆ ಶಿಕಾರಿ

ಸ್ವಂ ಸು.] ಚಾಮರಾಜನಗರ ೧೩

ಈ ಊರಿಗೆ ಸಮೀಪದಲ್ಲಿರುವ ಹರದನಹಳ್ಳಿ ಬಳಿ ಚಿರತೆಯೊಂದನ್ನು ಮೂರು ಮಂದಿ ಭರ್ಜಿಯಿಂದ ತಿವಿದು ಕೊಂದಿದ್ದಾರೆ. ಈ ಮೂವರಿಗೂ ಸ್ವಲ್ಪ ಗಾಯಗಳಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದುತ್ತಿದ್ದಾರೆ

ನಾಗ|| ಗ|| ನೌಕರರ ಸಂಘ

ಈ ತಾಲ್ಲೂಕಿನ ನಾನ್ ಗೆಜೆಟೆಡ್ ನೌಕರರು ಸಂಘವೊಂದನ್ನು ಸ್ಥಾಪಿಸಿಕೊಂಡಿದ್ದಾರೆ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ಶ್ರೀ|| ವಿ ಸುಬ್ರಹ್ಮಣ್ಯಶಾಸ್ತ್ರಿಗಳು ಅದರ ಅಧ್ಯಕ್ಷರಾಗಿಯೂ, ಆ|| ರೇಷ್ಮೆ ಫಾರ್ಮ್ ಅಧಿಕಾರಿಗಳು ಉಪಾಧ್ಯಕ್ಷರಾಗಿಯೂ, ಪುರಸಭಾ ಚೀಫ್ ಆಫೀಸರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಸರ್ ತಂಬೂಚೆಟ್ಟಿಯವರಿಗೆ ಬೆದರಿಕೆ ಪತ್ರಗಳು?

ದರೋಡೆ ಮೊಕದ್ದಮೆಯಲ್ಲಿ ಸುಂದರರಾಯರ ಸಾಕ್ಷ್ಯದ ವಿವರ

ಸ್ವಂ ಸು.ಫೋ||] ಬೆಂಗಳೂರು ೧೫

ಧರ್ಮ ರತ್ನಾಕರ ಗೋಪಾಲರಾಯರ ಒಡವೆ ದರೋಡೆ ಮೊಕದ್ದಮೆಯಲ್ಲಿ ಮಾಜಿ ಎ. ಡಿ. ಸಿ ಯವರಾದ ಶ್ರೀ ಡಿ ಸುಂದರರಾಯರು ತಮ್ಮ ಸಾಕ್ಷ್ಯದಲ್ಲಿ ಹೀಗೆ ಹೇಳಿದರು :—

ಶ್ರೀ ಗೋಪಾಲರಾಯರನ್ನು ದಸ್ತಗಿರಿ ಮಾಡಬೇಕೆಂದು ಅವರ ಕ್ರೆಡಿಟರುಗಳ ಪೈಕಿ ಒಬ್ಬರಾದ ಶ್ರೀ ಎಫ್. ತಂಬೂಚೆಟ್ಟಿಯವರು ೩|| ೧೧ ನೇ ತಾ|| ನನ್ನನ್ನು ಪ್ರಾರ್ಥಿಸಿದ್ದರು. ಫಿರ್ಯಾದಿಲ್ಲದೆ ಅವರ ದಸ್ತಗಿರಿ ಸಾಧ್ಯವಿಲ್ಲವೆಂದೂ, ಅಲ್ಲದೆ ನಾನು ಆಗ ಎ ಡಿ ಸಿ ಅಲ್ಲವೆಂದೂ ಅವರಿಗೆ ತಿಳಿಸಿದ್ದೆ. ಗೋಪಾಲರಾಯರೇ ಕ್ರೆಡಿಟರುಗಳಲ್ಲಿ ನಂಬಿಕೆ ಉಳಿಸಿಕೊಳ್ಳಲು ತಮ್ಮ ಒಡವೆಗಳನ್ನು ಶ್ರೀ ಸರ್ವೋತ್ತಮರಾಯರಿಗೆ ಕೊಟ್ಟರೆಂದು ಶ್ರೀ ಎಫ್ ತಂಬೂಚೆಟ್ಟರು ನನಗೆ ಹೇಳಿದ್ದರು

ಗೋಪಾಲರಾಯರಿಗೆ ನಾನು ೫ ಸಾವಿರ ರೂ ಗಳನ್ನೂ ನನ್ನ ಮಗ ೧೦ ಸಾವಿರ ರೂ ಗಳನ್ನೂ ಕೊಟ್ಟಿದ್ದು ಸ್ವಲ್ಪ ದಿನಗಳ ಮೇಲೆ ವಾಪಸು ಪಡೆದೆವು. ಶ್ರೀ ಸರ್ವೋತ್ತಮರಾಯರಿಗೂ ನನಗೂ ಸಂಬಂಧವಿರುವುದರಿಂದ ಅವರ ಮೇಲೆ ಮೊಕದ್ದಮೆ ಹೂಡಿದ ನಂತರ ನಾನು ಅವರ ಭೇಟಿ ಮಾಡಲಿಲ್ಲ. ನಿನ್ನೆಯೇ ಅವರನ್ನು ಇಲ್ಲಿ ಕಂಡಿದ್ದು. ತಪ್ಪು ಅಭಿಪ್ರಾಯಕ್ಕೆ ಎಡೆಗೊಡಬಾರದೆಂಬ ಕಾರಣದಿಂದ ಈ ಮೊಕದ್ದಮೆಯಲ್ಲಿ ಯಾವ ತನಿಖೆಗೂ ನನ್ನನ್ನು ನೇಮಿಸಬಾರದೆಂದು ಮಂತ್ರಿಗಳಾದ ಶ್ರೀ ಶೇಷಾದ್ರಿಯವರನ್ನು ನಾನು ಪ್ರಾರ್ಥಿಸಿದ್ದೆ.

ಶ್ರೀಮನ್ನಾರಾಯಣರವರ ಆಪ್ತ ಕಾರ್ಯದರ್ಶಿಗಳಾದ ಸರ್ ಟಿ ತಂಬೂಚೆಟ್ಟಿಯವರ ಪ್ರಾಣಾಪಹರಣದ ಬೆದರಿಕೆಯ ಅನಾಮಧೇಯ ಪತ್ರಗಳು ಬರುತ್ತಿದ್ದುವೆಂದೂ, ಈ ವಿಷಯದಲ್ಲಿ ಪತ್ತೆ ನಡೆದು ಯಾರು ಇದಕ್ಕೆ ಕಾರಣರೆಂಬುದನ್ನು ಗೊತ್ತುಮಾಡುವಂತೆ ಆಗ್ಗೆ ದಿವಾನರಾಗಿದ್ದ ಶ್ರೀ ಮಾಧವರಾಯರೂ, ಸರ್ ತಂಬೂಚೆಟ್ಟಿಯರೂ ನನಗೆ ತಿಳಿಸಿದ್ದರು. ಹಲವು ಪ್ರಮುಖ ಅಧಿಕಾರಿಗಳ ಪತ್ರ ಸುತ್ತ ಜಾಲವನ್ನು ಇಡಲಾಗಿದ್ದಿತು. ಮಂತ್ರಿಗಳಾಗಿದ್ದ ಶ್ರೀ ಪುಟ್ಟಸ್ವಾಮಿಶೆಟ್ಟಿ ಮತ್ತು ನ್ಯಾಯಾಧೀಶರಾದ ಶ್ರೀ ಮಾದಪ್ಪನವರ ಮನೆಯ ಮೇಲೂ ನಿಗಾ ಇಡಲಾಗಿದ್ದಿತು. ಸುಪ್ತ ದಳದ ವರದಿಯ ಪ್ರಕಾರ ಆ ಇಬ್ಬರ ಅಧಿಕಾರಿಗಳ ತನಿಖೆಯನ್ನು ನಡೆಸಬೇಕಾದ ಪ್ರಮೇಯ ಬರಲಿಲ್ಲ. ಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀ ಎಂ. ಶಂಕರಲಿಂಗೇಗೌಡರ ಮೇಲೆ ನನಗೆ ಅನುಮಾನವಿದ್ದಿತು

ಕೃಪಲಾನಿಯವರ ಪ್ರವಾಸದಲ್ಲಿ ಬದಲಾವಣೆ

ಆಚಾರ್ಯ ಕೃಪಲಾನಿಯವರು ಹಳ್ಳಿ ಕೋಟೆಯಿಂದ ನೇರವಾಗಿ ೨೦ ನೇ ತಾ|| ಬೆಳಗ್ಗೆ ಮೈಸೂರಿಗೆ ಹೊರಡುವರು. ಮಂಡ್ಯ ತಿಳಿಸಲಾಗಿದ್ದಂತೆ ಅವರು ಕೊಡಗು ಮತ್ತು ತಲಚೇರಿ ಕಡೆಯಿಂದ ಬರುವುದಿಲ್ಲವೆಂಬುದಾಗಿ ವರದಿಯಾಗಿದೆ.

ಸಾಧ್ವಿ

ತಾ|| ೧೫-೩-೪೭ ಶನಿವಾರ

ಮೈಸೂರಿನ ನೀತಿಯೇನು ?

ಜಯಪುರ, ಜೋಧಪುರ, ಗ್ವಾಲಿಯರ್ ಮತ್ತು ಭಾವನಗರ ಸಂಸ್ಥಾನಗಳು ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಲು ನಿರ್ಧರಿಸಿವೆ. ಕೊಚ್ಚಿ ಮತ್ತು ಬರೋಡಗಳು ಈ ಮೊದಲೇ ಆ ರೀತಿ ತೀರ್ಮಾನಿಸಿದ್ದುವು ಕಾಥೇವಾರ್ ಸಂಸ್ಥಾನಗಳ ಗುಂಪಿನವರು ಮೊನ್ನೆ ಬೊಂಬಾಯಿಯಲ್ಲಿ ಸೇರಿ ತಾವೂ ಸಹ ಭಾಗ ವಹಿಸುವುದಾಗಿ ತೀರ್ಮಾನಿಸಿದ್ದಾರೆ ಹೀಗೆ ಇನ್ನೂ ಅನೇಕ ಸಂಸ್ಥಾನಗಳು ಈ ಬಗ್ಗೆ ತಮ್ಮ ಸಮ್ಮತಿಯನ್ನು ಸೂಚಿಸಲು ಮುಂದೆ ಬರುತ್ತಿವೆ ಇದೊಂದು ಶುಭ ಸೂಚನೆಯೇ ಸರಿ.

ಬರೋಡದಲ್ಲಿ ದಿವಾನರೂ ಸಹ ಚುನಾವಣೆಗೆ ಉಮೇದುವಾರರಾಗಿ ನಿಂತಿರುವುದು ಅತ್ಯಂತ ಮಹತ್ವದ ಸಂಗತಿ ಅವರಿಗೆ ಪ್ರಜಾಮಂಡಲದವರೂ ಸಹ ಬೆಂಬಲವನ್ನಿತ್ತಿದ್ದಾರೆ ಅದರಂತೆಯೇ ಜಯಪುರ ಸಂಸ್ಥಾನದ ದಿವಾನರಾದ ಸರ್ ವಿ ಟಿ ಕೃಷ್ಣಮಾಚಾರಿಯವರಿಗೂ ಅಲ್ಲಿನ ಪ್ರಜಾಮಂಡಲದವರು ಬೆಂಬಲವಿತ್ತಿದ್ದಾರೆ. ಕೊಚ್ಚಿಯಲ್ಲಿ ಪ್ರಜೆಗಳಿಂದ ಚುನಾಯಿತರಾದ ಮಾ ಇಗಿ ಮಂತ್ರಿಗಳನ್ನು ಈಗಾಗಲೇ ಅಲ್ಲಿನ ಮಹಾರಾಜರು ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನಾಗಿ ಕಳುಹಿಸಿದ್ದಾರೆ ಅವರು ಇದುವರೆಗೆ ನಡೆದ ಸಂಧಾನ ಸಮಿತಿಯ ಕಾರ್ಯಗಳಲ್ಲಿಯೂ ಭಾಗಿಗಳಾಗಿರುತ್ತಾರೆ.

ಹೀಗೆ ದೊಡ್ಡ ದೊಡ್ಡ ಸಂಸ್ಥಾನಗಳು ನೂತನ ಭಾರತ ರಾಜ್ಯಾಂಗ ರಚನೆಯ ವಿಷಯದಲ್ಲಿ ನಿರ್ದಿಷ್ಟವಾದ ನೀತಿಯನ್ನು ವ್ಯ

ಭಾರತೀಯರ ವಿರುದ್ಧ ದ|| ಆಫ್ರಿಕದಲ್ಲಿ ಚಳುವಳಿ

ಟ್ರಾನ್ಸ್‌ವಾಲ್ ಜಿಲ್ಲೆಯ ಎಲ್ಲರ ಎಂಟಲ್ಲಿ ಬಿಳಿಯರ ಭಾರಿ ಸಭೆಯೊಂದು ಜರುಗಿ, ಪ್ರತಿಯೊಬ್ಬ ಐರೋಪ್ಯನೂ ತನ್ನ ಮಕ್ಕಳಿಗೆ ಏಷ್ಯ ಜನರ ವಿರುದ್ಧವಾದ ಅಭಿಪ್ರಾಯಗಳನ್ನು ತಪ್ಪದೆ ಬೋಧಿಸಬೇಕು ; ಅವರೊಡನೆ ವ್ಯವಹಾರ, ವ್ಯಾಪಾರವಾಡುವುದು ಅವಮಾನಕರವೆಂದು ಹೇಳಬೇಕು ; ಭಾರತೀಯ ಪ್ರದೇಶದಲ್ಲಿ ಅವರು ಇರದಂತೆ ಮಾಡಬೇಕು - ಎಂಬುದಾಗಿ ತೀರ್ಮಾನಿಸಲಾಯಿತೆಂದು ವರದಿಯಾಗಿದೆ.

ಕುದುರೆಗಳಿಗೆ ಇನ್‌ಫ್ಲೂಯೆಂಜಾ

ಮನುಷ್ಯರಿಗೆ ಬರುವಂತೆಯೇ ಇನ್‌ಫ್ಲೂಯೆಂಜಾ ಖಾಯಿಲೆಯು ಲಂಡನ್ನಿನಲ್ಲಿ ಗಾಡಿಯ ಕುದುರೆಗಳಿಗೂ ಬಂದು ಸಹಸ್ರಾರು ಸಂಖ್ಯೆಯಲ್ಲಿ ಅವು ಸಾಯುತ್ತಿವೆಯೆಂದೂ, ಅವುಗಳಿಗೆ ಪೆನಿಸಿಲಿನ್ ಚಿಕಿತ್ಸೆ ಕೊಡಲಾಗುತ್ತಿದೆಯೆಂದೂ ಗೊತ್ತಾಗಿದೆ.

ಕ್ಷ ಪಡಿಸಿ ಅದಕ್ಕನುಗುಣವಾದ ಕಾರ್ಯಕ್ರಮವನ್ನು ಕೈಗೊಳ್ಳುತ್ತಿವೆ ಆದರೆ ನಮ್ಮ ಮೈಸೂರು ಮಾತ್ರ ಈ ವಿಷಯದಲ್ಲಿ ಯಾವ ನಿರ್ಧಾರಕ್ಕೂ ಬಾರದೆ ಇನ್ನೂ ತಟಸ್ಥವಾಗಿರುವಂತೆ ಕಾಣುತ್ತದೆ ರಾಜ್ಯಾಂಗ ಸಭೆಗೆ ಇನ್ನೂ ಮೈಸೂರಿನ ಪ್ರತಿನಿಧಿಗಳನ್ನೇ ಆರಿಸಿರುವುದಿಲ್ಲ ಸಭೆಯ ಕಾರ್ಯಕಲಾಪಗಳು ಈಗಾಗಲೇ ಬಹಳವಾಗಿ ಮುಂದುವರಿದಿವೆ ಮುಖ್ಯವಾದ ಸಂಸ್ಥಾನಗಳು ಇನ್ನೂ ಹಿಂದುಮುಂದು ನೋಡುತ್ತ ಹೀಗೆ ಕುಳಿತಿರುವುದು ಸರಿಯಲ್ಲ ಈ ಬಗ್ಗೆ ನಮ್ಮ ಪ್ರಭುತ್ವದವರು ಕೂಡಲೇ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವುದು ವಿಹಿತವಾಗಿದೆ

ವಿದ್ಯಾರ್ಥಿಗಳಿಗೆ ಹಾಜರಾತಿಯ ತೊಂದರೆ

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷೆಗಳಿಗೆ ಹಾಜರಾತಿ ಸಾಲದೆಂಬ ಕಾರಣದ ಮೇಲೆ ಹಲವು ವಿದ್ಯಾರ್ಥಿಗಳನ್ನು ಸೇರಿಸದಿದ್ದ ವಿಚಾರವನ್ನು ಕೇಳಿ ವಿಷಾದವಾಗಿದೆ ಈ ವೈರಿ ಹಾಜರಾತಿಯನ್ನು ಸರಿಯಾಗಿ ಹಾಕಿ, ಸಕಾಲದಲ್ಲಿ ಫೀಜು ಪಾವತಿ ಮಾಡದಿದ್ದ ಬಗ್ಗೆ ಈ ಶಿಕ್ಷೆಯನ್ನು ಅನುಭವಿಸಿರುವ ಕೆಲವು ಬಡ ವಿದ್ಯಾರ್ಥಿಗಳೂ ಇದ್ದಾರೆ. ಇಂತಹ ಸಂದರ್ಭಗಳಲ್ಲಿ ಫೀಜು ಕೊಟ್ಟ ಮೇಲೆ ಅವರುಗಳ ಹಾಜರಾತಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿದ್ದಿತು. ಆದರೆ ಈ ಸಲ ಅಧಿಕಾರಿಗಳು ಅದನ್ನು ರದ್ದು ಮಾಡಿರುತ್ತಾರೆ ಈ ಬಡ ವಿದ್ಯಾರ್ಥಿಗಳಿಗೆ ಒಂದು ವರ್ಷ ಕಾಲವೂ, ಇದುವರೆಗೆ ಸಲ್ಲಿಸಿದ ಫೀಜೂ, ವ್ಯಾಸಂಗದ ಶ್ರಮವೂ ವ್ಯರ್ಥವಾಗಿರುತ್ತದೆ. ಇನ್ನು ಮುಂದಾದರೂ ಇಂತಹ ವಿಷಾದಕರ ಘಟನೆಗಳು ವಿಶ್ವವಿದ್ಯಾಲಯದಲ್ಲಿ ನಡೆಯದಂತೆ ಅಧಿಕಾರಿಗಳು ನೋಡಿಕೊಳ್ಳಬೇಕಾಗಿದೆ

ಸಂ. ಕ. ಜ.

ನಗರ ಪರೀಕ್ಷೆ

ಪುರಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ಇದೇ ೧೬ ನೇ ತಾ|| ಭಾನುವಾರ ಬೆಳಗ್ಗೆ ೮|| ಗಂಟೆಯಿಂದ ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಶಾಲೆಯಿಂದ ಹೊರಟು, ಈದಿಗವ ವರೆವಿಗೆ ಇರುವ ಮಂಡಿ ಮೊಹಲ್ಲಾ ಪ್ರದೇಶಗಳಿಗೆ ಭೇಟಿ ಕೊಡುವರು ಮೊಹಲ್ಲಾ ನಿವಾಸಿಗಳು ಸಹಕರಿಸಬೇಕಾಗಿ ಕೋರಲಾಗಿದೆ

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲು

ಗರ್ಭಾಶಯರೋಗ ನಿವಾ

ಅರುಣ ಮತು ಡಿ
ತನ್ನು ನಿರ್ಮೂಲಿ
ಪೂರ್ಣ ಸ್ತ್ರೀತ್ವ
ಸಾಧಿಸುವವಳು
ರ್ಳವಾದ ದಿವ್ಯೌ
ದನ್ನು ಬಿಡದೆ ಸೇ
ರಿದರೆ, ನಿಮ್ಮ
ಪರಮಾವಧಿಯಾ
ಮಂದಾನಂದವನ್ನು
ದೆ ಒದಗಿಸಬಲ್ಲುದ

ಆಯುರ್ವೇದಾಶ್ರಮಂ ಲಿಮಿಟೆ
ಟಿ-ನಗರ್. . . . ಮದರಾ

ಅಪೆರಾ ಟಾಕೀಸ
೧೩-೩-೪೭ ರಿಂದ
ನೂರ್ ಮಹಲ್
(ಹಿಂದಿ ಚಿತ್ರ)
ಪ್ರತಿ ದಿನ ಮೂರು ಆಟಗಳು
ಪಾತ್ರ :- ಜೀವನ್, ಕೌಶಲ್ಯ,
ಮಾಯಾ ಬ್ಯಾನರ್ಜಿ ಮುಂತಾದ

Edited, printed and publish[ed by] A. R. Nagarajan at the Sadhvi [Press,] D. Subbiah Road, Mysore.

ರಾಜ್‌ಕಮಲ್, ಮೈಸೂರು

ತಾ|| ೧೪-೩-೪೭ ರಿಂದ

೪ ದಿನಗಳು ಮಾತ್ರ ಬೆಳಗಿನ ಪ್ರದರ್ಶನ

೧೦-೩೦ ಗಂಟೆಗೆ

ಚಿತ್ರಲೇಖ

(ಹಿಂದಿ ಚಿತ್ರ)

ಪಾತ್ರ :- ಮೆಹತಾಬ್, ನಂದೇಕರ್, ಮೋನಿಕ್ ದೇಸಾಯಿ ಮುಂತಾದವರು

ಮೈಸೂರು ಶ್ರೀ ಗಣೇಶ ಟಾಕೀಸಿನಲ್ಲಿ

14-3-47 ರಿಂದ ಪ್ರತಿ ದಿನ ಮೂರು ಆಟಗಳು

ಕನ್ನಡ ಚಿತ್ರಗಳಲ್ಲೆಲ್ಲಾ ಶ್ರೇಷ್ಠವಾದ ವರ್ಣರಂಜಿತ ಸನ್ನಿವೇಶಗಳಿಂದ ಕೂಡಿದ

ಕನ್ನಡ

ಹರಿಶ್ಚಂದ್ರ

ಪಾತ್ರ :- ಸುಬ್ಬಯ್ಯ ನಾಯ್ಡು, ನಾಗೇಂದ್ರರಾವ್, ಮರಿಯಾನ್, ಲಕ್ಷ್ಮೀಬಾಯಿ.

Morning Shows on 14, 15, 16, 17 at 10 30 A. M

"NIGHT-MARE"

— Starring :—

Diana — Barrymore — Brian — Donlevy

ಕಂಟ್ರೋಲು ಬೆಲೆ! ಸುಸಮಯ!

ಹೊಸ ಜವಳಿ

ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಬನಾರಸ್, ಕಂಚಿ, ಆರ್ಣಿ, ಕಾಂಚೀಪುರಂ, ಹುಬ್ಬಳ್ಳಿ ಸೀರೆಗಳೂ, ಕರಾಚಿ ಸೀರೆಗಳೂ, ನೂಲಿನ ಫ್ಯಾನ್ಸಿ ರವಿಕೆ ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.

M. P V., M. V ಭೋಜಯ್ಯ B A ಅಂಡ್ ಬ್ರದರ್ಸ್

ದೊಡ್ಡ ಜನ - ಹಾಸ ಕೋರ್ಟಿನ ಕ್ಲಿಕ್ ಒಳಭಾಗ ಎ ಕೊನೆ

ಜವಳಿ ಅಂಗಡಿ, ಮೈಸೂರು

ಐಟಿಯಾಲ್

TRADE ITL MARK

ಅತ್ಯುತ್ತಮವಾದ ಕ್ರಿಮಿನಾಶಿನಿ

ಕಾರ್‌ಬಾಲಿಕ್ ದ್ರಾವಕಕ್ಕಿಂತಲೂ ೮ ರರಷ್ಟು ಶಕ್ತಿಯುತವಾದದ್ದು, ಮಿಶ್ರಿತವಲ್ಲದ್ದು, ಸವೆಸದಿರುವುದು, ಕಲೆಯನ್ನು ಉಳಿಸದಿರುವುದು ಮತ್ತು ಆಹ್ಲಾದವಾದ ವಾಸನೆಯುಳ್ಳದ್ದು. ಕ್ರಿಮಿಗಳಿಗೆ ಐಟಿಯಾಲ್ ಮೃತ್ಯುಪ್ರಾಯ, ಆದರೆ ಚರ್ಮಕ್ಕೆ ಯಾವ ಬಾಧೆಯನ್ನೂ ಉಂಟುಮಾಡುವುದಿಲ್ಲ. ಶಸ್ತ್ರ ಮತ್ತು ಚಿಕಿತ್ಸೆಗಳಲ್ಲಿಯೂ ಮನೆ ಮತ್ತು ಸ್ವಂತ ಉಪಯೋಗಕ್ಕೂ ಹಳೇ ಕಾಲದ ಕ್ರಿಮಿಗಳನ್ನು ನಿವಾರಿಸುತ್ತದೆ

೪, ೮, ಮತ್ತು ೧೬ ಔನ್ಸ್ ಸೀಸೆಗಳಲ್ಲಿ ದೊರೆಯುತ್ತದೆ.

ಐ. ಟಿ. ಎಲ್. ತಯಾರಿ

—: ತಯಾರಿಸುವವರು :—

ಮೈಸೂರು ಇಂಡಸ್ಟ್ರಿಯಲ್ ಮತ್ತು ಟೆಸ್ಟಿಂಗ್ ಲ್ಯಾಬೋರೇಟರಿ, ಲಿಮಿಟೆಡ್

ಮಲ್ಲೇಶ್ವರಂ, : : ಬೆಂಗಳೂರು

ರಿ. ನಂ. ೩೯೨ ॥ ವಂದೇ ಮಾತರಂ ॥ ಬಿಡಿ ಪ್ರತಿ 3 ಕಾಸು.

ಸಂಪುಟ ೫] ಭಾನುವಾರ ೧೬—೯—೪೭. [ಸಂಚಿಕೆ ೧೮೬

ಗಾಂಧೀಜಿಯವರಿಗೆ ನೋಬೆಲ್ ಬಹುಮಾನ

...ನಾರಪ್ಪನವರ ಆಗಮನ

ಮೈಸೂರು ೧೬

...ಖಿಲ ಭಾರತ ಗ್ರಾಮೋದ್ಯೋಗ ಸಂ...ಕಾರ್ಯದರ್ಶಿಗಳಾದ ಶ್ರೀ॥ ಜೆ. ಸಿ. ...ನಾರಪ್ಪನವರು ಈ ದಿನ ಬೆಳಗ್ಗೆ ಬೆಂಗ...ಳೂರಿನಿಂದ ಆಗಮಿಸಿದರು. ರೈಲ್ವೆ ಸ್ಟೇಷನ್ನಿನಲ್ಲಿ ಶ್ರೀ ಎಚ್. ಸಿ. ದಾಸಪ್ಪನವರೂ, ...ಪ್ರಮುಖರೂ ಅವರನ್ನು ಸ್ವಾಗತಿಸಿ... ಅವರು ಇಂದಿನಿಂದ ೪ ದಿನಗಳು ಚೆ...ಪಟ್ಟಣದಲ್ಲಿ ನಡೆಯುವ ಶಿಕ್ಷಣ ಶಿಬಿರದ ...ವಿದ್ಯಾರ್ಥಿಯರನ್ನು ಕುರಿತು ಭಾಷಣ ...ಸುವರು. ೧೮ ನೇ ತಾ॥ ಮಂಗಳವಾ...ರದ ೭ ಘಂಟೆಗೆ ಟೌನ್‌ಹಾಲ್ ಮೈದಾ...ನದಲ್ಲಿ "ಗ್ರಾಮೈಕ್ಯಗಾರಿಕೆಗಳು ಮತ್ತು ರಾ...ಷ್ಟ್ರದ ಪ್ರಗತಿ" ಎಂಬ ವಿಚಾರವಾಗಿ ಉಪ...ನ್ಯಾಸ ಮಾಡುವರು. ೧೯ ನೇ ತಾ॥ ವಿದ್ಯಾ...ರ್ಥಿಗಳನ್ನು ಕುರಿತು ಭಾಷಣ ಮಾಡುವ... ಶ್ರೀಯುತರನ್ನು ಭೇಟಿ ಮಾಡಲಿಚ್ಛಿ...ಸುವವರು ಒಂಟಿಕೊಪ್ಪಲು ಯತಿರಾಜ...ನಿವಾಸದಲ್ಲಿ ವಿಚಾರಿಸಬೇಕೆಂದು ಕೋರಲಾ...ಗಿದೆ.

ಶಾಲಾ ವಾರ್ಷಿಕೋತ್ಸವ

ಮೊನ್ನೆ ದಿನ ಮಂಡಿ ಮೊಹಲ್ಲೆಯ ಕನ್ನಡ ಮಾಧ್ಯಮಿಕ ಶಾಲೆಯ ಪೋಷಕ ಬೋಧಕ ಸಂಘದ ವಾರ್ಷಿಕೋತ್ಸವವು ಪುರ...ಸಭೆಯ ಸದಸ್ಯರಾದ ಶ್ರೀ॥ ಜಿ. ಆರ್. ರಂಗ...ಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿ...ತು. ಪುರಸಭೆಯ ಕಂಟ್ರಾಕ್ಟರಾದ ಶ್ರೀ॥ ...ಸಯ್ಯನವರು ಶಾಲಾ ಬಾಲಕರ ಒಂದು ದಿನದ ತಿಂಡಿ ಮತ್ತು ಊಟದ ಖರ್ಚಿಗಾಗಿ ೧೦೦ ರೂ ಸಹಾಯ ಮಾಡುವುದಾಗಿ ವಾ...ಗ್ದಾನವಿತ್ತರು. ವಿದ್ಯಾರ್ಥಿಗಳಿಂದ ವರದಕ್ಷಿ...ಣೆ ಎಂಬ ನಾಟಕವು ಅಭಿನಯಿಸಲ್ಪಟ್ಟಿತು. ...ಅಧ್ಯಕ್ಷರಿಂದ ವಿದ್ಯಾರ್ಥಿಗಳಿಗೂ, ಪೋಷಕ...ರು ಮತ್ತು ಬೋಧಕರಿಗೂ ಹಿತವಚನ...ಗಳು ಕೊಡಲ್ಪಟ್ಟನಂತರ ವಂದೇ ಮಾತರಂ ...ನೊಡನೆ ಸಭೆ ಮುಕ್ತಾಯವಾಯಿತು.

ಗುರು ಜಯಂತಿ

ಶ್ರೀ ಅಭಿನವ ಶಂಕರಾಲಯದಲ್ಲಿ ನಾಳೆ ...ಶ್ರೀ ಗುರು ಜಯಂತಿ ಮಹೋತ್ಸವವು ನಡೆಯಲು ಏರ್ಪಾಡಾಗಿದೆ. ಅಂದು ಬೆಳ...ಗ್ಗೆ ಬಡ ಬಗ್ಗರಿಗೆ ಯಥಾ ಶಕ್ತಿ ಭೋಜನ ಸಮಾರಾಧನೆಯನ್ನು ಹಂಚಲಾಗುವುದು. ೧೨ ...ಘಂಟೆಗೆ ವಾನರ ಪೂಜೆ, ಸಂಜೆ ೬॥ ಘಂಟೆ ...ಉಪನ್ಯಾಸ, ೮॥ ಘಂಟೆಗೆ ಮಹಾ ಮಂ...ಗಳಾರತಿ ಮತ್ತು ಪ್ರಸಾದ ವಿನಿಯೋಗಗಳು ನಡೆಯುವುವು.

ಮಿಲಿಟರಿಯವರಿಗೂ ಧಾಳಿಕಾರರಿಗೂ ಭಾರಿ ಕದನ

ಪಂಜಾಬಿನ ಪರಿಸ್ಥಿತಿ ಒಂದೇ ಸಮನೆ ...ಸಿ. ಫಿರೋಜ್‌ಪುರ ತಹಸೀಲಿನ ಜಾಂ...ಸ್ ಎಂಬಲ್ಲಿ ಮೊನ್ನೆ ಮಿಲಿಟರಿಯವರಿಗೂ ಧಾಳಿಕಾರರಿಗೂ ೬ ಗಂಟೆ ಕಾಲ ಯುದ್ಧವೇ ನಡೆಯಿತು. ಅನೇಕ ಧಾಳಿಕಾರರು ಸತ್ತಿದ್ದಾರೆ. ಪಿಂಡಿಯಲ್ಲಿನ, ಥಕೋಹ ...ಗಂಜದಲ್ಲಿ ಬೆಂಕಿ ಹಚ್ಚುವ ಕಾರ್ಯ ನಡೆ...ಯುತ್ತಲೇ ಇದೆ. ಮುದ್ದೀಕ್ ಎಂಬ ಹಳ್ಳಿ...ಯನ್ನು ೨೦೦೦ ಮಂದಿ ಗಲಭೆಕಾರರು ಭ...ಸ್ಮ ಮಾಡಿದ್ದಾರೆ. ಶಾಂತಿ ಸ್ಥಾಪನಾ ಕಾ...ರ್ಯದಲ್ಲಿ ೧೪ ಸಾವಿರ ಮಂದಿ ಬ್ರಿಟಿಷ್ ...ಮತ್ತು ಭಾರತೀಯ ಸೈನಿಕರು ತೊಡಗಿ...ದ್ದಾರೆ. ಫಿರೋಜ್‌ಪುರದ ಕಡೆ ಬರುತ್ತಿದ್ದ ...ರೈಲು ಗಾಡಿಯಲ್ಲಿ ೫ ಮಂದಿ ಕೊಲೆಗೀಡಾ...ಗಿದ್ದಾರೆ.

ರಾಷ್ಟ್ರಪತಿಗಳಿಗೆ ಪುರಸಭಾ ಮಾನಪತ್ರ

ಮೈಸೂರು ೧೬

ಬರುವ ೧೯ ಅಥವಾ ೨೦ ನೇ ತಾ॥ ರಾಜಧಾನಿಗೆ ಆಗಮಿಸಲಿರುವ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರಿಗೆ ಮೈಸೂರು ಪುರಸಭೆಯ ಪರವಾಗಿ ಮಾನಪತ್ರವನ್ನು ಅರ್ಪಿಸಬೇಕೆಂದು ನಿನ್ನೆ ಸಂಜೆ ಶ್ರೀ. ರಾಮಚಂದ್ರ ರಾವ್ ಬೊಂಬೋರೆಯವರ ಅಧ್ಯಕ್ಷತೆಯಲ್ಲಿ ನಡೆದ ಪುರಸಭಾ ವಿ॥ ಅಧಿವೇಶನದಲ್ಲಿ ನಿರ್ಧರಿಸಲಾಯಿತು. ಬಿನ್ನವತ್ತಳೆಯನ್ನು ತಯಾರಿಸಿ, ಅಗತ್ಯವಾದ ಇತರ ವ್ಯವಸ್ಥೆಗಳನ್ನು ಮಾಡಲು ಶ್ರೀಗಳಾದ ಅಧ್ಯಕ್ಷರು, ಉಪಾಧ್ಯಕ್ಷರು, ಟಿ. ಮರಿಯಪ್ಪ, ಪಿ. ಸೀತಾರಾಮಯ್ಯ, ಬಿ. ನಾರಾಯಣಸ್ವಾಮಿ ಮತ್ತು ಪಿ. ಗೋಪಾಲಕೃಷ್ಣ ಶೆಟ್ಟರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು.

ಶ್ರೀಗಳಾದ ಟಿ. ಮರಿಯಪ್ಪ, ಪಿ. ಸೀತಾರಾಮಯ್ಯ, ಎ. ವೆಂಕಟೇಶಯ್ಯ ಮುಂತಾದವರು ಮಾತನಾಡಿ ಆಚಾರ್ಯ ಕೃಪಲಾನಿಯವರು ರಾಷ್ಟ್ರಪತಿಗಳಾಗಿ ಇಲ್ಲಿಗೆ ಆಗಮಿಸುತ್ತಿರುವುದು ಇದೇ ಮೊದಲೆಂದೂ, ಅವರ ವಿದ್ಯಾಪ್ರೌಢಿಮೆ, ಸೇವೆ, ತ್ಯಾಗ ಇವುಗಳ ಗಣನೆಯಿಂದ ಅಂತಹ ಮಹಾ ಮುಖಂಡರನ್ನು ಸನ್ಮಾನಿಸಿ ಗೌರವಿಸುವುದು, ನಗರಕ್ಕೆ ಕೀರ್ತಿಯುತವಾದುದೆಂದೂ ಹೇಳಿದರು. ಹಾ॥ ಎ. ಆರ್. ನೂರ್ ಹುಸೇನರು ತಾವು ಯಾವ ಪಕ್ಷವನ್ನು ವಹಿಸುವುದಿಲ್ಲವೆಂದು ಹೇಳಿ ಇದರಂತೆ ರಾಜಧಾನಿಗೆ ಬರುವ ಎಲ್ಲಾ ಗಣ್ಯ ವ್ಯಕ್ತಿಗಳಿಗೂ ಮಾನಪತ್ರ ಅರ್ಪಿಸಬೇಕೆಂದು ಸೂಚಿಸಿದರು. ನಿರ್ಣಯವು ಅವಿರೋಧವಾಗಿ ಅಂಗೀಕಾರವಾಯಿತು.

ಅಸ್ಸಾಮಿನಲ್ಲೂ ಲೀಗಿನವರ ಶಾಸನಭಂಗ ಚಳುವಳಿ

ಅಸ್ಸಾಂ ಪ್ರಾಂತ್ಯದಲ್ಲಿ ಶಾಸನಭಂಗ ಚಳುವಳಿ ನಡೆಸಬೇಕೆಂದು ಮುಸ್ಲಿಂ ಲೀಗಿನವರು ನಿರ್ಧರಿಸಿದ್ದಾರೆ. ಆ ಪ್ರಾಂತ್ಯದಲ್ಲಿ ಅನುಮತಿ ಇಲ್ಲದೆ ಸಾಗುವಳಿ ಮಾಡಕೂಡದೆಂದು ಜಾರಿಯಲ್ಲಿರುವ ಶಾಸನವನ್ನು ಲೀಗಿನವರು ಮುರಿಯಬೇಕೆಂದು ತೀರ್ಮಾನಿಸಿದ್ದಾರೆ. ಹೊರಗಿನಿಂದ ತಂಡಗಳು ಆ ಪ್ರಾಂತ್ಯದೊಳಕ್ಕೆ ಹೋಗಿ ಗಡಿಯ ಜಮೀನುಗಳಲ್ಲಿ ನೆಲಸಿ ವ್ಯವಸಾಯ ಮಾಡಲು ಕಾರ್ಯಕ್ರಮಗಳನ್ನು ಹಾಕಲಾಗುತ್ತಿದೆ. ತಮ್ಮ ಮೇಲಿರುವ ಪ್ರತಿಬಂಧಾಜ್ಞೆಗಳನ್ನು ಅಲ್ಲಿ ಲೀಗ್ ನಾಯಕರು ಉಲ್ಲಂಘಿಸಲಿದ್ದಾರೆ.

ಗಾಂಧೀಜಿಗೆ ನೋಬೆಲ್ ಬಹುಮಾನ ಕೊಡಲು ಸಲಹೆ

ಶಾಂತಿ ಸ್ಥಾಪನಾ ಕಾರ್ಯದಲ್ಲಿ ಪ್ರಥಮ ದರ್ಜೆಗೆ ಸೇರಿದವರಿಗೆ ಕೊಡಲಾಗುವ ನೋಬೆಲ್ ಬಹುಮಾನಕ್ಕೆ ಸೂಚಿಸಲಾಗಿರುವ ವಿವಿಧ ದೇಶಗಳ ಅನೇಕ ಪ್ರಮುಖರ ಹೆಸರುಗಳ ಪೈಕಿ ಮಹಾತ್ಮ ಗಾಂಧಿಯವರ ಹೆಸರೂ ಇರುವುದೆಂದು ನೋಬೆಲ್ ಪಾರಿತೋಷಕ ಸಮಿತಿಯವರು ತಿಳಿಸಿದ್ದಾರೆ.

೫೦ ಸಂಸ್ಥಾನಗಳ ಕಾನ್ಫೆಡರೇಷನ್ ಸ್ಥಾಪನೆ

ಕಾಥೇವಾಡ, ರಾಜಪುಟಾಣ ಮತ್ತು ಮಧ್ಯ ಇಂಡಿಯದ ೫೦ ಸಂಸ್ಥಾನಗಳ ನರೇಂದ್ರರುಗಳೂ, ಪ್ರತಿನಿಧಿಗಳೂ ಬೊಂಬಾಯಿಯಲ್ಲಿ ಕಳೆದ ೩ ದಿನಗಳಿಂದ ಸಮ್ಮೇಳನ ನಡೆಸಿ ಒಂದು ಉಪ ಫೆಡರೇಷನ್ನನ್ನು ರಚಿಸಿಕೊಳ್ಳಲು ತೀರ್ಮಾನಿಸಿದ್ದಾರೆ. ಈ ಬಗ್ಗೆ ಒಂದು ರಾಜ್ಯಾಂಗವನ್ನೂ, ಸಹ ನಿರ್ಮಿಸಿಕೊಂಡಿದ್ದಾರೆ.

ಸರ್ ಶಿವನಾರವರು ಸ್ವಗ್ರಾಮಕ್ಕೆ

ಪಂಜಾಬಿನ ಮಾಜಿ ಪ್ರಧಾನಿಗಳಾದ ಸರ್ ಮಿಜರ್ ಮಹಾರಾಜ್ ಶಿವನಾರವರು ರಾಜಕೀಯವನ್ನು ಸಂಪೂರ್ಣವಾಗಿ ತ್ಯಜಿಸಿದ ತಮ್ಮ ಕಲ್ಲುಜನ(?) ಕಡೆದರು. ಎರಡು ಲಾರಿಗಳಷ್ಟು ಅವರ ಸಾಮಾನುಗಳನ್ನೂ, ಸರಂಜಾಮುಗಳನ್ನೂ, ಮೂರು ಕಾರುಗಳಲ್ಲಿ ಸಂಬಂಧಿಕರನ್ನೂ, ಸೇವಕರನ್ನೂ ಕರೆದುಕೊಂಡು ಹೋದರು.

ಪಂಜಾಬ್ ಪ್ರಕರಣದಲ್ಲಿ ಸತ್ತವರೆಷ್ಟು?

ಪಂಜಾಬಿನಲ್ಲಿ ನಡೆಯುತ್ತಿರುವ ನರಮೇಧಯಾಗದಲ್ಲಿ ನಿನ್ನೆ ದಿನದವರೆಗೆ ೧೦೩೬ ಮಂದಿ ಅಹುತಿಯಾಗಿದ್ದಾರೆಂದೂ ೧೧೧೦ ಮಂದಿ ತೀವ್ರ ಗಾಯಗೊಂಡಿದ್ದಾರೆಂದು ಅಧಿಕೃತವಾಗಿ ವರದಿಯಾಗಿದೆ.

ಕೇಂದ್ರಸರ್ಕಾರದಲ್ಲಿ ಪಕ್ಷಗಳ ಒಪ್ಪಂದವೇ?

ಹೊಸ ವೈಸರಾಯರು ಭಾರತಕ್ಕೆ ಬಂದು ಅಧಿಕಾರ ಸ್ವೀಕರಿಸಿದ ಕೂಡಲೇ ತಾತ್ಕಾಲಿಕ ಸರ್ಕಾರವನ್ನು ಭದ್ರಪಡಿಸುವ ದಿಕ್ಕಿನಲ್ಲಿ ಪ್ರಯತ್ನ ಕಾಂಗ್ರೆಸ್ ಪಕ್ಷ [illegible] ...ತ್ತಿಸುವರೆಂದು [illegible] ಮಾಡಿದೆ.

ಜವಾಬ್ದಾರಿ ಸರ್ಕಾರದ ಬಗ್ಗೆ ಸ॥ ಪಟೇಲರ ಪತ್ರ

ಕಾಲ ವಿಳಂಬದಿಂದ ಸರ್ಕಾರಕ್ಕೆ ಕಷ್ಟ ಪರಂಪರೆ

ಬಹಳ ಹಿಂದೆಯೇ ಮೈಸೂರು ಸರ್ಕಾರದವರು ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕಾಗಿತ್ತು; ಅವರು ಅದನ್ನು ಇನ್ನೂ ತಡಮಾಡಿದರೆ ಬಹಳ ಕಷ್ಟ ಪರಂಪರೆಗಳಿಗೆ ಈಡಾಗುವರು ಎಂಬುದಾಗಿ ಕೇಂದ್ರ ಸರ್ಕಾರದ ಗೃಹ ಸಚಿವರಾದ ಸರ್ದಾರ್ ಪಟೇಲರು ಪ್ರಜಾ ಸಭೆಯ ಸದಸ್ಯರಾದ ಶ್ರೀ ಶಂಕರಲಿಂಗೇಗೌಡರಿಗೆ ಬರೆದ ಪತ್ರದಲ್ಲಿ ತಿಳಿಸಿರುತ್ತಾರೆ. ಸಂಸ್ಥಾನಗಳು ಮತ್ತು ರಾಜರ ವಿಚಾರದಲ್ಲಿ ಅವರು ಹೀಗೆ ಹೇಳಿರುವರು :—

ಜವಾಬ್ದಾರಿ ಆಡಳಿತವು ಬಂದರೆ ರಾಜರುಗಳು ನಿರ್ನಾಮವಾಗುವರೆಂಬ ಅರ್ಥವಲ್ಲ. ಮೈಸೂರು ಕಾಂಗ್ರೆಸ್ಸಿನಲ್ಲಿ ಯಾರೂ ಆ ಅಭಿಪ್ರಾಯವನ್ನು ಹೊಂದಿರುವುದಿಲ್ಲ. ಇಂಗ್ಲೆಂಡಿನಲ್ಲಿಯಾಗಲೀ, ಸಂಸ್ಥಾನಗಳಲ್ಲಿಯಾಗಲೀ ಅಥವಾ ಬೇರೆ ಯಾವ ಕಡೆಗಳಲ್ಲಿಯೇ ಆಗಲೀ ಸಾರ್ವಭೌಮಾಧಿಕಾರವು ಪ್ರಜೆಗಳಲ್ಲಿ ನೆಲೆಸಿಲ್ಲವಾದರೂ ಇರುವುದೆಂದು ಪ್ರಪಂಚದಲ್ಲಿ ಯಾರೂ ನಂಬಿರುವುದಿಲ್ಲ. ಬ್ರಿಟನ್ನಿನ ಪ್ರಜೆಗಳ ಮೇಲೆ ಅಲ್ಲಿನ ಚಕ್ರವರ್ತಿಗಳು ಹೊಂದಿರುವ ಅಧಿಕಾರಕ್ಕಿಂತಲೂ ಹೆಚ್ಚಿನ ಅಧಿಕಾರವನ್ನು ತಮ್ಮ ರಾಜರು ಹೊಂದಿರುವರೆಂದು ಸೀತ್ರಾಮಿಸಿದ್ದರೆ ಅದು ಶುದ್ಧ ತಪ್ಪು. ಮೈಸೂರು ಕಾಂಗ್ರೆಸ್ಸು ಹಿಂದೆ ಅಂಗೀಕರಿಸಿರುವ ನಿರ್ಣಯಗಳು, ಬದಲಾಯಿಸಿರುವ ಇಂದಿನ ಪರಿಸ್ಥಿತಿಯಲ್ಲಿ ಅದನ್ನು ಈಗ ಬದ್ಧಪಡಿಸಬಹುದು. ಬ್ರಿಟಿಷ್ ಚಕ್ರವರ್ತಿಗಳಿಗೆ ರಾಜಭಕ್ತಿಯನ್ನು ಅರ್ಪಿಸಲು ಎಲ್ಲಾ ರಾಜರುಗಳೂ ಮನ್ನಣೆ ಹೊಂದಿರುವರು. ಬರುವ ವರ್ಷ ಜೂನ್ ತಿಂಗಳಿಂದ ಹಿಂದೂಸ್ಥಾನದಲ್ಲಿ ಯಾವ ಸಾರ್ವಭೌಮರೂ ಇರುವುದಿಲ್ಲ. ಪರಮಾಧಿಕಾರವು ಗಾಳಿಗೆ ಹಾರಿ ಹೋಗುತ್ತದೆ. ವಿದ್ಯಮಾನಗಳಿಂದ ಆಗುತ್ತಿರುವ ಭಾರಿ ಬದಲಾವಣೆಗಳನ್ನು ನೀವು ಮನಗಂಡಂತೆ ಕಾಣುವುದಿಲ್ಲ. ಆದ್ದರಿಂದಲೇ ಮೈಸೂರು ಕಾಂಗ್ರೆಸ್ಸಿನ ನೀತಿಯನ್ನಾಗಲೀ, ನನ್ನ ಪತ್ರದ ಅಭಿಪ್ರಾಯವನ್ನಾಗಲೀ ತಿಳಿಯಲು ನಿಮಗೆ ಕಷ್ಟವಾಗಿದೆ. ಬದಲಾಯಿಸುತ್ತಿರುವ ಪರಿಸ್ಥಿತಿಗನುಗುಣವಾಗಿ ಎಲ್ಲಾ ರಾಜರುಗಳೂ ನಡೆದುಕೊಂಡು ಬ್ರಿಟಿಷ್ ಸಾರ್ವಭೌಮರಂತೆ ಶಾಸನಬದ್ಧರಾಗಬೇಕಾಗಿದೆ. ಕಾಲಗತಿಯನ್ನರಿತುಕೊಳ್ಳುವುದೇ ಬುದ್ಧಿವಂತಿಕೆ; ಬೇರಾಯನ ಕಾಲದ ತತ್ವಗಳಿಗೆ ಅಂಟಿಕೊಂಡಿರುವುದು ತಿಳಿಗೇಡಿತನ. ಪ್ರಮಾಣ ವಚನದ ಕಾರಣದ ಮೇಲೆ ರಾಜಭಯ ಮಾತನ್ನೆತ್ತುವುದು ಮೂರ್ಖತನ. ನಾವುಗಳೂ ಸಹ ಪ್ರಮಾಣ ವಚನವನ್ನು ಸ್ವೀಕರಿಸಿದ್ದೇವೆ. ಆದರೆ ಸ್ವತಂತ್ರ ಭಾರತಕ್ಕಾಗಿ ನಾವು ನಡೆಸುವ ಹೋರಾಟ ಅದು ಅವಮಾನಕರವಾಗಿರುವುದಿಲ್ಲ.

ಬೆಂಕಿಪೊಟ್ಟಣದ ಮೊಕದ್ದಮೆ

ಕಾಳಸ್ಸ್ನಾನಗುಡಿ ಬೀದಿಯಲ್ಲಿರುವ ಸರ್ ಅಬ್ದುಲ್ ಹುಸೇನ್ ಎಂಬುವನು ಬೆಂಕಿಪೊಟ್ಟಣಗಳನ್ನು [illegible] ಮಾರಿದುದಾಗಿ ಮಂಡಿ ಪೋಲೀಸ್ ಸ್ಟೇಷನ್ನಿನವರು [illegible] ನ್ಯಾಯಾಧೀಶರ ಬಳಿ [illegible]

ಸಾಧ್ವಿ

ತಾ॥ ೧೬-೮-೪೭ ಶನಿವಾರ

ಮುಷ್ಕರದ ಮುಕ್ತಾಯ

— —

ಆಯುರ್ವೇದಿಕ್ ಮತ್ತು ಯುನಾನಿ ಕಾಲೇಜ್ ವಿದ್ಯಾರ್ಥಿಗಳು ಒಂದು ತಿಂಗಳಿಂದ ನಡೆಸುತ್ತಿದ್ದ ಮುಷ್ಕರವನ್ನು ಮುಕ್ತಾಯಗೊಳಿಸಿ ಶಾಲೆಗೆ ಹಿಂದಿರುಗಿರುತ್ತಾರೆ ಮಂತ್ರಿಗಳೂ ಸಂಬಂಧಪಟ್ಟ ಅಧಿಕಾರಿಗಳೂ ಅವರಿಗೆ ಕೊಟ್ಟ ಭರವಸೆಯೇ ಇದಕ್ಕೆ ಕಾರಣ ಈ ಪ್ರಕರಣವು ಈ ರೀತಿಯಲ್ಲಿ ಮುಕ್ತಾಯಗೊಂಡುದಕ್ಕಾಗಿ ನಾವು ಸಂತೋಷಿಸುತ್ತೇವೆ

ಮೇಲ್ಕಂಡ ಕಾಲೇಜಿನಲ್ಲಿ ಇರುವ ಕುಂದುಕೊರತೆಗಳ ಬಗ್ಗೆ ವಿದ್ಯಾರ್ಥಿಗಳು ಮಾಡಿಕೊಂಡಿರುವ ಮನವಿಯು ವಾಸ್ತವವಾಗಿರುತ್ತದೆ ಸರಿಯಾದ ಅಧ್ಯಾಪಕರುಗಳು, ಬೇಕಾದ ಸಾಮಗ್ರಿಗಳೂ ಮತ್ತು ಆವಶ್ಯಕವಾದ ಇತರ ಸೌಲಭ್ಯಗಳೂ ಇಲ್ಲದೆ ಶಾಲೆಯ ಕೆಲಸಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಿಲ್ಲ. ಆಯುರ್ವೇದ ಸಂಸ್ಥೆಗಳಿಗೆ ಬಹಳ ಆದರ್ಶಪ್ರಾಯವಾಗಿ, ಆದಿಯಿಂದಲೂ ಹೆಸರುವಾಸಿ ಹೊಂದಿದ್ದ ಈ ಸಂಸ್ಥೆಯು ಈ ಸ್ಥಿತಿಗೆ ಇಳಿದಿರುವುದು ಸರ್ವಥಾ ಸಮರ್ಪಕವಲ್ಲ

ಆಯುರ್ವೇದ ಮತ್ತು ಯುನಾನಿ ವೈದ್ಯ ಪದ್ಧತಿಗಳ ಅಭಿವೃದ್ಧಿಗಾಗಿ ಈ ಶಾಲೆಗೆ ಪುಣ್ಯಸ್ಮರಣೀಯರಾದ ಪಂಡಿತ ಡಿ ಗೋಪಾಲಾಚಾರ್ಲು, ಧರ್ಮಪ್ರಕಾಶ ಡಿ ಬನುಮಯ್ಯ, ಗುಂಡ್ಲುಪಂಡಿತ ಲಕ್ಷ್ಮಣಾಚಾರ್ ಮತ್ತು ಇನ್ನೂ ಅನೇಕ ಮಹನೀಯರುಗಳು ಉದಾರವಾಗಿ ಧನ ಸಹಾಯ ಮಾಡಿರುತ್ತಾರೆ ನಮ್ಮ ಸರ್ಕಾರದವರೂ ಸಹ ಇದಕ್ಕೆ ವಿಶೇಷ ಪ್ರೋತ್ಸಾಹವನ್ನು ಕೊಡುತ್ತಾ ಬಂದಿರುತ್ತಾರೆ ಆದರೆ ಈಚೀಚೆಗೆ ಶಾಲೆಯ ವ್ಯವಸ್ಥೆಗಳು ಸರಿಯಾಗಿಲ್ಲದೆ ಅದು ಹೀನಸ್ಥಿತಿಗೆ ಬಂದಿರುತ್ತದೆ. ಯಾವ ಧನವಾದ ಉದ್ದೇಶದಿಂದ ಅದು ಸ್ಥಾಪಿಸಲ್ಪಟ್ಟಿತೋ ಮತ್ತು ಯಾವ ಪ್ರಾಚೀನ ವಿದ್ಯೆಯ ಅಭಿಮಾನದಿಂದ ಉದಾರಿಗಳು ಅದಕ್ಕೆ ಕೊಡುಗೆಯಿಂದ ಸಹಾಯ ಮಾಡಿದರೋ ಅದು ನೆರವೇರುತ್ತಿಲ್ಲ. ಇತರ ಪ್ರಾಂತ್ಯಗಳಲ್ಲಿ ಹೊಸಹೊಸದಾಗಿ ಆಯುರ್ವೇದ ಶಾಲೆಗಳು ಉದ್ಭವಿಸಿ ವಿಶೇಷ ಪ್ರೋತ್ಸಾಹವನ್ನು ಪಡೆಯುತ್ತಿವೆ ಮೈಸೂರು ದೇಶವು ತನ್ನ ಹೆಮ್ಮೆಯ ಸ್ಥಾನವನ್ನು ಕಳೆದುಕೊಂಡು ಹಿಂದೆ ಬೀಳುವುದು ಸರಿಯಲ್ಲ.

ನಮ್ಮ ಸರ್ಕಾರದವರೂ ಈ ಸಂಸ್ಥೆಯ ಮೇಲ್ವಿಚಾರಕರೂ ಮತ್ತು ಆಯುರ್ವೇದದಲ್ಲಿ ಅಭಿಮಾನವುಳ್ಳ ಸಕಲರೂ ಈ ವಿಷಯಕ್ಕೆ ಗಮನ ಕೊಟ್ಟು ನಮ್ಮ ಆಯುರ್ವೇದ ಮತ್ತು ಯುನಾನಿ ವಿದ್ಯಾ ಸಂಸ್ಥೆಯು ಆದರ್ಶಪ್ರಾಯವಾಗಿ ನಡೆಯಲು ಅವಕಾಶ ಕಲ್ಪಿಸಬೇಕೆಂದು ನಾವು ಕೋರುತ್ತೇವೆ

ತಾತ್ಕಾಲಿಕ ಸರ್ಕಾರಕ್ಕೆ ಪೂರ್ಣಾಧಿಕಾರ ವರ್ಗ

ಬ್ರಿಟಿಷ್ ಪ್ರಧಾನಿಯವರ ಫೆಬ್ರವರಿ ೨೦ ನೇ ತಾ॥ ನ ಘೋಷಣೆಯಲ್ಲಿ ಏನೇ ಇರಲಿ ಬ್ರಿಟಿಷ್ ಸರ್ಕಾರದವರು ಎಲ್ಲ ಅಧಿಕಾರವನ್ನೂ ತಾತ್ಕಾಲಿಕ ಕೇಂದ್ರ ಸರ್ಕಾರಕ್ಕಲ್ಲದೆ ಬೇರೆ ಯಾರಿಗೂ ವರ್ಗಾಯಿಸುವುದಿಲ್ಲವೆಂದು ಭಾರತ ವಿಚಾರಗಳನ್ನರಿತ ಬ್ರಿಟನ್ನಿನ ಪ್ರಮುಖ ಲೇಬರ್ ನಾಯಕರೊಬ್ಬರು ಹೇಳಿರುವುದಾಗಿ ವರದಿಯಾಗಿದೆ

ವನಸ್ಪತಿ ತುಪ್ಪದಿಂದ ಕಣ್ಣಿನ ದೃಷ್ಟಿ ಕೆಡುವುದೇ ?

ವನಸ್ಪತಿ ತುಪ್ಪವು ಆರೋಗ್ಯಕ್ಕೆ ಹಾನಿಕರವೇ ? ಎಂಬ ವಿಚಾರವನ್ನು ಪರಿಶೀಲಿಸಲು ಕಾಶಿ ಸಂಶೋಧನಾ ಕೇಂದ್ರದವರನ್ನು ಕೇಳಿಕೊಳ್ಳಲಾಗಿದ್ದಿತು ಇದರಿಂದ ಆರೋಗ್ಯಕ್ಕೆ ಬಹಳ ಹಾನಿಯಾಗುವುದು, ಅಲ್ಲದೆ ಕಣ್ಣಿನ ದೃಷ್ಟಿಯ ಮೇಲೆ ಪರಿಣಾಮವಾಗುವುದೆಂದು ಅವರು ವರದಿಯಲ್ಲಿ ತಿಳಿಸಿದ್ದಾರೆ ಇಲಿಗಳ ಮೇಲೆ ಅದನ್ನು ಪ್ರಯೋಗಿಸಲಾಗಿ ಅವುಗಳ ೩ ನೇ ಸಂತತಿ ಕುರುಡಾಗಿದ್ದುದು ಕಂಡುಬಂದಿತು ಮನುಷ್ಯನ ಮೇಲೂ ಇದರ ಪರಿಣಾಮವನ್ನು ಚೆನ್ನಾಗಿ ಪರೀಕ್ಷಿಸಿ ಹಾನಿಕರವೆಂದು ತೋರಿಬಂದರೆ ಅದರ ತಯಾರಿಯನ್ನು ನಿಲ್ಲಿಸಬೇಕಾಗುವುದು — ಎಂಬುದಾಗಿ ಬಾಬು ರಾಜೇಂದ್ರಪ್ರಸಾದರು ಕೇಂದ್ರ ಶಾಸನ ಸಭೆಯಲ್ಲಿ ತಿಳಿಸಿದ್ದಾರೆ

ಪ್ರಕಾಶಂ ರಾಜೀನಾಮೆ

ಮದ್ರಾಸ್ ಪ್ರಧಾನಿ ಶ್ರೀ ಟಿ ಪ್ರಕಾಶಂರವರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಮೊನ್ನೆ ಗೌರ್ನರಿಗೆ ಒಪ್ಪಿಸಿದರು. ಆದಾಗ್ಯೂ ಹೊಸ ವ್ಯವಸ್ಥೆ ಆಗುವವರೆಗೆ ಅಧಿಕಾರದಲ್ಲಿರಬೇಕೆಂದು ಗೌರ್ನರರು ಅವರನ್ನು ಪ್ರಾರ್ಥಿಸಿದ್ದಾರೆ

ಬ್ರಿಟಿಷ್ ಸೈನ್ಯ ಸಿದ್ಧತೆ

ಯಾವುದೇ ಸಂದರ್ಭ ಒದಗಿದರೂ ಅದನ್ನೆದುರಿಸಲು ಬ್ರಿಟನ್ನು ತನ್ನ ಸೈನ್ಯವನ್ನು ಸಿದ್ಧವಾಗಿಟ್ಟಿರುವುದಾಗಿ ಯುದ್ಧ ಮಂತ್ರಿಗಳು ಕಾಮನ್ಸ್ ಸಭೆಯಲ್ಲಿ ಮೊನ್ನೆ ಪ್ರಕಟಿಸಿರುವುದು ವಿಶ್ವದ ಪ್ರಮುಖ ರಾಷ್ಟ್ರಗಳಲ್ಲಿ ಕುತೂಹಲವನ್ನು ಹುಟ್ಟಿಸಿದೆ.

ಛತರ್‌ಪರ್ ಸಂಸ್ಥಾನದ ಸತ್ಯಾಗ್ರಹ

ಬುಂದೇಲ್‌ಖಂಡದ ಪ್ರಮುಖ ಸ... ವಾದ ಛತರ್‌ಪರ್ ಪ್ರಜಾ ಮಂಡ... ಜವಾಬ್ದಾರಿ ಸರ್ಕಾರ ಸ್ಥಾಪಿಸಲು ... ದವರನ್ನು ಒತ್ತಾಯಪಡಿಸಿದ್ದರು. ಇದುವರೆಗೂ ಸರ್ಕಾರದವರು ಪ್ರ... ಯತ್ನವನ್ನೂ ಕೈಗೊಂಡಿಲ್ಲವಾ... ದು ಸತ್ಯಾಗ್ರಹವನ್ನು ಆರಂಭಿಸ... ದೂ, ಸ್ವಯಂ ಸೇವಕರು ನ್ಯಾಯ... ಮತ್ತು ಕಛೇರಿಗಳ ಬಳಿ ಪಿಕೆಟಿಂಗ್... ಸುತ್ತಿದ್ದಾರೆಂದೂ ವರದಿಯಾಗಿದೆ

ಟಿ. ಸಿ. ನಟರಾ...

ಔ ಷ ಧಾ ಲ ಯ

ನೇತ್ರ ಪರೀಕ್ಷೆಯು ಉಚಿತವಾ... ಮಾಡಲ್ಪಡುತ್ತದೆ.

ಆಗತ್ಯವಾಗಿ ಬೇಕಾದ ಎಲ್ಲಾ... ತ್ತ್ವ ಔಷಧಿಗಳೂ ಸದಾ ಕಾಲದ... ದೊರೆಯುವುದಲ್ಲದೆ ಸಮಸ್ತವ್ಯಾಧಿ... ಚಿಕಿತ್ಸೆಯು ಬಹು ಸುಲಭ ಭಾ... ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದಿ... ದ್ಯೌಷಧಗಳೆಲ್ಲವೂ ದೊರೆಯುತ್ತವೆ

ಗರ್ಭ ರಕ್ಷಿ...

ಅಪೂರ್ವ ಅನುಭವ ಸಿದ್ಧವಾ... ಔಷಧಿ

ಇದರಿಂದ ಗರ್ಭದಲ್ಲಿರುವ ... ದೃಢವಾಗಿ ಬೆಳೆದು, ಗರ್ಭಸ್ರಾವವಾ... ನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ತೊಂದರೆಯಿಲ್ಲದೆ ಸರಾಗವಾಗಿ ... ವಾಗುವುದು

ಆಯುರ್ವೇದ ವೈದ್ಯ ಭೂಷ...

ಪಂಡಿತ್ ಕೆ. ಪಿ ವೆಂಕಟರಾ...

ಓ॥ ಬೋರ್ಡ್ ವೈದ್ಯ, ಅರಕಲ...

ಚಾಮರಾಜನಗರ ತಾ॥

ಮೈಸೂರು ಶ್ರೀ ಗಣೇಶ ಟಾಕೀಸಿನಲ್ಲಿ

14-8-47 ರಿಂದ ಪ್ರತಿ ದಿನ ಮೂರು ಆಟಗಳು

ಕನ್ನಡ ಚಿತ್ರಗಳಲ್ಲೆಲ್ಲಾ ಶ್ರೇಷ್ಠವಾದ ಮನೋರಂಜಕ ಸನ್ನಿವೇಶಗಳಿಂದ ಕೂಡಿದ

ಕನ್ನಡ

ಹರಿಶ್ಚಂದ್ರ

ಪಾತ್ರ:- ಸುಬ್ಬಯ್ಯ ನಾಯ್ಡು, ನಾಗೇಂದ್ರರಾವ್, ಮರಿರಾವ್, ಲಕ್ಷ್ಮೀಬಾಯಿ

Morning Shows on 14, 15, 16, 17 at 10 30 A. M.

"NIGHT-MARE"

— Starring :—

Diana — Barrymore — Brian · Donlevy

Join Now
Summer Classes in
Type writing Short-hand and Book-keeping
at the
Champion Metropolitan College of Commerce,
Old Mysore Bank Buildings, Sayyaji Rao Road, Mysore.
Admissions received on all working days between
7 and 10 a m and 5 and 7 p m.

P. S. SUBBARAYA SASTRY,
Principal.

ರಾಜ್‌ಕಮಲ್,

ಮೈಸೂರು

ತಾ॥ ೧೪-೮-೪೭ ರಿಂದ

೪ ದಿನಗಳು ಮಾತ್ರ ಬೆಳಗಿನ ಪ್ರದರ್ಶನ

೧೦-೩೦ ಗಂಟೆಗೆ

ಚಿತ್ರಲೇಖ

(ಹಿಂದಿ ಚಿತ್ರ)

ಪಾತ್ರ :—ಮೆಹತಾಬ್, ನಂದೇಕರ್, ಮೊನಿಕ್ ದೇಸಾಯಿ ಮುಂತಾದವರು

WANTED

Organisers on monthly salary and commission basis for Mysore State - under our New Expansion Scheme (Preference to energetic young men with experience) Apply immediately:-

P C KARAMBAYA,
Branch Secretary,
Warden Insurance Co. Ltd.,
Bangalore Branch,
142, Gandhinagar,
Bangalore City

[ಪ.ಭ]

ರಾ ಜ ಕ ಮ...

೧೬-೮-೪೭ ರಿಂದ ೫ ನೇ ...

1 ನೇ ಆಟ 6 ಘಂಟೆಗೆ,
2 ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲ...

(ಕನ್ನಡ...

ಇಂಪಾದ ಗಾನಗಳು! ಸೊಂಪಾದ ... ಕಗಳು!! ಮನರಂಜಕವಾದ ದೃಶ್ಯ... ಇವೆಲ್ಲವನ್ನೂ ಇಂದೇ ನೋ...

ಆಪೆರಾ ಟಾಕೀ...

೧೪-೮-೪೭ ರಿಂದ

ಸೂರ್ಲ್ ಮಾ...

(ಹಿಂದಿ ಚಿತ್ರ)

ಪ್ರತಿ ದಿನ ಮೂರು ಆಟಗಳು

ಪಾತ್ರ :- ಜೀವನ್, ಕೌಶಲ್ಯ... ಮಣಿಯಾ ಬ್ಯಾನರ್ಜಿ ಮುಂತಾ...

— : ಮುಂದಿನ ವಿನೋದ :—

ಕುಂಡಲಕೇಶಿ

(ತಮಿಳು)

Edited, P... A. R Nagara... D Subbian... Sadhvi Press... Mysore

ಸಂ 392 WEEKLY EDITION

ಸಂಪುಟ ೧೧] ಸೋಮವಾರ ೧೭—೩—೪೭ [ಸಂಚಿಕೆ ೪೨

ಬ್ರಿಟಿಷ್ ಪ್ರಧಾನಿಗಳಿಂದ ಮತ್ತೊಂದು ಹೇಳಿಕೆ ?

ಪಂಜಾಬಿನಲ್ಲಿ ಪೊಲೀಸರ ಅತ್ಯಾಚಾರ

ಪಂಜಾಬ್ ಪ್ರಾಂತ್ಯದಲ್ಲಿ ನಡೆಯುತ್ತಿರುವ ಗಲಭೆಯಲ್ಲಿ ಅಲ್ಲಿನ ಹಲವು ಪೊಲೀಸರ ಕೈವಾಡವೂ ಇದೆಯೆಂದೂ, ಅವರ ಅತ್ಯಾಚಾರ ಈಗೀಗ ಒಂದೊಂದಾಗಿ ಬಯಲಾಗುತ್ತಿವೆಯೆಂದೂ ವರದಿಯಾಗಿದೆ. ... ಸಿನವರನ್ನು ಹಿಂದಕ್ಕೆ ತೆಗೆದು ... ತಮ್ಮ ರಕ್ಷಣೆಯನ್ನು ತಾವೇ ಸ ... ವಾದ ರೀತಿಯಲ್ಲಿ ತಾವೇ ಮಾಡಿ ... ವಾಗಿ ಅಲ್ಲಿನ ಹಿಂದೂ ಮತ್ತು ಸಿ ... ತ್ತಿದ್ದಾರೆ. ಇದುವರೆಗೆ ಪೊಲೀ ... ಬಂದೂಕಿನಿಂದ ಸತ್ತವರೇ ಹೆಚ್ಚು ... ಹೇಳಲಾಗಿದೆ. ಹಲವು ನ ... ಸ್ಥಿತಿ ಸ್ವಲ್ಪ ಶಾಂತವಾಗಿದೆ. ಗ್ರಾಮಾಂತರ ಪ್ರದೇಶಗಳ ಸ್ಥಿತಿ ಸಿ ... ಯಕರವಾಗಿದೆ.

... ರಿಯಾದಲ್ಲಿ ರಾಜ್ಯಾಂಗ ಸುಧಾರಣೆ

... ಆಫ್ರಿಕದಲ್ಲಿರುವ ಬ್ರಿಟಿಷ್ ಸ್ವಾ ... ಬಹಳ ದೊಡ್ಡದಾದ ನೈಜೀರಿಯಾ ಪ್ರಾಂತ್ಯಕ್ಕೆ ಒಳಾಡಳಿತ ಸ್ವಾತಂತ್ರ್ಯವನ್ನು ಬ್ರಿಟಿಷ್ ಸರ್ಕಾರದವರು ಇತ್ತಿ ... ಇಲ್ಲಿಗೆ ಒಂದು ಪಾರ್ಲಿಮೆಂಟು ... ವಾಗುವುದು. ಅದರಲ್ಲಿ ಆಫ್ರಿಕದ ... ಬಹು ಸಂಖ್ಯೆಯಲ್ಲಿರುವರು. ... ಸಭೆಯಲ್ಲಿ ಇವರ ಪಕ್ಷಕ್ಕೆ ಬಹು ... ಸ್ಥಾನಗಳು ಲಭಿಸುವುವು. ಈ ... ಇದೇ ೪೦ ನೇ ತಾ|| ಆರಂಭವಾಗುವುದು.

ಉಪಾಧ್ಯಾಯರುಗಳ ಪ್ರಾರ್ಥನೆ

ಸ್ವಂ ಸು.] ಚಾಮರಾಜನಗರ ೧೬

ಇಲ್ಲಿನ ಪುರಸಭಾ ಹೈಸ್ಕೂಲಿನ ಉಪಾಧ್ಯಾಯರುಗಳು ಸಭೆ ಸೇರಿ ಸ್ಥಳೀಯ ಸಂ ... ಮತ್ತು ಏಡೆಡ್ ಸಂಸ್ಥೆಗಳ ನೌಕರರ ಸಂಬಳದ ಪುನರ್ವಿಮರ್ಶೆಯನ್ನು ಸಂಬಳ ... ಬಿಸುವರೆಗೆ ಒಪ್ಪಿಕೊಳ್ಳಲೆಂಬ ಅಂಶದ ... ವಿಷಾದ ವ್ಯಕ್ತಪಡಿಸಿದ್ದಾರೆ. ಪುರಸಭಾ ಹೈಸ್ಕೂಲ್ ಉಪಾಧ್ಯಾಯರುಗಳು ಇ ... ಎಲ್ಲಾ ವಿಧದಲ್ಲೂ ಸರ್ಕಾರಿ ಶಾಲಾ ಉಪಾಧ್ಯಾಯರುಗಳಂತೆಯೇ ಗಣಿಸಲ್ಪಡುತ್ತಿದ್ದಾರೆ. ಆದ್ದರಿಂದ ಸರ್ಕಾರದವರು ಈ ... ವನ್ನು ತಪ್ಪಿಸಿ ಅವರಂತೆಯೇ ಸಂ ... ಸವಲತ್ತುಗಳನ್ನು ಪುರಸಭಾ ಹೈಸ್ಕೂಲ್ ಉಪಾಧ್ಯಾಯರುಗಳಿಗೂ ಕೊಡಿಸಬೇಕೆಂದು ಪ್ರಾರ್ಥಿಸಿದ್ದಾರೆ.

ಚಾಮರಾಜನಗರದ ವೋಟರು ಮಹಾಶಯರಲ್ಲಿ ವಿಜ್ಞಾಪನೆ

1947 ನೇ ಇಸವಿ ಏಪ್ರಿಲ್ ಮಾಹೆ ೨೨ ನೇ ತಾರೀಖು ನಡೆಯುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಚಾಮರಾಜನಗರ ತಾಲ್ಲೋಕಿನಿಂದ ನಾನೊಬ್ಬ ಸಂಸ್ಥಾನ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಗ್ರಾಮ ... ಸಂಘದಿಂದ ಉಮೇದುವಾರನಾಗಿ ನಿಂತಿರುತ್ತೇನೆ. ಪ್ರಜಾ ಸೇವೆ ಮಾಡಲು ಅರ್ಹನೆಂದು ತಾವುಗಳು ಪರಿಗಣಿಸುವುದಾದರೆ ತಮ್ಮ ಅಮೂಲ್ಯವಾದ 3 ವೋಟುಗಳಲ್ಲಿ ಒಂದು ವೋಟನ್ನು "ಘಂಟೆ" ಗುರ್ತಿನ ನನಗೆ ಕೊಟ್ಟು ಮಾಂಬಲಿಗಳು ... ಬೇಕಾಗಿ ಕೋರುತ್ತೇನೆ.

ಪಿ. ಶ್ರೀನಿವಾಸಮೂರ್ತಿ,
ಹೊನ್ನಹಳ್ಳಿ, ಸಿಂಗಾನಲ್ಲೂರು ಶ್ಯಾನುಭೋಗ್.

ಮೈಸೂರರಸರ ಅರಮನೆ ವಸ್ತು ಸಂಗ್ರಹಾಲಯವಾಗುವುದೇ ?

ದೆಹಲಿಯಲ್ಲಿ ವೈಸರಾಯರು ವಾಸಿಸುವ ಅರಮನೆಯನ್ನು ವಸ್ತು ಸಂಗ್ರಹ ಶಾಲೆಯನ್ನಾಗಿ ಮಾಡಲು ತಾತ್ಕಾಲಿಕ ಸರ್ಕಾರದವರು ಸಾರ್ವಭೌಮ ಸರ್ಕಾರದವರಲ್ಲಿ ಪ್ರಾರ್ಥನೆಯನ್ನು ಸಲ್ಲಿಸಬಹುದೆಂದು ಭೂ ಸಂಶೋಧನಾ ಶಾಖೆಯ ಡೈರೆಕ್ಟರ್ ಜನರಲ್ ಡಾ|| ಮಾರ್ಟಿಮರ್ ವೀಲರ್‌ರವರು ಸೂಚಿಸಿರುವುದಾಗಿ ವರದಿಯಾಗಿದೆ. ವೈಸರಾಯರು ವಾಸಿಸಲು ದೇಶೀಯ ಸಂಸ್ಥಾನಗಳ ರಾಜರುಗಳಿಗೆ ಸೇರಿದ ಅರಮನೆಗಳಲ್ಲೊಂದನ್ನು ಬಿಟ್ಟುಕೊಡಬಹುದೆಂದೂ ಹೇಳಲಾಗಿದೆ.

ಬರೋಡ ದಿವಾನರಿಗೆ ಪ್ರಜೆಗಳ ಬೆಂಬಲ

ರಾಜ್ಯಾಂಗ ರಚನಾ ಸಮಿತಿಗೆ ಬರೋಡ ಸಂಸ್ಥಾನದಿಂದ ಸ್ಪರ್ಧಿಸುವ ದಿವಾನರಾದ ಸರ್ ಮಿತ್ತರ್‌ರವರಿಗೆ ಪ್ರಜಾ ಮಂಡಲ, ಲೋಕ ಸಭಾ ಮೊದಲಾದ ಎಲ್ಲ ಪ್ರಜಾ ಪಕ್ಷಗಳ ಪ್ರತಿನಿಧಿಗಳೂ ಬೆಂಬಲವಿತ್ತಿದ್ದಾರೆ.

ವಿದ್ಯಾರ್ಥಿಗಳಿಗೆ ಸೌಕರ್ಯ

ಸ್ವಂ ಸು.] ಶ್ರೀರಂಗಪಟ್ಟಣ ೧೫

ಈ ತಾಲ್ಲೂಕು ಚಂದಗಾಲ್ ಗ್ರಾಮದ ಜಮೀನ್‌ದಾರ್ ಶ್ರೀ ಬಿ ಮರೀಗೌಡರು ಇಲ್ಲಿ ನಡೆಯುವ ಲೋಯರ್ ಸೆಕೆಂಡರಿ ಪರೀಕ್ಷೆಗೆ ಬರುವ ವಿದ್ಯಾರ್ಥಿಗಳಿಗೆ ಜ್ಯೋತಿ ರ್ಮಹೇಶ್ವರ ದೇವಸ್ಥಾನದಲ್ಲಿ ಊಟದ ವ್ಯವಸ್ಥೆಯನ್ನು ಏರ್ಪಡಿಸಿರುತ್ತಾರೆ.

ಕಳೆದ ಎಂಟು ದಿನಗಳಿಂದಲೂ, ಕೊಗ ... ಬೆಳ್ಳಿ, ಸೀಮೆಎಣ್ಣೆ ಮತ್ತು ಬೆಂಕಿ ಪೊಟ್ಟಣ ಸಿಗುತ್ತಿಲ್ಲ.

† ಶ್ರೀ ದೇವದಾಸ್ ಗಾಂಧಿಯವರು ಅಖಿಲ ಭಾರತ ಪತ್ರಿಕಾ ಸಂಪಾದಕರ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ರಾ ಜ ಕ ಮ ಲ್

೧೭-೩-೪೭ ರಿಂದ ೫ ನೇ ವಾರ

1 ನೇ ಆಟ 6 ಘಂಟೆಗೆ,
2 ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ
(ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಂಪಾದ ನಾಟ್ಯಗಳು!! ಮನರಂಜಕವಾದ ದೃಶ್ಯಗಳು!!!
ಇವೆಲ್ಲವನ್ನೂ ಇಂದೇ ನೋಡಿ.

ಪೌರಸಭೆಯಲ್ಲಿ ಸರ್ಕಾರದ ಮನೋಭಾವನೆಯ ಖಂಡನೆ

ಸ್ವಂ.ಸು.ಪೋ||] ಬೆಂಗಳೂರು ೧೬

ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ವಿರುದ್ಧವಾಗಿ ಸರ್ಕಾರವು ಕೈಗೊಂಡಿರುವ ಕಾರ್ಯಕ್ರಮಕ್ಕಾಗಿ, ಬೆಂಗಳೂರಿನಲ್ಲಿರುವ ದಕ್ಷಿಣ ಆಫ್ರಿಕಾದ ಬೀದಾರರನ್ನು ಗಡೀಪಾರು ಮಾಡಬೇಕೆಂದೂ ಮತ್ತು ಭಾರತ ರಾಜ್ಯಾಂಗ ಸಭೆಗೆ ಚುನಾಯಿತ ಪ್ರತಿನಿಧಿಗಳನ್ನು ಸಂಸ್ಥಾನದ ಪರವಾಗಿ ಕಳುಹಿಸಬೇಕೆಂದೂ ಮಾಡಿದ್ದ ನಿರ್ಣಯಗಳ ಬಗ್ಗೆ ಸರ್ಕಾರದವರು ಕಳುಹಿಸಿದ್ದ ಉತ್ತರವನ್ನು ಮೊನ್ನೆ ನಡೆದ ಪುರಸಭಾಧಿವೇಶನದಲ್ಲಿ ಪರಿಶೀಲಿಸಲಾಯಿತು.

ಈ ವಿಚಾರಗಳು ಪುರಸಭೆಗೆ ಸಂಬಂಧಿಸಿದುದಲ್ಲವೆಂದೂ ಸಭೆಗೆ ಸಂಬಂಧಪಟ್ಟ ವಿಷಯಗಳಿಗೆ ಮಾತ್ರ ತಮ್ಮ ತೀರ್ಮಾನಗಳನ್ನು ಸೀಮಿತಗೊಳಿಸಬೇಕೆಂದೂ ಸಲಹೆಯನ್ನು ಸರ್ಕಾರದ ರೆವಿನ್ಯೂ ಕಾರ್ಯದರ್ಶಿಗಳು ಕಳುಹಿಸಿದ್ದರು. ಹಿಂದೆ ಅನೇಕಾವರ್ತಿ ಸಾರ್ವತ್ರಿಕ ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದು ನಿರ್ಣಯಗಳಾಗಿವೆಯೆಂದೂ, ಈ ಸಂದರ್ಭದಲ್ಲಿ ಸರ್ಕಾರದ ಅಭಿಪ್ರಾಯ ಮತ್ತು ಮನೋಭಾವವು ಖಂಡನಾರ್ಹವಾಗಿದೆಯೆಂದೂ ಸದಸ್ಯರುಗಳು ಟೀಕಿಸಿದರು. ಈ ಅಭಿಪ್ರಾಯಗಳೊಡನೆ ಆ ಪತ್ರವನ್ನು ರೆಕಾರ್ಡ್ ಮಾಡಲಾಯಿತು.

ಶ್ರೀ ರಾಮೋತ್ಸವ ಕಾರ್ಯಕ್ರಮ

ಮೈಸೂರು ೧೬

ಕೃಷ್ಣರಾಜಮೊಹಲ್ಲಾ ನಾರಾಯಣ ... ಶ್ರೀ ದೊಡ್ಡರಾಮ ದೇವಸ್ಥಾನದಲ್ಲಿ ಇದೇ ೨೩ ನೇ ತಾ|| ನಿಂದ ಏಪ್ರಿಲ್ ೧ ರ ವರೆಗೆ ಶ್ರೀ ರಾಮೋತ್ಸವದ ಪ್ರಯುಕ್ತ ಕಾರ್ಯಕ್ರಮಗಳು ಮುಂದೆ ಕಂಡಂತೆ ಏರ್ಪಾಡಾಗಿವೆ.—೨೩ ನೇ ತಾ|| ಆ|| ವಿ| ಸಂಗೀತ ರತ್ನ ಟಿ ಚೌಡಯ್ಯನವರ ಪಿಟೀಲು, ೨೪ ಶ್ರೀ ಶ್ರೀಮತಿ ... ಸಂಗೀತ. ೨೬ ವಿ|| ಮೋರಿಸ್ವಾಮಯ್ಯಂಗಾರ್‌ರವರ ವೀಣೆ. ೨೭ ವಿ|| ರಾಮರತ್ನಂರವರ ಗಾಯನ ... ಶನಿವಾರದಿಂದ ... ೨೯ ವಿ|| ... ಶ್ರೀನಿವಾಸ ... ರಂಗಾಚಾರ್ಯರ ... ೩೧ ... ಕೃಷ್ಣ ... ಏ ೧ ಶಯನೋತ್ಸವ.

ಭಾರತದ ಬಗ್ಗೆ ಅಟ್ಲೀಯವರ ಹೊಸ ಹೇಳಿಕೆ ?

ಭಾರತದ ಅಧಿಕಾರವನ್ನು ೧೯೪೮ ರ ಜೂನ್ ಅಂತ್ಯದೊಳಗೆ ಭಾರತೀಯ ಕೇಂದ್ರ ಅಥವಾ ಪ್ರಾಂತ್ಯ ಸರ್ಕಾರಗಳಿಗೆ ವಹಿಸಿಕೊಡಲಾಗುವುದೆಂದು ಬ್ರಿಟನ್ ಪ್ರಕಟಿಸಿದ ಬಳಿಕ ... ಪಂಜಾಬಿನಲ್ಲಿ ಹೊಸ ವಿಷಮ ಪರಿಸ್ಥಿತಿ ಉಂಟಾಗಿದೆಯೆಂದೂ ಪಂಜಾಬಿನ ಪರಿಸ್ಥಿತಿಯನ್ನು ತಿಳಿಗೊಳಿಸಲು ... ಬ್ರಿಟಿಷ್ ... ಅಧಿಕಾರಿಗಳು ... ಸೂಚಿಸಿರುವುದರಿಂದಲೂ, ಬ್ರಿಟಿಷ್ ಪ್ರಧಾನಿ ಅಟ್ಲೀಯವರು ಸದ್ಯದಲ್ಲೇ ಕಾಮನ್ಸ್ ಸಭೆಯಲ್ಲಿ ಮತ್ತೊಂದು ಹೇಳಿಕೆಯನ್ನು ನೀಡಬಹುದೆಂದೂ, ಹಾಗಾದರೆ ಹೊಸ ವೈಸರಾಯರು ಕೂಡ ಹೇಳಿಕೆಯನ್ನು ಕಳುಹಿಸಬಹುದೆಂದೂ ಲಂಡನ್ನಿನಲ್ಲಿ ಹೇಳಲಾಗುತ್ತಿದೆ.

೧೪೭ ವರ್ಷದ ಮನುಷ್ಯ

ದಕ್ಷಿಣ ಸ್ಟಾವ್ರೊಪೋಲ್ ಬಳಿಯ ... ದಲ್ಲಿ ಫಿಪರೆ ... ರೈತನು ಮೊನ್ನೆ ತಾನೆ ತನ್ನ ೧೪೭ ನೇ ವರ್ಷದ ಜಯಂತಿಯನ್ನು ನೆರವೇರಿಸಿಕೊಂಡನೆಂದು ವರದಿಯಾಗಿದೆ. ಈತನು ಇನ್ನೂ ದೃಢಕಾಯನಾಗಿದ್ದಾನೆ. ಇವನ ತಂದೆಯು ೧೩೭ ವರ್ಷಗಳ ವರೆಗೂ, ತಾಯಿಯು ೧೧೫ ವರ್ಷಗಳ ವರೆಗೂ ಬದುಕಿದ್ದರೆಂದು ಹೇಳಲಾಗಿದೆ.

೧೯೪೮ ರ ಜೂನಿನಲ್ಲಿ ಗಡಿನಾಡಿನ ಸೋಲ್ಜರ್ ಮುತ್ತಿಗೆ

... ಮುಸ್ಲಿಂ ... ಒಕ್ಕೂಟದಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟು ... ನಡೆಸಿರುವುದಾಗಿ ... ಇವರು ... ಇರುವ ... ಹೆಚ್ಚು ಕಾರ್ಯ ... ಯೋಜನೆಯೊಂದನ್ನು ತಯಾರಿಸಿ, ಭಾರೀ ಪ್ರಮಾಣದ ಭರ್ತಿ ... ನ್ನು ಕೂಡಲು ... ಇದ್ದಾರೆಂದು ಗೊತ್ತಾಗಿದೆ. ... ಈ ಬಗ್ಗೆ ಪ್ರಚಾರ ನಡೆಸುತ್ತಿದ್ದಾರೆಂದೂ, ... ಪ್ರದೇಶಗಳನ್ನು ಮುಸ್ಲಿಮರಿಗೆ ದೊರಕಿಸಿಕೊಡುವುದೇ ಇವರ ಗುರಿಯೆಂದು ಹೇಳಲಾಗಿದೆ.

ಸಂಯುಕ್ತ ಸಂಸ್ಥಾನದ ಸೋಲಿ ರಷ್ಯಾ ಯಾಕೆ ಹೋಗುವುದೇ?

ಅಮೇರಿಕಾ ... ಶ್ರೀ ... ಮಾಡಿದರೆ ಅಗ್ಗೆ ರಷ್ಯಾ ... ಎಂಬುದರ ಬಗ್ಗೆ ನಿಶ್ಚಿತ ಅಭಿಪ್ರಾಯ ... ರವರು ... ಹೇಳಿದ್ದಾರೆ.

* ಮೈಸೂರು ನಗರದ ... ಕೆಲ ... ಶ್ರೀ ಎ. ... ಎನ್ ... ನಡೆಯಿತು.

* ... ಮಾಡಿದೆ

ಸಾಧ್ವಿ

ತಾ॥ ೧೭-೩-೪೭ ಸೋಮವಾರ

ಪತ್ರಿಕಾ ಶಾಸನದ ಪುನರ್ವಿಮರ್ಶೆ

ಭರತಖಂಡದ ವರ್ತಮಾನ ಪತ್ರಿಕೆಗಳ ಮೇಲೆ ಇರುವ ಶಾಸನವನ್ನು ಪುನರ್ವಿಮರ್ಶೆ ಮಾಡಿ ಅವಶ್ಯಕವಾದ ಬದಲಾವಣೆಗಳನ್ನು ಸೂಚಿಸಲು ಕೇಂದ್ರ ಸರ್ಕಾರದವರು ಒಂದು ಸಮಿತಿಯನ್ನು ರಚಿಸುತ್ತಾರೆ. ಪ್ರಮುಖ ಪತ್ರಿಕೆಗಳ ಸಂಪಾದಕರೂ, ಶಾಸನ ಸಭೆಯ ಸದಸ್ಯರೂ ಅದರಲ್ಲಿರುತ್ತಾರೆ. ಪ್ರಪಂಚದ ಸ್ವತಂತ್ರ ರಾಷ್ಟ್ರಗಳಲ್ಲಿ ಪತ್ರಿಕೆಗಳ ಮೇಲೆ ಇರಬಹುದಾದ ಹತೋಟಿಗಳನ್ನು ಪರಿಶೀಲಿಸಿ ಇಲ್ಲಿನ ಕಾನೂನಿನಲ್ಲಿ ಮಾಡಬೇಕಾದ ಬದಲಾವಣೆಗಳನ್ನು ಸೂಚಿಸುವಂತೆ ಸಮಿತಿಯವರನ್ನು ಕೋರಲಾಗಿದೆ.

ನೂತನ ಭಾರತ ಕೇಂದ್ರ ಸರ್ಕಾರವು ರಚಿತವಾದ ಮೇಲೆ ಶಾಸನ ಸಭೆಯಲ್ಲಿ ಈ ವಿಚಾರವಾಗಿ ಬಂದ ಪ್ರಶ್ನೆಗೆ ಉತ್ತರವೀಯುತ್ತಾ ಸರ್ದಾರ್ ಪಟೇಲರು ಈ ಬಗೆಯ ಸಮಿತಿಯೊಂದನ್ನು ರಚಿಸುವುದಾಗಿ ಹೇಳಿದ್ದರು. ಅದರಂತೆ ಈಗ ಮಾಡಿದ್ದಾರೆ. ವ್ಯಕ್ತ ಪತ್ರಿಕೆಗಳ ಮೇಲಿನ ಕರಾಳ ಶಾಸನವನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂದು ಎಲ್ಲರೂ ಕೇಳುತ್ತಿರುವರು. ಪತ್ರಿಕೆಗಳ ಹತೋಟಿಗಾಗಿ ಪ್ರತ್ಯೇಕವಾದ ಶಾಸನಗಳ ಅಗತ್ಯವಿರುವುದಿಲ್ಲ. ದಾರಿ ತಪ್ಪಿ ನಡೆಯುವ ಪತ್ರಿಕೆಗಳನ್ನು ದಂಡಿಸಲು ಈಗಿರುವ ಸಾಮಾನ್ಯ ಶಾಸನಗಳಲ್ಲಿಯೇ ಬೇಕಾದಷ್ಟು ಅವಕಾಶವಿರುತ್ತದೆ; ಇಂಗ್ಲೆಂಡ್, ಅಮೆರಿಕ ಮುಂತಾದ ರಾಷ್ಟ್ರಗಳಲ್ಲಿ ಪತ್ರಿಕೆಗಳಿಗಾಗಿ ಯಾವ ಪ್ರತ್ಯೇಕ ಶಾಸನವೂ ಇರುವುದಿಲ್ಲ; ಆದುದರಿಂದ ನಮ್ಮಲ್ಲಿಯೂ ಇದನ್ನು ಸಂಪೂರ್ಣವಾಗಿ ತೊಡೆದುಹಾಕಬೇಕೆಂದು ಹೇಳುತ್ತಿದ್ದಾರೆ.

ಇತ್ತೀಚೆಗೆ ಕೊಚ್ಚಿ ಸಂಸ್ಥಾನದಲ್ಲಿ ಪತ್ರಿಕಾ ಕಾನೂನನ್ನು ಸಂಪೂರ್ಣವಾಗಿ ತೊಡೆದುಹಾಕಲಾಗಿದೆ. ಅದರಿಂದ ಅಲ್ಲಿ ಯಾವ ಅನರ್ಥವೂ ಉಂಟಾಗಿರುವುದಿಲ್ಲ. ಕೇಂದ್ರ ಸರ್ಕಾರದವರೂ ಸಹ ಅದರಂತೆಯೇ ಈ ಶಾಸನವನ್ನು ಸಂಪೂರ್ಣವಾಗಿ ರದ್ದು ಮಾಡಿದ್ದರೆ ಚೆನ್ನಾಗಿತ್ತು. ಇದಕ್ಕಾಗಿ ಸಮಿತಿಯನ್ನು ರಚಿಸುವ ಪ್ರಮೇಯವೇ ಇರಲಿಲ್ಲ. ಪತ್ರಿಕಾ ಸ್ವಾತಂತ್ರ್ಯಕ್ಕಾಗಿ ಹೋರಾಡುವವರು ಯಾವ ಬಗೆಯ ಪತ್ರಿಕಾ ಶಾಸನಕ್ಕೂ ಒಪ್ಪಿಗೆಯನ್ನೀಯಲಾಗದು. ಆದರೆ ಈಗ ಸಮಿತಿಯೊಂದು ನೇಮಕವಾಗಿರುವುದರಿಂದ ಅವರು ಪತ್ರಿಕಾ ಸ್ವಾತಂತ್ರ್ಯವನ್ನೂ, ಸಾರ್ವಜನಿಕ ಹಿತರಕ್ಷಣೆಯನ್ನೂ ಸಮನ್ವಯಗೊಳಿಸಿ ಯಾವ ಸಲಹೆಗಳನ್ನು ಕೊಡುವರೆಂಬುದನ್ನು ಕುತೂಹಲದಿಂದ ನಿರೀಕ್ಷಿಸಬೇಕಾಗಿದೆ.

ಯುದ್ಧ ಕಾಲದಿಂದ ಇಚೆಗಂತೂ ಪತ್ರಿಕೆಗಳ ಮೇಲೆ ಅಸಂಖ್ಯಾತವಾದ ನಿರ್ಬಂಧಗಳು ಬಂದಿರುತ್ತವೆ. ಅವುಗಳು ಒಂದೊಂದಾಗಿ ಈಗ ಸಡಿಲವಾಗುತ್ತಿವೆ. ಆದರೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಈ ಶಾಸನಗಳು ಇನ್ನೂ ಇದ್ದೇ ಇರುತ್ತವೆ. ಯುದ್ಧವು ಮುಗಿದರೂ, ಯುದ್ಧ ಕಾಲದ ಅಪ್ಪಣೆಗಳು ಮಾತ್ರ ಇನ್ನೂ ಜಾರಿಯಲ್ಲಿವೆ. ಮುದ್ರಣ ಕಾಗದ, ಮುದ್ರಣಾಲಯ ಮುಂತಾದುವುಗಳ ಮೇಲಿನ ಹತೋಟಿಯು ಇನ್ನೂ ರದ್ದಾಗಿರುವುದಿಲ್ಲ.

ಬರುವ ತಿಂಗಳಲ್ಲಿ ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನವು ನಡೆಯಲಿದೆ. ನಮ್ಮ ಪತ್ರಿಕೆಗಳಿಗೆ ಇರುವ ಕಿರುಕುಳಗಳನ್ನೆಲ್ಲಾ ನಿವಾರಿಸಿ, ಸ್ವತಂತ್ರಮಯ ವಾತಾವರಣದಲ್ಲಿ ಅವುಗಳ ನಿಜವಾದ ಸೇವೆಯನ್ನು ಸಲ್ಲಿಸಲು ಅವಕಾಶವಾಗಲು ಬೇಕಾದ ಎಲ್ಲ ಕಾರ್ಯಕ್ರಮಗಳನ್ನೂ ಸಮ್ಮೇಳನದವರು ಕೈಗೊಳ್ಳಬೇಕೆಂದು ನಾವು ಕೋರುತ್ತೇವೆ.

WANTED

(1) A Clerk and (2) A Librarian for the Sarada Vilas High School, Mysore.
Pay Rs 25/- plus D A 10. Minimum qulification S S L C Knowledge of Type-writing will be deemed an additional qualification. Retired officials may also apply.
Please apply to:
The Hon: Secretary,
Saradavilas High School
MYSORE
on or before 25-3-1947

ಸುಲಭ ದರದಲ್ಲಿ ಈಚಲ ಚಾಪೆಗಳು, ವಿಚಾರಿಸಿ:-
ಬಾಯಸಾರ್ ಕಂಪೆನಿ,
ಓಲ್ಡ್ ಮೈಸೂರು ಬ್ಯಾಂಕ್ ರೋಡ್,
ಮೈಸೂರು.

ಅಪೆರಾ ಟಾಕೀಸ್
೧೩-೩-೪೭ ರಿಂದ
ನೂರ್ ಮಾಸರ್
(ಹಿಂದಿ ಚಿತ್ರ)
ಪ್ರತಿದಿನ ಮೂರು ಆಟಗಳು
ಪಾತ್ರ:- ಜೀವನ್, ಕೌಸಲ್ಯ, ಮಾಯಾ ಬ್ಯಾನರ್ಜಿ ಮುಂತಾದವರು
—: ಮುಂದಿನ ವಿನೋದ :—
ಕುಂಡಲಕೇಶಿ
(ತಮಿಳು)

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ॥ ೧೭-೩-೪೭ ರಿಂದ ೨೩-೩-೪೭ರವರೆಗೆ

ಮೇಷ- ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಉದ್ಯೋಗ ವ್ಯವಹಾರಗಳಲ್ಲಿ ಯಶ. ವ್ಯಾಪಾರದಲ್ಲಿ ಪ್ರಗತಿ ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ ಮತ್ತು ಖರ್ಚು ಬಂಧುಗಳ ಸಮಾಗಮದಿಂದ ಸಂತೋಷ, ತಾ॥ ೧೮, ೨೦, ೨೩ ಲಾಭ, ಸಂತೋಷ.

ವೃಷಭ- ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಉತ್ತಮ, ಅಧಿಕಾರವರ್ಗದವರಿಂದ ಸನ್ಮಾನ, ವ್ಯಾಪಾರದಲ್ಲಿ ಶತ್ರುಗಳ ಕಿರುಕುಳ, ಉದ್ಯೋಗ, ವ್ಯವಹಾರಗಳಲ್ಲಿ ಮಿತ್ರರಿಂದಲೂ, ಬಂಧುಗಳಿಂದಲೂ ಸಹಾಯ, ಶುಭಕಾರ್ಯಗಳಿಗಾಗಿ ಪ್ರವಾಸ, ಸಂತೋಷಕೂಟಗಳಿಗಾಗಿ ಖರ್ಚು, ತಾ॥ ೨೦, ೨೩ ಲಾಭ, ಶಾಂತಿ, ಮಿತ್ರಭೇಟಿ.

ಮಿಥುನ- ಆರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ನಷ್ಟ, ವ್ಯಾಪಾರಕ್ಕೆ ಶತ್ರುಗಳಿಂದ ಧಕ್ಕೆ ಬರುತ್ತದೆ ಮಿತ್ರರಿಂದಲೂ ಬಂಧುಗಳಿಂದಲೂ ತಿರಸ್ಕಾರ, ಅಧಿಕಾರವರ್ಗದವರಿಂದ ಅವಮಾನ, ತಾ॥ ೧೮, ೨೦ ಸಾಧಾರಣ, ಲಾಭ, ಶಾಂತಿ

ಕಟಕ- ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಕಡಿಮೆ, ಧನಲಾಭ ಸಾಧಾರಣ, ಉದ್ಯೋಗ ವ್ಯವಹಾರಗಳಲ್ಲಿ ಪ್ರತಿಗಾಮಿ ಜನರಿಂದ ತೊಂದರೆ, ಬಂಧುಗಳೊಡನೆ ಕಲಹ ಮತ್ತು ತಿರಸ್ಕಾರ, ತಾ॥ ೧೯, ೨೦, ೨೩ ಪ್ರವಾಸ, ಲಾಭ, ಶಾಂತಿ.

ಸಿಂಹ- ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಅಧಿಕ, ವ್ಯಾಪಾರದಲ್ಲಿ ಪ್ರಗತಿ, ಉದ್ಯೋಗ ವ್ಯವಹಾರಗಳಲ್ಲಿ ಯಶ ಧಾರ್ಮಿಕ ಕಾರ್ಯಗಳಿಗಾಗಿ ಪ್ರವಾಸ ಮತ್ತು ಖರ್ಚು, ಪ್ರಮುಖ ವ್ಯ

ಯುಗಾದಿ ಹಬ್ಬಕ್ಕೆ
ಬೆಲ್ಲ ದೊರೆಯುತ್ತದೆ
ಟಿ. ಹೆಚ್. ಗೋವಿಂದಶೆಟ್ಟಿ
೧೬೦ ದೇವರಾಜ ಮಾರ್ಕೆಟ್, ಮೈಸೂರು
ಇವರಲ್ಲಿ ಬೆಳಿಗ್ಗೆ ೯ ರಿಂದ ೧ ಗಂಟೆ
ಮಧ್ಯಾಹ್ನ ೩ ರಿಂದ ೭ ಗಂಟೆವರೆಗೆ
ದರ ವೀಸೆ ೧ಕ್ಕೆ ೦-೧೨-೯
ಬುಧವಾರದಿಂದ ಜನ್ನೂರಿನ ಅಚ್ಚು ಬೆಲ್ಲ ಸಹ ದೊರೆಯುತ್ತದೆ

ಶ್ರುಗಳಿಂದ ಮನ್ನಣೆ, ತಾ॥ ... ಲಾಭ, ಶಾಂತಿ.

ಕನ್ಯಾ- ಆರೋಗ್ಯ ಸಾಧಾರಣ, ಲಾಭ ಕಡಿಮೆ, ಖರ್ಚು ಅಧಿಕ, ... ರದಿಂದ ಲಾಭ, ಶತ್ರುಗಳ ಕಿರುಕುಳ, ಮಿತ್ರರಿಂದ ತಿರಸ್ಕಾರ, ಆಕಸ್ಮಿಕ ... ದು, ಶುಭಕಾರ್ಯಗಳಿಗಾಗಿ ... ಪ್ರವಾಸವೂ ಆಗುವುದು, ತಾ॥ ... ೨೩ ಲಾಭ, ಶಾಂತಿ

ತುಲಾ- ಆರೋಗ್ಯ ಉತ್ತಮ, ... ಲಾಭ ಚೆನ್ನಾಗಿರುತ್ತದೆ, ಖರ್ಚು ... ಮೆ, ವ್ಯಾಪಾರದಲ್ಲಿ ಪ್ರಗತಿ, ... ಅಧಿಕಾರವರ್ಗದವರಿಂದಲೂ ಪ್ರ... ಶ್ರುಗಳಿಂದಲೂ ಮನ್ನಣೆ, ... ನ್ಮಾನ, ಮಂಗಳಕಾರ್ಯಗಳಿಗಾಗಿ ... ತಾ॥ ೨೦, ೨೨, ೨೩ ಖರ್ಚು, ...

ವೃಶ್ಚಿಕ- ಆರೋಗ್ಯ ಚೆನ್ನಾಗಿ... ನಲಾಭ ಕಡಿಮೆ, ಖರ್ಚು ಅಧಿಕ, ... ಪಾರದಲ್ಲಿ ಶತ್ರುಗಳಿಂದ ನಷ್ಟ, ... ಅನಾರೋಗ್ಯ, ಔಷಧೋಪಚಾರ... ಗಿ ವಿಶೇಷ ಖರ್ಚು, ಅನಿರೀಕ್ಷಿತ ... ಸದಿಂದ ಅಶಾಂತಿ, ತಾ॥ ೧೯, ... ಧಾರಣ ಲಾಭ, ಸಂತೋಷ

ಧನಸ್ಸು- ಆರೋಗ್ಯ ಸಾಧಾರಣ, ... ನಸಿಕ ಚಿಂತೆ ಹೆಚ್ಚು, ಧನಲಾಭ ... ಖರ್ಚು ಮಿತಿಮೀರುವುದು, ಪ್ರವಾಸ... ಅಪಘಾತ, ಶತ್ರುಗಳಿಂದ ವಿಶೇಷ ... ಳ, ತಾ॥ ೧೮, ೨೦, ೨೩ ಸಾಧಾ... ಶಾಂತಿ, ಮಿತ್ರಸಹಾಯ

ಮಕರ- ಆರೋಗ್ಯ ಉತ್ತಮ, ... ಲಾಭ ಚೆನ್ನಾಗಿರುತ್ತದೆ, ವ್ಯಾಪಾ... ಪ್ರಗತಿ, ಮಿತ್ರರಿಂದಲೂ ಬಂಧುಗಳಿಂ... ಸಹಾಯ, ಮಂಗಳ ಕಾರ್ಯಗಳಿಗಾ... ವಾಸ ಮತ್ತು ಖರ್ಚು, ತಾ॥ ೨೦, ... ಲಾಭ, ಶಾಂತಿ.

ಕುಂಭ- ಆರೋಗ್ಯ ಉತ್ತಮ, ಧ... ಭ ಸಾಧಾರಣ, ಖರ್ಚು ಅಧಿಕ, ವ್ಯಾ... ದಲ್ಲಿ ನಷ್ಟ, ಉದ್ಯೋಗ ವ್ಯವಹಾ... ಲ್ಲಿ ಶತ್ರುಗಳಿಂದ ಕಿರುಕುಳ ಹೆಚ್ಚು... ಪ್ರತಿಗಾಮಿ ಜನರಿಂದ ಪ್ರಗತಿಗೆ ಅಡ... ಅನಿರೀಕ್ಷಿತ ಪ್ರವಾಸದಿಂದ ಅಶಾಂ... ತ್ತು ದೇಹಾಲಸ್ಯ, ತಾ॥ ೧೯, ೨೦ ... ಭ, ಶಾಂತಿ.

ಮೀನ- ಆರೋಗ್ಯ ಚೆನ್ನಾಗಿರುತ್ತದೆ ... ನಲಾಭ ಉತ್ತಮ, ವ್ಯಾಪಾರದಲ್ಲಿ ಪ್ರ... ಧಾರ್ಮಿಕ ಕಾರ್ಯಗಳಿಗಾಗಿ ಖ... ಮಂಗಳ ಕಾರ್ಯಗಳಿಂದ ಸಂತೋಷ, ... ವಾಸದಿಂದ ಪ್ರಮುಖ ವ್ಯಕ್ತಿಗಳ ... ಮತ್ತು ಮಿತ್ರದರ್ಶನ, ತಾ॥ ೧೯, ... ೨೩ ಲಾಭ, ಶಾಂತಿ

Edited, printed and published by A. N. Nagaraja at the Sadhvi Pr... D. Subbiah Road, Mysore.

ಹೊಸ ಜವಳಿ
ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ
ಇಂದೇ ಭೇಟಿ ಕೊಡಿ!
ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!
ಬಿ. ಕೆಂಚಪ್ಪ ಸನ್ಸ್
ಜವಳಿ ಅಂಗಡಿ ... ಸಗರು ... ಟ್

ಕರ್ನಾಟಕದಲ್ಲೆಲ್ಲಾ ಅತ್ಯಂತ ವಿಜಯ ಹೊಂದಿರುವ ಮೈಸೂರು ಎಸ್. ಎಸ್. ನಾಟಕ ಮಂಡಳಿಯವರ ಕನ್ನಡ ಚಿತ್ರ
★ ಹರಿಶ್ಚಂದ್ರ ★
(ಹೊಸ ಕಾಪಿ)
ಅನೇಕ ಭಾಗಗಳಲ್ಲಿ ವಿವಿಧ ವರ್ಣಗಳಿಂದ ಚಿತ್ರಿಸಿರುತ್ತೆ
ಪಾತ್ರ:- ಸುಬ್ಬಯ್ಯ ನಾಯ್ಡು, ಲಕ್ಷ್ಮೀಬಾಯಿ, ನಾಗೇಂದ್ರ ರಾವ್,
14-3-47 ರಿಂದ ಪ್ರತಿ ದಿನ ಮೂರು ಆಟಗಳು
ಮೈಸೂರು ಶ್ರೀ ಗಣೇಶ ಟಾಕೀಸಿನಲ್ಲಿ
[Krishna Pictures Release

ರಿಜಿ. ನಂ. ೮೪೨ ॥ ವಂದೇ ಮಾತರಂ ॥ ಈದಿನದ ಪತ್ರಿಕೆ ೩ ಕಾಸು



ಸಂಪುಟ ೫] ಮಂಗಳವಾರ ೮—೩—೪೭ [ಸಂಚಿಕೆ ೧೮೭

ಕಾಂಗ್ರೆಸ್ ಅಧ್ಯಕ್ಷರಿಗೆ ಕೊಚ್ಚಿ ರಾಜರ ಕಾಣಿಕೆ

ಗಡಿನಾಡಿನಲ್ಲಿ ಶಾಂತಿ

ಗಡಿನಾಡಿನಲ್ಲಿ ಶಾಂತಿ ನೆಲೆಸಿರುವುದಾಗಿ ಪ್ರಧಾನಿ ಡಾ॥ ಖಾನ್ ಸಾಹೇಬರು ಖಾನ್ ಅಬ್ದುಲ್ ಗಫಾರ್ ಖಾನರಿಗೆ ತಂತಿ ಕಳುಹಿಸಿದ್ದಾರೆ. ಸುಪ್ತರ್ ಡಾಯಿಪ್ ಮತ್ತು ಪೀರ್ ಎಂಬ ಗ್ರಾಮಗಳಲ್ಲಿ ಒಟ್ಟು ೯೦ ಜನ ಹಿಂದೂ ಮತ್ತು ಸಿಖ್ಖರನ್ನು ಬಲಾತ್ಕಾರವಾಗಿ ಮತಾಂತರಗೊಳಿಸಲಾಗಿದೆಯೆಂದು ವರದಿಯಾಗಿದೆ.

ಮದ್ರಾಸಿಗೆ ಮತ್ತೆ ರಾಜಾಜಿ

ಮದ್ರಾಸ್ ಮಂತ್ರಿಮಂಡಲದ ಬಿಕ್ಕಟ್ಟನ್ನು ನಿವಾರಿಸಲು ನಾಯಕರುಗಳು ಬಹಳ ಪ್ರಯತ್ನ ಪಡುತ್ತಿದ್ದಾರೆ. ಶ್ರೀ॥ ರಾಜಗೋಪಾಲಾಚಾರಿಯವರು ಮತ್ತೆ ಮದ್ರಾಸಿನ ಕಡೆಗೆ ಪ್ರಧಾನಿ ಪಟ್ಟ ವಹಿಸುವಂತೆ ಒತ್ತಾಯ ಮಾಡಲ್ಪಡುತ್ತಿದ್ದಾರೆ. ಅವರು ಇದಕ್ಕೆ ಒಪ್ಪಿದರೆ ಶ್ರೀ॥ ಪ್ರಕಾಶಂ ರವರನ್ನು ಉಪ ಪ್ರಧಾನಿಗಳನ್ನಾಗಿಯೂ, ಡಾ॥ ಪಟ್ಟಾಭಿ ಸೀತಾರಾಮಯ್ಯನವರನ್ನು ಮಂತ್ರಿಗಳನ್ನಾಗಿಯೂ ತೆಗೆದುಕೊಂಡು ಬಲವಾದ ಮಂತ್ರಿಮಂಡಲವನ್ನು ರಚಿಸುವ ಆಲೋಚನೆ ನಡೆಯುತ್ತಿದೆಯೆಂದು ವರದಿಯಾಗಿದೆ. ಇದು ಸಫಲವಾದಲ್ಲಿ ಕೇಂದ್ರ ಸರ್ಕಾರಕ್ಕೆ ರಾಜಾಜಿಯವರ ಸ್ಥಾನದಲ್ಲಿ ಡಾ॥ ಬಿ. ಸಿ. ರಾಯರನ್ನು ತೆಗೆದುಕೊಳ್ಳಬಹುದೆಂದು ಊಹಿಸಲಾಗಿದೆ.

ಆಕ್ರಮಣ ಮಾಡುವುದೇ ಅಮೆರಿಕದ ನೀತಿ

ಗ್ರೀಸ್ ಮತ್ತು ಟರ್ಕಿಗಳಿಗೆ ಸಾಲ ಕೊಡುವುದನ್ನು ನೋಡಿದರೆ ಅವರ ಆಕ್ರಮಣದ ನೀತಿಯು ಬಹಿರಂಗವಾಗಿ ವ್ಯಕ್ತವಾಗುತ್ತದೆ. ಇದು ಖಂಡನೀಯವಾದುದು. ಟರ್ಕಿಯು ಅಮೇರಿಕದಿಂದ ಸಾಲ ತೆಗೆದುಕೊಳ್ಳುವುದರಿಂದ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದು- ಎಂದುದಾಗಿ ಹೇಳಿ, ಮಾಸ್ಕೋ ರೇಡಿಯೋವು ಅಮೇರಿಕದ ಈ ಧೋರಣೆಯನ್ನು ತೀವ್ರವಾಗಿ ಖಂಡಿಸಿದೆ.

ಕೊಚ್ಚಿ ಮಹಾರಾಜರೊಡನೆ ಕೃಪಲಾನಿಯವರ ಭೇಟಿ

ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಮೊನ್ನೆ ಬೆಳಗ್ಗೆ ಎರ್ನಾಕುಲಂನ್ನಲ್ಲಿ ಕೊಚ್ಚಿ ಮಹಾರಾಜರನ್ನು ಭೇಟಿ ಮಾಡಿ, ಅರ್ಧ ಗಂಟೆ ಕಾಲ ಮಾತುಕತೆ ನಡೆಸಿದರು.

ಚಾಮರಾಜನಗರದ ವೋಟರು ಮಹಾಶಯರಲ್ಲಿ ವಿಜ್ಞಾಪನೆ

1947 ನೇ ಇಸವಿ ಏಪ್ರಿಲ್ ಮಾಹೆ 28 ನೇ ತಾರೀಖು ನಡೆಯುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಚಾಮರಾಜನಗರದ ತಾಲ್ಲೋಕಿನಿಂದ ನಾನೊಬ್ಬ ಸಂಸ್ಥಾನ ಕ್ಕೊ ಪ್ರಜಾ ಪಕ್ಷಕ್ಕೂ ಮಧ್ಯವರ್ತಿಗಳಾದ ಗ್ರಾಮಾಧಿಕಾರಿಗಳ ಸಂಘದಿಂದ ಉಮೇದುವಾರನಾಗಿ ನಿಂತಿರುತ್ತೇನೆ. ಪ್ರಜಾ ಸೇವೆ ಮಾಡಲು ಅರ್ಹನೆಂದು ತಾವುಗಳು ಪರಿಗಣಿಸುವುದಾದರೆ ತಮ್ಮ ಅಮೂಲ್ಯವಾದ 3 ವೋಟುಗಳಲ್ಲಿ ಒಂದು ವೋಟನ್ನು "ಘಂಟೆ" ಗುರ್ತಿನ ನನಗೆ ಕೊಟ್ಟು ಮುಂಬರಂಗಲು ದಯಾಳುಗಳಾಗಬೇಕಾಗಿ ಕೋರುತ್ತೇನೆ.

ಎ. ಶ್ರೀನಿವಾಸಮೂರ್ತಿ,
ಹೊನ್ನಹಳ್ಳಿ ಫಿರ್ಕಾ ಶ್ಯಾನುಭೋಗ್.

ಕಾಂಗ್ರೆಸ್ ಅಧ್ಯಕ್ಷರಿಗೆ ೩೦ ಸಾವಿರ ರೂ. ಕಾಣಿಕೆ

ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರನ್ನು ಕೊಚ್ಚಿ ರಾಜರು ಎರ್ನಾಕುಲಮ್ಮಿನ ಬೆಟ್ಟದ ಅರಮನೆಗೆ ಮೊನ್ನೆ ಕರೆಸಿಕೊಂಡು ಸತ್ಕರಿಸಿದರು. ಈ ಸಮಯದಲ್ಲಿ ದಿವಾನರೂ, ಇತರ ಸಚಿವರುಗಳೂ ಹಾಜರಿದ್ದರು. ಅರ್ಧ ಘಂಟೆಯ ಕಾಲ ಸಂಭಾಷಣೆ ನಡೆಸಿ ಮಹಾರಾಜರು ಕಾಂಗ್ರೆಸ್ ಕೆಲಸ ಕಾರ್ಯಗಳಿಗಾಗಿ ೩೦ ಸಹಸ್ರ ರೂ. ಗಳ ಚೆಕ್ಕೊಂದನ್ನು ಅಧ್ಯಕ್ಷ ಕೃಪಲಾನಿಯವರಿಗೆ ಸಲ್ಲಿಸಿದರು. ಈ ರೀತಿ ಕಾಂಗ್ರೆಸ್ ನಿಧಿಗೆ ಸಹಾಯ ಮಾಡಿರುವ ರಾಜರುಗಳಲ್ಲಿ ಇವರೇ ಮೊದಲನೆಯವರೆಂದೂ, ಪ್ರಜೆಗಳ ಕ್ಷೇಮ ಸಾಧನೆ ಬಗ್ಗೆ ಮಹಾರಾಜರಿಗಿರುವ ಆಸಕ್ತಿಯನ್ನು ಇದು ಪ್ರತಿಬಿಂಬಿಸುವುದೆಂದೂ ಕೃಪಲಾನಿಯವರು ಹೇಳಿರುವರು.

ಪಂಜಾಬಿಗೆ ಪರಿಹಾರ

ಡಾ॥ ನೆಹರೂರವರು ಪಂಜಾಬಿನ ಪ್ರವಾಸವನ್ನು ಮುಗಿಸಿಕೊಂಡು ದಿಲ್ಲಿಗೆ ಹಿಂತಿರುಗಿದ್ದಾರೆ. ದಿಲ್ಲಿನ ಗಲಭೆಗಳು ಇನ್ನು ಕೆಲವೇ ದಿನಗಳಲ್ಲಿ ಸಂಪೂರ್ಣವಾಗಿ ನಿಂತು ಹೋಗುವುದಾಗಿ ಅವರು ತಿಳಿಸಿದ್ದಾರೆ. ಪಂಜಾಬಿನ ಗಲಭೆಗಳಲ್ಲಿ ಕಷ್ಟನಷ್ಟಗಳಿಗೆ ಈಡಾದವರ ಸಹಾಯಾರ್ಥವಾಗಿ ಒಂದು ಕೋಟಿ ರೂಪಾಯಿ ಧನ ಸಹಾಯ ಬೇಕೆಂದು ಹಿಂದೂ ಮತ್ತು ಸಿಖ್ ಪರಿಹಾರ ಸಮಿತಿಯು ತಿಳಿಸಿದೆ. ಉತ್ತರ ಮತ್ತು ಪಶ್ಚಿಮ ಪಂಜಾಬಿನಲ್ಲಿ ವಾತಾವರಣವು ಬಿಸಿಯಾಗಿಯೇ ಇದೆ.

ಪಂಜಾಬಿನ ದುರ್ಘಟನೆ-ಗೀಡಾದವರಿಗೆ ಪರಿಹಾರ ಒದಗಿಸುವ ಸಲುವಾಗಿ ಕೇಂದ್ರ ಸರ್ಕಾರದ ಗೃಹ ಸಚಿವರಾದ ಸರ್ದಾರ್ ಪಟೇಲರೂ ಸಹ ಒಂದು ಮನವಿಯನ್ನು ಹೊರಡಿಸಿ ಎಲ್ಲರೂ ಉದಾರವಾಗಿ ಸಹಾಯ ಮಾಡಬೇಕೆಂದು ಕೋರಿದ್ದಾರೆ.

ಹೋಟೇಲು ಕೆಲಸಗಾರರ ಸಭೆ

ರಾಜಧಾನಿಯ ಹೋಟೇಲು ಕೆಲಸಗಾರರ ಸಭೆಯು ನಿನ್ನೆ ಶ್ರೀ॥ ಎಂ. ಎ. ಜೋರ ಯವರ ಅಧ್ಯಕ್ಷತೆಯಲ್ಲಿ ಸೇರಿ, ಯುಗಾದಿ ಹಬ್ಬದ ದಿನ ಹೋಟೇಲುಗಳಿಗೆ ರಜಾ ಕೊಡಬೇಕೆಂದೂ, ಕೆಲಸಗಾರರ ರಜಾ ಮತ್ತು ಸಂಬಳಗಳನ್ನು ಸರಿಯಾಗಿ ನಿಗದಿ ಮಾಡಬೇಕೆಂದೂ, ದಿನಕ್ಕೆ ೯ ಘಂಟೆಗಿಂತ ಹೆಚ್ಚಿಗೆ ಕೆಲಸವನ್ನು ತೆಗೆದುಕೊಳ್ಳದಂತೆ ವ್ಯವಸ್ಥೆ ಮಾಡಬೇಕೆಂದೂ ಮಾಲೀಕರುಗಳನ್ನು ಪ್ರಾರ್ಥಿಸುವ ನಿರ್ಣಯಗಳನ್ನು ಮಾಡಿತು.

ನಾಳೆ ರಾಷ್ಟ್ರಪತಿ ಕೃಪಲಾನಿಯವರ ಆಗಮನ

ಮೈಸೂರು ೧೮

ಆಚಾರ್ಯ ಕೃಪಲಾನಿಯವರು ನಾಳೆ ಬೆಳಗ್ಗೆ ಕಲ್ಲಿಕೋಟೆಯಿಂದ ಹೊರಟು ಗುಂಡಲುಪೇಟೆ, ನಂಜನಗೂಡು ಮಾರ್ಗವಾಗಿ ಮಧ್ಯಾಹ್ನ ಎರಡು ಗಂಟೆಗೆ ರಾಜಧಾನಿಗೆ ದಯಮಾಡಿಸುವರು. ಅವರನ್ನು ಕರೆತರಲು ಮೈಸೂರು ಕಾಂಗ್ರೆಸ್ ನಾಯಕರಾದ ಶ್ರೀಗಳು ಎಸ್. ನಿಜಲಿಂಗಪ್ಪ ಮತ್ತು ಎಸ್. ಚನ್ನಯ್ಯನವರು ಈ ದಿನ ಕಲ್ಲಿಕೋಟೆಗೆ ತೆರಳಿರುವರು. ರಾಷ್ಟ್ರಪತಿಗಳ ಕಾರ್ಯಕ್ರಮ ಈ ರೀತಿ ಇದೆ:—

ಮಧ್ಯಾಹ್ನ ಎರಡು ಗಂಟೆಗೆ ರಾಜಧಾನಿಯ ದಕ್ಷಿಣ ಭಾಗದ ಉಕ್ಕಡದ ಬಳಿ ಸ್ವಾಗತ; ನಾಲ್ಕು ಗಂಟೆಗೆ ಕಾಂಗ್ರೆಸ್ ಕಛೇರಿ ಕಾಂಗ್ರೆಸ್ ಕೆಲಸಗಾರರನ್ನು ಕುರಿತು ಭಾಷಣ; ಐದೂವರೆ ಗಂಟೆಗೆ ಕಸ್ತೂರಿಬಾಯಿ ಶಿಬಿರಕ್ಕೆ ಭೇಟಿ; ಆರೂವರೆ ಗಂಟೆಗೆ ಪತ್ರಿಕೋದ್ಯೋಗಿಗಳ ಸಂಘಕ್ಕೆ ಭೇಟಿ, ಏಳು ಗಂಟೆಗೆ ಟೌನ್‌ಹಾಲಿನಲ್ಲಿ ಸಾರ್ವಜನಿಕ ಬಹಿರಂಗ ಸಭೆ; ಎಂಟು ಗಂಟೆಗೆ ಕಾಲೇಜು ವಿಭಾಗದ ಮೈದಾನದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ಸಿನ ಬಹಿರಂಗ ಸಭೆಯಲ್ಲಿ ವಿದ್ಯಾರ್ಥಿಗಳೆಲ್ಲರೂ ಬರಬೇಕಾಗಿ ಕಾರ್ಯದರ್ಶಿಗಳು ಕೋರಿರುತ್ತಾರೆ.

೨೦ ನೇ ತಾ॥ ಗುರುವಾರ ಬೆಳಗ್ಗೆ ೮ ಗಂಟೆಗೆ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಭೆ; ಅನಂತರ ಶ್ರೀರಂಗಪಟ್ಟಣದ ಮಾರ್ಗವಾಗಿ ಬೆಂಗಳೂರಿಗೆ ಪ್ರಯಾಣ.

ಶಿಕ್ಷಣ ಶಿಬಿರದಲ್ಲಿ

ಆಚಾರ್ಯ ಕೃಪಲಾನಿಯವರು ಬೇಡವಾಡಿ ಕಸ್ತೂರಿಬಾಯಿ ಶಿಬಿರದ ವಿದ್ಯಾರ್ಥಿನಿಯರಿಗೆ ಹಿತೋಕ್ತಿಗಳನ್ನು ಹೇಳುವರು. ಶ್ರೀಮತಿ ಸುಚೇತಾ ಕೃಪಲಾನಿಯವರು ಅಧ್ಯಕ್ಷತೆ ವಹಿಸುವರು. ಸರ್ವರೂ ಬರಮಾಡಿಸಬೇಕಾಗಿ ಶ್ರೀಮತಿ ಯಶೋಧರಾ ದಾಸಪ್ಪನವರು ಕೋರಿರುತ್ತಾರೆ.

ಜಿಲ್ಲಾ ಕಾಂಗ್ರೆಸ್ ಸಮಿತಿಯವರು ಮೈಸೂರು ಗಡಿಯಲ್ಲಿ ಸ್ವಾಗತವನ್ನು ನೀಡುವರು. ಗುಂಡ್ಲುಪೇಟೆ ಮತ್ತು ನಂಜನಗೂಡಿನಲ್ಲಿ ಸತ್ಕಾರ ಮತ್ತು ಬೇಗೂರಿನಲ್ಲಿ ಸಭೆ ಜರುಗುವುವು. ಜಿಲ್ಲಾ ಕಾಂಗ್ರೆಸ್ ಸದಸ್ಯರೆಲ್ಲರೂ ಸಹಕರಿಸಬೇಕಾಗಿ ಕೋರಲಾಗಿದೆ.

ಶ್ರೀ ಕೆ. ಸಿ. ರೆಡ್ಡಿಯವರು ಎಚ್. ಸಿ. ದಾಸಪ್ಪನವರು ಕಲ್ಲಿಕೋಟೆಯಲ್ಲಿ ರಾಷ್ಟ್ರಪತಿಯವರನ್ನು ಭೇಟಿ ಮಾಡಲಿರುವರೆಂದು ತಿಳಿದುಬಂದಿದೆ.

ಬ್ರಿಟಿಷರು ಹೋದ ಮೇಲೆ ತಿರುವಾಂಕೂರಿಗೆ ಸ್ವಾತಂತ್ರ್ಯ

ಬ್ರಿಟಿಷರು ಭಾರತವನ್ನು ಸ್ವಜನಿಗಳಿಗೆ ಒಪ್ಪಿಸಿ ಜೂನ್ ತಿಂಗಳಿಗೆ ತೊರೆದು ಹೋದ ಮೇಲೆ, ತಿರುವಾಂಕೂರು ಸಂಸ್ಥಾನವು ಸ್ವತಂತ್ರವಾಗಿರಲು ನಿಶ್ಚಯಿಸಿದೆಯೆಂದು ಅಲ್ಲಿನ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ತಿಳಿಸಿದ್ದಾರೆ. ಆದರೆ ನಂತರ ತಿರುವಾಂಕೂರು ಸ್ವತಂತ್ರ ರಾಜ್ಯವಾಗಿ ಬ್ರಿಟಿಷ್ ಸರ್ಕಾರದೊಡನೆ ವ್ಯವಹರಿಸುತ್ತಿತ್ತು, ಅದೇ ರೀತಿ ಇತರ ದೇಶಗಳೊಡನೆ ಸ್ವತಂತ್ರವಾಗಿ ಇತರ ಸರ್ಕಾರಗಳೊಡನೆ ವ್ಯವಹರಿಸುವುದು-ಎಂದು ಹೇಳಿದ್ದಾರೆ.

೭೦೦೦ ಬೇಳೆ ಮೂಟೆಗಳ ಜಪ್ತಿ

ಮಧುರ ನಗರದಲ್ಲಿ ಕಾಳಸಂತೆ ನಿರೋಧಕ್ಕಾಗಿ ನೇಮಿಸಲಾಗಿರುವ ವಿಶೇಷ ಪೋಲೀಸ್ ದಳದವರು ೭ ಸಹಸ್ರ ಮೂಟೆ ಬೇಳೆಯನ್ನು ಜಪ್ತಿ ಮಾಡಿ ವಶಪಡಿಸಿಕೊಂಡಿರುತ್ತಾರೆ. ಇದರ ಬೆಲೆ ೫ ಲಕ್ಷ ರೂ. ಗಳಾಗುತ್ತವೆ.

ಮದ್ರಾಸ್ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ೪೭,೮೦೦ ಮಂದಿ

ಕಳೆದ ಸಾಲಿಗಿಂತ ೧೦ ಸಹಸ್ರ ಮಂದಿ ಹೆಚ್ಚು ವಿದ್ಯಾರ್ಥಿಗಳು ಈ ಸಲ ಮದ್ರಾಸ್ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತಿದ್ದಾರೆ. ಮೊನ್ನೆಯಿಂದ ೫೧೦ ಕೇಂದ್ರಗಳಲ್ಲಿ ಪರೀಕ್ಷೆ ಆರಂಭವಾಗಿ ೪೭,೮೦೦ ಮಂದಿ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಭಾಗವಹಿಸಿದ್ದಾರೆ. ಇದು ಹಿಂದಿನ ದಾಖಲೆಯನ್ನು ಮೀರಿಸಿದೆ.

ನಿರುದ್ಯೋಗಿಗಳಿಗೆ ಸರ್ಕಾರಿ ಉದ್ಯೋಗ

ಸರ್ಕಾರದ ವಿವಿಧ ಇಲಾಖೆಗಳು ಉದ್ಯೋಗಿಗಳಿಗೆ ತಿಳಿಯದು ಸೇರಿಸಿ ಎಲ್ಲ ಅವಕಾಶಗಳನ್ನೂ, ಅನುಕೂಲಗಳನ್ನೂ ಮಾಡಿಕೊಡಲಾಗುವುದು. ಖಾಲಿ ಜಾಗಗಳಿಗೆ ಅರ್ಹರಾದ ಹಳೇ ಸೈನಿಕರನ್ನು ಪುನಃಪ್ರತಿಷ್ಠಾಪಿಸಲಾಗುವುದು-ಎಂದು ಮದ್ರಾಸಿನ ಪ್ರಧಾನಿ ಶ್ರೀ ಟಿ. ಪ್ರಕಾಶಂರವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಅಟಕ್ ಜಿಲ್ಲೆಯ ಗ್ರಾಮಗಳಿಂದ ಎಲ್ಲ ಹಿಂದೂಗಳ ರವಾನೆ

ಪಂಜಾಬಿನ ಗಲಭೆಯಲ್ಲಿ ತೀಕ್ಷ್ಣವಾಗಿ ತುತ್ತಾದ ಅಟಕ್, ರಾವಲ್ಪಿಂಡಿ ಮತ್ತು ಪಶ್ಚಿಮ ಭಾಗಗಳಲ್ಲಿ ದಿನಕ್ಕೆ ೩ ಸಹಸ್ರ ಹಿಂದೂ ನಿರಾಶ್ರಿತರು ಝೀಲಂ, ಚಕ್ವಾಲ್ ಮತ್ತು ಮುಕ್ತ ಮತ್ತಿತರ ಸ್ಥಳಗಳಿಂದ ಬರುತ್ತಿದ್ದು, ಹಳ್ಳಿಗಳ ಎಲ್ಲ ಹಿಂದುಗಳನ್ನು ರಕ್ಷಣೆಗಾಗಿ ಬೇರೆ ಬೇರೆ ಕಡೆಗಳಿಗೆ ರವಾನೆ ಮಾಡಲಾಗಿದೆ. ಅಟಕ್ ಜಿಲ್ಲೆಯ ಗ್ರಾಮಗಳ ಅಂಗಡಿಗಳೆಲ್ಲಾ ಲೂಟಿಯಾಗಿವೆ.

ಪ್ರಾಂತ್ಯಗಳಲ್ಲಿ ಮಿಶ್ರ ಮಂತ್ರಿಮಂಡಲ

ಅವಿಭಕ್ತ ಭಾರತದ ಸಮಸ್ಯೆಗಳು ಪರಿಹಾರವಾಗುವವರೆಗೆ ಒಂದಾಗಿ ಒಂದು ಮಿಶ್ರ ಮಂತ್ರಿಮಂಡಲದ ಸ್ಥಾಪನೆ ಸಾಧ್ಯವಿಲ್ಲವೆಂದೂ, ಭವಿಷ್ಯದಲ್ಲಿ ಎಲ್ಲ ಪ್ರಾಂತ್ಯಗಳಲ್ಲಿಯೂ ಸಂಯುಕ್ತ ಮಂತ್ರಿಮಂಡಲಗಳೇ ಇರಬೇಕಾಗುವುವೆಂದು ಮಾ. ಬ. ಗೋವಿಂದ ವಲ್ಲಭ ಪಂತ್‌ರವರು ಪ್ರಕಟಿಸಿದ್ದಾರೆ.

ಸಾಧ್ವಿ

ತಾ|| ೧೮-೩-೪೭ ಮಂಗಳವಾರ

ಪಂಜಾಬಿನ ಪಕ್ಷಪಾತ

ಅಖಿಲ ಭಾರತ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ಭೋಪಟ್‌ಕರ್ ಮತ್ತು ಕಾರ್ಯದರ್ಶಿಗಳಾದ ಅಶುತೋಷ ಲಹರಿಯವರು ಇನ್ನು ಆರು ತಿಂಗಳ ಕಾಲ ಪಂಜಾಬಿಗೆ ಬರಲಾಗದೆಂಬ ಗಡೀಪಾರು ಆಜ್ಞೆಯನ್ನು ಅಲ್ಲಿನ ಸರ್ಕಾರದವರು ಜಾರಿ ಮಾಡಿದ್ದಾರೆ. ಅಲ್ಲಿ ನಡೆಯುತ್ತಿರುವ ಅತ್ಯಾಚಾರಗಳನ್ನು ಸ್ವತಃ ಪರಿಶೀಲಿಸಿ ಪರಿಹಾರವನ್ನು ನೀಡಲು ಅವರು ಅಲ್ಲಿಗೆ ಹೋಗುತ್ತಿದ್ದರು. ದಾರಿಯಲ್ಲಿಯೇ ಪ್ರತಿಬಂಧ ಆಜ್ಞೆಯು ಜಾರಿಯಾಯಿತು. ಪಂಜಾಬ್ ಸರ್ಕಾರವು ಹಿಂದೂ ಮಹಾಸಭೆಯ ಈ ನಾಯಕರುಗಳ ಮೇಲೆ ಹಾಕಿರುವ ನಿರ್ಬಂಧವು ಅತ್ಯಂತ ಅನುಚಿತವಾದುದು. ಅಲ್ಲಿ ನಡೆಯುತ್ತಿರುವ ಘೋರ ಘಟನೆಗಳನ್ನು ಕಣ್ಣಾರೆ ಕಂಡು ಕಷ್ಟ ಪಡುತ್ತಿರುವ ಜನರಿಗೆ ನೆರವು ನೀಡಲು ಬೇರೆ ನಾಯಕರು ಅಲ್ಲಿಗೆ ಹೋಗುವುದು ಸಹಜವಾಗಿಯೇ ಇದೆ. ಮುಸ್ಲಿಂ ಲೀಗಿನ ಮುಖಂಡರುಗಳು ಅಲ್ಲಿಗೆ ಧಾರಾಳವಾಗಿ ಹೋಗಿ ಬರುತ್ತಿದ್ದಾರೆ. ಕೇಂದ್ರ ಸರ್ಕಾರದ ಲೀಗ್ ಮಂತ್ರಿಗಳೂ ಸಹ ಹೋಗುತ್ತಿರುವರು. ಹೀಗಿದ್ದರೂ ಮೇಲ್ಕಂಡ ಇಬ್ಬರು ಮಹನೀಯರ ಪ್ರವೇಶಕ್ಕೆ ಅವಕಾಶ ಕೊಡದಿರುವುದು ಸರಿಯಲ್ಲ.

ಪಂಜಾಬಿನಲ್ಲಿ ಈಗ ಮಿಶ್ರ ಮಂತ್ರಿಮಂಡಲವೂ ಇಲ್ಲ, ಲೀಗ್ ಮಂತ್ರಿಮಂಡಲವೂ ಇಲ್ಲ. ಗೌರ್ನರರ ಆಡಳಿತವು ಇರುತ್ತದೆ. ಇದು ಯಾವ ಪಕ್ಷಕ್ಕೂ ಸೇರಿದುದಲ್ಲ. ಆದರೂ ಒಂದು ಸಂಸ್ಥೆಯ ನಾಯಕರಿಗೆ ಅಡ್ಡಿ ಪಡಿಸಿರುವುದು ಪಕ್ಷಪಾತದ ವರ್ತನೆಯೇ ಸರಿ. ಪಂಜಾಬಿನಲ್ಲಿ ಈಗ ನಡೆಯುತ್ತಿರುವ ಅತ್ಯಾಚಾರಗಳಲ್ಲಿ ಅಲ್ಲಿನ ಸರ್ಕಾರದವರ ಕೈವಾಡವೂ ಇರುವುದೆಂಬ ಪುಕಾರುಗಳು ಈಚೀಚೆಗೆ ಕೇಳಿಬರುತ್ತಿವೆ. ಅವನ್ನು ಇಂತಹ ಪ್ರವರ್ತನೆಗಳು ಸಮರ್ಥಿಸುತ್ತವೆ.

ಅಪಾರವಾದ ಕಷ್ಟ ಪರಂಪರೆಗಳಿಗೆ ಈಡಾಗಿರುವವರಿಗೆ ಸಹಾಯವನ್ನು ನೀಡುವುದು ಸಕಲರ ಕರ್ತವ್ಯ. ಎಲ್ಲ ಪಕ್ಷಗಳ ಮತ್ತು ಗುಂಪುಗಳ ಸಹಕಾರವನ್ನೂ ಅಲ್ಲಿನ ಸರ್ಕಾರದವರು ತೆಗೆದುಕೊಳ್ಳುವುದು ಉಚಿತವಾಗಿದೆ. ಅದು ಬಿಟ್ಟು ಒಂದು ಗುಂಪಿನ ನಾಯಕರನ್ನು ತಡೆಗಟ್ಟುವುದು ತರವಲ್ಲ. ಈಗಲೂ ಅವರ ಮೇಲೆ ಹಾಕಿರುವ ಅಡ್ಡಿಯನ್ನು ತೆಗೆದುಹಾಕಿ, ಆ ಪ್ರಾಂತ್ಯದಲ್ಲಿ ಶಾಂತಿ ಸೌಹಾರ್ದಗಳು ನೆಲಸಲು ಪಂಜಾಬ್ ಸರ್ಕಾರದವರು ಏರ್ಪಡಿಸುವುದು ಯುಕ್ತವಾಗಿರುತ್ತದೆ.

Edited, printed and published by A. R. Nagarajan at the Sadhvi Press D. Subbiah Road, Mysore

ಕುಮಾರಪ್ಪನವರ ಭಾಷಣ

ಮೈಸೂರು ೧೮

ನಾಳೆ ಸಂಜೆ ೫-೩೦ ಗಂಟೆಗೆ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಆಶ್ರಯದಲ್ಲಿ ಟೌನ್ ಹಾಲಿನಲ್ಲಿ ಶ್ರೀ ಜೆ. ಸಿ. ಕುಮಾರಪ್ಪನವರು ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ.

‡ ಪಂಜಾಬ್ ವಿಭಜನೆ ಬಗ್ಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಮಾಡಿರುವ ನಿರ್ಣಯವು ಸರಿಯಲ್ಲವೆಂದು ಶ್ರೀ|| ಶರತ್ ಚಂದ್ರ ಬೋಸರು ಹೇಳಿದ್ದಾರೆ.

ಹಿಂದೂ ಮಹಾಸಭಾ ಕಾರ್ಯದರ್ಶಿಗಳ ದಸ್ತಗಿರಿ

ಪಂಜಾಬ್ ಪ್ರಾಂತ್ಯದೊಳಕ್ಕೆ ಕಾಲಿಡಕೂಡದೆಂದು ಗಡೀಪಾರು ಆಜ್ಞೆಗೆ ಗುರಿಯಾಗಿದ್ದ ಅಖಿಲ ಭಾರತ ಹಿಂದೂ ಮಹಾಸಭಾ ಪ್ರಧಾನ ಕಾರ್ಯದರ್ಶಿ ಶ್ರೀ ದೇಶಪಾಂಡೆಯವರ ಆಜ್ಞೆಯನ್ನು ಉಲ್ಲಂಘಿಸಿ ಅಲ್ಲಿಗೆ ಹೋದರೆಂಬ ಕಾರಣದ ಮೇಲೆ ನಿನ್ನೆ ಅವರನ್ನು ಲಾಹೋರಿನಲ್ಲಿ ದಸ್ತಗಿರಿ ಮಾಡಲಾಯಿತು

ರಾಜಕಮಲ

೧೩-೩-೪೭ ರಿಂದ ೫ ನೇ :

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕಪಾಲೀ[ಲಾ]

(ಕನ್ನಡ

ಇಂಪಾದ ಗಾನಗಳು! ಸೊಂಪಾದ ನೃ[ತ್ಯ]ಗಳು!! ಮನರಂಜಕವಾದ ದೃಶ್ಯ[ಗಳು]

ಇವೆಲ್ಲವನ್ನೂ ಇಂದೇ ನೋಡಿ

ಮೈಸೂರು ಸ್ಟೇಟ್ ರೈಲ್ವೆ

ಗೂಡ್ಸ್ ದರಗಳನ್ನು ಹೆಚ್ಚಿಸಲಾಗಿದೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—೧೯೪೭ ನೇ ಏಪ್ರಿಲ್ ೧ ರಿಂದ ಲೋಕಲ್ ಬುಕ್ಕಿಂಗಿನಲ್ಲಿ ಗೂಡ್ಸ್ ಟ್ರಾಫಿಕ್‌ಗೆ ಈಗ ಇರುವ ಸ್ಪೆಷಲ್ ದರಗಳನ್ನು ಸಾಮಾನ್ಯವಾಗಿ ಹೆಚ್ಚಿಸಲಾಗುತ್ತದೆ.

ಅದೇ ತಾರೀಖಿನಿಂದ, ಕೆಲವು ಸಾಮಾನುಗಳಿಗೆ ಎಂ. ಎಸ್. ರೈಲ್ವೆಯವರು ಕೆಳದರ್ಜೆಯ ಗೂಡ್ಸ್ ವಿಲೇವಾರಿ ಸ್ಪೆಷಲ್ ರೀತಿಯಲ್ಲಿ ತಿಳಿಸಿದ ದರಗಳನ್ನು ಕೆಳಗೆ ಕಾಣಿಸಿ ಬದಲಾಯಿಸಲಾಗಿದೆ:-

	ಸಾಮಾನಿನ ಹೆಸರು	ಈಗಿರುವ ವಿಲೇವಾರಿ ವಿವರ		1947 ನೇ ಏಪ್ರಿಲ್ 1 ರಿಂದ ಜಾರಿಗೆ ಬರುವ ವಿಲೇವಾರಿ ವಿವರ	
		ರೈಲ್ವೆ ರಿಸ್ಕ್ ಮೇಲೆ	ಮಾಲೀಕರ ರಿಸ್ಕ್ ಮೇಲೆ	ರೈಲ್ವೆ ರಿಸ್ಕ್ ಮೇಲೆ	ಮಾಲೀಕರ ರಿಸ್ಕ್ ಮೇಲೆ
1.	ಬೀಡಿ ಎಲೆಗಳು	4 - A Class	4th Class W - 81	4 - A Class	—
2	ಮೆಣಸಿನ ಕಾಯಿ	4th Class	2nd Class W 100 : L	2 - B Class W - 100 : L	—
3.	ಸಿಪ್ಪೆ ಸಮೇತ ಇರುವ ಕಡಲೆಕಾಯಿ	2 - C Class	2nd Class W-200 : MG: L W - 160 : NG:L	2-C Class	—
4.	ಕೊಂಗಲು, ಚರ್ಮ ಮತ್ತು ಕೂದಲಿರುವ ಚರ್ಮ, ಸಾಧಾರಣ ಒಣಗಿದ್ದು	4th Class	2nd Class W-240: MG: W-160: NG: L	3rd Class W-240 MG W-160: NG:L	2- B Class W-240 MG W-160: NG:L
5.	ಕೊಂಗಲು, ಚರ್ಮ ಮತ್ತು ಕೂದಲಿರುವ ಚರ್ಮ ಸಾಧಾರಣ ಹಸಿಯಾಗಿರುವುದು	4th Class	2nd Class W-270: MG: W-200: NG: L	3rd Class W-270: MG W-200 NG: L	2-B Class W-270: M G W-200: NG:L
6.	ಚಿಲ್ಲರೆ ಹತ್ತಿ, ಬಿಟ್ಟಿ ಉಲ್ಲನ್ ವಗೈರೆ ಪ್ರೆಸ್ ಪ್ಯಾಕ್ ಮಾಡಿರುವುದು	4-A Class	4th Class	4- B Class	4- A Class
7	ದೇಶದಲ್ಲಿ ತಯಾರಿಸಲಾದ ಹೊಗೆಸೊಪ್ಪು	4-A Class	4th Class	4- B Class	4- A Class
8.	ದೇಶದಲ್ಲಿ ತಯಾರಿಸದಿದ್ದ ಹೊಗೆಸೊಪ್ಪು	4th Class	—	4- A Class	—

W- ; ಅಂಕಿಗಳ ಹಿಂದೆ W ಎಂದಿರುವುದು ದರವು ನಾಲ್ಕು ಚಕ್ರದ ವ್ಯಾಗನ್ನುಗಳಲ್ಲಿ ಸಾಗಿಸಬಹುದಾದ ಕನಿಷ್ಠ ತೂಕಕ್ಕೆ ಅನ್ವಯಿಸುತ್ತದೆ. ಉದಾಹರಣೆಗಾಗಿ, W-೧೨೦ ಎಂದರೆ ದರವು ಒಂದು ವ್ಯಾಗನ್ನಿನಲ್ಲಿ ಸಾಗಿಸಬಹುದಾದ ಕನಿಷ್ಠ ತೂಕವಾದ ೧೨೦ ಮಣಗಳಿಗೆ ಅನ್ವಯಿಸುತ್ತದೆ.

N G ; ಎಂದರೆ ನ್ಯಾರೋ ಗೇಜ್.

M G : ಎಂದರೆ ಮೀಟರ್ ಗೇಜ್.

L ; ಎಂದರೆ ಲೋಡಿಂಗ್ ಮತ್ತು ಅನ್‌ಲೋಡಿಂಗ್‌ಗಳನ್ನು ಮಾಲೀಕರೇ ಮಾಡಬೇಕು

ಸ್ಪೆಷಲ್ ರೇಟುಗಳಲ್ಲಿ ಹೆಚ್ಚಿಸಲಾಗಿರುವ ದರದ ವಿವರಗಳು ಬೇಕಾಗಬಹುದಾದರೆ ಸಾಮಾನಿನ ಹೆಸರು ಮತ್ತು ಬುಕ್ಕಿಂಗ್ ಮಾಡಲಿಚ್ಛಿಸುವ ಸ್ಟೇಷನ್ನುಗಳ ಹೆಸರುಗಳೊಡನೆ ಕೆಳಗೆ ರುಜು ಮಾಡಿರುವವರಿಗೆ ಬರೆದುಕೊಳ್ಳಬಹುದು

ಟ್ರಾಫಿಕ್ ಮ್ಯಾನೇಜರವರ ಆಫೀಸು

ಮೈಸೂರು

ತಾ|| 10-3-1947

ಮಿರ್ ಇನಾಯತ್ ಹುಸೇನ್,

ಟ್ರಾಫಿಕ್ ಮ್ಯಾನೇಜರ್.

ಬರಿಯ ಮೈಸೂರು ಒಂದೇ ಅಲ್ಲ! ಕೃಷ್ಣರಾಜ ಪೇಟೆ, ವೀರರಾಜ ಪೇಟೆ; ಕೃಷ್ಣರಾಜನಗರ, ಚಾಮರಾಜನಗರ; ಶಾಂತರಾಜಪುರ, ನರಸಿಂಹರಾಜಪುರ; ತಿರುಮಕೂಡಲು ನರಸೀಪುರ, ಹೊಳೇ ನರಸೀಪುರ; ಶ್ರೀರಂಗಪಟ್ಟಣ, ಚೆನ್ನಪಟ್ಟಣ; ಬನ್ನೂರು, ಸೊಸ್ಲೆ; ಪೂರಿಗಾಲಿ, ಕೊಳ್ಳೇಗಾಲ ಮುಂತಾದ ಊರು ಹಳ್ಳಿಗಳಿಂದೆಲ್ಲಾ ಜನರು ಮೈಸೂರಿನ "ಬಾ ಯ ಸಾ ರ್ ಕಂ ಪೆ ನಿ" ಯಲ್ಲಿ ಸೀರೆಗಳನ್ನು ಕೊಂಡುಕೊಂಡು ಹೋಗುತ್ತಿದ್ದಾರೆ ನೀವೇಕೆ ಇನ್ನೂ "ಹಬ್ಬದ ಸೀರೆ ಬೇಕು, ಹಬ್ಬದ ಸೀರೆ ಬೇಕು" ಎಂದು ಸುಮ್ಮನೆ ಕುಳಿತಿದ್ದೀರಿ? ನೀವೂ ಕೂಡ ಅವರಲ್ಲಿರುವ ನಾನಾ ಬಗೆಯ ಸೀರೆಗಳನ್ನು ನೋಡಿದರೆ ಆನಂದಪಡುವಿರಿ. ನಿಮಗೆ ಬೇಕಾದ ಒಂದನ್ನು ಆರಿಸಿ, ಹೊಸ ವರ್ಷದ [ಹಬ್ಬ] ಮಾಡಿ, ಎಲ್ಲರಂತೆ ನೀವೂ ಸಂತೋಷಪಡಿರಿ.

ರಿ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೯—೪—೪೭ [ಸಂಚಿಕೆ ೧೮೮

ಆಚಾರ್ಯ ಕೃಪಲಾನಿಯವರು ಮೈಸೂರಿಗೆ ಬಂದರು

...ದ್ರರಿಗೆ ರಾಷ್ಟ್ರಪತಿಗಳ ಎಚ್ಚರಿಕೆ

...ದೇಶವನ್ನು ತ್ಯಜಿಸಿ ಬ್ರಿಟಿಷರೇ ಹೊರಟು ಹೋಗುವ ಕಾಲ ಬಂದಿದೆ. ನರೇಂದ್ರರು ಇದನ್ನು ಅರಿತುಕೊಂಡು ತಾವೇ ಅಧಿಕಾರವನ್ನು ತಮ್ಮ ಪ್ರಜಾ...ಧಿಗಳಿಗೆ ಬಿಟ್ಟು ಕೊಟ್ಟರೆ ಮುಂತೆ ...ಗೆ ಗೌರವ ಸಲ್ಲುತ್ತದೆ. ಇಲ್ಲವಾದರೆ ...ದಿ ನಡೆಯುವುದನ್ನು ಯಾರಿಂದಲೂ ...ಲು ಸಾಧ್ಯವಿಲ್ಲ. ನರೇಂದ್ರರು ಅದರ ...ಫಲಗಳನ್ನು ಅನುಭವಿಸಲೇ ಬೇಕು ಎಂಬುದಾಗಿ ರಾಷ್ಟ್ರಪತಿ ಆಚಾರ್ಯ ...ಲಾನಿಯವರು ಕೊಟ್ಟಾಯಮ್ಮಿನಲ್ಲಿ ...ಣ ಮಾಡುತ್ತಾ ತಿಳಿಸಿದ್ದಾರೆ

...ಟ್ಲೀಯವರ ಹೇಳಿಕೆಯು ಒಂದು ಒಳಸಂಚು

ಬ್ರಿಟಿಷ್ ಪ್ರಧಾನಿ ಅಟ್ಲೀಯವರ ಹೇಳಿ...ು ಒಂದು ನಿರ್ಯೋಜಿತವಾದ ಸಾಮ್ರಾಜ್ಯಶಾಹಿಯ ಒಳಸಂಚೆನಿಸಿದೆ. ಭಾರತ...ವನ್ನು ತ್ಯಜಿಸಲು ೧೫ ತಿಂಗಳ ಕಾಲಾವ...ಧಿ ಬೇಕೆಂಬ ನೆಪ ಹೇಳಿ ಆ ಕಾಲದಲ್ಲಿ ...ತದ ಕೋಮುಗಳಲ್ಲಿ ದ್ವೇಷಾಸೂಯೆ...ನ್ನು ತುಂಬಿ, ರಾಷ್ಟ್ರೀಯತ್ವವನ್ನು ನಾ...ಶಪಡಿಸಿ, ಶಾಂತಿಸ್ಥಾಪನೆಯ ಸೋಗಿನಲ್ಲಿ ...ಲಟರಿ ಮತ್ತು ವಿಮಾನ ಕೇಂದ್ರಗಳನ್ನು ...ಸಿ, ಬ್ರಿಟಿಷ್ ಬಂಡವಾಳವನ್ನು ಭದ್ರಪ...ಡಿಸುವ ಸಲುವಾಗಿಯೇ ಈ ಹಂಚಿಕೆ ನಡೆ...ದೆ. ಬ್ರಿ॥ ಸಾಮ್ರಾಜ್ಯಶಾಹಿಯು ಪರ...ದೆ ಹಿಂದೆ ನಿಂತು ಭಾರತವನ್ನು ಆಳಲು ...ವುದು ಸಹಾಯವಾಗುವುವು, ಎಂಬುದಾಗಿ ಕಲ್ಕತ್ತೆಯಲ್ಲಿ ನಡೆದ ಫಾರ್ವರ್ಡ್‌ಬ್ಲಾಕ್ ಕಾರ್ಯಕಾರಿ ಸಮಿತಿಯು ನಿರ್ಣಯಿಸಿದೆ

ಜುಲ್ಮಾನೆಗಳು

ಹೆಗ್ಗಡದೇವನಕೋಟೆಯ ಕರಿಯಪ್ಪ...ನು ಕಳೆದ ತಿಂಗಳು ೨೨ ನೇ ತಾ॥ ...ಯಿಲ್ಲದೆ ಹತ್ತು ವೀಸೆ ಸಕ್ಕರೆಯ...ನ್ನು ಇಟ್ಟುಕೊಂಡಿದುದಕ್ಕಾಗಿ ನಗರ ನ್ಯಾಯಾಧೀಶರು ಅವನಿಗೆ ೧೫ ರೂ ಜುಲ್ಮಾನೆ ...ದರೆ ೧೫ ದಿವಸ ಕಠಿಣ ಸಜ ವಿಧಿಸಿದ್ದಾರೆ.

ಕನ್ನೇಗೌಡನ ಕೊಪ್ಪಲಿನ ದ್ಯಾವಯ್ಯ ...ಅಬ್ದುಲ್ ಸಾಹೆಬ್‌ರವರು ೧॥ ಮಣ ಬೆಲ್ಲವನ್ನು ಸಾಗಿಸುತ್ತಿದ್ದುದಕ್ಕಾಗಿ ೫ ರೂ. ಜುಲ್ಮಾನೆ, ಅಥವಾ ೫ ದಿನ ಕಠಿಣ ಸಜಕ್ಕೆ ಗುರಿಯಾಗಿದ್ದಾನೆ

SPY SMASHER
SPY SMASHER

A Stupendous Serial
in 24 Reels
:- Featuring :-
Kane Richmond
(King of the Serials)
From 20-3-47
FOR 7 DAYS ONLY
Daily 3 Shows
AT
OLYMPIA

ಭಾರತದ ಮೇಲೆ ಅಧಿಕಾರ ನಡೆಸಲು ಅಮೆರಿಕದ ಪ್ರಯತ್ನ

ಗ್ರೀಸ್ ಮತ್ತು ತುರ್ಕಿ ದೇಶಗಳಿಗೆ ಹಣದ ಸಹಾಯ ನೀಡುವ ಕಾರ್ಯವು ಭಾರತದ ಮೇಲೆ ಅಧಿಕಾರ ನಡೆಸಲು ಅಮೆರಿಕವು ನಡೆಸುತ್ತಿರುವ ಪ್ರಯತ್ನದ ಒಂದು ಅಂಗವೆಂದು ಬ್ರಿಟಿಷ್ ಕಮ್ಯೂನಿಸ್ಟ್ ಪಕ್ಷದ ಅಧ್ಯಕ್ಷ ಟ್ರೂಮನ್ನರ ನೀತಿಯನ್ನು ಖಂಡಿಸಿದೆ. ಅಮೆರಿಕವು ಇದರಿಂದ ಮೆಡಿಟರೇನಿಯಾ ಪ್ರದೇಶದ ಮೇಲೆ ಪೂರ್ಣ ಹತೋಟಿ ಪಡೆದು, ಭಾರತದ ಮೇಲೂ ಹತೋಟಿಯನ್ನಿಟ್ಟುಕೊಳ್ಳಲು ನಡೆಸಿರುವ ಸಂಚೆಂದು ಅದು ಅಭಿಪ್ರಾಯಪಟ್ಟಿದೆ

ಮಂಚೂರಿಯಾ ರಣರಂಗ

೫ ಸಹಸ್ರ ಕೊರಿಯ... ಕಮ್ಯೂನಿಸ್ಟ್ ಸೈನಿಕರು ಮಂಚೂರಿಯಾದಲ್ಲಿರುವ ಸೈಬೀರೀ...ರೇವಿನಲ್ಲಿ ಬಂದಿಳಿದಿದ್ದಾರೆ. ಅವರಿಗೆ ರಷ್ಯನರು ಶಸ್ತ್ರಾಸ್ತ್ರಗಳನ್ನು ಒದಗಿಸಿದ್ದಾರೆಂದೂ, ಅವರು ರೇವಿನ ಉತ್ತರ ಭಾಗದಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂದೂ ವರದಿಯಾಗಿದೆ

ಭಿನ್ನಾಭಿಪ್ರಾಯ ನಿವಾರಣೆಗೆ ಆಮರಣಾಂತ ಉಪವಾಸ

ಮದ್ರಾಸಿನ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರಲ್ಲಿ ಒಮ್ಮತಾಭಿಪ್ರಾಯವನ್ನುಂಟುಮಾಡುವ ಮತ್ತು ದಕ್ಷತೆಯುಳ್ಳ ಕೂಡಿದ ಕಾಂಗ್ರೆಸ್ ಮಂತ್ರಿಮಂಡಲವನ್ನು ರಚಿಸುವ ಸಲುವಾಗಿ ಶ್ರೀ ಪೊಟ್ಟಿ ಸೀತಾರಾಮುಲುರವರು ನಿನ್ನೆಯಿಂದ ಆಮರಣಾಂತ ಉಪವಾಸ ವ್ರತವನ್ನು ಕೈಗೊಂಡಿದ್ದಾರೆ. ಶಾಸನ ಸಭೆಯ ಕಾಂಗ್ರೆಸ್ ಸದಸ್ಯರು ತಮ್ಮತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ತೊರೆದು ರಾಷ್ಟ್ರಪತಿಗಳ ಇಚ್ಛೆಯಂತೆ ನಡೆದರೆ ಆಗ ತಾವು ತಮ್ಮ ವ್ರತವನ್ನು ತ್ಯಜಿಸುವುದಾಗಿ ಅವರು ಹೇಳಿರುತ್ತಾರೆ

ಪ್ರಜಾಮಂಡಲದ ಭವನಕ್ಕೆ ಕೊಚ್ಚಿ ಸರ್ಕಾರದಿಂದ ೫೦,೦೦೦ ರೂ

ಅಖಿಲ ಭಾರತ ಸಂಸ್ಥಾನಗಳ ಪ್ರಜಾ ಸಮ್ಮೇಳನದ ಕಟ್ಟಡಕ್ಕಾಗಿ ಕೊಚ್ಚಿ ಸರ್ಕಾರವು ೫೦ ಸಹಸ್ರ ರೂ ಗಳನ್ನು ದಾನವಾಗಿ ಕೊಟ್ಟಿರುತ್ತದೆ

ರಾಷ್ಟ್ರಪತಿಗಳ ಆಗಮನ

ಮೈಸೂರು ೮ನೆ

ಈ ದಿನ ಮಧ್ಯಾಹ್ನ ೧-೪೫ ಗಂಟೆಗೆ ಆಚಾರ್ಯ ಕೃಪಲಾನಿಯವರು ಪತ್ನೀ ಸಮೇತರಾಗಿ ರಾಜಧಾನಿಗೆ ಆಗಮಿಸಿ ನಗರ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರ ಮನೆಯ ಬಿಡಾರಕ್ಕೆ ತೆರಳಿದರು.

ಗುಂಡ್ಲುಪೇಟೆ ಮತ್ತು ನಂಜನಗೂಡುಗಳಲ್ಲಿ ಅಧ್ಯಕ್ಷರಿಗೆ ಸಾರ್ವಜನಿಕರು ಸ್ವಾಗತ ನೀಡಿದರು. ನಂಜನಗೂಡಿನ ಕಾಂಗ್ರೆಸ್ ಸಮಿತಿಯವರು ಅಧ್ಯಕ್ಷರಿಗೆ ೩೦೦ ರೂ. ನಿಧಿಯನ್ನರ್ಪಿಸಿದರು.

ವಿದ್ಯಾರ್ಥಿ ಕಾಂಗ್ರೆಸ್ಸಿನವರು ಆಚಾರ್ಯರಿಗೆ ಅರ್ಪಿಸುವ ಬಿನ್ನವತ್ತಳೆಯ ಸಮಾರಂಭವು ಕಾಲೇಜು ಮೈದಾನದ ಬದಲು ...ಬನುಮಯ್ಯನವರ ಶಾಲೆಯ ಮೈದಾನದಲ್ಲಿ ನಡೆಯುವುದು.

ರಾಷ್ಟ್ರಪತಿಗಳು ಈ ದಿನ ರಾತ್ರಿ ಕೃಷ್ಣರಾಜಸಾಗರಕ್ಕೆ ಭೇಟಿಯಿತ್ತು ಹಿಂದಿರುಗುವರು. ನಾಳೆ ಅವರು ಬೆಂಗಳೂರಿಗೆ ಹೋಗುವಾಗ ಶ್ರೀರಂಗಪಟ್ಟಣದ ಸಾರ್ವಜನಿಕರು ಅಲ್ಲಿನ ಬಸ್ ನಿಲ್ದಾಣದ ಬಳಿ ರಾಷ್ಟ್ರಪತಿಗಳಿಗೆ ಸ್ವಾಗತ ನೀಡುವರು

ಸ್ಕೌಟ್ ಕಮಿಷನರ್

ಚೀಫ್ ಸ್ಕೌಟರಾದ ಶ್ರೀಮನ್ಮಹಾರಾಜರವರು ಮಿ॥ ಕೆ॥ ವಿ ಕೆ ಸುಂದರಂರವರನ್ನು ಒಬ್ಬ ಸ್ಕೌಟ್ ಹೆಡ್-ಕ್ವಾರ್ಟರ್ಸ್ ಕಮಿಷನರನ್ನಾಗಿ ನೇಮಕ ಮಾಡಿದ್ದಾರೆ

ವೇಣುಗಾನ

ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ನಾಳೆ ಸಂಜೆ ೬॥ ಗಂಟೆಗೆ ಪ್ರದೋಷದ ಪ್ರಯುಕ್ತ ಮಿ॥ ವಿ. ದೇಶಿಕಾಚಾರ್ಯರ ವೇಣುಗಾನವು ನಡೆಯುವುದು

ಪಂಜಾಬ್ ಪರಿಸ್ಥಿತಿ

ನೆನ್ನೆ ಜೇಂಗ್ಸ್ ಮತ್ತು ಲಾಹೋರಿನಲ್ಲಿ ೧೧ ಅಂಗಡಿಗಳಿಗೆ ಬೆಂಕಿ ಇಡಲಾಯಿತು. ರಾವಲ್ಪಿಂಡಿ ಜಿಲ್ಲೆಯ ವಾತಾವರಣವು ಇನ್ನೂ ಕಠಿಣವಾಗಿಯೇ ಇದೆ. ಹಜಾರ ಜಿಲ್ಲೆಯ ಅಬ್ಬೋಟಾಬಾದಿನಲ್ಲಿ ಮುತ್ತಿಗೆಯಿಡುವವರು ಗುಂಪನ್ನು ಚದುರಿಸಲು ಗುಂಡು ಹಾರಿಸುತ್ತಿದ್ದಾರೆ. ಮುಲ್ತಾನ್, ಸರ್ಗೋಧಾ ಮುಂತಾದೆಡೆಗಳಲ್ಲಿ ಪರಿಸ್ಥಿತಿ ಚಿಂತಾಜನಕವಾಗಿದೆ. ಸೋಷಿಯಲಿಸ್ಟ್ ಪಕ್ಷದ ನಾಯಕರಾದ ಶ್ರೀ ಜೈ ಪ್ರಕಾಶ ನಾರಾಯಣರು ಲಾಹೋರಿಗೆ ಆಗಮಿಸಿದ್ದಾರೆ. ಅವರು ಗಲಭೆಗೀಡಾಗಿರುವ ಪ್ರದೇಶಗಳಲ್ಲಿ ಸಂಚರಿಸುವರೆಂದು ಗೊತ್ತಾಗಿದೆ. ಪ್ರಾಂತ್ಯದ ಪರಿಸ್ಥಿತಿಯು ಹತೋಟಿಗೆ ಬರುತ್ತಿದೆಯೆಂದು ವರದಿಯಾಗಿದೆ.

ಸುಧಾರಣಾಧಿಕಾರಿಗಳಿಗೆ ಪರ್ಸನಲ್ ಅಸಿಸ್ಟೆಂಟರು

ಸ್ವಂ.ಸು.ಪ್ರೋ॥] ಬೆಂಗಳೂರು ೮ನೆ

ಮೈಸೂರಿನ ವಕೀಲರಾದ ಶ್ರೀ॥ ಸಿ. ಶ್ರೀಕಂಠಯ್ಯನವರನ್ನು ಸುಧಾರಣಾಧಿಕಾರಿಗಳಾದ ಶ್ರೀ॥ ಬಿ. ಎಸ್ ಪುಟ್ಟಸ್ವಾಮಿಯವರ ಪರ್ಸನಲ್ ಅಸಿಸ್ಟೆಂಟರನ್ನಾಗಿ ನೇಮಕ ಮಾಡಲಾಗಿದೆ

ದರೋಡೆ ಮೊಕದ್ದಮೆಯಲ್ಲಿ ವಾದವಿವಾದಗಳು

ಧರ್ಮರಕ್ಷಾಕರ ಗೋಪಾಲರಾಯರ ಆಭರಣಗಳ ದರೋಡೆ ಮೊಕದ್ದಮೆಯಲ್ಲಿ ನಿನ್ನೆ ವಾದವಿವಾದಗಳು ನಡೆದುವು. ಮೊದಲನೇ ಆಪಾದಿತರ ಪರ ಶ್ರೀ॥ ರಾಜಾರಾಂರವರು ವಾದ ನಡೆಸಿದರು. ಶ್ರೀ॥ ಗೋಪಾಲರಾಯರ ಸಾಕ್ಷ್ಯದಲ್ಲಿ ಸ್ವಲ್ಪವೂ ತಿರುಳಿಲ್ಲದೆ, ಅದು ಮೊದಲಿನಿಂದ ಕೊನೆಯವರೆಗೆ ಬರಿಯ ಸುಳ್ಳಿನಿಂದ ಕೂಡಿ ನಂಬಲನರ್ಹವಾಗಿದೆಯೆಂದು ಅವರು ತಿಳಿಸಿದರು. ಇದನ್ನು ಕೋರ್ಟು ಗಮನಿಸಿ ಶ್ರೀ॥ ಗೋಪಾಲರಾಯರ ಮೇಲೆಯೇ ಸುಳ್ಳು ಪ್ರಮಾಣಕ್ಕಾಗಿ ಮೊಕದ್ದಮೆ ಹೂಡುವುದು ನ್ಯಾಯವಾಗಿದೆ ಎಂದು ಹೇಳಿದರು. ಗೌರವಯುತರಾದವರನ್ನು ಸಾಕ್ಷಿಗಳನ್ನಾಗಿ ತೋರಿಸಿ ಅನಂತರ ಅವರು ಗೋಪಾಲರಾಯರ ಕಥೆಗೆ ಬೆಂಬಲ ಕೊಡುವುದಿಲ್ಲವೆಂದು ಪ್ರಾಸಿಕ್ಯೂಷನ್ನಿನವರು ಅವರ ಕೈ ಬಿಟ್ಟಿದ್ದಾರೆಂದು ಟೀಕಿಸಿದರು. ಮೊಕದ್ದಮೆ ಈ ದಿನಕ್ಕೆ ಮುಂದುವರಿದಿದೆ

ಅಸಿಸ್ಟೆಂಟ್ ಪ್ರೊಫೆಸರ್

ಮೆಡಿಕಲ್ ಕಾಲೇಜಿನಲ್ಲಿ ಪ್ಯಾಥಾಲಜಿ ಲೆಕ್ಚರರಾದ ಶ್ರೀ॥ ಎ ವಾಸುದೇವ ರಾಯರನ್ನು ಅಸಿಸ್ಟೆಂಟ್ ಪ್ರೊಫೆಸರನ್ನಾಗಿ ನೇಮಿಸಲಾಗಿದೆ

ಗುಡಿಸುವವರ ಮುಷ್ಕರ

ಕಮ್ಯೂನಿಸ್ಟರ ಬಂಧನ ಮತ್ತು ಬಿಡುಗಡೆ

ಮೈಸೂರು ೮ನೆ

...ತ್ಕಾಲಿಕ ಪರಿಹಾರವನ್ನು ತಮಗೂ ಕೊಟ್ಟಿಲ್ಲವೆಂಬ ಕಾರಣದ ಮೇಲೆ ರಾಜಧಾನಿಯ ಗುಡಿಸುವವರು ಈ ದಿನ ಬೆಳಿಗ್ಗೆ ಮುಷ್ಕರ ಹೂಡಿದ್ದರು. ಈ ಪರಿಹಾರವನ್ನು ಕೊಡಿಸಲು ಪ್ರಯತ್ನಿಸಲಾಗುತ್ತಿದೆಯೆಂದು ಕಾಂಗ್ರೆಸ್ ನಾಯಕರು ಭರವಸೆಯಿತ್ತ ಮೇಲೆ ಅವರುಗಳು ಕೆಲಸಕ್ಕೆ ಹಿಂದಿರುಗಿದರು. ಇದೇ ಸಂಬಂಧದಲ್ಲಿ ಪೌರಸಭೆಯ ಬಳಿ ನಿನ್ನೆ ಗಲಭೆ ಮಾಡಿದರೆಂಬ ಕಾರಣದ ಮೇಲೆ ಕಮ್ಯೂನಿಸ್ಟ್ ನಾಯಕರಾದ ಶ್ರೀ ಬಿ ಎಲ್ ರಾಮನಾಥ ಮತ್ತು ಶ್ರೀ ಶಂಕರನಾರಾಯಣರಾಯರನ್ನು ಪೋಲೀಸರು ದಸ್ತಗಿರಿ ಮಾಡಿ ನಂತರ ಬಿಡುಗಡೆ ಮಾಡಿದರು

ಸ್ಕೂಲ್ ಫೈನಲ್ ಪರೀಕ್ಷೆ ಮುಂದೆ ಹೋಯಿತು

ಪ್ರಶ್ನ ಪತ್ರಿಕೆಗಳು ಪರೀಕ್ಷೆಗೆ ಮುಂಚೆಯೇ ಪ್ರಾಂತ್ಯದಲ್ಲೆಲ್ಲಾ ಹೊರಬಿದ್ದವೆಂಬ ಕಾರಣದ ಮೇಲೆ ಮದರಾಸ್ ಎಸ್.ಎಸ್. ಎಲ್. ಸಿ. ಪರೀಕ್ಷೆಯನ್ನು ಮುಂದಕ್ಕೆ ಹಾಕಲಾಗಿದೆ. ಮದನಪಲ್ಲಿಯ ೪೯ ವರ್ಷ ವಯಸ್ಸಿನ ಒಬ್ಬಾತನೂ ಸಹ ಈ ಪರೀಕ್ಷೆಗೆ ಕುಳಿತಿದ್ದನೆಂದು ವರದಿಯಾಗಿದೆ

● ಇಂಡೋನೇಷ್ಯಾ ಸಂಯುಕ್ತ ಸಂಸ್ಥಾನದ ಸ್ಥಾಪನೆಯ ಬಗ್ಗೆ ಕಳೆದ ನವಂಬರಿನಲ್ಲಿ ಆಗಿದ್ದ ಒಪ್ಪಂದಕ್ಕೆ ಕೊನೆಗೇ ಡಚ್ ರಾಣಿ ...ಪಟೇವಿಯಾದಲ್ಲಿರುವ ಡಚ್ ಅಧಿಕಾರಿಗೆ ಹಾಲೆಂಡ್ ಸರ್ಕಾರವು ಅಪ್ಪಣೆ ಇತ್ತಿದೆ

ಸಾಧ್ವಿ
ತಾ|| ೧೯-೩-೪೭ ಬುಧವಾರ

ರಾಷ್ಟ್ರಪತಿಗೆ ಸುಸ್ವಾಗತ!

ಈ ದಿನ ನಮ್ಮ ಪಟ್ಟಣಕ್ಕೆ ಆಗಮಿಸಿರುವ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರಿಗೆ ನಾವು ಹೃತ್ಪೂರ್ವಕವಾದ ಸ್ವಾಗತವನ್ನು ನೀಡುತ್ತೇವೆ. ಅಖಿಲ ಭಾರತ ಕಾಂಗ್ರೆಸ್ ಮಹಾಸಭೆಯ ಅಧ್ಯಕ್ಷರಾದ ಮೇಲೆ ಅವರು ಇಲ್ಲಿಗೆ ಬಂದಿರುವುದು ಇದೇ ಮೊದಲು. ಹಿಂದೆ ಅವರು ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾಗಿದ್ದಾಗ ನಮ್ಮ ಸಂಸ್ಥಾನಕ್ಕೆ ಭೇಟಿಯಿತ್ತು ಅಂದಿನ ಬಿಕ್ಕಟ್ಟನ್ನು ಬಗೆಹರಿಸಿ ಸರ್ಕಾರಕ್ಕೂ ಪ್ರಜೆಗಳಿಗೂ ಮಧುರ ಬಾಂಧವ್ಯವನ್ನು ಉಂಟುಮಾಡಿದ ಅಂಶವು ಚಿರಸ್ಮರಣೀಯವಾದುದು. ಇಂತಹ ಮಹನೀಯರಿಗೆ ಸಂಸ್ಥಾನದ ಪ್ರಜೆಗಳೆಲ್ಲರೂ ಅತ್ಯಂತ ಆನಂದದಿಂದ ಸುಸ್ವಾಗತವನ್ನು ನೀಡುವುದು ಸಹಜವಾಗಿಯೇ ಇದೆ.

ಮೊನ್ನೆ ಕೊಚ್ಚಿ ಸಂಸ್ಥಾನದಲ್ಲಿ ರಾಷ್ಟ್ರಪತಿಗಳಿಗೆ ರಾಜ ಸನ್ಮಾನವು ನಡೆಯಿತು. ಅಲ್ಲಿನ ಪ್ರಭುಗಳು ಅವರನ್ನು ಅರಮನೆಗೆ ಬರಮಾಡಿಕೊಂಡು ತಮ್ಮ ಮಂತ್ರಿಗಳೊಡನೆ ಸತ್ಕರಿಸಿದರು. ಅಲ್ಲದೆ ಸಂಸ್ಥಾನದ ಬೊಕ್ಕಸದಿಂದ ಕಾಂಗ್ರೆಸ್ಸಿನ ನಿಧಿಗೆ ಮೂವತ್ತು ಸಾವಿರ ರೂ. ಗಳನ್ನೂ ಸಹ ಅರ್ಪಿಸಿದರು. ಸಂಸ್ಥಾನಗಳ ಮತ್ತು ಕಾಂಗ್ರೆಸ್ ಸಂಸ್ಥೆಯ ಸಂಬಂಧದ ಇತಿಹಾಸದಲ್ಲಿಯೇ ಇದೊಂದು ಮಹತ್ತರವಾದ ಘಟನೆ. ಸಂಸ್ಥಾನಗಳ ಪೈಕಿ ಕಾಂಗ್ರೆಸ್ ನಿಧಿಗೆ ಧನ ಸಹಾಯ ಮಾಡಿರುವುದರಲ್ಲಿ ಕೊಚ್ಚಿ ಸಂಸ್ಥಾನಕ್ಕೇ ಅಗ್ರಮರ್ಯಾದೆಯು ಸಲ್ಲುವುದೆಂದು ಆಚಾರ್ಯ ಕೃಪಲಾನಿಯವರು ಹೇಳಿರುವರು.

ಹಿಂದೂಸ್ಥಾನದ ಭವಿಷ್ಯವು ಪುನರ್ರಚನೆ ಹೊಂದುತ್ತಿರುವ ಈ ಸಮಯದಲ್ಲಿ ಸಂಸ್ಥಾನಗಳಿಗೂ, ಕಾಂಗ್ರೆಸ್ಸಿಗೂ ಹೀಗೆ ಹೆಚ್ಚು ಸಂಪರ್ಕವು ಬೆಳೆಯುತ್ತಿರುವುದು ಸಂತೋಷದ ಸಂಗತಿ. ಬರುವ ವರ್ಷ ಬ್ರಿಟಿಷರು ಹಿಂದೂಸ್ಥಾನವನ್ನು ಬಿಟ್ಟುಹೋದ ಮೇಲೆ ಅಖಂಡ ಹಿಂದೂಸ್ಥಾನವೆಲ್ಲವೂ ಒಂದೇ ರಾಜ್ಯಾಂಗದೊಳಗೆ ಸೇರಿ ನಲವತ್ತು ಕೋಟಿ ಭಾರತೀಯರ ಹಿತಸಾಧನೆಯಲ್ಲಿ ತೊಡಗಬೇಕಾಗಿರುವುದು. ಸಂಸ್ಥಾನಗಳೂ ಸಹ ಈ ವ್ಯವಸ್ಥೆಯಲ್ಲಿ ಭಾಗಗಳಾಗುವುದಾಗಿ ಈಗಾಗಲೇ ನಿರ್ಧರಿಸಿರುವುವು. ಆದುದರಿಂದ ಸಂಸ್ಥಾನಗಳಿಗೂ, ಬ್ರಿಟಿಷ್ ಭಾರತದ ಪ್ರಾಂತ್ಯಗಳಿಗೂ ಈಗಿನಿಂದಲೇ ನಿಕಟ ಬಾಂಧವ್ಯವು ಏರ್ಪಡುವುದು ಅಗತ್ಯವಾಗಿದೆ.

ರಾಷ್ಟ್ರಪತಿಯವರು ಅಖಂಡ ಭಾರತದ ಕ್ಷೇಮಾಭ್ಯುದಯದ ಸಾಧನೆಯ ಮೂರ್ತಿಸ್ವರೂಪವಾದ ಕಾಂಗ್ರೆಸ್ ಸಂಸ್ಥೆಯ ಸೂತ್ರಧಾರಿಗಳಾಗಿರುವರು. ಭವಿಷ್ಯ ಭಾರತದಲ್ಲಿ ಮೈಸೂರಿಗೆ ಸಲ್ಲಬೇಕಾದ ಸ್ಥಾನ, ಮಾನಗಳ ಬಗ್ಗೆ ಕಾಂಗ್ರೆಸ್ ಸಂಸ್ಥೆಯು ತನ್ನ ಸಂಪೂರ್ಣ ಪ್ರಭಾವವನ್ನು ಬೀರುವುದು ಅಗತ್ಯವಾಗಿರುತ್ತದೆ. ಆದುದರಿಂದ ಕಾಂಗ್ರೆಸ್ಸಿನ ಅಧಿಪತಿಗಳಿಗೆ ಮೈಸೂರು ಸಂಸ್ಥಾನವು ಯೋಗ್ಯವಾದ ಸನ್ಮಾನವನ್ನು ಮಾಡುವುದು ಅವಶ್ಯಕವಾಗಿದೆ. ಇಂದು ರಾಜಧಾನಿಯಲ್ಲಿಯೂ ಮತ್ತು ನಾಳೆ ಬೆಂಗಳೂರು ಮತ್ತು ಇತರ ಕಡೆಗಳಲ್ಲಿಯೂ ನಡೆಯುವ ಸಮಾರಂಭಗಳಲ್ಲಿ ಮೈಸೂರಿನ ಪ್ರಜೆಗಳು ರಾಷ್ಟ್ರಪತಿಗಳಿಗೆ ತಮ್ಮ ಭಕ್ತಿ, ಗೌರವಗಳನ್ನು ಸಲ್ಲಿಸುವರು.

ನಮ್ಮ ಪ್ರಭುತ್ವದವರೂ ಈ ಸಮಯದಲ್ಲಿ ರಾಷ್ಟ್ರಪತಿಗಳಿಗೆ ಉಚಿತವಾದ ಮನ್ನಣೆಯನ್ನು ಮಾಡುವುದು ವಿಹಿತವಾಗಿರುತ್ತದೆ. ಮತ್ತು ನಮ್ಮ ಶ್ರೀಮನ್ಮಹಾರಾಜರವರೂ ಸಹ ಆಚಾರ್ಯ ಕೃಪಲಾನಿಯವರನ್ನು ಅರಮನೆಗೆ ಆಹ್ವಾನಿಸಿ ಸತ್ಕರಿಸಬೇಕೆಂದು ನಾವು ಬೇಡುತ್ತೇವೆ.

ನಿಜಾಮರ ಸೇನಾಪತಿಗಳ ಕೊಲೆ

ಹೈದರಾಬಾದ್ ನಿಜಾಮರ ಸೈನ್ಯದ ಮೇಜರ್ ಎ. ಎ. ಮುಕ್ತಾರರವರನ್ನು ಗುಂಡಿನಿಂದ ಕೊಂದುಹಾಕಲಾಗಿದೆ. ಮೊನ್ನೆ ರಾತ್ರಿ ಯಾರೋ ಕಾರಿನಲ್ಲಿ ಅವರ ಮನೆಗೆ ಬಂದು ಅವರ ಭೇಟಿ ಕೇಳಿದರು. ಮಲಗಿದ್ದ ಮುಕ್ತಾರರವರು ಎದ್ದು ಕಾರಿನ ಬಳಿ ಬಂದರು. ಮಾತನಾಡಿಕೊಂಡು ಮುಕ್ತಾರರವರು ಹಿಂದಿರುಗುತ್ತಿದ್ದಾಗ ಗುಂಡಿನಿಂದ ಹೊಡೆದು ಕಾರಿನಲ್ಲಿದ್ದವರು ಪರಾರಿಯಾದರು. ಇದುವರೆಗೆ ಅವರ ಸುಳಿವೇ ಪತ್ತೆಯಾಗಿಲ್ಲ.

ಚಾಮರಾಜನಗರದ ವೋಟರು ಮಹಾಶಯರಲ್ಲಿ ವಿಜ್ಞಾಪನೆ

1947 ನೇ ಇಸವಿ ಏಪ್ರಿಲ್ ಮಾಹೆ 28 ನೇ ತಾರೀಖು ನಡೆಯುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಚಾಮರಾಜನಗರದ ತಾಲ್ಲೋಕಿನಿಂದ ನಾನೊಬ್ಬ ಸರ್ಕಾರಕ್ಕೂ ಪ್ರಜಾ ಪಕ್ಷಕ್ಕೂ ಮಧ್ಯವರ್ತಿಗಳಾದ ಗ್ರಾಮಾಧಿಕಾರಿಗಳ ಸಂಘದಿಂದ ಉಮೇದುವಾರನಾಗಿ ನಿಂತಿರುತ್ತೇನೆ. ಪ್ರಜಾ ಸೇವೆ ಮಾಡಲು ಅರ್ಹನೆಂದು ತಾವುಗಳು ಪರಿಗಣಿಸುವುದಾದರೆ ತಮ್ಮ ಘನವಾದ 3 ವೋಟುಗಳಲ್ಲಿ ಒಂದು ವೋಟನ್ನು "ಘಂಟೆ" ಗುರ್ತಿನ ಪೆಟ್ಟಿಗೆಗೆ ಕೊಟ್ಟು ಮೆಂಬರಾಗಲು ಬೆಂಬಲ ಕೊಡಬೇಕಾಗಿ ಕೋರುತ್ತೇನೆ.

ಎ. ಶ್ರೀನಿವಾಸಮೂರ್ತಿ,
ಹೊನ್ನಹಳ್ಳಿ ಫಿರ್ಕಾ ಶ್ಯಾನುಭೋಗ್.

ಬನ್ನೂರಿನ ಮಹಮದ್ [illegible] ಬಾಕಸು ಜನವರಿ ೨೮ರಲ್ಲಿ ರಕ್ಷ[illegible] ಲ್ಲದೆ ಹತ್ತು ಮುಕ್ಕಾಲು ಮಣ [illegible] ಸಾಗಿಸಿದುದಕ್ಕಾಗಿ ೩೦ ರೂ. [illegible] ತಪ್ಪಿದರೆ ಒಂದು ತಿಂಗಳ ಕಠಿಣ [illegible] ಗೆ ಗುರಿಯಾಗಿದ್ದಾನೆ.

ನಿಮ್ಮ ಮೈ ಕೋಮಲವಾಗಿ [illegible]
ಹೊಳೆಯಬೇಕೆ ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿ[illegible]

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮ[illegible]
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾ[illegible]
ಬೆಂಗಳೂರು.

ರಾಜಕಮಲ್
೧೬-೩-೪೭ ರಿಂದ ೫ ನೇ ವಾರ
1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ
ಶ್ರೀ ಕೃಷ್ಣಲೀಲಾ (ಕನ್ನಡ ಚಿತ್ರ)
ಇಂಪಾದ ಗಾನಗಳು! ಸೊಂಪಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!!
ಇವೆಲ್ಲವನ್ನೂ ಇಂದೇ ನೋಡಿ.

ಅಪೆರಾ ಟಾಕೀಸ್
೨೦-೩-೪೭ ರಿಂದ
ಕುಂಡಲಕೇಶಿ
(ತಮಿಳು)
ಪ್ರತಿ ದಿನ ಮೂರು ಆಟಗಳು
ಪಾತ್ರ:- ವಸಂತಕೋಕಿಲಂ, ಹೊನ್ನಪ್ಪ ಭಾಗವತರ್, ಟಿ ಆರ್. ರಾಮಚಂದ್ರ ಮುಂತಾದವರು

Edited, printed and published by A. K. Nagarajan at the Sadhvi Press D-Subbiah Road, Mysore.

JOIN THE INDIAN AIR TRAINING CORP[S]
To Enter the Air-Force.

Applications are invited from students between 17 [and] 20 years of age of all Colleges in Mysore including Philomina and Sharada Vilas for the Summer Co[urse] of the I. A. T. C. which will commence about the 15 April.

Intending candidates are to report to the I. A. [T. C.] Office at Saraswathipuram, Mysore, between 9 a.m [and] [illegible] a. m. on any day before 25th March.

Join Now
Summer Classes in
Type writing, Short-hand and Book-keeping
at the
Champion Metropolitan College of Commerc[e]
Old Mysore Bank Buildings, Sayyaji Rao Road, Mys[ore]
Admissions received on all working days between
7 and 10 a. m. and 5 and 7 p. m.

P. Subbaraya Sas[tri]
Principal.

ಹೊಸ ಜವಳಿ
ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ
ಇಂದೇ ಭೇಟಿ ಕೊಡಿ!
ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ !!
ಬಿ. ಕೆಂಚಪ್ಪ ಸನ್ಸ್
ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು.

ಯುಗಾದಿ ಹಬ್ಬಕ್ಕೆ
ಅಚ್ಚುಮೆಚ್ಚಾದ ಸೀರೆಗಳು ಬೇಕಾದಷ್ಟು ಬಂದಿವೆ.
ನೀವೇ ಬಂದು ನಿಮಗೆ ಬೇಕಾದ್ದನ್ನು ಆರಿಸಿ.
ಬೆಲೆಯು ಕೂಡ ಬಹಳ ಅನುಕೂಲವಾಗಿದೆ.
ಬಾ[illegible] ಕಂಪೆನಿ, ಮೈಸೂರು.

ಕೋr. ನಂ. 392 | ವಂದೇ ಮಾತರಂ || ಅಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೨೦—೩—೪೭ [ಸಂಚಿಕೆ ೧೮೫

ಪಂಜಾಬಿನ ಪುಂಡರಿಗೆ — ಮರಣ ದಂಡನೆ —

ಹಿಂದಿಯೇ ಭಾರತದ ಮಾಧ್ಯಮ ಭಾಷೆ

ಮೈಸೂರು ೨೦

ಆಚಾರ್ಯ ಕೃಪಲಾನಿಯವರು ನಿನ್ನೆ ನಗರ ರಾಜಧಾನಿಯ ಹಿಂದೀ ಪ್ರಚಾರ ಸಭೆಗೆ ಭೇಟಿ ಇತ್ತಿದ್ದರು. ಶ್ರೀ|| ಅಂಟಳಿ ಸುಬ್ರಹ್ಮಣ್ಯ ಅಯ್ಯರ್ರವರು ಅವರಿಗೆ ಸ್ವಾಗತ ಕೋರಿದರು. ಬ್ರಿಟಿಷರು ಬಿಟ್ಟುಹೋದ ಮೇಲೆ ಭಾರತದಲ್ಲಿ ಇಂಗ್ಲೀಷಿಗೆ ಈಗ ಇರುವ ಸ್ಥಾನವು ಇರುವುದಿಲ್ಲ. ಭಾರತದ ವ್ಯವಹಾರ, ವ್ಯಾಪಾರ ಮತ್ತು ಸಂಬಂಧದ ವಿಚಾರದಲ್ಲಿ ಹಿಂದಿಯೇ ಮಾಧ್ಯಮ ಭಾಷೆಯಾಗುವುದು. ಹಿಂದಿಯು ಪ್ರಾಂತ್ಯ ಭಾಷೆಗಳ ಬೆಳವಣಿಗೆಗೆ ಅಡ್ಡಿ ತರುವುದಿಲ್ಲ. ಆದ್ದರಿಂದ ಪ್ರಾಂತೀಯರೆಲ್ಲರೂ ಹಿಂದಿಯನ್ನು ಕಲಿಯಬೇಕು- ಎಂಬುದಾಗಿ ಆಚಾರ್ಯರು ತಮ್ಮ ಭಾಷಣದಲ್ಲಿ ಹೇಳಿದರು.

ಕೃಪಲಾನಿಯವರ ಕಾರ್ಯಕ್ರಮ

ಮೈಸೂರು ೨೦

ಆಚಾರ್ಯ ಕೃಪಲಾನಿಯವರು ನಿನ್ನೆ ಬೆಳಿಗ್ಗೆ ೮|| ಗಂಟೆಗೆ ಕಾಂಗ್ರೆಸ್ ಕಛೇರಿಗೆ ಆಗಮಿಸಿ ಕೆಲಸಗಾರರಿಗೆ ಹಿತವಚನಗಳನ್ನಿತ್ತರು. ನಂತರ ಬೇವಾಡಿಯ ಕಸ್ತೂರಬಾ ಶಿಬಿರಕ್ಕೆ ತೆರಳಿ ಅಲ್ಲಿ ಸಭೆಯಲ್ಲಿ ಭಾಷಣ ಮಾಡಿದರು. ಖದ್ದರ್ ಪರಿಷ್ಕರಣೆಯ ಸಂಘಕ್ಕೆ ಭೇಟಿ ಇತ್ತು, ಸಂಘದ ನೂತ್ನ ಶಾಲುಜೋಡಿಯನ್ನು ಸ್ವೀಕರಿಸಿದರು. ಬನುಮಯ್ಯನವರ ಶಾಲಾ ಆವರಣದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ಸಿನವರಿಗೆ ಬಿನ್ನವತ್ತಳೆಯನ್ನು ಸ್ವೀಕರಿಸಿದರು. ಕೃಷ್ಣರಾಜ ನಗರಕ್ಕೆ ತೆರಳಿ ದೀಪೋತ್ಸವವನ್ನು ನೋಡಿದರು. ರಾತ್ರಿ ಶ್ರೀ ಹಿಂದ್ ... ರವರ ಮನೆಯಲ್ಲಿ ಭೋಜನ ಮಾಡಿದರು.

ವಿದ್ಯಾರ್ಥಿಗಳ ಸಭೆಯಲ್ಲಿ ಅಧ್ಯಕ್ಷರಿಗೆ ಅರ್ಪಿಸಲಾಗಿದ್ದ ಒಳ್ಳೆ ಉಂಗುರ, ಗಡಿಯಾರ, ಫೌಂಟೇನ್‌ಪೆನ್, ಚಪ್ಪಲಿ, ಲೋಟ ಮುಂತಾದ ಪದಾರ್ಥಗಳನ್ನು ಹರಾಜು ಮಾಡಿದ್ದರಿಂದ ಸುಮಾರು ೩ ಸಾವಿರ ರೂ. ಗಳು ವಸೂಲಾದುವು.

ಇಂದು ಬೆಳಿಗ್ಗೆ ಆಚಾರ್ಯರು ರಾಜಧಾನಿಯಿಂದ ಕೃಷ್ಣರಾಜೇಂದ್ರ ಗಿರಣಿಗೆ ತೆರಳಿ ಅಲ್ಲಿನ ಸಹಸ್ರಾರು ಕಾರ್ಮಿಕರನ್ನುದ್ದೇಶಿಸಿ ಭಾಷಣ ಮಾಡಿ ನಿಧಿಯನ್ನು ಸ್ವೀಕರಿಸಿ ಬೆಂಗಳೂರಿಗೆ ಪ್ರಯಾಣ ಮಾಡಿದರು.

SPY SMASHER

SPY SMASHER

A Stupendous Serial in 24 Reels.

-: Featuring :-

Kane Richmond

(King of the Serials)

From 20-3-47

FOR 7 DAYS ONLY

Daily 3 Shows

AT

OLYMPIA

ಗುಲಾಮಗಿರಿಯು ಎಲ್ಲರಿಗೂ ಸಮಾನವಾದುದು

ಪೌರಸಭೆಯ ಮಾನಪತ್ರಕ್ಕೆ ರಾಷ್ಟ್ರಪತಿಗಳ ಉತ್ತರ

ಮೈಸೂರು ೨೦

"ಬ್ರಿಟಿಷ್ ಭಾರತದಲ್ಲಿರಲಿ, ಸಂಸ್ಥಾನಗಳಲ್ಲಿರಲಿ, ಸಕಲ ಭಾರತೀಯರೂ ಸಮಾನವಾದ ಗುಲಾಮಗಿರಿಗೆ ಪಾತ್ರರಾಗಿದ್ದಾರೆ. ಅವರ ಸ್ಥಾನ ಮಾನಗಳು ಎಷ್ಟೇ ಮಹತ್ವವುಳ್ಳದ್ದಾಗಿರಲಿ ಗುಲಾಮಗಿರಿಯು ತಪ್ಪಿದ್ದಲ್ಲ. ಇದು ರಾಜರುಗಳಿಗೂ ಸಹ ಅನ್ವಯಿಸುವುದು. ಗುಲಾಮಗಿರಿಗೆ ಗುಲಾಮರಾಗಿರುವುದು ಇಂದಿನ ನಮ್ಮದು ಸ್ಥಿತಿಯಾಗಿರುತ್ತದೆ." ಎಂಬುದಾಗಿ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ನಿನ್ನೆ ಪೌರಸಭೆಯವರ ಬಿನ್ನವತ್ತಳೆಗೆ ಉತ್ತರವೀಯುತ್ತಾ ನುಡಿದರು. ಈ ಸಮಾರಂಭಕ್ಕಾಗಿ ಪುರಭವನವು ನೇತ್ರಾನಂದಕರವಾಗಿ ಶೃಂಗರಿಸಲ್ಪಟ್ಟಿತ್ತು. ಎಳ್ಳುಕಾಳು ಹಾಕುವುದಕ್ಕೂ ಸ್ಥಳವಿಲ್ಲದಷ್ಟು ಜನಸಂದಣಿಯು ... ಪೋಲೀಸಿನವರು ಸಭಾಂಗಣದ ಬಳಿ ಶಿಸ್ತು ವ್ಯವಸ್ಥೆಗಳನ್ನು ಸಂರಕ್ಷಿಸುತ್ತಿದ್ದರು. ಜಿಲ್ಲಾಧಿಕಾರಿಗಳು ಸ್ವತಃ ಹಾಜರಿದ್ದು ಮೇಲ್ವಿಚಾರಣೆಗಳನ್ನು ನೋಡಿಕೊಳ್ಳುತ್ತಿದ್ದರು.

ಸ್ವಾಗತಗೀತೆಯ ನಂತರ ಪೌರಸಭೆಯ ಉಪಾಧ್ಯಕ್ಷರಾದ ಶ್ರೀ ಟಿ ನರಸಿಂಹಯ್ಯಂಗಾರ್ಯರವರು ಬಿನ್ನವತ್ತಳೆಯನ್ನು ಓದಿ ಗಂಧದ ಕರಂಡದಲ್ಲಿ ರಾಷ್ಟ್ರಪತಿಗಳಿಗೆ ಒಪ್ಪಿಸಿದರು. ಕಲಾವಿದರಾದ ಶ್ರೀ ಎಸ್. ಎನ್ ಸ್ವಾಮಿಯವರು ರಚಿಸಿದ್ದ ಮಹಾತ್ಮರ ಭಾವಚಿತ್ರದ ಪಟವನ್ನು ಅರ್ಪಿಸಿದರು. ಶ್ರೀ ಎಂ ಪಿ ಲಿಂಗಪ್ಪಯ್ಯನವರು ತಮ್ಮ ಔದ್ಯೋಗಿಕ ಶಾಲೆಯಲ್ಲಿ ತಯಾರಾದ ಕೈ ನೂಲಿನ ಶಾಲುಜೋಡಿಯನ್ನು ಅರ್ಪಿಸಿದರು.

ಆಚಾರ್ಯರು ಬಿನ್ನವತ್ತಳೆಗೆ ಉತ್ತರವಿತ್ತು ಈ ರೀತಿ ಹೇಳಿದರು:—

ಈ ಬಿನ್ನವತ್ತಳೆಯನ್ನು ಪೌರಸಭೆಯ ಅಧ್ಯಕ್ಷರು ಒಪ್ಪಿಸಿದರೆಂದು ಮೊದಲು ನಾನು ಭಾವಿಸಿದ್ದೆ. ಆದರೆ ಅವರು ಸರ್ಕಾರಿ ನೌಕರರೆಂದು ಈಚೆಗೆ ತಿಳಿಯಿತು. ಅವರು ಬುದ್ಧಿವಂತರು. ಆದುದರಿಂದಲೇ ಅವರು ಇಲ್ಲಿಗೆ ಬಂದಿರುವುದಿಲ್ಲ. ತಿರುವಾಂಕೂರಿನಲ್ಲಿ ನನ್ನ ಭಾಷಣಕ್ಕೆ ಅಧಿಕಾರಿಗಳು ವ್ಯವಧಾನವನ್ನು ಕೊಡಲಿಲ್ಲ. ರಸ್ತೆಯಲ್ಲಿಯೇ ಭಾಷಣ ಮಾಡಬೇಕಾಯಿತು.

ತಮ್ಮ ಸಾರ್ವಭೌಮತ್ವವು ಇನ್ನು ಮುಂದೆ ನಡೆಯುವುದಿಲ್ಲವೆಂದು ತಿಳಿದಾಗ ಬ್ರಿಟಿಷರು ಹೊರಟುಹೋಗಲು ಸಿದ್ಧರಾಗುತ್ತಿರುವರು. ಅದರ ಮುಂದೆ ಸ್ನೇಹ ಸೌಹಾರ್ದದ ಸಂಬಂಧವಿರಲು ಅವರು ಏರ್ಪಾಡು ಮಾಡಿಕೊಳ್ಳುತ್ತಿರುವರು. ನಮ್ಮವರಾದರೋ ವಿರಸ ಮಾರ್ಗದಲ್ಲಿಯೇ ತೊಡಗಿರುವರು. ಇಂಗ್ಲೆಂಡಿನಲ್ಲಿಯೂ ರಾಜರಿರುವರು. ಅವರಿಗೆ ಸಕಲ ಅಧಿಕಾರಗಳೂ ಇರುವುವು. ಆದರೆ ಅವುಗಳಿಂದನ್ನೂ ಅವರು ಪ್ರಯೋಗಿಸುವುದಿಲ್ಲ. ಎಲ್ಲ ಅಧಿಕಾರಗಳನ್ನೂ ಪ್ರಧಾನ ಮಂತ್ರಿಗಳೇ ಚಲಾಯಿಸುವರು. ರಾಜರಿಗೂ ಮಂತ್ರಿಗಳಿಗೂ ಈ ಬಗ್ಗೆ ಪರೋಕ್ಷವಾದ ಅಂತರಂಗದ ಒಡಂಬಡಿಕೆಯು ಇರುತ್ತದೆ. ರಾಜರು ಮಾರ್ಗಪ್ರದರ್ಶಕರಂತೆ ಇರುವರು. ನಮ್ಮಲ್ಲಿ ಹಾಗೆ ಇರುವುದಿಲ್ಲ. ನಾವೆಲ್ಲರೂ ಪರಕೀಯರ ಗುಲಾಮರು. ಸಂಸ್ಥಾನದಲ್ಲಿರುವವರಿಗೆ ಇಬ್ಬಗೆಯ ಗುಲಾಮಗಿರಿಯು ಇರುತ್ತದೆ. ರಾಜ ಮಹಾರಾಜರುಗಳಿಗೂ ಇದು ತಪ್ಪಿದ್ದಲ್ಲ. ಅವರ ಸ್ಥಾನಮಾನಗಳು ಎಷ್ಟೇ ಉನ್ನತವಾಗಿರಲಿ, ತಮ್ಮ ಇತರ ಬಾಂಧವರ ಸ್ಥಿತಿಯು ಅವರಿಗೂ ಅನ್ವಯಿಸುವುದು. ಒಬ್ಬ ಭಿಕ್ಷುಕನಿಗೂ ಕೂಡ ತನಗೆ ಬೇಕಾದವರನ್ನು ಭೇಟಿ ಮಾಡುವ ಸ್ವಾತಂತ್ರ್ಯವಿದೆ; ನಮ್ಮ ರಾಜರುಗಳಿಗೆ ಆ ಸ್ವಾತಂತ್ರ್ಯವೂ ಇಲ್ಲ.

ನಮ್ಮ ನಗರಗಳು ಬಹಳ ಸುಂದರವಾಗಿರುವುದೇನೋ ನಿಜ. ಆದರೆ ಅವು ಕೇವಲ ಕೆಲವು ಮಾತ್ರ. ಹಳ್ಳಿಗಳ ರಕ್ತವನ್ನು ಹೀರಿ ಈ ನಗರಗಳು ಬೆಳೆದಿರುತ್ತವೆ. ಸಹಾರದಂತಹ ಮರುಭೂಮಿಯಲ್ಲಿ ಸಣ್ಣ ಸಣ್ಣ ಜಲಾಶಯಗಳು ಇದ್ದಂತೆ ಈ ನಗರಗಳು ಕಂಡುಬರುತ್ತವೆ. ಗ್ರಾಮಗಳ ಅಭ್ಯುದಯಕ್ಕೆ ನಗರ ಸಭೆಯವರೇ ಸಕಲ ವ್ಯವಸಾಯಗಳನ್ನು ನಡೆಸಿ, ತಮ್ಮ ಹಳ್ಳಿಗಳ ಏಳಿಗೆಯನ್ನು ಸಾಧಿಸಿಕೊಳ್ಳಬೇಕು.

ಸಭೆಯಲ್ಲಿ ರಾಷ್ಟ್ರಪತಿಗಳಿಗೆ ಅರ್ಪಿಸಲಾದ ಬಳೆ, ಉಂಗುರ ಮತ್ತು ಇತರ ಪದಾರ್ಥಗಳನ್ನು ಹರಾಜು ಹಾಕಲಾಗಿ ಸುಮಾರು

ರಾಜಕಮಲ್

೨೧-೩-೪೭ ರಿಂದ ೪ ದಿನಗಳು

ದಿನಕ್ಕೆ ೧೧-೩೦ ಘಂಟೆಗೆ

ಆಗೇ ಕದಂ

ಪಾತ್ರ:- ಮೋತೀಲಾಲ್ ಮತ್ತು ಅಂಜಲಿದೇವಿ

ಮಾನನಷ್ಟ ಮೊಕದ್ದಮೆ

ಮೈಸೂರು ೨೦

"ಮೈಸೂರು ಪತ್ರಿಕೆ" ಯ ೧೮ ನೇ ತಾ|| ಸಂಚಿಕೆಯಲ್ಲಿ ಕಾರ್ಪೊರೇಷನ್ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ತಮಗೆ ಬೇಕಾದವರಿಗೆ ಮುಂಚೆ ಒಟ್ಟಿ ಕೊಡುತ್ತದೆ ದ. ಪಕ್ಷಟವಾಗಿರುವ ಲೇಖನದ ಬಗ್ಗೆ ತಮಗೆ ಮಾನನಷ್ಟವಾಗಿರುವುದೆಂದು ಪ್ರಜಾಪ್ರತಿನಿಧಿ ಸಭೆ ಮತ್ತು ಪುರಸಭಾ ಸದಸ್ಯರಾದ ಡ|| ವಿಲ್‌ನರ್ ಹುಸೇನ್ ರವರು ಮೈಸೂರು ಚಾವಡಿ ಬೀದಿಯಲ್ಲಿರುವ ಶ್ರೀ ಎಸ್ ರಾಮಸ್ವಾಮಿ ಮತ್ತು ಮೈಸೂರು ಪತ್ರಿಕಾ ಸಂಪಾದಕರಾದ ಶ್ರೀ ಟಿ. ನಾರಾಯಣರವರ ಮೇಲೆ ನಗರ ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ಹೂಡಿರುತ್ತಾರೆ. ವಿಚಾರಣೆ ಏಪ್ರಿಲ್ ೧ ಕ್ಕೆ ಆರಂಭವಾಗುವುದು.

ರಾಷ್ಟ್ರಪತಿಗಳಿಗೆ ಸ್ವಾಗತ

ಸ್ವಂ. ಸು ಪ್ರೋ] ಬೆಂಗಳೂರು ೨೦

ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ೧.೪೫ ಕ್ಕೆ ಆಗಮಿಸಿದರು. ಮೈಸೂರು ರಸ್ತೆ ಗೇಟಿನ ಬಳಿ ಸುಮಾರು ೩೦೦ ಜನರು ಅವರನ್ನು ಸ್ವಾಗತಿಸಿದರು. ಅವರು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ|| ಕೆ ಸಿ ರೆಡ್ಡಿಯವರ ಅತಿಥಿಗಳಾಗಿದ್ದಾರೆ. ಇಂದು ಅವರು ಭಾರತ ವಿಜ್ಞಾನ ಕೇಂದ್ರಕ್ಕೆ ಭೇಟಿ ಇತ್ತಿದ್ದರು. ಮೆಜೆಸ್ಟಿಕ್ ಥಿಯೇಟರಿನಲ್ಲಿ ಆಚಾರ್ಯರಿಗೆ ಗುಜರಾತ್ ಮತ್ತು ಮರಾಠಾ ಕೋಮಿನವರು ಬಿನ್ನವತ್ತಳೆಯನ್ನು ಸಮರ್ಪಿಸಿದರು. ಸಂಸ್ಥಾನದ ಸರ್ಕಾರಿ ನೌಕರರ ಸಂಘಕ್ಕೆ ಭೇಟಿಯಿತ್ತು ಅಲ್ಲಿ ಸ್ವಲ್ಪ ಕಾಲ ಸಂಭಾಷಣೆ ನಡೆಸಿದರು. ವಿದ್ಯಾರ್ಥಿ ಕಾಂಗ್ರೆಸ್ಸಿನವರು ಬಸವನಗುಡಿಯ ಪಕ್ಷ ಸಂಘದಲ್ಲಿತ್ತ ಬಿನ್ನವತ್ತಳೆಯನ್ನು ಸ್ವೀಕರಿಸಿದರು. ಪುರಸಭೆಯ ಸಮಾರಂಭ ಏ.|| ಏಪ್ರಿಲ್ ರವರು ಇತ್ತ ಮಾನಪತ್ರವನ್ನು ಸ್ವೀಕರಿಸಿದರು. ಈ ರಾತ್ರಿ ಆಚಾರ್ಯರು ಮದ್ರಾಸಿಗೆ ತೆರಳುವರು.

ಪಂಜಾಬಿನಲ್ಲಿ ಮರಣದಂಡನೆ ಶಾಸನ

ಅರಾಜಕತೆಯನ್ನು ಹೋಗಲಾಡಿಸಿ, ಶಾಂತಿ ಮತ್ತು ಶಿಸ್ತು ನೆಲೆಸ ಮಾಡಲು ಗಲಭೆ ಪ್ರದೇಶಗಳಲ್ಲಿ ಗವರ್ನರು ವಿಶೇಷ ಶಾಸನವೊಂದನ್ನು ಜಾರಿಗೆ ತಂದಿದ್ದಾರೆ. ಕೊಲೆ ಪ್ರಯತ್ನ, ದರೋಡೆ, ಸ್ತ್ರೀ ಅಪಹಾರ, ಅತ್ಯಾಚಾರ, ಲೂಟಿ ಮುಂತಾದ ಕೃತ್ಯಗಳಲ್ಲಿ ತೊಡಗುವವರಿಗೆ ಈ ಶಾಸನ ದಂಡನೆ ಮರಣ ದಂಡನೆಯನ್ನು ವಿಧಿಸಬಹುದಾಗಿದೆ.

ಕೊಚ್ಚಿ ಶಾಸನ ಸಭೆಗೆ ಚುನಾಯಿತ ಅಧ್ಯಕ್ಷರು

ಕೊಚ್ಚಿ ಸಂಸ್ಥಾನದ ಶಾಸನ ಸಭೆಗೆ ಸಭೆಯ ಸದಸ್ಯರಿಂದ ಚುನಾಯಿತರಾದವರೇ ಅಧ್ಯಕ್ಷರಾಗಬೇಕೆಂದು ಅಲ್ಲಿನ ಶಾಸನ ಸಭಾಸದಸ್ಯರು ಮಾಡಿದ್ದ ನಿರ್ಣಯವನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ. ಬರುವ ಏಪ್ರಿಲ್ ೧೧ ನೇ ತಾರೀಖು ಅಧ್ಯಕ್ಷ ಚುನಾವಣೆಯು ನಡೆಯುವುದು.

—೩೦೦೦ ರೂ ವಸೂಲಾಯಿತು. ಪೌರಸಭೆಯು ಸದಸ್ಯರ ಪರವಾಗಿ ೫೦೦ ರೂ. ಕೊಡುವುದಾಗಿ ವಾಗ್ದಾನ ಮಾಡಲಾಯಿತು. ವಂದೇ ಮಾತರಂ ಗೀತೆಯೊಂದಿಗೆ ಜಯಘೋಷ ಪಠನಗಳೊಡನೆ ಸಭೆ ಮುಕ್ತಾಯವಾಯಿತು.

ಸಾಧ್ವಿ

ತಾ|| ೨೦-೩-೪೭ ಗುರುವಾರ

ಭಾರತ ಮಾತೆಯ ವೀರವಾಣಿ

ರಾಷ್ಟ್ರಪತಿಯವರು ನಿನ್ನೆ ರಾಜಧಾನಿಯ ಸಮಾರಂಭಗಳಲ್ಲಿ ಸಾರಿದ ಸಂದೇಶವು ಭಾರತ ಮಾತೆಯ ವೀರವಾಣಿಯಂತಿರುತ್ತದೆ ಇಂದಿನ ಪರಿಸ್ಥಿತಿಯಲ್ಲಿ ದೇಶಬಾಂಧವರ ಕರ್ತವ್ಯದ ಬಗ್ಗೆ ಅವರು ನಿರೂಪವನ್ನು ಕೊಟ್ಟಿರುತ್ತಾರೆ ಸ್ವಾತಂತ್ರ್ಯದ ಹೊಸ್ತಿಲಿನಲ್ಲಿರುವ ಈ ಸಮಯದಲ್ಲಿ ಭಾರತೀಯರೆಲ್ಲರೂ ಹೇಗೆ ವರ್ತಿಸಬೇಕೆಂಬುದನ್ನು ಸೂಚಿಸಿರುತ್ತಾರೆ.

ಸ್ವಾತಂತ್ರ್ಯ ಸಾಧನೆಯ ಸಂಗ್ರಾಮದಲ್ಲಿ ಸಲ್ಲಿಸಿರುವ ತ್ಯಾಗ ಮತ್ತು ಸೇವೆಗಳನ್ನು ನೆನೆಯುತ್ತ ಹಿಗ್ಗುವ ಕಾಲವಿದಲ್ಲ ಇತರ ದೇಶಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಜನರು ದೇಶಕ್ಕಾಗಿ ಪ್ರಾಣವನ್ನು ಅರ್ಪಿಸಿರುತ್ತಾರೆ. ಅವರುಗಳು ತಮ್ಮ ತ್ಯಾಗದ ಪ್ರಶಂಸೆಯನ್ನು ಮಾಡಿಕೊಳ್ಳುತ್ತಿಲ್ಲ. ರಾಷ್ಟ್ರದ ಪುನರ್ನಿರ್ಮಾಣಕ್ಕಾಗಿ ಈಗಿನಿಂದಲೇ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗಿದೆ.

ಭವಿಷ್ಯ ಭಾರತದ ನಿರ್ಮಾಣಕ್ಕೆ ಈಗ ಅತ್ಯಂತ ಅಗತ್ಯವಾಗಿರುವುದು ಶಿಸ್ತು ಮತ್ತು ವ್ಯವಸ್ಥೆ. ಆದರೆ ದೇಶದಲ್ಲಿ ಎಲ್ಲೆಲ್ಲೂ ಅಧಿಕಾರ ಲಾಲಸೆ, ಸ್ವಾರ್ಥ, ಮಾನಗಳ ಹಿ... ಹಾನಿ ಮತ್ತು ಕೋಮುವಾರು ವೈಷಮ್ಯಗಳು ತಲೆದೋರುತ್ತಿವೆ. ಇವುಗಳಿಂದ ನವಭಾರತದ ನಿರ್ಮಾಣವಾಗುವುದಿಲ್ಲ ನಿಜವಾದ ಭಾರತ ಜನರ ನಮ್ಮ ಹಳ್ಳಿಗಳ ಉದ್ಧಾರದಲ್ಲಿಯೇ ಇರುತ್ತದೆ. ದಿಲ್ಲಿಯಲ್ಲಿ ಶಾಸನ ಸಭೆಗಳನ್ನು ಆಲಂಕರಿಸುವುದರಲ್ಲಿ ಇಲ್ಲ. ಗ್ರಾಮಗಳ ಪುನರುಜ್ಜೀವನದಿಂದಲೇ ಭಾರತದ ಸ್ವಾತಂತ್ರ್ಯವು ಸಾಧಿಸಲ್ಪಡಬೇಕು ಇದಕ್ಕಾಗಿ ಮಹಾತ್ಮರು ರಚನಾತ್ಮಕ ಕಾರ್ಯಕ್ರಮದ ವ್ಯವಸ್ಥೆಯ...

ಮುನಿಸಿಪಲ್ ನೌಕರರಿಗೂ ಪರಿಹಾರ ಬೇಕು

ಮೈಸೂರು ಮುನಿಸಿಪಲ್ ಕೆಲಸಗಾರರು ಸರ್ಕಾರಿ ನೌಕರರಂತೆ ತಮಗೂ ತಾತ್ಕಾಲಿಕ ಪರಿಹಾರ ನೀಡಬೇಕೆಂದು ಸಲ್ಲಿಸಿದ ಪ್ರಾರ್ಥನೆಗೆ ಅಧಿಕಾರಿಗಳು ಗಮನವನ್ನೇ ಕೊಟ್ಟಿಲ್ಲ ಕೆಲಸಗಾರರ ಸಂಘದ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಮೇಲೆ ಮೊಕದ್ದಮೆಯನ್ನು ಹೂಡಲಾಗಿದೆ. ಕೆಲಸಗಾರರು ಮುಷ್ಕರ ಹೂಡಿದರೆ ಮಹಾಜನರಿಗೆ ತೊಂದರೆಯಾಗುವುದು ಆದ್ದರಿಂದ ಇತರ ಕೂಲಿಗಾರರೂ, ರಾಜಕೀಯ ಪಕ್ಷಗಳವರೂ, ಪ್ರಜಾಸಭಾ ಸದಸ್ಯರೂ, ಮಹಾಜನರೂ ಕೆಲಸಗಾರರ ಬೇಡಿಕೆಗೆ ಬೆಂಬಲವಿತ್ತು ಮೊಕದ್ದಮೆಗಳನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಒತ್ತಾಯಪಡಿಸಬೇಕು-ಎಂಬುದಾಗಿ ಸದರಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಕೋರಿರುತ್ತಾರೆ

ನ್ನು ನಿರ್ದೇಶಿಸಿದ್ದಾರೆ ಅದನ್ನು ಅನುಸರಿಸುವುದೇ ಸಕಲ ಭಾರತೀಯರ ಮುಂದೆ ಇರುವ ಕರ್ತವ್ಯ. ಇದೇ ರಾಷ್ಟ್ರಪತಿಗಳ ದಿವ್ಯ ಸಂದೇಶ. ಮೈಸೂರಿನ ಪ್ರಜೆಗಳು ದೇಶ ಮಾತೆಯ ಈ ಕರೆಗೆ ಕಿವಿಗೊಟ್ಟು ತಮ್ಮ ಕರ್ತವ್ಯವನ್ನು ಈಡೇರಿಸುವರೇ ?

ಅಪೆರಾ ಟಾಕೀಸ್, ಮೈಸೂರು

೨೦-೩-೪೭ ರಿಂದ

ಕುಂಡಲಕೇಶಿ

(ತಮಿಳು)

ಪ್ರತಿ ದಿನ ಮೂರು ಆಟಗಳು

ಪಾತ್ರ:-ವಸಂತಕೋಕಿಲಂ, ಹೊನ್ನಪ್ಪ ಭಾಗವತರ್, ಟಿ ಆರ್ ರಾಮಚಂದ್ರನ್ ಮುಂತಾದವರು

Morning shows from 21-3-47

STORM OVER LISBON

ಪತ್ರಿಕೋದ್ಯೋಗಿಗಳಿಗೆ ಗಾಂಧೀಜಿ ಆದರ್ಶ

ಪತ್ರಿಕೋದ್ಯೋಗಿಗಳ ಸಂಘದಲ್ಲಿ ರಾಷ್ಟ್ರಪತಿಯವರ ಭಾಷಣ

ಮೈಸೂರು ೨೦

ಮಹಾತ್ಮಾ ಗಾಂಧಿಯವರು ಪತ್ರಿಕೋದ್ಯಮದ ಉನ್ನತ ಆದರ್ಶವನ್ನು ಹಾಕಿಕೊಟ್ಟಿದ್ದಾರೆ. ಅದನ್ನು ಎಲ್ಲರೂ ಅನುಸರಿಸುವುದ ಉತ್ತಮ. ಸತ್ಯ ಪ್ರತಿಪಾದನೆಯೇ ಪತ್ರಿಕೋದ್ಯೋಗಿಗಳ ಮುಖ್ಯ ಗುರಿಯಾಗಿರಬೇಕು. ಆದರೆ ಹಿತಕರವಲ್ಲದ ಸತ್ಯವನ್ನು ಸಹ ಪ್ರಕಟಿಸುವುದು ಯುಕ್ತವಲ್ಲ-ಎಂಬುದಾಗಿ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ನಿನ್ನೆ ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ಸನ್ಮಾನ ಸಮಾರಂಭದಲ್ಲಿ ನುಡಿದರು. ಪಾಶ್ಚಿಮಾತ್ಯ ದೇಶಗಳಲ್ಲಿ ಕೇವಲ ಧನ, ಅಧಿಕಾರ ಮತ್ತು ಪ್ರಾಬಲ್ಯಗಳ ದೃಷ್ಟಿಯಿಂದ ಪತ್ರಿಕಾ ವೃತ್ತಿಯು ಸಾಗುತ್ತಿದೆ. ಅಲ್ಲಿ ಅಕ್ಷರ ಜ್ಞಾನವು ವಿಶೇಷವಾಗಿ ಬೆಳೆದಿದ್ದರೂ, ಪ್ರಕಟಣೆಗಳಿಂದ ಪತ್ರಿಕೋದ್ಯಮವು ಸಮಾಜಕ್ಕೆ ಹೆಚ್ಚಿನ ಹಾನಿಯನ್ನೇ ಉಂಟುಮಾಡುತ್ತಿದೆ. ನಮ್ಮ ದೇಶದ ಪತ್ರಿಕಾ ಚಾಲಕರು ದೇಶಾಭಿಮಾನದಿಂದ ಸಮಾಜಕ್ಕೆ ಹಿತಕರವಾದ ರೀತಿಯಲ್ಲಿ ಪತ್ರಿಕೆಗಳನ್ನು ಪ್ರಕಟಿಸಬೇಕು - ಎಂಬುದಾಗಿ ಅವರು ತಿಳಿಸಿದರು

ಚಾಮರಾಜನಗರದ ಮೋಟಾರು ಮಹಾಶಯರಲ್ಲಿ ವಿಜ್ಞಾಪನೆ

1947 ನೇ ಇಸವಿ ಏಪ್ರಿಲ್ ಮಾಹೆ 28 ನೇ ತಾರೀಖು ನಡೆಯುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಚಾಮರಾಜನಗರ ದ ತಾಲ್ಲೋಕಿನಿಂದ ನಾನೊಬ್ಬ ಸಂಸ್ಥಾನ ಪ್ರಜಾ ಪಕ್ಷದ ಅಭ್ಯರ್ಥಿ ಕಾಂಗ್ರೆಸ್ ದ ... ಮಹಾಶಯರಿಗೆ ... ನಾನು ಅಭ್ಯರ್ಥಿಯಾಗಿ ನಿಂತಿರುತ್ತೇನೆ. ಪ್ರಜಾಸೇವೆ ಮಾಡಲು ಅರ್ಹನೆಂದು ತಾವುಗಳು ಪರಿಗಣಿಸುವುದಾದರೆ ತಮ್ಮ ಬೆಲೆಯಾದ 3 ವೋಟಿನ ಕಳ್ಳ ಒಂದು ವೋಟನ್ನು "ಘಂಟೆ" ಗುರ್ತಿನ ಪಕ್ಕದಲ್ಲಿ ಕೊಟ್ಟು ಮೆಂಬರಾಗಲು ಬೆಂಬಲ ಕೊಡಬೇಕಾಗಿ ಕೋರುತ್ತೇನೆ.

ಎ ಶ್ರೀನಿವಾಸಮೂರ್ತಿ,

ಹೊನ್ನಹಳ್ಳಿ ಫಿರ್ಕಾ ಕ್ಯಾನ್ ಡಿಡೇಟ್.

ಶ್ರೀ ರಾಮೋತ್ಸವ

ಸ್ವಂ.ಸು.] ಯಳಂದೂರು,

ಈ ಊರಿನ ಶ್ರೀ ರಾಮ ಮಂದಿರದಲ್ಲಿ ಮಾಮೂಲಿನಂತೆ ಚೈತ್ರ ಶುದ್ಧ ಪಾಡ್ಯ ದಿಂದ ಪ್ರಾರಂಭವಾಗಿ ದ್ವಾದಶಿವರೆಗೆ ರಾಮೋತ್ಸವ ನಡೆಯುವುದು ಭಕ್ತಾದಿಗಳು ತಮ್ಮ ತಮ್ಮ ಸಹಕಾರ, ಸಹಾಯಗಳನ್ನು ನೀಡಬೇಕೆಂದು ಕೋರಲಾಗಿದೆ.

ಪ್ರೌಢಶಾಲಾ ಬೋಧಕ ಸಂಘ

ಕಳೆದ ೧೬ ನೇ ತಾ|| ಮಂಗಳವಾರ ನಡೆದ ಉತ್ಸವದಲ್ಲಿ ವಿದ್ಯಾರ್ಥಿಗಳು ಶ್ರೀ ಶಾರದಾ ಪೂಜೆಯನ್ನು ರೇಂಜ್ ಇನ್ಸ್‌ಪೆಕ್ಟರ್ ಶ್ರೀ ಎಂ ಸಿ. ಸುಬ್ಬಪ್ಪನವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಅನೇಕ ಪೋಷಕರು ದಯಮಾಡಿಸಿದ್ದರು ಅಧ್ಯಕ್ಷರು ಮಾತನಾಡುತ್ತ ವಿದ್ಯಾರ್ಥಿಗಳ ಅಭಿವೃದ್ಧಿಗೆ ಪೋಷಕರ ಸಹಕಾರವು ಅವಶ್ಯಕವೆಂದು ತಿಳಿಸಿದರು.

ಕಳೆದ ೧೬ ನೇ ತಾರೀಖಿನ ದಿನ ಗಿರಿಮಲ್ಲಪ್ಪನವರ ಮಾಧ್ಯಮಿಕ ಶಾಲೆ ವಿದ್ಯಾರ್ಥಿಗಳು ಶ್ರವಣಬೆಳಗೊಳಕ್ಕೆ ಪ್ರವಾಸ ಹೋಗಿ ಅಲ್ಲಿ ತಂಗಿದ್ದು ಮಾರನೇ ದಿನ ವಾಪಸು ಬಂದರು.

ರಣಜಿತ್

೨೧-೩-೪೭ ರಿಂದ

ಹೋಳಿ

ಪ್ರತಿ ದಿನ ೩ ಆಟಗಳು

ಖುರ್ಷಿದ್ — ಮೋತೀಲಾಲ್

ರಾಜಕಮಲ್

೧೬-೩-೪೭ ರಿಂದ ೫ ನೇ ವಾರ

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕಷ್ಟಲೀಲಾ

(ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಂಪಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!

ಇವೆಲ್ಲವನ್ನೂ ಇಂದೇ ನೋಡಿ.

Edited, printed and published by A.K. Nagaraian at the Sadhvi Press, D. Subbiah Road, Mysore.

JOIN THE INDIAN AIR TRAINING CORPS

To Enter the Air-Force.

Applications are invited from students between 17 and 20 years of age of all Colleges in Mysore including St. Philomina and Sharada Vilas for the Summer Course of the I. A. T. C which will commence about the 15th of April.

Intending candidates are to report to the I. A. T. C. Office at Saraswathipuram, Mysore, between 9 and 11 a. m. on any day before 25th March.

ಕಂಟ್ರೋಲು ಬೆಲೆ! ಸುಸಮಯ!

ಹೊಸ ಜವಳಿ

ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಟೆರಾಯಿನ್, ಶಂಟಿ, ಆರ್ಗಂಡಿ, ಕಾಂಚೀಪುರ, ಹುಬ್ಬಳ್ಳಿ ಸೀರೆಗಳೂ, ಕಂಚಿ ಸೀರೆಗಳೂ, ನೂರಿನ ಪೂನಾ ರವಿಕೆ ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.

M. P. V., M. V. ಭೋಜಯ್ಯ B. A. ಅಂಡ್ ಬ್ರದರ್ಸ್

ಬೊಂಬಾಯಿ ಆನಂದ ಭವನ ಹೋಟೆಲ್ ಲೈನ್ ಬಲಭಾಗದ ಕೊನೇ ಜವಳಿ ಅಂಗಡಿ, ಮೈಸೂರು

ನಮ್ಮ ಅಂಗಡಿಗೆ ಇಂದು ತಾರಾಮತಿ, ಚಂದ್ರಮತಿ, ಭಾನುಮತಿ, ರತಿದೇವಿ, ಸೂರ್ಯಕುಮಾರಿ, ಇವರೂ, ಅರುಂಧತಿ, ಅನಸೂಯಾ ಬಾಯಿಯವರೂ, ಕಾವೇರೀ ಬಾಯಿ ತುಂಗಮ್ಮ ಪೇಟೆ ಪದ್ಮನವರೂ, ಗೃಹಲಕ್ಷ್ಮೀ, ಭೀಮಾಬಾಯಿ, ಚಂದ್ರಭಾಗ-ಗೋದಾವರೀ ಬಾಯಿಯವರೂ, ಗಂಗಾ, ಯಮುನಾ, ಭಾಗೀರಥೀ ಬಾಯಿಯವರೂ, ಯಶೋದಾಬಾಯಿ, ಸತ್ಯಭಾಮಾ, ರುಕ್ಮಿಣೀ ದೇವಮ್ಮನವರೂ, ಕಮಲಾಬಾಯಿ, ಅಂಬುಜ, ಪಂಕಜ, ಬೀಬಿ ಸರೋಜ ಇವರುಗಳೂ, ರಂಗಮ್ಮ, ಕೆಂಪನಂಜಮ್ಮ, ನೀಲಮ್ಮ ಕಾಳಮ್ಮ ಮುದ್ದಮ್ಮನವರೂ, ವಿಶಾಲಾಕ್ಷಿ, ಜಲಜಾಕ್ಷಿ, ಕಮಲಾಕ್ಷಿ, ವನಜಾಕ್ಷಿ, ಕಾಮಾಕ್ಷಮ್ಮನವರೂ, ಸೀತಾಲಕ್ಷ್ಮಿ, ಸುಬ್ಬಲಕ್ಷ್ಮಿ, ಧನಲಕ್ಷ್ಮಿ, ಭಾಗ್ಯಲಕ್ಷ್ಮಿ, ಸಂತಾನಲಕ್ಷ್ಮಿ ಇವರುಗಳ ಜೊತೆ ಪದ್ಮ, ಸಣ್ಣಮ್ಮ, ಪುಟ್ಟಮ್ಮ, ಪಾಪಮ್ಮ ಇವರೂ, ಚಲುವೇಲಮ್ಮ, ದೇವೀರಮ್ಮನವರೂ ಮಹಾದೇವಿ, ಜ್ವಾಲಾಮುಖಿಯು, ಚಾಮುಂಡಮ್ಮ, ಮಂಡೋದರೀ ಮುಂತಾದ ಇವರುಗಳೆಲ್ಲಾ ... ನಮ್ಮ ಸ್ವೀಕರಿಸಿದ ನಂತರ ತಮಗೆ ಬೇಕಾದ ಸೀರೆಗಳನ್ನು ತಾವೇ ಆರಿಸಿಕೊಂಡು ಹೋದರು. ನಮ್ಮಲ್ಲಿರುವ ನೌಕರರಿಗೆ ಗಳನ್ನು, ನಮೂನೆಗಳನ್ನೂ, ಬೆಲೆಗಳನ್ನೂ ನೋಡಿದರೆ ನೀವೂ ಆನಂದಪಡುವಿರಿ ನೀವೂ ಕೂಡ ಬಂದು, ನಿಮಗೆ ಬೇಕಾದ ಸೀರೆಗಳನ್ನು ನೀವೇ ಆರಿಸಿಕೊಂಡು ಹೋಗಿ.

ಚಾಮುಂಡಾ ಕಂಪನಿ, ಸೀ ... ... ಓಲ್ಡ್ ... ... ರೋಡ್, ಮೈಸೂರು.

ಫೋ. ನಂ 392 | ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೧—೩—೪೭ [ಸಂಚಿಕೆ ೮೯೦

ಪಂಜಾಬ್ ವಿಭಜನೆಗೆ ಗೌರ್ನರರ ಬೆಂಬಲ

ಕೃಪಲಾನಿಗಳಿಗೆ ಅದ್ಭುತ ಸ್ವಾಗತ

೫೦ ರೂ ನಿಧಿ ಸಮರ್ಪಣೆ

ಫೋ] ಬೆಂಗಳೂರು ೨೧

...ಚಾರ್ಯ ಕೃಪಲಾನಿಯವರ ಗೌರವಾ... ನಿನ್ನೆ ಮಧ್ಯಾಹ್ನ ೨ ಗಂಟೆಯಿಂ... ಗಂಟೆ ವರೆಗೆ ಇಲ್ಲಿ ಅನೇಕ ಸ... ಭೆಗಳು ಜರುಗಿದುವು ಮೊದಲು ... ಟಾಟಾ ವಿಜ್ಞಾನ ಮಂದಿರಕ್ಕೆ ಭೇಟಿ ... ಡಾ|| ಘೋಷ್ ಮತ್ತು ಇತ... ಪಕರೂ, ವಿದ್ಯಾರ್ಥಿಗಳೂ ಅವರ... ಸ್ವಾಗಿಸಿದರು ಆಚಾರ್ಯರು ಈರೀತಿ ...:—

...ನಾರ್ಜನೆಯಲ್ಲಿ ಒಳ್ಳೆಯುದೂ ಇರು... ಕೆಟ್ಟುದೂ ಇರುತ್ತದೆ ಜ್ಞಾನಾರ್ಜ... ಮನುಷ್ಯನಿಗೆ ಅತ್ಯವಶ್ಯಕ ಯಾವ ... ಜ್ಞಾನವನ್ನಾದರೂ ಸಂಪಾದಿಸಿರು... ಒಳ್ಳೆಯದು ಆದರೆ ಅದರ ದುರುಪ... ಗವನ್ನು ಮಾತ್ರ ಮಾಡಲಾಗದು. ಮಾಡಿದರೆ ವಾನವರು ಮೃಗಗಳಂ... ...ವರು ವಿಜ್ಞಾನದ ಬೆಳವಣಿಗೆಯಿಂ... ...ಪ ಅನರ್ಥಗಳಾಗಿವೆ ವಿನಾಶ, ಅ... ಮತ್ತು ದ್ವೇಷಾಸೂಯೆಗಳು ಬೆಳೆದಿ... ಆದರೆ ವಿಜ್ಞಾನದ ಬೆಳವಣಿಗೆಯು ...ವಾಗಿರುವ ಒಂದು ಕೆಲಸ ಗ್ರಾಮ... ಜನರ ಜೀವನವನ್ನು ಉತ್ತಮಪಡಿಸ ... ವಿಜ್ಞಾನವು ಸಹಕಾರಿಯಾಗಬೇಕು. ...ವಿಯು ಒಂದು ಮಹಾಶಕ್ತಿ ಅದನ್ನು ...ಧಿಸಿ ವಿಜ್ಞಾನವು ಬೆಳೆಯಬಾರದು ...ಸಿ ಮುಂದುವರಿಯಬೇಕು. ಹಾಗೆ ...ದರೆ ಅಣುಬಾಂಬಿನ ಪ್ರಯೋಗದ ...ಸಂಗವು ಬರುವುದಿಲ್ಲ

ಮಾರ್ವಾಡಿಗಳ ಮನ್ನಣೆ

...ನೆಸ್ಟಿಕ್ ಸಿನಿಮಾ ಮಂದಿರದಲ್ಲಿ ಮಾ... ...ಡಿಗಳೂ, ಗುಜರಾತಿಗಳೂ, ಸಿಂಧಿಗ... ಆಚಾರ್ಯರಿಗೆ ಮಾನಪತ್ರವನ್ನರ್ಪಿಸಿ, ...ಸ್ಥಾನದಲ್ಲಿರುವ ಕಾವುಗಳು ಮೈಸೂ... ...ವಂತೆಯೇ ಇಲ್ಲಿನ ಜನರ ಕಷ್ಟ ಸುಖ... ...ಳ್ಳ ಭಾಗಿಗಳಾಗಿರುವುದಾಗಿ ತಿಳಿಸಿದರು ...ಅಭಿಪ್ರಾಯವನ್ನು ಆಚಾರ್ಯರು ಸಂಪೂ... ...ವಾಗಿ ಮೆಚ್ಚಿದರು. ಶ್ರೀ ರಾಂ ನಾರಾಯ... ...ಚೆಲ್ಲಾರಾಂ ರವರು ಅರ್ಪಿಸಿದ ೩ ಸಾವಿರ ...ಪಾಯಿನ ನಿಧಿಯು ಅತ್ಯಲ್ಪವೆಂದು ಹೇ... ಅದನ್ನು ನಿರಾಕರಿಸಿದರು

ವಕೀಲ ವೃಂದದಲ್ಲಿ

...ಸನ ಮತ್ತು ರಾಜನೀತಿಗಳು ಒಂದ... ...ದರೊಂದು ಸಮ್ಮಿಳಿತವಾಗಿವೆ ಸ್ವಾತಂ... ...ಸಂಗ್ರಾಮದಲ್ಲಿ ವಕೀಲರದೇ ಪ್ರಮು... ...ಪಾತ್ರ ಸ್ವಾತಂತ್ರ್ಯವಿಲ್ಲದೆ ವಕೀಲವೃ... ...ಪ್ರಗತಿಯು ಸಾಧ್ಯವಿಲ್ಲ ನಾಗರಿಕ ...ಗಳ ರಕ್ಷಣೆಯಲ್ಲಿ ವಕೀಲರು ಬದ್ಧಾ... ...ರಾಗಿರಬೇಕು—ಎಂಬುದಾಗಿ ವಕೀಲರ ...ಘದಲ್ಲಿ ಶ್ರೀ|| ಕೃಪಲಾನಿಯವರು ಹೇಳಿ... ...ದರು.

ಪತ್ರಿಕೋದ್ಯೋಗಿ ಸಂಘದಲ್ಲಿ

...ಮೈಸೂರು ನಗರದಲ್ಲಿ ಜೀವದ ಮಾತು ...ನೆಯೇ ಬೆಂಗಳೂರಿನ ಪತ್ರಿಕೋದ್ಯೋಗಿ ...ಸಂಘ ಹೇಳಿ, ಬಂಡವಾಳಗಾರರುಗಳಿಗೆ ಪ... ...ತ್ರಿಕೋದ್ಯೋಗಿಗಳು ಅಧೀನರಾಗಲಾಗ... ...ಬಾರದೆಂದು ಸೂಚಿಸಿದರು

ಹಿಂದೀ ಸಮಿತಿಯ ಸತ್ಕಾರ

ಕನ್ನಡ ಪರಿಷತ್ತಿನ ಸಭಾಂಗಣದಲ್ಲಿ ಸಂ... ...ಸ್ಥಾನದ ಹಿಂದೀ ಪ್ರಚಾರ ಸಮಿತಿಯವರು ಏರ್ಪಡಿಸಿದ್ದ ಸಮಾರಂಭದಲ್ಲಿ ... ...ಸನಾತನಾದಿ ಸಂಸ್ಥಾನದ ಜನರು ಹಿಂ...

ಸಿಂಧು ಪ್ರಾಂತ್ಯಕ್ಕೂ ಕೇಂದ್ರ ಸರ್ಕಾರಕ್ಕೂ ಸಂಬಂಧವಿಲ್ಲ

ಸಿಂಧು ಪ್ರಾಂತ್ಯವು ಕೇಂದ್ರ ಸರ್ಕಾರದೊಡನೆ ಯಾವ ಸಂಬಂಧವನ್ನೂ ಪಡೆದಿರುವುದಿಲ್ಲ. ಮತ್ತು ಪ್ರಾಂತ್ಯವು ಪ್ರತ್ಯೇಕವಾದ ಸಿವಿಲ್ ಸರ್ವಿಸ್ಸನ್ನು ಹೊಂದುವುದು ಎಂಬುದಾಗಿ ಅಲ್ಲಿನ ಪ್ರಧಾನ ಮಂ|| ಗುಲಾಂ ಹುಸೇನ್ ಹಿದಾಯತುಲ್ಲಾರವರು ತಿಳಿಸಿದ್ದಾರೆ ಅದ್ದರಿಂದ ಸಿಂಧು ಪ್ರಾಂತ್ಯದ ಅಧಿಕಾರಿಗಳಾಗಲೀ, ಇತರರಾಗಲಿ ಪ್ರಾಂತ್ಯವನ್ನು ಬಿಟ್ಟು ಬೇರೆ ಕಡೆಗೆ ಕೆಲಸಕ್ಕೆ ಹೋಗಲು ಬಿಡುವುದಿಲ್ಲವೆಂದೂ ಹೇಳಿದ್ದಾರೆ

ದೀ ಘಾಷಾ ಪ್ರಚಾರಕ್ಕೆ ಇನ್ನೂ ಹೆಚ್ಚಿನ ನೆರವು ನೀಡಬೇಕೆಂದು ತಿಳಿಸಿದರು

ಗ್ರಾಮೋದ್ಯೋಗಗಳನ್ನು ಸೃಜಿಸಿ, ಶಿಸ್ತಿನಿಂದ ವರ್ತಿಸುವಂತೆ ಗಾಂಧೀಬಜಾರ್ ಯುವಕ ಸಂಘದವರ ಸಭೆಯಲ್ಲಿ ಬೋಧಿಸಿದರು.

ಪೌರಸಭೆಯ ಮಾನಪತ್ರ

ಪೌರಸಭಾಧ್ಯಕ್ಷರಾದ ಮ|| ಎ. ಜೆ. ಖಲೀಲ್‌ರವರು ಪೌರಸಭೆಯ ಮಾನಪತ್ರವನ್ನು ಓದಿ ಗಂಧದ ಕರಂಡದಲ್ಲಿ ಒಪ್ಪಿಸಿದರು ಕೈನೂಲಿನ ಹಾರವನ್ನೂ ಹಾಕಿದರು. ಸಂಸ್ಥಾನಗಳಲ್ಲಿ ತಮಗೆ ತೋರಿಸಲಾಗುವ ಆದಮನೆ ಮತ್ತು ಸುಂದರ ದೃಶ್ಯಗಳಿಂದ ತಾವು ಮೋಸಹೋಗುವುದಿಲ್ಲವೆಂದೂ, ನಿಜವಾದ ಸ್ವರಾಜ್ಯವು ನೆಲಸಬೇಕಾಗಿರುವ ಹಳ್ಳಿಗಳನ್ನು ನಗರದಂತೆ ಅಭಿವೃದ್ಧಿಪಡಿಸಬೇಕೆಂದೂ ಆಚಾರ್ಯರು ತಮ್ಮ ಉತ್ತರದಲ್ಲಿ ತಿಳಿಸಿದರು

ಬಹಿರಂಗ ಸಭೆ

ಚಿಕ್ಕ ಲಾಲ್‌ಬಾಗಿನಲ್ಲಿ ೨೦ ಸಾವಿರ ಜನರ ಭಾರಿ ಸಭೆಯಲ್ಲಿ ಅದ್ಭುತವಾದ ಸ್ವಾಗತವನ್ನು ನೀಡಲಾಯಿತು ಶ್ರೀ|| ಚೆಂಗಲರಾಯ ರೆಡ್ಡಿಯವರು ಪುರವಾಸಿಗಳ ಪರವಾಗಿ ೧೦ ಸಾವಿರ ರೂಪಾಯಿನ ನಿಧಿಯನ್ನು ಅರ್ಪಿಸಿದರು ಕಾಂಗ್ರೆಸ್ಸಿನವರಿಗೆ ಜನರೂ ಬೆಂಬಲ ನೀಡುವ ಅಗತ್ಯ ರಚನಾತ್ಮಕ ಕಾರ್ಯ, ಮಹಾತ್ಮರ ಸಂದೇಶ, ಅಹಿಂಸೆ, ಏಕಮನಸ್ಸು ಮುಂತಾದ ವಿಚಾರವಾಗಿ ಆಚಾರ್ಯರು ಅಮೋಘ ಭಾಷಣವನ್ನು ಮಾಡಿದರು

ದಂಡಿನಲ್ಲಿ

ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರರ ಶಾಲಾ ಅಂಗಳದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ದಂಡಿನ ನಿವಾಸಿಗಳ ಪರವಾಗಿ ೩೦೦೦ ರೂಪಾಯಿ ನಿಧಿಯನ್ನು ಅರ್ಪಿಸಲಾಯಿತು ಅನಂತರ ರಾತ್ರಿ ರೈಲಿನಲ್ಲಿ ರಾಷ್ಟ್ರಪತಿಗಳು ಮದರಾಸಿಗೆ ತೆರಳಿದರು.

ಬಂಗಾಳಾ ಪ್ರಾರ್ಥನೆಗೆ ಕೇಂದ್ರ ಸರ್ಕಾರದ ತಿರಸ್ಕಾರ

ತಮ್ಮ ಆಯವ್ಯಯ ಪಟ್ಟಿಯಲ್ಲಿ ಉಂಟಾಗಿರುವ ೧೫|| ಕೋಟಿ ರೂ ಗಳ ನಷ್ಟವನ್ನು ಸರಿದೂಗಿಸಲು ಕೇಂದ್ರ ಸರ್ಕಾರವನ್ನು ಬಂಗಾಳಾ ಸರ್ಕಾರವು ಸಹಾಯ ಕೇಳಿದ್ದಿತು ಸಾಲ ಪಡೆದು ಆ ನಷ್ಟವನ್ನು ಸರಿಪಡಿಸಿಕೊಳ್ಳಲು ಕೇಂದ್ರ ಸರ್ಕಾರ ಸೂಚಿಸಿ, ಸಹಾಯ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುವುದಾಗಿ ವರದಿಯಾಗಿದೆ ಬಂಗಾಳವು ಇಂಗ್ಲೆಂಡ್ ಮತ್ತು ಕೇಂದ್ರ ಸರ್ಕಾರದಿಂದ ಬೇರೆಯಾಗಿ ಸ್ವತಂತ್ರವಾದರೆ ಆಗ್ಗೆ ಅದು ಭಾರತದಲ್ಲೇ ಅಲ್ಲದೆ, ಇಡೀ ಪೂರ್ವ ರಾಷ್ಟ್ರಗಳಲ್ಲಿ ಅತ್ಯಂತ ಐಶ್ವರ್ಯವಂತ ರಾಷ್ಟ್ರವಾಗುವುದು ; ನಮಗೆ ಸ್ವಾತಂತ್ರ್ಯಬೇಕು; ಪರದೇಶ ಅಥವಾ ಕೇಂದ್ರದ ಆಳ್ವಿಕೆ ಬೇಕಿಲ್ಲ-ಎಂಬುದಾಗಿ ಬಂಗಾಳದ ಅರ್ಥ ಮಂತ್ರಿಗಳು ತಿಳಿಸಿದ್ದಾರೆ

ಇಂಗ್ಲೆಂಡಿನ ಮೇಲೆ ಪ್ರಚಂಡ ಬಿರುಗಾಳಿ

ಕಳೆದ ೧೬ ನೇ ತಾ|| ಇಂಗ್ಲೆಂಡಿನ ಮೇಲೆ ಪ್ರಚಂಡವಾದ ಬಿರುಗಾಳಿಯು ಬೀಸಿ ಅಪಾರ ನಷ್ಟವನ್ನುಂಟುಮಾಡಿರುವುದಾಗಿ ವರದಿಯಾಗಿದೆ. ಈ ಗಾಳಿಯು ಅಟ್ಲಾಂಟಿಕ್ ಸಾಗರದಿಂದ ಆರಂಭವಾಗಿ ನೈಋತ್ಯದಿಂದ ಇಂಗ್ಲೆಂಡಿನ ಮೇಲೆ ಈಶಾನ್ಯದ ಕಡೆ ಬೀಸಿತು ಇದರವೇಗ ಗಂಟೆಗೆ ೯೮ ಮೈಲಿ ಇದ್ದಿತು. ಅಗಣಿತವಾಗಿ ಗಿಡ ಮರಗಳು ಬೇರು ಸಹಿತ ಉರುಳಿದವು ಟೆಲಿಫೋನ್ ಕಂಭಗಳು ಮುರಿದುವು ಮನೆಗಳ ಮೇಲ್ಛಾವಣಿಗಳು ಗಗನಕ್ಕೆ ಹಾರಿದವು. ಲಂಡನ್, ಬರ್ಮಿಂಗ್‌ಹ್ಯಾಮುಗಳಲ್ಲಿ ಮುಳುಗಿಹೋಗಿರುವ ಜಣಗಳನ್ನು ತೆಗೆಯುವ ಕಾರ್ಯ ಆರಂಭವಾಗಿದೆ ನದಿಗಳ ನೀರು ಗಾಳಿಯ ಸುಳಿಗೆ ಸಿಕ್ಕಿ ಊರುಗಳ ಮೇಲೆಲ್ಲಾ ಹರಿದಿವೆ ಅನೇಕ ನಗರಗಳಲ್ಲಿ ಜನರು ದೋಣಿಗಳಲ್ಲಿ ಓಡಾಡುತ್ತಿದ್ದಾರೆ ನಷ್ಟದ ಸಂಖ್ಯೆ ಪೂರ್ಣವಾಗಿ ತಿಳಿದುಬಂದಿಲ್ಲ

ಮಂತ್ರಿಗಳೇ ಕಸ ಗುಡಿಸಿದರು

ನಾಗಪುರದಲ್ಲಿ ಕಸ ಗುಡಿಸುವವರು ಮುಷ್ಕರ ಹೂಡಿರುವುದರಿಂದ ಮುಖ್ಯ ಬೀದಿಗಳಲ್ಲಿ ಮಂತ್ರಿಗಳೂ, ಪ್ರಮುಖ ಅಧಿಕಾರಿಗಳೂ, ಶಾಸನ ಸಭಾಧ್ಯಕ್ಷರೂ ಮೊನ್ನೆ ಕಸ ಗುಡಿಸಿದರು.

ನೆಹರೂರವರ ರೇಡಿಯೋ ಭಾಷಣ

ಮೈಸೂರು ೨೧

ನಿವೃತ್ತರಾಗಲಿರುವ ವೈಸರಾಯ್ ವೇವೆಲ್ಲರು ಇದಿನ ರಾತ್ರಿ ೮-೩೦ಕ್ಕೆ ದೆಹಲಿಯ ರೇಡಿಯೋ ಮೂಲಕ ಭಾಷಣಮಾಡುವರು ಅದನ್ನು ಆಕಾಶವಾಣಿಯ ಮೂಲಕ ಪ್ರಸಾರಮಾಡಲಾಗುವುದು.

ವಯಸ್ಕರ ಶಿಕ್ಷಣ ವ್ಯವಸ್ಥಾಪಕರ ಶಿಬಿರ

ವಯಸ್ಕರ ಶಿಕ್ಷಣ ಕಾರ್ಯರಂಗದಲ್ಲಿ ವ್ಯವಸ್ಥಾಪಕರಾಗಿ ಕೆಲಸಮಾಡಲು ಇಷ್ಟಪಡುವವರಿಗೆ ಸುಮಾರು ಎರಡು ವಾರದ ಮಟ್ಟಿಗೆ ಶಿಕ್ಷಣ ಕೊಡಲು ಏರ್ಪಡಿಸಲಾಗಿದೆ ಶಿಕ್ಷಣ ಪಡೆಯಲು ಇಷ್ಟಪಡುವವರು ಈ ತಿಂಗಳು ೨೬ ನೇ ತಾರೀಖಿನೊಳಗೆ "ಆರ್ಗನೈಸರ್" ವಯಸ್ಕರ ಶಿಕ್ಷಣ ಸಮಿತಿ, ಸರಸ್ವತಿಪುರ, ಮೈಸೂರು. ಇವರಿಗೆ ಅರ್ಜಿ ಕಳುಹಿಸಬೇಕು ಶಿಕ್ಷಣ ಕಾಲದಲ್ಲಿ ಊಟ ವಸತಿ ಏರ್ಪಾಡನ್ನು ಸಮಿತಿಯೇ ವಹಿಸುವುದು ಕೂಡಲೇ ಕೆಲಸ ಸಿಗುವ ಭರವಸೆಯುಳ್ಳ ಅವಶ್ಯಕತೆ ಬಂದಂತೆ ಶಿಕ್ಷಣ ಪಡೆದವರನ್ನು ವ್ಯವಸ್ಥಾಪಕರು ಅಥವಾ ವ್ಯವಸ್ಥಾಪಕ ಕಾರ್ಯದರ್ಶಿಗಳನ್ನಾಗಿ ತೆಗೆದುಕೊಳ್ಳಲಾಗುವುದು. ಹೆಚ್ಚಿಗೆ ವಿವರಗಳನ್ನು ಕಾರ್ಯದರ್ಶಿಯವರಿಂದ ತಿಳಿಯಬಹುದು

ಪಂಜಾಬ್ ವಿಭಜನೆ

ಸಂಯುಕ್ತ ಪಂಜಾಬನ್ನು ೩ ವಿಭಾಗಗಳಾಗಿ ಮಾಡಿ ಅವುಗಳಿಗೆ ಒಳಾಡಳಿತ ಸ್ವಾತಂತ್ರ್ಯಕೊಡುವ ಯೋಜನೆಯೊಂದನ್ನು ಕರ್ನಲ್ ನೆಹರುರವರು ತಯಾರಿಸಿದ್ದಾರೆ ಇದಕ್ಕೆ ಅಲ್ಲಿನ ಗೌರ್ನರರ ಬೆಂಬಲವೂ ಸಿಕ್ಕಿರುವುದಾಗಿ ತಿಳಿದುಬಂದಿದೆ ಇದರಂತೆ ಅಂಬಾಲ ಮತ್ತು ಜಲಂಧರ್ ಜಿಲ್ಲೆಗಳು ಪೂರ್ವಭಾಗವಾಗುವುದು ಆ ಮುಂದಿ ಸಿಖ್, ಹಿಂದೂ ಮತ್ತು ಮುಸ್ಲಿಂ ಮಂತ್ರಿಗಳ ಮೇಲ್ವಿಚಾರಣೆಗೆ ಇದನ್ನು ಒಪ್ಪಿಸಲಾಗುವುದು. ಮುಲ್ತಾನ್ ಮತ್ತು ರಾವಲ್ಪಿಂಡಿ ಜಿಲ್ಲೆಗಳು ಪಶ್ಚಿಮಭಾಗವಾಗಿ ಇವು ಮುಸ್ಲಿಂ ಮತ್ತು ಒಬ್ಬ ಸಿಖ್ ಮಂತ್ರಿಗಳಿಂದ ಆಳಲ್ಪಡುವುದು. ಲಾಹೋರ್ ವಿಭಾಗವು ಒಬ್ಬ ಮುಸ್ಲಿಂ ಮತ್ತು ಒಬ್ಬ ಹಿಂದೂ ಮಂತ್ರಿಗಳ ಜಂಟಿ ಆಳ್ವಿಕೆಯಲ್ಲಿರುವುದು ಈ ಯೋಜನೆಯ ಬಗ್ಗೆ ಲೀಗಿನೊಡನೆ ಚರ್ಚೆ ಆರಂಭವಾಗುವುದು ಲೀಗಿನವರು ಒಪ್ಪಿದರೆ ಕೂಡಲೇ ಪಂಜಾಬಿನಲ್ಲಿ ಎಲ್ಲ ಪಕ್ಷಗಳ ಮಂತ್ರಿ ಮಂಡಲವನ್ನೇರ್ಪಡಿಸಲು ಪ್ರಯತ್ನಿಸಲಾಗುವುದೆಂದು ವರದಿ ಬಂದಿದೆ

ವೈದ್ಯ ಸಹಾಯದ ಯೋಜನೆ

ಸ್ವಂ ವ ಫೋ] ಬೆಂಗಳೂರು ೨೧

೪೧ ಎಳ ಲಕ್ಷ ರೂ ವೆಚ್ಚದ ೫ ವರ್ಷದ ವೈದ್ಯ ಸಹಾಯದ ಯೋಜನೆಯೊಂದನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ ಪ್ರತಿಯೊಂದು ಮೈದಾನ ಜಿಲ್ಲೆಯಲ್ಲಿಯೂ ಒಂದು ಸಂಚಾರದ ಆಸ್ಪತ್ರೆಯನ್ನೂ, ಪ್ರತಿ ಮಲೆನಾಡು ಜಿಲ್ಲೆಯಲ್ಲೂ ಮೂರು ಸಂಚಾರದ ಆಸ್ಪತ್ರೆಗಳನ್ನೂ ಇಡುವಂತೆ ಏರ್ಪಾಡಾಗಿದೆ. ಈ ವರ್ಷ ೩೦ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಕೃಷ್ಣರಾಜನಗರದ ತಾಲ್ಲೂಕು ಹೆಬ್ಬಾಳು ಎಂಬಲ್ಲಿ ಒಂದು ಕೇಂದ್ರವನ್ನು ಕೂಡಲೇ ಏರ್ಪಡಿಸಲಾಗುವುದು ಪ್ರತಿಯೊಂದು ಹೋಬಳಿಯಲ್ಲಿಯೂ ಒಬ್ಬೊಬ್ಬ ಸೂಲಗಿತ್ತಿಯನ್ನು ಇಡಲಾಗುವುದು . ಬೆಂಗಳೂರಿನಲ್ಲಿ ಕುಷ್ಠರೋಗ ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಲಾಗುವುದು.

ಸಾಧ್ವಿ

ತಾ॥ ೨೧-೩-೪೭ ಶುಕ್ರವಾರ

ಪೌರಸಭಾಧ್ಯಕ್ಷತೆಯ ಬಿಂಕ

ರಾಷ್ಟ್ರಪತಿ ಕೃಪಲಾನಿಯವರಿಗೆ ರಾಜಧಾನಿಯ ಪೌರಸಭೆಯು ಬಿನ್ನವತ್ತಳೆಯನ್ನು ಅರ್ಪಿಸಿತಷ್ಟೆ. ಈ ಸಮಾರಂಭದಲ್ಲಿ ಪೌರಸಭಾಧ್ಯಕ್ಷರೇ ಭಾಗವಹಿಸದಿದ್ದುದು ವಿಶೇಷ ಆಕ್ಷೇಪಣೆಗೆ ಅವಕಾಶವಿತ್ತಿದೆ. ಎಲ್ಲರ ಬಾಯಲ್ಲಿಯೂ ಇದೇ ಮಾತಾಗಿದೆ. ಇಡೀ ಭರತಖಂಡದ ನಲವತ್ತು ಕೋಟಿ ಪ್ರಜೆಗಳ ಆಸೆ ಆಕಾಂಕ್ಷೆಗಳ ಪ್ರತಿಬಿಂಬವಾದ ಮಹಾಸಭೆಯ ಅಗ್ರಾಸನಾಧಿಪತಿಗಳು ನಮ್ಮ ನಗರಕ್ಕೆ ಬಂದಾಗ ಇಲ್ಲಿನ ಎರಡು ಲಕ್ಷ ಪ್ರಜೆಗಳ ಪ್ರತಿನಿಧಿ ಸಂಸ್ಥೆಯಾದ ಪೌರಸಭೆಯ ಸೂತ್ರಧಾರಿಗಳು ಅದರಲ್ಲಿ ಪಾತ್ರವಹಿಸದಿರಬಹುದೇ? - ಎಂದು ಸಕಲರೂ ಕೇಳುತ್ತಿದ್ದಾರೆ. ಸಂಸ್ಥಾನದ ರಾಜಧಾನಿಗೆ ಇದೊಂದು ಕಳಂಕಪ್ರಾಯವಾದ ವಿಚಾರವಾಗಿರುತ್ತದೆ.

ಪೌರಸಭೆಯು ವಿಶೇಷ ಅಧಿವೇಶನವೊಂದನ್ನು ಸೇರಿಸಿ ರಾಷ್ಟ್ರಪತಿಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಬೇಕೆಂದು ನಿರ್ಧರಿಸಿದ್ದಿತು ಎಂದ ಮೇಲೆ ಆ ಸಮಾರಂಭವು ಪೌರಸಭೆಯ ಕಾರ್ಯಕಲಾಪಗಳ ಒಂದು ಅಂಗವಾಗಿಯೇ ಇತ್ತು. ವಿಶೇಷ ಅಧಿವೇಶನದಲ್ಲಿ ಗೊತ್ತಾದ ಇಂತಹ ಪ್ರಾಮುಖ್ಯ ವಿಚಾರದಲ್ಲಿಯೇ ಅಧ್ಯಕ್ಷರು ಉದಾಸೀನತೆಯನ್ನು ಹೊಂದಿದ್ದುದು ಅಕ್ಷಮ್ಯವಾದ ಅಪರಾಧವೇ ಸರಿ. ಇನ್ನು ಸಭೆಯ ಸಾಮಾನ್ಯ ನಿರ್ಣಯಗಳನ್ನು ಪಾಲಿಸುವುದರಲ್ಲಿ ಇವರು ಎಷ್ಟು ಮಟ್ಟಿನ ಶ್ರದ್ಧೆಯನ್ನು ವಹಿಸಬಹುದೆಂಬುದನ್ನು ವಾಚಕರೇ ಊಹಿಸಬೇಕು.

ಈ ನಗರಕ್ಕೆ ಆಗಿಂದಾಗ್ಗೆ ಅನೇಕ ಪ್ರಸಿದ್ಧ ಪುರುಷರು ಬಂದು ಹೋಗುತ್ತಾರೆ. ಅವರಲ್ಲಿ ಪೌರಸಭೆಯ ಮತ್ತು ಪುರಜನರ ಸನ್ಮಾನಕ್ಕೆ ಪಾತ್ರರಾದವರೂ ಇರುತ್ತಾರೆ; ಪಾತ್ರರಲ್ಲದವರೂ ಸಹ ಇರುತ್ತಾರೆ. ಯಾರಿಗೂ ಬೇಡದ ಕೇವಲ ಹಲ ಕೆಲವು ಸ್ವಾರ್ಥಸಾಧಕರ ಅಥವಾ ಪಂಗಡಗಳ ಭಂಟರ ಪ್ರೀತ್ಯರ್ಥವಾಗಿ ಅನೇಕ ಸನ್ಮಾನ ಸಮಾರಂಭಗಳ ನಾಟಕಗಳೂ ಆಗಿಂದಾಗ್ಗೆ ನಡೆಯುತ್ತವೆ. ಅವುಗಳಿಗಾಗಿ ನಮ್ಮ ಅಧಿಕಾರಿವರ್ಗದವರನೇಕರು ಇಲ್ಲದ ಸಲ್ಲದ ಉತ್ಸಾಹವನ್ನು ತೋರಿ, ಟೊಂಕ ಕಟ್ಟಿ ನಿಂತು ಏರ್ಪಾಡುಗಳನ್ನು ಮಾಡುತ್ತಾರೆ. ನಿಸ್ವಾರ್ಥ ಸೇವೆಯಿಂದಲೂ ಅನುಭವ ತ್ಯಾಗದಿಂದಲೂ, ಅಹೋರಾತ್ರಿಯೂ ಪ್ರಜಾ ಸೇವೆಗಾಗಿ ದುಡಿಯುವ ವೀರ ದೇಶಭಕ್ತರ ಸೇವೆಯು ಇಂತಹವರಿಗೆ ಲಭಿಸುವುದೆಂತು?

ರಾಷ್ಟ್ರಪತಿಗೆ ಪ್ರತ್ಯಕ್ಷವಾಗಿ ಸನ್ಮಾನ ಮಾಡುವ ಸುಯೋಗವು ದೊರೆಯದಿದ್ದುದಕ್ಕಾಗಿ ನಮ್ಮ ಪೌರಸಭಾಧ್ಯಕ್ಷರಿಗೆ ನಾವು ಪಶ್ಚಾತ್ತಾಪಕರವಾದ ಪರಿಹಾರವನ್ನು ಸೂಚಿಸಬೇಕಾಗಿದೆ. ಹಿಂದೆ ಪಂಡಿತ ನೆಹರೂರವರು ಇಲ್ಲಿಗೆ ದಯಮಾಡಿಸಿದ್ದಾಗ ಪೌರಸಭೆಯು ಮಾನಪತ್ರವನ್ನು ಎಲ್ಲರಗಿಂತಲೂ ಮೊದಲು ಅರ್ಪಿಸಬೇಕೆಂದು ಅಂದಿನ ಅಧ್ಯಕ್ಷರಾಗಿದ್ದ ಶ್ರೀ॥ ಟಿ. ಜಿ. ರಾಮಯ್ಯಂಗಾರ್‌ರವರು ಒತ್ತಾಯಪಡಿಸಿ ಅದರಂತೆಯೇ ನೆರವೇರಿಸಿದುದು ನಮ್ಮ ನೆನಪಿನಲ್ಲಿದೆ. ಅಂತಹ ಭಾಗ್ಯವು ಇಂದಿನ ಅಧ್ಯಕ್ಷರಿಗೆ ದೊರೆಯದಿದ್ದುದು ವಿಷಾದಕರ.

ಮಾನಪತ್ರವನ್ನು ಅರ್ಪಿಸುವ ಏರ್ಪಾಡನ್ನು ಮಾಡುವ ಸಮಯದಲ್ಲಿಯೇ ಅಧ್ಯಕ್ಷರು ಆಕ್ಷೇಪವನ್ನು ಎತ್ತಿದ್ದರು. ಪ್ರತಿಬಂಧಕಾಜ್ಞೆಯಿರುವುದರಿಂದ ಇದಕ್ಕೆ ತೊಡಕುಗಳಿವೆಯೆಂದು ಸೂಚಿಸಿದ್ದರು. ಆದರೆ ಶಾಸನಬದ್ಧವಾದ ಸ್ಥಳೀಯ ಸರ್ಕಾರ ಸಂಸ್ಥೆಯೊಂದರಿಂದ ನಡೆಸಲ್ಪಡುವ ಕಾರ್ಯಕ್ರಮಗಳಿಗೆ ಈ ನಿರ್ಬಂಧವು ಅನ್ವಯಿಸುವುದಿಲ್ಲವೆಂದು ತಿಳಿಸಲಾಗಿತ್ತು. ಪ್ರತಿಬಂಧಕಾಜ್ಞೆಯ ಮೂಲ ಕರ್ತರಾದ ಜಿಲ್ಲಾಧಿಕಾರಿಗಳೇ ಸ್ವತಃ ಅಂದಿನ ಸಮಾರಂಭಗಳಲ್ಲಿ ಹಾಜರಿದ್ದು ಎಲ್ಲವನ್ನೂ ವ್ಯವಸ್ಥೆಯಿಂದ ನೋಡಿಕೊಂಡರು. ಇದನ್ನು ಅರಿತಾದರೂ ಪೌರಸಭಾಧ್ಯಕ್ಷರು ಸಮಾರಂಭದಲ್ಲಿ ಭಾಗವಹಿಸಬಹುದಾಗಿತ್ತು.

ರಾಷ್ಟ್ರಪತಿಗಳೇ ಇದಕ್ಕೆಲ್ಲಾ ಕಾರಣವನ್ನು ಸೂಚಿಸಿದ್ದಾರೆ. ನಮ್ಮ ದೇಶದ ಗುಲಾಮಗಿರಿಯೇ ಇವಕ್ಕೆಲ್ಲಾ ಮೂಲ. ಆದರೆ ಇಂತಹ ಸಮಾರಂಭದಲ್ಲಿ ಭಾಗವಹಿಸಲು ಅಧ್ಯಕ್ಷರಿಗೆ ಯಾವ ವಿಧವಾದ ಆಡಳಿತದ ಅಡಚಣೆಯೂ ಇದ್ದಿತೆಂದು ನಾವು ಭಾವಿಸುವುದಿಲ್ಲ. ಅವರೇ ಇಲ್ಲದ ತೊಂದರೆಗಳನ್ನು ಸ್ವಕಪೋಲದಿಂದ ಕಲ್ಪಿಸಿಕೊಂಡಿರಬೇಕು. ಮುಖ್ಯವಾಗಿ ಈ ನಗರದ ಪೌರಸಭೆಯ ಅಧ್ಯಕ್ಷಸ್ಥಾನವು ಒಂದು ತ್ರಿಶಂಕು ಸ್ವರ್ಗದಂತಿರುತ್ತದೆ. ಅಧಿಕಾರಿ ಅಧ್ಯಕ್ಷರಿರುವುದರಿಂದಲೇ ಇಂತಹ ಅ... ಗಳು ಮೇಲಿಂದಮೇಲೆ ನಡೆಯುತ್ತವೆ ... ನ್ನಾದರೂ ನಮ್ಮ ಆಳರಸರು ಈ ... ಪೌರಸಭೆಗೆ ಅಧ್ಯಕ್ಷರನ್ನು ಚುನಾಯಿ... ಕ್ಕುವ ಅವಕಾಶವನ್ನು ಕೊಟ್ಟು ... ಪ್ರಸಂಗಗಳನ್ನು ತಪ್ಪಿಸಬಾರದೇ?

ಶ್ರೀ ಗಣೇಶಾ ಟಾಕೀಸ್

21-3-47 ರಿಂದ 2ನೇ ವಾರ

ಪ್ರತಿ ದಿನ ಮೂರು ಆಟಗಳು

ವರ್ಣರಂಜಿತ ಸನ್ನಿವೇಶಗಳಿಂದ ಕೂಡಿದ

ಕನ್ನಡ

ಹರಿಶ್ಚಂದ್ರ

ಪಾತ್ರ:- ಸುಬ್ಬಯ್ಯನಾಯ್ಡು, ನಾಗೇಂದ್ರರಾವ್, ಲಕ್ಷ್ಮೀಬಾಯಿ,

Morning Shows on 21, 22, 23 and 24th at 10-30 a m

Laurel and Hardy in

Pardon Us

and

Sons of Desert

(Double Programme)

ರಾಜಕಮಲ್

೨೧-೩-೪೭ ರಿಂದ ೪ ದಿನಗಳು

ಬೆಳಿಗ್ಗೆ ೧೦-೩೦ ಘಂಟೆಗೆ

ಆಗೇ ಕದಂ

ಪಾತ್ರ:- ಮೋತಿಲಾಲ್ ಮತ್ತು ಅಂಜಲಿದೇವಿ

ಕೂಡಲೆ ಮಾರಾಟಕ್ಕಿದೆ

2946, ಸರಸ್ವತಿಪುರ, ಹೊಸಮನೆ, ಕಾಂಪೌಂಡ್ ಕಟ್ಟಿದೆ, ೫೫ ರೂ ಬಾಡಿಗೆ ಬರುತ್ತಾ ಇದೆ. ಕ್ರಯ 12,000

ಕೂಡಲೆ ವಿಚಾರಿಸಿ :—

ಆರ್. ಗುಂಡೂರಾವ್,

ಪ್ರೊಪ್ರೈಟರ್ ಮೈಸೂರು ಬಿಸಿನೆಸ್ ಬ್ಯೂರೋ, ಮೈಸೂರು.

SPY SMASHER

SPY SMASHER

A Stupendous Serial in 21 Reels.

: Featuring :-

Kane Richmond

(King of the Serials)

From 20-3-47

For 7 Days Only

Daily 3 Shows

At

OLYMPIA

ರಣಜಿತ್

೨೧-೩-೪೭ ರಿಂದ

ಹೋಲಿ

ಪ್ರತಿ ದಿನ ೩ ಆಟಗಳು

ಖುರ್ಷಿದ್ — ಮೋತಿಲಾಲ್

ಚಾಮರಾಜನಗರದ ತಾಲ್ಲೂ...

ವೋಟರು ಮಹಾಶಯರಲ್ಲಿ

ವಿಜ್ಞಾಪನೆ

1947 ನೇ ಇಸವಿ ... ಮಾರ್ಚಿ 28 ನೇ ... ನಡೆಯುವ ... ಬೋರ್ಡು ಚು... ಗೆ ಚಾಮರಾಜನಗರದ ತಾಲ್ಲೂಕಿನಿಂದ ನಾನೊಬ್ಬ ಸಂಸ್ಥಾನ ಪ್ರಜಾ ಪಕ್ಷದ ಮಧ್ಯವರ್ತಿಗಳ ... ಮಾಧಿಕಾರಿಗಳ ಸಂಘದಿಂದ ಉಮೇದುವಾರನಾಗಿ ನಿಂತಿರುತ್ತೇನೆ. ಪ್ರಜಾಸೇವೆ ಮಾಡಲು ಅರ್ಹನೆಂದು ತಾವುಗಳು ಪರಿಗಣಿಸುವುದಾದರೆ ತಮ್ಮ ಘನವಾದ 3 ವೋಟು... ಒಂದು ವೋಟನ್ನು "ಘಂಟೆ" ಗುರ್ತಿನ ಡಬ್ಬಿಗೆ ಕೊಟ್ಟು ... ಬೆಂಬಲ ಕೊಡಬೇಕಾಗಿ ಕೋರುತ್ತೇನೆ.

ಎ. ಶ್ರೀನಿವಾಸಮೂರ್ತಿ,

ಹೊನ್ನಹಳ್ಳಿ, ಫಿರ್ಕಾ ಶ್ಯಾನುಭೋಗ

Don't Miss

A Fine Oppertunity!

Foreign

WOOLLEN GENTS' COAT

in different colours and

Varieties

— Cheapest Rates —

(1) L. Mathura Das,

(2) K. S. Panduranga Rao and Co.,

Fancy Cloth Merchants.

೩೯೧, Garageswari Chouk

Mysore

ಉಗಾದಿ ಹಬ್ಬದ ಸಲುವಾಗಿ

20-3-47 ರಿಂದ ದಿನವಹಿ 3 ಪ್ರದರ್ಶನಗಳು

ಹೊನ್ನಪ್ಪ ಭಾಗವತರ್, ವಸಂತ ಕೋಕಿಲಂ, ವಸಂತ, ರಾಮಚಂದ್ರರ್ ಪಾತ್ರ ವಹಿಸಿರುವ ತಮಿಳು ಚಿತ್ರ

★ ಕುಂಡಲಕೇಶಿ ★

ಮೈಸೂರು ನ್ಯೂ ಅಪೇರಾ ದಲ್ಲಿ

— For Bookings :

ಶ್ರೀ ವಿಜಯಾ ಪಿಕ್ಚರ್ಸ್,

ಗಾಂಧಿನಗರ, ಬೆಂಗಳೂರು ಸಿಟಿ

ರಾಜಕಮಲ್

೧೬-೩-೪೭ ರಿಂದ ೨ನೇ ವಾರ

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ (ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಗಸಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!! ಇವೆಲ್ಲವನ್ನೂ ಇಂದೇ ನೋಡಿ.

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ

No R. 1—1946-47

ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ಮೊದಲ್ಗೊಂಡು ... ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳೂ ಸಹಾ ತಾ॥ ೨೨-೩-೪೭ ಭಾನುವಾರ ದಿವಸ "ಉಗಾದಿ ಹಬ್ಬ" ಪ್ರಯುಕ್ತ ಮುಚ್ಚಲ್ಪಡುತ್ತವೆ

ಅಬ್ದುಲ್ ರಜಾಕ್,

ರೇಷನಿಂಗ್ ಆಫೀಸರ್,

ಮೈಸೂರು ಸಿಟಿ.

Edited, printed and published by ...

ರೀಜಿ. ನಂ. 392 | ವಂದೇ ಮಾತರಂ | ಇಂದಿನ ಪತ್ರಿಕೆ ೪ ಪುಟ

ಸಂಪುಟ ೫] ಶನಿವಾರ ೨೨—೩—೪೭ [ಸಂಚಿಕೆ ೧೯೧

— ಈ ದಿನ ಸೂಚನೆ —

ವೈಸರಾಯರ ಆಗಮನ

ಸರ್ವಜಿತು ಸಂವತ್ಸರ ಫಲ

ವರ್ಷದಲ್ಲಿ ಖಂಡವೃಷ್ಟಿಯೂ, ಜನರಿಗೆ ನಾನಾ ವಿಧವಾದ ತೊಂದರೆಯೂ, ಅ ಕಲಹವೂ, ರೋಗಾದ್ಯುಪದ್ರವಗಳೂ ಕ್ಷಾಮಬಾಧೆಯೂ, ಉಂಟಾಗುವುದು. ಕಡೆ ಸಸ್ಯಸಮೃದ್ಧಿಯೂ, ಜನಾನುರಾಗವೂ ಉಂಟಾಗುವುದು ದಕ್ಷಿಣ ದೇಶದಲ್ಲಿ ಸಾಮಾನ್ಯ ಬೆಳೆಯೂ, ಉತ್ತರ ದೇಶದಲ್ಲಿ ಕ್ಷಾಮಬಾಧೆಯೂ ಉಂಟಾಗುವುದು. ಧಾನ್ಯ ಮತ್ತು ಭತ್ತದ ಬೆಳೆಯೂ, ಪೂರ್ವದಲ್ಲಿ ಸಸ್ಯಸಮೃದ್ಧಿಯೂ ಆ... ಎಳ್ಳು ಮೊದಲಾದ ಎಣ್ಣೆಯೂ ಧಾನ್ಯಗಳೂ, ಕಬ್ಬು ಮೊದಲಾದ ಪದಾರ್ಥಗಳೂ ಫಲಿಸುವುವು. ಬಣ್ಣ ಪದಾರ್ಥಗಳು, ಹತ್ತಿ ಮತ್ತು ಮಣ್ಣಿನ ಪಾತ್ರೆಗಳ ಬೆಲೆ ಹೆಚ್ಚುವುವು ಪಶ್ಚಿಮ ... ದರೆಯಾಗಿ ಹಾಲು, ತುಪ್ಪ ... ದುವುಗಳ ಬೆಲೆ ಹೆಚ್ಚುವುವು. ವರ್ಷದಲ್ಲಿ ಆವರ್ತವೆಂಬ ಮೇಘವು ... ಉತ್ತರ ದಿಕ್ಕಿನಲ್ಲಿ ಹುಟ್ಟಿ ಎರಡು ... ಮಿಂಚು ಮತ್ತು ಸಿಡಿಲು ಆರ್ಭಟದೊಡನೆ ವರ್ಷಿಸುವುದು. ಅ ...ಗೆ ತೊಂದರೆಯೂ, ಸಸ್ಯನಾಶವೂ ... ಜನರಿಗೆ ನಾನಾ ವಿಧವಾದ ..., ದಕ್ಷಿಣ ದೇಶದಲ್ಲಿ ಕ್ಷಾಮಬಾಧೆ ... ಉಂಟಾಗುವುದು. ಸುವೃಷ್ಟಿಯೂ, ಸಸ್ಯವೃದ್ಧಿಯೂ ಜನಾನುಕೂಲವೂ ಉಂಟಾಗುವುದು ... ಮಾಡತಕ್ಕ ಪದಾರ್ಥಗಳ ಬೆಲೆ ಹೆಚ್ಚುವುದು. ದೇಶ ಸುಭಿಕ್ಷದಿಂದಿರುವುದು. ಕೆಲವು ಕಡೆ ... ಮಳೆಯೂ, ಸಸ್ಯನಾಶವೂ, ರೋಗಬಾಧೆಯೂ, ಜನರಿಗೆ ತೊಂದರೆಯೂ ಉಂಟಾಗುವುದು.

... ನಕ್ಷತ್ರ ವಹಿಸುತ್ತಿರುವ ಪ್ರಮುಖ ... ಗಳಲ್ಲಿ ಭಿನ್ನಾಭಿಪ್ರಾಯಗಳು ಹ... ವಿಶೇಷವಾದ ಗಲಭೆ ಮತ್ತು ಸಾವು ನೋವುಗಳುಂಟಾಗುವುವು. ಸಂವತ್ಸರದ ಪೂರ್ವಾರ್ಧದಲ್ಲಿ ಗಲಭೆಗಳು ಮಿತಿಮೀರಿ ... ನಡೆಯುವುದು ಪ್ರಮುಖ ... ಸಂಘಗಳಲ್ಲಿ ಒಡಂಬಡಿಕೆ ... ಪ್ರಜೆಗಳಿಗೆ ಬಹಳವಾದ ವ್ಯಸನ ... ಸಂವತ್ಸರದ ಉತ್ತರಾರ್ಧದ ... ದೊಡ್ಡ ಆಂದೋಳನದ ನಂತರ ಪ್ರಜಾ ...ವನ್ನು ಪಡೆದಿರುವ ಪ್ರಮುಖ ರಾಜಕೀಯ ಪಕ್ಷವು ಪ್ರಬಲವಾಗಿ ಎಲ್ಲ ಎದುರು ...ಗಳನ್ನೂ ಎದುರಿಸಿ ಅಧಿಕಾರ ಸೂತ್ರವನ್ನು ತನ್ನ ಸ್ವಾಧೀನಕ್ಕೆ ಪಡೆಯುವುದು.

೧೯೪೭ ನೇ ಆಗಸ್ಟ್ ೨೫ ನೇ ತಾ॥ ನ ... ಧೂಮಕೇತುವು ಬ್ರಿಟನ್ನಿನಲ್ಲಿ ಕಾಣಿ...ಕೊಂಡು ಅಮೆರಿಕಾ, ರಷ್ಯಾ, ಫ್ರಾನ್ಸ್ ಮಾರ್ಗವಾಗಿ ಸಂಚರಿಸುವುದು ಇದರಿಂದ ಆ ಮಹಾರಾಷ್ಟ್ರಗಳಲ್ಲಿ ಯುದ್ಧ, ಪ್ರಳಯ ಮತ್ತು ಸಾವುನೋವುಗಳುಂಟಾಗುವವು ಜರ್ನ ೩ ನೇ ತಾ॥ ನ ದಿನ ಚಂದ್ರಗ್ರಹಣವು ಸಂಭವಿಸುವುದು ... ದಲ್ಲಿ ಪ್ರಜೆಗಳಿಗೆ ಶಾಂತಿ, ಸಮಾಧಾನಗಳು ದೊರಕುವುವು ಪ್ರಮುಖ ರಾಜಕೀಯ ಪಕ್ಷಗಳು ತಮ್ಮತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ತೊರೆದು ಒಗ್ಗಟ್ಟಾಗಿ ದೇಶೋನ್ನತಿಗಾಗಿ ದುಡಿಯುವುವು.

ಸೂಚನೆ

ಈ ಪ್ರಮಾಣ ಯುಗಾದಿ ಪ್ರಯುಕ್ತ ನಾಳೆ 'ಸಾಧ್ವಿ'' ಪತ್ರಿಕೆಗೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕ.

ಶುಭವಾದನಗಳು

ಮೈಸೂರು ೨೨

ಶ್ರೀ ಸರ್ವಜಿತು ಸಂವತ್ಸರವು, ಸುಭಿಕ್ಷವಾಗಿಯೂ, ಸೌಖ್ಯದಾಯಕವಾಗಿಯೂ, ಆರೋಗ್ಯದಿಂದಲೂ ಕೂಡಿರಲೆಂದು ಹಾರೈಸಿ ಈ ಮುಂದೆ ಕಂಡ ಮಹನೀಯರುಗಳು ಕಳುಹಿಸಿರುವ ಯುಗಾದಿ ಶುಭವಾದನಗಳನ್ನು ಆದರದಿಂದ ಸ್ವೀಕರಿಸಿದ್ದೇವೆ:— ಕಸಬ ಗೋಪಾಲಯ್ಯನವರ ಬೀದಿಯಲ್ಲಿರುವ ಹೆಚ್. ಕೃಷ್ಣಮೂರ್ತಿಯವರು, ಶ್ರೀ ಸತ್ಯನಾರಾಯಣ ಹಿಮಾಳ ಫ್ಯಾಕ್ಟರಿಯ ಶ್ರೀ ಎಂ. ವಿ. ನಾರಾಯಣರಾವ್, ಜ್ಯೋತಿಷ್ಯ ವಿದ್ವಾನ್ ಎನ್. ರಂಗನಾಥಾಚಾರ್.

ಚಿಲ್ಲರೆ ವರ್ತಕರ ಸಂಘ

ರಾಜಧಾನಿಯ ಕೃಷ್ಣರಾಜ ಮಾರ್ಕೆಟ್ಟಿನಲ್ಲಿ ಮೊಹಲ್ಲಾ ಚಿಲ್ಲರೆ ವರ್ತಕರ ಸಂಘದವರು ಪೌರಸಭಾ ಮಾಜಿ ಉಪಾಧ್ಯಕ್ಷರಾದ ಶ್ರೀ॥ ಎ. ಕೃಷ್ಣಮೂರ್ತಿರಾಯರ ನೇತೃತ್ವದಲ್ಲಿ ಮೊನ್ನೆ ದಿನ ದಿವಾನರನ್ನು ಭೇಟಿ ಮಾಡಿ ತಮ್ಮ ಕುಂದುಕೊರತೆಗಳನ್ನು ಹೇಳಿಕೊಂಡರು. ಅವರು ಸಾವಧಾನವಾಗಿ ವಿಚಾರಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ಇತ್ತರು

ಗ॥ ಪ್ರೆಸ್ ಕೆಲಸಗಾರರ ಸಂಘ

ಮೈಸೂರು ಸರ್ಕಾರಿ ಛಾಪಾ ಮುದ್ರಣಾಲಯದ ಕೆಲಸಗಾರರ ಸಂಘವು ೮ನೇ ತಾ॥ ಸರ್ಕಾರದವರಿಂದ ರಿಜಿಸ್ಟರ್ ಮಾಡಲ್ಪಟ್ಟಿರುತ್ತದೆಯೆಂದು ತಿಳಿದುಬಂದಿದೆ.

ಹರಿಕಥೆಗಳು

ನಾಳೆ ಸಂಜೆ ವಿಠಲರಾಯರ ರಾಮಚಂದ್ರ ದೇವಾಲಯದಲ್ಲಿ ಶ್ರೀ ಶಿವಲಿಂಗಸ್ವಾಮಿ ಹಿರೇಮಠರವರಿಂದ ಸತ್ಯಹರಿಶ್ಚಂದ್ರ ಎಂಬ ಹರಿಕಥೆಯೂ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ವಿಶ್ವೇಶ್ವರ ಭವನದ ಮುಂಭಾಗದಲ್ಲಿ ರಾತ್ರಿ ೯ ಗಂಟೆಗೆ ಗಿರಿಜಾ ಕಲ್ಯಾಣವೆಂಬ ಹರಿಕಥೆಯೂ ನಡೆಯುವುವು

ಪ್ರಕಾಶಂರವರ ಪರಾಜಯ

ನಿನ್ನೆ ನಡೆದ ಮದರಾಸಿನ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಶ್ರೀ॥ ಓಮಂದೂರು ರಾಮಸ್ವಾಮಿ ರೆಡ್ಡಿಯವರು ಬಹುಮತದಿಂದ ನಾಯಕರಾಗಿ ಆರಿಸಲ್ಪಟ್ಟಿರುತ್ತಾರೆ ಪ್ರಕಾಶಂರವರಿಗೆ ಕಡಿಮೆ ಓಟುಗಳು ಬಂದು ಪರಾಜಿತರಾಗಿದ್ದಾರೆ

ಕಾರ್ಮಿಕ ಸರ್ಕಾರಕ್ಕೆ ಸೋಲು

ಬ್ರಿಟನ್ನಿನ ಆರ್ಥಿಕ ಸಮಸ್ಯೆಯ ಪರಿಹಾರದ ಬಗ್ಗೆ ಕಾರ್ಮಿಕ ಸರ್ಕಾರವು ಅನುಸರಿಸುತ್ತಿರುವ ನೀತಿಯನ್ನು ಖಂಡಿಸುವ ನಿರ್ಣಯವು ಲಾರ್ಡ್ಸ್ ಸಭೆಯಲ್ಲಿ ೧೧೯-೩೦ ಓಟುಗಳಿಂದ ಅಂಗೀಕಾರವಾಗಿ ಲೇಬರ್ ಸರ್ಕಾರಕ್ಕೆ ಭಾರಿ ಸೋಲು ಪ್ರಾಪ್ತವಾಗಿದೆ

ಬೆಂಕಿಯಲ್ಲಿ ಬಿದ್ದು ಸಾಯುವುದಾಗಿ ಗಾಂಧೀಜಿ

ಬಿಹಾರಿನಲ್ಲಿ ಪಂಜಾಬ್ ದಿನಾಚರಣೆಯನ್ನು ನಡೆಸಿದ್ದುದರ ಬಾಪು ಬೆಂಕಿಯಲ್ಲಿ ಹಾರಿಕೊಂಡು ಪ್ರಾಣಬಿಡುವುದಾಗಿ ಗಾಂಧಿಜಿಯವರು ಅಲ್ಲಿನ ಹಿಂದೂಗಳಿಗೂ ಸಿಖ್ಖರಿಗೂ ತಿಳಿಸಿದ್ದಾರೆ ಈ ದಿನಾಚರಣೆಯ ಬದಲು ಸರ್ಕಾರ ಕೂಲಿ, ಸವಲತ್ತುಗಳಿಗೆ ಅವಕಾಶ ವಿಸ್ತರಿಸಬೇಕೆಂದು ಅವರು ಹೇಳಿದ್ದಾರೆ

ಪಂಚಾಂಗ ಸ್ವೀಕಾರ

ವಿ॥ ಎಸ್ ಎನ್ ಕೃಷ್ಣಜೋಯಿಸರಿಂದ ಗಣಿಸಲ್ಪಟ್ಟು, ಮಹಾವಿದ್ವಾನ್ ಸಂಪತ್ಕೃಷ್ಣ ಜೋಯಿಸರಿಂದ ಪರಿಶೋಧಿಸಲ್ಪಟ್ಟ ಸರ್ವಜಿತ್ಸಂವತ್ಸರದ ಸಿದ್ಧಾಂತ ಮತ್ತು ವಾಕ್ಯ ಪಂಚಾಂಗವನ್ನು ಆದರದಿಂದ ಸ್ವೀಕರಿಸಿದ್ದೇವೆ. ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸಿನಲ್ಲಿ ಅಂದವಾಗಿ ಮುದ್ರಿತವಾಗಿದೆ. ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸಾಹಿತ್ಯ ಮಂದಿರದವರು ಮಾರಾಟದ ಅಧಿಕಾರಿಗಳಾಗಿದ್ದಾರೆ ಬೆಲೆ ೫ಂ ಆಣೆ ಮಾತ್ರ

ಮೌಂಟ್ ಬ್ಯಾಟನ್ನರ ಆಗಮನ

ನೂತನ ವೈಸರಾಯರಾದ ಲಾರ್ಡ್ ಮೌಂಟ್‌ಬ್ಯಾಟನ್ನರು ಮೊನ್ನೆ ತಮ್ಮ ಪರಿವಾರದೊಡನೆ ಲಂಡನ್ನಿನಿಂದ ವಿಮಾನದಲ್ಲಿ ಪ್ರಯಾಣ ಬೆಳೆಸಿದರು ಇಂದು ಸಂಜೆ ಅವರು ದೆಹಲಿಗೆ ಬರುವರು. ಇವರ ಕೂಡ ಲೇಡಿ ಮೌಂಟ್ ಬ್ಯಾಟನ್ನರೂ ಹಿರಿಯ ಮಗಳೂ, ಅವರ ಪ್ರೈವೇಟ್ ಸಹಾಯಕರೂ ಬರುವರು ಹಳೆಯ ಮತ್ತು ಹೊಸ ವೈಸರಾಯರು ಭಾರತದಲ್ಲಿ ಭೇಟಿಮಾಡುವ ಸಂದರ್ಭವು ಇದುವರೆಗೆ ಬಂದಿಲ್ಲ ಹೊಸಬರು ಬಂದಿಳಿಯುವ ಮೊದಲೇ ಹಳಬರು ಹಡಗೇರಿ ತಮ್ಮ ದೇಶಕ್ಕೆ ತೆರಳುತ್ತಿದ್ದರು ಆದರೆ ಈ ಸಾರಿ ಲಾರ್ಡ್ ಮೌಂಟ್ ಬ್ಯಾಟನ್ನರು ಇಂದು ರಾತ್ರಿ ಲಾರ್ಡ್ ವೇವೆಲ್ಲರನ್ನು ದೆಹಲಿಯಲ್ಲಿ ಭೇಟಿ ಮಾಡುವರು ಮೌಂಟ್ ಬ್ಯಾಟನ್ನರೇ ಭಾರತದ ಕಡೇ ವೈಸರಾಯರಾದ್ದರಿಂದ ಈ ಭೇಟಿಯ ಕಾರ್ಯಕ್ರಮ ನಡೆಯುವುದೆಂದು ಹೇಳಲಾಗಿದೆ

ಪ್ರತಿಬಂಧಕಾಜ್ಞೆ ರದ್ದು

ಪಂಜಾಬ್ ಪ್ರಾಂತ್ಯಕ್ಕೆ ಪ್ರವೇಶಿಸಕೂಡದೆಂದು ಆ॥ ಭಾ॥ ಹಿಂದೂ ಮಹಾಸಭಾಧ್ಯಕ್ಷ ಮತ್ತು ಕಾರ್ಯದರ್ಶಿಗಳ ಮೇಲೆ ವಿಧಿಸಿದ್ದ ಆಜ್ಞೆಯನ್ನು ಅಲ್ಲಿನ ಸರ್ಕಾರವು, ಪರಿಸ್ಥಿತಿಯು ತಿಳಿಗೊಳ್ಳುತ್ತಿರುವುದರಿಂದ ವಾಪಸು ಪಡೆದಿದೆ ಇದುವರೆಗೆ ಪಂಜಾಬಿನಲ್ಲಿ ೨೦೪೯ ಸಾವು, ೧೧೦೩ ನೋವು ಆಗಿರುವುದಾಗಿ ವರದಿಯಾಗಿದೆ

ಸಂಬಳಕ್ಕೆ ತಡೆ

ಸ್ವಂ. ವ.] ಚಾಮರಾಜನಗರ ೧೯

ಮೂಗೂರು ಕರ್ನಾಟಕ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡಲು ನಿರಾಕರಿಸಿರುವುದರಿಂದ ಶ್ರೀ ಚಾಮರಾಜೇಶ್ವರ ವೇದಪಾಠಶಾಲೆಯ ಉಪಾಧ್ಯಾಯರುಗಳ ಸಂಬಳವನ್ನು ತಡೆಹಿಡಿಯಲಾಗಿದೆಯೆಂದು ತಿಳಿದು ಬಂದಿದೆ.

ದೊಂಬಿ ಮೊಕದ್ದಮೆಯಲ್ಲಿ ಶಿಕ್ಷೆ

ಸ್ವಂ. ವ.] ನಂಜನಗೂಡು ೨೦

ಚಾಮರಾಜನಗರದ ತಾಲ್ಲೂಕು ಸಂತೆಮರಳ್ಳಿ ಗ್ರಾಮದಲ್ಲಿ ಕೆಲವು ದಿನಗಳ ಹಿಂದೆ ದೊಂಬಿ ನಡೆಸಿದರೆಂಬ ಅಪಾದನೆಗೆ ಗುರಿಯಾಗಿದ್ದ ಪಟೇಲ್ ಪುಟ್ಟಸ್ವಾಮಿ, ಯಾಲಕ್ಕೂರು ಶಿವಪ್ಪ ಮತ್ತು ಅವರ ಪಕ್ಷಗಳ ಮೇಲೆ ಮೊಕದ್ದಮೆ ಹೂಡಲಾಗಿದ್ದಿತು. ಇಲ್ಲಿನ ಮ್ಯಾಜಿಸ್ಟ್ರೇಟರು ಸೀರಿಯಸ್ಸು ಉಭಯ ಪಕ್ಷಗಳ ೩ಗ ಮಂದಿಗೆ ತಲಾ ೬ ತಿಂಗಳಿಂದ ಮೂರು ತಿಂಗಳ ವರೆಗೆ ಕಠಿಣ ಶಿಕ್ಷೆಯನ್ನು ವಿಧಿಸಿದ್ದಾರೆ

ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ದೊಡ್ಡ ಬಾಗಿಲ ಗೋಪುರವನ್ನು ಯಾರೋ ಪಾಪಿಗಳು ಹೊಡೆದುಹಾಕಿದ್ದಾರೆ ವೃಷಭ ... ಬಸವನನ್ನು ಊರಿನವರೆಲ್ಲಾ ಮೆರವಣಿಗೆ ಮಾಡಿ ಅದರ ಅಂತಕ್ರಿಯೆಯನ್ನು ನಡೆಸಲಾಯಿತು

ರಾಜಕಮಲ್

೨೩-೩-೪೭ ರಿಂದ ೬ ನೇ ವಾರ

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ (ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಗಸಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!!

ಇವೆಲ್ಲವನ್ನೂ ಇಂದೇ ನೋಡಿ.

ರಾಜಕಮಲ್

೨೧-೩-೪೭ ರಿಂದ ೪ ದಿನಗಳು

ಬೆಳಗ್ಗೆ ೧೦-೩೦ ಘಂಟೆಗೆ

ಆಗೇ ಕದಂ

ಪಾತ್ರ - ಮೋತಿಲಾಲ್ ಮತ್ತು ಅಂಜಲಿದೇವಿ

ಅಪೆರಾ ಟಾಕೀಸ್, ಮೈಸೂರು

೨೦-೩-೪೭ ರಿಂದ

ಕುಂಡಲಕೇಶಿ

(ತಮಿಳು)

ಪ್ರತಿ ದಿನ ಮೂರು ಆಟಗಳು

ಪಾತ್ರ :- ಪಳಂಗಾಸೋಕಿಲಂ, ಹೊನ್ನಪ್ಪ ಭಾಗವತರ್, ಟಿ. ಆರ್. ರಾಮಚಂದ್ರನ್ ಮುಂತಾದವರು

ಸಾಧ್ವಿ

ತಾ|| ೨೨-೩-೪೭ ಶನಿವಾರ

ಹೊಸ ವರ್ಷದ ಹಾರೈಕೆ

ನೂತನ ಸರ್ವಜಿತು ಸಂವತ್ಸರದಲ್ಲಿ ಭಗವಂತನು ಸಕಲರಿಗೂ ಸನ್ಮಂಗಳಗಳನ್ನು ಕರುಣಿಸಲೆಂದು ಅನನ್ಯ ಭಕ್ತಿಯಿಂದ ನಾವು ಬೇಡುತ್ತೇವೆ. ಘೋರವಾದ ಕ್ಷಾಮ, ದಾರುಣ ಅಭಾವ ಮತ್ತು ಅಶಾಂತಿಗಳಿಂದ ಜಗತ್ತು ಪಾರಾಗಿ ಮಾನವ ಪ್ರೇಮವೂ, ವಿಶ್ವ ಸೋದರತ್ವವೂ ಬೆಳೆದು ಪುನಃ ಸುಖ, ಶಾಂತಿಗಳಿಂದ ನಲಿಯಲೆಂದು ಹಾರೈಸುತ್ತೇವೆ. ನಮ್ಮ ವಾಚಕರಿಗೂ, ಹಿತೈಷಿಗಳಿಗೂ, ಸಕಲ ದೇಶ ಬಾಂಧವರಿಗೂ ಶುಭಾಶಯಗಳನ್ನು ಕೋರುತ್ತೇವೆ.

ಕೂಡಲೆ ಮಾರಾಟಕ್ಕಿದೆ

2946, ಸರಸ್ವತಿಪುರ, ಹೊಸಮನೆ, ಶಾಂತಿ ಕಟ್ಟಡ, ಜಾಗ ದೊಡ್ಡದು ಬಾಡಿಗೆ ಬರುತ್ತಾ ಇದೆ. ಕ್ರಯ 12,000

ಕೂಡಲೆ ವಿಚಾರಿಸಿ —

ಆರ್. ಗುಂಡೂರಾವ್,

ಪ್ರೊಪ್ರೈಟರ್ ಮೈಸೂರು ಬಿಸಿನೆಸ್ ಬ್ಯೂರೋ, ಮೈಸೂರು.

ಉಗಾದಿ ಹಾರೈಕೆ

ಹರ್ಷವ ನೀಡುವ ನೂತನ ವರ್ಷದ
ಆದಿಯು ದಿನವದು ರವಿವಾರ
ಹರ್ಷದಿ ಕೀರ್ತಿಯು ಪಡೆಯಲಿ ಪ್ರಜೆಗಳು
ಬೆಳಗುವ ಸೂರ್ಯನ ತೆರದಲ್ಲಿ
ವರ್ಷಕೆ ವರ್ಷಕೆ ಮಿಗಿಲು ಸಮೃದ್ಧಿಯು
ತಿಳಿಯಲು ರಾಜ್ಯದ ಪ್ರಜೆಯೆಲ್ಲ
ಹರ್ಷದಿ ಸಲಹಲಿ ಶ್ರೀ ಚಾಮೇಶ್ವರ
ನಮ್ಮಯ " ಸಾಧ್ವಿಯ " ಪತ್ರಿಕೆಯು
ವರ್ಷಕೆ ವರ್ಷಕೆ ಮಿಗಿಲ ನಿಜ್ಯವು
ಕಲಿಯುತ ರಾಜ್ಯದ ಪ್ರಜೆಯೆಲ್ಲ
ಹರ್ಷವ ಪಡೆಯುತ ಹೊಮ್ಮಿದೆ ಬಾಳಲಿ
ಕಾರದಿ ಮಾತೆಯ ಬೆಂಬಲದಿ
ಕನ್ನಡ ಭಾಷೆಯು ಕೆರದಲಿ ಬಾಳಲಿ
'ನಮ್ಮಯ ಭಾಗ್ಯದ ಪ್ರಭುವರರು
ವನ್ನಡೆ ದೊರಕಲಿ ಕನ್ನಡ ಭಾಷೆಗೆ
ಪ ಭುಗಳ ಪ್ರೇಮದ ಬೆಂಬಲದಿ
ಎಂ ವಿ ನರಸಿಂಹಯ್ಯಂಗಾರ್.

ನೂತನ ವರ್ಷದ ಹಾರೈಕೆ

ನಾಳೆಯಿಂದ ಪ್ರಾರಂಭವಾಗುವ ನೂತನ ವರ್ಷದಲ್ಲಿ ಕೃಷ್ಣರಾಜನಗರದ ತಾಲ್ಲೂಕಿನ ಸಮಸ್ತ ರೈತರಿಗೂ, ಜಮೀನ್ದಾರರಿಗೂ, ಸರ್ಕಾರಿ ನೌಕರರಿಗೂ, ವರ್ತಕರಿಗೂ ಮತ್ತು ಮೈಸೂರು ಸಂಸ್ಥಾನದ ಎಲ್ಲಾ ರೈತ ಕೆಲಸಗಾರರಿಗೂ ಭಗವಂತನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕರುಣಿಸಲೆಂದು ನಾನು ಪ್ರಾರ್ಥಿಸುತ್ತೇನೆ

ಜಿ ಎಸ್ ಭೈರೋಜಿರಾವ್,

ಪತ್ರಗಳನ್ನು ಬರೆಯುವವರು ಮತ್ತು ಕಮಿಷನ್ ಏಜಂಟ್, ಕೃಷ್ಣರಾಜನಗರ.

Edited, printed and published by A. R. Nagarajan at the Sadhvi Press D-Subbiah Road, Mysore.

ಪಂಚಾಂಗ ಶ್ರವಣ

ಮೈಸೂರು ಸಂಸ್ಕೃತ ಪಾಠಶಾಲೆಯಲ್ಲಿರುವ ಶ್ರೀ ಸದ್ಗುರು ಸೇವಾನಂದಲದ ಆಶ್ರಯದಲ್ಲಿ ನಾಳೆ, ಭಾನುವಾರ ಸಂಜೆ 5|| ಘಂಟೆಗೆ ಯುಗಪ್ರತಿಷ್ಠ ಪ್ರಯುಕ್ತ ಶ್ರೀ ಶ್ರೀ ಗಳವರ ದೇವಾಲಯದಲ್ಲಿ ಮಹಾಮಹೋಪಂತಿ ಪಂಚಾಂಗ ಶ್ರವಣವು ನಡೆಯುವುದು ಸರ್ವರಿಗೂ ಆಹ್ವಾನವಿರುತ್ತದೆ

ಚಾಮರಾಜನಗರದ ತಾಲ್ಲೂಕು ಪೋಟರು ಮಹಾಶಯರಲ್ಲಿ

ವಿಜ್ಞಾಪನೆ

1947 ನೇ ಇಸವಿ ಏಪ್ರಿಲ್ ಮಾಹೆ 28 ನೇ ತಾರೀಖು ನಡೆಯುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಚಾಮರಾಜನಗರದ ತಾಲ್ಲೋಕಿನಿಂದ ನಾನೊಬ್ಬ ಸ್ವತಂತ್ರಕನ್ನೂ ಪ್ರಜಾಪಕ್ಷಕ್ಕೂ ಮಧ್ಯವರ್ತಿಗಳಾದ ಗ್ರಾಮಾಧಿಕಾರಿಗಳ ಸಂಘದಿಂದ ಉಮೇದುವಾರನಾಗಿ ನಿಂತಿರುತ್ತೇನೆ. ಪ್ರಜಾಸೇವೆ ಮಾಡಲು ಅರ್ಹನೆಂದು ತಾವುಗಳು ಪರಿಗಣಿಸುವುದಾದರೆ ತಮ್ಮ ಅಮೂಲ್ಯವಾದ 3 ವೋಟುಗಳಲ್ಲಿ ಒಂದು ವೋಟನ್ನು " ಘಂಟೆ " ಗುರ್ತಿನ ನನಗೆ ಕೊಟ್ಟು ಬೆಂಬಲವನ್ನು ಕೊಡಬೇಕಾಗಿ ಕೋರುತ್ತೇನೆ

ಎ. ಶ್ರೀನಿವಾಸಮೂರ್ತಿ,

ಹೊನ್ನಹಳ್ಳಿ ಫಿರ್ಕಾ ಶ್ಯಾನುಭೋಗ್

ಮಹನೀಯ! ಕೇಳಿಕೊಳ್ಳಬೇಡಿ!

ಹೊರ ದೇಶದಿಂದ ಬಂದಿರುವ

ಉಲ್ಲನ್ ಪೆಂಟ್ಸ್ ಕೋಟುಗಳು

ಬೇರೆ ಬೇರೆ ಬಣ್ಣ ಮತ್ತು ನಮೂನೆಗಳಲ್ಲಿ

ಅತ್ಯಂತ ಸುಲಭ ಬೆಲೆ

1. ಎಲ್. ಮಧುರಾದಾಸ್,
2. ಕೆ. ಎಸ್ ಪಾಂಡುರಂಗರಾವ್ ಅಂಡ್ ಕೋ

ಬ್ಯಾಗಿಕ ಬಟ್ಟೆ ವರ್ತಕರು,

331, ಗಣೇಶನ ಚೌಕ, ಮೈಸೂರು.

● ಮೈಸೂರು ಮಿತ್ರ ಮಂಡಲಿಯ ಸಿಂಹೋತ್ಸವವು ನಾಳೆ ಸಂಜೆ ... ಬನುಮಯ್ಯನವರ ಶಾಲಾ ಆವರಣದಲ್ಲಿ ನಡೆಯುವುದು ಸರ್ವರಿಗೂ ಆಹ್ವಾನ



ಈ ಐವತ್ತು ವರ್ಷಗಳಿಂದ ಮಾನವ ಲೋಕಕ್ಕೆ ಆರೋಗ್ಯ ... ನಂದಗಳನ್ನು ನೀಡುತ್ತಾ ಅನರ್ಘ್ಯ ಸೇವೆ ..., ಅವಿಚ್ಛಿನ್ನವಾಗಿ ಸೇವೆ ಮಾಡಿ, ದಿನ ದಿನಾಭಿವೃದ್ಧಿ ಹೊಂದುತ್ತಿರುವುದಕ್ಕಾಗಿ ಎಸ್ಪ್ರೋ ಗರ್ವಿಸುತ್ತಿದೆ.

PATTERNS 374

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ !!

.ಬಿ. ಕೆಂಚಪ್ಪ ಸನ್ಸ್

ಜವಳೀ ಅಂಗಡಿ : — : ದೊಡ್ಡಪೇಟೆ, ಮೈಸೂರು

ನಂಜನಗೂಡು ದೊಡ್ಡಜಾತ್ರೆ - ದನಗಳ ಪ್ರದರ್ಶನ

1-4-47 ರ ಆಗಾಯ್ತು 4-4-47 ರ ವರೆಗೆ ದೊಡ್ಡ ಜಾತ್ರೆ ರಥೋತ್ಸವ ಸಂದರ್ಭದಲ್ಲಿ, ದನಗಳ ಪ್ರದರ್ಶನವನ್ನು ಈ ಊರಿನ ಜೋಗಿ ತೋಪಿನಲ್ಲಿ ಏರ್ಪಡಿಸಿರುತ್ತೆ ನೀರು ನೆರಳಿನ ಸೌಕರ್ಯ ಚೆನ್ನಾಗಿದೆ ದನಗಳಿಗೆ ಸುಂಕವಿಲ್ಲ, ವೈದ್ಯ ಸಹಾಯ ಏರ್ಪಡಿಸಿದೆ. ಉತ್ತಮ ದನಗಳಿಗೆ ಬಹುಮಾನ ಕೊಡಲಾಗುತ್ತೆ.

ಎ ವಿ. ಕೃಷ್ಣ, ಪ್ರೆಸಿಡೆಂಟ್,

ಟೌನ್ ಮುನಿಸಿಪಲ್ ಕೌನ್ಸಿಲ್, ನಂಜನಗೂಡು.

ಶ್ರೀ ಕೃಷ್ಣಾ ಫ್ಲೋರ್ ಅಂಡ್ ಫ್ಲೇಕ್ಸ್ ರೀ-ಗ್ರೂವಿಂಗ್ ವರ್ಕ್ಸ್

ಡೋರ್ ನಂ 1266, ಕೃಷ್ಣರಾಜೇಂದ್ರ ಆಸ್ಪತ್ರೆ ರಸ್ತೆ, ಮೈಸೂರು

ಪ್ರೊಪ್ರೈಟರ್:- ಎಂ. ಎಚ್. ತಿಮ್ಮಪ್ಪ,

ಫ್ಲೋರ್ ಮಿಲ್ ಗಳ ಮಾಲೀಕರೇ,

ನಿಮ್ಮ ಫ್ಲೋರ್ ಮಿಲ್ ಪ್ಲೇಟುಗಳ ಕೆಟ್ಟು ಕಾಲ ಬಾಳಿಕೆ ಬಂದು ಚೆನ್ನಾಗಿ ಕೆಲಸ ನಡೆಯುವ ಹಾಗೆ ರೀ-ಗ್ರೂವ್ ಮಾಡಿಕೊಡುತ್ತೇವೆ ಹೆಚ್ಚಿನ ವಿವರಗಳಿಗೆ ಮೇಲ್ಕಂಡ ವಿಳಾಸದಲ್ಲಿ ಖುದ್ದಾಗಿಯಾಗಲೀ ಪತ್ರ ವ್ಯವಹಾರದಲ್ಲಿಯಾಗಲೀ ದಯಮಾಡಿ ವಿಚಾರಿಸಿ.

ಚಾಮುಂಡೇಶ್ವರೀ ಟಾಕೀಸ್

೨೨-೩-೪೭ ರಿಂದ :: ಪ್ರತಿ ದಿನ ೩ ಆಟಗಳು

ಸ್ಟಾರ್ ಕಂಬೈನ್ಸ್ ಮತ್ತು ಪ್ರಗತಿಯವರ ಅಮೋಘವಾದ ತಮಿಳು ಚಿತ್ರ

- ವಿಜಯಲಕ್ಷ್ಮಿ -

ಮುಖ್ಯ ಭೂಮಿಕೆ:- ಎಂ. ವಿ ರಾಜಮ್ಮ, ಟಿ ಆರ್ ರಾಮಚಂದ್ರನ್, ಬಿ ಆರ್. ಪಂತುಲು ಮತ್ತು ಎಂ. ಜಿ ಚಂದ್ರನ್.

Morning Shows on 22, 23, and 24 at 10-30 a m

Laurel and Hardy in

BEAU HUNKS & PACK UP YOUR TROUBLES

Grand Double Attraction.

Join Now

Summer Classes in

Type writing, Short-hand and Book-keeping

at the

Champion Metropolitan College of Commerce,

Old Mysore Bank Buildings, Sayyaji Rao Road, Mysore

Admissions received on all working days between 7 and 10 a m and 5 and 7 p. m.

P. SUBBARAYA SASTRY

Principal.

ರೆ॥ ನಂ. 392 WEEKLY EDITION ಅಂಚೆಯ ಶುಲ್ಕ 6 ಕಾಸು

ಸಂಪುಟ ೧೧] ಸೋಮವಾರ ೨೪—೩—೪೭ [ಸಂಚಿಕೆ ೩೪

ಮದ್ರಾಸಿನಲ್ಲಿ ಹೊಸ ಮಂತ್ರಿಮಂಡಲ ರಚನೆ

ವಿದ್ಯಾರ್ಥಿಗಳು ವಿಧೇಯತೆ ಕಲಿಯಬೇಕು

ಆಚಾರ್ಯ ಕೃಪಲಾನಿಯವರ ಹಿತೋಕ್ತಿ

ಮೈಸೂರು ೨೪

ಬ್ರಿಟನ್ನಿನ ವಿದ್ಯಾರ್ಥಿಗಳು ಜರ್ಮನಿಯೊಂದಿಗಿನ ಯುದ್ಧದಲ್ಲಿ ಮಿ॥ ಚರ್ಚಿಲ್ಲರಿಗೆ ಸೂಚನೆ ಕೊಡುತ್ತಿರಲಿಲ್ಲ; ಚರ್ಚಿಲರು ಹೇಳಿದ ಹಾಗೆ ಕೇಳುತ್ತಿದ್ದರು. ಆದರೆ ನಮ್ಮ ವಿದ್ಯಾರ್ಥಿಗಳು ಹೀಗೆ ಮಾಡಬೇಕು, ಹಾಗೆ ಮಾಡಬೇಕು- ಎಂದು ಅಖಿಲ ಭಾರತ ಕಾಂಗ್ರೆಸ್ಸಿಗೇ ಸೂಚನೆಗಳನ್ನು ಕೊಡುತ್ತಾರೆ. ಈ ನೀತಿ ಉಚಿತವಾದುದಲ್ಲ- ಎಂಬುದಾಗಿ ಆಚಾರ್ಯ ಕೃಪಲಾನಿಯವರು ೧೯ನೇ ತಾ॥ ಸಂಜೆ ಬನುಮಯ್ಯನವರ ಶಾಲಾ ಭವನದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ಸಿನವರ ಪ್ರಶ್ನೆಗಳಿಗೆ ಉತ್ತರವಾಗಿ ತಿಳಿಸಿದರು.

ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ॥ ... ರವರು ಆಚಾರ್ಯರಿಗೆ ಬಿನ್ನವತ್ತಳೆಯನ್ನರ್ಪಿಸಿ, ೧೯೪೨ರ ಚಳುವಳಿಯಲ್ಲಿ ಮೈಸೂರು ವಿದ್ಯಾರ್ಥಿಗಳ ಪಾತ್ರವನ್ನು ವಿವರಿಸಿ, ವಿದ್ಯಾರ್ಥಿ ಹುತಾತ್ಮರನ್ನು ಸ್ಮರಿಸಿ, ರಾಷ್ಟ್ರಪತಿಗಳಿಗೆ ವಿದ್ಯಾರ್ಥಿ ಗಣದ ಪರವಾಗಿ ಸುಸ್ವಾಗತವನ್ನು ಕೋರಿದರು

ಬಿನ್ನವತ್ತಳೆಗೆ ಉತ್ತರವಾಗಿ ಆಚಾರ್ಯರು ಈ ರೀತಿ ಹೇಳಿದರು:-

ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಪ್ರಾಣ ನೀಗಿದ ಇಬ್ಬರು ವಿದ್ಯಾರ್ಥಿಗಳನ್ನು ನೀವು ಹೊಗಳಿದ್ದೀರಿ; ಅವರನ್ನು ಹುತಾತ್ಮರೆಂದು- ಎಂದು ಕೊಂಡಾಡಿದ್ದೀರಿ. ಕಳೆದ ಮಹಾ ಯುದ್ಧದಲ್ಲಿ ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ವಿಶ್ವ ವಿದ್ಯಾನಿಲಯಗಳ ಶೇಕಡ ೬೦ ಮಂದಿ ವಿದ್ಯಾರ್ಥಿಗಳು ತಮ್ಮ ದೇಶಕ್ಕಾಗಿ ಪ್ರಾಣ ನೀಗಿದರು. ಆದರೆ ಅವರನ್ನು ನಿಮ್ಮ ಹಾಗೆ ಹೊಗಳುತ್ತಿಲ್ಲ. ಅದು ಅವರ ಕರ್ತವ್ಯವನ್ನು ಅವರು ಮಾಡಿದರು. ಅಂತೆಯೇ ನಿಮ್ಮ ಕರ್ತವ್ಯವನ್ನು ನೀವು ಮಾಡಿದ್ದೀರಿ. ಅದಕ್ಕೆ ಹೊಗಳಿಕೆ, ಶಭಾಸ್‌ಗಿರಿ ಕೂಡದು.

ಸರ್ವ ಸಮನ್ವಯವಾದ ಶಾಸನಗಳನ್ನು ಉಲ್ಲಂಘಿಸಿ, ತನ್ನ ಇಚ್ಛೆ ಬಂದಂತೆ ವರ್ತಿಸುವವನನ್ನು ಸ್ವತಂತ್ರನೆಂದು ಕರೆಯಲು ಸಾಧ್ಯವಿಲ್ಲ. ಆದ್ದರಿಂದ ಸ್ವಾತಂತ್ರ್ಯದ ಅರ್ಥವನ್ನು ಪ್ರತಿಯೊಬ್ಬರೂ ಸರಿಯಾಗಿ ಗ್ರಹಿಸಬೇಕು.

ಚರ್ಚಿಲರು ರಾಷ್ಟ್ರಕ್ಕಾಗಿ ತನ್ನ ಜನಗಳ ರಕ್ತ ಮತ್ತು ಪ್ರಾಣಗಳನ್ನು ಕೇಳಿದರು. ಮಹಾತ್ಮಾ ಗಾಂಧಿಯವರು ಯಾರ ಪ್ರಾಣವನ್ನೂ ಕೇಳುತ್ತಿಲ್ಲ. ದೇಶಕ್ಕಾಗಿ ಪ್ರತಿಯೊಬ್ಬರೂ ಬದುಕಬೇಕೆಂಬುದೇ ಅವರ ತತ್ವ.

ರಾಜಧಾನಿಯ ಮೋಟಾರು, ಹೋಟೇಲು ಪ್ರೆಸ್, ಪವರ್ ಅಂಡ್ ಲೈಟ್ ಮತ್ತು ಸಿಗರೇಟ್ ಫ್ಯಾಕ್ಟರಿ ಕೆಲಸಗಾರರು ರಾಷ್ಟ್ರಪತಿಗಳಿಗೆ ಕಾಂ॥ ಕಛೇರಿಯಲ್ಲಿ ಹಾರ ಅರ್ಪಿಸಿ ತಮ್ಮ ಗೌರವ ಸಲ್ಲಿಸಿದರು.

ಹೊಸ ವರ್ಷದ ಶುಭಾಶಯ

ನೂತನ ವರ್ಷದಲ್ಲಿ ನಾಡಿನ ಭಾಗ್ಯೋದಯವಾಗಲೆಂದೂ, ಸರ್ವಜಿತ್ ಸಂವತ್ಸರವು ಸರ್ವರಿಗೆ ಸುಖ ಶಾಂತಿ ಸನ್ಮಂಗಳವೀಯಲೆಂದೂ ಹಾರೈಸುವ,

ತಿಲಕ್ ಸಂಘ,

ಒಂಟಿಕೊಪ್ಪಲು, ಮೈಸೂರು.

ಅಂತರ ಏಷ್ಯಾ ರಾಷ್ಟ್ರಗಳ ಸಮ್ಮೇಳನ

ನವದೆಹಲಿಯಲ್ಲಿ ನಿನ್ನೆ ಅಂತರ ಏಷ್ಯಾ ರಾಷ್ಟ್ರಗಳ ಸಮ್ಮೇಳನವು ಶ್ರೀಮತಿ ಸರೋಜಿನಿದೇವಿಯವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಈ ಸಮ್ಮೇಳನಕ್ಕೆ ಏಷ್ಯಾದ ೩೨ ರಾಷ್ಟ್ರಗಳ ೨೫೦ ಪ್ರತಿನಿಧಿಗಳು ಆಗಮಿಸಿದ್ದಾರೆ. ಪಂ॥ ನೆಹರೂರವರು ಆರಂಭೋತ್ಸವವನ್ನು ನೆರವೇರಿಸಿ ಹಳೇ ಯುಗವೊಂದು ಪರಿಸಮಾಪ್ತಿಯಾಗಿ ಹೊಸ ಯುಗವು ಆರಂಭವಾಗುತ್ತಿರುವುದಾಗಿ ತಿಳಿಸಿದರು.

ಮದ್ರಾಸಿನಲ್ಲಿ ಹೊಸ ಮಂತ್ರಿ ಮಂಡಲ

ಶ್ರೀ॥ ಓಮಂದೂರು ರಾಮಸ್ವಾಮಿ ರೆಡ್ಡಿಯವರು ಮದ್ರಾಸಿನಲ್ಲಿ ಹೊಸ ಮಂತ್ರಿಮಂಡಲವನ್ನು ನಿನ್ನೆ ರಚಿಸಿದರು. ಶ್ರೀ॥ ರೆಡ್ಡಿಯವರ॥ ಮುಖ್ಯ ಮಂತ್ರಿಗಳು; ಡಾ॥ ಟಿ. ಎಸ್. ಎಸ್. ರಾಜನ್, ಡಾ॥ ಪಿ. ಸುಬ್ಬರಾಯನ್, ಶ್ರೀ॥ಗಳಾದ ಭಕ್ತವತ್ಸಲಂ, ಬಿ. ಗೋಪಾಲರೆಡ್ಡಿ, ಕೆ. ಚಂದ್ರಮೌಳಿ, ಎಚ್. ಸೀತಾರಾಮ ರೆಡ್ಡಿ ಮತ್ತು ಕೆ. ಮಾಧವ ಮೆನನ್ ರವರುಗಳು ಇತರ ಮಂತ್ರಿಗಳು. ಇವರುಗಳು ನಿನ್ನೆ ಮಧ್ಯಾಹ್ನ ಪ್ರಮಾಣ ವಚನವನ್ನು ಸ್ವೀಕರಿಸಿ ಅಧಿಕಾರವನ್ನು ವಹಿಸಿಕೊಂಡರು. ಈ ಮಂತ್ರಿ ಮಂಡಲವು ಭದ್ರವಾಗಿದ್ದು ಪ್ರಾಂತ್ಯದ ಜನ ಸಾಮಾನ್ಯರ ಆಸೆಯನ್ನು ಈಡೇರಿಸಲೆಂದು ಗವರ್ನರರು ಹಾರೈಸಿದ್ದಾರೆ.

LATE NEWS

ಸ್ವಂ ಸು. ಪ್ರೇ॥] ಬೆಂಗಳೂರು ೨೪

ಧರ್ಮರಕ್ಷಕರ ಬಿ.ಎನ್. ಗೋಪಾಲರಾಯರ ದರೋಡೆ ಮೊಕದ್ದಮೆಯ ವಿಚಾರಣೆ ಇಂದಿಗೆ ಮುಕ್ತಾಯಗೊಂಡಿತು. ತೀರ್ಪಿಗಾಗಿ ೩೧ ನೇ ತಾ॥ಗೆ ಮುಂದುವರಿಸಲಾಗಿದೆ

ಪ್ರಶ್ನೆ ಪತ್ರಿಕೆಯ ಗೊಂದಲ

ಮೈಸೂರು ೨೪

ಇಂದು ನಡೆದ ಎಸ್. ಎಸ್. ಎಲ್. ಸಿ. ಪರೀಕ್ಷೆಯ 'ಎಲಿಮೆಂಟರಿ ಮ್ಯಾಥಮೆಟಿಕ್ಸ್' ಪ್ರಶ್ನೆ ಪತ್ರಿಕೆಯ ೭ ನೇ ಪ್ರಶ್ನೆಯಲ್ಲಿ ತಪ್ಪು ಮುದ್ರಣದಿಂದ ವಿದ್ಯಾರ್ಥಿಗಳು ಬಹಳ ತೊಂದರೆಗೆ ಸಿಕ್ಕಿ ಬಿದ್ದಿದ್ದಾರೆ. $x=4.5$ ಇರುವುದಕ್ಕೆ ಬದಲು $x=4.5$ ಎಂದೂ, $y=2.5$ ಇರಬೇಕಾದ್ದು $y=25$ ಎಂದೂ ಬಿದ್ದಿವೆ. ಪಟ್ಟಿಯಲ್ಲಿ x ಇರುವ ಜಾಗದಲ್ಲಿ y ಬಿದ್ದು ಇಡೀ ಲೆಕ್ಕವೇ ತಪ್ಪಾಗಿಹೋಗಿ ವಿಶೇಷ ಕೋಲಾಹಲವುಂಟಾಗಿದೆ.

ಪಂಜಾಬ್ ಗಡಿಯಲ್ಲಿ ಮಿಲಿಟರಿ ಕಾವಲು

ಪಂಜಾಬ್ ಮತ್ತು ಗಡಿನಾಡು ಪ್ರಾಂತ್ಯಗಳ ಗಡಿ ಪ್ರದೇಶದಲ್ಲಿ ವಿಶೇಷ ಕಾವಲಿಗಾಗಿ ಮಿಲಿಟರಿಯವರನ್ನು ಕಳುಹಿಸಲಾಗಿದೆ. ಗಡಿನಾಡಿನ ಹಜಾರ ಜಿಲ್ಲೆಯಲ್ಲಿ ಘಾತುಕಾರರ ಕೈ ಮೇಲಾಗಿರುವುದರಿಂದ ಈ ಕ್ರಮವನ್ನು ಅನುಸರಿಸಲಾಗಿದೆ. ಹಜಾರಾ ಜಿಲ್ಲೆಯ ಮಾನ್‌ಸೆಹರ್‌ನ ಹಿಂದೂಗಳ ಅಂಗಡಿ ಬೀದಿಗೆ ಮುಸ್ಲಿಂ ಗುಂಪು ಬೆಂಕಿ ಹಚ್ಚಿತ್ತು. ೧೦೦ ಅಂಗಡಿಗಳೂ ಎರಡು ದೇವಸ್ಥಾನಗಳೂ ಭಸ್ಮವಾಗಿವೆ. ೨೪ ಗಂಟೆಗಳ ಕಾಲದ ಕರ್ಫ್ಯೂ ಆಜ್ಞೆ ಜಾರಿಗೆ ಬಂದಿದೆ.

ಜೈ ಪ್ರಕಾಶ ನಾರಾಯಣ್ ರವರ ಪ್ರವಾಸ

ಮೈಸೂರು ೨೪

ಕರ್ನಾಟಕ ಪ್ರಾಂತ ವಿದ್ಯಾರ್ಥಿ ಕಾಂಗ್ರೆಸ್ಸಿನ ಆಹ್ವಾನವನ್ನು ಪರಿಗಣಿಸಿ ಶ್ರೀ ಜೈ ಪ್ರಕಾಶ ನಾರಾಯಣ್‌ರವರು ಕರ್ನಾಟಕದ ಪ್ರವಾಸವನ್ನು ಕೈಕೊಳ್ಳಲಿರುವರು. ವಿ॥ ವಿ॥ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನವೊಂದನ್ನು ೨೯ ನೇ ತಾ॥ ಬೆಂಗಳೂರಿನಲ್ಲಿ ಕರೆಯಲಾಗಿದೆ. ಅಲ್ಲಿ ಜೈ ಪ್ರಕಾಶರು ಭಾಷಣ ಮಾಡುವರು. ವಿದ್ಯಾರ್ಥಿಗಳ ನಿಧಿಯನ್ನು ಸ್ವೀಕರಿಸುವರು. ಈ ಸಮ್ಮೇಳನದ ವಿವರಗಳನ್ನು ಯುವಕ ಸಂಘ, ಬಸವನಗುಡಿ, ಬೆಂಗಳೂರು ನಗರ ಎಂಬ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

ಅಸ್ಸಾಮಿನಲ್ಲಿ ಲೀಗ್ ಚಳುವಳಿಗಾರರ ಮೇಲೆ ಗುಂಡಿನೇಟು

ಅಸ್ಸಾಂ ಪ್ರಾಂತ್ಯದಲ್ಲಿ ಜಾರಿಯಲ್ಲಿರುವ ವ್ಯವಸಾಯ ಶಾಸನವನ್ನು ಮುರಿಯಲು ಮುಸ್ಲಿಂ ಲೀಗಿನವರು ನಿರ್ಧರಿಸಿರುವಂತೆ ಮೊದಲನೇ ತಂಡದವರು ಬಂಗಾಳದಿಂದ ಅಸ್ಸಾಮಿಗೆ ನುಗ್ಗಿ ಮೊನ್ನೆ ಚಳುವಳಿಯನ್ನು ಆರಂಭಿಸಿದರು. ಬಾರ್‌ಪೇಟ ಸಬ್ ಡಿವಿಜನ್ನಿನಲ್ಲಿ ಈ ಚಳುವಳಿಗಾರರ ಮೇಲೆ ಪೋಲೀಸರು ಗುಂಡು ಹಾರಿಸಿದರು. ಅಸ್ಸಾಂ ಮತ್ತು ಬಂಗಾಳ ಗಡಿಯನ್ನು ಕಾವಲು ಮಿಲಿಟರಿಯನ್ನು ಅಸ್ಸಾಂ ಸರ್ಕಾರವು ಕಳುಹಿಸಿದೆ.

ಬಂಗಾಳ ಪ್ರಾಂತ್ಯದ ಮೈಮನ್‌ಸಿಂಗ್ ಜಿಲ್ಲೆಯಲ್ಲಿ ೧೦ ಸಹಸ್ರ ಲೀಗ್ ಸ್ವಯಂಸೇವಕರು ಅಸ್ಸಾಮಿಗೆ ನುಗ್ಗಲು ತಯಾರಾಗಿದ್ದಾರೆಂದೂ ಬಂಗಾಳದಲ್ಲಿರುವ ಚಳುವಳಿ ಸಮಿತಿಯು ಈಗಾಗಲೇ ೩ ಲಕ್ಷ ರೂ ಗಳನ್ನು ಇದಕ್ಕಾಗಿ ವಸೂಲು ಮಾಡಿದೆಯೆಂದೂ ತಿಳಿದು ಬಂದಿದೆ.

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ತಾ॥ ೨೪-೩-೪೭ರಿಂದ ೩೦-೩-೪೭ ರ ವರೆಗೆ

ಮೇಷ—ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಸಾಧಾರಣ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ತಾ॥ ೨೬-೨೮ ಆಲಸ್ಯ ಚಿಂತೆ.

ವೃಷಭ-ಆರೋಗ್ಯ ಉತ್ತಮ, ಧನಲಾಭ ಕಡಿಮೆ, ಖರ್ಚು ಅಧಿಕ, ಪ್ರವಾಸದಿಂದ ಆಲಸ್ಯ, ವ್ಯಾಪಾರದಲ್ಲಿ ಶತ್ರುಗಳಿಂದ ಕಿರುಕುಳ, ವ್ಯವಹಾರದಲ್ಲಿ ಮಿತ್ರ ಸಹಾಯ ತಾ॥ ೨೭-೨೯ ಲಾಭ, ಶಾಂತಿ.

ಮಿಥುನ—ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ಖರ್ಚು ಅಧಿಕ. ಉದ್ಯೋಗ, ವ್ಯವಹಾರಗಳಲ್ಲಿ ಯಶ, ಶತ್ರುನಾಶ, ಶುಭ ಕಾರ್ಯಗಳಿಗಾಗಿ ಪ್ರವಾಸ.

ಕಟಕ—ಆರೋಗ್ಯ ಚೆನ್ನಾಗಿರುತ್ತದೆ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ವ್ಯಾಪಾರದಿಂದ ಅಧಿಕ ಲಾಭ, ತಾ॥ ೨೯-೩೦ ಲಾಭ, ಪ್ರವಾಸ.

ಸಿಂಹ—ಶಾರೀರಿಕ ಸ್ಥಿತಿ ಉತ್ತಮ, ಧನಲಾಭ, ಸಾಧಾರಣ, ಖರ್ಚು ಅಧಿಕ, ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ವಿಶೇಷ ಸನ್ಮಾನ, ವ್ಯಾಪಾರದಿಂದ ಲಾಭ, ತಾ॥ ೨೬-೨೭ ಪ್ರವಾಸ, ಅಶಾಂತಿ

ಕನ್ಯಾ—ಆರೋಗ್ಯ ಚೆನ್ನಾಗಿರುತ್ತದೆ, ಮಾನಸಿಕ ಚಿಂತೆ ಹೆಚ್ಚು, ಧನಾಭಾವದಿಂದ ಕಾರ್ಯ ಹಾನಿ, ಅಧಿಕಾರಿ ವರ್ಗದವರಿಂದ ಅಸಮಾಧಾನ, ತಾ॥ ೨೪-೨೬-೩೦ ಲಾಭ, ಶಾಂತಿ

ತುಲಾ—ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ವ್ಯಾಪಾರ, ಉದ್ಯೋಗಗಳಲ್ಲಿ ಪ್ರಗತಿ, ವ್ಯವಹಾರಗಳಲ್ಲಿ ಅಧಿಕಾರಿ ವರ್ಗದವರಿಂದ ಸಹಾಯ, ತಾ॥ ೨೭-೨೯, ಖರ್ಚು, ಅಶಾಂತಿ.

ವೃಶ್ಚಿಕ ಆರೋಗ್ಯ ಕೆಟ್ಟು ಔಷಧೋಪಚಾರಗಳಿಗಾಗಿ ವಿಶೇಷ ಧನ ವ್ಯಯ, ವ್ಯಾಪಾರ, ಉದ್ಯೋಗಗಳಲ್ಲಿ ಪ್ರಗತಿ, ಶತ್ರುಗಳ ಕಿರುಕುಳ ಹೆಚ್ಚು, ತಾ॥ ೨೬-೨೮-೩೦ ಲಾಭ, ಪ್ರವಾಸ.

ಧನುಸ್ಸು—ದೈಹಿಕ ಸ್ಥಿತಿ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ, ವ್ಯವಹಾರಗಳಲ್ಲಿ ಮಿತ್ರರಿಂದ ಸಹಾಯ, ವ್ಯಾಪಾರದಲ್ಲಿ ನಷ್ಟ, ಪ್ರವಾಸದಿಂದ ಆಘಾತ, ತಾ॥ ೨೫-೨೭-೩೦ ಶಾಂತಿ, ಬಂಧು ದರ್ಶನ.

ಮಕರ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಅಧಿಕ, ವ್ಯಾಪಾರದಲ್ಲಿ ಶತ್ರುಗಳ ಕಿರುಕುಳದಿಂದ ನಷ್ಟ, ಅಧಿಕಾರಿ ವರ್ಗದವರಿಂದ ತಿರಸ್ಕಾರ, ಆಪ್ತ ಜನರಿಂದ ಅಪಮಾನ, ತಾ॥ ೨೪-೨೮ ಲಾಭ, ಶಾಂತಿ, ಸಂತೋಷ.

ಕುಂಭ—ಶಾರೀರಿಕ ಸ್ಥಿತಿ ಕೆಡುತ್ತದೆ, ಖರ್ಚು ಅಧಿಕ, ಉದ್ಯೋಗ, ವ್ಯವಹಾರಗಳಿಗೆ ಆಪ್ತರಿಂದ ಧಕ್ಕೆ ತಗುಲುತ್ತದೆ, ವ್ಯಾಪಾರದಲ್ಲಿ ಪ್ರಗತಿ, ಪ್ರವಾಸದಿಂದ ಮಾನಸಿಕ ಅಶಾಂತಿ ಹೆಚ್ಚುವುದು, ತಾ॥ ೨೫-೨೭-೩೦ ಅಶಾಂತಿ, ಅಶುಭ ವಾರ್ತೆ.

ಮೀನ—ಆರೋಗ್ಯ ಉತ್ತಮ, ಧನಲಾಭ ಚೆನ್ನಾಗಿರುತ್ತದೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಮಿತ್ರರಿಂದ ಸಹಾಯ, ಗೃಹದಲ್ಲಿ ಮಂಗಳ ಕಾರ್ಯಗಳಿಗಾಗಿ ಖರ್ಚು, ಪ್ರವಾಸದಿಂದ ಬಂಧು ದರ್ಶನ, ತಾ॥ ೨೭, ೩೦ ಲಾಭ, ಸಂತೋಷ

ಸಾಧ್ವಿ

ತಾ॥ ೨೪-೩-೪೭ ಸೋಮವಾರ

ಹೊಸ ಅಧ್ಯಾಯ

ಹಳೆಯ ವೈಸರಾಯರಾದ ಲಾರ್ಡ್ ವೇವೆಲ್ಲರು ಸ್ವದೇಶಕ್ಕೆ ಹಿಂತಿರುಗಿದರು. ಹೊಸಬರಾದ ವೈಕೌಂಟ್ ಮೌಂಟ್ ಬ್ಯಾಟನ್ನರು ಬಂದರು. ಇವರು ಈ ದಿನ ಕ್ರಮ ಪ್ರಕಾರವಾಗಿ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡರು. ಇವರ ಕಾಲದಲ್ಲಿ ಹೊಸ ಪ್ರಕರಣವೊಂದು ಆರಂಭವಾಗಿ ಬ್ರಿಟನ್ ಮತ್ತು ಭಾರತಗಳ ಸಂಬಂಧವು ಅಂತಿಮವಾಗಿ ಇತ್ಯರ್ಥಗೊಳ್ಳುವುದೆಂದು ನಂಬಲಾಗಿದೆ.

ಬ್ರಿಟಿಷರು ಬರುವ ವರ್ಷ ತಮ್ಮ ಅಧಿಕಾರವನ್ನು ಭಾರತೀಯರಿಗೆ ಬಿಟ್ಟುಕೊಟ್ಟು ಹಿಂದಿರುಗುವುದಾಗಿ ಘೋಷಿಸಿರುವರಷ್ಟೆ. ಪೂರ್ವ ಸಿದ್ಧತೆಗಳನ್ನು ಮಾಡುವುದೇ ಹೊಸ ವೈಸರಾಯರ ಮುಖ್ಯ ಕರ್ತವ್ಯವಾಗಿದೆ. ಅವರು ಅದಕ್ಕಾಗಿ ಈಗಿನಿಂದಲೇ ಪ್ರಯತ್ನಗಳನ್ನು ಕೈಗೊಳ್ಳುವರೆಂದೂ ಹೇಳಲಾಗಿದೆ. ಅಧಿಕಾರವು ಹಸ್ತಗತವಾಗುವ ಸಮಯದಲ್ಲಿ ಪ್ರತಿಗಾಮಿಯಾದ ಶಕ್ತಿಗಳು ಈಗಾಗಲೇ ತಮ್ಮ ಪ್ರಾಬಲ್ಯವನ್ನು ಪ್ರಕಟಿಸಲು ತೊಡಗಿರುತ್ತವೆ. ಇದರಿಂದ ಅಪಾರವಾದ ಅನರ್ಥಗಳೂ, ಕಷ್ಟ ಪರಂಪರೆಗಳೂ ಸಹ ಸಂಪ್ರಾಪ್ತವಾಗಿರುತ್ತವೆ. ಆದುದರಿಂದ ಹೊಸ ವೈಸರಾಯರ ಜವಾಬ್ದಾರಿಯು ಇನ್ನೂ ಹೆಚ್ಚು ಗುರುತರವಾಗಿ ಪರಿಣಮಿಸಿರುತ್ತದೆ.

ಮೌಂಟ್ ಬ್ಯಾಟನ್ನರು ಪ್ರಗತಿ ಪರವಾದ ಪ್ರಜಾಪ್ರಭುತ್ವ ಭಾವನೆಯುಳ್ಳ ಪೂರ್ಣ ವಿಶ್ವಾಸವುಳ್ಳವರೆಂದು ಹೇಳಲಾಗಿದೆ. ನೆಹರೂ ಮತ್ತು ಇತರ ನಾಯಕರುಗಳಿಗೆ ಆಪ್ತರಾದ ಮಿತ್ರರೆಂದೂ ಸಹ ತಿಳಿದುಬಂದಿದೆ. ಅಲ್ಲದೆ ನಿಜವಾದ ನ್ಯಾಯಯುತ ಅವರು ನಿಯುಕ್ತವಾದ ತಮ್ಮ ಕೆಲಸಕಾರ್ಯಗಳನ್ನು ಸ್ಪಷ್ಟವಾಗಿ ಮಾಡುವವರೆಂದೂ ಸಹ ಗೊತ್ತಾಗಿದೆ. ಆದುದರಿಂದ ಬ್ರಿಟಿಷ್ ಸರ್ಕಾರದ ಉಗ್ರ ಯೋಜನೆಯನ್ನು ಅವರು ಯುಕ್ತವಾದ ರೀತಿಯಲ್ಲಿ ಕಾರ್ಯರೂಪಕ್ಕೆ ತರುವರೆಂದು ನಂಬಲಾಗಿದೆ.

ಹೊಸ ವೈಸರಾಯರ ಅಧಿಕಾರದ ಅವಧಿಯು ಹಿಂದೂಸ್ಥಾನದ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವಾಗಿ ಪರಿಣಮಿಸುವುದೆಂದು ಹೇಳಬಹುದು. ಇವರೇ ಭಾರತದ ಕಡೆಯ ವೈಸರಾಯರೆಂದೂ ಗೊತ್ತಾಗಿದೆ. ಭಾರತೀಯರಿಗೆ ಬರುವ ವರ್ಷ ಅಧಿಕಾರವು ವರ್ಗಾಯಿಸಲ್ಪಡುವುದರಿಂದ ಇನ್ನು ಮುಂದೆ ಬೇರೆ ವೈಸರಾಯರುಗಳು ಬರುವ ಪ್ರಮೇಯವಿರುವುದಿಲ್ಲ. ಅಧಿಕಾರದ ವರ್ಗೀಕರಣವನ್ನು ಅದಷ್ಟು ವಿಶ್ವಾಸಪೂರಕವಾಗಿ ನೆರವೇರಿಸುವುದೇ ವೈಕೌಂಟ್ ಮೌಂಟ್ ಬ್ಯಾಟನ್ನರ ಮುಂದಿರುವ ಕೆಲಸ. ಹಿಂದೂಸ್ಥಾನದ ಸರ್ಕಾರವು ಕಾರ್ಯತಃ ಡೊಮಿನಿಯನ್ ಸರ್ಕಾರದಂತೆ ವರ್ತಿಸಲು ಕೂಡಲೇ ಅವರು ಕಾರ್ಯಕ್ರಮ ಕೈಗೊಳ್ಳುವರೆಂದು ಹೇಳಲಾಗಿದೆ. ಅವರ ಹಾಗೆ ಮಾಡಿದರೆ ಇಂದಿನ ಅನೇಕ ತೊಡಕುಗಳು ಖಂಡಿತವಾಗಿಯೂ ಪರಿಹಾರವಾಗುವವು. ಈ ದಿನ ಅಧಿಕಾರ ಸ್ವೀಕಾರ ಮಾಡಿರುವ ಇವರು ತಮ್ಮ ಮುಂದಿರುವ ಕಾರ್ಯವನ್ನು ಯುಕ್ತಿಯಾಗಿ ನೆರವೇರಿಸಿ, ಬ್ರಿಟನ್ನಿಗೂ, ಭಾರತಕ್ಕೂ ಶಾಶ್ವತವಾದ ಸ್ನೇಹ ಸೌಹಾರ್ದಗಳು ಏರ್ಪಡುವಂತೆ ಮಾಡಲೆಂದು ನಾವು ಹಾರೈಸುತ್ತೇವೆ. ಸಂ॥

Don't Miss
A Fine Opportunity!
Foreign
WOOLLEN GENTS' COATS
in different colours and
Varieties
— Cheapest Rates —
(1) L. Mathura Das,
(2) K. S. Pandurangа Rao and Co.,
Fancy Cloth Merchants,
Garageswari Chouk,
Mysore.

ಚಾಮರಾಜನಗರದ ತಾಲ್ಲೂಕು ವೋಟರು ಮಹಾಶಯರಲ್ಲಿ ವಿಜ್ಞಾಪನೆ

1947 ನೇ ಇಸವಿ ಏಪ್ರಿಲ್ ಮಾಹೆ 28 ನೇ ತಾರೀಖು ನಡೆಯುವ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಗೆ ಚಾಮರಾಜನಗರದ ತಾಲ್ಲೋಕಿನಿಂದ ನಾನೊಬ್ಬ ಸರ್ಕಾರಕ್ಕೂ ಪ್ರಜಾ ಪಕ್ಷಕ್ಕೂ ಮಧ್ಯವರ್ತಿಗಳಾದ ಗ್ರಾಮಾಧಿಕಾರಿಗಳ ಸಂಘದಿಂದ ಉಮೇದುವಾರನಾಗಿ ನಿಂತಿರುತ್ತೇನೆ. ಪ್ರಜಾ ಸೇವೆ ಮಾಡಲು ಅರ್ಹನೆಂದು ತಾವುಗಳು ಪರಿಗಣಿಸುವುದಾದರೆ ತಮ್ಮ ಘನವಾದ 3 ವೋಟುಗಳಲ್ಲಿ ಒಂದು ವೋಟನ್ನು " ಘಂಟೆ " ಗುರ್ತಿನ ಡಬ್ಬಿಗೆ ಕೊಟ್ಟು ಮುಂಬರಾಗಲು ಬೆಂಬಲ ಕೊಡಬೇಕಾಗಿ ಕೋರುತ್ತೇನೆ.

ಎ. ಶ್ರೀನಿವಾಸಮೂರ್ತಿ,
ಹೊನ್ನಹಳ್ಳಿ ಡಿಪ್ಯುಟಿ ಶ್ಯಾನುಭೋಗ್.

ವಿವಾಹ ಮಹೋತ್ಸವ

ಮದ್ರಾಸ್ ೧೮

ಆಯುರ್ವೇದಾಶ್ರಮದ ಮ್ಯಾನೇಜಿಂಗ್ ಡೈರೆಕ್ಟರರಾದ ಡಾ॥ ಡಿ. ದೇಶಿಕಾಚಾರ್ಲ್ಲುರವರು ತಮ್ಮ ಕುಮಾರಿ ಸೌ॥ ರಾಜಲಕ್ಷ್ಮಿಯವರನ್ನು ಕುಮಕೂಂನ ಶ್ರೀ॥ ಎಸ್ ರಾಮಯ್ಯಂಗಾರ್ಯರ ಕುಮಾರ ಚಿ॥ ರಾಜರವರಿಗೆ ಕೊಟ್ಟು ವಿವಾಹವನ್ನು ಕಳೆದ ೯ ನೇ ತಾ॥ ತ್ಯಾಗರಾಜ ನಗರದಲ್ಲಿ ವೈಭವದಿಂದ ನೆರವೇರಿಸಿದರು. ಸಂಜೆ ನಡೆದ ಸ್ವಾಗತ ಸಮಾರಂಭದಲ್ಲಿ ಸುಶ್ರಾವ್ಯವಾದ ಸಂಗೀತ ಕಛೇರಿ ನಡೆಯಿತು. ಅನೇಕ ಮಾನ್ಯ ಮಹನೀಯರು ಆಹ್ವಾನಿತರಾಗಿ ಸತ್ಕರಿಸಲ್ಪಟ್ಟರು. ವಧೂ ವರರಿಗೆ ಅನೇಕ ಬಹುಮಾನಗಳು ಕೊಡಲ್ಪಟ್ಟವು.

ತಾತ್ಕಾಲಿಕ ಪರಿಹಾರ

ರಾಜಧಾನಿಯ ದಳವಾಯಿ ವಿದ್ಯಾಸಂಸ್ಥೆಯ ಪ್ರಾಥಮಿಕ, ಮಾಧ್ಯಮಿಕ ಮತ್ತು ಸೆಕೆಂಡರಿ ಶಾಲಾ ಉಪಾಧ್ಯಾಯರುಗಳಿಗೆ ಒಂದು ತಿಂಗಳ ಸಂಬಳವನ್ನು ತಾತ್ಕಾಲಿಕ ಪರಿಹಾರವಾಗಿ ಕೊಡಲಾಗಿದೆ. ಏಡೆಡ್ ಸಂಸ್ಥೆಗಳ ಮೈಕೆ ಈರೀತಿ ಪರಿಹಾರ ದೊರೆತಿರುವುದು ಇದೇ ಮೊದಲೆಂದು ಹೇಳಲಾಗಿದೆ.

ಕೈ ಮಗ್ಗದವರ ಸಭೆ

ಮೈಸೂರು ಜಿಲ್ಲೆಯಲ್ಲಿರುವ ಕೈ ನೆಯ್ಗೆಯವರ ಸಂಘದ ಸರ್ವ ಸದ... ಸಭೆಯು ಇದೇ ೨೭ ನೇ ಗುರುವಾರ ... ಹ್ನ ೩ ಗಂಟೆಗೆ ಚಿಂತಿ ನವಾಬರ ... ಕೈ ಸುಬ್ಬಯ್ಯನವರ ಛತ್ರದಲ್ಲಿ ನಡೆ... ದರಿಂದ ಸದಸ್ಯರೆಲ್ಲರೂ ತಪ್ಪದೆ ದ... ಹಿಸಬೇಕೆಂದು ಕಾರ್ಯದರ್ಶಿಗಳು ... ರುತ್ತಾರೆ

ರಾಜಕಮಲ...
೨೩-೩-೪೭ ರಿಂದ ೬ ನೇ ...
1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ
ಶ್ರೀ ಕೃಷ್ಣಲೀಲಾ...
(ಕನ್ನಡ...)
ಇಂಪಾದ ಗಾಯನಗಳು! ಸೊಂಪಾದ ... ನಗಳು!! ಮನರಂಜಕವಾದ ದೃಶ್ಯ...
ಇವೆಲ್ಲವನ್ನೂ ಇಂದೇ ನೋಡಿ...

ಅಪೆರಾ ಟಾಕೀಸ್, ಮೈಸೂ...
೨೦-೩-೪೭ ರಿಂದ
ಕುಂಡಲಕೇಶಿ
(ತಮಿಳು)
ಪ್ರತಿ ದಿನ ಮೂರು ಆಟಗಳು
ಪಾತ್ರ:-ವಸಂತಕೋಕಿಲಂ, ಹೊ... ಭಾಗವತರ್, ಟಿ ಆರ್. ರಾ... ಚಂದ್ರನ್ ಮುಂತಾದವರು

Edited, printed and publish... A. R. Nagarajan at the Sadhvi ... D. Subbaiah Road, Mysore

ಕಂಟ್ರೋಲು ಬಿಡಿ! ಸುಸಮಯ!

ಹೊಸ ಜವಳಿ

ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಬನಾರಿಸ್, ಕಂಚಿ, ಆರ್ನಿ, ಕಾಂಚಿಪುರಂ, ಹುಬ್ಬಳ್ಳಿ ಸೀರೆಗಳೂ, ಕರಾಚಿ ಸೀರೆಗಳೂ, ನೂಲಿನ ಪೂನಾ ಡಿಜೈನಾದ ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.

M. P. V., M. V. ಘೋಟಿ ಯ್ಯು B. A. ಅಂಡ್ ಬ್ರದರ್ಸ್
ದೊಡ್ಡಾ... ಆನಂದ ಭವನ ಹೋಟೆಲ್ ಪೈಕ ಬಲಭಾಗದ ಕೊನೆ
ಜವಳಿ ಅಂಗಡಿ, ಮೈಸೂರು.

ನಂಜನಗೂಡು ದೊಡ್ಡ ಜಾತ್ರೆ - ದನಗಳ ಪ್ರದರ್ಶನ

1-4-47 ರ ಆರಾಭ್ಯ 4-4-47 ರ ವರೆಗೆ ದೊಡ್ಡ ಜಾತ್ರೆ ರಥೋತ್ಸವ ಸಂದರ್ಭದಲ್ಲಿ, ದನಗಳ ಪ್ರದರ್ಶನವನ್ನು ಈ ಊರಿನ ಹೋಗಿ ತೋಪಿನಲ್ಲಿ ಏರ್ಪಡಿಸಿರುತ್ತೆ. ನೀರು ನೆರಳಿನ ಸೌಕರ್ಯ ... ದನಗಳಿಗೆ ಸುಂಕವಿಲ್ಲ, ವೈದ್ಯ ಸಹಾಯ ಏರ್ಪಡಿಸಿದೆ. ಉತ್ತಮ ದನಗಳಿಗೆ ಬಹುಮಾನ ಕೊಡಲಾಗುತ್ತೆ.

ಎ. ವಿ. ಕೃಷ್ಣನ್, ಪ್ರೆಸಿಡೆಂಟ್,
... ಮುನಿಸಿಪಾಲಿಟಿ, ನಂಜನಗೂಡು.

ಜೈ ಹಿಂದ್! ॥ ವಂದೇ ಮಾತರಂ ॥ ಜೈ ಹಿಂದ್

ನಂಜನಗೂಡು ಪುರ ಸಭಾ ಚುನಾವಣೆ

ತಾ॥ ೨೭-೩-೪೭ ನೇ ಗುರುವಾರ ನಡೆಯಲಿರುವ
ಪುರ ಸಭಾ ಚುನಾವಣೆಯಲ್ಲಿ
ದಯವಿಟ್ಟು ಕಾಂಗ್ರೆಸ್ಸಿನ ಪರವಾಗಿ ನಿಂತಿರುವ ಈ ಕೆಳಗೆ ಕಂಡ ಉಮೇದುವಾರ... ತಮ್ಮ ಘನವಾದ ಓಟನ್ನು ಕೊಡಿ.

ನಂ.	ಹೆಸರು	ಚಿಹ್ನೆ	ಓಟು ಮಾಡುವ...
	ಒಂದನೇ ಬ್ಲಾಕ್		
೬	ಹೆಚ್. ಮಾದಪ್ಪ	ಗಾಡಿ	X
೭	ರಾಚಪ್ಪ	ರಾಟೆ	X
೮	ಆರ್. ವಿ. ಈಶ್ವರರಾವ್	ಆನೆ	X
೯	ಎನ್. ವಿ. ವೆಂಕಟರಮಣ ಶೆಟ್ಟಿ ಉರುಫ್ ಸ್ವಾಮಿ	ಹುಲಿ	X
೧೦	ಗೈಬ್ ಸಾಹೇಬ್	ಕುದುರೆ	X
೧೧	ಮಣೇಗಾರ್ ಸಿದ್ದಪ್ಪ	ಸಿಂಹ	X
	ಎರಡನೇ ಬ್ಲಾಕ್		
೫	ಬಿ. ಎನ್. ಎಸ್ ಆರಾಧ್ಯ	ಗಣಪತಿ	X
೬	ಆರ್. ರಂಗಯ್ಯ	ಸೂರ್ಯ	X
೭	ಎನ್. ಸಿ. ಶಿವಣ್ಣ	ರಾಟೆ	X
೮	ಕೆ. ವೆಂಕಟಸುಬ್ಬಯ್ಯ	ಹುಲಿ	X
೯	ಕೆ. ನಂಜಯ್ಯ	ಗಾಡಿ	X
	ಮೂರನೇ ಬ್ಲಾಕ್		
೩	ಜಿ. ನಂಜುಂಡಪ್ಪ	ತ್ರಿಶೂಲ	X
೪	....	....	....
೫	ಡಿ. ಶಂಕರನಾರಾಯಣ ಅಯ್ಯರ್	ಸಿಹ್ಮ	X
೬	ಎಸ್. ಎನ್. ವೆಂಕಟರಾವ್	ಸೂರ್ಯ	X

ರಿಜಿ. ನಂ. 392 | ವಂದೇ ಮಾತರಂ | ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೨೫—೩—೪೭ [ಸಂಚಿಕೆ ೯೯೩

ಮುಖಂಡರುಗಳೊಡನೆ ಹೊಸ ಮೈಸೂರಾಯರ ಭೇಟಿ

ಭಾರತದ ಸ್ವಾತಂತ್ರ್ಯ ಹಳ್ಳಿಗಳಲ್ಲಿದೆ

ಮೈಸೂರು ೨೫

ಬ್ರಿಟಿಷರು ಭಾರತವನ್ನು ಬಿಟ್ಟು ಹೋರ ಟುಹೋದ ಮಾತ್ರಕ್ಕೆ ನಮಗೆ ಸ್ವರಾಜ್ಯ ಬಂದಂತಾಗಲಿಲ್ಲ. ಈಗಿರುವ ಅಭ್ಯುದಯ ಮಾಡುವುದು ನಮ್ಮ ಗುರಿ ಸೇರಲು ಬಹಳ ಪ್ರಯತ್ನ ಮಾಡಬೇಕು. ಹಳ್ಳಿಗಳ ರಾಷ್ಟ್ರ ನಮ್ಮ ಸ್ವತಂತ್ರ ಹಳ್ಳಿಗಳಲ್ಲಿದೆ; ದೆಹಲಿಯಲ್ಲಿ ಲ್ಲ. ಪ್ರತಿಯೊಂದು ಗ್ರಾಮವೂ ಸ್ವಾವಲಂಬನದ ಕೇಂದ್ರ, ಸ್ವತಂತ್ರ ರಿಪಬ್ಲಿಕ್ ಆಗಬೇಕು. ಆಗಲೇ ನಮಗೆ ನಿಜ ಸ್ವಾತಂತ್ರ್ಯ ಬರುವುದು-ಎಂಬುದಾಗಿ ... ಆಚಾರ್ಯ ಕೃಪಲಾನಿಯವರು ... ತಾ॥ ಮಧ್ಯಾಹ್ನ ಬೆಳವಾಡಿಯ ... ಬಾಯಿ ಶಿಬಿರದಲ್ಲಿ ಮಾತನಾಡು ತ್ತಿದ್ದರು.

... ದಂಪತಿಗಳು ಗ್ರಾಮಕ್ಕೆ ದಯಮಾಡಿ ... ಶಿಬಿರದ ಶಿಕ್ಷಕಿಯರು ಆವ ... (ಗಾರ್ಡ್ ಆಫ್ ಆನರ್) ಗೌರವ ಸ ಲ್ಲಿಸಿದರು. ಶ್ರೀ ದಾಸಪ್ಪ ದಂಪತಿಗಳು ... ಆಚಾರ್ಯರು ಗ್ರಾಮಸ್ಥರ ... ವನ್ನು ಸ್ವೀಕರಿಸಿ ಹಣ್ಣುಹಂಪಲ ಕ ಣಿಕೆಯಿತ್ತರು. ನಂತರ ಶ್ರೀಮತಿ ... ರವರ ಅಧ್ಯಕ್ಷತೆಯಲ್ಲಿ ನಡೆದ ಸ ಭೆಯಲ್ಲಿ ಆಚಾರ್ಯರು ಭಾಷಣ ಮಾಡಿ ...

... ಚಕ್ರ ಒಂದೇ ಸಮನಾಗಿ ... ಇನ್ನು ಮೇಲೆ ದೆಹಲಿ ಸರ್ಕಾರ ... ಕಡೆ ಗಮನ ಕೊಡಬೇಕಾಗಿದೆ. ... ರಾಜಧಾನಿ ಪ್ರತಿ ಗ್ರಾಮದಲ್ಲೂ ... ಬೇಕಾಗುವುದು-ಎಂದು ದಾಸಪ್ಪನವರು ... ನಮ್ಮಲ್ಲಿ ... ಯಲ್ಲಿರು ... ಕೀಳು ಭಾವನೆಯನ್ನು ಟೀಕಿಸಿ ... ತನ್ನ ಕರ್ಮದ ಮೇಲೆ ಮನುಷ್ಯ ... ಅಥವಾ ನೀಚನಾಗುತ್ತಾನೆ ... ಶ್ರೇಷ್ಠರಿಂದೂ ಮಹಾತ್ಮರಿಂದೂ, ... ಕರೆಯುತ್ತೇವೆ. ಅವರು ಜಾತಿಯ ... ಬ್ರಾಹ್ಮಣರಲ್ಲ, ವೈಶ್ಯರು ಆದರೂ ಅ ... ತಮ್ಮ ಕಾರ್ಯದಿಂದ ಶ್ರೇಷ್ಠರಾಗಿ ... ಆದ್ದರಿಂದ ಭೇದ ಭಾವಗಳು ಹೋ ... ಎಂದು ತಿಳಿಸಿದರು.

ಪಂಚಾಂಗ ಸ್ವೀಕಾರ

ಸಜ್ಜನರಾವ್ ರಸ್ತೆಯಲ್ಲಿರುವ ಮಾ ... ಟೈಲರಿಂಗ್ ಹಾಲ್ ಪ್ರೊ॥ ಶ್ರೀ ಎಂ ... ಶ್ರೀನಿವಾಸರಾಯರು ಕಳುಹಿಸಿಕೊ ... ಶ್ರೀ ಸರ್ವಜಿತು ನಾಮ ಸಂವತ್ಸ ... ಮೈಸೂರು ಸಿದ್ಧಾಂತ ಪಂಚಾಂಗವ ... ಅವರಿಂದ ಸ್ವೀಕರಿಸಿದ್ದೇನೆ

... ಮೈಸೂರು ಹಳ್ಳದಕೇರಿಯಲ್ಲಿರು ... ಪ್ರೊ॥ ಚಂದ್ರಶೇಖರಜೋಯಿಸ ... ಗಣಿಸಲ್ಪಟ್ಟ ಶ್ರೀ ಸಚ್ಚಿದಾನಂದ ... ಸ್ವಾಮಿಗಳಿಂದ ಪರಿಶೋಧಿಸಲ್ಪಟ್ಟಿದೆ

ಶ್ರೀ ಮಹಾವೀರಸ್ವಾಮಿಗಳ ಮೆರವಣಿಗೆ

ಏಪ್ರಿಲ್ ೩ ನೇ ತಾ॥ ಗುರುವಾರ ... ಶ್ರೀ ಮಹಾವೀರಸ್ವಾಮಿಯವರ ಮೆರವ ಣಿಗೆಯನ್ನು ರಾಜಮರ್ಯಾದೆಗಳ ಸಮೇ ತವಾಗಿ ನಡೆಸಲಾಗುವುದು. ಅದೇ ದಿನ ಸಂಜೆ ಅವರ ಜೀವನ ಚರಿತ್ರೆ ವಿಚಾರವಾ ... ಪಾಲಿನಲ್ಲಿ ಉಪನ್ಯಾಸವೂ ನಡ ಯುವುದು. ಇವುಗಳಿಗಾಗಿ ಜೈನ ಬಾಂ ಧವರು ವಿಶೇಷ ಏರ್ಪಾಡುಗಳನ್ನು ಮಾಡ ತ್ತಿದ್ದಾರೆ.

ಸಧ್ಯದಲ್ಲೇ ನಾಯಕರೊಡನೆ ಮೈಸೂರಾಯರ ಭೇಟಿ

೧೯೪೮ ರ ಜೂನ್ ವೇಳೆಗೆ ಅಧಿಕಾರವ ನ್ನು ಭಾರತೀಯರಿಗೆ ವಹಿಸಿಕೊಡುವ ಬಗ್ಗೆ ಇನ್ನು ಕೆಲವು ತಿಂಗಳೊಳಗಾಗಿಯೇ ಒಂ ದು ನಿರ್ಧಾರಕ್ಕೆ ಬರಬೇಕಾಗಿದೆಯೆಂದು ಹೊಸ ಮೈಸೂರಾಯರಾದ ಲಾರ್ಡ್ ಮೌಂ ಟ್ ಬ್ಯಾಟನ್ನರು ಇನ್ನೆ ಅಧಿಕಾರ ಸ್ವೀಕರಿ ಸುವಾಗ ತಿಳಿಸಿದ್ದಾರೆ. ಬ್ರಿಟನ್ ಮತ್ತು ಭ ... ಗಳನ್ನು ಹುಟ್ಟಿಸುವ ಹೊಸ ಚರಿತ ... ಕೃತ್ಯವನ್ನಾಗಲೀ, ಮಾತನ್ನಾಗಲಿ ಯಾರೂ ಆಡಬಾರದೆಂದು ಅವರು ಪ್ರಾರ್ಥಿಸಿದ್ದಾರೆ. ಅಧಿಕಾರವನ್ನು ೪೮ ರ ಜೂನ್ ಅಂತ್ಯದೊ ಳಗೆ ವರ್ಗಾಯಿಸಿಕೊಡಲು ನಿರ್ಧಾರವಾಗಿ ರುವುದರಿಂದ ಹೊಸ ಆಡಳಿತ ವ್ಯವಸ್ಥೆಗಳನ್ನು ಮಾಡಬೇಕಾಗಿದೆ ಎಂದು ಅವರು ಹೇಳಿ ದರು. ತಾವು ಸದ್ಯದಲ್ಲೇ ಭಾರತದ ಎಲ್ಲ ರಾಜಕೀಯ ಮುಖಂಡರೊಡನೆ ಸಮಾ ಲೋಚನೆ ನಡೆಸುವುದಾಗಿ ತಿಳಿಸಿದರು.

ಕಟ್ಟಡದ ಕೆಲಸಗಾರರ ಸಭೆ

ಮೈಸೂರು ನಗರದಲ್ಲಿ ಕಲ್ಲು, ಕಬ್ಬಿಣ, ಮರ, ಮಣ್ಣು ಮತ್ತು ಗಾರೆ ಕೆಲಸ ಮಾ ಡುವವರ ಸಭೆಯು ಕಳೆದ ೧೭ ನೇ ತಾ॥ ... ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ... ಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಗಳಾದ ಹೆಚ್. ಸಿ. ದಾಸಪ್ಪ, ಎಸ್. ಚನ್ನ ಯ್ಯ, ಎಸ್. ರಂಗರಾಮಯ್ಯನವರುಗಳು ಕೆಲಸಗಾರರಿಗೆ ಉಪದೇಶವಿತ್ತರು. ನಂತ ರ ಸದಸ್ಯರಿಗೆ ಕೆಲಸಗಾರರ ಸಂಘ ಸ್ಥಾಪನೆ ಯಾಗಿ ಶ್ರೀಗಳಾದ ಟಿ ಮರಿಯಪ್ಪನವರು ಅಧ್ಯಕ್ಷರಾಗಿಯೂ, ಮೇಸ್ತ್ರಿ ಲಿಂಗಣ್ಣನವ ರು ಉಪಾಧ್ಯಕ್ಷರಾಗಿಯೂ, ಶ್ರೀ ಗೋಪಾಲ ಕೃಷ್ಣಶೆಟ್ಟಿಯವರು ಕಾರ್ಯದರ್ಶಿಗಳಾಗಿಯೂ, ಶ್ರೀ ಚೌಡಪ್ಪನವರು ೨೫ ತಾ॥ ಗಳಾಗಿ ಯೂ ಚುನಾಯಿತರಾದರು.

ಫ್ರಾನ್ಸ್ ಬಿಕ್ಕಟ್ಟು ಬಗೆಹರಿಯಿತು

ಫ್ರಾನ್ಸಿನ ಮಂತ್ರಿ ಮಂಡಲದಲ್ಲಿ ಇಂಡೋ ಚೀಣಾದ ಬಗ್ಗೆ ಉಂಟಾಗಿದ್ದ ಬಿ ಕ್ಕಟ್ಟು ಕಮ್ಯೂನಿಸ್ಟರೊಡನೆ ನಡೆದ ಸಂ ಧಾನದಿಂದಲೂ ಮತ್ತು ರ್‍ಯಾಡಿಕಲ್ ಪಕ್ಷದ ವರು ಕಡೇ ಘಳಿಗೆಯಲ್ಲಿ ಮನಸ್ಸನ್ನು ಪರಿ ವರ್ತನೆ ಮಾಡಿಕೊಂಡಿದ್ದರಿಂದಲೂ ಬಗೆಹ ರಿಯಿತೆಂದು ತಿಳಿದುಬಂದಿದೆ. ಕಮ್ಯೂನಿಸ್ಟ ರು ಇಂಡೋ ಚೀಣಾದ ವಿಚಾರದಲ್ಲಿ ಮತ ಪ್ರದರ್ಶಿಸ ... ವೆಂದು ಹೇಳಿರುವುದನ್ನು ಪ್ರಧಾನಿ ರಾಮಡಿಯರ್ ಒಪ್ಪಿದ್ದಾರೆ.

ತಿರುವಾಂಕೂರು ಸುಧಾರಣೆ ಯಲ್ಲಿ ಬದಲಾವಣೆ

ಪ್ರಜಾ ಮುಖಂಡರುಗಳೊಡನೆ ನಡೆಸಿದ ಮಾತುಕಥೆಗಳ ಪರಿಣಾಮವಾಗಿ ತಿರುವಾಂ ಕೂರಿನಲ್ಲಿ ಜಾರಿಗೆ ಬರಲಿರುವ ಹೊಸ ಸು ಧಾರಣೆಗಳನ್ನು ಅಲ್ಲಿನ ಶಾಸನ ಸಭೆಗಳ ಮೂರನೇ ಎರಡು ಪಾಲು ಸದಸ್ಯರ ಅಪೇ ಕ್ಷೆಯಂತೆ ಬದಲಾವಣೆ ಮಾಡಬಹುದೆಂ ದು ದಿವಾನರಾದ ಸರ್ ಸಿ ಪಿ ರಾಮಸ್ವಾ ಮಿ ಅಯ್ಯರ್‌ರವರು ಒಪ್ಪಿಕೊಂಡಿದ್ದಾರೆ. ಶಾ ಸನ ಸಭೆಗಳು ನಡೆಯುವ ಕಾಲ ಮತ್ತು ಸ್ಥಳವನ್ನು ದಿವಾನರಿಗೆ ಬದಲು ಸದನ ಸ ಭೆಗಳೇ ನಿರ್ಧರಿಸಬಹುದು. ಶಾಸನ ಸಭೆಗ ಳ ಅಭಿಮತಕ್ಕೆ ವಿರೋಧವಾಗಿ ದಿವಾನರು ಜಾರಿಗೆ ತರುವ ಶಾಸನಗಳನ್ನು ಕೇವಲ ಒಂದು ವರ್ಷ ಕಾಲ ಮಾತ್ರ ಜಾರಿಯಲ್ಲಿಡ ಬಹುದು. ಮತ ಮತ್ತು ಅವುಗಳಿಗೆ ಸಂಬಂಧಪಟ್ಟ ಹಣಕಾಸಿನ ವಿಚಾರಗಳನ್ನು ಶಾಸನ ಸಭೆಗಳು ಮೂರನೇ ಎರಡು ಬಹು ಮತದಿಂದ ನಿರ್ಧರಿಸಲು ಹಕ್ಕನ್ನು ಕೊಡ ಲಾಗುವುದು. ... ಶಾಸನ ಸಭಾ ಸದಸ್ಯರುಗಳು ಇರುವ ಅನರ್ಹತೆ ಯನ್ನು ಕೇವಲ ಸ್ತ್ರೀ ... ಮಾತ್ರ ಅನ್ವಯಿಸಲಾಗುವುದು. ಶಾಸನ ಸಭೆಯು ಅಧಿಕಾರಿಗಳ ಸಂಬಳವನ್ನು ಮೋ ... ಮಾಡಬಹುದು. ದಿವಾನರು ತಮ್ಮ ... ಅಧಿಕಾರವನ್ನು ಪಡೆದೇ ... ತು. ... ನ್ಯಾಯಾಸ್ಥಾನದ ಶಾಸಕಾಂ ಗ ಮತ್ತು ಕಾರ್ಯಾಂಗದಿಂದ ಪ್ರತ್ಯೇಕ ಗೊಳಿಸಲಾಗುವುದು.

ಶಾಲಾ ನಿಧಿಗೆ ಸಹಾಯ

ಯುಗಾದಿ ಹಬ್ಬದ ಪ್ರಯುಕ್ತ ಮೊನ್ನೆ ರಾಜಧಾನಿಯ ತಿಲಕ ಸಂಘದವರು ಒಂಟಿ ಕೊಪ್ಪಲಿನ ಮಹಾಜನ ಹೈಸ್ಕೂಲಿನ ನಿಧಿಗೆ ೧೧೦ ರೂ. ಗಳನ್ನು ಶೇಖರಿಸಿ ಕೊಟ್ಟಿ ದ್ದಾರೆ.

ಶ್ರೀ ಸಾಯಿಬಾಬಾರವರ ಉತ್ಸವ

ಇದೇ ೩೦ ನೇ ತಾ॥ ಶ್ರೀರಾಮನವಮಿ ದಿನ ಒಂಟಿಕೊಪ್ಪಲಿನಲ್ಲಿ ಶ್ರೀ ಸಾಯಿಬಾ ಬಾರವರ ಉತ್ಸವವನ್ನು ಏರ್ಪಡಿಸಲಾಗಿದೆ. ಶ್ರೀ ಬಾಬಾರವರ ಶಿಷ್ಯರಾದ ಶ್ರೀಮಾನ್ ನಾ ರಾಯಣರಾಜುರವರು ಗುರುಪೂಜೆ ನಡೆಸ ಲೊಪ್ಪಿರುತ್ತಾರೆ. ಬೆಳಗ್ಗೆ ೮ ಗಂಟೆಗೆ ಅಭಿ ಷೇಕ, ಸಾಯಂಕಾಲ ಗುರು ಪೂಜೆ, ೮-೩೦ ಕ್ಕೆ ಮಹಾಮಂಗಳಾರತಿ. ಸಾರ್ವಜನಿಕರು ಪೂಜೆಯಲ್ಲಿ ಭಾಗವಹಿಸಬೇಕೆಂದು ವ್ಯವ ಸ್ಥಾಪಕರು ... ಕೋರುತ್ತಾರೆ.

ಬೆಂಗಳೂರಿಗೆ ಟ್ರ್ಯಾಲಿ ಬಸ್ಸುಗಳು

ಸ್ವಂ. ಸು. ಫೋ॥] ಬೆಂಗಳೂರು ೨೫

ಈ ನಗರದಲ್ಲಿ ಟ್ರ್ಯಾಲಿ ಬಸ್ಸುಗಳನ್ನು ಓ ಡಿಸುವ ಬಗ್ಗೆ ತಯಾರಾಗಿದ್ದ ಯೋಜನೆ ಯನ್ನು ಸರ್ಕಾರದವರು ಅಂಗೀಕರಿಸಿದ್ದಾರೆ. ಪ್ಲಾನುಗಳನ್ನು ಕೂಡಲೇ ತಯಾರಿಸಿ ಅಗ ತ್ಯವಾದ ಪ್ರಾರಂಭದ ರಚನೆಗಳನ್ನು ಸರ್ಕಾ ರದವರು ಸಧ್ಯದಲ್ಲೇ ಕೈಗೊಳ್ಳುವರೆಂದು ಹೇಳಲಾಗಿದೆ. ಮೈಸೂರು-ಬೆಂಗಳೂರು ರೈ ಲ್ವೆ ಲೈನನ್ನು ವಿದ್ಯುಚ್ಛಕ್ತಿಯಿಂದ ಓಡಿಸು ವ ಬಗ್ಗೆ ... ಕಾರ್ಯ ... ವೆಂದೂ ಗೊತ್ತಾಗಿದೆ.

ಪಂಜಾಬ್ ನಿಧಿಗೆ ಪಾಟಿಯಾಲಾ ರಾಜರ ಸಹಾಯ

ಪಂಜಾಬಿನ ಗಲಭೆಯಲ್ಲಿ ನಿರಾಶ್ರಿತರಾ ದವರಿಗೆ ಪರಿಹಾರ ಒದಗಿಸುವ ಸಲುವಾಗಿ ಪಾಟಿಯಾಲಾ ಮಹಾರಾಜರು ಸರ್ದಾರ್ ಪಟೇಲರಿಗೆ ಒಂದು ಲಕ್ಷ ರೂ ಕೊಟ್ಟಿರು ತ್ತಾರೆ. ತಮ್ಮ ಸಂಸ್ಥಾನದಲ್ಲಿ ಪಂಜಾಬಿ ನ ನಿರಾಶ್ರಿತರಿಗೆ ವಸತಿ ಸೌಕರ್ಯಗಳನ್ನೊ ದಗಿಸುವುದಾಗಿ ಅವರು ಕೊಟ್ಟಿದ್ದ ಸಂದೇಶ ದ ಫಲವಾಗಿ ೫೦೦೦ ಜನ ನಿರಾಶ್ರಿತರು ಪಾ ಟಿಯಾಲಾಕ್ಕೆ ಬಂದಿದ್ದಾರೆಂದು ವರದಿಯಾ ಗಿದೆ.

ಪಂಜಾಬಿನಲ್ಲಿ ಶಾಂತಿ

ಪಂಜಾಬಿನಲ್ಲಿ ಶಾಂತಿ ನೆಲಸಿರುವುದಾಗಿ ಸರ್ಕಾರದ ಪ್ರಕಟಣೆಯೊಂದು ಹೊರಟಿದೆ. ಇದೇ ಪ್ರಾಂತ್ಯದಲ್ಲಿ ೧೮ ಸಹಸ್ರ ಮಿಲಿಟರಿ ಸೈನಿಕರು ಪಹರೆ ... ದಲ್ಲಿ ತೊಡಗಿದ್ದಾರೆ. ಅನೇಕ ಕಡೆ ನಿರಾಶ್ರಿತ ಶಿಬಿರಗಳನ್ನು ಸೈನಿಕರೇ ನಡೆಸುತ್ತಿದ್ದಾರೆ. ಮುಸ್ಲಿಂಲೀಗ್ ನ್ಯಾಷನಲ್ ಗಾರ್ಡ್ ದಳದವರು ಬಿಡಾರ ಮಾಡಿದ್ದಾರೆ.

ನಿಖಿಲ ಕರ್ಣಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ

ಲಿಮಿಟೆಡ್, ಮೈಸೂರು.

ಈ ಕಂಪೆನಿಯ ಷೇರುದಾರರುಗಳ 4 ನೆಯ ಜನರಲ್ ಮೀಟಿಂಗು ಮೈಸೂರು ಸಿಟಿ ಕೋ-ಆಪರೇಟಿವ್ಸ್ ಹಾಲಿನಲ್ಲಿ ೬-೪-೪೭ ನೇ ಸೋಮವಾರ ಬೆಳಗ್ಗೆ ೯ ಗಂಟೆಗೆ ನಡೆಯಲಿರುವುದರಿಂದ ಈ ಕಂಪೆನಿ ಯ ಷೇರು ವರ್ಗಾವರ್ಗಿ ರಿಜಿಸ್ಟರನ್ನು ತಾ॥ ... ರ ವರೆಗೆ ಮುಚ್ಚಲಾಗಿದೆ.

ಮೈ ಲಕ್ಷ್ಮೀನರಸಿಂಹಶಾಸ್ತ್ರಿ ... ಮ್ಯಾನೇಜಿಂಗ್ ಡೈರೆಕ್ಟರ್.

ಗರ್ಭ ರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು, ಗರ್ಭಸ್ರಾವವಾಗುವುದ ನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸುಲಭವಾಗಿ ಪ್ರಸವ ವಾಗುವುದು.

ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ ವಿ ವೆಂಕಟರಾಮಯ್ಯ, ... ತಾಳವಾಡಿ ...

ಸಾಧ್ವಿ

ತಾ॥ ೨೫-೩-೪೭ ಮಂಗಳವಾರ

ಏಷ್ಯಾ ಖಂಡ ಎಚ್ಚೆತ್ತಿತು

ಹಲವು ಶತಮಾನಗಳಿಂದ ಪಾಶ್ಚಿಮಾತ್ಯ ರಾಷ್ಟ್ರಗಳ ಸುಲಿಗೆ, ಆಕ್ರಮಣ ಮತ್ತು ದಬ್ಬಾಳಿಕೆಗಳಿಗೆ ತುತ್ತಾಗಿದ್ದ ಏಷ್ಯಾ ಖಂಡವು ಇಂದು ಜಾಗೃತಗೊಂಡು ತನ್ನ ನಿಜವಾದ ಸ್ಥಾನವನ್ನು ಪಡೆಯಲು ಕಂಕಣ ತೊಟ್ಟು ನಿಂತಿರುತ್ತದೆ. ಇಂದು ಭಾರತದಲ್ಲಿ ಸ್ಥಾಪಿತವಾಗಿರುವ ಕೇಂದ್ರ ತಾತ್ಕಾಲಿಕ ಸರ್ಕಾರದ ಅವಕಾಶವನ್ನು ಉಪಯೋಗಿಸಿಕೊಂಡು ರಾಷ್ಟ್ರನಾಯಕರು ದೆಹಲಿ ನಗರದಲ್ಲಿ ಅಖಿಲ ಏಷ್ಯಾ ರಾಷ್ಟ್ರಗಳ ಸಮ್ಮೇಳನವನ್ನು ಸೇರಿಸಿರುತ್ತಾರೆ. ಪೂರ್ವಾರ್ಧ ಗೋಳದ ರಾಜ್ಯಗಳ ಸಂಸ್ಕೃತಿ, ಸಾಹಿತ್ಯ, ಕಲೆ, ವಾಣಿಜ್ಯ, ವ್ಯವಹಾರಗಳ ಪರಿಚಯವನ್ನು ಮಾಡಿಕೊಂಡು ವಿಶ್ವ ಶಾಂತಿಗಾಗಿ ತಾವು ವಹಿಸಬೇಕಾದ ಪಾತ್ರವನ್ನು ನಿರ್ಧರಿಸಲು ತೊಡಗಿದ್ದಾರೆ.

ಪಾಶ್ಚಿಮಾತ್ಯ ದೇಶಗಳು ವಿಜ್ಞಾನದ ಸಂಶೋಧನೆಯಲ್ಲಿಯೂ, ವ್ಯಾಪಾರದ ಬೆಳವಣಿಗೆಯಲ್ಲಿಯೂ ಬಹಳ ಮುಂದಿರುವುವಾದರೂ, ಇದೇ ಕಾರಣದಿಂದ ಪರಸ್ಪರ ವೈಷಮ್ಯ ಮತ್ತು ಪೈಪೋಟಿಗಳಿಗೆ ಈಡಾಗಿ ನಿರಂತರವಾದ ಕದನ ಮತ್ತು ಕಡಿದಾಟಗಳಲ್ಲಿಯೇ ನಿರತವಾಗಿರುತ್ತವೆ. ದುರಾಕ್ರಮಣ ನೀತಿಯಿಂದ ಪ್ರೇರಿತವಾದ ತಮ್ಮ ಉದ್ಯಮಗಳಲ್ಲಿ ಏಷ್ಯಾ ಖಂಡದ ಜನ, ಧನ ಮತ್ತು ಸಂಪತ್ಸಾಧನಗಳನ್ನೂ ಸಹ ಉಪಕರಣಗಳಾಗಿ ಉಪಯೋಗಿಸಿಕೊಂಡಿವೆ. ಇಂತಹ ಅಕ್ರಮ ಪ್ರವರ್ತನೆಗಳಲ್ಲಿ ಇನ್ನು ಮುಂದೆ ಭಾಗಿಗಳಾಗದೆ ಸತ್ಯ ಮತ್ತು ಧರ್ಮದ ಮಾರ್ಗದಲ್ಲಿಯೇ ವಿಶ್ವಕಲ್ಯಾಣವನ್ನು ಸಾಧಿಸಲು ಮೇಲ್ಪಂಕ್ತಿಯನ್ನು ಹಾಕಬೇಕೆಂಬ ಸದುದ್ದೇಶದಿಂದ ಏಷ್ಯಾ ಖಂಡದ ಪ್ರಮುಖರೆಲ್ಲರೂ ದೆಹಲಿಯಲ್ಲಿ ಇಂದು ನೆರೆದಿದ್ದಾರೆ.

ಪ್ರಪಂಚದ ಸಕಲ ಧರ್ಮಗಳೂ ಏಷ್ಯಾ ಖಂಡದಲ್ಲಿಯೇ ಉದ್ಭವಿಸಿದುವೆಂಬುದನ್ನು ಈ ಸಮಯದಲ್ಲಿ ನೆನಪಿನಲ್ಲಿಡಬೇಕು. ಮಹಾತ್ಮನಾದ ಯೇಸು ಕ್ರಿಸ್ತನೂ, ಮಹಮ್ಮದ್ ಪೈಗಂಬರನೂ, ಪಾರ್ಸಿ ಮತಸ್ಥಾಪಕನಾದ ಜೋರಾಸ್ಟರನೂ, ಗೌತಮ ಬುದ್ಧನೂ ಅವತರಿಸಿದುದು ಇಲ್ಲಿಯೇ. ಅಲ್ಲದೆ ಸನಾತನ ಧರ್ಮದ ಪ್ರತಿಪಾದಕರಾದ ಆರ್ಯ ಮಹರ್ಷಿಗಳ ನಿವಾಸಸ್ಥಾನವೂ ಸಹ ಇದೇ ಆಗಿರುತ್ತದೆ.

ಐಹಿಕ ಸುಖ, ಭೋಗ ಸಾಮಗ್ರಿಗಳಿಂದ ತುಂಬಿ ತುಳುಕಿ ಪರಸ್ಪರ ದ್ವೇಷಾಸೂಯೆಗಳಿಂದ ಬಳಲುತ್ತಿರುವ ಜಗತ್ತಿಗೆ ಶಾಂತಿಯನ್ನು ನೀಡಲು ಮತ್ತೊಮ್ಮೆ ಏಷ್ಯಾ ಖಂಡದಿಂದಲೇ ದಿವ್ಯ ಸಂದೇಶವು ಹೊರಬೀಳಬೇಕಾಗಿದೆ. ಈ ಮಹತ್ತರವಾದ ಕಾರ್ಯವು ಇಂದು ದೆಹಲಿಯಲ್ಲಿ ನಡೆಯುತ್ತಿದೆ. ಈ ಸಮ್ಮೇಳನವು ಸಂಪೂರ್ಣ ಯಶಸ್ಸನ್ನು ಪಡೆದು ಪ್ರಪಂಚಕ್ಕೆ ಹೊಸ ಬೆಳಕನ್ನು ಬೀರಲೆಂದು ಹಾರೈಸೋಣ.

Edited, printed and published by A. R. Nagarajan at the Sadhvi Press D. Subbiah Road, Mysore.

ಪ್ರಸಿದ್ಧ ಪತ್ರಿಕೆ

ಮೈಸೂರು ಸಿಟಿ ಮ್ಯುನಿಸಿಪಲ್ ಆಫೀಸಿನಿಂದ

ತಾ॥ ೧೦—೩—೪೭

ಈ ಮೇಲ್ಕಂಡ ಮೈಸೂರು ಸಿಟಿಯಲ್ಲಿರುವ ಸಮಸ್ತ ಟಾಂಗ ಮತ್ತು ಜಟಕಾ ಗಾಡಿ ಮಾಲೀಕರು ಮತ್ತು ಡ್ರೈವರುಗಳಿಗೆ ತಿಳಿಯಪಡಿಸುವುದೇನೆಂದರೆ:—

ಹಾಲಿ ಮೈಸೂರು ಸಿಟಿಯಲ್ಲಿ ಬಾಡಿಗೆಗೋಸ್ಕರ ಇಟ್ಟಿರುವ ಟಾಂಗ ಮತ್ತು ಜಟಕಾ ಗಾಡಿಗಳ ಡ್ರೈವರ್‌ಗಳು ಮೈಸೂರು ಸಿಟಿ ಮ್ಯುನಿಸಿಪಲ್ ಪಬ್ಲಿಕ್ ಕನ್ವೆಯನ್ಸ್ ರೂಲ್ಸ್ ಮತ್ತು ಬೈಲಾಸ್ ೫ ಮತ್ತು ೭ ನೇ ಸೆಕ್ಷನ್‌ಗಳ ಪ್ರಕಾರ ತಮ್ಮ ತಮ್ಮ ಗಾಡಿಗಳಲ್ಲಿ ಕ್ರಮವಾದ (Table of Fares) ದರಗಳ ಪಟ್ಟಿಯನ್ನು ಇಟ್ಟುಕೊಳ್ಳದೆ ಗಾಡಿಗಳನ್ನು ಓಡಾಡಿಸುತ್ತಿರುವುದು ರೂಲ್ಸಿಗೆ ವಿರೋಧವಾಗಿರುತ್ತದೆ. ಈಗಲೂ ಸಹ ಈ ಜಾಹಿರಾಯ್ತು ೧೫ ದಿವಸಗಳೊಳಗಾಗಿ ಪ್ರತಿಯೊಬ್ಬ ಟಾಂಗ ಮತ್ತು ಜಟಕಾ ಗಾಡಿಗಳ ಮಾಲೀಕರು ಅಥವಾ ಡ್ರೈವರುಗಳು ಸದರಿ ದರಗಳ ಪಟ್ಟಿಯನ್ನು ಮ್ಯುನಿಸಿಪಲ್ ಆಫೀಸಿನಿಂದ ಪಡೆಯತಕ್ಕದ್ದು. ತಪ್ಪಿದಲ್ಲಿ ಅಂತಹವರ ಮೇಲೆ ಮೇಲ್ಕಂಡ ರೂಲ್ಸ್ ಅನುಸರಿಸಿ ಮುಂದಿನ ಕ್ರಮ ಜರುಗಿಸಲ್ಪಡುತ್ತದೆ. ಈ ಮೇಲ್ಕಂಡ ದರಗಳ ಪಟ್ಟಿಯನ್ನು ಟಿಕ್ಕು ನಮೂನೆಯಲ್ಲಿ ತಯಾರುಮಾಡಿಸಿ ಪ್ರತಿ ಟಿಕೆಟ್ಟಿಗೂ ೧ ಆಣೆ (೦-೧-೦) ಯ ಪ್ರಕಾರ ಗೊತ್ತುಮಾಡಿ ಬಿಕರಿಗೆ ಇಟ್ಟಿರುತ್ತೇವೆ. ಈ ನಮೂನೆ ಪಬ್ಲಿಕ್ ಮಾರ್ಕೆಟ್ಟಿನಲ್ಲಿ ಮಾರಾಟಕ್ಕೆ ಇಡಿಸಿರುತ್ತೆ.

(ಸಹಿ) ಆರ್. ರಾಮಚಂದ್ರರಾವ್
ಚಾಂಫೋರೆ,
ಪ್ರೆಸಿಡೆಂಟ್

ಮೈಸೂರು ಸ್ಟೇಟ್ ರೈಲ್ವೆ

ಗೂಡ್ಸ್ ದರಗಳನ್ನು ಹೆಚ್ಚಿಸಲಾಗಿದೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—೧೯೪೭ ನೇ ಏಪ್ರಿಲ್ ೧ ರಿಂದ ಲೋಕಲ್ ಬುಕಿಂಗಿನಲ್ಲಿ ಗೂಡ್ಸ್ ಟ್ರಾಫಿಕ್‌ಗೆ ಈಗ ಇರುವ ಸ್ಪೆಷಲ್ ದರಗಳನ್ನು ಸಾಮಾನ್ಯವಾಗಿ ಹೆಚ್ಚಿಸಲಾಗುತ್ತದೆ.

ಅದೇ ತಾರೀಖಿನಿಂದ, ಕೆಲವು ಸಾಮಾನುಗಳಿಗೆ ಎಂ. ಎಸ್. ರೈಲ್ವೆಯವರು ಕೆಳದರ್ಜೆಯ ಗೂಡ್ಸ್ ವಿಲೇವಾರಿ ಸ್ಪೆಷಲ್ ರೇಟಿಯಲ್ಲಿ ತಿಳಿಸಿದ ದರಗಳನ್ನು ಕೆಳಗೆ ಕಂಡಂತೆ ಬದಲಾಯಿಸಲಾಗಿದೆ:-

	ಸಾಮಾನಿನ ಹೆಸರು	ಈಗಿರುವ ವಿಲೇವಾರಿ ವಿವರ		1947 ನೇ ಏಪ್ರಿಲ್ 1 ರಿಂದ ಜಾರಿಗೆ ಬರುವ ವಿಲೇವಾರಿ ವಿವರ	
		ರೈಲ್ವೆ ರಿಸ್ಕ್ ಮೇಲೆ	ಮಾಲೀಕರ ರಿಸ್ಕ್ ಮೇಲೆ	ರೈಲ್ವೆ ರಿಸ್ಕ್ ಮೇಲೆ	ಮಾಲೀಕರ ರಿಸ್ಕ್ ಮೇಲೆ
1.	ಬೀಡಿ ಎಲೆಗಳು	4 - A Class	4th Class W - 81	4 - A Class	—
2.	ಮೆಣಸಿನ ಕಾಯಿ	4th Class	2nd Class W 100 : L	3 - B Class W - 100 . L	—
3.	ಸಿಪ್ಪೆ ಸಮೇತ ಇರುವ ಕಡಲೆಕಾಯಿ	2 C Class	2nd Class W-200 : MG: L w . 160 : NG:L	3-C Class	—
4.	ತೊಗಲು, ಚರ್ಮ ಮತ್ತು ಕೂದಲಿರುವ ಚರ್ಮ, ಸಾಧಾರಣ ಒಣಗಿದ್ದು	4th Class	2nd Class W-240: MG: W-160: NG: L	3rd Class W-240 MG W.160: NG:L	2- B Clas W-240 MG W-160: NG
5	ತೊಗಲು, ಚರ್ಮ ಮತ್ತು ಕೂದಲಿರುವ ಚರ್ಮ ಸಾಧಾರಣ ಹಸಿಯಾಗಿರುವುದು	4th Class	2nd Class W-270: MG: W-200: NG: L	3rd Class W-270: MG W-200 NG: L	2-B Clas W-270: MG W-200: NG
6.	ಚಿಲ್ಲರೆ ಹತ್ತಿ, ಬಟ್ಟೆ ಉಳ್ಳ ಪಗ್ಗರೆ ಪ್ರೆಸ್ ಪ್ಯಾಕ್ ಮಾಡಿರುವುದು	4-A Class	4th Class	4- B Class	4- A Clss
7	ದೇಶದಲ್ಲಿ ತಯಾರಿಸಲಾದ ಹೊಗೆಸೊಪ್ಪು	4-A Class	4th Class	4- B Class	4- A Class
8	ದೇಶದಲ್ಲಿ ತಯಾರಿಸದಿದ್ದ ಹೊಗೆಸೊಪ್ಪು	4th Class	—	4- A Class	—

W- : ಅಂಕಿಗಳ ಹಿಂದೆ W ಎಂದಿರುವುದು ದರವು ನಾಲ್ಕು ಚಕ್ರದ ವ್ಯಾಗನ್ನುಗಳಲ್ಲಿ ಸಾಗಿಸಬಹುದಾದ ಮಣಗಳಿಗೆ ಅನ್ವಯಿಸುತ್ತದೆ. ಉದಾಹರಣೆಗಾಗಿ, W-೧೨೦ ಎಂದರೆ ದರವು ಒಂದು ವ್ಯಾಗನ್ನಿನಲ್ಲಿ ಸಾಗಿಸಬಹುದಾದ ಕನಿಷ್ಟವಾದ ೧೨೦ ಮಣಗಳಿಗೆ ಅನ್ವಯಿಸುತ್ತದೆ.

N G : ಎಂದರೆ ನ್ಯಾರೋ ಗೇಜ್.

M G : ಎಂದರೆ ಮೀಟರ್ ಗೇಜ್.

L : ಎಂದರೆ ಲೋಡಿಂಗ್ ಮತ್ತು ಅನ್‌ಲೋಡಿಂಗ್‌ಗಳನ್ನು ಮಾಲೀಕರೇ ಮಾಡಬೇಕು.

ಸ್ಪೆಷಲ್ ರೇಟುಗಳಲ್ಲಿ ಹೆಚ್ಚಿಸಲಾಗಿರುವ ದರದ ವಿವರಗಳು ಬೇಕಾಗಬಹುದಾದರೆ ಸಾಮಾನಿನ ಹೆಸರು ಬುಕ್ಕಿಂಗ್ ಮಾಡಲಿಚ್ಛಿಸುವ ಸ್ಟೇಷನ್ನುಗಳ ಹೆಸರುಗಳೊಡನೆ ಕೆಳಗೆ ರುಜು ಮಾಡಿರುವವರಿಗೆ ಬರೆದುಕೊಳ್ಳಬಹುದು.

ಟ್ರಾಫಿಕ್ ಮ್ಯಾನೇಜರವರ ಆಫೀಸು
ಮೈಸೂರು.
೧೦-3-1947

ಮಿರ್ಜಾ ಇನಾಯತ್ ಹುಸೇ(ನ್)
ಟ್ರಾಫಿಕ್ ಮ್ಯಾನೇಜರ್.

ವಿದ್ಯಾರ್ಥಿ ಕಾಂಗ್ರೆ(ಸ್)

ರಾಜಧಾನಿಯ ವಿದ್ಯಾರ್ಥಿ ಕಾ(ಂಗ್ರೆಸ್) ಕಾರ್ಯಕಾರಿ ಸಮಿತಿಯ ಸಭೆ(...) ಸಂಜೆ ೫ ಘಂಟೆಗೆ ವಿದ್ಯಾರ್ಥಿ(...)ಸ್ ಕಛೇರಿಯಲ್ಲಿ ಸೇರುತ್ತದೆ. (...)ರೂ ಬರಬೇಕೆಂದು ಕಾರ್ಯ(...) ಕೋರಿದ್ದಾರೆ.

ರಾಜಕಮಲ(...)
೨೩-೩-೪೭ ರಿಂದ ೬ ನೇ(...)
1 ನೇ ಆಟ 6 ಘಂಟೆ(...)
2ನೇ ಆಟ 9-15 ಘಂಟೆ(...)
ಶ್ರೀ ಕೃಷ್ಣಲೀಲ(...)
(ಕನ್ನ...)
ಇಂಪಾದ ಗಾನಗಳು! ಸೊಂಪಾದ (...)ಕಗಳು!! ಮನರಂಜಕವಾದ ದೃ(...)
ಇವೆಲ್ಲವನ್ನೂ ಇಂದೇ ನೋ(...)

ರೆಜಿ. ನಂ. 392 ॥ ವಂದೇ ಮಾತರಂ ॥ ಒಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨೬—೩—೪೭ [ಸಂಚಿಕೆ ೧೯೪

ಇನ್ನು ಕೆಲವು ತಿಂಗಳಲ್ಲಿ ★ ರೆಸಿಡೆನ್ಸಿಗಳ ರದ್ದು ★

...ಜನಗೂಡಿಗೆ ವಿನೋದ ತೆರಿಗೆ

...ಪ್ರೆಸ್] ಬೆಂಗಳೂರು ೨೫

...ನೋದ ತೆರಿಗೆಯ ಶಾಸನವು ಬರುವ ೧ ನೇ ತಾರೀಖಿನಿಂದ ನಂಜನಗೂಡು ...ಸಭಾ ಕ್ಷೇತ್ರದಲ್ಲಿ ಜಾರಿಗೆ ಬರತಕ್ಕ... ಸರ್ಕಾರದವರು ಆಜ್ಞೆ ಮಾಡಿರು...

ಹೊಸ ಉಪಕಾರ್ಯದರ್ಶಿ

...ೀಯ ಸಂಸ್ಥೆಗಳ ಶಾಖೆಯಲ್ಲಿ ಹೆ... ಕೆಲಸವಿರುವುದರಿಂದ ಈಗಿರುವ ಉಪ ...ರ್ಯದರ್ಶಿಗಳ ಜೊತೆಗೆ ಮತ್ತೊಬ್ಬರ ...ನೇಮಿಸಲು ಸರ್ಕಾರವು ಪರ್ಯಾಲೋ...ತ್ತಿರುವುದೆಂದು ವರದಿಯಾಗಿದೆ

...ದಲನೆಯ ಭಾರತೀಯ ವಿಮಾನ

...ಂಗಳೂರಿನಲ್ಲಿರುವ ಹಿಂದೂಸ್ಥಾನ ಏ...ಕ್ರಾಫ್ಟ್ ವಿಮಾನ ಕೈಗಾರಿಕಾ ಕಾರ್ಖಾನೆ... ಇದೇ ನವಂಬರಿನ ವೇಳೆಗೆ ಪ್ರಥಮ ...ತೀಯ ವಿಮಾನವನ್ನು ತಯಾರಿಸಬ...ಹುದೆಂದು ನಿರೀಕ್ಷಿಸಲಾಗಿದೆ. ಭಾರತ ಕೇಂ... ಸರ್ಕಾರವು ಈ ಕಾರ್ಖಾನೆಯ ಸಹಾ...ರ್ಥವಾಗಿ ೨೦ ಲಕ್ಷ ರೂ ಗಳ ಹಣ್ಣಿನ ...ಂಟನ್ನು ಮಂಜೂರ್ಮಾಡಿರುತ್ತದೆ

ರೆಸಿಡೆನ್ಸಿಗಳ ರದ್ದು

ಹೊಸ ವೈಸರಾಯರು ಅಧಿಕಾರವನ್ನು ...ಕೆಯಾಗಿ ವರ್ಗಾಯಿಸುವ ಬಗ್ಗೆ ಈ...ಗಲೇ ಕಾರ್ಯಕ್ರಮಗಳನ್ನು ಕೈಗೊಳ್ಳ...ತೊಡಗಿದ್ದಾರೆ. ಇನ್ನು ಕೆಲವು ತಿಂಗ...ಗಳಲ್ಲಿ ದೇಶೀಯ ಸಂಸ್ಥಾನಗಳಲ್ಲಿರುವ ...ಡೆನ್ಸಿಗಳನ್ನೆಲ್ಲಾ ರದ್ದು ಮಾಡುವ ಸಂ...ಭವವಿದೆಯೆಂದು ದೆಹಲಿಯ ವಾರ್ತೆಯೊಂ...ದು ತಿಳಿಸುತ್ತದೆ. ಆದುದರಿಂದ ಬ್ರಿಟಿಷರು ...ಬಿಟ್ಟುಹೋಗುವುದಕ್ಕಿಂತ ಮುಂಚೆಯೇ ...ಸಂಸ್ಥಾನಗಳು ತಮ್ಮ ಸ್ವಾತಂತ್ರ್ಯವನ್ನು ...ಘೋಷಿಸಬಹುದೆಂಬ ಊಹೆಗೆ ಅವಕಾಶ ...ಸಿಗುತ್ತದೆ. ಹೊಸ ವೈಸರಾಯರು ಮುಂ...ದಿನ ಕಾರ್ಯಕ್ರಮಗಳ ಬಗ್ಗೆ ಪ್ರಾಂತೀಯ ...ಗವರ್ನರುಗಳನ್ನು ಕರೆಸಿಕೊಂಡು ಮಾತ...ನಾಡುವರೆಂದು ಹೇಳಲಾಗಿದೆ.

ನಿಮ್ಮ ಮೈ ನೊಣವಮಲ್ಲಿನಂತೆ

ಹೊಳೆಯಬೇಕೆ ? ನೀವು

ಚಾಪಣ್ಣ ಮೂರ್ತಿಗಳಾಗಬೇಕೆ ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್

ಸೋಪನ್ನೇ ಉಪಯೋಗಿಸಿ !

ಮೈಸೂರು

ಸ್ಯಾಂಡಲ್

ಸೋಪ್

ಅನೇಕರಿಗೆ ಸೌಂದರ್ಯವನ್ನು

ಸಂಪಾದಿಸಿ ಕೊಟ್ಟಿದೆ. ನಿಮಗೂ

ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ಏಷ್ಯಾ ಪ್ರತಿನಿಧಿಗಳಿಗೆ ವೈಸರಾಯರಿಂದ ಸತ್ಕಾರ

ಇದೇ ೨೮ ನೇ ಶುಕ್ರವಾರ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ಅಂತರ್ ಏಷ್ಯಾ ರಾಷ್ಟ್ರಗಳ ಸಮ್ಮೇಳನದ ಪ್ರತಿನಿಧಿಗಳಿಗೆ ಸತ್ಕಾರವೀಯುವರೆಂದು ವರದಿಯಾಗಿದೆ

ನೊಬೆಲ್ ಬಹುಮಾನಕ್ಕೆ ತ್ರಿಮೂರ್ತಿಗಳು

ಮಹಾತ್ಮ ಗಾಂಧಿ, ಪೋಪ್ ಮತ್ತು ಸರ್ ಬರ್ನಾರ್ಡ್ ಷಾ ರವರ ಹೆಸರುಗಳನ್ನು ನೊಬೆಲ್ ಪಾರಿತೋಷಕಕ್ಕೆ ಸೂಚಿಸಲಾಗಿದೆ. ಈ ಬಹುಮಾನದ ಮೊಬಲಗು ಇದುವರೆಗೆ ೮,೬೮೦ ಪೌಂಡು ಇದ್ದುದನ್ನು ಈಗ ೧೦,೫೩೭ ಪೌಂಡುಗಳಿಗೆ ಹೆಚ್ಚಿಸಲಾಗಿದೆ.

ನೀರಿನ ಅಭಾವ

ಸ್ವಂ ವ.] ನಂಜನಗೂಡು ೨೫

ಈ ಊರಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆ ನಡೆಯುತ್ತಿದೆ, ಮುಂದೆ ಲೋಯರ್ ಸೆಕೆಂಡರಿ ಪರೀಕ್ಷೆಯೂ ಬರುವುದು. ಇಂತಹ ಸ್ಥಳದಲ್ಲಿ ಈ ಬೇಸಿಗೆಯಲ್ಲಿ ಕುಡಿಯಲು ನೀರಿಲ್ಲದೆ ವಿದ್ಯಾರ್ಥಿಗಳು ಬಹಳ ತೊಂದರೆ ಪಡುತ್ತಿದ್ದಾರೆ. ಶಾಲೆಯು ಊರಿಗೆ ದೂರವಾಗಿದೆ. ನಲ್ಲಿ ಮತ್ತು ಟ್ಯಾಂಕು ಇದ್ದರೂ ಅವುಗಳಲ್ಲಿ ನೀರಿಲ್ಲ. ಅಲ್ಲಿರುವ ಭಾವಿಯ ನೀರು ಕ್ರಿಮಿ ಮತ್ತು ಕಸಗಳಿಂದ ಕೂಡಿ ಕುಡಿಯಲನರ್ಹವಾಗಿದೆ. ಸಂಬಂಧಪಟ್ಟವರು ಕೂಡಲೇ ಈ ನೀರಿನ ಅಭಾವವನ್ನು ತಪ್ಪಿಸುವರೆಂದು ನಂಬಲಾಗಿದೆ.

ಹೊಸ ವರ್ಷದ ಹಾರೈಕೆ

ಬೆಂಗಳೂರು ಚಾಮರಾಜಪೇಟೆಯಲ್ಲಿರುವ ಪಂಡಿತ ಪ್ರಿಂಟಿಂಗ್ ವರ್ಕ್ಸ್ ಮತ್ತು ಪರಿಮಳ ಸಾಹಿತ್ಯ ಮಂದಿರದವರು ವಿಶ್ವಾಸದಿಂದ ಕಳುಹಿಸಿರುವ ಹೊಸ ವರುಷದ ಹಾರೈಕೆಯನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಅಪೆರಾ ಟಾಕೀಸ್, ಮೈಸೂರು

೨೭-೩-೪೭ ರಿಂದ ೨ ನೇ ವಾರ

ಕುಂಡಲಕೇಶಿ

(ತಮಿಳು)

ಪಾತ್ರ:- ವಸಂತಕೋಕಿಲಂ, ಹೊನ್ನಪ್ಪ ಭಾಗವತರ್, ಟಿ ಆರ್ ರಾಮಚಂದ್ರನ್ ಮುಂತಾದವರು

Morning Shows from 26-3-47

The SHANGHAI COBRA

ಬ್ರಿಟಿಷರು ಹೋಗುವ ಬಗ್ಗೆ ಬರೋಡಾ ರಾಜರ ಅಭಿಪ್ರಾಯ

ಬ್ರಿಟಿಷರು ಭಾರತವನ್ನು ತ್ಯಜಿಸಲು ಮಾಡಿರುವ ನಿಶ್ಚಯದ ಬಗ್ಗೆ ಬಂದ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಬ್ರಿಟಿಷ್ ಸರ್ಕಾರಕ್ಕಿಂತ ಭಾರತೀಯ ಸರ್ಕಾರದಿಂದಲೇ ಹೆಚ್ಚಿನ ನ್ಯಾಯವು ದೊರಕುವುದು-ಎಂಬುದಾಗಿ ಅಮೇರಿಕದಲ್ಲಿ ಪ್ರವಾಸವನ್ನು ಕೈಗೊಂಡಿರುವ ಬರೋಡದ ಗಾಯಕವಾಡ್ ಮಹಾರಾಜರವರು ಹೇಳಿರುವರು

ರಷ್ಯನರಿಂದ ಹೇಯಾಂಗ್ ದ್ವೀಪದ ಪುನರಾಕ್ರಮಣ

ಕಳೆದ ಯುದ್ಧಕ್ಕೆ ಮುಂಚೆ ತಮಗೆ ಹೇಯಾಂಗ್ ದ್ವೀಪವು ಸೇರಿತ್ತೆಂದು ಹೇಳಿ ರಷ್ಯದ ೨೦ ತುಕಡಿ ಸೈನ್ಯಗಳು ಆ ಪ್ರದೇಶಕ್ಕೆ ಯುದ್ಧ ನೌಕೆಯೊಂದರಿಂದ ಬಂದಿಳಿದಿರುವುದಾಗಿ ವಾರ್ತೆ ಬಂದಿದೆ.

ಜಿಲ್ಲಾ ಬೋರ್ಡ್ ಚುನಾವಣೆ

ಸ್ವಂ ವ.] [ಶ್ರೀರಂಗಪಟ್ಟಣ ೨೪

ಮಂಡ್ಯ ಜಿಲ್ಲಾ ಬೋರ್ಡ್ ಚುನಾವಣೆಗೆ ಕಾಂಗ್ರೆಸ್ ಪರವಾಗಿ ಈ ಮುಂದೆ ಕಂಡವರನ್ನು ಉಮೇದುವಾರರನ್ನಾಗಿ ನಿಲ್ಲಿಸಲಾಗಿದೆ:- ಶ್ರೀರಂಗಪಟ್ಟಣ ತಾ||- ಶ್ರೀಗಂಧ ಚಂದಗಾಲ್ ಬಿ ಮಂಗೇಗೌಡರು, ಮತ್ತು ಕೆ. ಪುಟ್ಟಸ್ವಾಮಿ; ಫ್ರೆಂಚ್ ರಾಕ್ಸ್ ತಾಲ್ಲೂಕು- ಕೆ ಶ್ರೀಕಂಠೇಗೌಡರು ಮತ್ತು ಮರೀಗೌಡರು; ಕೃಷ್ಣರಾಜಪೇಟೆ ತಾ||-ಬಿ ಕೆಂಪೇಗೌಡರು ಮತ್ತು ಮಾಧವನಕೋಡಿ ಬೋರಾಂ ಗೌಡರು, ನಾಗಮಂಗಲ ತಾ||- ಕೆ ಎ ಕಪನಯ್ಯ ಗೌಡರು; ಮಂಡ್ಯ ತಾ|| ಕೆ ಶಂಕರೇಗೌಡರು ಮತ್ತು ಬೊಮ್ಮೇಗೌಡರು; ಮದ್ದೂರು ತಾ||- ಎಚ್ ಕೆ ವೀರಣ್ಣಗೌಡರು; ಮಳವಳ್ಳಿ ತಾ||- ಎಚ್. ವಿ. ವೀರೇಗೌಡರು.

ಅಧಿಕಾರಿಗಳ ವರ್ತನೆ

ಮೈಸೂರು ೨೫

ನಗರದ ಅಸಿಸ್ಟೆಂಟ್ ಹೆಲ್ತ್ ಆಫೀಸರು ಹೋಟೇಲುಗಳ ಒಳಗೆ ಮನೆಗೆ ಬೂಟ್ಸು ಹಾಕಿಕೊಂಡೇ ಹೋಗುತ್ತಾರೆ. ಇದು ಜನರಲ್ಲಿ ಅಸಮಾಧಾನವನ್ನುಂಟುಮಾಡಿದೆ. ಅಲ್ಲದೆ ಬೂಟ್ಸಿನ ಧೂಳಿನಿಂದ ಅನಾರೋಗ್ಯ ವ್ಯಾಪ್ತಿಯಾಗುತ್ತದೆ. ಆದ್ದರಿಂದ ಮೇಲ್ಪಟ್ಟ ಅಧಿಕಾರಿಗಳು ಇವರ ವರ್ತನೆಯನ್ನು ಸರಿಪಡಿಸಿ, ಬೂಟ್ಸ್ ಕಾಲಿನಲ್ಲಿ ಒಳಗೆ ಮನೆ ಪ್ರವೇಶಿಸದಂತೆ ಮಾಡಬೇಕೆಂದ ಪ್ರಾರ್ಥನಾಗರಿಕರೊಬ್ಬರು ಪತ್ರ ಬರೆದಿದ್ದಾರೆ

ನೆಹರೂರವರಿಗೆ ಪ್ರೋತ್ಸಾಹಕ ಬಹುಮಾನ

ದೆಹಲಿಯಲ್ಲಿ ನಡೆಯುತ್ತಿರುವ ಏಷ್ಯಾ ಸಮ್ಮೇಳನದಲ್ಲಿ ಉಜ್ಬೇಕಿಸ್ತಾನದ ಪ್ರತಿನಿಧಿಗಳು ಪಂ|| ನೆಹರೂರವರಲ್ಲಿ ತಮಗಿರುವ ಗೌರವವನ್ನು ವ್ಯಕ್ತಪಡಿಸುವ ಸಲುವಾಗಿ ತಮ್ಮ ದೇಶದ ಕೊಡಿಗೆಯಾದ ಜೋಡು ರೇಷ್ಮೆ ಗೌನು ಮತ್ತು ಟೋಪಿಗಳನ್ನು ಬಹುಮಾನ ಮಾಡಿ ಅವುಗಳಿಂದ ಅವರನ್ನು ಅಲಂಕರಿಸಿದರೆಂದು ವರದಿಯಾಗಿದೆ.

ರಹಸ್ಯ ಪತ್ರಗಳ ಪ್ರಕಟಣೆ

ಗ್ರೀಸ್ ಮತ್ತು ಟರ್ಕಿ ರಾಷ್ಟ್ರಗಳ ವಿಚಾರದಲ್ಲಿ ಗುಪ್ತವಾಗಿದ್ದ ಪತ್ರಗಳನ್ನು ಅಮೆರಿಕಾ ಸಂಯುಕ್ತ ಸಂಸ್ಥಾನದ ಸರ್ಕಾರವು ಬಹಿರಂಗ ಪಡಿಸಿದೆ. ರಷ್ಯವು ಗ್ರೀಸನ್ನು ಆಕ್ರಮಿಸಿ ತನ್ನ ಅಧೀನಪಡಿಸಿಕೊಳ್ಳಲು ರಚಿಸಿದ್ದ ಯೋಜನೆಯ ೩ ಟರ್ಕಿಯ ಮೇಲೆ ಸಹ ರಷ್ಯವು ಯುದ್ಧ ಹೂಡಲು ನಡೆಸಿದ್ದ ಹಂಚಿಕೆಯೂ ಅದರಲ್ಲಿ ನವ ಪಿದಾಗಿವೆಯೆಂದು ತಿಳಿದು ಬಂದಿದೆ.

ಪ್ರಕೃತಿ ಚಿಕಿತ್ಸಾ ಶಿಕ್ಷಣ

ಮೈಸೂರು ೨೬

ಪ್ರಕೃತಿ ಚಿಕಿತ್ಸೆಯ ಕ್ರಮದಲ್ಲಿ ನಿಪುಣರಾದ ಡಾ|| ರಮಣ ಮತ್ತು ಕೆ. ಲಕ್ಷ್ಮೀನಾರಾಯಣರುಗಳ ಮೇಲ್ವಿಚಾರಣೆಯಲ್ಲಿ ಬರುವ ಏಪ್ರಿಲ್ ೧೫ ನೇ ತಾ|| ನಿಂದ ಪ್ರಕೃತಿ ಚಿಕಿತ್ಸೆಯ ವಿಚಾರವಾಗಿ ಬೇಸಿಗೆ ಶಿಕ್ಷಣ ತರಗತಿಗಳು ಇಂಗ್ಲೀಷಿನಲ್ಲಿ ನಡೆಯುವುವು. ಡಾ|| ಎಲ್. ರಾಮೇಶ್ವರನ್, ೧೪ ಡಿ|| ಬ್ಲಾ|| ೨೧-೧೫೦೦ ಕೆ. ಆರ್. ವನಂ ಮೈಸೂರು- ಈ ವಿಳಾಸಕ್ಕೆ ಬರೆದು ವಿವರಗಳನ್ನು ತಿಳಿದುಕೊಳ್ಳಬಹುದು.

ವಿದ್ಯಾರ್ಥಿಗಳಿಗೆ ಭೋಜನ

ಸ್ವಂ ವ.] [ಗುಂಡ್ಲುಪೇಟೆ ೨೪

ಇಲ್ಲಿನ ಪರೀಕ್ಷಾ ಕೇಂದ್ರಕ್ಕೆ ಬರುವ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೆ ಶ್ರೀ|| ಸಭಾ ಸದಸ್ಯರಾದ ಮಿ|| ಜಿ. ಎ. ಅಬ್ದುಲ್ ಗಫಾರ್ ಖಾನರು ಉಚಿತ ಭೋಜನದ ವ್ಯವಸ್ಥೆ ಮಾಡಿರುತ್ತಾರೆ

ಶ್ರೀ ರಾಮ ನವಮಿ

ಕೃಷ್ಣರಾಜನಗರ ೨೫

ಈ ಊರಿನ ಬ್ರಾಹ್ಮಣ ಬಾಲಕ ಭಕ್ತ ಮಂಡಲಿಯವರ, ವರ್ಷದಂತೆ ಶ್ರೀ ರಾಮ ಗರ್ಭಜನನವು. ಪ್ರಯುಕ್ತ ತಾರೀಖು ೨೯-೩-೪೭ ರಿಂದ ೫-೪-೪೭ ರ ವರೆಗೆ ಶ್ರೀ ರಾಮೋತ್ಸವವನ್ನು ನೆರವೇರಿಸುವರು. ಭಕ್ತ ಮಹಾ ಜನಗಳು ಉದಾರವಾಗಿ ಸಹಾಯ ಮಾಡಬೇಕೆಂದು ಪ್ರಾರ್ಥಿಸಲಾಗಿದೆ.

ರಂಗೂನಿಗೆ ಸಿ. ವಿ. ರಾಮನ್ ರವರ ಉಚಿತ ಸೇವೆ

ಕಳೆದ ಮಹಾ ಯುದ್ಧದಲ್ಲಿ ಬಾಂಬಿನ ಹೊಡೆತದಿಂದ ರಂಗೂನಿನ ವಿಶ್ವವಿದ್ಯಾಲಯದ ವಿಜ್ಞಾನ ಸಂಶೋಧನಾಲಯಕ್ಕೆ ಪೆಟ್ಟು ತಗುಲಿ ಅದಕ್ಕೆ ತುಂಬಾ ನಷ್ಟವುಂಟಾಗಿರುವುದರಿಂದ ಅದರ ವಿಜ್ಞಾನ ಸಂಶೋಧನೆಗೆ ಸಹಾಯ ನೀಡುವ ಸಲುವಾಗಿ ಮೂರು ತಿಂಗಳ ಕಾಲ ಅಲ್ಲಿದ್ದು ಉಚಿತವಾಗಿ ಸಂಶೋಧನೆ ಮತ್ತು ಪಾಠ ಪ್ರವಚನಗಳಿಗೆ ಸಹಿತ ಕೆಲಸ ಮಾಡುವುದಾಗಿ ಭಾರತದ ಸುಪ್ರಸಿದ್ಧ ವೈಜ್ಞಾನಿಕರಾದ ಸರ್ ಸಿ. ವಿ. ರಾಮನ್ ರವರು ದೆಹಲಿಯಲ್ಲಿ ನಡೆಯುತ್ತಿರುವ ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ ಹೇಳಿರುತ್ತಾರೆ

ಸಾಧ್ವಿ

ತಾ॥ ೨೬-೩-೪೭ ಬುಧವಾರ

ಇಂಡೊನೇಷ್ಯಾ ಒಪ್ಪಂದ

ಹಾಲೆಂಡ್ ದೇಶಕ್ಕೂ ಇಂಡೊನೇಷ್ಯಾಕ್ಕೂ ಹಲವು ದಿನಗಳಿಂದ ನಡೆಯುತ್ತಿದ್ದ ವ್ಯವಹಾರವು ಮುಕ್ತಾಯವಾಗಿ ನಿನ್ನೆ ದಿನ ಉಭಯ ರಾಷ್ಟ್ರಗಳೂ ಪರಸ್ಪರ ಒಪ್ಪಂದಕ್ಕೆ ರುಜು ಮಾಡಿರುವು ಇಂಡೊನೇಷ್ಯಾದಲ್ಲಿ ಸ್ವತಂತ್ರ ಸಂಯುಕ್ತ ಸಂಸ್ಥಾನದ ಸ್ಥಾಪನೆಗೆ ಹಾಲೆಂಡು ಸಮ್ಮತಿ ಇತ್ತಿರುತ್ತದೆ ಯುದ್ಧವು ಮುಗಿದ ಮೇಲೆಯೂ ಈ ಎರಡು ರಾಷ್ಟ್ರಗಳಿಗೆ ಉಂಟಾಗಿದ್ದ ಘರ್ಷಣೆಯು ಸ್ವಾತಂತ್ರ್ಯ ಪ್ರೇಮಿಗಳಾದ ಸಕಲರಿಗೂ ವಿಸ್ಮಯವನ್ನುಂಟುಮಾಡುತ್ತಿತ್ತು ಎರಡು ಕಡೆಗಳಲ್ಲಿಯೂ ಅಪಾರವಾದ ಜನ, ಧನ ಮತ್ತು ಸಾಮುಗ್ರಿಗಳು ಬಹಳವಾಗಿ ನಷ್ಟವಾಗಿವೆ ಈ ಅಧ್ಯಾಯವು ಈಗ ಶಾಂತರೀತಿಯಲ್ಲಿ ಪರ್ಯವಸಾನಗೊಂಡಿರುವುದು ಎಲ್ಲರಿಗೂ ಸಮಾಧಾನವನ್ನುಂಟುಮಾಡುವ ವಿಷಯ

ಈಗ ದೆಹಲಿಯಲ್ಲಿ ಅಖಿಲ ಏಷ್ಯಾಖಂಡದ ರಾಷ್ಟ್ರಗಳ ಸಮ್ಮೇಳನವು ನಡೆಯುತ್ತಿದೆಯಷ್ಟೆ ಏಷ್ಯಾಖಂಡದ ಒಂದು ರಾಜ್ಯದಲ್ಲಿ ನಡೆಯುತ್ತಿದ್ದ ಕದನವು ನಿಂತು ಇದೇ ಸಮಯದಲ್ಲಿ ಈ ಒಪ್ಪಂದವೂ ಸಹ ಆಗಿರುವುದರಿಂದ ಸಮ್ಮೇಳನದವರೆಲ್ಲರಿಗೂ ವಿಶೇಷ ಸಮಾಧಾನವುಂಟಾಗದಿರದು. ಏಷ್ಯದ ಜನಾಂಗಗಳೆಲ್ಲವೂ ಎಚ್ಚೆತ್ತು, ಪರಸ್ಪರ ಕ್ಷೇಮಾಭ್ಯುದಯಕ್ಕಾಗಿ ಒಗ್ಗಟ್ಟಿನಿಂದ ಕೆಲಸ ಮಾಡಲು ಹವಣಿಸುತ್ತಿರುವ ಈ ಸಮಯದಲ್ಲಿ ಪಾಶ್ಚಿಮಾತ್ಯರು ತಮ್ಮ ಆಕ್ರಮಣ ನೀತಿಯನ್ನು ತೊರೆದು ಸ್ನೇಹ, ಸೌಹಾರ್ದಗಳಿಂದ ವರ್ತಿಸಲು ಮುಂದೆ ಬರುತ್ತಿರುವುದು ಆಶ್ಚರ್ಯವೇನೂ ಅಲ್ಲ ಬ್ರಿಟಿಷರು ಭಾರತ ಮತ್ತು ಬರ್ಮಾಗಳನ್ನು ಬಿಟ್ಟು ಹೊರಡುವ ಯೋಜನೆಯೂ ಈ ಹೊಸ ಜಾಗೃತಿಯ ಫಲವೆಂದು ಹೇಳಬಹುದು

ಇಂಡೋಚೀನಾದಲ್ಲಿ ಫ್ರಾನ್ಸಿನವರು ಇನ್ನೂ ತಮ್ಮ ಆಕ್ರಮಣ ನೀತಿಯನ್ನು ತ್ಯಜಿಸಿರುವುದಿಲ್ಲ ಇದರ ಬಗ್ಗೆ ಅಲ್ಲಿನ ಮಂತ್ರಿಮಂಡಲದಲ್ಲಿಯೇ ಭಿನ್ನಾಭಿಪ್ರಾಯಗಳಿರುತ್ತವೆ ಇಂಡೊನೇಷ್ಯದಂತೆಯೇ ಇಂಡೋಚೀಣರೂ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದಾರೆ ಸ್ವಾತಂತ್ರ್ಯ, ಭ್ರಾತೃತ್ವ ಮತ್ತು ಸಮಾನತೆಗಳ ತೌರೂರೆನಿಸಿದ್ದ ಫ್ರಾನ್ಸು ಇಂದು ಸಾಮ್ರಾಜ್ಯ ಶಾಹಿಯ ವರ್ತನೆಯಲ್ಲಿ ತೊಡಗಿರುತ್ತದೆ. ಇತ್ತೀಚೆಗೆ ಅದಕ್ಕೆ ದೊರಕಿದ ಇತರ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಸಂಪರ್ಕದ ದೋಷವೇ ಇದು ಫ್ರಾನ್ಸೂ ಸಹ ತನ್ನ ವರ್ತನೆಯನ್ನು ಬದಲಾಯಿಸಿ, ಇಂಡೋಚೀಣದವರಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು ಪರಸ್ಪರ ಗೌರವಯುತವಾದ ಒಪ್ಪಂದವನ್ನು ಮಾಡಿಕೊಳ್ಳುವುದು ವಿಹಿತವಾಗಿರುತ್ತದೆ

ದಕ್ಷಿಣ ಆಫ್ರಿಕದಲ್ಲಿ ಮಾತ್ರ ಇನ್ನೂ ಬಿಳಿಯರು ಬಣ್ಣದ ಜನರ ಮೇಲೆ ದಬ್ಬಾಳಿಕೆಯನ್ನು ನಡೆಸುತ್ತಲೇ ಇದ್ದಾರೆ. ವಿಶ್ವಸಂಸ್ಥೆಯ ನಿರ್ಧಾರವಾಗಲೀ, ಏಷ್ಯದ ಜನರ ಜಾಗೃತಿಯಾಗಲೀ, ಈಚಿನ ವಿದ್ಯಮಾನಗಳ ಪ್ರಭಾವವಾಗಲೀ ಅವರ ಮೇಲೆ ಯಾವ ಪರಿಣಾಮವನ್ನೂ ಮಾಡಿರುವಂತೆ ಕಾಣುವುದಿಲ್ಲ. ಆ ದೇಶದಲ್ಲಿರುವ ಅನೇಕ ಐರೋಪ್ಯರೂ ಸಹ ಅಲ್ಲಿನ ಸರ್ಕಾರದ ವರ್ತನೆಯನ್ನು ಒಪ್ಪುತ್ತಿಲ್ಲ. ಸ್ವಾತಂತ್ರ್ಯ ಮತ್ತು ಸಮಾನತೆಯ ಪ್ರತಿಪಾದಕರಾದ ಜನಾಂಗದವರೆಲ್ಲರೂ ದಕ್ಷಿಣ ಆಫ್ರಿಕಕ್ಕೆ ತಕ್ಕ ಪ್ರತೀಕಾರವನ್ನು ಮಾಡುವ ಕಾಲವು ಸನ್ನಿಹಿತವಾಗುತ್ತಿದೆ

ಇಂಡೊನೇಷ್ಯವು ಸಣ್ಣ ರಾಜ್ಯವಾದರೂ ತನ್ನ ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳುವುದರಲ್ಲಿ ಅತ್ಯಂತ ದಿಟ್ಟತನದಿಂದಲೂ, ದೇಶಾಭಿಮಾನದಿಂದಲೂ ಹೋರಾಡಿರುತ್ತದೆ ಈಗ ಅದು ಪಡೆದಿರುವ ಸ್ಥಾನವು ಸಂಪೂರ್ಣ ಸ್ವಾತಂತ್ರ್ಯದ ಸಾಧನೆಗೆ ತಳಹದಿಯಾಗಿರುತ್ತದೆ. ಆ ದೇಶದ ಕಾರ್ಯಸಾಧನೆಯು ಪ್ರಪಂಚದ ಎಲ್ಲ ಜನಾಂಗಗಳ ಕಣ್ಣನ್ನೂ ತೆರೆಯಿಸಲೆಂದು ನಾವು ಹಾರೈಸುತ್ತೇನೆ.

Edited, printed and published by A. R. Nagarajan at the Sadhvi Press D. Subbiah Road, Mysore

ರಾಜಕಮಲ್

೨೪-೩-೪೭ ರಿಂದ ೭ ನೇ ವಾರ

1 ನೇ ಆಟ 6 ಘಂಟೆಗೆ.

2 ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ

(ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಗಸಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!!

ಇವೆಲ್ಲವನ್ನೂ ಇಂದೇ ನೋಡಿ.

ಟೆಕ್ನಿಕಲ್ ಶಿಕ್ಷಣ ಸಮ್ಮೇಳನ

ಸ್ವಂ. ಪ್ರ.] ಬೆಂಗಳೂರು ೨೬

ಮೈಸೂರು ಸರ್ಕಾರದ ಆಹ್ವಾನವನ್ನಂಗೀಕರಿಸಿ ಅಖಿಲ ಭಾರತ ಟೆಕ್ನಿಕಲ್ ವಿದ್ಯಾಭ್ಯಾಸ ಸಮ್ಮೇಳನದವರು ತಮ್ಮ ಮುಂದಿನ ಸಮ್ಮೇಳನವನ್ನು ಬರುವ ತಿಂಗಳ ಮಧ್ಯಭಾಗದಲ್ಲಿ ಬೆಂಗಳೂರಿನಲ್ಲಿ ನಡೆಸಲು ಅಂಗೀಕರಿಸಿರುವರೆಂದು ಗೊತ್ತಾಗಿದೆ.

ರಾಮೋತ್ಸವದ ಘನವಾದ ಸಂಗೀತ ಕಛೇರಿಗಳು

ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ

ಪ್ರಸನ್ನ ಸೀತಾರಾಮ ಮಂದಿರ ಮೈಸೂರು

೩೦-೩-೪೭ ಮಾಯಾವರಂ ಕೃಷ್ಣಅಯ್ಯರ್‌ರವರ ಹಾಡುಗಾರಿಕೆ, ಬಿ ಕೇಶವಮೂರ್ತಿಗಳ ಪಿಟೀಲು, ರಂಗನಾಥರವರ ಮೃದಂಗ

೩೧-೩-೪೭ ಬೂದುಲೂರು ಕೃಷ್ಣಮೂರ್ತಿ ಶಾಸ್ತ್ರಿಗಳ ಗೋಟುವಾದ್ಯ, ಅಯ್ಯಾಮಣಿ ಅಯ್ಯರ್‌ರವರ ಮೃದಂಗ

೧-೪-೪೭ ಆರ್ ಕೆ ಶ್ರೀಕಂಠರವರ ಹಾಡುಗಾರಿಕೆ, ಗೋವಿಂದಸ್ವಾಮಿಯವರ ಪಿಟೀಲು, ಅಯ್ಯಾಮಣಿ ಅಯ್ಯರ್‌ರವರ ಮೃದಂಗ

೨-೪-೪೭ ಟಿ ಕೆ. ರಾಧಾಕೃಷ್ಣರವರ ಕೊಳಲು, ಪಾಲಘಾಟ್ ಸಿ ಆರ್. ಮಣಿ ಅಯ್ಯರ್‌ರವರ ಪಿಟೀಲು, ಪಾಲಘಾಟ್ ಸುಬ್ಬಯ್ಯರ್‌ರವರ ಮೃದಂಗ.

೩-೪-೪೭ ಚೆಂಬೈ ವೈದ್ಯನಾಥ ಭಾಗವತರವರ ಹಾಡುಗಾರಿಕೆ, ಟಿ. ಚೌಡಯ್ಯನವರ ಪಿಟೀಲು, ಶ್ರೀಕಂಠರವರ ಮೃದಂಗ, ತಿಪ್ಪವಲ್ಲಿ ವೆಂಕಟರಾಮಯ್ಯರ್‌ರವರ ಖಂಜರಿ, ರಾಮಚಂದ್ರಂರವರ ಘಟಂ, ಸೀತಾರಾಮ ಶಾಸ್ತ್ರಿಗಳ ಮೋರ್ಚಿಂಗ್.

೪-೪-೪೭ ಗಾನಸರಸ್ವತಿ ಡಿ. ಕೆ. ಪಟ್ಟಮ್ಮಾಳ್ ಮತ್ತು ಪಾರ್ಟಿ ಸಂಗೀತ

೫-೪-೪೭ ಮಧುರೆ ಡಿ. ಶ್ರೀನಿವಾಸ ಅಯ್ಯಂಗಾರ್‌ರವರ ಜಲತರಂಗ್, ಎ. ವಿ ಕೃಷ್ಣಮಾಚಾರ್ಯರವರ ಪಿಟೀಲು, ಡಿ ಕೃಷ್ಣ ಅಯ್ಯಂಗಾರ್ ಮೃದಂಗ.

೬-೪-೪೭ ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್‌ರವರ ಹಾಡುಗಾರಿಕೆ, ಟಿ. ಚೌಡಯ್ಯನವರ ಪಿಟೀಲು, ಪಳನಿ ಸುಬ್ರಮಣ್ಯ ಪಿಳ್ಳೆಯವರ ಮೃದಂಗ

೭-೪-೪೭ ಬಿ ಕೆ. ಪದ್ಮನಾಭರಾಯರ ಹಾಡುಗಾರಿಕೆ, ವೆಂಕಟರಮಣ ಶಾಸ್ತ್ರಿಗಳವರ ಪಿಟೀಲು, ರಾಜಪ್ಪಯ್ಯರ್‌ರವರ ಮೃದಂಗ

೮-೪-೪೭ ಮಧುರೆ ಮಣಿ ಅಯ್ಯರ್‌ರವರ ಹಾಡುಗಾರಿಕೆ, ಟಿ. ಚೌಡಯ್ಯನವರ ಪಿಟೀಲು, ರಾಜಪ್ಪಯ್ಯರ್‌ರವರ ಮೃದಂಗ

೯-೪-೪೭ ಟ್ರಿಚಿ ಸ್ವಾಮಿನಾಥರವರ ಹಾಡುಗಾರಿಕೆ, ಅಳಗಿರಿ ಸ್ವಾಮಿಯವರ ಪಿಟೀಲು, ರಾಜಪ್ಪಯ್ಯನವರ ಮೃದಂಗ

೧೦-೪-೪೭ ಭಾನುಮತಿ ಮತ್ತು ಪಾರ್ಟಿಯವರಿಂದ ಭರತ ನಾಟ್ಯ.

೧೧-೪-೪೭ ಕುಮಾರಿ ಪದ್ಮಮ್ಮನವರ ಹಾಡುಗಾರಿಕೆ, ವೆಂಕಟರಮಣಯ್ಯನವರ ಪಿಟೀಲು, ವರದಾಚಾರ್ಯರವರ ಮೃದಂಗ

(ಮೆಂಬರುಗಳಲ್ಲದವರಿಗೆ ಟಿಕೇಟು ಮೂಲಕ ಪ್ರವೇಶ)

ಡಿ. ಕಪನೀಪತಿರಾವ್,

ಸೆಕ್ರೆಟರಿ.

" ವಿದ್ಯಾಭ್ಯಾಸದ ಇಲಾಖೆಯ ... ರಾದ ಶ್ರೀ ಆರ್. ಕಸ್ತೂರಿರಾಜಚೆಟ್ಟಿ ... ರನ್ನು ಖಾಯಂ ಮಾಡಲಾಗಿದೆ.

ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆ... ಟರವರ ಆಫೀಸು,

ಮೈಸೂರು, ತಾ॥ ೨೪ - ೩ ...

ನಂ H I P. R. ೨೪೭/೪೬-೪...

ನೋಟೀಸು

ಮೈಸೂರು ಸಿಟಿಯಲ್ಲಿರುವ ಪ್ರ... ಮ ಹೊಟ್ಟೆ ಅಂಗಡಿ, ಮಿಠಾಯಿ ಅ... ಹೋಟೆಲು, ರೆಸ್ಟೊರೆಂಟ್, ಟೀ ಅಂ... ಗಡಿ, ಹಾಲಿನ ಅಂಗಡಿ, ಕ್ಷೌರದ ಅ... ಐಸ್ ಮತ್ತು ಕಾಫಿ ಪಾನೀಯಗಳನ್ನು ... ಯಾರು ಮಾಡುವ ಮತ್ತು ಬಳಿ... ವ ಸ್ಥಳಗಳು ಮತ್ತು ಮಾಂಸದ ... ಗಳು ಇವುಗಳ ಮಾಲೀಕರೂ, ... ವಾಗುವವರೂ, ಹಂಚುವವರೂ, ... ವವರೂ, ಮಾರುವವರೂ, ಕುಟನಾ... ವರೂ, ಅಡಿಗೆ ಮಾಡುವವರೂ ಮು... ತರ ಸಮಸ್ತ ನೌಕರ ಮಾನೇಜುಗಳು ... ರ್ನಮೆಂಟಿನಿಂದ ಸಾದರಾದ ೧೪ - ೩ ... ನೇ ಮುರ್ಮಾ ಆರ್ಡರ್ ನಂ ... ೯೩೯೨-೪/೧೭೬ ೧೦೬-೪೫-೩೫ ... ತಿದ್ದುಪಾಟಾದ ಮೈಸೂರು ಸಿಟಿ ಮು... ಲ್ ಸರಹದ್ದಿನಲ್ಲಿರುವ ಹೋಟೆಲ್, ... ಅಂಗಡಿ ವಗೈರೆಗಳಿಗೆ ಲೈಸೆನ್ಸು ಕೊ... ಮತ್ತು ತನಿಖೆ ಮಾಡಲು ನಿಯಮಿ... ಗಿರುವ ಬೈಲಾ ೭, ೮ ಮತ್ತು ೯ ... ಬಂಧನೆಗಳ ಪ್ರಕಾರ ಸದರಿ ಪೌರಸ... ದ ನೇಮಕರಾದ ಡಾಕ್ಟರವರಿಂದ ... ಪಲ್ ಹೆಲ್ತ್ ಆಫೀಸಿನಲ್ಲಿ ಪರೀಕ್ಷೆ... ಸಿಕೊಂಡು ತಾವೂ ಆಯಾ ಸ್ಥಳಗ... ಲಸಮಾಡಲು ಆರೋಗ್ಯ ರೀತ್ಯಾ ಅ... ಪಡೆದಿರುತ್ತಾರೆಂಬ ಸರ್ಟಿಫಿಕೇಟನ್ನು ... ವರ್ಷವೂ ಪಡೆಯತಕ್ಕದ್ದು ಈ ಸ... ಕೇಟಿಗಾಗಿ ಪ್ರತಿ ವರ್ಷವೂ ಒಂದು ... ಯನ್ನೂ ಮತ್ತು ತಮ್ಮ ಹೆಸರನ್ನು ... ಸಿಪಲ್ ಆಫೀಸಿನಲ್ಲಿರುವ ರಿಜಿಸ್ಟ... ದಾಖಲ್ ಮಾಡಲು ಎಂಟಾಣೆಯ ... (ಜುಲೈ ೧-೮-೦) ಮುನಿಸಿಪಲ್ ... ನೆಯಲ್ಲಿ ಪಾವತಿಮಾಡಿ ರಶೀತಿ ... ಅರ್ಜಿಯೊಡನೆ ಮುನಿಸಿಪಲ್ ಹೆಲ್ತ್ ... ಸಿನಲ್ಲಿ ಹಾಜರ್ಮಾಡಿ ಈ ಲಾಗಾಯ್ತು ... ನೈದು ದಿವಸಗಳಲ್ಲಿ ಸರ್ಟಿಫಿಕೇಟನ್ನು ... ಯತಕ್ಕದ್ದು.

ಆ ರೀತಿ ಮಾಡಲು ತಪ್ಪಿದರೆ ... ಪ್ರಕಾರ ಪ್ರಾಸಿಕ್ಯೂಷನ್ ಮಾಡಲಾಗು...

(ಸಹಿ) ಆರ್. ರಾಮಚಂದ್ರರಾ... ಚಾಂಪಿ...

... ಪ್ರೆಸಿಡೆಂಟ್

ಸುಸಮಯ! ತೆರೆದುಕೊಳ್ಳ...

ಹೊರ ದೇಶದಿಂದ ಬಂದಿರುವ

ಉಲ್ಲನ್ ಪೆಂಟ್ಸ್ ಕೋಟುಗ...

ಬೇರೆ ಬೇರೆ ಬಣ್ಣ ಮತ್ತು ನಮೂ...

ಅತ್ಯಂತ ಸುಲಭ ಬೆಲೆ

1. ಎಲ್. ಮಧುರಾದಾಸ್,

2. ಕೆ ಎಸ್ ಪಾಂಡುರಂಗರಾ... ಅಂಡ್ ಕೋ

ಫ್ಯಾನ್ಸಿ ಬಟ್ಟೆ ವರ್ತಕರು,

361, ನಗರೇಶ್ವರಿ ಚೌಕ, ಮೈಸೂ...

ನಂಜನಗೂಡು ದೊಡ್ಡಜಾತ್ರೆ - ದನಗಳ ಪ್ರದರ್ಶನ

1-4-47 ರ ಲಾಗಾಯ್ತು 4-4-47 ರ ವರೆಗೆ ದೊಡ್ಡ ಜಾತ್ರೆ ರಥೋತ್ಸವ ಸಂದರ್ಭದಲ್ಲಿ, ದನಗಳ ಪ್ರದರ್ಶನವನ್ನು ಈ ಊರಿನ ಜೋಗಿ ತೋಪಿನಲ್ಲಿ ಏರ್ಪಡಿಸಿರುತ್ತೆ ನೀರು ನೆರಳಿನ ಸೌಕರ್ಯ ಚೆನ್ನಾಗಿದೆ ರಾಸುಗಳಿಗೆ ಸುಂಕವಿಲ್ಲ, ವೈದ್ಯ ಸಹಾಯ ಏರ್ಪಡಿಸಿದೆ ಉತ್ತಮ ರಾಸುಗಳಿಗೆ ಬಹುಮಾನ ಕೊಡಲಾಗುತ್ತೆ.

ಎ ವಿ. ಕೃಷ್ಣ, ಪ್ರೆಸಿಡೆಂಟ್,

ಟೌನ್ ಮುನಿಸಿಪಲ್ ಕೌನ್ಸಿಲ್, ನಂಜನಗೂಡು

Join Now

Summer Classes in

Type writing, Short-hand and Book-keeping

at the

Champion Metropolitan College of Commerce,

Old Mysore Bank Buildings, Sayyaji Rao Road, Mysore.

Admissions received on all working days between

7 and 10 a m and 5 and 7 p m

P. SUBBARAYA SASTRY,

Principal

ಸಂ॥ ೯ ಸಂ. 392 । ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೨೭—೩—೪೭ [ಸಂಚಿಕೆ ೧೯೪

ಗಾಂಧಿ-ಜಿನ್ನಾರವರಿಗೆ ವೈಸರಾಯರ ಕರೆ

ಇಂಡೋನೇಷ್ಯಾ ಸಂಯುಕ್ತ ಸಂಸ್ಥಾನ ಸ್ಥಾಪನೆ

ಮತ್ತು ಇಂಡೋನೇಷ್ಯಾ ಪ್ರತಿನಿಧಿಗಳ ಒಪ್ಪಂದಕ್ಕೆ ಮೊನ್ನೆ ಬಟೇವಿಯಾದಲ್ಲಿ ರುಜು ಹಾಕಿ ಇಂಡೋನೇಷ್ಯಾ ರಿಪಬ್ಲಿಕ್ ನೆದರ್ಲ್ಯಾಂಡ್ ಸರ್ಕಾರವು ಅಂಗೀಕರಿಸಿರುವ ರಿಪಬ್ಲಿಕ್ಕಿಗೆ ಸುಮಾತ್ರ, ಜಾವ, ಮಧುರಾಗಳು ಸೇರಿ ಇಂಡೋನೇಷ್ಯಾ ಸಂಯುಕ್ತ ಸಂಸ್ಥಾನವನ್ನು ಸ್ಥಾಪಿಸಲು ರಾಜ್ಯಾಂಗ ಸಭೆಯು ನಿರ್ಮಿತವಾಗುವ ವರದಿಯಾಗಿದೆ

ವೀಣಾ ವಾದನ

ಮೈಸೂರು ೨೭

ರಾಜ ಮೊಹಲ್ಲಾ ನಾಲಾ ಬೀದಿಯ ದೊಡ್ಡ ರಾಮ ದೇವಸ್ಥಾನದಲ್ಲಿ ರಾಮನವಮಿ ಪ್ರಯುಕ್ತ ನಾಳೆ ಸಂಜೆ ೭ ನಡೆಯಬೇಕಾಗಿದ್ದ ಆಕಾಶ ವಾಣಿ ... ಬದಲು ಶ್ರೀಮತಿ ನೀಲ ... ವರ ವೀಣಾ ವಾದನವು ನಡೆಯುತ್ತದೆ ಸರ್ವರಿಗೂ ಸ್ವಾಗತ

ಷಷ್ಟ್ಯಬ್ಧ ಪೂರ್ತಿ ಶಾಂತಿ

... ವಾಜಿ ಪೌರ ಸಭಾ ಸದಸ್ಯರೂ, ಕಾಂಗ್ರೆಸ್ ಸೇವಕರೂ ಆದ ಶ್ರೀ ... ಸತ್ಯನಾರಾಯಣರಾಯರು ನಿ... ದೀರ್ಘರೂಪರವಾದ ಶ್ರೀ॥ ... ರವರ ಷಷ್ಟ್ಯಬ್ಧ ಪೂರ್ತಿ ಶಾಂತಿ ... ನವನ್ನು ವಿಧಿಯುಕ್ತವಾಗಿ ವೈಭವದಿಂದ ನೆರವೇರಿಸಿ ಅನೇಕ ಬಂಧು, ಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ಕಾಲಜ್ಞಾನ ಸಂಗ್ರಹ

ಸಂಪಾದಕರು- ಶ್ರೀ॥ ಶಿವಬಸವಸ್ವಾಮಿ ಪ್ರಕಾಶಕರು ಮೈಸೂರು ಶಿವಶರಣ ... ಪ್ರಕಾಶ ಕಾರ್ಯಾಲಯ. ವೀ... ವರ್ಷಮಾನ ಕತ್ತಲೆಗೆಯನ್ನು ಕನ್ನಡಿಯು ಮೂಡಿರುವ ಪ್ರಯುಕ್ತ, ಇ... ಗೆ ಕೆಲವು ಸುಪ್ರಸಿದ್ಧ ಮಹನೀಯರು ... ಟಕವಾಗಿ ದುಡಿದು ಶಿವಸಾ... ಸೇರಿರುತ್ತಾರೆ. ಬಸವಾದಿ ಶರಣರು ... ದ ಕಾಲಜ್ಞಾನದ ಮಹಾವಾಕ್ಯಗಳ ... ವಾಗಿ ಪ್ರಕಟಿಸಿರುವ ಈ ಗ್ರಂಥ ... ಪ್ರತಿ ಕನ್ನಡಿಗನೂ ಓದಲೇ ಬೇಕು. ... ಜ್ಞಾನದ ಬೆಳವಣಿಗೆಗೆ ಸಾಧಕ ... ಶ್ರೀ॥ ಶಿವಬಸವಸ್ವಾಮಿಗಳು ... ಸಿರುವ ಈ ಕೃತಿ ನಿರ್ಮಾಣದ ಕಾರ್ಯವು ಯಶಸ್ಸುಗಳಿಸಿ ಮುಂದುವರಿಯಲು ಹಾರೈಸುತ್ತೇವೆ.

ಶ್ರೀ ಗಣೇಶಾ ಟಾಕೀಸ್

28-3-47 ರಿಂದ 3ನೇ ವಾರ

ಪ್ರತಿದಿನ ಮೂರು ಆಟಗಳು

ಹರಿಶ್ಚಂದ್ರ

Morning Shows on 28, 29, 30 and 31st at 10-30 a.m.

New Fantastic Sensation

Suggested by H. G. WELLS

The Invisible - - Man Returns

With Sir Cedric, Hardwicke

Nan Grey

ಮೊಕದ್ದಮೆ ವರ್ಗಾಯಿಸಲು ನಿರಾಕರಣೆ

ಸ್ವಂ.ವ.ಪ್ರೋ॥] ಬೆಂಗಳೂರು ೨೭

ಚಿನ್ನದ ಗಣಿಯ ಡೊಂಬಿ ಮೊದಲಾದ ಗಲಭೆಗಳ ಸಂಬಂಧವಾಗಿ ಹೂಡಲಾಗಿರುವ ಎರಡು ಮೊಕದ್ದಮೆಗಳಲ್ಲಿ ಆಪಾದಿತರ ಪರ ವಕಾಲತ್ತು ವಹಿಸಿರುವ ಮದರಾಸಿನ ವಕೀಲರಾದ ಶ್ರೀ॥ ಎ. ಎಸ್. ಮಣಿಯವರು ಮೊಕದ್ದಮೆಗಳನ್ನು ಗಣಿಯ ಸ್ಪೆಷಲ್ ಮ್ಯಾಜಿಸ್ಟ್ರೇಟರ ಕೋರ್ಟಿನಿಂದ ಬೇರೆ ಕೋರ್ಟಿಗೆ ವರ್ಗಾಯಿಸಬೇಕೆಂದು ಹೈ ಕೋರ್ಟಿಗೆ ಅರ್ಜಿ ಹಾಕಿದ್ದರು ಈ ಅರ್ಜಿ ನ್ಯಾಯಮೂರ್ತಿಗಳಾದ ಶ್ರೀ॥ ವೆಂಕಟರಾಮಯ್ಯನವರ ಮುಂದೆ ವಾದ ನಡೆದು ಅವರು ಮೊಕದ್ದಮೆಯ ವರ್ಗಾವಣೆಯು ಅನಾವಶ್ಯಕವೆಂದು ಹೇಳಿ ಅರ್ಜಿಯನ್ನು ತಿರಸ್ಕರಿಸಿರುವರು.

ಪಂಜಾಬಿನಲ್ಲಿ ಶಾಂತಿ

ಪಂಜಾಬಿನಲ್ಲಿ ಬಹು ಮಟ್ಟಿಗೆ ಶಾಂತಿಯು ನೆಲೆಸಿರುವುದಾಗಿ ಹೇಳಲಾಗಿದೆ. ಲಾಹೋರ್, ಅಮೃತಸರ ಜಿಲ್ಲೆಗಳಲ್ಲಿ ಬೆಂಕಿ ಹೊತ್ತಿಸುವ ಒಂದೊಂದು ಪ್ರಸಂಗಗಳು ನಡೆದಿವೆ ಗುರುಗಾಂವಿನಲ್ಲಿ ಕರ್ಫ್ಯೂ ವಿಧಿಸಿದ ಮೇಲೆ ಗಲಭೆ ಘಟನೆಗಳು ನಡೆದಿಲ್ಲ

ವಿದ್ಯಾರ್ಥಿಗಳಿಗೆ ಊಟದ ಸೌಕರ್ಯ

ಕೃಷ್ಣರಾಜಪೇಟೆ ಕೇಂದ್ರಕ್ಕೆ ಬರಲಿರುವ ಲೋವರ್ ಸೆಕೆಂಡರಿ ವಿದ್ಯಾರ್ಥಿಗಳಿಗೆ ಇಲ್ಲಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ, ಜಮೀನುದಾರರೂ ಆದ ಶ್ರೀ ನಾಡಿಗ ನಂಜಪ್ಪನವರೂ, ಯೋಗಾನರಸಿಂಹ ಮೋಟಾರ್ ಸರ್ವಿಸ್ ಮಾಲೀಕರಾದ ಶ್ರೀ ನಾರಾಯಣರಾಯರೂ ಉಚಿತ ಊಟದ ಸೌಕರ್ಯವನ್ನು ಏರ್ಪಡಿಸಿರುತ್ತಾರೆಂದು ತಿಳಿದುಬಂದಿದೆ.

ಉಪಾಧ್ಯಾಯರ ಸಂಘ

ಸ್ವಂ. ವ.] ನಂಜನಗೂಡು ೨೭

ಈ ರೇಂಜಿನ ಕನ್ನಡ ಮತ್ತು ಉರ್ದು ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ಬರುವ ೩೦ ನೇ ತಾ॥ ಭಾನುವಾರ ಮಧ್ಯಾಹ್ನ ಪ್ರಾಥಮಿಕ ಶಾಲಾ ಡೆ॥ ಡೈ॥ ಶ್ರೀ ಎಂ. ಎಸ್. ... ರವರ ಅಧ್ಯಕ್ಷತೆಯಲ್ಲಿ ಇಲ್ಲಿನ ಟಿಸಿಡೆಂಟ್ ... ಬಂಗಲೆಯಲ್ಲಿ ನಡೆಯುವುದು.. ಸಂಘದ ಉಪಾಧ್ಯಾಯರೆಲ್ಲರೂ ಬರಬೇಕೆಂದು ಕಾರ್ಯದರ್ಶಿಗಳು ಕೋರಿದ್ದಾರೆ

ಗಾಂಧಿ-ಜಿನ್ನಾರವರಿಗೆ ವೈಸರಾಯರ ಆಹ್ವಾನ

ಅಧಿಕಾರವನ್ನು ವಹಿಸಿಕೊಂಡೊಡನೆಯೇ ಹೊಸ ವೈಸರಾಯರಾದ ಲಾರ್ಡ್ ಲೂಯಿ ಮೌಂಟ್ ಬ್ಯಾಟನ್ನರವರು ಮಹಾತ್ಮ ಗಾಂಧಿಯವರಿಗೂ, ಮಿ॥ ಜಿನ್ನಾರವರಿಗೂ ಪತ್ರಗಳನ್ನು ಬರೆದು ಕೂಡಲೇ ಬಂದು ತಮ್ಮನ್ನು ಭೇಟಿ ಮಾಡುವಂತೆ ಆಹ್ವಾನಿಸಿರುವರು. ಮಹಾತ್ಮರನ್ನು ಕರೆತರಲು ಒಂದು ವಿಮಾನವನ್ನೂ ಸಹ ಸಿದ್ಧಗೊಳಿಸಲಾಗಿದೆ. ಅವರು ಮಾರ್ಚಿ ೩೦ ನೇ ತಾರೀಕಿನ ಹೊತ್ತಿಗೆ ದಿಹಲಿಗೆ ಬರುವರೆಂದು ಹೇಳಲಾಗಿದೆ ದಿಹಲಿಗೆ ಬಂದಿರುವ ಏಷ್ಯಾ ಸಮ್ಮೇಳನದ ಪ್ರತಿನಿಧಿಗಳನ್ನೂ ಸಹ ಮಹಾತ್ಮರು ಭೇಟಿ ಮಾಡುವರೆಂದು ಗೊತ್ತಾಗಿದೆ

ನಾಜಿ ಚಳುವಳಿ ಅಡಗಿಲ್ಲ

ಜರ್ಮನಿಯಲ್ಲಿ ನಾಜಿ ಗುಪ್ತ ಚಳುವಳಿಯು ಪೂರ್ಣವಾಗಿ ನಿಂತಿರುವುದಿಲ್ಲ. ಅದು ಆಗಾಗ ಒಂದಲ್ಲ ಒಂದು ರೀತಿಯಲ್ಲಿ ತಲೆ ಎತ್ತುತ್ತಲೇ ಇರುತ್ತದೆ. ಬ್ರಿಟಿಷ್ ಗೂಢಚಾರ ಅಮೆರಿಕನರು ಕೆಲವು ದಿನಗಳ ಹಿಂದೆ ಆರಂಭಿಸಿದ ನಾಜಿ ಗುಪ್ತ ಚಳುವಳಿಯು ಕೊನೆಯದೇನೂ ಅಲ್ಲ-ವೆಂಬ ದಾಗಿ ಜರ್ಮನಿಯಲ್ಲಿ ಬ್ರಿಟಿಷ್ ಕಮ್ಯಾಂಡರು ಸರ್ ಷೋಲ್ಟೋ ಡುಗ್ಲಾಸ್‌ರವರು ಹೇಳಿರುವರು

ಬೆಲ್ಲದ ಪತ್ತೆ

ಸ್ವಂ. ವ.] ಶ್ರೀರಂಗಪಟ್ಟಣ ೨೭

ಈಗ್ಗೆ ೪-೫ ದಿನಗಳ ಹಿಂದೆ ಕಾಳಸಂತೆ ವ್ಯಾಪಾರಕ್ಕಾಗಿ ಹೋಗುತ್ತಿದ್ದ ಒಂದು ಗಾಡಿ ಬೆಲ್ಲವನ್ನು ಕೃಷ್ಣರಾಜಪೇಟೆ ಪೋಲೀಸರು ಪತ್ತೆ ಹಚ್ಚಿ ಮುಂದಿನ ಕ್ರಮ ಜರುಗಿಸುವುದರಲ್ಲಿದ್ದರೆಂದೂ ಅಷ್ಟರಲ್ಲಿ ಇಲ್ಲಿನ ಕ್ರಮುಖರೊಬ್ಬರು ಮಧ್ಯೆ ಪ್ರವೇಶಿಸಿ ಮೇಲಧಿಕಾರಿಗಳ ಶಿಫಾರಸ್ಸಿನಿಂದ ಪೋಲೀಸರು ಕ್ರಮ ಜರುಗಿಸುವುದನ್ನು ತಡೆದರೆಂದೂ ಗೊತ್ತಾಗಿದೆ

ಪಂಜಾಬಿನ ನಿಮ್ನ ವರ್ಗದವರಿಗೇ ಪ್ರತ್ಯೇಕ ಪ್ರಾಂತ್ಯ

ಕಾಂಗ್ರೆಸ್ಸು ಪಂಜಾಬಿನ ವಿಭಜನೆಗೆ ಒಪ್ಪಿರುವುದರ ಒಟ್ಟಿಗೆ ಅಖಿಲ ಭಾರತ ನಿಮ್ನ ವರ್ಗದ ಕಾರ್ಯದರ್ಶಿ ಶ್ರೀ॥ ಪಿ. ಎಸ್. ... ಜಘೋಜರು ಒಂದು ಹೇಳಿಕೆಯನ್ನಿತ್ತು ಪಂಜಾಬನ್ನು ವಿಭಜಿಸುವುದಾದರೆ ಅದನ್ನು ... ಹಿಂದೂ, ಸಿಖ್ ಮತ್ತು ನಿಮ್ನ ವರ್ಗದವರಿಗೆ ಮೂರು ... ಬೇಕೆಂದು ಅವರು ಹೇಳಿದ್ದಾರೆ

ಶ್ರೀರಾಮ ಪಟ್ಟಾಭಿಷೇಕ

ಸ್ವಂ. ವ.] ಚಾಮರಾಜನಗರ ೨೬

ಶ್ರೀರಾಮನವಮಿ ಪ್ರಯುಕ್ತ ಇದೇ ೩೦ ನೇ ತಾ॥ ನಿಂದ ಇಲ್ಲಿನ ಅಗ್ರಹಾರದಲ್ಲಿರುವ ಶ್ರೀ ಪಟ್ಟಾಭಿರಾಮ ಮಂದಿರದಲ್ಲಿ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವವು ನಡೆಯುವುದು. ಅದರ ಅಂಗವಾಗಿ ನಾಳೆಯಿಂದ ೯-೪-೪೭ ನೇ ಬುಧವಾರ ಪೂರ್ತಿ ಅನುಕ್ರಮವಾಗಿ ಈ ಕೆಳಗೆ ಕಂಡಂತೆ ಪ್ರತಿದಿನ ಸಂಜೆ ೭-೩೦ ಗಂಟೆಗೆ ಕಾರ್ಯಕ್ರಮಗಳು ಜರುಗುವುವು:- ೨೮ ನೇ ಶುಕ್ರವಾರ ಸಿಲ್ಕ್ ಫಿಲೇಚರ್ ಮ್ಯಾನೇಜರ್ ಎಸ್. ಟಿ. ರಂದ ಶ್ರೀ ಜಿ. ಕೃಷ್ಣಸ್ವಾಮಿಯವರಿಂದ ಪ್ರಾರಂಭೋತ್ಸವ ೩೦ ನೇ ತಾ॥ ಭಾನುವಾರ ಆಸ್ಥಾನ ಮಹಾವಿದ್ವಾನ್ ಸವಿನಯ ಎಂ. ಎಸ್. ವೆಂಕಟೇಶಶಾಸ್ತ್ರಿಗಳಿಂದ ಗೀತಾ ರಹಸ್ಯದ ಉಪನ್ಯಾಸ ಅನಂತರ ಅನುಕ್ರಮವಾಗಿ ಡಾ॥ ಎಂ. ಎಚ್. ಕೃಷ್ಣರವರಿಂದ ಭಾರತೀಯ ಸಂಸ್ಕೃತಿ-ಎಂಬ ವಿಚಾರವಾಗಿ ಉಪನ್ಯಾಸ, ವಿದ್ವಾನ್ ಆರ್. ಕೆ. ಶ್ರೀಕಂಠನ್‌ರವರ ಸಂಗೀತ-ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ಭಾರತ ವಾಚನ ಶ್ರೀ ಎಂ. ಯಾಮುನಾಚಾರ್ಯರವರಿಂದ ಆಚಾರ್ಯ ಹೃದಯ-ಎಂಬ ವಿಷಯದ ಮೇಲೆ ಉಪನ್ಯಾಸ, ಶ್ರೀ ಎ. ಸೀತಾರಾಮಯ್ಯನವರಿಂದ ಯಶೋಧರಾ ಎಂಬ ಉಪನ್ಯಾಸ, ವಿದ್ವಾನ್ ಸಂಪತ್ಕುಮಾರ್ ಮತ್ತು ಪಾರ್ಟಿಯವರಿಂದ ಸಂಗೀತ, ಶ್ರೀ ನರಸಿಂಹಮೂರ್ತಿಯವರಿಂದ ಹರಿಕಥೆ, ಶ್ರೀ ಕೃಷ್ಣಭಾಗವತರು ಮತ್ತು ಪಾರ್ಟಿಯವರಿಂದ ಸಂಗೀತ, ಶ್ರೀ ಎಸ್. ಶಿವರಾಮಶಾಸ್ತ್ರಿಗಳವರಿಂದ ಕನ್ನಡ ಕಾವ್ಯ ವಾಚನ ಮತ್ತು ೯ ನೇ ಬುಧವಾರ ವಿದ್ವಾನ್ ರಾಘವೇಂದ್ರಾಚಾರ್ಯರವರಿಂದ ಶ್ರೀರಾಮಾವತಾರದ ಉಪನ್ಯಾಸ ಮತ್ತು ಪಟ್ಟಾಭಿಷೇಕ

ಬಿಹಾರ್ ಪೋಲೀಸರ ಮುಷ್ಕರ

ಸಭೆಗಳ ಮೇಲೆ ಹಾಕಿದ್ದ ಪ್ರತಿಬಂಧಕವನ್ನು ಉಲ್ಲಂಘಿಸಿ ಪಾಟ್ನಾ ನಗರದ ಪೋಲೀಸರು ಸಭೆಯನ್ನು ನಡೆಸಿ ತಮ್ಮ ಅಹವಾಲುಗಳನ್ನು ಹೇಳಿಕೊಳ್ಳಲು ತೊಡಗಿದ್ದವರಲ್ಲಿ ಅಲ್ಲಿಗೆ ಹೋದ ಪೋಲೀಸ್ ಸೂಪರಿಂಟೆಂಡೆಂಟರಿಗೂ ಮತ್ತು ಇತರ ನೌಕರರಿಗೂ ಗಾಯಗಳಾಗಿ ಮಿಲಿಟರಿಯವರು ಬಂದು ಪೋಲೀಸಿನವರ ಸ್ವಾಧೀನದಲ್ಲಿದ್ದ ಶಸ್ತ್ರಗಳನ್ನು ವಶಪಡಿಸಿಕೊಂಡು ನಗರದ ರಕ್ಷಣೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ ಇಡೀ ಪ್ರಾಂತ್ಯದ ಪೋಲೀಸಿನವರೆಲ್ಲರೂ ಮುಷ್ಕರ ಹೂಡಿದ್ದಾರೆ. ಪೋಲೀಸಿನವರಿಗೂ, ಮಿಲಿಟರಿಯವರಿಗೂ ಉಂಟಾದ ಘರ್ಷಣೆಯಲ್ಲಿ ಒಬ್ಬ ಪೋಲೀಸಿನವನೂ ಇಬ್ಬರು ನಾಗರಿಕರೂ ಮಡಿದಿರುವರು. ಪೋಲೀಸಿನವರ ಈ ಅವಿಧೇಯ ವರ್ತನೆಯನ್ನು ಮಟ್ಟ ಹಾಕಲು ಬಿಹಾರ್ ಸರ್ಕಾರದವರು ಬದ್ಧಕಂಕಣರಾಗಿದ್ದಾರೆ

ಬರೋಡವು ಪ್ರತ್ಯೇಕ ಸ್ವಾತಂತ್ರ್ಯವನ್ನು ಘೋಷಿಸುವುದಿಲ್ಲ

ಬರೋಡಾ ಸಂಸ್ಥಾನವು ಪ್ರತ್ಯೇಕ ಸ್ವತಂತ್ರ ರಾಜ್ಯವಾಗಿರಲು ಬಯಸುವುದಿಲ್ಲ; ಕೇಂದ್ರ ಸರ್ಕಾರದೊಡನೆ ಸೇರಿ ಬಲಯುತವಾದ ಅಖಂಡ ಭಾರತದ ಸ್ಥಾಪನೆಗಾಗಿ ದುಡಿಯ ... ಎಂದು ... ದಿವಾನರಾದ ಸರ್ ಮಿತ್ತರ್‌ರವರು ಹೇಳಿರುವರು.

ಸಾಧ್ವಿ

ತಾ॥ ೨೭-೩-೪೭ ಗುರುವಾರ

ಜಿಲ್ಲಾ ಬೋರ್ಡು ಚುನಾವಣೆಗಳ ಅವ್ಯವಸ್ಥೆ

ಬರುವ ತಿಂಗಳಲ್ಲಿ ಜಿಲ್ಲಾ ಬೋರ್ಡುಗಳ ಚುನಾವಣೆಯು ನಡೆಯುವುದಷ್ಟೆ. ಇದರ ಸಂಬಂಧದಲ್ಲಿ ಹಾಸನದಿಂದ ಬಂದಿರುವ ವರದಿಯು ಅತ್ಯಂತ ಕಳವಳಕ್ಕೆ ಆಸ್ಪದವನ್ನುಂಟುಮಾಡಿರುತ್ತದೆ. ಚುನಾವಣಾಧಿಕಾರಿಗಳಾದ ಡೆಪ್ಯುಟಿ ಕಮೀಷನರವರು ಹನ್ನೊಂದು ಜನ ಉಮೇದುವಾರರ ಹೆಸರನ್ನು ಹೊಡೆದು ಹಾಕಿರುವುದಾಗಿ ತಿಳಿದು ಬಂದಿದೆ. ಇದರ ಪೈಕಿ ಮೂವರು ಸ್ವತಂತ್ರರು, ಎಂಟು ಜನರು ಕಾಂಗ್ರೆಸ್ಸಿನವರು. ಉಮೇದುವಾರರ ಹೆಸರಿನ ಅಕ್ಷರಗಳಲ್ಲಿ ಚುಕ್ಕೆಯು ಸರಿಯಾಗಿ ಬರೆಯಲ್ಪಟ್ಟಿರಲಿಲ್ಲವೆಂಬುದೂ ಇದಕ್ಕೆ ಮುಖ್ಯ ಕಾರಣ. ಉಮೇದುವಾರಿಕೆಯ ಅರ್ಜಿಯಲ್ಲಿ ತಂದೆಯ ಹೆಸರನ್ನು ಬರೆದಿಲ್ಲವೆಂಬುದು ಮತ್ತೊಂದು ಕಾರಣ.

ಹೀಗೆ ಅರ್ಜಿಗಳನ್ನು ನಿರಾಕರಿಸುವುದರಿಂದ ಐದು ತಾಲ್ಲೂಕುಗಳಲ್ಲಿ ಚುನಾವಣೆಯೇ ನಡೆಯದಂತಾಗಿದೆ. ಇನ್ನು ಮೂರು ತಾಲ್ಲೂಕುಗಳಲ್ಲಿ ಮಾತ್ರ ಅದು ನಡೆಯುತ್ತದೆ. ಹೀಗೆ ಹನ್ನೊಂದು ಜನರ ಹೆಸರನ್ನು ಹೊಡೆದು ಹಾಕಿ ಚುನಾವಣೆಯು ನಡೆಯದಂತೆ ಮಾಡಿರುವ ಅಂಶವು ವಿಶೇಷ ಕೋಲಾಹಲವನ್ನುಂಟುಮಾಡಿರುತ್ತದೆ.

ಹಾಸನ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಲಕ್ಷ್ಮಪ್ಪಗೌಡರು ಶ್ರೀಮನ್ಮಹಾರಾಜರವರಿಗೂ, ದಿವಾನರಿಗೂ ತಂತಿಯನ್ನು ಕಳುಹಿಸಿ ಈ ವಿಷಯವನ್ನು ಕೂಡಲೇ ಕ್ರಮಪಡಿಸಬೇಕೆಂದು ಕೋರಿದ್ದಾರೆ. ಈಗ ನಡೆಯಲಿರುವ ಜಿಲ್ಲಾ ಬೋರ್ಡು ಚುನಾವಣೆಗಳ ಪ್ರಕರಣದಲ್ಲಿ ಎಲ್ಲರ ಗಮನವೂ ಈಗ ಹಾಸನದ ಕಡೆಗೆ ತಿರುಗಿರುತ್ತದೆ. ಇನ್ನು ಇತರ ಜಿಲ್ಲೆಗಳ ಪರಿಸ್ಥಿತಿಯು ಹೇಗಿರುವುದೆಂಬುದು ವರದಿಯಾಗಿಲ್ಲ.

ಚುನಾವಣೆಗಳ ಸಂಬಂಧವಾದ ಅವ್ಯವಸ್ಥೆಗಳಿಗೆ ಹಾಸನ ಜಿಲ್ಲೆಯು ತವರೂರೆಂದು ಕಂಡು ಬರುತ್ತದೆ. ಹಿಂದೆ ಹೊಸ ಸುಧಾರಣೆಗಳು ಜಾರಿಗೆ ಬಂದಾಗ ನಡೆದ ಚುನಾವಣೆಗಳಲ್ಲಿ ಹಾಸನವು ಬಹಳ ಟೀಕೆಗೆ ಗುರಿಯಾಗಿತ್ತು. ಚುನಾವಣಾ ಪೆಟ್ಟಿಗೆಗಳನ್ನೂ ಸಹ ಒಡೆದು ಹಾಕಿ ಮತದಾನದ ಪವಿತ್ರವಾದ ರಹಸ್ಯವನ್ನು ಬಯಲು ಮಾಡಿದ ಅಪವಾದನೆಗೆ ಗುರಿಯಾಗಿತ್ತು. ಆಗಲೂ ಸಹ ವಿಶೇಷ ಕೋಲಾಹಲವು ಎದ್ದು ಕೋರ್ಟುಗಳ ವರೆಗೂ ದೂರು ಹೋಗಿದ್ದಿತು. ಹೊಸದಾಗಿ ಪ್ರಭುಗಳಿಂದ ಕರುಣಿಸಲ್ಪಟ್ಟ ಸುಧಾರಣೆಗಳನ್ನು ಮೊದಲನೆಯ ಬಾರಿ ಜಾರಿಗೆ ತರುವಾಗಲೇ ಉಂಟಾದ ಇಂತಹ ರಹಸ್ಯ ಭಂಗವು ಇನ್ನು ಮುಂದೆ ಉಂಟಾಗಲಾರದೆಂಬ ಭರವಸೆಯು ಮೂಡಿತ್ತು. ಆದರೆ ಪುನಃ ಹಾಸನವು ಚುನಾವಣೆಯ ಗೊಂದಲದ ರಂಗಕ್ಕೆ ಇಳಿದಿರುತ್ತದೆ.

ರಾಜಕೀಯ ಜೀವನದಲ್ಲಿ ಮಾನವನಿಗೆ ಮಾನ, ಪ್ರಾಣ, ಧನಗಳಷ್ಟೇ ಪವಿತ್ರವಾದ ವಸ್ತುವು ಮತದಾನದ ಸ್ವಾತಂತ್ರ್ಯವೆಂಬ ತತ್ವವನ್ನು ಸಕಲ ನಾಗರಿಕ ಜನಾಂಗಗಳೂ ಅಂಗೀಕರಿಸಿರುತ್ತವೆ. ಓಟಿನ ರಹಸ್ಯವನ್ನು ಸಂರಕ್ಷಿಸುವುದು ನಿಷ್ಪಕ್ಷಪಾತದ ಪ್ರಭುತ್ವದವರ ಹಿರಿಯ ಹೊಣೆ. ಓಟಿನ ಸ್ವಾತಂತ್ರ್ಯ ಮತ್ತು ಅದರ ಅಂತರಂಗದ ರಕ್ಷಣೆಯ ಭರವಸೆ ಇಲ್ಲದಿರುವ ಚುನಾವಣೆಯು ಒಂದು ನಕಲಿ ನಾಟಕದಂತೆಯೇ ಸರಿ. ತನಗೆ ಸೂಕ್ತ ತೋರಿದಂತೆ, ತನ್ನ ಮತವನ್ನು ಚಲಾಯಿಸಲು ಸಾರ್ವಜನಿಕರಿಗೆ ಇರುವ ಸ್ವಾತಂತ್ರ್ಯವೇ ಪ್ರಜಾಪ್ರಭುತ್ವದ ಲಕ್ಷಣ. ಇದಕ್ಕೆ ಇಲ್ಲದ, ಸಲ್ಲದ ಸಣ್ಣ ಪುಟ್ಟ ಕಾರಣಗಳಿಂದ ಅಡಚಣೆಗಳನ್ನುಂಟು ಮಾಡುವುದು ನಿರಂಕುಶಾಡಳಿತದ ಪರಮಾವಧಿ.

ಸುಧಾರಣೆಗಳ ಆರಂಭದಲ್ಲಿ ಕೇವಲ ಅಲ್ಪ ಕಾರಣಗಳಿಗಾಗಿ ಉಮೇದುವಾರರ ಅರ್ಜಿಗಳನ್ನು ನಿರಾಕರಿಸಿದ್ದುದು ಎಲ್ಲರ ನೆನಪಿನಲ್ಲಿಯೂ ಇದೆ. ವಯಸ್ಸು, ಹುಟ್ಟಿದ ತಾರೀಖು, ತಂದೆಯ ಹೆಸರು, ಸಂಪೂರ್ಣ ವಿಳಾಸ, ಗಂಡೋ ಅಥವಾ ಹೆಣ್ಣೋ ಎಂಬವೇ ಮುಂತಾದ ಅಂಶಗಳ ಬಗ್ಗೆ ಸರಿಯಾದ ವಿವರಗಳನ್ನು ಕೊಟ್ಟಿರಲಿಲ್ಲವೆಂಬ ನೆಪದ ಮೇಲೆ ಅನೇಕ ಅರ್ಜಿಗಳು ಆಗ ತಳ್ಳಿಹಾಕಲ್ಪಟ್ಟಿದ್ದುವು. ಆದರೆ ಇಂದು ಹಾಸನದಲ್ಲಿ ನಡೆದಿರುವುದು ಅವೆಲ್ಲವನ್ನೂ ಮೀರಿಸುತ್ತದೆ. ಚೆ-ಎಂಬ ಅಕ್ಷರದಲ್ಲಿ ಚುಕ್ಕೆಯು ಸರಿಯಾಗಿರಲಿಲ್ಲವೆಂಬ ಕಾರಣದ ಮೇಲೆ ಅರ್ಜಿಯು ತಳ್ಳಲ್ಪಟ್ಟಿದೆ. ಇದು ಚುನಾವಣೆಯ ಇತಿಹಾಸದಲ್ಲೇ ಅತ್ಯಂತ ಕೋಲಾಹಲಕರವಾದ ಪ್ರಸಂಗ. ಇಂತಹ ಕಾರಣಗಳಿಂದ ಹಲವಾರು ತಾಲ್ಲೂಕುಗಳಲ್ಲಿ ಚುನಾವಣೆಯೇ ನಡೆಯದಂತೆ ಮಾಡಿರುವುದು ಚುನಾವಣೆಯ ಮಹತ್ತರವಾದ ಉದ್ದೇಶಕ್ಕೇ ಭಂಗವನ್ನುಂಟುಮಾಡಿರುತ್ತದೆ. ಹೀಗೆ ಉಮೇದುವಾರಿಕೆ ಅರ್ಜಿಗಳನ್ನು ಮೂಲೆಗೊತ್ತುತ್ತಾ ಹೋದರೆ ಯಾವುದಾದರೂ ಅರ್ಜಿಗಳು ಸಂಪೂರ್ಣವಾಗಿ ಸಮರ್ಪಕವಾಗಿರಲು ಸಾಧ್ಯವೇ?-ಎಂಬ ಸಂಶಯವೂ ಉದ್ಭವಿಸುವುದು.

ಇಂತಹ ಪ್ರವರ್ತನೆಗಳಿಂದ ಉಮೇದುವಾರರುಗಳು ಮುಂದೆ ಕೊನೆ ಮೊದಲಿಲ್ಲದ ವ್ಯವಹಾರದಲ್ಲಿ ತೊಡಗಲು ಕಾರಣವಾಗುವರು. ಶ್ರೀಮನ್ಮಹಾರಾಜರವರೇ ಸ್ವತಃ ಪರಿಶೀಲಿಸಿ ಕ್ರಮಪಡಿಸಲು ಅರ್ಹವಾದ ವಿಚಾರವಿದು. ಇಂತಹ ನಡವಳಿಕೆಗಳು ಇನ್ನು ಮುಂದೆ ನಡೆಯದಂತೆಯೂ, ಈಗ ಪ್ರತಿಬಂಧಕಕ್ಕೆ ಗುರಿಯಾಗಿರುವವರಿಗೆ ತಕ್ಕ ಪರಿಹಾರವು ದೊರೆಯುವಂತೆಯೂ, ಬರಲಿರುವ ಚುನಾವಣೆಗಳು ನಿಷ್ಕಲ್ಮಷವಾದ ವಾತಾವರಣದಲ್ಲಿ ಜರುಗುವಂತೆಯೂ ಏರ್ಪಡಿಸಲು ಮಹಾಪ್ರಭುಗಳು ಪ್ರಭುತ್ವದವರಿಗೆ ಅಪ್ಪಣೆ ಮಾಡಬೇಕೆಂದು ನಾವು ಬೇಡುತ್ತೇವೆ.

ಅಸ್ಸಾಮಿನಲ್ಲಿ ಲೀಗಿನವರ ಧಾಳಿ

ಕಳೆದ ೨೧ ನೇ ತಾರೀಖಿನಿಂದ ಅಸ್ಸಾಮಿನ ಗೋಪಿಂದಪುರದ ಹುಲ್ಲುಗಾವಲಿನ ಬಳಿಯ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆಯೆಂದು ವರದಿಯಾಗಿದೆ. ಅಲ್ಲಿ ಸುಮಾರು ೬ ಸಹಸ್ರ ಮಂದಿ ಮುಸ್ಲಿಮರು ಶಸ್ತ್ರ ಸಜ್ಜಿತರಾಗಿ ಕಾನೂನನ್ನು ಉಲ್ಲಂಘಿಸಿ ರಿಸರ್ವ್ ಫಾರೆಸ್ಟಿಗೆ ನುಗ್ಗಿ ಧಾಳಿ ನಡೆಸಿದರೆಂದು ಗೊತ್ತಾಗಿದೆ. ರಕ್ಷಕರು ಇವರ ಧಾಳಿಯನ್ನು ತಡೆಯಲು ಗುಂಡು ಹಾರಿಸಿದರೆಂದೂ ಅದರಿಂದ ಒಬ್ಬನು ಸತ್ತು ೯ ಮಂದಿಗೆ ಗಾಯವಾಗಿದೆಯೆಂದೂ ತಿಳಿದು ಬಂದಿದೆ.

ಭಾರತಕ್ಕೆ ಅಮೆರಿಕ[ಾದ] ಸಹಾಯ

ಭಾರತೀಯರು ಮುಂದೆ ... ಘೋರ ಹೋರಾಟದಲ್ಲಿ ಅಮೆರಿ... ಧ್ಯವಾದ ಸಹಾಯವನ್ನೆಲ್ಲಾ ... ದು ಅಲ್ಲಿನ ಪ್ರತಿನಿಧಿ ಸಭೆಯ ಅ... ಜೋಸೆಫ್ ಮಾರ್ಟಿನರವರು ... ಇವರು ಅಂತಸ್ತಿನಲ್ಲಿ ಅಧ್ಯಕ್ಷರಿಗೆ ... ಯುವರು. ಸ್ವಾತಂತ್ರ್ಯಕ್ಕಾಗಿ ... ಯರು ನಡೆಸಿದ ದೀರ್ಘವಾದ ... ಯಲ್ಲಿ ಅಮೆರಿಕದವರಿಗೆ ಸಂಪೂರ್ಣ ... ನುಭೂತಿಯಿರುವುದೆಂದೂ, ಭಾರ... ತಂತ್ರ್ಯವು ಬಂದಮೇಲೆ ಅದು ... ಯ ಸಾಮಾಜಿಕ ಮತ್ತು ಆರ್ಥಿ... ಯನ್ನು ಹೊಂದಲು ಅವರು ಸಕ... ಯವನ್ನೂ ನೀಡುವರೆಂದೂ ಅವ... ರುವರು.

ರಾಜಕುಮಾರಿ ಎಲಿಜ[ಬೆತ್] ವಿವಾಹ

ಬ್ರಿಟನ್ನಿನ ರಾಜಕುಮಾರಿ ಎ... ರು ಗ್ರೀಸಿನ ಮಾಜಿ ರಾಜಕುಮ... ಪ್ಪರನ್ನು ಮದುವೆಯಾಗುವುದಕ್ಕೆ ... ರ್ಕಾರವು ಆಕ್ಷೇಪಿಸುವುದಿಲ್ಲವೆಂದ... ಬಂದಿದೆ. ಇವರಿಬ್ಬರಿಗೂ ಉಂಟ... ಸ್ನೇಹ, ಪ್ರೀತಿ, ವಿಶ್ವಾಸಗಳನ್ನು ... ತ್ರಿಮಂಡಲವು ದೀರ್ಘವಾಗಿ ಚ... ದೂ, ಅವರ ಪ್ರಣಯವು ನಿಜವಾ... ದನ್ನು ಮಂತ್ರಿಗಳು ಅರಿತಿರುವರೆಂ... ಕಲಾಗಿದೆ. ಫಿಲಿಪ್ಪರು ಭಾರತದ ... ಯರಾದ ಲಾರ್ಡ್ 'ಮೌಂಟ್ ಬ[ಾಟನ್]' ... ಸೋದರಳಿಯಂದಿರು. ಇವರು ... ಬ್ಯಾಟನ್ನರೆಂಬ ಹೆಸರನ್ನಿಟ್ಟುಕೊ... ಟಿಷ್ ಪ್ರಜೆಗಳಾಗಿದ್ದಾರೆಂದು ಲ... ಗೆಜೆಟ್ಟಿನಲ್ಲಿ ಪ್ರಕಟವಾಗಿದೆ. ... ಸಂಬಂಧದಲ್ಲಿ ಅಗತ್ಯವಾಗಿ ಆಗಬೇ... ಕಾರ್ಯವಿದು. ಇದು ಮುಂದಿ... ಕ್ರಮಕ್ಕೆ ಸೀರಿಕೆಯೆಂದು ಊಹಿಸ...

ಜಿಲ್ಲಾ ಬೋರ್ಡು ಚುನಾವಣೆ

೨೮-೪-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗಿನ

ಕಾಂಗ್ರೆಸ್ ಉಮೇದುವಾರರಿಗೇ

ದಯವಿಟ್ಟು ಓಟು ಕೊಡಿ :-

ಹೆಚ್ ಲಿಂಗಪ್ಪ (ಹನಿಯಂಬಳ್ಳಿ)

ಹೆಚ್ ಎಂ. ನಾಗಪ್ಪ (ಹುಲ್ಲಹಳ್ಳಿ)

ಎಂ ಲಿಂಗಣ್ಣ (ಹೆಜ್ಜಿಗ)

ರಾಜಕಮಲ್

೨೪-೩-೪೭ ರಿಂದ ೭ ನೇ ವಾರ

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ

ಶ್ರೀ (ಕನ್ನಡ ಚಿತ್ರ)

ಇಂಪಾದ ಗಾಯನಗಳು! ಸೊಗಸಾದ ನೃತ್ಯವೇಷಗಳು!! ಮನರಂಜಕವಾದ ದೃಶ್ಯಗಳು!!!

ಚಾಮುಂಡೇಶ್ವರೀ ಟಾಕೀಸ್

೨೨-೩-೪೭ ರಿಂದ :: ಪ್ರತಿ ದಿನ ೩ ಆಟಗಳು

ಸ್ಟಾರ್ ಕಂಬೈನ್ಸ್ ಮತ್ತು ಪ್ರಗತಿಯವರ ಅಮೋಘವಾದ ತಮಿಳು ಚಿತ್ರ

— ವಿಜಯಲಕ್ಷ್ಮಿ —

ಮುಖ್ಯ ಭೂಮಿಕೆ:- ಎಂ. ವಿ ರಾಜಮ್ಮ, ಟಿ ಆರ್ ರಾಮಚಂದ್ರನ್, ಬಿ ಆರ್ ಪಂತುಲು ಮತ್ತು ಎಂ. ಜಿ ಚಂದ್ರನ್.

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ !!

ಬಿ. ಕೆಂಚಪ್ಪ ಸನ್ಸ್,

ಜವಳಿ ಅಂಗಡಿ : — : ದೊಡ್ಡ ಪೇಟೆ, ಮೈಸೂರು

RAJKAMAL, MYS[ORE]

Morning Shows fr[om] 28.3.47 for 4 days d[aily] at 10-30 a. m.

GOLGOT[HA]

A marvellous million-[dollar] Production

ಅಪೆರಾ ಟಾಕೀಸ್, ಮೈ[ಸೂರು]

೨೭-೩-೪೭ ರಿಂದ ೨ ನೇ [ವಾರ]

ಕುಂಡಲಕೇಶಿ

(ತಮಿಳು)

ಪಾತ್ರ:-ವಸಂತಕೋಕಿಲಂ, ... ಭಾಗವತರ್, ಟಿ ಆರ್ ರಾ[ಮ]ಚಂದ್ರನ್ ಮುಂತಾದವರು

Morning Shows from 2[8]... The SHANGHAI COB[RA]

Edited, printed and publi[shed by] A. R. Nagaraiah at the Sadh[vi Press,] D. Subbiah Road, Mysore

ಫೋನ್ ನಂ. 892 | ವಂದೇ ಮಾತರಂ || ಬಿಡಿ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೫—೪—೪೭ [ಸಂಚಿಕೆ ೧೯೫

ನರೇಂದ್ರ ಮಂಡಲಿಗೆ ತಿರುವಾಂಕೂರು ಇಲ್ಲ

…ಜಿಲ್ಲಾಧಿಕಾರಿಗಳು ಕ್ಷಮಾಪಣೆ ಬೇಡಬೇಕು

…ಸ್ಥಾನದ ಜಿಲ್ಲಾ ಬೋರ್ಡು ಚುನಾವಣೆ ಸಂಬಂಧದಲ್ಲಿ ಉಪಯೋಗಿಸುವಾಗ ಅವನ್ನು ಅಲ್ಲಿನ ಜಿಲ್ಲಾಧಿಕಾರಿಗಳು ತಿರಸ್ಕರಿಸಿದರ ಕಾರಣವನ್ನು ಕೊಡಬೇಕೆಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ …ಕೃಷ್ಣಗೌಡರು ಕೇಳಿದಾಗ ಜಿಲ್ಲಾಧಿಕಾರಿಗಳು ಅವರನ್ನು "ಗೆಟ್ ಔಟ್" ಎಂದರು. ಆದರಿಂದ ಶ್ರೀ ಗೌಡರು ತಮಗೆ ಅವಮಾನವಾಗಿರುವುದರಿಂದ ಅವರು ಕ್ಷಮೆ ಕೇಳಬೇಕೆಂದು ಡೆಪ್ಯುಟಿ ಕಮಿಷನರಿಗೆ ನೋಟೀಸು ಕೊಟ್ಟಿರುವುದಾಗಿ ವರದಿಯಾಗಿದೆ.

…ರಾಷ್ಟ್ರಗಳೊಡನೆ ಸಂಸ್ಥಾನಗಳ ಸಂಧಾನ

…ಭಾರತದ ಸಂಸ್ಥಾನಾಧೀಶ್ವರರು ತಮ್ಮ …ಗಳನ್ನು ಹೆಚ್ಚಿಸಿಕೊಳ್ಳುವ ಬಗ್ಗೆ …ರಾಷ್ಟ್ರಗಳೊಡನೆ ಸಂಧಾನ ನಡೆಸುತ್ತಿರುವರು ಎಂದು ಲಂಡನ್ನಿನ ವಾರ್ತೆಯೊಂದು ತಿಳಿಸಿದೆ. ೧೯೪೮ರ ಜೂನ್ ನಂತರ ಸಂಸ್ಥಾನಗಳಲ್ಲಿ ಬ್ರಿ|| ಸೈನ್ಯಗಳನ್ನಿಟ್ಟುಕೊಳ್ಳುವ ಬಗ್ಗೆ ಪ್ರಯತ್ನಗಳು ಸಾಗುತ್ತಿವೆ, …ದ ಉನ್ನತಾಧಿಕಾರಿಗಳೊಡನೆ …ಹೊಂದಿದ ಅಧಿಕಾರಿಗಳೊಡನೆ ಸಂಸ್ಥಾನಗಳ ಪ್ರತಿನಿಧಿಗಳು ಸಂಧಾನ ನಡೆಸಿದ್ದಾರೆ; ರಷ್ಯದೊಡನೆ ಸಂಚಾರ ಸಂಪರ್ಕವನ್ನು ಹೊಂದಿರುವ ಕಾಶ್ಮೀರ ಸಂಸ್ಥಾನವು ತನ್ನ ರಕ್ಷಣೆಗಾಗಿ ಬ್ರಿ|| ಸೈನ್ಯವನ್ನಿಟ್ಟುಕೊಳ್ಳಲು ನಿರ್ಧರಿಸಿದೆ; ನೇಪಾಳಕ್ಕೆ ಬ್ರಿಟನ್ನು ಆರ್ಥಿಕ ಸಹಾಯ ನೀಡಿ ಅದರೊಡನೆ ವಾಣಿಜ್ಯ ಮತ್ತು ರಾಯಭಾರತ್ವ ಒಡಂಬಡಿಕೆಯನ್ನು ಮಾಡಿಕೊಳ್ಳಲಿದೆ; …ದ ಭಾರತದ ಸಂಸ್ಥಾನಗಳು ಇಂಗ್ಲೆಂಡ್, ಅಮೆರಿಕಾ ಮತ್ತು ಆಸ್ಟ್ರೇಲಿಯಾಗಳೊಡನೆ ಒಪ್ಪಂದ ಮಾಡಿಕೊಳ್ಳಲಿವೆಯೆಂದು ಗೊತ್ತಾಗುತ್ತದೆ- ಎಂದು ಆ ವಾರ್ತೆ ತಿಳಿಸಿದೆ.

ಲಲಿತ ಕಲಾ ಸಂಘ

ಮೈಸೂರು ಸಂಸ್ಥಾನದ ಲಲಿತ ಕಲಾ ಸಂಘವು ಹಲವು ದಿನಗಳಿಂದ ಕಾರ್ಯಕ ಚಟುವಟಿಕೆಯನ್ನು ನಿಲ್ಲಿಸಿದ್ದಿತು. ಕಳೆದ …ನೇ ತಾ|| ಬೆಂಗಳೂರಿನಲ್ಲಿ ಸಂಘದ ಆಡಳಿತಾಧಿಕಾರಿಗಳ ಸಭೆ ನಡೆದು ಸಂಘದ ಕಾರ್ಯಗಳನ್ನು ಕೂಡಲೇ ಆರಂಭಿಸಬೇಕೆಂದು ನಿರ್ಧರಿಸಲಾಯಿತು. ಸಂಸ್ಥಾನದಲ್ಲಿ ಕಲಾ ಶಾಲಾ ಕೇಂದ್ರವೊಂದನ್ನು ಸ್ಥಾಪಿಸಲು ಸ್ಥಳವನ್ನು ಕೊಡುವಂತೆ ಸರ್ಕಾರವನ್ನು ಪ್ರಾರ್ಥಿಸಲಾಯಿತು. ನವರಾತ್ರಿಯಲ್ಲಿ ಕಲಾ ಪ್ರದರ್ಶನ ನಡೆಸಲು ಅವಕಾಶ ಕೊಡುವಂತೆ ಸರ್ಕಾರವನ್ನು ಕೇಳಿಕೊಳ್ಳಲಾಯಿತು. ಶ್ರೀ ಕಾಮಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಕಲಾ ತ್ರೈಮಾಸಿಕ ಪತ್ರಿಕೆಯೊಂದನ್ನು ಹೊರಡಿಸಬೇಕೆಂದೂ ನಿರ್ಧರಿಸಲಾಯಿತು.

ರಾಮೋತ್ಸವ

ಪಲ್ಲೆ ಮೊಹಲ್ಲಾ ವೀಣೆ ಶಾಮಣ್ಣನವರ ಬೀದಿಯಲ್ಲಿರುವ ಶ್ರೀನಿವಾಸ ರಾಘವೇಂದ್ರ ದೇವಾಲಯದಲ್ಲಿ ಇದೇ ೨೦ ನೇ ತಾ|| ಭಾನುವಾರದಿಂದ ೧೫ ದಿನಗಳು ಶ್ರೀರಾಮನವಮಿ ಪ್ರಯುಕ್ತ ಪೂಜಾದಿಗಳು ನಡೆಯುವುವು. ಭಕ್ತಾದಿಗಳು ದಯಮಾಡಿಸಬೇಕೆಂದು ಶ್ರೀ ಟಿ. ಕೆ ಸುಬ್ಬಾಚಾರ್ಯರು ಕೋರಿರುತ್ತಾರೆ.

ಬಂಗಾಳದಲ್ಲಿ ಹೊಸ ಮಂತ್ರಿ ಮಂಡಳಕ್ಕಾಗಿ ಒತ್ತಾಯ

ಬಂಗಾಳ ಮಂತ್ರಿಮಂಡಳವು ಗಲಭೆಗಳ ಸಂಬಂಧದಲ್ಲಿಯೂ ಮತ್ತು ಆಹಾರ …ನ ಬಗ್ಗೆಯೂ ಸರಿಯಾದ ಕಾರ್ಯಕ್ರಮವನ್ನು ಕೈಗೊಂಡಿಲ್ಲವೆಂದೂ ಆದ್ದರಿಂದ ಕೂಡಲೇ ಈಗಿರುವ ಮಂತ್ರಿಮಂಡಲವನ್ನು ರದ್ದು ಮಾಡಿ ಹೊಸ ಮಂತ್ರಿಮಂಡಲವನ್ನು ರಚಿಸಬೇಕೆಂದೂ ಒತ್ತಾಯಪಡಿಸಿ ಅಲ್ಲಿನ ಶಾಸನ ಸಭೆಯ ೮೦ ಲೀಗ್ ಸದಸ್ಯರು ಅ|| ಭಾ|| ಮುಸ್ಲಿಂ ಲೀಗಿಗೂ, ಮಿ|| ಜಿನ್ನಾರವರಿಗೂ ಪತ್ರ ಬರೆದಿರುವರೆಂದು ವರದಿಯಾಗಿದೆ.

ಪರ್ಷಿಯಾದಲ್ಲಿ ರಷ್ಯದ ಕಾಳ ಸಂತೆ

ಟೆಹರಾನಿನಲ್ಲಿ ರಷ್ಯದ ವ್ಯಾಪಾರದ ಏಜೆನ್ಸಿಯು ಸುಮಾರು ಹತ್ತು ಸಾವಿರ ಟನ್ ಸಕ್ಕರೆಯನ್ನು ಕಿಲೋಗ್ರಾಂ ಒಂದಕ್ಕೆ ೨೪ ಶಿಲಿಂಗುಗಳಂತೆ ಕಾಳಸಂತೆಯಲ್ಲಿ ಮಾರಿ ಸುಮಾರು ೩೦ ಲಕ್ಷ ಪೌಂಡುಗಳಷ್ಟು ಲಾಭ ಗಳಿಸಿರುವುದಾಗಿ ಅಲ್ಲಿನ ಸುದ್ದಿಯೊಂದು ತಿಳಿಸುತ್ತದೆ. ಇದೇ ರೀತಿ ಹತ್ತಿ ಬಟ್ಟೆಯಿಂದಲೂ ಸುಮಾರು ೩ ಕೋಟಿ ಪೌಂಡುಗಳಷ್ಟು ಲಾಭ ಸಂಪಾದಿಸಿರುವುದಾಗಿ ಹೇಳಲಾಗಿದೆ.

ಶೇ. ೭೪ ಹುದ್ದೆಗಳು ಮುಸ್ಲಿಮರಿಗೆ

ಸಿಂಧು ಪ್ರಾಂತ್ಯದಲ್ಲಿ ಶೇಕಡ ೭೪ ರಷ್ಟು ಹುದ್ದೆಗಳನ್ನು ಮುಸ್ಲಿಮರಿಗೂ ಉಳಿದುದನ್ನು ಮುಸ್ಲಿಮೇತರರಿಗೂ ಕೊಡಬೇಕೆಂಬ ನಿರ್ಣಯವನ್ನು ಮುಸ್ಲಿಂಲೀಗ್ ಪಕ್ಷದವರು ಅಲ್ಲಿ ಶಾಸನ ಸಭೆಯಲ್ಲಿ ತಂದರು. ಅದು ಬಹುಮತದಿಂದ ಅಂಗೀಕಾರವಾಯಿತು. ಈ ಸಮಯದಲ್ಲಿ ಕಾಂಗ್ರೆಸ್ ಪಕ್ಷದವರು ಸಭೆಯಲ್ಲಿ ಭಾಗವಹಿಸಲಿಲ್ಲ.

ಮದ್ರಾಸ್ ಪ್ರಧಾನಿಯ ಮೌನ ಮತ್ತು ಉಪವಾಸ

ಮೊನ್ನೆ ಕೃತ್ತಿಕೆ ಪ್ರಯುಕ್ತ ಮದ್ರಾಸಿನ ಪ್ರಧಾನಿ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯಾರ್‌ರವರು ತಮ್ಮ ಪದ್ಧತಿಯಂತೆ ಮೌನ ಮತ್ತು ಉಪವಾಸ ವ್ರತಗಳನ್ನು ಆಚರಿಸಿದುದರಿಂದ ಶಾಸನ ಸಭೆಯ ಕಾರ್ಯಕಲಾಪಗಳಲ್ಲಿಯೂ ಮತ್ತು ಸರ್ಕಾರಿ ಕೆಲಸ ಕಾರ್ಯಗಳಲ್ಲಿಯೂ ಭಾಗವಹಿಸಲಿಲ್ಲ. ಸಭಾನಾಯಕರಾದ ಶ್ರೀ ಟಿ ಸುಬ್ರಹ್ಮಣ್ಯರವರು ಅವರ ಪರವಾಗಿ ಪ್ರಶ್ನೆಗಳಿಗೆ ಉತ್ತರವಿತ್ತರು.

ನರೇಂದ್ರ ಮಂಡಲಿಗೆ ತಿರುವಾಂಕೂರಿನ ಬಹಿಷ್ಕಾರ

ಭೂಪಾಲ್ ನವಾಬರ ನಾಯಕತ್ವದಲ್ಲಿ ಕೆಲಸ ನಡೆಸುತ್ತಿರುವ ನರೇಂದ್ರ ಮಂಡಲಿಯಿಂದ ತಾವು ದೂರವಾಗಿರುವುದಾಗಿ ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಹೇಳಿರುವರು. ಅದಕ್ಕೆ ಪೂರ್ವ ಪೀಠಿಕೆಯಾಗಿ ನಾಳೆ ಬೊಂಬಾಯಿಯಲ್ಲಿ ಆರಂಭವಾಗುವ ನರೇಂದ್ರ ಮಂಡಲದ ಸಮಿತಿಗಳಿಗೂ, ಮಂತ್ರಿಗಳ ಸಭೆಗಳಿಗೂ ತಾವು ಗೈರು ಹಾಜರಾಗುವುದಾಗಿ ಅವರು ತಿಳಿಸಿರುವರು. ಹಿಂದೂಸ್ಥಾನವು ಒಂದೇ ಸಂಯುಕ್ತ ರಾಷ್ಟ್ರವಾಗಿರಬೇಕೆಂದು ಅವರು ಒತ್ತಿ ಹೇಳಿರುವರು. ಹಿಂದೂಸ್ಥಾನದಲ್ಲಿ ಬಲವಾದ ಕೇಂದ್ರ ಸರ್ಕಾರವು ಸ್ಥಾಪಿತವಾದೊಡನೆಯೇ ತಿರುವಾಂಕೂರಿನ ಸಂಪೂರ್ಣ ಸ್ವಾತಂತ್ರ್ಯದ ವಾದವನ್ನು ತಾವು ಬಿಟ್ಟುಕೊಡುವುದಾಗಿಯೂ ಸರ್ ಸಿ. ಪಿ ಯವರು ತಿಳಿಸಿರುವರು. ಮುಸ್ಲಿಂ ಲೀಗನ್ನು ತೃಪ್ತಿಪಡಿಸಲು ಭಾರತದಲ್ಲಿ ಒಂದು ದುರ್ಬಲ ಸರ್ಕಾರವಿರುವುದಾದರೆ ದಕ್ಷಿಣ ಭಾರತದಲ್ಲಿ ಮದರಾಸ್, ಮೈಸೂರು ಮತ್ತು ಕೊಚ್ಚಿ ಸಂಸ್ಥಾನಗಳಿಂದ ಕೂಡಿದ ಒಂದು ಹೊಸ ಸಂಯೋಜನೆಯನ್ನೂ ಸಹ ತಾವು ಅನುಮೋದಿಸುವುದಾಗಿ ಅವರು ಹೇಳಿರುವರು.

ಸಕಲರಿಗೂ ಸಮಾನತೆ

ದೆಹಲಿಯಲ್ಲಿ ನಡೆಯುತ್ತಿರುವ ಅಂತರ ಏಷ್ಯಾ ರಾಷ್ಟ್ರಗಳ ಸಮ್ಮೇಳನವು ಮೊನ್ನೆ ಪ್ರಾಮುಖ್ಯವಾದ ಒಂದು ನಿರ್ಣಯವನ್ನು ಅಂಗೀಕರಿಸಿತು. ಎಲ್ಲಾ ನಾಗರಿಕರಿಗೂ ಕಾನೂನಿನ ಪ್ರಕಾರ ಸಮಾನತ್ವವಿರತಕ್ಕದ್ದು, ಪ್ರತಿಯೊಬ್ಬ ಪ್ರಜೆಗೂ ಮತ ಸಂಬಂಧವಾದ ಸ್ವಾತಂತ್ರ್ಯವಿರತಕ್ಕದ್ದು, ಯಾವ ಒಂದು ಜನಾಂಗಕ್ಕೇ ಆಗಲೀ ಸಾಮಾಜಿಕ ಅಡಚಣೆಯಿರಕೂಡದು, ವಿದೇಶದಿಂದ ಬಂದು ನೆಲಸಿರತಕ್ಕವರಿಗೂ ಸಹ ನ್ಯಾಯ ನಿರ್ವಹಣೆಯಲ್ಲಿ ಸಮಾನತ್ವವಿರತಕ್ಕದ್ದು- ಎಂಬುದೇ ನಿರ್ಣಯದ ಉದ್ದೇಶ.

ಒಂದು ಪೆನ್ನಿಗೆ ೭೧ ಸಾವಿರ ಪೌಂಡು

ಆಬರ್‌ಡೀನಿನ ಒಬ್ಬ ಬಸ್ ಡ್ರೈವರ್ ಎಡ್ವರ್ಡ್ ಕಿಂಗ್ಸ್ ಎಂಬುವನು ೧೪ ಫುಟ್‌ಬಾಲ್ ಪಂದ್ಯಗಳ ಫಲಿತಾಂಶದ ಭವಿಷ್ಯದ ಮೇಲೆ ಒಂದು ಪೆನ್ನಿ ಬಾಜಿ ಕಟ್ಟಿ ೭೧೪೪೭ ಪೌಂಡುಗಳನ್ನು ಗೆದ್ದು … ಕಾರ್ಯ … ವರದಿಯಾಗಿದೆ.

ಗಾಂಧಿ-ಜಿನ್ನಾ-ವೈಸರಾಯ್ ಸಮಾಲೋಚನೆಯೇ?

ವೈಸರಾಯರೊಡನೆಯೂ, ಮಹಾತ್ಮಗಾಂಧಿಯವರೊಡನೆಯೂ ಮಾತುಕತೆ ನಡೆಸಲು ಬಂದಿದ್ದ ಆಹ್ವಾನವನ್ನು ತಾವು ಅಂಗೀಕರಿಸಿರುವುದಾಗಿ ಮಿ|| ಜಿನ್ನಾರವರು ತಮ್ಮ ಕಾರ್ಯದರ್ಶಿಗಳ ಮೂಲಕ ಪ್ರಕಟಪಡಿಸಿರುತ್ತಾರೆ. ಈ ಸಭೆಗಳಲ್ಲಿ ಭಾಗವಹಿಸಲು ತಾವು ಸದ್ಯದಲ್ಲಿಯೇ ಬೊಂಬಾಯಿನಿಂದ ದೆಹಲಿಗೆ ತೆರಳುವುದಾಗಿಯೂ ಸಹ ಅವರು ತಿಳಿಸಿದ್ದಾರೆ.

ಯಾವುದಾದರೂ ಕಾರಣದಿಂದ ಜಿನ್ನಾರವರು ದೆಹಲಿಗೆ ಬರಲು ಆಗದಿದ್ದರೆ, ಯಾವ ಸ್ಥಳದಲ್ಲಿ ಅವರನ್ನು ವೈಸರಾಯರು ಕಾಣಬಹುದೆಂಬುದನ್ನು ತಿಳಿಸುವಂತೆ ಅವರನ್ನು ಕೋರಲಾಗುವುದೆಂದೂ ಸಹ ವರದಿಯಾಗಿದೆ.

ಬಿಹಾರ್ ಪೋಲೀಸರ ಮುಷ್ಕರ ಹರಡುತ್ತಿದೆ

ಪಾಟ್ನಾ ನಗರದಲ್ಲಿ ಆರಂಭವಾದ ಪೋಲೀಸರ ಮುಷ್ಕರವು ಬಿಹಾರ್ ಪ್ರಾಂತ್ಯದ ಇತರ ಜಿಲ್ಲೆಗಳಿಗೂ ವ್ಯಾಪಿಸಿದೆ. ಗಯೆಯ ಪರಿಸ್ಥಿತಿ ಹತೋಟಿ ಮೀರಿದೆ. ರಿಜರ್ವ್ ಪೋಲೀಸಿನವರು ಅವರ ನಿವಾಸಗಳಿಂದ ಹೊರಗೆ ಬರದಂತೆ ಪ್ರತಿಬಂಧಿಸಲ್ಪಟ್ಟಿದ್ದಾರೆ. ಪೋಲೀಸಿನವರಿಗೂ ಭೂಸೇನಾ ಪಡೆಯವರಿಗೂ ಬಂದೂಕಿನ ಕದನವೇ ನಡೆಯಿತು. ಈಚೆಗೆ ಪರಿಸ್ಥಿತಿ ಹತೋಟಿಗೆ ಬಂದಿದೆ. ದಂಗೆಕೋರರಾದ ಪೋಲೀಸಿನವರನ್ನು ಅಡಗಿಸುವುದಾಗಿ ಅಲ್ಲಿನ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಅವರ ಮೇಲೆ ಸೈನ್ಯವನ್ನೂ ಸಹ ಉಪಯೋಗಿಸುವುದಾಗಿ ತಿಳಿಸಿದ್ದಾರೆ.

ಮೇ ೧ ಕ್ಕೆ ಸತ್ಯಾಗ್ರಹ

ಸ್ವಂ. ವಾ ಪ್ರ.] ಬೆಂಗಳೂರು ೨೪

ಬರುವ ಮೇ ಒಂದನೇ ತಾ|| ನಿಂದ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಗೊತ್ತುಮಾಡುವ ರೀತಿಯಲ್ಲಿ ಅಹಿಂಸಾತ್ಮಕ ಸತ್ಯಾಗ್ರಹ ಚಳುವಳಿಯನ್ನು ಹೂಡಲು ಶಿಫಾರ್ಸು ಮಾಡುವ ನಿರ್ಣಯವು ನಾಳೆ …ಪೇಟೆಯಲ್ಲಿ ಆರಂಭವಾಗುವ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಮುಂದೆ ಕಾರ್ಯಕಾರಿ ಮಂಡಲಿಯಿಂದ ಮಂಡಿಸಲ್ಪಡುವುದು.

ಬೆಂಗಳೂರಿನಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ಈ ಬಗ್ಗೆ ದೀರ್ಘವಾದ ನಿರ್ಣಯವನ್ನು ಮಾಡಿರುತ್ತದೆ. ಬ್ರಿಟಿಷರು ಭಾರತವನ್ನು ಬಿಟ್ಟುಹೋಗುವುದಾಗಿ ಘೋಷಣೆ ಮಾಡಿರುವ ಅಂಶವನ್ನು ಉಲ್ಲೇಖಿಸಿ ನಮ್ಮ ಸಂಸ್ಥಾನವು ಇನ್ನೂ ಹಿಂದೆ ಬಿದ್ದಿರುವುದನ್ನು ಟೀಕಿಸಿರುತ್ತದೆ. ಶ್ರೀಮನ್ಮಹಾರಾಜರವರ ಸಂದೇಶವು ಬಂದ ನಂತರ ನಡೆದಿರುವ ವಿದ್ಯಮಾನಗಳು ಅಸಮರ್ಪಕವೂ, ಪ್ರಜಾ ಪ್ರಭುತ್ವ ವಿರುದ್ಧವೂ ಆಗಿರುವುದಾಗಿ ಸೂಚಿಸಲಾಗಿದೆ.

ಗೋಪಾಲರಾಯರ ಆಸ್ತಿ

ಧರ್ಮರಕ್ಷಕರಾದ ಗೋಪಾಲರಾಯರ ಆಸ್ತಿಗಳು ಇನ್ನೂ ವಶೀಕರವಾಗಿ ಬಿಟ್ಟಿಲ್ಲವೆಂದೂ, ಅದರ ಬಗ್ಗೆ ಅವರನ್ನು ತನಿಖೆ ಮಾಡಬೇಕೆಂದೂ ಶ್ರೀ ಎಸ್. ಎ ಗೋಪಾಲರಾಯರೇ ಮುಂತಾದವರ ಪರವಾಗಿ ಬಂದಿದ್ದ ಅರ್ಜಿಯನ್ನು ಜಿಲ್ಲಾ ನ್ಯಾಯಾಧೀಶರು ನಿನ್ನೆ ತಳ್ಳಿಹಾಕಿದರು. ಈಗಾಗಲೇ ಧರ್ಮರಕ್ಷಕರ ಆಸ್ತಿಗಳು … ಸರ್ಕಾರದಲ್ಲಿರುವುದರಿಂದ ಇದು ಅಗತ್ಯವಿಲ್ಲ … ತಿಳಿಸಿರುವರು.

ಸಾಧ್ವಿ

ತಾ॥ ೨೮-೩-೪೭ ಶುಕ್ರವಾರ

ದಂಡು ಮೈಸೂರಿಗೆ

ಬೆಂಗಳೂರು ದಂಡಿನ ಪ್ರದೇಶವು ಬರುವ ಮೇ ತಿಂಗಳಿನಿಂದ ಮೈಸೂರು ಸಂಸ್ಥಾನಕ್ಕೆ ಸೇರುವುದೆಂದು ತಿಳಿದುಬಂದಿದೆ ಇದೊಂದು ಸಂತೋಷದ ಸಂಗತಿ. ಸುಮಾರು ಅರ್ಧ ಶತಮಾನಕ್ಕಿಂತಲೂ ಹೆಚ್ಚು ಕಾಲ ನಡೆಸಿದ ಪ್ರಯತ್ನವು ಇಂದು ಕೈಗೂಡಿದೆ

ಬ್ರಿಟಿಷರು ಹಿಂದೂಸ್ಥಾನವನ್ನೇ ಬಿಟ್ಟು ತೆರಳಲಿರುವರು ಸಂಸ್ಥಾನಗಳಲ್ಲಿರುವ ರೆಸಿಡೆನ್ಸಿಗಳೆಲ್ಲವೂ ರದ್ದಾಗುವುವು ಹೀಗಿರುವಲ್ಲಿ ದಂಡಿನ ಪ್ರದೇಶಗಳು ಆಯಾ ಸಂಸ್ಥಾನಗಳಿಗೆ ಸೇರಿಹೋಗುವುದು ಸಹಜವಾಗಿಯೇ ಇರುತ್ತದೆ. ಕಳೆದ ಇಪ್ಪತ್ತೈದು ವರ್ಷಗಳಿಂದಲೂ ದಂಡನ್ನು ಸೇರಿಸಿಕೊಳ್ಳಲು ನಮ್ಮ ಸರ್ಕಾರದವರು ವಿಶ್ವಪ್ರಯತ್ನವನ್ನೇ ಮಾಡಿದರು. ಸರ್ ಮಿರ್ಜಾರವರಂತೂ ತಮಗೆ ತೋರಿದ ಮಾರ್ಗಗಳನ್ನೆಲ್ಲಾ ಅನುಸರಿಸಿದರು. ಸರ್ ಆರ್ಕಾಟ್‌ರವರು ಬರಿಯ ಆಶಾಭಾವನೆಯಲ್ಲಿ ಮಾತ್ರ ತೊಡಗಿದ್ದರು ಈ ಪ್ರಯತ್ನಗಳಿಗೆ ತಕ್ಕ ಫಲವು ಇದುವರೆಗೆ ದೊರೆತಿರಲಿಲ್ಲ

ಈಗ ಸ್ವಾತಂತ್ರ್ಯದ ಪ್ರವಾಹವು ಭೋರ್ಗರೆಯುತ್ತಾ ಬರುತ್ತಿದೆ. ಜನರು ನಿರೀಕ್ಷಿಸಿದುದಕ್ಕಿಂತಲೂ ವೇಗವಾಗಿ ವಿದ್ಯಮಾನಗಳು ಚಲಿಸುತ್ತಿವೆ. ಪ್ರಜೆಗಳ ಆಕಾಂಕ್ಷೆಗಳು ಶೀಘ್ರವಾಗಿಯೇ ಈಡೇರುವ ಕಾಲವು ಬಂದಿರುತ್ತದೆ ಇವಕ್ಕೆಲ್ಲಾ ಪೂರ್ವ ರಾಷ್ಟ್ರಗಳಲ್ಲಿ ಉಂಟಾಗಿರುವ ನವಜಾಗೃತಿ ಮತ್ತು ಸಂಘಟಿತ ಕಾರ್ಯಕ್ರಮಗಳೇ ಮುಖ್ಯ ಕಾರಣ. ಪರಕೀಯರು ತಮ್ಮ ಆಕ್ರಮಣ ನೀತಿಯನ್ನು ಬಿಟ್ಟುಕೊಟ್ಟು ಸ್ಥಳೀಯ ಪ್ರಜೆಗಳೊಡನೆ ಸ್ನೇಹ, ಸೌಹಾರ್ದಗಳಿಂದ ವರ್ತಿಸಲು ಹವಣಿಸುತ್ತಿದ್ದಾರೆ ಬೆಂಗಳೂರು ದಂಡಿನ ಪ್ರದೇಶವು ಮೈಸೂರಿಗೆ ಸೇರುವುದಾದರೂ ಈ ದೊಡ್ಡ ಆಂದೋಳನದ ಪ್ರಭಾವದ ಒಂದು ಅಂಗವೇ ಎಂದು ಧಾರಾಳವಾಗಿ ಹೇಳಬಹುದು ಇದಕ್ಕಾಗಿ ಮೈಸೂರಿನ ಪ್ರಜೆಗಳೂ, ಪ್ರಭುತ್ವದವರೂ ನಮ್ಮ ನೆರೆಯ ಸೋದರರೆಲ್ಲರಿಗೂ ಅತ್ಯಂತ ಋಣಿಗಳಾಗಿರಬೇಕು

ಕೇವಲ ಸಿವಿಲ್ ಪ್ರದೇಶಗಳನ್ನು ಮಾತ್ರ ಮೈಸೂರಿಗೆ ಕೊಟ್ಟು ಮಿಲಿಟರಿ ಸ್ಥಾನಗಳನ್ನು ಬ್ರಿಟಿಷರು ತಮ್ಮ ವಶದಲ್ಲಿಯೇ ಇಟ್ಟುಕೊಳ್ಳುವರೆಂಬ ವಾರ್ತೆಯು ಹಿಂದೆ ಹರಡಿತ್ತು. ಆದರೆ ಈಗ ಬ್ರಿಟಿಷರ ಅಧಿಕಾರವೇ ಮಾಯವಾಗುವುದರಿಂದ ಹಾಗೆ ಕೆಲವು ಪ್ರದೇಶಗಳನ್ನು ಉಳಿಸಿಕೊಳ್ಳಲು ಕಾರಣವಿರುವುದಿಲ್ಲ. ಸ್ವಲ್ಪ ಭಾಗವನ್ನು ಪರಕೀಯರ ಆಡಳಿತಕ್ಕೆ ಬಿಟ್ಟು ಉಳಿದುದನ್ನು ಮಾತ್ರ ತೆಗೆದುಕೊಳ್ಳುವುದು ಹಿತಕರವೂ ಅಲ್ಲ; ಅದರಿಂದ ಮುಂದೆ ಇಲ್ಲದ ಸಲ್ಲದ ರಾಜಕೀಯ ತೊಡಕುಗಳು ಹುಟ್ಟಿಕೊಳ್ಳಲು ಅವಕಾಶವಾಗುವುದು

ದಂಡನ್ನು ವಶಪಡಿಸಿಕೊಳ್ಳುವ ಈ ಸಮಯದಲ್ಲಿ ಇಂತಹ ಲೋಪಗಳು ಇನ್ನೂ ಉಳಿದುಕೊಳ್ಳದಂತೆ ಜಾಗರೂಕತೆಯಿಂದ ವರ್ತಿಸುವುದು ಅಗತ್ಯ ದಂಡಿನ ಪ್ರದೇಶವು ಮೈಸೂರಿಗೆ ಸಂಪೂರ್ಣವಾಗಿ ಸೇರುವಂತೆ ನಮ್ಮ ಪ್ರಭುತ್ವದವರು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ನಾವು ಕೋರುತ್ತೇವೆ.

§ ಶ್ರೀರಾಮನವಮಿ ಪ್ರಯುಕ್ತ ಇದೇ ೩೧ ನೇ ತಾ॥ ಸೋಮವಾರ ಗೌ॥ ಬ್ರಾ॥ ಪ್ರೆಸ್ ಕೆಲಸಗಾರರ ಸಂಘದಲ್ಲಿ ಮಂಗಳಾರತಿ ಮತ್ತು ಸಭೆ ನಡೆಯುತ್ತವೆ. ಸದಸ್ಯರೆಲ್ಲರೂ ಬರಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ಮತದಾರರ ಪಟ್ಟಿಯಲ್ಲಿ ನ್ಯೂನತೆ

ಮಂಡ್ಯದ ಜಿಲ್ಲಾ ಬೋರ್ಡ್ ಚುನಾವಣೆಗೆ ಶ್ರೀರಂಗಪಟ್ಟಣ ತಾಲ್ಲೂಕಿನ ಮತದಾರರ ಪಟ್ಟಿಯಲ್ಲಿರುವ ಕೆಲವು ನ್ಯೂನತೆಗಳನ್ನು ಎತ್ತಿ ತೋರಿ, ಅವುಗಳನ್ನು ಕ್ರಮಪಡಿಸಬೇಕೆಂದು ಪ್ರಾರ್ಥಿಸಿ ಮಂಡ್ಯದ ಜಿಲ್ಲಾಧಿಕಾರಿಗಳಿಗೆ ಶ್ರೀರಂಗಪಟ್ಟಣ ತಾಲ್ಲೂಕಿನಿಂದ ಉಮೇದುವಾರರಾಗಿ ನಿಂತಿರುವ ವಕೀಲರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಪತ್ರವೊಂದನ್ನು ಬರೆದಿರುವರು.

ನಿಯಮದಲ್ಲಿರುವಂತೆ ಮತದಾರರ ವಾಸಸ್ಥಳವನ್ನು ಸೂಚಿಸಿಲ್ಲ, ಕೆಲವು ಕಡೆ ನಂಬರುಗಳನ್ನೂ ಇನ್ನು ಕೆಲವು ಕಡೆ ನಂಬರಿನ ಪಕ್ಕದಲ್ಲಿ ಹೆಸರುಗಳನ್ನೂ ಕೊಟ್ಟಿರುವುದಿಲ್ಲ, ಉಮೇದುವಾರರು ಮತದಾರರನ್ನು ಗುರ್ತಿಸಲು ಬೇಕಾದ ವಿವರಗಳಿಲ್ಲ; ತಾಲ್ಲೂಕಿನ ಹೊರಗಿರುವ ಕೆಲವು ಸರ್ಕಾರಿ ನೌಕರರನ್ನು ಪಟ್ಟಿಯಲ್ಲಿ ಸೇರಿಸಿ ಅವರು ಬಾಬೂರಾಯನ ಕೊಪ್ಪಲಿನ ನಿವಾಸಿಗಳೆಂದು ಹೇಳಲಾಗಿದೆ; ಅವರಿಗೆ ಆಸ್ತಿಯ ಅರ್ಹತೆಯಿಲ್ಲ, ಕುರುಬಚೆಟ್ಟಿ ಹಳ್ಳಿ ಹೋಬಳಿಯಲ್ಲಿ ಮತದಾರರಾಗಲನರ್ಹರಾದ ಸುಮಾರು ೪೦೦ ಜನರನ್ನು ಪಟ್ಟಿಯಲ್ಲಿ ಸೇರಿಸಿದೆ; ಅಲ್ಲದೆ ೪ ರೂ. ಭೂಕಂದಾಯ ಮತ್ತು ೮ ಆಣೆ ಮನೆಗಂದಾಯ ಕೊಡುವ ನಿಮ್ನ ವರ್ಗದವರನ್ನೂ ಪಟ್ಟಿಯಲ್ಲಿ ಸೇರಿಸಿರುವುದಾಗಿ ತಿಳಿದು ಬಂದಿದೆ - ಎಂದು ಅವರು ತಮ್ಮ ಪತ್ರದಲ್ಲಿ ತಿಳಿಸಿರುತ್ತಾರೆ

○ ಇನ್ನು ೩೦ ರಿಂದ ೬೦ ದಿವಸಗ...
ಕ್ಷಿಣ ಕೊರಿಯಾದಲ್ಲಿ ಒಂದು ತಾ...
ಸ್ವತಂತ್ರ ಸರ್ಕಾರವನ್ನು ಸ್ಥಾಪಿಸುವ...
ಜನೆಯು ಅಮೆರಿಕದ ಸರ್ಕಾರಕ್ಕೆ...
ದೆಂದು ವರದಿಯಾಗಿದೆ,

ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆ...
ಟರವರ ಆಫೀಸು,
ಮೈಸೂರು, ತಾ॥ ೨೪-೩...
ನಂ H I P. R. ೨೪೭/೪೭...

ನೋಟೀಸು

ಮೈಸೂರು ಸಿಟಿಯಲ್ಲಿರುವ ಪ್ರ...
ದು ರೊಟ್ಟಿ ಅಂಗಡಿ, ಮಿಠಾಯಿ ...
ಹೋಟೆಲು, ರೆಸ್ಟೋರೆಂಟ್, ಟೀ ...
ಗಡಿ, ಹಾಲಿನ ಅಂಗಡಿ, ಕ್ಷೌರದ ...
ಏಸ್ ಮತ್ತು ಕೇಕು ತಯಾರಿಯಾಗ...
ಯಾರು ಮಾಡುವ ಮತ್ತು ಬಿಕರಿ ...
ವ ಸ್ಥಳಗಳು ಮತ್ತು ಮಾಂಸದ ...
ಗಳು ಇವುಗಳ ಮಾಲೀಕರೂ, ...
ಮಾಡುವವರೂ, ಹಂಚುವವರೂ, ...
ರವರೂ, ಮಾರುವವರೂ, ತುಟಸ...
ವರೂ, ಅಡಿಗೆ ಮಾಡುವವರೂ ಮ...
ತರ ಸಮಸ್ತ ನೌಕರ ಮಾನೇಜುಗಳ...
ರ್ನಮೆಂಟಿನಿಂದ ಸಾದರಾದ ೧೯೪೩...
ನೇ ಮರ್ಕ್ಯುರಂ ಆರ್ಡರ್ ನಂ
೯೩೯೯೨-೪/೧೯೪೩ ೧೯೩-೪೫-೩೫
ತಿದ್ದುಪಾಟಾದ ಮೈಸೂರು ಸಿಟಿ ಮು...
ಲ್ ಸರಹದ್ದಿನಲ್ಲಿರುವ ಹೋಟೆಲ್,
ಅಂಗಡಿ ವಗೈರೆಗಳಿಗೆ ಲೈಸೆನ್ಸ್ ಕೆ...
ಮತ್ತು ತನಿಖೆ ಮಾಡಲು ನಿಯಮ...
ಗಿರುವ ಬೈಲಾ ೬, ೮ ಮತ್ತು ...
ಬಂಧನೆಗಳ ಪ್ರಕಾರ ಸದರಿ ಪೌರಸ...
ದ ನೇಮಿತರಾದ ಡಾಕ್ಟರವರಿಂದ ...
ಪಬ್ಲಿಕ್ ಹೆಲ್ತ್ ಆಫೀಸಿನಲ್ಲಿ ಪರೀಕ್ಷೆ...
ಸಿಕೊಂಡು ತಾವು ಆಯಾ ಸ್ಥಳಗ...
ಲಸಮಾಡಲು ಆರೋಗ್ಯ ರೀತ್ಯಾ ...
ಪಡೆದಿರುತ್ತಾರೆಂಬ ಸರ್ಟಿಫಿಕೇಟನ್ನು
ವರ್ಷವೂ ಪಡೆಯತಕ್ಕದ್ದು ಈ ...
ಕೇಟಿಗಾಗಿ ಪ್ರತಿ ವರ್ಷವೂ ಒಂದು ...
ಯನ್ನೂ ಮತ್ತು ತಮ್ಮ ಹೆಸರನ್ನು
ಸಿಪಲ್ ಆಫೀಸಿನಲ್ಲಿರುವ ರಿಜಿಸ್ಟ...
ದಾಖಲ್ ಮಾಡಲು ಎಂಟಾಣೆಯ...
(ಮುಂಬಾ ೧ ೬.೦) ಮುನಿಸಿಪಲ್
ನೆಯಲ್ಲಿ ಪಾವತಿಮಾಡಿ ರಸೀತಿ...
ಅರ್ಜಿಯೊಡನೆ ಮುನಿಸಿಪಲ್ ಹೆಲ್ತ್
ಸಿನಲ್ಲಿ ಹಾಜರಾಗಿ ಈ ಲಾಗಾಯು...
ನೈದು ದಿವಸಗಳಲ್ಲಿ ಸರ್ಟಿಫಿಕೇಟನ್ನು
ಯತಕ್ಕದ್ದು.

ಆ ರೀತಿ ಮಾಡಲು ತಪ್ಪಿದರೆ ಕಾ...
ಪ್ರಕಾರ ಪ್ರಾಸಿಕ್ಯೂಷನ್ ಮಾಡಲಾಗು...

(ಸಹಿ) ಆರ್. ರಾಮಚಂದ್ರರಾ...
ಛಾಂಬ...
ಪ್ರೆಸಿಡೆಂಟ್

ಜಿಲ್ಲಾ ಬೋರ್ಡ್ ಚುನಾವ...
೨೮-೪-೪೭ ನೇ ಸೋಮವಾ...
ನಂಜನಗೂಡು ತಾಲ್ಲೂಕಿನ ಈ ಕೆಳ...
ಕಾಂಗ್ರೆಸ್ ಉಮೇದುವಾರರಿಗೆ
-, ದಯವಿಟ್ಟು ೬ ಟು ಕೊಡಿ
ಹೆಚ್ ಲಿಂಗಪ್ಪ (ಹನಿಯುಂಬ...
ಹೆಚ್. ಎಂ. ನಾಗಪ್ಪ (ಹುಲ್ಲ...
ಎಂ. ಲಿಂಗಪ್ಪ (ಹೆಜ್ಜಿಗೆ)

ಚಾಮುಂಡೇಶ್ವರೀ ಟಾಕೀಸ್

೨೭-೩-೪೭ ರಿಂದ :: ಪ್ರತಿ ದಿನ ೩ ಆಟಗಳು

ಸ್ಟಾರ್ ಕಂಬೈನ್ಸ್ ಮತ್ತು ಪ್ರಗತಿಯವರ ಅಮೋಘವಾದ ತಮಿಳು ಚಿತ್ರ

- ವಿ ಜ ಯ ಲ ಕ್ಷ್ಮಿ -

ಮುಖ್ಯ ಭೂಮಿಕೆ:- ಎಂ. ವಿ ರಾಜಮ್ಮ, ಟಿ ಆರ್ ರಾಮಚಂದ್ರನ್, ಬಿ ಆರ್. ಪಂತುಲು ಮತ್ತು ಎಂ. ಜಿ ಆಂಡಾಳ್.

ನಂಜನಗೂಡು ದೊಡ್ಡ ಜಾತ್ರೆ - ದನಗಳ ಪ್ರದರ್ಶನ

1-4-47 ರ ಆರಾಭ್ಯ 4-4-47 ರ ವರೆಗೆ ದೊಡ್ಡ ಜಾತ್ರೆ, ರಥೋತ್ಸವದ ಸಂದರ್ಭದಲ್ಲಿ, ದನಗಳ ಪ್ರದರ್ಶನವನ್ನು ಈ ಊರಿನ ಹೋರಿ ತೋಪಿನಲ್ಲಿ ಏರ್ಪಡಿಸಿರುತ್ತೆ ನೀರು ನೆರಳಿನ ಸೌಕರ್ಯ ಚೆನ್ನಾಗಿದೆ. ರಾಸುಗಳಿಗೆ ಸುಂಕವಿಲ್ಲ, ವೈದ್ಯ ಸಹಾಯ ಏರ್ಪಡಿಸಿದೆ. ಉತ್ತಮ ರಾಸುಗಳಿಗೆ ಬಹುಮಾನ ಕೊಡಲಾಗುತ್ತೆ.

ಎ ವಿ. ಕೃಷ್ಣನ್, ಪ್ರೆಸಿಡೆಂಟ್,
ಟೌನ್ ಮುನಿಸಿಪಲ್ ಕೌನ್ಸಿಲ್, ನಂಜನಗೂಡು

RAJKAMAL, MYSORE

Morning Shows from
28-3-47 for 1 days daily
at 10-30 a. m

GOLGOTHA

A marvellous million-dollar
Production

Don't Miss
A Fine Opportunity!
Foreign
WOOLLEN GENTS' COATS
in different colours and
Varieties
— Cheapest Rates —
(1) L. Mathura Das,
(2) K. S. Panduranga Rao and Co.,
Fancy Cloth Merchants.
೩೪೧, Gargeswari Chouk,
Mysore

ರಾ ಜ ಕ ಮ ಲ್

೨೪-೩-೪೭ ರಿಂದ ೬ ನೇ ವಾರ

1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ (ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಂಪಾದ ನೃತ್ಯವೇಷಗಳು!! ಮನರಂಜಕವಾದ ದೃಶ್ಯಗಳು!!!
ಇವೆಲ್ಲವನ್ನೂ ಇಂದೇ ನೋಡಿ.

ಮೈಸೂರು ಸಿಟಿ ರೇಷನಿಂಗ್

No R. ೬ ೪೧/೧೯೪೬-೪೭

೧೯೪೭ ನೇ ಇಸವಿ ಮಾರ್ಚಿ ಮಾಹೆ ೩೧ ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರೀ ಡಿಪೋ, ಮೊಹಲ್ಲಾ ಸಬ್ ಗೋಡೌನ್, ಪರ್ಮಿಟ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ, ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ

ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ.

Edited, printed and published by A. R. Nagarajan at the Sadhvi Press D. Subbiah Road ...

ರೀ. ನಂ. 392 | ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೨೯—೩—೪೭ [ಸಂಚಿಕೆ ೧೯೬

ನಾಗೋಡ್ ಸಂಸ್ಥಾನದಲ್ಲಿ ಸತ್ಯಾಗ್ರಹ; ದಬ್ಬಾಳಿಕೆ

(ಕಾಂ)ಗ್ರೆಸ್ ಕಾರ್ಯದರ್ಶಿಯ ಮೇಲೆ ಜುಲುಂ?

...ನಗರದ ತಾಲ್ಲೂಕು ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾದ ಶ್ರೀ ...ನಗರಾಜ್‌ರವರು ಒಂದು ಹೇಳಿಕೆಯಲ್ಲಿ ತಾಲ್ಲೂಕು ಅಮಲ್ದಾರರಿಂದ ತಮಗಾದ ಅಪಚಾರವನ್ನು ವಿವರಿಸಿರುತ್ತಾರೆ. ... ಅಂಗಡಿಯಲ್ಲಿ ತಮಗೆ ಬಟ್ಟೆ ...ಸಿಗುತ್ತಿದ್ದುದರಿಂದ ಅಮಲ್ದಾರರ ...ಲು ಅವರು ಕಾರ್ಡಿನ ಮೇಲೆ ...ದ್ದರಿಂದಲೂ, ಆದರೆ ಅಂಗಡಿಯಲ್ಲಿ ...ಇರುವ ಬಟ್ಟೆಯಿಂದ ಕೊಡುವಂ...ದಿದ್ದರಿಂದ ತಮಗೆ ಪುನಃ ಬಟ್ಟೆ ...ಲ್ಲವೆಂದು ಹೇಳಿದಾಗ ಅಮಲ್ದಾರರು ...ಅವಮಾನವನ್ನೂ, ಪೋಲೀಸಿನ ...ಕರೆದು ತಮ್ಮನ್ನು ಸ್ಟೇಷನ್ನಿಗೆ ...ದರಿಂದಲೂ, ಅಲ್ಲಿದ್ದ ದಫೇದಾರರು ವಿ...ಗಳನ್ನು ತಿಳಿದು ಅಂಗಡಿಯಿಂದ ...ನ್ನು ಕೊಡಿಸಿದರಿಂದಲೂ ತಿಳಿಸಿ ಅ...ರ ವರ್ತನೆಯನ್ನು ಖಂಡಿಸಿರು(ತ್ತಾರೆ).

...ಜಿ ಫ್ರೆಂಚ್ ಪ್ರಧಾನಿಗೆ ಶಿಕ್ಷೆ

...ಯ ಅಪಮಾನ, ರಾಷ್ಟ್ರದ್ರೋಹ ...ಧಮುಂತಾದ ಅಪಾದನೆಗಳ ಮೇ...ನ್ಸಿನ ಮಾಜಿ ಪ್ರಧಾನಿ ಎಂ. ಕ್ಯಾಮಿಲ್ ಚೌಟೆಂಪ್ಸರಿಗೆ ಅವರ ಗೈರು ಹಾಜರಿ... ವರ್ಸೈಲ್ಸಿನ ಕ್ರಿಮಿನಲ್ ನ್ಯಾಯಾಲಯ ...ಐದು ವರ್ಷದ ಕಾರಾಗೃಹವಾಸವನ್ನು ವಿಧಿಸಿ ಅವರ ಆಸ್ತಿ ಪಾಸ್ತಿ ...ವಶಪಡಿಸಿಕೊಳ್ಳಲು ಆಜ್ಞೆಯಿತ್ತಿ...

...ಮುರೇಶ್ವರ ರಥೋತ್ಸವ

ಚನ್ನರಾಯಪಟ್ಟಣ ೨೬

...ವಾಡಿಕೆಯಂತೆ ಬರುವ ೫ ನೇ ತಾ|| ...ರ ಶ್ರವಣಬೆಳಗೊಳದ ಶ್ರೀ ಗೋಮ...ಸ್ವಾಮಿಯವರ ಮಹಾರಥೋತ್ಸವ ...ಯುವುದೆಂದು ಗೊತ್ತಾಗಿದೆ.

...ಲ್ಲೂಕಿನಿಂದ ಹಾಸನ ಜಿಲ್ಲಾ ...ಗೆ ಶ್ರೀಗಳಾದ ವಾಟೇಗೌಡ ಮ...ಳ್ಳಿ ಚಿಕ್ಕೇಗೌಡರು ಉಮೇ...ರಾಗಿ ನಿಂತಿರುತ್ತಾರೆ.

...ತ್ಯಾಗರಾಜ ಗಾಯನ ಸಮಾಜವು ...ಗಿದೆ. ಸದಸ್ಯರಾಗಲಿಚ್ಛಿಸುವವ...ಮಾಜದ ಕಾರ್ಯದರ್ಶಿಗಳಿಗೆ ಬರೆದು ...ಬೇಕೆಂದು ಕೋರಲಾಗಿದೆ.

...ರಾ ಮೋ ತ್ಸ ವ ಗ ಳು

...ಜಧಾನಿಯ ಶಿವರಾಂಪೇಟೆಯಲ್ಲಿರುವ ...ರಾಮಚಂದ್ರ ದೇವಾಲಯದಲ್ಲಿ ಶ್ರೀ ...ಮೋತ್ಸವದ ಪ್ರಯುಕ್ತ ನಾಳೆಯಿಂದ ...ದಿನಗಳು ಪ್ರತಿ ದಿನ ಸಂಜೆ ೬-೩೦ ...ಪದ್ಧತಿ ಮೇರೆ ಸಂಗೀತ, ಹರಿಕಥೆ ...ನಡೆಯುತ್ತವೆ.

...ಚಾಮುಂಡಿಪುರಂ ವೈಸ್ರಾಯ್ ರಸ್ತೆಯ ...ನೇ ನಂ. ಮನೆಯಲ್ಲಿರುವ ಬಾಲಕರ ...ದ ಮಂದಿರದಲ್ಲಿ ನಾಡಿದ್ದಿನಿಂದ ೧೫ ...ರಾಮೋತ್ಸವವು ಜರುಗುತ್ತದೆ ...ಮಹಾಶಯರು ಉದಾರವಾಗಿ ಸಹಾಯಮಾಡಬೇಕೆಂದು ಕೋರಲಾಗಿದೆ.

...ರ ಚಾಟ್ಟ ಕ್ಕೆ ಹಿಂದೆ ಸಂಸ್ಕೃತದಲ್ಲಿ ...ಬರೆಯಲ್ಪಟ್ಟಿರುವ ಹಿಂದೂ ಸಾಹಿತ್ಯವು ...ಬಿಹಾರದಲ್ಲಿ ದೊರೆತಿರುವುದಾಗಿ ವರ...ಗಿದೆ. ಇದರಿಂದ ತಮ್ಮ ದೇಶದ ...ಸವನ್ನು ವಿಶದವಾಗಿ ಬರೆಯಬಹುದು ...ಇಂಡೋನೇಷ್ಯದ ಪ್ರವೀಣರು ಅಭಿ...ಪಟ್ಟಿರುತ್ತಾರೆ.

ನಾಗೋಡ್ ಸಂಸ್ಥಾನದಲ್ಲಿ ಘೋರ ದಬ್ಬಾಳಿಕೆ

ನಾಗರಿಕ ಸ್ವಾತಂತ್ರ್ಯವನ್ನು ಸ್ಥಾಪಿಸುವುದಕ್ಕಾಗಿ ಮಧ್ಯ ಭಾರತದ ನಾಗೋಡ್ ಸಂಸ್ಥಾನದ ಪ್ರಜಾ ಮಂಡಲದ ನಾಯಕರಾದ ಪ್ರೇಮ ನಾರಾಯಣ ಖರೆ ಮತ್ತು ಇತರೆ ನಾಯಕರು ಚಳುವಳಿ ನಡೆಸಿದುದಕ್ಕಾಗಿ ಅವರನ್ನು ದಸ್ತಗಿರಿ ಮಾಡಲಾಗಿದೆ. ಇತರ ಕೆಲಸಗಾರರುಗಳಿಗೆ ಭಾರಿ ಜುಲ್ಮಾನೆಗಳನ್ನು ವಿಧಿಸಲಾಗಿದೆ. ಮನೆಗಳ ಸಾಕ್ಷಿ ಪದಾರ್ಥ ಮತ್ತು ದವಸಧಾನ್ಯಗಳನ್ನು ಪೋಲೀಸಿನವರು ಬಲಾತ್ಕಾರವಾಗಿ ಜಪ್ತು ಮಾಡಿಕೊಂಡು ಹೋಗಿದ್ದಾರೆ. ಇದೂ ಸಾಲದೆ ಪ್ರಜಾ ಮಂಡಲದ ಕೆಲಸಗಾರರ ಸಂಸಾರಗಳನ್ನು ಅವರವರ ಮನೆಗಳಲ್ಲಿಯೇ ಬಂಧನದಲ್ಲಿಟ್ಟು ಬೀಗವನ್ನು ಹಾಕಿರುತ್ತಾರೆ. ಅವರ ಬಂಧು, ಮಿತ್ರರೂ ಸಹ ಅವರನ್ನು ಹೋಗಿ ನೋಡದಂತೆ ಪೋಲೀಸ್ ಪಹರೆಯನ್ನು ಇಡಲಾಗಿದೆ. ಸರ್ಕಾರಿ ಕಛೇರಿಗಳ ಮುಂದೆ ಬಲವಾದ ಪಿಕೆಟಿಂಗ್ ಚಳುವಳಿಯನ್ನು ಆರಂಭಿಸಲಾಗುವುದೆಂದು ಹೇಳಲಾಗಿದೆ. ನೆರೆಯ ಸಂಸ್ಥಾನಗಳಾದ ಕೋಠಿಯ ಮತ್ತು ಅಜಯಗಢಗಳಿಂದಲೂ ಸಹ ಸತ್ಯಾಗ್ರಹಿಗಳ ತಂಡವು ಅಧಿಕ ಸಂಖ್ಯೆಯಲ್ಲಿ ನಾಗೋಡಿಗೆ ಬಂದು ಸೇರಿರುವುದಾಗಿ ತಿಳಿದುಬಂದಿದೆ.

ಬುಕ್-ಕೀಪಿಂಗ್

ಸರ್ಕಾರದ ಸರ್ಟಿಫೈಡ್ ಅಡಿಟರಾದ ಶ್ರೀ ಎ ರಾಮಚಂದ್ರರಾಯರು ಇಂಗ್ಲಿಷಿನಲ್ಲಿ ಹೈಸ್ಕೂಲ್ ದರ್ಜೆಯ ವಿದ್ಯಾರ್ಥಿಗಳಿಗಾಗಿ ಬರೆದಿರುವ 'ಬುಕ್-ಕೀಪಿಂಗ್ ಸುಲಭ ಪಾಠಗಳು' ಎಂಬ ಪುಸ್ತಕವನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಶ್ರೀಯುತರು ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ವಿಷಯಗಳನ್ನು ಸಂಗ್ರಹಿಸಿ ಬರೆದಿರುತ್ತಾರೆ.

ಮೈಸೂರು ಸ್ಕೌಟ್ ಗಳು ಪ್ಯಾರಿಸ್ಸಿಗೆ

ಸ್ವಂ. ಮು] ಬೆಂಗಳೂರು ೨೮

ಪ್ಯಾರಿಸ್ಸಿನಲ್ಲಿ ಮೇ ತಿಂಗಳು ನಡೆಯಲಿರುವ ಅಂತರ ರಾಷ್ಟ್ರೀಯ ಸ್ಕೌಟ್ ಸಮ್ಮೇಳನದಲ್ಲಿ ಭಾಗ ವಹಿಸಲು ಮೈಸೂರಿನ ಪರವಾಗಿ ಸ್ಕೌಟ್ ಕಮಿಷನರಾದ ಲೆ|| ಕ|| ಎ. ಕೆ ಸುಂದರಂ ರವರ ನಾಯಕತ್ವದಲ್ಲಿ ೧೨ ಮಂದಿ ಸ್ಕೌಟ್ ಪ್ರತಿನಿಧಿಗಳು ಪ್ಯಾರಿಸ್ಸಿಗೆ ತೆರಳಲಿರುವರು

ಸಂಪೂರ್ಣ ಪಾನ ನಿರೋಧ

ಸ್ವಂ ಮು ಫೋ] ಬೆಂಗಳೂರು ೨೮

ಕಳೆದ ೩ ದಿನಗಳಿಂದಲೂ ಪಾನ ನಿರೋಧ ವಿಚಾರಣಾ ಸಮಿತಿಯು ೧೬ ಅಭಿಪ್ರಾಯಗಳನ್ನು ಸಂಗ್ರಹಿಸಿತು. ಶ್ರೀಗಳಾದ ಘೋಷಾಳ್ ಚಂದ್ರಶೇಖರಯ್ಯ ಮತ್ತು ಮಹಮ್ಮದ್ ಅಬ್ಬಾಸ್ ಖಾನರು ಸಾಕ್ಷ್ಯಗಳನ್ನಿತ್ತರು. ಸದ್ಯದಲ್ಲಿಯೇ ಬರಲಿರುವ ಎಕ್ಸೈಜು ಹರಾಜಿನ ಕಾಲದಲ್ಲಿ ಪಾನ ನಿರೋಧದಿಂದ ಉಂಟಾಗಬಹುದಾದ ಪರಿಣಾಮವನ್ನು ಕಂಟ್ರಾಕ್ಟರುಗಳಿಗೆ ಮನವರಿಕೆ ಮಾಡುವ ಬಗ್ಗೆ ಸಮಿತಿಯವರು ಸರ್ಕಾರಕ್ಕೆ ಒಂದು ತಾತ್ಕಾಲಿಕ ವರದಿಯನ್ನು ಬರುವ ತಿಂಗಳಲ್ಲಿ ಕಳುಹಿಸಬಹುದೆಂದು ಹೇಳಲಾಗಿದೆ. ಸಂಸ್ಥಾನದಲ್ಲಿ ಮದ್ಯಪಾನವನ್ನು ಸಂಪೂರ್ಣವಾಗಿ ತಪ್ಪಿಸಬೇಕೆಂಬುದೇ ಸಮಿತಿಯ ಸದಸ್ಯರೆಲ್ಲರ ಸಾಮಾನ್ಯವಾದ ಅಭಿಪ್ರಾಯವಾಗಿರುವುದಾಗಿ ತಿಳಿದುಬಂದಿದೆ.

ನಂಜನಗೂಡು ಪೌರಸಭಾ ಚುನಾವಣೆ

೫ ಜನ ಕಾಂಗ್ರೆಸ್ಸಿನವರ ವಿಜಯ

ಸ್ವಂ ಮು] ನಂಜನಗೂಡು ೨೮

ಮೊನ್ನೆ ಈ ಊರಿನಲ್ಲಿ ನಡೆದ ಪೌರ ಸಭಾ ಚುನಾವಣೆಗಳ ಎಣಿಕೆಯು ನಿನ್ನೆ ನಡೆದು ಫಲಿತಾಂಶಗಳು ಈ ರೀತಿ ಹೊರಬಿದ್ದಿವೆ:—

ಮೊದಲನೇ ಬ್ಲಾಕ್—ಶ್ರೀಗಳಾದ ಎಸ್. ಕೆ. ಮರಿಗಂಟಯ್ಯ, ೨ ವೈ ಕೆ. ಎಸ್ ಲಕ್ಷ್ಮಣಶೆಟ್ಟರು, ೩. ಡಿ ಗಂಗಣ್ಣ, ೪. ಎಸ್ ರಾಚಯ್ಯ (ಕಾಂ), ೫ ಟಿ. ಎಸ್ ನಂಜಪ್ಪಶೆಟ್ಟಿಯಾರ್, ೬ ಎಸ್ ವಿ ವೆಂಕಟರಮಣಸ್ವಾಮಿ (ಕಾಂ)

ಎರಡನೇ ಬ್ಲಾಕ್—ಶ್ರೀಗಳಾದ ಕೆ ವೆಂಕಟಸುಬ್ಬ (ಕಾಂ), ೨ ಸಿ. ಕೆ. ನಾಗಪ್ಪ, ೩. ಕೆ. ಗೋವಿಂದರಾಜ, ೪ ಬಿ ಎಸ್. ಎಸ್. ಆರಾಧ್ಯ (ಕಾಂ), ೫. ಎಸ್ ಎಲ್ ಸುಬ್ಬರಾಯಪ್ಪ

ಮೂರನೇ ಬ್ಲಾಕ್—೧ ಎ ವಿ ಕೃಷ್ಣ, ೨ ಎಸ್. ಎ ರಹಮಾನ್ ಷರೀಫ್, ೩. ಟಿ. ವಿ. ಸುಬ್ಬಯ್ಯ, ೪. ಶಂಕರನಾರಾಯಣ ಐಯ್ಯರ್ (ಕಾಂ)

ಸಂಯುಕ್ತ ರಾಷ್ಟ್ರ ಸಂಸ್ಥೆಗೆ ೮೫ ಲಕ್ಷ ಪೌಂಡು

ಸಂಯುಕ್ತ ರಾಷ್ಟ್ರ ಸಂಸ್ಥೆಯ ಪ್ರಧಾನ ಕಾಂತಿಗೆ ಕಳಿಸಿದಿಯೆಂದು ಹೇಳಿ ಅದರ ಕಟ್ಟಡಕ್ಕಾಗಿ ಅಮೆರಿಕದ ಜಾನ್ ರಾಕ್‌ಫೆಲ್ಲರರು ೮೫ ಲಕ್ಷ ಪೌಂಡುಗಳನ್ನು ಕೊಟ್ಟಿರುತ್ತಾರೆ.

ದೆಹಲಿಗೆ ಗಾಂಧೀಜಿ

ವೈಸರಾಯರ ಆಹ್ವಾನವನ್ನಂಗೀಕರಿಸಿ ಮಹಾತ್ಮ ಗಾಂಧಿಯವರು ರೈಲಿನಲ್ಲಿ ನಾಳೆ ದ್ದು ಬೆಳಿಗ್ಗೆ ದೆಹಲಿಗೆ ತಲುಪುವರೆಂದು ವರದಿಯಾಗಿದೆ. ಮಹಾತ್ಮರು ಎರಡು ಮೂರು ದಿನಗಳಲ್ಲೇ ಬಿಹಾರಿಗೆ ಹಿಂದಿರುಗಲು ಕಾತರರಾಗಿರುವರೆಂದೂ, ಆದರೆ ಮಾತುಕತೆಗಳ ಪರಿಣಾಮವಾಗಿ ಅವರು ಹೆಚ್ಚು ಕಾಲ ದೆಹಲಿಯಲ್ಲೇ ಇರಬೇಕಾಗಬಹುದೆಂದೂ ಹೇಳಲಾಗಿದೆ.

ತ್ಯಾಗರಾಜ ಭಾಗವತರ ಅಪ್ಪೀಲಿಗೆ ಅವಕಾಶ

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆಯಲ್ಲಿ ಆಜೀವ ಕಾರಾಗೃಹ ವಾಸಕ್ಕೆ ಗುರಿಯಾಗಿರುವ ಸುಪ್ರಸಿದ್ಧ ಸಿನಿಮಾ ನಟರಾದ ಎಂ. ಕೆ. ತ್ಯಾಗರಾಜ ಭಾಗವತರ್ ಮತ್ತು ಎನ್. ಎಸ್. ಕೃಷ್ಣನ್‌ರವರು ಮಾಡಿದ್ದ ಅಪ್ಪೀಲನ್ನು ಪ್ರಿವಿ ಕೌನ್ಸಿಲಿನವರು ಪುರಸ್ಕರಿಸಿ ಅವರ ಅಪ್ಪೀಲನ್ನು ಮದರಾಸ್ ಹೈಕೋರ್ಟಿನವರು ಪುನಃ ಪ್ರಕಾರವಾಗಿ ವಿಚಾರಿಸಬೇಕೆಂದು ಆಜ್ಞೆ ಮಾಡಿರುತ್ತಾರೆ. ಹೈಕೋರ್ಟ್ ವಿಚಾರಣೆಯ ಸಮಯದಲ್ಲಿ ಜ್ಯೂರಿಗಳ ಅಭಿಪ್ರಾಯವು ಸಾಧುವೇ, ಅಸಾಧುವೇ ಎಂಬುದನ್ನು ನ್ಯಾಯಾಧೀಶರು ಪರಿಶೀಲಿಸುವುದನ್ನು ಬಿಟ್ಟು ಸಕಾರಣವಾಗಿ ಶಿಕ್ಷೆ ಇಲ್ಲವೇ ಎಂಬುದನ್ನು ಮಾತ್ರ ವಿಮರ್ಶಿಸಿರುವುದು ಸರಿಯಲ್ಲವೆಂದು ಪ್ರಿವಿ ಕೌನ್ಸಿಲಿನವರು ಅಭಿಪ್ರಾಯಪಟ್ಟಿರುತ್ತಾರೆ.

...ನಿಕ್ಕಲಿನಲ್ಲಿ ಹೊಸ ರೂಪಾಯಿನ ನಾಣ್ಯಗಳನ್ನು ತಯಾರಿಸಲಾಗಿದೆ. ಅದು ಅತ್ಯಂತ ಬಾಳಿಕೆ ಬರುವಂತಹುದಾಗಿದೆ. ...ಲ್ಲಿಗೆ ಕೊಡಲು ಕೇಂದ್ರ ಸರ್ಕಾರದ ಅಪ್ಪಣೆಯನ್ನು ಎದುರು ನೋಡಲಾಗುತ್ತಿದೆ.

ಕಲ್ಕತ್ತೆಯ ಪರಿಸ್ಥಿತಿ

ಕಲ್ಕತ್ತೆಯ ನಾನಾ ಭಾಗಗಳಲ್ಲಿ ಪರಿಸ್ಥಿತಿ ಇನ್ನೂ ಬಿಗುವಾಗಿಯೇ ಇದೆ. ...ರು ಸತ್ತು, ೪೬ ಜನರು ಗಾಯಗೊಂಡಿದ್ದಾರೆ. ಗುಂಪುಗಳ ಮೇಲೆ ಟಿಯರ್ ಗ್ಯಾಸ್ ಪ್ರಯೋಗ ಮತ್ತು ಮಿಲಿಟರಿಯವರಿಂದ ಗುಂಡು ಹಾರಿಸುವುದು ನಡೆಯುತ್ತಲೇ ಇದೆ. ಇದುವರೆಗೆ ೨೦೦ ಮಂದಿ ದಸ್ತಗಿರಿ ಆಗಿರುವರು

ಸೇವಾರ್ಥ

ಚಾಮರಾಜಪೇಟೆಯಲ್ಲಿ ರಾಜ ಪರಿವಾರ ಸಂಘದ ಮೇಲ್ವಿಚಾರಣೆಗೆ ಸೇರಿದ ಮಹದೇಶ್ವರ ಸ್ವಾಮಿಯವರ ದೇವಾಲಯದಲ್ಲಿ ಮಾಮೂಲಿನಂತೆ ಶ್ರೀಮನ್ಮಹಾರಾಜರವರ ಜನ್ಮದಿನದಂದು ಸರ್ದಾರ್ ಬಿ. ಎ. ನಂಜರಾಜೇ ಅರಸಿನವರು ಕಳೆದ ೨೪ನೇ ಭಾನುವಾರ ಅಭಿಷೇಕ, ಉತ್ಸವಾದಿಗಳನ್ನು ನೆರವೇರಿಸಿದರು. ಬರುವ ೭ ನೇ ತಾ|| ಸೋಮವಾರ ಶ್ರೀ ಬೈರೇಗೌಡರು ಆರಾಧನೆಯನ್ನು ಏರ್ಪಡಿಸಿರುತ್ತಾರೆ.

ಮಾಳವೀಯರ ಬಗ್ಗೆ ಸಂತಾಪ

ಸೆನೆಟ್ ಸಭೆಯಲ್ಲಿ ನಿರ್ಣಯ

ಮೈಸೂರು ೨೮

ದಿವಂಗತ ಪಂ|| ಮದನಮೋಹನ ಮಾಳವೀಯರ ನಿಧನದ ಬಗ್ಗೆ ಹಿಂದೆ ಶ್ರೀ ಎ. ಲಿಂಗಪ್ಪಯ್ಯನವರು ತಂದಿದ್ದ ನಿರ್ಣಯವನ್ನು ವೈಸ್‌ಛಾನ್ಸಲರು ನಿರಾಕರಿಸಿದುದರಿಂದ ಎಲ್ಲೆಲ್ಲೂ ವಿಶೇಷ ಕೋಲಾಹಲವುಂಟಾಗಿ, ದ್ದಿತಷ್ಟೆ. ಈ ದಿನ ನಡೆದ ಸೆನೆಟ್ ಸಭೆಯಲ್ಲಿ ಅದೇ ನಿರ್ಣಯವನ್ನು ಮಂಡಿಸಲು ಶ್ರೀ ಲಿಂಗಪ್ಪಯ್ಯನವರಿಗೆ ಅಧ್ಯಕ್ಷರು ಅವಕಾಶವಿತ್ತರು. ಎಲ್ಲರೂ ಎದ್ದುನಿಂತು ಅದನ್ನು ಅಂಗೀಕರಿಸಿದರು.

ಸಾಧ್ವಿ

ತಾ|| ೨೯-೩-೪೭ ಶನಿವಾರ

ಬರೋಡದ ಆದರ್ಶ

ಭಾರತ ಭವಿಷ್ಯ ರಾಜ್ಯಾಂಗದ ವಿಚಾರದಲ್ಲಿ ಬರೋಡಾ ಸಂಸ್ಥಾನವು ಅನುಸರಿಸುತ್ತಿರುವ ನೀತಿಯು ಇತರ ಸಂಸ್ಥಾನಗಳಿಗೆ ಮಾದರಿಯಾಗಿರುತ್ತದೆ. ಬ್ರಿಟಿಷರು ಹೋದ ಮೇಲೆ ಬರೋಡವು ಪ್ರತ್ಯೇಕವಾದ ಸ್ವಾತಂತ್ರ್ಯ ಘೋಷಣೆಯನ್ನು ಮಾಡುವುದಿಲ್ಲವೆಂದು ಅಲ್ಲಿನ ದಿವಾನರು ತಿಳಿಸಿರುತ್ತಾರೆ. ಅಖಂಡ ಭಾರತದ ಸಂಯುಕ್ತ ರಾಜ್ಯಾಂಗವೇ ಬರೋಡೆಯ ಗುರಿಯೆಂದು ಅವರು ತಿಳಿಸಿರುತ್ತಾರೆ

ಬರೋಡದ ಮಹಾರಾಜರೂ ಸಹ ಕಾಲಕ್ಕೆ ತಕ್ಕಂತೆ ಉದಾರವಾದ ನೀತಿಯನ್ನೇ ಅನುಸರಿಸುತ್ತಿರುವರು. ಜವಾಬ್ದಾರಿ ಸರಕಾರದ ಸ್ಥಾಪನೆಗೆ ಬೇಕಾದ ಸಿದ್ಧತೆಗಳನ್ನು ಕೈಗೊಂಡು ರಾಜ್ಯಾಂಗವನ್ನು ಸಿದ್ಧಗೊಳಿಸುವಂತೆ ತಮ್ಮ ದಿವಾನರಿಗೆ ಆಜ್ಞೆ ಮಾಡಿರುವರು. ದಿವಾನರೂ ಸಹ ಪ್ರಜಾಪ್ರಭುತ್ವ ತತ್ವಗಳಿಗೆ ಅನುಗುಣವಾಗಿ ತಮ್ಮ ಕಾರ್ಯಕ್ರಮಗಳನ್ನು ನಡೆಸುತ್ತಿರುವರು. ಬ್ರಿಟಿಷರು ಹೊರಟುಹೋದ ಮೇಲೆ ಭಾರತೀಯ ಸರ್ಕಾರದಿಂದ ಪ್ರಜೆಗಳಿಗೆ ಹೆಚ್ಚಿನ ನ್ಯಾಯವು ದೊರೆಯುವುದೆಂದು ಬರೋಡಾ ಮಹಾರಾಜರು ಹೇಳಿರುವ ಮಾತುಗಳು ಅತ್ಯಂತ ಅಮೂಲ್ಯವಾಗಿವೆ.

ಸಂಯುಕ್ತ ಭಾರತದ ಯೂನಿಯನ್ನಿಗೆ ಸೇರಲು ಬರೋಡೆಯು ನಿರ್ಧರಿಸಿರುತ್ತದೆ. ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಲು ತೀರ್ಮಾನಿಸಿರುತ್ತದೆ. ಆದ್ದರಿಂದ ಅಲ್ಲಿನ ಪ್ರಜೆಗಳಿಗೂ, ಪ್ರಭುತ್ವದವರಿಗೂ ಸಂಪೂರ್ಣ ಸೌಹಾರ್ದದ ಮನೋಭಾವವು ಏರ್ಪಾಟಾಗಿರುತ್ತದೆ. ದಿವಾನರು ಅಧಿಕಾರಿಗಳಾಗಿದ್ದಾಗ್ಯೂ ಪ್ರಜಾಪ್ರತಿನಿಧಿಗಳ ಬೆಂಬಲದಿಂದ ಅವಿರೋಧವಾಗಿ ರಾಜ್ಯಾಂಗ ಸಭೆಗೆ ಚುನಾಯಿತರಾಗಿರುವುದು ಅತ್ಯಂತ ಅಭಿಮಾನದ ಸಂಗತಿ. ಹಿಂದೂಸ್ಥಾನದ ಯಾವ ದಿವಾನರಿಗೂ ಈ ಗೌರವವು ಇದುವರೆಗೆ ದೊರೆತಿಲ್ಲ. ಕೇವಲ ನಾಮಕರಣದ ಮೂಲಕ ಅವರುಗಳು ರಾಜ್ಯಾಂಗ ಸಭೆಗೆ ಹೋಗಲು ಹವಣಿಸುತ್ತಿರುವರು.

ಬರೋಡೆಯು ಹಿಂದೂಸ್ಥಾನದ ರಾಜ್ಯಾಂಗ ರಚನೆಯಲ್ಲಿ ಅತ್ಯಂತ ಪ್ರಾಮುಖ್ಯವಾದ ಪಾತ್ರವನ್ನು ವಹಿಸಲಿದೆ. ಸ್ವತಂತ್ರ ಭಾರತದ ಹಿತಕ್ಕೆ ವಿರುದ್ಧವಾಗಿ ಹಲವು ನರೇಂದ್ರರು ನಡೆಸಿದ ಕುತಂತ್ರಗಳನ್ನು ತಾವು ಬಯಲಿಗೆಳೆದಿರುವುದಾಗಿ ಅಲ್ಲಿನ ದಿವಾನರು ಹೇಳಿದ್ದಾರೆ. ಬರೋಡೆಯ ಪ್ರಭಾವವು ಇತರ ಅನೇಕ ಸಂಸ್ಥಾನಗಳ ಮೇಲೆ ಈಗಾಗಲೇ ಬೀರಲ್ಪಟ್ಟು ಅವುಗಳೂ ಸಹ ಇಡೀ ಹಿಂದೂಸ್ಥಾನದ ಅಭ್ಯುದಯದ ಸಾಧನೆಯಲ್ಲಿ ಸಹಕರಿಸುತ್ತಿವೆ.

ಈ ಸಂದರ್ಭದಲ್ಲಿ ನಮ್ಮ ಮೈಸೂರಿನ ಸ್ಥಿತಿ ಏನು?-ಎಂಬ ಪ್ರಶ್ನೆಯು ಸಹಜವಾಗಿಯೇ ಉದ್ಭವಿಸುವುದು. ಈ ಪ್ರಶ್ನೆಯೇ ಪ್ರತ್ಯಕ್ಷದ ರೂಪದಲ್ಲಿ ಪ್ರತಿಧ್ವನಿಯಾಗಿ ಕೇಳಬರುತ್ತಿದೆ

ಎಳನೀರು ಮಾರಾಟಕ್ಕೆ ಅಡ್ಡಿಯೇ

ಮೈಸೂರು ೨೮

ಬಿಸಿಲಿನ ತಾಪದಿಂದ ಜನರು ತಲ್ಲಣಿಸುವ ಈ ಕಾಲದಲ್ಲಿ ಬೀದಿಯ ನಲ್ಲಿಗಳಲ್ಲಿ ನೀರೂ ಸಹಾ ದೊರೆಯದೆ ತೊಂದರೆಯಾಗಿರುವಾಗ ಚಿಲ್ಲರೆ ಅಂಗಡಿಗಳವರು ನಡೆಸುತ್ತಿರುವ ಎಳನೀರು ವ್ಯಾಪಾರದ ಮೇಲೆಯೂ ಪೌರಸಭೆಯ ನೌಕರರು ದಾಳಿ ಮಾಡುತ್ತಿರುವುದಾಗಿ ಒಬ್ಬ ದಾಖಲೇದಾರರು ಫಿರ್ಯಾದು ಮಾಡಿರುತ್ತಾರೆ. ಅಂಗಡಿಗಳ ಮುಂದೆ ಹಾಕಿಕೊಂಡಿರುವ ಎಳನೀರಿನ ರಾಶಿಗಳನ್ನು ಪೌರಸಭೆಯ ಲಾರಿಗಳಲ್ಲಿ ತುಂಬಿಕೊಂಡು ಹೋಗಲಾಗುತ್ತಿದೆಯೆಂದೂ ಇದನ್ನು ಮೇಲ್ಪಟ್ಟ ಅಧಿಕಾರಿಗಳು ಕೂಡಲೇ ತಪ್ಪಿಸಬೇಕೆಂದೂ ಸಹ ಅವರು ಸೂಚಿಸಿರುತ್ತಾರೆ

ವೀರಶೈವ ಸಮ್ಮೇಳನ

ನಾಳೆ ಚಾಮರಾಜನಗರದ ತಾಲ್ಲೂಕು ದೊಡ್ಡರಾಯಪೇಟೆಯಲ್ಲಿ ನಡೆಯಬೇಕಾಗಿದ್ದ ನಂಜನಗೂಡು ಸಬ್ ಡಿವಿಜನ್ ವೀರಶೈವರ ಮಹಾ ಸಭೆಯನ್ನು ಅನಿರೀಕ್ಷಿತವಾದ ಭಾರಿ ಮಳೆಯ ದೆಸೆಯಿಂದ ಮುಂದುವರಿಸಲಾಗಿದೆಯೆಂದು ಸಂಚಾಲಕರು ತಿಳಿಸಿರುತ್ತಾರೆ.

ಸನ್ಮಾನ ಸಮಾರಂಭ

ಶ್ರೀ ಅಣ್ಣಾಜಿಸ್ವಾಮಿಗಳಿಗೆ ಶ್ರೀಮನ್ಮಹಾರಾಜರವರು ಆಸ್ಥಾನ ಶಿಲ್ಪ ಮಹಾವಿದ್ವಾನ್ ಎಂಬ ಬಿರುದನ್ನು ದಯಪಾಲಿಸಿದುದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಲು ರಾಜಧಾನಿಯ ವಿಶ್ವಕರ್ಮ ಸಮಾಜ ಮತ್ತು ವಿದ್ಯಾರ್ಥಿ ನಿಲಯಗಳ ಅಧ್ಯಕ್ಷರಾದ ಶ್ರೀ ಟಿ ಯಾಲಕ್ಕಾಚಾರ್ಯರು ನಿನ್ನೆ ಸಂಜೆ ಶ್ರೀ ರಾಮಚಂದ್ರರಾವ್ ಬೋಂಭೋರೆಯವರ ಅಧ್ಯಕ್ಷತೆಯಲ್ಲಿ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಕಾಳಿಕಾದೇವಿ ಕಮಟೇಶ್ವರಸ್ವಾಮಿಯವರ ದೇವಾಲಯದಲ್ಲಿ ಒಂದು ಸನ್ಮಾನ ಸಮಾರಂಭವನ್ನೇರ್ಪಡಿಸಿದ್ದರು.

ಪ್ರಾರ್ಥನೆ, ಸ್ವಾಗತ ಗೀತೆಗಳಾದನಂತರ ವಿಶ್ವಕರ್ಮ ಸಮಾಜ, ವಿದ್ಯಾರ್ಥಿನಿಲಯ, ಶಿಲ್ಪಕಲಾಮಂಡಲಿ ಮತ್ತು ವೇದಶಾಸ್ತ್ರೋಜ್ಜೀವಿನೀ ಸಭೆಗಳಿಂದ ಸ್ವಾಮಿಗಳಿಗೆ ಬಿನ್ನವತ್ತಳೆಗಳು ಅರ್ಪಿಸಲ್ಪಟ್ಟುವು. ಸ್ವಾಮಿಗಳು ತಮಗೆ ಸಮಾಜದವರು ಸಲ್ಲಿಸಿದ ಗೌರವಕ್ಕಾಗಿ ತಮ್ಮ ಕೃತಜ್ಞತೆಯನ್ನು ಸೂಚಿಸಿದ ನಂತರ ಅಧ್ಯಕ್ಷ ಭಾಷಣ ಮತ್ತು ವಂದನಾರ್ಪಣೆಗಳೊಡನೆ ಸಮಾರಂಭವು ಮುಕ್ತಾಯವಾಯಿತು

ನೆಪೋಲಿಯನ್ನನ ಜುಟ್ಟಿಗೆ ೧೭ ಸಹಸ್ರ ಫ್ರಾಂಕು !

ಫ್ರಾನ್ಸಿನ ನಾಯಕನಾಗಿದ್ದ ನೆಪೋಲಿಯನ್ ಬೋನೋಪಾರ್ಟನ ತಲೆಗೂದಲನ್ನು ೧೭ ಸಹಸ್ರ ಫ್ರಾಂಕುಗಳಿಗೆ ಮಾರಲಾಗಿದೆ. ಅದನ್ನು ನೆಪೋಲಿಯನ್ನನು ಇಂಗ್ಲಿಷ್ ಕಲಿಯುತ್ತಿದ್ದಾಗ ಬರೆದಿದ್ದ ಒಂದು ಕಾಗದದಲ್ಲಿ ಸುತ್ತಲಾಗಿದ್ದಿತೆಂದೂ ೧೮೫೭ ರಲ್ಲಿ ಅವನು ಸೆಂಟ್ ಹೆಲಿನಾ ದ್ವೀಪದಲ್ಲಿ ಬಂಧಿಸಲ್ಪಟ್ಟಿದ್ದಾಗ ಅದನ್ನು ಅವನ ತಲೆಯಿಂದ ಕತ್ತರಿಸಲಾಗಿದ್ದಿತೆಂದೂ ವರದಿಯಾಗಿದೆ

† ಸಮುದ್ರದ ಯುದ್ಧ ಹಡಗುಗಳು ಎಷ್ಟೇ ಬಲಯುತವಾಗಿದ್ದರೂ ಸಹ ಅಟಂಬಾಂಬುಗಳ ಮುಂದೆ ಅವುಗಳು ನಿಷ್ಪ್ರಯೋಜಕವಾಗುವುವು - ಎಂದು ಬ್ರಿಟನ್ನಿನ ಮಾಜಿ ಯುದ್ಧ ಸಚಿವರಾದ ಲಾರ್ಡ್ [illegible] ಹೇಳಿರುವರು

ಮದರಾಸಿಗೆ ಇನ್ನೂ ೫ ಜ ಮಂತ್ರಿಗಳು

ಪ್ರಕಾಶಂ ಮಂತ್ರಿಮಂಡಲದಲ್ಲಿ
ಗಳಾದ ಡೇನಿಯಲ್ ಥಾಮಸ್ ಎ
ರ್ಮಯ್ಯ ಮತ್ತು ಅವಿನಾಶಲಿಂಗಂ
ಯವರೂ ಮತ್ತು ಶ್ರೀಗಳಾದ ಕಾಳ
ಕಟ್ಟರಾವ್ ಮತ್ತು ಎ. ಬಿ ಶೆಟ್ಟಿಯವ
ಮದರಾಸಿನ ಮಂತ್ರಿಮಂಡಲದ ಸದಸ್ಯ
ಗಿ ಸೇರಿಸಲ್ಪಟ್ಟಿರುತ್ತಾರೆ. ಶ್ರೀ|| ಎ
ಶೆಟ್ಟರು ಕನ್ನಡಿಗರು.

ಬೆಂಕಿ ಪೆಟ್ಟಿಗೆ ಅಭಾವ

ಸ್ವಂ ಸು] ಕೃಷ್ಣರಾಜನಗರ.

ಈ ಊರಿನಲ್ಲಿ ಸುಮಾರು ೧೫ ದಿ
ಗಳಿಂದಲೂ ದೀಪದ ಪೆಟ್ಟಿಗೆಗಳು
ಯದೆ ಜನಗಳಿಗೆ ತುಂಬಾ ತೊಂದರೆ
ಟಾಗಿರುತ್ತದೆ ಸಂಬಂಧಪಟ್ಟ ಅಧಿ
ಗಳು ಕೂಡಲೇ ಇದಕ್ಕೆ ಗಮನ ಕೊಡ
ಕಾಗಿದೆ

ಕಳೆದುಹೋಗಿದೆ

ತಾ|| 26-3-47 ರಲ್ಲು ಗಣೇಶ
ಟೂರ್ ಬಸ್ಸಿನಲ್ಲಿ ಮಡಿಕೇರಿಯಿಂದ
ಸೂರಿಗೆ ಬರುತ್ತಿದ್ದಾಗ ನನ್ನ ಹಾಸಿಗೆ
ಒಬ್ಬ ಪ್ರಯಾಣಿಕರಿಂದ ಬದಲಾಯಿ
ಟ್ಟಿದೆ ಇದರ ಬಾಬತು ಸಮಾಚಾರ
ತಿಳಿದವರು ಮೈಸೂರು ಸಿಟಿ, ನಂಜ
ಬಹದ್ದೂರ್ರವರ ಛತ್ರದಲ್ಲಿರುವ ಪ್ರ
ಫೋಟೋಷ್ ರವರಿಗೆ ತಿಳಿಸಿದರೆ ಬಹಳ
ಕಾರವಾಗುತ್ತದೆ.

ಚಾಮುಂಡೇಶ್ವರಿ ಟಾಕೀಸ್

೨೯-೪-೪೭ ರಿಂದ : : ಎರಡನೇ ವಾರ

ಸ್ಟಾರ್ ಕಂಬೈನ್ಸ್ ಮತ್ತು ಪ್ರಗತಿಯವರ ಅಮೋಘವಾದ ತಮಿಳು ಚಿತ್ರ

– ವಿಜಯಲಕ್ಷ್ಮಿ –

ಮುಖ್ಯ ಭೂಮಿಕೆ:- ಎಂ. ವಿ ರಾಜಮ್ಮ, ಟಿ ಆರ್ ರಾಮಚಂದ್ರ,
ಬಿ. ಆರ್. ಪಂತುಲು ಮತ್ತು ಎಂ. ಜಿ ಆಂಡಾಳ್.

ರಾಜಕಮಲ್

೩೦-೩-೪೭ ರಿಂದ ನೇ ೭ ವಾರ

1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ (ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಂಪಾದ ನೃತ್ಯವೇಶಗಳು!! ಮನರಂಜಕವಾದ ದೃಶ್ಯಗಳು!!!
ಇವೆಲ್ಲವನ್ನೂ ಇಂದೇ ನೋಡಿ.

RAJKAMAL, MYSORE

Morning Shows from 28-3-47 for 4 days daily at 10-30 a m

GOLGOTHA

A marvellous million-dollar Production

ಅಭಿನಂದನೆ

ನಂಜನಗೂಡು ಟೌನ್ ಮೊದಲನೇ ಬ್ಲಾಕಿನ ವೋಟರುಗಳು ದಯಮಾಡಿ ನನಗೆ ತಮ್ಮ ಘನವಾದ ವೋಟನ್ನು ಕೊಟ್ಟು ಪೌರಸಭಾ ಚುನಾವಣೆಯಲ್ಲಿ ಜಯಶೀಲನನ್ನಾಗಿ ಮಾಡಿರುವುದಕ್ಕಾಗಿ ತುಂಬಾ ಕೃತಜ್ಞನಾಗಿರುವುದಲ್ಲದೆ ಅದಕ್ಕಾಗಿ ಈ ಮೂಲಕ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ

ಟಿ. ಎನ್. ನಂಜಪ್ಪಶೆಟ್ಟಿಯಾರ್,
ಚಾಮಲಾಪುರ,
ನಂಜನಗೂಡು

ಜಿಲ್ಲಾ ಬೋರ್ಡ್ ಚುನಾವಣೆ

೨೮-೪ ೪೭ ನೇ ಸೋಮವಾರ
ನಂಜನಗೂಡು ತಾಲ್ಲೂಕಿನ ಈ ಕೆಳಗಿನಂತೆ
ಕಾಂಗ್ರೆಸ್ ಉಮೇದುವಾರರಿಗೇ
ದಯವಿಟ್ಟು ಓಟು ಕೊಡಿ:-
ಹೆಚ್ ಲಿಂಗಪ್ಪ (ಹನಿಯಂಬಳ್ಳಿ)
ಹೆಚ್. ಎಂ. ನಾಗಪ್ಪ (ಹುಲ್ಲಳ್ಳಿ)
ಎಂ. ಲಿಂಗಣ್ಣ (ಹೆಜ್ಜಿಗೆ)

Edited, printed and published by [illegible]

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ ಗೋಪಾಲಾಚಾರ್ಲು

ಅರ್ಕ

ಗರ್ಭಾಶಯರೋಗ ನಿವಾರಿ

ಆರೋಗ್ಯ ಮತ್ತು ದೊ
ಳನ್ನು ನಿರ್ಮೂಲಿಸಿ
ಪೂರ್ಣ ಸ್ತ್ರೀತ್ವವನ
ಸಾಧಿಸುವಲ್ಲಿಯಂತೆ
ಯವಾದ ದಿವ್ಯೌಷಧ
ದನ್ನು ಬಿಡದೆ ಸೇವಿ
ರಾದರೆ, ನಿಮ್ಮ ಜೀ
ಪರಮಾವಧಿಯಾದ
ಮಂದಾನಂದವನ್ನು
ದೆ ಒದಗಿಸಬಲ್ಲುದು

ಆಯುರ್ವೇದಾಶ್ರಮಂ ಲಿಮಿಟೆಡ್
ಟಿ-ನಗರ್.... ಮದರಾಸ್

ರೀ. ನಂ. 392 | ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಭಾನುವಾರ ೨೦—೪—೪೭ [ಸಂಚಿಕೆ ೧೯೭

ವಿಯಟ್ನಾಮಿನೊಡನೆ ಸಂಧಾನಕ್ಕೆ ಫ್ರಾನ್ಸು ಸಿದ್ಧ

ಕೊಲೆ ಮೊಕದ್ದಮೆಯಲ್ಲಿ ಖುಲಾಸೆ

ಮೈಸೂರು ೧೦

ಚಾಮರಾಜನಗರದ ತಾಲ್ಲೂಕು ಬೋರ್ಡಿನ ಆದಿಕರ್ನಾಟಕರ ಜಾತಿ ಬುಳ್ಳಂಕ ಎಂಬುವನನ್ನು ಮುಟ್ಟು, ಧರ್ಮಗ ೧೯-೬-೪೬ ರಲ್ಲಿ ಕೋಡಿ ಮೊಳೆ ಕೆರೆ ಬಳಿ ಹೊಡೆದು ಕೊಂದು ಹಾಕಿದ ಆಪಾದನೆ ಮೇಲೆ ದಿಡ್ಡೀಪುರದ ಚಿಕ್ಕ..., ಶಾಳ ಮತ್ತು ಹೊಂಗನೂರಿನ ರಂಗ... ಮತ್ತು ಇತರ ೭ ಮಂದಿಯ ಮೇಲೆ ಚಾಮರಾಜನಗರದ ಪೋಲೀಸರು ಸೆಷನ್ಸ್ ನ್ಯಾಯಾಧೀಶರ ಮುಂದೆ ಮೊಕದ್ದಮೆ ಹೂಡಿದ್ದರು. ಆದರೆ ಸೆಷನ್ಸಿಗೆ ಹಾಜರಾಗಿದ್ದ ನಿನ್ನೆ ಸೆಷನ್ಸ್ ನ್ಯಾಯಾಧೀಶರು ಆಪಾದಿತರು ನಿರಪರಾಧಿಗಳೆಂದು ಹೇಳಿ ಮೊಕದ್ದಮೆಯನ್ನು ವಜಾ ಮಾಡಿರುವರು.

...ಕ್ಕೆ ಈ ದಿನ ರಾತ್ರಿ ೮|| ಘಂಟೆಗೆ ಗೀತಾ... ಯಲ್ಲಿರುವ ಶ್ರೀ ಪ್ರಸನ್ನ ಬಾಲಕ ಸೀತಾರಾಮ ಮಂದಿರದಲ್ಲಿ ಶ್ರೀಮತಿ ಲಕ್ಷಮ್ಮನವರ ಹಾಡುಗಾರಿಕೆಯು ಪಕ್ಕ ವಾದ್ಯಗಳೊಡನೆ ನೆರವೇರುತ್ತದೆ. ಸರ್ವರಿಗೂ ಆಹ್ವಾನವುಂಟು.

ಫ್ರಾನ್ಸ್-ವಿಯಟ್ನಾಂ ಒಪ್ಪಂದವೇ ?

ವಿಯಟ್ನಾಮಿನ ಪ್ರಜೆಗಳು ಸ್ವಭಾವ...ರಿಗಳು, ಅವರನ್ನು ನಾಶಪಡಿಸಲಾಗ..., ಅವರ ಪ್ರತಿನಿಧಿಗಳೊಡನೆ ಸಂಧಾನ ಕೆಲಸ ಫ್ರಾನ್ಸು ಸಿದ್ಧವಾಗಿದೆ- ಎಂಬುದಾಗಿ ಫ್ರಾನ್ಸಿನ ವಸಾಹತುಗಳ ಮಂತ್ರಿ ಮಾರಿಯಸ್ ಮೌಟೆಟ್ಟರು ಹೇಳಿರುವರು. ಇಂಡೋ-ಚೀಣದ ಕದನವನ್ನು ಮುಕ್ತಾಯಗೊಳಿಸುವ ಮಾರ್ಗವನ್ನು ಗೊತ್ತು ಮಾಡಲು ಅಲ್ಲಿನ ಫ್ರೆಂಚ್ ಹೈಕಮಿಷನರ್ ಎಮಿಲ್ ಬೋಲ್ಲೈರವರು ಸೈಗಾನಿಗೆ ತೆರಳಿದ್ದಾರೆ.

ಶಿವ ಲಿಂಗದ ಮೇಲೆ ಸರ್ಪ

ಬೊಬ್ಬಿಲಿ ಸಂಸ್ಥಾನದ ಉತ್ತರವಿಳ್ಳಿ ಎಂಬಲ್ಲಿಯ ಒಂದು ಶಿವ ದೇವಾಲಯವನ್ನು ಶಿವರಾತ್ರಿಯ ದಿನ ಒಂದು ನಾಗರ ಹಾವು ಪ್ರವೇಶಿಸಿ ಶಿವಲಿಂಗಕ್ಕೆ ಸುತ್ತು ಹಾಕಿಕೊಂಡು ಅಲ್ಲಿಯೇ ಮನೆ ಮಾಡಿಕೊಂಡಿತ್ತು. ಮಾರನೇ ದಿನ ಅರ್ಚಕರು ಅದನ್ನು ನೋಡಿ ಇತರರ ಸಹಾಯದಿಂದ ಆ ಹಾವನ್ನು ಹಿಡಿದು ದೂರದಲ್ಲಿ ಬಿಟ್ಟರು. ಆದರೆ ಪುನಃ ಸಂಜೆ ವೇಳೆ ಆ ಸರ್ಪವು ಲಿಂಗವನ್ನು ಬಿಟ್ಟಿರಲಾರದೆ ಹೇಗೋ ಪುನಃ ಅಲ್ಲಿಗೇ ಬಂದು ಮಲಗುತ್ತದೆ.

ಸುಸಮಯ! ಕಳೆದುಕೊಳ್ಳಬೇಡಿ!

ದೂರ ದೇಶದಿಂದ ಬಂದಿರುವ ಉಲ್ಲನ್ ಜೆಂಟ್ಸ್ ಕೋಟುಗಳು ನಾನಾ ಬಣ್ಣ ಮತ್ತು ನಮೂನೆಗಳಲ್ಲಿ ಅತ್ಯಂತ ಸುಲಭ ಬೆಲೆ

1 ಎಲ್. ಮಧುರಾದಾಸ್,
2 ಕೆ ಎಸ್ ಪಾಂಡುರಂಗರಾವ್ ಅಂಡ್ ಕೋ
ಫ್ಯಾನ್ಸಿ ಬಟ್ಟೆ ವರ್ತಕರು,
331, ಗರ್ನೇಕ್ಷನ್ ಬೌಕ್, ಮೈಸೂರು.

ಬಿಹಾರ್ ಕಾಂಗ್ರೆಸ್ ಅಧ್ಯಕ್ಷರ ಕೊಲೆ

ಬಿಹಾರ್ ಪ್ರಾಂತ್ಯದ ಕಾಂಗ್ರೆಸ್ ಅಧ್ಯಕ್ಷರಾದ ಮೌಲಾನಾ ಅಬ್ದುಲ್ ಬಾರಿಯವರು ಮೊನ್ನೆ ಕೊಲೆಮಾಡಲ್ಪಟ್ಟಿದ್ದಾರೆ. ಅವರು ಪ್ರತ್ಸ ಎಂಬ ಹಳ್ಳಿಯಿಂದ ಪಾಟ್ನಾ ನಗರಕ್ಕೆ ಹಿಂದಿರುಗುತ್ತಿದ್ದಾಗ ಈ ಕೃತ್ಯ ಜರುಗಿದೆ. ಪ್ರಧಾನಿ ಶ್ರೀ|| ಕೃಷ್ಣಸಿನ್ಹರು ಇತರ ಮಂತ್ರಿಗಳೊಡನೆ ಕೂಡಲೇ ಸ್ಥಳಕ್ಕೆ ಭೇಟಿಯಿತ್ತಿದ್ದರು. ಈಗ ಕೆಲವು ದಿನಗಳ ಹಿಂದೆಯೂ ಸಹ ಅವರನ್ನು ಕೊಲೆ ಮಾಡುವ ಪ್ರಯತ್ನವು ನಡೆದಿತ್ತು.

ಗವರ್ನರುಗಳ ಸಮ್ಮೇಳನ

ವೈಸರಾಯ್ ಲಾರ್ಡ್ ಮೌಂಟ್ ಬ್ಯಾಟನ್ನರು ಎಲ್ಲಾ ಪ್ರಾಂತ್ಯಗಳ ಗವರ್ನರುಗಳನ್ನೂ ಏಪ್ರಿಲ್ ಮಧ್ಯಭಾಗದಲ್ಲಿ ಸಮ್ಮೇಳನಕ್ಕಾಗಿ ದೆಹಲಿಗೆ ಆಹ್ವಾನಿಸಿದ್ದಾರೆ.

ಪೋಲೀಸಿನವರ ಸಂಬಳ ಹೆಚ್ಚಿತು

ಮದರಾಸ್ ಸರ್ಕಾರದವರು ತಮ್ಮ ಪೋಲೀಸ್ ಕಾನ್ಸ್ಟೇಬಲ್ಲುಗಳ ಸಂಬಳವನ್ನು ಹೆಚ್ಚಿಸುವುದಾಗಿ ನಿರ್ಧರಿಸಿರುತ್ತಾರೆ. ಅವರ ಸಂಬಳವು ಇನ್ನು ಮುಂದೆ ೩೦ ರೂಪಾಯಿನಿಂದ ಆರಂಭವಾಗುವುದು. ತಮ್ಮ ಸಂಬಳವನ್ನು ಹೆಚ್ಚಿಸಬೇಕೆಂದು ಒತ್ತಾಯಪಡಿಸಲು ಮದರಾಸಿನ ಪೋಲೀಸಿನವರು ಕಳೆದ ತಿಂಗಳ ಸಂಬಳವನ್ನು ಇದುವರೆಗೆ ತೆಗೆದುಕೊಂಡಿರುವುದಿಲ್ಲ.

ಕುಂಚಿಟಿಗರ ಶ್ರೀ ರಾಮ ಮಂದಿರ

ಮೈಸೂರು ಸಂತೇಪೇಟೆಯಲ್ಲಿರುವ ಮೇಲ್ಕಂಡ ಮಂದಿರದಲ್ಲಿ ನಾಳೆ ಸಂಜೆ ೬|| ಗಂಟೆಗೆ ಆ|| ವಿ|| ವೈಣಿಕ ಪ್ರವೀಣ ವೆಂಕಟಗಿರಿಯಪ್ಪನವರ ವೀಣಾ ವಾದನವು ಶ್ರೀಮನ್ಮಹಾರಾಜರವರ ಕಾರ್ಯದರ್ಶಿ ಶ್ರೀ|| ಟಿ. ರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು. ನಾಳಿದ್ದು ಸಂಜೆ ವಿ|| ನಾರಾಯಣ ಶಾಸ್ತ್ರಿಗಳಿಂದ ಹರಿಕಥೆ ಜರುಗುವುದು.

ಅಸ್ಸಾಮಿನಲ್ಲಿ ೧೦೦೦೦ ಲೀಗ್ ಮುತ್ತಿಗೆಗಾರರ ಧಾಳಿ

ಬಂಗಾಳದ ಮೈಮೆನ್‌ಸಿಂಗ್ ಜಿಲ್ಲೆಯಿಂದ ಆಯುಧಧಾರಿಗಳಾದ ೧೦೦೦೦ ಮುತ್ತಿಗೆಗಾರರು ಮುಸ್ಲಿಂ ಲೀಗಿನವರ ನಾಯಕತ್ವದಲ್ಲಿ ಅಸ್ಸಾಮಿಗೆ ನುಗ್ಗಿ ಧಾಳಿ ನಡೆಸುತ್ತಿರುವುದಾಗಿ ವರದಿಯಾಗಿದೆ. ಅಸ್ಸಾಮಿನ ಪೋಲೀಸರಿಗೂ, ಮುತ್ತಿಗೆಗಾರರಿಗೂ ಮೊದಲನೆಯ ಘರ್ಷಣೆಯು ಆಗಲೇ ನಡೆದಿದೆ. ಮಿಲಿಟರಿ ಸಹಾಯವನ್ನು ಕೂಡಲೇ ಕಳುಹಿಸದಿದ್ದರೆ ಪರಿಸ್ಥಿತಿಯು ಕೈ ಮೀರಿ ವಿಪರೀತ ಅನಾಹುತಕ್ಕೆ ಕಾರಣವಾಗುವುದೆಂದು ತಿಳಿಸಿ ಇಲ್ಲಿನ ಪ್ರಧಾನಿಯವರು ಕೇಂದ್ರ ಸರ್ಕಾರಕ್ಕೆ ಪ್ರಾರ್ಥನೆಯನ್ನು ಕಳುಹಿಸಿದ್ದರು. ಮಿಲಿಟರಿ ಪಡೆಯನ್ನು ಅಸ್ಸಾಮಿಗೆ ಕಳುಹಿಸಿ ಅದನ್ನು ಅಲ್ಲಿನ ಸರ್ಕಾರದ ಹತೋಟಿಯಲ್ಲಿ ಇಡಬೇಕೆಂದು ಕೇಂದ್ರ ಸರ್ಕಾರದವರು ಪೌರ್ವಾತ್ಯ ಕಮ್ಯಾಂಡಿನವರಿಗೆ ಆಜ್ಞೆಯಿತ್ತಿರುವುದಾಗಿ ಹೇಳಲಾಗಿದೆ.

ಪಂಡಿತ ಸದಾಶಿವ ಶಾಸ್ತ್ರಿಗಳ ನಿಧನ

ಮೈಸೂರು ೧೦

ಆಸ್ಥಾನ ಮಹಾವಿದ್ವಾನ್ ಪಂಡಿತ ಸದಾಶಿವಶಾಸ್ತ್ರಿಗಳು ... ಮೊಹಲ್ಲೆಯ ಸ್ವಗೃಹದಲ್ಲಿ ತಮ್ಮ ೮೦ ನೆಯ ವಯಸ್ಸಿನಲ್ಲಿ ಮೊನ್ನೆ ಬೆಳಗ್ಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಸಂಸ್ಥಾನದ ಮಾಜಿ ದಿವಾನರಾದ ಸರ್ ಮಿರ್ಜಾರವರು ಇವರಲ್ಲಿ ಬಹಳ ಗೌರವವನ್ನಿಟ್ಟುಕೊಂಡಿದ್ದು ಇವರಿಂದ ಒಂಟಿಕೊಪ್ಪಲಿನಲ್ಲಿ ಸ್ಥಾಪಿತವಾದ ಅಕ್ಷರದೇವಾಲಯಕ್ಕೆ ೫ ಸಹಸ್ರ ರೂ.ಗಳನ್ನು ಸಹಾಯ ಮಾಡಿದ್ದರು. ಸನಾತನ ಧರ್ಮೋದ್ಧಾರ ಕಾರ್ಯಗಳಲ್ಲಿ ದಿವಂಗತರಿಗೆ ತುಂಬಾ ಆಸಕ್ತಿಯಿತ್ತು. ಇವರು ವೇದಶಾಸ್ತ್ರಪೋಷಣೀ ಸಭೆಯನ್ನು ಸ್ಥಾಪಿಸಿ ಅದಕ್ಕಾಗಿ ಅನೇಕರಿಂದ ಧನಸಹಾಯ ಪಡೆದಿದ್ದರು. ದಿವಂಗತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಮದರಾಸಿನ 'ಬಕಿಂಗ್‌ಹ್ಯಾಂ' ಮತ್ತು 'ಕರ್ನಾಟಿಕ್' ಗಿರಣಿಗಳ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ|| ಅಂಥೋಣಿ ಪಿಳ್ಳೆಯವರನ್ನು ಅಲ್ಲಿನ ಸರ್ಕಾರದವರು ದಸ್ತಗಿರಿ ಮಾಡಿದ್ದಾರೆ. ಕೆಲಸಗಾರರ ಕೋರಿಕೆಗಳನ್ನು ವಿಚಾರಿಸಲು [illegible] ಕೋರ್ಟನ್ನು ಸ್ಥಾಪಿಸಿದ ಮೇಲೆಯೂ ಅವರು ಮುಷ್ಕರವನ್ನು ಮುಂದುವರಿಸುತ್ತಿರುವರೆಂಬುದೇ ಇದಕ್ಕೆ ಕಾರಣ.

ಸತ್ಯಾಗ್ರಹ ನಿರ್ಣಯದ ಅಂಗೀಕಾರ

ಬೌರಿಂಗ್‌ಪೇಟೆಯಲ್ಲಿ ಕಾಂಗ್ರೆಸ್ ಅಧಿವೇಶನ

(ವಿಶೇಷ ಸುದ್ದಿಗಾರನಿಂದ ತಂತಿ)

ಬೌರಿಂಗ್‌ಪೇಟೆ ೧೦

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ ಅಧಿವೇಶನವು ನಿನ್ನೆ ಮಧ್ಯಾಹ್ನ ರಾಜಾ ಹನುಮಂತಪ್ಪಶೆಟ್ಟಿರವರ ತೋಟದಲ್ಲಿ ಆರಂಭವಾಯಿತು. ಇದಕ್ಕೆ ಮುಂಚೆ ಸುಂದರವಾಗಿ ಅಲಂಕೃತವಾಗಿದ್ದ ರಸ್ತೆಯಲ್ಲಿ ಅಧ್ಯಕ್ಷರ ಮೆರವಣಿಗೆಯು ನಡೆಯಿತು. ವರ್ತಕರು ಅಧ್ಯಕ್ಷರಿಗೆ ಹಾರ, ತುರಾಯಿಗಳನ್ನರ್ಪಿಸಿದರು. ಸಂಸ್ಥಾನದ ನಾನಾ ಭಾಗಗಳಿಂದ ಸುಮಾರು ನೂರೈವತ್ತು ಪ್ರತಿನಿಧಿಗಳು ಬಂದಿದ್ದಾರೆ.

ನೆನ್ನೆ ಬೆಳಗ್ಗೆ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಮೈಸೂರು ಧ್ವಜವನ್ನೂ, ಕೋಲಾರ ಜಿಲ್ಲಾ ಕಾಂ|| ಅಧ್ಯಕ್ಷರಾದ ಶ್ರೀ ಹೆಚ್. ಸಿ. ಲಿಂಗಾರೆಡ್ಡಿಯವರು ರಾಷ್ಟ್ರಧ್ವಜವನ್ನೂ ಹಾರಿಸಿದರು.

ಮಧ್ಯಾಹ್ನ ನಾಲ್ಕೂವರೆ ಗಂಟೆಗೆ ಅಧಿವೇಶನವು ಆರಂಭವಾಯಿತು. ಸ್ವಾಗತ ಗೀತೆಯ ನಂತರ ಸ್ವಾಗತಾಧ್ಯಕ್ಷರಾದ ರಾಜಾ ಹನುಮಂತಪ್ಪಶೆಟ್ಟರು ಪ್ರತಿನಿಧಿಗಳಿಗೆ ಸುಸ್ವಾಗತವನ್ನು ಕೋರಿ ಭಾಷಣ ಮಾಡಿದರು.

ಅಧ್ಯಕ್ಷರಾದ ಶ್ರೀ ಕೆ. ಚಂಗಲರಾಯರೆಡ್ಡಿಯವರು ಭಾಷಣ ಮಾಡುತ್ತಾ ಶ್ರೀಮನ್ಮಹಾರಾಜರವರು ಸಂದೇಶವನ್ನು ಘೋಷಿಸಿದ ಮೇಲೆ ಇದುವರೆಗಿನ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿದರು. ರಾಜ್ಯಾಂಗ ರಚನಾ ಸಭೆಗೆ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸಬೇಕೆಂದು ಒತ್ತಾಯಪಡಿಸಿದರು. ಜವಾಬ್ದಾರಿ ಸರ್ಕಾರದ ಸ್ಥಾಪನೆಯ ಕುರಿತು ಬಗ್ಗೆ ಖಚಿತವಾದ ಪ್ರಕಟಣೆಯನ್ನು ಹೊರಡಿಸಬೇಕೆಂದು ಶ್ರೀಮನ್ಮಹಾರಾಜರವರನ್ನು ಪ್ರಾರ್ಥಿಸಿದರು. ಸತ್ಯಾಗ್ರಹ ಹೂಡಲು ಸ್ವಲ್ಪ ಕಾಲ ಕಾಲಾವಕಾಶ ಕೊಡಬೇಕೆಂದು ಡಾ|| ಪಟ್ಟಾಭಿಸೀತಾರಾಮಯ್ಯ, ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಪಂಡಿತ ನೆಹರೂರವರು ಸಲಹೆಗಳನ್ನಿತ್ತಿರುವುದಾಗಿ ರೆಡ್ಡಿಯವರು ತಿಳಿಸಿದರು.

ಮೇ ೧ ನೇ ತಾ|| ನಿಂದ ಸತ್ಯಾಗ್ರಹವನ್ನು ಹೂಡುವ ಬಗ್ಗೆ ಕಾಂ|| ಕಾರ್ಯಕಾರಿ ಸಮಿತಿಯು ಮಾಡಿರುವ ನಿರ್ಣಯವನ್ನು ಮಂಡಿಸಿ, ಅದಕ್ಕೆ ಸಕಲರೂ ಬೆಂಬಲ ಕೊಡಬೇಕೆಂದು ಶ್ರೀ ಕೆ. ಟಿ. ಭಾಷ್ಯಂರವರು ಪ್ರಾರ್ಥಿಸಿ ಪ್ರಭುತ್ವದವರು ಕೂಡಲೇ ಜವಾಬ್ದಾರಿ ಸರ್ಕಾರವನ್ನು ಘೋಷಿಸಬೇಕೆಂದು ಕೋರಿದರು.

ಶ್ರೀ ಎಚ್. ಸಿದ್ದಯ್ಯನವರು ನಿರ್ಣಯವನ್ನು ಅನುಮೋದಿಸಿದರು. ಮೂಲ ನಿರ್ಣಯಕ್ಕೆ ನಾಲ್ಕು ಮಂದಿ ತಿದ್ದುಪಡಿಗಳನ್ನು ಸೂಚಿಸಿದರು. ಎಂಟು ಮಂದಿ ಅವುಗಳ ಪರವಾಗಿ ಭಾಷಣಮಾಡಿದರು. ನಾಲ್ಕು ಗಂಟೆಗಳ ಬಿಸಿ ಬಿಸಿ ಚರ್ಚೆಯ ನಂತರ ಕಾರ್ಯಕಾರಿ ಸಮಿತಿಯ ನಿರ್ಣಯವು ಅವಿರೋಧವಾಗಿ ಅಂಗೀಕರಿಸಲ್ಪಟ್ಟಿತು.

ಸೂಚನೆ

ಶ್ರೀ ರಾಮನವಮಿ ಪ್ರಯುಕ್ತ ನಾಳೆ "ಸಾಧ್ವಿ" ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ.

ಪ್ರಕಟಣೆ

ಇದೇ ಏಪ್ರಿಲ್ ೧ನೇ ತಾರೀಖಿನಿಂದ ನಾವು ನಮ್ಮ ರಣಜಿತ್ ಟಾಕೀಸ್ ವ್ಯವಹಾರವನ್ನು ತಾತ್ಕಾಲಿಕವಾಗಿ ಮುಚ್ಚುತ್ತೇವೆ. ಇದುವರೆಗೂ ರಾಜಧಾನಿಯ ಪುರವಾಸಿಗಳು ನಮಗೆ ಇತ್ತ ಪ್ರೋತ್ಸಾಹಕ್ಕಾಗಿ ಈ ಮೂಲಕ ನಮ್ಮ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತೇವೆ.

ಮ್ಯಾನೇಜ್‌ಮೆಂಟ್ : : ರಣಜಿತ್ ಟಾಕೀಸ್
ಮೈಸೂರು

ಸಾಧ್ವಿ

ತಾ|| ೩೦-೩-೪೭ ಭಾನುವಾರ

ವೈಸರಾಯರ ಸಮಾಲೋಚನೆ

ಮುಂದೆ ತಾವು ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಸಮಾಲೋಚನೆ ನಡೆಸಲು ಹೊಸ ವೈಸರಾಯರು ಮಹಾತ್ಮ ಗಾಂಧಿಯವರಿಗೂ, ಮಿ|| ಜಿನ್ನಾರವರಿಗೂ ಆಹ್ವಾನವನ್ನು ಕಳುಹಿಸಿರುವರಷ್ಟೆ. ಈ ಇಬ್ಬರು ನಾಯಕರೂ ಸದರಿ ಆಹ್ವಾನವನ್ನು ಅಂಗೀಕರಿಸಿ ದೆಹಲಿಗೆ ತೆರಳುವರು. ಇನ್ನು ಒಂದೆರಡು ದಿನಗಳಲ್ಲಿ ಮಾತುಕತೆಗಳು ಆರಂಭವಾಗುವುವು. ವೈಸರಾಯರೊಡನೆಯೂ, ಮಹಾತ್ಮರೊಡನೆಯೂ ಸಮಾಲೋಚನೆಗಳಲ್ಲಿ ತಾವು ಭಾಗವಹಿಸುವುದಾಗಿ ಮಿ|| ಜಿನ್ನಾರವರು ಹೇಳಿರುವರು. ಆದುದರಿಂದ ಇದೊಂದು ತ್ರಿಮೂರ್ತಿಗಳ ಸಮ್ಮೇಳನವಾಗುವುದೆಂಬ ಸೂಚನೆಯಿದೆ.

ತಾವು ತಮ್ಮ ವೈಯಕ್ತಿಕ ಅಭಿಪ್ರಾಯಗಳನ್ನು ಮಾತ್ರ ಸೂಚಿಸಲು ಸಮರ್ಥರೆಂದೂ, ಕಾಂಗ್ರೆಸ್ಸಿನ ಪರವಾಗಿ ಮಾತನಾಡಲು ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರನ್ನೇ ಕರೆಸಬೇಕೆಂದೂ ಮಹಾತ್ಮರು ಎಂದಿನಂತೆ ಸಲಹೆಯಿತ್ತಿದ್ದಾರೆ. ಆಚಾರ್ಯರಿಗೂ ಆಹ್ವಾನವು ಹೋಗುವ ನಿರೀಕ್ಷೆಯಿದೆ. ಮುಂದಿನ ವಾರವು ದೆಹಲಿಯಲ್ಲಿ ಅತ್ಯಂತ ಮಹತ್ವದವಾದ ಕಾರ್ಯಚಟುವಟಿಕೆಗಳ ಪರ್ವಕಾಲವಾಗಿ ಪರಿಣಮಿಸುವುದು. ಪ್ರಾಂತೀಯ ಗೌರ್ನರುಗಳನ್ನೂ ಸಹ ವೈಸರಾಯರು ಸಮಾಲೋಚನೆಗೆ ಕರೆದಿದ್ದಾರೆ.

ಕೇಂದ್ರ ಸರ್ಕಾರದಲ್ಲಿ ಈಗಿರುವ ಅಸಮಂಜಸತ್ವವನ್ನು ಹೋಗಲಾಡಿಸಿ ಅದು ಡೊಮಿನಿಯನ್ ಅಂತಸ್ತಿನ ಸರ್ಕಾರದಂತೆ ಕೆಲಸ ಮಾಡಲು ಏರ್ಪಡಿಸುವುದೇ ಹೊಸ ವೈಸರಾಯರ ಪ್ರಥಮ ಕರ್ತವ್ಯವೆಂದು ಈ ಮೊದಲೇ ವರದಿಯಾಗಿದ್ದಿತು. ಅದಕ್ಕೆ ಅನುಗುಣವಾಗಿ ಅವರು ಈಗ ಕಾರ್ಯಕ್ರಮವನ್ನು ಕೈಗೊಳ್ಳಲಿರುವರೆಂದು ಭಾವಿಸಲಾಗಿದೆ. ಆದರೆ ಇದಕ್ಕೆ ಅನೇಕ ತೊಡಕುಗಳು ಇನ್ನೂ ಇದ್ದೇ ಇವೆ. ಮುಸ್ಲಿಂ ಲೀಗಿನ ಪ್ರತಿನಿಧಿಗಳು ತಮ್ಮ ಸ್ವಂತ ಹಕ್ಕಿನ ಮೇಲೆ ಕೇಂದ್ರ ಸರ್ಕಾರದಲ್ಲಿ ಇರುವುದಾಗಿಯೂ, ತಾವು ಯಾವ ನಿಯಮ, ನಿರ್ಬಂಧಗಳಿಗೂ ಬದ್ಧರಲ್ಲವೆಂಬುದಾಗಿಯೂ ಹೇಳುತ್ತಿರುವರು. ಇದರಿಂದ ಕೇಂದ್ರ ಸರ್ಕಾರದ ಸಂಯುಕ್ತ ಕಾರ್ಯಾಚರಣೆಗಳಿಗೆ ಭಂಗವುಂಟಾಗುತ್ತಿದೆ. ಅಲ್ಲದೆ ಅನೇಕ ಮಾಮೂಲು ಕಾರ್ಯಕ್ರಮಗಳಿಗೂ ಅಡಚಣೆಗಳು ಪ್ರಾಪ್ತವಾಗುತ್ತಿವೆ. ಇದನ್ನು ತಪ್ಪಿಸುವುದು ವೈಸರಾಯರ ಮುಖ್ಯ ಕರ್ತವ್ಯ.

ಪಾಕಿಸ್ತಾನವೇ ಇಂದಿನ ಸಕಲ ಬಿಕ್ಕಟ್ಟಿಗೂ ಪರಿಹಾರೋಪಾಯವೆಂದು ಮಿ|| ಜಿನ್ನಾರವರು ಇನ್ನೂ ಹೇಳುತ್ತಲೇ ಇದ್ದಾರೆ. ಅಲ್ಲದೆ ಲೀಗಿನ ಪ್ರಧಾನವಿರುವ ಪ್ರಾಂತ್ಯಗಳಲ್ಲಿ ಸ್ವತಂತ್ರ ಆಡಳಿತಗಳನ್ನು ಸ್ಥಾಪಿಸಲು ಈಗಿನಿಂದಲೇ ಪ್ರಯತ್ನಗಳು ಜರುಗುತ್ತಿವೆ. ಪಂಜಾಬ್, ಅಸ್ಸಾಂ ಮತ್ತು ಗಡಿನಾಡುಗಳಲ್ಲಿ ಲೀಗಿನವರು ಆಡಳಿತ ವರ್ಗದವರಿಗೆ ಅಪಾರವಾದ ಕಿರುಕುಳಗಳನ್ನು ಒಡ್ಡುತ್ತಿದ್ದಾರೆ. ಹೀಗಿರುವಲ್ಲಿ ಕಾಂಗ್ರೆಸ್ಸಿಗೂ, ಲೀಗಿನವರಿಗೂ ಒಡಂಬಡಿಕೆಯಾಗುವುದು ಹೇಗೆಂಬುದೇ ತೋಚುವುದಿಲ್ಲ.

ಬ್ರಿಟಿಷ್ ಸರ್ಕಾರದವರು ಇದುವರೆಗೆ ಕೊಟ್ಟಿರುವ ಹೇಳಿಕೆಗಳಂತೆ ವರ್ತಿಸುವುದಾದರೆ ಈ ಕಂಡಾಟಗಳೆಲ್ಲವೂ ಬೇಗನೆ ಮಾಯವಾಗುವುವು. ಆದರೆ ಮ… ಯುವರಾದ ಬ್ರಿಟಿಷರ ಬಲವಂತದಿಂ… ದೇಶದಲ್ಲಿ ಶಾಂತಿಯು ನೆಲೆಸುವ … ಇಲ್ಲಿನ ವಿವಿಧ ಪಂಗಡಗಳ ಪರಸ್ಪರ … ಬಡಿಕೆಯಿಂದಲೇ ಅದು ಸ್ಥಾಪಿಸಲ್ಪ… ದು ಸಕಲರೂ ಹಾರೈಸುತ್ತಿದ್ದಾರೆ. ದೆಹಲಿಯಲ್ಲಿ ನಡೆಯಲಿರುವ ಮಾತು… ಗಳು ಇದಕ್ಕೆ ಸಹಕಾರಿಯಾಗಲಿ ಎಂದು ಆಶಿಸೋಣ.

ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರ ಆಫೀಸು,

ಮೈಸೂರು, ತಾ|| ೨೪-೩-೪೭.

ನಂ H I P. R. ೨೪೭/೪೬-೪೭

ನೋಟೀಸು

ಮೈಸೂರು ಸಿಟಿಯಲ್ಲಿರುವ ಪ್ರತಿಯೊಂದು ರೊಟ್ಟಿ ಅಂಗಡಿ, ಮಿಠಾಯಿ ಅಂಗಡಿ, ಹೋಟೆಲು, ರೆಸ್ಟೊರೆಂಟ್, ಟೀ ಕಾಫಿ ಅಂಗಡಿ, ಹಾಲಿನ ಅಂಗಡಿ, ಕ್ಷೌರದ ಅಂಗಡಿ, ಐಸ್ ಮತ್ತು ತಂಪು ಪಾನೀಯಗಳನ್ನು ತಯಾರು ಮಾಡುವ ಮತ್ತು ವಿಕ್ರಯ ಮಾಡುವ ಸ್ಥಳಗಳು ಮತ್ತು ಮಾಂಸದ ಅಂಗಡಿಗಳು ಇವುಗಳ ಮಾಲೀಕರೂ, ತಯಾರು ಮಾಡುವವರೂ, ಹಂಚುವವರೂ, ಬಡಿಸುವವರೂ, ಮಾರುವವರೂ, ಶುಚಿಮಾಡುವವರೂ, ಅಡಿಗೆ ಮಾಡುವವರೂ ಮತ್ತು ಇತರ ಸಮಸ್ತ ನೌಕರ ಮಾಣೀಗಳೂ ಗೌರ್ನಮೆಂಟಿನಿಂದ ಜಾರಿಯಾದ ೧೪-೩-೪೭ ನೇ ತಾರೀಖು ಆರ್ಡರ್ ನಂ. ಎಲ್: ೯೩೭೩-೪/೧೬೭. ೧೯೭-೪೬-೩೫ ಮೇರೆ ತಿದ್ದುಪಾಟಾದ ಮೈಸೂರು ಸಿಟಿ ಮುನಿಸಿಪಲ್ ಪರವಾನ್ಗಿ ಸಲ್ಲಿರುವ ಹೋಟೆಲ್, ರೊಟ್ಟಿ ಅಂಗಡಿ ವರ್ತಕರಿಗೆ ಲೈಸೆನ್ಸ್ ಕೊಡುವ ಮತ್ತು ತನಿಖೆ ಮಾಡಲು ನಿಯಮಿತವಾಗಿರುವ ಬೈಲಾ ೭, ೮ ಮತ್ತು ೯ ನೇ ನಿಬಂಧನೆಗಳ ಪ್ರಕಾರ ಸದರಿ ಕೌನ್ಸಿಲಿನ ನೇಮಕವಾದ ಡಾಕ್ಟರರಿಂದ ಮುನಿಸಿಪಲ್ ಹೆಲ್ತ್ ಆಫೀಸಿನಲ್ಲಿ ಪರೀಕ್ಷೆ ಮಾಡಿಸಿಕೊಂಡು ತಾವೂ ಆಯಾ ಸ್ಥಳಗಳಲ್ಲಿ ಕೆಲಸಮಾಡಲು ಆರೋಗ್ಯ ರೀತ್ಯಾ ಅರ್ಹತೆ ಪಡೆದಿರುತ್ತಾರೆಂಬ ಸರ್ಟಿಫಿಕೇಟನ್ನು ಪ್ರತಿವರ್ಷವೂ ಪಡೆಯತಕ್ಕದ್ದು. ಈ ಸರ್ಟಿಫಿಕೇಟಿಗಾಗಿ ಪ್ರತಿ ವರ್ಷವೂ ಒಂದು ರೂಪಾಯನ್ನೂ ಮತ್ತು ತಮ್ಮ ಹೆಸರನ್ನು ಮುನಿಸಿಪಲ್ ಆಫೀಸಿನಲ್ಲಿರುವ ರಿಜಿಸ್ಟರಿನಲ್ಲಿ ದಾಖಲ್ ಮಾಡಲು ಎಂಟಾಣೆಯನ್ನೂ (ಜುಮ್ಲಾ ೧-೮-೦) ಮುನಿಸಿಪಲ್ ಖಜಾನೆಯಲ್ಲಿ ಪಾವತಿಮಾಡಿ ರಶೀತಿಯನ್ನು ಅರ್ಜಿಯೊಡನೆ ಮುನಿಸಿಪಲ್ ಹೆಲ್ತ್ ಆಫೀಸಿನಲ್ಲಿ ಹಾಜರ್ಪಡಿಸಿ ಈ ಆಗಾಯ್ತು ಹದಿನೈದು ದಿವಸಗಳಲ್ಲಿ ಸರ್ಟಿಫಿಕೇಟನ್ನು ಪಡೆಯತಕ್ಕದ್ದು.

ಆ ರೀತಿ ಮಾಡಲು ತಪ್ಪಿದರೆ ಕಾನೂನು ಪ್ರಕಾರ ಪ್ರಾಸಿಕ್ಯೂಷನ್ ಮಾಡಲಾಗುತ್ತೆ.

(ಸಹಿ) ಆರ್. ರಾಮಚಂದ್ರರಾವ್

ಚಾಂಛೋರೆ,

ಪ್ರೆಸಿಡೆ…

ಕಳೆದುಹೋಗಿದೆ

ತಾ|| 26-3-47 ರಲ್ಲು ಗಣೇಶ ಟೂರ್ ಬಸ್ಸಿನಲ್ಲಿ ಮಡಿಕೇರಿಯಿಂದ ಸೂಂಗೆ ಬರುತ್ತಿದ್ದಾಗ ನನ್ನ ಹಾಸಿ… ಬಿಟ್ಟ ಪ್ರಯಾಣಿಕರಿಂದ ಬದಲಾಯಿ… ಟ್ಟಿದೆ. ಇದರ ಬಾಬತು ಸಮಾಚಾರ ತಿಳಿದವರು ಮೈಸೂರು ಸಿಟಿ, ನಂ… ಬಹದ್ದೂರ್‌ರವರ ಛತ್ರದಲ್ಲಿರುವ ಪ್ರೊ… ಫೋಟೋಗ್ರಾಫರ್‌ರವರಿಗೆ ತಿಳಿಸಿದರೆ ಬಹು… ವಾಗುತ್ತದೆ. ಇದರಲ್ಲಿ ದೇವರ… ಸಾಮಾನುಗಳಿರುವುದರಿಂದ ಇಟ್ಟು… ವರಿಗೆ ತಿಳಿದೀತು.

ರಾಜಕಮಲ್

೩೦-೩-೪೭ ರಿಂದ ನೇ ೭ ವಾರ

1 ನೇ ಆಟ 6 ಘಂಟೆಗೆ,

2ನೇ ಆಟ 9-15 ಘಂಟೆಗೆ

ಶ್ರೀ ಕೃಷ್ಣಲೀಲಾ

(ಕನ್ನಡ ಚಿತ್ರ)

ಇಂಪಾದ ಗಾನಗಳು! ಸೊಂಪಾದ ನೃತ್ಯಭೇದಗಳು!! ಮನರಂಜಕವಾದ ದೃಶ್ಯಗಳು!!!

ಇವೆಲ್ಲವನ್ನೂ ಇಂದೇ ನೋಡಿ.

RAJKAMAL, MYSORE

Morning Shows from 28-3-47 for 4 days daily at 10-30 a. m.

GOLGOTHA

A marvellous million-dollar Production

ಜಿಲ್ಲಾ ಬೋರ್ಡ್ ಚುನಾವಣೆ

೩೧-೩-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗೆ ಕಂಡ

ಕಾಂಗ್ರೆಸ್ ಉಮೇದುವಾರರಿಗೇ

ದಯವಿಟ್ಟು ಓಟು ಕೊಡಿ :-

ಪಟೇಲ್ ರಂಗಪ್ಪ (ಹನುಮನಾಳು)

ಪಟೇಲ್ ಎಂ. ನಾಗಪ್ಪ (ಹುಲ್ಲಹಳ್ಳಿ)

ಎಂ. ಲಿಂಗಣ್ಣ (ಹೆಜ್ಜಿಗೆ)

Edited, printed and published by A. R. … Proprietor of the Sadhvi … and Mysore [illegible]

ಚಾಮುಂಡೇಶ್ವರಿ ಟಾಕೀಸ್

೨೯-೩-೪೭ ರಿಂದ :: ಎರಡನೇ …

ಸ್ಟಾರ್ ಕಂಬೈನ್ಸ್ ಮತ್ತು ಪ್ರಗತಿಯವರ ಅಮೋಘವಾದ ತಮಿಳು ಚಿ…

— ವಿಜಯಲಕ್ಷ್ಮಿ —

ಮುಖ್ಯ ಭೂಮಿಕೆ:- ಎಂ. ವಿ. ರಾಜಮ್ಮ, ಟಿ. ಆರ್. ರಾಮಚಂದ್ರ, ಬಿ. ಆರ್. ಪಂತುಲು ಮತ್ತು ಎಂ. ಜಿ. ಅಂಡಾಳ್.

ಕಂಟ್ರೋಲು ಬೆಲೆ! … ಸುಸ…

ಹೊಸ ಜವಳಿ

ನಮ್ಮಲ್ಲಿ ಈಗ ತಾನೇ ಹೊಸದಾಗಿ ಬಂದಿರುವ ಬನಾರಸ್, ಕಂಚಿ, ಆರ್ಣಿ, ಕಾಂಚಿ ಹುಬ್ಬಳ್ಳಿ ಸೀರೆಗಳೂ, ಕರಾಚಿ ಸೀರೆಗಳೂ, ನೂಲಿನ ಪೂನಾ ಡಿಜೈನ್ ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.

M. P. V., M. V. ಛೋಟೇಬಜ್ಜ B. A. ಅಂಡ್ ಬ್ರದರ್ಸ್

ಬೊಂಬಾಯಿ ಆನಂದ ಭವನ ಹೋಟೆಲ್ ಬಳಿ ಬಲಭಾಗದ ಕೊನೇ ಜವಳಿ ಅಂಗಡಿ, ಮೈಸೂರು.

Join Now
Summer Classes in
Type-writing, Short-hand and Book-keeping
at the
Champion Metropolitan College of Commerce
Old Mysore Bank Buildings, Sayyaji Rao Road, My…
Admissions received on all working days between 7 and 10 a. m. and 5 and 7 p. m.

P. SUBBARAYA SAS…
Principal.

ಹೊಸ ಜವಳಿ

ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ

ಇಂದೇ ಭೇಟಿ ಕೊಡಿ!

ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿರಿ!!

ಬಿ. ಕೆಂಚಪ್ಪ ಸನ್ಸ್

… : … ಪೇಟೆ, ಮೈಸೂ…

ರಿಜಿ. ನಂ. 392 | ವಂದೇ ಮಾತರಂ | ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೧—೪—೪೭ [ಸಂಚಿಕೆ ೧೯೮

ದರೋಡೆ ಮೊಕದ್ದಮೆಯಲ್ಲಿ ಆಪಾದಿತರ ಖುಲಾಸೆ

ವಿಮಲಾನಂದ ತೀರ್ಥರು ಬ್ರಹ್ಮೈಕ್ಯರಾದರು

ಮೈಸೂರು ೧

ರಾಜಧಾನಿಯಲ್ಲಿ ಸುಪ್ರಸಿದ್ಧ ಆಯು... ಮಹಾವಿದ್ವಾಂಸರಾಗಿ ಅನೇಕ ವ...ಳಿಂದ ಜನ ಸಾಮಾನ್ಯರ ಸೇವೆಯ...ಮಾಡಿ ಚಿರ ಕೀರ್ತಿಗಳಿಸಿದ್ದ ಶ್ರೀ ...ಸ್ತ್ರೀ ಪಂಡಿತರವರು ಇತ್ತೀಚೆ ಕೆಲವು ...ಹಿಂದೆ ವಿಮಲಾನಂದ ತೀರ್ಥರೆಂಬ ...ಧೇಯವನ್ನು ಹೊಂದಿ ಸನ್ಯಾಸಾಶ್ರ...ಮವನ್ನು ಸ್ವೀಕರಿಸಿದ್ದರು.

...ಸ್ವಾಮಿಗಳವರು ಈ ದಿನ ಬೆಳಿಗ್ಗೆ ...೭೦ನೆಯ ವಯಸ್ಸಿನಲ್ಲಿ ಬ್ರಹ್ಮೈಕ್ಯ...ರು. ದೊಡ್ಡಕೆರೆ ಬಳಿ ಹೊಸ ಮಠ...ದ ಆವರಣದಲ್ಲಿ ಅವರ ಸಮಾಧಿಕ್ರಿಯೆಗಳ...ನ್ನು ಶಾಸ್ತ್ರೋಕ್ತವಾಗಿ ಅವರ ಮಕ್ಕಳಾದ ...ಎಸ್. ನರಸಿಂಹಯ್ಯ ಮತ್ತು ಶ್ರೀ ...ರಾಮಯ್ಯನವರುಗಳು ನೆರವೇರಿಸಿದ...ರು. ನೂರಾರು ಜನ ವೈದಿಕ, ಲೌಕಿಕ ...ಸ್ನೇಹಿತರುಗಳು ಇದರಲ್ಲಿ ಭಾಗ ವಹಿಸಿ...ದ್ದರು.

ಹೋರಾಟಕ್ಕೆ ಸಕಲರೂ ಸಿದ್ಧರಾಗಬೇಕು

ಕಾಂ॥ ಅಧ್ಯಕ್ಷರ ವಿನಂತಿ

(ನಮ್ಮ ವಿಶೇಷ ಸುದ್ದಿಗಾರರಿಂದ)

ಬೌರಿಂಗ್‌ಪೇಟೆ ಮಾ. ೩೧

ಮೈಸೂರಿನಲ್ಲಿ ನಡೆಯುವ ಸತ್ಯಾಗ್ರಹ...ವನ್ನು ಮೂರೇ ದಿನಗಳಲ್ಲಿ ಮಟ್ಟ ಹಾಕುವು...ದಾಗಿ ದಿವಾನರಾದ ಸರ್ ಆರ್ಕಾಟರು ಹೇಳಿ...ದ್ದಾರೆಂದು ತಿಳಿಸಿದರೆಂದು ಗೊತ್ತಾಗಿದೆ; ಇದು ...ಚಾಲೆಂಜಿನಂತಿರುವುದಾಗಿದೆ; ಇದನ್ನು ನಾವು ...ಸ್ವೀಕರಿಸಿ ಅವರು ಸವಾಲು ಹಾಕುವ ಕಾಲ ...ಬಂದಿದೆ; ಅವರು ಮೂರು ದಿನದಲ್ಲಿ ಮಟ್ಟ ...ಹಾಕುವರೋ, ಅಥವಾ ನಾವು ಮೂರು ತಿಂ...ಗಳೊಳಗಾಗಿ ನಮ್ಮ ಹೋರಾಟದಲ್ಲಿ ಜಯ...ಗಳಿಸಿ ನಮ್ಮ ಗುರಿ ಮುಟ್ಟುತ್ತೇವೆಯೋ ...ನೋಡಿಯೇಬಿಡೋಣ- ಎಂಬುದಾಗಿ ಕಾಂ...ಗ್ರೆಸ್ ಅಧ್ಯಕ್ಷರಾದ ಶ್ರೀ॥ ಕೆ. ಸಿ. ರೆಡ್ಡಿಯ...ವರು ನಿನ್ನೆ ಅಖಿಲ ಮೈಸೂರು ಕಾಂಗ್ರೆಸ್ ...ಸಮಿತಿ ಅಧಿವೇಶನದ ಮುಕ್ತಾಯ ಭಾಷಣ ...ಮಾಡುತ್ತಾ ತಿಳಿಸಿದರು.

ಅಧಿವೇಶನವು ನಿನ್ನೆ ಮಧ್ಯಾಹ್ನ ಮುಗಿ...ಯಿತು.

ಅಧ್ಯಕ್ಷ ರೆಡ್ಡಿಯವರು, ಇಂದಿನ ಸಕಲ ...ಕುಂದುಕೊರತೆಗಳಿಗೂ ಜವಾಬ್ದಾರಿ ಸರ್ಕಾ...ರವೇ ಸಂಪೂರ್ಣವಾದುದರಿಂದ ಈ ಬಗ್ಗೆ ಆ...ರಂಭವಾಗಲಿರುವ ಹೋರಾಟದಲ್ಲಿ ಭಾಗ ವ...ಹಿಸಲು ಸಕಲರೂ ಸಿದ್ಧರಾಗಬೇಕೆಂದು ...ಪ್ರಾರ್ಥಿಸಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ...ಕಾಂಗ್ರೆಸ್ಸು ಭಾಗ ವಹಿಸಕೂಡದೆಂಬ ಬಾಬ...ಗಿ ನಿರ್ಣಯವು ನಿನ್ನೆಯ ಅಧಿವೇಶನದಲ್ಲಿ ...ಅಂಗೀಕೃತವಾಯಿತು. ಕಾಂಗ್ರೆಸ್ ನಿಯಮಾ...ವಳಿಯಲ್ಲಿ "ಶ್ರೀಮನ್ಮಹಾರಾಜರವರ ಆ...ಶ್ರಯದಲ್ಲಿ" ಎಂದಿರುವುದನ್ನು ರದ್ದು ...ಮಾಡಬೇಕೆಂಬ ಮತ್ತೊಂದು ಖಾಸಗೀ ನಿ...ರ್ಣಯದ ಮೇಲೆ ವಿಪುಲ ಚರ್ಚೆ ನಡೆಯಿ...ತು. ಕೊನೆಗೆ ಸೂಚಕರೇ ಅದನ್ನು ವಾಪ...ಸು ತೆಗೆದುಕೊಂಡರು.

ಪೊಲೀಸ್ ನಾಯಕರ ಶರಣಾಗತಿ

ಬಿಹಾರ್ ಪೊಲೀಸ್ ದಳದ ನಾಯಕ...ರಾದ ಶ್ರೀ ರಾಮಾನಂದ ತಿವಾರಿಯವರು ...ಮಹಾತ್ಮ ಗಾಂಧಿಯವರ ಕೂಡ ಪ್ರಾಂತ್ಯ...ದ ಪೊಲೀಸರ ಬೇಡಿಕೆಗಳನ್ನು ದೀರ್ಘವಾ...ಗಿ ಚರ್ಚಿಸಿ, ಅವರ ಸಲಹೆಯಂತೆ ಸರ್ಕಾ...ರಕ್ಕೆ ಶಾಂತವಾಗಿಯೇ ಶರಣಾಗತರಾಗಿದ್ದಾರೆ.

ದರೋಡೆ ಮೊಕದ್ದಮೆಯಲ್ಲಿ ಖುಲಾಸೆ

ಸ್ವಂ ಸು ಪ್ರ॥] ಬೆಂಗಳೂರು ೧

ದಂಡಿನ ಪೊಲೀಸ್ ಅಧಿಕಾರಿಗಳಾದ ಸ...ಬ್‌ಇನ್‌ಸ್ಪೆಕ್ಟರ್ ಮಹಬೂಬ್, ಅರ್ಲ ನೋನಿಸ್ ಮ...ತ್ತು ಬೆಳಗಾಂ ವಾಲ್‌ರವರು ಧರ್ಮ ರಕ್ಷಾ...ಕರ ಗೋಪಾಲಾಚಾರ್ಯರ ಆಭರಣಗಳನ್ನು ...ದರೋಡೆ ಮಾಡಿದರೆಂಬುದಾಗಿ ಬಂದಿದ್ದ ...ಮೊಕದ್ದಮೆಯಲ್ಲಿ ಅಡಿಷನಲ್ ಜಿಲ್ಲಾ ನ್ಯಾ...ಯಾಧೀಶರು ಈ ದಿನ ತೀರ್ಪಿತ್ತು ಮೂವ...ರು ಆಪಾದಿತರನ್ನೂ ಖುಲಾಸೆ ಮಾಡಿದರು. ...ಒಡವೆಗಳನ್ನು ಸರ್ಕಾರದ ರಿಸೀವರಿಗೆ ವಹಿ...ಸ್ಬೆ ಕೊಡಿಸಿದರು. ಆಪಾದನೆಗೆ ಸಾಕಾದ ...ಪುರಾವೆ ರುಜುವಾತಿಲ್ಲವೆಂದು ತೀರ್ಪಿನಲ್ಲಿ ಹೇ...ಳಿರುವರು.

ಉತ್ಸವದಲ್ಲಿ ಗಲಭೆ

ಅಣ್ಣಮ್ಮನವರ ಉತ್ಸವವು ನಿನ್ನೆ ರಾತ್ರಿ ...ರಾಜಾಸಿಂಗ್ ಪೇಟೆಯಲ್ಲಿ ಹೋಗಿ ಬರುತ್ತಿ...ದ್ದಾಗ ದೊಣ್ಣೆಗಳಿಂದಲೂ, ಕಲ್ಲುಗಳಿಂದ...ಲೂ, ಒಂದು ಗುಂಪು ಮೆರವಣಿಗೆ ಮೇಲೆ ...ಬಿದ್ದುದರಿಂದ ಗಲಭೆಯಾಗಿ ೧೩ ಜನರಿಗೆ ...ಗಾಯವಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟರೆಂದೂ ...ಒಬ್ಬನು ಮೃತಪಟ್ಟಿರುವನೆಂದೂ ತಿಳಿದು ...ಬಂದಿದೆ. ೨ ಅಂಗಡಿಗಳು ಲೂಟಿಯಾದು...ವು. ೨ ಗಾಡಿಗಳಿಗೆ ಜಖಂ ಆಯಿತು. ...ಕಂಟೋನ್‌ಮೆಂಟ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಕೆ ...ಮ್ಮೇಗೌಡರಿಗೂ ಗಾಯವಾಗಿದೆ. ಪೊ...ಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಸ...ಬ್ಬಂದಿಯೊಡನೆ ಸ್ಥಳಕ್ಕೆ ತೆರಳಿ ಶಾಂತಿಯ...ನ್ನು ಸ್ಥಾಪಿಸಿದ್ದಾರೆ. ಪರಿಸ್ಥಿತಿಯನ್ನು ಕಾ...ಯಲು ಮೈಸೂರು ಕಾಲು ದಳವು ಸಿದ್ಧವಾ...ಗಿರಲು ಸೂಚನೆಯನ್ನು ಕೊಡಲಾಗಿದೆ...ಯೆಂದೂ ಗೊತ್ತಾಗಿದೆ.

ಅಹಿಂಸೆಯನ್ನು ಬಿಡಲು ಗಾಂಧೀಜಿಯವರಿಗೆ ಸೂಚನೆ

ಸ್ವಾತಂತ್ರ್ಯ ಪ್ರತಿಜ್ಞೆಯಲ್ಲಿ "ಅಹಿಂಸೆ" ...ಎಂಬ ಪದವನ್ನು ಇನ್ನು ಮುಂದೆ ಬಿಟ್ಟುಬಿ...ಡಬೇಕೆಂದು ಸೂಚಿಸಿ ಗಾಂಧಿಜಿಯವರಿಗೆ ...ಸುಪ್ರಸಿದ್ಧ ಕ್ರಾಂತಿಕಾರರಾದ ರಾಜಾ ಮ...ಹೇಂದ್ರ ಪ್ರತಾಪರು ಪತ್ರ ಬರೆದಿದ್ದಾರೆಂದು ...ವರದಿಯಾಗಿದೆ. ಕಾಂಗ್ರೆಸ್ ಮಂತ್ರಿಮಂ...ಡಲಗಳು ವಿಧಿಯಿಲ್ಲದೆ ಹಿಂಸಾ ಮಾರ್ಗವ...ನ್ನನುಸರಿಸಬೇಕಾಗಿ ಬಂದಿರುವುದೇ ಇದ...ಕ್ಕೆ ಕಾರಣವೆಂದು ಅವರು ತಿಳಿಸಿರುವರು. ...ಅವರು ಹೇಳಿರುವ ಮಾತುಗಳಲ್ಲಿ ಒಹಿಮ...ಟ್ಟಿನ ಸತ್ಯಾಂಶವಿರುವುದಾದರೂ ತಾವು ಅ...ದಕ್ಕೆ ಒಪ್ಪಲು ಸಾಧ್ಯವಿಲ್ಲವೆಂದೂ ಮಹಾ...ತ್ಮಜಿ ಅವರಿಗೆ ಉತ್ತರವಿತ್ತಿದ್ದಾರೆ.

ರಾಷ್ಟ್ರಪತಿಯ ಸ್ವಾಗತದಲ್ಲಿ ಪೌರಾಧ್ಯಕ್ಷರ ಅಸಹಕಾರ

ಪುರಸಭೆಯಲ್ಲಿ ಖಂಡನೆ

ಮೈಸೂರು ೧

ರಾಜಧಾನಿಗೆ ರಾಷ್ಟ್ರಪತಿ ಆಚಾರ್ಯ ಕೃ...ಪಲಾನಿಯವರು ದಯಮಾಡಿಸಿದ್ದಾಗ ಪೌ...ರಸಭೆಯು ಅವರಿಗೆ ಬಿನ್ನವತ್ತಳೆಯನ್ನು ...ಅರ್ಪಿಸಲು ಏರ್ಪಡಿಸಿದ್ದ ಸಮಾರಂಭದಲ್ಲಿ ...ಸಹಕರಿಸದೆ ಪೌರಸಭಾಧ್ಯಕ್ಷರು ಗೈರು ಹಾ...ಜರಾದುದನ್ನು ಖಂಡಿಸುವುದಕ್ಕಾಗಿ ನಿನ್ನೆ ...ನಡೆಯಬೇಕಾಗಿದ್ದ ಪೌರಸಭೆಯ ಕಾರ್ಯ ...ಕಲಾಪಗಳನ್ನು ಮತ್ತೊಂದು ದಿನಕ್ಕೆ ಹಾಕ...ಬೇಕೆಂಬ ನಿರ್ಣಯವನ್ನು ಶ್ರೀ॥ ಅಗರಂ ...ರಂಗಯ್ಯನವರು ಮಂಡಿಸಿದರು. ಶ್ರೀ॥ ಟಿ ...ಮರಿಯಪ್ಪನವರು ಅದನ್ನು ಸಮರ್ಥಿಸಿದ...ರು. ಈ ನಿರ್ಣಯವು ಕೇವಲ ಸಭೆಯನ್ನು ...ಮುಂದೆ ಹಾಕುವುದಕ್ಕಾಗಿ ಮಾತ್ರ ಮಂಡಿ...ಸಲ್ಪಟ್ಟಿಲ್ಲವೆಂದೂ, ಅದರಲ್ಲಿ ಅಧ್ಯಕ್ಷರ ಮೇ...ಲಿನ ಖಂಡನೆಯು ಇರುವುದೆಂದೂ ಹೇಳಿ ...ಅಧ್ಯಕ್ಷರು ಅದನ್ನು ತಳ್ಳಿಹಾಕಿದರು. ಅ...ನಂತರ ಶ್ರೀ॥ ಟಿ ಮರಿಯಪ್ಪನವರು ಮ...ತ್ತೊಂದು ನಿರ್ಣಯ ಸೂಚಿಸಿ, ಯಾವ ಕಾರ...ಣವನ್ನೂ ಕೊಡದೆ ಸಭೆಯು ಈ ತಿಂಗಳು ...೭ನೇ ತಾರೀಕಿಗೆ ಮುಂದುವರಿಯಬೇಕೆಂ...ದು ತಿಳಿಸಿದರು. ಇದು ಅನುಮೋದಿಸಲ್ಪ...ಟ್ಟು ಅಂಗೀಕೃತವಾಯಿತು. ಅಲ್ಲಿಗೆ ಸಭೆ...ಯು ಮುಗಿಯಿತು.

ಜಾಡಮಾಲಿಗಳ ಸಂಬಳ ಹೆಚ್ಚಿತು

ಸ್ವಂ ಸು] ಬೆಂಗಳೂರು ೧

ಇಲ್ಲಿನ ಪುರಸಭಾಧಿವೇಶನವು ಕಳೆದ ಶ...ನಿವಾರ ಹೆಚ್ ಖಲೀಲರ ಅಧ್ಯಕ್ಷತೆಯಲ್ಲಿ ಜ...ರುಗಿತು. ಸಭೆಗೆ ಆಗಮಿಸಿದ್ದ ಮೈಸೂರು ...ಪ್ರಜಾಸಭಾ ಉಪಾಧ್ಯಕ್ಷರಾದ ಶ್ರೀ ಟಿ. ನರ...ಸಿಂಹಯ್ಯಂಗಾರ್ಯರಿಗೆ ಸ್ವಾಗತವನ್ನು ನೀ...ಡಲಾಯಿತು.

ಜಾಡಮಾಲಿಗಳಿಗೆ ಅವರ ಈಗಿನ ಸಂಬ...ಳದ ಮೇಲೆ ಒಂದು ರೂ. ೧೧ ಒಂದಾಣೆ...ಯಂತೆ ಭತ್ಯ ಕೊಡಬೇಕೆಂದೂ, ಅವರಲ್ಲಿ ...ಗಂಡಸರಿಗೆ ವರ್ಷಕ್ಕೆ ೧ ಜೊತೆ ಚಡ್ಡಿ ಮ...ತ್ತು ಷರಟು, ಹೆಂಗಸರಿಗೆ ೧ ಜೊತೆ ಸೀರೆ ...ಮತ್ತು ರವಿಕೆಗಳನ್ನು ಕೊಡಬೇಕೆಂದೂ, ...ತೀರ್ಮಾನಿಸಲಾಯಿತು. ಇದರಿಂದ ಪುರ...ಸಭೆಗೆ ವರ್ಷಕ್ಕೆ ಸುಮಾರು ೬೦ ಸಾವಿರ ...ರೂ. ಗಳ ಅಧಿಕ ವೆಚ್ಚ ತಗಲಲಿದೆ.

ಗಾಂಧಿ-ವೈಸರಾಯ್ ಭೇಟಿ

ಮಹಾತ್ಮ ಗಾಂಧಿಯವರು ನಿನ್ನೆ ಬೆಳಿ...ಗ್ಗೆ ಡೆಹಲಿಗೆ ರೈಲಿನಲ್ಲಿ ಆಗಮಿಸಿದರು. ನಿ...ನ್ನೆ ಸಂಜೆ ಅವರು ಹೊಸ ವೈಸರಾಯರಾದ ...ಲಾರ್ಡ್ ಮೌಂಟ್ ಬ್ಯಾಟನ್ನರನ್ನೂ ಅವ...ರ ಪತ್ನಿಯವರನ್ನೂ ಭೇಟಿ ಮಾಡಿ ೨॥ ...ಗಂಟೆ ಕಾಲ ಸಂಭಾಷಣೆ ನಡೆಸಿದರು. ಅ...ವರು ಈ ದಿನವೂ ವೈಸರಾಯರನ್ನು ಭೇಟಿ ...ಮಾಡಲಿರುವರು.

ಅಸ್ಸಾಮಿನಲ್ಲಿ ಮುಸ್ಲಿಮರ ಚಳುವಳಿ

ಅಸ್ಸಾಂ ಪ್ರಾಂತ್ಯದ ಎಲ್ಲಾ ಜಿಲ್ಲೆಗಳಲ್ಲೂ ...ಕಾಯಿದೆಭಂಗ ಚಳುವಳಿಯನ್ನು ಆರಂಭಿ...ಸಬೇಕೆಂದು ಮುಸ್ಲಿಂ ಲೀಗಿನವರು ತೀ...ರ್ಮಾನಿಸಿದ್ದಾರೆ. ಅಸ್ಸಾಂ ಸರ್ಕಾರದವ...ರು ಜಾರಿಗೆ ತಂದಿರುವ ಸಾಗುವಳಿ ಶಾಸನ...ವನ್ನು ವಾಪಸು ತೆಗೆದುಕೊಳ್ಳದಿದ್ದಲ್ಲಿ ಬಂ...ಗಾಳದಲ್ಲಿ ಅದೇ ಬಗೆಯ ಶಾಸನ ಜಾರಿಗೆ ...ಬರುವುದೆಂದು ಬಂಗಾಳ ಪ್ರಾಂತ್ಯ ಲೀಗ್ ...ಕಾರ್ಯದರ್ಶಿಗಳು ಎಚ್ಚರಿಸಿದ್ದಾರೆ.

ಕಲ್ಯಾಣೋತ್ಸವ

ಮೈಸೂರು ೧

ಇದೇ ೩ ನೇ ತಾ॥ ಗುರುವಾರ ಸಾಯಂ...ಕಾಲ ೫॥ ಗಂಟೆಗೆ ಟೌನ್‌ಹಾಲಿನಲ್ಲಿ ಶ್ರೀ ...ಮನ್ಮಹಾರಾಜರವರ ಹುಜೂರ್ ಸೆಕ್ರೆಟರಿ...ಗಳಾದ ಶ್ರೀ ಟಿ ರಾಮಯ್ಯನವರ ಅಧ್ಯಕ್ಷ...ತೆಯಲ್ಲಿ ಶ್ರೀ ಮಹಾವೀರ ಜಿನರ ಕಲ್ಯಾ...ಣೋತ್ಸವವು ನಡೆಯುವುದು. ಸರ್ವರಿಗೂ ...ಆಹ್ವಾನವಿರುವುದಾಗಿ ಜೈನ ಸಂಘದ ಕಾರ್ಯ...ದರ್ಶಿಗಳು ತಿಳಿಸಿದ್ದಾರೆ.

ಶ್ರೀರಾಮೋತ್ಸವ

ಮಾಮೂಲಿನಂತೆ ಶ್ರೀ ರಾಮೋತ್ಸವವು ...ಆರ್ಯವೈಶ್ಯ ಬಾಲಕ ಭಕ್ತ ಮಂಡಲಿಯ ...ಶ್ರೀರಾಮ ಮಂದಿರದ ಆಶ್ರಯದಲ್ಲಿ ಕೊ...ತ್ವಾಲ ರಾಮಯ್ಯನವರ ಬೀದಿಯಲ್ಲಿರುವ ...ಶ್ರೀ ಮನ್ನಾರು ಕೃಷ್ಣ ಶೆಟ್ಟಿಯವರ ಛತ್ರ...ದಲ್ಲಿ ವಾಸವಾಗಿರುವ ಶ್ರೀ ಪಿ. ಎಸ್. ಅ...ನಂತರಾಮ ಶ್ರೇಷ್ಠಿಯವರ ವಾಸ ಗೃಹದ...ಲ್ಲಿ ಮೊನ್ನೆಯಿಂದ ಬರುವ ೯ ನೇ ತಾ॥ ...ವರೆಗೆ ನಡೆಯುತ್ತದೆ. ಭಕ್ತಾದಿಗಳು ಭಾಗ ...ವಹಿಸಬೇಕೆಂದು ಪ್ರಾರ್ಥಿಸಲಾಗಿದೆ.

ಜಾನಕೀರಾಮ ಮಂದಿರ

ಹಳೇ ಅಗ್ರಹಾರದ ಚಾವಡಿ ಬೀದಿಯ...ಲ್ಲಿರುವ ಶ್ರೀ ಜಾನಕೀರಾಮ ಮಂದಿರದಲ್ಲಿ ...ನಿನ್ನೆಯಿಂದ ಶ್ರೀ ರಾಮೋತ್ಸವದ ಅಂಗವಾ...ಗಿ ಸಂಗೀತ ಕಛೇರಿಗಳು ನಡೆಯುತ್ತಿವೆ. ...ನಿನ್ನೆ ಆ॥ ವಿ॥ ವಿ ದೊರೆಸ್ವಾಮಿಅಯ್ಯಂ...ಗಾರ್ಯರಿಂದ ವೀಣಾ ವಾದನವು ನಡೆಯಿ...ತು. ಇಂದು ಆ॥ ವಿ॥ ಶಿವರುದ್ರಪ್ಪನವರ ...ಪಿಟೀಲು ಕಛೇರಿಯು ನಡೆಯುವುದು.

ಬೆಂಕಿ ಪೆಟ್ಟಿಗೆಗಾಗಿ ಗಲಾಟೆ

ಸ್ವಂ ಸು] ಶ್ರೀರಂಗಪಟ್ಟಣ ೩೦

ಮೊನ್ನೆ ರಾತ್ರಿ ಬೆಂಕಿ ಪೆಟ್ಟಿಗೆಯನ್ನು ೯ ...ಕಾಸಿಗೆ ಅಂಗಡಿಯೊಂದರಲ್ಲಿ ಮಾರುತ್ತಿದ್ದಾ...ಗ ಕೆಲವು ಪಟ್ಟಣವಾಸಿಗಳು, ಸ್ಥಳದವರಿಗೂ ...ಬಿಸಿ ಬಿಸಿ ಮಾತುಗಳು ಆರಂಭವಾಗಿ ಹೊ...ಡೆದಾಟವೇ ನಡೆಯಿತೋ ಏನೋ [illegible] ಇಲ್ಲಿನ ...ಪ್ರೊಬೇಷನರಿ ಎ. ಆಗ॥ ರವರು ಆ ಸಮ...ಯಕ್ಕೆ ಸರಿಯಾಗಿ ಅಲ್ಲಿಗೆ ಬಾರದಿದ್ದರೆ ವಿಶ...ೇಷ ಗಲಾಟೆಯೇ ನಡೆದುಹೋಗುತ್ತಿದ್ದಿ...ತು. ಆದ್ದರಿಂದ ಅಂಗಡಿ ಬೀದಿಯಲ್ಲಿ ...ಅಧಿಕಾರಿಗಳು ಆಗಾಗ್ಗೆ ತನಿಖೆ ನಡೆಸುತ್ತಿದ್ದ...ರೆ, ಜನರಿಗೆ ಸ್ವಲ್ಪ ಉಪಕಾರವಾಗುತ್ತದೆ.

ಈ ಊರಿನ ಬಚ್ಚಲುಗಳಲ್ಲಿ ನೀರು ಸ...ರಿಯಾಗಿ ಹೋಗದೆ, ಸೊಳ್ಳೆಗಳ ಕಾಟ ಹೆ...

ಸಾಧ್ವಿ

ತಾ॥ ೧-೪-೪೭ ಮಂಗಳವಾರ

ಸತ್ಯಾಗ್ರಹದ ನಿರ್ಧಾರ

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ಬೌರಿಂಗ್‌ಪೇಟೆಯಲ್ಲಿ ಸೇರಿ ಸತ್ಯಾಗ್ರಹದ ನಿರ್ಧಾರವನ್ನು ಮಾಡಿರುತ್ತದೆ ಇನ್ನು ಒಂದು ತಿಂಗಳಲ್ಲಿ ಸತ್ಯಾಗ್ರಹವು ಆರಂಭವಾಗಲಿದೆ. ಈ ಕೂಡಲೇ ಚಳುವಳಿಯನ್ನು ಆರಂಭಿಸಬೇಕೆಂದೂ ಸಹ ಹಲವರು ಒತ್ತಾಯಪಡಿಸಿದರು. ಆದರೆ ಸ್ವಲ್ಪ ಕಾಲಾವಕಾಶವನ್ನು ಕೊಡುವುದು ಯುಕ್ತವೆಂದು ಸಭೆಯು ಅಭಿಪ್ರಾಯಪಟ್ಟಿತು. ಇದರಿಂದ ಚಳುವಳಿಯನ್ನು ಕೈಗೊಳ್ಳಲು ಕಾಂಗ್ರೆಸ್ ಸದಸ್ಯರು ಎಷ್ಟು ತೀವ್ರ ಆಸಕ್ತಿಯುಳ್ಳವರಾಗಿರುವರೆಂಬುದು ವೇದ್ಯವಾಗುತ್ತದೆ

ಸಂಸ್ಥಾನದಲ್ಲಿ ಈಗ ಇಂತಹ ಪರಿಸ್ಥಿತಿಯು ಬಂದೊದಗಿರುವುದು ಅತ್ಯಂತ ವಿಷಾದಕರವಾದ ಅಂಶ. ಸತ್ಯಾಗ್ರಹವೆಂದರೆ ಪ್ರಜಾವರ್ಗವು ಎಷ್ಟು ಕಷ್ಟ ಮತ್ತು ಸಂಕಟಗಳಿಗೆ ಈಡಾಗುವ ಪರಿಸ್ಥಿತಿಯು ಬಂದೊದಗುವುದೆಂಬುದನ್ನು ಹೇಳಲು ಸಾಧ್ಯವಿಲ್ಲ ತಮ್ಮ ಗುರಿಯನ್ನು ಸಾಧಿಸಲು ಸರ್ವಪ್ರಯತ್ನಗಳನ್ನೂ ಮಾಡಿ ನಿರಾಸೆಗೊಂಡಿರುವ ಕಾಂಗ್ರೆಸ್ ಸೂತ್ರಧಾರಿಗಳು ಈ ಅಂತಿಮ ನಿರ್ಧಾರಕ್ಕೆ ಬಂದಿರುತ್ತಾರೆ

ದೇಶದ ಜನರೆಲ್ಲರೂ ಕೇಳುತ್ತಿರುವ ಮೂಲಭೂತವಾದ ಬೇಡಿಕೆಗಳು ಈಡೇರದೆ ಇದಕ್ಕಾಗಿ ಒಂದು ಆಂದೋಳನವೇ ನಡೆಯಬೇಕೇ ?-ಎಂಬ ಪ್ರಶ್ನೆಯು ಎಲ್ಲರ ಬಾಯಲ್ಲಿಯೂ ಕೇಳಬರುತ್ತದೆ ಜವಾಬ್ದಾರಿ ಸರ್ಕಾರದ ಘೋಷಣೆಯ ಬಗ್ಗೆ ಯಾರಲ್ಲಿಯೂ ಭಿನ್ನಾಭಿಪ್ರಾಯವಿರುವುದಿಲ್ಲ. ಇದನ್ನು ನಮ್ಮ ಸಂಸ್ಥಾನದಲ್ಲಿ ಏಕೆ ಘೋಷಿಸಬಾರದೋ ನಮಗೆ ಅರ್ಥವಾಗುವುದಿಲ್ಲ ಭಾರತದ ಯೂನಿಯನ್ನಿನಲ್ಲಿ ಸೇರುವ ತತ್ವವನ್ನು ನರೇಂದ್ರ ಮಂಡಲದವರೇ ಅಂಗೀಕರಿಸಿರುವಲ್ಲಿ ಮೈಸೂರಿನವರೂ ಈ ಬಗ್ಗೆ ಪ್ರಕಟಣೆಯನ್ನು ಹೊರಡಿಸಲು ಯಾವ ಅಡ್ಡಿಯೂ ಇರುವುದಿಲ್ಲ. ಪೂರೈಸಿಯದಾಗಿ, ಇಂದಿನ ಶಾಸನ ಸಭೆಗಳಿಂದಲೇ ಪ್ರಜಾನುರಾಗಕ್ಕೆ ಪಾತ್ರರಾದ ಮಂತ್ರಿಗಳಿಂದ ಕೂಡಿದ ಆಡಳಿತ ವರ್ಗವನ್ನು ರಚಿಸುವುದಕ್ಕೂ ತೊಂದರೆಯಿಲ್ಲ. ಕಡೆಯದಾಗಿ ಸಂಸ್ಥಾನದ ರಾಜ್ಯಾಂಗವನ್ನು ರಚಿಸಲು ಸರ್ವ ಪ್ರಾತಿನಿಧ್ಯವುಳ್ಳ ಸಮಿತಿಯನ್ನು ರಚಿಸುವ ಅಂಶವೂ ಸಹ ನಿರ್ವಿವಾದವಾದ ವಿಷಯವಾಗಿದೆ.

ಮೈಸೂರು ಕಾಂಗ್ರೆಸ್ಸಿನವರ ಮತ್ತು ಪ್ರಜಾ ವರ್ಗದವರ ಇಂದಿನ ಆಕಾಂಕ್ಷೆಗಳೆಲ್ಲವೂ ಮೇಲ್ಕಂಡ ವಿಷಯಗಳಲ್ಲಿ ಅಡಕವಾಗಿವೆ ಕೆಲವು ತಿಂಗಳ ಹಿಂದೆಯೇ ಸಂಸ್ಥಾನದಲ್ಲಿ ಆರಂಭವಾಗಲಿದ್ದ ಈ ಚಳುವಳಿಯನ್ನು ಶ್ರೀಮನ್ಮಹಾರಾಜರವರ ಘೋಷಣೆಯಿಂದ ಮುಂದಕ್ಕೆ ಹಾಕಲಾಯಿತು. ಆದರೆ ಈಚೆಗೆ ನಡೆದಿರುವ ವಿದ್ಯಮಾನಗಳಿಂದ ಅಸಂತುಷ್ಟಿಗೊಂಡು ಕಾಂಗ್ರೆಸ್ಸಿನವರು ಮೇಲ್ಕಂಡ ನಿರ್ಧಾರಕ್ಕೆ ಬಂದಿದ್ದಾರೆ

ಇಂದಿನ ಸಮಸ್ಯೆಯನ್ನು ಬಗೆ ಹರಿಸುವುದೂ ಸಹ ಶ್ರೀಮನ್ಮಹಾರಾಜರವರ ಕೈಯಲ್ಲಿಯೇ ಇರುತ್ತದೆ. ತಮ್ಮ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದಾಗಿ ಅವರು ಆಜ್ಞೆಯನ್ನು ಹೊರಡಿಸಬೇಕೆಂದು ನಾವು ವಿಶ್ವಾಸ ಪೂರ್ವಕವಾಗಿ ಬೇಡುತ್ತೇವೆ. ನಮ್ಮ ಮಹಾಪ್ರಭುಗಳವರು ಮೇಲ್ಕಂಡ ಕೋರಿಕೆಗಳಿಗೆ ಪೂರ್ಣಗಮನ ಕೊಟ್ಟು ಪ್ರಜೆಗಳ ಆಕಾಂಕ್ಷೆಯನ್ನು ಈಡೇರಿಸಿ ಸಂಸ್ಥಾನದಲ್ಲಿ ಶಾಂತಿ, ಸೌಹಾರ್ದಗಳು ನೆಲಸುವಂತೆ ಮಾಡಬೇಕೆಂದು ನಾವು ಪ್ರಾರ್ಥಿಸುತ್ತೇವೆ

Don't Miss
A Fine Opportunity!
Foreign
WOOLLEN GENTS' COATS
in different colours and
Varieties
— Cheapest Rates —
(1) L. Mathura Das,
(2) K. S. Panduranga Rao and Co.,
Fancy Cloth Merchants.
೩೪೧, Gangoswari Chouk.
Mysore.

ರಾಜಕಮಲ್
೩೦-೩-೪೭ ರಿಂದ ೭ನೇ ವಾರ
1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ
ಶ್ರೀ ಕಪಲೀಲಾ
(ಕನ್ನಡ ಚಿತ್ರ)
ಇಂಪಾದ ಗಾನಗಳು! ಸೊಂಪಾದ ನೃತ್ಯಗಳು!! ಮನರಂಜಕವಾದ ದೃಶ್ಯಗಳು!!!
ಇವೆಲ್ಲವನ್ನೂ ಇಂದೇ ನೋಡಿ.

ಜಿಲ್ಲಾ ಬೋರ್ಡು ಚುನಾವಣೆ
೨೮-೪-೪೭ ನೇ ಸೋಮವಾರ
ನಂಜನಗೂಡು ತಾಲ್ಲೂಕಿನ ಈ ಕೆಳಗೆಕಂಡ ಕಾಂಗ್ರೆಸ್ ಉಮೇದುವಾರರಿಗೆ
- ದಯವಿಟ್ಟು ಓಟು ಕೊಡಿ :-
ಹೆಚ್. ಲಿಂಗಪ್ಪ (ಹನಿಯಂಬಳ್ಳಿ)
ಬಿ.ಎಚ್. ಎಂ. ನಾಗಪ್ಪ (ಹುಲ್ಲಳ್ಳಿ)
ಎಂ ಲಿಂಗಣ್ಣ (ಹೆಜ್ಜಿಗೆ)

Edited, printed and published by A. R. Nagarajan at the Sadhvi Press D. Subbiah Road, Mysore.

ಶ್ರೀರಾಮೋತ್ಸವ

ಟಿ. ನರಸೀಪುರ ೩೦

ಈ ದಿನದಿಂದ ಏಪ್ರಿಲ್ ೧೦ ನೇ ತಾ॥ ವರೆವಿಗೆ ಶ್ರೀರಾಮ ವಸಂತ ನವರಾತ್ರೋತ್ಸವವು ಶ್ರೀ ರಾಮಚಂದ್ರಪುರಾಗ್ರಹಾರದ ಶ್ರೀರಾಮ ಮಂದಿರದಲ್ಲಿ ನಡೆಯಲು ಏರ್ಪಾಡಾಗಿದೆ. ಆಸ್ತಿಕ ಮಹನೀಯರುಗಳು ಉತ್ಸವದಲ್ಲಿ ಭಾಗಿಗಳಾಗಿ ಶ್ರೀರಾಮಾನುಗ್ರಹಕ್ಕೆ ಪಾತ್ರರಾಗಬೇಕಾಗಿ ಕೋರಲಾಗಿದೆ

ಉಪಾಧ್ಯಾಯರುಗಳ ಉಪವಾಸ ಮುಷ್ಕರ

೧೯೪೪ ನೇ ಸೆಪ್ಟೆಂಬರ್ ತಿಂಗಳಿನಿಂದ ಇದುವರೆಗೆ ತಮಗೆ ಸಲ್ಲಬೇಕಾದ ತುಟ್ಟಿಭತ್ಯವನ್ನು ಪುರಸಭೆಯವರು ಇನ್ನೂ ಕೊಟ್ಟಿಲ್ಲವೆಂಬ ಕಾರಣದಿಂದ ನಾಗಪಟ್ಟಣದ ಪುರಸಭೆಯ ಮೇಲ್ವಿಚಾರಣೆಯಲ್ಲಿರುವ ಎಲ್ಲಾ ಶಾಲಾ ಉಪಾಧ್ಯಾಯರುಗಳೂ, ಕಳೆದ ೨೫ ನೇ ತಾ॥ ನಿಂದ ಉಪವಾಸ ಮುಷ್ಕರವನ್ನು ಹೂಡಿರುವರೆಂದು ವರದಿಯಾಗಿದೆ. ಎಲ್ಲರೂ " ಉಪವಾಸ ಮುಷ್ಕರ " ಎಂದು ಕೆತ್ತಿದ ಬಿಲ್ಲೆಗಳನ್ನು ಧರಿಸಿರುವರು.

ಅಭಿನಂದನೆ

ನಂಜನಗೂಡು ಟೌನ್ ಮೂರನೇ ಬ್ಲಾಕಿನ ವೋಟರುಗಳು ದಯಮಾಡಿ ನನಗೆ ತಮ್ಮ ಘನವಾದ ವೋಟನ್ನು ಕೊಟ್ಟು ಪೌರಸಭಾ ಚುನಾವಣೆಯಲ್ಲಿ ಜಯಶೀಲನನ್ನಾಗಿ ಮಾಡಿರುವುದಕ್ಕಾಗಿ ತುಂಬಾ ಕೃತಜ್ಞನಾಗಿರುವುದಲ್ಲದೆ ಅದಕ್ಕಾಗಿ ಈ ಮೂಲಕ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ

ಎ. ವಿ. ಕೃಷ್ಣ,
ನಂಜನಗೂಡು

ರಾಜಧಾನಿಯಲ್ಲಿ ಪ್ರತಿಬಂಧಕಾಜ್ಞೆ

ಮೈಸೂ

ರಾಜಧಾನಿಯಲ್ಲಿ ಆಪ್ಪಣೆಯಿಲ್ಲದೆ ಮೆರವಣಿಗೆಗಳನ್ನು ನಡೆಸಕೂಡದೆಂದು ಪೋಲೀಸ್ ಸೆಕ್ಷನ್ ೪೫ ರ ಪ್ರಕಾರ ಪ್ರತಿಬಂಧಕಾಜ್ಞೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ಇಂದಿನಿಂದ ಮತ್ತೆ ೨ ತಿಂಗಳ ವರೆಗೆ ಹೆಚ್ಚಿಸಿದ್ದಾರೆ

ಪತ್ರಿಕಾ ಸಮ್ಮೇಳನ

ಸ್ವಂ ಸು] ಚಿಕ್ಕಮಗಳೂರು

ಇಲ್ಲಿನ ಜಿಲ್ಲಾಧಿಕಾರಿಗಳು ಮೊನ್ನೆ ಪತ್ರಿಕೋದ್ಯೋಗಿಗಳನ್ನೆಲ್ಲಾ ಆಹ್ವಾನಿಸಿ ಸತ್ಕರಿಸಿ, ಪರಿಚಯಮಾಡಿಕೊಂಡು ಆಹಾರ ಪದಾರ್ಥಗಳ ಹಂಚಿಕೆ, ಬಟ್ಟೆ ರಾಜು ಮುಂತಾದುವುಗಳ ಬಗ್ಗೆ ಚರ್ಚಿಸಿದರು. ಇಂಟರ್ ಕಾಲೇಜ್, ವಸ್ತ್ರ ಬಡಾವಣೆ ಮತ್ತು ಕಡೂರಿನ ಕೃಷ್ಣಮಗಳೂರಿನ ವರೆಗಿನ ಸಿಮೆಂಟ್ ಮುಂತಾದ ವಿಚಾರಗಳನ್ನೂ ಕುರಿತು ಕುಶಲ ನಡೆಸಿದರು

ಭಾರಿ ಸ್ವತ್ತುಗಳು ಕ್ರಯ

೧ ೨೮೮೭/೧ ಹಳ್ಳದಕೇರಿ, ಯ್ಯಾನಗಲ್ಲಿ, ಮಹಡಿಮನೆ. (ಅರ್ಧ ಭಾಗ.)

೨ ೧೯೩/೨ ರಮಾ ವಿಲಾಸ ರಸ್ತೆ ವಿಶಾಲವಾದ ಕಾರಸಿಕಟ್ಟಡ ಹೋಟಲನ್ನು ರದಿಂದ ಪಶ್ಚಿಮಕ್ಕೆ ಮನೆ)

—: ವಿವರಗಳಿಗೆ :—

ಆರ್. ಗುಂಡೂರಾವ್
ಹಳೇ ಮೈಸೂರು ಬ್ಯಾಂಕ್ ಬಳಿ
ಮೈಸೂರು.

ಗುಂಡ್ಲುಪೇಟೆ ಟೌನ್ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರ ಆಫೀಸಿನಿಂದ ತಾ॥ ೧೪—೩—೪೭

ಟೆಂಡರು ನೋಟೀಸು

ಈ ಟೌನ್ ಮುನಿಸಿಪಾಲಿಟಿಯಲ್ಲಿ ೧—೭—೪೭ ರ ಲಾಗಾಯ್ತು ೩೦—೬—೪೮ ರ ವರೆಗೆ ಈ ಕೆಳಗೆ ಕಂಡ ಬಾಬುಗಳನ್ನು ಹರಾಜಿನಲ್ಲಿ ಬಿಡ್ ಮಾಡುವುದಕ್ಕೂ ದರಗಳನ್ನು ಕೊಡಲು ಆಯಾ ಬಾಬಿನ ಮುಂದೆ ನಮೂದಿಸಿರುವಂತೆ ಬಾಬನ್ನು ಹರಾಜಿನವರು ಆ ದಿವಸ ಮಧ್ಯಾಹ್ನ ೩ ಘಂಟೆಗೆ ಟೌನ್ ಹಾಲ್ ಬಳಿ ಬಂದು ಬಿಡ್ ಮಾಡುವುದು ಮತ್ತು ಟೆಂಡರು ಹಾಕಬಹುದು ಹೆಚ್ಚಿಗೆ ವಿಷಯ ಬೇಕಾದಲ್ಲಿ ರಜಾ ದಿನದ ಹೊರತು ಆಫೀಸು ವೇಳೆ ಟೌನ್ ಮುನಿಸಿಪಲ್ ಆಫೀಸಿನಲ್ಲಿ ತಿಳಿದುಕೊಳ್ಳಬಹುದು. ತಿಳಿಯಿರಿ

1) ಹರಾಜು ಇಸ್ತಿಹಾರ್ ಪರತ್ತುಗಳಿಗೆ ಒಳಪಟ್ಟು ಗುಂಡ್ಲುಪೇಟೆ ಟೌನ್ ಮುನಿಸಿಪಲ್ ಎಲ್ಲೆಯೊಳಗೆ ಒಂಟಿ ಕೈ ವಾಹನಗಳ ವೀಲ್ ಟೋಲು ವಸೂಲ್ಮಾಡತಕ್ಕ ಹಕ್ಕನ್ನು ಹರಾಜು ಮಾಡಲಾಗುತ್ತೆ.	9-4-1947 ಬುಧವಾರ ಮಧ್ಯಾಹ್ನ 3 ಘಂಟೆಗೆ
2) ಹರಾಜು ಇಸ್ತಿಹಾರ್ ಪರತ್ತುಗಳಿಗೆ ಒಳಪಟ್ಟು ಮಟನ್ ಸ್ಟಾಲು ಮತ್ತು ಸ್ಲಾಟರ್ ಹೌಸ್‌ನಲ್ಲಿ ವ್ಯಾಪಾರ ಮಾಡತಕ್ಕ ಹಕ್ಕು	ಡಿಟೋ
3) ದೊಡ್ಡಿ ಬಳಿ ಇರುವ ಬಸ್ ಸ್ಟಾಂಡ್ ಸ್ಥಳದಲ್ಲಿ ಹಣ್ಣು ಹಂಪಲು ವಗೈರೆ ವ್ಯಾಪಾರ ಮಾಡತಕ್ಕ ಹಕ್ಕು	ಡಿಟೋ
4) ಟೆಂಡರು ಇಸ್ತಿಹಾರ್ ಪರತ್ತುಗಳಿಗೆ ಒಳಪಡಿಸಿ ಟೌನ್‌ನಲ್ಲಿ ಬೀಳಬಹುದಾದ ಕಚರಾವನ್ನು ಗುಡಿಸಿರುವುದನ್ನು ಗುಂಟ್ರಾಕ್ಟುದಾರರ ಸ್ವಂತ ಎತ್ತು ಗಾಡಿಗಳು ಎರಡರಿಂದ ಸಾಗಿಸತಕ್ಕ ಬಗ್ಗೆ ಟೆಂಡರು ಹಾಕಲು ಅಪ್ಪೈರು ಹಾಕೀಯು	9-4-47 ನೇ ಬುಧವಾರ ಮಧ್ಯಾಹ್ನ 3 ಘಂಟೆಯೊಳಗೆ
5) ಟೆಂಡರು ಇಸ್ತಿಹಾರ್ ಪರತ್ತುಗಳಿಗೆ ಒಳಪಡಿಸಿ ಟೌನ್‌ನಲ್ಲಿ 18 ಪೆಟ್ರೋಮ್ಯಾಕ್ಸ್ ಲೈಟುಗಳು, 37 ಸಾದಾ ದೀಪಗಳನ್ನು ಹಚ್ಚಿಸಲು ಟೆಂಡರು ಹಾಕಲು ಅಪ್ಪೈರ್ ಹಾಕೀಯು.	ಡಿಟೋ

ಬಿ. ಎಚ್. ಅಮೀರ್, ಪ್ರೆಸಿಡೆಂಟ್

ಹೊಸ ಜವಳಿ
ಈಗ ತಾನೆ ಹೊಸ ನಮೂನೆ ಸೀರೆಗಳು ಬಂದಿವೆ
ಇಂದೇ ಭೇಟಿ ಕೊಡಿ!
ಒಂದು ಸಲ ನಮ್ಮ ಅಂಗಡಿಗೆ ಬಂದು ಪರೀಕ್ಷಿಸಿ!!
ಬಿ. ಕೆಂಚಪ್ಪ ಸನ್ಸ್
ಜವಳಿ ಅಂಗಡಿ : — ದೇವರಾಜ ಮೊಹಲ್ಲ, ಮೈಸೂರು

ರೋ. ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೨—೪—೪೭ [ಸಂಚಿಕೆ ೧೯೯

ಬೆಂಗಳೂರಿನಲ್ಲಿ ೪೮ ಗಂಟೆ ಕಾಲ ಕರ್ಫ್ಯೂ

ಚುನಾವಣೆ ರದ್ದು

ಮೈಸೂರು ೨

. ಪ್ರ॥ ಪ್ರ॥ ಸಭಾ ಚುನಾವಣೆಯ .. ಶೀನರಸೀಪುರದಿಂದ ಉಮೇದುವಾ .. ಶ್ರೀ॥ ಎಸ್ ಸಿ ಸೂರ್ಯನಾರಾ .. ಣ್ಣರು ತಮ್ಮ ಪ್ರತಿಸ್ಪರ್ಧಿಗಳಾಗಿದ್ದ .. ಡೇರಾಯ ಶೆಟ್ಟರಿಗೆ ಉಮೇದು .. ಲು ಸರಿಯಾದ ಅರ್ಹತೆಯಿಲ್ಲ .. ಕಿದ್ದ ತಕರಾರನ್ನು ಚುನಾವ .. ರಿಗಳು ತಳ್ಳಿ ಹಾಕಿದುದರ ಪರಿ .. ಗಿ ಖಂಡೇರಾಯ ಶೆಟ್ಟರು ಚುನಾ .. ದ ಬಗ್ಗೆ ಶ್ರೀ॥ ಸೂರ್ಯನಾರಾಯ .. ರು ಸರ್ಕಾರದಲ್ಲಿ ಹೂಡಿದ್ದ ಅರ್ಜಿ .. ಮೈಸೂರು ಜಿಲ್ಲಾ ನ್ಯಾಯಾಧೀಶ .. ಶ್ರೀ॥ ಬಿ ಆರ್ ರಾಮಲಿಂಗಯ್ಯನ .. ಚಾರಿಸಿ ಶ್ರೀ॥ ಖಂಡೇರಾಯ ಶೆಟ್ಟ .. ರಾದನ್ನು ಅರ್ಹತೆಯಿಲ್ಲದಿರುವುದ .. ಅವರ ಚುನಾವಣೆಯನ್ನು ರದ್ದು .. ಮೇರೆ ಚುನಾವಣೆ ನಡೆಯಬೇಕೆಂ .. ತೀರ್ಪು ಮಾಡಿರುತ್ತಾರೆ

. ಪ್ರೆಸ್ ಕೆಲಸಗಾರರ ಸಂಘ

.. ನ್ನೆ ದಿನ ಮೇಲ್ಕಂಡ ಸಭೆಯವರು .. ಮನವಮಿ ಮಹೋತ್ಸವವನ್ನು .. ಂದ ಆಚರಿಸಿದರು ಸಂಘದ ಅ .. ಪೂಜಾನಂತರ ಶ್ರೀಗಳಾದ ಟಿ. .. ಪ್ಪ, ಪಿ ಸೀತಾರಾಮಯ್ಯ, ಆಗ .. ಗಯ, ಬಿ ನಾರಾಯಣಸ್ವಾಮಿಯ .. ಶ್ರೀಮತಿ ಎಂ ಆರ್ ಲಕ್ಷಮ್ಮನ .. ಭಾಷಣಮಾಡಿ ಕೆಲಸಗಾರರ ಸಂಘ .. ಶಿಸ್ತು, ಐಕಮತ್ಯ, ಮುಂತಾದವುಗಳ .. ವಶ್ಯಕತೆಯನ್ನು ಒತ್ತಿ ಹೇಳಿದರು. .. ರಾಧನೆಯನಂತರ ಪ್ರಸಾದವಿನಿಯೋ .. ದ ಮೇಲೆ ಸಮಾರಂಭವು ಮುಕ್ತಾ .. ಯಿತು.

ವಿದ್ಯಾರ್ಥಿಗಳಿಗೆ ಉಪಾಹಾರ

.. ಜಧಾನಿಯಲ್ಲಿ ನಿನ್ನೆಯಿಂದ ನಡೆಯು .. ವ ಲೋವರ್ ಸೆಕೆಂಡರೀ ಪರೀಕ್ಷೆಯು .. ರಾರ ೨೦೦೦ ವಿದ್ಯಾರ್ಥಿಗಳಿಗೆ ಮ .. ಧ್ಯದ ಸಮಯದಲ್ಲಿ ಮೊಸರು ಅನ್ನ .. ವಿನಿಯೋಗ ಮಾಡಲು ಧರ್ಮ .. ಕೆ ನಂದೀಬಸಪ್ಪನವರು ಏರ್ಪಡಿ .. ತ್ತಾರೆ

.. ಳೇ ಅಗ್ರಹಾರದ ಶ್ರೀ ಜಾನಕೀ .. ಮಂದಿರದಲ್ಲಿ ಇಂದು ರಾತ್ರಿ ೭ ಗಂ .. ಆಸ್ಥಾನ ವಿದ್ವಾನ್ ಗಾನ ವಿಶಾರದ .. ಕೃಷ್ಣಯ್ಯಂಗಾರ್ಯರಿಂದ ಹಾಡುಗಾ .. ಜರುಗುವುದು.

.. ಶ್ರೀರಾಮಪೇಟೆ ಶ್ರೀ ವೆಂಕ್ಟಾರಮಣ ಕೃಷ್ಣ .. ದ ಮಂದಿರದಲ್ಲಿರುವ ರಾಮ ಮಂದಿರ .. ಇಂದು ರಾತ್ರಿ ೧೦ ಘಂಟೆಗೆ ನೇ॥ ವಿ. .. ಯಣ ಶಾಸ್ತ್ರಿಗಳಿಂದ ಶ್ರೀ ಭದ್ರಾಚಲ .. ಮದಾಸ್ ಎಂಬ ಹರಿಕಥೆ ನಡೆಯು .. ದೆ

.. ನುಮಯ್ಯನವರ ಧಸೆ ಯಲ್ಲಿರುವ .. ಚಿಗರ ಶ್ರೀರಾಮ ಮಂದಿರದಲ್ಲಿ ಈ .. ೬-೩೦ ಗಂಟೆಗೆ ಸ್ವಾಮಿ ಶರ್ .. ಎ ರಾವ್ ರವರ ಹಾಡುಗಾರಿಕೆಯು .. ಆರ್ ರಾಮಚಂದ್ರರಾವ್ ಬೆಂ .. ಚ॥ ಯವರ ಅಧ್ಯಕ್ಷತೆಯಲ್ಲಿ ನಡೆಯು .. ದೆ.

.. ಮಂಜ ವೆಂಕಪ್ಪ ಹರಿಜನ ಕೇರಿ .. ಶ್ರೀರಾಮ ನವಮಿ ಪ್ರಯುಕ್ತ ಕಳೆ .. ದ ಭಾರಿ ಸಭೆ ನಡೆಯಿತು. .. ಕೆ ಕೇಶವ ಯವರು ಶ್ರೀರಾಮನ .. ಷಯವಾಗಿ ಉಪನ್ಯಾಸವಿತ್ತರು

ಶ್ರೀಕಂಠೇಶ್ವರ ಸ್ವಾಮಿಯವರ ರಥಕ್ಕೆ ಸಿಕ್ಕಿ ಇಬ್ಬರ ಮರಣ

ಸ್ವಂ. ವ] [ನಂಜನಗೂಡು ೨.

ಇದಿನ ನಡೆದ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ರಥೋತ್ಸವದ ಸಂಬಂಧದಲ್ಲಿ ಶ್ರೀಯವರ ದೊಡ್ಡ ರಥವು ಮಾರ್ಗ ಕಳೆದು ಬಳಿ ವೇಗವಾಗಿ ಬರುತ್ತಿದ್ದಾಗ ಪಕ್ಕದಲ್ಲಿ ಜಲ್ಲಿ ಗುಡ್ಡೆಯ ಮೇಲೆ ನಿಂತಿದ್ದ ಗುಂಪನ್ನು ಜನರು ಹಿಂದಿನಿಂದ ನೂಕಿದುದರಿಂದ ನಾಲ್ಕು ಮಂದಿ ನೆಲಕ್ಕುರುಳಿ ಬಿದ್ದರು ಬೇಗವಾಗಿ ಹರಿಯುತ್ತಿದ್ದ ತೇರು ಅವರ ಮೇಲೆ ಉರುಳಿ ಇಬ್ಬರು ತಕ್ಷಣ ಅಲ್ಲೇ ಮೃತಪಟ್ಟರು ಒಬ್ಬನಿಗೆ ಕೈ ಕಾಲು ಎರಡೂ ಮುರಿದಿವೆ ಮತ್ತೊಬ್ಬನ ತೊಡೆಗೆ ಪೆಟ್ಟು ಬಲವಾಗಿ ಬಿದ್ದಿದೆ. ಹೆಣಗಳನ್ನು ತೆಗೆದು ರಥವನ್ನು ೮ ಘಂಟೆಗೇ ಮುಂದಕ್ಕೆ ಎಳೆಯಲಾಯಿತು. ರಥೋತ್ಸವದ ಕಾಲದಲ್ಲಿಯೂ ಜಲ್ಲಿ ಗುಡ್ಡೆಯನ್ನು ತೆಗೆಸದಿದ್ದುದು ಈ ದುರ್ಘಟನೆಗೆ ಕಾರಣವಾಯಿತು

ಬ್ರಿಟನ್ನಿಗೆ ಹೋಗಲು ಅನುಮತಿಯಿಲ್ಲ

ಯುದ್ಧ ಕಾಲದಲ್ಲಿ ಬ್ರಿಟಿಷ್ ಯೋಧರನ್ನು ಮದುವೆಯಾದ ೧೫ ಮಂದಿ ಇಟಲಿಯನ್ ಕನ್ಯೆಯರು ತಮ್ಮ ಆಂಗ್ಲ ಗಂಡಂದಿರೊಡನೆ ಬಾಳಲು ಅವಕಾಶ ಮಾಡಿಕೊಡು ವಂತೆ ಮಿ ಬೆವಿನ್ನರು ಜ॥ ಸ್ಟಾಲಿನ್ನರನ್ನು ಕೇಳಿದರೆಂದೂ, ಆದರೆ ಆ ಹುಡುಗಿಯರನ್ನು ರಷ್ಯ ಬಿಟ್ಟು ಕಳುಹಿಸಲು ಜ॥ ಸ್ಟಾಲಿನ್ನರು ನಿರಾಕರಿಸಿದರೆಂದೂ ಹೇಳಲಾಗಿದೆ.

ಪುದುಕೋಟೆಗೆ ಚುನಾಯಿತ ಮಂತ್ರಿ

ಜುಲೈ ತಿಂಗಳ ಮಧ್ಯ ಭಾಗದಲ್ಲಿ ಬರುವ ತಮ್ಮ ವರ್ಧಂತಿ ಸಮಯದಲ್ಲಿ ಪುದುಕೋಟೆ ಮಹಾರಾಜರು ಒಂದು ಘೋಷಣೆಯನ್ನು ಹೊರಡಿಸಿ ಈಗಿರುವ ದಿವಾನರೊಡನೆ ಪ್ರಥಮ ಬಾರಿಗೆ ಜನರ ಜೊತೆಗೆ ಶಾಸನ ಸಭೆಯಿಂದ ಚುನಾಯಿತರಾದ ಒಬ್ಬರನ್ನು ಮಂತ್ರಿಗಳನ್ನಾಗಿ ಆರಿಸಿಕೊಳ್ಳುವರೆಂದು ಗೊತ್ತಾಗಿದೆ

ಕ್ಯಾಲೆಂಡರ್ ಸ್ವೀಕಾರ

ದೇವರಾಜ ಮಾರ್ಕೆಟ್ಟಿನ ಶ್ರೀ ದಾಮೋದರ ಆಂಡ್ ಸಿ ಕಾಂಡಿಮೆಂಟ್ಸ್ ಸ್ಟೋರ್ಸ್‌ನವರು ಕಳುಹಿಸಿಕೊಟ್ಟಿರುವ ನೇತಾಜಿಯವರ ಚಾವಿಚಿತ್ರದಿಂದ ಕೂಡಿದ ನೂತನ ವರ್ಷದ ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

೪೮ ಗಂಟೆ ಕರ್ಫ್ಯೂ

ಪರಿಸ್ಥಿತಿ ಬಿಗಡಾಯಿಸಿದೆ

ಸ್ವಂ ವ ಪ್ರೆಸ್] ಬೆಂಗಳೂರು ೨

ಮೊನ್ನೆ ನಡೆದ ಕೋಮುವಾರು ಗಲಭೆಯ ಪರಿಣಾಮವಾಗಿ ಹಲವು ಪ್ರದೇಶಗಳಲ್ಲಿ ಜಿಲ್ಲಾಧಿಕಾರಿಗಳು ರಾತ್ರಿ ೯ ಗಂಟೆಯಿಂದ ಬೆಳಗಿನ ೬ ಗಂಟೆ ವರೆಗೆ ಹಾಕಿದ್ದ ಕರ್ಫ್ಯೂ ಆಜ್ಞೆಯು ಪರಿಣಾಮಕಾರಿಯಾದಂತೆ ಕಾಣುತ್ತಿಲ್ಲ ನಿನ್ನೆ ಸಂಜೆ ಎಲ್ಲಾ ಅಂಗಡಿ ಮುಂಗಟ್ಟುಗಳೂ ಮುಚ್ಚಲ್ಪಟ್ಟಿದ್ದುವು. ಜಟಕಾ ಗಾಡಿಗಳೂ ಕಾಣಬರುತ್ತಿರಲಿಲ್ಲ ಈ ದಿನ ಬೆಳಗ್ಗೆ ಕರ್ಫ್ಯೂ ಅವಧಿಯ ನಂತರ ಪರಿಸ್ಥಿತಿಯು ಬಿಗಡಾಯಿಸಿತು. ಕೈಕ್ಕೆ ಸ್ಟೇಷನ್ ಬಳಿ ೩-೪ ಗಾಡಿಗಳು ಸುಡಲ್ಪಟ್ಟುವೆಂದು ತಿಳಿದುಬಂದಿದೆ ಇದುವರೆಗೆ ೪೫ ಜನರಿಗೆ ಗಾಯಗಳಾಗಿ ೩ ಮಂದಿ ಮಡಿದಿರುವರೆಂದು ಗೊತ್ತಾಗಿದೆ ಅಲ್ಲಲ್ಲಿ ಕಲ್ಲು ತೂರಾಟ ಹೊಡೆದಾಟಗಳು ನಡೆಯುತ್ತಿವೆ. ಈ ಕಾರಣದಿಂದ ಕೋರ್ಟುಗಳನ್ನು ಸ್ವಲ್ಪ ಕಾಲ ಮಾತ್ರ ನಡೆಸಿ ಅನಂತರ ಮುಚ್ಚಲಾಯಿತು ಮಂತ್ರಿಮಂಡಲವರು ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದಾರೆ ಜಿಲ್ಲಾಧಿಕಾರಿಗಳು ಕರ್ಫ್ಯೂ ಆಜ್ಞೆಯನ್ನು ೪೮ ಗಂಟೆಗಳಿಗೆ ವಿಸ್ತರಿಸಿದ್ದಾರೆ ಬಳೇಪೇಟೆ, ಚಿಕ್ಕಪೇಟೆ, ಅರಳೇಪೇಟೆ, ಸುಲ್ತಾನ್‌ಪೇಟೆ, ಉಪ್ಪಾರಪೇಟೆ, ನಾಲ್ಕುರಸ್ತೆಗಳಿಗೆ ಇದು ಅನ್ವಯಿಸುವುದು.

ನಿನ್ನೆ ದಿನ ಪೌರಸಭೆಯ ವಿಶೇಷ ಅಧಿವೇಶನವು ನಡೆದು ಶಾಂತಿಗೋಸ್ಕರ ಜನರಿಗೆ ಅನುತಾಪವನ್ನು ಸೂಚಿಸಲಾಯಿತು.

ಸ್ಪೇನಿನಲ್ಲಿ ಮತ್ತೆ ರಾಜ ಪ್ರಭುತ್ವ ಸ್ಥಾಪನೆ ?

ಸ್ಪೇನಿನಲ್ಲಿ ಮತ್ತೆ ರಾಜ ಪ್ರಭುತ್ವವನ್ನು ಸ್ಥಾಪಿಸುವ ಸಲುವಾಗಿ ಜ॥ ಫ್ರಾಂಕೋರವರು ಒಂದು ಮಸೂದೆಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸುವುದಾಗಿ ತಿಳಿಸಿದ್ದಾರೆ. ಈ ಬಗ್ಗೆ ೧೨ ಮಂದಿಯ ಕೌನ್ಸಿಲ್ ಆಫ್ ಸ್ಟೇಟನ್ನು ರಚಿಸಲಾಗುವುದೆಂದೂ, ಅದಕ್ಕೆ ತಾವೇ ಪ್ರಧಾನಿಗಳಾಗಿರುವುದಾಗಿಯೂ ತಿಳಿಸಿದ್ದಾರೆ ರೀಜೆನ್ಸಿ ಬಗ್ಗೆ ೩ ಜನರ ಒಂದು ಸಮಿತಿಯನ್ನೂ ಸಹ ರಚಿಸಲಾಗುವುದೆಂದು ಅವರು ಹೇಳಿದ್ದಾರೆ. ಕೌನ್ಸಿಲ್ ಆಫ್ ಸ್ಟೇಟಿನ ನಾಯಕರಾದ ಜ॥ ಫ್ರಾಂಕೋರವರು ಗತಿಸಿದ ನಂತರ ರೀಜೆನ್ಸಿಗೇ ಎಲ್ಲಾ ಅಧಿಕಾರವನ್ನು ವಹಿಸಿಕೊಡಲಾಗುವುದೆಂದೂ ಅವರ ಸ್ಥಾನಕ್ಕೆ ಅಗ್ಗಳಿಕೆಯ ಸದಸ್ಯನನ್ನು ಆರಿಸುವವರೆಗೆ ಅವರನ್ನು ಬಹು ಮತದಿಂದ ಪಡೆದವರನ್ನು ಆರಿಸಲಾಗುವುದೆಂದು ಹೇಳಲಾಗಿದೆ

ಮಸೀದಿಯಲ್ಲಿ ಮಲಯಾಳಿ ಭಾಷೆ ಕೂಡದೇ ?

ಕಲ್ಲಿಕೋಟೆಯಲ್ಲಿನ ಮಸೀದಿಯಲ್ಲಿ ಕಳೆದ ವಾರ ಎಂಬ ಶುಕ್ರವಾರದ ದಿನ ನಡೆಯುವ ಜುಮ್ಮಾ ಪ್ರಾರ್ಥನೆಯಲ್ಲಿ ಮೂವತ್ತರಿಂದ ಕೆ ಅರಬ್ಬೀ ಭಾಷೆಯ ಪ್ರಾರ್ಥನೆಯೊಂದನ್ನು ಆ ಭಾಷೆ ತಿಳಿಯದ ಅನೇಕರಿಗೆ ಮಲೆಯಾಳಿ ಭಾಷೆಯಲ್ಲಿ ಹೇಳುತ್ತಿದ್ದುದರಿಂದ ಇನ್ನು ಮುಂದೆ ಆ ಭಾಷೆಯಲ್ಲಿ ಹೇಳಕೂಡದೆಂದು ಅಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಮುಸ್ಲಿಮರ ಸಂಘದವರು ಬೆದರಿಸಿರುವುದಾಗಿ ವರದಿಯಾಗಿದೆ. ಅಲ್ಲಿಯ ಮುಸ್ಲಿಮರು ಇದರಿಂದ ಘರ್ಷಣೆಯುಂಟಾಗಬಹುದೆಂದು ಅಲ್ಲಿ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಲಾಗಿದೆ ಈಗಿರುವ ಪ್ರಾರ್ಥನಾ ಪದ್ಧತಿಯಲ್ಲಿ ಯಾರೂ ಪ್ರವೇಶಿಸಬಾರದೆಂದೂ ಸೂಚಿಸಲಾಗಿದೆ.

ಭಾರಿ ವರ್ತಕರಿಗೆ ಜುಲ್ಮಾನೆ

ಬಟ್ಟೆ ಮತ್ತು ದಾರದ ಕಂಟ್ರೋಲಿಗೆ ವಿರುದ್ಧವಾಗಿ ಕಳೆದ ಮೇ ತಿಂಗಳಿನಲ್ಲಿ ೧೨೦ ಮೂಟೆ ನೂಲನ್ನು ಮಾರಿದರೆಂಬ ಆರೋಪದ ಮೇಲೆ ಕೊಯಮತ್ತೂರಿನ ಲೋಟಸ್ ಗಿರಣಿ ಡೈರೆಕ್ಟರುಗಳಾದ ರಾಜಾ ಸರ್ ಅಣ್ಣಾಮಲೈಚೆಟ್ಟಿಯಾರ್, ಸರ್ ಎಂ. ಎ ಮುತ್ತಯ್ಯಚೆಟ್ಟಿಯಾರ್ ಶ್ರೀ ಆರ್ ರಾಮನಾಥಚೆಟ್ಟಿಯಾರ್, ನಾ ಚ ಅಪ್ಪ ಚೆಟ್ಟಿಯಾರ್, ಪಳನಿಯಪ್ಪ ಚೆಟ್ಟಿಯಾರ್, ಕರುಪ್ಪಣ್ಣ ಚೆಟ್ಟಿಯಾರ್ ಮತ್ತು ಗಿರಣಿಯ ಮ್ಯಾನೇಜರಾದ ಸ ॥ ಪಿಳ್ಳೆಯವರುಗಳಿಗೆ ತಲಾ ೧೫ ಸಾವಿರ ರೂ. ಮತ್ತು ಗುಮಾಸ್ತ ಮತ್ತು ದಾರದ ನೂಲನ್ನು ಮಾರಿದರೆಂದು ಶ್ರೀ ಎ. ಎ ಚಿದಂಬರಂ ಚೆಟ್ಟಿಯಾರರಿಗೆ ೬೦ ಸಾವಿರ ರೂ. ಜುಲ್ಮಾನೆಯನ್ನು ಅಲ್ಲಿನ ಅಡಿಷನಲ್ ಜಿಲ್ಲಾ ನ್ಯಾಯಾಧೀಶರು ವಿಧಿಸಿರುವರು.

ಗಾಂಧಿ-ವೈಸರಾಯ್ ಭೇಟಿ

ಮಹಾತ್ಮ ಗಾಂಧೀಜಿಯವರು ಮೊನ್ನೆ ಸಂಜೆ ಮತ್ತು ನಿನ್ನೆ ಬೆಳಗ್ಗೆ ಹೊಸ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರನ್ನು ಮೊದಲನೆಯ ಬಾರಿ ದೆಹಲಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದರು. ನಂತರ ಗಾಂಧೀಜಿಯವರು ಪಂ॥ ನೆಹರು, ಪಟೇಲ್, ಸ॥ ಪಟೇಲ್ ಮತ್ತಿತರ ನಾಯಕರೊಡನೆ ಮಾತುಕತೆ ನಡೆಸಿದರು ಗಾಂಧೀಜಿಯವರು ವೈಸರಾಯರೊಡನೆ ಪ್ರಸ್ತುತ ವಿಷಯಗಳನ್ನೂ, ೪೮ ರ ಜೂನ್ ನಂತರ ಅಧಿಕಾರ ವಹಿಸಿ ಕೊಡಲಿರುವ ಅಂಶವನ್ನು ಕುರಿತು ಮಾತನಾಡಿದರೆಂದು ಹೇಳಲಾಗಿದೆ

ಮೈಸೂರಿನವರ ವಿಜಯ

ಮಧುರೆಯಲ್ಲಿ ನಡೆಯುತ್ತಿರುವ ಅಖಿಲ ಭಾರತ ಪ್ರಾವಿನ್ಷಿಯಲ್ ಟೋರ್ನಮೆಂಟಿನ ಮೊದಲನೇ ಪಂದ್ಯದಲ್ಲಿ ಮೈಸೂರಿನ ಬ್ಲೂಸಿನವರು ೭ ಗೋಲುಗಳಿಂದ ವಿಜಯಗಳಿಸಿದ್ದಾರೆ

ಪ್ರಜಾಪ್ರತಿನಿಧಿಗಳ ಸಭೆ

ಪ್ರ॥ ಪ್ರ॥ ಸಭೆಯ ಕಾಂಗ್ರೆಸ್ ಪಕ್ಷದ ಮೈಸೂರು ಜಿಲ್ಲೆಯ ಸದಸ್ಯರ ಸಭೆಯು ನಾಳಿದ್ದು ಸಂಜೆ ೫ ಗಂಟೆಗೆ ಮೈಸೂರು ನಗರದ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದೆಂದೂ, ಸದಸ್ಯರೆಲ್ಲರೂ ಹಾಜರಾಗಬೇಕೆಂದೂ ಜಿಲ್ಲಾ ವಿಪ್ ಆದ ಶ್ರೀ॥ ಶಿವನಂಜೇಗೌಡರು ಕೋರಿರುತ್ತಾರೆ.

ಸಾಧ್ವಿ
ತಾ॥ ೨-೪-೪೭ ಬುಧವಾರ

ಮದರಾಸಿನಲ್ಲಿ ವಂದೇ ಮಾತರಂ ಗೀತೆಗೆ ಅವಕಾಶ

ಶಾಲಾ, ಕಾಲೇಜುಗಳಲ್ಲಿಯೂ, ಇತರ ಸಾರ್ವಜನಿಕ ಸ್ಥಳಗಳಲ್ಲಿಯೂ ವಂದೇಮಾತರಂ ಗೀತೆಯನ್ನು ಹಾಡುವ ವಿಷಯವಾಗಿ ಈಚೆಗೆ ಅಲ್ಲದ, ಸಲ್ಲದ ಅಡಚಣೆಗಳು ಎದ್ದು ಹಲವು ಕಡೆಗಳಲ್ಲಿ ಕೋಲಾಹಲಗಳಿಗೂ ಕಾರಣವಾಗಿರುವುದಷ್ಟೆ. ಮೈಸೂರು ವಿಶ್ವವಿದ್ಯಾನಿಲಯ ಸಂಘದಲ್ಲಿ ಇದೊಂದು ದೊಡ್ಡ ಬಿಕ್ಕಟ್ಟಿನ ಪ್ರಕರಣವಾಗಿಯೇ ಪರಿಣಮಿಸಿತ್ತು. ಬೆಂಗಳೂರಿನ ವಿಶ್ವವಿದ್ಯಾನಿಲಯ ಸಂಘದಲ್ಲಿಯೂ ಸಹ ಇದು ಅಸಮಾಧಾನಗಳಿಗೆ ಅವಕಾಶ ಕೊಟ್ಟಿತು. ಮಲ್ಲೇಶ್ವರಂ ಸ್ಕೂಲಿನಲ್ಲಿ ದುರ್ಘಟನೆಗಳು ಸಹಾ ನಡೆದುವು. ಕೆಲವು ದಿನಗಳ ಹಿಂದೆ ಶಿವಮೊಗ್ಗ ಮತ್ತು ಚಿತ್ರದುರ್ಗಗಳ ಶಾಲೆಗಳಲ್ಲಿ ಇದರ ಬಗ್ಗೆ ವಿದ್ಯಾರ್ಥಿಗಳು ಹೊಡೆದಾಡಿ, ಗಾಯಗೊಂಡು ಆಸ್ಪತ್ರೆಗೂ ಸೇರಿಸಲ್ಪಟ್ಟರು.

ಇನ್ನೂ ಸಹ ನಮ್ಮ ಅಧಿಕಾರಿಗಳು ಈ ಸಮಸ್ಯೆಯನ್ನು ಸಮರ್ಪಕವಾಗಿ ಬಗೆಹರಿಸಿರುವುದಿಲ್ಲ. ಇದರ ಪೂರ್ವಾಪರಗಳ ವಿಷಯವಾಗಿ ಅವರು ಇನ್ನೂ ವಿಮರ್ಶೆಯನ್ನು ನಡೆಸುತ್ತಿರುವರೆಂದೇ ಹೇಳಲಾಗಿದೆ. ನಮ್ಮ ವಿಶ್ವವಿದ್ಯಾಲಯದಲ್ಲಂತೂ, ಈ ಗೀತೆಯ ಮೇಲೆ ಸದಾ ಪ್ರತಿಬಂಧವೇ ಮಾಡಲ್ಪಟ್ಟಿರುತ್ತದೆ. ನಮ್ಮ ಸಂಸ್ಥಾನದ ಪರಿಸ್ಥಿತಿಯು ಈ ರೀತಿಯಲ್ಲಿರುವಲ್ಲಿ ನೆರೆಯ ಪ್ರಾಂತ್ಯವಾದ ಮದರಾಸಿನಲ್ಲಿ ಇದರ ಬಗ್ಗೆ ಸರಕಾರದವರು ಅನುಸರಿಸಿರುವ ನೀತಿಯು ಆದರ್ಶಪ್ರಾಯವಾಗಿರುತ್ತದೆ. ಈ ಬಗ್ಗೆ ಬಂದ ಪ್ರಶ್ನೆಗೆ ಅಲ್ಲಿನ ಶಾಸನ ಸಭೆಯಲ್ಲಿ ಮಂತ್ರಿಗಳು ಉತ್ತರವಿತ್ತು ಕೇವಲ ಕೆಲವರ ಆಕ್ಷೇಪಣೆಗಾಗಿ ವಂದೇಮಾತರಂ ಗೀತೆಯನ್ನು ನಿಷೇಧಿಸಲಾಗುವುದಿಲ್ಲವೆಂದು ಅವರು ಸ್ಪಷ್ಟವಾಗಿ ಹೇಳಿರುವರು.

ಮದರಾಸ್ ಮಂತ್ರಿಗಳ ಹೇಳಿರುವ ಅಭಿಪ್ರಾಯಗಳನ್ನು ನಮ್ಮ ಅಧಿಕಾರಿಗಳೂ ಗಮನಿಸುವುದು ಸೂಕ್ತವಾಗಿರುತ್ತದೆ. ಮೊನ್ನೆ, ಮೊನ್ನೆಯವರೆಗೆ ಈ ಗೀತೆಯನ್ನು ಹಾಡಲು ಮುಸ್ಲಿಮರ ಆಕ್ಷೇಪಣೆಯೇನೂ ಇರಲಿಲ್ಲ. ಇದಕ್ಕೆ ರಾಜಕೀಯ ಬಣ್ಣವನ್ನು ಒಂದು ಸಂಸ್ಥೆಯು ಕೊಟ್ಟ ಮೇಲೆ ಆಕ್ಷೇಪಣೆಗೆ ಆರಂಭವಾಯಿತು. ಆದರೆ ಈ ಗೀತೆಯನ್ನು ಹಾಡಬೇಕೆಂದು ಯಾರನ್ನೂ ಒತ್ತಾಯಪಡಿಸುವುದಿಲ್ಲ; ಬೇಡವೆನ್ನುವವರು ಹಾಡದಿರಬಹುದು; ಶೇಕಡ ತೊಂಭತ್ತೈದು ಜನರಿಗೆ ಬೇಕಾಗಿರುವ ಈ ಗೀತೆಯನ್ನು ಕೇವಲ ಕೆಲವರ ಆಕ್ಷೇಪಣೆಗಾಗಿ ನಿಷೇಧಿಸಲು ಸಾಧ್ಯವಿಲ್ಲ; ಆದರೆ ಇದನ್ನು ಹಾಡಲೇಬೇಕೆಂದು ಯಾವ ಶಾಲಾ, ಕಾಲೇಜುಗಳಿಗೂ ಒತ್ತಾಯ ಮಾಡಿರುವುದಿಲ್ಲ; ಮುಸ್ಲಿಮರಲ್ಲದ ವಿದ್ಯಾರ್ಥಿಗಳಿರುವ ಅನೇಕ ಕಾಲೇಜುಗಳಲ್ಲಿ ಅರಬ್ಬೀ ಭಾಷೆಯ ಪ್ರಾರ್ಥನೆಯನ್ನು ನಡೆಸಲಾಗುತ್ತಿದೆ; ಇದಕ್ಕೆ ಹಿಂದುಗಳು ಯಾವ ಅಡ್ಡಿಯನ್ನೂ ಮಾಡಿಲ್ಲ; ಈ ಬಗೆಯ ಸೈರಣೆಯು ಎಲ್ಲರಲ್ಲಿಯೂ ಬರಬೇಕು-ಎಂದು ಅಲ್ಲಿನ ಮಂತ್ರಿಗಳು ಹೇಳಿರುವರು.

ಮಾತೆಗೂ, ಮಾತೃಭೂಮಿಗೂ ವಂದನೆಯನ್ನು ಸಲ್ಲಿಸುವ ಇಂತಹ ಪವಿತ್ರವಾದ ಗೀತೆಯನ್ನು ಹಾಡಲು ನಮ್ಮ ಸಂಸ್ಥಾನದಲ್ಲಿಯೂ ಯಾವ ಅಡ್ಡಿಯೂ ಇಲ್ಲದಂತೆ ನಮ್ಮ ಸರ್ಕಾರದವರೂ ಏರ್ಪಡಿಸಬಾರದೇ?

ರಾಜಕಮಲ್
೩೦-೩-೪೭ ರಿಂದ ೭ನೇ ವಾರ
1 ನೇ ಆಟ 6 ಘಂಟೆಗೆ,
2ನೇ ಆಟ 9-15 ಘಂಟೆಗೆ
ಶ್ರೀ ಕೃಷ್ಣಲೀಲಾ
(ಕನ್ನಡ ಚಿತ್ರ)
ಇಂಪಾದ ಗಾನಗಳು! ಸೊಂಪಾದ ಸನ್ನಿವೇಶಗಳು!! ಮನರಂಜಕವಾದ ದೃಶ್ಯಗಳು!!!
ಇವೆಲ್ಲವನ್ನೂ ಇಂದೇ ನೋಡಿ.

ಭಾರಿ ಸ್ವತ್ತುಗಳು ಕ್ರಯಕ್ಕಿವೆ
೧ ೩೮೨೭/೧ ಹಳ್ಳದಕೇರಿ, ಸೀಬಯ್ಯನಗಲ್ಲಿ, ಮುಪಡಿಮನೆ. (ಉತ್ತರದ ಅರ್ಧ ಭಾಗ.)
೨ ೧೯೩/೨ ರಮಾ ವಿಲಾಸ ಅಗ್ರಹಾರ ವಿಶಾಲವಾದ ತಾರಸಿಕಟ್ಟಡ. (ಆ ಹೋಟಲಿನ ಕಡೆಯಿಂದ ಪಶ್ಚಿಮಕ್ಕೆ ೩ ನೇ ಮನೆ)
—: ವಿವರಗಳಿಗೆ :—
ಆರ್. ಗುಂಡೂರಾವ್,
ಹಳೇ ಮೈಸೂರು ಬ್ಯಾಂಕ್ ಕಟ್ಟಡ,
ಮೈಸೂರು.

Edited, printed and published by A. R. Hoovaiah of the Sadhvi Press, D. Subbiah Road, Mysore.

ಕೇಂದ್ರ ಸರ್ಕಾರದೊಡನೆ ಸಂಸ್ಥಾನಗಳ ಸಹಕಾರ

ಬ್ರಿ॥ ಭಾರತದ ಭಾವಿ ರಾಜ್ಯಾಂಗ ಯಾವ ರೀತಿಯೇ ಇರಲಿ ರಕ್ಷಣೆ, ಸಂಚಾರಮಾರ್ಗಗಳು ವಿದೇಶ್ಯಾಂಗ ವ್ಯವಹಾರಗಳು, ಕೆಂಗೆ ಸಂಬಂಧಪಟ್ಟ ವಿಷಯಗಳಲ್ಲಿ ಅದರೊಡನೆ ಸಹಕಾರವು ಅತ್ಯಾವಶ್ಯಕವೆಂದು ನರೇಂದ್ರ ಮಂಡಲದ ಸಚಿವ ಸಮಿತಿಯ ಸಭೆಯು ಬೊಂಬಾಯಿಯಲ್ಲಿ ಸಭೆ ಸೇರಿ ಅಭಿಪ್ರಾಯಪಟ್ಟಿದೆ. ಈ ಸಹಕಾರವು ಯಾವ ರೀತಿ ಇರಬೇಕೆಂಬುದನ್ನು ನಿರ್ಧರಿಸಲು ಭಾರತದ ಪ್ರಮುಖ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಮತ್ತು ಸಂಸ್ಥಾನ ಪ್ರತಿನಿಧಿಗಳು ದುಂಡು ಮೇಜಿನ ಸಮ್ಮೇಳನವೊಂದನ್ನು ನಡೆಸಬೇಕೆಂದು ಸೂಚಿಸಲಾಗಿದೆ.

ಪೋರ್ಚುಗೀಸರು ಭಾರತವನ್ನು ಬಿಡುವುದಿಲ್ಲ

ಭಾರತವನ್ನು ಬಿಟ್ಟು ಹೋಗುವ ಬ್ರಿಟಿಷರ ನೀತಿಯನ್ನು ಪೋರ್ಚುಗೀಸರು ಅನುಸರಿಸುವುದಿಲ್ಲವೆಂದು ಲಂಡನ್ನಿನ ಪತ್ರಿಕೆಯೊಂದು ತಿಳಿಸುತ್ತದೆ. ಭಾರತಕ್ಕೆ ಪೂರ್ಣ ಸ್ವಾತಂತ್ರ್ಯ ಬಂದ ಮೇಲೂ ಗೋವಾವನ್ನು ಪೋರ್ಚುಗೀಸರು ತಮ್ಮ ಅಧೀನದಲ್ಲಿಯೇ ಇಟ್ಟುಕೊಳ್ಳುವರೆಂದು ಹೇಳಲಾಗಿದೆ.

ಜಿಲ್ಲಾ ಬೋರ್ಡ್ ಚುನಾವಣೆ
೭-೪-೪೭ ನೇ ಸೋಮವಾರ
ನಂಜನಗೂಡು ತಾಲ್ಲೂಕಿನ ಈ ಕೆಳಗಿನ
ಕಾಂಗ್ರೆಸ್ ಉಮೇದುವಾರರಿಗೆ
ದಯವಿಟ್ಟು ಓಟು ಕೊಡಿ:
ಹೆಚ್. ಲಿಂಗಪ್ಪ (ಹನಿಯಂಬಳ್ಳಿ)
ಹೆಚ್. ಎಂ. ನಾಗಪ್ಪ (ಹುಲ್ಲಹಳ್ಳಿ)
ಎಂ. ಲಿಂಗಣ್ಣ (ಹೆಜ್ಜಿಗೆ)

MYSORE STATE RAILWAY

Re: New Booking Office at VANI VILAS MARKET, MYSORE

With effect from 2nd April 1947 A New City Booking Office, at Vani vilas Market, Mysore, will be opened for local and through booking.

The above Booking Office will be open for-

(a) issue of passenger tickets.

(b) Tickets issued at this Booking Office will be available for use on the day of issue only;

(c) The working hours will be from 6 to 11 and from 14 to 19 hours daily

Mir Inayeth Hussain,
Traffic Manager

Mysore,
1-4-47

ಮೈಸೂರು ಸ್ಟೇಟ್ ರೈಲ್ವೆ

ವಾಣೀವಿಲಾಸ ಮಾರ್ಕೆಟ್ಟಿನಲ್ಲಿ ಹೊಸ ಬುಕಿಂಗ್ ಆಫೀಸು

೧೯೪೭ ನೇ ಏಪ್ರಿಲ್ ೨ ನೇ ತಾರೀಖಿನಿಂದ ಮೈಸೂರು ವಾಣೀವಿಲಾಸ ಮಾರ್ಕೆಟ್ಟಿನಲ್ಲಿ ಲೋಕಲ್ ಮತ್ತು ಥ್ರೂ ಬುಕಿಂಗುಗಳಿಗಾಗಿ ಒಂದು ಹೊಸ ಬುಕಿಂಗ್ ಆಫೀಸನ್ನು ತೆರೆಯಲಾಗುತ್ತದೆ

ಸದರಿ ಬುಕ್ಕಿಂಗ್ ಆಫೀಸಿನಲ್ಲಿ—

(ಎ) ಪ್ಯಾಸೆಂಜರ್ ಟಿಕೆಟ್ಟುಗಳನ್ನು ಕೊಡಲಾಗುವುದು.

(ಬಿ) ಈ ಆಫೀಸಿನಲ್ಲಿ ದೊರೆಯುವ ಟಿಕೆಟ್ಟುಗಳು ಅವುಗಳನ್ನು ಕೊಂಡುಕೊಂಡ ದಿನ ಮಾತ್ರ ಉಪಯೋಗಕ್ಕೆ ಬರುವುವು

(ಸಿ) ಪ್ರತಿ ದಿನವೂ ೬ ರಿಂದ ೧೧ ಮತ್ತು ೧೪ ರಿಂದ ೧೯ ಗಂಟೆಗಳ ವರೆಗೆ ಈ ಬುಕ್ಕಿಂಗ್ ಆಫೀಸು ತೆರೆದಿಡಲ್ಪಟ್ಟಿರುವುದು

ಮೀರ್ ಇನಾಯತ್ ಹುಸೇನ್,
ಟ್ರಾಫಿಕ್ ಮ್ಯಾನೇಜರ್

ಮೈಸೂರು,
೧-೪-೪೭.

ಗುಂಡ್ಲುಪೇಟೆ ಟೌನ್ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರ ಆಫೀಸಿನಿಂದ ತಾ॥ ೧೪—೩—೪೭

ಟೆಂಡರು ನೋಟೀಸು

ಈ ಟೌನ್ ಮುನಿಸಿಪಾಲಿಟಿಯಲ್ಲಿ ೧—೭—೪೭ ರ ಲಾಗಾಯ್ತು ೩೦—೬—೪೮ ರ ವರೆಗೆ ಈ ಕೆಳಗೆ ಕಂಡ ಬಾಬುಗಳನ್ನು ಹರಾಜಿನಲ್ಲಿ ಬಿಡ್ ಮಾಡುವುದಕ್ಕೂ ಟೆಂಡರುಗಳನ್ನು ಕೊಡಲು ಆಯಾ ಬಾಬಿನ ಮುಂದೆ ನಮೂದಿಸಿರುವಾಗ ಬಾಬನ್ನು ಪಡೆಯುವವರು ಆ ದಿವಸ ಮಧ್ಯಾಹ್ನ ೩ ಘಂಟೆಗೆ ಟೌನ್ ಹಾಲ್ ಬಳಿ ಬಂದು ಬಿಡ್ ಮಾಡಬಹುದು ಮತ್ತು ಟೆಂಡರು ಹಾಕಬಹುದು. ಹೆಚ್ಚಿನ ವಿಷಯ ಬೇಕಾದಲ್ಲಿ ರಜಾ ದಿನಗಳ ಹೊರತು ಆಫೀಸು ವೇಳೆ ಟೌನ್ ಮುನಿಸಿಪಲ್ ಆಫೀಸಿನಲ್ಲಿ ತಿಳಿದುಕೊಳ್ಳಬಹುದು- ತಿಳಿಯುವೆ

1) ಹರಾಜು ಇಸ್ತಿಹಾರ್ ಷರತ್ತುಗಳಿಗೆ ಒಳಪಟ್ಟು ಗುಂಡ್ಲುಪೇಟೆ ಟೌನ್ ಮುನಿಸಿಪಲ್ ಎಲ್ಲೆಯೊಳಗೆ ಬರತಕ್ಕ ವಾಹನಗಳ ಮೇಲೆ ಟೋಲು ವಸೂಲ್ಮಾಡತಕ್ಕ ಹಕ್ಕನ್ನು ಹರಾಜು ಮಾಡಲಾಗುತ್ತೆ	9-4-1947 ನೇ ಬುಧವಾರ ಮಧ್ಯಾಹ್ನ 3 ಘಂಟೆಗೆ
2) ಹರಾಜು ಇಸ್ತಿಹಾರ್ ಷರತ್ತುಗಳಿಗೆ ಒಳಪಟ್ಟು ಮಟನ್ ಸ್ಟಾಲು ಮತ್ತು ಸ್ಲಾಟರ್ ಹೌಸ್‌ನಲ್ಲಿ ವ್ಯಾಪಾರ ಮಾಡತಕ್ಕ ಹಕ್ಕು	ಡಿಟೋ
3) ದೊಡ್ಡ ಬಳಿ ಇರುವ ಬಸ್ ಸ್ಟ್ಯಾಂಡ್ ಸ್ಟಾಲಿನಲ್ಲಿ ಹಣ್ಣು ಹಂಪಲು ವಗೈರೆ ವ್ಯಾಪಾರ ಮಾಡತಕ್ಕ ಹಕ್ಕು	ಡಿಟೋ
4) ಟೆಂಡರು ಇಸ್ತಿಹಾರ್ ಷರತ್ತುಗಳಿಗೆ ಒಳಪಡಿಸಿ ಟೌನ್‌ನಲ್ಲಿ ಬೀಳಬಹುದಾದ ಕಚರಾವನ್ನು ಗುಡಿಸುವುದನ್ನು ಕಂಟ್ರಾಕ್ಟುದಾರರ ಸ್ವಂತ ಎತ್ತು ಗಾಡಿಗಳು ವಗೈರೆಯಿಂದ ಸಾಗಿಸತಕ್ಕ ಬಗ್ಗೆ ಟೆಂಡರು ಹಾಕಲು ಅಪ್ಪಣೆ ತಾರೀಖು	9-4-47 ನೇ ಬುಧವಾರ ಮಧ್ಯಾಹ್ನ 3 ಘಂಟೆಯೊಳಗೆ
5) ಟೆಂಡರು ಇಸ್ತಿಹಾರ್ ಷರತ್ತುಗಳಿಗೆ ಒಳಪಡಿಸಿ ಟೌನ್‌ನಲ್ಲಿ 18 ಪೆಟ್ರೊಮ್ಯಾಕ್ಸ್ ಲೈಟುಗಳು, 37 ಸಾದಾ ದೀಪಗಳನ್ನು ಹಚ್ಚಿಸಲು ಟೆಂಡರು ಹಾಕಲು ಅಪ್ಪಣೆ ತಾರೀಖು	ಡಿಟೋ

ಟಿ. ಎಚ್. ಅಮೀರ್, ಪ್ರೆಸಿಡೆಂಟ್

ಕಂಟ್ರೋಲು ಬೆಲೆ! ಸುಸಮಯ!
ಹೊಸ ಜವಳಿ
ನಮ್ಮಲ್ಲಿ ಈಗ ತಾನೇ ಹೊಸದಾಗಿ ಬಂದಿರುವ ಬನಾರಸ್, ಕಂಚಿ, ಆರ್ಣಿ, ಕಾಂಚಿಪುರಂ, ಹುಬ್ಬಳ್ಳಿ ಸೀರೆಗಳೂ, ಕಂಚಿ ಸೀರೆಗಳೂ, ನೂಲಿನ ಪೂನಾ ರುಮಾಲು ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.
M. P. V., M. V. ಭೋಜಯ್ಯ B. A. ಅಂಡ್ ಬ್ರದರ್ಸ್
ಬೊಂಬಾಯಿ ಆನಂದ ಭವನ ಹೋಟೆಲ್ ಕ್ರಾಸ್ ಭಾಗದ ಕೊನೆ
ಜವಳಿ ೨ ಗಲ್ಲಿ, ಮೈಸೂರು

ರೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೩—೪—೪೭ [ಸಂಚಿಕೆ ೨೦೦

- ಬಿಕನೀರ್ ರಾಜರ - ಸಭಾ ಪರಿತ್ಯಾಗ

ಉಭೆ ಪರಿಸ್ಥಿತಿ ಹತೋಟಿಗೆ ಬಂದಿದೆ

ಮಿಲಿಟರಿ ಮತ್ತು ಪೊಲೀಸಿನವರ ಬಂದೋಬಸ್ತು

(ಸು. ಪ್ರೊ.) ಬೆಂಗಳೂರು ೩. ...ನೆ ಮಧ್ಯಾಹ್ನದಿಂದ ೪೮ ಘಂಟೆಗಳ ... ಕರ್ಫ್ಯೂ ಆಜ್ಞೆಯನ್ನು ಹಾಕಿದ ... ಯಾವ ದುರ್ಘಟನೆಗಳೂ ನಡೆದಿರು...ಲ್ಲ ಮಿಲಿಟರಿಯವರೂ, ಸಶಸ್ತ್ರ ಪೊ...ಸಿನವರೂ ಬಂದೋಬಸ್ತನ್ನು ಮಾಡು...ವರು ನಗರದ ಹೊರ ವಲಯಗಳಲ್ಲಿ ... ಸಹ ಉಸ್ತುವಾರಿಯು ಬಲವಾಗಿದೆ. ...ಸಂದಣಿಯು ವಿಶೇಷವಾಗಿರುವ ಕಡೆಗ...ಳ್ಲಿ ರಕ್ಷಣಾ ದಳಗಳನ್ನಿಡಲಾಗಿದೆ ...ಗಳಿಂದಲೂ, ಈಟಿಗಳಿಂದಲೂ ...ವನ್ನು ಇರಿಯಲು ತೊಡಗಿದ್ದ ೫೦ ಜನ...ನ್ನು ಪೊಲೀಸರು ದಸ್ತಗಿರಿ ಮಾಡಿರುತ್ತಾ... ಹೆಂಡದಂಗಡಿಗಳನ್ನೂ, ಸಿನೆಮಾ ...ಗಳನ್ನೂ ಮುಚ್ಚಲಾಗಿದೆ. ನಿನ್ನೆ ...ಯುವರೆಗೆ ೫ ಜನರು ಮರಣ ಹೊಂ...ರುವರು

ಪ್ರಮುಖರ ಸಭೆ

ಗೃಹ ಮಂತ್ರಿಗಳಾದ ಶ್ರೀ ಎಂ. ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಪ್ರಮುಖರ ಸಭೆಯೊಂದು ನಡೆದು ಶಾಂತಿ ರಕ್ಷಣೆಗಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ನಗರದ ಪ್ರಮುಖ ನಾಯಕರುಗಳು ಪ್ರರಸಿವಾಸಿಗಳಲ್ಲಿ ಮನವಿಯೊಂದನ್ನು ಮಾಡಿ, ಶಾಂತಿ ಪಾಲನೆಗೆ ಸಹಕರಿಸ ಬೇಕೆಂದು ಕೋರಿದ್ದಾರೆ ಇದನ್ನು ಪುರಸ್ಕರಿಸಿ ಸರ್ಕಾರದವರೂ ಸಹ ಪ್ರಕಟನೆಯೊಂದನ್ನು ಹೊರಡಿಸಿರುತ್ತಾರೆ ಗಲಭೆಕೋರರನ್ನು ಅಡಗಿಸಲು ಸಕಲ ಶಸ್ತ್ರಗಳನ್ನೂ ಪ್ರಯೋಗಿಸಲು ಹಿಂಜರಿಯುವುದಿಲ್ಲವೆಂದು ಸರ್ಕಾರದವರು ತಿಳಿಸಿರುತ್ತಾರೆ.

ಈ ದಿನ ಬೆಳಗ್ಗೆ ಗೃಹ ಮಂತ್ರಿಗಳಾದ ಶ್ರೀ ಶೇಷಾದ್ರಿಯವರೂ, ಇತರ ಮುಖಂಡರುಗಳೂ ಪೇಟೆ ಬೀದಿಯಲ್ಲಿ ಹೊರಟು ವರ್ತಕರಿಗೆ ಉತ್ತೇಜನವಿತ್ತ ಮೇಲೆ ಅಂಗಡಿಗಳು ಒಂದೊಂದಾಗಿ ತೆರೆಯುತ್ತಿವೆ. ನೆನ್ನೆ ರಾತ್ರಿ ಎರಡು ಕಡೆ ಸಣ್ಣ ತಕರಾರಿನ ಪ್ರಸಂಗಗಳಾದುವೆಂದು ಹೇಳಲಾಗಿದೆ ಆಸ್ಪತ್ರೆಯಲ್ಲಿ ಇನ್-ಪೇಷಂಟುಗಳಾಗಿ ದಾಖಲಾಗಿದ್ದ ೩೪ ಜನರ ಪೈಕಿ ಒಬ್ಬರನ್ನು ಈ ದಿನ ಮನೆಗೆ ಕಳುಹಿಸಿಕೊಡಲಾಯಿತು. ಇತರರೂ ಉತ್ತಮಗೊಳ್ಳುತ್ತಿದ್ದಾರೆ. ನಿರಾಧಾರವಾದ ವದಂತಿಗಳಿಂದ ಉದ್ರೇಕಗೊಂಡು ನೆಮ್ಮದಿಗೆ ಭಂಗ ತರಬಾರದೆಂದೂ, ಶಾಂತಿ ರಕ್ಷಣೆಯಲ್ಲಿ ಸಕಲರೂ ಸಹಕರಿಸಬೇಕೆಂದೂ ಕೇಂದ್ರ ಶಾಂತಿ ಸಮಿತಿಯವರು ಮನವಿ ಮಾಡಿಕೊಂಡಿದ್ದಾರೆ ಪರಿಸ್ಥಿತಿ ಉತ್ತಮಗೊಳ್ಳುತ್ತಿದೆ

ಪತ್ರಿಕೆಗಳ ಪ್ರಕಟಣೆ ಇಲ್ಲ

ಕರ್ಫ್ಯೂ ಆಜ್ಞೆಯು ಜಾರಿಯಲ್ಲಿರುವ ಕಾರಣ ನಗರದ ಅನೇಕ ದಿನ ಪತ್ರಿಕೆಗಳು ಹೊರಡುವುದಿಲ್ಲವೆಂದು ಗೊತ್ತಾಗಿದೆ ಕೆಲಸಗಾರರು ವಿಶೇಷವಾಗಿ ಕರ್ಫ್ಯೂ ಪ್ರದೇಶದಲ್ಲಿರುವುದರಿಂದ ಅವರುಗಳು ಹೊರಗೆ ಬರಲು ಅಸಮರ್ಥವಾಗಿರುವುದೇ ಇದಕ್ಕೆ ಕಾರಣ

ಕರಗಕ್ಕೆ ಬರಲಾಗದು

ನಗರದ ಕೋಮುವಾರು ಪರಿಸ್ಥಿತಿಯು ಸಮರ್ಪಕವಾಗಿಲ್ಲದಿರುವುದರಿಂದ ಇಲ್ಲಿ ನಡೆಯಲಿರುವ ಧರ್ಮರಾಜನ ಕರಗದ ಉತ್ಸವಕ್ಕೆ ಹೊರಗಿನಿಂದ ಯಾರೂ ಬರಬಾರದೆಂದು ಸರ್ಕಾರದವರು ಪ್ರಕಟನೆ ಹೊರಡಿಸಿದ್ದಾರೆ. ಹಾಗೆ ಬರುವವರನ್ನು ಹಿಂದ...

ಮೈಸೂರು ಜಿಲ್ಲೆಯಲ್ಲೂ ಪ್ರತಿಬಂಧಕಾಜ್ಞೆಗಳು

ಮೈಸೂರು ೩

ಮೈಸೂರುನಗರ, ಚಾಮರಾಜನಗರ, ಬನ್ನೂರು ಮತ್ತು ಅವುಗಳ ಸುತ್ತಮುತ್ತಲಿನ ೫ ಮೈಲಿ ಫಾಸಲೆಯೊಳಗೆ ಸಭೆ, ಮೆರವಣಿಗೆ, ಘೋಷಣೆ ಮುಂತಾದುವುಗಳನ್ನು ಪ್ರತಿಬಂಧಿಸಿ ಪೋಲೀಸ್ ಶಾಸನದ ೩೯ನೇ ಪ್ರಕಾರ ಒಂದು ಆಜ್ಞೆಯನ್ನು ಈ ದಿನದಿಂದ ೩ ತಿಂಗಳ ಕಾಲ ಜಾರಿಗೆ ತರಲಾಗಿದೆ. ಈ ಪ್ರದೇಶಗಳಲ್ಲೆಲ್ಲಾ ಪೋಲೀಸ್ ಉಸ್ತುವಾರಿಯನ್ನು ಬಿಗಿಪಡಿಸಲಾಗಿದೆ

ಚಲವಾದಿಯಲ್ಲಿ ಅಕ್ಷರ ಪ್ರಚಾರ

ಚಲವಾದಿ ಹರಿಜನೋದ್ಧಾರ ಕರ್ನಾಟಕ ಯುವಕ ಸಂಘದ ಆಶ್ರಯದಲ್ಲಿ ವಯಸ್ಕರ ಅಕ್ಷರ ಪ್ರಚಾರ ಶಾಲೆಯನ್ನು ಮೈಸೂರು ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೆ. ಕೇಶವಮೂರ್ತಿಯವರು ಕಳೆದ ಭಾನುವಾರ ನೆರವೇರಿಸಿದರು.

§ ನಂಜನಗೂಡು ಕುಂಬಾರಗೇರಿ ಶ್ರೀರಾಮಮಂದಿರದಲ್ಲಿ ಈ ದಿನ ಸಂಜೆ ೬ ಗಂಟೆಗೆ ವಿ. ಟಿ. ಪುಟ್ಟಸ್ವಾಮಯ್ಯನವರ ಸಂಗೀತ ಕಛೇರಿ ನಡೆಯುವುದು ಸಿ. ಬಿ. ನಂಜರಾಜೇ ಅರಸಿನವರು ಅಧ್ಯಕ್ಷತೆ ವಹಿಸುವರು.

§ ಹಳೇ ಅಗ್ರಹಾರದ ಚಾವಡಿ ಬೀದಿಯಲ್ಲಿರುವ ಶ್ರೀ ಜಾನಕೀರಾಮ ಮಂದಿರದಲ್ಲಿ ಈ ದಿನ ರಾತ್ರಿ ೮ ಗಂಟೆಗೆ ಶ್ರೀ ಚಿಕ್ಕಸ್ವಾಮಿಯವರ ಗಾಯನವು ನಡೆಯುವುದು

ಕೈ ಕಳುಹಿಸುವ ಸಂಘವಿದೆ ಅಲ್ಲದೆ ಕರಗಕ್ಕಾಗಿ ಯಾವ ಬಗೆಯ ಸಂಚಾರ ಸೌಲಭ್ಯಗಳನ್ನೂ ಕಲ್ಪಿಸಲಾಗುವುದಿಲ್ಲ

ಶ್ರೀ ಗಣೇಶಾ ಟಾಕೀಸ್

4-4-47 ರಿಂದ 4ನೇ ವಾರ

ಕನ್ನಡ ಚಿತ್ರಗಳಲ್ಲೆಲ್ಲಾ ಶ್ರೇಷ್ಠವಾದ ವರ್ಣರಂಜಿತ ಸನ್ನಿವೇಶಗಳಿಂದ ಕೂಡಿದ

ಹರಿಶ್ಚಂದ್ರ

(ಕನ್ನಡ)

Morning Shows on 4, 5, 6 and 7 at 10-30 a m

Devils of The Desert

-:Featuring:-

JACK MULHALL, RUTH HALL

ಮಡಗಾಸ್ಕರ ದ್ವೀಪದಲ್ಲಿ ದಂಗೆ

ದಕ್ಷಿಣ ಆಫ್ರಿಕದ ಪೂರ್ವದಲ್ಲಿರುವ ಮಡಗಾಸ್ಕರ್ ದ್ವೀಪದಲ್ಲಿ ೧೦೦ ಮಂದಿ ದೇಶೀಯರು ಈಟಿ, ಭರ್ಜಿಗಳಿಂದ ಸಜ್ಜಿತರಾಗಿ ಮೂರು ಗ್ರಾಮಗಳಲ್ಲಿರುವ ಫ್ರೆಂಚ್ ಸೈನ್ಯದ ಮೇಲೆ ಧಾಳಿಯನ್ನಾರಂಭಿಸಿದ್ದಾರೆ. ಇದನ್ನು ಅಡಗಿಸಲು ಫ್ರೆಂಚರು ವಿಮಾನದಿಂದ ಸೈನ್ಯಗಳನ್ನು ಆ ದ್ವೀಪದಲ್ಲಿ ಇಳಿಸುತ್ತಿದ್ದಾರೆ. ಅನೇಕ ಫ್ರೆಂಚ್ ಅಧಿಕಾರಿಗಳು ಈ ದಂಗೆಯಲ್ಲಿ ಹತರಾಗಿದ್ದಾರೆಂದು ವರದಿಯಾಗಿದೆ.

ಸನಾತನ ಧರ್ಮದ ರಕ್ಷಣೆ

ನಂಜನಗೂಡು ೧

ಶ್ರೀ ಶ್ರೀಕಂಠೇಶ್ವರಾಸ್ತಿಕ ಸಭೆಯ ಸದಸ್ಯರುಗಳು ಕಳೆದ ಗುರುವಾರ ಶ್ರೀ ಶಂಕರ ಮಠದಲ್ಲಿ ವೇ॥ ಬ್ರ॥ ಶ್ರೀ॥ ಗೋವಿಂದ ಭಟ್ಟ ಕೃಷ್ಣಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸನಾತನ ಧರ್ಮವನ್ನು ಉಳಿಸಿಕೊಂಡು ಬರುವುದು ಪ್ರತಿಯೊಬ್ಬ ಧಾರ್ಮಿಕರ ಕರ್ತವ್ಯವೆಂದು ನಿರ್ಣಯಿಸಿದರು. ಕರ್ನಾಟಕ ಸನಾತನಿಗಳ ಸಂಘದವರು ವಿವಾಹಗಳಿಗೆ ಒಪ್ಪಿಸಿರುವ ನಿರ್ಣಯಗಳಿಗೆ ಬೆಂಬಲ ಕೊಡಬೇಕೆಂದು ತೀರ್ಮಾನಿಸಿದರು ಮಠಾಧಿಪತಿಗಳು ಈ ವಿಷಯದಲ್ಲಿ ಆಸಕ್ತಿ ವಹಿಸಿ ಮುಂದೆಯೂ ಸನಾತನ ಧರ್ಮವನ್ನು ಉದ್ಧಾರ ಮಾಡಬೇಕೆಂದೂ ಪ್ರಾರ್ಥಿಸಲಾಯಿತು

ಕಳಲೆ ರಥೋತ್ಸವ

ನಂಜನಗೂಡು ತಾಲ್ಲೂಕು ಕಳಲೆ ಶ್ರೀ ಲಕ್ಷ್ಮೀಕಾಂತಸ್ವಾಮಿಯವರ ದೇವಸ್ಥಾನದಲ್ಲಿ ಇದೇ ೭ ನೇ ತಾ॥ ಬೆಳಗ್ಗೆ ರಥೋತ್ಸವವೂ ರಾತ್ರಿ ಪುಷ್ಪಾಲಂಕಾರ ತೇರಿನ ಉತ್ಸವವೂ ೮ ನೇ ತಾ॥ ಸಂಜೆ ವೇ॥ ವೇ॥ ಗೋಪಾಲದಾಸರಿಂದ "ಶ್ರೀನಿವಾಸ ಕಲ್ಯಾಣ" ವೆಂಬ ಹರಿಕಥೆಯೂ ನಂತರ ತೆಪ್ಪೋತ್ಸವವೂ; ೯ ನೇ ತಾ॥ ಸಂಜೆ ೭ ಗಂಟೆಗೆ ತೆಪ್ಪೋತ್ಸವವೂ ನಡೆಯುತ್ತವೆ. ಭಗವದ್ಭಕ್ತರೆಲ್ಲರೂ ಇದಕ್ಕೆ ಧನ ಸಹಾಯ ಮಾಡಬೇಕೆಂದು ಪಾರುಪತ್ತೇಗಾರ್ ಶ್ರೀ ಕೆ ಸುಬ್ಬರಾಯರು ಕೋರಿದ್ದಾರೆ

• ಮೈಸೂರು ಕೃಷ್ಣರಾಜ ಮೊಹಲ್ಲಾ ಶಾಲಾ ಬೀದಿಯಲ್ಲಿರುವ ದೊಡ್ಡ ರಾಮಮಂದಿರದಲ್ಲಿ ಈ ದಿನ ರಾತ್ರಿ ೯ ಗಂಟೆಗೆ ವೇ॥ ಬ್ರ॥ ವೇಣುಗೋಪಾಲ ದಾಸರವರಿಂದ "ಪಾಂಚಾಲೀ ಆಶ್ವ" ವೆಂಬ ಹರಿಕಥೆಯು ನಡೆಯುವುದು.

ನರೇಂದ್ರರ ಸಭೆಯಿಂದ ಬಿಕನೀರು ರಾಜರ ಪರಿತ್ಯಾಗ

ಬೊಂಬಾಯಿನಲ್ಲಿ ನಡೆಯುತ್ತಿರುವ ನರೇಂದ್ರರುಗಳ ಸ್ಥಾಯೀ ಸಮಿತಿಯ ಸಭೆಯಿಂದ ಬಿಕನೀರು ಮಹಾರಾಜರು ಸಭಾ ಪರಿತ್ಯಾಗ ಮಾಡಿದರೆಂದು ವರದಿಯಾಗಿದೆ. ಭಾರತದ ಭವಿಷ್ಯ ರಾಜ್ಯಾಂಗದ ಅಂತಿಮ ಘಟ್ಟದಲ್ಲಿ ಸಂಸ್ಥಾನಗಳು ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು ರಾಜ್ಯಾಂಗ ಸಭೆಯ ಮುಂದಿನ ಅಧಿವೇಶನದಲ್ಲಿ ಭಾಗ ವಹಿಸಬಹುದೆಂದು ಹಿಂದೆಯೇ ತೀರ್ಮಾನವಾಗಿದ್ದುದಕ್ಕೆ ಈಗಿನ ನಿರ್ಧಾರವು ವಿರೋಧವಾಗಿದೆಯೆಂದೂ, ಸಂಸ್ಥಾನಗಳು ರಾಜ್ಯಾಂಗ ಸಭೆಗೆ ಸೇರಲು ಆತುರ ಮಾಡುವುದು ಸರಿಯಲ್ಲವೆಂದೂ, ಹೇಳಿ ಬಿಕನೀರ್ ರಾಜರು ಸಭೆಯಿಂದ ಹೊರಟುಹೋದರೆಂದು ತಿಳಿದುಬಂದಿದೆ.

೧,೨೨,೦೦೦ ಉಪಾಧ್ಯಾಯರ ಮುಷ್ಕರ

ಹೆಚ್ಚಿನ ಸಂಬಳ ಮತ್ತು ಸರ್ವಿಸ್ ನಿಯಮಗಳ ಸೌಕರ್ಯಗಳನ್ನು ಪಡೆಯುವುದಕ್ಕಾಗಿ ಬಂಗಾಳ ಪ್ರಾಂತ್ಯದ ಸುಮಾರು ೪ ಸಾವಿರ ಪ್ರೈಮರಿ ಶಾಲೆಗಳ ೧೨೦೦೦೦ ಉಪಾಧ್ಯಾಯರುಗಳು ನಿನ್ನೆಯಿಂದ ಮುಷ್ಕರ ಹೂಡಿದ್ದಾರೆ

ಏಕ ವಿಶ್ವಕ್ಕಾಗಿ ದುಡಿಯಿರಿ

ಏಕವಿಶ್ವವಿಲ್ಲದಲ್ಲಿ ನಾನು ಬದುಕಲು ಆಶಿಸುವುದಿಲ್ಲ. ನನ್ನ ಜೀವಮಾನದಲ್ಲೇ ಏಕ ವಿಶ್ವ ಸ್ಥಾಪನೆಯ ಕನಸು ನನಸಾಗಬೇಕೆಂಬುದು ನನ್ನ ಹಂಬಲ. ಇಲ್ಲಿ ನೆರೆದಿರುವ ವಿವಿಧ ರಾಷ್ಟ್ರಗಳ ಪ್ರತಿನಿಧಿಗಳೆಲ್ಲರೂ ದೃಢ ನಿರ್ಧಾರದಿಂದ 'ಏಕ ವಿಶ್ವದ' ಗುರಿಯ ಸಾಧನೆಗಾಗಿ ದುಡಿದರೆ ನನ್ನ ಆಶೆ ಈಡೇರುವುದರಲ್ಲಿ ಸಂದೇಹವಿಲ್ಲ- ಎಂಬುದಾಗಿ ಮಹಾತ್ಮ ಗಾಂಧಿಯವರು ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ

ತಾವೇ ಕದೆಯ ವೈಸರಾಯರೆಂದು ಮೌಂಟ್ ಬ್ಯಾಟನ್ನರು

ನೂತನ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು, ತಾವೇ ಭಾರತದ ಕಟ್ಟ ಕಡೆಯ ವೈಸರಾಯರೆಂದು ತಮ್ಮೊಡನೆ ಮಾತನಾಡುವಾಗ ಗಾಂಧೀಜಿಯವರು ತಿಳಿಸಿದ್ದಾರೆ ಇದನ್ನು ತಾವು ಸಂಪೂರ್ಣವಾಗಿ ನಂಬ ಬೇಕಾಗಿಯೂ ಸಹ ಅವರು ಹೇಳಿದ್ದಾರೆ

ಗ್ರೀಸ್ ದೊರೆಯ ಮರಣ

ಗ್ರೀಸಿನ ರಾಜರಾದ ಎರಡನೆ ಜಾರ್ಜ್‌ರವರು ಮೊನ್ನೆ ದಿನ ನಿಧನರಾದರು. ಇವರ ತಮ್ಮಂದಿರಾದ ರಾಜಕುಮಾರ ಪಾಲ್‌ರವರು ಸಿಂಹಾಸನಾರೋಹಣ ಮಾಡಿದರು.

ಜಿಲ್ಲಾ ಬೋರ್ಡ್ ಚುನಾವಣೆ

೭-೪-೪೭ ನೇ ಸೋಮವಾರ ನಂಜನಗೂಡು ತಾಲ್ಲೂಕಿನ ಈ ಕೆಳಗಿನ ಕಾಂಗ್ರೆಸ್ ಉಮೇದುವಾರರಿಗೆ ... ಓಟು ಕೊಡಿ :-

ಪಟೇಲ್ ಲಿಂಗಪ್ಪ (ಹೆಸರು ...)

ಪಟೇಲ್ ... (ಹುಲ್ಲಹಳ್ಳಿ)

ಎಂ. ಲಿಂಗಣ್ಣ (ಬಿಳಿಗೆರೆ)

ಸಾಧ್ವಿ

ತಾ॥ ೩-೪-೪೭ ಗುರುವಾರ

ಕೋಮುವಾರು ಶಾಂತಿಯು ಅಗತ್ಯ

ಒಂದೆರಡು ದಿನಗಳಿಂದಲೂ ಬೆಂಗಳೂರಿನಿಂದ ಬರುತ್ತಿರುವ ವಾರ್ತೆಯು ಚಿಂತಾಜನಕವಾಗಿರುತ್ತದೆ. ಅಲ್ಲಿ ನಡೆಸಿದ ಉತ್ಸವದ ಮೇಲೆ ಹಲವರು ಮಾಡಿದ ಧಾಳಿಯು ಕೋಮುವಾರು ಜ್ವಾಲೆಯಾಗಿ ಪರಿಣಮಿಸಿರುತ್ತದೆ. ಅದರ ಹತೋಟಿಗಾಗಿ ಮೊದಲನೆಯ ದಿನ ವಿಧಿಸಿದ ಕರ್ಫ್ಯೂ ಆಜ್ಞೆಯು ವಿಫಲವಾಗಿ ಈಗ ನಲವತ್ತೆಂಟು ಘಂಟೆ ಕರ್ಫ್ಯೂವನ್ನು ಹಾಕಲಾಗಿದೆ.

ಭರತ ಖಂಡದ ಇತರ ಅನೇಕ ಕಡೆಗಳಲ್ಲಿ ಈಗ ಪ್ರತಿ ದಿನವೂ ನಡೆಯುತ್ತಿರುವ ಕೋಮುವಾರು ಕಲಹದ ಗಾಳಿಯು ಬೆಂಗಳೂರಿಗೂ ಬೀಸಿರುವಂತಿದೆ. ಇದು ಅತ್ಯಂತ ಶೋಚನೀಯವಾದ ವಿಚಾರ. ಕಲ್ಯಾಣ ನಗರವೆಂದೂ, ದಕ್ಷಿಣ ಭಾರತದ ಉದ್ಯಾನವನವೆಂದೂ ಹೆಸರುವಾಸಿಯಾದ ಬೆಂಗಳೂರಿನಲ್ಲಿ ನಲವತ್ತೆಂಟು ಘಂಟೆಗಳ ಕಾಲ ಕರ್ಫ್ಯೂ ಆಜ್ಞೆಯು ಜಾರಿಯಾಗಿ, ಜನರ ಸಮಸ್ತ ವ್ಯಾಪಾರ, ವ್ಯವಹಾರಗಳಿಗೂ ಅಡಚಣೆಯುಂಟಾಗಿರುವುದು ಅತ್ಯಂತ ವಿಷಾದಕರವಾದ ಅಂಶ. ನಗರದ ಸುಮಾರು ಮೂರನೇ ಒಂದು ಭಾಗದಲ್ಲಿ ಚಲನವಲನವೇ ನಿಂತು ಹೋಗಿ ಆ ಮಹಾ ನಗರವು ಒಂದು ಮರುಭೂಮಿಯಂತೆ ಪರಿಣಮಿಸಿರುತ್ತದೆ. ಇದರ ಪರಿಣಾಮವು ನಗರದಲ್ಲೆಲ್ಲಾ ಕಳವಳವನ್ನು ಹುಟ್ಟಿಸಿ ದಿನಚರಿಯ ಜೀವನವು ನಿರುತ್ಸಾಹ ಜನಕವಾಗಿರುತ್ತದೆ.

ಬೆಂಗಳೂರಿನ ಇತಿಹಾಸದಲ್ಲಿ ಇಂತಹ ಪರಿಸ್ಥಿತಿಯು ಹಿಂದೆಂದೂ ಬಂದೊದಗಿರಲಿಲ್ಲ. ಹಿಂದೆ ಅನೇಕ ಬಾರಿ ರಾಜಕೀಯ, ಕಾರ್ಮಿಕ ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಆಂದೋಳನಗಳು ನಡೆದಾಗಲೂ ಇಂತಹ ಪರಿಸ್ಥಿತಿಯು ಇರಲಿಲ್ಲ. ಮುಂದೆ ಕೋಮುವಾರು ವ್ಯಾಧಿಯು ಯಾವ ಪ್ರಮಾಣವನ್ನು ತಾಳಿ, ಎಂತಹ ಅನರ್ಥಗಳಿಗೆ ಕಾರಣವಾಗುವುದೋ ಎಂಬ ಶಂಕೆಯಿಂದ ಅಧಿಕಾರಿಗಳು ಬಲವತ್ತರವಾದ ಮುಂಜಾಗ್ರತೆ ಕ್ರಮಗಳನ್ನು ಕೈಗೊಂಡಿದ್ದಾರೆ. ಸಾರ್ವಜನಿಕ ಮುಖಂಡರುಗಳೂ ಸಹ ಶಾಂತಿ ರಕ್ಷಣೆಗಾಗಿ ಮಹಾಜನರಲ್ಲಿ ಮನವಿಯನ್ನು ಮಾಡಿಕೊಂಡಿರುತ್ತಾರೆ. ಈ ವಿಚಾರಗಳಲ್ಲಿ ಸುಸಂಸ್ಕೃತರಾದ ಸಭ್ಯ ಪ್ರಜೆಗಳೆಲ್ಲರೂ ಸಂಪೂರ್ಣವಾದ ಸಹಕಾರವನ್ನು ನೀಡುವುದು ಅತ್ಯಗತ್ಯ.

ಅನೇಕ ವರ್ಷಗಳಿಂದಲೂ ಶಾಂತಿ, ಸೌಹಾರ್ದಗಳಿಗೆ ಪ್ರಖ್ಯಾತವಾಗಿದ್ದ ನಮ್ಮ ಸಂಸ್ಥಾನದಲ್ಲಿ ಈ ಕೋಮುವಾರು ವ್ಯಾಧಿಯು ಬೆಳೆಯಲು ಅವಕಾಶ ಕೊಡುವುದು ಸರಿಯಲ್ಲ. ಇದನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಿ ಇದರ ಬಗ್ಗೆ ಕೈಗೊಳ್ಳಬೇಕಾಗಿರುವ ಸಕಲ ಪ್ರಯತ್ನಗಳಲ್ಲಿಯೂ ಸಾರ್ವಜನಿಕರು ಸರ್ವ ವಿಧದಲ್ಲಿಯೂ ನೆರವು ನೀಡಬೇಕೆಂದು ನಾವು ಕೋರುತ್ತೇವೆ.

RAJKAMAL, MYSORE

Morning Shows from 4-4-47
for 4 Days
Daily at 10-30 a m

PRISONERS OF ZENDA

The most romantic adventure Story of all times
Starring:- Ronald Colman, Madelene Carroll, Douglas Fairbanks Jr, Mary Astor Etc.

MYSORE STATE RAILWAY

Re: New Booking Office at VANI VILAS MARKET, MYSORE

With effect from 2nd April 1947 A New City Booking Office, at Vani vilas Market, Mysore, will be opened for local and through booking.

The above Booking Office will be open for-

(a) issue of passenger tickets;

(b) Tickets issued at this Booking Office will be available for use on the day of issue only

(c) The working hours will be from 6 to 11 and from 14 to 19 hours daily

Mir Inayeth Hussain.
Traffic Manager

Mysore,
2 4 -47

ರಾಜಕಮಲ್

೩೦-೩-೪೭ ರಿಂದ ಅಮೋಘವಾದ ೭ನೇ ವಾರ

ಶ್ರೀ ಕೃಷ್ಣಲೀಲಾ (ಕನ್ನಡದಲ್ಲಿ)

ಮೈಸೂರಿನಲ್ಲಿ ತಯಾರಿಸಿ, ಮಹಾಜನಗಳ ಮನ್ನಣೆಗೆ ಪಾತ್ರವಾಗಿರುವ ಈ ಪುರಾಣ ವೈಖರಿಯನ್ನು ನೋಡಲು ತಪ್ಪದೇ ಬನ್ನಿ

ಮೈಸೂರು ಸ್ಟೇಟ್ ರೈಲ್ವೆ

ವಾಣೀವಿಲಾಸ ಮಾರ್ಕೆಟ್ಟಿನಲ್ಲಿ ಹೊಸ ಬುಕಿಂಗ್ ಆಫೀಸು

೧೯೪೭ ನೇ ಏಪ್ರಿಲ್ ೨ ನೇ ತಾರೀಖಿನಿಂದ ಮೈಸೂರು ವಾಣೀ ವಿಲಾಸ ಮಾರ್ಕೆಟ್ಟಿನಲ್ಲಿ ಲೋಕಲ್ ಮತ್ತು ಥ್ರೂ ಬುಕಿಂಗುಗಳಿಗಾಗಿ ಒಂದು ಹೊಸ ಬುಕಿಂಗ್ ಆಫೀಸನ್ನು ತೆರೆಯಲಾಗುತ್ತದೆ

ಸದರಿ ಬುಕ್ಕಿಂಗ್ ಆಫೀಸಿನಲ್ಲಿ—

(ಎ) ಪ್ಯಾಸೆಂಜರ್ ಟಿಕೆಟ್ಟುಗಳನ್ನು ಕೊಡಲಾಗುವುದು

(ಬಿ) ಈ ಆಫೀಸಿನಲ್ಲಿ ದೊರೆಯುವ ಟಿಕೆಟ್ಟುಗಳು ಅವುಗಳನ್ನು ಕೊಂಡುಕೊಂಡ ದಿನ ಮಾತ್ರ ಉಪಯೋಗಕ್ಕೆ ಬರುವುವು.

(ಸಿ) ಪ್ರತಿ ದಿನವೂ ೬ ರಿಂದ ೧೧ ಮತ್ತು ೧೪ ರಿಂದ ೧೯ ಗಂಟೆಗಳ ವರೆಗೆ ಈ ಬುಕ್ಕಿಂಗ್ ಆಫೀಸು ತೆರೆದಿಟ್ಟಿರಲಾಗುವುದು

ಮಿರ್ ಇನಾಯತ್ ಹುಸೇನ್,
ಟ್ರಾಫಿಕ್ ಮ್ಯಾನೇಜರ್

ಮೈಸೂರು,
೧-೪-೪೭

ಅಪ್ಸರಾ ಟಾಕೀಸ್, ಮೈಸೂರು

೩-೪-೪೭ ರಿಂದ ೩ ನೇ ವಾರ

ಕುಂಡಲಕೇಶಿ

೨)

ಮಂತ್ರಿಮಂಡಲದ ವಿಶೇಷ [...]

ಬೆಂಗಳೂರು ನಗರದ 'ಪರಿಸ್ಥಿತಿ [...] ವಿಮರ್ಶಿಸಲು ಮಂತ್ರಿಮಂಡಲದ [...] ಸಭೆಯು ನಿನ್ನೆ ತಾ॥ ರಾಯರ ರವ[...] ಕ್ಷತೆಯಲ್ಲಿ ಜರುಗಿತು

Edited, printed and publish[ed by] A. V. Nagarajan at the Sadhvi [Press,] D. Subbiah Road, Mysore

UNIVERSITY OF MYSORE.

Office of the University of My[sore]

No Ex 3-1085/46-47. Mysore 25th March 1947.

NOTIFICATION

It is hereby notified that for the benefit of the Sc[ience] students in the Junior Intermediate class of the Col[leges] at Davangere and Hassan a course of practical wo[rk in] Physics and Chemistry has been arranged at the Ce[ntral] College, Bangalore, as indicated below.

Batches of Students	Duration of the Co[urse]
1. Men students of Intermediate College, Hassan and Women students of Hassan and Davangere	From 14th April 26th April
2 Men students of the Intermediate College. Davangere.	From 28th Ap[ril] 10th May

The men students of the above colleges will be [accom]modated in the Central College Hostel, Bangalore [and] the Women students in the Maharani's College H[ostel,] Bangalore The University will bear their boardin[g and] lodging charges.

Further details regarding arrangements for p[rocee]ding to Bangalore and back should be obtained b[y] students from the Superintendents of the respec[tive] colleges.

D. S GORDON
Registr[ar]

ಗುಂಡ್ಲುಪೇಟೆ ಟವನ್ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟ್[ರ]

ಆಫೀಸಿನಿಂದ ತಾ॥ ೧೪—೩—೪೭

ಟೆಂಡರು ನೋಟೀಸು

ಈ ಟವನ್ ಮುನಿಸಿಪಾಲಿಟಿಯಲ್ಲಿ ೧—೬—೪೭ ರ ಲಾಗಾಯ್ತು ೩೦—[...] ರ ವರೆಗೆ ಈ ಕೆಳಗೆ ಕಂಡ ಬಾಬುಗಳನ್ನು ಹರಾಜಿನಲ್ಲಿ ಬಿಡ್ ಮಾಡುವುದಕ್ಕೂ [...] ರುಗಳನ್ನು ಕೊಡಲು ಆಯಾ ಬಾಬಿನ ಮುಂದೆ ನಮೂದಿಸಿರುವಂತೆ ಬಾಬನ್ನು [...] ವವರು ಆ ದಿವಸ ಮಧ್ಯಾಹ್ನ ೩ ಘಂಟೆಗೆ ಟವನ್ ಹಾಲ್ ಬಳಿ ಬಂದು ಬಿಡ್ ಮಾ[ಡಬಹು]ದು ಮತ್ತು ಟೆಂಡರು ಹಾಕಬಹುದು ಹೆಚ್ಚಿಗೆ ವಿಷಯ ಬೇಕಾದಲ್ಲಿ ರಜಾ ದಿವ[ಸ ಹೊರತು] ಆಫೀಸು ವೇಳೆ ಟವನ್ ಮುನಿಸಿಪಲ್ ಆಫೀಸಿನಲ್ಲಿ ತಿಳಿದುಕೊಳ್ಳಬಹುದು- ತಿಳಿಯ[...]

1) ಹರಾಜು ಇಸ್ತಿಹಾರ್ ಷರತ್ತುಗಳಿಗೆ ಒಳಪಟ್ಟು ಗುಂಡ್ಲುಪೇಟೆ ಟವನ್ ಮುನಿಸಿಪಲ್ ಎಲ್ಲೆಯೊಳಗೆ ಬರತಕ್ಕ ವಾಹನಗಳ ಮೇಲೆ ಟೋಲು ವಸೂಲ್ಮಾಡತಕ್ಕ ಹಕ್ಕನ್ನು ಹರಾಜು ಮಾಡಲಾಗುತ್ತೆ	9-4-1947 ಬುಧವಾರ ಮ[ಧ್ಯಾಹ್ನ] 3 ಘಂಟೆ
2) ಹರಾಜು ಇಸ್ತಿಹಾರ್ ಷರತ್ತುಗಳಿಗೆ ಒಳಪಟ್ಟು ಮರ್ಕೆಟ್ ಸ್ಟಾಲು ಮತ್ತು ಸ್ಲಾಟರ್ ಹೌಸ್‌ನಲ್ಲಿ ವ್ಯಾಪಾರ ಮಾಡತಕ್ಕ ಹಕ್ಕು	ಡಿಟೋ
3) ದೊಡ್ಡಿ ಬಳಿ ಇರುವ ಬಸ್ ಸ್ಟ್ಯಾಂಡ್ ಸ್ಥಳದಲ್ಲಿ ಹಣ್ಣು ಹಂಪಲು ವಗೈರೆ ವ್ಯಾಪಾರ ಮಾಡತಕ್ಕ ಹಕ್ಕು	ಡಿಟೋ
4) ಟೆಂಡರು ಇಸ್ತಿಹಾರ್ ಷರತ್ತುಗಳಿಗೆ ಒಳಪಡಿಸಿ ಟವನ್‌ನಲ್ಲಿ ಬೀಳಬಹುದಾದ ಕಚಡಾವನ್ನು ಗುಡಿಸಿರುವುದನ್ನು ಕಂಟ್ರಾಕ್ಟುದಾರರ ಸ್ವಂತ ಎತ್ತಿನ ಗಾಡಿಗಳು ಎರಡರಿಂದ ಸಾಗಿಸತಕ್ಕ ಬಗ್ಗೆ ಟೆಂಡರು ಹಾಕಲು ಅಪ್ಪಯರು ಕಾರೀಖು	9-4-47 ಬುಧವಾರ ಮ[ಧ್ಯಾಹ್ನ] 3 ಘಂಟೆಯೊ[ಳಗೆ]
5) ಟೆಂಡರು ಇಸ್ತಿಹಾರ್ ಷರತ್ತುಗಳಿಗೆ ಒಳಪಡಿಸಿ ಟವನ್‌ನಲ್ಲಿ 18 ಪೆಟ್ರೊಮ್ಯಾಕ್ಸ್ ಲೈಟುಗಳು, 37 ಸಾದಾ ದೀಪಗಳನ್ನು ಹಚ್ಚಿಸಲು ಟೆಂಡರು ಹಾಕಲು ಅಪ್ಪಯರ್ ಕಾರೀಖು	ಡಿಟೋ

ಟಿ. ಎಚ್. ಅಮೀನ್, ಪ್ರೆಸಿಡೆ[ಂಟ್]

ರಿಜಿ. ನಂ. ೨೨೨ ‖ ವಂದೇ ಮಾತರಂ ‖ ಬಿಡಿಯ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೪—೮—೪೭ [ಸಂಚಿಕೆ ೨೦೧

ರಾಜ್ಯಾಂಗ ಸಭಾ ಪ್ರವೇಶಕ್ಕೆ ಸಂಸ್ಥಾನಗಳಿಗೆ ಸ್ವಾತಂತ್ರ್ಯ

ಪಶ್ಚಿಮ ಪಂಜಾಬಿನಿಂದ ೦ದೂ - ಸಿಖ್ಖರ ಯಾತ್ರೆ

೫ ಸಹಸ್ರ ಹಿಂದೂ ಮತ್ತು ಸಿಖ್ಖರು ಪಶ್ಚಿಮ ಪಂಜಾಬಿನಿಂದ ಗಂಟುಮೂಟೆ ಕಟ್ಟಿಕೊಂಡು ನಗರ ಪ್ರದೇಶಗಳ ಯಾತ್ರೆ ತೆರಳುತ್ತಿದ್ದಾರೆಂದು ವರದಿಯಾ . ಶಾಂತಿ ಸ್ಥಾಪನೆಯು ಅಸಾಧ್ಯವೆಂ , ತಮ್ಮ ಆತ್ಮರಕ್ಷಣೆಗೆ ಪಲಾಯನವೇ ವೆಂದೂ ಅರಿತು ಅವರುಗಳು ಈ ೨೯ ಪ್ರಯಾಣ ಕೈಗೊಂಡಿದ್ದಾರೆಂದು ಹೇಳಗಿದೆ

ಶೇಕ್ ಅಬ್ದುಲ್ಲಾ ವಿಚಾರಣೆಗೆ ೪೭,೦೦೦ ರೂ. ಖರ್ಚು

ಕಾಶ್ಮೀರದ ಪ್ರಜಾ ನಾಯಕರಾದ ಶೇಕ್ ಅಬ್ದುಲ್ಲಾರವರ ಮೇಲಿನ ಮೊಕದ್ದಮೆಯು ಸರ್ಕಾರದವರ ವಾದವಿವಾದ ನಡೆಸಲು ಸಾವಿರ ರೂ. ಗಳು ಖರ್ಚಾದವೆಂದು ಕಾಶ್ಮೀರ ಸರ್ಕಾರವು ತಿಳಿಸಿದೆ. ಅಬ್ದುಲ್ಲಾರವರ ಪರವಾಗಿ ಮಿ॥ ಅಸಫ್ ಅಲಿ, ಭವನ್ ಮುಂತಾದ ಭಾರಿ ವಕೀಲರು ಬಂದಿದ್ದರಿಂದ ತಾವೂ ಸಹ ಬ್ರಿ॥ ಇಂಡಿಯಾದ ಒಬ್ಬ ಪ್ರಮುಖ ವಕೀಲರನ್ನು ಕರೆ ಬೇಕಾಯಿತೆಂದು ಸರ್ಕಾರದ ಪರ ವಿವರ ಕೊಡಲಾಗಿದೆ.

ಪುರಸಭಾ ಚುನಾವಣೆ

ಸ್ವಂ.ಸು] ಚಾಮರಾಜನಗರ ೩

ಇಲ್ಲಿನ ಪುರಸಭಾ ಚುನಾವಣೆಯು ಇದೇ ೧೬ ನೇ ತಾ॥ ನಡೆಯಲಿದೆ. ೧೫ ಸ್ಥಾನಗಳಿಗೆ ೨೭ ಮಂದಿ ಸ್ಪರ್ಧಿಸಿದ್ದಾರೆ. ಎ ಡಿವಿಜನ್:- (೬ ಸ್ಥಾನಗಳು) ಶ್ರೀಗಳಾದ ಬಿ. ಬಸವಣ್ಣ, ಭಾಸ್ಕರಾಚಾರ್, ರಾಮಲಿಂಗ ಶೆಟ್ಟಿ, ಜಯರಾಮನಾಯ್ಡು, ಸಿ ವಿ ಅಪ್ಪ, ಎಸ್. ಶಾಮಣ್ಣ, ಸುಬ್ರಹ್ಮಣ್ಯ/ಪಾಟೀಲ್ ಸಿ ಎ ಗಾಮ್ರ, ಚೌಡಶೆಟ್ಟಿ ಟಿ ಎಸ್ ಬಸಮಯ್ಯ, ಹಾರುವಶೆಟ್ಟಿ ಮತ್ತು ಸೈಯದ್ ಅಬ್ದುಲ್ ಜಬ್ಬಾರ್.

ಬಿ ಡಿವಿಜನ್:- (೪ ಸ್ಥಾನಗಳು) ಶ್ರೀಗಳಾದ ಸಿ. ಡಿ ನಾರಾಯಣರಾವ್, ಎಸ್. ಲಕ್ಷ್ಮೀನಾರಾಯಣಯ್ಯ, ಕೆ. ಎ ಕೃಷ್ಣಮೂರ್ತಿ ಎ. ನರಸಿಂಹಮೂರ್ತಿ, ಟಿ. ಆರ್. ಜಗನ್ನಾಥರಾವ್, ಅಬ್ದುಲ್ ಬಷೀರ್, ಸಿ ಎಸ್ ಶ್ರೀಕಂಠಯ್ಯ, ಮತ್ತು ಬಿ ನಾರಾಯಣ್.

ಸಿ ಡಿವಿಜನ್:- (೫ ಸ್ಥಾನಗಳು) ಶ್ರೀಗಳಾದ ಎಸ್. ವೆಂಕಟಸುಬ್ಬಶೆಟ್ಟಿ, ಎಸ್. ನಾಗರಾಜ್, ಚಿಕ್ಕನಂಜಶೆಟ್ಟಿ, ಯು ವೆಂಕಟರಮಣನಾಯ್ಡು, ಬಿ ನಾರಾಯಣ್, ಸಿ ಎಸ್ ಆನಂದರಾವ್ ಮತ್ತು ಸೈಯದ್ ಅಬ್ದುಲ್ ಜಬ್ಬಾರ್

ರಥೋತ್ಸವದ ಪ್ರಕರಣ

ಸ್ವಂ ಸು] ನಂಜನಗೂಡು ೩

ನಿನ್ನೆ ನಡೆದ ರಥೋತ್ಸವದ ಸಂದರ್ಭದಲ್ಲಿ ರಥದ ಚಕ್ರಕ್ಕೆ ಸಿಕ್ಕಿ ಇಬ್ಬರು ವ್ಯಕ್ತಿಗಳು ಸತ್ತರು. ಮತ್ತಿಬ್ಬರೂ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ಸತ್ತವರ ಪೈಕಿ ಒಬ್ಬರು ನಂಜನಗೂಡಿನ ಶ್ರೀ ಗೋವಿಂದಸ್ವಾಮಿನಾಯ್ಡುರವರು ೬೦ ವರ್ಷ ವಯಸ್ಸು, ಬಳೇ ವ್ಯಾಪಾರ. ಮತ್ತೊಬ್ಬರು ಮೈಸೂರು ಕನ್ನೇಗೌಡನ ಕೊಪ್ಪಲಿನ ೨೫ ವರ್ಷ ವಯಸ್ಸಿನ ರಂಗಪ್ಪ ಎಂಬುವರು

* ಮೈಸೂರು ದೇವೀರಮ್ಮಣ್ಣೀ ಅಗ್ರಹಾರದಲ್ಲಿರುವ ಶ್ರೀ ವಿಘ್ನೇಶ್ವರ ದೇವಾಲಯದಲ್ಲಿ ಈ ದಿನ ಸಂಜೆ ೬॥ ಗಂಟೆಗೆ ರಾಮನವಮಿ ಉತ್ಸವದ ಸಲುವಾಗಿ ವೇ॥ ಗಮಕಿ ನಾಗರಾಜ ಶಾಸ್ತ್ರಿಗಳಿಂದ ಬಂಗಾಳ ಎಂಬ ಹರಿಕಥೆಯು ನಡೆಯುವುದು.

ರಾಜಧಾನಿಯಲ್ಲಿ ಶಾಂತಿ ರಕ್ಷಣೆಗೆ ಏರ್ಪಾಡು

ಮೈಸೂರು ೪

ಜಿಲ್ಲಾಧಿಕಾರಿಗಳಾದ ಶ್ರೀ ಜಿ ಎಸ್. ನಾಗರಾಜ(?)ಯರು ಈ ದಿನ ಬೆಳಗ್ಗೆ ಹಿಂದೂ ಮತ್ತು ಮುಸಲ್ಮಾನ್ ಪುರ ಪ್ರಮುಖರನ್ನೂ, ಪತ್ರಿಕಾ ಪ್ರತಿನಿಧಿಗಳನ್ನೂ ಬರಮಾಡಿಕೊಂಡು ಶಾಂತಿ ಸ್ಥಾಪನೆಯ ಏರ್ಪಾಡುಗಳ ಬಗ್ಗೆ ಸಮಾಲೋಚನೆ ನಡೆಸಿದರು. ಪೌರಸಭಾಧ್ಯಕ್ಷರಾದ ಶ್ರೀ ಆರ್ ರಾಮಚಂದ್ರರಾವ್ ಬಾಂಭೋರೆಯವರು ಹಿಂದೆ ಈ ಊರಿನಲ್ಲಿ ಕೈಗೊಳ್ಳಲಾಗಿದ್ದ ಕಾರ್ಯಕ್ರಮಗಳನ್ನು ವಿವರಿಸಿ, ಮುಂದೆಯೂ ಸಹ ಸಾರ್ವಜನಿಕ ಮುಖಂಡರು ಶಾಂತಿ ಪಾಲನೆಯಲ್ಲಿ ಸಹಕರಿಸಬೇಕೆಂದು ಕೋರಿದರು. ನೆರೆದಿದ್ದ ಅನೇಕ ಸದಸ್ಯರು ಹಲವು ಸಲಹೆಗಳನ್ನಿತ್ತರು. ಸಂಜೆ ೭ ಗಂಟೆಯ ಮೇಲೆ ಹೆಂಡದಂಗಡಿಗಳನ್ನು ಮುಚ್ಚಿಸ ಬೇಕು, ೯ ಗಂಟೆಯ ಮೇಲೆ ಸಿನಿಮಾ ಮತ್ತು ನಾಟಕಗಳನ್ನು ತಪ್ಪಿಸುವುದು, ಜೂಜಿನ ಕಟ್ಟೆ ಮುಂತಾದ ಕಡೆಗಳಲ್ಲಿ ಬಂದೋಬಸ್ತು ಮಾಡುವುದು-ಇವೇ ಮುಂತಾದ ಸಲಹೆಗಳನ್ನು ಕೊಡಲಾಯಿತು. ಈ ಬಗ್ಗೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು

ಸಂಗೀತ ಕಛೇರಿಗಳು

ಈ ದಿನ ರಾತ್ರಿ ೧೦ ಗಂಟೆಗೆ ಚಾಮರಾಜ ಜೋಡಿ ಬಡಾವಣೆಯಲ್ಲಿರುವ ಶ್ರೀ ಶಂಕರ ನಾರಾಯಣ ಸ್ವಾಮಿ ದೇವಾಲಯದ ಶ್ರೀರಾಮ ಮಂದಿರದಲ್ಲಿ ಚೆಂಪೈ ಶ್ರೀ ವೈದ್ಯನಾಥ ಭಾಗವತರವರ ಸಂಗೀತವೂ ಶ್ರೀ॥ ಸುಬ್ಬಯ್ಯರ್ ರವರ ಮೃದಂಗ ಪಕ್ಕವಾದ್ಯ ಶ್ರೀ॥ ಸೀತಾರಾಮ ಶಾಸ್ತ್ರಿಗಳ ಮೋರ್ಚಿಂಗ್ ನೊಡನೆ ಜರುಗುವುದು.

ಶಂಕರಪೇಟೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ಈ ದಿನ ಸಂಜೆ ೬-೩೦ ಗಂಟೆಗೆ ಆ॥ ವಿ॥ ಬಿ ದೇವೇಂದ್ರಪ್ಪನವರ ಗಾಯನವು ಶ್ರೀಮನ್ಮಹಾರಾಜರವರ ಖಾಸಗೀ ಕಾರ್ಯದರ್ಶಿಗಳಾದ ಶ್ರೀ॥ ಕೆ ನರಸಿಂಹ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಜರುಗುವುದು.

ಹಳೇ ಅಗ್ರಹಾರದ ಬಾಲಾಜಿ ಬೀದಿಯಲ್ಲಿರುವ ಜಾನಕೀ ರಾಮ ಮಂದಿರದಲ್ಲಿ ಈ ದಿನ ರಾತ್ರಿ ೯ ಗಂಟೆಗೆ ವಿ॥ ವಿ ದೇಶಿಕಾಚಾರ್ಯರವರ ಮುರಳೀ ವಾದನವು ಪಕ್ಕವಾದ್ಯಗಳೊಡನೆ ಜರುಗುವುದು.

ಬೆಂಗಳೂರಿನ ಪರಿಸ್ಥಿತಿ ಉತ್ತಮಗೊಂಡಿದೆ

ಸ್ವಂ ಸು. ವರದಿ] [ಬೆಂಗಳೂರು ೪

೪೮ ಗಂಟೆಗಳ ಕಾಲ ಕರ್ಫ್ಯೂ ಆಜ್ಞೆಯು ಈ ದಿನ ಮಧ್ಯಾಹ್ನ ೧೨ ಗಂಟೆಗೆ ಮುಕ್ತಾಯವಾಯಿತು. ಅದನ್ನು ಮುಂದುವರಿಸಿರುವುದಿಲ್ಲ. ಇದುವರೆಗೆ ಯಾವ ದುರ್ಘಟನೆಗಳೂ ಆಗಿಲ್ಲ. ಕರ್ಫ್ಯೂ ಅವಧಿಯು ಮುಗಿದೊಡನೆ ಶ್ರೀಗಳಾದ ಕೆ. ಟಿ ಭಾಷ್ಯಂ, ಮಿರ್ಜಾ ಅಬೀಜುಲ್ಲಾ ಬೇಗ್ ಮುಂತಾದವರು ಪೇಟೆಯ ವ್ಯಾನಿನಲ್ಲಿ ಹೊರಟು ಶಾಂತಿ ಸಂರಕ್ಷಣೆ ಮಾಡುವಂತೆ ಮಹಾಜನರಲ್ಲಿ ಮನವಿ ಮಾಡಿಕೊಂಡು ಬಂದರು.

ರಾತ್ರಿ ೯ ಗಂಟೆಯಿಂದ ಬೆಳಗಿನ ೫ ಗಂಟೆಯ ವರೆಗೆ ಜಾರಿಯಲ್ಲಿರುವ ಕರ್ಫ್ಯೂ ಆಜ್ಞೆಯನ್ನು ಇನ್ನೆರಡು ದಿನಗಳ ಕಾಲ ಮುಂದುವರಿಸಲಾಗಿದೆ

ಗಲಭೆಗಳಿಂದ ಇದುವರೆಗೆ ೬ ಜನರು ಮೃತಪಟ್ಟಿದ್ದಾರೆ. ಉಳಿದವರು ಉತ್ತಮಗೊಳ್ಳುತ್ತಿದ್ದಾರೆ

ಗಲಭೆಯ ಕಾರಣದಿಂದ ಬೀದಿಗಳಲ್ಲಿರುವ ಅಂಚೆ ಪೆಟ್ಟಿಗೆಗಳಿಗೆ ಕಾಗದಗಳನ್ನು ಹಾಕಿದರೆ ಕಾವಲು ಜನ ಬ್ಯಾಂಯನ್ನು ನಡೆಸಿಕೊಳ್ಳಲಾಗುವುದಿಲ್ಲವೆಂದೂ, ಕಾಗದಗಳನ್ನು ಟಪಾಲ್ ಆಫೀಸಿನಲ್ಲಿಯೇ ಹಾಕಬೇಕೆಂದೂ ಸದರಿ ಇಲಾಖೆಯವರು ಪ್ರಕಟಣೆ ಹೊರಡಿಸಿರುತ್ತಾರೆ

ಈ ದಿನ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಅಂಗಡಿ, ಮುಂಗಟ್ಟುಗಳು ತೆರೆಯಲ್ಪಟ್ಟಿವೆ. ಪುನಃ ಗಲಭೆಯು ತಲೆದೋರಿ ಪುಂಡರು ಹಾವಳಿ ಮಾಡುವ ಸಂದರ್ಭ ಒದಗಿದರೆ ಅವರನ್ನು ಗುಮಾನಿಯ ಮೇಲೆ ಕೂಡಲೇ ಗುಂಡಿನಿಂದ ಹೊಡೆದು ಹಾಕುವುದು ಅಥವಾ ಛಡಿ ಶಿಕ್ಷೆಗೆ ಗುರಿಪಡಿಸುವುದು-ಇವೇ ಮುಂತಾದ ಸಲಹೆಗಳನ್ನು ಶಾಂತಿ ಸಮಿತಿಯವರು ಸರ್ಕಾರದವರಿಗೆ ಕೊಟ್ಟಿರುವರು

ಸಕ್ಕರೆ ಗಿರಣಿ ಕೆಲಸಗಾರರಿಗೆ ೧ ತಿಂಗಳ ಬೋನಸ್ಸು

ಮೈಸೂರು ೪

ಮಂಡ್ಯದ ಸಕ್ಕರೆ ಗಿರಣಿ ಆಡಳಿತಗಾರರಿಗೂ, ಕೆಲಸಗಾರರಿಗೂ ಉಂಟಾಗಿದ್ದ ಭಿನ್ನಾಭಿಪ್ರಾಯವನ್ನು ವಿಚಾರಿಸಲು ಶ್ರೀ॥ ಸಿಂಗಾರು ವೇಲು ಮೊದಲಿಯಾರ್ ರವರ ಅಧ್ಯಕ್ಷತೆಯಲ್ಲಿ ನೇಮಕವಾದ ಪಂಚಾಯಿತಿಯವರು ಗಿರಣಿ ಕೆಲಸಗಾರರಿಗೆ ೬೦

ರಾಜ್ಯಾಂಗ ಸಭಾ ಪ್ರವೇಶಕ್ಕೆ ಸಂಸ್ಥಾನಗಳಿಗೆ ಸ್ವಾತಂತ್ರ್ಯ

ಭಾರತದ ಭವಿಷ್ಯ ರಾಜ್ಯಾಂಗದ ಸ್ವರೂಪವು ಹೊರಬಿದ್ದ ನಂತರ ಸಂಸ್ಥಾನಗಳು ರಾಜ್ಯಾಂಗ ಸಭೆಗೆ ಸೇರತಕ್ಕದ್ದೆಂದು ಬೊಂಬಾಯಿಯಲ್ಲಿ ನಡೆದ ನರೇಂದ್ರರ ಸ್ಥಾಯೀ ಸಮಿತಿಯಲ್ಲಿ ಬಹುಮಂದಿ ಸದಸ್ಯರು ಅಭಿಪ್ರಾಯ ಪಟ್ಟಿದ್ದರು. ಆದರೆ ಬೀಕಾನೀರ್ ರಾಜರು ಧೈರ್ಯವಾಗಿ ಈ ನೀತಿಯನ್ನು ಎದುರಿಸಿ ನಿಂತ ನಂತರ ರಾಜ್ಯಾಂಗ ಸಭೆಯ ಕಾರ್ಯ ಕಲಾಪಗಳಲ್ಲಿ ತನಗಿಷ್ಟ ಬಂದಾಗ ಭಾಗವಹಿಸಲು ಪ್ರತಿಯೊಂದು ಸಂಸ್ಥಾನಕ್ಕೂ ಅವಕಾಶವಿದೆ- ಎಂಬ ನಿರ್ಣಯವು ಕಡೆಯಲ್ಲಿ ಅಂಗೀಕೃತವಾಗಿರುತ್ತದೆ

ಪಟಿಯಾಲಾ ಸಂಸ್ಥಾನದಲ್ಲಿ ತಾತ್ಕಾಲಿಕ ಸರ್ಕಾರ

ಪಟಿಯಾಲಾ ಸಂಸ್ಥಾನದ ಮಹಾರಾಜರು ತಮ್ಮ ವರ್ಧಂತಿ ಸಮಾರಂಭದಲ್ಲಿ ಒಂದು ಘೋಷಣೆಯನ್ನು ಹೊರಡಿಸಿ ಸಂಸ್ಥಾನದಲ್ಲಿ ಪೂರ್ಣ ಜವಾಬ್ದಾರಿ ಸರ್ಕಾರದ ಆಧಾರದ ಮೇಲೆ ಸುಧಾರಣೆಗಳನ್ನು ರೂಪಿಸಲು ಚುನಾಯಿತ ರಾಜ್ಯಾಂಗ ಸಭೆಯೊಂದನ್ನು ರಚಿಸುವುದಾಗಿ ತಿಳಿಸಿದ್ದಾರೆ. ಅಲ್ಲದೆ ನಾಲ್ವರು ಮಂತ್ರಿಗಳನ್ನೊಳಗೊಂಡ ತಾತ್ಕಾಲಿಕ ಸರ್ಕಾರವನ್ನು ರಚಿಸಿದ್ದಾರೆ ಈ ತಾತ್ಕಾಲಿಕ ಸರ್ಕಾರದಲ್ಲಿ ಪ್ರಜಾಮಂಡಲ ಮತ್ತು ಅಕಾಲಿ ಪಕ್ಷದ ಅಧ್ಯಕ್ಷರುಗಳೂ, ಇಬ್ಬರು ಅಧಿಕಾರಿಗಳೂ ಇರುವರು.

ಕರಗದ ಉತ್ಸವಕ್ಕೆ ಪ್ರತಿಬಂಧಕ

ಸ್ವಂ ಸು. ವರದಿ] [ಬೆಂಗಳೂರು ೪

ಬೆಂಗಳೂರಿನಲ್ಲಿ ಇರುವ ಕೋಮುವಾರು ಗಲಭೆ ಪರಿಸ್ಥಿತಿಯಿಂದ ಈ ಸಾರಿ ಧರ್ಮರಾಯನ ಕರಗದ ಉತ್ಸವವನ್ನು ನಡೆಸಲಾಗದೆಂದು ಸರ್ಕಾರದವರು ಪ್ರತಿಬಂಧಕವನ್ನು ಜಾರಿ ಮಾಡಿದ್ದಾರೆ. ದೇವಸ್ಥಾನಗಳಲ್ಲಿ ಮಾತ್ರ ಇದರ ಸಂಬಂಧವಾದ ಪೂಜಾದಿಗಳು ನಡೆಯಲು ಅವಕಾಶವಿರುತ್ತದೆ. ಮತ್ತು ಈ ಉತ್ಸವಕ್ಕಾಗಿ ಬೆಂಗಳೂರಿಗೆ ಜನರು ಬರಲು ಯಾವ ಸೌಕರ್ಯವನ್ನೂ ಒದಗಿಸಿರುವುದಿಲ್ಲವೆಂದೂ, ಬಂದವರನ್ನು ಹಿಂದಕ್ಕೆ ಕಳುಹಿಸಲಾಗುವುದೆಂದೂ ತಿಳಿಸಲಾಗಿದೆ

ಬೆಂಗಳೂರು ದಂಡಿನಲ್ಲಿ ಇನ್ನು ೧೫ ದಿನಗಳ ವರೆಗೆ ರಹದಾರಿಯಿಲ್ಲದೆ ಸಭೆ, ಮೆರವಣಿಗೆ ಮತ್ತು ಪ್ರದರ್ಶನಗಳನ್ನು ನಡೆಸದಂತೆ ೧೪೪ ನೇ ಕಲಂ ಪ್ರಕಾರ ಆಜ್ಞೆ ಜಾರಿಮಾಡಿದೆ

ಈ ದಿನದಿಂದ ಪತ್ರಿಕೆಗಳು ಪ್ರಕಟನೆಯನ್ನು ಮುಂದೆ ವರಿಸುವುವು

ದು ತಿಂಗಳ ಬೋನಸ್ಸನ್ನು ಕೊಡಬೇಕೆಂದು ತೀರ್ಮಾನಿಸಿದ್ದಾರೆ. ಆಡಳಿತ ವರ್ಗದವರು ಇದನ್ನು ಒಪ್ಪಿದ್ದಾರೆಂದು ಹೇಳಲಾಗಿದೆ

LATE NEWS

ಸ್ವಂ.ಸು ವರದಿ] ಬೆಂಗಳೂರು ೪

ನಿನ್ನೆ ರಾತ್ರಿ ೪ ಇರಿತದ ಪ್ರಸಂಗಗಳು ನಡೆದು, ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ ಇಂದು ಬೆಳಗ್ಗೆ ಸಹ ಒಂದು ಇರಿತದ ವಾರ್ತೆ ಬಂದಿದೆ ಈ ಗಲಭೆಗಳ ಸಂಬಂಧದಲ್ಲಿ ೬೦ ಮಂದಿಯನ್ನು ದಸ್ತಗಿರಿ ಮಾಡಿ ಕರ್ಫ್ಯೂ ಆಜ್ಞೆಯನ್ನು ಉಲ್ಲಂಘಿಸಿದರೆಂಬ ಆಪಾದನೆ ಮೇಲೆ ಜಿಲ್ಲಾ ಪ್ರ॥ ನ್ಯಾಯಾಧೀಶರಾದ ಶ್ರೀ ಕೆ ಪಿ ರಾಮ ಸಾಮಗನವರ ಮುಂದೆ ಹಾಜರು ಪಡಿಸಿ ಶಿಕ್ಷೆ ಮಾಡಲಾಗಿದೆ

ಸಾಧ್ವಿ

ತಾ|| ೪-೪-೪೭ ಶುಕ್ರವಾರ

ಏಕ ಜಗತ್ತಿನ ನಿರ್ಮಾಣ

ಹತ್ತು ದಿನಗಳ ವಿಚಾರ ವಿನಿಮಯದ ನಂತರ ಏಷ್ಯದ ರಾಷ್ಟ್ರಗಳ ಮಹಾ ಸಮ್ಮೇಳನವು ಮೊನ್ನೆ ದೆಹಲಿಯಲ್ಲಿ ಮುಕ್ತಾಯಗೊಂಡಿತು. ಇತಿಹಾಸದಲ್ಲಿಯೇ ಮೊದಲನೆಯದಾಗಿ ನಡೆದ ಇಂತಹ ಸಮಾರಂಭವು ಅತ್ಯಂತ ಯಶಸ್ವಿಯಾಗಿ ಜರಗಿ ತನ್ನ ಉದ್ದೇಶವನ್ನು ಈಡೇರಿಸಿರುವುದೆಂದು ಧಾರಾಳವಾಗಿ ಹೇಳಬಹುದು. ಏಷ್ಯದ ರಾಷ್ಟ್ರಗಳಲ್ಲಿ ಪರಸ್ಪರ ಐಕಮತ್ಯ, ಸಹಕಾರ ಮತ್ತು ವಿಚಾರ ವಿಮರ್ಶೆಗಳು ಬೆಳೆಯಲು ಇದು ವಿಶೇಷ ಸಹಕಾರಿಯಾಯಿತು.

ಏಷ್ಯದ ರಾಷ್ಟ್ರಗಳಲ್ಲಿ ಇಂದು ನವ ಚೈತನ್ಯವು ಒಡೆದು ಮೂಡುತ್ತಿದೆ. ವಿಜ್ಞಾನ ಸಂಶೋಧನೆಯ ಪಾಶವೀ ಬಲದಿಂದ ಪ್ರೇರಿತವಾದ ಪಾಶ್ಚಿಮಾತ್ಯ ಸಂಸ್ಕೃತಿಯ ದುರಾಕ್ರಮಣವನ್ನು ಎದುರಿಸಲು ಸಕಲ ರಾಷ್ಟ್ರಗಳೂ ಇಂದು ಟೊಂಕ ಕಟ್ಟಿ ನಿಂತಿವೆ. ಧರ್ಮ, ನೀತಿ ಮತ್ತು ಸತ್ಯದ ಆಧಾರದ ಮೇಲೆಯೇ ಏಷ್ಯದ ರಾಷ್ಟ್ರಗಳು ಇತರರ ದಬ್ಬಾಳಿಕೆಯನ್ನು ಪ್ರತಿಭಟಿಸಲು ದೃಢ ಸಂಕಲ್ಪ ಮಾಡಿರುತ್ತವೆ. ಪರಕೀಯರ ಆಕ್ರಮಣವನ್ನು ಎದುರಿಸುವುದರಲ್ಲಿ ಪರಸ್ಪರ ಸಹಕಾರ ನೀಡುವುದು, ಸ್ವಾತಂತ್ರ್ಯ ಸಾಧನೆಗಾಗಿ ಹೋರಾಡುವ ಸಣ್ಣ ಪುಟ್ಟ ರಾಷ್ಟ್ರಗಳಿಗೆ ಸಹಾಯ ಮಾಡುವುದು, ವಾಣಿಜ್ಯ, ವ್ಯಾಪಾರಗಳಲ್ಲಿ ಅನ್ಯೋನ್ಯತೆಯಿಂದ ವರ್ತಿಸುವುದು, ಸಂಸ್ಕೃತಿ, ಕಲೆ ಮತ್ತು ಕೈಗಾರಿಕೆಗಳ ಬೆಳವಣಿಗೆಯಲ್ಲಿ ಒಬ್ಬರಿಗೊಬ್ಬರು ನೆರವು ನೀಡುವುದು-ಇವೇ ಮುಂತಾದ ಪ್ರಮುಖ ಅಂಶಗಳು ಸಮ್ಮೇಳನದಲ್ಲಿ ನಿರ್ಧರಿಸಲ್ಪಟ್ಟುವು. ಇನ್ನು ಮುಂದೆ ಏಷ್ಯಾ ಖಂಡದ ರಾಜ್ಯಗಳೆಲ್ಲವೂ ಹೆಚ್ಚಿನ ನಿಕಟ ಸಂಬಂಧವನ್ನು ಬೆಳೆಸಿ ತಮ್ಮ ಅಭ್ಯುದಯವನ್ನು ಸಾಧಿಸಲು ಈ ಸಮಾರಂಭವು ವಿಶೇಷ ಸಹಕಾರಿಯಾಗಿರುತ್ತದೆ.

ಸತ್ಯ ಮತ್ತು ಧರ್ಮದ ಆಚರಣೆಗೆ ಜಗತ್ತಿನಲ್ಲಿಯೇ ಆದರ್ಶಪ್ರಾಯವಾದ ಮಹಾತ್ಮ ಗಾಂಧಿಯವರ ಸಾನ್ನಿಧ್ಯವೂ ಮತ್ತು ಸದುಪದೇಶವೂ ಸಮ್ಮೇಳನಕ್ಕೆ ಶಿರೋಭೂಷಣಪ್ರಾಯವಾಗಿದ್ದುವು. ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಸಕಲ ಮಾನವ ಕೋಟಿಯನ್ನೂ ಸಹೋದರರಂತೆ ಕಾಣುವ ಗಾಂಧೀಜಿಯವರಿಗೆ ಏಷ್ಯದ ರಾಷ್ಟ್ರಗಳ ಕೇವಲ ರಾಷ್ಟ್ರೀಯ ಅಥವಾ ಏಷ್ಯಾ ಖಂಡದ ಸಂಘಟನೆಯ ಭಾವನೆಯಲ್ಲಿಯೇ ಮಗ್ನವಾಗಿರುವುದು ಸಂತೃಪ್ತಿಯನ್ನುಂಟುಮಾಡುವುದಿಲ್ಲ. ಪ್ರತಿಯೊಂದು ರಾಷ್ಟ್ರವೂ ತನ್ನ ಬಂಧನ ವಿಮೋಚನೆಯನ್ನು ಮಾಡಿಕೊಂಡು, ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವುದಲ್ಲದೆ, ಇಡೀ ಜಗತ್ತಿನ ಜನಾಂಗಗಳ ಸ್ನೇಹ, ಸೌಹಾರ್ದಗಳನ್ನು ಗಳಿಸಿ, ವಿಶ್ವದ ಅಭ್ಯುದಯವನ್ನು ಸಾಧಿಸಬೇಕೆಂಬ ದಿವ್ಯ ಸಂದೇಶವನ್ನು ಮಹಾತ್ಮರು ಸಾರಿದರು. ಹಿಂದೆ ಏಷ್ಯಾ ಖಂಡದಲ್ಲಿಯೇ ಜನಿಸಿ ಪ್ರಪಂಚಕ್ಕೆಲ್ಲಾ ಜ್ಞಾನೋದಯವನ್ನುಂಟುಮಾಡಿದ ಮಹಾತ್ಮರುಗಳಾದ ಏಸು ಕ್ರಿಸ್ತ, ಮಹಮ್ಮದ್ ಪೈಗಂಬರ್, ಜೊರಾಸ್ಟರ್, ಗೌತಮ ಬುದ್ಧ-ಮುಂತಾದ ಮಹನೀಯರುಗಳ ಬೋಧನೆಯ ಪ್ರತಿಧ್ವನಿಯಂತೆ ಮಹಾತ್ಮರ ಹಿತವಚನಗಳೂ ಕೇಳಿಬರುತ್ತಿದ್ದುವು.

ಏಕ ಜಗತ್ತಿನ ನಿರ್ಮಾಣವೇ ತಮ್ಮ ಜೀವನದ ಕನಸೆಂದೂ, ಅದಿಲ್ಲವಿದ್ದರೆ ತಮಗೆ ಈ ಪ್ರಪಂಚದಲ್ಲಿ ಆಸಕ್ತಿಯೇ ಇಲ್ಲವೆಂದೂ ಮಹಾತ್ಮರು ಹೇಳಿರುತ್ತಾರೆ. ರಾಷ್ಟ್ರೀಯ ಹಿತ ಸಾಧನೆಯನ್ನು ಅಂತರ ರಾಷ್ಟ್ರೀಯ ಅಭ್ಯುದಯದಲ್ಲಿ ಸಮನ್ವಯಗೊಳಿಸಿ, ಇಡೀ ವಿಶ್ವದ ಕಲ್ಯಾಣವನ್ನು ಸಾಧಿಸುವುದೇ ಇಂದು ಭಾರತದಲ್ಲಿ ಮಹಾತ್ಮರ ನೇತೃತ್ವದಲ್ಲಿ ನಡೆಯುತ್ತಿರುವ ಮಹಾ ಪ್ರಯೋಗ. ಇದೇ ಸಂದೇಶವನ್ನೇ ಗಾಂಧೀಜಿಯವರು ಏಷ್ಯದ ಜನಾಂಗಗಳಿಗೆ ಸಾರಿರುತ್ತಾರೆ. ಈ ಸಂದೇಶವು ಸಕಲರ ಹೃದಯದಲ್ಲಿಯೂ ಪ್ರತಿಧ್ವನಿಗೈದು ನೂತನ ಜಗತ್ತಿನ ನಿರ್ಮಾಣದಲ್ಲಿ ಪರಿಣಮಿಸಿ ಮಾನವ ಕೋಟಿಯು ಸುಖ, ಶಾಂತಿಗಳಿಂದ ನೆಲೆಸಲು ಸಹಕಾರಿಯಾಗಲೆಂದು ಹಾರೈಸೋಣ.

ಬೆಂಕಿ ಪೆಟ್ಟಿಗೆಗಾಗಿ ಗಲ...

ಸ್ವಂ ಸ] ಶಿ ರಂಗಪಟ್ಟ...

ಕಳೆದ ಮಂಗಳವಾರದ ಪತ್ರಿಕೆ... ಬೆಂಕಿ ಪೆಟ್ಟಿಗೆಗಾಗಿ ಗಲಾಟೆ ಎಂಬ... ನಾಮೆಯಲ್ಲಿ ೯ ಕಾಸಿಗೆ ಒಂದರಂತೆ... ಯಲ್ಲಿ ಮಾರುತ್ತಿದ್ದಾಗ ಎಂದಿರುವು... ೬ ಕಾಸಿಗೆ ಒಂದರಂತೆ ಎಂದು ತಿದ್ದಿ... ಬೇಕು

● ಬೊಂಬಾಯಿ ಸರ್ಕಾರದವರು ಪ... ಕಯಾರಿಯನ್ನು ನಿಷೇಧಿಸಲು ನಿರ್ಧ... ಈ ಬಗ್ಗೆ ಶಾಸನವನ್ನು ಸಿದ್ಧಗೊಳಿಸು... ವರೆಂದು ತಿಳಿದುಬಂದಿದೆ.

ಸುವರ್ಣಾವಕಾಶ ! ಕಳೆದುಕೊಳ್ಳಬೇಡಿ

ಹೊರ ದೇಶದಿಂದ ಬಂದಿರುವ

ಉಲ್ಲನ್ ಜೆಂಟ್ಸ್ ಕೋಟುಗಳು

ಬೇರೆ ಬೇರೆ ಬಣ್ಣ ಮತ್ತು ನಮೂನೆಗಳಲ್ಲಿ

ಅತ್ಯಂತ ಸುಲಭ ಬೆಲೆ

೧ ಎಲ್ ಮಧುರಾದಾಸ್,

ತಿ. ಕೆ. ಎಸ್. ಪಾಂಡುರಂಗರಾವ್

ಅಂಡ್ ಕೋ

ಫ್ಯಾನ್ಸಿ ಬಟ್ಟೆ ವರ್ತಕರು,

೩೩೧, ಗರ್ಗೇಶ್ವರಿ ಚೌಕ, ಮೈಸೂರು.

RAJKAMAL, MYSORE

Morning Shows from 4-4-47

for 4 Days

Daily at 10-30 a m

PRISONERS OF ZENDA

The most romantic adventure Story of all times

Starring:- Ronald Colman, Madelene Carroll, Douglas Fairbanks Jr, Mary Astor ETC.

ರಾಜಕಮಲ್

೩೦-೩-೪೭ ರಿಂದ ಅಮೋಘವಾದ ೭ನೇ ವಾರ

ಶ್ರೀ ಕೃಷ್ಣಲೀಲಾ (ಕನ್ನಡದಲ್ಲಿ)

ಮೈಸೂರಿನಲ್ಲಿ ತಯಾರಿಸಿ, ಮಹಾಜನಗಳ ಮನ್ನಣೆಗೆ ಪಾತ್ರವಾಗಿರುವ ಈ ಪುರಾಣ ವೈಭವವನ್ನು ನೋಡಲು ತಪ್ಪಬೇಡಿ

ಚಾಮುಂಡೇಶ್ವರೀ ಟಾಕೀಸ್

5-4-47 ರಿಂದ ಪ್ರತಿದಿನ ೩ ಆಟಗಳು

ಪಿಯಾ ಮಿಲನ್

(ಹಿಂದಿ)

ಪಾತ್ರ:- ಮೋತೀಲಾಲ್-ನಿಮಾಳಾ

Morning Shows on 5th 6th and 7th at 10-30 a m.

Between-Us Girls

Starring:-Diana Durbin

ಭಾರಿ ಸ್ವತ್ತುಗಳು ಕ್ರಯಕ್ಕಿವೆ

೧ ೨೮೮೭/೧ ಹಳ್ಳದಕೇರಿ, ಸೀಬಯ್ಯನಗಲ್ಲಿ, ಮಹಡಿಮನೆ. (ಉತ್ತರದ ಅರ್ಧ ಭಾಗ.)

೨ ೧೯೩/೨ ರಮಾ ವಿಲಾಸ ಅಗ್ರಹಾರದ ವಿಶಾಲವಾದ ಖಾಲಿಸೈಟು (ಅಮೋಘಮಠದಿಂದ ಪಶ್ಚಿಮಕ್ಕೆ ೩ ನೇ ಮನೆ)

-: ವಿವರಗಳಿಗೆ :—

ಆರ್. ಗುಂಡೂರಾವ್,

ಹಳೇ ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು.

ಅಪೋಲೋ ಟಾಕೀಸ್, ಮೈಸೂ...

೩-೪-೪೭ ರಿಂದ ೩ ನೇ ವಾ...

ಕುಂಡಲಕೇಶಿ

Morning Shows from 4-4

DIVORCE

Edited, printed and published ... A. R. Nagarajan of the Sadhvi P... D. Subbiah Road, Mysore.

ಈ ಐವತ್ತು ವರ್ಷಗಳಿಂದ ಮಾನವ ಲೋಕಕ್ಕೆ ಆರೋಗ್ಯ... ಸಂಪದಗಳನ್ನು ನೀಡುತ್ತಾ ಅನೇಕವಾಗಿ, ಅವಿಚ್ಛಿನ್ನವಾಗಿ ಸೇ... ಮಾಡಿ, ದಿನ ದಿನಾಭಿವೃದ್ಧಿ ಹೊಂದುತ್ತಿರುವುದ... ಎಷ್ಟೋ ಗರ್ವಿಸುತ್ತಿದೆ.



CASTERNS 379

ಜಿಲ್ಲಾ ಬೋರ್ಡ್ ಚುನಾವಣೆ

೨೮-೪-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗೆ ಕಂಡ

ಕಾಂಗ್ರೆಸ್ ಉಮೇದುವಾರರಿಗೇ ,

,, ದಯವಿಟ್ಟು ಓಟು ಕೊಡಿ :- ,

ಹೆಚ್ ಲಿಂಗಪ್ಪ (ಹನಿಯಂಬಳ್ಳಿ)

ಹೆಚ್ ಎಂ. ನಾಗಪ್ಪ (ಹುಲ್ಲಹಳ್ಳಿ)

ಎಂ. ಲಿಂಗಣ್ಣ (ಹೆಜ್ಜಿಗೆ)

ಕಂಟ್ರೋಲು ಬೆಲೆ ! ಸುವರ್ಣಾವಕಾಶ !

ಹೊಸ ಜವಳಿ

ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಬನಾರಸ್, ಕಂಚಿ, ಆರ್ನಿ, ಕಾಂಚಿಪುರಂ, ಹುಬ್ಬಳ್ಳಿ ಸೀರೆಗಳೂ, ಕರಾಚಿ ಸೀರೆಗಳೂ, ನೂಲಿನ ಪೂನಾ ರುಮಾಲು ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.

M. P. V., M. V ಭೋಜಯ್ಯ B. A ಅಂಡ್ ಬ್ರದರ್ಸ್

ಬೊಂಬಾಯಿ ಆನಂದ ಭವನ ಹೋಟೆಲ್ ನೈರ ಬಲಭಾಗದ ಕೊನೆ

ಜವಳಿ ಅಂಗಡಿ, ಮೈಸೂರು.

ಬೆಂಗಾಲ್ ಸಿಲ್ಕ್ ಸೀರೆಗಳ ವೈಖರಿಯನ್ನು

ನೋಡಬೇಕಾದರೆ ಬಾಬುಸಾರ್ ಕಂಪೆನಿಗೆ ಹೋಗಿರಿ

ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು

ರಿಜಿ. ನಂ. ೫೦೩ || ವಂದೇ ಮಾತರಂ || ಬಿಡಿಪ್ರತಿಗೆ ೩ ಕಾಸು

ಸಂಪುಟ ೫] ಶನಿವಾರ ೫—೪—೪೭ [ಸಂಚಿಕೆ ೨೦೨

ಸೈನ್ಯವನ್ನೂ ವಿಭಜಿಸಲು ಫಿರೋಜ್ ಖಾನರ ಒತ್ತಾಯ

ಬೆಂಗಳೂರಿನಲ್ಲಿ ಮತ್ತೆ ಗಲಭೆ

ಶ್ರೀರಾಮಪುರ ಮತ್ತು ನಾಗಪ್ಪ ಬ್ಲಾಕಿನಲ್ಲಿ

ಸ್ವಂ. ಸು. ಫ್ರೋ] [ಬೆಂಗಳೂರು ೫

ನಿನ್ನೆ ರಾತ್ರಿ ೧ ಗಂಟೆ ಸಮಯದಲ್ಲಿ ಶ್ರೀರಾಮಪುರ ನಾಗಪ್ಪ ಬ್ಲಾಕಿನಲ್ಲಿ ಕೋಮುವಾರು ಕಲಹ ಇದ್ದಕ್ಕಿದ್ದಂತೆಯೇ ತಲೆದೋರಿತು. ... ನೊಬ್ಬನು ೧೭ ವರ್ಷದ ಹುಡುಗನೊಬ್ಬನ ಮೇಲೆ ಗುಂಡು ಹಾರಿಸಿದನೆಂದೂ ಅದರಿಂದ ಇಬ್ಬರು ಹುಡುಗರಿಗೆ ಗಾಯಗಳಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರೆಂದು ತಿಳಿದುಬಂದಿದೆ. ಈ ಸುದ್ದಿಯು ಹಬ್ಬುತ್ತಿದ್ದಂತೆ ಮುಸ್ಲಿಮರ ಅನೇಕ ಅಂಗಡಿಗಳನ್ನು ಲೂಟಿಮಾಡಿ, ಗಲಭೆ ಪ್ರಬಲವಾಗುವ ಸೂಚನೆಗಳು ಕಂಡುಬಂದುವು. ಪೋಲೀಸ್ ಮತ್ತು ಮಿಲಿಟರಿ ಪಡೆಗಳು ತಕ್ಷಣವೇ ಆ ಸ್ಥಳಕ್ಕೆ ಧಾವಿಸಿ ಬಂದು ... ನಡೆಸಿದುವು. ಈ ಸಂಬಂಧದಲ್ಲಿ ಅನೇಕರ ದಸ್ತಗಿರಿಯಾಗಿದೆ. ಪರಿಸ್ಥಿತಿಯನ್ನು ಹತೋಟಿಗೆ ತರಲು ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಭಾರತದಲ್ಲಿ ಮಕ್ಕಳ ಜನನ ಕಡಿಮೆಯಾಗುತ್ತಿದೆ

ಪ್ರಪಂಚದ ೩೦ ಭಾರಿ ರಾಷ್ಟ್ರಗಳ ಜನನ ಮರಣ ಲೆಕ್ಕದ ಕೋಷ್ಟಕವನ್ನು ... ಪತ್ರಿಕೆಯೊಂದು ಪ್ರಕಟಿಸಿದೆ. ಅದರಂತೆ ಭಾರತ ಮತ್ತು ... ಗಳಲ್ಲಿ ಮಕ್ಕಳ ಜನನದ ಸಂಖ್ಯೆ ... ಕಡಿಮೆಯಾಗಿರುವುದು ಕಂಡುಬಂದಿದೆ. ೧೯೩೬-೩೮ರಲ್ಲಿ ೧೦೦೦ಕ್ಕೆ ೩೪ರಂತೆ ಜನನದ ಸಂಖ್ಯೆ ಇದ್ದಿತು. ಅದು ೧೯೪೫ರಲ್ಲಿ ೧೦೦೦ಕ್ಕೆ ೨೯.೫ಕ್ಕೆ ಇಳಿದು ಹೋಗಿದೆಯೆಂದು ವರದಿಯಾಗಿದೆ.

೧೭ ವರ್ಷಕ್ಕೇ ತಂದೆಯಾದ!

ಆಸ್ಟ್ರೇಲಿಯಾದ ಮೆಲ್ಬೋರ್ನ್ ನಗರದಲ್ಲಿ ಹದಿನಾರು ವರ್ಷದ ಹುಡುಗನೊಬ್ಬನು ತಂದೆಯಾಗಿರುವುದಾಗಿ ವರದಿಯಾಗಿದೆ. ಈತನು ತನ್ನ ೧೫ನೇ ವರ್ಷ ವಯಸ್ಸಿನಲ್ಲೇ ಒಬ್ಬಳನ್ನು ಮದುವೆಯಾದನು. ಇವನ ೧೬ನೇ ವಯಸ್ಸಿನಲ್ಲಿ ಆಕೆಯಲ್ಲಿ ಒಂದು ಮಗುವಾದ ನಂತರ ಆಕೆಯು ಬದುಕಿರದಿರಲು ಪುನಃ ಮತ್ತೊಬ್ಬಳನ್ನು ಮದುವೆಮಾಡಿಕೊಂಡನೆಂದು ... ಮೇಲೆ ಅವನ ಮೇಲೆ ಮೊಕದ್ದಮೆ ಹೂಡಲಾಗಿದೆ. ಜಾಮೀನಿನ ಮೇಲೆ ಈ ಹುಡುಗ ತಂದೆಯು ಬಿಡುಗಡೆಯಾಗಿದ್ದಾನೆ.

ಗ್ರೀಸಿನಿಂದ ದೇಶ್ಯರ ರಾಜಭಾರಿಯು ವಾಪಸು

ಗ್ರೀಸಿನ ರಾಜಧಾನಿಯಾದ ಅಥೆನ್ಸಿನಲ್ಲಿರುವ ಸೋವಿಯಟ್ ರಷ್ಯದ ರಾಯಭಾರಿಗಳ ತನ್ನ ... ಸರ್ಕಾರಕ್ಕೆ ಹಿಂದಿರುಗುವನು. ಗ್ರೀಸ್ ಪತ್ರಿಕೆಗಳಲ್ಲಿ ರಷ್ಯದ ವಿರುದ್ಧ ಪ್ರಚಾರ ನಡೆಯುತ್ತಿದೆ ... ಅವರು ... ಮಾಡಿದ್ದರು. ಅಮೆರಿಕಾ ಸಂಯುಕ್ತ ಸಂಸ್ಥಾನವು ಗ್ರೀಸಿನ ಬಗ್ಗೆ ಕೈಕೊಂಡಿರುವ ಧೋರಣೆಯನ್ನು ಪ್ರತಿಭಟಿಸಿ ರಷ್ಯವು ಈ ನೀತಿಯನ್ನು ಅನುಸರಿಸಿದೆಯೆಂದು ಹೇಳಲಾಗುತ್ತಿದೆ.

ಪಂಜಾಬ್ ನಿಧಿಗೆ ಸಹಾಯ

ಪಂಜಾಬ್ ಪ್ರಕರಣದಲ್ಲಿ ತೊಂದರೆಗೀಡಾದವರಿಗೆ ಸಹಾಯ ನೀಡಲು ಸರ್ದಾರ್ ಪಟೇಲರವರು ಆರಂಭಿಸಿರುವ ನಿಧಿಗೆ ಈಗಾಗಲೇ ... ಲಕ್ಷ ರೂ.ಗಳು ವಸೂಲಾಗಿವೆ. ಫರೀದ್‌ಕೋಟೆ ರಾಜರು ೧೧ ಸಾವಿರ, ಲೂನವಾಡಾ ಸಂಸ್ಥಾನಾಧೀಶರು ... ಉದಯಪುರದ ... ಸಾವಿರ, ಪಾಟಿಯಾಲಾದ ಮಹಾರಾಜರು ೫ ಸಾವಿರ, ದೇವಾಸ್ ಸಂಸ್ಥಾನದ ರಾಜರು ... ಸಾವಿರ ... ನರೇಂದ್ರರುಗಳೇ ಸಹಾಯ ಮಾಡಿದ್ದಾರೆ.

ಜಿನ್ನಾ-ವೈಸರಾಯ್ ಭೇಟಿ

ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮಿ|| ಜಿನ್ನಾರವರು ದೆಹಲಿಗೆ ಆಗಮಿಸಿದ್ದಾರೆ. ಅವರು ಇಂದಿನ ಬೆಳಗ್ಗೆ ೧೧ ಗಂಟೆಗೆ ವೈಸರಾಯರನ್ನು ಭೇಟಿ ಮಾಡುವರು.

ಹೋಟೆಲು ಕೆಲಸಗಾರರ ಸಂಘ

ಮೈಸೂರು ೫

ನಾಳೆ ಸಂಜೆ ೮ ಘಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ನಗರದ ಹೋಟೆಲು ಕೆಲಸಗಾರರ ಸಂಘದ ಸಭೆಯು ನಡೆಯುವುದು.

ರಾಷ್ಟ್ರೀಯ ವಾರ

ಗಾಂಧೀ ಸೇವಾ ಸಂಘದ ಆಶ್ರಯದಲ್ಲಿ ಆರಂಭವಾಗುವ ರಾಷ್ಟ್ರೀಯ ವಾರದ ಸಂಬಂಧವಾಗಿ ನಾಳೆ ಬೆಳಗ್ಗೆ ೬|| ಗಂಟೆಗೆ ... ನಲ್ಲಿರುವ ಸಂಘದ ಆವರಣದಲ್ಲಿ ಪ್ರಾರ್ಥನೆ ಧ್ವಜಾರೋಹಣ ಮತ್ತು ... ಕಾರ್ಯಕ್ರಮಗಳು ನಡೆಯುವುವು. ಈ ವಾರದ ಕೊನೆಯಲ್ಲಿ ಕ್ಷೇತ್ರ ... ಜನಗಳಿಗೆ ... ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

...ರ್ ಉಲ್ಲಂಘನೆಗಾಗಿ ೫ ಮಂದಿಗೆ ಶಿಕ್ಷೆ

ಇದುವರೆಗೆ ೮ ಜನರ ಮರಣ — ೭೭ ಮಂದಿಗೆ ಗಾಯ

ಫ್ರೋ] [ಬೆಂಗಳೂರು ೫

ಸ್ಪೆಷಲ್ ನ್ಯಾಯಾಧೀಶರಾದ ... ನಾಥಯ್ಯನವರು ನಿನ್ನೆ ೪೦ ... ಕರ್ಫ್ಯೂ ಆಜ್ಞೆಯನ್ನು ಉಲ್ಲಂಘಿಸಿದ್ದಕ್ಕಾಗಿ ತಲಾ ೨೦ ರೂ. ಜುಲ್ಮಾನೆ ... ಸಜಾ ವಿಧಿಸಿ ... ತಲಾ ೫ ರೂ. ಜುಲ್ಮಾನೆ ತಪ್ಪಿದಲ್ಲಿ ... ಸಜಾ ಹಾಕಿದರು. ೧೪ ಮಂದಿ ... ನಾಯಕರಾದ ಆಯುಧಗಳನ್ನು ... ಕ್ಕಾಗಿ ತಲಾ ೨೦೦ ರೂ. ... ಜುಲ್ಮಾನೆ ... ತಿಂಗಳ ... ವನ್ನು ವಿಧಿಸಿದರು.

... ದ ಮಾರನೇ ಪ್ರಕಟಣೆ ಮೂರ ... ನಗರದಲ್ಲಿ ಶಾಂತಿ ನೆಲೆಸುತ್ತಿರುವುದರಲ್ಲಿ ತಿಳಿಸಲಾಗಿದೆ. ದಸ್ತಗಿರಿ ... ದೇ ಸಮನೆ ನಾಗುತ್ತಿವೆ. ಇದುವರೆಗೆ ೭೭ ಮಂದಿ ಗಾಯಗೊಂಡಿದ್ದಾರೆ. ... ಮಂದಿ ಮೃತಪಟ್ಟಿದ್ದಾರೆ.

... ಸಮಿತಿಗೆ ನೆಹರೂ ಅಧ್ಯಕ್ಷರು

... ಎಸ್ಸೆಂಬ್ಲಿಯ ... ರಚಿಸಲಾದ ಸ್ಥಾಯೀ ಸಮಿತಿಗೆ ನೆಹರೂರವರು ಅಧ್ಯಕ್ಷರಾಗಿಯೂ, ... ಶ್ರೀ ಬಿ. ಶಿವರಾಯರು ... ಕಾರ್ಯದರ್ಶಿಯಾಗಿಯೂ ಸರ್ವಾನುಮತದಿಂದ ಚುನಾಯಿತರಾಗಿರುವರು. ... ಸಮಿತಿಯ ... ರಲ್ಲಿ ... ದಲ್ಲಿ ನಡೆಯಬೇಕೆಂದು ನಿರ್ಧಾರವಾಗಿರುತ್ತದೆ.

... ಕೋಟಿ ರೂ. ಭತ್ತದ ಕಳವು

... ದ ಅನೇಕ ಜಿಲ್ಲೆಗಳಲ್ಲಿ ಸರ್ಕಾರದ ಮತ್ತು ... ಗಳ ... ಕೇಂದ್ರಗಳಿಂದ ೧ ಕೋಟಿ ರೂ. ಬೆಲೆಬಾಳುವಷ್ಟು ಭತ್ತವನ್ನು ಕಳವು ಮಾಡಿದ್ದಾರೆಂದು ವರದಿಯಾಗಿದೆ. ... ಲ್ಲಿ ಅಕ್ಕಿ ಗಿರಣಿಯೊಂದಕ್ಕೆ ... ಗಳ ... ತಂಡವೊಂದು ನುಗ್ಗಿ ... ಗಳಲ್ಲಿ ಭತ್ತವನ್ನು ...

ಸಂಗೀತ ಮತ್ತು ಹರಿಕಥೆ

ಮೈಸೂರು ೫

... ಪೇಟೆ ... ಶ್ರೀ ರಾಮಮಂದಿರದಲ್ಲಿ ಈ ದಿನ ರಾತ್ರಿ ೬-೩೦ಕ್ಕೆ ... ಸಂಗೀತ ಶಾಸ್ತ್ರ ವಿಶಾರದ ಶ್ರೀ|| ಕೆ. ... ದೇವಾಚಾರ್ಯರ ಅಧ್ಯಕ್ಷತೆಯಲ್ಲಿ ... ಗಾನ ಕೋಕಿಲ ಲಕ್ಷ್ಮಮ್ಮನವರ ಸಂಗೀತವೂ, ನಾಳೆ ಸಂಜೆ ೬-೩೦ಕ್ಕೆ ಜಿಲ್ಲಾ ... ಗಳಾದ ಶ್ರೀ|| ನಾಗರಾಜರಾಯರ ಅಧ್ಯಕ್ಷತೆಯಲ್ಲಿ ಶ್ರೀ ವಿ|| ಗಾನ ವಿಶಾರದ ... ಕೃಷ್ಣಯ್ಯಂಗಾರ್ಯರ ಸಂಗೀತವೂ ನಡೆಯುವುವು.

... ಬಾಲಿಕಾ ಭಕ್ತ ಮಂಡಲಿ ... ರಾಮ ಮಂದಿರದಲ್ಲಿ ಈ ದಿನ ರಾತ್ರಿ ... ಶ್ರೀ|| ... ರವರಿಂದ ... ಹರಿಕಥೆ ನಡೆಸುವರು.

... ಅಗ್ರಹಾರದ ... ಬೀದಿಯ ... ಶ್ರೀ ಜಾನಕೀ ರಾಮ ಮಂದಿರದಲ್ಲಿ ... ದಿನ ರಾತ್ರಿ ೮-೩೦ ಗಂಟೆಗೆ ಶ್ರೀ|| ... ರವರಿಂದ ... ವಿಜಯ ... ಹರಿಕಥೆಯು ನಡೆಯುತ್ತದೆ.

ಸೈನ್ಯ ವಿಭಜನೆಗೂ ಲೀಗ್ ನಾಯಕರ ಒತ್ತಾಯ

ಬರುವ ವರ್ಷದ ಜೂನ್ ತಿಂಗಳೊಳಗೆ ಭಾರತವನ್ನು ಹಿಂದೂಸ್ಥಾನ, ಪಾಕಿಸ್ಥಾನಗಳೆಂದು ವಿಭಾಗಿಸುವುದಲ್ಲದೆ ಸೈನ್ಯವನ್ನು ಮತ್ತು ಶಸ್ತ್ರಾಸ್ತ್ರಗಳನ್ನು ಸಹ ಅವರೊಳಗೆ ಕೋಮುವಾರು ಪ್ರಮಾಣದಲ್ಲಿ ಹಂಚಬೇಕು ಎಂಬುದಾಗಿ ಮುಸ್ಲಿಂ ಲೀಗ್ ನಾಯಕರೂ, ಮಾಜಿ ವೈಸರಾಯ್ ಕೌನ್ಸಿಲ್ ಸದಸ್ಯರೂ ಆದ ಮಲ್ಲಿಕ್ ಫಿರೋಜ್ ಖಾನ್ ನೂನ್ ರವರು ಹೇಳಿರುವರು. ಹೀಗೆ ಮಾಡದಿದ್ದಲ್ಲಿ ಸ್ವಾತಂತ್ರ್ಯ ಘೋಷಣೆಗೆ ಎಳ್ಳಷ್ಟು ಬೆಲೆಯೂ ಇರುವುದಿಲ್ಲವೆಂದು ತಿಳಿಸಿರುವರು.

ಪಂಜಾಬಿನಲ್ಲಿ ಮತ್ತೆ ೧೫ ಹಳ್ಳಿಗಳ ದಹನ

ಪಂಜಾಬಿನ ಗುರ್‌ಗಾಂವ್ ಜಿಲ್ಲೆಯಲ್ಲಿ ಸುಮಾರು ೧೫ ಹಳ್ಳಿಗಳು ಭಸ್ಮವಾದುವೆಂದು ವರದಿಯಾಗಿದೆ. ಬ್ರಿ|| ಮತ್ತು ಭಾರತೀಯ ಸೈನ್ಯಗಳೂ, ಅಲ್ವಾರ್ ಸಂಸ್ಥಾನದ ಸೈನ್ಯಗಳೂ ಈ ಜಿಲ್ಲೆಗಳನ್ನು ರಕ್ಷಿಸುತ್ತಿವೆ. ಗವರ್ನರರು ಈ ದಿನ ಅಲ್ಲಿಗೆ ಭೇಟಿ ಕೊಟ್ಟಿದ್ದರು.

ಸಿವಿಲ್ ಸರ್ವಿಸ್ ನಿವೃತ್ತಿ ಬಗ್ಗೆ ಒಪ್ಪಂದ

ಭಾರತದ ಕಾರ್ಯದರ್ಶಿಯು ಹುದ್ದೆಯನ್ನು ವಜಾ ಮಾಡುವ ಮತ್ತು ಇಂಡಿಯನ್ ಸಿವಿಲ್ ಮತ್ತು ಪೋಲೀಸ್ ಸರ್ವೀಸುಗಳ ಅಧಿಕಾರಿಗಳಿಗೆ ಪರಿಹಾರವನ್ನು ಒದಗಿಸುವ ವಿಚಾರದಲ್ಲಿ ಬ್ರಿಟಿಷ್ ಸರ್ಕಾರಕ್ಕೂ ಭಾರತದ ಸರ್ಕಾರಕ್ಕೂ ಒಪ್ಪಂದವಾಗಿರುವುದಾಗಿ ಹೇಳಲಾಗಿದೆ. ನಿವೃತ್ತಿ ವೇತನವನ್ನು ಬ್ರಿಟಿಷ್ ಸರ್ಕಾರವೂ ಪರಿಹಾರವನ್ನು ಭಾರತೀಯರಿಗೆ ಇಲ್ಲಿನ ಸರ್ಕಾರವೂ ಕೊಡಬೇಕೆಂಬುದನ್ನು ಒಪ್ಪಲಾಗಿದೆಯೆಂದು ಗೊತ್ತಾಗಿದೆ.

ಅಸ್ಸಾಮಿನಲ್ಲಿ ದಸ್ತಗಿರಿಗಳು

ಅಸ್ಸಾಂ ಪ್ರಾಂತದ ರಕ್ಷಣಾ ಶಾಸನವನ್ನು ವಿರೋಧಿಸಿದ ಕಾರಣದ ಮೇಲೆ ಲೀಗ್ ಕಾರ್ಯದರ್ಶಿಗಳನ್ನೂ ಮತ್ತು ಆ|| ಬಾ|| ಲೀಗ್ ಕೌನ್ಸಿಲಿನ ಸದಸ್ಯರೊಬ್ಬರನ್ನು ದಸ್ತಗಿರಿ ಮಾಡಿ ಮೊಕದ್ದಮೆ ಹೂಡಲಾಗಿದೆ.

ಮಿರಜ್ ಸಂಸ್ಥಾನದಲ್ಲಿ ಹೊಸ ಸುಧಾರಣೆಗಳು

ಮಿರಜ್ ಸಂಸ್ಥಾನಾಧೀಶರು ಒಂದು ಪ್ರಕಟಣೆ ಹೊರಡಿಸಿ ಪ್ರಜೆಗಳನ್ನು ಬಿಟ್ಟು ಹೋಗ ... ಸಾಮಾನ್ಯ ತಮ್ಮ ಸಂಸ್ಥಾನದ ಪ್ರಜೆಗಳಿಗೆ ಆಡಳಿತದಲ್ಲಿ ಹೆಚ್ಚು ಜವಾಬ್ದಾರಿ ವಹಿಸಲು ನಿರ್ಧರಿಸಿದ್ದಾರೆ. ಸಣ್ಣ ಸಂಸ್ಥಾನಗಳು ಇನ್ನು ಮುಂದೆ ಬಾಳುವುದು ಕಷ್ಟವೆಂದೂ, ಇಂಥ ಸಂಸ್ಥಾನಗಳು ಒಕ್ಕೂಟವೊಂದು ಏರ್ಪಡಬೇಕೆಂದೂ ಸೂಚಿಸಿ ಅದಕ್ಕೆ ಸಿದ್ಧವಾಗುವವರೆಗೆ ತಮ್ಮ ಸಂಸ್ಥಾನದಲ್ಲಿ ಒಂದು ಜನರ ಸಭೆಯನ್ನು ಸ್ಥಾಪಿಸಿ ಅದಕ್ಕೆ ಜವಾಬ್ದಾರರಾದ ಇಬ್ಬರು ಮಂತ್ರಿಗಳನ್ನು ತೆಗೆದುಕೊಳ್ಳಲಾಗುವುದೆಂದೂ ದಿವಾನರು ಮಂತ್ರಿಮಂಡಲದ ಅಧ್ಯಕ್ಷರಾಗಿರುವರೆಂದೂ ತಿಳಿಸಿದ್ದಾರೆ.

● ಧೂಮಪಾನ ಮಾಡುವುದರಿಂದ ಕ್ಯಾನ್ಸರ್ ರೋಗ ಆಯಸ್ಸು ಕ್ಷೀಣಿಸಿ ಹೋಗುವುದೆಂದು ವೈದ್ಯಶಾಸ್ತ್ರಜ್ಞರು ಪತ್ತೆಹಚ್ಚಿದ್ದಾರೆ. ಇಲಿಗಳ ಮೇಲೆ ಈ ಒಸ್ಸ್ ಪ್ರಯೋಗ ನಡೆಸಿ ಈ ನಿರ್ಧಾರಕ್ಕೆ ಬಂದಿದ್ದಾರೆ.

ಸಾಧ್ವಿ

ತಾ|| ೫-೪-೪೭ ಶನಿವಾರ

ರಾಜರುಗಳಿಗೆ ಸುವರ್ಣ ಸಂಧಿ

ಭಾರತ ರಾಜ್ಯಾಂಗ ಸಭೆಯಲ್ಲಿ ಸೇರುವ ಬಗ್ಗೆ ದೇಶೀಯ ರಾಜರುಗಳಲ್ಲಿದ್ದ ಭಿನ್ನಾಭಿಪ್ರಾಯವು ಕೊನೆಗೊಂಡಿದೆ. ರಾಜ್ಯಾಂಗ ಸಭೆಯಲ್ಲಿ ಸೇರಿ ಸಹಕರಿಸುವುದಾಗಿ ಕಳೆದ ಜನವರಿಯಲ್ಲಿ ಇವರು ಮಾಡಿದ್ದ ನಿರ್ಣಯವನ್ನು ಹಿಂಬದಿಗೆ ಒತ್ತುವ ಪ್ರಯತ್ನಗಳು ಅಲ್ಲಲ್ಲಿ ನಡೆದುವು. ಆದರೆ ನರೇಂದ್ರರಲ್ಲಿಯೇ ಹುಟ್ಟಿರುವ ಪ್ರಗತಿ ಪಕ್ಷದ ದೇಶಾಭಿಮಾನ ಪೂರಿತವಾದ ದಿಟ್ಟತನದ ವರ್ತನೆಯಿಂದ ಈ ಪ್ರಯತ್ನವು ವಿಫಲವಾಯಿತು. ರಾಜ್ಯಾಂಗ ಸಭೆಯಲ್ಲಿ ಸಂಸ್ಥಾನಗಳ ಸೇರಲು ಈಗ ಸ್ವಾತಂತ್ರ್ಯವು ದೊರೆತಂತಾಗಿದೆ.

ಹಿಂದೂಸ್ಥಾನದ ರಾಜಕೀಯ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಇದುವರೆಗೆ ರಾಜರುಗಳು ವಹಿಸಿರುವ ಪಾತ್ರವು ಅಷ್ಟೇನೂ ಯಶಸ್ವಿಯಾಗಿರುವುದಿಲ್ಲ. ಬ್ರಿಟಿಷ್ ಸರ್ಕಾರದವರ ಕೈಗೊಂಬೆಗಳಾಗಿ ತಕ್ಕಂತೆ ಅವರು ಕುಣಿಯುತ್ತಿರುವರೆಂಬ ಆರೋಪಣೆಯು ಬಂದಿರುತ್ತದೆ. ಒಂದು ಸಾರಿ ಮಾಡಿದ ನಿರ್ಧಾರವನ್ನು ಮತ್ತೊಂದು ಸಾರಿ ಅವರೇ ಮುರಿಯುತ್ತಿರುವರೆಂಬ ಟೀಕೆಗಳೂ ಬಂದಿವೆ. ಪ್ರಗತಿಗಾಮಿಗಳಾದ ಹಲವು ರಾಜರುಗಳೂ, ದಿವಾನರುಗಳೂ, ಈಗಾಗಲೇ ಇಂತಹ ಪ್ರಸಂಗಗಳನ್ನು ಬಯಲುಮಾಡಿದ್ದಾರೆ.

ಮೊನ್ನೆ ಬೊಂಬಾಯಿನಲ್ಲಿ ನಡೆದ ನರೇಂದ್ರರುಗಳ ಸಭೆಯಲ್ಲಿ ಬಿಕನೀರ್ ಮಹಾರಾಜರೂ, ನಮ್ಮ ಸಂಸ್ಥಾನದ ಮಾಜಿ ಮಂತ್ರಿಗಳಾಗಿದ್ದು ಈಗ ಗ್ವಾಲಿಯರಿನ ಪ್ರಧಾನಿಗಳಾಗಿರುವ ಶ್ರೀ ಎಂ. ಎ. ಶ್ರೀನಿವಾಸರವರೂ ವಹಿಸಿದ ಪಾತ್ರವು ಅತ್ಯಂತ ಶ್ಲಾಘನೀಯವಾದುವು. ಭಾರತ ರಾಜ್ಯಾಂಗ ಸಭೆಯಲ್ಲಿ ಸಹಕರಿಸುವುದಾಗಿ ರಾಜರುಗಳು ಹಿಂದೆ ಕೊಟ್ಟಿದ್ದ ಭರವಸೆಯಿಂದ ಹಿಂಜರಿಯುತ್ತಿರುವುದನ್ನು ಕಂಡು ಅದನ್ನು ಧೈರ್ಯವಾಗಿ ಪ್ರತಿಭಟಿಸಿ ಇಂತಹ ವರ್ತನೆಯ ದುಷ್ಪರಿಣಾಮಗಳ ಬಗ್ಗೆ ಕಠಿಣವಾದ ಎಚ್ಚರಿಕೆಯನ್ನಿತ್ತರು. ಬಿಕನೀರ್ ಮಹಾರಾಜರು ತಮ್ಮ ಅಸಮಾಧಾನವನ್ನು ಸೂಚಿಸಲು ಸಭಾ ಪರಿತ್ಯಾಗವನ್ನು ಸಹ ಮಾಡಿದರು. ರಾಜರುಗಳ ವರ್ತನೆಯು ವಿಚಾರವಾಗಿ ಅವರುಗಳಲ್ಲಿಯೇ ಎಷ್ಟು ಮಟ್ಟಿನ ಒಡಕು ಉಂಟಾಗಿರುವುದೆಂಬುದು ಇದರಿಂದ ವೇದ್ಯವಾಗುತ್ತದೆ.

ಉದಯಪುರ ಸಂಸ್ಥಾನದ ಪ್ರಧಾನಿಗಳಾದ ಸರ್ ಟಿ. ವಿಜಯರಾಘವಾಚಾರ್ಯರವರೂ ಸಹ ನರೇಂದ್ರರುಗಳ ವರ್ತನೆಯನ್ನು ತೀವ್ರವಾಗಿ ಟೀಕಿಸುತ್ತಾರೆ. ರಾಜ್ಯಾಂಗ ಸಭೆಯಲ್ಲಿ ಸೇರುವುದರಿಂದ ಸಂಸ್ಥಾನಗಳಿಗೆ ಲಾಭವೇ ಹೊರತು ನಷ್ಟವಲ್ಲವೆಂದು ತಿಳಿಸುತ್ತಾರೆ. ಹಾಗೆ ಮಾಡದಿದ್ದರೆ ಇಡೀ ಹಿಂದೂಸ್ಥಾನದ ಪ್ರಗತಿ ಅಭಿವೃದ್ಧಿಯನ್ನು ಒಡ್ಡುತ್ತಿರುವವರೆಂಬ ಅಪಾದನೆಯಿಂದ ರಾಜರುಗಳು ಪಾರಾಗಲಾರರೆಂದೂ ಸಹ ಹೇಳುತ್ತಾರೆ.

ಪರಿಸ್ಥಿತಿಗಳೆಲ್ಲವೂ ತಮ್ಮ ಹಿಂದಿನ ನಿ... ರಾಜ್ಯಾಂಗ ಸಭೆಯ...

ಮೈಸೂರಿನ ಮುಂದಿನ ಹೆಜ್ಜೆ

ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿರುವ ಸ್ಫೂರ್ತಿಕರವಾಗಬೇಕೆಂಬ ಆಸೆಯಿಂದಲೂ, ಸೇವಾಕಾಂಕ್ಷೆಯ ಹೆಬ್ಬಯಕೆಯಿಂದಲೂ, ಅಭಿಪ್ರಾಯ ಪ್ರಚಾರಮಾಡಬೇಕೆಂಬ ಪ್ರಚೋದನೆಯಿಂದಲೂ ಕೂಡಿ ಬೆಂಗಳೂರಿನ ಸುಪ್ರಸಿದ್ಧ ಪತ್ರಿಕೋದ್ಯೋಗಿಗಳಾದ ಶ್ರೀ|| ಪಿ. ಕೇಶವನವರು ಬರೆದಿರುವ ಮೇಲ್ಕಂಡ ಹೆಸರಿನ ಈ ಪುಸ್ತಕವನ್ನು ಮೈಸೂರಿನ ಮುಂದುವರಿದ ಪ್ರತಿ ನಾಗರಿಕರೂ ಓದಲೇಬೇಕು. ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಕಡೆಯ ಹೋರಾಟವು ಕೂಡಲೇ ಆರಂಭವಾಗಬೇಕೆಂದು ಸೂಚಿಸಿ, ಕಾಂಗ್ರೆಸ್ ನಾಯಕತ್ವವನ್ನು ಕಾರ್ಯಮುಖಕ್ಕೆ ಎಳೆಯುವುದೇ ಈ ಬರಹದ ಮುಖ್ಯೋದ್ದೇಶವೆಂದೂ ಲೇಖಕರೇ ಸಾರಿದ್ದಾರೆ. ಸ್ವಾತಂತ್ರ್ಯೋದಯ ಪುಸ್ತಕಮಾಲೆಯ ಮೊದಲನೇ ಕಿಡಿಯಿಂದ ಇದರ ಬೆಲೆ ಕೇವಲ ನಾಲ್ಕಾಣೆ.

ಲೇ ಭಾಗವಹಿಸುವ ತೀರ್ಮಾನಿಸಿದ್ದರೆ ಸರ್ವೋತ್ತಮವಾಗುತ್ತಿತ್ತು. ಅನೇಕ್ಷ ಸದವಕಾಶವನ್ನು ಕಳೆದುಕೊಳ್ಳುವುದು ಸ್ವಲ್ಪ ಮಟ್ಟಿಗೆ ಸಮಾಧಾನವನ್ನುಂಟುಮಾಡುವುದು. ಇದಕ್ಕಾಗಿ ಶ್ರಮಿಸಿದ ನರೇಂದ್ರರುಗಳೂ, ಅವರ ಪ್ರತಿನಿಧಿಗಳೂ ವಂದನಾರ್ಹರು.

ಮುಂದೆಯಾದರೂ ರಾಜರುಗಳು ಅಖಂಡ ಭಾರತದ ಹಿತಕ್ಕೆ ವಿರುದ್ಧವಾಗಿ ನಡೆಯದಿರಲೆಂದು ಹಾರೈಸಬೇಕಾಗಿದೆ. ಬಿಕನೀರಿನ ರಾಜರು ಈ ಸಂದರ್ಭದಲ್ಲಿ ಕೊಟ್ಟಿರುವ ಎಚ್ಚರಿಕೆಯನ್ನು ಅವರುಗಳು ಗಮನಿಸುವರೆ. ಒಳ್ಳೆಯದು. "ಸಂಪೂರ್ಣ ಸ್ವಾತಂತ್ರ್ಯದ ಸಾಧನೆಯಲ್ಲಿ ನಿರ್ದಿಷ್ಟವಾದ ಪಾತ್ರವನ್ನು ವಹಿಸಲು ರಾಜರುಗಳಿಗೆ ಈಗ ಸುವರ್ಣ ಸಂಧಿಯು ಸಂಪ್ರಾಪ್ತವಾಗಿರುತ್ತದೆ. ಕೊಟ್ಟ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ನಮ್ಮ ಸಹೋದರರಿಗೂ, ಇಡೀ ಪ್ರಪಂಚಕ್ಕೂ ತೋರಿಸಿಕೊಡಲು ಅವಕಾಶ ದೊರೆತಿರುತ್ತದೆ. ಇಂತಹ ಸಮಯವು ಮತ್ತೊಮ್ಮೆ ಬಾರದಿರಬಹುದು. ಇದನ್ನು ಸದುಪಯೋಗಪಡಿಸಿಕೊಳ್ಳದಿದ್ದುದಕ್ಕಾಗಿ ನಾವು ಪರಿತಾಪಪಡಬೇಕಾದೀತು; ಸಾವಕಾಶದಿಂದ ಕೊಡುವ ಸಹಕಾರವು ನಿರರ್ಥಕವಾಗಬಹುದು; ಬ್ರಿಟಿಷ್ ಭಾರತದ ನಮ್ಮ ಸೋದರರು ನಮ್ಮನ್ನು ಪ್ರೀತಿವಿಶ್ವಾಸಗಳಿಂದ ಸ್ವಾಗತಿಸಲು ಸಿದ್ಧರಾಗಿದ್ದಾರೆ; ಭರತಖಂಡದ ಸ್ವಾತಂತ್ರ್ಯ ಮತ್ತು ಅಭ್ಯುದಯದ ರಚನೆಯಲ್ಲಿ ಸಮಭಾಗಿಗಳೆಂದೆ ಸ್ವಾಗತಿಸಲ್ಪಡೋಣ. ನರೇಂದ್ರರೆಲ್ಲರೂ ಸಿದ್ಧರಾಗಲಿ !" ಎಂಬುದಾಗಿ ಬಿಕನೀರ್ ರಾಜರು ಮನವಿ ಮಾಡಿದ್ದಾರೆ.

ಇಂತಹ ಸುಸಮಯವನ್ನು ನಮ್ಮ ರಾಜರುಗಳು ಕಳೆದುಕೊಳ್ಳಬಹುದೇ ?

ಜಿಲ್ಲಾ ಬೋರ್ಡ್ ಚುನಾವಣೆ

೨೮-೪-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗೆಕಂಡ ಕಾಂಗ್ರೆಸ್ ಉಮೇದುವಾರರಿಗೇ

- ದಯವಿಟ್ಟು ಓಟು ಕೊಡಿ :

ಜಿಚ್. ಲಿಂಗಪ್ಪ (ಹನಿಯಂಬಾಳ್ಳಿ)

ಜಿಚ್. ಎಂ. ನಾಗಪ್ಪ (ಸುಲ್ಲಳ್ಳಿ)

ನೋಟುಗಳ ದಹನ

ದಕ್ಷಿಣ ಅಮೇರಿಕದಲ್ಲಿರುವ ಬ್ರೆಜಿಲ್ ದೇಶದಲ್ಲಿ ಅಲ್ಲಿನ ೧ ಕೋಟಿ ಬೆಲೆಯ ನೋಟುಗಳನ್ನು ಅಲ್ಲಿನ ಅಧ್ಯಕ್ಷರ ಅಜ್ಞೆಯಂತೆ ಸುಡಲಾಯಿತೆಂದು ವರದಿಯಾಗಿದೆ. ನೋಟುಗಳ ಚಲಾವಣೆಯು ಹೆಚ್ಚಿ ಹೋಗಿರುವುದನ್ನು ತಗ್ಗಿಸುವ ಸಲುವಾಗಿ ಈ ರೀತಿ ಮಾಡಲಾಯಿತೆಂದು ಹೇಳಲಾಗಿದೆ.

ಗೌವರ್ನರ್ ಭವನ ಕ್ಷಯ ರೋಗದ ಆಸ್ಪತ್ರೆ ಆಗಲಿದೆ

ಗಿಂಡಿಯ ರ ಬರ್ನ ನಗರ ಮದ್ರಾಸ್ ಗವರ್ನರು ವಾಸಮಾಡುವ ಸರ್ಕಾರಿ ಭವನವನ್ನು ಕ್ಷಯರೋಗದ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಈಗಾಗಲೇ ಸಲಹೆ ಬಂದಿರುವುದಾಗಿ ತಿಳಿದು ಬಂದಿದೆ.

ಪೆಷಾವರನ್ನು ಹಿಂದೂ-ಸಿಖ್ಖರು ತ್ಯಜಿಸಿದರು

ಗಡಿನಾಡಿನ ಪೆಷಾವರ್ ನಗರದ ಅಲ್ಪಸಂಖ್ಯಾತರ ನಾಲ್ಕನೇ ಒಂದು ಭಾಗವನ್ನು ಅಂದರೆ ೭ ಸಹಸ್ರ ಹಿಂದೂ ಮತ್ತು ಸಿಖ್ಖರು ಮನೆ ಮಠಗಳನ್ನು ತೊರೆದು ಪಂಜಾಬ್ ಮತ್ತಿತರ ಹಿಂದೂ ಪ್ರದೇಶಗಳಿಗೆ ಪ್ರಯಾಣ ಬೆಳೆಸಿದ್ದಾರೆಂದು ಸುದ್ದಿ ಬಂದಿದೆ.

ಬಿಂದಿ ಬಟ್ಟೆಯ " ರಾಜರುಗಳು "

ಬಿಳಿ ಬಟ್ಟೆಯನ್ನು ಧರಿಸಿ ತಾವುಗಳು ರಾಜರೆಂದು ಹೇಳಿಕೊಂಡು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಸಂಯುಕ್ತ ಪ್ರಾಂತ್ಯದ ಶಾಸನ ಸಭೆಯ ಮುಂದೆ ೧೫ ಮಂದಿ ನಿಮ್ನ ವರ್ಗದವರು ಪ್ರದರ್ಶನ ನಡೆಸಿದರು. ಪೋಲೀಸರು ಇವರನ್ನು ಪ್ರಶ್ನಿಸಿದಾಗ ತಮ್ಮ ತಂದೆಯ ಹೆಸರು ಅಚ್ಯುತಾನಂದನೆಂದೂ, ಅವರು ಭೀಮನಗರದಿಂದ ಬಂದರೆಂದೂ ಹೇಳಿದರು. ಮೇಲ್ಕಂಡ "ರಾಜರ" ಪ್ರಜೆಗಳೆಂದು ಹೇಳಿಕೊಂಡು ಪ್ರದರ್ಶನ ನಡೆಸುತ್ತಿದ್ದ ೪೦ ಮಂದಿಯನ್ನು ಪೋಲೀಸರು ದಸ್ತಗಿರಿ ಮಾಡಿ ಜೈಲಿನಲ್ಲಿಟ್ಟಿದ್ದಾರೆಂದು ತಿಳಿದು ಬಂದಿದೆ.

ಶ್ರೀ ರಾಮೋತ್ಸವ

ಸ್ವ ಸು] ಅಗ್ನಿಸಂದ್ರ ೩

ಇಲ್ಲಿನ ಬ್ರಾಹ್ಮಣ ಬಾಲ ಭಜನ ಮಂಡಳಿಯಿಂದ ಶ್ರೀ ರಾಮೋತ್ಸವವು ಶ್ರೀ ಚಂದ್ರಮೌಳೇಶ್ವರ ದೇವಸ್ಥಾನದಲ್ಲಿ ಕಳೆದ ೨೮ ರಿಂದ ೩ ದಿನಗಳ ಕಾಲ ಪಾರಾಯಣ, ಸಂಗೀತ ಕಛೇರಿ ಮತ್ತು ಉಪನ್ಯಾಸಗಳೊಡನೆ ವೈಭವದಿಂದ ಜರುಗಿತು. ಊರಿನ ಮಹನೀಯರೆಲ್ಲರೂ ಇದರಲ್ಲಿ ಭಾಗವಹಿಸಿದ್ದರು.

RAJKAMAL, MYSORE

Morning Shows from 4-4-47

for 4 Days

Daily at 10-30 a. m

PRISONERS OF ZENDA

The most romantic adventure Story of all times

Starring:- Ronald Colman, Madeleine Carroll, Douglas Fairbanks Jr, Mary Astor Etc.

Edited, printed and published by A. A. Narayana at the Sadhvi Press

ಕತ್ತೆಗಳಿಂದ ಸಾಬೂನು

ದಕ್ಷಿಣ ಆಫ್ರಿಕದ ಕೇಪ್ ... ಸ್ಪ್ರಿಂಗ್ಸ್ ಡಿಸ್ಟ್ರಿಕ್ ಎಂಬಲ್ಲಿ ಕತ್ತೆಗಳನ್ನು ಕೊಂದು ಅವುಗಳ ಕೊಬ್ಬಿನಿಂದ ... ನ್ನು ತಯಾರಿಸುತ್ತಿದ್ದಾರೆಂದು ಗೊ... ಸಾಬೂನಿಗೆ ಉಂಟಾಗಿರುವ ಅಭಾ... ದಕ್ಕೆ ಕಾರಣ. ಪ್ರತಿ ದಿನವೂ ... ಕತ್ತೆಗಳನ್ನು ಸಾಬೂನು ತಯಾ... ಕೊಂದು ಹಾಕಲಾಗುತ್ತಿದೆಯೆಂದು ... ಬಂದಿದೆ.

ಆದಿಕರ್ನಾಟಕರ ಸಮ್ಮೇ...

ಪಿರಿಯಾಪಟ್ಟಣದ ತಾ|| ... ಗ್ರಾಮದಲ್ಲಿ ಆದಿಕರ್ನಾಟಕರ ಸ... ವೊಂದು ಕಳೆದ ವಾರ ಜರುಗಿತು. ... ಸೂರು ಸಬ್ ಡಿವಿಜನ್ ಅಧಿಕಾ... ಶ್ರೀ ಬಾಲರಾಜ್‌ರವರು ಅಧ್ಯಕ್ಷತೆ... ರು. ಕೃಷ್ಣರಾಜನಗರ ಮತ್ತು ... ರು ಮುಂತಾದ ಕಡೆಗಳಿಂದ ... ಮಂದಿ ಸಮ್ಮೇಳನಕ್ಕೆ ಆಗಮಿಸಿದ್ದ... ಮನ್ನ ಮಹಾರಾಜರಿಗೆ ರಾಜಭಕ್ತಿ ... ಮತ್ತು ಪಿರಿಯಾಪಟ್ಟಣದಲ್ಲಿ ಒಂದ... ತ ವಿದ್ಯಾರ್ಥಿ ನಿಲಯವನ್ನು ತೆರೆಯ... ಯು ಸರ್ಕಾರವನ್ನು ಪ್ರಾರ್ಥಿಸುವ ... ಯಗಳನ್ನು ಮಾಡಲಾಯಿತು.

ಟೌನ್ ಕ್ಲಬ್

ಚಾಮರಾಜ...

ಇಲ್ಲಿನ ಟೌನ್ ಕ್ಲಬ್ಬಿನ ಸರ್ವ ಸಭೆಯು ಮೊನ್ನೆ ದಿನ ಜರುಗಿತು. ಕಾರಿ ಸಮಿತಿಗೆ ಚುನಾವಣೆ ನಡೆ... ಲ್ದಾರರಾದ ಶ್ರೀ ಎಚ್. ಹಾಲಪ್ಪನ... ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ರಾಯಾರ್ಗ್‌ರವರನ್ನು ಉಪಾಧ್ಯಕ್ಷ... ಯೂ, ಸಿ. ಎಸ್. ಶ್ರೀಕಂಠಯ್ಯ... ಎಸ್. ಮಲ್ಲಣ್ಣನವರುಗಳನ್ನು ಕಾ... ದರ್ಶಿಗಳನ್ನಾಗಿಯೂ, ಆರಿಸಲಾಯಿತು.

ಇಲ್ಲಿನ ವೀರಶೈವ ವಿದ್ಯಾರ್ಥಿ ನಿ... ಕಟ್ಟಡದ ನಿಧಿಗೆ ಆಲೂರು ಮತ್ತು ಬಳ್ಳಿ ಗ್ರಾಮಸ್ಥರು ೨೩ ಸಹಸ್ರ ರ... ದಾನವಿತ್ತಿದ್ದಾರೆ. ಮಹಾಜನರು ರೀತಿ ಪ್ರೋತ್ಸಾಹ ನೀಡಬೇಕಾಗಿ ... ಧಿಯ ಕಾರ್ಯದರ್ಶಿಗಳು ಪ್ರಾರ್ಥಿ...

ಕಾಪಡು ಜನರ ಸಭೆ

ಹೆಗ್ಗಡದೇವನಕೋ...

ಈ ತಾಲ್ಲೂಕು ಬೀರಂಬಳ್ಳಿಯಲ್ಲಿ ೩೦ ನೇ ತಾ|| ಶ್ರೀ ಹೆಚ್. ವಿ. ... ದರಾಮಯ್ಯನವರ ಅಧ್ಯಕ್ಷತೆಯಲ್ಲಿ ... ಜನರ ಭಾರಿ ಸಭೆಯೊಂದು ಜರುಗಿ... ಕಾಡು ಜನರು ಹಿಂದೂ ಮತಕ್ಕೆ ಸ... ರೆಂಬ ವಿಷಯವನ್ನು ವಿವರಿಸಿ ... ಭಾಷಣ ಮಾಡಿದರು. ಅಲ್ಲಿನ ... ಸ್ವಾಮಿ ದೇವಸ್ಥಾನವನ್ನು ಜೀರ್ಣೋ... ರಮಾಡಲು ಸಹಾಯಮಾಡಬೇಕೆಂ... ರವನ್ನು ಪ್ರಾರ್ಥಿಸುವ ನಿರ್ಣಯ... ಮಾಡಲಾಯಿತು.

ರಾಜಕಮ...

೬-೪-೪೭ ರಿಂದ ಅಮೋ...

ವಾದ ೮ನೇ ವಾರ

ಶ್ರೀ ಕೃಷ್ಣಲೀಲ...

ಮೈಸೂರಿನಲ್ಲಿ ತಯಾರಿಸಿ, ಮಹಾ... ಮನ್ನಣೆಗೆ ಪಾತ್ರವಾಗಿರುವ ಈ ... ವೈಭವದ ಚಿತ್ರ ನೋಡಲು ತಪ್ಪ...

ಫೋನ್ ನಂ. 392 || ವಂದೇ ಮಾತರಂ || ದೈನಿಕ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೬—೪—೪೭ [ಸಂಚಿಕೆ ೨೦೩

ಇನ್ನು ೨೦ ವರ್ಷಗಳಲ್ಲಿ ೩ ನೇ ಮಹಾ ಯುದ್ಧ

ಕರಗದ ಮಹೋತ್ಸವವು ಶಾಂತಿಯಿಂದ ನಡೆಯಿತು

ಸ್ವಂ. ವ. ಫೋ.] [ಬೆಂಗಳೂರು ೬ ಕರಗದ ಮೆರವಣಿಗೆಯನ್ನು ನಡೆಸಬಾರದೆಂದು ಸರ್ಕಾರದವರು ವಿಧಿಸಿದ್ದ ಆಜ್ಞೆಯಿಂದ ಅನೇಕ ಕಡೆ ಅಸಮಾಧಾನ ತಲೆದೋರಿತು. ಅನೂಚಾನವಾಗಿ ಬಂದಿರುವ ಈ ಸಂಪ್ರದಾಯವನ್ನು ತಪ್ಪಿಸಕೂಡದೆಂದು ಹಿಂದೂ ಉಭಯ ಕೋಮುಗಳ ಮುಖಂಡರು ಉತ್ಸವಕ್ಕೆ ಅವಕಾಶ ಕೊಡುವಂತೆ ಸರ್ಕಾರವನ್ನು ಪ್ರಾರ್ಥಿಸಿಕೊಂಡ ಮೇಲೆ ಮಂತ್ರಿಮಂಡಲದ ವಿಶೇಷ ಸಭೆಯು ಜರುಗಿ ಹಿಂದಿನ ಆಜ್ಞೆಯನ್ನು ಬದಲಾಯಿಸಿ ಗ್ರಾಫಿಕ್ ಲೈಟಿಂಗ್ ದೂರ ಮಾತ್ರ ಉತ್ಸವವನ್ನು ನಡೆಸಲು ಅವಕಾಶ ಕೊಡಲ್ಪಟ್ಟಿತು.

ದೇವಸ್ಥಾನದಲ್ಲಿ ಶಾಸ್ತ್ರೋಕ್ತವಾಗಿ ಪೂಜಾದಿಗಳು ನಡೆದ ನಂತರ ಕರಗದ ಉತ್ಸವವು ಧರ್ಮರಾಯನ ದೇವಾಲಯದಿಂದ ರಾತ್ರಿ ೧೦-೪೦ ಕ್ಕೆ ಹೊರಟು ದೊಡ್ಡಪೇಟೆ ಚೌಕದ ವರೆಗೆ ಬಂದು ಹಿಂತಿರುಗಿ ೧೧-೧೫ ಕ್ಕೆ ಗುಡಿಯನ್ನು ಸೇರಿತು. ಉತ್ಸವದ ಮಾರ್ಗದಲ್ಲಿ ಮಿಲಿಟರಿಯ ಕಾವಲು ಇಡಲಾಗಿತ್ತು.

ಧರ್ಮರಾಯನ ಉತ್ಸವವು ೧೨ ಘಂಟೆಗೆ ಹೊರಟು ೧ ಘಂಟೆ ವೇಳೆಗೆ ಹಿಂತಿರುಗಿತು. ಈ ಸಲ ಹೊರಗಡೆಯಿಂದ ಜನರು ಬರಲು ಪ್ರತಿಬಂಧಕವಿದ್ದುದರಿಂದ ಜನಸಂದಣಿ ಹೆಚ್ಚಾಗಿರಲಿಲ್ಲ.

ಕರಗದ ಉತ್ಸವವನ್ನು ಪ್ರತಿಬಂಧಿಸಿ ಜಿಲ್ಲಾಧಿಕಾರಿಗಳು ಹೊರಡಿಸಿರುವ ಆಜ್ಞೆಯನ್ನು ಪ್ರತಿಭಟಿಸಿ ಶಾಂತಿ ಪಾಲನಾ ಸಮಿತಿ ಸದಸ್ಯತ್ವಕ್ಕೆ ಶ್ರೀ|| ಜಿ. ವಿ. ರಾಮಾಚಾರ್ಯರು ರಾಜೀನಾಮೆ ಸಲ್ಲಿಸಿದ್ದಾರೆ.

ಅಧಿಕಾರ ವರ್ಗಾಯಿಸುವ ಬಗ್ಗೆ ಮಾತುಕತೆಗಳು

ಹೊಸ ವೈಸರಾಯರೂ ಮತ್ತು ಗಾಂಧೀಜಿಯವರೂ ನಡೆಸುತ್ತಿರುವ ಮಾತುಕತೆಗಳಲ್ಲಿ, ಅಧಿಕಾರವನ್ನು ಭಾರತೀಯರಿಗೆ ವರ್ಗಾಯಿಸಿ ಕೊಡುವುದರ ಬಗ್ಗೆ ವಿವರಗಳನ್ನು ಈಗ ಚರ್ಚಿಸಲಾಗುತ್ತಿದೆಯೆಂದು ಹೇಳಲಾಗಿದೆ. ಇದನ್ನು ಈ ವಾರದ ಅಂತ್ಯದಲ್ಲಿ ದೀರ್ಘವಾಗಿ ವಿಮರ್ಶಿಸಲಾಗುವುದಿದ್ದು, ಆದಕಾರಣ ಗಾಂಧಿಯವರು ದಿಲ್ಲಿಯಲ್ಲಿ ಹೆಚ್ಚು ದಿನ ಬಿಡಾರ ಮಾಡುವುದೆಂದೂ ಗೊತ್ತಾಗಿದೆ.

ಧೂಮಪಾನದಲ್ಲಿಯೂ ಸ್ತ್ರೀಯರಿಗೆ ಸಮಾನ ಹಕ್ಕು !

ಹೆಂಗಸರಿಗೂ ಸಹ ಸಮಾನ ಹಕ್ಕುಬಾಧ್ಯತೆಗಳಿರುವುವೆಂದು ಆಸ್ಟ್ರೇಲಿಯವು ಮಾಡಿರುವ ಹೊಸ ಶಾಸನದ ಆಧಾರದ ಮೇಲೆ ಸಿಡ್ನಿ ನಗರದ ಕೆಲವರು ಹೆಂಗಸರು ತಮಗೆ ಈಗ ಕೊಡುತ್ತಿರುವ ಸಿಗರೇಟಿನ ಅರ್ಧಭಾಗ ಪೀಸನ್ನಿನ ಬದಲು ಗಂಡಸರಿಗೆ ಕೊಡುತ್ತಿರುವಷ್ಟನ್ನೇ ತಮಗೂ ಕೊಡಬೇಕೆಂದು ಅಲ್ಲಿನ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿರುತ್ತಾರೆ.

ಉಪನ್ಯಾಸ

ಮೈಸೂರು ಶ್ರೀ ಶಂಕರಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಕ್ಕೆ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಮಹಾವಿದ್ವಾನ್ ಅರಣಿಕೊಪ್ಪಲು ಸುಬ್ರಹ್ಮಣ್ಯಶಾಸ್ತ್ರಿಗಳು "ಕರ್ಮ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡುವರು.

ಗಲಭೆ ಪರಿಸ್ಥಿತಿ ಉತ್ತಮಗೊಂಡಿದೆ

ಸ್ವಂ. ವ. ಫೋ.] [ಬೆಂಗಳೂರು ೬ ಶ್ರೀರಾಮಪುರದಲ್ಲಿ ನಿನ್ನೆ ನಡೆದ ಪ್ರಮಾದ ಪ್ರಸಂಗವು ಯಾವ ರೀತಿಯಿಂದಲೂ ಪ್ರಬಲಿಸದೆ ನಗರವು ಶಾಂತಿಯಿಂದ ಕೂಡಿದೆ. ಆ ಸ್ಥಳದಲ್ಲಿ ವಿಶೇಷ ಮಿಲಿಟರಿ ಪಹರೆ ಇಡಲಾಗಿದೆ.

ದಸ್ತಗಿರಿಗಳು

ಗಲಭೆ ಆರಂಭವಾದಾಗಿನಿಂದ ಇದುವರೆವಿಗೆ ೩೦ ಮಂದಿಯನ್ನು ದಸ್ತಗಿರಿ ಮಾಡಲಾಗಿದೆ. ಮೊನ್ನೆ ಶಿಕ್ಷೆಗೆ ಗುರಿಯಾಗಿದ್ದ ೧೯ ಮಂದಿ ಕತ್ತಿ ಕಠಾರಿ ಹಿಡಿದು ತಿರುಗುತ್ತಿದ್ದರೆಂದು ಪುನಃ ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಪ್ರಜಾಪ್ರತಿನಿಧಿ ಸಭೆ ಮತ್ತು ಪುರಸಭಾ ಸದಸ್ಯರಾದ ಶ್ರೀ|| ಎಂ. ಕೃಷ್ಣಸ್ವಾಮಿ ಪಿಳ್ಳೆಯವರನ್ನೂ ಮೈಸೂರು ರಸ್ತೆಯಲ್ಲಿರುವ ವಿ|| ಬಾಬಾ ಮತ್ತು ಅವರ ಮೂವರು ಮಕ್ಕಳನ್ನೂ ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ಬಂಧಿಸಲಾಗಿದೆ.

ಶಾಂತಿ ನೆಲೆಸುತ್ತಿದೆ

ಅಂಗಡಿಗಳು ತೆರೆಯಲ್ಪಡುತ್ತಿವೆ. ಪೋಲೀಸ್ ಮತ್ತು ಮಿಲಿಟರಿಯ ರಕ್ಷಣೆ ಪ್ರಧಾನವಾಗಿ ಕಂಡು ಬರುತ್ತಿದೆ. ವಾಹನಗಳ ಸಂಚಾರವು ಮತ್ತೆ ಆರಂಭವಾಗಿದೆ. ನಗರದಲ್ಲಿ ನಿನ್ನೆ ಮತ್ತು ಇಂದು ಯಾವ ದುರ್ಘಟನೆಗಳೂ ವರದಿಯಾಗಿಲ್ಲ.

ಸಹಕಾರ ಸಂಘಗಳ ಸಮ್ಮೇಳನ

ಮೈಸೂರು ನಗರದ ಸಹಕಾರ ಸಂಘಗಳ ಸಮ್ಮೇಳನವು ಇಂದು ಸಹಕಾರ ಭವನದಲ್ಲಿ ನಡೆಯಿತು. ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯಾದ ನಂತರ ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿಯವರು ಸ್ವಾಗತ ಭಾಷಣ ಮಾಡಿದರು. ಸಹಕಾರ ಸಂಘಗಳು ಆಹಾರ ಮತ್ತು ಬಟ್ಟೆ ಸರಬರಾಜು, ಲೇವಾದೇವಿ, ಗೃಹ ನಿರ್ಮಾಣ ಮುಂತಾದ ವಿಷಯಗಳಲ್ಲಿ ಎಷ್ಟರ ಮಟ್ಟಿನ ಸೇವೆ ಸಲ್ಲಿಸಬಹುದೆಂಬುದನ್ನು ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಿಳಿಸಿದರು. ಈ ವಿಚಾರಗಳಲ್ಲಿ ಸರ್ಕಾರದವರು ಸಹಕಾರ ಸಂಘಕ್ಕೆ ಪೂರ್ಣ ಸಹಕಾರವನ್ನು ಪಡೆಯಬೇಕೆಂದು ತಿಳಿಸಿ ಸಧ್ಯದಲ್ಲಿ ಆಹಾರ ಧಾನ್ಯಗಳನ್ನೂ, ಬಟ್ಟೆ ಬರೆಗಳನ್ನೂ ಸಹಕಾರ ಸಂಘಗಳ ಮೂಲಕ ಮಹಾಜನರಿಗೆ ಒದಗಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ಸಿನಿಮಾ ಮತ್ತು ಹೆಂಡ ದಂಗಡಿಗಳ ಮೇಲೆ ಪ್ರತಿಬಂಧಕ

ಮೈಸೂರು ೬

ಕೋಮುವಾರು ಶಾಂತಿಗೆ ಭಯ ಬರದಂತೆ ರಕ್ಷಣೆ ಮಾಡಲು ಪೋಲೀಸ್ ಶಾಸನದ ೪೫ ನೇ ಕಲಮಿನ ಪ್ರಕಾರ ನಿನ್ನೆಯಿಂದ ಸೋಮವಾರ ಶಾಲ ರಾತ್ರಿ ೯ ಗಂಟೆಯ ನಂತರ ರಾಜಧಾನಿಯಲ್ಲಿ ಸಿನಿಮಾ, ನಾಟಕಗಳ ಪ್ರದರ್ಶನ ನಡೆಯಕೂಡದೆಂದು ಜಿಲ್ಲಾಧಿಕಾರಿಗಳು ಪ್ರತಿಬಂಧಕಾಜ್ಞೆ ಹೊರಡಿಸಿದ್ದಾರೆ. ಆದರೂ ನಿನ್ನೆ ರಾತ್ರಿ ಎಲ್ಲಾ ಸಿನಿಮಾ ಮಂದಿರಗಳಲ್ಲಿ ಸಿನಿಮಾ ಪ್ರದರ್ಶನವು ನಡೆಯಿತು. ಜನರು ಕುಡಿತದ ಅಮಲಿನಲ್ಲಿ ಗಲಭೆ ನಡೆಸಿ ಕೋಮುವಾರು ಶಾಂತಿಗೆ ಭಂಗ ತರದಂತೆ ರಕ್ಷಿಸುವ ಸಲುವಾಗಿ ರಾಜಧಾನಿಯ ಎಲ್ಲಾ ಹೆಂಡದಂಗಡಿಗಳೂ, ವಿದೇಶೀ ಸಾರಾಯಿ ಅಂಗಡಿಗಳೂ ಸಹ ನಿನ್ನೆಯಿಂದ ಒಂದು ವಾರದ ವರೆಗೆ ಸಂಜೆ ೬ ಗಂಟೆಯ ಮೇಲೆ ಮುಚ್ಚಲ್ಪಡಬೇಕೆಂದು ಜಿಲ್ಲಾಧಿಕಾರಿಗಳು ಆಜ್ಞೆ ಮಾಡಿರುತ್ತಾರೆ.

ರಾಮೋತ್ಸವ ಕಾರ್ಯಕ್ರಮಗಳು

ಗೀತಾ ರಸ್ತೆಯಲ್ಲಿರುವ ಬಾಲಕ ಸೀತಾರಾಮ ಮಂದಿರದಲ್ಲಿ ಈ ದಿನ ಶ್ರೀ ಟಿ. ಕೆ. ವೇಣುಗೋಪಾಲದಾಸರವರಿಂದ ಕೃಷ್ಣಸಂಧಾನಪೇಟ ಹರಿಕಥೆಯು ನಡೆಯುವುದು.

ಕುಂಚಿಟಿಗರ ಶ್ರೀರಾಮ ಮಂದಿರದಲ್ಲಿ ಈ ದಿನ ಸಂಜೆ ೬|| ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಜಿ. ಎಸ್. ನಾಗರಾಜರಾಯರ ಅಧ್ಯಕ್ಷತೆಯಲ್ಲಿ ಸಂ|| ವಿ|| ಅ|| ವಿ ಶೆಟ್ಟಿ ಕೃಷ್ಣಯ್ಯಂಗಾರ್ಯರ ಗಾಯನವನ್ನು ಏರ್ಪಡಿಸಲಾಗಿದೆ.

ಜೈ ಪ್ರಕಾಶ್ ನಿಧಿಗಾಗಿ ಮನವಿ

ವಿದ್ಯಾರ್ಥಿ ಕಾಂಗ್ರೆಸ್ಸಿನ ಆಹ್ವಾನವನ್ನು ಮನ್ನಿಸಿ ಶ್ರೀ ಜೈ ಪ್ರಕಾಶ್ ನಾರಾಯಣ್ ರವರು ಈ ತಿಂಗಳ ಮೂರನೇ ವಾರದಲ್ಲಿ ಮೈಸೂರಿನಲ್ಲಿ ಪ್ರವಾಸ ಮಾಡಲಿರುವರು. ಅಗ್ಗ ಅವರಿಗೆ ಪತ್ತು ಸಹಸ್ರ ರೂ ಗಳ ನಿಧಿಯನ್ನರ್ಪಿಸಬೇಕೆಂದು ನಿರ್ಧರಿಸಲಾಗಿದೆ. ಎಲ್ಲ ಯುವಕರು ಈ ನಿಧಿಯನ್ನು ಸೇರಿಸಲು ನೆರವಾಗಬೇಕು. ವಿದ್ಯಾರ್ಥಿ ಕಾಂಗ್ರೆಸ್ ಕೂಡಿಸುತ್ತಿರುವ ಈ ನಿಧಿಗೆ ಮಹಾಜನರೆಲ್ಲಾ ಪ್ರೋತ್ಸಾಹ ಕೊಡಬೇಕೆಂಬುದಾಗಿ ಕಾರ್ಯದರ್ಶಿಗಳಾದ ಶ್ರೀ ಕವನಸ್ತು ಭಗವಾನ್ ರವರು ಮನವಿ ಮಾಡಿಕೊಂಡಿದ್ದಾರೆ.

ಕಲ್ಕತ್ತ ಮತ್ತು ಕರಾಚಿ ಸ್ವತಂತ್ರ ಬಂದರುಗಳು

ಪಾಕೀಸ್ತಾನವು ಸ್ಥಾಪಿಸಲ್ಪಟ್ಟರೆ ಆಗ್ಗೆ ಕಲ್ಕತ್ತ ಮತ್ತು ಕರಾಚಿ ಬಂದರುಗಳ ಸ್ಥಿತಿಯನ್ನು ಕುರಿತು ರಾಜಕೀಯ ಮತ್ತು ಮಿಲಿಟರಿ ತಜ್ಞರು ಯೋಚನೆ ಮಾಡುತ್ತಿದ್ದಾರೆಂದು ಹೇಳಲಾಗಿದೆ. ಈ ಎರಡು ಬಂದರುಗಳನ್ನೂ ಸ್ವತಂತ್ರವನ್ನಾಗಿ ಮಾಡಿ ಅವರಿಗೆ ಇರುವಂತೆ ಪ್ರತ್ಯೇಕ ಶಾಸನ ಸಭೆಗಳನ್ನು ರಚಿಸಿ, ಸುಂಕ, ತೆರಿಗೆ, ರಕ್ಷಣೆ ಮುಂತಾದುವುಗಳ ವಿಚಾರದಲ್ಲಿ ಅವುಗಳನ್ನು ಕೇಂದ್ರ ಸರ್ಕಾರಕ್ಕೆ ಅಧೀನಪಡಿಸಲಾಗುವುದೆಂದು ಹೇಳಲಾಗಿದೆ. ಇದಕ್ಕೆ ಕಾಂಗ್ರೆಸ್ಸಿನ ಸಮ್ಮತಿ ಇರುವುದೆಂದೂ ಊಹಿಸಲಾಗಿದೆ.

ರಷ್ಯ-ಅಮೇರಿಕನ್ ಯುದ್ಧ

ಇನ್ನು ೨೦ ವರ್ಷದೊಳಗಾಗಿ ಮೂರನೆಯ ವಿಶ್ವ ಸಂಗ್ರಾಮವು ನಡೆಯುವುದರಲ್ಲಿ ಸಂದೇಹವಿಲ್ಲ ಎಂಬುದಾಗಿ ಬ್ರಿಟನ್ನಿನ ಸ್ವತಂತ್ರ ಲೇಬರ್ ಪಕ್ಷದ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಮಿ|| ಬಾಬ್ ಎಡ್ವರ್ಡ್ಸ್ ರವರು ಘೋಷಿಸಿದ್ದಾರೆ. ಅಮೇರಿಕಾ ಮತ್ತು ರಷ್ಯಾಗಳೇ ಈ ಸಂಗ್ರಾಮದ ಪ್ರಧಾನ ಪಾತ್ರಧಾರಿಗಳೆಂದು ಅವರು ತಿಳಿಸಿದ್ದಾರೆ.

ಭಾರತದಲ್ಲಿ ಅಮೇರಿಕದ ರಾಯಭಾರಿ

ಮಿ|| ಹೆನ್ರಿ ಎಫ್. ಗ್ರಾಡಿ ಎಂಬುವರನ್ನು ಭಾರತದಲ್ಲಿ ಅಮೇರಿಕದ ಪ್ರಥಮ ರಾಯಭಾರಿಗಳನ್ನಾಗಿ ನೇಮಿಸಲಾಗಿದೆ. ಇವರಿಗೆ ೬೫ ವರ್ಷ ವಯಸ್ಸು. ಇವರ ಆಯ್ಕೆಯನ್ನು ಸ್ವಾಗತಿಸಿ ಅಮೇರಿಕದಲ್ಲಿರುವ ಭಾರತದ ರಾಯಭಾರಿ ಮಿ|| ಆಸಫ್ ಅಲಿಯವರು ಹೇಳಿಕೆ ಇತ್ತಿದ್ದಾರೆ.

ಜೈಪ್ರಕಾಶರಿಗೆ ವೈಸರಾಯರ ಆಹ್ವಾನ

ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ಸೋಷಿಯಲಿಸ್ಟ್ ನಾಯಕರಾದ ಶ್ರೀ|| ಜಯಪ್ರಕಾಶ ನಾರಾಯಣ್ ರವರನ್ನು ಮಾತುಕತೆ ನಡೆಸಲು ಆಹ್ವಾನಿಸಿದ್ದಾರೆಂದು ಗೊತ್ತಾಗಿದೆ. ಕಾಂಗ್ರೆಸ್ ಮತ್ತು ಲೀಗಿನಿಂದ ಹೊರಗಡೆ ಇರುವ ನಾಯಕರುಗಳನ್ನು ವೈಸರಾಯರು ಭೇಟಿಗಾಗಿ ಆಹ್ವಾನಿಸುವರೆಂದೂ ಹೇಳಲಾಗಿದೆ.

ಜಯಚಾಮರಾಜೇಂದ್ರ ಸೊಸೈಟಿ

ಮೈಸೂರು ೬

ಶ್ರೀ ಜಯಚಾಮರಾಜೇಂದ್ರ ಕೋ-ಆಪರೇಟಿವ ಸೊಸೈಟಿಯ ವಾರ್ಷಿಕ ಸಭೆಯು ಇದೇ ೧೩ ನೇ ತಾರೀಖು ಭಾನುವಾರ ಮಧ್ಯಾಹ್ನ ೩ ಗಂಟೆಗೆ ಸಹಕಾರ ಭವನದಲ್ಲಿ ನಡೆಯುವುದು.

ಹಳೇ ಅಗ್ರಹಾರದ ಚಾವಡಿ ಬೀದಿಯಲ್ಲಿರುವ ಶ್ರೀ ಜಾನಕೀರಾಮ ಮಂದಿರದಲ್ಲಿ ಈ ದಿನ ರಾತ್ರಿ ೯ ಗಂಟೆಗೆ ಮಿ|| ಕೆ. ಎಸ್. ವೇಣುಗೋಪಾಲಾಚಾರ್ಯರ ಗಾಯನವು ನಡೆಯುವುದು.

ವಕೀಲರ ಸಂಘ

ರಾಜಧಾನಿಯ ವಕೀಲರುಗಳ ಸಂಘದ ೪೦ ನೇ ವರ್ಷದ ವಾರ್ಷಿಕ ಸಭೆಯು ನಿನ್ನೆ ಸಾಯಂಕಾಲ ನಡೆದು ಮುಂದಿನ ಸಾಲಿಗೆ ಶ್ರೀ ಎಂ. ಲಕ್ಷ್ಮೀನಾರಾಯಣರಾಯರು ಅಧ್ಯಕ್ಷರಾಗಿಯೂ, ಶ್ರೀ ಎಂ. ಆರ್. ನರಸಿಂಹಮೂರ್ತಿಯವರು ಉಪಾಧ್ಯಕ್ಷರಾಗಿಯೂ ಶ್ರೀ ಟಿ. ವಿ. ಕೃಷ್ಣರಾಯರು ಜಂಟಿ ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿದ್ದಾರೆ.

ಸಾಧ್ವಿ

ತಾ|| ೬-೪-೪೭ ಭಾನುವಾರ

ಕರಗಕ್ಕೆ ಅವಕಾಶ

ಕಟ್ಟ ಕಡೆಗೆ ಸರ್ಕಾರದವರು ಬೆಂಗಳೂರು ನಗರದಲ್ಲಿ ನಿನ್ನೆ ನಡೆಯಬೇಕಾಗಿದ್ದ ಧರ್ಮರಾಯನ ಕರಗದ ಉತ್ಸವಕ್ಕೆ ಅವಕಾಶ ಕೊಟ್ಟರು. ಕೋಮುವಾರು ಘರ್ಷಣೆಯಿಂದ ಕಲಕಿರುವ ಅಲ್ಲಿನ ವಾತಾವರಣದಲ್ಲಿ ಇದು ಮಹಾಜನರಿಗೆ ತೃಪ್ತಿಯನ್ನಾಗಲಿ ಸಮಾಧಾನವನ್ನಾಗಲಿ ಮಾಡದಿರದು

ಅಣ್ಣಮ್ಮನ ಉತ್ಸವದ ಸಂಬಂಧವಾಗಿ ಉದ್ಭವಿಸಿದ ಗಲಭೆಯಿಂದ ಕಳವಳಗೊಂಡು ಸರ್ಕಾರದವರು ಕರಗದ ಉತ್ಸವವನ್ನೂ ಪ್ರತಿಬಂಧಿಸಿದರು ಗಲಭೆಗಳು ಯಾವುದೇ ಕಾರಣಗಳಿಂದ ನಡೆಯಲಿ ಅವುಗಳ ಮೂಲ ಕಾರಣವನ್ನು ನಿವಾರಿಸುವುದು ಸಮಸ್ತ ಶಾಂತಿ ಪಾಲಕರ ಆದ್ಯ ಕರ್ತವ್ಯ ಆದರೆ ಅನೂಚಾನವಾಗಿ ಅನೇಕ ಶತಮಾನಗಳಿಂದಲೂ ನಡೆದು ಬರುವ ಧಾರ್ಮಿಕ ಸಮಾರಂಭಗಳನ್ನು ಕೋಮುವಾರು ಕಾರಣಗಳ ಮೇಲೆ ತಡೆಗಟ್ಟುವುದು ರಾಜನೀತಿ ಲಕ್ಷಣವಲ್ಲ ಹಾಗೆ ಮಾಡುವುದು ಗಲಭೆಯನ್ನು ಹುಟ್ಟಿಸುವ ಅಲ್ಪಸಂಖ್ಯಾತರ ಕೈಗೆ ಶಕ್ತಿ ಕೊಟ್ಟಂತಾಗುವುದು. ಗಲಭೆಯನ್ನು ಅಡಗಿಸಲಾರದ ದೌರ್ಬಲ್ಯ ಅಥವಾ ತಮ್ಮಲ್ಲಿರುವ ಪೊಲೀಸಿನ ಶಕ್ತಿಯು ಸ್ವಲ್ಪವೆಂದು ಭಾವಿಸಲು ಇದರಿಂದ ಅವಕಾಶವಾಗುವುದು ಪುಂಡರು ಎಷ್ಟೇ ಬಲಯುತರಾಗಿದ್ದರೂ ಅವರನ್ನು ಅಡಗಿಸಿ ನ್ಯಾಯವಾಗಿ ನಡೆಯಬೇಕಾದ ಕಾರ್ಯಕ್ರಮಗಳು ನಿರಾತಂಕವಾಗಿ ಜರಗುವಂತೆ ಮಾಡುವುದೇ ಪ್ರಭುತ್ವದವರ ಕರ್ತವ್ಯ

ಈ ಸಾರಿ ಧರ್ಮರಾಯನ ಕರಗದ ಉತ್ಸವವನ್ನು ನಿಲ್ಲಿಸುವುದಾಗಿ ಸರ್ಕಾರದವರು ಮೊದಲು ಮಾಡಿದ್ದ ನಿರ್ಣಯವು ಯಾರಿಗೂ ಸಮ್ಮತವಾಗಿರಲಿಲ್ಲ. ಮುಸಲ್ಮಾನರಿಗೂ ಸಹ ಇದು ಒಪ್ಪಿಗೆಯಾಗಿರಲಿಲ್ಲವೆಂದು ತಿಳಿದು ಬಂದಿದೆ ಕರಗದ ಉತ್ಸವವನ್ನು ತಮ್ಮ ಮಸೀದಿಗೂ ಬರಮಾಡಿಕೊಂಡು ಮರ್ಯಾದೆ ಮಾಡಿ ಕಳುಹಿಸಿ ಬರುವ ಪದ್ಧತಿಯನ್ನು ಮುಸಲ್ಮಾನರು ಅನೇಕ ವರ್ಷಗಳಿಂದಲೂ ಆಚರಣೆಯಲ್ಲಿಟ್ಟುಕೊಂಡಿರುತ್ತಾರೆ ಆದುದರಿಂದ ಈ ಉತ್ಸವ ಸಮಾರಂಭವನ್ನು ನಿಲ್ಲಿಸಲು ಒಪ್ಪದೆ ಹಿಂದೂ ಮತ್ತು ಮುಸಲ್ಮಾನ ಪ್ರಮುಖರು ಅಧಿಕಾರಿಗಳಲ್ಲಿ ಹೋಗಿ ನಿವೇದಿಸಿಕೊಂಡ ಮೇಲೆ ಸರ್ಕಾರದವರು ತಮ್ಮ ಆಜ್ಞೆಯನ್ನು ಮಾರ್ಪಡಿಸಿ, ಉತ್ಸವವು ನೆರವೇರಲು ಅವಕಾಶ ಕೊಟ್ಟಿರುವುದು ಸಮಾಧಾನಕರವಾಗಿದೆ ಈ ಒಂದು ನಿದರ್ಶನದಿಂದ ಹಿಂದೂ ಮತ್ತು ಮುಸಲ್ಮಾನ ಪ್ರತಿನಿಧಿಗಳು ಸರ್ಕಾರದವರ ಕಳವಳವನ್ನು ನಿವಾರಿಸಿದಂತಾಗಿರುವುದು ಸಂತೋಷದ ವಿಷಯವೇ ಸರಿ

ರಾಜಕೀಯ ಯಂತ್ರದ ಮೇಲೆ ಧರ್ಮದ ನಿಗ್ರಹವು ಬಗ್ಗೆ ಅರ್ಹವಾದ ಈ ಸಮಾರಂಭವು ಎಂದಿನಂತೆ ನಡೆದಿರುವುದಕ್ಕಾಗಿ ಎಲ್ಲರೂ ಸಂತೋಷ ಪಡಬೇಕಾಗಿದೆ ಮುಂದೆಯೂ ಸಹ ಅಲ್ಪಸಂಖ್ಯಾತರಿಗೆ ಕಿರುಕುಳ ಸಾರ್ವಜನಿಕ ಸಮಾರಂಭಗಳಿಗೆ ಭಂಗ ತರುವ ಕೋಮುವಾರು ಮನೋಭಾವ ಪ್ರವೃತ್ತಿಗಳು ಸಹಜವಾಗಿ ಮಾನವನ ಎಲ್ಲ ವ್ಯವಹಾರಗಳಲ್ಲಿಯೂ ಧರ್ಮಾಕ್ಕೆ

ಕತ್ತಿಯಿಂದ ಪಾಕೀಸ್ಥಾನ ದೊರೆಯುವುದಿಲ್ಲ

ಪಾಕಿಸ್ಥಾನವನ್ನು ಕತ್ತಿಯಿಂದ ಪಡೆಯಲು ಸಾಧ್ಯವಿಲ್ಲ ಕಾಂಗ್ರೆಸ್ಸು ಪಂಜಾಬಿನ ವಿಭಜನೆ ನಿರ್ಮಾಣಕ್ಕೆ ಒಪ್ಪುವುದಾಗಿ ಈಗಾಗಲೇ ತಿಳಿಸಿದೆ ಅದನ್ನು ಬಿಟ್ಟು ಈ ಬೆದರಿಕೆ ಮಾರ್ಗದಿಂದ ತಮ್ಮ ಹಠ ಸಾಧಿಸುವುದಾಗಿ ಲೀಗಿನವರು ತಿಳಿದಿದ್ದರೆ ಅದು ಬರಿಯ ಭ್ರಾಂತಿಯೇ ಸರಿ ಪಾಕಿಸ್ಥಾನವು ಫಲದಾಯಕವಾಗಿಯೂ ಹುಡುಗಾಟಿಕೆ ಸರಕಾರ. ಆದೊಂದು ಹಗಲುಗನಸು ಎಂದು ಸ|| ಪಟೇಲರು ಅಹಮದಾಬಾದಿನಲ್ಲಿ ಮಾಡಿದ ಭಾಷಣದಲ್ಲಿ ಹೇಳಿರುವರು

ಎರಡನೇ ಗಂಡನ ಮರಣ ಮೊದಲನೇ ಗಂಡನ ಭೇಟಿ

ಜರ್ಮನಿಯ ಕೈಲ್ ಎಂಬಲ್ಲಿನ ಒಬ್ಬಾಕೆ ತನ್ನ ಎರಡನೇ ಗಂಡನು ಕಳೆದ ಯುದ್ಧದಲ್ಲಿ ಮಡಿದನೆಂಬ ಸುದ್ದಿ ಕೇಳಿ ಚಿಂತಾಕ್ರಾಂತಳಾಗಿದ್ದಾಗ, ಒಬ್ಬಾತನು ಸಂತೋಷಭರಿತನಾಗಿ ಆಕೆಯನ್ನು ಚುಂಬಿಸಿದನು. ಇವನು ಆಕೆಯ ಮೊದಲನೇ ಗಂಡನೆಂದೂ ೧೯೧೪ರ ಯುದ್ಧದಲ್ಲಿ ಪತ್ತೆಯಿಲ್ಲದವನಾಗಿದ್ದನೆಂದೂ ಅನಂತರ ತಿಳಿದು ಬಂದಿತು ಮೊದಲನೇ ಗಂಡನೇ ಸಿಕ್ಕಿದಾಗ ಉಂಟಾದ ಅವಳ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು

ಕ್ರಾಂತಿ ಯುಗ

ಮೈಸೂರು ಉಜ್ವಲ ಸಾಹಿತ್ಯ ಭಂಡಾರದವರು ಹೊರಡಿಸುತ್ತಿರುವ ಮಹಜೀವ ದೇಶಾಯಿ ಪುಸ್ತಕ ಮಾಲೆಯ ಎರಡನೇ ಪುಷ್ಪವಾದ "ಕ್ರಾಂತಿಯುಗ" ಎಂಬ ಈ ಪುಸ್ತಕವು ಈಗ ತಾನೇ ಹೊರಬಿದ್ದಿದೆ ಶ್ರೀ ಚನ್ನಗಿರಿ ರಾಮಚಂದ್ರರಾಯರೇ ಇದರ ಲೇಖಕರು ಬೆಲೆ ಒಂದೂಕಾಲು ರೂ

ಕಾಂಗ್ರೆಸ್ ಸಮತಾವಾದಿ ಪಕ್ಷದ ಆಚಾರ್ಯ, ಶಾಯ, ರಂಗ, ಇಂದಿನ ಧೋರಣೆ ಇವುಗಳನ್ನು ಇದರಲ್ಲಿ ವಿವರಿಸಲಾಗಿದೆ ಭಾರತವು ಸ್ವಾತಂತ್ರ್ಯದ ಅಂತಿಮಘಟ್ಟದಲ್ಲಿರುವಾಗ ಇಂದಿನ ತರುಣರೆಲ್ಲಾ ಇಂತಹ ಕ್ರಾಂತಿ ಚಿಂತನೆಗಳನ್ನು ಓದಿ ಗ್ರಹಿಸಬೇಕಾದ ವಿಷಯಗಳು ಬೇಕಾದಷ್ಟಿವೆ

ವಿಜಯವುಂಟಾಗಿ ಲೋಕ ಕಲ್ಯಾಣವಾಗಲು ಈ ಮಹೋತ್ಸವದ ಯಶಸ್ಸೇ ಪ್ರೇರಕವಾಗಲೆಂದು ಹಾರೈಸೋಣ

ರಾಜಕಮಲ್

೬-೪-೪೭ ರಿಂದ ಅಮೋಘ ವಾದ ಒಂದನೇ ವಾರ

ಶ್ರೀ ಕೃಷ್ಣಲೀಲಾ

(ಕನ್ನಡದಲ್ಲಿ)

ಮೈಸೂರಿನಲ್ಲಿ ತಯಾರಿಸಿ, ಮಹಾಜನಗಳ ಮನ್ನಣೆಗೆ ಪಾತ್ರವಾಗಿರುವ ಈ ಪುರಾಣ ವೈಭವದ ಚಿತ್ರವನ್ನು ನೋಡಲು ತಪ್ಪದೇಡಿ

ಜಿಲ್ಲಾ ಬೋರ್ಡ್ ಚುನಾವಣೆ

೨೮-೪-೪೭ ನೇ ಸೋಮವಾರ ನಂಜನಗೂಡು ತಾಲ್ಲೂಕಿನ ಈ ಕೆಳಗಿನಂತೆ ಕಾಂಗ್ರೆಸ್ ಉಮೇದುವಾರರಿಗೆ

- ಪದವಿಟ್ಟು ಓಟು ಕೊಡಿ :-

ಪಟೇಲ್ ಲಿಂಗಪ್ಪ (ಹನಿಯಂಬಳ್ಳಿ)

ಪಟೇಲ್ ಎಂ. ನಾಗಪ್ಪ (ಹುಲ್ಲಳ್ಳಿ)

ಎಂ ... (ಚಿಕ್ಕನ್)

ರಾಜ್ಯಾಂಗ ಸಭೆಗೆ ರೀವಾ ಸಂಸ್ಥಾನದಿಂದ ಆಯ್ಕೆ

ರೀವಾ ಸಂಸ್ಥಾನದಿಂದ ಭಾರತ ರಾಜ್ಯಾಂಗ ಸಭೆಗೆ ಎರಡು ಸ್ಥಾನಗಳು ದೊರಕಿವೆ ಒಂದನ್ನು ಅಲ್ಲಿನ ರಾಜರೇ ಆರಿಸುವರು ಮತ್ತೊಂದನ್ನು ಪ್ರಜೆಗಳು ಆರಿಸಬೇಕೆಂದು ಸೂಚಿಸಲಾಗಿದೆ ಆದರೆ ಅಲ್ಲಿ ಶಾಸನಸಭೆಯಿಲ್ಲದಿರುವುದರಿಂದ ಅಲ್ಲಿನ ೭೧ ಗ್ರಾಮಪಂಚಾಯಿತಿಗಳ ನಾಯಕರೂ, ೩ ಪುರಸಭೆಗಳಲ್ಲಿರುವ ೪೦ ಮಂದಿ ಸದಸ್ಯರೂ ಸಭೆ ಸೇರಿ ಒಬ್ಬರನ್ನು ಚುನಾಯಿಸಲು ಏರ್ಪಾಡುಮಾಡಲಾಗಿದೆ. ಚುನಾವಣೆಯಲ್ಲಿ ಎಲ್ಲ ಪ್ರಜೆಗಳ ಪ್ರಾತಿನಿಧ್ಯ ದೊರೆಯುವ ಸಲುವಾಗಿ ಎಲ್ಲ ರಾಜಕೀಯ ಪೈದಿಗಳನ್ನೂ ಬಿಡುಗಡೆ ಮಾಡಲಾಗಿದೆ

ಮೇ ತಿಂಗಳಲ್ಲಿ ಕಾಂಗ್ರೆಸ್ ಲೀಗ್ ಸಂಧಾನ

ಭಾರತದಲ್ಲಿ ಶಾಂತಿ ಸ್ಥಾಪಿಸಲು ಹೊಸ ವೈಸರಾಯರು ಕೈಗೊಳ್ಳುವ ಕಾರ್ಯಕ್ರಮಗಳು ಏಪ್ರಿಲ್ ೧೧ ರಿಂದ ಪ್ರಾರಂಭವಾಗುವುವು ಕಾಂಗ್ರೆಸ್ ಮತ್ತು ಲೀಗುಗಳು ಒಂದು ಒಪ್ಪಂದಕ್ಕೆ ಇದೇ ಮೇ ತಿಂಗಳಲ್ಲಿ ಬರುವುವು ಇದರ ಫಲವಾಗಿ ಪ್ರಾಂತ್ಯಗಳಲ್ಲಿ ಬಲವಾದ ಮಂತ್ರಿ ಮಂಡಲಗಳ ರಚನೆಯಾಗುವುದು ಪ್ರಮುಖ ಸಂಸ್ಥಾನಗಳಾದ ಹೈದರಾಬಾದ್ ಮತ್ತು ಮೈಸೂರು ಸಂಸ್ಥಾನಗಳು ಈ ಎಲ್ಲಾ ಬದಲಾವಣೆಗಳ ಪ್ರಭಾವದಿಂದ ರಾಜ್ಯಾಂಗ ಸಭೆಗೆ ಸೇರಿ ಕೇಂದ್ರ ಸರ್ಕಾರದೊಡನೆ ಒಪ್ಪಂದಕ್ಕೆ ಬರುತ್ತವೆ - ಎಂಬುದಾಗಿ ಎರ್ರಂಪಳ್ಳಿಯ ಪ್ರಮುಖ ಜ್ಯೋತಿಷ್ಯರಾದ ಶ್ರೀ ಎಂ ವಿ ರಾಮಲಿಂಗ ಶಾಸ್ತ್ರಿಗಳು ಭವಿಷ್ಯ ನುಡಿದಿದ್ದಾರೆ.

RAJKAMAL, MYSORE

Morning Shows from 4-4-47 for 4 Days

Daily at 10-30 a m

PRISONERS OF ZENDA

The most romantic adventure Story of all times

Starring:- Ronald Colman, Madelene Carroll, Douglas Fairbanks Jr, Mary Astor Etc

ನಾಯಿಕೆಮ್ಮಿನ ಔಷಧಿ

7-8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರ್ಲು—ಉಬ್ಬಸಕ್ಕೆ

(Asthma)

ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ.

ಅ(Appendicitis) ಗ ಲ್ಯಾಂಡ್ ಮತ್ತು (Tonsils) ಗಳಾಯಿಲೆ ಅವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ.

ಖುದ್ದು ಬಂದು ನೋಡಿ

ಗುಂಡ್ಲುಪೇಟೆ ಆರ್ ಎಸ್ ಪಂಡಿತರು, ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂರು

Edited, printed and published by ... D... Mysore

ಅಪಾರ ಐಶ್ವರ್ಯದ ಶೇಖರಣೆ ಬಗ್ಗೆ ವಿಚಾರ

೧೯೩೯ ನೇ ಆಗಸ್ಟಿನಿಂದೀಚೆಗೆ ... ವಾದ ಆಸ್ತಿ ಪಾಸ್ತಿಗಳನ್ನು ಶೇ... ಸಂದರ್ಭಗಳನ್ನು ತನಿಖೆ ಮಾಡಲು ... ದ್ರ ಸರ್ಕಾರವು ಒಂದು ಸಮಿತಿಯ ... ಚಿಸುವುದೆಂದು ಗೊತ್ತಾಗಿದೆ. ರೀತಿ ಈ ಆಸ್ತಿಗಳು ಬಂದುವು, ... ಗಳೇನು, ವರಮಾನದ ಮಾರ್ಗಗಳ ... ಇವುಗಳನ್ನು ಈ ಸಮಿತಿಯು ತನಿಖೆ ... ದುವುದೆಂದು ಹೇಳಲಾಗಿದೆ

ಬಲಾತ್ಕಾರ ವಿವಾಹಗಳು

ಪೂರ್ವ ಬಂಗಾಳದ ತಿಪ್ಪೇರಾ, ನೌಖಾಲಿ ಜಿಲ್ಲೆಗಳಲ್ಲಿ ಗಲಭೆ ಕಾಲದಲ್ಲಿ ನಡೆದ ಬಲಾತ್ಕಾರದ ವಿವಾಹಗಳನ್ನು ಗೂಳಿಸುವ ಕೌನ್ಸಿಲ್ ಆಫ್ ಸ್ಟೇಟ್ಸ್ ನಲ್ಲಿ ಮಸೂದೆಯನ್ನು ಶ್ರೀ ಪಿ... ಮಾರ ರಾಯರು ಮಂಡಿಸಲಿದ್ದಾರೆ. ಸ್ವಾತಂತ್ರ್ಯ ಮತಾಂತರ ಹೊಂದಿದವರಿಗೆ ದೂ ಧರ್ಮ ಶಾಸ್ತ್ರದ ರೀತಿಯಾ ... ಪಾಸ್ತಿಗಳ ಹಕ್ಕನ್ನು ಉಳಿಸುವ ಸಲು ... ಈ ಮಸೂದೆಯನ್ನು ಮಂಡಿಸಲಾಗು ...

ರಿಪಬ್ಲಿಕ್ ಮತ್ತು ರಾಜತ್ವ ಮೇಲೆ ಚರ್ಚೆ

ಮದ್ರಾಸಿನ ಶಾಸನ ಸಭೆಯಲ್ಲಿ, ನಾಡುತ, ರಾಜತ್ವವೇ ಉತ್ತಮವಾ ... ಕಾರವೆಂದು ಸರ್ ಎ. ಲಕ್ಷ್ಮಣಸ್ವಾ ... ಮೊದಲಿಯಾರರು ತಿಳಿಸಿರುವರು ... ತ್ವವನ್ನು ರದ್ದು ಮಾಡಬೇಕೆಂಬು ... ಕಾರದ ಅಭಿಲಾಷೆಯಲ್ಲವೆಂದೂ ಅದ ... ಲ್ಲೇ ಆದ್ರ, ರುಮೇನಿಯಾಗಳಂತೆ ... ಕಡೆಗಳಿಂದ ರಾಜರನ್ನು ಓಡಿಸುವ ... ವ ನೀತಿಯನ್ನು ಅನುಸರಿಸಬಾರದ ... ಗ್ರಹ ಪಟವಾದ ಡಾ|| ಸುಬ್ಬರಾಯ ... ರು ಹೇಳಿದರು. ಭಾರತದಲ್ಲಿ ಕೇ ... ಕಾರವು ರಿಪಬ್ಲಿಕ್ಕಾಗಿಯೇ ಇರಲಿ ... ದೂ, ರಾಜತ್ವವಿರುವ ಇತರ ಭಾಗ ... ದಾತ್ತ ಅದು ಮುಂದುವರಿಯಬಹು ... ದೂ ಅವರು ಅಭಿಪ್ರಾಯಪಟ್ಟರು

ಶ್ರೀ ರಾಮೋತ್ಸವ ಕಾರ್ಯಕ್ರಮ ಮೈಸೂರು

ಚಾಮುಂಡಿಪುರಂವಿನ ಮೈಸೂರು ರೋಡಿನಲ್ಲಿರುವ ಬಾಲಕರ ಶ್ರೀರಾಮ ... ದಿರದಲ್ಲಿ ಈ ದಿನ ರಾತ್ರಿ ೮ ಗಂಟೆಗೆ ಸುಂದರಮೂರ್ತಿಯವರ ಕೊಳಲು ... ವನ್ನು ಏರ್ಪಡಿಸಲಾಗಿದೆ

ದೇವೀರಮ್ಮಣ್ಣಿ ಅಗ್ರಹಾರದ ಶ್ರೀ ... ಮ ಸೇವಾ ಸಂಘದಲ್ಲಿ ನಾಳೆ ರಾತ್ರಿ ... ಟೆಗೆ ಶ್ರೀ ವಿಠಲ್ ಸುಬ್ಬರಾಯರಿಂದ ಕೃಷ್ಣಗಾರುಡಿ ಎಂಬ ಹರಿಕಥೆಯು ... ಯುವುದು

ಗರ್ಭ ರಕ್ಷಿಣಿ

ಅನೇಕರು ಅನುಭವ ಸಿದ್ಧವಾದ ಔಷದಿ

ಇದರಿಂದ ಗರ್ಭದಲ್ಲಿರುವ ಪಿಂಡ ದೃಢವಾಗಿ ಬೆಳೆದು ಗರ್ಭಸ್ರಾವವನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾ ... ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು

ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ ವಿ ವೆಂಕಟರಾಮಾ ... ಡಿ|| ಬೋರ್ಡ್ ವೈದ್ಯ, ಅರಕಲವಾಡಿ ಚಾಮರಾಜನಗರ ತಾ||

ರಿ|| ನಂ. 397 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೭—೪—೪೭ [ಸಂಚಿಕೆ ೩೫

ಇಂಡೊನೇಷ್ಯಾವಿಗೆ ಭಾರತದ ಅಂಗೀಕಾರ

ಕಡೆಯ ಸೇನಾಪತಿ

ವೈಸರಾಯರಾದ ಲಾರ್ಡ್ ಮೌಂಟ್‌ಬ್ಯಾಟನ್ನರು ಭಾರತದ ಕಡೆಯ ವೈಸರಾಯರಂತೆಯೇ ಲಾರ್ಡ್ ಆಕಿನ್‌ಲೆಕ್ಕರೂ ಭಾರತದ ಕೊನೆಯ ಸೈನ್ಯಾಧಿಕಾರಿಗಳೆನ್ನಿಸುವರೆಂದೂ ಅಲ್ಲಿಂದ ಮುಂದೆ ಮುಖ್ಯ ಸೈನ್ಯಾಧಿಕಾರಿಯ ಹುದ್ದೆಯನ್ನು ರದ್ದುಪಡಿಸಿ ಆ ಸ್ಥಾನದಲ್ಲಿ ಭಾರತೀಯರೊಬ್ಬರನ್ನು ಸೇನಾನಾಯಕರನ್ನಾಗಿ ನೇಮಿಸಲಾಗುವುದೆಂದೂ ದೆಹಲಿಯ ಪತ್ರಿಕೆಯೊಂದು ಪ್ರಕಟಿಸಿರುವುದೆಂದು ವರದಿಯಾಗಿದೆ.

ಜಮಖಂಡಿಯಲ್ಲೂ ಸುಧಾರಣೆ

ಬ್ರಿಟಿಷರು ಭಾರತವನ್ನು ೧೯೪೮ರ ಜೂನಿನಲ್ಲಿ ಬಿಟ್ಟು ಹೊರಟು ಹೋಗುವ ನಿರ್ಧಾರವನ್ನೂ ಪ್ರಜೆಗಳ ಆಶೆ ಆಕಾಂಕ್ಷೆಗಳನ್ನೂ ಗಮನಿಸಿ ಜಮಖಂಡಿ ಸಂಸ್ಥಾನಾಧೀಶರು ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರಲು ನಿಶ್ಚಯಿಸಿ ಘೋಷಣೆಯೊಂದನ್ನು ಹೊರಡಿಸಿದ್ದಾರೆ. ದಿವಾನರನ್ನೂ ಶಾಸನದ ಸಭೆಗೆ ಜವಾಬ್ದಾರರಾದ ಇಬ್ಬರು ಮಂತ್ರಿಗಳನ್ನೂ ಒಳಗೊಂಡ ಸಚಿವ ಮಂಡಲಿಯನ್ನೂ ಅಲ್ಲಿ ರಚಿಸಲಾಗುವುದು. ಶಾಸನ ಸಭೆಯಲ್ಲಿರುವ ನಾಮಕರಣ ಸದಸ್ಯಸ್ಥಾನಗಳನ್ನು ವಜಾ ಮಾಡುವುದಲ್ಲದೆ ಸಭೆಯು ತನ್ನ ಅಧ್ಯಕ್ಷರನ್ನು ಚುನಾಯಿಸಿಕೊಳ್ಳಲು ಅಧಿಕಾರ ಕೊಡಲಾಗುವುದು.

ಶಾಸನ ಸಭೆಯಲ್ಲಿ ಗೂಬೆ!

ಒರಿಸ್ಸಾ ಶಾಸನ ಸಭೆಯಲ್ಲಿ ಬಜೆಟ್ಟಿನ ಚರ್ಚೆ ನಡೆಯುತ್ತಿದ್ದಾಗ ಅಲ್ಲಿಗೆ ಒಂದು ಗೂಬೆಯು ಪ್ರವೇಶಿಸಿ ಸಭೆಯ ಶಾಂತತೆಯನ್ನು ಕಲಕಿತು. ಗೂಬೆಯ ಪ್ರವೇಶವು ಶುಭ ಸೂಚಕವೇ, ಅಶುಭವೇ ಎಂಬ ಚರ್ಚೆಯು ಸಭೆಯ ಸದಸ್ಯರಲ್ಲಿ ಬಿರುಸಾಗಿ ನಡೆಯಲು ಆರಂಭವಾಯಿತು. ಹಣಕಾಸಿನ ಸಚಿವರಾದ ಶ್ರೀ|| ನಬಾ ಕೃಷ್ಣ ಚೌಧುರಿಯವರು ಅದನ್ನು ಅಟ್ಟಿಸಿಕೊಂಡು ಹೋಗಿ ಹಿಡಿದುಕೊಂಡರು. ಗೂಬೆಯು ಲಕ್ಷ್ಮಿಯ ವಾಹನವೆಂದೂ, ಅದರ ಪ್ರವೇಶವು ಮಂಗಳಕರವೆಂದೂ ಹೇಳಿ ಕಾಂಗ್ರೆಸ್ ಸದಸ್ಯರು ಕಾರ್ಯಕಲಾಪಗಳನ್ನು ಮುಂದುವರಿಸಿದರು.

ಮಲ್ಲೇಶ್ವರದ ಪ್ರಕರಣದ ವಿವರ

[ಸ್ವಂ.ಸು.ಫೋ] ಬೆಂಗಳೂರು ೭

ಮಲ್ಲೇಶ್ವರದ ಬಳಿ ಮೊನ್ನೆ ರಾತ್ರಿ ನಡೆದ ಪ್ರಕರಣದ ಬಗ್ಗೆ ಚೀಫ್ ಸೆಕ್ರೆಟರಿಯವರು ಪತ್ರಿಕಾ ಪ್ರಕಟಣೆಯೊಂದನ್ನು ನಿನ್ನೆ ಹೊರಡಿಸಿದ್ದಾರೆ. ಅದರ ವಿವರ ಈ ರೀತಿ ಇದೆ:—

೪ನೇ ತಾ|| ಶುಕ್ರವಾರ ಮಲ್ಲೇಶ್ವರದ ಕಾಲೊನಿ ಬಳಿ ಕೂಲಿಗಾರರ ಗುಂಪೊಂದು ... ವರ ಮನೆಯನ್ನು ಮುತ್ತಿತು. ಇದನ್ನು ಪೋಲೀಸರು ತಡೆಗಟ್ಟಿದರು. ಅನಂತರ ಮತ್ತೆ ಈ ರೀತಿ ಮುತ್ತಿಗೆ ನಡೆದಾಗ ಮನೆಯೊಳಗಿಂದ ಒಬ್ಬರು ಗುಂಪಿನ ಮೇಲೆ ಗುಂಡು ಹಾರಿಸಿದರೆಂದೂ, ಅದರ ಪರಿಣಾಮವಾಗಿ ಒಬ್ಬ ಯುವಕನು ಸತ್ತನೆಂದೂ ವರದಿಯಾಗಿದೆ. ಆ ಪ್ರದೇಶದಲ್ಲಿ ಹೆಚ್ಚಾದ ಪೋಲೀಸ್ ಮತ್ತು ಮಿಲಿಟರಿ ಕಾವಲನ್ನು ಇಡಲಾಗಿದೆ. ಈ ಸಂಬಂಧದಲ್ಲಿ, ಶಾಂತಿಭಂಗ ತರುವ ಕಾರ್ಯಗಳಿಗೆ ಉತ್ತೇಜನ ಕೊಡುತ್ತಿರುವರೆಂಬ ಗುಮಾನಿಯ ಮೇಲೆ ಹಲವಾರು ದಸ್ತಗಿರಿಗಳನ್ನು ಮಾಡಲಾಗಿದೆ.

ನ್ಯಾಯ ಇಲಾಖೆಯಲ್ಲಿ ವರ್ಗಾವರ್ಗಿ

[ಸ್ವಂ. ಸು] [ಬೆಂಗಳೂರು ೭.

ಈ ಕೆಳಗೆ ಕಂಡಂತೆ ನ್ಯಾಯ ಇಲಾಖೆಯಲ್ಲಿ ವರ್ಗಾವರ್ಗಿಗಳು ನಡೆದಿವೆ:—

ಶ್ರೀಗಳಾದ ಎಂ. ಎಸ್. ಕೃಷ್ಣಮೂರ್ತಿಯವರನ್ನು ದಾವಣಗೆರೆ ಮುನಸೀಫರಾಗಿಯೂ, ಹೆಚ್. ಸಿ. ವಿಶ್ವನಾಥರವರನ್ನು ಹುಣಸೂರ್ ಮುನಸೀಫ್ ಮ್ಯಾಜಿಸ್ಟ್ರೇಟರನ್ನಾಗಿಯೂ, ಡಿ. ಆರ್. ನರಸಿಂಹರಾಯರನ್ನು ಕ್ಲೋಸ್‌ಪೇಟೆ ಆ|| ಮು|| ರಾಗಿಯೂ, ಡಿ. ರಾಮಸ್ವಾಮಿ ಅಯ್ಯಂಗಾರ್ಯರನ್ನು ಕ್ಲೋಸ್‌ಪೇಟೆ ಸ್ಪೆ|| ಫ|| ಮ್ಯಾ|| ರಾಗಿಯೂ, ಪಿ. ನರಸಿಂಹಮೂರ್ತಿಯವರನ್ನು ಕ್ಲೋಸ್‌ಪೇಟೆ ಮು|| ರಾಗಿಯೂ, ಎಂ. ಸದಾಶಿವಯ್ಯನವರನ್ನು ಮೈಸೂರಿನ ಮೊದಲನೇ ಮುನ್ಸೀಫರಾಗಿಯೂ, ಬಿ. ಸುಬ್ಬಯ್ಯನವರನ್ನು ತುಮಕೂರಿನ ಎರಡನೇ ಮ್ಯಾ|| ರಾಗಿಯೂ, ಸಿ. ಅಬ್ದುಲ್ ಬಾಸೀದ್‌ರವರನ್ನು ಶಿವಮೊಗ್ಗ ಸ್ಪೆ|| ಫ|| ಮ್ಯಾಜಿಸ್ಟ್ರೇಟರಾಗಿಯೂ, ಹೆಚ್. ಸಂಜೀವಲುರವರನ್ನು ಮಧುಗಿರಿ ಮುನಸೀಫರನ್ನಾಗಿಯೂ, ಸಿ. ರಾಮಸ್ವಾಮಿಯವರನ್ನು ಹಾಸನಕ್ಕೂ, ಎ. ಎಸ್. ರಾಮಚಂದ್ರರಾಯರನ್ನು ಶಿವಮೊಗ್ಗೆಗೂ, ಎಸ್. ವಿ. ರಂಗರಾವ್‌ರವರನ್ನು ಶ್ರೀರಂಗಪಟ್ಟಣಕ್ಕೂ, ಟಿ. ಶಿವಪ್ಪ ಸ್ವರಾಜೇ ಅರಸರನ್ನು ಕೋಲಾರಕ್ಕೂ ಮುನಸೀಫರುಗಳನ್ನಾಗಿಯೂ, ಎ. ಸ್. ಗೋವಿಂದ ಶರ್ಮರನ್ನು ಬೆಂಗಳೂರು ಎರಡನೇ ಮುನಸೀಫರನ್ನಾಗಿಯೂ, ಎ. ಎಲ್. ರಂಗನಾಥ್‌ರವರನ್ನು ಸಾಗರದ ಮತ್ತು ಎ. ಎ. ಮಜೀದರನ್ನು ತಿಪಟೂರು ಸ್ಪೆ|| ಫ|| ಮ್ಯಾಜಿಸ್ಟ್ರೇಟರನ್ನಾಗಿ ವರ್ಗಾಯಿಸಲಾಗಿದೆ.

ಜೈನಹಳ್ಳಿಯ ಕೊರತೆಗಳು

ಕೃಷ್ಣರಾಜಪೇಟೆ ತಾ|| ಅಕ್ಕಿಹೆಬ್ಬಾಳು ಜೈನಹಳ್ಳಿ ಗ್ರಾಮದ ಕೆಲವು ಕೊರತೆಗಳನ್ನು ಅಧಿಕಾರಿಗಳ ಗಮನಕ್ಕೆ ಅನೇಕ ಬಾರಿ ತಂದರೂ ಪರಿಹಾರ ದೊರೆತಿಲ್ಲ. ಕುಡಿಯುವ ನೀರಿಲ್ಲದೆ ಜನರು ಸಂಕಟಪಡುತ್ತಿದ್ದಾರೆ. ಶ್ರೀ|| ತಿಮ್ಮೇಗೌಡರು ಕಟ್ಟಿಸಿರುವ ಬಾವಿಯನ್ನು ಸರ್ಕಾರಕ್ಕೆ ಕೊಡಲು ಅವರು ಸಿದ್ಧರಿದ್ದಾರೆ. ವಾರಕ್ಕೊಂದಾವರ್ತಿ ಅಕ್ಕಿಹೆಬ್ಬಾಳು ಡಾಕ್ಟರು ಬಂದು ಹೋಗಲು ವ್ಯವಸ್ಥೆಯಾಗಬೇಕಾಗಿದೆ. ಅಧಿಕಾರಿಗಳು ಇಲ್ಲಿನ ಕೊರತೆಗಳನ್ನು ನೀಗಿಸಬೇಕೆಂದು, ಕೋಡಿಹಳ್ಳಿ ಶ್ರೀ ಪಿ. ವೆಂಕಟಸುಬ್ಬಯ್ಯನವರು ಪ್ರಾರ್ಥಿಸಿದ್ದಾರೆ.

(ಹಿಂದಿನ ಪುಟದಿಂದ ಮುಂದುವರಿದುದು)

೧೩ ಖರ್ಚು, ಅಶಾಂತಿ

ಕನ್ಯಾ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ. ಖರ್ಚು ಅಧಿಕ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗಾದಿಗಳಲ್ಲಿ ಶತ್ರುಗಳಿಂದ ತೊಂದರೆ ಹೆಚ್ಚು, ಅಧಿಕಾರಿಗಳಿಂದ ತಿರಸ್ಕಾರ, ಬಂಧು ಜನರಿಂದ ಅವಮಾನ, ಮಂಗಳ ಕಾರ್ಯಗಳಿಗಾಗಿ ವಿಶೇಷ ಪ್ರವಾಸ, ತಾ|| ೧೧, ೧೩, ಲಾಭ, ಶಾಂತಿ.

ತುಲಾ—ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ಖರ್ಚು ಕಡಿಮೆ, ಉದ್ಯೋಗ, ವ್ಯಾಪಾರಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಸನ್ಮಾನ, ವ್ಯಾಪಾರದಲ್ಲಿ ಅಧಿಕ ಲಾಭ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಬಂಧುಗಳಿಂದ ಸನ್ಮಾನ, ತಾ|| ೧೦, ೧೩ ಲಾಭ, ಶಾಂತಿ, ಪ್ರವಾಸ.

ವೃಶ್ಚಿಕ—ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಉತ್ತಮ, ವ್ಯಾಪಾರದಲ್ಲಿ ಪ್ರಗತಿ, ಮಂಗಳ ಕಾರ್ಯಗಳಿಗಾಗಿ ಖರ್ಚು, ಪ್ರವಾಸದಿಂದ ಸಂತೋಷ, ಧಾರ್ಮಿಕ ಕಾರ್ಯಗಳಿಗಾಗಿ ಧನ ವ್ಯಯ, ತಾ|| ೧೦, ೧೨, ೧೩ ಚಿಂತೆ ಬಂಧು ದರ್ಶನ.

ಧನುಸ್ಸು—ಆರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಹೆಚ್ಚು, ಧನಲಾಭ ಕಡಿಮೆ, ಶತ್ರುಗಳಿಂದ ತೊಂದರೆ, ಕಾರ್ಯಗಳಿಗೆ ಅಡಚಣೆ, ಮಿತ್ರರಿಂದ ತಿರಸ್ಕಾರ, ಗೃಹದಲ್ಲಿ ಅಶಾಂತಿ, ಯತ್ನಿಸಿದ ಕಾರ್ಯಗಳಲ್ಲೆಲ್ಲಾ ಸೋಲು, ತಾ|| ೮, ೯, ೧೧ ಸಾಧಾರಣ ಶಾಂತಿ.

ಮಕರ—ಆರೋಗ್ಯ ಸಾಧಾರಣ, ಕೌಟುಂಬಿಕ ಖರ್ಚು ಅಧಿಕ, ಧನಲಾಭ ಕಡಿಮೆ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ. ಧಾರ್ಮಿಕ ಕಾರ್ಯಗಳಿಗಾಗಿ ವಿಶೇಷ ಖರ್ಚು, ರಾಜಕೀಯ ಗೊಂದಲಗಳಿಂದ ಅಶಾಂತಿ, ತಾ|| ೯, ೧೨, ೧೩ ಪ್ರವಾಸ, ಖರ್ಚು.

ಕುಂಭ—ಆರೋಗ್ಯ ಉತ್ತಮ, ಧನಲಾಭ ಕಡಿಮೆ, ಖರ್ಚು ಅಧಿಕ, ವ್ಯಾಪಾರ, ವ್ಯವಹಾರಗಳಲ್ಲಿ ನಷ್ಟ, ಅಧಿಕಾರಿ ವರ್ಗದವರಿಂದಲೂ, ಮಿತ್ರರಿಂದಲೂ ತಿರಸ್ಕಾರ, ತಾ|| ೮, ೯ ಲಾಭ, ಶಾಂತಿ.

ಮೀನ—ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಉತ್ತಮ, ಖರ್ಚು ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಮನ್ನಣೆ, ಮಂಗಳ ಕಾರ್ಯಗಳಿಗಾಗಿ ಖರ್ಚು, ತಾ|| ೮, ೧೧ ಲಾಭ, ಪ್ರವಾಸ.

ಶಾಂತಿ ಸ್ಥಾಪನೆಗೆ ಪೂರ್ಣ ಜವಾಬ್ದಾರಿ ಸರ್ಕಾರ ಅಗತ್ಯ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯ

[ಸ್ವಂ.ಸು ಫೋ] ಬೆಂಗಳೂರು ೭

ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ನಿನ್ನೆ ಮತ್ತು ಮೊನ್ನೆ ಶ್ರೀ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿತು. ಸತ್ಯಾಗ್ರಹ ನಿರ್ಣಯವನ್ನು ಕಾರ್ಯರೂಪಕ್ಕೆ ತರುವ ವಿಧಾನವನ್ನು ಪರಿಶೀಲಿಸಲಾಯಿತು.

ಸಮಿತಿಯು ಕೋಲಾರದ ಗಲಭೆಯ ವಿಚಾರದಲ್ಲಿ ದೀರ್ಘವಾದ ನಿರ್ಣಯವೊಂದನ್ನು ಅಂಗೀಕರಿಸಿದೆ. ಮಹಾಜನರು ಶಾಂತಿಯಿಂದಲೂ, ಸಮಾಧಾನದಿಂದಲೂ ಇರಬೇಕೆಂದು ಪ್ರಾರ್ಥಿಸಿದೆ. ದೇಶದಲ್ಲಿ ಶಾಂತಿ ಸಮಾಧಾನಗಳು ನೆಲೆಸಬೇಕಾದರೆ ಜವಾಬ್ದಾರಿ ಸರ್ಕಾರ ಜಾರಿಗೆ ಬರಬೇಕೆಂದು ಒತ್ತಾಯಪಡಿಸಲಾಗಿದೆ. ಪ್ರತಿಯೊಬ್ಬರೂ ಶಾಂತಿಯಿಂದಲೂ ಧೈರ್ಯದಿಂದ ಪ್ರವರ್ತಿಸಬೇಕೆಂದು ಪ್ರಾರ್ಥಿಸಲಾಗಿದೆ.

ಸಂಸ್ಥಾನಗಳಲ್ಲಿರುವ ಕಾಂಗ್ರೆಸ್ ಸಂಸ್ಥೆಗಳನ್ನು ಬ್ರಿ|| ಪ್ರಾಂತ್ಯದಲ್ಲಿರುವ ಸಂಸ್ಥೆಗಳಂತೆಯೇ ಸಂಘಟಿಸಿ, ಈಗಿರುವ ವ್ಯವಸ್ಥೆಯನ್ನು ರದ್ದುಪಡಿಸಬೇಕೆಂದು ಅಖಿಲ ಭಾರತ ಕಾಂಗ್ರೆಸ್ಸನ್ನು ಪ್ರಾರ್ಥಿಸುವ ನಿರ್ಣಯವೊಂದನ್ನು ಸಭೆ ಅಂಗೀಕರಿಸಿದೆ.

ಬೆಂಗಳೂರಿನ ಪರಿಸ್ಥಿತಿ ಈಗ ಶಾಂತವಾಗಿದೆ.

ಇಂಡೋನೇಷ್ಯಾ ರಿಪಬ್ಲಿಕ್ಕಿಗೆ ಭಾರತದ ಅಂಗೀಕಾರ

ಇಂಡೋನೇಷಿಯಾದ ಹೊಸ ರಿಪಬ್ಲಿಕ್ ಸರ್ಕಾರವನ್ನು ಅಂಗೀಕರಿಸಿ ಭಾರತ ಸರ್ಕಾರವು ಸದ್ಯದಲ್ಲೇ ಒಂದು ಪ್ರಕಟಣೆಯನ್ನು ಹೊರಡಿಸುವುದೆಂದು ಗೊತ್ತಾಗಿದೆ. ಅಲ್ಲಿನ ಪ್ರಧಾನಿ ಡಾ|| ಶೆಹರಿಯಾರ್ ರವರು ದೆಹಲಿಯಲ್ಲಿ ಪಂ|| ನೆಹರೂ ರವರ ಅತಿಥಿಗಳಾಗಿದ್ದು ಇಂದಿನ ಜಾವಾಕ್ಕೆ ವಾಪಸು ತೆರಳುವರು.

ರಾಮೋತ್ಸವ ಕಾರ್ಯಕ್ರಮ

ಮೈಸೂರು-೭

ಇಂದಿನ ಕೋಟೆ ಶ್ರೀರಾಮ ಮಂದಿರದಲ್ಲಿ ಸಂಜೆ ೬|| ಘಂಟೆಗೆ ಅಗ್ರಹಾರಂ ಟಿ. ಚೌಡಯ್ಯನವರ ಪಿಟೀಲು ಕಛೇರಿಯು ವಿ|| ಮಧುರೆ ಕೃಷ್ಣಸ್ವಾಮಿಯವರ ಮೃದಂಗದೊಡನೆ ಶ್ರೀ ಅಂಬಳೆ ಸುಬ್ರಹ್ಮಣ್ಯಯ್ಯರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ನಾಳೆ ಚಾಮರಾಜ ಬೀದಿಯಲ್ಲಿರುವ ಶ್ರೀ ಪ್ರಸನ್ನ ರಾಮಮಂದಿರದಲ್ಲಿ ರಾತ್ರಿ ೯ ಗಂಟೆಗೆ ವಿ|| ಚಲುವರಾಯಸ್ವಾಮಿ ಮತ್ತು ಇವರ ಕುಮಾರ ಕೃಷ್ಣಮೂರ್ತಿಯವರಿಂದ ವೀಣಾವಾದನವನ್ನೇರ್ಪಡಿಸಿರುತ್ತದೆ.

ರಹದಾರಿ ವಾಪಸು

[ಸ್ವಂ. ವ.] [ಚಾಮರಾಜನಗರ ೫.

ನೆಹರೂ ಸ್ಟೋರ್ಸ್ ಮಾಲೀಕರಾದ ಶ್ರೀ|| ಟಿ. ಆರ್. ನಂಜುಂಡಸ್ವಾಮಿಯವರು ತಮ್ಮ ಬಟ್ಟೆ ಲೈಸೆನ್ಸನ್ನು ಸರ್ಕಾರಕ್ಕೆ ವಾಪಸು ಮಾಡಿದ್ದಾರೆ. ಬಟ್ಟೆ ಸರಿಯಾಗಿ ಸರಬರಾಜಾಗದೆ ಮಹಾಜನರಿಂದ ವೃಥಾ ಮಾತು ಕೇಳುವುದಕ್ಕಿಂತ ಈ ವ್ಯಾಪಾರವೇ ಬೇಡವೆಂದು ಅವರು ಈ ಕಾರ್ಯಕ್ರಮ ಕೈಗೊಂಡರೆಂದು ಹೇಳಲಾಗಿದೆ. ಸಮಾಜ ಸೇವಾ ರಹದಾರಿಗಳ ಪೈಕಿ ಈ ರೀತಿ ವಾಪಸ್ ಮಾಡಿರುವುದರಲ್ಲಿ ಇದೇ ಮೊದಲನೆಯದೆಂದು ತಿಳಿದು ಬಂದಿದೆ.

ಸಾಧ್ವಿ

ತಾ|| ೭-೪-೪೭ ಸೋಮವಾರ

ಇರ್ವಿನ್ ನಾಲಾ ಪ್ರದೇಶಕ್ಕೆ ನೀರು ಸರಬರಾಜು

(ಲೇಖಕರು:- ಶ್ರೀ ಎಸ್ ಕೃಷ್ಣಸ್ವಾಮಿ ರಾವ್, ಬಿ.ಎ., ಎಲ್‌ಎಲ್ ಬಿ, ಅಡ್ವೊಕೇಟ್ ಮತ್ತು ಶಾಸನ ಸಭಾ ಸದಸ್ಯರು)

ಈ ವರ್ಷವೂ ಮತ್ತು ಮುಂದಿನ ವರ್ಷವೂ ಸಹ ಹಿಂದಿನ ವರ್ಷಗಳಂತೆ ಅಥವಾ ಇನ್ನೂ ಹೆಚ್ಚಾಗಿಯೇ ಧಾನ್ಯ ಮತ್ತು ಇತರ ಆಹಾರ ವಸ್ತುಗಳ ಅಭಾವವು ಬರಬಹುದೆಂಬ ಶಂಕೆಯು ಪ್ರಪಂಚದ ಎಲ್ಲಾ ಪಂಡಿತರ ಮನಸ್ಸಿನಲ್ಲಿಯೂ ತಲೆದೋರುತ್ತಿದೆ. ಈ ವಿಷಯವಾಗಿ ಇನ್ನು ಕೆಲವು ದಿವಸಗಳಲ್ಲೇ ಪ್ರಪಂಚದ ಎಲ್ಲಾ ಕಡೆಯಿಂದಲೂ ಪ್ರಮುಖರು ಭಾರತದಲ್ಲಿ ಸೇರಿ ಒಂದು ಸಮ್ಮೇಳನವನ್ನು ನಡೆಸಿ ಮುಂದೆ ಬರಬಹುದಾದ ಆಹಾರಾಭಾವದ ದುರ್ಘಟನೆಯನ್ನು ತಪ್ಪಿಸಲು ಆಲೋಚನೆ ಮಾಡುವವರಾಗಿದ್ದಾರೆ. ಈ ಸಂದರ್ಭದಲ್ಲಿ ಸ್ಥಳೀಯ ವಿದ್ಯಮಾನಗಳಿಗೆ ಅನುಸಾರವಾಗಿ ನಮ್ಮ ದೇಶದಲ್ಲೂ ಈಗಿನಿಂದಲೇ ಸರಿಯಾದ ಏರ್ಪಾಡುಗಳನ್ನು ಮಾಡಲು ಸರ್ಕಾರದವರೂ ಮತ್ತು ರೈತರೂ ಪ್ರಯತ್ನಪಡುವುದು ಅತ್ಯವಶ್ಯಕವಾಗಿರುತ್ತದೆ. ಇರ್ವಿನ್ ನಾಲಾ ಪ್ರದೇಶದಲ್ಲಿ ಏನು ಮಾಡಬಹುದೆಂಬ ವಿಷಯದಲ್ಲಿ ನನ್ನ ಅನುಭವಕ್ಕೆ ಬಂದ ಒಂದೆರಡು ವಿಷಯಗಳನ್ನು ಹೇಳಲು ಇಚ್ಛಿಸುತ್ತೇನೆ.

ಕೃಷ್ಣರಾಜಸಾಗರದಲ್ಲಿ ದೈವಕೃಪೆಯಿಂದ ಈ ಸಾರಿ ನೀರು ಯಥೇಚ್ಛವಾಗಿದೆ. ಮುಂದಿನ ಮಳೆಗಾಲ ಬರುವವರೆಗೆ ಸರಿಯಾಗಿ ಉಪಯೋಗಿಸಿಕೊಂಡು ಹೆಚ್ಚು ಬೆಳೆ ಬೆಳೆಯುವುದಕ್ಕೆ ಸರ್ಕಾರದವರು ಈ ನೀರನ್ನು ಒದಗಿಸಿಕೊಡಲು ಪ್ರಯತ್ನ ಮಾಡಬೇಕು. ಕಾರು ರಾಗಿಯನ್ನು ಬೆಳೆಯಲು ಸರ್ಕಾರದವರು ರೈತರಿಗೆಲ್ಲಾ ಬಹಳ ಪ್ರೋತ್ಸಾಹ ಕೊಡಬೇಕಾಗುವುದು ಅವಶ್ಯಕ. ಇದರ ಏರ್ಪಾಡುಗಳನ್ನು ಸರ್ಕಾರದವರು ಹಿಂದಿನಿಂದಲೂ ಮಾಡುತ್ತಲೇ ಇದ್ದಾರೆ. ಈ ಸಾರಿ ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಮುತುವರ್ಜಿಯನ್ನು ವಹಿಸುತ್ತಾರೆಂದು ನಂಬಿದ್ದೇನೆ.

ಎರಡನೆಯದಾಗಿ ಭತ್ತದ ಬೆಳೆಗೆ ಹೆಚ್ಚು ನಿಗಾ ಕೊಡಬೇಕು. ಕೂಡಲೇ ಗದ್ದೆಗಳನ್ನು ಉತ್ತು, ಕಾಳು ಚೆಲ್ಲಿ ಪೈರುಮಾಡಿ ಅದನ್ನು ನಾಟಿ ಹಾಕುವಾಗ ಗದ್ದೆಗೆ ಕಳೆದು ಭತ್ತದ ಬೆಳೆಯನ್ನು ಮಾಡಿದರೆ ಭತ್ತದ ಫಲವು ಹೆಚ್ಚಾಗುತ್ತದೆಯೆಂಬುದು ಎಲ್ಲರಿಗೂ ಗೊತ್ತಾದ ವಿಷಯ. ರೂಲ್ಸ್ ಪ್ರಕಾರ ಜೂನ್ ಮಧ್ಯಭಾಗದಿಂದ ಗದ್ದೆ ಕೆಲಸಕ್ಕಾಗಿ ನೀರು ಬಿಡುತ್ತೇವೆಂದು ಹೇಳಿದರೆ ಆ ಕಾಲದಲ್ಲಿ ಜಮೀನು ಉಳುವುದಕ್ಕೂ, ಕಾಳು ಚೆಲ್ಲಿ ಪೈರುಮಾಡುವುದಕ್ಕೂ ಅವಕಾಶವಿಲ್ಲದೆ ಬಂಜರು ನೆಲವನ್ನು ಆಗತಾನೇ ಉತ್ತು ಹಸಿ ಮಣ್ಣಿಗೆ ನಾಟಿಯನ್ನು ನೆಡಬೇಕಾಗುತ್ತದೆ. ಅದರಿಂದ ಭತ್ತದ ಫಸಲು ಬಹಳ ಹೀನಸ್ಥಿತಿಯಲ್ಲಿ ಬೆಳೆದು ಕೆಲವು ವೇಳೆ ವ್ಯವಸಾಯದ ಖರ್ಚೂ ಸಿಗದಂತೆ ನಷ್ಟ ಉಂಟಾಗಬಹುದು.

ಇರ್ವಿನ್ ನಾಲಾ ಪ್ರದೇಶಗಳಲ್ಲಿ ಮಲೇರಿಯಾ ಜಾಡ್ಯದಿಂದ ಜನಸಂಖ್ಯೆಯು ಕಡಿಮೆಯಾಗಿರುವುದರಿಂದಲೂ ಮತ್ತು ಹಾಲಿ ಬದುಕಿರುವ ರೈತರುಗಳು ಮಲೇರಿಯಾದಿಂದ ಪದೇಪದೇ ನರಳುತ್ತಿರುವುದರಿಂದಲೂ ಕೆಲಸ ಮಾಡುವ ಆಳುಗಳ ಅಭಾವವು ಬಹಳ ಹೆಚ್ಚಾಗಿ ಜೂನ್, ಜುಲೈ ತಿಂಗಳುಗಳಲ್ಲಿ ಗದ್ದೆ ವ್ಯವಸಾಯದ ಕೆಲಸವನ್ನು ಪ್ರಾರಂಭಮಾಡಿದರೆ ಅಕ್ಟೋಬರ್, ನವೆಂಬರ್ ತಿಂಗಳುಗಳ ವರೆಗೂ ರೈತರು ಭತ್ತವನ್ನು ನಾಟಿ ಹಾಕುತ್ತಲೇ ಇರುತ್ತಾರೆ. ಹೀಗೆ ಕಾಲಾತೀತವಾಗಿ ನೆಟ್ಟ ಭತ್ತದಿಂದ ಯಾವ ಫಸಲೂ ಬರುವುದಿಲ್ಲವೆಂದು ಹೇಳಬೇಕಾಗಿಯೇ ಇರುವುದಿಲ್ಲ. ಈ ಕಾರಣದಿಂದಲೂ ವ್ಯವಸಾಯದ ಕೆಲಸಗಳನ್ನು ಮೊದಲು ಮೊದಲೇ ಪ್ರಾರಂಭಮಾಡಿದರೆ ಜಾಗ್ರತೆಯಾಗಿ ಭತ್ತದ ನಾಟಿಗಳನ್ನು ರೈತರು ಹಾಕಿಕೊಳ್ಳಲು ಅವಕಾಶವಾಗುತ್ತದೆ.

ದೇಶದಲ್ಲೆಲ್ಲಾ ದ್ವಿದಳ ಧಾನ್ಯಗಳ ಅಭಾವವು ಹೆಚ್ಚಾಗಿರುವ ಈ ಕಾಲದಲ್ಲಿ ಸಾಧ್ಯವಾದಷ್ಟನ್ನು ರೈತರು ಭತ್ತದ ನಾಟಿಗೆ ಮುನ್ನ ಬೆಳೆದುಕೊಳ್ಳಲು ಉತ್ತೇಜನಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಏಪ್ರಿಲ್ ತಿಂಗಳು ೧೫ ರ ಒಳಗಾಗಿ ನಾಲೆಗಳಲ್ಲಿ ಸರಿಯಾಗಿ ನೀರು ಕೊಟ್ಟರೆ ರೈತರೆಲ್ಲಾ ಉದ್ದು, ಹೆಸರು, ಹುರುಳಿ, ಎಳ್ಳು ವಗೈರೆ ಫಸಲುಗಳನ್ನು ಗದ್ದೆಗಳಲ್ಲಿ ಬೆಳೆದು ಅವುಗಳಲ್ಲಿ ಧಾನ್ಯಗಳನ್ನು ತೆಗೆದುಕೊಂಡು ಸೊಪ್ಪನ್ನು ಭತ್ತದ ನಾಟಿಗೆ ಮೊದಲು ಗದ್ದೆಗೆ ತುಳಿಯಲು ಅವಕಾಶವಾಗುತ್ತದೆ. ಹಾಗಿಲ್ಲದ ಪಕ್ಷದಲ್ಲಿ ದ್ವಿದಳ ಧಾನ್ಯದ ಫಸಲು ಒಂದು ಕಾಳೂ ರೈತರಿಗೆ ಸಿಕ್ಕುವುದಿಲ್ಲ.

ಈಗ ಜಮೀನುಗಳ ಮೇಲಿರುವ ಕಬ್ಬಿನ ಫಸಲುಗಳಿಗೆ ಐದು ದಿವಸ ನೀರು ಕೊಟ್ಟು ಮುಂದಿನ ಐದು ದಿವಸ ನಿಲ್ಲಿಸುವಂತೆ ಫಸಲು ಕಟಾವಾಗುವವರೆಗೂ, ಏರ್ಪಾಡು ಮಾಡಿರುವರೆಂದು ತಿಳಿದು ಬಂದಿದೆ. ಈ ಏರ್ಪಾಡು ಸರ್ವಥಾ ಸಮರ್ಪಕವಲ್ಲ. ಕಾಲು ಎಕರೆ, ಅರ್ಧ ಎಕರೆ ಕಬ್ಬಿನ ಗದ್ದೆ ಇರತಕ್ಕ ರೈತರು ತಮ್ಮ ಗದ್ದೆಗಳಿಗೆ ನೀರು ಬಂದಕೂಡಲೇ ಒಂದು, ಎರಡು ಅಥವಾ ಮೂರು ಸಾರಿ ನೀರು ಹಾಯಿಸಿಕೊಳ್ಳಲು ಪ್ರಯತ್ನ ಮಾಡಿ ಅದನ್ನು ಸಾಧಿಸುತ್ತಾರೆ. ೫, ೧೦, ೨೦ ಎಕರೆ ಕಬ್ಬು ಹಾಕಿರತಕ್ಕವನು ೫ ದಿವಸಗಳಲ್ಲಿ ಒಂದು ಸಾರಿಯೂ ನೀರು ಹಾಯಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಕಡು ಬೇಸಿಗೆ ಕಾಲದಲ್ಲಿ ಜಮೀನಿಗೆ ಬಿಟ್ಟ ನೀರು ಜಾಗ್ರತೆಯಾಗಿ ಮುಂದು ಮುಂದಕ್ಕೆ ಹೋಗುವುದೇ ಇಲ್ಲ. ಆದ್ದರಿಂದ ೫ ದಿವಸಗಳಲ್ಲಿ ಒಂದು ಸಾರಿ ಮಾತ್ರ ನೀರು ಹಾಯಿಸಿಕೊಳ್ಳುವವರಿಗೂ ಅಥವಾ ೫ ದಿವಸಗಳಲ್ಲಿ ಒಂದು ದಿವಸವೂ ನೀರು ಸಿಕ್ಕದೆ ಇರುವವರಿಗೂ ಜಮೀನಿನಲ್ಲಿ ನೀರನ್ನು ಮುಂದು ಮುಂದಕ್ಕೆ ತೆಗೆದುಕೊಂಡು ಹೋಗುವುದು ಅಸಾಧ್ಯವಾದ ಕೆಲಸವಾಗಿರುತ್ತದೆ. ಈಗ ಬರುತ್ತಿರುವ ಅರ್ಧ ಅಥವಾ ಕಾಲು ಭಾಗದ ನಾಲಾ ನೀರಿನಿಂದಲೇ ಭತ್ತದ ಗದ್ದೆ ವಗೈರೆ ಫಸಲುಮಾಡತಕ್ಕ ರೈತರುಗಳು ತಮ್ಮ ವ್ಯವಸಾಯಕ್ಕಾಗಿ ನೀರನ್ನು ಹೇಗೋ ತೆಗೆದುಕೊಂಡು ನ್ಯಾಯವಾಗಿ ಕಬ್ಬಿನ ಗದ್ದೆಗೇನೇ ಸರಬರಾಜು ಆಗಬೇಕಾಗಿರುವ ನೀರನ್ನು ಬಹಳ ಕಡಿಮೆ ಮಾಡುತ್ತಾರೆ. ಇತ್ಯಾದಿ ಕಾರಣಗಳಿಂದ ಮುಂದೆ ಮಳೆಗಾಲ ಬರುವವರೆಗೂ ಕಬ್ಬಿನ ಫಸಲು ಬಹಳ ಹೀನಸ್ಥಿತಿಗೆ ಬಂದು ಈ ಭಾಗದಲ್ಲಿ ರೈತರಿಗೆ ತುಂಬಾ ನಷ್ಟವಾಗುತ್ತದೆ. ಅಲ್ಲದೆ ದೇಶದಲ್ಲಿ ಸಕ್ಕರೆ ಉತ್ಪತ್ತಿಯೂ ಕಡಿಮೆಯಾಗುತ್ತದೆ.

ಈ ಮೇಲ್ಕಂಡ ಕಾರಣಗಳಿಂದ ಸರ್ಕಾರದವರು ಇರ್ವಿನ್ ನಾಲಾ ಪ್ರದೇಶದ ಕಾಲುವೆಗಳಿಗೆ ಏಪ್ರಿಲ್ ೧೫ ನೇ ತಾರೀಕಿನಿಂದಲೇ ಸಂಪೂರ್ಣವಾಗಿ ಸರ್ವದಾ ನೀರು ಹರಿಯುವುದಕ್ಕೆ ಏರ್ಪಾಡುಮಾಡಿ ಇರ್ವಿನ್ ನಾಲಾ ಪ್ರದೇಶವೆಲ್ಲಾ ಸುಭಿಕ್ಷವಾಗಿ ಬೆಳೆಯಾಗಲು ಅವಕಾಶವನ್ನು ಕೊಡುತ್ತಾರೆಂದು ನಾನು ನಂಬಿರುತ್ತೇನೆ.

Edited, printed and published by A. K. Nagarajan at the Sadhvi Press D. Subbiah Road, Mysore.

ಶ್ರೀ ಗಣೇಶ ಟಾಕೀಸ್

7-1 47 ರಿಂದ 11-4-47 ರ

ಪೂರ್ತ 9-30 ರ ಆಟ ಇಲ್ಲವಾದ ಕಾರಣ

ಪ್ರತಿ ದಿನ 2 ಆಟಗಳು ಮಾತ್ರ

ಮ್ಯಾಟನಿ 3-30 1 ನೇ ಆಟ 6-30

ಹರಿಶ್ಚಂದ್ರ

(ಕನ್ನಡ)

ಜಿಲ್ಲಾ ಬೋರ್ಡು ಚುನಾವಣೆ

೨೧-೪-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗಿನ

ಕಾಂಗ್ರೆಸ್ ಉಮೇದುವಾರರಿಗೇ

., ವಯವಟ್ಟು ಓಟು ಕೊಡಿ :-

ಹೆಚ್ ಲಿಂಗಪ್ಪ (ಹನಿಯಂಬಳ್ಳಿ)

ಹೆಚ್. ಎಂ. ನಾಗಪ್ಪ (ಸುಳ್ಳಳ್ಳಿ)

ಎಂ ಲಿಂಗಣ್ಣ (ಹೆಜ್ಜಿಗೆ)

ರಾಜಕಮಲ್

೩-೪-೪೭ ರಿಂದ ಅಪೂರ್ವ ವಾದ ೮ನೇ ವಾರ

ಮ್ಯಾಟನಿ ಮಧ್ಯಾಹ್ನ 3 ಗಂಟೆಗೆ

ಮೊದಲನೇ ಆಟ ಸಂಜೆ 6 ಗಂಟೆಗೆ

ಶ್ರೀ ಕೃಷ್ಣಲೀಲಾ

(ಕನ್ನಡದಲ್ಲಿ)

ಮೈಸೂರಿನಲ್ಲಿ ತಯಾರಾಗಿ, ಮಹಾಜನಗಳ ಮನ್ನಣೆಗೆ ಪಾತ್ರವಾಗಿರುವ ಈ ಪೌರಾಣಿಕ ವೈಖರಿಯನ್ನು ನೋಡಲು ತಪ್ಪಬೇಡಿ

ಕಂಟ್ರೋಲು ಬೆಲೆ! ಸುಸಮಯ!

ಹೊಸ ಜವಳಿ

ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಬನಾರಿಸ್, ಕಂಚಿ, ಆರ್ನಿ, ಕಾಂಚೀಪುರಂ, ಮಟ್ಟಿ ಸೀರೆಗಳೂ, ಕರಾಚಿ ಸೀರೆಗಳೂ, ನೂಲಿನ ಪೂನಾ ರಜಂವಾರ ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.

M. P V., M. V ಭೋಜಯ್ಯ B A ಅಂಡ್ ಬ್ರದರ್ಸ್

ಬೊಂಬಾಯಿ ಆನಂದ ಭವನ ಹೋಟೆಲ್ ಕೈ ಬಲಭಾಗದ ಕೊನೇ

ಜವಳಿ ಅಂಗಡಿ, ಮೈಸೂರು

ವಾರ ಭವಿಷ್ಯ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ…

(ತಾ|| ೭-೪-೪೭ ರಿಂದ ೧೪-೪-೪೭ …

ಮೇಷ—ಆರೋಗ್ಯ ಉತ್ತಮ, … ಲಾಭ ಚೆನ್ನಾಗಿರುತ್ತದೆ, ಉದ್ಯೋಗ… ಹಾರಗಳಲ್ಲಿ ಪ್ರಗತಿ, ವ್ಯಾಪಾರದಿಂದ… ಧನ ಲಾಭ, ಅಧಿಕಾರ ವರ್ಗದವರಿಂದ… ಸನ್ಮಾನ, ತಾ|| ೯, ೧೦ ಪ್ರವಾಸ, …

ವೃಷಭ—ಆರೋಗ್ಯ ಸಾಧಾರಣ, … ಲಾಭ ಕಡಿಮೆ, ಉದ್ಯೋಗ ವ್ಯವ… ಗಳಲ್ಲಿ ಶತ್ರುಗಳಿಂದ ತೊಂದರೆ, … ರದಲ್ಲಿ ನಷ್ಟ. ಮಿತ್ರರಿಂದ ತಿರಸ್ಕಾ… ಪಾನದಿಂದ ಆರೋಗ್ಯಕ್ಕೆ ಹಾನಿ, ತಾ… ೧೩ ಲಾಭ, ಸಾಧಾರಣ ಶಾಂತಿ.

ಮಿಥುನ – ಆರೋಗ್ಯ ಕೆಡುತ್ತದೆ, … ಮನಸಿನ ಚಿಂತೆ ಹೆಚ್ಚುವುದು, ಧನಾ… ಕಡಿಮೆ, ಖರ್ಚು ಹೆಚ್ಚು, ಅಧಿ… ವರ್ಗದವರಿಂದ ವಿಶೇಷ ಸಹಾಯ, … ದರ್ಶನ, ಮಂಗಳ ಕಾರ್ಯಗಳಿಗಾ… ವಾಸ, ತಾ|| ೮, ೧೦ ಲಾಭ, ಸಂತೋ…

ಕಟಕ — ದೈಹಿಕ ಸ್ಥಿತಿ ಉತ್ತಮವಾ… ರುತ್ತದೆ, ಮಾನಸಿಕ ಚಿಂತೆ ಕಡಿ… ಅಧಿಕಾರವರ್ಗದವರಿಂದಲೂ, ಮಿತ್ರ… ಲೂ ವ್ಯವಹಾರಗಳಲ್ಲಿ ವಿಶೇಷ ಸಹಾ… ಬಂಧುಗಳಿಂದ ಮನ್ನಣೆ, ವ್ಯಾಪಾ… ಪ್ರಗತಿ, ತಾ|| ೧೦, ೧೩ ಪ್ರವಾಸ, …

ಸಿಂಹ—ಪ್ರಾಕೃತಿಕ ಸ್ಥಿತಿ ಉತ್ತಮ… ಧನಲಾಭ ಚೆನ್ನಾಗಿರುತ್ತದೆ, ಖರ್ಚು … ಮೆ, ಉದ್ಯೋಗಾದಿಗಳಲ್ಲಿ ಶತ್ರುಗಳ … ಕುಳ ತಪ್ಪುವುದು, ಮಂಗಳ ಕಾರ್ಯ… ಳಿಗಾಗಿ ಪ್ರವಾಸ, ಮತ್ತು ಖರ್ಚು ಒದ… ವುದು, ಬಂಧುಗಳಿಂದ ಸನ್ಮಾನ, ತಾ…

(ಹಿಂದಿನ ಪುಟಕ್ಕೆ ಮುಂದುವರಿಸಿದೆ)

ಬಾಡಿಗೆಗೆ ಇದೆ

ನಂಜನಗೂಡು ಕೋ-ಆಪರೇಟಿವ್ … ಡಿಟ್ ಬ್ಯಾಂಕ್(ಲಿಮಿಟೆಡ್)ನ ಬಿಲ್ಡಿಂ… ಕೆಳಭಾಗದ ವಾಸದ ಮನೆ ಬಾಡಿಗೆಗೆ ಕೊ… ಲ್ಪಡುತ್ತೆ. ಸಂಸಾರಕ್ಕೆ ಅನುಕೂಲವಾ… ಬೆಳಕು, ಲೈಟು, ನಲ್ಲಿ, ಭಾವಿ, ಅಥವ… ರೀತಿ ಕಕ್ಕಸ್ ಸಹ ಇರುತ್ತೆ. ಬಾಡಿ… ದೇಕಾದವರು ತಾವು ಎಷ್ಟು ಕಾಲದವ… ಎಷ್ಟು ರೂಪಾಯಿ ಬಾಡಿಗೆ ಕೊಡ… ಸಾಧ್ಯ ಎಂಬ ವಿವರಗಳ ಸಮೇತ ಬಾ… ದರಖಾಸ್ತುಗಳನ್ನು ಈ ಮಾಹೆ ೧೫ ನೇ ತಾರೀಖಿನೊಳಗೆ ಬ್ಯಾಂಕಿನ ಸೆಕ್ರೆಟರಿ… ವರಿಗೆ ಲಿಖಿತ ಮೂಲಕ ಕಳುಹಿಸಿಕೊಡ… ಕೃಷ್ಣು. ಬಾಡಿಗೆ ದರಖಾಸ್ತುಗಳ ಸ್ವೀ… ಯಾವುದನ್ನಾದರೂ ಅಂಗೀಕರಿಸುವುದಕ್ಕೂ… ತಿರಸ್ಕರಿಸುವುದಕ್ಕೂ ಸ್ವೇಚ್ಛೆಯುಗಳ ಮಂ… ಚನೆಗೆ ಸೇರಿದ್ದಾಗಿರುತ್ತೆ. ಒಪ್ಪಿಗೆಯಾ… ಬಾಡಿಗೆದಾರರು ಬ್ಯಾಂಕಿನವರ ಇರಾದೆಯಂ… ತೆ ಕರಾರು ಬರೆದುಕೊಡಬೇಕು ಮತ್ತು ಅವರು ಅಪೇಕ್ಷಿಸಿದಲ್ಲಿ ಅಡ್ವಾನ್ಸ್ ಹ… ಬಗು ಕೊಡಲು ಬದ್ಧರಾಗಿರಬೇಕು.

ಸೂಚನೆ:—ಹೋಟೆಲ್ಲು ಇಡತಕ್ಕವರು, … ನಸಿ ದಾಸ್ತಾನು ಮಾಡುವವರ ದರಖಾಸ್ತು… ಗಳನ್ನು ಅಂಗೀಕರಿಸುವುದಿಲ್ಲ

ಬೋರ್ಡಿನ ಆಜ್ಞೆ ಮೇ…
ಬಿ. ಮಹದೇವಪ್ಪ
ಗೌರವ ಕಾರ್ಯದರ್ಶಿ

ತಾ|| 1—4 47.
ನಂಜನಗೂಡು

ರೀ. ನಂ. ೩೯೨ ॥ ವಂದೇ ಮಾತರಂ ॥ ಬಿಡಿ ಪ್ರತಿಕೆ 3 ಕಾಸು

ಸಂಪುಟ ೫] ಮಂಗಳವಾರ ೮—೪—೪೭ [ಸಂಚಿಕೆ ೨೦೪

ಪಾಕಿಸ್ತಾನ್ ವಿಭಜನೆಗೆ ಸವಾರ್ಕರರ ಸೂಚನೆ

...ಗಳೂರು ಘಟನೆಗಳಿಗೆ ಸಂತಾಪ

...ರಸಭೆಯಲ್ಲಿ ನಿರ್ಣಯ

ಮೈಸೂರು ೭

...ಗಳೂರು ಗಲಭೆಯಲ್ಲಿ ನಿಧನರಾದ ...ಗ್ಗೆ ಸಂತಾಪ ಮತ್ತು ಸಹಾನುಭೂ... ಬಿಹಾರಿನ ಕಾಂಗ್ರೆಸ್ ನಾಯಕ ಶ್ರೀ॥ ಅಬ್ದುಲ್ ಬಾರಿಯವರ ...ರಣದ ಬಗ್ಗೆ ವಿಷಾದವನ್ನೂ ಸೂ... ಅವರುಗಳ ಆತ್ಮಕ್ಕೆ ಶಾಂತಿ ಕೋರು...ವನ್ನು ನಿನ್ನೆ ದಿನ ನಡೆದ ಪುರಸ...ವೇಶನದಲ್ಲಿ ಸದಸ್ಯರು ಎದ್ದು ನಿಂತು ...ಸಿದರು.

...ರಿಯಲ್ಲಿ ನಡೆಯುತ್ತಿರುವ ಅಖಿಲ ...ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳ ...ನಕ್ಕೆ ಮೈಸೂರಿನಿಂದ ಪ್ರತಿನಿಧಿ...ಗಳನ್ನು ಕಳುಹಿಸಬೇಕೆಂದೂ, ಈ ...ವನೆಯನ್ನು ಪುನರ್ಘಟಿತವಾಗುವ ಪ್ರ...ಯು ಮುಂದೆ ತರಬೇಕೆಂದೂ, ಕಳೆದ ...ಬರ್ ತಿಂಗಳಲ್ಲಿ ಆದ ನಿರ್ಣಯವನ್ನು ...ರು ಕಾರ್ಯರೂಪಕ್ಕೆ ತರದೆ ಕರ್ತವ್ಯ...ಪ ಮಾಡಿದ್ದಾರೆಂದು ಶ್ರೀಗಳಾದ ಬಿ. ...ಬ್ಬಸ್ವಾಮಿ, ಪಿ ಸೀತಾರಾಮಯ್ಯ ಮತ್ತು ಪಿ ನಂಜಪ್ಪನವರು ಆಕ್ಷೇಪಿ...ಸಿ ನವಂಬರ್ ತಿಂಗಳಲ್ಲಿ ತಾವು ...ದ ನೋಟೀಸಿದ್ದಾಗ್ಯೂ, ಅದ್ದರಿಂದ ...ವಿಚಾರವು ಗಮನ ತಪ್ಪಿಹೋಯಿತೆಂ..., ಅದಕ್ಕಾಗಿ ತಾವು ವಿಷಾದ ಸೂಚಿಸ...ಗಿಯೂ ಅಧ್ಯಕ್ಷರು ತಿಳಿಸಿದರು.

...ಬಜೆಟ್ಟಿಯನ್ನು ಪೂರ್ಣವಾಗಿ ಸ...ದವರೇ ವಶಪಡಿಸಿಕೊಂಡು, ಆಹಾರ ...ರ್ಥಗಳನ್ನು ಹಂಚುತ್ತಿರುವಂತೆ ಗೋ...ಧ ರೀತಿಯಲ್ಲಿ ಸರ್ಕಾರ ಡಿಪೋ ಮತ್ತು ...ಡಾ ಪಡೆದಿರುವವರ ಮೂಲಕ ಹಂಚ...ಬೇಕೆಂದು ಶ್ರೀ॥ ಪಿ ಗೋಪಾಲಕೃಷ್ಣ...ಯ್ಯರು ಮಂಡಿಸಿದ ನಿರ್ಣಯವು ಅಂಗೀ...ಕೃತವಾಯಿತು.

...ಳ್ಳೆ ಮೊದಲ್ಗೊಂಡು ಶಂಕರ ಮಠದ ಪಕ್ಕದ ...ವ ತೋಟದ ಪ್ರದೇಶದಿಂದ ಮಾರ್ಕೇ...ಗೆ ಹೋಗುವ ಹಾದಿಯ ಕೆಲಗಳು ಕರೆದೋ... ಕೊಂಡಿರುವವರು ಕಾರ್ಪೊರೇಷನ್ನವರಿಗೆ ... ಪ್ರದೇಶವನ್ನು ವಶಪಡಿಸಿಕೊಳ್ಳಬೇಕೆಂ..., ನಗರಾಭಿವೃದ್ಧಿ ಸಮಿತಿಯನ್ನು ಪ್ರಾ...ಸುವ ನಿರ್ಣಯವನ್ನು ಶ್ರೀ॥ ಎ. ಕೃಷ್ಣ...ಶರ್ಮರಾಯರು ಮಂಡಿಸಿದರು. ಶ್ರೀ॥ ...ಸಿಂ ರಂಗಯ್ಯನವರು ಮಾತನಾಡಿ ..., ಕೆರುಲು, ಹಾವು ಮುಂತಾದ ಪ್ರಾಣಿ...ಗಳು ತೋಟಗಳಲ್ಲಿ ಸೇರಿಕೊಂಡು ಪಕ್ಕ...ದಲ್ಲಿ ವಾಸಮಾಡುವವರಿಗೆ ಬಹಳ ತೊಂದ...ರೆಯನ್ನುಂಟುಮಾಡುತ್ತಿವೆಯೆಂದು ಹೇ...ಳಿದ... ಶ್ರೀ॥ ಪಿ. ಸೀತಾರಾಮಯ್ಯನ...ವರು ಆ ಪ್ರದೇಶವನ್ನು ವಶಪಡಿಸಿಕೊಂಡು ...ಬಡವರಿಗೋಸ್ಕರ ಮನೆಗಳನ್ನು ...ಕಟ್ಟಿಸಬೇಕೆಂದರು. ಶ್ರೀ॥ ಕೆ ಸಿದ್ದಯ್ಯ...ನವರು ನಿರ್ಣಯವನ್ನು ವಿರೋಧಿಸಿ ಆ ...ತೋಟಗಳಿಂದ ಜೀವನ ಮಾಡುತ್ತಿರುವ ...ವರಿಗೆ ಕಾರ್ಪೊರೇಷನ್ ತೊಂದರೆಯಾಗುವು...ದೆಂದರು. ಉಪಾಧ್ಯಕ್ಷರಾದ ಶ್ರೀ॥ ನರಸಿಂ...ಹಯ್ಯಂಗಾರ್ಯರು ಸಮಾಧಾನ ಹೇಳುತ್ತ ...ಜೆಟ್ ಧಾರಣೆಯಲ್ಲಿ ೨೦ ಎಕರೆ ಪಿಳ್ಳೆ...ಗೆ ಕೊಟ್ಟ ಮಾಡಲಾಗುವುದೆಂದೂ, ಅದ ...ಕ್ಕೆ ಒಪ್ಪಿರುವವರಿಗೆ ಗುತ್ತಿಗೆಗೆ ಕೊಡಲಾಗು...ವುದೆಂದೂ ಹೇಳಿದರು. ಜನರ ಆರೋಗ್ಯ...ಕ್ಕಾಗಿ ಪಿಳ್ಳೆಗೆ ಕೊಟ್ಟ ಮುಖ್ಯವಲ್ಲವೆಂ...ದು ಶ್ರೀ॥ ಟಿ ವೆಂಕಟರಮಣಯ್ಯನವರು ಹೇಳಿದರು. ಕೊನೆಯಲ್ಲಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಮೈಸೂರು ನಗರದಲ್ಲಿ ಟೆಲಿಫೋನುಗಳ ಸಂಖ್ಯೆಯನ್ನು ಹೆಚ್ಚಿಸಿ, ಪುರಸಭಾ ಸದಸ್ಯರು ನಾಗರಿಕರ ಸೇವೆಯನ್ನು ಚುರುಕಾಗಿಯೂ, ದಕ್ಷತೆಯಿಂದಲೂ ಮಾಡಲು ಪುರಸಭೆಯ ವೆಚ್ಚದಲ್ಲಿ ಅವರ ನಿವಾಸಗಳಿಗೆ ಟೆಲಿಫೋನುಗಳನ್ನು ಹಾಕಿಸಬೇಕೆಂದೂ ನಿರ್ಣಯವನ್ನು ಶ್ರೀ॥ ಪಿ ಸೀತಾರಾಮಯ್ಯನವರು ಮಂಡಿಸಿದರು. ಅದು ಅಂಗೀಕರಿಸಲ್ಪಟ್ಟಿತು.

ನಗರದಲ್ಲಿರುವ ಎಲ್ಲಾ ಆಸ್ಪತ್ರೆ ಮತ್ತು ಸರ್ಕಾರೀ ಲಿನ 'ವಿಸಿಟರು' ಗಳ ಸಮಿತಿಯಲ್ಲಿ ಪುರಸಭೆಯಿಂದ ಚುನಾಯಿತರಾದ ಇಬ್ಬರು ಸದಸ್ಯರುಗಳಿಗೆ ಸ್ಥಾನವನ್ನು ಕಾದಿರಿಸುವಂತೆ ಸರ್ಕಾರವನ್ನು ಪ್ರಾರ್ಥಿಸಬೇಕೆಂದೂ ಮತ್ತು ... ಕಲಿಂಗ್ ಕೊಡಲಾಗಿರುವ ೫ ಗಜ ಮೀಟರ್ ಒಟ್ಟಿಯ ಪ್ರಮಾಣವನ್ನು ೧೦ ಗಜಕ್ಕೆ ಏರಿಸಬೇಕೆಂದು ಪ್ರಾರ್ಥಿಸುವ ಶ್ರೀ॥ ಜಿ ಆರ್ ರಂಗಸ್ವಾಮಿ ಯ್ಯನವರ ನಿರ್ಣಯಗಳೂ, ವಿದ್ಯುಚ್ಛಕ್ತಿಯ ಪ್ರಕಾಶವು ಮನೆಗಳಲ್ಲಿ ತಗ್ಗಿ ಹೋಗುತ್ತಿರುವುದರಿಂದ ಸಾರ್ವಜನಿಕರಿಗೆ ಉಂಟಾಗುವ ತೊಂದರೆಯನ್ನು ತೊಡಲೇ ಪರಿಹರಿಸಲು ಸರ್ಕಾರದ ಗಮನವನ್ನು ಸೆಳೆಯುವ ಬಗ್ಗೆ ಡಾ॥ ನಾರಾಯಣರಾಯರ ರಾಯರ ನಿರ್ಣಯವೂ, ಧನ್ವಂತರಿ ರಸ್ತೆಯ ಬಳಿ ಮನೆಗಳನ್ನು ವಶಪಡಿಸಿಕೊಳ್ಳುತ್ತಿರುವುದನ್ನು ನಿಲ್ಲಿಸಿಕೊಡಬೇಕೆಂದು ನಗರಾಭಿವೃದ್ಧಿ ಸಮಿತಿಯನ್ನು ಪ್ರಾರ್ಥಿಸುವ ಶ್ರೀ॥ ಟಿ. ವೆಂಕಟರಮಣಯ್ಯನವರ ನಿರ್ಣಯವೂ, ಅದಿಕರ್ನಾಟಕ ಪುರ ಮತ್ತು ಜಲಪುರಿಯಲ್ಲಿ ರೇಡಿಯೋ ಸ್ಥಾಪಿಸಬೇಕೆಂದು ಶ್ರೀ॥ ಕೆ ಸಿದ್ದಯ್ಯನವರು ಮಂಡಿಸಿದ ನಿರ್ಣಯವೂ ಅಂಗೀಕೃತವಾದುವು.

ನಗರಾಭಿವೃದ್ಧಿ ಸಮಿತಿಗೆ ಪುರಸಭೆಯಿಂದ ಶ್ರೀಗಳಾದ ಪಿ. ಸೀತಾರಾಮಯ್ಯ ಮತ್ತು ಟಿ. ವೆಂಕಟರಮಣಯ್ಯನವರನ್ನು ಚುನಾಯಿಸಲಾಯಿತು.

ಪುರಸಭೆಗೆ ಸೇರಿದ ವಿದ್ಯುಚ್ಛಕ್ತಿ ಸಂಸ್ಥೆಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿರುವುದಕ್ಕಾಗಿ ಫೋರ್‌ಮನ್ನಿಗೆ ಮಾಸಿಕವಾಗಿ ೧೦ ರೂ. ಗಳ ಅಲೋಯೆನ್ಸ್ ಕೊಡಬೇಕೆಂದು ಬಂದಿದ್ದ ಸೂಚನೆಯನ್ನು ಸಭೆಯು ತಿರಸ್ಕರಿಸಿತು. ಶ್ರೀಗಳಾದ ಕೆ ಪುಟ್ಟಸ್ವಾಮಿ, ಎಂ ನಾರಾಯಣಸ್ವಾಮಿ ಮತ್ತು ಪಿ ಸೀತಾರಾಮಯ್ಯ ಮಾತನಾಡಿದರು. ಮಾತನಾಡಿ, ಪುರಸಭೆಯು ೭ ಡಾ ರ್ಮಾಗಳಿಂದ ...ಯಾದ ಶಾಪುಗಳೂ ಕೆಲಸ ಮಾಡುತ್ತಿಲ್ಲವೆಂಬ ಅಂಶವು ಸ್ಪಷ್ಟವಾಗಿರುವುದರಿಂದ ಸಮರ್ಪಕವಾಗಿ ಕೆಲಸ ಮಾಡದವರಿಗೆ ಅಲೋಯೆನ್ಸ್ ಕೊಡುವುದು ಧರ್ಮವಲ್ಲವೆಂದು ತಿಳಿಸಿದರು. ಈ ಸಮಯದಲ್ಲಿ ಅಧ್ಯಕ್ಷರಿಗೂ, ಸದಸ್ಯರುಗಳಿಗೂ ಬಿಸಿ, ಬಿಸಿ ಚರ್ಚೆ ನಡೆಯಿತು. ತಾವು ಈ ಕೆಲಸಕ್ಕೆ ಫೋರ್‌ಮನ್ನನ್ನು ನೇಮಿಸಿ, ಅವನಿಗೆ ಭತ್ಯವನ್ನು ಕೊಡುವುದಾಗಿ ತಿಳಿಸಿದ್ದರಿಂದೂ, ಅದ್ದರಿಂದ ಪುರಸಭೆಯು ಇದನ್ನು ಮಂಜೂರು ಮಾಡಬೇಕೆಂದೂ, ಹಾಗೆ ಮಾಡದಿದ್ದರೆ ತಾವು ಸರ್ಕಾರಕ್ಕೆ ಬರೆಯುವುದಾಗಿಯೂ ಅಧ್ಯಕ್ಷರು ತಿಳಿಸಿದರು. ಇದು ಸಭೆಗೆ ಸವಾಲು ಹಾಕುತ್ತಿರುವಂತಿದೆಯೆಂದು ಶ್ರೀ॥ ಪುಟ್ಟಸ್ವಾಮಿಯವರು ಆಕ್ಷೇಪಿಸಿದರು. ಮಿ॥ ನೂರ್ ಹುಸೇನರು ಭತ್ಯವನ್ನು ಕೊಡಬಹುದೆಂಬ ಅಭಿಪ್ರಾಯ ಸೂಚಿಸಿದರು. ಇವರೊಬ್ಬರ ಹೊರತಾಗಿ ಮಿಕ್ಕೆಲ್ಲ ಸದಸ್ಯರೂ ಸೂಚನೆಯನ್ನು ವಿರೋಧಿಸಿದರು. ಸಭೆಯವರು ಕೋಪದಿಂದ ಸ್ಥರಿ ತಾವೇ ಕೈಯಿಂದ ಈ ಹಣವನ್ನು ಕೊಡುವುದಾಗಿ ಅಧ್ಯಕ್ಷರು ತಿಳಿಸಿದರು.

ಈ ಸಂದರ್ಭದಲ್ಲಿ ಸಭೆಯು ಬ್ರಾಹ್ಮಣ ಬ್ರಾಹ್ಮಣೇತರ ಪಕ್ಷಪಾತ ಮಾಡುತ್ತಿದೆಯೆಂಬ ಸೂಚನೆಯನ್ನು ಮಿ॥ ನೂರ್ ಹುಸೇನರು ಎತ್ತಿದಾಗ ಅನೇಕ ಸದಸ್ಯರು ಅದನ್ನು ಪ್ರತಿಭಟಿಸಿದರು. ಸ್ವಲ್ಪ ಹೊತ್ತಿನ ಮೇಲೆ ಸಭೆಯಲ್ಲಿ ವ್ಯಕ್ತಿ ಪಕ್ಷಪಾತವು ಎದ್ದು ಕಾಣುತ್ತಿರುವುದರಿಂದ ತಾವು ಅದರಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿ ಅವರು ಹೊರಟುಹೋದರು.

ಪುರಸಭೆಯ ಸೆಂಟ್ರಲ್ ಸ್ಟೋರ್ ಕೀಪರ್ ಸ್ಥಾನಕ್ಕೆ ಶ್ರೀ॥ ಕೆಂಪಣ್ಣನವರನ್ನು ಅಧ್ಯಕ್ಷರು ನೇಮಿಸಿಕೊಂಡಿರುವುದಕ್ಕೆ ಸಭೆಯಲ್ಲಿ ಸಮ್ಮತಿ ದೊರೆಯಲಿಲ್ಲ. ಆ ಸ್ಥಾನಕ್ಕೆ ತಕ್ಕ ಅರ್ಹತೆಗಳನ್ನೊಳಗೊಂಡವರನ್ನು ಸರ್ಕಾರದವರು ಕಳುಹಿಸಿ ಕೊಡುವಂತೆ ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

* ಹಳೇ ಅಗ್ರಹಾರದ ಚಾವಡಿ ಬೀದಿ ಬೆಳ್ಳಿಸುವ ಶ್ರೀ ಜಾನಕೀರಾಮ ಮಂದಿರದಲ್ಲಿ ಈ ದಿನ ರಾತ್ರಿ ೮-೩೦ ಕ್ಕೆ ಶ್ರೀಮತಿ ಪದ್ಮ... ಜಿ.ವಿ.ರಾವ್ ರವರ ಸಂಗೀತವು ನಡೆಯುವುದು.

* ಜಾನಕಿರಾಜ ಮೊಹಲ್ಲಾ ಗೊಲ್ಲಗೇರಿಯ ಶ್ರೀ ಸೀತಾರಾಮ ಮಂದಿರದಲ್ಲಿ ಈ ದಿನ ರಾತ್ರಿ ೮ ಗಂಟೆಗೆ ಶ್ರೀ ವೇ॥ ಹುಂ ... ನಾರಾಯಣಶಾಸ್ತ್ರಿಗಳವರಿಂದ ಸೀತಾಕಲ್ಯಾಣವೆಂಬ ಹರಿಕಥೆಯು ನಡೆಯುವುದು.

ಪಾಕಿಸ್ತಾನವನ್ನು ಭೇದಿಸಬೇಕು

ಅಖಂಡ ಹಿಂದೂಸ್ಥಾನದ ರಚನೆಗಾಗಿ ಹಿಂದೂಗಳು ಮೊದಲು ಪಾಕಿಸ್ತಾನದ ಪ್ರದೇಶಗಳನ್ನು ವಿಭಾಗ ಮಾಡಬೇಕು. ಪಶ್ಚಿಮ ಬಂಗಾಳದಲ್ಲಿ ಹಿಂದೂ ಪ್ರಾಂತ್ಯದ ರಚನೆ, ಅಸ್ಸಾಮಿನೊಳಕ್ಕೆ ಅಕ್ರಮ ಪ್ರವೇಶ ಮಾಡುವ ಮುಸ್ಲಿಮರನ್ನು ಓಡಿಸಿ ಪೂರ್ವಪಾಕಿಸ್ತಾನವನ್ನು ೨ ಹಿಂದೂ ಪ್ರಾಂತ್ಯಗಳ ಮಧ್ಯೆ ಸಿಕ್ಕಿಸಿಕೊಂಡು ಅದುಮುವುದು, ಪೂರ್ವ ಪಂಜಾಬಿನಲ್ಲಿ ಹಿಂದೂ ಮತ್ತು ಸಿಖ್ ಪ್ರಾಂತ್ಯವೊಂದನ್ನು ರಚಿಸುವುದು, ಸಿಂಧ್ ಪ್ರಾಂತ್ಯದ ಹಿಂದೂ ಬಹು ಸಂಖ್ಯಾತರಿರುವ ಪ್ರದೇಶವನ್ನು ಜೋಧಪುರಕ್ಕೆ ಸೇರಿಸುವುದು. ಈ ರೀತಿ ೧೦ ಪ್ರಬಲ ಹಿಂದೂ ಪ್ರಾಂತ್ಯಗಳನ್ನು ರಚಿಸಿ, ಅಖಂಡ ಹಿಂದೂಸ್ಥಾನದ ಕೇಂದ್ರ ಸರ್ಕಾರಕ್ಕೆ ಒಳಪಡಿಸಬೇಕು. ಆದರೆ ಇವು ಅಥವಾ ಇನ್ನಾವ ಪಾದರೂ ತಂತ್ರಗಳು ಕಾರ್ಯರೂಪಕ್ಕೆ ಬರಬೇಕಾದರೆ ಮುಸ್ಲಿಂ ಬಹು ಸಂಖ್ಯಾತ ಪ್ರದೇಶದಲ್ಲಿ ಹಿಂದೂಗಳ ವಿಷಯ ವರ್ತಿಸುವಂತೆಯೇ ಹಿಂದೂಸ್ಥಾನದ ಮುಸ್ಲಿಮರ ವಿಷಯದಲ್ಲಿಯೂ ವರ್ತಿಸಲಾಗುವುದೆಂದು ನಿಷ್ಕರ್ಷೆಯಿಂದ ಘೋಷಿಸಬೇಕು ಎಂಬುದಾಗಿ ಹಿಂದೂಮಹಾಸಭೆಯ ಮಾಜಿ ಅಧ್ಯಕ್ಷ ವೀರ ಸವಾರ್ಕರರು ಇತ್ತ ಸಂದೇಶವೊಂದರಲ್ಲಿ ತಿಳಿಸಿದ್ದಾರೆ.

ಮಲಕಂಡ್ ರೆಸಿಡೆಂಟರು ದೋಷರಹಿತರು

ಕಳೆದ ಅಕ್ಟೋಬರ್ ೨೧ ನೇ ತಾ॥ ಪಂಡಿತ ನೆಹರೂರವರು ಗಡಿನಾಡು ಪ್ರದೇಶಕ್ಕೆ ಭೇಟಿ ಇತ್ತಿದ್ದಾಗ ಅಲ್ಲಿ ನಡೆದ ಘಟನೆಯ ಸಂದರ್ಭದಲ್ಲಿ ಮಲಕಂಡ್ ರಾಜಕೀಯ ಏಜೆಂಟರಾದ ನವಾಬ್ ಅಲಿಯವರನ್ನು ವಿಚಾರಣೆಗೆ ಗುರಿಪಡಿಸಲಾಗಿದ್ದಿತು. ಪೆಷಾವರ್ ಕ್ರೌನ್ ನ್ಯಾಯಾಸ್ಥಾನದ ಜ॥ ಕ್ಲಾರ್ಕ್ ರವರು ವಿಚಾರಣೆ ನಡೆಸಿ ಅವರನ್ನು ದೋಷರಹಿತರೆಂದು ವರದಿ ಒಪ್ಪಿಸಿದ್ದಾರೆ.

ಪಾಟಿಯಾಲಾಕ್ಕೆ ೧೪ ಸಾವಿರ ನಿರಾಶ್ರಿತರು

ಪಂಜಾಬ್ ಗಲಭೆಯಿಂದ ನಿರಾಶ್ರಿತರಾದ ೧೪ ಸಹಸ್ರ ಮಂದಿ ಪಾಟಿಯಾಲಾ ಸಂಸ್ಥಾನಕ್ಕೆ ಬಂದಿರುವರೆಂದು ವರದಿಯಾಗಿದೆ. ಪಾಟಿಯಾಲಾ ನಗರದಲ್ಲಿ ೮ ಸಾವಿರ ಮಂದಿಗೆ ೨ ಶಿಬಿರಗಳಲ್ಲಿ ಆಶ್ರಯ ಕೊಡಲಾಗಿದೆ. ಧುರಿ ಮತ್ತು, ಫತೇಘರ್ ಸಾಹಿಬ್‌ಗಳಲ್ಲಿ ತಲಾ ೩ ಸಾವಿರ ನಿರಾಶ್ರಿತರಿಗೆ ರಕ್ಷಣೆ ಕೊಡಲಾಗಿದೆ. ಬರ್ನಾಲ ಮತ್ತು ಭಟಿಂಡಗಳಲ್ಲಿ ಶೀಘ್ರದಲ್ಲೇ ಮತ್ತೆರಡು ಶಿಬಿರಗಳನ್ನು ಆರಂಭಿಸಲಾಗುವುದೆಂದು ಗೊತ್ತಾಗಿದೆ.

ಉಪನಯನ

ಮೈಸೂರು ೮

ಆಯುರ್ವೇದ ವಿದ್ವಾನ್ ಡಾ॥ ಎಂ. ಎಸ್ ಸುಬ್ರಹ್ಮಣ್ಯಶಾಸ್ತ್ರಿಗಳು ನಿನ್ನೆ ತಮ್ಮ ಕುಮಾರ ಚಿ॥ ಶ್ರೀಕಂಠನ ಉಪನಯನ ಮಹೋತ್ಸವವನ್ನು ನೆರವೇರಿಸಿ ಅನೇಕ ಬಂಧು ಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು.

೦ ದಿನಕ್ಕೆ ೧೬ ಸಾವಿರ ಗಜ ಬಟ್ಟೆಯನ್ನು ತೆಗೆಯಬಹುದಾದ ಹೊಸ ಮಾದರಿಯ ಚರಕವೊಂದನ್ನು ಮಹಾರಾಷ್ಟ್ರ ವಾಣಿಜ್ಯ ಸಂಘದ ಸದಸ್ಯರೊಬ್ಬರು ತಯಾರಿಸಿ ಅದನ್ನು ಶ್ರೀ ಸಿ ರಾಜಗೋಪಾಲಾಚಾರಿಯವರಿಗೆ ತೋರಿಸಿದ್ದಾರೆ.

ಸಾಧ್ವಿ

ತಾ॥ ೮-೪-೪೭ ಮಂಗಳವಾರ

ಪ್ರತಿಬಂಧಕಾಜ್ಞೆಯ ಜಾರಿಯಲ್ಲಿ ತಾತ್ಸಾರವೇಕೆ?

ಸಾರ್ವಜನಿಕ ಶಾಂತಿ ರಕ್ಷಣೆಗಾಗಿ ನಗರದಲ್ಲಿ ರಾತ್ರಿಯ ಹೊತ್ತು ಸಿನಿಮಾ ಮತ್ತು ನಾಟಕಗಳನ್ನೂ, ಹೆಂಡದ ಮಾರಾಟವನ್ನೂ ನಿಷೇಧಿಸುವಂತೆ ಕಳೆದ ಶುಕ್ರವಾರ ಜಿಲ್ಲಾಧಿಕಾರಿಗಳು ನಡೆಸಿದ ಪುರ ಪ್ರಮುಖರ ಸಭೆಯಲ್ಲಿ ನಿರ್ಣಯವಾಯಿತಷ್ಟೆ. ಈ ಬಗ್ಗೆ ಮಾರನೇ ದಿನ ಪ್ರತಿಬಂಧಕಾಜ್ಞೆಯು ಹೊರಟಿತು. ಇದು ಹೊರಟಿದ್ದೂ ಸಹ ಬಹಳ ನಿಧಾನವಾಗಿಯೆಂದೇ ಹೇಳಬೇಕು. ಸಂಜೆ ಹೊತ್ತಿಗೆ ಇದು ಹೊರಬಿತ್ತು. ಸಾರ್ವಜನಿಕರಿಗೆ ಆ ದಿನ ಅದರ ಅರಿವು ಆಗಲು ಅವಕಾಶವೇ ಇರಲಿಲ್ಲ.

ಸಂಬಂಧಪಟ್ಟವರಿಗೆ ಈ ಆಜ್ಞೆಯು ಆ ದಿವಸ ಜಾರಿಯೇ ಆಗಲಿಲ್ಲ. ಎಂದಿನಂತೆ ಸಿನಿಮಾಗಳು ತಮ್ಮ ಪ್ರದರ್ಶನಗಳನ್ನು ನಡೆಸಿದುವು. ಮೂರನೆಯ ದಿನವೂ ಸಹ ಆಜ್ಞೆಯನ್ನು ಬಹಳ ಹೊತ್ತಾದ ನಂತರ ರಾತ್ರಿಯ ಮೇಲೆ ಸಿನಿಮಾ ಮಂದಿರಗಳವರಿಗೆ ತಿಳಿಸಲಾಯಿತು. ಆನಂತರ ಎರಡನೇ ಪ್ರದರ್ಶನವನ್ನು ನಿಲ್ಲಿಸುವುದಾಗಿ ಮಂದಿರದವರು ಪ್ರಕಟಿಸಿದರು.

ಈ ಪ್ರತಿಬಂಧಕದ ಅವಧಿಯು ಕೇವಲ ಒಂದು ವಾರ ಮಾತ್ರ. ಅದರಲ್ಲೂ ಒಂದು ದಿವಸ ಕಳೆದು ಹೋಯಿತು. ಎರಡನೇ ದಿವಸ ಬಹಳ ತಡವಾಗಿ ತಿಳಿಸಲ್ಪಟ್ಟಿತು. ಇದರಿಂದ ಈ ನಿರ್ಬಂಧವನ್ನು ಹಾಕಬೇಕೆಂದು ಸೂಚಿಸಿದವರ ಉದ್ದೇಶವು ಪೂರ್ಣವಾಗಿ ಈಡೇರಲಿಲ್ಲ. ತ್ವರಿತವಾಗಿ ಕೈಗೊಳ್ಳಬೇಕಾದ ಕಾರ್ಯಕ್ರಮದ ಬಗ್ಗೆ ಸಾರ್ವಜನಿಕರು ಕಲೆತು ನೀಡಿದ ಸಲಹೆಯು ಇಷ್ಟು ನಿಧಾನವಾಗಿ ಅನುಷ್ಠಾನಕ್ಕೆ ಬಂದಿರುವುದು ಸಮರ್ಪಕವಲ್ಲ. ಈ ನಿರ್ಧಾರಕ್ಕೆ ಬಂದ ಉತ್ತರ ಕ್ಷಣದಲ್ಲಿಯೇ ಆಜ್ಞೆಯು ಹೊರಡಬೇಕಾಗಿತ್ತು. ಮರುಕ್ಷಣದಲ್ಲಿ ಜಾರಿಯಾಗಬೇಕಾಗಿತ್ತು. ಆಜ್ಞೆ ಹೊರಡಲು ಇಪ್ಪತ್ತನಾಲ್ಕು ಗಂಟೆಯಾಯಿತು. ಜಾರಿಯಾಗಲು ಇನ್ನೂ ಇಪ್ಪತ್ತನಾಲ್ಕು ಗಂಟೆಗಿಂತ ಹೆಚ್ಚಾಯಿತು.

ಜಿಲ್ಲಾಧಿಕಾರಿಗಳು ಊರಿನಲ್ಲಿರಲಿಲ್ಲವೆಂದು ಕೇಳುತ್ತೇವೆ. ಆದರೆ ಇದ್ದವರೇ ಕಾರ್ಯ ತರದೂದು ಮಾಡಬೇಕಾಗಿತ್ತು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚೆಂಗಲರಾಯ ರೆಡ್ಡಿಯವರು ಬಂದಾಗ ಟೋಲುಗೇಟು ಬಳಿಯ ಸಭೆಗೂ ಪ್ರತಿಬಂಧಕವನ್ನು ಜಾರಿಗೆ ಉತ್ಸಾಹದಲ್ಲಿ ಅರ್ಥವನ್ನಾದರೂ ಈ ಸಮಯದಲ್ಲಿ ತೋರಬಾರದಾಗಿತ್ತೇ?

ಶಾಸನಿಮವರಿಂದ ಬಂದ ಇಂತಹ ಸಲಹೆಗಳಿಗೂ ಅಧಿಕಾರಿಗಳು ತಮ್ಮ ಪ್ರಯತ್ನಗಳಿಗೆ ಕೊಡುವಷ್ಟೇ ಪ್ರಾಮುಖ್ಯತೆಯನ್ನು ಕೊಡಬೇಕಲ್ಲವೇ?

ನಿಯೋಗದ ಆಗಮನ

ಅಂತರ ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ ಭಾಗವಹಿಸಲು ಭಾರತಕ್ಕೆ ಆಗಮಿಸಿರುವ ಇಂಡೊನೇಷಿಯಾ ನಿಯೋಗದ ಪ್ರತಿನಿಧಿಗಳು ೯ ನೇ ತಾ॥ ಬೆಂಗಳೂರಿಗೆ [illegible] ಎಂದು ಗೊತ್ತಾಗಿದೆ.

ಯಳಂದೂರು ವಿದ್ಯಾರ್ಥಿಗಳ ಸಹಾಯ ನಿಧಿ

ಯಳಂದೂರು ಜಹಗೀರಿನ ಬಡ ವಿದ್ಯಾರ್ಥಿಗಳಿಗೆ ಸಹಾಯ ನೀಡಲು ನಿಧಿಯೊಂದನ್ನು ಸೇರಿಸಲಾಗುತ್ತಿದೆಯಷ್ಟೆ. ಕಳೆದ ೨೭ ವರ್ಷಗಳಲ್ಲಿ ಈ ನಿಧಿಯಿಂದ ಎಲ್ಲಾ ಕೋಮುಗಳ ೩೨೦ ವಿದ್ಯಾರ್ಥಿಗಳಿಗೆ ೨೧೪೩೮ ರೂಪಾಯಿಗಳನ್ನು ಹಂಚಲಾಗಿದೆ. ಈ ನಿಧಿಗೆ ಶ್ರೀಮಂತ ಯಳಂದೂರು ಜಹಗೀರುದಾರರು ಮಹಾ ಪೋಷಕರಾಗಿದ್ದಾರೆ.

ಯಳಂದೂರಿನಲ್ಲಿ ವಾಸವಾಗಿರುವವರೂ ಸಂಬಂಧಪಟ್ಟವರೂ ಜಹಗೀರು ವಿದ್ಯಾರ್ಥಿಗಳ ಅಭಿವೃದ್ಧಿಯಲ್ಲಿ ಮಮತೆ ಇರುವವರೂ ಈ ನಿಧಿಗೆ ಸದಸ್ಯರಾಗಬಹುದು.

ಈ ನಿಧಿಯ ಮೇಲ್ವಿಚಾರಣಾ ಸಮಿತಿಗೆ ಶ್ರೀಗಳಾದ ನಿವೃತ್ತ ಹೈಕೋರ್ಟು ನ್ಯಾಯಾಧೀಶರಾದ ಡಿ. ಕೆ. ರಾಮರಾಯರು ಅಧ್ಯಕ್ಷರಾಗಿಯೂ, ನಿವೃತ್ತ ಮೈಸೂರು ರೈಲ್ವೆ ಜನರಲ್ ಮ್ಯಾನೇಜರ್ ರಾಜಸೇವಾ ಪ್ರಸಕ್ತ ವೈ. ಕೆ. ರಾಮಚಂದ್ರರಾಯರು ಕಾರ್ಯದರ್ಶಿಗಳಾಗಿಯೂ ಇರುವರು.

ಇನ್ನು ಮುಂದೆ ಪ್ರತಿವರ್ಷವೂ ೮೦ ಹುಡುಗರಿಗೆ ಸುಮಾರು ೧೮೦೦ ರೂ ಗಳವರೆಗೆ ಸಹಾಯ ಮಾಡಬೇಕಾಗಿರುತ್ತದೆಯಾಗಿ ಯಳಂದೂರು ಬಡ ವಿದ್ಯಾರ್ಥಿಗಳ ಪುರೋಭಿವೃದ್ಧಿಯಲ್ಲಿ ಮಮತೆಯಿರುವ ಸರ್ವರಿಂದಲೂ ಹಿಂದಿನಂತೆ ಮುಂದೆಯೂ ಫಂಡಿಗೆ ವಿಶೇಷ ಸಹಾಯವನ್ನು ಕಾರ್ಯದರ್ಶಿಗಳು ಕೋರಿರುತ್ತಾರೆ.

ಪಂಜಾಬಿಗೆ ಗಾಂಧೀಜಿ

ಮಹಾತ್ಮಗಾಂಧಿಯವರು ಒಂದು ವಾರ ಕಾಲ ಪಂಜಾಬಿನ ಗಲಭೆ ಪ್ರದೇಶಗಳಿಗೆ ಭೇಟಿ ಕೊಡುವ ಸಂಭವವಿದೆ. ಅವರು ಪಂಜಾಬಿಗೆ ಬರಬೇಕೆಂದು ತಂತಿ ಮೂಲಕ ಅನೇಕ ಮಂದಿ ಪ್ರಾರ್ಥಿಸಿದ್ದಾರೆಂದು ಹೇಳಲಾಗಿದೆ. ಅಟಕ್ ಜಿಲ್ಲೆಯವರ ಪರವಾಗಿ ಲಾಲಾ ಬಾಲಮುಕುಂದ ವಿಜಯಾರವರ ನಾಯಕತ್ವದಲ್ಲಿ ನಿಯೋಗವೊಂದು ಮೊನ್ನೆ ಮಹಾತ್ಮರನ್ನು ಭೇಟಿ ಮಾಡಿ ಪರಿಸ್ಥಿತಿಯನ್ನು ವಿವರಿಸಿತು.

ಚಾಮುಂಡೇಶ್ವರೀ ಚಿತ್ರ

ಶಿವಮೊಗ್ಗ ಜಿಲ್ಲಾ ಸಾಗರ ಟೌನಿನ ಕೃಷ್ಣಾ ಟಾಕೀಸ್ ಎದುರುಗಿರುವ ಚಾವಡಿಯಲ್ಲಿ ಚಾಮುಂಡೇಶ್ವರೀ ಅಮ್ಮನವರ ಸುಮಾರು ೨॥ ಅಡಿ ಚದರದ ಒಂದು ಸುಂದರವಾದ ಭಾವಚಿತ್ರವಿದೆ. ಹಿಂದೆ ಇದಕ್ಕೆ ಪ್ರತಿದಿನವೂ ಪೂಜೆ, ಪುನಸ್ಕಾರಗಳು ಚೆನ್ನಾಗಿ ನಡೆಯುತ್ತಿದ್ದುವು. ಈಗ ಆ ಚಿತ್ರವು ಹರಿದು ಹೋಗಿ ಕೇಳುವವರಿಲ್ಲದೆ ಮೂಲೆ ಪಾಲಾಗಿದೆ. ಸರ್ಕಾರದವರು ಕೂಡಲೇ ಇದರ ಕಡೆ ಗಮನಕೊಟ್ಟು ಚಿತ್ರವನ್ನು ಸರಿಪಡಿಸಿ ಹಿಂದಿನಂತೆ ಪೂಜಾದಿಗಳು ನಡೆಯುವಂತೆ ಏರ್ಪಾಡು ಮಾಡಬೇಕೆಂದು ರೈಲ್ವೆ ವರ್ಕ್‌ಷಾಪ್ ಪೆಯಿಂಟರ್ ಶ್ರೀ ರಂಗಪ್ಪನವರು ಪ್ರಾರ್ಥಿಸಿರುತ್ತಾರೆ.

Edited, printed and published by A. K. [illegible] at the Sadhvi Press, [illegible] Road, M[illegible]

ಗುಡ್ಡಗಾಡಿನವರು ಸಂಘಟನೆಗೆ ಸಿದ್ಧ

ಬ್ರಿಟಿಷರು ಭಾರತವನ್ನೂ, ವಜೀರಿಸ್ಥಾನವನ್ನೂ ಬಿಟ್ಟು ಹೋಗುವಂತೆ ಕಾಂಗ್ರೆಸ್ ಮಹಾ ಸಂಸ್ಥೆಯು ಮಾಡಿರುತ್ತದೆ. ಆದರೊಡನೆ ಗುಡ್ಡಗಾಡಿನ ಜನರು ಒಪ್ಪಂದ ಮಾಡಿಕೊಳ್ಳಲು ತಯಾರಿದ್ದಾರೆ-ಎಂಬುದಾಗಿ ಗುಡ್ಡಗಾಡಿನ ಜನರ ನಾಯಕರಾದ ಇಫಿ ಫಕೀರರು ಸಹಿ ಮಾಡಿರುವ ಸಾವಿರಾರು ಹಸ್ತ ಪತ್ರಿಕೆಗಳನ್ನು ವಜೀರಿಸ್ಥಾನದಲ್ಲೆಲ್ಲಾ ಹಂಚಲಾಗಿದೆಯೆಂದು ಗೊತ್ತಾಗಿದೆ.

ಸದ್ಗುರುಗಳ ಆರಾಧನೋತ್ಸವ

ಮೈಸೂರು ೮

ಈವತ್ತು, ನಾಳೆ, ನಾಳಿದ್ದು ಶ್ರೀ ಕೂಡಲೀ ಮಹಾ ಸಂಸ್ಥಾನಾಧೀಶ್ವರ ಶ್ರೀ ವಿದ್ಯಾಭಿನವ ವಾಲುಕೇಶ್ವರ ಭಾರತೀ ಶ್ರೀ ಶ್ರೀ ಗಳವರ ಹನ್ನೊಂದನೆಯ ವಾರ್ಷಿಕಾರಾಧನೋತ್ಸವವು ಶ್ರೀಮನ್ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲಾ ಆವರಣದಲ್ಲಿರುವ ಶ್ರೀ ಗುರುಗಳವರ ದೇವಾಲಯದಲ್ಲಿ ನಡೆಯುತ್ತದೆ. ಆಸ್ತಿಕ ಮಹನೀಯರೆಲ್ಲರೂ ಉದಾರವಾಗಿ ಸಹಾಯನೀಡಿ, ಉತ್ಸವದಲ್ಲಿ ಸಹಕರಿಸಬೇಕಾಗಿ ಪ್ರಾರ್ಥಿಸಲಾಗಿದೆ.

ವಿಶ್ವವಿದ್ಯಾನಿಲಯದ ಕೌನ್ಸಿಲ್ಲಿಗೆ ನಾಮಕರಣ

ರಾಜೀನಾಮೆ ಕೊಟ್ಟ ಫಾದರ್ ಕ್ವೆಗ್ಲರ್ ರವರ ಸ್ಥಾನದಲ್ಲಿ ರಾಜಧಾನಿಯ ಸೆಂಟ್ ಫಿಲೋಮಿನ ಕಾಲೇಜಿನ ಪ್ರಿನ್ಸಿಪಾಲರಾದ ರೆ॥ ಫಾದರ್ ಸಿ ಬ್ರೌನ್‌ರವರನ್ನು ವಿಶ್ವವಿದ್ಯಾನಿಲಯದ ಕೌನ್ಸಿಲಿನ ಸದಸ್ಯರನ್ನಾಗಿ ನಾಮಕರಣ ಮಾಡಲಾಗಿದೆ.

ರಾಜಕಮಲ್

೬-೪-೪೭ ರಿಂದ ಅಪೋಘ ವಾದ ೬ನೇ ವಾರ

ಮ್ಯಾಟಿನಿ ಮಧ್ಯಾಹ್ನ 3 ಗಂಟೆಗೆ

ಮೊದಲನೇ ಆಟ ಸಂಜೆ 6-15 ಕ್ಕೆ ಗಂಟೆಗೆ

ಶ್ರೀ ಕೃಷ್ಣಲೀಲಾ (ಕನ್ನಡದಲ್ಲಿ)

ಮೈಸೂರಿನಲ್ಲಿ ತಯಾರಿಸಿ, ಮಹಾಜನಗಳ ಮನ್ನಣೆಗೆ ಪಾತ್ರವಾಗಿರುವ ಈ ಪುರಾಣ ವೈಭವವನ್ನು ನೋಡಲು ತಪ್ಪದೇ ಬನ್ನಿ

ಜಿಲ್ಲಾ ಬೋರ್ಡು ಚುನಾವಣೆ

೨೮-೪-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗೆ ಕಂಡ ಕಾಂಗ್ರೆಸ್ ಉಮೇದುವಾರರಿಗೇ

-: ದಯವಿಟ್ಟು ಓಟು ಕೊಡಿ :-

ಹೆಚ್. ಲಿಂಗಪ್ಪ B. Sc., LL.B

ಹೆಚ್. ಎಂ. ನಾಗಪ್ಪ (ಹುಲ್ಲಹಳ್ಳಿ)

ಎಂ. ಲಿಂಗಣ್ಣ B. Sc., LL.B

ಸಾಧ್ವಿ

ಈ ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ವೀರಶೈವ ಸಮ್ಮೇಳನ

ಮದ್ರಾಸ್ [illegible]

ಇದೇ ೧೪ ನೇ ತಾ॥ ಸೋಮವಾರ ಮ[illegible] ಮುತ್ತಯ್ಯ ಚೆಟ್ಟಿಯಾರ್ ರವರ ಹ[illegible]ಲ್ ಭವನದಲ್ಲಿ ಮದ್ರಾಸ್ ಪ್ರಾಂ[illegible] ವೀರಶೈವರ ಸಮ್ಮೇಳನವು ಜರುಗು[illegible] ಇದರ ಆರಂಭೋತ್ಸವವನ್ನು ಉರು[illegible]ಡಿ ಗವಿಮಠಾಧ್ಯಕ್ಷರಾದ ಶ್ರೀ ಜಗ[illegible] ಕರಿಬಸವ ರಾಜೇಂದ್ರ ಸ್ವಾಮಿಗಳು [illegible]ರಿಸುವರು. ಅಧ್ಯಕ್ಷತೆಯನ್ನು ಬಳ್ಳಾ[illegible] ರಾವ್ ಬಹದ್ದೂರ್ ವೈ ಮಹಾಬಲೇ[illegible]ಪ್ಪನವರು ವಹಿಸುವರು. ಪ್ರತಿನಿಧಿ[illegible] ಊಟ ವಸತಿಗಳ ಸೌಕರ್ಯ ಏರ್ಪಡಿ[illegible]ಲಾಗಿದೆ. ಶುಲ್ಕ ಎರಡು ರೂಪಾಯಿ[illegible]ತ್ತು. ವೀರಶೈವ ವಿಶ್ವವಿದ್ಯಾನಿಲಯ[illegible]ದನೆ ಸಂಬಂಧವಾಗಿ ಮೈಸೂರು ವೀ[illegible] ಸಂಘದ ಡಾ॥ ಕಾರ್ಯದರ್ಶಿಗಳಾದ ಎಸ್. ಪುಟ್ಟವೀರಯ್ಯನವರು ಆಹ್ವಾನಿ[illegible]ಟ್ಟಿದ್ದಾರೆ. ಸಮ್ಮೇಳನಕ್ಕೆ ಪ್ರತಿನಿಧಿ[illegible] ಬರುವವರು ಮದ್ರಾಸ್ ತಂಬೂಚೆಟ್ಟಿ[illegible] ಬೀದಿಯಲ್ಲಿ ೨೮೯ ನೇ ನಂ. ಭವನದಲ್ಲಿ[illegible] ಸ್ವಾಗತ ಸಮಿತಿ ಕಾರ್ಯಾಲಯಕ್ಕೆ [illegible]ರ್ವಭಾವಿಯಾಗಿ ತಿಳಿಸಬೇಕೆಂದು [illegible]ಲಾಗಿದೆ.

ನಿಮ್ಮ ಮೈ ನೊಕಮಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ನಾಯಿಕೆಮ್ಮಿನ ಔಷಧಿ

7–8 ದಿವಸಗಳಲ್ಲೇ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರ್ಲು—ಉಬ್ಬಸಕ್ಕೆ (Asthma)

ಖಾತರಿಯಾದ ಔಷಧಿ ದೊರೆಯು[illegible] ಅನೇಕ ದೊಡ್ಡ ಮನುಷ್ಯರು ಬಂಗಾ[illegible]ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊ[illegible]ದ್ದಾರೆ.

(Appendecitis) ಗುಲ್ಮ ಕ[illegible] ಮತ್ತು (Tonsils) ಗಲಾಯಿಕ ರ[illegible]ಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸು[illegible] ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್ ಎಸ್ ಪಂಡಿತ[illegible] ದಿವಾನ್ಸ್ ರೋಡ್, ಗೊಲ್ಲಗೇರಿ ಮೈಸೂ[illegible]

ರೋ||. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೯—೪—೪೭ [ಸಂಚಿಕೆ ೨೦೫

ತಿರುಪತಿ ದೇವಸ್ಥಾನಕ್ಕೆ ಹರಿಜನರ ಪ್ರವೇಶ

ತಿರುಪತಿ ದೇವಾಲಯಕ್ಕೆ ಹರಿಜನರು

ತಿರುಪತಿ ದೇವಸ್ಥಾನದಲ್ಲಿ ಹರಿಜನರ ಪ್ರವೇಶಕ್ಕೆ ಅವಕಾಶವೀಯಬೇಕೆಂದು ಮದ್ರಾಸ್ ಸರ್ಕಾರವು ದೇವಾಲಯದ ಅಧಿಕಾರಿಗಳಿಗೆ ಆಜ್ಞೆಯಿತ್ತಿದೆ. ದೇವಸ್ಥಾನದ ಮೇಲ್ವಿಚಾರಣಾ ಸಮಿತಿಗೆ ಶಾಸನ ಸಭೆಯ ಹರಿಜನ ಸದಸ್ಯರೊಬ್ಬರನ್ನೂ ಸಹ ನೇಮಿಸಲಾಗಿದೆ. ಈ ಸಮಿತಿಗೆ ಹರಿಜನ ಸದಸ್ಯರನ್ನು ನೇಮಕ ಮಾಡಿರುವುದು ಇದೇ ಮೊದಲು.

ಭಾರತ ಮಂತ್ರಿಯ ರಾಜೀನಾಮೆ

ಇಂಡಿಯಾ ಸ್ಟೇಟ್ ಸೆಕ್ರೆಟರಿ ಲಾರ್ಡ್ ಪೆಥಿಕ್ ಲಾರೆನ್ಸರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವರೆಂದೂ, ೧೯೪೮ ರ ಜೂನ್ ತಿಂಗಳಿನಲ್ಲಿ ಅಧಿಕಾರ ವರ್ಗಾವಣೆಯಾಗುವ ವರೆಗೆ ಪ್ರಧಾನಿ ಮಿ|| ಅಟ್ಲೀಯವರೇ ಈ ಕೆಲಸವನ್ನು ನೋಡಿಕೊಳ್ಳುವರೆಂದೂ, ಲಂಡನ್ನಿನ ರಾಜಕೀಯ ವಲಯಗಳಲ್ಲಿ ಹೇಳಲಾಗುತ್ತಿದೆ.

ಡೈರೆಕ್ಟರುಗಳ ಚುನಾವಣೆ

ಮೈಸೂರು ೯

ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿಯ ೪ ನೇ ವಾರ್ಷಿಕ ಸಭೆಯು ಮೊನ್ನೆ ಕೋ-ಆಪರೇಟಿವ್ ಹಾಲಿನಲ್ಲಿ ಸೇರಿ, ಖಾಲಿಯಾಗಿದ್ದ ಡೈರೆಕ್ಟರುಗಳ ಸ್ಥಾನದಲ್ಲಿ ಹೊಸಬರನ್ನು ಆರಿಸಿತು. ವೈದ್ಯ ಡೈರೆಕ್ಟರುಗಳ ಸ್ಥಾನಕ್ಕೆ ಪಂ|| ಕೆ. ಪಿ. ಪುಟ್ಟಣ್ಣಯ್ಯ ಮತ್ತು ಡಾ|| ಎಚ್. ಎಸ್. ಕೃಷ್ಣಮೂರ್ತಿಯವರೂ, ವೈದ್ಯೇತರ ಡೈರೆಕ್ಟರ್ ಸ್ಥಾನಕ್ಕೆ ಶ್ರೀ|| ಬಿ. ಗೋಪಾಲಯ್ಯನವರೂ ಆರಿಸಲ್ಪಟ್ಟಿದ್ದಾರೆ.

ಶ್ರೀ ರಾಮೋತ್ಸವ ಕಾರ್ಯಕ್ರಮಗಳು

ಗಾನ ವಿಹಾರದ ಏರ್ಪಾಡಿನಂತೆ ಶ್ರೀಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಎಂದಿನಂತೆ ಈ ಸಾರಿಯೂ ಶ್ರೀ ರಾಮೋತ್ಸವದ ಸಂಬಂಧವಾಗಿ ಅನೇಕ ಘನವಾದ ಸಂಗೀತ ಕಛೇರಿಗಳು ನಡೆಯುತ್ತಿವೆ. ಗೊತ್ತಾಗಿರುವ ಕಾರ್ಯಕ್ರಮದಂತೆ ಕಛೇರಿಗಳು ನಡೆದು ಶ್ರೋತೃಗಳಿಗೆ ಸಂತೋಷವನ್ನುಂಟುಮಾಡುತ್ತಿವೆ.

ಸಂಕೀರ್ತನ ಪಿತಾಮಹರಾದ ಶ್ರೀ ...ರಾಮರವರಿಂದ ಈ ದಿನ ಸಂಜೆ ೬-೩೦ ಘಂಟೆಗೆ ಹರಿಕಥೆಯೂ, ಶ್ರೀ ... ಇವರಿಂದ ನಾಗಸ್ವರವೂ ನಡೆಯುತ್ತವೆ.

ಹೆನ್ರಿ ಫೋರ್ಡರ ನಿಧನ

ಅಮೆರಿಕದ ಸುಪ್ರಸಿದ್ಧ ಮೋಟಾರು ತಯಾರಿಕೆಗಾರರಾದ ಮಿ|| ಹೆನ್ರಿ ಫೋರ್ಡರು ಮೊನ್ನೆ ತಮ್ಮ ೮೩ ನೇ ವಯಸ್ಸಿನಲ್ಲಿ ನಿಧನರಾದರು. ಅವರ ಮರಣಕ್ಕೆ ಕಾರಣವೇನೆಂಬುದು ಗೊತ್ತಾಗಿಲ್ಲ. ಕಳೆದ ೧೮ ತಿಂಗಳ ಹಿಂದೆ ತಮ್ಮ ಕಾರ್ಖಾನೆಯ ಆಡಳಿತವನ್ನು ತಮ್ಮ ಮೊಮ್ಮಗನಿಗೆ ವಹಿಸಿ ಅವರು ವಿಶ್ರಾಂತಿಯನ್ನನುಭವಿಸುತ್ತಿದ್ದರು.

ಸಚಿವರ ನಿವಾಸಗಳ ಮೇಲೆ ಧಾಳಿ

ಬರ್ಮಿಂಗ್‌ಹ್ಯಾಂ ಮತ್ತು ಕರ್ನಾಟಿಕ್ ಗಿರಣಿ ಕೆಲಸಗಾರರ ಮುಷ್ಕರದ ಬಗ್ಗೆ ಸಹಾನುಭೂತಿ ತೋರಿಸುವ ಸಲುವಾಗಿ ಮದರಾಸ್ ಮಂತ್ರಿಮಂಡಲದ ಸಚಿವರುಗಳ ಬಂಗಲೆಯ ಮುಂದೆ ಅನೇಕ ಜನ ಸ್ತ್ರೀಯರು ಪ್ರದರ್ಶನ ನಡೆಸುವುದರಿಂದ ಪೊಲೀಸರು ಅವರುಗಳ ಮೇಲೆ ಟಿಯರ್ ಗ್ಯಾಸ್ ಪ್ರಯೋಗ ಮಾಡಿ ಗುಂಡಿನ ಪ್ರಯೋಗ ನಡೆಸಿದರೆಂದು ವರದಿಯಾಗಿದೆ.

ನರೇಂದ್ರರುಗಳಿಗೆ ಪಾಟಿ ಯಾಲಾ ರಾಜರ ಸೂಚನೆ

ಭಾರತದ ಸ್ವಾತಂತ್ರ್ಯವು ಹತ್ತಿರವಾಗುತ್ತಿರುವಾಗ ನಾವು ಹಗ್ಗಜಗ್ಗಾಟ ಮಾಡದೆ ಬಲಿಷ್ಠವಾದ ದೀರ್ಘದೃಷ್ಟಿಯಿಂದ ಶಕ್ತಿಶಾಲಿಯಾದ ಸಂಯುಕ್ತ ರಾಜ್ಯಾಂಗ ರಚನೆಗೆ ಸಹಕಾರ ನೀಡಿ, ಅಧಿಕಾರವು ಶಾಂತ ರೀತಿಯಿಂದ ಭಾರತೀಯರ ಹಸ್ತಗತವಾಗುವುದಕ್ಕಾಗಿ ಯುಕ್ತವಾಗಿದೆ. ಸಂಸ್ಥಾನಾಧೀಶರು ರಾಜ್ಯಾಂಗ ರಚನೆಯಲ್ಲಿ ಸಹಕರಿಸುವ ಮಾರ್ಗವನ್ನನುಸರಿಸುವುದರಿಂದ ಸ್ವತಂತ್ರ ಭಾರತದ ಪ್ರಗತಿಯು ಸಾಧನೆಯಾಗುವುದಲ್ಲದೆ ಭವಿಷ್ಯ ಭಾರತದಲ್ಲಿ ತಮಗೂ ಯೋಗ್ಯ ಸ್ಥಾನವನ್ನು ಪಡೆಯಲು ಅವಕಾಶವಾಗುವುದು ಎಂಬುದಾಗಿ ಪಾಟಿಯಾಲಾ ಮಹಾರಾಜರು ಒಂದು ಸಂದೇಶದಲ್ಲಿ ತಿಳಿಸಿದ್ದಾರೆ.

ಮಹಾ ಪೂಜೆ

ಮೈಸೂರು ೯

ಕಳೆದ ೧ ನೇ ತಾ|| ಬ್ರಹ್ಮೈಕ್ಯರಾದ ಶ್ರೀ ವಿಮಲಾನಂದ ತೀರ್ಥ ಸ್ವಾಮಿಗಳವರ (ಎಸ್. ಎನ್. ಪಂಡಿತರ) ಮಹಾ ಪೂಜೆಯು ನಾಳೆ ಬೆಳಿಗ್ಗೆ ೮ ಘಂಟೆಗೆ ಹಳೇ ಅಗ್ರಹಾರದ ಪಕ್ಕದಲ್ಲಿರುವ ಮಠದಲ್ಲಿ ನಡೆಯುವುದು.

ಶ್ರೀ ಹಳೇ ಅಗ್ರಹಾರದ ... ಬೀದಿಯಲ್ಲಿರುವ ಶ್ರೀ ಜಾನಕೀ ರಾಮ ಮಂದಿರದಲ್ಲಿ ಈ ದಿನ ರಾತ್ರಿ ೯ ಘಂಟೆಗೆ ಶ್ರೀ ... ಮತ್ತು ಪಾರ್ಟಿಯವರಿಂದ ...

ತಿರುವಾಂಕೂರು ಸುಧಾರಣೆಗಳು

ತಿರುವಾಂಕೂರಿನಲ್ಲಿ ಜಾರಿಗೆ ಬರುವ ಹೊಸ ರಾಜ್ಯಾಂಗದ ವ್ಯವಸ್ಥೆಯ ಬಗ್ಗೆ ೬೯ ನಿಬಂಧನೆಗಳನ್ನು ಸಿದ್ಧಗೊಳಿಸಿ ಅದನ್ನು ಪ್ರಕಟಿಸಲಾಗಿದೆ. ಅದರಲ್ಲಿ ಮೊದಲನೆಯ ಭಾಗವು ಶಾಸನಗಳಿಗೂ, ಎರಡನೆಯದು ಕಾರ್ಯನಿರ್ವಹಣೆಗೂ, ಮೂರನೆಯದು ಹೊಸ ರಾಜ್ಯಾಂಗದ ರೀತಿ ನ್ಯಾಯಾಂಗ ಶಾಖೆಗೂ ಮತ್ತು ನಾಲ್ಕನೆಯದು ಶಾಸನ ಸಭೆಗೆ ಸಂಬಂಧಿಸಿದಂತೆ ಕೆಲವು ಇತರ ಶಾಸನಗಳಿಗೂ ಅನ್ವಯಿಸುವುದು. ಇದರಂತೆ ಶಾಸನ ಸಭೆಗೆ ಬಜೆಟ್, ಕಾರ್ಯ ನಿರ್ವಹಣಾ ಸಮಿತಿಗಳು, ಇವುಗಳ ಮೇಲೆ ವಿಶೇಷ ಅಧಿಕಾರವಿರುವುದು. ದಿವಾನರು ಕಾರ್ಯನಿರ್ವಾಹಕ ಮುಖಂಡರಾದರೂ ಸಹ ಕೆಲವು ಅನಿವಾರ್ಯ ಸಂದರ್ಭಗಳಲ್ಲಿ ಹೊರತು ಉಳಿದೆಲ್ಲಾ ವಿಷಯಗಳಲ್ಲಿಯೂ ಕಾರ್ಯನಿರ್ವಾಹಕ ಸಮಿತಿಯ ತೀರ್ಮಾನದಂತೆಯೇ ವರ್ತಿಸಬೇಕಾಗುವುದು.

ಧರ್ಮಶಾಲೆ

ನಂಜನಗೂಡು ೯

ನಂಜನಗೂಡು ಶ್ರೀ ಶಂಕರ ಮಠದ ಪಶ್ಚಿಮ ಭಾಗದಲ್ಲಿ, ಬ್ರಾಹ್ಮಣರ ಉಪನಯನ, ವಿವಾಹಾದಿ ಶುಭ ಕಾರ್ಯಗಳನ್ನು ನಡೆಸಲು ಅನುಕೂಲವಾಗುವಂತೆ ತಮ್ಮ ತಂದೆ ವೇ|| ಸ್ವರ್ಣವಧಾನಿ ನಂಜುಂಡಾವಧಾನಿಗಳ ಜ್ಞಾಪಕಾರ್ಥವಾಗಿ ಕಟ್ಟಿಸಿರುವ ಧರ್ಮಶಾಲೆಯ ಪ್ರವೇಶೋತ್ಸವವನ್ನು ಬಿ. ಸುಬ್ರಹ್ಮಣ್ಯ ಬಿ. ಎ. ಪಂಡಿತರು ನಾಳೆ ಬೆಳಿಗ್ಗೆ ೮ ಗಂಟೆಗೆ ನೆರವೇರಿಸಿ ಅದನ್ನು ಶ್ರೀ ಶೃಂಗೇರಿ ಮಠಕ್ಕೆ ವಹಿಸಿಕೊಡಲು ನಿಶ್ಚಯಿಸಿದ್ದಾರೆ.

ಹೋಟೇಲ್ ಕೆಲಸಗಾರರ ಸಂಘ

ರಾಜಧಾನಿಯ ಹೋಟೇಲ್ ಕೆಲಸಗಾರರ ಸಂಘದವರು ಕಳೆದ ಭಾನುವಾರ ಸಭೆ ಸೇರಿ ಈ ಕೆಳಗೆ ಕಂಡ ನಿರ್ಣಯಗಳನ್ನು ಅಂಗೀಕರಿಸಿದರು:- ಕೆಲವು ಹೋಟೇಲು ಮಾಲೀಕರು ತಮ್ಮ ಕೆಲಸಗಾರರು ಸಂಘಕ್ಕೆ ಸೇರುವುದಕ್ಕಾಗಿ ಅವರಿಗೆ ಕಿರುಕುಳ ಕೊಡುವುದು ಮತ್ತು ಕೆಲಸದಿಂದ ತೆಗೆದಿರುವುದನ್ನು ಖಂಡಿಸುವುದು, ಮೈಸೂರು ಕಾಂಗ್ರೆಸ್ಸು ಒದಗುವ ದಿನಗಳಲ್ಲಿ ಸತ್ಯಾಗ್ರಹ ಹೂಡಬೇಕೆಂದು ನಿರ್ಣಯಿಸಿರುವುದಕ್ಕೆ ಬೆಂಬಲ ನೀಡುವುದು ಮತ್ತು ಕೆಲಸಗಾರರ ಹಿತದೃಷ್ಟಿಯಿಂದ ಸಂಸ್ಥಾನದಲ್ಲೆಲ್ಲಾ ಶಾಪ್ಸ್ ಆಕ್ಟ್ ಕಾನೂನನ್ನು ಜಾರಿಗೆ ತರಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವುದು.

ವಾರ್ಷಿಕೋತ್ಸವ

ಇದೇ ೧೪ ನೇ ತಾ|| ಸೋಮವಾರ ಸಂಜೆ ೬ ಘಂಟೆಗೆ ಮೈಸೂರು ಅಹೋಬಲ ಮಠದಲ್ಲಿ ಶಿಲ್ಪ ಕ್ಲಬ್‌ನ ಸಂಘದ ಅಧ್ಯಕ್ಷರಾದ ಶ್ರೀ|| ಡಿ. ವಿ. ರಾಜಗೋಪಾಲರವರ ಅಧ್ಯಕ್ಷತೆಯಲ್ಲಿ "ಶಿವಂ ಸತ್ಯಂ ಸುಂದರಂ" ಎಂಬ ಕೈಬರಹದ ತಿಂಗಳು ಪತ್ರಿಕೆಯ ಎರಡನೇ ವಾರ್ಷಿಕೋತ್ಸವವು ಜರುಗುವುದು. ಸರ್ವರಿಗೂ ಸ್ವಾಗತವಿದೆ.

ಪಿಟೀಲು ಸಂಗೀತವನ್ನು ಏರ್ಪಡಿಸಿದೆ

ಈ ದಿನ ರಾತ್ರಿ ... ದೇವೀರಮ್ಮಣ್ಣಿ ಅಗ್ರಹಾರದ ಶ್ರೀ ರಾಮ ಸೇವಾ ಸಂಘದವರು ... ಎಸ್. ಎನ್. ... ಅವರ ಪಿಟೀಲು ಮತ್ತು ... ಮೃದಂಗಗಳೊಡನೆ ನಡೆಯುವುದು.

ಇಂಡೋನೇಷ್ಯಾ ನಿಯೋಗದವರ ಆಗಮನ

[ಬೆಂಗಳೂರು ೯

... ಯಲ್ಲಿ ನಡೆದ ಅಂತರ ಏಷ್ಯಾ ಸಮ್ಮೇಳನಕ್ಕೆ ಬಂದಿದ್ದ ಇಂಡೋನೇಷಿಯಾ ... ಪೈಕಿ ೧೩ ಜನರ ನಿಯೋಗವು ... ಬೆಳಗ್ಗೆ ವಿಮಾನದಲ್ಲಿ ಇಲ್ಲಿಗೆ ಬಂದಿತು. ದಕ್ಷಿಣ ... ದೇಶದಿಂದ ಆಕ್ರಮಿಸಿರುವ ... ಅವರು ಈದಿನ ... ಮಂತ್ರಿಗಳೊಡನೆ ಚರ್ಚಿಸಿ...

ದಕ್ಷಿಣ ಭಾರತದ ಆಹಾರ ಅಧಿಕಾರಿ ಶ್ರೀ|| ಗೋಪಾಲಸ್ವಾಮಿಯವರು ... ತಿರುವಾಂಕೂರಿನಿಂದ ಈದಿನ ಬರುವರು. ನಾಳೆದಿನ ನಿಯೋಗದವರೊಂದಿಗೆ ಭೇಟಿ ಕೊಡುವರು.

ಪ್ರಾಂತ ಮಂತ್ರಿಗಳ ಆಗಮನ

... ಪ್ರಾಂತ ಮತ್ತು ಬೇರಾರುಗಳ ... ಮಂತ್ರಿ ಶ್ರೀ|| ದ್ವಾರಕಾನಾಥರು ನಿನ್ನೆ ಇಲ್ಲಿಗೆ ವಿಮಾನದಲ್ಲಿ ... ಅತಿಥಿಗಳಾಗಿರುತ್ತಾರೆ. ... ವರೆಗೆ ಕೋಲಾರ, ಭದ್ರಾವತಿ, ಜೋಗ್, ಮಂಡ್ಯ, ಶಿಂಷಾ, ದೇವರಾಯದುರ್ಗ, ಶ್ರೀರಂಗಪಟ್ಟಣಗಳಿಗೆ ಭೇಟಿಯಿತ್ತು ೧೩ ನೇ ತಾ|| ಮೈಸೂರಿಗೆ ಹೋಗುವರು.

... ಪ್ರಾಂತದ ಮಂತ್ರಿ ಮತ್ತು ಸಚಿವ ಶ್ರೀ|| ರಾಧಾಕೃಷ್ಣ ಬಿಶ್ವಾಸ್ ರವರು ನಾಳೆ ಇಲ್ಲಿಗೆ ಬರುವರು. ... ಗಳನ್ನು ನೋಡುವುದಕ್ಕಾಗಿ ಇಲ್ಲಿ ... ದಿನಗಳು ಇಲ್ಲಿಗೆ ತೆರಳುವರು.

... ರವರು ಮುಂದಿನ ವಾರದ ಮಧ್ಯದಲ್ಲಿ ಇಲ್ಲಿಗೆ ಬರುವರು. ೧೩ ನೇ ... ಯನ್ನು ಕಳೆಯುವರು. ಅವರ ... ನೋಡಲು ಅವರ ಪರ್ಸನಲ್ ... ಶ್ರೀ|| ವಿಶ್ವನಾಥ ಮೊದಲಿಯಾರ್ ... ಗೆ ತೆರಳಿದರು.

... ರದ ಪರಿಸ್ಥಿತಿಯು ಈಗ ಶಾಂತವಾಗಿದೆ. ಇತ್ತೀಚೆಗೆ ಯಾವ ಘಟನೆಗಳೂ ವರದಿಯಾಗಿಲ್ಲ.

... ಲಿಯಲ್ಲಿ ಪುನಃ ಹಾವಳಿ

... ೨ ನೇ ತಾರೀಖಿನಿಂದ ಪುನಃ ದರೋಡೆ, ಕೊಲೆ, ಲೂಟಿ, ದರೋಡೆ ನಡೆಯುತ್ತಿವೆಯೆಂದೂ, ಮುಸಲ್ಮಾನ್ ... ಮುಂದಿರುವ ೩ ಮನೆಗಳಿಗೆ ... ಬೆಂಕಿಯಿಡಲಾಯಿತೆಂದೂ ಆದರೆ ಅದು ... ತಿಳಿದುಬಂದಿದೆ. ... ಶ್ರೀ|| ಸತೀಶಚಂದ್ರ ದಾಸಗುಪ್ತರು ... ಗಾಂಧಿಯವರಿಗೆ ತಂತಿ ಕಳುಹಿಸಿದ್ದಾರೆ. ಮಹಾತ್ಮರು ಬಂಗಾಳ ಪ್ರಧಾನಿ ಸುಹ್ರವರ್ದಿಯವರಿಗೆ ಈ ಬಗ್ಗೆ ... ಕ್ರಮ ಕೈಗೊಳ್ಳಬೇಕೆಂದು ... ದ್ದಾರೆ.

ಕಳ್ಳ ವ್ಯಾಪಾರದ ಪತ್ತೆ

ಚನ್ನರಾಯಪಟ್ಟಣ ೬

... ಚನ್ನರಾಯಪಟ್ಟಣದ ತಾಲ್ಲೂಕು ... ಹಳ್ಳಿಯಲ್ಲಿ ... ಕೃಷ್ಣ ... ಬತ್ತದ ಮೂಟೆಗಳನ್ನು ... ಮೂಲಕ ಹೊರಗೆ ಸಾಗಿಸುತ್ತಿದ್ದ ಕಳ್ಳ ವ್ಯಾಪಾರ ... ಪತ್ತೆ ಹಚ್ಚಿ ... ಇನ್ಸ್‌ಪೆಕ್ಟರ್ ... ಕೈಗೆ ಒಪ್ಪಿಸಿ ... ಮೊಕದ್ದಮೆ ಹೂಡಿದ್ದಾರೆಂದು ತಿಳಿದಿದೆ.

ಸಾಧ್ವಿ

ತಾ|| ೯-೪-೪೭ ಬುಧವಾರ

ಸೌದೆಯ ತೊಂದರೆ

ರಾಜಧಾನಿಯಲ್ಲಿ ಇತ್ತೀಚೆಗೆ ಹೊಗೆ ಸೊಪ್ಪು, ಬೇಳೆ, ಬೆಲ್ಲ, ಬಟ್ಟೆ, ಬೆಂಕಿ ಪೆಟ್ಟಿಗೆ ಮುಂತಾದ ಪದಾರ್ಥಗಳು ಸ್ವಲ್ಪ ಮಟ್ಟಿಗೆ ದೊರೆಯುವಂತೆ ಏರ್ಪಾಡಾಗಿದೆ. ಆದರೆ ಸೌದೆಯ ಅಭಾವವು ದಿನೇ ದಿನೇ ಹೆಚ್ಚುತ್ತಿದೆ. ದಿನಕ್ಕೆ ನಾಲ್ಕಾಣೆಯ ಸೌದೆಯೂ ದೊರೆಯದೆ ಅನೇಕ ಜನರು ಕಷ್ಟಪಡುತ್ತಿದ್ದಾರೆ. ಇದಕ್ಕಾಗಿ ಗಂಟೆ ಗಟ್ಟಲೆ ಕಾದು ಕಾಲವನ್ನೆಲ್ಲಾ ವೆಚ್ಚಮಾಡಬೇಕಾಗಿದೆ.

ಯಾವ ಡಿಪೋವಿನಲ್ಲಿ ನೋಡಿದರೂ ಸೌದೆಯೇ ಕಂಡು ಬರುವುದಿಲ್ಲ. ಪೌರಸಭೆಯವರು ಏರ್ಪಡಿಸಿರುವ ಡಿಪೋಗಳಲ್ಲಿ ಅಭಾವವು ಮತ್ತೂ ಅಧಿಕವಾಗಿರುತ್ತದೆ. ಇತರ ಕಡೆಗಳಲ್ಲಿ ರೂ ಗೆ ಒಂದೂವರೆ ಅಥವಾ ಎರಡು ಮಣ ದೊರೆಯುವುದೂ ದುಸ್ತರವಾಗಿರುತ್ತದೆ. ಅದೂ ಸಹ ಹಸಿಯ ಕಾಡು ಸೌದೆಯಾಗಿರುತ್ತದೆ.

ಪೌರಸಭೆಯವರು ಸೌದೆ ಸರಬರಾಜಿಗಾಗಿ ವಿಶೇಷ ವ್ಯವಸ್ಥೆಗಳನ್ನೇನೋ ಮಾಡುತ್ತಾರೆ. ಲಾರಿ, ಪೆಟ್ರೋಲ್ ಮುಂತಾದ ಸಲಕರಣೆಗಳನ್ನು ಒದಗಿಸಿರುತ್ತಾರೆ. ಆದರೆ ಪುರನಿವಾಸಿಗಳ ಕಷ್ಟವು ಮಾತ್ರ ತಪ್ಪಿಲ್ಲ. ಈ ನಗರಕ್ಕೆ ಪ್ರತಿದಿನವೂ ಮುನ್ನೂರು ಟನ್ನುಗಳಷ್ಟು ಸೌದೆಯು ಬರುತ್ತಿರುವುದಾಗಿ ಅಧಿಕಾರಿಗಳು ಹೇಳುತ್ತಾರೆ. ಆದರೆ ಅದೆಲ್ಲವೂ ಎಲ್ಲಿ ಮಾಯವಾಗುತ್ತದೋ ತಿಳಿಯದು. ಡಿಪೋಗಳಿಗೆ ಅಲೆದು ಬರಿಗೈಯಲ್ಲಿ ಹಿಂದಿರುಗುವ ಬಡ ಪ್ರಜೆಗಳ ಕಷ್ಟವು ವರ್ಣನಾತೀತವಾಗಿದೆ. ದಿನದ ಕೆಲಸವನ್ನೆಲ್ಲಾ ಬಿಟ್ಟು ಸೌದೆಗಾಗಿಯೇ ಜನರು ಕಾಲಹರಣ ಮಾಡುವ ಸ್ಥಿತಿಯು ಸಮರ್ಪಕವಲ್ಲ.

ಪ್ರತಿಯೊಬ್ಬ ರೇಷನ್ ಕಾರ್ಡ್ ಹೋಲ್ಡರಿಗೂ ಕನಿಷ್ಠ ಪ್ರಮಾಣದಲ್ಲಿಯಾದರೂ ಸೌದೆಯು ದೊರೆಯುವಂತೆ ಮಾಡಿದಲ್ಲದೆ ಇಂದಿನ ಏರ್ಪಾಡುಗಳು ಸಾರ್ಥಕವಾಗಲಾರವು. ಬೆಂಗಳೂರು ನಗರದಲ್ಲಿ ಸರ್ಕಾರದವರೇ ಸೌದೆ ಸರಬರಾಜನ್ನು ತಮ್ಮ ಮೇಲ್ವಿಚಾರಣೆಗೆ ತೆಗೆದುಕೊಂಡು ತಕ್ಕ ಮಟ್ಟಿಗಾದರೂ ಪುರನಿವಾಸಿಗಳಿಗೆ ಅದನ್ನು ಒದಗಿಸುತ್ತಿದ್ದಾರೆ. ರಾಜಧಾನಿಯಾದ ಈ ಊರಿನಲ್ಲಿಯೂ ಆ ಬಗೆಯ ವ್ಯವಸ್ಥೆಯನ್ನು ಮಾಡಿ, ಬಡ ಪ್ರಜೆಗಳಿಗೆ ಕಷ್ಟವನ್ನು ತಪ್ಪಿಸುವುದು ಆವಶ್ಯಕವಾಗಿದೆ.

ಟೆಂಡರ್ ನೋಟೀಸು

ಮೈಸೂರು ಅರಮನೆ ಗಜಶಾಲ ಇಲಾಖೆಗೆ ೧೯೪೭—೪೮ ನೇ ಸಾಲಿನಲ್ಲಿ ಸಾಮಗ್ರಿ ಸಪ್ಲೈ ಮಾಡಲು ಅಪೇಕ್ಷೆಯುಳ್ಳವರು ಸೀಲ್ ಟೆಂಡರುಗಳನ್ನು ತಾ|| ೧೫-೪-೪೭ ನೇ ಮಧ್ಯಾಹ್ನ ೧೨ ಘಂಟೆಯೊಳಗಾಗಿ ಗಜಶಾಲ ಆಫೀಸರವರಿಗೆ ಕೊಡತಕ್ಕದ್ದು. ಹೆಚ್ಚಿನ ವಿಷಯಗಳನ್ನು ಗಜಶಾಲೆಯಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಡಿ. ಎಸ್. ನೀಲಕಂಠರಾವ್,
ಆಫೀಸರ್-ಇನ್-ಛಾರ್ಜ್,
ಅರಮನೆ ಗಜಶಾಲೆ

೯ ಅಡಿ ೩|| ಅಂಗುಲದ ಮನುಷ್ಯ

ಜಾನ್ ವಾನ್ ಅಲ್ಬರ್ಟ್ ಎಂಬ ಡಚ್ ದೇಶದವನು ೯ ಅಡಿ ೩|| ಅಂಗುಲ ಎತ್ತರವಿದ್ದಾನೆಂದು ವರದಿಯಾಗಿದೆ. ಮಗುವಾಗಿದ್ದಾಗ ಇವನ ತೂಕ ೧೭ ಪೌಂಡ್ ಇದ್ದಿತು. ೭ ನೇ ವರ್ಷದಲ್ಲಿ ೬ ಅಡಿ, ೩೦ ನೇ ವರ್ಷದಲ್ಲಿ ೮ ಅಡಿ ಎತ್ತರ ಬೆಳೆದನು. ೩೫ ನೇ ವಯಸ್ಸಿನಲ್ಲಿ ಈ ಎತ್ತರಕ್ಕೆ ಬಂದನು. ಈಗ ಇವನ ವಯಸ್ಸು ೪೪. ವಿಡಿಶರ ಪದ್ಧತಿಯು ಇವನನ್ನು ಬಾಧಿಸುತ್ತಿರುವ ನಮುಸ್ಯೆಗಳಲ್ಲಿ ಪ್ರಾಮುಖ್ಯವಾದುದು.

ಅಮೆರಿಕದಲ್ಲಿ ನಿರುದ್ಯೋಗಿಗಳು ಹೆಚ್ಚುತ್ತಿದ್ದಾರೆ

ಕಳೆದ ನವೆಂಬರ್ ತಿಂಗಳಿನಲ್ಲಿ ಅಮೆರಿಕದಲ್ಲಿ ೫೬೦೦೦೦ ನಿರುದ್ಯೋಗಿಗಳಿದ್ದರು. ಈಗ ಅವರ ಸಂಖ್ಯೆ ೩೪೯೦೦೦೦ ಕ್ಕೆ ಏರಿದೆಯೆಂದು ವರದಿಯಾಗಿದೆ. ಕಳೆದ ತಿಂಗಳಿನಲ್ಲಿ ೯೦ ಸಹಸ್ರ ಮಂದಿ ಕೆಲಸ ಕಳೆದುಕೊಂಡರೆಂದು ಗೊತ್ತಾಗಿದೆ.

ಚರ್ಚಿಲ್ ವಿರುದ್ಧ ದರ್ಜಿಯ ಸ್ಪರ್ಧೆ

ಎಸೆಕ್ಸಿನ ವುಡ್ ಫೋರ್ಡ್ ಕ್ಷೇತ್ರದಿಂದ ಮಿ|| ಚರ್ಚಿಲರ ವಿರುದ್ಧವಾಗಿ ೧೯೫೦ ರಲ್ಲಿ ನಡೆಯುವ ಪಾರ್ಲಿಮೆಂಟ್ ಚುನಾವಣೆಗೆ ಸಮತಾವಾದಿ ಪರರಾಷ್ಟ್ರ ಧೋರಣೆಯುಳ್ಳ ದರ್ಜಿಯೊಬ್ಬನು ಸ್ಪರ್ಧಿಸುವುದಾಗಿ ವರದಿಯಾಗಿದೆ. ಈತನ ಹೆಸರು ಮಿ|| ಆರ್. ಎಸ್. ಫೆಸ್ಟರ್ ಬರ್. ಕಳೆದ ಯುದ್ಧದಲ್ಲಿ ಈತನು ರಾಯಲ್ ಸೈನ್ಯದ ವೈದ್ಯಶಾಖೆಯಲ್ಲಿದ್ದನು.

ಗ್ರೀಸಿನಲ್ಲಿ ಗೆರಿಲ್ಲಾ ನಾಯಕರ ರುಂಡಗಳ ಪ್ರದರ್ಶನ

ಉತ್ತರ ಗ್ರೀಸಿನಲ್ಲಿ ಗೆರಿಲ್ಲಾ ಪಡೆಗಳನ್ನು ಅಲ್ಲಿನ ಹಳ್ಳಿಯೊಂದರಲ್ಲಿ ರೈತರುಗಳೇ ಎದುರಿಸಿ ೫೦ ಮಂದಿ ಗೆರಿಲ್ಲಾ ನಾಯಕರನ್ನು ಕೊಂದು ಅವರುಗಳ ರುಂಡವನ್ನು ಪ್ರದರ್ಶಿಸಿದರೆಂದು ತಿಳಿದು ಬಂದಿದೆ.

ಸ್ವಾತಂತ್ರ್ಯ ಸಂದೇಶವನ್ನು ಹಳ್ಳಿಗಳಿಗೆ ಒಯ್ಯಿರಿ

ಭಾರತದ ಮೋಕ್ಷವು ಕೇಂದ್ರ ಅಥವಾ ಪ್ರಾಂತ್ಯಗಳಲ್ಲಿ ಮಂತ್ರಿ ಮಂಡಲಗಳನ್ನು ರಚಿಸುವುದರಲ್ಲಿಲ್ಲ. ಸ್ವಾತಂತ್ರ್ಯದ ಸಂದೇಶವನ್ನು ೭ ಲಕ್ಷ ಹಳ್ಳಿಗಳಿಗೆ ಒಯ್ಯುವುದರಿಂದಲೇ ಭಾರತವು ಭವ್ಯದಾಯಕವಾಗುವುದು - ಎಂಬುದಾಗಿ ರಾಷ್ಟ್ರಪತಿ ಆ|| ಕೃಪಲಾನಿಯವರು ರಾಷ್ಟ್ರೀಯ ವಾರದಲ್ಲಿ ಸಂದೇಶವಿತ್ತಿದ್ದಾರೆ.

ಅಮೆರಿಕದಲ್ಲಿ ಗಂಡಸರಿಗಿಂತ ಹೆಂಗಸರ ಸಂಖ್ಯೆ ಹೆಚ್ಚುತ್ತಿದೆ

ಅಮೆರಿಕಾ ಸಂಯುಕ್ತ ಸಂಸ್ಥಾನದ ಜನಸಂಖ್ಯೆ ೧೯೪೦ ನೇ ಏಪ್ರಿಲಿನಲ್ಲಿ ೧೩೧೬೬೯೨೭೫ ಇದ್ದಿತು. ೧೯೪೬ ನೇ ಜುಲೈನಲ್ಲಿ ೧೪೧೨೩೫೦೦೦ ಕ್ಕೆ ಏರಿತು. ೧೯೪೦ ರಲ್ಲಿ ಗಂಡಸರು ಹೆಂಗಸರಿಗಿಂತ ೪೫೪೦೦೦ ರಷ್ಟು ಹೆಚ್ಚಾಗಿದ್ದರು. ಆದರೆ ೧೯೪೬ ರಲ್ಲಿ ಹೆಂಗಸರು ಗಂಡಸರಿಗಿಂತ ೪೭೦೦೦೦ ರಷ್ಟು ಹೆಚ್ಚಿ ಹೋಗಿರುತ್ತಾರೆ. ಯುದ್ಧದಲ್ಲಿ ಅನೇಕರು ಮಡಿದು ಹೋದುದೂ, ಹೆಂಗಸರ ಆಯುಸ್ಸು ಹೆಚ್ಚುತ್ತಿರುವುದೂ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಆಕಾಶದಿಂದ ಗೋಧಿ ಬಿತ್ತನೆ

ಇಂಗ್ಲೆಂಡಿನ ನಾರ್ ಫ್ಯಾಂಪ್ಟನ್ ಷೈರಿನಲ್ಲಿ ಒಂದು ಪ್ರದೇಶದಲ್ಲಿರುವ ೩ ಸಹಸ್ರ ಎಕರೆ ಜಮೀನನ್ನು ಹೊಸ ವಿಧಾನಗಳಿಂದ ಸಾಗುವಳಿ ಮಾಡುವ ಕ್ರಮವನ್ನು ಬ್ರಿಟಿಷ್ ವ್ಯವಸಾಯ ಮಂತ್ರಿ ಮಂಡಲವು ಮೊನ್ನೆ ಪರೀಕ್ಷಿಸಿತು. ಆಕಾಶದಲ್ಲಿ ೫೦ ಅಡಿ ಎತ್ತರದಿಂದ ೨೦ ಎಕರೆ ಭೂಮಿಯಲ್ಲಿ ಗೋಧಿಯನ್ನು ಬಿತ್ತಲಾಗಿದೆ. ಇದಕ್ಕೆ ಎರಡು ಗಂಟೆ ಕಾಲ ಮಾತ್ರ ಹಿಡಿಯಿತು.

ನಾಗೋಡ್ ಸಂಸ್ಥಾನದಲ್ಲಿ ಬಂದಿಗಳ ಬಿಡುಗಡೆ

ನಾಗೋಡ್ ಸಂಸ್ಥಾನದ ಮಹಾರಾಜರು ಅಲ್ಲಿನ ಪ್ರಜಾ ಮಂಡಲದ ಮುಖಂಡರನ್ನು ಆಹ್ವಾನಿಸಿ ಸಂಧಾನ ನಡೆಸಿ ಒಪ್ಪಂದಕ್ಕೆ ಬಂದುದರಿಂದ ರಾಜಕೀಯ ಖೈದಿಗಳನ್ನೆಲ್ಲಾ ಖುಲಾಸೆ ಮಾಡಲು ಆಜ್ಞೆ ಇತ್ತಿದ್ದಾರೆ.

ರಾಜಕಮಲ್

೭-೪-೪೭ ರಿಂದ ಅಮೋಘವಾದ ೮ನೇ ವಾರ

ಮ್ಯಾಟಿನಿ ಮಧ್ಯಾಹ್ನ 3 ಗಂಟೆಗೆ
ಮೊದಲನೇ ಆಟ ಸಂಜೆ 6-15 ಕ್ಕೆ ಗಂಟೆಗೆ

ಶ್ರೀ ಕೃಷ್ಣಲೀಲಾ (ಕನ್ನಡದಲ್ಲಿ)

ಮೈಸೂರಿನಲ್ಲಿ ತಯಾರಿಸಿ, ಮಹಾಜನಗಳ ಮನ್ನಣೆಗೆ ಪಾತ್ರವಾಗಿರುವ ಈ ಪುರಾಣ ವೈಖರಿಯನ್ನು ನೋಡಲು ತಪ್ಪಬೇಡಿ

ಜಿಲ್ಲಾ ಬೋರ್ಡ್ ಚುನಾವಣೆ

೨೮-೪-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗೆ ಕಂಡ ಕಾಂಗ್ರೆಸ್ ಉಮೇದುವಾರರಿಗೇ ದಯವಿಟ್ಟು ವೋಟು ಕೊಡಿ:-

ಹೆಚ್. ಲಿಂಗಪ್ಪ B. Sc., LL.B
ಕೆ. ಎಂ. ನಾಗಪ್ಪ (ಹುಲ್ಲಹಳ್ಳಿ)
ಎಂ. ಲಿಂಗಣ್ಣ B. Sc., LL.B

Edited, printed and published by M. R. Nagarajan at the Sadhvi Press Dhanvantri Road Mysore

ಬೆಂಗಾಲ್ ಸಿಲ್ಕ್ ಸೀರೆಗಳನ್ನು ಏತಕ್ಕೆ ಕೊಳ್ಳಬೇಕು?

1. ಅಂದ, ಚೆಂದ, ಆನಂದಕರ ಬಣ್ಣಗಳು
2. ಹಗುರ ಮತ್ತು ನಯ, ಉಡಲು ಹರ್ಷಕರ
3. ಬೆಲೆ ಕಡಿಮೆ, ಎರಡು ಸೀರೆಗಳ ಬೆಲೆಗೆ ಮೂರು ಕೊಳ್ಳಬಹುದು
4. 6-7-8 ಮತ್ತು 9 ಗಜಗಳಲ್ಲಿ ಸಿಗುತ್ತವೆ

ಬಾಹುಸಾರ್ ಕಂಪೆನಿ, ಓಲ್ಡ್ ಮೈಸೂರು ಬ್ಯಾಂಕ್ ರೋಡ್, ಮೈಸೂರು.

ಪಾಣಿವಿಲಾಸ ಮೊಹಲ್ಲೆಯ ಚ... ಬಾ ಪಾರ್ಕಿನಲ್ಲಿರುವ ಸಾರ್ವಜನಿಕ ... ಯೋಗಕ್ಕೆ ಲಗತ್ತಿಸಿರುವ ಲೌಡ್ ಸ್ಪೀಕರ್ ಯಂತ್ರವು ಕೆಟ್ಟು ಹೋಗಿರುತ್ತದೆ. ... ಕಾರಿಗಳ ಗಮನ ಅಗತ್ಯ.

ಪ್ರಕಟನೆ

ಸಿವಿಲ್ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ ಲಿಮಿಟೆಡ್, ಮೈಸೂರು

ಈ ಕಂಪೆನಿಯ ನಾಲ್ಕನೆಯ ... ಬಾಡಿ ಮೀಟಿಂಗು ಮೈಸೂರಿನಲ್ಲಿ ತಾ|| ೭-೪-೪೭ ನೇ ಸೋಮವಾರ ನಡೆ... ರುದಾರರುಗಳಿಗೆ ೧೯೪೭ ನೇ ಸಾಲಿ... ೬|| ರಂತೆ ಡಿವಿಡೆಂಡ್ ಹಂಚಲಾಗ... ತಲೂ, ತಾ|| ೨೫-೪-೧೯೪೭ ರಿಂದ ೧೦-೫-೧೯೪೭ ರ ಪೂರ್ತಾ, ಆಫೀ... ಕಾಲಗಳಲ್ಲಿ ಷೇರುದಾರ... ತಮಗೆ ಸಲ್ಲುವ ಡಿವಿಡೆಂಡ್ ಮೊಬಲ... ಆಫೀಸಿನಿಂದ ಸೀದಾ ತೆಗೆದುಕೊ... ದೆಂತಲೂ, ಆ ವಾಯಿದೆ ಕಳೆದ ... ೧೦ ಅಣೆಯಿಂದ ೨೦ ರೂ. ವರೆಗಿನ ... ಲಗನ್ನು (ಮ. ಆ. ಕಮಿಷನ್ ಚಾರ್ಜ್ ... ಷೇರುದಾರರಿಗೆ ಮನಿಯಾರ್ಡರ್ ಮೂಲಕವೂ, ಹೆಚ್ಚಿ... ಬಲಗನ್ನು ಬ್ಯಾಂಕ್ ಚೆಕ್ಕು ಮೂ... ಪಾವತಿ ಮಾಡಲಾಗುವುದೆಂತಲೂ, ... ಅಣೆಗೆ ಕಮ್ಮಿಯಾದ ಮೊಬಲಗನ್ನು ... ನಕ್ಕೆ ಇಟ್ಟಿದ್ದು ಮುಂದಿನ ವರ್ಷಕ್ಕೆ ... ಸಿಕೊಡಲಾಗುವುದೆಂತಲೂ ಗೊತ್ತು... ಲಾಗಿದೆ.

ವೈ. ಅಕ್ಷ್ಮೀನರಸಿಂಹ...
ಮೈಸೂರು, ಮ್ಯಾನೇಜಿಂಗ್ ಡೈರೆಕ್ಟರ್
ತಾ|| ೮-೪-೧೯೪೭.

ಗೃಹಕೃತ್ಯದ ನೋಟೀಸು

ಗುಂಡ್ಲುಪೇಟೆ ತಾಲ್ಲೂಕು ಬೇ... ಹೋಬಳಿ ಥೋಗಯ್ಯನ ಹುಂಡಿಯ ... ವ ದೊಡ್ಡ ಪುಟ್ಟಪ್ಪನವರ ಮಗ ... ಪ್ಪನು ಸಮಸ್ತರಿಗೂ ಈ ಮೂಲಕ ತಿ... ಪಡಿಸುವುದೇನೆಂದರೆ:—

ನನ್ನ ತಮ್ಮ ಸುಮಾರು ೭೦ ವ... ವಯಸ್ಸಿನ ಮಲ್ಲಪ್ಪನೆಂಬುವನಿಗೆ ... ಒಂದು ತಿಂಗಳಿಂದ ಬುದ್ಧಿ ಭ್ರಮಣೆ... ಜ್ಞಾನ ಇಲ್ಲದೆ ನಮ್ಮ ... ಬಿಟ್ಟು ತಿರುಗುತ್ತಾ ಇದ್ದಾನೆ. ... ಹೆಂಡತಿಯಾಗಲೀ ಮಕ್ಕಳಾಗಲೀ ... ರೂ ಇಲ್ಲ. ನಾನು ಮತ್ತು ನನ್ನ ... ಜನ ಮಕ್ಕಳೇ ವಾರಸುದಾರರಾಗಿದ್ದೂ ... ರೈವರುಗಳಾಗಿಯೂ ಇರುತ್ತೇವೆ. ... ಗ್ರಾಮದಲ್ಲಿ ನನ್ನ ಮೇಲೆ ಪಾರ್ಟಿ ... ಕೆಲವು ಜನಗಳು ನಮ್ಮ ತಮ್ಮನ ... ದುರ್ಬೋಧನೆ ಮಾಡಿ ಪ... ಮೋಸದ ಇರಾದೆಯಿಂದ ಈತನಿಂದ ... ಪಿತ್ರಾರ್ಜಿತವಾದ ನಮ್ಮ ಗ್ರಾಮಕ್ಕೆ ... ಸರ್ವೆ ೫೩ ನೇ ನಂಬರ್ ಜಮೀನು ... ಮನೆ ಈ ಸ್ವತ್ತುಗಳನ್ನು ಮೋಸದಿಂದ ... ಸಿಕೊಳ್ಳಬೇಕೆಂತ ಪ್ರಯತ್ನಪಡುತ್ತಿ... ಒಂದು ವೇಳೆ ಆತನಿಂದ ಪತ್ರಗಳನ್ನು ... ಕೊಂಡಲ್ಲಿ ಆ ಪತ್ರಗಳೆಲ್ಲವೂ ಊರ್ಜಿತ... ಗತಕ್ಕವುಗಳಲ್ಲವೆಂಬ ಅಂಶ ಈ ಮೂ... ತಿಳಿಸಿದೆ.

ತಾ|| ೮-೪-೪೭ (ಸಹಿ) ಮಾದ...

ಫೋ॥ ನಂ. ೮೪೩ ॥ ವಂದೇ ಮಾತರಂ ॥ ಬಿಡಿಪ್ರತಿಯ ಬೆಲೆ ೬ ಕಾಸು



ಸಂಪುಟ ೫] ಗುರುವಾರ ೧೦—೯—೪೭ [ಸಂಚಿಕೆ ೨೦೭

ಪ್ರಭುಗಳಿಗೆ ಕಾಂಗ್ರೆಸ್ಸಿನ ಮತ್ತೊಂದು ಮನವಿ?

ಇಂಡೋನೇಷಿಯಾ ನಿಯೋಗ ದವರ ಆಗಮನ

ಮೈಸೂರು ೧೦

...ಶರ ಏಷ್ಯಾ ಸಮ್ಮೇಳನದಲ್ಲಿ ಭಾಗ...ಲು ಭಾರತಕ್ಕೆ ಬಂದಿದ್ದ ೧೫ ಮಂದಿ ಇಂಡೋನೇಷಿಯಾ ನಿಯೋಗದ ಪ್ರತಿನಿಧಿಗ...ಈ ದಿನ ಬೆಂಗಳೂರಿನಿಂದ ಕಾರಿನಲ್ಲಿ ...ಕ್ಕೆ ರಾಜಧಾನಿಗೆ ಆಗಮಿಸಿ ಸರ್ಕಾರ ...ತಿಥಿಗಳಾಗಿದ್ದಾರೆ. ಅವರು ಮಾರ್ಗ ...ದಲ್ಲಿ ಶ್ರೀರಂಗಪಟ್ಟಣಕ್ಕೆ ಭೇಟಿ ಇ...ಲ್ಲಿನ ಅನೇಕ ಸ್ಥಳಗಳನ್ನು ಪರಿಶೀಲಿ...

...ನಡಲ್ಲಿ ಅವರುಗಳು ಈ ದಿನ ಅರಮ...ಸದ ಎಂಡಿ ಬೆಟ್ಟ, ಮೃಗಾಲಯ, ...ಶೇಂದ್ರ ಔದ್ಯೋಗಿಕ ಶಾಲೆ ಮುಂ...ಸ್ಥಳಗಳಿಗೆ ಭೇಟಿ ಇತ್ತಿದ್ದರು. ಪುರ...ಸದಸ್ಯರು ಅವರನ್ನು ಆಹ್ವಾನಿಸಿ ಉ...ದಿಂದ ಸತ್ಕರಿಸಿದರು. ಈ ನಿಯೋ...ರು ಒಂದು ಪತ್ರಿಕಾ ಸಮ್ಮೇಳನವ...ಏರ್ಪಡಿಸಿ ತಮ್ಮ ಆಗಮನದ ಉದ್ದೇ...ತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿ...ಸಿದರು.

...ವರೆಲ್ಲರೂ ಈ ದಿನ ಸಂಜೆ ಕೃಷ್ಣರಾಜ ...ಕ್ಕೆ ತೆರಳಿ, ಭೋಜನ ಮಾಡಿಕೊಂ...ನೇರವಾಗಿ ಬೆಂಗಳೂರಿಗೆ ಹೋಗುವ...ಅಲ್ಲಿಂದ ನಾಳೆ ಬೆಳಿಗ್ಗೆ ಮದ್ರಾಸಿಗೆ ...ಣ ಬೆಳೆಸುವರು.

ಮೈಸೂರಿನವರಿಗೆ ಬಿರುದು

...ರಾಘವೇಂದ್ರಸ್ವಾಮಿಗಳವರ ಸನ್ನಿ...ಲ್ಲಿ ಇತ್ತೀಚೆಗೆ ತಿರುಪತಿಯಲ್ಲಿ ನಡೆದ ಮಧ್ವ ಸಂಘದ ಸಮಾವೇಶದಲ್ಲಿ ಟಿ. ನ...ಪುರದ ಶ್ರೀ॥ ಜಿ. ಎಸ್. ಜಯ ತೀ...ರ್ಥಾಚಾರ್ಯರು ಶ್ರೀಮದ್ಭಗವದ್ಗೀತೆಯ ...ದ ಅಮೋಘವಾದ ಭಾಷಣ ಮಾಡಿ ...ಅದನ್ನು ಮೆಚ್ಚಿ ಅಲ್ಲಿ ನೆರೆದಿದ್ದ ...ವಿದ್ವಾಂಸರುಗಳು ಅವರಿಗೆ "ಉಪ...ನ್ಯಾಸ ರತ್ನಾಕರ" ಎಂಬ ಬಿರುದನ್ನು ಕೊ...ಟ್ಟು ಸನ್ಮಾನಿಸಿದರು. ಸಭಾಧ್ಯಕ್ಷತೆಯನ್ನು ...ಜಿಲ್ಲಾ ಮುಖ್ಯ ಸೆ॥ ಜಡ್ಜರಾದ ಶ್ರೀ॥ ...ಅನಂತಗಿರಿ ರಾಯರು ವಹಿಸಿದ್ದರು.

ಹರಿಕಥೆ

ಕೃಷ್ಣರಾಜ ಮೊಹಲ್ಲಾ ಬಂಡೀಕೇರಿಯ ...ನ ಶ್ರೀ ಮಹಾಲಕ್ಷ್ಮೀ ಕೊಲ್ಹಾಪುರದ ...ನವರ ಗುಡಿಯ ಮುಂದಿನ ಚಪ್ಪರದ...ಲ್ಲಿ ನಾಳಿನ ರಾತ್ರಿ ೯-೩೦ ಗಂಟೆಗೆ ಶ್ರೀ॥ ಟಿ. ...ಎಸ್. ಶಿವಲಿಂಗಸ್ವಾಮಿ ಹಿರೇಮಠ ...ರಿಂದ ಕಬೀರ್‌ದಾಸ್ ಎಂಬ ಹರಿಕಥೆ ...ನಡೆಯುತ್ತದೆ.

ಬರ್ಮಾ ರಾಜ್ಯಾಂಗ ಸಭೆಗೆ ಚುನಾವಣೆ

ಕಳೆದ ಜನವರಿಯಲ್ಲಿ ನಡೆದ ಆಂಗ್ಲೋ-ಬರ್ಮಾ ಒಪ್ಪಂದದಂತೆ ಹೊಸ ರಾಜ್ಯಾಂಗವನ್ನು ...ಚಿಸಲು ನಿನ್ನೆ ಬರ್ಮಾದಲ್ಲಿ ಚುನಾವಣೆ ನ...ಡೆಯಿತು. ಸುಮಾರು ಅರ್ಧ ಭಾಗದಷ್ಟು ...ಸ್ಯರು ಮೊದಲೇ ಅವಿರೋಧವಾಗಿ ಆರಿ...ಸಲ್ಪಟ್ಟಿದ್ದರು. ಇವರಲ್ಲಿ ಹೆಚ್ಚು ಮಂದಿ ...ಫ್ಯಾಸಿಸ್ಟ್ ವಿರೋಧಿ ಪಕ್ಷದವರು.

ಪ್ರಪಂಚದಲ್ಲೆಲ್ಲಾ ಹಿರಿದಾದ ವಜ್ರ

ಪ್ರಪಂಚದಲ್ಲೇ ಹಿಂದಿನ ಮತ್ತು ಎಂ...ಟು ಕೋಟಿ ರೂ ಗಳಿಗಿಂತಲೂ ಹೆಚ್ಚು ಬೆಲೆಯುಳ್ಳ ಜೋಡಿ ವಜ್ರವು ಹೈದರಾಬಾದಿನ ...ನಿಜಾಮ್ ಮಹಾರಾಜರ ವಶದಲ್ಲಿದ್ದ... ಅವನ್ನು ಮಾರಿದುದಾಗಿ ವರದಿ ಮಾಡಿದೆ. ಇದು ಇನ್ನೂರು ವರ್ಷಗಳ ...ಹಿಂದಿನದು.

ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಭೆ

ಮೈಸೂರು ೧೦

ಕೃಷ್ಣರಾಜೇಂದ್ರಗಿರಣಿ ಕೆಲಸಗಾರರ ಸಂಘದ ವಾರ್ಷಿಕ ಸಭೆಯು ಕಳೆದ ೭ ನೇ ತಾ॥ ಟೌನ್‌ಹಾಲಿನಲ್ಲಿ ಶ್ರೀ॥ ಟಿ. ಮರಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ೧೬೫೦ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು. ಗಿರಿನಿಯ ಮುಸ್ಲಿಂ ಏಕತಾ ಸಮಿತಿ ಪರವಾಗಿ ಜ॥ ಮಹಮದ್ ಹುಸೇನ್ ರವರು ಅಧ್ಯಕ್ಷರನ್ನು ಸ್ವಾಗತಿಸಿ, ಹಿಂದೂ ಮುಸ್ಲಿಂ ಐಕ್ಯಕ್ಕಾಗಿ ಅವರು ಮಾಡುತ್ತಿರುವ ಕಾರ್ಯವನ್ನು ಪ್ರಶಂಸಿಸಿದರು. ಶ್ರೀ॥ ...ನರಸಿಂಗರಾಯರು ಕಾರ್ಮಿಕರ ಬಗ್ಗೆ ರಚಿಸಿರುವ ಲಾವಣಿಯನ್ನು ಹಾಡಿದರು. ಅನಂತರ ಈ ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದುವು:—

ಮದನ ಮೋಹನ ಮಾಳವೀಯ, ಪ್ರೊ॥ ಅಬ್ದುಲ್ ಬಾರಿ ಮತ್ತು ಬೆಂಗಳೂರು ದುರಂತದಲ್ಲಿ ಮಡಿದು ಹೋದವರ ಬಗ್ಗೆ ಸಂತಾಪ ಸೂಚನೆ, ಕೋಮುವಾರು ಸೌಹಾರ್ದವನ್ನು ಕಾಪಾಡಿಕೊಂಡು ಬರುವಂತೆ ಕೆಲಸಗಾರರಲ್ಲಿ ಪ್ರಾರ್ಥನೆ; ಶ್ರೀಮನ್ಮಹಾರಾಜರ ಛತ್ರಛಾಯೆಯಲ್ಲಿ ಜವಾಬ್ದಾರಿ ಸರ್ಕಾರವು ಕಾರ್ಮಿಕರ ಏಳಿಗೆಗೆ ಅತ್ಯವಶ್ಯಕವೆಂದೂ, ಅದರ ಸಾಧನೆಗಾಗಿ ಸರ್ವತ್ಯಾಗ ಮಾಡಲು ಸಿದ್ಧರಾಗಬೇಕೆಂದೂ ನಿರ್ಧಾರ.

ಅಧ್ಯಕ್ಷರು ಕೊನೆಯಲ್ಲಿ ಮಾತನಾಡಿ, ಕೆಲಸಗಾರರೆಲ್ಲರೂ ಶಿಸ್ತಿನಿಂದಲೂ, ಒಗ್ಗಟ್ಟಿನಿಂದಲೂ, ಸೌಹಾರ್ದದಿಂದಲೂ ಇರಬೇಕೆಂದು ತಿಳಿಸಿದರು. ಬಟ್ಟೆ ಅಭಾವವನ್ನು ಪರಿಹರಿಸಲು ಕೆಲಸಗಾರರು ದಕ್ಷತೆಯಿಂದ ಕೆಲಸಮಾಡಿ, ಬಟ್ಟೆ ಉತ್ಪತ್ತಿಯನ್ನು ಹೆಚ್ಚಿಸಬೇಕೆಂದರು.

ಲೀಗ್ ನಾಯಕರಿಂದ ಲೀಗ್ ನೀತಿಗೆ ವಿರೋಧ

ಅಸ್ಸಾಂ ಸರ್ಕಾರವು ಜಾರಿಗೆ ತಂದಿರುವ ಸಾಗುವಳಿ ಪದ್ಧತಿಯನ್ನು ವಿರೋಧಿಸಿ ಲೀಗ್ ನಾಯಕರು ಕೈಗೊಂಡಿರುವ ಹೋರಾಟವನ್ನು ಪ್ರತಿಭಟಿಸಿ ...ಜಿಲ್ಲಾ ಲೀಗ್ ಅಧ್ಯಕ್ಷರಾದ ಖಾನ್ ಸಾಹೇಬ್ ಅಲಿ ಮತ್ತು ಕಾರ್ಯದರ್ಶಿಗಳಾದ ...ಪ್ರವೀಣ ಅಹಮದ್ ರವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿದ್ದಾರೆ.

ಪುರಸಭಾಧ್ಯಕ್ಷರನ್ನು ತೆಗೆದುಹಾಕಬೇಕು

ಪೌರಸಭೆಯಲ್ಲಿ ಅವಿಶ್ವಾಸ ನಿರ್ಣಯ

ಮೈಸೂರು ೧೦

ಪೌರಸಭಾಧ್ಯಕ್ಷರಾದ ಶ್ರೀ ಆರ್. ರಾಮಚಂದ್ರರಾವ್ ಬೆಂಗಳೂರಿನವರ ಕರ್ತವ್ಯ ಪರಾಙ್ಮುಖತೆ ಮತ್ತು ಅನಾದರಣೆಗಳಿಗಾಗಿಯೂ, ಅವುಗಳಿಂದ ಪೌರಸಭಾ ಆಡಳಿತದಲ್ಲಿ ಉಂಟಾಗಿರುವ ಶೈಥಿಲ್ಯಕ್ಕಾಗಿಯೂ, ಸರ್ಕಾರದವರು ಅವರ ಮೇಲೆ ನಗರ ಪೌರಸಭೆಗಳ ಶಾಸನದ ೨೩ (೨) ಕಲಮಿನ ಪ್ರಕಾರ ಕಾರ್ಯಕ್ರಮವನ್ನು ಕೈಗೊಂಡು ಅವರನ್ನು ಅವರ ಸ್ಥಾನದಿಂದ ತೆಗೆದುಹಾಕಬೇಕೆಂದು ಪ್ರಾರ್ಥಿಸುವ ಮತ್ತು ಅವರಲ್ಲಿ ಅವಿಶ್ವಾಸವನ್ನು ಸೂಚಿಸುವ ನಿರ್ಣಯಗಳನ್ನು ಪರಿಶೀಲಿಸಲು ಪೌರಸಭೆಯ ವಿಶೇಷ ಅಧಿವೇಶನವೊಂದನ್ನು ಕರೆಯಬೇಕೆಂದು ೨೩ ಮಂದಿ ಪೌರಸಭಾ ಸದಸ್ಯರು ಈ ದಿನ ಅಧ್ಯಕ್ಷರಿಗೆ ಪತ್ರವೊಂದನ್ನು ಬರೆದು ಕಳುಹಿಸಿರುತ್ತಾರೆಂದು ತಿಳಿದು ಬಂದಿದೆ.

ನಗರಾಭಿವೃದ್ಧಿ ಸಮಿತಿಗೆ ನಾಮಕರಣ

ಮುಜರಾಯಿ ಇಲಾಖೆಯ ವರದ ಶ್ರೀ ಟಿ. ರಾಮಯ್ಯ, ಶ್ರೀ ಎಫ್. ಸಿ. ದೇವರಾಜೇ ಅರಸ್ ಮತ್ತು ಫಾದರ್ ಅಡ್ವೊಕೇಟರುಗಳನ್ನು ೨ ವರ್ಷಗಳ ಕಾಲ ಮೈಸೂರು ನಗರಾಭಿವೃದ್ಧಿ ಸಮಿತಿ ಸದಸ್ಯರನ್ನಾಗಿ ಸರ್ಕಾರದವರು ನಾಮಕರಣ ಮಾಡಿರುತ್ತಾರೆ.

ಸ್ಥಳೀಯ ಸಂಸ್ಥೆಗಳಿಗೆ ಸಂಯುಕ್ತ ಚುನಾವಣೆ

ಅಖಿಲ ಭಾರತ ಸ್ಥಳೀಯ ಸಂಸ್ಥೆಗಳ ೫ ನೇ ಸಮ್ಮೇಳನವು ನವ ದೆಹಲಿಯಲ್ಲಿ ಮೊನ್ನೆ ದಿನ ಮುಕ್ತಾಯಗೊಂಡಿತು. ಸ್ಥಳೀಯ ಸಂಸ್ಥೆಗಳಲ್ಲಿ ವಯಸ್ಕರ ಮತದಾನ ಪದ್ಧತಿಯುಳ್ಳ ಸಂಯುಕ್ತ ಚುನಾವಣೆಯನ್ನು ಜಾರಿಗೆ ತರಬೇಕೆಂದೂ, ಅಲ್ಪಸಂಖ್ಯಾತರು ಅಪೇಕ್ಷೆಪಟ್ಟರೆ, ಕೋಮುವಾರು ಆಧಾರದ ಮೇಲೆ ಸ್ಥಾನಗಳನ್ನು ಮೀಸಲಾಗಿ ಇಡಬೇಕೆಂದೂ, ಪ್ರಾಂತ್ಯ ಮತ್ತು ಸಂಸ್ಥಾನಗಳ ಸರ್ಕಾರಗಳನ್ನು ಪ್ರಾರ್ಥಿಸುವ ನಿರ್ಣಯವನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು. ಮುಂದಿನ ಸಮ್ಮೇಳನವು ಮೈಸೂರಿನಲ್ಲಿ ನಡೆಯಲು ಆಹ್ವಾನಿಸಲಾಗಿದೆ.

ಮೈಸೂರು ವಿದ್ಯಾರ್ಥಿಗಳಿಗೆ ...ವಿದ್ಯಾರ್ಥಿ...

...ದಕ್ಕೆ ತೆರಳುವ ಮೈಸೂರು ವಿದ್ಯಾರ್ಥಿ ... ವಿ... ಬ್ರಸೆಲ್ಸಿಗೆ ೯...

ಸತ್ಯಾಗ್ರಹವನ್ನು ತಪ್ಪಿಸಲು ಕಡೇ ಪ್ರಯತ್ನ

ಶ್ರೀಮನ್ಮಹಾರಾಜರಿಗೆ ಮತ್ತೊಂದು ಕಾಂಗ್ರೆಸ್ ಮನವಿ

ಸ್ವಂತ ಫೋನ್] [ಬೆಂಗಳೂರು ೧೦

ಸೆಪ್ಟೆಂಬರ್ ೧ ನೇ ತಾ॥ ಆರಂಭವಾಗಲಿರುವ ಸತ್ಯಾಗ್ರಹವನ್ನು ತಪ್ಪಿಸಲು ಕಟ್ಟ ಕಡೆಯದಾಗಿ ಶ್ರೀಮನ್ಮಹಾರಾಜರವರಿಗೆ ಮೈಸೂರು ಕಾಂಗ್ರೆಸ್ಸಿನವರು ಮತ್ತೊಂದು ಮನವಿಯನ್ನು ಸಲ್ಲಿಸಿರುವರೆಂದೂ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದಾಗಿ ಘೋಷಿಸಿ ಅದಕ್ಕಾಗಿ ಕೂಡಲೇ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ ಪ್ರಾರ್ಥಿಸಲಾಗಿದೆಯೆಂದು ಗೊತ್ತಾಗಿದೆ. ಪ್ರಭುಗಳ ಸಂದೇಶವನ್ನು ದಿವಾನರು ಸರಿಯಾಗಿ ಕಾರ್ಯರೂಪಕ್ಕೆ ತಂದಿಲ್ಲವೆಂದು ಅದರಲ್ಲಿ ಆಕ್ಷೇಪಿಸಲಾಗಿದೆಯೆಂದೂ ಹೇಳಲಾಗಿದೆ.

ದಿವಾನರು ಭೇಟಿಗಾಗಿ ಆಹ್ವಾನವನ್ನಿತ್ತರೆ ಆಗ್ಗೆ ಅವರನ್ನು ಕಾಣಲು ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿಯವರಿಗೆ ಅನುಮತಿಯನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಇತ್ತಿದೆಯೆಂದು ಗೊತ್ತಾಗಿದೆ.

ಸತ್ಯಾಗ್ರಹದ ಮೊದಲನೆ ಘಟ್ಟದಲ್ಲಿ ಸ್ವಯಂ ಸೇವಕರ ಗುಂಪುಗಳು ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿ ಪ್ರಜೆಗಳ ಆಕ್ಷೋಭ...ಗಳನ್ನು ತಿಳಿಸಲು ಪ್ರಯತ್ನಗಳನ್ನು ನಡೆಸುವುವೆಂದು ವರದಿಯೊಂದು ತಿಳಿಸುತ್ತದೆ.

ಅಖಂಡ ಭಾರತದಲ್ಲಿ ಜಿನ್ನಾ ಸಾಹೇಬರ ವಿಶ್ವಾಸ

ಭಾರತವು ಅಖಂಡವಾದುದೆಂದು ನಾನು ಭಾವಿಸುತ್ತೇನೆ. ಮತ್ತು ಅದು ಒಂದಾಗಿಯೇ ಇರಬೇಕಾಗಿದೆ. ರಾಜರುಗಳಿಗೆ ತಕ್ಕ ಪುರಸ್ಕಾರ ದೊರಕಿದರೆ ಅವರು ಕೇಂದ್ರದೊಡನೆ ಸೇರುವರು. ಬ್ರಿ॥ ಇಂಡಿಯದವರು ಈಗ ನಮ್ಮೊಡನೆ ನ್ಯಾಯವಾದ ರೀತಿಯಲ್ಲಿ ವರ್ತಿಸಿದರೆ ನಾವಿಬ್ಬರೂ ಸೇರಿ ಅಖಂಡ ಭಾರತದ ರಾಜ್ಯಾಂಗವನ್ನು ಬೇಗನೆ ರಚಿಸುವುದರಲ್ಲಿ ಸಂದೇಹವಿಲ್ಲ ಎಂಬುದಾಗಿ ನವ ನಗರದ ರಾಜರಾದ ಜಾಂ ಸಾಹೇಬರು ತಿಳಿಸಿದ್ದಾರೆ.

ಭಾರಿ ಯುದ್ಧ ಅಸಂಭವ

ಬ್ರಿಟನ್ ದೊರೆಗಳಾದ ಜಾರ್ಜ್‌ರವರು ದಕ್ಷಿಣ ಆಫ್ರಿಕದಲ್ಲಿನ ಕೊನೆಯ ದಿನದ ಬೀಳ್ಕೊಡುಗೆ ಉತ್ಸವವನ್ನು ನೆರವೇರಿಸುತ್ತಾ ಮತ್ತೊಂದು ಭಾರಿ ಯುದ್ಧವು ನಡೆಯುವ ಸಂಭವವಿಲ್ಲವೆಂದು ತಿಳಿಸಿದ್ದಾರೆ. ಆದರೆ ರಕ್ಷಣಾ ದಳಗಳನ್ನು ಮಾತ್ರ ಬಲಪಡಿಸಬೇಕೆಂದು ಹೇಳಿದರು.

ಭಾರತದಲ್ಲಿ ವಿಮಾನ ತಯಾರಿ ಹೆಚ್ಚುವುದು

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ವಿಮಾನ ಕಾರ್ಖಾನೆಯನ್ನು ಅಭಿವೃದ್ಧಿಪಡಿಸಿ ತಯಾರಿಯನ್ನು ಹೆಚ್ಚಿಸಲಾಗುವುದೆಂದು ಕೇಂದ್ರ ಸರ್ಕಾರದ ಕೈಗಾರಿಕಾ ಸಚಿವರಾದ ಶ್ರೀ॥ ರಾಜಗೋಪಾಲಾಚಾರಿಯವರು ತಿಳಿಸುತ್ತಾರೆ.

ಶ್ರೀ ಮೈಸೂರು ಸಂಸ್ಥಾನದಲ್ಲಿರುವ ವಿದ್ಯಾರ್ಥಿಗಳು ಜನ್ಮದ ವಿಶ್ವವಿದ್ಯಾನಿಲಯದ "ಪೋಸ್ಟ್ ಗ್ರಾಜುಯೇಟ್" ಪದವಿಯು ... ಪಡೆಯಲು ತಮ್ಮ ವ್ಯವಸ್ಥೆಯನ್ನು ... ಸ್ಪಷ್ಟವಾಗಿ ಹೇಳಲಿರುವರು

ಸಾಧ್ವಿ

ತಾ॥ ೧೦-೪-೪೭ ಗುರುವಾರ

ಪಾಟಿಯಾಲಾ ರಾಜರ ಹಿತೋಕ್ತಿ

ಭರತಖಂಡದ ರಾಜ್ಯಾಂಗ ರಚನೆಯಲ್ಲಿ ಸಹಕರಿಸಿ, ಹಿಂದೂಸ್ಥಾನದ ಯೂನಿಯನ್ನಿನಲ್ಲಿ ರಾಜರೆಲ್ಲರೂ ಸೇರಬೇಕೆಂದು ಪಾಟಿಯಾಲಾ ಮಹಾರಾಜರು ಒತ್ತಾಯಪಡಿಸಿರುವುದು ಅತ್ಯಂತ ಅಭಿನಂದನೀಯವಾದ ಸಂಗತಿ. ಈ ಸಮಯದಲ್ಲಿ ರಾಜರುಗಳು ಹಿಂದು ಮುಂದು ನೋಡುತ್ತಾ ಕುಳಿತರೆ ಮುಂದೆ ಹೊಸ ರಾಜ್ಯಾಂಗದ ಘಟನೆಯು ಆದ ಮೇಲೆ ಅವರಿಗೆ ಸರಿಯಾದ ಸ್ಥಾನಮಾನಗಳು ದೊರೆಯಲಾರವೆಂದು ಎಚ್ಚರಿಸಿದ್ದಾರೆ. ದೇಶದ ಸ್ವಾತಂತ್ರ್ಯ ಸಾಧನೆಯಲ್ಲಿ ನರೇಂದ್ರರು ಮಹತ್ತರವಾದ ಪಾತ್ರವನ್ನು ವಹಿಸಬೇಕಾಗಿದೆಯೆಂದೂ, ಸ್ವಾತಂತ್ರ್ಯ ಮಂದಿರದ ಶಿಲ್ಪಿಗಳಂತೆ ಅವರೂ ಸಹ ವರ್ತಿಸಬೇಕಾಗಿದೆಯೆಂದೂ ಅವರು ಹೇಳಿದ್ದಾರೆ. ಇದಕ್ಕಾಗಿ ರಾಜ್ಯಾಂಗ ಸಮಿತಿಯಲ್ಲಿ ಸೇರಿ ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ಸೂಚಿಸಿದ್ದಾರೆ.

ರಾಜರುಗಳು ಒಟ್ಟೊಬ್ಬರಾಗಿ ಈ ರೀತಿ ಮುಂದೆ ಸ್ವತಂತ್ರ ಭಾರತದ ನಿರ್ಮಾಣದಲ್ಲಿ ಆಸಕ್ತಿಯನ್ನು ತೋರಿಸುವುದಕ್ಕಾಗಿ ನಾವು ಬಹಳವಾಗಿ ಸಂತೋಷಿಸುತ್ತೇವೆ. ಈ ಬಗ್ಗೆ ಮೊದಲನೆಯ ಗೌರವವು ಕೊಚ್ಚಿ ಸಂಸ್ಥಾನಕ್ಕೆ ಸಂದಿರುತ್ತದೆ. ಅಲ್ಲಿನ ರಾಜರು ಜವಾಬ್ದಾರಿ ಸರ್ಕಾರದ ಘೋಷಣೆಯನ್ನು ಮಾಡಿದುದಲ್ಲದೆ ರಾಜ್ಯಾಂಗ ಸಭೆಯಲ್ಲಿಯೂ ಭಾಗವಹಿಸುವುದಾಗಿ ಪ್ರಕಟಿಸಿ, ಪ್ರಜಾ ಪ್ರತಿನಿಧಿಗಳಿಂದ ಚುನಾಯಿತರಾದವರನ್ನೇ ತಮ್ಮ ಸಂಸ್ಥಾನದ ಪರವಾಗಿ ಆ ಸಭೆಗೆ ಕಳುಹಿಸಿಕೊಟ್ಟಿದ್ದಾರೆ. ಇದಾದ ನಂತರ ಅನೇಕ ಸಣ್ಣ ಪುಟ್ಟ ಸಂಸ್ಥಾನಗಳೂ ಸಹ ಇದೇ ಮೇಲ್ಪಂಕ್ತಿಯನ್ನು ಅನುಸರಿಸಿದುವು.

ಬರೋಡೆಯು ಇನ್ನೂ ಮುಂದೆ ಹೋಗಿ ದಿವಾನ ನೌಕರಿ ಸಹ ಚುನಾವಣೆಯ ಸ್ಪರ್ಧೆಗೆ ಒಳಪಡಿಸಿ ಇತಿಹಾಸದಲ್ಲೇ ಹೊಸ ಪ್ರಕರಣವನ್ನು ಕಲ್ಪಿಸಿತು. ಅಲ್ಲಿನ ಪ್ರಜಾ ಪ್ರಮುಖರ ವಿಶ್ವಾಸವನ್ನು ಪ್ರಜೆಗಳಿಗೆ ಅಧಿಕಾರವರ್ಗದವರಾದ ದಿವಾನರಿಗೂ, ಪ್ರಜಾ ಮಂಡಲವು ದೊರೆಯುವಂತಾಗಿ ಅವರು ಅವಿರೋಧವಾಗಿ ಚುನಾಯಿತರಾದುದು ಅತ್ಯಂತ ಸಂತೋಷವಾದ ಅಂಶವಾಗಿದೆ.

ಈಚೆಗೆ ನರೇಂದ್ರ ಮಂಡಲದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಮನೋಭಾವನ್ನು ಖಂಡಿಸಿ ರಾಜರುಗಳು ತಮ್ಮ ಮಾತೃಸಂಸ್ಥೆ ವರ್ತಿಸಿ, ಸಂಯುಕ್ತ ಭಾರತ ರಾಜ್ಯ ಘಟನೆಯಲ್ಲಿ ಸಹಕರಿಸಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಿ ಅನೇಕ ರಾಜ ಮಹಾರಾಜರುಗಳನ್ನು ತಮ್ಮ ಕರ್ತವ್ಯ ಲಕ್ಷ್ಯಕ್ಕೆ ಸೆಳೆದ ಕೀರ್ತಿಯು ಬಿಕಾನೀರಿನ ಅರಸರಿಗೆ ಸಂದಿರುತ್ತದೆ. ಇನ್ನೂ ಅನೇಕ ನರೇಂದ್ರರೂ ಇದೇ ಭಾವನೆಯನ್ನು ಸೂಚಿಸಲು ಮುಂದೆ ಬಂದಿರುವುದು ಶುಭ ಸೂಚಕವೇ ಸರಿ.

ಪಾಟಿಯಾಲಾ ರಾಜರ ಸ್ಪಷ್ಟವಾದ ಹಿತವಚನವನ್ನು ರಾಜರುಗಳೆಲ್ಲರೂ ಪಾಲಿಸುವುದು ಒಳ್ಳೆಯದು. ನರೇಂದ್ರ ಮಂಡಲ ... ವಾದ ನ ...

ನೌಖಾಲಿಯಲ್ಲಿ ಮತ್ತೆ ಪುಂಡಾಟ

ನೌಖಾಲಿಯಲ್ಲಿ ಅರಾಜಕತ್ವವು ಮತ್ತೆ ತಾಂಡವವಾಡುತ್ತಿದೆಯೆಂದು ತಮಗೆ ದೂರುಗಳು ಬಂದಿರುವುದಾಗಿಯೂ, ಆದ್ದರಿಂದ ಕೂಡಲೇ ಆ ಬಗ್ಗೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಪ್ರಾರ್ಥಿಸಿ ಗಾಂಧೀಜಿಯವರು ಬಂಗಾಳಾ ಪ್ರಧಾನಿಗೆ ತಂತಿ ಕಳುಹಿಸಿದ್ದಾರೆ. ರಾಮಗಂಜ್ ಠಾಣೆಯಲ್ಲಿ ೨೧ ಜನರನ್ನೊಳಗೊಂಡ ೬ ಸಂಸಾರಗಳನ್ನು ಸುಡಲು ಪ್ರಯತ್ನ ನಡೆದುವು. ಕಳ್ಳತನ, ದರೋಡೆ, ಹೆಚ್ಚುವೆ. ಅತ್ಯಾಚಾರಿಗಳು, ಪುಂಡರು ರಾಜಾರೋಷವಾಗಿ ಬೀದಿಯಲ್ಲೇ ತಿರುಗಾಡುತ್ತಿದ್ದಾರೆ. ನೌಖಾಲಿಯಲ್ಲಿದ್ದ ಹಿಂದೂ ಅಧಿಕಾರಿಗಳನ್ನೆಲ್ಲಾ ವರ್ಗಾಯಿಸಲಾಗಿದೆ-ಎಂಬುದಾಗಿ ದೂರುಗಳು ಬಂದಿವೆ. ಈ ತರ್ಹ ಘೋರ ಸುದ್ದಿಗಳನ್ನು ಕೇಳಿ ಗಾಂಧೀಜಿ ಮರುಗಿದ್ದಾರೆ. "ಪರಿಸ್ಥಿತಿ ಇಷ್ಟು ಘೋರವಾಗಿದ್ದಲ್ಲಿ ಅಲ್ಲಿನ ಅಲ್ಪ ಸಂಖ್ಯಾತರಾದ ಹಿಂದೂಗಳು ಆ ಪ್ರದೇಶವನ್ನು ಬಿಟ್ಟು ಹೊರ ಹೋಗಬೇಕು ಇಲ್ಲವೇ ಅಲ್ಲೇ ಇದ್ದು, ಆ ಅಗ್ನಿಕುಂಡದಲ್ಲಿ ಆತ್ಮಾರ್ಪಣೆ ಮಾಡಬೇಕು"-ಇವೇ ಉಳಿದಿರುವ ಮಾರ್ಗಗಳು ಎಂದು ಸೂಚಿಸಿದ್ದಾರೆ.

ಸಮಾದ ಸ್ಥಿತಿಯಿಂದ ಇದುವರೆಗೆ ಆ ಸಂಸ್ಥೆಯು ಮತ್ತು ಅದರ ಹಿಂಬಾಲಕರ ವಿಷಯದಲ್ಲಿ ಸಾರ್ವಜನಿಕ ಅಭಿಪ್ರಾಯವು ದಿನೇ ದಿನೇ ವ್ಯತಿರೇಕವಾಗಿ ಪರಿಣಮಿಸುತ್ತಿರುವುದು. ದೇಶದ ಸ್ವಾತಂತ್ರ್ಯಕ್ಕೆ ನರೇಂದ್ರರುಗಳು ಅಡಚಣೆಯನ್ನುಂಟು ಮಾಡುತ್ತಿರುವರೆಂಬ ಅಪವಾದನೆಯು ಇದರಿಂದ ಸಹಜವಾಗಿ ಉತ್ಪನ್ನವಾಗುವುದೆಂದು ಉದಯಪುರದ ದಿವಾನರಾದ ಸರ್. ಟಿ. ವಿಜಯರಾಘವಾಚಾರಿಯವರು ಹೇಳಿರುವರು. ಇಂತಹ ಆರೋಪಣೆಯಿಂದ ಪಾರಾಗಬೇಕಾದುದು ಎಲ್ಲ ನರೇಂದ್ರರುಗಳ ಆದ್ಯ ಕರ್ತವ್ಯ.

ಜಿಲ್ಲಾ ಬೋರ್ಡ್ ಚುನಾವಣೆ
೨೮-೪-೪೭ ನೇ ಸೋಮವಾರ
ನಂಜನಗೂಡು ತಾಲ್ಲೂಕಿನ ೩ ಕ್ಷೇತ್ರಗಳಿಂದ
ಕಾಂಗ್ರೆಸ್ ಉಮೇದುವಾರರಿಗೇ
... ದಯವಿಟ್ಟು ಓಟು ಕೊಡಿ :-
ಹೆಚ್. ಲಿಂಗಪ್ಪ B. Sc., LL.B.
ಹೆಚ್. ಎಂ. ನಾಗಪ್ಪ (ಹುಲ್ಲಹಳ್ಳಿ)
ಎಂ. ಲಿಂಗಣ್ಣ B. Sc., LL.B.

ಟೆಂಡರ್ ನೋಟೀಸು

ಮೈಸೂರು ಅರಮನೆ ಗಜಶಾಲ ಇಲಾಖೆಗೆ ೧೯೪೭—೪೮ ನೇ ಸಾಲಿನಲ್ಲಿ ಸೌದೆ ಸಪ್ಲೈ ಮಾಡಲು ಅಪೇಕ್ಷೆಯುಳ್ಳವರು ಸೀಲ್ ಟೆಂಡರುಗಳನ್ನು ತಾ॥ ೧೫-೪-೪೭ ನೇ ಮಧ್ಯಾಹ್ನ ೧೨ ಘಂಟೆಯೊಳಗಾಗಿ ಗಜಶಾಲ ಆಫೀಸರವರಿಗೆ ಕೊಡತಕ್ಕದ್ದು. ಹೆಚ್ಚಿನ ವಿಷಯಗಳನ್ನು ಗಜಶಾಲೆಯಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಬಿ. ಎಸ್. ನೀಲಕಂಠರಾವ್,
ಆಫೀಸರ್-ಇನ್-ಛಾರ್ಜ್,
ಅರಮನೆ ಗಜಶಾಲೆ.

Printed ... ...
... Mysore ... Sadhvi ...
... Nos.

ಚಲನಚಿತ್ರಗಳಲ್ಲಿ ಮದ್ಯಪಾನ ದೃಶ್ಯವಿಲ್ಲ

ಇದೇ ೧ ನೇ ತಾ॥ ನಿಂದ ಬೊಂಬಾಯಿಯಲ್ಲಿ ಜಾರಿಗೆ ಬಂದಿರುವ ಮದ್ಯಪಾನ ನಿರೋಧದ ಶಾಸನದ ಮೇರೆ ಚಲನಚಿತ್ರಗಳಲ್ಲಿ ಮದ್ಯಪಾನದ ದೃಶ್ಯಗಳನ್ನು ಸೇರಿಸಕೂಡದೆಂದು ಅಲ್ಲಿನ ಸರ್ಕಾರವು ಆಜ್ಞಾಪಿಸುತ್ತಿದೆ.

ಸಾರ್ವಜನಿಕ ಕೊರತೆ

ಸ್ವಂ ಷು] ಕೃಷ್ಣರಾಜನಗರ

ಈ ಊರು ದಿನೇ ದಿನೇ ಅಭಿವೃದ್ಧಿಯಾಗುತ್ತಾ ಇದ್ದು ಸ್ಥಳ ಪರಸ್ಥಳದ ಜನರು ಬಂದು ಹೋಗುತ್ತಿರುವುದು ಹೆಚ್ಚುತ್ತಿದೆ. ಹೀಗಿದ್ದಾಗ್ಯೂ ಇಲ್ಲಿ ಸಾರ್ವಜನಿಕ ಕಕ್ಕಸು ಇಲ್ಲದಿರುವುದು ದೊಡ್ಡ ಕೊರತೆಯಾಗಿದೆ. ನೀರಿನ ಸೌಕರ್ಯದಿಂದೊಡಗೂಡಿದ ಒಂದು ಕಕ್ಕಸನ್ನು ಪೌರಸಭೆಯವರು ಕೂಡಲೇ ನಿರ್ಮಿಸಬೇಕು.

ಸನಾತನ ಧರ್ಮ ರಕ್ಷಣಾಸಭೆ

ಹಿರೀಸಾವೆ ಅ

ಈ ಗ್ರಾಮದ ಸನಾತನ ಧರ್ಮಾವಲಂಬಿಗಳು ಶಾ॥ ಶ್ರೀ॥ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಕಳೆದ ತಿಂಗಳು ಸಭೆ ಸೇರಿ ಸನಾತನ ಧರ್ಮ ರಕ್ಷಣೆಯನ್ನು ಮಹಾಪ್ರಭುಗಳು ಮುಂದುವರಿಸಿಕೊಂಡು ಬರಬೇಕೆಂದು ಪ್ರಾರ್ಥಿಸಿ, ತಮ್ಮ ಧರ್ಮದ ರಕ್ಷಣೆ ಬಗ್ಗೆ ದಿವಾನರಿಗೆ ಮನವಿ ಸಲ್ಲಿಸಬೇಕೆಂದು ನಿರ್ಧರಿಸಿದರು.

ಶ್ರೀ ಗಣೇಶ ಟಾಕೀಸ್
11-4-47 ರಿಂದ ಅಮೋಘವಾದ
5 ನೇ ವಾರ
ದಿನವಹಿ 3 ಆಟಗಳು
ಹರಿಶ್ಚಂದ್ರ
(ಕನ್ನಡ) ಚಿತ್ರ
Morning Shows on 11, 12, 13 and 14 at 10-30 a. m.
Sherlock Holmes and The Voice of Terror
Starring:- BASIL RATHBONE and NIGEL BRUCE

ಅಪೆರಾ ಟಾಕೀಸ್, ಮೈಸೂರು
೧೧-೪-೪೭ ರಿಂದ ೫ ನೇ ವಾರ
ಕುಂಡಲಕೇಶಿ

ಗರ್ಭ ರಕ್ಷಿಣಿ
ಅನೇಕರ ಅನುಭವ ಸಿದ್ಧವಾದ ಔಷಧಿ
ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸುಲಭವಾಗಿ ಪ್ರಸವವಾಗುವುದು.
ಆಯುರ್ವೇದ ವೈದ್ಯ ಭೂಷಣ
ಪಂಡಿತ್ ಕೆ. ವಿ. ವೆಂಕಟಸುಬ್ಬಯ್ಯ,
ಬಿ॥ ಬೋರ್ಡ್ ವೈದ್ಯ, ಅರಕಲವಾಡಿ.

ಚಾಮುಂಡಿಪುರಕ್ಕೆ ಮಾರ್ಕೆಟ್ಟಿನ ಆವಶ್ಯಕ...

ಮೈಸೂರು

ಚಾಮುಂಡಿಪುರವು ದಿನೇ ದಿನೇ ... ಯಸುತ್ತಿದೆ. ಇಲ್ಲಿನ ಜನರು ತರಕಾರಿ ... ಸಾಮಾನುಗಳಿಗೆ ದೇವರಾಜ ಮಾರ್ಕೆಟ್ಟಿಗೆ ಬರಬೇಕು. ಇದು ಇಲ್ಲಿಗೆ ಬಹಳ ...ರವಾಗಿದೆ. ಈ ಬಡಾವಣೆಯ ಮಧ್ಯ ದೇಶದಲ್ಲಿ ಒಂದು ಮಾರ್ಕೆಟ್ಟನ್ನು ... ಬೇಕಾದುದು ಅಗತ್ಯ. ಹಾಲಿ ಪ... ವಾಡಿ ರಸ್ತೆಯಲ್ಲಿ ಹಳ್ಳಿಯವರು ತರ... ಮತ್ತು ಸೌದೆ ಮಾರುವುದನ್ನು ಪೋಲಿ... ವರು ಅಡ್ಡಿಪಡಿಸುತ್ತಿರುವರು. ... ಯವರು ಬೇಗನೆ ಇಲ್ಲಿ ಒಂದು ಮಾ...ಟ್ಟನ್ನು ನಿರ್ಮಿಸಿ ಜನರಿಗೆ ಉಪಕಾರ ...ಡಬೇಕೆಂದು ಶ್ರೀ ಎಸ್. ರಾಮಣ್ಣನ... ಪ್ರಾರ್ಥಿಸಿದ್ದಾರೆ.

ಸಂಸ್ಕೃತ ಪ್ರಶ್ನೆ ಪತ್ರಿಕೆಗೆ ಆಕ್ಷೇಪ...

ಈ ಸಲದ ಮಿಡಲ್ ಸ್ಕೂಲ್ ಪರೀಕ್ಷೆ... ಸಂಸ್ಕೃತ ಪ್ರಶ್ನೆ ಪತ್ರಿಕೆಯು ಕಠಿಣ... ಯೂ, ಅಂತಸ್ತನ್ನು ಮೀರಿದುದಾಗಿ... ಇದ್ದು ವಿದ್ಯಾರ್ಥಿಗಳನ್ನು ಬಹಳ ಕಷ್ಟ... ಗುರಿ ಮಾಡಿದೆಯೆಂದೂ, ಇದರಿಂದ ... ತವು ಬಹಳ ಕಷ್ಟವೆಂಬ ಅಭಿಪ್ರಾಯವು... ಬಲವಾಗಿ ವಿದ್ಯಾರ್ಥಿಗಳು ಅದನ್ನು ... ಕೊಳ್ಳುವುದನ್ನು ಬಿಟ್ಟು ಬಿಡು... ಸೂಚನೆಗಳು ಈಗಾಗಲೇ ಕಂಡು... ದಿರುವುದರಿಂದ, ಈ ರೀತಿ ಕಠಿಣ ಪ್ರಶ್ನೆ...ನ್ನು ಈಯುವ ಭಾಷೆಗೆ ಪ್ರೋತ್ಸಾಹ ... ವ ನೀತಿಯನ್ನು ಅನುಸರಿಸಬೇಕೆಂದು ... ಸಂಬಂಧಪಟ್ಟವರಲ್ಲಿ ಶಿವರಾಮಪೇಟೆಯ... ಟುನ ಶ್ರೀ ಕೆ. ಎಂ. ಉತ್ತರ್‌ಕರ್‌ರವ... ಪ್ರಾರ್ಥಿಸಿದ್ದಾರೆ.

ಬೆಂಗಾಲ್ ಸಿಲ್ಕ್ ಸೀರೆ
ಏತಕ್ಕೆ ಕೊಳ್ಳಬೇಕು
ಅಂದ, ಚೆಂದ, ಆನಂದಕರ ಬಣ್ಣ... ಹಗುರ, ನಯ, ಉಡಲು ಹರ್ಷಕ... ಬೆಲೆ ಕಡಿಮೆ. ೨ ಸೀರೆ ಬೆಲೆಗೆ ೩
6-7-8-9 ಗಜಗಳಲ್ಲಿ ಸಿಗುತ್ತವೆ
ಬಾಬುರಾವ್ ಕಂಪೆನಿ, ಸಿಲ್...
ಮೈಸೂರು ಬ್ಯಾಂಕ್ ರೋಡ್, ಮೈಸೂ...

ರಾಜಕಮಲ್
೭-೪-೪೭ ರಿಂದ ಅಮೋಘವಾದ ೨ನೇ ವಾರ
ಮ್ಯಾಟಿನಿ ಮಧ್ಯಾಹ್ನ 3 ಗಂಟೆಗೆ
ಮೊದಲನೇ ಆಟ ಸಂಜೆ 6-15 ಕ್ಕೆ ಗಂಟೆ
ಶ್ರೀ ಕೃಷ್ಣಲೀಲಾ
(ಕನ್ನಡ...)
ಮೈಸೂರಿನಲ್ಲಿ ತಯಾರಿಸಿ, ಮಹಾಜನರ ಮನ್ನಣೆಗೆ ಪಾತ್ರವಾಗಿರುವ ಈ ಪ್ರಾಣ... ವೈಭವವನ್ನು ನೋಡಲು ತಪ್ಪಬೇಡಿ

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ವರ್ಷಕ್ಕೆ ಚಂದಾ ಎಂಟಾಣೆ ಮಾ...)

ರಿ. ನಂ. 392 ‖ ವಂದೇ ಮಾತರಂ ‖ ಬಿಡಿಪ್ರತಿಗೆ 3 ಕಾಸು

ಸಂಪುಟ ೫] ಶುಕ್ರವಾರ ೧೧—೪—೪೭ [ಸಂಚಿಕೆ ೨೦೭

ನಾಗೋಡ್ ಸಂಸ್ಥಾನದ ಸತ್ಯಾಗ್ರಹಕ್ಕೆ ವಿಜಯ

ರಾಷ್ಟ್ರೀಯ ಸಪ್ತಾಹ

ಮೈಸೂರು ೧೧

ಸೂರು ನಗರ ಕಾಂಗ್ರೆಸ್ ಸಮಿತಿ ಯದಲ್ಲಿ ರಾಷ್ಟ್ರೀಯ ಸಪ್ತಾಹದ ಇದೇ ೧೩ ನೇ ತಾ॥ ಬಾನು ಸಂಜೆ ಸಯ್ಯಾಜಿರಾವ್ ರಸ್ತೆಯಲ್ಲಿ ಕಾಂಗ್ರೆಸ್ ಕಛೇರಿಯಲ್ಲಿ ಪ್ರಾರ್ಥನಾ ಕರ್ನಾಟಕ ಏಕೀಕರಣ ದಿನಾ ನಡೆಯುವುದು

ಂಗ್ರೆಸ್ ಅಧ್ಯಕ್ಷರ ಸೂಚನೆಯಂತೆ ಕಮ್ಮ ಮನೆಗಳ ಮೇಲೆ ರಾಷ್ಟ್ರ ವನ್ನು ಹಾರಿಸುವುದಲ್ಲದೆ ಕೋಮು ಐಕ್ಯತೆಯ ಕಾರ್ಯದಲ್ಲಿ ನಿರತರಾಗ ಂದು ಪ್ರಾರ್ಥಿಸಲಾಗಿದೆ. ಸಂಜೆ ೭ ಗೆ ಕಾಂಗ್ರೆಸ್ ಕಛೇರಿಯಲ್ಲಿ ನಡೆಯು ಥೆಗೆ ಕಾಂಗ್ರೆಸ್ ಸದಸ್ಯರೆಲ್ಲರೂ ಬರ ಂದು ಕೋರಲಾಗಿದೆ

ನೀರು ಸರಬರಾಜಿಗಾಗಿ ವಂದನೆಗಳು

ವಿಶಾಖಪುರದಲ್ಲಿ ಮೊನ್ನೆ ವಿದ್ಯು ಇಲ್ಲದೆ ನಲ್ಲಿ ನೀರು ನಿಂತುಹೋಗಿ ಈ ವಿಚಾರವನ್ನು ನೀರು ಸರಬ ಸೂಪರಿಂಟೆಂಡೆಂಟರವರಿಗೆ ತಿಳಿಸ ಅವರು ಪುರಸಭಾ ಉಪಾಧ್ಯಕ್ಷರಿಗೆ ನೂಡಿದರು. ಅನಂತರ ಲಾರಿಯ ಪ್ರದೇಶದಲ್ಲೆಲ್ಲಾ ನೀರು ಸರಬರಾ ಮಾಡಲಾಯಿತು ಇದಕ್ಕಾಗಿ ಸಂಬಂ ಎಲ್ಲ ಅಧಿಕಾರಿಗಳಿಗೂ ಈ ಮೊಹ ಜನರು ವಂದನೆಗಳನ್ನರ್ಪಿಸುತ್ತಾರೆಂ ಆ ಪ್ರದೇಶದ ನಾಗರಿಕ ಪ್ರಮುಖರೊ ಬರೆದಿರುತ್ತಾರೆ

ಪ್ರಾಂತಗಳ ಆಡಳಿತದಲ್ಲಿ ಭಾರಿ ಬದಲಾವಣೆಯೇ ?

ಪ್ರಾಂತ್ಯಗಳ ಗೌರ್ನರುಗಳ ಸಮ್ಮೇಳ ದೆಹಲಿಯಲ್ಲಿ ಇದೇ ೧೪ ಮತ್ತು ೧೫ ತಾ॥ ಗಳಲ್ಲಿ ನಡೆಯುವುದು. ಬ್ರಿಟ ಭಾರತವನ್ನು ಬಿಟ್ಟು ಹೊರಟು ಹೋ ನಿರ್ಧರಿಸಿರುವುದರಿಂದ ಅಧಿಕಾರವ ಭಾರತೀಯರಿಗೆ ವರ್ಗಾಯಿಸುವ ಬಗ್ಗೆ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಡುವರಿಸಲು ಗೌರ್ನರುಗಳು ತಮ್ಮ ಪ್ರಾಂತ್ಯದ ಶಾಂತಿಯನ್ನು ರಕ್ಷಿಸುವ ವಿಶೇಷ ಶ್ರದ್ಧೆವಹಿಸಬೇಕೆಂದು ವೈಸ ರಾಯ್ ಅವರಿಗೆ ತಿಳಿಸಲಿರುವರೆಂದು ಗೊ ಗಿದೆ ಈ ದೃಷ್ಟಿಯಿಂದ ಪ್ರಾಂತ್ಯದ ಳಿತಗಳಲ್ಲಿ ಭಾರಿ ಬದಲಾವಣೆ ಉಂಟಾ ಗುವುದೆಂದು ಊಹಿಸಲಾಗಿದೆ ಬ್ರಿ॥ ಸ ರದ ನೀತಿಯನ್ನು ಗೊತ್ತು ಮಾಡುವ ಲ್ಲಿ ವೈಸರಾಯರಷ್ಟೆ ಗೌರ್ನರುಗಳೂ ಅ ನ ಪಡೆದಿರಬೇಕೆಂದು ಜವಾಬ್ದಾರಿ ವ ಗಳಲ್ಲಿ ಹೇಳಲಾಗುತ್ತಿದೆ

ಹೆನ್ರಿ ಫೋರ್ಡರ ಆಸ್ತಿಪಾಸ್ತಿಗಳು

ದಿವಂಗತ ಹೆನ್ರಿ ಫೋರ್ಡ್ ರವರ ಆಸ್ತಿ ಸ್ತಿಗಳ ಮೊತ್ತವು ಸುಮಾರು ೬೦ ಕೋ ಡಾಲರುಗಳನ್ನು ಮೀರಬಹುದೆಂದು ಂದಾಜು ಮಾಡಲಾಗಿದೆ ಅವರ ಕೈಗಾ ಕಾ ಸಾಮ್ರಾಜ್ಯವೂ, ಈ ಆಸ್ತಿ ಪಾಸ್ತಿಗ ೂ ಅವರ ಪತ್ನಿ, ಸೊಸೆ ಮತ್ತು ನಾಲ್ಕು ಮ್ಮಳಾದ ಹೆನ್ರಿ, ಬೆನ್ಸನ್ ವಿಲಿಯಂ ಮ ಜೊಸೆಫೈನ್ ರವರುಗಳಿಗೆ ಸೇರುವುದು

ಇಂಡೋನೇಷ್ಯದ ನಿಯೋಗದವರು ನೆ ರಾತ್ರಿ ಮೈಸೂರಿನಿಂದ ಬೆಂಗಳೂರಿಗೆ ದಿರುಗಿ ಈ ದಿನ ಬೆಳಗ್ಗೆ ಮದರಾಸಿಗೆ ವಿ ಮಾನದಲ್ಲಿ ಪ್ರಯಾಣ ಬೆಳಸಿದರು,

ಭಾರತದಲ್ಲಿನ ಪಡಿತರ ಪ್ರಮಾಣ ಬಹಳ ಕಡಿಮೆ

ಇಂಡೋನೇಷ್ಯಾ ನಿಯೋಗದ ಪ್ರಮುಖರ ಅಭಿಪ್ರಾಯ

ಮೈಸೂರು ೧೦

ರಾಜಧಾನಿಗೆ ಆಗಮಿಸಿದ್ದ ಇಂಡೊನೇಷಿ ಯಾ ನಿಯೋಗದ ನಾಯಕರಾದ ಡಾ॥ ಥಾ ಮ್ ಜಿಲ್ ರವರು ನಿನ್ನೆ ಸಂಜೆ ಪುರಸಭಾ ಭವನದಲ್ಲಿ ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿದರು ಅದರಲ್ಲಿ ಅವರು ಮಾತನಾ ಡುತ್ತಾ ಭಾರತದಲ್ಲಿ ಕೊಡಲಾಗುತ್ತಿರುವ ಪಡಿತರ ಪ್ರಮಾಣವು ಬಹಳ ಅಲ್ಪವೆಂದು ಅಭಿಪ್ರಾಯ ಪಟ್ಟರು ಜನರ ಉಪವಾಸ ವನ್ನು ತಪ್ಪಿಸಲು ಇನ್ನೂ ಕೆಲವು ಕಾಲ ಭಾರತಕ್ಕೆ ಹೊರದೇಶದಿಂದ ಆಹಾರವು ಬರ ಲೇ ಬೇಕಾಗಿದೆಯೆಂದು ಹೇಳಿದರು

ಆಹಾರದ ವಿಚಾರದಲ್ಲಿ ಭಾರತದ ಸರ ಕಾರಗಳೂ, ಜನರೂ ನಡೆಸುತ್ತಿರುವ ಕಾರ್ಯ ಕ್ರಮಗಳನ್ನು ಪ್ರಶಂಸಿಸಿದರು. ಭಾರತದ ಲ್ಲಿರುವ ಆಹಾರ ಸಂಗ್ರಹಣೆ ಮತ್ತು ಹಂ ಚಿಕೆಯ ಪದ್ಧತಿಯೂ ಪ್ರಪಂಚದಲ್ಲೆಲ್ಲಾ ಅ ತ್ಯಂತ ಕಠಿಣವಾದುದೆಂದು ಹೇಳಿದರು. ಇಂಡೊನೇಷಿಯದಲ್ಲಿ ತಮ್ಮ ಸ್ವತಂತ್ರ ಹೋರಾಟದ ಎರಡನೇ ಅಂಕವು ಈಗ ಆ ರಂಭವಾಗಲಿದೆಯೆಂದೂ ತಮ್ಮ ಪ್ರಸಕ್ತದ ನಾ ಕಾರ್ಯದಲ್ಲಿ ಭಾರತವು ಸಹಾಯ ಮಾ ಡಬೇಕೆಂದೂ ಪ್ರಾರ್ಥಿಸಿದರು ತಮಗೆ ಬಟ್ಟೆ ವ್ಯವಸಾಯದ ಉಪಕರಣ ಸಂಚಾರ ಸೌಕರ್ಯ ಮುಂತಾದುವುಗಳ ಅವಶ್ಯಕ ಬಹಳವಾಗಿದೆಯೆಂದರು ಏಷ್ಯಾ ಸಮ್ಮೇ ಳನದಿಂದ ಭಾರತದೊಡನೆ ತಮ್ಮ ಸಂಬಂಧ ವನ್ನು ಹೆಚ್ಚು ಮಾಡಿಕೊಳ್ಳಲು ಅವಕಾಶ ದೊರಕಿದೆಯೆಂದು ಹೇಳಿ, ಭಾರತದ ಪತ್ರಿ ಕೆಗಳು ತಮ್ಮ ಬಗ್ಗೆ ಆಸಕ್ತಿಯನ್ನು ವಹಿಸಿ ರುವುದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿದ ರು ಭಾರತದ ಪತ್ರಿಕಾ ಪ್ರತಿನಿಧಿಗಳು ತ ಮ್ಮ ದೇಶಕ್ಕೆ ಭೇಟಿ ಕೊಡಲು ವ್ಯವಸ್ಥೆ ಮಾಡಬೇಕೆಂದಿರುವುದಾಗಿ ಹೇಳಿದರು

ಪತ್ರಿಕಾ ಪ್ರತಿನಿಧಿಗಳು ಕೇಳಿದ ಅನೇಕ ಪ್ರಶ್ನೆಗಳಿಗೆ ಉತ್ತರವಿತ್ತು ಅಹಿಂಸೆಯಲ್ಲಿ ಸ್ವಲ್ಪಮಟ್ಟಿಗೆ ತಮಗೆ ನಂಬಿಕೆ ಇರುವುದಾ ಗಿ ಹೇಳಿದರು ತಮ್ಮಲ್ಲೂ ಕೈಯಿಂದ ದಾ ರ ತೆಗೆದು ಬಟ್ಟೆ ಮಾಡಲಾಗುತ್ತಿದೆಯೆಂ ದರು. ವಿದ್ಯಾರ್ಥಿಗಳ ನೆರವಿಲ್ಲದೆ ತಾವು ಸ್ವಾತಂತ್ರ್ಯ ಗಳಿಸಲು ಸಾಧ್ಯವಾಗುತ್ತಿರಲಿ ಲ್ಲವೆಂದೂ, ತಮ್ಮ ನಿಯೋಗದಲ್ಲಿ ಎಲ್ಲ ರಾ ಜಕೀಯ ಪಕ್ಷಗಳೂ ಇರುವುದಾಗಿಯೂ ತಿ ಳಿಸಿದರು ತಮ್ಮಲ್ಲಿ ಕೋಮುವಾರು ಪ್ರ

ಕೃಷ್ಣಸ್ವಾಮಿ ಪಿಳ್ಳೆಯವರ ಬಿಡುಗಡೆ

ಸ್ವಂ ಸು ಫೋ] [ಬೆಂಗಳೂರು ೧೧

ಬೆಂಗಳೂರು ಗಲಭೆಗಳ ಸಂಬಂಧದಲ್ಲಿ ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ಬಂಧಿಸಲ್ಪಟ್ಟಿದ್ದ ಪೌರಸಭಾ ಸದಸ್ಯರಾದ ಶ್ರೀ॥ ಕೃಷ್ಣಸ್ವಾಮಿ ಪಿಳ್ಳೆಯವರನ್ನು ಈದಿ ನ ಬಿಡುಗಡೆ ಮಾಡಲಾಯಿತು.

○ ಒರಿಸ್ಸಾ ಪ್ರಾಂತದ ಮುಖ್ಯಮಂತ್ರಿ ಸಚಿವರಾದ ಶ್ರೀ॥ ರಾಧಾಕೃಷ್ಣ ಬಿಸ್ವಾಸ ರಾಯ್ ರವರು ತಮ್ಮ ಚೀಫ್ ಎಂಜನಿ ಯರವರೊಡನೆ ಈ ದಿನ ಇಲ್ಲಿಗೆ ಬಂದರು. ಸಂಸ್ಥಾನದ ನೀರಾವರೀ ಕೆಲಸಗಳನ್ನು ಅ ವರು ಪರಿಶೀಲಿಸುವರು

× ಬರುವ ತಿಂಗಳು ೫ ನೇ ತಾ॥ ಅಖಿ ಲ ಭಾರತ ಹಾಕಿ ಪಂದ್ಯವು ಬೆಂಗಳೂರಿನಲ್ಲಿ ನಡೆಯುವುದು ಆದಿನ ಸಂಸ್ಥಾನದ ಇಲ ವೆನ್ಸ್ ಟೀಮಿನವರೂ, ೭ ನೇ ತಾ॥ ಈ ಬ್ಲೆಂಡ್ ಟೀಮಿನವರೂ ಆಟವಾಡುವರು

ವಿದ್ಯಾರ್ಥಿಗಳ ತೊಂದರೆ

ಸ್ವಂ. ಸು] [ಶ್ರೀರಂಗಪಟ್ಟಣ ೧೦

ಇಲ್ಲಿನ ಹೈಸ್ಕೂಲ್ ಮೊದಲನೇ ತರಗತಿ ಯ ಫಲಿತಾಂಶವು ಪ್ರಕಟವಾಗಿ ೩೦ ಮಂ ದಿ ತೇರ್ಗಡೆಯಾಗಿರುವರೆಂದೂ, ೧೦ ಮಂ ದಿಗೆ ಫಲಿತಾಂಶವನ್ನು ತಡೆಹಿಡಲಾಗಿದೆ ಯೆಂದೂ ತಿಳಿದುಬಂದಿದೆ ಹಾಜರಾತಿ ಯ ಕೊರತೆಯಿಂದ ಈ ರೀತಿ ಮಾಡಲಾಗಿ ದೆಯೆಂದು ಹೇಳಲಾಗುತ್ತಿದೆ. ಶಾಲೆಯ ನ್ನು ಬಹಳ ನಿಧಾನವಾಗಿ ಆರಂಭ ಮಾಡಿ ದುದರಿಂದ ಮೊದಲನೇ ವರ್ಷವಾದ ಈಸಲ ಈ ರೀತಿ ಅನಾನುಕೂಲ ಉಂಟಾಗಿದೆಯಾ ದುದರಿಂದ ಸಂಬಂಧಪಟ್ಟ ಅಧಿಕಾರಿಗಳೂ, ಪುರಸಭಾ ಸದಸ್ಯರೂ ಇದರ ಕಡೆ ಗಮನ ಕೊಟ್ಟು, ವಿದ್ಯಾರ್ಥಿಗಳಿಗೆ ಉಪಕಾರ ಮಾ ಡಬೇಕಾಗಿದೆ

‡ ಇಲ್ಲಿ ನಿನ್ನೆ ಭಾರಿ ಮಳೆ ಮತ್ತು ಗಾಳಿ ಬಂದು ಅನೇಕ ಮರಗಳು ನೆಲಸಮವಾದು ವು. ಕೆಲವು ಮನೆಗಳು ಉರುಳಿವೆ

* ಇದುವರೆಗೆ ಇಲ್ಲಿಗೆ ಈ ತಿಂಗಳ ಸಕ್ಕರೆ ಬಂದಿಲ್ಲವೆಂದು ಹೇಳಲಾಗಿದೆ.

ಸ್ಥಗಿತವಾದವು ಇಲ್ಲವೆಂದರು

ಮೈಸೂರು ನಗರದ ಸಭೆಯ ೨೪ ಚು ನಾಯಿತ ಸ್ಥಾನಗಳ ಪೈಕಿ ೨೩ ಸ್ಥಾನಗಳ ನ್ನು ಕಾಂಗ್ರೆಸ್ಸು ಪಡೆದಿರುವುದನ್ನು ನಿಯೋ ಗದವರು ಬಹಳವಾಗಿ ಪ್ರಶಂಸಿಸಿದರು ಮೈ ಸೂರು ಕಾಂಗ್ರೆಸ್ಸಿನವರು ಜವಾಬ್ದಾರಿ ಸ ರ್ಕಾರಕ್ಕಾಗಿ ಮೇ ೧ ರಿಂದ ಸತ್ಯಾಗ್ರಹ ಹೂಡಲಿರುವ ವಿಚಾರವನ್ನು ಸವಿಸ್ತಾರ ದಿಂದ ಕೇಳಿ, ವಿವರವನ್ನು ಪಡೆದರು

ನಾಗೋದ್ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ

ಮಧ್ಯ ಹಿಂದೂಸ್ಥಾನದಲ್ಲಿರುವ ನಾಗೋ ದ್ ಸಂಸ್ಥಾನದ ಪ್ರಜಾಮಂಡಲದವರು ಜ ವಾಬ್ದಾರಿ ಸರ್ಕಾರಕ್ಕಾಗಿ ಅಲ್ಲಿನ ಮಹಾ ರಾಜರನ್ನು ಒತ್ತಾಯ ಪಡಿಸಲು ಆರಂಭಿಸಿ ದ್ದ ಸತ್ಯಾಗ್ರಹವು ಜಯಪ್ರದವಾಗಿ ಮುಕ್ತಾ ಯಗೊಂಡಿದೆ ರಾಜರು ಎಲ್ಲಾ ಸತ್ಯಾಗ್ರ ಹಿಗಳನ್ನೂ ಬಿಡುಗಡೆ ಮಾಡಿಸಿದ್ದಾರೆ. ಗ್ರಾಮ ಪಂಚಾಯಿತಿಗಳಿಂದ ಸಂಯುಕ್ತ ಚುನಾವಣಾ ಪದ್ಧತಿಯಂತೆ ವಯಸ್ಕರಿಗೆ ಲ್ಲಾ ಓಟಿನ ಹಕ್ಕನ್ನು ಕೊಟ್ಟು ಹೊಸ ಚು ನಾವಣೆಗಳನ್ನು ನಡೆಸಲು ಒಪ್ಪಿದ್ದಾರೆ. ಇ ವರು ಚುನಾಯಿತ ಪ್ರತಿನಿಧಿಗಳನ್ನು ಮಂ ತ್ರಿಗಳನ್ನಾಗಿ ಅವರು ನೇಮಿಸಿಕೊಳ್ಳುತ್ತಾರೆ ಶಾಸನ ಸಭೆಯ ಅಧ್ಯಕ್ಷರನ್ನು ಚುನಾಯಿ ಸಿಕೊಳ್ಳುವ ಹಕ್ಕನ್ನು ಕೊಟ್ಟಿದ್ದಾರೆ ರಾ ಜರು ಒಂದು ಪ್ರಕಟಣೆಯನ್ನು ಹೊರಡಿಸಿ ತಮ್ಮ ಪ್ರಜೆಗಳನ್ನು "ಮರೆಯಿರಿ ಮತ್ತು ಮನ್ನಿಸಿ" ಎಂದು ಪ್ರಾರ್ಥಿಸಿದ್ದಾರೆ ಸಂ ಸ್ಥಾನದ ಚರಿತ್ರೆಯ ಹೊಸ ಅಧ್ಯಾಯವ ನ್ನು ಆರಂಭಿಸಲು ಸಹಕರಿಸಬೇಕೆಂದು ಕೋರಿದ್ದಾರೆ.

ಅಮೆರಿಕಾ ನೀತಿಯಿಂದ ವಿಶ್ವ ಸಂಗ್ರಾಮವೇ ?

ಇನ್ನು ೩ ತಿಂಗಳಲ್ಲಿ ಅಮೇರಿಕಾ ಸಂಯು ಕ್ತ ಸಂಸ್ಥಾನವು ಅನುಸರಿಸುವ ವಿದೇಶಾಂ ಗ ನೀತಿಯಿಂದ ಇದು ವಿಶ್ವ ಸಂಗ್ರಾಮದ ಲ್ಲಿ ಧುಮುಕುವ ಪರಿಸ್ಥಿತಿ ಒದಗುವುದೆಂದು ಅಲ್ಲಿನ ಮಾಜಿ ಉಪಾಧ್ಯಕ್ಷರಾದ ಮಿ॥ ಹೆನ್ರಿ ವ್ಯಾಲೆಸ್ ರವರು ತಿಳಿಸಿರುತ್ತಾರೆ ರಷ್ಯದ ವಿರುದ್ಧವಾದ ನಡವಳಿಕೆಯು ಈ ಯುದ್ಧ ದಲ್ಲಿ ಪರ್ಯವಸಾನವಾಗುವುದೆಂದು ಅವ ರು ಹೇಳಿದರು

ಜಿನ್ನಾರವರು ಪ್ರಧಾನಾಧ್ಯಕ್ಷರಾಗಲು ಗಾಂಧಿಜಿ ಒಪ್ಪಿಗೆ

ಭಾರತದಲ್ಲಿರುವ ಎಲ್ಲಾ ಕೋಮುಗಳ ಅರ್ಹರೂ, ದಕ್ಷರೂ ಆದ ಪ್ರತಿನಿಧಿಗಳನ್ನು ಸರ್ಕಾರದಲ್ಲಿ ಪಡೆದು ಮಿ॥ ಜಿನ್ನಾರವರು ಸ್ವತಂತ್ರ ಭಾರತ ರಿಪಬ್ಲಿಕ್ಕಿನ ಪ್ರಧಾನಾಧ್ಯ ಕ್ಷರಾದರೆ ಅದು ತಮಗೆ ಆನಂದವಾದ ಸಂ ತೋಷವಾಗುವುದಾಗಿ ಮಹಾತ್ಮ ಗಾಂಧಿ ಯವರು ತಿಳಿಸಿರುತ್ತಾರೆ ಹೀಗಾದಲ್ಲಿ ಎ ಲ್ಲಾ ವ್ಯಸನ ಮತ್ತು ಸಿಟ್ಟುಸಿರು ಕಂಡು ಬರದೆ ಭಾರತವು ಅಪೂರ್ವವಾದ ರಾಷ್ಟ್ರ ವಾಗುವುದರಲ್ಲಿ ಸಂದೇಹವಿಲ್ಲ ಎಂದು ಅವ ರು ಹೇಳಿರುವರು ಪಾಕಿಸ್ಥಾನವೆಂದರೇ ನು ಎಂಬುದೇ ತಮಗೆ ಇನ್ನೂ ತಿಳಿದು ಬಂ ದಿಲ್ಲವೆಂದು ಹೇಳಿ ಅದನ್ನು ಬೆದರಿಕೆ ಮ ತ್ತು ಬಲಪಂತದಿಂದ ಮುಸ್ಲಿಮರು ಪಡೆಯ ಲು ಸಾಧ್ಯವಿಲ್ಲವೆಂದೂ, ಆದರೆ ಉಭಯ ತಾಪಿ ಸಮ್ಮತಿ ಮತ್ತು ಸಂಧಾನಗಳಿಂದ ಇ ದೀ ಭಾರತವನ್ನೇ ಅವರಿಗೆ ಕೊಡಬಹುದಾ ಗಿದೆಯೆಂದು ಗಾಂಧಿಜಿ ತಿಳಿಸಿದ್ದಾರೆ. ಸ ರ್ಕಾರಕ್ಕೆ ಎಲ್ಲ ವರ್ಗಗಳ ಪ್ರಮುಖರನ್ನು ತೆಗೆದುಕೊಳ್ಳಲು ಒಪ್ಪಿದರೆ ಇಗ್ಗೆ ಭಾರತದ ಪೂರ್ಣಾಧಿಕಾರವನ್ನು ಮುಸ್ಲಿಂ ಲೀಗಿಗೆ ವ ಹಿಸಿಕೊಡಲು ಗಾಂಧಿಜಿಯವರು ಸಮ್ಮತಿಸಿ ರುವರೆಂದು ಹೇಳಲಾಗುತ್ತಿದೆ.

ಡಿ. ರಾಮಯ್ಯನವರಿಗೆ ಕಾರು ಅಕಸ್ಮಿಕ

ಮೈಸೂರು ಅರಮನೆ ಕಛೇರಿ ಮ್ಯಾನೇ ಜರ್ ಆದ ಶ್ರೀ॥ ಡಿ ರಾಮಯ್ಯನವರ ಮೋಟಾರ್ ನಿನ್ನೆ ಒಂದು ಕಾರು ಹರಿದು ಗಾ ಯಗೊಳಗಾಗಿ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂದು ತಿಳಿದು ಬಂದಿದೆ.

ಸಾಧ್ವಿ

ತಾ|| ೧೧-೪-೪೭ ಶುಕ್ರವಾರ

ಮದ್ಯಪಾನ ಪ್ರದರ್ಶನವನ್ನು ನಿಲ್ಲಿಸಬೇಕು

ಬೊಂಬಾಯಿ ಸರ್ಕಾರದವರು ಕೈಗೊಂಡಿರುವ ಪಾನ ನಿರೋಧದ ಕಾರ್ಯಕ್ರಮದ ಅಂಗವಾಗಿ ಚಲನಚಿತ್ರಗಳಲ್ಲಿ ಮದ್ಯಪಾನಕ್ಕೆ ಸಂಬಂಧಪಟ್ಟ ವಿಚಾರಗಳ ಪ್ರದರ್ಶನವನ್ನು ನಿಷೇಧಿಸಿರುತ್ತಾರೆ. ಇದು ಪಾನ ನಿರೋಧದ ಕಾರ್ಯಕ್ರಮದಲ್ಲಿ ಒಂದು ಪ್ರಾಮುಖ್ಯವಾದ ಸುಧಾರಣೆ ಇದರಿಂದ ಈ ದುಷ್ಟ ಪದ್ಧತಿಯನ್ನು ತಡೆಗಟ್ಟಲು ಸ್ವಲ್ಪಮಟ್ಟಿಗಾದರೂ ಸಹಾಯವಾಗದಿರದು.

ಮನುಷ್ಯನ ನೀತಿಯನ್ನು ರೂಪಿಸುವುದರಲ್ಲಿ ಚಲನಚಿತ್ರಗಳು ವಿಶೇಷ ಪ್ರಭಾವವನ್ನು ಬೀರುತ್ತವೆ. ಪ್ರೇಕ್ಷಕರನ್ನು ತಾತ್ಕಾಲಿಕವಾಗಿ ಸಂತೋಷಪಡಿಸುವುದು ಮಾತ್ರವೇ ಅಲ್ಲದೆ ಅವರ ನಡೆ, ನುಡಿಗಳನ್ನೂ ಮತ್ತು ರೀತಿ, ನೀತಿಗಳನ್ನು ಮಾರ್ಪಡಿಸಲು ಅವುಗಳು ಬಹಳ ಸಹಾಯಕವಾಗುತ್ತವೆ. ವಿನೋದವೇ ಚಿತ್ರ ಪ್ರದರ್ಶನಗಳ ಮುಖ್ಯ ಉದ್ದೇಶವಾದರೂ, ಅವುಗಳಿಂದ ಸಮಾಜದಲ್ಲಿ ಅನೀತಿಯು ಹರಡಲು ಆಸ್ಪದವಾಗಬಾರದು. ಜನಾಂಗದಲ್ಲಿರುವ ಅನೇಕ ದುರ್ನಡತೆಗಳನ್ನು ಚಲನ ಚಿತ್ರಗಳಿಂದ ದೂರವಾಗಿಡುವುದು ಅವಶ್ಯಕವಾಗಿರುತ್ತದೆ.

ಮದ್ಯಪಾನವು ಮಾನವನನ್ನು ಪಶು, ಪ್ರಾಣಿಗಿಂತಲೂ ಅಧಃಪಾತಾಳಕ್ಕೆ ಸೆಳೆಯುವ ದುಷ್ಟ ಚಾಳಿಯೆಂದು ಸಕಲ ಮತಗಳೂ, ಜನಾಂಗಗಳೂ ಅಂಗೀಕರಿಸಿವೆ ಅದನ್ನು ತಪ್ಪಿಸುವುದಕ್ಕಾಗಿ ಈಗಾಗಲೇ ವಿಶೇಷವಾದ ಪ್ರಯತ್ನಗಳೂ ಸಹ ನಡೆದಿವೆ. ಕಾಂಗ್ರೆಸ್ ಮಂತ್ರಿಮಂಡಲಗಳಿರುವ ಪ್ರಾಂತ್ಯಗಳಲ್ಲಿ ಈ ಕೆಟ್ಟ ಪದ್ಧತಿಯನ್ನು ಬಹಳ ಮಟ್ಟಿಗೆ ತಪ್ಪಿಸಿ, ಅದರಿಂದ ಆಗುವ ಅನರ್ಥವನ್ನು ನಿವಾರಣೆ ಮಾಡಿರುತ್ತಾರೆ

ನಮ್ಮ ಸಂಸ್ಥಾನದಲ್ಲಿ ಪಾನ ನಿರೋಧವನ್ನು ಜಾರಿಗೆ ತರಲು ಒಂದು ಸಮಿತಿಯನ್ನು ನೇಮಿಸಲಾಗಿದೆ ಅವರು ಇನ್ನೂ ಪ್ರಶ್ನಾವಳಿಯಲ್ಲಿಯೇ ತೊಡಗಿದ್ದಾರೆ. ಸಮಾಜಕ್ಕೆ ಅತ್ಯಂತ ಹಾನಿಕರವೆಂದು ನಿರ್ವಿವಾದದಿಂದ ನಿರ್ಧರವಾಗಿ, ನೆರೆಹೊರೆಯ ಪ್ರಾಂತ್ಯಗಳಲ್ಲಿ ಯಶಸ್ವಿಯಾಗಿ ನಿರೋಧಿಸಲ್ಪಟ್ಟಿರುವ ಈ ದುರಭ್ಯಾಸವನ್ನು ನಮ್ಮ ಸಂಸ್ಥಾನದಲ್ಲಿಯೂ ತಪ್ಪಿಸಲು ಸರ್ಕಾರದವರು ಕೂಡಲೇ ನೇರವಾದ ಕಾರ್ಯಕ್ರಮವನ್ನು ಕೈಗೊಳ್ಳಬಹುದಾಗಿತ್ತು. ಇದಕ್ಕೆ ವಿಚಾರಣಾ ಸಮಿತಿಯಾಗಲೀ, ಪ್ರಶ್ನಾವಳಿಗಳಾಗಲೀ, ಅಂಕಿಅಂಶಗಳಾಗಲೀ, ದಾಕ್ಷಿಣ್ಯ, ಸಾಹಿತ್ಯಗಳಾಗಲೀ ಅಗತ್ಯವಿಲ್ಲ. ಸರ್ಕಾರದವರು ಇದರಿಂದ ಬರುವ ಅಪವಿತ್ರವಾದ ಹಣವನ್ನು ತ್ಯಜಿಸಿ, ಸಂಸ್ಥಾನವನ್ನು ಪರಿಶುದ್ಧಗೊಳಿಸಲು ನಿರ್ಧರಿಸುವ ಧೈರ್ಯವನ್ನು ಮಾತ್ರ ತಾಳಬೇಕು

ಚಲನ ಚಿತ್ರಗಳಲ್ಲಿಯೂ, ನಾಟಕರಂಗಗಳಲ್ಲಿಯೂ, ವೇಷ ಸ್ಪರ್ಧೆಗಳಲ್ಲಿಯೂ, ವಿನೋದಕ್ಕಾಗಿಯಾದರೂ ಮದ್ಯಪಾನ ಪ್ರದರ್ಶನಗಳನ್ನು ಸೇರಿಸುವುದು ವಾಡಿಕೆಯಾಗಿಬಿಟ್ಟಿದೆ. ಇದರಿಂದ ಪ್ರೇಕ್ಷಕರ ಮನಸ್ಸಿನ ಮೇಲೆ ಆಗುವ ದುಷ್ಪರಿಣಾಮವೇ ಅಧಿಕವಾಗಿರುತ್ತದೆ ಆದುದರಿಂದ ಈಗ - ಟ್ಟಿಸುವುದು ಅವಶ್ಯಕ. ನಮ್ಮ ಸಂಸ್ಥಾನದ ಸರ್ಕಾರದವರು ಬೊಂಬಾಯಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಸಿನಿಮಾ, ನಾಟಕ ಮತ್ತು ಇತರ ಎಲ್ಲಾ ಪ್ರದರ್ಶನಗಳಲ್ಲಿಯೂ ಮದ್ಯಪಾನವನ್ನು ತೋರಿಸುವ ಭಾಗಗಳನ್ನು ನಿರೋಧಿಸುವಂತೆ ಏರ್ಪಾಡು ಮಾಡಬೇಕೆಂದು ನಾವು ಕೋರುತ್ತೇವೆ

ಮೊದಲು ಸ್ವಾತಂತ್ರ್ಯ, ಅನಂತರ ವಿವಾಹ!

ಬರ್ಮಾ ನಾಯಕರಾದ ಯು ಆಂಗ್ ಸಾನರ ಗ್ರಾಮವಾದ ನಾಟ್ಮೌಕ್ ಎಂಬಲ್ಲಿನ ೨೧ ಜನ ಯುವಕರೂ, ೨೩ ಮಂದಿ ತರುಣಿಯರೂ ತಾವು ಮೊದಲು ಬರ್ಮಾದ ಸ್ವಾತಂತ್ರ್ಯ ಸಾಧನೆಗಾಗಿ ಹೋರಾಡಿ, ಅದು ಸ್ವತಂತ್ರವಾದ ನಂತರ ವಿವಾಹ ಮಾಡಿಕೊಳ್ಳುವುದಾಗಿ ಪ್ರತಿಜ್ಞೆಮಾಡಿದ್ದಾರೆ.

ವೈಸರಾಯರ ಪತ್ನಿಯವರ ಮೇಲ್ಪಂಕ್ತಿ

ಭಾರತೀಯರಿಗೆ ಅಧಿಕಾರವನ್ನು ವಹಿಸಿಕೊಡುವ ಸಲುವಾಗಿ ತಾವು, ವೈಸ್ರಾಯರೂ ಭಾರತಕ್ಕೆ ಬಂದಿರುವುದಾಗಿಯೂ, ಭಾರತೀಯರಲ್ಲೇ ಸಂಘ, ಸಂಸ್ಥೆಗಳ ಕಾರ್ಯಕಲಾಪಗಳನ್ನು ನಡೆಸಿಕೊಳ್ಳಲು ಅರ್ಹರಾದವರು ಬೇಕಾದಷ್ಟು ಜನ ಇರುವರೆಂದೂ ಹೇಳಿ ಲೇಡಿ ಮೌಂಟ್ ಬ್ಯಾಟನ್ನರು ಭಾರತೀಯ ಕ್ರೈಸ್ತ ಮಹಿಳೆಯರ ಸಂಘದ ವಾರ್ಷಿಕ ಸಭಾಧ್ಯಕ್ಷತೆಗೆ ಬಂದಿದ್ದ ಆಹ್ವಾನವನ್ನು ಅಂಗೀಕರಿಸದೆ ಇದುವರೆಗೆ ವೈಸರಾಯಿಗಳ ಪತ್ನಿಗೇ ಅಧ್ಯಕ್ಷತೆ ವಹಿಸುತ್ತಿದ್ದ ಸಂಪ್ರದಾಯವನ್ನು ಮುರಿದಿರುತ್ತಾರೆ.

ಮಾಲೂರಿನಲ್ಲಿ ಕರಗ

ಪೋಲೀಸ್ ಶಾಸನದ ೪೫ ನೇ ಕಲಂ ಪ್ರಕಾರ ನಾಳೆದ್ದು ಮಾಲೂರಿನಲ್ಲಿ ನಡೆಯಬೇಕಾದ ಕರಗದ ಉತ್ಸವಕ್ಕೆ ಪ್ರತಿಬಂಧಕವಿತ್ತು. ಆದರೆ ಅಲ್ಲಿನ ಹಿಂದೂ ಮುಸ್ಲಿಂ ಮುಖಂಡರು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಉತ್ಸವವನ್ನು ನಡೆಸಲು ಅನುಮತಿಕೊಡಬೇಕೆಂದು ಪ್ರಾರ್ಥಿಸಿದುದರ ಮೇಲೆ ಅದಕ್ಕೆ ಅನುಮತಿಯನ್ನು ಕೊಡಲಾಗಿದೆ

ಕೋಮುವಾರು ಶಾಂತಿಗಾಗಿ ಎಲ್ಲಾ ಮುಖಂಡರ ಮನವಿ

ದೇಶದಲ್ಲಿ ಕೋಮುವಾರು ಶಾಂತಿಯನ್ನು ನೆಲೆಸುವ ಬಗ್ಗೆ ಮಹಾತ್ಮ ಗಾಂಧಿ, ಮಿ|| ಜಿನ್ನಾ, ಮಿ|| ತಾರಾಸಿಂಗ್ ಮುಂತಾದ ಪ್ರಮುಖರುಗಳ ರುಜುವನ್ನೊಳಗೊಂಡ ಮನವಿಯೊಂದನ್ನು ಹೊರಡಿಸಲು ವೈಸರಾಯರು ಪ್ರಯತ್ನ ಪಡುತ್ತಿದ್ದಾರೆಂದೂ ಇತ್ತೀಚಿನ ಭೇಟಿಗಳಲ್ಲಿ ಈ ವಿಚಾರವೂ ಚರ್ಚಿಸಲ್ಪಟ್ಟಿತೆಂದೂ ವರದಿಯಾಗಿದೆ

ಟೆಂಡರ್ ನೋಟೀಸು

ಮೈಸೂರು ಅರಮನೆ ಗಜಶಾಲ ಇಲಾಖೆಗೆ ೧೯೪೭—೪೮ ನೇ ಸಾಲಿನಲ್ಲಿ ಸೌದೆ ಸಪ್ಲೈ ಮಾಡಲು ಅಪೇಕ್ಷೆಯುಳ್ಳವರು ಸೀಲ್ ಟೆಂಡರುಗಳನ್ನು ತಾ|| ೧೫-೪-೪೭ ನೇ ಮಧ್ಯಾಹ್ನ ೧೨ ಘಂಟೆಯೊಳಗಾಗಿ ಗಜಶಾಲ ಆಫೀಸರವರಿಗೆ ಕೊಡತಕ್ಕದ್ದು- ಹೆಚ್ಚಿನ ವಿಷಯಗಳನ್ನು ಗಜಶಾಲೆಯಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು

ಡಿ. ಎಸ್ ನೀಲಕಂಠರಾವ್,
ಆಫೀಸರ್-ಇನ್-ಛಾರ್ಜ್,
ಅರಮನೆ ಗಜಶಾಲೆ,

ಮಚ್ಚಲೀ ಪಟ್ಟಣದ ಮೇಲೆ ಹೈದರಾಬಾದಿನ ಹಕ್ಕು

೧೮೦೨ ರಲ್ಲಿ ಹೈದರಾಬಾದು ಈಸ್ಟ್ ಇಂಡಿಯಾ ಕಂಪನಿಯೊಡನೆ ಮಚ್ಚಲೀಪಟ್ಟಣದ ಬಂದರನ್ನು ಯಾವ ನಿರ್ಬಂಧವೂ ಇಲ್ಲದೆ ಉಪಯೋಗಿಸಿಕೊಳ್ಳಲು ಒಪ್ಪಂದ ಮಾಡಿಕೊಂಡಿದೆ. ಆದ್ದರಿಂದ ಅದನ್ನು ಪಡೆದುಕೊಳ್ಳಲು ಹೈದರಾಬಾದಿಗೆ ಹಕ್ಕಿದೆ - ಎಂಬುದಾಗಿ ಅಲ್ಲಿನ ಆರ್ಥಿಕ ಸಮ್ಮೇಳನದಲ್ಲಿ ಸುಂಕದ ಇಲಾಖೆ ಸಲಹೆಗಾರರಾದ ಮಿ|| ಎ ಆರ್ ಚಿನ್ನಾರವರು ತಿಳಿಸಿದ್ದಾರೆ.

* ಕಾಂಗ್ರೆಸ್ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರೂ ಶ್ರೀಮತಿ ಸುಚೇತಾ ಕೃಪಲಾನಿಯವರೂ ನಿನ್ನೆ ಮಧ್ಯಾಹ್ನ ವೈಸರಾಯರೊಡನೆ ಉಪಾಹಾರ ಸ್ವೀಕರಿಸಿ ದೇಶದ ರಾಜಕೀಯ ಪರಿಸ್ಥಿತಿಗಳ ವಿಚಾರವಾಗಿ ಸಮಾಲೋಚನೆ ನಡೆಸಿದರು.

§ ಬಿಹಾರಿನಲ್ಲಿ ನಡೆದ ಕೋಮುವಾರು ದುರಂತಗಳ ಸಂಬಂಧದಲ್ಲಿ ಇದುವರೆಗೆ ೨೫೫೭ ಮಂದಿ ಹಿಂದುಗಳನ್ನು ದಸ್ತಗಿರಿ ಮಾಡಲಾಗಿದೆಯೆಂದು ವರದಿಯಾಗಿದೆ.

‡ ಕಾಶಿಯಲ್ಲಿ ಪುನಃ ಘರ್ಷಣೆಗಳು ಆರಂಭವಾಗಿರುವುದರಿಂದ ಯಾವ ಮನೆಯಿಂದಲೇ ಆಗಲಿ ಕಲ್ಲೆಸೆಯುವುದು ಕೂಗಿಕೊಳ್ಳುವುದು ತಿಳಿದು ಬಂದರೆ ಕೂಡಲೇ ಆ ಮನೆಯಲ್ಲಿರುವವರನ್ನೆಲ್ಲಾ ಮನೆಗೆ ನುಗ್ಗಿ ದಸ್ತಗಿರಿ ಮಾಡುವುದಾಗಿ ಅಲ್ಲಿನ ಪೋಲೀಸರು ಎಚ್ಚರಿಕೆಯನ್ನಿತ್ತಿದ್ದಾರೆ

ಬ್ಯಾಂಕಿನ ಬಳಿ ೧೭ ಸಾವಿರ ರೂ. ಅಪಹರಣ

ವ್ಯಾಪಾರಿಯೊಬ್ಬನು ಚೆಕ್ಕನ್ನು ಮುರಿಸಿ ೧೭ ಸಹಸ್ರ ರೂ. ಗಳನ್ನು ಪಡೆದು ತನ್ನ ಜವಾನನ ಕೂಡ ತನ್ನ ಕಛೇರಿಗೆ ಅದನ್ನು ಕಳುಹಿಸುತ್ತಿದ್ದುದನ್ನು ದರೋಡೆಕಾರರು ಅಂತು ಆ ಜವಾನನು ಬ್ಯಾಂಕಿನಿಂದ ಹೊರಗಡೆ ಬರುತ್ತಿದ್ದಾಗ್ಗೆ ಅವನಲ್ಲಿದ್ದ ಮೊತ್ತವನ್ನು ಅಪಹರಿಸಿ ೬೦ ಮೈಲಿ ವೇಗದ ಓಟವಲ್ಲಿ ಕಾರಿನಲ್ಲಿ ಪರಾರಿಯಾದರೆಂದು ಗೊತ್ತಾಗಿದೆ. ಈ ದರೋಡೆ ನಡೆದದ್ದು ಬೊಂಬಾಯಿಯಲ್ಲಿರುವ ಭಾರತದ ಛಾರ್ಟರ್ಡ್ ಬ್ಯಾಂಕಿನ ಬಳಿ

ಜಿಲ್ಲಾ ಬೋರ್ಡ್ ಚುನಾವಣೆ
೨೮-೪-೪೭ ನೇ ಸೋಮವಾರ
ನಂಜನಗೂಡು ತಾಲ್ಲೂಕಿನ ಈ ಕೆಳಗೆಕಂಡ
ಕಾಂಗ್ರೆಸ್ ಉಮೇದುವಾರರಿಗೆ
ದಯವಿಟ್ಟು ಓಟು ಕೊಡಿ :-
ಹೆಚ್. ಲಿಂಗಪ್ಪ B Sc, LL B
ಹೆಚ್. ಎಂ. ನಾಗಪ್ಪ (ಹುಲ್ಲಹಳ್ಳಿ)
ಎಂ ಲಿಂಗಣ್ಣ B. Sc, LL.B

ರಾಜಕಮಲ್
೬-೪-೪೭ ರಿಂದ ಅಮೋಘವಾದ ೬ನೇ ವಾರ
ಮ್ಯಾಟಿನಿ ಮಧ್ಯಾಹ್ನ 3 ಗಂಟೆಗೆ
ಮೊದಲನೇ ಆಟ ಸಂಜೆ 6-15 ಕ್ಕೆ ಗಂಟೆಗೆ
ಶ್ರೀ ಕೃಷ್ಣಲೀಲಾ (ಕನ್ನಡದಲ್ಲಿ)
ಮೈಸೂರಿನಲ್ಲಿ ತಯಾರಿಸಿ, ಮಹಾಜನಗಳ ಮನ್ನಣೆಗೆ ಪಾತ್ರವಾಗಿರುವ ಈ ಪುರಾಣ ವೈಭವವನ್ನು ನೋಡಲು ತಪ್ಪಬೇಡಿ

Edited, printed and published by A. R Nagaraian at the Sadhvi Press D...

ಉತ್ತರ ಗ್ರೀಸಿನಲ್ಲಿ ಗೆರಿಲ್ಲಾ ಸರ್ಕಾರ

ಅಥೆನ್ಸ್ ನಗರಕ್ಕೆ ಕಮ್ಯೂನಿಸ್ಟ್ ಕ್ಷೇತ್ರಗಳಿಂದ ಬರುತ್ತಿರುವ ಸುದ್ದಿಗಳ ಪ್ರಕಾರ ಉತ್ತರ ಗ್ರೀಸಿನಲ್ಲಿ ಗೆರಿಲ್ಲಾಗಳು ತಮ್ಮದೇ ಆದ ಸರ್ಕಾರವನ್ನು ರಚಿಸಲಿದ್ದಾರೆಂದು ಗೊತ್ತಾಗಿದೆ

ಆರ್ಥಿಕ ಸಮಸ್ಯೆಯ ಪರಿಹಾರ ಅತ್ಯಗತ್ಯ

ವಿಶ್ವದ ಆರ್ಥಿಕ ಸಮಸ್ಯೆಯನ್ನು ದೃ... ಪ್ರತೀಕ್ಷೆಯಿಂದ ಪರಿಹರಿಸಲು ಪ್ರಯತ್ನಿ... ದರೆ ಅಗ್ರ್ಯ ರಾಜಕೀಯ ವಿಚಾರಗಳು ... ವಾಗಿಯೇ ಬಗೆ ಹರಿಯುವುವು- ಎಂಬುದಾ... ಮೈಸೂರಿನ ದಿವಾನರಾದ ಸರ್ ರಾಮಸ್ವಾ... ಮಿ ಮೊದಲಿಯಾರರು ಲಂಡನ್ನಿನಲ್ಲಿ ತಿಳಿಸಿದ್ದಾರೆ. ಜೀವನಕ್ಕೆ ಆವಶ್ಯಕರವಾದ ವಸ್ತುಗಳು ಸಿಗದೆ ನಿರಾಶೆಗೊಂಡಿರುವವರು ವಿಶ್ವದಲ್ಲಿ ದೊಡ್ಡ ಸಮಸ್ಯೆಗಳನ್ನು ತಂದೊಡ್ಡಿದ್ದಾರೆ ಆದ್ದರಿಂದ ಐಕ್ಯರಾಷ್ಟ್ರ ಯುಕ್ತ ರಾಷ್ಟ್ರಗಳು ಈ ಕೊರತೆಯನ್ನು ನೀಗಿಸಲು ಮುಂದೆ ಬರಬೇಕು - ಎಂದು ಅವರು ಹೇಳಿದರು.

ಅಪೆರಾ ಟಾಕೀಸ್, ಮೈಸೂರು
೧೦-೪-೪೭ ರಿಂದ ೪ ನೇ ವಾರ
ಕುಂಡಲಕೇಶಿ
Morning Show from 11-4-47
DREAMS COME TRUE
ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲುರವರ
ಅರುಣ
ಗರ್ಭಾಶಯರೋಗ ನಿವಾರಿಣಿ

ಅರುಣ ಋತು ದೋಷವನ್ನು ನಿರ್ಮೂಲಿಸಿ ಪೂರ್ಣ ಸ್ತ್ರೀತ್ವವನ್ನು ಕೊಡುವುದಲ್ಲದೆ ... ಶ್ರೇಷ್ಠವಾದ ದಿವ್ಯೌಷಧ ... ದನ್ನು ಬಿಡದೆ ಸೇವಿಸುವಿರಾದರೆ, ನಿಮ್ಮ ಜೀವನ ಪರಮಾವಧಿಯಾದ ಆನಂದವನ್ನು ಕಳ್ಳದೆ ಒದಗಿಸಬಲ್ಲುದು.

ಆಯುರ್ವೇದಾಶ್ರಮಂ ಲಿಮಿಟೆಡ್
...ನಗರ್.... ಮದರಾಸು.

ಫೋನ್ ನಂ. 392 || ವಂದೇ ಮಾತರಂ || ಬಿಡಿಯ ಪತ್ರಿಕೆ 3 ಕಾಸು

ಸಂಪುಟ ೫] ರವಿವಾರ ೧೬—೩—೪೭ [ಸಂಚಿಕೆ ೨೦೮

ಅಸ್ಸಾಮಿನಲ್ಲಿ ಲೀಗಿನ ಶಾಸನಭಂಗ ಚಳುವಳಿ

ಜೈ ಪ್ರಕಾಶರ ಆಗಮನ

ಮೈಸೂರು ೧೫

ಅ ಭಾರತ ಸೋಷಿಯಲಿಸ್ಟ್ ನಾಯಕ ಶ್ರೀ|| ಜೈ ಪ್ರಕಾಶ ನಾರಾಯಣ್‌ರವರು ಸೇ ೨೭-ನೇ ತಾ|| ರಾಜಧಾನಿಗೆ ಆಗಮಿಸುವರು. ಅವರು ವಿದ್ಯಾರ್ಥಿ ಕಾಂಗ್ರೆಸ್ ಅತಿಥಿಗಳಾಗಿರುವರು. ನಗರದ ವಿವಿಧ ಸಂಸ್ಥೆಗಳಿಗೆ ಅವರು ಭೇಟಿ ಕೊಡಲು ಏರ್ಪಾಡುಗಳನ್ನು ಮಾಡಲಾಗಿದೆ. ಅಲ್ಲದೆ ಅವರಿಗೆ ಸ್ವಾಗತ ನೀಡಲು ವಿಶೇಷ ವ್ಯವಸ್ಥೆ ನಡೆಯುತ್ತಿದೆ. ಸ್ವಯಂ-ಸೇವಕರಾಗಬಯಸುವವರೂ, ದೇಶೀಯ ವಿದ್ಯಾಶಾಲೆಯ ಆಫೀಸಿನಲ್ಲಿ ಹೆಸರು ಕೊಡಬಹುದು. ಹೆಚ್ಚಿಗೆ ವಿವರವನ್ನು ಕಾರ್ಯದರ್ಶಿಗಳಿಂದ ಪಡೆಯಬಹುದು.

ಕಾಲತ್ರಯ ಪೂಜೆ

ಚಾಮುಂಡಿ ಬಡಾವಣೆ ೯ ನೇ ಬ್ಲಾಕಿನ ೧೮೬೯ನೇ ನಂ. ಮನೆಯ ಶ್ರೀ ರಾಜರಾಜೇಶ್ವರಿ ಸನ್ನಿಧಿಯಲ್ಲಿ ಸಾಂಗ ಸಂಕ್ರಮಣ ಪ್ರಯುಕ್ತ ಕಾಲತ್ರಯ ಪೂಜೆಯೂ, ಸತ್ಯನಾರಾಯಣ ಪೂಜೆಯೂ ನಡೆಯುತ್ತದೆ. ಸರ್ವರೂ ಪ್ರಸಾದವನ್ನು ಸ್ವೀಕರಿಸಬೇಕೆಂದು ವ್ಯವಸ್ಥಾಪಕರು ಕೋರುತ್ತಾರೆ.

ಕಾಡು ಜನರ ಮಹಾಸಭೆ

ಹಿಂದುಳಿದ ಕೋಮುಗಳ ಗೌ|| ಕಾರ್ಯದರ್ಶಿಗಳಾದ ಶ್ರೀ|| ಜೆ. ಎ. ಕೋದಂಡರಾಮಯ್ಯನವರು ಒಳನಾಡಳಿತ ಮಂತ್ರಿಗಳಾದ ಶ್ರೀ|| ಎಂ. ಶೇಷಾದ್ರಿಯವರನ್ನು ಹುಣಸೂರು ತಾ|| ಹೆಗ್ಗಡದೇವನಕೋಟೆ ತಾ||ಲ್ಲೂಕಿನಲ್ಲಿ ಇದೇ ಮೇ ತಿಂಗಳ ೩ ನೇ ತಾರೀಕಿನಲ್ಲಿ ನಡೆಯುವ ಕಾಡು ಜನರ ಮಹಾಸಭೆಯ ಅಧ್ಯಕ್ಷತೆ ವಹಿಸುವಂತೆ ಪ್ರಾರ್ಥಿಸಿರುವುದನ್ನು ಸಚಿವರು ಒಪ್ಪಿರುವರು.

ಶಿವಪುರದ ಮಾರುತಿ ಮಂದಿರದಲ್ಲಿ ೨೦ನೇ ದಿನ ಹನುಮಂತೋತ್ಸವವನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಲಾಯಿತು.

ವೈದ್ಯರುಗಳ ಸಭೆ

ರಾಜಧಾನಿಯ ಸುಪ್ರಸಿದ್ಧ ಆಯುರ್ವೇದ ವೈದ್ಯರಾಗಿ ಅನೇಕ ವರ್ಷಗಳಿಂದ ಲೋಕ ಸೇವೆ ಮಾಡಿ ವೈದ್ಯ ವೃಂದದಲ್ಲಿ ಗೌರವ ಪಡೆದ ಶ್ರೀಮಾನ್ ಎಸ್. ಎನ್. ಪಂಡಿತ್ ಶ್ರೀ ಶ್ರೀ ವಿವೇಕಾನಂದ ತೀರ್ಥರು ಸ್ವರ್ಗಸ್ಥರಾದ ನಿಮಿತ್ತ ವೈದ್ಯ ಸಂಘದ ಸದಸ್ಯರುಗಳೂ, ವೈದ್ಯಾಭಿಮಾನಿಗಳೂ ಸೇರುವ ಸಭೆಯನ್ನು ನಾಳೆ ಸಾಯಂಕಾಲ ೫ ಘಂಟೆಗೆ ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ನಡೆಯಿಸುವುದಕ್ಕೆ ನಿಶ್ಚಯಿಸಿರುತ್ತೆ. ಎಲ್ಲ ವೈದ್ಯಾಭಿಮಾನಿಗಳೂ ದಯಮಾಡಿಸಬೇಕೆಂದು ಆಯುರ್ವೇದ ವೈದ್ಯ ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ|| ಗೋಪಾಲಕೃಷ್ಣ ಶರ್ಮಾರವರು ಕೋರಿರುತ್ತಾರೆ.

ಈಶ್ವರ ಮತ್ತು ಅಲ್ಲಾ

ಹಿಂದೂ ಮತ್ತು ಮುಸ್ಲಿಮರ ದೇವರು ಒಬ್ಬನೇ ಎಂಬುದನ್ನು ಬೋಧಿಸಿ ಗಾಂಧೀಜಿಯವರ ಪ್ರಾರ್ಥನೆಯಲ್ಲಿ ಕೆಳಕಂಡ ಈ ರೀತಿ ಹೊಸ ಪದ್ಯವು ಸೇರಲ್ಪಡುತ್ತಿದೆಯೆಂದು ವರದಿಯಾಗಿದೆ.

" ರಘುಪತಿ ರಾಘವ ರಾಜಾರಾಮ್
ಪತಿತ ಪಾವನ ಸೀತಾರಾಮ್
ಈಶ್ವರ ಅಲ್ಲಾ ತೇರಾ ನಾಮ್
ಸಬ್ ಕೊ ಸನ್ಮತಿ ದೇ ಭಗವಾನ್ "

ಅಸ್ಸಾಮಿನಲ್ಲಿ ಲೀಗಿನವರ ಶಾಸನಭಂಗ ಚಳುವಳಿ

ಮುಸ್ಲಿಂ ಲೀಗಿನವರು ಅಸ್ಸಾಮಿನಲ್ಲಿ ಶಾಸನ ಭಂಗ ಚಳುವಳಿಯನ್ನು ಆರಂಭಿಸಿದ್ದಾರೆ. ನಿನ್ನೆ ಭಾರಿ ಮೆರವಣಿಗೆಯೊಂದು ಖಜಾನೆ ಮುಂಭಾಗದಲ್ಲಿ ಲೀಗ್ ಧ್ವಜವನ್ನು ಹಾರಿಸಲು ಪ್ರಯತ್ನ ನಡೆಸಿದಾಗ ಗುಂಪನ್ನು ಗುಂಡು ಹಾರಿಸಿ ಚದುರಿಸಲಾಯಿತು. ತೇಜಪುರಿನ ಮಂತ್ರಿಗಳ ಕಾರನ್ನು ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಲೀಗ್ ನ್ಯಾಷನಲ್ ಗಾರ್ಡ್ ದಳಪತಿಯೂ ಸಹಾ ಒಬ್ಬ ಮಂದಿ ಪ್ರಮುಖರನ್ನೂ ದಸ್ತಗಿರಿ ಮಾಡಲಾಗಿದೆ. ಗಡಿಯಲ್ಲಿ ಒಂದು ಲಕ್ಷ ಮಂದಿ ಶಸ್ತ್ರ ಸಜ್ಜಿತರಾದ ಲೀಗ್ ಸ್ವಯಂ ಸೇವಕರನ್ನೂ, ಭೂಮಿಗಳನ್ನು ಆಕ್ರಮಿಸಲು ವಲಸೆಗಾರರನ್ನು ಶೇಖರಿಸಲಾಗಿದೆಯೆಂದು ತಿಳಿದು ಬಂದಿದೆ.

ಲೀಗ್ ಮಂತ್ರಿಮಂಡಲಕ್ಕೆ ಕ್ರೈಸ್ತರ ವಿರೋಧ

ಪಂಜಾಬಿನಲ್ಲಿ ಮುಸ್ಲಿಂ ಲೀಗು ಮಂತ್ರಿಮಂಡಲವನ್ನು ರಚಿಸಲು ಅಲ್ಲಿನ ಶಾಸನ ಸಭೆಯ ನಾಲ್ವರು ಕ್ರೈಸ್ತ ಸದಸ್ಯರು ಬೆಂಬಲ ಕೊಡುವುದಿಲ್ಲವೆಂದು ಶಾಸನ ಸಭಾಧ್ಯಕ್ಷರೂ, ಕ್ರೈಸ್ತ ನಾಯಕರೂ ಆದ ಎಸ್. ಪಿ. ಸಿಂಗರು ತಿಳಿಸಿದ್ದಾರೆ. ಇಡೀ ಪಂಜಾಬು ಪಾಕಿಸ್ತಾನದಲ್ಲಿ ಸೇರುವುದನ್ನು ತಾವು ವಿರೋಧಿಸುವುದಾಗಿ ಅವರು ಹೇಳಿರುವರು.

ಆದಿ ಜಾಂಬವರ ಸಂಘ

ನಂಜನಗೂಡು ೧೧ [ಸ್ವಂ. ವ.]

ನಿನ್ನೆ ದಿನ ಇಲ್ಲಿನ ಆದಿ ಜಾಂಬವರ ಸಭೆಯು ಶ್ರೀ ಎ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ತಮ್ಮನ್ನು ಈಗಿರುವ ಸ್ಥಳದಿಂದ ಬೇರೆ ಕಡೆಗೆ ಹೋಗುವಂತೆ ಪುರಸಭೆಯವರು ಮಾಡುತ್ತಿರುವ ಪ್ರಯತ್ನಗಳನ್ನು ಖಂಡಿಸಿ ತಮ್ಮ ಜನ ಸಮೃದ್ಧಿ ಹೆಚ್ಚುತ್ತಿರುವುದರಿಂದ ಶ್ರೀ ತಿಮ್ಮೇಗೌಡರ ಜಮೀನನ್ನು ವಶಪಡಿಸಿಕೊಂಡು ತಮ್ಮ ಕಾಲೋನಿಗೆ ಸೇರಿಸಿಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನು ಸಭೆಯವರು ಅಂಗೀಕರಿಸಿದರು. ಆದಿ ಜಾಂಬವರ ಸಂಘಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಯಿತು.

ನಾಲ್ಕು ಮಕ್ಕಳ ಜನನ

ಶ್ರೀನಗರದ ಬಳಿಯ ಲೋಲಾಬ್ ಪುರದಲ್ಲಿ ಒಬ್ಬ ಸ್ತ್ರೀಯು ನಾಲ್ಕು ಮಕ್ಕಳನ್ನು ಪ್ರಸವಿಸಿದಳೆಂದೂ ಜನನವಾದ ನಾಲ್ಕನೇ ದಿನವೇ ಅವೆಲ್ಲವೂ ಮೃತವಾದುವೆಂದೂ ವರದಿಯಾಗಿದೆ.

ಅಧಿಕಾರ ವರ್ಗಾಯಿಸುವ ಯೋಜನೆ

ಕಳೆದ ಮೇ ೧೬ ರಲ್ಲಿ ಬ್ರಿಟಿಷ್ ನಿಯೋಗದವರು ಹೊರಡಿಸಿದ ಘೋಷಣೆ ಮತ್ತು ಡಿಸೆಂಬರ್ ೬ ರಲ್ಲಿ ಹೊರಟ ಬ್ರಿ|| ಸರಕಾರದ ಹೇಳಿಕೆಗಳಲ್ಲಿ ಅಡಕವಾಗಿರುವ 'ಗ್ರೂಪಿಂಗ್'-ಪದ್ಧತಿಯ ಮೇಲೆ ಮಾತುಕತೆಗಳನ್ನು ಮತ್ತೆ ಆರಂಭಿಸಲು ಮಿ|| ಜಿನ್ನಾರವರು ವೈಸರಾಯರನ್ನು ಪ್ರಾರ್ಥಿಸಿದ್ದಾರೆಂದು ವರದಿಯಾಗಿದೆ. ಇದರ ವಿಚಾರವಾಗಿಯೇ ವೈಸರಾಯರು ಗಾಂಧಿಜಿ ಮತ್ತು ಕಾಂಗ್ರೆಸ್ ಮುಖಂಡರುಗಳೊಡನೆ ಮಾತುಕತೆ ನಡೆಸಿದರೆಂದೂ, ಬ್ರಿ|| ಮಂತ್ರಿಮಂಡಲದೊಡನೆ ಸಮಾಲೋಚನೆ ನಡೆಸಿ ಇದೇ ೨೫ ನೇ ತಾ|| ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸೇರುವ ಮುನ್ನ ವೈಸರಾಯರು ಅಧಿಕಾರವನ್ನು ವರ್ಗಾಯಿಸುವ ಒಂದು ಹೊಸ ಯೋಜನೆಯನ್ನು ಹೊರಗೆಡಹುವರೆಂದೂ ಗೊತ್ತಾಗಿದೆ. ಈಗಿನ ತಾತ್ಕಾಲಿಕ ಸರ್ಕಾರಕ್ಕೆ ಡೊಮಿನಿಯನ್ ಸ್ಥಾನ ಮಾನವನ್ನು ಕೊಡಲಾಗುವುದೆಂದೂ, ಸಂಯುಕ್ತ ರಕ್ಷಣಾ ವ್ಯವಸ್ಥೆಯನ್ನು ಮುಂದುವರಿಸಲಾಗುವುದೆಂದೂ ಹೇಳಲಾಗುತ್ತಿದೆ.

೧೦ ಲಕ್ಷ ರೂ. ಪುಂಡು ಗಂದಾಯ

ಮುಲ್ತಾನಿನ ಪ್ರಜೆಗಳ ಮೇಲೆ ೧೦ ಲಕ್ಷ ರೂ. ಪುಂಡು ಗಂದಾಯವನ್ನು ಪಂಜಾಬ್ ಸರ್ಕಾರವು ವಿಧಿಸಿದೆ. ಈ ಪೈಕಿ ೬ ಲಕ್ಷವನ್ನು ಮುಸ್ಲಿಮರೂ ೪ ಲಕ್ಷವನ್ನು ಹಿಂದೂಗಳೂ ತೆರಬೇಕಾಗಿದೆ. ಕೆಲವರಿಗೆ ಮಾತ್ರ ವಿನಾಯಿತಿ ತೋರಿಸಲಾಗಿದೆ.

ಅಧಿಕಾರ ವರ್ಗಾವಣೆ ಬಗ್ಗೆ ಸಮಾಲೋಚನೆ

ವೈಸರಾಯರಾದ ಲಾರ್ಡ್ ವೆವೆಲ್‌ರವರು ಬ್ರಿಟಿಷ್ ಸಂಸ್ಥಾನಗಳ ರೆಸಿಡೆಂಟರುಗಳೊಡನೆಯೂ, ಇತರ ರಾಜಕೀಯ ಅಧಿಕಾರಿಗಳೊಡನೆಯೂ ಅಧಿಕಾರ ವರ್ಗಾವಣೆ ಬಗ್ಗೆ ನೆನ್ನೆ ದಹಲಿಯಲ್ಲಿ ಸಮಾಲೋಚನೆ ನಡೆಸಿದರು. ಪ್ರಕೃತದ ರಾಜಕೀಯ ಪರಿಸ್ಥಿತಿ, ರೆಸಿಡೆನ್ಸಿಗಳ ರದ್ದು, ಸಂಸ್ಥಾನಗಳು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದು, ಸಂಸ್ಥಾನಗಳಿಗೆ ರೆಸಿಡೆನ್ಸಿಗಳ ಜವಾಬ್ದಾರಿಯ ವರ್ಗಾವಣೆ ಇವುಗಳನ್ನು ಕುರಿತು ಆ ಸಭೆಯಲ್ಲಿ ಮಾತುಕತೆಗಳು ನಡೆದುವೆಂದು ಗೊತ್ತಾಗಿದೆ.

ರಾಜರ ಮತ್ತು ಪ್ರಜೆಗಳ ಉದ್ದೇಶ ಏಕ ಮುಖವಾಗಿದೆ

ಸಂಸ್ಥಾನದ ಪ್ರಜೆಗಳು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಕಾತುರರಾಗಿರುವುದು ಸ್ವಾಭಾವಿಕ. ಏಕೆಂದರೆ ಇಡೀ ಭಾರತಕ್ಕೆ ಒಂದು ರಾಜ್ಯಾಂಗವು ರಚನೆಯಾಗುತ್ತಿರುವಾಗ, ಭಾರತದ ಅಂಗವಾದ ಸಂಸ್ಥಾನ ಪ್ರಜೆಗಳು ತಮ್ಮ ಪಾತ್ರವನ್ನು ನಿರ್ವಹಿಸಲು ಆಶೆ ಹೊಂದಿರುವುದು ನ್ಯಾಯವಾಗಿಯೇ ಇದೆ. ರಾಜರುಗಳೂ ಸಹ ಅಷ್ಟೇ ಕಾತುರದಿಂದ ಕೂಡಿದ್ದಾರೆ. ರಾಜರು ಮತ್ತು ಪ್ರಜೆಗಳ ಉದ್ದೇಶ ವಿರೋಧವಾಗಿಲ್ಲ. ಅವು ಏಕಮುಖವಾಗಿಯೇ ಇವೆ ಎಂಬುದಾಗಿ ಬಿಕಾನೀರ್ ಮಹಾರಾಜರು ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ.

ಕೊಚ್ಚಿಯಿಂದ ರಾಜ್ಯಾಂಗ ಸಭೆಗೆ ಚುನಾವಣೆ

ಕೊಚ್ಚಿ ಸಂಸ್ಥಾನದಿಂದ ಭಾರತ ರಾಜ್ಯಾಂಗ ಸಭೆಗೆ ಒಬ್ಬ ಪ್ರತಿನಿಧಿಯನ್ನು ಕಳುಹಿಸಲು ಇದೇ ೧೮ ನೇ ತಾ|| ಅಲ್ಲಿನ ಶಾಸನ ಸಭೆಯಿಂದ ಚುನಾವಣೆ ನಡೆಯುವುದೆಂದು, ಸರ್ಕಾರಿ ಪ್ರಕಟನೆ ಹೊರಟಿದೆ. ಶಾಸನ ಸಭಾ ಸದಸ್ಯರಲ್ಲದವರೂ ಉಮೇದುವಾರರಾಗಬಹುದು.

ಭೂಪಾಲ್ ಸಂಸ್ಥಾನದಲ್ಲಿ ತಾತ್ಕಾಲಿಕ ಸರ್ಕಾರ

ಬಹು ಮತದ ಜನಪ್ರಿಯ ಮಂತ್ರಿಗಳ ನ್ನೊಳಗೊಂಡ ತಾತ್ಕಾಲಿಕ ಸರ್ಕಾರವನ್ನು ಭೂಪಾಲ ನವಾಬರು ತಮ್ಮ ಸಂಸ್ಥಾನದಲ್ಲಿ ಸ್ಥಾಪಿಸಿದ್ದಾರೆ. ಅದರಲ್ಲಿ ಲೀಗ್, ಕಾಂಗ್ರೆಸ್ ಮತ್ತು ಹಿಂದೂ ಮಹಾಸಭೆಯವರೂ ಪ್ರತಿನಿಧಿಗಳನ್ನು ಮಂತ್ರಿಗಳಾಗಿ ಆರಿಸಿಕೊಂಡಿದ್ದಾರೆ. ದಿವಾನರೂ, ಅಧಿಕಾರಿ ಮಂತ್ರಿಗಳೊಬ್ಬರೂ ಸೇರಿ ಈ ಸರ್ಕಾರವು ೫ ಜನರಿಂದ ಕೂಡಿರುವುದು.

ನಿಕ್ಕಲ್ ರೂಪಾಯಿಗಳು

ಬೆಳ್ಳಿಯ ರೂಪಾಯಿ ನಾಣ್ಯಗಳಿಗೆ ಬದಲಾಗಿ ನಿಕ್ಕಲ್ ರೂಪಾಯಿ ತಯಾರಿಕೆಯ ಸುಸೂದೆಗೆ ಕೇಂದ್ರ ಶಾಸನ ಸಭೆಯ ಅಂಗೀಕಾರವು ದೊರಕಿದೆ. ಯುದ್ಧ ಕಾಲದಲ್ಲಿ ಭಾರತಕ್ಕೆ ಅನೇಕರವು ಔನ್ಸ್ ಬೆಳ್ಳಿಯನ್ನು ಔನ್ಸ್ ಗಳನ್ನು ಬೆಳ್ಳಿಯನ್ನು ಸಾಲ ಕೊಟ್ಟಿದೆ. ಈಗ ಅದನ್ನು ತೀರಿಸುವ ಸಲುವಾಗಿ ಈ ಯೋಜನೆಯನ್ನು ತರಲಾಗಿದೆಯೆಂದು ತಿಳಿಸಲಾಗಿದೆ.

ಬಿರುಗಾಳಿಯಿಂದ ೧೫೦ ಮಂದಿಯ ಮರಣ

ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿರುವ ಓಕ್ಲಹಾಮ ನಗರದ ಮೇಲೆ ನೆನ್ನೆ ದಿನ ಭಾರಿ ಬಿರುಗಾಳಿಯು ಬೀಸಿದುದರಿಂದ ನಗರದ ಮುಕ್ಕಾಲು ಭಾಗವು ನಾಶವಾಗಿರುವುದಾಗಿ ವರದಿಯಾಗಿದೆ. ಇದುವರೆಗೆ ೧೫೦ ಮಂದಿಗಿಂತ ಹೆಚ್ಚಾಗಿ ಪ್ರಾಣ ಹಾನಿಯೂ ಸಹಸ್ರಾರು ಮಂದಿಗೆ ಗಾಯಗಳು ಆಗಿರುವುದಾಗಿ ತಿಳಿದು ಬಂದಿದೆ.

ಕಾಂಗ್ರೆಸ್ ಭವನಕ್ಕೆ ನಿವೇಶನ

ಚಾಮರಾಜನಗರ ೧೧ [ಸ್ವಂ. ವ.]

ಇಲ್ಲಿನ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಹಿ. ಎಲ್. ಪದ್ಮರಾಜ ಪಂಡಿತರು ಕಾಂಗ್ರೆಸ್ ಭವನವನ್ನು ಕಟ್ಟಲು ಉಚಿತವಾಗಿ ನಿವೇಶನವನ್ನು ದಾನ ಮಾಡಿರುತ್ತಾರೆ. ಇದಕ್ಕಾಗಿ ತಾ|| ೭|| ವಿಶೇಷ ಸಭೆಯಲ್ಲಿ ವಂದನೆಗಳನ್ನರ್ಪಿಸಲಾಗಿದೆ.

ಸಾಧ್ವಿ

ತಾ|| ೧೨-೪-೪೭ ಶನಿವಾರ

ವೈಸರಾಯರ ಪತ್ನಿಯವರ ಮೇಲ್ಪಂಕ್ತಿ

ದಿಹಲಿಯಲ್ಲಿರುವ ಭಾರತೀಯ ಕ್ರೈಸ್ತ ಮಹಿಳೆಯರ ಸಂಘದ ವಾರ್ಷಿಕ ಅಧಿವೇಶನಗಳಲ್ಲಿ ವೈಸರಾಯರ ಪತ್ನಿಯವರು ಅಧ್ಯಕ್ಷತೆಯನ್ನು ವಹಿಸುವುದು ಹಿಂದಿನಿಂದಲೂ ಬಂದಿರುವ ವಾಡಿಕೆ. ಅದರಂತೆ ಈ ಸಾರಿಯೂ ಸಂಘದವರು ಇಂದಿನ ವೈಸರಾಯರ ಪತ್ನಿಯವರಾದ ಲೇಡಿ ಮೌಂಟ್ ಬ್ಯಾಟನ್ನರವರಿಗೆ ಪತ್ರ ಬರೆದು ಅಗ್ರಾಸನವನ್ನು ವಹಿಸುವಂತೆ ಪ್ರಾರ್ಥಿಸಿದ್ದರು. ಆದರೆ ಅವರು ಒಪ್ಪದೆ ಸಂಘದವರಿಗೆ ಇತ್ತಿರುವ ಬುದ್ಧಿವಾದವು ಅತ್ಯಂತ ಶ್ಲಾಘನೀಯವಾಗಿರುತ್ತದೆ.

ಲಾರ್ಡ್ ಮೌಂಟ್ ಬ್ಯಾಟನ್ನರೂ, ನಾನೂ ಈಗ ಭಾರತಕ್ಕೆ ಬಂದಿರುವ ಮುಖ್ಯ ಉದ್ದೇಶವು ಭಾರತೀಯರಿಗೆ ಆದಷ್ಟು ಬೇಗನೆ ಅತ್ಯಂತ ಸುಲಭವಾದ ರೀತಿಯಲ್ಲಿ ಬ್ರಿಟಿಷ್ ಪ್ರಭುತ್ವದವರ ಅಧಿಕಾರವನ್ನು ವರ್ಗಾಯಿಸಿ ಕೊಡಲು ಸಹಾಯ ಮಾಡುವುದೇ ಆಗಿರುತ್ತದೆ. ನಿಮ್ಮ ಸಂಘಗಳ ಅಧ್ಯಕ್ಷತೆಯನ್ನು ವಹಿಸಿ, ಕಾರ್ಯ ಕಲಾಪಗಳನ್ನು ನಿರ್ವಹಿಸಬಲ್ಲ ಸದಸ್ಯರು ನಿಮ್ಮಲ್ಲಿಯೇ ವಿಶೇಷವಾಗಿ ಇರುವರೆಂದು ನಾನು ನಂಬುತ್ತೇನೆ ಎಂಬುದಾಗಿ ಲೇಡಿ ಮೌಂಟ್ ಬ್ಯಾಟನ್ನರು ತಮ್ಮ ಉತ್ತರದಲ್ಲಿ ತಿಳಿಸಿರುತ್ತಾರೆ. ಹಿಂದೂಸ್ಥಾನವನ್ನು ಬ್ರಿಟಿಷರು ಬರುವ ವರ್ಷ ಬಿಟ್ಟು ಹೋಗುವುದಾಗಿ ಮಾಡಿರುವ ಘೋಷಣೆಯನ್ನು ಪುಷ್ಟೀಕರಿಸುವುದು ಮಾತ್ರವೇ ಅಲ್ಲದೆ, ಆ ಕಾರ್ಯವನ್ನು ಸಾಧಿಸುವುದರಲ್ಲಿ ವೈಸರಾಯ ದಂಪತಿಗಳು ಎಷ್ಟರಮಟ್ಟಿಗೆ ತತ್ಪರರಾಗಿರುವರೆಂಬುದನ್ನು ಈ ಉತ್ತರವು ಸೂಚಿಸುತ್ತದೆ.

ಕಲ್ಕತ್ತೆಯ ವಾಣಿಜ್ಯ ಸಂಸ್ಥೆಗಳ ವಾರ್ಷಿಕಾಧಿವೇಶನದಲ್ಲಿಯೂ ಸಹ ಪ್ರತಿ ವರ್ಷವೂ ವೈಸರಾಯರು ಭಾಷಣ ಮಾಡುವ ಪದ್ಧತಿಯು ಅನೂಚಾನವಾಗಿ ಬಂದಿದ್ದಿತು. ಆದರೆ ಈ ಮಾಮೂಲನ್ನೂ ಸಹ ಮುರಿಯಲಾಯಿತು. ವೈಸರಾಯರ ಬದಲು ಪಂಡಿತ ಜವಹರಲಾಲ ನೆಹರೂರವರು ಈ ವರ್ಷ ಸದರಿ ಸಂಸ್ಥೆಯಲ್ಲಿ ಭಾಷಣ ಮಾಡಿದರು. ಮುಂದೆ ಭಾರತದಲ್ಲಿ ರಚನೆಯಾಗಲಿರುವ ರಾಜ್ಯಾಂಗದಲ್ಲಿ ಮುಖ್ಯ ಸೂತ್ರಧಾರಿಗಳಾಗಿರುವ ಪಂಡಿತ ನೆಹರೂರವರ ಮಾತುಗಳನ್ನು ಸದರಿ ಸಂಘದ ಸದಸ್ಯರುಗಳು ಭಾರತವನ್ನು ಬಿಟ್ಟುಹೋಗಲಿರುವ ವೈಸರಾಯರ ಭಾಷಣಕ್ಕಿಂತಲೂ ಹೆಚ್ಚಾಗಿ ಸ್ವಾಗತಿಸಿರುವರೆಂಬುದಕ್ಕೆ ಸಂದೇಹವಿಲ್ಲ.

ಕೆಲವು ದಿನಗಳ ಹಿಂದೆ ಮದರಾಸಿನ ಮಹಿಳಾ ಸಮಾಜಸಂಘದಲ್ಲಿ ಅಲ್ಲಿನ ಗೌರ್ನರವರ ಪತ್ನಿಯವರೂ ಇದೇ ಬಗೆಯ ಸಲಹೆಗಳನ್ನು ನೀಡಿದ್ದರು. ಗೌರ್ನರುಗಳ ಮತ್ತು ದೊಡ್ಡ ಅಧಿಕಾರಿಗಳ ಮಡದಿಯರನ್ನು ಅಗ್ರಾಸನಕ್ಕೆ ಆಹ್ವಾನಿಸುವ ಪದ್ಧತಿಯು ಹೋಗಬೇಕೆಂದೂ, ನಾಗರೀಕ ಜನರಲ್ಲೇ ಪ್ರತಿಭಾಶಾಲಿಗಳೂ, ವಿದ್ಯಾವಂತರೂ ಆದವರನ್ನು ಕರೆಯುವ ಪದ್ಧತಿಯನ್ನು ಬೆಳೆಸಬೇಕೆಂದೂ ಅವರು ಸೂಚಿಸಿದ್ದರು. ಆದರೆ ಇನ್ನೂ ಈ ಚಾಳಿಯು ನಮ್ಮ ಜನರನ್ನು ಬಿಟ್ಟಂತೆ ಕಾಣುವುದಿಲ್ಲ.

ಮದ್ರಾಸ್ ಶಾಸನ ಸಭೆಯಲ್ಲಿ ಭಾಷೆಗಳ ವಿವರ

ಮದ್ರಾಸ್ ಶಾಸನ ಸಭೆಯಲ್ಲಿ ಮಾತನಾಡುವಾಗ ಸದಸ್ಯರುಗಳು ಉಪಯೋಗಿಸುವ ಭಾಷೆಗಳ ಬಗ್ಗೆ ವಿವರವು ಈಗ ಪೂರ್ಣವಾಗಿ ದೊರಬಿದ್ದಿದೆ. ೭೭ ಮಂದಿ ಇಂಗ್ಲೀಷು, ೪೮ ಮಂದಿ ತಮಿಳು, ೨೫ ಮಂದಿ ತೆಲುಗು, ೨೧ ಮಂದಿ ಇಂಗ್ಲೀಷು ಮತ್ತು ಅಗಾಗ್ಯೆ ತಮಿಳು, ೧೯ ಮಂದಿ ಇಂಗ್ಲೀಷು ಮತ್ತು ತೆಲುಗು, ೯ ಮಂದಿ ಇಂಗ್ಲೀಷು ಮತ್ತು ಉರ್ದು, ೫ ಮಂದಿ ಇಂಗ್ಲೀಷು ಮತ್ತು ಮಲೆಯಾಳಿ, ೩ ಮಂದಿ ಇಂಗ್ಲೀಷು ಮತ್ತು ಕನ್ನಡ ಒಬ್ಬರು ತೆಲುಗು ಮತ್ತು ಹಿಂದಿ ಅಲ್ಲದೆ ಒಬ್ಬರು ಪೂರ್ಣ ಕನ್ನಡದಲ್ಲೂ ಒಬ್ಬರು ಮಲಯಾಳದಲ್ಲೂ ಮಾತನಾಡಲು ಬಯಸಿದ್ದಾರೆ.

ಆರ್ಥಿಕ ಮಂತ್ರಿಗಳಿಗೆ ೭ ಸಹಸ್ರ ಅರ್ಜಿಗಳು

ಅಖಿಲ ಭಾರತ ಆಡಿಟ್ ಮತ್ತು ಅಕೌಂಟ್ಸ್ ಸಂಘದ ೭ ಸಹಸ್ರ ಮಂದಿ ನೌಕರರು ಪೋಸ್ಟ್ ಕಾರ್ಡಿನಲ್ಲಿ ಕೇಂದ್ರ ಸರ್ಕಾರದ ಹಣಕಾಸಿನ ಸಚಿವರಾದ ಮಿ|| ಲಿಯಾಕತ್ ಅಲಿಖಾನರಿಗೆ ಅರ್ಜಿಗಳನ್ನು ಕೊಟ್ಟು ತಮ್ಮ ಸಂಬಳವನ್ನು ಸೆಂಟ್ರಲ್ ಸೆಕ್ರೆಟರಿಯೆಟ್ಟಿನವರ ದರ್ಜೆಗೆ ಏರಿಸಬೇಕೆಂದು ಪ್ರಾರ್ಥಿಸಿದ್ದಾರೆ.

ಬ್ರಿಟಿಷರು ಭಾರತವನ್ನು ಬಿಟ್ಟುಹೋಗಲು ಆಣೆ ಮಾಡಿಕೊಳ್ಳುತ್ತಿದ್ದರೂ, ಭಾರತವು ಅಥವಾ ಹಲಕೆಲವು ಭಾರತೀಯರು ಬ್ರಿಟಿಷರನ್ನು ತ್ಯಜಿಸಲು ಇನ್ನೂ ಸಿದ್ಧರಾಗಿಲ್ಲದಿರುವುದು ನಮ್ಮ ರಾಷ್ಟ್ರೀಯ ಅಧಃಪತನದ ಅವಶೇಷವೇ ಸರಿ. ಹೊರಟುಹೋಗುವಾಗಲೂ ಅವರು ನಮ್ಮವರಿಗೆ ಈ ಪಾಠವನ್ನು ಬೋಧಿಸಬೇಕಾಗಿರುವುದು ಒಂದು ದುರ್ದೈವವಾಗಿದೆ. ಗುಲಾಮಗಿರಿಯಲ್ಲಿ ಮಾನಸಿಕ ಪರಾವಲಂಬನೆಯು ಆತ್ಮಾಭಿಮಾನ ಶೂನ್ಯತೆಯ ಪರಮಾವಧಿಯನ್ನು ಸೂಚಿಸುವ ಗುರುತಾಗಿರುತ್ತದೆ.

ಭರತಖಂಡದ ಸಕಲ ವಿಧವಾದ ಕ್ಷೀಣದೆಸೆಗೂ ಮೂಲ ಕಾರಣವಾದ ಬ್ರಿಟಿಷ್ ಸಾಮ್ರಾಜ್ಯ ಶಾಹಿಯು ಭಾರತವನ್ನು ಬಿಟ್ಟು ಹೊರಟಮೇಲಾದರೂ ಇಂತಹ ದಾಸ್ಯ ಭಾವನೆಗಳು ತೊಲಗಲೆಂದು ಹಾರೈಸೋಣ.

ಜಿಲ್ಲಾ ಬೋರ್ಡು ಚುನಾವಣೆ
೨೮-೪-೪೭ ನೇ ಸೋಮವಾರ
ನಂಜನಗೂಡು ತಾಲ್ಲೂಕಿನ ಈ ಕೆಳಗೆಕಂಡ ಕಾಂಗ್ರೆಸ್ ಉಮೇದುವಾರರಿಗೇ
ದಯವಿಟ್ಟು ಓಟು ಕೊಡಿ:-
ಹೆಚ್. ಲಿಂಗಪ್ಪ B Sc., LL.B
ಹೆಚ್. ಎಂ. ನಾಗಪ್ಪ (ಹುಲ್ಲಳ್ಳಿ)
ಎಂ. ಲಿಂಗಣ್ಣ B. Sc., LL.B

ಆದಿಕರ್ನಾಟಕರಿಗೆ ಸೈನ್ಯ ಮತ್ತು ಪೋಲೀಸುಗಳಲ್ಲಿ ಅವಕಾಶ

ಮೈಸೂರು ಸರ್ಕಾರದವರು ಈಗ ಸೈನ್ಯಕ್ಕೂ, ಪೋಲೀಸ್ ದಳಕ್ಕೂ ಜನರನ್ನು ಸೇರಿಸುತ್ತಿದ್ದಾರೆಂದು ತಿಳಿದು ಬಂದಿದೆ. ಈ ಸ್ಥಾನಗಳಿಗೆ ಅಗತ್ಯವಾದ ಬಲವನ್ನು ಪಡೆದಿರುವ ಆದಿಕರ್ನಾಟಕರನ್ನು ಹೆಚ್ಚು ಸಂಖ್ಯೆಯಲ್ಲಿ ತೆಗೆದು ಆ ಕೋಮನ್ನು ಮುಂದುವರಿಸಲು ಸಹಾಯ ಮಾಡಬೇಕಾಗಿದೆ. ಇದರಿಂದ ಆ ಬಡ ಜನಾಂಗದ ಆರ್ಥಿಕ ಸ್ಥಿತಿಯು ಸುಧಾರಿಸುವುದು. ಆದಿಕರ್ನಾಟಕರ ಅಭಿವೃದ್ಧಿಯ ಸಲುವಾಗಿ ನಮ್ಮ ಸರ್ಕಾರದವರು ಈ ಅವಕಾಶವನ್ನು ಕಳೆದುಕೊಳ್ಳದೆ ಅವರನ್ನು ಹೆಚ್ಚು ಸಂಖ್ಯೆಯಲ್ಲಿ ಸೈನ್ಯ ಮತ್ತು ಪೋಲೀಸ್ ದಳಗಳಿಗೆ ಸೇರಿಸಿಕೊಳ್ಳಬೇಕು ಎಂದು ಹರಿಜನ ಸೇವಕ ಸಂಘದ ಗೌ|| ಕಾರ್ಯದರ್ಶಿಗಳಾದ ಶ್ರೀ|| ಕೆ. ಶೇಷಾದ್ರಿಯವರು ಸೂಚಿಸಿದ್ದಾರೆ.

ಸನಾತನ ಧರ್ಮ ಮಹಾಪರಿಷತ್ತು

ಮದ್ರಾಸ್ ೮

ಭಾರತದಲ್ಲಿ ಉಂಟಾಗುತ್ತಿರುವ ರಾಜಕೀಯ ಬದಲಾವಣೆಯನ್ನು ಗಮನಿಸಿ ಸನಾತನಧರ್ಮದ ರಕ್ಷಣೆಗೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಬರುವ ಜೂನ್ ೨೭ ರಿಂದ ಜುಲೈ ೭ ನೇ ತಾ|| ವರೆವಿಗೆ ಮದ್ರಾಸಿನಲ್ಲಿ ಅಖಿಲ ಭಾರತ ಸನಾತನ ಧರ್ಮ ಮಹಾ ಪರಿಷತ್ತನ್ನು ಸೇರಿಸಲು ಏರ್ಪಾಡುಗಳು ನಡೆಯುತ್ತಿವೆ. ಇದರ ಅಂಗವಾಗಿ ಅನೇಕ ಉಪ ಸಮ್ಮೇಳನಗಳೂ, ಹೋಮಾದಿ ಜಪತಪಗಳೂ, ಪ್ರದರ್ಶನಗಳೂ ನಡೆಯುವುವು. ಸನಾತನಿಗಳೆಲ್ಲಾ ಇದೇ ೨೩ ನೇ ತಾ|| ಅಕ್ಷಯ ತೃತೀಯಾ ವ್ರತವನ್ನು ಆಚರಿಸಿ, ಸಭೆಗಳನ್ನು ಜರುಗಿಸಿ ಈ ಮಹಾ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆರಿಸಿ ಧಾರ್ಮಿಕ ಹಿಂದೂ ಮಿಷನ್, ೩೦೭ ಮಿಂಟ್ ರಸ್ತೆ, ಜಿ ಟಿ ಮದ್ರಾಸ್, ಈ ವಿಳಾಸಕ್ಕೆ ಕಳುಹಿಸಿಕೊಡಬೇಕೆಂದು ಸಂಚಾಲಕರು ಪ್ರಾರ್ಥಿಸಿದ್ದಾರೆ.

ರಾಜಕಮಲ್
೧೩-೪-೪೭ ರಿಂದ ೯ ನೇ ವಾರ
1 ನೇ ಆಟ 6 ಕ್ಕೆ 2 ನೇ ಆಟ 9-15 ಕ್ಕೆ
ಶ್ರೀ ಕೃಷ್ಣಲೀಲಾ (ಕನ್ನಡದಲ್ಲಿ)
ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಪರಿಪಾಲಿಸುವ ಸಲುವಾಗಿ ಪರಮಾತ್ಮನು ಅವತರಿಸಿ ತನ್ನ ಮಹಿಮೆಯನ್ನು ಅರುಹಿದ ಕಥಾ ವೈಖರಿ

Edited, printed and published by A. R. Nagarajan at the Sadhvi Press D-Subbiah Road, Mysore.

ಭಾರತಕ್ಕೆ ಇಂಡೋನೇಷ್ಯಾ ಅಕ್ಕಿ

ಸತ್ಕಾರ ಕೂಟದಲ್ಲಿ ನಿಯೋಗದ ಭರವಸೆ

ಮೈಸೂರು (

ಅಂತರ ಏಷ್ಯಾ ಸಮ್ಮೇಳನಕ್ಕೆ ಬಂ
ಇಂಡೊನೇಷಿಯಾ ಪ್ರತಿನಿಧಿಗಳ ನೈ
ಲವರು ಮೊನ್ನೆ ರಾಜಧಾನಿಗೆ ಆಗಮಿ
ಇಲ್ಲಿನ ಪ್ರೇಕ್ಷಣೀಯ ಸ್ಥಳಗಳನ್ನು ನೋ
ಡಿದರು. ಅವರ ಗೌರವಾರ್ಥವಾಗಿ
ನ್ನೆ ಸಂಜೆ ಪುರಸಭಾ ಭವನದಲ್ಲಿ ಸತ್ಕಾ
ರ ಸಮಾರಂಭವನ್ನು ಏರ್ಪಡಿಸಲಾಗಿತ್ತು.
ಉಪಾಹಾರಾನಂತರ ಪುರಸಭಾಧ್ಯಕ್ಷ
ಶ್ರೀ ರಾಮಚಂದ್ರರಾವ್ ಬೊಂಥೋ
ವರು ಅವರಿಗೆ ಸ್ವಾಗತವನ್ನು ನೀಡಿ ಭಾ
ತದ ಕಷ್ಟಕಾಲದಲ್ಲಿ ಅಕ್ಕಿಯನ್ನು ನೀಡಿ
ಇಂಡೊನೇಷಿಯಾದವರನ್ನು ಕೊಂಡಾ
ತಮ್ಮ ಕೃತಜ್ಞತೆಯನ್ನು ಸೂಚಿಸಿದ

ಪುರಸಭಾ ಕಾಂಗ್ರೆಸ್ ಪಕ್ಷದ ನಾಯ
ರಾದ ಶ್ರೀ ಟಿ ಮರಿಯಪ್ಪನವರು ಸ
ಮಾತನಾಡಿ ಭಾರತವು ಕ್ಷಾಮದ ದ
ಯಲ್ಲಿ ಸಿಕ್ಕಿ ಬಿದ್ದಿದ್ದಾಗ ಇಂಡೊನೇ
ಯಾದಿಂದ ಅಕ್ಕಿಯ ಸಹಾಯ ಬಂದ
ನ್ನು ಪ್ರಶಂಸಿಸಿದರು. ಪಾಶ್ಚಾತ್ಯ ಸಾಮ್ರಾ
ಜ್ಯ ಶಾಹಿಯ ಕೈವಾಡದಿಂದ ಏಷ್ಯಾದ
ಷ್ಟ್ರಗಳು ಒಂದುಗೂಡಲು ಅವಕಾಶವಿ
ದಿದ್ದುದನ್ನು ತಿಳಿಸಿ ಆ ದಿನಗಳು ಕಳೆ
ಹೋದುದಕ್ಕಾಗಿ ಸಂತೋಷವನ್ನು ಸೂ
ಸಿದರು. ಭಾರತದಲ್ಲಿ ಆಹಾರ ಕ್ಷಾ
ಮ ಈಗ ಇನ್ನೂ ತಾಂಡವವಾ
ತ್ತಿದೆಯೆಂದೂ, ನಗರಗಳ ಸೌಂದರ್ಯ
ವನ್ನೇ ನೋಡಿ ಸಂತೃಪ್ತರಾಗದೆ ಯಾ
ಹಳ್ಳಿಯವರ ದುಡಿಮೆಯಿಂದ ನಾವು
ಸುಖವಾಗಿದ್ದೇವೆಯೋ ಅಂತಹವರ ವಾ
ಸ್ಥಳಗಳನ್ನು ಪರಿಶೀಲಿಸಿ ಆಹಾರದ ಬ
ಮುಂದೆಯೂ ಸಹಾಯ ನೀಡಬೇಕೆಂದು
ಪ್ರಾರ್ಥಿಸಿದರು.

ನಿಯೋಗದ ನಾಯಕರಾದ ಡಾ||
ಮಜಿಲ್ ರವರು ವಂದನೆಗಳನ್ನರ್ಪಿಸುತ್ತಾ
ಭಾರತವು ಪುರಾತನ ಸಂಸ್ಕೃತಿಯನ್ನು
ಪಡೆದಿರುವ ಮಹಾ ರಾಷ್ಟ್ರವೆಂದು ಹೇ
ದರು. ತಾವು ಆಹಾರದ ಪರಿಸ್ಥಿತಿಯನ್ನು
ಅರಿಯಲು ಬಂದಿರುವುದಾಗಿ ಹೇಳಿ, ಗ್ರಾ
ಮಾಂತರ ಪ್ರದೇಶಗಳಲ್ಲಿ ಆಹಾರಕ್ಕಾಗಿ
ನರು ಪರಿತಪಿಸುತ್ತಿರುವುದನ್ನು ತಾವು ನೋ
ಡಿರುವುದಾಗಿ ತಿಳಿಸಿದರು. ಸ್ವದೇಶಕ್ಕೆ ಹಿ
ದಿರುಗಿದ ಮೇಲೆ ಸಾಧ್ಯವಾದಷ್ಟು ಅಕ್ಕಿಯ
ನ್ನು ಭಾರತಕ್ಕೆ ಕಳುಹಿಸುವಂತೆ ತಮ್ಮ
ರ್ಕಾರವನ್ನು ಒತ್ತಾಯ ಪಡಿಸುವುದಾ
ಭರವಸೆ ಇತ್ತರು.

ನಿಯೋಗದವರು ಮೊನ್ನೆ ರಾತ್ರಿ ಬೃ
ದಾವನ ಮತ್ತು ಆಕಾಶವಾಣಿಗಳಿಗೆ ಭೇಟಿ
ಇತ್ತು ಬೆಂಗಳೂರಿಗೆ ಪ್ರಯಾಣ ಮಾ
ದರು.

ಕಂಟ್ರೋಲು ಬೆಲೆ! ಸುಸಮಯ
ಹೊಸ ಜವಳಿ
ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಬೆನಾರಿಸ್, ಕಂಚಿ, ಆರ್ನಿ, ಕಾಂಚೀಪುರಂ, ಹುಬ್ಬಳ್ಳಿ ಸೀರೆಗಳೂ, ಕಲಾಟ ಸೀರೆಗಳೂ, ನೂಲಿನ ಪ್ರಾನಾ ರಬಿಂವಾಗ ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.
M. P. V., M. V ಭೋಜಯ್ಯ B. A. ಅಂಡ್ ಬ್ರದರ್ಸ್
ಬೊಂಬಾಯಿ ಆನಂದ ಭವನ ಹೋಟೆಲ್ ಪ್ಲೈ ಬಲಭಾಗದ ಕೊನೆ
ಜವಳಿ ಅಂಗಡಿ, ಮೈ...

ರಾಜಕಮಲ್
ತಾ 12-4-47 ರಿಂದ 4 ದಿನಗಳು ಮಾತ್ರ
ಪ್ರತಿ ದಿನ ಪ್ರಾತಃಕಾಲ 10-30 ಗಂಟೆ
ಇನ್ ಸಾಫ್
ಭೂಮಿಕೆ:—ಕಿಶೋರ್ ಸಾಹು; ಶೋಭನಾ ಸಮರ್ಥ್, ಕೆ. ಸಿ. ಡೇ. ಮುಂತಾದವರು
ಇನ್ ಸಾಫ್

ಸಂಪುಟ ೫] ಸೋಮವಾರ ೧೪—೪—೪೭ [ಸಂಚಿಕೆ ೨೦೯

ಗಾಂಧೀಜಿ ಬಿಹಾರಿಗೆ ಹಿಂದಿರುಗಿದರು

ಜೈ ಪ್ರಕಾಶರ ಪ್ರವಾಸ ಕಾರ್ಯಕ್ರಮ

ಮೈಸೂರು ೧೩

ಪ್ರಸಿದ್ಧ ಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ಜೈಪ್ರಕಾಶ್ ನಾರಾಯಣರವರ ಮೈಸೂರು ಸಂಸ್ಥಾನದ ಪ್ರವಾಸ ಕಾರ್ಯಕ್ರಮ ಈ ರೀತಿ ಇದೆ:—

೨೬ ನೇ ತಾ॥ ಮಧ್ಯಾಹ್ನ ನಾಲ್ಕು ಘಂಟೆಗೆ ಬೆಂಗಳೂರು ಗಡಿಯಲ್ಲಿ ಸ್ವಾಗತ. ಸಂಜೆ [illegible] ಕೃಷ್ಣರಾಜನಗರಕ್ಕೆ ರಾತ್ರಿ [illegible] ಮೈಸೂರಿಗೂ ಆಗಮನ. ೨೭ [illegible] ಬೆಳಗ್ಗೆ ನಂಜನಗೂಡು, [illegible] ಚಾಮರಾಜನಗರಗಳಿಗೆ ಭೇಟಿ; [illegible] ರಾಜಧಾನಿಯಲ್ಲಿ ವಿವಿಧ ಸಂಸ್ಥೆ [illegible] ಭೇಟಿ ಮತ್ತು ಬಿನ್ನವತ್ತಳೆ. ೨೮ [illegible] ಬೆಳಗ್ಗೆ ಮಂಡ್ಯಕ್ಕೆ ಭೇಟಿ ಕೊಟ್ಟು [illegible] ಗಂಟೆಗೆ ಬೆಂಗಳೂರು ತಲಪುವರು. [illegible] ಬೆಂಗಳೂರಿನಲ್ಲಿ ಶ್ರೀ ಪ್ರಾಂ॥ ವಿ॥ [illegible] ಕಾರ್ಯಕರ್ತರ ಸಮಾವೇಶದಲ್ಲಿ [illegible] ಮತ್ತು ನಿಧಿ ಸಮರ್ಪಣೆ. ೨೯ ನೇ [illegible] ಬೆಳಗ್ಗೆ ಕೋಲಾರ, ಬೌರಿಂಗ್‌ಪೇಟೆ [illegible] ಗಳಿಗೆ ಭೇಟಿ ಕೊಟ್ಟು, ಬೆಂಗಳೂರಿಗೆ [illegible] ಮಧ್ಯಾಹ್ನ ನಾಲ್ಕು ಘಂಟೆಗೆ [illegible] ರಾತ್ರಿ [illegible] ಗಂಟೆಗೆ [illegible] ಭೇಟಿ. ೩೦ ನೇ ತಾ॥ ಬೆಳಗ್ಗೆ [illegible] ಭೇಟಿ. ಮಧ್ಯಾಹ್ನ [illegible] ದಾವಣಗೆರೆಗೆ ಆಗಮನ [illegible] ತಾ॥ ಹುಬ್ಬಳ್ಳಿಗೆ ಪ್ರಯಾಣ.

ಹೋಟೇಲ್ ಕೆಲಸಗಾರರಿಗೆ ತಿರುಗುಬಳುವೇ?

ರಾಜಧಾನಿಯ ಒಂದು ದೊಡ್ಡ ಹೋಟೆಲಿನವರು ತಮ್ಮ ಕೆಲಸಗಾರರ ಪೈಕಿ ಹೋಟೆಲು ಕೆಲಸಗಾರರ ಸಂಘಕ್ಕೆ ಸೇರಿರುವವರಿಗೆ ತಿಳುವಳಿಕೆಯನ್ನು ಕೊಟ್ಟು ಹದಿನೈದು [illegible] ಗಳವರನ್ನು ಕೆಲಸದಿಂದ ತೆಗೆದು ಹಾಕುವ ಯೋಚನೆ ಮಾಡುತ್ತಿದ್ದಾರೆ. ಈ [illegible] ಮಾಡುವುದು ಲೇಬರ್ ಆಕ್ಟಿಗೆ ವಿರುದ್ಧವಾಗುವುದು. ಆದ್ದರಿಂದ ಇನ್ನಾದರೂ [illegible] ಕೆಲಸಗಾರರಿಗೆ ತೊಂದರೆ ನಡೆ [illegible] ಸಂಘದೊಡನೆ ಸಹಕರಿಸಬೇಕೆಂದು ಸದರಿ ಸಂಘದ ಕಾರ್ಯದರ್ಶಿಗಳಾದ ಶ್ರೀ॥ ಟಿ. ಎಸ್. ಸುಬ್ಬಣ್ಣನವರು ಕೋರಿರುತ್ತಾರೆ.

ಪರೀಕ್ಷಾ ಸಪ್ತಾಹ

ಕೃಷ್ಣರಾಜಮೊಹಲ್ಲಾ ನಾಲ್ಕನೇ ಬೀದಿಯು [illegible] ದ ಶ್ರೀರಾಮ ಮಂದಿರದಲ್ಲಿ ಇಂದಿನಿಂದ ಕ್ರಮವಾಗಿ ೧೯ ನೇ ತಾ॥ ವರೆಗೆ [illegible] ಶ್ರೀ ಗರುಡ ರಾಮಕೃಷ್ಣ ಶಾಸ್ತ್ರಿಗಳು ಮತ್ತು ಶ್ರೀ ನರಸಿಂಹಪುರಂ ಶ್ರೀನಿವಾಸಾಚಾರ್ಯರುಗಳಿಂದ ಹರಿಕಥೆಗಳು [illegible] ರಿಂದ ೧೧ ರ ವರೆಗೆ ನಡೆಯುತ್ತವೆ. ೨೦ ನೇ ತಾ॥ ಸಂಜೆ [illegible] ಕ್ಕೆ [illegible] ವು ಜರುಗುವುದು.

ಸಹಾಯಾರ್ಥ ಪ್ರದರ್ಶನ

ಮೈಸೂರು ಗಾಯನ ಕರ್ನಾಟಕ ನಾಟಕ [illegible] ವರು ನಿನ್ನೆ [illegible] ಹಾಲಿನಲ್ಲಿ "[illegible] ವಿಜಯ" ಎಂಬ ನಾಟಕವನ್ನು ಪ್ರದರ್ಶಿಸಿ, ಬಂದ ಉತ್ಪತ್ತಿಯನ್ನು ಕೃಷ್ಣರಾಜಮೊಹಲ್ಲಾ ಶ್ರೀ [illegible] ದೇವಸ್ಥಾನಕ್ಕೆ ಧರ್ಮಾರ್ಥವಾಗಿ ಕೊಟ್ಟರು. ಪುರಸಭಾ ಸದಸ್ಯರಾದ ಶ್ರೀ॥ ಚೌಡಯ್ಯನವರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಪುರಸಭಾ ಸದಸ್ಯರಾದ ಶ್ರೀ॥ ಟಿ. [illegible] ಗೌಡರು ನಾಟಕ ಸಭೆಗೆ [illegible]

ಕಸ್ತೂರ್ಬಾ ಸ್ಮಾರಕ ನಿಧಿ [illegible]

ಕತ್ತಿ, ಚಾಕುಗಳನ್ನು ವಶಪಡಿಸಿಕೊಳ್ಳಲಾಗಿದೆ

ಸ್ವಂ ವ] ಬೆಂಗಳೂರು ೧೩

ಗಲಭೆ ಸಂದರ್ಭದಲ್ಲಿ [illegible] ಕಸ್ತೂರ್ಬಾ [illegible] ನಿನ್ನೆ [illegible] ಮುಕ್ತಾಯಗೊಂಡಿತು. ಅನುಮಾನ ಬಂದ ಅನೇಕ ಕಡೆ ಪೋಲೀಸರು ಶೋಧನೆ ನಡೆಸಿ ಕತ್ತಿ, ಚಾಕು ಮುಂತಾದುವುಗಳನ್ನು ವಶಪಡಿಸಿಕೊಂಡಿರುತ್ತಾರೆ. ಗಲಭೆ ಆರಂಭವಾದಂದಿನಿಂದ ಇದುವರೆವಿಗೆ [illegible] ಮಂದಿಯನ್ನು ದಸ್ತಗಿರಿ ಮಾಡಲಾಗಿದೆ. [illegible] ಕೆ [illegible] ಶಿಕ್ಷೆ ವಿಧಿಸಲಾಗಿದೆ.

ಮಲ್ಲೇಶ್ವರದ ಮಹಮ್ಮದೀಯ ಬ್ಲಾಕಿನಲ್ಲಿ ಒಬ್ಬ ಹುಡುಗನನ್ನು ಗುಂಡಿನಿಂದ ಹೊಡೆದು ಕೊಂದ ಸಂಬಂಧದಲ್ಲಿ ಎಕ್ಸೈಜ್ ಇನ್‌ಸ್ಪೆಕ್ಟರ್ ಅದ ಮಿ॥ ಅಬ್ದುಲ್ ಜಲೀಲ್‌ರನ್ನು, [illegible] ವಾಹಿದ್, ಮೊಹಮದ್ [illegible] ಮತ್ತು [illegible] ರವರನ್ನು ದಸ್ತಗಿರಿ ಮಾಡಿ ನಗರದ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿ ಪೊಲೀಸ್ ರಿಮ್ಯಾಂಡ್ ಪಡೆಯಲಾಗಿದೆ. ಇವರ ಮೇಲೆ ಮೊಕದ್ದಮೆ ಹೂಡಲಾಗಿದೆ.

ವ್ಯಾಸನೇಹಳ್ಳಿಯ ಶ್ರೀ॥ ಎಲ್. ವೆಂಕಟೇಶಯ್ಯನವರಿಗೂ, ಉತ್ತರಹಳ್ಳಿಯ [illegible] ಶ್ರೀ [illegible] ನವರಿಗೂ [illegible] ನವಾಗಿ ಕೊಟ್ಟರು.

ವೈಶ್ಯ ಮುಖಂಡರ ಪ್ರವಾಸ

ಮೈಸೂರು ಸಂಸ್ಥಾನದ ವೈಶ್ಯ ಯುವಜನ ಮಹಾಸಭೆಯ ಅಧ್ಯಕ್ಷರಾದ ಶ್ರೀ॥ ಪಿ. ಗೋಪಾಲಕೃಷ್ಣ ಶೆಟ್ಟರೂ, [illegible] ಮಹಾಸಭೆಯ ಪ್ರಧಾನ ಕಾರ್ಯದರ್ಶಿ [illegible] ಯ ಧ್ಯೇಯವನ್ನು [illegible], ವೈಶ್ಯ ಸಮಾಜದ ಸಂಘಟನೆಗಾಗಿಯೂ, ಸಂಸ್ಥಾನದಾದ್ಯಂತ ಇದೇ ೧೦ ನೇ ತಾ॥ ನಿಂದ ಪ್ರವಾಸವನ್ನು ಆರಂಭಿಸಿದ್ದಾರೆ. ಇವರ ಪ್ರವಾಸವು [illegible] ರ ವರೆಗೆ ನಡೆಯುವುದು. ಇವರು ಮೊನ್ನೆ ಹುಣಸೂರು, ಕೃಷ್ಣರಾಜನಗರ, ಕೊಣನೂರು, [illegible] ಗಳಿಗೆ ಭೇಟಿ ಇತ್ತು ಸಭೆಗಳನ್ನು ನಡೆಸಿ ಭಾಷಣಗಳನ್ನು ಮಾಡಿದರು. ವೈಶ್ಯ ಮುಖಂಡರುಗಳು ಸಿದ್ಧಿಗಳನ್ನು ವ್ಯಕ್ತಪಡಿಸಿದರು.

ಸೂಚನೆ

[illegible] ಯುಗಾದಿ ಪ್ರಯುಕ್ತ [illegible] "[illegible]" ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ

ಮದರಾಸ್ ಪ್ರಧಾನಿಗಳ ಆಗಮನ

ಸ್ವಂ ವ ಪ್ರ] ಬೆಂಗಳೂರು ೧೩

ಕೋಲಾರದಲ್ಲಿ ಈ ದಿನ ಮಧ್ಯಾಹ್ನ ನಡೆಯುವ ಮೂಲ ಶಿಕ್ಷಣ ಸಮಾರಂಭದ ಅಧ್ಯಕ್ಷತೆಯನ್ನು ವಹಿಸುವುದಕ್ಕಾಗಿ ಮದರಾಸಿನ ಮುಖ್ಯ ಮಂತ್ರಿಗಳಾದ ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯವರು ಈ ದಿನ ಬೆಳಗ್ಗೆ ಇಲ್ಲಿಗೆ ಆಗಮಿಸಿದರು. ಶ್ರೀಗಳಾದ ಕೆ. ಟಿ. ಭಾಷ್ಯಂ, ಚೆಂಗಲರಾಯ ರೆಡ್ಡಿ ಮತ್ತು ಅನೇಕ ಜನ ಕಾಂಗ್ರೆಸ್ ಕೆಲಸಗಾರರು ಅವರನ್ನು ರೈಲ್ವೆ ಸ್ಟೇಷನ್ನಿನಲ್ಲಿ ಸ್ವಾಗತಿಸಿದರು.

ಬೆಳಗ್ಗೆ ೧೦॥ ಗಂಟೆಯಲ್ಲಿ ಶ್ರೀ ರೆಡ್ಡಿಯಾರ್‌ರವರು ಇಲ್ಲಿನ ಕಾಂಗ್ರೆಸ್ ಕಛೇರಿಗೆ ಭೇಟಿ ಇತ್ತು ಕೆಲಸಗಾರರನ್ನು ಕುರಿತು ಒಂದು ಗಂಟೆ ಕಾಲ ತಮಿಳಿನಲ್ಲಿ ಭಾಷಣ ಮಾಡಿದರು. ರಚನಾತ್ಮಕ ಕಾರ್ಯ, ಸತ್ಯವನ್ನು [illegible], ಹರಿಜನ [illegible], ಗ್ರಾಮ ಕೈಗಾರಿಕೆ, ಹರಿಜನ ದೇವಾಲಯ ಪ್ರವೇಶ, [illegible] ಮುಂತಾದ ವಿಷಯಗಳನ್ನು [illegible] ವಿವರಿಸಿದರು. [illegible] ನೆಲ್ಲಾ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಸಂಪೂರ್ಣವಾಗಿ ಸಹಕರಿಸಿ ತಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಅವರು ಹೇಳಿದರು. ವೇಳೆ [illegible] ಮತ್ತು ರಾಷ್ಟ್ರಗಳು ಒಟ್ಟಿಗೆ ಶಕ್ತಿಯನ್ನು [illegible] ಹೇಳಿ [illegible] ಶಾಂತಿಗೆ ಮಹಾತ್ಮರು ಹೇಳಿರುವಂತೆ ಸತ್ಯ ಮತ್ತು ಅಹಿಂಸೆಗಳೇ ಆಧಾರಸ್ತಂಭಗಳೆಂದು ಹೇಳಿದರು. ತಮ್ಮ ಪ್ರಾಂತ್ಯದ ಗ್ರಾಮಗಳ ಅಭಿವೃದ್ಧಿಯಲ್ಲಿ ಪಟ್ಟಣಿಗರು ಸಂಪೂರ್ಣ ಆಸಕ್ತಿಯನ್ನು ವಹಿಸಬೇಕೆಂದು ತಿಳಿಸಿದರು. ಸಂಸ್ಥಾನಗಳು ಬ್ರಿಟಿಷ್ ಪ್ರಾಂತಗಳೂ ಏಕಮತ್ಯದಿಂದ ವರ್ತಿಸಿ ಸ್ವತಂತ್ರ [illegible] ವನ್ನು [illegible] ಬೇಕೆಂದು ಹೇಳಿದರು.

ಶ್ರೀ ಜಾನಕೀ ರಾಮ ಮಂದಿರ

ಮೈಸೂರು ೧೩

ಪಕ್ಕೀ ಅಗ್ರಹಾರದ ಚಾಮುಂಡೀ ಬೀದಿಯಲ್ಲಿರುವ ಶ್ರೀ ಜಾನಕೀ ರಾಮ ಮಂದಿರದಲ್ಲಿ ನಡೆದ ಶ್ರೀ ರಾಮೋತ್ಸವದ ಕಾರ್ಯಕ್ರಮದಲ್ಲಿ [illegible] ಎಂಬ ತಮ್ಮ ಮಗಳನ್ನು [illegible]

ಮಹಾತ್ಮರು ಬಿಹಾರಿಗೆ ಹಿಂದಿರುಗಿದರು

ವೈಸರಾಯ್ ಲಾರ್ಡ್ ಮೌಂಟ್ ಬ್ಯಾಟನ್ನರ ಆಹ್ವಾನವನ್ನಂಗೀಕರಿಸಿ ನವದೆಹಲಿಗೆ ತೆರಳಿದ್ದ ಮಹಾತ್ಮ ಗಾಂಧಿಯವರು ನಿನ್ನೆ ಸಂಜೆ ಬಿಹಾರಿಗೆ ಹಿಂದಿರುಗಿದರು. ಹೊರಡುವ ಮುನ್ನ ವೈಸರಾಯರನ್ನು ಅವರು ಭೇಟಿ ಮಾಡಿ ಅನಂತರ ತಾವು ದೆಹಲಿಗೆ ಆಗಮಿಸಿದ್ದ ಕಾರ್ಯವು ಮುಕ್ತಾಯಗೊಂಡಿತೆಂದೂ, ತಮಗೆ ಬಿಹಾರಿನ ಕರೆ ಬಂದಿರುವುದರಿಂದ ತಾವು ಅಲ್ಲಿಗೆ ಹಿಂದಿರುಗುವುದಾಗಿಯೂ ನಿನ್ನೆ ನಡೆದ ಪ್ರಾರ್ಥನಾ ಸಭೆಯಲ್ಲಿ ತಿಳಿಸಿದರು. ಹಠಾತ್ತಾಗಿ ಗಾಂಧೀಜಿಯವರು ಬಿಹಾರಿಗೆ ಹಿಂದಿರುಗಿರುವುದರಿಂದ ರಾಜಕೀಯ ವಲಯಗಳಲ್ಲಿ ವಿಶೇಷ ಊಹಾಪೋಹಗಳು ಎದ್ದಿವೆ.

ದರೋಡೆ ಮೊಕದ್ದಮೆಯಲ್ಲಿ ಪೊಲೀಸರ ಅಪೀಲು?

ಧರ್ಮರಕ್ಷಾಕರ ಬಿ. ಎಂ. ಗೋಪಾಲರಾಯರ ಮೊಕದ್ದಮೆಯಲ್ಲಿ ಆಪಾದಿತರುಗಳಾದ ಸರ್ವೋತ್ತಮರಾವ್, ಅರ್ಜುನ ಲೋಕರ್ ಮತ್ತು ಬೆಳಗಾಂ ವಾಲಾರವರುಗಳನ್ನು ಅಡಿಷನಲ್ ಜಿಲ್ಲಾ ನ್ಯಾಯಾಧೀಶರು ಬಿಡುಗಡೆ ಮಾಡಿದ್ದರಷ್ಟೆ. ನಗರ ಪೋಲೀಸರು ನ್ಯಾಯಾಧೀಶರ ಈ ಆಜ್ಞೆಯ ಮೇಲೆ ಅಪೀಲು ಹೂಡುವರೆಂದು ವದಂತಿಯಾಗಿದೆ.

ಸಂಸ್ಥಾನಗಳಿಗೆ ಪರಮಾಧಿಕಾರದ ವರ್ಗ

ದೆಹಲಿಯಲ್ಲಿ ನಡೆದ ರೆಸಿಡೆಂಟರುಗಳ ಸಮ್ಮೇಳನದಲ್ಲಿ ಸಂಸ್ಥಾನಗಳ ಮೇಲಿನ ಪರಮಾಧಿಕಾರವನ್ನು ಕ್ರಮೇಣ ಅವುಗಳಿಗೇ ವರ್ಗಾಯಿಸುವ ಬಗ್ಗೆ ಯೋಜನೆಯೊಂದು ಸಿದ್ಧವಾಗುವುದಾಗಿ ತಿಳಿದು ಬಂದಿದೆ. ಇದರಂತೆ ಸಂಸ್ಥಾನಗಳು ತಮ್ಮ ಮುಂದಿನ ರಾಜ್ಯತಂತ್ರಗಳನ್ನು ತಾವೇ ತೀರ್ಮಾನಿಸಬೇಕಾಗಿದೆ. ಪರಮಾಧಿಕಾರದ ಬಗ್ಗೆ ಉಂಟಾಗಬಹುದಾದ ತಕರಾರುಗಳ ಸಂದರ್ಭದಲ್ಲಿ ಇದುವರೆಗೆ ಸಾರ್ವಭೌಮ ಪ್ರತಿನಿಧಿಗೆ ಇದ್ದ ಅಧಿಕಾರವು ಹೋಗುವುದರಿಂದ ಸಂಸ್ಥಾನಗಳೇ ಈ ಬಗ್ಗೆ ತಮ್ಮ ಶಾಸನಗಳನ್ನು ಸಿದ್ಧಗೊಳಿಸಬೇಕಾಗುವುದು. ಕೇಂದ್ರ ಸರ್ಕಾರದೊಡನೆ ಯಾವ ಬಗೆಯ ಒಪ್ಪಂದ ಮಾಡಿಕೊಳ್ಳುವುದಕ್ಕೂ ಮತ್ತು ಈಗಾಗಲೇ ಮಾಡಿಕೊಂಡಿರಬಹುದಾದ ಒಪ್ಪಂದಗಳ ಬದಲಾವಣೆ ಮಾಡುವುದಕ್ಕೂ ಸಹ ಸಂಸ್ಥಾನಗಳಿಗೆ ಪೂರ್ಣ ಸ್ವಾತಂತ್ರ್ಯವಿರುವುದು.

ಅಹಿಂಸಾ ವಿಶ್ವ ವಿದ್ಯಾಲಯ

ಅಹಿಂಸಾ ತತ್ವವನ್ನು ಪ್ರತಿಪಾದಿಸುವ ಆಧಾರದ ಮೇಲೆ ವಿಶ್ವ ವಿದ್ಯಾಲಯವೊಂದನ್ನು ಸ್ಥಾಪಿಸುವ ಬಗ್ಗೆ ಯೋಜನೆಯನ್ನು ಕಲ್ಕತ್ತಾ ವಿಶ್ವ ವಿದ್ಯಾಲಯದ ಚರಿತ್ರೆಯ ಪ್ರಾಧ್ಯಾಪಕರಾದ ಡಾ॥ ಕಾಳಿದಾಸ ನಾಗರು ಏಷ್ಯಾ ರಾಷ್ಟ್ರಗಳ ಸಮ್ಮೇಳನದಲ್ಲಿ ಮಂಡಿಸಿದ್ದರು. ಅಹಿಂಸೆಯನ್ನು ಮಾನವ ಜನಾಂಗದ ಅಧ್ಯಾತ್ಮಾನುಭವವನ್ನಾಗಿಟ್ಟುಕೊಂಡು, ಸಂಶೋಧನೆಗಳನ್ನು ನಡೆಸುವ ವಿಶ್ವ ವಿದ್ಯಾಲಯವನ್ನು ಗಾಂಧೀಜಿಯವರ ಜನ್ಮಸ್ಥಾನವಾದ ಪೋರಬಂದರಿನಲ್ಲಿ ಸ್ಥಾಪಿಸಲು ಸಹಕರಿಸಬೇಕೆಂದು ಅವರು ಕೋರಿದ್ದಾರೆ.

ಸಾಧ್ವಿ

ತಾ|| ೧೩-೪-೪೭ ಭಾನುವಾರ

ಬಿಕನೀರ್ ರಾಜರ ಆದರ್ಶ ವಾಕ್ಯ

ಭಾರತದ ಹೊಸ ರಾಜ್ಯಾಂಗ ಮತ್ತು ಸಂಯುಕ್ತ ರಾಜ್ಯಾಂಗ ಸ್ಥಾಪನೆಗಾಗಿ ಬಿಕನೀರ್ ಮಹಾರಾಜರು ವಹಿಸುತ್ತಿರುವ ಪಾತ್ರವು ಅತ್ಯಂತ ಪ್ರಶಂಸನೀಯವಾಗಿದೆ. ರಾಜ್ಯಾಂಗ ಸಭೆಯಲ್ಲಿ ಸೇರಲು ನರೇಂದ್ರರು ಕೊಟ್ಟಿದ್ದ ಭರವಸೆಯನ್ನೂ ಮರೆತು ಹಿಂದಕ್ಕೆ ಹೋಗುವ ಸೂಚನೆಗಳು ಕಂಡುಬಂದಾಗ ಅವರು ಧೈರ್ಯದಿಂದ ತಮ್ಮ ಪ್ರತಿಭಟನೆಯನ್ನು ಸೂಚಿಸಿ, ಸಭಾ ಪಂಡಿತ್ಯಾಗವನ್ನು ... ಮಾಡಿದರು. ಆದಾದ ಮೇಲೆ ಸಂಸ್ಥಾನಗಳ ಪ್ರತಿನಿಧಿಗಳು ರಾಜ್ಯಾಂಗ ಸಭೆಗೆ ಸೇರಲು ಅಪೇಕ್ಷೆ ಪಡುವಂತವರುಗಳಿಗೆ ಅವಕಾಶ ಕೊಡುವಂತೆ ನಿರ್ಣಯವಾಯಿತು.

ಇತ್ತೀಚೆಗೆ ಸಂಸ್ಥಾನ ಪ್ರಜೆಗಳ ಪಕ್ಷ ಬಾಧ್ಯತೆಯ ವಿಷಯವಾಗಿ ಬಿಕನೀರ್ ಮಹಾರಾಜರು ಹೇಳಿರುವ ಮಾತುಗಳು ಮತ್ತಷ್ಟು ಸ್ತೋತ್ರಾರ್ಹವಾಗಿವೆ. ರಾಜರುಗಳ ಹಿತಕ್ಕೂ, ಪ್ರಜೆಗಳ ಹಿತಕ್ಕೂ ಯಾವ ಭೇದವೂ ಇಲ್ಲವೆಂದೂ ಅವೆರಡೂ ಒಂದೇ ಎಂದೂ ಅವರು ಹೇಳುತ್ತಾರೆ. ಸಂಸ್ಥಾನಗಳು ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದಿರುವ ಪ್ರದೇಶಗಳಾದರೂ, ಅವುಗಳು ಮುಖ್ಯವಾಗಿ ಭರತಖಂಡದ ಒಂದು ಅಂಗವಾಗಿರುತ್ತವೆ. ಸಂಸ್ಥಾನಗಳನ್ನು ಒಳಗೊಂಡ ಹಿಂದೂಸ್ಥಾನಕ್ಕೆ ಒಂದು ರಾಜ್ಯಾಂಗವು ರಚನೆಯಾಗಿರುವ ಕಾಲದಲ್ಲಿ ಪ್ರಜಾಪಕ್ಷ ರಾಜರುಗಳೂ, ಪ್ರಜೆಗಳೂ ಸಮಾನವಾದ ಶಕ್ತಿಯನ್ನು ಹೊಂದಿರಬೇಕಾಗುವುದು. ರಾಜ್ಯಾಂಗ ರಚನೆಯಲ್ಲಿ ತಮ್ಮ ಅಥವಾ ಯಾರನ್ನು ಸ್ಥಾನವು ಇರಬೇಕೆಂದು ಪ್ರಜೆಗಳು ಅಪೇಕ್ಷಿಸುವುದು ನ್ಯಾಯವಾಗಿಯೇ ಇದೆ ಎಂಬುದಾಗಿ ಬಿಕನೀರಿನ ಅರಸರು ಹೇಳಿರುವರು.

ಭಾರತ ರಾಜ್ಯಾಂಗ ಸಭೆಯಲ್ಲಿ ಸಹಕರಿಸುವುದರಿಂದಲೇ ತಮ್ಮ ಅಭ್ಯುದಯವು ಸಾಧ್ಯವಾಗುವುದೆಂಬ ದೃಢ ನಂಬಿಕೆಯಿಂದ ಬರೋಡಾ, ಉದಯಪುರ, ಜಯಪುರ, ಜೋಧಪುರ, ಪಾಟಿಯಾಲಾ, ರೇವಾ, ಬಿಕನೀರ್ ಮುಂತಾದ ರಾಜ್ಯಗಳು ಆ ಸಭೆಯಲ್ಲಿ ಸೇರಲು ನಿರ್ಧರಿಸಿರುವುದಾಗಿ ಅವರು ಹೇಳಿರುವರು. ಉಳಿದ ಇತರ ಸಂಸ್ಥಾನಗಳು ಏನು ಮಾಡುತ್ತವೆಂಬುದು ಗೊತ್ತಿಲ್ಲವೆಂದೂ ಸಹ ತಿಳಿಸಿರುವರು.

ನರೇಂದ್ರ ಮಂಡಲದ ಅಧ್ಯಕ್ಷರಾದ ಭೂಪಾಲ್ ನವಾಬರು ತಮ್ಮ ಚೌಕಾಶಿ ವ್ಯವಹಾರದಲ್ಲಿಯೇ ತೊಡಗಿರುವರು. ಪಂಡಿತ ನೆಹರೂರವರಿಗೆ ಅವರು ಪತ್ರವನ್ನು ಬರೆದು, ಷರತ್ತುಗಳನ್ನು ಹಾಕುತ್ತಿರುವರು. ಇತ್ತಲಾಗಿ ವೈಸ್‌ರಾಯ್ ಶಿವಾಜಿರಾಯರು ಮತ್ತು ವೈವಿಧ್ಯದ ಸಂಸ್ಥಾನಗಳು ಇನ್ನೂ ಯಾವ ನಿರ್ಧಾರಕ್ಕೂ ಬಂದಿರುವಂತೆಯೇ ಕಾಣುವುದಿಲ್ಲ. ಬೇರಿನ ಸಂಸ್ಥಾನಗಳು ಸೇರಲು ನರೇಂದ್ರ ಮಂಡಲದ ಸ್ಥಾನಕ್ಕೆ ಸ್ವಾತಂತ್ರ್ಯವು ದೊರಕಿ ಮೇಲೆ ... ಟ್ಟಿ ಸೇರಿಯನ್ನು ವಹಿಸ... ಲ್ಲಿ. ದೇಶ ಭವಿಷ್ಯದ ... ಸ್ವಾತಂತ್ರ್ಯ ಪ್ರೇಮದಿಂದಲೂ ನಮ್ಮ ದೇಶದ ...

ಮುಸ್ಲಿಂ ವಿದ್ಯಾರ್ಥಿಗಳು ರಾಜಕೀಯದಲ್ಲಿ ಸೇರರಲಿ

ಮುಸ್ಲಿಂ ವಿದ್ಯಾರ್ಥಿಗಳು ಏರ್ ಪುಸ್ತಕಗಳನ್ನು ಹಿಡಿದು ಕೂರುವುದನ್ನು ಕೇಂದ್ರ ಸರ್ಕಾರದ ಶ್ರೀ ಮಂತ್ರಿಗಳಾದ ಮಿ|| ಗಜ್ನಫರ್ ಅಲಿ ಖಾನರು ಖಂಡಿಸಿದ್ದಾರೆ. ಮುಸ್ಲಿಂ ರಾಷ್ಟ್ರವು ದಾಸ್ಯದಲ್ಲಿ ಸಿಕ್ಕಿ ತೊಳಲುತ್ತಿರುವಾಗ ಪಿಸ್ತ್ರಗಳನ್ನು ಪಡೆಯುವುದರಿಂದ ಯಾವ ಭಾಗ್ಯವೂ ಬರುವುದಿಲ್ಲವೆಂದು ಹೇಳಿ ಮುಸ್ಲಿಂ ವಿದ್ಯಾರ್ಥಿಗಳೆಲ್ಲಾ ರಾಜಕೀಯದಲ್ಲಿ ಭಾಗವಹಿಸಬೇಕೆಂದು ಸೂಚಿಸಿದ್ದಾರೆ.

ಚಿಕ್ಕಿಗೆ ಕೊಂಬು

ದಕ್ಷಿಣ ಕನ್ನಡ ಜಿಲ್ಲೆಯ ನಿವಾಸಿ ಮೊಯ್ ದಿಲ್ ... ಎಂಬುವನ ಬಳಿ ಎರಡು ಕೊಂಬುಗಳುಳ್ಳ ಚಿಕ್ಕ ಇರುವುದಾಗಿ ಗೊತ್ತಾಗಿದೆ. ಕೊಂಬಿನ ಉದ್ದ ೧|| ಅಂಗುಲ. ಚಿಕ್ಕಿನ ಇತರ ಅವಯವಗಳಲ್ಲಿ ಏನೂ ಬದಲಾವಣೆಯಿಲ್ಲ. ಅನೇಕರು ಇದನ್ನ ನೋಡಲು ಹೋಗುತ್ತಿರುವರು.

ನಾಲ್ಕೂವರೆ ಸಾವಿರ ವರ್ಷದ ಸಂಸ್ಕೃತ-ಪ್ರಾಕೃತ ನಿಘಂಟು

ಕಾಶಿಯ ಹಿಂದೂ ವಿಶ್ವವಿದ್ಯಾನಿಲಯದ ಪ್ರೊ|| ಪ್ರಾಣನಾಥ್ ರವರು ಬಳಿ ಕ್ರಿ. ಪೂ. ೩೦೦೦ ವರ್ಷಗಳ ಹಿಂದಿನ ಸಂಸ್ಕೃತ-ಪ್ರಾಕೃತ ನಿಘಂಟು ಇರುವುದಾಗಿ ವರದಿಯಾಗಿದೆ. ಇದರಲ್ಲಿ ಒಂದು ಸಾವಿರಕ್ಕಿಂತಲೂ ಹೆಚ್ಚು ಪುಟಗಳಿವೆಯೆಂದು ಹೇಳಲಾಗಿದೆ.

ಒಳಗಳು ಒಟ್ಟೊಟ್ಟಾಗಿ ಮುಂದೆ ಒಂದು ಅಖಂಡ ಹಿಂದೂಸ್ಥಾನದ ರಾಜ್ಯಾಂಗ ರಚನೆಯಲ್ಲಿ ನವನಟಿಸುತ್ತಿರುವಂತೆ ಇತರ ಸಂಸ್ಥಾನಗಳೂ ಮಾಡಬಾರದೇ?

ರಾಜಕಮಲ್
೧೩-೪-೪೭ ರಿಂದ ೭ನೇ ವಾರ
1 ನೇ ಆಟ 6 ಕ್ಕೆ 2 ನೇ ಆಟ 9-15 ಕ್ಕೆ
ಶ್ರೀ ಕೃಷ್ಣಲೀಲಾ
(ಕನ್ನಡದಲ್ಲಿ)
ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಪರಿಪಾಲಿಸುವ ಸಲುವಾಗಿ ಪರಮಾತ್ಮನು ಅವತರಿಸಿ ತನ್ನ ಮಹಿಮೆಯನ್ನು ತೋರಿದ ಕಥಾ ವೈಖರಿ

ಜಿಲ್ಲಾ ಬೋರ್ಡು ಚುನಾವಣೆ
೨೧-೪-೪೭ ನೇ ಸೋಮವಾರ
ನಂಜನಗೂಡು ತಾಲ್ಲೂಕಿನ ಈ ಕೆಳಗಿನ ಕಾಂಗ್ರೆಸ್ ಉಮೇದುವಾರರಿಗೆ
- ದಯವಿಟ್ಟು ಓಟು ಕೊಡಿ :-
ಟಿ. ಲಿಂಗಪ್ಪ B. Sc., LL.B
ಹೆಚ್. ಎಂ. ನಾಗಪ್ಪ (ಹುಲ್ಲಹಳ್ಳಿ)
ಎ. ಲಿಂಗಣ್ಣ B. Sc., LL.B

ಹಿಂದೂ ಶ್ರೀಮಂತರಿಂದ ಸಿಂಧು ಪ್ರಾಂತ್ಯದ ಪರಿತ್ಯಾಗ

ಸಿಂಧು ಪ್ರಾಂತ್ಯವನ್ನು ತ್ಯಜಿಸಲು ಹಿಂದೂ ಶ್ರೀಮಂತರು ತಯಾರಾಗುತ್ತಿದ್ದಾರೆಂದು ವರದಿಯಾಗಿದೆ. ದೊಡ್ಡ ದೊಡ್ಡ ಕೈಗಾರಿಕಾ ಮಾಲಿಕರೂ ಸಹ ಪ್ರಾಂತ್ಯವನ್ನು ಬಿಟ್ಟು ತೆರಳಲು ಆರಂಭಿಸಿದ್ದಾರೆ. ಕೆಲ ಕೆಲ ಗೋಲ್ಡ್ ಮಾಲಿಕರು ಈಗಾಗಲೇ ದಕ್ಷಿಣ ಭಾರತದಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪಿಸಿದ್ದಾರೆ. ಪ್ರಮುಖ ಬಿಸ್ಕತ್ ಫ್ಯಾಕ್ಟರಿಯ ಮಾಲಿಕರೊಬ್ಬರು ಜಯಪುರಕ್ಕೆ ಹೊರಡಲು ಏರ್ಪಾಡು ಮಾಡುತ್ತಿದ್ದಾರೆ. ಹಿಂದುಗಳು ತಮ್ಮ ಆಸ್ತಿಪಾಸ್ತಿಗಳನ್ನು ಮಾರಿ ಬೊಂಬಾಯಿ ಮತ್ತು ಸಂಯುಕ್ತ ಪ್ರಾಂತ್ಯಗಳಲ್ಲಿ ನೆಲಸಲು ಹವಣಿಸುತ್ತಿದ್ದಾರೆ. ಹೊರಗಡೆಯಿಂದ ಮುಸ್ಲಿಂ ಶ್ರೀಮಂತರೂ, ಮುಸ್ಲಿಂ ರಾಜರುಗಳೂ ಈ ಆಸ್ತಿಗಳನ್ನು ಕೊಳ್ಳುವಂತೆ ಲೀಗಿನವರು ಪ್ರೋತ್ಸಾಹಿಸುತ್ತಿದ್ದಾರೆ. ಹಿಂದೂ ವಿದ್ಯಾರ್ಥಿಗಳು ಬೇರೆ ಕಾಲೇಜುಗಳಿಗೆ ಹೋಗಲಿದ್ದಾರೆ ಎಂಬುದಾಗಿ ತಿಳಿದು ಬಂದಿದೆ.

ಹೈದರಾಬಾದಿನಲ್ಲಿ ಅರಬ್ಬರ ಸೈನ್ಯ

ಹತ್ತು ಲಕ್ಷ ರೂಗಳ ವೆಚ್ಚದಲ್ಲಿ ೧೨ ಸಹಸ್ರ ಮಂದಿಯನ್ನೊಳಗೊಂಡ ಸೈನ್ಯವೊಂದನ್ನು ಹೈದರಾಬಾದಿನಲ್ಲಿ ರಚಿಸಲಾಗುವುದೆಂದು ಅಲ್ಲಿನ ಆರ್ಥಿಕ ಮಂತ್ರಿಗಳು ತಿಳಿಸಿದ್ದಾರೆ. ಈ ಸೈನ್ಯದ ಮೂರರಲ್ಲೊಂದು ಭಾಗದಷ್ಟು ಮಂದಿ ಅರಬ್ಬರು ಇರುವರೆಂದು ಹೇಳಲಾಗಿದೆ.

ತಿರುವಾಂಕೂರು ಸುಧಾರಣೆಗಳಿಗೆ ತಿರಸ್ಕಾರ

ನಾಗರ ಕೋಯಿಲ್‌ನಲ್ಲಿ ಜರುಗಿದ ತಿರುವಾಂಕೂರು ಸಂಸ್ಥಾನದ ಕಾಂಗ್ರೆಸ್ ಅಧಿವೇಶನದಲ್ಲಿ ಅಲ್ಲಿ ಜಾರಿಗೆ ಬರಲಿರುವ ಹೊಸ ಸುಧಾರಣೆಗಳನ್ನು ತಿರಸ್ಕರಿಸುವ ನಿರ್ಣಯವನ್ನು ಅಂಗೀಕರಿಸಲಾಗಿದೆ.

ರಾಜಕಮಲ್
ತಾ|| 12-4-47 ರಿಂದ 4 ದಿನಗಳು ಮಾತ್ರ
ಪ್ರತಿದಿನ ಪ್ರಾತಃಕಾಲ 10-30 ಗಂಟೆಗೆ
ಇಕ್ ಸಾಥ್
ಭೂಮಿಕೆ:— ರೆನೋಲ್ ಸಾಹು; ಶೋಭನಾ ಸಮರ್ಥ್; ಕೆ. ಸಿ. ಡೇ. ಮುಂತಾದವರು
ಇಕ್ ಸಾಥ್

Edited, printed and published by A. R. Pangarajan at the Sadhvi Press, D. Subbiah Road, Mysore.

ನಾಲ್ಕು ಕರುಗಳ ಜನನ

ಪಶ್ಚಿಮ ಆಸ್ಟ್ರೇಲಿಯದ ಬಾರ್ಕ್ ವ... ಫಾರ್ಮ್ ಎಂಬಲ್ಲಿ ರೈತನೊಬ್ಬನ ಹಸುವೊಂದು ಏಕಕಾಲದಲ್ಲಿ ನಾಲ್ಕು ಕರುಗಳನ್ನು ಹಾಕಿರುವುದಾಗಿ ವರದಿಯಾಗಿದೆ. ಅವು ಕ್ರಮವಾಗಿ ೪೭, ೪೧, ೩೯ ಮತ್ತು ೩೨ ಪೌಂಡ್ ತೂಕವಿರುವುವಾಗಿಯೂ, ದೃಢಕಾಯದಿಂದಿರುವುದಾಗಿಯೂ ಹೇಳಲಾಗಿದೆ.

ಜಯಪ್ರಕಾಶ ನಿಧಿ

ಮೈಸೂರು ೧೧.

ಇದೇ ೨೨ ನೇ ತಾ|| ರಾಜಧಾನಿಗೆ ಶ್ರೀ ಜಯಪ್ರಕಾಶ ನಾರಾಯಣ್‌ರವರು ಆಗಮಿಸುವರು. ಅವರಿಗೆ ನಿಧಿಯೊಂದನ್ನು ಅರ್ಪಿಸಲು ವಿದ್ಯಾರ್ಥಿ ಕಾಂಗ್ರೆಸ್ಸು ನಿರ್ಧರಿಸಿದೆ. ಅವರಿಗೆ ಅರ್ಪಿಸುವ ಪ್ರತಿಯೊಂದು ಕಾಸೂ ನಾಡನ್ನು ಕೊನೆಯ ಹೋರಾಟಕ್ಕಾಗಿ ಸಜ್ಜುಮಾಡಲು ಕೊಟ್ಟ ಕಾಣಿಕೆಯಾಗುವುದು. ಆದ್ದರಿಂದ ಸಕಲರೂ ಉದಾರವಾಗಿ ನೆರವಾಗಬೇಕೆಂದು ಈ|| ಪ್ರಾಂತ್ಯ ವಿ... ಕಾರ್ಯದರ್ಶಿಗಳಾದ ಶ್ರೀ|| ಬಿ. ಶ್ರೀಕಂಠಪ್ಪನವರು ಪ್ರಾರ್ಥಿಸಿದ್ದಾರೆ.

ಈ ನಿಧಿಗೆ ನಗರದಲ್ಲಿ ಹಣವನ್ನು ಸಂಗ್ರಹಿಸಲು ಒಂದು ಸಮಿತಿಯನ್ನು ನಿನ್ನೆ ಸಂಜೆ ಕಾಂಗ್ರೆಸ್ ಭವನದಲ್ಲಿ ನಡೆದ ಸಭೆಯಲ್ಲಿ ರಚಿಸಲಾಯಿತು. ಶ್ರೀಗಳಾದ ಎಸ್. ಚನ್ನಯ್ಯನವರು-ಅಧ್ಯಕ್ಷರು, ಶ್ರೀ ಮ. ಆರ್. ಲಕ್ಷ್ಮಮ್ಮನವರು-ಉಪಾಧ್ಯಕ್ಷರು, ಕೆ. ಎಸ್. ಸತ್ಯನಾರಾಯಣರಾವ್, ಮತ್ತು ತವನಪ್ಪ ಭೂಪಾಲ್-ಕಾರ್ಯದರ್ಶಿಗಳು, ಟಿ. ವೆಂಕಟರಮಣಯ್ಯನವರು ಖಜಾಂಚಿಗಳು.

ಭಾರತ ವಾಚನ

ಸಂಸ್ಕೃತ ಪಾಠಶಾಲೆಯ ಆವರಣದಲ್ಲಿರುವ ಶ್ರೀ ಶ್ರೀ ಗುರುಗಳವರ ದೇವಾಲಯದ ಮುಂಭಾಗದಲ್ಲಿ ನಾಳೆಯಿಂದ ಒಂದು ವಾರ ಕಾಲ ರಂಜೆ ೭ ಗಂಟೆಗೆ ಭಾರತ ವಾಚನವು ನಡೆಯುತ್ತದೆ. ಸರ್ವರಿಗೂ ಸ್ವಾಗತವಿದೆ.

ನಾಯಿಕೆಮ್ಮಿನ ಔಷಧಿ
7-8 ದಿವಸಗಳಲ್ಲೇ ವಾಸಿಯಾಗುತ್ತೆ.
ಕ್ರಯ ಬಾಟ್ಲಿಗೆ 3-0
ಗೂರಲು—ಉಬ್ಬಸಕ್ಕೆ
(Asthma)
ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.
(Appendecitis) ಗು ಲ್ಮ ರೋಗ ಮತ್ತು (Tonsils) ಗಳಿಗೆ ಆಪರೇಷನ್ ಇಲ್ಲದೆ ಗುಣಪಡಿಸುತ್ತೆ ಖುದ್ದು ಬಂದು ನೋಡಿ.
ಗುಂಡ್ಲುಪೇಟೆ ಆರ್. ಎಸ್. ಪಂಡಿತರು
ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂರು

ಶ್ರೀ ಕೃಷ್ಣಾ ಫ್ಲೋರ್ ಅಂಡ್ ಫ್ಲೇಕ್ಸ್ ರೀ-ಗ್ರೂವಿಂಗ್ ವರ್ಕ್ಸ್
ಕಾಳಮ್ಮನಗುಡಿ ಬೀದಿ, ಮೈಸೂರು
ಪ್ರೊಪ್ರೈಟರ್:- ಎಂ. ಹೆಚ್. ತಿಮ್ಮಪ್ಪ.
ಫ್ಲೋರ್ ಮಿಲ್ಲುಗಳ ಮಾಲಿಕರೇ
ನಿಮ್ಮ ಫ್ಲೋರ್ ಮಿಲ್ ಪ್ಲೇಟುಗಳು ಹೆಚ್ಚುಕಾಲ ಬಾಳಿಕೆ ಬಂದು ಚೆನ್ನಾಗಿ ಕೆಲಸ ನಡೆಯುವ ಹಾಗೆ ರೀ-ಗ್ರೂವ್ ಮಾಡಿಕೊಡುತ್ತೇನೆ. ಹೆಚ್ಚಿನ ವಿವರಗಳಿಗೆ ಮೇಲ್ಕಂಡ ವಿಳಾಸದಲ್ಲಿ ಖುದ್ದಾಗಿಯಾಗಲೀ ಪತ್ರ ವ್ಯವಹಾರದಲ್ಲಿಯಾಗಲೀ ದಯವಿಟ್ಟು ವಿಚಾರಿಸಿ.

ಸಾಧ್ವಿ
ಉ
ರಾಜಧಾನಿಯ ಏಕೈಕ ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ರಿ॥ ನಂ ೨೨೨ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಮಂಗಳವಾರ ೧೫—೪—೪೭ [ಸಂಚಿಕೆ ೨೧೦

ಗಾಂಧೀಜಿಯವರು ಉಪವಾಸಕ್ಕೈಗೊಳ್ಳುವರೆ

ಸಿನಿಮಾ ಮಂದಿರಗಳಿಗೆ ರಹದಾರಿ

ನಗರಸಭೆಯಲ್ಲಿ ಪ್ರಶ್ನೋತ್ತರ

ಮೈಸೂರು ೧೫

...ದಲ್ಲಿ ಹಲವು ಚಿತ್ರ ಮಂದಿರಗಳ ...ಟ್ಟಲು ರಹದಾರಿ ಕೇಳಿ ೧೯೪೬ ರಿಂ ...ಷ್ಟು ಮಂದಿ ಅರ್ಜಿ ಸಲ್ಲಿಸಿದ್ದರು, ಅವು ...ದಾರಿ ಹೇಗೆ ಆಯಿತು ಎಂಬುದಾ ... ಎ ಕೃಷ್ಣಮೂರ್ತಿರಾಯರು ಕೇ ...ಪ್ರಶ್ನೆಗೆ ಇದೇ ೭ ನೇ ತಾ॥ ಸೋಮ ...ನಡೆದ ಪುರಸಭಾಧಿವೇಶನದಲ್ಲಿ ಅಧ್ಯ... ಈ ರೀತಿ ಉತ್ತರವಿತ್ತರು:—

೧೯೪೪ ರಲ್ಲಿ ಲಷ್ಕರ್ ಮೊಹಲ್ಲಾದಲ್ಲಿ ...ದಿರವನ್ನು ಕಟ್ಟಲು ಶ್ರೀ॥ ಎಸ್. ಚನ್ನ ...ನವರೂ, ಮಂಡಿ ಮೊಹಲ್ಲಾದಲ್ಲಿ ಕಟ್ಟ ...ಶ್ರೀ॥ ಎಸ್ ನರಸಿಂಗರಾಯರೂ ಅ ...ಕ್ಷಿಸಿದ್ದರು ಮೊದಲನೆಯವರಿಗೆ ರಹ ...ಕೊಡಲಿಲ್ಲ. ಎರಡನೆಯವರಿಗೆ ಕೊ ...ಯಿತು ೧೯೪೫ ರಲ್ಲಿ ೬ ಮಂದಿ ಅ ...ಕೊಂಡಿದ್ದರು ಸರ್ ಹಂಟರ್ ...ರಸ್ತೆಯಲ್ಲಿ ಮಂದಿರವನ್ನು ನಿರ್ಮಿ ...ಶ್ರೀ ಎ ಎಂ ಪಟೇಲರಿಗೂ, ಚಾಮ ...ರಸ್ತೆಯಲ್ಲಿ ಕಟ್ಟಲು ಶ್ರೀ ಟಿ ಚೆಲು ...ರ್ ಮತ್ತು ಶ್ರೀ ಎಂ. ಬಿ ದೇಸಾ ...ವರಿಗೂ, ಕೃಷ್ಣರಾಜ ವನದಲ್ಲಿ ಶ್ರೀ ... ಯಾಲಕ್ಕಾಚಾರ್ಯರಿಗೂ ರಹದಾರಿಯು ...ಕೊಡಲಾಯಿತು ಚಾಮರಾಜ ರ ...ಯಲ್ಲಿ ಕಟ್ಟಲು ಅನುಮತಿ ಕೇಳಿದ್ದ ಶ್ರೀ ... ಪಿ. ಮಾಳ್ ಚೆಟ್ಟಿರ ಅರ್ಜಿಯನ್ನು ನಿ ...ರಾಕರಿಸಲಾಯಿತು. ಸರ್ ಹಂಟರ್ ರಸ್ತೆಯಲ್ಲಿ ಕಟ್ಟಲು ಶ್ರೀ ಇ. ಪಿ ಪಾಲಂಜಿ ...ನವರು ಸಲ್ಲಿಸಿದ್ದ ಅರ್ಜಿಯನ್ನು ಬೇರೆ ...ಗಳ ಪರಿಶೀಲನೆಗೆ ಕಳುಹಿಸಲಾಗಿದೆ ...ರಲ್ಲಿ ದಾಸಪ್ರಕಾಶದ ಎದುರಿನಲ್ಲಿ ...ತ್ರ ಮಂದಿರವನ್ನು ಕಟ್ಟಲು ಶ್ರೀ ಜ ...ರಾಮಯ್ಯನವರಿಗೆ ಅನುಮತಿ ಕೊ ...ಯಿತು ಅಂಬಳೆ ಅಣ್ಣಯ್ಯ ಪಂಡಿ ... ಉದ್ಯಾನವನದ ಎದುರಿಗೆ ಕಟ್ಟಲು ...ಡಿ ಮಾಧವ ಕೃಷ್ಣಯ್ಯನವರ ಅರ್ಜಿ ...ವನ್ನು ತಿರಸ್ಕರಿಸಲಾಗಿದೆ

ಚಾಮರಾಜ ರಸ್ತೆಯಲ್ಲಿ ಎರಡು ಸಿನಿಮಾ ಮಂದಿರಗಳಿಗೆ ಅವಕಾಶಕೊಟ್ಟು ಶ್ರೀ ...ಮಾಳ್ ಚೆಟ್ಟಿರ ಅರ್ಜಿಯನ್ನು ನಿರಾಕರಿ... ಕಾರಣವೇನೆಂದು ಶ್ರೀ ನಾರಾಯಣ ...ಸ್ವಾಮಿಗಳು ಪ್ರಶ್ನಿಸಿದರು. ಅದಕ್ಕೆ ಅಧ್ಯ...ರು ಉತ್ತರವಿತ್ತು ಆ ಪ್ರದೇಶವನ್ನು ಮ...ನೆ ನಿರ್ಮಾಣಕ್ಕಾಗಿಯೇ ಕೊಟ್ಟಿದ್ದುದ...ರಿಂದ ಅದರಲ್ಲಿ ಸಿನಿಮಾ ಮಂದಿರವನ್ನು ...ಲು ಕೊಡಲಿಲ್ಲವೆಂದರು.

ಮಂಡಿ ಮೊಹಲ್ಲಾದಲ್ಲಿ ಶ್ರೀ ನರಸಿಂಗ...ರಾಯರಿಗೆ ರಹದಾರಿ ಕೊಟ್ಟಿರುವುದರಿಂದ ಆ ಪ್ರದೇಶದಲ್ಲಿ ಅನಾರೋಗ್ಯ ಮತ್ತಷ್ಟು ...ಚ್ಚುವುದಿಲ್ಲವೇ ? ಎಂದು ಮಿ॥ ನೂ...ರ್ ಹುಸೇನರು ಕೇಳಿದ್ದಕ್ಕೆ ಇಲ್ಲವೆಂದು ...ತ್ತರ ಕೊಡಲಾಯಿತು

ಚಾಮರಾಜ ರಸ್ತೆಯುಸ್ತ ಅಂ॥ ಅಣ್ಣ ...ಮ ಸಂಬಂಧಿತ ಶಾಲೆ ಪಕ್ಕದಲ್ಲಿ ಸಿನಿಮಾ ...ಮಂದಿರಕ್ಕೆ ಅವಕಾಶಕೊಟ್ಟಿರುವುದರಿಂದ ...ಲೆಯ ಮಕ್ಕಳ ವಿದ್ಯಾಭ್ಯಾಸಕ್ಕೆ ಧಕ್ಕೆ ...ಟಾಗುವುದಿಲ್ಲವೇ ಎಂಬುದಾಗಿ ಶ್ರೀ ಎ ...ಎ ನಾರಾಯಣಾಚಾರ್ಯರು ಕೇಳಿ...ದ ಪ್ರಶ್ನೆಗೆ ಆ ವಿಚಾರವನ್ನೆಲ್ಲಾ ಪರಿಶೀಲಿ...ಸಿಯೇ ಅನುಮತಿ ಕೊಡಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು

ನಾಯಕರುಗಳಿಗೆ ದಿವಾನರ ಆಹ್ವಾನ

ಸ್ವಂ ಸು ಫೋ(] ಬೆಂಗಳೂರು ೧೫

ಈವು ಅನಿವಾರ್ಯವಾಗಿ ಅಪ್ರಿಲ್‌ಕ್ಕೆ ಹೋಗಿರುವುದರಿಂದ ಸಂಸ್ಥಾನದ ರಾಜಕೀಯ ಸುಧಾರಣೆಗಳ ವಿಚಾರದ ಚರ್ಚೆಯನ್ನು ಮುಂದೂಡಬೇಕಾದುದಕ್ಕಾಗಿ ದಿವಾನರು ನಿನ್ನೆ ಒಂದು ಪತ್ರಿಕಾ ಭೇಟಿಯಲ್ಲಿ ವಿಷಾದವನ್ನು ವ್ಯಕ್ತಪಡಿಸಿದರು ಈಗ ಈವು ವಾಪಸು ಬಂದಿರುವುದರಿಂದ ಮುಂಬರುವ ವಾರದಲ್ಲಿ ಸಂಸ್ಥಾನದ ವಿವಿಧ ... ಮುಂದಾಳುಗಳೊಡನೆ ಮಾತುಕತೆಗಳನ್ನು ಆರಂಭಿಸುವುದಾಗಿ ಹೇಳಿದರು ಈವು ಲಂಡನ್ ನ... ತ್ರ ಮಲ್ಲಿಯಂಗಳಿಗೆ ಭೇಟಿ ಕೊಟ್ಟುದಾಗಿಯೂ, ಇವರ ಫಲವಾಗಿ ಸಂಸ್ಥಾನದ ಯುದ್ಧಾನಂತರದ ಯೋಜನೆಗಳಿಗೆ ಬೇಕಾದ ಯಂತ್ರ ಸಾಮಗ್ರಿಗಳು ದೊರೆಯುವ ಸಾಧ್ಯತೆಯೆಂದೂ ತಿಳಿಸಿದರು ಬೆಲ್ಜಿಯ... ನ ರೋವೇ ವಿಶ್ವವಿದ್ಯಾನಿಲಯದಲ್ಲಿ ಮೈಸೂರಿನ ವೈದ್ಯ ಪದವೀಧರರು ಹೆಚ್ಚಿನ ವ್ಯಾಸಂಗ ಮಾಡಲು ಅನುಕೂಲ ದೊರೆತಿದೆಯೆಂದು ಸೂಚಿಸಿದರು. ತಮ್ಮ ಉದ್ದೇಶ ಸಾಧನೆಯಲ್ಲಿ ಸಂಯುಕ್ತ ರಾಷ್ಟ್ರಗಳು ಬದ್ಧ ಕಂಕಣವಾಗಿರುವುದರಿಂದ ಈ ಸಂಸ್ಥೆಯು ಹಿಂದಿನ ಲೀಗ್ ಆಫ್ ನೇಷನ್ಸ್ ಸಂಸ್ಥೆಗಿಂತಲೂ ಹೆಚ್ಚು ಯಶಸ್ವಿಯಾಗುವುದೆಂದು ದಿವಾನರು ಅಭಿಪ್ರಾಯಪಟ್ಟರು

ಸಂತಾಪ ಸೂಚನೆ

ಮೈಸೂರು ೧೫

ರಾಜಧಾನಿಯ ಪ್ರಸಿದ್ಧ ವೈದ್ಯರೆಂದು ಪರಿಗಣಿತರಾಗಿದ್ದ ಬ್ರಹ್ಮೈಕ್ಯರಾದ ಶ್ರೀ॥ ವಿಮಲಾನಂದ ತೀರ್ಥರ ಗುಣಕಥನ ಮಾಡಲು ನೆನ್ನೆ ಸಂಜೆ ಸಂಸ್ಕೃತ ಪಾಠಶಾಲಾ ಆವರಣದಲ್ಲಿ ಆ॥ ಮ॥ ವಿದ್ವಾನ್ ಬ ವೆಂಕಟರಾಮ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಆಯುರ್ವೇದ ವೈದ್ಯ ಸಂಘದವರು ಏರ್ಪಡಿಸಿದ್ದರು ದಿವಂಗತರಿಗೆ ಪುತ್ರಿಯನ್ನೂ ಶ್ರೀ ಯವರ ವಿಯೋಗದಿಂದುಂಟಾದ ದುಃಖವನ್ನು ಸಹಿಸುವ ಶಕ್ತಿಯನ್ನು ಸಂಘದ ಸದಸ್ಯರಿಗೂ, ಶ್ರೀ॥ ಎಸ್. ಎನ್ ಪಂಡಿತರ ಮಕ್ಕಳಿಗೆ ಮುಂತಾದ ಬಂಧುವರ್ಗದವರಿಗೂ ದಯಪಾಲಿಸಬೇಕೆಂದು ಭಗವಂತನನ್ನು ಪ್ರಾರ್ಥಿಸುವ ನಿರ್ಣಯ ... ಸ್ವೀಕರಿಸಲಾಯಿತು: ಶ್ರೀಗಳಾದ ಕೃಷ್ಣರಾಯರು, ಪ್ರೊ. ಚಂದ್ರಶೇಖರ ಶಾಸ್ತ್ರಿಗಳು, ಆ॥ ವೈದ್ಯ ಕೆ. ಪಿ. ಪುರಾಣಿಕರು, ಡಾ॥ ಎ ಎಸ್ ಸುಬ್ರಹ್ಮಣ್ಯ ಶಾಸ್ತ್ರಿಗಳು ... ಕೆ. ಪಿ ಎಸ್ ನರಸಿಂಹಯ್ಯನವರುಗಳು ದಿವಂಗತರ ಗುಣಕಥನ ಮಾಡಿದರು.

ಪೌರಸಭಾಧ್ಯಕ್ಷರನ್ನು ವರ್ಗಾಯಿಸುವ ವಿಚಾರ

ಆರ್ಥಿಕ ದಿವಾನರಲ್ಲಿ ಮನವಿ

ಮೈಸೂರು ೧೫

ರಾಜಧಾನಿಯ ಪೌರಸಭಾಧ್ಯಕ್ಷರಾದ ಶ್ರೀ॥ ಆರ್ ರಾಮಚಂದ್ರರಾವ್ ಬೋರ್ಕರ್ ಯವರಲ್ಲಿ ಅವಿಶ್ವಾಸವನ್ನು ಸೂಚಿಸಿ, ಅವರನ್ನು ವರ್ಗಾಯಿಸಬೇಕೆಂದು ಪೌರಸಭೆಗೆ ನಿರ್ಣಯ ವನ್ನು ಕೆಲವು ಸದಸ್ಯರು ಕಳುಹಿಸಿರುವ ವಿಚಾರದಲ್ಲಿ ಆಗಾಗಳೇ ಉತ್ತಯುತ್ತವನ್ನು ತಡೆಗಟ್ಟಲು ಹಲವು ವ್ಯಕ್ತಿಗಳು ನಾನಾ ವಿಧಗಳಲ್ಲಿ ಪ್ರಯತ್ನಗಳನ್ನು ಮಾಡುತ್ತಿರುವುದಾಗಿ ತಿಳಿದು ಬಂದಿದೆ ಶ್ರೀ॥ ಗಳಾದ ದಸ್ತಗಿರಿ ಖಾನ ಕೆ. ಸೊಂಡೀಜಸಪ್ಪ, ಟಿ ಆರ್ ರಾಮಯ್ಯ, ಮಹಮ್ಮದ್ ಯಾಕೂಬ್, ಬಿ. ಎಸ್ ಸುಬ್ಬರಾವ್ ಮುಂತಾದವರು ಆರ್ಥಿಕ ದಿವಾನರಾದ ರಾ॥ ಬ॥ ಎಂ ರಾಯರ್ ಮತ್ತು ಶ್ರೀಮನ್ನಾರಾಯಣರ ಆಪ್ತ ಕಾರ್ಯದರ್ಶಿಗಳಾದ ಅಮಾತ್ಯ ಶಿರೋಮಣಿ ಸರ್ ಟಿ. ತಂಬೂಚೆಟ್ಟಿರಲ್ಲಿ ಇದಕ್ಕಾಗಿ ನಿಯೋಗ ಹೋಗಿ ಮೇಲ್ಕಂಡ ಪ್ರಸ್ತಾವನೆ ತಪ್ಪಿಸುವಂತೆ ಅರಿಕೆ ಮಾಡಿಕೊಂಡರು

ಡಾ॥ ರಾಯರವರಿಗೆ ಈ ಕೆಳಗೆ ಕಂಡಂತೆ ಒಂದು ಮನವಿಯನ್ನು ಸಲ್ಲಿಸಿರುವುದಾಗಿಯೂ ಸಹ ತಿಳಿದು ಬಂದಿದೆ:—

ಸ್ವಾಮಿ,

ಸಂಸ್ಥಾನದ ಶಾಂತಿ, ಧರ್ಮ ಮತ್ತು ಪ್ರತಿಷ್ಠೆಗಳನ್ನು ಹಿಡಿದೆತ್ತುವ ಅಭಿಪ್ರಾಯದಿಂದ ಈ ಕೆಳಗೆ ಕಂಡ ಕೆಲವಂಶಗಳನ್ನು ತಮ್ಮ ಅವಗಾಹನೆಗೆ ತರಲು ರಾಜ ಭಕ್ತಿಪೂರಿತ ಮೈಸೂರಿನ ಪ್ರಜೆಗಳಾದ ನಾವು ಆಶಿಸುತ್ತೇವೆ

ಪೌರಸಭೆಯ ಒಂದು ರಾಜಕೀಯ ಪಕ್ಷದವರು ಅಧ್ಯಕ್ಷರಲ್ಲಿ ತಮಗೆ ವಿಶ್ವಾಸವಿಲ್ಲವೆಂದೂ, ಆದರಿಂದ ಪೂರ್ತಿ ನಿರ್ಣಯದಲ್ಲಿ ಅವರು ಅಸಮರ್ಥರಾದುದರಿಂದ ಅವರನ್ನು ಕೂಡಲೇ ವರ್ಗಾಯಿಸಬೇಕೆಂದೂ ಸೂಚಿಸಿ ಪುರಸಭೆಗೆ ನಿರ್ಣಯವನ್ನು ಕಳುಹಿಸಿರುವರೆಂದು ಪತ್ರಿಕೆಗಳಲ್ಲಿ ನೋಡಿ ನಾವು ಅತ್ಯಂತ ವಿಷಾದಿಸುತ್ತೇವೆ

ಶ್ರೀ ಆರ್ ರಾಮಚಂದ್ರರಾವ್ ಬೋರ್ಕರ್ ರವರ ಸೇವೆಯು ಮೋಸರಹಿತವಾದುದೆಂದೂ, ಮತ್ತು ಸುಕೃತವಾದುದೆಂದೂ ನಾವೆಲ್ಲರೂ ನಂಬುತ್ತೇವೆ. ರಕ್ಷಣೆ, ನೈರ್ಮಲ್ಯ, ನೀರು ಸರಬರಾಜು ಮತ್ತು ... ಮುಂತಾದ ಕಾರ್ಯಕ್ರಮಗಳಲ್ಲಿ ಅವರು ವಿಶೇಷ ಸೇವೆ ಸಲ್ಲಿಸಿ...

ಮಹಾತ್ಮರ ಉಪವಾಸವೇ ?

ನೌಖಾಲಿ ಪ್ರದೇಶದಲ್ಲಿ ಪುಂಡರ ಹಾವಳಿಯು ಮತ್ತೆ ಆರಂಭವಾಗಿ ಅಲ್ಪ ಸಂಖ್ಯಾತರ ಮೇಲೆ ಅಪಾರ ಧಾಳಿಯು ನಡೆಯುತ್ತಿರುವುದರಿಂದ ಮಹಾತ್ಮ ಗಾಂಧಿಯವರು ಅತ್ಯಂತ ವಿಷಾದಗೊಂಡು ಈ ಹಾವಳಿಯು ತಪ್ಪದಿದ್ದರೆ ತಾವು ಉಪವಾಸ ವ್ರತವನ್ನು ಕೈಗೊಳ್ಳಬೇಕಾಗುವುದೆಂದು ಹೇಳಿರುವುದಾಗಿ ವರದಿಯಾಗಿದೆ.

...ದ್ದಾರೆ. ಪುರ ನಿವಾಸಿಗಳಿಗೆ ಇದರಿಂದ ಬಹಳ ತೃಪ್ತಿಯುಂಟಾಗಿರುತ್ತದೆ. ಪೌರಸಭೆ ಮತ್ತು ನಗರಾಭಿವೃದ್ಧಿ ಸಮಿತಿಯು ವರಮಾನವು ಹೆಚ್ಚುತ್ತದೆ ಇನ್ನು ಮುಂಬರುವ ಕ್ಷೇತ್ರದ ಅಭಿವೃದ್ಧಿಯ ವಿಚಾರದಲ್ಲಿ ಇವರು ತೋರಿಸಿರುವ ಆಸಕ್ತಿಯು ಸರ್ಕಾರದವರಿಂದಲೂ, ನಮ್ಮ ಮಾನ್ಯ ಪ್ರಭುಗಳವರಿಂದಲೂ ಅಂಗೀಕರಿಸಲ್ಪಟ್ಟಿವೆ.

ಈಗ್ಗೆ ಕೆಲವು ದಿನಗಳ ಹಿಂದೆ ಮೇಲ್ಕಂಡ ಪಕ್ಷದವರಿಂದ ಮಾಡಲ್ಪಟ್ಟ ಪ್ರಶಂಸೆಯಿಂದಲೂ ನಮ್ಮ ಹೇಳಿಕೆಯು ದೃಢಪಡುತ್ತದೆ.

ಜನರಿಂದಲೂ ಸಹ ಮಾದರಿ ಪೌರಸಭೆಯೆಂದು ಹೊಗಳಲ್ಪಟ್ಟ ಪ್ರಧಾನ ಪೌರಸಭೆಯು ಇತಿಹಾಸಕ್ಕೇ ಕಳಂಕಪ್ರಾಯವಾಗಿರುವ ಯುಕ್ತವಾದ ಮೇಲಿನ ನಿರ್ಣಯಗಳನ್ನು ತರುವ ಉದ್ದೇಶವು ಆ ಪಕ್ಷಕ್ಕೆ ಮಾತ್ರ ಗೊತ್ತಿರುವ ವಿಚಾರವಾಗಿದೆ.

ತಾವು ನೇಮ್ಕಂಡ ಸಭೆಯನ್ನು ನಿಲ್ಲಿಸಲು ಅಥವಾ ಆ ಪಕ್ಷದ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಬೇಕಾದ ಆಜ್ಞೆಯನ್ನು ಹೊರಡಿಸಿ ಮಾದರಿ ಸಂಸ್ಥಾನದ ಮತ್ತು ಪುರಸಭಾಧ್ಯಕ್ಷರ ಸ್ಥಾನ ಮಾನಗಳ ಗೌರವವನ್ನು ಉಳಿಸಬೇಕೆಂದು ಈ ಮೂಲಕ ನಾವು ತಮ್ಮನ್ನು ಪ್ರಾರ್ಥಿಸುತ್ತೇವೆ

ಅತ್ಯಂತ ನಿಷ್ಪಕ್ಷತೆಯಿಂದಲೂ ರಾಜಭಕ್ತಿಯಿಂದಲೂ ಪ್ರೇರಿತರಾಗಿಯೂ ದಯಾಪೂರಿತವಾದ ಸೇವೆ ಸಲ್ಲಿಸಿದ ಈ ಅಧಿಕಾರಿಗಳ ವ್ಯಕ್ತಿತ್ವ ಮತ್ತು ಸ್ಥಾನ ಮಾನಗಳನ್ನು ರಕ್ಷಿಸುವುದರಲ್ಲಿ ತಮಗೆ ಉತ್ಸಾಹವೆಂದು ತೋರಿದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ, ಪ್ರಾರ್ಥಿಸುತ್ತೇವೆ. ಇದಕ್ಕಾಗಿ ನಾವು ಅತ್ಯಂತ ಕೃತಜ್ಞರಾಗಿರುತ್ತೇವೆ. ಕಾಲಾತೀತವಾಗುವ ಮೊದಲೇ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೋರುತ್ತೇವೆ.

ತಮ್ಮ ವಿಧೇಯರು ಮತ್ತು ಭಕ್ತರು.

ಸಂಗೀತ

ಡಿ ಸುಬ್ಬಯ್ಯನ ರಸ್ತೆಯಲ್ಲಿರುವ ಸಾಧ್ವಿ ಆಫೀಸ್ ಮಹಡಿಯ ಮೇಲೆ ಈ ರಾತ್ರಿ ೯ ಘಂಟೆಗೆ ಶ್ರೀ॥ ಸೀತಾರಾಮಯ್ಯಂಗಾರರ ಸಂಗೀತವನ್ನು ಏರ್ಪಡಿಸಿದೆ. ಸರ್ವರಿಗೂ ಸ್ವಾಗತವುಂಟು.

ಹರಿಕಥೆ

ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿಯಲ್ಲಿರುವ ಶ್ರೀ ದಶರಥ ರಾಮ ಮಂದಿರದಲ್ಲಿ ಈ ದಿನ ರಾತ್ರಿ ೯ ಗಂಟೆಗೆ ಶ್ರೀ॥ ಗಮಕಿ ರಾಮಕೃಷ್ಣ ಶಾಸ್ತ್ರಿಗಳಿಂದ ಶ್ರೀನಿವಾಸ ಕಲ್ಯಾಣವೆಂಬ ಹರಿಕಥೆಯು ನಡೆಯುತ್ತದೆ.

ದಂಟಿನ ಬಗ್ಗೆ ಘೋಷಣೆ

ಬೆಂಗಳೂರು ದಂಡು. ಸಂಸ್ಥಾನಕ್ಕೆ ಸೇರುವ ವಿಚಾರವು ಇತ್ಯರ್ಥವಾಗಿ ಆ ಬಗ್ಗೆ ಸಧ್ಯದಲ್ಲೇ ಒಂದು ಘೋಷಣೆ ಹೊರಡುವುದೆಂದು ಗೊತ್ತಾಗಿದೆ.

ಸಾಧ್ವಿ

ತಾ|| ೧೫-೪-೪೭ ಮಂಗಳವಾರ

ದಿವಾನರ ಆಗಮನ

ವಿಶ್ವ ಸಂಸ್ಥೆಯ ಸಮಿತಿಯಲ್ಲಿ ಭಾಗವಹಿಸಲು ತೆರಳಿದ್ದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರವರು ನಿನ್ನೆ ದಿನ ಹಿಂದಿರುಗಿ ತಮ್ಮ ಕೆಲಸಕಾರ್ಯಗಳನ್ನು ವಹಿಸಿಕೊಂಡರು. ಅಮೆರಿಕಕ್ಕೆ ಹೋಗಿದ್ದ ಕೆಲಸವು ಅತ್ಯಂತ ಯಶಸ್ವಿಯಾಗಿ ಜರುಗಿತೆಂದು ಇವರು ಹೇಳಿರುವರು. ಭಾರತದ ಪ್ರತಿನಿಧಿಗಳು ಒತ್ತಾಯ ಪಡಿಸಿದ ಅಂಶಗಳೆಲ್ಲವೂ ಅಂಗೀಕರಿಸಲ್ಪಟ್ಟವೆಂದು ತಿಳಿಸಿರುವರು.

ಸಂಸ್ಥಾನದಲ್ಲಿ ಇತ್ತೀಚೆಗೆ ಅನೇಕ ವಿದ್ಯಮಾನಗಳು ನಡೆದು ಹೋಗಿವೆ. ರಾಜಕೀಯ ಸುಧಾರಣೆಗಳ ಬಗ್ಗೆ ಪ್ರಭುಗಳು ಘೋಷಣೆಯನ್ನು ಹೊರಡಿಸಿದಂದಿನಿಂದ ಇದುವರೆಗೆ ಅದಕ್ಕೆ ಅನುಗುಣವಾಗಿ ಯಾವ ಕಾರ್ಯಕ್ರಮವೂ ಮುಂದ ವರಿದಿಲ್ಲ. ಕೇವಲ ಪ್ರಶ್ನಾವಳಿಯ ಪ್ರಕಟಣೆಯೊಂದು ಮಾತ್ರ ಆಗಿರುತ್ತದೆ. ಅದಕ್ಕಾದರೂ ಸಾರ್ವಜನಿಕರಿಂದ ಎಷ್ಟು ಮಟ್ಟಿನ ಪ್ರತಿಕ್ರಿಯೆಯು ಬಂದಿರುವುದೆ ಎಂದು ಗೊತ್ತಿಲ್ಲ. ಹಲ ಕೆಲವರು ಕೊಟ್ಟ ಹೇಳಿಕೆಗಳೂ, ನಡೆಸಿದ ಸಮಾರಂಭಗಳೂ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇದಕ್ಕಿಂತ ಹೆಚ್ಚಾಗಿ ಏನೂ ನಡೆದಂತೆ ಕಾಣುವುದಿಲ್ಲ.

ಅಮೆರಿಕದಲ್ಲಿಯೇ ಮೈಸೂರಿನ ರಾಜಕೀಯ ವಿಚಾರಗಳ ಬಗ್ಗೆ ಸಲಹೆಗಳನ್ನು ತರಿಸಿಕೊಂಡು ಅವುಗಳನ್ನು ಆತ್ತ ಪರಿಷ್ಕರಿಸುವುದಾಗಿ ದಿವಾನರು ತಿಳಿಸಿದ್ದರು. ವಿಶ್ವ ಸಂಸ್ಥೆಯ ಆರ್ಥಿಕ ಸಮಿತಿಯ ಕಾರ್ಯಭಾರದ ಮಧ್ಯೆ ಮೈಸೂರಿನ ರಾಜಕೀಯ ಸುಧಾರಣೆಗಾಗಿ ದಿವಾನರು ಎಷ್ಟು ಮಟ್ಟಿನ ಗಮನವನ್ನು ಕೊಡಲು ಸಾಧ್ಯವಾಗಿದ್ದಿತೋ ತಿಳಿಯದು. ಆದರೂ ಅಮೆರಿಕದ ಸಂಪೂರ್ಣ ಪ್ರಜಾ ಪ್ರಭುತ್ವ ವಾತಾವರಣವು ಅವರ ಸಮಾಲೋಚನೆಯ ಮೇಲೆ ತನ್ನ ಪ್ರಭಾವವನ್ನು ಬೀರಿರಲೇ ಬೇಕು.

ಈ ಮಧ್ಯೆ ಮೈಸೂರು ಕಾಂಗ್ರೆಸ್ಸಿನವರು ಬೌರಿಂಗ್‌ಪೇಟೆಯಲ್ಲಿ ಸೇರಿ ಸತ್ಯಾಗ್ರಹದ ನಿರ್ಧಾರವನ್ನು ಮಾಡಿದರಷ್ಟೆ. ಇದಕ್ಕಿನ್ನು ಎರಡು ವಾರಗಳು ಮಾತ್ರ ಉಳಿದಿರುತ್ತವೆ. ಈ ಮಧ್ಯಕಾಲದಲ್ಲಿ ಪ್ರಭಾವಯುತವಾದ ಯಾವುದಾದರೂ ಕಾರ್ಯಕ್ರಮವು ಕೈಗೊಳ್ಳಲ್ಪಡದಿದ್ದರೆ ಕಾಂಗ್ರೆಸ್ಸಿನವರು ತಮ್ಮ ಚಳುವಳಿಯನ್ನು ಹೂಡಿ ದೇಶದಲ್ಲಿ ದೊಡ್ಡ ಅಹಿಂಸಾತ್ಮಕವಾದ ಆಂದೋಳನವನ್ನು ನಡೆಸಲು ನಿರ್ಧರಿಸಿದ್ದಾರೆ.

ಕಾಂಗ್ರೆಸ್ಸಿನವರು ಪ್ರಭುಗಳಿಗೆ ಮುಕ್ತಿಯೆಂದು ಮನವಿಯನ್ನು ಸಲ್ಲಿಸಿರುವುದಾಗಿಯೂ ತಿಳಿದು ಬಂದಿದೆ. ಪರಿಸ್ಥಿತಿಯು ಅತ್ಯಂತ ಸೂಕ್ಷ್ಮತರವಾಗಿ ಪರಿಣಮಿಸುತ್ತಿದೆ. ಇದನ್ನು ಸಂಪೂರ್ಣ ಜ್ಞಾನದಿಂದಲೂ, ದೂರದರ್ಶಿತ್ವದಿಂದಲೂ ಎದುರಿಸಬೇಕಾಗಿದೆ. ನಮ್ಮ ಪ್ರಭುಗಳವರ ರಾಜನೀತಿ ನೈಪುಣ್ಯವು ಇಂದು ಸಂಪೂರ್ಣವಾಗಿ ಪ್ರಕಟವಾಗಿ ಸಂಸ್ಥಾನದಲ್ಲಿ ವೃಥಾ ಕೋಲಾಹಲವೂ, ಮನಃಕ್ಷೋಭೆಯೂ ಆಗುವುದು ತಪ್ಪಬೇಕಾಗಿದೆ. ಹಿಂದೂಸ್ಥಾನದಲ್ಲಿ ಈಗ ಇರುವ ಪ್ರಶಾಂತ ವಾತಾವರಣದಲ್ಲಿ ಮೈಸೂರು ಸಂಸ್ಥಾನವು ಮಾತ್ರ ... ಘರ್ಷಣೆಯ ಕುರುಕ್ಷೇತ್ರವಾಗುವುದು ಸರ್ವಥಾ ಸೂಕ್ತವಲ್ಲ.

ಇದುವರೆಗೆ ಆದದ್ದು ಆಗಿ ಹೋಯಿತು. ಇನ್ನು ಮುಂದಾದರೂ ಕಾಲವಿಳಂಬವಾಗದೆ ಕಾರ್ಯ ಚಟುವಟಿಕೆಯು ನಡೆಯಬೇಕೆಂದು ನಾವು ಕೋರುತ್ತೇವೆ. ಕಾಂಗ್ರೆಸ್ಸಿನವರ ಕೋರಿಕೆಯು ಈಡೇರಿಸಲ್ಪಡಲು ಅಸಾಧ್ಯವಾದ ಅಂಶವೇನೂ ಅಲ್ಲ. ಸಂಸ್ಥಾನದ ಆಡಳಿತದ ಗುರಿಯು ಜವಾಬ್ದಾರಿ ಸರ್ಕಾರದ ಸ್ಥಾಪನೆಯೇ ಎಂದು ಘೋಷಿಸುವುದು ಅಷ್ಟೇನೂ ಕಷ್ಟದ ವಿಚಾರವಲ್ಲ. ಇದುವರೆಗೆ ಅನೇಕ ಸಂಸ್ಥಾನಗಳು ಹೀಗೆ ಮಾಡಿವೆ. ನಮ್ಮ ಪ್ರಭುಗಳವರೂ ಸಹ ಈ ಬಗ್ಗೆ ಒಂದು ಘೋಷಣೆಯನ್ನು ಮಾಡಲು ಯಾವ ಅಡ್ಡಿಯೂ ಇರುವುದಿಲ್ಲ.

ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ನರೇಂದ್ರ ಮಂಡಲದವರು ಪ್ರತಿಯೊಂದು ಸಂಸ್ಥಾನಕ್ಕೂ ಸ್ವಾತಂತ್ರ್ಯವನ್ನು ಕೊಟ್ಟಿರುತ್ತಾರೆ. ಮೈಸೂರು ಸಹ ಅದರಲ್ಲಿ ಸೇರಲು ಯಾವ ಅಡಚಣೆಯೂ ಇರುವುದಿಲ್ಲ. ಇಷ್ಟು ಸುಲಭವಾದ ಸನ್ನಿವೇಶದಲ್ಲಿ ಅನವಶ್ಯಕವಾದ ಹೋರಾಟಕ್ಕೆ ಅವಕಾಶ ಕಲ್ಪಿಸುವುದು ಸ್ವಲ್ಪವೂ ಸರಿಯಲ್ಲ.

ಪ್ರಮುಖ ರಾಜಕೀಯ ನಾಯಕರೊಡನೆ ಕಲೆತು ಸಮಾಲೋಚನೆ ನಡೆಸಿ ಸೂಕ್ತ ಸಲಹೆಗಳನ್ನು ನೀಡುವಂತೆ ಪ್ರಭುಗಳು ತಮ್ಮ ಘೋಷಣೆಯಲ್ಲಿ ದಿವಾನರಿಗೆ ಸೂಚಿಸಿರುವುದಾಗಿ ಅಪ್ಪಣೆ ಕೊಡಿಸಿರುತ್ತಾರೆ. ಈ ವಿಷಯದಲ್ಲಿ ಕಾಲಹರಣ ಮಾಡದೆ ಬೇಗನೆ ಕಾರ್ಯಕ್ರಮ ಕೈಗೊಳ್ಳುವುದಾಗಿ ದಿವಾನರು ಹೇಳಿದ್ದಾರೆ. ದೇಶದ ರಾಜಕೀಯ ಪ್ರಗತಿಗೆ ಮುಖ್ಯ ಸಂಸ್ಥೆಯಾಗಿ, ಸರ್ಕಾರದ ಅಂಗೀಕಾರವನ್ನೂ ಸಹ ಪಡೆದಿರುವ ಮೈಸೂರು ಕಾಂಗ್ರೆಸ್ಸಿನವರ ಸಹಾಯ, ಸಹಕಾರಗಳನ್ನು ದಿವಾನರು ಪಡೆದುಕೊಳ್ಳುವುದು ಅತ್ಯಂತ ಅವಶ್ಯಕ. ಆದುದರಿಂದ ಅವರು ಈ ಕೂಡಲೇ ಕಾಂಗ್ರೆಸ್ ಅಧ್ಯಕ್ಷರನ್ನು ಆಹ್ವಾನಿಸಿ, ಅವರೊಡನೆ ಮಾತುಕತೆ ನಡೆಸಿ ಇಂದಿನ ಬಿಕ್ಕಟ್ಟನ್ನು ಬಗೆಹರಿಸುವ ಮಾರ್ಗವನ್ನು ಹಿಡಿಯುವುದು ಅತ್ಯಂತ ಶ್ರೇಯಸ್ಕರವಾಗಿರುತ್ತದೆ.

ಭೂಪಾಲ್ ನವಾಬರ ವಿರೋಧ ಪ್ರಯತ್ನ

ರಾಜ್ಯಾಂಗ ಸಭೆಯ ಉಪ ಸಮಿತಿಗಳಲ್ಲಿ ಕೆಲಸ ಮಾಡಲು ಸಂಸ್ಥಾನಗಳ ಪರವಾಗಿ ಮೂವರು ಪ್ರತಿನಿಧಿಗಳನ್ನಾದರೂ ಕಳುಹಿಸಿ ಕೊಡಿರೆಂದು ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ನರೇಂದ್ರ ಸಮ್ಮೇಳನದ ಅಧ್ಯಕ್ಷರಾದ ಭೂಪಾಲ್ ನವಾಬರಿಗೆ ಪತ್ರ ಬರೆದಿದ್ದರು. ಸಂಸ್ಥಾನಗಳ ಭವಿಷ್ಯ, ರಾಜರ ಸ್ಥಾನಮಾನಗಳ ವಿಚಾರದಲ್ಲಿ, ನರೇಂದ್ರರ ಸ್ಥಾಯೀ ಸಮಿತಿಯವರು ಮಾಡಿರುವ ನಿರ್ಣಯವನ್ನು ರಾಜ್ಯಾಂಗ ಸಭೆಯು ಅಂಗೀಕರಿಸುವವರೆಗೆ ಪ್ರತಿನಿಧಿಗಳನ್ನು ಕಳುಹಿಸಲು ಸಾಧ್ಯವಿಲ್ಲವೆಂದು ನವಾಬರು ಉತ್ತರವಿತ್ತಿದ್ದರು. ಈಗಾಗಲೇ ಅನೇಕ ಸಂಸ್ಥಾನಗಳು ರಾಜ್ಯಾಂಗ ಸಭೆಗೆ ಸೇರಿರುವುವು. ಅಧ್ಯಕ್ಷ ಪ್ರಸಾದರು, ಮೂಲಭೂತ ಹಕ್ಕು ಬಾಧ್ಯತಾ ಉಪಸಮಿತಿಗೆ ಸರ್ ವಿ ಟಿ. ಕೃಷ್ಣಮಾಚಾರ್, ಮತ್ತು ಫಣಿಕ್ಕರ್ ರವರನ್ನು ಸಂಸ್ಥಾನಗಳ ಪರವಾಗಿ ನೇಮಿ...

ಕಾಶಿಯಲ್ಲಿ ಪುಂಡುಗಂದಾಯ

ಕಾಶಿಯ ಜಿಲ್ಲಾಧಿಕಾರಿಗಳು ಅಲ್ಲಿನ ಪ್ರಜೆಗಳ ಮೇಲೆ ೩,೦೦೦೦ ರೂ ಪುಂಡುಗಂದಾಯವನ್ನು ವಿಧಿಸಿ ೨೬,೦೦೦೦ ರೂಗಳನ್ನು ಮುಸ್ಲಿಮರಿಂದಲೂ, ಉಳಿದುದನ್ನು ಹಿಂದೂಗಳಿಂದಲೂ ವಸೂಲು ಮಾಡುತ್ತಾರೆಂದು ವರದಿಯಾಗಿದೆ.

ಮಾಸ್ಕೋ ಸಮ್ಮೇಳನದಲ್ಲಿ ಭಿನ್ನಾಭಿಪ್ರಾಯ

ಮಾಸ್ಕೋ ನಗರದಲ್ಲಿ ನಡೆಯುತ್ತಿರುವ ವಿದೇಶಾಂಗ ಸಚಿವರ ಸಮ್ಮೇಳನದಲ್ಲಿ ಭಾರಿ ಬಿಕ್ಕಟ್ಟು ಉಂಟಾಗಿರುವುದಾಗಿ ವರದಿಯಾಗಿದೆ. ಜರ್ಮನಿಯಿಂದ ರೂರ್ ಮತ್ತು ರೈನ್ ಪ್ರದೇಶಗಳನ್ನು ಪ್ರತ್ಯೇಕಿಸಬೇಕೆಂಬ ಫ್ರೆಂಚ್ ಸೂಚನೆಯನ್ನು ರಷ್ಯದ ಮಾಲಟೋವ್‌ರವರು ತೀವ್ರವಾಗಿ ವಿರೋಧಿಸಿದ್ದಾರೆ. ರೂರ್ ಕೈಗಾರಿಕೆಯ ಮೇಲೆ ಚತುರ್ರಾಷ್ಟ್ರಗಳ ಹತೋಟಿ ಇರಬೇಕೆಂದು ಅವರು ವಾದಿಸಿದ್ದಾರೆ. ಇಡೀ ಜರ್ಮನಿಯ ಮೇಲೆ ಹತೋಟಿಯಿಡಬೇಕೆಂದು ಅಮೆರಿಕ ಬ್ರಿಟನ್ನುಗಳು ಹೇಳುತ್ತಿವೆ.

ಕ್ರಯಕ್ಕಿವೆ

ಮೈಸೂರು ಸಿಟಿ ದೊಡ್ಡ ಕೆರೆ ಪಕ್ಕದಲ್ಲಿ "ಕೃಷ್ಣಾಗಾರ" ಎಂಬ ೩೧ ಎಕರೆ ತೋಟ ಇದು ಸ್ಟುಡಿಯೋ ಕಟ್ಟುವುದಕ್ಕೂ, ಡೈರಿ ಫಾರಂ ಮಾಡುವುದಕ್ಕೂ, ಭಾರಿ ತೋಟ ಮಾಡುವುದಕ್ಕೂ ಬಹಳ ಅನುಕೂಲವಾಗಿದೆ.

ಡೋರ್ ನಂ. ೨೦೮೭-೧ ಹಳ್ಳದಕೇರಿ ಮಹಡಿ ಮನೆ.

ಡೋರ್ ನಂ. ೯೩೧೦ ಸಿಮೆಂಟ್ ಫ್ಲೋರ್ ಸಿಮೆಂಟ್ ಕಾಂಕ್ರೀಟ್ ತಾರಸಿ ಹೊಸ ಮನೆ.

ವಿವರಗಳಿಗೆ:—

ಆರ್. ಗುಂಡೂರಾವ್,

ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು

ನಿಮ್ಮ ಮೈ ಹೊಳಪುಳ್ಳದಂತೆ ಹೊಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ? ಹಾಗಾದರೆ ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತವೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

ನಿಧನ

ಸ್ವಂ. ವ.] ನಂಜನಗೂಡು

ಇಲ್ಲಿನ ಸುಪ್ರಸಿದ್ಧ ವಕೀಲರೂ ಗಣ್ಯ ಮಹನೀಯರೂ ಆಗಿದ್ದ ಶ್ರೀಯುತರು ವೆಂಕಟಸ್ವಾಮಿ ಅಯ್ಯರ್‌ರವರು ಈ ದಿನ ಬೆಳಗಿನ ಝಾವ ೪ ಗಂಟೆ ಸಮಯದಲ್ಲಿ ಹೃದಯ ಸ್ತಂಭನದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಸರಸ್ವತೀ ಸಂಗೀತ ಸಮಾಜ

"ಮೈಸೂರಿನ ಶ್ರೀ ಸರಸ್ವತೀ ಸಂಗೀತ ಸಮಾಜದ ವಾರ್ಷಿಕೋತ್ಸವವು ಚಾಮರಾಜ ರಸ್ತೆಯಲ್ಲಿರುವ ಕೋ ಆಪರೇಟಿವ್ ಹೋಮಿನಲ್ಲಿ ಇದೇ ೨೦ ನೇ ತಾ|| ಭಾನುವಾರ ಸಂಜೆ ೫ ಗಂಟೆಗೆ ನಡೆಯುವುದು. ಸಂಗೀತ ಕಛೇರಿಯನ್ನು ಏರ್ಪಡಿಸಿದೆ. ಎಲ್ಲರಿಗೂ ಆಹ್ವಾನವುಂಟು.

ಇಂಡಿಯನ್ ಓವರ್‌ಸೀಸ್ ಬ್ಯಾಂಕ್

ರಾಜಧಾನಿಯ ಗಾಂಧೀ ಚೌಕದಲ್ಲಿ ನಿನ್ನೆ ಸಂಜೆ ಇಂಡಿಯನ್ ಓವರ್‌ಸೀಸ್ ಬ್ಯಾಂಕಿನ ಶಾಖೆಯ ಆರಂಭೋತ್ಸವ ವೈಭವದಿಂದ ನೆರವೇರಿಸಲ್ಪಟ್ಟಿತು. ನಗರದ ಅನೇಕ ಮಾನ್ಯ ಮಹನೀಯರು ಆಹ್ವಾನಿತರಾಗಿ ಸತ್ಕರಿಸಲ್ಪಟ್ಟರು.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

ರಾಜಕಮಲ್

೧೩-೪-೪೭ ರಿಂದ ೯ ನೇ ವಾರ

1 ನೇ ಆಟ 6 ಕ್ಕೆ 2 ನೇ ಆಟ 9-15 ಕ್ಕೆ

ಶ್ರೀ ಕೃಷ್ಣಲೀಲಾ

(ಕನ್ನಡದಲ್ಲಿ)

ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಪರಿಪಾಲಿಸುವ ಸಲುವಾಗಿ ಪರಮಾತ್ಮನು ಅವತರಿಸಿದ ತನ್ನ ಮಹಿಮೆಯನ್ನು ಅರುಹಿದ ಕಥಾ ವೈಖರಿ

ಲಾರಿಗಳು ಬೇಕಾಗಿವೆ

ಲಾರಿಗಳು ಜಂಗಲಿನಿಂದ ಸಾಗವಾನಿ ನಾಟಾ ಮತ್ತು ಸೌದೆಗಳನ್ನು ಮೈಸೂರಿಗೆ ರವಾನಿಸಲು ಬೇಕಾಗಿವೆ. ಲಾರಿ ಮಾಲೀಕರುಗಳು ಈ ಕೆಳಗಿನ ವಿಳಾಸದಾರರಲ್ಲಿ ವಿಚಾರಿಸಿ

ಪ್ರೊಪ್ರೈಟರ್ಸ್:

ಮಾಡರ್ನ್ ಇಂಜನಿಯರಿಂಗ್ ಕಂ.,

ನ್ಯೂ ಸಯ್ಯಾಜಿರಾವ್ ರಸ್ತೆ,

ಮೈಸೂರು.

ಜಿಲ್ಲಾ ಬೋರ್ಡ್ ಚುನಾವಣೆ

೨೧-೪-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗಿನ ಕಾಂಗ್ರೆಸ್ ಉಮೇದುವಾರರಿಗೆ

-: ನಿಮ್ಮ ವೋಟು ಕೊಡಿ :-

ಹೆಚ್. ಲಿಂಗಪ್ಪ B. Sc., LL.B.

ಹೆಚ್. ಎಂ. ನಾಗಪ್ಪ (ಹುಲ್ಲಹಳ್ಳಿ)

ಎಂ. ಲಿಂಗಣ್ಣ B. Sc., LL.B

Edited, printed and published by A. R. Nagarajan at the Sadhvi Press D. Subbiah Road, Mysore

ರೋ॥ ನಂ 392 ॥ ವಂದೇ ಮಾತರಂ ॥ ಬಿಡಿ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೧೬—೪—೪೭ [ಸಂಚಿಕೆ ೨೧೧

ವಿಜಯಲಕ್ಷ್ಮಿ ಪಂಡಿತರು ರಷ್ಯದಲ್ಲಿ ರಾಯಭಾರಿ

ಭಾರತ ಮತ್ತು ರಷ್ಯಗಳಲ್ಲಿ ರಾಯಭಾರಿಗಳು

ಸೋವಿಯಟ್ ರಷ್ಯ ಮತ್ತು ಭಾರತಗಳಲ್ಲಿ ಪರಸ್ಪರ ರಾಯಭಾರಿ ವಿನಿಮಯದ ಬಗ್ಗೆ ವ್ಯವಸ್ಥೆಯಾಗಿರುವುದೆಂದೂ, ಈ ವಿಷಯವಾಗಿ ರಷ್ಯಾ ಮತ್ತು ಭಾರತಗಳಿಂದ ಏಕಕಾಲದಲ್ಲಿ ಪ್ರಕಟಣೆ ಹೊರಬೀಳುವುದೆಂದೂ ಮಾಸ್ಕೋ ರೇಡಿಯೋ ತಿಳಿಸಿದೆ. ಪರಸ್ಪರ ಮೈತ್ರಿಯನ್ನು ದೃಢಪಡಿಸುಕೊಳ್ಳುವುದಕ್ಕಾಗಿ ಇವೆರಡು ರಾಷ್ಟ್ರಗಳೂ ರಾಯಭಾರಿಗಳನ್ನು ನೇಮಿಸಿಕೊಳ್ಳಲು ನಿರ್ಧರಿಸಿವೆಯೆಂದು ಭಾರತ ಸರ್ಕಾರದ ಪ್ರಕಟಣೆಯು ತಿಳಿಸುತ್ತದೆ. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ರಷ್ಯಕ್ಕೆ ಭಾರತದ ಪ್ರಥಮ ರಾಯಭಾರಿಗಳಾಗಿ ಹೋಗಬಹುದೆಂದು ಭಾರತೀಯ ಮತ್ತು ವಿದೇಶ್ಯ ಅಧಿಕಾರಿ ವಲಯಗಳಲ್ಲಿ ಹೇಳಲಾಗುತ್ತಿದೆ.

ಧರ್ಮ ತ್ಯಾಗವು ಹೇಡಿತನ

ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಸಲುವಾಗಿ ಹರಿಜನರು ಹಿಂದೂ ಧರ್ಮದಿಂದ ಪ್ರತ್ಯೇಕವಾಗಲು ನಡೆಸುತ್ತಿರುವ ಪ್ರಚಾರಗಳನ್ನು ಖಂಡಿಸಿ ಮತ ತ್ಯಾಗ ಮಾಡಲು ಆಲೋಚಿಸುವುದು ಹೇಡಿತನವೆಂದೂ, ಜಾತಿಭ್ರಷ್ಟನಾದವನು ಎಲ್ಲರಿಂದಲೂ ದೂರ ತಳ್ಳಲ್ಪಡುವನೆಂದೂ, ಜನರು ಯಾವಾಗಲೂ ಹೇಡಿಗಳಾಗಬಾರದೆಂದೂ ಕೇಂದ್ರ ಸರ್ಕಾರದ ಸಚಿವರಾದ ಶ್ರೀ॥ ಜಗಜೀವನರಾಂ ರವರು ಬೊಂಬಾಯಿನ ಭಾಷಣವೊಂದರಲ್ಲಿ ಹೇಳಿರುತ್ತಾರೆ.

ಸಂಸ್ಕೃತ ಪರೀಕ್ಷಾ ಫಲಿತಾಂಶ

ಮೈಸೂರು ೧೬

ಶ್ರೀಮನ್ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ನಡೆದ ೧೯೪೭ ನೇ ಮಾರ್ಚಿಯ ವಿವಿಧ ಪರೀಕ್ಷೆಗಳ ಫಲಿತಾಂಶವು ಹೊರಬಿದ್ದಿದೆ. ಬೇಕಾದವರು ನಮ್ಮ ಕಛೇರಿಯಲ್ಲಿ ಫಲಿತಾಂಶಗಳನ್ನು ತಿಳಿದುಕೊಳ್ಳಬಹುದು.

ಪೌರಸಭಾಧ್ಯಕ್ಷರ ವರ್ಗದ ವಿಚಾರ

ರಾಜಧಾನಿಯ ಪೌರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಭೋರೆಯವರನ್ನು ವರ್ಗಾಯಿಸಬೇಕೆಂದು ಹಲವು ಪೌರಸಭಾ ಸದಸ್ಯರು ಮಾಡಿರುವ ಪ್ರಯತ್ನದ ಸಂಬಂಧವಾಗಿ ಕೆಲವು ಜನ ದೇಶೀಯ ಕ್ರೈಸ್ತರು ಈ ದಿನ ಅಮಾತ್ಯ ಶಿರೋಮಣಿ ಸರ್ ಟಿ. ತಂಬೂಚೆಟ್ಟಿರವರಲ್ಲಿಗೆ ಹೋಗಿ ವರ್ಗದಿಂದ ಪ್ರಯತ್ನಕ್ಕೆ ಅವಕಾಶ ಕೊಡಬಾರದೆಂದು ಕೇಳಿಕೊಂಡರೆಂದು ತಿಳಿದು ಬಂದಿದೆ.

ವಿಲಾಸಪುರ ಸಂಸ್ಥಾನದಲ್ಲಿ ಪ್ರಜಾ ಸರ್ಕಾರ

ನಲವತ್ತು ಜನ ಚುನಾಯಿತ ಪ್ರತಿನಿಧಿಗಳಿಂದ ರಚಿತವಾಗಿರುವ ರಾಜ್ಯಾಂಗ ಸಮಿತಿಯು ತನ್ನ ವರದಿಯನ್ನು ಒಪ್ಪಿಸಿದೊಡನೆಯೇ ತಮ್ಮ ಸಂಸ್ಥಾನದಲ್ಲಿ ಪ್ರಜಾ ಸರ್ಕಾರವನ್ನು ಸ್ಥಾಪಿಸುವುದಾಗಿ ವಿಲಾಸಪುರ ಸಂಸ್ಥಾನದ ಮಹಾರಾಜರಾದ ರಾಜಾ ಆನಂದ ಚಂದ್ರರವರು ಮೊನ್ನೆ ನಡೆಸಿದ ಹೊಸ ವರ್ಷದ ದರ್ಬಾರಿನಲ್ಲಿ ಪ್ರಕಟಿಸಿರುವರು.

ಸತ್ಯಾಗ್ರಹದ ಪ್ರತಿಜ್ಞೆ

ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಮೇ ೧ ನೇ ತಾ॥ ನಿಂದ ಆರಂಭವಾಗಲಿರುವ ಸತ್ಯಾಗ್ರಹದಲ್ಲಿ ಭಾಗವಹಿಸಲು ಅಪೇಕ್ಷಿಸುವ ಕಾಂಗ್ರೆಸ್ ಸದಸ್ಯರು ಇದಕ್ಕಾಗಿ ಸಿದ್ಧವಾಗಿರುವ ಪ್ರತಿಜ್ಞಾ ಪತ್ರಿಕೆಗೆ ರುಜು ಮಾಡಬೇಕೆಂದು ಸತ್ಯಾಗ್ರಹದ ಉಪಸಮಿತಿಯ ಸಂಚಾಲಕರಾದ ಶ್ರೀ ಕೆ. ಎಸ್ ಶಂಕರಾರ್ಯರವರು ತಿಳಿಸಿರುತ್ತಾರೆ. ಪ್ರತಿಜ್ಞಾ ಪತ್ರಗಳು ಜಿಲ್ಲಾ ತಾಲ್ಲೂಕು ಕಾಂಗ್ರೆಸ್ ಸಮಿತಿಗಳಲ್ಲಿಯೂ ಮತ್ತು ಇವುಗಳಿಂದ ಅಧಿಕೃತರಾದವರಲ್ಲಿಯೂ ದೊರೆಯುತ್ತವೆ.

ಪತ್ರಿಕೆಯ ವಾರ್ಷಿಕೋತ್ಸವ

ಮೈಸೂರು ೧೬

ಮೊನ್ನೆ ಶ್ರೀ ಅಹೋಬಲ ಮಠದಲ್ಲಿ "ಇದಂ ಕವಿ ಇದಯಂ" ಎಂಬ ತಮಿಳು ಹಸ್ತಲಿಖಿತ ಪತ್ರಿಕೆಯ ಎರಡನೆಯ ವಾರ್ಷಿಕೋತ್ಸವವು ಶ್ರೀ ಪಿ ವಿ ರಾಜಗೋಪಾಲರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕುಮಾರಿ ಜಯಲಕ್ಷ್ಮಿ ಸಹೋದರಿಯರಿಂದ ಸಂಗೀತವೂ ಮತ್ತು ಯೋಗಾಭ್ಯಾಸ ವಿಶಾರದ ಶ್ರೀ ಎಸ್ ಆರ್ ದೇಶಿಕಾಚಾರ್ಯರಿಂದ ಯೋಗಾಸನ ಪ್ರದರ್ಶನವೂ ನಡೆದವು. ವಿದ್ವಾನ್ ವೀರರಾಘವಾಚಾರ್, ವಿದ್ವಾನ್ ಕೊತ್ತವಂಗಲಂ ವರದಾಚಾರ್ ಮತ್ತು ಅಧ್ಯಕ್ಷರು ಭಾಷಣ ಮಾಡಿದರು.

ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವ

ನಂಜನಗೂಡು ೧೬

ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವವು ನಂಜನಗೂಡು ಶ್ರೀರಾಮಪುರದ ಜನತೆಗೆ ನಾಳೆ ಸಾಯಂಕಾಲ ೫ ಘಂಟೆಗೆ ಬಿಜಯ ಮಾಡುತ್ತದೆ. ಪುರಜನರು ಈ ಉತ್ಸವದಲ್ಲಿ ಭಾಗಿಗಳಾಗಿ ಶ್ರೀ ಸ್ವಾಮಿಯ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಧರ್ಮದರ್ಶಿ ಶ್ರೀ॥ ಬಿ. ವಿ. ಪಂಡಿತರು ಕೋರುತ್ತಾರೆ.

ಜರ್ಮನ್ ರಾಜಕುಮಾರನ ವಿಚಾರಣೆ

ಕಳೆದ ಯುದ್ಧದಲ್ಲಿ ಮಾನವತ್ವಕ್ಕೆ ವಿರುದ್ಧವಾಗಿ ಅನೇಕ ಅತ್ಯಾಚಾರಗಳನ್ನೆಸಗಿದನೆಂಬ ಆಪಾದನೆಯ ಮೇಲೆ ಜರ್ಮನಿಯ ರಾಜಕುಮಾರ ಜೋಸೆಫ್ ವಾಲ್ಡೆಕ್‌ನನ್ನು ಮಿತ್ರ ಸಂಸ್ಥಾನದ ನ್ಯಾಯಸ್ಥಾನದಲ್ಲಿ ವಿಚಾರಣೆ ಮಾಡಲಾಗುತ್ತಿರುವುದಾಗಿ ವರದಿಯಾಗಿದೆ. ತಾನು ನಿರಪರಾಧಿಯೆಂದು ಆತನು ತಿಳಿಸಿರುವನು. ಯುದ್ಧಾಪರಾಧಗಳಿಗಾಗಿ ವಿಚಾರಣೆಯಾದ ರಾಜಕುಮಾರರಲ್ಲಿ ಈತನೇ ಮೊದಲನೆಯವನೆಂದು ಹೇಳಲಾಗಿದೆ.

೬೦ ಗಂಟೆಯಲ್ಲಿ ಪ್ರಪಂಚ ಪ್ರದಕ್ಷಿಣೆ

ಅಮೇರಿಕದ ಚಿಕಾಗೋವಿನ ಶ್ರೀಮಂತ ಮಿ॥ ಮಿಲ್ಟನ್ ರೇನಾಲ್ಡ್ಸ್‌ರು ೬೦ ಗಂಟೆಗಳೊಳಗೆ ವಿಮಾನದಲ್ಲಿ ಪ್ರಪಂಚವನ್ನು ಪ್ರದಕ್ಷಿಣೆ ಮಾಡುವ ಉದ್ದೇಶದಿಂದ ಕಳೆದ ೧೨ ನೇ ತಾ॥ ಬೆಳಿಗ್ಗೆ ನ್ಯೂಯಾರ್ಕಿನಿಂದ ಹೊರಟು ಪ್ಯಾರಿಸ್ ಮಾರ್ಗವಾಗಿ ೧೩ ನೇ ತಾ॥ ರಾತ್ರಿ ೧೧-೫೦ಕ್ಕೆ ಭಾರತದ ಕರಾಚಿ ನಿಲ್ದಾಣಕ್ಕೆ ಬಂದು ಕರಾಚಿ, ಕಲ್ಕತ್ತಾ, ಟೋಕಿಯೋ, ಅಲಾಸ್ಕಗಳ ಮಾರ್ಗವಾಗಿ ೧೫ ನೇ ತಾ॥ ಮಂಗಳವಾರ ನ್ಯೂಯಾರ್ಕ್ ತಲುಪುವುದಾಗಿ ತಿಳಿಸಿದರೆಂದು ವರದಿಯಾಗಿದೆ.

ವೈಶ್ಯ ಪ್ರಮುಖರ ಪ್ರವಾಸ

ಮೈಸೂರು ಸಂಸ್ಥಾನದ ವೈಶ್ಯ ಯುವಜನ ಸಭಾ ಸಭಾಧ್ಯಕ್ಷರಾದ ಶ್ರೀ॥ ಪಿ ನಾರಾಯಣಕೃಷ್ಣ ಶೆಟ್ಟರೂ, ಇತರ ಪ್ರಮುಖರೂ ವೈಶ್ಯ ಪತ್ರಿಕೆಯ ಮುದ್ರಣಾಲಯದ ನಿಧಿ ಸಂಗ್ರಹಣೆಗಾಗಿ ಪ್ರವಾಸಕ್ಕೆ ಹೊರಟಿರುವರಷ್ಟೆ. ಅವರು ಮೊನ್ನೆ ದಿನ ಶೃಂಗೇರಿಗೆ ಹೋಗಿ ಜಗದ್ಗುರುಗಳವರ ದರ್ಶನ, ಆಶೀರ್ವಾದ ಮತ್ತು ಧನ ಸಹಾಯವನ್ನು ಪಡೆದು ಅನಂತರ ಅಲ್ಲಿನ ವೈಶ್ಯ ಮಹಾಜನರು ನಡೆಸಿದ ಸಭೆಯಲ್ಲಿ ನಿಧಿ ಸಂಗ್ರಹಣ ಮಾಡಿದರು. ಅವರು ಕೊಪ್ಪ, ನರಸಿಂಹರಾಜಪುರ, ತರೀಕೆರೆ, ಭದ್ರಾವತಿಗಳಿಗೆ ಭೇಟಿಯಿತ್ತು ಶಿವಮೊಗ್ಗೆಗೆ ತೆರಳಿರುವರು.

ಡಿಪೋದಲ್ಲಿ ಕಳ್ಳತನ

ಸ್ವಂ ವ.] ಚಾಮರಾಜನಗರ ೧೫

ಇಲ್ಲಿನ ರಿಸರ್ವ್ ಡಿಪೋದಲ್ಲಿ ಕಳ್ಳರು ಬತ್ತ ಬೀಗ ಮುರಿದು ನುಗ್ಗಿ ಒಂದು ಮೂಟೆ ಸಕ್ಕರೆಯನ್ನು ಕಳವು ಮಾಡಿ ತೆಗೆದುಕೊಂಡು ಹೋಗಿರುವುದಾಗಿ ತಿಳಿದು ಬಂದಿದೆ. ತನಿಖೆ ನಡೆಯುತ್ತಿದೆ.

ವಾಚನಾಲಯದ ಬಳಿ ಜೂಜಾಟ

ಸ್ವಂ ವ.] ಕೃಷ್ಣರಾಜಪೇಟೆ ೧೫

ಇಲ್ಲಿನ ಸಾರ್ವಜನಿಕ ವಾಚನಾಲಯದ ಬಳಿ ನಿತ್ಯ ಪೋಕರಿಗಳು ಗುಂಪು ಸೇರಿ ಜೂಜಾಟ ಮೊದಲಾದವುಗಳಿಂದ ಗಲಾಟೆ ಮಾಡುತ್ತ ವಾಚಕರಿಗೆ ತೊಂದರೆಯನ್ನುಂಟು ಮಾಡುತ್ತಿದ್ದಾರೆ. ಅಧಿಕಾರಿಗಳು ಈ ಬಗ್ಗೆ ಶೀಘ್ರ ಕಾರ್ಯಕ್ರಮ ಕೈಗೊಳ್ಳಬೇಕಾಗಿದೆ.

ರಥೋತ್ಸವ

ಮೈಸೂರು ೧೬

ನಾಳೆ ದ್ವಾದಶಿ ಶುಕ್ರವಾರ ಬೆಳಿಗ್ಗೆ ೯-೩೦ಕ್ಕೆ ಶ್ರೀ ಶ್ವೇತವರಾಹ ಸ್ವಾಮಿಯವರ ರಥೋತ್ಸವ ಅರಮನೆ ಕೋಟೆಯೊಳಗೆ ನಡೆಯುವುದು.

ಬಾಬಾ ಬಿಡುಗಡೆ

ಸ್ವಂ ವ ಫೋ.] ಬೆಂಗಳೂರು ೧೬

ಸಾರ್ವಜನಿಕ ರಕ್ಷಣಾ ಶಾಸನದ ಪ್ರಕಾರ ಗಲಭೆಗಳ ಸಂಬಂಧದಲ್ಲಿ ಬಂಧಿಸಲ್ಪಟ್ಟಿದ್ದ ಬಾಬಾ ಎಂಬಾತನನ್ನು ನಿನ್ನೆ ದಿನ ಬಿಡುಗಡೆ ಮಾಡಲಾಯಿತು. ಈ ಸಂಜೆ ಇನ್ನೂ ಕೆಲವರನ್ನು ಬಿಟ್ಟುಬಿಡಲಾಗುವುದೆಂದು ತಿಳಿದುಬಂದಿದೆ.

ಈ ತಿಂಗಳ ಕೊನೆಯಲ್ಲಿ ದಿವಾನರು ದೆಹಲಿಗೆ ತೆರಳುವರೆಂದು ಗೊತ್ತಾಗಿದೆ.

ಈ ದಿನ ಮಧ್ಯಾಹ್ನ ಮಂತ್ರಿಮಂಡಲದ ಸಭೆಯು ದಿವಾನರ ಅಧ್ಯಕ್ಷತೆಯಲ್ಲಿ ನಡೆಯಿತು.

ಜೂನ್ ಅಂತ್ಯದ ಹೊತ್ತಿಗೆ ದಂಡಿನ ಪ್ರದೇಶವು ಸಂಸ್ಥಾನಕ್ಕೆ ಹಿಂತಿರುಗುವುದೆಂದು ಖಚಿತವಾಗಿ ತಿಳಿದು ಬಂದಿದೆ.

ಸೈಯದ್ ತಫಾಜಿಲ್ ದಾವೂದ್ ಎಂಬುವರಿಂದ ಬರೆಯಲ್ಪಟ್ಟ "ರಿಯಲ್ ತಿಪ್ಪು" ಎಂಬ ಪುಸ್ತಕವನ್ನು ಮುಟ್ಟುಗೋಲು ಹಾಕಲು ಸರ್ಕಾರದ ಆಜ್ಞೆಯಾಗಿದೆ.

ರಜದ ಮೇಲಿರುವ ಅ॥ ಕ॥ ಶ್ರೀ ಜಿ. ಎಸ್. ಪುಟ್ಟಣ್ಣನವರನ್ನು ಮೈಸೂರು ಜಿಲ್ಲಾಧಿಕಾರಿಗಳ ಆಹಾರದ ಅಸಿಸ್ಟೆಂಟರಾಗಿ ನೇಮಕ ಮಾಡಲಾಗಿದೆ.

ಮಿ.ಸ್ ಪಿ ಎಸ್ ರಾಜಮ್ಮನವರನ್ನು ಮೈಸೂರು ಚಲುವಾಂಬಾ ಆಸ್ಪತ್ರೆಯಿಂದ ಬೆಂಗಳೂರು ವಾಣೀವಿಲಾಸ ಆಸ್ಪತ್ರೆಗೆ ವರ್ಗಾಯಿಸಲಾಗಿದೆ.

ನೆಹರೂರವರಿಂದ ದುಂಡು ಮೇಜಿನ ಸಲಹೆ

ಯಾವುದಾದರೊಂದು ರೀತಿಯಿಂದ ನಮ್ಮ ನಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳಬೇಕಾದ ಕಾಲವು ಸನ್ನಿಹಿತವಾಗಿದೆ. ಸಾಧ್ಯವಾದಷ್ಟು ಕಾಲವಿಳಂಬವಿಲ್ಲದೆ ಭಾರತದ ವಿವಿಧ ರಾಜಕೀಯ ಪಕ್ಷಗಳ ಪ್ರಮುಖರು ಕೂಡಲೇ ದುಂಡು ಮೇಜಿನ ಸಮ್ಮೇಳನವೊಂದರಲ್ಲಿ ಕಲೆತು ಒಂದು ಅಂತಿಮ ನಿರ್ಧಾರಕ್ಕೆ ಬರಬೇಕಾಗಿದೆ ಎಂಬುದಾಗಿ ಪಂಡಿತ ನೆಹರೂರವರು ಹೇಳಿರುವರು.

ಗಡಿನಾಡಿನ ಗಾಂಧಿಯವರ ಮುಂದಿನ ಸಂಕಲ್ಪ

ತಮ್ಮ ಪ್ರಾಂತದ ಸೋದರರಾದ ಪಠಾಣರು ರಕ್ತ ಪಿಪಾಸಿಯಲ್ಲಿಯೂ, ಬಡ್ಡಿಯ ಹಣದ ಸುಲಿಗೆಯಲ್ಲಿಯೂ ತೊಡಗಿರುವರೆಂಬ ಅಪವಾದನೆಯಿಂದ ಅವರನ್ನು ವಿಮುಕ್ತರನ್ನಾಗಿ ಮಾಡಿ, ಅವರು ಅನೇಕರಂತೆ ವ್ಯಕ್ತಿಯ ಸೌಖ್ಯ ಜೀವನಕ್ಕೆ ಇದಿರು ನಿಂತೆ ಮಾಡಲು ತಮ್ಮ ಉಳಿದ ಆಯುಸ್ಸನ್ನು ವಿನಿಯೋಗಿಸಲು ಸಂಕಲ್ಪ ಮಾಡಿರುವುದಾಗಿ ಗಡಿನಾಡಿನ ಗಾಂಧಿಯವರಾದ ಖಾನ್ ಅಬ್ದುಲ್ ಗಫಾರ್ ಖಾನರು ತಿಳಿಸಿರುತ್ತಾರೆ.

ಹೋಟೇಲು ಕೆಲಸಗಾರರ ಮುಷ್ಕರ

ಮೈಸೂರು ೧೬

ರಾಜಧಾನಿಯ ದಾಸಪ್ರಕಾಶ (ಪ್ಯಾರಡೈಸ್ ಕೆಫೆ) ಹೋಟೇಲಿನ ಕೆಲಸಗಾರರು ಈ ದಿನ ಬೆಳಿಗ್ಗೆ ಕೆಲಸಕ್ಕೆ ಹೋಗದೆ ಹೊರಗಡೆ ನಿಂತು ಮುಷ್ಕರವನ್ನಾಚರಿಸಿದರೆಂದು ತಿಳಿದು ಬಂದಿದೆ. ತಮಗೆ ಸಕಾಲದಲ್ಲಿ ಸಂಬಳವನ್ನು ಕೊಡದೆ ಜುಲ್ಮಾನೆ ಹಾಕಿ ಕೆಲವರಿಗೆ ಕಿರುಕುಳವನ್ನು ಕೊಡಲಾಯಿತೆಂಬುದೇ ಮುಷ್ಕರದ ಕಾರಣವೆಂದು ಹೇಳಲಾಗಿದೆ.

ಸಾಧ್ವಿ

ತಾ॥ ೧೬-೪-೪೭ ಬುಧವಾರ

ದಿವಾನರ ಸಮಾಲೋಚನೆ

ಸಂಸ್ಥಾನದ ರಾಜಕೀಯ ಸುಧಾರಣೆಗಳ ಸಮಾಲೋಚನೆಗೆ ಇದುವರೆಗೆ ಆದ ಸಾವಕಾಶಕ್ಕಾಗಿ ವಿಷಾದವನ್ನು ಸೂಚಿಸಿ ಮುಂದಿನ ವಾರ ನಾಯಕರುಗಳನ್ನು ಕರೆಸಿ ಮಾತುಕತೆ ನಡೆಸುವುದಾಗಿ ದಿವಾನರು ಹೇಳಿರುವರಷ್ಟೆ. ಇನ್ನು ಮುಂದಾದರೂ ಅವರು ತ್ವರಿತವಾಗಿ ಕಾರ್ಯಕ್ರಮ ಕೈಗೊಳ್ಳಲೆಂದು ಆಶಿಸಲಾಗಿದೆ. ಮುಖಂಡರುಗಳೊಡನೆ ನಡೆಸುವ ಸಮಾಲೋಚನೆಯು ಅನವಶ್ಯಕವಾಗಿ ದೀರ್ಘವೂ ಮತ್ತು ಮಿತಿಮೀರಿದುದೂ ಆಗದಿರಲೆಂದು ಅಪೇಕ್ಷಿಸಬೇಕಾಗಿದೆ.

ಹಿಂದೆ ವೈಸರಾಯರಾಗಿದ್ದ ಲಾರ್ಡ್ ಲಿನ್‌ಲಿತ್ ಗೋ ರವರು ನಡೆಸಿದ ಇದೇ ಬಗೆಯ ಮಾತುಕತೆಗಳಲ್ಲಿ ನಾಯಕರೆಂಬುವ ಪಟ್ಟಿಯು ಹನುಮಂತನ ಬಾಲದಂತೆ ಬೆಳೆದು ಕೇವಲ ಸಾಮಾನ್ಯ ಜನರೂ ಮುಖಂಡರಂತೆ ಆಹ್ವಾನಿಸಲ್ಪಟ್ಟಿದ್ದರು. ಗೊತ್ತು ಗುರಿಯಿಲ್ಲದ ರೀತಿಯಲ್ಲಿ ನಾಟಕ ಕತೆಗಳು ನಡೆದುವು. ಒಬ್ಬೊಬ್ಬರು ಒಂದೊಂದು ಬಗೆಯ ಅಭಿಪ್ರಾಯವನ್ನು ಸೂಚಿಸಿದರು. ಆ ಪಂಗಡಗಳೆಲ್ಲವೂ ಪ್ರಜಾಭಿಪ್ರಾಯದ ಪ್ರತಿಬಿಂಬವೆಂದು ವೈಸರಾಯರು ಪರಿಗಣಿಸಿ ಭಾರತೀಯರು ಮುಂದರಲ್ಲಿ ಏಕಮತ್ಯವಿಲ್ಲವೆಂದೂ, ಭಿನ್ನಾಭಿಪ್ರಾಯವು ತೀವ್ರವಾಗಿರುವದೆಂದೂ ಪ್ರಪಂಚಕ್ಕೆ ಸಾರತೊಡಗಿದರು. ಭಾರತೀಯರಲ್ಲಿಯೇ ಒಮ್ಮತವಿಲ್ಲದಿರುವುದರಿಂದ ಬ್ರಿಟಿಷರು ಅಧಿಕಾರವನ್ನು ಯಾರಿಗೆ ವರ್ಗಾಯಿಸ ಬೇಕೆಂಬುದು ಕಷ್ಟದ ಸಮಸ್ಯೆಯಾಗಿರುವುದೆಂದು ಹೇಳತೊಡಗಿದರು.

ಈಗ ಪರಿಸ್ಥಿತಿಯು ಸಂಪೂರ್ಣವಾಗಿ ಬದಲಾಯಿಸಿರುತ್ತದೆ. ಬ್ರಿಟಿಷರೇ ಅಧಿಕಾರವನ್ನು ಭಾರತೀಯರಿಗೆ ವರ್ಗಾಯಿಸಿ ಹೊರಟು ಹೋಗುವುದಾಗಿ ಹೇಳತೊಡಗಿದ್ದಾರೆ. ಭಾರತದ ನಾಯಕರೂ, ದೇಶಾಭಿಮಾನಿಗಳೂ ಮಾಡಿದ ತ್ಯಾಗ ಮತ್ತು ಸೇವೆಗಳೇ ಇದಕ್ಕೆ ಮುಖ್ಯ ಕಾರಣ.

ನಮ್ಮ ಸಂಸ್ಥಾನದಲ್ಲಿಯೂ ಈ ರೀತಿ ನಾಯಕರುಗಳ ಸಂಖ್ಯೆಯನ್ನು ಬೆಳೆಯದಿರಬೇಕೆಂಬುದೇ ನಮ್ಮ ಕೋರಿಕೆ. ಚರ್ಚಿಸುವ ವಿಷಯವೂ ಸಹ ನಿರ್ದಿಷ್ಟವಾಗಿರಬೇಕು. ಮೂಲಭೂತ ಅಂಶಗಳನ್ನು ಪುನರ್ವಿಮರ್ಶೆ ಮಾಡಲು ಅವಕಾಶವಿರಬಾರದು. ಹಿಂದೆ ಸರ್ಕಾರದವರಿಂದ ನೇಮಕವಾಗಿದ್ದ ಸುಧಾರಣಾ ಸಮಿತಿಯವರು ಮಾಡಿರುವ ಶಿಫಾರಸಿಗಿಂತಲೂ ಹಿಂದಕ್ಕೆ ಹೋಗಲಾಗದು. ಜವಾಬ್ದಾರಿ ಸರ್ಕಾರದ ಗುರಿಯನ್ನು ಘೋಷಿಸಬೇಕೆಂದು ಆ ಸಮಿತಿಯವರು ಸೂಚಿಸಿದ್ದರು. ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ವಿಚಾರಣಾ ಸಮಿತಿಯವರೂ ಸಹ ಅದೇ ಸಲಹೆಯನ್ನು ಕೊಟ್ಟಿದ್ದರು. ಇಂದು ಸಂಸ್ಥಾನ ಪ್ರಜೆಗಳೆಲ್ಲರೂ ಬೇಡುತ್ತಿರುವುದೂ ಸಹ ಇದೇ ಆಗಿರುತ್ತದೆ. ಇದನ್ನು ಈಡೇರಿಸಿ ಸಂಸ್ಥಾನದಲ್ಲಿ ಶಾಂತಿ ಸಮಾಧಾನಗಳನ್ನು ಸ್ಥಾಪಿಸಲು ದಿವಾನರು ಕೂಡಲೇ ಕಾರ್ಯಕ್ರಮ ಕೈಗೊಳ್ಳಲಿ ಎಂದು ಹಾರೈಸುತ್ತೇವೆ.

೧೦ ನಿಮಿಷದಲ್ಲಿ ಪದವೀದಾನ ಸಮಾರಂಭ

ಒರಿಸ್ಸಾ ಪ್ರಾಂತದ ಉತ್ಕಲ ವಿಶ್ವವಿದ್ಯಾಲಯವು ಕೇವಲ ೧೦ ನಿಮಿಷದಲ್ಲಿ ಕಳೆದ ಸೋಮವಾರ ತನ್ನ ಪದವೀದಾನ ಸಮಾರಂಭವನ್ನು ಪರಿಸಮಾಪ್ತಿಗೊಳಿಸಿತು. ೬೩ ಜನರ ಪೈಕಿ ಕೇವಲ ೪ ಮಂದಿ ಪದವೀಧರರು ಮಾತ್ರ ತಮ್ಮ ಪ್ರಶಸ್ತಿಗಳನ್ನು ಪಡೆದರು. ಇತರರು ಹಾಜರಿರಲಿಲ್ಲ. ಛಾನ್ಸಲರಾಗಲೀ, ಪ್ರೋ ಛಾನ್ಸಲರಾಗಲೀ ಬಂದಿರಲಿಲ್ಲ. ಈ ಸಮಾರಂಭವು ಕಳೆದ ನವಂಬರಿನಲ್ಲಿಯೇ ನಡೆಯಬೇಕಾಗಿತ್ತು. ಸೇನಾಪತಿ ಸರ್ ಕ್ಲಾಡ್ ಆಚಿನ್ ಲೆಕ್ ರವರು ಪದವೀಧರರಿಗೆ ಹಿತೋಪದೇಶ ಮಾಡುವರೆಂದು ತಿಳಿದು ಬಂದುದರಿಂದ ವಿದ್ಯಾರ್ಥಿಗಳು ಅದನ್ನು ಪ್ರತಿಭಟಿಸಿ ಬಹಿಷ್ಕರಿಸುವುದಾಗಿ ಸೂಚಿಸಿದ್ದರು. ಆದ್ದರಿಂದ ಅದನ್ನು ಮುಂದೆ ಹಾಕಲಾಗಿತ್ತು.

ಬರುವ ವರ್ಷ ಜೂನ್ ೨೧ಕ್ಕೆ ಅಧಿಕಾರ ವರ್ಗಾವಣೆ

೧೯೪೮ ನೇ ಜೂನ್ ತಿಂಗಳನಲ್ಲಿ ಭಾರತೀಯರಿಗೆ ಅಧಿಕಾರ ವರ್ಗಾವಣೆ ಮಾಡುವುದಾಗಿ ಬ್ರಿಟಿಷ್ ಪ್ರಧಾನಿ ಮಿ॥ ಅಟ್ಲೀಯವರು ಆಗಲೇ ಘೋಷಿಸಿದ್ದಾರೆ. ಜೂನ್ ೨೧ ನೇ ತಾರೀಖಿನ ದಿನ ಅಧಿಕಾರ ವರ್ಗಾವಣೆ ನಡೆಯುವುದೆಂದು ಟ್ರಿಬ್ಯೂನ್ ಪತ್ರಿಕೆಯ ಲಂಡನ್ ಬಾತ್ಮೀದಾರರು ಬರೆದಿರುತ್ತಾರೆ. ಈಗಿನ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ವಿಕ್ಟೋರಿಯಾ ಮಹಾರಾಣಿಯವರ ಮರಿಮಕ್ಕಳು. ಜೂನ್ ೨೧ಕ್ಕೆ ಅವರ ೪೮ ನೆಯ ವರ್ಷ ವರ್ಧಂತಿಯು ನಡೆಯುತ್ತದೆ. ಆ ದಿನವೇ ಭಾರತಕ್ಕೆ ಪೂರ್ಣ ಅಧಿಕಾರವನ್ನು ವಹಿಸಿಕೊಡಬೇಕೆಂದು ಅವರು ಪ್ರಧಾನಿಗಳೊಡನೆ ಒಪ್ಪಂದ ಮಾಡಿಕೊಂಡಿದ್ದಾರೆ-ಎಂದು ಅವರು ತಿಳಿಸಿರುವರು.

ಜಿಲ್ಲಾ ಬೋರ್ಡ್ ಚುನಾವಣೆ

೨೮-೪-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗೆಕಂಡ ಕಾಂಗ್ರೆಸ್ ಉಮೇದುವಾರರಿಗೇ ದಯವಿಟ್ಟು ಓಟು ಕೊಡಿ :-

ಹೆಚ್. ಲಿಂಗಪ್ಪ B Sc, LL B

ಹೆಚ್. ಎಂ. ನಾಗಪ್ಪ (ಹುಲ್ಲಹಳ್ಳಿ)

ಎಂ. ಲಿಂಗಣ್ಣ B. Sc, LL B

ಭಾರತಕ್ಕೆ ಡೊಮಿನಿಯನ್ ಸ್ಥಾನ

ಮುಸ್ಲಿಂ ಲೀಗಿನವರು ತಮ್ಮ ಪಾಕಿಸ್ತಾನ ಸಾಧನೆಯ ಹಟದಿಂದ ಹಿಮ್ಮೆಟ್ಟದಿರುವುದರಿಂದ ಬರುವ ವರ್ಷ ಜೂನ್ ತಿಂಗಳೊಳಗೆ ಭಾರತಕ್ಕೆ ಅಧಿಕಾರ ವರ್ಗಾವಣೆಯ ಕಾರ್ಯ ನಡೆಯುವುದಿಲ್ಲವೆಂದು ಬ್ರಿಟಿಷ್ ಸರ್ಕಾರವು ಭಾವಿಸಿರುವುದಾಗಿಯೂ, ಆದುದರಿಂದ ಸದ್ಯದಲ್ಲೇ ಈಗಿನ ತಾತ್ಕಾಲಿಕ ಸರ್ಕಾರವನ್ನು ಡೊಮಿನಿಯನ್ ಸರ್ಕಾರವೆಂದು ಭಾವಿಸಿ ಅದರಂತೆ ತಕ್ಕ ಬದಲಾವಣೆಯು ಆಗಬಹುದೆಂದೂ ವರದಿಯಾಗಿದೆ. ಭಾರತ ತಾತ್ಕಾಲಿಕ ಸರ್ಕಾರಕ್ಕೆ ಡೊಮಿನಿಯನ್ ಅಂತಸ್ತನ್ನು ಕೊಟ್ಟಿರುವುದಾಗಿ ಬ್ರಿಟಿಷ್ ಸರ್ಕಾರವು ಸದ್ಯದಲ್ಲೇ ಘೋಷಿಸುವುದೆಂದು ಊಹಿಸಲಾಗಿದೆ.

ಆಳ್ವಾರಿನಲ್ಲಿ ಗಲಭೆ

ಆಳ್ವಾರ್ ಸಂಸ್ಥಾನದ ಗಡಿ ಪ್ರದೇಶದಲ್ಲಿ ಗಲಭೆಕಾರರು ೬ ಹಳ್ಳಿಗಳನ್ನು ಸುಟ್ಟಿದ್ದಾರೆಂದು ವರದಿಯಾಗಿದೆ. ಮಿಲಿಟರಿ ಮತ್ತು ಪೋಲೀಸರು ಅಲ್ಲಿಗೆ ಹೋಗಿ ಆಯುಧಪಾಣಿಗಳಾಗಿದ್ದ ಪುಂಡರ ಮೇಲೆ ಗುಂಡನ್ನು ಹಾರಿಸಿ ಅವರನ್ನು ಓಡಿಸಿದರೆಂದೂ, ೪ ಮಂದಿ ದಸ್ತಗಿರಿಯಾಗಿರುವುದಾಗಿಯೂ ಗೊತ್ತಾಗಿದೆ.

ಕ್ರಯಕ್ಕಿವೆ

ಮೈಸೂರು ಸಿಟಿ ದೊಡ್ಡ ಕೆರೆ ಪಕ್ಕದಲ್ಲಿ "ಕೃಷ್ಣಾಗಾರ" ಎಂಬ ೩೧ ಎಕರೆ ತೋಟ ಇದು ಸ್ಟುಡಿಯೋ ಕಟ್ಟುವುದಕ್ಕೂ, ಡೈರಿ ಫಾರಂ ಮಾಡುವುದಕ್ಕೂ, ಬಾರಿ ತೋಟ ಮಾಡುವುದಕ್ಕೂ ಬಹಳ ಅನುಕೂಲವಾಗಿದೆ

ಡೋರ್ ನಂ ೨೮೭೭-೧ ಹಳ್ಳದಕೇರಿ ಮಹಡಿ ಮನೆ

ಡೋರ್ ನಂ ೯೫೦ ಸಿಮೆಂಟ್ ಬ್ಲಾಕ್ ಸಿಮೆಂಟ್ ಕಾಂಕ್ರೀಟ್ ತಾರಸಿ ಹೊಸ ಮನೆ.

ವಿವರಗಳಿಗೆ:—

ಆರ್. ಗುಂಡೂರಾವ್,

ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು.

Edited, printed and published by A. R. Nagarajan at the Sadhvi Press D. Subbiah Road, Mysore.

ವೈರ್ ಲೆಸ್ಸಿನಿಂದ ವಿಮಾನ ಹತೋಟಿ

ಬ್ರಿಟನ್ನಿನಲ್ಲಿ ಹೊಸದಾಗಿ ತಯಾರಾಗಿರುವ "ಸ್ಕ್ರೂಟ್" ರಾಕೆಟ್ ವಿಮಾನದ ವಿವರವು ಹೊರಬಿದ್ದಿದೆ. ಇದರ ಮೇಲೆ ಹತೋಟಿಯನ್ನು ವೈರ್ ಲೆಸ್ ಮುಖಾಂತರ ಹೊಂದಲಾಗುವುದು. ನೆಲದ ಮೇಲೆ ಚಾಲಕನು ಒಂದು ಕಡ್ಡಿಯನ್ನು ತಿರುಗಿಸಿದರೆ ವಿಮಾನವು ಆಗಸದಲ್ಲಿ ತನ್ನ ಸಂಚಾರದ ಮಾರ್ಗವನ್ನು ಬದಲಾಯಿಸುವುದೆಂದು ಹೇಳಲಾಗಿದೆ.

ನೌಖಾಲಿಯು ಫುಟ್ ಬಾಲ್ ನಂತೆ ಆಗದಿರಲಿ

ನನಗೆ ಬರುತ್ತಿರುವ ಅಧಿಕೃತ ವರದಿಗಳ ಪ್ರಕಾರ ನೌಖಾಲಿಯಲ್ಲಿ ಅಂತಹ ಭಾರಿ ದುರ್ಘಟನೆಗಳೇನೂ ನಡೆಯುತ್ತಿಲ್ಲ. ಅಲ್ಲಿನ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನರಿತಿದ್ದಾರೆ. ಆದರೆ ಆ ಪ್ರದೇಶವು ರಾಜಕೀಯ ವ್ಯಕ್ತಿಗಳ ಫುಟ್ ಬಾಲ್ ಆಗದಂತೆ ನಾವು ನೋಡಿಕೊಳ್ಳಬೇಕಾಗಿದೆ-ಎಂದು ಬಂಗಾಳದ ಪ್ರಧಾನಿ ಸುಹ್ರವರ್ದಿಯವರು ಹೇಳಿರುತ್ತಾರೆ.

ನ್ಯಾಯಾಂಗ ಸಚಿವರು ದೆಹಲಿಗೆ

ದೆಹಲಿಯಲ್ಲಿ ಇದೇ ೨೧ ಮತ್ತು ೨೨ ನೇ ತಾ॥ ಗಳಲ್ಲಿ ನಡೆಯುವ ೮ ನೆಯ ಲಾ ಮಿನಿಸ್ಟರ್ ಸಮ್ಮೇಳನದಲ್ಲಿ ಭಾಗ ವಹಿಸಲು ನ್ಯಾಯಾಂಗ ಸಚಿವರು ೧೮ ನೇ ತಾ॥ ದೆಹಲಿಗೆ ಪ್ರಯಾಣ ಮಾಡಿ ೨೪ ತಾ॥ ವಾಪಸು ಬರುವರು.

ವೈಸರಾಯ್ ಮತ್ತು ಪ್ರಾಂತೀಯ ಪ್ರಧಾನಿಗಳ ಭೇಟಿ

ಅಧಿಕಾರ ವರ್ಗಾವಣೆಯ ಬಗ್ಗೆ ಪ್ರಮುಖರ ಉದ್ದೇಶವನ್ನು ಅರಿಯುವ ಸಲುವಾಗಿ ಗವರ್ನರುಗಳ ಸಮ್ಮೇಳನದ ಅನಂತರ ವೈಸರಾಯರು ಪ್ರಾಂತೀಯ ಪ್ರಧಾನಿಗಳ ಸಮ್ಮೇಳನವನ್ನು ಕರೆಯಲಿರುವರೆಂದು ವರದಿಯಾಗಿದೆ.

ರಾಜಕಮಲ್

೧೩-೪-೪೭ ರಿಂದ ೯ ನೇ ವಾರ

1 ನೇ ಆಟ 6 ಕ್ಕೆ 2 ನೇ ಆಟ 9-15 ಕ್ಕೆ

ಶ್ರೀ ಕೃಷ್ಣಲೀಲಾ

ಪ್ರಭಾ (ಕನ್ನಡದಲ್ಲಿ)

ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಪರಿಪಾಲಿಸುವ ಸಲುವಾಗಿ ಪರಮಾತ್ಮನು ಅವತರಿಸಿ ತನ್ನ ಮಹಿಮೆಯನ್ನು ಅರುಹಿದ ಕಥಾ ವೈಖರಿ

ನಿಮಗೆ

ಸಂಗೀತ ವಾದ್ಯಗಳು ಬೇಕೇ?

ಹಾಗಾದರೆ

ಶ್ರೀ ಶಾರದ ಗ್ರ್ಯಾಂಡ್ ಮ್ಯೂಸಿಕಲ್ ಸ್ಟೋರ್ಸ್

ಅಶೋಕ ರೋಡ್, ಮೈಸೂರು.

ಇವರಲ್ಲಿ ವಿಚಾರಿಸಿ.

ಸಂಗೀತಕ್ಕೆ ಬೇಕಾದ ವಾದ್ಯಗಳು, ಪಿಟೀಲು, ವೀಣೆ, ತಂಬೂರಿ, ಹಾರ್ಮೋನಿಯಂ ಮತ್ತು ಇವಕ್ಕೆ ಬೇಕಾದ ತಂತಿಗಳೂ, ಇತರ ಸಂಗೀತದ ಸಾಮಾನುಗಳೂ ದೊರೆಯುತ್ತವೆ ಮತ್ತು ರಿಪೇರಿ ಸಹ ಮಾಡಲ್ಪಡುತ್ತದೆ.

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ

:— ನಮ್ಮಲ್ಲಿ ವಿಚಾರಿಸಿ, :—

ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್,

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,

ಅಶೋಕಾ ರಸ್ತೆ, ಮೈಸೂರು.

ಸ್ಥಾಪಿತ ೧೯೩೨ : : ಫೋನ್. ೪೧೧

ಕಂಟ್ರೋಲು ಬೆಲೆ! ಸುಸಮಯ

ಹೊಸ ಜವಳಿ

ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಬನಾರಸ್, ಕಂಚಿ, ಆರ್ನಿ, ಕಾಂಚೀಪುರಂ ಜರಿಯುಳ್ಳ ಸೀರೆಗಳೂ, ಕರಾಚಿ ಸೀರೆಗಳೂ, ನೂಲಿನ ಪ್ಲೇನಾ ದಮಯಂತಿ ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.

M. P. V., M. V ಭೋಜಯ್ಯ B A ಅಂಡ್ ಬ್ರದರ್ಸ್

ಬೊಂಬಾಯಿ ಆನಂದ ಭವನ ಹೋಟೆಲ್ ನ ಬಲಭಾಗದ ಕೊನೆ

ಜವಳಿ ಅಂಗಡಿ, ಮೈಸೂರು.

ಫೋ. ನಂ. ೨೪೨ ॥ ವಂದೇ ಮಾತರಂ ॥ ಬಿಡಿ ಪ್ರತಿ ೩ ಕಾಸು

ಸಂಪುಟ ೫] ಗುರುವಾರ ೧೭—೪—೪೭ [ಸಂಚಿಕೆ ೨೧೨

ಕೇಂದ್ರ ಸರ್ಕಾರ ಬಿಡಲು ಲೀಗಿನವರು ಸಿದ್ಧ

ರಾಜಕೀಯದಲ್ಲಿ ಎಂದಿಗೂ ಹಿಂಸೆಯನ್ನು ಉಪಯೋಗಿಸಬಾರದು

ಗಾಂಧೀ-ಜಿನ್ನಾ ಜಂಟಿ ಹೇಳಿಕೆ

ದೇಶದಾದ್ಯಂತವೂ ಘಟಿಸುತ್ತಿರುವ ಹಿಂಸಾಕೃತ್ಯಗಳನ್ನು ಖಂಡಿಸಿ, ವೈಸರಾಯರ ಕೋರಿಕೆಯಂತೆ ಮಹಾತ್ಮ ಗಾಂಧಿಯವರೂ, ಮಿ|| ಜಿನ್ನಾ ರವರೂ ಈ ಕೆಳಕಂಡ ಜಂಟಿ ಹೇಳಿಕೆಯನ್ನಿತ್ತಿದ್ದಾರೆ:—

ಈಚೆಗೆ ನಡೆದ ಹಿಂಸಾಕೃತ್ಯಗಳು ... ಕೃತ್ಯಗಳು ... ದರ್ಶನೆಗಳನ್ನು ... ಯಾರು ಯಾರ ಮೇಲೆ ಬಿದ್ದರೂ, ಯಾರು ... ಕೃತ್ಯಗಳಿಗೆ ಬಲಿಯಾಗುವರು ... ಸಾಧನೆಗಾಗಿ ... ಪ್ರಯೋಗಗಳನ್ನು ... ನಾವು ... ಮತ್ತು ... ದರ್ಶನೆಗಳನ್ನು ... ಕೃತ್ಯಗಳಿಗೆ ಉತ್ತೇಜನ ... ಭಾಷಣಗಳನ್ನು ... ಲೇಖನಗಳನ್ನು ... ಬರೆಯುವುದನ್ನಾಗಲೀ ಮಾಡಬಾರದೆಂದು ... ಎಲ್ಲ ... ಜನಗಳಲ್ಲಿಯೂ ನಮ್ಮ ವಿನಂತಿ.

ತ್ಯಾಗರಾಜ ಭಾಗವತರ ಆಪೀಲು

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆಯಲ್ಲಿ ಶಿಕ್ಷೆಗೆ ಗುರಿಯಾಗಿರುವ ಪ್ರಸಿದ್ಧ ಸಿನಿಮಾ ನಟರಾದ ಎನ್. ಎಸ್. ಕೃಷ್ಣನ್ ಮತ್ತು ಎಂ. ಕೆ. ತ್ಯಾಗರಾಜ ಭಾಗವತರ ಅಪೀಲಿನ ವಿಚಾರಣೆಯು ಏಪ್ರಿಲ್ ... ನೇ ತಾ|| ಮದರಾಸ್ ಹೈಕೋರ್ಟಿನಲ್ಲಿ ಆರಂಭವಾಗುವುದು.

ನವರಾತ್ರೋತ್ಸವ

... ದಲ್ಲಿರುವ ಶ್ರೀ|| ... ದೇವಾಲಯದಲ್ಲಿ ... ರಾಮೋತ್ಸವದ ಅಂಗವಾಗಿ ... ಶ್ರೀಮನ್ಮಹಾರಾಜರವರ ... ಶ್ರೀ|| ಟಿ. ... ರವರ ಅಧ್ಯಕ್ಷತೆಯಲ್ಲಿ ವೈಭವದಿಂದ ... ಗಳು, ಸ್ವಾಗತ ಭಾಷಣ, ... ಶ್ರೀ|| ... ಶಾಸ್ತ್ರಿಗಳಿಂದ ಸಂಗೀತ, ಅಧ್ಯಕ್ಷರ ಭಾಷಣ ಮಂಗಳಾರತಿ ಪ್ರಸಾದ ವಿನಿಯೋಗಗಳು ನಡೆದುವು.

ತಾತ್ಕಾಲಿಕ ಸರ್ಕಾರವನ್ನು ಲೀಗಿನವರು ತ್ಯಜಿಸುವರೇ?

ವೈಸರಾಯ ... ಜಿನ್ನಾ ರವರ ... ತನ್ನ ಅಭಿಪ್ರಾಯ ... ವನ್ನು ಅವರಿಗೆ ತಿಳಿಸುತ್ತಾರೆಂದು ... ಬ್ರಿಟಿಷ್ ನಿಯೋಗದವರ ... ಯೋಜನೆ ... ಕೇಂದ್ರ ಸರ್ಕಾರದ ... ಅಂಗೀಕರಿಸುವುದಿಲ್ಲ ... ಪ್ರಾಂತಗಳ ... ದೇಶಗಳನ್ನು ... ಲೀಗ್ ... ಪ್ರೇರಿತವಾಗಿಯೂ ... ಜನಸಂಖ್ಯೆಯನ್ನು ... ಕೇಂದ್ರ ಸರ್ಕಾರವನ್ನು ಲೀಗಿನವರು ಬಿಡಲು ... ಸಿದ್ಧರಾಗಿರುತ್ತಾರೆ.

ಕೇಂದ್ರ ಸರ್ಕಾರವು ... ಮಾಡಬೇಕೆಂದು ವೈಸರಾಯರು ... ಸಲಹೆಯನ್ನು ... ಸ್ವೀಕರಿಸಿದರೆಂದು ತಿಳಿದು ಬಂದಿದೆ.

ಪುರಜನರ ಸಭೆ

... ಜನ ಪೌರಸಭಾ ಸದಸ್ಯರು ... ಮೇಲೆ ... ಗಳ ವಿಷಯದಲ್ಲಿ ಮಹಾಜನರ ಅಭಿಪ್ರಾಯ ... ಸಂಜೆ ... ಗಂಟೆಗೆ ... ಪುರಜನರ ಸಭೆ ... ಅಧ್ಯಕ್ಷತೆಯಲ್ಲಿ ಸಭೆಯನ್ನು ಏರ್ಪಡಿಸಿದೆ. ಸದಸ್ಯರೆಲ್ಲರೂ ... ಸಭೆಯಲ್ಲಿ ಭಾಗವಹಿಸಬೇಕೆಂದು ... ಎ. ಎನ್. ... ಗೋಪಾಲ್, ಬಿ. ಎಸ್. ... ಪ್ರಕಟಣಕಾರರುಗಳು ಪ್ರಾರ್ಥಿಸಿರುತ್ತಾರೆ.

...ಪ್ರಕಾಶ ನಿಧಿ

... ಮೈಸೂರು ೧೭. ... ಪ್ರವಾಸವನ್ನು ಕೈಗೊಂಡಿರುವ ... ದೇಶಭಕ್ತರೂ ಮತ್ತು ... ಮುಂದಾಳುಗಳೂ ಆದ ... ನಾರಾಯಣರವರು ರಾಜಧಾನಿಗೆ ... ನೇ ತಾ|| ಆಗಮಿಸುತ್ತಾರೆ ... ದೇಶ ಪ್ರವಾಸವನ್ನು ಕೈಗೊಂಡ ... ಇದೇ ಮೊದಲು ... ಅದರ ... ಒಂದು ನಿಧಿ ... ಸಬೇಕೆಂದು ಮೈಸೂರು ನಗರ ... ಸಮಿತಿಯವರು ತೀರ್ಮಾನಿಸಿದೆ. ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದೂ ... ಕಾಂಗ್ರೆಸ್ ... ಸ್ವಾಗತ ಸಮಿತಿಯವರಿಗೆ ... ಸ್ವಾಗತ ಸಮಿತಿಯ ... ಶ್ರೀ ಎಸ್. ಚನ್ನಯ್ಯನವರು ... ತ್ತಾರೆ.

...ತಪ್ಪಿಸಿಕೊಂಡಿದ್ದಾನೆ

... ಸಂಸ್ಕೃತ ಪಾಠಶಾಲೆ ... ಪ್ರೊ|| ಶ್ರೀ ಕೃಷ್ಣ ... ಮಗ ಅಲ್ಲೇ ವ್ಯಾಸಂಗಮಾಡುವ ... ವಿದ್ಯಾರ್ಥಿ ಟಿ. ಕೆ. ವೈದ್ಯಲಿಂಗ ... ಏಪ್ರಿಲ್ ೧೧ ನೇ ತಾ|| ... ತಪ್ಪಿಸಿಕೊಂಡು ಹೋಗಿರುವನು ... ಮೇಲೆ ಹೇಳಿದವರಿಗೆ ಸಹಾಯ ಮಾಡಬೇಕೆಂದು ಕೋರಿದೆ.

ಹರಿಕಥೆಗಳು

... ಅಗ್ರಹಾರದ ... ವೆಂಕಟರಮಣ ಸ್ವಾಮಿಯ ... ದಲ್ಲಿ ಏಕಾದಶಿ ಪ್ರಯುಕ್ತ ಈ ... ಘಂಟೆಗೆ ವ್ಯಾಖ್ಯಾತರಿಂದ ... ಭಟ್ಟಾಚಾರ್ಯ ... ಶ್ರೀ|| ... ನಾರಾಯಣಾಚಾರ್ಯ ... ಕೃಷ್ಣಲೀಲಾ ಎಂಬ ಹರಿಕಥೆಯು ... ಸರ್ವರಿಗೂ ಆಹ್ವಾನ.

... ಅಗ್ರಹಾರದ ... ಮಂದಿರದಲ್ಲಿ ... ದಿನ ... ಶ್ರೀ|| ... ರಾಮಾನುಜ ಎಂಬ ಹರಿಕಥೆ ನಡೆಯುತ್ತದೆ.

ಪದ್ಮಶಾಲಿ ಮಹಾ ಸಭೆ

... ವಾರ್ಷಿಕ ಸಭೆ ... ೨೦ ನೇ ತಾ|| ಭಾನುವಾರ ... ಘಂಟೆಗೆ ಬೆಂಗಳೂರು ... ಸ್ಕೂಲಿನಲ್ಲಿ ... ಸಂಘಗಳ ಗೌರವ ಸಂಚಾಲಕರಾದ ಶ್ರೀ ಹೆಚ್. ವಿ. ... ರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ ... ಬರಬೇಕೆಂದು ... ಕಾರ್ಯದರ್ಶಿ ಶ್ರೀ ಎ. ನರಸಿಂಹಯ್ಯನವರು ಪ್ರಾರ್ಥಿಸುತ್ತಾರೆ.

...ಜುಲ್ಮಾನೆ

... ದಿಂದ ... ಲಕ್ಷ್ಮೀಪುರಂ ... ಮೋಟಾರು ... ಗಾಡಿ ... ಮೇಲೆ ... ದಿನದ ... ಜುಲ್ಮಾನೆ ... ದಿನಗಳ ಸಾದಾ ಶಿಕ್ಷೆ ವಿಧಿಸಿದರು.

ಕಾಂಗ್ರೆಸ್ ಅಧ್ಯಕ್ಷರಿಗೆ ದಿವಾನರ ಆಹ್ವಾನ

ಸ್ವಂ. ಸು. ಪ್ರೋ.] ಬೆಂಗಳೂರು ೧೭.

ಬರುವ ... ನೇ ತಾ|| ಗುರುವಾರ ... ರಾಜಕೀಯ ಸುಧಾರಣೆಗಳ ವಿಷಯದಲ್ಲಿ ಸಲಹೆಗಳನ್ನು ನೀಡಲು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ... ಇತರ ಸಹಪಾಠಿಗಳೊಡನೆ ಬಂದು ತಮ್ಮನ್ನು ಭೇಟಿ ಮಾಡಬೇಕೆಂದು ಪ್ರಾರ್ಥಿಸಿ ದಿವಾನರು ಅವರಿಗೆ ಪತ್ರ ಬರೆದಿರುವರೆಂದು ತಿಳಿದು ಬಂದಿದೆ.

... ನಲ್ಲಿ ನಡೆಯುವ ಸಂಸ್ಥಾನಗಳ ಪ್ರಜಾ ಸಮ್ಮೇಳನಕ್ಕಾಗಿ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ಈ ದಿನ ಬೆಳಿಗ್ಗೆ ಇಲ್ಲಿಂದ ವಿಮಾನದಲ್ಲಿ ತೆರಳಿದರು.

* ಗಲಭೆಗಳ ಸಂಬಂಧದಲ್ಲಿ ... ಶಾಸನದ ಪ್ರಕಾರ ಬಂಧನದಲ್ಲಿಟ್ಟಿದ್ದ ೧೧ ಜನರನ್ನು ಸೆಂಟ್ರಲ್ ಜೈಲಿನಿಂದ ಬಿಡುಗಡೆ ಮಾಡಲಾಯಿತು.

* ಮಧ್ಯ ಪ್ರಾಂತ್ಯದ ಮಂತ್ರಿಗಳಾದ ಶ್ರೀ ದ್ವಾರಕಾ ಪ್ರಸಾದ ಮಿಶ್ರರವರು ಆ ... ಈ ದಿನ ... ದೇಶೀಯ ವಿದ್ಯಾಶಾಲೆಯ ... ನಡೆಯುವ ... ಭಾರತ ... ಮತ್ತು ಸ್ವದೇಶೀ ವಸ್ತು ಪ್ರದರ್ಶನದ ... ಅವರು ಈ ದಿನ ಸಂಜೆ ... ವಿಮಾನದಲ್ಲಿ ... ಪ್ರಯಾಣ ಬೆಳೆಸುವರು.

ಚನ್ನಪಟ್ಟಣದ ಗಲಭೆ ಮೊಕದ್ದಮೆ

ಸ್ವಂ. ಸು.] ಬೆಂಗಳೂರು ೧೭.

ಚನ್ನಪಟ್ಟಣದ ಗಲಭೆಗಳ ಸಂಬಂಧದಲ್ಲಿ ... ಲಿಂಗಡಯ್ಯನ್ನು ... ಲೂಟಿ ಮಾಡಿ ... ಗಳನ್ನು ... ಪೋಲೀಸ್ ... ಮೇಲೆ ... ಜನಗಳ ಮೇಲೆ ಹೂಡಲಾಗಿರುವ ಮೊಕದ್ದಮೆಯ ... ೨೧ ನೇ ತಾ|| ಗೆ ... ಮುಂದೆ ... ವೇ ... ಮುಂದೂಡಲಾಗಿದೆ.

... ಭಾಗವಹಿಸಿದ್ದರೆಂಬ ಆಪಾದನೆಯ ಮೇಲೆ ೮೮ ಮಂದಿ ಮುಸ್ಲಿಮರ ಮೇಲೆ ಹೂಡಲಾಗಿರುವ ಮೊಕದ್ದಮೆಯ ... ವಿಚಾರಣೆಗೆ ಬಂದು ಇದೇ ೩೦ ನೇ ತಾರೀಖಿಗೆ ಮುಂದೆ ಹಾಕಲ್ಪಟ್ಟಿದೆ.

ಪುಸ್ತಕಕ್ಕೆ ಮುಟ್ಟುಗೋಲು

... ಶ್ರೀ ... ಎಂ. ... ಎಂಬುವರು ಬರೆದಿರುವ "... " ಎಂಬ ಪುಸ್ತಕದ ಪ್ರತಿಗಳನ್ನು ... ಮುಟ್ಟುಗೋಲು ಹಾಕಲಾಗಿದೆ.

ಕೊಚ್ಚಿಯಲ್ಲಿ ಉಪ್ಪಿನ ತೆರಿಗೆ ರದ್ದು

ಇದೇ ೧೪ ನೇ ತಾ|| ನಿಂದ ಕೊಚ್ಚಿ ಸಂಸ್ಥಾನದಲ್ಲಿ ಉಪ್ಪಿನ ತೆರಿಗೆಯನ್ನು ರದ್ದು ಮಾಡಿರುವುದಾಗಿ ಅಲ್ಲಿನ ಸರ್ಕಾರವು ಪ್ರಕಟಿಸಿದೆ. ೧೪ ನೇ ತಾರೀಖಿನ ದಿನದ ... ಉಪ್ಪಿನ ಮೇಲೆ ... ತೆರಿಗೆಯನ್ನು ... ವಿಧಿಸಲಾಗಿದೆ.

ಸಾಧ್ವಿ

ತಾ॥ ೧೭-೪-೪೭ ಗುರುವಾರ

ಗಾಂಧಿ-ಜಿನ್ನಾ ಹೇಳಿಕೆ

ರಾಜಕೀಯ ವಿಚಾರಗಳಲ್ಲಿ ಕಾಂಗ್ರೆಸ್ಸಿಗೂ, ಮುಸ್ಲಿಂ ಲೀಗಿಗೂ ಒಡಂಬಡಿಕೆಯಾಗದಿದ್ದರೂ, ಭೂತದಯಾ ಪಶ್ಚಾತ್ತಾಪದಲ್ಲಿ ಉಭಯರೂ ಏಕಾಭಿಪ್ರಾಯವುಳ್ಳವರಾಗಿರುವುದು ಒಂದು ಶುಭ ಸೂಚನೆಯೇ ಸರಿ. ದೌರ್ಜನ್ಯ ಕೃತ್ಯಗಳನ್ನು ಎಲ್ಲರೂ ಖಂಡಿಸುತ್ತಿರುವರಾದರೂ, ಅದನ್ನು ತಡೆಗಟ್ಟಲು ಸಂಯುಕ್ತ ಕಾರ್ಯಕ್ರಮವನ್ನು ಇದುವರೆಗೆ ಯಾರೂ ಕೈಗೊಂಡಿರಲಿಲ್ಲ. ದೇಶದಲ್ಲಿ ನಡೆಯುತ್ತಿರುವ ಕೋಮು ವಾರು

[illegible] ಸರ್ಕಾರದ ಸನ್ನದ್ಧ [illegible] ಈ ಅಗ್ನಿಜ್ವಾಲೆಯನ್ನು ಆರಿಸುವುದು ಎಲ್ಲಕ್ಕಿಂತ [illegible] ನಾಯಕರುಗಳು [illegible]

ಮೊನ್ನೆ ವೈಸರಾಯರವರ ಬಂಗಲೆಯಲ್ಲಿ ನಡೆಸಿದ ಮಾತುಕತೆಯಲ್ಲಿ [illegible] ಗಾಂಧೀಜಿ [illegible] ಜಿನ್ನಾ [illegible] ಹೇಳಿಕೆಯೊಂದನ್ನು [illegible] ರಾಜಕೀಯ [illegible] ಸಾಧನೆಗಾಗಿ [illegible] ಕೊಡಬಾರದೆಂದು [illegible] ಮನವಿ [illegible] ಹೇಳುತ್ತಾರೆ.

ಈ ಹೇಳಿಕೆಯು [illegible] ಅನುಸರಿಸಿ [illegible] ದೇಶದ [illegible] ಸ್ವಾಗತಿಸುವರು. [illegible] ಹಿಂಸಾಕೃತ್ಯಗಳ [illegible] ಹೇಳಿಕೆಯು [illegible] ನೋಡಬೇಕಾಗಿದೆ.

ಇಂದು [illegible] ಸ್ವಾರ್ಥಸಾಧನೆಗಾಗಿ [illegible] ಉಪಯೋಗಿಸಲು [illegible] ಜನಸಾಮಾನ್ಯ [illegible] ಗಾಂಧಿ [illegible] ಜಿನ್ನಾ [illegible] ಪರಿಣಾಮ [illegible]

[illegible] ಸ್ವಾತಂತ್ರ್ಯ [illegible] ಮುಸ್ಲಿಂ [illegible] ಭಾರತಕ್ಕೆ [illegible]

ಭೋಪಾಲ್ ನವಾಬರ ರಾಜೀನಾಮೆಯೇ?

ನರೇಂದ್ರ ಮಂಡಲದ ಸದಸ್ಯರುಗಳಲ್ಲಿ ಬಲವಾದ ಭಿನ್ನಾಭಿಪ್ರಾಯವಿರುವುದರಿಂದ ಭೋಪಾಲಿನ ನವಾಬರು ನರೇಂದ್ರ ಮಂಡಲದ ಛಾನ್ಸಲರ್ ಪದವಿಗೆ ರಾಜೀನಾಮೆ ಕೊಡುವರೆಂದು ಹೇಳಲಾಗಿದೆ.

ಪುಂಡರ ಹಾವಳಿ

ಡೇರಾ ಇಸ್ಮೇಲ್ ಖಾನಿನ ಅನೇಕ ಅಂಗಡಿಗಳು, ಸಿನಿಮಾ ಮಂದಿರ, ಪುರಭವನ, ಕಾಲೇಜುಗಳಿಗೆ ಪುಂಡರು ಬೆಂಕಿಯಿಡುತ್ತಿದ್ದಾರೆ. ಮನೆಗಳಿಂದ ಆಗಾಗ್ಗೆ ಗುಂಡಿನ ಸುರಿಮಳೆಯನ್ನು ಸುರಿಸುತ್ತಿದ್ದಾರೆ. ಪರಿಸ್ಥಿತಿ ಬಿಕ್ಕಟ್ಟಿನಲ್ಲಿದೆ.

ವಿದ್ಯಾಭ್ಯಾಸ ಸಮ್ಮೇಳನ

ತಾತ್ಕಾಲಿಕ ಸರ್ಕಾರದ ವಿದ್ಯಾ ಸಚಿವ ಮೌಲಾನಾ ಆಜಾದರು ಇದೇ ೨೨ ಮತ್ತು ೨೪ ನೇ ತಾ॥ ಗಳಲ್ಲಿ ದಿಲ್ಲಿಯಲ್ಲಿ ವಿದ್ಯಾಭ್ಯಾಸದ ಸಮ್ಮೇಳನವೊಂದನ್ನು ಕರೆಯುವರೆಂದು ಹೇಳಲಾಗಿದೆ. ಇದರಲ್ಲಿ ಪ್ರಾಂತೀಯ ಮಂತ್ರಿಗಳೂ, ವಿಶ್ವವಿದ್ಯಾಲಯಗಳ ವೈಸ್‌ಛಾನ್ಸಲರುಗಳೂ, ಪಾಲೊಂಡಿನ ಬಿಷಪ್ಪರೂ, ರಾಜಕುಮಾರಿ ಅಮೃತ ಕೌರವರೂ, ಶ್ರೀಮತಿ ರೇಣುಕಾ ರಾಯರವರೂ ಮತ್ತು ಡಾ॥ ಜಕೀರ್ ಹುಸೇನರವರೂ ಭಾಗವಹಿಸುವರು. ಇದರಲ್ಲಿ ವಿದ್ಯಾಭ್ಯಾಸದ ಸಾರ್ಜೆಂಟ್ ಯೋಜನೆಯ ಶಿಫಾರಸುಗಳನ್ನು ಪರಿಶೀಲಿಸುವರು ಮತ್ತು ವಿದ್ಯಾಭ್ಯಾಸದ ಏಳಿಗೆಗೆ ಅವಶ್ಯಕವಾದ ಅಂಶಗಳನ್ನು ಪರ್ಯಾಲೋಚಿಸುವರು.

[illegible] ವರ್ಗಾಯಿಸಿ ಕೊಡುವ ಮಹಾಕಾರ್ಯ ಸಾಧನೆಯಲ್ಲಿ ಇನ್ನೂ ಅನೇಕ ಘಟ್ಟಗಳನ್ನು ಮುಟ್ಟಬೇಕಾಗಿರುವುದು. ಆದರೆ ಅತ್ಯಂತ ಜರೂರಾಗಿ ಆಗಬೇಕಾಗಿರುವ ಶಾಂತಿಪಾಲನೆಯ ಕಾರ್ಯದಲ್ಲಿ ಅವರು ಪ್ರಮುಖ್ಯ ಘಟ್ಟವನ್ನು ಮುಟ್ಟಿ ದೊಡ್ಡ ಕಾರ್ಯಸಾಧನೆಯನ್ನೇ ಮಾಡಿರುವರೆಂದು ಹೇಳಬಹುದು. ಭರತಖಂಡಕ್ಕೇ ಅಲ್ಲದೆ ಇಡೀ ವಿಶ್ವಕ್ಕೆಲ್ಲಾ ಅಹಿಂಸಾ ಧರ್ಮದ ಆದರ್ಶ ಮೂರ್ತಿಯಾದ ಮಹಾತ್ಮ ಗಾಂಧಿಯವರಿಂದಲೂ, ಭರತಖಂಡದ ರಾಜಕೀಯ ಬಿಕ್ಕಟ್ಟಿನಲ್ಲಿ ಪ್ರಧಾನ ಸೂತ್ರಧಾರಿಗಳಾಗಿರುವ ಮಿ॥ ಜಿನ್ನಾರವರಿಂದಲೂ ಒಂದು ಜಂಟಿ ಹೇಳಿಕೆಯನ್ನು ಪಡೆಯುವುದು ದೊಡ್ಡ ಸಾಧನೆಯೇ ಸರಿ. ಈ ಹೇಳಿಕೆಯು ಸಂಪೂರ್ಣ ಪರಿಣಾಮಕಾರಿಯಾಗಿ ಮುಂದೆ ರಚನೆಯಾಗಲಿರುವ ಭಾರತ ರಾಜ್ಯಾಂಗ ವ್ಯವಸ್ಥೆಗೆ ಅಸ್ತಿಭಾರವಾಗಲೆಂದು ಹಾರೈಸೋಣ.

ಜಿಲ್ಲಾ ಬೋರ್ಡು ಚುನಾವಣೆ

೨೧-೪-೪೭ ನೇ ಸೋಮವಾರ ನಂಜನಗೂಡು ತಾಲ್ಲೂಕಿನ ಈ ಕೆಳಗಿನ ಕಾಂಗ್ರೆಸ್ ಉಮೇದುವಾರರಿಗೇ ದಯವಿಟ್ಟು ಓಟು ಕೊಡಿ:-

ಹೆಚ್. ಲಿಂಗಪ್ಪ B. Sc., LL.B.

ಹೆಚ್. ಎಂ. ನಾಗಪ್ಪ (ಹುಲ್ಲಹಳ್ಳಿ)

ಎಂ. ಲಿಂಗಣ್ಣ B. Sc., LL.B.

ವಿಮಾನದಿಂದ ಬಿತ್ತನೆ

ಇತ್ತೀಚೆಗೆ ಬ್ರಿಟನ್ನಿನಲ್ಲಿ ಪ್ರವಾಹದಿಂದ ಬಿತ್ತನೆ ಕೆಲಸಗಳಿಗೆ ಉಂಟಾದ ತೊಂದರೆಯನ್ನು ನಿವಾರಿಸಲು ವಿಶಾಲವಾದ ಪ್ರದೇಶಗಳ ಮೇಲೆ ವಿಮಾನದಿಂದ ಬಿತ್ತನೆಯನ್ನು ಮಾಡುವ ಯೋಜನೆಗೆ ವ್ಯವಸಾಯದ ಇಲಾಖೆಯವರು ಒಪ್ಪಿಗೆ ಕೊಡಲಿರುವರೆಂದು ವರದಿಯಾಗಿದೆ. ಟೌಂಕಿನ್ಸ್ ಎಂಬ ರೈತನು ತನ್ನ ೫೦ ಎಕರೆ ಜಮೀನಿನಲ್ಲಿ ಈ ರೀತಿ ಮಾಡಿದ ಪ್ರಯೋಗವನ್ನು ಪರಿಶೀಲಿಸಿ ಅವರು ಮೆಚ್ಚಿದರೆಂದು ಹೇಳಲಾಗಿದೆ.

ಬೊಂಬಾಯಿನ ಮಾಜಿ ಸಚಿವರಿಗೆ ಮೈಸೂರಿನಲ್ಲಿ ಹುದ್ದೆ?

ಬೊಂಬಾಯಿನ ಮಾಜಿ ಶಿಕ್ಷಣ ಸಚಿವರಾದ ಸರ್ ಸಿದ್ದಪ್ಪ ತೋಟಪ್ಪ ಕಂಬಳಿಯವರು ಮೈಸೂರು ಸಂಸ್ಥಾನದಲ್ಲಿ ಒಂದು ದೊಡ್ಡ ಅಧಿಕಾರವನ್ನು ಹೊಂದಬಹುದೆಂದು ವರದಿಯಾಗಿದೆ. ಅವರೂ, ಮೈಸೂರಿನ ದಿವಾನರಾದ ಸರ್ ಆರ್ಕಾಟರೂ ಹುಬ್ಬಳ್ಳಿಯಿಂದ ಹರಿಹರದ ವರೆಗೆ ಒಂದೇ ಗಾಡಿಯಲ್ಲೇ ಪ್ರಯಾಣ ಮಾಡಿ, ಅನೇಕ ವಿಷಯಗಳಲ್ಲಿ ಮಾತುಕತೆ ನಡೆಸಿದರೆಂದು ಹೇಳಲಾಗಿದೆ.

ರಾಜರುಗಳಿಗೆ ಬರೋಡದ ಆದರ್ಶ

ಬರೋಡಾ ಮಹಾರಾಜರ ಈಗಿನ ನೀತಿ ಆದರ್ಶಪ್ರಾಯವಾಗಿದೆ. ಭಾರತದ ಎಲ್ಲ ಸಂಸ್ಥಾನಾಧಿಪರೂ ಅವರ ಮೇಲ್ಪಂಕ್ತಿಯನ್ನು ಅನುಸರಿಸಬೇಕು. ಪ್ರಜಾಹಿತ ದೃಷ್ಟಿಯಿಂದ ರಾಜರುಗಳೂ, ಪ್ರಜೆಗಳೂ ಒಂದಾಗುವುದು ಅತ್ಯಗತ್ಯ-ಎಂದು ಸರ್ದಾರ್ ಪಟೇಲರು ಒರೋಡದಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿರುವರು.

ಕಡ್ಡಾಯದ ಮಿಲಿಟರಿ ಶಿಕ್ಷಣ

ಶಾಲೆಗಳಲ್ಲಿ ಕಡ್ಡಾಯದ ವ್ಯಾಯಾಮ ಶಿಕ್ಷಣ ಮತ್ತು ಕಾಲೇಜುಗಳಲ್ಲಿ ಬಲವಂತದ ಮಿಲಿಟರಿ ಶಿಕ್ಷಣವನ್ನು ಇದೇ ಜುಲೈ ತಿಂಗಳಿನಿಂದ ಮಧ್ಯ ಪ್ರಾಂತ್ಯದಲ್ಲಿ ಜಾರಿಗೆ ತರುವುದಾಗಿ ಅಲ್ಲಿನ ವಿದ್ಯಾ ಸಚಿವರಾದ ಶ್ರೀ ಗೋಖಲೆಯವರು ಹೇಳಿರುವರು.

RAJKAMAL

Morning Shows from 18-1-47 for 4 days daily at 10-30

The Phantom Speaks

The ace of shockers—a spine chiller of murder and revenge with a dead criminal taking possesion of living mind.

Edited, printed and published by A. R. Nagarajan at the Sadhvi Press D. Subbiah Road, Mysore.

ಕೊಚ್ಚಿ ಶಾಸನ ಸಭೆಗೆ ಚುನಾಯಿತ ಅಧ್ಯಕ್ಷರು

ಕೊಚ್ಚಿ ಸಂಸ್ಥಾನದ ಶಾಸನ ಸಭೆಯು ಚುನಾಯಿತ ಅಧ್ಯಕ್ಷರನ್ನು ಹೊಂದುವ ಹಕ್ಕನ್ನು ದೊರಕಿಸಿಕೊಂಡಿದೆ. ಆ ಸ್ಥಾನಕ್ಕೆ ಚುನಾಯಿತ ಪ್ರತಿನಿಧಿಯು ಬಂದುದು ಇದೇ ಮೊದಲನೆಯ ಬಾರಿ. ಮಿ॥ ಎಂ. ಎಂ. ಪೈಲೀ ಮತ್ತು ಮಿ॥ ಟಿ. ಕೆ. ನಾಯರ್ ರವರುಗಳು ಉಮೇದುವಾರರಾಗಿದ್ದು ಮೊದಲನೆಯವರು ೨೭ ಓಟುಗಳನ್ನು ಪಡೆದು ಜಯಶೀಲರಾದರು.

ಗಂಟಲಿನಲ್ಲಿ ಮೀನು ಸಿಕ್ಕಿ ಮರಣ

ಬೀರ್ ಭೂಮಿನ ಬೆಸ್ತನೊಬ್ಬನು ಕೆರೆಯ ಬಳಿ ಒಂದು ಮೀನನ್ನು ಹಲ್ಲಿನಲ್ಲಿ ಕಚ್ಚಿಕೊಂಡು ಉಳಿದವುಗಳಿಗಾಗಿ ಹುಡುಕುತ್ತಿದ್ದಾಗ ಅದು ಗಂಟಲೊಳಕ್ಕೆ ಜಾರಿ, ಒಳಗೆ ಹೋಗದೆ, ಹೊರಕ್ಕೂ ಬರದೆ ಅಲ್ಲಿಯೇ ಸಿಕ್ಕಿಕೊಂಡಿತು. ಅದನ್ನು ಈಚೆಗೆ ತೆಗೆಯಲು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗಿ ಅತನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿ ಆಪರೇಷನ್ ಮೂಲಕ ಮಾಡಿದ ಪ್ರಯತ್ನವೂ ವಿಫಲವಾಗಿ ಅತನು ಸತ್ತನೆಂದು ವರದಿಯಾಗಿದೆ.

ಪ್ರದೋಷ ಸಂಗೀತ

ಕೃಷ್ಣರಾಜ ಮೊಹಲ್ಲಾ ನಾರಾ ಬೀದಿಯಲ್ಲಿರುವ ದೊಡ್ಡರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಕುಮಾರಿ ಪದ್ಮಾವತಮ್ಮನವರ ಸಂಗೀತವನ್ನು ಏರ್ಪಡಿಸಿರುತ್ತದೆ.

ರಾಜಕಮಲ್

೧೮-೪-೪೭ ರಿಂದ ೧೧ನೇ ವಾರ

1 ನೇ ಆಟ 6 ಕ್ಕೆ 2 ನೇ ಆಟ 9-15 ಕ್ಕೆ

ಶ್ರೀ ಕೃಷ್ಣಲೀಲಾ (ಕನ್ನಡದಲ್ಲಿ)

ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಪರಿಪಾಲಿಸುವ ಸಲುವಾಗಿ ಪರಮಾತ್ಮನು ಅವತರಿಸಿ ತನ್ನ ಮಹಿಮೆಯನ್ನು ತೋರಿಸಿದ ಕಥಾ ವೈಭವ

ಶ್ರೀ ಗಣೇಶಾ ಟಾಕೀಸ್

18-4-47 ರಿಂದ 6 ನೇ ವಾರ

ಪ್ರತಿ ದಿನ 2 ಆಟಗಳು

ಹರಿಶ್ಚಂದ್ರ (ಕನ್ನಡ)

Morning Shows on 18, 19, 20 and 21 at 10-30 a. m.

The Wolfman

Starring: CLAUDE RAINS LON CHANEY Jr. BELA LUGOSI.

ಹುಬ್ಬಳ್ಳಿ, ಧಾರವಾಡ, ಪೂನಾ, ಸಾಂಗ್ಲಿ ಸೀರೆಗಳು

ಬೇಕಾದಷ್ಟು ಬಂದಿವೆ. ಬಂದು ನೋಡಿ. ಬಾಹುಸಾರ್ ಕಂಪೆನಿ

ರಿಜಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೧೮—೪—೪೭ [ಸಂಚಿಕೆ ೨೧೯

ಮುಸ್ಲಿಂ ಸಂಸ್ಥಾನಗಳು ಸಿಂಧ್ ಸೇರುವುವೇ?

ಪುರಸಭಾಧ್ಯಕ್ಷರ ಮೇಲಿನ ಅವಿಶ್ವಾಸ ನಿರ್ಣಯ

ಮೈಸೂರು ೧೮

ಪುರಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಟಿ ಮರಿಯಪ್ಪನವರು ಹೇಳಿಕೆಯನ್ನು ಹೊರಡಿಸಿ, ಪುರಸಭಾಧ್ಯಕ್ಷರ ಮೇಲಿನ ಅವಿಶ್ವಾಸ ನಿರ್ಣಯವನ್ನು ಬಹಳ ಆಲೋಚನೆ ಮಾಡಿ ತರಲಾಗಿದೆಯೆಂದೂ, ಅವರ ಮೇಲೆ ಅನೇಕ ಆಕ್ಷೇಪಣೆಗಳಿವೆಯೆಂದೂ, ಸಕಾಲದಲ್ಲಿ ಎಲ್ಲ ವಿವರಗಳನ್ನು ಸಾರ್ವಜನಿಕರ ಮುಂದೆ ಇಡಲಾಗುವುದೆಂದೂ ತಿಳಿಸಿ, ಹಲವು ಸದಸ್ಯರು [illegible] ಕಾರ್ಯಕ್ರಮವನ್ನು ಖಂಡಿಸಿದ್ದಾರೆ

ಸಂಗೀತ

ಬಸವನಗುಡಿ ಅಗ್ರಹಾರದಲ್ಲಿರುವ ರಾಮಸೇವಾ ಸಂಘದ ಆಶ್ರಯದಲ್ಲಿ [illegible] ದಿನ ರಾತ್ರಿ ೮-೩೦ ಗಂಟೆಗೆ ಶ್ರೀಮತಿ [illegible] ದೇವಿಯವರ ಸಂಗೀತವನ್ನು ಏರ್ಪಡಿಸಿದೆ.

ಮುಷ್ಕರದ ಮುಕ್ತಾಯ

[illegible] ಕೆಲಸಗಾರರು [illegible] ದಿಂದ ಕೆಲಸಕ್ಕೆ ಹೋಗದೆ ಮುಷ್ಕರ ಹೂಡಿದ್ದರು. ಪೊಲೀಸ್ ಮುಖ್ಯಾಧಿಕಾರಿ [illegible] ಲೇಬರ್ ಕಮೀಷನರೂ, ಕೆಲಸಗಾರರ ಸಂಘದ ಕಾರ್ಯದರ್ಶಿಗಳೊಡನೆ ಮಾತುಕತೆ ನಡೆಸಿದರ ಪರಿಣಾಮವಾಗಿ [illegible] ಮಧ್ಯಸ್ಥದಿಂದ ಮುಷ್ಕರವು ಮುಕ್ತಾಯಗೊಂಡಿತೆಂದು ಕಾರ್ಯದರ್ಶಿಗಳಾದ [illegible] ಟಿ ಎಸ್ ಸುಬ್ಬಣ್ಣನವರು ತಿಳಿಸಿದ್ದಾರೆ

ಹರಿಕಥೆ

[illegible] ಕೀರ್ತನಕಾರರ ಮಂಡಳಿಯ ಆಶ್ರಯದಲ್ಲಿ [illegible] ನಾಳೆ ಸಂಜೆ ೬ ಘಂಟೆಗೆ [illegible] ಯಲ್ಲಿರುವ ಶ್ರೀ ಪಾಂಡುರಂಗ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಹೆಬ್ಬಾರ್ [illegible] ರವರಿಂದ "[illegible]" ಎಂಬ ಹರಿಕಥೆಯು ನಡೆಯುವುದು ಸರ್ವರಿಗೂ ಆಹ್ವಾನವುಂಟು.

ಪುರಸಭಾ ಚುನಾವಣೆ

ಸ್ವಂ. ವ] ಚಾಮರಾಜನಗರ ೧೭

ಇಲ್ಲಿನ ಪುರಸಭಾ ಚುನಾವಣೆಯು ನಿನ್ನೆ [illegible] ಶಾಂತಿಯಿಂದ ನಡೆಯಿತು ಫಲಿತಾಂಶವು ಈ ರೀತಿ ಇದೆ:—

೧ ಡಿವಿಜನ್ :-ಶ್ರೀಗಳಾದ ಸುಲ್ತಾನ್ [illegible] ಪಿ. ರಾಮಯ್ಯ, ಸಿ ವಿ, ನಾಗ [illegible] ಎಸ್ ಶಾಮಣ್ಣ, ಚೌಡಶೆಟ್ಟಿ ಮತ್ತು ಎಸ್ ಅಬ್ದುಲ್ ಜಬ್ಬಾರ್

೨ ಡಿವಿಜನ್:-ಬಿ ನಾರಾಯಣ್, ಸಿ. ನಾರಾಯಣರಾವ್, ಟಿ ಆರ್ [illegible], ಮತ್ತು ಎಸ್ ನರಸಿಂಹ [illegible]

೩ ಡಿವಿಜನ್: ಎಸ್ ವೆಂಕಟಪ್ಪ, [illegible] ಸಿ ಎಸ್. ಆನಂದರಾವ್, ಚಿಕ್ಕನಂ [illegible], ವೆಂಕಟರಮಣಯ್ಯ ಮತ್ತು [illegible] ನಾಗರಾಜ್

ಹಿಂದೂಮಹಾಸಭಾ ಕಾರ್ಯದರ್ಶಿಗೆ ಸಜಾ

ಪಂಜಾಬ್ ಪ್ರಾಂತ್ಯವನ್ನು ಪ್ರವೇಶಿಸಿದ [illegible] ಆಪಾದನೆಯ ಮೇಲೆ ಅಖಿಲ ಭಾರತ ಹಿಂದೂಮಹಾಸಭಾ ಕಾರ್ಯದರ್ಶಿಗಳಾದ [illegible] ದೇಶಪಾಂಡೆಯವರಿಗೆ ಅಲ್ಲಿನ [illegible] ನ್ಯಾಯಾಧೀಶರು ಆರು ತಿಂಗಳ ಕಠಿಣ ಶಿಕ್ಷೆ ವಿಧಿಸಿರುತ್ತಾರೆ

ಮೈಸೂರು ಧ್ವಜದಡಿಯಲ್ಲಿ ಕರ್ನಾಟಕ ಪ್ರಾಂತ ರಚನೆ

ವಸ್ತು ಪ್ರದರ್ಶನದಲ್ಲಿ ಮಧ್ಯಪ್ರಾಂತ ಮಂತ್ರಿಗಳ ಸಲಹೆ

ಸ್ವಂ. ವಾ ಫೋ] ಬೆಂಗಳೂರು ೧೮

ದೇಶೀಯ ವಿದ್ಯಾಶಾಲೆಯ ಆವರಣದಲ್ಲಿ ಏರ್ಪಾಡಾಗಿರುವ ಅಖಿಲ ಭಾರತ ಖಾದಿ ಮತ್ತು ಸ್ವದೇಶೀ ವಸ್ತುಪ್ರದರ್ಶನದ ಆರಂಭೋತ್ಸವವನ್ನು ನಿನ್ನೆ ಸಂಜೆ ಮಧ್ಯಪ್ರಾಂತದ ಮಂತ್ರಿಗಳಾದ ಶ್ರೀ|| ದ್ವಾರಕಾ ಪ್ರಸಾದ ಮಿಶ್ರರವರು ನೆರವೇರಿಸುತ್ತಾ ಈ ಕೆಳಗೆ ಕಂಡಂತೆ ಭಾಷಣ ಮಾಡಿದರು:—

ಕೆಲವು ದಿನಗಳಿಂದ ಈ ಸಂಸ್ಥಾನದಲ್ಲಿ ಪ್ರವಾಸ ಮಾಡಿ ಇಲ್ಲಿನ ಅಭಿವೃದ್ಧಿ ಕಾರ್ಯಗಳನ್ನು ನೋಡಿ ನಾನು ಮುಗ್ಧನಾಗಿದ್ದೇನೆ. ಸಂಸ್ಥಾನದ ಪ್ರಜೆಗಳ ಕಾರ್ಯದಕ್ಷತೆ ಮತ್ತು ಇಲ್ಲಿನ ದಿವಾನರುಗಳು ನಡೆಸಿದ ಪ್ರವೃತ್ತಿಗಳೇ ಈ ಅಭಿವೃದ್ಧಿಗೆ ಮುಖ್ಯ ಕಾರಣಗಳು. [illegible] ಇಷ್ಟು ಮಟ್ಟಿಗೆ ಮುಂದುವರಿಯದಿರಲು ಅಲ್ಲಿ [illegible] ಗೆ ಇದ್ದ ಬ್ರಿಟಿಷ್ ಆಡಳಿತವೇ ಕಾರಣ ಈಗ ಅಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲ ಏರ್ಪಟ್ಟಿದೆ. ಬ್ರಿಟಿಷರು ಹೊರಟು ಹೋಗಲು ಸಿದ್ಧರಾಗುತ್ತಿದ್ದಾರೆ. ಇನ್ನು ಮೇಲೆ ನಾವೂ ಸಹ ಮುನ್ನಡೆ ಇಡಲು ಸಂಕಲ್ಪಿಸಿರುತ್ತೇವೆ

ಗ್ರಾಮ ಕೈಗಾರಿಕೆಗಳ ಪ್ರೋತ್ಸಾಹ

ಕೈಗಾರಿಕೆಗಳ ವಿಕೇಂದ್ರೀಕರಣವೇ ಇಂದಿನ ಆದರ್ಶಗಳ ಮುಖ್ಯ ನೀತಿಯಾಗಿರಬೇಕು ಗೃಹ ಕೈಗಾರಿಕೆಗಳಿಗೆ ವಿಶೇಷ ಪ್ರೋತ್ಸಾಹವನ್ನು ನೀಡಬೇಕು ಗ್ರಾಮಾಭಿವೃದ್ಧಿಯೋದ್ದೇಶದಿಂದ ತೆರೆದಿರುವ ಗ್ರಾಮ ಕೈಗಾರಿಕೆಗಳ ಪ್ರದರ್ಶನಕ್ಕೆ ಇಂತಹ ಪ್ರದರ್ಶನಗಳು ಬಹಳ ಸಹಕಾರಿಯಾಗುತ್ತವೆ. ವ್ಯಾಪಾರಿವರ್ಗಕ್ಕೆ ವಸ್ತುಪ್ರದರ್ಶನಗಳ ಪ್ರಯೋಜನವ ವಿಚಾರವನ್ನು [illegible] ಅವುದು ಅಧಿಕ ಪ್ರಸಂಗವಾದೀತು

ಎಲ್ಲ ಜಾತಿ, ಮತ, ಕೋಮು, ಪ್ರಾಂತ ಮತ್ತು ವರ್ಗದವರೂ ಈಗ ಒಂದುಗೂಡಬೇಕಾದ ಕಾಲವು ಬಂದಿರುತ್ತದೆ ಸಂಕುಚಿತವಾದ ಪ್ರಾಂತೀಯ ಭಾವನೆಗೆ ಆಸ್ಪದ ಕೊಡಬಾರದು ಈ ಪ್ರಾಂತದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ ಎಂಬ ಭಿನ್ನ ಭಾವವು ತಲೆದೋರಿರುವುದೆಂದು ಕೇಳಿ ಬಹಳ ವಿಷಾದವೆನಿಸುತ್ತದೆ. ಉತ್ತರ ಭಾರತದಲ್ಲಿ ಹಿಂದೂ ಮುಸ್ಲಿಂ ಕಲಹಗಳು ಕೇವಲ [illegible] ಕ್ಕೆ ಕಾರಣವಾಗಿವೆ. ಈ ಭೇದ ಭಾವನೆಗಳು ಹೋಗಬೇಕು

ರಾಷ್ಟ್ರ ಭಾಷಾ ಪ್ರಚಾರ

ರಾಷ್ಟ್ರೀಯ ಐಕ್ಯತೆಗೆ ರಾಷ್ಟ್ರಭಾಷಾ ಪ್ರಚಾರವು ವಿಶೇಷ ಸಹಕಾರಿಯು. ಬ್ರಿಟಿಷರು [illegible] ಪ್ರದಕ್ಕೆ ಬಂದ ಇದೀ ಭಾರತೀಯರೆಲ್ಲರೂ ಏಕ ಭಾಷೆಯ ಮೂಲಕ ವ್ಯವಹಾರ ನಡೆಸುತ್ತಿದ್ದರು [illegible] ಮೊದಲಾದ ಮಹನೀಯರುಗಳು ಇಡೀ ಹಿಂದೂಸ್ಥಾನದಲ್ಲೆಲ್ಲಾ ತಮ್ಮ ದಿವ್ಯವಾದ ತತ್ವಗಳನ್ನು ಪ್ರಚಾರಮಾಡಿದರು ಹೀಗಿರುವಲ್ಲಿ ನಾವು ಪರಕೀಯ ಭಾಷೆಯನ್ನು ಇನ್ನು ಮುಂದೆಯೂ ಕಟ್ಟಿಕೊಂಡಿರಬೇಕಾದ ದುರವಸ್ಥೆ [illegible] ಬ್ರಿಟಿಷರು ಈ ದೇಶವನ್ನು ಬಿಟ್ಟು ಹೋಗಲಿದ್ದಾರೆ ಅವರ ಭಾಷೆಯು ಅವರೊಡನೆ ಹೋಗುವುದೆಂದು ಹೇಳಲು ಸಾಧ್ಯವಿಲ್ಲ. ಆದರೆ ರಾಷ್ಟ್ರಭಾಷೆಯಾದ ಹಿಂದಿಯನ್ನೇ ಉಪಯೋಗಿಸಲು ನಾವೆಲ್ಲರೂ ಈಗಿನಿಂದಲೇ ಉದ್ಯುಕ್ತರಾಗಬೇಕು

ಭಾಷಾವಾರು ಪ್ರಾಂತಗಳು

ಭಾಷಾವಾರು ಪ್ರಾಂತ ರಚನೆಯು ಇಂದಿನ ಪ್ರಶ್ನೆಗಳಲ್ಲೆಲ್ಲಾ ಅತ್ಯಂತ ಮಹತ್ವದ್ದಾದುದು. ಇದಕ್ಕೆ ಸಕಲ ದೇಶಭಕ್ತರ [illegible] ಇರುತ್ತದೆ. ಕರ್ನಾಟಕ ಪ್ರಾಂತ ರಚನೆಯನ್ನು ಇದೇ ದೃಷ್ಟಿಯಿಂದ ನಾವೆಲ್ಲರೂ ಸ್ವಾಗತಿಸಬೇಕು

ಮೈಸೂರಿನ ಆಶ್ರಯದಲ್ಲಿ ಕರ್ನಾಟಕ ಪ್ರಾಂತ

ಮೈಸೂರು ಬ್ರಿಟಿಷ್ ಕರ್ನಾಟಕದಲ್ಲಿ ಸೇರಬೇಕೇ? ಅಥವಾ ಬ್ರಿಟಿಷ್ ಕರ್ನಾಟಕವು ಮೈಸೂರಿನಲ್ಲಿ ಸೇರಬೇಕೇ? ಎಂಬ ಪ್ರಶ್ನೆಗಳು ಅಲ್ಲಲ್ಲಿ ಕೇಳಿ ಬರುತ್ತಿವೆ ಮೈಸೂರು ಧ್ವಜದ ಅಡಿಯಲ್ಲಿ ಕರ್ನಾಟಕ ಪ್ರದೇಶಗಳೆಲ್ಲವೂ ಒಂದು ಪ್ರಾಂತವಾಗಬೇಕೆಂಬುದೇ ನನ್ನ ಅಭಿಪ್ರಾಯ. ಇದಕ್ಕೆ ಕೆಲವು ಪ್ರಯತ್ನಗಳು [illegible] ಆಗ ಬೇಕಾಗಿವೆ. ಕಾಲ, ದೇಶ, ವರ್ತಮಾನಗಳಿಗೆ ಅನುಗುಣವಾಗಿ ಇಲ್ಲಿನ ಪ್ರಭುಗಳು [illegible] ವ್ಯವಸ್ಥೆಯಲ್ಲಿ ಸುಧಾರಣೆಗಳನ್ನು ಮಾಡುವುದು ಅವಶ್ಯಕವಾಗಿದೆ

ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವು [illegible] ನಡೆಯುವುದು ಸಹಜವಾಗಿದೆ [illegible] ಮಹಾರಾಜರವರು ಜನತೆಯ ಒಪ್ಪುವಂತಹ ಆಡಳಿತವನ್ನು ರಚಿಸಲೆಂದು ನಾನು ಹಾರೈಸುತ್ತೇನೆ.

ಕಾಠೇವಾಡ ದೇಶದ ಮುಸ್ಲಿಂ ಸಂಸ್ಥಾನಗಳು ಸಿಂಧಿಗೆ

[illegible] ಸಂಸ್ಥಾನಗಳ [illegible] ಸಿಂಧ್ ಪ್ರಾಂತವು [illegible] ಅಲ್ಲಿಗೆ ಸೇರಲು ನಿರ್ಧರಿಸಿ [illegible] ಜಿನ್ನಾರವರ [illegible] ಯಿಂದ [illegible] ಯಲ್ಲಿ [illegible] ಈ ಸಂಸ್ಥಾನ [illegible] ಅವರನ್ನು [illegible] ಯೋ [illegible]

[illegible] ಶ್ವರ [illegible] ತೀರ್ಪು

[illegible]] [illegible] ೧೮

[illegible] ಕಾರಿನ [illegible] ಮತ್ತು [illegible] ಕಾವೇರಿ [illegible] ಅಭಿನವ [illegible] ಚಂದ್ರ [illegible] ಅಭಿನವ [illegible]

[illegible]

ಸಾಧ್ವಿ

ತಾ|| ೧೮-೪-೪೭ ಶುಕ್ರವಾರ

ಕಾಂಗ್ರೆಸ್ ಅಧ್ಯಕ್ಷರಿಗೆ ದಿವಾನರ ಆಹ್ವಾನ

ಅಮೆರಿಕದಿಂದ ಹಿಂದಿರುಗಿದ ಮೇಲೆ ಸಂಚಿಸಿವಂತೆ ದಿವಾನರು ಸಂಸ್ಥಾನದ ನಾಯಕರುಗಳನ್ನು ಭೇಟಿಮಾಡಲು ಆಹ್ವಾನಗಳನ್ನು ಕಳುಹಿಸಲು ಆರಂಭಿಸಿರುವರು. ಬರುವ ವಾರ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ|| ಚೆಂಗಲರಾಯ ರೆಡ್ಡಿ ಯವರನ್ನು ಮಾತು ಕತೆಗಳಿಗಾಗಿ ಕರೆದಿರುವರು. ಸಂಸ್ಥಾನದ ಇತರ ಗಣ್ಯ ವ್ಯಕ್ತಿಗಳಿಗೂ ಸಹ ಅವರು ಆಹ್ವಾನಗಳನ್ನು ಕಳುಹಿಸಲಿರುವರು.

ಈ ಮಾತು ಕತೆಗಳು ಸಂಪೂರ್ಣ ರೀತಿಯ ಹೃದಯದಿಂದಲೂ, ಉನ್ನತ ಮಟ್ಟದಲ್ಲಿಯೂ ನಡೆಯಲೆಂದು ಹಾರೈಸಬೇಕಾಗಿದೆ. ಆಡಳಿತ ವ್ಯವಹಾರದ ಸಣ್ಣ ಪುಟ್ಟ ಅಂಶಗಳ ಮೇಲೆ ಚರ್ಚೆ ನಡೆಸುವುದರಿಂದ ಯಾವ ಪ್ರಯೋಜನವೂ ಆಗಲಾರದು. ಸಂಸ್ಥಾನದ ಮುಂದಿನ ರಾಜ್ಯಾಂಗವನ್ನು ಹೇಗೆ ರೂಪಿಸಬೇಕೆಂಬುದೇ ಈ ಮಾತುಕತೆಗಳ ಮುಖ್ಯ ಗುರಿಯಾಗಿರಬೇಕು. ಮುಂದುವರಿಯುತ್ತಿರುವ ಇತರ ಸಂಸ್ಥಾನಗಳ ಮಟ್ಟಕ್ಕೆ ಬ್ರಿಟಿಷ್ ಭಾರತದ ಮಟ್ಟಕ್ಕೆ ಬೇಗ ಮೈಸೂರು ಏರುವಂತೆ [illegible] ವಾದ ವ್ಯವಸ್ಥೆಯನ್ನು ಮಾಡಬೇಕು.

ರಾಜಕೀಯ ಸಮಾಲೋಚನೆಗಾಗಿ ಆಧಿಕಾರಿಗಳೊಡನೆ ಕಲೆತು ಮಾತನಾಡಲು ಕಾಂಗ್ರೆಸ್ಸಿನವರು ಯಾವಾಗಲೂ ಸಿದ್ಧರಾಗಿರುತ್ತಾರೆ. ಈ ರೀತಿಯ ಆಹ್ವಾನವು [illegible] ನಡೆದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು. ದಿವಾನರ ಆಹ್ವಾನವನ್ನು ಕಾಂಗ್ರೆಸ್ ಅಧ್ಯಕ್ಷರು ಒಪ್ಪಿಕೊಂಡು ತಮ್ಮ ಸಂಸ್ಥೆಯ ಅಭಿಪ್ರಾಯಗಳನ್ನು ಅವರ ಮುಂದಿಡುವರು. ಕಾಂಗ್ರೆಸ್ಸಿನ ಧ್ಯೇಯ, ಧೋರಣೆಗಳೇನೆಂಬುದು ಈಗಾಗಲೇ ಎಲ್ಲರಿಗೂ ಗೊತ್ತಾಗಿದೆ. ಇನ್ನೂ ಅವುಗಳ ಬಗ್ಗೆ [illegible] ವಿಷಯದಲ್ಲಿ ಸಂದೇಹವಿಲ್ಲ. ದಿವಾನರೂ ಸಹ ಅವುಗಳನ್ನು ಸೌಹಾರ್ದ ಭಾವನೆಯಿಂದ ಸ್ವೀಕರಿಸಿ ಅವುಗಳನ್ನು ಕಾರ್ಯಗತ ಮಾಡಲು ಪ್ರಯತ್ನ ಪಡಬೇಕು.

ನಾವು ಮೊದಲೇ ಸೂಚಿಸಿದಂತೆ ಆತ್ಮ ನಿಶ್ಚಯ ಪಟ್ಟಿಯನ್ನು ಆಗಿನ್ನೂ ಪಟ್ಟಿಗೆ ವಿತರಿಸಾಗಬೇಕಾದ [illegible]. ರಾಜಕೀಯ ಕ್ಷೇತ್ರದಲ್ಲಿ ಪ್ರಜಾ ಪಾಲಿತಾಗಿ ಪ್ರಜಾ ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ಪ್ರತಿನಿಧಿಗಳ ಮಾತ್ರ [illegible] ಸಮಾಲೋಚನೆಗಳಲ್ಲಿ ಭಾಗ ವಹಿಸಲು [illegible] ರಾಜಕೀಯದಲ್ಲಿ [illegible] ತಮಗೂ ಅನುಭವವಿಲ್ಲದಿದ್ದರೂ ಆದೇಶಗಳು ಸ್ವಾಗತಿಸುತ್ತವೆ. ಇನ್ನು ಏನೇ ಆದರೂ ನಾವು ತಿನ್ನುವ ಪ್ರಯತ್ನ ಮುಂದುವರಿಸಿದಲ್ಲಿ ಕೊಂಡಿರುವವರಿಗೆ ಸ್ಥಾನವಿಲ್ಲ.

ಈಗಾಗಲೇ ಕಾಲವು ಮೀರಿಹೋಗಿ ಪ್ರ ಯತ್ನವಾಗಿರುತ್ತದೆ. ಇನ್ನು ಹೆಚ್ಚು ಕಾಲ ಇಂತಹ ಎಡೆಗೊಡಬಾರದೆಂಬುದು ನಮ್ಮ ಮೊದಲನೆಯ ಕೋರಿಕೆ. [illegible] ರಾಜಕೀಯ ಗುರಿಯ [illegible] ಎಂದು ಘೋಷಿಸುವ [illegible].

ಅವುಗಳನ್ನೆಂಬುದು ನಮ್ಮ ಎರಡನೆಯ ಸೂಚನೆ. ಈ ಧ್ಯೇಯ ಸಾಧನೆಗಾಗಿ ಪ್ರಜಾ ವಿಶ್ವಾಸಕ್ಕೆ ಪಾತ್ರರಾದ ಪ್ರತಿನಿಧಿಗಳಿಂದ ಕೂಡಿದ ಸಮಿತಿಯೊಂದನ್ನು ರಚಿಸಬೇಕೆಂಬುದು ನಮ್ಮ ಮೂರನೆಯ ಸಲಹೆ. ಭಾರತ ರಾಜ್ಯಾಂಗ ಸಭೆಯಲ್ಲಿ ಯೂನಿಯನ್ ಸರ್ಕಾರದಲ್ಲಿ ಮೈಸೂರು ಸೇರುವುದೆಂದು ನಿರ್ಧರಿಸಿರುವುದು ನಾಲ್ಕನೆಯ ಅಂಶ. ಇವೆಲ್ಲವನ್ನೂ ಸಾಧಿಸಲು ಸಹಕಾರಿಯಾಗುವಂತೆ ಪ್ರಸ್ತುತ ಮಂತ್ರಿಮಂಡಲವನ್ನು ಪ್ರಜಾಪ್ರಭುತ್ವ ಮಾದರಿ ನಿವೃತ್ತ [illegible] ವರ್ಗವನ್ನು ನಿರ್ಧರಿಸುವುದು ಐದನೆಯ ವಿಚಾರ.

ದಿವಾನರ ಮಾತುಕತೆಗಳಲ್ಲಿ ಕೇವಲ ಸಣ್ಣಪುಟ್ಟ ವಿಚಾರಗಳಿಗೆ ಗಮನ ಕೊಡದೆ ಮೇಲ್ಕಂಡ ಅಂಶಗಳ ಬಗ್ಗೆ ಸಮರ್ಪಕವಾದ ನಿರ್ಧಾರಗಳಾಗಿ ಅವಕ್ಕೆ ಅನುಗುಣವಾಗಿ ಬೇಗನೆ ಪ್ರಜಾರಂಜನೆಯನ್ನು ಪಡೆಯುವ ಕ್ರಮಗಳ ಘೋಷಣೆಯು ಹೊರಟು ಸಂಸ್ಥಾನದಲ್ಲಿ ಶಾಂತಿ, ಸಮಾಧಾನಗಳು ನೆಲೆಸುವಂತಾಗಲೆಂದು ನಾವು ಹಾರೈಸುತ್ತೇವೆ.

ಪ್ರಕಟಣೆ

ಇದುವರೆವಿಗೂ ನೂರಡಿ ರಸ್ತೆಯಲ್ಲಿದ್ದ ಸರ್ಕ್ಯುಟ್ ಟಾಂಡ್ರಿಯನ್ನು ಡಿ. ಸುಬ್ಬಯ್ಯನ ರಸ್ತೆಯಲ್ಲಿರುವ ೩೩ ನೇ ನಂಬರು ಮನೆ(ಸಾಧ್ವಿ ಆಫೀಸ್ ಹಿಂಬಾಗ) ೧೪-೪-೪೭ ನೇ ತಾ|| ನಿಂದ ಬದಲಾಯಿಸಿದ್ದು ಗ್ರಾಹಕರು ಎಂದಿನಂತೆ ಪ್ರೋತ್ಸಾಹಿಸ ಬೇಕೆಂದು ಕೇಳುತ್ತೇವೆ.

ವೆಂಕಟಯ್ಯ, ಪ್ರೊಪ್ರೈಟರ್

ರಾಜಕಮಲ್

೧೮-೪-೪೭ ರಿಂದ ೧೦ನೇ ವಾರ

1 ನೇ ಆಟ 6 ಕ್ಕೆ 2 ನೇ ಆಟ 9-15 ಕ್ಕೆ

ಶ್ರೀ ಕೃಷ್ಣಲೀಲಾ

(ಕನ್ನಡದಲ್ಲಿ)

ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಪರಿಪಾಲಿಸುವ ಸಲುವಾಗಿ ಪರಮಾತ್ಮನು ಅವತರಿಸಿ ತನ್ನ ಮಹಿಮೆಯನ್ನು ಅರುಹಿದ ಕಥಾ ವೈಭವ

ಪೌರಸಭಾ ಚುನಾವಣೆ

ಮೈಸೂರು] ಚಿಕ್ಕಮಗಳೂರು ೧೭

ಈ ಟೌನಿನಲ್ಲಿ ನಡೆದ ಮ್ಯುನಿಸಿಪಲ್ ಚುನಾವಣೆಯ ಫಲಿತಾಂಶವು ಈ ರೀತಿ ಇದೆ:- ೧ ನೇ ಶ್ರೀಗಳಾದ ನಾರಾಯಣನಾಯಕ (ಕಾಂ), ತಿಮ್ಮಪ್ಪಯ್ಯಂಗಾರ್ (ಸ್ವ) ಲಿಂಗಣ್ಣ (ಕಾಂ); ೨ ನೇ ವಾರ್ಡು:- ಶ್ರೀಗಳಾದ ಸೀನಪ್ಪ (ಕಾಂ), ಎಂ. ಎಸ್. ವಾಸು (ಹಿಂ ಮಹಾಸಭೆ), ಎಂ ಎಲ್. ನರಸಿಂಹ ಶೆಟ್ಟಿ (ಸ್ವ); ೩ ನೇ ವಾರ್ಡು:- ಶ್ರೀಗಳಾದ ಅಣ್ಣಪ್ಪಶೆಟ್ಟಿ (ಕಾಂ), ಭಗತ್ (ಸ್ವ), ಎಂ ಎಲ್ ಶ್ರೀನಿವಾಸಶೆಟ್ಟರು, (ಸ್ವ); ೪ ನೇ ವಾರ್ಡು:- ಶ್ರೀಗಳಾದ ಗೌಸ್ ಮೊಹಿದ್ದೀನ್ ಸಾಹೇಬ್, ಇಂಬ್ರಾಹಿಂ ಸಾಹೇಬ್, ಗೌಸ್ ಖಾನ್ ಸಾಹೇಬ್ (ಸ್ವ); ೫ ನೇ ವಾರ್ಡು:- ಶ್ರೀಗಳಾದ ಭಗತ್, ರುದ್ರಪ್ಪಶಾಸ್ತ್ರಿ, ದಶರಥರಾವ್ (ಸ್ವ)

ಇಟಲಿಯಲ್ಲಿ ಮರಣದಂಡನೆ ರದ್ದು

ಇನ್ನು ಮುಂದೆ ಇಟಲಿಯಲ್ಲಿ ಮರಣ ದಂಡನೆಯನ್ನು ವಿಧಿಸಬಾರದೆಂದು ಅಲ್ಲಿನ ರಾಜ್ಯಾಂಗ ರಚನಾ ಸಭೆಯು ನಿರ್ಧರಿಸಿರುವುದಾಗಿ ವರದಿಯಾಗಿದೆ.

ಜಿಲ್ಲಾ ಬೋರ್ಡು ಚುನಾವಣೆ

೨೧-೪-೪೭ ನೇ ಸೋಮವಾರ ನಂಜನಗೂಡು ತಾಲ್ಲೂಕಿನ ಈ ಕೆಳಗೆಕಂಡ ಕಾಂಗ್ರೆಸ್ ಉಮೇದುವಾರರಿಗೇ

-: ನಿಮ್ಮ ಓಟು ಕೊಡಿ :-

ಮಿಸ್ಟರ್. ಲಿಂಗಪ್ಪ B. Sc., LL B

ಮಿಸ್ಟರ್. ಎಂ. ನಾಗಪ್ಪ (ಹುಲ್ಲಹಳ್ಳಿ)

ಎಂ ಲಿಂಗಣ್ಣ B. Sc., LL.B

ಒಲಿಂಪಿಯಾ ಟಾಕೀಸ್, ಮೈಸೂರು

೧೮-೪-೪೭ ರಿಂದ ಪ್ರತಿ ದಿನ ೩ ಆಟಗಳು

ರಾಜಕುಮಾರಿ

(ತಮಿಳು)

ಪಾತ್ರ:-ಮಾಲತಿ, ಟಿ ಎಸ್ ಬಾಲಯ್ಯ

RAJKAMAL

Morning shows from 18-4-47 for 4 days daily at 10-30

The Phantom Speaks

The ace of shockers—a spine chiller of murder and revenge with a dead criminal taking possesion of living mind

ಧರ್ಮ ಯುದ್ಧದ ಕರೆ

ಇಂದಿನ ಸರ್ಕಾರದ ನೀತಿಯು ಸ್ಪಷ್ಟವಾಗಿ ಭಾರತದ ವಿಭಜನೆಯು ಪ್ರಜೆ, ಹಿಂದೂ ಮುಸ್ಲಿಂ ತಿಕ್ಕಾಟಗಳು [illegible]; ಇಂದಿನ ರಕ್ತಪಾತಕ್ಕೆ ಸರ್ಕಾರ ಹೊಣೆಯಾಗಿದೆ; ಆದುದರಿಂದ ಸರ್ಕಾರವನ್ನು ಎದುರಿಸಿ ಪ್ರಾಚೀನ ಧರ್ಮವನ್ನು ಸ್ಥಾಪಿಸಬೇಕಾಗಿದೆ; ಅಧರ್ಮವನ್ನು ಹೆಚ್ಚಿಸಲು ಸಹಕಾರಿಯಾಗಿರುವಂತಹ ಕಾನೂನುಗಳನ್ನು ಇದೇ ೨೩ ನೇ ತಾ|| ಒಳಗೆ ವಾಪಸು ತೆಗೆದುಕೊಳ್ಳದಿದ್ದರೆ ಸರ್ಕಾರವನ್ನು ಬಹಿಷ್ಕರಿಸಬೇಕು; ಹಾಗೆ ಮಾಡದಿದ್ದಲ್ಲಿ ಈ ಸರ್ಕಾರಕ್ಕೆ ವಿರುದ್ಧ ಸಾರ್ವತ್ರಿಕ ಸತ್ಯಾಗ್ರಹ ನಡೆಸಬೇಕು - ಎಂದು ಅಖಿಲಭಾರತ ಸನಾತನ ಸಂಘವು ಪ್ರಕಟಿಸಿರುತ್ತದೆ. ಈ ರೀತಿಯಿಂದ ನಿರ್ಣಯಗಳಲ್ಲಿ ಅಖಿಲ ಕರ್ನಾಟಕ ಸನಾತನ ಸಂಘವು ಸಹಕರಿಸಲು ನಿರ್ಧರಿಸಿದೆ. ಆದುದರಿಂದ ನಮ್ಮ ದೇಶದ ಧನದ, ಸ್ವಯಂಸೇವಕರ, ಮತ್ತು ಧರ್ಮ ಯುದ್ಧಕ್ಕೆ ಜಯವನ್ನು ಕೋರಿ ಪ್ರಜಾದಿಗಳನ್ನು ನೀಡುವುದರ ಮೂಲಕ ಸಹಾಯಮಾಡಬೇಕೆಂದೂ, ಆ ರೀತಿ ನೀಡಲಿಚ್ಛಿಸುವವರು ಕಾರ್ಯದರ್ಶಿ, ಅಖಿಲ ಕರ್ನಾಟಕ ಸನಾತನ ಸಂಘ, ನೆಲ್ಸಂ, ದೊಡ್ಡಮನೆ ನಂಜನಗೂಡು ಈ ವಿಳಾಸಕ್ಕೆ ತಿಳಿಸಬೇಕೆಂದೂ ಸಂಘದ ಕಾರ್ಯದರ್ಶಿಗಳಾದ ಶ್ರೀ|| ರಾಜ ಗುರುರಾಜಾಚಾರ್ಯರು ಪ್ರಾರ್ಥಿಸಿರುತ್ತಾರೆ.

ಈ ಐವತ್ತು ವರ್ಷಗಳಿಂದ ಮಾನವ ದೇಹಕ್ಕೆ ಆರೋಗ್ಯ ಸಂದೇಶಗಳನ್ನು ನೀಡುತ್ತಾ ಅನನ್ಯವಾಗಿ, ಅವಿಚ್ಛಿನ್ನವಾಗಿ ಸೇವೆ ಮಾಡಿ, ದಿನ ದಿನಾಭಿವೃದ್ಧಿ ಹೊಂದುತ್ತಿರುವ ಪ್ರಖ್ಯಾತಿಗೆ ಎಷ್ಟೋ ಗರ್ವಿಸುತ್ತಿದೆ.



EASTERN 379.

ಶ್ರೀ ಕೃಷ್ಣ ಜ್ಯೂಯಲರಿ ಮಾರ್ಟ್

ಅಶೋಕರಸ್ತೆ, ಮೈಸೂರು : : ಫೋನ್ 411

ಚಿನ್ನ, ಬೆಳ್ಳಿ ಮತ್ತು ಹರಳಿನ ಆಭರಣಗಳು ಹೊಸ ನಮೂನೆಯಲ್ಲಿ ನಮ್ಮಲ್ಲಿ ಬೇಕಾಗಿ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.

ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್

ಕನ್ನಡಿಗರೇ ಬನ್ನಿ ! ಸುಸಮಯ

ಹೊಸ ಜವಳಿ

ನಮ್ಮಲ್ಲಿ ಈಗ ತಾನೇ ಹೊಸದಾಗಿ ಬಂದಿರುವ ಬನಾರಸ್, ಕಂಚಿ, ಆರ್ನಿ, ಕಾಂಚೀಪುರಂ ಮಟ್ಟಲ್ಲಿ ಸೀರೆಗಳು, ಕಲಾಪತಿ ಸೀರೆಗಳು, ನೂಲಿನ ಪೂನಾ ರವಿಕೆ ಸೀರೆಗಳು, ಕಾಶ್ಮೀರ್ ಶಾಲುಗಳು, ದೊರೆಯುತ್ತವೆ.

M. P. V., M. V ಭೋಜಯ್ಯ B. A ಅಂಡ್ ಬ್ರದರ್ಸ್

ಬೊಂಬಾಯಿ ಆನಂದ ಭವನ ಹೋಟೆಲ್ ಪಕ್ಕ ಚಿಕ್ಕಮಾರ್ಕೆಟ್ ರಸ್ತೆ

ರಿ. ನಂ. ೫೨೨ ‖ ಬಿಡಿ ಪ್ರತಿ ‖ ಒಂದು ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೫] ಶನಿವಾರ ೧೯—೪—೪೭ [ಸಂಚಿಕೆ ೨೧೪

ಕಾಂಗ್ರೆಸ್ ಮತ್ತು ಲೀಗ್ ಒಪ್ಪಂದದ ಸೂಚನೆ

...ಲಸಗಾರರ ಮುಷ್ಕರ

ಮೈಸೂರು ೧೯

ಸುಮಾರು ೧೫೦೦ ಬೀಡಿ ಕೆಲಸಗಾರರು ಕೂಲಿ ದರವನ್ನು ಹೆಚ್ಚಿಸಬೇಕೆಂದು ಕೊಡಬೇಕೆಂದು ಮಾಡಿದ್ದ ಪ್ರಾರ್ಥನೆಗೆ ಸಮಾಧಾನ...ದೆ ಅವರು ಲೇಬರ್ ಕಮಿಷನರ...ಮಾಡಿದ್ದರು. ಇದರಲ್ಲಿ ಕೈ...ಲ್ಲವೆಂದು ಲೇಬರ್ ಕಮೀಷನ...ರಿಂದ ಕೆಲಸಗಾರರು ಮುಷ್ಕರ...ಕೆಂದು ನಿನ್ನೆ ನಿರ್ಧರಿಸಿ ಇಂದು...ವನ್ನು ಆರಂಭಿಸಿರುವರು. ಮು...ವರ ಸಹಕಾರವನ್ನೂ ಕೋರಿರು...

ಹರಿಕಥೆ

...ವಾಂಬ ಅಗ್ರಹಾರದ ಚೌಕದಲ್ಲಿರು...ಮ ಮಂದಿರದಲ್ಲಿ ಈ ದಿನ ರಾತ್ರಿ...ಗೆ ಶ್ರೀ ಶಿವಲಿಂಗ ಸ್ವಾಮಿಯವ...ನುಮಯಂತಿ ಎಂಬ ಹರಿಕಥೆ...ಯುತ್ತದೆ.

ಹಿಂದೂಸ್ಥಾನಿ ಸಂಗೀತ

ಕೃಷ್ಣಪ್ಪನವರ ರಾಮ ಮಂದಿರ...ಸಂಜೆ ೭ ಘಂಟೆಗೆ ಗ್ವಾಲಿಯರಿ...ದಿರುವ ಸಂಗೀತ ವಿದ್ವಾಂಸರಾದ...ಹಬೂಬ್ ರವರಿಂದ ಕವಾಲ್ ಎಂ...ಸಂಗೀತವು, ವಿ॥ ರಾಮಯ್ಯನ...ಲಯೊಡನೆ ನಡೆಯುವುದು. ಸಕ...ಪ್ರವೇಶವುಂಟು

...ದಕ ಕೆಲಸಗಾರರ ಸಂಘ

...ಸೂರು ನಗರದ ಕಟ್ಟಡದ ಕೆಲಸಗಾ...ಘದ ಕಾರ್ಯಕಾರಿ ಸಮಿತಿ ಸಭೆ...ಳೆದ ೧೫ ನೇ ತಾ॥ ನಡೆದು, ನಗರ...ಪ ಕಟ್ಟಡದ ಕೆಲಸ ಮಾಡುವವರೆ...ಸಂಘದ ಸದಸ್ಯರಾಗ ಬೇಕೆಂದು...ಸುವ ನಿರ್ಣಯವನ್ನು ಅಂಗೀಕರಿ...ಯಿತು.

ಸ್ವಯಂ ಸೇವಕರಿಗೆ ಸೂಚನೆ

ಶ್ರೀ ಜಯಪ್ರಕಾಶ ನಾರಾಯಣ್‌ರವರ...ಗತ ಸಮಾರಂಭದಲ್ಲಿ ಸ್ವಯಂ ಸೇವಕ...ಲು ಇಚ್ಛಿಸುವವರು ನಗರ ಕಾಂಗ್ರೆಸ್...ರಿಯಲ್ಲಿ ಹೆಸರುಗಳನ್ನು ಕೊಡಬೇಕೆಂ...ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯದರ್ಶಿ...ದ ಶ್ರೀ ಕರಿಯಪ್ಪ ಭೂಪಾಲರು ಪ್ರಾ...ಸಿದ್ದಾರೆ.

ಮಕ್ಕಳ ಪುಸ್ತಕ ಸಮಿತಿ ಸಭೆ

...ನಾಳೆ ಸಂಜೆ ೫-೩೦ ಕ್ಕೆ ಜಯನಗರದ...ನಿವ ವನಿತಾ ಸದನದಲ್ಲಿ ಮಕ್ಕಳ ಸಮಿ...ತಿ ಸರ್ವ ಸದಸ್ಯರ ಸಭೆಯು ನಡೆಯು...ವು. ಸದಸ್ಯರೆಲ್ಲಾ ತಪ್ಪದೆ ದಯಮಾ...ಡಬೇಕೆಂದು ಕಾರ್ಯದರ್ಶಿಗಳಾದ ಶ್ರೀ॥...ನಾಗೇಶರಾಯರು ಪ್ರಾರ್ಥಿಸಿದ್ದಾರೆ.

ಹಾಲೆಂಡಿನಲ್ಲಿ ರಾಯಭಾರಿ

ಭಾರತ ಮತ್ತು ಹಾಲೆಂಡುಗಳಿಗೆ ರಾ...ಭಾರಿಗಳ ವಿನಿಮಯವಾಗುವುದಾಗಿ ಭಾ...ಸರ್ಕಾರದ ಪ್ರಕಟಣೆ ಹೊರಟಿದೆ.

ಏಜೆಂಟರು ಬೇಕು

ಸಾಧ್ವಿ ಪತ್ರಿಕೆಗೆ ಮೈಸೂರು ನಗರಕ್ಕೆ ಏಜೆಂಟರು ಬೇಕು. ವಿವರಗಳಿಗೆ ಖುದ್ದಾಗಿ ಬಂದು ವಿಚಾರಿಸಿರಿ.

ವ್ಯವಸ್ಥಾಪಕ

ಮುಸ್ಲಿಮರಿಗೆ ಮೂರನೇ ಒಂದರಷ್ಟು ಸ್ಥಾನ ಬೇಕು

ಲೀಗ್ ಅಧಿವೇಶನದಲ್ಲಿ ಅಧ್ಯಕ್ಷರ ಭಾಷಣ

ಶಿವಮೊಗ್ಗ ೧೯

ಇಲ್ಲಿ ಮೈಸೂರು ಸಂಸ್ಥಾನದ ಮುಸ್ಲಿಂ ಲೀಗಿನ ೫ ನೇ ಅಧಿವೇಶನವು ಮೊನ್ನೆ ಆರಂಭವಾಯಿತು. ಅಧ್ಯಕ್ಷರಾದ ಮಿ॥ ಮಹಮದ್ ಷರೀಫ್ ರವರು ಮಾತನಾಡುತ್ತಾ ಮೈಸೂರು ಸಂಸ್ಥಾನದ ಶಾಸನ ಸಭೆಗಳಲ್ಲೂ, ಸರ್ಕಾರದಿಂದ ನೇಮಕವಾಗುವ ಎಲ್ಲಾ ಸಂಸ್ಥೆ ಮತ್ತು ಸಮಿತಿಗಳಲ್ಲೂ ಮುಸ್ಲಿಮರಿಗೆ ಮೂರನೇ ಒಂದು ಭಾಗ ಸ್ಥಾನವನ್ನು ಕೊಡಬೇಕೆಂದು ತಿಳಿಸಿದರು. ಸ್ಥಳೀಯ ಸಂಸ್ಥೆಗಳಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ಚುನಾವಣಾ ಹಕ್ಕನ್ನು ಕೊಡಬೇಕೆಂದು ಹೇಳಿದರು. ಮುಸ್ಲಿಮರು ಸಂಸ್ಥಾನಕ್ಕೆ ಸಲ್ಲಿಸುವ ಸೇವೆಯನ್ನು ಗಮನಿಸಿ ಅವರಿಗೆ ಪೋಲೀಸ್ ಮತ್ತು ಮಿಲಿಟರಿ ಇಲಾಖೆಗಳಲ್ಲಿ ಶೇಕಡ ೫೦ ರಷ್ಟು ಹುದ್ದೆಗಳನ್ನು ಕೊಡಬೇಕೆಂದು ಸೂಚಿಸಿದರು.

ಕೋಮುವಾರು ಗಲಭೆಯ ವಿಚಾರವನ್ನು ಮಿ॥ ಷರೀಫರು ಪ್ರಸ್ತಾಪಿಸಿ, ಬ್ರಿಟಿಷ್ ಭಾರತದ ಹಲವರು ಕಣ್ಣಿಗೆ ಕಾಣಿಸದಂತೆ ನಡೆಸುತ್ತಿರುವ ಒಳಸಂಚೇ ಇದಕ್ಕೆ ಕಾರಣವೆಂದೂ, ಬಹು ಸಂಖ್ಯಾತ ಕೋಮಿನವರು ವಟ್ಟಿಕೆಯ ಮನೋಭಾವದಿಂದ ವರ್ತಿಸುತ್ತಿರುವರೆಂದೂ ಹೇಳಿದರು. ಈ ಸಂದರ್ಭದಲ್ಲಿ ಪೋಲೀಸರು ಅನುಸರಿಸಿದ ನೀತಿಯನ್ನು ಖಂಡಿಸಿ ಅವರು ಪಕ್ಷಪಾತ ತೋರಿಸಿದರೆಂದು ಆರೋಪಿಸಿದರು. ಪಾಕಿಸ್ಥಾನದ ಸಮಸ್ಯೆ ಇತ್ಯರ್ಥವಾಗದೆ ಭಾರತದಲ್ಲಿ ಶಾಂತಿ ನೆಲೆಸಲಾರದೆಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ಪೆಥಿಕ್ ಲಾರೆನ್ಸರ ಬದಲು ಲಿಸ್ಟೋವೆಲ್ಲರು

ಭಾರತ ಮತ್ತು ಬರ್ಮಗಳ ಕಾರ್ಯದರ್ಶಿಗಳಾಗಿದ್ದ ಲಾರ್ಡ್ ಪೆಥಿಕ್ ಲಾರೆನ್ಸರು ತಮ್ಮ ಅಧಿಕಾರಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಅವರ ಸ್ಥಾನಕ್ಕೆ ಪೋಸ್ಟು ಮಾಸ್ಟರ್ ಜನರಲ್ ಆಗಿರುವ ಲಾರ್ಡ್ ಲಿಸ್ಟೋವೆಲ್ಲರನ್ನು ನೇಮಿಸಲಾಗಿದೆ. ಭಾರತ ಮತ್ತು ಬರ್ಮಗಳಿಗೆ ಅಧಿಕಾರ ವರ್ಗಾಯಿಸಿ ಕೊಡುವಂತಹ ಮಸೂದಾ ಕಾನೂನುಗಳನ್ನು ಸಿದ್ಧಪಡಿಸುವ ಕಾರ್ಯವು ಯುವಕರಿಂದಲೇ ನಡೆಯಬೇಕೆಂದು ಲಾ॥ ಪೆಥಿಕ್ ಲಾರೆನ್ಸರು ಸೂಚಿಸಿದ್ದಾರೆ.

ರಾಜ್ಯಾಂಗ ಸಭೆಗೆ ಸೇರದ ಸಂಸ್ಥಾನಗಳು ಶತ್ರುಗಳೇ ಸರಿ

ಸಂಸ್ಥಾನಗಳ ಪ್ರಜಾ ಸಮ್ಮೇಳನದಲ್ಲಿ ನೆಹರೂರವರ ಎಚ್ಚರಿಕೆ

ನಿನ್ನೆ ಗ್ವಾಲಿಯರಿನಲ್ಲಿ ನಡೆದ ಸಂಸ್ಥಾನಗಳ ಪ್ರಜಾ ಸಮ್ಮೇಳನದಲ್ಲಿ ಪಂಡಿತ ಜವಹರಲಾಲ ನೆಹರೂರವರು ಭಾಷಣ ಮಾಡಿ, ರಾಜ್ಯಾಂಗ ಸಭೆಗೆ ಸಂಸ್ಥಾನಗಳು ಕೂಡಲೇ ಸೇರಬೇಕೆಂದು ಸೂಚಿಸಿದರು. ಅದರಲ್ಲಿ ಸಹಕರಿಸದಿದ್ದವರನ್ನು ವೈರಿಗಳೆಂದು ಭಾವಿಸಲಾಗುವುದೆಂದೂ, ಅವರುಗಳು ಅದರ ಫಲವನ್ನು ಅನುಭವಿಸಬೇಕಾಗುವುದೆಂದೂ ಎಚ್ಚರಿಕೆಯನ್ನಿತ್ತರು. ಯಾರು ಬಂದಿದ್ದರೂ ರಾಜ್ಯಾಂಗ ಸಭೆಯು ತನ್ನ ಕೆಲಸವನ್ನು ಮುಂದುವರಿಸುವುದೆಂದೂ ಅವರು ಹೇಳಿದರು.

ಕೊಟ್ಟ ರಾಜರು ಪ್ರಜೆಗಳಿಗೆ ಅಧಿಕಾರವನ್ನು ವಹಿಸಿಕೊಡಲು ಮಾಡಿರುವ ಏರ್ಪಾಡುಗಳನ್ನೇ ಇತರ ರಾಜರುಗಳೂ ಅನುಸರಿಸಬೇಕೆಂದು ಅಧ್ಯಕ್ಷತೆ ವಹಿಸಿದ್ದ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಭಾಷಣದಲ್ಲಿ ತಿಳಿಸಿದರು.

ಟೆಕ್ಸಾಸ್ ಬಂದರಿನಲ್ಲಿ ಮೂರು ಸಾವಿರ ಜನರು ಸತ್ತರು

ಉತ್ತರ ಅಮೆರಿಕದ ಮೆಕ್ಸಿಕೊ ತೀರದಲ್ಲಿರುವ ಟೆಕ್ಸಾಸ್ ನಗರದಲ್ಲಿ ಮೊನ್ನೆ ೩ ಭಾರಿ ಆಸ್ಫೋಟನೆಗಳಾಗಿ ಸುಮಾರು ೧ ಸಹಸ್ರ ಮಂದಿ ಪ್ರಾಣ ಬಿಟ್ಟಿದ್ದಾರೆಂದು ವರದಿಯಾಗಿದೆ. ದ್ರಾವಕ ವಸ್ತುವಿನಿಂದ ಭರ್ತಿಯಾಗಿದ್ದ ಹಡಗೊಂದಕ್ಕೆ ಬೆಂಕಿ ಬಿದ್ದು ಈ ಆಸ್ಫೋಟನೆಗಳಾದುವೆಂದೂ ಅದರಿಂದ ವಿಷವಾಯುವು ಹೊರಟು ಬಂದರಿನಲ್ಲಿ ಅಗ್ನಿ ಕೆಲಸಮಾಡುತ್ತಿದ್ದವರಲ್ಲಿ ಬಹು ಮಂದಿ ಮಡಿದಿರುವುದಾಗಿಯೂ ಹೇಳಲಾಗಿದೆ.

ಪೌರಸಭಾಧ್ಯಕ್ಷರಲ್ಲಿ ಹೋಟೆಲ್ ಮಾಲೀಕರ ವಿಶ್ವಾಸ

ಪುರಸಭಾ ಅಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಬೋರೆಯವರು ಇಲ್ಲಿನ ಲೈಸೆನ್ಸಿಂಗ್ ಅಧಿಕಾರಿಗಳಾಗಿಯೂ ಸಹ ಅಪಾರ ಸೇವೆ ಸಲ್ಲಿಸಿದ್ದಾರೆಂದೂ, ಇವರನ್ನು ಇಲ್ಲಿಂದ ಬದಲಾಯಿಸುವುದು ಸರಿಯಲ್ಲವೆಂದೂ, ಅವರಲ್ಲಿ ತಮಗೆ ಪೂರ್ಣ ನಂಬಿಕೆ, ವಿಶ್ವಾಸ ಇರುವುದಾಗಿಯೂ ಮೈಸೂರು ಹೋಟೆಲು ಸಂಘದವರು ನಿರ್ಣಯವನ್ನು ಅಂಗೀಕರಿಸಿದ್ದಾರೆ.

ಕಾಂಗ್ರೆಸ್-ಲೀಗ್ ಒಪ್ಪಂದ!

ದೆಹಲಿಯಲ್ಲಿ ವೈಸರಾಯ್ ಮೌಂಟ್ ಬ್ಯಾಟನ್ನರು ನಡೆಸುತ್ತಿರುವ ಸಂಭಾಷಣೆ ಫಲದಾಯಕವಾಗುವ ಸೂಚನೆಗಳು ಕಂಡು ಬರುತ್ತಿರುವುದಾಗಿ ವರದಿಯಾಗಿದೆ. ಕಾಂಗ್ರೆಸ್ ಮತ್ತು ಲೀಗುಗಳಲ್ಲಿ ಒಪ್ಪಂದವಾಗುವ ಚಿಹ್ನೆಗಳು ತೋರಿ ಬರುತ್ತಿರುವುದಾಗಿ ಹೇಳಲಾಗಿದೆ. ಬ್ರಿಟಿಷ್ ಯೋಜನೆಯಂತೆ ಕಾಂಗ್ರೆಸ್ಸು ಗುಂಪುಗಳ ವಿಂಗಡನೆಗೆ ಒಪ್ಪುವುದೆಂದೂ, ಲೀಗು ಬಿ ಮತ್ತು ಸಿ ಗುಂಪುಗಳಲ್ಲಿ ಸಂಯುಕ್ತ ಚುನಾವಣೆಯನ್ನು ಏರ್ಪಡಿಸಿ ಅಲ್ಪ ಸಂಖ್ಯಾತರಿಗೆ ಪ್ರಾತಿನಿಧ್ಯ ಮತ್ತು ರಕ್ಷಣೆಯನ್ನು ಒದಗಿಸಿಕೊಡುವುದೆಂದು ಹೇಳಲಾಗುತ್ತಿದೆ. ಇದರಿಂದ ಪ್ರಾಂತ್ಯ ಮತ್ತು ಕೇಂದ್ರಗಳಲ್ಲಿ ಸಮ್ಮಿಶ್ರ ಮಂತ್ರಿ ಮಂಡಲಗಳೇರ್ಪಡಬಹುದೆಂದೂ ಊಹಿಸಲಾಗಿದೆ.

ದಿವಾನರಲ್ಲಿ ನಿಯೋಗ

ಮೈಸೂರು ೧೯

ಶ್ರೀಗಳಾದ ಬಿ. ಎಸ್. ಸುಬ್ಬರಾವ್, ಕೆ. ನಂದೀಬಸಪ್ಪ ಮತ್ತು ಯೂಸೂಫ್ ರವರು ಈದಿನ ದಿವಾನರ ಬಳಿ ನಿಯೋಗ ಹೋಗಿ ಪುರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಬೋರೆಯವರನ್ನು ಬೇರೆ ಕಡೆ ವರ್ಗಾಯಿಸಕೂಡದೆಂತಲೂ, ಅವರನ್ನು ಇಲ್ಲೇ ಇರಿಸಿ ಕೊಡಬೇಕೆಂದೂ ಪ್ರಾರ್ಥಿಸಿದರು.

ಅವಿಶ್ವಾಸ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಸೂಚನೆ

ನಿನ್ನೆ ಸಂಜೆ ಸಹಕಾರ ಭವನದಲ್ಲಿ ಶ್ರೀ॥ ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ರವರ ಅಧ್ಯಕ್ಷತೆಯಲ್ಲಿ "ಪುರಜನರ" ಸಭೆಯೊಂದು ಜರುಗಿ ೪೭ ಜನರು ಹಾಜರಿದ್ದರು. ಶ್ರೀಗಳಾದ ಭಕ್ತ ಶಿರೋಮಣಿ ಜೆ. ಸ್ವಾಮಿದಾಸ್, ಎಂ. ಎ. ನಾರಾಯಣರಾವ್, ವೆಂಕಟಗಿರಿಯಪ್ಪ, ಎಫ್. ಸಿ. ದೇವರಾಜೇ ಅರಸ್, ಬಿ. ಎಸ್. ಸುಬ್ಬರಾವ್ ಮತ್ತು ಮಹಮ್ಮದ್ ಯೂಸೂಫ್ ಮುಂತಾದವರು ಮಾತನಾಡಿ ಪುರಸಭಾಧ್ಯಕ್ಷರಾದ ಶ್ರೀ॥ ಬೊಂಬೋರೆಯವರ ಮೇಲೆ ಅವಿಶ್ವಾಸ ಸೂಚಿಸಿ, ಅವರನ್ನು ಆ ಸ್ಥಳದಿಂದ ತೆಗೆದು ಹಾಕಬೇಕೆಂದು ೨೩ ಮಂದಿ ಪುರಸಭಾ ಸದಸ್ಯರು ಮಂಡಿಸಿರುವ ನಿರ್ಣಯದ ವಿಚಾರವನ್ನು ಪ್ರಸ್ತಾಪಿಸಿದರು. ಆ ನಿರ್ಣಯವನ್ನು ವಾಪಸು ತೆಗೆದುಕೊಂಡು ಮಧುರ ಬಾಂಧವ್ಯವನ್ನು ಕಾಪಾಡಬೇಕೆಂದು ಪುರಸಭಾ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಸೂಚಿಸುವ ನಿರ್ಣಯವನ್ನು ಸಭೆಯಲ್ಲಿ ಅಂಗೀಕರಿಸಲಾಯಿತು.

ಅಪೆರಾ ಟಾಕೀಸ್, ಮೈಸೂರು

೧೯-೪-೪೭ ರಿಂದ ಪ್ರತಿ ದಿನ ೩ ಆಟಗಳು

ರಾಜಕುಮಾರಿ

(ತಮಿಳು)

ಪಾತ್ರ:—ಮಾಲತಿ, ಟಿ. ಎಸ್. ಬಾಲಯ್ಯ

ಸಾಧ್ವಿ

ಈ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಒಂದು ರೂಪಾಯಿ ಮಾತ್ರ)

ಸಾಧ್ವಿ

ತಾ|| ೧೯-೪-೪೭ ಶನಿವಾರ

ಮೈಸೂರಿಗೆ ಸದವಕಾಶ

ಕರ್ನಾಟಕ ಏಕೀಕರಣ ಪ್ರಯತ್ನದಲ್ಲಿ ಮೈಸೂರು ಬ್ರಿಟಿಷ್ ಕರ್ನಾಟಕ ಪ್ರಾಂತಗಳೊಡನೆ ಸೇರಬೇಕೇ? ಅಥವಾ ಬ್ರಿಟಿಷ್ ಪ್ರಾಂತಗಳು ಮೈಸೂರಿನಲ್ಲಿ ಸೇರಬೇಕೇ?- ಎಂಬ ಪ್ರಶ್ನೆಗಳಿಗೆ ಮಧ್ಯಪ್ರಾಂತ್ಯದ ಮಂತ್ರಿಗಳಾದ ಶ್ರೀ ಡಿ. ಪಿ. ಮಿಶ್ರರವರು ಉತ್ತರವಿತ್ತಿದ್ದಾರೆ. ಮೈಸೂರಿನ ಧ್ವಜದ ಅಡಿಯಲ್ಲಿ ಉಳಿದ ಪ್ರದೇಶಗಳೆಲ್ಲವೂ ಒಂದುಗೂಡಿ ಅಖಂಡ ಕರ್ನಾಟಕ ರಾಜ್ಯವು ನಿರ್ಮಾಣವಾಗಬೇಕೆಂದು ಅವರು ಸೂಚಿಸಿದ್ದಾರೆ.

ಒಂದು ವಾರದಿಂದ ಸಂಸ್ಥಾನದ ನಾನಾ ಪ್ರದೇಶಗಳಲ್ಲಿ ಪ್ರವಾಸ ಮಾಡಿ ಇಲ್ಲಿನ ಅಭಿವೃದ್ಧಿ ಕಾರ್ಯಗಳನ್ನು ನೋಡಿ ಸಂತೋಷಗೊಂಡ, ಅವರು ಈ ಅಭಿಪ್ರಾಯಕ್ಕೆ ಬಂದಿರುವರು. ಪರಕೀಯರ ಆಡಳಿತಕ್ಕೆ ಸಿಲುಕಿ ನಿರ್ಜೀವವಾದ ಸರ್ಕಾರದ ಯಂತ್ರದಿಂದ ಪ್ರಜಾಹಿತ ಸಾಧನೆಯ ಕಾರ್ಯಗಳನ್ನು ತಮ್ಮ ಪ್ರಾಂತಗಳಲ್ಲಿ ಕಾಣದವರು ಮೈಸೂರಿನಲ್ಲಿ ಆಗುತ್ತಿರುವ ಕಾರ್ಯ ಸಾಧನೆಗಳನ್ನು ಕಂಡು ಅವರು ಮುಗ್ಧರಾಗಿರುವುದು ಸಹಜವೇ ಆಗಿರುತ್ತದೆ. ಮೈಸೂರಿಗೆ ಇತರ ಪ್ರದೇಶಗಳು ಸೇರಲೆಂಬ ಬಯಕೆಯು ಇಲ್ಲಿನ ಪ್ರಭುಗಳಿಗೂ ಪ್ರಜೆಗಳಿಗೂ ವಿಶೇಷ ಹೆಮ್ಮೆಯನ್ನುಂಟುಮಾಡದಿರದು.

ಮೈಸೂರಿನ ಬಗೆಯ ಏಕೀಕರಣಕ್ಕೆ ಶ್ರೀ ಮಿಶ್ರರವರು ಒಂದು ಷರತ್ತನ್ನು ಮಾತ್ರ ಹಾಕುತ್ತಾರೆ. ತಾವು ಸಾಂಕೇತಿಕ ಪ್ರಭುಗಳೆಂದೂ, ಎಲ್ಲಾ ಅಧಿಕಾರವು ಪ್ರಜಾ ಪ್ರತಿನಿಧಿಗಳ ವಶಕ್ಕೆ ಮಾತ್ರವಾಗಿರುವುದೆಂದೂ, ಇಲ್ಲಿನ ರಾಜರು ಘೋಷಿಸಬೇಕೆಂಬುದೇ ಆ ಷರತ್ತು. ಈ ಸೂಚನೆಯು ಅತ್ಯಂತ ಸಾಧುವೂ, ಸಮಯೋಚಿತವೂ ಆಗಿರುತ್ತದೆ. ಮೈಸೂರಿನ ಪ್ರಜೆಗಳು ಇಂದು ಬೇಡುತ್ತಿರುವುದೂ ಇದೇ ಆಗಿದೆ.

ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರವು ಸ್ಥಾಪಿತವಾದರೆ ನಾವೆಲ್ಲರೂ ಅದರೊಳಗೆ ಸೇರಲು ಬಯಸುವುದಾಗಿ ಬ್ರಿಟಿಷ್ ಕರ್ನಾಟಕದ ಧುರೀಣರುಗಳು ಕಾಲು ಶತಮಾನದ ಹಿಂದೆಯೇ ಹೇಳುತ್ತಿದ್ದರು. ಆದರೆ ಇತ್ತೀಚೆಗೆ ಈ ಅಭಿಪ್ರಾಯವು ಮಾರ್ಪಟ್ಟಿರುವುದಾಗಿಯೂ, ಮೈಸೂರಿನಲ್ಲಿ ಎಂಥದೇ ರಾಜ್ಯಾಂಗವು ಏರ್ಪಟ್ಟರೂ ತಾವು ಅದರಲ್ಲಿ ಸೇರಲು ಬಯಸುವುದಿಲ್ಲವೆಂದು ಹೇಳುವವರ ಸಂಖ್ಯೆಯು ಹೆಚ್ಚುತ್ತಿದೆಯೆಂದೂ ಬೊಂಬಾಯಿನ ಉಪ ಮಂತ್ರಿಗಳಾದ ಶ್ರೀ ಕೆ ಎಫ್ ಪಾಟೀಲರು ಕೆಲವು ದಿನಗಳ ಹಿಂದೆ ಇಲ್ಲಿ ನುಡಿದಿದ್ದರು. ಆದರೂ ಸಹ ಮೈಸೂರಿನ ಒಗ್ಗೆ ಇನ್ನೂ ಬರುತ್ತಿರುವ ಪ್ರಶಂಸಾತ್ಮಕವಾದ ಮಾತುಗಳು ನಮ್ಮನ್ನು ಉತ್ಸಾಹಗೊಳಿಸುವುದರಲ್ಲಿ ಸಂದೇಹವಿಲ್ಲ.

ಶ್ರೀ ಮಿಶ್ರರವರ ಸಲಹೆಯು ಇಡೀ ಕರ್ನಾಟಕದ ಪ್ರಜೆಗಳು ಮೈಸೂರು ಪ್ರಭುತ್ವದ ಆಶ್ರಯದಲ್ಲಿ ಸೇರಲು ಪ್ರೋತ್ಸಾಹದಿಂದ ಒಪ್ಪುವಂತಹ ದೊರೆಯುವುದು ಖಂಡಿತ. ಬೆಳಗಾಂ, ಧಾರವಾಡ, ಬಿಜಾಪುರ, ವರಾಡ್, ಗೋವಾ ಮುಂತಾದ ಪ್ರದೇಶಗಳನ್ನು ಹೈದರಾಬಾದಿಗೆ ಸೇರಿಸುವ ಬಗೆ ಉಂಟಾಗಿರುವಂತಹ ವಿರೋಧಗಳು ಮೈಸೂರಿನ ವಿಚಾರದಲ್ಲಿ ಉದ್ಭವಿಸಲಾರವು.

ಕಾಲಾನುಗುಣ್ಯವೂ, ಪ್ರಜೆಗಳ ಇಷ್ಟಾರ್ಥ ಸಿದ್ಧಿದಾಯಕವೂ ಆದ ಈ ಸೂಚನೆಯನ್ನು ನಮ್ಮ ಪ್ರಭುಗಳು ಸಂಪೂರ್ಣ ಅಭಿಮಾನದಿಂದ ಅಂಗೀಕರಿಸಿ, ಬರುವ ವರ್ಷ ಭಾರತದ ಸ್ವಾತಂತ್ರ್ಯ ಸಾಧನೆಯ ಜೊತೆಯಲ್ಲಿಯೇ ಅಖಂಡ ಕರ್ನಾಟಕ ರಾಜ್ಯದ ಸ್ಥಾಪನೆಗೂ ನೆರವಾಗಿ ಕರ್ನಾಟಕ ರತ್ನ ಸಿಂಹಾಸನದಲ್ಲಿ ಅವರು ವಿರಾಜಿಸುವಂತಾಗಲೆಂದು ಹಾರೈಸಬಹುದಲ್ಲವೇ?

ಪೌರಸಭಾಧ್ಯಕ್ಷರ ಪರವಾಗಿ ಪ್ರಚಾರವೇಕೆ?

ಪೌರಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಟಿ ಮರಿಯಪ್ಪನವರು ಈ ರೀತಿ ಹೇಳಿಕೆಯೊಂದನ್ನಿತ್ತಿದ್ದಾರೆ :-

ಕಾಂಗ್ರೆಸ್ ಪಕ್ಷದ ಪೌರಸಭಾ ಸದಸ್ಯರು ಪೌರಸಭಾಧ್ಯಕ್ಷರ ಮೇಲೆ ಅವಿಶ್ವಾಸ ನಿರ್ಣಯವನ್ನು ಸೂಚಿಸಿರುವ ವಿಷಯವಾಗಿ ಅಧ್ಯಕ್ಷರಲ್ಲಿ ಆಸಕ್ತಿಯುಳ್ಳ ಮತ್ತು ಆಶ್ರಯ ಹೊಂದಿರುವ ಕೆಲವು ಮಹನೀಯರುಗಳು ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿರುವುದಲ್ಲದೆ ಸಾರ್ವಜನಿಕ ಸಭೆಯನ್ನು ಸೇರಿಸಿದ್ದಾರೆಂದು ಪತ್ರಿಕೆಗಳಲ್ಲಿ ಪ್ರಚಾರ ನಡೆಯುತ್ತಿದೆ. ಈ ಪ್ರಚಾರದ ಹಿಂದೆ ಯಾರ ಕೈವಾಡವಿದೆ ಎಂಬುದು ನಮಗೆ ತಿಳಿದು ಬಂದಿದೆ.

ಅವಿಶ್ವಾಸ ನಿರ್ಣಯವನ್ನು ಸೂಚಿಸುವ ಮೊದಲು ಪೌರಸಭಾ ಸದಸ್ಯರು ದೀರ್ಘವಾಗಿ ಆಲೋಚನೆ ಮಾಡಿ ಕಳೆದ ಮೂರು ವರ್ಷಗಳಿಂದ ಪೌರಸಭೆಯ ಆಡಳಿತ ನಿರ್ವಹಣೆಯಲ್ಲಿ ಉಂಟಾಗಿರುವ ಲೋಪದೋಷಗಳನ್ನು ಮನಗಂಡು ವಿಧಿಯಿಲ್ಲದೆ ಈ ಅವಿಶ್ವಾಸ ನಿರ್ಣಯವನ್ನು ತಂದಿದ್ದಾರೆ. ಅವಿಶ್ವಾಸ ನಿರ್ಣಯ ತರುವ ಮೊದಲು ಸಾರ್ವಜನಿಕರನ್ನು ಕೇಳಬೇಕೆಂಬ ವಾದ ತಿರುಳಿಲ್ಲದ್ದು. ಇದು ಯಾವ ಪ್ರಜಾಪ್ರಭುತ್ವದ ತತ್ವಕ್ಕೂ ಸರಿಹೊಂದಲಾರದು.

ಪೌರಸಭೆಯ ಆಡಳಿತ ನಿರ್ವಹಣೆಯಲ್ಲಿ ಶೈಥಿಲ್ಯ ಮತ್ತು ಅನಾದರಣೆ ಕಂಡಾಗಲೆಲ್ಲಾ ಪೌರಸಭೆಯಲ್ಲಿ ಟೀಕಿಸಲಾಗಿದೆ. ಹಿಂದೆ ಈ ಅಧ್ಯಕ್ಷರ ನ್ಯಾಯ ಬಾಹಿರವಾದ ರೂಲಿಂಗ್ ವಿಚಾರದಲ್ಲಿ ಆಗ ಕಾಂಗ್ರೆಸ್ ಪಕ್ಷದ ನಾಯಕರಾಗಿದ್ದ ಶ್ರೀ|| ಬಿ. ನಾರಾಯಣಸ್ವಾಮಿಯವರು ಅಧ್ಯಕ್ಷರ ವರ್ತನೆಯನ್ನು ಟೀಕಿಸಿ ಇವರ ಮೇಲೆ ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಹಿಂಜರಿಯುವುದಿಲ್ಲವೆಂದು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟಿರುತ್ತಾರೆ. ಅಲ್ಲದೆ ೩ ವರ್ಷಕ್ಕೆ ಮೇಲ್ಪಟ್ಟಿರುವ ಎಲ್ಲಾ ಅಧಿಕಾರಿಗಳನ್ನೂ ಪೌರಸಭೆಯಿಂದ ವರ್ಗ ಮಾಡಬೇಕೆಂದೂ ಸಹಾ ಇದೇ ಜನವರಿ ತಿಂಗಳಲ್ಲಿ ನಿರ್ಣಯ ಮಾಡಲಾಗಿದೆ ಎಂಬುದನ್ನು ಮಹಾಜನರು ನೆನಪಿನಲ್ಲಿಡಬೇಕು. ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ರಾಜಧಾನಿಗೆ ದಯಮಾಡಿಸಿದ್ದಾಗ ಅಧ್ಯಕ್ಷರು ಸಕಲೇಶಪುರದಲ್ಲಿದ್ದುದನ್ನೂ, ಗೈರುಹಾಜರಾದುದನ್ನೂ ಪ್ರತಿಭಟಿಸಲು ತಾ|| ೧೧-೩-೪೭ ರ ಪೌರಸಭೆಯ ಮೀಟಿಂಗನ್ನು ಮುಂದುವರಿಸಬೇಕೆಂದು ೨೩ ಸದಸ್ಯರು ತಂದ ನಿರ್ಣಯವನ್ನು ಅದು ತಮ್ಮ ಮೇಲೆ ಅವಿಶ್ವಾಸ ಸೂಚನೆಯೆಂದು ಭಾವಿಸಿ ಅವರು ೧೦ ದಿವಸಗಳ ರಜೆ ಬೇಕೆಂದು ಕೇಳಿ ನೆಪ ಹೇಳಿ ಆ ನಿರ್ಣಯವನ್ನು ತಳ್ಳಿ ಹಾಕಿರುವುದನ್ನು ಸಾರ್ವಜನಿಕರು ಮರೆಯಬಾರದು. ಅವಿಶ್ವಾಸ ನಿರ್ಣಯವನ್ನು ಜಾರಿಗೊಳಿಸಲು ಈ ರೀತಿ ಪ್ರಚಾರ ಮಾಡಿದರು. ಕಳೆದ ೩ ವರ್ಷಗಳಿಂದ ಈ ಅಧ್ಯಕ್ಷರ ಆಡಳಿತದ ಲೋಪದೋಷಗಳ ವಿಷಯದಲ್ಲಿ ಆಪಾದನೆಗಳು ಬಂದು ತೋರಿ ಬರುತ್ತವೆ. ಸಾಧಾರಣವಾಗಿ ಅನೇಕ ನಿದರ್ಶನಗಳನ್ನು ಎತ್ತಿ ತೋರಿಸುವುದು ಕಷ್ಟವೇನೂ ಅಲ್ಲ. ಸಕಾಲದಲ್ಲಿ ಈ ಅಂಶಗಳನ್ನೆಲ್ಲಾ ಮಹಾಜನಗಳ ಮುಂದೆ ಆಧಾರ ಸಹಿತವಾಗಿ ಇಡಲಾಗುವುದು. ಅಧ್ಯಕ್ಷರು ವಿವರಣೆ ಮತ್ತು ಸಮಜಾಯಿಷಿ ಕೊಡುವುದಕ್ಕೂ ಸಹ ಅವಕಾಶವಿದೆ. ಈ ಮಧ್ಯೆ ಮಹಾಜನರ ಮನಸ್ಸನ್ನು ಕಲಕಲು ಕೆಲವು ಮಹನೀಯರು ನಡೆಸುತ್ತಿರುವ ಪ್ರಚಾರ ಮತ್ತು ಮಾಡುತ್ತಿರುವ ಪ್ರಯತ್ನಗಳು ಸಾಧುವಾದವುಗಳಲ್ಲ. ಇದರಿಂದ ಮಹಾಜನರು ಮರುಳಾಗಲಾರರು. ಅಧಿಕಾರಿ ಅಧ್ಯಕ್ಷರು ನಗರ ಸಭೆಯಲ್ಲಿ ಶಾಶ್ವತವಾಗಿ ಇರಲೆಂಬ ಅಂಶವನ್ನು ಯಾವ ನಾಗರಿಕನೂ ಒಪ್ಪುವುದಿಲ್ಲ. ಅನೇಕ ಸಾರಿ ಅಧಿಕಾರಿಗಳು ಈ ಸಭೆಯ ಅಧ್ಯಕ್ಷರಾಗಿರುವುದು ಸರಿಯಲ್ಲವೆಂದು ಸಾರ್ವಜನಿಕರು ಸ್ಪಷ್ಟಪಡಿಸಿದ್ದಾರೆ. ಹೀಗಿದ್ದರೂ ಅಧಿಕಾರಿ ಅಧ್ಯಕ್ಷರ ಪರವಾಗಿ ಪ್ರಚಾರ ಕೈಗೊಂಡಿರುವುದು ಸೋಜಿಗವೇ ಸರಿ. ಆದುದರಿಂದ ಮಹಾಜನರು ಅಪಪ್ರಚಾರಕ್ಕೆ ಕಿವಿಗೊಡದೆ ತಾಳ್ಮೆಯಿಂದಿರಬೇಕೆಂದು ಪ್ರಾರ್ಥಿಸುತ್ತೇನೆ.

ಜಿಲ್ಲಾ ಬೋರ್ಡ್ ಚುನಾವಣೆ

೨೧-೪-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗಿನಂತ ಕಾಂಗ್ರೆಸ್ ಉಮೇದುವಾರರಿಗೆ

- ಜಯುವೆಟ್ಟು ಓಟು ಕೊಡಿ :-

ಹೆಚ್ ಲಿಂಗಪ್ಪ B. Sc., LL.B

ಹೆಚ್ ಎಂ. ನಾಗಪ್ಪ (ಹುಲ್ಲಹಳ್ಳಿ)

ಎಂ ಲಿಂಗಣ್ಣ B. Sc., LL.B

ದಿವಂಗತ ಕೆ. ವೆಂಕಟಸ್ವಾಮಯ್ಯನವ

ನಂಜನಗೂಡು,

ನಂಜನಗೂಡಿನ ಸುಪ್ರಸಿದ್ಧ ವ ರೂ, ಪುರ ಪ್ರಮುಖರೂ ಆದ ಶ್ರೀ ಕೆ ವೆಂಕಟಸ್ವಾಮಯ್ಯನವರು ತಮ್ಮ ೬೫ ನೇ ವಯಸ್ಸಿನಲ್ಲಿ ಇದೇ ೧೪ ನೇ ತಾ|| ಸೋ ಮವಾರ ಬೆಳಗ್ಗೆ ಹೃದಯಸ್ತಂಭನದಿಂದ ರಾದರು. ದಿವಂಗತರು ನಂಜನಗೂ ಪ್ರಥಮ ಪಾಲಿಕೆ ಉಪಾಧ್ಯಕ್ಷರಾಗಿದ್ದ ಪ್ರಜಾ ಪ್ರತಿನಿಧಿ ಸಭೆಯಲ್ಲಿ ೨೫ ವರ್ಷ ಕಾಲವೂ, ಮೈಸೂರು ಜಿಲ್ಲಾ ಬೋ ರ್ಡ್ ೧೦ ವರ್ಷವೂ ಸದಸ್ಯರಾಗಿದ್ದರು ಸಹಕಾರ ಸಂಘಗಳು ಬಾಲ ದಳ, ಅನೇಕ ಸಭಾ ಸಮಿತಿಗಳಲ್ಲಿದ್ದು ಸೇವೆ ಸಲ್ಲಿಸಿದ್ದಾರೆ. ನಂಜನಗೂಡಿನ ಸ್ಕೂಲ್, ಹೆರಿಗೆ ಆಸ್ಪತ್ರೆ ಮುಂತಾದ ಸ್ಥೆಗಳಿಗೆ ಉದಾರವಾಗಿ ಧನಸಹಾಯವ ಮಾಡಿದ್ದಾರೆ ರಾಜಮನೆತನದವರು ಎಂ. ವಿಶ್ವೇಶ್ವರಯ್ಯನವರು, ಸರ್ ಮಿ ದಿ|| ಬಿ ತ್ಯಾಗರಾಜ ಮುಂತಾದ ಅಧಿ ಗಳಿಂದಲೂ ಮೆಚ್ಚುಗೆಯನ್ನು ಪಡೆದಿ ಇವರ ನಿಧನದಿಂದ ಇಡೀ ಸಂಸ್ಥಾನಕ್ಕೆ ಕಾಲ ನಷ್ಟ ಸಂಭವಿಸಿದೆ ದಿವಂಗತ ಆತ್ಮಕ್ಕೆ ಶಾಂತಿಯನ್ನು ಕೋರಿ, ಈ ದ ವನ್ನು ಸಹಿಸಲು ಅವರ ಏಕ ಪುತ್ರ ಶ್ರೀ ವೆಂಕಟಸುಬ್ಬರಾಯರವರಿಗೂ, ಕುಟು ದವರಿಗೂ, ಬಂಧು ಮಿತ್ರರಿಗೂ ಶಕ್ತಿ ನ್ನು ದಯಪಾಲಿಸುವಂತೆ ಭಗವಂತ ಪ್ರಾರ್ಥಿಸುತ್ತೇವೆ.

ವಿಶ್ವಸಂಸ್ಥೆಗೆ ಸರ್ ಮಿರ್ಜಾ

ಏಪ್ರಿಲ್ ಅಂತ್ಯದಲ್ಲಿ ನಡೆಯುವ ವಿಶ್ವಸಂಸ್ಥೆಯ ವಿಶೇಷ ಅಧಿವೇಶನಕ್ಕೆ ಭಾರತದ ಪರವಾಗಿ ಇಬ್ಬರು ಪ್ರತಿನಿಧಿಗ ಳನ್ನು ಕಳುಹಿಸಲಾಗುವುದೆಂದೂ, ಆ ಪೈಕಿ ಹೈದರಾಬಾದಿನ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲರೂ ಒಬ್ಬರೆಂದೂ ಹೇಳಲಾಗ

ರಾಜಕಮಲ್

೧೮-೪-೪೭ ರಿಂದ ೧ನೇ ವಾರ

1 ನೇ ಆಟ 6 ಕ್ಕೆ 2 ನೇ ಆಟ 9-15 ಕ್ಕೆ

ಶ್ರೀ ಕೃಷ್ಣಲೀಲಾ (ಕನ್ನಡದಲ್ಲಿ)

ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಪರಿಪಾಲಿಸುವ ಸಲುವಾಗಿ ಪರಮಾತ್ಮನು ಅವತರಿಸಿ ತನ್ನ ಮಹಿಮೆಯನ್ನು ತೋರಿದ ಕಥಾ ವೈಭವ

RAJKAMAL

Morning Shows from 18-4-47 for 4 days daily at 10-30

The Phantom Speaks

The ace of shockers—a spine chiller of murder and revenge with a dead criminal taking possesion of living mind

ಪ್ರಕಟಣೆ

ಇದುವರೆಗೂ ನೂರಡಿ ರಸ್ತೆಯ ಸೆಲೆಕ್ಟ್ ಲಾಂಡ್ರಿಯನ್ನು ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ೩೩ ನೇ ನಂಬರು ಮನೆ(ಸಾಧ್ವಿ ಆಫೀಸ್ ಹಿಂಭಾಗ) ೧೪-೪-೪೭ ನೇ ತಾ|| ನಿಂದ ಬದಲಾಯಿಸಿರು ಮಹಾಜನರು ಎಂದಿನಂತೆ ಪ್ರೋತ್ಸಾಹಿಸಬೇಕೆಂದು ಕೋರುತ್ತೇನೆ

ವೆಂಕಟಯ್ಯ,

ಪ್ರೊಪ್ರೈ,

ಶ್ರೀ ಗಣೇಶಾ ಟಾಕೀಸ

18-4-47 ರಿಂದ 6 ನೇ ವಾರ

ಪ್ರತಿ ದಿನ 2 ಆಟಗಳು

ಹರಿಶ್ಚಂ(ದ್ರ) (ಕನ್ನಡ)

Morning Shows on 18, 19 and 21 at 10-30 a. m

The Wolfma

Starring:- CLAUDE RAI LON CHANEY Jr.

Edited, printed and published by A. N. Nagarajan at the Sadhvi Press D-Subbiah Road, My

॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೫] ಭಾನುವಾರ ೨೦—೪—೪೭ [ಸಂಚಿಕೆ ೨೧೫

ರಾಷ್ಟ್ರಪತಿಯವರಿಗೆ ವೈಸರಾಯರ ಕ್ಷಮಾಪಣೆ

ಬೀಡಿ ಕೆಲಸಗಾರರ ಮುಷ್ಕರ

ಮೈಸೂರು ೨೦

...ನ್ನೆಯಿಂದ ಆರಂಭವಾಗಿರುವ ಬೀಡಿ ಕೆಲಸಗಾರರ ಮುಷ್ಕರವು ಮುಂದುವರಿಯು...ದೆ. ಮೈಸೂರಿನ ಲೇಬರ್ ಅಸಿಸ್ಟೆಂಟ್ ...ಮಿಷನರು ಕೆಲಸಗಾರರ ಕುಂದು ಕೊರ...ಗಳನ್ನು ಅರಿತುಕೊಂಡು ಮಾಲೀಕರೊ...ನೆ ಸಂಧಾನ ನಡೆಸುವುದಾಗಿ ಭರವಸೆ ...ದ್ದಾರೆ. ಈ ದಿನ ಮುಷ್ಕರಗಾರರು ಮೌ...ನ ಪುರ ಪ್ರದಕ್ಷಿಣೆ ಮಾಡಿದರು.

ವಿದ್ಯಾರ್ಥಿ ಕಾಂಗ್ರೆಸ್

ಕರ್ನಾಟಕ ಪ್ರಾಂತ ವಿದ್ಯಾರ್ಥಿ ಕಾಂಗ್ರೆ...ಸ ಕಾರ್ಯ ಕಾರಿ ಸಮಿತಿ ಸಭೆಯು ...ದೇ ಮಾಹೆ ೨೮ ನೇ ತಾ॥ ಸೋಮವಾರ ...ಂಗಳೂರಿನಲ್ಲಿ ಸೇರುವುದು. ಸದಸ್ಯರೆ...ಲ್ಲರೂ ತಪ್ಪದೆ ಬರಬೇಕೆಂದು ಕಾರ್ಯಾಲ...ದ ಕಾರ್ಯದರ್ಶಿ ಶ್ರೀ॥ ಪ್ರಾಣೇಶರಾಯ...ರು ಪ್ರಾರ್ಥಿಸಿದ್ದಾರೆ.

ಹೋಟೆಲು ಕೆಲಸಗಾರರ ಸಭೆ

ಮೊನ್ನೆ ದಿನ ನಗರದ ಹೋಟೆಲು ಕೆಲ...ಸಗಾರರ ಸಭೆಯು ಶ್ರೀ॥ ಪದ್ಮನಾಭಯ್ಯ...ನವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಛೇರಿ...ಯಲ್ಲಿ ಸೇರಿದ್ದಿತು. ಶ್ರೀಗಳಾದ ಸುಬ್ಬಣ್ಣ, ...ನ ಣ್ಣ ಮತ್ತು ತಿಮ್ಮಪ್ಪನವರು ಭಾಷ...ಣ ಮಾಡಿದರು. ಮೈಸೂರು ಸಂಸ್ಥಾನ...ದಲ್ಲಿ ಕೂಡಲೇ ಷಾಪ್ ಅಸಿಸ್ಟೆಂಟ್ ಶಾಸನ...ವನ್ನು ಜಾರಿಗೆ ತರಬೇಕೆಂದು ಸರ್ಕಾರವನ್ನು ...ತ್ತಾಯ ಪಡಿಸುವ ನಿರ್ಣಯವನ್ನು ಅಂ...ಗೀಕರಿಸಲಾಯಿತು.

ಹರಿಜನ ದೇವಾಲಯ ಪ್ರವೇಶಕ್ಕೆ ವಿರೋಧ

ಮದ್ರಾಸಿನ ಪ್ರಧಾನಿಗಳ ಶ್ರೀ॥ ಓಮಂ...ದೂರು ರೆಡ್ಡಿಯವರು ಹರಿಜನರಿಗೆ ದೇವಾ...ಲಯ ಪ್ರವೇಶಾಧಿಕಾರವನ್ನು ಮೈಸೂರು ಕೂಡಲೇ ಕೊಡಬೇಕೆಂದು ಬೆಂಗಳೂರು ಕಾಂಗ್ರೆಸ್ ಕಛೇರಿಯಲ್ಲಿ ಕಳೆದವಾರ ಮಾ...ಡಿದ ಭಾಷಣವನ್ನು ಟೀಕಿಸಿ, ಧರ್ಮ ವಿ...ರುದ್ಧವಾದ ಇಂತಹ ಕಾರ್ಯವನ್ನು ಜಾರಿ...ಗೆ ತರಕೂಡದೆಂದು ಅಖಿಲ ಕರ್ನಾಟಕ ಸ...ನಾತನ ಸಂಘದ ಕಾರ್ಯದರ್ಶಿಗಳಾದ ರಾ...ಜಾ ಶ್ರೀ ಗುರು ರಾಜಾಚಾರ್ಯರು ಹೇಳಿಕೆ...ಯೊಂದನ್ನಿತ್ತಿದ್ದಾರೆ.

ಕೈಗಾರಿಕಾ ವಸ್ತುಗಳ ಮಾರಾಟಗಾರರ ಸಂಘ

ಮೈಸೂರು ಸಂಸ್ಥಾನದ ಕಲೆ ಮತ್ತು ಕೈಗಾರಿಕಾ ವಸ್ತುಗಳ ಮಾರಾಟಗಾರರ ಸ...ಭೆಯು ಕಳೆದ ೧೭ ನೇ ತಾ॥ ಚಾಮರಾ...ಜೇಂದ್ರ ಔದ್ಯೋಗಿಕ ಶಾಲಾ ಮುಖ್ಯಾಧಿ...ಕಾರಿಗಳಾದ ಶ್ರೀ ಅಣ್ಣಾ ಮೊದಲಿಯಾರರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಗಳಾದ ಎ. ಪಿ. ಲಿಂಗಪ್ಪಯ್ಯನವರನ್ನು ಅಧ್ಯಕ್ಷರ...ನ್ನಾಗಿಯೂ ಎಂ. ಮುರ್ತುಜ ಹುಸೇನರವ...ರನ್ನು ಉಪಾಧ್ಯಕ್ಷರನ್ನಾಗಿಯೂ, ಟಿ. ಎಲ್. ಎಸ್. ಉಪಾಧ್ಯಾಯರನ್ನು ಕಾರ್ಯದರ್ಶಿ...ಗಳನ್ನಾಗಿ ಚುನಾಯಿಸಲಾಯಿತು.

ಶ್ರೀ ಶಂಕರ ಜಯಂತಿ

ಇದೇ ೨೨ ನೇ ತಾ॥ ನಿಂದ ಮೇ ೨ ರ ವರೆವಿಗೆ ಎಂದಿನಂತೆ ಶ್ರೀ ತ್ರಿನಯನೇಶ್ವರ ಸ್ವಾಮಿ ದೇವಸ್ಥಾನ ಮತ್ತು ಶ್ರೀ ಮನ್ಮಹಾ...ರಾಜ ಸಂಸ್ಕೃತ ಪಾಠಶಾಲೆಗಳಲ್ಲಿ ಶ್ರೀ ಶಂ...ಕರ ಭಗವತ್ಪಾದಾಚಾರ್ಯರವರ ಜಯಂ...ತಿ ಮಹೋತ್ಸವವು ಸಭೆಯವರಿಂದ ಜರಗು...ವುದು. ಪ್ರತಿ ದಿನ ಸಂಜೆ, ಉಪನ್ಯಾಸ, ಹರಿಕಥೆ, ಸಂಗೀತ ಮುಂತಾದುವುಗಳನ್ನು ಏರ್ಪಡಿಸಲಾಗಿದೆ.

ಮುಂದಿನ ತಿಂಗಳಲ್ಲಿ ಸರ್ವ ಪಕ್ಷ ಸಮ್ಮೇಳನ

ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರ ಮುಖಂಡತ್ವದಲ್ಲಿ ಸರ್ವ ಪಕ್ಷ ರಾಜಕೀಯ ಸಮ್ಮೇಳನವು ಮೇ ತಿಂಗಳ ಎರಡನೇ ವಾರದಲ್ಲಿ ಸಿಮ್ಲಾದಲ್ಲಿ ನಡೆಯುವುದೆಂದು ಗೊತ್ತಾಗಿದೆ. ಇದರಲ್ಲಿ ಸಂಸ್ಥಾನಾಧೀಶರೂ, ಪ್ರತಿನಿಧಿಗಳೂ, ಅಲ್ಪ ಸಂಖ್ಯಾತ ಪಂಗಡಗಳ ಪ್ರತಿನಿಧಿಗಳೂ ಭಾಗವಹಿಸುವರೆಂದು ತಿಳಿದು ಬಂದಿದೆ.

ಪಿರಿಯಾಪಟ್ಟಣ ತಾಲ್ಲೂಕಿನ ರೈತರ ಗೋಳು

ನ್ಯಾಯವಿಧಾಯಕ ಸಭಾ ಸದಸ್ಯರೂ, ಜಿಲ್ಲಾ ಬೋರ್ಡ್ ಸದಸ್ಯರೂ ಆದ ಶ್ರೀ॥ ಹೆಚ್. ಬಿ. ಚನ್ನಬಸಪ್ಪನವರು ಈ ರೀತಿ ಪ್ರಕಟಣೆಯೊಂದನ್ನು ಹೊರಡಿಸಿರುತ್ತಾರೆ.-

ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿ ಆಹಾರ ಸಂಗ್ರಹಣದ ನೀತಿ ವಿಚಿತ್ರವಾದದು. ಕಳೆದ ಸಲ ಫಸಲಿಗೆ ನಷ್ಟ ಸಂಭವಿಸಿರುವ ವಿಚಾರವು ಎಲ್ಲರಿಗೂ ತಿಳಿದದ್ದೇ ಆಗಿದೆ. ಹೀಗಿದ್ದರೂ ಅಲ್ಲಿನ ಅಮಲ್ದಾರರು ೨೨ ಸಹಸ್ರ ಪಲ್ಲರಾಗಿಯನ್ನು ಕೊಳ್ಳುವುದಾಗಿ ಭರವಸೆ ಕೊಟ್ಟಿರುವರೆಂದು ಹೇಳಲಾಗುತ್ತಿದೆ. ಇದನ್ನು ನಡೆಸಲು ಶ್ಯಾನುಭೋಗರ ಅಸಿಸ್ಟೆಂಟ್ ಅಂಕಿ ಅಂಶಗಳನ್ನೆಲ್ಲಾ ಅಮಲ್ದಾರರೇ ಖುದ್ದಾಗಿ ಬದಲಾಯಿಸಿ ತಮಗಿಚ್ಛೆ ಬಂದಂತೆ ವಸೂಲಿ ಕ್ರಮವನ್ನು ನಡೆಸಲು ಪೋಲೀಸರ ಸಹಾಯದಿಂದ ಕಾರ್ಯೋನ್ಮುಖರಾಗಿದ್ದಾರೆಂದು ಗೊತ್ತಾಗಿದೆ. ಅಮಲ್ದಾರರ ನಿಗದಿ ಮೇಲೆ ರೈತರು ಅಪೀಲು ಹಾಕಿಕೊಳ್ಳಲು ಶಾಸನದಲ್ಲಿ ಅವಕಾಶವಿರುವುದನ್ನು ಅವರು ಮರೆತಂತೆ ಕಂಡು ಬಂದಿದೆ. ನೋಟೀಸು ಕೊಟ್ಟ ಘಳಿಗೆಯಲ್ಲಿಯೇ ದವಸವನ್ನು ಅಳೆಯಲು ನಿರ್ಬಂಧ ಪಡಿಸಲಾಗುತ್ತಿದೆಯೆಂದೂ, ಅಮಲ್ದಾರರು ಹೇಳಿದ-ತ ದವಸವನ್ನು ಒಪ್ಪಿಸದಿದ್ದವರಿಗೆ ಹಣವನ್ನು ಪಾವತಿ ಮಾಡುತ್ತಿಲ್ಲವೆಂದೂ, ತಿಳಿದು ಬಂದಿದೆ. ಅಮಲ್ದಾರರ ಮತ್ತು ಅವರ ಸಿಬ್ಬಂದಿಗಳ ಕಾರ್ಯಾಚರಣೆಗಳಿಗೆ ಶಾಸನದ ನಿಯಮಗಳೇ ಇರುವಂತೆ ಕಂಡು ಬಂದಿರುವುದಿಲ್ಲ. ರೈತರ ಗೋಳು ಹೇಳತೀರದಾಗಿದೆ. ಸರ್ಕಾರಕ್ಕದಲ್ಲಿಯೂ ಈ ಪ್ರದೇಶದಲ್ಲಿ ಕ್ಷಾಮ ತಪ್ಪಿದ್ದಲ್ಲ. ಜಿಲ್ಲಾಧಿಕಾರಿಗಳು ಕೂಡಲೇ ಈ ಬಗ್ಗೆ ಸೂಕ್ತ ವಿಚಾರಣೆ ನಡೆಸಿ ರೈತರಿಗೆ ಒದಗಿರುವ ಈ ತೊಂದರೆಯನ್ನು ತಪ್ಪಿಸಬೇಕಾಗಿ ಪ್ರಾರ್ಥನೆ.

ಹೈದ್ರಾಬಾದಿನಲ್ಲಿ ೨ ಭಾರಿ ಅಣೆ ಕಟ್ಟುಗಳು

೪೦ ಕೋಟಿ ರೂ.ಗಳ ವೆಚ್ಚದಲ್ಲಿ ಗೋದಾವರಿ ನದಿಗೆ ಕವಲ್ ಗ-ಡ ಎಂಬಲ್ಲಿ ಭಾರಿ ಅಣೆಕಟ್ಟನ್ನು ರಚಿಸಲು ಹೈದರಾಬಾದ್ ಸರ್ಕಾರವು ಆಲೋಚಿಸಿದೆ. ಇದರಿಂದ ೧೫ ಲಕ್ಷ ಎಕರೆ ಭೂಮಿಯು ಸಾಗುವಳಿಗೆ ಬರುವುದು. ೧೫ ಲಕ್ಷ ಕಿಲೋ ವಾಟಿನಷ್ಟು ವಿದ್ಯುಚ್ಛಕ್ತಿಯನ್ನೂ ಅಲ್ಲಿ ತಯಾರಿಸಲಾಗುವುದು. ಮತ್ತೊಂದನ್ನು ಇಂದ್ರಾವತಿ ಸಂಗಮದ ಬಳಿ ಕಟ್ಟಲಾಗುವುದು. ಇದಕ್ಕೆ ೬ ಕೋಟಿ ರೂ ಗಳು ತಗಲುವುವು. ೧೪ ಲಕ್ಷ ಕಿಲೋವಾಟ್ ಶಕ್ತಿಯನ್ನು ಇದರಿಂದ ತಯಾರಿಸಿ ಇದನ್ನು ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಯೊಂದಕ್ಕೆ ಉಪಯೋಗಿಸಲಾಗುವುದು. ಉಳಿಕೆ ವಿದ್ಯುಚ್ಛಕ್ತಿಯನ್ನು ಮದ್ರಾಸ್, ಮಧ್ಯ ಪ್ರಾಂತ್ಯ ಮತ್ತು ಬಸ್ತರ್ ಸಂಸ್ಥಾನಕ್ಕೆ ಒದಗಿಸಲಾಗುವುದು.

ಜೈ ಪ್ರಕಾಶ್ ನಿಧಿ ಸಮಿತಿ

ಇದೇ ೨೬ ಮತ್ತು ೨೭ ನೇ ತಾ॥ ಗಳಲ್ಲಿ ಶ್ರೀ॥ ಜಯ ಪ್ರಕಾಶ ನಾರಾಯಣ್ ರವರು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವರು. ಅವರಿಗೆ ವೈಭವದ ಸ್ವಾಗತವನ್ನು ನೀಡಲು ಮತ್ತು ನಿಧಿ ಅರ್ಪಿಸಲು ಶ್ರೀಗಳಾದ ಸೂರ್ಯನಾರಾಯಣ ಪಂಡಿತರು ಅಧ್ಯಕ್ಷರಾಗಿಯೂ, ಎಂ. ಎಸ್. ಜೋಯಿಸರು ಕೋಶಾಧಿಕಾರಿಗಳಾಗಿಯೂ, ಬಾಲಯ್ಯನವರು ವ್ಯವಸ್ಥಾಪಕರಾಗಿಯೂ ಇರುವ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಜಿಲ್ಲೆಯ ಮಹಾಜನರೆಲ್ಲರೂ ಉದಾರವಾಗಿ ಸಹಾಯ ಮಾಡಬೇಕೆಂದು ಜಿ॥ ಪ್ರಾ॥ ವಿ॥ ಕಾಂಗ್ರೆಸ್ಸಿನ ಪ್ರ॥ ಕಾರ್ಯದರ್ಶಿಗಳಾದ ಶ್ರೀ॥ ಬಿ. ಶ್ರೀಕಂಠಪ್ಪನವರು ಪ್ರಾರ್ಥಿಸಿದ್ದಾರೆ.

ಏಜೆಂಟರು ಬೇಕು

ಸಾಧ್ವಿ ಪತ್ರಿಕೆಗೆ ಮೈಸೂರು ನಗರಕ್ಕೆ ಏಜೆಂಟರು ಬೇಕು. ವಿವರಗಳಿಗೆ ಖುದ್ದಾಗಿ ಬಂದು ವಿಚಾರಿಸಿರಿ.

ವ್ಯವಸ್ಥಾಪಕ

ಆಚಾರ್ಯ ಕೃಪಲಾನಿಯವರಿಗೆ ವೈಸರಾಯರ ಕ್ಷಮಾಪಣೆ

ದೇಶದಲ್ಲಿ ಕೋಮುವಾರು ಗಲಭೆಯನ್ನು ಖಂಡಿಸಿ, ಶಾಂತಿ ಸ್ಥಾಪಿಸುವ ಬಗ್ಗೆ ನಾಯಕರುಗಳು ಸಂಯುಕ್ತ ಹೇಳಿಕೆಗಾಗಿ ವೈಸರಾಯ್ ಮೌಂಟ್ ಬ್ಯಾಟನ್ನರು ಏರ್ಪಡಿಸಿದುದಕ್ಕೆ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು, ತಮ್ಮ ರುಜುವನ್ನು ಹಾಕಲು ಒಪ್ಪಿದ್ದರು. ಆದರೆ ಮಿ॥ ಜಿನ್ನಾರವರು ಹಿಂದೂಗಳ ಪರವಾಗಿ ಗಾಂಧಿಜಿಯವರು ಮಾತ್ರ ರುಜು ಹಾಕಬೇಕೆಂದು ಸೂಚಿಸಿ, ತಮ್ಮ ರುಜು ಹಾಕಿದರು. ತಮ್ಮ ಸ್ವಂತವಾಗಿ ಮಾತ್ರ ಇದಕ್ಕೆ ಬೆಂಬಲ ಕೊಡುತ್ತೇನೆಂದೂ, ಕಾಂಗ್ರೆಸ್ಸಿನ ಬೆಂಬಲ ಬೇಕಾದರೆ ರಾಷ್ಟ್ರಪತಿಗಳೇ ಅದಕ್ಕೆ ರುಜು ಹಾಕಬೇಕೆಂದೂ ಹೇಳಿ ಮಹಾತ್ಮಜಿಯವರೂ ಆ ಹೇಳಿಕೆಗೆ ರುಜು ಹಾಕಿದರು. ರಾಷ್ಟ್ರಪತಿಗಳ ರುಜು ಇಲ್ಲದೆಯೇ ಗಾಂಧಿ-ಜಿನ್ನಾ ಹೇಳಿಕೆಯು ಹೊರ ಬಿದ್ದಿತು. ಮೊನ್ನೆ ಕೃಪಲಾನಿಯವರೊಡನೆ ವೈಸರಾಯರ ಭೇಟಿ ನಡೆದಾಗ ಆಚಾರ್ಯರ ರುಜುವನ್ನು ಸೇರಿಸದಿದ್ದ ಬಗ್ಗೆ ವೈಸರಾಯರು ರಾಷ್ಟ್ರಪತಿಗಳ ಕ್ಷಮಾಪಣೆ ಕೇಳಿದರೆಂದು ತಿಳಿದು ಬಂದಿದೆ.

ಡಾ॥ ಖರೆಯವರು ಆಳ್ವಾರ್ ದಿವಾನರಾದರು

ಮಧ್ಯಪ್ರಾಂತದ ಮಾಜಿ ಕಾಂಗ್ರೆಸ್ ಪ್ರಧಾನಿಗಳೂ, ವೈಸರಾಯ್ ಕಾರ್ಯಕಾರಿ ಸಮಿತಿ ಮಾಜಿ ಸದಸ್ಯರೂ ಆದ ಡಾ॥ ಎನ್. ಬಿ. ಖರೆಯವರು ಆಳ್ವಾರ್ ಸಂಸ್ಥಾನದ ದಿವಾನರಾಗಿ ನೇಮಕ ಮಾಡಲ್ಪಟ್ಟಿದ್ದಾರೆ.

ಮಾಪಿಳ್ಳೆ ಸ್ಥಾನ

ಮಲಬಾರ್ ಜಿಲ್ಲಾ ಮುಸ್ಲಿಂ ಲೀಗಿನ ಕಾರ್ಯಕಾರಿ ಸಮಿತಿಯು ಸಭೆಯು ಮೊನ್ನೆ ನಡೆದು ಮಲಬಾರ್ ಮುಸ್ಲಿಮರಿಗಾಗಿ 'ಮಾಪಿಳ್ಳೆ ಸ್ಥಾನ'ವೊಂದನ್ನು ರಚಿಸಬೇಕೆಂದು ನಿರ್ಧರಿಸಿರುತ್ತದೆ. ಇಂತಹ ಸ್ಥಾನಕ್ಕೆ ಆ ವಕಾಶವಿಲ್ಲದ ರಾಜ್ಯಾಂಗವು ಈ ಪ್ರಾಂತ್ಯದ ಮುಸ್ಲಿಮರಿಗೆ ಒಪ್ಪಿಗೆಯಾಗುವುದಿಲ್ಲವೆಂದೂ ತಿಳಿಸಲಾಗಿದೆ. ಸದ್ಯದಲ್ಲಿ 'ಮಾಪಿಳ್ಳೆ ಸ್ಥಾನ'ದ ಸಮ್ಮೇಳನವೊಂದನ್ನು ಸೇರಿಸಬೇಕೆಂದೂ, ಕೇಂದ್ರ ಸರ್ಕಾರದ ಸಚಿವರಾದ ಮಿ॥ ಸೈಯದ್ ಅಬ್ದುಲ್ ರಬ್ ನಿಷ್ತಾರ್ ರವರನ್ನು ಈ ಸಮ್ಮೇಳನವನ್ನು ಆರಂಭಿಸಲು ಆಹ್ವಾನಿಸಬೇಕೆಂದೂ ನಿರ್ಧರಿಸಲಾಗಿದೆ. ಕೇರಳ ಸಂಯುಕ್ತ ಸಮ್ಮೇಳನದಲ್ಲಿ ಮುಸ್ಲಿಮರು ಭಾಗವಹಿಸಕೂಡದೆಂದು ತೀರ್ಮಾನಿಸಲಾಗಿದೆ.

ಹರಿಕಥೆ

ಚಾಮರಾಜ ಮೊಹಲ್ಲಾ ಗೊಲ್ಲಗೇರಿಯಲ್ಲಿರುವ ಶ್ರೀ ಜನಾರ್ದನ ಮಂದಿರದಲ್ಲಿ ನಾಳೆ ರಾತ್ರಿ ೮ ಗಂಟೆಗೆ ವಿದ್ವಾನ್ ಕೇಶವ ಮಾಧವದಾಸರವರಿಂದ ಇಂದ್ರಕೀಲವೆಂಬ ಹರಿಕಥೆಯು ನಡೆಯುತ್ತದೆ.

ವಾಚಕರಲ್ಲಿ ವಿನಂತಿ

ರಾಜಧಾನಿಯ ಚಂದಾದಾರರ ಪೈಕಿ ಕೆಲವರಿಗೆ ನಮ್ಮ ಪತ್ರಿಕೆಯು ಸರಿಯಾಗಿ ತಲುಪುತ್ತಿಲ್ಲವೆಂದು ಕೇಳಿ ವಿಷಾದಿಸುತ್ತೇವೆ. ಇದನ್ನು ಕ್ರಮಪಡಿಸಲು ತಕ್ಕ ವ್ಯವಸ್ಥೆಯನ್ನು ಸದ್ಯದಲ್ಲಿಯೇ ಮಾಡಲಿರುತ್ತೇವೆ. ಪತ್ರಿಕೆಗಳು ಸರಿಯಾಗಿ ತಲುಪದಿರುವ ಚಂದಾದಾರರುಗಳು ದಯವಿಟ್ಟು ಸದರಿ ಅಂಶವನ್ನು ನಮಗೆ ಲಿಖಿತ ಮೂಲಕವಾಗಿಯಾಗಲೀ, ಟೆಲಿಫೋನ್ ಮೂಲಕವಾಗಿಯಾಗಲೀ ತಿಳಿಸಬೇಕೆಂದು ಕೋರುತ್ತೇವೆ.

ವ್ಯವಸ್ಥಾಪಕ - 'ಸಾಧ್ವಿ'

ಸಾಧ್ವಿ

ತಾ|| ೨೦-೪-೪೭ ಶನಿವಾರ

ನೆಹರೂರವರ ಎಚ್ಚರಿಕೆ

ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸದಿರುವ ಸಂಸ್ಥಾನಗಳನ್ನು ವಿರೋಧಿಗಳೆಂತೆ ಪರಿಗಣಿಸಲಾಗುವುದೆಂದು ಪಂಡಿತ ನೆಹರೂರವರು ಗ್ವಾಲಿಯರ್‌ನಲ್ಲಿ ನಡೆದ ಸಂಸ್ಥಾನ ಪ್ರಜಾ ಸಮ್ಮೇಳನದಲ್ಲಿ ತಿಳಿಸಿರುತ್ತಾರೆ. ಇದರ ಪರಿಣಾಮವನ್ನು ಅನುಭವಿಸಲು ಅಂತಹ ಸಂಸ್ಥಾನಗಳು ಸಿದ್ಧವಾಗಿರಬೇಕೆಂದೂ ಎಚ್ಚರಿಸಿರುತ್ತಾರೆ. ನೂತನ ರಾಜ್ಯಾಂಗ ನಿರ್ಮಾಣ ಕಾರ್ಯದಲ್ಲಿ ಇನ್ನು ಮೇಲೆಯೂ ಹಿಂದು ಮುಂದು ನೋಡುತ್ತ ಅಡ್ಡಗೋಡೆಯ ಮೇಲೆ ಕುಳಿತಿರಲು ಆಸ್ಪದವಿಲ್ಲವೆಂಬುದೇ ಇದರ ಅಭಿಪ್ರಾಯ.

ಭಾರತ ಸ್ವಾತಂತ್ರ್ಯ ಸಾಧನೆಯಲ್ಲಿಯೂ, ತನ್ನ ಪ್ರಜೆಗಳ ರಾಜಕೀಯ ಹಕ್ಕು ಬಾಧ್ಯತೆಗಳನ್ನು ಈಡೇರಿಸುವುದರಲ್ಲಿಯೂ ತಾವು ಸಂಪೂರ್ಣವಾಗಿ ಸಹಕರಿಸುವುದಾಗಿ ನರೇಂದ್ರ ಮಂಡಲದವರು ಸ್ಪಷ್ಟವಾಗಿ ಘೋಷಣೆ ಮಾಡಿ ಒಂದು ವರ್ಷದ ಮೇಲಾದರೂ ಈ ವಾಗ್ದಾನವು ಕೇವಲ ಸರಸ್ವತೀ ಪ್ರಸನ್ನವಾಗಿಯೇ ಉಳಿದಿದೆಯೆಂದು ನೆಹರೂರವರು ಟೀಕಿಸಿದ್ದಾರೆ. ದಾಕ್ಷಿಣ್ಯಕ್ಕಾಗಿಯೂ, ದುರಭಿಮಾನದಿಂದಲೂ ಮುಚ್ಚುಮರೆಯಿಂದ ವರ್ತಿಸುವ ಕಾಲವು ಕಳೆದು ಹೋಯಿತೆಂದೂ, ಇದ್ದುದನ್ನು ಇದ್ದ ಹಾಗೆಯೇ ಹೇಳುವ ಸಮಯವು ಬಂದಿರುವುದೆಂದೂ ಅವರು ತಿಳಿಸಿರುವರು.

ಭಾರತ ರಾಜ್ಯಾಂಗ ಸಭೆಯು ಈಗಾಗಲೇ ಬಹಳ ಮಟ್ಟಿಗೆ ತನ್ನ ಕೆಲಸಕಾರ್ಯಗ ಮುಂದುವರೆದಿರುತ್ತದೆ. ನರೇಂದ್ರ ಮಂಡಲದವರು ಸಾಮೂಹಿಕವಾಗಿ ಅದರಲ್ಲಿ ಸೇರಬೇಕೇ? ಬೇಡವೇ?-ಎಂಬ ಬಗ್ಗೆ ಇನ್ನೂ ಪತ್ರವ್ಯವಹಾರದಲ್ಲಿಯೇ ತೊಡಗಿದ್ದಾರೆ. ಇದುವರೆಗೆ ಆಗಿರುವ ಒಪ್ಪಂದವನ್ನೂ ಸಹ ಬಾಹಿರಗೆ ತಂದಿರುವುದಿಲ್ಲ. ಇದರಿಂದ ಜಿಗುಪ್ಸೆಗೊಂಡ ಅನೇಕ ಸಂಸ್ಥಾನಗಳವರು ಒತ್ತಾಯ ಮಾಡಿದ ಮೇಲೆ ಅಪೇಕ್ಷೆ ಪಡುವ ಸಂಸ್ಥಾನಗಳಿಗೆ ವಿನಾಯಿತಿಯನ್ನು ಕೊಡಲಾಗಿದೆ.

ಇನ್ನು ಕೆಲವು ತಿಂಗಳುಗಳಲ್ಲಿಯೇ ಹೊಸ ರಾಜ್ಯಾಂಗದ ಸ್ವರೂಪವು ಒಂದು ನಿರ್ದಿಷ್ಟವಾದ ಕಟ್ಟನ್ನು ಮುಟ್ಟುವುದು. ಭಾರತದ ಮುಂದಿನ ಅನೇಕ ವ್ಯವಹಾರಗಳನ್ನು ಅದಕ್ಕೆ ಅನುಗುಣವಾಗಿ ರೂಪಿಸಬೇಕಾಗುವುದು. ಆದುದರಿಂದ ಸಂಸ್ಥಾನಗಳು ತಮ್ಮ ಅಭಿಪ್ರಾಯ ನಿರ್ಧಾರವನ್ನು ಕೂಡಲೇ ಮಾಡುವುದು ಅವಶ್ಯಕ. ಅಖಿಲ ಭಾರತದ ಯೂನಿಯನ್ನಿನಿಂದ ಆಗಬೇಕಾದ ಪ್ರಯೋಜನಗಳನ್ನು ಹೊಂದಬೇಕಾದರೆ ಸಂಸ್ಥಾನಗಳು ಅದರ ನಿಯಮಾವಳಿಗಳಲ್ಲಿ ಸಹಭಾಗಿಗಳಾಗಬೇಕು. ಇಲ್ಲವಾದರೆ ಅದರಿಂದ ದೊರೆಯಬಹುದಾದ ಸಹಾಯ ಸಂಪತ್ತುಗಳನ್ನು ಅವುಗಳು ನಿರೀಕ್ಷಿಸುವಂತಿಲ್ಲ. ಸಂಕುಚಿತವಾದ ಎಲ್ಲೆ ಕಟ್ಟಿನೊಳಗೆ ಸೇರಿಹೋಗಿ ಸಹಾಯವಿಲ್ಲದೆ ಇಂತಹ ಸಂಸ್ಥಾನಗಳು ಸೊರಗಿ, ಕೊರಗಬೇಕಾಗುವುದು. ಇಂತಹ ಪರಿಸ್ಥಿತಿಯು ಯಾವ ಸಂಸ್ಥಾನಕ್ಕೂ ಹಿತಕರವಾದುದಲ್ಲ. ನೆಹರೂರವರ ಎಚ್ಚರಿಕೆಯನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಂಡು ಬಿಟ್ಟರೋ

ಸ್ತ್ರೀಯರ ಔದ್ಯೋಗಿಕ ಶಿಕ್ಷಣ ಸಂಸ್ಥೆ

ಪೂನಾ ೧೮

ಗೌರವಯುತವಾದ ಜೀವನವನ್ನು ನಡೆಸಲು ಅನುಕೂಲವಾಗುವಂತೆ ಸ್ತ್ರೀಯರಿಗೆ ಶಿಕ್ಷಣವನ್ನು ಕೊಡಲು ಪೂನಾ ನಗರದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಕ್ಷಣ ಸಂಸ್ಥೆಯ ೫೧ನೆಯ ವಾರ್ಷಿಕ ವರದಿಯು ಪ್ರಕಟವಾಗಿದೆ. ಕಳೆದ ವರ್ಷ ಈ ಸಂಸ್ಥೆಯ ಸುವರ್ಣ ಮಹೋತ್ಸವವು ವೈಭವದಿಂದ ನಡೆಯಿತು. ಫಲ್ಟನ್ ಸಂಸ್ಥಾನದ ಲೇಡಿ ಲಕ್ಷ್ಮೀದೇವಿ ರಾಣಿ ಸಾಹೇಬರವರು ಇದರ ಅಧ್ಯಕ್ಷರಾಗಿದ್ದಾರೆ. ಮಹಿಳೆಯರ ಅದರಲ್ಲೂ ವಿಧವೆಯರ ಅಭಿವೃದ್ಧಿಗಾಗಿ ದುಡಿಯುತ್ತಿರುವ ಈ ಮಹಿಳಾ ಸಂಸ್ಥೆಗೆ ಮಹಾಜನರೆಲ್ಲರೂ ಉದಾರವಾಗಿ ಸಹಾಯಮಾಡಬೇಕೆಂದು ಪ್ರಾರ್ಥಿಸಲಾಗಿದೆ.

ಕಂದಾಯ ನಿರಾಕರಣೆ ಚಳುವಳಿಗೆ ಪ್ರತಿಬಂಧಕ

ಫ್ರೆಂಚ್ ಇಂಡಿಯಾದಲ್ಲಿ ಕರನಿರಾಕರಣೆ ಚಳುವಳಿಗೆ ಬೆಂಬಲ ಕೊಡುವವರನ್ನೂ ಪ್ರಚಾರ ನಡೆಸುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಲಾಗುವುದೆಂದು ಅಲ್ಲಿನ ಸರ್ಕಾರದ ವಿಶೇಷ ಪ್ರಕಟಣೆಯೊಂದು ತಿಳಿಸುತ್ತದೆ.

ಗಳಿರುವ ಬ್ರಿಟಿಷರ ಅವಲಂಬನೆಯನ್ನು ಮರೆತು, ಪ್ರಜೆಗಳ ಪ್ರೀತಿ, ವಿಶ್ವಾಸಗಳನ್ನೇ ನಂಬಿ ಎಲ್ಲ ಸಂಸ್ಥಾನಗಳೂ ಭಾರತ ರಾಜ್ಯಾಂಗ ನಿರ್ಮಾಣ ಕಾರ್ಯದಲ್ಲಿ ಭಾಗಿಗಳಾಗಿ ತಮ್ಮ ದೇಶಾಭಿಮಾನವನ್ನೂ, ಸ್ವಾತಂತ್ರ್ಯ ಪ್ರೇಮವನ್ನೂ ಪ್ರಕಾಶಪಡಿಸುವುದು ಅತ್ಯಂತ ಸಾಧುವಾಗಿರುತ್ತದೆ.

ಜಿಲ್ಲಾ ಬೋರ್ಡ್ ಚುನಾವಣೆ
೨೮-೪-೪೭ ನೇ ಸೋಮವಾರ
ನಂಜನಗೂಡು ತಾಲ್ಲೂಕಿನ ಈ ಕೆಳಗಿನ
ಕಾಂಗ್ರೆಸ್ ಉಮೇದುವಾರರಿಗೇ
ದಯವಿಟ್ಟು ಓಟು ಕೊಡಿ :-
ಹೆಚ್. ಲಿಂಗಪ್ಪ B. Sc., LL.B
ಹೆಚ್. ಎಂ. ನಾಗಪ್ಪ (ಹುಳ್ಳಳ್ಳಿ)
ಎಂ. ಲಿಂಗಣ್ಣ B. Sc., LL.B

ಅಪೆರಾ ಟಾಕೀಸ್, ಮೈಸೂರು
೧೯-೪-೪೭ ರಿಂದ ಪ್ರತಿ ದಿನ ೩ ಆಟಗಳು
ರಾಜಕುಮಾರಿ
(ತಮಿಳು)
ಪಾತ್ರ:- ಮಾಲತಿ, ಟಿ. ಎಸ್. ಬಾಲಯ್ಯ,

ಬರ್ಮಾದಿಂದ ಬ್ರಿ|| ಸೈನ್ಯಗಳ ವಾಪಸು

ಬರ್ಮಾದಲ್ಲಿರುವ ಬ್ರಿಟಿಷ್ ಮತ್ತು ಭಾರತೀಯ ಸೈನ್ಯಗಳನ್ನು ಇನ್ನು ಆರು ತಿಂಗಳುಗಳೊಳಗಾಗಿ ವಾಪಸು ಕರೆಸಿಕೊಳ್ಳುವುದಾಗಿ ಪ್ರಮುಖ ಬ್ರಿ|| ಅಧಿಕಾರಿಗಳು ಹೇಳಿರುವುದಾಗಿ ವರದಿಯಾಗಿದೆ.

ಚರ್ಚಾಗೋಷ್ಠಿಗೆ ಸರ್ ಸಿ. ಪಿ. ಯವರ ಬೆಂಬಲ

ಕಾಂಗ್ರೆಸ್, ಲೀಗ್, ಸಿಖ್ ಕ್ಷತ್ರಿಯರ ಮತ್ತು ಸಂಸ್ಥಾನ ಪ್ರತಿನಿಧಿಗಳನ್ನೊಳಗೊಂಡ ಚರ್ಚಾಗೋಷ್ಠಿಯೊಂದು ಸೇರಿ ಇಂದಿನ ಪರಿಸ್ಥಿತಿಯನ್ನು ಪರಿಶೀಲಿಸಿ ಒಂದು ನಿರ್ಧಾರಕ್ಕೆ ಬರುವುದು ಅತ್ಯಗತ್ಯವೆಂದು ಪಂ|| ನೆಹರೂರವರು ಸೂಚಿಸಿರುವ ಸಲಹೆಯನ್ನು ತಿರುವಾಂಕೂರಿನ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಸ್ವಾಗತಿಸಿದ್ದಾರೆ. ಮುಂದಿನ ವರ್ಷದೊಳಗೆ ತೀರ್ಮಾನಕ್ಕೆ ನಾವುಗಳು ಬಾರದಿದ್ದರೆ ಭಾರತದಲ್ಲಿ ಅರಾಜಕತೆ, ಅವ್ಯವಸ್ಥೆ ತಲೆದೋರುವುದು ಖಂಡಿತವೆಂದು ಅವರು ತಿಳಿಸಿದ್ದಾರೆ.

ರಾಜಕಮಲ್
೧೮-೪-೪೭ ರಿಂದ ೧ನೇ ವಾರ
1 ನೇ ಆಟ 6 ಕ್ಕೆ 2 ನೇ ಆಟ 9-15 ಕ್ಕೆ
ಶ್ರೀ ಕೃಷ್ಣಲೀಲಾ (ಕನ್ನಡದಲ್ಲಿ)
ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಪರಿಪಾಲಿಸುವ ಸಲುವಾಗಿ ಪರಮಾತ್ಮನು ಅವತರಿಸಿ ತನ್ನ ಮಹಿಮೆಯನ್ನು ಅರುಹಿದ ಕಥಾ ವೈಖರಿ

RAJKAMAL
Morning Shows from 18-4-47 for 4 days daily at 10-30
The Phantom Speaks
The ace of shockers—a spine chiller of murder and revenge with a dead criminal taking possesion of living mind.

Edited, printed and published by A. R. Nagarajan at the Sadhvi Press D. Subbiah Road, Mysore.

ಕಸ್ತೂರಿ ಬಾಯಿ ಶಿಬಿರ ಕಟ್ಟಡದ ಪ್ರಾರಂಭ

ಮೂಡಿಗೆರೆ ತಾಲ್ಲೂಕು ಹೊಸ ... ಹೋಬಳಿ ಭಾರತೀಯ ಬಯಲು ... ಕೆಲವು ದಿನಗಳಿಂದ ನಡೆಯುತ್ತಿರುವ ಕಸ್ತೂರಿ ಬಾಯಿ ಗ್ರಾಮ ಸೇವಾ ಶಿಬಿರದ ... ಕಟ್ಟಡದ ಪ್ರಾರಂಭೋತ್ಸವವನ್ನು ೧೬ ನೇ ತಾ|| ಬುಧವಾರ ಶ್ರೀಮಾನ್ ... ಶ್ರೀಯುತ ದಾಸಪ್ಪನವರು ನೆರವೇರಿಸಿ... ಸಂಸ್ಥೆಯ ಕಾರ್ಯದರ್ಶಿ ಶ್ರೀ ಸಿ. ಜಿ. ವಿಶ್ವನಾಥರವರು ಶಿಬಿರದ ಉದ್ದೇಶ ... ಕಾರ್ಯಗಳನ್ನು ವಿವರಿಸಿದರು. ಪ್ರ... ಸಭೆಯ ಸದಸ್ಯರಾದ ಶ್ರೀ ಅಣ್ಣಪ್ಪ... ಅಧ್ಯಕ್ಷತೆ ವಹಿಸಿದ್ದರು. ಶಾಸನ ಸಭಾ ಸದಸ್ಯರಾದ ಶ್ರೀ ಹುಚ್ಚೇಗೌಡರು ಭಾ... ಮಾಡಿ ರಚನಾತ್ಮಕ ಕಾರ್ಯದ ಅವ... ಶ್ಯಕತೆಯನ್ನು ತಿಳಿಸಿದರು. ಅಲ್ಲಿನ ... ಯರು ತಮ್ಮ ಬೇಡಿಕೆಗಳನ್ನು ಶ್ರೀ... ಯುತ ದಾಸಪ್ಪನವರಲ್ಲಿ ಸಲ್ಲಿಸಿ...

ಕೊಚ್ಚಿಯಿಂದ ರಾಜ್ಯಾಂಗ ಸಭೆಗೆ ಚುನಾವಣೆ

ಭಾರತ ರಾಜ್ಯಾಂಗ ಸಭೆಗೆ ಕೊಚ್ಚಿ... ನ ಸಭೆಯಿಂದ ಅಲ್ಲಿನ ಆಹಾರ ಮಂ... ಯಾದ ಶ್ರೀ ಪನಂಪಿಳ್ಳಿ ಗೋವಿಂದ ... ನ್‌ರವರು ಅವಿರೋಧವಾಗಿ ಚುನಾ... ರಾಗಿದ್ದಾರೆ

ನಾಯಿಕೆಮ್ಮಿನ ಔಷಧಿ
೭-೮ ದಿವಸಗಳಲ್ಲೇ ಖಾತರಿಯ ವಾಸಿಯಾಗುತ್ತೆ.
ಕ್ರಯ ಬಾಟ್ಲಿಗೆ 0-8-0
ಗೂರ್ಲು—ಉಬ್ಬಸಕ್ಕೆ
(Asthma)
ಖಾತರಿಯಾದ ಔಷಧಿ ದೊರೆಯು... ಅನೇಕ ದೊಡ್ಡ ಮನುಷ್ಯರು ಬಂಗ... ಪವರ ಮತ್ತು ಸರ್ಟಿಫಿಕೇಟ್‌ಗಳನ್ನು ಕೊ... ಟ್ಟಿದ್ದಾರೆ.
(Appendecitis) ಗುಲ್ಮ ಶೂ... ಮತ್ತು (Tonsils) ಗಲಾಯುಕ್ತ ... ಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸ... ಬಹುದು ಬಂದು ನೋಡಿ.
ಗುಂಡ್ಲುಪೇಟೆ ಆರ್. ಎಸ್. ಪಂಡಿ...
ದಿವಾನ್ಸ್ ರೋಡ್, ಗೊಲ್ಲಗೇರಿ ಮೈಸೂ...

ಹುರಿಗಡ...
ಕಂಟ್ರೋಲ್ ಬೆಲೆಗೆ ದೊರೆಯುತ್ತದೆ
ನಂ. ೧. ರೂ ೧ ಕ್ಕೆ ೨|| ...
ನಂ. ೨ ರೂ ೧ ಕ್ಕೆ ೨||| ...
ಯಂ. ಪುಟ್ಟಸ್ವಾಮಯ್ಯ
ಕಡ್ಲೆ ಅಂಗಡಿ, ನಂಜನಗೂಡು

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್
ಅಶೋಕಾ ರಸ್ತೆ, ಮೈಸೂರು : : ಫೋನ್ 411
ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಯಲ್ಲಿ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ
ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್

ಕಂಟ್ರೋಲು ಬೆಲೆ! ಸುಸಮಯ
ಹೊಸ ಜವಳಿ
ನಮ್ಮಲ್ಲಿ ಈಗತಾನೇ ಹೊಸದಾಗಿ ಬಂದಿರುವ ಬೆನಾರಿಸ್, ಕಂಚಿ, ಆರ್ಣಿ, ಕಾಂಚಿಪುರಂ ಹುಬ್ಬಳ್ಳಿ ಸೀರೆಗಳೂ, ಕರಾಚಿ ಸೀರೆಗಳೂ, ನೂಲಿನ ಪೂನಾ ರಖಂವಾರ ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.
M. P. V., M. V ಭೋಜಯ್ಯ B. A. ಅಂಡ್ ಬ್ರದರ್ಸ್
ಬೊಂಬಾಯಿ ಆನಂದ ಭವನ ಹೋಟೆಲ್ ಲೈನ್ ಬಲಭಾಗದ ಕೊನೇ
ಜವಳಿ ಅಂಗಡಿ, ಮೈಸೂರು

ಫೋ. ನಂ. 392 WEEKLY EDITION ಅಂಚೆಯ ಪ್ರತಿ 6 ಕಾಸು

ಸಾಧ್ವಿ

ಸಂಪುಟ ೧೧] ಸೋಮವಾರ ೨೧—೪—೪೭ [ಸಂಚಿಕೆ ೨೩೫

ವೈಸರಾಯರು ಮೇ ನಲ್ಲಿ ಚಕ್ರಗೋಷ್ಠಿ ಸೇರಿಸುವರು

ಗಡಿನಾಡು ಗೌರ್ನರನ್ನು ವಾಪಸು ಕರೆಸಬೇಕು

ಗಡಿನಾಡಿನಲ್ಲಿರುವ ಕಾಂಗ್ರೆಸ್ ಮಂತ್ರಿಮಂಡಲವನ್ನು ಉರುಳಿಸಲು ಆರಂಭವಾಗಿರುವ ಲೀಗ್ ಚಳುವಳಿಗೆ ಅಲ್ಲಿನ ಅಧಿಕಾರಿಗಳ ಮತ್ತು ಗೌರ್ನರರ ಪೂರ್ಣ ಬೆಂಬಲವಿದೆಯೆಂದೂ, ಆದ್ದರಿಂದ ಆ ಪ್ರಾಂತ್ಯದಲ್ಲಿ ಶಾಂತಿ ನೆಲೆಸಲು ತಕ್ಕ ಕಾರ್ಯಕ್ರಮವನ್ನು ಮಂತ್ರಿ ಮಂಡಲವು ಕೈಗೊಳ್ಳಲು ಅಲ್ಲಿನ ಗೌರ್ನರನ್ನು ವಾಪಸು ಕರೆಸಬೇಕೆಂದೂ ಗಡಿನಾಡು ಕಾಂಗ್ರೆಸ್ ಸಚಿವರು ವೈಸರಾಯರಿಗೆ ಸೂಚಿಸಿದ್ದರು. ಪಕ್ಕ ಕೇಂದ್ರ ಸರ್ಕಾರದ ಹಲವು ಸದಸ್ಯರ ಬೆಂಬಲವೂ ಇದ್ದಿತು. ಮೊನ್ನೆ ವೈಸರಾಯರ ಸಮ್ಮುಖದಲ್ಲಿ ಗಡಿನಾಡಿನ ಗವರ್ನರು, ಪ್ರಧಾನಿ ಡಾ|| ಖಾನ್ ಸಾಹೇಬ್, ಪಂ|| ನೆಹರೂ ಮುಂತಾದವರು ಸೇರಿ ನಡೆಸಿದ ಮಾತುಕತೆಗಳ ಫಲವಾಗಿ ಶಾಂತಿ ಸ್ಥಾಪನೆಗಾಗಿ ಗಡಿನಾಡಿನ ಗವರ್ನರು ಕೂಡಲೇ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಒಪ್ಪಿರುವರೆಂದೂ ಗೊತ್ತಾಗಿದೆ. ಗಾಂಧಿ - ಜಿನ್ನಾ ಹೇಳಿಕೆಯನ್ನು ಸಾರ್ಥಕಗೊಳಿಸಲು ಲೀಗು ಗಡಿನಾಡಿನಲ್ಲಿ ಆರಂಭಿಸಿರುವ ಚಳುವಳಿಯನ್ನು ನಿಲ್ಲಿಸುವುದಾಗಿಯೂ ಹೇಳಲಾಗುತ್ತಿದೆ

ಬಾಲವಿರುವ ಮಗು

ಗಂಜಾಂ ಜಿಲ್ಲೆಯಲ್ಲಿ ೧೬ ದಿನಗಳ ಹಿಂದೆ ಹೆಣ್ಣು ಮಗುವೊಂದು ಜನಿಸಿತು. ಇದಕ್ಕೆ ಬಾಲ ಇದೆ ಈ ಬಾಲವನ್ನು ತೆಗೆದುಹಾಕಲು ಶಸ್ತ್ರ ಚಿಕಿತ್ಸೆಗಾಗಿ ಬರ್ಹಾಂಪುರಕ್ಕೆ ಆ ಮಗುವನ್ನು ಕರೆದುಕೊಂಡು ಹೋಗಲಾಗಿದೆಯೆಂದು ತಿಳಿದು ಬಂದಿದೆ.

ಹೆಂಡಕ್ಕೆ ರೀಪ್ಪೆ

ಪುದುಕೋಟೆ ಸಂಸ್ಥಾನದಲ್ಲಿ ಪಾನನಿರೋಧವನ್ನು ಜಾರಿಗೆ ತರಬೇಕೆಂದು ಅಲ್ಲಿನ ಶಾಸನ ಸಭೆಯಲ್ಲಿ ಬಂದ ನಿರ್ಣಯವಸೂಚನೆಯನ್ನು ದಿವಾನರಾದ ಎ|| ಖಲೀಫುಲ್ಲರವರು ವಿರೋಧಿಸಿ ಪಾನ ನಿರೋಧದಿಂದ ಸಂಸ್ಥಾನದ ವರಮಾನವು ಬಿದ್ದು ಹೋಗುವುದೆಂದೂ, ಆದ್ದರಿಂದ ಹೆಂಡವನ್ನು ನಿಗದಿಯಾದ ಪ್ರಮಾಣದಲ್ಲಿ ಹಂಚಲಾಗುವುದೆಂದೂ ತಿಳಿಸಿದ್ದಾರೆ.

ಜರ್ಮನ್ ಕೋಟೆಯ ನಾಶ

ಹೆಲಿಗೋಲ್ಯಾಂಡ್ ಎಂಬ ದ್ವೀಪದಲ್ಲಿ ಜರ್ಮನರು ನಿರ್ಮಿಸಿದ್ದ ಭಾರಿಕೋಟೆಯನ್ನು ಮಿತ್ರಪಕ್ಷದವರು ಮೊನ್ನೆ ದಿನ ನಾಶ ಮಾಡಿದರು ಇದನ್ನು ನೆಲಸಮ ಮಾಡಲು ೭೦೦೦ ಟನ್ ಅಗ್ನಿಸ್ಫೋಟಕ ವಸ್ತುಗಳನ್ನು ಉಪಯೋಗಿಸಲಾಯಿತು. ಈ ಪ್ರದೇಶವನ್ನು ವಿಹಾರ ಕ್ಷೇತ್ರವನ್ನಾಗಿ ಮಾಡಲಾಗುವುದೆಂದು ಹೇಳಲಾಗಿದೆ.

EXCELLO ARTISTS
Stage Two Sweet Kannada
DRAMAS
ಸತ್ಯಸಾಧನೆ] ಮತ್ತು [ಪೇಪರ್‌ಪಾತ್ರ-ಕೋಲಾಹಲ
on Tuesday 22 April 1947
AT 6-30 p m
at Town Hall, Mysore
For the Benefit of
A Students Organisation
(ಸಮಾಗೋಷ್ಠಿ)
Rates:- Rs 0-7-11 0-3-11

ಸತ್ಯಾಗ್ರಹದ ಸಿದ್ಧತೆ

ಮೈಸೂರು ೨೧

ಮೈಸೂರು ಸಂಸ್ಥಾನದಲ್ಲಿ ಸಂಪೂರ್ಣ ಜವಾಬ್ದಾರೀ ಸರ್ಕಾರದ ಸ್ಥಾಪನೆಗಾಗಿ ೧-೫-೪೭ ರಿಂದ ಮೈಸೂರು ಕಾಂಗ್ರೆಸ್ಸು ಹೂಡಲಿರುವ ಸತ್ಯಾಗ್ರಹದಲ್ಲಿ ಭಾಗವಹಿಸಲು ಅಪೇಕ್ಷಿಸುವ ಮಹಿಳೆಯರೂ, ಮಹನೀಯರೂ ಮೈಸೂರು ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ೨೩ ನೇ ತಾ|| ಬುಧವಾರದಿಂದ ತಮ್ಮ ಹೆಸರುಗಳನ್ನು ಸತ್ಯಾಗ್ರಹದ ಪಟ್ಟಿಯಲ್ಲಿ ದಾಖಲು ಮಾಡಿಸುವುದಲ್ಲದೆ ಸತ್ಯಾಗ್ರಹ ಪ್ರತಿಜ್ಞೆಗೆ ರುಜು ಹಾಕಬೇಕೆಂದು ಕೋರಲಾಗಿದೆ. ಸತ್ಯಾಗ್ರಹವನ್ನು ಯಶಸ್ವಿಯಾಗಿ ನಡೆಸಿ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಪುರಜನರು ಸಂಪೂರ್ಣವಾದ ಬೆಂಬಲವನ್ನೂ ಸಹಕಾರವನ್ನೂ ನೀಡಬೇಕೆಂದು ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ಪ್ರಾರ್ಥಿಸಿರುತ್ತಾರೆ

ಸಾಯಿಬಾಬಾ ವಾರ್ಷಿಕೋತ್ಸವ

ವಾಣೀವಿಲಾಸ ಮೊಹಲ್ಲಾದಲ್ಲಿರುವ ಶ್ರೀ ಅಂಡಾಳ್ ಮಂದಿರದ ಹಿಂಭಾಗದಲ್ಲಿ ಶ್ರೀ ಬಾಬಾರವರ ಮಂದಿರಕ್ಕೆ ಕೊಡಲಾಗಿರುವ ಪ್ರದೇಶದಲ್ಲಿ ಶ್ರೀ ಸಾಯಿ ಬಾಬಾ ರವರ ಮೂರನೇ ವಾರ್ಷಿಕೋತ್ಸವವು ಇದೇ ಮೇ ೭ ನೇ ತಾ|| ಬುಧವಾರ ನಡೆಯುವುದು. ಅದೇ ದಿನ ಮಂದಿರದ ಶಂಕುಸ್ಥಾಪನಾ ಮಹೋತ್ಸವವನ್ನು ಅಖಿಲ ಭಾರತ ಬಾಬಾ ಸಮಿತಿಯ ಅಧ್ಯಕ್ಷರಾದ ಶ್ರೀ|| ನರಸಿಂಹಸ್ವಾಮಿಯವರು ನೆರವೇರಿಸುವರು. ಸಾರ್ವಜನಿಕರು ಸಹಾಯ ಮಾಡಬೇಕೆಂದು ಸಂಚಾಲಕಿಯರಾದ ಶ್ರೀಮತಿ ಸುನಂದಮ್ಮನವರು ಪ್ರಾರ್ಥಿಸಿದ್ದಾರೆ

ವಾಚಕರಲ್ಲಿ ವಿನಂತಿ

ರಾಜಧಾನಿಯ ಚಂದಾದಾರರ ಪೈಕಿ ಹಲವರಿಗೆ ನಮ್ಮ ಪತ್ರಿಕೆಯು ಸರಿಯಾಗಿ ತಲುಪುತ್ತಿಲ್ಲವೆಂದು ಕೇಳಿ ವಿಷಾದಿಸುತ್ತೇವೆ ಇದನ್ನು ಕ್ರಮಪಡಿಸಲು ತಕ್ಕ ವ್ಯವಸ್ಥೆಯನ್ನು ಸದ್ಯದಲ್ಲಿಯೇ ಮಾಡಲಿರುತ್ತೇವೆ ಪತ್ರಿಕೆಗಳು ಸರಿಯಾಗಿ ತಲುಪದಿರುವ ಚಂದಾದಾರರುಗಳು ದಯವಿಟ್ಟು ಸಂಗತಿ ಅಂಶವನ್ನು ನಮಗೆ ಲಿಖಿತ ಮೂಲಕವಾಗಿಯಾಗಲೀ, ಟೆಲಿಫೋನ್ ಮೂಲಕವಾಗಿಯಾಗಲೀ ತಿಳಿಸಬೇಕೆಂದು ಕೋರುತ್ತೇವೆ

ವ್ಯವಸ್ಥಾಪಕ - 'ಸಾಧ್ವಿ'

೧೯೫೩ ರಲ್ಲಿ ಮತ್ತೊಂದು ಮಹಾ ಯುದ್ಧ

ಪೌರ್ವಾತ್ಯ ದೇಶಗಳ ಗ್ರಂಥಗಳನ್ನು ವ್ಯಾಸಂಗ ಮಾಡಿ, ಅದ್ಭುತವಾದ ಜೋತಿಷ್ಯವಿದ್ಯೆಯನ್ನು ಸಂಪಾದಿಸಿರುವ ಮೈಕೇಲ್ ನಾಸ್ಟರ್ ಡ್ಯಾಮಸ್ ಎಂಬುವರು ೨೦೦ ವರ್ಷಗಳ ಭವಿಷ್ಯವನ್ನು ಸಾರಿದ್ದಾರೆ. ೧೫೫೫ ರಿಂದ ೩೭೯೭ ರ ವರೆಗಾಗುವ ಮಹಾ ಘಟನೆಗಳೆಲ್ಲವನ್ನೂ ನುಡಿದಿದ್ದಾರೆ. ೧೯೫೩ ರಲ್ಲಿ ಮತ್ತೊಂದು ಮಹಾ ಯುದ್ಧವಾಗುವುದೆಂದೂ, ೧೯೬೮ ರಲ್ಲಿ ಅದಕ್ಕಿಂತಲೂ ಭೀಕರವಾದ ಯುದ್ಧವಾಗುವುದೆಂದೂ ಹೇಳಿದ್ದಾರೆ. ಇದುವರೆಗೆ ಆತನು ಹೇಳಿದ್ದುದೆಲ್ಲ ಅಕ್ಷರಶಃ ಸತ್ಯವಾಗಿದೆ. ಹಿಟ್ಲರನ ಏಳಿಗೆ; ಆತ್ಮಹತ್ಯೆ, ಜರ್ಮನಿ ಪತನ, ಬ್ರಿಟಿಷ್ ಚಕ್ರಾಧಿಪತ್ಯದ ಅವನತಿ, ಭಾರತ, ಈಜಿಪ್ಟ್ ಮತ್ತು ಬರ್ಮಗಳ ಸ್ವಾತಂತ್ರ್ಯ ಇವುಗಳ ಬಗ್ಗೆ ಆತನು ಹೇಳಿರುವುದೆಲ್ಲಾ ಚಾಚೂ ತಪ್ಪದೆ ನಡೆದಿದೆ.

ದೆಹಲಿಯನ್ನು ಆಕ್ರಮಿಸಲು ೨೦ ಲಕ್ಷ ಮಂದಿಯ ಸೈನ್ಯ

೧೯೪೮ ನೇ ಜೂನ್ ತಿಂಗಳ ಅಂತ್ಯದೊಳಗೆ ಬ್ರಿಟಿಷರು ಎಲ್ಲ ಅಧಿಕಾರವನ್ನೂ ಭಾರತೀಯರಿಗೆ ವಹಿಸದಿದ್ದಲ್ಲಿ ಆಗ್ಗೆ ದೆಹಲಿಯನ್ನು ಆಕ್ರಮಿಸಲು ೨೦ ಲಕ್ಷ ಮಂದಿಯನ್ನು ಕೂಡಿಸಿ ರಾಷ್ಟ್ರೀಯ ಸೈನ್ಯವೊಂದನ್ನು ರಚಿಸುವುದಾಗಿ ಕ್ರಾಂತಿ ವೀರರಾದ ಬಾಮುಹೇಂದ್ರ ಪ್ರತಾಪರು ತಿಳಿಸಿದ್ದಾರೆ. ತಮ್ಮ ಕಾರ್ಯ ಸಾಧನೆಯಾಗ ಬೇಕಾದರೆ ಭಾರತದ ಸೈನ್ಯವು ತಮಗೆ ಬೆಂಬಲ ಕೊಡಬೇಕೆಂದೂ ಆ ರೀತಿ ಮಾಡಲು ಈ ೧೪ ತಿಂಗಳುಗಳಲ್ಲಿ ಪ್ರಚಾರ ನಡೆಸಲಾಗುವುದೆಂದೂ ಅವರು ತಿಳಿಸಿದ್ದಾರೆ

ನೆಹರೂ ಬಟ್ಟೆಗಾಗಿ ಗಾಂಧೀಜಿಯವರ ನೂಲು

ಪಂ|| ನೆಹರೂರವರಿಗೆ ದಾರ ತೆಗೆಯಲು ಪುರಸತ್ತು ಇಲ್ಲದ ಪ್ರಯುಕ್ತ ದೆಹಲಿಯ ಖಾದಿ ಭಂಡಾರದಿಂದ ಬಟ್ಟೆಯನ್ನು ಕೊಳ್ಳಲು ಅವರಿಗೆ ಮಹಾತ್ಮ ಗಾಂಧಿಯವರು ತಾವೇ ತೆಗೆದ ದಾರವನ್ನು ಕೊಟ್ಟರೆಂದು ವರದಿಯಾಗಿದೆ

ನರ್ತನ ಪ್ರದರ್ಶನ

ಮೈಸೂರು ೨೧

ಈ ದಿನ ಸಂಜೆ ೭-೩೦ ಕ್ಕೆ ಕೃಷ್ಣರಾಜ ಮೊಹಲ್ಲಾ ನಾಲಾ ಬೀದಿ ಶ್ರೀ ದೊಡ್ಡರಾಮ ಮಂದಿರದಲ್ಲಿ ಬೆಂಗಳೂರಿನ ಚಲನ ಚಿತ್ರ ವಿಖ್ಯಾತರಾದ ಕುಮಾರಿ ಮೈನಾ ಮತ್ತು ಪಾರ್ಟಿಯವರಿಂದ ನರ್ತನ ಪ್ರದರ್ಶನವನ್ನು ಏರ್ಪಡಿಸಿದೆ

ಮೇ ತಿಂಗಳಲ್ಲಿ ಚಕ್ರಗೋಷ್ಠಿ

ಕಾಂಗ್ರೆಸ್ ಮತ್ತು ಲೀಗ್ ನಾಯಕರ ಚಕ್ರಗೋಷ್ಠಿಯನ್ನು ವೈಸರಾಯ್ ಮೌಂಟ್ ಬ್ಯಾಟನ್ನರು ಮೇ ೧೫ ನೇ ತಾ|| ದ ವೇಳೆಗೆ ಸೇರಿಸಲು ಆಶಿಸಿರುವುದಾಗಿ ಗೊತ್ತಾಗಿದೆ. ಅಧಿಕಾರವನ್ನು ಭಾರತೀಯರಿಗೆ ವಹಿಸುವ ಬಗ್ಗೆ ಯೋಜನೆಯನ್ನೂ ಸಹ ಆ ವೇಳೆಗೆ ಅವರು ಸಿದ್ಧಗೊಳಿಸುವರೆಂದು ಹೇಳಲಾಗಿದೆ ಆ ಗೋಷ್ಠಿಯಲ್ಲಿ ವೈಸರಾಯರು ಪ್ರಧಾನ ಪಕ್ಷಗಳಿಗೆ ಒಪ್ಪಂದ ಮಾಡಿಸಲು ಪ್ರಯತ್ನಿಸುವರು ಅದು ವಿಫಲವಾದರೆ, ಬಂಗಾಳಾ ಮತ್ತು ಪಂಜಾಬನ್ನು ವಿಭಾಗಿಸಿ ಪಾಕೀಸ್ತಾನದ ರಚನೆಗೆ ಅವಕಾಶ ಕೊಡುವರು. ವಾಯುವ್ಯ ಮತ್ತು ಈಶಾನ್ಯದಲ್ಲಿರುವ ಮುಸ್ಲಿಂ ಪ್ರದೇಶಗಳಿಗೆ ಪ್ರತ್ಯೇಕ ರಾಜ್ಯಾಂಗ ಸಮಿತಿಯನ್ನು ರಚಿಸಲಾಗುವುದೆಂದೂ, ಈ ರೀತಿ ೩ ರಾಜ್ಯಾಂಗ ಸಮಿತಿಗಳ ನಿರ್ಮಾಣವನ್ನು ಕಾರ್ಯರೂಪಕ್ಕೆ ತರಲು ವೈಸರಾಯರು ಸೂಚಿಸುವರೆಂದೂ ಹೇಳಲಾಗಿದೆ.

ಬ್ರೆಲ್ವಿಯವರ ಆಗಮನ

ಸ್ವಂ.ಸು.ಪ್ರೋ] ಬೆಂಗಳೂರು ೨೧

'ಬಾಂಬೆ ಕ್ರಾನಿಕಲ್' ಪತ್ರಿಕಾ ಸಂಪಾದಕರಾದ ಶ್ರೀ|| ಬ್ರೆಲ್ವಿಯವರು ನಾಳೆ ಬೆಳಗ್ಗೆ ಇಲ್ಲಿಗೆ ಆಗಮಿಸುವರು.

§ ಸಂಸ್ಥಾನದ ನಾನ್ ಗೆಜೆಟೆಡ್ ಅಧಿಕಾರಿಗಳ ಸಂಘದವರು ೨೪ ನೇ ತಾ|| ಸಂಜೆ ವಿಕ್ಟೋರಿ ಭವನದಲ್ಲಿ ದಿವಾನರಿಗೆ ಬಿನ್ನವತ್ತಳೆಯನ್ನು ಅರ್ಪಿಸುವರು.

* ಶ್ರೀ|| ಕೆ. ಸಿ. ರೆಡ್ಡಿಯವರು ನಾಳೆ ಗ್ವಾಲಿಯರಿನಿಂದ ಆಗಮಿಸಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಭಾಗವಹಿಸುವರು

ಕಾಮರ್ಸ್ ಪರೀಕ್ಷೆಗೆ ಬಹಿಷ್ಕಾರವೇ?

ಮೈಸೂರು ಛಾಂಪಿಯನ್ ಮೆಟ್ರೋಪಾಲಿಟನ್ ಕಾಲೇಜಿನ ವಿದ್ಯಾರ್ಥಿಗಳು ಮುಂದಿನ ವಾರ ೨೮ ನೇ ತಾ|| ಪ್ರಾರಂಭವಾಗುವ ಕಾಮರ್ಸ್ ಪರೀಕ್ಷೆಗೆ ಕೂಡಲು ನಿರಾಕರಿಸಿದ್ದಾರೆಂದು ತಿಳಿದು ಬಂದಿದೆ ಕಾಲೇಜಿನ ಅಧಿಕಾರಿಗಳು ತಮ್ಮ ಜಾಹಿರಾತಿನಲ್ಲೂ ಮತ್ತು ತಮ್ಮ ಹೇಳಿಕೆಗಳಲ್ಲೂ ಎಂಟು ತಿಂಗಳ ಮಾತ್ರ ಫೀಜನ್ನು ತೆಗೆದುಕೊಳ್ಳುವುದಾಗಿ ತಿಳುವಳಿಕೆ ಕೊಟ್ಟು ಈಗ ಮತ್ತೆರಡು ತಿಂಗಳು ಫೀಜನ್ನು ಕೊಡದಿದ್ದರೆ ಪ್ರವೇಶ ಪತ್ರ ಕೊಡಲು ನಿರಾಕರಿಸಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ

ಜೈ ಪ್ರಕಾಶರ ಪ್ರವಾಸ

ಶ್ರೀ|| ಜೈ ಪ್ರಕಾಶ ನಾರಾಯಣ್ ಅವರ ಪತ್ನಿ ಶ್ರೀಮತಿ ಪ್ರಭಾವತಿ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ, ಇವರುಗಳು ಇದೇ ೨೬ ನೇ ತಾ|| ಶನಿವಾರ ಮಧ್ಯಾಹ್ನ ೪ ಘಂಟೆಗೆ ಮೈಸೂರು ನಗರಕ್ಕೆ ಕಾರಿನಲ್ಲಿ ಬರುವರು. ರಾತ್ರಿ ೧೧|| ಗೆ ಬೆಂಗಳೂರಿಗೆ ರೈಲಿನಲ್ಲಿ ಪ್ರಯಾಣ ಮಾಡುವರು. ೨೭ ನೇ ತಾ|| ಬೆಳಗ್ಗೆ ಕೆ. ಜಿ. ಎಫ್. ಗೆ ಭೇಟಿ ಇತ್ತು ಬೆಂಗಳೂರಿಗೆ ಹಿಂತಿರುಗುವರು. ರಾತ್ರಿ ೯ ಕ್ಕೆ ಕಾರಿನಲ್ಲಿ ತುಮಕೂರಿಗೆ ಆಗಮನ ೧೧ ಘಂಟೆಗೆ ತಿಪಟೂರಿಗೆ ರೈಲಿನಲ್ಲಿ ಪ್ರಯಾಣ ೨೮ ನೇ ತಾ|| ಸೋಮವಾರ ೧೧|| ಘಂಟೆಗೆ ದಾವಣಗೆರೆ, ೨೯ ನೇ ಮಂಗಳವಾರ ಬೆಳಗ್ಗೆ ದಾವಣಗೆರೆಯಿಂದ ಒಳ್ಳಾರಿಗೆ ಪ್ರಯಾಣ.

ಸಾಧ್ವಿ

ತಾ॥ ೨೧-೪-೪೮ ಸೋಮವಾರ

ಗ್ವಾಲಿಯರಿನ ಸಂದೇಶ

ಅಖಿಲ ಭಾರತ ಸಂಸ್ಥಾನಗಳ ಪ್ರಜಾ ಸಮ್ಮೇಳನದ ಅಧಿವೇಶನವು ಗ್ವಾಲಿಯರಿನಲ್ಲಿ ನಡೆದು ಮಹತ್ವ ಪೂರಿತವಾದ ನಿರ್ಣಯಗಳನ್ನು ಅಂಗೀಕರಿಸಿರುತ್ತದೆ. ಇಂದು ಜಗತ್ತಿನಲ್ಲೆಲ್ಲಾ ಉಂಟಾಗಿರುವ ಜಾಗೃತಿಯು ಸಂಸ್ಥಾನಗಳ ಮೇಲೆಯೂ ತನ್ನ ಪ್ರಭಾವವನ್ನು ಬೀರಿ ಇಲ್ಲಿನ ಪ್ರಜೆಗಳ ಧ್ಯೇಯ, ಧೋರಣೆಗಳನ್ನು ರೂಪುಗೊಳಿಸುತ್ತಿದೆ. ನೆರೆಹೊರೆಯ ದೇಶ ಬಾಂಧವರಂತೆ ತಾವೂ ಸಹ ಮುನ್ನಡೆಯಿಡಲು ಸಂಸ್ಥಾನಗಳ ಪ್ರಜೆಗಳು ಬಯಸುವುದು ಸಹಜವಾಗಿಯೇ ಇರುತ್ತದೆ.

ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸಲು ಕಾರ್ಯಕ್ರಮವನ್ನು ಕೈಗೊಳ್ಳುವುದು, ಭಾರತ ರಾಜ್ಯಾಂಗ ಸಭೆಯಲ್ಲಿ ಕೂಡಲೇ ಭಾಗವಹಿಸುವುದು; ಹಾಗೆ ಮಾಡದಿದ್ದ ಸಂಸ್ಥಾನಗಳನ್ನು ಶತ್ರುಗಳಂತೆ ಪರಿಗಣಿಸುವುದು, ಸಂಸ್ಥಾನಗಳಲ್ಲಿ ರಾಜ್ಯಾಂಗ ಸಭೆಗಳನ್ನು ಸ್ಥಾಪಿಸುವಂತೆ ಒತ್ತಾಯ ಪಡಿಸುವುದು - ಇವೇ ಮುಂತಾದ ನಿರ್ಣಯಗಳು ಗ್ವಾಲಿಯರಿನಲ್ಲಿ ಅಂಗೀಕರಿಸಲ್ಪಟ್ಟವು.

ಅಧ್ಯಕ್ಷತೆಯನ್ನು ವಹಿಸಿದ್ದ ಡಾ॥ ಪಟ್ಟಾಭಿ ಸೀತಾರಾಮಯ್ಯನವರು, ಸಮ್ಮೇಳನವನ್ನು ಪ್ರಾರಂಭ ಮಾಡಿದ ಪಂಡಿತ ನೆಹರೂರವರು ಸಹ ರಾಜ-ಪ್ರಜೆಗಳ ಪರಸ್ಪರ ಪ್ರೀತಿ, ವಿಶ್ವಾಸ ಮತ್ತು ಹಕ್ಕು ಬಾಧ್ಯತೆಗಳ ಸಂರಕ್ಷಣೆಗೆ ಅನುಗುಣವಾಗಿ ಭಾಷಣ ಮಾಡಿರುವರು. ಭಾರತ ರಾಜ್ಯಾಂಗ ಸಭೆಯಲ್ಲಿ ಸಂಸ್ಥಾನಗಳು ಕಾಲ ಮಿತಿಯನ್ನು ನಿರ್ಧರಿಸಬೇಕೆಂದು ಡಾ॥ ಪಟ್ಟಾಭಿಯವರು ಹೇಳುವರು. ನೆಹರೂರವರ ಮಾತುಗಳು ಎಂದಿನಂತೆ ಬಿರುಸಾಗಿಯೇ ಇರುವುವು. ಕೇವಲ ದಾಕ್ಷಿಣ್ಯದಿಂದ ವರ್ತಿಸುವ ಕಾಲವು ಕಳೆಯಿತೆಂದೂ, ಮನಸ್ಸಿನಲ್ಲಿರುವುದನ್ನು ಸ್ಪಷ್ಟವಾಗಿ ಈಗ ಹೇಳಬೇಕಾಗಿದೆಯೆಂದೂ ಅವರು ತಿಳಿಸಿದರು. ರಾಜ್ಯಾಂಗ ಸಭೆಗೆ ಸೇರದ ಸಂಸ್ಥಾನಗಳನ್ನು ವೈರಿಗಳೆಂದು ಭಾವಿಸುವುದಾಗಿ ಅವರು ಕೊಟ್ಟಿರುವ ಎಚ್ಚರಿಕೆಯು ಎಲ್ಲರನ್ನೂ ಜಾಗ್ರತಗೊಳಿಸುವಂತಿರುತ್ತದೆ. ಈ ಮಾತುಗಳು ಕೆಲವರಿಗೆ ಕಹಿಯಾಗಿ ಕಂಡು ಬಂದಿರಬಹುದು. ಆದರೆ ಎಲ್ಲ ಅಂಗೀಕೃತ ರಾಜ್ಯ ಪದ್ಧತಿಗಳಲ್ಲಿಯೂ ಇದೇ ವರ್ತನೆಯನ್ನೇ ಅನುಸರಿಸಲಾಗುವುದು.

ವೈರಿಗಳೆಂದು ಪರಿಗಣಿಸುವ ರಾಜ್ಯಗಳ ಮೇಲೆ ಇತರ ರಾಷ್ಟ್ರಗಳು ದಂಡನ್ನೆತ್ತಿಕೊಂಡು ಬಂದು ಧಾಳಿ ನಡೆಸುವುದೆಂಬುದು ಇದರ ಅರ್ಥವಲ್ಲ; ಅಖಿಲ ಭಾರತ ಸಂಯುಕ್ತ ರಾಜ್ಯಾಂಗದಿಂದ ದೊರೆಯತಕ್ಕ ದಾದ ಸಹಾಯ ಸೌಲಭ್ಯಗಳು ಇಂತಹ ರಾಜ್ಯಗಳಿಗೆ ಲಭಿಸುವುದಿಲ್ಲವೆಂಬುದೇ ಇದರ ಅಭಿಪ್ರಾಯ. ಸಂಸ್ಥಾನಗಳು ಮಾತ್ರವೇ ಅಲ್ಲದೆ ನೆರೆಯ ಪ್ರಾಂತಗಳೂ ಮತ್ತು ಇಡೀ ಹಿಂದೂಸ್ಥಾನವೂ ಹಲವಾರು ಸಹಾಯ ಸಂಪತ್ತಿಗಳಿಗಾಗಿ ಇತರ ರಾಷ್ಟ್ರಗಳನ್ನು ಅವಲಂಬಿಸಬೇಕಾಗಿರುವ ಪ್ರಸಂಗಗಳು ಈಗಾಗಲೇ ವಿಶೇಷವಾಗಿ ಕಂಡು ಬಂದಿವೆ. ಅಕ್ಕಿ, ಗೋಧಿ, ಮುಂತಾದ ಪದಾರ್ಥಗಳಿಗಾಗಿ ಹಿಂದೂಸ್ಥಾನವು ಇತರ ದೇಶಗಳ

ವಾರ ಭವಿಷ್ಯ

ತಾ॥ ೨೧-೪-೪೮ ರಿಂದ ೨೮-೪-೪೮ರ ವರೆಗೆ

(ಶ್ರೀ ನಿತ್ಯಾನಂದಸ್ವಾಮಿಗಳಿಂದ)

ಮೇಷ—ಆರೋಗ್ಯ ಕೆಡುತ್ತದೆ, ಧನಾದಾಯ ಉತ್ತಮವಾಗಿರುತ್ತದೆ, ಖರ್ಚು ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ಅಧಿಕಾರಿ ವರ್ಗದವರಿಂದ ಸನ್ಮಾನ, ಶತ್ರುಗಳ ಕಿರುಕುಳ ಕಡಿಮೆಯಾಗುತ್ತದೆ, ತಾ॥ ೨೨, ೨೫ ಸಾಧಾರಣ ಲಾಭ ಬಂಧು ದರ್ಶನ.

ವೃಷಭ—ಆರೋಗ್ಯ ಸಾಧಾರಣವಾಗಿರುತ್ತದೆ, ಯೋಚಿಸಿದ ಕಾರ್ಯಗಳು ಸುಗಮವಾಗಿ ನೆರವೇರುವುವು, ಮಂಗಳ ಕಾರ್ಯಗಳು ನಡೆಯುವುವು, ಧನಲಾಭ ಉತ್ತಮವಿರುತ್ತದೆ, ಮಿತ್ರರಿಂದ ವಿಶೇಷ ಸಹಾಯವಾಗುವುದು, ತಾ॥ ೨೨, ೨೪, ೨೬ ಲಾಭ ಪ್ರವಾಸ.

ಮಿಥುನ—ಆರೋಗ್ಯ ಕೆಡುವ ಸಂಭವವಿದೆ, ಉದ್ಯೋಗ ವ್ಯವಹಾರಗಳಲ್ಲಿ ಸೋಲು, ಶತ್ರುಗಳಿಂದ ಕಿರುಕುಳ, ಧನಾದಾಯ ಕಡಿಮೆ, ಓಷಧೋಪಚಾರಗಳಿಗಾಗಿ ಹೆಚ್ಚಿನ ಖರ್ಚು, ಮಿತ್ರರಿಂದ ತಿರಸ್ಕಾರ, ತಾ॥ ೨೫, ೨೬ ಲಾಭ ಶಾಂತಿ.

ಕಟಕ—ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ಅಧಿಕಾರ ವರ್ಗದವರಿಂದ ಸಹಾಯ, ಶತ್ರುಗಳಿಂದ ವ್ಯಾಪಾರಕ್ಕೆ ಧಕ್ಕೆ ತಗಲುವುದು, ಶುಭ ಕಾರ್ಯಗಳಿಗಾಗಿ ವೆಚ್ಚ,

ದ ಪಡೆದಿರುವ ಸಹಾಯ, ಸಹಕಾರಗಳು ಎಲ್ಲರಿಗೂ ವೇದ್ಯವೇ ಆಗಿವೆ. ಹಿಂದೂಸ್ಥಾನ ಸರ್ಕಾರಕ್ಕೆ ದೊರೆತ ಸಾಮಗ್ರಿಗಳು ಇರುವವರೆಗೆ ಸಂಸ್ಥಾನಗಳಿಗೂ ಸಹ ಹಂಚಲ್ಪಟ್ಟಿರುತ್ತವೆ. ಭಾರತ ಯೂನಿಯನ್ನಿಗೆ ಇನ್ನು ಮುಂದೆ ಸೇರುವುದಿಲ್ಲವೆಂದು ಹೇಳುವ ಪ್ರದೇಶಗಳು ಇಂತಹ ಸಹಾಯಗಳನ್ನು ನಿರೀಕ್ಷಿಸುವುದಾದರೂ ಎಂತು?

ತಮ್ಮ ಮತ್ತು ತಮ್ಮ ಪ್ರಜೆಗಳ ಅಭ್ಯುದಯದ ದೃಷ್ಟಿಯಿಂದಲಾದರೂ ನಮ್ಮ ರಾಜರುಗಳು ಕೂಡಲೇ ಅಪ್ರಿಯ ನಿರ್ಧಾರವನ್ನು ಮಾಡಿ, ಭಾರತ ರಾಜ್ಯಾಂಗ ರಚನೆಯಲ್ಲಿ ಸಹಕರಿಸಿ, ಸ್ವತಂತ್ರ ಭಾರತದ ಭಾಗ್ಯೋದಯದಲ್ಲಿ ಭಾಗಿಗಳಾಗಲೆಂದು ಹಾರೈಸೋಣ.

ರಾಜಕಮಲ್

೧೮-೪-೪೮ ರಿಂದ ೧೧ನೇ ವಾರ

1 ನೇ ಆಟ 6 ಕ್ಕೆ 2 ನೇ ಆಟ 9-15 ಕ್ಕೆ

ಶ್ರೀ ಕಷ್ಣಲೀಲಾ

(ಕನ್ನಡದಲ್ಲಿ)

ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ಪರಿಪಾಲಿಸುವ ಸಲುವಾಗಿ ಪರಮಾತ್ಮನು ಅವತರಿಸಿ ತನ್ನ ಮಹಿಮೆಯನ್ನು ಅರುಹಿದ ಕಥಾ ವೈಖರಿ

ಹುರಿಗಡಲೆ

ಕಂಟ್ರೋಲ್ ಬೆಲೆಗೆ ದೊರೆಯುತ್ತದೆ

ನಂ. ೧. ರೂ ೧ ಕ್ಕೆ ೨॥ ಸೇರು

ನಂ. ೨ ರೂ ೧ ಕ್ಕೆ ೨॥। ಸೇರು

ಎಂ. ಪುಟ್ಟಸ್ವಾಮಯ್ಯ,

ರಥ್ಬೀದಿ, ನಂಜನಗೂಡು

ತಾ॥ ೨೨, ೨೪ ಲಾಭ, ಪ್ರವಾಸ.

ಸಿಂಹ—ಆರೋಗ್ಯ ಉತ್ತಮ, ಉದ್ಯೋಗ ವ್ಯವಹಾರಗಳಲ್ಲಿ ಸೋಲು, ಮನೆಯವರಿಗೆ ಆರೋಗ್ಯ ಕೆಟ್ಟು ಔಷಧೋಪಚಾರಗಳಿಗಾಗಿ ಹೆಚ್ಚಿನ ವೆಚ್ಚ, ಪ್ರವಾಸದಿಂದ ಅಲಸ್ಯ, ಮಿತ್ರರಿಂದ ತಿರಸ್ಕಾರ, ತಾ॥ ೨೨, ೨೪, ೨೬, ಸಾಧಾರಣ, ಸಂತೋಷ.

ಕನ್ಯಾ—ಆರೋಗ್ಯ ಉತ್ತಮ, ವ್ಯಾಪಾರದಿಂದ ಲಾಭ ಮತ್ತು ಯಶ, ಮಂಗಳ ಕಾರ್ಯಗಳು ನಡೆಯುತ್ತವೆ, ರಾಜಕೀಯ ವ್ಯವಹಾರದಿಂದ ಪ್ರಮುಖ ವ್ಯಕ್ತಿಗಳ ಮನ್ನಣೆ, ಪ್ರವಾಸದಿಂದ ಮಿತ್ರರ ಭೇಟಿ, ತಾ॥ ೨೧, ೨೩, ೨೫ ಸಂತೋಷ ಕಾರ್ಯಕ್ಕಾಗಿ ವ್ಯಯ.

ತುಲಾ—ಆರೋಗ್ಯ ಸಾಧಾರಣವಿರುತ್ತದೆ, ಮಾನಸಿಕ ಚಿಂತೆ ಹೆಚ್ಚು, ಧನ ಲಾಭ ಕಡಿಮೆ, ಖರ್ಚು ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ಶತ್ರುಗಳಿಂದ ಕಿರುಕುಳ, ಧಾರ್ಮಿಕ ಕಾರ್ಯಗಳಲ್ಲಿ ವಿಶೇಷ ಆಸಕ್ತಿ, ತಾ॥ ೨೨, ೨೬ ಪ್ರವಾಸ, ಅಧಿಕಾರಿಗಳಿಂದ ಮನ್ನಣೆ.

ವೃಶ್ಚಿಕ—ಆರೋಗ್ಯ ಕೆಡುತ್ತದೆ, ಯೋಚಿಸಿದ ಕಾರ್ಯಗಳಲ್ಲಿ ಮಿತ್ರರಿಂದ ಸಹಾಯ, ಉದ್ಯೋಗ ವ್ಯವಹಾರಗಳಲ್ಲಿ ಯಶ, ಗೃಹದಲ್ಲಿ ಕಲಹ ಸಂಭವಿಸಿ ಮಾನಸಿಕ ಚಿಂತೆ ಹೆಚ್ಚುವುದು, ತಾ॥ ೨೨, ೨೪ ಸಾಧಾರಣ ಲಾಭ, ಸನ್ಮಾನ.

ಧನಸ್ಸು—ಆರೋಗ್ಯ ಕೆಡುತ್ತದೆ, ಉದ್ಯೋಗ ವ್ಯವಹಾರಗಳಲ್ಲಿ ಯಶ, ಅಧಿಕಾರಿ ವರ್ಗದವರಿಂದ ಸನ್ಮಾನ, ಮಾನಸಿಕ ಚಿಂತೆ ಹೆಚ್ಚು, ಧನ ವ್ಯಯ ಅಧಿಕ, ಪದೇ ಪದೇ ಪ್ರವಾಸವುಂಟಾಗುವುದು, ತಾ॥ ೨೩, ೨೬ ಅಪ್ರಿಯವಾರ್ತೆ, ಅಶಾಂತಿ.

ಮಕರ—ಆರೋಗ್ಯ ಸಾಧಾರಣ, ಧನಾದಾಯ ಉತ್ತಮ, ಉದ್ಯೋಗ ವ್ಯವಹಾರಗಳಲ್ಲಿ ಜಯ, ಅಧಿಕಾರಿ ವರ್ಗದವರಿಂದಲೂ, ಪ್ರಮುಖ ವ್ಯಕ್ತಿಗಳಿಂದಲೂ ಸನ್ಮಾನ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ತಾ॥ ೨೫, ೨೬ ಪ್ರವಾಸ, ಚಿಂತೆ.

ಕುಂಭ—ಆರೋಗ್ಯ ಕೆಡುತ್ತದೆ, ಖರ್ಚು ಅಧಿಕ, ತಾ॥ ೨೨, ೨೪ ಸಾಧಾರಣ ಲಾಭ, ಶಾಂತಿ.

ಮೀನ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಅಧಿಕಾರಿ ವರ್ಗದವರ ಮತ್ತು ರಾಜಕೀಯ ವ್ಯಕ್ತಿಗಳ ಸ್ನೇಹ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಮಂಗಳ ಕಾರ್ಯಗಳಿಗಾಗಿ ವಿಶೇಷ ಪ್ರವಾಸ, ತಾ॥ ೨೧, ೨೫ ಲಾಭ, ಮಿತ್ರ ಭೇಟಿ

ಸಂಸ್ಥಾನದ ಗೃಹ ಕೈಗಾರಿಕೆಯನ್ನು ಪ್ರೋತ್ಸಾಹಿಸಿ!

ನಮ್ಮ ಸಂಸ್ಥಾನದ ತಯಾರಾದ ಸ್ಲೇಟುಗಳು, ಬಳಪಗಳು, ಮುಂತಾದುವು ಈ ಕೆಳಗಿನವರಲ್ಲಿ ಸಿಗುತ್ತವೆ.

ಹುಡುಕಬೇಕಾಗಿದೆ : ಏಜೆಂಟರುಗಳು, ಬೇಕಾಗಿದ್ದಾರೆ

-: ವಿವರಗಳಿಗೆ :-

ಕೆ. ವಿ. ವೆಂಕಟರಾಮಶೆಟ್ಟಿ,

ಶ್ರೀ ಸಾಯಿ ಬಾಬಾ ಸ್ಲೇಟುಗಳು, ಬಳಪಗಳು ಮತ್ತು ಪ್ರೆಸ್ ವರ್ಕ್ಸ್,

೧೭೨೯, ನಾರಾಯಣಶಾಸ್ತ್ರಿ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು

ಕೃಷ್ಣರಾಜನಗರ ಟೌನ್ ಮ್ಯುನಿ...

ಹರಾಜು ನೋಟೀ...

ಕೃಷ್ಣರಾಜನಗರದ ಚಂದ್ರವನ... ರಸ್ತೆಯಲ್ಲಿ ಅತ್ಯುತ್ತಮ ಅಂಗಡಿ... ಗಳನ್ನು ಇದೇ ಮೇ ೧೯ ನೇ ತಾ... ಗುರುವಾರದ ದಿವಸ ಸ್ಟೆಟುಗಳ ಬ... ಹ್ನ ೩ ಗಂಟೆ ಅಲಾಗಾಯಿತು ... ಷರತ್ತುಗಳಿಗೆ ಒಳಪಡಿಸಿ ಬಹಿ... ಹರಾಜು ಮಾಡಲಾಗುತ್ತೆ. ... ವರು ಛಡತವಾಲ್ ಮೂಲಕ ... ಹುದು. ವಿವರಗಳನ್ನು ಮ್ಯು... ಆಫೀಸಿನಲ್ಲಿ ತಿಳಿಯಬಹುದು

ಬಿ. ಬಸವರಾಜ...

ಪ್ರೆಸಿಡೆಂಟ್,

ಮ್ಯುನಿಸಿಪಲ್ ಕೌನ್...

೧೬-೪-೪೮. ಕೃಷ್ಣರಾ...

ಕಂಪ್ಲಿ ಜನಿರ್ಗಾ ಮು... ಇನಾಂ ವೃತ್ತಿಗಳ ಬಹಿ... ಹರಾಜು

ಮೈಸೂರು ಎ ಪಿ ಜೈನ ... ಬೋರ್ಡಿಂಗ್ ಹೋಮಿಗೆ ಸೇರಿದ ... ಜನಗೂಡು ತಾಲ್ಲೂಕು ವಿಚಗವಳ್ಳಿ... ದಲ್ಲಿ ೬ ಎಕರೆ ಕುಂಟೆ ಖುಷ್ಕಿ ... ತಾ॥ ೨-೫-೪೮ ನೇ ಮಧ್ಯಾಹ್ನ ೨ ... ವಿಚಗವಳ್ಳಿ ಗ್ರಾಮದಲ್ಲಿ, ೨) ... ಡು ತಾಲ್ಲೂಕು ಹುಸ್ಕೂರು ಇನಾ... ತ್ತಿಗಳ ಪೈಕಿ ೧। ವೃತ್ತಿ ತಾ॥ ... ನೇ ಬೆಳಗ್ಗೆ ೧೧ ಗಂಟೆಗೆ ಹುಸ್ಕೂ... ಮದಲ್ಲಿ, ನಂಜನಗೂಡು ರಿವಿನ್ಯೂ ... ಡಿವಿಜನ್ ಆಫೀಸರವರಿಂದಲೂ, ... ರಾಜಪೇಟೆ ತಾಲ್ಲೂಕು ನಾಗ... ಇನಾಂ ವೃತ್ತಿಗಳ ಪೈಕಿ ಅರೆ... ವೃತ್ತಿಯ (ಒಟ್ಟು ಗ್ರಾಮದಲ್ಲಿ ಮ... ಒಂದು ಭಾಗ) ತಾ॥ ೨೬-೫-೪೮ನೇ ... ೧೧ ಗಂಟೆಗೆ ಕೃಷ್ಣರಾಜಪೇಟೆ ... ಆಫೀಸಿನಲ್ಲಿ ಫ್ರೆಂಚ್‌ರಾಕ್ಸ್ ರಿವಿನ್ಯೂ ... ಡಿವಿಜನ್ ಆಫೀಸರವರಿಂದಲೂ ... ವಾಗಿ ಹರಾಜು ನಡೆಸಲ್ಪಡುತ್ತವೆ.

-: ಹೆಚ್ಚಿನ ವಿವರಗಳಿಗೆ :-

೧) ನಂಜನಗೂಡು ಮತ್ತು ... ರಾಕ್ಸ್ ಸಬ್-ಡಿವಿಜನ್ ಆಫೀಸುಗ...

೨) ಡಿಟೋ ತಾಲೂಕು ಆಫೀ...

೩) ಈ ಕೆಳಗಿನ ಅಡ್ರೆಸ್ಸಿನಲ್ಲಿ ... ಹೆಚ್. ಪಿ. ಸೂ... ಸೆಕ್ರೆಟೆ...

ಎ. ಪಿ ಜೈನಬ್ರಾಹ್ಮಣ ಬೋರ್ಡಿಂಗ್ ಹೋಂ,

ಮೈಸೂರ್ ರಸ್ತೆ, ಮೈಸೂ...

ಜಿಲ್ಲಾ ಬೋರ್ಡು ಚುನ... ೨೮-೪-೪೮ ನೇ ಸೋಮವಾ... ನಂಜನಗೂಡು ತಾಲ್ಲೂಕಿನ ಈ ಕೆ... ಕಾಂಗ್ರೆಸ್ ಉಮೇದುವಾರ... ವಿಡುವಟ್ಟು ಓಟು ಕೊ...

ಹೆಚ್. ಲಿಂಗಪ್ಪ B. Sc.,

ಹೆಚ್. ಎಂ. ನಾಗಪ್ಪ (...

ಎಂ. ಲಿಂಗಣ್ಣ, B. Sc.,

Edited, printed and publ... A. R. Nagarajan at the Sadh... D. Subbiah Road, Mysore

ಫೋನ್ ನಂ. ೨೮೪ || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೨೨—೪—೪೭ [ಸಂಚಿಕೆ ೨೧೬

ರಾಜೇಂದ್ರ ಪ್ರಸಾದರ ರಾಜೀನಾಮೆಯೇ?

ಜವಾಬ್ದಾರೀ ಸರ್ಕಾರಕ್ಕೆ ಮೈಸೂರು ಲೀಗಿನ ವಿರೋಧ

ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಏರ್ಪಟ್ಟರೆ ಬಹುಮತ ಪಂಗಡದ ಪ್ರಾಬಲ್ಯ ಧಾರವಾಗುವುದು. ಇದನ್ನು ಈ ಸಂಸ್ಥಾನದ ಮುಸ್ಲಿಂ ಲೀಗು ವಿರೋಧಿಸುವುದು. ಜವಾಬ್ದಾರೀ ಸರ್ಕಾರ ಸತ್ಯಾಗ್ರಹ ಹೂಡಲು ನಿರ್ಧರಿಸಿರುವ ಮೈಸೂರು ಕಾಂಗ್ರೆಸ್ಸಿನ ಬೇಡಿಕೆಗೆ ಜವಾಬ್ದಾರಿ ಸರ್ಕಾರ ಕೊಡಕೂಡದು ಈ ಸಮ್ಮೇಳನವು ಸರ್ಕಾರಕ್ಕೆ ಸೂಚಿಸುವ ಎಂಬ ನಿರ್ಣಯವನ್ನು ಶಿವಮೊಗ್ಗದಲ್ಲಿ ನಡೆದ ಸಂಸ್ಥಾನದ ಲೀಗ್ ಅಧಿವೇಶನದಲ್ಲಿ ಅಂಗೀಕರಿಸಲಾಗಿದೆ

ಮೈಸೂರು ದಿವಾನರು ಬಂಗಾಳಾ ಗೌರ್ನರಾಗುವರೆ?

ಭಾರತದ ನಾನಾ ಪ್ರಾಂತ್ಯಗಳಲ್ಲಿ ಭಾರತೀಯ ಗೌರ್ನರುಗಳನ್ನು ನೇಮಿಸುವಾಗ್ಗೆ ಮೈಸೂರು ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ರವರನ್ನು ಬಂಗಾಳದ ಗೌರ್ನರಾಗಿ ನೇಮಕ ಮಾಡಬಹುದೆಂದು ಕಲ್ಕತ್ತಾ ಪತ್ರಿಕೆಯೊಂದು ಬರೆದಿದೆ

ಸಚಿವರ ಆಗಮನ

[ಚಾಮರಾಜನಗರ ..] ಚಾಮರಾಜನಗರ ೨೧ ಮಂತ್ರಿಗಳಾದ ಶ್ರೀ|| ಅಪ್ಪಾಜಿ ಗೌಡರು ನೆನ್ನೆ ದಿನ ಇಲ್ಲಿಗೆ ಭೇಟಿ ಇತ್ತಿದ್ದರು. ಹೈಸ್ಕೂಲ್ ಕಟ್ಟಡವನ್ನು ರಾಮಸಮುದ್ರದ ನಿವೇಶನದಲ್ಲಿ ಕಟ್ಟುವುದಕ್ಕೆ ಸಮ್ಮತಿಯನ್ನು ಸೂಚಿಸಿದರು.

ಹಾವಿನ ಕಡಿತದಿಂದ ಬಾಲಕನು ಪಾರಾದುದು

ಕನಕನಹಳ್ಳಿ ಎಂಬಲ್ಲಿ ಮಾ|| ಫರ್ನಾಂಡಿಸ್ ಎಂಬುವರ ಮಗನಿಗೆ ೧೫ ನೇ ತಾ|| ಬೆಳಿಗ್ಗೆ ೯-೩೦ಕ್ಕೆ ಕರೀ ನಾಗರಹಾವು ಕಚ್ಚಿತು. ಅವರು ಕೂಡಲೇ ಹುಣಸೂರಿನಲ್ಲಿ ಪೋಸ್ಟ್ ಮಾಸ್ಟರಾದ ಶ್ರೀ|| ಡಿ. ಕೆ. ಚಂದ್ರ ಅಯ್ಯರ್‌ರವರಿಗೆ ತಂತೀ ಕೊಟ್ಟರು. ಶ್ರೀ ಅಯ್ಯರ್‌ರವರ ಮಂತ್ರ ಪ್ರಭಾವದಿಂದ ಆ ಹುಡುಗನು ೯-೩೦ ಕ್ಕೆ ನಿದ್ರೆಯಿಂದ ಎದ್ದವನಂತೆ ಗುಣಮುಖನಾದನೆಂದು ತಿಳಿದು ಬಂದಿದೆ.

ಚಾಮರಾಜನಗರದ ತಾಲ್ಲೂಕು ಓಟರು ಮಹಾಶಯರಲ್ಲಿ ವಿಜ್ಞಾಪನೆ



1947ನೇ ಇಸವಿ ಏಪ್ರಿಲ್ ಮಾಹೆ 28 ನೇ ತಾರೀಖು ನಡೆಯುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಚಾಮರಾಜ ನಗರ ಕ್ಷೇತ್ರದಿಂದ ನಾನೊಬ್ಬ ಸರ್ವರಕ್ಷಕ ಪಕ್ಷಕ್ಕೂ ಮಧ್ಯವರ್ತಿಗಳಾಗಿ ಗ್ರಾಮಸ್ಥರ ಸಂಪೂರ್ಣ ಸಹಾಯದಿಂದ ಉಮೇದುವಾರನಾಗಿ ನಿಂತಿರುತ್ತೇನೆ. ಪ್ರಜಾ ಸೇವೆ ಮಾಡಲು ಅರ್ಹನೆಂದು ತಾವುಗಳು ಪರಿಗಣಿಸುವ ಪಕ್ಷದಲ್ಲಿ ತಮಗಿರುವ 3 ವೋಟುಗಳಲ್ಲಿ ಒಂದು ವೋಟನ್ನು "ಘಂಟೆ" ಗುರುತಿನ ನನಗೆ ಕೊಟ್ಟು ಮುಂಬರಲು ಅವಕಾಶ ಕೊಡಬೇಕಾಗಿ ಕೋರುತ್ತೇನೆ.

ಎ. ಶ್ರೀನಿವಾಸಮೂರ್ತಿ,
ಮೊನ್ನಹಳ್ಳಿ, ಛಂಡ್ರಾ ಟ್ಯಾನುಫೋರ್

ಮೀರಜ್‌ನಲ್ಲಿ ಜವಾಬ್ದಾರೀ ಸರ್ಕಾರ

ಹಿರಿಯ ಮೀರಜ್ ಸಂಸ್ಥಾನದ ರಾಜರು ಮೊನ್ನೆ ದಿನ ಒಂದು ಘೋಷಣೆಯನ್ನು ಹೊರಡಿಸಿ ತಮ್ಮ ಸಂಸ್ಥಾನದಲ್ಲಿ ಮತ್ತಷ್ಟು ಸುಧಾರಣೆಗಳನ್ನು ಜಾರಿಗೆ ತಂದಿದ್ದಾರೆ. ಶಾಸನ ಸಭೆಯು ಚುನಾಯಿತ ಸದಸ್ಯರಿಂದಲೇ ಕೂಡಿರುವುದು. ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಸಭೆಯೇ ಚುನಾಯಿಸಿಕೊಳ್ಳುವುದು. ಸಭೆಯ ಬಹುಮತ ಪಕ್ಷದ ನಾಯಕನನ್ನು ರಾಜರು ಮಂತ್ರಿಮಂಡಲದ ಅಧ್ಯಕ್ಷರನ್ನಾಗಿ (ದಿವಾನರನ್ನಾಗಿ) ನೇಮಿಸುವರು. ಇತರ ಮಂತ್ರಿಗಳನ್ನು ಈ ದಿವಾನರ ಸಲಹೆಯಂತೆ ಶಾಸನ ಸಭೆಯಿಂದ ರಾಜರೇ ಆರಿಸುವರು. ಈ ಮಂತ್ರಿಮಂಡಲವು ಶಾಸನ ಸಭೆಗೆ ಪೂರ್ಣವಾಗಿ ಜವಾಬ್ದಾರವಾಗಿರುವುದು. ಈ ಹೊಸ ಸುಧಾರಣೆಗಳು ಕೂಡಲೇ ಕಾರ್ಯರೂಪಕ್ಕೆ ಬರಲು ಈ ಶಾಸನ ಸಭೆಯಲ್ಲಿರುವ ನಾಮಕರಣ ಸದಸ್ಯರನ್ನೆಲ್ಲಾ ವಾಪಸು ಕರೆಲಾಗುವುದು. ರಾಜರ ಸ್ವಂತ ವೆಚ್ಚ, ಸಿಬ್ಬಂದಿ, ಮುಂತಾದುವುಗಳ ಮೇಲ್ವಿಚಾರಣೆ, ಹಕ್ಕೋಟೆ ಇವುಗಳನ್ನು ಬಿಟ್ಟು ಮಿಕ್ಕೆಲ್ಲಾ ಅಧಿಕಾರಗಳನ್ನು ಮಂತ್ರಿಮಂಡಲಕ್ಕೆ ಕೊಡಲಾಗಿದೆ. ಈ ಸುಧಾರಣೆ ಮೇ ೧ನೇ ಕ್ಕೆ ಜಾರಿಗೆ ಬರುದಾಗಿ ಪ್ರಕಟಿಸಲಾಗಿದೆ.

ಪಾಕೀಸ್ಥಾನದ ನೋಟುಗಳು

೧೦೦೦ ರೂ. ಗಳ 'ಪಾಕೀಸ್ಥಾನದ' ನೋಟುಗಳು ಕರಾಚಿ ನಗರದಲ್ಲಿ ಹಂಚು ಬರುತ್ತಿವೆ. ಇವು ಇತರ ನೋಟುಗಳಂತೆಯೇ ಇವೆ. ಇವುಗಳ ಮೇಲೆ ರಿಜರ್ವ್ ಬ್ಯಾಂಕ್ ಆಫ್ ಪಾಕಿಸ್ತಾನ್ ಎಂದು ಮುದ್ರಿಸಲಾಗಿದೆ. ಕೇಂದ್ರ ಸರ್ಕಾರದ ಅರ್ಥ ಸಚಿವರಾದ ಲಿಯಾಕತ್ ಅಲಿಖಾನರ ರುಜು ಕೆಳಗಡೆ ಇದೆ. ನೋಟಿನ ಎಡ ಭಾಗದಲ್ಲಿ ಪಾಕೀಸ್ಥಾನದ ಭೂಪಟವೂ ಬಲ ಭಾಗದಲ್ಲಿ ಕಿರೀಟವನ್ನು ಧರಿಸಿರುವ ಮಿ|| ಜಿನ್ನಾ ರವರ ತಲೆಯೂ ಇರುವುವು. ಇದು ಕೇಂದ್ರ ಕಛೇರಿಯ ತಂಟೆ ಎಂದು ಪ್ರಕಟಿಸಲಾಗಿದೆ

ಹರಿಕಥೆ

ಚಲುವಾಂಬ ಅಗ್ರಹಾರದ ಶ್ರೀರಾಮ ಮಂದಿರದಲ್ಲಿ ಈ ದಿನ ರಾತ್ರಿ ೯ ಕ್ಕೆ ಶ್ರೀ ಹೆಚ್. ಎಸ್. ಶಿವಲಿಂಗಸ್ವಾಮಿಯವರಿಂದ 'ಶ್ರೀ ಕೃಷ್ಣ ಗಾರುಡಿ' ಎಂಬ ಹರಿಕಥೆಯು ನಡೆಯುವುದು.

ಗಡಿನಾಡಿನಲ್ಲಿ ಬಿಡುಗಡೆ

ಸಾಧ್ಯವಾದಷ್ಟು ಕೂಡಲೇ ಗಡಿನಾಡಿನಲ್ಲಿರುವ ರಾಜಕೀಯ ಖೈದಿಗಳನ್ನೆಲ್ಲಾ ಖುಲಾಸೆ ಮಾಡುವುದಾಗಿ ಅಲ್ಲಿನ ಸರ್ಕಾರವು ಪ್ರಕಟಿಸಿದೆ. ಗಾಂಧಿ-ಜಿನ್ನಾ ಶಾಂತಿ ಸಂದೇಶವನ್ನು ಕಾರ್ಯರೂಪಕ್ಕೆ ತರಲು ಪ್ರಾಂತ್ಯದ ಜನರೆಲ್ಲರೂ ಸಹಕರಿಸಬೇಕೆಂದು ಆ ಸರ್ಕಾರವು ಪ್ರಾರ್ಥಿಸಿದೆ. ಲೀಗ್ ಚಳುವಳಿಯಲ್ಲಿ ಭಾಗವಹಿಸಿ ಬಂಧನದಲ್ಲಿರುವ ೫ ಸಹಸ್ರ ಲೀಗಿನವರು ಖುಲಾಸೆಯಾಗಲಿದ್ದಾರೆ.

ಭಾಗವತರ್-ಕೃಷ್ಣನ್ ಅಪ್ಪೀಲು ವಿಚಾರಣೆ

ಲಕ್ಷ್ಮೀಕಾಂತಂ ರವರ ಕೊಲೆ ಮೊಕದ್ದಮೆಯಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಶ್ರೀ|| ತ್ಯಾಗರಾಜ ಭಾಗವತರ್ ಮತ್ತು ಶ್ರೀ|| ಎನ್. ಎಸ್. ಕೃಷ್ಣನ್ ರವರು ಪ್ರಿವಿ ಕೌನ್ಸಿಲ್ಲಿಗೆ ಅಪೀಲು ಮಾಡಿಕೊಂಡಿದ್ದರಷ್ಟೆ. ಈ ಮೊಕದ್ದಮೆಯನ್ನು ಪುನಃ ವಿಚಾರಿಸುವಂತೆ ಪ್ರಿವಿ ಕೌನ್ಸಿಲು ಮದ್ರಾಸ್ ಶ್ರೇಷ್ಠ ನ್ಯಾಯಾಸ್ಥಾನಕ್ಕೆ ಸೂಚನೆ ಇತ್ತಿದ್ದಿತು. ಅದರಂತೆ ವಿಚಾರಣೆಯು ನಿನ್ನೆ ಆರಂಭವಾಯಿತು. ಅಪರಾಧಿಗಳ ಪರ ಶ್ರೀ|| ವಿ. ಎಲ್. ಎತಿರಾಜ್ ರವರು ವಕಾಲತ್ತು ವಹಿಸಿ ವಾದವನ್ನು ಆರಂಭಿಸಿದ್ದಾರೆ

ಸಾನೆ ಗುರೂಜಿಯವರ ಉಪವಾಸ ವ್ರತ

ಪಂಢರಾಪುರದ ವಿಠೋಬಾ ದೇವಾಲಯಕ್ಕೆ ಹರಿಜನ ಪ್ರವೇಶಾಧಿಕಾರವನ್ನು ದೊರಕಿಸಿಕೊಳ್ಳಲು ಮಹಾರಾಷ್ಟ್ರ ಕಾಂಗ್ರೆಸ್ ಮುಖಂಡರಾದ ಶ್ರೀ|| ಸಾನೆ ಉರುಫ್ ಸಾನೆ ಗುರೂಜಿಯವರು ಮೇ ೧ ರಿಂದ ಆಮರಣಾಂತರ ಉಪವಾಸವನ್ನು ಆರಂಭಿಸುವರೆಂದು ಗೊತ್ತಾಗಿದೆ

ಬೊಂಬಾಯಿನಲ್ಲಿ ಒತ್ತಾಯ ಶಿಕ್ಷಣ

ಬೊಂಬಾಯಿ ಪ್ರಾಂತ್ಯದ ಸ್ಥಳೀಯ ಸಂಸ್ಥೆಗಳು ಒಂದು ಸಹಸ್ರಕ್ಕಿಂತ ಹೆಚ್ಚಾಗಿ ಜನ ಸಂಖ್ಯೆ ಇರುವ ಪ್ರದೇಶದಲ್ಲೆಲ್ಲಾ ಪ್ರಾಥಮಿಕ ಶಿಕ್ಷಣವನ್ನು ಒತ್ತಾಯದ ಮೂಲಕ ಜಾರಿಗೆ ಜೂ ೧ ರಿಂದ ತರಬೇಕೆಂದು ಅಲ್ಲಿನ ಸರ್ಕಾರವು ಆಜ್ಞೆ ಇತ್ತಿದೆ. ಯೋಜನೆಯನ್ನು ೫ ವರ್ಷಗಳ ವರೆಗೆ ವಿಸ್ತರಿಸಿಕೊಳ್ಳಲು ಅವಕಾಶ ಕೊಡಲಾಗಿದೆ. ವೆಚ್ಚದ ಅರ್ಧ ಭಾಗವನ್ನು ಸರ್ಕಾರವೇ ವಹಿಸಿಕೊಳ್ಳುವುದು

ರಾಜೇಂದ್ರ ಪ್ರಸಾದರ ರಾಜೀನಾಮೆಯೆ?

ಕೇಂದ್ರ ಸರ್ಕಾರದ ಆಹಾರ ಮತ್ತು ವ್ಯವಸಾಯ ಮಂತ್ರಿಗಳಾದ ಡಾ|| ರಾಜೇಂದ್ರ ಪ್ರಸಾದರು ತಮ್ಮ ಮಂತ್ರಿಪದವಿಗೆ ರಾಜೀನಾಮೆ ಸಲ್ಲಿಸುವರೆಂದು ಗೊತ್ತಾಗಿದೆ. ರಾಜ್ಯಾಂಗ ಸಭೆಯ ಅಧ್ಯಕ್ಷತೆ ಜೊತೆಗೆ ಈ ಮಂತ್ರಿಪದವಿಯ ಕಾರ್ಯವು ಬಹಳವಾಗಿ ಹೋಗಿ ಅದರಿಂದ ಆಯಾಸ ಉಂಟಾಗಿದೆ ಎಂದೂ, ಅಲ್ಲದೆ ತಮ್ಮ ಪ್ರಾಂತ್ಯವಾದ ಬಿಹಾರಿನ ಪರಿಸ್ಥಿತಿ ಬಗ್ಗೆ ಅವರು ಹೆಚ್ಚು ಗಮನ ಕೊಡಲು ಆಶಿಸಿರುವುದರಿಂದಲೂ, ಮಹಾತ್ಮ ಗಾಂಧಿಯವರ ಅನುಮತಿ ಸಿಕ್ಕಿದ ಕೂಡಲೇ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಲು ಕೊಡುವುದಾಗಿ ಗೊತ್ತಾಗಿದೆ. ಇವರ ಸ್ಥಾನಕ್ಕೆ ಬೊಂಬಾಯಿಯ ಮಾಜಿ ಮಂತ್ರಿ ಶ್ರೀ|| ಕೆ. ಎಂ. ಮುನ್ಷಿಯವರು ಬರಬಹುದೆಂದು ಊಹಿಸಲಾಗಿದೆ.

ಕಾಂಗ್ರೆಸ್ಸಿನೊಡನೆ ಅಂಬೇಡ್ಕರರ ಸಂಧಾನ

ನಿಮ್ನ ವರ್ಗದ ನಾಯಕರಾದ ಡಾ|| ಅಂಬೇಡ್ಕರ್‌ರವರು ಕಾಂಗ್ರೆಸ್ಸಿನೊಡನೆ ನಿಮ್ನ ವರ್ಗದ ರಕ್ಷಣೆಗಾಗಿ ಸಂಧಾನ ನಡೆಸುತ್ತಿದ್ದಾರೆಂದೂ, ಅದು ವಿಫಲವಾದರೆ ಅವರು ಭಾರತ ರಾಜ್ಯಾಂಗ ಸಭೆಗೆ ರಾಜೀನಾಮೆ ಸಲ್ಲಿಸಿ, ಭಾರತದಲ್ಲೆಲ್ಲಾ ನಿಮ್ನ ವರ್ಗದವರು ಶಾಸನ ಭಂಗ ಚಳುವಳಿ ಮಾಡಲು ಸೂಚನೆ ಕೊಡುವರೆಂದೂ ನಿಮ್ನ ವರ್ಗದ ಫೆಡರೇಷನ್ ಕಾರ್ಯದರ್ಶಿಗಳು ತಿಳಿಸಿದ್ದಾರೆ.

● ಡೆನ್‌ಮಾರ್ಕಿನ ರಾಜರಾದ ಕಿಂಗ್ ಕ್ರಿಶ್ಚಿಯನ್ನರು ಮೊನ್ನೆ ರಾತ್ರಿ ತಮ್ಮ ೭೬ ನೇ ವಯಸ್ಸಿನಲ್ಲಿ ನಿಧನರಾದರು. ಈಗ ಇವರ ಹಿರಿಯ ಮಗ್ನರಾದ ಫ್ರೆಡ್ರಿಕ್‌ರವರು ಡೆನ್‌ಮಾರ್ಕ್ ಸಿಂಹಾಸನವನ್ನು ಏರುವರು.

○ ಜಿಲ್ಲಾ ಬೋರ್ಡುಗಳನ್ನು ವಜಾ ಮಾಡುವ ವಿಚಾರವನ್ನು ಮದ್ರಾಸ್ ಸರ್ಕಾರವು ಪರಿಶೀಲಿಸುತ್ತಿರುವುದಾಗಿ ತಿಳಿದು ಬಂದಿದೆ

—

ಸೈನ್ಯದಲ್ಲಿ ಹಿಂದೂಗಳಿಗೆ ಶೇ. ೯೨ ರಷ್ಟು ಸ್ಥಾನ

ಮೈಸೂರು ನಗರದ ಹಿಂದೂ ಮಹಾಸಭೆಯ ಸದಸ್ಯರ ಸಭೆಯು ಮೊನ್ನೆ ಶ್ರೀ|| ಕೆ. ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ನಡೆದು, ಸೈನ್ಯ ಮತ್ತು ರಿಜರ್ವ್ ಪೋಲೀಸ್ ದಳಗಳಲ್ಲಿ ಶೇಕಡ ೯೨ ರಷ್ಟು ಸ್ಥಾನಗಳಿಗೆ ಹಿಂದೂಗಳನ್ನೇ ಸೇರಿಸಿಕೊಳ್ಳಬೇಕೆಂದು ಶ್ರೀಮನ್ಮಹಾರಾಜರನ್ನು ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ವಾಚಕರಲ್ಲಿ ವಿನಂತಿ

ರಾಜಧಾನಿಯ ಚಂದಾದಾರರ ಪೈಕಿ ಹಲವರಿಗೆ ನಮ್ಮ ಪತ್ರಿಕೆಯು ಸರಿಯಾಗಿ ತಲುಪುತ್ತಿಲ್ಲವೆಂದು ಕೇಳಿ ವಿಷಾದಿಸುತ್ತೇವೆ. ಇದನ್ನು ಕ್ರಮಪಡಿಸಲು ತಕ್ಕ ವ್ಯವಸ್ಥೆಯನ್ನು ಸದ್ಯದಲ್ಲಿಯೇ ಮಾಡಲಿರುತ್ತೇವೆ. ಪತ್ರಿಕೆಗಳು ಸರಿಯಾಗಿ ತಲುಪದಿರುವ ಚಂದಾದಾರರುಗಳು ದಯವಿಟ್ಟು ಸದರಿ ಅಂಶವನ್ನು ನಮಗೆ ಲಿಖಿತ ಮೂಲಕವಾಗಿಯಾಗಲೀ, ಟೆಲಿಫೋನ್ ಮೂಲಕವಾಗಿಯಾಗಲೀ ತಿಳಿಸಬೇಕೆಂದು ಕೋರುತ್ತೇವೆ.

ವ್ಯವಸ್ಥಾಪಕ - 'ಸಾಧ್ವಿ'

ಸಾಧ್ವಿ

ತಾ॥ ೨೨-೪-೪೭ ಮಂಗಳವಾರ

ಗ್ವಾಲಿಯರಿಗೆ ಅಭಿನಂದನೆ

ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಗ್ವಾಲಿಯರ್ ಸಂಸ್ಥಾನವು ನಿರ್ಧರಿಸಿರುವುದಲ್ಲದೆ ತನಗೆ ಇರುವ ನಾಲ್ಕು ಸ್ಥಾನಗಳ ಪೈಕಿ ಮೂರು ಸ್ಥಾನಗಳಿಗೆ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸಿಕೊಡುವುದಾಗಿಯೂ ತೀರ್ಮಾನಿಸಿರುವುದು ಅತ್ಯಂತ ಅಭಿನಂದನೀಯವಾದ ವಿಷಯವಾಗಿರುತ್ತದೆ. ಸಂಧಾನ ಸಮಿತಿಗಳಲ್ಲಿ ಆದ ಒಪ್ಪಂದಕ್ಕಿಂತಲೂ ಒಂದು ಹೆಜ್ಜೆ ಮುಂದೆ ಹೋಗಿರುವುದಾಗಿ ಅಲ್ಲಿನ ಪ್ರಧಾನ ಮಂತ್ರಿ ಶ್ರೀ ಎಂ. ಎ. ಶ್ರೀನಿವಾಸನ್‌ರವರು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಶೇಕಡ ಐವತ್ತರಷ್ಟು ಮಾತ್ರ ಚುನಾಯಿತ ಪ್ರತಿನಿಧಿಗಳನ್ನು ಕಳುಹಿಸಲು ಒಪ್ಪಂದವಾಗಿದ್ದರೂ, ಇನ್ನು ಒಟ್ಟು ಹೆಚ್ಚಿನ ಸದಸ್ಯರನ್ನು ಕಳುಹಿಸಲು ಅವರು ಒಪ್ಪಿರುವುದು ನಿಜವಾಗಿಯೂ ಗ್ವಾಲಿಯರ್ ಸಂಸ್ಥಾನದ ಉದಾರ ವರ್ತನೆಯನ್ನು ಸೂಚಿಸುತ್ತದೆ

ಗ್ವಾಲಿಯರಿನಲ್ಲಿ ನಡೆದ ಸಂಸ್ಥಾನ ಪ್ರಜಾ ಸಮ್ಮೇಳನದ ಪ್ರಭಾವವು ಅಲ್ಲಿನ ಪ್ರಭುತ್ವದವರ ಮೇಲೆ ಈ ಪರಿಣಾಮವನ್ನು ಉಂಟುಮಾಡಿರಬೇಕು. ಈ ಸಮ್ಮೇಳನಕ್ಕೆ ಬೇಕಾದ ಸಹಾಯ, ಸೌಕರ್ಯಗಳನ್ನು ಸಂಸ್ಥಾನದ ಅರಸರು ಕಲ್ಪಿಸಿಕೊಟ್ಟುದಲ್ಲದೆ ಪ್ರಗತಿ ಪರವಾದ ನೀತಿಯನ್ನೂ ಅನುಸರಿಸುತ್ತಿರುವುದಕ್ಕಾಗಿ ಸಂಸ್ಥಾನದ ಪ್ರಜೆಗಳೆಲ್ಲರೂ ಅವರಿಗೆ ಕೃತಜ್ಞರಾಗಿರಬೇಕು. ಪಂಡಿತ ನೆಹರೂರವರು ಶ್ರೀ ಎಂ. ಎ. ಶ್ರೀನಿವಾಸನ್‌ರವರನ್ನು ಭೇಟಿ ಮಾಡಿ ರಾಜ್ಯಾಂಗ ಸಭೆಯಲ್ಲಿ ಸಂಸ್ಥಾನಗಳು ಸೇರುವ ವಿಷಯವಾಗಿ ಮಾತುಕತೆ ನಡೆಸಿದರು. ಈ ಭೇಟಿಯೂ ಸಹ ಗ್ವಾಲಿಯರ್ ಸಂಸ್ಥಾನದ ಮೇಲ್ಕಂಡ ನಿರ್ಧಾರಕ್ಕೆ ಸಹಕಾರಿಯಾಗಿರಬೇಕು.

ಪ್ರಗತಿ ಪರವಾದ ಸಂಸ್ಥಾನಗಳು ಈ ರೀತಿಯಲ್ಲಿ ಮುಂದೆ ಬಂದು ಕಾಲಾನುಗುಣ್ಯವಾಗಿ ವರ್ತಿಸುತ್ತಿರುವುದು ಸಂತೋಷದ ಸಂಗತಿ. ಅಲ್ಲದೆ ನಮ್ಮ ಮೈಸೂರಿನವರಾದ ಶ್ರೀ ಎಂ. ಎ. ಶ್ರೀನಿವಾಸನ್‌ರವರಿಗೆ ನಮ್ಮ ಸಂಸ್ಥಾನದಲ್ಲಿಯೇ ಅವಕಾಶ ದೊರೆಯದಿದ್ದರೂ, ಹೊರಗಡೆಯಾದರೂ ಭಾರತದ ಭವಿಷ್ಯವನ್ನು ರೂಪುಗೊಳಿಸುವ ಕಾರ್ಯದಲ್ಲಿ ಪ್ರಧಾನ ಪ್ರಧಾನ ಪಾತ್ರವು ದೊರೆತಿರುವುದು ಮೈಸೂರಿನವರಾದ ನಮಗೆ ಅಭಿಮಾನದ ವಿಷಯವೇ ಸರಿ. ಕಳೆದ ನರೇಂದ್ರ ಮಂಡಲದ ಅಧಿವೇಶನದಲ್ಲಿ ಹಲವು ರಾಜರುಗಳು ಪ್ರಗತಿ ವಿರೋಧವಾದ ಮಾರ್ಗವನ್ನು ಅವಲಂಬಿಸಿದ ಸಮಯದಲ್ಲಿ ಬರೋಡದ ಮಹಾರಾಜರೂ, ಶ್ರೀ ಎಂ. ಎ. ಶ್ರೀನಿವಾಸನ್‌ರವರೂ ವಹಿಸಿದ ಪಾತ್ರವು ಅತ್ಯಂತ ಸ್ತೋತ್ರಾರ್ಹವಾದುದು.

ಹೀಗೆ ನೆರೆಯ ಸಂಸ್ಥಾನಗಳು ಮುನ್ನಡೆಯುತ್ತಿರುವಲ್ಲಿ ಮೈಸೂರಿನ ಪಾತ್ರವೇನೆಂಬುದೇ ಗೊತ್ತಾಗಿರುವುದಿಲ್ಲ. ಈ ವಿಚಾರವನ್ನು ಇನ್ನೂ ಪರ್ಯಾಲೋಚಿಸುತ್ತಿರುವುದಾಗಿ ಇಲ್ಲಿನ ದಿವಾನರು ಹೇಳುತ್ತಾರೆ. ಇಷ್ಟರಲ್ಲಿಗೆ ಈ ಪರ್ಯಾಲೋಚನೆಯು ಮುಗಿಯುವುದೋ ತಿಳಿಯದು. ರಾಜ್ಯಾಂ ... [illegible]

ಪುರಸಭಾಧ್ಯಕ್ಷರ ಸೇವೆ ?

ಮೈಸೂರಿನಲ್ಲಿರುವ ಭಾರತೀಯ ವೈದ್ಯಶಾಸ್ತ್ರ ಪರಿಷತ್ತಿನ ಹಿತೈಷಿಗಳಾದ ಶ್ರೀ ಕಾಶಿ ಆಯುರ್ವೇದಾಚಾರ್ಯರು ಈ ರೀತಿ ಬರೆಯುತ್ತಾರೆ:-

ಪುರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಭೋರೆಯವರನ್ನು ಸ್ತುತಿಸಿ ಹಲವರ ಪ್ರಚಾರವೂ, ದಿವಾನರ ಹೊಂಗಳ ಶಾದವರಲ್ಲಿ ನಿಯೋಗವೂ ನಡೆಯುತ್ತಿವೆಯಷ್ಟೆ. ಪುರಸಭಾಧ್ಯಕ್ಷರು ಮೈಸೂರು ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಸಲಹಾ ಸಮಿತಿಯ ಉಪಾಧ್ಯಕ್ಷರು. ಕೆಲವು ದಿನಗಳ ಹಿಂದೆ ಅಲ್ಲಿ ನಡೆದ ಮುಷ್ಕರದ ಸಂಬಂಧದಲ್ಲಿ ವಿದ್ಯಾರ್ಥಿಗಳ ಬೇಡಿಕೆಯನ್ನು ಪರಿಹರಿಸಲು ಪ್ರಯತ್ನ ಪಡಲಿ. ದಿವಾನರಾಗಿದ್ದ ಡಾ॥ ರಾಯ್ರ್‌ರವರು ವಿದ್ಯಾರ್ಥಿಗಳನ್ನು ವಿಚಾರಿಸುತ್ತಿದ್ದಾಗ ಅವರ ಎದುರಿನಲ್ಲೇ ವಿದ್ಯಾರ್ಥಿಗಳ ಬೇಡಿಕೆಯನ್ನು ಈ ಅಧ್ಯಕ್ಷರು ಅಲ್ಲಗಳೆದರು. ಆದರೂ ಡಾ॥ ರಾಯ್ರ್‌ರು ವಿದ್ಯಾರ್ಥಿಗಳ ಕುಂದು ಕೊರತೆಗಳನ್ನು ಪರಿಹರಿಸುವುದಾಗಿ ಭರವಸೆ ಇತ್ತರು. ಶ್ರೀ ಬೊಂಭೋರೆಯವರ ಸೇವೆಗೆ ಈ ನಿದರ್ಶನ ಸಾಲದೇ ?

ಮೆಟ್ಟಿಗೆ ಮುಗಿಯುತ್ತ ಬಂದಿವೆ. ಇನ್ನಾದರೂ ಈ ವಿಷಯವನ್ನು ಕೂಡಲೇ ನಿರ್ಧರಿಸಿ ಸಂಸ್ಥಾನದ ಪ್ರತಿನಿಧಿಗಳು ನೂತನ ಭಾರತ ರಾಜ್ಯಾಂಗ ನಿರ್ಮಾಣದಲ್ಲಿ ಭಾಗಿಗಳಾಗಲು ಅವಕಾಶ ಕಲ್ಪಿಸಬಾರದೇ ?

ಜಿಲ್ಲಾ ಬೋರ್ಡು ಚುನಾವಣೆ
೨೮-೪-೪೭ ನೇ ಸೋಮವಾರ
ನಂಜನಗೂಡು ತಾಲ್ಲೂಕಿನ ಈ ಕೆಳಗೆ ಕಂಡ
ಕಾಂಗ್ರೆಸ್ ಉಮೇದುವಾರರಿಗೇ
-: ದಯವಿಟ್ಟು ಓಟು ಕೊಡಿ :-
ಹೆಚ್. ಲಿಂಗಪ್ಪ B. Sc., LL.B.
ಹೆಚ್. ಎಂ. ನಾಗಪ್ಪ (ಹುಲ್ಲಹಳ್ಳಿ)
ಎ. ಲಿಂಗಣ್ಣ B. Sc., LL.B.

Mr B. S. LAXMINARAYEN,
Sales Representative,
Simpson and Co., Ltd.,
— is Now —
AT MODERN CAFE
To Book orders for
Norton Motor Cycles and
Simpsons Water-Cooled
Gas plants
For Immediate Delivery.
Please Meet Him.

ಹುರಿಗಡಲೆ
ಕಂಟ್ರೋಲ್ ಬೆಲೆಗೆ
ದೊರೆಯುತ್ತವೆ
ನಂ. ೧. ರೂ ೧ ಕ್ಕೆ ೨॥ ಸೇರು
ನಂ. ೨ ರೂ ೧ ಕ್ಕೆ ೨॥ ಸೇರು
ಯಂ. ಪುಟ್ಟಸ್ವಾಮಯ್ಯ,
ಕಡ್ಲೆ ಅಂಗಡಿ, ನಂಜನಗೂಡು

ಆರಾಧ್ಯ-ಸುಲೋಚನಾದೇವಿ

ತುಮಕೂರಿನ ಸುಪ್ರಸಿದ್ಧ ಕಾಂಗ್ರೆಸ್ ಮುಂದಾಳುಗಳೂ, ಪತ್ರಿಕೋದ್ಯೋಗಿಗಳೂ ಆದ ಶ್ರೀ ಆರ್. ಎಸ್. ಆರಾಧ್ಯರವರ ವಿವಾಹವು ಇದೇ ೨೫ ನೇ ತಾ॥ ಶುಕ್ರವಾರ ತುಮಕೂರಿನಲ್ಲಿ ಅನಗವಾಡಿ ಹಿರೇಮಠದ ಜಂಗಿನ ಮಠ ಭಯ್ಯನವರ ಮೊಮ್ಮಗಳು ಸೌ॥ ಸುಲೋಚನಾದೇವಿಯವರೊಡನೆ ಜರುಗುವುದು

ದಿವಾನರೊಡನೆ ಭೇಟಿ

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಪದವೀಧರರ ಸಂಘದ ಕಾರ್ಯದರ್ಶಿಗಳಾದ ಡಾ॥ ಟಿ. ಎ. ಕಸ್ತೂರಿ ರಂಗಾಚಾರ್ಯರು ದಿವಾನರನ್ನು ಭೇಟಿ ಮಾಡಿ ಆಯುರ್ವೇದ ಮತ್ತು ಯುನಾನಿ ಪದವೀಧರರ ಸ್ಥಾನಗಳನ್ನು ಹೆಚ್ಚಿಸುವಂತೆಯೂ, ಸ್ಥಳೀಯ ಸಂಸ್ಥೆಗಳಲ್ಲಿರುವ ಈ ವೈದ್ಯರ ಸ್ಥಿತಿಯನ್ನು ಉತ್ತಮಪಡಿಸುವಂತೆಯೂ, ಕಾಲೇಜಿನ ಶಿಕ್ಷಣ ಮಟ್ಟವನ್ನು ಹೆಚ್ಚಿಸಿ, ಹೊರಗಡೆ ಸರಿಯಾದ ಮನ್ನಣೆ ದೊರಕುವಂತೆ ಏರ್ಪಾಡು ಮಾಡಬೇಕೆಂದು ಪ್ರಾರ್ಥಿಸಿದರು. ದಿವಾನರು ಸೂಕ್ತವಾದ ರೀತಿಯಲ್ಲಿ ಇವುಗಳ ಬಗ್ಗೆ ಗಮನ ಕೊಡುವುದಾಗಿ ಭರವಸೆ ಇತ್ತರೆಂದು ಗೊತ್ತಾಗಿದೆ

ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತವೆ
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ರಾಜಕಮಲ್
ಕಡೇ ವಾರ! ಕಡೇ ವಾರ!!
1 ನೇ ಆಟ 6 ಕ್ಕೆ 2 ನೇ ಆಟ 9-15 ಕ್ಕೆ
ಶ್ರೀ ಕೃಷ್ಣಲೀಲಾ (ಕನ್ನಡದಲ್ಲಿ)
೨೫-೪-೪೭ ರಿಂದ
ಗೊಲ್ಲಭಾಮ (ತೆಲುಗು)

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ
ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ
—: ನಮ್ಮಲ್ಲಿ ವಿಚಾರಿಸಿ. :—
. ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.
ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,
ಅಶೋಕಾ ರಸ್ತೆ, ಮೈಸೂರು.
ಸ್ಥಾಪಿತ ೧೯೩೩ ಫೋನ್ ೪೧೧

ಪಟ ಹಾರಿಸಲು ಪ್ರತಿಬಂಧ

ಕಾನ್ಪುರದ ಜಿಲ್ಲಾ ಮ್ಯಾಜಿಸ್ಟ್ರೇಟ್ ೧೪೪ ನೇ ಕಲಮಿನ ಪ್ರಕಾರ ಪಟ ಹಾರಿಸಲು ಪ್ರತಿಬಂಧಕಾಜ್ಞೆ ಹೊರಡಿಸಿದ್ದಾರೆ. ಪಟದ ಮೇಲೆ ಆಕ್ಷೇಪಣೀಯವಾದ ಕೋಮುವಾರು ಘೋಷಣೆಗಳನ್ನು ಬರೆದು ಹಾರಿಸುತ್ತಿದ್ದುದರಿಂದಲೇ ಈ ಪ್ರತಿಬಂಧವನ್ನು ಜಾರಿಗೆ ತರಲಾಗಿದೆಯೆಂದು ಹೇಳಲಾಗಿದೆ

ಕೀರ್ತನ ವಿಜಯ

ಮೈಸೂರು ಕಬೀರ್ ರಸ್ತೆಯಲ್ಲಿರುವ ಪಾಂಡುರಂಗಸ್ವಾಮಿ ದೇವಾಲಯದ ರಾಮ ಮಂದಿರದಲ್ಲಿ ೨೫ ನೇ ತಾ॥ ಬುಧವಾರದಿಂದ ಪ್ರತಿನಿತ್ಯವೂ ಸಾಯಂಕಾಲದಿಂದ ೭॥ ಗಂಟೆಯವರೆಗೆ ಕೀರ್ತನ ಮಂಡಲಿಯ ಕಾರ್ಯದರ್ಶಿಗಳಾದ ಶ್ರೀ ವೇ॥ ವೆಂಕಟಸುಬ್ಬ ಶರ್ಮರಿಂದ ಶಂಕರ ವಿಜಯವು ಕಥಾರೂಪವಾಗಿ ನಡೆಯುತ್ತದೆ. ಸರ್ವರಿಗೂ ಆಹ್ವಾನವುಂಟು.

ಆಯುರ್ವೇದ ಪದವೀಧರರ ಸಂಘ

ಇದೇ ೩೦ ನೇ ತಾ॥ ಬೆಳಗ್ಗೆ ೯ ಗಂಟೆಗೆ ಜಿಲ್ಲಾ ಬೋರ್ಡ್ ವೈದ್ಯ ಮತ್ತು ಇತರ ಪ್ರತಿನಿಧಿಗಳ ಸಭೆಯೂ, ಸಾಯಂಕಾಲ ೬ ಗಂಟೆಗೆ ಸಂಘದ ಸ್ಥಾಯೀ ಸಮಿತಿ ಸಭೆಯೂ, ಬೆಂಗಳೂರು ಶ್ರೀರಾಮಪುರದಲ್ಲಿ ಆರ್ಯ ಸಮಾಜದ ಕಟ್ಟಡದಲ್ಲಿರುವ ಸಂಘದ ಉಚಿತ ವೈದ್ಯಶಾಲೆಯಲ್ಲಿ ಜರುಗುವುದಾಗಿ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಶ್ರೀ ಕೃಷ್ಣರಾಜೇಂದ್ರ ಮಿಲ
ಲಿಮಿಟೆಡ್
ಮೈಸೂರು.

ಟೆಂಡರು ನೋಟೀಸು

ಶ್ರೀ ಕೃಷ್ಣರಾಜೇಂದ್ರ ಗಿರಣಿಯ ಕೂಗಾರರ ಕಾಲೊನಿಯ ನಿವೇಶನದಲ್ಲಿ ಕೂಗಾರರ ವಾಸಕ್ಕೋಸ್ಕರ ಕಡಿಮೆ ಗೋಡೆ ಮತ್ತು ಮಂಗಳೂರು ಹೆಂಚಿನ ಮೇಲ್ಛಾವಣಿಗಳಿಂದ ೮೦ ಪ್ರತ್ಯೇಕವಾದ ಮನೆಗಳನ್ನು ಕಟ್ಟಲು ೧೯೪೭ ನೇ ಮೇ ೧ ನೇ ತಾರೀಕು ಸಂಜೆ ೫ ಗಂಟೆಯವರೆಗೆ ಗಿರಣಿಯ ಜನರಲ್ ಮ್ಯಾನೇಜರವರಿಂದ ಗೊತ್ತಾದ ಮಾನೆಯಲ್ಲಿ ಸೀಲಾದ ಟೆಂಡರುಗಳು ಸ್ವೀಕರಿಸಲ್ಪಡುತ್ತವೆ. ಟೆಂಡರಿನೊಡನೆ ೨೫ ರೂ. ಗಳನ್ನು ಠೇವಣಿಯಾಗಿ ಕಳುಹಿಕೊಡಬೇಕು;

ಅಳತೆ ಮೊದಲಾದ ವಿವರಗಳನ್ನೊಳಗೊಂಡ ಟೆಂಡರು ಫಾರಮ್ಮುಗಳನ್ನು ಗಿರಣಿಯು ಕೆಲಸ ಮಾಡುವ ದಿನಗಳಲ್ಲಿ ಗಿರಣಿಯ ಆಫೀಸಿನಲ್ಲಿ ಪಡೆಯಬಹುದು.

ಟೆಂಡರು ಅಂಗೀಕೃತವಾದ ದಿನದಿಂದ ಎರಡೂವರೆ ತಿಂಗಳುಗಳಲ್ಲಿ ಎಲ್ಲಾ ೮೦ ಮನೆಗಳೂ ತಿಂಗಳಿಗೆ ೩೨ ಮನೆಗಳಂತೆ ಕಟ್ಟಲ್ಪಡಬೇಕು

ಎಂ. ಆರ್. ಶ್ರೀನಿವಾಸಯ್ಯಂಗಾರ್
- ಜನರಲ್ ಮ್ಯಾನೇಜರ್.

Edited, printed and published by A. P. Nagarajan at the Sadhvi Press, D. Subbiah Road, Mysore

ಪೋ।ೕ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೨೪—೪—೪೭ [ಸಂಚಿಕೆ ೨೧೫

ರೆಡ್ಡಿ-ದಿವಾನ್ ಭೇಟಿ ಬಗ್ಗೆ ಸರ್ಕಾರಿ ಪ್ರಕಟಣೆ

ಕಾಂ॥ ಅಧ್ಯಕ್ಷರ ಭೇಟಿ ಬಗ್ಗೆ ಸರ್ಕಾರಿ ಪ್ರಕಟಣೆ

ಸ್ವಂ ಸು ವರದಿಗಾರ್ರಿ ಬೆಂಗಳೂರು ೨೪

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ॥ ಕೆ ಚಂಗಲರಾಯ ರೆಡ್ಡಿ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ॥ ಎ ಜಿ ರಾಮಚಂದ್ರರಾಯರು ನಿನ್ನೆ ಮಧ್ಯಾಹ್ನ ೪-೩೦ ಕ್ಕೆ ಕಾರ್ಲ್‌ಟನ್ ಭವನಕ್ಕೆ ತೆರಳಿ ದಿವಾನರೊಡನೆ ೩ ಘಂಟೆಗಳ ಕಾಲ ಸಂಭಾಷಣೆ ನಡೆಸಿದರು. ಭವನದ ಮುಂಭಾಗದಲ್ಲಿ ಮುಖಂಡರನ್ನು ದಿವಾನರೇ ಸ್ವಾಗತಿಸಿದರು. ಮೈಸೂರಿನ ರಾಜಕೀಯದಲ್ಲಿ ಇದೊಂದು ಚಾರಿತ್ರಾರ್ಹವಾದ ಘಟ್ಟ. ಭವನದೊಳಗೆ ಪತ್ರಿಕೋದ್ಯೋಗಿಗಳಿಗೆ ಪ್ರವೇಶವಿರಲಿಲ್ಲ. ಛಾಯಾ ಚಿತ್ರವನ್ನು ತೆಗೆಯಲೂ ಅವಕಾಶ ಕೊಡಲಿಲ್ಲ. ಭೇಟಿ ಮುಗಿದ ನಂತರ ಪತ್ರಿಕಾ ಪ್ರಕಟಣೆಯೊಂದನ್ನು ಹೊರಡಿಸಲಾಗುವುದೆಂದು ತಿಳಿಸಲಾಯಿತು.

ಭೇಟಿಯು ರಾತ್ರಿ ೭-೩೦ ಕ್ಕೆ ಮುಕ್ತಾಯಗೊಂಡಿತು. ಸಂಭಾಷಣೆಯು ಸೌಹಾರ್ದಪೂರಿತವಾಗಿತ್ತೆಂದು ಹೇಳಲಾಗಿದೆ. ಕಾಂಗ್ರೆಸ್ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ದಿವಾನರಿಂದ ಅಂಗೀಕೃತವಾದ ಪ್ರಕಟಣೆಯೊಂದನ್ನು ರಾತ್ರಿ ೮ ಘಂಟೆಗೆ ಹೊರಡಿಸಲಾಯಿತು. ಅದರ ವಿವರ ಈ ರೀತಿ ಇದೆ:—

ಶ್ರೀಮನ್ಮಹಾರಾಜರವರ ಸಂದೇಶದ ವ್ಯಾಪ್ತಿ, ರಾಜಕೀಯ ಗುರಿ ಮತ್ತು ಪ್ರಗತಿಯ ಬಗ್ಗೆ ಅದರಲ್ಲಿರುವ ಅವಕಾಶ, ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕುರಿತ ಮನಸ್ಸಿನಿಂದ ಚರ್ಚಿಸಲಾಯಿತು. ಕಾಂಗ್ರೆಸ್ ಅಧ್ಯಕ್ಷರು ತಮ್ಮ ಸಂಸ್ಥೆಯ ನೀತಿಯನ್ನು ವಿವರಿಸಿದರು. ಇನ್ನು ಕೆಲವು ದಿನಗಳಲ್ಲೇ ಇತರ ಪಕ್ಷಗಳ ಪ್ರತಿನಿಧಿಗಳನ್ನು ತಾವು ಭೇಟಿ ಮಾಡುವುದಾಗಿಯೂ, ಅವುಗಳು ಮುಗಿದ ನಂತರ ಕಾಂಗ್ರೆಸ್ಸಿನೊಡನೆ ಚರ್ಚೆಯನ್ನು ಮುಂದುವರಿಸಲು ನಿರೀಕ್ಷಿಸುವುದಾಗಿ ದಿವಾನರು ತಿಳಿಸಿದರು. ಚರ್ಚೆಯ ವಿವರವನ್ನು ಕಾರ್ಯಕಾರಿ ಸಮಿತಿಯ ಮುಂದೆ ಮಂಡಿಸುವುದಾಗಿಯೂ ಅನಂತರ ಅದಕ್ಕೆ ಬಾಗ್ರತೆ ಮತ್ತೊಂದು ಭೇಟಿ ಏರ್ಪಡಬಹುದೆಂದೂ ಶ್ರೀ॥ ಕೆ. ಸಿ ರೆಡ್ಡಿಯವರು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ನಡೆಯುತ್ತಿದೆ. ದಿವಾನರೊಡನೆ ಅಧ್ಯಕ್ಷರು ನಡೆಸಿದ ಭೇಟಿಯನ್ನು ಸಭೆ ಪರಿಶೀಲಿಸುತ್ತಿದೆ.

ಇತರ ಪ. ಮುಖಂಡರೊಡನೆ ಭೇಟಿ

ಭಾನುವಾರ ಮತ್ತು ಸೋಮವಾರ ದಿವಾನರು ಇತರ ಪಕ್ಷಗಳ ಮುಖಂಡರನ್ನು ಭೇಟಿ ಮಾಡುವರೆಂದು ಹೇಳಲಾಗಿದೆ.

ಮತ್ತೆ ಭೇಟಿ ಎಂದು?

ಮುಂದಿನ ಮಂಗಳವಾರ ದಿವಾನರು ಕಾಂಗ್ರೆಸ್ ಅಧ್ಯಕ್ಷರೊಡನೆ ಭೇಟಿ ಮಾಡಿ ಚರ್ಚೆಯನ್ನು ಮುಂದುವರಿಸುವರೆಂದು ತಿಳಿದು ಬಂದಿದೆ.

ದಿವಾನರು ೨೯ ನೇ ತಾ॥ ದೆಹಲಿಗೆ ತೆರಳುವರು. ಅಲ್ಲಿಂದ ಮಾತುಕತೆಗಳನ್ನು ಮುಗಿಸುವರೆಂದು ಹೇಳಲಾಗಿದೆ.

ಸಂಸ್ಥಾನದಲ್ಲಿ ವಾಸ ನಿರೋಧವನ್ನು ಇಂದಿನಿಂದ ಜಾರಿಗೆ ಅವುಗಳಿಂದ ಆ ವ್ಯಕ್ತಿಯ ಜೀವನದ ಗತಿ ಕೆಲಸವನ್ನು ಬದಲಿಸಕೊಡುವ ಬಗ್ಗೆ ಸಲಹೆಗಳನ್ನು ನಿನ್ನೆ ಸೇರಿದ್ದ ವಾಸ ನಿರೋಧ ಸಮಿತಿಯು ಪರಿಶೀಲಿಸಿತು. ಸಮಿತಿಯ ಮುಂದಿನ ಸಭೆಯು ಮೇ ೨ ನೇ ತಾರೀಖಿನಲ್ಲಿ ನಡೆಯಲಿದೆ.

ಕಾಂಗ್ರೆಸ್ ಕಛೇರಿಗೆ ಜೈ ಪ್ರಕಾಶರ ಭೇಟಿ

ಮೈಸೂರು ೨೪

ಅಖಿಲ ಭಾರತ ಸಮಾಜವಾದಿ ನಾಯಕ ಶ್ರೀ ಜೈ ಪ್ರಕಾಶ್ ನಾರಾಯಣರವರು ೬ ನೇ ತಾ॥ ಶನಿವಾರ ಸಂಜೆ ೫ ಗಂಟೆಗೆ ಕಾಂಗ್ರೆಸ್ ಕಛೇರಿಗೆ ಭೇಟಿ ಕೊಡುವರು. ಅವರನ್ನು ಸ್ವಾಗತಿಸಲು ಕಾಂಗ್ರೆಸ್ಸಿಗರೆಲ್ಲರೂ ಹಾಜರಿರಬೇಕೆಂದು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಇಂಜನಿಯರುಗಳ ವರ್ಗ

ಪುರಸಭೆಯ ಇಂಜನೀಯರಾಗಿದ್ದ ಶ್ರೀ ಜಿ. ಚಾಟ್ಟಿಯವರನ್ನು ನಗರಾಭಿವೃದ್ಧಿ ಇಂ॥ ಆಗಿಯೂ, ಶಿವಮೊಗ್ಗ ಸ ಅ॥ ಇಂಜನೀಯರಾಗಿದ್ದ ಶ್ರೀ ಸಿ. ನಾರಾಯಣಸ್ವಾಮಿಯವರನ್ನು ಮೈಸೂರು ಸಭಾ ಇಂಜನೀಯರನ್ನಾಗಿಯೂ ವರ್ಗಾಯಿಸಲಾಗಿದೆ.

ಅಂತರ ರಾಷ್ಟ್ರೀಯ ಮಕ್ಕಳ ಪುಸ್ತಕ ಪ್ರದರ್ಶನ

ವಿದ್ಯಾಭಿಮಾನಿಗಳ ಸಭೆಯೊಂದು ಆಗಿ ೨೧ ನೇ ತಾ॥ ವಸತಿ ಸದನದಲ್ಲಿ ಶ್ರೀ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸೇರಿ ಮಕ್ಕಳ ಪುಸ್ತಕ ಮಂಡಲಿಯನ್ನು ಸ್ಥಾಪಿಸಲಾಯಿತು. ಶ್ರೀಗಳಾದ ಆರ್ ಸ್ವಾಮಿರಾಜಚೆಟ್ಟಿಯರು ಅಧ್ಯಕ್ಷರಾಗಿಯೂ, ಎಸ್ ರಾಜಗೋಪಾಲರಾವ್ ಮತ್ತು ರಾಮಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಚುನಾಯಿತರಾದರು. ಜರುಗುವ ದಸರಾ ವಸ್ತು ಪ್ರದರ್ಶನದ ಸಮಯದಲ್ಲಿ ಅಂತರಾಷ್ಟ್ರೀಯ ಮಕ್ಕಳ ಪುಸ್ತಕ ಪ್ರದರ್ಶನವನ್ನು ಏರ್ಪಡಿಸಬೇಕೆಂದೂ ತೀರ್ಮಾನಿಸಲಾಯಿತು.

ಸಂತಾಪ ಪ್ರದರ್ಶನ

ಸ್ವಂ.ಸು] ನಂಜನಗೂಡು ೨೩

ಇಲ್ಲಿನ ಕೋ-ಆಪರೇಟಿವ್ ಕ್ರೆಡಿಟ್ ಬ್ಯಾಂಕಿನಲ್ಲಿ ೨೪ ವರ್ಷಗಳ ಕಾಲ ಅಧ್ಯಕ್ಷರಾಗಿದ್ದ ಶ್ರೀ ಕೆ. ವೆಂಕಟಸ್ವಾಮಯ್ಯಂಗಾರರ ನಿಧನದ ಬಗ್ಗೆ ಸಂತಾಪ ಸೂಚಿಸಲು, ಷೇರುದಾರರುಗಳ ಮತ್ತು ಮಹಾಜನರ ಸಭೆಯೊಂದು ನಿನ್ನೆ ಬ್ಯಾಂಕಿನ ಸಭಾಂಗಣದಲ್ಲಿ ಶ್ರೀ ಕೆ ವಿಶ್ವೇಶ್ವರಗೌಡರ ಅಧ್ಯಕ್ಷತೆಯಲ್ಲಿ ಜರುಗಿತು. ದಿವಂಗತರ ಗುಣಗಾನವಾದ ನಂತರ ಅವರ ನಿಧನದ ಬಗ್ಗೆ ಸಂತಾಪ ಸೂಚಿಸಿ ಅವರ ಆತ್ಮಕ್ಕೆ ಶಾಂತಿ ದಯಪಾಲಿಸುವಂತೆ ಪರಮಾತ್ಮನನ್ನು ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಕಾಫಿ ಬೋರ್ಡಿಗೆ ಚುನಾವಣೆ

ಸ್ವಂ.ಸು] ಚಿಕ್ಕಮಗಳೂರು ೨೩

ಭಾರತದ ಕಾಫಿ ಬೋರ್ಡಿಗೆ ಈ ಜಿಲ್ಲೆಯಿಂದ ಶ್ರೀ ಎಂ. ಎಸ್. ದೇವೇಗೌಡರು ಚುನಾಯಿತರಾಗಿರುತ್ತಾರೆ

ವಾಚಕರಲ್ಲಿ ವಿನಂತಿ

ರಾಜಧಾನಿಯ ಚಂದಾದಾರರ ಪೈಕಿ ಹಲವರಿಗೆ ನಮ್ಮ ಪತ್ರಿಕೆಯು ಸರಿಯಾಗಿ ತಲುಪುತ್ತಿಲ್ಲವೆಂದು ಕೇಳಿ ವಿಷಾದಿಸುತ್ತೇವೆ. ಇದನ್ನು ಕ್ರಮಪಡಿಸಲು ತಕ್ಕ ವ್ಯವಸ್ಥೆಯನ್ನು ಸದ್ಯದಲ್ಲಿಯೇ ಮಾಡಲಿರುತ್ತೇವೆ. ಪತ್ರಿಕೆಗಳು ಸರಿಯಾಗಿ ತಲುಪದಿರುವ ಚಂದಾದಾರರುಗಳು ದಯವಿಟ್ಟು ಸದರಿ ಅಂಶವನ್ನು ನಮಗೆ ಲಿಖಿತ ಮೂಲಕವಾಗಿಯಾಗಲೀ, ಟೆಲಿಫೋನ್ ಮೂಲಕವಾಗಿಯಾಗಲೀ ತಿಳಿಸಬೇಕೆಂದು ಕೋರುತ್ತೇವೆ.

ವ್ಯವಸ್ಥಾಪಕ—'ಸಾಧ್ವಿ'

ಅಧಿಕರ್ಣಾಟಕರ ಸಮ್ಮೇಳನ

ಮೈಸೂರು ೨೪

ಟಿ. ನರಸೀಪುರ ತಾ॥ ಮುಡಕತೊರೆ ಕ್ಷೇತ್ರದ ತಲಕಾಡು ಚಿಟ್ಟಹಳ್ಳಿಯಲ್ಲಿ ಶ್ರೀ ಜಿ ಕೃಷ್ಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಮೊನ್ನೆದಿನ ಆದಿಕರ್ಣಾಟಕರ ಸಮ್ಮೇಳನವೊಂದು ಜರುಗಿತು. ಜಿಲ್ಲೆಯ ನಾನಾ ಭಾಗಗಳಿಂದ ೫ ಸಹಸ್ರ ಜನರೂ ಮೈಸೂರಿನ ಶ್ರೀ ಕೆ ಶೇಷಾದ್ರಿಯವರೂ, ಬೆಂಗಳೂರಿನ ಸಾಹುಕಾರ್ ಶ್ರೀ ವೆಂಕಟೇಮಣಪ್ಪನವರೂ, ತಾ॥ ಆಫೀಸರ್ ಅವರೂ ಆಗಮಿಸಿದ್ದರು. ಶ್ರೀಮನ್ಮಹಾರಾಜರಿಗೆ ರಾಜಭಕ್ತಿ ಸಮರ್ಪಿಸುವ ನಿರ್ಣಯವೂ, ಆದಿಕರ್ಣಾಟಕರನ್ನು ಸೈನ್ಯಕ್ಕೂ ರಿಜರ್ವ್ ಪೋಲೀಸ್ ದಳಕ್ಕೂ ಹೆಚ್ಚಾಗಿ ಸೇರಿಸಿಕೊಳ್ಳಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವೂ ಅಂಗೀಕೃತವಾದುವು. ಸದರಿ ಚಿಟ್ಟದ ಹಳ್ಳಿಯಲ್ಲಿ ಶ್ರೀ ಮುದ್ದಮಾದಪ್ಪ ಸ್ವಾಮಿಗಳು ಸ್ಥಾಪಿಸುವ ಆದಿಕರ್ಣಾಟಕ ಅನಾಥಾಲಯದ ಕಟ್ಟಡಕ್ಕೆ ಅದನ್ನು ನಡೆಸಿಕೊಂಡು ಬರಲು ಸರ್ಕಾರದವರು ಸಹಾಯವಿಡಬೇಕೆಂದು ಪ್ರಾರ್ಥಿಸುವ ಠರಾವನ್ನು ಅಂಗೀಕರಿಸಲಾಯಿತು. ಶ್ರೀ ಕೃಷ್ಣಸ್ವಾಮಿ ಮುಂತಾದವರೂ ಗಿ೭೦೦ ರೂ ಗಳ ದಾನವನ್ನಿತ್ತರು.

ಹರಿಕಥೆ

ಈ ದಿನ ರಾತ್ರಿ ೮ ಗಂಟೆಗೆ ಕೃಷ್ಣರಾಜಾ ಪೊಲೀಸ್ ಸ್ಟೇಷನ್ನಿನ ಹಿಂಭಾಗದಲ್ಲಿರುವ ಕೊಲ್ಲಾಪುರದಮ್ಮನವರ ದೇವಸ್ಥಾನದಲ್ಲಿ ವೇ॥ ಶ್ರೀ ವೇಣುಗೋಪಾಲದಾಸರವರಿಂದ ಚಂದ್ರಹಾಸ ಎಂಬ ಹರಿಕಥೆಯು ನಡೆಯುವುದು.

ಜಿನ್ನಾರವರ ಮೇಲೆ ಮೈಸೂರಾಯರ ಒತ್ತಾಯವೇ?

ಅಖಿಲ ಭಾರತಕ್ಕೆಲ್ಲಾ ಒಂದು ಕೇಂದ್ರ ಸರ್ಕಾರವಿರಬೇಕೆಂಬ ಯೋಜನೆಯನ್ನು ಒಪ್ಪಿಕೊಳ್ಳುವಂತೆ ಮೈಸೂರಾಯರು ನಿನ್ನೆ ಮಿ॥ ಜಿನ್ನಾರವರೊಡನೆ ನಡೆಸಿದ ಭೇಟಿಯಲ್ಲಿ ಒತ್ತಾಯಪಡಿಸಿದರೆಂದು ಗೊತ್ತಾಗಿದೆ. ಬ್ರಿಟಿಷರಾದ ಉತ್ತರವನ್ನು ಮೇ ೫ ರೊಳಗೆ ಕೊಡುವಂತೆ ಮೈಸೂರಾಯರು ಹೀಗೆಯೇ ಮಿ॥ ಜಿನ್ನಾರವರಿಗೆ ತಿಳಿಸಿದ್ದರೆಂದೂ ಹೇಳಲಾಗಿದೆ. ಮೈಸೂರಾಯರು ಈ ಪ್ರಯತ್ನದಲ್ಲಿ ವಿಫಲರಾದರೆ ತಮ್ಮ ಮುಂದಿನ ಕಾರ್ಯಕ್ರಮವನ್ನು ಕೂಡಲೇ ನಿರ್ಧರಿಸುವರೆಂದು ಹೇಳಲಾಗಿದೆ

ಅಪಪ್ರಚಾರದ ಖಂಡನೆ

ಮೈಸೂರು ೨೪

ಶ್ರೀಗಳಾದ ಬಿ ವಿ ಕೃಷ್ಣಮೂರ್ತಿ, ಎ ಕೃಷ್ಣಸ್ವಾಮಿ, ಆರ್ ಎಸ್. ನಾಗಪ್ಪಶೆಟ್ಟಿ, ಕಂಬಿ ನಾಗಣ್ಣ ಮತ್ತು ಎರ್. ಲಕ್ಷ್ಮೀಪತಿ ಮುಂತಾದವರು ಈ ರೀತಿ ಹೇಳಿಕೆಯೊಂದ ನ್ನಿತ್ತಿದ್ದಾರೆ:—

ಇದೇ ಮಾಹೆ ೧೬ ತಾರೀಖಿನಲ್ಲಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೆ ಬಹಿರಂಗ ಪತ್ರ ಎಂಬ ಶಿರೋನಾಮೆಯಲ್ಲಿ ಶ್ರೀ ಶಿವರುದ್ರಪ್ಪ ಎಂಬುವರು ಮಿ॥ ರಾ॥ ಪಾಲಹಳ್ಳಿ ಸೀತಾರಾಮಯ್ಯನವರ ಮೇಲೆ ಆರೋಪಣೆಗಳನ್ನು ಮಾಡಿರುತ್ತಾರೆ. ಮಿ॥ರಾ॥ ಪಾಲಹಳ್ಳಿ ಸೀತಾರಾಮಯ್ಯನವರು ಯಾಗಾದಿ ಹಬ್ಬದ ಸ್ಪೆಷಲ್ ಕೋಟಾವನ್ನು, ಹಂಚಿಕೆ ಬಗ್ಗೆ ತಂದೂ ಮಾಡಿ ನಿಸ್ಪೃಹರಾಗಿ ನಿಂತು ಚಟ್ಟೆ ಹಂಚಿಕೆ ಮಾಡಿಸಿದುದು ನಗರದ ಎಲ್ಲಾ ನಿವಾಸಿಗಳಿಗೆಲ್ಲಾ ತಿಳಿದ ವಿಷಯವೇ ಆಗಿರುತ್ತದೆ. ಅಲ್ಲದೆ ಯುಗಾದಿ ಹಬ್ಬದ ಪ್ರಯುಕ್ತ ಮಿ॥ ರಾ॥ ನಂಜುಂಡಪ್ಪ ಅಂಡ್ ಸನ್ಸ್‌ರವರ ಅಂಗಡಿಯಲ್ಲಿ ಅಂಗಡಿ ಮಾಲೀಕರ ಪೈಕಿ ಒಬ್ಬರು ಬಟ್ಟೆಹಂಚಿಕೆಯ ಸಂದರ್ಭದಲ್ಲಿ ಮಿ॥ ಸೀತಾರಾಮಯ್ಯನವರ ಕೊಟ್ಟ ಜವಾಬುಗಳೂ ಮತ್ತು ಅವರಿಗೆ ಬಿದ್ದ ಕೋಟಾ ಬಟ್ಟೆಯನ್ನು ಕೋರ್ಟಿಗೆ ಅವರ ಹಂಚಿಕೆಯೇ ಇಲ್ಲ ವೆಂತೆ ಜವಾಬು ಜವಾಬು ಕೊಟ್ಟಿರುವುದೂ ಎಲ್ಲರಿಗೂ ತಿಳಿದ ವಿಷಯವಾಗಿದೆ. ಇಂತಹ ಸಂದರ್ಭದಲ್ಲಿ ಸದರಿ ಶಿವರುದ್ರಪ್ಪ ಎಂಬುವರು ನಿಸ್ವಾರ್ಥತೆಯಿಂದಲೂ ಮತ್ತು ದಕ್ಷತೆಯಿಂದಲೂ ಕೆಲಸ ಮಾಡಿದ ಮಿ॥ ಸೀತಾರಾಮಯ್ಯನವರ ಮೇಲೆ ಈ ರೀತಿ ಆರೋಪಣೆಗಳನ್ನು ಮಾಡಿರುವುದು ಬಹಳ ಶೋಚನೀಯವಾಗಿರುತ್ತದೆ. ಇವರು ವೇಟ್ಟರಂತೆ ಮಿ॥ ನಂಜುಂಡಪ್ಪ ಅಂಡ್ ಸನ್ಸ್ ರವರ ಕಡೆಯ ಮನುಷ್ಯರಾಗಿ ನಡೆದಿದ್ದರು. ಮಿ॥ ಸೀತಾರಾಮಯ್ಯನವರಿಗೆ ಶೋಭಿಸಿದ ವರ್ತನೆಗೆ ಕ್ರಮಮಾಡಬೇಕೆಂದು ಡೆಪ್ಯುಟಿ ಕಮೀಷನರವರು ಆರ್ಡರ್ ಮಾಡಿರುವುದಕ್ಕೆ ಪ್ರತೀಕಾರವಾಗಿ ಹೊರಡಿಸಿರುವ ನಿರಾಧಾರವಾದ ಆರೋಪಣೆ ಇದಾಗಿರುತ್ತದೆ. ಸಾರ್ವಜನಿಕ ಸೇವೆಯನ್ನು ಅಪಾರವಾಗಿ ಸಲ್ಲಿಸುತ್ತಿರುವ ಮಹನೀಯರುಗಳಲ್ಲಿ ಶ್ರೀಯುತರು ಒಬ್ಬರಾಗಿರುವುದು ಸರ್ವವಿದಿತವಾಗಿರುತ್ತದೆಂಬ ವಿಷಯವನ್ನು ವ್ಯಕ್ತಪಡಿಸುವ ಕಾರಣದಿಂದ ನಾವು ಹೇಳುತ್ತೇವೆ. ಮಹಾಜನಗಳು ಇಂತಹ ಅಪಪ್ರಚಾರಕ್ಕೆ ಕಿವಿಗೊಡಬಾರದೆಂದು ಪ್ರಾರ್ಥಿಸುತ್ತೇವೆ.

ಸಾಧ್ವಿ

ತಾ|| ೨೪-೪-೪೭ ಗುರುವಾರ

ಪೌರಸಭಾಧ್ಯಕ್ಷರ ವಿರಸ ವರ್ತನೆ

ರಾಜಧಾನಿಯ ಪೌರಸಭಾಧ್ಯಕ್ಷರ ಮೇಲೆ ಅವಿಶ್ವಾಸವನ್ನು ಸೂಚಿಸಿ, ಅವರನ್ನು ಬೇರೆ ಕಡೆಗೆ ವರ್ಗಾಯಿಸುವ ಪ್ರಯತ್ನದ ವಿಚಾರದಲ್ಲಿ ಈಗಾಗಲೇ ಸ್ವಲ್ಪ ಮಟ್ಟಿಗೆ ಚರ್ಚೆಗಳು ನಡೆದಿವೆಯಷ್ಟೆ. ಆದರೆ ಪೌರಸಭಾಧ್ಯಕ್ಷರ ಇತ್ತೀಚಿನ ವರ್ತನೆಯಿಂದ ಈ ವಾದ, ವಿವಾದಗಳು ಬೆಳೆದು ಅವರ ಮೇಲೆ ಇನ್ನೂ ಹೆಚ್ಚಿನ ಟೀಕೆಯೂ ಬರಲು ಆಸ್ಪದವಾಗಿರುತ್ತದೆ. ಅವರಿಗೆ ಬೇಲಿ ಕೊಡುತ್ತಿದ್ದವರೂ ಸಹ ಈಗ ಅವರನ್ನು ಖಂಡಿಸುವಂತೆ ಆಗಿದೆ. ಅವಿಶ್ವಾಸ ನಿರ್ಣಯಕ್ಕೆ ಮೊದಲು ಎಷ್ಟು ಕಾರಣವಿದ್ದಿತೋ ಅದಕ್ಕೀಗಲೂ ಹೆಚ್ಚಿನ ಅವಕಾಶವನ್ನು ಈಗ ಅವರೇ ಕಲ್ಪಿಸಿರುತ್ತಾರೆ.

ವಿಶೇಷ ಸಭೆಯನ್ನು ಕರೆಯಲು ಇಪ್ಪತ್ತಮೂರು ಜನ ಸದಸ್ಯರು ಕೇಳಿಕೊಂಡ ನಿರ್ಣಯವು ಪೌರಸಭೆಯ ಕಾನೂನಿಗೆ ವಿರೋಧವಾಗಿರುವುದೆಂದು ಸಭೆಯನ್ನು ಕರೆಯ ಬಯಸಿದೆಂದು ಅವರು ತಿಳಿಸಿದ್ದಾರೆ. ಈ ರೀತಿ ಸದಸ್ಯರ ಸೂಚನೆಗಳನ್ನು ಅವರು ತಳ್ಳಿ ಹಾಕಿರುವುದು ಇದೇ ಮೊದಲಲ್ಲ. ಪೌರಸಭೆಯ ಇತಿಹಾಸದಲ್ಲಿ ಸದಸ್ಯರ ಸೂಚನೆಗಳನ್ನು ನಿರಾಕರಿಸುವವರಲ್ಲಿ ಇಂದಿನ ಅಧ್ಯಕ್ಷರಿಗೆ ಅಗ್ರಸ್ಥಾನವು ದೊರೆಯುತ್ತದೆ. ಇವರು ತಳ್ಳಿಹಾಕಿರುವ ನಾನಾ ಬಗೆಯ ಸೂಚನೆಗಳನ್ನು ನ್ಯಾಯಶಾಸ್ತ್ರ ಪಂಡಿತರುಗಳು ವಿಮರ್ಶಿಸಿ, ವ್ಯಾಖ್ಯಾನ ಮಾಡಿ ಒಂದು ಗ್ರಂಥವನ್ನೇ ಬರೆಯಬಹುದು. ಅಧ್ಯಕ್ಷರು ಕೊಡುವರೂ ಲಿಂಗೇ ಅಂತಿಮ ನಿರ್ಧಾರವಾಗುವಂತೆ ಮಾಡಬೇಕೆಂಬ ಸಲಹೆಯನ್ನು ಸರ್ಕಾರದವರು ಕೊಡುತ್ತಿರುವ ಈ ಕಾಲದಲ್ಲಿ ಇವರ ತೀರ್ಮಾನಗಳ ವೈಖರಿಯನ್ನು ನೋಡಿ ಅದರ ಸಹ ವಿಶ್ರಾಂತಿ ಇರಬಹುದು.

ಕಾನೂನಿನಲ್ಲಿ ಅವಕಾಶವಿರುವ ಅಲ್ಲಿಗೆ ಸನ್ನಿವೇಶ ಅಧ್ಯಕ್ಷರು ತಮ್ಮ ಮನಸ್ಸಿನಂತೆ ತಳ್ಳಿ ಹಾಕುತ್ತಿದ್ದರೆ ಸಾರ್ವಜನಿಕ ಸಂಸ್ಥೆಗಳ ಆಡಳಿತವಾದರೂ ಒಂದು ನಾಟಕ ನಾಟಕಕ್ಕಿಂತಲೂ ಕೀಳಾಗುವುದರಲ್ಲಿ ಸಂದೇಹವಿಲ್ಲ. ಸ್ಥಳೀಯ ಸ್ವಾಯತ್ತ ಸಂಸ್ಥೆಗಳ ದ ಮೇಲ್ವಿಚಾರಣೆ ಪೌರ ಸಭೆಗಳಲ್ಲಿ ಕೂಡ ಇಂತಹ ಪ್ರಸಂಗಗಳು ಕೆಲವಲ ಧುರಂಧರ ಪ್ರಾಂತವಾದ ಪ್ರಹಸನಗಳಾಗಿಯೇ ಪರಿಣಮಿಸುವುವು.

ಹಿಂದೊಮ್ಮೆ ಮತ್ತೊಬ್ಬ ಅಧ್ಯಕ್ಷರು ಪೌರಸಭೆಯ ಸದಸ್ಯರ ಕೋರಿಕೆಯನ್ನು ಮನ್ನಿಸದೆ ಸಭೆಯನ್ನು ಕರೆಯದಿದ್ದುದೂ, ಅನಂತರ ಉಪಾಧ್ಯಕ್ಷರೇ ಅದನ್ನು ಕರೆದುದೂ ವಾಚಕರ ನೆನಪಿನಲ್ಲಿರಬೇಕು. ಈಗಲೂ ಸಹ ಅದರ ಪುನರಾವೃತ್ತಿಯೇ ಆಗಬೇಕಾದ ಪ್ರಸಂಗವು ಬಂದಿರುವಂತಿದೆ. ಇಂದಿನ ವಾತಾವರಣದಲ್ಲಿ ಮೇಲ್ಕಂಡಂತೆ ಅಧ್ಯಕ್ಷರು ವರ್ತಿಸಬೇಕಾದರೆ ಅವರು ಈ ಬಗೆಯ ಪ್ರತಿಕ್ರಿಯೆಗೂ ಸಿದ್ಧರಾಗಿರುವರೆಂದೇ ಭಾವಿಸಬೇಕು. ಇನ್ನು ಮುಂದೆ ಈ ಪ್ರಕರಣವು ಯಾವ, ಯಾವ ರೂಪವನ್ನು ತಾಳುವುದೋ ನೋಡಬೇಕಾಗಿದೆ.

ಅವಿಶ್ವಾಸ ನಿರ್ಣಯದ ಯುಕ್ತಾಯುಕ್ತತೆಯನ್ನು ವಿಮರ್ಶಿಸುವುದು ಈಗ ಅಪ್ರಕೃತ. ಸಭೆಯನ್ನು ಕರೆಯದಿದ್ದುದನ್ನು ಮಾತ್ರ ಅತ್ಯಂತ ತೀವ್ರವಾಗಿ ಖಂಡಿಸಬೇಕಾಗಿದೆ. ಮೇಲಾಗಿ ಅವಿಶ್ವಾಸದ ವಿಚಾರವನ್ನು ಅಧ್ಯಕ್ಷರು ಇಷ್ಟು ಪ್ರಮಾದವಾಗಿ ಪರಿಗಣಿಸಿರುವುದೂ ಯುಕ್ತವಲ್ಲ. ಪ್ರಪಂಚದ ಅನೇಕ ಆಡಳಿತಗಳಲ್ಲಿ ದಿನ ಬೆಳಗಾದರೆ ಅವಿಶ್ವಾಸ ಸೂಚನೆಗಳು ಬಂದು ಹೋಗುತ್ತಿವೆ. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಆಗಿಂದಾಗ್ಗೆ ಇದು ಬರುತ್ತಲೇ ಇದೆ. ಮೊನ್ನೆ ತಾನೆ ಮದರಾಸಿನ ಖಾಸಗೀ ಪ್ರಧಾನಿಗಳಾದ ಪ್ರಕಾಶಂರವರ ಮೇಲೆ ಅವಿಶ್ವಾಸವನ್ನು ವ್ಯಕ್ತಪಡಿಸಲಾಯಿತು. ಸಾರ್ವಜನಿಕ ಸಂಸ್ಥೆಯಾದ ತಮಿಳುನಾಡು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ|| ಕಾಮರಾಜ ನಾಡರವರ ಮೇಲೆ ಅವರ ಸಹೋದ್ಯೋಗಿಗಳೇ ಅವಿಶ್ವಾಸವನ್ನು ಸೂಚಿಸಿದ್ದರು. ಆದರೆ ಅದು ಬಿದ್ದು ಹೋಯಿತು.

ಅವಿಶ್ವಾಸ ನಿರ್ಣಯವನ್ನು ವಿಶಾಲ ಭಾವನೆಯಿಂದ ವೀಕ್ಷಿಸುವ ಪದ್ಧತಿಯು ನಮ್ಮ ಅಧಿಕಾರಿಗಳಿಗೆ ಹೊಸದು. ಸದಸ್ಯರ ನಂಬಿಕೆಗೆ ತಾವು ಪಾತ್ರರಲ್ಲದ ಮೇಲೆ ತಾವೇ ಸ್ಥಾನವನ್ನು ಬಿಟ್ಟು ಬೇರೆ ಕಡೆಗೆ ಹೋಗಬೇಕೆಂಬ ಸಂಪ್ರದಾಯವು ಅವರಲ್ಲಿ ಬಂದಿಲ್ಲ. ಸಾಲದುದಕ್ಕೆ ಸಾರ್ವಜನಿಕರೆನಿಸಿಕೊಂಡ ಹಲವು ಅತ್ಯುತ್ಸಾಹಿಗಳೂ ಸಹ ಇಂತಹ ಅಧಿಕಾರಿಗಳೇ ಇರಬೇಕೆಂದು ಚಳುವಳಿ ನಡೆಸುವ ಭರದಲ್ಲಿಯೂ ಕೂಡ ಇರುವುದು ಒಂದು ಸೋಜಿಗದ ಸಂಗತಿ.

ಕೆಲವು ದಿನಗಳ ಹಿಂದೆ ಮೈಸೂರಿನ ಹೊಸ ಜಿಲ್ಲಾಧಿಕಾರಿಗಳನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ಈ ಗುಂಪಿನ ಹಲವರು ಪ್ರಯತ್ನಿಸಿದರೆಂದೂ ವರ್ತಮಾನವಿದೆ. ಇಂತಹವರ ಮಾತಿಗೆ ಎಷ್ಟು ಬೆಲೆಯಿರುವುದೆಂಬುದನ್ನು ಮಹಾಜನರೇ ಊಹಿಸಬೇಕು.

ಅಧಿಕಾರಿವರ್ಗದವರಿಂದ ಖಾಸಗಿಯವರಿಗೆ ಆಡಳಿತವನ್ನು ಬದಲಾಯಿಸಬೇಕೆಂದು ಹೇಳುತ್ತಿರುವ ಕಾಲದಲ್ಲಿಯೂ ಒಬ್ಬ ನೌಕರನನ್ನು ಒಂದು ಕಡೆಯೇ ಇಟ್ಟಿರಬೇಕೆಂದು ಒತ್ತಾಯಪಡಿಸುತ್ತಿರುವುದು ಅರ್ಥವಿಲ್ಲದ ಪಂಕ್ತಿಯೇ ಸರಿ. ಒಟ್ಟಿನಲ್ಲಿ ಪೌರಸಭಾಧ್ಯಕ್ಷರ ಪ್ರಭಾವವು ದಿನೇ ದಿನೇ ಕಳೆಗುಂದುತ್ತ ಬಂದು ಪೌರಸಭೆಯಲ್ಲಿ ಇಲ್ಲದ ಘರ್ಷಣೆಗಳಿಗೆ ಅವಕಾಶವಾಗುತ್ತಿದೆ. ಇದರಿಂದಲಾದರೂ ಇಂದಿನ ಅಧ್ಯಕ್ಷರನ್ನು ಬೇರೆ ಕಡೆಗೆ ವರ್ಗಾಯಿಸುವುದು ಸರ್ವರಿಗೂ ಕ್ಷೇಮಕರವಲ್ಲವೆ?

Edited, printed and published by A. R. Nagarajan at the Sadhvi Press D Subbiah Road, Mysore

ಜಿಲ್ಲಾ ಬೋರ್ಡು ಚುನಾವಣೆ

೨೮-೪-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗೆ ಕಂಡ ಕಾಂಗ್ರೆಸ್ ಉಮೇದುವಾರರಿಗೇ ದಯವಿಟ್ಟು ಓಟು ಕೊಡಿ :-

ಹೆಚ್. ಲಿಂಗಪ್ಪ, B. Sc., LL.B.

ಹೆಚ್. ಎಂ. ನಾಗಪ್ಪ (ಹುಲ್ಲಹಳ್ಳಿ)

ಎಂ. ಲಿಂಗಣ್ಣ B. Sc., LL.B

ಮನೆ ಬಾಡಿಗೆಗೆ ಇದೆ

ರಾಮಾನುಜ ಸ್ಟ್ರೀಟ್ನಲ್ಲಿ ... ನೇ ನಂ. ಮುನಿಸಿಪಲ್ ಮಾಡರ್ನ್ ಮನೆ ... ಕೆಳಗಿನ ವಿಳಾಸದಲ್ಲಿ ವಿಚಾರಿಸಿ

X

C/o ಸಾಧ್ವಿ ಆಫೀಸು, ಮೈಸೂರು

ಮೊಮಿನ್ ಸಮ್ಮೇಳನ ಅಧ್ಯಕ್ಷರ ಮೇಲೆ ...

ಮೊಮಿನ್ನರೆಲ್ಲರೂ ಮುಸ್ಲಿಂ ... ಸೇರಬೇಕೆಂದು ಸದರಿ ಸಮ್ಮೇಳನಾಧ್ಯಕ್ಷರಾದ ಮಿ|| ಜಹೀರುದ್ದೀನ್ ... ಕೊಟ್ಟಿದ್ದಕ್ಕಾಗಿ ಸಮ್ಮೇಳನದ ... ಕಾರ ಸಮಿತಿಯು ಅವರನ್ನು ... ವಿಯಿಂದ ತೆಗೆದುಹಾಕಿದೆ. ... ತ್ರಿಗಳೂ, ಸಮ್ಮೇಳನದ ಉಪಾಧ್ಯಕ್ಷರಾದ ಮಿ|| ಅಬ್ದುಲ್ ಕ್ವಯಾಂ ... ವರನ್ನು ಕಾರ್ಯಾಧ್ಯಕ್ಷರನ್ನಾಗಿ ... ಗಿದೆ

ಚಾಮರಾಜನಗರದ ತ್ರಾ...

ವೋಟರು ಮಹಾಶಯ...

ವಿಜ್ಞಾಪನೆ

1947ನೇ ಇ... ಲ್ ಮಾಹೆ 28 ... ರೀಖು ನಡೆಯುವ ... ಕ್ಟ್ ಬೋರ್ಡು ... ಣೆಗೆ ಚಾಮರಾಜನಗರದ ತಾಲ್ಲೂಕಿನಿಂದ ನಾನೊಬ್ಬ ಸ... ಪ್ರಜಾ ಪಕ್ಷಕ್ಕೂ ಮಧ್ಯವರ್ತಿಗಳಾ... ಮಾಧಿಕಾರಿಗಳ ಸಂಘದಿಂದ ಉಮೇ... ರನಾಗಿ ನಿಂತಿರುತ್ತೇನೆ. ಪ್ರಜಾ ಸೇ... ದಲು ಅರ್ಹನೆಂದು ತಾವುಗಳು ಪ... ವುದಾದರೆ ತಮ್ಮ ಕ್ಷೇತ್ರವಾದ ... ಲ್ಲಿ ಒಂದು ವೋಟನ್ನು " ... ಗುರ್ತಿನ ನನಗೆ ಕೊಟ್ಟು ಮುಂ... ಬೆಂಬಲ ಕೊಡಬೇಕಾಗಿ ಕೋರುತ್ತೇ...

ಎ. ಶ್ರೀನಿವಾಸಯ್ಯ

ಹೊನ್ನಹಳ್ಳಿ, ಫಿರ್ಕಾ ಕ್ಯಾಸಿಕು...

ರಾಜಕಮಲ್, ಮೈಸೂರು

ತಾ|| ೨೫-೪-೪೭ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು

ಕೃಷ್ಣವೇಣಿ, ರಘುರಾಮಯ್ಯ, ... ದೇವಿ ಪಾತ್ರವಹಿಸಿರುವ

'ಗೊಲ್ಲಭಾಮ' (ತೆ...

ಮಾನವನ ಹೃದಯ ದ... ಮುಖಿಯಲ್ಲಿ ದೇವತೆಗಳ ... ಸಿಗದ ಶಾಂತಿ ಮಾನವ... ಹೇಗೆ ದೊರಕಿತೆಂಬುದ... ನಿರೂಪಿಸುವ ಅಮೋಘ ಚಿತ್ರ ಕಥಾವಳಿ

From 25-4-47 for 4 days Daily at 10-30 a. m.

"Bells of Rosarita"

Produced on a larish scale with big song and dance numbers

ಶ್ರೀ ಗಣೇಶ ಟಾಕೀಸ್, ಮೈಸೂರು

೨೫-೪-೪೭ರಿಂದ ಪ್ರತಿ ದಿನ ೩ ಆಟಗಳು

ಜೆಮಿನಿಯವರ ಕಲಾ ಕೌಶಲ್ಯದಿಂದ ಕೂಡಿದ

ತಮಿಳು ಚಿತ್ರ

ಕನ್ನಮ್ಮಾ-ಎನ್-ಕಾದಲಿ

ಮುಖ್ಯ ಭೂಮಿಕೆ —ಎಂ. ಕೆ. ರಾಧಾ, ಸುಂದರಿಬಾಯಿ, ನಾರಾಯಣ ರಾವ್

Morning Shows on 25, 26, 27 and 28th at 10-30 a. m

Calling Dr. Death

Starring:-LON CHANEY with PATRICIA MORISON, K. CARROL NAISH

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು : : ಫೋನ್

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಯಲ್ಲಿ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.

ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್

ಪೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೨೫—೪—೪೭ [ಸಂಚಿಕೆ ೨೧೯

ಭಾಗವತರ್—ಕೃಷ್ಣ ರವರುಗಳ ಖುಲಾಸೆ

ಮುಸ್ಲಿಂಲೀಗು ಕೇಂದ್ರ ಸರ್ಕಾರದಿಂದ ಹೊರಬೀಳುವುದೇ ?

...ದಂ॥ ನೆಹರೂರವರ ಹೇಳಿಕೆಗೆ ವಿರುದ್ಧ ...ಗ ೨೦॥ ಲಿಯಾಕತ್ ಅಲಿಖಾನರು ...ತ್ರುವ ಹೇಳಿಕೆಯ ಬಗ್ಗೆ ದೆಹಲಿಯ ...ಜಕೀಯ ಆವರಣದಲ್ಲಿ ಕುತೂಹಲ ಹು...ದೆ. ಕಾಂಗ್ರೆಸ್ ಮತ್ತು ಲೀಗುಗಳಲ್ಲಿ ...ಸ್ಪಂದವಾಗಬಹುದೆಂಬ ಅಂಶಗಳೆಲ್ಲಾ ಈ ...ಅಳಸಿಹೋದಂತಾಗಿದೆ ವೈಸರಾಯ ...ರ್ಯಾಚಟುವಟಿಕೆ ಲೀಗಿನವರಿಗೆ ಒಂದು ...ಲ್ಲ ಅವರಿಗೆ ಎಚ್ಚರಿಕೆ ಕೊಡುವ ಸಲು...ಗ ಲೀಗ್ ಮಂತ್ರಿಗಳು ಕೇಂದ್ರ ಸರ್ಕಾರವನ್ನು ತ್ಯಜಿಸಿ ಹೊರಬರಬಹುದೆಂದು ಊ...ಹಿಸಲಾಗಿದೆ.

ಕೆಲಸಗಾರರ ತೊಂದರೆ

ಮೈಸೂರು ೨೫

ಬೀಗೊಳದ ಎಂ. ಸಿ. ಎಫ್ ಕಾರ್ಮಿಕ ...ಸಂಘದವರು ವಿಜಯೋತ್ಸವದ ಬೋನಸ್ ...ಲಸದ ಕಾಲ, ರಜಾ ದಿನಗಳು ಇವೇ ಮೊದಲಾದ ವಿಷಯಗಳಲ್ಲಿ ಕೆಲಸಗಾರರಿಗೆ ಕೊಟ್ಟಿದ್ದ ನೋಟೀಸನ್ನು ಚೀಫ್ ಕೆಮಿಸ್ಟ್ ...ರವರು ಪರಿಶೀಲಿಸದಿರುವುದು ...ಸೋಚನೀಯವಾಗಿದೆ ಅಧಿಕಾರಿಗಳ ...ಉದಾಸೀನತೆಯಿಂದ ಕೆಲಸಗಾರರ ತೊಂದರೆ ಹೆಚ್ಚುತ್ತಿದೆ ಕೂಡಲೇ ಇದನ್ನು ಪರಿಶೀಲಿಸಬೇಕು ಎಂದು ಕೆಲಸಗಾರರೊಬ್ಬರು ಪ್ರಾರ್ಥಿಸಿದ್ದಾರೆ

ಗಾಂಧಿ ಸೇವಾ ಸಂಘ

ಕಳೆದ ೨೦ ನೇ ತಾ॥ ಭಾನುವಾರ ಗಾಂಧಿ ಸೇವಾ ಸಂಘದ ಸಾಮಾನ್ಯ ಸದಸ್ಯರ ಸಭೆ ಜರುಗಿತು. ೨೬-೧-೪೭ ರಿಂದ ಒಟ್ಟು ರೂ. ೫೦-೧೪-೬ ಖರ್ಚಾಗಿದೆಯೆಂದೂ, ಸಂಘದಲ್ಲಿ ರೂ ೪೨೦-೦-೦ ಶಿಲ್ಕು ಇದೆಯೆಂದೂ ಕಾರ್ಯದರ್ಶಿಗಳು ಮಂಡಿಸಿದ ವರದಿಯು ಅಂಗೀಕೃತವಾಯಿತು

ನೀಲಂಬೂರ್ ದಿವಾನರ ದಸ್ತಗಿರಿ

ಕಲ್ಲಿಕೋಟೆ ಬಳಿ ಇರುವ ಕೊಟ್ಟಕ್ಕಲ್ ಎಂಬಲ್ಲಿನ ಪೊಲೀಸರು ನೀಲಂಬೂರ್ ದಿವಾನರಾದ ಶ್ರೀ ಇಟ್ಟಿ ರಾಂಪುರನ್ ಮತ್ತು ಮತ್ತು ಕಿಜ್ಹಕ್ಕ ಕೋವಿಲಗಂ ಸದಸ್ಯರಾದ ಐದು ಮಂದಿಯನ್ನು, ಕೊಟ್ಟಕ್ಕಲ್ ಕಿಜ್ಹಕ್ಕ ಕೋವಿಲಗಂ ಸಂಘದ ಮ್ಯಾನೇಜರ್ ರವರ ದೂರಿನ ಮೇಲೆ ದಸ್ತಗಿರಿ ಮಾಡಿದ್ದಾರೆ ಈ ಆಪಾದಿತರು ತಮ್ಮ ಕೊಠಡಿಗೆ ನುಗ್ಗಿ ಬೀಗದ ಕೈಗಳನ್ನು ಬಲವಂತದಿಂದ ಕಸಿದುಕೊಳ್ಳಲು ಪ್ರಯತ್ನಿಸಿದರೆಂದು ಅವರು ದೂರಿನಲ್ಲಿ ತಿಳಿಸಿದ್ದಾರೆ.

ಇಬ್ಬರು ಮಹಿಳಾ ಪ್ರೊಫೆಸರುಗಳಿಗೆ ಜುಲ್ಮಾನೆ

ಕಲ್ಕತ್ತದ ಮಹಿಳಾ ಕಾಲೇಜಿನ ಇಬ್ಬರು ಪ್ರೊಫೆಸರುಗಳು ಅಕ್ರಮ ಕೂಟದ ಸದಸ್ಯರಾಗಿದ್ದರೆಂದು ಅಲ್ಲಿನ ಮ್ಯಾಜಿಸ್ಟ್ರೇಟರು ಅವರಿಗೆ ತಲಾ ೨೫೦ ರೂ ಗಳ ಜುಲ್ಮಾನೆಯನ್ನು ವಿಧಿಸಿದ್ದಾರೆ

ಪ್ರತಿ ದಿನ ೩ ಆಟಗಳು
ಇದೇ 26-4-47 ನೇ ಶನಿವಾರದಿಂದ
ನ್ಯೂ ಥಿಯೇಟರ್ಸ್‌ರವರ
ನಸೀಯತ್ ನಾಮಾ
ಭೂಮಿಕೆ:– ಭಾರತಿ, ಅಶೀಕ್ ಬರ್ಮಾ, ಸುಮಿತ್ರಾ, ಅರ್ಚಿ ಚೌದರಿ
ಒಲಂಪಿಯಾ ಟಾಕೀಸ್
ಮೈಸೂರು.

ರಾಜ್ಯಾಂಗ ಸಭೆಗೆ ಜಯಪುರ ಸೇರಿತು

ದಿವಾನರಾದ ಸರ್ ವಿ. ಟಿ. ಕೃಷ್ಣಮಾಚಾರ್, ಪಂಡಿತ ಹೀರಾಲಾಲಶಾಸ್ತ್ರಿ ಮತ್ತು ರಾಜಾ ಸರ್ದಾರ್ ಸಿಂಗ್‌ಜಿ ಬಹದ್ದೂರ್‌ರವರುಗಳನ್ನು ಜಯಪುರ ಸಂಸ್ಥಾನವು ಭಾರತ ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನಾಗಿ ಆರಿಸಿರುವುದಾಗಿ ಪ್ರಕಟಿಸಲಾಗಿದೆ. ಕಾಶ್ಮೀರ ಸಂಸ್ಥಾನವೂ ರಾಜ್ಯಾಂಗ ಸಭೆಗೆ ಸೇರಲು ನಿರ್ಧರಿಸಿದೆ.

ಬಂಗಾಳಾ ವಿಭಜನೆಗೆ ಶೇ॥ ೯೮ ರಷ್ಟು ಬೆಂಬಲ

ಬಂಗಾಳಿ ಹಿಂದೂಗಳಿಗಾಗಿ ಪ್ರತ್ಯೇಕ ಪ್ರದೇಶ ಬೇಕೆಂದು ನೀವು ಆಶಿಸುವಿರಾ? ಎಂಬ ಪ್ರಶ್ನೆಯನ್ನು ಕಲ್ಕತ್ತದ 'ಅಮೃತ ಬಜಾರ್' ಪತ್ರಿಕೆಯು ಬಂಗಾಳಿಗಳಿಗೆ ಹಾಕಿದ್ದಿತು. ಅದಕ್ಕೆ ೫೩,೪೨೮ ಮಂದಿ ಉತ್ತರವಿತ್ತಿದ್ದಾರೆ. ಶೇಕಡ ೯೮.೩ ರಷ್ಟು ಮಂದಿ ಪ್ರತ್ಯೇಕವಾದ್ದು ಬೇಕೆಂದೂ, ಶೇ॥ ೦.೬ ಮಂದಿ ಬೇಡವೆಂದೂ ಉತ್ತರವಿತ್ತಿದ್ದಾರೆ. ಶೇ॥ ೧.೧ ರಷ್ಟು ಮಂದಿಯು ಉತ್ತರವೇ ಸರಿಯಾಗಿಲ್ಲವೆಂದೂ ಹೇಳಲಾಗಿದೆ

ಹಡಗು ಪತ್ತೆಯಿಲ್ಲ

ರಂಗೂನಿನಿಂದ ಮಾರ್ಗೂಯಿಗೆ ಏಪ್ರಿಲ್ ೧೭ ರಲ್ಲಿ ಹೊರಟ ಒಂದು ಹಡಗು ಪತ್ತೆಯಿಲ್ಲದಂತಾಗಿದೆ. ಇದರಲ್ಲಿ ೨೫೦ ಮಂದಿ ಪ್ರಯಾಣಿಕರು ಇದ್ದರು. ಚಂಡಮಾರುತಕ್ಕೆ ಸಿಕ್ಕಿ ಅದು ನಾಶವಾಗಿರಬೇಕೆಂದು ಊಹಿಸಲಾಗಿದೆ ರಾಯಲ್ ಏರ್ ಫೋರ್ಸ್ ವಿಮಾನಗಳು ಇದನ್ನು ಹುಡುಕುತ್ತಿವೆ

ಕಲ್ಕತ್ತದಲ್ಲಿ ಹರತಾಳ

ಹ್ಯಾರಿಸನ್ ರಸ್ತೆಯಲ್ಲಿ ಮಹಿಳೆಯರ ಮೇಲೆ ಪೊಲೀಸರು ನಡೆಸಿದ ಅನುಚಿತ ವರ್ತನೆಯನ್ನು ಖಂಡಿಸಲು ಕಲ್ಕತ್ತಾ ನಗರದಲ್ಲಿ ಮೊನ್ನೆ ಹರತಾಳ ನಡೆಯಿತು; ವಾಹನ ಸಂಚಾರಗಳೆಲ್ಲಾ ನಿಂತುಹೋಗಿದ್ದವು. ಬಹುಮಟ್ಟಿಗೆ ಅಂಗಡಿಗಳೆಲ್ಲಾ ಬಂದಾಗಿದ್ದವು ಶಾಸನ ಸಭೆಗೆ ವಿರೋಧಪಕ್ಷದವರಾದ ಕಾಂಗ್ರೆಸ್ ಸಂಗಡದವರೂ ಹಾಜರಾಗಲಿಲ್ಲ. ಕೋರಂ ಇಲ್ಲದೆ ಸಭೆ ಮುಂದುವರಿಯಿತು. ನಗರದಲ್ಲಿ ಒಟ್ಟು ೯೪ ಇರಿತಗಳಾದುವೆಂದು ವರದಿಯಾಗಿದೆ

• ಭದ್ರಾವತಿ ಕಾರ್ಖಾನೆಯ ಡೈರೆಕ್ಟರನ್ನು ಕಬ್ಬಿಣ ಮತ್ತು ಉಕ್ಕಿನ ಕಮಿಟಿಗಳನ್ನಾಗಿ ನೇಮಕ ಮಾಡಲಾಗಿದೆ

ನಾನ್ ಗೆಜೆಟೆಡ್ ಅಧಿಕಾರಿಗಳಿಗೆ ಸಂಬಳ ಮತ್ತು ವಸತಿ ಸೌಕರ್ಯ

ದಿವಾನರಿಂದ ಭರವಸೆ

ಸ್ವಂ ಸು ಪೋ] ಬೆಂಗಳೂರು ೨೪

ನಿನ್ನೆ ಸಂಜೆ ಶ್ರೀ ಜಯಚಾಮರಾಜೇಂದ್ರ ವಿಕ್ಟರಿ ಹಾಲಿನಲ್ಲಿ ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ಟಿನ ನಾನ್ ಗೆಜೆಟೆಡ್ ಅಧಿಕಾರಿಗಳು ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರಿಗೆ ಬಿನ್ನವತ್ತಳೆಯೊಂದನ್ನು ಒಪ್ಪಿಸಿ, ತಾವು ರಾಜಭಕ್ತಿಯಿಂದ ಸಲ್ಲಿಸಿಕೊಂಡು ಬರುತ್ತಿರುವ ಸೇವೆಯನ್ನೂ ತಮ್ಮ ಕುಂದುಕೊರತೆಗಳನ್ನೂ ಅರಿಕೆ ಮಾಡಿಕೊಂಡರು

ದಿವಾನರು ಉತ್ತರವೀಯುತ್ತಾ ಈ ಬಿನ್ನವತ್ತಳೆಯು ಒಂದು ಕುಟುಂಬದ ಸದಸ್ಯರು ಅದೇ ಕುಟುಂಬದ ಒಬ್ಬನಿಗೆ ಕೊಟ್ಟ ಗೌರವದಂತಿದೆಯೆಂದರು. ಮೈಸೂರಿನ ಸೆಕ್ರೆಟೇರಿಯಟ್ಟು, ತಾವು ನೋಡಿರುವ ಇತರ ಸೆಕ್ರೆಟೇರಿಯಟ್ಟುಗಳಿಗೆ ಸರಿಸಮಾನವಾಗಿರುವುದೆಂದು ತಿಳಿಸಿದರು ಬಿನ್ನವತ್ತಳೆಯಲ್ಲಿ ನಮೂದಿಸಿರುವ ಸಂಬಳ ಮತ್ತು ವಸತಿಯ ಕೋರಿಕೆಗಳ ಬಗ್ಗೆ ಮಾತನಾಡುತ್ತಾ ಅವುಗಳು ಸಾಧುವಾಗಿವೆಯೆಂದರು ಸಂಬಳ ಕಮಿಟಿಯ ವರದಿ ಬಂದ ಕೂಡಲೇ ಸೂಕ್ತ ಪರಿಹಾರವನ್ನು ಕೊಡಲಾಗುವುದು. ಒಂದು ವೇಳೆ ಆ ವರದಿ ಬರುವುದು ತಡವಾದರೆ ಪರಿಹಾರವನ್ನು ಇಂದಿನಿಂದಲೂ ಸೇರಿಸಿಕೊಡಲಾಗುವುದು ವಸತಿ ನಿರ್ಮಾಣಕ್ಕಾಗಿ ಜಾಲಹಳ್ಳಿ ಕ್ಷೇತ್ರವನ್ನು ತೆಗೆದುಕೊಳ್ಳಲು ಪ್ರಯತ್ನಗಳು ನಡೆಯುತ್ತಿವೆಯೆಂದು ದಿವಾನರು ತಿಳಿಸಿದರು.

ಪತ್ರಿಕೋದ್ಯೋಗಿ ಸಮ್ಮೇಳನದ ಆರಂಭೋತ್ಸವ

ಸಂಸ್ಥಾನದ ಪತ್ರಿಕೋದ್ಯೋಗಿ ಸಮ್ಮೇಳನದ ಆರಂಭೋತ್ಸವವನ್ನು ಇದೇ ೨೭ನೇ ತಾ॥ ಬೆಳಗ್ಗೆ ೯ ಗಂಟೆಗೆ ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರು ನೆರವೇರಿಸುವರು

ಅಪೆರಾ ಟಾಕೀಸ್, ಮೈಸೂರು
೨೬-೪-೪೭ ರಿಂದ ೨ ನೇ ವಾರ
ರಾಜಕುಮಾರಿ
(ತಮಿಳು)
Morning Shows from 25th
CISCO KID RETURNS

ಜೈ ಪ್ರಕಾಶರ ಆಗಮನ

ನಗರದ ಕಾರ್ಯಕ್ರಮಗಳು

ಮೈಸೂರು ೨೫

ನಾಳೆ ಮಧ್ಯಾಹ್ನ ४ ಗಂಟೆಗೆ ಶ್ರೀ ಜೈಪ್ರಕಾಶ ನಾರಾಯಣ್‌ರವರು ನಗರಕ್ಕೆ ಆಗಮಿಸುವರು. ४-३० ಕ್ಕೆ ನಗರ ಕಾಂಗ್ರೆಸ್ ಕೆಲಸಗಾರರ ಸಭೆ. ೫-३೦ ರಿಂದ ६-१५ ರ ವರೆಗೆ ಶೇಷಾದ್ರಿ ವಿದ್ಯಾಶಾಲೆ, ತಿಲಕ ಸಂಘ ಮತ್ತು ವನಿತಾ ಸದನಕ್ಕೆ ಭೇಟಿ. ६-१५ ಕ್ಕೆ ಕಾಂಗ್ರೆಸ್ ಕಛೇರಿಯಲ್ಲಿ ವಿವಿಧ ಕಾರ್ಮಿಕ ಸಂಘಗಳ ಸಭೆ.

ಸಂಜೆ ६-१५ ಕ್ಕೆ ಟವನ್‌ಹಾಲಿನಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ಆಶ್ರಯದಲ್ಲಿ ಬಹಿರಂಗ ಸಭೆ.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರೂ ಭಾಷಣ ಮಾಡುವರು

ಲಂಡನ್ನಿನಲ್ಲಿ ಭಾರತೀಯ ದೇವರ ವಿಗ್ರಹ ಸಿಕ್ಕಿದೆ

ಬಹಳ ಬೆಲೆ ಬಾಳುವ ೫ ಅಡಿ ಎತ್ತರವಿರುವ ಅರ್ಧ ಟನ್ ತೂಕವಿರುವ ಭಾರತೀಯ ದೇವರ ವಿಗ್ರಹವೊಂದು ಲಂಡನ್ನಿನ ಸಿಟಿ ವ್ಯಾಪಾರದ ಉಗ್ರಾಣವೊಂದರಲ್ಲಿ ಬಿದ್ದಿದ್ದನ್ನು ಈಗ ಪತ್ತೆ ಹಚ್ಚಲಾಗಿದೆ. ಇದನ್ನು ಲಂಡನ್ನಿನ ವಸ್ತು ಸಂಗ್ರಹಾಲಯದಲ್ಲಿರಿಸಲಾಗಿದೆ. ಸದರಿ ಬೋರ್ಡಿನ ತಜ್ಞರ ಪರಿಶೀಲನೆ ಆಗುವ ವರೆಗೆ ಇದರ ವಿಚಾರವನ್ನು ಗುಪ್ತವಾಗಿಡಲಾಗುವುದೆಂದು ಹೇಳಲಾಗಿದೆ.

ಸರ್. ಸಿ. ಪಿ. ಯವರಿಗೆ ವೈಸರಾಯರ ಆಹ್ವಾನ

ತಿರುವಾಂಕೂರು ದಿವಾನರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ರವರನ್ನು ಈ ರೂಪು ಮಾತುಕತೆಗಳಿಗಾಗಿ ದೆಹಲಿಗೆ ಬರುವಂತೆ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ಆಹ್ವಾನಿಸಿದ್ದಾರೆ ಶನಿವಾರ ಅಥವಾ ಭಾನುವಾರ ಈ ಭೇಟಿ ನಡೆಯಲಿದೆ

ಗಡಿನಾಡು ಪ್ರಾಂತ್ಯಕ್ಕೆ ವೈಸರಾಯರ ಭೇಟಿ

ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ಅನೇಕ ಪ್ರಾಂತ್ಯಗಳಿಗೂ, ಸಂಸ್ಥಾನಗಳಿಗೂ ಇನ್ನು ಮುಂದೆ ಭೇಟಿ ಕೊಡುವರು ಇದೇ ೨೮ ನೇ ತಾ॥ ವೈಸರಾಯ್ ದಂಪತಿಗಳು ಗಡಿನಾಡಿಗೆ ಭೇಟಿ ಇತ್ತು ಅಲ್ಲಿನ ಪರಿಸ್ಥಿತಿಯನ್ನು ತಾವೇ ಖುದ್ದಾಗಿ ಪರಿಶೀಲಿಸುವರೆಂದು ಗೊತ್ತಾಗಿದೆ.

LATE NEWS

ತ್ಯಾಗರಾಜ ಭಾಗವತರ್ ಮತ್ತು ಕೃಷ್ಣನ್‌ರವರ ಖುಲಾಸೆ

ಸ್ವಂ ಸು ಪೋ] ಬೆಂಗಳೂರು ೨೫

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆಯಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ಶ್ರೀ ತ್ಯಾಗರಾಜ ಭಾಗವತರ್ ಮತ್ತು ಎನ್ ಎಸ್ ಕೃಷ್ಣನ್‌ರವರ ಅಪೀಲನ್ನು ಅಂಗೀಕರಿಸಿ ಅವರ ಜೀವಾವಧಿ ಶಿಕ್ಷೆಯನ್ನು ರದ್ದು ಮಾಡಿ, ಮದ್ರಾಸ್ ಪ್ರೀವಿ ನ್ಯಾಯಾಸ್ಥಾನದವರು ಅವರನ್ನು ಖುಲಾಸೆ ಮಾಡಿರುವುದಾಗಿ ವರ್ತಮಾನ ಬಂದಿದೆ.

ಸಾಧ್ವಿ

ತಾ|| ೨೫-೪-೪೭ ಶುಕ್ರವಾರ

ಉದಯಪುರದ ದಿವಾನರ ರಾಜೀನಾಮೆ

ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದಾಗಿ ಮಾಡಿದ್ದ ನಿರ್ಣಯವನ್ನು ಉದಯಪುರದ ರಾಜರು ಬದಲಾಯಿಸಿಕೊಂಡುದಕ್ಕಾಗಿ ಅಸಮಾಧಾನಗೊಂಡು ಅಲ್ಲಿನ ದಿವಾನರಾದ ಸರ್ ಟಿ ವಿಜಯರಾಘವಾಚಾರ್ಯರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತರು. ಅದನ್ನು ರಾಜರು ಅಂಗೀಕರಿಸಿದರು. ಆದರೆ ಈಗ ರಾಜರು ಪುನಃ ತಮ್ಮ ಅಭಿಪ್ರಾಯವನ್ನು ಮಾರ್ಪಡಿಸಿ ರಾಜ್ಯಾಂಗ ಸಭೆಗೆ ತಮ್ಮ ಸಂಸ್ಥಾನದಿಂದ ಇಬ್ಬರು ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಿದ್ದಾರೆ.

ನರೇಂದ್ರರುಗಳ ವರ್ತನೆಯಲ್ಲಿ ಈ ಬಗೆಯ ಅಸ್ತವ್ಯಸ್ತಗಳು ಉಂಟಾಗುವುದು ಸ್ವಲ್ಪವೂ ಸಮರ್ಥಕವಲ್ಲ. ರಾಜರೊಬ್ಬರ ವರ್ತನೆಯನ್ನು ಪ್ರತಿಭಟಿಸಿ ದಿವಾನರು ರಾಜೀನಾಮೆ ಇತ್ತಿರುವ ಪ್ರಸಂಗವು ಅತ್ಯಂತ ಘೋರವಾದುದು. ಸಂಸ್ಥಾನದ ಆಡಳಿತ ವ್ಯವಹಾರದಲ್ಲಿ ಎಷ್ಟು ನಂಬಿಕೆ ಶೈಥಿಲ್ಯವುಂಟಾಗಿದೆ ಎಂಬುದನ್ನು ಇದು ಎಲ್ಲರಿಗೂ ಪ್ರಕಾಶಪಡಿಸುತ್ತದೆ. ಸರ್ ಟಿ ವಿಜಯರಾಘವಾಚಾರ್ಯರು ತಮ್ಮ ಪದವಿಗಾಗಿ ಗೌರವಕ್ಕಿಂತಲೂ ಮಾತೃಭೂಮಿಯ ಶ್ರೇಯಸ್ಸಿಗೂ ಮತ್ತು ರಾಜ್ಯಾಂಗ ಸಭೆಗೆ ಕೊಟ್ಟಿರುವ ಭರವಸೆಗೂ ಹೆಚ್ಚು ಮನ್ನಣೆಯಿತ್ತು ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟು ಸಕಲ ದೇಶಬಾಂಧವರ ಮೆಚ್ಚಿಗೆಗೂ ಪಾತ್ರರಾಗಿದ್ದಾರೆ.

ರಾಜ್ಯಾಂಗ ರಚನೆಯ ಕಾರ್ಯದಲ್ಲಿ ಸಹಕರಿಸುವುದಾಗಿ ನರೇಂದ್ರ ಮಂಡಲದವರು ಮೊದಲು ನಿರ್ಣಯ ಮಾಡಿ ಅನಂತರ ಹಿಂದಕ್ಕೆ ಹೋಗಲು ಯತ್ನಿಸಿದಾಗ ಬಿಕನೀರ್ ಮಹಾರಾಜರು ಅದನ್ನು ಪ್ರತಿಭಟಿಸಿ ಸಭಾ ಬಹಿಷ್ಕಾರ ಮಾಡಿದುದು ಎಲ್ಲರಿಗೂ ತಿಳಿದೇ ಇದೆ. ಅನಂತರ ನರೇಂದ್ರ ಮಂಡಲಿಯ ವರ್ತನೆಯಲ್ಲಿ ಸೂಕ್ತವಾದ ಬದಲಾವಣೆಯು ಆಗಿ ಈಚೆಗೆ ಸಂಸ್ಥಾನಗಳು ಒಂದೊಂದಾಗಿ ಸಹಕರಿಸಲು ಮುಂದೆ ಬರುತ್ತಿವೆ. ಕಾಶ್ಮೀರ ಸಂಸ್ಥಾನವೂ ಸಹ ಈಗ ಇದೇ ನಿರ್ಧಾರವನ್ನು ಮಾಡಿರುತ್ತದೆ. ಬಿಕನೀರ್ ರಾಜರ ಸಭಾ ಬಹಿಷ್ಕಾರದ ಪ್ರಕರಣದಿಂದ ಉಂಟಾಗಿದ್ದ ಸತ್ಪರಿಣಾಮವು ಸರ್ ಟಿ ವಿಜಯರಾಘವಾಚಾರ್ಯರ ರಾಜೀನಾಮೆಯಿಂದ ಇನ್ನೂ ಬಲಗೊಂಡು ರಾಜರುಗಳನ್ನು ತಮ್ಮ ಕರ್ತವ್ಯ ಪಥಕ್ಕೆ ಸೆಳೆಯಲು ಸಹಕಾರಿಯಾಗುವುದರಲ್ಲಿ ಸಂದೇಹವಿಲ್ಲ.

ರಾಜ್ಯಾಂಗ ರಚನಾ ಸಭೆಯು ಬರುವ ಸೋಮವಾರ ಮತ್ತೆ ಸಮಾವೇಶಗೊಳ್ಳುವುದು. ಸುಮಾರು ಇಪ್ಪತ್ತು ಸಂಸ್ಥಾನಗಳು ಅದರಲ್ಲಿ ಭಾಗ ವಹಿಸುವುವು. ಆದರೆ ನಮ್ಮ ಮೈಸೂರಿನ ಪಾತ್ರವು ಮಾತ್ರ ಇನ್ನೂ ನಿರ್ಧರಿತವಾಗಿರುವುದಿಲ್ಲ. ತಮ್ಮ ನೇತೃತ್ವದಲ್ಲಿ ಮೈಸೂರಿನ ಪ್ರತಿನಿಧಿಗಳನ್ನು ಆ ಸಭೆಗೆ ಕೊಂಡೊಯ್ಯುವುದಾಗಿ ದಿವಾನರು ಹೇಳಿ ಎಷ್ಟೋ ದಿನಗಳಾದುವು. ಆದರೆ ಸಭೆಯಲ್ಲಿ ಭಾಗ ವಹಿಸುವ ವಿಚಾರವನ್ನು ಇನ್ನೂ ಪರ್ಯಾಲೋಚಿಸುತ್ತಿರುವುದಾಗಿ ಅವರು ಇತ್ತೀಚೆಗೆ ಹೇಳಿರುವರು. ಈ ಪರ್ಯಾಲೋಚನೆಗಳು ಮುಗಿದು ಮೈಸೂರಿನ ಪ್ರತಿನಿಧಿಗಳು ಸಭೆಯಲ್ಲಿ ಭಾಗ ವಹಿಸುವಂತೆ ಆಗುವುದು ಎಂದಿಗೋ ತಿಳಿಯದು.

ಜಿಲ್ಲಾ ಬೋರ್ಡು ಚುನಾವಣೆ
೨೮-೪-೪೭ ನೇ ಸೋಮವಾರ
ನಂಜನಗೂಡು ತಾಲ್ಲೂಕಿನ ಈ ಕೆಳಗೆಕಂಡ
ಕಾಂಗ್ರೆಸ್ ಉಮೇದುವಾರರಿಗೇ
ದಯವಿಟ್ಟು ಓಟು ಕೊಡಿ :-

2	ಹೆಚ್. ಲಿಂಗಪ್ಪ	ಮರ
3	ಹೆಚ್. ಎಂ. ನಾಗಪ್ಪ	ಸೈಕಲ್
6.	ಎಂ. ಲಿಂಗಣ್ಣ	ಗಣಪತಿ

ಶ್ರೀ ಚಾಮುಂಡೇಶ್ವರಿ ಟಾಕೀಸ್
26-4-17 ರಿಂದ ಪ್ರತಿ ದಿನದ ಆಟಗಳು
ಸೊಹರಾಬ್ ಮೋದಿಯವರ
ಅಮೋಘವಾದ ಹಿಂದಿ ಚಿತ್ರ
'ಷಮಾ'
ಪಾತ್ರ:- ಮೆಹತಾಬ್ - ವಾಸ್ತಿ
ನಿಜಸತಿಯು ತನ್ನ ಶ್ರೇಷ್ಠವಾದ ಧರ್ಮ ಮತ್ತು ಪ್ರೇಮವನ್ನು ತನ್ನ ಪತಿಗಾಗಿ ಅರ್ಪಿಸಿ ಅದರಿಂದ ಪಡೆದ ಫಲವನ್ನು
— :ಈ ಚಿತ್ರದಲ್ಲಿ ತಪ್ಪದೆ ನೋಡಿ: —

ಚಾಮರಾಜನಗರದ ತಾಲ್ಲೂಕು ವೋಟರು ಮಹಾಶಯರಲ್ಲಿ ವಿಜ್ಞಾಪನೆ

1947ನೇ ಇಸವಿ ಏಪ್ರಿಲ್ ಮಾಹೆ 28 ನೇ ತಾರೀಖು ನಡೆಯುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಚಾಮರಾಜನಗರದ ತಾಲ್ಲೂಕಿನಿಂದ ನಾನೊಬ್ಬ ಸಂಸ್ಥಾನ ಪ್ರಜಾ ಪಕ್ಷದ ಮಧ್ಯವರ್ತಿಗಳಾದ ಗ್ರಾಮಾಧಿಕಾರಿಗಳ ಸಂಘದಿಂದ ಉಮೇದುವಾರನಾಗಿ ನಿಂತಿರುತ್ತೇನೆ. ಪ್ರಜಾ ಸೇವೆ ಮಾಡಲು ಅರ್ಹನೆಂದು ತಾವುಗಳು ಪರಿಗಣಿಸುವುದಾದರೆ ತಮ್ಮ ಧನವಾದ 3 ವೋಟುಗಳಲ್ಲಿ ಒಂದು ವೋಟನ್ನು "ಘಂಟೆ" ಗುರ್ತಿನ ನನಗೆ ಕೊಟ್ಟು ನಂಬರಾಗಲು ಬೆಂಬಲ ಕೊಡಬೇಕಾಗಿ ಕೋರುತ್ತೇನೆ.

ಎ. ಶ್ರೀನಿವಾಸಮೂರ್ತಿ,
ಹೊನ್ನಹಳ್ಳಿ, ಫಿರ್ಕಾ ಶ್ಯಾನುಭೋಗ್

ಮನೆ ಬಾಡಿಗೆಗೆ ಇದೆ
ರಾಮಾನುಜ ರಸ್ತೆಯಲ್ಲಿರುವ ೬೫ ನೇ ನಂ. ಮುನಸಿಪಲ್ ಮಾದರಿ ಮನೆ. ಕೆಳಗಿನ ವಿಳಾಸದಲ್ಲಿ ವಿಚಾರಿಸಿರಿ
X
C/o ಸಾಧ್ವಿ ಆಫೀಸು, ಮೈಸೂರು.

● ದೂರಜ ಲ ನೇ ಎಡ್ವರ್ಡರಾದ ... ಆಫ್ ವಿಂಡ್ಸರ್ ರವರು ಬರುವ ಭೇ... ಲ್ಲಿ ಭಾರತಕ್ಕೆ ಭೇಟಿ ಕೊಡುವ ಸ... ದೆಯೆಂದು ಪ್ರಮುಖರೊಬ್ಬರು ತಿಳಿ...

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲು
ಅಶೋ...
ಗರ್ಭಾಶಯರೋಗ ನಿವಾ...

ಅರುಣಾ ಮುಟ್ಟು ದ... ಕನ್ನು ನಿವಾರಿ... ಪೂರ್ಣ ಸ್ತ್ರೀತ್ವ... ಸಾಧಿಸುವಷ್ಟರ... ರ್ಣವಾದ ದಿವ್ಯೌ... ದನ್ನು ಬಿಡದೆ ಸೇ... ರಾದರೆ, ನಿಮ್ಮ... ಪರಮಾವಧಿಯಾ... ಮಂದಾನಂದವನ್ನು... ದೆ ಒದಗಿಸಬಲ್ಲುದು

ಆಯುರ್ವೇದಾಶ್ರಮಂ ಲಿಮಿಟೆ...
ಟಿ-ನಗರ್.... ಮದರಾ...

ರಾಜಕಮಲ್, ಮೈಸೂರು
ತಾ|| ೨೫-೪-೪೭ರಿಂದ ಅಮೋಘ ಪ್ರಾರಂಭ
ಮೊದಲನೇ ಆಟ ಮಧ್ಯಾಹ್ನ 3; ೨ ನೇ ಆಟ 6; ೩ ನೇ ಆಟ 9-15ಕ್ಕೆ.

ಕೃಷ್ಣವೇಣಿ, ರಘುರಾಮಯ್ಯ, ಅಂಜಲಿ ದೇವಿ ಪಾತ್ರವಹಿಸಿರುವ
'ಗೊಲ್ಲಭಾಮ' (ತೆಲುಗು)
ಮಾನವನ ಹೃದಯ ದ ಅಜ್ಞಾನ ಮಬ್ಬಿನಲ್ಲಿ ದೇವತೆಗಳಿಗೂ ಸಿಗದ ಶಾಂತಿ ಮಾನವನಿಗೆ ಹೇಗೆ ದೊರಕಿತೆಂಬುದನ್ನು ನಿರೂಪಿಸುವ ಅಮೋಘ ಚಿತ್ರ ಕಥಾವಳಿ

From 25-4-47 for 4 days Daily at 10-30 a. m.
"Bells of Rosarita"
Produced on a lavish scale with big song and dance numbers

ಕಂಟ್ರೋಲು ಬೆಲೆ!

ಹೊಸ ಜವಳಿ
ನಮ್ಮಲ್ಲಿ ಈಗ ತಾನೇ ಹೊಸದಾಗಿ ಬಂದಿರುವ ಬನಾರಸ್, ಕಂಚಿ, ಆರ್ಣಿ, ಕಾಂ... ಹುಬ್ಬಳ್ಳಿ ಸೀರೆಗಳೂ, ಕರಾಚಿ ಸೀರೆಗಳೂ, ನೂಲಿನ ಪೂನಾ ರವಿಂವಾರ ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.
M. P. V., M. V ಭೋಜಯ್ಯ B A ಅಂಡ್ ಬ್ರದರ್ಸ್
ಬೊಂಬಾಯಿ ಆನಂದ ಭವನ ಹೋಟೆಲ್ ಶೈರ ಬಲಭಾಗದ ಕೊನೇ
ಜವಳಿ ಅಂಗಡಿ, ಮೈಸೂರು

WOOD-LANDS TALKIE[S]
WATCH FOR OPENING DATE
ವುಡ್-ಲೆಂಡ್ಸ್ ಟಾಕೀಸ್
ಶೀಘ್ರದಲ್ಲಿಯೇ ಆರಂಭವಾಗುವ ತಾರೀಖನ್ನು ಗಮ...
B. M. RAMAMURT[HY]
Proprietor

Edited, printed and publish[ed] ... A. R. Nagarajan at the Sadhvi ... D. Subbiah Road, Mysore

ಫೋನ್. ನಂ. 592 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೨೬—೪—೪೭ [ಸಂಚಿಕೆ ೨೩೦

ಡಾ॥ ರಾಮಮನೋಹರ ಲೋಹಿಯಾ ದಸ್ತಗಿರಿ

ಆಹಾರದ ಅಭಾವದಿಂದ ಯುದ್ಧದ ಸಂಭವ

ಎಲ್ಲದಕ್ಕಿಂತ ವ್ಯವಸಾಯ ಉತ್ಪನ್ನವ ಹೆಚ್ಚುಮಾಡಲು ಎಲ್ಲರೂ ಸಹಕರಿಸ ದಿದ್ದಲ್ಲಿ ನಾವಾಗಿಯೇ ೩ ನೇ ಮಹಾ ಸಂಗ್ರಾಮವನ್ನು ಆಹ್ವಾನಿಸಿದಂತಾಗುವುದು. ಹೀಗೆಂದಾಗಿ ಸಂಯುಕ್ತ ರಾಷ್ಟ್ರಗಳ ಆಹಾರ ಮತ್ತು ವ್ಯವಸಾಯ ಸಂಘದ ಡೈರೆಕ್ಟರ್ ಜನರಲ್ ಆದ ಸರ್ ಜಾನ್ ಬೋಯ್ಡ್ ಆರ್‌ರವರು ಎಚ್ಚರಿಸಿದ್ದಾರೆ. ರಾಜಕೀಯ ಕ್ಕಿಂತ ಈಗ ಆಹಾರವು ಪ್ರಧಾನವಾಗಿದೆಯೆಂದೂ, ಅದಿಲ್ಲದಿದ್ದರೆ ಅಶಾಂತಿ ಹುಟ್ಟಿ ಯುದ್ಧ ತಲೆದೋರುವುದೆಂದೂ ಅವರು ಹೇಳುವರು.

ಬೋಸರಂತೆಯೇ ಅವರ ಮೇಲಿನ ಮೊಕದ್ದಮೆಗಳೂ ಸತ್ತಿವೆ

ಬಂಗಾಳಾ ಶಾಸನ ಸಭೆಯಲ್ಲಿ ನೇತಾಜಿ ಬೋಸರ ಬಗ್ಗೆ ಪ್ರಶ್ನೆಗಳು ಕೇಳಲ್ಪಟ್ಟವು. ಆ ವಿಚಾರದಲ್ಲಿ ಖಚಿತವಾದ ಅಂಶಗಳು ತಿಳಿದಿಲ್ಲವೆಂದು ಸರ್ಕಾರದ ಪರವಾಗಿ ಉತ್ತರ ಕೊಡಲಾಗಿದೆ. ಶ್ರೀ ಸುಭಾಷ್ ಚಂದ್ರ ಬೋಸರು ಸತ್ತುಹೋಗಿರುವಂತೆ ಯೇ ಅವರ ಮೇಲಿನ ಮೊಕದ್ದಮೆಗಳೂ ಸತ್ತು ಹೋದಂತಾಗಿರುವುದಾಗಿ ಪ್ರಧಾನಿ ಡಾ॥ ಸುಹ್ರವರ್ದಿಯವರು ತಿಳಿಸಿದರು.

ಸತ್ಯಾಗ್ರಹಕ್ಕೆ ಬೆಂಬಲ

ಗ್ವಾಲಿಯರ್‌ನಲ್ಲಿ ನಡೆದ ಸಂಸ್ಥಾನಗಳ ಪ್ರಜಾ ಸಮ್ಮೇಳನದಲ್ಲಿ ಮೈಸೂರಿನ ಸತ್ಯಾಗ್ರಹಕ್ಕೆ ಬೆಂಬಲ ನೀಡುವ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು. ಈಗಲಾದರೂ ಮೈಸೂರು ಸರ್ಕಾರದವರು ಜವಾಬ್ದಾರಿ ಸರ್ಕಾರದ ಕೇಳಿಕೆಯನ್ನು ನಡೆಸಿಕೊಡಬೇಕೆಂದು ನಿರ್ಣಯದಲ್ಲಿ ಒತ್ತಾಯಪಡಿಸಲಾಗಿದೆ.

ಹಿಂದೂ ಸಂಗೀತಕ್ಕೆ ಲಂಡನ್ ಮುಸ್ಲಿಮರ ವಿರೋಧ

ಲಂಡನ್ನಿನ ಇಸ್ಲಾಂ ಸಾಂಸ್ಕೃತಿಕ ಕೇಂದ್ರದಲ್ಲಾಗಲಿರುವ ಆಲೀಯಾ ಬೇಗಂ ರವರ ಆರ್ಕೆಸ್ಟ್ರಾ ಹಿಂದೂ ಸಂಗೀತದ ಮೇಲಿನ ಭಾಷಣವನ್ನೂ ಶ್ರೀ ಪಾಂಡಿಯಾ ಮತ್ತು ಬಾಬುರಾವ್‌ರವರ ಸಂಗೀತವನ್ನೂ ನಡೆಸಲು ಅವಕಾಶ ಕೊಡಕೂಡದೆಂದು ಲಂಡನ್ನಿನ ಮುಸ್ಲಿಂಲೀಗ್ ಶಾಖೆಯ ಮತ್ತು ಈಜಿಪ್ಟ್ ರಾಜರಾದ ಫರೂಕ್‌ರವರನ್ನು ತಂತೀ ಮೂಲಕ ಪ್ರಾರ್ಥಿಸಿದ್ದಾರೆ. ಈ ಕೇಂದ್ರದಲ್ಲಿ ಮಸ್ಲಿಂ ಪ್ರಾರ್ಥನೆ ನಡೆಯುತ್ತಿರುವುದರಿಂದ ಇಲ್ಲಿ ಯಾವ ತರಹ ಇತರ ಸಂಗೀತಕ್ಕೂ ಅವಕಾಶವೀಬಾರದೆಂದೂ ಅದರಲ್ಲೂ ಹಿಂದೂ ಸಂಗೀತವಂತೂ ನಡೆಯಲೇ ಕೂಡದೆಂದೂ ಅವರು ತಿಳಿಸಿದ್ದಾರೆ. ಫರೂಕ್‌ರವರು ಈ ಕೇಂದ್ರದ ಪ್ರಮುಖ ಆಶ್ರಯದಾತರಾಗಿರುವರು.

ಹೊಸ ಅಣು ಬಾಂಬು

ಹೊಸ ರೀತಿಯ ಅಣುಬಾಂಬುಗಳನ್ನು ಸಂಯುಕ್ತ ಸಂಸ್ಥಾನವು ಸೃಷ್ಟಿಸಿರುವುದಾಗಿ ಅಮೇರಿಕಾ ಸಂಯುಕ್ತ ಸಂಸ್ಥಾನದ ಕಮ್ಯಾಂಡರಾದ ಜ॥ ಪಾರ್ಕರವರು ತಿಳಿಸಿದ್ದಾರೆ.

ದಿವಾನರ ಆಗಮನ

ಮೈಸೂರು ೨೫

ಈ ದಿನ ಬೆಳಗ್ಗೆ ದಿವಾನರು ಆಗಮಿಸಿದರು. ಪ್ರಮುಖರ ಭೇಟಿ ಮಾಡಿದ ನಂತರ ರಾತ್ರಿ ಬೆಂಗಳೂರಿಗೆ ಪ್ರಯಾಣ ಮಾಡುವರೆಂದು ಗೊತ್ತಾಗಿದೆ.

ಹರಿಕಥೆ

ಚಾಮುಂಡಿ ಮೊಹಲ್ಲಾ ಗೊಲ್ಲಗೇರಿಯಲ್ಲಿರುವ ಶ್ರೀ ವೆಂಕಟೇಶ್ವರ ಮಂದಿರದಲ್ಲಿ ಈ ದಿನ ರಾತ್ರಿ ೯ ಗಂಟೆಗೆ ಹರಿಕಥಾ ವಿದ್ವಾನ್ ಮ॥ ಸೀತಾ ಮಾಧವದಾಸರಿಂದ 'ಗರುಡ ಗರ್ವಭಂಗ' ಎಂಬ ಹರಿಕಥೆಯು ನಡೆಯುತ್ತದೆ.

ಕೀರ್ತನೆಗಳು

ಕಬೀರ್ ರಸ್ತೆಯಲ್ಲಿರುವ ಕೀರ್ತನಕಾರ ಮಂಡಲಿಯಲ್ಲಿ ನಾಳೆ ಸಂಜೆ ೫ ಘಂಟೆಗೆ ಶ್ರೀ॥ ವಿ ಎಲ್ ಶ್ರೀನಿವಾಸಾಚಾರ್ಯರಿಂದ 'ಭದ್ರಾಚಲ ರಾಮದಾಸ' ಎಂಬ ಕೀರ್ತನೆಯೂ, ಅನಂತರ ೭ ಘಂಟೆಯಿಂದ ಶ್ರೀ॥ ಆರ್. ಎಸ್. ಶೇಷಗಿರಿ ದಾಸರಿಂದ 'ಕುಂಭಕರ್ಣನ ಯುದ್ಧ ಪ್ರಸ್ಥಾನ' ಎಂಬ ಕಥೆಯೂ ನಡೆಯುವುವು.

ಭಗವದ್ಗೀತೆ

ಕೃಷ್ಣಮೂರ್ತಿ ಪುರದಲ್ಲಿರುವ ಶ್ರೀ ವ್ಯಾಸರಾಯ ಮಠದಲ್ಲಿ ನಾಳೆ ಸಂಜೆ ೬-೪೫ಕ್ಕೆ ಉಪನ್ಯಾಸ ರತ್ನಾಕರ ಶ್ರೀ॥ ಜಯತೀರ್ಥಾಚಾರ್ಯರಿಂದ ಭಗವದ್ಗೀತೆಯ ಮೇಲೆ ಉಪನ್ಯಾಸವು ಕೊಡಲ್ಪಡುವುದು. ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ.

ಶಿವಾಜಿ ಜಯಂತಿ

ಸಹಕಾರ ಭವನದಲ್ಲಿ ನಾಳೆ ಸಂಜೆ ೬ ಘಂಟೆಗೆ ಛತ್ರಪತಿ ಶ್ರೀ ಶಿವಾಜಿ ಮಹಾರಾಜರವರ ಜಯಂತಿ ಉತ್ಸವವನ್ನು ಶ್ರೀ ಶಿವ ಛತ್ರಪತಿ ಸಹಕಾರ ಸಂಘದವರು ನೆರವೇರಿಸುವರು. ಪುರಸಭಾಧ್ಯಕ್ಷ ಶ್ರೀ ರಾಮಚಂದ್ರರಾವ್ ಟೊಂಬೋರಿಯವರು ಸಭಾಧ್ಯಕ್ಷತೆಯನ್ನು ವಹಿಸುವರು. ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ.

ಮೈಸೂರು ಸಿಟಿ ರೇಷನಿಂಗ್

No. K.6-81 1946-47

೧೯೪೭ ನೇ ಇಸವಿ ಏಪ್ರಿಲ್ ಮಾಹೆ ೩೦ ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ ಮೊಹಲ್ಲಾ ಸಬ್ ಗೋಡೌನ್, ವರ್ಕರ್ಸ್ ಡಿಪೋ, ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ

ನಂಜನಗೂಡು ತಾಲ್ಲೂಕು ಜಿಲ್ಲಾ ಬೋರ್ಡಿನ ಓಟರು ಮತದಾರರುಗಳಲ್ಲಿ ವಿಜ್ಞಾಪನೆ

ಗ್ರಾಮಾಧಿಕಾರಿಗಳ ಪರವಾಗಿ ಉಮೇದುವಾರರಾಗಿರುವ ೧ ನೇ ನಂಬರು ಎನ್. ರಾಮಚಂದರ್‌ರಾವ್, ... ಗುರುತು, ... ಹಸಿರು ಬಣ್ಣದ ಓಟನ್ನು ಕೊಡಬೇಕಾಗಿ ಪ್ರಾರ್ಥನೆ.

ಮೇ ತಿಂಗಳಲ್ಲಿ ರಾಜೇಂದ್ರ ಪ್ರಸಾದರ ಆಗಮನ

ಸ್ವಂ. ವ. ಸ್ಪೆಷಲ್] ಬೆಂಗಳೂರು ೨೬

ಕೇಂದ್ರ ಸರ್ಕಾರದ ಆಹಾರ ಮಂತ್ರಿಗಳಾದ ಡಾ॥ ರಾಜೇಂದ್ರ ಪ್ರಸಾದರು ಮೇ ತಿಂಗಳಲ್ಲಿ ಸಂಸ್ಥಾನಕ್ಕೆ ಭೇಟಿ ಕೊಡುವರೆಂದು ಗೊತ್ತಾಗಿದೆ. ಹೆಚ್ಚು ಆಹಾರ ಬೆಳೆಯುವ ಯೋಜನೆ ಮತ್ತು ಆಹಾರ ಸರಬರಾಜನ್ನು ಹೆಚ್ಚು ಮಾಡುವ ವಿಚಾರದಲ್ಲಿ ಮೈಸೂರು ಸರ್ಕಾರದೊಡನೆ ಮಾತುಕತೆ ನಡೆಸುವರೆಂದು ಹೇಳಲಾಗಿದೆ.

ದೆಹಲಿಯಲ್ಲಿ ನಡೆದ ಆಹಾರ ಸಮ್ಮೇಳನಕ್ಕೆ ತೆರಳಿದ್ದ ಮಿ॥ ಟಿ. ಎಸ್. ಎನ್. ಶರ್ಮರವರು ಬೆಂಗಳೂರಿಗೆ ಹಿಂತಿರುಗಿದರು. ಗೋಧಿಯ ಅಭಾವ ಹೆಚ್ಚಾಗಿರುವುದರಿಂದ ದಕ್ಷಿಣ ಭಾರತಕ್ಕೆ ಗೋಧಿ ಸರಬರಾಜನ್ನು ಸರಿಯಾಗಿ ಮಾಡಲು ಸಾಧ್ಯವಿಲ್ಲವೆಂದೂ, ಬೇಳೆ ಧಾನ್ಯಗಳ ಮೇಲೆ ಕಂಟ್ರೋಲ್ ಎತ್ತಿಬಿಡಲು ಭಾರತ ಸರ್ಕಾರವು ಆಲೋಚಿಸುತ್ತಿರುವುದಾಗಿಯೂ, ಅವರು ಹೇಳಿದ್ದಾರೆ.

ಭಾರತ ರಕ್ಷಣಾ ಶಾಸನದ ಮಾದರಿಯಲ್ಲಿ ದಂಡನೆಯಲ್ಲಿ ವಿಶೇಷ ಕಾನೂನೊಂದನ್ನು ಜಾರಿಗೆ ತರಲಾಗಿದೆ.

ಡಾ॥ ಲೋಹಿಯಾರವರ ದಸ್ತಗಿರಿ

ಸಮಾಜವಾದಿ ಪಕ್ಷದ ನಾಯಕರಾದ ಡಾ॥ ರಾಮ ಮನೋಹರ ಲೋಹಿಯಾರವರು ಡಾರ್ಜಲಿಂಗ್ ಬಳಿ ಇರುವ ಸುಕಿಯಾ ಪೋಕ್ರಿ ಎಂಬಲ್ಲಿ ಜಾರಿಯಲ್ಲಿದ್ದ ೧೪೪ ನೇ ಸೆ. ವಿ. ಸಿ ಪ್ರತಿಬಂಧಾಜ್ಞೆಯನ್ನು ಉಲ್ಲಂಘಿಸಿದರೆಂಬ ಆಪಾದನೆ ಮೇಲೆ ದಸ್ತಗಿರಿಯಾಗಿ, ಗಸ್ತಿನ ಸ್ಥಳಕ್ಕೆ ಕರೆದೊಯ್ಯಲ್ಪಟ್ಟಿದ್ದಾರೆಂದು ತಿಳಿದು ಬಂದಿದೆ.

ವಿದ್ಯಾರ್ಥಿಗಳ ಮೇಲೆ ಲಾಹೋರಿನಲ್ಲಿ ಗುಂಡಿನೇಟು

ಪರೀಕ್ಷೆಗಳನ್ನು ಮುಂದುವರಿಸಬೇಕೆಂದು ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ಒತ್ತಾಯಪಡಿಸಲು ಲಾಹೋರು 'ವಿದ್ಯಾರ್ಥಿ ಕಾಂಗ್ರೆಸ್ಸಿನ ಹತ್ತು ಮಂದಿ ಉಪವಾಸ ಮುಷ್ಕರವನ್ನು ಆರಂಭಿಸಿದ್ದಾರೆ. ಇವರಿಗೆ ಸಹಾನುಭೂತಿ ತೋರಿಸಲು ನಡೆಸಿದ ಮೆರವಣಿಗೆಯೊಂದರ ಮೇಲೆ ಗುಂಡು ಹಾರಿಸಿದುದರಿಂದ ಒಬ್ಬ ವಿದ್ಯಾರ್ಥಿ ಸತ್ತು ಹೋಗಿದ್ದಾನೆ. ಕೆಲವರಿಗೆ ಗಾಯಗಳಾಗಿವೆ.

ಪರೀಕ್ಷಾ ಫಲಿತಾಂಶಗಳು

ಮೈಸೂರು ೨೬

ಮೈಸೂರು ವಿಶ್ವವಿದ್ಯಾಲಯದ ೧೯೪೭ ನೇ ಮಾರ್ಚಿಯಲ್ಲಿ ನಡೆದ ಇಂಟರ್‌ಮೀಡಿಯೇಟ್, ಸೈನ್ಸ್, ಆರ್ಟ್ಸ್, ಕಾಮರ್ಸ್ ಮತ್ತು ಬಿ ಟಿ ಪರೀಕ್ಷೆಗಳ ಫಲಿತಾಂಶವು ಈ ದಿನ ಹೊರಬಿದ್ದಿದೆ. ಅದರ ಪ್ರತಿಯನ್ನು ಸಾರ್ವಜನಿಕರ ಅವಗಾಹನೆಗಾಗಿ 'ಸಾಧ್ವಿ' ಕಛೇರಿಯಲ್ಲಿಡಲಾಗಿದೆ.

ಸಂಗೀತ ಕಛೇರಿಗಳು

ಶಂಕರ ಜಯಂತಿ ಮಹೋತ್ಸವದ ಅಂಗವಾಗಿ ಈ ದಿನ ಸಂಸ್ಕೃತ ಪಾಠಶಾಲೆಯಲ್ಲಿ ಸಂಜೆ ೭ ಘಂಟೆಗೆ ವಿದ್ವಾನ್ ಎಚ್. ಆರ್. ನಾರಾಯಣ ಶಾಸ್ತ್ರಿಗಳ ಸಂಗೀತವೂ ೨೯ ನೇ ತಾ॥ ಮಂಗಳವಾರ ಸಂಜೆ ೭ ಘಂಟೆಗೆ ಸಂಗೀತರತ್ನ ಟಿ॥ ಚೌಡಯ್ಯನವರ ಸಂಗೀತ ಕಛೇರಿಯೂ ನಡೆಯುವುವು.

ಭರದಿಂದ ಸಾಗುತ್ತಿದೆ

ಶ್ರೀ ರಾಘವೇಂದ್ರ ಪಿಕ್ಚರ್‍ಸ್
ಮತ್ತು
ಶ್ರೀ ಮಹಾವೀರ್ ಫಿಲಂ ಎಕ್ಸ್‌ಚೇಂಜ್
ರವರ
ಅತ್ಯುತ್ತಮ
ಕನ್ನಡ ಸಾಮಾಜಿಕ ಚಿತ್ರ

ಭಾರತಿ
ಭಾರತಿ

ಕಥೆ:- ಎಂ. ನರೇಂದ್ರಬಾಬು
ಸಂಗೀತ:- ಆಸ್ಥಾನ ಸಂಗೀತ ವಿದ್ವಾನ್ ಎಂ. ಎಸ್. ಚಂದ್ರಶೇಖರಯ್ಯ
ನಿರ್ದೇಶನ:- ಆರ್. ಎಂ. ವೀರಭದ್ರಯ್ಯ
ತಯಾರಿಕೆ:- ನವಜ್ಯೋತಿ ಸ್ಟುಡಿಯೋಸ್

— Sole Distributors :—
Sri Mahaveer Film Exchange,
Ashoka Road, Mysore.

ಸಾಧ್ವಿ

ತಾ|| ೨೬-೪-೪೭ ಶನಿವಾರ

ಜೈ ಪ್ರಕಾಶರಿಗೆ ಸುಖಾಗಮನ

ಸಮಾಜವಾದಿ ನಾಯಕರೂ, ಕ್ರಾಂತಿ ವೀರರೂ, ಉಜ್ವಲ ರಾಷ್ಟ್ರಭಕ್ತರೂ ಆದ ಶ್ರೀ|| ಜಯ ಪ್ರಕಾಶ ನಾರಾಯಣರವರು ಇಂದು ನಮ್ಮ ಸಂಸ್ಥಾನಕ್ಕೆ ಭೇಟಿ ಕೊಡುವರು. ಅವರಿಗೆ ನಾವು ನಮ್ಮ ಹೃತ್ಪೂರ್ವಕವಾದ ಸುಖಾಗಮನವನ್ನು ನೀಡುತ್ತೇವೆ. ಅವರ ಭೇಟಿಯು ನಮ್ಮ ದೇಶಾಭಿಮಾನಿಗಳ ಮೇಲೆ ಉತ್ತಮ ಪರಿಣಾಮವನ್ನುಂಟು ಮಾಡಿ ದೇಶ ಸೇವೆಯಲ್ಲಿ ಅವರಂತೆಯೇ ತೊಡಗುವ ಹಾಗೆ ಮಾಡಲೆಂದು ಹಾರೈಸುತ್ತೇವೆ.

ಶ್ರೀ|| ಜಯ ಪ್ರಕಾಶರವರು ಅದ್ಭುತವಾದ ರಾಜನೀತಿಜ್ಞರು. ಪ್ರಗತಿ ಪರವಾದ ಭಾವನೆಗಳಿಂದ ಪ್ರೇರಿತರಾದವರು. ಮಹತ್ವ ಪೂರಿತವಾದ ದೀರ್ಘಾಲೋಚನೆಯಿಂದ ವರ್ತಿಸುವವರು. ರಾಜನೀತಿ ಶಾಸ್ತ್ರದಲ್ಲಿ ಇವರಿಗೆ ಅದ್ಭುತವಾದ ಪಾಂಡಿತ್ಯವಿರುತ್ತದೆ. ಸಮತವಾದ ತತ್ವದ ಪ್ರತಿಪಾದನೆಯಲ್ಲಿ ಇವರೊಬ್ಬರು ಪ್ರಮಾಣ ಪುರುಷರು. ಇವರು ಇಂದು ಆಲೋಚಿಸಿ ನಿರ್ಧರಿಸಿರುವುದನ್ನು ಕಾಂಗ್ರೆಸ್ಸು ಇನ್ನು ಹತ್ತು ವರ್ಷಗಳ ನಂತರ ಆಚರಣೆಗೆ ತರುವುದೆಂದು ಹೇಳಲಾಗಿದೆ.

ಪ್ರಗತಿ ಭಾವನೆಯ ಕಾರ್ಯ ಕರ್ತರುಗಳಿಗೆ ಜೈ ಪ್ರಕಾಶರು ಆದರ್ಶಪ್ರಾಯರು. ನಿರ್ಜೀವವಾದ ಮಾತೂಲಿನ ಕಾರ್ಯಕ್ರಮಗಳಲ್ಲಿ ಇವರಿಗೆ ಸಂತೃಪ್ತಿಯಿಲ್ಲ. ಕ್ರಾಂತಿ ಮಾರ್ಗದಿಂದ ಅತ್ಯಲ್ಪ ಕಾಲದಲ್ಲಿ ನಾಡಿನ ಸ್ವಾತಂತ್ರ್ಯವನ್ನು ಗಳಿಸಬೇಕೆಂಬುದು ಇವರ ಅಭಿಮತ. ಬಂಡವಾಳ ಷಾಹಿಯನ್ನು ಬಡಿದೋಡಿಸಿ ಕೆಲಸಗಾರರ, ರೈತರ ಮತ್ತು ಸಾಮಾನ್ಯ ಪ್ರಜೆಗಳ ರಾಜ್ಯವನ್ನು ಸ್ಥಾಪಿಸಬೇಕೆಂಬುದೇ ಇವರ ಗುರಿ. ವಿಚಾರ ಕ್ರಾಂತಿ, ಆರ್ಥಿಕ ಕ್ರಾಂತಿ, ಸಾಮಾಜಿಕ ಕ್ರಾಂತಿ ಮತ್ತು ರಾಜಕೀಯ ಕ್ರಾಂತಿಗಳನ್ನು ಮಾಡಬೇಕೆಂದು ಇವರು ಸಾರುತ್ತಿದ್ದಾರೆ.

೧೯೪೨ ನೇ ಇಸವಿಯ ಆಂದೋಳನದಲ್ಲಿ ಅಂತರಂಗವಾಗಿ ಇವರೂ, ಇವರ ಸಹೋದ್ಯೋಗಿಗಳೂ ನಡೆಸಿದ ಅಮೋಘವಾದ ಕಾರ್ಯಸಾಧನೆಗಳ ವಿವರಗಳು ಇನ್ನೂ ಜನರ ದೃಷ್ಟಿಪಥಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿರುವುದಿಲ್ಲ. ಬಂಧನಕ್ಕೊಳಗಾದಾಗಲೂ ಅನೇಕ ಬಾರಿ ಇವರು ತಪ್ಪಿಸಿಕೊಂಡು ಹೋಗಿ ತಮ್ಮ ಕ್ರಾಂತಿಯ ಕಾರ್ಯವನ್ನು ಮುಂದುವರಿಸಿದ ಅನೇಕ ನಿದರ್ಶನಗಳು ಇತಿಹಾಸ ಪ್ರಸಿದ್ಧವಾಗಿವೆ.

ಪ್ರಗತಿ ಪರವಾದ ಕಾರ್ಯಕರ್ತರುಗಳಿಗೆ ಜೈ ಪ್ರಕಾಶರು ಅತ್ಯುತ್ತಮರಾದ ಆದರ್ಶ ಪುರುಷರಾಗಿರುತ್ತಾರೆ. ಕಾಂಗ್ರೆಸ್ಸಿನ ಶಿಸ್ತು, ಸಂಯಮಗಳಿಗೆ ಅನುಗುಣವಾಗಿ ಸಕಲ ಕಾರ್ಯಕ್ರಮಗಳನ್ನೂ ಇವರು ನಡೆಸುತ್ತಾರೆ. ಅವರೂ ತಮ್ಮ ಪ್ರಗತಿ ಭಾವನೆಯನ್ನು ಯಾವಾಗಲೂ ದೇಶದ ಮುಂದೆ ಎತ್ತಿ ಹಿಡಿಯುತ್ತಲೇ ಇರುತ್ತಾರೆ. ಸ್ವಾತಂತ್ರ್ಯವು ಲಭಿಸುವ ವರೆಗೆ ಸಮಾಜವಾದಿಗಳು [illegible] ನ ನಾಯಕವೇ ಸೇವೆ ಮಾಡಬೇಕೆಂದು ಹೇಳುತ್ತಿದ್ದಾರೆ. ಇವರ ಮೇಲ್ಪಂಕ್ತಿಯು ನಮ್ಮ ದೇಶ ಭಕ್ತರೆಲ್ಲರನ್ನೂ, ತಮ್ಮ ಕರ್ತವ್ಯ ಪಥದಲ್ಲಿ ಪ್ರೇರೇಪಿಸಲೆಂದು ನಾವು ಹಾರೈಸುತ್ತೇವೆ.

ಹಾಕಿ ಆಟಗಾರರ ಆಗಮನ

ಅಖಿಲ ಭಾರತ ಹಾಕಿ ಸಂಘದ ಆಟಗಾರರು ನಾಳೆ ಬೆಳಗ್ಗೆ ರಾಜಧಾನಿಗೆ ಆಗಮಿಸುವರು. ಸಂಜೆ ಮೈಸೂರು ಜಿಲ್ಲಾ ಹಾಕಿ ಸಂಘದ ಆಟಗಾರರ ಮೇಲೆ ಪಂದ್ಯವೊಂದನ್ನು ಆಡುವರು.

ಜಿಲ್ಲಾ ಬೋರ್ಡು ಚುನಾವಣೆ

೨೮-೪-೪೭ ನೇ ಸೋಮವಾರ

ನಂಜನಗೂಡು ತಾಲ್ಲೂಕಿನ ಈ ಕೆಳಗೆಕಂಡ ಕಾಂಗ್ರೆಸ್ ಉಮೇದುವಾರರಿಗೆ

-: ದಯವಿಟ್ಟು ಓಟು ಕೊಡಿ :-

2	ಹೆಚ್. ಲಿಂಗಪ್ಪ	ಮರ
3	ಹೆಚ್. ಎಂ. ನಾಗಪ್ಪ	ಸೈಕಲ್
5	ಎಂ. ಲಿಂಗಣ್ಣ	ಗಾಳಿಪಟ

ಭಾರತದ ಚಕ್ರಾಧಿಪತ್ಯ ಕೈಬಿಟ್ಟು ಹೋಗಲಿದೆ.

ಬ್ರಿ|| ಲೇಬರ್ ಸರ್ಕಾರವು ಬಲಯುತವಾದ ಭಾರತ ಚಕ್ರಾಧಿಪತ್ಯವನ್ನು ಕೈಬಿಡುವ ಘೋರ ಕಾರ್ಯವೆಸಗಿರುವುದಾಗಿ ಮಿ|| ಚರ್ಚಿಲರು ಆಕ್ಷೇಪಿಸಿದ್ದಾರೆ. ಪ್ಯಾಲಸ್ಟೈನನ್ನು ಅರಬ್ಬರಿಗೆ ವಹಿಸಿಕೊಡಲು ಬ್ರಿ|| ಸರ್ಕಾರ ಹವಣಿಸುತ್ತಿರುವುದಾಗಿ ಅವರು ಟೀಕಿಸಿ ಭಾರತದಲ್ಲಿರುವುದಕ್ಕಿಂತ ನಾಲ್ಕರಷ್ಟು ಸೈನ್ಯವು ಪ್ಯಾಲಿಸ್ಟೈನಲ್ಲಿರುವುದಾಗಿ ತಿಳಿಸಿದ್ದಾರೆ.

ಮನೆ ಬಾಡಿಗೆಗೆ ಇದೆ

ರಾಮಾನುಜ ರಸ್ತೆಯಲ್ಲಿರುವ ೬೫ ನೇ ನಂ. ಮುನಸಿಪಲ್ ಮಾದರಿ ಮನೆ. ಕೆಳಗಿನ ವಿಳಾಸದಲ್ಲಿ ವಿಚಾರಿಸಿರಿ.

X

C/o ಸಾಧ್ವಿ ಆಫೀಸು, ಮೈಸೂರು.

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ

—: ನಮ್ಮಲ್ಲಿ ವಿಚಾರಿಸಿ. :—

ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,

ಅಶೋಕ ರಸ್ತೆ, ಮೈಸೂರು.

ಸ್ಥಾಪಿತ ೧೯೩೨ : : ಫೋನ್. ೪೧೧

ರಾಜಕಮಲ್, ಮೈಸೂರು

ತಾ|| ೨೫-೪-೪೭ರಿಂದ ಅಮೋಘ ಪ್ರಾರಂಭ

ಮೊದಲನೇ ಆಟ ಮಧ್ಯಾಹ್ನ 3-30; ೨ ನೇ ಆಟ 6-30, ೩ ನೇ ಆಟ 9-30ಕ್ಕೆ.

ಕೃಷ್ಣವೇಣಿ, ರಘುರಾಮಯ್ಯ, ಅಂಜಲಿ ದೇವಿ ಪಾತ್ರವಹಿಸಿರುವ

'ಗೊಲ್ಲಭಾಮ'

(ತೆಲುಗು)

ಮಾನವನ ಹೃದಯದ ಜ್ವಾಲಾ ಮುಖಿಯಲ್ಲಿ ದೇವತೆಗಳಿಗೂ ಸಿಗದ ಶಾಂತಿ ಮಾನವನಿಗೆ ಹೇಗೆ ದೊರಕಿತೆಂಬುದನ್ನು ನಿರೂಪಿಸುವ ಅಮೋಘ ಚಿತ್ರ ಕಥಾವಳಿ

From 25-4-47 for 4 days Daily at 10-30 a. m.

"Bells of Rosarita"

Produced on a lavish scale with big song and dance numbers

WOOD-LANDS TALKIES

WATCH FOR OPENING DATE

ವುಡ್-ಲೆಂಡ್ಸ್ ಟಾಕೀಸ್

ಶೀಘ್ರದಲ್ಲಿಯೇ ಆರಂಭವಾಗುವ ತಾರೀಖನ್ನು ಗಮನಿಸಿ

B. M. RAMA MURTHY,
Proprietor.

ಬರ್ಮಾದಲ್ಲೂ ಪಾಕಿಸ್ತಾನ!

ಬರ್ಮಾದ ಆರಕಾನ್ ಪ್ರಾಂತ್ಯಕ್ಕೆ ಸೇರಿದ ಬುಥಿ ಡಾಂಗ್ ಮತ್ತು ಮೌಂಗ್‌ಡಾ ಜಿಲ್ಲೆಗಳ ೩೦ ಸಾವಿರ ಮುಸ್ಲಿಮರು ತಮಗೆ ಪ್ರತ್ಯೇಕ ಪ್ರಾಂತ ಬೇಕೆಂದು ಚಳುವಳಿ ಎಬ್ಬಿಸಿದ್ದಾರೆ. ಇವರು ಬರ್ಮಾದಿಂದ ಪ್ರತ್ಯೇಕರಾಗಲು ಆಶಿಸಿದ್ದಾರೆ. ಇತ್ತೀಚೆ ಚಿತ್ತಗಾಂಗಿನಲ್ಲಿ ಮುಸ್ಲಿಂ ವ್ಯಾಪಾರಿಗಳು ಈ ಪ್ರದೇಶವನ್ನು ಪೂರ್ವ ಪಾಕೀಸ್ತಾನಕ್ಕೆ ಸೇರಿಸಿಕೊಳ್ಳಬೇಕೆಂದು ಬಂಗಾಳ ಸರ್ಕಾರವನ್ನು ಒತ್ತಾಯಪಡಿಸಿದ್ದರು.

ಬಾವಿಯಲ್ಲಿ ಮಗು ಜನನ

ಪ್ರಸವ ವೇದನೆಯನ್ನು ಸಹಿಸಲಾರದೆ ತುಂಬು ಬಸರಿಯೋರ್ವಳು ಮಧುರೆಯಲ್ಲಿ ತನ್ನ ಮನೆಯ ಹಿಂಭಾಗದ ಬಾವಿಗೆ ಹಾರಿದಳೆಂದೂ, ಬಿದ್ದ ಕೂಡಲೇ ಮಗುವು ಜನಿಸಿತೆಂದೂ ವರದಿಯಾಗಿದೆ. ನೀರಿನಲ್ಲಿ ಧುಮುಕಿದ ಆಕೆಯು ಒಂದು ಕೈಯಲ್ಲಿ ಶಿಶುವನ್ನು ಎತ್ತಿ ಹಿಡಿದುಕೊಂಡು ಮತ್ತೊಂದು ಕೈಯಲ್ಲಿ ಬಾವಿಯ ದಡವನ್ನು ಹಿಡಿದುಕೊಂಡಳೆಂದೂ ಅಕ್ಕ ಪಕ್ಕದವರು ಬಂದು ಮೇಲಕ್ಕೆತ್ತಿದರೆಂದೂ ಗೊತ್ತಾಗಿದೆ. ಮಗು ಬಾಣಂತಿಯರು ಆರೋಗ್ಯವಾಗಿದ್ದಾರೆ.

ಚಾಮರಾಜನಗರದ ತಾಲ್ಲೂಕು ವೋಟರು ಮಹಾಶಯರಲ್ಲಿ ವಿಜ್ಞಾಪನೆ

1947ನೇ ಇಸವಿ ಏಪ್ರಿಲ್ ಮಾಹೆ 28 ನೇ ತಾರೀಖು ನಡೆಯುವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಚಾಮರಾಜ ನಗರದ ತಾಲ್ಲೂಕಿನಿಂದ ನಾನೊಬ್ಬ ಸ್ವತಂತ್ರ ಪ್ರಜಾ ಪಕ್ಷದವರೂ ಮಧ್ಯವರ್ತಿಗಳಾದ ಗ್ರಾಮಾಧಿಕಾರಿಗಳ ಸಂಘದಿಂದ ಉಮೇದುವಾರನಾಗಿ ನಿಂತಿರುತ್ತೇನೆ. ಪ್ರಜಾ ಸೇವೆ ಮಾಡಲು ಅರ್ಹನೆಂದು ತಾವುಗಳು ಪರಿಗಣಿಸುವುದಾದರೆ ತಮ್ಮ ಧನವಾದ 3 ವೋಟುಗಳಲ್ಲಿ ಒಂದು ವೋಟನ್ನು "ಘಂಟೆ" ಗುರ್ತಿನ ನನಗೆ ಕೊಟ್ಟು ಬೆಂಬಲ ಕೊಡಬೇಕಾಗಿ ಕೋರುತ್ತೇನೆ.

ಎ. ಶ್ರೀನಿವಾಸಮೂರ್ತಿ
ಹೊನ್ನಹಳ್ಳಿ ಫಿರ್ಕಾ ಶ್ಯಾನುಭೋಗ

ಪ್ರತಿ ದಿನ ೩ ಆಟಗಳು

ಇದೇ 26-4-47 ನೇ ಶನಿವಾರದಿಂದ

ನ್ಯೂ ಥಿಯೇಟರ್ಸ್‌ರವರ

ನಸೀಯತ್ ನಾಮ

ಭೂಮಿಕೆ:— ಭಾರತಿ, ಅಸಿತ್ ಬರನ್, ಸುಮಿತ್ರಾ, ಅಹೀಂ ಚೌದರಿ

ಒಲಂಪಿಯಾ ಟಾಕೀಸ್

ಮೈಸೂರು.

ಅಪೆರಾ ಟಾಕೀಸ್, ಮೈಸೂರು

೨೫-೪-೪೭ ರಿಂದ ೨ ನೇ ವಾರ

ರಾಜಕುಮಾರಿ

(ತಮಿಳು)

Morning Shows from 2[illegible]

CISCO KID RETURN[S]

Edited, printed and published ... at the Sadhvi Press ... Mysore.

ಫೋ. ನಂ. 392 || ವಂದೇ ಮಾತರಂ || ಬಿಡಿ ಪ್ರತಿ 3 ಕಾಸು

ಸಂಪುಟ ೫] ಮಂಗಳವಾರ ೨೯—೪—೪೭ [ಸಂಚಿಕೆ ೨೨೩

ಲಂಡನ್ನಿಗೆ ವೈಸ್ರಾಯರ ಸಲಹೆಗಾರರ ಭೇಟಿ

'ಕಲಾವಿದ' ಚಿತ್ರದ ಆರಂಭೋತ್ಸವ

ಮೈಸೂರು ೨೮

...ಕಲಾಸ್ಟಾರ್ ಸಂಸ್ಥೆಯವರು ಶ್ರೀ|| ...ನಲಾಲರ ನಾಯಕತ್ವದಲ್ಲಿ ತಯಾ...ವ 'ಕಲಾವಿದ ಚಿತ್ರದ' ಆರಂಭೋ...ವನ್ನು ಕಳೆದವಾರ ರಾಜಧಾನಿಯ ...ಸ್ಟುಡಿಯೋವಿನಲ್ಲಿ ನಡೆಸಿದ ...ಶ್ರೀಯುತ ...ರವರ ಅಸಿಸ್ಟೆಂಟ್ ...ಯವರಾದ ಶ್ರೀ ಕೆ ನರಸಿಂಹಯ್ಯಂ...ರು ಅಧ್ಯಕ್ಷತೆ ವಹಿಸಿದ್ದರು. ಶ್ರೀ|| ...ನಸನ್ನ ...ಮತ್ತು ಶ್ರೀ|| ಕಾಳಿಂಗ ...ರ ಪ್ರಾರ್ಥನಾ ಗೀತೆಯಾದ ಮೇಲೆ ...ದ ಪ್ರಸಿದ್ಧ ಸಂಗೀತ ವಿದ್ವಾಂಸರಾ...ಮೊಹಿಯುದ್ದೀನರವರು ಸಿತಾರ್ ...ವನ್ನು ನುಡಿಸಿದರು. ಅನಂತರ ...ಕಾಂತಾರವರ ನೃತ್ಯವೂ ನಡೆ...ಅಧ್ಯಕ್ಷರು ಮಾತನಾಡಿ ಆಳದ ...ಸ್ವಾಮಿಯವರು ಕಲಾಭಿಮಾನಿಗಳ ...ಪ್ರೋತ್ಸಾಹಕೊಟ್ಟು ಮೈಸೂರು ಕಲೆಗೆ ...ರು ಎನ್ನುವಂತೆ ಮಾಡಿದರೆಂದೂ, ...ನ ಮಹಾಸ್ವಾಮಿಯವರೂ ಉತ್ತಮ ...ಉತ್ತೇಜನ ಕೊಡುತ್ತಿರುವುದಾಗಿ ...ಹೇಳಿದರು. ಚಿತ್ರ ತಯಾರಿಕೆಗೆ ...ನೆರವು ನೀಡುವುದಾಗಿ ತಿಳಿಸಿದರು. ...ತರ ಶ್ರೀ|| ಜಿ ಆರ್ ರಾಮಯ್ಯನವ ...ಮಾತನಾಡಿ ಈ ಉದ್ಯಮದಲ್ಲಿ ತಮ್ಮ ...ದ ಸಹಾಯವನ್ನು ನೀಡುವುದಾಗಿ ...ಟಿಸಿದರು. ಅನೇಕ ಪ್ರಮುಖರು ಆ ...ನಿ ಸತ್ಕರಿಸಲ್ಪಟ್ಟರು.

ಪೌರಸಭೆಯಲ್ಲಿ ಸಭಾ ಪರಿತ್ಯಾಗ

ರಾಜಧಾನಿಯ ಪೌರಸಭೆಯು ಸಾಮಾ...ಧಿವೇಶನವು ಇಂದು ಸೇರಿದ್ದಾಗ ಕಾಂ...ಸ್ ಪಕ್ಷದವರು ಹೊರಗೆ ಬಂದು ಸಭಾ...ತ್ಯಾಗವನ್ನು ಮಾಡಿದರು ಅಧ್ಯಕ್ಷರಲ್ಲಿ ...ವಿಶ್ವಾಸನಿರ್ಣಯವನ್ನು ತಾವು ಮುಂದಿಸಿ...ದ್ದರಿಂದಲೂ, ಅದನ್ನು ಅಧ್ಯಕ್ಷರು ನಿರಾ...ಸುವುದರಿಂದಲೂ ಈ ವಿಷಯವು ಇತ್ಯ...ರ್ಥವಾಗುವವರೆಗೆ ತಮ್ಮ ಪಕ್ಷದವರು ಸಭೆ...ಯಲ್ಲಿ ಭಾಗವಹಿಸುವುದಿಲ್ಲವೆಂದು ಶ್ರೀ||ಟಿ. ...ರವರಯ್ಯನವರು ಒಂದು ಹೇಳಿಕೆ ...ಯಲ್ಲಿ ತಿಳಿಸಿದರು.

ಜವಾಬ್ದಾರಿ ಸರ್ಕಾರಕ್ಕೆ ಕೂಲಿಗಾರರ ಒತ್ತಾಯ

ಶ್ರೀ ಕೃಷ್ಣರಾಜೇಂದ್ರ ಗಿರಣಿಯ ಕೆಲಸ...ಗಾರರ ಸಂಘದ ಕಾರ್ಯನಿರ್ವಾಹಕ ಸಮಿತಿ...ಯ ಸಾಧಾರಣ ಸಭೆಯು ಮೊನ್ನೆ ಸೇರಿದ್ದಿ...ತು ಶ್ರೀಮನ್ಮಹಾರಾಜರ ಛತ್ರಛಾಯೆಯಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾದ ಹೊ...ರತು ಕೂಲಿಗಾರರ ಸ್ಥಿತಿಯು ಉತ್ತಮವಾ...ಗುವುದಿಲ್ಲವಾದ್ದರಿಂದ ಅದರ ಸ್ಥಾಪನೆಗೆ ಎ...ಲ್ಲ ತ್ಯಾಗಗಳನ್ನೂ ಮಾಡಲು ಸಿದ್ಧರಾಗ...ಬೇಕೆಂದು ತೀರ್ಮಾನಿಸಲಾಯಿತು ಜವಾ...ಬ್ದಾರಿ ಸರ್ಕಾರ ಸ್ಥಾಪನೆಗೆ ಪ್ರಭುತ್ವದವರ...ನ್ನು ಒತ್ತಾಯಪಡಿಸುವ ನಿರ್ಣಯವು ಅಂ...ಗೀಕರಿಸಲ್ಪಟ್ಟಿತು

ವಿವಾಹ ಮಹೋತ್ಸವ

ರಾಜಧಾನಿಯ ಅಡ್ವೋಕೇಟರಾದ ಶ್ರೀ ...ಪುಟ್ಟಸ್ವಾಮಯ್ಯನವರು ತಮ್ಮ ಮಗ ಚಿ|| ...ರವರಿಗೆ ಸರ್ಕಾರದ ಅಡಿಟರಾದ ಶ್ರೀ|| ಎಸ್ ನಂಜಪ್ಪನವರ ಕುಮಾರಿ ಚಿ|| ಸೌ|| ಇಂದಿರಾರವರನ್ನು ತಂದುಕೊಂಡು ವಿವಾಹವನ್ನು ನಿನ್ನೆದಿನ ನೆರವೇರಿಸಿದರು.

ಪತ್ರಿಕೋದ್ಯೋಗಿಗಳ ಸಮ್ಮೇಳನದ ಮುಕ್ತಾಯ

ಅಂಗೀಕೃತವಾದ ನಿರ್ಣಯಗಳು

ಸ್ವಂ ಸು ಪ್ರೋ|] ಬೆಂಗಳೂರು ೨೮

ನಿನ್ನೆ ಸಂಜೆ ೭ ಗಂಟೆಗೆ ಪತ್ರಿಕೋದ್ಯೋಗಿಗಳ ಸಮ್ಮೇಳನವು ಮುಕ್ತಾಯಗೊಂಡು ಈ ಕೆಳಗೆ ಕಂಡ ನಿರ್ಣಯಗಳು ಅಂಗೀಕೃತವಾದುವು:—

ಬಾತ್ಮೀದಾರರುಗಳ ಸಂಭಾವನೆಯನ್ನು ಹೆಚ್ಚಿಸುವುದು, ಗಾಂಧಿ-ಜಿನ್ನಾ ಹೇಳಿಕೆಯನ್ನು ಸ್ವಾಗತಿಸುವುದು, ಕನ್ನಡಪ್ರಾಂತ ರಚನೆಗೆ ತೀವ್ರ ಗಮನಕೊಡುವುದು, ಪತ್ರಿಕಾ ಪತ್ರಿಕೋ...ಶಾಸನವು ಬ್ರಿ|| ಭಾರತದಲ್ಲಿ ರದ್ದಾಗಿದ್ದರೂ ಸಹ ಇಲ್ಲಿ ಇನ್ನೂ ಆಗದಿರುವುದರಿಂದ ಅದಕ್ಕಾಗಿ ಸರ್ಕಾರವನ್ನು ಒತ್ತಾಯಪಡಿಸುವುದು ಕೇಂದ್ರ ಸರ್ಕಾರದವರಂತೆ ಇಲ್ಲಿಯೂ ಸಹ ಮುದ್ರಣ ಶಾಸನವನ್ನು ಬದಲಾಯಿಸಲು ಸಮಿತಿಯೊಂದನ್ನು ಏರ್ಪಡಿಸುವುದ, ಪತ್ರಿಕೋದ್ಯಮದ ಮಟ್ಟವನ್ನು ಹೆಚ್ಚಿಸಲು ಒಂದು ಉಪಸಮಿತಿಯನ್ನು ನೇಮಿಸುವುದು, ಮಹಿಳಾ ಪತ್ರಿಕೋದ್ಯೋಗಿಗಳನ್ನು ಹೆಚ್ಚು ಹೆಚ್ಚಾಗಿ ಆರಿಸುವುದು, ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಂಘವು ಈ ಸಮ್ಮೇಳನದೊಡನೆ ಏಕ್ಯವಾಗಲು ಕಾರ್ಯಕ್ರಮ ಕೈಗೊಳ್ಳುವುದು, ಕೋಮುವಾರು ಸೌಹಾರ್ದಕ್ಕೆ ವಿರುದ್ಧವಾದ ಅಂಶಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸದಿರುವುದು, ಇವೇ ಮುಂತಾದ ನಿರ್ಣಯಗಳು ಮಂಜೂರಾದುವು

ದಿವಾನರಿಗೂ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ|| ಕೆ. ಚೆಂಗಲರಾಯ ರೆಡ್ಡಿಯವರಿಗೂ ಮೊನ್ನೆ ಭೇಟಿ ನಡೆದ ಸಮಯದಲ್ಲಿ ದಿವಾನ್ ಭವನದಿಂದ ಪತ್ರಿಕೋದ್ಯೋಗಿಗಳನ್ನು ಹೊರಗೆ ಕಳುಹಿಸಿದುದನ್ನು ಪರಿಶೀಲಿಸಲು ಶ್ರೀ|| ಪ್ರಿಯವ್ರತರವರು ಒಂದು ಆವಶರದ ನಿರ್ಣಯವನ್ನು ಮುಂದಿಟ್ಟರು ಸಭೆಯು ಇದನ್ನು ಅನುಮೋದಿಸಿತು

ಅಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ ಸರ್ವರನ್ನೂ ವಂದಿಸಿ,ಪತ್ರಿಕೋದ್ಯಮದ ಉನ್ನತಿಗಾಗಿ ತಾವು ದುಡಿಯುವುದಾಗಿ ಭರವಸೆ ಇತ್ತರು

ವಿದ್ಯಾಭ್ಯಾಸದ ಇಲಾಖೆಯ ಪಂಡಿತರೂ, ಮೌಲ್ವಿಗಳೂ, ಸಂಗೀತ ಉಪಾಧ್ಯಾಯರುಗಳೇ ಮುಂತಾದವರ ಅರ್ಜಿಗಳನ್ನು ಸಂಬಳದ ವಿಚಾರಣಾ ಸಮಿತಿಯವರು ...೨೯ ಮತ್ತು ...ನೇ ತಾ|| ಗಳಲ್ಲಿ ಸಭೆ ಸೇರಿ ಪರಿಶೀಲಿಸಿದರೆಂದು ತಿಳಿದು ಬಂದಿದೆ

ಸಂಸ್ಥಾನದ ಪ್ರತಿನಿಧಿಗಳಿಗೆ ಸ್ವಾಗತ

ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ನಿರ್ಧರಿಸಿ ನಿನ್ನೆ ದಿನ ಹಾಜರಾಗಿದ್ದ ಸಂಸ್ಥಾನಗಳ ಪ್ರತಿನಿಧಿಗಳಿಗೆ ಸ್ವಾಗತವನ್ನು ನೀಡಿ ಪಂಡಿತ ನೆಹರೂರವರು ಭಾಷಣವನ್ನು ಮಾಡಿದರು ಇನ್ನೂ ಸಭೆಗೆ ಸೇರದಿರುವ ಸಂಸ್ಥಾನಗಳು ಬೇಗನೆ ಬಂದು ಸೇರಲೆಂದೂ ಹಾರೈಸಿದರು

ರೈಲಿನಲ್ಲಿ ರಾಜ್ಯಾಂಗ ಸಭಾ ಸದಸ್ಯರ ಮರಣ

ಬರೋಡಾ ಸಂಸ್ಥಾನದಿಂದ ರಾಜ್ಯಾಂಗ ರಚನಾ ಸಭೆಗೆ ಪ್ರತಿನಿಧಿಯಾಗಿ ಆರಿಸಲ್ಪಟ್ಟಿದ್ದ ಶ್ರೀ|| ಕನ್ಹೈಯ್ಯಲಾಲ್ ಮುಜುಂದಾರರು ಸದರಿ ಸಭೆಯಲ್ಲಿ ಭಾಗವಹಿಸಲು ರೈಲಿನಲ್ಲಿ ತೆರಳುತ್ತಿದ್ದಾಗ ಅವರು ಸೇದಿಯು ...ದ್ದ ಸಿಗರೇಟಿನ ಬೆಂಕಿಯು ಬಟ್ಟೆಗೆ ತಗುಲಿ ಅದರಿಂದ ಗಾಡಿಯೆಲ್ಲಾ ಹತ್ತಿಕೊಂಡು ಅವರಿಗೂ ಗಾಯವಾಗಿ ಆಸ್ಪತ್ರೆಗೆ ಸಾಗಿಸಲ್ಪಟ್ಟು ಅಲ್ಲೇ ಮೃತರಾದರೆಂದು ವರದಿಯಾಗಿದೆ

ದಂಡಿಗೆ ಮೈಸೂರಿನ ಜಿಲ್ಲಾಧಿಕಾರಿಗಳು

ಸ್ವಂ.ಸು ಪ್ರೋ|] ಬೆಂಗಳೂರು ೨೮

ಚಿತ್ರದುರ್ಗದ ಜಿಲ್ಲಾಧಿಕಾರಿಗಳಾದ ಶ್ರೀ ಎಚ್ ಪುಟ್ಟರಂಗಸ್ವಾಮಿಯವರು ಬೆಂಗಳೂರು ದಂಡಿನ ರೆಸಿಡೆಂಟರ ಬಳಿ ಅಲ್ಲಿನ ಕಲೆಕ್ಟರ್ ಮತ್ತು ಜಿಲ್ಲಾಧಿಕಾರಿಗಳಾಗಿ ಕೆಲಸ ಮಾಡುವಂತೆ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ

* ಸರ್. ಎಂ. ವಿಶ್ವೇಶ್ವರಯ್ಯನವರು ಬರುವ ವಾರ ಬೆಂಗಳೂರಿಗೆ ಬಂದು ಸುಮಾರು ಎರಡು ತಿಂಗಳ ಕಾಲ ಇಲ್ಲಿ ತಂಗುವರು

§ ಮುನಿಸೀಫರುಗಳ ಚುನಾವಣೆಗಾಗಿ ನಾಳೆ ಹೈ ಕೋರ್ಟಿನವರು ಪರೀಕ್ಷೆ ನಡೆಸುವರು. ಸುಮಾರು ೨೫ ಜನ ಉಮೇದುವಾರರಾಗಿ ನಿಂತಿರುವರು

ಆರ್ಮೋನಿಯಾ ರಸ್ತೆಯಲ್ಲಿರುವ ಸುಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ಪದ್ಮನಾಭಯ್ಯನವರು ತಮ್ಮ ಕುಮಾರಿ ಸೌ|| ಬ್ರಹ್ಮರಾಂಬ...ಮ್ಮನನ್ನು ಮಂಡ್ಯದ ನೂರಿನ ವ್ಯಾಪಾರಿಗಳಾದ ಶ್ರೀ ಚನ್ನಪ್ಪನವರ ಕುಮಾರ ಚಿ|| ಜಯಕುಮಾರಯ್ಯನವರಿಗೆ ಕೊಟ್ಟು ವಿವಾಹವನ್ನು ನಜರ್ ಬಾದಿನ ಶ್ರೀ ಎಸ್. ಚನ್ನಯ್ಯನವರ ವಿದ್ಯಾರ್ಥಿನಿಲಯದಲ್ಲಿ ವೈಭವದಿಂದ ನೆರವೇರಿಸಿದರು.

ಸುಧಾರಣೆ ಬಗ್ಗೆ ದಿವಾನರ ಭೇಟಿಗಳು

ಸ್ವಂ ಸು.ಪ್ರೋ|] ಬೆಂಗಳೂರು ೨೮

ರಾಜಕೀಯ ಸುಧಾರಣೆಗಳ ಬಗ್ಗೆ ದಿವಾನರು ಮೊನ್ನೆ ಪ್ರಜಾಪಕ್ಷದ ಪರವಾಗಿ ಛ|| ಪ್ರ|| ಕುಪ್ಪಸ್ವಾಮಿನಾಯ್ಡು ಶ್ರೀಗಳಾದ ವೈ. ಧರ್ಮಪ್ಪ ಮತ್ತು ಎಂ. ಎಲ್ ಶ್ರೀಕಂಠಯ್ಯನವರೊಡನೆ ಮಾತುಕತೆ ನಡೆಸಿದರು ಪಕ್ಷದ ಪರವಾಗಿ ಒಂದು ಹೇಳಿಕೆಯನ್ನು ದಿವಾನರಿಗೆ ಸಲ್ಲಿಸಲಾಯಿತೆಂದು ತಿಳಿದು ಬಂದಿದೆ

ಮುಸ್ಲಿಂಲೀಗಿನ ಅಧ್ಯಕ್ಷರಾದ ಮಿ|| ಮಹಮದ್ ಷರೀಫ್ ಮತ್ತು ಕಾರ್ಯದರ್ಶಿಗಳಾದ ಮಿ|| ಎ ಜೆ ಖಲೀಲರು ನಿನ್ನೆ ಇದೇ ಸಂದರ್ಭದಲ್ಲಿ ದಿವಾನರೊಡನೆ ಮಾತುಕತೆ ನಡೆಸಿದರು. ಲೀಗಿನ ಪರವಾಗಿಯೂ ಒಂದು ವಿವರಣೆಯು ದಿವಾನರಿಗೆ ಕೊಡಲ್ಪಟ್ಟಿತು ಅದರ ಮೇಲೆ ಚರ್ಚೆಗಳು ನಡೆದುವು ಇತರ ಪಕ್ಷಗಳ ಪ್ರತಿನಿಧಿಗಳನ್ನೂ ಮತ್ತು ಹೇಳಿಕೆಗಳನ್ನು ಕಳುಹಿಸಿರುವ ವ್ಯಕ್ತಿಗಳನ್ನೂ ದಿವಾನರು ದೆಹಲಿಯಿಂದ ಬಂದನಂತರ ಕರೆಸಿ ಅವರೊಡನೆ ಮಾತುಕತೆ ನಡೆಸುವರೆಂದು ಗೊತ್ತಾಗಿದೆ

ಈ ದಿನ ರಾತ್ರಿ ದಿವಾನರು ದೆಹಲಿಗೆ ತೆರಳಿರುವರು.

ರೆಡ್ಡಿ—ದಿವಾನ್ ಭೇಟಿ

ಸ್ವಂ ಸು.ಪ್ರೋ|] ಬೆಂಗಳೂರು ೨೮

ಮೊದಲೇ ಸೂಚಿಸಿದ್ದಂತೆ ಮೈ|| ಕಾಂ|| ಅಧ್ಯಕ್ಷರಾದ ಶ್ರೀ|| ಕೆ ಚೆಂಗಲರಾಯ ರೆಡ್ಡಿಯವರೊಡನೆ ಈ ದಿನ ಸಂಜೆ ೫ ಗಂಟೆಗೆ ದಿವಾನರು ತಮ್ಮ ಎರಡನೇ ಸಂಭಾಷಣೆಯನ್ನು ನಡಸಲಿರುವರು

ಲಂಡನ್ನಿಗೆ ವೈಸರಾಯರ ಪ್ರತಿನಿಧಿ

ಬ್ರಿಟಿಷ್ ಅಧಿಕಾರಿಗಳೊಡನೆ ಭಾರತದ ಅಧಿಕಾರವರ್ಗಾವಣೆಯ ವಿಚಾರವಾಗಿ ಮಾತುಕತೆ ನಡೆಸಲು ವೈಸರಾಯರ ಸಲಹೆಗಾರರಾದ ಲಾರ್ಡ್ ಇಸ್ಮೆಯವರು ಈ ವಾರಾಂತ್ಯದಲ್ಲಿ ಬ್ರಿಟನ್ನಿಗೆ ತೆರಳಲಿರುವರೆಂದು ವರದಿಯಾಗಿದೆ ವೈಸರಾಯರು ಅಧಿಕಾರದ ವರ್ಗಾವಣೆಯ ವಿಷಯವಾಗಿ ತಮ್ಮ ಸಲಹೆಗಳನ್ನು ಅವರೊಡನೆ ಕಳುಹಿಸಿಕೊಡುವರು ರಾಜ್ಯಾಂಗಸಭೆಯು ಕೇವಲ ಒಂದುವಾರ ಕಾಲ ಕೆಲಸಮಾಡಿ ಜೂನ್ ತಿಂಗಳಿಗೆ ಮುಂದುವರಿಯುವುದೆಂದು ಜೇ ... ಬಿ. ಅಕ್ಟೋಬರ್ ೩೧ ರೊಳಗೆ ಅದು ರಾಜ್ಯಾಂಗವನ್ನು ಸಿದ್ಧಗೊಳಿಸುವುದೆಂದೂ ವರದಿಯಾಗಿದೆ.

○ ಕೃಷ್ಣವಿಲಾಸ ಅಗ್ರಹಾರದ ಶ್ರೀ|| ಪ್ರಸನ್ನ ವೆಂಕಟರಮಣ ಸ್ವಾಮಿಯವರ ದೇವಾಲಯದಲ್ಲಿ ಕಲ್ಯಾಣೋತ್ಸವದ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಶ್ರೀ|| ಅತ್ತಿಮುಬ್ಬಾಚಾರ್ಯರಿಂದ ಶ್ರೀ ವೆಂಕಟೇಶ ಕಲ್ಯಾಣವೆಂಬ ಹರಿಕಥೆಯು ನಡೆಯುತ್ತದೆ.

LATE NEWS

ಜಿಲ್ಲಾಬೋರ್ಡ್ ಚುನಾವಣಾ ಫಲಿತಾಂಶ

ಮೈಸೂರು ೨೮

ನಿನ್ನೆ ನಡೆದ ಜಿಲ್ಲಾಬೋರ್ಡ್ ಚುನಾವಣೆಯಲ್ಲಿ ಮೈಸೂರು ತಾಲ್ಲೂಕಿನಿಂದ ಶ್ರೀ ಟಿ ಸಿ ಪೊನ್ನಪ್ಪ (ಪ್ರ) ಮತ್ತು ಶ್ರೀ|| ಶಿವನಂಜೇಗೌಡ (ಕಾಂ) ಇವರುಗಳು ಜಯಶೀಲರಾಗಿದ್ದಾರೆ.

ಸಾಧ್ವಿ

ತಾ॥ ೨೯-೪-೪೭ ಮಂಗಳವಾರ

ಪತ್ರಿಕೋದ್ಯಮದ ಮುನ್ನಡೆ

ಮೊನ್ನೆ ಮತ್ತು ನೆನ್ನೆ ಬೆಂಗಳೂರಿನಲ್ಲಿ ನಡೆದ ಪತ್ರಿಕೋದ್ಯೋಗಿಗಳ ಸಮ್ಮೇಳನವು ಸಂಸ್ಥಾನದಲ್ಲಿ ಈ ವೃತ್ತಿಯವರು ದಿನೇ ದಿನೇ ಹೊಂದುತ್ತಿರುವ ಪ್ರಗತಿಯನ್ನು ಸೂಚಿಸುವುದಾಗಿದೆ. ಪತ್ರಿಕಾ ಸಂಪಾದಕರುಗಳೂ, ಮಾಲೀಕರುಗಳೂ, ಲೇಖಕರೂ, ಸುದ್ದಿಗಾರರೂ ಹೀಗೆ ವರ್ಷಕೊಮ್ಮೆ ಸೇರಿ ಪರಸ್ಪರ ಕಷ್ಟ ಸುಖಗಳನ್ನು ವಿಚಾರಿಸಿ ತಮ್ಮ ಮತ್ತು ಉದ್ಯಮದ ಉನ್ನತಿಗಾಗಿ ದುಡಿಯುತ್ತಿರುವರು. ಇದರಿಂದ ಈಗಾಗಲೇ ಈ ವೃತ್ತಿ ಬಾಂಧವರಲ್ಲಿ ವಿಶೇಷ ಪ್ರೀತಿ, ವಿಶ್ವಾಸಗಳೂ, ಸ್ನೇಹ ಸೌಹಾರ್ದಗಳೂ, ಸಹಾಯ, ಸಹಕಾರದ ಮನೋಭಾವಗಳೂ ಬೆಳೆಯಲು ಅನುಕೂಲವಾಗಿರುತ್ತವೆ.

ಪತ್ರಿಕೋದ್ಯಮಕ್ಕೆ ಇರುವ ಅನೇಕ ಅತಂಕಗಳು ಸಕಲರಿಗೂ ವೇದ್ಯವೇ ಆಗಿವೆ. ಕರಾಳ ಶಾಸನಗಳ ಪ್ರಯೋಗವೂ, ಮುದ್ರಣ ಸಾಮಗ್ರಿಗಳ ಮತ್ತು ಕಾಗದದ ಅಭಾವವೂ ಹೇಗೆ ಪತ್ರಿಕಾ ಚಾಲನಕ್ಕೆ ಅಡಚಣೆಯನ್ನುಂಟುಮಾಡುತ್ತಿವೆಯೆಂಬುದು ಸಕಲರಿಗೂ ಗೊತ್ತಿರುತ್ತದೆ. ಇವುಗಳನ್ನು ನಿವಾರಿಸಲು ಪತ್ರಿಕೋದ್ಯೋಗಿಗಳು ಅನೇಕ ವಿಧದಲ್ಲಿ ಪ್ರಯತ್ನ ಸುತ್ತಿದ್ದಾರೆ. ಸಾಮೂಹಿಕವಾಗಿ ಸಂಘಟನೆಯಿಂದ ಅವರು ನಡೆಸುವ ಕೆಲಸಕಾರ್ಯಗಳಿಗೆ ಯಶಸ್ಸು ದೊರೆಯುವುದರಲ್ಲಿ ಸಂಶಯವಿಲ್ಲ.

ಪತ್ರಿಕಾ ವೃತ್ತಿಯು ತನ್ನ ನಿಜವಾದ ಉನ್ನತ ಆದರ್ಶವನ್ನು ಮುಟ್ಟಬೇಕಾದರೆ ಅದರಲ್ಲಿ ತೊಡಗಿರುವವರೆಲ್ಲರೂ ನಿರ್ಮಲವಾದ ಮತ್ತು ಸತ್ಯ ಪೂರಿತವಾದ ಮಾರ್ಗಗಳನ್ನೇ ಅವಲಂಬಿಸಬೇಕು. ಸಮಾಜದ ಲೋಪ ದೋಷಗಳನ್ನೂ, ಸ್ವಪರೀಕ್ಷೆಗಳನ್ನೂ ಬೆಳಕಿಗೆ ತರುವವರು ತಮ್ಮಲ್ಲಿರುವ ನ್ಯೂನಾತಿರೇಕಗಳನ್ನೂ ಕ್ರಮಪಡಿಸಿಕೊಳ್ಳಬೇಕು. ಈ ಉದ್ದೇಶ ಸಾಧನೆಗಾಗಿ ಸಮ್ಮೇಳನವು ಹಲವು ನಿರ್ಣಯಗನ್ನು ಮಾಡಿರುತ್ತದೆ.

ಬರುವ ವರ್ಷದಲ್ಲಿ ಸಮ್ಮೇಳನದ ಸೂತ್ರಧಾರಿಗಳಾಗಿರುವ ಅಧ್ಯಕ್ಷರೂ ಮತ್ತು ಅವರ ಸಹೋದ್ಯೋಗಿಗಳೂ ಪತ್ರಿಕೋದ್ಯಮದ ಘನವಾದ ಗುರಿಗಳನ್ನು ಸಾಧಿಸಿ ವೃತ್ತಿ ಬಾಂಧವರಿಗೆ ಸಕಲ ಸೌಲಭ್ಯಗಳನ್ನೂ ಗಳಿಸಿಕೊಟ್ಟು ತಮ್ಮ ಕರ್ತವ್ಯದಲ್ಲಿ ಯಶಸ್ವಿಗಳಾಗಲೆಂದು ನಾವು ಹಾರೈಸುತ್ತೇವೆ.

ಸಂಯುಕ್ತ ಪ್ರಾಂತ್ಯವನ್ನು ವಿಂಗಡಿಸಲು ಪ್ರಯತ್ನ

ಸಂಯುಕ್ತ ಪ್ರಾಂತ್ಯದ ವಾಯುವ್ಯ ಭಾಗವನ್ನು ಬೇರೆ ಮಾಡಲು ಮುಸ್ಲಿಂ ಲೀಗ್ ಪಕ್ಷದವರು ಪ್ರಯತ್ನ ಸುತ್ತಿದ್ದಾರೆಂದು ವರದಿಯಾಗಿದೆ. ತಮ್ಮ ಈ ಚಳುವಳಿಗೆ ಈ ಪ್ರಾಂತ್ಯದ ಮುಸ್ಲಿಮರೂ, ಕ್ರಿಶ್ಚಿಯನ್ನರೂ ಹಿಂದು ವರ್ಗದವರೂ ಬೆಂಬಲ ಕೊಡುವರೆಂದು ಲೀಗ್ ನಾಯಕರು ತಿಳಿಸಿದ್ದಾರೆ. ಈ ರೀತಿ ಏರ್ಪಡಿಸುವುದರಿಂದ ಎಲ್ಲಾ ಕೋಮಿನವರಿಗೂ ಸರಿಯಾದ ಪ್ರಾತಿನಿಧ್ಯವು ಅಲ್ಲಿ ದೊರೆಯುವುದಾಗಿ ಅವರು ಹೇಳಿದ್ದಾರೆ.

ವಾರ್ಷಿಕೋತ್ಸವ

ಸ್ವಂ.ವ.] ಶ್ರೀರಂಗಪಟ್ಟಣ ೨೩

ಇಲ್ಲಿನ ಟ್ಯಾಟ್ಮೆಂಟರ್ ಕ್ಲಬ್ಬಿನ ಆರನೇ ವಾರ್ಷಿಕೋತ್ಸವವು ೨೦ ನೇ ತಾ॥ ಶ್ರೀ ಎಂ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ಕ್ಲಬ್ಬಿಗೆ ಒಂದು ಕಟ್ಟಡವನ್ನು ಕಟ್ಟಿಸಬೇಕೆಂದೂ, ಅದಕ್ಕಾಗಿ ಮುಖಂಡರಾಗಿ ನಿವೇಶನವನ್ನು ಕೊಡುವಂತೆ ಪುರಸಭೆಯವರನ್ನು ಪ್ರಾರ್ಥಿಸಬೇಕೆಂದೂ ಅಧ್ಯಕ್ಷರು ಸಲಹೆ ಇತ್ತರು.

ಚಾಮರಾಜನಗರದ ವಾಚಕರಲ್ಲಿ ವಿನಂತಿ

ತಾ॥ ೧-೪-೪೭ ರಿಂದ 'ಸಾಧ್ವಿ' ಪತ್ರಿಕೆಯ ಏಜನ್ಸಿಯನ್ನು ನಾನು ಬಿಟ್ಟಿರುತ್ತೇನೆ. ಶ್ರೀ॥ ಎಸ್. ನಾಗರಾಜುರವರು ಅಂದಿನಿಂದ ಸಾಧ್ವಿಯ ಏಜಂಟರಾಗಿರುತ್ತಾರೆ. ತಾವೆಲ್ಲರೂ ಇದುವರೆಗೆ ಇತ್ತ ಸಹಕಾರಕ್ಕಾಗಿ ಕೃತಜ್ಞನಾಗಿರುತ್ತೇನೆ. ಮುಂದೆ ಸಂಬಂಧಪಟ್ಟ ವ್ಯವಹಾರಗಳನ್ನು ಶ್ರೀ॥ ನಾಗರಾಜುರವರಲ್ಲಿ ನಡೆಸಬೇಕಾಗಿ ಕೋರುತ್ತೇನೆ.

ಸಿ. ಗೋಪಾಲರಾವ್.

ವಿವಾಹ ಮತ್ತು ಉಪನಯನ

ಅರಮನೆ ಆಸ್ಥಾನ ವೈದ್ಯರಾದ ಶ್ರೀ ಸೂರ್ಯನಾರಾಯಣ ಪಂಡಿತರು ತಮ್ಮ ದ್ವಿತೀಯ ಕುಮಾರ ಚಿ॥ ರಾಮಕೃಷ್ಣಯ್ಯನಿಗೂ, ಮೊಮ್ಮಗ ಚಿ॥ ಸುಬ್ರಹ್ಮಣ್ಯನಿಗೂ ಕಳೆದ ೨೫ ನೇ ತಾ॥ ಉಪನಯನವನ್ನೂ, ಅವರ ಭಾವಮೈದುನರ ಮಗ ಚಿ॥ ನಾಗರಾಜನಿಗೆ ಹೊಳೆನರಸೀಪುರದ ದಿ॥ ನರಸಿಂಹಭಟ್ಟರ ಮಗಳು ಸೌ॥ಲಕ್ಷ್ಮೀದೇವಿಯನ್ನು ತಂದು ಕೊಂಡು ವಿವಾಹವನ್ನೂ ನೆರವೇರಿಸಿದರು.

ವೇದರತ್ನಂ ವೆಂಕಟರಾಮಾವಧಾನಿಗಳ ಮಗ ವಿದ್ವಾನ್ ಕೆ. ಕೃಷ್ಣಶಾಸ್ತ್ರಿಗಳ ಕುಮಾರ ಚಿ॥ಬಾಲಸುಬ್ರಹ್ಮಣ್ಯ, ಕಿಕ್ಕೇರು ಪಟೇಲ್ ರಾಮಕೇಶವಯ್ಯನವರ ಮೊಮ್ಮಗ ಚಿ॥ ವೈದ್ಯನಾಥ, ಬೆಂಗಳೂರು ಮರಾಮತ್ ಶಾಖಾ ಅಕೌಂಟೆಂಟ್ ಶ್ರೀ ಎಸ್. ಕುಮಾರಸ್ವಾಮಿಯವರ ಕುಮಾರ ಚಿ॥ ಸುಬ್ರಹ್ಮಣ್ಯ ಇವರುಗಳ ಉಪನಯನ ಮಹೋತ್ಸವಗಳು ೨೫ ನೇ ತಾ॥ ಶುಕ್ರವಾರ ಮೈಸೂರಿನಲ್ಲಿ ವೈಭವದಿಂದನಡೆದವು.

ಕೂಡಲೆ ಕ್ರಯಕ್ಕಿವೆ

೧) ನಂ ೫೯೯, ಶಾ ಲೀ ಬ್ ರಸ್ತೆ, ಮಹಡಿ ಮನೆ

೨) ನಂ. ೪೮೭, ಡಿ ಸುಬ್ಬಯ್ಯ ರಸ್ತೆ, ಮಹಡಿ ಮನೆ.

ವಿವರಗಳಿಗೆ:- ಆರ್. ಗುಂಡೂರಾವ್,
ಮೈಸೂರು ಬ್ಯಾಂಕ್ ಕಟ್ಟಡ,
ಮೈಸೂರು

ಮನೆ ಬಾಡಿಗೆಗೆ ಇದೆ

ರಾಮಾನುಜ ರಸ್ತೆಯಲ್ಲಿರುವ ೬೫ ನೇ ನಂ ಮುನಿಸಿಪಲ್ ಮಾದರಿ ಮನೆ. ಕೆಳಗಿನ ವಿಳಾಸದಲ್ಲಿ ವಿಚಾರಿಸಿರಿ.

X

C/o ಸಾಧ್ವಿ ಆಫೀಸು, ಮೈಸೂರು.

ರಾಜಕಮಲ್, ಮೈಸೂರು

ತಾ॥ ೨೫-೪-೪೭ರಿಂದ ಅಮೋಘ ಪ್ರಾರಂಭ

ಮೊದಲನೇ ಆಟ ಮಧ್ಯಾಹ್ನ 3-30; ೨ ನೇ ಆಟ 6-30; ೩ ನೇ ಆಟ 9-30ಕ್ಕೆ.

'ಗೊಲ್ಲಭಾಮ'

(ತೆಲುಗು)

ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ ಪಾತ್ರವಹಿಸಿರುವ

ಮಾನವನ ಹೃದಯದ ಜ್ವಾಲಾಮುಖಿಯಲ್ಲಿ ದೇವತೆಗಳಿಗೂ

ಸಿಗದ ಶಾಂತಿ ಮಾನವನಿಗೆ ಹೇಗೆ ದೊರಕಿತೆಂಬುದನ್ನು

ನಿರೂಪಿಸುವ ಅಮೋಘ ಚಿತ್ರಕಥಾವಳಿ

MYSORE CITY MUNICIPALITY

(Works Department)

NOTICE

Sealed tenders will be received at the Office of the Municipal Engineer up to 4 P. M. on 5—5—47 for improvements to the Nanjaraja Bahdoor Chatram Building, Mysore.

The work is estimated to cost Rs 8270- Each tender should be accompanied by a chellan for having remitted Rs. 410-to the Municipal Treasury as earnest money. The Plans and Estimates may be seen at the Office of the Municipal Engineer during working hours. For further particulars please see the detail notification on the Office notice board.

K. G. KATWEY,
Municipal Engineer.

ಭರದಿಂದ ಸಾಗುತ್ತಿ

ಶ್ರೀ ರಾಘವೇಂದ್ರ ಪಿಕ್ಚರ್

ಮತ್ತು

ಶ್ರೀ ಮಹಾವೀರ್ ಫಿಲ್ಮ್

ಎಕ್ಸ್‌ಚೇಂಜ್

ಇವರ

ಅತ್ಯುತ್ತಮ

ಕನ್ನಡ ಸಾಮಾಜಿಕ ಚಿತ್ರ

ಭಾರತಿ

ಭಾರತಿ

ಕಥೆ:-ಎಂ. ನರೇಂದ್ರಬಾಬು

ಸಂಗೀತ:-ಆಸ್ಥಾನ ಸಂಗೀತ ವಿದ್ವಾನ್ ಎಂ. ಎಸ್. ಚಂ ತೇಖರ

ದಿಗ್ದರ್ಶನ:-ಆರ್. ಎಂ. ವಿ ಭದ್ರ

ತಯಾರಿಕೆ:-ನವಜ್ಯೋತಿ ಸ್ಟುಡಿಯೋ

—: Sole Distributors :-

Sri Mahaveer Film Exchange

Ashoka Road, Mysore.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

Edited, printed and published by A. R. Nagaraian at the Sadhvi P. D. Subbiah Road, Mysore.

ಫೋ. ನಂ. ೨೪೨ ‖ ವಂದೇ ಮಾತರಂ ‖ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಬುಧವಾರ ೩೦—೪—೪೭ [ಸಂಚಿಕೆ ೨೨೪

ಜವಾಬ್ದಾರಿ ಸರ್ಕಾರದ ಬಗ್ಗೆ ದಿವಾನರ ಹೇಳಿಕೆ

...ಸನ ಸಭೆಗಳಿಂದ ಚುನಾ...ಯಿತರಾದ ಮಂತ್ರಿಗಳು

ಜವಾಬ್ದಾರಿ ಸರ್ಕಾರದ ಬಗ್ಗೆ ದಿವಾನರ ಹೇಳಿಕೆ

...ಸು. ಫೋ.] ಬೆಂಗಳೂರು ೩೦ ...ಹಲಿಗೆ ತೆರಳುವುದಕ್ಕೆ ಮುಂಚೆ ದಿವಾ... ಒಂದು ಹೇಳಿಕೆಯನ್ನಿತ್ತು ಈ ರೀತಿ ...ಪ್ರಾಯವನ್ನು ಸೂಚಿಸಿದ್ದಾರೆ:—

...ಮನ್ನ ಮಹಾರಾಜರವರ ಸಂದೇಶವು ಹ... ದಿನಗಳಿಂದ ಮಹಾಜನರ ಮುಂದಿ...ತ್ತದೆ. ಅದರ ಬಗ್ಗೆ ಹೆಚ್ಚಿನ ವಿವರ...ವಾಗಲೀ, ವಿಸ್ತರಣೆಯಾಗಲೀ ಅಗತ್ಯ... ಅದಕ್ಕೆ ಅನುಗುಣವಾಗಿ ಸಲಹೆಗಳ...ಕೊಡುವುದು ನನ್ನ ಮುಖ್ಯ ಕರ್ತವ್ಯ...ಸ್ಥಾನದಲ್ಲಿ ಸಕಲ ಪ್ರಜೆಗಳಿಗೂ ಸಮಾ...ನದ ಅವಕಾಶವು ದೊರೆತು ಶಾಂತಿ, ಭ... ಸಂತೃಪ್ತಿ ಮತ್ತು ರಕ್ಷಣೆಗಳು ದೊರೆ...ವಂತೆ ಮಾಡುವುದೇ ನನ್ನ ಮುಖ್ಯ...ಶವಾಗಿರುತ್ತದೆ. ಸಂಸ್ಥಾನದಲ್ಲಿ ಯಾವ...ಪದ್ಧತಿಯ ಸರ್ಕಾರವು ಜಾರಿಗೆ ಬರಬೇಕೆಂ...ಪ್ರಶ್ನೆಯು ನನಗೆ ಹಾಕಲ್ಪಡುತ್ತಿದೆ. ವ...ಶದಲ್ಲಿರುವ ಮಂತ್ರಿಗಳು ಶಾಸನ ಸಭೆ...ಂದ ಆರಿಸಲ್ಪಟ್ಟವರಾಗಿರಬೇಕೆಂಬುದು...ಅಭಿಪ್ರಾಯವಾಗಿದೆ. ಸರ್ಕಾರದ ಮಂತ್ರಿ...ಶಾಸನ ಸಭೆಗಳಿಗೆ ಎಷ್ಟು ಮಟ್ಟಿಗೆ ...ಬ್ದಾರಿಯುಳ್ಳವರಾಗಿರಬೇಕೆಂಬುದು ...ಧ ರಾಜ್ಯಾಂಗಗಳನ್ನು ಅವಲಂಬಿಸಿರು...ದೆ. ರಾಜ್ಯಾಂಗ ಶಾಸನದಲ್ಲಿ ಚರ್ಚೆಗೆ...ಗೂ, ಪರಿಹಾರಗಳಿಗೂ ಅವಕಾಶಗಳು...ಕಲ್ಪಿಸಲ್ಪಡುತ್ತವೆ. ಸಂಸ್ಥಾನದ ಪ್ರಮುಖ ...ಪಕ್ಷಗಳ ಸಹಕಾರದಿಂದ ಈ ಮುಖ್ಯ ವಿ...ಷಯಗಳಲ್ಲಿ ವಿಶೇಷ ಒಮ್ಮತವುಳ್ಳ ನಿರ್ಧಾ...ಕ್ಕೆ ಬಂದು ಸೂಕ್ತವಾದ ಸಲಹೆಗಳನ್ನು ...ಡಲು ನಾನು ಬಯಸುತ್ತೇನೆ. ಶ್ರೀ ...ಮನ್ಮಹಾರಾಜರವರ ಪರಮಾಧಿಕಾರಕ್ಕೆ ಅ...ನುಗುಣವೂ ಪ್ರಜೆಗಳ ಅಭಿಪ್ರಾಯ ಮತ್ತು ...ಆಕಾಂಕ್ಷೆಗೆ ಅರ್ಹವೂ ಆದ ಒಂದು ಬಗೆ...ಯ ಜವಾಬ್ದಾರಿ ಸರ್ಕಾರದ ಯೋಜನೆಯ...ನ್ನು ನಾನು ಸಿದ್ಧಗೊಳಿಸಬಹುದೆಂದು ಆಶಿ...ಸುತ್ತೇನೆ.

ಓವರ್‌ಲೋಡಿಗೆ ಶಿಕ್ಷೆ

...ಸು.] ಚಾಮರಾಜನಗರ ೨೮ ...ಚಾಮರಾಜನಗರ - ಮೈಸೂರು ಬಳ್ಳಿಗೆ ...ಹೋಗುವ ಕಾರ್ವಾಯ್ ಬಸ್ಸಿನಲ್ಲಿ ಓವ...ರ್‌ಲೋಡ್ ಮಾಡಿದರೆಂಬ ಕಾರಣದ...ಕೆ ಬಸ್ಸಿನ ಲೈಸೆನ್ಸನ್ನು ಒಂದು ತಿಂಗ...ಳವರೆಗೂ, ಡ್ರೈವರ್ ಮತ್ತು ಕಂಡಕ್ಟ...ರ ಲೈಸೆನ್ಸುಗಳನ್ನು ತಲಾ ಮೂರು ...ಕಾಲವೂ ಸಸ್ಪೆಂಡ್ ಮಾಡಿರುವು...ದು ಗೊತ್ತಾಗಿದೆ.

...ಬಸ್ಸು ಮತ್ತು ಲಾರಿಗಳು ಸಾರ್ವಜನಿ...ಕ ದೃಷ್ಟಿಯಿಂದ ಅಂಗಡಿಬೀದಿಗಳಲ್ಲಿ ...ನಿಲ್ಲಿಸಕೂಡದೆಂದು ನಿರ್ಬಂಧವಿದ್ದರೂ ...ಅದು ತಪ್ಪದೆ ಜನಗಳಿಗೆ ತೊಂದರೆ...ಯಾಗುತ್ತಿದೆ.

ಬಾವಿಯಲ್ಲಿ ಬಿದ್ದು ಮರಣ

...ಸು.] ನಂಜನಗೂಡು ೨೯ ...ಕ್ಕೆಯ ಅಂಗಡಿ ಬೀದಿಯ ಮನೆಯೊಂ...ದರ ಬಾವಿಯ ಬಳಿ ಆಟವಾಡುತ್ತಿದ್ದ ಚಿಕ್ಕ ...ಮಕ್ಕಳು ಆಕಸ್ಮಾತ್ತಾಗಿ ಬಾವಿಗೆ ಬಿ...ದ್ದೆ. ಆ ಪೈಕಿ ೬ ವರ್ಷದ ಒಂದು ಮ...ಗುವನ್ನು ಬದುಕಿಸಲಾಯಿತು. ೪ ವರು...ಷದ ಮತ್ತೊಂದು ಮಗು ಮರಣಹೊಂ...ದಿತು.

ರೆಡ್ಡಿ — ದಿವಾನ್ ಭೇಟಿ

ಸರ್ಕಾರದ ಪ್ರಕಟನೆ

ಸ್ವಂ. ಸು. ಫೋ.] ಬೆಂಗಳೂರು ೩೦

ನಿನ್ನೆ ಸಂಜೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರು ದಿವಾನರೊಡನೆ ೭೦ ನಿಮಿಷಕಾಲ ಮಾತುಕತೆ ನಡೆಸಿದರು. ಇದರ ಬಗ್ಗೆ ಸರ್ಕಾರಿ ಪ್ರಕಟಣೆಯು ಈ ವಿವರಗಳನ್ನು ಕೊಟ್ಟಿರುತ್ತದೆ.

"ಕಾಂಗ್ರೆಸ್ ಅಧ್ಯಕ್ಷರು ಜವಾಬ್ದಾರಿ ಸರ್ಕಾರ ರಾಜ್ಯಾಂಗ ಸಭೆಯಲ್ಲಿ ಮೈಸೂರಿನ ಪ್ರತಿನಿಧಿಗಳು ಸೇರಬೇಕಾದ ವಿಚಾರ ಮತ್ತು ಸುಧಾರಣೆಗಳ ಸಲಹೆಗಳನ್ನು ಮಂಡಿಸುವುದರಲ್ಲಿ ದಿವಾನರು ಅನುಸರಿಸುವ ಕ್ರಮ ಈ ಮಧ್ಯೆ ತಾತ್ಕಾಲಿಕ ಮಂತ್ರಿಮಂಡಲವನ್ನು ವಿಸ್ತರಿಸುವುದು ಮುಂತಾದ ವಿಷಯಗಳನ್ನು ಎತ್ತಿದರು. ದಿವಾನರು ದೆಹಲಿಯಿಂದ ಹಿಂದಿರುಗಿದ ಮೇಲೆ ಕಾಂಗ್ರೆಸ್ ಮತ್ತು ಇತರ ಸಂಘಗಳ ಪ್ರತಿನಿಧಿಗಳೊಡನೆ ಮಾತುಕತೆಗಳು ಮುಂದುವರಿಸಲ್ಪಡುತ್ತವೆ."

ಈ ದಿನ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ಸಭೆ ಸೇರಿ ದಿವಾನರೊಡನೆ ಅಧ್ಯಕ್ಷರು ನಡೆಸಿದ ಭೇಟಿಯ ವಿಚಾರವನ್ನೂ ಸತ್ಯಾಗ್ರಹದ ವಿಚಾರವನ್ನೂ ಪರಿಶೀಲಿಸುತ್ತದೆ. ಈ ದಿನ ಸಂಜೆಯೊಳಗೆ ಸಮಿತಿಯ ನಿರ್ಧಾರವು ಹೊರಬೀಳಲಿದೆ.

ಕಸ್ತೂರ ಬಾ ಶಿಬಿರಕ್ಕೆ ಶ್ರೀಮತಿ ಪ್ರಭಾವತಿಯವರ ಭೇಟಿ

ಬೆಳಗಾಂ ೩೦

ಶ್ರೀ ಜಯಪ್ರಕಾಶ್ ನಾರಾಯಣ್, ಮತ್ತು ಅವರ ಪತ್ನಿ ಶ್ರೀಮತಿ ಪ್ರಭಾವತಿ ಮತ್ತು ಶ್ರೀಮತಿ ಕಮಲಾದೇವಿಯವರನ್ನು ಕಸ್ತೂರ ಬಾ ಶಿಬಿರದವರು ೨೬ ನೇ ತಾ॥ ಸಂದರ್ಶಿಸಿದರು. ಶಿಬಿರದ ಸೇವಕಿಯರು 'ಗಾರ್ಡ್ ಆಫ್ ಆನರ್' ಕೊಟ್ಟರು. ಶ್ರೀಮತಿ ಪ್ರಭಾವತಿಯವರು ಶಿಬಿರದ ವಸತಿಗೃಹಗಳನ್ನು ಪರಿಶೀಲಿಸಿದರು. ಶ್ರೀ ಹಿರೇಮಠ್ ಹಾಕಪ್ಪನವರು ಶಿಬಿರದ ಕಾರ್ಯಕಲಾಪಗಳನ್ನು ಅವರಿಗೆ ವಿವರಿಸಿದರು. ಕಸ್ತೂರ ಬಾ ರವರ ಆದರ್ಶ ಜೀವನವನ್ನು ಎಲ್ಲ ಸ್ತ್ರೀಯರೂ ಅನುಸರಿಸಬೇಕೆಂದು ಶ್ರೀಮತಿ ಪ್ರಭಾವತಿಯವರು ಸೂಚಿಸಿದರು. ಬಾಪೂಜಿಯವರ ಆಶೀರ್ವಾದ ಪಡೆದಿರುವ ಈ ಸಂಸ್ಥೆಯು ದೇಶದ ಕಲ್ಯಾಣಕ್ಕೆ ಸಹಕರಿಸುವ ಭಾಗ್ಯ ಲಭಿಸಲೆಂದು ಅವರು ಹಾರೈಸಿದರು.

ದಿವಾನರು ದೆಹಲಿಗೆ

ಸ್ವಂ. ಸು. ಫೋ.] ಬೆಂಗಳೂರು ೩೦

ನಿನ್ನೆ ರಾತ್ರಿ ದಿವಾನರು ತಮ್ಮ ಆಪ್ತ ಮತ್ತು ಸ್ವಂತ ಕಾರ್ಯದರ್ಶಿಗಳೊಡನೆ ದೆಹಲಿಗೆ ತೆರಳಿದರು. ೧೦ ನೇ ತಾ॥ ವಾಪಸು ಬರಲಿರುವರು. ಅದುವರೆವಿಗೆ ಡಾ॥ ರಾಘವೇಂದ್ರರಾಯರವರು ಅವರ ಕೆಲಸವನ್ನು ನೋಡಿಕೊಳ್ಳುವರು.

ವಿದೇಶಕ್ಕೆ ತೆರಳಲಿರುವ ಡಾ॥ ವೆಂಕಟಸುಬ್ಬರಾಯರ ಸ್ಥಾನದಲ್ಲಿ ಕುಮಟೂರಿನ ಡಾ॥ ಬಿ. ಸುಬ್ಬರಾಮಯ್ಯನವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ವರ್ಗಾಯಿಸಲಾಗಿದೆ.

ಮಂತ್ರಿಗಳಾದ ಶ್ರೀ ಅಪ್ಪಾಜಿಗೌಡರು ನಿನ್ನೆ ಕೋಲಾರ ಜಿಲ್ಲಾ ಪ್ರವಾಸದ ಮೇಲೆ ತೆರಳಿದರು. ೧ ನೇ ತಾ॥ ಅವರು ಶಿರುಪತಿಗೆ ಭೇಟಿ ಕೊಡುವರು.

ಭಾರತವನ್ನು ಆಕ್ರಮಿಸಲು ರಷ್ಯಕ್ಕೆ ಆಸೆಯಿಲ್ಲ

ಮಾಸ್ಕೋನಲ್ಲಿ ಬ್ರಿ॥ ವಿದೇಶಾಂಗ ಸಚಿವರಾದ ಮಿ॥ ಬೆವಿನ್‌ರವರನ್ನು ಭೇಟಿಮಾಡಿದಾಗ ಭಾರತ ಮತ್ತು ಈಜಿಪ್ಟ್‌ಗಳಲ್ಲಿ ತಮಗೆ ಯಾವ ಆಸಕ್ತಿಯೂ ಇಲ್ಲವೆಂದು ಸ್ಟಾಲಿನ್ನರು ಭರವಸೆ ಇತ್ತರೆಂದು ವರದಿಯಾಗಿದೆ.

ಮೇ ೨೨ ಕ್ಕೆ ಬ್ರಿಟಿಷ್ ಯೋಜನೆ ವಿವರಣೆ

ವೈಸರಾಯರ ಆಪ್ತ ಸಲಹೆಗಾರರಾದ ಲಾರ್ಡ್ ಇಸ್ಮೇರವರು ಇಲ್ಲಿನ ರಾಜಕೀಯ ಬೆಳವಣಿಗೆಗಳನ್ನು ವರದಿಮಾಡಲು ಲಂಡನ್ನಿಗೆ ತೆರಳಿ ಮೇ ೧೫ ಕ್ಕೆ ಭಾರತಕ್ಕೆ ಹಿಂತಿರುಗುವರು. ಆ ವೇಳೆಗೆ ವೈಸರಾಯರು ನಾಯಕರ ಸಂಯುಕ್ತ ಸಭೆಯೊಂದನ್ನು ಸೇರಿಸಿ ಅವರುಗಳ ಅಭಿಪ್ರಾಯವನ್ನು ತಿಳಿದುಕೊಳ್ಳುವರು. ಮೇ ೨೨ ರ ವೇಳೆಗೆ ಅಧಿಕಾರ ವರ್ಗಾಯಿಸುವ ಯೋಜನೆಯ ವಿವರವನ್ನು ವೈಸರಾಯರು ಹೊರಗೆಡಹುವರೆಂದು ದೆಹಲಿ ಆವರಣದಲ್ಲಿ ಹೇಳಲಾಗುತ್ತಿದೆ.

ಗಂಟೆಗೆ ೯ ಮೈಲಿ ಓಟ

ವಾಷಿಂಗ್ಟನ್ನಿನ ಶ್ರೀ ಪೋಮ್ಮ ಸಕ್ಕ ಎಂಬ ೪೦ ವರ್ಷ ವಯಸ್ಸಿನವರು ನೊನ್ನೆ ೭ ಗಂಟೆಯಲ್ಲಿ ೬೪ ಮೈಲಿಯನ್ನು ಓಡಿ ದಾಖಲೆ ಬಿರುದನ್ನು ಗೆದ್ದಿದ್ದಾರೆ. ಇವರು ವಾಷಿಂಗ್ಟನ್ನು ಬಿಟ್ಟು ೬ ಕ್ಕೆ ಬಿಟ್ಟು ೬೪ ಮೈಲಿ ದೂರದಲ್ಲಿರುವ ಬಾಲ್ಟಿಮೋರ್ ಪೋಸ್ಟ್ ಆಫೀಸನ್ನು ೮ ಗಂಟೆಗೆ ತಲುಪಿದರು.

ಕಲ್ಕತ್ತಾದಲ್ಲಿ ಗಾಂಧಿ-ಜಿನ್ನಾ ...ಂತಿ ಸಂದೇಶದ ಪ್ರಚಾರ

...ಶಾಂತಿ ಸಂದೇಶದ ೪೦ ಸಹಸ್ರ...

ಕೃಷ್ಣರಾಜನಗರ ...

...ಶರವಾಗಿ ಸ್ಪರ್ಧಿಸಿದ್ದ ಶ್ರೀಗಳಾದ ಅಕ್ಕಮಾದಪ್ಪ ಮತ್ತು ಎಂ. ಎಸ್. ಕೋಟೇಗೌಡರು ಜಿಲ್ಲಾಬೋರ್ಡಿಗೆ ಚುನಾಯಿತರಾಗಿದ್ದಾರೆ.

ಪಿರಿಯಾಪಟ್ಟಣದಿಂದ ಶ್ರೀ ಹೆಚ್. ಎಂ. ಚನ್ನಬಸಪ್ಪ (ಕಾಂ) ಮತ್ತು ಶ್ರೀ ವೆಂಕಟಸುಬ್ಬಯ್ಯ (ಸ್ವ) ನವರು ಚುನಾಯಿತರಾದರು.

ಟಿ. ನರಸೀಪುರದಿಂದ ಶ್ರೀಗಳಾದ ಟಿ. ಪಿ. ಬೋರಯ್ಯ (ಕಾಂ) ಶಿವಾನಂದಸ್ವಾಮಿ (ಕಾಂ) ಮತ್ತು ಸಿ॥ ಸಿದ್ದೇಗೌಡ (ಸ್ವ) ಇವರುಗಳು ಆರಿಸಲ್ಪಟ್ಟಿದ್ದಾರೆ.

ಮಂಡ್ಯ ಜಿಲ್ಲಾಬೋರ್ಡಿಗೆ ಮಳವಳ್ಳಿಯಿಂದ ಶ್ರೀಗಳಾದ ವೀರೇಗೌಡ (ಕಾಂ) ಮತ್ತು ನಾಗರಾಜಮೂರ್ತಿ (ಸ್ವ) ಇವರುಗಳು ಚುನಾಯಿತರಾದರು.

ನಾಗಮಂಗಲದಿಂದ ಶ್ರೀಗಳಾದ ಲಕ್ಷನೇಗೌಡ (ಕಾಂ) ಮತ್ತು ಶಂಕರಲಿಂಗೇಗೌಡರು (ಸ್ವ) ಆರಿಸಲ್ಪಟ್ಟಿದ್ದಾರೆ.

ಚಾಮರಾಜನಗರದಿಂದ ಶ್ರೀಗಳಾದ ಎಸ್. ಪುಟ್ಟನಂಜಪ್ಪ (ಕಾಂ) ಗುರುಮಲ್ಲಪ್ಪ ಮತ್ತು ಕೆ. ಎಂ. ಪುಟ್ಟಣ್ಣ (ಸ್ವ) ನವರುಗಳು ಚುನಾಯಿತರಾದರು.

ಶಂಕರ ಜಯಂತೀ ಮಹೋತ್ಸವ ಸಭೆ

ಇದೇ ಮೇ ೫ ನೇ ಸೋಮವಾರ ಸಂಜೆ ೬ ಘಂಟೆಗೆ ವೇಲ್ಲಂಡ ಸಭೆಯು ಸರ್ವಸದಸ್ಯರ ವಾರ್ಷಿಕ ಸಭೆಯು ಸಂಸ್ಕೃತ ಪಾಠಶಾಲೆಯಲ್ಲಿ ನಡೆಯುವುದು. ರಾಜಸೇವಾಸಕ್ತ ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ರವರು ಅಧ್ಯಕ್ಷತೆಯನ್ನು ವಹಿಸುವರು. ಸದಸ್ಯರೆಲ್ಲಾ ತಪ್ಪದೆ ದಯಮಾಡಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ಆ ರಾ ಧ ನೆ

ಮೇ ೫ ನೇ ತಾ॥ ಮಂಗಳವಾರ ಪಲ್ಲಿಕೊಪ್ಪಲ್ಲು ವೀಣೆ ಶಾಮಣ್ಣನವರ ಬೀದಿಯ ಶ್ರೀರಾಮ ಮಂದಿರದಲ್ಲಿ ಶ್ರೀ ಸತ್ಯನಾರಾಯಣ ಮತ್ತು ಶ್ರೀ ರಾಘವೇಂದ್ರಸ್ವಾಮಿಗಳ ಆರಾಧನೆಯನ್ನು ನಡೆಸಲಾಗುವುದು. ಮೇ ೧೪ ನೇ ತಾ॥ ಸತ್ಯನಾರಾಯಣ ವ್ರತವು ಜರುಗುವುದು. ಮಹಾಜನರು ಉದಾರವಾಗಿ ಸಹಾಯ ನೀಡಬೇಕೆಂದು ಕಾರ್ಯದರ್ಶಿಗಳಾದ ಶ್ರೀ ಟಿ. ಕೆ. ಸುಬ್ಬಾಚಾರ್ಯರು ಪ್ರಾರ್ಥಿಸಿದ್ದಾರೆ.

ಗುರುಗಳ ಪಟ್ಟಾಭಿಷೇಕ

ಸ್ವಂ. ಸು.] ಚಿಕ್ಕಮಗಳೂರು ೨೮

ಮೇ ೭ ನೇ ತಾ॥ ಬುಧವಾರ ಶ್ರೀ ಉಜ್ಜಯನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಸಿದ್ದೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಶ್ರೀ ಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಇಲ್ಲಿನ ಬಾಳೆಹೊನ್ನೂರು ಶ್ರೀ ರಂಭಾಪುರಿ ಪೀಠಸಿಂಹಾಸನದ ಜಗದ್ಗುರು ಶ್ರೀ ಗಂಗಾಧರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಹೋತ್ಸವವನ್ನು ನೆರವೇರಿಸುವರು.

ದೆಹಲಿಗೆ ಗಾಂಧೀಜಿ

ಪಂ॥ ನೆಹರು ಮತ್ತು ಆಚಾರ್ಯ ಕೃಪಲಾನಿಯವರ ಕೋರಿಕೆಯಂತೆ ಮಹಾತ್ಮ ಗಾಂಧಿಯವರು ಈ ದಿನ ದೆಹಲಿಗೆ ಪಾಟ್ನಾದಿಂದ ತೆರಳಿ...

ಸಾಧ್ವಿ

ತಾ|| ೩೦-೪-೪೭ ನೇ ... ಬುಧವಾರ

ಕೈ ಮಗ್ಗದವರ ಕೊರತೆ

ಮೈಸೂರು ಪುರಸಭಾ ಸದಸ್ಯರೂ ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲಾ ನೂಲು ವರ್ತಕರ ಸಂಘದ ಪ್ರಧಾನ ಕಾರ್ಯದರ್ಶಿಗಳೂ ಆದ ಶ್ರೀ ಇ ಪಿ ನಂಜಪ್ಪನವರು ಈ ರೀತಿ ಹೇಳಿಕೆಯೊಂದನ್ನಿತ್ತಿದ್ದಾರೆ:—

ಕೈ ಮಗ್ಗದಲ್ಲಿ ತಯಾರಾದ ಬಟ್ಟೆಗಳಿಗೆ ಧಾರಣೆ ನಿಗದಿ ಮಾಡತಕ್ಕ ಬಗ್ಗೆ ಸರ್ಕಾರದಿಂದ ಜಾರಿಯಾಗಿರುವ ಆಜ್ಞೆಯು ಮಗ್ಗದವರಿಗೆ ಇಲ್ಲದ ತೊಡಕುಗಳ ಉಂಟುಮಾಡುತ್ತಲಿದೆ, ಭಾರತದ ಪ್ರಾಚೀನ ಕೈಗಾರಿಕೆಯಾದ ಈ ಉದ್ಯೋಗವು ನಶಿಸಿಹೋಗುವಂತಿದೆ. ನೇಕಾರನಿಗೆ ತಿಂಗಳು ಒಂದಕ್ಕೆ ಕೊಡುವ ಇಪ್ಪತ್ತು ರಾತಲು ನೂಲು, ಕೇವಲ ಹತ್ತು ದಿನದ ಜೀವನಕ್ಕೂ ಸಾಲದಿರುವಾಗ, ನೇಕಾರನು ತಯಾರಿಸಿದ ಬಟ್ಟೆಗೆ ಧಾರಣೆ ನಿಗದಿ ಮಾಡಿಸಲು ಪೂರ್ವಭಾವಿಯಾಗಿ ಸರಕು ಒಂದಕ್ಕೆ ಆರು ಕಾಸಿನಂತೆ ಸರ್ಕಾರದ ಖಜಾನೆಗೆ ಜಮಾ ಮಾಡುವ ಅಧ್ಯಾಯದಲ್ಲಿ ನೇಕಾರರಲ್ಲಿ ಕೇವಲ ೯೫ ಮಂದಿ ಅಕ್ಷರಸ್ಥರು ಇರುವ ಈ ಸಮುದಾಯದಲ್ಲಿ ಚಲನ್ ಬರೆಸುವುದಕ್ಕೆ ಮಾಡುವ ಆಶ್ರಯ ಮತ್ತು ೩-೪ ಗಂಟೆಗಳ ಕಾಲ ನಿಂತು ಕಾಸುಗಳನ್ನು ಸರ್ಕಾರದ ಬೊಕ್ಕಸಕ್ಕೆ ತುಂಬುವ ಕಾರ್ಯದಲ್ಲಿ ಒಂದು ದಿನವೇ ಕಳೆದು ಹೋಗುತ್ತದೆ.

ಧಾರಣೆ ನಿಗದಿ ಮಾಡುವ ಇನ್ಸ್‌ಪೆಕ್ಟರ್ ಆಫೀಸಿಗೆ ರಶೀತಿ ಸಮೇತ ತಯಾರಿಸಿದ ಬಟ್ಟೆಗಳನ್ನು ಕೊಟ್ಟರೆ, ಅವರು ಆರ್ಡರಿನ ೧೮ ನೇ ಕಲಮಿನಂತೆ ೧೦ ದಿನಗಳು ಅವರ ಬಳಿ ಇರಬೇಕೆಂದು ಹೇಳುತ್ತಾರೆ. ಆ ದಿನ ತಯಾರಿಸಿದ ಬಟ್ಟೆಗಳನ್ನು ಆ ಸಂಜೆಗೆ ಮಾರಿ, ಹೊಟ್ಟೆ ಹೊರೆಯುವ ನೇಕಾರನ ಪರಿಸ್ಥಿತಿ ಹತ್ತೆರಡು ದಿನ ಸಂಸಾರ ಸಮೇತ ಉಪವಾಸವಿರುವ ಕಾಲ ಬಂದಿದೆ.

ಮೈಸೂರು ಜಿಲ್ಲೆಯಲ್ಲಿ ೨೫೦೦ ಕೈ ಮಗ್ಗಗಳಿವೆ. ಪ್ರತಿ ಮಗ್ಗದಲ್ಲಿಯೂ, ಸರ್ಕಾರದವರು ಕೊಡುವ ಈ ಅಲ್ಪ ಪ್ರಮಾಣದ ನೂಲಿನಿಂದ ಸರಾಸರಿ ಹತ್ತು ಸೀರೆ ತಯಾರಿಸಿದರೂ ೨೫ ಸಾವಿರ ಸೀರೆಗಳಾಗುತ್ತವೆ. ಇಷ್ಟು ಸೀರೆಗಳಿಗೆ ಧಾರಣೆ ನಿಗದಿ ಮಾಡತಕ್ಕ ಬಗ್ಗೆ ಇಬ್ಬರು ಅಸಿಸ್ಟೆಂಟ್ ಇನ್ಸ್‌ಪೆಕ್ಟರನ್ನು ಮೈಸೂರು, ಮಂಡ್ಯ ಮತ್ತು ಹಾಸನ, ಈ ಮೂರು ಜಿಲ್ಲೆಗಳಿಗೆ ಸೇರಿದಂತೆ ಇಬ್ಬರು ಇನ್ಸ್‌ಪೆಕ್ಟರನ್ನು ನೇಮಿಸಿ ಕಾನೂನು ಪಾಲಿಸುತ್ತಿರುವ ಕಾರ್ಯಕ್ರಮದಿಂದ ಬಡ ನೇಕಾರನು ಜೀವಿಸುವುದೆಂತೋ ದೇವರಿಗೇ ಗೊತ್ತು. ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರಿನಲ್ಲಿ ೧೫೦ ಜನ ನೇಕಾರರಿದ್ದಾರೆ. ಸರ್ಕಾರದ ಖಜಾನೆಗೆ ಸೀರೆಗೆ ಆರು ಪೈನಂತೆ ಸುಮಾರು ೧೫೦೦ ಸೀರೆಗಳಿಗೆ ರುಸುಂ ಕೊಟ್ಟು, ಹದಿನೈದು ದಿನಗಳಾಗಿವೆ. ಈ ಇಲಾಖೆಗೆ ಸೇರಿದ ಸರ್ಕಾರದ ಎಲ್ಲ ಅಧಿಕಾರಿಗಳನ್ನೂ ಭೇಟಿ ಮಾಡಿ ಬಂದರೂ, ಈ ವರೆವಿಗೆ ಮುದ್ರೆ ಬಿದ್ದಿಲ್ಲ. ನೇಕಾರರು ತಯಾರಿಸಿದ ಬಟ್ಟೆ ಮಾರಿ ಜೀವನಕ್ಕೆ ಬೇಕಾದ ಸಾಮಗ್ರಿ ಕೊಳ್ಳಬೇಕು. ಅನೇಕ ನೇಕಾರರು ೨-೩ ದಿನಗಳಿಂದ ಉಪವಾಸವಿದ್ದಾರೆ. ಅಧಿಕಾರಿಗಳ ಹೃದಯ ಕರಗುವುದೇ? ಸಾಕಾದಷ್ಟು ಸಿಬ್ಬಂದಿಯನ್ನು ನೇಮಿಸಿ ಕಾರ್ಯಕ್ರಮ ಕೈಗೊಳ್ಳುವ ವರೆಗೆ ಈ ಆಜ್ಞೆಯನ್ನು ಸರ್ಕಾರದವರು ಹಿಂಬದಿಗಿಡಬೇಕಾಗಿ ಕೋರುತ್ತೇನೆ.

Edited, printed and published by A. K. Nagaraiao at the Sadhvi Press D. Subbiah Road, Mysore

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾಡಬಹುದಾದ
ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ
—: ನಮ್ಮಲ್ಲಿ ವಿಚಾರಿಸಿ. :—
ಕೆ ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.
ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,
ಅಶೋಕಾ ರಸ್ತೆ, ಮೈಸೂರು.
ಸ್ಥಾಪಿತ ೧೯೩೭ :: ಫೋನ್. ೪೧೧

ಶಂಕುಸ್ಥಾಪನೋತ್ಸವ

ರಾಜಧಾನಿಯ ಲಷ್ಕರ್ ಮೊಹಲ್ಲಾದಲ್ಲಿನ ಶ್ರೀ ಪಾಂಡುರಂಗಸ್ವಾಮಿಯವರ ದೇವಸ್ಥಾನಕ್ಕೆ ನಗರಾಭಿವೃದ್ಧಿ ಸಮಿತಿಯವರು ಕೊಟ್ಟಿರುವ ನಿವೇಶನದಲ್ಲಿ ಅಶೋಕಾ ರಸ್ತೆಯಲ್ಲಿರುವ ಜವಳಿ ಅಂಗಡಿ ಶ್ರೀ|| ಲಾಲೆ ವೆಂಕಟರಾಯರು ತಮ್ಮ ತಂದೆ ಶ್ರೀ ಲಾಲೆ ಗುಂಡೋಜಿರಾವ್ ಮತ್ತು ತಾಯಿ ಮನ್ನಾಬಾಯಿಯವರ ಹೆಸರಿನಲ್ಲಿ ಕಟ್ಟಲಿರುವ ಧರ್ಮಛತ್ರಾಲಯದ ಶಂಕುಸ್ಥಾಪನೆಯನ್ನು ಶ್ರೀ ರಾಮಚಂದ್ರರಾವ್ ಬಾಂಛೋಳೆಯವರು ನಾಳೆ ಬೆಳಗ್ಗೆ ನೆರವೇರಿಸುವರು.

ಚಿತ್ರದುರ್ಗದ ಶ್ರೀ ದೊಡ್ಡೇರಿ ಸುಬ್ಬರಾಯರ ತಮ್ಮ ಸ್ಯಾನಿಟರಿ ಇನ್ಸ್‌ಪೆಕ್ಟರ್ ಶ್ರೀ ಡಿ ಅಶ್ವತ್ಥನಾರಾಯಣರಾಯರ ಮಗಳು ಶ್ರೀ ಗೌರಮ್ಮನನ್ನು ರಿ|| ಡಿ|| ಫಾ|| ಆಫೀಸರು ಶ್ರೀ ಎಂ. ವಿ ನರಸಿಂಹಯ್ಯನವರ ಅಣ್ಣ ಶ್ರೀ ಸುಬ್ಬರಾಯರ ಮಗ ಡಾ|| ಎಂ. ಎಸ್. ವಿಶ್ವೇಶ್ವರಯ್ಯನವರಿಗೆ ಕೊಟ್ಟು ವಿವಾಹವು ಮೈಸೂರಿನಲ್ಲಿ ಮೊನ್ನೆ ನೆರವೇರಿತು.

ಪ್ರತ್ಯೇಕ ಶಿಕ್ಷಣ ತರಗತಿಗಳು

ಕೃಷ್ಣಮೂರ್ತಿಪುರದಲ್ಲಿ ಪ್ರತ್ಯೇಕ ಶಿಕ್ಷಣ ತರಗತಿಗಳನ್ನು ಮೇ ೨ ನೇ ತಾರೀಖಿನಿಂದ ಆರಂಭಿಸಲು ಏರ್ಪಾಡುಗಳಾಗುತ್ತಿವೆ, ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳಿಗೂ ಗ್ರಾಮಪುನರ್ರಚನಾ ಕೆಲಸಗಾರರಿಗೂ ಮಹಿಳಾ ಕಾರ್ಯಕರ್ತರಿಗೂ ಶಿಕ್ಷಣದ ಶುಲ್ಕವನ್ನು ಮನ್ನಾ ಮಾಡಲಾಗಿದೆಯೆಂದು ಸದರಿ ಶಿಕ್ಷಣದ ಡೈ|| ಡೈರೆಕ್ಟರಾದ ಶ್ರೀ ಎಚ್. ರಾಮೇಶ್ವರ ತಿವಾರಿಯವರು ತಿಳಿಸಿರುತ್ತಾರೆ.

ಕೂಡಲೆ ಕ್ರಯಕ್ಕಿವೆ

೧) ನಂ ೫೯೯, ಕಾಲೇಜ್ ರಸ್ತೆ, ಮಹಡಿ ಮನೆ
೨) ನಂ. ೪೮೬, ಡಿ ಸುಬ್ಬಯ್ಯ ರಸ್ತೆ, ಮಹಡಿ ಮನೆ.
ವಿವರಗಳಿಗೆ:-ಆರ್. ಗುಂಡೂರಾವ್,
ಮೈಸೂರು ಬ್ಯಾಂಕ್ ಕಟ್ಟಡ,
ಮೈಸೂರು

ಚರ್ಚಿಲರು ಪುನಃ ಬರುವರೇ ?

ಜರ್ಮನಿಯು ಪೋಲೆಂಡಿನ ಮೇ... ನಡೆಸಿದ ಮುತ್ತಿಗೆಯ ದಿವಸ ... ಪ್ರಸಿದ್ಧ ಲಿಯೊನಾರ್ಡ್ ಬ್ಲೇರ್ ಎಂ... ಸಿದ್ಧ ಜ್ಯೋತಿಷ್ಯನು ಈಗ ಮತ್ತೊ... ಭವಿಷ್ಯ ನುಡಿದಿದ್ದಾನೆ. ಜರ್ಮನಿ... ಗ್ಯ ರಷ್ಯವು ಅನುಸರಿಸುತ್ತಿರುವ ನೀತಿ... ದ ಯುದ್ಧವು ಅನಿವಾರ್ಯವೋ ಅಲ್ಲ... ಎಂಬುದು ಈ ಬೇಸಿಗೆಯೊಳಗೆ ತಿಳಿ... ದು ಗ್ರಹಗತಿಗಳ ಸನ್ನಿವೇಶಗಳಿಂದ ... ಟಿಷ್ ರಾಜಕಾರಣದಲ್ಲಿ ಮುರಂತ... ಗಳು ಸಂಭವಿಸುವುವು. ಮಿ|| ಚ... ರಾಗಲೀ, ಅವರ ಪಕ್ಷದ ನೀತಿಯಾ... ಪ್ರಾಮುಖ್ಯತೆಗೆ ಬರುವುದು ಎಂಬು... ಆತನು ಪತ್ರಿಕೆಯೊಂದಕ್ಕೆ ಕೊಟ್ಟ ಹ... ಯಲ್ಲಿ ತಿಳಿಸಿರುವನು. ತನ್ನ ಈ ಜ... ಯನ್ನು ಸಮರ್ಥಿಸಲು ತಾನು ಹಿಂದೆ ... ಳಿದಂತೆ ನಾಜಿಗಳ ಅಧಿಕಾರಾಕ್ರಮ... ಟ್ಲರ್, ಮುಸ್ಸೋಲಿನಿಯವರ ಪತ... ಹಿಟ್ಲರನ ದೇಹದ ಮಾಯ ಮುಂ... ಘಟನೆಗಳು ನಡೆದದನ್ನು ಸೂಚಿಸಿರು...

ಮನೆ ಬಾಡಿಗೆಗೆ ಇದೆ

ರಾಮಾನುಜ ರಸ್ತೆಯಲ್ಲಿರುವ ...
ನಂ ಮುನಿಸಿಪಲ್ ಮಾದರಿ ಮನೆ ...
ಗಿನ ವಿಳಾಸದಲ್ಲಿ ವಿಚಾರಿಸಿ.
X
C/o ಸಾಧ್ವಿ ಆಫೀಸು, ಮೈಸೂ...

FOR SALE

One G. E. C mak...
'REFRIGERATOR
in good working cond...
Price Rs. 1600.
or near offer
Apply to :-
The Proprietor
University Restaura...
MYSORE.

ಕಂಟ್ರೋಲು ಬೆಲೆ! ಮನ...

ಹೊಸ ಜವಳಿ

ನಮ್ಮಲ್ಲಿ ಈಗ ತಾನೇ ಹೊಸದಾಗಿ ಬಂದಿರುವ ಬನಾರಸ್, ಕಂಚಿ, ಆರ್ನಿ, ಕಾಂ...
ಹುಬ್ಬಳ್ಳಿ ಸೀರೆಗಳೂ, ಕಂಚಿ ಸೀರೆಗಳೂ, ನೂಲಿನ ಪೂನಾ ರುಮಾಲು
ಸೀರೆಗಳೂ, ಕಾಶ್ಮೀರ್ ಶಾಲುಗಳೂ, ದೊರೆಯುತ್ತವೆ.
M. P. V., M. V ಭೋಜಯ್ಯ B. A ಅಂಡ್ ಬ್ರದರ್ಸ್
ಬೊಂಬಾಯಿ ಆನಂದ ಭವನ ಹೋಟೆಲ್ ಮೈರ್ ಬಲಭಾಗದ ಕೊನೆ
ಜವಳಿ ಅಂಗಡಿ, ಮೈಸೂರು.

MYSORE CITY MUNICIPALITY

(Works Department)

NOTICE

Sealed tenders will be received at the Office of the Municipal Engineer up to 4 P. M. on 5—6—47 for improvements to the Nanjaraja Bahdoor Chatram Building, Mysore

The work is estimated to cost Rs. 8270. Each tender should be accompanied by a chellan for having remitted Rs. 410 to the Municipal Treasury as earnest money The Plans and Estimates may be seen at the Office of the Municipal Engineer during working hours. For further particulars please see the detail notification on the Office notice board

K. G. KATWEY,
Municipal Engineer

ರಾಜಕಮಲ್, ಮೈಸೂರು

ತಾ|| ೨೫-೪-೪೭ರಿಂದ ಅಮೋಘ ಪ್ರಾರಂಭ
ಮೊದಲನೇ ಆಟ ಮಧ್ಯಾಹ್ನ 3-30; ೨ ನೇ ಆಟ 6-30; ೩ ನೇ ಆಟ 9-

'ಗೊಲ್ಲಭಾಮ'

(ತೆಲುಗು)

ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ ಪಾತ್ರವಹಿಸಿರುವ
ಮಾನವನ ಹೃದಯದ ಜ್ವಾಲಾಮುಖಿಯಲ್ಲಿ ದೇವತೆಗಳಿ...
ಸಿಗದ ಶಾಂತಿ ಮಾನವನಿಗೆ ಹೇಗೆ ದೊರಕಿತೆಂಬುದನ್ನು
ನಿರೂಪಿಸುವ ಅಮೋಘ ಚಿತ್ರಕಥಾವಳಿ

ಫೋ. ನಂ. ೨೨೪   ॥ ವಂದೇ ಮಾತರಂ ॥   ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫]   ಗುರುವಾರ ೧—೫—೪೭   [ಸಂಚಿಕೆ ೨೭೯

— ಹೈದರಾಬಾದಿಗೆ — ವಿಶ್ವ ಸಂಸ್ಥೆಯಲ್ಲಿ ಸ್ಥಾನ ?

...ಗ್ರಹದ ಬಗ್ಗೆ ಕಾಂಗ್ರೆಸ್ ಪ್ರಕಟಣೆ

...ಸಿ. ಸಿ ಸೇರಿಸಲು ನಿರ್ಧಾರ

...ಪೋರ್] ಬೆಂಗಳೂರು ೧
...ಸೂರು ಕಾಂಗ್ರೆಸ್ ಕಾರ್ಯಕಾರಿ ಸ...ಯು ನಿನ್ನೆ ಮತ್ತು ಮೊನ್ನೆ ಸೇರಿ ದಿ...ನೊಡನೆ ಕಾಂಗ್ರೆಸ್ ಅಧ್ಯಕ್ಷರೂ ಕಾರ್ಯ...ಗಳೂ ನಡೆಸಿದ ಭೇಟಿಯ ಅಂಶಗಳ...ಶಾಸನ ಸಭೆಯಿಂದ ಮಂತ್ರಿಗಳನ್ನು ...ವ ಪ್ರಜೆಗಳ ಸಮ್ಮತಿಗೆ ಬ...ವಾದ ಒಂದು ಬಗೆಯ ಜವಾಬ್ದಾರಿ ಸ...ಪದ್ಧತಿಯನ್ನು ಜಾರಿಗೆ ತರುವ ಬಗ್ಗೆ ...ನರು ಮೊನ್ನೆ ಹೊರಡಿಸಿರುವ ಹೇಳಿಕೆ...ನ್ನು ದೀರ್ಘವಾಗಿ ಪರಿಶೀಲಿಸಿ ಒಂದು ...ಯವನ್ನು ಮಾಡಿದೆ. ದಿವಾನರು ...ಹೇಳಿಕೆಯಲ್ಲಿನ ಹಲವಂಶಗಳನ್ನು ...ಸಬೇಕೆಂದು ಕಾಂಗ್ರೆಸ್ಸು ಕೇಳಿದೆ. ...ಸ್ಯಾಂಗ ಸಮಿತಿ ರಚನೆ, ತಾತ್ಕಾಲಿಕ ಸ...ದ ಸ್ಥಾಪನೆ ಮತ್ತು ಭಾರತ ರಾಜ್ಯಾಂಗ ...ಗೆ ಮೈಸೂರಿನಿಂದ ಪ್ರತಿನಿಧಿಗಳನ್ನು ...ಸುವ ವಿಚಾರದಲ್ಲಿ ಮಾತುಕತೆಗಳು ...ನ್ನು ಪೂರ್ಣವಾಗಿಲ್ಲವೆಂದೂ, ದಿವಾನರು ...ನಿಂದ ಹಿಂತಿರುಗಿದ ಮೇಲೆ ಅವು ...ಪ್ರಾರಂಭವಾಗುವುದಾಗಿಯೂ ಹೇಳ...ದೆ. ಮಾತುಕತೆಗಳು ಮುಗಿದ ಕೂ...ಡಲೆ ಮೈಸೂರು ಕಾಂಗ್ರೆಸ್ ಸಮಿ...ನ್ನು ಸೇರಿಸಿ ಅದರ ಮುಂದೆ ಮಂಡಿ...ಕಾರ್ಯಕಾರಿ ಸಮಿತಿಯು ನಿರ್ಧರಿ...

...ಮಂಡಿನ ಕಲೆಕ್ಟರ ಅಧಿಕಾರವನ್ನು ಶ್ರೀ ...ಲಿಂಗಸ್ವಾಮಿಯವರು ಈ ದಿನ ವಹಿಸಿ...ದರು.

ಮೈಸೂರು ದೇಶದಲ್ಲಿ ತಯಾರಾಗುವ ...ಚಲನ ಚಿತ್ರಗಳ ಕೊನೆಯಲ್ಲಿ ಮೈ...ರು ರಾಷ್ಟ್ರಗೀತೆಯನ್ನು ಸೇರಿಸಬೇಕೆಂ...“ಸಿನಿಮಟೋಗ್ರಾಫ್” ಕಾನೂನಿನ ...ನ ಆಜ್ಞೆ ಹೊರಡಿಸಲಾಗಿದೆ

ಮೈಸೂರು ಮೋಟಾರ್ ವಾಹನಗಳು ...ರಸ್ತೆ ಸಂಚಾರದ ಜರೂರು ಶಾಸನ ...೨೮ ನೇ ತಾ॥ ನಿಂದ ಮತ್ತೆ ೬ ತಿಂ...ಕಾಲ ಬಡಾಯಿಸಲಾಗಿದೆ

ಸ್ವತಂತ್ರ್ಯದ ದಿನ ಬಾರಿಸುವ ಘಂಟೆ

ಭಾರತವು ಸ್ವತಂತ್ರವಾಯಿತೆಂಬ ದನ್ನು ...ನೇ ಸು ವ ದಿನ ಬಾರಿಸುವುದಕ್ಕಾಗಿ ...ದ ಘಂಟೆಯೊಂದನ್ನು ರಚಿಸ...ಬಂಗಾಳಾ ಶಾಸನಸಭೆಯ ರಾಷ್ಟ್ರೀಯ ...ನ ಯಕರಾದ ಶ್ರೀ ... ಮ...ರು ೧೦ ಸಹಸ್ರ ರೂಗಳನ್ನು ಕೊ...ವುದಾಗಿ ತಿಳಿಸಿದ್ದಾರೆ. ಅ ಮೇ ರಿ ಕಾ ...ಯುಕ್ತ ಸಂಸ್ಥಾನದ ಸ್ವಾತಂತ್ರ್ಯವನ್ನು ...ಸಿದ ಘಂಟೆಯನ್ನು ಜ್ಞಾಪಿಸಿಕೊಂ...ಇಲ್ಲಿಯೂ ಅದೇ ರೀತಿ ಮಾಡಬೇಕೆಂದು ...ರು ಸೂಚಿಸಿದ್ದಾರೆ. ಪ್ರತಿವರ್ಷವೂ ...ಸ್ವಾತಂತ್ರ್ಯದಿನಾಚರಣೆಯ ದಿನ ಈ ಘಂಟೆ...ನ್ನು ಬಾರಿಸಬೇಕೆಂದು ಅವರು ಅಭಿಪ್ರಾ...ಪಟ್ಟಿದ್ದಾರೆ.

ಕೆಳ ದರ್ಜೆ ನೌಕರರಿಗೆ ರಿಯಾಯಿತಿ

...ಮದ್ರಾಸ್ ಸರ್ಕಾರದವರು ಒಂದು ಆ...ಯನ್ನು ಹೊರಡಿಸಿ ಕೆಳದರ್ಜೆ ನೌಕರ...ರನ್ನು ಮೇಲೆ ಸಂಬಳದೊಂದಿಗೆ ವರ್ಷ...ದ... ದಿನಗಳ ರಜವನ್ನು ಕೊಡುವ ...ಯಿತಿಯನ್ನು ತೋರಿಸಿದ್ದಾರೆ. ಈಗ ...ವರೆಗೆ ರಜಾಕಾಲದಲ್ಲಿ ಅರ್ಧಸಂಬಳ ...ಮಾತ್ರ ಬರುತ್ತಿತ್ತು.

ಸತ್ಯಾಗ್ರಹ ಮುಂದಕ್ಕೆ ಹೋಯಿತು

ಸ್ವಂ ಸು.] ಬೆಂಗಳೂರು ೧
ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಸಿ. ರೆಡ್ಡಿಯವರು ದಿವಾನರೊಡನೆ ನಡೆಸಿದ ಭೇಟಿ, ಮತ್ತು ಅನಂತರ ದಿವಾನರು ಹೊರಡಿಸಿರುವ ಪ್ರಕಟಣೆ ಇವುಗಳನ್ನು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿನ್ನೆ ವಿಶದವಾಗಿ ಪರಿಶೀಲಿಸಿತು. ಸತ್ಯಾಗ್ರಹದ ಪ್ರಶ್ನೆಯನ್ನೂ ಚರ್ಚಿಸಿತು. ದಿವಾನರ ಹೇಳಿಕೆಯಿಂದ ಉಂಟಾಗಿರುವ ಹೊಸ ಪರಿಸ್ಥಿತಿಯ ದೆಸೆಯಿಂದ ಸತ್ಯಾಗ್ರಹವನ್ನು ಮುಂದ ವರಿಸಿರುವುದಾಗಿ ಕಾಂಗ್ರೆಸ್ ಕಾರ್ಯದರ್ಶಿಗಳು ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಲೀಗ್ ನಾಯಕರಿಗೆ ಪೆರೋಲ್ ಸೌಕರ್ಯ

ಗಡಿನಾಡಿನ ಲೀಗ್ ಚಳುವಳಿಯಲ್ಲಿ ಬಂಧಿತರಾಗಿರುವ ನಾಯಕರನ್ನೆಲ್ಲಾ ಸಮಾಲೋಚನೆಗಾಗಿ ಒಂದೇ ಜೈಲಿನಲ್ಲಿಡಲೂ, ಅವರ ನಿಯೋಗವೊಂದು ಮಿ॥ ಜಿನ್ನರವರನ್ನು ಭೇಟಿಮಾಡಲೂ ಅನುಕೂಲವಾಗುವಂತೆ ಕೆಲವರನ್ನು ಪೆರೋಲ್ ಮೇಲೆ ಬಿಡಲೂ ಪೈಸರಾಯ್ ಲಾರ್ಡ್ ಮೌಂಟ್ ಬ್ಯಾಟನ್ನರು ಒಪ್ಪಿದ್ದಾರೆಂದು ತಿಳಿದುಬಂದಿದೆ

ವಿಕ್ರಮಶಿಲಾ ವಿಶ್ವವಿದ್ಯಾಲಯ

ನಳಂದ ಮತ್ತು ತಕ್ಷಶಿಲಾ ವಿಶ್ವವಿದ್ಯಾಲಯಗಳಿಗಿಂತಲೂ ಪ್ರಾಚೀನವೂ, ೨ ಸಹಸ್ರ ವರ್ಷಗಳ ಹಿಂದಿನದೂ ಆದ ವಿಕ್ರಮಶಿಲಾ ವಿಶ್ವವಿದ್ಯಾಲಯವನ್ನು ಬಿಹಾರಿನ ಭಾಗಲ್ಪುರದ ಬಳಿ ಪತ್ತೆ ಹಚ್ಚಲಾಗುವುದೆಂದು ತಿಳಿದುಬಂದಿದೆ. ಆಲ್ ಇಂಡಿಯಾ ಹಿಂದ್ ಸರ್ಕಾರದಲ್ಲಿದ್ದ ಶ್ರೀ ಆನಂದಮೋಹನ ಸಹಾಯರವರು ಈ ಶೋಧನೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸಿದ್ದಾರೆ. ಈ ಬಗ್ಗೆ ಅವರು ಆಜಾದ್ ಮತ್ತು ಡಾ॥ ಪ್ರಸಾದರ ಕೂಡ ಚರ್ಚೆ ನಡೆಸಿದರೆಂದು ಗೊತ್ತಾಗಿದೆ

ರೆಸಿಡೆನ್ಸಿಗಳ ರದ್ದು

೧೯೪೮ ರ ಜೂನ್ ಅಂತ್ಯದೊಳಗೆ ಬ್ರಿಟಿಷರು ಭಾರತವನ್ನು ಬಿಟ್ಟು ಹೊರಟುಹೋಗುವರಷ್ಟೆ. ಆದ್ದರಿಂದ ಸಂಸ್ಥಾನಗಳಲ್ಲಿರುವ ರೆಸಿಡೆನ್ಸಿಗಳನ್ನು ಈ ವರ್ಷದ ಅಂತ್ಯದೊಳಗೇ ರದ್ದುಗೊಳಿಸಲಾಗುವುದು. ಈ ಕೆಲಸ ಕಾರ್ಯಗಳನ್ನು ಆಯಾ ಸಂಸ್ಥಾನಗಳೇ ನೋಡಿಕೊಳ್ಳುತ್ತವೆ. ೪೮ ನೇ ಜೂನ್ ಅನಂತರ ಸಂಸ್ಥಾನಗಳು ತಮಗಿಷ್ಟಬಂದಂತೆ ಸಂಬಂಧಗಳನ್ನು ಕಲ್ಪಿಸಿಕೊಳ್ಳಬಹುದಾಗಿದೆ.

ಸ್ವತಂತ್ರ ಭಾರತದಲ್ಲಿ ಬಿರುದು ಬಾವಲಿಗಳಿಲ್ಲ

ಭಾರತದ ಯೂನಿಯನ್ನು ಯಾರಿಗೂ ಬಿರುದು ಬಾವಲಿಗಳನ್ನು ಕೊಡಕೂಡದು. ಯೂನಿಯನ್ನಿನ ಯಾವ ಪ್ರಜೆಯೂ, ಹೊರ ದೇಶಗಳಿಂದಲೂ ಬಿರುದುಗಳನ್ನು ಸ್ವೀಕರಿಸಕೂಡದು. ಯೂನಿಯನ್ನಿನ ನೌಕರರು ಸರ್ಕಾರದ ಪೂರ್ವಭಾವಿ ಅನುಮತಿ ಪಡೆಯದೆ ಪರದೇಶದ ಬಹುಮಾನ, ಭತ್ಯ, ನೌಕರಿ ಮತ್ತು ಬಿರುದುಗಳನ್ನು ಪಡೆಯಕೂಡದು—ಎಂಬ ನಿರ್ಣಯವನ್ನು ಭಾರತ ರಾಜ್ಯಾಂಗ ಸಭೆಯಲ್ಲಿ ಅಂಗೀಕರಿಸಲಾಗಿದೆ.

ಸಂಬಳ ಸಮಿತಿ ವರದಿ

ಭಾರತ ಸರ್ಕಾರದವರು ನೇಮಿಸಿದ ಸಂಬಳ ಸಮಿತಿಯವರು ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದಾರೆಂದು ಗೊತ್ತಾಗಿದೆ. ನಿವೃತ್ತಿ ವೇತನ ವಿಮಾ ಸೌಕರ್ಯ ಮತ್ತು ಸಂಬಳದ ದರ್ಜೆಗಳ ವಿಚಾರದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ಸೂಚಿಸಲಾಗಿದೆಯೆಂದು ಹೇಳಲಾಗಿದೆ. ಈ ವರದಿಯನ್ನು ಪೂರ್ಣವಾಗಿ ಒಪ್ಪಿಕೊಂಡರೆ ೨೦ ಕೋಟಿ ರೂಗಳು ಹೆಚ್ಚು ಖರ್ಚು ತಗಲುವುದೆಂದು ವರದಿಯಾಗಿದೆ.

ಮೈಸೂರು ಕಾಂಗ್ರೆಸ್ ನಗರ ಸಮಿತಿ

ಮೈಸೂರು ಕಾಂಗ್ರೆಸ್ ಪ್ರಧಾನಕಾರ್ಯದರ್ಶಿಗಳು ಮಾಡಿದ ಹೊಸ ಪ್ರಕಟಣೆಯಂತೆ ಈ ನಗರದಲ್ಲಿ ಇಂದು ಸತ್ಯಾಗ್ರಹವು ಆರಂಭವಾಗುವುದಿಲ್ಲ. ಮುಂದಿನ ಕಾರ್ಯಕ್ರಮವನ್ನು ಸೂಕ್ತಕಾಲದಲ್ಲಿ ತಿಳಿಸಲಾಗುವುದು ಎಂದು ಸಮಿತಿಯ ಕಾರ್ಯದರ್ಶಿಯವರು ತಿಳಿಸಿರುತ್ತಾರೆ

ಪ್ರದೋಷ ಸಂಗೀತ

ಕೃಷ್ಣರಾಜ ಮೊಹಲ್ಲಾ ನಾಲಾಬೀದಿ ರಾಮಮಂದಿರದಲ್ಲಿ ನಾಳೆ ಸಂಜೆ ೭ ಗಂಟೆಗೆ ಪ್ರದೋಷದ ಪ್ರಯುಕ್ತ ಶ್ರೀಮತಿ ಎಂ. ಆರ್ ಸರೋಜಮ್ಮನವರ ಸಂಗೀತಕಛೇರಿಯನ್ನು ಏರ್ಪಡಿಸಿದೆ

ಜೂಜುಕೋರರಿಗೆ ಶಿಕ್ಷೆ

ನೂರಡಿ ರಸ್ತೆಯಲ್ಲಿರುವ ... ಟೈಲರಿಂಗ್ ಹೌಸ್ ಮಾಲೀಕರಾದ ಶ್ರೀ ಚೌಡಯ್ಯ ಮತ್ತು ರಂಗೇಗೌಡ, ಮುಂತಾದ ೫ ಮಂದಿಯು ಮೇಲೆ ಜೂಜಾಟವನ್ನು (ಪಕೆಟ್‌ಮಾವ್) ನಡೆಸುತ್ತಿದ್ದರೆಂದು ಲಷ್ಕರ್ ಪೋಲೀಸರು ತಂದಿದ್ದ ಮೊಕದ್ದಮೆಯಲ್ಲಿ ೨ ನೇ ನ್ಯಾಯಾಧೀಶರು ರಂಗೇಗೌಡನಿಗೆ ೫ ರೂ. ಜುಲ್ಮಾನೆ ವಿಧಿಸಿದರು. ಇತರರ ಮೇಲಿನ ಮೊಕದ್ದಮೆ ನಡೆಯುತ್ತಿದೆ

ಕಲ್ಕತ್ತಾದಲ್ಲಿ ಗಾಂಧಿ-ಜಿನ್ನಾ ಶಾಂತಿ ಸಂದೇಶದ ಪ್ರಚಾರ

ಗಾಂಧಿ-ಜಿನ್ನಾ ಸಂದೇಶದ ೪೦ ಸಹಸ್ರ ಪ್ರತಿಗಳನ್ನು ವಿಮಾನದಿಂದ ಕಲ್ಕತ್ತ ನಗರದ ಮೇಲೆಲ್ಲಾ ಮೊನ್ನೆದಿನ ಹಾಕಲಾಗಿದೆ. ಟ್ರಾಂಗಳ ಮೇಲೆಲ್ಲಾ ಇದನ್ನು ಪ್ರಚಾರ ಮಾಡಲಾಗಿದೆ. ೫೭ ಸಿನಿಮಾ ಮಂದಿರಗಳಲ್ಲಿ 'ಸ್ಲೈಡ್' ಮೂಲಕ ಪ್ರದರ್ಶಿಸಲಾಗುತ್ತಿದೆ. ೪೦ ಸಹಸ್ರ ಗ್ರಾಮಫೋನ್ ತಟ್ಟೆಗಳು ಪ್ರದರ್ಶನಗಳಲ್ಲಿ ಹಂಚಲಾಗಿದೆ.

ಗಡಿನಾಡಿನಲ್ಲಿ ಲೀಗ್ ಚಳುವಳಿ ನಿಲ್ಲುವುದಿಲ್ಲ

ಪೆಷಾವರ್‌ನ ಜೈಲಿನಲ್ಲಿರುವ ಲೀಗ್ ನಾಯಕರು ಸಭೆ ಸೇರಿ ಗಡಿನಾಡಿನಲ್ಲಿ ಸರ್ಕಾರವು ಲೀಗ್ ಪೈದಿಗಳನ್ನು ಬಿಟ್ಟುಬಿಡುವುದಾಗಿ ಸೂಚಿಸಿರುವ ಸಂದೇಶವನ್ನೂ, ವೈಸರಾಯರೊಡನೆ ನಡೆದ ಮಾತುಕತೆಗಳನ್ನೂ ಪರಿಶೀಲಿಸಿದರು. ತಮ್ಮ ನ್ಯಾಯಬದ್ಧವಾದ ಬೇಡಿಕೆಗಳು ಈಡೇರಿಲ್ಲವಾಗಿ ತಮ್ಮ ಚಳುವಳಿಯನ್ನು ನಿಲ್ಲಿಸಕೂಡದೆಂದು ಅವರು ನಿರ್ಧರಿಸಿರುವುದಾಗಿ ತಿಳಿದುಬಂದಿದೆ

ಬ್ರಿಟಿಷ್ ಸೈನ್ಯಾಧಿಕಾರಿಗಳ ಸ್ವದೇಶ ಯಾತ್ರೆ

೧೯೪೮ ರ ಜೂನ್ ಸುಮಾರಿಗೆ ಭಾರತದಲ್ಲಿರುವ ಬ್ರಿಟಿಷ್ ಅಧಿಕಾರಿಗಳೂ, ಸೈನ್ಯದಲ್ಲಿರುವ ಇತರ ಬ್ರಿಟಿಷರೂ ಸ್ವದೇಶಕ್ಕೆ ತೆರಳಲು ಸಿದ್ಧತೆಗಳು ನಡೆಯುತ್ತಿವೆಯೆಂದು ವರದಿಯಾಗಿದೆ.

ಪಂಜಾಬಿನಲ್ಲೂ ಚಕ್ರಗೋಷ್ಠಿ

ಕಾಂಗ್ರೆಸ್, ಲೀಗ್ ಮತ್ತು ಸಿಖ್ ಪ್ರತಿನಿಧಿಗಳ ಚಕ್ರಗೋಷ್ಠಿಯೊಂದನ್ನು ಸೇರಿಸಿ ಪಂಜಾಬಿನ ವಿಭಜನೆಯ ವಿಚಾರವನ್ನು ಕೂಲಂಕಷವಾಗಿ ಚರ್ಚಿಸುವುದು ಉತ್ತಮವೆಂದು ... ಮುಸ್ಲಿಂ ಲೀಗ್ ಮುಖಂಡರು ... ಸೂಚಿಸಿದ್ದಾರೆ.

ಪೆಪ್ಸು ಅಧ್ಯಕ್ಷರ ರಾಜೀನಾಮೆ

ದಕ್ಷಿಣ ಆಫ್ರಿಕದ ... ಅಧ್ಯಕ್ಷ ... ರಾಜೀನಾಮೆ ಕೊಟ್ಟಿದ್ದಾರೆ ... ಸೈನ್ಯಾಧಿಕಾರಿಯ ... ಕೆಲವು ದಿನಗಳ ಹಿಂದೆ ನಡೆದ ... ಅನೇಕ ಊರುಗಳನ್ನು ... ಸೈನಿಕರು ವಶಪಡಿಸಿಕೊಂಡಿದ್ದರು ... ಅಧಿಕಾರ ಸೈನ್ಯಾಧಿಕಾರಿಗೇ ಬಿಟ್ಟಿದೆ

ವಿಶ್ವಸಂಸ್ಥೆಯಲ್ಲಿ ಹೈದರಾಬಾದಿಗೆ ಸ್ಥಾನ ?

ಹೈದರಾಬಾದ್ ಸಂಸ್ಥಾನವನ್ನು ಸ್ವತಂತ್ರವನ್ನಾಗಿ ಘೋಷಿಸಲು ವಿಶೇಷ ಪ್ರಯತ್ನಗಳಾಗುತ್ತಿರುವುದಾಗಿ ವರದಿಯಾಗಿದೆ. ವಿಶ್ವಸಂಸ್ಥೆಯ ಸದಸ್ಯಸ್ಥಾನಕ್ಕೆ ಅರ್ಜಿ ಹಾಕಲು ಆ ಸಂಸ್ಥಾನದ ರಾಜ್ಯಾಂಗ ಸಲಹೆಗಾರರಾದ ಸರ್ ವಾಲ್ಟರ್ ಮಾಂಕ್ಟನ್‌ರವರು ವಿಮಾನದಲ್ಲಿ ಇಂಗ್ಲೆಂಡಿಗೆ ... ಹೊರಟಿರುವುದಾಗಿ ಹೇಳಲಾಗಿದೆ

... ಶ್ರೀ ... ಅವರನ್ನು ... ಮಾಡಲಾಗಿದೆ.

ಸಾಧ್ವಿ
ತಾ|| ೧-೫-೪೭ ಗುರುವಾರ

ಯಾವ ಬಗೆಯ ಜವಾಬ್ದಾರೀ ಸರ್ಕಾರ?

ಸಂಸ್ಥಾನದಲ್ಲಿ ಜಾರಿಗೆ ಬರಲಿರುವ ರಾಜಕೀಯ ಸುಧಾರಣೆಗಳ ಸ್ವರೂಪವನ್ನು ದಿವಾನರು ಸೂಕ್ಷ್ಮವಾಗಿ ಸೂಚಿಸಿರುತ್ತಾರೆ. ಇನ್ನು ಮುಂದೆ ಶಾಸನ ಸಭೆಗಳಿಂದಲೇ ಚುನಾಯಿತರಾದ ಮಂತ್ರಿಗಳು ಇರಬೇಕೆಂಬ ಅಭಿಪ್ರಾಯ ಪಟ್ಟಿರುತ್ತಾರೆ. ಒಂದು ಬಗೆಯ ಜವಾಬ್ದಾರೀ ಸರ್ಕಾರದ ಯೋಜನೆಯನ್ನು ತಾವು ಸಿದ್ಧಪಡಿಸುವುದಾಗಿ ತಿಳಿಸಿದ್ದಾರೆ. ಇದು ಯಾವ ಬಗೆ ಎಂಬುದು ಇನ್ನೂ ಗೊತ್ತಾಗಿಲ್ಲ.

ಜವಾಬ್ದಾರೀ ಸರ್ಕಾರವೆಂದರೆ ಮಂತ್ರಿಗಳು ಪ್ರಜೆಗಳ ಪ್ರತಿನಿಧಿಗಳಿಂದ ಆರಿಸಲ್ಪಡಬೇಕು ಮತ್ತು ಅವರ ವಿಶ್ವಾಸಕ್ಕೆ ಪಾತ್ರರಾಗಿರಬೇಕು. ಇದೇ ಜವಾಬ್ದಾರೀ ಸರ್ಕಾರದ ಮೂಲ ತತ್ವ. ಒಂದೊಂದು ದೇಶದ ಸ್ಥಿತಿ, ಗತಿಗಳಿಗೆ ಅನುಗುಣವಾಗಿ ಅಲ್ಲಿನ ರಾಜ್ಯಾಂಗ ಪದ್ಧತಿಯು ರಚಿಸಲ್ಪಡಬೇಕೆಂದು ದಿವಾನರು ಹೇಳಿರುವುದನ್ನು ನಾವು ಅನುಮೋದಿಸುತ್ತೇವೆ. ಆದರೆ ಮೇಲ್ಕಂಡ ಮೂಲಭೂತ ತತ್ವದಲ್ಲಿ ಮಾತ್ರ ಯಾವ ಬದಲಾವಣೆಗೂ ಅವಕಾಶವಿರುವುದಿಲ್ಲ.

ಶ್ರೀಮನ್ಮಹಾರಾಜರವರ ಆಧಿಪತ್ಯಕ್ಕೆ ಚ್ಯುತಿ ಬಾರದಿರಬೇಕೆಂಬ ವಿಷಯದಲ್ಲಿ ಯಾವ ಪಂಗಡದವರಿಗೂ ಭಿನ್ನಾಭಿಪ್ರಾಯವಿರುವುದಿಲ್ಲ. ಪ್ರಭುಗಳ ಆಶ್ರಯದಲ್ಲಿಯೇ ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸಬೇಕೆಂದು ಸಕಲರೂ ಕೇಳುತ್ತಿರುವುದು. ಆದರೆ ರಾಜರು ಸಾಂಕೇತಿಕ ಪ್ರಭುಗಳಾಗಿರಬೇಕೆಂಬುದೇ ಪ್ರಜಾ ಪ್ರಭುತ್ವ ಪದ್ಧತಿಯ ಮುಖ್ಯ ಲಕ್ಷಣ. ಈ ತತ್ವವನ್ನು ನಮ್ಮ ಪ್ರಭುಗಳು ಬಹಳ ಹಿಂದೆಯೇ ಅಂಗೀಕರಿಸಿರುತ್ತಾರೆ. ರಾಜ್ಯದ ಪರಿಪೂರ್ಣವಾದ ಪರಮಾಧಿಕಾರವು ಆಯಾ ಪ್ರಜಾ ವರ್ಗದಲ್ಲಿ ಅಂತರ್ಗತವಾಗಿರುವುದು ಪ್ರಜಾ ಪ್ರಭುತ್ವದ ತಿರುಳು.

ಸಂಸ್ಥಾನದ ಪ್ರಜೆಗಳ ಸಮಸ್ತ ರಾಜಕೀಯ ಚಟುವಟಿಕೆಗಳ ಏಕೈಕ ಗುರಿಯಾದ ಯಾವ ಆಡಳಿತ ಪದ್ಧತಿಯ ಘೋಷಣೆಗಾಗಿ ಹತ್ತಾರು ವರ್ಷಗಳಿಂದ ಅಪಾರವಾದ ಕಷ್ಟ, ನಷ್ಟಗಳು ಅನುಭವಿಸಲ್ಪಟ್ಟಿವೆಯೋ ಅದರ ಉದ್ಘೋಷಣೆಗೆ ಈಗ ಸಮಯವು ಸಂಪ್ರಾಪ್ತವಾಗಿದೆ. ಜವಾಬ್ದಾರೀ ಸರ್ಕಾರವೇ ಆಡಳಿತದ ಗುರಿಯೆಂದು ಸಾರಲು ಪ್ರಜೆಗಳು ನಡೆಸುತ್ತಿದ್ದ ಬೇಡಿಕೆಗಳಿಗೆ ಅಧಿಕೃತವಾದ ಪುರಸ್ಕಾರವು ಇದುವರೆಗೆ ದೊರೆತಿರಲಿಲ್ಲ. ಈಗ ಅದನ್ನು ತಾವು ಪ್ರಕಾಶ ಮಾಡುವುದಾಗಿ ದಿವಾನರೇ ಹೇಳಿರುವುದು ರಾಜಕೀಯ ಪ್ರಗತಿಯಲ್ಲಿ ಒಂದು ಪ್ರಾಮುಖ್ಯ ಘಟ್ಟವಾಗಿರುತ್ತದೆ. ಆಡಳಿತ ಯಂತ್ರದ ಪ್ರಧಾನ ಸೂತ್ರಧಾರಿಗಳಿಂದ ಜವಾಬ್ದಾರೀ ಸರ್ಕಾರದ [illegible]ವು ಆಗಿರುವುದು ಇದೇ ಮೊದಲು. ಪ್ರಜೆಗಳ ಆಕಾಂಕ್ಷೆಯನ್ನು ಈಡೇರಿಸಲು ಪ್ರಭುಗಳು ಇತ್ತಿರುವ ಸಂದೇಶವು ಸಂಪೂರ್ಣವಾಗಿ ಸಾಫಲ್ಯ ಹೊಂದಬೇಕಾದರೆ ಈ ಘೋಷಣೆಯನ್ನು ಆದಷ್ಟು ಬೇಗನೆ ಕಾರ್ಯ [illegible]

ದಿವಾನರ ಹೇಳಿಕೆಯನ್ನೂ ಅವರು ನಡೆಸುತ್ತಿರುವ ಸಂಧಾನಗಳನ್ನೂ ಅನುಸರಿಸಿ ಮೈಸೂರು ಕಾಂಗ್ರೆಸ್ಸಿನವರು ಇಂದಿನಿಂದ ಆಚರಿಸಬೇಕಾಗಿದ್ದ ಸತ್ಯಾಗ್ರಹವನ್ನು ಮುಂದೆ ಹಾಕಿರುವುದು ಸೂಕ್ತವೇ ಆಗಿರುತ್ತದೆ. ಮತ್ತೆ ಮಾತುಕತೆಗಳು ಮುಂದುವರೆದಾಗ ಉಭಯತ್ರರಿಗೂ ಸಮರ್ಪಕವಾದ ಒಪ್ಪಂದವೇರ್ಪಟ್ಟು ಯಾವ ಆಂದೋಳನವೂ ಇಲ್ಲದೆ ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರ ಸ್ಥಾಪನೆಗೆ ಬೀಜಾಂಕುರವನ್ನು ಹಾಕಲು ಅವಕಾಶವಾಗಲೆಂದು ನಾವು ಹಾರೈಸುತ್ತೇವೆ.

ಪ್ರಕಟನೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:-

ಮೈಸೂರು ಸಿಟಿ ದೇವರಾಜ ಮಾರ್ಕೆಟ್ಟಿನಲ್ಲಿ ನೆಲದಮೇಲೆ ಉಗುಳುವುದೂ, ಮತ್ತು ಹಣ್ಣಿನ ಸಿಪ್ಪೆಗಳನ್ನು ಸಿಕ್ಕಿದ ಕಡೆ ಬಿಸಾಡುವುದೂ ಬಹಳ ಜಾಸ್ತಿಯಾಗುತ್ತಿದ್ದು ಇದರಿಂದ ಅನೇಕ ಅಪಾಯಗಳು ಸಂಭವಿಸುವ ಸಂದರ್ಭವಿರುತ್ತದೆ. ಇದಕ್ಕೆ ತಿಳುವಳಿಕೆಯನ್ನು ಮುಂಜಾಗ್ರತೆ ಬಗ್ಗೆ ಬೋರ್ಡುಗಳ ಮೂಲಕ ಎಚ್ಚರಿಕೆ ಕೊಟ್ಟಾಗ್ಯೂ ಈ ತರಹ ವರ್ತನೆಯು ಮಾರ್ಕೆಟ್ಟಿನಲ್ಲಿ ಹೆಚ್ಚುತ್ತಿದೆ. ಆದುದರಿಂದ ಪ್ರತಿಯೊಬ್ಬರೂ ಕೂಡ ಮೇಲ್ಕಂಡ ಅಪಾಯಗಳಿಂದ ತಪ್ಪಿಸಿಕೊಳ್ಳಲು ಹಣ್ಣಿನ ಸಿಪ್ಪೆಗಳನ್ನು ನಿಯಮಿತವಾದ ಜಾಗಗಳಲ್ಲಿ ಹಾಕುವುದರ ಮೂಲಕವೂ ಮತ್ತು ಉಗುಳುದಾನಿಗಳಲ್ಲೇ ಉಗುಳುವುದರ ಮೂಲಕವೂ ಮಾರ್ಕೆಟ್ಟಿನ ನೈರ್ಮಲ್ಯವನ್ನು ಕಾಪಾಡಲು ಸಹಾಯಕರಾಗಬೇಕು. ಇದಕ್ಕೆ ತಪ್ಪಿ ನಡೆದವರನ್ನು ಶಿಕ್ಷೆಗೆ ಗುರಿಮಾಡಲಾಗುತ್ತೆ.

(ಸಹಿ) ಇ. ಅನಂತರಾವ್,
ಫಾರ್ ಪ್ರೆಸಿಡೆಂಟ್.

ಮೈಸೂರು, ೨೮-೪-೪೭

ಗಡಿನಾಡು ಗಲಭೆ ವಿವರಗಳು

ಲೀಗಿನವರು ಗಡಿನಾಡಿನಲ್ಲಿ ಆರಂಭಿಸಿರುವ ಚಳುವಳಿ ಸಮಯದಲ್ಲಿ ಇದುವರೆವಿಗೆ ೪೦೦ ಜನ ಸತ್ತಿದ್ದಾರೆ. ೧೫೦ ಮಂದಿ ಇರಿತಕ್ಕೂ ೩,೦೦೦ ಜನ ಬಲಾತ್ಕಾರ ಮತಾಂತರಕ್ಕೂ ಒಳಗಾಗಿದ್ದಾರೆ. ೫೦ ಮಂದಿಯನ್ನು ಅಪಹರಿಸಲಾಗಿದೆ. ೧೬೦೦ ಮನೆ ಮತ್ತು ಅಂಗಡಿಗಳೂ, ೫೦ ಪ್ರಾರ್ಥನಾ ಸ್ಥಳಗಳೂ ಸುಟ್ಟುಹೋಗಿವೆ ಎಂಬುದಾಗಿ ಗಡಿನಾಡಿನ ಹಣಕಾಸಿನ ಸಚಿವ ಶ್ರೀ ಮೆಹರ್ ಚಂದ್ ಖನ್ನಾರವರು ತಿಳಿಸಿದ್ದಾರೆ.

● ಸಂಯುಕ್ತ ಸಂಸ್ಥಾನದ ಮಿಸ್ಸೋರಿ ಪ್ರಾಂತ್ಯದ ಒಂದು ಊರಿನಲ್ಲಿ ಭಾರಿ ಬಿರುಗಾಳಿ ಎದ್ದು ೧೦ ಮಂದಿ ಸತ್ತಿದ್ದಾರೆ. ನೂರಾರು ಮಂದಿ ಗಾಯಗೊಂಡಿದ್ದಾರೆ.

ಲೈಬೀರಿಯಾದಲ್ಲಿ ದಂಗೆ

ಪಶ್ಚಿಮ ಆಫ್ರಿಕದಲ್ಲಿರುವ ಲೈಬೀರಿಯಾ ಪ್ರಾಂತ್ಯದ ದೇಶೀಯರು ದಂಗೆ ಎದ್ದು ಸಂಯುಕ್ತ ಸಂಸ್ಥಾನ ಸೈನ್ಯವನ್ನು ಮುತ್ತಿದ್ದಾರೆಂದು ತಿಳಿದು ಬಂದಿದೆ. ಮಾರ್ಚಿ ೩೧ ರಲ್ಲಿ ವಿಮಾನ ನಿಲ್ದಾಣದ ಕೆಲಸಗಳನ್ನು ನಿಲ್ಲಿಸಿದುದರಿಂದ ೮೦೦ ಮಂದಿ ಕೆಲಸಗಾರರು ನಿರುದ್ಯೋಗಿಗಳಾದರು. ಇದರಿಂದಲೇ ಅವರುಗಳು ದಂಗೆ ಎದ್ದರೆಂದು ವರದಿಯಾಗಿದೆ. ಸಹಾಯಕ್ಕಾಗಿ ಅಮೆರಿಕ ಸೈನ್ಯ ಬರುವುದಾಗಿ ಊಹಿಸಲಾಗಿದೆ.

ಆಸಫ್ ಆಲಿ ಉಪಾಧ್ಯಕ್ಷರು

ಪ್ಯಾಲಸ್ಟೈನ್ ಸಮಸ್ಯೆಯನ್ನು ಪರಿಶೀಲಿಸಲು ವಿಶ್ವ ಸಂಸ್ಥೆಯ ಅಧಿವೇಶನವು ನ್ಯೂಯಾರ್ಕ್‌ನಲ್ಲಿ ನೆರೆದಿದೆ. ಸದರಿ ಸಂಸ್ಥೆಯ ಸ್ಟಿಯರಿಂಗ್ ಸಮಿತಿ ಉಪಾಧ್ಯಕ್ಷರಾಗಿ ಮಿ|| ಅಸಫ್ ಆಲಿಯವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ಸ್ವತಂತ್ರ ನೇಪಾಳ

ನೇಪಾಳವು ಸ್ವತಂತ್ರ ರಾಷ್ಟ್ರವೆಂದು ಒಪ್ಪಿ ಅಮೆರಿಕಾ ಸಂಯುಕ್ತ ಸಂಸ್ಥಾನವು ಒಪ್ಪಂದವನ್ನು ಮಾಡಿಕೊಂಡಿದೆ.

ಸಂತಾಪ ಪ್ರದರ್ಶನ

ನಂಜನಗೂಡು-೨೮

ಇಲ್ಲಿನ ಪುರಪ್ರಮುಖರಾದ ಶ್ರೀ. ಕೆ. ವೆಂಕಟಸ್ವಾಮಿ ಅಯ್ಯಂಗಾರ್‌ರವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲು ಶ್ರೀ ಶ್ರೀಕಂಠೇಶ್ವರ ಬ್ಯಾಂಕಿನ ಆವರಣದಲ್ಲಿ ಕಳೆದ ೧೪ ನೇ ತಾ|| ನಡೆದ ಸಭೆಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಲಾಯಿತು. ದಿವಂಗತರ ಆತ್ಮಕ್ಕೆ ಶಾಂತಿ ದೊರಕಿಸಿಕೊಡುವಂತೆ ಪರಮಾತ್ಮನಲ್ಲಿ ಪ್ರಾರ್ಥನೆಯನ್ನು ಸಲ್ಲಿಸಲಾಯಿತು. ಸಭಾಧ್ಯಕ್ಷತೆಯನ್ನು ಆ|| ವಿ|| ದುರ್ಗಂ ಭೀಮಾಚಾರ್ಯರು ವಹಿಸಿದ್ದರು.

ಮೊಮ್ಮಕ್ಕಳಿಗೆ ಮೊಮ್ಮಕ್ಕಳು

ಸ್ಕ್ಯಾಟ್ಲೆಂಡಿನಲ್ಲಿ ೧೧೪ ವರ್ಷದ ಒಬ್ಬಳು ಕಳೆದ ವಾರ ಮೃತಳಾದಳು. ಈಕೆಗೆ ಮೊಮ್ಮಕ್ಕಳ ಮೊಮ್ಮಕ್ಕಳು ಜನಿಸಿದ್ದಾರೆ. ತನ್ನ ಜೀವಮಾನದಲ್ಲೇ ತನ್ನ ೫ ನೇ ತಲೆಮಾರನ್ನು ಈಕೆ ಕಂಡಿದ್ದಳು.

Edited, printed and published by A R Nagar[illegible] at the Sadhvi Press D.S [illegible] Road, M[illegible]

Chamundeswari Talkies

Morning Shows on 2, 3, 4 and 5th at 10-30 a m.

Acho Murder

Starring :-David Sarara, Davis Arnuedel

FOR SALE

One G E C make
' REFRIGERATOR '
in good working condition
Price Rs. 1500.
or near offer
Apply to :-
The Proprietor,
University Restaurant,
MYSORE.

ರಾಜಕಮಲ್, ಮೈಸೂರು

ತಾ|| ೨-೫-೪೭ ರಿಂದ ಎರಡನೇ ವಾರ

ಮೊದಲನೇ ಆಟ ಮಧ್ಯಾಹ್ನ 3-30; ೨ ನೇ ಆಟ 6-30; ೩ ನೇ ಆಟ 9-30ಕ್ಕೆ

'ಗೊಲ್ಲಭಾಮ' (ತೆಲುಗು)

ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ ಪಾತ್ರವಹಿಸಿರುವ
ಮಾನವನ ಹೃದಯದ ಜ್ವಾಲಾಮುಖಿಯಲ್ಲಿ ದೇವತೆಗಳಿಗೂ
ಸಿಗದ ಶಾಂತಿ ಮಾನವನಿಗೆ ಹೇಗೆ ದೊರಕಿತೆಂಬುದನ್ನು
ನಿರೂಪಿಸುವ ಅಮೋಘ ಚಿತ್ರಕಥಾವಳಿ

2-5-47 ರಿಂದ 4 ದಿನಗಳು ಪ್ರಾತಃಕಾಲ 10-30 ಕ್ಕೆ

" ರಾಜಾ ಗೋಪೀಚಂದ್ " (ಹಿಂದಿ)

-: ಭೂಮಿಕೆ :-
ಚಂದ್ರಕಾಂತ್, ಪ್ರಭಾ

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು : : ಫೋನ್ 411

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಯಲ್ಲಿ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.

ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.

ಶ್ರೀ ಗಣೇಶ ಟಾಕೀಸ್

2-5-47 ರಿಂದ ಅಮೋಘವಾದ
2 ನೇ ವಾರ
ಜೆಮಿನಿಯವರ
ಕನ್ನಮ್ಮಾ-ಎನ್-ಕಾದಲಿ
(ತಮಿಳು)

Morning Shows on 2, 3, 4, and 5 th at 10-30 a. m.

Private Life of Henry VIII

Starring :-Charles Laughton

ಮನೆ ಬಾಡಿಗೆಗೆ ಇದೆ

ರಾಮಾನುಜ ರಸ್ತೆಯಲ್ಲಿರುವ [illegible] ನೇ ನಂ ಮುನಿಸಿಪಲ್ ಮಾದರಿ ಮನೆ. ಕೆಳಗಿನ ವಿಳಾಸದಲ್ಲಿ ವಿಚಾರಿಸಿರಿ

X

C/o ಸಾಧ್ವಿ ಆಫೀಸು, ಮೈಸೂರು.

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು



ಸಂಪುಟ ೫] ಶುಕ್ರವಾರ ೨—೫—೪೭ [ಸಂಚಿಕೆ ೨೨೬

ಮತ್ತೊಂದು ಯುದ್ಧಕ್ಕೆ ಅಮೆರಿಕದಲ್ಲಿ ಸಿದ್ಧತೆ

...ಚ್ ಸರ್ಕಾರಕ್ಕೆ ಚಂದ್ರ ನಗರದ ಎಚ್ಚರಿಕೆ

...ಶದಲ್ಲಿ ಫ್ರೆಂಚ್ ಆಡಳಿತಕ್ಕೆ ಸೇರಿ ...ಚಂದ್ರ ನಗರದ ಜನರು ಪೊಂದಿ ...ಗಳು ತಮಗೆ ಸಂಪೂರ್ಣ ಸ್ವಾತಂ...ವನ್ನು ನಿಯಮಿತ ಕಾಲದೊಳಗೆ ಕೊ...ಡಬೇಕೆಂದು ಫ್ರೆಂಚ್ ಸರ್ಕಾರಕ್ಕೆ ಎಚ್ಚರಿ...ಸೂಚನೆಯನ್ನಿತ್ತಿದ್ದಾರೆ

...ಯುಕ್ತ ಹೇಳಿಕೆ ಇತ್ತುದು ...ಗೆ ಗಾಂಧೀಜಿ ಪರಿತಾಪ?

...ಂಧಿ ಜಿನ್ನಾ ಶಾಂತಿಸಂದೇಶವು ಹೊರ ...ಮೇಲೂ, ಪಂಜಾಬ್ ಮತ್ತು ಗಡಿ ...ಗಳಲ್ಲಿ ಪರಿಸ್ಥಿತಿ ಪಕೋಟಿಗೆ ಜಾರಿದ...ದನ್ನು ನೋಡಿ ಗಾಂಧೀಜಿಯವರು ವಿ...ಗಿದ್ದಾರೆಂದೂ, ಜಿನ್ನಾರವರ ಮಾತಿಗೆ ...ಗಿರುವುದರಿಂದ ಲೀಗಿನ ಅಧಿಕಾರ ...ಪ್ರೇಮ ಬರುವುದೆಂದೂ ಗಾಂಧೀಜಿಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಸಂ...ಕ್ತ ಹೇಳಿಕೆ ಕೊಡಲು ತಾವು ಸಮ್ಮತಿ...ದ ಸರಿಯೇ ಎಂಬ ಶಂಕೆ ತಮ್ಮನ್ನು ...ಡುವುದಾಗಿ ಅವರು ಹೇಳಿದ್ದಾರೆ

...ಪ್ರಾಂತ್ಯಗಳ ಪಾಕೀಸ್ಥಾನ ...ಗೆ ಜಿನ್ನಾರವರ ಒತ್ತಾಯ

ಪಂಜಾಬ್ ಮತ್ತು ಬಂಗಾಳಗಳ ವಿಭ...ಜನೆಯು ದ್ವೇಷ, ಅಸೂಯೆಗಳಿಂದ ಕೂಡಿ...ರೋಗಿಷ್ಟ ಮನೋವೃತ್ತಿಯ ಬೇಡಿಕೆ ...ದು ಮಿ|| ಜಿನ್ನಾರವರು ಹೇಳಿಕೆ ಇತ್ತಿ...ರೈ ವೈಸರಾಯರಾಗಲೀ, ಬ್ರಿ|| ಸರ್ಕಾರ...ವಾಗಲೀ ಈ ಬಲೆಗೆ ಬಿದ್ದು ಅನರ್ಥ ಕ...ಡದಿರಲೆಂದು ಎಚ್ಚರಿಸಿದ್ದಾರೆ. ಬಂಗಾ...ಳ, ಪಂಜಾಬ್, ಅಸ್ಸಾಂ, ಸಿಂಧ್, ಗಡಿ ...ಡು ಮತ್ತು ಬಲೂಚಿಸ್ಥಾನಗಳನ್ನೊಳ...ಗೊಂಡ ಪಾಕೀಸ್ಥಾನ ಏರ್ಪಡಿಸಲೇಬೇಕೆಂ...ದು ಅವರು ತಿಳಿಸಿದ್ದಾರೆ ಪಾಕೀಸ್ಥಾನ ...ಹಿಂದೂಸ್ಥಾನಗಳ ರಕ್ಷಣಾ ಬಲಗಳನ್ನು ...ವಿಂಗಡಿಸಬೇಕೆಂದೂ, ಅಲ್ಪಸಂಖ್ಯಾತ ಪ್ರ...ದೇಶಗಳಿಂದ ಜನಗಳ ವರ್ಗಾಂತರ ನಡೆ...ಸಬೇಕೆಂದೂ ಜಿನ್ನಾರವರು ಹೇಳಿದ್ದಾರೆ.

ರಿವಾ ಸಂಸ್ಥಾನದಲ್ಲಿ ಪ್ರಜಾಮಂತ್ರಿಗಳು

ತಮ್ಮ ವರ್ಧಂತಿ ಸಮಾರಂಭದಲ್ಲಿ ಘೋ...ಷಿಸಿದಂತೆ ರೀವಾ ಮಹಾರಾಜರು ತಮ್ಮ ಮಂತ್ರಿಮಂಡಲಕ್ಕೆ ಅಲ್ಲಿನ ಪ್ರಜಾಮಂಡಲದ ಅಧ್ಯಕ್ಷರಾದ ಶಂಭುನಾಥಶುಕ್ಲ ಮತ್ತು ...ಇಂದ್ರಬಹದ್ದೂರ್ ಸಿಂಗ್‌ರವರನ್ನು ನೇಮಿಸಿಕೊಂಡಿದ್ದಾರೆ

ಸ್ವತಂತ್ರ ಭಾರತದಲ್ಲಿ ಮೂಲಭೂತ ಹಕ್ಕುಗಳು

ಸಾರ್ವಜನಿಕ ನೆಮ್ಮದಿ ಮತ್ತು ಶಿಸ್ತಿಗೆ ...ನೆ ಭಂಗಬಾರದಂತೆ ಪ್ರತಿಪ್ರಜೆಗೂ ಭಾಷಣಮಾಡುವುದು, ಸಭೆನಡೆಸುವುದು, ಸಂಘ ಸ್ಥಾಪಿಸಿಕೊಳ್ಳುವುದು, ಯೂನಿಯನ್ನಿನಲ್ಲೆಲ್ಲಾ ಯಾವ ಅಡ್ಡಿಯೂ ಇಲ್ಲದೆ ಸಂಚರಿಸುವುದು, ಯೂನಿಯನ್ನಿನ ಯಾವ ಪ್ರದೇಶದಲ್ಲಾದರೂ ನೆಲೆಸುವುದು, ಆಸ್ತಿ ಸಂಪಾದನೆ ಅಥವಾ ವಿಲೆಮಾಡುವುದು, ಯಾವ ಉದ್ಯೋಗವನ್ನಾಗಲೀ, ವ್ಯಾಪಾರ ವ್ಯವಹಾರವನ್ನಾಗಲೀ ಕೈಗೊಳ್ಳುವುದು, ಇವುಗಳಿಗೆ ಪೂರ್ಣಸ್ವಾತಂತ್ರ್ಯವನ್ನು ಕೊಡುವ ಗೊತ್ತುವಳಿಯನ್ನು ಭಾರತ ರಾಜ್ಯಾಂಗ ರಚನಾ ಸಭೆಯು ಅಂಗೀಕರಿಸಿರುತ್ತದೆ.

ಜೂರ್ನಲ್ಲಿ ಕುದುರೆ ಜೂಜು

ಸ್ವಂ. ವ. ಪ್ರೆ.] ಬೆಂಗಳೂರು ೨

ಕಳೆದ ೫ ವರ್ಷಗಳಿಂದ ನಿಂತುಹೋಗಿದ್ದ ಕುದುರೆ ಜೂಜನ್ನು ಬರುವ ಜೂನ್‌ನ ೧೮ ರಿಂದ ಮತ್ತೆ ಆರಂಭಿಸಲಾಗುವುದು. ಸರ್ಕಾರದ ಆಜ್ಞಾನುಸಾರ ಈ ಜೂಜನ್ನು ನಿಷೇಧಿಸಬೇಕೆಂದು ಸರ್ಕಾರದವರು ಹೊರಡಿಸಿದ್ದ ಆಜ್ಞೆಯನ್ನು ಪುನರ್ವಿಮರ್ಶಿಸಿ, ಈಗ ಜೂಜಿಗೆ ಅನುಮತಿ ಕೊಟ್ಟಿರುವರು. ಜೂಜಿನ ಕುದುರೆಗಳು ಮೈಸೂರು ಸಂಸ್ಥಾನಕ್ಕೆ ಪ್ರವೇಶಿಸದಂತೆ ಹಾಕಿದ್ದ ನಿರ್ಬಂಧಗಳನ್ನೂ ಸರ್ಕಾರದವರು ಜತೆಯಲ್ಲೇ ತೆಗೆದು ಹಾಕಿರುವರು

ವಾರ್ಡ್ ಪದ್ಧತಿ ಅಂಗೀಕಾರ

ಪುರಸಭೆಯ ವಿಶೇಷ ಅಧಿವೇಶನವು ಸಿ...ಟಿಯ ಚುನಾವಣೆಗಳಿಗಾಗಿ ವಿಂಗಡಿಸಬೇಕೆಂದೂ ಪ್ರತಿ ...ದಸ್ಯರ ಸಂಖ್ಯೆಯನ್ನು ... ದ ವಾರ್ಡಿಗೆ ... ಬೇಕೆಂದೂ ಒಂದಿಷ್ಟು ಸಮಿತಿ ವರದಿಯನ್ನು ಅಂಗೀಕರಿಸಿತು.

ಮುಂದಿನವಾರ ನಾಯಕರ ಸಮ್ಮೇಳನ?

ವೈಸರಾಯರು ಮುಂದಿನ ವಾರ ನಡೆಸಬೇಕೆಂದಿರುವ ನಾಯಕರ ಸಮ್ಮೇಳನಕ್ಕೆ ಸ|| ಪಟೇಲ್, ಪಂ|| ನೆಹರು, ಮಿ|| ಜಿನ್ನಾ, ಮಿ|| ಲಿಯಾಕತ್ ಅಲಿಖಾನ್ ಮತ್ತು ಸ|| ಬಲದೇವಸಿಂಗ್‌ರವರುಗಳನ್ನು ಆಹ್ವಾನಿಸಲಾಗುವುದೆಂದು ಹೇಳಲಾಗಿದೆ. ಭಾರತದ ವಿಭಜನೆ ಯಾವ ಆಧಾರದ ಮೇಲೆ ನಡೆಯಬೇಕೆಂಬುದನ್ನು ಚರ್ಚಿಸುವ ಸಲುವಾಗಿಯೂ, ರಕ್ಷಣಾವ್ಯವಸ್ಥೆಯ ಬಗ್ಗೆಯೂ ಮಾತುಕತೆಗಳು ನಡೆಯುವುವೆಂದು ಗೊತ್ತಾಗಿದೆ

ಭಾರತದ ವಿಭಜನೆ ಬಗ್ಗೆ ರಾಜೇಂದ್ರ ಪ್ರಸಾದರು

ಭಾರತವನ್ನು ವಿಭಜಿಸುವುದು ಅಗತ್ಯವೇ ಆದರೆ, ಅಸ್ಸಾಂ, ಪಂಜಾಬ ಮತ್ತು ಬಂಗಾಳವನ್ನು ವಿಭಾಗಿಸಬೇಕಾಗುವುದು ... ಒಮ್ಮೆ ಭಾರತವನ್ನು ವಿಭಾಗಿಸಿದ ಮೇಲೆ ಮೇಲೆ ಪಟೇಲ್ ... ಸಂಬಂಧಿಸಿದ ವಿಷಯಗಳೆಲ್ಲವನ್ನೂ ಪೂರ್ಣವಾಗಿ ತೀರ್ಮಾನಿಸಬೇಕು. ಅಲ್ಲಿದೆ ರಕ್ಷಣಾವ್ಯವಸ್ಥೆಯೂ ಬೇರೆ ಆಗಬೇಕು. ಎಂದು ... ರಾಜ್ಯಾಂಗ ಸಭಾಧ್ಯಕ್ಷರಾದ ಡಾ|| ರಾಜೇಂದ್ರಪ್ರಸಾದರು ತಿಳಿಸಿದ್ದಾರೆ.

ವೈಸರಾಯರ ಹೊಸ ಯೋಜನೆ ಬೇಗನೆ ಹೊರಬೀಳಲಿದೆ

ಅಧಿಕಾರವನ್ನು ಭಾರತೀಯರಿಗೆ ವರ್ಗಾಯಿಸಿಕೊಡುವುದರ ಬಗ್ಗೆ ವೈಸರಾಯರು ತಮ್ಮ ಯೋಜನೆಯನ್ನು ಇನ್ನು ಹಿಂದೆರಡು ವಾರಗಳಲ್ಲೇ ಹೊರಪಡಿಸುವರೆಂದು ಹೇಳಲಾಗಿದೆ ಅದನ್ನು ಬ್ರಿ|| ಸರ್ಕಾರಕ್ಕೆ ಲಾರ್ಡ್ ಇಸ್ಮೇರವರ ಕೂಡ ಕಳುಹಿಸಿಕೊಡುವ ಮುನ್ನ ಮಹಾತ್ಮ ಗಾಂಧಿ ಮತ್ತು ಮಿ|| ಜಿನ್ನಾರವರ ಅಭಿಪ್ರಾಯವನ್ನು ತಿಳಿಯುವರೆಂದು ಊಹಿಸಲಾಗಿದೆ. ಭಾರತವನ್ನು ಹಿಂದೂಸ್ಥಾನ ಮತ್ತು ಪಾಕೀಸ್ಥಾನಗಳನ್ನಾಗಿ ವಿಭಾಗಿಸುವುದು. ಎರಡು ಭಾಗಗಳ ಗಡಿ ಗೊತ್ತು ಮಾಡಲು ಸಮಿತಿಯೊಂದನ್ನು ರಚಿಸುವುದು ಪಾಕೀಸ್ಥಾನಕ್ಕೇ ಪ್ರತ್ಯೇಕ ರಾಜ್ಯಾಂಗ ಸಮಿತಿಯನ್ನು ನೇಮಿಸುವುದು ಅಧಿಕಾರವನ್ನು ಪೂರ್ಣವಾಗಿ ವರ್ಗಾಯಿಸಿ ಕೊಡುವವರೆಗೆ ಇರುವ ಮಧ್ಯಕಾಲದಲ್ಲಿ ಭಾರತದ ಯಾವ ಭಾಗದಲ್ಲೂ ಯಾವ ವಿಧವಾದ ಶಾಂತಿ ಭಂಗ ಚಳುವಳಿ ನಡೆಯದಂತೆ ನಿರ್ಬಂಧಾಜ್ಞೆ ಹೊರಡಿಸುವುದು ಇವುಗಳೇ ಆ ಯೋಜನೆಯ ಮುಖ್ಯಾಂಶಗಳೆಂದು ಹೇಳಲಾಗುತ್ತಿದೆ

ನಾರ್ಗೆಜೆಟೆಡ್ ಅಧಿಕಾರಿಗಳ ಸಭೆ

ನಂಜನಗೂಡು ೧

ಇದೇ ೫ ನೇ ತಾ|| ಸೋಮವಾರ ಸಂಜೆ ೫ ಗಂಟೆಗೆ ದಳವಾಯಿ ಕಟ್ಟಡದಲ್ಲಿ ಇಲ್ಲಿನ ನಾನ್‌ಗೆಜೆಟೆಡ್ ಅಧಿಕಾರಿಗಳ ಸಭೆಯೊಂದನ್ನು ಕರೆಯಲಾಗಿದೆ ಸದರಿ ಅಧಿಕಾರಿಗಳೆಲ್ಲರೂ ತಪ್ಪದೆ ದಯಮಾಡಿಸಬೇಕೆಂದು ಸಂಚಾಲಕರಾದ ಶ್ರೀ ಟಿ. ನಾಗರಾಜಯ್ಯನವರು ಪ್ರಾರ್ಥಿಸಿದ್ದಾರೆ

ರಾಜಧಾನಿಯ ಏಜೆಂಟರು

1-5-47 ರಿಂದ ಈ ಕೆಳಗೆ ಕಂಡವರನ್ನು ರಾಜಧಾನಿಯಲ್ಲಿ 'ಸಾಧ್ವಿ' ಪತ್ರಿಕೆಯ ಏಜೆಂಟರನ್ನಾಗಿ ನೇಮಿಸಲಾಗಿದೆ ಮಹಾಜನರು ಇವರಿಗೆ ಸರ್ವವಿಧದಲ್ಲಿಯೂ ಸಹಕಾರವನ್ನು ನೀಡಬೇಕಾಗಿ ವಿನಂತಿ.

ವ್ಯವಸ್ಥಾಪಕ, 'ಸಾಧ್ವಿ'

ಏಜೆಂಟರು:—ಜನರಲ್ ಏಜೆನ್ಸೀಸ್,
ಮ್ಯಾನೇಜಿಂಗ್ ಪಾರ್ಟ್‌ನರ್—
ಶ್ರೀ|| ಎಸ್. ಶ್ರೀಕಂಠಸ್ವಾಮಿ ಬಿ ಎ,
ಎ ರಾಮಣ್ಣನವರಬೀದಿ, ಮೈಸೂರು

ಅಮೆರಿಕದಲ್ಲಿ ಇನ್ನೊಂದು ಯುದ್ಧಕ್ಕೆ ಸಿದ್ಧತೆ

ಇದ್ದಕ್ಕಿದ್ದಂತೆಯೇ ಮತ್ತೊಂದು ಯುದ್ಧವೇನಾದರೂ ಆರಂಭವಾಗುವುದಾದರೆ ಅದಕ್ಕಾಗಿ ಸಮಸ್ತ ಕೈಗಾರಿಕೆಗಳನ್ನೂ ಪೂರ್ಣವಾಗಿ ಸಂಘಟಿಸಿ, ಸಿದ್ಧತೆಗಳನ್ನು ಮಾಡಲು ಅವಶ್ಯಕವಾದ ಯೋಜನೆಯನ್ನು ಅಮೆರಿಕ ಸಂಯುಕ್ತಸಂಸ್ಥಾನದ ಸೈನ್ಯ ಮತ್ತು ನೌಕಾ ಮುದ್ರಾಂಗಣಗಳ ಸಮಿತಿ ತಯಾರಿಸುತ್ತಿರುವುದಾಗಿ ಸದರಿ ಬೋರ್ಡಿನ ಅಧ್ಯಕ್ಷರಾದ ಮಿ|| ರಿಚರ್ಡ್ ಡ್ಯೂಪ್ರೆರವರು ತಿಳಿಸಿದ್ದಾರೆ ಈ ಯೋಜನೆಯು ಮುಂದಿನ ವರ್ಷದಿಂದಲೇ ಜಾರಿಗೆ ಬರುವುದು ಪ್ರತಿವರ್ಷವೂ ಹೊಸ ಅಸ್ತ್ರ ಮತ್ತು ಸಂಶೋಧನೆಗಳಿಗನುಗುಣವಾಗಿ ಸುಧಾರಿಸಲ್ಪಡುವುದು ಅಮೆರಿಕದಲ್ಲಿ ದೊರೆಯದ ಅಗತ್ಯವಾದ ಯುದ್ಧವಸ್ತುಗಳನ್ನು ಹೊರದೇಶಗಳಿಂದ ಆಮದು ಮಾಡಿ ಕೇಟಿರಿಸಲಾಗುವುದು. ಎಂದು ಅವರು ತಿಳಿಸಿದ್ದಾರೆ

ಕಲ್ಕತ್ತಾ ಮೇಯರಾಗಿ ಕಾಂಗ್ರೆಸ್ಸಿನವರ ಆಯ್ಕೆ

ಕಾಂಗ್ರೆಸ್ ಪಕ್ಷದ ಶ್ರೀ ಸುಧೀರರಾಯ್ ಚೌಧರಿಯವರು ಕಲ್ಕತ್ತ ನಗರದ ಮೇಯರಾಗಿ ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ. ಆಂಗ್ಲೋ ಇಂಡಿಯನ್ ಪಂಗಡದ ಮಿ|| ಗ್ರೋಗಿನಿಯವರು ಡೆ|| ಮೇಯರಾಗಿ ಚುನಾಯಿತರಾಗಿರುವರು.

ಕೀರ್ತನಕಾರರಿಗೆ ಪ್ರೋತ್ಸಾಹವೀಯಬೇಕು

ಮೈಸೂರು ನಗರದಲ್ಲಿ ಕೀರ್ತನ ಸಮಾಜ, ಹರಿಕಥಾ ಸಂಘ ಇತ್ಯಾದಿ ಹೆಸರುಗಳ ಹನ್ನೆರಡು ಸಂಸ್ಥೆಗಳಿವೆ. ಇವುಗಳ ಪೈಕಿ ಕೆಲವು ಸಂಘಗಳಲ್ಲಿ ಆಯಾ ಸಂಚಾಲಕರುಗಳಿಗೂ, ಅವರ ಶಿಷ್ಯರುಗಳಿಗೂ ಅವಕಾಶ ದೊರಕುವುದೇ ವಿನಾ ಇತರರಿಗೆ ದೊರಕುತ್ತಿಲ್ಲ ಇದೂ ಅಲ್ಲದೆ ಕೆಲವು ಮಂದಿರಗಳಲ್ಲೂ ಧರ್ಮಶಾಲೆ ಮತ್ತು ದೇವಸ್ಥಾನಗಳಲ್ಲೂ ಸಹ ಕೆಲವು ಕೀರ್ತನಕಾರರಿಗೆ ಮಾತ್ರ ಎಲ್ಲವೂ ಮೀಸಲಾಗಿರುತ್ತವೆ ಈ ಪಕ್ಷಪಾತ ತಪ್ಪಬೇಕು. ಈ ಊರಿನಲ್ಲೇ ಇರುವ ಇತರ ಕೀರ್ತನಕಾರರಿಗೂ ಹೊರಗಡೆಯಿಂದ ಬರುವ ವಿದ್ವಾಂಸರುಗಳಿಗೂ ಅವಕಾಶವನ್ನು ಕಲ್ಪಿಸಿಕೊಟ್ಟು ಪ್ರೋತ್ಸಾಹಕೊಡುವುದು ಅಗತ್ಯವಾಗಿದೆ. ಮಹಾಜನರು ಈ ಬಗ್ಗೆ ಕೀರ್ತನ ಸಂಘ ಸಂಸ್ಥೆಗಳ ಕಾರ್ಯಕರ್ತರುಗಳ ಮೇಲೆ ಒತ್ತಾಯವನ್ನು ತಂದು ಸಂಕುಚಿತವೃತ್ತಿಯಿಂದ ಕಷ್ಟಪಡುವ ಕೀರ್ತನಕಾರರಿಗೆ ನೆರವಾಗಬೇಕು

ಕೀರ್ತನಕಾರ.

ಭಾರತ ವಾಚನ

ಕಬ್ಬನ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ದೇವಾಲಯದಲ್ಲಿ ಕೀರ್ತನಾಚಾರ್ಯ ಕಲಾ ರತ್ನ ಶ್ರೀ ಕೆ. ಎ. ಕೃಷ್ಣದಾಸರವರು ಇದೇ 4 ನೇ ತಾ|| ಸಂಜೆ ೮ ಘಂಟೆಗೆ ಭಾರತ ವಾಚನವನ್ನು ಮಾಡುವರು ಶ್ರೀ ವೆಂಕಟಸುಬ್ಬ ಶಾಸ್ತ್ರೀ ಭಾರತಿಯವರು ವ್ಯಾಖ್ಯಾನಮಾಡುವರು

ಉಪನ್ಯಾಸ

ಇದೇ ೫ ನೇ ತಾ|| ಸೋಮವಾರ ಸಂಜೆ ೫ ಗಂಟೆಗೆ ನಂಜನಗೂಡಿನ ಶ್ರೀ ಶಂಕರಮಠದಲ್ಲಿ ಆ|| ವಿ|| ವೈ. ಚಂದ್ರಶೇಖರ ಶಾಸ್ತ್ರಿಗಳು ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆಯ ವಿಷಯವಾಗಿ ಉಪನ್ಯಾಸ ಮಾಡುತ್ತಾರೆ.

ಸಾಧ್ವಿ

ತಾ|| ೨-೫-೪೭ ಶುಕ್ರವಾರ

ನಮ್ಮಮುಂದಿರುವ ಪ್ರಶ್ನೆಗಳು

ದಿವಾನರು ಇತ್ತೀಚೆಗೆ ಕೊಟ್ಟ ಹೇಳಿಕೆಯ ಅನಂತರ ಹಲವು ಬಗೆಯ ಪ್ರಶ್ನೆಗಳು ಎದ್ದಿರುತ್ತವೆ. ಸಂಪೂರ್ಣ ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸುವಂತೆ ದಿವಾನರು ಸಲಹೆ ಕೊಡುತ್ತಾರೆಯೇ? ಅಥವಾ ಅದಕ್ಕೆ ಏನಾದರೂ ಪರಿಮಿತಿಗಳನ್ನು ಹಾಕಲಾಗುವುದೇ? ಅದರ ಸ್ಥಾಪನೆಗೆ ಕಾಲಾವಧಿಯನ್ನು ಗೊತ್ತುಮಾಡಲಾಗುವುದೇ? ಮಂತ್ರಿಗಳ ಜವಾಬ್ದಾರಿಗೆ ನಿರ್ಬಂಧಗಳನ್ನು ಹಾಕಲಾಗುವುದೇ? ಚುನಾಯಿತ ಮಂತ್ರಿಗಳು ಶಾಸನ ಸಭೆಗಳ ಅವಿಶ್ವಾಸದಿಂದ ತೆಗೆದುಹಾಕಲ್ಪಡುವುದಿಲ್ಲವೇ? ಮೀಸಲಾಗಿ ಇಟ್ಟುಕೊಳ್ಳುವ ವಿಚಾರಗಳಾವುವು? ಮಂತ್ರಿಗಳಿಗೆ ವರ್ಗಾಯಿಸುವ ಅಂಶಗಳಾವುವು? ಮಂತ್ರಿಗಳ ಚುನಾವಣೆಯು ಈಗಿನ ಶಾಸನ ಸಭೆಗಳಿಂದಲೇ ನಡೆಯುವುದೇ? ಅಥವಾ ಹೊಸ ಚುನಾವಣೆಯು ಇದಕ್ಕಾಗಿ ನಡೆಯುವುದೇ? ರಾಜ್ಯಾಂಗ ಪದ್ಧತಿಯನ್ನು ನಿರ್ಣಯಿಸಲು ಸಂಸ್ಥಾನದಲ್ಲಿಯೂ ಸರ್ವ ಪ್ರಾತಿನಿಧ್ಯವುಳ್ಳ ಸಭೆಯೊಂದನ್ನು ರಚಿಸಲಾಗುವುದೇ? ಈ ಮಧ್ಯಕಾಲದಲ್ಲಿ ತಾತ್ಕಾಲಿಕ ಸರ್ಕಾರವೊಂದನ್ನು ರಚಿಸಲಾಗುವುದೇ? ಈಗ ನಡೆಯುತ್ತಿರುವ ಭಾರತ ರಾಜ್ಯಾಂಗ ರಚನೆಯ ಕಾರ್ಯದಲ್ಲಿ ಮೈಸೂರು ಕೂಡಲೇ ಭಾಗವಹಿಸುವುದೇ? ಎಂಬಿವೇ ಮುಂತಾದ ಪ್ರಶ್ನೆಗಳು ಒದಗುತ್ತವೆ.

ದಿವಾನರ ಹೇಳಿಕೆಯಲ್ಲಿ ಮೇಲ್ಕಂಡ ಅಂಶಗಳೊಂದಕ್ಕೂ ಉತ್ತರವಿರುವುದಿಲ್ಲ. ಜವಾಬ್ದಾರೀ ಸರ್ಕಾರ ಎಂಬ ಮಾತನ್ನು ಮಾತ್ರ ಅವರು ಉಪಯೋಗಿಸಿದ್ದಾರೆ. ಅದೂ ಒಂದು ಮಾದರಿಯ ಜವಾಬ್ದಾರೀ ಸರ್ಕಾರವೆಂದು ಹೇಳುತ್ತಾರೆ. ಅದು ಯಾವ ಮಾದರಿಯೆಂಬುದನ್ನು ಮುಂದೆ ಕಾದು ನೋಡಬೇಕಾಗಿದೆ. ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ತಿರುವಾಂಕೂರಿನಲ್ಲಿ ಅಮೇರಿಕದ ಮಾದರಿಯ ರಾಜ್ಯಾಂಗವನ್ನು ತಯಾರು ಮಾಡುವುದಾಗಿ ಹೇಳಿದ್ದರು. ಅವರೆ ಅನೇಕರಿಗೆ ಕಾಣದ ಒಂದು ನಿರಂಕುಶಾಧಿಕ ಪದ್ಧತಿಯನ್ನು ಅಲ್ಲಿ ಸೃಷ್ಟಿಮಾಡಿರುವರು. ಅಮೇರಿಕದ ರೀತಿಯಲ್ಲಿ ಚುನಾಯಿತ ಅಧ್ಯಕ್ಷರಾಗಲೀ ಅಥವಾ ಚುನಾಯಿತ ದಿವಾನರೇ ಆಗಲೀ ಇರಲು ಅವರು ಅವಕಾಶ ಕಲ್ಪಿಸಿರುವುದಿಲ್ಲ. ಸಮಸ್ತ ಅಧಿಕಾರವನ್ನೂ ತಮ್ಮಲ್ಲಿಯೇ ಆವಾಹನೆ ಮಾಡಿಕೊಂಡು, ತಾವು ಸರ್ವಾಧಿಕಾರಿಗಳಾಗಿರುವಂತೆ ದಾರಿಯನ್ನು ಮಾಡಿಕೊಂಡಿರುತ್ತಾರೆ. ಅದರಲ್ಲಿ ಅಮೇರಿಕದ ಮಾದರಿಯು ಸ್ವಲ್ಪವೂ ಇರುವುದಿಲ್ಲ. ಜವಾಬ್ದಾರೀ ಸರ್ಕಾರದ ನೆರಳು ಕೂಡಾ ಕಂಡುಬರುವುದಿಲ್ಲ.

ನಮ್ಮ ದಿವಾನರು ಯಾವ ಬಗೆಯ ರಾಜ್ಯಾಂಗವನ್ನು ರಚಿಸಲಿರುವರೋ ತಿಳಿಯದು. ಅವರ ಜವಾಬ್ದಾರೀ ಸರ್ಕಾರದ ತಿರುಳನ್ನು ಹೊಂದಿಲ್ಲದ ಯಾವ ಯೋಜನೆಯೂ ಪ್ರಜೆಗಳಿಗೆ ಸಮಾಧಾನವನ್ನುಂಟು ಮಾಡುವುದಿಲ್ಲ. ಕೇವಲ ತೋರಿಕೆಯ ಸುಧಾರಣೆಗಳನ್ನು ಕಲ್ಪಿಸಿ ಪ್ರಜೆಗಳಿಗೆ ಆಶಾಭಂಗವುಂಟುಮಾಡಿ ಮತ್ತೆ ಘರ್ಷಣೆಗಳಿಗೆ ಅವಕಾಶವಾಗದಿರಲೆಂದೂ, ಕೂಡಲೇ ಸಂಸ್ಥಾನದಲ್ಲಿ ಸಂಪೂರ್ಣ ಜವಾಬ್ದಾರೀ ಸರ್ಕಾರ ಪದ್ಧತಿಯು ಸ್ಥಾಪಿತವಾಗಿ ಮೈಸೂರು ಸಂಸ್ಥಾನವು ಅಖಂಡ ಭಾರತದ ಸ್ವಾತಂತ್ರ್ಯ ಸಾಧನೆಯಲ್ಲಿ ತನ್ನ ನಿಜವಾದ ಪಾತ್ರವನ್ನು ವಹಿಸುವಂತೆ ದಿವಾನರು ವ್ಯವಸ್ಥೆ ಮಾಡಲೆಂದೂ ನಾವು ಹಾರೈಸುತ್ತೇವೆ.

Edited printed and published by [illegible] R. Nagarajan at the Sadhvi Press D. Subbiah Road Mysore.

ಮನೆ ಬಾಡಿಗೆಗೆ ಇದೆ

ರಾಮಾನುಜ ರಸ್ತೆಯಲ್ಲಿರುವ ೬೫ ನೇ ನಂ ಮುನಿಸಿಪಲ್ ಮಾದರಿ ಮನೆ ಕೆಳಗಿನ ವಿಳಾಸದಲ್ಲಿ ವಿಚಾರಿಸಿ.

X

C/o ಸಾಧ್ವಿ ಆಫೀಸು, ಮೈಸೂರು.

ಕ್ರಯಕ್ಕಿದೆ.

ಡೋರ್ ನಂ ೧೮೧೭, ಸಿಮೆಂಟ್ ಬ್ಲಾಕ್.

—: ವಿವರಗಳಿಗೆ :—

ಆರ್. ಗುಂಡೂರಾವ್,

ಮೈಸೂರು ಬ್ಯಾಂಕ್ ಹತ್ತಿರ, ಮೈಸೂರು.

ಶ್ರೀರಾಮ ಪಟ್ಟಾಭಿಷೇಕ

ಶ್ರೀ ರಾಮಪೇಟೆ ಶ್ರೀರಾಮಾಭ್ಯುದಯ ಸಭೆಯ ಆಶ್ರಯದಲ್ಲಿ ಇದೇ ೪ ನೇ ತಾ|| ಶನಿವಾರ ಶ್ರೀ ರಾಮಪಟ್ಟಾಭಿಷೇಕವೂ, ೬ ನೇ ತಾ|| ಮಂಗಳವಾರ ಹನುಮಂತೋತ್ಸವವೂ ನಡೆಯುವುವು. ಸರ್ವರೂ ದಯಮಾಡಿರಬೇಕಾಗಿ ಕೋರಲಾಗಿದೆ.

ಶೀಘ್ರದಲ್ಲಿಯೇ ಪ್ರದರ್ಶನಾರಂಭವನ್ನು ನಿರೀಕ್ಷಿಸಿರಿ!

ಮೈಸೂರಿನ ಭವ್ಯ ಶ್ರೀ ಚಲನಚಿತ್ರ ಮಂದಿರ

ವುಡ್-ಲೆಂಡ್ ಟಾಕೀಸ್,

(ಕರ್ಜನ್ ಪಾರ್ಕ್)

ಎ. ವಿ. ಎಂ. ಪ್ರೊಡಕ್ಷನ್ನರವರ ಅಮೋಘ ಸಾಮಾಜಿಕ ಚಿತ್ರ

'ನಾವು-ಇಬ್ಬರು'

(ತಮಿಳು)

—: ತಾರಾಗಣ :—

ಟಿ. ಆರ್. ಮಹಲಿಂಗಂ,

ಟಿ. ಎ. ಜಯಲಕ್ಷ್ಮಿ,

ಆರ್. ರಾಮಚಂದ್ರನ್

ಮತ್ತು ಇತರರು.

ಬಿ. ಎಂ. ಗೋವಿಂದಸ್ವಾಮಿ,

ಬಿ. ಎಂ. ರಾಮಮೂರ್ತಿ,

ಪ್ರೊಪ್ರೈಟರ್ಸ್.

ಗರ್ಭ ರಕ್ಷಿಣಿ

ಆರ್ಷೇಯ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು

ಆಯುರ್ವೇದ ವೈದ್ಯ ಭೂಷಣ

ಪಂಡಿತ್ ಕೆ. ವಿ. ವೆಂಕಟರಾಮಯ್ಯ,

ಡಿ|| ಬೋರ್ಡ್ ವೈದ್ಯ, ಅರಕಲವಾಡಿ

ಚಾಮರಾಜನಗರ ತಾ||

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ

ದಿನ ಪತ್ರಿಕೆ

ಕೂಡಲೇ [illegible]ದಾರರಾಗಿರಿ

FOR SALE

One G. E. C. ma[illegible]

'REFRIGERATO[illegible]

in good working cond[illegible]

Price Rs. 1500

or near offer

Apply to :-

The Proprietor,

University Restaura[illegible]

MYSORE.

ನಾಯಿಕೆಮ್ಮಿನ ಔಷ[illegible]

7-8 ದಿವಸಗಳಲ್ಲೇ [illegible] ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರ್ಲು—ಉಬ್ಬಸಕ್ಕೆ

(Asthma)

ಖಾತರಿಯಾದ ಔಷಧಿ ದೊರೆ[illegible] ಅನೇಕ ದೊಡ್ಡ ಮನುಷ್ಯರು ಬಂ[illegible] ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು [illegible]ದ್ದಾರೆ.

(Appendecitis) ಗ[illegible] ಮತ್ತು (Tonsils) ಗಳಾದ[illegible]ಗಳನ್ನು ಆಪರೇಷನ್ ಇಲ್ಲದೆ ಗುಣಪಡಿ[illegible] ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್ ಎಸ್ ಪಂ[illegible] ದಿವಾನ್ಸ್‌ರೋಡ್. ಗೊಲ್ಲಗೇರಿ ಮೈ[illegible]



ಈ ಐವತ್ತು ವರ್ಷಗಳ[illegible] ಮಾನವ ಲೋಕಕ್ಕೆ ಆರೋಗ[illegible]ನಂದಗಳನ್ನು ನೀಡುತ್ತಾ ಅನ[illegible]ವಾಗಿ, ಅವಿಚ್ಛಿನ್ನವಾಗಿ ಸೇ[illegible] ಮಾಡಿ, ದಿನ ದಿನಾಭಿವೃ[illegible] ಹೊಂದುತ್ತಿರುವ ದ[illegible] ಎಷ್ಟೋ ಗರ್ವಿಸುತ್ತಿದೆ.



ರಾಜಕಮಲ್, ಮೈಸೂರು

ತಾ|| ೨-೫-೪೭ ರಿಂದ ಎರಡನೇ ವಾರ

ಮೊದಲನೇ ಆಟ ಮಧ್ಯಾಹ್ನ 3-30; ೨ ನೇ ಆಟ 6-30; ೩ ನೇ ಆಟ 9-30ಕ್ಕೆ

'ಗೊಲ್ಲಭಾಮ'

(ತೆಲುಗು)

ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ ಪಾತ್ರ ವಹಿಸಿರುವ

ಮಾನವನ ಹೃದಯದ ಜ್ವಾಲಾಮುಖಿಯಲ್ಲಿ ದೇವತೆಗಳಿಗೂ

ಸಿಗದ ಶಾಂತಿ ಮಾನವನಿಗೆ ಹೇಗೆ ದೊರಕಿತೆಂಬುದನ್ನು

ನಿರೂಪಿಸುವ ಅಮೋಘ ಚಿತ್ರಕಥಾವಳಿ

2-5-47 ರಿಂದ 4 ದಿನಗಳು ಪ್ರಾತಃಕಾಲ 10-30 ಕ್ಕೆ

"ರಾಜಾ ಗೋಪೀಚಂದ್"

(ಹಿಂದಿ)

—: ಭೂಮಿಕೆ :—

ಚಂದ್ರಕಾಂತಾ, ಪ್ರಭಾ

ಪೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೩—೫—೪೭ [ಸಂಚಿಕೆ ೨೨೭

ಗಡಿನಾಡು ಪ್ರಾಂತ್ಯದಲ್ಲಿ ಗೌರ್ನರರ ಪ್ರಭುತ್ವವೇ?

ತಿರುಪತಿ ದೇವಸ್ಥಾನಕ್ಕೆ ಹರಿಜನ ಧರ್ಮದರ್ಶಿ

ಹರಿಜನರಾದ ಶ್ರೀ ದೊಡ್ಡಿ ಕಣ್ಣ ಎಂಬವರನ್ನು ತಿರುಪತಿ ವೆಂಕಟರಮಣ ಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳನ್ನಾಗಿ ನೇಮಿಸಲಾಗಿದೆ. ಚರಿತ್ರಾರ್ಹವಾದ ಈ ದೇವಸ್ಥಾನಕ್ಕೆ ಹರಿಜನರು ಧರ್ಮದರ್ಶಿಗಳಾದುದು ಇದೇ ಮೊದಲು. ಅಲ್ಲದೆ ಅವರು ಬ್ರಹ್ಮೋತ್ಸವ ಸಮಿತಿ ಸದಸ್ಯರನ್ನಾಗಿಯೂ ಚುನಾಯಿಸಿರುವುದು ವಿಶೇಷ ಪ್ರಾಮುಖ್ಯವಾದುದಾಗಿದೆ.

೩೦ ವರ್ಷ ತುರಂಗದಲ್ಲಿ ೧೯ ನೇ ಸಲ ಶಿಕ್ಷೆಗೆ ಗುರಿಯಾದವ

ಬೆಜವಾಡದಲ್ಲಿ ಟಿ. ವೆಂಕಟಸ್ವಾಮಿ ಎಂಬ ೫೫ ವರ್ಷ ವಯಸ್ಸಿನವನು ಇದುವರೆಗೆ ೧೮ ಬಾರಿ ಶಿಕ್ಷೆಗೆ ಗುರಿಯಾಗಿ ೩೦ ವರ್ಷಗಳ ಕಾಲ ಜೈಲು ವಾಸವನ್ನು ಅನುಭವಿಸಿ ಈಗ ಮತ್ತೆ ಕಳ್ಳತನವೊಂದರ ಆಪಾದನೆಯಲ್ಲಿ ೪ ವರ್ಷಗಳ ಕಠಿಣ ಶಿಕ್ಷೆಗೆ ಗುರಿಯಾಗಿದ್ದಾನೆ.

ಚಲಿಸುವ ಟೆಲಿಫೋನುಗಳು

ಕಾರ್, ಬಸ್ಸು ಅಥವಾ ರೈಲುಗಳಲ್ಲಿ ಪ್ರಯಾಣ ಮಾಡುವಾಗ ಪ್ರಯಾಣಿಕರು ಉಪಯೋಗಿಸಲು ಟೆಲಿಫೋನ್ ಸೌಕರ್ಯಗಳನ್ನು ಅಮೆರಿಕಾ ಸಂಯುಕ್ತ ಸಂಸ್ಥಾನದ ೭೦ ನಗರಗಳಲ್ಲಿ ಏರ್ಪಡಿಸಲಾಗುವುದು. ರೇಡಿಯೋ ಮೂಲಕ ಇದರ ಸಂಬಂಧವು ಕಲ್ಪಿಸಲಾಗುವುದು ಎಂದು ವರದಿಯಾಗಿದೆ.

ಪಾಕೀಸ್ಥಾನಕ್ಕೆ ಪ್ರತ್ಯೇಕ ರಾಜ್ಯಾಂಗ ಸಭೆ

ಮಿ॥ ಜಿನ್ನಾರವರ ಕಾರ್ಯದರ್ಶಿಗಳು ಹೇಳಿಕೆಯೊಂದನ್ನು ಹೊರಡಿಸಿ, ಪಾಕೀಸ್ಥಾನ ಪ್ರದೇಶಗಳ ರಾಜ್ಯಾಂಗ ವ್ಯವಸ್ಥೆಯನ್ನು ರಚಿಸಲು ಮುಸ್ಲಿಂ ಲೀಗು ತನ್ನದೇ ಆದ ಪ್ರತ್ಯೇಕ ರಾಜ್ಯಾಂಗ ಸಭೆಯನ್ನು ನಡೆಸುವ ಯೋಜನೆಯನ್ನು ಮಾಡಿರುವುದಾಗಿ ತಿಳಿಸಿದ್ದಾರೆ.

ದಿವಾನರ ರಾಜೀನಾಮೆ ವಾಪಸು

ತಿರುವಾಂಕೂರು ಭಾರತ ರಾಜ್ಯಾಂಗ ಸಭೆಗೆ ಸೇರಬೇಕೆಂದು ದಿವಾನರಾದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರು ಇತ್ತೀಚೆ ಸಲಹೆಯನ್ನು ಅಲ್ಲಿನ ಮಹಾರಾಜರು ನಿರಾಕರಿಸಿದುದರಿಂದ ಶ್ರೀ ಅಯ್ಯರ್‌ರವರು ತಮ್ಮ ಅಧಿಕಾರಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಆದರೆ ಮಹಾರಾಜರು ತಮ್ಮ ನಿರ್ಧಾರವನ್ನು ಬದಲಾಯಿಸಿ ರಾಜ್ಯಾಂಗ ಸಭೆಗೆ ಸೇರಲು ಒಪ್ಪಿದುದರಿಂದ ದಿವಾನರು ತಮ್ಮ ರಾಜೀನಾಮೆಯನ್ನು ವಾಪಸು ತೆಗೆದುಕೊಂಡಿದ್ದಾರೆ. (ಗ್ಲೋಬ್ ಸುದ್ದಿ)

ಚುಂಬನಕ್ಕೆ ಪ್ರತಿಬಂಧಕ

ಮೆಕ್ಸಿಕೋ ನಗರದ ವಿಮಾನ ನಿಲ್ದಾಣದಲ್ಲಿ ಚುಂಬನದ ಮೇಲೆ ಪ್ರತಿಬಂಧಕಾಜ್ಞೆಯನ್ನು ಜಾರಿಗೆ ತರಲಾಗಿದೆ. ಕಳ್ಳತನದ ಸಾಮಾನು ಸಾಗಿಸುವವರು ಬೀಳ್ಕೊಡುವವರಿಂದಲೂ, ಅವರು ಚಿನ್ನ, ವಜ್ರ ಮತ್ತು ನೋಟುಗಳು ಮುಂತಾದ ಭಾರಿ ಬೆಲೆಗೆ ಗುರಿಯಾದ ವಸ್ತುಗಳನ್ನು ತಮ್ಮ ಪ್ರೀತಿಯ ಕುರುಹಾಗಿ ಪ್ರಯಾಣಿಕರಿಗೆ ಕೊಡುವುದನ್ನು ತಪ್ಪಿಸಲು ಈ ರೀತಿ ಮಾಡಲಾಯಿತೆಂದೂ ತಿಳಿಸಲಾಗಿದೆ. (ಗ್ಲೋಬ್ ಸುದ್ದಿ)

೧೯೪೮ ರಲ್ಲಿ ಭಾರತವು ಸ್ವತಂತ್ರವಾದರೆ ಅದೊಂದು ಅದ್ಭುತ

ಇಂಗ್ಲೆಂಡಿನ ಅಧ್ಯಕ್ಷ ಮಿ॥ ಡಿವಲೆರಾರವರನ್ನು ಭಾರತದ ಶ್ರೀ॥ ಕೆ. ಸಿ. ವರ್ಮಾ ಎಂಬ ವಿದ್ಯಾರ್ಥಿಯು ಭೇಟಿ ಮಾಡಿ ಮಾತುಕತೆ ನಡೆಸಿದಾಗ, ಭಾರತವು ರಕ್ತಪಾತವಿಲ್ಲದೆ ೧೯೪೮ ರಲ್ಲಿ ಸ್ವಾತಂತ್ರ್ಯವನ್ನು ಪಡೆದರೆ ಅದು ನಿಜವಾಗಿಯೂ ಅದ್ಭುತವೇ ಸರಿ ಎಂದು ಮಿ॥ ಡಿವಲೆರಾರವರು ಹೇಳಿರುವರೆಂದು ಗೊತ್ತಾಗಿದೆ. ಭಾರತದೊಡನೆ ರಾಯಭಾರಿ ಸಂಬಂಧವನ್ನು ಕೂಡಲೇ ಕಲ್ಪಿಸಲು ಪ್ರಯತ್ನಿಸುವುದಾಗಿಯೂ ಅವರು ತಿಳಿಸಿದ್ದಾರೆ.

ಗಡಿನಾಡಿನಲ್ಲಿ ಗೌರ್ನರರ ಆಡಳಿತ

ಗಡಿನಾಡು ಪ್ರಾಂತ್ಯದಲ್ಲಿ ಕಾಂಗ್ರೆಸ್ ಮಂತ್ರಿಮಂಡಲವನ್ನು ವಜಾಮಾಡಿ ಗೌರ್ನರ್ ಜನರಲ್ ಸೆಕ್ಷನ್ ಪ್ರಕಾರ ಅಧಿಕಾರವನ್ನು ಗೌರ್ನರರೇ ವಹಿಸಿಕೊಳ್ಳುವಂತೆ ವೈಸರಾಯರು ಸೂಚಿಸಬಹುದೆಂದು ದೆಹಲಿಯಲ್ಲಿ ಹೇಳಲಾಗುತ್ತಿದೆ. ಗಡಿನಾಡಿನ ಪ್ರವಾಸ ಪ್ರಮುಖ್ಯವಾದಮೇಲೆ ಅಲ್ಲಿನ ಪರಿಸ್ಥಿತಿಯನ್ನು ಅರಿತ ವೈಸರಾಯರು ಈ ಬಗ್ಗೆ ತಾತ್ಕಾಲಿಕ ಸರ್ಕಾರದ ಮಂತ್ರಿಗಳಿಗೆ ಸೂಚನೆಯನ್ನು ಕೊಟ್ಟಿರಬಹುದೆಂದೂ ಭಾವಿಸಲಾಗಿದೆ.

ಕೋಮುವಾರು ಗಲಭೆಯಿಂದ ಸೀರೆ ಬೆಲೆ ಇಳಿಯಿತು

ಭಾರತದಲ್ಲಿ ತಲೆದೋರಿರುವ ಕೋಮುವಾರು ಗಲಭೆಯು ದೆಸೆಯಿಂದ ಬನಾರಸ್ ಸೀರೆಯ ಬೆಲೆ ಇಳಿದು ಹೋಗಿದೆ. ಕಳೆದ ಅಕ್ಟೋಬರಿನಲ್ಲಿ ೧೦೦೦ ರೂ. ಬಾಳುತ್ತಿದ್ದ ಸೀರೆ ಈಗ ೪೦೦ ರೂ. ಗಳಿಗೆ ಸಿಗುತ್ತಿವೆ. ಗಲಭೆ ಇದೇ ರೀತಿ ಮುಂದುವರಿದರೆ ಬೆಲೆ ಇನ್ನೂ ಇಳಿಯಬಹುದು ಎಂದು ಕಾಶಿಯ ರೇಷ್ಮೆ ವರ್ತಕರ ಸಂಘದ ಅಧ್ಯಕ್ಷರು ತಿಳಿಸಿದ್ದಾರೆ.

ಕಾಂಗ್ರೆಸ್ ವಿಜಯ

ಸ್ವಂ ಸು] ನಂಜನಗೂಡು ೧

ಮೈಸೂರು ಜಿಲ್ಲಾ ಬೋರ್ಡಿಗೆ ಈ ತಾಲ್ಲೂಕಿನಿಂದ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಶ್ರೀಗಳಾದ ಹೆಚ್. ಲಿಂಗಪ್ಪನವರು ಮತ್ತು ಹೆಚ್. ಎಂ. ನಾಗಪ್ಪನವರೂ ಸ್ವತಂತ್ರರಾದ ಶ್ರೀ ಮ. ಮಹದೇವಪ್ಪನವರೂ ಚುನಾಯಿತರಾಗಿದ್ದಾರೆ.

ಉಪಾಧ್ಯಕ್ಷರೇ ಸಭೆಯನ್ನು ಕರೆಯುವರು

ಮೈಸೂರು ೩

ಪೌರಸಭಾಧ್ಯಕ್ಷರಲ್ಲಿ ಅವಿಶ್ವಾಸವನ್ನು ಸೂಚಿಸಲು ಸಭೆಯನ್ನು ಸೇರಿಸುವುದಿಲ್ಲವೆಂದು ಅಧ್ಯಕ್ಷರು ತಿಳಿಸಿರುವುದರಿಂದ ಉಪಾಧ್ಯಕ್ಷರೇ ತಮಗಿರುವ ಅಧಿಕಾರವನ್ನು ಚಲಾಯಿಸಿ ಈ ತಿಂಗಳು ೬ ನೇ ತಾ॥ ಮಂಗಳವಾರ ಇದಕ್ಕಾಗಿ ವಿಶೇಷ ಅಧಿವೇಶನವನ್ನು ಕರೆದಿರುವರೆಂದು ತಿಳಿದು ಬಂದಿದೆ.

ಪರೀಕ್ಷೆ

ಚಾಮುಂಡಿ ಪುರಸಭಾ ಗೊಲ್ಲಗೇರಿಯಲ್ಲಿರುವ ಜನತಾ ರಾಷ್ಟ್ರ ಮಂದಿರದಲ್ಲಿ ಈ ದಿನ ರಾತ್ರಿ ೯ ಘಂಟೆಗೆ ವಿದ್ಯಾರ್ಥಿ ಸೇನೆಯ ನಾಟಕಾಭಿನಯ 'ಸತಿ ಅನುಸೂಯ' ಎಂಬ ಪರೀಕ್ಷೆ ನಡೆಯುವುದು.

ವಿವಾಹ ಮಹೋತ್ಸವ

ಮೈಸೂರು ಪುರಸಭಾ ಸದಸ್ಯರೂ, ಪ್ರಮುಖ ವರ್ತಕರೂ ಆದ ಶ್ರೀ. ಎಸ್. ಲಿಂಗಣ್ಣನವರು ತಮ್ಮ ಮಗ ಶ್ರೀ॥ ಶಂಕರಪ್ಪನಿಗೆ ನಜರ್‌ಬಾದ್ ವರ್ತಕರಾದ ಶ್ರೀ॥ ಕೆ. ಪುಟ್ಟಣ್ಣನವರ ಮಗಳು ಸೌ॥ ಪಾರ್ವತಮ್ಮನನ್ನು ತಂದುಕೊಂಡು ನಿನ್ನೆ ನಗರದ ಶ್ರೀ ಸಿದ್ಧಪ್ಪನವರ ಲಿಂಗಾಯತ ವಿದ್ಯಾರ್ಥಿ ನಿಲಯದಲ್ಲಿ ವಿವಾಹವನ್ನು ವೈಭವದಿಂದ ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ॥ ಲಿಂಗಣ್ಣನವರು ಮೈಸೂರು ಕಾಂಗ್ರೆಸ್ಸಿಗೆ ೧೦೦ ರೂ. ಗಳನ್ನೂ, ಶ್ರೀ॥ ಕೆ. ಎಚ್. ರಾಮಯ್ಯನವರ ಅನಾಥಾಲಯಕ್ಕೆ ೧೦೦ ರೂ. ಗಳನ್ನೂ ಕೊಟ್ಟಿರುವರು.

ರಾಜಧಾನಿಯ ಏಜೆಂಟರು

1-5-47 ರಿಂದ ಈ ಕೆಳಗೆ ಕಂಡವರನ್ನು ರಾಜಧಾನಿಯಲ್ಲಿ 'ಸಾಧ್ವಿ' ಪತ್ರಿಕೆಯ ಏಜೆಂಟರನ್ನಾಗಿ ನೇಮಿಸಲಾಗಿದೆ. ಮಹಾಜನರು ಅವರಿಗೆ ಪರ್ಯಾಪ್ತವಲ್ಲಿಯೂ ಸಹಕಾರವನ್ನು ನೀಡಬೇಕಾಗಿ ವಿನಂತಿ.

ವ್ಯವಸ್ಥಾಪಕ, 'ಸಾಧ್ವಿ'

ಏಜೆಂಟರು—ಜನರಲ್ ಏಜೆನ್ಸೀಸ್, ನಂ ೩ ಸೇ ರಂಗ ಪಾರ್ಟನರ್—ಶ್ರೀ॥ ಎಸ್. ಶ್ರೀಕಂಠಸ್ವಾಮಿ, ಬಿ. ಎ., ಎ. ರಾಮಣ್ಣನವರ ಛತ್ರ, ಮೈಸೂರು

ಪಾಕೀಸ್ಥಾನದ ಟಿಕೇಟುಗಳು

ಮುಸ್ಲಿಂ ಲೀಗಿನ ಸ್ವಯಂ ಸೇವಕರು ಮೊನ್ನೆ ದಿನ ಗಡಿನಾಡಿನಲ್ಲಿರುವ ನೌಶೇರಾ ಎಂಬ ರೈಲ್ವೆ ನಿಲ್ದಾಣಕ್ಕೆ ನುಗ್ಗಿ ಪಾಕೀಸ್ಥಾನದ ಟಿಕೇಟುಗಳನ್ನು ಪ್ರಯಾಣಿಕರಿಗೆ ಕೊಟ್ಟರೆಂದು ಗೊತ್ತಾಗಿದೆ. ಅಬಟಾಬಾದ್, ಹರಿಪುರ ಮ್ಯಾನ್‌ಸರಾ ಮತ್ತು ಮರ್ದಾನ್ ನಗರಗಳ ನ್ಯಾಯಾಸ್ಥಾನಗಳನ್ನು ಸ್ವಯಂ ಸೇವಕರು ಪಿಕೆಟ್ ಮಾಡಿದರೆಂದೂ ವರದಿಯಾಗಿದೆ.

ರೆಡ್ಡಿಯವರು ದೆಹಲಿಗೆ

ಸ್ವಂ. ಸು. ವೈ॥] ಬೆಂಗಳೂರು ೩

ಶ್ರೀ ಚೆಂಗಲರಾಯ ರೆಡ್ಡಿಯವರು ಮಿಮಾನದಲ್ಲಿ ಈ ದಿನ ದೆಹಲಿಗೆ ತೆರಳಿದರು. ರಾಷ್ಟ್ರ ನಾಯಕರೊಡನೆ ಮಾತುಕತೆ ನಡೆಸಿ ಒಂದು ವಾರದ ನಂತರ ಹಿಂದಿರುಗುವರು.

ಈ ತಿಂಗಳ ಅಂತ್ಯದಲ್ಲಿ ಇಲ್ಲಿ ನಡೆಯುವ ಡಾ॥ ಭಾ॥ ಹಿಕ್ಕಿ ಕಲ್ ವಿದ್ಯಾ ಸಮ್ಮೇಳನದ ಆರಂಭೋತ್ಸವವನ್ನು ದಿವಾನರು ನೆರವೇರಿಸುವರು.

ಕಮ್ಯೂನಿಸ್ಟ್ ನಾಯಕರಾದ ಶ್ರೀ ಎಸ್. ಎ. ಡಾಂಗೆಯವರು ಇಲ್ಲಿಗೆ ನಿನ್ನೆ ಬಂದರು.

ರಾಷ್ಟ್ರೀಯ ಭಾಷೆಯಲ್ಲಿಯೇ ರಾಜ್ಯಾಂಗ ರಚನೆ

ಭಾರತದ ಭವಿಷ್ಯ ರಾಜ್ಯಾಂಗವು ಇಂಗ್ಲಿಷ್ ಭಾಷೆಯಲ್ಲಿದ್ದರೂ ಕೂಡ ರಾಜ್ಯಾಂಗ ಸಭೆಯಲ್ಲಿ ರಚಿತವಾದ ಯೋಜನೆಯನ್ನು ರಾಷ್ಟ್ರೀಯ ಭಾಷೆಗೆ ಪರಿವರ್ತಿಸಬೇಕೆಂದೂ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದರು ತಿಳಿಸಿದ್ದಾರೆ.

ಬಂಗಾಳಾ ವಿಭಜನೆಗೆ ಐರೋಪ್ಯರ ವಿರೋಧ

ಬಂಗಾಳಾ ಪ್ರಾಂತ್ಯದಲ್ಲಿರುವ ಐರೋಪ್ಯರು ಆ ಪ್ರಾಂತ್ಯವನ್ನು ವಿಭಾಗ ಮಾಡದಂತೆ ವೈಸರಾಯರನ್ನು ಒತ್ತಾಯ ಪಡಿಸುತ್ತಿದ್ದಾರೆಂದು ತಿಳಿದು ಬಂದಿದೆ. ಸೆಣಬಿನ ಕೈಗಾರಿಕೆಯ ಬಹು ಭಾಗವು ಇವರ ಕೈಯಲ್ಲಿಯೇ ಇರುವುದರಿಂದ ಪ್ರಾಂತ್ಯವು ವಿಭಾಗವಾದರೆ ತಮ್ಮ ವ್ಯಾಪಾರಕ್ಕೆ ಧಕ್ಕೆ ಬರಬಹುದೆಂದೂ ಅವರು ಭಾವಿಸಿದ್ದಾರೆ.

ಕಾಂಗ್ರೆಸ್ ನಾಯಕರ ಸಮಾಲೋಚನೆ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ದೆಹಲಿಯ ಬಂಗಿ ಕಾಲೊನಿಯಲ್ಲಿ ನಡೆಯುತ್ತಿದೆ. ವೈಸರಾಯರು ತಮ್ಮ ಯೋಜನೆಯನ್ನು ಹೊರಗೆಡಹುವ ವರೆವಿಗೆ ಯಾವ ನಿರ್ಧಾರವೂ ಆಗಲಾರದೆಂದು ಹೇಳಲಾಗಿದೆ. ಬ್ರಿಟಿಷರು ಪಾಕೀಸ್ಥಾನವನ್ನು ಕೊಡುವುದಾದರೆ ಅನಿವಾರ್ಯ ಪಂಜಾಬ್ ಮತ್ತು ಬಂಗಾಳಾ ವಿಭಜನೆಯೂ ಆಗಬೇಕೆಂದು ನಾಯಕರು ಅಭಿಪ್ರಾಯ ಪಡುತ್ತಿದ್ದಾರೆ. ಮಹಾತ್ಮ ಗಾಂಧಿಯವರು ಮಾತ್ರ ಯಾವ ವಿಧವಾದ ವಿಭಜನೆಗೂ ಒಪ್ಪುವುದಿಲ್ಲವೆಂದು ಹೇಳಲಾಗಿದೆ.

ಕಾಂಗ್ರೆಸ್ ಭವನಕ್ಕೆ ಸಹಾಯ

ಸ್ವಂ ಸು.] ಚಾಮರಾಜನಗರ ೧

ಈ ತಾಲ್ಲೂಕು ಕಾಂಗ್ರೆಸ್ ಭವನವನ್ನು ರಚಿಸಲು ಪ್ರಯತ್ನಗಳು ಆರಂಭವಾಗಿವೆ. ಈ ಸಂಬಂಧದಲ್ಲಿ ಬಸವಲಿಂಗಪ್ಪನವರ ಪುತ್ರರಾದ ಶ್ರೀ॥ ಎಂ. ಸಿ. ಬಸಪ್ಪನವರು ನಿಧಿ ಸಂಗ್ರಹಿಸಲು ಆರಂಭಿಸಿದ್ದಾರೆ. ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದು ತಾ॥ ಕಾಂ॥ ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ಸಾಧ್ವಿ

ತಾ|| ೩-೫-೪೭ ಶನಿವಾರ

ವಿಭಜನೆಯ ಗೊಂದಲ

ಭರತಖಂಡದಲ್ಲಿ ಹಿಂದೂ ಮತ್ತು ಮುಸ್ಲಿಂ ಎಂಬ ಎರಡು ಪ್ರತ್ಯೇಕ ರಾಷ್ಟ್ರಗಳವೆಯೆಂದೂ ಈ ದೇಶವನ್ನು ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳೆಂಬ ಎರಡು ಭಾಗಗಳಾಗಿ ಹಂಚಬೇಕೆಂದೂ ಮಿ|| ಜಿನ್ನಾ ರವರು ವಾದಿಸುತ್ತಿರುವರಷ್ಟೆ. ಹೀಗೆ ಕೋಮುವಾರು ಆಧಾರದ ಮೇಲೆ ದೇಶವನ್ನು ಹಂಚುವುದು ಯಾರಿಗೂ ಹಿತಕರವಲ್ಲವೆಂದು ಅವರಿಗೆ ಎಷ್ಟು ಹೇಳಿದರೂ ಫಲಕಾರಿಯಾದಂತೆ ಕಾಣುವುದಿಲ್ಲ. ಅದುದರಿಂದ ರಾಷ್ಟ್ರನಾಯಕರುಗಳೂ ಸಹ ಜಿನ್ನಾರವರ ಅಸ್ತ್ರವನ್ನೇ ಪ್ರಯೋಗಿಸಲು ಮೊರೆಹೊಕ್ಕಿರುವರು.

ಇದುವರೆಗೆ ಬಂಗಾಳ ಮತ್ತು ಪಂಜಾಬುಗಳಲ್ಲಿ ನಡೆದಂತಹ ಕೋಮುವಾರು ಅತ್ಯಾಚಾರಗಳು ತಪ್ಪಬೇಕಾದರೆ ಆ ಪ್ರಾಂತಗಳನ್ನು ವಿಭಾಗ ಮಾಡುವುದೇ ಪರಿಹಾರೋಪಾಯವೆಂದು ಕಾಂಗ್ರೆಸ್ಸಿನವರೂ ಇತರ ಮುಖಂಡರೂ ಹೇಳತೊಡಗಿದ್ದಾರೆ. ಮುಸ್ಲಿಂ ಲೀಗಿನವರು ರಾಷ್ಟ್ರ ವಿಭಜನೆಗೆ ಒತ್ತಾಯಪಡಿಸುತ್ತಿರುವರು. ರಾಷ್ಟ್ರನಾಯಕರು ಪ್ರಾಂತ ವಿಭಜನೆಯನ್ನು ಕೇಳುತ್ತಿರುವರು. ಉಭಯತ್ರರೂ ಕೋಮುವಾರು ಆಧಾರದ ಮೇಲೆಯೇ ವಿಭಜನೆಯನ್ನು ಬಯಸುತ್ತಿರುವರು.

ಮುಸ್ಲಿಂ ಕೋಮಿನವರು ಬಹುಸಂಖ್ಯಾತರಾಗಿರುವ ಪ್ರದೇಶಗಳನ್ನು ಒಂದುಗೂಡಿಸಬೇಕೆಂದು ಜಿನ್ನಾರವರು ಹೇಳುವರು. ಆದರೆ ಅತ್ಮ ನಿರ್ಣಯದ ತತ್ವದ ಮೇಲೆ ಪ್ರಾಂತಗಳನ್ನು ವಿಭಾಗ ಮಾಡಬೇಕೆಂದು ಕಾಂಗ್ರೆಸ್ಸಿನವರು ಹೇಳುವರು. ತಮ್ಮ ಕಸಿನ ಪಾಕಿಸ್ಥಾನದ ಪ್ರದೇಶಕ್ಕೆ ಧಕ್ಕೆ ತಗಲುವುದನ್ನೂ ಪಾಕಿಸ್ಥಾನದ ಸುತ್ತಲೂ ಹಿಂದೂಸ್ಥಾನದ ಪ್ರದೇಶಗಳಲ್ಲಿ ಆವರಿಸಿಕೊಳ್ಳುವುದನ್ನೂ ಕಂಡು ಜಿನ್ನಾರವರು ದಿಗ್ಭ್ರಾಂತರಾಗಿದ್ದಾರೆ. ಆದುದರಿಂದ ಪ್ರಾಂತ ವಿಭಜನೆಗೆ ತಮ್ಮ ಅಸಮ್ಮತಿಯನ್ನು ಸೂಚಿಸುತ್ತಿದ್ದಾರೆ. ಈ ಪ್ರಯತ್ನವು ಒಂದು ಕುಟಿಲ ನೀತಿಯೆಂದೂ ಅದನ್ನು ಪ್ರತಿಭಟಿಸಬೇಕೆಂದು ಹೇಳತೊಡಗಿದ್ದಾರೆ.

ತಮ್ಮ ದೋಷವನ್ನು ತಾವೇ ಉಪಭೋಗಿಸುವ ಪರಿಸ್ಥಿತಿಯು ಜಿನ್ನಾರವರಿಗೆ ಈಗ ಒದಗಿದೆ. ಆದುದರಿಂದ ಅವರು ತಮಗೆ ಒಂದು ನ್ಯಾಯ, ಇತರರಿಗೆ ಇನ್ನೊಂದು ನ್ಯಾಯ-ಎಂಬ ನೀತಿಯನ್ನು ಅನುಸರಿಸುತ್ತಿದ್ದಾರೆ. ಪಾಕಿಸ್ಥಾನವು ಬೇಕಾದರೆ ಅವರು ಪ್ರಾಂತಗಳ ವಿಭಜನೆಗೂ ಒಪ್ಪಬೇಕು. ಅಲ್ಲಿಗೆ ಪಾಕಿಸ್ಥಾನವು ತಾನಾಗಿಯೇ ನಿರ್ನಾಮವಾಗುವುದು. ಇಲ್ಲವಾದರೆ ಅಖಂಡ ಭಾರತಕ್ಕೆ ಅವರು ಒಪ್ಪಬೇಕಾಗುವುದು.

ಮಿ|| ಜಿನ್ನಾರವರ ಆಟಕ್ಕೆ ರಾಷ್ಟ್ರನಾಯಕರು ತಕ್ಕ ಪ್ರತೀಕಾರವನ್ನು ಹೂಡಿರುವರು. ಅದು ಇನ್ನು ಬಹಳ ಕಾಲ ನಡೆಯುವುದಿಲ್ಲ. ಬ್ರಿಟಿಷರು ಹೊರಟು ಹೋಗುವ ಕಾಲವು ಸಮೀಪಿಸಿದಂತೆಲ್ಲಾ ಇಂತಹ ಕಗ್ಗಂಟುಗಳಿಗೆ ಅಂತ್ಯವೂ ಸಮೀಪಿಸುವುದರಲ್ಲಿ ಸಂಶಯವಿಲ್ಲ.

Edited, printed and published by A. R. Nagarajan at the Sadhvi P., D. Subbaiah Road, Mysore.

ಶಾಂತಾ ಟಾಕೀಸ್, ಮೈಸೂರು

೩-೫-೪೭ ರಿಂದ ೩ ನೇ ವಾರ

ರಾಜಕುಮಾರಿ

(ತಮಿಳು)

ಕ್ರಯಕ್ಕಿದೆ.

ಹೋರ್ ಸಂ ೧೧೦೧೬, ಸಿಮೆಂಟ್ ಬ್ಲಾಕ್.

ವಿವರಗಳಿಗೆ:—

ಆರ್. ಗುಂಡೂರಾವ್,

ಮೈಸೂರು ಬ್ಯಾಂಕ್ ಕಟ್ಟಡ, ಮೈಸೂರು.

ರಾಜಕಮಲ್, ಮೈಸೂರು

ತಾ|| ೨-೫-೪೭ ರಿಂದ ಎರಡನೇ ವಾರ

ಮೊದಲನೇ ಆಟ ಮಧ್ಯಾಹ್ನ 3-30; ೨ ನೇ ಆಟ 6-30; ೩ ನೇ ಆಟ 9-30ಕ್ಕೆ

'ಗೊಲ್ಲಭಾಮ'

(ತೆಲುಗು)

ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ ಪಾತ್ರವಹಿಸಿರುವ

ಮಾನವನ ಹೃದಯದ ಜ್ವಾಲಾಮುಖಿಯಲ್ಲಿ ದೇವತೆಗಳಿಗೂ ಸಿಗದ ಶಾಂತಿ ಮಾನವನಿಗೆ ಹೇಗೆ ದೊರಕಿತೆಂಬುದನ್ನು ನಿರೂಪಿಸುವ ಅಮೋಘ ಚಿತ್ರಕಥಾವಳಿ

2-5-47 ರಿಂದ 4 ದಿನಗಳು ಪ್ರಾತಃಕಾಲ 10-30 ಕ್ಕೆ

"ರಾಜಾ ಗೋಪೀಚಂದ್"

(ಹಿಂದಿ)

-: ಭೂಮಿಕೆ :-

ಚಂದ್ರಕಾಂತ್, ಪ್ರಭಾ

ಇದೀಗ ಸಿದ್ಧವಾಗುತ್ತಿದೆ * *

ಹಿಮಾಂಶು ರೂಪವಾಣಿ ಇವರ ಕನ್ನಡ ಸಾಮಾಜಿಕ ಚಿತ್ರ

★ ಬಿಂದು ★

ನಿರ್ದೇಶನ - ಎಂ. ಎಸ್. ಆಚಾರ್ಯ ಮತ್ತು ಹನುಮಂತರಾವ್

ಸಂಗೀತ— ಆಸ್ಥಾನ ವಿದ್ವಾನ್ ನಾ|| ಮಿ|| ಬಿ. ದೇವೇಂದ್ರಪ್ಪ

— ಸ್ಟುಡಿಯೋ-ನವಜ್ಯೋತಿ, ಮೈಸೂರು —

HIMAMSU RUPAVANI, MYSORE

Chamundeswari Talkie

Morning Shows on 2, 3, 4 and 5th at 10-30 a.m.

Echo Murder

Starring :-David Sarara Davis Arnuedel

ಪ್ರಕಟನೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:-

ಮೈಸೂರು ಸಿಟಿ ದೇವರಾಜ ಮಾರ್ಕೆಟ್ಟಿನಲ್ಲಿ ನೆಲದಮೇಲೆ ಉಗುಳುವುದೂ, ಮತ್ತು ಹಣ್ಣಿನ ಸಿಪ್ಪೆಗಳನ್ನು ಸಿಕ್ಕಿದ ಕಡೆ ಹಾಕುವುದೂ ಬಹಳ ಜಾಸ್ತಿಯಾಗಿರುತ್ತೆ. ಇದರಿಂದ ಅನೇಕ ಅಪಾಯಗಳು ಸಂಭವಿಸುವ ಸಂದರ್ಭವಿರುತ್ತದೆ. ಇದಕ್ಕೆ ಕಳಕಳಿಯನ್ನು ಮುಂಜಾಗ್ರತೆ ಬಗ್ಗೆ ದೊಡ್ಡವರುಗಳ ಮೂಲಕ ಎಚ್ಚರಿಕೆ ಕೊಟ್ಟಾಗ್ಯೂ ಈ ತರಹ ವರ್ತನೆಯು ಮಾರ್ಕೆಟ್ಟಿನಲ್ಲಿ ಹೆಚ್ಚುತ್ತಿದೆ. ಆದುದರಿಂದ ಪ್ರತಿಯೊಬ್ಬರೂ ಕೂಡ ಮೇಲ್ಕಂಡ ಅಪಾಯಗಳಿಂದ ತಪ್ಪಿಸಿಕೊಳ್ಳಲು ಹಣ್ಣಿನ ಸಿಪ್ಪೆಗಳನ್ನು ನಿರ್ಧಾಯಕವಾದ ಜಾಗಗಳಲ್ಲಿ ಹಾಕುವುದು ಮೂಲಕವೂ ಮತ್ತು ಧೂಕುದಾನಿಗಳಲ್ಲೇ ಉಗುಳುವುದರ ಮೂಲಕವೂ ಮಾರ್ಕೆಟ್ಟಿನ ಸ್ವಚ್ಛತೆಯನ್ನು ಕಾಪಾಡಲು ಸಹಾಯಕರಾಗಬೇಕು. ಇದಕ್ಕೆ ತಪ್ಪಿ ನಡೆದವರನ್ನು ಶಿಕ್ಷೆಗೆ ಗುರಿಮಾಡಲಾಗುತ್ತೆ.

(ಸಹಿ) ಇ. ಅನಂತರಾವ್,

ಛಾರ್ ಪ್ರೆಸಿಡೆಂಟ್.

ಮೈಸೂರು, ೨೮-೪-೪೭.

4 5 47 ನೇ ತಾರೀಖು ಸಾಯಂಕಾಲ 6-30 ಗಂಟೆಯಿಂದ

ಅಮೋಘ ಪ್ರಾರಂಭ

ಮೈಸೂರಿನ ಭವ್ಯ ಚಲನಚಿತ್ರ ಮಂದಿರ

ವುಡ್-ಲೆಂಡ್ ಟಾಕೀಸ್,

(ಆಶೋಕ ಹಾಲ್)

ಎ. ವಿ. ಯಂ. ಪ್ರೊಡಕ್ಷನ್ಸ್‌ರವರ ಅಮೋಘ ಸಾಮಾಜಿಕ ಚಿತ್ರ

★ 'ನಾಮ್-ಇರುವರು' ★

(ತಮಿಳು)

ತಾರಾಗಣ :- ಟಿ. ಆರ್. ಮಹಾಲಿಂಗಂ, ಟಿ. ಎ. ಜಯಲಕ್ಷ್ಮಿ, ಆರ್. ರಾಮಚಂದ್ರನ್ ಮತ್ತು ಇತರರು.

ಪ್ರೊಪ್ರೈಟರ್ಸ್ :— ಬಿ. ಎಂ. ಗೋವಿಂದಸ್ವಾಮಿ, ಬಿ. ಎಂ. ರಾಮಮೂರ್ತಿ.

ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ಬಾಲ್ಕನಿ ಸೀಟುಗಳನ್ನು ...

ಫೋ. ನಂ. ೨೨೨ ॥ ವಂದೇ ಮಾತರಂ ॥ ಬಿಡಿ ಪ್ರತಿಗೆ ೩ ಕಾಸು

ಸಾಧ್ವಿ

ಸಂಪುಟ ೫] ಭಾನುವಾರ ೪—೫—೪೬ [ಸಂಚಿಕೆ ೨೨೭

ಗಡಿನಾಡು ಚುನಾವಣೆಗೆ ಕಾಂಗ್ರೆಸ್ ವಿರೋಧ

...ಲಿನಲ್ಲಿ ತಿವಿದು ಹೊರಕ್ಕೆ ಎಸೆಯಲಾಯಿತು

...ಬ್ಬಲ್‌ಪುರದಲ್ಲಿ ಭಾರತ ಸೈನಿಕ ಆಸ್ಪತ್ರೆ...ಯಲ್ಲಿನ ನರ್ಸ್ ಮಿಸ್ ಆಲಂಟ ಎಂಬುವಳೊಬ್ಬಳು ಜಬ್ಬಲ್‌ಪುರದಿಂದ ...ಬಾಯಿಗೆ ರಾತ್ರಿ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಇಟಾರ್ಸಿಯ ಬಳಿ ದುರಾ...ತ್ಮನು ಅವಳಿದ್ದ ಬಾಗಿಲ್ಕೆ ನುಗ್ಗಿ ಅ...ತಳಿಗೆ ಚೂರಿಯಿಂದ ಗಾಯಪಡಿಸಿ ...ನ್ನು ಹೊರಕ್ಕೆ ಎಸೆದನೆಂದು ವರದಿ...ಗಿದೆ ಅದೃಷ್ಟವಶಾತ್ ಆಕೆಯು ...ಚಿ ಬದುಕಿಕೊಂಡಳು ಆ ವೈರಿ...ಗಿ ನಡೆದುಕೊಂಡು ಹೋಗಿ ಅಕೆ ...ಪೋಲೀಸರಿಗೆ ದೂರು ಕೊಟ್ಟು ಚೂ...ನ್ನು ತೋರಿಸಿದಳು ಪೋಲೀಸರು ...ಚಿ ನಡೆಸುತ್ತಿರುವರು

...ನ್ಯಾಯರ ಸಂಧಾನದ ಬಗ್ಗೆ ಭವಿಷ್ಯ

ಭಾರತದ ಬಗ್ಗೆ ಮಾತುಕತೆ ನಡೆಸಲು ...ನ್ನಿಗೆ ಹೋಗಿರುವ ವೈಸ್ರಾಯರ ಆಪ್ತ ...ದರ್ಶಿ ಲಾರ್ಡ್ ಇಸ್ಮೇರವರ ಪ್ರಯ...ತ್ನ ಜಯಪ್ರದವಾಗುವುದಾಗಿ ನಿರೀಕ್ಷಿಸ...ಬಹುದೆಂದು ಎಲ್ಲೋರಿನ ಪ್ರಸಿದ್ಧ ಜ್ಯೋತಿ...ಷ್ಯದ ಶ್ರೀ ಎಂ. ವಿ. ರಾವ ಲಿಂಗಶಾಸ್ತ್ರಿ...ಗಳು ತಿಳಿಸಿರುವರು ಮೈಸೂರು ಮ ...ತಿರುವಾಂಕೂರು ಮುಂತಾದ ಪ್ರಮು...ಖ ಸಂಸ್ಥಾನಗಳಿಂದ ರಾಜ್ಯಾಂಗ ಸಭೆ...ಗೆ ಸೇರುವ ಬಗ್ಗೆ ಘೋಷಣೆಗಳು ಬರ...ಬಹುದೆಂದು ಅವರು ಹೇಳಿದ್ದಾರೆ ಮು...ಸ್ಲಿಂಲೀಗು ತಾನು ಕನಸು ಕಾಣುತ್ತಿರುವಂ...ತೆ ಪಾಕೀಸ್ತಾನವನ್ನು ಹೊಂದಲಾರದೆಂ...ದು ಅವರು ಸೂಚಿಸಿದ್ದಾರೆ

ಬೆಂಕಿ ಅನಾಹುತದಿಂದ ೨೩ ಮಂದಿ ಮರಣ

ದರ್ಭಾಂಗ ಜಿಲ್ಲೆಯ ಜರದ್ ಪೋವರ್ ...ಹಳ್ಳಿಗೆ ಬಿರುಗಾಳಿಯು ಬೀಸಿಯಿಂದ ...ಕಿ ತಗುಲಿ ೪೦೦ ಮನೆಗಳು ಭಸ್ಮವಾ...ಗಿ ೨೩ ಮಂದಿ ಜೀವಸಹಿತ ದಹಿಸ...ಲ್ಪಟ್ಟಿದ್ದಾರೆ ಅನೇಕ ಹಂಗಸರು ಮಕ್ಕ...ಳ ಪತ್ತೆ ಇಲ್ಲವಾಗಿದ್ದಾರೆ ದನಕರುಗಳ ...ನಷ್ಟ ಅಸಂಖ್ಯಾತವಾಗಿದೆ. ಪಕ್ಕದಲ್ಲಿರುವ ...ಪ ನಗರದ ಕಾಂಗ್ರೆಸ್ ಕಾರ್ಯದರ್ಶಿಗಳ ...ಸಂಬಂಧವರು ಅಂದು ಆ ಊರಿಗೆ ಬಂ...ದವರು ಈ ಯಜ್ಞದಲ್ಲಿ ಸಿಕ್ಕಿ ಎಲ್ಲರೂ ...ಸಾಗಿದ್ದಾರೆ—ಎಂದು ವರದಿಯಾಗಿದೆ

ವೈಸರಾಯರಿಂದ ಕ್ಷೇತ್ರ ಗೋಷ್ಟಿಯ ಏರ್ಪಾಡು

ವೈಸರಾಯರಾದ ಲಾರ್ಡ್ ಮೌಂಟ್ ...ಬ್ಯಾಟನ್ನರು ಈ ತಿಂಗಳ ಮಧ್ಯದೊಳಗೆ ...ನ್ನಿಯಲ್ಲಿ ಚಕ್ರಗೋಷ್ಟಿಯೊಂದನ್ನು ಕರೆ...ಯುವರೆಂದು ವರದಿಯಾಗಿದೆ ಅಲ್ಲಿ ಬ್ರಿ...ಟಿಷ್ ನಿಯೋಗದವರ ಮೇ ೧೬ ನೇ ತಾ॥ ...ಯೋಜನೆಯ ಆಧಾರದ ಮೇಲೆ ಎಲ್ಲ ...ಪಕ್ಷದ ನಾಯಕರುಗಳೊಡನೆ ಸಮಾ...ಲೋಚನೆ ನಡೆಸುವರು

ಅಖಿಲ ಭಾರತ ಫುಟ್‌ಬಾಲ್ ಪಂದ್ಯ

ಕಲಕತ್ತೆಯಲ್ಲಿ ನಡೆಯುತ್ತಿರುವ ಅಖಿಲ ಭಾರತ ಫುಟ್‌ಬಾಲ್ ಪಂದ್ಯದಲ್ಲಿ "ಮೈಸೂರ್ ಬ್ಲೂಸ್" ಟೀಮಿನವರು ತಮ್ಮ ...ನವರೊಡನೆಯ ಪಂದ್ಯವನ್ನು ಮುಗಿಸಿನ ...ಮಿನ ಮೇಲೆ ಆಡಿ ಮೂರು ಗೋಲುಗ...ಳಿಂದ ಜಯಶಾಲಿಗಳಾಗಿರುವರು

ಕಾಳ ಸಂತೆಯಲ್ಲಿ ಮದುವೆ ವರಗಳು

ಗ್ಲೋಬ್] ಕರಾಚಿ ೧

ಒಂದು ಸಾವಿರ ರೂ ಗಳಿಗಿಂತ ಹೆಚ್ಚಾಗಿ ವರದಕ್ಷಿಣೆಯನ್ನು ತೆಗೆದುಕೊಳ್ಳಕೂಡದೆಂದು ಸಿಂಧ್ ಪ್ರಾಂತ್ಯದಲ್ಲಿ ಕಾನೂನು ಮಾಡಲಾಗಿದೆ ಹಿಂದೂಗಳಲ್ಲಿ ಈಗ ವರಗಳು ಸಿಕ್ಕುವುದೇ ಕಷ್ಟವಾಗಿ ಕಾಳ ಸಂತೆಯಲ್ಲಿ ವರಗಳ ವ್ಯಾಪಾರ ಆರಂಭವಾಗುತ್ತಿದೆ ಅಲ್ಲಿ ಕಳೆದ ವಾರ ನಡೆದ ಹಲವು ಮದುವೆಗಳಲ್ಲಿ ೧೦ ರಿಂದ ೬೦ ಸಾವಿರ ರೂ ಗಳ ವರೆಗೆ ವರದಕ್ಷಿಣೆ ಕೊಡುವವರೆಗೂ ಮದುವೆ ನಡೆಯಲು ಮದುವೆ ವರರುಗಳು ಒಪ್ಪಲಿಲ್ಲವೆಂದು ವರದಿಯಾಗಿದೆ

ರಾಜ್ಯಾಂಗ ಸಭೆಗೆ ಬಿಕನೀರು ಪ್ರತಿನಿಧಿ

ಗ್ಲೋಬ್] ಅಜ್ಮೀರ್ ಏ ೩೦

ಭಾರತ ರಾಜ್ಯಾಂಗ ಸಭೆಗೆ ಬಿಕನೀರು ಸಂಸ್ಥಾನದ ಪ್ರಜೆಗಳ ಪರವಾಗಿ ಪ್ರಜಾಪರಿಷತ್ತಿನ ಅಧ್ಯಕ್ಷರಾದ ಶ್ರೀ॥ ರಘುವರ ದಯಾಳ್ ಗೋಯಲ್‌ರವರು ಅವಿರೋಧವಾಗಿ ಆರಿಸಲ್ಪಡಲಿದ್ದಾರೆ

ತಂಪಾದ ಟಾಂಗಾ

ಗ್ಲೋಬ್] ದೆಹಲಿ ಏ ೩೦

ಟಾಂಗಾ ಗಾಡಿಯ ಸುತ್ತಲೂ ಲಾಮಂಚದ ಚಾಪೆಗಳನ್ನು ಕಟ್ಟಿ, ಅದರ ಮೇಲೆ ಆಗಾಗ್ಗೆ ನೀರನ್ನು ಚುಮುಕಿಸುವುದರಿಂದ ಗಾಡಿಯ ಒಳಗೆ ತಂಪಾಗಿರುವಂತೆ ದೆಹಲಿಯಲ್ಲಿ ಟಾಂಗಾಗಾಡಿಯವನೊಬ್ಬನು ಏರ್ಪಾಡು ಮಾಡಿರುತ್ತಾನೆ ಈ ನಾತನ ಏರ್ಪಾಡು ಸಾರ್ವಜನಿಕ ಆದರಣೆಯನ್ನು ಪಡೆಯುವುದೆಂದು ಆತನು ಅಭಿಪ್ರಾಯಪಟ್ಟಿದ್ದಾನೆ

ಜಿಲ್ಲಾ ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ಸಮ್ಮೇಳನ

ಮೈಸೂರು ೪

ಇದೇ ೧೧ ನೇ ತಾ॥ ಭಾನುವಾರ ಮಧ್ಯಾಹ್ನ ೪ ಘಂಟೆಗೆ ಶ್ರೀ ಚಾಮುಂಡೇಶ್ವರೀ ಭವನದಲ್ಲಿ ಮೈಸೂರು ಜಿಲ್ಲಾ ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ಸಂಘದ ಪ್ರಥಮ ವಾರ್ಷಿಕ ಸಮ್ಮೇಳನವು ಶ್ರೀ ಎ. ಸುಬ್ಬರಾವ ಅರಸುರವರ ಅಧ್ಯಕ್ಷತೆಯಲ್ಲಿ ಜರುಗುವುದು

ಕಾಂಗ್ರೆಸ್ಸಿಗೆ ಭಾರಿ ವಿಜಯ

ಮಂಡ್ಯ ೨

ಇಲ್ಲಿನ ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್ಸಿನ ಪರವಾಗಿ ೧೧ ಮಂದಿ ಉಪ (ದುವಾರ) ರನ್ನು ನಿಲ್ಲಿಸಲಾಗಿದ್ದಿತು ಆ ಪೈಕಿ ೧೦ ಮಂದಿ ಚುನಾಯಿತರಾಗಿ ಕಾಂಗ್ರೆಸ್ಸಿಗೆ ಭಾರಿ ವಿಜಯ ದೊರಕಿದೆ

ಗಡಿನಾಡಿನಲ್ಲಿ ಹೊಸ ಚುನಾವಣೆ

ಗಡಿನಾಡು ಪ್ರಾಂತ್ಯವು ಹಿಂದೂಸ್ಥಾನ ಅಥವಾ ಪಾಕೀಸ್ತಾನಕ್ಕೆ ಸೇರುವುದೋ, ಅಥವಾ ಸ್ವತಂತ್ರವಾಗಿಯೇ ಉಳಿಯುವುದೋ ಎಂಬ ಅಂಶವನ್ನು ತಿಳಿಯುವ ಸಲುವಾಗಿ ಅಲ್ಲಿನ ಶಾಸನ ಸಭೆಗೆ ಹೊಸ ಚುನಾವಣೆಯನ್ನು ಏರ್ಪಡಿಸಲು ವೈಸರಾಯರು ಆಲೋಚಿಸುತ್ತಿದ್ದಾರೆಂದು ವರದಿಯಾಗಿದೆ ಈಗಿರುವ ಗೌರ್ನರನ್ನು ಬದಲಾಯಿಸಿ ೯೩ ನೇ ಸೆಕ್ಷನ್ ಆಡಳಿತವನ್ನು ಸ್ಥಾಪಿಸಿ ಅನಂತರ ಚುನಾವಣೆ ನಡೆಸುವರೆಂದು ಹೇಳಲಾಗಿದೆ.

ಬಂಗಾಳ ವಿಭಜನೆಗಾಗಿ ವೈಸರಾಯರಲ್ಲಿ ಮನವಿ

ಕಲ್ಕತ್ತ ನಗರದ ಮಾಜಿ ಮೇಯರುಗಳಾದ ಶ್ಯಾಂತಕುಮಾರ ರಾಯ್, ಚೌಧ್ರಿ ದೇವೇಂದ್ರನಾಥ ಮುಖರ್ಜಿ ಮತ್ತು ಫಣೀಂದ್ರನಾಥ ಬ್ರಹ್ಮ ಇವರುಗಳು ವೈಸರಾಯರಿಗೆ ಶಾಂತಿ ಕಳುಹಿಸಿ ಶಾಂತಿ ಮತ್ತು ರಕ್ಷಣಾ ದೃಷ್ಟಿಯಿಂದ ಕೂಡಲೇ ಬಂಗಾಳವನ್ನು ವಿಭಾಗಿಸಬೇಕೆಂದು ಮನವಿ ಮಾಡಿಕೊಂಡಿದ್ದಾರೆ

ರಾಜಧಾನಿಯ ಏಜೆಂಟರು

1-5-47 ರಿಂದ ಈ ಕೆಳಗೆ ಕಂಡವರನ್ನು ರಾಜಧಾನಿಯಲ್ಲಿ 'ಸಾಧ್ವಿ' ಪತ್ರಿಕೆಯ ಏಜೆಂಟರನ್ನಾಗಿ ನೇಮಿಸಲಾಗಿದೆ ಮಹಾಜನರು ಅವರಿಗೆ ಸರ್ವವಿಧದಲ್ಲಿಯೂ ಸಹಕಾರವನ್ನು ನೀಡಬೇಕಾಗಿ ವಿನಂತಿ

ವ್ಯವಸ್ಥಾಪಕ, 'ಸಾಧ್ವಿ'

ಏಜೆಂಟರು:—ಜನರಲ್ ಏಜೆನ್ಸೀಸ್, ನ್ಯಾಷನಲ್ ಯಂಗ್ ಪಾರ್ಟನರ್—ಶ್ರೀ॥ ಎಸ್ ಶ್ರೀಕಂಠಸ್ವಾಮಿ ಬಿ ಎ, ಎ ರಾಮಣ್ಣನವರ ಬೀದಿ, ಮೈಸೂರು

ಗಡಿನಾಡಿನಲ್ಲಿ ಚುನಾವಣೆಗೆ ಕಾಂಗ್ರೆಸ್ ವಿರೋಧ

ಮುಸ್ಲಿಂ ಲೀಗಿನ ಬೇಡಿಕೆಯಂತೆ ಗಡಿನಾಡು ಶಾಸನ ಸಭೆಗೆ ಬೇರೆ ಚುನಾವಣೆ ನಡೆಸಬೇಕೆಂಬ ಸೂಚನೆಯನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ವಿರೋಧಿಸಿ ನಿರ್ಣಯವನ್ನು ಮಾಡಿದ್ದಾರೆ. ಪಕ್ಕಕ್ಕೆ ಗಡಿನಾಡಿನಲ್ಲಿ ಶಾಂತಿ ಸ್ಥಾಪಿಸುವ ಬಗ್ಗೆ ಗಮನ ಕೊಡಬೇಕಾದ್ದು ಅಗತ್ಯವಾಗಿದೆಯೆಂದೂ, ಕಳೆದ ಸಲ ಪಾಕೀಸ್ತಾನದ ಪಕ್ಷದ ಮೇಲೆ ಚುನಾವಣೆ ನಡೆದು ಈಗಿನ ಮಂತ್ರಿ ಮಂಡಲ ರಚನೆಯಾಗಿರುವುದರಿಂದ ಈಗ ಚುನಾವಣೆ ಅವಶ್ಯಕವಿಲ್ಲವೆಂದೂ ಹೇಳಿ ವೈಸರಾಯರಿಗೆ ಕಾಂಗ್ರೆಸ್ ಪತ್ರ ಬರೆದಿದೆಯೆಂದು ತಿಳಿದು ಬಂದಿದೆ

ವೈಸರಾಯರ ಪ್ರತಿನಿಧಿಗಳು ಲಂಡನ್ನಿಗೆ ತೆರಳಿದರು

ಅಧಿಕಾರವನ್ನು ಭಾರತೀಯರಿಗೆ ವರ್ಗಾಯಿಸಿ ಕೊಡುವ ಬಗ್ಗೆ ವೈಸರಾಯರು ಭಾರತೀಯ ಮುಖಂಡರೊಡನೆ ಸಮಾಲೋಚನೆ ನಡೆಸಿದ ನಂತರ ತಯಾರಿಸಿರುವ ಯೋಜನೆಯನ್ನು ಬ್ರಿಟಿಷ್ ಮಂತ್ರಿ ಮಂಡಲಕ್ಕೆ ವರದಿ ಮಾಡಲು ವೈಸರಾಯರ ಪ್ರತಿನಿಧಿಗಳಾದ ಲಾರ್ಡ್ ಇಸ್ಮೇರವರು ನಿನ್ನೆ ದೆಹಲಿಯಿಂದ ಲಂಡನ್ನಿಗೆ ಪ್ರಯಾಣ ಮಾಡಿದರು. ಇವರ ಕೂಡ ರಾಜಕೀಯ ಸಲಹೆಗಾರರಾದ ಸರ್ ಕ್ರಾಫೀಲ್ಡ್‌ರವರೂ, ವೈಸರಾಯರ ಆಪ್ತ ಕಾರ್ಯದರ್ಶಿಗಳಾದ ಮಿ॥ ಅಬೆಲ್‌ರವರು ತೆರಳಿದರು

ಪೆರುಗ್ವೆಯಲ್ಲಿ ಕಾಳಗ

ದಕ್ಷಿಣ ಅಮೇರಿಕದಲ್ಲಿರುವ ಪೆರುಗ್ವೆ ಪ್ರಾಂತ್ಯದಲ್ಲಿ ಕಲಿದೇರಿರುವ ದಂಗೆಯು ಭೀಕರವಾಗಿ ರಾಜಧಾನಿಯಾದ ಅಸೆಂಷಿಯಾನಲ್ಲಿ ಒಂದು ಸಹಸ್ರ ಮಂದಿ ಹೆಂಗಸರು ಮಕ್ಕಳು ಮರಣ ಹೊಂದಿದ್ದಾರೆಂದು ವರದಿಯಾಗಿದೆ ಮನೆ ಮನೆಯಲ್ಲೂ ಕಾಳಗ ನಡೆಯುತ್ತಿದೆ

ಸುಮಾತ್ರಾ ದ್ವೀಪಕ್ಕೆ ಒಳಾಡಳಿತ ಸ್ವಾತಂತ್ರ್ಯ

ಇಂಡೋನೇಷಿಯಾ ರಿಪಬ್ಲಿಕ್ ಸರ್ಕಾರವು ವಿಶೇಷ ಪ್ರಕಟಣೆಯೊಂದನ್ನು ಹೊರಡಿಸಿ ಸುಮಾತ್ರಾ ದ್ವೀಪಕ್ಕೆ ಒಳಾಡಳಿತ ಸ್ವಾತಂತ್ರ್ಯವನ್ನು ಕೊಟ್ಟಿದೆ ಈ ದ್ವೀಪದಲ್ಲಿ ೧ ಕೋಟಿ ಜನರಿದ್ದಾರೆ

ಕತ್ತರಿಸಿ ಬಿದ್ದ ಮೂಗನ್ನು ಪುನಃ ಸೇರಿಸಲಾಯಿತು

ಗ್ಲೋಬ್] ಲಂಡನ್ ಏ ೩ೀ

ಅನಾಹುತಕ್ಕೊಳಗಾಗಿ ಮೂಗನ್ನು ಕಳೆದುಕೊಂಡ ಕುಪ್ಪರ್ ಬ್ರೂಕ್ಸ್ ಎಂಬ ೧೫ ವರ್ಷದ ಹುಡುಗನೊಬ್ಬ ಚಾರ್ಸ್ ಟಂಬಲೀಸಿನ ಆಸ್ಪತ್ರೆಯೊಂದಕ್ಕೆ ಚಿಕಿತ್ಸೆಗಾಗಿ ಬಂದನು. ಕತ್ತರಿಸಿ ಹೋದ ಮೂಗನ್ನು ಕೂಡಲೇ ತಂದರೆ ಅದರ ಜಾಗದಲ್ಲಿ ಹೊಲಿದು ಸೇರಿಸಬಹುದೆಂದು ವೈದ್ಯರು ಅಭಿಪ್ರಾಯಪಟ್ಟರು ಅಪಘಾತ ನಡೆದ ಸ್ಥಳಕ್ಕೆ ಓಡಿಹೋಗಿ ಸುಮಾರು ೨೦ ನಿಮಿಷಗಳು ಹುಡುಕಿದ ಮೇಲೆ ಮೂಗು ಸಿಕ್ಕಿತು ಅದನ್ನು ಬೆಚ್ಚಗೆ ಇಟ್ಟುಕೊಂಡು ಬಂದು ವೈದ್ಯರ ಕೈಯಲ್ಲಿ ಕೊಡಲಾಗಿ ಅವರು ಅದನ್ನು ಶಸ್ತ್ರಚಿಕಿತ್ಸೆ ಮಾಡಿ ಸೇರಿಸಿ ಹೊಲಿದರು. ಈಗ ಆತನ ಮೂಗು ಹಿಂದಿನಂತೆ ಇರುವುದು ಆಸ್ಪತ್ರೆಗೆ ಸೇರಿಸಲು ಆತ ಹವಣಿಸುತ್ತಿರುವನು

ಸಾಧ್ವಿ

ತಾ|| ೪-೫-೪೭ ಭಾನುವಾರ

ಕೊಚ್ಚಿ ರಾಜರ ಆದರ್ಶ

ಪ್ರಜಾಪ್ರಭುತ್ವ ತತ್ವದಲ್ಲಿಯೂ, ಅಖಂಡ ಭಾರತ ರಾಷ್ಟ್ರ ರಚನೆಯಲ್ಲಿಯೂ ಅಚಲ ವಿಶ್ವಾಸವನ್ನು ತೋರಿರುವುದಲ್ಲದೆ, ಅದಕ್ಕಾಗಿ ಅಗತ್ಯವಾದ ವ್ಯವಸ್ಥೆಗಳನ್ನೂ ಮಾಡಿ ಕೊಚ್ಚಿಯ ಮಹಾರಾಜರವರು ಸಕಲ ಭಾರತೀಯರ ಮನ್ನಣೆಗೂ ಪಾತ್ರರಾಗಿದ್ದಾರೆ. ತಮ್ಮ ಸಂಸ್ಥಾನದಲ್ಲಿ ಬೇಗನೆ ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸುವುದಾಗಿಯೂ, ಭಾರತ ರಾಜ್ಯಾಂಗದಲ್ಲಿ ಕೊಚ್ಚಿಯು ಭಾಗವಹಿಸುವುದಾಗಿಯೂ, ಕೇರಳ ಪ್ರಾಂತದ ಏಕೀಕರಣದಲ್ಲಿ ತಾವು ಸಹಕರಿಸುವುದಾಗಿಯೂ ಅವರು ಹೇಳಿರುತ್ತಾರೆ.

"ನನ್ನ ಮಂತ್ರಿಗಳಲ್ಲಿ ನನಗೆ ಸಂಪೂರ್ಣವಾದ ಭರವಸೆ ಇದೆ; ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ ನಾನು ನಡೆಯುವೆನೆಂದಾಗಲೀ, ಸಂಪೂರ್ಣ ಜವಾಬ್ದಾರೀ ಸರ್ಕಾರ ಸ್ಥಾಪನೆಯ ಕಾರ್ಯದಲ್ಲಿ ಹಿಂಜರಿಯುವೆನೆಂದಾಗಲೀ ಯಾರಿಗಾದರೂ ಸಂಶಯವಿರುವುದಾದರೆ ಅಂತಹವರಿಗೋಸ್ಕರ ಈ ವಿಲಕ ನಾನು ಬಹಿರಂಗವಾಗಿ ಘೋಷಣೆ ಮಾಡುತ್ತೇನೆ. ಸಾಂಕುಶ ಪ್ರಭುತ್ವ ಮತ್ತು ಪ್ರಜಾ ಪ್ರಭುತ್ವದಲ್ಲಿ ನನಗೆ ಸಂಪೂರ್ಣವಾಗಿ ನಂಬಿಕೆ ಇದೆ. ನನ್ನ ಕಾಲದಲ್ಲಿಯೇ ಅದನ್ನು ಸ್ಥಿರವಾಗಿ ಸ್ಥಾಪಿಸಲು ನಾನು ದೃಢ ಸಂಕಲ್ಪ ಮಾಡಿರುತ್ತೇನೆ"— ಎಂದು ಕೊಚ್ಚಿಯ ರಾಜರು ಹೇಳಿರುವರು. ಇದಕ್ಕಾಗಿ ಈಗಾಗಲೇ ಅವರು ತಕ್ಕ ಕಾರ್ಯಕ್ರಮಗಳನ್ನೂ ಕೈಗೊಂಡಿರುವರು. ಪ್ರಜೆಗಳ ಪ್ರೀತಿಗೆ ಪಾತ್ರರಾದ ಮಂತ್ರಿಗಳಿಂದ ಕೂಡಿದ ಸರ್ಕಾರವನ್ನು ರಚಿಸಿರುವರು. ಚುನಾಯಿತ ಸದಸ್ಯರನ್ನು ರಾಜ್ಯಾಂಗ ಸಭೆಗೆ ಕಳುಹಿಸಿರುವರು. ದೇಶಾಭ್ಯುದಯಕ್ಕೆ ಸಾಧಕವಾದ ಸಕಲ ಕಾರ್ಯಗಳಲ್ಲಿಯೂ ಮುನ್ನಡಿಯಿಡುತ್ತಿರುವರು.

ಭಾರತ ಖಂಡದ ಐಕ್ಯತೆ ಮತ್ತು ಸಂಯುಕ್ತ ಭಾರತ ರಾಜ್ಯಾಂಗದಲ್ಲಿ ತಮ್ಮ ಪ್ರಜೆಗಳ ಸ್ಥಾನ, ಮಾನಗಳ ವಿಷಯದಲ್ಲಿ ಕೊಚ್ಚಿ ರಾಜರು ಹೇಳಿರುವ ವಾಕ್ಯಗಳು ಸುವರ್ಣಾಕ್ಷರಗಳಲ್ಲಿ ಬರೆಯಲು ಅರ್ಹವಾಗಿವೆ. "ನಮ್ಮೆಲ್ಲರ ಜನ್ಮಭೂಮಿಯಾದ ಭಾರತ ಮಾತೆಯ ಅಂಗವಾಗಿ ಕೊಚ್ಚಿ ಸಂಸ್ಥಾನವು ಇನ್ನು ಮುಂದೆಯೂ ಇರುವುದೆಂದು ಬಹಿರಂಗವಾಗಿ ಘೋಷಿಸಲು ನಾನು ಸ್ವಲ್ಪವೂ ಹಿಂಜರಿಯುವುದಿಲ್ಲ; ಈ ಕೂಡಲೇ ನಮ್ಮ ಸಂಸ್ಥಾನವು ಭಾರತ ರಾಜ್ಯಾಂಗ ಸಭೆಯಲ್ಲಿ ಸೇರುವುದು; ನಾನೂ ಒಬ್ಬ ಭಾರತೀಯನೆಂದು ಕರೆದುಕೊಳ್ಳುವ ಹಕ್ಕನ್ನು ಕೊಚ್ಚಿಯ ಯಾವ ಒಬ್ಬ ಪ್ರಜೆಯೂ ಕಳೆದುಕೊಳ್ಳುವಂತೆ ಮಾಡುವ ಯಾವ ಒಂದು ಮಾತನ್ನೂ ನಾನು ಆಡುವುದಿಲ್ಲವೆಂದೂ, ಯಾವ ಕಾರ್ಯವನ್ನೂ ಮಾಡುವುದಿಲ್ಲವೆಂದೂ ಭರವಸೆ ಕೊಡುತ್ತೇನೆ"— ಎಂದು ಅವರು ತಿಳಿಸಿರುವರು.

ಪ್ರಜಾ ಪ್ರಭುತ್ವಕ್ಕೆ ತಾವು ನೀಡುತ್ತಿರುವ ಬೆಂಬಲಕ್ಕಾಗಿ ತಮ್ಮ ಸೋದರರಾದ ಹಲವು ರಾಜರುಗಳು ತಮ್ಮನ್ನು ಟೀಕಿಸುತ್ತಿರುವರೆಂದು ಕೊಚ್ಚಿಯ ಅರಸರು ಹೇಳಿರುವರು. ಭಾರತ ರಾಜ್ಯಾಂಗದಲ್ಲಿ ಸಂಸ್ಥಾನಗಳು ವಹಿಸಬೇಕಾದ ಪ್ರಾಮುಖ್ಯ ಪಾತ್ರವಿರುವುದೆಂದು ಕೆಲವರು ಹೇಳುವುದನ್ನು ಅವರು ಟೀಕಿಸುವರು. ಸರಕೀಯ ಸರ್ಕಾರದ 'ರಾಜಕೀಯ ಶಾಖೆಯ' ಸೂತ್ರದಂತೆ ವರ್ತಿಸಿ, ಪರಾಧೀನತೆಯಲ್ಲಿ ತೊಳಲುತ್ತಿರುವ ಈ ಸಂಸ್ಥಾನಗಳು ಸ್ವತಂತ್ರ ರಾಷ್ಟ್ರನಿರ್ಮಾಣದಲ್ಲಿ ಯಾವ ಸಹಾಯವನ್ನು ಮಾಡಬಹುದೆಂಬ ಬಗ್ಗೆ ಸಂಶಯವನ್ನು ವ್ಯಕ್ತಪಡಿಸಿರುವರು. ಪ್ರಜಾ ಪ್ರಭುತ್ವವೇ ನಿಜವಾದ ದೇಶಾಭ್ಯುದಯ ಸಾಧನೆಯ ಮಾರ್ಗವೆಂದು ಸಕಲ ಶಾಸ್ತ್ರಗಳೂ ಸಾರಿರುವುದಾಗಿ ತಿಳಿಸಿರುವರು. ಆದುದರಿಂದ ಸಂಸ್ಥಾನಗಳೂ, ರಾಜರುಗಳೂ ಮುಂದೆಯೂ ಉಳಿದಿರಬೇಕಾದರೆ ಅವರು ಸಾಂಕುಶ ಪ್ರಭುಗಳಾಗಿ ಇರಬೇಕೇ ಹೊರತು ಬೇರೆ ಮಾರ್ಗವೇ ಇಲ್ಲವೆಂದು ಸೂಚಿಸಿರುವರು.

ಕೊಚ್ಚಿ ರಾಜರ ದೇಶಾಭಿಮಾನ ಸೂಚಕವಾದ ಈ ಘೋಷಣೆಯಂತೆ ಇತರ ರಾಜರುಗಳೂ ವರ್ತಿಸಲೆಂಬುದೇ ನಮ್ಮ ಹಾರೈಕೆ.

ಅಣುಬಾಂಬು ಕೆಲಸಗಾರರ
ನಪುಂಸಕತ್ವ

ಅಣುಬಾಂಬನ್ನು ತಯಾರು ಮಾ ವಾಗ ರೇಡಿಯೋ ಆಕ್ಟಿವ್ ಅಮ್ಲ ಕವು ಕೆಲಸಗಾರರ ದೇಹದೊಳಕ್ಕೆ ಪ್ರ ಶಿಸಿ ಅದರಲ್ಲಿ ನಪುಂಸಕತ್ವ ಉಂಟಾ ದು ಎಂದು ಕೆಮಿಕಲ್ ಕೆಲಸಗಾರರ ದ ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ

(ಗ್ಲೋಬ್ ಸ

ಬಂಗಾಳ ವಿಭಜನೆಗೆ
ಮಹಾತ್ಮರು ಒಪ್ಪುವರೆ!

ಬಂಗಾಳಾ ಪ್ರಾಂತ್ಯ ವಿಭಜನೆಯ ಗಾಂಧೀಜಿಯವರು ತಮ್ಮ ಅಭಿಪ್ರಾ ನ್ನು ಈಗ ಬದಲಾಯಿಸಿರುವುದಾಗಿ ವ ಲಾಗಿದೆ. ಕಾಂಗ್ರೆಸ್ ಕಾರ್ಯಕಾರಿ ತಿಯು ಈ ವಿಚಾರದಲ್ಲಿ ತರುವ ನಿರ್ ಕ್ಕೆ ಅವರು ಒಪ್ಪಿಗೆ ಕೊಡಬಹುದೆಂದು ದು ಬಂದಿದೆ

ರಾಜಕಮಲ್, ಮೈಸೂರು

ತಾ|| ೨-೫-೪೭ ರಿಂದ ಎರಡನೇ ವಾರ

'ಗೊಲ್ಲಭಾಮ'

(ತೆಲುಗು)

ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ ಪಾತ್ರವಹಿಸಿರುವ

2-5-47 ರಿಂದ 4 ದಿನಗಳು ಪ್ರಾತಃಕಾಲ 10-30 ಕ್ಕೆ

"ರಾಜಾ ಗೋಪೀಚಂದ್"

(ಹಿಂದಿ)

-: ಭೂಮಿಕೆ :-

ಚಂದ್ರಕಾಂತ್, ಪ್ರಭಾ

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ

—: ನಮ್ಮಲ್ಲಿ ವಿಚಾರಿಸಿ. :—

. ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,

ಅಶೋಕಾ ರಸ್ತೆ, ಮೈಸೂರು.

ಸ್ಥಾಪಿತ ೧೯೩೬ :: ಫೋ. ೪೦೦

ಕ್ರಯಕ್ಕಿದೆ.

ಡೋರ್ ನಂ ೧೧೦೭, ಸಿಮೆಂಟ್ ಬ

—: ವಿವರಗಳಿಗೆ :—

ಆರ್. ಗುಂಡೂರಾವ್,

ಮೈಸೂರು ಬ್ಯಾಂಕ್ ಕಟ್ಟಡ, ಮೈಸೂ

ಮನೆ ಬಾಡಿಗೆಗೆ ಇದೆ

ರಾಮಾನುಜ ರಸ್ತೆಯಲ್ಲಿರುವ ೬೫ ನೆಂ ಮುನಿಸಿಪಲ್ ಮಾದರಿ ಮನೆ ಗಿನ ವಿಳಾಸದಲ್ಲಿ ವಿಚಾರಿಸಿರಿ

X

C/o ಸಾಧ್ವಿ ಆಫೀಸು, ಮೈಸೂರು

ಅಪೆರಾ ಟಾಕೀಸ್, ಮೈಸೂರ

೩-೫-೪೭ ರಿಂದ ೩ ನೇ ವಾರ

ರಾಜಕುಮಾರಿ

(ತಮಿಳು)

Edited printed and published by A. R. Nagarajan at the Sadhvi Pr… D. Subbiah Road, Mysore

4-5-47 ನೇ ತಾರೀಖು ಭಾನುವಾರದಿಂದ ಅಮೋಘ ಪ್ರಾರಂಭ

ಮೈಸೂರಿನ ಭವ್ಯ ಚಲನಚಿತ್ರ ಮಂದಿರ

ವುಡ್-ಲೆಂಡ್ಸ್ ಟಾಕೀಸ್.

(ಕೆಜಿ ಡಿ ಬಾಲ್)

ಎ. ವಿ. ಯಂ. ಪ್ರೊಡಕ್ಷನ್‌ರವರ ಅಮೋಘ ಸಾಮಾಜಿಕ ಚಿತ್ರ

★ 'ನಾಮ್-ಇರುವರು' ★

(ತಮಿಳು)

ತಾರಾಗಣ:- ಟಿ. ಆರ್. ಮಹಾಲಿಂಗಂ, ಟಿ. ಎ. ಜಯಲಕ್ಷ್ಮಿ, ಆರ್. ರಾಮಚಂದ್ರನ್ ಮತ್ತು ಇತರರು.

ಪ್ರೊಪ್ರೈಟರ್ಸ್ :— ಬಿ. ಎಂ. ಗೋವಿಂದಸ್ವಾಮಿ, ಬಿ. ಎಂ. ರಾಮಮೂರ್ತಿ.

ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ಬಾಲ್ಕನಿ ಸೀಟುಗಳನ್ನು ರಿಜರ್ವ್ ಮಾಡಲಾಗುತ್ತೆ

ಫೋನ್ ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೫—೫—೪೭ [ಸಂಚಿಕೆ ೩೭

ವೈಸ್ರಾಯರು ಲಂಡನ್ನಿಗೆ ತೆರಳಲಿರುವರೇ?

ಚುನಾಯಿತ ಗೌರ್ನರುಗಳು ಬೇಕು

ಪ್ರಾಂತ್ಯಗಳ ಗೌರ್ನರುಗಳಿಗೆ ಭಾರತೀಯರನ್ನು ನೇಮಿಸಲಾಗುವುದೆಂದು ಹೊರಬಿದ್ದ ವದಂತಿ ನಿಜವಾದಲ್ಲಿ ಸದರಿ ಗೌರ್ನರ್ ಪದವಿಗಳಿಗೆ ಆಯಾ ಪ್ರಾಂತ್ಯಗಳಲ್ಲಿ ಚುನಾವಣೆಯನ್ನು ನಡೆಸಿ ಆ ಸ್ಥಾನಗಳನ್ನು ಭರ್ತಿಮಾಡಬೇಕೆಂದು ನಾಗಪುರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಜನರಲ್ ಆವಾಡಿಯವರು ಪಂ॥ ನೆಹರುರವರನ್ನು ಪ್ರಾರ್ಥಿಸಿದ್ದಾರೆ.

೯ ವರ್ಷದ ಹುಡುಗನ ಭಿಕ್ಷೆ

ಸಿಡ್ನಿ ನಗರದ ರಾಯಲ್ ಪ್ರದರ್ಶನದ ಬಳಿ ೯ ವರ್ಷದ ಚಿಪ್ಪಿ ಷ್ಮೈಟ್ ಎಂಬ ಹುಡುಗನು, ತಾನು ಆಹಾರದ ಅಭಾವದಿಂದ ಪೀಡಿತನಾಗಿರುವುದಾಗಿಯೂ, ಎನಗೆ ಸಹಾಯ ನೀಡಬೇಕೆಂದೂ ಪ್ರಾರ್ಥನೆಯೊಂದನ್ನು ಹೊರಡಿಸಿದ್ದಾನೆ. ಈತನು ೫೭೦ ಪೌಂಡ್ ತೂಕವಿದ್ದಾನೆ. ವಾರಕ್ಕೆ ೭೦ ಪೌಂಡುಗಳ ಮಾಂಸವನ್ನು ಇವನು ಊಟ ಮಾಡುವನು. ಇವನಿಗೆ ೪೦ ಪೌಂಡ್ ಮಾತ್ರ ಪಡಿತರ ದೊರಕುತ್ತಿದೆ. ಇಲಾಖೆ ಪತ್ರ ಪಡೆಯಿಂದ ತಾನು ೪ ಸ್ಟೋನ್‌ಗಳಷ್ಟು ಇಳಿದುಹೋಗಿರುವುದಾಗಿ ತಿಳಿಸಿದ್ದಾನೆ.

ಫೋನಿನ ಮೂಲಕ ನಿದ್ದೆ

ನ್ಯೂಯಾರ್ಕ್ ನಗರದಲ್ಲಿ ತಮ್ಮ ಮಕ್ಕಳನ್ನು ಮಲಗಿ ನಿದ್ರಿಸಲು ತಕರಾರು ಮಾಡಿದರೆ ಆಗ ತಾಯಂದಿರು "ಜೋಗುಳದ ಬಂಗಾರನಿಗೆ" ಫೋನ್ ಮಾಡುವರು. ಫ್ಲಿಪ್ಪ ವೈಲ್ ಮಲೊನಿ ಎಂಬಾತನು ಜೋಗುಳವನ್ನು ಹಾಡಲು ಆರಂಭಿಸುವನು. ಫೋನಿನ ಧ್ವನಿ ಗ್ರಾಹಕವನ್ನು ಮಗುವಿನ ಕಿವಿ ಪಕ್ಕದಲ್ಲಿಟ್ಟರೆ, ಮಕ್ಕಳು ಹಾಡನ್ನು ಕೇಳಿ ೫ ನಿಮಿಷಗಳಲ್ಲಿ ನಿದ್ರಿಸಲು ಆರಂಭಿಸುವವು. ಈ ರೀತಿ ಆತನು ದಿನಕ್ಕೆ ೫೦ ಮಕ್ಕಳನ್ನು ಮಲಗಿಸುವನು. ಈ ಜೋಗುಳಕ್ಕೆ ಪ್ರತಿಫಲವನ್ನು ಕೊಡಬೇಕಾದುದಿಲ್ಲ.

ಪ್ರಕಟನೆ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:-

ಮೈಸೂರು ಸಿಟಿ ದೇವರಾಜ ಮಾರ್ಕೆಟ್ಟಿನಲ್ಲಿ ನೆಲದಮೇಲೆ ಉಗುಳುವುದೂ, ಮತ್ತು ಹಣ್ಣಿನ ಸಿಪ್ಪೆಗಳನ್ನು ಸಿಕ್ಕಿದ ಕಡೆ ಬಿಸಾಡುವುದೂ ಬಹಳ ಜಾಸ್ತಿಯಾಗಿರುತ್ತೆ. ಇದರಿಂದ ಅನೇಕ ಅಪಾಯಗಳು ಸಂಭವಿಸುವ ಸಂದರ್ಭವಿರುತ್ತದೆ. ಇದಕ್ಕೆ ಶುಚಿತ್ವದ ಮುಂಜಾಗ್ರತೆ ಬಗ್ಗೆ ಬೋರ್ಡುಗಳ ಮೂಲಕ ಎಚ್ಚರಿಕೆ ಕೊಟ್ಟಾಗ್ಯೂ ಈ ತರಹ ವರ್ತನೆಯು ಮಾರ್ಕೆಟ್ಟಿನಲ್ಲಿ ಕಾಣುತ್ತಿದೆ. ಆದುದರಿಂದ ಪ್ರತಿಯೊಬ್ಬರೂ ಕೂಡ ಮೇಲ್ಕಂಡ ಅಪಾಯಗಳಿಂದ ತಪ್ಪಿಸಿಕೊಳ್ಳಲು ಹಣ್ಣಿನ ಸಿಪ್ಪೆಗಳನ್ನು ನಿಯಮಿತವಾದ ಜಾಗಗಳಲ್ಲಿ ಹಾಕುವುದರ ಮೂಲಕವೂ ಮತ್ತು ಥೂಕುದಾನಿಗಳಲ್ಲೇ ಉಗುಳುವುದರ ಮೂಲಕವೂ ಮಾರ್ಕೆಟ್ಟಿನ ನೈರ್ಮಲ್ಯವನ್ನು ಕಾಪಾಡಲು ಸಹಾಯಕರಾಗಬೇಕು. ಇದಕ್ಕೆ ತಪ್ಪಿ ನಡೆದವರನ್ನು ಶಿಕ್ಷೆಗೆ ಗುರಿಮಾಡಲಾಗುತ್ತೆ.

(ಸಹಿ) ಇ. ಅನಂತರಾವ್,
ಛೇರ್ ಪ್ರೆಸಿಡೆಂಟ್.

ಮೈಸೂರು, ೨೮-೪-೪೭

ಅಮೆರಿಕಕ್ಕೆ ಮೈಸೂರು ಆನೆಗಳು

ಗ್ಲೋಬ್] ನ್ಯೂಯಾರ್ಕ್ (ಏರ್ ಮೇಲ್)

ಅಮೆರಿಕಾ ಸಂಯುಕ್ತ ಸಂಸ್ಥಾನದ ಮಿ॥ ರೀಡ್ ಎಂಬುವರು ಮೈಸೂರಿಗೆ ತೆರಳಿ ಅಲ್ಲಿಂದ ಆನೆಗಳನ್ನು ಕೊಂಡು ಇಲ್ಲಿಗೆ ತರಲಿದ್ದಾರೆ. ಆ ಪೈಕಿ ೧ ಆನೆ ಮೈಸೂರು ಸಾಬು ಪಾತ್ರವಹಿಸಿರುವ "ಎಲಿಫೆಂಟ್ ಬಾಯ್" ಚಲನ ಚಿತ್ರದಲ್ಲಿ ಭಾಗವಹಿಸಿದ್ದುದು. ಸಾಬುವಿನ ಸೋದರ ಶೇಖ್ ಎಂಬುವನು ಈ ಆನೆಯ ಕೂಡ ಅಮೆರಿಕಾಕ್ಕೆ ಬಂದು ಹಿಂದಿರುಗಲಿದ್ದಾನೆ. ಮಿ॥ ರೀಡ್‌ರವರು ೩ ಹೆಬ್ಬಾವುಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ. ಅವುಗಳ ಪೈಕಿ ದೊಡ್ಡದಾಗಿರುವುದು ೧೧ ಅಡಿ ಉದ್ದವಾಗಿದೆ. ಅವರು ೨೦೦ ಕೋತಿ, ಕೆಲವು ಹುಲಿ ಮತ್ತು ಇತರ ಸರ್ಕಸ್ಸಿಗೆ ಬೇಕಾದ ಪ್ರಾಣಿಗಳಿಗಾಗಿ ಆರ್ಡರನ್ನು ಕೊಟ್ಟಿದ್ದಾರೆ.

ಅರ್ಜೆಂಟೈನಾದಲ್ಲಿ ಮುಸ್ಸೋಲಿನಿ ಮಗ

ದಿವಂಗತ ಮುಸ್ಸೋಲಿನಿಯ ಮಗ ವಿಟ್ಟೋರಿಯೋ ಮುಸಲೋನಿಯು ಅಕ್ರಮವಾಗಿ ಅರ್ಜೆಂಟೈನಾವನ್ನು ಪ್ರವೇಶಿಸಿದುದಕ್ಕೆ ದಂಡವನ್ನು ತೆತ್ತು ಆ ಪ್ರಾಂತ್ಯದಲ್ಲೇ ವಾಸಿಸಲು ಅಲ್ಲಿನ ಸರ್ಕಾರವು ಅನುಮತಿ ಇತ್ತಿದೆ.

ಎನ್. ಎಸ್. ಕೃಷ್ಣನ್‌ರವರ ಜೈಲುವಾಸದ ಚಲನ ಚಿತ್ರ

ಕೆಲವು ದಿನಗಳ ಹಿಂದೆ ಬಿಡುಗಡೆಯಾದ ಶ್ರೀ॥ ಎನ್. ಎಸ್. ಕೃಷ್ಣನ್‌ರವರು ಸತ್ಕಾರ ಸಮಾರಂಭವೊಂದರಲ್ಲಿ ಭಾಷಣ ಮಾಡುತ್ತಾ, ಜೈಲುವಾಸವು ವಿಶ್ವವಿದ್ಯಾನಿಲಯದ ಶಿಕ್ಷಣ ಶಾಲೆಯಂತಿರುವುದೆಂದು ಹೇಳಿದರು. ಶಾಂತಿ, ತಿತ್ತಿರತೆ, ಆತ್ಮಸಂಯಮ ಇವೇ ಮೊದಲಾದ ಅನೇಕ ವಿಚಾರಗಳನ್ನು ಅಲ್ಲಿ ಕಲಿಯಬಹುದು. ಜೈಲು ನಿಜವಾಗಿಯೂ ನರಕವೇ ಸರಿ. ಆದರೂ ಅದು ವ್ಯಕ್ತಿಯ ಅಭಿಪ್ರಾಯದ ಮೇಲೆ ಹೋಗುತ್ತದೆ. ನನ್ನ ಮಟ್ಟಿಗೆ ಹೇಳುವುದಾದರೆ, ನನ್ನ ದೃಷ್ಟಿ ವಿಶಾಲವಾಗಿದೆ. ನನ್ನ ಸಂಸ್ಕೃತಿ ಬೆಳೆದಿದೆ. ಮುಂದಿನ ಚಲನ ಚಿತ್ರದಲ್ಲಿ ೨೮ ತಿಂಗಳ ನನ್ನ ಜೈಲುವಾಸದ ಕೆಲವು ಸಂಗತಿಗಳನ್ನು ನೆ ಡಸ ಕ್ರೈನೆ—ಎಂಬುದಾಗಿ ಅವರು ಹೇಳಿರುವರು.

ಮೈಸೂರು ಪತ್ರಿಕಾ ಸಂಪಾದಕರ ಖುಲಾಸೆ

ಮೈಸೂರು ೫

ರಾಜಧಾನಿಯ ಪೌರಸಭಾ ಸದಸ್ಯರಾದ ಶ್ರೀ॥ ಇ. ಪಿ. ನಂಜಪ್ಪನವರು ಮೈಸೂರು ಪತ್ರಿಕಾ ಸಂಪಾದಕರಾದ ಶ್ರೀ॥ ಟಿ. ನಾರಾಯಣರವರ ಮೇಲೆ ಹೂಡಿದ್ದ ಮಾನನಷ್ಟದ ಮೊಕದ್ದಮೆಯಲ್ಲಿ ಇದಿನ ಸ್ಪೆಷಲ್ ಮ್ಯಾಜಿಸ್ಟ್ರೇಟರಾದ ಶ್ರೀ॥ ಕೃಷ್ಣಶೆಟ್ಟರು ಆರೋಪಿತರು ಅಪಾದಿತರು ಲಘುವಾದ ರೀತಿಯಲ್ಲಿ ಬರೆದಿದ್ದ ಲೇಖನವನ್ನು ಪ್ರಕಟಿಸಿದುದು ಅಪರಾಧವಲ್ಲವೆಂದು ಅವರನ್ನು ಖುಲಾಸೆ ಮಾಡಿರುತ್ತಾರೆ.

ಮೈಸೂರು ಬ್ಲೂಸಿಗೆ ವಿಜಯ

ಅಲಹಾಬಾದಿನಲ್ಲಿ ನಡೆಯುತ್ತಿರುವ ಅಖಿಲ ಭಾರತ ಫುಟ್‌ಬಾಲ್ ಪಂದ್ಯದಲ್ಲಿ ಮೈಸೂರು ಬ್ಲೂಸಿನವರು ತಂಜಾವೂರಿನ ಟೀಮಿನವರನ್ನು ಮೂರು ಗೋಲುಗಳಿಂದ ಸೋಲಿಸಿ ಸೆಮಿ ಫೈನಲ್ಸ್ ಪಂದ್ಯವನ್ನಾಡಲು ಅರ್ಹತೆಯನ್ನು ಪಡೆದಿರುತ್ತಾರೆ.

ಬಣ್ಣಗಳ ಭಂಗಾರ

ಗ್ಲೋಬ್] ಲಂಡನ್ ೧

ಹಸಿರು, ಕೆಂಪು ಮತ್ತು ಕೆಂಪು ಬಣ್ಣಗಳಿರುವ ಭಂಗಾರವನ್ನು ಲಂಡನ್ನಿನಲ್ಲಿ ನಡೆಯುವ ಕೈಗಾರಿಕಾ ಪ್ರದರ್ಶನದಲ್ಲಿ ಇಡಲಾಗುವುದೆಂದು ಅಲ್ಲಿನ ಚಿನ್ನ ಮತ್ತು ಒಡವೆ ಸಂಘದ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ರಾಜಾಂಗ ಸಭೆಯ ಮುಂದೆ ಸಾಧುಗಳ ದಸ್ತಗಿರಿ

ಗ್ಲೋಬ್] ಡೆಹಲಿ ೧

ಗೋವಧೆಗೆ ವಿರೋಧವನ್ನು ಸೂಚಿಸಿ, ರಾಜ್ಯಾಂಗ ಸಭೆಯ ಮುಂದೆ ಪ್ರದರ್ಶನವನ್ನು ನಡೆಸಿದ ಸಾಧುಗಳ ತಂಡವೊಂದನ್ನು ದಸ್ತಗಿರಿ ಮಾಡಲಾಗಿದೆ. ಕಳೆದ ಸೋಮವಾರ ಸಾಧುಗಳ ಮೊದಲನೇ ತಂಡವನ್ನು ದಸ್ತಗಿರಿ ಮಾಡಲಾಗಿತ್ತು.

ಬರ್ಮಾದಲ್ಲಿ ಬ್ರಿಟಿಷ್ ವಿರುದ್ಧ ಸೈನ್ಯ

ಬರ್ಮಾದಲ್ಲಿರುವ ಡೊಬಾಮಾ ಪಕ್ಷದ ನಾಯಕರಾದ ಥಾಕಿನ್‌ಬಾ ಸೇನವರು ೧ ಲಕ್ಷ ಮಂದಿ ಸ್ವಯಂಸೇವಕರ ಸೈನ್ಯವೊಂದನ್ನು ರಚಿಸಲು ಪ್ರಯತ್ನಿಸುತ್ತಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯತ್ವವನ್ನೂ, ಅದರ ಅನುಯಾಯಿಗಳಾದ ಬರ್ಮಾದ ಪ್ಯಾಸಿಸ್ಟ್ ವಿರೋಧ ಪಕ್ಷದವರನ್ನೂ ಎದುರಿಸುವುದೇ ಈ ಸೈನ್ಯದ ಗುರಿಯೆಂದು ಹೇಳಲಾಗಿದೆ.

ಸಂಬಳ ಸಮಿತಿ ಸಭೆ

ಸ್ವಂ.ಸು.] ಬೆಂಗಳೂರು ೫

ಸಂಬಳವನ್ನು ಪುನರ್ವ್ಯವಸ್ಥೆಗೊಳಿಸಲು ನೇಮಿಸಲಾಗಿರುವ ಸಮಿತಿಯು ಕಳೆದ ೧ ಮತ್ತು ೨ ನೇ ತಾ॥ ಬೆಂಗಳೂರಿನಲ್ಲಿ ಈ ಮುಂದೆ ಕಂಡ ಇಲಾಖಾ ಪ್ರತಿನಿಧಿಗಳನ್ನು ಭೇಟಿ ಮಾಡಿ ಅವರ ಬೇಡಿಕೆಗಳನ್ನು ಪರಿಶೀಲಿಸಿತು:— ನ್ಯಾಯಾಂಗ, ವ್ಯವಸಾಯ, ಸಾರ್ವಜನಿಕ ಆರೋಗ್ಯ, ವೈದ್ಯ, ಮರಾಮತ್, ಸ್ಟಾಂಪ್ ಮತ್ತು ರಿಜಿಸ್ಟ್ರೇಷನ್, ವ್ಯಾಪಾರ ಮತ್ತು ವಾಣಿಜ್ಯ, ಕಾರ್ಮಿಕ ಮತ್ತು ಕೈಗಾರಿಕಾ ಯೋಜನೆ, ಪಶುವೈದ್ಯ, ಮಿಲಿಟರಿ, ಪೋಲೀಸ್, ಅರಣ್ಯ ಮತ್ತು ಎಕ್ಸೈಜ್ ಇಲಾಖೆಗಳು.

ವೈಸರಾಯರು ಲಂಡನ್ನಿಗೆ?

ಭಾರತವನ್ನು ವಿಭಜಿಸುವ ಬಗ್ಗೆ ಬ್ರಿ॥ ಸರ್ಕಾರವನ್ನು ಒಪ್ಪಿಸುವ ಕಾರ್ಯದಲ್ಲಿ ತಮ್ಮ ಪ್ರತಿನಿಧಿಗಳಾದ ಲಾರ್ಡ್ ಇಸ್ಮೆರವರು ವಿಫಲರಾದರೆ ಆಗ್ಗೆ ವೈಸರಾಯರೇ ಲಂಡನ್ನಿಗೆ ಪ್ರಯಾಣ ಮಾಡಿ ಬ್ರಿ॥ ಮಂತ್ರಿಗಳಿಗೆ ವಿವರವನ್ನು ಒದಗಿಸಬಹುದೆಂದು ವರದಿಯಾಗಿದೆ. ಬ್ರಿಟಿಷ್ ಸರ್ಕಾರವು ಅಖಂಡ ಭಾರತದಲ್ಲೇ ತನ್ನ ವಿಶ್ವಾಸವನ್ನು ಇಟ್ಟುಕೊಂಡಿದೆಯೆಂದೂ, ಭಾರತದ ವಿಭಜನೆಯನ್ನು ತಪ್ಪಿಸಲು ಪ್ರಯತ್ನಿಸುವುದಾಗಿಯೂ ಹೇಳಲಾಗಿದೆ.

ಪ್ರೇಮ ವಿಹಾರಿಗೆ ಗುಂಡಿನೇಟು

ಗ್ಲೋಬ್] ಆಗ್ರ ೧

ವಿಶ್ವವಿಖ್ಯಾತವಾದ ಟಾಜ್‌ಮಹಲಿನಲ್ಲಿ ತನ್ನ ಪ್ರೇಯಸಿಯೊಡನೆ ವಿಹಾರಾರ್ಥವಾಗಿ ತೆರಳುತ್ತಿದ್ದ ಯುವಕನೊಬ್ಬನ ಮೇಲೆ ೧೬ ವರ್ಷದ ಹುಡುಗನೊಬ್ಬನು ಬಂದೂಕಿನಿಂದ ಹೊಡೆದು ಆತನನ್ನು ಕೊಂದಿದ್ದಾನೆ. ಆ ಹುಡುಗನನ್ನು ದಸ್ತಗಿರಿ ಮಾಡಲಾಗಿದೆ.

ತಿರುಪತಿಗೆ ಮೈಸೂರು ಮಂತ್ರಿಗಳ ಭೇಟಿ

ತಿರುಪತಿ ೩

ಮೈಸೂರು ಸಂಸ್ಥಾನದ ರೆವಿನ್ಯೂ ಮಂತ್ರಿಗಳಾದ ಶ್ರೀ॥ ಜೆ. ಅಪ್ಪಾಜಿಗೌಡರು ಮೊನ್ನೆದಿನ ಇಲ್ಲಿಗೆ ಭೇಟಿ ಕೊಟ್ಟಿದ್ದರು. ಅವರನ್ನು ದೇವಸ್ಥಾನದ ಪೇಷ್ಕಾರ್ ಮತ್ತು ಮೈಸೂರಿನ ಶ್ರೀ॥ ಬಿ. ಎಸ್. ಸುಬ್ಬರಾಯರು ಸ್ವಾಗತಿಸಿದರು. ನಿನ್ನೆ ಅವರು ದೇವಸ್ಥಾನಕ್ಕೆ ಭೇಟಿ ಇತ್ತು, ಮೈಸೂರು ಮಹಾರಾಜರು ದಯಪಾಲಿಸಿದ್ದ ವಜ್ರ ವೈಡೂರ್ಯಾದಿ ಆಭರಣಗಳನ್ನು ಪರಿಶೀಲಿಸಿದರು. ಮಹಾರಾಜರವರ ಛತ್ರವನ್ನು ನೋಡಿಕೊಂಡು ಮಂತ್ರಿಗಳು ಬೆಂಗಳೂರಿಗೆ ಈ ದಿನ ತೆರಳಿದರು.

ತಿರುಪತಿಯಲ್ಲಿ ಸತ್ಯಾಗ್ರಹಕ್ಕೆ ಸ್ವಯಂ ಸೇವಕರು

ಗ್ಲೋಬ್] ಬೆಂಗಳೂರು ೧

ತಿರುಪತಿ ದೇವಾಲಯಕ್ಕೆ ಹರಿಜನರನ್ನು ಸೇರಿಸುವುದನ್ನು ಪ್ರತಿಭಟಿಸಿ ಸತ್ಯಾಗ್ರಹವನ್ನು ಮಾಡಲು ಅಖಿಲ ಕರ್ನಾಟಕ ಸನಾತನ ಸಂಘದವರು, ಸ್ವಯಂ ಸೇವಕರನ್ನು ಸೇರಿಸುತ್ತಿದ್ದಾರೆ. ಮೊದಲನೇ ತಂಡವು ಸಂಘದ ಕಾರ್ಯದರ್ಶಿಗಳೊಡನೆ ತಿರುಪತಿಯನ್ನು ತಲುಪಿದೆ.

ಸಾಧ್ವಿ

ತಾ|| ೫-೫-೪೭ ಸೋಮವಾರ

ಅಮೇರಿಕಾ-ರಷ್ಯಾಗಳ ಸಹಕಾರ

ಪರಸ್ಪರ ಸಹಕಾರಕ್ಕೆ ಯಾವಾಗಲೂ ಅವಕಾಶವಿದ್ದೇ ಇದೆ; ಆದರೆ ಸಹಕಾರದ ಅಪೇಕ್ಷೆಯು ಮಾತ್ರ ಸದಾ ಕಾಲದಲ್ಲಿಯೂ ಕಂಡು ಬರುವುದಿಲ್ಲ; ಒಂದು ಪಂಗಡವು ಸಹಕರಿಸಲು ಇಷ್ಟಪಡದಿದ್ದರೆ ಘರ್ಷಣೆಯೇ ಅದರ ಪರಿಣಾಮ; ಎಂದರೆ ಯುದ್ಧ ಸಂಭವಿಸುವುದು ಸಿದ್ಧ-ವಾಗಬಹುದಾಗಿ ರಷ್ಯದ ನಾಯಕರಾದ ಸ್ಟಾಲಿನ್ನರು ಅಮೇರಿಕದ ಅಧ್ಯಕ್ಷತೆಗೆ ಉಮೇದುವಾರರಾಗಲಿರುವ ಹೆರಾಲ್ಡ್ ಸ್ಟಾಸನ್‌ರವರಿಗೆ ತಿಳಿಸಿದರೆಂದು ವರದಿಯಾಗಿದೆ ಅಮೇರಿಕಾ ಮತ್ತು ರಷ್ಯದ ರಾಜ್ಯ ಪದ್ಧತಿಗಳಲ್ಲಿ ಭಿನ್ನತೆಯಿರುವುದೇನೋ ನಿಜ, ಆದರೆ ಈ ಎರಡು ರಾಷ್ಟ್ರಗಳೂ ಒಂದರಮೇಲೊಂದು ಯುದ್ಧ ಹೂಡಲಿಲ್ಲ, ಯುದ್ಧ ಹೂಡಲು ರಷ್ಯವು ಬಯಸುವುದೂ ಇಲ್ಲ; ಯುದ್ಧಕಾಲದಲ್ಲಿ ಸ್ನೇಹ, ಸೌಹಾರ್ದದಿಂದ ನಡೆದುಕೊಳ್ಳಲು ಸಾಧ್ಯವಿದ್ದಾಗ ಶಾಂತಿ ಕಾಲದಲ್ಲೇಕೆ ಆಗಬಾರದು -ಎಂಬ ಪ್ರಶ್ನೆಯನ್ನು ಸಹ ಸ್ಟಾಲಿನ್ನರು ಹಾಕಿರುವರು ಅಮೇರಿಕಾ ಮತ್ತು ರಷ್ಯಗಳು ಇನ್ನು ಮುಂದೆ ಪರಸ್ಪರ ಸಹಕರಿಸಿ ನಡೆದುಕೊಳ್ಳಬೇಕೆಂದು ಒತ್ತಿ ಹೇಳಿರುವರು.

ಚತುರ್ರಾಷ್ಟ್ರಗಳಲ್ಲಿ ಪ್ರಮುಖ್ಯವಾದ ಈ ಎರಡು ರಾಷ್ಟ್ರಗಳ ಪರಸ್ಪರ ಸಹಕಾರದ ಬೇಡಿಕೆಯು ಈಗ ವಿಶೇಷವಾಗಿ ಒತ್ತಾಯಪಡಿಸಲ್ಪಟ್ಟಿರುವುದರಲ್ಲಿ ಮಹತ್ವದ ಉದ್ದೇಶವಿರಲೇಬೇಕು. ಮಹಾ ಯುದ್ಧದ ಅನಂತರ ಶಾಂತಿ ಸ್ಥಾಪನೆ ಮತ್ತು ಶತ್ರು ರಾಷ್ಟ್ರಗಳ ಹಂಚಿಕೆಯ ವಿಚಾರದಲ್ಲಿ ಇನ್ನೂ ಮಹಾ ನಾಯಕರುಗಳಲ್ಲಿ ಒಪ್ಪಂದವೇ ಆಗದಿರುವುದಿಲ್ಲವೆಂಬ ಕೂಗುಗಳು ಕೇಳಿ ಬರುತ್ತಿವೆ. ಈ ಮಧ್ಯೆ ರಷ್ಯದ ಮೇಲೆ ಇಂಗ್ಲೆಂಡ್ ಮತ್ತು ಅಮೇರಿಕಗಳು ತಿರುಗಿ ಬೀಳುತ್ತಿರುವುವೆಂಬ ಪ್ರಸಂಗಗಳೂ ಅನೇಕ ಬಾರಿ ವರದಿಯಾಗಿರುತ್ತವೆ. ಈ ರಾಷ್ಟ್ರಗಳಲ್ಲಿ ಪ್ರಾಮಾಣಿಕತೆಯಿಂದ ಕೂಡಿದ ಸ್ನೇಹಭಾವವು ಇನ್ನೂ ಉತ್ಪನ್ನವಾಗಿಲ್ಲವೆಂದೂ, ಪರಸ್ಪರ ಸಂಶಯಗಳೇ ಹಿಂದಿನವರಾದುತ್ತಿವೆಯೆಂದೂ ಹೇಳಬಹುದು ಇವೆ ಎರಡು ಅನುಸರಿಸುತ್ತಿರುವ ವರ್ತನೆಯಿಂದ ಅದು ರಷ್ಯದ ಮೇಲೆ ಧಾಳಿ ಮಾಡಲೇ ಬೇಕಾಗುವುದೆಂಬ ಎಚ್ಚರಿಕೆಯನ್ನು ಅಮೇರಿಕದ ಮಾಜಿ ಸೆಕ್ರೆಟರಿಗಳಾದ ಹೆನ್ರಿ ವ್ಯಾಲೇಸರು ಬಹಿರಂಗವಾಗಿ ಸಾರುತ್ತಲೇ ಇದ್ದಾರೆ.

ಸಣ್ಣ ಪುಟ್ಟ ರಾಷ್ಟ್ರಗಳಿಗೆ ಅಮೇರಿಕವು ಕೊಡುತ್ತಿರುವ ಸಾಲದ ಉದ್ದೇಶವೂ ಸಹ ಸದರಿ ರಾಜ್ಯಗಳನ್ನು ಸೋವಿಯಟ್ ರಷ್ಯಕ್ಕೆ ವಿರುದ್ಧವಾಗಿ ಎತ್ತಿ ಕಟ್ಟುವುದೇ ಆಗಿದೆಯೆಂಬ ಅಪವಾದನೆಗಳೂ ಬರುತ್ತಿವೆ. ಈ ಸಮಯದಲ್ಲಿ ಸ್ಟಾಲಿನ್ನರು ಮುಂದೆ ಅಮೇರಿಕದ ಅಧ್ಯಕ್ಷರಾಗಬಹುದಾದವರಿಗೆ ಕೊಟ್ಟಿರುವ ಸೂಚನೆಗಳು ಸಂಪೂರ್ಣವಾಗಿ ಅರ್ಥಗರ್ಭಿತವಾಗಿರುತ್ತವೆ. ರಾಜ್ಯಾಂಗ ತಂತ್ರಗಳಲ್ಲಿ ಒಂದೊಂದು ದೇಶಕ್ಕೆ ಒಂದೊಂದು ಪದ್ಧತಿಯು ಇರುವುದು ಸಹಜವಾಗಿಯೇ ಇರುತ್ತದೆ. ಅದರಲ್ಲಿ ಇತರ ರಾಜ್ಯಗಳು ಪ್ರವೇಶಿಸಲು ಅವಕಾಶವಿರುವುದಿಲ್ಲ. ತತ್ವದಲ್ಲಿ ಭಿನ್ನತೆಯಿದ್ದರೂ, ಕಾರ್ಯದಲ್ಲಿ ಸಹಕರಿಸುವುದೇ ಸೌಜನ್ಯದ ಲಕ್ಷಣ ಸ್ಟಾಲಿನ್ನರು ಮಿತ್ರ ರಾಷ್ಟ್ರಗಳ ಸತ್ವ ಪರೀಕ್ಷೆಗಾಗಿ ಈ ಪ್ರಶ್ನೆಯನ್ನು ಈಗ ಎತ್ತಿದ್ದಾರೆ ಇದಕ್ಕೆ ಅಮೇರಿಕವು ಕೊಡುವ ಉತ್ತರದ ಮೇಲೆಯೇ ಮುಂದಿನ ಶಾಂತಿ, ಸಮಾಧಾನದ ಸ್ಥಾಪನೆಯ ಪ್ರಯತ್ನಗಳು ಸಾರ್ಥಕ್ಯವನ್ನು ಹೊಂದಬೇಕು

Edited, printed and published by ... Nagarajan at the Sadhvi Press, D. Subbiah Road, Mysore.

ಚಂದಾದಾರರಲ್ಲಿ ವಿನಂತಿ

ರಾಜಧಾನಿಯ ಚಂದಾದಾರರು ೧-೫-೪೭ ರಿಂದ ತಮ್ಮ ಚಂದಾ ಹಣವನ್ನು ನಮ್ಮ ಹೊಸ ಏಜೆಂಟರಾದ ಶ್ರೀ|| ಎಸ್. ಶ್ರೀಕಂಠಸ್ವಾಮಿಯವರಿಗೆ ಪಾವತಿ ಮಾಡಿ ಕ್ರಮವಾದ ರಸೀತಿ ಪಡೆಯಬೇಕೆಂದು ಕೋರಲಾಗಿದೆ

ವ್ಯವಸ್ಥಾಪಕ, 'ಸಾಧ್ವಿ'

ಕೂಡಲೆ ಕ್ರಯಕ್ಕಿವೆ.

೧ ಅರಸಿನಾಥಾ ರಸ್ತೆ, ಕೃಷ್ಣವಿಲಾಸ ಹೋಟೆಲ್ ಎದುರು ೧೧೦x೨೮ ಅಡಿ ಗುರಿಯ ಲಾಗದ ಸೈಟು

೨ ದೊಡ್ಡ ಬ್ಲಾಕ್ ೬೦x೮೦ ... ರೈಲ್ವೆ ಸ್ಟೇಷನ್‌ಗಳಿಗೆ ಹತ್ತಿರ ಸವಿಪಾದ ಸೊಗಸಾದ ಸೈಟು.

—: ವಿವರಗಳಿಗೆ :—

ಜಿ. ಎಸ್. ಫೈರೋಜಿರಾವ್, ಬ್ರೋಕರ್ ಮತ್ತು ಕಮಿಷನ್ ಏಜೆಂಟ್, ಕೃಷ್ಣರಾಜನಗರ

ವಾರ ಭವಿಷ್ಯ

ತಾ|| ೫-೫-೪೭ ರಿಂದ ೧೧-೫-೪೭ ರ ವರೆಗೆ

ಮೇಷ- ಆರೋಗ್ಯ ಉತ್ತಮ, ಉದ್ಯೋಗ, ವ್ಯವಹಾರಗಳಲ್ಲಿ ಲಾಭ, ಆದಾಯ ಕಡಿಮೆ, ಖರ್ಚು ಅಧಿಕ, ಪ್ರವಾಸ, ಶತ್ರುಗಳಿಂದ ಕಿರುಕುಳ, ತಾ|| ೮, ೧೦ ಲಾಭ, ಶಾಂತಿ.

ವೃಷಭ- ಆರೋಗ್ಯ ಸಾಧಾರಣ ಧನಲಾಭ ಉತ್ತಮ, ಖರ್ಚು ಕಡಿಮೆ, ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ. ಪ್ರವಾಸದಿಂದ ಸನ್ಮಾನ, ಮಿತ್ರರಿಂದ ಸಹಾಯ, ತಾ|| ೭, ೯, ೧೧ ಅಶುಭವಾರ್ತೆ ಕಲಹ

ಮಿಥುನ- ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಸಾಧಾರಣ, ಖರ್ಚು ಅಧಿಕ ಮಾನಸಿಕ ಚಿಂತೆ ಹೆಚ್ಚು, ಅಧಿಕಾರಿವರ್ಗದವರಿಂದ ತಿರಸ್ಕಾರ, ವ್ಯಾಪಾರದಲ್ಲಿ ನಷ್ಟ ತಾ|| ೬, ೮, ೧೦ ಲಾಭ, ಶಾಂತಿ, ಮಿತ್ರದರ್ಶನ.

ಕಟಕ- ಆರೋಗ್ಯ ಸಾಮಾನ್ಯವಾಗಿರುತ್ತದೆ, ಆದಾಯ ವ್ಯಯಗಳು ಸಮನಾಗಿರುತ್ತವೆ, ಅಧಿಕಾರಿ ವರ್ಗದವರಿಂದ ಮನ್ನಣೆ, ಕರ್ತವ್ಯ ನಿಷ್ಠೆಯಿಂದ ಯುಕ್ತಿಸಿದ ಕಾರ್ಯಗಳಲ್ಲಿ ಜಯ, ಪ್ರವಾಸದಿಂದ ಅಶಾಂತಿ ಹೆಚ್ಚುವುದು, ತಾ|| ೯, ೧೧ ಲಾಭ, ಬಂಧು ದರ್ಶನ

ಸಿಂಹ- ಪ್ರಾಕೃತಿಕ ಸ್ಥಿತಿ ಉತ್ತಮವಾಗಿರುತ್ತದೆ, ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ಧನಾದಾಯ ಕಡಿಮೆ, ಖರ್ಚು ಅಧಿಕ, ಪ್ರವಾಸದಿಂದ ಶತ್ರುಗಳ ಕಿರುಕುಳ, ತಾ|| ೯, ೧೦ ಲಾಭ, ಸಾಧಾರಣ ಶಾಂತಿ

ಕನ್ಯಾ- ಆರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಹೆಚ್ಚು, ಧನಾದಾಯ ಕಡಿಮೆ, ಮೇಲ್ಪಟ್ಟವರಿಂದ ತಿರಸ್ಕಾರ, ಉಪಭೋಗ ಚಾರಗಳಿಗಾಗಿ ಖರ್ಚು, ತಾ|| ೮, ೯ ಸಾಧಾರಣ ಲಾಭ.

ತುಲಾ- ಆರೋಗ್ಯ ಉತ್ತಮ, ಧನಾದಾಯ ಚೆನ್ನಾಗಿರುತ್ತದೆ, ಉದ್ಯೋಗ ವ್ಯವಹಾರಗಳಲ್ಲಿ ಮಿತ್ರರಿಂದ ಸಹಾಯ, ಅಧಿಕಾರಿ ವರ್ಗದವರಿಂದ ಸನ್ಮಾನ, ಮ... ಕಾರ್ಯಗಳಿಗಾಗಿ ಪ್ರವಾಸ ತಾ|| ೭, ೯, ನಷ್ಟ, ಚಿಂತೆ

ವೃಶ್ಚಿಕ- ಆರೋಗ್ಯ ಸಾಧಾರಣ, ಧನಲಾಭ ಕಡಿಮೆ; ಖರ್ಚು ಅಧಿಕ, ವ್ಯಾಪಾರಾದಿಗಳಲ್ಲಿ ನಷ್ಟ, ಯುಕ್ತಿಸಿದ ಕಾರ್ಯಗಳ... ಶತ್ರುಗಳ ಕಿರುಕುಳ, ಪ್ರವಾಸದಿಂದ ಆರೋಗ್ಯ ಕೆಟ್ಟು ಉಪಭೋಗಚಾರಗಳಿಗಾಗಿ ಹೆಚ್ಚು ಖರ್ಚು, ತಾ|| ೭, ೯, ೧೧ ಸಾಧಾರಣ ಶಾಂತಿ, ಮಿತ್ರರಿಂದ ಸಹಾಯ

ಧನು- ಆರೋಗ್ಯ ಚೆನ್ನಾಗಿರುತ್ತದೆ, ಧನಾದಾಯ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ವ್ಯಾಪಾರಾದಿಗಳಲ್ಲಿ ಆದಾಯ ಕಡಿಮೆ, ಪ್ರವಾಸದಿಂದ ಆಘಾತ, ತಾ|| ೬, ೮, ೧೦ ಲಾಭ, ಶಾಂತಿ, ಬಂಧುದರ್ಶನ

ಮಕರ- ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಕುಟುಂಬದವರ ಆರೋಗ್ಯ ಕೆಟ್ಟು ವೈದ್ಯಕೀಯ ಖರ್ಚು ಹೆಚ್ಚುವುದು ಧನಾದಾಯ ಸಾಧಾರಣ, ವ್ಯಾಪಾರದಲ್ಲಿ ಪ್ರಗತಿ, ತಾ|| ೬, ೯ ಲಾಭ, ಸಂತೋಷ

ಕುಂಭ- ಆರೋಗ್ಯ ಸಾಧಾರಣ, ಆರ್ಥಿಕ ಸ್ಥಿತಿ ಉತ್ತಮ, ವ್ಯಾಪಾರ ಮತ್ತು ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರ ವರ್ಗದಿಂದ ಸನ್ಮಾನ, ತಾ|| ೯, ೧೧ ಲಾಭ, ಬಂಧುದರ್ಶನ.

ಮೀನ- ಪ್ರಾಕೃತಿಕ ಸ್ಥಿತಿ ಉತ್ತಮ, ಧನಾದಾಯ ಚೆನ್ನಾಗಿರುತ್ತದೆ, ಖರ್ಚು ಕಡಿಮೆ, ಯುಕ್ತಿಸಿದ ಕಾರ್ಯಗಳಲ್ಲಿ ಜಯ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ ತಾ|| ೯, ೧೧ ಲಾಭ, ಚಿಂತೆ

ಒಂದು ವಾರದ ಹಿಂದೆ ನಿದ್ದೆ ಹೋಗಿ ಇನ್ನೂ ಎದ್ದಿಲ್ಲ

ಫ್ರಾನ್ಸ್ ನಗರದಲ್ಲಿ ಪಿಲ್ಲೆ ವಿಲಿಟ ಎಂಬ ೧೯ ವರ್ಷದ ತರುಣಿಯು ಕಳೆದ ಬಾನುವಾರ ನಿದ್ದೆ ಮಾಡಲು ಮಲಗಿದವಳು ಇನ್ನೂ ಮೇಲಕ್ಕೆದ್ದಿಲ್ಲವೆಂದು ವರದಿಯಾಗಿದೆ. ಆದರೆ ಈಕೆ ಜೀವಂತಳಾಗಿದ್ದಾಳೆ ಇವಳನ್ನು ಎಬ್ಬಿಸಲು ವೈದ್ಯರುಗಳು ಪಟ್ಟ ಪ್ರಯತ್ನವೆಲ್ಲಾ ವಿಫಲವಾಗಿವೆ

ಪೆರೋಲ್ ಪಡೆದ ಲೀಗ್ ನಾಯಕರ ನಿಯೋಗ

ಗಡಿನಾಡಿನ ಚಳುವಳಿಯಲ್ಲಿ ಬಂಧಿತರಾಗಿ ಸೆರೆಮನೆಯಲ್ಲಿದ್ದ ೫ ಮಂದಿ ಲೀಗ್ ನಾಯಕರನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಲಾಗಿದೆ. ಇವರುಗಳು ದೆಹಲಿಗೆ ತೆರಳಿ ಮಿ|| ಜಿನ್ನಾರೊಡನೆ ಮಾತುಕತೆ ನಡೆಸುತ್ತಿದ್ದಾರೆ

ಶ್ರೀ ಗಣೇಶಾ ಟಾಕೀಸ್

7-5-47 ರಿಂದ ದಿನವೂ 3, 6, 9, ಘಂಟೆಗೆ ಪ್ರದರ್ಶಿಸುವರು

ಕಾಂಚನಮಾಲ ಮತ್ತು ಪುಷ್ಪವಲ್ಲಿ ನಟಿಸಿರುವ

'ಬಾಲನಾಗಮ್ಮ' (ತೆಲುಗು)

೪-೫-೪೭ ನೇ ತಾ|| ಭಾನುವಾರದಿಂದ ಅಪೋಷಿ ಪ್ರಾರಂಭ

ಪ್ರತಿ ದಿನ ೩ ಆಟಗಳು ೩-೩೦, ೬-೩೦, ೯-೩೦ ಕ್ಕೆ

ಮೈಸೂರಿನ ಭವ್ಯ ಚಲನ ಚಿತ್ರ ಮಂದಿರ

ವುಡ್-ಲೆಂಡ್ ಟಾಕೀಸ್.

ಎ. ವಿ. ಎಂ. ಪ್ರೊಡಕ್ಷನ್‌ರವರ

ಅಪೋಷಿ ಸಾಮಾಜಿಕ ಚಿತ್ರ

'ನಾಮ್-ಇರುವರು' (ತಮಿಳು)

ತಾರಾಗಣ:- ಟಿ. ಆರ್. ಮಹಾಲಿಂಗಂ, ಟಿ ಎ ಜಯಲಕ್ಷ್ಮಿ, ಆರ್ ರಾಮಚಂದ್ರ ಮತ್ತು ಇತರರು

ಪ್ರೊಪ್ರೈಟರ್ಸ್: ಬಿ ಎಂ ಗೋವಿಂದಸ್ವಾಮಿ ಬಿ ಎಂ ...ಮೂರ್ತಿ

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು : : ಫೋನ್ 111

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಯಲ್ಲಿ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ

ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.

ರಾಜಕಮಲ್, ಮೈಸೂರು

ತಾ|| ೨-೫-೪೭ ರಿಂದ ಎರಡನೇ ವಾರ

'ಗೊಲ್ಲಭಾಮ' (ತೆಲುಗು)

ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ ಪಾತ್ರವಹಿಸಿರುವ

ಫೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೬—೫—೪೭ [ಸಂಚಿಕೆ ೨೨೯

ಗಡಿನಾಡಿನಲ್ಲಿ ಹೊಸ ಶಸ್ತ್ರಸಜ್ಜಿತ ಪಕ್ಷ

...ಜೇಂದ್ರ ಪ್ರಸಾದರ ಆಗಮನ

...ಫೋ] ಬೆಂಗಳೂರು ೬

...ಪ್ರ ಸರ್ಕಾರದ ಆಹಾರ ಮಂತ್ರಿಗ ...ಗ್ರೆಸ್ ಸಭೆಯ ಅಧ್ಯಕ್ಷರೂ ಆದ ...ಜೇಂದ್ರ ಪ್ರಸಾದರವರು ೮ ನೇ ...ವಾರ ಸಾಯಂಕಾಲ ವಿಮಾನದ ...ಳೂರಿಗೆ ಬರುವರು ೯ ನೇ ತಾ॥ ...ಕ್ಕರದಾಯ ಸಂಶೋಧನಾಲಯಗ ...ಪ್ರಿಲಿಸಿ ಸರ್ಕಾರಿ ಅಧಿಕಾರಿಗಳೊ ...ಾತುಕತೆ ನಡೆಸುವರು ೧೧ನೇ ತಾ॥ ...ಗೆ ತೆರಳುವರು.

...ಸ್ಸದ ಎಗ್ಸಿಕ್ಯುಟಿವ್ ಇಂಜನಿಯ ...ಂಗರಾಯರನ್ನು ಬೆಂಗಳೂರು ...ಯ ಇಂಜನಿಯರಾಗಿ ವರ್ಗಾಯಿ ...ದೆ.

...ನ ಪಳ್ಳಿಯಲ್ಲಿ ನಾಳೆ ನಡೆಯುವ ...ಾಹಿತ್ಯ ಸಮ್ಮೇಳನಕ್ಕಾಗಿ ಇಲ್ಲಿಂದ ...ನ ಸುಮಾರು ೫೦ ಜನ ಪ್ರತಿನಿಧಿಗ ...ದರು ಅಧ್ಯಕ್ಷರಾದ ಶ್ರೀ ಸಿ.ಕೆ. ...ರಾಮಯ್ಯನವರೂ ಮತ್ತು ಶ್ರೀ॥ ...ವೆ ಸಪೇಶ ಅಯ್ಯಂಗಾರ್ಯರೂ ಈ ದಿ ...ಟರು.

...ಕ್ಕೆ ನಾಲ್ಕಾವರೆ ಸೀಸೆ ಹಾಲೇ ಆಹಾರ

...] ಜಿನೀವಾ ೫

...ತರ್ರಾಷ್ಟ್ರೀಯ ವ್ಯಾಸಿಂಗ್ ಸಮ್ಮೇ ...ಬಂದಿರುವ ಭಾರತದ ಪ್ರತಿನಿಧಿ ಶ್ರೀ ...ಿ. ದಿನಕ್ಕೆ ನಾಲ್ಕಾವರೆ ಸೀಸೆಗಳ ...ಾಲನ್ನು ಮಾತ್ರ ಕುಡಿದು ೬ ದಿನ ...ದ ಕಾಲ ಕಳೆಯುತ್ತಿರುವುದಾಗಿ ತಿಳಿಸಿ

...ಾಟೆಸ್ಟ್ರೇಲ್ ಜೈಲಿನಿಂದ ಖೈದಿಗಳ ಪರಾರಿ

...ತ್ತರ ಪ್ಯಾಲಸ್ಟೈನಿನಲ್ಲಿರುವ ಎಕ್ರೆ ...ಿಂದ ೨೫೧ ಮಂದಿ ಖೈದಿಗಳು ತಪ್ಪಿ ...ಸಿ ಪರಾರಿಯಾಗಿದ್ದಾರೆ. ಹೊರ ...ಗುಂಪೊಂದು ಜೈಲಿನ ಗೋಡೆಗೆ ಬಾಂ ...ಾಕಿ ದಾರಿ ಮಾಡಿದ ಮೇಲೆ ಇವರು ...ರಾರಿಯಾಗಿದ್ದಾರೆ. ಈ ಪೈಕಿ ೩೦ ...ವರನ್ನು ಮಾತ್ರ ಪುನಃ ಹಿಡಿಯಲಾ

...ಶ್ಚರ್ಯಕರವಾದ ಹೊಸ ರೇಡಿಯೋ ಯಂತ್ರ

...ರ್] ಲಂಡನ್ ೧

...ಬ್ದ ಮತ್ತು ಚಿತ್ರವನ್ನು ಏಕಕಾಲದಲ್ಲಿ ...ಸುವ ಹೊಸ ರೇಡಿಯೋ ಯಂತ್ರವ ...ಲಂಡನ್ನಿನಲ್ಲಿ ತಯಾರಿಸಲಾಗಿದೆ. ಇ ...ಪ್ರಥಮ ಪ್ರದರ್ಶನವು ಸದ್ಯದಲ್ಲೇ ...ಡಿದೆ.

ಶ್ರೀ

...ಗಣೇಶಾ ಟಾಕೀಸ್

೭—೫—೪೭ ರಿಂದ

ದಿನವಹಿ 3, 6, 9, ಘಂಟೆಗೆ

ಜೆಮಿನಿಯವರ

ಬಾಲ—ನಾಗಮ್ಮ

(ತೆಲುಗು)

—ಪಾತ್ರ:—

...ಂಚನಮಾಲ • ಪುಷ್ಪವಲ್ಲಿ

ಕಾಂಗ್ರೆಸ್ ಬೇಡಿಕೆಗೆ ದೇಶೀಯ ಕ್ರೈಸ್ತರ ಬೆಂಬಲ

ಸ್ವಂ ಸು. ಫೋ] ಬೆಂಗಳೂರು ೬

ನೂತನ ಸುಧಾರಣೆಗಳ ಬಗ್ಗೆ ದೇಶೀಯ ಕ್ರೈಸ್ತರುಗಳು ಒಂದು ಮನವಿಯನ್ನು ಸಲ್ಲಿಸಿರುತ್ತಾರೆ. ಜವಾಬ್ದಾರಿ ಸರ್ಕಾರ ಮತ್ತು ಇತರ ವಿಷಯಗಳಲ್ಲಿ ಕಾಂಗ್ರೆಸ್ಸಿನ ಬೇಡಿಕೆಗಳಿಗೇ ಅವರು ಸಾಮಾನ್ಯವಾಗಿ ಬೆಂಬಲವನ್ನು ಕೊಟ್ಟಿರುತ್ತಾರೆ. ದೇಶೀಯ ಕ್ರೈಸ್ತರಿಗೆ ಪ್ರತ್ಯೇಕ ಚುನಾವಣೆಯು ಬೇಕಿಲ್ಲವೆಂದೂ ಸಹ ತಿಳಿಸಿರುತ್ತಾರೆ

ದಂಡ ವಿಧಿಸುವುದಕ್ಕಿಂತ ಜೈಲು ವಾಸ ಪರಿಣಾಮಕಾರಿ

ಗ್ಲೋಬ್] ನಾಗಪುರ ೧

ಕಾಳಸಂತೆಯಲ್ಲಿ ವ್ಯಾಪಾರಮಾಡುವವರಿಗೆ ದಂಡವನ್ನು ವಿಧಿಸಿದರೆ ಅವರು ಆ ಮೊಬಲಗನ್ನು ಮತ್ತೆ ಕಾಳಸಂತೆಯಲ್ಲಿಯೇ ಸಂಪಾದಿಸಲು ತೊಡಗುವುದರಿಂದ ಅವರಿಗೆ ಜೈಲು ಶಿಕ್ಷೆಯು ಹೆಚ್ಚು ಪರಿಣಾಮಕಾರಿಯೆಂದು ಹೇಳಿ ಟಸಿಂ ಜಿಲ್ಲಾ ಡಿ॥ ಮ್ಯಾಜಿಸ್ಟ್ರೇಟರು ಶ್ರೀ ರಾಮನಿಕಲಾಲ್ ಎಂಬ ಪ್ರಮುಖ ವರ್ತಕರಿಗೆ ೩ ತಿಂಗಳ ಕಠಿಣ ಸಜ ವ ತ್ತು ೨೦೦೦ರೂ ಜುಲ್ಮಾನೆ ವಿಧಿಸಿದ್ದಾರೆ

LATEST NEWS

ಅವಿಶ್ವಾಸ ನಿರ್ಣಯಕ್ಕೆ ಒತ್ತಾಯವಿಲ್ಲ

ಮೈಸೂರು ೬

ಪುರಸಭಾಧ್ಯಕ್ಷರಾದ ಶ್ರೀ॥ ಆರ್. ರಾಮಚಂದ್ರರಾವ್ ಬೊಂಬೋರೆಯವರ ಮೇಲಿನ ಅವಿಶ್ವಾಸ ನಿರ್ಣಯವನ್ನು ಅಂಗೀಕರಿಸಲು ಈ ದಿನ ಮಧ್ಯಾಹ್ನ ಪುರಸಭೆಯ ಉಪಾಧ್ಯಕ್ಷರಾದ ಶ್ರೀ॥ ಟಿ ನರಸಿಂಹ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ವಿಶೇಷ ಅಧಿವೇಶನವು ಸೇರಿದ್ದಿತು. ಅಚಾರ್ಯ ಕೃಪಲಾನಿಯವರ ವಿಷಯದಲ್ಲಿ ತಮಗೆ ಯಾವ ಬಗೆಯ ಅಗೌರವವೂ ಇಲ್ಲವೆಂದೂ ಹಳೆಯದನ್ನೆಲ್ಲಾ ಮರೆತು ಎಲ್ಲರ ಎಂಬಿನಂತೆ ಸೌಹಾರ್ದದಿಂದ ವರ್ತಿಸೋಣವೆಂದೂ, ಪುರಸಭಾಧ್ಯಕ್ಷರಾದ ಶ್ರೀ॥ ಬೊಂಬೋರೆಯವರು ಪತ್ರ ಬರೆದುದರಿಂದ ಅವಿಶ್ವಾಸ ನಿರ್ಣಯವನ್ನು ಒತ್ತಾಯ ಪಡಿಸದೆ ಸಭೆ ಬರ್ಖಾಸ್ತಾಯಿತು.

ಸರಹದ್ದಿನ ಮಾಜಿ ಪ್ರಧಾನಿ ದಸ್ತಗಿರಿ

ಗಡಿನಾಡಿನ ಮುಸ್ಲಿಂ ಲೀಗ್ ಮಾಜಿ ಪ್ರಧಾನಿಗಳಾದ ಸರ್ದಾರ್ ಔರಂಗ್ ಜೇಬ್ ಖಾನರು ಮರ್ದಾನಿನಲ್ಲಿ ಲೀಗ್ ಚಳುವಳಿ ಸಂದರ್ಭವಾಗಿ ದಸ್ತಗಿರಿ ಮಾಡಲ್ಪಟ್ಟಿದ್ದಾರೆ

ಜೋಡು ಕದ್ದ ಪ್ರಜಾಮಂಡಲದ ಅಧ್ಯಕ್ಷರಿಗೆ ಕಠಿಣ ಸಜಾ

ಗ್ಲೋಬ್] ಸೂರತ್ ೧

ಸಿರೋಹಿ ಸಂಸ್ಥಾನದ ಪ್ರಜಾಮಂಡಲದ ಅಧ್ಯಕ್ಷರಾದ ಶ್ರೀ ರಾಮೇಶ್ವರ ದಯಾಳ್ ಅಗರವಾಲರವರು ಒಂದು ಜೊತೆ ಪಾದರಕ್ಷೆಯನ್ನು ಕಳವು ಮಾಡಿದರೆಂದು ೧೫ ದಿನಗಳ ಕಠಿಣಶಿಕ್ಷೆ ಮತ್ತು ೫೦ ರೂಗಳ ದಂಡಕ್ಕೆ ಗುರಿಯಾಗಿದ್ದಾರೆ

ಹೊಲೆದ ಬಟ್ಟೆ ಹತೋಟಿ

ಬೆಂಗಳೂರು ೬

ಗಿರಣಿಯ ಹತ್ತಿ ಬಟ್ಟೆ, ಮಗ್ಗ, ನೂಲು (ಅಂಚೆ ಮೂಲಕ ರವಾನೆ) ನಿರ್ಬಂಧ ಆಜ್ಞೆ ೨ ನೇ ಕಲಮನ್ನು ಸರ್ಕಾರದವರು ತಿದ್ದುಪಡಿ ಮಾಡಿ ಹೊಲೆದು ಸಿದ್ಧಪಡಿಸಿರುವ ಬಟ್ಟೆಗಳು ಅಥವಾ ಸ್ವಂತ ಅಥವಾ ಮನೆ ಉಪಯೋಗಕ್ಕಾಗಿ ಹೊಲೆದಿರುವ ವಸ್ತುಗಳನ್ನು ಬಟ್ಟೆ ಎಂಬುದಾಗಿ ಪರಿಗಣಿಸಲಾಗುವುದೆಂದೂ, ಮತ್ತು ಅವುಗಳನ್ನು ಅಂಚೆ ಮೂಲಕ ರವಾನಿಸುವುದನ್ನು ಪ್ರತಿಬಂಧಿಸಲಾಗುವುದೆಂದು ತಿಳಿಸಿದ್ದಾರೆ

● ಆಲಿಘಢದ ಮಿ॥ ಹಾದಿ ಹಸನರವರು ಶಾಕುಂತಳ ನಾಟಕವನ್ನು ಪರ್ಷಿಯನ್ ಭಾಷೆಗೆ ಭಾಷಾಂತರಿಸಿದ್ದಾರೆ ಟೆಹರಾನಿನಲ್ಲಿರುವ ಇರಾನಿಯನ್ ವಿದ್ಯಾಲಯದಲ್ಲಿ ಈ ಗ್ರಂಥವನ್ನು ಪ್ರಕಟಿಸಲಾಗುವುದು

ವಿವಾಹ ಮಹೋತ್ಸವ

ಮೈಸೂರು ೬

ಪುರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಬೋರೆಯವರು ತಮ್ಮ ಕುಮಾರಿ ಕು॥ ಗೌರಮ್ಮನನ್ನು ದೊಡ್ಡಬಳ್ಳಾಪುರದ ಶ್ರೀ ಪಿ. ರಾಜೋಜಿರಾಯರ ಮಗ ಚಿ॥ ಪಿ ಆರ್ ಲಿಂಗೋಜಿರಾಯರಿಗೆ ಕೊಟ್ಟು ಮೊನ್ನೆ ದಿನ ವೈಭವದಿಂದ ವಿವಾಹವನ್ನು ನೆರವೇರಿಸಿದರು ನಿನ್ನೆ ದಿನ ಇದೇ ಸಂದರ್ಭದಲ್ಲಿ ಶ್ರೀ॥ ಬೊಂಬೋರೆಯವರು ಒಂದು ಸಂತೋಷ ಕೂಟವನ್ನೇರ್ಪಡಿಸಿ ಬಂಧು ಮಿತ್ರರನ್ನು ಸನ್ಮಾನಿಸಿದರು.

ಪೌರ ಚುನಾವಣೆಯಲ್ಲಿ ವಾರ್ಡ್ ಪದ್ಧತಿ

ಪ್ರತ್ಯೇಕ ಚುನಾವಣೆಗೆ ಅಸಮ್ಮತಿ

ಸ್ವಂ ಸು ಫೋ] ಬೆಂಗಳೂರು ೬

ಬೆಂಗಳೂರು ನಗರದ ಪೌರಸಭಾ ಚುನಾವಣೆಗೆ ಈಗ ವೋಟರ್ಲ್ಲಾ ವಾರು ಒಬ್ಬರಿಗಿಂತಲೂ ಹೆಚ್ಚಿನ ಸಂಖ್ಯೆಯ ಉಮೇದುವಾರರಿರುವ ಪದ್ಧತಿಯನ್ನು ಬದಲಾಯಿಸಿ ಒಬ್ಬೊಬ್ಬರೇ ಉಮೇದುವಾರರಿರುವಂತೆ ಹೊಸ ಕ್ಷೇತ್ರಗಳನ್ನು ನಿರ್ಮಿಸುವುದಕ್ಕೂ, ಈಗಿರುವ ೩೦ ಜನ ಸದಸ್ಯರ ಸಂಖ್ಯೆಯನ್ನು ೪೫ ಕ್ಕೆ ಹೆಚ್ಚಿಸುವುದಕ್ಕಾಗಿಯೂ ಪೌರಸಭೆಯ ಉಪಸಮಿತಿಯವರು ಕೊಟ್ಟಿದ್ದ ಸಲಹೆಗಳನ್ನು ನಿನ್ನೆ ದಿನ ಪೌರಸಭೆಯ ವಿಶೇಷ ಅಧಿವೇಶನದಲ್ಲಿ ಅಂಗೀಕರಿಸಲಾಯಿತು ಇದರ ಪ್ರಕಾರ ನಗರದಲ್ಲಿ ೩೦ ವಾರ್ಡುಗಳು ಆಗುವುವು. ಒಂದೊಂದು ವಾರ್ಡಿಗೂ ಒಬ್ಬೊಬ್ಬ ಪ್ರತಿನಿಧಿಯನ್ನು ಆರಿಸಲಾಗುವುದು. ಮುಸ್ಲಿಮರಿಗಾಗಿ ೪, ಮಹಿಳೆಯರಿಗೆ ೧, ವಾಣಿಜ್ಯಕ್ಕೆ ೧, ಹರಿಜನರಿಗೆ ೩, ಕ್ರೈಸ್ತರಿಗೆ ೨, ಕಾರ್ಮಿಕರಿಗೆ ೧, ಈ ರೀತಿ ಸ್ಥಾನಗಳನ್ನು ಗೊತ್ತುಮಾಡಲಾಗುವುದು. ಇತರ ವಿಶೇಷ ಹಿತಗಳಿಗಾಗಿ ಸರ್ಕಾರದವರು ೩ ಸ್ಥಾನಗಳನ್ನು ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗುವುದು. ಜಂಟಿ ಚುನಾವಣಾ ಪದ್ಧತಿಯೇ ಜಾರಿಯಲ್ಲಿರುವುದು.

ಈ ಸೂಚನೆಗೆ ಮಿ॥ ಗೌಸ್ ಮೊಹಿಯುದ್ದೀನರವರು ತಿದ್ದುಪಡಿಯನ್ನು ತಂದು ಮುಸ್ಲಿಮರಿಗೆ ನಾಲ್ಕು ಸ್ಥಾನಗಳ ಬದಲು ಐದು ಸ್ಥಾನಗಳನ್ನು ಕೊಡಬೇಕೆಂದೂ ಪ್ರತ್ಯೇಕ ಚುನಾವಣಾ ಪದ್ಧತಿಯನ್ನು ಜಾರಿಗೆ ತರಬೇಕೆಂದೂ ಹೇಳಿದರು. ಹಾಗೆ ಮಾಡಿದರೆ ಆ ನಾ ಮ ಥೇ ಯ ರು ಬ ರುವ ಬದಲು ಉತ್ತಮ ಉಮೇದುವಾರರು ಆರಿಸಿ ಬರಲು ಅವಕಾಶವಾಗುವುದೆಂದು ತಿಳಿಸಿದರು ಹಾಗೂ ಮುಸ್ಲಿಂ ಏಕ್ಯವನ್ನು ಬೆಳೆಸಲು ಪ್ರತ್ಯೇಕ ಚುನಾವಣೆಯು ಸಹಕಾರಿಯಲ್ಲವೆಂದೂ, ಆ ಪದ್ಧತಿಯಿಂದ ಮುಸ್ಲಿಮರಿಗೇ ಹಾನಿಯುಂಟಾಗುವುದೆಂದು ಹೇಳಿ ಶ್ರೀ॥ ಜಿ ವಿ ರಾಮಾಚಾರ್ಯರು ತಿದ್ದುಪಡಿಯನ್ನು ವಿರೋಧಿಸಿದರು ಅಧ್ಯಕ್ಷರಾದ ಶ್ರೀ॥ ಎ. ಜೆ. ಖಲೀಲರೂ ತಿದ್ದುಪಡಿಗೆ ತಮ್ಮ ಬೆಂಬಲವನ್ನು ಇತ್ತರು ಕ್ರೈಸ್ತ ಸದಸ್ಯರಾದ ಶ್ರೀ॥ ಅಂಬ್ರೋಸ್ ಆನಂದರವರೂ ಸಹ ಪ್ರತ್ಯೇಕ ಚುನಾವಣೆಗಾಗಿಯೇ ಒತ್ತಾಯ ಪಡಿಸಿದರು ಅವರ ತಿದ್ದುಪಡಿಯು ಬಹುಮತದಿಂದ ಬಿದ್ದುಹೋಯಿತು.

ಗಡಿನಾಡಿನಲ್ಲಿ ಶಸ್ತ್ರಸಜ್ಜಿತ ಪಕ್ಷ

ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರ ಮಗ ಖಾನ್ ಅಬ್ದುಲ್ ಗನಿಖಾನರು ತಮ್ಮ ಪ್ರಾಂತ್ಯದಲ್ಲಿ ಹೊಸ ರಾಜಕೀಯ ಪಕ್ಷವೊಂದನ್ನು ರಚಿಸಿದ್ದಾರೆ. ಈ ಪಕ್ಷದವರೂ ಕೆಂಪಂಗಿ ದಳದಂತೆಯೇ ಇರುವರು ಇವರು ಅಹಿಂಸಾ ಮಾರ್ಗವನ್ನು ಅನುಸರಿಸದೆ ಶಸ್ತ್ರಾಸ್ತ್ರಗಳನ್ನು ಪಡೆದಿರುವರು ರಕ್ಷಣೆಗಾಗಿ ಇವರು ಹಿಂಸೆಯನ್ನೂ, ಪ್ರತಿಕ್ರಿಯೆ ಮನ್ನೂ ಕೈಗೊಳ್ಳುವರೆಂದು ಹೇಳಲಾಗಿದೆ

ಸಾಧ್ವಿ

ತಾ|| ೬-೫-೪೭ ಮಂಗಳವಾರ

ಮೈಸೂರಿನಲ್ಲೂ ತಾತ್ಕಾಲಿಕ ಸರ್ಕಾರ ಏರ್ಪಡಲಿ!

ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳನ್ನು ಸೂಚಿಸಲು ಪ್ರಯತ್ನಗಳು ನಡೆಯುತ್ತಿವೆಯಷ್ಟೆ. ಈ ಮಾತುಕತೆಗಳು ಒಂದು ಕ್ರಮದಿಂದ ಸಾಗುತ್ತಿವೆ. ಈ ಮಧ್ಯೆ ಹಿಂದೂಸ್ಥಾನದಂತೆಯೇ ಇಲ್ಲಿಯೂ ಒಂದು ತಾತ್ಕಾಲಿಕ ಮಂತ್ರಿಮಂಡಲವನ್ನು ಸ್ಥಾಪಿಸುವುದು ಅತ್ಯಗತ್ಯವಾಗಿದೆ. ಹೊಸ ಸುಧಾರಣೆಗಳನ್ನು ರೂಪಿಸುವುದಕ್ಕೂ, ಅವುಗಳು ತೃಪ್ತಿಕರವಾದ ರೀತಿಯಲ್ಲಿ ಜಾರಿಗೆ ಬರುವುದಕ್ಕೂ ಈ ಬಗೆಯ ಕೇಂದ್ರ ಸರ್ಕಾರವನ್ನು ಏರ್ಪಡಿಸುವುದು ಅತ್ಯಂತ ಆವಶ್ಯಕವಾಗಿದೆ.

ಈಗಿರುವ ಮೈಸೂರು ರಾಜ್ಯಾಂಗ ಶಾಸನದಲ್ಲಿಯೇ ಇದಕ್ಕೆ ಸಂಪೂರ್ಣವಾದ ಅವಕಾಶವಿರುತ್ತದೆ. ಇದಕ್ಕಾಗಿ ರಾಜ್ಯಾಂಗದಲ್ಲಿ ಯಾವ ಬದಲಾವಣೆಯೂ ಆಗಬೇಕಾಗಿಲ್ಲ. ಹಿಂದೆ ಸುಧಾರಣೆಗಳು ಜಾರಿಗೆ ಬಂದಾಗ ಅವುಗಳ ವ್ಯಾಪ್ತಿಯ ವಿಚಾರವಾಗಿ ಸರ್ ಮಿರ್ಜಾ ಇಸ್ಮಾಯಿಲರು ಕೊಟ್ಟಿದ್ದ ವಿವರಣೆಯು ಎಲ್ಲರ ನೆನಪಿನಲ್ಲಿಯೂ ಇದೆ. ದಿವಾನರೂ ಸೇರಿ ಎಲ್ಲ ಮಂತ್ರಿಗಳನ್ನೂ ಶಾಸನ ಸಭೆಗಳ ಚುನಾಯಿತ ಪ್ರತಿನಿಧಿಗಳಿಂದಲೇ ಆರಿಸಿಕೊಳ್ಳಲು ಈ ಶಾಸನದಲ್ಲಿಯೇ ಅವಕಾಶವಿರುವುದೆಂದು ಅವರು ಹೇಳಿದ್ದರು. ಆದರೆ ಅವರ ಮಾತುಗಳು ಇನ್ನೂ ಈಡೇರಿರುವುದಿಲ್ಲ. ಹೊಸ ಸುಧಾರಣೆಗಳು ಜಾರಿಗೆ ಬರುವುದಕ್ಕೆ ಮೊದಲು ಹಳೆಯ ಸುಧಾರಣೆಗಳನ್ನು ಸಂಪೂರ್ಣವಾಗಿ ಚಲಾಯಿಸುವುದು ಅತ್ಯಗತ್ಯ. ಸರ್ ಮಿರ್ಜಾರವರು ಹೇಳಿದ್ದಂತೆ ಇಂದಿನ ಶಾಸನ ಸಭೆಗಳ ಚುನಾಯಿತ ಸದಸ್ಯರಿಂದಲೇ ನಮ್ಮ ಮಂತ್ರಿಮಂಡಲವನ್ನು ರಚಿಸಬೇಕು; ದಿವಾನರನ್ನೂ ಸಹ ಇದೇ ರೀತಿ ನೇಮಿಸಬೇಕು. ಇಂದಿನ ದಿವಾನರಾದ ಸರ್ ಆರ್ಕಾಟರವರು ಬೇಕಾದರೆ ಸಲಹೆಗಾರರಂತೆ ಕೆಲಸ ಮಾಡಬಹುದು.

ಹಿಂದೆ ಸುಧಾರಣೆಗಳನ್ನು ಸೂಚಿಸಲು ರಚಿತವಾಗಿದ್ದ ಸಮಿತಿಯವರು ಸಂಸ್ಥಾನದಲ್ಲಿ ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸುವುದೇ ರಾಜ್ಯಾಂಗದ ಗುರಿಯೆಂದು ತಿಳಿಸಿದ್ದರು. ಮಂತ್ರಿಗಳು ಶಾಸನ ಸಭೆಗಳಿಗೆ ಉತ್ತರವಾದಿಗಳಾಗಿರಬೇಕೆಂದು ಹೇಳಿದ್ದರು ಮತ್ತು ಶಾಸನ ಸಭೆಗಳಲ್ಲಿ ಅಂಗೀಕರಿಸಲ್ಪಡುವ ಕರ್ತರೀ ಪ್ರಯೋಗಗಳನ್ನು ಅವಿಶ್ವಾಸ ನಿರ್ಣಯಗಳೆಂದು ಅಂಗೀಕರಿಸಿ ಮಂತ್ರಿಗಳು ರಾಜೀನಾಮೆ ಕೊಡುವ ಪದ್ಧತಿಯನ್ನು ಜಾರಿಗೆ ತರಬೇಕೆಂದೂ ಸಹ ಸಲಹೆ ಮಾಡಿದ್ದರು. ಆದರೆ ಈ ಸಲಹೆಗಳನ್ನು ಇದುವರೆಗೆ ಪ್ರಭುತ್ವದವರು ಜಾರಿಗೆ ತಂದಿರುವುದಿಲ್ಲ.

ಉಭಯ ಶಾಸನ ಸಭೆಗಳಲ್ಲಿಯೂ ಇದುವರೆಗೆ ಅನೇಕ ಬಾರಿ ಸರ್ಕಾರದವರಿಗೆ ಸೋಲಿನ ಮೇಲೆ ಸೋಲುಗಳು ಸಂಪ್ರಾಪ್ತವಾಗಿರುತ್ತವೆ. ಕರ್ತರೀ ಪ್ರಯೋಗಗಳೂ ಹೇರಳವಾಗಿ ಅಂಗೀಕರಿಸಲ್ಪಟ್ಟಿವೆ. ಎರಡು ಸಭೆಗಳ ಸದಸ್ಯರೂ ಶ್ರೀಮನ್ಮಹಾರಾಜರವರಿಗೂ ಸಹ ಮನವಿಯನ್ನು ಸಲ್ಲಿಸಿ ಇಂದಿನ ಸಂಪೂರ್ಣ ಮಂತ್ರಿಮಂಡಲವು ಪ್ರಜಾ ಪ್ರತಿನಿಧಿ

ಜಿನ್ನಾರವರ ಭೇಟಿಗೆ ತೆರಳಿ ಮರೆಸಿಕೊಂಡಿದ್ದವನು

ಗಡಿನಾಡಿನ ತಂಡಗದಲ್ಲಿದ್ದ ನಾಲ್ವರು ಲೀಗ್ ನಾಯಕರನ್ನು ಪೆರೋಲ್ ಮೇಲೆ ಬಿಡುಗಡೆ ಮಾಡಿ ಮಿ|| ಜಿನ್ನಾರವರ ಭೇಟಿಗಾಗಿ ದೆಹಲಿಗೆ ಹೋಗಲು ವೈಸರಾಯರ ಅಪೇಕ್ಷೆಯಂತೆ ಏರ್ಪಾಡು ಮಾಡಲಾಗಿದ್ದಿತಷ್ಟೆ. ಮಿಯಾನ್ ಅಬ್ದುಲ್ಲಾ ಹಸ ಎಂಬಾತನು ದಸ್ತಗಿರಿಯ ವಾರಂಟನ್ನು ತಪ್ಪಿಸಿ ತಲೆಮರೆಸಿಕೊಂಡಿದ್ದು ಈ ನಿಯೋಗದ ಜೊತೆಯಲ್ಲಿ ಅವರ ವಿಮಾನದಲ್ಲಿಯೇ ದೆಹಲಿಗೆ ಹೋಗಿ ಮಿ|| ಜಿನ್ನಾರವರ ಭೇಟಿ ಮಾಡಿದ್ದಾನೆಂದು ವರದಿಯಾಗಿದೆ.

ಇಂಡೊನೇಷಿಯಾಕ್ಕೆ ಡಚ್ ಪ್ರಧಾನಿ

ಡಚ್ ಪ್ರಧಾನಿಗಳು ಜಾವಾಕ್ಕೆ ಮೊನ್ನೆ ವಿಮಾನದಲ್ಲಿ ಪ್ರಯಾಣಮಾಡಿದರು. ಇಂಡೊನೇಷಿಯನ್ ರಿಪಬ್ಲಿಕ್‌ನೊಂದಿಗೆ ಮಾಡಿಕೊಳ್ಳಲಾಗುವ ಒಪ್ಪಂದವನ್ನು ಕುರಿತು ಇವರು ಡಚ್ ಕಮಿಷನರೊಡನೆ ಮಾತುಕತೆ ನಡೆಸುವರು.

ಳ ವಿಶ್ವಾಸಕ್ಕೆ ಪಾತ್ರವಾಗಿಲ್ಲವೆಂದೂ, ಅದನ್ನು ಪುನರ್ರಚನೆ ಮಾಡಬೇಕೆಂದೂ ಕೇಳಿಕೊಂಡಿದ್ದಾರೆ. ಈ ಕಾರಣಗಳಿಂದ ಕೂಡಲೇ ಸಂಸ್ಥಾನದಲ್ಲಿ ಪ್ರಮುಖ ರಾಜಕೀಯ ಸಂಗಡಗಳ ವಿಶ್ವಾಸಕ್ಕೆ ಪಾತ್ರರಾದ ಪ್ರತಿನಿಧಿಗಳಿಂದ ಕೂಡಿದ ತಾತ್ಕಾಲಿಕ ಸರ್ಕಾರವು ಏರ್ಪಡುವುದು ಅತ್ಯಗತ್ಯವಾಗಿದೆ. ಹೊಸ ಸುಧಾರಣೆಗಳ ಜಾರಿಗೆ ಈ ಬಗೆಯ ತಾತ್ಕಾಲಿಕ ಸರ್ಕಾರವೇ ಪೂರ್ವ ಪೀಠಿಕೆಯಂತಿರುತ್ತದೆ. ಇಲ್ಲವಾದರೆ ಸುಧಾರಣೆಗಳು ಸಮರ್ಪಕವಾಗಿ ಜಾರಿಗೆ ಬರಲು ಸಾಧ್ಯವಿಲ್ಲ. ಆದುದರಿಂದ ನಮ್ಮ ಸಂಸ್ಥಾನದಲ್ಲಿಯೂ ಎಲ್ಲ ಸಂಗಡಗಳ ಪ್ರಾತಿನಿಧ್ಯವನ್ನು ಹೊಂದಿರುವ ತಾತ್ಕಾಲಿಕ ಸರ್ಕಾರವನ್ನು ಕೂಡಲೇ ರಚಿಸುವುದು ಅತ್ಯಗತ್ಯವೆಂದು ನಾವು ಸೂಚಿಸುತ್ತೇವೆ.

ಕೊಚ್ಚಿಯಲ್ಲಿ ಮುಂದಿನ ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಮುಂದಿನ ಸಲ ಕೇರಳ ಪ್ರಾಂತ್ಯದಲ್ಲಿ ನಡೆಯಬೇಕೆಂದು ನಿರ್ಧಾರವಾಗಿದೆ. ಸದರಿ ಪ್ರಾಂತ್ಯದ ಕಾಂ|| ಸಮಿತಿಯವರು ಅಧಿವೇಶನವನ್ನು ಕೊಚ್ಚಿ ಸಂಸ್ಥಾನದಲ್ಲಿ ಸೇರಿಸಲು ಆಲೋಚಿಸಿದ್ದಾರೆ. ಕೊಚ್ಚಿ ರಾಜರಿಗೆ ಪ್ರಜಾ ಪ್ರಭುತ್ವದ ಮೇಲಿರುವ ವಿಶ್ವಾಸವು ಸರ್ವಮಾನ್ಯವಾಗಿರುವುದರಿಂದ ಈ ಸೂಚನೆಯನ್ನು ಕೊಡಲಾಗಿದೆ. ಕಾಂಗ್ರೆಸ್ ಅಧಿವೇಶನವು ದೇಶೀಯ ಸಂಸ್ಥಾನದಲ್ಲಿ ನಡೆಯುವುದು ಇದೇ ಪ್ರಥಮ.

ಅಮೆರಿಕದ ಮೇಲೆ ರಷ್ಯ ಎಂದು ಯುದ್ಧ ಹೂಡುವುದು?

ಬ್ರಿಟನ್ನಿನ ಹಲವು ಖಾಸಗೀ ಶಾಲೆಗಳಲ್ಲಿ ರಷ್ಯದ ವಿರುದ್ಧ ಪ್ರಚಾರ ಸಾಗಿಸುತ್ತಿರುವುದಾಗಿ ವರದಿಯಾಗಿದೆ. ಸುಮಾರು ೧೦ ವರ್ಷದ ಬಾಲಕರೂ ಸಹ ರಷ್ಯವು ಎಂದು ಅಮೆರಿಕದ ಮೇಲೆ ಯುದ್ಧ ಹೂಡುವುದು? ಎಂದು ಪ್ರಶ್ನಿಸುತ್ತಿದ್ದಾರೆ. ಈ ಅಭಿಪ್ರಾಯವು ತಮಗೆ ಶಾಲೆಯಲ್ಲಿ ಬಂದಿತೆಂದು ಆ ಹುಡುಗರು ಹೇಳುತ್ತಿದ್ದಾರೆ. ಈ ಬಗ್ಗೆ ಅಧಿಕಾರಿಗಳಿಗೆ ದೂರು ಕೊಡಲಾಗಿದೆಯೆಂದು ತಿಳಿದು ಬಂದಿದೆ.

ಚಂದಾದಾರರಲ್ಲಿ ವಿನಂತಿ

ರಾಜಧಾನಿಯ ಚಂದಾದಾರರು ೧-೫-೪೭ ರಿಂದ ತಮ್ಮ ಚಂದಾ ಹಣವನ್ನು ನಮ್ಮ ಹೊಸ ಏಜಂಟರಾದ ಶ್ರೀ|| ಎಸ್. ಶ್ರೀಕಂಠಸ್ವಾಮಿಯವರಿಗೆ ಪಾವತಿ ಮಾಡಿ ಕ್ರಮವಾದ ರಸೀತಿ ಪಡೆಯಬೇಕೆಂದು ಕೋರಲಾಗಿದೆ.

ವ್ಯವಸ್ಥಾಪಕ; 'ಸಾಧ್ವಿ'

ಚುನಾವಣೆ ರದ್ದಾಗಬೇಕು

ಚನ್ನರಾಯ ಪಟ್ಟಣದ ತಾ|| ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ, ಜಿಲ್ಲಾ ಬೋರ್ಡ್ ಸದಸ್ಯರೂ ಆದ ಶ್ರೀ ಅಂಕಂ ಸಂಜೀವಯ್ಯನವರು ಈ ರೀತಿ ಬರೆಯುತ್ತಾರೆ :-

ಹಾಸನದ ಜಿಲ್ಲಾ ಬೋರ್ಡಿಗೆ ಚನ್ನರಾಯಪಟ್ಟಣದಿಂದ ನಡೆದ ಚುನಾವಣೆಯಲ್ಲಿ ಜಿಲ್ಲಾ ಮತ್ತು ಇತರ ಅಧಿಕಾರಿಗಳ ಕೈವಾಡ ಬಹಳವಾಗಿದ್ದಿತು. ಮತದಾರರು ನಿರ್ಭಯವಾಗಿ ಓಟುಮಾಡಲು ತೊಂದರೆ ಇತ್ತು. ಗೆಜೆಟ್ಟಿನಲ್ಲಿ ಪ್ರಕಟವಾಗಿದ್ದ ಉಮೇದುವಾರರ ಪಟ್ಟಿಯಲ್ಲಿದ್ದ ಕ್ರಮವನ್ನು ಅಧಿಕಾರಿಗಳು ತಮಗಿಷ್ಟಬಂದಂತೆ ಬದಲಾಯಿಸಿಕೊಂಡಿದ್ದರು. ನಂಬರನ್ನೂ ಕೂಡ ಹಾಕಿರಲಿಲ್ಲ. ಪೋಲಿಂಗ್ ಬೂತುಗಳಲ್ಲಿ ನಡೆದ ಅನ್ಯಾಯಗಳನ್ನು ಅಧಿಕಾರಿಗಳ ಗಮನಕ್ಕೆ ತಂದರೂ ಅವರು ಅದನ್ನು ಸರಿಪಡಿಸಲಿಲ್ಲ. ಚುನಾವಣೆಗೆ ನಾಲ್ಕು ದಿನಗಳ ಹಿಂದಿನಿಂದ ಜಿಲ್ಲಾಧಿಕಾರಿಗಳೂ ಇಲ್ಲಿ ಮೊಕ್ಕಾಂ ಮಾಡಿ ಕಾಂಗ್ರೆಸ್ ಉಮೇದುವಾರರ ವಿರೋಧವಾಗಿ ಕೆಲಸ ಮಾಡಿರುತ್ತಾರೆ. ಈ ಎಲ್ಲಾ ಕಾರಣಗಳಿಂದ ಈಗ ನಡೆದಿರುವ ಚುನಾವಣೆಯು ರದ್ದಾಗಿ ಹೊಸ ಚುನಾವಣೆ ನಡೆಯಬೇಕಾಗಿದೆ. ಈ ವಿಚಾರಗಳನ್ನು ಸ್ಥಳೀಯ ಸಂಸ್ಥಾನ ಮಂತ್ರಿಗಳಿಗೂ, ದಿವಾನರಿಗೂ ತಂತೀ ಮೂಲಕ ತಿಳಿಸಲಾಗಿದೆ.

ಮಂತ್ರಶಕ್ತಿಯಿಂದ ರೋಗ ನಿವಾರಣೆ

ಗ್ಲೋಬ್] ಕೈರೋ

ಎಲ್ಲಾ ವಿಧವಾದ ರೋಗರುಜಿನಾದಿಗಳನ್ನೂ ಮಂತ್ರಶಕ್ತಿಯಿಂದ ಗುಣಪಡಿಸುವ ೨೦ ವರ್ಷದ ಅವಾಲ್ ಎಂಬ ಅರ್ಮೇನಿಯನ್ ಯುವಕನೊಬ್ಬನ ಬಳಿಗೆ ಜನರು ತಂಡೋಪತಂಡವಾಗಿ ಬರುತ್ತಿರುವರು. ಈತನು ಟಿಹರಾನ್ ಬಳಿ ಇರುವನು. ಈತನು ಅದ್ಭುತವಾದ ಮಂತ್ರ ಚಿಕಿತ್ಸಾ ಶಕ್ತಿಯನ್ನು ಪಡೆದಿರುವನೆಂದು ಹೇಳಲಾಗಿದೆ. ರೋಗಿಗಳಿಂದ ಹಣವನ್ನು ಇವನು ಅಪೇಕ್ಷಿಸುವುದಿಲ್ಲವೆಂದೂ, ಕೈತುಂಬ ಅವನಿಗೆ ಪ್ರಿಯವಾದ ಈರುಳ್ಳಿ ಕೊಟ್ಟರೆ ಸಾಕೆಂದೂ ಗೊತ್ತಾಗಿದೆ. ಈತನು ಸದ್ಯದಲ್ಲೇ ಕ್ಯಾಲಿಫೋರ್ನಿಯಾದ ಕೋಟ್ಯಾಧಿಪತಿಯ ಮಗಳೊಬ್ಬಳ ಪಾರ್ಶ್ವವಾಯುವನ್ನು ಗುಣಪಡಿಸಲು ಅಮೆರಿಕಕ್ಕೆ ತೆರಳಲಿದ್ದಾನೆ.

ಬೆಣ್ಣೆ ಟಿನ್ನಿನಲ್ಲಿ ಚಿನ್ನದ ರವಾನೆ

ಗ್ಲೋಬ್] ಲಂಡನ್ ೩

ದಕ್ಷಿಣಆಫ್ರಿಕದಿಂದ ಭಾರತಕ್ಕೆ ಬೆಣ್ಣೆ ಟಿನ್ನುಗಳಲ್ಲಿ ಚಿನ್ನವನ್ನು ಕಳ್ಳತನದಲ್ಲಿ ಸಾಗಿಸಲಾಗುತ್ತಿದೆ. ಭಾರತದಿಂದ ದ|| ಆಫ್ರಿಕಕ್ಕೆ ಹೋದ ಬೆಣ್ಣೆ ಟಿನ್ನುಗಳನ್ನು ಒಡೆದು ಕಳವು ಮಾಡಲಾಗಿದ್ದ ೧ ಲಕ್ಷ ಪೌಂ ಬೆಲೆ ಬಾಳುವ ಚಿನ್ನದ ಅಚ್ಚುಗಳನ್ನು ಅದರೊಳಕ್ಕೆ ಹಾಕಿ ಭದ್ರವಾಗಿ ಟಿನ್ನುಗಳನ್ನು ಸೀಲು ಮಾಡಿ ಬೆಣ್ಣೆಯು ಕೆಟ್ಟುಹೋಗಿರುವುದರಿಂದ ಅದು ಉಪಯೋಗಕ್ಕೆ ಅರ್ಹವಾಗಿಲ್ಲವೆಂಬ ನೆಪದಮೇಲೆ ಭಾರತಕ್ಕೇ ವಾಪಸ್ ಕಳುಹಿಸಲ್ಪಟ್ಟಿದೆ. ಆ ಬೆಣ್ಣೆಯನ್ನು ಭಾರತದಲ್ಲಿ ಕರಗಿಸಿ ಚಿನ್ನವನ್ನು ಪಡೆಯಲಾಗುತ್ತಿದೆಯೆಂದು ವರದಿಯಾಗಿದೆ.

ರಾಜಕಮಲ್, ಮೈಸೂರು

ತಾ|| ೨-೫-೪೭ ರಿಂದ ಎರಡನೇ ವಾರ

ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ ಪಾತ್ರವಹಿಸಿರುವ

'ಗೊಲ್ಲಭಾಮ' (ತೆಲುಗು)

೪-೫-೪೭ ನೇ ತಾ|| ಭಾನುವಾರದಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು ೩-೩೦, ೬-೩೦, ೯-೩೦ ಕ್ಕೆ

ಮೈಸೂರಿನ ಭವ್ಯ ಚಲನ ಚಿತ್ರ ಮಂದಿರ

ಫ್ರೆಡ್-ಲೆಂಡ್ ಟಾಕೀಸ್.

(ಕಟ್ಟೆ ಹಾಲ್)

ಎ. ವಿ. ಯಂ. ಪ್ರೊಡಕ್ಷನ್ನರವರ

ಅಮೋಘ ಸಾಮಾಜಿಕ ಚಿತ್ರ

★ 'ನಾಮ್ ಇರುವರು' ★ (ತಮಿಳು)

ತಾರಾಗಣ :- ಟಿ. ಆರ್. ಮಹಾಲಿಂಗಂ, ಟಿ. ಎ ಜಯಲಕ್ಷ್ಮಿ, ಆರ್ ರಾಮಚಂದ್ರನ್ ಮತ್ತು ಇತರರು

ಪ್ರೊಪ್ರೈಟರ್ಸ್ :- ಬಿ ಎಂ ಗೋವಿಂದಸ್ವಾಮಿ, ಬಿ. ಎಂ ರಾಮಮೂರ್ತಿ.

Edited, printed and published by A. K. Nagarajan at the Sadhvi Press D Subbiah Road, Mysore.

ಪೋಸ್ಟ್. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಬುಧವಾರ ೭—೫—೪೭ [ಸಂಚಿಕೆ ೨೩೦

ಮೂರು ಘಂಟೆ ಕಾಲ ಗಾಂಧಿ—ಜಿನ್ನಾ ಭೇಟಿ

ವಿಶ್ವಾಸ ನಿರ್ಣಯಕ್ಕೆ ಒತ್ತಾಯವಿಲ್ಲ

ಅಧ್ಯಕ್ಷರ ಪತ್ರದ ಪರಿಣಾಮ

ಮೈಸೂರು ೬

[illegible]ದಾ ಅಧ್ಯಕ್ಷರ ಮೇಲೆ ಅವಿಶ್ವಾಸ [illegible]ಸೂಚಿಸಿ, ಅವರನ್ನು ಆಸ್ಥಾನದಿಂದ [illegible]ಬೇಕೆಂದು ಸರ್ಕಾರವನ್ನು ಪ್ರಾ[illegible] ನಿರ್ಣಯಗಳನ್ನು ಚರ್ಚಿಸಲು [illegible] ವಿಶೇಷ ಅಧಿವೇಶನವನ್ನು ಕ[illegible]ಬೇಕೆಂದು ೨೩ ಮಂದಿ ಸದಸ್ಯರು ಕ[illegible]ಕೊಟ್ಟಿದ್ದ ನಿರ್ಣಯವನ್ನು ಅಧ್ಯಕ್ಷ[illegible]ಯ ಸಭೆಯನ್ನು ಕರೆಯಲು ನಿ[illegible]ದ್ದುದರಿಂದ ಪುರಸಭೆಯ ಕಾನೂ[illegible] (೨) ನೇ ಕಲಮಿನ ಪ್ರಕಾರ ಉ[illegible]ದ ಶ್ರೀ॥ಟಿ. ನರಸಿಂಹಯ್ಯಂ[illegible]ರು ವಿಶೇಷ ಸಭೆಯೊಂದನ್ನು ಕರೆ[illegible]. ಅದರಂತೆ ಸಭೆಯು ನಿನ್ನೆ ಮ[illegible] ನಡೆಯಿತು. ಸಭಾಧ್ಯಕ್ಷತೆಯನ್ನು ನರಸಿಂಹಯ್ಯಂಗಾರ್‌ರವರು ವಹಿಸಿದ್ದ[illegible] ಸಭೆಯನ್ನು ಸೇರಿಸಿದ ಪೂರ್ವೋ[illegible]ವನ್ನು ಅಧ್ಯಕ್ಷರು ವಿವರಿಸಿದರು.

[illegible]ಗ್ರೆಸ್ ಪಕ್ಷದ ನಾಯಕರಾದ ಶ್ರೀ॥ [illegible]ಪ್ಪನವರು ಸದರಿ ನಿರ್ಣಯಗ[illegible] ಸಭೆಯಲ್ಲಿ ಮಂಡಿಸಿದರು. ಪುರಸ[illegible] ಗೌರವವನ್ನೂ, ಅಂತಸ್ತನ್ನೂ ಹೆಚ್ಚಿ[illegible] ಸದರಿ ಸದಸ್ಯರ ಹಕ್ಕನ್ನು ಕಾಪಾಡುವ [illegible]ಗಿ ಈ ನಿರ್ಣಯಗಳನ್ನು ತರಲಾಗಿ[illegible]ದು ಹೇಳಿದರು. ಶ್ರೀ॥ ಅಗರಂ [illegible]ಗಯ್ಯನವರು ನಿರ್ಣಯಗಳನ್ನು ಅನು[illegible]ದಿಸುತ್ತಾ ಪುರಸಭೆಯ ಇತಿಹಾಸದಲ್ಲಿ [illegible] ಠರಾವು ಮುಂಡಿತವಾಗಿರುವುದು [illegible] ಮೊದಲೆಂದು ಹೇಳಿದರು. ಕಾನೂ[illegible] ಪ್ರಕಾರ ಉಪಾಧ್ಯಕ್ಷರು ಸಭೆ ಕರೆದು [illegible] ಗೌರವವನ್ನು ಎತ್ತಿ ಹಿಡಿದುದ[illegible]ಗಿ ಅವರನ್ನು ಅಭಿನಂದಿಸಿದರು.

[illegible]ಸಭಾಧ್ಯಕ್ಷರಾದ ಶ್ರೀ॥ ರಾಮಚಂದ್ರ[illegible] ಬೊಂಥೋರಿಯವರು ಬರೆದು ಕಳು[illegible]ದ್ದ ಪತ್ರವನ್ನು ಸಭಾಧ್ಯಕ್ಷರು ಓದಿದರು [illegible] ಪತ್ರದ ವಿವರ ಈ ರೀತಿ ಇದೆ:—

ತಪ್ಪು ಅಭಿಪ್ರಾಯವೊಂದು ಪ್ರಸಾರವಾ[illegible]ಗಿರುವುದರಿಂದ ಈ ಪತ್ರ ಬರೆಯು[illegible]ತ್ತೇನೆ. ಆಚಾರ್ಯ ಕೃಪಲಾನಿಯವ[illegible] ಇತ್ತೀಚೆಗೆ ಇಲ್ಲಿಗೆ ಆಗಮಿಸಿದ್ದಾಗ ಅವ[illegible] ಅಗೌರವಪಡಿಸಬೇಕೆಂಬ ಮನೋಭಾ[illegible]ವನ್ನು ನಾನು ಲೇಶಮಾತ್ರವೂ ಹೊಂದಿ[illegible]ರಲಿಲ್ಲವೆಂಬ ಅಂಶವನ್ನು ತಮಗೆ ತಿಳಿಸ ಬ[illegible]ಯಸುತ್ತೇನೆ. ಕಳೆದು ಹೋದುದನ್ನು ನಾವು ಮರೆತು ಬಿಡೋಣ. ಎಂದಿನಂತೆ ಸಹಕಾರ ರೀತಿಯಿಂದ ನಾವು ನಗರ ಸೇವೆ[illegible]ಯನ್ನು ಮುಂದುವರಿಸೋಣ.

ಈ ಪತ್ರವನ್ನು ಸಭೆಯಲ್ಲಿ ಓದಿದ ನಂ[illegible] ಶ್ರೀ॥ ಮರಿಯಪ್ಪನವರು ಎದ್ದು ಕಾಂಗ್ರೆಸ್ ಪಕ್ಷದವರು ಯಾವ ವೈಯಕ್ತಿಕ ಕಾರಣಗಳಿಗಾಗಿ ಈ ನಿರ್ಣಯಗಳನ್ನು ಮಂಡಿಸಿಲ್ಲವೆಂದೂ, ತತ್ವದ ದೃಷ್ಟಿಯಿಂದ ಮಾತ್ರ ಆ ರೀತಿ ಮಾಡಲಾಯಿತೆಂದೂ ಹೇಳಿದರು. ತಮಗೆ ಪಟುಸಾಧನೆ ಮನೋಭಾವವಿಲ್ಲವೆಂದೂ, ಅಧ್ಯಕ್ಷರು ಬರೆದಿರುವ ಪತ್ರದ ಮನೋಭಾವನೆಯನ್ನು ಗಮನಿಸಿ ತಾವು ಆ ನಿರ್ಣಯಗಳನ್ನು ಒತ್ತಾಯಪಡಿಸುವುದಿಲ್ಲವೆಂದೂ ಹೇಳಿದರು. ಸಭೆಯು ನಿರ್ಣಯವನ್ನು ಒತ್ತಾಯಪಡಿಸುವುದಿಲ್ಲವೆಂಬ ಸೂಚನೆಗೆ ಬೆಂಬಲವಿತ್ತು ಅವಿಶ್ವಾಸ ಪ್ರಕರಣವನ್ನು ಮುಕ್ತಾಯಮಾಡಿತು.

ರಾಜ್ಯಾಂಗ ಸಭೆಗೆ ಹೈದರಾಬಾದ್ ಸೇರುವುದು

ಭಾರತ ರಾಜ್ಯಾಂಗ ಸಭೆಗೆ ಹೈದರಾಬಾದ್ ಸಂಸ್ಥಾನವು ಸೇರಲು ನಿರ್ಧರಿಸಿದೆ. ಈ ಬಗ್ಗೆ ವೈಸರಾಯರೊಡನೆ ಮಾತುಕತೆಗಳನ್ನು ನಡೆಸಲು ದಿವಾನರಾದ ಸರ್ ಮಿರ್ಜಾರವರು ಸದ್ಯದಲ್ಲೇ ದೆಹಲಿಗೆ ತೆರಳುವರು.

ಸಾಧುಗಳ ಬಿಡುಗಡೆಗೆ ಒತ್ತಾಯ

ಒ ಬಾ ತಂತಿ] ತೀರ್ಥಹಳ್ಳಿ ೬

ಕಳೆದ ೨೮ ನೇ ತಾ॥ ದೆಹಲಿಯಲ್ಲಿ ಸ್ವಾಮಿ ಕರಪಾತ್ರೀಜಿ ಮತ್ತು ಅವರ ಸಹೋದ್ಯೋಗಿ ಸಾಧುಗಳನ್ನು ದಸ್ತಗಿರಿ ಮಾಡಿರುವುದನ್ನು ಖಂಡಿಸಿ ಅಖಿಲ ಭಾರತ ಧರ್ಮವೀರ ದಳದ ಅಧ್ಯಕ್ಷರೂ ದ್ವಾರಕಾ ಪೀಠದ ಜಗದ್ಗುರುಗಳೂ ಆದ ಶ್ರೀ ಶ್ರೀ ಶಂಕರಾಚಾರ್ಯರು ಪ್ರಧಾನಿ, ಭಾರತದ ಉಪರಾಜ್ಯ ಪಾಲರು(?), ವೈಸರಾಯ್, ಪಂ॥ ನೆಹರು ಮುಂತಾದ ನಾಯಕರಿಗೆ ತಂತಿ ಕಳುಹಿಸಿ ಕೂಡಲೇ ಅವರನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಪಡಿಸಿದ್ದಾರೆ. ಭಾರತದ ಧಾರ್ಮಿಕ ಸಂಸ್ಥೆಗಳೂ, ಧರ್ಮಾಚಾರ್ಯರುಗಳೂ, ಹಿಂದೂ ಸಂಘಗಳೂ, ಧರ್ಮಯುದ್ಧಕ್ಕೆ ಬೆಂಬಲ ಕೊಟ್ಟು ಆ ಸಾಧುಗಳ ಬಿಡುಗಡೆಗಾಗಿ ಸರ್ಕಾರವನ್ನು ಒತ್ತಾಯಪಡಿಸಬೇಕೆಂದು ಸೂಚಿಸಿದ್ದಾರೆ.

* ಗಡಿನಾಡಿನ ಲೀಗ್ ಚಳುವಳಿಯಲ್ಲಿ ಭಾಗವಹಿಸಿದ್ದ ಮಾಜಿ ಪ್ರಧಾನಿ ಸರ್ದಾರ್ ಔರಂಗ್‌ಜೇಬ್ ಖಾನರಿಗೆ ಪ್ರತಿಬಂಧಕಾಜ್ಞೆಯನ್ನು ಮೀರಿದರೆಂಬ ಆಪಾದನೆ ಮೇಲೆ ೬ ತಿಂಗಳ ಕಠಿಣ ಸಜವನ್ನು ವಿಧಿಸಲಾಗಿದೆ.

LATEST NEWS

ಗೋಪಾಲರಾಯರ ದಸ್ತಗಿರಿ ಮತ್ತು ಬಿಡುಗಡೆ

ಸ್ವಂ ಸು ಫೋ] ಬೆಂಗಳೂರು ೬

ಧರ್ಮರತ್ನಾಕರ ಶ್ರೀ ಬಿ ಎಲ್ ಗೋಪಾಲರಾಯರು ತಮಗೆ ೧ ಲಕ್ಷ ರೂಗಳಿಗೆ ಮೋಸಮಾಡಿದ್ದಾರೆಂದು ದಂಡಿನ ಮಿ॥ ಗೋಮ್ಸ್‌ರವರೂ, ೮೦ ಸಾವಿರ ರೂಗಳಿಗೆ ತಮಗೆ ಮೋಸಮಾಡಿರುವುದಾಗಿ ಮಿ॥ ಸಿಗರ್ಡೋ ಎಂಬುವರೂ ದಂಡಿನ ಪೋಲೀಸರಲ್ಲಿ ಕೊಟ್ಟ ದೂರಿನಮೇಲೆ ನಿನ್ನೆ ಧರ್ಮರತ್ನಾಕರ ಗೋಪಾಲರಾಯರನ್ನು ದಸ್ತಗಿರಿ ಮಾಡಲಾಯಿತು. ೫ ಸಾವಿರ ರೂಗಳ ಜಾಮೀನು ಮುಚ್ಚಳಿಕೆಮೇಲೆ ಅವರನ್ನು ದಂಡಿನ ಸಬ್ ಡಿವಿಷನ್ ಮ್ಯಾಜಿಸ್ಟ್ರೇಟರು ಬಿಡುಗಡೆ ಮಾಡಿದ್ದಾರೆ.

ಹರಿಕಥೆ

ಮೈಸೂರು ೬

ಶಿ ಸುಬ್ಬಯ್ಯನ ರಸ್ತೆಯಲ್ಲಿರುವ 'ಸಾಧ್ವಿ' ಆಫೀಸು ಮಹಡಿಯ ಮೇಲೆ ಈ ದಿನ ರಾತ್ರಿ ಹರಿಕಥಾ ವಿದ್ವಾನ್ ಶ್ರೀ ಕೆ ಎಸ್ ರಂಗಸ್ವಾಮಿ ಅಯ್ಯಂಗಾರ್ಯರವರಿಂದ 'ಹನುಮದ್ವಿಲಾಸ' ಎಂಬ ಹರಿಕಥೆಯು ನಡೆಯುವುದು. ಸರ್ವರಿಗೂ ಆಹ್ವಾನವುಂಟು.

ಸಂಗೀತ

ಚಾಮುಂಡಿಪುರಂ(?) ಜಾನಕೀರಾಮ ಮಂದಿರದಲ್ಲಿ ಈ ದಿನ ಸಂಜೆ ೬-೩೦ ಕ್ಕೆ ಶ್ರೀಮತಿ ಎಂ ಎಸ್ ಸುಂದರವರ(?) ಸಂಗೀತವೂ, ಶ್ರೀಮತಿ ಎಂ ಎಲ್ ಜಯಮ್ಮನವರ ವೀಣಾವಾದನವೂ, ವಿದ್ವಾನ್ ಹೆಚ್ ವಿ ಕೃಷ್ಣರಾಯರ ಪಿಟೀಲು ಮತ್ತು ವಿದ್ವಾನ್ ಶಂಕರನಾರಾಯಣರವರ ಮೃದಂಗದೊಡನೆ ನಡೆಯುವುದು.

ಸಾಯಿ ಬಾಬಾ ವಾರ್ಷಿಕೋತ್ಸವ

ಒಂಟಿಕೊಪ್ಪಲು ರಂಗರ್(?) ಮಂದಿರದಲ್ಲಿ ಶ್ರೀ ಸಾಯಿ ಬಾಬಾರವರ ಮೂರನೇ ವಾರ್ಷಿಕೋತ್ಸವವು ಈ ದಿನ ಬೆಳಗ್ಗೆ ವೈಭವಯುತವಾಗಿ ಆರಂಭವಾಯಿತು. [illegible] ಕಾಲ ಅಭಿಷೇಕವೂ, ವ್ಯಾಸ[illegible] ಅಖಿಲ ಹಿಂದೂಸ್ಥಾನ ಸಾಯಿ ಸಮಾಜದ ಅಧ್ಯಕ್ಷರಾದ ಶ್ರೀ॥ ಬಿ. ವಿ. ನರಸಿಂಹಸ್ವಾಮಿಯವರಿಂದ ಶ್ರೀ ಬಾಬಾ ಮಂದಿರದ ಶಂಕುಸ್ಥಾಪನೆಯೂ ನಡೆದುವು. ಮಧ್ಯಾಹ್ನ ಶ್ರೀ॥ ನರಸಿಂಹಸ್ವಾಮಿಯವರಿಂದ ಹರಿಕಥೆ ನಡೆಯಿತು. ಸಂಜೆ ೬ ರಿಂದ ೮ ಗಂಟೆವರೆಗೆ ಗಾನಕೋಕಿಲ ರತ್ನಮ್ಮನವರ ಸಂಗೀತವೂ ಏರ್ಪಟ್ಟಿವೆ.

—

ಗಾಂಧಿ—ಜಿನ್ನಾ ಭೇಟಿ

ಮಹಾತ್ಮ ಗಾಂಧಿಯವರು ನಿನ್ನೆ ಮಿ॥ ಜಿನ್ನಾರವರನ್ನು ಭೇಟಿಮಾಡಿ ೩ ಗಂಟೆ ಕಾಲ ಮಾತುಕತೆ ನಡೆಸಿದರು. ಮಹಾತ್ಮರ ಇಚ್ಛೆಯಂತೆ ಜಿನ್ನಾರವರ ಮನೆಯಲ್ಲಿಯೇ ಈ ಭೇಟಿಯು ನಡೆಯಿತೆಂದು ಗೊತ್ತಾಗಿದೆ. ಮೊನ್ನೆ ದಿನ ಗಾಂಧೀಜಿಯವರು ವೈಸರಾಯರ ಭೇಟಿ ಮಾಡಿ ಹಿಂತಿರುಗುತ್ತಿದ್ದಾಗ, ಆಕಸ್ಮಾತ್ತಾಗಿ ಮಿ॥ ಜಿನ್ನಾ ಮತ್ತು ಮಿ॥ ಲಿಯಾಕತ್ ಅಲಿಖಾನರು ಒಳಕ್ಕೆ ಆಗಮಿಸುತ್ತಿದ್ದಾಗ ಸಿಕ್ಕಿ ಇಬ್ಬರೂ ಸ್ವಲ್ಪಕಾಲ ಸಂಭಾಷಣೆ ನಡೆಸಿ, ಮತ್ತೆ ಸೇರಲು ನಿರ್ಧರಿಸಿದ್ದರು. ಅದರಂತೆ ನಿನ್ನೆ ಭೇಟಿಯು ನಡೆಯಿತು. ಕೆಲವು ದಿನಗಳ ಹಿಂದೆ ಇತ್ತಿದ್ದ ಶಾಂತಿ ಸಂದೇಶದ ವಿಚಾರ[illegible] ಮಾತುಕತೆ ನಡೆಯಿತೆಂದು [illegible] ತಿಳಿದಿದೆ.

ಭವ್ಯತರ ಕನ್ನಡ ನಾಡಿನ ರಚನೆ

ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

(ನಮ್ಮ ವಿಶೇಷ ಪ್ರತಿನಿಧಿಗಳಿಂದ ತಂತಿ)

ಹರಪನಹಳ್ಳಿ ೬

ಕನ್ನಡ ಬಂಧುಗಳೇ! ನಾವೆಲ್ಲರೂ ಒಕ್ಕಟ್ಟಿನಿಂದ ಕಾರ್ಯರಂಗದಲ್ಲಿ ನಿಂತು ಒಮ್ಮನವಾಗಿ ಪ್ರಯತ್ನಿಸಿ ಶ್ರಮಿಸಿದಲ್ಲದೆ, ಮುಂದಿನ ಬೃಹತ್ತಾದ ಮತ್ತು ಭವ್ಯತರವಾದ ಕನ್ನಡ ನಾಡನ್ನು ಕಟ್ಟಲಾರೆವು. ಅದು ಸುವ್ಯವಸ್ಥಿತವಾದ ಸಂಘಟನೆಯಿಂದ ಸಾಧ್ಯವಾಗುವ ಕೆಲಸವೇ ಹೊರತು, ಮಾತುಗಳ ಸುರಿಮಳೆಯಿಂದಲೂ, ಉದ್ರೇಕದ ಘೋಷಣೆಗಳಿಂದಲೂ, ಸಭ್ಯರ ದೂಷಣೆಗಳಿಂದಲೂ ಆಗುವ ಕೆಲಸವಲ್ಲ. ಕನ್ನಡ ನಾಡಿನಲ್ಲಿ ನಿತ್ಯೋತ್ಸವವೋ ಎಂಬಂತೆ ಕನ್ನಡ ನಾಡೆಲ್ಲಾ ಒಂದು ಜೇನು ಗೂಡೋ ಎಂಬಂತೆ ಉತ್ಸಾಹದಿಂದಲೂ, ಐಕಮತ್ಯದಿಂದಲೂ ಕೆಲಸ ನಡೆಯಬೇಕು ಎಂಬುದಾಗಿ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಇಲ್ಲಿ ಸಮಾವೇಶಗೊಂಡಿರುವ ೩೦ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಭಾಷಣ ಮಾಡುತ್ತಾ ತಿಳಿಸಿದರು.

ತೆಲುಗು, ತಮಿಳು ಬಾಂಧವರು ತಮ್ಮ ಪ್ರಾಂತ್ಯ ಮತ್ತು ಭಾಷೆಗೆ ಯಾವ ಸ್ಥಾನಮಾನಗಳನ್ನು ಪಡೆಯುವರೋ ಅವೇ ಸ್ಥಾನಮಾನಗಳೇ ನಮಗೂ ದೊರೆಯುವಂತೆ ಸರ್ವ ಪ್ರಯತ್ನಗಳನ್ನು ಸಫಲ ರೀತಿಯಲ್ಲಿ ನೆರವೇರಿಸಿ ಜಯಶಾಲಿಗಳಾಗೋಣ! ಸೋದರ ಭಾವನೆಯಿಂದಲೂ, ಐಕ್ಯಮತ್ಯದಿಂದಲೂ, ನಾಡಿಗೆ ಸ್ವತಂತ್ರ(?) [illegible] ಭವ್ಯದಾಯ ಸಾಧನೆ ಮಾಡಿ ಶ್ರೇಯಸ್ಸು, ಶ್ರೀಯಸ್ಸುಗಳೆರಡೂ ಸಮ್ಮಿಳಿತವಾಗಿ ಸೇರುವಂತೆ ಕಾರ್ಯರಂಗವನ್ನು ರೂಪಿಸಿ ಆ ಲಕ್ಷ್ಯದಲ್ಲಿ ಕನ್ನಡನಾಡ ಪ್ರಪಂಚಕ್ಕೇ ಆದರ್ಶವಾಗಲನುಕೂಲಿಸುವಂತೆ ನಿರ್ಮಾಣ(?) [illegible]ನಿಂದ ನಮ್ಮ ಕರ್ತವ್ಯಗಳನ್ನು ಪಾಲಿಸಿ ಧನ್ಯರಾಗೋಣ! ಎಂದು ಹೇಳಿದರು.

ಇಲ್ಲದೆ ಅವರು ತಮ್ಮ ಭಾಷಣದಲ್ಲಿ, ಹಿಂದಿನ ಮತ್ತು ಈಗಿನ ಸಾಹಿತ್ಯಗಳು, ಮೈಸೂರು ಅರಮನೆಯಲ್ಲಿ ನಡೆಯುತ್ತಿರುವ ಭಾಷಾಂತರ ಕಾರ್ಯ, ಸಾಹಿತ್ಯ, ಮತ್ತು ನಾಡಿನ ಸಂಬಂಧದ ಸಮಸ್ಯೆಗಳು ಇವುಗಳನ್ನೆಲ್ಲಾ ವಿವರವಾಗಿ ವಿಮರ್ಶಿಸಿ ಅನೇಕ ಉಪಯುಕ್ತ ಸಲಹೆಗಳನ್ನು ಸೂಚಿಸಿದ್ದಾರೆ.

ನಿನ್ನೆ ಸಂಜೆ ಅಧ್ಯಕ್ಷರ ಮೆರವಣಿಗೆ ರಥದಲ್ಲಿ ವೈಭವದಿಂದ ನಡೆಯಿತು. [illegible] ಜನರು ಭಾಗವಹಿಸಿದ್ದರು. ಈ ದಿನ ಬೆಳಗ್ಗೆ ಅಧ್ಯಕ್ಷರು ಕನ್ನಡ ಧ್ವಜವನ್ನು ಹಾರಿಸಿದರು. ಒಕ್ಕಲು(?) ಕಲೆಕ್ಟರಾದ ಶ್ರೀ॥ [illegible]ನಂತರಾಮರಾಯರವರು ವಸ್ತುಪ್ರದರ್ಶನವನ್ನು ಪ್ರಾರಂಭಿಸಿ ಪ್ರದರ್ಶನಗಳ ಪ್ರಯೋಜನವನ್ನು ವಿವರಿಸಿದರು. ಮದ್ರಾಸಿನ ಮಂತ್ರಿಗಳಾದ ಶ್ರೀ॥ ಎ. ಬಿ. ಶೆಟ್ಟಿಯವರು ಸಾಹಿತ್ಯ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿ ಕರ್ನಾಟಕದ ಏಕೀಕರಣಕ್ಕೆ ಸಕಲ ಸಹಾಯಗಳನ್ನೂ ನೀಡುವುದಾಗಿ ಭರವಸೆ ಇತ್ತರು.

ಸಮ್ಮೇಳನದ ಪ್ರವೇಶಕ್ಕೆ ಕೈಲಾಸ ನಗರವೆಂದು ನಾಮಕರಣ ಮಾಡಲಾಗಿದೆ. [illegible] ಸ್ವಾಗತ [illegible] ಅವನ್ನು ಸೂಚಿಸಿ ನಿರ್ಣಯವನ್ನು ಮಾಡಲಾಯಿತು.

ಸಾಧ್ವಿ

ತಾ॥ ೭-೫-೪೭ ಬುಧವಾರ

ವಿಷಾದ ಪ್ರಕರಣದ ಪರಿಸಮಾಪ್ತಿ

ಪೌರಸಭಾಧ್ಯಕ್ಷರ ಮೇಲೆ ಅವಿಶ್ವಾಸವನ್ನು ಸೂಚಿಸಿ ಅವರನ್ನು ವರ್ಗಾಯಿಸಲು ಬಂದಿದ್ದ ನಿರ್ಣಯವು ಒತ್ತಾಯಪಡಿಸಲ್ಪಡದೆ ಈ ಪ್ರಕರಣವು ಇಷ್ಟರಲ್ಲಿಯೇ ಪರಿಸಮಾಪ್ತಿಗೊಂಡಿರುತ್ತದೆ. ಹಳೆಯದನ್ನು ಮರೆತು, ಮುಂದೆ ಸಕಲರೂ ಸೌಜನ್ಯದಿಂದ ಸಹಕರಿಸಿ ಪುರಜನರ ಸೇವೆ ಮಾಡಬೇಕೆಂದೂ, ರಾಷ್ಟ್ರಪತಿ ಕೃಪಲಾನಿಯವರ ವಿಷಯದಲ್ಲಿ ತಮಗೆ ಯಾವ ಅಗೌರವವೂ ಇರಲಿಲ್ಲವೆಂದೂ ಅಧ್ಯಕ್ಷರು ಪತ್ರವನ್ನು ಬರೆದು ಕಳುಹಿಸಿದ್ದುದೇ ಇದಕ್ಕೆ ಕಾರಣ

ಮೈಸೂರು ಪೌರಸಭೆಯ ಇತಿಹಾಸದಲ್ಲೇ ಹೊಸದಾದ ಈ ಪ್ರಕರಣವು ಈ ರೀತಿಯಲ್ಲಿ ಪರ್ಯವಸಾನಗೊಂಡಿರುವುದೇ ಉಚಿತವಾಗಿದೆ ಅಧ್ಯಕ್ಷರ ಮೇಲೆ ಪರಸ್ಪರ ಹಗೆಗಾಗಿ ಅವಿಶ್ವಾಸ ನಿರ್ಣಯವನ್ನು ಸದಸ್ಯರು ತಂದಿರಲಿಲ್ಲವೆಂಬುದನ್ನು ಇದು ಸೂಚಿಸುತ್ತದೆ ಸಭೆಯನ್ನೇ ನಡೆಯಲು ಬಿಡದೆ ಪೌರಸಭೆಯ ಹಕ್ಕು ಬಾಧ್ಯತೆಗೆ ಧಕ್ಕೆ ತಂದಿದ್ದ ಅಧ್ಯಕ್ಷರು ತಮ್ಮ ಮನೋಭಾವವನ್ನು ಬದಲಾಯಿಸಿ ಒಂದು ಬಗೆಯಲ್ಲಿ ಪಶ್ಚಾತ್ತಾಪವನ್ನು ಸೂಚಿಸಿ ಮುಂದೆ ಸೌಜನ್ಯದಿಂದ ವರ್ತಿಸುವುದಾಗಿ ಭರವಸೆ ಇತ್ತಿರುತ್ತಾರೆ. ಇದರ ಮೇಲೂ ಅವಿಶ್ವಾಸ ನಿರ್ಣಯವನ್ನು ಒತ್ತಾಯ ಪಡಿಸುವುದು ಔದಾರ್ಯದ ಲಕ್ಷಣವಲ್ಲ. ಆದುದರಿಂದ ಸದರಿ ನಿರ್ಣಯಗಳನ್ನು ಒತ್ತಾಯಪಡಿಸದೆ ಈ ವಿಷಯವನ್ನು ಇಲ್ಲಿಗೇ ಮುಕ್ತಾಯಪಡಿಸಿರುವುದು ಸಹಜವೇ ಆಗಿರುತ್ತದೆ.

ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಇರುವುದಾಗಿಯೂ ನಮಗೆ ತಿಳಿದುಬಂದಿದೆ ಆದರೆ ನಿರ್ಣಯಗಳನ್ನು ಮಂಡಿಸಿದ ವಿಚಾರದಲ್ಲಿಯೂ ಸಾರ್ವಜನಿಕರಲ್ಲಿ ಭಿನ್ನಾಭಿಪ್ರಾಯಗಳು ಉದ್ಭವಿಸಿ ಸ್ವಲ್ಪ ಮಟ್ಟಿನ ಚಳುವಳಿಯೂ ನಡೆಯಿತೆಂಬುದನ್ನು ಮರೆಯಲಾಗದು ಅವಿಶ್ವಾಸ ಅಸ್ತ್ರವು ಸದಸ್ಯರ ಬತ್ತಳಿಕೆಯಲ್ಲಿ ಸದಾ ಕಾಲದಲ್ಲಿಯೂ ಸಿದ್ಧವಾಗಿ ಇದ್ದೇ ಇರುತ್ತದೆ ಅದನ್ನು ಪ್ರಯೋಗಿಸುವ ಅಧಿಕಾರವೂ ಅವರಿಗೆ ಯಾವಾಗಲೂ ಇರುತ್ತದೆ ಆದರೆ ಸಮಯ, ಸಂದರ್ಭ ಮತ್ತು ಸನ್ನಿವೇಶಗಳನ್ನು ನೋಡಿಕೊಂಡು ಅಸ್ತ್ರಗಳನ್ನು ಚಲಾಯಿಸುವುದು ಸಾರ್ವಜನಿಕ ಸೇವಕರ ಕರ್ತವ್ಯ ಅಸ್ತ್ರ ಪ್ರಯೋಗವಿಲ್ಲದೆಯೇ ಉದ್ದೇಶವು ಈಡೇರುವುದಾದರೆ ಅದರಲ್ಲಿ ತೊಡಗುವುದು ಅನವಶ್ಯಕ. ಅಸ್ತ್ರ ಪ್ರಯೋಗವೇ ಮುಖ್ಯ ಗುರಿಯಲ್ಲ ಅಧ್ಯಕ್ಷರು ಈಗ ಕೊಟ್ಟಿರುವ ಭರವಸೆಯು ಮುಂದೆ ಈಡೇರದಿದ್ದರೆ ಮತ್ತೆ ಯಾವಾಗ ಬೇಕಾದರೂ ಅದೇ ಅಸ್ತ್ರವನ್ನು ಉಪಯೋಗಿಸಲು ಅವಕಾಶವಿದ್ದೇ ಇರುತ್ತದೆ

ಮುಖ್ಯವಾಗಿ ಪೌರಸಭೆಯ ಸದಸ್ಯರು ಸಭೆಯನ್ನು ಕರೆಯಲು ತಮಗಿರುವ ಅಧಿಕಾರವನ್ನು ಚಲಾಯಿಸಿ ತಮ್ಮ ಹಕ್ಕನ್ನು ಸ್ಥಾಪಿಸಿರುತ್ತಾರೆ ಅಧ್ಯಕ್ಷರು ಇನ್ನು ಮುಂದೆ ಇಂತಹ ಪ್ರಕರಣಗಳಿಗೆ ಅವಕಾಶ ಕೊಡದಂತೆ ಪೌರಸಭೆಯ ಹಕ್ಕುಬಾಧ್ಯತೆಗಳನ್ನು ರಕ್ಷಿಸುವುದಲ್ಲದೆ ಸದಸ್ಯ [illegible]

ತುಪ್ಪದ ವ್ಯಾಪಾರದ ಬಗ್ಗೆ ಪುರಸಭೆಯ ಸೂಚನೆ

ಮೈಸೂರು ೬

ನಗರದಲ್ಲಿ ಬೆರಕೆ ತುಪ್ಪಗಳನ್ನು ಬೇರೆ ಬೇರೆ ಹೆಸರುಗಳಲ್ಲಿ ಮಾರಲಾಗುತ್ತಿದೆಯೆಂದು ತಿಳಿದು ಬಂದಿದೆ. ಇವುಗಳನ್ನು ಪುರಸಭೆಯ ಆರೋಗ್ಯ ಇಲಾಖೆಯವರು ಪರಿಶೀಲನೆ ಮಾಡಿ ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ ರಾಮಾಂಜನೇಯ, ಆರ್ ಜಿ ಜಿ ಎಸ್., ಚಾಮುಂಡಿ ಮತ್ತು ಗಣೇಶ ಮುಂತಾದ ಬ್ರಾಂಡ್ ತುಪ್ಪಗಳು ಅಪ್ಪಟ ತುಪ್ಪವಲ್ಲ. ಶೇಕಡ ೮೦ ರಿಂದ ೯೦ ರಷ್ಟು ವಿದೇಶದ ಕೊಬ್ಬಿನಿಂದ ಇವುಗಳು ತಯಾರಾಗಿವೆ. ಆಹಾರ ಬೆರಿಕೆ ಕಾನೂನಿನ ಪ್ರಕಾರ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳಲಾಗುವುದು. ನಾಲು ಮತ್ತು ಪೇಟೆಯಲ್ಲಿ ಬೆರಕೆ ಮಾಡಿ ಮಾರುವಗಲ ಮಂದಿ ಮೇಲೆ ಮೊಕದ್ದಮೆ ಹೂಡಲಾಗಿತ್ತು ಅವರುಗಳಿಗೆ ೧೫ ರಿಂದ ೨೫ ರೂ ಗಳವರೆಗೆ ಜುಲ್ಮಾನೆ ವಿಧಿಸಲಾಯಿತು ಈ ಬೆರಕೆ ವ್ಯಾಪಾರವನ್ನು ಪತ್ತೆಹಚ್ಚಿ ಅದನ್ನು ತಪ್ಪಿಸಲು ಸಾರ್ವಜನಿಕರು ಸಹಕರಿಸಬೇಕಾಗಿ ಪೌರಸಭೆಯ ಆರೋಗ್ಯಾಧಿಕಾರಿಗಳು ಕೋರಿರುತ್ತಾರೆ

ಪ್ರೀತಿ, ವಿಶ್ವಾಸಗಳನ್ನು ಗಳಿಸಿ ಅವರ ಸಹಕಾರದಿಂದ ಪುರಜನರ ಸೇವೆಯನ್ನು ಸಮರ್ಪಕವಾಗಿ ನಡೆಸುವಂತಾಗಲೆಂದು ನಾವು ಹಾರೈಸುತ್ತೇವೆ

ಗಡಿನಾಡಿಗೆ ಭಾರತೀಯ ಗೌರ್ನರರು ?

ಗಡಿನಾಡು ಪ್ರಾಂತ್ಯದ ಗೌರ್ನರನ್ನು ಆ ಸ್ಥಾನದಿಂದ ನಿವೃತ್ತಿ ಮಾಡಬಹುದು ಅಥವಾ ಬೇರೆ ಕಡೆಗೆ ವರ್ಗಾಯಿಸಬಹುದು-ಎಂಬುದಾಗಿ ದೆಹಲಿಯ ಜವಾಬ್ದಾರೀ ಕ್ಷೇತ್ರಗಳಲ್ಲಿ ಹೇಳಲಾಗುತ್ತಿದೆ. ಪ್ರಧಾನಿ ಡಾ॥ ಖಾನ್ ಸಾಹೇಬ್ ಮತ್ತು ಗಡಿನಾಡಿನ ಗಾಂಧಿಯವರನ್ನು ದೆಹಲಿಗೆ ಮಾತುಕತೆಗಳಿಗಾಗಿ ಆಹ್ವಾನಿಸಿರುವುದು ಈ ವಿಚಾರಕ್ಕೆ ಬೆಂಬಲವಿತ್ತಿದೆ. ಕಾಂಗ್ರೆಸ್ ನಾಯಕರು ಗಡಿನಾಡಿನ ಪ್ರಶ್ನೆಯನ್ನು ಬ್ರಿಟಿಷರ ಪ್ರಾಮಾಣಿಕತ್ವದ ಒರೆಗಲ್ಲಾಗಿ ಪರಿಗಣಿಸುವುದರಿಂದ ಆ ಗೌರ್ನರನ್ನು ಸ್ಥಾನ ಭ್ರಷ್ಟರನ್ನಾಗಿ ಮಾಡಿ, ಅವರ ಜಾಗದಲ್ಲಿ ಭಾರತೀಯರೊಬ್ಬರನ್ನು ನೇಮಿಸಲಾಗುವುದೆಂದು ಹೇಳಲಾಗುತ್ತಿದೆ

ನಾನ್ ಗೆಜೆಟೆಡ್ ಅಧಿಕಾರಿಗಳ ಸಂಘ

ನಂಜನಗೂಡು ೬

ಇಲ್ಲಿನ ನಾನ್ ಗೆಜೆಟೆಡ್ ಅಧಿಕಾರಿಗಳ ಸಭೆಯು ನಿನ್ನೆ ದಿನ ನಡೆಯಿತು ಮುಂದಿನ ಸಾಲಿಗೆ ಶ್ರೀಗಳಾದ ಸಿ. ಸುಬ್ಬರಾಯರನ್ನು ಅಧ್ಯಕ್ಷರನ್ನಾಗಿಯೂ, ಎಲ್ ಶಿವಲಿಂಗಯ್ಯನವರನ್ನು ಉಪಾಧ್ಯಕ್ಷರನ್ನಾಗಿಯೂ, ಟಿ ನಾಗರಾಜ್‌ರವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು.

Edited, printed and published by A. R. Nagarajan of the Sadhvi Press, D. Subbiah Road, Mysore.

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ
—: ನಮ್ಮಲ್ಲಿ ವಿಚಾರಿಸಿ. :—
ಕೆ ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.
ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,
ಅಶೋಕಾ ರಸ್ತೆ, ಮೈಸೂರು.
ಸ್ಥಾಪಿತ ೧೯೩೦. ಫೋನ್ ४೧೧

ರಾಜಕಮಲ್, ಮೈಸೂರು
ತಾ॥ ೨-೫-೪೭ ರಿಂದ ಎರಡನೇ ವಾರ
ಕೃಷ್ಣವೇಣಿ, ರಘುರಾಮಯ್ಯ, ಅಂಜಲೀದೇವಿ ಪಾತ್ರವಹಿಸಿರುವ
'ಗೊಲ್ಲಭಾಮ' (ತೆಲುಗು)

೮-೫-೪೭ ನೇ ತಾ॥ ಭಾನುವಾರದಿಂದ ಅಪೋಷ ಪ್ರಾರಂಭ
ಪ್ರತಿದಿನ ೩ ಆಟಗಳು ೬-೩೦, ೬-೩೦, ೯-೩೦ ಕ್ಕೆ
ಮೈಸೂರಿನ ಭವ್ಯ ಚಲನ ಚಿತ್ರ ಮಂದಿರ
ವುಡ್-ಲೆಂಡ್ ಟಾಕೀಸ್.
(ಶಬ್ದಗ್ರಾಹಕ [illegible])
ಎ. ವಿ. ಯಂ. ಪ್ರೊಡಕ್ಷನ್ನರವರ
ಅಮೋಘ ಸಾಮಾಜಿಕ ಚಿತ್ರ
* 'ನಾಮ್-ಇರುವರ್' * (ತಮಿಳು)
ತಾರಾಗಣ :- ಟಿ. ಆರ್. ಮಹಾಲಿಂಗಂ, ಟಿ. ವಿ ಜಯಲಕ್ಷ್ಮಿ, ಆರ್ ರಾಮಚಂದ್ರ ಮತ್ತು ಇತರರು
ಪ್ರೊಪ್ರೈಟರ್ಸ್ :- ಬಿ. ಎಂ. ಗೋವಿಂದಸ್ವಾಮಿ, ಬಿ. ಎಂ. ರಾಮಮೂರ್ತಿ.

ಹೈದರಾಬಾದಿನಲ್ಲಿ ಸತ್ಯಾಗ್ರಹ

ಮುಂದಿನ ತಿಂಗಳಲ್ಲಿ ಹೈದರಾಬಾದ್ ಕಾಂಗ್ರೆಸ್ಸಿನವರು ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಸತ್ಯಾಗ್ರಹವನ್ನು ಆರಂಭಿಸುವರೆಂದು ತಿಳಿದುಬಂದಿದೆ. ಈ ತಿಂಗಳ ಕೊನೆಯಲ್ಲಿ ನಡೆಯಲಿರುವ ಕಾಂಗ್ರೆಸ್ ಅಧಿವೇಶನದಲ್ಲಿ ಈ ಬಗ್ಗೆ ಖಚಿತವಾದ ನಿರ್ಧಾರಕ್ಕೆ ಬರಲಾಗುವುದೆಂದು ಹೇಳಲಾಗಿದೆ.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

University of Mysore.

Office of the University of Mysore,

Mysore, dated 1st May 1947
No Ex 3-1219/46—47.

NOTIFICATION

SUBJECT:- Marks cards of the Intermediate Examination of March 1947

It is hereby notified for the information of candidates who had appeared for the Examination of March 1947, that the Intermediate Marks Cards have been sent to the respective Colleges for distribution

They may apply for the marks cards to the heads of the Colleges through which they appeared for the Examination.

BY ORDER,
D. S. GORDON
Registrar

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ ೮ ಕಾಸು

ಸಂಪುಟ ೫] ಗುರುವಾರ ೮—೫—೪೭ [ಸಂಚಿಕೆ ೨೪೧

ಹೈದರಾಬಾದಿನಲ್ಲಿ ಜೈಪ್ರಕಾಶರ ದಸ್ತಗಿರಿ

...ನಾಡಿನಲ್ಲಿ ಮರು ಚುನಾವಣೆಯಾದರೆ ರಕ್ತಪಾತ

...ನಾಡಿನಲ್ಲಿ ಶಾಸನ ಸಭೆಯನ್ನು ರದ್ದು ಮಾಡಿ ಮರುಚುನಾವಣೆಯನ್ನು ನಡೆಸಿದ್ದಲ್ಲಿ ಭಾರಿ ಪ್ರಮಾಣದಲ್ಲಿ ರಕ್ತಪಾತವಾಗುವುದು ಖಂಡಿತವೆಂದು ಖಾನ್ ಅಬ್ದುಲ್ ಗಫಾರ್ ಖಾನರು ತಿಳಿಸಿದ್ದಾರೆ. ಚುನಾವಣೆ ನಡೆಯಬೇಕೆಂದು ಹೇಳುವುದು ...ತ್ರದಿಂದ ಕೂಡಿದೆಯೆಂದೂ, ಪಾಕೀಸ್ತಾನ ತಮಗೆ ಬೇಡವೆಂದು ಪಠಾಣರು ಈ ...ವರ್ಷವೇ ಸಾರಿ ಕಾಂಗ್ರೆಸ್ ಸರ್ಕಾರವನ್ನು ಸ್ಥಾಪಿಸಿದ್ದಾರೆಂದೂ ಅವರು ...ದ್ದಾರೆ.

ಕಾಶ್ಮೀರದಲ್ಲಿ ರಾಜಕೀಯ ಸಂಧಾನ

...] ಶ್ರೀನಗರ ೩

...ವೈದ್ಯರೂ, ವಕೀಲರು, ಪುರಸಭಾಸದ...ರು ಮತ್ತು ವರ್ತಕರುಗಳನ್ನೊಳಗೊಂಡ ...ರು ಮಂದಿಯ ಸಮಿತಿಯೊಂದನ್ನು ಶ್ರೀ ...ನಗ ಮಹಾಜನರು ನೇಮಿಸಿದ್ದಾರೆ. ಸಂ...ನದಲ್ಲಿ ತಲೆದೋರಿರುವ ರಾಜಕೀಯ ಬಿ...ಟ್ಟನ್ನು ಪರಿಹರಿಸಲು ಈ ಸಮಿತಿಯವ...ರು ಪ್ರಯತ್ನಿಸುವರು. ಇವರು ಸೆರೆಯಲ್ಲಿ...ರುವ ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನದ ನಾಯಕರನ್ನು ಭೇಟಿ ಮಾಡುವರು. ...ತರ ಪಕ್ಷಗಳ ಮುಖಂಡರುಗಳೊಡನೆ ...ಯೂ ಮಾತುಕತೆ ನಡೆಸುವರು. ಅನಂ...ತರ ಸರ್ಕಾರದವರನ್ನು ಭೇಟಿ ಮಾಡಿ ಮು...ಖಂಡರನ್ನು ಬಿಡುಗಡೆ ಮಾಡುವಂತೆಯೂ ...ಜವಾಬ್ದಾರಿ ಸರ್ಕಾರವನ್ನು ...ಸ್ಥಾಪಿಸುವಂತೆಯೂ ಅವರನ್ನು ಪ್ರಾರ್ಥಿ...ಸಿಕೊಳ್ಳುವರು.

ಹೈದರಾಬಾದಿನಲ್ಲಿ ವಿದ್ಯುಚ್ಛಕ್ತಿ

ಹೈದರಾಬಾದ್ ಸರ್ಕಾರವು ದವನೂರ್ ...ಬಳಿ ಒಂದು ವಿದ್ಯುಚ್ಛಕ್ತಿ ತಯಾರಿಕಾ ಕೇಂದ್ರವನ್ನು ಸ್ಥಾಪಿಸಲು ಏರ್ಪಾಡು ಮಾಡುತ್ತಿದೆ. ಇದಕ್ಕೆ ಮೂವತ್ತೊಂದು ಕೋಟಿ ...ರೂ ಖರ್ಚಾಗುವುದೆಂದು ಅಂದಾಜು ಮಾಡಲಾಗಿದೆ. ಈ ಕೇಂದ್ರದಲ್ಲಿ ೫೦ ಸಾವಿರ ಕಿಲೋವಾಟ್ ಶಕ್ತಿಯನ್ನು ತಯಾರಿಸಬಹುದೆಂದೂ, ಕಾಲುವೆ ಸಹಾಯದಿಂದ ೧ ...ಲಕ್ಷ ಎಕರೆ ಜಮೀನು ಸಾಗುವಳಿ ಮಾಡಬಹುದೆಂದೂ ಹೇಳಲಾಗಿದೆ.

ಸಿಂಧ್ ಮರುಭೂಮಿ ಬೆಳೆಯುತ್ತಿದೆ

ಸಿಂಧ್ ಮತ್ತು ರಜಪುಟಾಣಾ ಮರುಭೂಮಿಗಳು ಪೂರ್ವ ಮತ್ತು ಉತ್ತರ ಮುಖವಾಗಿ ವರ್ಷಕ್ಕೆ ಅರ್ಧ ಮೈಲಿಯಂತೆ ಬೆಳೆಯುತ್ತಿರುವುದಾಗಿ ಡೆಹರಾ ಡೂನಿನಲ್ಲಿರುವ ಅರಣ್ಯ ಸಂಶೋಧನಾ ಸಂಸ್ಥೆಯವರು ತಿಳಿಸಿದ್ದಾರೆ. ಈಗ ಈ ಮರುಭೂಮಿಯು ೧ ಲಕ್ಷ ಚದರ ಮೈಲಿಯಷ್ಟಿದೆ.

ಬಟ್ಟೆ ಅಭಾವದಿಂದ ಲಂಡನ್ನಿನಲ್ಲಿ ಕಳ್ಳತನ

ಲಂಡನ್ನಿನಲ್ಲಿ ಬಟ್ಟೆ ಅಭಾವ ತಲೆದೋರಿರುವುದರಿಂದ ಕಳ್ಳತನಗಳು ಹೆಚ್ಚುತ್ತಿರುವುದಾಗಿ ವರದಿಯಾಗಿದೆ. ಮೊನ್ನೆ ರಾತ್ರಿ ರಸ್ತೆಯಲ್ಲಿ ಹೋಗುತ್ತಿದ್ದ ಒಬ್ಬಾತನಿಗೆ ಯಾರೋ ಬಂದೂಕ ತೋರಿಸಿ ಅವನ ಬಟ್ಟೆ ಬರೆಗಳನ್ನೂ, ಹ್ಯಾಟು ಬೂಟುಗಳನ್ನೂ ಕಸಿದುಕೊಂಡು ಬರಿ ಮೈಯಲ್ಲಿ ಅವನು ಮನೆ ಸೇರುವಂತೆ ಮಾಡಿದ ಪ್ರಸಂಗವು ವರದಿಯಾಗಿದೆ.

ಪಾಕಿಸ್ತಾನವೊಂದೇ ಮಾರ್ಗವೆಂದು ಜಿನ್ನಾ

ಮಹಾತ್ಮ ಗಾಂಧಿಯವರೊಡನೆ ತಾವು ನಡೆಸಿದ ಭೇಟಿಯ ನಂತರ ಮಿ|| ಜಿನ್ನಾರವರು ಹೇಳಿಕೆಯೊಂದನ್ನು ಹೊರಡಿಸಿ ಗಾಂಧಿಜಿಯವರು ಭಾರತದ ವಿಭಜನೆಗೆ ಒಪ್ಪಲಿಲ್ಲವೆಂದೂ, ಸದ್ಯದ ರಾಜಕೀಯ ಸಮಸ್ಯೆಯನ್ನು ಬಗೆಹರಿಸಲು ಪಾಕಿಸ್ತಾನವೊಂದೇ ಮಾರ್ಗವೆಂದು ತಾವು ಹೇಳಿದುದಾಗಿಯೂ ತಿಳಿಸಿದ್ದಾರೆ. ಗಾಂಧಿ-ಜಿನ್ನಾ ಹೇಳಿಕೆ ಬಗ್ಗೆ ಚರ್ಚೆ ನಡೆಯಿತೆಂದೂ, ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಮ್ಮ ಶಕ್ತ್ಯನುಸಾರ ಅದು ಕಾರ್ಯರೂಪಕ್ಕೆ ಬರಲು ಪ್ರಯತ್ನಿಸಲಾಗುವುದೆಂದೂ ಹೇಳಿದ್ದಾರೆ.

ಆಲೂಗೆಡ್ಡೆ ಬಿತ್ತನೆಯಿಂದ ಹೊಗೆಸೊಪ್ಪು

ಗ್ಲೋಬ್] ಲಂಡನ್ ೫

ಹೊಗೆಸೊಪ್ಪಿನ ರಸದಲ್ಲಿ ಬಿತ್ತನೆಯ ಆಲೂಗೆಡ್ಡೆಯನ್ನು ನೆನಸಿ ವಿಶೇಷ ರೀತಿಯಲ್ಲಿ ಒಣಗಿಸಿ ನೆಟ್ಟರೆ ಅದರಿಂದ ಹುಟ್ಟುವ ಸಸಿಯ ಎಲೆಗಳೆಲ್ಲಾ ಹೊಗೆಸೊಪ್ಪಿನ ಹಾಗಿರುವುದೆಂದೂ, ಹೊಗೆಸೊಪ್ಪಿನ ಗುಣಗಳೆಲ್ಲಾ ಅವುಗಳಲ್ಲಿರುವುವೆಂದೂ, ಜರ್ಮನ್ ಫಲವೃಕ್ಷ ಪ್ರವೀಣ ಡಾ|| ಓಟ್ಟೋ ಶ್ರೆಂಡರ್‌ರವರು ತಿಳಿಸಿದ್ದಾರೆ. ಅಲ್ಲದೆ ಹಸೀ ಕಾಫಿಬೀಜದ ರಸದಲ್ಲಿ ಬಿತ್ತನೆಯ ಗೋಧಿಕಾಳನ್ನು ನೆನಸಿ ಅದನ್ನು ನೆಟ್ಟರೆ ಅದರಲ್ಲಿ ಬೆಳೆಯುವ ಗೋಧಿಯಲ್ಲಿ ಕಾಫಿ ಗುಣಗಳೆಲ್ಲವೂ ಇರುತ್ತವೆಂದೂ ಅವರು ಸಮರ್ಥಿಸಿದ್ದಾರೆ. ಈ ಬಗ್ಗೆ ಬ್ರಿಟಿಷ್ ತಜ್ಞರು ಸಂಶೋಧನೆ ನಡೆಸುತ್ತಿದ್ದಾರೆ.

ಕೇಂದ್ರ ಸರ್ಕಾರದಿಂದ ಕಾಂ|| ಮಂತ್ರಿಗಳ ರಾಜೀನಾಮೆ ?

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಕೇಂದ್ರ ತಾತ್ಕಾಲಿಕ ಸರ್ಕಾರದ ಮಂತ್ರಿಗಳ ಪ್ರಭಾವವು ಬಲಹೀನವಾಗಿರುವುದರಿಂದ, ಅವರು ಸರ್ಕಾರವನ್ನು ತ್ಯಜಿಸಬೇಕೆಂದು ಮಹಾತ್ಮ ಗಾಂಧಿಯವರು ಸಲಹೆ ಕೊಡಬಹುದೆಂದು ವರದಿಯಾಗಿದೆ. ಪಂ|| ನೆಹರುರವರು ಸಿಮ್ಲಾಕ್ಕೆ ತೆರಳುವ ಮೊದಲು ಜೊತೆ ಸೇರಿರುವುದು ಕೆಲವು ಕ್ಷೇತ್ರಗಳಲ್ಲಿ ಟೀಕೆಗೊಳಗಾಗಿದೆ. ಪೈಸರಾಯ್ ಮೌಂಟ್‌ಬ್ಯಾಟನ್ನರು ಪಂ|| ನೆಹರೂರವರನ್ನು ಗಾಂಧಿಜಿಯವರ ತತ್ವದಿಂದ ದೂರ ಸೆಳೆಯಲು ಪ್ರಯತ್ನಿಸಬಹುದೆಂದೂ ಹೇಳಲಾಗುತ್ತಿದೆ.

ರಾಜಧಾನಿಗೆ ರಾಜೇಂದ್ರ ಪ್ರಸಾದರ ಆಗಮನ

ಮೈಸೂರು ೮

ಕೇಂದ್ರ ಸರ್ಕಾರದ ಆಹಾರ ಸಚಿವರೂ, ರಾಜ್ಯಾಂಗ ಸಭಾಧ್ಯಕ್ಷರೂ ಆದ ಡಾ|| ರಾಜೇಂದ್ರ ಪ್ರಸಾದರು ಈ ದಿನ ಸಂಜೆ ಬೆಂಗಳೂರಿಗೆ ಬರುವರು. ರಾತ್ರಿ ೭ ಘಂಟೆಗೆ ಸರ್ಕಾರದ ಅಧಿಕಾರಿಗಳೊಡನೆ ಆಹಾರದ ವಿಷಯವಾಗಿ ಪರಿಶೀಲನೆ ನಡೆಸುವರು. ನಾಳೆ ಇಂಪೀರಿಯಲ್ ಡೈರಿ ಫಾರಂ, ಹೆಬ್ಬಾಳದ ವ್ಯವಸಾಯ ಕ್ಷೇತ್ರ ಮುಂತಾದುವನ್ನು ಪರಿಶೀಲಿಸುವರು. ನಾಳಿದ್ದು ಶನಿವಾರ ಬೆಳಗ್ಗೆ ಬೆಂಗಳೂರಿನಿಂದ ಮೈಸೂರಿಗೆ ಬರುವರು. ಇಲ್ಲಿನ ವಸ್ತು ಪ್ರದರ್ಶನಾಲಯ, ವೃತ್ತಿ ಶಿಕ್ಷಣಾಲಯ ಕೃಷ್ಣರಾಜ ಸಾಗರ, ಬೆಳಗೊಳದ ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಮುಂತಾದುವುಗಳಿಗೆ ಭೇಟಿ ಇತ್ತು ಸೋಮವಾರ ಬೆಳಗ್ಗೆ ಬೆಂಗಳೂರಿಗೆ ತೆರಳುವರು. ದಾರಿಯಲ್ಲಿ ಇರ್ವಿನ್ ನಾಲಾ ಪ್ರದೇಶವನ್ನು ಪರಿಶೀಲಿಸುವರು.

ಹರಿಕಥಾ ಸಪ್ತಾಹ

ಶಿವರಾಮಪೇಟೆ ವಿಠಲಾಂಜನೇಯ ಶ್ರೀರಾಮ ಮಂದಿರದಲ್ಲಿ ಈ-ದಿನಿಂದ ಪ್ರತಿದಿನ ರಾತ್ರಿ ೯ ಗಂಟೆಗೆ ಕೀರ್ತನಾಚಾರ್ಯ ವಿದ್ವಾನ್ ಶ್ರೀ|| ವೆಂಕಟಸುಬ್ಬದಾಸರಿಂದ ಹರಿಕಥಾ ಸಪ್ತಾಹವನ್ನು ಏರ್ಪಡಿಸಲಾಗಿದೆ.

ಸತ್ಕಾರ ಸಮಾರಂಭ

ಪುರಸಭಾಧ್ಯಕ್ಷರಾದ ಶ್ರೀ|| ರಾಮಚಂದ್ರರಾವ್ ಬೊಂಭೋರೆಯವರ ಕುಮಾರಿಯವರ ವಿವಾಹ ಮಹೋತ್ಸವದ ಸಂದರ್ಭದಲ್ಲಿ ರಾಜಧಾನಿಯ ಎಸ್. ಎಸ್. ಜೈನ ಸಂಘದ ಅಧ್ಯಕ್ಷರಾದ ಶ್ರೀ|| ಎಸ್. ಮಾಣಕಚಂದ್ ಪುಕರಾಜ್‌ರವರು ಮೊನ್ನೆ ಶ್ರೀವಾಸವ...ದಲ್ಲಿ ಸತ್ಕಾರ ಸಮಾರಂಭವೊಂದನ್ನು ನಡೆಸಿದರು. ಶ್ರೀ|| ಬೊಂಭೋರೆಯವರು ಸತ್ಕಾರಕ್ಕಾಗಿ ತಮ್ಮ ಧನ್ಯವಾದಗಳನ್ನು ಸಲ್ಲಿಸಿದರು.

ಲಕ್ಷ್ಮೀಕಾಂತಂ ಕೊಲೆ ಅಪಾದಿತರಿಗೆ ದಯಾಭಿಕ್ಷೆ

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆಯಲ್ಲಿ ಶಿಕ್ಷೆಗೊಳಗಾಗಿ ಇನ್ನೂ ಸೆರೆಮನೆಯಲ್ಲಿರುವ ಎನ್. ಎಸ್. ಕೃಷ್ಣನ್, ರಾಜಾಬಾದರ್, ನಾಗಲಿಂಗಂ ಮತ್ತು ಆರ್ಯ ವೀರಸೇನನ್ ಇವರುಗಳಿಗೆ ದಯೆ ತೋರಿಸಿ ಬಿಡುಗಡೆ ಮಾಡುವಂತೆ ಮದ್ರಾಸ್ ಸರ್ಕಾರವನ್ನು ಪ್ರಾರ್ಥಿಸಲಾಗಿದೆ. ...ಇವರುಗಳು ಬಿಡುಗಡೆಯಾಗಲಿರುವರು.

ದಿವಾನರ ಆಗಮನ

ಸ್ವಂ ಸು. ಪ್ರೋ] ಬೆಂಗಳೂರು ೮

ದೆಹಲಿಯಿಂದ ದಿವಾನರು ಇದೇ ೧೨ನೇ ತಾ|| ಸೋಮವಾರ ಬೆಳಗ್ಗೆ ಇಲ್ಲಿಗೆ ಬರುವರೆಂದು ಖಚಿತವಾಗಿ ಗೊತ್ತಾಗಿದೆ.

ಪ್ರತಿನಿಧಿ ಸಭಾಧಿವೇಶನ

ಪ್ರಜಾಪ್ರತಿನಿಧಿ ಸಭೆಯ ಬಡ್ಜೆಟ್ ಅಧಿವೇಶನವು ಇದೇ ತಿಂಗಳು ೨೮ರಿಂದ ಆರಂಭವಾಗಿ ೧೦ ದಿನಗಳು ನಡೆಯಲು ಏರ್ಪಾಡಾಗಿದೆ. ಸಭೆಯ ಮುಂದೆ ಒಟ್ಟು ೨೮ ಮಸೂದೆಗಳು ಪರಿಶೀಲನೆಗೆ ಬರುವುವು. ಈ ಪೈಕಿ ಎರಡು ಮಾತ್ರ ಖಾಸಗೀ ಮಸೂದೆಗಳು. ಹರಿಜನರಿಗೆ ದೇವಾಲಯ ಪ್ರವೇಶವನ್ನು ದೊರಕಿಸಿ ಕೊಡುವ ಖಾಸಗೀ ಮಸೂದೆಯು ಇದರಲ್ಲೊಂದಾಗಿದೆ.

ಅಮೆರಿಕಕ್ಕೆ ನಿಯೋಗ

ಎಂಜನಿಯರಿಂಗ್ ಮತ್ತು ಎಲಕ್ಟ್ರಿಕ್ ಕಂಟ್ರಾಕ್ಟರುಗಳೇ ಮೊದಲಾದ ವಿಚಾರಗಳಲ್ಲಿ ಪರಿಶ್ರಮವನ್ನು ಪಡೆಯಲು ಮೈಸೂರು ಸರ್ಕಾರದವರು ಪ್ರೊಫೆಸರರಾದ ಶ್ರೀ|| ಎಂ. ಅಶ್ವಥ್‌ರವರನ್ನು ಅಮೆರಿಕದ ಟೆನೆಸ್ಸಿ ವ್ಯಾಲಿಗೆ ಕಳುಹಿಸಲಿರುವರು.

ಬಂಗಾಳದಲ್ಲಿ ಪ್ರತಿ ಸರ್ಕಾರ

ಬ್ರಿಟಿಷರು ಬಂಗಾಳವನ್ನು ವಿಭಾಗಿಸದೆ ಈಗಿರುವ ಪ್ರಾಂತ್ಯ ಸರ್ಕಾರಕ್ಕೇ ಅಧಿಕಾರವನ್ನು ವರ್ಗಾಯಿಸಿ ಕೊಟ್ಟರೆ ಆಗ್ಗೆ ಬಂಗಾಳ ಪ್ರಾಂತ ಕಾಂಗ್ರೆಸ್ ಸಮಿತಿಯು ಬೇರೊಂದು ರಾಷ್ಟ್ರೀಯ ಪ್ರತಿಸರ್ಕಾರವನ್ನು ಸ್ಥಾಪಿಸಿಕೊಂಡು ಅಂತಹ ಪ್ರಸಂಗ ಬಂದರೂ ಎದುರಿಸಲು ಸಿದ್ಧವಾಗಬೇಕು-ಎಂಬುದಾಗಿ ಮಧ್ಯ ಮತ್ತು ಪೂರ್ವ ಕಲ್ಕತ್ತೆಯ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ನಿರ್ಣಯಿಸಲಾಗಿದೆ. ಅಲ್ಲದೆ ಬ್ರಿಟಿಷರು ಭಾರತವನ್ನು ಹಿಂದೂಸ್ಥಾನ ಮತ್ತು ಪಾಕಿಸ್ತಾನಗಳೆಂದು ವಿಭಾಗಿಸಿದರೆ ಹಿಂದೂಸ್ಥಾನವು ಇಂಗ್ಲೆಂಡಿನ ವಿರುದ್ಧ ಪ್ರತೀಕಾರ ನಡೆಸಬೇಕು. ಮತ್ತು ಇಂಗ್ಲೆಂಡ್ ಸರಕುಗಳ ಮೇಲೆ ಬಹಿಷ್ಕಾರ ಹಾಕಬೇಕು-ಎಂಬುದಾಗಿ ನಿರ್ಣಯ ಸಲಾಗಿದೆ.

ಬಂಗಾಳಾ ವಿಭಜನೆಗೆ ಅರವಿಂದಘೋಷರ ಬೆಂಬಲ

ಭಾರತವು ವಿಭಾಗಿಸಲ್ಪಟ್ಟರೆ ಬಂಗಾಳದ ವಿಭಜನೆ ಅನಿವಾರ್ಯ. ಅಖಂಡ ಹಿಂದೂಸ್ಥಾನದಲ್ಲಿ ಮಾತ್ರ ಅಖಂಡ ಬಂಗಾಳವು ಉಳಿಯಲು ಸಾಧ್ಯ- ಎಂಬುದಾಗಿ ಪಾಂಡಿಚೇರಿಯಲ್ಲಿರುವ ಮಹರ್ಷಿ ಅರವಿಂದ ಘೋಷರು ತಿಳಿಸಿದ್ದಾರೆಂದು ವರದಿಯಾಗಿದೆ.

LATEST NEWS

ಜೈ ಪ್ರಕಾಶ ನಾರಾಯಣರವರ ದಸ್ತಗಿರಿ

ಸ್ವಂ ಸು. ಪ್ರೋ] ಬೆಂಗಳೂರು ೮

ಹೈದರಾಬಾದ್ ಸಂಸ್ಥಾನದಿಂದ ಕೂಡಲೇ ಹೊರಗಡೆ ಹೋಗಬೇಕೆಂದು ಗಡೀಪಾರು ಆಜ್ಞೆಯೊಂದನ್ನು ರಕ್ಷಣಾ ಶಾಸನದಂತೆ ಅಲ್ಲಿನ ಸರ್ಕಾರದವರು ಸಮಾಜವಾದಿ ಮುಖಂಡರಾದ ಶ್ರೀ ಜೈ ಪ್ರಕಾಶ ನಾರಾಯಣರವರ ಮೇಲೆ ಈ ದಿನ ಜಾರಿ ಮಾಡಿದರು. ಶ್ರೀ ಪ್ರಕಾಶರು ಅದರಂತೆ ಸಂಸ್ಥಾನವನ್ನು ಬಿಟ್ಟು ಹೋಗಲು ನಿರಾಕರಿಸಿದುದರಿಂದ ಅವರನ್ನು ದಸ್ತಗಿರಿ ಮಾಡಲಾಗಿದೆ-ಎಂಬುದಾಗಿ ಅಲ್ಲಿನ ಸಮಾಜವಾದಿ ಪಕ್ಷದ ಕೇಂದ್ರದಿಂದ ಸುದ್ದಿ ತಿಳಿದುಬಂದಿದೆ.

ಸಾಧ್ವಿ

ತಾ॥ ೮-೫-೪೭ ಗುರುವಾರ

ಕನ್ನಡದ ಮುನ್ನಡೆ

ಕನ್ನಡ ಸಾಹಿತ್ಯ ಸಮ್ಮೇಳನದ ಮೂವತ್ತನೇ ಅಧಿವೇಶನವು ಹರಪನಹಳ್ಳಿಯ ಕೈಲಾಸ ನಗರದಲ್ಲಿ ನಿನ್ನೆ ವೈಭವದಿಂದ ಆರಂಭವಾಯಿತು. ಕನ್ನಡ ನಾಡಿನ ಎಲ್ಲ ಕಡೆಗಳಿಂದಲೂ ನೂರಾರು ಜನ ಪ್ರತಿನಿಧಿಗಳು ಸೇರಿ ಕನ್ನಡನಾಡು ಮತ್ತು ನುಡಿಯ ಬೆಳವಣಿಗೆಯ ಬಗ್ಗೆ ಪರಿಶೀಲನೆಗಳನ್ನು ನಡೆಸಿದರು. ಕಳೆದ ಮೂವತ್ತು ವರ್ಷಗಳಿಂದ ಕನ್ನಡಿಗರು ತಮ್ಮ ಸಾಹಿತ್ಯ ಮತ್ತು ಸಂಸ್ಕೃತಿಯ ಉನ್ನತಿಗಾಗಿ ಅನೇಕ ಮುಖವಾಗಿ ಶ್ರಮಿಸುತ್ತಿವೆ. ಅನೇಕ ಭಾಗಗಳಾಗಿ ಹಂಚಿ ಹೋಗಿರುವ ಕನ್ನಡನಾಡನ್ನು ಒಂದುಗೂಡಿಸಿ ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆ ಮುಂತಾದುವುಗಳ ಪುನರುಜ್ಜೀವನಕ್ಕಾಗಿ ಈ ಸಮ್ಮೇಳನದ ಮೂಲಕ ಸುವ್ಯವಸ್ಥಿತವಾಗಿ ಪ್ರಯತ್ನಗಳನ್ನು ನಡೆಸುತ್ತಿರುವರು.

ಮೈಸೂರು ಸರ್ಕಾರದ ಕನ್ನಡ ಭಾಷಾಂತರಕಾರರಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿ ಕಾರ್ಯ ಕಲಾಪಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸುತ್ತಿರುವರು. ಸರ್ಕಾರದ ದಿನಚರಿಯ ಪತ್ರಿಕೆಯನ್ನಾದ ವ್ಯವಹಾರಗಳ ಭಾಷಾಂತರದಲ್ಲೂ ಒಂದು ನವ ಚೇತನವನ್ನು ಉಂಟು ಮಾಡಿ ಕನ್ನಡ ಭಾಷೆಯ ಸೊಬಗನ್ನು ಅದರಲ್ಲಿಯೂ ಸದಾ ತಂದಿರುವವರು. ಮೈಸೂರು ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರ ಭಾಷಣಗಳನ್ನು ಕನ್ನಡಕ್ಕೆ ಪರಿವರ್ತಿಸಿ ಇವರು ಓದುವಾಗ ವಿದ್ವಾಂಸರಾದವರ ಪ್ರಶಂಸೆ, ಉತ್ಸಾಹ ಮತ್ತು ಭಾವನೆಗಳಿಗೆ ಇನ್ನೂ ಹೆಚ್ಚಿನ ಕಳೆಯನ್ನು ಕಟ್ಟುವುದು ಎಲ್ಲರಿಗೂ ಗೋಚರವಾಗಿರುತ್ತದೆ. ಉನ್ನತವಾದ ಸಾಹಿತ್ಯದ ಸೃಷ್ಟಿ ಮತ್ತು ವಿಮರ್ಶೆಗಳಲ್ಲಿಯೂ ಶ್ರೀ ವೆಂಕಟರಾಮಯ್ಯನವರು ಅಪಾರವಾದ ಪಾಂಡಿತ್ಯವನ್ನು ಪಡೆದಿರುತ್ತಾರೆ. ಸಂಸ್ಕೃತ ಮತ್ತು ಕನ್ನಡಗಳೆರಡರಲ್ಲಿಯೂ ಇವರಿಗೆ ವಿಶೇಷ ಪರಿಶ್ರಮವಿರುತ್ತದೆ. ಸಾಹಿತ್ಯದ ಉತ್ತಮ ಆದರ್ಶಗಳನ್ನು ಹೃದಯಂಗಮವಾದ ರೀತಿಯಲ್ಲಿ ಚಿತ್ರಿಸಲು ಶ್ರೀ ವೆಂಕಟರಾಮಯ್ಯನವರು ಅಪೂರ್ವವಾದ ಶೈಲಿಯನ್ನು ಹೊಂದಿದ್ದಾರೆ.

ಅನೇಕ ವರ್ಷಗಳಿಂದ ಕನ್ನಡದ ಸೇವೆಯನ್ನು ಮಾಡಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಸಂಪೂರ್ಣವಾದ ಅರ್ಹತೆಯನ್ನು ಪಡೆದಿರುವ ಶ್ರೀ ವೆಂಕಟರಾಮಯ್ಯನವರ ನೇತೃತ್ವದಲ್ಲಿ ಸಮ್ಮೇಳನವು ಅತ್ಯಂತ ಯಶಸ್ವಿಯಾಗಿ ಕಾರ್ಯ ಸಾಧನೆಯನ್ನು ಮಾಡುವುದರಲ್ಲಿ ಸಂದೇಹವಿಲ್ಲ. ತಮ್ಮ ಅಧ್ಯಕ್ಷ ಭಾಷಣದಲ್ಲಿ ಅವರು ಪರ್ಯಾಲೋಚಿಸಿರುವ ತಮ್ಮ ಸವಿಗನ್ನಡದ ಕನ್ನಡದ ಹಿರಿಮೆ ... ದೇಶಕ್ಕೆ ಅತ್ಯಂತ ಉಪಯುಕ್ತವಾಗಿರುತ್ತದೆ. ಸಮಸ್ತವಾದ ಭಾರತ ಮಾತೆಯ ಪ್ರತಿಭೆ, ಸೌಭಾಗ್ಯ ಸ್ವರೂಪದ ... ಭಾಷೆ ... ಸುವರ್ಣ ... ಪರಮ ಕಲ್ಯಾಣಕರವಾದ ... [illegible]

ಫಿಲೋಮಿನಾ ಕಾಲೇಜ್ ಅಧ್ಯಾಪಕರ ವಜಾ?

ರಾಜಧಾನಿಯಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಸೆಂಟ್ ಫಿಲೋಮಿನಾ ಕಾಲೇಜಿನಲ್ಲಿ ಕೆಲ ಪ್ರಮುಖ ಲೆಕ್ಚರರುಗಳನ್ನು ಕಾರಣ ಕೊಡದೆ ಕೆಲಸದಿಂದ ತೆಗೆಯಲಾಗಿದೆ. ಹಿಂದಿ ಇತಿಹಾಸ ಇಂಗ್ಲಿಷ್ ಉಪಾಧ್ಯಾಯರೊಬ್ಬರನ್ನು ತೆಗೆದುಹಾಕಿದಾಗ ವಿದ್ಯಾರ್ಥಿಗಳ ಒತ್ತಾಯದ ಪ್ರತಿಭಟನೆಯಿಂದ ಅವರನ್ನು ವಾಪಸು ಕರೆಸಲಾಯಿತು. ಕಾಲೇಜು ಗೌರ್ನಿಂಗ್ ಸಮಿತಿಯ ಈ ಸ್ವೇಚ್ಛಾ ನೀತಿಗೆ ಸರ್ಕಾರದವರು ಕೂಡಲೇ ಗಮನಕೊಟ್ಟು ಮನೆಗೆ ಕಳುಹಿಸಲಾಗಿರುವ ಉಪಾಧ್ಯಾಯರನ್ನು ಹಿಂದಕ್ಕೆ ಕರೆಸುವಂತೆ ವ್ಯವಸ್ಥೆ ಮಾಡಬೇಕಾಗಿದೆ.

ಒಬ್ಬ ವಿದ್ಯಾರ್ಥಿ

ಲಕ್ಷ್ಮಿಯೂ, ಪಾರ್ವತಿಯೂ ಇಕ್ಕೆಲಗಳಲ್ಲಿ ನಿಂತು ಮಂಜುಳ ಗಾಯನವನ್ನು ಆಲಿಸಿ ಆನಂದ ಪರವಶರಾಗಿರುವಾಗ ವಿಶ್ವ ಸಸ್ಯಶ್ಯಾಮಲ ... ಪರಮ ಮಂಗಳಮೂರ್ತಿ ... ಸನ್ನಿಧಿಯಲ್ಲಿ ನರ್ತಿಸುತ್ತಿರುವಾಗ ಕನ್ನಡ ಮಾತೆಯು ತನ್ನ ತಾಯಿಯಾದ ಭಾರತ ಮಾತೆಗೆ ಪ್ರಣಾಮವನ್ನು ಸಲ್ಲಿಸುವ ಸನ್ನಿವೇಶ ವರ್ಣಿಸುವ ಚಿತ್ರವು ಕನ್ನಡಿಗರೆಲ್ಲರಿಗೂ ದಿವ್ಯ ಸ್ಫೂರ್ತಿಯನ್ನುಂಟುಮಾಡದಿರದು.

ಅಧ್ಯಕ್ಷರು ತಮ್ಮ ಭಾಷಣದ ಅಂತ್ಯದಲ್ಲಿ ಮಾಡಿರುವ ಪ್ರಾರ್ಥನೆಯು ಎಲ್ಲ ಕನ್ನಡಿಗರ ಕಂಠದಲ್ಲಿಯೂ ಪ್ರತಿಧ್ವನಿ ಮಾಡಲೆಂದು ನಾವು ಹಾರೈಸುತ್ತೇವೆ "ಬಾ ತಾಯಿ, ಬಾರಮ್ಮ! ನಮ್ಮ ನಾಲಿಗೆಯ ನಡೆನುಡಿಯ ಹಾಸುವೆವು ಬಾ ತಾಯಿ! ನಮ್ಮ ದೇಹ ದೇಗುಲಯಕ್ಕೆ ಬಿಜಯ ಮಾಡು ತಾಯಿ! ನಮ್ಮ ಹೃದಯ ಸಿಂಹಾಸನದಲ್ಲಿ ಮಂಡಿಸಿ ಉದ್ಧರಿಸು ತಾಯಿ!"

Edited, printed and published by A. R. Nagarajan at the Sadhvi Press D Subbiah Road, Mysore

ಚೌಕಬಂಧ ಸ್ಪರ್ಧೆಯಲ್ಲಿ ಮೋಸಕ್ಕಾಗಿ ಶಿಕ್ಷೆ

ಮದ್ರಾಸಿನ ಶ್ರೀ ಪಿ. ವಿ. ನಂಜುಂಡರಾವ್ ಎಂಬುವರು ಚೌಕಬಂಧ ಸ್ಪರ್ಧೆಯೊಂದನ್ನು ನಡೆಸುತ್ತಿದ್ದರು. ಅದರಲ್ಲಿ ಮೊದಲು ಸೂಚಿಸಿದ್ದ ಅಕ್ಷರಗಳನ್ನು ಬದಲಾಯಿಸಿದರೆಂದೂ, ಅನಾಮಧೇಯರಿಗೆ ಬಹುಮಾನ ಹಂಚಿ ಮೋಸಗೊಳಿಸಿದರೆಂದೂ ಆಪಾದನೆ ಗೊಳಗಾಗಿ ಆರು ತಿಂಗಳ ಶಿಕ್ಷೆಗೆ ಗುರಿಯಾಗಿದ್ದಾರೆ.

University of Mysore.

Office of the University of MYSORE,

Mysore, dated 1st May 1947.

No. Ex 3-1209/46—47.

NOTIFICATION

SUBJECT:- Marks Cards of the Intermediate Examination of March 1947

It is hereby notified for the information of candidates who had appeared for the Examination of March 1947, that the Intermediate Marks Cards have been sent to the respective Colleges for distribution

They may apply for the marks cards to the heads of the Colleges through which they appeared for the Examination

BY ORDER,
D. S. GORDON,
Registrar

ಪಶ್ಚಿಮ ಜಾವದ ಸ್ವಾತಂತ್ರ್ಯ ಘೋಷಣೆ

ಪಶ್ಚಿಮ ಜಾವದಲ್ಲಿ ಹೊಸ ಇಂಡೊನೇಷಿಯನ್ ಸಂಸ್ಥಾನವು ಸ್ವತಂತ್ರವಾಗಿರುವುದಾಗಿ ಘೋಷಿಸಿ ಸುಂದಾನೀಸ್ ಪ್ರಜಾಪಕ್ಷದವರು ನಿರ್ಣಯವನ್ನು ಮಾಡಿದ್ದಾರೆ. ಇದನ್ನು ಇನ್ನು ಮೇಲೆ 'ನೆಗರ ಪಸೋಂಡನ್' ಎಂದು ಕರೆಯಲಾಗುವುದು. ಹೊಸ ಇಂಡೊನೇಷಿಯಾ ಪಬ್ಲಿಕ್ಕಿನೊಂದಿಗೆ ಸಂಬಂಧ ತ್ಯಾಗ ಮಾಡಿ ನೆದರ್ಲೆಂಡ ಸಿಂಹಾಸನದ ಆಶ್ರಯದಲ್ಲಿ ಫೆಡರೇಟೆಡ್ ಯೂನಿಯನ್ ಆಗಿ ಇರಲು ಈ ಪ್ರಜಾಪಕ್ಷದವರು ನಿರ್ಧರಿಸಿದ್ದಾರೆ.

ಗೋವಾ ಸಿಸ್ಟರ್ಸ್

ಪಂಚ್ ಅನಿಮಲ್ ಛಾರಿಟಿ

ಪೂರ್ತಿ ರಶೀತಿ ರಿಸಲ್ಟು 20-4-1947

I. No ೧೦೦೬೭- ೧೦೦ ರೂ ಚಾಮರಾಜನಗರ, II ೩೦೬೧- ೫೦ ರೂ ಹೊಸಕೋಟೆ, ಬೆಂಗಳೂರು ಡಿಸ್ಟ್ರಿಕ್ಟ್. III. ೧೩೦೮- ೨೫ ರೂ ಮೈಸೂರು ಸಿಟಿ

ಇತರ ಸ್ಮಾಲ್ ಪ್ರೈಜ್ ನಂಬರುಗಳು: [illegible]

ವಿನ್ ರಶೀತಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಿ ಕೊಡಿ. ಪೇಮೆಂಟ್ ೧೫-೬-೪೭. ಮುಂದಿನ ಡ್ರಾಯಿಂಗ್‌ರಶೀತಿ ಬಿಕರಿಗೆ ಸಿದ್ಧವಾಗಿದೆ ಬುಕ್ ಒಕ್ಕೆ ರೂ ೬-೪-೦ ಕ್ಲೋಸಿಂಗ್ ೧೦-೬-೪೭, ಡ್ರಾಯಿಂಗ್ ೨೦-೬-೪೭

ಈ ಸಲದ ಮೊಬಲಗನ್ನು ಪಿಂಜರಾಪೋಲ್, ದಕ್ಷಾಯಿ ಸ್ಕೂಲು, ಕುರುಡ ಮೂಗರ ಪಾಠಶಾಲೆಗೆ ಕೊಡುತ್ತೇವೆ. ರಿಜಲ್ಟ್ ಅಥವಾ ಸಿಯುಳ್ಳವರು ೦-೧-೦ ಸ್ಟಾಂಪ್ ಕಳುಹಿಸಿ ತರಿಸಿಕೊಳ್ಳಿ

ಆನರರಿ ಸೆಕ್ರೆಟರಿ
ಆಲ್ ಇಂಡಿಯಾ ಪಂಚ್ ಅನಿಮಲ್ ಛಾರಿಟಿ ಫಂಡ್ ಆಫೀಸು,
ಹಳ್ಳದಕೇರಿ, ಮೈಸೂರು.

ರಾಜಕಮಲ್, ಮೈಸೂರು

ತಾ॥ ೯-೫-೪೭ ರಿಂದ ಮೂರನೇ ವಾರ

'ಗೊಲ್ಲಭಾಮ'

(ತೆಲುಗು)

ಭೂಮಿಕೆ:— ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

ಶ್ರೀ ೫—೪೭ ನೇ ತಾ॥ ಭಾನುವಾರದಿಂದ ಅಮೋಘ ಪ್ರಾರಂಭ

ಪ್ರತಿ ದಿನ ೩ ಆಟಗಳು ೩-೩೦, ೬-೩೦, ೯-೩೦ ಕ್ಕೆ

ಮೈಸೂರಿನ ಭವ್ಯ ಚಲನ ಚಿತ್ರ ಮಂದಿರ

ವುಡ್-ಲೆಂಡ್ ಟಾಕೀಸ್.

(ರಜತ ಪಾಟ)

ಎ. ವಿ. ಎಂ. ಪ್ರೊಡಕ್ಷನ್ಸರ

ಅಮೋಘ ಸಾಮಾಜಿಕ ಚಿತ್ರ

★ 'ನಾಮ್-ಇರುವರು' ★

(ತಮಿಳು)

ತಾರಾಗಣ:- ಟಿ. ಆರ್. ಮಹಾಲಿಂಗಂ, ಟಿ. ಎ. ಜಯಲಕ್ಷ್ಮಿ, ಆರ್. ರಾಮಚಂದ್ರ ಮತ್ತು ಇತರರು

[illegible]

RAJKAMAL

Morning Shows from 9-5-47 for 4 days daily at 10-30 a m

The Great Flamarion

with ERIC VON STROHEIM, MARY BETH HUGHES, DAN DUREYA Etc

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೯—೫—೪೭ [ಸಂಚಿಕೆ ೨೩೨

ಅಖಂಡ ಭಾರತಕ್ಕಾಗಿ ವೈಸರಾಯರ ಸಲಹೆ

ಪರೀಕ್ಷೆ ಫಲಿತಾಂಶಗಳು

ಮೈಸೂರು ೯

೧೯೪೭ ನೇ ಮಾರ್ಚಿ ಏಪ್ರಿಲ್ಲಿನಲ್ಲಿ ನಡೆದ ಮೆಡಿಕಲ್, ಎಂ ಬಿ ಬಿ ಎಸ್ ಡಿಗ್ರಿ, ಬಿ ಇ ಮತ್ತು ಇಂಜನಿಯರಿಂಗ್ ಡಿಪ್ಲೊಮಾ ಪರೀಕ್ಷೆಗಳ ಫಲಿತಾಂಶವು ಈ ರೀತಿ ಹೊರಬಿದ್ದಿದೆ-

ಪ್ರೀ-ಮೆಡಿಕಲ್:-೧ ನೇ ತರಗತಿ ಇಲ್ಲ, ೨ ನೇ ತರಗತಿ ೧ ತೇರ್ಗಡೆ ೨, ೩, ೪, ೫, ೬, ೮, ೯, ೧೦, ೧೧, ೧೨ ಮತ್ತು ೧೩.

ಎಂ ಬಿ ಬಿ ಎಸ್ ಡಿಗ್ರಿ ಮೊದಲ ನೇ ಪರೀಕ್ಷೆ ೧ ನೇ ತರಗತಿ ಇಲ್ಲ, ೨ ನೇ ತರಗತಿ ಇಲ್ಲ, ತೇರ್ಗಡೆ ೧, ೪, ೬, ೭, ೯, ೧೧, ೧೩ ಮತ್ತು ೧೪.

ಎರಡನೇ ಪರೀಕ್ಷೆ, ಭಾಗ (೧) ೧ ನೇ ತರಗತಿ ಇಲ್ಲ, ೨ ನೇ ತರಗತಿ, ೧೬, ೧೭, ೧೯, ೨೦, ೨೧, ೨೨, ೨೩, ೨೪, ೨೫, ೨೮, ೨೯, ೩೦, ೩೧ ಮತ್ತು ೩೨

ಎರಡನೇ ಪರೀಕ್ಷೆ ಭಾಗ (೨) ೧ ನೇ ತರಗತಿ ಇಲ್ಲ, ೨ ನೇ ತರಗತಿ ೩೩ ಮತ್ತು ೩೪. ತೇರ್ಗಡೆ ೩೫, ೩೬, ೩೭, ೩೮ ಎರಡನೇ ಪರೀಕ್ಷೆ ಭಾಗ (೩) ೧ ನೇ ತರಗತಿ ಇಲ್ಲ, ೨ ನೇ ತರಗತಿ ೪೨ ಮತ್ತು ೪೩, ತೇರ್ಗಡೆ ೪೫, ೪೬, ೪೭, ೪೮, ೪೯

ಮೂರನೇ ಪರೀಕ್ಷೆ:-೧ ನೇ ತರಗತಿ ಇಲ್ಲ, ೨ ನೇ ತರಗತಿ ೫೩, ತೇರ್ಗಡೆ: ೫೮, ೫೯, ೬೦, ೬೧, ೬೨, ೬೩, ೬೫, ೬೬, ೬೭, ೬೮

ಬಿ ಇ ಡಿ:-ತೇರ್ಗಡೆ ೧ ಮತ್ತು ೨

ಇಂಜನಿಯರಿಂಗ್ ಡಿಪ್ಲೊಮಾ:-ಸಿವಿಲ್ ೧ ನೇ ತರಗತಿ ಇಲ್ಲ, ೨ ನೇ ತರಗತಿ ೧ ಮತ್ತು ೨ ಮೆಕ್ಯಾನಿಕಲ್-ತೇರ್ಗಡೆ ೩ ಎಲೆಕ್ಟ್ರಿಕಲ್ ತೇರ್ಗಡೆ ೪ ಮತ್ತು ೫

ಉದಾರ ದಾನ

ಶ್ರೀ ಶಂಕರ ಜಯಂತೀ ಮಹೋತ್ಸವ ದ ಮೂಲಧನಕ್ಕಾಗಿ ರಿ|| ಪೋಸ್ಟ್ ಮಾಸ್ಟರ್ ಶ್ರೀ|| ಶಂಕರಪ್ಪನವರು ಮತ್ತು ಕಾಶಿವಾಸಿ ನಂಜುಂಡಯ್ಯನವರು ತಲಾ ಒಂದು ನೂರು ರೂಪಾಯಿಗಳನ್ನೂ, ದೊಡ್ಡಬಳ್ಳಾಪುರದ ಶ್ರೀ ಕೆ ನಾರಣಪ್ಪನವರು ೫೦ ರೂ ಗಳನ್ನೂ ಉದಾರವಾಗಿ ದಾನ ಮಾಡಿದ್ದಾರೆ.

ಕಾಂಗ್ರೆಸ್ ಪಕ್ಷದ ಶಾಸನ ಸಭಾ ಸದಸ್ಯರ ಸಭೆ

ಇದೇ ೧೧ ನೇ ತಾರೀಖು ಭಾನುವಾರ ಮಧ್ಯಾಹ್ನ ೨ ಗಂಟೆಗೆ ಮೈಸೂರು ನಗರದ ಕಾಂಗ್ರೆಸ್ ಕಛೇರಿಯಲ್ಲಿ ನ್ಯಾಯವಿಧಾಯಕ ಸಭಾ ಕಾಂಗ್ರೆಸ್ ಪಕ್ಷದವರ ಸಭೆಯು ಸೇರುವುದು. ಸದಸ್ಯರೆಲ್ಲರೂ ತಪ್ಪದೆ ಹಾಜರಾಗಬೇಕೆಂದು ಪಕ್ಷದ ಉಪನಾಯಕರಾದ ಶ್ರೀ ಟಿ ಮರಿಯಪ್ಪನವರು ಪ್ರಕಟಿಸಿದ್ದಾರೆ

ಉದಾರ ದಾನ

ಭಾವಸಾರ ಕ್ಷತ್ರಿಯ ಸೋಸಿಯಲ್ ಇನ್‌ಸ್ಟಿಟ್ಯೂಟಿಗೆ ರಾಜಧಾನಿಯ ಪುರಸಭಾ ಸದಸ್ಯರಾದ ಶ್ರೀ ಆರ್ ರಾಮಚಂದ್ರರಾವ್ ಸಿಂಧೋರೆಯವರು ತಮ್ಮ ಕುಮಾರಿಯ ವಿವಾಹದ ಸಂದರ್ಭದಲ್ಲಿ ೧೦೦೧ ರೂ ಗಳನ್ನೂ, ಬೆಂಗಳೂರು ದಂಡಿನಲ್ಲಿರುವ ಜವಳಿ ವ್ಯಾಪಾರಿಗಳಾದ ಶ್ರೀ ಕೆ ಗುಂಡೂರಾವರು ತಮ್ಮ ಕುಮಾರ ಶ್ರೀ ಕೆ ಜ ಮಹದೇವರಾಯರ ವಿವಾಹದ ಸಂದರ್ಭದಲ್ಲಿ ೧೦೧ ರೂಗಳನ್ನೂ ಉದಾರವಾಗಿ ದಾನ ಮಾಡಿದ್ದಾರೆ.

ಆಹಾರ ಪರಿಸ್ಥಿತಿ ಕಷ್ಟಕರವಾಗಿದೆ

ಮಳೆ, ಪ್ರವಾಹ ಮತ್ತಿತರ ಕಾರಣಗಳಿಂದ ಈ ಸಲ ಬೆಳೆಯು ಕೆಟ್ಟು ಹೋದ ಪ್ರಯುಕ್ತ ಉತ್ಪತ್ತಿಯಲ್ಲಿ ಸುಮಾರು ೧೦ ಲಕ್ಷ ಟನ್ ಧಾನ್ಯ ಖೋತಾ ಆಗುವುದು ಬರ್ಮ ಮತ್ತು ಸಯಾಂಗಳಿಂದ ಅಕ್ಕಿ ಆಮದು ಮಾಡಿಕೊಳ್ಳಲು ವಿಶೇಷ ನಿರ್ಬಂಧಗಳಿವೆ. ಪರದೇಶಗಳಿಂದ ಧಾನ್ಯ ತರಿಸಿಕೊಳ್ಳುವುದೂ ಕಷ್ಟಕರವಾಗಿದೆ—ಎಂಬುದಾಗಿ ಭಾರತ ಸರ್ಕಾರದ ಆಹಾರ ಶಾಖಾ ಕಾರ್ಯದರ್ಶಿ ಶ್ರೀ|| ಕೆ. ಎಲ್. ಪಂಜಾಬಿಯವರು ಹೇಳಿದ್ದಾರೆ

ಮೇವಾಡದ ಸುಧಾರಣೆಗೆ ಕಾಂಗ್ರೆಸ್ ವಿರೋಧ

ಗ್ಲೋಬ್] ಅಜ್ಮೀರ್ ೮

ಮೇವಾಡದ ಶಾಸನ ಸಭೆಯಲ್ಲಿ ೪೮ ಸ್ಥಾನಗಳ ಪೈಕಿ ಜಹಗೀರುದಾರರಿಗೆ ೧೧ ಸ್ಥಾನಗಳನ್ನು ಕಾದಿರಿಸಿರುವುದು ಹೆಚ್ಚೆಂದೂ ಭಿಲ್ಲರಿಗೆ ಚುನಾಯಿತ ಪ್ರಾತಿನಿಧ್ಯವಿಲ್ಲವೆಂದೂ ಹೇಳಿ, ಅಲ್ಲಿನ ಪ್ರಜಾ ಮಂಡಲದವರು ಹೊಸ ಸುಧಾರಣೆಗಳನ್ನು ನಿರಾಕರಿಸಿದ್ದಾರೆ

ನೆಹರೂರವರೊಡನೆ ಕೆ. ಸಿ. ರೆಡ್ಡಿಯವರ ಭೇಟಿ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚಂಗಲರಾಯರೆಡ್ಡಿಯವರು ನಿನ್ನೆ ದೆಹಲಿಯಲ್ಲಿ ಪಂ|| ನೆಹರು ಮುಂತಾದ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿ ಮೈಸೂರಿನ ರಾಜಕೀಯವನ್ನು ಚರ್ಚಿಸಿದರೆಂದು ತಿಳಿದುಬಂದಿದೆ. ಅವರು ಬೆಂಗಳೂರಿಗೆ ೧೧ ನೇ ತಾ|| ಹಿಂದಿರುಗುವರು.

ಪಾಕೀಸ್ತಾನ್ ಪ್ರದೇಶದ ಬ್ಯಾಂಕುಗಳು ದೆಹಲಿಗೆ

ಲಾಹೋರಿನ ಪ್ರಮುಖವಾದ ಕೆಲವು ಬ್ಯಾಂಕುಗಳು ತಮ್ಮ ಕೇಂದ್ರ ಕಛೇರಿಯನ್ನು ದೆಹಲಿಗೆ ವರ್ಗಾಯಿಸಿ, ತಮ್ಮ ಸದಸ್ಯರಿಗೆಲ್ಲಾ ಸೂಚನೆಯನ್ನಿತ್ತಿವೆ ಕೆಲವು ಜೀವ ವಿಮಾ ಕಂಪನಿಗಳೂ ಸಹ ದೆಹಲಿ ಯಾತ್ರೆಯನ್ನು ಆರಂಭಿಸಿವೆ. ಕಂಪನಿಯ ವ್ಯವಹಾರಗಳನ್ನು ಮಿತವ್ಯಯದಿಂದಲೂ, ದಕ್ಷತೆಯಿಂದಲೂ, ನಡೆಸಲು ಈ ವರ್ಗವು ಅವಶ್ಯಕವೆಂದು ಹೇಳಲಾಗಿದೆ ಈ ಕಂಪನಿಗಳ ಒಂದುವಾಳ ೫೦ ಕೋಟಿ ರೂಗಳೆಂದು ಅಂದಾಜು ಮಾಡಲಾಗಿದೆ.

ಸತ್ಯಾಗ್ರಹ ಹೂಡಬೇಕು

ಬೆಂಗಳೂರು ೯

ದಿವಾನರು ಕೊಟ್ಟಿರುವ ಹೇಳಿಕೆಯು ಕಾಂಗ್ರೆಸ್ಸಿನ ಬೇಡಿಕೆಯನ್ನು ತಿರಸ್ಕರಿಸುವ ಬದಲು ಬರೀ ಕಾಲಹರಣ ಮಾಡುವ ನೆಪದಿಂದ ಕೂಡಿರುವುದರಿಂದ ಮೈಸೂರು ಕಾಂಗ್ರೆಸ್ಸು ಕೂಡಲೇ ಸತ್ಯಾಗ್ರಹವನ್ನು ಹೂಡಬೇಕು—ಎಂಬುದಾಗಿ ಮೈಸೂರು ಕಾಂಗ್ರೆಸ್ ಪ್ರಗತಿ ಪಕ್ಷದ ಕಾರ್ಯಕಾರಿ ಸಮಿತಿಯು ನಿರ್ಣಯಿಸಿದೆ

ನ್ಯಾಯವಿಧಾಯಕ ಸಭೆಗೆ ಆಯ್ಕೆ

ಮೈಸೂರು ಮಂಡ್ಯ ಮತ್ತು ಹಾಸನ ಜಿಲ್ಲೆಗಳ ಮುಸ್ಲಿಂ ಕ್ಷೇತ್ರದಿಂದ ನ್ಯಾಯವಿಧಾಯಕ ಸಭೆಗೆ ಸ್ಥಂಸ್ಥಾನದ ಮುಸ್ಲಿಂ ಲೀಗ್ ಅಧ್ಯಕ್ಷರಾದ ಮಿ|| ಮಹಮದ್ ಷರೀಫರು ಅವಿರೋಧವಾಗಿ ಆರಿಸಿ ಬಂದಿದ್ದಾರೆ.

ಆರ್ಕಾಟ್—ಜಿನ್ನಾ ಭೇಟಿ

ಮೈಸೂರು ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ನಿನ್ನೆ ದೆಹಲಿಯಲ್ಲಿ ಮಿ|| ಜಿನ್ನಾ, ಮಿ|| ಲಿಯಾಕತ್ ಅಲಿಖಾನ್ ಮುಂತಾದವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಅಮೇರಿಕನ್ನನಾದ ಭಾರತೀಯ

ಗ್ಲೋಬ್] ನ್ಯೂಯಾರ್ಕ್ ೮

ಶ್ರೀ|| ಲಾಲ್‌ಚಂದ ಮೆಹ್ರ ಎಂಬ ಚಲನ ಚಿತ್ರ ಮತ್ತು ರೇಡಿಯೋ ನಟನು ಅಮೇರಿಕಾ ದೇಶದ ಪೌರತ್ವವನ್ನು ಪಡೆದಿದ್ದಾನೆ ಭಾರತೀಯರು ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ ನೆಲೆಸಲು ಅನುಮತಿ ಕೊಡಲಾಗಿರುವ ಶಾಸನವು ಜಾರಿಗೆ ಬಂದ ಮೇಲೆ ಈ ಹಕ್ಕನ್ನು ಪಡೆದಿರುವ ಭಾರತೀಯರಲ್ಲಿ ಈತನೇ ಮೊದಲನೆಯವನು.

ರಥಕ್ಕೆ ಬೆಂಕಿ

ತುಮಕೂರು ತಾಲ್ಲೂಕು ಬೆಳ್ಳಾವಿಯ ಶ್ರೀ|| ಆಂಜನೇಯ ಸ್ವಾಮಿಯವರ ರಥೋತ್ಸವವು ಕಳೆದ ಸೋಮವಾರ ನಡೆದಾಗ ರಥಕ್ಕೆ ಆಕಸ್ಮಾತ್ ಬೆಂಕಿ ತಗುಲಿ ಮೇಲೆ ಕಟ್ಟಿದ್ದ ಬಟ್ಟೆಯೆಲ್ಲಾ ಸುಟ್ಟುಹೋಯಿತು. ಕೂಡಲೇ ಜನರ ಸಹಾಯದಿಂದ ಅದನ್ನು ಆರಿಸಲಾಯಿತು ದೇವರ ವಿಗ್ರಹಕ್ಕೆ ಏನೂ ಅಪಾಯವಾಗಲಿಲ್ಲವೆಂದು ತಿಳಿದು ಬಂದಿದೆ

ವಿನಂತಿ

ಚಿತ್ರದುರ್ಗದ ವಿದ್ಯಾರ್ಥಿ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ|| ಕೆ. ಎಸ್ ರಾಮರಾಯರು ಅಲ್ಲಿ ಸಾಧ್ವಿ ಪತ್ರಿಕೆಯ ಏಜೆಂಟರಾಗಿರುತ್ತಾರೆ ಮಹಾಜನರು ಅವರೊಡನೆ ಸಹಕರಿಸಬೇಕೆಂದು ಕೋರಲಾಗಿದೆ.

ವ್ಯವಸ್ಥಾಪಕ, 'ಸಾಧ್ವಿ'

೪೮ ರ ಜೂನಿಗೆ ಮುಂಚೆಯೇ ಹೊರಡಲು ವೈಸರಾಯರ ಸೂಚನೆ

೧೯೪೮ ರ ಜೂನಿಗಿಂತಲೂ ಮುಂಚಿತವಾಗಿಯೇ ಭಾರತೀಯರಿಗೆ ಅಧಿಕಾರವನ್ನು ವಹಿಸಿ ಕೊಟ್ಟು ಹೊರಡಬೇಕೆಂದು ವೈಸರಾಯರು ಲಾರ್ಡ್ ಇಸ್ಮೆರವರ ಮೂಲಕ ಬ್ರಿಟಿಷ್ ಮಂತ್ರಿಮಂಡಲಕ್ಕೆ ಸಲಹೆ ಇತ್ತಿದ್ದಾರೆಂದು ಗೊತ್ತಾಗಿದೆ. ಮುಖ್ಯವಾಗಿದ್ದರೂ ಸಹ ಅಖಂಡವಾದ ಭಾರತ ಸರ್ಕಾರದ ರಚನೆಗೆ ವೈಸರಾಯರು ಬೆಂಬಲವಿತ್ತಿದ್ದಾರೆಂದು ಹೇಳಲಾಗಿದೆ. ಭಾರತದ ವಿಭಾಗದ ವಿಚಾರವು ಬ್ರಿ|| ಮಂತ್ರಿಮಂಡಲವನ್ನು ಅಷ್ಟು ಬಾಧಿಸುತ್ತಿಲ್ಲವೆಂದೂ ಅದರ ರಕ್ಷಣೆಯ ವಿಚಾರಕ್ಕೆ ಹೆಚ್ಚು ಮಹತ್ವವನ್ನು ಕೊಡಲಾಗುತ್ತಿದೆಯೆಂದೂ ವರದಿಯಾಗಿದೆ.

ಸಂಯುಕ್ತ ಪ್ರವಾಸಕ್ಕೆ ಜಿನ್ನಾರವರ ನಿರಾಕರಣೆ

ದೇಶದಲ್ಲಿ ಗಲಭೆಯು ಹೆಚ್ಚಿಂದ ತೊಂದರೆಗೀಡಾಗಿರುವ ಪ್ರದೇಶಗಳಲ್ಲಿ ಜೊತೆಯಲ್ಲಿ ಪ್ರವಾಸ ಮಾಡಿ ಜನರಲ್ಲಿ ಧೈರ್ಯ ಹುಟ್ಟಿಸಬೇಕೆಂದು ಮಹಾತ್ಮ ಗಾಂಧಿಯವರು ಮಿ|| ಜಿನ್ನಾರವರಿಗೆ ಸೂಚಿಸಿದರೆಂದೂ, ಆದರೆ ಅದನ್ನು ಜಿನ್ನಾರವರು ನಿರಾಕರಿಸಿದರೆಂದೂ ವರದಿಯಾಗಿದೆ

ಸರ್ ಸಿ. ಪಿ. ಯವರು ಲಂಡನ್ನಿಗೆ

ತಿರುವಾಂಕೂರಿನ ಸ್ಥಾನಮಾನಗಳ ಬಗ್ಗೆ ಬ್ರಿ|| ಮಂತ್ರಿಗಳೊಡನೆ ಮಾತುಕತೆ ನಡೆಸಲು ದಿವಾನರಾದ ಸರ್ ಸಿ. ಪಿ ರಾಮಸ್ವಾಮಿ ಅಯ್ಯರ್‌ರವರು, ಜೂನ್ ಆದಿಯಲ್ಲಿ ಲಂಡನ್ನಿಗೆ ತೆರಳುವರೆಂದು ಅವರೇ ಪ್ರಕಟಿಸಿರುವರು ಭಾರತವನ್ನು ವಿಭಾಗಿಸದಿದ್ದರೆ ಅಗ್ಗ ತಿರುವಾಂಕೂರು ಭಾರತದ ಯೂನಿಯನ್ನಿಗೆ ಸೇರುವುದೆಂದೂ, ಹಾಗಿಲ್ಲದೆ ಭಾರತವನ್ನು ವಿಭಾಗಿಸಿದರೆ ತನ್ನ ಸಂಸ್ಥಾನವು ಸ್ವತಂತ್ರ ರಾಜ್ಯವಾಗುವುದೆಂದೂ ಸರ್ ಸಿ. ಪಿ. ಯವರು ತಿಳಿಸಿದ್ದಾರೆ.

ಜೈ ಪ್ರಕಾಶರನ್ನು ಬೊಂಬಾಯಿಗೆ ರವಾನಿಸಲಾಯಿತು

ನಿನ್ನೆ ದಸ್ತಗಿರಿಯಾಗಿದ್ದ ಶ್ರೀ|| ಜಯಪ್ರಕಾಶ ನಾರಾಯಣರವರನ್ನೂ ಅವರ ಪತ್ನಿಯವರನ್ನೂ ವಿಮಾನದಲ್ಲಿ ಬೊಂಬಾಯಿಗೆ ಹೈದರಾಬಾದ್ ಸರ್ಕಾರದವರು ಕರೆದೊಯ್ಯುತ್ತಿದ್ದಾರೆ. ಮೊನ್ನೆ ರಂಗಾರೆಡ್ಡಿ ರಂದರಾಬಾದಿನಲ್ಲಿ ಶ್ರೀ|| ಪ್ರಕಾಶರು ಭಾಷಣ ಮಾಡುತ್ತಾ, ಮಿ|| ಜಿನ್ನಾರವರು ಎರಡನೇ ಮೀರ್ ಜಾಫರನೆಂದೂ, ಬ್ರಿಟಿಷರು ಭಾರತದಿಂದ ಹೋಗಲು ನಿರ್ಧರಿಸಿದ್ದರೂ ಅವರಿಗೆ ಬೆಂಬಲವಿತ್ತು ರಾಷ್ಟ್ರದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಪೋಷಣೆ ಮಾಡಲು ಜಿನ್ನಾರವರು ನಿರ್ಧರಿಸಿದ್ದಾರೆಂದು ಅವರು ಹೇಳಿದ್ದಾರೆಂದೂ ಅಲ್ಲದೆ ನಿಜಾಮರನ್ನು ಸಿಂಹಾಸನದಿಂದ ತೆಗೆದು ಹಾಕಲು ಪ್ರಜೆಗಳು ಪ್ರಯತ್ನಿಸಬೇಕೆಂದು ತಿಳಿಸಿದರೆಂದೂ ಈ ಕಾರಣಗಳಿಗಾಗಿ ಅವರ ಮೇಲೆ ಕ್ರಮ ಕೈಗೊಳ್ಳಲಾಯಿತೆಂದೂ ಹೇಳಲಾಗಿದೆ. ಜೈ ಪ್ರಕಾಶ್‌ರನ್ನು ಗಡೀಪಾರು ಮಾಡುತ್ತಿರುವುದನ್ನು ಖಂಡಿಸಲು, ಹೈದರಾಬಾದ್ ಮತ್ತು ಸಿಕಂದರಾಬಾದುಗಳಲ್ಲಿ ಹರತಾಳವನ್ನು ಆಚರಿಸಲಾಯಿತು

ಸಾಧ್ವಿ

ತಾ॥ ೯-೫-೪೭ ಶುಕ್ರವಾರ

ಸಂಸ್ಥಾನಕ್ಕೆ ರಾಜೇಂದ್ರ ಬಾಬುಗಳ ಭೇಟಿ

ಕೇಂದ್ರ ಶಾಸನ ಸಭೆಯ ಆಹಾರ ಮಂತ್ರಿಗಳೂ, ಭಾರತ ರಾಜ್ಯಾಂಗ ಸಭೆಯ ಅಧ್ಯಕ್ಷರೂ ಆದ ಬಾಬು ರಾಜೇಂದ್ರ ಪ್ರಸಾದರವರು ಈಗ ನಮ್ಮ ಸಂಸ್ಥಾನಕ್ಕೆ ಭೇಟಿಯಿತ್ತಿರುವರು. ಇಲ್ಲಿನ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಿ ಮುಂದೆ ಮಾಡಬೇಕಾದ ವ್ಯವಸ್ಥೆಗಳನ್ನು ಕುರಿತು ಅಧಿಕಾರಿಗಳೊಡನೆ ಮಾತುಕತೆ ನಡೆಸುವರು. ಇವರ ಭೇಟಿಯಿಂದ ಸಂಸ್ಥಾನಕ್ಕೆ ಸಕಲ ವಿಧಗಳಲ್ಲಿಯೂ ವಿಶೇಷ ಪ್ರಯೋಜನವುಂಟಾಗುವುದೆಂದು ಆಶಿಸಬಹುದು.

ಡಾ॥ ರಾಜೇಂದ್ರ ಪ್ರಸಾದರು ಕೇಂದ್ರ ಸರ್ಕಾರದಲ್ಲಿ ಮಂತ್ರಿ ಪದವಿಯನ್ನು ಅಂಗೀಕರಿಸಿದ ತರುಣದಲ್ಲಿಯೇ ದಕ್ಷಿಣ ಭಾರತದ ಪ್ರವಾಸವನ್ನು ಕೈಗೊಂಡು ಮೈಸೂರಿಗೂ ಭೇಟಿ ಕೊಡುವರೆಂದು ನಿರೀಕ್ಷಿಸಿಯಿತ್ತು. ಆದರೆ ಆಗ ಅವರು ಬರಲು ಸಾಧ್ಯವಾಗಲಿಲ್ಲ. ಈಗ ನಮ್ಮ ಸರ್ಕಾರದವರು ಅವರ ಭೇಟಿಯ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ನಾವು ಕೋರುತ್ತೇವೆ.

ಆಹಾರದ ಅಭಾವವು ದಕ್ಷಿಣ ಹಿಂದೂಸ್ಥಾನವನ್ನು ಆನೇಕ ರೀತಿಯಲ್ಲಿ ಬಹಳವಾಗಿ ಬಾಧಿಸುತ್ತಿದೆಯೆಂಬುದು ಪ್ರಸಂಗಕ್ಕೇ ವೇದ್ಯವಾಗುತ್ತದೆ. ನಮ್ಮ ಸಂಸ್ಥಾನದಲ್ಲಿಯೂ ಹಲವು ಕಡೆಗಳಲ್ಲಿ ಬೇಸರದ ಪರಿಸ್ಥಿತಿಯುಂಟಾಗಿ ಆಮೇಲೆ, ಇಂಗ್ಲೆಂಡ್ ಮುಂತಾದ ಕಡೆಗಳ ಪ್ರಜೆಗಳ ಗಮನವನ್ನೂ ಸೆಳೆದಿರುತ್ತದೆ. ಇದಕ್ಕೆ ಸೂಕ್ತವಾದ ಪರಿಹಾರವನ್ನು ಒದಗಿಸಲು ಸರ್ಕಾರ ಪಕ್ಷಗಳಲ್ಲಿ ಪ್ರಯತ್ನಗಳು ಆಗುತ್ತಿವೆ. ಕೇಂದ್ರ ಸರ್ಕಾರ ಮತ್ತು ಇತರ ರಾಜ್ಯಗಳ ನೆರವು ನಮಗೆ ಅತ್ಯಗತ್ಯವಾಗಿ ಬೇಕಾಗಿರುತ್ತದೆ.

ಇಂದಿನ ಪರಿಸ್ಥಿತಿಯಲ್ಲಿ ಒಂದು ರಾಷ್ಟ್ರದ ನೆರವು ಮತ್ತೊಂದಕ್ಕೆ ಎಷ್ಟು ಅಗತ್ಯವಾಗಿರುವುದು ... ದಿನೇ ದಿನೇ ಹೆಚ್ಚು ಸ್ಪಷ್ಟವಾಗಿ ವೇದ್ಯವಾಗುತ್ತಿದೆ. ಭಾರತ ಕೇಂದ್ರ ಸರ್ಕಾರದಿಂದ ನಮ್ಮ ಸಂಸ್ಥಾನಕ್ಕೆ ಅನೇಕ ರೀತಿಯಲ್ಲಿ ಸಹಾಯವು ದೊರೆಯಬೇಕಾಗಿದೆ. ಇದನ್ನು ನಮ್ಮ ಸರ್ಕಾರದವರು ... ಇದಕ್ಕಾಗಿ ಕೇಂದ್ರ ಸರ್ಕಾರದ ... ನಮ್ಮ ಸಂಸ್ಥಾನದ ... ಪಡೆದುಕೊಳ್ಳುವುದು ಅವಶ್ಯಕ.

ದಕ್ಷಿಣ ... ನಮ್ಮ ಸಂಸ್ಥಾನದ ... ಹೆಚ್ಚು ... ಭಾಗ್ಯವೆಂದು ನಂಬಿದ್ದೇವೆ.

ಕಲ್ಕತ್ತಾ ಮೆಟ್ರಿಕ್ಯುಲೇಶನಿಗೆ ೬೨ ಸಾವಿರ ವಿದ್ಯಾರ್ಥಿಗಳು

ಕಲ್ಕತ್ತ ವಿಶ್ವವಿದ್ಯಾನಿಲಯದ ಮೆಟ್ರಿಕ್ ಪರೀಕ್ಷೆಗೆ ಸಲ ೬೨ ಸಹಸ್ರ ಮಂದಿ ಕುಳಿತಿದ್ದಾರೆಂದು ವರದಿಯಾಗಿದೆ. ಈ ಸ್ಪೈಕಿ ೭ ಸಹಸ್ರ ವಿದ್ಯಾರ್ಥಿನಿಯರಿದ್ದಾರೆ. ಭಾರತ ವಿಶ್ವವಿದ್ಯಾನಿಲಯದ ಇತಿಹಾಸದಲ್ಲಿ ಈ ಸಂಖ್ಯೆ ಪ್ರಥಮ ಸ್ಥಾನ ಗಳಿಸುವುದಾಗಿದೆ. ಬಂಗಾಳ, ಅಸ್ಸಾಂ, ಸಿಕ್ಕಿಂ ಮತ್ತು ಬ್ರಹ್ಮದೇಶ ದ್ವೀಪಗಳ ೮೧೦ ಕೇಂದ್ರಗಳಲ್ಲಿ ಈ ಪರೀಕ್ಷೆ ನಡೆಯುವುದು.

ಕೆಟ್ಟ ಧಾನ್ಯಕ್ಕಾಗಿ ಅಧಿಕಾರಿಗಳ ಮೇಲೆ ಮೊಕದ್ದಮೆ

ಭಾವ್‌ನಗರ್ ನಗರದ ಸಭೆಯ ಉಪಾಧ್ಯಕ್ಷರಾದ ಶ್ರೀ ರಾಕೂರ ಬಾಯಿ ದೇಸಾಯಿಯವರು ಸಮ್ಮುಖದ ಡಿಪೋಗಳಲ್ಲಿ ಹಂಚುವ ಕೆಂಪು ಜೋಳ ತಿನ್ನಲು ಉಪಯೋಗವಾಗಿಲ್ಲವೆಂದು ರೇಷನ್ ಅಧಿಕಾರಿಗಳ ಮೇಲೆ ಮೊಕದ್ದಮೆಯೊಂದನ್ನು ಹೂಡಿದ್ದರು. ಅಲ್ಲಿನ ಮ್ಯಾಜಿಸ್ಟ್ರೇಟರು ಕೆಂಪು ಜೋಳವು ಊಟಮಾಡಲು ಅಯೋಗ್ಯವಾಗಿದೆಯೆಂದು ತೀರ್ಪಿತ್ತಿದ್ದಾರೆ.

ಗಡಿನಾಡಿನಲ್ಲಿ ಚಳುವಳಿ ಮುಂದುವರಿಯುವುದು

ಮುಸ್ಲಿಂ ಲೀಗಿನ ಬೇಡಿಕೆಗೆ ಒಪ್ಪಿದ ಹೊರತು ಗಡಿನಾಡಿನಲ್ಲಿ ಲೀಗ್ ... ವಳಿ ನಿಲ್ಲಿಸಬಾರದೆಂದು ಮಿ॥ ಜಿನ್ನಾ ... ಗಡಿನಾಡು ಲೀಗ್ ನಿಯೋಗದವರಿಗೆ ... ನೆ ಕೊಟ್ಟಿರುವುದಾಗಿ ಹೇಳಲಾಗಿದೆ

ವಿಭಜನಾ ಚಳುವಳಿ ನಿಲ್ಲ... ದ್ದರೆ ಕೊಲೆಯ ಬೆದರಿಕೆ

ಬಂಗಾಳಾ ವಿಭಜನೆಯ ಚಳುವಳಿಯನ್ನು ಕೂಡಲೇ ನಿಲ್ಲಿಸದಿದ್ದರೆ ಪ್ರಾಣ ಅಪಹರಿಸುವುದಾಗಿ ಬಂಗಾಳದ ಕೆಲ ಮುಖಂಡರುಗಳಿಗೆ ಅನಾಮಧೇಯ ... ಗಳು ಬಂದಿರುವುವೆಂದು ತಿಳಿದು ಬಂ... ಇವು ಒಂದೇ ತರಹ ಕಾಗದದ ಮೇಲೆ ... ಪು ಮಾಡಲ್ಪಟ್ಟು ಅಂಚೆ ಮೂಲಕ ... ರುತ್ತವೆ

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು : : ಫೋನ್ 411

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಯಲ್ಲಿ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.

ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.

ಮೈಸೂರಿನ ಭವ್ಯ ಚಲನ ಚಿತ್ರ ಮಂದಿರ

ಫ್ರೆಡ್-ಲೆಂಡ್ ಟಾಕೀಸ್.

(ತಪ್ಪ ಸಾಗರ)

ಎ. ವಿ. ಎಂ. ಪ್ರೊಡಕ್ಷನ್ಸ್‌ರವರ

ಅಮೋಘ ಸಾಮಾಜಿಕ ಚಿತ್ರ

★ 'ನಾಮ್-ಇರುವರು' ★

(ತಮಿಳು)

ಪ್ರತಿ ದಿನ ೩ ಆಟಗಳು ೩-೩೦, ೬-೩೦, ೯-೩೦ ಕ್ಕೆ

ತಾರಾಗಣ :- ಟಿ. ಆರ್. ಮಹಾಲಿಂಗಂ, ಟಿ ಎ ಜಯಲಕ್ಷ್ಮಿ, ಆರ್ ರಾಮಚಂದ್ರನ್ ಮತ್ತು ಇತರರು

ಫ್ರೀ ಮತ್ತು ಕಾಂಪ್ಲಿಮೆಂಟರಿ ಪಾಸುಗಳನ್ನು ರದ್ದು ಮಾಡಲಾಗಿದೆ

ಪ್ರೊಪ್ರೈಟರ್ಸ್ :- ಬಿ ಎಂ ಗೋವಿಂದಸ್ವಾಮಿ, ಬಿ. ಎಂ. ರಾಮಮೂರ್ತಿ.

ರಾಜಕಮಲ್, ಮೈಸೂರು

ತಾ॥ ೯-೫-೪೭ ರಿಂದ ಮೂರನೇ ವಾರ-ಪ್ರತಿ ದಿನ ೨ ಆಟಗಳು

'ಗೊಲ್ಲಭಾಮ'

(ತೆಲುಗು)

ಭೂಮಿಕೆ :—ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

MYSORE CITY MUNICIPALITY.

(WORKS DEPARTMENT)

NOTICE.

Sealed tenders will be received at the Office of the Municipal Engineer up to 4 p. m. on 14—5—47 for constructing cooly quarters at the Municipal Sewage Farm, Mysore.

The work is estimated to cost Rs 9600. Each tender should be accompanied by a challan for having remitted Rs 420 to the Municipal Treasury as earnest money. The plans and estimates may be seen at the Office of the Municipal Engineer during working hours. For all particulars please see the detail notification on the Office Notice Board

K. G. KATWEY,
Municipal Engineer

RAJKAMA[L]

Morning Shows from 9-5. for 4 days daily at 10-30 a.

The Great Flamario[n]

with ERIC VON STROHEIM, MARY BETH HUGHES, DAN DUREYA Etc.

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲು ...

ಗರ್ಭಾಶಯರೋಗ ನಿವಾರಿ...

ಅರುಣ ಮತ್ತು ಮೋ... ಕನ್ನು ನಿರ್ಮೂಲಿಸಿ ... ಪೂರ್ಣ ಸ್ತ್ರೀತ್ವವನ್ನು ... ನಾಡಿಸುವಲ್ಲಿಯಂತೂ ... ರ್ಣವಾದ ದಿವ್ಯೌಷಧ... ವನ್ನು ಬಿಡದೆ ಸೇವಿಸ... ರುವರೆ, ನಿಮ್ಮ ಜೀ... ಪರಮಾವಧಿಯಾದ ಮಂದಾನಂದವನ್ನು ... ದೆ ಒದಗಿಸಬಲ್ಲುದು

ಆಯುರ್ವೇದಾಶ್ರಮಂ ಲಿಮಿಟೆಡ್ ... ನಗರ್.... ಮದರಾಸು.

ರೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧೦—೫—೪೭ [ಸಂಚಿಕೆ ೩೩೩

ಮರಣ ಪರ್ಯಂತರ ಮಹಾತ್ಮರ ಉಪವಾಸ?

ತ್ರೈ ಪ್ರಕಾಶರು ಪುನಃ ಹೈದರಾಬಾದಿಗೆ

ತ್ರಿ ಪುನಃ ಹೈದರಾಬಾದಿಗೆ ಹೋಗ ತ್ಸರುವುದಾಗಿ ಶ್ರೀ ಶ್ರೈಪ್ರಕಾಶ ನಾಯ ವರು ತಿಳಿಸಿದ್ದಾರೆ. ಅದಕ್ಕೆ ಮುಂ ನ, ಕಾಂಗ್ರೆಸ್ ಮತ್ತು ಸೋಷಿಯ ಪಕ್ಷಗಳ ಸಲಹೆಯನ್ನು ಪಡೆಯುವು ಎಂದೂ ಅವರು ಹೇಳಿದ್ದಾರೆ. ಸುಲ್ತಾ ಬಾನಿನಲ್ಲಿ ಜಯಪ್ರಕಾಶರ ದಸ್ತಗಿರಿ ಕ್ಷೋಭೆಗೊಂಡ ಜನರ ಗುಂಪು ಪೊ ಮೇಲೆ ಬಿದ್ದಿತು. ಪೋಲೀಸರ ಸ ಕ್ಕಾಗಿ ಮಿಲಿಟರಿಯನ್ನು ಕರೆಸಲಾ ೪ ಮಂದಿ ಪೋಲೀಸರಿಗೆ ಗಾಯಗ ; ಗುಂಪನ್ನು ಚದುರಿಸಲು ಟಿಯ ಗ್ಯಾಸ್ ಪ್ರಯೋಗಿಸಲಾಗಿದೆ. ಹಲ್ಲು ದಿನ ಚಿಕಿತ್ಸೆಗಾಗಿ ಉಸ್ಮಾನಿಯಾ ಆ ತ್ರೆಯಿಂದ ಬಿಡುಗಡೆಯಾಗಿದ್ದ ಕಮ್ಯೂ ಪ್ರಮುಖರಾದ ಡಾ|| ರಾಜಾ ಬಹ ರ್ ಗೌಡ್ ಮತ್ತು ಜವಾದ್ ರಜ್ವಿಯ ಅಲ್ಲಿಂದ ಪರಾರಿಯಾಗಿದ್ದಾರೆ.

೧೫ ವರ್ಷದ ನಂತರ ಕಾಡುಗ ತಲುಪಿತು

ಬಹು ಕಾಲದ ಹಿಂದೆ ಇಲ್ಲಿ ಇದ್ದು ತ್ತರಾಗಿದ್ದ ವಿಧವಾಲಯಕ್ಕೆ ಬೊಂ ಸಿರು ಒದ ೧೮–೬–೩೨ ರಲ್ಲಿ ಬರೆದ ಗನ್ನು ನಿನ್ನೆ ದಿನ ತಲುಪಿಸಲಾಯಿತು.

ವಿಮಾನದಲ್ಲಿ ಘಂಟೆಗೆ ೧ ಸಾವಿರ ಮೈಲಿ

ಗಂಟೆಗೆ ಒಂದು ಸಾವಿರ ಮೈಲಿಯಂತೆ ಮಾನ ಪ್ರಯಾಣವನ್ನು ಏರ್ಪಡಿಸಲಾ ವೆಂದೂ ೮ ದಿನಗಳು ಬಹಳ ಹತ್ತಿರ ಗಿವೆಯೆಂದೂ ಅಮೆರಿಕದ ಏರ್ ಕ ಡರಾದ ಎಫ್. ವೈಟಲ್‌ರವರು ಸಿದ್ದಾರೆ.

ಮದ್ರಾಸಿನಲ್ಲಿ ಕಾಂಗ್ರೆಸ್ಸಿನ ವಿದ್ಯಾರ್ಥಿ ಶಾಖಾ ಕಛೇರಿ

ಅಖಿಲ ಭಾರತ ಕಾಂಗ್ರೆಸ್ಸಿನ ವಿದ್ಯಾರ್ಥಿ ಶಾ ಕಛೇರಿಯನ್ನು ಮದ್ರಾಸಿನಲ್ಲಿ ತೆರೆ ಯಲಾಗುವುದೆಂದು ಗೊತ್ತಾಗಿದೆ. ಇದು ಸಂಘದ ಕಾರ್ಯದರ್ಶಿ ಶ್ರೀ ಜಿ. ರಾ ಚಂದ್ರ ರವರ ಮೇಲ್ವಿಚಾರಣೆಗೊಳಪ ಡುವುದು.

ಚೀಣಾ ಸ್ನೇಹಕ್ಕಾಗಿ ನೇಪಾಳದ ಪ್ರಯತ್ನ

ಗ್ಲೋಬ್] ಲಂಡನ್ ೫

ಬ್ರಿಟಿಷರು ಭಾರತೀಯರಿಗೆ ಅಧಿಕಾರವ ನ್ನು ವಹಿಸಿಕೊಟ್ಟು ಹೊರಟು ಹೋಗುವು ರಿಂದ ನೇಪಾಳ ಸರಕಾರವು ನೆರೆಯ ರಾ ಷ್ಟ್ರವಾದ ಚೀಣಾದೊಡನೆ ಸ್ನೇಹ ಸಂಬಂ ಧ ಬೆಳೆಸಲು ನಿರ್ಧರಿಸಿದೆ. ಇದಕ್ಕಾಗಿ ನಿ ಯೋಗವೊಂದನ್ನು ಸಹ ಕಳುಹಿಸಲಾಗಿದೆ. ಚೀಣಾ ರಿಪಬ್ಲಿಕ್ಕಿನ ಆಶ್ರಯದಲ್ಲಿರುವ ಟಿಬೆ ಟ್ಟಿನ ಸ್ವಾತಂತ್ರ್ಯವನ್ನು ನೇಪಾಳ ಸರ್ಕಾ ರವು ಒಪ್ಪಿಕೊಳ್ಳಲಿದೆ.

ಭಾರತಕ್ಕೆ ಅಕ್ಕಿ ಇಲ್ಲ

ವಾಷಿಂಗ್‌ಟನ್ನಿನ ವಿಶ್ವ ಆಹಾರ ಸಂಚ ಕೆಯ ಬೋರ್ಡಿನವರು ಮುಂದಿನ ವರ್ಷ ಸಾರಿಗೆ ಭಾರತಕ್ಕೆ ಅಕ್ಕಿಯ ಕೋಟವನ್ನೇ ಕೊಟ್ಟಿಲ್ಲವೆಂದು ಹೇಳಲಾಗಿದೆ. ಆಹಾರ ಸಮಸ್ಯೆ ಮೊದಲೇ ಕೆಡುತ್ತಿರುವುದರಿಂದ ಈ ಸುದ್ದಿಯು ನಿಜವಾದರೆ ಭಾರತವು ಬ ಹಳ ಕಷ್ಟದ ದಿನಗಳನ್ನು ಎದುರಿಸಬೇ ಕಾಗುವುದು.

ವ್ಯವಸಾಯ ಸಂಶೋಧನೆ ಅವಶ್ಯಕ

ಸ್ವಂತ ವರದಿ] ಬೆಂಗಳೂರು ೧೦

ಬಾಬು ರಾಜೇಂದ್ರ ಪ್ರಸಾದರು ನಿನ್ನೆ ಸಂಜೆ ಟಾಟಾ ವಿಜ್ಞಾನ ಮಂದಿರಕ್ಕೆ ಭೇಟಿ ಇತ್ತಿದ್ದರು. ಅಲ್ಲಿನ ವಿದ್ಯಾರ್ಥಿಗಳನ್ನುದ್ದೇ ಶಿಸಿ ಭಾಷಣ ಮಾಡುತ್ತಾ, ಅವರು ಹೆಚ್ಚು ಆಹಾರ ಬೆಳೆಯುವ ಮತ್ತು ವ್ಯವಸಾಯ ಅಭಿವೃದ್ಧಿಯ, ಬಗ್ಗೆ ಸಂಶೋಧನೆಗಳನ್ನು ನಡೆಸಬೇಕೆಂದು ತಿಳಿಸಿದರು. ಅದೇ ಸಭೆ ಯಲ್ಲಿ ಸರ್ ಸಿ ವಿ ರಾಮನ್‌ರವರು ಮಾತ ನಾಡಿ, ವೈಜ್ಞಾನಿಕ ಸಂಶೋಧನೆಗಳು ಈಗ ಪಟ್ಟಣಗಳಲ್ಲಿ ಕೇಂದ್ರೀಕೃತವಾಗಿರುವುವೆಂ ದೂ, ಅವು ಹಳ್ಳಿಗಳಲ್ಲಿ ಆಗಬೇಕೆಂದೂ ಹೇಳಿದರು. ಡಾ|| ಪ್ರಸಾದರು ಈ ದಿನ ಹಣ್ಣು ಬೆಳೆಯುವ ಫಾರಂಗೆ ಭೇಟಿ ಇತ್ತಿ ದ್ದರು. ಈ ದಿನ ಸಂಜೆ ಚಿಕ್ಕ ಲಾಲಬಾಗಿ ನಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾ ಡುವರು.

ಡಾ|| ರಾಜೇಂದ್ರ ಪ್ರಸಾದರು ಮೈಸೂ ರಿಗೆ ಭೇಟಿ ಕೊಡುವ ಬಗ್ಗೆ ಏರ್ಪಾಡಾಗಿದ್ದ ಕಾರ್ಯಕ್ರಮಗಳನ್ನು ರದ್ದುಗೊಳಿಸಲಾ ಗಿದೆ.

ಪೋಲಿಷ್ ಕೊಲೆಪಾತಕನ ಪರಾರಿ

ಗ್ಲೋಬ್] ಲಂಡನ್ ೫

೨೪ ವರ್ಷ ವಯಸ್ಸಿನ ಪೋಲೆಂಡ್ ಎಂ ಬಾತನು ೧೯ ಬಾರಿ ಕೊಲೆಗಳನ್ನು ಮಾಡಿ ಸೆರೆಹಿಡಿಯಲ್ಪಟ್ಟು ಫ್ರಾನ್ಸಿನ ಸೆರೆಮನೆ ಯಲ್ಲಿ ಬಂಧಿತನಾಗಿದ್ದನು. ಈತನು ರಾತ್ರಿ ಯಲ್ಲಿ ತನ್ನ ಕೈ ಕೋಳಗಳನ್ನು ಮುರಿದು ಚೈನುಗಳನ್ನು ಕಿತ್ತು ಕಬ್ಬಿಣದ ಸಲಾಕೆಗ ಳನ್ನು ಬಗ್ಗಿಸಿ, ವಾರ್ಡನ್ನನ ಬಿರುಡೆಯ ನ್ನು ಸೀಳಿ, ಸುರಂಗದ ದೊಡ್ಡ ಬಾಗಿಲನ್ನು ಬೀಗದ ಕೈಯಿಂದ ತೆಗೆದು, ರಸ್ತೆಯಲ್ಲಿದ್ದ ಕಾರೊಂದನ್ನು ಹತ್ತಿ ಪರಾರಿಯಾದನೆಂದು ವರದಿಯಾಗಿದೆ.

ಗಾಂಧೀಜಿ ಆಮರಣಾಂತ ಉಪವಾಸ ಮಾಡುವರೇ?

ಹಿಂದೂ ಮತ್ತು ಮುಸಲ್ಮಾನರು ಮೃಗ ಗಳಂತೆ ವರ್ತಿಸುತ್ತಿರುವುದನ್ನು ನಿಲ್ಲಿಸದಿದ್ದ ರೆ ತಾವು ಆಮರಣಾಂತ ಉಪವಾಸ ವ್ರತವ ನ್ನು ಕೈಗೊಳ್ಳುವುದಾಗಿ ಮಹಾತ್ಮ ಗಾಂಧಿ ಯವರು ನಿನ್ನೆ ಕಲ್ಕತ್ತೆಯ ಪ್ರಾರ್ಥನಾ ಸ ಭೆಯಲ್ಲಿ ಘೋಷಿಸಿದರೆಂದು ತಿಳಿದುಬಂ ದಿದೆ.

ಕನ್ನಡ ಸಮ್ಮೇಳನಕ್ಕೆ ರಾಷ್ಟ್ರಪತಿಗಳ ಸಂದೇಶ

ಸ್ವಂ ವ] ಹೊಸಹಳ್ಳಿ ೭

ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ರಾಷ್ಟ್ರ ಪತಿ ಆಚಾರ್ಯ ಕೃಪಲಾನಿಯವರೂ ಶ್ರೀ ಗಳಾದ ಡಿ ವಿ ಗುಂಡಪ್ಪ, ಪ್ರಾಂತ್ಯ ಕಾಂ ಗ್ರೆಸ್ ಅಧ್ಯಕ್ಷರಾದ ನಿಜಲಿಂಗಪ್ಪ, ಸಂಡೂ ರು ಮಹಾರಾಜರು, ಮದ್ರಾಸ್ ಮಂತ್ರಿ ಗಳಾದ ಮಾಧವ ಮೆನನ್, ಭಕ್ತವತ್ಸಲಂ, ಕೂರ್ಮಯ್ಯ ಮತ್ತು ಹಲವು ಮಂದಿ ಗುರುಗಳೂ ಸಂದೇಶಗಳನ್ನು ಕಳುಹಿಸಿ ಸ ಮ್ಮೇಳನವು ಯಶಸ್ವಿಯಾಗಿ ನಡೆಯುವಂ ತೆ ಹಾರೈಸಿದ್ದರು.

ನಿನ್ನೆ ಅಧ್ಯಕ್ಷರನ್ನು ೩೦ ಜೋಡಿ ಎತ್ತು ಗಳನ್ನು ಕಟ್ಟಿದ್ದ ಹತ್ತಿಯ ರಥದಲ್ಲಿ ಮೆರ ವಣಿಗೆ ಮಾಡಲಾಯಿತು. ಭಗವದ್ಗೀತೆ ಯಲ್ಲಿನ ಶ್ರೀ ಕೃಷ್ಣಾರ್ಜುನರ ರಥದೋ ಪಾದಿಯಲ್ಲಿ ಅದನ್ನು ನಿರ್ಮಿಸಲಾಗಿದ್ದಿತು. ರಥದಲ್ಲಿ ಅಧ್ಯಕ್ಷ ಶ್ರೀ|| ವೆಂಕಟರಾಮಯ್ಯ ನವರೊಡನೆ ಮದ್ರಾಸಿನ ಆರೋಗ್ಯ ಮಂ ತ್ರಿಗಳಾದ ಶ್ರೀ|| ಅತ್ತಾವರ ಬಾಲಕೃಷ್ಣ ಶೆಟ್ಟಿಯವರೂ, ಸ್ವಾಗತ ಸಮಿತಿ ಅಧ್ಯಕ್ಷ ರಾದ ಶ್ರೀ|| ಇಜಾರಿ ವಸುಪಾಲಯ್ಯನವರೂ ಕುಳಿತಿದ್ದರು. ಮೆರವಣಿಗೆಯಲ್ಲಿ ನೂ ರಾರು ಮಂದಿ ಸ್ವಯಂ ಸೇವಕ ಸೇವಕಿಯ ರೂ, ಪ್ರತಿನಿಧಿಗಳೂ, ನಾಲ್ಕು ಸಹಸ್ರ ಜನರೂ ಭಾಗವಹಿಸಿದ್ದರು. ರಾ ತ್ರಿ ೨ ಘಂಟೆವರೆಗೆ ಮೆರವಣಿಗೆ ನಡೆಯಿತು.

ಸಮ್ಮೇಳನವನ್ನು ಪ್ರಾರಂಭಿಸುತ್ತಾ ಎ. ಬಿ. ಶೆಟ್ಟಿಯವರು ಕರ್ನಾಟಕದ ಅವಶ್ಯಕತೆ ಗಳನ್ನು ವಿವರಿಸಿದರು. ಕನ್ನಡ ನಾಡಿನ ಏಕೀಕರಣವು ಅತ್ಯವಶ್ಯಕವೆಂದೂ, ಅದ ಕ್ಕಾಗಿ ತಾವು ಪ್ರಯತ್ನಿಸುವುದಾಗಿಯೂ ಹೇಳಿದರು. ನೀಲಗಿರಿ, ಮಂಗಳೂರು ಮತ್ತು ಕೊಡಗುಗಳ ಅತ್ರ ಮ ಅ ಕ್ಕಾಗಿ ಮಲೆಯಾಳಿಗಳು ಪ್ರಯತ್ನಿಸುವುದನ್ನು ಕ ನ್ನಡಿಗರು ಸ್ಪರ್ಧಿಸಬೇಕೆಂದೂ ಹೇಳಿ ಏಕೀ ಕೃತ ಕರ್ನಾಟಕದಲ್ಲಿ ಅವರು ಬದುಕಿ ಬಾ ಳುವರು ಎಂದು ಹೇಳಿದರು.

ಈ ಸಮಾರಂಭಕ್ಕೆ ೩ ಸಹಸ್ರ ಮಹಿಳೆ ಯರೂ, ೭ ಸಹಸ್ರ ಮಹನೀಯರೂ ಆಗ ಮಿಸಿದ್ದರು.

—

ಉಪನ್ಯಾಸ

ಹಾಡೇ ವಿಲಾಸ ಮೊಹಲ್ಲಾ ಶ್ರೀ ರಾಮ ಕೃಷ್ಣಾಶ್ರಮದಲ್ಲಿ ನಾಳೆ ಸಂಜೆ ೬ ಘಂಟೆಗೆ ಶ್ರೀ ಸ್ವಾಮಿ ಸೋಮನಾಥಾನಂದರು ಭಗ ವದ್ಗೀತೆಯ ಮೇಲೆ ಉಪನ್ಯಾಸವಿತ್ತವರು.

ಕೊಚ್ಚಿ ಸಂಸ್ಥಾನದಲ್ಲಿ ಲಂಚದ ಸೊಲ್ಲೇ ಇಲ್ಲ

ಕೊಚ್ಚಿ ಸಂಸ್ಥಾನದ ಯಾವ ಇಲಾಖೆ ಯಲ್ಲೂ ಲಂಚ ತೆಗೆದುಕೊಳ್ಳುತ್ತಿರುವುದಾ ಗಲೀ ಅಥವಾ ಅದರ ವ್ಯಾಪನೆಯಾಗಲೀ ಇಲ್ಲವೇ ಇಲ್ಲ-ವೆಂಬುದಾಗಿ ೭ ತಿಂಗಳ ಕಾ ಲ ತನಿಖೆ ನಡೆಸಿದ ಲಂಚ ನಿರೋಧ ಮಂ ಡಲಿಯು ಸರ್ಕಾರಕ್ಕೆ ವರದಿ ಮಾಡಿದೆ. ಲಂಚದ ಸೊಲ್ಲೇ ಇಲ್ಲದಿರುವಾಗ ಅದರ ಪ ರಿಹಾರದ ಬಗ್ಗೆ ಸೂಚನೆಯಾಗಲೀ, ಸಲ ಹೆಯಾಗಲೀ ಅವಶ್ಯಕವಿಲ್ಲವೆಂದು ಆ ಮಂಡಲಿಯವರು ಸರ್ಕಾರಕ್ಕೆ ಒಪ್ಪಿಸಿರುವ ವರದಿಯಲ್ಲಿ ನಮೂದಿಸಿದ್ದಾರೆ.

ಕ್ಷಾರವಿಲ್ಲದ ಉಪ್ಪು

ಗ್ಲೋಬ್ ನ್ಯೂಯಾರ್ಕ್ (ಏರ್‌ಮೈಲ್) ೮

ಕ್ಷಾರವರ್ಜ್ಯವಾದ ಆಹಾರ ತೆಗೆದುಕೊ ಳ್ಳುವವರಿಗಾಗಿ ಹೊಸ ವಿಧದ ಉಪ್ಪನ್ನು ತಯಾರಿಸಲಾಗಿದೆ. ಇದು ಆಕಾರ, ರುಚಿ ಮತ್ತು ರಚನೆಯಲ್ಲಿ ಸಾಮಾನ್ಯ ಉಪ್ಪಿನಂ ತೆಯೇ ಇದೆ. ಆದರೆ ಇದರಲ್ಲಿ ಕ್ಷಾರ ಗು ಣವಿಲ್ಲ.

ಆರ್ಕಾಟ್-ನೆಹರೂ ಭೇಟಿ

ಮೈಸೂರಿನ ದಿವಾನರಾದ ಸರ್ ಆರ್ಕಾ ಟ್ ರಾಮಸ್ವಾಮಿ ಮೊದಲಿಯಾರರು ದೆಹ ಲಿಯಲ್ಲಿ ಪಂ|| ನೆಹರು, ಡಾ|| ರಾಜೇಂದ್ರ ಪ್ರಸಾದ್, ಮತ್ತು ಡಾ|| ಜಾನ್ ಮಥ್ಯೈ ರವರನ್ನು ೭ ನೇ ತಾ|| ಭೇಟಿ ಮಾಡಿ ಮಾ ತುಕತೆ ನಡೆಸಿದರು.

ಮತ್ತೊಂದು ಮಹಾ ಯುದ್ಧದ ಭೀತಿ ಹೆಚ್ಚುತ್ತಿದೆ

ವಿಶ್ವದಲ್ಲಿ ಮತ್ತೆ ಮಹಾಯುದ್ಧವೊಂ ದು ನಡೆಯುವ ಭಯವು ತೀವ್ರವಾಗಿ ಹೆ ಚ್ಚುತ್ತಿದೆ. ಹಾಗೇನಾದರೂ ಯುದ್ಧವು ನಡೆದರೆ ಪ್ರಪಂಚದ ನಾಗರೀಕತೆಗೆ ಭಾರಿ ವಿಪತ್ತು ಸಂಭವಿಸಿ, ಅದು ಉಳಿಯುವುದೇ ಕಷ್ಟವಾಗುವುದು. ಆದ್ದರಿಂದ ಯುದ್ಧಕ್ಕೆ ಆಸ್ಪದ ಕೊಡಬಾರದು. ಹಿಂದಿನ ಜ ನಾಂಗ ಸಭೆಗೆ ಬಂದ ಗತಿ ಪ್ರಪಂಚ ಸಂಸ್ಥೆ ಗೆ ಬಾರದಂತೆ ನೋಡಿಕೊಳ್ಳಬೇಕು. ರ ಷ್ಯ ಮತ್ತು ಅಮೆರಿಕಗಳು ಈ ಸಂಸ್ಥೆಯಲ್ಲಿ ರುವುದರಿಂದ ಶಾಂತಿ ವ್ಯವಸ್ಥೆಗೆ ಹೆಚ್ಚು ಬೆಂಬಲ ಸಿಕ್ಕಿದೆ—ಎಂಬುದಾಗಿ ಬ್ರಿಟಿಷ್ ಪ್ರಧಾನಿ ಮಿ|| ಅಟ್ಲಿಯವರು ತಿಳಿಸಿದ್ದಾರೆ.

ನಾಮಕರಣ ಮಹೋತ್ಸವ

ಮೈಸೂರು ೧೦

ನಗರದ ವ್ಯಾಪಾರಿಗಳೂ, ಕಾಂಗ್ರೆಸ್ ಕೆಲಸಗಾರರೂ ಆದ ಶ್ರೀ|| ಚಾಮುಂಡಯ್ಯ ನವರ ಕುಮಾರಿ ಶ್ರೀಮತಿ ಸರಸ್ವತೀ ದೇ ವಿಯವರ ಮಗ ಚಿ|| ಶಾಂತರಾಜುವಿನ ನಾ ಮಕರಣೋತ್ಸವವು ಈ ದಿನ ವೈಭವದಿಂದ ಜರುಗಿತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಕೆ ಎಚ್. ರಾಮಯ್ಯನವರ ವಿ ದ್ಯಾರ್ಥಿ ನಿಲಯಕ್ಕೆ ತಲಾ ೫ ರೂ ಗಳ ಉದಾರ ದಾನವನ್ನು ನೀಡಲಾಯಿತು.

ಸೈಕಲ್ ಸಿಕ್ಕಿದೆ

ರಾಜಧಾನಿಯ ದೇವರಾಜ ಮೊಹಲ್ಲಾ ಪೋಲೀಸ್ ಸ್ಟೇಷನ್ನಿನಲ್ಲಿ ಫಿಲಿಪ್ಸ್ ಎಫ್. ೬ ನಂ ೩೭೫೪ ನೇ ನಂಬರಿನ ಸೈಕಲ್ ಒಂದು ಸಿಕ್ಕಿದೆ. ವಾರಸುದಾರರು ಸರಿಯಾದ ರುಜುವಾತು ಕೊಟ್ಟು, ಅದನ್ನು ಪಡೆಯ ಬಹುದು.

ಸಾಧ್ವಿ

೧೦ ತಾ|| -೫-೪೭ ಶನಿವಾರ

ಬ್ರಿಟಿಷರು ಕೂಡಲೇ ಹೊರಡಬೇಕು

ಈ ದಿನವೇ ಬ್ರಿಟಿಷರು ಹೊರಟುಹೋದರೆ ಬಹಳ ಒಳ್ಳೆಯದು; ಇನ್ನೂ ಹದಿಮೂರು ತಿಂಗಳೆಂದರೆ ದೇಶಕ್ಕೆ ಬಹಳ ಹಾನಿ ಕೊಟ್ಟಂತೆಯೇ ಎಂದು ಮಹಾತ್ಮರು ನುಡಿದಿರುವರು. ಬರುವ ವರ್ಷ ಬ್ರಿಟಿಷರು ಹೊರಟುಹೋಗುವುದಾಗಿ ಹೇಳಿರುವ ಮಾತುಗಳು ಸಂಪೂರ್ಣ ಪ್ರಾಮಾಣಿಕತೆಯಿಂದ ಕೂಡಿವೆಯೆಂದು ಅವರು ತಿಳಿಸಿರುವರು. ಬ್ರಿಟಿಷ್ ಮತ್ತು ಭಾರತದ ಇತಿಹಾಸದಲ್ಲಿ ಈ ಘೋಷಣೆಯು ಅತ್ಯಂತ ಪ್ರಾಮುಖ್ಯವಾದ ಅಂಶವೆಂದು ಅವರು ಸೂಚಿಸಿರುವರು. ಅದರಲ್ಲಿ ಹೇಳಿದ ಮಂತೆ ಬ್ರಿಟಿಷರು ನಡೆದುಕೊಳ್ಳುವುದಾದರೆ ಅವರು ಪ್ರಪಂಚದ ಮನ್ನಣೆಗೆ ಪಾತ್ರರಾಗುವರೆಂದು ಮಹಾತ್ಮರು ಅಭಿಪ್ರಾಯಪಟ್ಟಿರುವರು.

ಆದರೆ ವಾಸ್ತವಾಂಶಗಳ ದೃಷ್ಟಿಯಿಂದ ಬ್ರಿಟಿಷರು ಇನ್ನೂ ಹದಿಮೂರು ತಿಂಗಳ ಕಾಲ ಕಾಯುವುದಕ್ಕಿಂತಲೂ ಇಂದೇ ಹೊರಟು ಹೋಗುವುದು ಲೇಸೆಂದು ಗಾಂಧೀಜಿಯವರು ಸೂಚಿಸಿರುವರು. ಈ ದೇಶವನ್ನು ಬಿಟ್ಟು ಹೋಗುವವರಿಗೆ ಹದಿಮೂರು ತಿಂಗಳ ಅವಧಿಯು ಅವಶ್ಯಕವೇ? ಎಂಬ ಬಗ್ಗೆ ತಮಗೆ ಸಂಶಯವಿರುವುದಾಗಿಯೂ ಅವರು ಹೇಳಿರುವರು.

ಅಧಿಕಾರವನ್ನು ಭಾರತೀಯರಿಗೆ ವರ್ಗಾಯಿಸುವುದಾಗಿ ಬ್ರಿಟಿಷರು ಸಾರಿದಂದಿನಿಂದ ಹಿಂದೂಸ್ಥಾನದಲ್ಲಿ ಹೊಸ ಅಧಿಕಾರದ ಹಂಚಿಕೆಗಾಗಿ ಈಗಾಗಲೇ ವಿಶೇಷವಾದ ಗೊಂದಲಗಳು ಎದ್ದಿರುತ್ತವೆ. ಮುಸ್ಲಿಂ ಲೀಗಿನವರು ರಾಷ್ಟ್ರ ವಿಭಜನೆಯ ವಾದವನ್ನು ಮತ್ತಷ್ಟು ಬಲವಿನಿಂದ ಒತ್ತಾಯ ಪಡಿಸುತ್ತಿದ್ದಾರೆ. ಇದರ ಪ್ರತಿಕ್ರಿಯೆಯಾಗಿ ಕಾಂಗ್ರೆಸ್, ಹಿಂದೂ ಮಹಾಸಭೆ ಮತ್ತು ಇತರ ಸಂಘಗಳೂ ಸಹ ಪ್ರಾಂತಗಳ ವಿಭಜನೆಗಾಗಿ ಒತ್ತಾಯಪಡಿಸುತ್ತಿವೆ. ಇಷ್ಟೇ ಅಲ್ಲದೆ ಲೀಗಿನವರು ತಮ್ಮ ಧ್ಯೇಯ ಸಾಧನೆಗಾಗಿ ಈಗಾಗಲೇ ಗಡಿನಾಡು ಮತ್ತು ಅಸ್ಸಾಮುಗಳಲ್ಲಿ ಶಾಸನ ಭಂಗ ಚಳುವಳಿಯನ್ನು ಸಹ ಹೂಡಿ ಅಲ್ಲೋಲ ಕಲ್ಲೋಲವನ್ನುಂಟುಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅಪಾರವಾದ ಪ್ರಾಣ ನಷ್ಟವೂ, ಮಾನಹಾನಿಯೂ, ಧನನಾಶವೂ ಸಹ ಆಗುತ್ತಿವೆ. ಇವುಗಳನ್ನು ಎದುರಿಸಲು ಪ್ರಾಂತ್ಯ ಸರ್ಕಾರಗಳು ಬ್ರಿಟಿಷ್ ಸೈನ್ಯಗಳನ್ನು ಉಪಯೋಗಿಸಬೇಕಾಗಿ ಬಂದಿದೆ. ಹೀಗೆ ಗಲಭೆಗಳನ್ನು ಅಡಗಿಸಲು ವಿದೇಶೀಯ ಸೈನ್ಯವನ್ನು ಉಪಯೋಗಿಸುವುದು ಸರಕಾರದ ದೌರ್ಬಲ್ಯದ ಕುರುಹೆಂದು ಸೂಚಿಸಿ ಮಹಾತ್ಮರು ಅದನ್ನು ಖಂಡಿಸಿದ್ದಾರೆ. ಆದರೆ ಎರಡು ಶತಮಾನಗಳ ಬ್ರಿಟಿಷ್ ಆಳ್ವಿಕೆಯಲ್ಲಿ ಆತ್ಮರಕ್ಷಣೆಗಾಗಿ ಶಕ್ತಿಯನ್ನು ಕಳೆದುಕೊಂಡಿರುವ ಪಾಪವನ್ನೇ ಭಾರತೀಯರು ಅನುಭವಿಸುತ್ತಿರುವುದರಿಂದ ಈ ಪರಿಸ್ಥಿತಿ ಬಂದಿರುವುದೆಂದೂ ಸಹ ಅವರು ಹೇಳಿದ್ದಾರೆ. ಬ್ರಿಟಿಷರು ಇಲ್ಲಿ ಎಷ್ಟು ದಿವಸವಿದ್ದರೆ ಅಷ್ಟು ಕಾಲ ಈ ಪ್ರಸಂಗಗಳಿಗೆ ಅವಕಾಶವಿದ್ದೇ ಇರುವುದೆಂದೂ, ಇನ್ನೂ ಹದಿಮೂರು ತಿಂಗಳ ಕಾಲ ಕಾಯದೆ ಅವರು ಕೂಡಲೇ ತೊರೆದ

ಕೋಪಿಷ್ಟರಿಗೆ ನೆಗಡಿ ಹೆಚ್ಚು

ಗ್ಲೋಬ್] ನ್ಯೂಯಾರ್ಕ್ ೬

ಮನುಷ್ಯನ ಮೂಗಿನಲ್ಲಿ ನೆಗಡಿಯ ಕ್ರಿಮಿಗಳು ಯಾವಾಗಲೂ ಸುಪ್ತಾವಸ್ಥೆಯಲ್ಲಿರುವುವು. ಮನುಷ್ಯನು ಕೋಪಗೊಂಡ ಕೂಡಲೇ ಅವು ಎಚ್ಚರಗೊಂಡು ಚುರುಕಾಗಿ ಕೆಲಸ ಮಾಡುವುವು. ತತ್ಫಲವಾಗಿ ಕೋಪಿಷ್ಠನಾದವನಿಗೆ ಆಗಾಗ್ಗೆ ನೆಗಡಿ ಬರುವುದು. ಶಾಂತಿಯಿಂದ ಇರುವವನಿಗೆ ಹೆಚ್ಚು ನೆಗಡಿಯು ಕಾಣಿಸುವುದಿಲ್ಲ— ಎಂಬುದಾಗಿ ಡಾ|| ಹೆರಾಲ್ಡರು ಅಭಿಪ್ರಾಯ ಪಟ್ಟಿದ್ದಾರೆ.

ಬೇಕೆಂದೂ ಸಹ ಅವರು ಸೂಚಿಸಿದ್ದಾರೆ.

ಬರುವ ವರ್ಷದ ಜೂನ್ ತಿಂಗಳಿಗೆ ಮುಂಚಿತವಾಗಿಯೇ ಅಧಿಕಾರವನ್ನು ವರ್ಗಾಯಿಸಬೇಕೆಂದು ವೈಸರಾಯರು ಸಲಹೆಯಿತ್ತಿರುವರೆಂದು ಇತ್ತೀಚಿಗೆ ವರದಿಯಾಗಿರುತ್ತದೆ. ಅದರಂತೆ ಬ್ರಿಟಿಷ್ ಸರ್ಕಾರದವರು ಕೂಡಲೇ ಏರ್ಪಾಡು ಮಾಡಿ ಮಹಾತ್ಮರವರ ಅಭೀಷ್ಟವನ್ನೂ, ವೈಸರಾಯರ ಸಲಹೆಯನ್ನೂ ಈಡೇರಿಸಿ ಈ ದೇಶದಲ್ಲಿ ಇನ್ನೂ ಆಗಬಹುದಾದ ಅನರ್ಥ ಪರಂಪರೆಗಳನ್ನು ತಪ್ಪಿಸಲೆಂದು ಹಾರೈಸೋಣ.

ರೋಗಿಯಾಗಲು ವೈದ್ಯರೊಬ್ಬರ ಪ್ರಯತ್ನ

ಗ್ಲೋಬ್] ಲಂಡನ್ ೫

ರೋಗಿಯಾಗಬೇಕೆಂದು ನಿರ್ಧರಿಸಿ ಬ್ರಿಟಿಷ್ ದಂತವೈದ್ಯರೊಬ್ಬರು ಊಟಮಾಡುವ ವಿಚಾರದಲ್ಲಿ ಬದಲಾವಣೆಯನ್ನು ಸೂಚಿಸಿದರೆಂದೂ ಅದಕ್ಕೆ ಸರಿಬೀಳದೆ ಹೆಂಡತಿಯು ಅವರ ಮೇಲೆ ಮೊಕದ್ದಮೆ ಹೂಡಿ ಕ್ರೌರ್ಯದ ಕಾರಣದ ಮೇಲೆ ವಿವಾಹ ವಿಚ್ಛೇದನಕ್ಕಾಗಿ ಡಿಕ್ರಿ ಪಡೆದಿರುವಳೆಂದೂ ವರದಿಯಾಗಿದೆ. ಈ ವೈದ್ಯರು ತಮ್ಮ ಹೆಂಡತಿಯೊಡನೆ ಮಾತನಾಡುವುದನ್ನು ದಿನ ದಿನಕ್ಕೆ ಕಡಮೆ ಮಾಡುತ್ತಿದ್ದರೆಂದೂ ಆಪಾದಿಸಲಾಗಿದೆ

ನೈರುತ್ಯ ಆಫ್ರಿಕವು ದಕ್ಷಿಣ ಆಫ್ರಿಕಕ್ಕೆ

ನೈರುತ್ಯ ಆಫ್ರಿಕವು ದಕ್ಷಿಣ ಆಫ್ರಿಕಾ ಯೂನಿಯನ್ನಿನಲ್ಲಿ ಸೇರಬೇಕೆಂದು ಅಲ್ಲಿನ ಶಾಸನ ಸಭೆಯಲ್ಲಿ ೧೪-೨ ಓಟುಗಳಿಂದ ನಿರ್ಧರಿಸಲಾಗಿದೆ. ಸಭೆಯು ಜ|| ಸ್ಮಟ್ಸರ ಕಾರ್ಯ ನೀತಿಯನ್ನು ಒಪ್ಪಿದೆ

Edited, printed and published by A. R. Nagarajan at the Sadhvi Press D-Subbiah Road, Mysore.

ಭಾರತ ಮತ್ತು ದ|| ಆಫ್ರಿ[ಕ] ರಾಯಭಾರಿ ಸಂಬಂಧ?

ದಕ್ಷಿಣ ಆಫ್ರಿಕದೊಡನೆ ಭಾರತವು
ರಾಯಭಾರಿ ಸಂಬಂಧವನ್ನು ಪುನಃ ಪಡೆ
ಬಹುಮಟ್ಟಿಗೆ ಆಶೆಯನ್ನು ಆಫ್ರಿಕದ ಇ
ಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಡಾ||
ಮದ್ ಇಸ್ಮೈಲ್‌ದವರು ವ್ಯಕ್ತಪಡಿ
ದ್ದಾರೆ ಶ್ರೀ ದೇಶಮುಖರನ್ನು ಭಾ
ಸರ್ಕಾರವು ದ|| ಆಫ್ರಿಕಕ್ಕೆ ಮತ್ತೆ ಕಳ
ಸುವುದೆಂದೂ ಈ ಬಗ್ಗೆ ಮಾತುಕತೆ
ಆರಂಭವಾಗಿವೆಯೆಂದೂ ಅ
ಹೇಳಿದ್ದಾರೆ

ಡೋಗ್ರಾ ಸ್ಥಾನಕ್ಕೆ ಬೆಂಬ

ಗ್ಲೋಬ್] ಶ್ರೀನಗ

ಜಮ್ಮು, ಕಂಗ್ಡ ಮತ್ತು ಪಂಜಾಬ
ಗುವ ಇತರ ಡೋಗ್ರಾ ಜನರು ತಮಗೆ
ಶ್ಮೀರ ಸ್ಥಾನಬೇಕೆಂದು ಕೇಳುತ್ತಿರುವು
ಕಾಶ್ಮೀರ ರಾಷ್ಟ್ರೀಯರು ಬೆಂಬಲ ನೀ
ಲು ನಿರ್ಧರಿಸಿದ್ದಾರೆಂದು ಗೊತ್ತಾಗಿದೆ.

ರಾಜಕಮಲ್, ಮೈಸೂರು

ತಾ|| ೯-೫-೪೭ ರಿಂದ ಮೂರನೇ ವಾರ-ಪ್ರತಿ ದಿನ ೨ ಆಟಗಳು

'ಗೊಲ್ಲಭಾಮ' (ತೆಲುಗು)

ಭೂಮಿಕೆ:—ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

11-5-47 ನೇ ತಾ|| ದಿಂದ ಜನಭರಿತನಾದ ೭ ನೇ ವಾರ

ವುಡ್-ಲ್ಯಾಂಡ್ಸ್ ಟಾಕೀಸ್, ಮೈಸೂರು.

★ 'ನಾಮ್-ಇರುವರ್' ★ (ತಮಿಳು)

ಪ್ರತಿ ದಿನ ಮೂರು ಆಟಗಳು

ತಾರಾಗಣ:- ಟಿ ಆರ್. ಮಹಾಲಿಂಗಂ, ಟಿ ಎ ಜಯಲಕ್ಷ್ಮಿ ಮತ್ತು ಬೇಬಿ ಕಮಲ

MYSORE CITY MUNICIPALITY.

(WORKS DEPARTMENT)

NOTICE.

Sealed tenders will be received at the Office of the Municipal Engineer up to 4 p. m. on 14—5—47 for constructing cooly quarters at the Municipal Sewage Farm, Mysore.

The work is estimated to cost Rs. 9600. Each tender should be accompanied by a challan for having remitted Rs. 420. to the Municipal Treasury as earnest money. The plans and estimates may be seen at the Office of the Municipal Engineer during working hours. For all particulars please see the detail notification on the Office Notice Board.

K. G. KATWEY,
Municipal Engineer

ಶ್ರೀ ಗಣೇಶಾ ಟಾಕೀಸ್

೭—೫—೪೭ ರಿಂದ

ದಿನವಹಿ 3, 6, 9, ಘಂಟೆಗೆ

ಜೆಮಿನಿಯವರ

ಬಾಲ-ನಾಗಮ್ಮ (ತೆಲುಗು)

Morning Shows on 11 a[nd] 12th at 10-30 a. m.

Love Story

ಬೇಕಾಗಿದೆ

ಆಕರ್ಷಣೀಯವಾಗಿ ಪುಸ್ತಕ ರೂ
ಪದಲ್ಲಿ ಪ್ರಕಟವಾಗುತ್ತಿರುವ "ತಮಾಷ
ವಾರ ಪತ್ರಿಕೆಯನ್ನು ಮೈಸೂರು ನ
ಗರದಲ್ಲಿ ಹಂಚಲು ಸೋಲ್ ಏಜೆಂಟರು
ಬೇಕಾಗಿದ್ದಾರೆ. ವಿವರಗಳಿಗೆ ತಮಾಷ
ಯಾಫೀಸಿನಲ್ಲಿ ವಿಚಾರಿಸಿ.
ವ್ಯವಸ್ಥಾಪಕ, "ತಮಾಷ
ರಾಮಾನುಜ ರಸ್ತೆ, ಮೈಸೂ

RAJKAMA

Morning Shows from 9-5
for 4 days daily at 10-30 a

The Great Flamaric

with ERIC VON STROHEI
MARY BETH HUGHES,
DAN DUREYA Etc.

ಒಪೆರಾ ಟಾಕೀಸ್, ಮೈಸೂ

೧೦-೫-೪೭ ರಿಂದ ೪ ನೇ ವಾರ

ರಾಜಕುಮಾರಿ (ತಮಿಳು)

Morning Shows from 9-5

Swing Parade
1946 and Fea

ಫೋ. ನಂ. ೩೯೭ || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ ೫] ಭಾನುವಾರ ೧೧—೫—೪೭ [ಸಂಚಿಕೆ ೨೩೭

ಬಂಗಾಳಾ ವಿಭಜನೆ ತಪ್ಪಿಸಲು ಜಂಟಿಪ್ರಯತ್ನ

ಸಾಹಿತ್ಯ ಸಮ್ಮೇಳನ

ಗೋಷ್ಠಿ ಸಮಾರಂಭಗಳು

೦ ಸು.] ಹರಪನಹಳ್ಳಿ ೯

ಸಾಹಿತ್ಯ ಸಮ್ಮೇಳನದ ಅಂಗವಾಗಿ ನಿನ್ನೆ ಶ್ರೀ ಕುಮ್ಮಿನ ಕಟ್ಟಿಯವರ ಅಧ್ಯಕ್ಷತೆಯಲ್ಲಿ ವಿಜ್ಞಾನ ಗೋಷ್ಠಿಯು ಜರುಗಿತು. ಶ್ರೀ ಜನರಾಜ ಹೆಗ್ಗಡೆಯವರು ಇದರ ಆರಂಭೋತ್ಸವವನ್ನು ನೆರವೇರಿಸಿ ಕರ್ನಾಟಕದ ಏಕೀಕರಣವಾದ ಕೂಡಲೇ ಕನ್ನಡಿಗರೆಲ್ಲರೂ ವಿಜ್ಞಾನದ ಉಪಯೋಗವನ್ನು ಹೆಚ್ಚು ಹೆಚ್ಚಾಗಿ ಪಡೆಯಬೇಕಾಗಿ ಬಂದರೂ ಈ ಬಗ್ಗೆ ಈಗಿನಿಂದಲೇ ಅವಶ್ಯವಾದ ಪುಸ್ತಕಗಳು ಹೊರಬೀಳಬೇಕೆಂದು ಹೇಳಿದರು. ಮಾನವನ ನಿತ್ಯಜೀವನದಲ್ಲಿ ವಿಜ್ಞಾನವು ಮಹತ್ವ ಸ್ಥಾನವನ್ನು ಪಡೆದಿದೆ. ಅಂತಹ ವಿಜ್ಞಾನದ ಉಪಯೋಗವನ್ನು ಕನ್ನಡಿಗರೆಲ್ಲರೂ ಸುಲಭವಾಗಿ ಪಡೆಯುವಂತೆ ಕೂಡಲೇ ಏರ್ಪಾಡುಗಳಾಗಬೇಕು - ಎಂಬುದಾಗಿ ಅಧ್ಯಕ್ಷರು ತಿಳಿಸಿದರು

ಜನಪದ ಸಾಹಿತ್ಯ ಗೋಷ್ಠಿಯು ಶ್ರೀ ಮಟಗೇರಿ ಕೃಷ್ಣಶರ್ಮರ ಅಧ್ಯಕ್ಷತೆಯಲ್ಲಿ ನಡೆಯಿತು. ಕರ್ನಾಟಕದಲ್ಲಿ ಜನಪದ ಸಾಹಿತ್ಯವು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದೆ, ಯುವಕರು ಮುಂದೆ ಬಂದು ಇದರ ಅಭಿವೃದ್ಧಿಗೆ ಗಮನಕೊಡಬೇಕೆಂದು ಹೇಳಿ ಮೈಸೂರಿನ ಶ್ರೀ ಗ. ಸ. ಹಾಲಪ್ಪನವರು ಈ ಗೋಷ್ಠಿಯ ಆರಂಭೋತ್ಸವವನ್ನು ನೆರವೇರಿಸಿದರು

ಶ್ರೀ ಸಿದ್ಧಯ್ಯ ಪುರಾಣಿಕರವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಗೋಷ್ಠಿಯು ಜರುಗಿತು

ವಸ್ತುಪ್ರದರ್ಶನಕ್ಕೆ ಮೈಸೂರಿನ ಶ್ರೀ|| ಅನಂತಸುಬ್ಬರಾಯರು ಮತ್ತು ಬ್ರಿಟಿಷ್ ಇನ್ಸಿಟ್ಯೂಟಿನವರ ಕನ್ನಡ ಟೈಪ್‌ರೈಟರು ಗಳೂ, ಆ|| ಪ್ರೊ|| ಬಿ. ಕುಪ್ಪಸ್ವಾಮಿ ನಾಯ್ಡುರವರ ಸಂಸ್ಕರಣದ ಟೈಪ್‌ರೈಟರೂ ಬಂದಿವೆ

ಕನ್ನಡ ಸಾಹಿತ್ಯ ಪರಿಷತ್ತಿನ ಸಕಲ ಸದಸ್ಯರ ಸಭೆಯು ನಿನ್ನೆ ಜರುಗಿ ಮುಂದಿನ ಸಾಲಿಗೆ ದಖ್ಖನ್ ಸಂಸ್ಥಾನಗಳ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶರಾದ ಶ್ರೀ|| ಎಸ್. ಎಸ್. ಲೋಕೂರ್‌ರವರು ಅಧ್ಯಕ್ಷರಾಗಿಯೂ, ಡಾ|| ಶ್ರೀ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು ಉಪಾಧ್ಯಕ್ಷರಾಗಿಯೂ ಶ್ರೀ|| ಸಿ. ಕೆ. ನಾಗರಾಜರಾಯರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿರುವರು

ಸೇವೆಯ ಫಲದಿಂದ ಉಪವಾಸದ ಹಕ್ಕು

ಕೋಮುವಾರು ಶಾಂತಿಗಾಗಿ ಹೊರಟಿರುವ ಜಂಟಿ ಹೇಳಿಕೆಗೆ ನಾವು ರುಜು ಹಾಕಿರುವುದರಿಂದ ಕರ್ತವ್ಯ ಭಾರವನ್ನು ನಿರ್ವಹಿಸಲು ಆಮರಣಾಂತ ಉಪವಾಸವನ್ನು ಕೈಕೊಳ್ಳಬೇಕಾಗುವುದೆಂದು ಮ. ಗಾ. ಕೃ. ತಿಳಿಸಿರುವರು ತಿಳಿಸಿದ್ದಾರೆ. ಇದುವರೆಗೆ, ಹಿಂದೂ ಮತ್ತು ಮುಸ್ಲಿಮರಿಗೆ ಸಲ್ಲಿಸಿರುವ ಸೇವೆಯಿಂದ ನಾವು ಉಪವಾಸ ಮಾಡುವ ಹಕ್ಕನ್ನು ಪಡೆದಿರುವುದಾಗಿ ಅವರು ಹೇಳಿದ್ದಾರೆ. ಬ್ರಿಟಿಷರಿಗೆ ಈಗಿರುವ ಕೆಲಸವೆಂದರೆ, ಅವರು ಇದನ್ನು ಬೇಗ ಭಾರತದಿಂದ ಹೊರಡುವುದು. ಅವರು ಅದನ್ನು ಮಾಡಿದ ಮೇಲೆ ಎಲ್ಲ ವಿಷಯಗಳನ್ನೂ ನಾವೇ ಸಹೋದರ ಭಾವದಿಂದ ಇತ್ಯರ್ಥ ಮಾಡಿಕೊಳ್ಳಬಹುದು— ಎಂಬುದಾಗಿ ಅವರು ತಿಳಿಸಿದ್ದಾರೆ.

ಜಿನ್ನಾರವರ ಘೋಷಣೆ ಸದ್ಭಾವನೆಯಿಂದ ಕೂಡಿದೆ

ಡಾ|| ರಾಜೇಂದ್ರ ಪ್ರಸಾದರ ಅಭಿಪ್ರಾಯ

ಸ್ವಂ ಸು.ಪ್ರೋ] ಬೆಂಗಳೂರು ೧೦

ಬಾಬು ರಾಜೇಂದ್ರ ಪ್ರಸಾದರು ಈ ದಿನ ಕಾಂಗ್ರೆಸ್ ಕಚೇರಿಗೆ ಭೇಟಿಯಿತ್ತು ಕೆಲ ಸಂಗಾರರನ್ನು ದ್ದೇಶಿಸಿ ಭಾಷಣ ಮಾಡಿದರು. ಜಿನ್ನಾರವರು ಇತ್ತೀಚೆಗೆ ಹೊರಡಿಸಿರುವ ಘೋಷಣೆಯು ಸದ್ಭಾವನೆಯಿಂದ ಕೂಡಿದೆಯೆಂದೂ ಮುಂದೆ ಶಾಂತಿಯಿಂದ ಅದರ ಪರಿಣಾಮವನ್ನು ಕಾದು ನೋಡಬೇಕೆಂದೂ ಹೇಳಿದರು. ಮೈಸೂರು ಕಾಂಗ್ರೆಸ್ಸು ಸುವ್ಯವಸ್ಥಿತವಾಗಿ ಬೆಳೆದು ಜನಜಾಗ್ರತಿಯನ್ನುಂಟು ಮಾಡಿರುವುದನ್ನು ಪ್ರಶಂಸಿಸಿದರು. ಕಾಂಗ್ರೆಸ್ಸಿನ ಕೋರಿಕೆಯಾದ ಜವಾಬ್ದಾರಿ ಸರ್ಕಾರವು ಸಾಧುವಾದುದೆಂದೂ, ಸರ್ಕಾರದವರು ಅದನ್ನು ಉಪೇಕ್ಷಿಸಿದರೆ ಸತ್ಯಾಗ್ರಹವು ಅನಿವಾರ್ಯವೆಂದೂ ಸೂಚಿಸಿದರು. ಮೈಸೂರು ಸಂಸ್ಥಾನವು ರಾಜ್ಯಾಂಗ ಸಭೆಗೆ ಸೇರುವುದು ಯುಕ್ತವೆಂದು ಅಭಿಪ್ರಾಯಪಟ್ಟರು

ಬಂಗಾಳಾ ಪುಂಡರುಗಳ ಸಾಮೂಹಿಕ ವಿಚಾರಣೆ

ಬಂಗಾಳದ ಢಾಕ್ಕಾ, ಮೈಮೆನ್‌ಸಿಂಗ್ ಫರೀದ್‌ಪುರ್ ಮುಂತಾದ ಜಿಲ್ಲೆಗಳಲ್ಲಿ ಅನೇಕ ದರೋಡೆಗಳನ್ನು ಮಾಡಿದರೆಂಬ ಆಪಾದನೆ ಮೇಲೆ ೫೦ ಜನರು ಸಾಮೂಹಿಕ ವಿಚಾರಣೆಗೆ ಗುರಿಯಾಗಿದ್ದಾರೆ. ಈ ಸಂದರ್ಭದಲ್ಲಿ ಸುಮಾರು ೧೨೭೮ ಮಂದಿಯ ಸಾಕ್ಷ್ಯವನ್ನು ತೆಗೆದುಕೊಳ್ಳಲಾಗುವುದು. ವಿಚಾರಣೆಯು ಒಂದು ವರ್ಷಕ್ಕಿಂತ ಹೆಚ್ಚು ಕಾಲವು ಹಿಡಿಯುವುದೆಂದು ವರದಿಯಾಗಿದೆ

ಐರೋಪ್ಯ ಉಡುಪಿಗೆ ಬಹಿಷ್ಕಾರ

ಗ್ಲೋಬ್], ಲಂಡನ್ ೬

ಐರೋಪ್ಯ ವ್ಯಾಪಾರಸ್ಥರು ಸಾಮಾನುಗಳಿಗೆ ದುಬಾರಿ ಬೆಲೆಯನ್ನು ತೆಗೆದುಕೊಳ್ಳುತ್ತಿರುವುದಕ್ಕಾಗಿಯೂ ಮತ್ತು ತಮ್ಮ ಸಂಘಗಳನ್ನು ನಿಷೇಧಿಸಿರುವುದಕ್ಕಾಗಿಯೂ, ತಮ್ಮ ಪ್ರತಿಭಟನೆಯನ್ನು ತೋರಿಸಲು ದ|| ಆಫ್ರಿಕದ ನೈಜೀರಿಯಾ ದೇಶದ ಸಿವಿಲ್ ಅಧಿಕಾರಿಗಳು ಐರೋಪ್ಯ ಉಡುಪು ಧರಿಸುವುದನ್ನು ತ್ಯಜಿಸಲು ಆರಂಭಿಸಿದ್ದಾರೆ

ಅಪಪ್ರಚಾರದ ಖಂಡನೆಯೋ?

೨೪-೪-೪೭ ರ 'ಸಾಧ್ವಿ' ಪತ್ರಿಕೆಯಲ್ಲಿ ೫ ಮಂದಿ ರುಜು ಮಾಡಿ ಪ್ರಕಟಿಸಿದ್ದ "ಅಪಪ್ರಚಾರದ ಖಂಡನೆ" ಎಂಬ ಲೇಖನಕ್ಕೆ ಪ್ರತ್ಯುತ್ತರವಾಗಿ ಮೈಸೂರು ನಗರದ ಪಿಳ್ಳೆ ಮೊಹಲ್ಲಾ ಶ್ರೀ|| ಶಿವರುದ್ರಪ್ಪನವರು ದೀರ್ಘವಾದ ಹೇಳಿಕೆಯನ್ನು ಮುದ್ರಿಸಿ ಪ್ರಕಟನೆಗಾಗಿ ಕಳುಹಿಸಿದ್ದಾರೆ. ಅದು ಬಹಳ ದೊಡ್ಡದಾಗಿರುವುದರಿಂದ ಸ್ಥಳಾಭಾವದ ಸಲುವಾಗಿ ಅದನ್ನು ಪ್ರಕಟಿಸಲು ಸಾಧ್ಯವಿಲ್ಲವಾಗಿದೆ

ಪ್ಯಾಲೆಸ್ಟೈನ್ ಸ್ವಾತಂತ್ರ್ಯಕ್ಕೆ ರಷ್ಯದ ಬೆಂಬಲ

ಪ್ಯಾಲೆಸ್ಟೈನಿನ ಸ್ವಾತಂತ್ರ್ಯವು ಎಲ್ಲಕ್ಕಿಂತಲೂ ಮುಖ್ಯವಾದುದು ಎಂಬುದಾಗಿ ವಿಶ್ವಸಂಸ್ಥೆಯಲ್ಲಿ ರಷ್ಯದ ಪ್ರತಿನಿಧಿಯಾಗಿರುವ ಗ್ರೋಮಿಕೋರವರು ಹೇಳಿದ್ದಾರೆ. ಆ ದೇಶದ ಸಮಸ್ಯೆಗೆ ಸಂಬಂಧಪಟ್ಟ ಅಂಶಗಳನ್ನು ಸಂಗ್ರಹಿಸಲು ನೇಮಕವಾಗಿರುವ ಸಮಿತಿಯು ಪ್ಯಾಲೆಸ್ಟೈನಿನಲ್ಲಿ ಬ್ರಿಟಿಷ್ ಆಡಳಿತವನ್ನು ಕೊನೆಗಾಣಿಸಿ ಸ್ವಾತಂತ್ರ್ಯವನ್ನು ನಿರ್ಧರಿಸುವ ವಿಷಯಗಳನ್ನು ಪರಿಶೀಲಿಸಬೇಕು - ಎಂಬುದಾಗಿ ಅವರು ಸೂಚಿಸಿದ್ದಾರೆ

ಮಂಡ್ಯದಲ್ಲಿ ಆನೆಕಲ್ಲು ಮಳೆಯಿಂದ ಅನಾಹುತ

ಮಂಡ್ಯ ಮತ್ತು ಅದರ ಸುತ್ತ ಮುತ್ತಲಿನ ಕೆಲವು ಗ್ರಾಮಗಳಲ್ಲಿ ಮೊನ್ನೆ ಸಂಜೆ ಬಿರುಗಾಳಿ ಮತ್ತು ಮಳೆಯು ೩೦ ನಿಮಿಷಗಳ ಕಾಲ ಸುರಿದು ಆನೆಕಲ್ಲಿನ ಏಟಿನಿಂದ ೫೦ ಮಂದಿಗೆ ಏಪರೀತ ಗಾಯಗಳಾಗಿವೆ. ಕಟ್ಟಡಗಳ ಮೇಲ್ಛಾವಣಿಗಳು ಹಾಳಾಗಿ ಹೋಗಿವೆ. ಮರಗಿಡಗಳು ಉರುಳಿವೆ. ಈ ಮಳೆಯ ಪೆಟ್ಟಿಯಿಂದ ಸುಮಾರು ೧೦ ಸಹಸ್ರ ರೂ. ನಷ್ಟ ಸಂಭವಿಸಿರಬಹುದೆಂದು ಅಂದಾಜು ಮಾಡಲಾಗಿದೆ. ಮಂಡ್ಯ ಹೋಟೆಲು ಮುಂಭಾಗ ಮೇಲ್ಛಾವಣಿಯು ಎರಡು ಫರ್ಲಾಂಗುಗಳ ಆಚೆ ಹಾರಿಬಿದ್ದಿದೆ. ಟ್ರಾವೆಲರ್ಸ್ ಬಂಗಲೆಯ ಮೇಲ್ಛಾವಣಿಯ ಹೆಂಚುಗಳು ಹಾಳಾಗಿ ಹೋಗಿವೆ. ಪೇಟೆಯ ಅಂಗಡಿಯ ಮೇಲಿನ ತಗಡು ಪೀಸು ಬಿದ್ದು ಒಬ್ಬನಿಗೆ ಮೂಗು ಪೂರ್ತಾ ಕತ್ತರಿಸಿಹೋಗಿದೆ

ವಂಗ ವಿಭಜನೆ ತಪ್ಪಿಸಲು ಕಾಂ|| ಮತ್ತು ಲೀಗ್ ಯತ್ನ

ಬಂಗಾಳ ಪ್ರಾಂತ್ಯವು ವಿಭಾಗವಾಗುವುದನ್ನು ತಪ್ಪಿಸಿ ಅಲ್ಲಿನ ಸಮಸ್ಯೆಯನ್ನು ಪರಿಹರಿಸಲು ಕಾಂಗ್ರೆಸ್ ಮತ್ತು ಲೀಗ್ ನಾಯಕರು ಪ್ರಯತ್ನ ಪಡುತ್ತಿರುವರೆಂಬ ವಾರ್ತೆಯು ಕಲ್ಕತ್ತಾ ಮತ್ತು ದೆಹಲಿಯಿಂದ ಬಂದಿರುತ್ತದೆ. ಈ ಪ್ರಯತ್ನದ ಫಲವಾಗಿಯೇ ನಾಯಕರು ಅಲ್ಲಿಗೆ ಈಗ ಭೇಟಿಯಿತ್ತಿರುವರೆಂದು ತಿಳಿದು ಬಂದಿದೆ. ಬಂಗಾಳ ಪ್ರಧಾನಿಗಳಾದ ಮಿ|| ಸುಹ್ರವರ್ದಿಯವರ ಮನೆಯಲ್ಲಿ ಈ ಬಗ್ಗೆ ಮಾತುಕತೆಗಳು ನಡೆಯುತ್ತಿರುವುದಾಗಿಯೂ ಹೇಳಲಾಗುತ್ತಿದೆ. ಗಾಂಧೀಜಿ ಮತ್ತು ಜಿನ್ನಾರವರ ಒಪ್ಪಿಗೆಯನ್ನು ಪಡೆದ ನಂತರವೇ ಒಂದು ನಿರ್ಧಾರಕ್ಕೆ ಬರಲಾಗುವುದೆಂದೂ ಗೊತ್ತಾಗಿದೆ.

ಅಮೆರಿಕಕ್ಕೆ ಈಜಿಪ್ಟಿನ ಯುದ್ಧ ಸಹಾಯ

ಗ್ಲೋಬ್] ಕೈರೋ ೬

ಮಾಸ್ಕೋ ಸಮ್ಮೇಳನವು ವಿಫಲವಾದುದನ್ನು ಪರಿಶೀಲಿಸಿ ಸಂಯುಕ್ತ ಸಂಸ್ಥಾನದ ಸ್ಟೇಟ್ ಇಲಾಖೆಯವರು ಈಜಿಪ್ಟ್ ಸರ್ಕಾರಕ್ಕೆ ಕೋರಿಕೆಯೊಂದನ್ನು ಕಳುಹಿಸಿದ್ದಾರೆಂದು ತಿಳಿದು ಬಂದಿದೆ. ಮುಂದೆ ಅಮೆರಿಕಾ, ಬ್ರಿಟನ್‌ಗಳ ಮೇಲೆ ಬೇರೆ ದೇಶವು ಯುದ್ಧ ಮಾಡಿದರೆ ಈಜಿಪ್ಟ್ ಮಿತ್ರಪಕ್ಷಗಳ ಪರವಾಗಿ ನಿಂತು ಸಹಕರಿಸುವುದೇ ಎಂಬ ಪ್ರಶ್ನೆಯನ್ನು ಅದರಲ್ಲಿ ಕೇಳಲಾಗಿದೆ

ಪರದೇಶೀಯರಿಗೆ ಈಜಿಪ್ಟಿನ ರಾಷ್ಟ್ರೀಯತೆ ಇಲ್ಲ

ಗ್ಲೋಬ್] ಕೈರೋ ೬

ಈಜಿಪ್ಟಿನಲ್ಲಿ ಪರದೇಶದವರಿಗೆ ಅಲ್ಲಿನ ರಾಷ್ಟ್ರೀಯತೆಯನ್ನು ಕೊಡುವುದು ಸರ್ಕಾರದ ನೀತಿಯಲ್ಲವೆಂದು ಪ್ರಧಾನಿ ನೊಕ್ರಾಸಿಸ್ ಪಾಷರವರು ಹೇಳಿಕೆಯೊಂದರಲ್ಲಿ ತಿಳಿಸಿರುವರು. ಅದರೆ ಪರದೇಶದವರಿಗೆ ಈಜಿಪ್ಟಿನಲ್ಲಿ ಹುಟ್ಟಿದ ಮಕ್ಕಳಿಗೆ ವಯಸ್ಸಿನ ಮೇಲೆ ರಾಷ್ಟ್ರೀಯತೆಯನ್ನು ಹೊಂದುವ ಹಕ್ಕುಂಟು. ಈಜಿಪ್ಟಿನಲ್ಲಿ ವಾಸವಾಗಿರುವ ಪರದೇಶೀಯರಿಗೆ ಯಾವ ಪ್ರತಿಬಂಧಕವೂ ಇರುವುದಿಲ್ಲ.

೨೩ ಪ್ರತಿಮೆಗಳು ಸಿಕ್ಕಿವೆ

ಕಲ್ಕತ್ತೆಯ ಅಲ್ಪೋರ ಗ್ರಾಮದಲ್ಲಿ ಭೂಸಂಶೋಧನೆ ನಡೆದಾಗ ವಿವಿಧ ಲೋಹಗಳ ೨೩ ಪ್ರತಿಮೆಗಳು ಸಿಕ್ಕಿವೆಯೆಂದು ವರದಿಯಾಗಿದೆ. ಅವು ಜೈನ ಮತ್ತು ಬೌದ್ಧಮತದ ಮೂರ್ತಿಗಳೆಂದು ಹೇಳಲಾಗಿದೆ. ಇವು ಎಂಟು ಬೇರೆ ಬೇರೆ ಲೋಹಗಳಿಂದ ಕೂಡಿ ೧೧ ರಿಂದ ೧೮ ಅಂಗುಲಗಳ ಎತ್ತರ ಇವೆ

ವಿವಾಹ ಮಹೋತ್ಸವಗಳು

ನಂಜನಗೂಡು ಎಕ್ಸೈಸ್ ಆಫೀಸ್ ಅಕೌಂಟೆಂಟ್ ಶ್ರೀ|| ಪಿ. ಸುಬ್ರಹ್ಮಣ್ಯಯ್ಯನವರು ತಮ್ಮ ಕುಮಾರಿ ಗಾನಕೋಕಿಲ ಸೌ|| ರತ್ನಮ್ಮನವನ್ನು ಶ್ರೀ ನಾರಾಯಣ ಜೋಯಿಸರ ಕುಮಾರ ಎಂ. ಎನ್. ಕೃಷ್ಣಮೂರ್ತಿಯವರಿಗೂ, ಶ್ರೀ ಕೆ. ಜಿ. ಶೇಷಗಿರಿರಾಯರು ತಮ್ಮ ಕುಮಾರಿ ಚೌ|| ಮಂಜುಳಾದೇವಿಯನ್ನು ಕೆ. ವಿ. ಅನಂತರಾಮಯ್ಯನವರ ಕುಮಾರ ಕೆ. ಎ. ವೆಂಕಟಸುಬ್ಬರಾಯರಿಗೂ ಕೊಟ್ಟು ಈ ದಿನ ಮೈಸೂರಿನ ರಾಮಮಂದಿರ ವಿದ್ಯಾಪೀಠ ನಿಲಯದಲ್ಲಿ ವಿಜೃಂಭಣೆಯಿಂದ ನೆರವೇರಿಸಿದರು.

ಸಾಧ್ವಿ
ತಾ|| ೧೧-೫-೪೭ ಭಾನುವಾರ

ರಾಜೇಂದ್ರ ಬಾಬುಗಳ ಹಿತೋಪದೇಶ

ಬೆಂಗಳೂರಿಗೆ ಭೇಟಿಯಿತ್ತಿರುವ ಡಾಕ್ಟರ್ ರಾಜೇಂದ್ರ ಪ್ರಸಾದರು ಕಾಂಗ್ರೆಸ್ ಕೆಲಸಗಾರರನ್ನು ಕುರಿತು ಹೇಳಿದ ಮಾತುಗಳು ಸರ್ಕಾರದವರಿಗೂ, ಸಂಸ್ಥಾನದ ಪ್ರಜೆಗಳಿಗೂ, ಅತ್ಯಂತ ಹಿತಕಾರಿಯಾಗಿರುತ್ತವೆ ಉಭಯತ್ರರೂ ಅವಕ್ಕೆ ಸಂಪೂರ್ಣ ಮನ್ನಣೆಯಿತ್ತು ಅದರಂತೆ ನಡೆದುಕೊಂಡರೆ ಸಕಲರಿಗೂ ಕ್ಷೇಮವುಂಟಾಗುವುದರಲ್ಲಿ ಸಂದೇಹವಿಲ್ಲ

ಮೈಸೂರು ಸಂಸ್ಥಾನವು ವಿಶೇಷ ಪ್ರಗತಿಪರವಾದ ಪ್ರಾಂತವಾಗಿರುತ್ತದೆ ಮೇಧಾವಿಗಳೂ, ದೇಶಾಭಿಮಾನಿಗಳೂ ಆದ ದಿವಾನರುಗಳು ಇಲ್ಲಿ ಅನೇಕ ಅಭಿವೃದ್ಧಿಕಾರ್ಯಗಳನ್ನು ಕೈಗೊಂಡು ಈ ಸಂಸ್ಥಾನವು ಇತರ ಪ್ರದೇಶಗಳಿಗೆ ಮಾದರಿಯಾಗುವಂತೆ ಮಾಡಿದ್ದಾರೆ ಮುಂದೆ ಭರತಖಂಡದ ಪುನರ್ರಚನೆಯಲ್ಲಿಯೂ ಸಹ ಮೈಸೂರು ಉಚಿತವಾದ ಪಾತ್ರವನ್ನು ವಹಿಸಿ ತನ್ನ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ ಎಂದು ಡಾಕ್ಟರ್ ಪ್ರಸಾದರು ಹೇಳುತ್ತಾರೆ

ಕಾಲಧರ್ಮಕ್ಕೆ ಅನುಗುಣವಾಗಿ ಸಂಸ್ಥಾನದಲ್ಲಿ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರಬೇಕೆಂದೂ, ಮೈಸೂರು ಕೂಡಲೇ ಘಟನಾ ರಚನಾ ಸಭೆಯಲ್ಲಿ ಸೇರಬೇಕೆಂದೂ ಅವರು ತಿಳಿಸಿರುತ್ತಾರೆ ದಿವಾನರು ಇತ್ತೀಚಿಗೆ ಕೊಟ್ಟಿರುವ ಹೇಳಿಕೆಯು ಸದ್ಭಾವನೆಯಿಂದ ಕೂಡಿರುವುದೆಂದೂ, ಪ್ರಜೆಗಳ ಆಕಾಂಕ್ಷೆಯನ್ನು ಈಡೇರಿಸಲು ಇಲ್ಲಿನ ಪ್ರಭುತ್ವದವರು ಅಗತ್ಯವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ ಅವರು ತಿಳಿಸಿದರು.

ಮೈಸೂರು ಕಾಂಗ್ರೆಸ್ಸಿನವರೂ ಸಹ ಇದನ್ನು ಮನಗಂಡೇ ತಮ್ಮ ಆಂದೋಳನವನ್ನು ಸದ್ಯಕ್ಕೆ ನಿಲ್ಲಿಸಿರುತ್ತಾರೆ ಆದರೆ ದಿವಾನರ ಹೇಳಿಕೆಯಲ್ಲಿ ಪ್ರಜೆಗಳ ಕೋರಿಕೆಗಳ ಬಗ್ಗೆ ಸ್ಪಷ್ಟವಾದ ವಿವರಣೆಗಳು ಕಂಡುಬರುವುದಿಲ್ಲ ಆದುದರಿಂದಲೇ ಜನರ ಮನಸ್ಸಿನಲ್ಲಿ ಇನ್ನೂ ಸಂಶಯವೂ, ಅತೃಪ್ತಿಯೂ ಕಂಡುಬರುತ್ತವೆ ಕಾಂಗ್ರೆಸ್ಸಿನ ಪ್ರಗತಿ ಪಕ್ಷದವರು ಸತ್ಯಾಗ್ರಹವನ್ನು ಕೂಡಲೇ ಆರಂಭಿಸಬೇಕೆಂದೂ ಸಹ ಒತ್ತಾಯಪಡಿಸುತ್ತಿದ್ದಾರೆ

ಸಂಸ್ಥಾನದಲ್ಲಿ ಒಂದು ಜಗಿಯು ಜವಾಬ್ದಾರೀ ಸರ್ಕಾರ ಪದ್ಧತಿಯನ್ನು ಜಾರಿಗೆ ತರಲಾಗುವುದೆಂದು ದಿವಾನರು ಹೇಳಿರುವರು ಆದರೆ ಅದು ಎಷ್ಟು ಪುಟ್ಟಿನ ಜವಾಬ್ದಾರಿ ಎಂಬುವರ ಬಗ್ಗೆ ಇನ್ನೂ ಸಂಶಯವಿದ್ದೇ ಇರುತ್ತದೆ ಭಾರತ ರಾಷ್ಟ್ರಾಂಗ ಸಭೆಗೆ ಚುನಾಯಿತ ಪ್ರತಿನಿಧಿಗಳನ್ನು ಕಳುಹಿಸಲು ಇನ್ನೂ ಏರ್ಪಾಡುಮಾಡಿರುವುದಿಲ್ಲ ತಾತ್ಕಾಲಿಕ ಸರ್ಕಾರದ ಪ್ರಸ್ತಾಪವನ್ನೇ ದಿವಾನರು ಎತ್ತಿರುವುದಿಲ್ಲ ಈ ಕಾರಣಗಳಿಂದ ಹಲವು ತೀವ್ರಗಾಮಿಗಳುಮುನ್ನಡಿಯಿಟ್ಟು ಚಳುವಳಿಯನ್ನು ನಡೆಸಲೂ ಸಹ ಕಾತುರರಾಗಿದ್ದಾರೆ ಇದರ ಬಗ್ಗೆ ಬಾಬು ರಾಜೇಂದ್ರರು ತಮ್ಮ ಸಲಹೆಯನ್ನು ಕೊಟ್ಟಿರುತ್ತಾರೆ ಅಧಿಕಾರಿಗಳಿಗೆ ಎಲ್ಲಾ ಅವಕಾಶಗಳನ್ನು ಕೊಟ್ಟು, ಯಾವುದರಿಂದಲೂ ಪ್ರಯೋಜನವಾಗದಿದ್ದರೆ, ಬೇರೆ ವಿಧಿಯಿಲ್ಲದೆ ಕಟ್ಟಕಡೆಯ ಅಸ್ತ್ರವನ್ನು ಪ್ರಯೋಗಿಸಬೇಕೆಂದು ಹೇಳಿರುತ್ತಾರೆ.

ಪ್ರಸ್ತುತದಲ್ಲಿ ಎಲ್ಲ ಸಂಸ್ಥಾನಗಳಲ್ಲಿಯೂ ಮತ್ತು ಬ್ರಿಟಿಷ್ ಹಿಂದೂಸ್ಥಾನದಲ್ಲಿಯೂ ಸಹ ಪರಸ್ಪರ ಒಡಂಬಡಿಕೆಯಿಂದಲೇ ರಾಜಕೀಯ ಸಮಸ್ಯೆಗಳು ಇತ್ಯರ್ಥವಾಗುತ್ತಿವೆ ಬ್ರಿಟಿಷ್ ಸರ್ಕಾರದವರೂ ಬರುವ ವರ್ಷ ಭಾರತವನ್ನು ಬಿಟ್ಟು ಹೋಗುವುದಾಗಿ ಖಂಡಿತವಾಗಿಯೇ ಘೋಷಿಸಿರುತ್ತಾರೆ. ಹೀಗಿರುವಲ್ಲಿ ನಮ್ಮ ಸಂಸ್ಥಾನಗಳೂ ಸಹ ಪ್ರಜೆಗಳ ಇಂಗಿತವನ್ನು ಅರಿತು ಅವುಗಳಿಗೆ ಅನುಸಾರವಾಗಿ ವರ್ತಿಸುವುದು ಯುಕ್ತವಾಗಿದೆ ಬಾಬು ರಾಜೇಂದ್ರರ ಹಿತೋಪದೇಶವು ಸಂಸ್ಥಾನದ ಆಳರಸರ ಮತ್ತು ಪ್ರಜೆಗಳ ಮೇಲೆ ಪರಿಣಾಮವನ್ನುಂಟುಮಾಡಿ ಇಲ್ಲಿನ ರಾಜಕೀಯ ಸಮಸ್ಯೆಯು ಉಭಯತ್ರರಿಗೂ ಸಮಾಧಾನವಾಗುವಂತೆ ಇತ್ಯರ್ಥವಾಗಲು ಸಹಕಾರಿಯಾಗಲೆಂದು ಹಾರೈಸಬಹುದಲ್ಲವೇ ?

ಬೇಕಾಗಿದೆ

ಆಕರ್ಷಣೀಯವಾಗಿ ಪುಸ್ತಕ ರೂಪದಲ್ಲಿ ಪ್ರಕಟವಾಗುತ್ತಿರುವ " ತಮಾಷ " ವಾರ ಪತ್ರಿಕೆಯನ್ನು ಮೈಸೂರು ನಗರದಲ್ಲಿ ಹಂಚಲು ಸೋಲ್ ಏಜೆಂಟರು ಬೇಕಾಗಿದ್ದಾರೆ. ವಿವರಗಳಿಗೆ ತಮಾಷ ಕಾರ್ಯಾಲಯದಲ್ಲಿ ವೊಖ್ಖಾ ವಿಚಾರಿಸಿ.

ವ್ಯವಸ್ಥಾಪಕ, ' ತಮಾಷ '
ರಾಮಾನುಜ ರಸ್ತೆ, ಮೈಸೂರು.

ಕಲ್ಯಾಣಾ ಗ್ರಾಮಾಧಿಕಾರಿಗಳ ಪೋಟಿಗೆ ಇಮ್ಮಡಿಸಿತು

ಕಲ್ಯಾಣ ಸಂಸ್ಥಾನದಲ್ಲಿನ ಎಲ್ಲಾ ನೌಕರರಿಗೂ ತಾತ್ಕಾಲಿಕ ಪರಿಹಾರವನ್ನು ಕೊಡಲಾಗಿದೆ ಪೋಲೀಸ್, ಹವಾಲ್‌ದಾರ ಮತ್ತು ಸಿಪಾಯಿಗಳಿಗೆ ೩ ರೂ ಜಮಾದಾರರಿಗೆ ೪ ರೂ ಭತ್ತೆ, ಪ್ರಾಥಮಿಕ ಶಾಲಾ ಶಿಕ್ಷಕರು, ಕಾರಕೂನ ಮೊದಲಾದ ಮೇಲಿನ ವರ್ಗದ ಮತ್ತು ೧೦೦ ರೂಗಿಂತ ಕಡಿಮೆ ವೇತನವುಳ್ಳ ನೌಕರರಿಗೆ ೫ ರೂ ಭತ್ತೆ, ೧೦೦ ಕ್ಕಿಂತ ಹೆಚ್ಚಿದ್ದವರಿಗೆ ೨೦ ರೂ ಭತ್ತೆ ಕೊಡಲಾಗಿದೆ ಗ್ರಾಮಾಧಿಕಾರಿಗಳ ಪೋಟಿಗೆಯನ್ನು ಇಮ್ಮಡಿಯಾಗಿ ಹೆಚ್ಚಿಸಲಾಗಿದೆ ಸಂಸ್ಥಾನದ ರಾಜಕೀಯ ಪರಿಸ್ಥಿತಿ ಬದಲಾವಣೆಯಾಗುವುದರಿಂದ ತಾತ್ಕಾಲಿಕ ಪರಿಹಾರ ಕೊಡಲಾಗಿದೆಯೆಂದು ಅಲ್ಲಿನ ಮಹಾರಾಜರು ತಿಳಿಸಿದ್ದಾರೆ

ಹೈದರಾಬಾದಿನಲ್ಲಿ ಗಲಭೆ

ಸಿಕಂದರಾಬಾದಿನ ಲಾಲಗೂಡ ಪ್ರದೇಶದಲ್ಲಿ ಕೋಮುವಾರು ಗಲಭೆ ನಡೆದು ೪ ಜನರು ಸತ್ತರೆಂದು ವರದಿಯಾಗಿದೆ ಪೋಲೀಸರು ೨೭೭ ಮಂದಿಯನ್ನು ದಸ್ತಗಿರಿ ಮಾಡಿದ್ದಾರೆ ಆ ಪ್ರದೇಶಗಳಲ್ಲೆಲ್ಲಾ ಪೋಲೀಸ್ ಮತ್ತು ಮಿಲಿಟರಿ ಕಾವಲನ್ನು ಹಾಕಲಾಗಿದೆ ಸಮಾಜವಾದಿ ಮುಖಂಡರಾದ ಶ್ರೀ|| ಬಿ ಎಸ್ ಮಹದೇವ ಸಿಂಗ್ ರವರನ್ನು ರಕ್ಷಣಾ ಶಾಸನದಂತೆ ದಸ್ತಗಿರಿ ಮಾಡಲಾಗಿದೆ.

ಲಂಡನ್ನಿಗೆ ಚುಂದ್ರೀಗರ್

ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಿಗಳಾದ ಮಿ|| ಇಸ್ಮೈಲ್ ಚುಂದ್ರೀಗರ್‌ರವರು ಜಿನೀವಾ ನಗರದಲ್ಲಿ ನಡೆಯುವ ಅಂತರ್ರಾಷ್ಟ್ರೀಯ ವಾಣಿಜ್ಯ ಸಮ್ಮೇಳನದಲ್ಲಿ ಭಾರತದ ಪರವಾಗಿ ಭಾಗವಹಿಸುವ ನಿಯೋಗದ ನಾಯಕರಾಗಿ ಮೊನ್ನೆ ಲಂಡನ್ನಿಗೆ ಪ್ರಯಾಣಮಾಡಿದರು

ಷೇಕ್ ಅಬ್ದುಲ್ಲಾರವರ ಬಿಡುಗಡೆ ?

ಬಂಧನದಲ್ಲಿರುವ ಕಾಶ್ಮೀರದ ಪ್ರಜಾನಾಯಕರಾದ ಷೇಕ್ ಅಬ್ದುಲ್ಲಾರವರನ್ನು ಅಲ್ಲಿನ ಸರ್ಕಾರವು ಖುಲಾಸೆ ಮಾಡುತ್ತದೆಂದು ನಂಬಲರ್ಹವಾದ ಕಡೆಗಳಲ್ಲಿ ಹೇಳಲಾಗುತ್ತಿದೆ ಪ್ರಮುಖ ಕಾಂಗ್ರೆಸ್ ಮುಖಂಡರೊಬ್ಬರು ಆ ಸಂಸ್ಥಾನಕ್ಕೆ ಭೇಟಿಕೊಡುವ ಸಮಯದಲ್ಲಿ ಈ ಖುಲಾಸೆ ನಡೆಯುವುದೆಂದೂ ವರದಿಯಾಗಿದೆ

ಪೆಟ್ರೋಲು ರೇಷನ್ ಹೆಚ್ಚುವುದು

ಇನ್ನು ಮುಂದೆ ಈಗ ಕೊಡುತ್ತಿರುವುದಕ್ಕಿಂತಲೂ ೧೦ ರಷ್ಟು ಪೆಟ್ರೋಲನ್ನು ಹೆಚ್ಚಿಸಲಾಗುವುದು ೧೯೪೮ ರ ಜನವರಿ ವೇಳೆಗೆ ಪೆಟ್ರೋಲ್ ಮೇಲಿನ ಕಂಟ್ರೋಲನ್ನು ತೆಗೆದು ಹಾಕಲಾಗುವುದು — ಎಂದು ವರದಿಯಾಗಿದೆ.

Edited, printed and published by A. N. Nagaraja at the Sadhvi Press D S ... Road, Mysore.

RAJKAMAL

Morning Shows from 9-5 47 for 4 days daily at 10-30 a m

The Great Flamarion

with ERIC VON STROHEIM, MARY BETH HUGHES, DAN DUREYA Etc.

ಅಪೆರಾ ಟಾಕೀಸ್, ಮೈಸೂರು

೧೦ ೫ ೪೭ ರಿಂದ ೪ ನೇ ವಾರ

ರಾಜಕುಮಾರಿ

(ತಮಿಳು)

Morning Shows from 9-5-47

Swing Parade of 1946 and Fear

ಅಕ್ಕ, ತಂಗಿಯರಿಗೆ ಸ್ವಾಗತ !

ಸೌಭಾಗ್ಯ, ಸೌಂದರ್ಯ, ಸೊಗಸುಗಳಿಗೆ ಸಮ್ಮತವಾದ
ಬಳೆಗಳೂ,
ಅಂದ, ಚಂದ, ಅಲಂಕಾರಗಳಿಗೆ ಅತ್ಯುತ್ತಮವಾದ
ಗಿಬ್ಬಿಗಳೂ,
ಬಂಧು ಬಾಂಧವರಿಗೆ ಬಳುವಳಿ ಕೊಡುವ ಬಹುಮಾನದ ಸಾಮಾನುಗಳೂ ಸುಂದರವಾಗಿ,
ನಿಮಗಾಗಿ ಸಿದ್ಧವಾಗಿವೆ ಇಂದೇ ಬಂದು ಕೊಂಡುಹೋಗಿ
ನಾಳೆ ಬಂದು ನಿರಾಶರಾಗಬೇಡಿ

ಜಯಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸ್

ದೇವರಾಜ ಮಾರ್ಕೆಟ್, — — ಮೈಸೂರು.

11-5-17 ನೇ ತಾ|| ನಿಂದ ಜನಭರಿತವಾದ 2 ನೇ ವಾರ

ವುಡ್-ಲ್ಯಾಂಡ್ಸ್ ಟಾಕೀಸ್, ಮೈಸೂರು.

★ ' ನಾಮ್-ಇರುವರು ' ★ (ತಮಿಳು)

ಪ್ರತಿ ದಿನ ಮೂರು ಆಟಗಳು

ತಾರಾಗಣ ಟಿ ಆರ್ ಮಹಾಲಿಂಗಂ, ಟಿ ಎ ಜಯಲಕ್ಷ್ಮಿ ಮತ್ತು ಬೇಬಿಕಮಲ

ನಿಮಗೆ ಬೇಕಾಗುವಂಥಾದ ಅಥವಾ ನೀವು ಮಾರಬಹುದಾದ
ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ
ನಮ್ಮಲ್ಲಿ ವಿಚಾರಿಸಿ. :—
ಕೆ ಎಸ್ ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್,
ಶ್ರೀ ಕೃಷ್ಣ ಜ್ಯೂಯಲರಿ ಮಾರ್ಟ್,
ಅಶೋಕ ರಸ್ತೆ, ಮೈಸೂರು.
ಸ್ಥಾಪಿತ ೧೯೩೦ ಫೋನ್. ೪೧೧

ರಾಜಕಮಲ್, ಮೈಸೂರು

ತಾ|| ೯-೫-೪೭ ರಿಂದ ಮೂರನೇ ವಾರ-ಪ್ರತಿ ದಿನ ೩ ಆಟಗಳು.

' ಗೊಲ್ಲಭಾಮ ' (ತೆಲುಗು)

ಭೂಮಿಕೆ :—ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

ರೋ||. ನಂ. ೩೮೭ WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೧] ಸೋಮವಾರ ೧೨—೫—೪೭ [ಸಂಚಿಕೆ ೩೮

ಮುಖಂಡರುಗಳಿಗೆ ವೈಸರಾಯರ ಆಹ್ವಾನ

ರಾಜೇಂದ್ರ ಪ್ರಸಾದ್ ಮತ್ತು ಕೆ. ಸಿ. ರೆಡ್ಡಿ ಭೇಟಿ

ವಿಶೇಷ ವರದಿ] ಬೆಂಗಳೂರು ೧೨

ನಿನ್ನೆ ದಿನ ಮೈಸೂರು ಕಾಂ|| ಅಧ್ಯಕ್ಷರಾದ ಶ್ರೀ|| ಕೆ. ಚಂಗಲರಾಯ ರೆಡ್ಡಿಯವರು ದೆಹಲಿಯಿಂದ ಹಿಂದಿರುಗಿದರು. ಅವರು ಮುಕ್ಕಾಲು ಘಂಟೆಯ ಕಾಲ ಡಾ|| ರಾಜೇಂದ್ರ ಪ್ರಸಾದರೊಡನೆ ಮಾತುಕತೆ ನಡೆಸಿದರು. ಸಂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿದರು.

ಡಾ|| ರಾಜೇಂದ್ರರು ನಿನ್ನೆ ಬಸವನಗುಡಿಯ ರಾಜೇಂದ್ರ ಉದ್ಯೋಗಿಕ ಶಾಲೆಗೆ ಭೇಟಿಯಿತ್ತು ಅಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳನ್ನು ನೋಡಿ ಇದು ಹಿಂದೂಸ್ಥಾನಕ್ಕೆ ಮಾದರಿಯಾಗಿವೆಯೆಂದು ಸೂಚಿಸಿದರು. ಇತರ ಪ್ರಾಂತ್ಯಗಳೂ ಇದೇ ರೀತಿಯ ಶಾಲೆಗಳನ್ನು ಸ್ಥಾಪಿಸಬೇಕೆಂದು ಅಭಿಪ್ರಾಯ ಪಟ್ಟರು.

ನಿನ್ನೆ ಮಧ್ಯಾಹ್ನ ಅವರು ಪತ್ರಿಕೋದ್ಯೋಗಿಗಳ ಸಭೆಗೆ ಭೇಟಿಯಿತ್ತರು. ಇಂಗ್ಲಿಷ್ ಭಾಷೆಯ ಪತ್ರಿಕೆಗಳಿಗಿಂತಲೂ ದೇಶಭಾಷೆಯ ಪತ್ರಿಕೆಗಳು ಹೆಚ್ಚಾಗಿ ಪ್ರಜಾಸೇವೆ ಮಾಡಬಲ್ಲುವೆಂದು ಅವರು ತಿಳಿಸಿದರು. ಕೋಮುವಾರು ಶಾಂತಿಯನ್ನು ಕೆಲವು ಪತ್ರಿಕೆಗಳು ವಿರಸ ಸಮಾಚಾರ [illegible] ಹೇಳಿದರು. ಕೆಲವು ಪ್ರಶ್ನೆಗಳಿಗೆ ಉತ್ತರವನ್ನೂ ಸಹ ಕೊಟ್ಟರು.

ನಿನ್ನೆ ರಾತ್ರಿ ಡಾ|| ಪ್ರಸಾದರು ಮದರಾಸಿಗೆ ತೆರಳಿದರು. ಅಲ್ಲಿ ಮೂರು ದಿನಗಳಿದ್ದು ದೆಹಲಿಗೆ ಹೊರಡುವರು. ಅವರು ತಿರುವಾಂಕೂರು ಮತ್ತು ಕೊಚ್ಚಿ ಪ್ರವಾಸಗಳು ರದ್ದಾಗಿವೆ.

ಈ ದಿನ ಬೆಳಗ್ಗೆ ದಿವಾನರು ದೆಹಲಿಯಿಂದ ಹಿಂದಿರುಗಿದರು. ಈ ಮಧ್ಯಾಹ್ನ ಮಂತ್ರಿ ಮಂಡಲದ ಸಭೆ ಸೇರಿ ಪ್ರಜಾಪ್ರತಿನಿಧಿ ಸಭೆಯ ಆಯವ್ಯಯವನ್ನು ಪರಿಶೀಲಿಸುವುದು.

ದೇಶೀಯ ವಿದ್ಯಾಶಾಲೆಯಲ್ಲಿ ನಡೆಯುತ್ತಿದ್ದ ಸ್ವದೇಶೀ ವಸ್ತು ಪ್ರದರ್ಶನವು ನಿನ್ನೆ ಮುಕ್ತಾಯವಾಯಿತು. ರಾ|| ಬ|| ಬಿ. ಗರುಡಾಚಾರ್ಯರು ಅಧ್ಯಕ್ಷತೆ ವಹಿಸಿ ಬಹುಮಾನಗಳನ್ನು ಹಂಚಿದರು.

ಅಮೃತಸರದಲ್ಲಿ ೭ ಮಂದಿಯ ಸಜೀವ ದಹನ

ಅಮೃತಸರದಲ್ಲಿ ಮತ್ತೆ ಗಲಭೆ ಪ್ರಾರಂಭವಾಗಿದೆ. ಮರಣ ಹೊಂದಿದ ಮಗುವೊಂದರ ಅಂತ್ಯಕ್ರಿಯೆಗಳನ್ನು ಮುಗಿಸಿ ಸ್ಮಶಾನದಿಂದ ಹಿಂತಿರುಗುತ್ತಿದ್ದ ೧೨ ಮಂದಿಯ ಮೇಲೆ ಪುಂಡರು ಪೆಟ್ರೋಲನ್ನು ಸುರಿದು ಬೆಂಕಿ ಹಚ್ಚಿಸಿದರು. ಅವರ ಪೈಕಿ ೭ ಮಂದಿ ಜೀವಸಹಿತವಾಗಿ ದಹಿಸಿಹೋದರು. ಐವರು ತೀವ್ರ ಗಾಯಕ್ಕೊಳಗಾಗಿದ್ದಾರೆ. ನಗರದಲ್ಲಿ ೨೪ ಘಂಟೆಯ ಕರ್ಫ್ಯೂ ಜಾರಿಗೆ ತರಲಾಗಿದೆ.

ಸ|| ಪಟೇಲರ ಭೇಟಿಗೆ ನವನಗರದ ರಾಜರು

ಪಶ್ಚಿಮಭಾರತ ಮತ್ತು ರಜಪುಟಾಣಾ ಸಂಸ್ಥಾನಗಳು ಭಾರತ ರಾಜ್ಯಾಂಗ ಸಭೆಗೆ ಸೇರುವ ವಿಚಾರದಲ್ಲಿ ಮಾತುಕತೆ ನಡೆಸುವುದಕ್ಕಾಗಿ ಸ|| ಪಟೇಲರನ್ನು ಭೇಟಿಮಾಡಲು ನವನಗರದ ಮಹಾರಾಜರು ನಿನ್ನೆ ವಿಮಾನದಲ್ಲಿ ದೆಹಲಿಗೆ ಪ್ರಯಾಣಮಾಡಿದರು.

ಸಾಹಿತ್ಯ ಸಮ್ಮೇಳನಾಧ್ಯಕ್ಷರ ಪತ್ರಿಕಾ ಸಮ್ಮೇಳನ

ಸ್ವಂ ವ] ಹರಪನಹಳ್ಳಿ ೯

ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಈ ದಿನ ಸಮ್ಮೇಳನಕ್ಕೆ ಬಂದಿದ್ದ ಪತ್ರಿಕಾಕರ್ತರ ಸಭೆಯೊಂದನ್ನು ಕರೆದಿದ್ದರು. ತಾವು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರ ಬಳಿ ಪತ್ರಿಕಾ ವೃತ್ತಿಯನ್ನು ಅಭ್ಯಾಸಮಾಡಿ ಸಾಧ್ವಿ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದುದಾಗಿ ಅಧ್ಯಕ್ಷರು ತಿಳಿಸಿದರು. ತಮ್ಮ ಭಾಷಣದಲ್ಲಿ ಕೆಲವು ಪತ್ರಿಕೆಗಳ ಹೆಸರುಗಳು ಬಿಟ್ಟಿರುವುದಾಗಿಯೂ, ಅದಕ್ಕಾಗಿ ಕ್ಷಮಿಸಬೇಕೆಂದೂ ಕೋರಿದರು. ಅನಂತರ ಶ್ರೀ|| ಪಿ. ಬಸವನಾಳ, ಎಸ್. ಸಿ. ನಂದೀಮಠ, ಎಸ್. ಎಸ್. ಮಾಳವಾಡ ಮುಂತಾದವರು ಪತ್ರಿಕೆಗಳ [illegible] ವಿಷಯವಾಗಿ ಭಾಷಣ ಮಾಡಿದರು.

ವೈದಿಕ ಹಿಂದೂಗಳಿಗೆ ಸಜಾ

ಗ್ಲೋಬ್] ದೆಹಲಿ ೭

ಸ್ವತಂತ್ರ ಭಾರತದಲ್ಲಿ ವೈದಿಕ ಧರ್ಮವನ್ನು ಸಂರಕ್ಷಿಸುವ ಬಗ್ಗೆ ಪಂ|| ನೆಹರೂ ಮತ್ತು ಸ|| ಪಟೇಲರ ಮನೆ ಮುಂದೆ ಪಿಕೆಟಿಂಗ್ ನಡೆಸಿದ ೧೦ ಮಂದಿ ವೈದಿಕ ಹಿಂದೂಗಳಿಗೆ ತಲಾ ೫೦ ರೂ ದಂಡವನ್ನು ಇಲ್ಲಿನ ಮ್ಯಾಜಿಸ್ಟ್ರೇಟರು ವಿಧಿಸಿದರು. ಅವರುಗಳು ದಂಡವನ್ನು ಕೊಡಲು ನಿರಾಕರಿಸಿದುದರಿಂದ ೮ ದಿನಗಳು ಸಜಾ ಅನುಭವಿಸಲು ಕಾರಾಗೃಹಕ್ಕೆ ಕಳುಹಿಸಲ್ಪಟ್ಟರು.

(ಹಿಂದಿನ ಪುಟದಿಂದ ಮುಂದುವರಿದುದು)

ಲಾಭ, ಲಾಭ

ಮಕರ—ಆರೋಗ್ಯ ಉತ್ತಮ, ಮಾನಸಿಕ ಚಿಂತೆ ಹೆಚ್ಚು, ಧನಲಾಭ ಚೆನ್ನಾಗಿರುತ್ತದೆ, ಗೃಹದಲ್ಲಿ ಆರೋಗ್ಯ ಕೆಟ್ಟು ವೈದ್ಯರಿಗೆ ವೆಚ್ಚವೂ ಅಶಾಂತಿಯೂ ಹೆಚ್ಚುವುವು, ತಾ|| ೧೪, ೧೬ ಚಿಂತೆ.

ಕುಂಭ—ಪ್ರತ್ಯೇಕ ಸ್ಥಿತಿ ಉತ್ತಮ, ಧನಲಾಭ ಚೆನ್ನಾಗಿರುತ್ತದೆ, ಮಂಗಳ ಕಾರ್ಯಗಳು ವಿಶೇಷವಾಗಿ ಯಶಸ್ವಿಯಾಗಿ ನಡೆಯುವುವು, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ತಾ|| ೧೩, ೧೬ ಪ್ರವಾಸ ಚಿಂತೆ.

ಮೀನ—ಆರೋಗ್ಯ ಚೆನ್ನಾಗಿರುತ್ತದೆ, ಧನಲಾಭ ಉತ್ತಮ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಮಿತ್ರರಿಂದ ಸಹಾಯ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ|| ೧೩, ೧೪ ಲಾಭ, ಸಂತೋಷ.

ಅಲಹಾಬಾದಿನಲ್ಲಿ ಕಪಿ ಸೈನ್ಯದ ಧಾಳಿ

ಗ್ಲೋಬ್] ಅಲಹಾಬಾದ್ ೭

ಕೋತಿಗಳ ಗುಂಪೊಂದು ಅಲಹಾಬಾದಿನಲ್ಲಿ ಹೊಸ ವಿಧವಾದ ಶಾಸನ ಭಂಗವನ್ನು ಆರಂಭಿಸಿವೆ. ಇಲ್ಲಿನ ದಕ್ಷಿಣ ಭಾಗದ ನಿವಾಸಿಗಳು ಇವುಗಳ ಧಾಳಿಗೆ ತುತ್ತಾಗಿದ್ದಾರೆ. ಸುಮಾರು ೨೦೦ ಕಪಿಗಳು ಒಂದು ದಳವನ್ನು ರಚಿಸಿಕೊಂಡು ಸಾಮೂಹಿಕವಾಗಿ ಮುತ್ತಿಗೆ ಹಾಕುವುವು. ಹೆಂಚು ಹಾರಿದ ಮುಂತಾದುವೇ ಮುತ್ತಿಗೆಯ ಗುರಿಗಳು. ಶಸ್ತ್ರಗಳು ಅಟ್ಟಿಸಿಕೊಂಡು ಒಂದರೆ ಬಹಳ ಜಾಗರೂಕತೆಯಿಂದ ಅವು ವಾಪಸಾಗುವುವು. ಅವು ಬಹಳ ಶಿಸ್ತಿನಿಂದಿವೆ. ಇವುಗಳನ್ನು ಎದುರಿಸಲು ವಿಮಾನದಿಂದ ಬಾಂಬು ಹಾಕುವುದೊಂದೇ ಮಾರ್ಗವೆಂದು ಅಲ್ಲಿನ ಜನರು ಅಭಿಪ್ರಾಯಪಟ್ಟಿರುವರು. ಈ ಧಾಳಿಯಿಂದ ಸುಮಾರು ೫೦ ಸಹಸ್ರ ರೂ ನಷ್ಟ ಸಂಭವಿಸಿದೆಯೆಂದು ಹೇಳಲಾಗಿದೆ.

ಜರ್ಮನ್ ಅಣುಶೋಧಕರನ್ನು ಕಳುಹಿಸಲು ನಿರಾಕರಣೆ

ಗ್ಲೋಬ್] ಲಂಡನ್ ೭

ಅಣುಬಾಂಬು ಸಂಶೋಧಕನಾದ ಜರ್ಮನ್ ವಿಜ್ಞಾನಿ ಪ್ರೊ|| ಒಟ್ಟೊ ಹನ್ನರವರನ್ನು ಬ್ರಿಟಿಷ್ ಆಕ್ರಮಿತ ಪ್ರದೇಶದಿಂದ ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಸಲಹೆಗಾಗಿ ಕಳುಹಿಸಿಕೊಡಲು ಬ್ರಿಟಿಷ್ ಅಧಿಕಾರಿಗಳು ನಿರಾಕರಿಸಿದ್ದಾರೆ. ಅಣು ಬಾಂಬು ಪ್ರವೀಣರಾದ ಪ್ರೊ|| ವಾನ್‌ಲಾರವರೂ ಸಹ ಬ್ರಿಟಿಷ್ ಗಡಿ ಬಿಟ್ಟು ಹೋಗುವುದನ್ನೂ ಪ್ರತಿಬಂಧಿಸಲಾಗಿದೆ.

ಡೊಮಿನಿಯನ್ ಸ್ಥಾನ ಕೊಟ್ಟರೆ ಒಂದು ವಾರದಲ್ಲಿ ಶಾಂತಿ

ಈಗಿರುವ ತಾತ್ಕಾಲಿಕ ಸರ್ಕಾರಕ್ಕೆ ಬ್ರಿಟಿಷರು ಡೊಮಿನಿಯನ್ ಸ್ಥಾನ ಮಾನವನ್ನು ಕೊಟ್ಟು ಅಧಿಕಾರವನ್ನು ವಹಿಸಿ ವೈಸರಾಯರು ಹಿಂತಿರುಗಿದ್ದರೆ, ಆಗ್ಗೆ ಕೋಮುವಾರು ಗಲಭೆಯು ಸಮಾಪ್ತವಾಗಿ ಇನ್ನು ಒಂದು ವಾರದೊಳಗಾಗಿ ಶಾಂತಿ ನೆಲಸುವುದು. ಬ್ರಿಟಿಷರು ಹಾಗೆ ಮಾಡುವುದರಿಂದ ಅವರ ಸಮಾಧಾನಕ್ಕಾಗಿ ಕಳುಹಿಸಲು ಯಾ ಚಿಕ್ಕ ಪತ್ರಿಕೆ [illegible] ಪಟೇಲರು ಹೇಳಿದ್ದಾರೆ.

ಕಾಂಗ್ರೆಸ್, ಲೀಗ್ ಮತ್ತು ಸಿಖ್ ನಾಯಕರಿಗೆ ವೈಸರಾಯರ ಕರೆ

ಕಾಂಗ್ರೆಸ್, ಮುಸ್ಲಿಂ ಲೀಗ್ ಮತ್ತು ಸಿಖ್ ನಾಯಕರನ್ನು ದೆಹಲಿಗೆ ಇದೇ ೧೬ನೇ ತಾ|| ಶನಿವಾರ ಬೆಳಗ್ಗೆ ೧೦-೩೦ಕ್ಕೆ ಭೇಟಿಗಾಗಿ ವೈಸರಾಯರು ಆಹ್ವಾನಿಸಿದ್ದಾರೆ. ಭಾರತೀಯರಿಗೆ ಅಧಿಕಾರವನ್ನು ವರ್ಗಾಯಿಸುವ ಬಗ್ಗೆ ಬ್ರಿ|| ಸರ್ಕಾರವು ತಯಾರಿಸಿರುವ ಯೋಜನೆಯನ್ನು ಅವರು ನಾಯಕರ ಮುಂದೆ ಮಂಡಿಸುವರಾಗಿ ಹೇಳಲಾಗಿದೆ. ಪಂ|| ನೆಹರೂ, ಸ|| ಪಟೇಲ್, ಮಿ|| ಜಿನ್ನಾ, ಮಿ|| ಲಿಯಾಖತ್ ಅಲಿಖಾನ್, ಮತ್ತು ಸ|| ಬಲದೇವ ಸಿಂಗರಿಗೆ ಆಹ್ವಾನವನ್ನು ಕಳುಹಿಸಲಾಗಿದೆ. ಅಖಿಲ ನರೇಂದ್ರರ ಸಂಘದ ಸಮಿತಿಯ ಪ್ರತಿನಿಧಿಗಳನ್ನೂ ವೈಸರಾಯರು ಆ ದಿನ ಮಧ್ಯಾಹ್ನ ಭೇಟಿ ಮಾಡುವರು. ಪಂಜಾಬ್ ಮತ್ತು ಬಂಗಾಳವನ್ನು ವಿಭಜಿಸಿ ಭಾರತವನ್ನು ವಿಭಾಗಿಸಬೇಕೆಂದು ವೈಸರಾಯರು ಮಾಡಿರುವ ಸಲಹೆಯನ್ನು ಬ್ರಿ|| ಸರ್ಕಾರವು ಒಪ್ಪಿರುವುದೆಂದು ಹೇಳಲಾಗಿದೆ. ಇದು ಕಾರ್ಯರೂಪಕ್ಕೆ ಬರುವವರೆಗೆ ೨ ಕೇಂದ್ರ ತಾತ್ಕಾಲಿಕ ಸರ್ಕಾರಗಳಿರುವುವೆಂದೂ, ವೈಸರಾಯರ ಹೇಳಿಕೆ ಹೊರಬಿದ್ದ ಕೂಡಲೇ ಹಲವು ಪ್ರಮುಖ ಸಂಸ್ಥಾನಗಳು ರಾಜ್ಯಾಂಗ ಸಭೆಗೆ ಸೇರುವುದಾಗಿ ಘೋಷಿಸುವುವೆಂದೂ ವರದಿಯಾಗಿದೆ.

ಆಕ್ರಮಿತ ಜರ್ಮನಿಗೆ ಫ್ರಾಂಕ್‌ಫರ್ಟ್ ರಾಜಧಾನಿ

ಬ್ರಿಟಿಷ್ ಮತ್ತು ಅಮೆರಿಕಾ ಆಕ್ರಮಿತ ಜರ್ಮನಿಗೆ ಫ್ರಾಂಕ್‌ಫರ್ಟನ್ನು ರಾಜಧಾನಿಯನ್ನಾಗಿ ಮಾಡಲಾಗುವುದೆಂದು ಹೇಳಲಾಗಿದೆ.

ಪಂಢರಾಪುರದ ದೇವಾಲಯಕ್ಕೆ ಹರಿಜನರ ಪ್ರವೇಶ

ಪಂಢರಾಪುರದಲ್ಲಿರುವ ಪ್ರಖ್ಯಾತವಾದ ವಿಠೋಬ ದೇವಸ್ಥಾನಕ್ಕೆ ಹರಿಜನರನ್ನು ಬಿಡಬಹುದೆಂದು ಅಲ್ಲಿನ ಧರ್ಮದರ್ಶಿಗಳು ಒಮ್ಮತದಿಂದ ತೀರ್ಮಾನಿಸಿದ್ದಾರೆ. ಇದಕ್ಕಾಗಿ ಆಮರಣಾಂತ ಉಪವಾಸವನ್ನು ಆರಂಭಿಸಿದ್ದ ಸಾನೆ ಗುರೂಜಿಯವರು ಮೊನ್ನೆ ತಮ್ಮ ಉಪವಾಸವನ್ನು ಮುಕ್ತಾಯಗೊಳಿಸಿದರು.

ಬಟ್ಟೆ ಮತ್ತು ನೂಲಿನ ಹತೋಟಿ ವಜಾ?

ಮುಂದಿನ ತಿಂಗಳ ಪ್ರಾರಂಭದ ವೇಳೆಗೆ ಬಟ್ಟೆ ಮತ್ತು ನೂಲಿನ ಸಂಗ್ರಹಣ ಮತ್ತು ಹಂಚಿಕೆಯ ಮೇಲಿರುವ ಹತೋಟಿಯನ್ನು ಕೇಂದ್ರ ಸರ್ಕಾರದವರು ವಜಾ ಮಾಡಬಹುದೆಂದು ಗೊತ್ತಾಗಿದೆ. ಆದರೆ ಸಕ್ಕರೆ ಮತ್ತು ಧಾನ್ಯದ ಮೇಲಿನ ಹತೋಟಿ ಮುಂದುವರಿಯುವುದೆಂದು ಹೇಳಲಾಗಿದೆ.

ಜರ್ಮನ್ ಮಕ್ಕಳಿಗೆ ಕಮ್ಯೂನಿಸ್ಟ್ ಶಿಕ್ಷಣ

ಗ್ಲೋಬ್] ಲಂಡನ್ ೭

ರಷ್ಯನ್ ಆಕ್ರಮಿತ ಜರ್ಮನ್ ಕ್ಷೇತ್ರದಲ್ಲಿ ಜನರ ಸ್ವಭಾವನ್ನು ಪರಿವರ್ತಿಸುವುದರಲ್ಲಿರುವ ರಷ್ಯನರಿಗೆ ಒಪ್ಪು ಇಲ್ಲ. ಅವರುಗಳಿಗೆ ಕಮ್ಯೂನಿಸ್ಟ್ ಶಿಕ್ಷಣ ಕೊಡಲಾಗುತ್ತಿದೆಯೆಂದು ವರದಿಯಾಗಿದೆ. ಬರ್ಲಿನ್ನಿನಲ್ಲಿರುವ ೭ ಜರ್ಮನ್ ಶಿಕ್ಷಣ ಕೇಂದ್ರಗಳು ರಷ್ಯದ ಆಡಳಿತದ ಪ್ರಚಾರಕ್ಕಾಗಿ ಪುಸ್ತಕಗಳನ್ನು ತಯಾರಿಸುತ್ತಿವೆ.

ಸಾಧ್ವಿ

ತಾ॥ ೧೨-೫-೪೭ ಸೋಮವಾರ

ಹನುಮಂತಯ್ಯನವರನ್ನೂ ಬಿಡುಗಡೆ ಮಾಡಬೇಕು

ಕಾಶ್ಮೀರ ಸಂಸ್ಥಾನದ ಪ್ರಜಾ ಸಮ್ಮೇಳನದ ಅಧ್ಯಕ್ಷರಾದ ಷೇಕ್ ಅಬ್ದುಲ್ಲಾರವರನ್ನು ಬಿಡುಗಡೆ ಮಾಡಲು ಅಲ್ಲಿನ ಸರ್ಕಾರದವರು ತೀರ್ಮಾನಿಸಿರುವುದಾಗಿ ವರದಿಯಾಗಿದೆ. ಕಾಂಗ್ರೆಸ್ ನಾಯಕರೊಬ್ಬರು ಅಲ್ಲಿಗೆ ಸಧ್ಯದಲ್ಲಿಯೇ ಭೇಟಿ ಕೊಡುವಾಗ ಈ ಬಿಡುಗಡೆಯು ಆಗುವುದೆಂದು ಹೇಳಲಾಗಿದೆ. ಪ್ರಜೆಗಳ ಇಷ್ಟಾರ್ಥವನ್ನು ಈಡೇರಿಸಲು ಸರ್ಕಾರದವರಿಗೆ ಇರುವ ಸದ್ಭಾವನೆಯನ್ನು ಸೂಚಿಸಲು ಈ ರೀತಿ ಮಾಡಲಾಗುವುದೆಂದೂ ಸಹ ತಿಳಿದು ಬಂದಿದೆ.

ಷೇಕ್ ಅಬ್ದುಲ್ಲಾರವರು ಸಂಸ್ಥಾನದ ಪ್ರಜೆಗಳ ಚಳುವಳಿಯಲ್ಲಿ ದೊಡ್ಡ ಕ್ರಾಂತಿಯನ್ನೇ ಉಂಟುಮಾಡಿರುತ್ತಾರೆ. ತಮ್ಮ ಸಂಸ್ಥಾನದ ರಾಜರ ಮೂಲವನ್ನು ಬಯಲು ಪಡಿಸಿ ಕೇವಲ ಅಲ್ಪ ಪ್ರತಿಫಲಕ್ಕಾಗಿ ಅವರು ಬ್ರಿಟಿಷರಿಂದ ರಾಜ್ಯವನ್ನು ಪಡೆದುಕೊಂಡ ಅಂಶವನ್ನು ಹೊರಗೆಡಹಿದ್ದಾರೆ. ರಾಜರುಗಳ ಸಾರ್ವಭೌಮಾಧಿಕಾರವು ಪ್ರಜೆಗಳ ಪರಮಾಧಿಕಾರಕ್ಕೆ ಅಧೀನವಾಗಿರುವುದೆಂದು ಈಗ ಸಾರಲಾಗುತ್ತಿರುವ ಸಿದ್ಧಾಂತವನ್ನು ಅಬ್ದುಲ್ಲಾರವರು ಬಹಳ ದಿನಗಳ ಹಿಂದೆಯೇ ಪ್ರತಿಪಾದಿಸಿರುತ್ತಾರೆ. ಬ್ರಿಟಿಷರು ಹಿಂದೂಸ್ಥಾನವನ್ನು ಬಿಟ್ಟು ಹೋಗುವಂತೆ ಕಾಶ್ಮೀರದ ಅರಸರೂ ಸಹ ತಮ್ಮ ಅಧಿಕಾರವನ್ನು ಪ್ರಜೆಗಳಿಗೆ ಬಿಟ್ಟುಕೊಡಬೇಕೆಂದು ಅವರು ವಾದಿಸುತ್ತಿದ್ದಾರೆ.

ಅಬ್ದುಲ್ಲಾರವರ ಚಳುವಳಿಗಾಗಿ ಕಾಶ್ಮೀರದ ಅರಸರು ಅವರನ್ನೂ, ಅವರ ಅನುಯಾಯಿಗಳನ್ನೂ ಬಂಧಿಸಿ ಆ ಸಂಸ್ಥಾನದ ಜೈಲನ್ನು ಚಳ್ಳೋಲಕಲ್ಲೋಲವನ್ನುಂಟುಮಾಡಿ ಅನಂತರ ಸಂಧಿಕ ನೆಹರೂರವರನ್ನೂ ದಸ್ತಗಿರಿ ಮಾಡಿದ ಪ್ರಕರಣವು ಇತಿಹಾಸಪ್ರಸಿದ್ಧವಾಗಿದೆ.

ಇಂತಹ ಕ್ರಾಂತಿಕಾರಕ ಆಂದೋಳನಕ್ಕೆ ಕಾರಣ ಕರ್ತರಾದ ಷೇಕ್ ಅಬ್ದುಲ್ಲಾರವರ ಸಾಂಗ್ರ್ಯದಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದರೂ ಅವರನ್ನೇ ಅಖಿಲ ಭಾರತ ಸಂಸ್ಥಾನ ಪ್ರಜಾ ಸಮ್ಮೇಳನದ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಸಂಸ್ಥಾನದಲ್ಲಿ ಉಂಟಾಗಿರುವ ನವ ಜಾಗೃತಿಯು ಯಾವ ರೀತಿ ಪ್ರವಹಿಸುತ್ತಿದೆಯೆಂಬುದು ಇದರಿಂದ ವೇದ್ಯವಾಗುತ್ತದೆ.

ಕಾಶ್ಮೀರದ ರಾಜರ ಮೇಲೆ ಪ್ರತ್ಯಕ್ಷ ಹೋರಾಟವನ್ನು ಹೂಡಿದ್ದ ಷೇಕ್ ಅಬ್ದುಲ್ಲಾರವರನ್ನೇ ಅಲ್ಲಿನ ಸರ್ಕಾರದವರು ತಮ್ಮ ಸೌಹಾರ್ದದ ಗುರುತಾಗಿ ಬಿಡುಗಡೆ ಮಾಡಲಿರುವರು. ಹೀಗಿರುವಲ್ಲಿ ಕೇವಲ ರಾಜ್ಯಾಂಗ ರಚನೆಯಲ್ಲಿ ಮಾರ್ಪಾಡುಗಳನ್ನು ಸೂಚಿಸಿದ ನಮ್ಮ ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರನ್ನೂ ಸಹ ನಮ್ಮ ಸರ್ಕಾರದವರು ಮೇಲ್ಕಂಡ ಸಭೆಯ ಅಧಿವೇಶನಕ್ಕೆ ಮುಂಚಿತವಾಗಿಯೇ ಬಿಡುಗಡೆ ಮಾಡಿ ತಮ್ಮ ಸೌಹಾರ್ದವನ್ನೂ ಪ್ರಕಟ ಪಡಿಸುವುದು ಯುಕ್ತವಾಗಿರುವುದಲ್ಲವೇ?

ವಾರ ಭವಿಷ್ಯ

ತಾ॥ ೧೨-೫-೪೭ರಿಂದ ೧೮-೫-೪೭ರ ವರೆಗೆ

(ಶ್ರೀ ನಿತ್ಯಾನಂದಸ್ವಾಮಿಗಳಿಂದ)

ಮೇಷ—ಆರೋಗ್ಯ ಸಾಧಾರಣ, ಆದಾಯ ಕಡಿಮೆ, ಖರ್ಚು ಅಧಿಕ, ವ್ಯಾಪಾರ, ವ್ಯವಹಾರಗಳಲ್ಲಿ ಅಧಿಕಾರಿ ವರ್ಗದವರಿಂದ ಸಹಾಯ, ತಾ॥ ೧೨, ೧೪, ಲಾಭ, ಪ್ರವಾಸ

ವೃಷಭ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಕಡಿಮೆ, ಮಂಗಳಕಾರ್ಯಗಳಿಗಾಗಿ ಪ್ರವಾಸ, ವ್ಯಾಪಾರ, ವ್ಯವಹಾರಗಳಲ್ಲಿ ಶತ್ರುಗಳ ಕಿರುಕುಳ ಹೆಚ್ಚು, ತಾ॥ ೧೩, ೧೫ ಶಾಂತಿ, ಸಂತೋಷ

ಮಿಥುನ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ಬಂಧು ವರ್ಗದವರ ಆಗಮನ, ತಾ॥ ೧೪, ೧೬ ಚಿಂತೆ, ನಷ್ಟ.

ಕಟಕ—ಆರೋಗ್ಯ ಸಾಧಾರಣ, ಧನಲಾಭ ಕಡಿಮೆ, ಖರ್ಚು ಅಧಿಕ, ವ್ಯಾಪಾರಾದಿಗಳಲ್ಲಿ ನಷ್ಟ, ಪ್ರವಾಸದಿಂದ ಅಪಘಾತ, ಮಂಗಳಕಾರ್ಯಗಳಿಗಾಗಿ ವಿಶೇಷ ಖರ್ಚು, ತಾ॥ ೧೫, ೧೭ ಶಾಂತಿ, ಸಂತೋಷ, ಮಿತ್ರ ದರ್ಶನ.

ಸಿಂಹ—ಪ್ರಾಕೃತಿಕ ಸ್ಥಿತಿ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು, ಧನಲಾಭ ಕಡಿಮೆ, ಖರ್ಚು ಅಧಿಕ, ವ್ಯಾಪಾರದಲ್ಲಿ ಶತ್ರುಗಳಿಂದ ನಷ್ಟ, ಬಂಧುಗಳಿಂದ ತಿರಸ್ಕಾರ, ತಾ॥ ೧೪, ೧೬ ಸಾಧಾರಣ.

ಕನ್ಯಾ—ಆರೋಗ್ಯ ಸಾಧಾರಣ, ಕುಟುಂಬದ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಹೆಚ್ಚುತ್ತದೆ, ಆರ್ಥಿಕ ಸ್ಥಿತಿ ಸಾಧಾರಣವಾಗಿರುತ್ತದೆ, ವ್ಯಾಪಾರಾದಿಗಳಲ್ಲಿ ಪ್ರಗತಿ, ಪ್ರವಾಸದಿಂದ ಬಂಧು ದರ್ಶನ, ತಾ॥ ೧೫, ೧೭, ೧೮ ಲಾಭ, ಸಂತೋಷ.

ತುಲಾ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ವ್ಯಾಪಾರ, ವ್ಯವಹಾರಗಳಲ್ಲಿ ಮಿತ್ರರಿಂದ ಸಹಾಯ, ಧನಲಾಭ ಉತ್ತಮ, ಮಂಗಳಕಾರ್ಯಗಳಿಗಾಗಿ ವಿಶೇಷ ಧನ ವ್ಯಯ, ತಾ॥ ೧೩, ೧೪, ೧೬ ಅಶಾಂತಿ, ಚಿಂತೆ.

ವೃಶ್ಚಿಕ—ಪ್ರಾಕೃತಿಕ ಸ್ಥಿತಿ ಉತ್ತಮ, ಆರ್ಥಿಕ ಸ್ಥಿತಿ ಚಿಂತಾದಾಯಕ, ಉದ್ಯೋಗಾದಿಗಳಲ್ಲಿ ಅಧಿಕಾರಿ ವರ್ಗದವರಿಂದ ತಿರಸ್ಕಾರ, ಪ್ರವಾಸದಿಂದ ಅಶಾಂತಿ, ತಾ॥ ೧೨, ೧೫ ಲಾಭ, ಶಾಂತಿ.

ಧನಸ್ಸು—ಆರೋಗ್ಯ ಚೆನ್ನಾಗಿರುತ್ತದೆ, ಧನಾಭಾವ ಹೆಚ್ಚು, ವಿಶೇಷ ಪ್ರವಾಸ, ಶತ್ರುಗಳಿಂದ ಎಲ್ಲ ಕೆಲಸಗಳಲ್ಲೂ ಅಡಚಣೆ, ಏ ಕೃರಿಂದ ತಿರಸ್ಕಾರ, ತಾ॥ ೧೩, ೧೪

(ಹಿಂದಿನ ಪುಟವನ್ನು ನೋಡಿ)

(ಹಿಂದಿನ ಪುಟವನ್ನು ನೋಡಿ)

ಬೆಲೆ ಸುಲಭ

ರಬ್ಬರ್ ಬಳೆಗಳು, ಲೋಲಕ್ಕುಗಳು, ಬಿಚ್ಚೋಲೆಗಳು ಹೊಸದಾಗಿ ಬಂದಿವೆ.

ಪ್ರಭಾತ್ ಬ್ಯಾಂಗಲ್ ಸ್ಟೋರ್ಸ್,

೨೦೬, ಸಯ್ಯಾಜಿರಾವ್ ರಸ್ತೆ, ಮೈಸೂರು.

Edited, printed and published by A. R. Nagarajan at the Sadhvi Press D-Subbiah Road Mysore.

೧೧-೫-೪೭ ನೇ ತಾ॥ ನಿಂದ ಜನಭರಿತವಾದ 2 ನೇ ವಾರ

ಪ್ರುಡ್-ಲ್ಯಾಂಡ್ಸ್ ಟಾಕೀಸ್, ಮೈಸೂರು.

'ನಾವ್ರ್ರಿಬ್ಬರು' (ತಮಿಳು)

ಪ್ರತಿದಿನ ಮೂರು ಆಟಗಳು

ನಾಯಕರು:-ಟಿ ಆರ್. ಮಹಾಲಿಂಗಂ, ಟಿ ಎ ಜಯಲಕ್ಷ್ಮಿಮತ್ತು ಬೇಬಿಕಮಲ

ರಾಜಕಮಲ್, ಮೈಸೂರು

ತಾ॥ ೯-೫-೪೭ ರಿಂದ ಮೂರನೇ ವಾರ-ಪ್ರತಿ ದಿನ ೨ ಆಟಗಳು

'ಗೊಲ್ಲಭಾಮ' (ತೆಲುಗು)

ಭೂಮಿಕೆ:—ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

Office of the President,
City Municipal Council, Mysore.
Dated 9th May 1947.

No M 5 C-148/46-47

NOTIFICATION

Notice is hereby given to the inhabitants of the Mysore City Municipality that the Municipal Council have resolved to amend the Octroi Bye-law No. 17 relating to levy of duty on articles coming within the limits of the Municipality, so as to levy storage fees on playing cards and brushes of all varieties, as noted below. The levy of Octroi duty in respect of these has already been sanctioned in G. O. No L 4435-6 Ml 67-46-15 dated 27-9-46.

Add the following as item No 41 and 43 to Rule 17 of the Octroi Bye-laws and as 31 and 32 under exemptions thereof.

Item	Rate	Period
41 (1) Playing cards for each package case, bag or bale of 400 lbs or over the weight	0-4-0	per week or portion thereof
(2) If less than 400 lbs in weight	0-2-0	Do
42 (1) Brushes of all varieties for each package, case, bag or bale if 400 lbs and over in weight	0-4-0	Do
(2) If less than 400 lbs in weight	0-2-0	Do

Exemptions being 31 two brushes of each variety not exceeding six if brought for personal use of travellers or passengers.

32. One packet of playing cards if brought for bona fide personal use by travellers or passengers.

Any person having any objection in respect of the proposed amendment may prefer the same in writing to the undersigned within a month from the date of publication of this notification in the offical Gazette after which no objection will be received.

R. RAMACHANDRA RAO BHOMBORE
PRESIDENT.

ಪೋ. ನಂ. ೩೨೨ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೧೩—೫—೪೭ [ಸಂಚಿಕೆ ೨೩೫

ಪಂಜಾಬ್ ಪ್ರಾಂತ್ಯದಲ್ಲಿ ರಾಷ್ಟ್ರೀಯ ಭಾಗಗಳೇ ?

ಹಿಂಸೆಯನ್ನು ಅಡಗಿಸಲು ಹಿಂಸೆಯೇ ಅಸ್ತ್ರ

...ಗದ ಪರಿಸ್ಥಿತಿ ಬದಲಾಯಿಸುತ್ತಿದೆ. ...ನಮ್ಮ ಧೋರಣೆಯೂ ಮಾರ್ಪಾಟಾ...ಬೇಕು. ಆತ್ಮರಕ್ಷಣೆ ಮಾಡಿಕೊಳ್ಳುವ...ವಾಗಿ ಹಿಂಸೆಯನ್ನು ಹಿಂಸೆಯಿಂದಲೇ ...ಸಬೇಕು. ಕೋಮುವಾರು ಭೂತ...ವ್ನು ಎದುರಿಸಲು ಆಯುಧಪಾಣಿಗಳಾಗ...ಬೇಕು. ಬಂದೂಕದೇಟಿಗೆ ಬಂದೂ...ದಲೇ ಪ್ರತೀಕಾರ ಮಾಡಬೇಕು. ...ದಲ್ಲಿ ಪ್ರತಿಯೊಬ್ಬರೂ ಶಸ್ತ್ರಾಸ್ತ್ರಗಳ ...ಧರಿಸಬೇಕು. ಸರ್ಕಾರವು ಅದಷ್ಟು ...ಶಸ್ತ್ರಾಸ್ತ್ರಗಳನ್ನು ಒದಗಿಸಬೇಕು— ...ಬುದಾಗಿ ಸಂಯುಕ್ತ ಪ್ರಾಂತ್ಯದ ಶಾಸನ...ಸಭ್ಯರಾದ ಶ್ರೀ॥ ಪುರುಷೋತ್ತಮ ...ದಾಸ್ ಟಂಡನ್‌ರವರು ಸ್ವಯಂಸೇವಕ ...ಪೊಂದರಲ್ಲಿ ಭಾಷಣ ಮಾಡುತ್ತಾ ತಿಳಿ...ಸಿದರು

ಮೀನುಗಳ ಪ್ರಣಯ ಸಂಗೀತ

...ಮೇರಿಕದ ವಿಜ್ಞಾನಿಗಳು ಸಬ್ ಮೆ...ರಿನಲ್ಲಿ ಸಮುದ್ರದೊಳಗೆ ಪ್ರವೇಶಿಸಿ ...ಮೀನುಗಳು ಉಚ್ಚರಿಸುವ ಶಬ್ದಗಳನ್ನು ರಿ...ಕಾರ್ಡ್ ಮಾಡಿರುತ್ತಾರೆ ಮೀನುಗಳ ...ಪ್ರಣಯ ಸಂಗೀತವನ್ನು ಸಹ ಇದೇ ರೀತಿ ...ಮೈಕ್ರೋಫೋನಿನಿಂದ ರಿಕಾರ್ಡು ಮಾಡಿ...ದ್ದಾರೆಂದು ವರದಿಯಾಗಿದೆ.

ಚಲನಚಿತ್ರದಲ್ಲಿ ಪೋಪರು

ಕ್ರೈಸ್ತ ಜಗದ್ಗುರುಗಳಾದ ಪೋಪರು ...ದಲ್ಲಿ ಚಲನ ಚಿತ್ರ ವೊಂದರಲ್ಲಿ ಪಾ...ವಹಿಸುವರು ಸಿನಿಮಾಟೋಗ್ರಾಫ್ ಚಿ...ತ್ರ ತಯಾರಿಕಾ ಸಂಸ್ಥೆಯವರ "ಯುದ್ಧದ ...ನಂತರ ಯುದ್ಧ" ಎಂಬ ಚಿತ್ರದ ಕೊನೆ...ಯ ಭಾಗದಲ್ಲಿ ಇವರು ಕಾಣಿಸಿಕೊಂಡು ...ಶಾಂತಿಗಾಗಿ ಮನವಿ ಮಾಡಿಕೊಳ್ಳು...ವರು.

ಸಾಬುವು ಜೂಜಿನ ಕುದುರೆಯ ಮಾಲೀಕನಾಗುವನು

ಮೈಸೂರು ಸಾಬುವು ಜೂಜಿನ ಕುದುರೆ ...ಮಾಲೀಕನಾಗುವನೆಂದು ತಿಳಿದು ಬಂದಿದೆ ...ವನು ಮುಂದಿನ ತಿಂಗಳು ಹಲವು ಜೂಜ...ು ಕುದುರೆಗಳನ್ನು ಕೊಳ್ಳಲಿದ್ದಾನೆ. ಇವ...ನ ಕುದುರೆ ಜೂಜಿನ ಮೇಲೆ ಬಹಳ ಪ್ರೀತಿ

ಬಿಹಾರ್ ಅಗಸರ ಮುಷ್ಕರ

ಕಮ್ಮಿ ಕೊಡುತ್ತಿರುವ ವಾಷಿಂಗ್ ಸೋ...ಪನ್ನು ಹೆಚ್ಚು ಮಾಡಿ ಪ್ರತಿ ಅಗಸರಿ...ಗೆ ೩ ಸೇರು ಕೊಡದಿದ್ದರೆ ಮುಷ್ಕರವನ್ನು ...ಹೂಡುವುದಾಗಿ ಬಿಹಾರಿನ ಬೇಗುಸರಾಯ ...ಜಿಲ್ಲೆಯ ಅಗಸರು ಅಧಿಕಾರಿಗಳಿಗೆ ತಿಳಿಸಿ...ದ್ದಾರೆ

ಮುಖಂಡರ ಸಮ್ಮೇಳನ ಮುಂದುವರಿಯಿತು

ಮೇ ೧೭ ನೇ ತಾ॥ ಶನಿವಾರ ಕಾಂಗ್ರೆ...ಸ್, ಲೀಗ್ ಮತ್ತು ಸಿಖ್ ನಾಯಕರನ್ನು ...ಒಟ್ಟಿಗಾಗಿ ವೈಸರಾಯರು ಆಹ್ವಾನಿಸಿದ್ದ...ರು. ಆ ಸಮ್ಮೇಳನವನ್ನು ಜೂನ್ ೨ ...ನೇ ತಾ॥ ಗೆ ಮುಂದುವರಿಸಲಾಗಿದೆ ಲಂ...ಡನ್ನಿನಲ್ಲಾಗುತ್ತಿರುವ ರಾಜಕೀಯ ಸಮಾ...ಲೋಚನೆಗಳು ನಿರ್ದಿಷ್ಟವಾದ ಸ್ಥಿತಿಗೆ ಬಂ...ದಿಲ್ಲವಾದ ಕಾರಣದಿಂದ ಸಮ್ಮೇಳನವನ್ನು ...ಮುಂದೂಡಲಾಗಿದೆಯೆಂದು ವರದಿಯಾ...ಗಿದೆ

ಸದ್ಯದಲ್ಲೇ ಬ್ರಿಟಿಷ್ ಸರ್ಕಾರದ ಶ್ವೇತ ಪತ್ರ

ಭಾರತದ ವೈಸರಾಯರ ಪ್ರತಿನಿಧಿಗಳಾದ ಲಾರ್ಡ್ ಇಸ್ಮೆರವರು ಬ್ರಿಟಿಷ್ ಮಂತ್ರಿಮಂಡಲದೊಡನೆ ನಡೆಸುತ್ತಿರುವ ಚರ್ಚೆಯು ಇನ್ನು ಒಂದೆರಡು ದಿನಗಳಲ್ಲೇ ಮುಕ್ತಾಯವಾಗುವುದು ಅದಾದ ಕೂಡಲೇ ಬ್ರಿ॥ ಸರಕಾರವು ಒಂದು ಶ್ವೇತಪತ್ರವನ್ನು ಲಂಡನ್ ಮತ್ತು ದೆಹಲಿಗಳಲ್ಲಿ ಏಕಕಾಲದಲ್ಲಿ ಪ್ರಕಟಿಸುವುದೆಂದು ಹೇಳಲಾಗಿದೆ

ಸಕ್ಕರೆ ಹತೋಟಿ ಹೋಗುವುದೇ ?

ಕೇಂದ್ರ ಸರ್ಕಾರದ ಸಕ್ಕರೆ ಕಂಟ್ರೋಲರು ಸಕ್ಕರೆ ಮೇಲಿನ ಹತೋಟಿಯನ್ನು ತೆಗೆದು ಹಾಕುವ ಬಗ್ಗೆ ಅಭಿಪ್ರಾಯವನ್ನು ಕೂಡಲೇ ಕಳುಹಿಸಿಕೊಡುವಂತೆ ಪ್ರಾಂತ್ಯ ಸರ್ಕಾರಗಳನ್ನು ಕೇಳಿದ್ದಾರೆಂದು ತಿಳಿದು ಬಂದಿದೆ

ಭೂಮಿ ಒಳಗಿರುವುದನ್ನು ಪತ್ತೆ ಹಚ್ಚುವ ಹುಡುಗ

ದಕ್ಷಿಣ ಆಫ್ರಿಕದ ೧೭ ವರ್ಷ ವಯಸ್ಸಿನ ಹುಡುಗನೊಬ್ಬನು ತನ್ನ ವಿಶೇಷ ಅವಲೋಕನಾ ಶಕ್ತಿಯಿಂದ ಭೂಮಿಯೊಳಗಿರುವ ನೀರು, ಚಿನ್ನ, ಮತ್ತು ಇತರ ಲೋಹಗಳು ಇರತಕ್ಕ ಸ್ಥಳಗಳನ್ನು ಸುಲಭವಾಗಿ ಪತ್ತೆ ಹಚ್ಚುವನೆಂದು ಗೊತ್ತಾಗಿದೆ ಇವನನ್ನು ಒಬ್ಬ ಧಾರಿ ಬಂಡವಾಳಗಾರರು ಚಿನ್ನ ದೊರೆಯುವ ಸ್ಥಳವನ್ನು ಪತ್ತೆ ಹಚ್ಚಲು ಕೆಲಸಕ್ಕೆ ನೇಮಿಸಿಕೊಂಡಿದ್ದಾರೆ

ಅಧ್ಯಕ್ಷ ಚುನಾವಣೆ

ಸ್ವಂ ಸು] ನಂಜನಗೂಡು ೧೧

ಇಲ್ಲಿನ ಪುರಸಭೆಯ ಅಧ್ಯಕ್ಷ ಸ್ಥಾನಕ್ಕೆ ಹಾಲಿ ಉಪಾಧ್ಯಕ್ಷರಾಗಿರುವ ಶ್ರೀ ವೈ ಕೆ ಎಸ್ ಲಕ್ಷ್ಮಣಶೆಟ್ಟರು ಸ್ಪರ್ಧಿಸುವರೆಂದು ಗೊತ್ತಾಗಿದೆ

ಆಹಾರ ಇಲಾಖೆಯವರ ವರ್ತನೆ

ಸ್ವಂ ಸು] ಹಿರೀಸಾವೆ ೧೦

ಈ ಗ್ರಾಮದಲ್ಲಿ ಜನಗಳಿಗೆ ಸರಿಯಾಗಿ ರೇಷನ್ ದೊರೆಯದೆ ಬಹಳ ತೊಂದರೆಯಾಗುತ್ತಿದ್ದಾರೆ. ಇಲ್ಲಿಗೆ ಹೊಸದಾಗಿ ಬಂದಿರುವ ಫುಡ್ ಇನ್ಸ್‌ಪೆಕ್ಟರವರು ರೇಷನ್ ಕೇಳಲು ಹೋದವರಿಗೆ ಬೆದರಿಕೆ ಮಾತುಗಳನ್ನಾಡಿ ಕಳುಹಿಸುತ್ತಾರೆ ಮೇಲ್ಪಟ್ಟ ಅಧಿಕಾರಿಗಳು ಕೂಡಲೇ ಈ ವಿಚಾರಕ್ಕೆ ಗಮನಕೊಡಬೇಕಾಗಿದೆ.

ಪಂಜಾಬಿನಲ್ಲಿ ರಾಷ್ಟ್ರೀಯ ವಿಭಾಗಗಳು

ಪಂಜಾಬ್ ಪ್ರಾಂತ್ಯವನ್ನು ರಾಷ್ಟ್ರೀಯ ವಿಭಾಗಗಳಾಗಿ ಹಂಚುವ ಯೋಜನೆಯೊಂದನ್ನು ಕುರಿತು ಮೊನ್ನೆ ಸಿಮ್ಲಾದಲ್ಲಿ ವೈಸರಾಯ್, ಪಂ॥ ನೆಹರೂ ಮತ್ತು ಪಂಜಾಬ್ ಗೌರ್ನರಾದ ಇವಾನ್ ಜೆಂಕಿನ್ಸ್‌ರವರುಗಳು ಮಾತುಕತೆ ನಡೆಸಿದರು. ಅದರ ಪ್ರಕಾರ ಅಂಬಾಲಾ, ಜಲಂಧರ್ ಡಿವಿಜನ್‌ಗಳ ೧೩ ಜಿಲ್ಲೆಗಳೂ, ಮತ್ತು ಅಮೃತಸರ ಡಿವಿಜನ್ನೂ ಒಂದು ಭಾಗವಾಗುವುದು. ಇವು ಹಿಂದೂ ಮತ್ತು ಸಿಖ್ಖರ ಅಧೀನದಲ್ಲಿರುವುವು ಪಶ್ಚಿಮ ಭಾಗದ ೧೭ ಜಿಲ್ಲೆಗಳು ಮುಸ್ಲಿಮರ ಅಧಿಕಾರಕ್ಕೊಳಪಡುವುವು. ಈ ಎರಡು ಭಾಗಗಳೂ ಪ್ರತ್ಯೇಕ ಶಾಸನ ಸಭೆಗಳನ್ನೂ ಮಂತ್ರಿಮಂಡಲಗಳನ್ನೂ ಪಡೆದಿರುತ್ತವೆ. ಒಬ್ಬರೇ ಗೌರ್ನರ ಅಧೀನದಲ್ಲಿ ಈ ಎರಡು ಮಂತ್ರಿಮಂಡಲಗಳೂ ಇರುವುವು. ಗಡಿ ನಿಗದಿಗಾಗಿ ಒಂದು ಸಮಿತಿಯನ್ನು ನೇಮಿಸಿ ಅದರ ಕಾರ್ಯ ಪೂರ್ಣವಾದೊಡನೆಯೇ ಅಮೃತಸರದ ನಿರ್ಧಾರಕ್ಕೆ ಬರಲಾಗುವುದು ಆದರೆ ಈ ಸಲಹೆಯನ್ನು ಸಿಖ್ಖರು ತೀವ್ರವಾಗಿ ವಿರೋಧಿಸಿದ್ದಾರೆ ಈ ಬಗ್ಗೆ ಮಾತುಕತೆಗಳು ಇನ್ನೂ ಪೂರ್ಣವಾಗಿಲ್ಲವಿಲ್ಲ

ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ವಾರ್ಷಿಕ ಸಭೆ

ಮೈಸೂರು ಜಿಲ್ಲಾ ಸ್ಯಾನಿಟರಿ ಇನ್ಸ್‌ಪೆಕ್ಟರುಗಳ ಪ್ರಥಮ ವಾರ್ಷಿಕ ಸಭೆಯು ಮೊನ್ನೆ ಸಂಜೆ ನಡೆದು ಮುಂದಿನ ಸಾಲಿಗೆ ಶ್ರೀಗಳಾದ ಎ ಸುಬ್ಬರಾಜೇ ಅರಸಿನವರು ಅಧ್ಯಕ್ಷರಾಗಿಯೂ ಕೆ ಎಸ್ ಶ್ರೀನಿವಾಸ ಅಯ್ಯಂಗಾರ್ಯರು ಕಾರ್ಯದರ್ಶಿ ಖಜಾಂಚಿಗಳಾಗಿಯೂ ಚುನಾಯಿಸಲ್ಪಟ್ಟರು.

ಜೈ ಪ್ರಕಾಶ ನಿಧಿ

ಕರ್ನಾಟಕ ಪ್ರಾಂತ ವಿದ್ಯಾರ್ಥಿ ಕಾಂಗ್ರೆಸ್ಸು ಸಂಗ್ರಹಿಸಿರುವ ಜೈ ಪ್ರಕಾಶ ನಿಧಿಯ ಒಟ್ಟು ಲೆಕ್ಕವನ್ನು ಪರಿಶೀಲಿಸಿ ಪ್ರಕಟಿಸಬೇಕಾಗಿರುವುದರಿಂದ ಕರ್ನಾಟಕದ ವಿವಿಧ ಸ್ಥಳಗಳಲ್ಲಿ ನಿಧಿ ಸಂಗ್ರಹಿಸಿರುವ ವಿ॥ ಕಾಂ॥ ಅಂಗ ಸಂಸ್ಥೆಗಳೂ, ನಿಧಿ ಸಮಿತಿಗಳೂ, ಜಮಾ ಲೆಕ್ಕ ಪತ್ರಗಳನ್ನೂ, ಹಣವನ್ನೂ ಕೇಂದ್ರ ಕಛೇರಿಗೆ ಇದೇ ಮಾಹೆ ೨೦ನೇ ತಾ॥ ನೊಳಗೆ ಕಳುಹಿಸಕೊಡಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ಮಹಿಳೆಯರ ಮಹಾಶಕ್ತಿ

ಮಹಿಳಾ ಗೋಷ್ಠಿಯ ಅಧ್ಯಕ್ಷಿಣಿಯರ ಭಾಷಣ

ಸ್ವಂ ಸು.] ಹರಪನಹಳ್ಳಿ, ೧೦

ಸಾಹಿತ್ಯ ಸಮ್ಮೇಳನದ ಅಂಗವಾಗಿ ಮೊನ್ನೆ ನಡೆದ ಮಹಿಳಾ ಗೋಷ್ಠಿಯ ಅಧ್ಯಕ್ಷ ಪೀಠದಿಂದ ಭಾಷಣ ಮಾಡುತ್ತಾ ಶ್ರೀಮತಿ ಪಾರ್ವತಿದೇವಿ ಕೇಸರಿಯವರು ಈ ರೀತಿ ನುಡಿದರು:—

ಇಂದಿನ ಶಿಶುವು ಭಾವಿ ರಾಷ್ಟ್ರದ ನಾಗರಿಕ ಅಂದ ಮೇಲೆ ರಾಷ್ಟ್ರೋನ್ನತಿಗೆ ಕಾರಣರಾದ ಮಹಿಳೆಯರ ಶೀಲ ಸ್ವಭಾವಗಳು ಯಾವ ರೀತಿಯಲ್ಲಿರುವುವೋ ಅದರಂತೆ ಮುಂದಿನ ಸಂಗತಿಯೂ ಆಗುವುದೆಂಬುದು ಸರ್ವಸಮ್ಮತವಾಗಿದೆ ಭವಿಷ್ಯದ ಅಭಿವೃದ್ಧಿಗೆ ಕಾರಣರಾದ ಮಾತೆಯರು ವಿದ್ಯಾವಿನಯಸಂಪನ್ನೆಯರಾಗಿ, ವೀರಮಾತೆಯರಾಗಿ ಮೆರೆಯಬೇಕು. ಹಿಂದೆ ನಮ್ಮ ಮಹಿಳೆಯರು ವೀರಾಂಗನೆಯರಾಗಿ ಆದರ್ಶರಾಗಿದ್ದಾರೆ

ಸ್ತ್ರೀಯರು ದಾಸ್ಯವನ್ನು ಕಡಿದೊಗೆದು, ವಿದ್ಯಾವತಿಯರಾಗಿ, ಅರ್ಧಾಂಗಿಯರಾಗಿ, ವೀರ ಮಾತೆಯರಾಗಿ, ಭಾರತ ಮಾತೆಯ ಅಕ್ಕರೆಯ ಪುತ್ರಿಯರಾಗಿ ಮೆರೆಯಬೇಕು. ಸ್ತ್ರೀಯೆಂದರೆ ಅಬಲೆಯೆಂದು ಅವರನ್ನು ದಾಸ್ಯದಲ್ಲಿ ನೂಕಿ ಅಜ್ಞಾನಾಂಧಕಾರದಲ್ಲಿ ಮುಳುಗಿಸಿ, ವಿದ್ಯಾವಿಹೀನರಾದ ಪಶುಗಳನ್ನಾಗಿ ಮಾಡದೆ, ಅವರನ್ನು ದೇಶಾಭಿವೃದ್ಧಿಯ ಅನೇಕ ಕಾರ್ಯಗಳಿಗೆ ಸಹಾಯಕರಾಗುವಂತೆ ಸೌಲಭ್ಯ ಕೊಡಬೇಕು

ಜ್ಞಾನಾಭಿವೃದ್ಧಿಗೆ ಕಾರಣವಾದ ವಿದ್ಯೆಯು ಪುರುಷರಿಗೆ ಹೇಗೋ ಹಾಗೆ ಸ್ತ್ರೀಯರಾದ ನಮಗೆ ಪರಮ ಪ್ರಯೋಜನಕಾರಿ, ವಿದ್ಯೆ ಇಲ್ಲದೆ ಸಾಹಿತ್ಯವಿಲ್ಲ ಸಾಹಿತ್ಯವೇ ಜನ ಜೀವಾಳ, ಜನಜೀವನದ ಪಡಿನೆಳಲು ಮತ್ತು ಪ್ರತಿಬಿಂಬ. ಸಾಹಿತ್ಯ ಮತ್ತು ಜೀವನ ಸಮರಸವಾಗಿವೆ ಸಾಹಿತ್ಯದಿಂದಲೇ ಸ್ತ್ರೀ-ಪುರುಷರನ್ನು ದೇವತೆಗಳನ್ನಾಗಿ ಮಾಡಬೇಕು

ಸ್ತ್ರೀಯೆಂದರೆ ಶಕ್ತಿಯ ರೂಪ. ದೇವರುಗಳ ಕೂಡ ದೇವಿಯಾಗಿ ಅರ್ಧ ನಾರೀಶ್ವರನನ್ನು ಮಾಡಿರುವುದು ಸ್ತ್ರೀ ಶಕ್ತಿ ! ಸ್ತ್ರೀ ಮುನಿದರೆ ಮಾರಿಯಾಗಿ ಎದುರಾಳಿಯನ್ನು ಧ್ವಂಸ ಮಾಡುವುದು ಸ್ತ್ರೀ ಶಕ್ತಿ !! ಜಗದೀಶ್ವರನನ್ನು ಕಾಲ ಕೆಳಗೆ ಹಾಕಿ ತುಳಿದಿರುವುದು ಸ್ತ್ರೀ ಶಕ್ತಿ !!! ಪಾರ್ವತಿ, ಲಕ್ಷ್ಮಿ, ಸರಸ್ವತಿಯರಾಗಿ ಸ್ವರ್ಗವನ್ನು ರಚಿಸುವುದು ಸ್ತ್ರೀ ಶಕ್ತಿ. ಇಂತಹ ಶಕ್ತಿಗೆ ಮಿಗಿಲಾದ ಕಾರ್ಯವು ಯಾವುದೂ ಇಲ್ಲವೆಂದು ಧೈರ್ಯವಾಗಿ ಹೇಳಲು ಈಗಿನ ನಮ್ಮ ಶ್ರೇಷ್ಠ ಮಹಿಳೆಯರೇ ನಿದರ್ಶನರಾಗಿದ್ದಾರೆ ಕನ್ನಡ ನಾಡಿನ ಸರ್ವವಿಧವಾದ ಪ್ರಗತಿಗೆ ನಾವೆಲ್ಲರೂ ಟೊಂಕ ಕಟ್ಟಿ ದುಡಿಯೋಣ.

○ ಚಿದುಕಲ್ ನೇರಿಯ ಬಳಿ ಇರುವ ಮೀನಾಕ್ಷಿಪುರಂ ಎಂಬ ಪಲ್ಲಿಯಲ್ಲಿ ೩೭ ವರ್ಷ ವಯಸ್ಸಿನ ಮುಸ್ಲಿಂ ಯುವತಿಯು ಏಕಕಾಲದಲ್ಲಿ ೩ ಗಂಡು ಮಕ್ಕಳನ್ನು ಹೆತ್ತಿದ್ದಾಳೆ

ವಿವಾಹ ಮಹೋತ್ಸವ

ಸಾಲಿಗ್ರಾಮದ ಸಾಹುಕಾರ್ ಬೋರೇಗೌಡರ ತಮ್ಮ ಕುಮಾರ ಚಿ॥ ಬೋರೇಗೌಡರಿಗೆ ಮೈಸೂರು ಕಂಟ್ರಾಕ್ಟರ್ ಶ್ರೀ ಬೋರಯ್ಯನವರ ಕುಮಾರಿ ಸೌ॥ ಕಾಮಾಕ್ಷಮ್ಮನನ್ನು ತಂದುಕೊಂಡು ನಿನ್ನೆ ಕನ್ನೇಗೌಡನ ಕೊಪ್ಪಲಿನಲ್ಲಿ ವೈಭವದಿಂದ ವಿವಾಹ ಮಹೋತ್ಸವವನ್ನು ನೆರವೇರಿಸಿದರು.

ಸಾಧ್ವಿ

ತಾ|| ೧೩-೫-೪೭ ಮಂಗಳವಾರ

ವೈಸರಾಯರ ಸಂಧಾನ

ಬರುವ ವರ್ಷ ಬ್ರಿಟಿಷರು ಹಿಂದೂಸ್ಥಾನವನ್ನು ಬಿಟ್ಟು ತೆರಳುವುದಕ್ಕೆ ಪೂರ್ವಭಾವಿಯಾಗಿ ಭಾರತೀಯರಿಗೆ ಅಧಿಕಾರವನ್ನು ವರ್ಗಾಯಿಸುವ ಮಾರ್ಗದ ವಿಚಾರದಲ್ಲಿ ಈಗಾಗಲೇ ಅನೇಕ ಊಹಾಪೋಹಗಳೆದ್ದಿವೆಯಷ್ಟೆ. ಹೊಸ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರವರು ಈ ದೇಶಕ್ಕೆ ಬಂದ ಮೇಲೆ ಇಲ್ಲಿನ ವಿದ್ಯಮಾನಗಳನ್ನೆಲ್ಲಾ ಅರಿತು ಬ್ರಿಟಿಷ್ ಸರ್ಕಾರಕ್ಕೆ ತಮ್ಮ ಸಲಹೆಗಳನ್ನು ಕಳುಹಿಸಿದ್ದಾರೆ.

ಅಧಿಕಾರವನ್ನು ವರ್ಗಾಯಿಸುವ ಕಾರ್ಯವು ಈ ಕೂಡಲೇ ಆರಂಭವಾಗಲು ತಕ್ಕ ಸಲಹೆಗಳನ್ನು ವೈಸರಾಯರು ಕೊಟ್ಟಿರುವರೆಂದು ತಿಳಿದುಬಂದಿದೆ. ಬ್ರಿಟಿಷ್ ಮಂತ್ರಿಮಂಡಲದವರು ಈ ಸಲಹೆಗಳನ್ನು ಈಗ ಪರಿಶೀಲಿಸುತ್ತಿರುವರು. ಸದ್ಯದಲ್ಲಿಯೇ ಅವರು ತಮ್ಮ ಅಂತಿಮ ನಿರ್ಧಾರವನ್ನು ಮಾಡಲಿರುವರು. ಅವುಗಳನ್ನು ವೈಸರಾಯರು ಈ ದೇಶದ ಎಲ್ಲಾ ಪಕ್ಷಗಳ ನಾಯಕರುಗಳಿಗೂ ಬರುವ ಜೂನ್ ಎರಡನೇ ತಾರೀಖು ತಿಳಿಸಲಿರುವರು. ಅಷ್ಟರೊಳಗೆ ಇಲ್ಲಿನ ವಿವಿಧ ರಾಜಕೀಯ ಪಂಗಡಗಳು ತಮ್ಮ ಕಾರ್ಯನೀತಿಯನ್ನು ಸ್ಪಷ್ಟವಾಗಿ ನಿರ್ಧರಿಸಿಕೊಳ್ಳಬೇಕಾಗಿದೆ.

ಕೆಲವು ದಿನಗಳಿಂದ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿದರೆ ಮುಸ್ಲಿಂ ಲೀಗಿನವರು ರಾಷ್ಟ್ರ ವಿಭಜನೆಯ ತಮ್ಮ ನೀತಿಯನ್ನು ಸ್ವಲ್ಪವೂ ಸಡಲಿಸುವಂತೆ ಕಾಣುವುದಿಲ್ಲ. ಆದುದರಿಂದ ರಾಷ್ಟ್ರ ನಾಯಕರು ಪ್ರಾಂತ ವಿಭಜನೆಗಾಗಿಯೂ ಒತ್ತಾಯಪಡಿಸುತ್ತಿರುವರು. ಪಂಜಾಬ್ ಮತ್ತು ಬಂಗಾಳಗಳನ್ನು ಮುಸ್ಲಿಮರಿಗೂ, ಮುಸ್ಲಿಮೇತರರಿಗೂ ಪ್ರತ್ಯೇಕವಾಗಿ ಹಂಚಬೇಕೆಂದು ಹೇಳುತ್ತಿರುವರು. ಈ ಪ್ರಯುಕ್ತವು ಆ ಪ್ರಾಂತಗಳ ಮುಸ್ಲಿಂ ನಾಯಕರುಗಳಿಗೂ, ಮಿ|| ಜಿನ್ನಾರವರಿಗೂ ಸಮ್ಮತವಾಗಿರುವುದಿಲ್ಲ. ಆದರೆ ತಮ್ಮ ಪಾಕಿಸ್ತಾನ್ ಬೇಡಿಕೆಯ ಪ್ರತಿದ್ವಂದಿಯಾಗಿ ಉದ್ಭವಿಸಿರುವ ಪ್ರಾಂತ ವಿಭಜನೆಯ ಪ್ರಯುಕ್ತವನ್ನು ಅವರು ಯಶಸ್ವಿಯಾಗಿ ಪ್ರತಿಭಟಿಸಲು ಸಮರ್ಥರಾಗಿರುವುದಿಲ್ಲ.

ಈ ಮಧ್ಯೆ ಬಂಗಾಳದ ಪ್ರಧಾನಿ ಮಿ|| ಸುಹ್ರವರ್ದಿಯವರು ಮಹಾತ್ಮರೊಡನೆ ಮಾತುಕತೆ ನಡೆಸಿ ಬಂಗಾಳದ ಐಕ್ಯತೆಗೆ ಭಂಗ ಬಾರದಂತೆ ಹವಣು ಮಾಡುತ್ತಿದ್ದಾರೆ. ಇತ್ತೀಚಾಗಿ ಸಂಯುಕ್ತ ಮತ್ತು ಸ್ವತಂತ್ರ ಮಂತ್ರಿಮಂಡಲದ ಸ್ಥಾಪನೆಗಾಗಿ ಹಲವು ಮುಸ್ಲಿಂ ನಾಯಕರು ಪ್ರಯತ್ನಪಡುತ್ತಿದ್ದಾರೆ. ಆದರೆ ಗಡಿನಾಡಿನಲ್ಲಿ ಮುಸ್ಲಿಂ ಲೀಗಿನವರ ಆಂದೋಳನವು ಸರ್ಕಾರದವರಿಗೆ ಬಹಳ ವಿಷಮ ಸ್ಥಿತಿಯನ್ನು ತಂದೊಡ್ಡಿದೆ. ಅಸ್ಸಾಮಿನಲ್ಲಿಯೂ ಸಹ ಲೀಗಿನವರ ವಿರೋಧವು ಇನ್ನೂ ಸಂಪೂರ್ಣವಾಗಿ ನಿಂತಿರುವುದಿಲ್ಲ. ಈ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿಗೂ, ಲೀಗಿಗೂ ಒಪ್ಪಂದವಾಗುವ ಸೂಚನೆಗಳೇ ಕಾಣುತ್ತಿಲ್ಲ.

ಬ್ರಿಟಿಷ್ ಸರ್ಕಾರದವರು ವೈಸರಾಯ ... ಸಮ್ಮತಿ ... [illegible]

ಉಪಾಧ್ಯಾಯರ ಉಪವಾಸ

ಕಳೆದ ಫೆಬ್ರವರಿಯಲ್ಲಿ ಉಪಾಧ್ಯಾಯರ ದಿನಾಚರಣೆ ಸಂಬಂಧವಾಗಿ ಶಾಲೆಗಳನ್ನು ಬಹಿಷ್ಕರಿಸಿ ಹರತಾಳವಾಚರಿಸಿದುದರಿಂದ ಆ ದಿನದ ಸಂಬಳವನ್ನು ಸೂರತ್ ಜಿಲ್ಲಾ ಬೋರ್ಡಿನವರು ಕೊಡಲು ನಿರಾಕರಿಸಿದ್ದರು. ಇದನ್ನು ಪ್ರತಿಭಟಿಸಲು ಸೂರತ್ ನಗರದ ಮತ್ತು ಜಿಲ್ಲೆಯ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳು ಜೂನ್ ೧ ನೇ ತಾ|| ಉಪವಾಸ ವ್ರತವನ್ನು ಆಚರಿಸುವರು.

ಸಲಹೆಗಳನ್ನು ನಾಯಕರುಗಳ ಮುಂದೆ ಇಡಲಿರುವರೆಂದೂ, ಅವುಗಳ ಮೈಕ ಬಹುಮತವನ್ನು ಪಡೆಯತಕ್ಕ ಸೂಚನೆಗಳನ್ನು ವೈಸರಾಯರು ಜಾರಿಗೆ ತರುವರೆಂದೂ ಹೇಳಲಾಗಿದೆ. ಜೂನ್ ೨ನೇ ತಾರೀಖಿನೊಳಗೆ ಭಾರತದ ರಾಜಕೀಯ ಪಂಗಡಗಳಲ್ಲಿ ಅಪೇಕ್ಷಿತವಾದ ಒಡಂಬಡಿಕೆಯು ಆಗದಿದ್ದರೆ ಬ್ರಿಟಿಷ್ ಸರ್ಕಾರದವರ ತೀರ್ಮಾನವನ್ನೇ ಬಲವಂತವಾಗಿ ಜಾರಿಗೆ ತರಬೇಕಾದೀತು. ಬ್ರಿಟಿಷ್ ಸರ್ಕಾರದವರಾದರೂ ಇದುವರೆಗೆ ಮಾಡಿರುವ ಘೋಷಣೆ, ಪ್ರಕಟಣೆ ಮತ್ತು ಸೂಚನೆಗಳಿಗೆ ಅನುಗುಣವಾಗಿ ವರ್ತಿಸಿ ಕೃತಕೃತ್ಯರಾಗುವರೆಂದು ಹಾರೈಸಬೇಕಾಗಿದೆ.

ಜಯಪುರಕ್ಕೆ ಇನ್ನಿಬ್ಬರು ಖಾಸಗೀ ಮಂತ್ರಿಗಳು

ಜಯಪುರ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಜಾರಿಗೆ ತರಲಾಗುವ ಕಾರ್ಯಕ್ರಮದಂತೆ ಇಬ್ಬರು ಖಾಸಗೀ ಸಚಿವರನ್ನು ಆರಿಸಿಕೊಳ್ಳಲಾಗಿದೆ. ಅದರಂತೆ ಶಾಸನ ಸಭೆಯ ಪ್ರಜಾಮಂಡಲ ಮತ್ತು ಸರ್ದಾರ್ ಪಕ್ಷದ ನಾಯಕರು ಮಂತ್ರಿ ಪದವಿಗಳನ್ನು ವಹಿಸಿಕೊಂಡಿರುವರು. ೧ ವರ್ಷದ ಹಿಂದೆಯೇ ಒಬ್ಬ ಖಾಸಗೀ ಸಚಿವರನ್ನು ನೇಮಿಸಿಕೊಳ್ಳಲಾಗಿತ್ತು. ಒಟ್ಟು ಈಗ ಮೂವರು ಖಾಸಗೀ ಮತ್ತು ಒಬ್ಬ ಅಧಿಕಾರಿ ಮಂತ್ರಿಗಳೂ ದಿವಾನರಾದ ಸರ್ ಟಿ. ವಿಜಯರಾಘವಾಚಾರ್ಯರೂ ಇದ್ದಾರೆ.

ಹಕ್ಕಿಗಳ ಮೇಲೆ ಬ್ರಿಟನ್ನಿನ ಧಾಳಿ

ಮುಂದಿನ ವಸಂತ ಕಾಲದಲ್ಲಿ ಬ್ರಿಟನ್ನಿನ ಮೇಲೆ ಹಾರಾಡುವ ಅಸಂಖ್ಯಾತ ಹಕ್ಕಿಗಳನ್ನು ಹಿಡಿಯಲು ಈಗಿನಿಂದಲೇ ಸಿದ್ಧತೆಗಳಾಗುತ್ತಿವೆ. ೬ ಸಹಸ್ರ ಮೈಲಿ ಸುತ್ತಳತೆಯಲ್ಲಿ ೨೫೦ ಲೈಟ್ ಹೌಸುಗಳಿಗೆ ಭಾರಿ ತಂತಿಗಳನ್ನು ಬಿಗಿಯಲಾಗಿದೆ. ಹಕ್ಕಿಗಳು ಈ ದೀಪಗಳಿಗೆ ಬಡಿದು ಈ ತಂತಿಯ ಬಲೆಗೆ ಬೀಳುವುವು.

ಅಕ್ಕ ತಂಗಿಯರಿಗೆ ಸ್ವಾಗತ !

ಸೌಭಾಗ್ಯ, ಸೌಂದರ್ಯ, ಸೊಗಸುಗಳಿಗೆ ಸಮ್ಮತವಾದ

ಬಳೆಗಳೂ,

ಅಂದ, ಚಂದ, ಅಲಂಕಾರಗಳಿಗೆ ಅತ್ಯುತ್ತಮವಾದ

ರಿಬ್ಬನ್‌ಗಳೂ,

ಬಂಧು ಬಾಂಧವರಿಗೆ ಬಳುವಳಿ ಕೊಡುವ ಬಹುಮಾನದ ಸಾಮಾನುಗಳೂ ಬಂದಿವೆ

ನಿಮಗಾಗಿ ಸಿದ್ಧವಾಗಿದೆ. ಇಂದೇ ಬಂದು ಕೊಂಡುಹೋಗಿ

ನಾಳೆ ಬಂದು ನಿರಾಶರಾಗಬೇಡಿ

ಜಯಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸ್

ದೇವರಾಜ ಮಾರ್ಕೆಟ್, — — ಮೈಸೂರು.

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು : : ಫೋನ್ 411

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಯಲ್ಲಿ ನಮ್ಮಲ್ಲಿ ಬಳಕೆಗೆ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.

ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.

11-5-47 ನೇ ತಾ|| ನಿಂದ ಜನಭರಿತವಾದ 2 ನೇ ವಾರ

ವುಡ್‌ಲ್ಯಾಂಡ್ಸ್ ಟಾಕೀಸ್, ಮೈಸೂರು.

'ನಾವು—ಇಬ್ಬರು' (ತಮಿಳು)

ಪ್ರತಿ ದಿನ ಮೂರು ಆಟಗಳು

ತಾರಾಗಣ:—ಟಿ. ಆರ್. ಮಹಾಲಿಂಗಂ, ಟಿ. ಎ. ಜಯಲಕ್ಷ್ಮಿ ಮತ್ತು ಬೇಬಿಕಮಲ

ರಾಜಕಮಲ್, ಮೈಸೂರು

ತಾ|| ೯-೫-೪೭ ರಿಂದ ಮೂರನೇ ವಾರ—ಪ್ರತಿ ದಿನ ೩ ಆಟಗಳು

'ಗೊಲ್ಲಭಾಮ' (ತೆಲುಗು)

ತಾರಾಗಣ:—ಅಂಜಲಿದೇವಿ, ರಘುರಾಮಯ್ಯ, ... ದೇವಿ

ಗೂಢಚಾರನೆಂದು ಹೇಳಿಕೊಂಡು ಸುಲಿಗೆ

ಸ್ಪೆಂಸು] ಕಂಚನಗೂಡು[illegible]

ನಿನ್ನೆ ಬೆಳಗ್ಗೆ ೯॥ ಗಂಟೆಯ ಮೇಲೆ ಇಲ್ಲಿನ ಫಲಾಹಾರ ಮಂದಿರಗಳಿಗೆ ಒಬ್ಬ ಅಪರಿಚಿತ ವ್ಯಕ್ತಿಯು ಪ್ರವೇಶಿಸಿ ತಾನು ಸರ್ಕಾರಿ ಗೂಢಚಾರನೆಂದು ಹೇಳಿಕೊಂಡು [illegible] ವೇಳೆಯಲ್ಲಿ ವ್ಯಾಪಾರಮಾಡುತ್ತಿರುವುದು ಕಾನೂನಿಗೆ ವಿರೋಧವಾದುದರಿಂದ ಅವರ ಮೇಲೆ ಕ್ರಮ ಜರುಗಿಸಬೇಕಾಗುವುದೆಂದು ಬೆದರಿಸಿ ಸುಮಾರು ೨೦೦ ರೂಗಳನ್ನು ಸುಲಿಗೆ ಮಾಡಿಕೊಂಡು ಹೋಗಿರುವನೆಂದು ತಿಳಿದು ಬಂದಿದೆ. ವ್ಯಕ್ತಿಯು ಯಾರೆಂಬುದು ಗೊತ್ತಾಗಿಲ್ಲ.

ಕುದುರೆ ಗಾಡಿಯವರ ಮುಷ್ಕರ

ಗ್ಲೋಬ್] ಚಿದಂಬರಂ,

ಅಣ್ಣಾಮಲೈ ವಿಶ್ವವಿದ್ಯಾನಿಲಯ ಕೇಂದ್ರವಾದ ಈ ಊರಿನಲ್ಲಿ ೫೦೦ ಮಂದಿ ಕುದುರೆಗಾಡಿಯವರು ಒಂದು ವಾರ [illegible] ಮುಷ್ಕರ ಹೂಡಿದ್ದಾರೆ. ಗಾಡಿಗಳ [illegible] ಚಾರವಿಲ್ಲದೆ ಬಹಳ ತೊಂದರೆಯಾಗಿದೆ.

ಹೋಟೆಲುಗಳ ಬಂದು

ಗ್ಲೋಬ್] ಕೊಯಮತ್ತೂರು,

ಇಲ್ಲಿನ ಹೋಟೇಲು ಮತ್ತು ಫಲಾಹಾರ ಮಂದಿರಗಳ ಮಾಲೀಕರು ಸಭೆಸೇರಿ ತಮಗೆ ಕೊಡುತ್ತಿರುವ ರೇಷನ್ ಪ್ರಮಾಣಕ್ಕೆ ಈ ತಿಂಗಳ ಮಧ್ಯದೊಳಗೆ ಹೆಚ್ಚು ಮಾಡದ್ದರೆ ತಮ್ಮ ಮಂದಿರಗಳನ್ನು ಮುಚ್ಚಬೇಕಾಗುವುದೆಂದು ನಿರ್ಣಯಿಸಿದ್ದಾರೆ.

ಮಣಿಪುರ ಸಂಸ್ಥಾನವು ಬರ್ಮಾಕ್ಕೆ ಸೇರುವುದೇ ?

ಬರ್ಮಾದ ಗಡಿಯಲ್ಲಿರುವ ಮಣಿಪುರ ಸಂಸ್ಥಾನದ ಪ್ರಜೆಗಳು ತಮ್ಮ ದೇಶವನ್ನು ಬರ್ಮಾದೊಂದಿಗೆ ಸೇರಲು ನಿರ್ಧರಿಸಿರುವರೆಂದು ಹೇಳಲಾಗಿದೆ. ಮಣಿಪುರವು ೧೦೦ ವರ್ಷಗಳ ಹಿಂದೆ ಬರ್ಮಾಕ್ಕೆ ಸೇರಿದ್ದು ೨ ನೇ ಬರ್ಮಾ ಯುದ್ಧವಾದ ನಂತರ ಅದು ಅವರ ಕೈ ಬಿಟ್ಟು ಹೋಯಿತು. ಬರ್ಮಾ ಸರ್ಕಾರದ ಉಪಾಧ್ಯಕ್ಷರಾದ ಯು ಆಂಗ್ ಸಾನರು ಮಣಿಪುರಕ್ಕೆ ಭೇಟಿ ಕೊಡಲು ಅಲ್ಲಿನ ಪ್ರಜೆಗಳಿಂದ ಆಹ್ವಾನಿತರಾಗಿದ್ದಾರೆ.

ಶ್ರೀ ಗಣೇಶಾ ಟಾಕೀಸ್

14-5-47 ರಿಂದ ಆರಂಭವಾದ

2ನೇ ವಾರ

ಪ್ರತಿ ದಿನ 2-15 ಕ್ಕೆ, 6 ಕ್ಕೆ ಮತ್ತು 9 ಗಂಟೆಗೆ

ಜೆಮಿನಿಯವರ

ಬಾಲ—ನಾಗಮ್ಮ (ತೆಲುಗು)

ಹೊಸ ಪ್ರಿಂಟು ಮತ್ತು ವರ್ಣರಂಜಿತ ಸನ್ನಿವೇಶಗಳಿಂದ ಕೂಡಿದ ಆಕರ್ಷಣೀಯವಾದ ಚಿತ್ರ

Edited, printed and published by A. K. Nagarajan at the Sadhvi Press, D-S-[illegible] Road, Mys[illegible]

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಆಣೆ

ಸಂಪುಟ ೫] ಬುಧವಾರ ೧೪—೫—೪೭ [ಸಂಚಿಕೆ ೨೪೬

ಸರ್ ಮಿರ್ಜಾ ಇಸ್ಮಾಯಿಲರ ರಾಜೀನಾಮೆಯೇ?

...ಮತ್ತು ಪಂಡಿತರುಗಳ ಸಮ್ಮೇಳನ

...] ತೀರ್ಥಹಳ್ಳಿ ೧೩
...ಮೈಸೂರು ಸಂಸ್ಥಾನದ ಪಂಡಿತರುಗಳ ...ನೇ ಸಮ್ಮೇಳನ, ಕರ್ನಾಟಕ ಪ್ರಾಂತ್ಯ ...ಪಂಡಿತರ ದ್ವಿತೀಯ ಸಮ್ಮೇಳನ, ಆಗಮ ಸಮ್ಮೇಳನ ಮತ್ತು ಅಖಿಲ ಕರ್ನಾಟಕ ಸನಾತನ ಧರ್ಮ ಸಮ್ಮೇಳನಗಳು ತೀರ್ಥಹಳ್ಳಿಯಲ್ಲಿ ಇದೇ ೨೫ನೇ ತಾ॥ ನಿಂದ ...ನೇ ತಾ॥ ವರೆಗೆ ದ್ವಾರಕಾ ಪೀಠದ ...ಜಗದ್ಗುರು ಶ್ರೀ ಶಂಕರಾಚಾರ್ಯ ...ಅಭಿನವ ಸಚ್ಚಿದಾನಂದ ತೀರ್ಥರವರ ಅಧ್ಯಕ್ಷತೆಯಲ್ಲಿ ಜರುಗುವುವು. ಮೈಸೂರು ...ಗೃಹ ಸಚಿವರಾದ ಶ್ರೀ ಎಂ. ಶೇಷಾದ್ರಿ ...ಯವರು ಸಮ್ಮೇಳನಗಳ ಆರಂಭೋತ್ಸವವನ್ನು ನೆರವೇರಿಸುವರು. ದಕ್ಷಿಣ ಭಾರತದ ...ಪಂಡಿತರುಗಳೂ, ಘನ ವಿದ್ವಾಂಸರುಗಳೂ ಈ ಸಮ್ಮೇಳನಗಳಿಗೆ ಆಗಮಿಸುವರು.

ಪ್ಲೇಗ್ ಕ್ರಿಮಿಗಳನ್ನು ಉತ್ಪತ್ತಿ ಮಾಡುವ ಯಂತ್ರ

...ಬ್] ಲಂಡನ್ ೯
ಪ್ಲೇಗನ್ನು ಹರಡುವ ಅಗೋಚರ ಕ್ರಿಮಿಗಳನ್ನು ಉತ್ಪತ್ತಿ ಮಾಡುವ ಯಂತ್ರವೊಂದನ್ನು ಬ್ರಿಟನ್ನಿನ ಸಾಲಿಸ್ಬರಿಯ ...ಡಾ॥ ಹೆಂಡರ್‌ಸನ್‌ರವರು ಕಂಡು ಹಿಡಿದಿದ್ದಾರೆ. ಇದರ ವಿವರಗಳನ್ನು ಬ್ರಿಟಿಷ್ ಸರ್ಕಾರವು ಸದ್ಯದಲ್ಲೇ ಪ್ರಕಟಿಸಲಿದೆ. ಇದರಿಂದ ಉಂಟಾಗುವ ಪ್ಲೇಗ್ ಉಪದ್ರವಕ್ಕೆ ಔಷಧವನ್ನು ಸಹ ಕಂಡು ಹಿಡಿಯಲಾಗಿದೆಯೆಂದು ಹೇಳಲಾಗಿದೆ.

ಸಿಗರೇಟಿನೊಳಗೆ ನೋಟುಗಳ ರವಾನೆ

...ಬ್] ಲಂಡನ್ ೧೦
ಅಮೆರಿಕದಿಂದ ಪ್ಯಾಲೆಸ್ಟೈನಿಗೆ ರವಾನೆಯಾಗುತ್ತಿದ್ದ ಸಿಗರೇಟು ಪೆಟ್ಟಿಗೆಯೊಂದನ್ನು ಈಜಿಪ್ಟಿನ ತೆರಿಗೆ ಅಧಿಕಾರಿಗಳು ಬಿಡಿಸಿ ಶೋಧಿಸಿದಾಗ ಸಿಗರೇಟಿನ ಹೊಗೆಸೊಪ್ಪಿನ ಪುಡಿಯೊಳಗೆ ೧೦೦ ಡಾಲರ್ ನೋಟುಗಳು ಪತ್ತೆಯಾದುವು. ಇವು ಪ್ಯಾಲೆಸ್ಟೈನಿನ ಕ್ರಾಂತಿಕಾರರ ಸಂಸ್ಥೆಗಳಿಗೆ ಹೋಗುತ್ತಿದ್ದುವು.

ತಿರುಕನ ವರಮಾನ ದಿನಕ್ಕೆ ಐದು ಪೌಂಡು

...ಬ್] ನ್ಯೂಯಾರ್ಕ್ ೧೦
ಅಮೆರಿಕದಲ್ಲಿ ಪೋಲೀಸರು ತಿರುಕರ ...ದ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ...ಗುಂಪಿನ ಕುರುಡ ನಾಯಕನೊಬ್ಬನ ಮರಣದ ಬಗ್ಗೆ ತನಿಖೆ ನಡೆಸಿದಾಗ ಅವನಿಗೆ ತನ್ನ ವೃತ್ತಿಯಿಂದ ದಿನಕ್ಕೆ ಐದು ಪೌಂಡುಗಳಿಗೆ ಕಡಿಮೆ ಇಲ್ಲದಂತೆ ವರಮಾನ ಬರುತ್ತಿದ್ದಿತೆಂದು ತಿಳಿದು ಬಂದಿದೆ.

ವಿವಾಹ ಮಹೋತ್ಸವ

ಹರಿಕಥಾ ವಿದ್ವಾನ್ ಶ್ರೀ ಟಿ. ಟಿ. ...ಯ್ಯನವರಿಗೆ ಡಾ॥ ಆರ್. ಎಸ್. ನಾರಾಯಣ ಶಾಸ್ತ್ರಿಗಳ ಜ್ಯೇಷ್ಠ ಕುಮಾರಿ ಸೌ॥ ...ದೇವಮ್ಮನವರನ್ನು ಕೊಟ್ಟು ವಿವಾಹವು ಜರುಗಿದ ಸಂಬಂಧವಾಗಿ ಕಳೆದ ಭಾನುವಾರ ...ದ ಆರತಕ್ಷತೆಯ ಸಮಾರಂಭದಲ್ಲಿ ವಿದ್ವಾನ್ ಚಾಮುಂಡಪ್ಪನವರ ಸಂಗೀತವೂ ವಿದ್ವಾನ್ ಕೃಷ್ಣಮಾಚಾರ್ಯರ ಪಿಟೀಲು ಮತ್ತು ವಿದ್ವಾನ್ ನಾಗಪ್ಪನವರ ಮೃದಂಗದೊಡನೆ ಸುಸಂಪನ್ನವಾಗಿ ನಡೆಯಿತು.

ಸರ್ ಮಿರ್ಜಾ ಇಸ್ಮಾಯಿಲರ ರಾಜೀನಾಮೆಯೇ?

—

ಮೈಸೂರು ೧೪
ಭಾರತ ರಾಜ್ಯಾಂಗ ಸಭೆ ಮತ್ತು ಭಾರತದ ಯೂನಿಯನ್ನಿನಲ್ಲಿ ಸೇರುವ ವಿಚಾರವಾಗಿ ಹೈದರಾಬಾದಿನ ನೈಜಾಮರಿಗೂ, ಅಲ್ಲಿನ ಪ್ರಧಾನ ಮಂತ್ರಿಗಳಾದ ಸರ್ ಮಿರ್ಜಾ ಇಸ್ಮಾಯಿಲರಿಗೂ ತೀವ್ರವಾದ ಭಿನ್ನಾಭಿಪ್ರಾಯ ಉಂಟಾಗಿರುವುದರಿಂದ ಸರ್ ಮಿರ್ಜಾರವರು ಸದ್ಯದಲ್ಲಿಯೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವರೆಂಬುದಾಗಿ ಪ್ರಬಲವಾದ ವದಂತಿಯು ಬೆಂಗಳೂರು ಮತ್ತು ಹೈದರಾಬಾದುಗಳಲ್ಲಿ ಹರಡಿರುವುದಾಗಿ ವಾರ್ತೆ ಬಂದಿರುತ್ತದೆ.

ಬ್ಲೂಸಿನವರ ವಿಜಯ

ಆಲಪ್ಪೆಯಲ್ಲಿ ನಡೆಯುತ್ತಿರುವ ಅಖಿಲ ಭಾರತ ಫುಟ್‌ಬಾಲ್ ಪಂದ್ಯದಲ್ಲಿ ಮೈಸೂರು ಬ್ಲೂಸಿನವರು ಎಂ. ಎಸ್. ಎಂ. ಟೈಟ್ಸ್ ಇನ್ಸ್‌ಟಿಟ್ಯೂಟ್‌ರವರನ್ನು ಸೆಮಿ ಫೈನಲ್ಸ್ ಪಂದ್ಯದಲ್ಲಿ ಒಂದು ಗೋಲಿನಿಂದ ಸೋಲಿಸಿದ್ದಾರೆ. ಇವರು ಮೈಸೂರು ಮರ್ಕೆಂಟೈಲ್ ಟೀಮಿನವರ ಮೇಲೆ ಫೈನಲ್ಸ್ ಪಂದ್ಯವನ್ನಾಡಲಿರುವರು.

ಜಿಲ್ಲಾ ಸಮ್ಮೇಳನ

ಮೈಸೂರು ಜಿಲ್ಲಾ ಸಮ್ಮೇಳನವು ಇದೇ ೧೭ನೇ ತಾ॥ ಶನಿವಾರ ಮಧ್ಯಾಹ್ನ ೧ ಗಂಟೆಗೆ ಟೌನ್ ಹಾಲಿನಲ್ಲಿ ಜರುಗುವುದು. ಗೃಹ ಸಚಿವರಾದ ರಾ॥ ಶ್ರೀ॥ ಎಂ. ಶೇಷಾದ್ರಿಯವರು ಸಭಾಧ್ಯಕ್ಷತೆಯನ್ನು ವಹಿಸುವರು.

ಪಂಜಾಬ್ ಭೂಪಟಕ್ಕೆ ಗಿರಾಕಿ

ಗ್ಲೋಬ್] ಲಾಹೋರ್ ೧೧
ಪಂಜಾಬ್ ಪ್ರಾಂತ್ಯದ ಭೂಪಟಗಳು ಹಿಂದೆಂದೂ ಇಲ್ಲದಷ್ಟು ಖರ್ಚಾಗುತ್ತಿವೆ. ಜನರು ಪ್ರಾಂತ ವಿಭಜನೆಯ ಬಗ್ಗೆ ತಮ್ಮ ವಾದವನ್ನು ಭೂಪಟದ ನೆರವಿನೊಡನೆ ಚರ್ಚಿಸುತ್ತಿದ್ದಾರೆ.

ವೈಸರಾಯರು ಲಂಡನ್ನಿಗೆ?

ಭಾರತೀಯರಿಗೆ ಅಧಿಕಾರವನ್ನು ವರ್ಗಾಯಿಸಿಕೊಡುವ ಬಗ್ಗೆ ತಯಾರಾಗಿರುವ ಯೋಜನೆಯ ವಿಚಾರದಲ್ಲಿ ಬ್ರಿಟಿಷ್ ಮಂತ್ರಿಮಂಡಲವು ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರೊಡನೆ ಮಾತುಕತೆ ನಡೆಸಲು ಇಚ್ಛಿಸಿದೆಯೆಂದೂ, ಅದಕ್ಕಾಗಿ ವೈಸರಾಯರು ಸದ್ಯದಲ್ಲೇ ಲಂಡನ್ನಿಗೆ ತೆರಳಲಿದ್ದಾರೆಂದೂ ವದಂತಿಯಾಗಿದೆ.

ಭಾರತವನ್ನು ಪೂರ್ತಿಯಾಗಿ ವಿಭಾಗಿಸಲಾಗುವುದು

ಭಾರತದ ವಿಭಜನೆಯನ್ನು ತಪ್ಪಿಸಲು ವೈಸರಾಯರು ಕಟ್ಟಕಡೆಯ ಪ್ರಯತ್ನವೊಂದನ್ನು ಮಾಡುವರು. ಅದು ವಿಫಲವಾದರೆ ಆಗ್ಗೆ ದೇಶವನ್ನು ಪೂರ್ಣವಾಗಿ ಎಲ್ಲ ವಿಧದಲ್ಲಿಯೂ ವಿಭಾಗಿಸಿ ಬ್ರಿಟನರು ಸ್ವದೇಶಕ್ಕೆ ತೆರಳುವರೆಂದು ಖಚಿತವಾಗಿ ಗೊತ್ತಾಗಿದೆ. ಪಂಜಾಬ್ ಮತ್ತು ಬಂಗಾಳ ಶಾಸನ ಸಭೆಗಳ ಸದಸ್ಯರನ್ನು ಪಾಕೀಸ್ಥಾನ ಮತ್ತು ಹಿಂದೂಸ್ಥಾನಕ್ಕೆ ಸೇರುವ ಪ್ರದೇಶಗಳ ಆಧಾರದ ಮೇಲೆ ವಿಂಗಡಿಸಿ ಅವರ ಅಭಿಪ್ರಾಯದಂತೆ ನಡೆಯಲಾಗುವುದು.

ಇನ್ನುಮೇಲೆ ೨೫೦೦ ರೂಗಳ ಮೇಲೆ ಸಂಬಳವಿಲ್ಲ

ಕೇಂದ್ರ ಸರ್ಕಾರದವರು ನೇಮಿಸಿದ್ದ ಸಂಬಳ ಸಮಿತಿಯವರು ತಮ್ಮ ವರದಿಯನ್ನು ಒಪ್ಪಿಸಿದ್ದಾರೆ. ಇನ್ನು ಮೇಲೆ ಸರ್ಕಾರದ ಅಧಿಕಾರಿಗಳ ಪರಮಾವಧಿ ಸಂಬಳ ೨೫೦೦ ರೂ ಗಳಿಗಿಂತ ಹೆಚ್ಚಾಗಿರಕೂಡದೆಂದೂ, ಕನಿಷ್ಠ ಸಂಬಳ ತುಟ್ಟಿ ಭತ್ಯವೂ ಸೇರಿ ೫೫ ರೂಗಳಿರಬೇಕೆಂದೂ ಸಮಿತಿಯು ಸೂಚಿಸಿದೆ. ಈ ವರದಿಯಂತೆ ೩೦ ಕೋಟಿ ರೂ ಗಳ ಹೆಚ್ಚು ಖರ್ಚು ಸರ್ಕಾರಕ್ಕೆ ತಗಲುವುದೆಂದು ಹೇಳಲಾಗಿದೆ.

ಜಸ್ಟಿಸ್ ಬೈಯರ್ಸರಿಗೆ ಪೆನ್ಷನ್ ಕೊಟ್ಟು ನಿವೃತ್ತಿ

ಕೆಲವು ತಿಂಗಳ ಹಿಂದೆ ಮದ್ರಾಸಿನಲ್ಲಿ ಎ. ಐ. ಎ. ಪ್ರದರ್ಶನದ ಕಾಲದಲ್ಲಿ ಒಬ್ಬ ಬಾಲಕನ ಮೇಲೆ ಗುಂಡು ಹಾರಿಸಿ, ಆತನು ಮಡಿಯುವಂತೆ ಮಾಡಿದ ಮದ್ರಾಸ್ ಕ್ರೈಸ್ತ ನ್ಯಾಯಸ್ಥಾನದ ಜ॥ ಬೈಯರ್ಸ್‌ರವರು ಮತ್ತೆ ನ್ಯಾಯಾಧಿಪತಿಗಳಾಗಲು ಅವಕಾಶ ಕೊಡದೆ ಅವರಿಗೆ ಪೆನ್ಷನ್ ಕೊಟ್ಟು ಕಳುಹಿಸಲು ಮದ್ರಾಸ್ ಸರ್ಕಾರ ನಿರ್ಧರಿಸಿದೆ.

ಅಧಿಕಾರದ ವರ್ಗ ಕೂಡಲೇ ಆಗಬೇಕು

ಗ್ಲೋಬ್] ಲಂಡನ್ ೮
ವೈಸರಾಯರ ಪ್ರತಿನಿಧಿಗಳಾದ ಲಾರ್ಡ್ ಇಸ್ಮೆಯವರು ಬ್ರಿಟಿಷ್ ಸರ್ಕಾರದವರಿಗೆ ಕೊಟ್ಟಿರುವ ವರದಿಯಲ್ಲಿ ಅಧಿಕಾರ ವರ್ಗಾವಣೆಯ ಕ್ರಮವನ್ನು ಸ್ಥೂಲವಾಗಿ ಸೂಚಿಸಿ ಆ ಕೆಲಸವು ಈ ಕೂಡಲೇ ಆರಂಭವಾಗಬೇಕೆಂದು ಒತ್ತಿ ಹೇಳಿದ್ದಾರೆಂದು ಅಬ್ಸರ್ವರ್ ಪತ್ರಿಕೆಯು ತಿಳಿಸಿದೆ.

ದಾವಣಗೆರೆಗೆ ನಗರ ಪೌರಸಭಾ ಸ್ಥಾನ

ಸ್ವಂ ಸು ಪ್ರೋ] ಬೆಂಗಳೂರು ೧೪
ಬರುವ ವರ್ಷದ ಜನವರಿ ತಿಂಗಳಿನಿಂದ ದಾವಣಗೆರೆಗೆ ನಗರ ಪೌರಸಭೆಯ ಅಂತಸ್ತನ್ನು ಕೊಡಲು ಸರ್ಕಾರದವರು ನಿರ್ಧರಿಸಿರುತ್ತಾರೆ. ಇದಕ್ಕೆ ಆಕ್ಷೇಪಣೆ ಇರುವವರು ಇನ್ನು ೩ ತಿಂಗಳೊಳಗೆ ಲಿಖಿತ ಮೂಲಕ ಸರ್ಕಾರದವರಿಗೆ ಬರೆದುಕೊಳ್ಳಬಹುದೆಂದು ತಿಳಿಸಲಾಗಿದೆ. ಈಗ ದಾವಣಗೆರೆಯಲ್ಲಿರುವ ಟೌನ್ ಪುರಸಭೆಯ ಅವಧಿಯನ್ನು ಬರುವ ಜುಲೈ ತಿಂಗಳಿಂದ ಈ ವರ್ಷದ ಅಂತ್ಯದವರೆಗೆ ಹೆಚ್ಚಿಸಲಾಗಿದೆ.

ಮೈಸೂರು ಮಂತ್ರಿ ಮಂಡಲವು ಮೊನ್ನೆ, ನಿನ್ನೆ ಮತ್ತು ಈ ದಿನ ಸೇರಿ ಬರುವ ಆಯವ್ಯಯ ಮತ್ತು ಪ್ರಜಾಪ್ರತಿನಿಧಿ ಸಭೆಯ ಕಾರ್ಯಕ್ರಮಗಳನ್ನು ಪರಿಶೀಲಿಸಿತು.

ಅಖಿಲ ಭಾರತ ಪ್ರಾಂತೀಯ ವಿದ್ಯಾ ಸಮ್ಮೇಳನದ ೨ನೇ ಅಧಿವೇಶನವು ಈ ತಿಂಗಳು ೨೯ ಮತ್ತು ೩೦ನೇ ತಾರೀಖುಗಳಲ್ಲಿ ಬೆಂಗಳೂರಿನ ಪಿಕ್ಕರಿ ಭವನದಲ್ಲಿ ನಡೆಯುವುದು. ದಿವಾನರಾದ ಸರ್ ಎ. ರಾಮಸ್ವಾಮಿ ಮೊದಲಿಯಾರರು ಅದರ ಆರಂಭೋತ್ಸವವನ್ನು ನಡೆಸುವರು. ಎಲ್ಲಾ ಪ್ರಾಂತ್ಯಗಳ ವಿದ್ಯಾ ಮಂತ್ರಿಗಳೂ ಸೇರಿ ೭೫ ಜನ ಪ್ರತಿನಿಧಿಗಳೂ ಬರಲಿರುವರು. ಭಾರತ ಸರ್ಕಾರದ ವಿದ್ಯಾ ಸಲಹೆಗಾರರಾದ ಸರ್ ಜಾನ್ ಸಾರ್ಜೆಂಟರೂ ಸಹ ಬರುವರು. ಮೈಸೂರು ಮಂತ್ರಿ ಮಂಡಲದ ನಿವೃತ್ತ ಸಚಿವರಾದ ಸರ್ ಎಂ. ಎನ್. ಕೃಷ್ಣರಾಯರು ಅಧ್ಯಕ್ಷತೆಯನ್ನು ವಹಿಸುವರು.

ಕೋಲಾರ, ಬೆಂಗಳೂರು, ಮತ್ತು ಮೈಸೂರುಗಳಲ್ಲಿ ಮಳೆ ಸಮಯೋಚಿತವಾಗಿ ಆಗಿರುವುದಾಗಿಯೂ ಗೋಧಿ ಮತ್ತು ಅವರೆ ಹುಟ್ಟಿನ ಸರಬರಾಜಿನ ಸ್ಥಿತಿಯು ಬಹಳ ಕಮ್ಮಿಯಾಗಿ ಕಳವಳಕ್ಕೆ ಆಸ್ಪದ ಉಂಟುಮಾಡುವುದೆಂದೂ ಇತರ ಧಾನ್ಯಗಳ ಸರಬರಾಜು ಸಮರ್ಪಕವಾಗಿದೆಯೆಂದೂ ಸರ್ಕಾರದ ಕಳೆದ ೧೫ ದಿವಸದ ವರದಿಯು ಸೂಚಿಸುತ್ತದೆ.

ಮೈಸೂರು ಹೈಕೋರ್ಟು ಹಂಗಾಮಿ ಜಿಲ್ಲಾ ಛೀಫ್ ಕೋರ್ಟ್ ಜಡ್ಜರಾದ ಶ್ರೀ॥ ಕೆ. ವಿ. ಶ್ರೀನಿವಾಸಯ್ಯನವರನ್ನು ಅವರ ಸ್ಥಾನದಲ್ಲಿ ಖಾಯಂ ಮಾಡಲಾಗಿದೆ.

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆಯಲ್ಲಿ ಇತರರ ಖುಲಾಸೆ?

ಲಕ್ಷ್ಮೀಕಾಂತಂ ಕೊಲೆ ಮೊಕದ್ದಮೆಯಲ್ಲಿ ಆಜೀವ ಶಿಕ್ಷೆಗೊಳಗಾಗಿ ಬಂಧನದಲ್ಲಿರುವ ವಡಿವೇಲು ಮುಂತಾದವರ ಶಿಕ್ಷೆಯನ್ನು ವಜಾ ಮಾಡಿ ಅವರುಗಳನ್ನು ಖುಲಾಸೆ ಮಾಡಲಾಗುವುದೆಂದು ಗೊತ್ತಾಗಿದೆ.

ಹಕ್ಕಿಯಿಂದ ನಗರದಲ್ಲೆಲ್ಲಾ ಕತ್ತಲೆ

ಗ್ಲೋಬ್] ಲಂಡನ್ ೯
ನೈರೋಬಿ ನಗರದಲ್ಲಿ ಮಾಂಸದ ಅಂಗಡಿಯ ಬಳಿ ಹಾರಾಡುತ್ತಿದ್ದ ಹಕ್ಕಿಯೊಂದು ಮಾಂಸದ ತುಂಡನ್ನು ಹಾರಿಸಿಕೊಂಡು ಗಗನಕ್ಕೆ ಹಾರಿತು. ವಿದ್ಯುಚ್ಛಕ್ತಿ ಕೇಂದ್ರ ತಂತಿಯೊಂದರ ಮೇಲೆ ಕುಳಿತುಕೊಂಡಾಗ ಎರಡು ತಂತಿಗಳಿಗೆ ಅದು ತಗುಲಿ 'ಷಾರ್ಟ್ ಸರ್ಕ್ಯೂಟ್' ಆಗಿ ಇಡೀ ನಗರದ ದೀಪಗಳೆಲ್ಲಾ ಹಲವಾರು ಘಂಟೆಗಳ ಕಾಲ ಆರಿಹೋಗಿ ಕತ್ತಲು ಕವಿದಿತ್ತು. ಹಕ್ಕಿಯೂ ಅಲ್ಲೇ ಪ್ರಾಣ ಬಿಟ್ಟಿತು.

ಸಾಧ್ವಿ

ತಾ॥ ೧೪-೫-೪೭ ಬುಧವಾರ

ಸರ್ದಾರರ ಸ್ಪಷ್ಟೋಕ್ತಿ

ಗಲಭೆಗಳು ನಡೆದ ಸಮಯಗಳಲ್ಲಿ ಮಹಾ ಜನರು ಯಾವರೀತಿ ವರ್ತಿಸಬೇಕೆಂಬ ಬಗ್ಗೆ ಸರ್ದಾರ್ ವಲ್ಲಭ ಭಾಯಿ ಪಟೇಲರು ಕೊಟ್ಟಿರುವ ಸಲಹೆಗಳು ಸಕಲರಿಗೂ ಮಾನ್ಯವಾಗಿರುತ್ತವೆ. ಪ್ರತಿಯೊಬ್ಬ ಮನುಷ್ಯನೂ ಒಬ್ಬ ಪೋಲೀಸಿನವನಂತೆ ನಡೆದುಕೊಳ್ಳಬೇಕೆಂದು ಅವರು ಹೇಳಿರುವರು. ಆತ್ಮ ರಕ್ಷಣೆಯನ್ನು ಮಾಡಿಕೊಳ್ಳುವುದಲ್ಲದೆ ದುರ್ಬಲರಾದವರನ್ನೂ ರಕ್ಷಿಸಲು ಸಕಲ ಪ್ರಯತ್ನಗಳನ್ನೂ ಮಾಡಬೇಕೆಂದು ಸೂಚಿಸಿರುವರು.

ಮಹಾತ್ಮರ ಅಹಿಂಸಾ ಮಾರ್ಗವನ್ನು ಅವಲಂಬಿಸಿ ಪುಂಡರನ್ನು ಶಾಂತಿಯಿಂದ ಎದುರಿಸಬಹುದು. ಅಥವಾ ಲೋಕದ ರೀತಿಯನ್ನು ಹಿಡಿದು ದುಷ್ಟರನ್ನು ಪ್ರತಿಭಟಿಸಿ ಅವರನ್ನು ಮಟ್ಟಹಾಕಬಹುದು; ಆದರೆ ಎರಡೂ ಬಿಟ್ಟು ಹೇಡಿಗಳಂತೆ ಮಾತ್ರ ಓಡಿ ಹೋಗಬಾರದು, ಸರ್ವ ಶಕ್ತಿಯಿಂದಲೂ ಎದುರಿಸಬೇಕು ಎಂದು ಅವರು ಹೇಳಿರುವರು.

ಕೋಮುವಾರು ಮತ್ತು ಇತರ ಬಗೆಯ ದೌರ್ಜನ್ಯ ಕೃತ್ಯಗಳು ಇನ್ನೂ ದೇಶದಲ್ಲಿ ಹಾವಳಿ ಮಾಡುತ್ತಿರುವುದರಿಂದ ಸರ್ದಾರರ ಸಿಂಹನಾದವು ಜನರನ್ನು ಉತ್ತೇಜನಗೊಳಿಸದೆ ಇರದು. ರಾಜಕೀಯ ಒಪ್ಪಂದವು ಸಮೀಪಿಸಿದಂತೆ ಕಾಣುವುದಿಲ್ಲವಾದುದರಿಂದ ಇನ್ನೂ ಸ್ವಲ್ಪ ಕಾಲ ದೇಶದಲ್ಲಿ ಅಲ್ಲೋಲ ಕಲ್ಲೋಲ ಉಂಟಾಗುವ ಸಂಭವವಿರುವುದೆಂದು ರಾಷ್ಟ್ರ ನಾಯಕರುಗಳು ನಿರೀಕ್ಷಿಸುತ್ತಿದ್ದಾರೆ. ಬ್ರಿಟಿಷರು ಹೊರಡುವುದಕ್ಕೆ ಮುಂಚೆ ಇನ್ನು ಒಂದು ವರ್ಷದ ಅವಧಿಯಲ್ಲಿ ಅನೇಕ ವಿಧವಾದ ಅನರ್ಥ ಪರಂಪರೆಗಳು ಸಂಪ್ರಾಪ್ತವಾಗಬಹುದೆಂದೂ ಸಹ ಭಾವಿಸಲಾಗಿದೆ. ಅದನ್ನು ಎದುರಿಸಲು ಸರ್ವರೂ ಸಿದ್ಧರಾಗಿರಬೇಕೆಂದೂ ಹೇಳಲಾಗಿದೆ.

ಸಕಲ ಸಂದರ್ಭಗಳಲ್ಲಿಯೂ ಕಾಯಾ, ವಾಚಾ, ಮನಸಾ ಅಹಿಂಸೆಯನ್ನೇ ಆಚರಿಸಬೇಕೆಂಬುದು ಮಹಾತ್ಮರ ಮತ. ಆದರೆ ಮಾನವನ ಆದ್ಯ ಕರ್ತವ್ಯವಾದ ಆತ್ಮ ರಕ್ಷಣೆಯಲ್ಲಿ ಅವಶ್ಯಕವಾದರೆ ಹಿಂಸೆಯನ್ನಾದರೂ ಪ್ರಯೋಗಿಸಬೇಕೆಂಬುದು ಅನೇಕ ರಾಷ್ಟ್ರನಾಯಕರ ಅಭಿಪ್ರಾಯ. ಅಹಿಂಸೆಯ ಹೆಸರಿನಲ್ಲಿ ಆತ್ಮ ರಕ್ಷಣೆ ಮಾಡಿಕೊಳ್ಳದೆ ಇರುವುದು ಹೇಡಿತನವಾಗುವುದೆಂದು ಅವರು ಹೇಳಿರುವರು. ಮಹಾತ್ಮರೂ ಸಹ ಇದನ್ನು ಅನುಮೋದಿಸಿರುವರು. ಆದುದರಿಂದಲೇ ಪ್ರತಿಯೊಬ್ಬ ಮನುಷ್ಯನೂ ಸಕಲ ಸಂದರ್ಭಗಳಲ್ಲಿಯೂ ಆತ್ಮ ರಕ್ಷಣೆಗಾಗಿ ಸರ್ವ ಸಿದ್ಧತೆಗಳನ್ನೂ ಮಾಡಿಕೊಳ್ಳಬೇಕೆಂದು ಹೇಳುತ್ತಿರುವರು.

ಪ್ರತಿಯೊಬ್ಬ ಮನುಷ್ಯನೂ, ಪ್ರತಿಯೊಂದು ಮನೆಯೂ, ಪ್ರತಿಯೊಂದು ಬೀದಿಯೂ ಒಂದು ರಕ್ಷಣಾ ಕೇಂದ್ರವಾಗಬೇಕೆಂದು ಪಂ॥ ನೆಹರೂರವರು ಹಿಂದೆಯೇ ತಿಳಿಸಿದ್ದರು. ಅದನ್ನೇ ಸರ್ದಾರರು ಈಗ ಒತ್ತಿ ಹೇಳುತ್ತಿರುವರು. ಹಿಂಸೆಯನ್ನು ತಡೆಗಟ್ಟಲು ಸಕಲ ಪ್ರಜೆಗಳೂ ಅಸ್ತ್ರಗಳನ್ನು ಸಮಂತ ಮಾಡಬೇಕೆಂದು ಸಂಯುಕ್ತ ಪ್ರಾಂತ ಶಾಸನ ಸಭಾಧ್ಯಕ್ಷರಾದ ಪುರುಷೋತ್ತಮದಾಸ ಟಾಂಡನ್‌ರವರು ಹೇಳಿರುವರು. ಗಡಿನಾಡಿನಲ್ಲಿ ಖಾನ್ ಅಬ್ದುಲ್ ಗಫಾರ್ ಖಾನರ ಮಕ್ಕಳು ಶಸ್ತ್ರ ಸಜ್ಜಿತ ಕ್ಷವೊಂದನ್ನೇ ಸೃಷ್ಟಿಸಿರುವರು.

ಹೀಗೆ ಆತ್ಮ ರಕ್ಷಣೆಗಾಗಿ ಸಕಲ ವಿಧದಲ್ಲಿಯೂ ಸಿದ್ಧತೆಗಳು ಆಗುತ್ತಿವೆ. ಈ ಸಿದ್ಧತೆಯೇ ಪುಂಡರುಗಳಿಗೆ ಒಂದು ಮುನ್ನೆಚ್ಚರಿಕೆಯಾಗಿ ಪರಿಣಮಿಸುವುದು. ಆದುದರಿಂದ ಸಾರ್ವಜನಿಕರು ಆತ್ಮ ರಕ್ಷಣೆಗೆ ಸರ್ವದಾ ಸಿದ್ಧರಾಗಿರುವುದು ಅಗತ್ಯವಾಗಿದೆ.

Edited, printed and published by A. S. Nagaraja at the Sadhvi Press D. Subbiah Road, Mysore.

ನಾಯಿಕೆಮ್ಮಿನ ಔಷಧಿ

7—8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರ್ಲು—ಉಬ್ಬಸಕ್ಕೆ

(Asthma)

ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

(Appendecitis) ಗು ಅಪ್ಪೆಂಡಿಸೈಟಿಸ್ ಮತ್ತು (Tonsils) ಗಲಾಯಿಕೆ ಇವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಬಂದು ನೋಡಿ.

ಗುಂಡ್ಲುಪೇಟೆ ಆರ್. ಎಸ್. ಪಂಡಿತರು, ದಿವಾನ್ಸ್ ರೋಡ್, ಗೊಲ್ಲಗೇರಿ ಮೈಸೂರು.

ಗರ್ಭ ರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು.

ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ. ವಿ. ವೆಂಕಟರಾಮಯ್ಯ, ಡಿ॥ ಬೋರ್ಡ್ ವೈದ್ಯ, ಆನಗಲವಾಡಿ ಚಾಮರಾಜನಗರ ತಾ॥

ಸಾಧ್ವಿ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಚಾಮರಾಜನಗರದ ಟೌನ್ ಮುನಿಸಿಪಲ್ ಆಫೀಸಿನಿಂದ

ಹರಾಜು ಇಸ್ತಿಹಾರ್

ಈ ಟೌನ್ ಮುನಿಸಿಪಾಲಿಟಿಗೆ ಸೇರಿದ ಬಸ್ ಸ್ಟ್ಯಾಂಡ್ ಕಟ್ಟಡದಲ್ಲಿ ೧೯೪೭ ನೇ ಇಸವಿ ಜುಲೈ ೧ ನೇ ತಾ॥ ಲಾಗಾಯತು ಮೂರು ವರುಷಗಳ ಕಾಲದ ಅವಧಿಯೊಳಗೆ ಹೋಟಲನ್ನು ಇಟ್ಟುಕೊಂಡು ವ್ಯಾಪಾರ ಮಾಡುವ ಹಕ್ಕನ್ನು ಹರಾಜು ಇಸ್ತಿಹಾರಿನ ಷರತ್ತಿನಂತೆ ೧೯೪೭ ನೇ ಇಸವಿ ಜೂನ್ ಮಾಹೆ ೪ ನೇ ತಾ॥ ೫ ಗಂಟೆಗೆ ಸರಿಯಾಗಿ ಟೌನ್ ಮುನಿಸಿಪಲ್ ಆಫೀಸಿನ ಬಳಿ ಹರಾಜು ಮೂಲಕ ವಿಲೆ ಮಾಡಲಾಗುತ್ತದೆ. ಇಷ್ಟವುಳ್ಳವರು ೨೦ ರೂ ಠೇವಣಿ ಪಾವತಿ ಮಾಡಿ ಭಿಡ ಸವಾಲು ಮೂಲಕ ಸದರಿ ಹಕ್ಕನ್ನು ಪಡೆದುಕೊಳ್ಳಬಹುದೆಂದು ಈ ಮೂಲಕ ಪ್ರಚುರಪಡಿಸಿದೆ.

ಹೆಚ್. ಹಾಲಪ್ಪ,
ಪ್ರೆಸಿಡೆಂಟ್

ಚಾಮರಾಜನಗರ ಟೌನ್ ಮುನಿಸಿಪಲ್ ಆಫೀಸಿನಿಂದ

ಹರಾಜು ಇಸ್ತಿಹಾರ್

ಈ ಟೌನ್ ಮುನಿಸಿಪಲ್ ಸರಹದ್ದಿನಲ್ಲಿ ೧೯೪೭ ನೇ ಜುಲೈ ೧ನೇ ತಾರೀಖಿನಿಂದ ೧೯೪೮ ನೇ ಜೂನ್ ೩೦ ನೇ ತಾರೀಖುವರೆಗಿನ ಒಂದು ವರ್ಷ ಅವಧಿಯಲ್ಲಿ ಟೋಲು ವಸೂಲಿಸುವ ಹಕ್ಕನ್ನು ಹರಾಜು ಷರತ್ತಿನ ಪ್ರಕಾರ ತಾರೀಖು ೪-೬-೧೯೪೭ನೇ ಬುಧವಾರ ಮಧ್ಯಾಹ್ನ ೩ ಘಂಟೆಗೆ ಸರಿಯಾಗಿ ಟೌನ್ ಮುನಿಸಿಪಲ್ ಆಫೀಸಿನ ಬಳಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತದೆ. ಇಷ್ಟವುಳ್ಳವರು ಆ ದಿವಸ ೧೫೦ ರೂಪಾಯಿ ಠೇವಣಿ ಮೊಬಲಗು ಪಾವತಿ ಮಾಡಿ ಭಿಡ ಸವಾಲಿನ ಮೂಲಕ ಪಡೆಯಬಹುದು.

ಹೆಚ್. ಹಾಲಪ್ಪ,
ಪ್ರೆಸಿಡೆಂಟ್

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಬೆಲೆ ಸುಲಭ

ರಬ್ಬರ್ ಬಳೆಗಳು, ಲೋಲಕ್ಕುಗಳು, ಬಟನ್ನುಗಳು ಹೊಸವಾಗಿ ಬಂದಿವೆ

ಪ್ರಭಾತ್ ಬ್ಯಾಂಗಲ್ ಸ್ಟೋರ್ಸ್,

ಡಿ. ಸುಬ್ಬಯ್ಯರಾವ್ ರಸ್ತೆ, ಮೈಸೂರು.

11-5-47 ನೇ ತಾ॥ ನಿಂದ ಜನಭರಿತವಾದ 2 ನೇ ವಾರ

ವುಡ್-ಲ್ಯಾಂಡ್ಸ್ ಟಾಕೀಸ್, ಮೈಸೂರು.

★ 'ನಾಮ್-ಇಬ್ಬರು' (ತಮಿಳು)

ಪ್ರತಿ ದಿನ ಮೂರು ಆಟಗಳು

ತಾರಾಗಣ:- ಟಿ. ಆರ್. ಮಹಾಲಿಂಗಂ, ಟಿ. ಎ. ಜಯಲಕ್ಷ್ಮಿ ಮತ್ತು ಬೇಬಿ ಕ...

Distributors:-



ಇಂಡಿಯಾ ಸೂಪರ್ ಟಾಂಗಾ ಟೈರು

ಬಹಳ ಕಾಲ ಬಾಳಿಕೆ ಬರುವ ಮತ್ತು ಸ್ಥಿತಿಸ್ಥಾಪಕವಾದ ರಬ್ಬರಿನಿಂದ ಯುದ್ಧದ ಪೂರ್ವದ ಮಾದರಿಯ ತಯಾರಿಸಲ್ಪಟ್ಟಿರುವುವು. ದಯವಿಟ್ಟು ಒಂದು ಸಾರಿ ಉಪಯೋಗಿಸಿ ನೋಡಿ.

ಸಿಕ್ಕುವ ಸ್ಥಳ:-

ಸಿ. ಬಿ. ಎಂ. ಚಂದ್ರಯ್ಯ, ಅಶೋಕ ರಸ್ತೆ, :: ಮೈಸೂರು

ರಾಜಕಮಲ್, ಮೈಸೂರು

ತಾ॥ ೯-೫-೪೭ ರಿಂದ ಮೂರನೇ ವಾರ-ಪ್ರತಿ ದಿನ ೨ ಆಟಗಳು

'ಗೊಲ್ಲಭಾಮ' (ತೆಲುಗು)

ಭೂಮಿಕೆ:— ವಸಂತ, ರಘುರಾಮಯ್ಯ, ಅಂಜಲೀದೇವಿ

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೧೫—೫—೪೭ [ಸಂಚಿಕೆ ೨೩೭

ಬೊಂಬಾಯಿಯಲ್ಲೂ ಪಾಕಿಸ್ಥಾನದ ಸ್ಥಾಪನೆ ?

ಲೀಗ್ ಮಂತ್ರಿ ಮಂಡಲದ ಮೇಲೆ ಅವಿಶ್ವಾಸ

ಬಂಗಾಳದ ಲೀಗ್ ಮಂತ್ರಿ ಮಂಡಲ ಅವಿಶ್ವಾಸ ಸೂಚಿಸಿ, ಅದು ರಾಜೀನಾಮೆ ಕೊಡಬೇಕೆಂದು ಕಲ್ಕತ್ತ ಪುರಸಭೆಯು ನಿರ್ಣಯಿಸಲಾಗಿದೆ. ಹಿಂದುಗಳು ಬಹುಸಂಖ್ಯಾತರಾಗಿರುವ ಕಲ್ಕತ್ತ ಮತ್ತು ಬಂಗಾಳದ ಪಶ್ಚಿಮ ಭಾಗವನ್ನು ಪ್ರತ್ಯೇಕಿಸಿ ಬೇರೆ ಪ್ರಾಂತ್ಯ ನಿರ್ಮಿಸಬೇಕೆಂದೂ ತೀರ್ಮಾನಿಸಲಾಗಿದೆ. ಇದಕ್ಕೆ ೩೭ ಕಾಂಗ್ರೆಸ್ ಮತ್ತು ಹಿಂದೂ ಮಹಾಸಭಾ ಸದಸ್ಯರೂ, ಆಂಗ್ಲೋ ಇಂಡಿಯನ್ ಸದಸ್ಯರೂ ಬೆಂಬಲವಿತ್ತಿರುವರು. ಆಂಗ್ಲೋ ಇಂಡಿಯನ್ ಮತ್ತು ಐರೋಪ್ಯ ಸದಸ್ಯರು ತಟಸ್ಥರಾಗಿದ್ದರು. ಮುಸ್ಲಿಂ ಲೀಗಿನ ನಾಯಕರೂ ಸದಸ್ಯರೂ ಸಭೆಗೆ ಬರಲಿಲ್ಲ.

ಫಲ್ಟಾಣದಲ್ಲಿ ಪ್ರಜಾ ಮಂತ್ರಿಗಳು

ಫಲ್ಟಣದ ರಾಜಾ ಸಾಹೇಬರು ತಮ್ಮ ಮಂತ್ರಿಮಂಡಲಕ್ಕೆ ಅಲ್ಲಿನ ಪ್ರಜಾ ಸಂಘದ ಶ್ರೀ॥ ಆರ್. ಎಚ್. ಶಹಾ ಮತ್ತು ಶ್ರೀ॥ ಎಸ್. ವಿ ಬಾವಡೇಕರರನ್ನು ಮಂತ್ರಿಗಳಾಗಿ ತೆಗೆದುಕೊಂಡಿದ್ದಾರೆ.

ಹೈದರಾಬಾದಿನ ಮುಂದಿನ ದಿವಾನರಾರು ?

ಹೈದರಾಬಾದಿನ ಮಂತ್ರಿ ಮಂಡಲದ ಅಧ್ಯಕ್ಷರಾದ ಸರ್ ಮಿರ್ಜಾ ಇಸ್ಮಾಯಿಲರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿರುವರು. ಇದು ನಿಜವಾದರೆ ಅವರ ಸ್ಥಾನಕ್ಕೆ ಮದರಾಸಿನ ಮಾಜಿ ಲೀಗ್ ಮುಖ್ಯಮಂತ್ರಿಗಳಾದ ನವಾಬ್ ಛತಾರಿಯವರಾಗಲೀ, ಸಿಂಧ್ ಲೀಗ್ ಮುಖಂಡರಾದ ಎಂ॥ ಫಿರೋಜ್ ಖಾನ್ ನೂನರವರಾಗಲೀ ನೇಮಿಸಲ್ಪಡುವರೆಂದು ಹೇಳಲಾಗಿದೆ

ಕಾಶ್ಮೀರಕ್ಕೆ ಕೃಪಲಾನಿ

ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ನಿನ್ನೆ ಕಾಶ್ಮೀರಕ್ಕೆ ಪ್ರಯಾಣ ಮಾಡಿದರು. ಅವರು ದಾರಿಯಲ್ಲಿ ಲಾಹೋರ್ ಪಂಜಾಬಿಗಳಿಗೆ ಭೇಟಿ ಕೊಡುವರು. ನಂತರ ಶ್ರೀನಗರಕ್ಕೆ ಭೇಟಿ ಕೊಡುವ ಸಮಯದಲ್ಲಿ ಸೆರೆಮನೆಯಲ್ಲಿರುವ ಕಾಶ್ಮೀರದ ಮುಖಂಡರಾದ ಷೇಕ್ ಅಬ್ದುಲ್ಲಾ ಅವರನ್ನು ಅಲ್ಲಿನ ಸರ್ಕಾರವು ಬಿಡುಗಡೆ ಮಾಡಬಹುದೆಂದು ಹೇಳಲಾಗಿದೆ.

ಮೈಸೂರು ಸಿಟಿ ಚೀಫ್ ರೇಷನಿಂಗ್ ಆಫೀಸಿನಿಂದ:-

ನೋಟೀಸ್ ನಂ RI 189-46-47
ತಾರೀಖು 14-5-1947

ಈ ಮೂಲಕ ಮೈಸೂರು ನಗರದ ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ:- ಮೈಸೂರು ಸಿಟಿಯಲ್ಲಿ ರೇಷನಿಂಗ್ ಜಾರಿಯಲ್ಲಿರುವುದರಿಂದಲೂ, ಹೊರಗಿನಿಂದ ಸಿಟಿ ಒಳಕ್ಕೆ ಸಾಗುವ ಸಹ ಕಳ್ಳದಾರಿಯಿಂದಲೂ, ಜನರು ನಿತ್ಯಗಟ್ಟಲೆ ಉಪಯೋಗಕ್ಕೆ ಹೆಸರು, ಕಡಲೆ ವಗೈರೆ ಧಾನ್ಯಗಳನ್ನು ಹೆಚ್ಚಾಗಿ ಕೂಡಿಡಬಾರದೆಂದು ತಿಳಿಯಪಡಿಸುತ್ತೇನೆ.

ಆರ್. ರಾಮಚಂದ್ರಂರಾವ್
ಬೊಂಬುರೀಕರ್,
ಚೀಫ್ ರೇಷನಿಂಗ್ ಆಫೀಸರ್,
ಮೈಸೂರು ಮೈಸೂರು ಸಿಟಿ
14-5-1947

ದರೋಡೆ ಚಿತ್ರಗಳನ್ನು ನಿಲ್ಲಿಸಬೇಕು

ಗ್ಲೋಬ್] ಲಂಡನ್ ೧೦

ತರುಣರ ಮೇಲೆ ದುಷ್ಪರಿಣಾಮವನ್ನುಂಟುಮಾಡುವಂತಹ ದರೋಡೆ ಮುಂತಾದ ದೃಶ್ಯಗಳುಳ್ಳ ಚಿತ್ರಗಳನ್ನು ಇನ್ನು ಮುಂದೆ ನಿಲ್ಲಿಸಬೇಕೆಂದು ಹಾಲಿವುಡ್ಡಿನ ಚಲನ ಚಿತ್ರ ನಿರ್ಮಾಪಕರಿಗೆ ತಿಳಿಸಲಾಗಿದೆ. ಬ್ರಿಟನ್ನಿನಲ್ಲಿಯೂ ಗೃಹ ಮಂತ್ರಿಗಳೂ, ಪೋಲೀಸ್ ಕಮೀಷನರೂ ಈ ಬಗ್ಗೆ ಕ್ರಮ ಕೈಗೊಳ್ಳಲು ಆಲೋಚಿಸುತ್ತಿರುವರು

ನಿಧನ

ಸ್ವಂ. ವ] ನಂಜನಗೂಡು ೧೪

ಇಲ್ಲಿನ ವೈದಿಕ ಮಂಡಳಿಯಲ್ಲಿ ಅಗ್ರಗಣ್ಯರಾಗಿದ್ದ ಶ್ರೀ॥ ವೇ॥ ವೈದ್ಯ ರಾಮರಾವ ಘನಪಾಠಿಗಳವರು ನೆನ್ನೆ ರಾತ್ರಿ ೧೦ ಘಂಟೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ೬೨ ವರ್ಷ ವಯಸ್ಸಾಗಿದ್ದಿತು. ಮೃತರ ಆತ್ಮಕ್ಕೆ ಭಗವಂತನು ಶಾಂತಿಯೀಯಲೆಂದು ಪ್ರಾರ್ಥಿಸುತ್ತೇವೆ.

ಗೂಢಚಾರನ ಬಂಧನ

ನೆನ್ನೆ ಇಲ್ಲಿನ ಹೋಟೆಲೊಂದರಲ್ಲಿ ಗೂಢಚಾರನೆಂದು ಹೇಳಿಕೊಂಡು ಹಣವನ್ನು ತೆಗೆದುಕೊಂಡು ಹೋದ ಮನುಷ್ಯನು ಚಾಮರಾಜನಗರದಲ್ಲಿಯೂ ಇದೇ ರೀತಿ ಮಾಡುತ್ತಿದ್ದಾಗ ಪೋಲೀಸರ ಕೈಗೆ ಸಿಕ್ಕಿಬಿದ್ದನು ಅವನನ್ನು ಬಂಧಿಸಿ ಇಲ್ಲಿಗೆ ಕರೆತಂದು ವಿಚಾರಣೆಗೆ ಗುರಿಪಡಿಸಲಾಗಿದೆ

ಸನ್ಮಾನ ಸಭೆ

ಮೈಸೂರು ೧೫

ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮದ ಶ್ರೀ॥ ವಿಶ್ವಕರ್ಮ ಸಮಾಜದವರು, ಶ್ರೀ॥ ಟಿ. ಚಲುವಾಚಾರ್ಯರಿಗೆ ವಾಸ್ತುಕಲಾಸೇವಾಸಕ್ತ ಎಂಬ ಪ್ರಶಸ್ತಿ ಬಂದುದಕ್ಕಾಗಿ ಸಂತೋಷ ಸೂಚಿಸಲು ನೆನ್ನೆ ಸಭೆ ಸೇರಿ ಅವರನ್ನು ಸನ್ಮಾನಿಸಿದರು ಶ್ರೀ॥ ಎಲ್ ಶಿವಲಿಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಹರಿಕಥೆ

ದೇವೀರಮ್ಮಣ್ಣೀ ಅಗ್ರಹಾರದಲ್ಲಿ ಶ್ರೀರಾಮ ಸೇವಾ ಸಂಘದ ಆಶ್ರಯದಲ್ಲಿ ಏಕಾದಶೀ ಪ್ರಯುಕ್ತ ನಾಳೆ ರಾತ್ರಿ ೯ ಘಂಟೆಗೆ ವಿದ್ವಾನ್ ಸೋಸಲೆ ನಾರಾಯಣದಾಸರಿಂದ ಸತಿ ಅನಸೂಯ ಎಂಬ ಹರಿಕಥೆಯು ನಡೆಯುವುದು.

ಬೊಂಬಾಯಿ ಪ್ರಾಂತ್ಯದಲ್ಲೂ ಪಾಕಿಸ್ಥಾನದ ಸ್ಥಾಪನೆಯೇ ?

ಬೊಂಬಾಯಿ ಪ್ರಾಂತ್ಯದಲ್ಲಿ ಮುಸಲ್ಮಾನರು ಬಹುಸಂಖ್ಯಾತರಾಗಿರುವ ಪ್ರದೇಶಗಳನ್ನು ಗೊತ್ತುಮಾಡಿ, ಅವುಗಳನ್ನೆಲ್ಲಾ ಒಂದುಗೂಡಿಸಿ ಪ್ರತ್ಯೇಕ ಮತ್ತು ಸ್ವತಂತ್ರ ಪ್ರಾಂತ್ಯವನ್ನು ರಚಿಸಬೇಕೆಂದು ಅಲ್ಲಿನ ಮುಸ್ಲಿಂ ಲೀಗಿನವರು ಪ್ರಯತ್ನಿಸುತ್ತಿದ್ದಾರೆಂದು ವರದಿಯಾಗಿದೆ, ಬೊಂಬಾಯಿ ಪ್ರಾಂತ ಮುಸ್ಲಿಂ ಲೀಗಿನ ಕಾರ್ಯಕಾರಿ ಸಮಿತಿಯಲ್ಲಿ ಇಂದು ಈ ಬಗ್ಗೆ ಬಂದಿರುವ ನಿರ್ಣಯವನ್ನು ಪರಿಶೀಲಿಸಲಾಗುವುದು.

ಇಸ್ಮೆರವರು ವಾಪಸು

ವೈಸರಾಯರ ಪ್ರತಿನಿಧಿಗಳಾದ ಲಾರ್ಡ್ ಇಸ್ಮೆರವರು ಬ್ರಿ॥ ಮಂತ್ರಿಗಳೊಡನೆ ತಮ್ಮ ಮಾತುಕತೆಗಳನ್ನು ಮುಗಿಸಿಕೊಂಡು ಇಂದು ಭಾರತಕ್ಕೆ ಹಿಂತಿರುಗುವರೆಂದು ಹೇಳಲಾಗಿದೆ ಅವರು ಬಂದನಂತರ ಭಾರತದ ರಾಜಕೀಯ ಪಟುಪಟಿಕೆಗಳು ಮತ್ತೆ ಆರಂಭವಾಗುವುದೆಂದೂ, ಈವರ ಮೂಲಕ ಬ್ರಿ॥ ಮಂತ್ರಿಮಂಡಲದವರು ಅಧಿಕಾರ ವರ್ಗಾವಣೆಯ ವಿಚಾರದಲ್ಲಿ ಕಳುಹಿಸುವ ಯೋಜನೆಯನ್ನು ವೈಸರಾಯರು ಮುಖಂಡರುಗಳಿಗೆ ಜೂನ್ ೨ ನೇ ತಾ॥ ತಿಳಿಸುವರೆಂದೂ ಗೊತ್ತಾಗಿದೆ.

○ ಆಫ್ರಿಕದಲ್ಲಿ ಹಿಂದೆ ಇಟಲಿಯ ಸ್ವಾಧೀನಗಳಾಗಿದ್ದ ಎರಿಟ್ರಿಯಾ, ಮತ್ತು ಸೋಮಾಲಿ ಲ್ಯಾಂಡ್ ಪ್ರದೇಶಗಳು ತಮಗೆ ಸೇರಬೇಕೆಂದು ಅಬಿಸೀನಿಯದ ರಾಜರಾದ ಹೈಲಿ ಸಿಲಾಸಿಯವರು ಕೇಳಿರುವರು ಈ ಅಂಶವನ್ನು ಪ್ರಪಂಚ ಸಂಸ್ಥೆಗೆ ಬಿಡಬೇಕೆಂಬ ಸೂಚನೆಯನ್ನು ಅವರು ನಿರಾಕರಿಸಿರುವರು

LATEST NEWS

ಪೌರಸಭೆಯು ಬಿಕ್ಕಟ್ಟು ಮರುಕಳಿಸಿತೇ ?

ಮೈಸೂರು ೧೫

ಅವಿಶ್ವಾಸ ನಿರ್ಣಯವನ್ನು ಚರ್ಚಿಸಲು ಪೌರಸಭಾಧ್ಯಕ್ಷರು ಪೌರಸಭೆಯ ವಿಶೇಷ ಸಭೆಯನ್ನು ಕರೆಯಲು ನಿರಾಕರಿಸಿದುದರಿಂದ ಉಪಾಧ್ಯಕ್ಷರೇ ಆ ಸಭೆಯನ್ನು ನಡೆಸಿದರಷ್ಟೆ ಸದರಿ ವಿಶೇಷ ಸಭೆಯ ಕಾರ್ಯಕಲಾಪಗಳನ್ನು ವರದಿಯ ಪುಸ್ತಕದಲ್ಲಿ ಸೇರಿಸಲು ಅಧ್ಯಕ್ಷರು ಈಗ ನಿರಾಕರಿಸುತ್ತಿರುವುದರಿಂದ ಪುನಃ ಬಿಕ್ಕಟ್ಟು ತಲೆದೋರಿ ಈ ದಿನ ನಡೆದ ಪೌರಸಭಾಧಿವೇಶನವು ಯಾವ ಕೆಲಸವನ್ನೂ ನಡೆಸದೆ ಮತ್ತೆ ೨೬ ನೇ ತಾ॥ ಗೆ ಮುಂದುವರೆಯಿತು

ಹೇಬಿಯಸ್ ಕಾರ್ಪಸ್ ಮಸೂದೆ

ಸ್ವಂ ಸು ವ್ರೋ] ಬೆಂಗಳೂರು ೧೫

ಬ್ರಿಟಿಷ್ ಹಿಂದೂಸ್ಥಾನದಲ್ಲಿರುವಂತೆಯೇ ಇಲ್ಲಿಯೂ, ಹೇಬಿಯಸ್ ಕಾರ್ಪಸ್ ಪ್ರಕಾರ ಹೈಕೋರ್ಟಿಗೆ ಅಧಿಕಾರ ಕೊಡುವ ಮಸೂದೆಯನ್ನು ಬರುವ ಪ್ರಜಾಪ್ರತಿನಿಧಿ ಸಭೆಯಲ್ಲಿ ಸರ್ಕಾರದವರೇ ಮಂಡಿಸುವವರಾಗಿದ್ದಾರೆ. ಬಂಧನದಲ್ಲಿರುವವರನ್ನು ಇದರ ಪ್ರಕಾರ ಕೋರ್ಟಿನಲ್ಲಿ ಹಾಜರ್ಪಡಿಸಲು ಅವಕಾಶ ಕಲ್ಪಿಸಲಾಗುವುದು ಅಂತರ್ಜಾತೀಯ ವಿವಾಹಗಳನ್ನು ಶಾಸನ ಬದ್ಧವಾಗಿ ಮಾಡುವುದಕ್ಕೂ, ಸಾರ್ವಜನಿಕ ಪ್ರದೇಶಗಳಿಗೆಲ್ಲಾ ಹರಿಜನರು ಪ್ರವೇಶಿಸಲು ಅವಕಾಶ ಕಲ್ಪಿಸುವುದಕ್ಕೂ, ನಾಗರಿಕರ ಹಕ್ಕುಗಳಿಗೆ ಇರುವ ಅನಿವಾರ್ಯಗಳನ್ನು ತೆಗೆದು ಹಾಕುವುದಕ್ಕೂ ಸಹ ಸರ್ಕಾರದವರು ಮಸೂದೆಗಳನ್ನು ತರಲಿರುವರು.

ಶ್ರೀ॥ ಕೆ. ಚೆಂಗಲರಾಯ ರೆಡ್ಡಿಯವರು ಕೊಚ್ಚಿ ಪ್ರಜಾ ಸಮ್ಮೇಳನದಲ್ಲಿ ಭಾಗವಹಿಸಲು ಈ ದಿನ ಅಲ್ಲಿಗೆ ತೆರಳಿರುವರು

ದಿವಾನರು ನಾಳಿದ್ದು ಮೈಸೂರಿಗೆ ಬರುವರು. ೨೦ ನೇ ತಾ॥ ಮಂತ್ರಿಮಂಡಲದ ಸಭೆಯು ಬೆಂಗಳೂರಿನಲ್ಲಿ ನಡೆಯುವುದು

ಈ ದಿನ ಸಾಯಂಕಾಲ ಸಂಸ್ಥಾನದ ಮುಸ್ಲಿಂ ಜನಾಂಗದವರ ಪರವಾಗಿ ಬಿನ್ನವತ್ತಳೆಯೊಂದನ್ನು ದಿವಾನರಿಗೆ ಅರ್ಪಿಸಲಾಗುವುದು.

ಮದ್ರಾಸಿನ ಶಾಸನ ಸಭಾ ಸದಸ್ಯರಾದ ಶ್ರೀ॥ ಕೆ. ವೆಂಕಟಸ್ವಾಮಿ ನಾಯ್ಡುರವರು ನಾಳೆ ದಿನ ಇಲ್ಲಿನ ಶ್ರೀ ವೈಷ್ಣವ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವರು ಶ್ರೀ ಸಾಸ್ತ್ರಿ ವೆಂಕಟೇಶಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು.

ಚನ್ನಪಟ್ಟಣದ ಹೆಡ್‌ಮಾಸ್ಟರ ಕೊಲೆ ಸಂಬಂಧದಲ್ಲಿ ನಿನ್ನೆ ಪೈಸ್ಕೂಲ್ ಹೆಡ್ ಕ್ಲಾರ್ಕರ ಸಾಕ್ಷ್ಯವನ್ನು ತೆಗೆದುಕೊಳ್ಳಲಾಯಿತು. ಸ್ಕೂಲಿಗೆ ಗುಂಪು ನುಗ್ಗಿದಾಗ ಎಷ್ಟು ಬೇಡಿಕೊಂಡರೂ ಕೇಳದೆ ಹೆಡ್ ಮಾಸ್ಟರನ್ನು ಕೊಲೆ ಮಾಡಿದ ವಿಷಯವನ್ನು ಅವರು ತಿಳಿಸಿದರು

ಬರ್ಮದಲ್ಲಿ ಪರಮಾವಧಿ ಸಂಬಳ ೧೮೦೦ ರೂ.

ಗ್ಲೋಬ್] ರಂಗೂನ್ ೧೧

ಬರ್ಮದ ಸಂಬಳ ಕಮಿಟಿಯು ಅಲ್ಲಿನ ಅಧಿಕಾರಿಗಳ ಪರಮಾವಧಿ ಸಂಬಳವು ೧೮೦೦ ರೂ. ಗಳನ್ನು ಮೀರಕೂಡದೆಂದು ಸಲಹೆ ಇತ್ತಿದೆ ಕೆಳ ದರ್ಜೆ ನೌಕರರ ಸಂಬಳವನ್ನು ಬಹಳವಾಗಿ ಹೆಚ್ಚು ಮಾಡಿದೆ ಯುದ್ಧಕ್ಕೆ ಮುಂಚೆ ಇದ್ದುದಕ್ಕಿಂತ ಈಗ ಎರಡೂವರೆ ಕೋಟಿ ರೂ ಗಳು ಹೆಚ್ಚು ಖರ್ಚಾಗುವುದು

ಲೀಗಿನವರಿಗೆ ಗಡಿನಾಡು ಗಾಂಧಿಯವರ ಆಹ್ವಾನ

ಮುಸ್ಲಿಂ ಲೀಗಿನವರಿಗೆ ಹಿಂದೂ ಸ್ವತಂತ್ರ ಸರಕಾರಕ್ಕಿಂತ ಬ್ರಿಟಿಷರ ಹೆದರಿಕೆ. ಆದ್ದರಿಂದ ಲೀಗಿನವರು ಸರ್ಕಾರದ ಹೆದರಿಕೆಯನ್ನು ತೊರೆದು ನೀಗಿಸಬೇಕು. ಬ್ರಿಟಿಷರು ಭಾರತವನ್ನು ಬಿಟ್ಟುಹೋದ ಮೇಲೆ ಉದ್ಭವಿಸುವ ಕೋಮುವಾರು ಸಮಸ್ಯೆಗಳ ಬಗ್ಗೆ ಸಮಾಲೋಚನೆ ನಡೆಸಲು ಲೀಗಿನವರು ಕೆಂಪು ದಳದವರೊಡನೆ ಕುಳಿತು ಚರ್ಚೆ ನಡೆಸಬೇಕು—ಎಂಬುದಾಗಿ ಗಡಿನಾಡಿನ ಗಾಂಧಿ ಗಫಾರ್ ಖಾನರು ಲೀಗಿನವರಿಗೆ ಆಹ್ವಾನವಿತ್ತಿದ್ದಾರೆ

ಸಾಧ್ವಿ

ತಾ|| ೧೫-೫-೪೭ ಗುರುವಾರ

ಹೈದರಾಬಾದಿನ ಹೀನಸ್ಥಿತಿ

ಸರ್ ಮಿರ್ಜಾ ಇಸ್ಮೇಲರು ಹೈದರಾಬಾದಿನ ಪ್ರಧಾನ ಮಂತ್ರಿಯ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಗಿ ಬಂದಿರುವ ಪ್ರಸಂಗವು ಆ ಸಂಸ್ಥಾನದ ಹೀನಸ್ಥಿತಿಯನ್ನು ವ್ಯಕ್ತಪಡಿಸುವುದಾಗಿದೆ. ರಾಜ್ಯಾಂಗ ಸಭೆಯಲ್ಲಿಯೂ, ಭಾರತದ ಯೂನಿಯನ್ನಿನಲ್ಲಿಯೂ ಹೈದರಾಬಾದು ಭಾಗ ವಹಿಸಬೇಕೆಂಬ ವಿಚಾರದಲ್ಲಿ ನೈಜಾಮರಿಗೂ, ಸರ್ ಮಿರ್ಜಾರವರಿಗೂ ಭಿನ್ನಾಭಿಪ್ರಾಯವುಂಟಾಗಿರುವುದೇ ರಾಜೀನಾಮೆಗೆ ಕಾರಣವೆಂದು ಹೇಳಲಾಗಿದೆ. ಇದು ನಿಜವಿದ್ದರೆ ಸರ್ ಮಿರ್ಜಾರವರ ವರ್ತನೆಯನ್ನು ಸಕಲ ದೇಶಾಭಿಮಾನಿಗಳೂ ಕೊಂಡಾಡುವುದರಲ್ಲಿ ಸಂದೇಹವಿಲ್ಲ.

ರಾಜ್ಯಾಂಗ ಸಭೆಯಲ್ಲಿ ಹೈದರಾಬಾದು ಸೇರುವುದೆಂಬ ವಾರ್ತೆಯು ಕೆಲವು ದಿನಗಳ ಹಿಂದೆ ಹರಡಿತ್ತು. ಆದರೆ ಅದನ್ನು ನಿರಾಕರಿಸಿ ಅಲ್ಲಿನ ಪ್ರಭುತ್ವದವರು ಪ್ರಕಟಣೆಯೊಂದನ್ನು ಹೊರಡಿಸಿದರು. ಆ ಕಾಲದಲ್ಲಿ ಸರ್ ಮಿರ್ಜಾರವರು ಬೆಂಗಳೂರಿನಲ್ಲಿಯೇ ಇದ್ದರು. ಅವರು ದೆಹಲಿಗೆ ತೆರಳಿ ವೈಸರಾಯರೊಡನೆ ಹೈದರಾಬಾದು ರಾಜ್ಯಾಂಗ ಸಭೆಯಲ್ಲಿ ಸೇರುವ ವಿಚಾರವನ್ನು ಪ್ರಸ್ತಾಪ ಮಾಡುವರೆಂಬ ಸುದ್ದಿಯು ಬರುತ್ತಿದ್ದ ಹಾಗೆಯೇ ನೈಜಾಂ ಸರ್ಕಾರದ ಮೇಲ್ಕಂಡ ಪ್ರಕಟಣೆಯು ಹೊರಬಿತ್ತು. ಇದರಿಂದ ವಿಸ್ಮಿತರಾಗಿ ಸರ್ ಮಿರ್ಜಾರವರು ರಾಜೀನಾಮೆ ಇತ್ತಿದ್ದರೆ ಆಶ್ಚರ್ಯವಿಲ್ಲ.

ಭಾರತ ರಾಜ್ಯಾಂಗ ಸಭೆಯೊಡನೆ ಸಂಧಾನ ನಡೆಸಲು ಏರ್ಪಟ್ಟಿರುವ ಸಮಿತಿಯಲ್ಲಿ ಹೈದರಾಬಾದಿನ ಪರವಾಗಿ ಸರ್ ಮಿರ್ಜಾರವರು ಭಾಗ ವಹಿಸಿ ಅದರ ಕಾರ್ಯನೀತಿಯನ್ನು ನಿರ್ಧರಿಸಲು ಬಹಳ ಮಟ್ಟಿಗೆ ಸಹಕಾರಿಗಳಾಗಿದ್ದರು. ಅದಕ್ಕನುಗುಣವಾಗಿ ಹೈದರಾಬಾದಿನ ಪ್ರತಿನಿಧಿಗಳು ಆ ಸಭೆಗೆ ಹೋಗಲು ತಕ್ಕ ಪ್ರಯತ್ನಗಳನ್ನೂ ಸಹ ಅವರು ಮಾಡುತ್ತಿದ್ದರು. ಆದರೆ ಪ್ರತಿಗಾಮಿ ಶಕ್ತಿಗಳ ಕೈವಾಡವು ಇತ್ತೀಚೆಗೆ ಹೈದರಾಬಾದಿನಲ್ಲಿ ಪ್ರಾಬಲ್ಯವನ್ನು ಹೊಂದುತ್ತಿರುವಂತೆ ಕಾಣಬರುತ್ತದೆ. ಶ್ರೀ ಪ್ರಕಾಶರವರನ್ನು ದಸ್ತಗಿರಿ ಮಾಡಿದ ಪ್ರಕರಣವೂ ಈ ವರ್ಗದವರಿಂದಲೇ ನಡೆದಿರುತ್ತದೆ. ಸರ್ ಮಿರ್ಜಾರವರು ಕೇವಲ ಸ್ವಲ್ಪ ದಿನಗಳಲ್ಲಿಯೇ ಹೈದರಾಬಾದನ್ನು ಸರ್ವ ವಿಧದಲ್ಲಿಯೂ ಮುಂದಕ್ಕೆ ತರಲು ಮಾಡಿದ ಪ್ರಯತ್ನಗಳೆಲ್ಲವೂ ನಿರ್ನಾಮವಾದಂತಿವೆ. ಇಂತಹ ಪರಿಸ್ಥಿತಿಯಲ್ಲಿ ಆತ್ಮಗೌರವವುಳ್ಳ ಯಾರೊಬ್ಬರೂ ತಮ್ಮ ಸ್ಥಾನದಲ್ಲಿ ಇರಲು ಸಾಧ್ಯವಿಲ್ಲ.

ಹೈದರಾಬಾದಿನ ರಾಜಕೀಯವು ಇತ್ತೀಚೆಗೆ ಅತ್ಯಂತ ವಿಷಮಾವಸ್ಥೆಗೆ ತಿರುಗುತ್ತಿರುವಂತಿದೆ. ಬರುವ ವರ್ಷದ ಹೊತ್ತಿಗೆ ಆ ಸಂಸ್ಥಾನವು ಒಂದು ಸ್ವತಂತ್ರ ಸಾಮ್ರಾಜ್ಯವೆಂದು ಸಾರಲು ಹಲವರ ಚಾಪಲ್ಯವಿರುವುದಾಗಿ ಕಂಡು ಬಂದಿದೆ. ನೈಜಾಮರನ್ನು ಚಕ್ರವರ್ತಿ ಸಾರ್ವಭೌಮರೆಂದು ಘೋಷಿಸಬೇಕೆಂಬ ಹಂಬಲವಿರುವಂತಿದೆ. ಆ ಸಂಸ್ಥಾನವನ್ನು ಭಾರತದ ಯಾವ ಪ್ರದೇಶಕ್ಕೂ ಸೇರಿಸದೆ ನೇರವಾಗಿ ಸಂಯುಕ್ತ ರಾಷ್ಟ್ರ ಸಂಘಕ್ಕೆ ಸೇರಿಸುವ ಅಭಿಪ್ರಾಯಗಳೂ ಹೊರಬೀಳುತ್ತಿವೆ. ಬ್ರಿಟಿಷ್ ಸಾಮ್ರಾಜ್ಯದಲ್ಲಿಯೇ ಅದೊಂದು ಪ್ರತ್ಯೇಕ ಡೊಮಿನಿಯನ್ನಾಗಿರಬೇಕೆಂದು ಸೂಚಿಸುವವರೂ ಇದ್ದಾರೆ.

ಈ ಮಧ್ಯೆ ನೈಜಾಮರಿಗೆ ಬೀರಾರ್ ಪ್ರಾಂತವನ್ನು ವಾಪಸು ಕೊಡಿಸುವ ಪ್ರಯತ್ನಗಳೂ ನಡೆಯುತ್ತಿವೆ. ಮಚಲೀಪಟ್ಟಣದ ಬಂದರು ಬೇಕೆಂದು ಅಲ್ಲಿನ ಸರ್ಕಾರದವರು ಕೇಳುತ್ತಿದ್ದಾರೆ. ಇತ್ತೀಚೆಗೆ ಪಶ್ಚಿಮ ಭಾಗದಲ್ಲಿರುವ ಗೋವಾ ರೇವು ಪಟ್ಟಣವನ್ನು ನೈಜಾಮರು ಕ್ರಯಕ್ಕೆ ತೆಗೆದುಕೊಳ್ಳುವರೆಂಬ ವಾರ್ತೆಯೂ ಹರಡಿದೆ. ಇವುಗಳಿಗೆ ಆಯಾ ಪ್ರದೇಶಗಳ ಪ್ರಜೆಗಳು ತೀವ್ರವಾಗಿ ಪ್ರತಿಭಟನೆಯನ್ನೂ ಸೂಚಿಸುತ್ತಿದ್ದಾರೆ.

ಈ ಮಧ್ಯೆ ಮುಸ್ಲಿಂ ಲೀಗಿನ ಹಲವು ನಾಯಕರು ಹೈದರಾಬಾದಿನ ವಿಷಯದಲ್ಲಿ ವಿಶೇಷ ಆಸಕ್ತಿ ವಹಿಸಿ ಅದರ ಮೇಲೆ ಪ್ರತಿಭಟಿಸುವವರಿಗೆ ತಕ್ಕ ಪ್ರತೀಕಾರ ಮಾಡುವುದಾಗಿ ಬೆದರಿಕೆಯನ್ನೂ ಸೂಚಿಸಿದ್ದಾರೆ.

ಒಟ್ಟಿನಲ್ಲಿ ಹೈದರಾಬಾದು ಭಾರತದ ಸ್ವಾತಂತ್ರ್ಯ ಸಾಧನೆಗಾಗಲೀ, ರಾಜ್ಯಾಂಗ ರಚನೆಗಾಗಲೀ ಸ್ವಲ್ಪ ಮಾತ್ರವೂ ಸಹಕಾರಿಯಾಗುವ ಸೂಚನೆಗಳು ಕಂಡುಬರು[illegible]. ಕೆಲವು ದಿನಗಳ ಹಿಂದೆ ಕೋಮುವಾರು ಗಲಭೆಗಳು ವಿಪರೀತವಾಗಿದ್ದಾಗ ಅ[illegible] ಭಾರತದ ಹಿತಸಾಧನೆಗಾಗಿ ನೈಜಾ[illegible] ಹೊರಡಿಸಿದ ಹೇಳಿಕೆಯು ಒಂದು ಟ[illegible] ಘೋಷಣೆಯೆಂದು ಈಗ ಭಾಸವಾಗುತ್ತ[illegible]. ಹೈದರಾಬಾದಿನ ವಿದ್ಯಮಾನಗಳು ಆ ಸಂಸ್ಥಾನದ ಅಧಃಪತನವನ್ನು ಸೂಚಿಸು[illegible]ವುದಕ್ಕಾಗಿ ಸಕಲರೂ ವಿಷಾದಿಸಬೇಕಾ[illegible]

ಚಾಮರಾಜನಗರ ಟೌನ್ ಮುನಿಸಿಪಲ್ ಆಫೀಸಿನಿಂದ

ಹರಾಜು ಇಸ್ತಿಹಾರ್

ಈ ಟೌನ್ ಮುನಿಸಿಪಲ್ ಸರಹದ್ದಿನಲ್ಲಿ ೧೯೪೭ನೇ ಜುಲೈ ೧ನೇ ತಾರೀಖಿನಿಂದ ೧೯೪೮ನೇ ಜೂನ್ ೩೦ನೇ ತಾರೀಖಿನವರೆಗಿನ ಒಂದು ವರ್ಷ ಅವಧಿಯಲ್ಲಿ ಟೋಲು ವಸೂಲಿಸುವ ಹಕ್ಕನ್ನು ಹರಾಜು ಷರತ್ತಿನ ಮೇರೆಗೆ ತಾರೀಖು ೪-೬-೧೯೪೭ನೇ ಬುಧವಾರ ಮಧ್ಯಾಹ್ನ ೩ ಘಂಟೆಗೆ ಸರಿಯಾಗಿ ಟೌನ್ ಮುನಿಸಿಪಲ್ ಆಫೀಸಿನ ಬಳಿ ಬಹಿರಂಗವಾಗಿ ಹರಾಜು ಹಾಕಲ್ಪಡುತ್ತದೆ. ಇಷ್ಟವುಳ್ಳವರು ಆ ದಿವಸ ೧೫೦ ರೂಪಾಯಿ ಠೇವಣಿ ಹಣವನ್ನು ಪಾವತಿ ಮಾಡಿ ಭಿಡ ಸವಾಲಿನ ಮೂಲಕ ಪಡೆಯಬಹುದು.

ಹೆಚ್. ಹಾಲಪ್ಪ,
ಪ್ರೆಸಿಡೆಂಟ್

ಚಾಮರಾಜನಗರದ ಟೌನ್ ಮುನಿಸಿಪಲ್ ಆಫೀಸಿನಿಂದ

ಹರಾಜು ಇಸ್ತಿಹಾರ್

ಈ ಟೌನ್ ಮುನಿಸಿಪಾಲಿಟಿಗೆ ಸೇರಿದ ಬಸ್ ಸ್ಟ್ಯಾಂಡ್ ಕಟ್ಟಡದಲ್ಲಿ ೧೯೪೭ನೇ ಇಸವಿ ಜುಲೈ ೧ನೇ ತಾ|| ಲಾಗಾಯಿತು ಮೂರು ವರುಷಗಳ ಕಾಲದ ಅವಧಿಯೊಳಗೆ ಹೋಟೆಲನ್ನು ಇಟ್ಟುಕೊಂಡು ವ್ಯಾಪಾರ ಮಾಡುವ ಹಕ್ಕನ್ನು ಹರಾಜು ಇಸ್ತಿಹಾರಿನ ಷರತ್ತಿನಂತೆ ೧೯೪೭ನೇ ಇಸವಿ ಜೂನ್ ಮಾಹೆ ೪ನೇ ತಾ|| ೩ ಗಂಟೆಗೆ ಸರಿಯಾಗಿ ಟೌನ್ ಮುನಿಸಿಪಲ್ ಆಫೀಸಿನ ಬಳಿ ಹರಾಜು ಮೂಲಕ ವಿಲೆ ಮಾಡಲಾಗುತ್ತದೆ. ಇಷ್ಟವುಳ್ಳವರು ೨೦ ರೂ ಠೇವಣಿ ಪಾವತಿ ಮಾಡಿ ಭಿಡ ಸವಾಲು ಮೂಲಕ ಸದರಿ ಹಕ್ಕನ್ನು ಪಡೆದುಕೊಳ್ಳಬಹುದೆಂದು ಈ ಮೂಲಕ ಪ್ರಚುರಪಡಿಸುತ್ತದೆ.

ಹೆಚ್. ಹಾಲಪ್ಪ,
ಪ್ರೆಸಿಡೆಂಟ್

ಪ್ರತಿ ದಿನ 3 ಆಟಗಳು
೧೬—೫—೪೭ ರಿಂದ
ಫಜ್ಲಿ ಬ್ರದರ್ಸ್‌ರವರ ಮಾಸ್ಟರ್ ಪೀಸ್
ದಿಲ್
ಮುಖ್ಯ ಭೂಮಿಕೆ:—ನೂರ್ ಜಹಾನ್, ಅಬ್ದುಲ್ ಲತೀಫ್, ಗೀತಾ ಬೋಸ್
ಒಲಿಂಪಿಯಾ ಟಾಕೀಸ್

ರಾಜಕಮಲ್, ಮೈಸೂರು
ತಾ|| ೧೬-೫-೪೭ ರಿಂದ ನಾಲ್ಕನೇ ವಾರ-ಪ್ರತಿ ದಿನ ೨ ಆಟಗಳು
'ಗೊಲ್ಲಭಾಮ' (ತೆಲುಗು)
ಭೂಮಿಕೆ:—ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ
ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ
—: ನಮ್ಮಲ್ಲಿ ವಿಚಾರಿಸಿ. :—
ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.
ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,
ಅಶೋಕಾ ರಸ್ತೆ, ಮೈಸೂರು.
ಸ್ಥಾಪಿತ ೧೯೩೩ :: ಫೋನ್ ೪೧೭

11-5-47 ನೇ ತಾ|| ನಿಂದ ಜನಭರಿತವಾದ 2 ನೇ ವಾರ
ವುಡ್-ಲ್ಯಾಂಡ್ಸ್ ಟಾಕೀಸ್, ಮೈಸೂರು.
★ 'ನಾವ್–ಇಬ್ಬರು' ★ (ತಮಿಳು)
ಪ್ರತಿ ದಿನ ಮೂರು ಆಟಗಳು
ತಾರಾಗಣ: ಟಿ. ಆರ್. ಮಹಾಲಿಂಗಂ, ಟಿ. ಎ. ಜಯಲಕ್ಷ್ಮಿ ಮತ್ತು ಬೇಬಿ ಕಮಲ

ನಾಯಿಕೆಮ್ಮಿನ ಔಷಧಿ
7-8 ದಿವಸಗಳಲ್ಲೇ ಖಾಯಿಲೆಯು ವಾಸಿಯಾಗುತ್ತೆ.
ಕ್ರಯ ಬಾಟ್ಲಿಗೆ 1-8-0
ಗೂರಲು—ಉಬ್ಬಸಕ್ಕೆ
(Asthma)
ಖಾತರಿಯಾದ ಔಷಧಿ ದೊರೆಯುತ್ತ[illegible] ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.
(Appendecitis) ಗುಲ್ಮ ಶೂ[illegible] ಮತ್ತು (Tonsils) ಗಳಾಯುಳ ಅವ[illegible]ನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತ[illegible] ಖುದ್ದು ಬಂದು ನೋಡಿ.
ಗುಂಡ್ಲುಪೇಟೆ ಆರ್. ಎಸ್. ಪಂಡಿತರು
ದಿವಾನ್ಸ್ ರೋಡ್, ಗೊಲ್ಲಗೇರಿ ಮೈಸೂರು

ಗರ್ಭ ರಕ್ಷಿಣಿ
ಅನೇಕರ ಅನುಭವ ಸಿದ್ಧವಾದ ಔಷಧಿ
ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು
ಆಯುರ್ವೇದ ವೈದ್ಯ ಭೂಷಣ
ಪಂಡಿತ್ ಕೆ. ವಿ. ವೆಂಕಟರಾಮಯ್ಯ,
ಡಿ|| ಬೋರ್ಡ್ ವೈದ್ಯ, ಅರಕಲವಾಡಿ.
ಚಾಮರಾಜನಗರ ತಾ||

RAJKAMAL
Morning Shows from 16-5-47
for 4 days daily at 10-30 a m
'Intermezzo'
with
Leslie Howard and
Ingrid Bergmann

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

Edited, printed and published by A. R. Nagarajan of the Sadhvi Press [illegible] Mysore

ಫೋನ್ ನಂ. ೩೨೨ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೫] ಶುಕ್ರವಾರ ೧೬—೫—೪೭ [ಸಂಚಿಕೆ ೨೩೮

ಲಂಡನ್ನಿಗೆ ಬರಲು ವೈಸರಾಯರಿಗೆ ಕರೆ

...ರರಿಗೂ ಸಮಾನ ಅವಕಾಶ ದೊರೆಯಬೇಕು

ದಿವಾನರ ಭಾಷಣ

...ಸು.ಫೋ] ಬೆಂಗಳೂರು ೧೬

ಮೈಸೂರು ಸಂಸ್ಥಾನದ ಮುಸಲ್ಮಾನರ ...ಗಿ ದಿವಾನರಾದ ಸರ್ ಆರ್ಕಾಟ್ ...ಸ್ವಾಮಿ ಮೊದಲಿಯಾರರಿಗೆ ನಿನ್ನೆ ...ತಿ ಬಿನ್ನವತ್ತಳೆಯೊಂದನ್ನು ಬೆಳ್ಳಿ ಕರಂ...ದ ಒಪ್ಪಿಸಲಾಯಿತು. ಮೈಸೂರಿಗೆ ...ದು ದಿವಾನರಾಗಿ ಬಂದುದು ತಮ್ಮ ಪು...ವೆಂದು ಬಿನ್ನವತ್ತಳೆಯಲ್ಲಿ ನಿ...ಸಿಕೊಳ್ಳಲಾಗಿದ್ದಿತು. ಮುಸಲ್ಮಾನರ ...ಕೀಯ ಮತ್ತು ಧಾರ್ಮಿಕ ಹಕ್ಕುಬಾ...ಗಳನ್ನು ದಿವಾನರು ಕಾಪಾಡುವರೆಂಬ ...ತ್ರರವನ್ನು ಸೂಚಿಸಿ ಶ್ರೀಮನ್ಮಹಾ...ರಲ್ಲಿ ತಮ್ಮ ರಾಜಭಕ್ತಿಯನ್ನು ವ್ಯಕ್ತ...ಸಲಾಗಿದ್ದಿತು.

ದಿವಾನರು ಉತ್ತರವಾಗಿ ಇಂಥಾ ಸಮಾ...ಗಳು ಹೆಚ್ಚುಹೆಚ್ಚಾಗಿ ನಡೆಯದೇ ...ದೂ, ಭಾರತದಲ್ಲಿ ತಲೆದೋರಿರುವ ...ಮುದಾಯ ಗಲಭೆಯ ಸಮಯದಲ್ಲಿ ...ರು ಈ ರೀತಿಯಲ್ಲಿ ಇತರರಿಗೆ ಮಾ...ದರ್ಶಕರಾಗಿರಬೇಕೆಂದೂ, ಹೇಳಿದರು. ...ರಾಜಕೀಯ ಸಿದ್ಧಾಂತವನ್ನು ಬಿನ್ನ...ಯಲ್ಲಿ ಪ್ರಶಂಸಿಸಿರುವುದನ್ನು ಪ್ರಸ್ತಾ... ಎಲ್ಲಾ ಕೋಮುಗಳಿಗೂ ಸಮಾನ ...ದ ಅವಕಾಶವನ್ನು ಒದಗಿಸಿಕೊಡುವು...ದನ್ನು ಇದುವರೆಗಿನ ನೀತಿಯೆಂದೂ, ...ನ್ನು ಸಾಧಿಸಲು ತಾವು ಯಾವತ್ತೂ ...ಡುವುದಾಗಿಯೂ ಹೇಳಿದರು. ಮೈ...ರಿನ ಹೆಸರು ಚರಿತ್ರೆಯಲ್ಲಿ ಚಿರಸ್ಥಾಯಿ...ಯಾಗಿ ಉಳಿಯಲು, ಮೈಸೂರಿನ ಕೀರ್ತಿ ...ಸಲು, ಜನರು ಸುಖಶಾಂತಿಗಳಿಂದಿರಲು ...ವಶ್ಯಕವಾದ, ಸರಿಯಾದ ಸಾಧಾರಣಾ ಸ...ಗಳನ್ನು ಶ್ರೀಮನ್ಮಹಾರಾಜರಿಗೆ ಒಪ್ಪಿ...ವುದಾಗಿ ಭರವಸೆ ಇತ್ತರು.

ಶ್ರೀಮನ್ಮಹಾರಾಜರವರ ಹುಜೂರ್ ಸೆ...ಟರಿಗಳಾದ ಶ್ರೀ ಟಿ ರಾಮಯ್ಯನವರಿಗೆ ...ಮೇ ೨೮ ನೇ ತಾ॥ ನಿಂದ ೧ ತಿಂಗಳ ರಜ...ವನ್ನು ಮಂಜೂರು ಮಾಡಲಾಗಿದೆ

ಮದ್ರಾಸ್ ಸಭೆಯಲ್ಲಿ ಗೊಂದಲ

ಬಾಬೂ ರಾಜೇಂದ್ರ ಪ್ರಸಾದ್ ಮತ್ತು ...ಸಿ. ರಾಜಗೋಪಾಲಚಾರಿಯವರು ಭಾ...ಷಣ ಮಾಡಲು ಮದ್ರಾಸಿನ ತಿಲಕ್ ಘಾಟ್...ನಲ್ಲಿ ಮೊನ್ನೆ ಏರ್ಪಾಟಾಗಿದ್ದ ೧ ಲಕ್ಷ ಜನ...ರಿದ್ದ ಬಹಿರಂಗ ಸಭೆಯಲ್ಲಿ ಮುಷ್ಕರ ...ಹೂಡಿರುವ ಮಿಲ್ ಕೆಲಸಗಾರರ ಗುಂಪೊಂದು ಕಲ್ಲು, ಮರಳುಗಳನ್ನು ಎಸೆದು ...ಟೆ ಎಬ್ಬಿಸಿದುದರಿಂದ ಸಭೆ ನಡೆಯಲಿಲ್ಲ. ಸಭೆಗೆ ಆಗಮಿಸಿದ ಡಾ॥ ಪ್ರಸಾದರು ...ಗೆಯೇ ಹಿಂತಿರುಗಿದರು. ಈ ಸಂಬಂಧ...ದಲ್ಲಿ ನಾಲ್ವರನ್ನು ದಸ್ತಗಿರಿ ಮಾಡಲಾಗಿದೆ.

ಮನುಷ್ಯರಿಗೆ ಪ್ರಾಣಿಗಳ ಮುಖ

...ಟರ್] ಲಂಡನ್ ೧೫

ಸಿಸಿಲಿಯಾದ ಹಳ್ಳಿಗಾಡಿನಲ್ಲಿ ಹುಟ್ಟಿ...ರುವ ಜನರ ಮುಖಗಳು ಕಾಲಗತಿಯಲ್ಲಿ ಪ್ರಾ...ಣಿಗಳ ಮುಖದಂತೆ ಆಗುತ್ತಿವೆಯೆಂದು ಇ...ಟಲಿ ವೈಜ್ಞಾನಿಕರೊಬ್ಬರು ಅಲ್ಲಿನ ತಮ್ಮ ...ವರ್ಷಗಳ ಸಂಶೋಧನೆಯಿಂದ ತಿಳಿಸಿ...ದ್ದಾರೆ.

ಪರೀಕ್ಷೆ ಫಲಿತಾಂಶ

ಮೈಸೂರು ೧೬

೧೯೪೭ ನೇ ಮಾರ್ಚ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ನಡೆದ ವಿಶ್ವವಿದ್ಯಾನಿಲಯದ ಪರೀಕ್ಷೆ ಮತ್ತು ಎಸ್ ಎಸ್. ಎಲ್ ಸಿ ಪರೀಕ್ಷೆಗಳ ಫಲಿತಾಂಶವನ್ನು ೨೦ ನೇ ತಾ॥ ಮಂಗಳವಾರ ಬೆಳಗ್ಗೆ ೯ ಗಂಟೆಗೆ ಪ್ರಕಟಿಸಲಾಗುತ್ತದೆ

ಉದಾರ ದಾನ

ಶೆಟ್ಟಿಗೆ ಗೂಡಿನಲ್ಲಿರುವ ಯುವಕ ಸಂಘಕ್ಕೆ ಪುರಸಭಾ ಸದಸ್ಯರಾದ ಶ್ರೀ ಎಸ್ ಲಿಂಗಣ್ಣನವರು ತಮ್ಮ ಮಕ್ಕಳ ವಿವಾಹದ ಸಂದರ್ಭದಲ್ಲಿ ೨೦ ರೂಗಳನ್ನೂ, ಶ್ರೀ ಎಸ್ ಬೋರಯ್ಯನವರು ತಮ್ಮ ಮಗಳು ಮತ್ತು ತಮ್ಮನವರ ವಿವಾಹದ ಸಂದರ್ಭದಲ್ಲಿ ೧೬ ರೂಗಳನ್ನೂ ಉದಾರವಾಗಿ ದಾನ ಮಾಡಿದ್ದಾರೆ

ಯಕ್ಷಗಾನ

ಈ ದಿನ ರಾತ್ರಿ ೮॥ ಗಂಟೆಗೆ ಚಲುವಾಂಬಾ ಅಗ್ರಹಾರದ ಹಿಂಭಾಗದ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಪಕ್ಕಾಪುರೀ ಪ್ರಯುಕ್ತ ಶ್ರೀ ಹನುಮಂತಪ್ಪ ಶ್ರೀ ಚಾಮುಂಡೇಶ್ವರೀ ಯಕ್ಷಗಾನ ಕಲಾವಂತಲಿ ಯುವರಿಂದ ಪ್ರಹ್ಲಾದ ಚರಿತ್ರೆಯೆಂಬ ಪ್ರಸಂಗವು ನಡೆಯುವುದು. ಸರ್ವರಿಗೂ ಆಹ್ವಾನವುಂಟು

ನಾಗರಹಾವು ಹಿಡಿಯಲ್ಪಟ್ಟಿತು

ಅರಮನೆ ಕಛೇರಿಯ ಮುಂಭಾಗದಲ್ಲಿ ಮೈನಾ ಪಕ್ಷಿಯೊಂದನ್ನು ನುಂಗಿದ್ದ ೬೦ ದೂಡರಿ ಹಾಗೂ ಉದ್ದದ ದೊಡ್ಡ ನಾಗರ ಹಾವೊಂದನ್ನು ಅಲ್ಲೇ ಕೆಲಸಮಾಡುವ ಮಹದೇವಯ್ಯನೆಂಬುವನು ನಿನ್ನೆ ಸಂಜೆ ಹಿಡಿದಿರುತ್ತಾನೆ.

ಗಾಂಧೀಜಿಯವರಿಗೆ ನೆಹರು ರವರ ಜರೂರು ಕರೆ

ಬ್ರಿ॥ ಮಂತ್ರಿಮಂಡಲದ ಇತ್ತೀಚಿನ ಯೋಜನೆಯು ಕಾಂಗ್ರೆಸ್ಸಿನ ಅಭಿಪ್ರಾಯಕ್ಕೆ ವಿರೋಧವಾಗಿರುವುದೆಂದು ಹೇಳಲಾಗಿದೆ. ಕಾಂಗ್ರೆಸ್ಸು ಪ್ರಾಂತ್ಯಗಳ ವಿಭಜನಾ ಪ್ರಶ್ನೆಯನ್ನು ಬೆಂಬಲಿಸಿದ್ದು, ಅಸ್ಸಾಂ ಮತ್ತು ಗಡಿನಾಡು ಮಂತ್ರಿ ಮಂಡಲಗಳನ್ನು ತ್ಯಾಗಮಾಡಬೇಕಾಗಿ ಬರಬಹುದೆಂದೂ ಊಹಿಸಲಾಗಿದೆ. ಪರಿಸ್ಥಿತಿಯು ಹೀಗೆ ಬದಲಾವಣೆಯಾಗುತ್ತಿರುವುದರಿಂದ ಕೂಡಲೇ ದೆಹಲಿಗೆ ಬಂದು ಆವಶ್ಯಕವಾದ ಸಲಹೆ ಕೊಡುವಂತೆ ಗಾಂಧೀಜಿಯವರಿಗೆ ಪಂ॥ ನೆಹರುರವರು ಜರೂರು ಕರೆ ಕಳುಹಿಸಿರುವರೆಂದು ವರದಿಯಾಗಿದೆ.

ಪರಮಾವಧಿ ಸಂಬಳ ೩೦೦೦ ರೂ. ಕನಿಷ್ಠ ಸಂಬಳ ೫೫ ರೂ

ಭಾರತ ಸರ್ಕಾರದ ಆಜ್ಞೆ

ಭಾರತ ಸರ್ಕಾರದವರು ಸಂಬಳ ಸಮಿತಿಯವರ ವರದಿಯನ್ನು ಪರಿಶೀಲಿಸಿ ಆಜ್ಞೆಯೊಂದನ್ನು ಹೊರಡಿಸಿದ್ದಾರೆ. ಕನಿಷ್ಠ ಸಂಬಳ ೩೦ ರೂಪಾಯಿ ಕೊಟ್ಟು ಭತ್ಯ ಸೇರಿ ೫೫ ರೂ ಪರಮಾವಧಿ ಸಂಬಳ ೩ ಸಾವಿರ ರೂ ಮಾತ್ರ. ೫೦ ರೂ. ಗಿಂತ ಕಡಿಮೆ ಸಂಬಳ ಬರುವವರಿಗೆ ೨೫ ರೂ ತುಟ್ಟಿ ಭತ್ಯ. ೭೫೦ ರಿಂದ ೧೦೦೦ ರೂ. ಬರುವವರಿಗೆ ೧೦೦ ರೂ ತುಟ್ಟಿ ಭತ್ಯ ೧೦೦೦ ಕ್ಕೆ ಮೇಲ್ಪಟ್ಟು ಸಂಬಳ ಪಡೆಯುವವರಿಗೆ ಸಂಬಳದ ಶೇ ೧೦ ರಷ್ಟು ತುಟ್ಟಿ ಭತ್ಯ. ಇದು ೧೫೦ ರೂ ಗಳನ್ನು ಮೀರಕೂಡದು. ವಿವಾಹಿತ ಮತ್ತು ಅವಿವಾಹಿತ ಸರ್ಕಾರಿ ಅಧಿಕಾರಿಗಳಿಗೆ ಭತ್ಯದ ವ್ಯತ್ಯಾಸ ಇರಕೂಡದೆಂದು ಸಮಿತಿಯು ಮಾಡಿದ್ದ ಸೂಚನೆಯನ್ನು ಸರ್ಕಾರವು ನಿರಾಕರಿಸಿದೆ. ಇವರಿಗಿಂತಲೂ ಸ್ವಲ್ಪ ವ್ಯತ್ಯಾಸವಿರಬೇಕೆಂದೂ ೫೦೦ ರೂ ಗಳಿಗಿಂತ ಕಡಿಮೆ ಬರುವವರಿಗೆ ೨೦ ರೂ ಮತ್ತು ಶೇಕಡ ೧೫ ರಷ್ಟು ಅದಕ್ಕಿಂತ ಹೆಚ್ಚು ಬರುವವರಿಗೆ ೧೦೦ ರೂಪಾಯಿ ಮತ್ತು ಶೇಕಡ ೧೦ ರಷ್ಟು ಹೆಚ್ಚು ಭತ್ಯ ಕೊಡಲಾಗುವುದೆಂದ ಸರ್ಕಾರದವರು ತಿಳಿಸಿದ್ದಾರೆ. ಬೊಂಬಾಯಿ, ಕಲ್ಕತ್ತ ಮುಂತಾದ ನಗರಗಳಲ್ಲಿರುವವರಿಗೆ ೩೦ ರೂಗಳಿಗಿಂತ ಕಡಿಮೆ ಸಂಬಳ ಇದ್ದರೆ ೫ ರಿಂದ ೧೦ ರೂಪಾಯಿ ಹೆಚ್ಚು ಭತ್ಯ ೨೦೦ ಕ್ಕೆ ಮೇಲ್ಪಟ್ಟಿದ್ದರೆ ಅವರಿಗೆ ೨೦ ರೂಪಾಯಿ ಮತ್ತು ಸಂಬಳದ ಶೇಕಡ ೧೦ ರಷ್ಟು ಹೆಚ್ಚು ಭತ್ಯ.

ಸರ್ಕಾರವು ಈ ಆಜ್ಞೆಯನ್ನು ಆದಷ್ಟು ಜಾಗ್ರತೆ ಜಾರಿಗೆ ತರಲು ಆಶಿಸಿದೆ. ಇದರಿಂದ ೫೫ ಕೋಟಿ ರೂಪಾಯಿ ಹೆಚ್ಚು ವೆಚ್ಚ ತಗಲಲಿದೆ

ಸುಹ್ರವರ್ದಿಯವರಿಗೆ ಹೈದರಾಬಾದ್ ದಿವಾನಗಿರಿ

ಹೈದರಾಬಾದ್ ದಿವಾನಗಿರಿಯನ್ನು ವಹಿಸಿಕೊಳ್ಳುವಂತೆ ಬಂಗಾಳದ ಪ್ರಧಾನಿ ಮಿ॥ ಸುಹ್ರವರ್ದಿಯವರನ್ನು ನೈಜಾಮರು ಆಹ್ವಾನಿಸಿದ್ದಾರೆಂದು ಹೇಳಲಾಗಿದೆ. ಬಂಗಾಳ ವಿಭಜನೆಯನ್ನು ತಪ್ಪಿಸಲು ಸಾಧ್ಯವಾಗದಿದ್ದರೆ ಜಿನ್ನಾ ತಮ್ಮ ಮುಖ್ಯ ಮಂತ್ರಿ ಪದವಿಗೆ ಅವರು ರಾಜೀನಾಮೆ ಸಲ್ಲಿಸಿ, ಈ ಹೊಸ ಹುದ್ದೆಯನ್ನು ಸ್ವೀಕರಿಸುವರೆಂದು ಹೇಳಲಾಗಿದೆ.

ದಂಡಿನ ಗಲಭೆಗಾಗಿ ೭ ವರ್ಷ ಕಠಿಣ ಶಿಕ್ಷೆ

ಸ್ವಂ.ಸು.ಫೋ] ಬೆಂಗಳೂರು ೧೬

ದಂಡಿನಲ್ಲಿ ಹಿಂದೆ ನಡೆದ ಕೋಮುವಾರು ಗಲಭೆ ಸಂಬಂಧದಲ್ಲಿ ಅಬ್ದುಲ್ ಅಜೀಜ್ ಎಂಬುವರಿಗೆ ೭ ವರ್ಷ ಕಠಿಣ ಶಿಕ್ಷೆಯನ್ನು ದಂಡಿನ ಜಿಲ್ಲಾ ಮತ್ತು ಸೆಷನ್ಸ್ ಜಡ್ಜರು ನಿನ್ನೆ ವಿಧಿಸಿದರು. ೩೦ ಮಂದಿ ಆಪಾದಿತರ ಪೈಕಿ ೧೧ ಜನರನ್ನು ಬಿಡುಗಡೆ ಮಾಡಲಾಯಿತು. ಉಳಿದ ೧೮ ಜನರನ್ನು ೧ ವರ್ಷದ ಕಾಲ ಒಳ್ಳೆಯ ನಡತೆಗಾಗಿ ೫೦ ರಿಂದ ಸಾವಿರ ರೂಗಳವರೆಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು

ಲಂಡನ್ನಿಗೆ ವೈಸರಾಯರು

ಭಾರತೀಯರಿಗೆ ಅಧಿಕಾರವನ್ನು ವರ್ಗಾಯಿಸಿಕೊಡುವ ಬಗ್ಗೆ ಅವರು ಯೋಜನೆಯನ್ನು ಸಿದ್ಧಗೊಳಿಸುವ ಮುನ್ನ ಪರಿಸ್ಥಿತಿಯನ್ನು ಚೆನ್ನಾಗಿ ಮನನ ಮಾಡಿಕೊಂಡಿರುವ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರೊಡನೆ ನೇರವಾದ ಚರ್ಚೆಯನ್ನು ನಡೆಸಬೇಕೆಂದು ಬ್ರಿಟಿಷ್ ಮಂತ್ರಿ ಮಂಡಲದವರು ನಿರ್ಧರಿಸಿ, ಅದಕ್ಕಾಗಿ ವೈಸರಾಯರು ಲಂಡನ್ನಿಗೆ ಆದಷ್ಟು ಜಾಗ್ರತೆ ಬರಬೇಕೆಂದು ಆಹ್ವಾನವನ್ನು ಕಳುಹಿಸಿದ್ದಾರೆ. ವೈಸರಾಯರು ಅದರಂತೆ ಲಂಡನ್ನಿಗೆ ತೆರಳಿ ಜೂನ್ ೨ ನೇ ತಾ॥ ನ ವೇಳೆಗೆ ಭಾರತಕ್ಕೆ ಹಿಂದಿರುಗಿ ನಾಯಕರುಗಳ ಸಮ್ಮೇಳನದಲ್ಲಿ ಅಧಿಕಾರ ವರ್ಗಾವಣೆಯ ಅಂತಿಮ ಯೋಜನೆಯನ್ನು ವಿವರಿಸುವರೆಂದೂ ಗೊತ್ತಾಗಿದೆ.

ಪುರಸಭೆಯ ಸ್ವತ್ತಿನ ವಿಲೇವಾರಿ

ಸ್ವಂ ಸು] ದಾವಣಗೆರೆ ೧೧

ಇಲ್ಲಿನ ಪುರಸಭೆಗೆ ಸ್ವಾಧೀನವಾಗಿದ್ದ ಒಂದು ಸ್ವತ್ತು ಮಾರಾಟ ಮನೆಯೊಂದನ್ನು ಹಿಂದೆ ಅದನ್ನು ಕೊಂಡು ಹಣ ಪಾವತಿ ಮಾಡದೆ ಇದ್ದವರಿಗೇ ಪುನಃ ವಾಪಸು ಕೊಡುವಂತೆ ತೀರ್ಮಾನವಾಗಿದೆ. ಆದರೆ ಅವರು ಅದನ್ನು ಪುರಸಭೆಯಿಂದ ೩ ಸಹಸ್ರ ರೂಗಳಿಗೆ ಪಡೆದು ೭ ಸಹಸ್ರ ರೂಗಳಿಗೆ ಪುರಸಭಾ ಸದಸ್ಯರೊಬ್ಬರಿಗೆ ಬಿಕರಿ ಮಾಡುವ ಕರಾರು ಮಾಡಿಕೊಂಡಿದ್ದಾರೆಂದೂ, ಇದರಿಂದ ಪುರಸಭೆಗೆ ಸಹಸ್ರಾರು ರೂಗಳ ನಷ್ಟ ಸಂಭವಿಸುತ್ತದೆಯೆಂದೂ, ಆದ್ದರಿಂದ ಈ ಬಗ್ಗೆ ಪುರಸಭೆಯಲ್ಲಿ ಮಂಡಿತವಾಗಿರುವ ನಿರ್ಣಯವು ಇತ್ಯರ್ಥವಾಗುವವರೆಗೆ ಆ ಮನೆಯನ್ನು ವಿಲೇವಾರಿ ಮಾಡುವುದನ್ನು ತಡೆಯಬೇಕೆಂದು ಹಲವು ಪುರಸಭಾ ಸದಸ್ಯರು ಮಂತ್ರಿಗಳಲ್ಲಿ ಅರಿಕೆಮಾಡಿಕೊಂಡಿದ್ದಾರೆ

LATEST NEWS

ಮೈಸೂರಿನಿಂದ ರಾಜ್ಯಾಂಗ ಸಭೆಗೆ ಚುನಾಯಿತ ಸದಸ್ಯರು

ದೆಹಲಿಯಲ್ಲಿ ದಿವಾನರ ಭರವಸೆ

ಮೈಸೂರು ಸಂಸ್ಥಾನವು ಭಾರತ ರಾಜ್ಯಾಂಗ ಸಭೆಗೆ ಸೇರುವುದು ಮತ್ತು ನಿಗದಿಯಾಗಿರುವ ೭ ಸ್ಥಾನಗಳ ಪೈಕಿ ತಮ್ಮನ್ನು ಬಿಟ್ಟು ಮಿಕ್ಕ ೬ ಸ್ಥಾನಗಳಿಗೂ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳನ್ನು ಕಳುಹಿಸಲಾಗುವುದೆಂಬುದಾಗಿ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿಮೊದಲಿಯಾರ್ ದೆಹಲಿಗೆ ಭೇಟಿ ಇತ್ತಿದ್ದಾಗ ಭರವಸೆ ಕೊಟ್ಟಿರುವರೆಂದು ವರದಿಯಾಗಿದೆ

ಸಾಧ್ವಿ

ತಾ॥ ೧೬-೫-೪೭ ಶುಕ್ರವಾರ

ಮಾತುಕತೆಗಳಲ್ಲಿ ಸಾವಕಾಶ ವೇಕೆ?

ದಿವಾನರು ದೆಹಲಿಯಿಂದ ಹಿಂದಿರುಗಿದರು. ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚೆಂಗಲರಾಯ ರೆಡ್ಡಿಯವರೂ ಸಹ ವಾಪಸು ಬಂದಿರುವರು. ಆದರೆ ಇನ್ನೂ ಇವರಿಬ್ಬರ ಮಾತುಕತೆಗಳು ಮುಂದುವರೆಯಲು ಇದುವರೆಗೆ ಯಾವ ಏರ್ಪಾಡುಗಳೂ ಆಗಿರುವುದಿಲ್ಲ.

ಹಿಂದೆ ಎರಡನೇ ಬಾರಿ ಇವರ ಭೇಟಿಯು ನಡೆದ ಮೇಲೆ ಸರ್ಕಾರದವರು ಹೊರಡಿಸಿದ ಪ್ರಕಟಣೆಯಲ್ಲಿ ದಿವಾನರು ಹಿಂದಿರುಗಿದ ನಂತರ ಮಾತುಕತೆಗಳು ಮುಂದುವರೆಯುವುವೆಂದು ಸೂಚಿಸಲಾಗಿತ್ತು. ಕಾಲ ವಿಳಂಬವಾಗದೆ ಎಲ್ಲರಿಗೂ ಸಮ್ಮತವಾಗುವ ಒಂದು ನಿರ್ಧಾರಕ್ಕೆ ಬರಬೇಕೆಂಬುದೇ ಈ ಚರ್ಚೆಗಳ ಗುರಿಯಾಗಿರುತ್ತದೆ. ಆದರೆ ಈ ಕೆಲಸವು ಬಹಳ ಸಾವಕಾಶವಾಗಿ ಸಾಗುತ್ತಿದೆ. ಶ್ರೀಮನ್ಮಹಾರಾಜರವರು ಸುಧಾರಣೆಗಳ ಬಗ್ಗೆ ಘೋಷಣೆಯನ್ನು ಹೊರಡಿಸಿ ಬಹಳ ದಿನಗಳಾದವು. ತಮ್ಮ ಸಲಹೆಗಳನ್ನು ಕೊಡಲು ವಿಶೇಷ ಕಾಲಹರಣ ಮಾಡುವುದಿಲ್ಲವೆಂದು ದಿವಾನರೂ ಹೇಳಿದ್ದರು. ಆದರೆ ಈ ಮಧ್ಯೆ ಅವರ ಅನೇಕ ಮುಖ್ಯ ದೆಹಲಿ ಪ್ರವಾಸಗಳಿಂದ ವಿಷಯಕ್ಕೆ ಕಾಲ ವಿಳಂಬಕ್ಕೆ ಕಾರಣವಾಯಿತು. ಇದಕ್ಕಾಗಿ ಪರಿತಾಪ ಪಟ್ಟು ದಿವಾನರು ಇನ್ನು ಮುಂದೆ ತ್ವರಿತದಿಂದ ತಮ್ಮ ಕೆಲಸವನ್ನು ಪೂರೈಸುವುದಾಗಿ ಭರವಸೆಯಿತ್ತರು. ಆದರೆ ಇನ್ನೂ ವಿವಿಧ ವರ್ಗಗಳವರೊಡನೆ ಅವರ ಮಾತುಕತೆಗಳೇ ಮುಗಿದಿರುವಂತೆ ಕಾಣುವುದಿಲ್ಲ. ಇನ್ನೂ ಎಷ್ಟು ಜನರೊಡನೆ ಅವರು ಭೇಟಿ ಮಾಡಬೇಕಾಗಿದೆಯೆಂಬುದೂ ಗೊತ್ತಾಗಿರುವುದಿಲ್ಲ.

ಸಮ್ಮೇಳನದಲ್ಲಿಯೇ ಪ್ರಜಾಪ್ರತಿನಿಧಿ ಸಭೆಯು ಸೇರಲಿದೆ. ಅನಂತರ ಶಾಸನ ಸಭೆಯೂ ಸಹ ಕೂಡುವುದು. ಈ ಸಭೆಗಳ ಅಧಿವೇಶನಕ್ಕೆ ಮುಂಚಿತವಾಗಿಯೇ ಒಂದು ನಿರ್ಧಾರಕ್ಕೆ ಬರುವುದು ಸೂಕ್ತವಾಗಿದೆ. ಮತ್ತು ಉಭಯ ಸಭೆಗಳ ಜಂಟಿ ಅಧಿವೇಶನವೊಂದನ್ನು ಸೇರಿಸಿ ಅವುಗಳಿಂದ ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ವ್ಯವಸ್ಥೆ ಮಾಡುವುದೂ ಯುಕ್ತವಾಗಿದೆ.

ಜವಾಬ್ದಾರೀ ಸರ್ಕಾರ ಸ್ಥಾಪನೆಯ ಬಗ್ಗೆ ತಮ್ಮ ಅಭಿಮತವನ್ನು ದಿವಾನರು ವ್ಯಕ್ತಪಡಿಸಿದ್ದಾರೆ. ಚುನಾಯಿತ ಮಂತ್ರಿಗಳೇ ಇರಬೇಕೆಂದು ಸೂಚಿಸಿದ್ದಾರೆ. ಅವರ ಹೇಳಿಕೆಯು ಪ್ರಾಮಾಣಿಕತೆಯಿಂದ ಕೂಡಿದೆಯೆಂದು ಡಾಕ್ಟರ್ ರಾಜೇಂದ್ರ ಪ್ರಸಾದರೂ ಸಹ ಪ್ರಶಂಸೆ ಮಾಡಿದ್ದಾರೆ. ಅದನ್ನು ದಿವಾನರು ಸಾರ್ಥಕಪಡಿಸಿಕೊಳ್ಳುವುದು ಅಗತ್ಯವಾಗಿದೆ. ಇದಕ್ಕಾಗಿ ಭಾರತ ಯೂನಿಯನ್ನಿನಲ್ಲಿ ಮೈಸೂರು ಸೇರುವುದೆಂದು ಬಹಿರಂಗವಾದ ಘೋಷಣೆಯೊಂದನ್ನು ಹೊರಡಿಸುವುದಲ್ಲದೆ ಮೇಲೆ ಹೇಳಿರುವಂತೆ ಕೂಡಲೇ ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸಲು ಕಾರ್ಯಕ್ರಮವು ಕೈಗೊಳ್ಳಬೇಕಾಗಿದೆ. ಇದಕ್ಕೆ ದಿವಾನರು ಗಮನ ಕೊಡುವರೆಂದು ನಾವು ನಂಬಿದ್ದೇವೆ.

ಚಾಮರಾಜನಗರ ಟೌನ್ ಮುನಿಸಿಪಲ್ ಆಫೀಸಿನಿಂದ

ಹರಾಜು ಇಸ್ತಿಹಾರ್

ಈ ಟೌನ್ ಮುನಿಸಿಪಲ್ ಸರಹದ್ದಿನಲ್ಲಿ ೧೯೪೭ ನೇ ಜುಲೈ ೧ ನೇ ತಾರೀಖಿನಿಂದ ೧೯೪೮ ನೇ ಜೂನ್ ೩೦ ನೇ ತಾರೀಖಿನವರೆಗಿನ ಒಂದು ವರ್ಷ ಅವಧಿಯಲ್ಲಿ ಟೋಲು ವಸೂಲ್ ಮಾಡುವ ಹಕ್ಕನ್ನು ಹರಾಜು ಮಾಡುತ್ತಾರೆ. ತಾರೀಖು ೪-೬-೧೯೪೭ನೇ ಬುಧವಾರ ಮಧ್ಯಾಹ್ನ ೩ ಘಂಟೆಗೆ ಸರಿಯಾಗಿ ಟೌನ್ ಮುನಿಸಿಪಲ್ ಆಫೀಸಿನ ಬಳಿ ಬಹಿರಂಗವಾಗಿ ಹರಾಜು ನಡೆಯುವುದು. ಇಷ್ಟವುಳ್ಳವರು ಆ ದಿವಸ ಗಂಟೆಯೊಳಗಾಗಿ ಠೇವಣಿ ಮೊಬಲಗು ಜಮಾ ಮಾಡಿ ಭಾಗವಹಿಸಿ ಕೊಳ್ಳಬಹುದು.

ಹೆಚ್. ಹಾಲಪ್ಪ,
ಪ್ರೆಸಿಡೆಂಟ್

Edited, printed and published by A. K. Nagarajan at the Sadhvi Press ... Mysore

ಚಾಮರಾಜನಗರದ ಟೌನ್ ಮುನಿಸಿಪಲ್ ಆಫೀಸಿನಿಂದ

ಹರಾಜು ಇಸ್ತಿಹಾರ್

ಈ ಟೌನ್ ಮುನಿಸಿಪಾಲಿಟಿಗೆ ಸೇರಿದ ಬಸ್ ಸ್ಟ್ಯಾಂಡ್ ಕಟ್ಟಡದಲ್ಲಿ ೧೯೪೭ ನೇ ಇಸವಿ ಜುಲೈ ೧ ನೇ ತಾ॥ ಆರಂಭವಾಗುವ ಮೂರು ವರುಷಗಳ ಕಾಲದ ಅವಧಿಯೊಳಗೆ ಹೋಟೆಲನ್ನು ಇಟ್ಟುಕೊಂಡು ವ್ಯಾಪಾರ ಮಾಡುವ ಹಕ್ಕನ್ನು ಹರಾಜು ಇಸ್ತಿಹಾರಿನ ಷರತ್ತಿನಂತೆ ೧೯೪೭ ನೇ ಇಸವಿ ಜೂನ್ ಮಾಹೆ ೪ ನೇ ತಾ॥ ೩ ಗಂಟೆಗೆ ಸರಿಯಾಗಿ ಟೌನ್ ಮುನಿಸಿಪಲ್ ಆಫೀಸಿನ ಬಳಿ ಹರಾಜು ಮೂಲಕ ವಿಲೆ ಮಾಡಲಾಗುತ್ತದೆ. ಇಷ್ಟವುಳ್ಳವರು ೨೦ ರೂ ಠೇವಣಿ ಜಮಾ ಮಾಡಿ ಭಾಗವಹಿಸಬಹುದು. ಷರತ್ತುಗಳನ್ನು ಪಡೆದುಕೊಳ್ಳಬಹುದೆಂದು ಈ ಮೂಲಕ ಪ್ರಚುರಪಡಿಸಲಾಗಿದೆ.

ಹೆಚ್. ಹಾಲಪ್ಪ,
ಪ್ರೆಸಿಡೆಂಟ್

ಚಾಮುಂಡೇಶ್ವರಿ ಟಾಕೀಸ್

ಶ್ರೀ ಕುಮಾರ್ ಪ್ರೊಡಕ್ಷನ್

ಹಿಂದೀ ಚಿತ್ರ

ಭಾಯ್

೧೭-೫-೪೭ ರಿಂದ

ಪ್ರತಿದಿನ ೩ ಆಟಗಳು

ಮುಖ್ಯ ಪಾತ್ರ:-ಮನೋರಮಾ, ಸತೀಶ್

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್

ಹರಾಜು ಇಸ್ತಿಹಾರ್

ಇದರಿಂದ ಸರ್ವರಿಗೂ ತಿಳಿಯಪಡಿಸುವುದೇನೆಂದರೆ ಜಯಲಕ್ಷ್ಮೀಪುರಂನಲ್ಲಿ ಸಿನಿಮಾ ಥಿಯೇಟರನ್ನು ಕಟ್ಟಲು ಒಂದು ಖಾಲಿ ನಿವೇಶನವನ್ನು ಮೇ ಮಾಹೆ 26 ನೇ ಸೋಮವಾರ ಬೆಳಿಗ್ಗೆ 10 ಘಂಟೆಗೆ ಹರಾಜು ಮಾಡಲಾಗುತ್ತೆ. ಹೆಚ್ಚಿಗೆ ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಆರ್. ರಾಮಚಂದ್ರರಾವ್
ಬಾಂಭೋರೆ,
ಛೇರ್ಮನ್

ಅಕ್ಕ ತಂಗಿಯರಿಗೆ ಸ್ವಾಗತ !

ಸೌಭಾಗ್ಯ, ಸೌಂದರ್ಯ, ಸೊಗಸುಗಳಿಗೆ ಸನ್ಮತವಾದ

ಬಳೆಗಳೂ,

ಅಂದ, ಚಂದ, ಅಲಂಕಾರಗಳಿಗೆ ಅತ್ಯುತ್ತಮವಾದ

ರಿಬ್ಬನ್‌ಗಳೂ,

ಬಂಧು ಬಾಂಧವರಿಗೆ ಬಳುವಳಿ ಕೊಡುವ ಬಹುಮಾನದ ಸಾಮಾನುಗಳೂ ಬಂದಿವೆ

ನಿಮಗಾಗಿ ಸಿದ್ಧವಾಗಿದೆ ಇಂದೇ ಬಂದು ಕೊಂಡುಕೊಳ್ಳಿ

ನಾಳೆ ಬಂದು ನಿರಾಶರಾಗಬೇಡಿ

ಜಯಲಕ್ಷ್ಮೀ ಬ್ಯಾಂಗಲ್ ಸ್ಟೋರ್ಸ್

ದೇವರಾಜ ಮಾರ್ಕೆಟ್, — — ಮೈಸೂರು.

ರಾಜಕಮಲ್, ಮೈಸೂರು

ತಾ॥ ೧೬-೫-೪೭ ರಿಂದ ನಾಲ್ಕನೇ ವಾರ-ಪ್ರತಿ ದಿನ ೩ ಆಟಗಳು

'ಗೊಲ್ಲಭಾಮ'

(ತೆಲುಗು)

ಭೂಮಿಕೆ: -ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

ಮೈಸೂರು ಸ್ಟೇಟ್ ರೈಲ್ವೆ—ನೋಟಿಫಿಕೇಷನ್

ಮೈಸೂರು ವಾಣಿ ವಿಲಾಸ ಮಾರ್ಕೆಟ್ಟಿನ ಹೊಸ ಬುಕಿಂಗ್ ಆಫೀಸು

೧೯೪೭ನೇ ಮೇ ೧೫ನೇ ತಾರೀಖಿನಿಂದ ವಾಣಿ ವಿಲಾಸ ಮಾರ್ಕೆಟ್ಟಿನ ಬುಕಿಂಗ್ ಆಫೀಸಿನ ಕೆಲಸ ಮಾಡುವ ವೇಳೆಯು ಈ ಕೆಳಗೆ ನಮೂದಿಸಿರುವಂತೆ ಬದಲಾವಣೆ ಮಾಡಲ್ಪಡುತ್ತದೆ

ಈಗಿರುವುದು ೭ ರಿಂದ ೧೧ ಗಂಟೆ	ಬದಲಾವಣೆಯಾಗಿರುವುದು ೭ ರಿಂದ ೧೦ ಗಂಟೆ
೧೪ ರಿಂದ ೧೯ ಗಂಟೆ	೧೪ ರಿಂದ ೧೯ ಗಂಟೆ
ಟ್ರಾಫಿಕ್ ಮ್ಯಾನೇಜರವರ ಆಫೀಸು,	ಮಿರ್ ಇನಾಯತ್ ಹುಸೇನ್,
ಮೈಸೂರು, ... ನೇ ಮೇ ೧೯...	ಟ್ರಾಫಿಕ್ ...

RAJKAMAL

Morning Shows from 16-5-47

for 4 days daily at 10-30 a.m.

'Intermezzo'

with

LESLIE HOWARD and

INGRID BERGMANN

ಪ್ರತಿ ದಿನ 3 ಆಟಗಳು

೧೬—೫—೪೭ ರಿಂದ

ಫಜ್ಲಿ ಬ್ರದರ್ಸ್‌ರವರ ಮಾಸ್ಟರ್ ಪೀಸ್

ದಿಲ್

ಮುಖ್ಯ ಭೂಮಿಕೆ:—ನೂರ್‌ಜೆಹಾನ್, ಅಬ್ದುಲ್ ಅತೀಫ್, ಗೀತಾ ಬೋಸ್

ಒಲಿಂಪಿಯಾ ಟಾಕೀಸ್



ಈ ಐವತ್ತು ವರ್ಷಗಳಿಂದ ಮಾನವ ಲೋಕಕ್ಕೆ ಆರೋಗ್ಯಾನಂದಗಳನ್ನು ನೀಡುತ್ತಾ ಬರುತ್ತಿರುವ, ಅವಿಚ್ಛಿನ್ನವಾಗಿ ಸೇವೆ ಮಾಡಿ, ದಿನ ದಿನಾಭಿವೃದ್ಧಿಹೊಂದುತ್ತಿರುವುದಕ್ಕಾಗಿ ಎಷ್ಟೋ ಗರ್ವಿಸುತ್ತಿದೆ.

ಡಿ. ಗೋಪಾಲಾಚಾರ್ಲು, ಮದರಾಸು

EASTERNS 379

ಫೋ. ನಂ. ೩೪೨ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೧೭—೫—೪೭ [ಸಂಚಿಕೆ ೨೩೯

ಕೊಲ್ಹಾಪುರದ ರಾಜರ ಪ್ರಜಾಪ್ರಭುತ್ವಘೋಷಣೆ

ಮಹಿಳಾ ಸಮ್ಮೇಳನದ ಸದಸ್ಯತನ

ಮೈಸೂರು ೧೬

…ಟ್ಟನ ಸಂಸ್ಥೆಯು ಮಹಿಳೆಯರಿಗೆ ಸ… ದ ಮಹಿಳಾ ಸಮ್ಮೇಳನದ ಮೈಸೂ… …ಯು ಸದಸ್ಯರಾಗಲು ಅನುಕೂಲ… ಆದರಿಂದ ಮಹಿಳೆಯರ ಪ್ರಯೋ… …ಗೆ ಮಾರ್ಗವಾಗಬೇಕೆಂದು ಬಯ… …ಬರಿನಲ್ಲಿ ಮಹಿಳಾ ಸಮಾಜದಲ್ಲಿ ಮೈಸೂರು ಶಾಖಾ ಸಮಿತಿ ಸಭೆಯು ಸದಸ್ಯತನದ ವಾರ್ಷಿಕ ಚಂದಾವ… …ದು ರೂಪಾಯಿಗೆ ಇಳಿಸಿದೆ ಅಲ್ಲ… …ತಿ ಸದಸ್ಯತನವನ್ನು ಹೆಚ್ಚಿಸಿ ಜಿ… ಮಹಿಳಾ ಸಮ್ಮೇಳನ ಕರೆಯಲು ಕಾರ್ಯದರ್ಶಿಯಾದ ಶ್ರೀಮತಿ … ಸೀತಮ್ಮನವರೂ ಕಾರ್ಯಕಾರಿ ಸದಸ್ಯೆ ಶ್ರೀಮತಿ ಎಂ ಆರ್ ಲಕ್ಷ್ಮ… …ನವರೂ ಅಧಿಕೃತರಾಗಿದ್ದಾರೆ ನಗ… …ಹಿಳೆಯರು ಅಧಿಕ ಸಂಖ್ಯೆಯಲ್ಲಿ ಸ… …ಗಿ ನೆರವಾಗಬೇಕೆಂದು ಕೋರಲಾ… …ಚಂದಾ ಮೊಬಲಗು ಒಂದು ರೂಪಾ… …ಹೆಸರು ವಿಳಾಸದೊಂದಿಗೆ ಕಾರ್ಯ… ಮೈಸೂರು ಮಹಿಳಾ ಸಮ್ಮೇಳನ … ಶಾಖೆ C-o ಮಹಿಳಾ ಸಮಾ… …ಸೂರು, ಎಂಬ ವಿಳಾಸಕ್ಕೆ ತಲುಪಿಸಿ… …ಕಾಗಿ ಕಾರ್ಯದರ್ಶಿಯಾದ … ಎ ಟಿ ಲಕ್ಷ್ಮಮ್ಮನವರು ಕೋರಿ…ರೆ

…ಲ್ವೆ ಕೆಲಸಗಾರರ ಸಂಘ

…ಸೂರು ಸ್ಟೇಟ್ ರೈಲ್ವೆಯ ಕೆಲಸಗಾ… …ಘವನ್ನು ೧೯೪೭ ರ ಕಾರ್ಮಿಕ ಶಾ… …ತೆ ಸರ್ಕಾರದವರು ಅಂಗೀಕರಿಸಿ, … ಮಾಡಿಕೊಂಡಿರುತ್ತಾರೆ

ಅರಕೆರೆ ವಿದ್ಯಾರ್ಥಿನಿಲಯ

…ಕೆರೆಯಲ್ಲಿರುವ ಜೈಹಿಂದ್ ವಿದ್ಯಾರ್ಥಿ… …ದಲ್ಲಿ ೫ ಮಂದಿ ಬಡ ವಿದ್ಯಾರ್ಥಿಗ… …ಚಿತವಾಗಿಯೂ, ಇಬ್ಬರಿಗೆ ಅರ್ಧ… …ವಾಗಿಯೂ, ಉಳಿದವರಿಗೆ ಮಾಹೆ… …೮ ರೂನಂತೆಯೂ ಭೋಜನಾದಿ… …ಗಳ ವ್ಯವಸ್ಥೆ ಮಾಡಲಾಗಿದೆ ಸೇರಲ… …ಚ್ಛುವವರು ಇದೇ ೨೨ನೇ ತಾ॥ನೊ… …ರ್ಜಿ ಹಾಕಿಕೊಳ್ಳಬೇಕು

ಕಾಡುಜನರ ಮಹಾಸಭೆ

…೧೯ ನೇ ತಾ॥ ಸೋಮವಾರ ಹೆ… …ನಕೋಟೆ ತಾ॥ ಬೀರಂಬಳ್ಳಿ— …ಫಾರೆಸ್ಟ್ ಲಾಡ್ಜಿನಲ್ಲಿ ಮೈಸೂರು … ನದ ಕಾಡುಜನರ ಮೊದಲನೆಯ … …ಭೆಯು ಒಳಾಡಳಿತ ಸಚಿವರಾದ … ವೇಂಕಟಾದ್ರಿಯವರ ಅಧ್ಯಕ್ಷತೆಯಲ್ಲಿ … …ಯು ಮೈಸೂರು, ಪಿರಿಯಾಪ… …ಗ ಪಟ್ಟಣ, ಹುಣಸೂರು, ಚಾಮರಾಜನಗರ … ಹುಳಿಯೂರು ತಾ॥ ಈ ಜನಾಂಗದ … ಪ್ರತಿನಿಧಿಗಳು ಸಭೆಗೆ ಹಾಜರಾಗಬೇ… …ಕೆಂದು ವ್ಯವಸ್ಥಾಪಕರಾದ ಶ್ರೀ॥ … ಹೊನ್ನಯ್ಯನವರು ಪ್ರಾರ್ಥಿಸಿ…

ಜಗದಂಬ ಶಿಶುವಿಹಾರ

…ರಾಯನಕೆರೆ ಬಳಿ ಇರುವ ಜಗ… …ಶಿಶುವಿಹಾರವು ಬೇಸಗೆ ರಜವನ್ನು … …ನ್ನೆಯಿಂದ ಆರಂಭವಾಗಿದೆ

ಪ್ರದೋಷ ಸಂಗೀತ

…ಸವ ಪ್ರಯುಕ್ತ ನಾಳೆ ಸಂಜೆ … …ಗೆ ಟಿಡಾರಂ ಕೃಷ್ಣಸ್ವಾಮಿ ಪ್ರಸನ್ನ… …ಮಂದಿರದಲ್ಲಿ ಸಂಗೀತವಿದ್ವಾ… …ಎಸ್ ನಾರಾಯಣಶಾಸ್ತ್ರಿಗಳ ಗಾಯ… …ಡೆಯುತ್ತದೆ

ದೆಹಲಿಗೆ ಗಾಂಧೀಜಿ

ಪಂ॥ ನೆಹರು ಮತ್ತು ಆಚಾರ್ಯ ಕೃಪಲಾನಿಯವರ ಆಹ್ವಾನದಂತೆ ಮಹಾತ್ಮ ಗಾಂಧಿಯವರು ಇದೇ ೨೪ ನೇ ತಾ॥ ದೆಹಲಿಗೆ ಹೋಗಲಿರುವರು.

ಆಕಾಶದಿಂದ ಗ್ರಹ ಬಿದ್ದಿತು

ಗ್ಲೋಬ್] ಲಂಡನ್ ೧೩

ಈ ವರ್ಷದ ಆದಿಯಲ್ಲಿ ಸೂರ್ಯನಿಗಿಂತ ಲೂ ಪ್ರಕಾಶಮಾನವಾದ ಭಾರಿ ಗ್ರಹವೊಂದು ಜಪಾನಿಗೆ ಉತ್ತರ ದ್ವೀಪವೊಂದರ ಬಳಿನಲ್ಲಿ ಬಿದ್ದಿತೆಂದು ರಷ್ಯಾ ವೈಜ್ಞಾನಿಕರು ಕಂಡುಹಿಡಿದಿದ್ದಾರೆ ಇದರ ತೂಕ ಸುಮಾರು ಸಾವಿರ ಟನ್ನುಗಳೆಂದು ಗೊತ್ತಾಗಿದೆ ಇದು ಇನ್ನು ಒಂದೆರಡು ಸೆಕೆಂಡುಗಳ ಮೊದಲೋ ಅಥವಾ ಅನಂತರವೋ ಬಿದ್ದಿದ್ದರೆ ಪ್ರಮುಖದ ಪ್ರಮುಖ ನಗರವೊಂದು ನಿರ್ನಾಮವಾಗುತ್ತಿದ್ದಿತೆಂದೂ ಅವರು ತಿಳಿಸಿದ್ದಾರೆ

ಪಂಜಾಬಿನಲ್ಲಿ ಮತ್ತೆ ಗಲಭೆ

ಲಾಹೋರಿನಲ್ಲಿ ಮತ್ತೆ ಕೋಮುವಾರು ಗಲಭೆ ಆರಂಭವಾಗಿದೆ ಎರಡು ದಿನದಿಂದ ೩೦ ಮಂದಿ ಪ್ರಾಣ ಬಿಟ್ಟಿದ್ದಾರೆ ನಗರದಲ್ಲಿ ೨೪ ಘಂಟೆಗಳ ಕಾಲ ಕರ್ಫ್ಯೂ ಜಾರಿಗೆ ತರಲಾಗಿದೆ ವಿಶ್ವವಿದ್ಯಾನಿಲಯದ ಪರೀಕ್ಷೆಗಳನ್ನು ಮುಂದೂಡಲಾಗಿದೆ

ಹೈದರಾಬಾದಿಗೆ ಬಿರಾರ್ ಇಲ್ಲ

ಹೈದರಾಬಾದ್ ಸಂಸ್ಥಾನಕ್ಕೆ ಬೀರಾರನ್ನು ಕೊಡಲು ಸಾಧ್ಯವಿಲ್ಲವೆಂದು ನೈಜಾಮರಿಗೆ ಖಚಿತವಾಗಿ ತಿಳಿಸಲಾಗಿದೆಯೆಂದೂ ಬಿರಾರಿನ ಪ್ರಜೆಗಳು ಒಪ್ಪಿದ ಹೊರತು ಅದನ್ನು ನಿಜಾಮರ ಆಡಳಿತಕ್ಕೆ ಒಳಪಡಿಸಲಾಗುವುದಿಲ್ಲವೆಂದೂ ಗೊತ್ತಾಗಿದೆ

ರಾಜ್ಯಾಂಗ ಸಭೆಗೆ ಭೂಪಾಲ್ ಮುಸ್ಲಿಮರ ವಿರೋಧ

ತಮ್ಮ ಸಂಸ್ಥಾನವು ಭಾರತ ರಾಜ್ಯಾಂಗ ಸಭೆಗೆ ಸೇರಕೂಡದೆಂದು ಭೂಪಾಲ್ ಸಂಸ್ಥಾನದ ಮುಸ್ಲಿಂ ಲೀಗ್ ನಿರ್ಧರಿಸಿ, ಇದಕ್ಕೆ ವಿರುದ್ಧವಾಗಿ ಸರ್ಕಾರವು ವರ್ತಿಸಕೂಡದೆಂದು ಎಚ್ಚರಿಕೆಯಿತ್ತಿದೆ

ಹೈದರಾಬಾದಿನಲ್ಲಿ ಬಂಧನ

ಶ್ರೀ … ನಾರಾಯಣರವರ ಬಂಧನ ಮತ್ತು ಗಡೀಪಾರು ಪ್ರಕರಣದ ನಂತರ ನಡೆದ ಚಟುವಟಿಕೆಗಳ ಸಂಬಂಧದಲ್ಲಿ ಇದುವರೆವಿಗೆ ಹೈದರಾಬಾದ್ ನಗರ … …ಗಳಲ್ಲಿ … ನೈಜಾಂ ಸರ್ಕಾರದವರು ಬಂಧಿಸಿದ್ದಾರೆಂದು ವರದಿಯಾಗಿದೆ

ಕೊಲ್ಹಾಪುರದಲ್ಲಿ ಪ್ರಜಾಪ್ರಭುತ್ವ ಸರ್ಕಾರ

ಕೊಲ್ಹಾಪುರದ ಮಹಾರಾಜರು ಅಲ್ಲಿನ ಶಾಸನ ಸಭೆಯ ಬೇಸಿಗೆ ಅಧಿವೇಶನದ ಆರಂಭೋತ್ಸವವನ್ನು ನೆರವೇರಿಸುತ್ತಾ ತಾವು ಜಾರಿಗೆ ತರಬೇಕೆಂದಿರುವ ಸುಧಾರಣೆಗಳ ಸ್ವರೂಪವನ್ನು ಸಾರಿದ್ದಾರೆ ಪ್ರತಿಯೊಬ್ಬರೂ ಪ್ರಜಾ ಸತ್ತಾತ್ಮಕ ತಳಹದಿಯ ಮೇಲೆ ತಮ್ಮ ಕಾರುಬಾರು ನಡೆಸಬೇಕು ಪ್ರತಿಯೊಂದು ಗ್ರಾಮ ಪಂಚಾಯಿತಿಯೂ ಗ್ರಾಮ ಚಟುವಟಿಕೆಯ ಕೇಂದ್ರವಾಗಿ … …ಗಳನ್ನು … ಗ್ರಾಮ ರಾಜ್ಯಕ್ಕೂ ಶಾಸನ ಸಭೆಗೂ ಸಂಬಂಧವನ್ನು ಹೊಂದಿಸಲಾಗುವುದು— ಎಂದು ಅವರು ತಿಳಿಸಿದ್ದಾರೆ.

ಲಂಡನ್ನಿಗೆ ವಾರಾಂತ್ಯದಲ್ಲಿ ವೈಸರಾಯರು

ಬ್ರಿ॥ ಮಂತ್ರಿಮಂಡಲದ ಕರೆಯ ಮೇರೆಗೆ ವೈಸರಾಯರು ಈ ವಾರಾಂತ್ಯದಲ್ಲಿ ಲಂಡನ್ನಿಗೆ ತೆರಳುವರು ಪ್ರಮುಖ ಮಂತ್ರಿ … ಮುಖಂಡರುಗಳೊಡನೆ ಸಂಭಾಷಣೆಗಳನ್ನು ನಡೆಸುವರು

ಪರೀಕ್ಷಾ ಭವನದಿಂದ ವಿದ್ಯಾರ್ಥಿಗಳ ಪರಿತ್ಯಾಗ

ಢಾಕಾ ವಿಶ್ವವಿದ್ಯಾನಿಲಯದ ಇಂಟರ್ ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿಗಳು ತಮಗೆ ಕೊಡಲಾಗಿದ್ದ ಗಣಿತದ ಪ್ರಶ್ನೆ ಪತ್ರಿಕೆಯು ಅತ್ಯಂತ ಕಠಿಣವಾಗಿದೆಯೆಂದು ಹೇಳಿ ಪರೀಕ್ಷಾ ಭವನವನ್ನು ತ್ಯಜಿಸಿ ಹೊರಗೆ ಬಂದುಬಿಟ್ಟರೆಂದು ತಿಳಿದು ಬಂದಿದೆ.

ಜೈಪುರದಲ್ಲಿ ಸುಧಾರಣಾ ಸಮಿತಿ

ಸಂಸ್ಥಾನದಲ್ಲಿ ಹೊಸ ರಾಜ್ಯಾಂಗ ರಚನೆಗಾಗಿ ಸಮಿತಿಯೊಂದನ್ನು ಜೈಪುರ ಸರ್ಕಾರವು ನೇಮಿಸಿದೆ ಇದಕ್ಕೆ ಅಲ್ಲಿನ ಪ್ರಧಾನ ನ್ಯಾಯಾಧೀಶರಾದ ಶ್ರೀ॥ … ರವರು ಅಧ್ಯಕ್ಷರಾಗಿರುವರು ಇವರಲ್ಲದೆ ೧೧ ಮಂದಿ ಸದಸ್ಯರೂ ಇರುವರು

ಗಡಿನಾಡು ಗೌರ್ನರ್‌ಗಿರಿಗೆ ಸರ್ ತ್ರಿವೇದಿ

ಗ್ಲೋಬ್] ಕಟಕ್ ೧೪

ಒರಿಸ್ಸದ ಗೌರ್ನರಾದ ಸರ್ ಸಿ ಎಂ ತ್ರಿವೇದಿಯವರು ಗಡಿನಾಡಿನ ಗೌರ್ನರಾಗಿಯೂ, ಅಲ್ಲಿರುವ ಸರ್ ಒಲಾಫ್ ಕೆರೋರವರು ಒರಿಸ್ಸಾವಿಗೂ ವರ್ಗಾಯಿಸಲ್ಪಡುವರೆಂದು ಒಳವಾರ್ತೆ ವದಂತಿ ಹಬ್ಬಿದೆ

ಒರಿಸ್ಸಾ ಸಂಸ್ಥಾನ ಸೇರಿಸಿಕೊಳ್ಳಲು ಹೈದರಾಬಾದಿನ ಪ್ರಯತ್ನ

ಗ್ಲೋಬ್] ಕಟಕ್ ೧೪

ಒರಿಸ್ಸಾ ಮುಸ್ಲಿಂ ಲೀಗಿನ ಬೆಂಬಲದೊಡನೆ, ಭಾಸ್ತರ್ ಎಂಬ ೧೩೭೦ ಸಾವಿರ ಚದುರ ಮೈಲಿ ವಿಸ್ತೀರ್ಣವುಳ್ಳ ಪ್ರಮುಖ ಪೂರ್ವ ಸಂಸ್ಥಾನವನ್ನು ಹೈದರಾಬಾದಿಗೆ ಸೇರಿಸಿಕೊಳ್ಳಲು ನೈಜಾಮರ ಸರ್ಕಾರವು ಒತ್ತಾಯಪಡಿಸುತ್ತಿದೆಯೆಂದು ತಿಳಿದು ಬಂದಿದೆ

ಹಿಂದೂ ವ್ಯಾಪಾರಿಗಳು ಕಲ್ಕತ್ತಾ ಬಿಡುತ್ತಿದ್ದಾರೆ

ಗ್ಲೋಬ್] ಲಂಡನ್ ೧೫

ಬಂಗಾಳವು ಪಾಕೀಸ್ತಾನಕ್ಕೆ ಸೇರಿಹೋಗುವುದೆಂಬ ಹೆದರಿಕೆಯಿಂದ ೪೫ ಕೋಟಿ ಪೌಂಡುಗಳ ಬಂಡವಾಳವನ್ನು ಪಡೆದಿರುವ ಪ್ರಮುಖ ಹಿಂದೂ ವ್ಯಾಪಾರಸ್ಥರು ಕಲ್ಕತ್ತಾ ನಗರವನ್ನು ತ್ಯಜಿಸುತ್ತಿರುವುದಾಗಿ ವರದಿಯಾಗಿದೆ.

ತರಕಾರಿಯ ಮೇಲೆ ಅಣು ಶಕ್ತಿಯ ಪ್ರಭಾವ

ಎರಡು ವರ್ಷಗಳ ಹಿಂದೆ ನಾಗಸಾಕಿಯ ಮೇಲೆ ಅಣುಬಾಂಬನ್ನು ಪ್ರಯೋಗಿಸಲಾಯಿತಷ್ಟೆ ಈಗ ಆ ಪ್ರದೇಶದಲ್ಲಿ ಬೆಳೆಯುತ್ತಿರುವ … …ರಷ್ಟು ದಪ್ಪನಾಗಿರುವುದಾಗಿ ವರದಿಯಾಗಿದೆ ಎರಡು ತಲೆಗಳುಳ್ಳ ಸಸಿಗಳು ಎರಡೆರಡು ಗೆಡ್ಡೆಗಳುಳ್ಳ … ಅತಿ ದಪ್ಪನಾಗಿರುವ ಗುಂಬಳಕಾಯಿಗಳು ಬೆಳೆಯುತ್ತಿರುವುದಾಗಿ ಹೇಳಲಾಗಿದೆ

ಪರೀಕ್ಷೆಗೇ ಹೋಗದೆ ವಿದ್ಯಾರ್ಥಿಯು ತೇರ್ಗಡೆ

ಗ್ಲೋಬ್] ನಾಗಪುರ ೧೬

ಇಲ್ಲಿನ ಕಾಂಜನೀಯ ಎ. ಗ್ … ಶಾಲೆಯ ವಿದ್ಯಾರ್ಥಿಯಾದ ಶ್ರೀ ಸರೋಜ ಎಂಬುವನು ಪರೀಕ್ಷೆಗೆ ಹೋಗದಿದ್ದರೂ ಉತ್ತೀರ್ಣನಾಗಿರುವನೆಂದು ಪ್ರಕಟಿಸಲಾಗಿದೆ. ಈತನು ಸನದಿ ವರ್ಗಕ್ಕೆ ೨ ತಿಂಗಳು ಮಾತ್ರ ಹಾಜರಾಗಿ ಶಾಲೆ ಹೋಗುವುದನ್ನೇ ತೊರೆದು ಬಿಟ್ಟಿದ್ದನು.

ಪ್ರತ್ಯೇಕ ಸಿಖ್ ಸ್ಥಾನ

ಹಿಂದೂಸ್ತಾನ ಮ. ಕ್ತ … ಪಾಕಿಸ್ಥಾನಗಳ ಮಧ್ಯೆ ಸಿಖ್ ಸ್ಥಾನವೊಂದನ್ನು ನಿರ್ಮಿಸಬೇಕಾಗುವುದೆಂದು ಬೇಡಿಕೆ … ಪಾಟಿಯಾಲದ ಮಹಾರಾಜರೇ ಈ ಸಿಖ್ ಸ್ಥಾನದ ನಾಯಕರಾಗುವರೆಂದು ಹೇಳಲಾಗಿದ್ದು ಈ ವಿಚಾರವನ್ನು ಚರ್ಚಿಸಲು ವೈಸರಾಯರು ಪಾಟಿಯಾಲಾ ಮಹಾರಾಜರನ್ನು ಲಂಡನ್ನಿಗೆ ಆಹ್ವಾನಿಸಿದ್ದಾರೆಂದೂ ಗೊತ್ತಾಗಿದೆ.

ಇಂದೂರ್ ಸಂಸ್ಥಾನದಲ್ಲಿ ಸರ್ಕಾರ ತಣ್ಣಗಾಗಿದೆ

ತಮಗೆ ಕೊಡಬೇಕಾದ ತಾತ್ಕಾಲಿಕ ಪರಿಹಾರವು ಸಮರ್ಪಕವಾಗಿಲ್ಲವೆಂದು ಇಂದೂರ್ ಸಂಸ್ಥಾನದ ನಾನ್ ಗೆಜೆಟೆಡ್ ಅಧಿಕಾರಿಗಳ ಸಂಘವು ತೀರ್ಮಾನಿಸಿ, ಮೊನ್ನೆ ಮುಷ್ಕರವನ್ನು ಘೋಷಿಸಿದ … ಮತ್ತು ನಾನ್ ಗೆಜೆಟೆಡ್ ಅಧಿಕಾರಿಗಳೆಲ್ಲರೂ ಕಛೇರಿಗಳಿಗೆ ಹೋಗಿಲ್ಲ … ಪತ್ರಿಕಾ ಪ್ರಸ್ತುತ ಮತ್ತು ರೇಸ … …ನ್ನು ಬಿಟ್ಟು ಮಿಕ್ಕ ಎಲ್ಲಾ ಸರ್ಕಾರಿ … …ಗಳೂ ಬಂದಾಗಿವೆ

ಸಾಧ್ವಿ

ತಾ|| ೧೭-೫-೪೭ ಶನಿವಾರ

ಸಂಬಳದ ಪ್ರಮಾಣ

ಸರ್ಕಾರಿ ನೌಕರರಿಗೆ ಇನ್ನು ಮುಂದೆ ಕೊಡಬೇಕಾದ ಸಂಬಳದ ಪ್ರಮಾಣದ ಬಗ್ಗೆ ಭಾರತ ಸರ್ಕಾರದವರು ರಚಿಸಿದ್ದ ಸಮಿತಿಯ ವರದಿಯು ಹೊರಬಿದ್ದಿದೆ. ಅದನ್ನು ಆ ಸರ್ಕಾರದವರು ಅಂಗೀಕರಿಸಿರುತ್ತಾರೆ. ಬಹಳ ದಿನಗಳಿಂದಲೂ ಇತ್ಯರ್ಥವಾಗದಿದ್ದ ಈ ವಿಷಯವನ್ನು ಸಮಿತಿಯವರು ಕೂಲಂಕಷವಾಗಿ ಪರೀಕ್ಷಿಸಿ ತಮ್ಮ ಸಲಹೆಗಳನ್ನು ನೀಡಿರುತ್ತಾರೆ

ನೌಕರರ ಕನಿಷ್ಠ ಸಂಬಳವು ಎರಡು ಸಾವಿರಕ್ಕೆ ಮೀರಕೂಡದೆಂದು ಗೊತ್ತುಮಾಡಲಾಗಿದೆ ಇದೊಂದು ಪ್ರಾಮುಖ್ಯವಾದ ತೀರ್ಮಾನ ಈ ಬಡ ದೇಶದಲ್ಲಿ ಇತರ ದೇಶಗಳಿಗಿಂತಲೂ ವಿಪರೀತವಾದ ಸಂಬಳಗಳನ್ನು ಉನ್ನತಾಧಿಕಾರಿಗಳು ತೆಗೆದುಕೊಳ್ಳುತ್ತಿರುವರೆಂಬ ಅಪಖ್ಯಾತಿಯು ಬಹಳ ದಿನಗಳಿಂದಲೂ ಇತ್ತು ಗರಿಷ್ಠಾವಧಿಯ ಸಂಬಳಗಳನ್ನು ಐನೂರು ರೂ. ಗೆ ಇಳಿಸಬೇಕೆಂಬುದೂ ಸಹ ಕಾಂಗ್ರೆಸ್ ನಾಯಕರ ಗುರಿಯಾಗಿತ್ತು ಸದ್ಯದ ವಿದ್ಯಮಾನಗಳನ್ನೆಲ್ಲ ಪರೀಕ್ಷಿಸಿ ಅದನ್ನು ಎರಡು ಸಾವಿರ ರೂ ಗಳಿಗೆ ನಿಗದಿ ಮಾಡಲಾಗಿದೆ. ಕಾಲಕ್ರಮದಲ್ಲಿ ಸೂಕ್ತ ಒಂದಂತೆ ಇದನ್ನು ಇನ್ನು ಕಡಿಮೆ ಮಾಡಬಹುದಾಗಿದೆ.

ಕನಿಷ್ಠ ದರ್ಜೆಯ ಸಂಬಳವು ತುಟ್ಟಿಭತ್ಯವೂ ಸೇರಿ ಐವತ್ತೈದು ರೂ ಇರಬೇಕೆಂದು ಗೊತ್ತಾಗಿದೆ ಇದರಲ್ಲಿ ಇಪ್ಪತ್ತೈದು ರೂ ತುಟ್ಟಿಭತ್ಯವೆಂದೂ ಮೂವತ್ತು ರೂ ಮೂಲ ಸಂಬಳವೆಂದೂ ಹೇಳಲಾಗಿದೆ ಎಲ್ಲಾ ಕೆಳ ದರ್ಜೆಯ ನೌಕರರೂ ಕನಿಷ್ಠ ಪಕ್ಷ ಮೂವತ್ತು ರೂ. ಸಂಬಳವನ್ನು ಪಡೆಯುವರು ತುಟ್ಟಿಭತ್ಯವು ಆಯಾ ಸಮಯ ಸನ್ನಿವೇಶದ ಧಾರಣೆಬಾಸಿಗಳನ್ನು ಅವಲಂಬಿಸಿರುತ್ತದೆ

ಮಧ್ಯಮ ವರ್ಗದವರಿಗೆ ಕಡೆಯ ಪಕ್ಷ ಐವತ್ತೈದು ರೂ ಸಂಬಳವನ್ನೂ ಮೂವತ್ತೈದು ರೂ. ತುಟ್ಟಿಭತ್ಯವನ್ನೂ ಕೊಡಲಾಗುವುದು ಇದಲ್ಲದೆ ದೊಡ್ಡ ನಗರಗಳಲ್ಲಿ ಮನೆ ಬಾಡಿಗೆ ಮುಂತಾದ ಒಗ್ಗೆ ಹೆಚ್ಚಿನ ಸಹಾಯವನ್ನೂ ನೀಡಲಾಗುವುದು ಈ ಹೊಸ ಏರ್ಪಾಡಿನಿಂದ ನೌಕರರಿಗೆ ಬಹು ಮಟ್ಟಿನ ಪರಿಹಾರವು ದೊರೆಯುವುದರಲ್ಲಿ ಸಂದೇಹವಿಲ್ಲ. ಇದರಿಂದ ಅವರು ಹೆಚ್ಚು ಉತ್ಸಾಹದಿಂದಲೂ, ಆಸಕ್ತಿಯಿಂದಲೂ, ಪ್ರಾಮಾಣಿಕತೆಯಿಂದಲೂ ಕೆಲಸ ಮಾಡಲು ಅನುಕೂಲವಾಗುವುದು

ನಮ್ಮ ಸಂಸ್ಥಾನದಲ್ಲಿಯೂ ಇದೇ ಬಗೆಯ ಸಮಿತಿಯು ಈಗ ಸಮಾಲೋಚನೆಗಳನ್ನು ನಡೆಸುತ್ತಿದೆ. ಅಖಿಲ ಭಾರತ ಸಮಿತಿಯ ಸಲಹೆಗಳನ್ನು ಅವರೂ ಸಹ ಕೂಲಂಕಷವಾಗಿ ಪರೀಕ್ಷಿಸುವರೆಂದು ನಾವು ನಂಬಿದ್ದೇವೆ. ಕೆಳ ದರ್ಜೆಯ ಮತ್ತು ಮಧ್ಯಮ ವರ್ಗದ ಜನರ ಸ್ಥಿತಿಯು ಇಡೀ ಭರತ ಖಂಡದಲ್ಲೆಲ್ಲಾ ಒಂದೇ ರೀತಿಯಲ್ಲಿರುತ್ತದೆ. ಆದುದರಿಂದ ಅಲ್ಲಿನ ಏರ್ಪಾಡುಗಳನ್ನೇ ಅವರುಗಳ ಬಗ್ಗೆ ಇಲ್ಲಿಯೂ ಅನುಸರಿಸುವುದು ಯುಕ್ತವಾಗಿದೆ ಆದರೆ ಮೇಲ್ದರ್ಜೆಯ ಅಧಿಕಾರಿಗಳ ಸಂಬಳವನ್ನು ಮಾತ್ರ ನಮ್ಮಲ್ಲಿ ಇನ್ನೂ ಕಡಮೆ ಮಾಡಬೇಕು. ನಮ್ಮ ಸಂಸ್ಥಾನವು ಬಹಳ ಚಿಕ್ಕದು ಇಲ್ಲಿನ ಅಧಿಕಾರಿಗಳ ಕಾರ್ಯವ್ಯಾಪ್ತಿಯು ಸಹ ಕಡಿಮೆ. ಆದುದರಿಂದ ಇಲ್ಲಿನ ಗರಿಷ್ಠಾವಧಿ ಸಂಬಳವನ್ನು ಸಾವಿರ ರೂಪಾಯಿಗೆ ನಿಗದಿ ಮಾಡುವುದು ಯುಕ್ತವಾಗಿದೆ ಸಂಬಳ ಸಮಿತಿಯವರು ಅದರಂತೆ ಶಿಫಾರಸು ಮಾಡುವರೆಂದು ನಾವು ನಂಬಿದ್ದೇವೆ

ರಾಜ್ಯಾಂಗ ಸಭಾ ಚುನಾವಣೆಯಲ್ಲಿ ಲೀಗಿನವರ ...

ಉದಯಪುರದಿಂದ ರಾಜ್ಯಾಂಗ ಪ್ರತಿನಿಧಿಯನ್ನು ಆರಿಸುವ ಬಗ್ಗೆ ಚುನಾವಣೆಯಲ್ಲಿ ಅಖಿಲ ಲೀಗಿನವ... ಗವಹಿಸಿ, ಪ್ರಜಾ ಮಂಡಲದ ... ವಾರದಾದ ಶ್ರೀ|| ಮಾಣಿಕ್ಯಲಾಲರಿಗೆ ಬೆಂಬಲವಿತ್ತು ಅವರು ಆಯ್ಕೆಯಾಗುವಂತೆ ಮಾಡಿದ್ದಾರೆ.

RAJKAMAL
Morning Shows from 16-5-47
for 4 days daily at 10-30 a m
'Intermezzo'
with
LESLIE HOWARD and
INGRID BERGMANN

ಮೈಸೂರು ಸಿಟಿ ಚೀಫ್ ರೇಷನಿಂಗ್ ಆಫೀಸಿನಿಂದಾ:-

ನೋಟಿಫಿಕೇಷನ್ ನಂ RI 188-46-47
ತಾರೀಖು 14-5-1947

ಇದರಿಂದ ಮೈಸೂರು ನಗರದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:- ಮೈಸೂರು ಸಿಟಿಯಲ್ಲಿ ತೊಗರಿಬೇಳೆ ಅಭಾವವಿರುವುದರಿಂದಲೂ, ಹೊರಗಿನಿಂದ ದಾಸ್ತಾನು ಬರತಕ್ಕ ಸಂಭವವು ಸಹ ಇಲ್ಲದಿರುವುದರಿಂದಲೂ, ಜನರು ನಿತ್ಯಗಟ್ಟಲೆ ಉಪಯೋಗಕ್ಕೆ ಹೆಸರು, ಕಡಲೆ ವಗೈರೆ ದ್ವಿದಳ ಧಾನ್ಯಗಳನ್ನು ಹೆಚ್ಚಾಗಿ ಉಪಯೋಗಿಸಬೇಕಾಗಿ ತಿಳಿಯಪಡಿಸಿರುತ್ತೆ

ಆರ್. ರಾಮಚಂದ್ರರಾವ್
ಬೊಂಬೂರೆ,
ಚೀಫ್ ರೇಷನಿಂಗ್ ಆಫೀಸರ್,
ಮೈಸೂರು ಮೈಸೂರು ಸಿಟಿ.
14-5-1947

ಚಾಮುಂಡೇಶ್ವರಿ ಟಾಕೀಸ್
ಷಾ ಕುಮಾರ್ ಪ್ರೊಡಕ್ಷನ್
ಹಿಂದೀ ಚಿತ್ರ
ಭಾಯ್
೧೭-೫-೪೭ ರಿಂದ
ಪ್ರತಿದಿನ 3 ಆಟಗಳು
ಮುಖ್ಯ ಪಾತ್ರ:-ಮನೋರಮಾ,
ಶಕೀರ್.

ಪ್ರತಿ ದಿನ 3 ಆಟಗಳು
೧೭—೫—೪೭ ರಿಂದ
ಫಜ್ಲಿ ಬ್ರದರ್ಸ್‌ರವರ ಮಾಸ್ಟರ್ ...
ದಿ ಲ್
ಮುಖ್ಯ ಭೂಮಿಕೆ:—ನೂರ್‌ಜಹಾನ್ ... ಅಬ್ದುಲ್ ಲತೀಫ್, ಗೀತಾ...
ಒಲಿಂಪಿಯಾ ಟಾಕೀಸ್

Edited, printed and publish... A. R. Nagaraja ... of the Sadhvi ... D. Subbiah Road, Mysore

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್
ಅಶೋಕಾ ರಸ್ತೆ, ಮೈಸೂರು : : ಫೋನ್ ...
ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಯಲ್ಲಿ ತಮ್ಮಲ್ಲಿ ... ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.
ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈ...

18-5-47 ನೇ ತಾ|| ನಿಂದ ಜನಭರಿತವಾದ 3 ನೇ ವಾರ
ವುಡ್-ಲ್ಯಾಂಡ್ಸ್ ಟಾಕೀಸ್, ಮೈಸೂರು.
★ 'ನಾ ಮ್-ಇ ಬ್ಬರು'
(ತಮಿಳು)
ಪ್ರತಿ ದಿನ ಮೂರು ಆಟಗಳು
ತಾರಾಗಣ:-ಟಿ.ಆರ್. ಮಹಾಲಿಂಗಂ, ಟಿ ಎ ಜಯಲಕ್ಷ್ಮಿ ಮತ್ತು ಬೇಬಿ ...

ರಾಜಕಮಲ್, ಮೈಸೂರು
ತಾ|| ೧೭-೫-೪೭ ರಿಂದ ನಾಲ್ಕನೇ ವಾರ-ಪ್ರತಿ ದಿನ ೨ ಆಟ...
'ಗೊಲ್ಲಭಾಮ'
(ತೆಲುಗು)
ಭೂಮಿಕೆ:—ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

Office of the President,
City Municipal Council, Mysore.
Dated 1st May 1947.

NOTIFICATION

Notice is hereby given to the inhabitants of the Mysore City Municipality that the Municipal Council have resolved to amend the Bye-law relating to Dangerous offensive trades so as to include the using of any place for manufacture of beedies, cigars cheroots or cigars under the above as follows:

In Chapter XXIV of the Municipal Rules and Bye-laws Add the following numbering it as 15 under 2 (b)

" - (b) 15 using any place for the manufacture of beedies, cigars, cheroots or cigars

Any person having objection to the above amendment may prefer the same in writing to the undersigned within one month from the date of this notification in the official Gazette after which no objection will be heard

R. RAMACHANDRA RAO BHOMBORE
PRESIDENT

Distributors:-


ಇಂಡಿಯಾ ಸೂಪರ್ ಟಾಂಗಾ ಟೈರು
ಬಹಳ ಕಾಲ ಬಾಳಿಕೆ ಬರುವ ಮತ್ತು ಸ್ವಾಭಾವಿಕವಾದ ರಬ್ಬರಿನಿಂದ ... ಯುದ್ಧದ ಪೂರ್ವದ ಮಾದರಿಯ ತಯಾರಿಸಲ್ಪಟ್ಟಿರುವುದು ಲಾಭ... ಒಂದು ಸಾರಿ ಉಪಯೋಗಿಸಿ ನೋಡಿ
ಸಿಕ್ಕುವ ಸ್ಥಳ:—
ಸಿ. ಬಿ. ಎಂ. ಚಂದ್ರಯ್ಯ ...
ಅಶೋಕಾ ರಸ್ತೆ, : : ಮೈಸೂರು

ರೆಜಿ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಭಾನುವಾರ ೧೮—೫—೪೭ [ಸಂಚಿಕೆ ೨೪೦

ತಾತ್ಕಾಲಿಕ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ

ಜಿಲ್ಲಾ ಸಮ್ಮೇಳನ

ಮೈಸೂರು ೧೮

ಸಂಸ್ಥಾನದ ಸ್ಥಳಾಡಳಿತ ಸಚಿವರಾದ ಶ್ರೀ॥ ಎಂ ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ನಿನ್ನೆ ಮಧ್ಯಾಹ್ನ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಮೈಸೂರು ಜಿಲ್ಲಾ ಸಮ್ಮೇಳನವು ಜರುಗಿತು. ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಟಿ ಸಿ ಹೊನ್ನಪ್ಪನವರು ಸ್ವಾಗತ ಭಾಷಣವನ್ನು ಮಾಡಿದರು ಜಿಲ್ಲಾಧಿಕಾರಿಗಳ ಅಸಿಸ್ಟೆಂಟರಾದ ಶ್ರೀ ಬಿ ಲಕ್ಷ್ಮೀನಾರಾಯಣರಾಯರು ಜಿಲ್ಲೆಯ ಕಳೆದ ವರ್ಷದ ವರದಿಯನ್ನು ಒಪ್ಪಿಸಿದರು

ರಾಜಕುಮಾರಿ ಗಾಯತ್ರಿ ದೇವಿಯವರ ಜನನದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿ ಮಹಾಪ್ರಭುಗಳಿಗೂ ರಾಜಮನೆತನಕ್ಕೂ ಶ್ರೇಯಸ್ಸನ್ನು ಕೋರುವ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಮೈಸೂರು ನಗರದಲ್ಲಿ ತಲೆದೋರಿರುವ ಸೌದೆ ಅಭಾವದ ಬಗ್ಗೆ ಶ್ರೀ॥ ಎಂ ರಾಮಸ್ವಾಮಿಯವರು ತಂದ ನಿರ್ಣಯದ ಮೇಲೆ ಸಭೆಯಲ್ಲಿ ವಿಪುಲವಾದ ಚರ್ಚೆ ನಡೆಯಿತು ನಗರಕ್ಕೆ ಸಾಕಾದಷ್ಟು ಸೌದೆ ಬರುತ್ತಿದೆಯೆಂದೂ, ಅದನ್ನು ಹೋಟೆಲುಗಳವರು ದುಬಾರಿ ಬೆಲೆಗೆ ಕೊಂಡು ದಾಸ್ತಾನು ಮಾಡಿಕೊಂಡಿರುತ್ತಾರೆಂದೂ ಹೇಳಲಾಯಿತು

ಫರೋ ಅಲಾಯ್ಸ್, ಗಂಧದ ಎಣ್ಣೆ ಕಾರ್ಖಾನೆಗಳಲ್ಲಿ ದಿನವಹಿ ನೂರಾರು ಗಾಡಿ ಸೌದೆಗಳು ಉಪಯೋಗವಾಗುತ್ತಿವೆ. ಅವುಗಳಿಗೆ ವಿದ್ಯುಚ್ಛಕ್ತಿ ಸೌಕರ್ಯವನ್ನು ಒದಗಿಸಿ, ಅಲ್ಲಿಗೆ ಹೋಗುವ ಸೌದೆ ಸಾರ್ವಜನಿಕರಿಗೆ ದೊರೆಯುವಂತೆ ಮಾಡಬೇಕೆಂದು ಶ್ರೀ ಶ್ರೀನಿವಾಸ ಮೂರ್ತಿಯವರು ಸೂಚಿಸಿದರು ಸಚಿವ ಶೇಷಾದ್ರಿಯವರು ಮಾತನಾಡಿ ಮೈಸೂರು ನಗರದ ಸೌದೆ ಪರಿಸ್ಥಿತಿಯನ್ನು ತನಿಖೆ ಮಾಡಿ ಅವಶ್ಯಕವಾದ ಏರ್ಪಾಡಿನ ಬಗ್ಗೆ ಸಲಹೆ ಕೊಡಲು ಸರ್ಕಾರದವರು ಒಬ್ಬ ವಿಶೇಷಾಧಿಕಾರಿಗಳನ್ನು ನೇಮಿಸಿದ್ದಾರೆಂದೂ, ವಿದ್ಯುಚ್ಛಕ್ತಿಯ ಯಂತ್ರಗಳಿಗೆ ಆರ್ಡರ್ ಕೊಡಲಾಗಿದೆಯೆಂದೂ, ಅವುಗಳು ಬಂದ ಕೂಡಲೇ ಕಾರ್ಖಾನೆಗಳಿಗೆ ಅವುಗಳನ್ನು ಒದಗಿಸಲಾಗುವುದೆಂದೂ ಹೇಳಿದರು.

ಈ ಕೂಡಲೇ ಸರ್ಕಾರದವರು ಮೈಸೂರು ನಗರದಲ್ಲಿರುವ ಸೌದೆ ಅಭಾವವನ್ನು ನೀಗಿಸಲು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಪ್ರಾರ್ಥಿಸುವ ಜಿಲ್ಲಾಧಿಕಾರಿಗಳ ನಿರ್ಣಯವು ಸಭೆಯ ಸರ್ವಾನುಮತವನ್ನು ಪಡೆಯಿತು.

ಮೈಸೂರು ಜಿಲ್ಲೆಯ ಕೈಮಗ್ಗದವರಿಗೆ ಇರುವ ಕೊರತೆಗಳ ಬಗ್ಗೆ ಶ್ರೀ॥ ಕೆ. ಸಿದ್ದಪ್ಪನವರು ನಿರ್ಣಯವನ್ನು ಮಂಡಿಸಿದರು. ಶ್ರೀ॥ ಇ ಪಿ. ನಂಜಪ್ಪನವರು ಮಾತನಾಡಿ ಸರ್ಕಾರದವರು ಹೊರಡಿಸಿರುವ ಕಾನೂನು ಕ್ರಮವಾಗಿ ಜಾರಿಗೆ ಬರಲು ಇಷ್ಟು ಸಿಬ್ಬಂದಿಗಳು ಅವಶ್ಯಕವೆಂದರು ಮಗ್ಗದವರು ಹೆಚ್ಚಾಗಿರುವ ಕೇಂದ್ರಗಳಿಗೆ ಇನ್ಸ್‌ಪೆಕ್ಟರುಗಳು ಭೇಟಿ ಇತ್ತು, ಅದೇ ಸ್ಥಳದಲ್ಲಿ ಸೀಲನ್ನು ಹಾಕಿ, ಅದರ ಶುಲ್ಕವನ್ನು ಅಲ್ಲೇ ವಸೂಲು ಮಾಡಿ ಕೈಮಗ್ಗದವರಿಗೆ ಉಪಕಾರ ಮಾಡಬೇಕೆಂದು ಹೇಳಿದರು ಮಗ್ಗದವರು ಬಟ್ಟೆ ತಂದ ದಿನವೇ ಸೀಲು ಹಾಕಿಸಲು ವ್ಯವಸ್ಥೆ ಮಾಡುವಂತೆ ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವು ಅಂಗೀಕೃತವಾಯಿತು

ರಾಜ್ಯಾಂಗ ಸಭೆಗೆ ಸೇರುವು ದಾಗಿ ಘೋಷಿಸಬೇಕು

ದಿವಾನರೊಡನೆ ಹೆಚ್ ಸಿ ದಾಸಪ್ಪನವರ ಭೇಟಿ

ಮೈಸೂರು ೧೮

ದಿವಾನರ ಆಹ್ವಾನದ ಮೇರೆ ಶ್ರೀ ಹಿರಿಹಳ್ಳಿ ದಾಸಪ್ಪನವರು ನಿನ್ನೆ ಸಂಜೆ ಅವರನ್ನು ಇಲ್ಲಿನ ಲೇಕ್‌ವ್ಯೂ ಭವನದಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದರು. ಮೈಸೂರು ಸಂಸ್ಥಾನವು ರಾಜ್ಯಾಂಗ ಸಭೆಗೆ ಸೇರುವುದಾಗಿ ಕೂಡಲೇ ಘೋಷಣೆಯೊಂದು ಹೊರಡಬೇಕೆಂದು ಶ್ರೀ ಹಿರಿಹಳ್ಳಿಯವರು ಒತ್ತಾಯ ಪಡಿಸಿದರೆಂದೂ, ಈ ವಿಷಯವನ್ನು ಪರಿಶೀಲಿಸುವುದಾಗಿ ಸರ್ ಆರ್ಕಾಟರು ಭರವಸೆ ಇತ್ತರೆಂದೂ ತಿಳಿದುಬಂದಿದೆ

ಮಲೇರಿಯಾಕ್ಕೆ ಜಯಪ್ರದವಾದ ಔಷಧಿ

ಗ್ಲೋಬ್] ಲಂಡನ್ ೧೫

ಮಲೇರಿಯಾ ಹಾವಳಿಯನ್ನು ಸಂಪೂರ್ಣವಾಗಿ ತಪ್ಪಿಸಲು ಭಾರಿ ಪ್ರಮಾಣದಲ್ಲಿ ಸಂಶೋಧನೆಗಳು ಜಯಪ್ರದವಾಗಿ ಸಾಗುತ್ತಿವೆ. ಶಾರ್ಡಿನಿಯಾ ದ್ವೀಪದ ೪೨೦ ಚದರ ಮೈಲಿ ಪ್ರದೇಶದಲ್ಲಿ ಅಜಿಯ ಎಫುಡಿ ಎಂಬುವರು ನಡೆಸಿದ ಪ್ರಯೋಗದಿಂದ ಸೊಳ್ಳೆಗಳ ಹೆಸರೇ ಇಲ್ಲದಂತೆ ಮಾಡಲಾಗಿದೆ. ಈಗ ಹೆಚ್ಚು ಪ್ರದೇಶದಲ್ಲಿ ಈ ಪ್ರಯೋಗವನ್ನು ಮುಂದುವರಿಸಲಾಗುವುದು ಮುಂದಿನ ಎರಡು ವರ್ಷಗಳಲ್ಲಿ ಇದಕ್ಕಾಗಿ ೩೫೦ ಸಾವಿರ ಪೌಂಡುಗಳನ್ನು ಖರ್ಚು ಮಾಡಲಾಗುತ್ತದೆಂದೂ, ಈ ಪ್ರಯೋಗವು ಯಶಸ್ವಿಯಾಗಿ ಔಷಧಿಯು ಸಿದ್ಧಿಸಿದರೆ ಬಂಡವಾಳದ ೧೦ ರಷ್ಟು ಲಾಭ ಬರುವುದೆಂದೂ ಅಂದಾಜು ಮಾಡಲಾಗಿದೆ

ಉಪಾಧ್ಯಾಯರಿಗೆ ೩೦ ರೂ. ತುಟ್ಟಿಭತ್ಯ

ಗ್ಲೋಬ್] ನಾಗಪುರ ೧೮

ಮಾಧ್ಯಮಿಕ ಶಾಲಾ ಉಪಾಧ್ಯಾಯರುಗಳ ಅವಸ್ಥೆಯನ್ನು ಮನ್ನಿಸಿ ಮಧ್ಯಪ್ರಾಂತ್ಯದ ಸರ್ಕಾರದವರು ಅವರಿಗೆ ೩೦ ರೂ ಗಳ ಜೀವನ ಭತ್ಯವನ್ನು ಕೊಡಲು ನಿರ್ಧರಿಸಿದ್ದಾರೆ ಸೆಕೆಂಡರಿ ಶಾಲೆಗಳ ಆಡಳಿತದವರು ಈ ಸ್ಕೇಲ ದರಗಳನ್ನು ಕೊಡುವರು; ವಿದ್ಯಾರ್ಥಿಗಳ ಫೀಜನ್ನು ಕೆ ಮತ್ತು ೧೦ ರೂಗಳಿಗೆ ಹೆಚ್ಚಿಸಿ, ಅದರಿಂದ ಉಳಿಕೆ [illegible] ಗುಪ್ತ.

ಮೈಸೂರು ರಾಜ್ಯಾಂಗ ಸಭೆಗೆ ಸೇರಬೇಕು

ಸ್ವಂ ಸು] ಬೆಂಗಳೂರು ೧೮

ನ್ಯಾಯವಿಧಾಯಕ ಸಭೆಯ ಅಧ್ಯಕ್ಷರಾದ ರಾಜಮಂತ್ರ ಪ್ರವೀಣ ಹೆಚ್ ಬಿ ಗುಂಡಪ್ಪಗೌಡರು ಮೊನ್ನೆ ವೈ ಎಂ ಸಿ ಎ ಭವನದಲ್ಲಿ ನಡೆದ ಚರ್ಚಾಕೂಟದ ಅಧ್ಯಕ್ಷತೆ ವಹಿಸಿ ಮೈಸೂರು ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಿ, ಅಖಿಲ ಭಾರತಕ್ಕೆಲ್ಲಾ ಅನ್ವಯವಾಗುವಂತಹ ರಾಜ್ಯಾಂಗವನ್ನು ರಚಿಸಬೇಕೆಂದೂ, ಮಹಾರಾಜರುಗಳು ಕಾಲಧರ್ಮವನ್ನು ಅನುಸರಿಸಿ ನಡೆಯಬೇಕೆಂದೂ ತಿಳಿಸಿದರು

ನಿವೃತ್ತ ಛೀಫ್ ನ್ಯಾಯಾಧೀಶರಾದ ರಾಜಧರ್ಮ ಪ್ರವೀಣ ದಿವಾನ್ ಬಹದ್ದೂರ್ ಪಿ ಮಹದೇವಯ್ಯನವರೂ ಹೇಳಿಕೆಯೊಂದನ್ನಿತ್ತು ಮೈಸೂರು ರಾಜ್ಯಾಂಗ ಸಭೆಗೆ ಸೇರಬೇಕೆಂದು ತಿಳಿಸಿದ್ದಾರೆ.

ಬೆಳ್ಳುಳ್ಳಿ ರಸದಿಂದ ಕ್ಷಯರೋಗಕ್ಕೆ ಔಷಧ

ಗ್ಲೋಬ್] ಬೆಂಗಳೂರು ೧೧

ಇಲ್ಲಿನ ಶಾಸ್ತ್ರ ವಿಜ್ಞಾನ ಮಂದಿರದಲ್ಲಿ ಕ್ಷಯ ರೋಗಕ್ಕೆ ಔಷಧಿಯನ್ನು ತಯಾರಿಸಲು ಡಾಕ್ಟರ ಳ ತೊಡಗಿದ್ದಾರೆ ಬೆಳ್ಳುಳ್ಳಿ ರಸದಿಂದ ಒಂದು ವಿಧವಾದ ಔಷಧಿ [illegible] ತಯಾರಿ; ಅದರಿಂದ ಕ್ಷಯ ರೋಗವನ್ನು ಗುಣಪಡಿಸುವ ಪ್ರ [illegible] ದಲ್ಲಿ [illegible] [illegible] ಈ ಔಷಧವನ್ನು ತಯಾರಿಸಲು ಪ್ರಯತ್ನಿಸಲಾಗುತ್ತಿದೆ ಪ್ರತಿ ವರ್ಷವೂ ೧೦ ಲಕ್ಷ ಜನರು ಕ್ಷಯದಿಂದ ಸಾಯುತ್ತಿರುವ ಭಾರತದಲ್ಲಿ ಈ ಪ್ರಯೋಗವು ಯಶಸ್ವಿಯಾದರೆ, ಸೇಗಿಲಿನ್ನಿನಂತೆ ಅಗ್ಗವಾಗಿ ಇದನ್ನು ತಯಾರಿಸಿ ಆಶ್ಚರ್ಯಕರವಾದ ರೀತಿಯಲ್ಲಿ ಈ ರೋಗವನ್ನು ನಿವಾರಿಸಲು ಸಾಧ್ಯವಾಗುವುದೆಂದು ಹೇಳಲಾಗಿದೆ

ಬೊಂಬಾಯಿಗೆ ರಾಮಮೂರ್ತಿಗಳು ಗೌರ್ನರು

ಮೈಸೂರಿನವರು ಲಂಡನ್ನಿಗೆ ತೆರಳಿದಾಗ ಅವರ ಅಧಿಕಾರವನ್ನು ನೋಡಿಕೊಳ್ಳಲು ಬೊಂಬಾಯಿ ಗೌರ್ನರು ಪಡೆಲಿಗೆ ತೆರಳುವರು. ಆಗ್ಗೆ ಬೊಂಬಾಯಿ ಗೌರ್ನರುಗಿರಿಯನ್ನು ಮದರಾಸ್ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಸರ್ ಎಸ್ ವಿ ರಾಮಮೂರ್ತಿಯವರು ವಹಿಸಿಕೊಳ್ಳುವರು.

ಮಿರ್ಜಾರವರ ರಾಜೀನಾಮೆ

ಸ್ವಂ.ಸು.ಪ್ರೊ] ಬೆಂಗಳೂರು ೧೮

ಸರ್ ಮಿರ್ಜಾ ಇಸ್ಮೇಲರು ಹೈದರಾಬಾದಿನ ದಿವಾನಗಿರಿಗೆ ಸಲ್ಲಿಸಿರುವ ರಾಜೀನಾಮೆಯು ಅಲ್ಲಿನ ನೈಜಾಮರಿಗೆ ತಲುಪಿರುವುದಾಗಿ ತಿಳಿದು ಬಂದಿದೆ. ಅವರ ಜಾಗಕ್ಕೆ ಬೇರೊಬ್ಬರನ್ನು ಖಾಯಂ ಆಗಿ ನೇಮಿಸುವವರೆವಿಗೆ ಅಲ್ಲಿನ ಮಂತ್ರಿಮಂಡಲದ ಉಪಾಧ್ಯಕ್ಷರಾದ ನವಾಬ್ ಮೊಹದಿ ಯಾರ್ ಜಂಗ್ ಬಹದ್ದೂರರವರು, ಆ ಸ್ಥಾನದಲ್ಲಿರುವರು. ಅವರು ಬೆಂಗಳೂರಿಗೆ ಬಂದು ಸರ್ ಮಿರ್ಜಾ ರವರಿಂದ ಅಧಿಕಾರವನ್ನು ಸ್ವೀಕರಿಸಲಿರುವರು

ದಿವಾನರ [illegible] ಮಾನ

ದಿವಾನ [illegible] ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ [illegible] ಮೈಸೂರಿನಿಂದ ಆಗಮಿಸಿ [illegible] ಅಸೋಸಿಯೇಷನ್ನಿನ ವಾರ್ಷಿಕೋತ್ಸವದಲ್ಲಿ ಭಾಷಣ ಮಾಡಿದರು ಸಂಜೆ ಮಿಥಿಕ್ ಸೊಸೈಟಿ ವಾರ್ಷಿಕೋತ್ಸವದಲ್ಲಿ ಅಧ್ಯಕ್ಷತೆ ವಹಿಸುವರು.

ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ

ಬ್ರಿ॥ ಸರ್ಕಾರವು ಭಾರತದ ಕೇಂದ್ರ ತಾತ್ಕಾಲಿಕ ಸರ್ಕಾರಕ್ಕೆ ಡೊಮಿನಿಯನ್ ಅಧಿಕಾರವನ್ನು ಈ ಕೂಡಲೇ ಕೊಡಲು ಆಲೋಚಿಸಿದೆಯೆಂದು ವರದಿಯಾಗಿದೆ. ದೇಶದ ವಿಭಜನೆ, ಎಲ್ಲೆಗಳ ನಿಗದಿ ಮುಂತಾದ ವಿಷಯಗಳಲ್ಲಿ ಜವಾಬ್ದಾರಿಯಿಂದಲೂ, ಸಾಮರ್ಥ್ಯದಿಂದಲೂ ವರ್ತಿಸಲು ಈ ಅಧಿಕಾರವನ್ನು ಈಗಿನ ಸರ್ಕಾರಕ್ಕೇ ಕೊಡುವುದು ಅವಶ್ಯಕವೆಂದು ಅವರು ಭಾವಿಸಿದ್ದಾರೆಂದು ಹೇಳಲಾಗಿದೆ ಭಾರತದ ಪರಿಸ್ಥಿತಿಯನ್ನು ಇನ್ನು ಮುಂದೆ ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವ ಭರವಸೆಯು ಅವರಿಗೆ ಇಲ್ಲದಿರುವುದೂ ಇದಕ್ಕೆ ಒಂದು ಪ್ರಬಲ ಕಾರಣವೆಂದೂ ಪರಿಗಣಿಸಲಾಗಿದೆ

ಬೋಸರು ಇಂಡೋಚೀನಾದಲ್ಲಿದ್ದಾರೆ

ಇಂಡೋಚೀನಾದಿಂದ ರಂಗೂನಿಗೆ ಬಂದಿರುವ ಫ್ರೆಂಚ್ [illegible] [illegible] ತಿಸಿದ್ದಾರೆ [illegible] [illegible]

ರಾಜ [illegible] [illegible]

ಗ್ಲೋಬ್]

[illegible] ಕೃಷಿಕಾರ್ಮಿಕರುಗಳನ್ನು ಸಾಗಿಸುತ್ತಿದ್ದುದನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ ಈ ಸಂಬಂಧದಲ್ಲಿ ಕಾರಿನ ಸಾರಥಿ ಮತ್ತು ಇಬ್ಬರನ್ನು ದಸ್ತಗಿರಿಮಾಡಿ ಖುಲಾಸೆಮಾಡಲಾಗಿದೆ

ಬ್ಲೂಸ್—ಮೊಹರಂಬ್ಸ್ ಫೈನಲ್ ಪಂದ್ಯ ಡ್ರಾ ಆಗಿದೆ

ಸಂಕೆ] ಅಲಪ್ಪೆ ೧೮

ಅಲಪ್ಪೆಯಲ್ಲಿ ನಡೆಯುತ್ತಿರುವ ಅಖಿಲ ಭಾರತ ಫುಟ್‌ಬಾಲ್ ಫೈನಲ್ಸ್ ಪಂದ್ಯವು "ಮೈಸೂರು ಬ್ಲೂಸ್‌" ಮತ್ತು "ಮೊಹರಂಬ್ಸ್" ಟೀಮುಗಳ ೧೬-೫-೪೭ನೇ ಮಂಗಳವಾರ ನಡೆದ [illegible] ಗೋಲುಗಳಿಂದ ಡ್ರಾ ಆಯಿತು. ಗುರುವಾರ ನಡೆದ ರೀಪ್ಲೇಯಲ್ಲಿ ಗೋಲುಗಳಾಗದೆ ಡ್ರಾ ಆಯಿತು. ಪುನಃ ಇದೇ ಪಂದ್ಯವು ಈ ದಿನ ನಡೆಯುವುದು

ಸಾಧ್ವಿ

ತಾ|| ೧೮-೫-೪೭ ಭಾನುವಾರ

ವೈಸರಾಯರ ಲಂಡನ್ ಯಾತ್ರೆ

ಭಾರತದ ಪ್ರಶ್ನೆಯ ವಿಚಾರವಾಗಿ ಮಾತನಾಡಲು ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರವರು ಲಂಡನ್ನಿಗೆ ಬರಬೇಕೆಂದು ಬ್ರಿಟಿಷ್ ಸರ್ಕಾರವು ಕರೆದಿರುತ್ತದೆ. ಸದ್ಯದಲ್ಲಿಯೇ ಅವರು ಅಲ್ಲಿಗೆ ತೆರಳಲಿರುವರು. ಹೊಸ ವೈಸರಾಯರು ತಮ್ಮ ಪ್ರತಿನಿಧಿಗಳಾದ ಲಾರ್ಡ್ ಇಸ್ಮೆಯವರ ಮೂಲಕ ಕಳುಹಿಸಿಕೊಟ್ಟ ಸಲಹೆಗಳ ಬಗ್ಗೆ ಬ್ರಿಟಿಷ್ ಮಂತ್ರಿಮಂಡಲಕ್ಕೆ ಇನ್ನೂ ಹೆಚ್ಚಿನ ವಿವರಣೆಯು ಬೇಕಾಗಿರುವುದೇ ವೈಸರಾಯರ ಲಂಡನ್ ಪ್ರಯಾಣಕ್ಕೆ ಕಾರಣವೆಂದು ಹೇಳಲಾಗಿದೆ.

ಕಳೆದ ಒಂದೆರಡು ವಾರಗಳಿಂದ ವೈಸರಾಯರು ಇಲ್ಲಿನ ಪ್ರಮುಖ ರಾಜಕೀಯ ನಾಯಕರುಗಳೊಡನೆ ಮಾತುಕತೆಗಳನ್ನು ಎಡೆಬಿಡದೆ ನಡೆಸುತ್ತಿರುವರು. ಎಲ್ಲ ಪಂಗಡಗಳ ಅಭಿಪ್ರಾಯಗಳನ್ನೂ ವಿವರವಾಗಿ ಅರಿತುಕೊಳ್ಳುತ್ತಿರುವರು. ಪ್ರಮುಖ ಪಕ್ಷಗಳಾದ ಕಾಂಗ್ರೆಸ್ಸಿಗೂ, ಮುಸ್ಲಿಂ ಲೀಗಿಗೂ ಒಪ್ಪಂದವನ್ನುಂಟುಮಾಡುವ ಆಸೆಯು ಈಗ ಯಾರಿಗೂ ಉಳಿದಿರುವುದಿಲ್ಲ. ಆದುದರಿಂದ ತಾತ್ಕಾಲಿಕವಾಗಿಯಾದರೂ ರಾಷ್ಟ್ರವಿಭಜನೆಯು ಆಗಲೇ ಬೇಕಾಗುತ್ತದೆ. ಹಾಗೆ ಆಗ ಬೇಕಾದರೆ ಪಂಜಾಬ್ ಮತ್ತು ಬಂಗಾಳಗಳನ್ನೂ ಸಹ ವಿಭಾಗ ಮಾಡಬೇಕೆಂಬ ಒತ್ತಾಯಗಳು ವಿಪರೀತವಾಗಿ ಬಂದಿವೆ. ಇವನ್ನು ಬ್ರಿಟಿಷ್ ಸರ್ಕಾರದವರು ಉಪೇಕ್ಷೆ ಮಾಡಲು ಸಾಧ್ಯವಿಲ್ಲವಾಗಿದೆ. ಹೀಗೆ ಪ್ರಾಂತ್ಯಗಳನ್ನು ವಿಭಾಗ ಮಾಡಿದರೆ ಪಾಕಿಸ್ತಾನದ ಉದ್ದೇಶವು ನಿರರ್ಥಕವಾಗುತ್ತದೆ. ಆದುದರಿಂದ ಪ್ರಾಂತ್ಯಗಳ ವಿಭಜನೆಗೆ ಲೀಗಿನವರು ವಿರೋಧವನ್ನು ಸೂಚಿಸಿದ್ದಾರೆ.

ಈ ಮಧ್ಯೆ ಸಿಖ್ ಜನಾಂಗದವರು ಪಾಟಿಯಾಲಾ ಮಹಾರಾಜರವರ ನೇತೃತ್ವದಲ್ಲಿ ತಮ್ಮದೇ ಆದ ಪ್ರತ್ಯೇಕ ಪ್ರಾಂತವನ್ನು ಸ್ಥಾಪಿಸುವುದಕ್ಕೂ ಸಹ ಹವಣಿಸುತ್ತಿದ್ದಾರೆ. ಪಾಟಿಯಾಲಾ ಮಹಾರಾಜರು ಇದಕ್ಕಾಗಿ ವಿಶೇಷ ಸಮಾಲೋಚನೆಗಳನ್ನೂ ನಡೆಸುತ್ತಿದ್ದಾರೆ. ಅವರೂ ಸಹ ಲಂಡನ್ನಿಗೆ ಹೋಗಿ ತಮ್ಮ ಅಭಿಪ್ರಾಯವನ್ನು ಸೂಚಿಸುವಂತೆ ಆಹ್ವಾನಿಸಲ್ಪಟ್ಟಿರುವರೆಂದು ಗೊತ್ತಾಗಿದೆ.

ಪ್ರಾಂತ ವಿಭಜನೆಯಿಂದ ಕೂಡಿದ ರಾಷ್ಟ್ರವಿಭಜನೆ ಅಥವಾ ಅಖಂಡ ಭಾರತ ರಾಜ್ಯಾಂಗದ ರಚನೆ ಇವೆರಡೇ ಈಗ ಇತ್ಯರ್ಥವಾಗಬೇಕಾಗಿರುವ ಪ್ರಶ್ನೆಗಳು. ಬ್ರಿಟಿಷ್ ಸರ್ಕಾರದವರು ಇವುಗಳ ಬಗ್ಗೆ ತಮ್ಮ ಅಂತಿಮ ನಿರ್ಧಾರವನ್ನು ಸದ್ಯದಲ್ಲಿಯೇ ಮಾಡಲಿರುವರು. ಜೂನ್ ಎರಡನೇ ವಾರದ ಹೊತ್ತಿಗೆ ವೈಸರಾಯರು ವಾಪಸು ಬಂದು ನಾಯಕರುಗಳಿಗೆ ಈ ನಿರ್ಧಾರವನ್ನು ತಿಳಿಸುವರು. ಅನಂತರ ಈ ಸಮಸ್ಯೆಯು ಕಟ್ಟು[?]ಸ್ಥವಾಗುವುದೆಂದು ನಿರೀಕ್ಷಿಸಲಾಗಿದೆ. ಸಮಯದಲ್ಲಿ ಬ್ರಿಟಿಷ್ ಪ್ರಭುತ್ವದ ಸಂಪೂರ್ಣ ಪ್ರಾಮಾಣಿಕತೆಯಿಂದ ಮಾನವ ಸ್ವಾತಂತ್ರ್ಯ ಮತ್ತು ಭೂತದ ಪಶ್ಚಾತ್ತಾಪದ ದೃಷ್ಟಿಯಿಂದಲೂ ವ[...]ಲೆಂದು ಹಾರೈಸಬೇಕಾಗಿದೆ.

RAJKAMAL

Morning Shows from 16-5-47 for 4 days daily at 10-30 a m

'Intermezzo'

with

LESLIE HOWARD and INGRID BERGMANN

ಗರ್ಭ ರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು.

ಆಯುರ್ವೇದ ವೈದ್ಯ ಭೂಷಣ

ಪಂಡಿತ್ ಕೆ. ವಿ. ವೆಂಕಟರಾಮಯ್ಯ,

ಡಿ|| ಬೋರ್ಡ್ ವೈದ್ಯ, ಅರಕಲವಾಡಿ

ಚಾಮರಾಜನಗರ ತಾ||

ನಾಯಿಕೆಮ್ಮಿನ ಔಷಧಿ

7–8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರಲು—ಉಬ್ಬಸಕ್ಕೆ

(Asthma)

ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.

(Appendecitis) ಗುಲ್ಮಶೂಲೆ ಮತ್ತು (Tonsils) ಗಲಾಯುಗ ಇವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್ ಎಸ್ ಪಂಡಿತರು, ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂರು

ಕ್ಯಾತನಹಳ್ಳಿ ವಿದ್ಯಾರ್ಥಿನಿಲಯ

ಕ್ಯಾತನಹಳ್ಳಿ ಸಾಹುಕಾರ್ ಸಿದ್ದಯ್ಯನವರ ಸಂಸ್ಕೃತ ಮತ್ತು ವೇದ ಶಾಲೆಯ ಉಚಿತ ವಿದ್ಯಾರ್ಥಿ ನಿಲಯ ಸೇರಬಿಚ್ಛಿಸುವ ಹಳೆಯ ಮತ್ತು [...] ವಿದ್ಯಾರ್ಥಿಗಳು ಇದೇ ೨೫ ನೇ ತಾ|| [...]ಳಗಾಗಿ ಅರ್ಜಿಫಾರಂ ಪಡೆದು ಕಾರ್ಯ[...]ದರ್ಶಿಯವರಿಗೆ ಕಳುಹಿಸಬೇಕೆಂದು ಪ್ರಕಟಿಸಲಾಗಿದೆ.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

Edited, printed and published by A. K. Nagarajan at the Sadhvi Press, D. Subbiah Road, Mysore.

Sarada Vilas Intermediate College Mysore.

Dated: 17—5—19[47]

TUTORIAL CLASSES

For candidates for the Intermediate Examination to be held in September 1947 will be opened on the 8th June 1947 provided there is an adequate number of applicants. Particulars regarding tuition and other Fees may be obtained on enquiry.

M S. Ramaswamy
PRINCIPAL

೧೮-೫-೪೭ ನೇ ತಾ|| ನಿಂದ ಜನಭರಿತವಾದ 3 ನೇ ವಾರ

ವುಡ್‌ಲ್ಯಾಂಡ್ಸ್ ಟಾಕೀಸ್, ಮೈಸೂರು.

★ 'ಸಾವಿತ್ರಿ'ಬ್ಬರು' ★

(ತಮಿಳು)

ಪ್ರತಿ ದಿನ ಮೂರು ಆಟಗಳು

ತಾರಾಗಣ:-ಟಿ.ಆರ್. ಮಹಾಲಿಂಗಂ, ಟಿ ಎ ಜಯಲಕ್ಷ್ಮಿ ಮತ್ತು ಬೇಬಿ ಕಮಲ

ರಾಜಕಮಲ್, ಮೈಸೂರು

ತಾ|| ೧೬-೫-೪೭ ರಿಂದ ನಾಲ್ಕನೇ ವಾರ-ಪ್ರತಿ ದಿನ ೨ ಆಟಗಳು

'ಗೊಲ್ಲಭಾಮ'

(ತೆಲುಗು)

ಭೂಮಿಕೆ:—ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

Sarada Vilas Intermediate College, Mysore.

Dated: 17th May 1947

The College reopens from the 24th June 1947. Those who want to join this College with P. C M. as their optionals have to get their names registered in the college, by paying one rupee. The last date for such registration is the 5th June. A list containing the names of students to whom seats are given will be put on the notice board on the 10th June. Admission will be closed by the 24th June. Arrangements will be made to teach Tamil, Teluge, Hindi and Urdu as Second Languages if sufficient number of students want to take any one of them. All concessions such as scholarships and freeships that are available in Government Colleges will be granted in this College also.

M S Ramaswamy,
PRINCIPAL

Distributors:-

ಇಂಡಿಯಾ ಸೂಪರ್ ಟಾಂಗಾ ಟೈರು

ಬಹಳ ಕಾಲ ಬಾಳಿಕೆ ಬರುವುದು ಮತ್ತು ಸ್ವಾಭಾವಿಕವಾದ ರಬ್ಬರಿನಿಂದ ಯುದ್ಧದ ಪೂರ್ವದ ಮಾದರಿಯಲ್ಲಿ ತಯಾರಿಸಲ್ಪಟ್ಟಿರುವುದು. ಅಭ್ಯಾಸ[...] ಒಂದು ಸಾರಿ ಉಪಯೋಗಿಸಿ ನೋಡಿ. ಸಿಕ್ಕುವ ಸ್ಥಳ:—

ಸಿ ಬಿ. ಎಂ ಚಂದ್ರಯ್ಯ

ಅಶೋಕಾ ರಸ್ತೆ, : : ಮೈಸೂರು

ರಿಜಿ. ನಂ. 392 WEEKLY EDITION ಬಿಡಿ ಪ್ರತಿಗೆ 6 ಕಾಸು

ಸಂಪುಟ ೧೧] ಸೋಮವಾರ ೧೯—೫—೪೭ [ಸಂಚಿಕೆ ೩೯

ಇನ್ನೊಂದು ನರೇಂದ್ರ ಮಂಡಲದ ಸ್ಥಾಪನೆಯೇ

ವಾರ ಭವಿಷ್ಯ

೧೯-೫-೪೭ರಿಂದ ೨೫-೫-೪೭ರ ವರೆಗೆ (ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ಆರೋಗ್ಯ ಸಾಧಾರಣ, ಧನಲಾಭ ಉತ್ತಮ ಮಾನಸಿಕ ಚಿಂತೆ ಹೆಚ್ಚು, ಉದ್ಯೋಗ, ವ್ಯವಹಾರಗಳಲ್ಲಿ ತೊಂದರೆ, ಪ್ರವಾಸದಿಂದ ಧನ ಲಾಭ, ತಾ॥ ೨೨, ಲಾಭ, ಶಾಂತಿ.

ವೃಷಭ—ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಹೆಚ್ಚು, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿವರ್ಗದವರಿಂದ ಸನ್ಮಾನ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ॥ ೨೩, ೨೫ ಪ್ರವಾಸದಿಂದ ಧನ ಲಾಭ.

ಮಿಥುನ—ಆರೋಗ್ಯ ಸಾಧಾರಣ, ಧನಾದಾಯ ಕಡಿಮೆ ಖರ್ಚು ಅಧಿಕ, ವ್ಯಾಪಾರದಲ್ಲಿ ಮಿತ್ರರಿಂದ ಸಹಾಯ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ಧಾರ್ಮಿಕ ಕಾರ್ಯಗಳಿಗಾಗಿ ಖರ್ಚು, ತಾ॥ ೨೦, ೨೫ ಬಂಧು ದರ್ಶನ, ಮಿತ್ರ ಭೇಟಿ

ಕಟಕ—ಆರೋಗ್ಯ ಕೆಡುತ್ತದೆ, ಮಾನಸಿಕ ಚಿಂತೆ ಹೆಚ್ಚು, ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ, ಔಷಧೋಪಚಾರಗಳಿಗಾಗಿ ಧನವ್ಯಯ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ॥ ೨೧, ೨೪, ೨೫ ಲಾಭ, ಸಂತೋಷ.

ಸಿಂಹ—ಆರೋಗ್ಯ ಸಾಧಾರಣ, ಧನಲಾಭ ಕಡಿಮೆ, ಖರ್ಚು ಹೆಚ್ಚು, ಮಿತ್ರರಿಂದಲೂ, ಬಂಧುಗಳಿಂದಲೂ ತಿರಸ್ಕಾರ, ಕುಟುಂಬದ ಆರೋಗ್ಯ ಕೆಟ್ಟು ಔಷಧೋಪಚಾರಗಳಿಗಾಗಿ ವಿಶೇಷ ಖರ್ಚು, ತಾ॥ ೨೫ ಸಾಧಾರಣ.

ಕನ್ಯಾ—ಆರೋಗ್ಯ ಚೆನ್ನಾಗಿರುತ್ತದೆ, ಲಾಭ ಉತ್ತಮ, ಖರ್ಚು ಕಡಿಮೆ, ವ್ಯಾಪಾರ, ವ್ಯವಹಾರಗಳಲ್ಲಿ ಪ್ರಗತಿ, ಮಿತ್ರರಿಂದ ಸಹಾಯ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ॥ ೨೧, ೨೫ ಚಿಂತೆ ಪ್ರವಾಸ

ತುಲಾ—ಆರೋಗ್ಯ ಕೆಡುತ್ತದೆ, ಧನಾದಾಯ ಕಡಿಮೆ, ಖರ್ಚು ಹೆಚ್ಚು, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ಮಿತ್ರರಿಂದ ತಿರಸ್ಕಾರ, ಶತ್ರುಗಳ ಕಿರುಕುಳ ಹೆಚ್ಚು, ತಾ॥ ೨೨, ೨೪ ಶಾಂತಿ, ಲಾಭ

ವೃಶ್ಚಿಕ—ಆರೋಗ್ಯ ಚೆನ್ನಾಗಿರುತ್ತದೆ, ಲಾಭ ಸಾಧಾರಣ, ಖರ್ಚು ಕಡಿಮೆ, ಅಧಿಕಾರಿ ವರ್ಗದವರಿಂದ ಸನ್ಮಾನ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ॥ ೨೩, ೨೫ ಲಾಭ, ಮಿತ್ರ ದರ್ಶನ

ಧನು—ಆರೋಗ್ಯ ಕೆಡುತ್ತದೆ, ಧನಲಾಭ ಕಡಿಮೆ, ಖರ್ಚು ಹೆಚ್ಚು, ಅಧಿಕಾರಿ ವರ್ಗದವರಿಂದ ಅವಮಾನ, ಶತ್ರುಗಳಿಂದ ಕಿರುಕುಳ, ಮಿತ್ರರಿಂದ ತಿರಸ್ಕಾರ, ವ್ಯಾಪಾರ, ವ್ಯವಹಾರಗಳಲ್ಲಿ ನಷ್ಟ, ತಾ॥ ೨೩, ೨೫ ಲಾಭ, ಸಾಧಾರಣ ಶಾಂತಿ

ಮಕರ—ಆರೋಗ್ಯ ಸಾಧಾರಣ, ಸಾಂಪತ್ತಿಕ ಪರಿಸ್ಥಿತಿ ಉತ್ತಮ, ಉದ್ಯೋಗ ವ್ಯವಹಾರಗಳಲ್ಲಿ ಅಪಾಯಕರ, ಅಧಿಕಾರ ವರ್ಗದವರಿಂದ ಸಹಾಯ, ಪ್ರವಾಸದಿಂದ ಅಪಘಾತ, ತಾ॥ ೨೨, ೨೫ ಲಾಭ, ಬಂಧು ದರ್ಶನ

ಕುಂಭ—ವ್ಯಾವಹಾರಿಕ ಸ್ಥಿತಿ ಉತ್ತಮ, ಆರ್ಥಿಕ ಸ್ಥಿತಿ ಸಾಧಾರಣ, ಖರ್ಚು ಹೆಚ್ಚು, ಅಧಿಕಾರಿ ವರ್ಗದವರಿಂದ ಉದ್ಯೋಗ ವ್ಯವಹಾರಗಳಲ್ಲಿ ಸಹಾಯ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ॥ ೨೧, ೨೩ ನಷ್ಟ, ಚಿಂತೆ

ಮೀನ—ಆರೋಗ್ಯ ಉತ್ತಮ, ಮಾನಸಿಕ ಚಿಂತೆ ಕಡಿಮೆ, ಧನಾದಾಯ ಉತ್ತಮ, ಖರ್ಚು ಅಧಿಕ, ಉದ್ಯೋಗ, ವ್ಯವಹಾರಗಳಲ್ಲಿ ಮಿತ್ರರಿಂದ ಸಹಾಯ, ಪ್ರವಾಸದಿಂದ ಲಾಭ, ಬಂಧು ದರ್ಶನ, ತಾ॥ ೨೩ ೨೫ ಚಿಂತೆ, ಅಪಮಾನ.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಹರಾಜು ಇಸ್ತಿಹಾರ್

ಈ ಮೂಲಕ ಸಮಸ್ತ ಜನರಿಗೂ ತಿಳಿಸುವುದೇನೆಂದರೆ—ಜಯಲಕ್ಷ್ಮೀಪುರಂ ಸಿನಿಮಾ ಥಿಯೇಟರನ್ನು ಕಟ್ಟಲು ಬಿಟ್ಟಿರುವ ಭಾರಿ ನಿವೇಶನವನ್ನು ಮೇ ಮಾಹೆ ೨೬ನೇ ಸೋಮವಾರ ಬೆಳಗ್ಗೆ ೧೧ ಘಂಟೆಗೆ ಹರಾಜು ಮಾಡಲಾಗುತ್ತೆ ಹೆಚ್ಚಿಗೆ ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

ಆರ್. ರಾಮಚಂದ್ರರಾವ್
ಚೇರ್ಮನ್
ಛೇರ್ಮನ್

ಷೇಕ್ ಅಬ್ದುಲ್ಲಾ ದಿನಾಚರಣೆ

ಮೈಸೂರು ೧೯

ಕಾಶ್ಮೀರದ ಕಾಂಗ್ರೆಸ್ ಮುಖಂಡರಾದ ಷೇಕ್ ಅಬ್ದುಲ್ಲಾರವರ ದಿನಾಚರಣೆಯು ನಾಳೆ ಸಂಜೆ ೭ ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದು ಕಾಂಗ್ರೆಸ್ ಸದಸ್ಯರೆಲ್ಲರೂ ದಯಮಾಡಿ ಬರಬೇಕೆಂದು ಕಾರ್ಯದರ್ಶಿಗಳಾದ ಶ್ರೀ॥ ಟಿ ನರಸಿಂಹಯ್ಯಂಗಾರ್ಯರು ಪ್ರಾರ್ಥಿಸಿರುತ್ತಾರೆ

ಮೈಸೂರು ಮರ್ಚೆಂಟ್ಸ್ ವಿಜಯ

ಕಲ್ಕತ್ತ] ಅಲಪ್ಪೆ ೧೮

ಇಲ್ಲಿ ನಡೆದ ಅಖಿಲ ಭಾರತ ಫುಟ್‌ಬಾಲ್ ಪಂದ್ಯದ ಫೈನಲ್ಸ್ ಆಟದಲ್ಲಿ ಮೈಸೂರು ಮರ್ಚೆಂಟ್ಸ್ ಟೀಮಿನವರು ಮೈಸೂರ ಬಿನ್ನಿಮಿಲ್ಲಿನವರನ್ನು ಸೋಲಿಸಿದರು

ತೊಗರೀಬೇಳೆ ಅಭಾವ
ಜಿಲ್ಲಾ ಸಮ್ಮೇಳನದಲ್ಲಿ ಚರ್ಚೆ

ಮೈಸೂರು ೧೯

ಜಿಲ್ಲಾ ಸಮ್ಮೇಳನವು ನಿನ್ನೆ ಬೆಳಗ್ಗೆ ಮುಂದುವರೆಯಿತು ಪಿರಿಯಾಪಟ್ಟಣದ ತಾಲ್ಲೂಕು ಹೀನಸ್ಥಿತಿಗೆ ಬರುತ್ತಿರುವುದರಿಂದ ಅದನ್ನು ಅಭಿವೃದ್ಧಿಪಡಿಸಲು ಪ್ರತಿವರ್ಷವೂ ೨೦ ಸಹಸ್ರ ರೂಗಳ ಗ್ರಾಂಟನ್ನು ಸರ್ಕಾರದವರು ಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನು ಶ್ರೀ॥ ಪಿ ವೆಂಕಟಸುಬ್ಬಯ್ಯನವರು ಮಂಡಿಸಿ ಆ ತಾಲ್ಲೂಕಿನ ಹೀನಸ್ಥಿತಿಯನ್ನು ವಿವರಿಸಿದರು ಶ್ರೀ॥ ಹೆಚ್ ಎಂ ಚೆನ್ನಬಸಪ್ಪನವರು ನಿರ್ಣಯಕ್ಕೆ ಬೆಂಬಲವಿತ್ತರು ಇದನ್ನು ಚೆನ್ನಾಗಿ ಪರಿಶೀಲಿಸಿ ಸರ್ಕಾರಕ್ಕೆ ವರದಿ ಮಾಡಲು ಒಂದು ಸಮಿತಿಯನ್ನು ರಚಿಸಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು

ತೊಗರೀಬೇಳೆ ಅಭಾವದ ಬಗ್ಗೆ ಬಂದಿದ್ದ ವಿಶೇಷ ನಿರ್ಣಯದ ಮೇಲೆ ಸಭೆಯಲ್ಲಿ ಬಹಳ ಚರ್ಚೆ ನಡೆಯಿತು ಜಿಲ್ಲಾಧಿಕಾರಿಗಳು ಮಾತನಾಡಿ ಬೇಳೆಯು ನಮ್ಮ ಸಂಸ್ಥಾನಕ್ಕೆ ಹೊರಗಿನಿಂದ ಬರಬೇಕಾದ ಧಾನ್ಯವೆಂದೂ, ಈ ಸಲ ಅದು ಬಾರದಿರುವುದು ಈ ಕೊರತೆಗೆ ಕಾರಣವೆಂದೂ ಹೇಳಿದರು ಬೇಳೆಯು ಆಫ್ರಿಕದಿಂದ ಬರಬೇಕೆಂದೂ ಸಹ ತಿಳಿಸಿದರು ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ಉತ್ತರ ಭಾರತದಿಂದ ಸ್ವಲ್ಪ ಬೇಳೆಯನ್ನು ಸಾಧ್ಯವಾದರೆ ಕಳುಹಿಸಿ ಕೊಡುವುದಾಗಿ ಡಾ॥ ರಾಜೇಂದ್ರ ಪ್ರಸಾದರು ತಿಳಿಸಿದ್ದಾರೆ, ಮದ್ರಾಸಿಗೆ ಬಂದಿರುವ ಸ್ವಲ್ಪ ಬೇಳೆಯನ್ನು ಇಲ್ಲಿಗೆ ತರಿಸಲು ಹಲವು ವರ್ತಕರ ಮೂಲಕ ಏರ್ಪಾಡು ನಡೆಯುತ್ತಿದೆ, ಈ ಬಗ್ಗೆ ಕೈಲಾದ ಪ್ರಯತ್ನವೆಲ್ಲಾ ಮಾಡಲಾಗುವುದು—ಎಂದು ಭರವಸೆ ಇತ್ತರು.

ಅಧ್ಯಕ್ಷರಾದ ಶ್ರೀ॥ ಕೇಶವಮೂರ್ತಿಯವರು ಮಾತನಾಡಿ ಪಿರಿಯಾಪಟ್ಟಣ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳ ಅಭಿವೃದ್ಧಿಗೆ ಗಮನ ಕೊಡಬೇಕಾಗುವುದೆಂದು ಹೇಳಿದರು ಮಲೇರಿಯಾ ಹಾವಳಿಯನ್ನು ತಪ್ಪಿಸಲು ಡ್ರೈ ಬೆಲ್ಟ್ ಏರ್ಪಡಿಸುವುದು ಅತ್ಯವಶ್ಯಕವಾದ ಕೆಲಸವೆಂದು ತಿಳಿಸಿದರು ಹಾಲು ಮತ್ತು ದನಗಳ ಮೇವಿನ ಸಂಬಂಧಗಳಿಗೆ ಸರ್ಕಾರದ ಪಡಿತಿಯ ಮೇಲೆ ಏರ್ಪಾಡುಗಳನ್ನು ಮಾಡಬೇಕೆಂದು ಸಲಹೆ ಇತ್ತರು ಮೈಸೂರು ನಗರಕ್ಕೆ ನೀರಿನ ಸಾಕಷ್ಟು ಬರುತ್ತಿದೆಯೋ

ದಿವಾನರು ದೆಹಲಿಗೆ

ಸ್ವಂ ಸು ಪ್ರೇ॥] ಬೆಂಗಳೂರು ೧೯

ಜೂನ್ ೨ ನೇ ತಾ॥ ವೈಸರಾಯರು ಬ್ರಿಟಿಷ್ ಸರ್ಕಾರದ ಯೋಜನೆಗಳನ್ನು ಭಾರತದ ನಾಯಕರಿಗೆ ತಿಳಿಸುವ ಸಂದರ್ಭದಲ್ಲಿ ಹಾಜರಿರುವಂತೆ ಆಹ್ವಾನ ಬಂದಿರುವುದನ್ನಂಗೀಕರಿಸಿ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಆ ಸಮಯಕ್ಕೆ ಅಲ್ಲಿಗೆ ತೆರಳುವರೆಂದು ತಿಳಿದು ಬಂದಿದೆ ಪ್ರ॥ ಪ್ರ॥ ಸಭೆಯನ್ನು ಆರಂಭಿಸಿ ಅನಂತರ ಅವರು ಹೊರಡುವರೆಂದು ಹೇಳಲಾಗಿದೆ

ಮಿಥಿಕ್ ಸೊಸೈಟಿಯ ೩೭ನೇ ವಾರ್ಷಿಕಾಧಿವೇಶನದ ಅಧ್ಯಕ್ಷತೆಯನ್ನು ವಹಿಸಿ ನೆನ್ನೆ ದಿವಾನರು ಪ್ರಾಚೀನ ಸಂಶೋಧನೆಗಳ ಜೊತೆಗೆ ಆಧುನಿಕ ಸಮಸ್ಯೆಗಳ ಪರಿಹಾರ ಕಾರ್ಯವನ್ನೂ ಸಂಸ್ಥೆಗಳು ಕೈಗೊಂಡು ಮಾನವರಲ್ಲಿ ಸೌಹಾರ್ದ ಮತ್ತು ಪ್ರೀತಿ, ವಿಶ್ವಾಸಗಳು ಬೆಳೆಯುವಂತೆ ಮಾಡಬೇಕೆಂದು ಹಾರೈಸಿದರು.

ಸೊಸೈಟಿ ಚುನಾವಣೆಗೆ ಉಮೇದುವಾರರು

ಮೈಸೂರು ೧೯

ತಾ॥ ೨೫ ೫ ೧೯೪೭ ನೇ ಭಾನುವಾರದ ದಿವಸ ನಡೆಸುವ ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳ ಚುನಾವಣೆಗೆ ಈ ಕೆಳಗೆ ಕಂಡವರು ಉಮೇದುವಾರರಾಗಿ ನಿಂತಿರುತ್ತಾರೆಂದು ತಿಳಿದು ಬಂದಿದೆ: ಶ್ರೀಯುತರುಗಳಾದ ಎಸ್ ರಂಗರಾಮಯ್ಯ, 'ಜಗದ್' ರಂಗಯ್ಯ, ಹಾಲಹಳ್ಳಿ ಸೀತಾರಾಮಯ್ಯ ಎ ಕೃಷ್ಣಮೂರ್ತಿರಾವ್, ಎಂ ಎನ್ ಜೋಯಿಸ್, ವಿ ಲಿಂಗಪ್ಪಯ್ಯ, ಎಸ್ ಲಿಂಗಣ್ಣ, ಕೆ ಪುಟ್ಟೋರಾವ್, ಎಂ ಎಸ್ ನಂಜಪ್ಪ, ಬಿ ವಿ ಕೃಷ್ಣಮೂರ್ತಿ, ಪಿ ಎಸ್ ಚಂದ್ರಮೂರ್ತಿ, ಎಸ್ ಶೇಷಗಿರಿರಾವ್, ಎಂ ಜಿ ನರಸಿಂಹಮೂರ್ತಿ

ಮತ್ತೊಂದು ನರೇಂದ್ರ ಮಂಡಲವೇ?

ಅನೇಕ ಸಂಸ್ಥಾನಗಳ ರಾಜರುಗಳು ಭಾರತ ರಾಜ್ಯಾಂಗ ಸಭೆಯಲ್ಲಿ ಸೇರುವಂತೆ ನಿರ್ಧರಿಸಿರುವುದರಿಂದ ನರೇಂದ್ರ ಮಂಡಲದ ಅಧ್ಯಕ್ಷರಾದ ಭೂಪಾಲ್ ನವಾಬರಿಗೆ ಅಸಂತೃಪ್ತಿಯುಂಟಾಗಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತಿದ್ದರು ಅದಕ್ಕೆ ಈಚೆಗೆ ಅಂಗೀಕರಿಸಲಾಗಿದೆಯೆಂದೂ, ಪಾಟಿಯಾಲಾ ಮಹಾರಾಜರು ಅವರ ಸ್ಥಾನಕ್ಕೆ ಬರಬಹುದೆಂದೂ ತಿಳಿದುಬಂದಿದೆ ಭೂಪಾಲ್ ನವಾಬರು ಮತ್ತೊಂದು ನರೇಂದ್ರ ಮಂಡಲವನ್ನು ಸ್ಥಾಪಿಸಲು ಹಲವು ನರೇಂದ್ರರುಗಳೊಡನೆ ಪ್ರಯತ್ನ ನಡೆಸುತ್ತಿರುವರೆಂದೂ ಹೇಳಲಾಗಿದೆ

ಹಾಗೂ ಅದರೆ ಅದರ ವಿಲೇವಾರಿ ಬಗ್ಗೆ [illegible] ಗೆ ಸಂಕಷ್ಟವಿರುವುದಾಗಿಯೂ, ಈ ಬಗ್ಗೆ ತಕ್ಕ ವ್ಯವಸ್ಥೆ ಮಾಡಲು ಒಬ್ಬ ಅಧಿಕಾರಿಗಳನ್ನು ನೇಮಿಸಲಾಗಿದೆಯೆಂದೂ ಹೇಳಿದರು.

ಸಂಸ್ಥಾನದ ರೈತರ ಶಿಕ್ಷಣವನ್ನು ಸಾಕಷ್ಟು ಸ್ವಲ್ಪ ಬೆಳವಣಿಗೆಯಿಲ್ಲದಿರುವುದರಿಂದ ೧ ತುಕ್ಕಡಿ ಸೈನ್ಯವನ್ನು ಹೆಚ್ಚು ಮಾಡಲಾಗುವುದೆಂದು, ಹೇಳಿ ಈಗ ೫೦೦ ಮಂದಿಯನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲಾಗುವುದೆಂದೂ, ಇದಕ್ಕೆ ಮಹಾಜನರ ಬೆಂಬಲ ಬೇಕೆಂದೂ ಪ್ರಾರ್ಥಿಸಿದರು.

ಸಾಧ್ವಿ
ತಾ|| ೧೯-೫-೪೭ ಸೋಮವಾರ

ಸೌದೆ ಸಮಸ್ಯೆ

ರಾಜಧಾನಿಯ ಸೌದೆ ಸರಬರಾಜು ಪ್ರಶ್ನೆಯು ವಿಶ್ವ ಬೆಳಕಿಗೆ ಬಂದಿರುವದೆ. ನಿನ್ನೆ ನಡೆದ ಜಿಲ್ಲಾ ಸಮ್ಮೇಳನದಲ್ಲಿಯೂ ಸಹ ಈ ವಿಷಯವು ಪ್ರಾಮುಖ್ಯವಾಗಿ ಚರ್ಚಿಸಲ್ಪಟ್ಟಿತು. ಪುರನಿವಾಸಿಗಳಿಗೆ ಉಂಟಾಗಿರುವ ತೊಂದರೆಯನ್ನು ಸದಸ್ಯರುಗಳು ಹೃದಯಂಗಮವಾಗಿ ವಿವರಿಸಿದರು, ಅಧಿಕಾರಿಗಳೂ ಸಹ ಅವುಗಳ ವಾಸ್ತವಾಂಶವನ್ನು ಒಪ್ಪಿಕೊಂಡರು.

ನಗರದೊಳಕ್ಕೆ ಸಾಕಾದಷ್ಟು ಸೌದೆಯು ಬರುತ್ತಿದೆಯೆಂದು ಅಧ್ಯಕ್ಷತೆ ವಹಿಸಿದ್ದ ಗೃಹ ಮಂತ್ರಿಗಳು ತಿಳಿಸಿದರು. ಇದು ಎಷ್ಟು ಮಟ್ಟಿಗೆ ಸರಿಯೆಂಬುದನ್ನು ನಿರ್ಣಯಿಸಲು ಯಾವ ಆಧಾರವೂ ಇರುವುದಿಲ್ಲ. ಈ ನಗರದಲ್ಲಿರುವ ಎರಡು ಲಕ್ಷ ಪ್ರಜೆಗಳಿಗೆ ಬೇಕಾಗುವ ಸೌದೆಯೆಷ್ಟು? ಅಲ್ಲದೆ ಕಾರ್ಖಾನೆ, ಹೋಟೆಲುಗಳೇ ಮುಂತಾದ ಸಂಸ್ಥೆಗಳಲ್ಲಿ ವೆಚ್ಚವಾಗುತ್ತಿರುವುದೆಷ್ಟು? ಎಂಬ ಬಗ್ಗೆ ಯಾವ ಪರಿಶೀಲನೆಯೂ ನಡೆದಿರುವಂತೆ ಕಾಣುವದಿಲ್ಲ.

ಹೊರಗಿನ ಊರಿನೊಳಕ್ಕೆ ಬರುವ ಒಟ್ಟು ಸೌದೆಯ ಪ್ರಮಾಣವು ಟೋಲು ಗೇಟುಗಳಲ್ಲಿ ದೊರೆಯಬಹುದು. ಆದರೆ ಹೀಗೆ ಬರುವ ಸೌದೆಯು ನಗರದ ಅವಶ್ಯಕತೆಗಳನ್ನೆಲ್ಲಾ ಪೂರೈಸುವುದೆಂದು ಹೇಳಲು ಯಾವ ದಾಖಲೆಗಳೂ ಇರುವುದಿಲ್ಲ.

ಪೌರಸಭೆಯವರು ಇಟ್ಟಿರುವ ಲೆಕ್ಕಗಳಿಂದ ನಗರದೊಳಕ್ಕೆ ಹೇರಳವಾಗಿ ಸೌದೆಯು ಬರುತ್ತಿದೆಯೆಂದು ವರದಿಯಾಗುತ್ತಿದೆ. ಆದರೆ ಯಾವ ಡಿಪೋಗಳಲ್ಲಿ ನೋಡಿದರೂ ಸೌದೆಯೇ ಇರುವುದಿಲ್ಲ. ಇರುವ ಅಲ್ಪಸ್ವಲ್ಪ ಸೌದೆಗೂ ನೂರಾರು ಜನರು ಕಾದು ಕುಳಿತಿರುತ್ತಾರೆ. ಇದಕ್ಕಾಗಿ ಅನೇಕ ಗಂಟೆಗಳ ಕಾಲ ಕಾಯಬೇಕಾಗಿಯೂ ಬಂದಿರುತ್ತದೆ. ಇಷ್ಟಾದರೂ ಬಡ ಜನಗಳಿಗೆ ಬೇಕಾಗುವ ಅತ್ಯಲ್ಪ ಪ್ರಮಾಣದಲ್ಲಿಯೂ ಸೌದೆಯು ದೊರೆಯುತ್ತಿಲ್ಲ.

ಸೌದೆಯು ಬೆಲೆಯೂ ಸಹ ಗೊತ್ತುಗುರಿಯಿಲ್ಲದಂತಿರುತ್ತದೆ. ಬೀದಿಯಲ್ಲಿ ಮಾರುವ ಸೌದೆಗಳ ಮೇಲೆ ಯಾವ ಹತೋಟಿಯೂ ಇರುವುದಿಲ್ಲ. ಒಂದೊಂದು ಗಾಡಿ ಸೌದೆಗೆ ನಲವತ್ತು, ಐವತ್ತು ರೂ. ಗಳನ್ನು ಕೇಳುವುದೂ ಉಂಟು. ಖಾಸಗೀ ಡಿಪೋಗಳಲ್ಲಿಯೂ ಒಂದು ಅಥವಾ ಒಂದೂವರೆ ಮಣ ಸಿಕ್ಕುವುದೇ ದುರ್ಲಭ. ಫೇರ್ ಪ್ರೈಸ್ ಡಿಪೋಗಳಲ್ಲಿ ಯಾವಾಗಲೂ ಸೌದೆಯೇ ಇರುವುದಿಲ್ಲ. ಹೀಗಿರುವುದರಿಂದ ಪುರನಿವಾಸಿಗಳ ಕಷ್ಟವು ಹೇಳತೀರದಾಗಿದೆ.

ಈ ನಗರಕ್ಕೆ ಬೇಕಾಗುವಷ್ಟು ಸೌದೆಯು ಬರುತ್ತಿದೆಯೆಂದು ಒಂದು ವೇಳೆ ಒಪ್ಪಿಕೊಂಡರೂ ಅದು ಜನರಿಗೆ ಮಾತ್ರ ಸರಿಯಾಗಿ ವಿನಿಯೋಗವಾಗುತ್ತಿಲ್ಲವೆಂಬುದು ನಿರ್ವಿವಾದವಾದ ವಿಷಯ. ಇಲ್ಲಿರುವ ಫೆರೋ ಅಲಾಯ್ಸ್, ಗಂಧದೆಣ್ಣೆ ಕಾರ್ಖಾನೆ ಮತ್ತು ಹೋಟೆಲುಗಳಿಗೆ ಬರುವ ಸೌದೆಯೆಲ್ಲಾ ವೆಚ್ಚವಾಗುತ್ತದೆ. ಆದುದರಿಂದ ಬಡ ಜನರಿಗೆ ಅದು ದೊರೆಯುವುದು ದುರ್ಲಭವಾಗಿದೆ. ಮಂತ್ರಿಗಳು ಹೇಳಿರುವಂತೆ ಸಾಕಾದಷ್ಟು ಸರಬರಾಜಿದ್ದರೂ ಜನರಿಗೆ ಮಾತ್ರ ಪ್ರಯೋಜನವಾಗುತ್ತಿಲ್ಲ. ಆದುದರಿಂದ ಬರತಕ್ಕ ಸೌದೆಯೆಲ್ಲವನ್ನೂ ಹತೋಟಿಗೆ ತೆಗೆದುಕೊಂಡು ಸಮಸ್ತ ಜನರಿಗೂ ನಿರ್ದಿಷ್ಟವಾದ ಪ್ರಮಾಣದಲ್ಲಿ ರೇಷನ್ ಕಾರ್ಡ್ ಮೂಲಕ ಅದನ್ನು ಹಂಚುವಂತೆ ಸರ್ಕಾರದವರು ಕೂಡಲೇ ಏರ್ಪಾಡು ಮಾಡಿ ಸೌದೆಯ ಅಭಾವವನ್ನು ತಪ್ಪಿಸುವುದು ಅತ್ಯಗತ್ಯವಾಗಿದೆ.

ನಾಯಿಕೆಮ್ಮಿನ ಔಷಧಿ
7–8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.
ಕ್ರಯ ಬಾಟ್ಲಿಗೆ 1-8-0
ಗೂರ್ಲು—ಉಬ್ಬಸಕ್ಕೆ
(Asthma)
ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.
(Appendecitis) ಗುಲ್ಮ ಕೂರೆ ಮತ್ತು (Tonsils) ಗಲಾಯಿಕೆ ಅವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ.
ಗುಂಡ್ಲುಪೇಟೆ ಆರ್ ಎಸ್ ಪಂಡಿತರು, ದಿವಾನ್ಸ್ ರೋಡ್, ಗೊಲ್ಲಗೇರಿ ಮೈಸೂರು.

ಕಮಲ್ ಪ್ರೂಫ್

ಲೋಲಕ್ಕುಗಳಿಗೆ!
*
ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸಿಗೆ ಭೇಟಿ ಕೊಡಿ

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

Edited, printed and published by A. R. Nagarajan at the Sadhvi Press D. Subbiah Road, Mysore.

ವಿವಾಹ ಮಹೋತ್ಸವಗಳು

ಬೇಲೂರು ಉಪಾಧ್ಯ ನಾಗಪ್ಪಾಚಾರ್ಯರು ತಮ್ಮ ಚಿಕ್ಕಪ್ಪನವರ ಪುತ್ರ ಚಿ|| ಎಸ್. ವಾಸುದೇವರಾಯರಿಗೆ ಬೆಂಗಳೂರು ಶ್ರೀ ವೆಂಕೋಬಾಚಾರ್ಯರ ಪುತ್ರಿ ಸೌ|| ದ್ವಾರಕಾಬಾಯಿಯನ್ನು ತಂದು ಬೆಂಗಳೂರಿನಲ್ಲಿಯೂ, ರಿ||ಟ್ರಾಫಿಕ್ ಇನ್ಸ್‌ಪೆಕ್ಟರಾದ ಶ್ರೀ ಟಿ. ಎನ್ ಸುಬ್ಬರಾಯರು ತಮ್ಮ ಮಗ ಶ್ರೀ ಎಸ್ ಸಂಜೀವರಾಯರಿಗೆ ಶ್ರೀ ಬಿ ರಾ[illegible]ರವರ ಮಗಳು ಸೌ|| ಸರೋಜಮ್ಮನನ್ನು ತಂದು ಮೈಸೂರಿನಲ್ಲಿಯೂ ನಿನ್ನೆ ದಿನ ವಿಜೃಂಭಣೆಯಿಂದ ವಿವಾಹವನ್ನು ನೆರವೇರಿಸಿದರು.

ಶಿಕ್ಷರಿ ಶ್ರೀ ತಿಮ್ಮೇಗೌಡ ಉ|| ತಮ್ಮಯ್ಯಗೌಡರು ತಮ್ಮ ಮಗ ಚಿ|| ಎಸ್ ಪುಟ್ಟಸ್ವಾಮಿಯವರಿಗೆ ನಂದೀಪುರದ ಶ್ರೀ ಎಸ್ ಕೆ ಪುಟ್ಟೇಗೌಡರ ಮಗಳು ಸೌ|| ಸುಶೀಲಮ್ಮನನ್ನು ತಂದು ಇದೇ ೧೬ ನೆ ತಾ|| ನೆರವೇರಿಸಿದ ವಿವಾಹದ ಪ್ರಯುಕ್ತ ಮೊನ್ನೆ ಸಂಜೆ ಆರತಕ್ಷತೆಯನ್ನು ವೈಭವದಿಂದ ಜರುಗಿಸಿದರು. ಮೊನ್ನೆ ಮಧ್ಯಾಹ್ನ ತಮ್ಮ ಹಿತ ಮಿತ್ರರನ್ನು ಆಹ್ವಾನಿಸಿ ಭೋಜನ ಕೂಟವನ್ನಿತ್ತು ಸತ್ಕರಿಸಿದರು.

ಜೈ ಪ್ರಕಾಶರಿಗೆ ಕಾಣಿಕೆ

ಮೈಸೂರು ಸಿಲ್ಕ್ ಫಿಲೇಚರ್ಸ್ ಕೆಲಸಗಾರರು ರೂ ೧೫೩-೫-೬ ಗಳನ್ನು ಶ್ರೀ ಜಯಪ್ರಕಾಶ ನಾರಾಯಣರವರ ನಿಧಿಗೆ ಕಾಣಿಕೆಯಾಗಿ ಇತ್ತಿದ್ದಾರೆ.

ಗರ್ಭ ರಕ್ಷಿಣಿ
ಅನೇಕರ ಅನುಭವ ಸಿದ್ಧವಾದ ಔಷಧಿ.
ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು
ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ. ವಿ. ವೆಂಕಟರಾಮಯ್ಯ, ರಿ|| ಬೋರ್ಡ್ ವೈದ್ಯ, ಅರಕಲವಾಡಿ. ಚಾಮರಾಜನಗರ ತಾ||

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ
ಚಿನ್ನ, ಬೆಳ್ಳಿ ಮತ್ತು ರತ್ನದ ಆಭರಣಗಳಿಗೆ
—: ನಮ್ಮಲ್ಲಿ ವಿಚಾರಿಸಿ. :—
ಕೆ ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.
ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,
ಅಶೋಕಾ ರಸ್ತೆ, ಮೈಸೂರು.
ಸ್ಥಾಪಿತ ೧೯೩೩ :: ಫೋನ್. ೪೧೧

18-5-47 ನೇ ತಾ|| ನಿಂದ ಜನಭರಿತವಾದ 3 ನೇ ವಾರ
ವುಡ್-ಲ್ಯಾಂಡ್ಸ್ ಟಾಕೀಸ್, ಮೈಸೂರು.
★ 'ನಾವು-ಇಬ್ಬರು' ★ (ತಮಿಳು)
ಪ್ರತಿ ದಿನ ಮೂರು ಆಟಗಳು
ಪಾತ್ರಗಳು:-ಟಿ ಆರ್. ಮಹಾಲಿಂಗಂ, ಟಿ ಎ ಜಯಲಕ್ಷ್ಮಿ ಮತ್ತು ಬೇಬಿ ಕಮಲ

ರಾಜಕಮಲ್, ಮೈಸೂರು
ತಾ|| ೧೬-೫-೪೭ ರಿಂದ ನಾಲ್ಕನೇ ವಾರ-ಪ್ರತಿ ದಿನ ೨ ಆಟಗಳು
'ಗೊಲ್ಲಭಾಮ' (ತೆಲುಗು)
ಭೂಮಿಕೆ:—ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

ಮೈಸೂರು ಸ್ಟೇಟ್ ರೈಲ್ವೆ—ನೋಟಿಫಿಕೇಷನ್

ಮೈಸೂರು ವಾಣಿ ವಿಲಾಸ ಮಾರ್ಕೆಟ್ಟಿನ ಹೊಸ ಬುಕಿಂಗ್ ಆಫೀಸು

೧೯೪೭ನೇ ಮೇ ೧೫ನೇ ತಾರೀಖಿನಿಂದ ವಾಣಿ ವಿಲಾಸ ಮಾರ್ಕೆಟ್ಟಿನ ಬುಕಿಂಗ್ ಆಫೀಸಿನ ಕೆಲಸ ಮಾಡುವ ವೇಳೆಯು ಈ ಕೆಳಗೆ ನಮೂದಿಸಿರುವಂತೆ ಬದಲಾವಣೆ ಮಾಡಲ್ಪಡುತ್ತದೆ

ಈಗಿರುವುದು: — ೬ ರಿಂದ ೧೧.೯ ಟಿ ಮತ್ತು ೧೪ ರಿಂದ ೧೯ ಗಂಟೆ

ಬದಲಾವಣೆಯಾಗಿರುವುದು:— ೬ ರಿಂದ ೧೦ ಗಂಟೆ ಮತ್ತು ೧೪ ರಿಂದ ೧೯ ಗಂಟೆ

ಟ್ರಾಫಿಕ್ ಮ್ಯಾನೇಜರವರ ಆಫೀಸು, ಮಿರ್ ಇನಾಯತ್ ಹುಸೇನ್
[illegible] [illegible]

Distributors:-


ಇಂಡಿಯಾ ಸೂಪರ್ ಟಾಂಗಾ ಟೈರು
ಬಹಳ ಕಾಲ ಬಾಳಿಕೆ ಬರುವುದು ಮತ್ತು ಸ್ವಾಭಾವಿಕವಾದ ರಬ್ಬರಿನಿಂದ ಯುದ್ಧದ ಪೂರ್ವದ ಮಾದರಿಯಂತೆ ತಯಾರಿಸಲ್ಪಟ್ಟಿರುವುವು ಲಾಭಕರ. ಒಂದು ಸಾರಿ ಉಪಯೋಗಿಸಿ ನೋಡಿ.
ಸಿಕ್ಕುವ ಸ್ಥಳ:—
ಸಿ. ಬಿ ಎಂ ಚಂದ್ರಯ್ಯ,
ಅಶೋಕಾ ರಸ್ತೆ, :: ಮೈಸೂರು

ಹೈದರಾಬಾದು ಬ್ರಿಟಿಷ್ ಮಿಲಿಟರಿ ಕೇಂದ್ರವಾಗುತ್ತಿದೆ

ಹೈದರಾಬಾದ್ ಸಂಸ್ಥಾನವನ್ನು ಬ್ರಿಟಿಷ್ ತಮ್ಮ ಮಿಲಿಟರಿ ಕೇಂದ್ರವನ್ನಾಗಿ ಮಾಡಿಕೊಳ್ಳುತ್ತಿದ್ದಾರೆ. ಅವರು ನಿಜವಾಗಿಯೂ, ಭಾರತವನ್ನು ಬಿಡಲು ಹೊರಡಿಲ್ಲವೆಂಬುದಕ್ಕೆ ಇದು ಸಾಕ್ಷಿಯಾಗಿದೆ—ಎಂಬುದಾಗಿ ದಕ್ಷಿಣದ ಪ್ರಾಂತ ಪತ್ರಿಕೆಯಲ್ಲಿ ವರದಿಯಾಗಿದೆ. ಬ್ರಿಟಿಷರು ಭಾರತದಲ್ಲಿರುವ ತಮ್ಮ ಸೈನ್ಯವನ್ನು ವಿಸರ್ಜಿಸುತ್ತಿರುವರೆಂದು ಭಾವಿಸುವುದು ಸರಿಯಲ್ಲ. ಅವುಗಳನ್ನು ಸ್ಥಳಾಂತರಗೊಳಿಸಿ, ಸಂಸ್ಥಾನಗಳಲ್ಲಿ ಇರಿಸಲಾಗುತ್ತಿದೆ. ಈಗ ರಾಜರುಗಳು ನೇರವಾಗಿ ವೈಸರಾಯರ ಅಧೀನದಲ್ಲಿರುವುದರಿಂದ, ಅವರು ಮಿಲಿಟರಿ ಪಟುವಟಿಕೆಗಳನ್ನು ಸಂಸ್ಥಾನಗಳಲ್ಲಿ ಗಲಾಟೆಯಿಲ್ಲದೆ ನಡೆಸಿಕೊಂಡು ಹೋಗಲು ಅವಕಾಶ ದೊರಕಿದೆ. ಬ್ರಿಟಿಷರು ೧೯೪೮ರ ಜೂನಿಗೆ ಭಾರತವನ್ನು ಬಿಟ್ಟುಹೋದರೂ, ಅವರ ಅಧಿಕಾರ ಮತ್ತು ಕೈವಾಡ, ಸಂಸ್ಥಾನಗಳ ಮೂಲಕ ಸಾಗುವುದರಲ್ಲಿ ಸಂಶಯವಿಲ್ಲ—ಎಂದು ಆ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

ವಿಂಡ್ಸರರು ಜರ್ಮನ್ ದೊರೆಗಳಾಗುವರೇ ?

ಡ್ಯೂಕ್ ಆಫ್ ವಿಂಡ್ಸರ್‌ರವರು ತಮ್ಮ ದೊರೆಗಳಾಗಬೇಕೆಂಬುದಾಗಿ ೪ ಲಕ್ಷ ಜರ್ಮನರು ಭಾರಿ ಚಳುವಳಿಯನ್ನು ಆರಂಭಿಸಿದ್ದಾರೆ. ಇಡೀ ಜರ್ಮನಿಯಲ್ಲಿ ಈ ವಿಚಾರವು ಮನೆ ಮಾತಾಗಿದೆ. ಇದಕ್ಕೆ ಆಕ್ಷೇಪಿಸಲು ಚಾರ್ಜರವರೇ ತಮ್ಮ ದೊರೆಗಳಾಗಿರಬೇಕೆಂದು ಮತ್ತೊಂದು ತಂಡವು ಸಾರುತ್ತಿದೆ. ಚಾರ್ಜರಿಗೆ ಇಂಗ್ಲೆಂಡಿನ ಕೆಲಸ ಹೆಚ್ಚಾಗಿರುವುದೆಂದೂ, ವಿಂಡ್ಸರರಿಗೆ ಅವರ ಕುಟುಂಬವಿರುವುದಾಗಿಯೂ ಮೊದಲನೇ ತಂಡದವರು ವಾದಿಸುತ್ತಿದ್ದಾರೆ. ಈ ಚಳುವಳಿಗೆ ಮಹಿಳೆಯರು ಸೂತ್ರಧಾರಿಗಳಾಗಿದ್ದಾರೆ.

ಇಂದೂರಿನಲ್ಲಿ ಸುಧಾರಣೆ

ತಮ್ಮ ಸಂಸ್ಥಾನದಲ್ಲಿ ಹೊಸ ಸುಧಾರಣೆಗಳನ್ನು ಜಾರಿಗೆ ತರಲೂ ಮತ್ತು ಒಂದು ಆಡಳಿತ ಸಮಿತಿಯನ್ನು ಜನಾನುರಾಗಿಗಳಾದ ಮಂತ್ರಿಗಳನ್ನು ನೇಮಿಸಿಕೊಳ್ಳಲೂ ಸಲಹೆಗಳನ್ನು ಕೊಡುವುದಕ್ಕಾಗಿ ಸಾರ್ವಜನಿಕ ಸಂಸ್ಥೆಗಳ ಪ್ರತಿನಿಧಿಗಳನ್ನು ಆಹ್ವಾನಿಸುವಂತೆ ಇಂದೂರ್ ಮಹಾರಾಜರು ತಮ್ಮ ಮುಖ್ಯ ಮಂತ್ರಿಗಳಿಗೆ ಆಜ್ಞೆ ಮಾಡಿರುತ್ತಾರೆ.

ಬ್ರಿಟಿಷರು ಹಿಂದಿರುಗಲು ವೇಶ್ಯೆಯರ ವಿರೋಧ

ಬ್ರಿಟಿಷರು ಭಾರತವನ್ನು ಬಿಟ್ಟುಹೋಗಕೂಡದೆಂದು ಕಾಶಿಯ ವೇಶ್ಯೆಯರು ಭಾರಿ ಚಳುವಳಿಯೊಂದನ್ನು ಆರಂಭಿಸಿದ್ದಾರೆ. ಇವರುಗಳು 'ಕ್ವಿಟ್ ಇಂಡಿಯಾ' ವನ್ನು ವಿರೋಧಿಸಿ, ಅದಕ್ಕಾಗಿ ತಮ್ಮ ಸೋದರಿಯರುಗಳಿಂದ ಕಾಶಿ ನುತ್ತು ಸಂಯುಕ್ತಪ್ರಾಂತ್ಯಗಳಲ್ಲಿ ರುಜುಗಳನ್ನು ಶೇಖರಿಸುತ್ತಿದ್ದಾರೆ. ಬ್ರಿಟಿಷರು ಭಾರತವನ್ನು ಬಿಟ್ಟುಹೋಗುವುದರಿಂದಲೂ ಕಾಂಗ್ರೆಸ್ ಸರ್ಕಾರಗಳು ಅವರಿಗೆ ತಂದಿರುವ ಪಾನನಿರೋಧದಿಂದಲೂ ತಮ್ಮ ವೃತ್ತಿಗೆ ಧಕ್ಕೆ ಬಂದಿದೆಯೆಂದು ಅವರು ಗೋಳಿಡುತ್ತಿದ್ದಾರೆ. ಈ ವಿಚಾರದಲ್ಲಿ ಅವರು ವೈಸರಾಯರಿಗೆ ಮನವಿಯೊಂದನ್ನು ಸಲ್ಲಿಸಲು ಪ್ರಯತ್ನಮಾಡುತ್ತಿದ್ದಾರೆಂದು ಗೊತ್ತಾಗಿದೆ.

ರೋ. ನಂ. ೩೯೩ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಮಂಗಳವಾರ ೨೦—೫—೪೭ [ಸಂಚಿಕೆ ೨೪೧

ವೈಸರಾಯರವರ ರಾಜೀನಾಮೆಯೇ ?

ಲಿಸ್ಟೋವೆಲ್ಲರು ಭಾರತದಲ್ಲಿ ರಾಯಭಾರಿ

೧೯೪೮ ನೇ ಜೂನಿನಲ್ಲಿ ಬ್ರಿಟಿಷರ ಆಧಿಕಾರವು ಅಂತ್ಯವಾದ ಮೇಲೆ ಈಗ ಭಾರತದ ಕಾರ್ಯದರ್ಶಿಗಳಾಗಿರುವ ಲಾರ್ಡ್ ಲಿಸ್ಟೋವೆಲ್ಲರು ಇಲ್ಲಿ ಬ್ರಿಟಿಷ್ ರಾಯಭಾರಿಗಳಾಗಬಹುದೆಂದು ಲಂಡನ್ನಿನ ಪತ್ರಿಕೆಯೊಂದರಲ್ಲಿ ವರದಿಯಾಗಿದೆ.

ವೈಸರಾಯರು ಲಂಡನ್ ತಲಪಿದರು

ಬ್ರಿ॥ ಮಂತ್ರಿಮಂಡಲದ ಕರೆಯಂತೆ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ನಿನ್ನೆ ಮಧ್ಯಾಹ್ನ ಲಂಡನ್ ತಲಪಿದರು. ವೈಸರಾಯರು ದೆಹಲಿ ಬಿಡುವ ಮುನ್ನ ತಾವು ಸೂಚಿಸಿರುವ ಯೋಜನೆಗಳನ್ನು ಕಾಂಗ್ರೆಸ್, ಲೀಗ್ ಮತ್ತು ಸಿಖ್ ಮುಖಂಡರಿಗೆ ತೋರಿಸಿ ಅವರ ಅಭಿಪ್ರಾಯಗಳನ್ನು ತಿಳಿದುಕೊಂಡು, ಇದಾದೊಡನೆ ಅವರು ಚರ್ಚೆ ನಡೆಸಿದರೆಂದು ವರದಿಯಾಗಿದೆ. ವೈಸರಾಯರು ತಮ್ಮ ಬಂಧುಗಳಾದ ಗ್ರೀಸಿನ ರಾಜಕುಮಾರರಿಗೆ ಇಂಗ್ಲೆಂಡಿನ ರಾಜಕುಮಾರಿ ಎಲಿಜಬೆತ್‌ರನ್ನು ಕೊಟ್ಟು ವಿವಾಹ ಮಾಡಿಸುವ ವಿಚಾರದಲ್ಲಿ ರಾಜಮನೆತನದೊಡನೆ ಮಾತುಕತೆ ನಡೆಸುವರೆಂದೂ ಹೇಳಲಾಗಿದೆ.

ಗ್ವಾಲಿಯರಿನಿಂದ ರಾಜ್ಯಾಂಗ ಸಭೆಗೆ ಪ್ರತಿನಿಧಿಗಳು

ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಗ್ವಾಲಿಯರಿನ ನಾಲ್ಕುಸ್ಥಾನಗಳಿಗೆ ಪೈಕಿ ಮೂರಕ್ಕೆ ಸದಸ್ಯರನ್ನು ಪ್ರತಿನಿಧಿ ಸಭೆ ಮತ್ತು ಶಾಸನಸಭೆಗಳ ಅಧಿವೇಶನದಲ್ಲಿ ಆರಿಸಲಾಗುವುದು. ಇದಕ್ಕಾಗಿ ಆ ಎರಡು ಸಭೆಗಳ ಅಧಿವೇಶನವು ಜೂನ್ ೧೯ ನೇ ತಾರೀಖಿನ ದಿನ ಸೇರುವುದು. ಅಲ್ಲಿನ ಪ್ರಧಾನಿಗಳಾದ ಶ್ರೀ ಎಂ ಎ ಶ್ರೀನಿವಾಸರವರು ಮಹಾರಾಜರಿಂದ ನಾಮಕರಣ ಮಾಡಲ್ಪಡುವರೆಂದೂ ಗೊತ್ತಾಗಿದೆ.

ಲಂಡನ್ನಿಗೆ ಬರಲು ಮುಖಂಡರುಗಳಿಗೆ ಆಹ್ವಾನವೇ ?

ಬ್ರಿಟಿಷ್ ಮಂತ್ರಿಮಂಡಲದ ಭಾರತ ಸಮಿತಿಯು ವೈಸರಾಯರೊಡನೆ ಚರ್ಚೆ ನಡೆಸಿದ ನಂತರ ಅವರು ಪರಿಶೀಲನೆಗಾಗಿ ಕಾಂಗ್ರೆಸ್, ಸಿಖ್ ಮತ್ತು ಲೀಗ್ ಮುಖಂಡರನ್ನು ಲಂಡನ್ನಿಗೆ ಆಹ್ವಾನಿಸುವುದೆಂದು ಹೇಳಲಾಗುತ್ತಿದೆ. ಆದರೆ ಅದನ್ನು ಕಾಂಗ್ರೆಸ್ಸು ನಿರಾಕರಿಸಬಹುದೆಂದು ಊಹಿಸಲಾಗಿದೆ.

ಪರೀಕ್ಷೆ ಫಲಿತಾಂಶಗಳು

ಮೈಸೂರು ೨೦

ಈ ದಿನ ಹೊರಬೀಳಬೇಕಾದ ಮೈಸೂರು ವಿಶ್ವವಿದ್ಯಾನಿಲಯದ ಮತ್ತು ಎಸ್. ಎಸ್. ಎಲ್. ಸಿ. ಪರೀಕ್ಷೆಗಳ ಫಲಿತಾಂಶವು ನಾಳೆ ಮತ್ತು ನಾಳಿದ್ದು ಪ್ರಕಟವಾಗುವುದೆಂದು ಗೊತ್ತಾಗಿದೆ.

ನಿಧನ

ಧರ್ಮ ಕಾರ್ಯಗಳಲ್ಲಿ ತುಂಬಾ ಆಸಕ್ತರಾಗಿ ತುಂಬಿಟ್ಟಿಗರ ಸಮಾಜದವರ ಪ್ರೀತಿಗೆ ಪಾತ್ರರಾಗಿದ್ದ ಶ್ರೀಮತಿ ಹೊಂಬಾಳೆ ಲಕ್ಷ್ಮಮ್ಮನವರು ನಿನ್ನೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರ ಆತ್ಮಕ್ಕೆ ಚಿರ ಶಾಂತಿಯನ್ನು ಕೊಟ್ಟು, ಅವರ ಕುಟುಂಬ ವರ್ಗಕ್ಕೆ ಉಂಟಾಗಿರುವ ದುಃಖಸಹಿಸುವ ಶಕ್ತಿಯನ್ನು ದಯಪಾಲಿಸಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇವೆ.

ಕಾಣಿಕೆ

ಇಟ್ಟಿಗೆಗೂಡು ಯುವಕ ಸಂಘಕ್ಕೆ ಶ್ರೀ ಎಸ್. ದೊರೆಯಪ್ಪನವರು ತಮ್ಮ ಕುಮಾರಿಯವರ ವಿವಾಹದ ಸಂದರ್ಭದಲ್ಲಿ ೧೦ ರೂ. ಗಳನ್ನೂ, ಶ್ರೀ ಬಿ. ದೊರೆಸ್ವಾಮಿಯವರು ತಮ್ಮ ತಮ್ಮನವರ ವಿವಾಹದ ಸಂದರ್ಭದಲ್ಲಿ ೬ ರೂ ಗಳನ್ನೂ ದಾನವಿತ್ತಿದ್ದಾರೆ.

ಮೌಂಟ್ ಬ್ಯಾಟನ್ನರು ರಾಜೀನಾಮೆ ಕೊಡುವರೇ ?

ಲಂಡನ್ನಿಗೆ ತೆರಳಿರುವ ಭಾರತದ ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬಹುದೆಂದು ದೆಹಲಿಯ ಅಧಿಕಾರ ವೃತ್ತಗಳಲ್ಲಿ ಹೇಳಲಾಗುತ್ತಿರುವುದಾಗಿ ವರದಿಯಾಗಿದೆ. ಭಾರತವನ್ನು ವಿಭಾಗಿಸದೆ ಪ್ರಾಂತ್ಯಗಳನ್ನೂ ವಿಭಾಗಿಸಬೇಕೆಂದು ಅವರು ಮಾಡಿರುವ ಸಲಹೆಯನ್ನು ಬ್ರಿಟಿಷ್ ಮಂತ್ರಿಮಂಡಲವು ಅನುಮೋದಿಸದೆ ಪ್ರಾಂತ್ಯ ವಿಭಜನೆಯಿಲ್ಲದೆ ಭಾರತವನ್ನು ವಿಭಾಗಿಸುವುದಾಗಿ ಹೇಳುತ್ತಿರುವುದೇ ಇದಕ್ಕೆ ಕಾರಣವೆಂದು ಭಾವಿಸಲಾಗಿದೆ. ವೈಸರಾಯರೊಡನೆ ಅವರ ಮುಖ್ಯ ಪರಿವಾರವೆಲ್ಲವೂ ಹೋಗಿರುವುದೂ ಈ ಊಹೆಗೆ ಏಕೆ ಪ್ರಬಲ ಕೊಟ್ಟಿರುತ್ತವೆ. ಹಾಗೆ ಅವರು ರಾಜೀನಾಮೆ ಕೊಟ್ಟಲ್ಲಿ ಅವರ ಸ್ಥಾನಕ್ಕೆ ಯಾರು ಬರಬಹುದು ಇನ್ನೂ ನಿರ್ಧರವಾಗಿರುವುದಿಲ್ಲ. ಆದರೂ ಮತ್ತೊಬ್ಬ ಸೈನ್ಯಾಧಿಕಾರಿಯೇ ಭಾರತದ ವೈಸರಾಯರಾಗಿ ಬರಬಹುದೆಂದು ಹೇಳಲಾಗುತ್ತಿದೆ.

ಬೊಂಬೋರೆಯವರು ರೆವಿನ್ಯೂ ಸೆಕ್ರೆಟರಿ

ಸ್ವಂ. ವ ಫೋ] ಬೆಂಗಳೂರು ೨೦

ಹಾಸನ ಜಿಲ್ಲಾಧಿಕಾರಿಗಳಾದ ಶ್ರೀ॥ ನಿರಂಜನ ರಾವ್ ಅರಸಿನವರಿಗೆ ಮೂರು ತಿಂಗಳು ರಜಾ ಕೊಡಲಾಗಿದೆ. ಅದರ ಪರಿಣಾಮವಾಗಿ ಈ ಕೆಳಗೆ ಕಂಡ ಬದಲಾವಣೆಗಳು ಆಗಬಹುದೆಂದು ತಿಳಿದು ಬಂದಿದೆ:-

ಕೋಲಾರದ ಮೊದಲನೇ ದರ್ಜೆ ಮ್ಯಾಜಿಸ್ಟ್ರೇಟರಾದ ಮಿ॥ ಅಬ್ದುಲ್ ಅಲೀಂರವರು ಹಾಸನದ ಜಿಲ್ಲೆಗೆ, ರೆವಿನ್ಯೂ ಸೆಕ್ರೆಟರಿಗಳಾದ ಶ್ರೀ॥ ಹೆಚ್ ಎನ್ ಸಾಕೇಗೌಡರು ಚಿತ್ರದುರ್ಗ ಜಿಲ್ಲೆಗೆ; ಮೈಸೂರು ಪೌರಸಭಾಧ್ಯಕ್ಷರಾದ ಶ್ರೀ॥ ರಾಮಚಂದ್ರರಾವ್ ಬೊಂಬೋರೆಯವರು ರೆವಿನ್ಯೂ ಸೆಕ್ರೆಟರಿ; ಮೈಸೂರು ನಗರ ನ್ಯಾಯಾಧೀಶರಾದ ಶ್ರೀ ಎಲ್. ಮುನಿಸ್ವಾಮಿಯವರು ಭಡ್ತಿ ಹೊಂದಿ ಮೈಸೂರು ಪೌರಸಭಾಧ್ಯಕ್ಷತೆಗೆ.

ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ॥ ಕೆ ಸಿ ರೆಡ್ಡಿಯವರಿಗೆ ಇದುವರೆವಿಗೆ ಮತ್ತೆ ದಿವಾನರಿಂದ ಆಹ್ವಾನ ಬಂದಿರುವುದಿಲ್ಲ. ಆದುದರಿಂದ ನಾಳೆ ನಡೆಯಬೇಕಾಗಿದ್ದ ಕಾಂ॥ ಕಾರ್ಯಕಾರಿ ಸಭೆಯನ್ನು ಮುಂದೆ ಹಾಕಲಾಗಿದೆ.

ಗಾಂಧಿ-ಜಿನ್ನಾ ಸಂದೇಶದ ಚಿತ್ರ

ಗ್ಲೋಬ್] ಕಾಶಿ ೧೯

ತಮ್ಮ ಪ್ರಾಂತ್ಯದಲ್ಲಿ ಕೋಮುವಾರು ಸೌಹಾರ್ದವನ್ನು ಸ್ಥಾಪಿಸಲು ಸಂಯುಕ್ತ ಪ್ರಾಂತ್ಯ ಸರ್ಕಾರದವರು ಗಾಂಧಿ-ಜಿನ್ನಾ ಜಂಟಿ ಶಾಂತಿ ಸಂದೇಶವು ಅವಿದ್ಯಾವಂತರಿಗೂ ತಿಳಿಯುವಂತೆ ಮಾಡುವ ಸಲುವಾಗಿ ೨೦೦ ಅಡಿ ಉದ್ದದ ಫಿಲ್ಮು ತೆಗೆಸಿ ತಮ್ಮ ಪ್ರಾಂತ್ಯದಲ್ಲಿ ಅದನ್ನು ಚಿತ್ರ ಮಂದಿರಗಳಲ್ಲಿ ಪ್ರದರ್ಶಿಸಲು ವಿಚಾರ ಮಾಡುತ್ತಿದ್ದಾರೆ.

ತಮ್ಮ ಸಂಸ್ಥಾನದಲ್ಲಿ ಜಾರಿಗೆ ತರಬೇಕಾದ ಹೊಸ ರಾಜ್ಯಾಂಗವನ್ನು ರೂಪಿಸಲು ಜಯಪುರ ಸರ್ಕಾರದವರು ಅಲ್ಲಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಎಸ್. ಪಿ ವರ್ಮರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿರುತ್ತಾರೆ.

ಭಾರತದಲ್ಲಿ ಮತ್ತೊಂದು ರಾಜ್ಯಾಂಗ ಸಭೆ

ವೈಸರಾಯರ ಲಂಡನ್ ಯಾತ್ರೆಯ ಫಲವಾಗಿ ಹೊರಗಿರುವ ಸಿಂಧು, ಪಶ್ಚಿಮ ಪಂಜಾಬ್, ಪೂರ್ವಬಂಗಾಳಗಳಿಗಾಗಿ ಮತ್ತೊಂದು ರಾಜ್ಯಾಂಗ ರಚನಾ ಸಭೆಯು ಸ್ಥಾಪಿಸಲ್ಪಡಬಹುದೆಂದು ಗೊತ್ತಾಗಿದೆ. ಈ ಬಗ್ಗೆ ಆಯಾ ಪ್ರದೇಶಗಳ ನಾಗರಿಕರ ಅಭಿಪ್ರಾಯ ಪಡೆದನಂತರ ಒಂದು ಪ್ರಕಟಣೆಯು ಹೊರಬೀಳಬಹುದು.

ರಾಮಪುರದ ರಾಜರ ದಸ್ತಗಿರಿ

ಬಿಹಾರ್ ಪಟ್ನಾ ಶಾಸನದ ವಿರುದ್ಧವಾಗಿ ಪ್ರಚಾರ ನಡೆಸುತ್ತಿದ್ದಾರೆಂದು ಹಜಾರಿಬಾಗ್ ಜಿಲ್ಲಾಧಿಕಾರಿಗಳು ರಾಮಘರದ ರಾಜರನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ರೈಲ್ವೆ ನೌಕರರ ಅರಿಕೆ

ಮೈಸೂರು ೧೯

ಮೈಸೂರು ರೈಲ್ವೆ ನೌಕರರ ಸಂಘದ ಉಪಾಧ್ಯಕ್ಷರು ಮತ್ತು ಜನ ಪ್ರತಿನಿಧಿಗಳೊಡನೆ ಈ ದಿನ ಬೆಂಗಳೂರಿಗೆ ತೆರಳಿ ನಾಳೆ ಸಂಬಳ ಏರಿಕೆಯ ಬಗ್ಗೆ ರೈಲ್ವೆ ನೌಕರರ ಬೇಡಿಕೆಗಳನ್ನು ಮುಂದಿಡಲಿರುವರೆಂದು ತಿಳಿದುಬಂದಿದೆ.

ಸಾಧ್ವಿ

ತಾ॥ ೨೦-೫-೪೭ ಮಂಗಳವಾರ

ಮತ್ತೆ ಆಹಾರದ ಅಭಾವ

ಇಡೀ ಭಾರತ ಖಂಡದಲ್ಲೆಲ್ಲಾ ಪುನಃ ಆಹಾರದ ಅಭಾವವು ಕಾಣಿಸಿಕೊಂಡಿದೆ. ಉತ್ತರ ದೇಶದಲ್ಲಿ ಗೋಧಿ ಬೆಳೆಯು ಬಹಳ ಮಟ್ಟಿಗೆ ಕೆಟ್ಟುಹೋಗಿದೆ. ಅಲ್ಲಿ ಈಗ ಬೆಳೆದಿರುವ ಗೋಧಿಯನ್ನೇ ಬಹಳ ಕಷ್ಟಪಟ್ಟು ಜನರಿಗೆ ಹಂಚಬೇಕಾಗಿದೆ. ಹೀಗಿರುವಲ್ಲಿ ದಕ್ಷಿಣ ಪ್ರಾಂತಗಳಿಗೆ ಗೋಧಿಯು ಬರುವ ಸಂಭವವೇ ಇಲ್ಲ.

ದಕ್ಷಿಣ ಭಾರತದಲ್ಲಿ ಬೆಳೆಯುವ ಅಕ್ಕಿಯು ಇಲ್ಲಿಗೇ ಸಾಲುವುದಿಲ್ಲ. ಹೊರಗಿನಿಂದ ಬಂದು ಇಲ್ಲಿನ ಅವಶ್ಯಕತೆಗಳನ್ನು ಪೂರೈಸಬೇಕಾಗಿದೆ. ಬರ್ಮಾ, ಇಂಡೋನೇಷ್ಯಾ ಮುಂತಾದ ಕಡೆಗಳಿಂದ ಸಂಚಾರ ಸೌಲಭ್ಯದ ಕೊರತೆಯಿಂದ ಸಾಕಾದಷ್ಟು ಪ್ರಮಾಣದಲ್ಲಿ ಅಕ್ಕಿಯು ಬರಲು ಅಡಚಣೆಯಾಗಿದೆ. ಈಗಾಗಲೇ ಮದರಾಸ್ ಸರ್ಕಾರದವರು ಅಕ್ಕಿ ಪಡಿತರವನ್ನು ಹನ್ನೆರಡು ಔನ್ಸಿನಿಂದ ಹತ್ತು ಔನ್ಸಿಗೆ ಇಳಿಸಿರುತ್ತಾರೆ.

ತಿರುವಾಂಕೂರಿನಲ್ಲಿ ಅಕ್ಕಿಯ ಸಮಸ್ಯೆ ಯನ್ನು ಚರ್ಚಿಸಲು ಒಂದು ಸಮ್ಮೇಳನ ವೊಂದು ನಡೆಯಿತು. ಕೇಂದ್ರ - ಸರ್ಕಾರದ ಆಹಾರ ಮಂತ್ರಿಗಳಾದ ಡಾಕ್ಟರ್ ರಾಜೇಂದ್ರ ಪ್ರಸಾದರವರು ದೇಶದ ಆಹಾರ ಪರಿಸ್ಥಿತಿಯನ್ನು ವಿವರಿಸಿ ಈ ವರ್ಷ ಪ್ರಜೆಗಳಿಗೆ ಪೂರ್ತಿಯಾಗಿ ಪಡಿತರವನ್ನೊದಗಿಸುವುದು ಬಹಳ ಕಷ್ಟವೆಂದು ತಿಳಿಸಿರುವರು. ಹೊರಗಿನ ದೇಶಗಳಿಂದ ಸಾಧ್ಯವಾದಷ್ಟು ಹೆಚ್ಚಾಗಿ ಧಾನ್ಯಗಳನ್ನು ತರಿಸಲು ಪ್ರಯತ್ನಪಡುವುದಾಗಿ ಹೇಳಿರುವರು. ಕಳೆದ ಎರಡು ಮೂರು ವರ್ಷಗಳಲ್ಲಿ ಜನರು ಅತ್ಯಂತ ಮಿತವ್ಯಯದಿಂದ ಕಾಲಯಾಪನೆ ಮಾಡಬೇಕಾದ ಕಾಲ ಈಗಲೂ ಮಾಡಬೇಕಾದ ಪರಿಸ್ಥಿತಿ ಒದಗಿರುತ್ತದೆ.

ಕೊಗರುಬೇಳೆ ಮುಂತಾದ ಧಾನ್ಯಗಳ ವಿಚಾರವನ್ನಂತೂ ಹೇಳಬೇಕಾಗಿಯೇ ಇಲ್ಲ. ಕೊಗರುಬೇಳೆಯು ಅಂಗಡಿಗಳಿಂದ ಸಂಪೂರ್ಣವಾಗಿ ಮಾಯವಾಗಿರುವಂತಿದೆ. ಯುದ್ಧಕಾಲದಲ್ಲಿ ಇದ್ದುದಕ್ಕಿಂತಲೂ ಮೂರರಷ್ಟು ಇದರ ಬೆಲೆಯು ಏರಿರುತ್ತದೆ. ಆದರೂ ಅದು ಜನರಿಗೆ ಸಿಕ್ಕುವುದೇ ದುರ್ಲಭವಾಗಿದೆ. ಅಧಿಕಾರಿಗಳೂ ಸಹ ಇದರ ಸರಬರಾಜಿನ ಬಗ್ಗೆ ನಿಸ್ಸಹಾಯಕರಾಗಿರುತ್ತಾರೆ. ದಕ್ಷಿಣ ಆಫ್ರಿಕ ಮುಂತಾದ ಕಡೆಗಳಿಂದ ಬೇಳೆಯನ್ನು ತರಿಸಿ ಹಂಚುವ ಆಲೋಚನೆ ಇರುವುದಾಗಿ ಗೊತ್ತಾಗಿದೆ.

ಬಾಬು ರಾಜೇಂದ್ರ ಪ್ರಸಾದರು ಸೂಚಿಸಿರುವಂತೆ ಮುಂದೆ ಕಠಿಣ ದಿನಗಳು ಕಾದಿರುವಂತಿವೆ. ಈ ಪರಿಸ್ಥಿತಿಯಲ್ಲಿ ಸಾರ್ವಜನಿಕರೂ, ಎಲ್ಲ ಸರ್ಕಾರಗಳೂ ಸಹಕರಿಸಿ ವರ್ತಿಸಬೇಕಾಗಿದೆ. ದೇಶದಲ್ಲಿರುವ ಧಾನ್ಯವನ್ನೆಲ್ಲಾ ಸರಿಯಾದ ರೀತಿಯಲ್ಲಿ ಸಂಗ್ರಹಿಸಿ ವಿತರಣೆಯಿಂದ ವಿನಿಯೋಗಿಸುವುದಲ್ಲದೆ ದೇಶ, ವಿದೇಶಗಳಿಂದಲೂ, ಅಂತರರಾಷ್ಟ್ರೀಯ ಸಂಸ್ಥೆಯವರಿಂದಲೂ ಕೂಡಲೇ ಆಹಾರವನ್ನು ಪಡೆಯಬೇಕಾಗಿದೆ. ಇಲ್ಲದಿದ್ದರೆ ದೇಶದಲ್ಲಿ ಭೀಕರ ಕ್ಷಾಮವು ಪುನಃ ತಲೆದೋರಿ ಅನರ್ಥಗಳಿಗೆ ಆಸ್ಪದವಾಗಬಹುದು. ಇಂತಹ ಪರಿಸ್ಥಿತಿಯನ್ನು ಯುಕ್ತರೀತಿಯಲ್ಲಿ ಎದುರಿಸಿ ಪ್ರಜೆಗಳ ಕಷ್ಟವನ್ನು ನಿಗಿಸಲು ರಾಷ್ಟ್ರನಾಯಕರು ಕೂಡಲೇ ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವರೆಂದು ಹಾರೈಸೋಣ.

ಸರ್ಕಾರಿ ನೌಕರರ ಲೇಖಣಿ ಮುಷ್ಕರ

ದೆಹಲಿಯಲ್ಲಿರುವ ಸೆಂಟ್ರಲ್ ರೆವಿನ್ಯೂ ಜನರಲ್ ಅಕೌಂಟ್ಸ್ ಶಾಖೆಯ ೬೦೦ ಮಂದಿ ನೌಕರರು ನೂತನ ಸಕ್ರೆಟೇರಿಯೆಟ್ಟಿನ ಅಧಿಕಾರಿಗಳ ಬಗ್ಗೆ ಸಂಬಳ ಸಮಿತಿಯು ಇತ್ತಿರುವ ಸಲಹೆಗೆ ತಮ್ಮ ವಿರೋಧ ಸೂಚಿಸಲು ಮೊನ್ನೆ ದಿನ ಕಛೇರಿಯಲ್ಲೇ ಲೇಖನಿಗಳನ್ನು ಕೆಳಗಿಳಿಸಿ ಹರತಾಳವನ್ನಾಚರಿಸಿದರು.

ದೆಹಲಿಯಲ್ಲಿ ರಾಯಭಾರಿಗಳ ನಗರ

ಭಾರತವು ಹೊಸ ಸ್ಥಾನವನ್ನು ಮುಟ್ಟುವುದರಿಂದ ದೆಹಲಿಯಲ್ಲಿ ವಿದೇಶಗಳ ೩೦ ಮಂದಿ ರಾಯಭಾರಿಗಳು ನೆಲೆಸುತ್ತಾರೆ. ಇವರುಗಳಿಗೆ ಪ್ರತ್ಯೇಕವಾದ ವಸತಿಯೊಂದನ್ನು ಕಟ್ಟಲು ಭಾರತ ಸರ್ಕಾರವು ನಿರ್ಧರಿಸಿ, ವಿಲಿಂಗ್ಡನ್ ವಿಮಾನ ನಿಲ್ದಾಣದ ಬಳಿ ೧೨೦೦ ಎಕರೆ ಪ್ರದೇಶದಲ್ಲಿ ರಾಯಭಾರಿಗಳ ನಗರವೊಂದನ್ನು ರಚಿಸಲಿದೆ.

ಸಿಂಧು ಪ್ರಾಂತ್ಯಕ್ಕೆ ರೇಡಿಯೊ ಕೇಂದ್ರವಿಲ್ಲ

ಸಿಂಧು ಪ್ರಾಂತ್ಯಕ್ಕೆ ಪ್ರತ್ಯೇಕವಾದ ರೇಡಿಯೋ ಕೇಂದ್ರವೊಂದನ್ನು ಸ್ಥಾಪಿಸಲು ಅವಕಾಶ ಕೊಡಲು ಸಂಬಾರಕರ ಸಚಿವರಾದ ಸರ್ದಾರ್ ಪಟೇಲರು ನಿರಾಕರಿಸಿದ್ದಾರೆ. ಇನ್ನು ೩ ವರ್ಷಗಳ ವರೆಗೆ ಕಾಯಬೇಕೆಂದು ಸಿಂಧು ಮಂತ್ರಿಗಳಿಗೆ ಅವರು ತಿಳಿಸಿದ್ದಾರೆ.

ಶ್ರೀ ಗಣೇಶಾ ಟಾಕೀಸ್

2-5-47 ರಿಂದ ಅಮೋಘವಾದ

3 ನೇ ವಾರ

ಪ್ರತಿ ದಿನ 2 ಆಟಗಳು 6 ಮತ್ತು 9-15 ಕ್ಕೆ

ಜೆಮಿನಿಯವರ

ಬಾಲ-ನಾಗಮ್ಮ

(ತೆಲುಗು)

ನಾಮಿಬ್ಬರು

ಮೈಸೂರು ನ್ಯೂ

ವುಡ್‌ಲೆಂಡ್ಸ್ ಟಾಕೀಸಿನಲ್ಲಿ ಪ್ರದರ್ಶಿಸಲಾಗುತ್ತಿರುವ 'ನಾವಿಬ್ಬರು' (ನಾಮಿಬ್ಬರು) ಚಿತ್ರಕ್ಕೆ ಪ್ರೇಕ್ಷಕರು ಕಿಕ್ಕಿರಿದು ಬರುತ್ತಿದ್ದಾರೆ. ಸ್ಥಳ ಸಿಗದೆ ನಿರಾಶರಾಗಿ ಅನೇಕರು ಹಿಂದಿರುಗಿ ಹೋಗುತ್ತಿದ್ದಾರೆ. ಚಿತ್ರದಲ್ಲಿರುವ ರಾಷ್ಟ್ರೀಯ ಭಾವನಾ ಪ್ರದರ್ಶನ, ಉತ್ತಮ ಸಂಗೀತ ಮತ್ತು ನೃತ್ಯಗಳು ಜನರನ್ನು ಆಕರ್ಷಿಸುತ್ತವೆ.

ಅಣೆಕಟ್ಟಿನ ವಿರೋಧಕ್ಕಾಗಿ ಸತ್ಯಾಗ್ರಹ

ಗ್ಲೋಬ್] ಕಟಕ್ ...

ಒರಿಸ್ಸಾ ಸರ್ಕಾರದವರು ಸಂಬಲ್‌ಪುರ ಹಿರಕುಂಡ್ ಅಣೆಕಟ್ಟೆಯನ್ನು ನಿರ್ಮಿಸತಕ್ಕದೆಂದು ಹಿರಕುಂಡ್ ಸಮಿತಿಯು ವಿರೋಧ ಪಕ್ಷದ ಶ್ರೀ ಅಚ್ಯುತಾನಂದ ಪುರೋಹಿತ್ ಮುಂತಾದವರು ಒರಿಸ್ಸಾ ಸರ್ಕಾರಕ್ಕೆ ತಿಳಿಸಿ, ಕೆಲಸವೇನಾದರೂ ಆರಂಭವಾದರೆ ತಾವು ಸತ್ಯಾಗ್ರಹವನ್ನು ಹೂಡುವುದಾಗಿ ಹೇಳಿದ್ದಾರೆ. ಸತ್ಯಾಗ್ರಹಿಗಳನ್ನು ಸೇರಿಸುವ ಕಾರ್ಯ ಭರದಿಂದ ಸಾಗುತ್ತಿದೆ. ಪರಿಸ್ಥಿತಿಯನ್ನು ಎದುರಿಸುವುದಾಗಿ ಒರಿಸ್ಸಾ ಸರ್ಕಾರವು ನಿರ್ಧರಿಸಿದೆ.

ಕಮಲಾಪೂಲ್

ಲೋಲಕ್ಕುಗಳಿಗೆ!

ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸಿಗೆ ಭೇಟಿ ಕೊಡಿ

ಬೆಂಗಾಲ್ ಸಿಲ್ಕ್ ಸೀರೆಗಳು!

ಬೆಂಗಾಲ್ ಸಿಲ್ಕ್ ಸೀರೆಗಳು!!

ಬೆಂಗಾಲ್ ಸಿಲ್ಕ್ ಸೀರೆಗಳು!!!

ಬೇಕಾದಷ್ಟು ಬಂದಿವೆ

ಬಾಬುಸಾಬ್ ಕಂಪೆನಿ, ಓಲ್ಡ್

ಮೈಸೂರು ಬ್ಯಾಂಕ್ ರೋಡ್, ಮೈಸೂರು

Edited, printed and published by A. R. Nagaraian of the Sadhvi Press D. Subbiah Road, Mysore

18-5-47 ನೇ ತಾ॥ ನಿಂದ ಜನಭರಿತವಾದ 3 ನೇ ವಾರ

ವುಡ್‌-ಲ್ಯಾಂಡ್ಸ್ ಟಾಕೀಸ್, ಮೈಸೂರು.

* 'ನಾ ಮ್‌-ಇ ಬ್ಬ ರು' *

(ತಮಿಳು)

ಪ್ರ ತಿ ದಿ ನ ಮೂ ರು ಆ ಟ ಗ ಳು

ತಾರಾಗಣ:-ಟಿ.ಆರ್. ಮಹಾಲಿಂಗಂ, ಟಿ ಎ ಜಯಲಕ್ಷ್ಮಿ ಮತ್ತು ಬೇಬಿ ಕಮಲ

Sarada Vilas Intermediate College, Mysore.

Dated. 17th May 1947

The College reopens from the 24th June 1947. Those who want to join this College with P. C M. as their optionals have to get their names registered in the college, by paying one rupee. The last date for such registration is the 5th June. A list containing the names of students to whom seats are given will be put on the notice board on the 10th June Admission will be closed by the 24th June Arrangements will be made to teach Tamil, Telugu, Hindi and Urdu as Second Languages if sufficient number of students want to take any one of them All concessions such as scholarships and freeships that are available in Government Colleges will be granted in this College also.

M. S Ramaswamy,
PRINCIPAL

Sarada Vilas Intermediate College, Mysore.

Dated: 17—5—1947

TUTORIAL CLASSES

For candidates for the Intermediate Examination to be held in September 1947 will be opened on the 8th June 1947 provided there is an adequate number of applicants. Particulars regarding tuition and other Fees may be obtained on enquiry.

M S. Ramaswamy
PRINCIPAL

ರಾ ಜ ಕ ಮ ಲ್, ಮೈ ಸೂ ರು

ತಾ॥ ೧೬-೫-೪೭ ರಿಂದ ನಾಲ್ಕನೇ ವಾರ-ಪ್ರತಿ ದಿನ ೨ ಆಟಗಳು

'ಗೊ ಲ್ಲ ಭಾ ಮ'

(ತೆಲುಗು)

ಭೂಮಿಕೆ:—ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

ರೋ॥ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೧] ಬುಧವಾರ ೨೧—೫—೪೭ [ಸಂಚಿಕೆ ೨೪೨

ಮಧ್ಯಪ್ರಾಚ್ಯದ ರಕ್ಷಣೆ ಅಮೆರಿಕ ವಹಿಸುವುದು

ಸ್ಥಾನಿಕ ಸಮಾಲೋಚನೆ

ಪ್ರ. ಪ್ರೆ॥ ದಿವಾನರು ಅವರ ರಾಜಕೀಯ ಸುಧಾರಣೆಯ ಕುರಿತ ಸಮಾಲೋಚನೆಗಳ ಎರಡ ಪ್ರಕರಣದ ಸಂಬಂಧದಲ್ಲಿ ಸರ್ಕಾರದ ಪ್ರಕಟಣೆಯೊಂದನ್ನು ಹೊರಡಿಸಿರು ಈ ವಿಷಯದಲ್ಲಿ ಸುಧಾರಣೆಗಳನ್ನು ಕುರಿತವರೊಡನೆ ದಿವಾನರು ಮಾತುಕತೆಗಳನ್ನು ನಡೆಸಿರುವರು. ಕಳೆದ ... ಪ್ರಜಾಪಕ್ಷದ ಉಪಾಧ್ಯಕ್ಷರು ... ಸದಸ್ಯರೊಡನೆ ಮಾತನಾಡಿದ ... ಒಕ್ಕಲಿಗರ ಸಂಘದ ... ಶ್ರೀ ಬಿ ಟಿ ರಾಮಯ್ಯನವರೇ ... ದಿವಾನರನ್ನು ಭೇಟಿ ಮಾ... ನಿನ್ನೆ ಸಂಸ್ಥಾನದ ಪಿನ್ನು ವರ್ಗ ... ಅಧ್ಯಕ್ಷ ಮತ್ತು ಕಾರ್ಯ... ಎರಡು ಗಂಟೆ ಕಾಲ ದಿವಾನ ... ಮಾತನಾಡಿದರು.

ನಿನ್ನೆ ರಾತ್ರಿ ದಿವಾನರು ತಮ್ಮ ಪ್ರವಾಸ ... ಲೀ ತೆರಳಿದರು. ... ಹಿಂದಿರುಗಿದ ನಂತರ ಅವರು ಒರುವ ... ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ... ರೆಡ್ಡಿಯವರನ್ನು ಮತ್ತೆ ಭೇಟಿ ಮಾ... ಎಂದು ಹೇಳಲಾಗಿದೆ. ಅಲ್ಲದೆ ... ವನ್ನು ಸಲ್ಲಿಸಿರುವ ಇತರ ಸಂಸ್ಥೆಗಳ ... ನಿಧಿಗಳೊಡನೆಯೂ ಮಾತುಕತೆ ನಡೆ... ದು

ಭಟ್ಕಳ್ ಬಂದರು

... ೧೦ ನೇ ತಾ॥ ಬೊಂಬಾಯಿನಲ್ಲಿ ... ಬಂದರಿನ ಸಂಬಂಧವಾಗಿ ಸಭೆ ... ನಡೆಯುವುದು. ಕೇಂದ್ರ ಸರ... ಮಂತ್ರಿಗಳಾದ ಡಾ॥ ಜಾನ್ ಮಥಾ... ಅಧ್ಯಕ್ಷತೆ ವಹಿಸುವರು. ಇಂದಿ... ಸರ್ಕಾರದ ಪ್ರತಿನಿಧಿಗಳೂ, ಬೊಂ... ಸರಕಾರದ ಪ್ರತಿನಿಧಿಗಳೂ ಹಾಜರಿರುವರು. ... ಪರವಾಗಿ ಸರ್ ಅರ್ಕಾಟ್ ರಾ... ವಹಿಸುವರು.

ಅಮೆರಿಕದಿಂದ ಮಧ್ಯ ಪ್ರಾಚ್ಯದ ರಕ್ಷಣೆ

ಮೆಡಿಟರೇನಿಯನ್ ಮತ್ತು ಮಧ್ಯ ಪ್ರಾಚ್ಯದ ದೇಶಗಳ ರಕ್ಷಣಾ ಜವಾಬ್ದಾರಿಗಳ ... ಇಂಗ್ಲೆಂಡು ಅಮೆರಿಕಕ್ಕೆ ವಹಿ... ಸಲು ಸಿದ್ಧತೆಗಳನ್ನು ಮಾಡುತ್ತಿರು... ವರದಿಯಾಗಿದೆ. ಅಲ್ಲಿಂದ ಸೈನ್ಯ... ಪೂರ್ವ ಆಫ್ರಿಕಕ್ಕೆ ಬ್ರಿಟನ್ನು ಸಾ... ಎಂದೂ ಹೇಳಲಾಗಿದೆ. ಇದರಿಂದ ... ಮೆಡಿಟರೇನಿಯನ್ ಮತ್ತು ಸೂಯೆಜ್ ಕಾ... ರಕ್ಷಣೆಯೂ ಅಮೆರಿಕದ ಪ್ರಧಾನ ... ವಾಗುವುದು. ಅದರೂ ಈ ... ಬ್ರಿಟನ್ನು ಆರ್ಥಿಕ ಮತ್ತು ರಾಜ... ಆಸಕ್ತಿಯನ್ನು ತ್ಯಜಿಸುವುದಿಲ್ಲವೆಂ... ತಿಳಿದುಬಂದಿದೆ

... ಜಿನ್ನಾರವರು ಮುಂದಿನ ... ಗೌರ್ನರಾಗುವರೇ?

... ಜಿನ್ನಾ ಎಂ. ... ಪ್ರಧಾನಿ ಪದವಿಗೆ ರಾಜೀನಾಮೆ ... ವಸ್ಸು ... ನಿವೃತ್ತರಾದ ... ರವರು ಮದರಾಸ್ ಪ್ರಾಂತ್ಯದ ಗೌ... ನೇಮಕವಾಗುವ ಸಂಭವವಿದೆ ... ವರದಿಯಾಗಿದೆ.

ಅರಮನೆ ಸುದ್ದಿ

ಮೈಸೂರು ೨೦

ಈ ದಿನ ಶ್ರೀಮನ್ಮಹಾರಾಜರವರು ಮಿ॥ ... ಸಾಹೇಬರಿಗೆ ಭೇಟಿಯನ್ನು ... ದಯಪಾಲಿಸಿದರು

ಪರೀಕ್ಷೆ ಫಲಿತಾಂಶಗಳು

ಮೈಸೂರು ೨೧

ಮಾರ್ಚಿ ತಿಂಗಳಿನಲ್ಲಿ ನಡೆದ ಬಿ ಎ ಬಿ ಎಸ್ ಸಿ, ಎಲ್.ಎಲ್.ಬಿ, ಎಂಜನಿಯರಿಂಗ್ ಮುಂತಾದ ಪರೀಕ್ಷಾ ಫಲಿತಾಂಶಗಳು ಈ ದಿನ ಹೊರಬಿದ್ದಿವೆ. ಅವುಗಳನ್ನು ತಿಳಿಯಲಪೇಕ್ಷಿಸುವವರು ಸಾಧ್ವಿ ಆಫೀಸಿನಲ್ಲಿ ಬಂದು ನೋಡಬಹುದು

ಸಿಂಧು ಪ್ರಾಂತವನ್ನು ಹಿಂದುಗಳು ಬಿಡುತ್ತಿದ್ದಾರೆ

ಗ್ಲೋಬ್] ಕರಾಚಿ ೧೮

ಸಿಂಧ ಪ್ರಾಂತ್ಯದಲ್ಲಿ ಪ್ರಜೆಗಳ ವರ್ಗಾಂತರದ ಪ್ರಯತ್ನಗಳು ಈಗಾಗಲೇ ನಡೆಯುತ್ತಿವೆ. ಮುಸ್ಲಿಮರು ಇಲ್ಲಿ ಆಸ್ತಿಪಾಸ್ತಿಗಳನ್ನು ಕೊಳ್ಳುತ್ತಿದ್ದಾರೆ. ಹಿಂದುಗಳು ಹಿಂದೂ ಬಹುಸಂಖ್ಯಾತರಿರುವ ಪ್ರಾಂತ್ಯಗಳಿಗೆ ಹೋಗಿ ಸೇರಿಕೊಳ್ಳಲು ವಲಸೆ ಹೋಗುತ್ತಿದ್ದಾರೆ

ಲಂಡನ್ನಿನಲ್ಲಿ ದುಂಡು ಮೇಜಿನ ಪರಿಷತ್ತು

ಭಾರತದ ನಾಯಕರುಗಳನ್ನು ಲಂಡನ್ನಿಗೆ ಕರೆಸಿ ಕಡೇ ಘಳಿಗೆಯ ಒಪ್ಪಂದವನ್ನು ಮಾಡಿಕೊಳ್ಳಲು ಒಂದು ದುಂಡು ಮೇಜಿನ ಪರಿಷತ್ತನ್ನು ಅಲ್ಲಿ ಕರೆಸಬೇಕೆಂದು ವೈಸರಾಯರು ಕೊಟ್ಟ ಸಲಹೆಯನ್ನು ಬ್ರಿಟಿಷ್ ಪ್ರಧಾನಿ ಮಿ॥ ಅಟ್ಲಿಯವರು ಪರಿಶೀಲಿಸುತ್ತಿರುವರೆಂದು ಒಂದು ವರದಿಯು ತಿಳಿಸುತ್ತದೆ. ಇದನ್ನು ನಡೆಸುವುದಾದರೆ ಜೂನ್ ೩ ನೇ ತಾರೀಖಿಗೆ ಬದಲಿಯಾಗಿ ಮುಂದಿನ ೮ ನೇ ಸಮ್ಮೇಳನವು ನಡೆಯುವ ಬದಲು ಲಂಡನ್ನಿನಲ್ಲಿಯೇ ಅದು ಜರುಗಬಹುದೆಂದು ಭಾವಿಸಲಾಗಿದೆ

ಉದಯಪುರಕ್ಕೆ ಹೊಸ ರಾಜ್ಯಾಂಗ

ರಾಜ್ಯಾಂಗ ಸಭೆಯ ಸದಸ್ಯರಿಂದ ಶ್ರೀ ಕೆ ಎಂ ಮುನ್ಷಿಯವರಿಂದ ಸಿದ್ಧಗೊಳಿಸಲ್ಪಟ್ಟ ಹೊಸ ರಾಜ್ಯಾಂಗ ವ್ಯವಸ್ಥೆಯು ಜೂನ್ ೧೨ ನೇ ತಾ॥ನಿಂದ ಉದಯಪುರದಲ್ಲಿ ಜಾರಿಗೆ ಬರುವುದು. ಇದರಿಂದ ಅಲ್ಲಿನ ಮಹಾಜನರಿಗೆ ಸ್ವಾತಂತ್ರ್ಯ ... ಡ. ಇನ್ನು ಮುಂದೆ ... ಪ್ರಜೆಯ ರಾಜಕೀಯ ... ಚುನಾವಣೆಯ ಮೂಲಕ ಪ್ರತಿನಿಧಿಗಳನ್ನು ಆರಿಸಿ ಮಂತ್ರಿಮಂಡಲವನ್ನು ರಚಿಸಲಾಗುವುದು

ಷೇಕ್ ಅಬ್ದುಲ್ಲಾರವರ ಬಿಡುಗಡೆಯಾಗಬೇಕು

ಮೈಸೂರು ೨೧

ನಿನ್ನೆ ಸಂಜೆ ಕಾಂಗ್ರೆಸ್ ಕಛೇರಿಯಲ್ಲಿ ಷೇಕ್ ಅಬ್ದುಲ್ಲಾ ದಿನಾಚರಣೆಯನ್ನು ನಡೆಸಲಾಯಿತು. ಶ್ರೀ ಎಸ್. ಚೆನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸಂಸ್ಥಾನಗಳ ಪ್ರಜಾಪರಿಷತ್ತಿನ ಉಪಾಧ್ಯಕ್ಷರೂ, ಕಾಶ್ಮೀರದ ಪ್ರಜಾಮಂಡಲದ ಮುಖಂಡರೂ ಆದ ಶ್ರೀ ಷೇಕ್ ಅಬ್ದುಲ್ಲಾರವರನ್ನು ಬಂಧಿಸಿರುವುದನ್ನು ಖಂಡಿಸಿ, ಅವರನ್ನು ಕೂಡಲೇ ಬಿಡುಗಡೆಮಾಡಬೇಕೆಂದು ಕಾಶ್ಮೀರ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಶ್ರೀ॥ ಎಂ ಎನ್ ಜೋಯಿಸರು ಮಂಡಿಸಿದರು. ಶ್ರೀಗಳಾದ ಟಿ ಮರಿಯಪ್ಪ, ಪುಟ್ಟವೀರಪ್ಪ, ರಾಜಶೆಟ್ಟಿ ಮೊದಲಾದವರು ಭಾಷಣಮಾಡಿದರು. ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಕುಮಾರಪ್ಪನವರ ಆಗಮನ

ಅಖಿಲ ಭಾರತ ಗ್ರಾಮೋದ್ಯೋಗ ಸಂಘದ ಕಾರ್ಯದರ್ಶಿಗಳೂ, ಡಾ॥ ಕಾರ್ಯಕಾರಿ ಮಂಡಲಿ ... ಆದ ಶ್ರೀ॥ ಜೆ ಸಿ ಕುಮಾರಪ್ಪನವರು ಈ ದಿನ ಇಲ್ಲಿಗೆ ಆಗಮಿಸಿ ಸಂಜೆ ... ತೆರಳಿದರು. ರೈಲ್ವೆ ನಿಲ್ದಾಣದಲ್ಲಿ ... ರವರಾಗಿ ಶ್ರೀಗಳಾದ ಸಿ ... ವೆಂಕಟರಾಮ, ನಂಜುಂಡರಾವ್, ಎ ಶಿವಣ್ಣ ಮತ್ತು ಶ್ರೀ ... ವೀರಪ್ಪನವರುಗಳು ಅವರನ್ನು ಭೇಟಿ ಮಾಡಿ ... ಬೀಳ್ಕೊಟ್ಟರು.

ಗೀತಾ ಉಪನ್ಯಾಸ

ಮೈಸೂರು ಹೆಬ್ಬಾರ್ ಶ್ರೀವೈಷ್ಣವ ಸಂಘದವರ ನೇತೃತ್ವದಲ್ಲಿ ನಡೆಯುತ್ತಿದ್ದ ಗೀತಾ ಉಪನ್ಯಾಸವು ಕಾರಣಾಂತರದಿಂದ ನಿಂತಿದ್ದು ಮತ್ತೆ ನಾಳೆಯಿಂದ ಸಂಜೆ ... ಗಂಟೆಗೆ ಚಾಮೀರ ಶ್ರೀನಿವಾಸ ದೇವರ ದೇವಸ್ಥಾನದಲ್ಲಿ ಮೊದಲಿನಂತೆ ನಡೆಯುವುದು

ಉಚಿತ ಹಿಂದೀ ತರಗತಿಗಳು

ಚಾಮರಾಜಪೇಟೆ ... ಕಾಂಗ್ರೆಸ್ ಕಛೇರಿಯಲ್ಲಿ ಬರುವ ಸೋಮವಾರದಿಂದ ಪ್ರತಿ ದಿನ ಸಂಜೆ ... ಗಂಟೆಗೆ ಹಿಂದೀ ತರಗತಿಗಳು ನಡೆಯುತ್ತವೆ. ಎಲ್ಲರೂ ಈ ಸದವಕಾಶವನ್ನು ಉಪಯೋಗಿಸಿಕೊಳ್ಳಬೇಕೆಂದು ವ್ಯವಸ್ಥಾಪಕರಾದ ಶ್ರೀ॥ ಎಸ್ ... ಪ್ರಾರ್ಥಿಸಿರುತ್ತಾರೆ

ಪ್ರಾಂತ ವಿಭಜನೆಯಾದರೆ ಸೈನ್ಯ ವಿಭಜನೆಯೂ ಆಗಬೇಕು

ಗ್ಲೋಬ್] ... ಲಂಡನ್ ೧೮

ಬಂಗಾಳ ಮತ್ತು ಪಂಜಾಬುಗಳನ್ನು ವಿಭಾಗಿಸಿದರೆ ಸೈನ್ಯವನ್ನೂ ಸಹ ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳಿಗೆ ಪ್ರತ್ಯೇಕವಾಗಿ ಭಾಗ ಮಾಡಬೇಕೆಂಬ ಮಿ॥ ಜಿನ್ನಾರವರ ಹೇಳಿಕೆಯಲ್ಲಿ ಬದಲಾವಣೆಯಾಗದಿರುವುದೇ ವೈಸರಾಯರ ಲಂಡನ್ ಯಾತ್ರೆಗೆ ಮುಖ್ಯ ಕಾರಣವೆಂದು ಡೇಲಿ ಪತ್ರಿಕೆಯ ದೆಹಲಿ ಬಾತ್ಮೀದಾರರು ತಿಳಿಸಿರುತ್ತಾರೆ

ಫ್ರಾಂಕೋರವರ ಕೊಲೆ ಪ್ರಯತ್ನವೇ?

ಫ್ರಾಂಕೋರವರು ಭೇಟಿ ಕೊಟ್ಟಿದ್ದ ಬಾರ್ಸಿಲೋನಾ ವಿಮಾನ ನಿಲ್ದಾಣದಲ್ಲಿ ಒಂದು ಬಾಂಬಿನ ಸ್ಫೋಟನೆಯಾಯಿತೆಂದೂ ಆದರೆ ಅಪಘಾತಗಳೇನೂ ಆಗಲಿಲ್ಲವೆಂದೂ ವರದಿಯಾಗಿದೆ

ಲಂಡನ್ ಮೃಗಾಲಯದ ಪ್ರಾಣಿಗಳ ಅದೃಷ್ಟ

ಆನೆ ಮತ್ತು ಕಪಿಗಳಿಗೂ ಬೆಚ್ಚಗಿರುವ ಕೋಟುಗಳು

ಗ್ಲೋಬ್] ಲಂಡನ್ ೧೮

ಕಳೆದ ಚಳಿಗಾಲದಲ್ಲಿ ತೊಂದರೆಪಟ್ಟ ಲಂಡನ್ ಮೃಗಾಲಯದ ಪ್ರಾಣಿಗಳಿಗೆ ದಯಾದೃಷ್ಟಿಯಿಂದ ಬೆಚ್ಚಗಿರುವ ಉಡುಪುಗಳನ್ನು ಇನ್ನು ಮುಂದೆ ಕೊಡಲು ಏರ್ಪಾಡಾಗುತ್ತಿದೆ. ಅತಿ ಚಳಿಯನ್ನು ತಡೆದುಕೊಳ್ಳಲು ದರ್ಜಿಯವರು ಹೋರಾಟ ... ಗ ತಯಾರು ಮಾಡುವರೆಂದು ಹೇಳಲಾಗಿದೆ. ಆನೆಗಳಿಗೂ, ಜಿರಾಫೆಗಳಿಗೂ, ಕೋಟು, ಜಾಕೆಟ್ಟುಗಳನ್ನು ಹೊಲೆಸಿಕೊಡಲಾಗುವುದು. ಕಪಿಗಳ ಕಿವಿ ಮತ್ತು ಬಾಲಗಳಿಗೆ ಹೊಸ ಮಾದರಿಯ ಹೊದಿಕೆಗಳನ್ನು ಹೊಲೆಸಲಾಗುವುದು. ಈ ಉಡುಪುಗಳನ್ನು ಆ ಪ್ರಾಣಿಗಳು ಹರಿದುಹಾಕಿಕೊಳ್ಳುವ ಅವಕಾಶವಿರುವುದಿಲ್ಲ. ಈ ಬಟ್ಟೆಗಳು ಹತ್ತಿ ... ಸಿದ್ಧವಾದ ಮೇಲೆ ಅವುಗಳನ್ನು ಪ್ರಾಣಿಗಳಿಗೆ ತೊಡಿಸುವುದೂ, ಕಳಚುವುದೂ ... ಬಹುದೆಂದು ಹೇಳಲಾಗಿದೆ.

ಸೊಸೈಟಿ ಚುನಾವಣೆ

ಬರುವ ೨೫ನೇ ತಾ॥ ಭಾನುವಾರ ನಡೆಯುವ ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳ ಚುನಾವಣೆಗೆ ನಿಲ್ಲುವ ಈ ಕೆಳಗೆ ಕಂಡ ಅಭ್ಯರ್ಥಿಗಳಿಗೆ ಸದಸ್ಯರುಗಳು ಓಟುಕೊಟ್ಟು ಸಹಾಯ ಮಾಡಬೇಕೆಂದು ಪ್ರಾರ್ಥನೆ:—

ಶ್ರೀಗಳವರ.—

ಎಸ್. ರಂಗಸ್ವಾಮಯ್ಯ,

ಅಗರಂ ರಂಗಯ್ಯ,

ಪಾಲಹಳ್ಳಿ ಶ್ರೀಕಂಠಯ್ಯ,

ಎ. ಕೃಷ್ಣಸ್ವಾಮಿ ರಾವ್,

ಎಂ. ಎನ್. ಜೋಯಿಸ್,

ವಿ. ಲಿಂಗಣ್ಣಯ್ಯ,

ಎಸ್. ಲಿಂಗಣ್ಣ,

ಕೆ. ಪುಟ್ಟಸ್ವಾಮಿ,

ಎಂ. ಎಸ್. ನಂಜಪ್ಪ,

ಬಿ. ವಿ. ಕೃಷ್ಣಮೂರ್ತಿ,

ಬಿ. ಎಸ್. ...,

ಎಸ್. ಶೇಷಗಿರಿರಾವ್,

ಎಂ. ಜಿ. ನರಸಿಂಹಮೂರ್ತಿ

ಸೊಸೈಟಿಯ ಹಿತೈಷಿ

ಸಾಧ್ವಿ

ತಾ|| ೨೧-೫-೪೭ ಬುಧವಾರ

ಜಂಟಿ ಅಧಿವೇಶನವನ್ನು ಸೇರಿಸಬೇಕು

ಭಾರತ ರಾಜ್ಯಾಂಗ ಸಭೆಯಲ್ಲಿ ಗ್ವಾಲಿಯರ್ ಸಂಸ್ಥಾನದ ಪರವಾಗಿ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಲು ಅಲ್ಲಿನ ಉಭಯಶಾಸನ ಸಭೆಗಳ ಜಂಟಿ ಅಧಿವೇಶನವನ್ನು ಕರೆಯಲಾಗಿದೆ. ಆ ಸಭೆಗಳಿಂದ ಸದಸ್ಯರು ತಮ್ಮ ಸ್ಥಾನಕ್ಕೆ ಮೂರು ಜನರನ್ನು ಚುನಾಯಿಸಿ ಕಳುಹಿಸುವರು. ಉಳಿದ ಒಂದು ಸ್ಥಾನಕ್ಕೆ ಅಲ್ಲಿನ ಪ್ರಧಾನ ಮಂತ್ರಿಗಳಾದ ಮೈಸೂರಿನ ಶ್ರೀ|| ಎಂ. ಎ. ಶ್ರೀನಿವಾಸನ್‌ರವರು ಗ್ವಾಲಿಯರ್ ಮಹಾರಾಜರಿಂದ ನೇಮಿಸಲ್ಪಡುವರು.

ಮೈಸೂರಿನವರು ಹೊರಗಿನ ದೇಶಗಳಿಗೆ ಹೋಗಿ ಅಲ್ಲಿನ ರಾಜರುಗಳ ಮೂಲಕ ರಾಜ್ಯಾಂಗ ಸಭೆಗೆ ಕಳುಹಿಸಲ್ಪಡುತ್ತಿರುವರು. ಅಲ್ಲದೆ ಪ್ರಜೆಗಳಿಂದ ಚುನಾಯಿತರಾದ ನವರೂ ಸಹ ಆ ಸಭೆಗೆ ಹೋಗುತ್ತಿರುವರು. ಆದರೆ ಮೈಸೂರು ಮಾತ್ರ ಇನ್ನೂ ಈ ಬಗ್ಗೆ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳದಿರುವುದು ಆಶ್ಚರ್ಯಕರವಾಗಿದೆ. ನಮ್ಮ ಸಂಸ್ಥಾನದ ನಿವೃತ್ತ ಸಚಿವರೂ ಗ್ವಾಲಿಯರಿನ ಮಾಜಿ ಪ್ರಧಾನಿಗಳೂ ಆದ ರಾಜಮಂತ್ರಪ್ರವೀಣ ಶ್ರೀ|| ಎಸ್. ಪಿ. ರಾಜಗೋಪಾಲಾಚಾರಿಯವರೂ ಸಹ ಇದಕ್ಕಾಗಿ ಬಹಳ ಪರಿತಾಪವನ್ನು ವ್ಯಕ್ತಪಡಿಸಿರುತ್ತಾರೆ.

ಮೈಸೂರು ಸಂಸ್ಥಾನವು ಭಾರತ ಯೂನಿಯನ್ನಿನಲ್ಲಿ ಸೇರುವುದಾಗಿಯೂ, ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದಾಗಿಯೂ ಕೂಡಲೇ ಘೋಷಣೆಯೊಂದನ್ನು ಹೊರಡಿಸಬೇಕೆಂದು ಕಾಂಗ್ರೆಸ್ ನಾಯಕರಾದ ಶ್ರೀ|| ಕೆ. ಟಿ. ಭಾಷ್ಯಂ ಮತ್ತು ಹೆಚ್. ಸಿ. ದಾಸಪ್ಪ ಮುಂತಾದವರುಗಳು ಒತ್ತಾಯಪಡಿಸುತ್ತಿದ್ದಾರೆ. ಹೊಸ ಸ್ಥಾನದಲ್ಲಿ ಜವಾಬ್ದಾರೀ ಸರ್ಕಾರಕ್ಕಾಗಿ ದಿವಾನರು ಸೂಚನೆ ಕೊಡುವುದು ನಿಜವಾದರೆ ಈಗಿನಿಂದಲೇ ಮಂತ್ರಿ ಮಂಡಲವು ಅದಕ್ಕನುಗುಣವಾಗಿ ಪುನರ್ರಚನೆ ಹೊಂದಬೇಕೆಂದು ಶ್ರೀ|| ಟಿ. ಸುಬ್ರಹ್ಮಣ್ಯಂರವರು ಹೇಳುತ್ತಾರೆ.

ಆದರೆ ಮೇಲ್ಕಂಡ ಸಲಹೆಗಳಿಗೆ ಅನುಗುಣವಾಗಿ ಯಾವ ಕಾರ್ಯಕ್ರಮವೂ ಇದುವರೆಗೆ ನಡೆದಂತೆ ಕಾಣುವುದಿಲ್ಲ. ದಿವಾನರು ಇನ್ನೂ ತಮ್ಮ ಮಾತುಕತೆಗಳನ್ನು ಮುಗಿಸಿರುವುದಿಲ್ಲ. ಅವರು ಭೇಟಿ ಮಾಡಬೇಕಾದವರ ಪಟ್ಟಿಯು ಇನ್ನೂ ಮುಗಿದಿಲ್ಲವೆಂದು ಹೇಳಲಾಗಿದೆ. ಇದರಿಂದ ಮಹಾಜನರ ಮನಸ್ಸಿನಲ್ಲಿ ವಿಶೇಷ ಕುತೂಹಲಕ್ಕೆ ಕಾರಣವಾಗಿರುತ್ತದೆ. ದಿವಾನರು ಈ ಮಾತುಕತೆಗಳನ್ನು ಇನ್ನಾದರೂ ಮುಕ್ತಾಯ ಮಾಡಿ ಮೈಸೂರಿನಿಂದ ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಆರಿಸಲು ಉಭಯ ಶಾಸನ ಸಭೆಗಳ ಜಂಟಿ ಅಧಿವೇಶನವನ್ನು ಕೂಡಲೇ ಕರೆಯಬೇಕೆಂದು ನಾವು ಕೋರುತ್ತೇವೆ.

ಜರ್ಮನೀ ಕಾರೀಕು ಪೈಸರಾಯರು ಹೊರಡಿಸಲಿರುವ ಬ್ರಿಟಿಷ್ ಸರ್ಕಾರದ

Edited, printed and published by A. M. Hegeraian at the Sadhvi ... Road.

ಕರೀ ಮನುಷ್ಯರನ್ನು ಬೆಳ್ಳಗೆ ಮಾಡಲಾಗುವುದು

ಅಮೆರಿಕದ ವೈಜ್ಞಾನಿಕರು ಕರೀ ಬಣ್ಣದ ನೀಗ್ರೋಗಳನ್ನು ಬಿಳಿ ಬಣ್ಣಕ್ಕೆ ಪರಿವರ್ತಿಸುವ ಕಾರ್ಯದಲ್ಲಿ ಜಯಪ್ರದರಾಗಿದ್ದಾರೆ. ಪ್ರೊ|| ಸ್ಟಿರೋಕೌರ್ ಎಂಬ ಪ್ರಖ್ಯಾತ ಅಮೆರಿಕನ್ ವೈಜ್ಞಾನಿಕರು ಅನೇಕ ನೀಗ್ರೋಗಳನ್ನು ಬಿಳಿಯರನ್ನಾಗಿ ಮಾಡಿದ್ದಾರೆ. ಅಲ್ಲದೆ ಬೇರೆ ಬೇರೆ ಬಣ್ಣಕ್ಕೂ ಪರಿವರ್ತಿಸಬಹುದೆಂದು ಅವರು ಕಂಡು ಹಿಡಿದಿದ್ದಾರೆ.

ಹೇಳಿಕೆಯನ್ನು ಪರಿಶೀಲಿಸಲು ದಿವಾನರು ದೆಹಲಿಗೆ ಕರೆಯಲ್ಪಟ್ಟಿರುವುದೇನೋ ನಿಜ; ಆದರೆ ಶ್ರೀ|| ಭಾಷ್ಯಂರವರು ಹೇಳಿರುವಂತೆ ಇಂತಹ ಹೇಳಿಕೆಗಳಿಗಾಗಿ ಕಾದು ಕುಳಿತಿರುವುದು ಸರ್ವಥಾ ಸರಿಯಲ್ಲ. ಈ ದೇಶವನ್ನೇ ಬಿಟ್ಟು ಹೋಗಲಿರುವ ಪರಕೀಯರ ಹೇಳಿಕೆಗಿಂತಲೂ, ಸ್ಥಳದಲ್ಲಿಯೇ ಇದ್ದು ಮುಂದೆ ಪ್ರಭುತ್ವದವರ ಮತ್ತು ಇಡೀ ದೇಶದ ಕಷ್ಟ ಸುಖಗಳಿಗೆ ಉತ್ತರವಾದಿಗಳಾಗಿರುವವರ ಕೋರಿಕೆಯಂತೆ ಇನ್ನಾದರೂ ವರ್ತಿಸಲು ಆರಂಭಿಸುವುದು ಯುಕ್ತವಾದ ಮಾರ್ಗವಾಗಿರುತ್ತದೆ.

ಶ್ರೀ
ಗಣೇಶಾ ಟಾಕೀಸ್
21-5-47 ರಿಂದ ಅಮೋಘವಾದ
3 ನೇ ವಾರ
ಪ್ರತಿ ದಿನ 2 ಆಟಗಳು 6 ಮತ್ತು 9-15 ಕ್ಕೆ
ಜೆಮಿನಿಯವರ
ಬಾಲ-
-ನಾಗಮ್ಮ
(ತೆಲುಗು)

ನವಖಲಿ ಯಾತ್ರೆ

ಲೇಖಕರು :- ಶ್ರೀ ಎಂ. ಶ್ಯಾಮಸುಂದರ್ ಭಾರದ್ವಾಜ್. ಪ್ರಕಾಶಕರು - ಬಸವನಗುಡಿಯಲ್ಲಿರುವ ಆಜ಼ಾದ್ ಪಬ್ಲಿಕೇಷನ್ಸಿನವರು. ಬೆಲೆ ೮ ಆಣೆ.

ಹಿಂದೂ ಮತ್ತು ಮುಸ್ಲಿಮರ ವೈಷಮ್ಯ ಸ್ವಭಾವತಃ ಇರುವ ಚಾಳ್ಯವಲ್ಲ. ಅದನ್ನು ಬಿತ್ತಿದವರು ಬ್ರಿಟಿಷರೇ. ನಾಳೆ ಭಾರತದಲ್ಲಿ ಬ್ರಿ|| ಸೇನೆಗಳು ಉಳಿಯುವುದಾದರೂ ಈ ವಿಷ ಬೀಜದ ಪ್ರತಿಫಲದಿಂದಲೇ ಎನ್ನಬಹುದು. ಕೋಮುವಾರು ವೈಷಮ್ಯವನ್ನು ತೊಲಗಿಸುವ ರಚನಾತ್ಮಕ ಉದ್ದೇಶದಿಂದ ಗಾಂಧೀಜಿ ನವಖಲಿ ಕಾಲ್ನಡಿಗೆ ಯಾತ್ರೆ ಕೈಕೊಂಡುದನ್ನೂ ಅವರ ಆ ಪ್ರವಾಸದಲ್ಲಿ ನಡೆದ ಹಲವು ಸ್ವಾರಸ್ಯ ಘಟನೆಗಳನ್ನೂ ಪರಿಚಯ ಮಾಡಿ ಕೊಡುವುದೇ ಈ ಪುಸ್ತಕದ ಉದ್ದೇಶವೆಂದು ಲೇಖಕರು ತಿಳಿಸಿದ್ದಾರೆ.

ಶ್ರೀ ಭಾರದ್ವಾಜರವರ ನೂತನ ಉದ್ಯಮವನ್ನು ನಾವು ಆದರದಿಂದ ಸ್ವಾಗತಿಸಿ ಅವರಿಗೆ ಯಶಸ್ಸನ್ನು ಕೋರುತ್ತೇವೆ.

ನಾಯಿಕೆಮ್ಮಿನ ಔಷಧಿ
7—8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.
ಕ್ರಯ ಬಾಟ್ಲಿಗೆ 1-8-0
ಗೂರ್ಲು—ಉಬ್ಬಸಕ್ಕೆ
(Asthma)
ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ.
(Appendecitis) ಗುಲ್ಮಶೂಲೆ ಮತ್ತು (Tonsils) ಗಲಾಯುಗಳು ಅವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ.
ಗುಂಡ್ಲುಪೇಟೆ ಆರ್. ಎಸ್. ಪಂಡಿತರು, ದಿವಾನ್ಸ್‌ರೋಡ್, ಗೊಲ್ಲಗೇರಿ ಮೈಸೂರು.

ಬಂಗಾಳಾ ವಿಭಜನೆಗೆ ಶರತ್ ಬೋಸರ ಬೆಂಬಲ

ಮೊದಲು ಬಂಗಾಳದ ವಿಭಜನೆಯು ಬಾರದೆಂದು ವಾದಿಸುತ್ತಿದ್ದ ಶ್ರೀ ಶರತ್‌ಚಂದ್ರಬೋಸರು ವಿಭಜನೆಯು ಅನಿವಾರ್ಯವೆಂದೂ, ತಾವು ಅಖಂಡ ಬಂಗಾಳದ ... ನೆಗೆ ಒಪ್ಪುವುದಿಲ್ಲವೆಂದೂ ಹೇಳಿರುವುದಾಗಿ ವರದಿಯಾಗಿದೆ.

ಪೆಟ್ರೋಲಿಯಮ್ಮಿನಿಂದ ವಿ...

ಗ್ಲೋಬ್] ನ್ಯೂಯಾರ್ಕ್ (...

ಟೆಕ್ಸಾಸಿನ ವಿಶ್ವವಿದ್ಯಾಲಯದ ಡಾ|| ...ಸ್ತ್ರ ಜ್ಞರು ಪೆಟ್ರೋಲಿಯಮ್ಮಿನಿಂದ ವಿ...ಯನ್ನು ತಯಾರಿಸಬಹುದೆಂದು ಕಂಡು ಹಿಡಿದಿದ್ದಾರೆ. ಇದರ ಸೇವನೆಯಿಂದ ಮ... ಬರುವುದಿಲ್ಲವೆಂದೂ, ದೇಹದ ಮೇಲೆ ... ವ ಬಗೆಯ ತೊಂದರೆಯೂ ಆಗುವು...ವೆಂದೂ ಅವರು ತಿಳಿಸಿದ್ದಾರೆ.

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!
ಮೈಸೂರು
ಸ್ಯಾಂಡಲ್
ಸೋಪ್
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿ.
ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಗರ್ಭ ರಕ್ಷಿಣಿ
ಅನೇಕರ ಅನುಭವ ಸಿದ್ಧವಾದ ಔಷಧಿ
ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸುಲಭವಾಗಿ ಪ್ರಸವವಾಗುವುದು.
ಆಯುರ್ವೇದ ವೈದ್ಯ ಭೂಷಣ
ಪಂಡಿತ್ ಕೆ. ವಿ. ವೆಂಕಟರಾಮಯ್ಯ.
ಡಿ|| ಬೋರ್ಡ್ ವೈದ್ಯ, ಅರಕಲವಾಡಿ.
ಚಾಮರಾಜನಗರ ತಾ||

ಸಾಧ್ವಿ
ಅದೆ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

18-5-47 ನೇ ತಾ|| ನಿಂದ ಜನಭರಿತವಾದ 3 ನೇ ವಾರ
ವುಡ್‌ಲ್ಯಾಂಡ್ಸ್ ಟಾಕೀಸ್, ಮೈಸೂರು.
'ನಾಮ್ ಇರುವರ್' (ತಮಿಳು)
ಪ್ರತಿ ದಿನ ಮೂರು ಆಟಗಳು
ತಾರಾಗಣ:- ಟಿ. ಆರ್. ಮಹಾಲಿಂಗಂ, ಟಿ. ಎ. ಜಯಲಕ್ಷ್ಮಿ ಮತ್ತು ಬೇಬಿ ಕಮಲ

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್
ಅಶೋಕಾ ರಸ್ತೆ, ಮೈಸೂರು : : ಫೋನ್ 411
ಚಿನ್ನ, ಬೆಳ್ಳಿ, ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಯಲ್ಲಿ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.
ಕೆ. ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್

ರಾಜಕಮಲ್, ಮೈಸೂರು
ತಾ|| ೧೬-೫-೪೭ ರಿಂದ ನಾಲ್ಕನೇ ವಾರ - ಪ್ರತಿ ದಿನ ೨ ಆಟಗಳು
'ಗೊಲ್ಲಭಾಮ' (ತೆಲುಗು)
ತಾರಾಗಣ:— ಕೃಷ್ಣವೇಣಿ, ರಘುರಾಮಯ್ಯ, ಅಂಜಲಿದೇವಿ

ರೋ. ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೨೨—೫—೪೭ [ಸಂಚಿಕೆ ೨೪೬

ಒಬ್ಬರೇ ವೈಸರಾಯ್
೨ ಡೊಮಿನಿಯನ್‌ಗಳು

ಹೈದರಾಬಾದು ಪಾಕಿಸ್ತಾನಕ್ಕೆ ಸೇರುವುದೇ?

ಪ್ರ, ಸ್ವಾತಂತ್ರ್ಯ ರಕ್ಷಣೆಗಾಗಿ ಸೈನ್ಯವು ಬೇಕೆಂದು ಪ್ರಾರ್ಥಿಸಿದ್ದ ಹೈದರಾಬಾದು ನಿಜಾಮರ ಬೇಡಿಕೆಗೆ ಬ್ರಿಟಿಷರ ಅನುಮತಿ ದೊರೆಯದಿರುವುದೂ, ಅಲ್ಲಿನ ಪ್ರಧಾನರಾದ ಸರ್ ಮಿರ್ಜಾರವರ ರಾಜೀನಾಮೆಯೂ ಹೈದರಾಬಾದು ಪಾಕಿಸ್ತಾನಕ್ಕೆ ಸೇರುವುದೆಂದು ಊಹಿಸಲು ಕಾರಣವಾಗಿದೆಯೆಂದು ವರದಿಯಾಗಿದೆ

ಹೊಟ್ಟೆಯಲ್ಲಿದ್ದ ಆಭರಣ ಪತ್ತೆಯಿಲ್ಲ

ಬ ... ಶಾಕಿಗಳು ... ನವಲು ಎಕ್ಸರೇ ಮೂಲಕ ಪರೀಕ್ಷಿಸಿ ಕಳ್ಳನೊಬ್ಬನ ಹೊಟ್ಟೆಯಲ್ಲಿ ಅವನು ನುಂಗಿದ್ದ ಚಿನ್ನದ ಹಾರವು ಕಂಡುಬಂದಿತು. ಅದನ್ನು ತೆಗೆಯಲು ಔಷಧಿ ಕೊಟ್ಟರೂ ಯಾವ ಪ್ರಯೋಜನವೂ ಆಗಲಿಲ್ಲ. ಮತ್ತೆ ಪುನಃ ಎಕ್ಸರೇ ಮೂಲಕ ನೋಡಲಾಗಿ ಆ ಹಾರವೇ ಪತ್ತೆಯಿಲ್ಲವಾಗಿದೆ.

ಶಿಕ್ಷಣ ಸಂಸ್ಥೆಗಳ ಮೇಲೆ ಧ್ವಜ ಹಾರಿಸಕೂಡದು

ಶಿಕ್ಷಣ ಸಂಸ್ಥೆಗಳ ಮೇಲೆ ಯೂನಿಯನ್ ಧ್ವಜವನ್ನು ಹಾರಿಸುತ್ತಿದ್ದುದನ್ನು ವಿದ್ಯಾರ್ಥಿಗಳು ವಿರೋಧಿಸಿದುದರಿಂದ ಒರಿಸ್ಸಾ ಸರ್ಕಾರದವರು ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳ ಮೇಲೆ ಯಾವ ಬಗೆಯ ಧ್ವಜವನ್ನೂ ಹಾರಿಸಕೂಡದೆಂದು ಆಜ್ಞೆ ಮಾಡಿರುತ್ತಾರೆ

ಸೂರು ಕೋ-ಆಪರೇಟಿವ್ ಸೊಸೈಟಿ
ಡೈರೆಕ್ಟರುಗಳ ಚುನಾವಣೆ

23-5-47 ಭಾನುವಾರ

ನಡೆಯಲಿರುವ ಸೊಸೈಟಿಯ ಡೈರೆಕ್ಟರುಗಳ ಸ್ಥಾನಕ್ಕೆ ಈ ಕೆಳಗೆ ಕಂಡವರನ್ನು ಚುನಾಯಿಸಬೇಕಾಗಿ ವಿನಂತಿ:—

ಗಣದ

ಸಿ. ರಂಗರಾಮಯ್ಯ,
ಸಿ. ರಂಗಯ್ಯ,
ಅಪಳ್ಳಿ ಸೀತಾರಾಮಯ್ಯ,
ಕೃಷ್ಣಮೂರ್ತಿ ರಾವ್,
ಎಸ್ ಜೋಯಿಸ್,
ಲಿಂಗಪ್ಪಯ್ಯ,
ಲಿಂಗಣ್ಣ,
ವೆಂಕಟೇಶ್ವರರಾವ್
ಎಸ್. ನಂಜಪ್ಪ,
ಎ. ಕೃಷ್ಣಮೂರ್ತಿ,
ಎಸ್. ತಾಂಡವಮೂರ್ತಿ,
ಶೇಷಗಿರಿ ರಾವ್,
ಜಿ. ನರಸಿಂಹ ಮೂರ್ತಿ,
ಕೃಷ್ಣಮೂರ್ತಿ,
ರಂಗಯ್ಯ ಶೆಟ್ಟಿ,

—ಸೊಸೈಟಿಯ ಹಿತೈಷಿಗಳು

ಸ್ಕೂಲ್ ಫೈನಲ್ ಪರೀಕ್ಷೆ ಫಲಿತಾಂಶ

ಮೈಸೂರು ೨೨

ಈ ದಿನ ಬೆಳಗ್ಗೆ ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶಗಳು ಪ್ರಕಟವಾಗಿವೆ. ಅವುಗಳ ಪಟ್ಟಿಯನ್ನು ಕಾರ್ಯಾಲಯದಲ್ಲಿ ಬಂದು ನೋಡಬಹುದು

ಭಾವಸಾರ ವಿದ್ಯಾರ್ಥಿ ನಿಲಯ

ರಾಜಧಾನಿಯ ಲಿಂಗೋಜಿರಾವ್ ರಾಮರಾವ್ ಉತ್ತರ್‌ಕರ್ ಭಾವಸಾರ ಕ್ಷತ್ರಿಯ ಉಚಿತ ವಿದ್ಯಾರ್ಥಿ ನಿಲಯವು ಜೂನ್ ೧ನೇ ತಾರೀಖು ತೆರೆಯುವುದು. ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಓದತಕ್ಕ ಬಡ ಭಾವಸಾರ ಕ್ಷತ್ರಿಯ ವಿದ್ಯಾರ್ಥಿಗಳಿಗೆ ಅದರಲ್ಲಿ ಪ್ರವೇಶ ದೊರೆಯುವುದು. ನಿಲಯಕ್ಕೆ ಸೇರಲಪೇಕ್ಷಿಸುವವರು ಜೂನ್ ೭ನೇ ತಾರೀಖಿನೊಳಗೆ ವಿಧಾಯಕರ್ ಘಂಟಿ ಮನೆಯಲ್ಲಿ ಸದರಿ ನಿಲಯದ ಅಧ್ಯಕ್ಷರಾದ ಯು. ಎಲ್ ರಾಮಚಂದ್ರರಾವ್ ಪ್ರೊಪ್ರೈಟರ್, ಶ್ರೀ ರಾಜರಾಜೇಶ್ವರಿ ಹಾಲ್, ಮೈಸೂರು ಇವರಿಗೆ ಅರ್ಜಿ ಹಾಕಿಕೊಳ್ಳಬಹುದು.

ಆಗಮ ಸಮ್ಮೇಳನಕ್ಕೆ ಹೋಗಲು ಅನುಮತಿ

ಇದೇ ೨೫ ರಿಂದ ೩೦ನೇ ತಾ॥ ವರೆಗೆ ಶಿವಮೊಗ್ಗೆಯಲ್ಲಿ ನಡೆಯುವ ಆಗಮ ಸಮ್ಮೇಳನದಲ್ಲಿ ಭಾಗವಹಿಸಲು ಮುಜರಾಯಿ ಇಲಾಖೆಗೆ ಸೇರಿದ ಎಲ್ಲ ಅರ್ಚಕ ಮತ್ತು ಆಗಮಿಕರುಗಳಿಗೂ ಅನುಮತಿ ದೊರೆತಿದೆ. ಅವರು ತಮ್ಮ ಸ್ವಂತ ಖರ್ಚಿನಿಂದ ಹೋಗಬೇಕಾಗುವುದು. ಅವರಿಗೆ ೨೫ನೇ ತಾ॥ ನಿಂದ ಜೂನ್ ೧ನೇ ತಾರೀಖಿನವರೆಗೆ ರಜಾ ಕೊಟ್ಟು ಕೆಲಸದ ಮೇಲಿದ್ದಂತೆಯೇ ಭಾವಿಸಲಾಗುವುದು ಎಂಬುದಾಗಿ ಸರ್ಕಾರಿ ಪ್ರಕಟಣೆಯೊಂದು ತಿಳಿಸಿರುತ್ತದೆ.

ಮಣಿಪುರವನ್ನು ಬರ್ಮಾಕ್ಕೆ ಸೇರಿಸಕೂಡದು

ಮಣಿಪುರವನ್ನು ಬರ್ಮಾ ದೇಶಕ್ಕೆ ಸೇರಿಸಕೂಡದು. ಅಲ್ಲಿನ ಜನರು ಅದನ್ನು ವಿರೋಧಿಸುತ್ತಾರೆ ಮಣಿಪುರದ ಜನ ಹಿಂದುಗಳು ಅದು ಹಿಂದೂ ಸಂಸ್ಥಾನ ಭಾಷೆ, ಕಲೆ, ಮತ, ಸಂಸ್ಕೃತಿಗಳಲ್ಲಿ ಬರ್ಮಕ್ಕೂ ಇಲ್ಲಿಗೂ ಯಾವ ಸಂಬಂಧವೂ ಇರುವುದಿಲ್ಲ ಆದುದರಿಂದ ಮಣಿಪುರವು ಭಾರತ ಯೂನಿಯನ್ನಿಗೇ ಸೇರಬೇಕು—ಎಂದು ಅಲ್ಲಿನ ಕಾಂ॥ ಕಾರ್ಯಕಾರಿ ಮಂಡಳಿಯ ಸದಸ್ಯರುಗಳು ಹೇಳುತ್ತಾರೆ

ಭಾರತದಲ್ಲಿ ಎರಡು ಡೊಮಿನಿಯನ್ ಸರ್ಕಾರಗಳೇ?

ಇನ್ನು ಮುಂದೆ ಭಾರತ ಕೇಂದ್ರ ಸರ್ಕಾರವನ್ನು ಪುನರ್‌ರಚನೆ ಮಾಡಿ ಶಾಸನ ಬದ್ಧರಾದ ಒಬ್ಬರೇ ಗವರ್ನರ್ ಜನರಲ್ಲರ ಅಧೀನದಲ್ಲಿ ಡೊಮಿನಿಯನ್ ಅಂತಸ್ತಿನ ಎರಡು ಮಂತ್ರಿ ಮಂಡಲಗಳನ್ನು ರಚಿಸಲಾಗುವುದೆಂದು ದೆಹಲಿಯಿಂದ ವಾರ್ತೆಯು ಬಂದಿರುತ್ತದೆ ಎಲ್ಲಾ ಇಲಾಖೆಗಳಿಗೂ ಮಂತ್ರಿಗಳು ಈ ಎರಡು ಸರ್ಕಾರಗಳಲ್ಲಿಯೂ ಇರುವರು ಅಕ್ಟೋಬರ್ ತಿಂಗಳ ಅಂತ್ಯದವರೆಗೆ ಎರಡು ಸರ್ಕಾರಗಳ ಸಮಿತಿಗಳು ಜತೆಗೆ ಕೆಲಸ ಮಾಡುವುವು ನವೆಂಬರಿನಿಂದ ಅವು ಸ್ವತಂತ್ರವಾಗಿ ವರ್ತಿಸುವುವು ಹಿಂದೂಸ್ಥಾನ ಮತ್ತು ಮುಸ್ಲಿಮರು ಬಹುಸಂಖ್ಯಾತರಾಗಿರುವ ಪ್ರದೇಶಗಳಿಗೆ ಪ್ರತ್ಯೇಕ ರಾಜ್ಯಾಂಗಗಳನ್ನು ರಚಿಸಲು ಜೂನ್ ೨ನೇ ತಾರೀಖು ಹೊರಡಲಿರುವ ಬ್ರಿಟಿಷ್ ಸರ್ಕಾರದ ಹೇಳಿಕೆಯಲ್ಲಿ ಅವಕಾಶ ಕಲ್ಪಿಸಲಾಗುವುದೆಂದು ವರದಿಯಾಗಿದೆ ಅಲ್ಲದೆ ಈಗಿರುವ ಕೇಂದ್ರ ಶಾಸನ ಸಭೆಯನ್ನು ರದ್ದು ಮಾಡಿ ಅದರ ಸ್ಥಾನದಲ್ಲಿ ಪ್ರತ್ಯೇಕ ಎರಡು ರಾಜ್ಯಾಂಗ ಸಭೆಗಳೇ ಕೆಲಸ ಮಾಡುವಂತೆ ಏರ್ಪಡಿಸಲಾಗುವುದೆಂದೂ ಸಹ ಹೇಳಲಾಗಿದೆ

ಸ್ಕೂಲ್ ಫೈನಲ್ಸ್ ಪರೀಕ್ಷೆಯ ಮೊದಲನೇ ೫ ಸ್ಥಾನಗಳು

ಸ್ವಂ ಸು ಪ್ರೋ] ಬೆಂಗಳೂರು ೨೨

ಭದ್ರಾವತಿ ಹೈ ಸ್ಕೂಲಿನ ಕೆಚ್ ವಿ ನರಸಿಂಹಮೂರ್ತಿ, ತೀರ್ಥಹಳ್ಳಿ ಗೌ॥ ಹೈಸ್ಕೂಲ್ ಎಂ ಎಸ್ ಕೃಷ್ಣಮೂರ್ತಿ, ಮಲ್ಲೇಶ್ವರಂ ಗೌ॥ ಹೈ ಸ್ಕೂಲ್ ವಿ ಸುಂದರ ಕೃಷ್ಣನ್, ಬೆಂಗಳೂರು ಎಸ್ ಎಲ್ ಎನ್ ಹೈಸ್ಕೂಲ್ ಹೆಚ್ ಆರ್ ರಾಮಾಚಾರಿ ಮತ್ತು ಮೈಸೂರು ಶಾರದಾವಿಲಾಸ ಹೈ ಸ್ಕೂಲಿನ ಕೆ ವಿ ಕೃಷ್ಣಮೂರ್ತಿ—ಇವರುಗಳು ಳೆದ ಸ್ಕೂಲ್ ಫೈನಲ್ಸ್ ಪರೀಕ್ಷೆಯಲ್ಲಿ ಮೊದಲನೇ ೫ ಸ್ಥಾನಗಳನ್ನು ಪಡೆದಿರುವರು

ಕೊಲೆಪಾತಕನ ಪತ್ತೆಗಿರಿಯೇ?

ಮಹಾತ್ಮನ ಆರ್ ಜೆ ಹಿಲ್ಟನ್ ಎಂಬ ವಿರೋಸ್ಟ್ ಗೃಹಸ್ಥರನ್ನು ಕೊಲೆ ಮಾಡಿದ ಗುಮಾಸ್ತೆಯ ಮೇಲೆ ದಂಡಿನ ಪೋಲೀಸಿನವರು ಬೆಂಗಳೂರು ಊಟಿನಲ್ಲಿ ಅತ್ಯಂತ ಸಾಹಸದಿಂದ ಒಬ್ಬಾತನನ್ನು ದಸ್ತಗಿರಿ ಮಾಡಿರುವರೆಂದು ತಿಳಿದು ಬಂದಿದೆ ಅವನ ಬಳಿ ಒಂದು ರಿವಾಲ್ವರೂ ಮತ್ತು ಇತರ ಆಯುಧಗಳೂ ಇದ್ದುವೆಂದು ಗೊತ್ತಾಗಿದೆ

ತಿರುಪತಿ ದೇವಾಲಯ ಪ್ರವೇಶಕ್ಕೆ ತಡೆ

ಹರಿಜನರು ತಿರುಪತಿ ದೇವಾಲಯದೊಳಗೆ ಪ್ರವೇಶಿಸಲು ಮದರಾಸ್ ಸರ್ಕಾರದವರು ಕೊಟ್ಟಿರುವ ಆಜ್ಞೆಯನ್ನು ರದ್ದು ಮಾಡಿಸಲು ಕಲ್ಯತ್ರಿಯ ಪ್ರೊಫೆಸರ್ ಅನಂತಕೃಷ್ಣ ಶಾಸ್ತ್ರಿಗಳವರು ಚಿತ್ತೂರ್ ಸಬ್ ಕೋರ್ಟಿನಲ್ಲಿ ಶಾಶ್ವತವಾದ ತಡೆ ಆಜ್ಞೆಯನ್ನು ಪಡೆಯಲು ಮೊಕದ್ದಮೆ ಹೂಡಿರುವರು. ಇದು ಇತ್ಯರ್ಥವಾಗುವುದಕ್ಕೆ ಮುಂಚೆ ತಾತ್ಕಾಲಿಕವಾದ ತಡೆ ಆಜ್ಞೆಯನ್ನು ಕೊಡಬೇಕೆಂದು ಮದರಾಸ್ ಹೈಕೋರ್ಟಿನಲ್ಲಿ ಬಂದಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಸಜಬುದ್ದೀನರವರು ಎತ್ತಿ ಹಿಡಿದು ಈ ವ್ಯವಹಾರವು ಇತ್ಯರ್ಥವಾಗುವವರೆಗೆ ಹರಿಜನರನ್ನು ದೇವಾಲಯದೊಳಗೆ ಬಿಡಲಾಗದೆಂದು ದೇವಸ್ಥಾನದ ಸಮಿತಿಯವರಿಗೆ ಆಜ್ಞೆ ಮಾಡಿರುತ್ತಾರೆ ಮೊಕದ್ದಮೆಯನ್ನು ಬೇಗನೆ ಇತ್ಯರ್ಥ ಪಡಿಸುವಂತೆ ಚಿತ್ತೂರು ಕೋರ್ಟಿಗೂ ಅವರು ಸೂಚನೆ ಕೊಟ್ಟಿರುತ್ತಾರೆ.

೩॥ ಲಕ್ಷ ರೂ. ಬೆಲೆ ಬಾಳುವ ಚಿನ್ನದ ಅಪಹರಣ

ಕಲ್ಕತ್ತೆಯ ಬಾಮಾ ಬಜಾರಿನಲ್ಲಿ ೩॥ ಲಕ್ಷದ ತೊಲ ಚಿನ್ನದ ದರೋಡೆಯು ನಡೆದಿರುವುದಾಗಿ ವರದಿಯಾಗಿದೆ ಬೊಂಬಾಯಿಯಿಂದ ವರ್ತಕನೊಬ್ಬನು ವಿಮಾನದಲ್ಲಿ ಕಲ್ಕತ್ತೆಗೆ ೩॥ ಲಕ್ಷದ ತೊಲೆ ಚಿನ್ನವನ್ನು ತಂದು ಜೀಪ್ ಗಾಡಿಯಲ್ಲಿ ಮನೆಗೆ ಸಾಗಿಸಿಕೊಂಡು ಹೋಗುತ್ತಿದ್ದಾಗ ಇಬ್ಬರು ಕಾರಿನಿಂದ ಅವನನ್ನು ಹಿಂಬಾಲಿಸಿ ತಡೆದು ಬಂದೂಕಿನಿಂದ ಹೆದರಿಸಿ ೩॥ ಲಕ್ಷ ರೂ ಬಾಳುವ ಅದನ್ನು ಅಪಹರಿಸಿಕೊಂಡು ಪರಾರಿಯಾದರೆಂದು ತಿಳಿದು ಬಂದಿದೆ

ಲಂಡನ್ ಮಾತುಕತೆ

ವೈಸರಾಯರ ಸಲಹೆಗಳನ್ನು ಪರಿಶೀಲಿಸಲು ನಾಳೆ ಬ್ರಿಟಿಷ್ ಮಂತ್ರಿಮಂಡಲದ ವಿಶೇಷ ಸಭೆಯೊಂದು ಲಂಡನ್ನಿನಲ್ಲಿ ಸೇರುವುದೆಂದು ಹೇಳಲಾಗಿದೆ ಲಾರ್ಡ್ ಮೌಂಟ್ ಬ್ಯಾಟನ್ನರ ಯೋಜನೆಗೆ ಬ್ರಿ॥ ಸರ್ಕಾರದ ಸಮ್ಮತಿಯನ್ನು ಪಡೆಯುವುದೇ ಇದರ ಉದ್ದೇಶ ತಮ್ಮ ಕೆಲಸವನ್ನು ಮುಗಿಸಿಕೊಂಡು ವೈಸರಾಯರು ಸೋಮವಾರ ಹಿಂದಿರುಗಬಹುದೆಂದು ತಿಳಿದುಬಂದಿದೆ.

ಡಾ॥ ಬಂದೀಗೌಡರು ಉಪಾಧ್ಯಕ್ಷರು

ಸ್ವಂ.ಸ] ಶ್ರೀರಂಗಪಟ್ಟಣ ೨೧

ಈ ದಿನ ಇಲ್ಲಿನ ಪ್ರು. ಸಭಾ ಉಪಾಧ್ಯಕ್ಷತೆಗೆ ನಡೆದ ಚುನಾವಣೆಯಲ್ಲಿ ಡಾ॥ ಬಂದೀಗೌಡರ ೧೫ ಓಟುಗಳನ್ನು ಪಡೆದು ಜಯಶಾಲಿಗಳಾಗಿದ್ದಾರೆ ಅವರ ಪ್ರತಿ ಸ್ಪರ್ಧಿಗಳಾದ ಮಿ॥ ಅಬ್ದುಲ್ ರಹೀಂರವರ ಕೇವಲ ೪ ಓಟುಗಳನ್ನು ಪಡೆದರು

ನಿಧನ

ಸ್ವಂ ಸು] ಚಾಮರಾಜನಗರ ೨೦

ಇಲ್ಲಿನ ಬಹಳ ವರ್ತಕರಾದ ಶ್ರೀಯುತ ವೆಂಕಟಕೃಷ್ಣಶೆಟ್ಟಿಯವರು ಮೊನ್ನೆ ಹಠಾತ್ತನೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರ ಬಗ್ಗೆ ಸಂತಾಪ ಸೂಚಿಸಲು ಇಲ್ಲಿನ ಎಲ್ಲ ಜನರೂ ವರ್ತಕರೂ ಅಂಗಡಿಗಳನ್ನು ಮುಚ್ಚಿದ್ದರು.

ಸಾಧ್ವಿ

೨೨-೫-೪೭ ಗುರುವಾರ

ವಿಚ್ಛೇದನಕ್ಕಿಂತಲೂ ವಿಭಜನೆಯು ಲೇಸು

ಬ್ರಿಟಿಷರು ಬರುವ ವರ್ಷ ಭಾರತವನ್ನು ಬಿಟ್ಟು ಹೋಗುವುದಾಗಿ ಹೇಳುತ್ತಿರುವ ಈ ಸಮಯದಲ್ಲಿ ರಾಷ್ಟ್ರ ವಿಭಜನೆಯ ಪ್ರಸ್ತಾಪವು ಬಹಳವಾಗಿ ಎದ್ದಿರುತ್ತದೆ. ರಾಷ್ಟ್ರ ವಿಭಜನೆಯ ಪ್ರತಿಧ್ವನಿಯಾಗಿ ಪ್ರಾಂತ ವಿಭಜನೆಯ ವಾದವೂ ಸಹ ಹುಟ್ಟಿಕೊಂಡಿದೆ. ಈಗಿರುವ ಪ್ರಾಂತಗಳನ್ನು ಅನಾಮತ್ತಾಗಿ ಪಾಕಿಸ್ತಾನಕ್ಕೆ ಸೇರಿಸಿಕೊಳ್ಳಬೇಕೆಂದಿದ್ದ ಲೀಗಿನವರ ಆಶಯವು ಪ್ರಾಂತ ವಿಭಜನೆಯ ಸೂಚನೆಯಿಂದ ಮಣ್ಣುಪಾಲಾಗಿರುವಂತಿದೆ. ಆದುದರಿಂದ ಅವರು ರಾಷ್ಟ್ರ ವಿಭಜನೆಗೆ ಒತ್ತಾಯಪಡಿಸುತ್ತಿದ್ದರೂ ಪ್ರಾಂತ ವಿಭಜನೆಗೆ ಮಾತ್ರ ವಿರೋಧವನ್ನು ಸೂಚಿಸುತ್ತಿರುವರು.

ಈ ವಿಭಜನೆಯ ಗೊಂದಲವು ಎಲ್ಲ ಮೇರೆಗಳನ್ನೂ ಮೀರಿ ಹೋಗುತ್ತಿರುವಂತಿದೆ. ಸೈನ್ಯಗಳನ್ನೂ ಕೋಮುವಾರು ಪ್ರಮಾಣದಲ್ಲಿ ಇಬ್ಭಾಗ ಮಾಡಬೇಕೆಂದು ಜಿನ್ನಾರವರು ಹೇಳತೊಡಗಿದ್ದಾರೆ. ಅಲ್ಲದೆ ಪಾಕಿಸ್ತಾನಕ್ಕೆ ಪ್ರತ್ಯೇಕ ರಾಜ್ಯಾಂಗ ಸಭೆಯನ್ನು ರಚಿಸಬೇಕೆಂದೂ ಸಹ ಹೇಳುತ್ತಿದ್ದಾರೆ. ಇನ್ನೂ ಅವರ ಅಪೇಕ್ಷೆಗಳು ಎಲ್ಲಿಯವರೆಗೆ ಹೋಗುವುವೋ ತಿಳಿಯದು.

ಈ ಮಧ್ಯೆ ಸಿಖ್ ಜನಾಂಗದವರು ಪ್ರತ್ಯೇಕವಾದ ಪ್ರಾಂತವನ್ನು ಪಟಿಯಾಲಾ ಮಹಾರಾಜರ ನೇತೃತ್ವದಲ್ಲಿ ಸ್ಥಾಪಿಸಿಕೊಳ್ಳಲಿರುವರೆಂದೂ ಸಹ ಹೇಳಲಾಗಿದೆ. ಇನ್ನು ಸಂಸ್ಥಾನಗಳ ವಿಚಾರವನ್ನಂತೂ ಹೇಳಬೇಕಾಗಿಯೇ ಇಲ್ಲ. ಹಲವು ರಾಜರುಗಳು ಈಗಾಗಲೇ ಮುಂದುವರಿದು ರಾಜ್ಯಾಂಗ ಸಭೆಯಲ್ಲಿ ಸೇರಿ ಭಾರತ ಸ್ವಾತಂತ್ರ್ಯಕ್ಕೆ ಬೆಂಬಲವನ್ನು ನೀಡಿದ್ದಾರೆ. ಇತರರು ಹಿಂದು ಮುಂದು ನೋಡುತ್ತಿದ್ದಾರೆ. ಮುಂದೆ ಬರಲಿರುವ ಬ್ರಿಟಿಷ್ ಸರ್ಕಾರದ ಹೇಳಿಕೆಯನ್ನು ಹಲವರು ಕಾದು ಕುಳಿತಿದ್ದಾರೆ. ಅಂತಹವರು ತಮ್ಮ ಪಾಕಿಸ್ತಾನಕ್ಕೆ ಸೇರಲೆಂದು ಮಿ|| ಜಿನ್ನಾರವರು ಆಹ್ವಾನಿಸುವುದರಲ್ಲಿ ಆಶ್ಚರ್ಯವಿಲ್ಲ. ಹಲವು ಮುಸ್ಲಿಂ ಸಂಸ್ಥಾನಗಳು ಈಗಾಗಲೇ ಪಾಕಿಸ್ತಾನದಲ್ಲಿ ಸೇರುವ ಸೂಚನೆಯನ್ನು ಕೊಟ್ಟಿರುವುದಾಗಿ ವರದಿಯಾಗಿದೆ. ಈ ಅಭಿಮಾನವು ಇತರ ಸಂಸ್ಥಾನಗಳಿಗೆ ಇಲ್ಲದೆ ಹೋಗಿರುವುದು ವಿಷಾದಕರ. ರಾಜಾಸ್ಥಾನವೊಂದನ್ನು ನಿರ್ಮಿಸುವ ಪ್ರಯತ್ನವೂ ಸಹ ನಡೆಯುತ್ತಿರುವುದಾಗಿ ಹೇಳಲಾಗಿದೆ.

ಸದ್ಯದಲ್ಲಿಯೇ ಹೊರಡಲಿರುವ ಬ್ರಿಟಿಷ್ ಸರ್ಕಾರದ ಹೇಳಿಕೆಯಲ್ಲಿ ಯಾವ ವಿಧದಿಂದ ಬಗೆಯ ವಿಭಜನೆಯು ಇತ್ಯರ್ಥವಾದುದೆಂದು ಹೇಳಬಹುದು. ಇದೇ ರೀತಿ [illegible] ಲಕ್ಷಣಗಳು [illegible] ವಿಭಾಗಿಸಲಾಗದೆಂದೂ, [illegible] ದೇಶವು ಒಟ್ಟು ಒಂದು ಯೂನಿಯನ್ನಿನೊಳಗೆ ಸೇರಬೇಕೆಂದೂ ಬ್ರಿಟಿಷ್ [illegible] ಯೋಜನೆಯನ್ನು ಸೂಚಿಸಿದ್ದ [illegible] ಬ್ರಿಟಿಷ್ ಸರ್ಕಾರದವರು [illegible] ಬೆಂಬಲ ನೀಡುವರೆಂದು ಆಶಿಸಲಾಗಿದೆ. ಪ್ರಾಂತ ಅಥವಾ ಪ್ರದೇಶಗಳಲ್ಲಿ ಎಷ್ಟೇ ವಿಭಾಗಗಳಿದ್ದರೂ ಇಡೀ ದೇಶವು ಒಂದು ಸಂಯುಕ್ತ ಆಡಳಿತಕ್ಕೆ ಒಳಪಟ್ಟಿರಬೇಕೆಂದು [illegible] ಅಪೇಕ್ಷಿಸುತ್ತಿದ್ದಾರೆ. ಆದುದರಿಂದಲೇ ಪ್ರಾಂತ ವಿಭಜನೆಗೆ ರಾಷ್ಟ್ರನಾಯಕರ ಸಮ್ಮತಿಯು ದೊರೆತಿರುತ್ತದೆ. ವಿಚ್ಛೇದನಕ್ಕಿಂತಲೂ ವಿಭಜನೆಯು ಲೇಸೆಂಬುದೇ ದೇಶಾಭಿಮಾನಿಗಳು ಇಂದು ಅನುಸರಿಸುತ್ತಿರುವ ನೀತಿಯಾಗಿದೆ.

Edited, printed and published by A. R. Nag[illegible] at the Sadhvi [illegible] Publishing [illegible]

ಕಮಲಾಪ್ರೂಲ್

ಲೋಲಕ್ಕಗಳಿಗೆ!

ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸಿಗೆ ಭೇಟಿ ಕೊಡಿ

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ನಾಯಿಕೆಮ್ಮಿನ ಔಷಧಿ

7-8 ದಿವಸಗಳಲ್ಲೇ ಖಾತರಿಯಾಗಿ ವಾಸಿಯಾಗುತ್ತೆ.

ಕ್ರಯ ಬಾಟ್ಲಿಗೆ 1-8-0

ಗೂರಲು—ಉಬ್ಬಸಕ್ಕೆ (Asthma)

ಖಾತರಿಯಾದ ಔಷಧಿ ದೊರೆಯುತ್ತೆ. ಅನೇಕ ದೊಡ್ಡ ಮನುಷ್ಯರು ಬಂಗಾರದ ಪದಕ ಮತ್ತು ಸರ್ಟಿಫಿಕೇಟ್‌ಗಳನ್ನು ಕೊಟ್ಟಿದ್ದಾರೆ.

(Appendecitis) ಗುಲ್ಮಶೂಲೆ ಮತ್ತು (Tonsils) ಗಲಾಯುಕ ಅವುಗಳನ್ನು ಆಪರೇಷನ್ ಇಲ್ಲದೆ ಗುಣಪಡಿಸುತ್ತೆ. ಖುದ್ದು ಬಂದು ನೋಡಿ.

ಗುಂಡ್ಲುಪೇಟೆ ಆರ್ ಎಸ್ ಪಂಡಿತರು, ದಿವಾನ್ಸ್ ರೋಡ್, ಗೊಲ್ಲಗೇರಿ ಮೈಸೂರು

ದ|| ಆಫ್ರಿಕದ ಅನ್ಯಾಯವು ಮೂರನೇ ಯುದ್ಧಕ್ಕೆ ಮೂಲ

ಆಫ್ರಿಕದಲ್ಲಿ ಸ್ಮಟ್ಸರು ಪಾಶ್ಚಾತ್ಯ ನಾಗರಿಕತೆಯ ಧರ್ಮದರ್ಶಿಯಾಗಿದ್ದಾರೆ. ಅವರು ಆಫ್ರಿಕನರನ್ನೂ ಮತ್ತು ಏಷ್ಯದ ಪ್ರಜೆಗಳನ್ನೂ ತಿರಸ್ಕರಿಸದೆ ಈ ಮೂರು ಜನಾಂಗಗಳ ಪ್ರತಿನಿಧಿಗಳಂತೆ ವರ್ತಿಸಬೇಕು. ಈ ವಿಚಾರದಲ್ಲಿ ಅವರು ಅನ್ಯಾಯದಿಂದ ವರ್ತಿಸುವುದು ಮೂರನೆಯ ಯುದ್ಧಕ್ಕೆ ಕಾರಣವಾಗುವುದು-ಎಂದು ಮಹಾತ್ಮಾ ಗಾಂಧಿಯವರು ಹೇಳಿರುತ್ತಾರೆ.

ಮರುಭೂಮಿಯಲ್ಲಿ ವ್ಯವಸಾಯ ಸಂಶೋಧನೆ

ಕಾಶಿಯ ಹಿಂದೂ ವಿಶ್ವವಿದ್ಯಾಲಯದ ಶ್ರೀ ನಂದಲಾಲ ಶರ್ಮರವರು ತಮ್ಮ ದಳದೊಡನೆ ಬಿಕಾನೀರು ಸಂಸ್ಥಾನದ ಮರುಭೂಮಿಯಲ್ಲಿ ವ್ಯವಸಾಯ ಮಾಡುವ ಬಗ್ಗೆ ಸಂಶೋಧನೆಯನ್ನು ಕೈಗೊಂಡಿದ್ದಾರೆ.

ರಾಜಕಮಲ್

೨೩-೫-೪೭ ರಿಂದ ೪ ದಿನಗಳು

ಪ್ರತಿ ದಿನ ಬೆಳಗ್ಗೆ ೧೦-೩೦ ಗಂಟೆಗೆ

ಬಾಂಬೆ ಟಾಕೀಸಿನವರ

ನಿರ್ಮಲ [ಹಿಂದಿ

-:ಭೂಮಿಕೆ:-

ಅಶೋಕ ಕುಮಾರ್ ಮತ್ತು ದೇವಿಕಾರಾಣಿ

ಗರ್ಭರಕ್ಷಿಣಿ

ಅನೇಕರ ಅನುಭವ ಸಿದ್ಧವಾದ ಔಷಧಿ

ಇದರಿಂದ ಗರ್ಭದಲ್ಲಿರುವ ಮಗುವು ದೃಢವಾಗಿ ಬೆಳೆದು ಗರ್ಭಸ್ರಾವವಾಗುವುದನ್ನು ನಿಲ್ಲಿಸಿ ಪ್ರಸವ ಕಾಲದಲ್ಲಿ ಯಾವ ತೊಂದರೆಯೂ ಇಲ್ಲದೆ ಸರಾಗವಾಗಿ ಪ್ರಸವವಾಗುವುದು.

ಆಯುರ್ವೇದ ವೈದ್ಯ ಭೂಷಣ ಪಂಡಿತ್ ಕೆ. ವಿ. ವೆಂಕಟರಾಮಯ್ಯ, ಡಿ|| ಬೋರ್ಡ್ ವೈದ್ಯ, ಅರಕಲವಾಡಿ. ಚಾಮರಾಜನಗರ ತಾ||

18-5-47 ನೇ ತಾ|| ನಿಂದ ಜನಭರಿತವಾದ 3 ನೇ ವಾರ

ವುಡ್‌ಲ್ಯಾಂಡ್ಸ್ ಟಾಕೀಸ್, ಮೈಸೂರು.

★ 'ನಾವು-ಇಬ್ಬರು' ★ (ತಮಿಳು)

ಪ್ರತಿ ದಿನ ಮೂರು ಆಟಗಳು

ತಾರಾಗಣ:-ಟಿ.ಆರ್. ಮಹಾಲಿಂಗಂ, ಟಿ ಎ ಜಯಲಕ್ಷ್ಮಿ ಮತ್ತು ಬೇಬಿ ಕಮಲ

ರಾಜಕಮಲ್, ಮೈಸೂರು

ತಾ|| ೨೩-೫-೪೭ ರಿಂದ ಐದನೇ ವಾರ-ಪ್ರತಿ ದಿನ ೨ ಆಟಗಳು

'ಗೊಲ್ಲಭಾಮ' (ತೆಲುಗು)

ಭೂಮಿಕೆ:—ಕೃಷ್ಣವೇಣಿ, ರಘುರಾಮಯ್ಯ, ಅಂಜಲಿ ದೇವಿ

ಭಾರತಕ್ಕೆ ಬ್ರಿಟಿಷ್ ದೊರೆ[illegible] ಮನವಿಯೋ ?

ವೈಸರಾಯರು ಬ್ರಿ|| ಮಂಡಲದೊಡನೆ ಚರ್ಚೆಯನ್ನು ಮುಗಿಸಿ ಮುಂದಿನ [illegible] ವಾರದ ವೇಳೆಗೆ ಭಾರತಕ್ಕೆ ಹಿಂದಿರುಗುವರು; ಶನಿವಾರದ ದಿನ ಸೇರುವ ಬ್ರಿ|| ಮಜೂರ ಪಕ್ಷದ ವಾರ್ಷಿಕ ಸಮ್ಮೇಳನದಲ್ಲಿ ಪ್ರಧಾನಿ ಅಟ್ಲಿಯವರು ಭಾರತದ [illegible]ಯನ್ನು ಚರ್ಚಿಸಬಹುದು; ಭಾರತೀಯರು ತಮ್ಮ ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮರೆತು ಸಂಘಟಿತರಾಗಬೇಕೆಂದು ಸಾಮ್ರಾಟರು ಭಾರತಕ್ಕೆ ಮನವಿ ಮಾಡಿಕೊಳ್ಳಬಹುದು-ಎಂದು ಲಂಡನ್ನಿನ ವಾರ್ತೆಯೊಂದು ತಿಳಿಸುತ್ತದೆ. ವೈಸರಾಯರ ವರದಿಯ ಬಹುಭಾಗವನ್ನು ಬ್ರಿ|| ಮಂ[illegible]ಮಂಡಲವು ಒಪ್ಪಿರುತ್ತದೆ; ಭಾರತದ [illegible]ಚಾರದಲ್ಲಿ ಸ್ವತಂತ್ರವಾಗಿ ವರ್ತಿಸಲು [illegible] ಅಧಿಕಾರವನ್ನು ಹೊಂದಿ ವೈಸರಾಯರು ಹಿಂದಿರುಗುವರು—ಎಂದೂ ಸಹ ಅದು ತಿಳಿಸಿರುತ್ತದೆ.

ಅಪಮಾನ ಸಂಘ

ಸ್ವಂ.ವ.] ಕೃಷ್ಣರಾಜನಗರ.

ಇಲ್ಲಿನ [illegible] ಸಂಘದಿಂದ ಇದುವರೆಗೆ ರೈತರಿಗೆ ಏಪ್ರಿ[illegible] ತಿಂಗಳಲ್ಲಿ ಅಲ್ಪಾವಧಿ ಸಾಲವನ್ನು [illegible]ಡುತ್ತಿದ್ದರು. ಆದರೆ ಈ ವರ್ಷ ಇನ್ನೂ ಕೊಟ್ಟಿರುವುದಿಲ್ಲ. ಸಂಬಂಧಪಟ್ಟವರು ಕೂಡಲೇ ಇದಕ್ಕೆ ಗಮನ ಕೊಡಬೇಕಾಗಿ[illegible]

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟ್‌ರವರ ಆಫೀಸಿನಿಂದ:—

ಪ್ರಸಿದ್ಧ ಪತ್ರಿಕೆ

R S. 291 - 46-47 ತಾ|| 20-5 4[illegible]

ಮೈಸೂರು ಸಿಟಿಯ ಮುನಿಸಿಪಲ್ ಮಾರ್ಕೆಟ್‌ಗಳಲ್ಲಿರುವ ಅಂಗಡಿಗಳ ಬಾಡಿಗೆದಾರರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಹಾಲೀ ದಾರಿಯಲ್ಲಿರುವ ಅಂಗಡಿ ಬಾಡಿಗೆಯ ಮೊಬಲಗಿನ ದರವು ಅನೇಕ ವರ್ಷಗಳಿಂದ ಬದಲಾವಣೆ ಆಗದೆ ಇರುವುದರಿಂದಲೂ, ಮಾರ್ಕೆಟ್ಟುಗಳ ರಿಪೇರಿ ವಗೈರೆ ಕೆಲಸಗಳ ಮತ್ತು ಸಿಬ್ಬಂದಿ ಖರ್ಚು ದಿನೇ ದಿನೇ ಜಾಸ್ತಿಯಾಗುತ್ತಾ ಇರುವುದರಿಂದಲೂ ಮತ್ತು ಈಗಿನ ಕಾಲಸ್ಥಿತಿಗೆ ತಕ್ಕಂತೆ ಬಾಡಿಗೆ ಮೊಬಲಗಿನ ದರವನ್ನು ನಿರ್ಧರಿಸಬೇಕಾಗಿರುವುದರಿಂದಲೂ, ಚೈತ್ರ ಮಾಸ ತಾ|| 16 ರಲ್ಲಿ ಸಿಟಿ ಮುನಿಸಿಪಾಲಿಟಿ ಮ್ಯಾನೇಜಿಂಗ್ ಕಮಿಟಿಯವರು ಹಾಲಿ ದಾರಿಯಲ್ಲಿರುವ ಬಾಡಿಗೆ ದರಗಳನ್ನು [illegible]ಸ್ತಿ ಮಾಡಬೇಕಾಗಿಯೂ, ಆ ರೀತಿ [illegible]ದ ದರದಲ್ಲಿ ಬಾಡಿಗೆ ಮೊಬಲಗನ್ನು 1947 ನೇ ಜುಲೈ ಮಾಹೆ ಒಂದನೇ [illegible]ರೀಖು ಪ್ರಾರಂಭವಾಗಿ ವಸೂಲು ಮಾಡಬೇಕಾಗಿಯೂ ತೀರ್ಮಾನ ಮಾಡಿರುತ್ತಾರೆ. ಪ್ರತಿ ಅಂಗಡಿಗೂ ಹಾಲಿ ಇರುವ ಮತ್ತು [illegible] ಮಾಡಿರುವ ಮೊಬಲಗನ್ನು ಆಯಾ [illegible] ಅಂಗಡಿ ಬಾಡಿಗೆದಾರರುಗಳಿಗೆ [illegible] ತಿಳಿಸಲಾಗುತ್ತೆ.

ಆರ್. ರಾಮಚಂದ್ರರಾವ್

ಬೊಂಭೋರೆ,

ಪ್ರೆಸಿಡೆಂಟ್,

ಸಿಟಿ ಮುನಿಸಿಪಲ್ ಕೌನ್ಸಿಲ್

ಪು. ೮. ಸಂ. ೩೯೨ || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೩೦—೫—೪೭ [ಸಂಚಿಕೆ ೨೪೪

ಬ್ರಿ|| ಸಾಮ್ರಾಜ್ಯದಲ್ಲಿಯೇ ರಾಜಾಸ್ಥಾನದ ಸ್ಥಾಪನೆ?

...ಯುದ್ಧ ತಪ್ಪಿಸಲು ಸಲಹೆ.

...ನಿಂದ ಕೊಡುತ್ತಿರುವ ಆಹಾರಾಂಗಗ ...ರಂಕದ ಮದ್ದು, ಗುಂಡುಗಳಿಗಾಗಿ ...ರಿಯುತ್ತಿಲ್ಲ ಮದ್ದುಗುಂಡುಗಳು ...ದ ಸಾಮಗ್ರಿಗಳು ಅಮೇರಿಕವು ಇಷ್ಟ ...ಸರಕೆಯನ್ನು ಶಿಲ್ಲಿಸಿ,ಬದಲಾಗೂ, ...ಉಪಯೋಗಕ್ಕೆ ಬರುವಂತಹ ... ಮತ್ತು ಇತರ ಯಂತ್ರೋಪಕರಣ ...ತಯಾರಿಸಲು ಕೊಡಗಿದರೆ ಅಗ ...ದ ಸಂಭವವಿರುವುದಿಲ್ಲ-ಎಂಬುದಾ ...ರಂಕದ ಮಾಜಿ ಉಪಾಧ್ಯಕ್ಷರಾದ ...ಸ್ರಿ ವ್ಯಾಲೇಸರು ತಿಳಿಸಿರುತ್ತಾರೆ

...ಹ ಮಹೋತ್ಸವಗಳು

ಮೈಸೂರು ೨೩.

...ಕಥಾ ವಿದ್ವಾನ್ ಶ್ರೀ ವೆಂಕಟಸುಬ್ಬ ...ತಮ್ಮ ಕುಮಾರ ಚಿ|| ನಾಗೇಶರಾ ...ದೆಳಗೋಳದ ಶ್ಯಾ|| ಶ್ರೀ ವೆಂಕಟ ...ಯ್ಯನವರ ಪುತ್ರಿ ಸೌ|| ನಾಗರತ್ನಮ್ಮ ...ತಂದು ದೆಳಗೋಳದಲ್ಲಿಯೂ, ...ವನಹಳ್ಳಿ ಶ್ರೀ ಶ್ರೀನಿವಾಸಯ್ಯಂಗಾ... ತಮ್ಮ ಕುಮಾರ ಶ್ರೀ ರಂಗಸ್ವಾ... ...ಯಂಗಾರ್ಯರ ಪುತ್ರಿ ಸೌ|| ಜಯಲಕ್ಷ... ...ನ್ನು ಮುದ್ರಾಶಿನಹೋಸಪುರದ ಶ್ರೀ ...ದೇಶಿಕಾಚಾರ್ಯರ ಕುಮಾರ ಚಿ|| ...ನವರಿಗೆ ಕೊಟ್ಟು ಒಂಟಿಕೊಪ್ಪಲಿ... ...ಯೂ, ...ವೃತ್ತ ರೈಲ್ವೆ ಅಧಿಕಾರಿಗಳಾದ ಶ್ರೀ ಎ. ...ರ್ಘವರು ತಮ್ಮ ಕುಮಾರಿ ಸೌ|| ...ಮಂಗಳಾರವರನ್ನು ತಿರುಚನಾಹಳ್ಳಿ ...ನಿವೃತ್ತ ಸಬ್ ಜಡ್ಜ್ ಶ್ರೀಕೆ ಕೃಷ್ಣಯ್ಯ... ...ರ ಕುಮಾರ ಚಿ|| ಕೆ. ಕೊರಿಸ್ವಾಮಿ... ...ರಿಗೆ ಕೊಟ್ಟು ಒಂಟಿಕೊಪ್ಪಲಿನಲ್ಲಿಯೂ ...ವಳ ವರ್ತಕರಾದ ಶ್ರೀ ಎಂ. ಕೆ ...ರಪ್ಪನವರು ತಮ್ಮ ಕುಮಾರ ಚಿ|| ...ಸಾರಥಿಯವರಿಗೆ ನಸ್ಕದ ಅಂಗಡಿ ...ವೆಂಕಟಪ್ಪನವರ ಕುಮಾರಿ ಸೌ|| ನಾ... ...ನನ್ನು ತಂದು ಮೈಸೂರಿನಲ್ಲಿಯೂ, ...ಷ್ಟ ವೈಭವದಿಂದ ವಿವಾಹವನ್ನು ನೆರ... ...ಸಿದರು.

ಮೈಸೂರು ಸಿಟಿ ಮುನಿಸಿಪಾಲಿಟಿ

ತಾರೀಖು ೧೭-೫-೧೯೪೭

ಪ್ರಕಟಣೆ

...ನಗರದ ಕೆಲವು ಭಾಗಗಳಲ್ಲಿ ಮ್ಯುನಿಸಿ... ...ರೆಗ್ಯುಲೇಷನ್ ಪ್ರಕಾರ ಲೈಸೆನ್ಸ್ ಪಡೆ... ...ವ್ಯಾಪಾರ ಮಾಡಬೇಕಾದ ಕೆಲವು ಕಸ... ...ಬು (Trades) ಲೈಸೆನ್ಸ್ ಇಲ್ಲದೆ ನ... ...ಸುತ್ತಿರುವುದಾಗಿ ಕಂಡು ಬಂದಿದೆ. ಈ ...ಲೈಸೆನ್ಸ್ ಪಡೆಯದೆ ಇದರೀ ಕಸಬು... ...ನ್ನು ನಡೆಸುವುದು ಕಾನೂನಿಗೆ ವಿರೋ... ...ಧ-ವಾದುದರಿಂದ ಈ ಪ್ರಕಟಣೆಯ ...ಮೂಲಕ ಜನರಿಗೆ ತಿಳಿಯಪಡಿಸುವುದೇ... ...ದರೆ:—

ಈ ತಾರೀಖಿನಿಂದ ಹದಿನೈದು ದಿನಗಳ ...ಳಗಾಗಿ ಲೈಸೆನ್ಸ್ ಪಡೆಯದಿದ್ದಲ್ಲಿ ರೂಲ್ಸ್... ...ಸಾರ ಮಾಲಿಕರ ಮೇಲೆ ಮುಂದಿನ ಕ್ರ... ...ಜರುಗಿಸಲಾಗುತ್ತದೆ.

ಇ. ಅನಂತರಾವ್,
ಹೆಲ್ತ್ ಆಫೀಸರ್.

ಕೋಮುವಾರು ವ್ಯಾಧಿಗೆ ಪರಿಹಾರ

ಭಾಷಾನುಗುಣವಾಗಿ ಪ್ರಾಂತ್ಯ ರಚನೆಯಾಗುವುದು; ಪ್ರತಿ ಪ್ರಾಂತ್ಯದಲ್ಲೂ ಸೋಷಿಯಲಿಸ್ಟ್ ರಿಪಬ್ಲಿಕ್ಕುಗಳ ಸ್ಥಾಪನೆ ಮಾಡುವುದು; ಇವುಗಳ ಪ್ರತಿನಿಧಿಗಳನ್ನೊಳಗೊಂಡು ಸಮಾನವಾದ ತತ್ವದ ಆಧಾರದ ಮೇಲೆ ಪ್ರಬಲವಾದ ಕೇಂದ್ರ ಸರ್ಕಾರವನ್ನು ರಚಿಸುವುದು-ಇವುಗಳಿಂದ ಮಾತ್ರ ಭಾರತದ ಕೋಮುವಾರು ಸಮಸ್ಯೆ ಬಗೆಹರಿಯುವುದು-ಎಂಬುದಾಗಿ ಶ್ರೀ ಶರತ್ ಚಂದ್ರ ಬೋಸರು ತಿಳಿಸಿದ್ದಾರೆ.

ಮೈಸೂರು ಕೋ-ಆಪರೇಟಿವ್ ಸೊಸೈಟಿ

ಡೈರೆಕ್ಟರುಗಳ ಚುನಾವಣೆ

25-5-47 ಭಾನುವಾರ

ನೀಲ್ಯಂಡ ಸೊಸೈಟಿಯ ಡೈರೆಕ್ಟರುಗಳ ಸ್ಥಾನಕ್ಕೆ ಈ ಕೆಳಗೆ ಕಂಡವರನ್ನು ಚುನಾಯಿಸಬೇಕಾಗಿ ವಿನಂತಿ:—

ಶ್ರೀಗಳಾದ

೧ ಅಗರಂ ರಂಗಯ್ಯ,
೪ ಎ. ಕೃಷ್ಣಮೂರ್ತಿ ರಾವ್,
೭ ಬಿ. ಕೃಷ್ಣಮೂರ್ತಿ,
೮ ಬಿ. ವಿ. ಕೃಷ್ಣಮೂರ್ತಿ,
೧೧ ಎಂ. ವಿ. ಜೋಯಿಸ್,
೧೨ ಬಿ ಎಸ್ ತಾಂಡವಮೂರ್ತಿ
೧೭ ಎಂ. ಜಿ. ನರಸಿಂಹಮೂರ್ತಿ
೧೮ ಎಂ. ಎಸ್. ನಂಜಪ್ಪ,
೨೦ ಕೆ. ಪುಟ್ಟಸ್ವಾಮಿರಾವ್,
೨೫ ಕೆ. ಯಂಗೆಯ್ಯ ಶೆಟ್ಟಿ,
೩೦ ಎಸ್. ರಂಗರಾಮಯ್ಯ,
೩೩ ಎಸ್. ಲಿಂಗಣ್ಣ,
೩೪ ವಿ.ಲಿಂಗಪ್ಪಯ್ಯ
೩೫ ಎಸ್.ಶೇಷಗಿರಿ ರಾವ್,
೩೯ ಪಾಲಹಳ್ಳಿ ಸೀತಾರಾಮಯ್ಯ

—ಸೊಸೈಟಿಯ ಹಿತೈಷಿಗಳು

ರೈಲ್ವೆ ಕೆಲಸಗಾರರ ಬೇಡಿಕೆ

ಮೈಸೂರು ೨೩

ಮೈಸೂರು ರೈಲ್ವೆ ಕೆಲಸಗಾರರ ಸಂಘದ ಸದಸ್ಯರು ಮೊನ್ನೆ ಸಂಬಳ ಸಮಿತಿಯವರನ್ನು ಬೆಂಗಳೂರಿನಲ್ಲಿ ಭೇಟಿ ಮಾಡಿ ತಮ್ಮ ಬೇಡಿಕೆಗಳನ್ನು ತಿಳಿಸಿದರು. ರೈಲ್ವೆ ಇಲಾಖೆಯು ಇತರ ಸರ್ಕಾರದ ಇಲಾಖೆಗಳಿಂದ ಸ್ವತಂತ್ರವಾಗಿದ್ದು ಒಂದು ಕುಶಲ ಸಂಸ್ಥೆಯು ಸಂಸ್ಥೆಯಾಗಿರುತ್ತದೆ. ಹೊರಗಿನ ರೈಲ್ವೆ ಕೆಲಸಗಾರರಿಗೆ ದೊರೆಕಿರುವ ಸೌಲಭ್ಯಗಳು ಈ ರೈಲ್ವೆಯವರಿಗೆ ದೊರೆಯುತ್ತಿಲ್ಲ. ಮೈಸೂರು ರೈಲ್ವೆಯು ಒಂದನೇ ದರ್ಜೆಯದ್ದಾಗಿದ್ದು, ಅಖಿಲ ಭಾರತ ರೈಲ್ವೆಯ ಒಂದು ಅಂಗವಾಗಿರುವುದರಿಂದ ಆ ನೌಕರರಿಗೆ ದೊರೆತಿರುವ ಸೌಲಭ್ಯಗಳು ಇಲ್ಲಿನವರಿಗೂ ದೊರೆಯಬೇಕು-ಎಂದು ಅವರು ಅರಿಕೆ ಮಾಡಿದ್ದಾರೆ.

ಕೆಲಸಗಾರರ ಬಹಿರಂಗ ಸಭೆಯೊಂದು ನಡೆದು ಸಂಘದ ಕಾರ್ಯದರ್ಶಿಗಳನ್ನು ಚಿಕ್ಕ ಜಾಜೂರಿಗೆ ವರ್ಗಾಯಿಸಿರುವುದನ್ನು ಖಂಡಿಸಿ ಅದನ್ನು ಕೂಡಲೇ ರದ್ದು ಮಾಡಬೇಕೆಂದು ಕೋರುವ ನಿರ್ಣಯವು ಅಂಗೀಕೃತವಾಯಿತು

ಕಾಶ್ಮೀರ ಭಾರತ ಯೂನಿಯನ್ ಸೇರಕೂಡದು

ಗ್ಲೋಬ್] ಶ್ರೀನಗರ ೨೦

ಕಾಂಗ್ರೆಸ್ಸಿನೊಡನೆ ಸೇರಿ ಕಾಶ್ಮೀರ ಸಂಸ್ಥಾನವು ಭಾರತ ಯೂನಿಯನ್ನಿಗೆ ಸೇರಕೂಡದೆಂದೂ, ಅಲ್ಲಿನ ರಾಜರು ಅದನ್ನು ಸ್ವತಂತ್ರ ಸಂಸ್ಥಾನವೆಂದು ಘೋಷಿಸಬೇಕೆಂದೂ ಅದಕ್ಕೆ ತಾವು ಬೆಂಬಲ ನೀಡುವುದಾಗಿಯೂ ಅಖಿಲ ಜಮ್ಮು ಮತ್ತು ಕಾಶ್ಮೀರದ ಮುಸ್ಲಿಂ ಲೀಗ್ ಅಧ್ಯಕ್ಷರು ಸೂಚಿಸಿದ್ದಾರೆ

ರಾಜಾಸ್ಥಾನದ ಸ್ಥಾಪನೆಗೆ ಪ್ರಯತ್ನ

ಪಾಕಿಸ್ತಾನ ಮತ್ತು ಹಿಂದೂಸ್ಥಾನಗಳಲ್ಲದೆ ರಾಜಾಸ್ಥಾನವೊಂದರ ಸ್ಥಾಪನೆಯೂ ಪತ್ರದಲ್ಲಿಯೇ ಪ್ರಕಟವಾಗುವುದೆಂದು ಲಂಡನ್ನಿನ ಅಧಿಕಾರಿ ವಲಯದಲ್ಲಿ ಹೇಳಲಾಗುತ್ತಿದೆ. ಇವರಲ್ಲಿ ಎಲ್ಲಾ ಸಂಸ್ಥಾನಗಳೂ ಇರುತ್ತವೆ. ಡೊಮಿನಿಯನ್ ಅಂತಸ್ತಿನಿಂದ ಬ್ರಿ|| ಸಾಮ್ರಾಜ್ಯದೊಳಗೇ ಅವು ಇರಲು ಬಯಸುವುವೆಂದು ಹೇಳಲಾಗಿದೆ

ಆರ್ಥಿಕ ಸಮ್ಮೇಳನದ ಸಮಿತಿಗಳ ರದ್ದು

ಪ್ರಸ ಪೋ] ಬೆಂಗಳೂರು ೨೩

ಈ ತಿಂಗಳು ೨೭ನೇ ತಾರೀಖು ಮಧ್ಯಾಹ್ನ ದಿವಾನರ ಅಧ್ಯಕ್ಷತೆಯಲ್ಲಿ ಆರ್ಥಿಕ ಸಮ್ಮೇಳನದ ಅಧಿವೇಶನವು ನಡೆಯುವುದು ಇದಾದ ಮೇಲೆ ಸಮ್ಮೇಳನದ ಉಪ ಸಮಿತಿಗಳನ್ನು ರದ್ದು ಮಾಡಲಾಗುವುದೆಂದು ಹೇಳಲಾಗಿದೆ.

ಎಲ್ಲ ಮುಸ್ಲಿಂ ಪ್ರದೇಶಗಳ ವಿಭಜನೆ ಆಗಬೇಕು

ಎಲ್ಲ ಪ್ರಾಂತಗಳಲ್ಲಿಯೂ ಮುಸ್ಲಿಂ ಪ್ರದೇಶಗಳ ವಿಭಜನೆ ಆಗಬೇಕು, ಪಶ್ಚಿಮ ಪಾಕಿಸ್ತಾನವನ್ನೂ ಪೂರ್ವ ಪಾಕಿಸ್ತಾನವನ್ನೂ ಸೇರಿಸಲು ಮಧ್ಯದಲ್ಲಿ ಮಾರ್ಗ ಬೇಕು; ಎಂಬುದಾಗಿ ಜಿನ್ನಾರವರು ವೈಸರಾಯರ ಸಲಹೆಗಾರರಾದ ಸರ್ ಎರಿಕ್ ಮಿಯೆವಿಲ್ಲೆಯವರಿಗೆ ಹೇಳಿರುವುದಾಗಿಯೂ, ಅವರು ಈ ವಿಚಾರವನ್ನು ಬ್ರಿ|| ಮಂತ್ರಿಮಂಡಲಕ್ಕೆ ತಿಳಿಸಿರುವುದಾಗಿಯೂ ವರದಿಯಾಗಿದೆ. ಪಂಜಾಬ್ ಮತ್ತು ಬಂಗಾಳಗಳ ವಿಭಜನೆಯಾಗಬೇಕೆಂಬ ಕಾಂಗ್ರೆಸ್ ಬೇಡಿಕೆಯನ್ನು ವಿಫಲಗೊಳಿಸುವುದೇ ಜಿನ್ನರ ಈ ಹೊಸ ಕೋರಿಕೆಯ ಉದ್ದೇಶವೆಂದು ಹೇಳಲಾಗಿದೆ

ಪೌರಸಭೆಯು ಮತ್ತೆ ಮುಂದುವರೆಯಿತು

ಮೈಸೂರು ೨೩.

ಪೌರಸಭಾಧ್ಯಕ್ಷರಲ್ಲಿ ಅವಿಶ್ವಾಸವನ್ನು ಸೂಚಿಸಲು ಉಪಾಧ್ಯಕ್ಷರು ಕರೆದಿದ್ದ ಸಭೆಯ ನಡವಳಿಕೆಗಳನ್ನು ವರದಿಯ ಪುಸ್ತಕದಲ್ಲಿ ಅಧ್ಯಕ್ಷರು ಇನ್ನೂ ಸೇರಿಸಿಲ್ಲದಿದ್ದುದರಿಂದ ರಾಜಧಾನಿಯ ಪೌರಸಭೆಯು ಮುಂದುವರಿದ ಅಧಿವೇಶನವು ನಿನ್ನೆ ದಿನ ಯಾವ ಕಾರ್ಯವನ್ನೂ ನಡೆಸದೆ ಮತ್ತೆ ಜೂನ್ ತಾರೀಖಿಗೆ ಮುಂದುವರಿಸಲ್ಪಟ್ಟಿತು. ಈ ವಿಷಯದಲ್ಲಿ ಸರ್ಕಾರದವರ ಅಭಿಪ್ರಾಯವನ್ನು ಕೇಳಲಾಗಿದೆಯೆಂದೂ ಅದು ಬರುವವರೆಗೆ ಕಾಯಬೇಕೆಂದೂ ಅಧ್ಯಕ್ಷರು ತಿಳಿಸಿದರು.

ಸರ್ಕಾರದ ಅಭಿಪ್ರಾಯವು ಅಪ್ರಸ್ತುತವೆಂದೂ, ಪೌರಸಭಾ ಆಡಳಿತವು ಪೌರಸಭೆಯಲ್ಲಿಯೇ ಅಂತರ್ಗತವಾಗಿರುವುದರಿಂದ ಸಭೆಯ ನಿರ್ಧಾರದ ವಿಷಯದಲ್ಲಿ ಸರ್ಕಾರವು ಮಧ್ಯೆ ಪ್ರವೇಶಿಸಲು ಅವಕಾಶವಿಲ್ಲವೆಂದೂ ಶ್ರೀ|| ಟಿ. ಮರಿಯಪ್ಪನವರು ಹೇಳಿದರು. ಸಭೆ ನಡವಳಿಕೆಗಳನ್ನು ಪುಸ್ತಕದಲ್ಲಿ ಸೇರಿಸುವವರೆಗೆ ಇನ್ನು ಎಷ್ಟು ದಿನಗಳಾದರೂ ತಾವು ಸಭೆಯ ಕಾರ್ಯಕಲಾಪಗಳು ಮುಂದುವರೆಯಲು ಅವಕಾಶ ಕೊಡುವುದಿಲ್ಲವೆಂದೂ, ಸಭೆಗೆ ಹಾಜರಾಗಿ ಅದನ್ನು ಮುಂದಕ್ಕೆ ಹಾಕಿಸುವುದಾಗಿಯೂ ಶ್ರೀ ಟಿ ಮರಿಯಪ್ಪನವರು ಹೇಳಿ ಇಂತಹ ಅನಂಗತಗಳನ್ನು ತಪ್ಪಿಸಲು ಸರ್ಕಾರದವರು ಬೇಗನೆ ಈ ಸಭೆಗೆ ಬೇರೆ ಅಧ್ಯಕ್ಷರನ್ನು ಕೊಡುವುದು ಸೂಕ್ತವೆಂದೂ ನುಡಿದರು. ಅನಂತರ ಸಭೆಯನ್ನು ಮುಂದೆ ಹಾಕಲಾಯಿತು.

ಬಜೆಟ್ ಅಧಿವೇಶನವೂ ಮುಂದೆ ಹೋಯಿತು

ಇದೇ ಕಾರಣದಿಂದ ಈ ದಿನ ನಡೆಯಬೇಕಾಗಿದ್ದ ಪೌರಸಭೆಯ ಬಜೆಟ್ಟಿನ ಅಧಿವೇಶನವನ್ನು ಸಹ ಮುಂದಕ್ಕೆ ಹಾಕಲಾಯಿತು

ಸಾಧ್ವಿ

ತಾ|| ೨೩-೫-೪೭ ಶುಕ್ರವಾರ

ಜಿನ್ನಾರವರ ಬೇಡಿಕೆಗೆ ಮಿತಿಯುಂಟೆ ?

ಹಿಂದೂಸ್ಥಾನದಲ್ಲಿ ಪ್ರತ್ಯೇಕ ಸ್ವತಂತ್ರ ಪಾಕಿಸ್ಥಾನವೊಂದನ್ನು ಸ್ಥಾಪಿಸುವ ಪ್ರಯತ್ನದಲ್ಲಿ ಯಶಸ್ಸು ಹೊಂದುವ ಲಕ್ಷಣವು ಮೂಡುತ್ತಿರುವ ಸಮಯದಲ್ಲಿಯೇ ಮಿ|| ಜಿನ್ನಾರವರು ತಮ್ಮ ಬೇಡಿಕೆಯನ್ನು ಕ್ಷಣಕ್ಷಣಕ್ಕೂ ಹೆಚ್ಚಿಸುತ್ತಿರುವಂತಿದೆ. ಪ್ರಾಂತ್ಯ ವಿಭಜನೆಯು ಆಗುವುದು ಶತಸ್ಸಿದ್ಧವೆಂದು ಮನಗಂಡ ಅವರು ಸೈನ್ಯ ವಿಭಜನೆಗೂ ಒತ್ತಾಯ ಪಡಿಸಲು ಆರಂಭಿಸಿದರು. ಪ್ರತ್ಯೇಕವಾದ ಸ್ವತಂತ್ರ ರಾಜ್ಯದಲ್ಲಿಯೇ ಸಂತೃಪ್ತರಾಗದೆ ನೂತನ ಪಾಕಿಸ್ಥಾನದ ಪ್ರದೇಶಗಳನ್ನು ಸೇರಿಸುವ ಮಧ್ಯ ಮಾರ್ಗವೂ ಬೇಕೆಂದು ಕೇಳಲು ಮಿ|| ಜಿನ್ನಾರವರು ಈಗ ತೊಡಗಿದ್ದಾರೆ.

ದೂರದೂರದಲ್ಲಿರುವ ಪಾಕಿಸ್ಥಾನದ ವಿಭಾಗಗಳಿಗೆ ಹೋಗಲು ದಾರಿಯು ಬೇಡವೇ ? ಎಂಬುದೇ ಅವರ ವಾದ. ಈ ದಾರಿಯು ಉದ್ಭವಿಸುವುದೋ ಇನ್ನೂ ತಿಳಿಯದು. ಅಗಲದ ವಿಚಾರವನ್ನು ಅವರು ಇನ್ನೂ ಎತ್ತಿರುವುದಿಲ್ಲ. ಈ ಮಾರ್ಗವು ಒಂದೇ ದಿಕ್ಕಿನಲ್ಲಿರುವುದೋ ಅಥವಾ ನಾನಾ ದಿಕ್ಕುಗಳಿಗೂ ಹರಡುವುದೋ ಎಂಬುವುದೂ ತಿಳಿದಿಲ್ಲ. ಹೀಗೆ ಹೆಜ್ಜೆ ಹೆಜ್ಜೆಗೂ ಜಿನ್ನಾರವರು ಹೊಸ ಹೊಸ ಒತ್ತಾಯಗಳನ್ನು ಒಡ್ಡುತ್ತಿದ್ದಾರೆ. ಬೆರಳು ತೋರಿಸಿದರೆ ಕೈಯನ್ನೇ ನುಂಗುವ ನೀತಿಯನ್ನು ಅವರು ಅನುಸರಿಸುತ್ತಿರುವಂತಿದೆ. ಹೀಗೆ ಅವರ ಇಷ್ಟಾರ್ಥಗಳಿಗೆ ತಲೆಬಾಗುತ್ತಾ ಹೋದರೆ ಕಡೆಯಲ್ಲಿ ಹಿಂದೂಸ್ಥಾನವೆಂಬುದು ಉಳಿಯುವುದೋ, ಇಲ್ಲವೋ ಎಂಬುದೇ ಸಂದೇಹ.

ಸ್ವತಂತ್ರ ಪಾಕಿಸ್ಥಾನದ ಭವಿಷ್ಯ ನೀತಿಯನ್ನು ಕುರಿತು ಜಿನ್ನಾರವರು ಒಂದು ವಿವರಣೆಯನ್ನು ಕೊಟ್ಟಿರುತ್ತಾರೆ. ವಿಶ್ವಸಂಸ್ಥೆಯೊಡನೆ ನೇರವಾದ ಸಂಬಂಧವನ್ನಿಟ್ಟುಕೊಳ್ಳುವುದಾಗಿಯೂ ಅವರು ಹೇಳಿರುತ್ತಾರೆ. ಹಿಂದೂಸ್ಥಾನದೊಡನೆ ಸ್ನೇಹ ಸಹಕಾರಗಳ ಒಪ್ಪಂದವನ್ನು ಮಾಡಿಕೊಳ್ಳುವುದಾಗಿ ತಿಳಿಸಿದ್ದಾರೆ. ದೇಶೀಯ ಸಂಸ್ಥಾನಗಳೂ ಸಹ ಪಾಕಿಸ್ಥಾನದಲ್ಲಿ ಬಂದು ಸೇರಲು ಆಹ್ವಾನವಿತ್ತಿದ್ದಾರೆ. ಅಲ್ಪಸಂಖ್ಯಾತರಿಗೆ ಸಂಪೂರ್ಣವಾದ ರಕ್ಷಣೆಯ ಭರವಸೆಯನ್ನು ಕೊಡುವುದಾಗಿ ವಾಗ್ದಾನ ಮಾಡಿರುತ್ತಾರೆ.

ಮಿ|| ಜಿನ್ನಾರವರ ಭರವಸೆಗಳಿಗೆ ಎಷ್ಟು ಬೆಲೆಯಿದೆಯೆಂಬುದು ಈಗಾಗಲೇ ಎಲ್ಲರಿಗೂ ವೇದ್ಯವಾಗಿರುತ್ತದೆ. ನೌಖಾಲಿ, ಬಿಹಾರ ಮತ್ತು ಪಂಜಾಬುಗಳಲ್ಲಿ ಇದರ ಅನುಭವವು ಬೇಕಾದಷ್ಟು ಆಗಿರುತ್ತದೆ. ಸಿಂಧೂ ಪ್ರಾಂತ್ಯದಲ್ಲಿ ಹಿಂದುಗಳಿಗೆ ಆಗುತ್ತಿರುವ ಕಿರುಕುಳಗಳು ಲೋಕವಿಖ್ಯಾತವಾಗಿವೆ. ಅಲ್ಲಿಂದ ಅವರು ವಲಸೆ ಹೋಗಲೂ ಸಹ ಸಿದ್ಧರಾಗುತ್ತಿದ್ದಾರೆ. ಅನೇಕ ಭಾರಿ ಬ್ಯಾಂಕುಗಳೂ ಗಿರಣಿಗಳೂ ಇತರ ವಾಣಿಜ್ಯ ಸಂಸ್ಥೆಗಳೂ ಈಗಾಗಲೇ ಭವಿಷ್ಯ ಪಾಕಿಸ್ಥಾನದ ಪ್ರದೇಶಗಳನ್ನು ಬಿಟ್ಟು ಹೊರಡಲು ಅಣಿ ಮಾಡಿಕೊಳ್ಳುತ್ತಿವೆ. ಗಡಿನಾಡು ಮತ್ತು ಅಸ್ಸಾಮುಗಳಲ್ಲಿ ಲೀಗಿನವರು ಪ್ರಭುತ್ವದವರಿಗೆ ಕೊಡುತ್ತಿರುವ ಕಿರುಕುಳವು ಅತ್ಯಂತ ಖಂಡನೀಯವಾಗಿದೆ. ಹೀಗಿರುವಲ್ಲಿ ಮಿ|| ಜಿನ್ನಾರವರ ಆಶೋತ್ತರಗಳಿಂದ ಯಾರೂ ವಂಚಿತರಾಗಬಾರದು.

ಇನ್ನಾದರೂ ಲೀಗನ್ನು ತೃಪ್ತಿಪಡಿ[...] ನೀತಿಯನ್ನು ರಾಷ್ಟ್ರನಾಯಕರು [...] ನಿಜವಾದ ದೇಶಾಭ್ಯುದಯದ ರಾ[...] ತತ್ವಗಳ ಆಧಾರದ ಮೇಲೆ ತಮ್ಮ [...] ವ ಕಾರ್ಯನೀತಿಯನ್ನು ಅವಲಂಬಿ[...] ಕೆಂದು ನಾವು ಕೋರುತ್ತೇವೆ.

ರಾಜಕಮಲ್

೨೩-೫-೪೭ ರಿಂದ ೪ ದಿನಗಳು

ಪ್ರತಿ ದಿನ ಬೆಳಗ್ಗೆ ೧೦-೩೦ ಗಂಟೆಗೆ

ಬಾಂಬೆ ಟಾಕೀಸಿನವರ

ನಿರ್ಮಲ [ಹಿಂದಿ

-:ಭೂಮಿಕೆ:-

ಅಶೋಕ ಕುಮಾರ್ ಮತ್ತು ದೇವಿಕಾರಾಣಿ

Edited printed and published by A. P. [illegible] at the Sadhvi Press, D. S. [illegible] Road, Mysore.

ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಮೆಂಬರುಗಳಲ್ಲಿ ವಿಜ್ಞಾಪನೆ

ನಾನು ಅನೇಕ ವರ್ಷಗಳಿಂದ ಮೇಲ್ಕಂಡ ಸೊಸೈಟಿಗೆ ಡೈರೆಕ್ಟರಾಗಿದ್ದು ತಮ್ಮ ಸೇವೆಯನ್ನು ನಿರ್ದಾಕ್ಷಿಣ್ಯವಾಗಿಯೂ, ನಿಸ್ಪೃಹತೆಯಿಂದಲೂ ಮಾಡುತ್ತಿರುವುದು ತಮಗೆ ತಿಳಿದೇ ಇದೆ.

ಈಗಲೂ ತಾ|| ಬನುಮಯ್ಯನವರ ಹೈಸ್ಕೂಲಿನಲ್ಲಿ 25-6-47 ನೇ ಭಾನುವಾರ ನಡೆಯುವ ಡೈರೆಕ್ಟರುಗಳ ಚುನಾವಣೆಯಲ್ಲಿ ನಾನೂ ಒಬ್ಬ ಉಮೇದುವಾರನಾಗಿರುತ್ತೇನೆ.

ದಯವಿಟ್ಟು ಚುನಾವಣೆ ದಿವಸ ಬಂದು ತಮ್ಮ ಅಮೂಲ್ಯವಾದ ಓಟನ್ನು ಕೊಟ್ಟು ತಮ್ಮ ಸೇವೆಯನ್ನು ಮಾಡಲು ಅವಕಾಶ ಕೊಡಬೇಕಾಗಿ ಕೋರುತ್ತೇನೆ.

ನಂ. 43.

ಜಿ. ವಿ. ಸೂರ್ಯನಾರಾಯಣಶೆಟ್ಟಿ

ಜ್ಯುಯೆಲರ್ ಮತ್ತು ಕ್ಲಾತ್ ಮರ್ಚೆಂಟ್,

ಸಯ್ಯಾಜಿರಾವ್ ರೋಡ್, ಮೈಸೂರು.

ವಿಶೇಷ ಸೂಚನೆ:- ನಿಮಗೆ ಕೊಡುವ ಓಟಿಂಗ್ ಲಿಸ್ಟಿನಲ್ಲಿ ನನ್ನ ಹೆಸರು ಕಡೆಯಲ್ಲಿರುತ್ತದೆಂಬುದನ್ನು ಮರೆಯಬೇಡಿ

ಸಾಧ್ವಿ

ಕೂಡಲೇ ಚಂದಾದಾರರಾಗಿ

ಉಜ್ವಲ ಸತೀತ್ವಕ್ಕೆ

ಪಂಡಿತ ಡಿ. ಗೋಪಾಲಾಚಾರ್ಲುರವ

ಅಶೋ

ಗರ್ಭಾಶಯರೋಗ ನಿವಾರಿಣಿ

ಅರುಚಿ ಮುಟ್ಟು ದೋಷ[...] ಗಳನ್ನು ನಿರ್ಮೂಲಿಸಿ [...] ಪೂರ್ಣ ಸ್ತ್ರೀತ್ವವನ್ನು [...] ಸಾಧಿಸುವಪ್ರಸಿದ್ಧ[...] ವಾದ ದಿವ್ಯೌಷಧ [...] ದನ್ನು ಬಿಡದೆ ಸೇವಿಸು[...] ದರೆ, ನಿಮ್ಮ ಜೀವನ [...] ಪರಮಾವಧಿಯಾದ [...] ಮಂದಾನಂದವನ್ನು [...] ದೆ ಒದಗಿಸಬಲ್ಲುದು.

ಆಯುರ್ವೇದಾಶ್ರಮಂ ಲಿಮಿಟೆಡ್

ಟಿ.-ನಗರ್.... ಮದರಾಸು.

ರಾಜಕಮಲ್, ಮೈಸೂರು

ತಾ|| ೨೩-೫-೪೭ ರಿಂದ ಐದನೇ ವಾರ-ಪ್ರತಿ ದಿನ ೨ ಆಟಗಳು

'ಗೊಲ್ಲಭಾಮ' (ತೆಲುಗು)

ಭೂಮಿಕೆ:— ಕೃಷ್ಣವೇಣಿ, ರಘುರಾಮಯ್ಯ, ಅಂಜಲಿ ದೇವಿ

Office of the President,
City Municipal Council, Mysore.
Mysore Dated: 20th May 1947.

NOTIFICATION

M. 5 p 16 0-46-47

Notice is hereby given to the inhabitants of the Mysore City Municipality that the Municipal Council have resolved to introduce the Bye-laws framed under section 51(1) (d) (11) for the control of cattle market and shandy area and obtaining of the license for carrying on the business of cattle brokerage.

Any person having any objection in respect of the proposed Bye-laws may prefer the same in writing to the undersigned within a month from the date of publication of this notification in the Mysore Gazette after which no objections will be received.

Copies of the detailed notification may be had in the City Municipal Office or in any Section Offices.

K. RAMACHANDRA RAO BHOMBORE
PRESIDENT

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ

—: ನಮ್ಮಲ್ಲಿ ವಿಚಾರಿಸಿ :—

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.

ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,

ಅಶೋಕಾ ರಸ್ತೆ, ಮೈಸೂರು.

ಸ್ಥಾಪಿತ ೧೯೩೨ :: ಫೋನ್. ೪೧೦

18-5-47 ನೇ ತಾ|| ನಿಂದ ಜನಭರಿತವಾದ 3 ನೇ ವಾರ

ವುಡ್‌ಲ್ಯಾಂಡ್ಸ್ ಟಾಕೀಸ್, ಮೈಸೂರು.

★ 'ನಾವು-ಇಬ್ಬರು' ★ (ತಮಿಳು)

ಪ್ರತಿ ದಿನ ಮೂರು ಆಟಗಳು

ತಾರಾಗಣ:- ಟಿ.ಆರ್. ಮಹಾಲಿಂಗಂ, ಟಿ. ಎ. ಜಯಲಕ್ಷ್ಮಿ ಮತ್ತು ಬೇಬಿ ಕಮಲ

ರೋ. ನಂ. 391 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೨೪—೫—೪೭ [ಸಂಚಿಕೆ ೨೪೫

ವೈಸ್ರಾಯರ ಯೋಜನೆಗೆ ಬ್ರಿ॥ ಸರ್ಕಾರದ ಒಪ್ಪಿಗೆ

...ಕಿಸ್ತಾನಕ್ಕೆ ಸಿಂಧು ...ಂತವು ಹೆಬ್ಬಾಗಿಲು

...ಸ್ತಾನದ ಸ್ಥಾಪನೆಯು ಈಗ ಶತ ...ಗಿದೆ. ಮುಸ್ಲಿಮರು ಅದಕ್ಕಾಗಿ ...ಬೇಕು; ಸಿಂಧು ಪ್ರಾಂತ್ಯವು ...ಸ್ತಾನದಲ್ಲಿ ಇಸ್ಲಾಮಿನ ಪ್ರವೇಶ ...ತ್ತು; ಈಗ ಅದೇ ಪಾಕಿಸ್ತಾನ ...ವೇಶದ್ವಾರವಾಗುವುದು—ಎಂಬು ...ಧು ಪ್ರಾಂತದ ಸುಧಾರಣೆ ಮತ್ತು ...ಶಾ ಮಂತ್ರಿ ಪೀರ್ ಇಲಾಹಿ ...ಕ್ಸಾರರು ಒಂದು ಹೇಳಿಕೆಯಲ್ಲಿ ...ತ್ತಾರೆ

...ಂದೂ ಮಹಾಸಭಾ ಅಧಿವೇಶನ

...ನಾಡು ಹಿಂದೂ ಮಹಾ ಸಭೆ ...ನೇ ಅಧಿವೇಶನವು ಕೊಯಮ ...ಜಿಲ್ಲೆ ಗೋಬಿಚೆಟ್ಟಿ ಪಾಳ್ಯದಲ್ಲಿ ...ಮೊದಲನೇ ವಾರದಲ್ಲಿ ನಡೆಯು ...ಈ ಅಧಿವೇಶನಕ್ಕೆ ವೀರ ಸಾವ ...ರ್! ಮುಕರ್ಜಿ, ಡಾ॥ ಮೂಂಜೆ, ...ರ್, ಡಾ॥ ಅಂಬೇಡ್ಕರ್ ಸರ್ ...ಮಸ್ವಾಮಿ ಅಯ್ಯರ್ ಮುಂತಾ ...ಮುಖಂಡರುಗಳು ಆಗಮಿಸಲಿದ್ದಾರೆಂ ...ಸ್ತ ಹಿಂದೂ ಬಾಂಧವರೂ ತಮ್ಮ ... ಸಹಾಯ, ಸಹಕಾರಗಳನ್ನು ...ಕೊಂಡೂ ಅಧಿವೇಶನದ ವ್ಯವಸ್ಥಾ ...ರ್ಥಿಸಿದ್ದಾರೆ.

...ಧುಗಳ ಬಿಡುಗಡೆ

...ರಾಜ್ಯಾಂಗ ಸಭೆಯ ಮುಂದೆ ... ನಡೆಸುತ್ತಿದ್ದುದಕ್ಕಾಗಿ ಶಿಕ್ಷೆಗೆ ...ಗಿದ್ದ ಸ್ವಾಮಿ ಕರಪಾತ್ರೀಜಿ ಮೊದ ...ಧುಗಳನ್ನು ಬಿಡುಗಡೆ ಮಾಡಲಾ ...ತಾತ್ಕಾಲಿಕ ಸರ್ಕಾರದ ಉಪಾಧ್ಯ ...ಪಂ॥ ನೆಹರೂರವರು ಅವರನ್ನು ...ಮಾಡಲು ಆಜ್ಞೆ ಇತ್ತರೆಂದು ವ ...ಗಿದೆ

...ಪ್ರದಿ ಜನಾಂಗದವರ ಎಚ್ಚರಿಕೆ

...ನಾಡಿನ ಆಫ್ರಿದಿ ಜನಾಂಗದವರ ...ಹಿರಂಗ ಸಭೆಯೊಂದು ನಡೆದು ... ...ಂಗ್ರೆಸ್ಸಿನ ಅಥವಾ ಲೀಗಿನವರ ಸ... ...ಬೇಡವೆಂದೂ, ತಮ್ಮ ಜನಾಂಗದ ... ರಾಜಕೀಯದಲ್ಲಿ ಭಾಗ ವಹಿಕ ...ವ, ನಿರ್ಧರಿಸಿ ಇದಕ್ಕೆ ತಪ್ಪಿದವ ...ರಿಗೆ ದಂಡನೆ ವಿಧಿಸಲಾಗುವುದೆಂ ...ಎಚ್ಚರಿಸುತ್ತಿದ್ದಾರೆ.

ಮೈಸೂರು ಸಿಟಿ ಮುನಿಸಿಪಾಲಿಟಿ ಸಿದ್ಧ ಪತ್ರಿಕೆ

...ನಿಂದ ಮೈಸೂರು ಸಿಟಿ ಪುರನಿವಾಸಿ ...ಕೇಳುವುದೇನೆಂದರೆ:— ...ಕೊಡು ಸಿಟಿ ವಾಣೀವಿಲಾಸ ನೀರಿನ ...ಗ್ರಹದಲ್ಲಿ ಅಲ್ಪ ಕೊರತೆ ಸಂಭವಿಸಿರು ...ದ ನಗರಕ್ಕೆ ನೀರಿನ ಸರಬರಾಜು ...ಮೊದಲಿನಂತೆ ಇರುವುದಿಲ್ಲವಾದ್ದರಿಂದ ...ಜನರು ನೀರನ್ನು ಪೋಲು ಮಾಡ ...ನೀರು ಬಂದಾಗ ಮುಂಜಾಗ್ರತೆ ...ವಾಗಿ ಬೇಕಾದಷ್ಟು ನೀರನ್ನು ...ತುಂಬಿಕೊಳ್ಳಬೇಕೆಂದೂ ಕೋರಲ್ಪ...

ಟಿ ನರಸಿಂಹ ಅಯ್ಯಂಗಾರ್, ...೪೭, ವೈಸ್‌ಪ್ರೆಸಿಡೆಂಟ್ ...ಸಾ

ಸಾಧುಗಳ ದಸ್ತಗಿರಿ

ದೆಹಲಿಯ ವೈಸರಾಯ್ ಭವನದ ಮುಂದೆ ಸತ್ಯಾಗ್ರಹವನ್ನು ನಡೆಸುತ್ತಿದ್ದ ೧೧ ಮಂದಿ ಸಾಧುಗಳನ್ನು ಮೊನ್ನೆ ಪೋಲೀಸರು ದಸ್ತಗಿರಿ ಮಾಡಿರುತ್ತಾರೆ.

ವೈಸರಾಯರ ಸಲಹೆಗೆ ಬ್ರಿ॥ ಸರ್ಕಾರದ ಸಮ್ಮತಿ

ಬ್ರಿ॥ ಮಂತ್ರಿ ಮಂಡಲದ ಜೊತೆಯಲ್ಲಿ ವೈಸರಾಯರು ಲಂಡನ್ನಿಗೆ ತೆರಳಿ ನಡೆಸಿದ ಮಾತುಕತೆಗಳು ನಿನ್ನೆಗೆ ಮುಕ್ತಾಯಗೊಂಡುವೆಂದು ತಿಳಿದು ಬಂದಿದೆ. ವೈಸರಾಯರ ಯೋಜನೆಯನ್ನು ಅತ್ಯಂತ ಬ್ರಿ॥ ಮಂತ್ರಿ ಮಂಡಲವು ಒಪ್ಪಿರುವುದಾಗಿ ಹೇಳಲಾಗಿದೆ. ಈ ಯೋಜನೆಯ ಅಂಶಗಳನ್ನು ಜೂನ್ ೨ನೇ ತಾ॥ ದೆಹಲಿಯಲ್ಲಿ ನಡೆಯುವ ಮುಖಂಡರ ಸಮ್ಮೇಳನಕ್ಕಿಂತ ಮುಂಚೆಯಾಗಿ ಹೊರಗೆಡಹುವುದಿಲ್ಲವೆಂದು ತಿಳಿಸಲಾಗಿದೆ.

ಜಾಗೃತಿ

ಬೊಂಬಾಯಿ ನಗರದಿಂದ ಪ್ರತಿಭಾನುವಾರ 'ಜಾಗೃತಿ' ಎಂಬ ಸಚಿತ್ರ ಕನ್ನಡ ವಾರ ಪತ್ರಿಕೆಯೊಂದು ಕಳೆದ ೧೧ನೇ ತಾ॥ ನಿಂದ ಹೊರಡಲಾರಂಭವಾಗಿದೆ ಇದರ ಸಂಪಾದಕರು ಶ್ರೀ. ಸಸಿಹಿತ್ಲು ವೆಂಕಟರಾಯರು ಮೈಸೂರಿನ ಚಿರಪರಿಚಿತರಾದ ಶ್ರೀ ಪಾದ್ರಿ ಶಾಮಣ್ಣನವರು ಇದರ ಸಹ ಸಂಪಾದಕರು ಶ್ರೀಮತಿ ಕಮಲಾದೇವಿ, ಶ್ರೀ ಬಿ. ಜಿ. ಗೋಖಲೆ ಮತ್ತು ಶ್ರೀ ಕೆ ಎಸ್ ಕಾರಂತರವರು ಸಂಪಾದಕ ಮಂಡಲದಲ್ಲಿರುವರು ಈ ಪತ್ರಿಕೆಯು ಸಮಾಜವಾದಿ ಪಕ್ಷದ ಪ್ರಚಾರದಲ್ಲಿ ಪ್ರಧಾನ ಪಾತ್ರವಹಿಸಿ, ಮನೋರಂಜನವಾಗಿದೆ: ಭಾವನೆ, ಯೋಜನೆಗಳ ಕ್ರಾಂತಿಯ ಈ ಸಮಯದಲ್ಲಿ ಕನ್ನಡಿಗರಿಗೆ ಇಂತಹ ಪತ್ರಿಕೆ ಬಹು ಅವಶ್ಯಕತೆ ಬಹಳವಾಗಿದೆ

ಕೇಂದ್ರ ಸರ್ಕಾರದೊಡನೆ ಸಂಸ್ಥಾನಗಳ ಸಂಬಂಧ

ದೇಶೀಯ ಸಂಸ್ಥಾನಗಳು ಇದುವರೆಗೆ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳೊಡನೆ ಪತ್ರ ವ್ಯವಹಾರ ಬೆಳೆಸುವಾಗ ತಮ್ಮ ತಮ್ಮ ರೆಸಿಡೆಂಟರುಗಳ ಮೂಲಕವೇ ಹಾಗೆ ಮಾಡಬೇಕೆಂದು ಇದುವರೆಗೆ ಜಾರಿಯಲ್ಲಿದ್ದ ಪದ್ಧತಿಯನ್ನು ರದ್ದು ಮಾಡಿ ಇನ್ನು ಮುಂದೆ ನೇರವಾಗಿ ವ್ಯವಹಾರ ನಡೆಸಬಹುದೆಂದು ವ್ಯವಸ್ಥೆ ಮಾಡಲಾಗುತ್ತದೆ

ಲೀಗಿನವರಿಗೇ ಪ್ರತ್ಯೇಕ ರಾಜ್ಯಾಂಗ ಸಭೆ

ಭಾರತವನ್ನು ವಿಭಾಗಿಸುವುದು ಅನಿವಾರ್ಯವೆಂದು ವರದಿಯಾಗಿದೆ ವೈಸರಾಯರ ಅಖೈರು ಪ್ರಯತ್ನವು ವಿಫಲವಾದರೆ ಆಗ್ಗೆ ಲೀಗಿನವರಿಗೇ ಪ್ರತ್ಯೇಕ ರಾಜ್ಯಾಂಗ ಸಭೆಯನ್ನು ನಿರ್ಮಿಸಿ, ಪಾಕಿಸ್ತಾನದ ರಾಜ್ಯಾಂಗವನ್ನು ರಚಿಸಲು ಅವಕಾಶ ಕಲ್ಪಿಸಿಕೊಡಲಾಗುವುದೆಂದು ಹೇಳಲಾಗಿದೆ

ಕಾಂಗ್ರೆಸ್, ಲೀಗ್ ಒಪ್ಪಂದಕ್ಕೆ ಫಕೀರರ ಮಧ್ಯಸ್ತಿಕೆ

ಕಾಂಗ್ರೆಸ್ ಮತ್ತು ಲೀಗಿನ ಮುಖಂಡರು ಪರಸ್ಪರ ರಾಜಿ ಆದರೆ ಅವರಿಬ್ಬರಿಗೂ ಒಪ್ಪಂದ ಮಾಡಿಸಲು ತಾವು ಮಧ್ಯಸ್ತಿಕೆಯನ್ನು ವಹಿಸಲು ತಯಾರಾಗಿರುವುದಾಗಿ ವಜೀರಿಸ್ತಾನದ ನಾಯಕರಾದ ಇಪಿ ಫಕೀರರು ಹೇಳಿಕೆಯೊಂದನ್ನು ಹೊರಡಿಸಿದ್ದಾರೆ. ಈ ಉಭಯರ ವಿಶ್ವಾಸ ಮತ್ತು ಶಾಂತಿಯಿಂದ ಸೌಹಾರ್ದ ಸಾಧ್ಯವೆಂದೂ, ಬ್ರಿಟಿಷರು ಭಾರತದಲ್ಲಿರುವವರೆಗೆ ಒಪ್ಪಂದ ಸಾಧ್ಯವಿಲ್ಲವೆಂದೂ ಅವರು ತಿಳಿಸಿದ್ದಾರೆ

ಬೋಸರು ಬದುಕಿದ್ದಾರೆ

ಗ್ಲೋಬ್] ಬೊಂಬಾಯಿ ೨೧

ಬೋಸರು ಸತ್ತುಹೋಗಿರುವುದಾಗಿ ಅನೇಕ ವಿಧವಾಗಿ ಸುದ್ದಿಗಳು ಪ್ರಕಟವಾಗಿದ್ದರೂ ಸಹ ಇನ್ನೂ ಅವರು ಬದುಕಿರುವುದಾಗಿಯೇ ತಾವು ನಂಬುವುದಾಗಿ ಅಖಿಲ ಭಾರತ ಫಾರ್ವರ್ಡ್ ಬ್ಲಾಕಿನ ಅಧ್ಯಕ್ಷರಾದ ಸರ್ದಾರ್ ಶಾರ್ದೂಲಸಿಂಗ್ ಕವೀಶ್ವರರು ಹೇಳಿರುತ್ತಾರೆ

ವಿಶ್ವ ಆಹಾರ ಸಮಿತಿಗೆ ಡಾ॥ ಪ್ರಸಾದರ ಪ್ರತಿಭಟನೆ

ಪ್ರಪಂಚದ ಜನರಿಗೆ ಆಹಾರ ಸಮಿತಿಯು ಭಾರತಕ್ಕೆ ಹಂಚಿರುವ ಆಕ್ಕಿಯ ಪ್ರಮಾಣವು ಬಹಳ ಕಡಿಮೆಯೆಂದು, ಭಾರತ ಸರ್ಕಾರದ ಆಹಾರ ಮಂತ್ರಿಗಳಾದ ಡಾ॥ ರಾಜೇಂದ್ರ ಪ್ರಸಾದರು ತಮ್ಮ ಪ್ರತಿಭಟನೆಯನ್ನು ಸೂಚಿಸಿದ್ದಾರೆ.

ಚಿತ್ರದ ಆರಂಭೋತ್ಸವ

ಮೈಸೂರು ೨೦

ಮೊನ್ನೆ ದಿನ ಮಹಾವೀರ್ ಫಿಲಂಸ್ ಎಕ್ಸ್‌ಚೇಂಜಿನವರ ಕನ್ನಡ ಭಾರತಿ ಚಿತ್ರವು ನವಜ್ಯೋತಿ ಸ್ಟುಡಿಯೋವಿನಲ್ಲಿ ಶ್ರೀ॥ ಜಿ ಆರ್. ರಾಮಯ್ಯನವರಿಂದ ಆರಂಭೋತ್ಸವ ಆರಂಭಿಸಲ್ಪಟ್ಟಿತು ರಾಜಧಾನಿಯ ಅನೇಕ ಪ್ರಮುಖರು ಈ ಸಂದರ್ಭದಲ್ಲಿ ಆಹ್ವಾನಿತರಾಗಿ ಸತ್ಕರಿಸಲ್ಪಟ್ಟರು.

ಸ್ಮಟ್ಸರ ಸಲಹೆಗೆ ನೆಹರೂರವರ ತಿರಸ್ಕಾರ

ದಕ್ಷಿಣ ಆಫ್ರಿಕಾ ಸರ್ಕಾರದೊಡನೆ ಸಂಬಂಧವನ್ನು ಉತ್ತಮಪಡಿಸಲು ಭಾರತೀಯ ಹೈಕಮಿಷನರನ್ನು ಹಿಂದಕ್ಕೆ ಕಳುಹಿಸಬೇಕೆಂದು ಜ॥ ಸ್ಮಟ್ಸರು ಭಾರತ ಸರ್ಕಾರಕ್ಕೆ ಬರೆದು ಕೊಂಡಿದ್ದರು ಪಂ॥ ನೆಹರೂರವರು ಈ ಸಲಹೆಯನ್ನು ತಿರಸ್ಕರಿಸಿರುವರೆಂದು ತಿಳಿದುಬಂದಿದೆ.

ಶಿಕ್ಷಣ ಶಿಬಿರ

ಮೈಸೂರು ೨೦

ಮೈಸೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ತಾಲ್ಲೂಕು ಮೇಲ್ವಿಚಾರಕರ ಶಿಕ್ಷಣ ಶಿಬಿರವು ಇದೇ ೨೭ನೇ ತಾ॥ ನಿಂದ ನಂಜನಗೂಡು ವಿದ್ಯಾಪೀಠದಲ್ಲಿ ೫ ದಿನಗಳ ಕಾಲ ನಡೆಯುತ್ತದೆ. ಶ್ರೀ॥ ಕೆ. ಎ ಬಾಳಪ್ಪಾಚಾರ್ಯರವರು ಶಿಬಿರದ ಆರಂಭೋತ್ಸವವನ್ನು ನೆರವೇರಿಸುವರು

ಪ್ರಜಾಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಸಭೆ

ಇದೇ ೨೮ನೇ ತಾ॥ ನಿಂದ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವು ಆರಂಭವಾಗಲಿದೆ. ಅದೇ ದಿನ ಬೆಳಗ್ಗೆ ೯ ಘಂಟೆಗೆ ಕಾಂಗ್ರೆಸ್ ಪಕ್ಷದವರ ಸಭೆಯನ್ನು ಕರೆಯಲಾಗಿದೆಯೆಂದೂ ಪಕ್ಷದ ಸದಸ್ಯರೆಲ್ಲರೂ ೨೭ನೇ ತಾ॥ ಬೆಂಗಳೂರಿಗೆ ದಯಮಾಡಿಸಿ ಮಾರನೇ ಬೆಳಗ್ಗೆ ಪಕ್ಷದ ಸಭೆಗೆ ತಪ್ಪದೆ ದಯಮಾಡಿಸಬೇಕೆಂದೂ, ಪಕ್ಷದ ಉಪನಾಯಕರಾದ ಟಿ. ಸೀತಾರಾಮಯ್ಯನವರು ಪ್ರಾರ್ಥಿಸಿದ್ದಾರೆ.

ಮೈಸೂರು ಕೋ-ಆಪರೇಟಿವ್ ಸೊಸೈಟಿ

ಡೈರೆಕ್ಟರುಗಳ ಚುನಾವಣೆ

25-5-47 ಭಾನುವಾರ

ಮೇಲ್ಕಂಡ ಸೊಸೈಟಿಯ ಡೈರೆಕ್ಟರುಗಳ ಸ್ಥಾನಕ್ಕೆ ಈ ಕೆಳಗೆ ಕಂಡವರನ್ನು ಚುನಾಯಿಸಬೇಕಾಗಿ ವಿನಂತಿ:—

ಕ್ರಮಸಂಖ್ಯೆ

೧ ಅಗರಂ ರಂಗಯ್ಯ,

೪ ಎ. ಕೃಷ್ಣಮೂರ್ತಿ ರಾವ್,

೬ ಬಿ. ಕೃಷ್ಣಮೂರ್ತಿ,

೭ ಬಿ. ವಿ. ಕೃಷ್ಣಮೂರ್ತಿ,

೧೧ ಎಂ. ಎ. ಜೋಯಿಸ್,

೧೫ ಬಿ ಎಸ್ ತಾಂಡವಮೂರ್ತಿ

೧೭ ಎಂ. ಜಿ. ನರಸಿಂಹಮೂರ್ತಿ

೧೯ ಎಂ. ಎಸ್. ನಂಜಪ್ಪ,

೨೦ ಕೆ. ಪುಟ್ಟಸ್ವಾಮಿರಾವ್,

೨೫ ಕೆ. ರಂಗಯ್ಯ ಶೆಟ್ಟಿ,

೩೦ ಎಸ್. ರಂಗರಾಮಯ್ಯ,

೩೩ ಎಸ್. ಲಿಂಗಣ್ಣ,

೩೪ ವಿ. ಲಿಂಗಪ್ಪಯ್ಯ

೩೫ ಎಸ್. ಶೇಷಗಿರಿ ರಾವ್,

೩೯ ಪಾಲಹಳ್ಳಿ ಸೀತಾರಾಮಯ್ಯ

—ಸೊಸೈಟಿಯ ಹಿತೈಷಿಗಳು

ಸಾಧ್ವಿ

ತಾ॥ ೨೪-೫-೪೭ ಶನಿವಾರ

ಪೌರಸಭೆಯು ಬಿಕ್ಕಟ್ಟು

ಉಪಾಧ್ಯಕ್ಷರು ಪೌರ ಸಭಾಧ್ಯಕ್ಷರ ಮೇಲೆ ಅವಿಶ್ವಾಸವನ್ನು ಸೂಚಿಸಿ ಅವನ್ನು ಪಾಸು ಮಾಡುವ ಸಂಭವ ಪ್ರಕರಣವು ಮುಕ್ತಾಯವಾಯಿತೆಂದು ನಾವು ನಂಬಿದ್ದೆವು. ಪೌರಸಭೆಯ ಮುಂದಿನ ಅಧ್ಯಾಯವನ್ನು ಸರ್ಕಾರವೇ ಆರಂಭಿಸಬೇಕೆಂದು ಅಧ್ಯಕ್ಷರು ಬರೆದಿದ್ದ ಪತ್ರದ ಪ್ರಕಾರ ಅವರು ಸಭೆಯ ಅಭಿಪ್ರಾಯದಂತೆ ನಡೆಯುವರೆಂದು ಭಾವಿಸಿದ್ದೆವು. ಆದರೆ ಇನ್ನೂ ಈ ಪ್ರಸಂಗದ ಪರಿಸಮಾಪ್ತಿ ಕಾಲವು ಬಂದಿರುವಂತೆ ಕಾಣುವುದಿಲ್ಲ.

ಉಪಾಧ್ಯಕ್ಷರು ನಡೆಸಿದ ವಿಶೇಷ ಸಭೆಯ ನಡವಳಿಕೆಗಳನ್ನು ಪುಸ್ತಕದಲ್ಲಿ ಬರೆಯಲು ಅಧ್ಯಕ್ಷರು ಈಗ ನಿರಾಕರಿಸುತ್ತಿರುವುದರಿಂದ ಮತ್ತೆ ಬಿಕ್ಕಟ್ಟು ತಲೆದೋರಿರುತ್ತದೆ. ಅದನ್ನು ಬರೆಯುವ ವರೆಗೆ ಯಾವ ಸಭೆಗಳನ್ನೂ ನಡೆಸುವುದಿಲ್ಲವೆಂದು ಸದಸ್ಯರು ಸಂಕಲ್ಪ ಮಾಡಿದ್ದಾರೆ. ಈಗಾಗಲೇ ಎರಡು ಸಭೆಗಳು ಯಾವ ಕೆಲಸವನ್ನೂ ಮಾಡದೆ ಮುಂದುವರಿಸಲ್ಪಟ್ಟವು. ಬರುವ ವರ್ಷದ ಆಯವ್ಯಯವನ್ನು ಪರಿಶೀಲಿಸಲು ಏರ್ಪಡಿಸಿದ್ದ ಸಭೆಯೂ ಸಹ ಮುಂದೆ ಹಾಕಲ್ಪಟ್ಟಿತು.

ಈ ವಿಷಯದಲ್ಲಿ ಸರ್ಕಾರದವರ ಅಭಿಪ್ರಾಯವು ಬರುವ ವರೆಗೆ ಕಾಯಬೇಕೆಂದು ಅಧ್ಯಕ್ಷರು ಹೇಳುತ್ತಿರುವರು. ಸರ್ಕಾರದವರು ಇದರಲ್ಲಿ ಪ್ರವೇಶಿಸಲು ಶಾಸನದ ಪ್ರಕಾರ ಯಾವ ಅವಕಾಶವೂ ಇರುವುದಿಲ್ಲ. ಅವರು ಹಾಗೆ ಪ್ರವೇಶಿಸ ಕೂಡದೆಂದೇ ನಮ್ಮ ನಂಬಿಕೆ. ಹಿಂದೆ ಇಂಥ ಜಗಳದ ಪ್ರಸಂಗವು ನಡೆದಾಗ ಸರ್ಕಾರದವರು ಮಧ್ಯೆ ಕೈ ಹಾಕಿರಲಿಲ್ಲ. ಈಗಲೂ ಸಹ ಅವರು ಯಾವ ಸೂಚನೆಯನ್ನೂ ಕೊಡದಿರುವುದೇ ಲೇಸು.

ಪೌರಸಭೆಯ ಅಧಿವೇಶನದಲ್ಲಿ ನಡೆಯುವ ಕಾರ್ಯಕಲಾಪಗಳು ಕೇವಲ ಆ ಸಭೆಗೆ ಸಂಬಂಧಪಟ್ಟವು. ಅವುಗಳಲ್ಲಿ ಶಾಸನಕ್ಕೆ ವಿರೋಧವಾದ ವಿಚಾರಗಳಿದ್ದರೆ ಆಗ ಸರ್ಕಾರದವರು ಕೈ ಹಾಕಿ ಅಂಥ ಭಾಗಗಳನ್ನು ಮಾತ್ರ ತೆಗೆಯಬಹುದು. ಇದೇ ಪದ್ಧತಿಯನ್ನೇ ಅನುಸರಿಸಬೇಕೆಂದು ಹೇಳಲು ಯಾರಿಗೂ ಅಧಿಕಾರವಿರುವುದಿಲ್ಲ.

ಉಪಾಧ್ಯಕ್ಷರು ಬಹಿರಂಗವಾಗಿ ವಿಶೇಷ ಸಭೆಯನ್ನು ಕರೆದಿದ್ದರು. ಅದರ ವಿಷಯವು ಅಧ್ಯಕ್ಷರಿಗೂ ಗೊತ್ತಿತ್ತು. ಸಭೆಯು ಸಮಯಕ್ಕೆ ಸರಿಯಾಗಿ ಅಧ್ಯಕ್ಷರು ತಮ್ಮ ನಿಲುವು ಸೂಚಕ ಪತ್ರವನ್ನೂ ಕಳುಹಿಸಿದರು. ಈ ವಿಚಾರಗಳೆಲ್ಲವೂ ಸಾರ್ವಜನಿಕರಿಗೆ ತಿಳಿದಿವೆ. ಎಲ್ಲ ಪತ್ರಿಕೆಗಳಲ್ಲಿಯೂ ಪ್ರಕಟವಾಗಿವೆ. ಸರ್ಕಾರದವರು ಈ ವಿವರಗಳನ್ನು ಅಧ್ಯಕ್ಷರಿಗೆ ತಿಳಿಸಿರುತ್ತಾರೆ. ಇನ್ನು ಪುಸ್ತಕದಲ್ಲಿ ಬರೆಯಲು ಏಕೆ ಹಿಂದೆ ಮಾಡಬೇಕೋ ತಿಳಿಯದು. ಈ ವಿಷಯದಲ್ಲಿ ಅಧ್ಯಕ್ಷರು ಸರ್ಕಾರದ ಕೈಗೊಂಬೆಯಾಗದೆ ಪೌರ ಸಭೆಯ ಘನತೆಯನ್ನು ಕಾಪಾಡಬೇಕು. ಇಲ್ಲವಾದರೆ ಪೌರಸಭೆಯ [illegible]

[illegible]

ಜಿಲ್ಲಾಧಿಕಾರಿಗಳ ಮೇಲೆ ಮಾನ ನಷ್ಟ ಮೊಕದ್ದಮೆ

ಹಾಸನದ ಜಿಲ್ಲಾಧಿಕಾರಿಗಳಾದ ಶ್ರೀ॥ ನಿರಂಜನರಾಜೇ ಅರಸಿನವರು ಅಲ್ಲಿನ ಪ್ರಸಿದ್ಧ ವಕೀಲರಾದ ಶ್ರೀ॥ ಜಿ. ಎ. ತಿಮ್ಮೇಗೌಡರನ್ನು ಷಟ್ ಅಪ್ ಎಂದದರಿಂದ ಅದರ ಬಗ್ಗೆ ಕ್ಷಮೆ ಕೇಳಬೇಕೆಂದು ಶ್ರೀ॥ ಗೌಡರು ಅವರಿಗೆ ನೋಟೀಸು ಕೊಟ್ಟಿದ್ದರು. ಆ ನೋಟೀಸಿಗೆ ಜಿಲ್ಲಾಧಿಕಾರಿಗಳು ಉತ್ತರ ಕೊಟ್ಟಿಲ್ಲದಿರುವುದರಿಂದ ಅವರು ಜಿಲ್ಲಾಧಿಕಾರಿಗಳ ಮೇಲೆ ಮಾನ ನಷ್ಟ ಮೊಕದ್ದಮೆ ಹೂಡಲಿರುವರೆಂದು ವರದಿಯಾಗಿದೆ.

ಯಾವ ರಂಗಸ್ಥಳವಲ್ಲದೆ ಸರ್ಕಾರವಲ್ಲ ಸ್ಥಳೀಯ ಸಂಸ್ಥೆಗಳ ಆಡಳಿತವು ಆಯಾ ಸಂಸ್ಥೆಗಳಲ್ಲಿಯೇ ಐಕ್ಯವಾಗಿರುವುದರಿಂದ ಸರ್ಕಾರದವರು ಅವುಗಳಲ್ಲಿ ಕೈ ಹಾಕಲು ಅವಕಾಶವಿರುವುದಿಲ್ಲ.

ಕಳೆದು ಹೋದ ಪ್ರಸಂಗವು ಮತ್ತೆ ಮರುಕಳಿಸುವಂತೆ ಅಧ್ಯಕ್ಷರು ಮಾಡಿ ಇಲ್ಲದ ಬಿಕ್ಕಟ್ಟಿಗೆ ಅವಕಾಶವುಂಟುಮಾಡಿದ್ದಾರೆ. ಸರ್ಕಾರದವರಾದರೂ ಅವರಿಗೆ ಸರಿಯಾದ ತಿಳುವಳಿಕೆಯನ್ನು ಕೊಡದೆ ತಟಸ್ಥರಾಗಿರುತ್ತಾರೆ. ಈ ಸನ್ನಿವೇಶದಲ್ಲಿ ಪೌರಸಭೆಯು ಕೆಲಸ ಕಾರ್ಯಗಳಿಗೆ ಅಡಚಣೆಯುಂಟಾಗಿರುತ್ತದೆ. ಇಂದಿನ ಅಧ್ಯಕ್ಷರನ್ನು ಈಗಲೇ ಬೇರೆ ಕಡೆಗೆ ವರ್ಗಾಯಿಸಿ ಈ ಪೌರಸಭೆಯಲ್ಲಿ ಚುನಾಯಿತ ಅಧ್ಯಕ್ಷರಿರುವಂತೆ ಸರ್ಕಾರದವರು ಕೂಡಲೇ ಏರ್ಪಾಡು ಮಾಡದಿದ್ದರೆ ಇಂತಹ ಅವ್ಯವಸ್ಥೆಗಳು ತಪ್ಪುವುವೇ?

Morning Shows at
SRI GANESH TALKIES
on 24, 25 and 26 at 10-30 a.m.
Universal's mammoth
Production
'This is the Life'
Starring:-SUSANNA FOSTER
DONALD O' CONNOR

ರಾಜಕಮಲ್
೨೩-೫-೪೭ ರಿಂದ ೪ ದಿನಗಳು
ಪ್ರತಿ ದಿನ ಬೆಳಗ್ಗೆ ೧೦-೩೦ ಗಂಟೆಗೆ
ಬಾಂಬೆ ಟಾಕೀಸಿನವರ
ನಿರ್ಮಲ
(ಹಿಂದಿ)
-ಭೂಮಿಕೆ:-
ಅಶೋಕ್ ಕುಮಾರ್ ಮತ್ತು
ದೇವಿಕಾರಾಣಿ

ಮೈಸೂರು ಸಿಟಿ
ಟೂರಿಸ್ಟ್ ಬಿಟ್ಟನ್ನುಗಳಿಗೆ
ಪ್ರಭಾತ್ ಬ್ಯಾಂಗಲ್ಸ್
ಸ್ಟೋರ್ಸಿಗೆ
ಭೇಟಿ ಕೊಡಿ

ಒಲಿಂಪಿಯಾ ಟಾಕೀಸ್, ಮೈಸೂರು
೨೪-೫-೪೭ ರಿಂದ ೬ ನೇ ವಾರ
ರಾಜಕುಮಾರಿ
(ತಮಿಳು)

ಕೋರ್ಟಿನಲ್ಲೇ ವಕೀಲರ ಮರಣ

ಕೋಲಾರದ ಜಿಲ್ಲಾಧಿಕಾರಿಗಳ ನ್ಯಾಯಸ್ಥಾನದಲ್ಲಿ ಮೊದಲನೆಯ ಬಾರಿ ವ್ಯವಹಾರ ಹೂಡಿದ್ದರಲ್ಲಿ ವಾದ ಮಾಡುತ್ತಲಿದ್ದ ೨೬ ವರ್ಷ ವಯಸ್ಸಿನ ಯುವಕ ವಕೀಲರಾದ ಶ್ರೀ॥ ಎ. ಎಸ್. ಶ್ರೀನಿವಾಸ ಮೂರ್ತಿಯವರು ಹೃದಯ ಸ್ತಂಭನದಿಂದ ನಿಧನರಾದರೆಂಬ ವಿಷಾದ ವಾರ್ತೆ ಬಂದಿದೆ.

ಗಡಿನಾಡು ಗವರ್ನರರ ಬದಲಾವಣೆ

ಗಡಿನಾಡು ಪ್ರಾಂತ್ಯದ ಗವರ್ನರಾದ ಸರ್ ಓಲಾಫ್ ಕ್ಯಾರೋರವರನ್ನು ಅಲ್ಲಿಂದ ಬದಲಾಯಿಸಲಾಗುವುದೆಂದೂ, ಈಗಿನ ಪ್ರಾಂತ್ಯ ಪರಿಸ್ಥಿತಿ ಮತ್ತು ಗುಡ್ಡಗಾಡಿನ ಸಮಸ್ಯೆಗಳಿಂದ ಮುಕ್ತನಾಗುವ ವಿರೋಧ್ಯವರೇ ಅಲ್ಲಿನ ಗವರ್ನರಾಗಿ ನೇಮಕವಾಗಬಹುದೆಂದೂ ವರದಿಯಾಗಿದೆ.

ದಿ ಮೈಸೂರು ಕೋ-ಆಪರೇಟಿವ್ ಸೊಸೈಟಿ
ಡೈರೆಕ್ಟರುಗಳ ಚುನಾವಣೆ
25-5-47 ರಲ್ಲಿ ಮಧ್ಯಾಹ್ನ 3-30 ರಿಂದ
ಶಾ॥ ಧ॥ ಡಿ. ಬನುಮಯ್ಯನವರ
ಹೈಸ್ಕೂಲಿನಲ್ಲಿ
ನಂ. 32
ಬಿ. ಆರ್. ಲಕ್ಷ್ಮಣಶೆಟ್ಟಿ
ಏಜೆಂಟ್:—ಮೈಸೂರು ಗೌರ್ನಮೆಂಟ್ ಇನ್ಸೂರೆನ್ಸ್
ಪ್ರೊಪ್ರೈಟರ್:—ದಿ ಎಲೆಕ್ಟ್ರಿಕ್ ಟ್ರೇಡ್ ಹೌಸ್
ಡೈರೆಕ್ಟರ್:-ದಿ ಮೈಸೂರು ಕೋ ಆಪರೇಟಿವ್ ಸೊಸೈಟಿ
ಡೈರೆಕ್ಟರ್:—ದಿ ಕೋ-ಆಪರೇಟಿವ್ ಹೌಸಿಂಗ್ ಸೊಸೈಟಿ
ಇವರಿಗೆ ತಮ್ಮ ಅಮೂಲ್ಯವಾದ ಓಟನ್ನು ಕೊಡಬೇಕಾಗಿ ಪ್ರಾರ್ಥನೆ.

ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆ

ಮೈಸೂರು,

ಇದೇ ೨೬ನೇ ತಾ॥ ಮಧ್ಯಾಹ್ನ ೪ ಟೆಗೆ ದೇವರಾಜ ಮಾರ್ಕೆಟ್ ಮತ್ತು ಮೇಲಿರುವ ಪುರಸಭಾ ಕಾಂಗ್ರೆಸ್ ಕಛೇರಿಯಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಜರುಗುತ್ತದೆ. ಅದೇ ಸಂದರ್ಭದಲ್ಲಿ ಜಿಲ್ಲಾ ಬೋರ್ಡಿಗೆ ಚುನಾಯಿತರಾಗಿರುವ ಪ್ರತಿನಿಧಿಗಳಾಗಿರುವ ಕಾಂಗ್ರೆಸ್ ಪಕ್ಷದ ಕೂಟವನ್ನು ನಡೆಸಲಾಗುವುದು. ಸಭೆಗೆ ಸದಸ್ಯರುಗಳೆಲ್ಲರೂ ತಪ್ಪದೆ ಹಾಜರಾಗಬೇಕೆಂದು ಕಾರ್ಯದರ್ಶಿ ಪ್ರಾರ್ಥಿಸಿದ್ದಾರೆ.

ರಾಜಕಮಲ್,
ತಾ॥ ೨೩-೫-೪೭ ರಿಂದ
ಐದನೇ ವಾರ
ಪ್ರತಿ ದಿನ ೨ ಆಟಗಳು
ಕೃಷ್ಣವೇಣಿ
ರಘುರಾಮಯ್ಯ

ಓಟಿಂಗ್ ಲಿಸ್ಟಿನಲ್ಲಿ ಕಡೆಯ ನಂಬರಿಂಬುವುದನ್ನು ಮರೆಯಬೇಡಿ
ದಿ ಮೈಸೂರು ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್,
ಡೈರೆಕ್ಟರುಗಳ ಚುನಾವಣೆ
ತಾ॥ 25-5-47 ಭಾನುವಾರ ಶಾ॥ ಧ॥ ಡಿ ಬನುಮಯ್ಯನವರ ಹೈ ಸ್ಕೂಲಿನಲ್ಲಿ.
ಮೆಂಬರುಗಳಲ್ಲಿ ವಿಜ್ಞಾಪನೆ
ನಂ. 43 ನಂ. 43
ಜಿ. ವಿ. ಸೂರ್ಯನಾರಾಯಣ ಶೆಟ್ಟಿ
ಪ್ರೆಸಿಡೆಂಟ್: ರಿಟೈಲ್ ಕ್ಲೈತ್ ಮರ್ಚೆಂಟ್ಸ್ ಅಸೋಸಿಯೇಷನ್
ವೈಸ್-ಪ್ರೆಸಿಡೆಂಟ್-ಮೈಸೂರು ಪೀಸ್ ಗೂಡ್ಸ್ ಮರ್ಚೆಂಟ್ಸ್ ಅಸೋಸಿಯೇಷನ್, ರವೇ ಬೀದಿ, ಮೈಸೂರು
ಡೈರೆಕ್ಟರ್: { ಮೈಸೂರು ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
ಶಿವಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ ಲಿಮಿಟೆಡ್
ಇವರಿಗೆ ತಮ್ಮ ಅಮೂಲ್ಯವಾದ ಓಟನ್ನು ತಪ್ಪದೆ ಕೊಡಬೇಕಾಗಿ ಪ್ರಾರ್ಥನೆ

25-5-47 ನೇ ತಾ॥ ನಿಂದ ಜನಭರಿತವಾದ 4 ನೇ ವಾರ
ವುಡ್‌ಲ್ಯಾಂಡ್ಸ್ ಟಾಕೀಸ್, ಮೈಸೂರು.
'ನಾಮ್ ಇರುವರ್' (ತಮಿಳು)
ಪ್ರತಿ ದಿನ ಮೂರು ಆಟಗಳು
ಪಾತ್ರಗಳು:-ಟಿ ಆರ್. ಮಹಾಲಿಂಗಂ, ಟಿ. ಎ. ಜಯಲಕ್ಷ್ಮಿ ಮತ್ತು ಬೇಬಿ ಕಮಲಾ

ರೆಜಿ. ನಂ. ೫೯೨ ॥ ವಂದೇ ಮಾತರಂ ॥ ಬಿಡಿ ಪ್ರತಿ ೩ ಕಾಸು

ಸಂಪುಟ ೫] ಭಾನುವಾರ ೨೫—೫—೪೭ [ಸಂಚಿಕೆ ೩೪೬

ವೈಸ್ರಾಯರ ಯೋಜನೆ ನೆಹರೂ ಮುಟ್ಟಿತು

ಮ್ಯಾಜಿಸ್ಟ್ರೇಟರುಗಳನ್ನೆಲ್ಲಾ ಜೈಲಿಗೆ ಕಳುಹಿಸಬೇಕು

ಬೊಂಬಾಯಿ ಪ್ರಾಂತದ ಕಾರಾಗೃಹ ಸು...ನ ಬಗ್ಗೆ ಬಂದಿದ್ದ ಪ್ರಶ್ನೆ ಒಂದಕ್ಕೆ ಉತ್ತ...ಗಿ ಅಲ್ಲಿನ ಉನ್ನತ ಪೋಲೀಸ್ ಅಧಿಕಾ...ರೊಬ್ಬರು ಉತ್ತರವಿತ್ತು ಎಲ್ಲ ನ್ಯಾಯಾ...ರನ್ನೂ ಕಡೆಯ ಪಕ್ಷ ಒಂದು ವಾರವಾ...ದ ಸೆರೆಮನೆಗೆ ಕಳುಹಿಸಬೇಕೆಂದು ಹೇ...ದ್ದಾರೆ. ಇದರಿಂದ ಅವರುಗಳ ಮುಂದೆ ಬರುವ ಪ್ರತಿಯೊಬ್ಬ ತಪ್ಪಿತಸ್ಥನಿಗೂ ...ವಿಧಿಸುವಾಗ ಸಮಂಜಸವಾದ ತೀರ್ಪು ...ಲು ಅನುಕೂಲವಾಗುವುದೆಂದು ಅವ...ತಿಳಿಸಿರುತ್ತಾರೆ.

...ಗಳು ಗಲಭೆಗೆ ಮೂಲ

...ಹೋರಿನ ಗಲಭೆಗಳ ಬಗ್ಗೆ ವಿಚಿತ್ರ ...ವೊಂದು ಹೊರಬಿದ್ದಿದೆ. ಅವ್ಯಕ...ಕೆಲವು ಪುಂಡರು ಲಾಹೋರಿನ ಕೆ...ಪಟಾಟಿಗಳಿಗೆ ಗಾಜಿನ ಬಳೆಯನ್ನು ...ಕುತ್ತಿದ್ದರೆಂದೂ, ಹಿಂದೂಗಳಿಗೆ ಬ...ನ್ನು ಕಳುಹಿಸುವುದು ಅವಹೇಳನವಾ...ದ ಗಲಭೆಗೆ ಅದೇ ಮೂಲ ಕಾರಣ ...ವೆಂತೂ, ಲಾಹೋರಿನ ಜಿಲ್ಲಾ ನ್ಯಾಯಾ...ರು ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿ ...ತಿಳಿಸಿರುವುದಾಗಿ ಗೊತ್ತಾಗಿದೆ.

...ದ್ಧ ರಕ್ತವಿಲ್ಲವೆಂದರಿಂದ ...ರುಣಿಯರ ಗಡೀಪಾರು

ಯುದ್ಧಕಾಲದಲ್ಲಿ ಅಮೆರಿಕದ ಸಿಪಾಯಿ...ನ್ನು ಮದುವೆಯಾದ ಇಬ್ಬರು ಬ್ರಿಟಿ...ಯರು ಈಗ ತಮ್ಮ ಗಂಡಂದಿರೊಡನೆ ...ಲು ಹೋದಾಗ ಅಮೆರಿಕದ ಶಾಸನದ ...ನ ಅವರಲ್ಲಿ ಇರಬೇಕಾದ ಶುದ್ಧ ಆಂ...ಸಾಕ್ಸನ್ ರಕ್ತದ ಪ್ರಮಾಣವು ಸಾಕಾ...ಇಲ್ಲದೆ ಶೇಕಡ ೫೦ ರಷ್ಟು ಮಾತ್ರ ...ಎಂಬ ಕಾರಣದ ಮೇಲೆ ಅವರನ್ನು ಅ...ಕದ ದ್ವೀಪ ಎಂಬ ಪ್ರಾಂತದಿಂದ ಗಡಿ...ಮಾಡಲಾಗಿದೆ.

ಕುದಿಯುವ ಎಣ್ಣೆಯಲ್ಲಿ ಕೈ ಅದ್ದಿಸಲಾಯಿತು

ತಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ...ವರ್ಷ ವಯಸ್ಸಿನ ಹರಿಜನ ಸೇವಕಿ...ಬ್ಬಳ ಕೈಯನ್ನು ಕುದಿಯುತ್ತಿರುವ ಎ...ಯೊಳಗೆ ಅದ್ದಿಸಿದರೆಂಬ ಅಪಾದನೆಯ...ಲೆ ಟಿಕ್ಕಪುರಂ ಎಂಬಲ್ಲಿನ ಮುಸ್ಲಿಂ ...ಹೆಯರನ್ನು ದಸ್ತಗಿರಿಮಾಡಿ ಜಾಮೀ...ನ ಮೇಲೆ ಬಿಡುಗಡೆ ಮಾಡಲಾಗಿದೆ. ಮ...ಸಲ್ಲಿದ್ದ ಹಿತ್ತಾಳೆ ಲೋಟವೊಂದನ್ನು ಕ...ರೆಂಬ ಅಪಾದನೆಯ ಮೇಲೆ ಕುದಿಯು...ವ ಎಣ್ಣೆಯೊಳಕ್ಕೆ ನಾಣ್ಯವೊಂದನ್ನು ...ತಾನು ನಿರಪರಾಧಿಯೆಂಬುದನ್ನು ಪ್ರ...ಮಾಣಪೂರ್ವಕವಾಗಿ ತೋರಿಸಲು ಆ ನಾ...ಣ್ಯವನ್ನು ತೆಗೆದುಕೊಳ್ಳಲು ಅವರು ಹುಡು...ಗಿಯನ್ನು ಒತ್ತಾಯಪಡಿಸಿದುದೇ ಅದಕ್ಕೆ ...ರಣವೆಂದು ಹೇಳಲಾಗಿದೆ.

ಕೇಂದ್ರ ಸರ್ಕಾರದ ನೌಕರರ ಮುಷ್ಕರವೇ ?

...ವೇತನ ಸಮಿತಿಯ ಸೂಚನೆಗಳು ಸ...ಮಾಧಾನಕರವಾಗಿ ತೋರದಿರುವುದರಿಂದ ...ಪೋಸ್ಟ್, ತಂತಿ ಮತ್ತು ಟೆಲಿಫೋನ್ ...ನೌಕರ ಸಂಘದವರು ಅವುಗಳನ್ನು ಟೀಕಿಸಿ, ...ಪರಿಶೀಲನೆ ಮಾಡಲು ಕೇಂದ್ರ ಸರ್ಕಾ...ರವನ್ನು ಕೇಳಿಕೊಂಡಿದ್ದಾರೆ. ಹಾಗೆ ಮಾ...ಡದಿದ್ದರೆ ಮುಷ್ಕರ ಹೂಡುವುದಾಗಿ ಅವರು ...ತಿಳಿಸಿದ್ದಾರೆಂದು ವರದಿಯಾಗಿದೆ.

ರಾಜ್ಯಾಂಗ ಸಭೆಗೆ ಸೇರಲು ಉದಯಪುರದರಸರ ಮನವಿ

ದೆಹಲಿಯಲ್ಲಿ ಬಲವಾದ ಕೇಂದ್ರ ಸರ...ಕಾರವೇರ್ಪಡುವಂತೆ ಸಹಾಯ ಮಾಡು...ವುದು ಎಲ್ಲ ಭಾರತೀಯರ ಕರ್ತವ್ಯವೆಂ...ದೂ, ಸಂಸ್ಥಾನಾಧೀಶರುಗಳು ರಾಜ್ಯಾಂಗ ಸಭೆಗೆ ಸೇರಬೇಕೆಂದೂ, ಉದಯಪುರದ ಮಹಾರಾಜರು ಮನವಿ ಮಾಡಿಕೊಂಡಿದ್ದಾರೆ.

ಪಾಕಿಸ್ಥಾನದಲ್ಲಿ ಬ್ರಿಟಿಷರ ಪ್ರಭಾವ

೧೯೪೮ ರ ಜೂನ್ ನಂತರ ಬ್ರಿಟಿಷರ ಪ್ರಭಾವವು ಪಾಕಿಸ್ತಾನದಲ್ಲಿ ಅಥವಾ ದೊಡ್ಡ ಸಂಸ್ಥಾನವೊಂದರಲ್ಲಿ ಇರುವುದಾದರೆ ಅದರಲ್ಲೇನೂ ಆಶ್ಚರ್ಯವಿಲ್ಲವೆಂದು ಬ್ರಿಟನ್ನಿನಲ್ಲಿ ಭಾರತದ ಹೈಕಮಿಷನರಾಗಿರುವ ಸರ್ ಸಾಮ್ಯುಯಲ್ ರಂಗನಾಥರವರು ಹೇಳಿದ್ದಾರೆ.

ದೆಹಲಿಗೆ ಎಂ. ಎ. ಶ್ರೀನಿವಾಸನ್

ಗ್ವಾಲಿಯರ್ ಸಂಸ್ಥಾನದ ಮಂತ್ರಿಮಂಡಲದ ಉಪಾಧ್ಯಕ್ಷರಾದ ಶ್ರೀ॥ ಎಂ. ಎ. ಶ್ರೀನಿವಾಸನ್‌ರವರು ಬೆಂಗಳೂರಿನಿಂದ ನಾಳೆ ಗ್ವಾಲಿಯರಿಗೆ ಪ್ರಯಾಣ ಮಾಡಿ, ಜೂನ್ ೨ನೇ ತಾ॥ ನಡೆಯುವ ಸಮ್ಮೇಳನದಲ್ಲಿ ಭಾಗವಹಿಸಲು ದೆಹಲಿಗೆ ತೆರಳುವರು. ಹೈದರಾಬಾದಿನ ದಿವಾನರಾದ ಸರ್ ಮಿರ್ಜಾರವರು ವಿಶೇಷ ರೈಲಿನಲ್ಲಿ ಬೆಂಗಳೂರಿನಿಂದ ದೆಹಲಿಗೆ ಅದೇ ಸಮ್ಮೇಳನಕ್ಕೆ ಹೋಗುವರು.

ಗೋವಧೆ ತಪ್ಪಿಸಲು ಸಾಧುಗಳ ಸತ್ಯಾಗ್ರಹ

ರಾಷ್ಟ್ರ ವಿಭಜನೆಯನ್ನೂ, ಗೋವಧೆಯನ್ನೂ ತಪ್ಪಿಸುವ ತಮ್ಮ ಕೋರಿಕೆಯನ್ನು ಭಾರತ ಸರ್ಕಾರವು ಕೂಡಲೇ ಪೂರೈಸದಿದ್ದರೆ ಸತ್ಯಾಗ್ರಹ ಹೂಡಲು ನೂರಾರು ಜನ ಸಾಧುಗಳು ದೆಹಲಿಯ ಯಮುನಾ ನದಿಯ ತೀರದಲ್ಲಿ ಬಿಡಾರ ಮಾಡಿದ್ದಾರೆ. ಕಳೆದ ಹದಿನೈದು ದಿನಗಳಿಂದ ಪ್ರತಿದಿನವೂ ೧೦ ರಿಂದ ೧೫ ಮಂದಿ ಸಾಧುಗಳು ವೈಸರಾಯ್ ಭವನ ಮತ್ತು ಸೆಕ್ರೆಟೇರಿಯೇಟ್ಟುಗಳ ಮುಂದೆ ಸತ್ಯಾಗ್ರಹ ನಡೆಸುತ್ತಿದ್ದಾರೆ. ಹಿಮಾಲಯ ಮತ್ತು ಇತರ ಬೆಟ್ಟಗಳ ಆಶ್ರಮದಲ್ಲಿರುವ ಎಲ್ಲ ಸಾಧುಗಳಿಗೂ ಸತ್ಯಾಗ್ರಹದಲ್ಲಿ ಭಾಗವಹಿಸಲು ಕರೆ ಹೋಗಿರುವುದಾಗಿ ವರದಿಯಾಗಿದೆ.

ಮೇವಾಡದಲ್ಲಿ ಜವಾಬ್ದಾರೀ ಸರ್ಕಾರ

ವಯಸ್ಕರಿಗೆಲ್ಲಾ ಓಟಿನ ಹಕ್ಕನ್ನು ಕೊಟ್ಟು, ಸಂಯುಕ್ತ ಚುನಾವಣಾ ಪದ್ಧತಿಯ ಮೇಲೆ ೩೧ ಜನರು ಚುನಾಯಿತ ಸಭ್ಯರಿರುವ ಶಾಸನ ಸಭೆಯನ್ನು ರಚಿಸುವುದು. ಭಿಲ್ಲರು ಮತ್ತು ಹಿಂದುಳಿದ ವರ್ಗದವರಿಗೆ ಸಂಖ್ಯಾನುಸಾರ ಪ್ರಾತಿನಿಧ್ಯ, ಮುಸ್ಲಿಮರಿಗೆ ೩, ಠಾಕೂರರಿಗೆ ೨, ಪಟೇಲರುಗಳಿಗೆ ಒಂದು ಸ್ಥಾನವನ್ನು ಕೊಡುವುದು. ಮಂತ್ರಿ ಮಂಡಲದಲ್ಲಿ ಒಬ್ಬ ಮುಖ್ಯ ಮಂತ್ರಿಯೂ, ಮೂವರು ಮಂತ್ರಿಗಳೂ ಇದ್ದು ೫ ವರ್ಷಗಳ ನಂತರ ಮುಖ್ಯ ಮಂತ್ರಿಯನ್ನು ಬಿಟ್ಟು ಮಿಕ್ಕೆಲ್ಲರೂ ಚುನಾಯಿತರೇ ಆಗುವುದು—ಈ ಅಂಶಗಳನ್ನೊಳಗೊಂಡ ಸುಧಾರಣೆಗಳನ್ನು ಜಾರಿಗೆ ತರುವುದಾಗಿ ಉದಯಪುರದ ಅರಸರು ವಿವರಿಸಿದ್ದಾರೆ.

ಜೂನ್ ೧ ರಿಂದ ನಿಕ್ಕಲ್ ರೂಪಾಯಿಗಳು

ನಿಕ್ಕಲ್ ರೂಪಾಯಿಗಳನ್ನು ಚಲಾಯಿಸಲು ಭಾರತ ಸರ್ಕಾರವು ಅಚ್ಚು ಒತ್ತಿದೆ. ಅದು ಜೂನ್ ೧ ರಿಂದಲೇ ಚಲಾವಣೆಗೆ ಬರುವುದು. ಅದು ಈಗಿರುವ ರೂಪಾಯಿಗಿಂತ ಆಕಾರದಲ್ಲಿ ಕಿರಿದಾಗಿ, ಈಗಿರುವ ಹೊಸ ಎಂಟಾಣೆ ಮತ್ತು ನಾಲ್ಕಾಣೆಯ ಚಿಹ್ನೆಗಳನ್ನು ಪಡೆದಿರುತ್ತದೆ. ತೂಕವು ಈಗಿರುವ ರೂಪಾಯಿಯಷ್ಟೇ ಇರುವುದು.

ವಿಶ್ವಕರ್ಮ ವಿದ್ಯಾರ್ಥಿ ನಿಲಯ

ಮೈಸೂರು ೨೫

ಮೈಸೂರು ವಿಶ್ವಕರ್ಮ ವಿದ್ಯಾರ್ಥಿ ನಿಲಯಕ್ಕೆ ಸೇರಲಪೇಕ್ಷಿಸುವ ವಿದ್ಯಾರ್ಥಿಗಳು ಜೂನ್ ೫ ನೇ ತಾ॥ ನೊಳಗೆ ಕಾರ್ಯದರ್ಶಿ, ಮನೆ ನಂ. ೨೮೫೧, ಹಳ್ಳದಕೇರಿ, ಮೈಸೂರು. ಈ ವಿಲಾಸಕ್ಕೆ ಅರ್ಜಿ ಹಾಕಿಕೊಳ್ಳಬೇಕಾಗಿ ಪ್ರಕಟಿಸಲಾಗಿದೆ.

ಕುಂಚಿಟಿಗರ ವಿದ್ಯಾರ್ಥಿ ನಿಲಯ

ರಾಜಧಾನಿಯ ನೋಟರಿ ರಸ್ತೆಯಲ್ಲಿರುವ ಶ್ರೀ ಹೊಂಬಾಳೆ ರಂಗಯ್ಯನವರ ವಿದ್ಯಾರ್ಥಿ ನಿಲಯವು ಜೂನ್ ೧೦ ನೇ ತಾ॥ ಆರಂಭವಾಗುವುದು. ೧೦ ಜನ ಕುಂಚಿಟಿಗ ಬಡ ವಿದ್ಯಾರ್ಥಿಗಳಿಗೆ ಉಚಿತ ಭೋಜನ ಏರ್ಪಾಡಾಗಿದೆ. ಈ ಪೈಕಿ ಮೂವರು ಹೆಣ್ಣು ಮಕ್ಕಳಿಗೂ ಅವಕಾಶಕೊಡಲಾಗುವುದು. ಸೇರಬಯಸುವ ಬಿ. ಎ., ಬಿ. ಎಸ್ಸಿ. ಮತ್ತು ಇಂಟರ್ ವಿದ್ಯಾರ್ಥಿಗಳು ಅರ್ಜಿ ಹಾಕಿಕೊಳ್ಳಬೇಕೆಂದು ಶ್ರೀ॥ ಹೊಂಬಾಳೆ ರಂಗಯ್ಯನವರು ತಿಳಿಸುತ್ತಾರೆ.

ಇಂದೂರಿನಲ್ಲಿ ಗುಂಡು

ಇಂದೂರು ಸಂಸ್ಥಾನವು ಭಾರತ ರಾಜ್ಯಾಂಗ ಸಭೆಗೆ ಸೇರಬೇಕೆಂದು ಒತ್ತಾಯ ಪಡಿಸಲು ೫ ಸಹಸ್ರ ಮಂದಿ ಪ್ರಜಾಮಂಡಲದವರು ಅಲ್ಲಿನ ಮಹಾರಾಜರ ಅರಮನೆಗೆ ಮೆರವಣಿಗೆಯಲ್ಲಿ ಹೊರಟಾಗ, ಅವರ ಮೇಲೆ ಪೊಲೀಸರು ೩ ಘಂಟೆಗಳ ಕಾಲ ಲಾಠಿ ಪ್ರಯೋಗ ನಡೆಸಿದರು. ಅಲ್ಲದೆ ಗುಂಡನ್ನೂ ಹಾರಿಸಿದ್ದಾರೆ. ಇದರಿಂದ ೧೫೦ ಮಂದಿ ತೀವ್ರ ಗಾಯಗೊಂಡಿದ್ದಾರೆ. ೨೦೦ ಮಂದಿಯನ್ನು ದಸ್ತಗಿರಿ ಮಾಡಲಾಗಿದೆ. ಸಂಸ್ಥಾನದಲ್ಲೆಲ್ಲಾ ಹರತಾಳ ನಡೆಯುತ್ತಿದೆ. ನಾನ್ ಗೆಜೆಟೆಡ್ ಅಧಿಕಾರಿಗಳ ಮುಷ್ಕರ ಮುಂದುವರಿಯುತ್ತಿದೆ.

ಪಂ॥ ನೆಹರೂರವರಿಗೆ ವೈಸ್ರಾಯರ ಹೊಸ ಬೇಡಿಕೆ

ಬ್ರಿ॥ ಸರ್ಕಾರದ ಅಂಗೀಕಾರವನ್ನು ಪಡೆದಿರುವ ವೈಸರಾಯರ ಯೋಜನೆಯ ಕರಡು ಪ್ರತಿಯು ನಿನ್ನೆ ಮುಸ್ಸೋರಿಯಲ್ಲಿರುವ ಪಂ॥ ನೆಹರೂರವರಿಗೆ ಕಳುಹಿಸಲ್ಪಟ್ಟಿತೆಂದು ವರದಿಯಾಗಿದೆ. ಇದರಂತೆ ಬಂಗಾಳ ಮತ್ತು ಪಂಜಾಬ್ ಪ್ರಾಂತ್ಯಗಳ ರಾಷ್ಟ್ರೀಯ ವಿಭಜನೆ ಬಗ್ಗೆ ಗಡಿ ನಿಗದಿ ಮಾಡಲೂ, ಹಣ ಮತ್ತು ಸ್ಟರ್ಲಿಂಗ್ ನಿಧಿ ಸೇರಿ ರಾಷ್ಟ್ರೀಯ ಲೇಣೆ, ದೇಣೆಗಳನ್ನು ಹಂಚಲೂ, ರಕ್ಷಣಾ ದಳವನ್ನು ವಿಂಗಡಿಸಲೂ, ಬೇರೆ ಬೇರೆ ಸಮಿತಿಗಳನ್ನು ನೇಮಿಸಲಾಗುವುದೆಂದು ಹೇಳಲಾಗಿದೆ. ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳಿಗಾಗಿ ಈಗಲೇ ಕೇಂದ್ರ ಸರ್ಕಾರ ವಿಭಾಗವಾಗುವುದಿಲ್ಲವೆಂದೂ, ಈ ಸಮಿತಿಗಳ ಕೆಲಸ ೩ ತಿಂಗಳ ಕಾಲ ನಡೆಯುವುದೆಂದೂ ಊಹಿಸಲಾಗಿದೆ. ಗಡಿನಾಡು ಮತ್ತು ಅಸ್ಸಾಮಿನ ಸಿಲ್ಹಟ್ ಜಿಲ್ಲೆಗಳಲ್ಲಿ ಜನರ ಅಭಿಪ್ರಾಯವನ್ನು ತೆಗೆದುಕೊಳ್ಳಲಾಗುವುದೆಂದೂ ವರದಿಯಾಗಿದೆ.

ಇನ್ನು ಮುಂದೆ ಸೈಕಲ್ ಆಮದು ರದ್ದು

ಭಾರತ ಸರ್ಕಾರವು ಆಮದಿನ ಬಗ್ಗೆ ತಯಾರಿಸಿರುವ ಹೊಸ ಯೋಜನೆಯಂತೆ ಇನ್ನು ಮೇಲೆ ಸೈಕಲ್ ಮತ್ತು ಇತರ ದಿನಚರಿ ಉಪಯೋಗಕ್ಕೆ ಬೇಕಾದ ವಸ್ತುಗಳನ್ನು ಹೊರಗಡೆಯಿಂದ ತರಿಸುವುದನ್ನು ನಿಲ್ಲಿಸಲಾಗುವುದೆಂದು ಗೊತ್ತಾಗಿದೆ. ಆ ಕಾರದ ಅಭಾವದಿಂದ ಹಣ ಕಾಸಿನ ಬದಲಾವಣೆಯಲ್ಲಾಗಿರುವ ತೊಂದರೆಯೇ ಈ ನಿರ್ಧಾರಕ್ಕೆ ಕಾರಣವೆಂದು ಹೇಳಲಾಗಿದೆ.

ವಿವಾಹ ಮಹೋತ್ಸವಗಳು

ಚನ್ನರಾಯಪಟ್ಟಣದಲ್ಲಿರುವ ಪತ್ರಿಕೋದ್ಯೋಗಿಗಳಾದ ಶ್ರೀ॥ ಎಚ್. ಸುಬ್ಬಯ್ಯನವರ ವಿವಾಹವು ಶ್ರೀ ವೆಂಕಟಪ್ಪನವರ ಕುಮಾರಿ ಸೌ॥ ಸರೋಜಮ್ಮನೊಡನೆ ಶ್ರೀ ಕೃಷ್ಣರಾಜನಗರದ ತಾ॥ ಬಟಿಗನಹಳ್ಳಿಯಲ್ಲಿ ನಡೆಯುವುದು.

ಮರ ಮತ್ತು ಗಳುವಿನ ವ್ಯಾಪಾರಿಗಳಾದ ಶ್ರೀ॥ ಎಂ. ಆರ್. ದೊಡ್ಡಯ್ಯನವರು ತಮ್ಮ ಕುಮಾರಿ ಸೌ॥ ಲಕ್ಷ್ಮಮ್ಮನನ್ನು ಶ್ರೀರಂಗಪಟ್ಟಣದ ತಾ॥ ಚಂದಗಾಲು ಗ್ರಾಮದ ಶ್ರೀ॥ ಜವರೇಗೌಡರ ಕುಮಾರ ಚಿ॥ ಜವರೇಗೌಡರಿಗೆ ಕೊಟ್ಟು ಈ ದಿನ ಮೈಸೂರಿನಲ್ಲಿ ವೈಭವದಿಂದ ವಿವಾಹವನ್ನು ನೆರವೇರಿಸಿದರು.

○ ಪೂರ್ವ ಮತ್ತು ಪಶ್ಚಿಮ ಪಾಕಿಸ್ಥಾನಗಳಿಗೆ ಮಧ್ಯಮಾರ್ಗವೊಂದು ಬೇಕೆಂದು ಮಿ॥ ಜಿನ್ನಾರವರ ಕೇಳಿಕೆಯನ್ನು ಬ್ರಿ॥ ಸರ್ಕಾರವು ಪುರಸ್ಕರಿಸಿಲ್ಲವೆಂದು ತಿಳಿದುಬಂದಿದೆ.

ಸಾಧ್ವಿ

ತಾ|| ೨೫-೫-೪೭ ಭಾನುವಾರ

ಇಂದೂರಿನಲ್ಲಿ ಗುಂಡಿನೇಟು

ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಚುನಾಯಿಸಬೇಕೆಂದು ಮಹಾರಾಜರನ್ನು ಬೇಡಲು ಇಂದೂರು ಸಂಸ್ಥಾನದ ಪ್ರಜಾಮಂಡಲದವರು ಒಂದು ಮೆರವಣಿಗೆಯನ್ನು ಮಾಡಿಕೊಂಡು ಅಲ್ಲಿನ ಅರಮನೆಯ ಕಡೆ ಹೋಗುತ್ತಿದ್ದಾಗ ಪೋಲೀಸಿನವರು ಗುಂಡು ಹಾರಿಸಿ ಗುಂಪನ್ನು ಚದುರಿಸಿದರೆಂಬ ವಿಷಾದ ವಾರ್ತೆಯು ಬಂದಿರುತ್ತದೆ. ಸಂಸ್ಥಾನಗಳಲ್ಲಿ ಉಂಟಾಗಿರುವ ನವಜಾಗೃತಿಯ ಅಂಗವಾಗಿ ಅಲ್ಲಿನ ಪ್ರಜೆಗಳು ಕೈಗೊಂಡ ಕಾರ್ಯಕ್ರಮದ ಮೇಲೆ ಈ ವಿಧದ ದರ್ಪನೆಯನ್ನು ಅಧಿಕಾರಿಗಳು ಅವಲಂಬಿಸಿರುವುದು ಅತ್ಯಂತ ಕಳವಳಕರವಾದ ವಿಷಯವಾಗಿರುತ್ತದೆ. ಇದನ್ನು ಎಲ್ಲ ಸಂಸ್ಥಾನಗಳ ಪ್ರಜೆಗಳೂ ತೀವ್ರವಾಗಿ ಪ್ರತಿಭಟಿಸಬೇಕು.

ಪ್ರಭುಗಳಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳುವುದು ಪ್ರತಿಯೊಬ್ಬ ಪ್ರಜೆಗೂ ಹಕ್ಕು. ಇದಲ್ಲದೆ ಗುಂಪುಗೂಡುವುದು ಸಕಲ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಧರ್ಮ. ಅದು ಬಿಟ್ಟು ಅಹವಾಲು ಹೇಳಿಕೊಳ್ಳುವವರನ್ನು ಗುಂಡಿನಿಂದ ಹೊಡೆಯುವ ಪರಿಸ್ಥಿತಿಯು ಅತ್ಯಂತ ಅಸಹನೀಯವಾದುದು. ಈ ಪ್ರಕರಣವು ಇಡೀ ಹಿಂದೂಸ್ಥಾನದ ಸಕಲ ಸಂಸ್ಥಾನಗಳ ಪ್ರಜೆಗಳನ್ನು ಮಾತ್ರವೇ ಅಲ್ಲದೆ ನಲವತ್ತು ಕೋಟಿ ಭಾರತೀಯರನ್ನೂ ಉದ್ರೇಕಗೊಳಿಸದೆ ಇರದು.

ಭಾರತದ ಇತಿಹಾಸದಲ್ಲಿ ಪ್ರತಿಯೊಬ್ಬ ಪ್ರಜೆಯೂ ತನ್ನ ಸ್ವಸ್ಥ ಸುಖಗಳನ್ನು ನೇರವಾಗಿ ಆಳುವ ಅರಸರುಗಳಿಗೆ ಅರಿಕೆ ಮಾಡಿಕೊಳ್ಳಲು ಅವಕಾಶವಿರುತ್ತಿದ್ದ ನಿದರ್ಶನಗಳು ಹೇರಳವಾಗಿವೆ. ಹೊಗಳಲಾಯಿತು ದರ್ಬಾರಿನಲ್ಲಿಯೂ ಸಹ ಇದಕ್ಕೆ ಸಕಲ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು. ತಮ್ಮ ಪ್ರಜೆಗಳ ಸ್ಥಿತಿಗತಿಗಳನ್ನು ಸ್ವಂತವಾಗಿ ತಿಳಿದು ತಕ್ಕ ನೆರವನ್ನು ನೀಡುವುದು ರಾಜರುಗಳ ಒಂದು ಧರ್ಮ. ಇಂದಿನ ವಿದ್ಯಮಾನಗಳು ಇದಕ್ಕೆ ವ್ಯತಿರೇಕವಾಗಿ ರಣ ಮಾಡುತ್ತಿರುವುದು ಯಾರಿಗೂ ಹಿತಕರವಲ್ಲ.

ದೂರದ ಮಾತಿರಲಿ ಮಹಾಪರಾಧವನ್ನು ಇಂದೂರಿನ ಪ್ರಜೆಗಳು ಮಾಡುತ್ತಿರಲಿಲ್ಲ. ಈಗಾಗಲೇ ರಾಜ್ಯಾಂಗ ಸಭೆಗೆ ಚುನಾಯಿತ ಪ್ರತಿನಿಧಿಗಳನ್ನು ಕಳುಹಿಸಲು ಅನೇಕ ರಾಜರುಗಳು ಮಾಡಿರುವ ನಿರ್ಧಾರದಂತೆಯೇ ತನ್ನ ಪ್ರಜೆಯ ಮಾತನ್ನು ಕೇಳಿಕೊಂಡು ಅವರು [illegible] ಇದು. ಇಂತಹ ಸಹಜವಾದ, ನ್ಯಾಯವಾದ ಬೇಡಿಕೆಯನ್ನು ಇಲ್ಲಿನ ಅರಸರು ಸೌಲಭ್ಯಗಳನ್ನು ಕಲ್ಪಿಸುವುದು ಬಿಟ್ಟು [illegible] ಗುಂಡಿನಿಂದ ತನ್ನ ಪ್ರಜೆಗಳನ್ನು [illegible] ಸ್ವಾಗತಿಸಿರುವುದು ಸರ್ವಥಾ ಸರಿಯಲ್ಲ.

ಇಂದೂರಿನ ಪ್ರಜೆಗಳ ಈ ದಿನ [illegible] ಯಲ್ಲಿ ಸಕಲ ಭಾರತೀಯ ಪ್ರಜಾ [illegible] ತಿಯನ್ನು ತೋರಿಸಿ ಪ್ರಜ್ವಲಿಸುತ್ತ ಪ್ರತಿಭಟನೆಯನ್ನು ಸೂಚಿಸಬೇಕು. ಇಂತಹ [illegible] ರ್ಯಕ್ರಮಗಳನ್ನು ಕೈಗೊಳ್ಳುವುದು ಸೂಕ್ತವಾಗಿದೆ.

ಕೋಮುವಾರು ಸಂಖ್ಯೆ ಮೇಲೆ ರೇಷನ್ ಅಂಗಡಿಗಳು

ಕೋಮುವಾರು ಪ್ರಮಾಣದ ಆಧಾರದ ಮೇಲೆ ರೇಷನ್ ಅಂಗಡಿಗಳಿಗೆ ೮ ಕ ದಾ ೨ ಕೊಡಲು ಸಿಂಧ್ ಸರ್ಕಾರವು ನಿರ್ಧರಿಸಿದೆ. ಕರಾಚಿಯಲ್ಲೇ ೧೪೦ ಮುಸ್ಲಿಮರಿಗೆ ಹೆಚ್ಚಾಗಿ ಲೈಸೆನ್ಸ್ ಕೊಡಲಾಗಿದೆ.

ಗಡಿನಾಡಿನಲ್ಲಿ ಮುಸ್ಲಿಮರ ಪ್ರತಿ ಸಂಸ್ಥೆ

ಸಂದರ್ಭವೊದಗಿದರೆ ಶಸ್ತ್ರಬಲದಿಂದ ಆತ್ಮರಕ್ಷಣೆ ಮಾಡಿಕೊಳ್ಳುವ ಉದ್ದೇಶದಿಂದ ಖಾನ್ ಅಬ್ದುಲ್ ಗಫಾರ್ ಖಾನರ ಮುಖ್ಯರು ಗಡಿನಾಡಿನಲ್ಲಿ ಸ್ಥಾಪಿಸಿರುವ ಜಾತ್ಯತೀತ ಸಂಸ್ಥೆಯ ವಿರುದ್ಧವಾಗಿ ಅಲ್ಲಿನ ಮುಸ್ಲಿಂ ಲೀಗಿನವರು ಗಾಜಿ ಫರಿಸ್ತ ಎಂಬ ಸಂಸ್ಥೆಯನ್ನು ಪ್ರಾರಂಭಿಸಿರುವುದಾಗಿ ವರದಿಯಾಗಿದೆ.

ಹೊಲಿಗೆಯವರ ತೊಂದರೆ

ಗಿರಾಕಿಗಳ ವಿಳಾಸ, ಅವರಿಂದ ತೆಗೆದುಕೊಂಡ ಬಟ್ಟೆ ಮುಂತಾದ ವಿವರಗಳನ್ನು ಪ್ರತಿಯೊಬ್ಬ ಹೊಲಿಗೆಯವನೂ ಇಡಬೇಕೆಂದು ಮೈಸೂರು ಜಿಲ್ಲಾಧಿಕಾರಿಗಳು ಹೊರಡಿಸಿರುವ ಆಜ್ಞೆಯು ಹೊಲಿಗೆಯವರಿಗೆ ಬಹಳ ತೊಂದರೆಯನ್ನುಂಟುಮಾಡುತ್ತಿದೆ. ಓದುಬರಹ ಬಾರದ ಹಲವರು ಈ ಕೆಲಸಕ್ಕಾಗಿ ಬೇರೆ ಗುಮಾಸ್ತರನ್ನಿಟ್ಟುಕೊಳ್ಳಬೇಕಾಗುತ್ತದೆ. ಆಯಾ ದಿನದ ಕೆಲಸದಿಂದ ಅಂದಿನ ಜೀವನವನ್ನು ಸಾಗಿಸುವ ಬಡಹೊಲಿಗೆಯವರ ಮೇಲೆ ಇಂತಹ ಬಂಧನವು ಜಾರಿಗೆ ತರುವುದ ಸರಿಯಲ್ಲ. ಜಿಲ್ಲಾಧಿಕಾರಿಗಳು ಬಡವರ ಈ ಗೋಳನ್ನು ಆಲಿಸಿ ಆ ಶಾಸನವನ್ನು ಜಾರಿಗೆ ತರಬಾರದೆಂದು ಪ್ರಾರ್ಥಿಸುತ್ತೇನೆ.

ನೊಂದವ

ರಾಜಕಮಲ್

೨೪-೫-೪೭ ರಿಂದ ೪ ದಿನಗಳು

ಪ್ರತಿ ದಿನ ಬೆಳಗ್ಗೆ ೧೦-೩೦ ಗಂಟೆಗೆ

ಬಾಂಬೆ ಟಾಕೀಸಿನವರ

ನಿರ್ಮಲ [ಹಿಂದಿ

ಭೂಮಿಕೆ:

ಅಶೋಕ ಕುಮಾರ್ ಮತ್ತು

ದೇವಿಕಾರಾಣಿ

ಸಂಯುಕ್ತ ಪ್ರಾಂತದಲ್ಲಿ ಸಕ್ಕರೆ ಇಲ್ಲ

ಗ್ಲೋಬ್] ತಾ ೨೦

ಪ್ರಾಂತದ ಸಾರ್ವಜನಿಕರಿಗೆ ನವೆಂಬರ್ ತಿಂಗಳವರೆಗೆ ಸಕ್ಕರೆ ರೇಷನ್ ಹಂಚಲಾಗುವುದಿಲ್ಲವೆಂದು ಸಂಯುಕ್ತ ಪ್ರಾಂತದ ಸರ್ಕಾರದ ಪ್ರಕಟನೆ ಹೊರಟಿದೆ. ಸಕ್ಕರೆ ತಯಾರಿ ಕಡಿಮೆಯಾಗಿರುವುದೂ ಮತ್ತು ನವೆಂಬರ್ ತಿಂಗಳು ಕಬ್ಬಿನ ಬೆಳೆಯು ಕೊನೆಯೂ ಆಗಿರುವುದೇ ಇದಕ್ಕೆ ಕಾರಣ.

ಮೈಸೂರು ಕೋ-ಆಪರೇಟಿವ್ ಸೊಸೈಟಿ

ಡೈರೆಕ್ಟರುಗಳ ಚುನಾವಣೆ

25-5-47 ಭಾನುವಾರ

ಮೇಲ್ಕಂಡ ಸೊಸೈಟಿಯ ಡೈರೆಕ್ಟರುಗಳ ಸ್ಥಾನಕ್ಕೆ ಈ ಕೆಳಗೆ ಕಂಡವರನ್ನು ಚುನಾಯಿಸಬೇಕಾಗಿ ವಿನಂತಿ:—

ಕ್ರಮಸಂಖ್ಯೆ

೧ ಅಗರಂ ರಂಗಯ್ಯ,

೪ ಎ. ಕೃಷ್ಣಮೂರ್ತಿ ರಾವ್,

೭ ಬಿ. ಕೃಷ್ಣಮೂರ್ತಿ,

೭ ಬಿ. ವಿ. ಕೃಷ್ಣಮೂರ್ತಿ,

೧೧ ಎಂ. ಎಚ್. ಜೋಯಿಸ್,

೧೨ ಬಿ ಎಸ್ ತಾಂಡವಮೂರ್ತಿ

೧೭ ಎಂ. ಜಿ. ನರಸಿಂಹಮೂರ್ತಿ

೧೮ ಎಂ. ಎಸ್. ನಂಜಪ್ಪ,

೨೦ ಕೆ. ಪುಟ್ಟಸ್ವಾಮಿರಾವ್,

೨೫ ಕೆ. ಯಂಗಯ್ಯ ಶೆಟ್ಟಿ,

೩೦ ಎಸ್. ರಂಗರಾಮಯ್ಯ,

೩೨ ಎಸ್. ಲಿಂಗಣ್ಣ,

೩೪ ವಿ. ಲಿಂಗಪ್ಪಯ್ಯ

೩೫ ಎಸ್. ಶೇಷಗಿರಿ ರಾವ್,

೩೯ ಪಾಲಹಳ್ಳಿ ಸೀತಾರಾಮಯ್ಯ

—ಸೊಸೈಟಿಯ ಹಿತೈಷಿಗಳು

Edited, printed and published by S. R. Nagarajan at the Sadhvi Press D. Subbiah Road, Mysore.

ಟ್ಯೂಬಿಲ್ಲದ ಟೈರುಗಳು

ಟ್ಯೂಬುಗಳ ಆವಶ್ಯಕತೆಯಿಲ್ಲದ ವಾಹನಗಳ ಸಂಚಾರಕ್ಕೆ ಅನುಕೂಲವಾಗುವ ಟೈರುಗಳನ್ನು ಅಮೇರಿಕದಲ್ಲಿ ತಯಾರಿಸಲಾಗಿದೆಯೆಂದು ವರದಿಯಾಗಿದೆ. [illegible]ರು ವರ್ಷಗಳ ಸಂಶೋಧನೆಯ ಅನಂತರ ಇದನ್ನು ತಯಾರಿಸಲಾಗಿದೆಯೆಂದು [illegible]ಸಲಾಗಿದೆ. ಪ್ರಾರಂಭದಲ್ಲಿ ಒಂದು ಪ[illegible]ತಿಯಲ್ಲಿ ಇದನ್ನು ಸಾರ್ವಜನಿಕರ ಉಪಯೋಗಕ್ಕೆ ಒದಗಿಸಲಾಗುವುದೆಂದು [illegible]ಲಾಗಿದೆ.

ಪ್ರತಿಷ್ಠಾ ಮಹೋತ್ಸವ

ಉತ್ತರ ಕೊಡಗಿನ ಫ್ರೇಸರ್ ಪೇಟೆಯಲ್ಲಿ ಆರ್ಯ ವೈಶ್ಯ ಮಂಡಲಿಯವರು [illegible]ದಾಗಿ ಕಟ್ಟಿಸಿರುವ ದೇವಾಲಯದಲ್ಲಿ [illegible] ಕನ್ನಿಕಾ ಪರಮೇಶ್ವರಿ, ಗಣಪತಿ, [illegible]ರಸ್ವಾಮಿ, ನಗರೇಶ್ವರಸ್ವಾಮಿ, ಮು[illegible]ಷ್ಣು ಮತ್ತು ನವಗ್ರಹಗಳ ಪ್ರತಿಷ್ಠಾ[illegible]ಯು ಇದೇ ೨೯ ನೇ ತಾ|| ಬೆಳಗ್ಗೆ [illegible]ಯುವುದು. ಈ ಮಹೋತ್ಸವಕ್ಕೆ [illegible] ಮಾಡಿಸುವ ಅತಿಥಿಗಳಿಗೆಲ್ಲಾ ಭೋಜನ [illegible] ವಸತಿ ಸೌಕರ್ಯಗಳನ್ನು ಕಲ್ಪಿಸಲಾಗಿದೆ.

ಮೈಸೂರಾಯರ ಯೋಜನೆ ಲೀಗಿನವರ ಒಪ್ಪಿಗೆಯೇ?

ಅಧಿಕಾರ ವರ್ಗಾವಣೆಯ ಬಗ್ಗೆ [illegible] ಸರ್ಕಾರದ ಅಂಗೀಕಾರ ಪಡೆದಿರುವ ಮೈ[illegible]ರಾಯರ ಯೋಜನೆಗೆ ಮುಸ್ಲಿಂ ಲೀಗಿ[illegible]ರು ಒಪ್ಪಿಗೆಯ ನ್ನಿತ್ತಿದ್ದಾರೆಂದು ತಿಳಿದು[illegible]ದಿದೆ. ಜಿನೀವಾದಲ್ಲಿದ್ದ ಕೇಂದ್ರ ಸರ್ಕಾರ[illegible] ಮಂತ್ರಿ ಮಿ|| ಚಾಂದ್ರೀಗರ್ ರವರನ್ನು [illegible] ಒಪ್ಪಿಗೆಯೇ ಮೈಸೂರಾಯರು ಲಂಡನ್ನಿಗೆ [illegible] ಸಿದ್ದರಿಂದೂ ವರದಿಯಾಗಿದೆ

ಅಪೆಲಾ ಟಾಕೀಸ್, ಮೈಸೂರು

೨೪-೫-೪೭ ರಿಂದ ೬ ನೇ ವಾರ

ರಾಜಕುಮಾರಿ

(ತಮಿಳು)

Morning Shows

from 23-5-47

Flame of the West and Spring time in Texas

ರಾಜಕಮಲ್,

ತಾ|| ೨೩-೫-೪೭ ರಿಂದ

ಐದನೇ ವಾರ

ಪ್ರತಿ ದಿನ ೨ ಆಟಗಳು

ಕೃಷ್ಣವೇಣಿ

ರಘುರಾಮಯ್ಯ

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು : : ಫೋನ್ 411

ಚಿನ್ನ, ಬೆಳ್ಳಿ, ಮುತ್ತು ರತ್ನದ ಆಭರಣಗಳು ಹೊಸ ನಮೂನೆಯಲ್ಲಿ ನಮ್ಮಲ್ಲಿ ಬಿಕರಿಗೆ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.

ಕೆ. ಎಸ್. ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್.

೨೫-೫-47 ನೇ ತಾ|| ಯಿಂದ ಜನಭರಿತವಾದ 4 ನೇ ವಾರ

ವುಡ್‌ಲ್ಯಾಂಡ್ಸ್ ಟಾಕೀಸ್, ಮೈಸೂರು.

* 'ನಾಮ್-ಇಬ್ಬರು' *

(ತಮಿಳು)

ಪ್ರತಿ ದಿನ ಎರಡು ಆಟಗಳು

ಪ್ರತಿ ಶನಿವಾರ ಮತ್ತು ಭಾನುವಾರಗಳಲ್ಲಿ 3 30 ಕ್ಕೆ ಮ್ಯಾಟನಿ.

ತಾರಾಗಣ:-ಟಿ ಆರ್. ಮಹಾಲಿಂಗಂ, ಟಿ ಎ ಜಯಲಕ್ಷ್ಮಿ ಮತ್ತು ಬೇಬಿ ಕಮಲ

ರೀ. ನಂ. ೩೯೨ WEEKLY EDITION ಬಿಡಿ ಪ್ರತಿಗೆ ೬ ಕಾಸು

ಸಂಪುಟ ೧೧] ಸೋಮವಾರ ೨೬—೫—೪೭ [ಸಂಚಿಕೆ ೪೦

ವೈಸರಾಯರಿಗೆ ಸಂಪೂರ್ಣ ಅಧಿಕಾರ

ಮೈಸೂರು ಪಾಕಿಸ್ತಾನಕ್ಕೆ ಸೇರಬೇಕು

ಜಧಾನಿಯ ಮುಸ್ಲಿಮರ ಸಭೆಯಲ್ಲಿ ಸೂಚನೆ

ಮೈಸೂರು ೨೬

ಮಂಡಿ ಮೊಹಲ್ಲಾದಲ್ಲಿ ಮೊನ್ನೆ ರಾತ್ರಿ ಮೈಸೂರು ನಗರದ ಮುಸ್ಲಿಂ ಲೀಗಿನ ವಾರ್ಷಿಕ ಅಧಿವೇಶನವು ಸಂಸ್ಥಾನದ ಮುಸ್ಲಿಂ ಲೀಗ್ ಅಧ್ಯಕ್ಷರಾದ ಮಿ॥ ಮಹಮದ್ ಷ...ರ ಅಧ್ಯಕ್ಷತೆಯಲ್ಲಿ ಜರುಗಿತು. ...ಗೀತೆಯೊಡನೆ ಸಭೆಯು ಆರಂಭವಾಯಿತು.

ಬ್ರಿಟಿಷರು ಹೊರಟು ಹೋದಮೇಲೆ ...ಸ್ಥಾನವು ಸ್ವತಂತ್ರ ರಾಷ್ಟ್ರವೆಂದು ಶ್ರೀ ...ಮಹಾರಾಜರವರು ಘೋಷಿಸಬೇಕೆಂ... ಸ್ಪರ್ಧಿಸುವ ಮತ್ತು ಸ್ಥಳೀಯ ಸಂ...ಗಳಲ್ಲಿ ಪ್ರತ್ಯೇಕ ಚುನಾವಣೆಯನ್ನು ಏ...ಡಿಸಿ, ಮೂರನೆಯ ಒಂದು ಭಾಗದಷ್ಟು ...ಸ್ಥಾನಗಳನ್ನು ಮುಸ್ಲಿಮರಿಗೆ ಕಾದಿಡಬೇ...ದು ಸರ್ಕಾರದನ್ನು ಒತ್ತಾಯಪಡಿಸಿ...ಯುಗಳಾದುವು. ಗ್ರಾಮಾಂತರ ಪ್ರ...ದೇಶಗಳಲ್ಲಿ ಮುಸ್ಲಿಮರ ಮೇಲೆ ಬಹುಸಂಖ್ಯಾತರು ನಡೆಸುತ್ತಿರುವ ಧಾಳಿಯನ್ನು ...ವಳದಿಂದ ವೀಕ್ಷಿಸಿ, ಇದನ್ನು ಎದುರಿಸಲು ಸಂಸ್ಥಾನದ ಪೊಲೀಸ್ ದಳದಲ್ಲಿ ಹೆಚ್ಚು ಮುಸ್ಲಿಮರನ್ನು ನೇಮಿಸಿಕೊಳ್ಳಬೇಕೆಂದು ...ರ್ಣಯಿಸಲಾಯಿತು.

ಅಧ್ಯಕ್ಷರು ಮಾತನಾಡಿ ಅನೇಕ ವರ್ಷಗಳಿಂದ ಮುಸ್ಲಿಮರ ಕನಸಾಗಿದ್ದ ಪಾಕಿಸ್ತಾನವು ಈಗ ನನಸಾಗಿ ಪರಿಣಮಿಸಿರುವುದು ...ಜಿನ್ನಾರವರ ನಾಯಕತ್ವದ ಫಲವೆಂ...ತಿಳಿಸಿ, ಪ್ರತಿ ಮುಸ್ಲಿಮನೂ ಅವರಿಗೆ ...ರುಣಿಯಾಗಿರುವನೆಂದು ಸಾರಿದರು. ...ಳೆಯುಗಾರರ ದಂಗೆಯ ಕಾಲದಿಂದಲೂ ಮುಸ್ಲಿಮರು ಮೈಸೂರು ಸಿಂಹಾಸನಕ್ಕೆ ಬೆಂಬಲವಾಗಿ ನಿಂತಿದ್ದಾರೆ. ಶ್ರೀರಂಗಪಟ್ಟಣದ ಪತನವಾದ ಮೇಲೆ ಸಿಂಹಾಸನವು ಈಗಿನ ...ಜರ ವಂಶಕ್ಕೆ ದೊರಕುವಂತೆ ಮಾಡಿದ...ರು ಮುಸ್ಲಿಮರು. ಸಂಸ್ಥಾನದಲ್ಲಿ ಅತ್ಯಂತ ರಾಜಭಕ್ತಿಯುಳ್ಳವರ ಪಂಗಡವಾವುದಾ...ದೆ, ಇದೆಯೆಂದರೆ ಅದು ಮುಸ್ಲಿಂ ಸ...ದ. ಮೈಸೂರು ಸ್ವತಂತ್ರ ರಾಷ್ಟ್ರವಾ...ದ ಮೇಲೆ ಅದಕ್ಕೆ ಬಲವಾದ ಸೈನ್ಯ ಬೇಕಾ...ಗುತ್ತದೆ. ವೀರ ವಂಶಕ್ಕೆ ಸೇರಿದ ಮುಸ್ಲಿಮರಿಗೆ ಶೇಕಡ ೫೦ ರಷ್ಟು ಸ್ಥಾನಗಳು ದೊ...ರೆಯಬೇಕು. ಸದಾ ಕಾಲದಲ್ಲೂ ರಾಜಭಕ್ತಿಯುತರಾಗಿರುವ ಮುಸ್ಲಿಮರಿಗೆ ಸರ್ಕಾರಿ ...ಕರಿಯಲ್ಲಿ ಶೇಕಡ ೩೦ ರಷ್ಟು ಸ್ಥಾನಗಳು ಕೊಡಲ್ಪಡಬೇಕು.

ಭಾರತದ ವಿಭಜನೆ ಶತಸ್ಸಿದ್ಧ, ಪಾಕಿಸ್ತಾನ, ಹಿಂದೂಸ್ಥಾನಗಳ ರಾಜ್ಯಾಂಗ ಸಭೆಯೂ ತಪ್ಪಿದ್ದಲ್ಲ. ಮೈಸೂರು ಈತರದಷ್ಟು ...ಗಿನ ರಾಜ್ಯಾಂಗ ಸಭೆಗೆ ಸೇರಬಾರದು ...ಯಿಂದ ಇದ್ದು ಪಾಕಿಸ್ತಾನದ ರಾಜ್ಯಾಂಗ ಸಭೆಗೆ ಸೇರಬೇಕೆಂದು ಆಶಿಸುತ್ತೇ...ನೆ. ಮೈಸೂರಿನ ಮುಸ್ಲಿಮರಾದ ನಾವು ಹೊಸ ಯುಗದ ಹೊಸಲಿನಲ್ಲಿ ಕಾಲಿಡುತ್ತಿದ್ದೇವೆ. ಈಗ ಧೈರ್ಯದಿಂದಲೂ, ಸಹ್ಯಸಂ...ಪ್ತಿಯಿಂದಲೂ, ನಮ್ಮ ಸಂಸ್ಥೆಯನ್ನು ಬಲಪಡಿಸಿಕೊಂಡು ನಾವು ಈಗ ಮುಂದೆ ನಡೆಯಬೇಕಾಗಿದೆ—ಎಂಬುದಾಗಿ ಅವರು ತಿಳಿಸಿದರು.

ವಿವಾಹ ಮಹೋತ್ಸವ

ಸಂಗಮೇಶ್ವರ ಮೋಟಾರ್ ಸರ್ವಿಸ್ ಮ್ಯಾನೇಜರಾದ ಶ್ರೀ ಎಸ್. ಸಂಗಪ್ಪನವರ ...ಕುಮಾರಿ ಸೌ॥ ಜಯಲಕ್ಷ್ಮಮ್ಮನವರನ್ನು ಬನ್ನೂರು ಪೋಸ್ಟ್‌ಮಾಸ್ಟರ್ ಶ್ರೀ ಕೆ. ಕೃಷ್ಣಪ್ಪನವರ ಕುಮಾರ ಚಿ॥ ಕೆ. ನಾರಾಯಣ ಮೂರ್ತಿಯವರಿಗೆ ಕೊಟ್ಟು ವಿವಾಹವನ್ನು ಸೀತಾವಿಲಾಸ ಅಗ್ರಹಾರದಲ್ಲಿರುವ ತಮ್ಮ ಗೃಹದಲ್ಲಿ ನಿನ್ನೆ ದಿನ ವೈಭವದಿಂದ ನೆರವೇರಿಸಿದರು.

ರೆಡ್ಡಿ-ದಿವಾನ್ ಭೇಟಿ

ಸ್ವಂ. ವಾ. ಪ್ರ॥] ಬೆಂಗಳೂರು ೨೬

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯರೆಡ್ಡಿಯವರನ್ನು ಭೇಟಿಗಾಗಿ ದಿವಾನರು ಈ ದಿನ ಸಂಜೆ ೬-೩೦ ಘಂಟೆಗೆ ಆಹ್ವಾನಿಸಿರುತ್ತಾರೆ. ನಿನ್ನೆ ಮತ್ತು ಈ ದಿನ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ಸೇರಿ ಸಂಸ್ಥಾನದ ರಾಜಕೀಯ ವಿಚಾರಗಳನ್ನು ಪರಿಶೀಲಿಸಿತು.

ಇಲ್ಲಿ ನಡೆಯಲಿರುವ ಅಖಿಲ ಭಾರತ ಟೆಕ್ನಿಕಲ್ ವಿದ್ಯಾಭ್ಯಾಸ ಸಮ್ಮೇಳನದ ಅಧ್ಯಕ್ಷರಾದ ಶ್ರೀ॥ ಎನ್. ಆರ್. ಸರ್ಕಾರರು ಈ ದಿನ ಇಲ್ಲಿಗೆ ಬಂದರು. ಭಾರತ ಸರ್ಕಾರದ ವಿದ್ಯಾಭ್ಯಾಸ ಸಲಹೆಗಾರರಾದ ಸರ್ ಜಾನ್ ಸಾರ್ಜೆಂಟರೂ ಸಹ ಬಂದಿರುವರು. ಇವರು ಸರ್ಕಾರದ ಅತಿಥಿಗಳಾಗಿರುತ್ತಾರೆ.

ಮಿರ್ಜಾರವರು ನಿಜಾಮರ ಮುಖ ನೋಡುವುದಿಲ್ಲವೇ?

ಹೈದರಾಬಾದಿನ ಪ್ರಧಾನಿಗಳಾದ ಸರ್ ಮಿರ್ಜಾ ಇಸ್ಮಾಯಿಲರು ಇನ್ನು ಮುಂದೆ ನಿಜಾಮರ ಮುಖ ನೋಡುವುದಿಲ್ಲವೆಂದು ಹೇಳಿ ಹೊರಟು ಹೋಗಿದ್ದಾರೆಂದು ವರದಿಯಾಗಿದೆ. ಮಿ॥ ಜಿನ್ನಾರವರು ನಿಜಾಮರ ಸಹಾಯದಿಂದ ಅನೇಕ ಸಂಸ್ಥಾನಗಳ ಬಿಕ್ಕಟ್ಟಿಗೆ ಕಾರಣರಾಗಿ ಕೊನೆಗೆ ಮಿರ್ಜಾರವರ ರಾಜೀನಾಮೆಗೆ ಸೂತ್ರಧಾರಿಗಳಾದರೆಂದು ಹೇಳಲಾಗಿದೆ. ಹಿಂದೆ ಪ್ರಧಾನಿಯಾಗಿದ್ದ ಛತ್ತಾರಿ ನವಾಬರೇ ಪುನಃ ಮಿರ್ಜಾರವರ ಜಾಗಕ್ಕೆ ಬರುವರೆಂದು ಊಹಿಸಲಾಗಿದೆ.

ಬರ್ಮಾದಲ್ಲಿ ಸಾಮ್ಯವಾದಿ ಪ್ರಜಾರಾಜ್ಯ

ಬರ್ಮಾದ ರಾಜ್ಯಾಂಗ ಸಭೆಯಲ್ಲಿ ಜ॥ ಆಂಗ್ ಸಾನರು ಮಂಡಿಸಿದ ಭವಿಷ್ಯ ರಾಜ್ಯಾಂಗ ಘಟನೆಯನ್ನು ಸಭೆಯು ಒಮ್ಮತದಿಂದ ಅಂಗೀಕರಿಸಿದೆ. ಬರ್ಮಾ ದೇಶವು ಸಾಮ್ಯವಾದಿ ಪ್ರಜಾರಾಜ್ಯವಾಗಿರಬೇಕೆಂದು ಅದರಲ್ಲಿ ಘೋಷಿಸಲಾಗಿದೆ. ರಾಷ್ಟ್ರೀಕರಣದ ಧ್ಯೇಯ ಮತ್ತು ಕಾರ್ಮಿಕರ ಹಕ್ಕುಬಾಧ್ಯತೆಗಳ ರಕ್ಷಣೆಗಳು ರಾಜ್ಯಾಂಗದಲ್ಲಿ ಅಡಕವಾಗಿವೆ.

ಇಂದೂರಿನಲ್ಲಿ ಮತ್ತೆ ಲಾಠೀ ಪ್ರಯೋಗ

ಇಂದೂರು ಸಂಸ್ಥಾನದಲ್ಲಿ ಪರಿಸ್ಥಿತಿಯು ಹತೋಟಿಗೆ ಬಂದಿರುವುದಿಲ್ಲ. ಪ್ರಜಾ ಮಂಡಲದ ಆಶ್ರಯದಲ್ಲಿ ಮೊನ್ನೆ ಸೇರಿದ್ದ ...ಲ್ಪ ಬಹಿರಂಗ ಸಭೆಗಳಲ್ಲಿದ್ದ ಜನಗಳ ಮೇಲೆ ಪೋಲೀಸರು ಲಾಠೀ ಪ್ರಯೋಗ ನಡೆಸಿ ಗುಂಪನ್ನು ಚದುರಿಸಿದರು. ೬ ಮಂದಿ ಪ್ರಜಾ ಮಂಡಲದ ನಾಯಕರನ್ನು ದಸ್ತಗಿರಿ ಮಾಡಲಾಯಿತು. ೧೪೪ ನೇ ಸೆಕ್ಷನ್ ಮತ್ತು ೧೦ ಗಂಟೆಗಳ ಕಾಲ ಕರ್ಫ್ಯೂ ಆಜ್ಞೆಯನ್ನು ಜಾರಿಗೆ ತರಲಾಗಿದೆ. ಕ್ರಮ...ಕೇಂದ್ರಗಳಲ್ಲಿ ಮಿಲಿಟರಿ ಪಹರೆ ...ಡಲಾಗಿದೆ. ಸರ್ಕಾರದ ಭವನಗಳನ್ನು ಮುಸ್ಲಿಂ ಲೀಗ್ ಸ್ವಯಂ ಸೇವಕರು ಕಾಯುತ್ತಿದ್ದಾರೆ. ಲೀಗ್ ಸ್ವಯಂ ಸೇವಕ ದಳವನ್ನು ಸರ್ಕಾರದವರ ಉಪಯೋಗಕ್ಕೆ ಕೊಡಲಾಗಿದೆ. ಸಂಸ್ಥಾನದ ೧೬ ಸಹಸ್ರ ನಾನ್‌ಗೆಜೆಟೆಡ್ ಅಧಿಕಾರಿಗಳ ಮುಷ್ಕರವು ನಡೆಯುತ್ತಲೇ ಇದೆ.

ತನ್ನನ್ನೇ ತಾನು ಮರೆತಿರುವ ಮಹಾವ್ಯಕ್ತಿ

ಆಸ್ಟ್ರಿಯದ ಅಧ್ಯಕ್ಷ ಕಾರ್ಲ್ ರೆನ್ನರ್ ಎಂಬುವರು ತಮ್ಮನ್ನೇ ತಾವು ಯಾರು ಎಂದು ಮರೆತಿರಬಹುದೆ ಎಂಬ ಅನುಮಾನಕ್ಕೆ ಸಿಕ್ಕಿ ಬಿದ್ದಿದ್ದಾರೆ. ೭೭ ವರ್ಷಗಳ ಹಿಂದೆ ಆಸ್ಟ್ರಿಯದ ಹಳ್ಳಿಯೊಂದರಲ್ಲಿ ಕಾರ್ಲ್ ಮತ್ತು ಆಟೋ ಎಂಬ ಅವಳಿ ಮಕ್ಕಳು ಜನಿಸಿದರು. ಅವರನ್ನು ಗುರುತಿಸಲು ...ಬ್ಬರಿಗೆ ಕೆಂಪು ಮತ್ತು ಮತ್ತೊಬ್ಬರಿಗೆ ಬಿಳಿ ರಿಬ್ಬನ್ನುಗಳನ್ನು ಕಟ್ಟಲಾಗಿತ್ತು. ಆದರೆ ಅದು ಯಾವಾಗಲೋ ಬಿಚ್ಚಿ ಹೋಗಿಬಿಟ್ಟಿತು. ಕೆಲವು ದಿನಗಳ ಹಿಂದೆ ಅವರಲ್ಲೊಬ್ಬರು ಸತ್ತು ಹೋದರು. ಈಗ ಅಧ್ಯಕ್ಷ ರೆನ್ನರರು ತನಗೆ ಕೆಂಪು ರಿಬ್ಬನ್ನು ಕಟ್ಟಲಾಗಿದ್ದಿತೆಂದು ನಂಬಿದ್ದಾರೆ. ಆದರೆ ಅವರು ಅನಿಶ್ಚಿತತೆಯಿಂದ ಕೂಡಿದ್ದಾರೆ.

ಕಟ್ಟಡದ ಕೆಲಸಗಾರರ ಸಭೆ

ಮೈಸೂರು ನಗರದ ಕಟ್ಟಡದ ಕೆಲಸಗಾರರ ಸಂಘದ ಸರ್ವ ಸದಸ್ಯರ ವಿಶೇಷ ಸಭೆಯು ಜೂನ್ ೧ ನೇ ತಾ॥ ಭಾನುವಾರ ಸಂಜೆ ೬ ಘಂಟೆಗೆ ಜರುಗುವುದು. ಕಟ್ಟಡದ ಕೆಲಸಗಾರರೆಲ್ಲರೂ ಸಭೆಗೆ ಹಾಜರಾಗಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ವೈಸರಾಯರಿಗೆ ಬ್ರಿಟಿಷ್ ಸರ್ಕಾರದಿಂದ ಪೂರ್ಣ ಅಧಿಕಾರ

ಹಿಂದೂಸ್ಥಾನ ಮತ್ತು ಪಾಕಿಸ್ತಾನಗಳ ಭವಿಷ್ಯವು ಇನ್ನು ೧೨ ವಾರಗಳಲ್ಲಿ ನಿರ್ಧಾರವಾಗಲಿದೆ. ಭಾರತವನ್ನು ವಿಭಾಗಿಸುವ ವಿಚಾರವನ್ನು ಇಲ್ಲಿನ ಪ್ರಧಾನ ನಾಯಕರೇ ನಿರ್ಧರಿಸಬೇಕೆಂದು ಬ್ರಿ॥ ಸರ್ಕಾರವು ಅಭಿಪ್ರಾಯಪಟ್ಟಿದೆ. ವಿಭಾಗವಾಗಬೇಕಾದಲ್ಲಿ ಅದರ ಸ್ವರೂಪವನ್ನು ಪ್ರಾಂತ್ಯಗಳ ಚುನಾಯಿತ ಪ್ರತಿನಿಧಿಗಳು ಕೊಡಬೇಕೆಂದೂ ಅಧಿಕಾರ ವರ್ಗಾವಣೆಯ ಕಾಲವನ್ನು ಭಾರತದ ನಾಯಕರೇ ಗೊತ್ತುಮಾಡಬೇಕೆಂದೂ ಹೇಳಲಾಗಿದೆ. ಅಧಿಕಾರ ವರ್ಗಾವಣೆಯನ್ನು ಸ್ವೀಕರಿಸುವ ಬಗ್ಗೆ ಅವಶ್ಯಕವಾದ ಪಾತ್ರವನ್ನು ಬ್ರಿಟನ್ನು ವಹಿಸುವುದು. ಮುಸ್ಲಿಂ ಬಹುಸಂಖ್ಯಾತರ ಪ್ರದೇಶಗಳನ್ನು ಆಯಾ ಪ್ರಾಂತ್ಯಗಳ ಪ್ರತಿನಿಧಿಗಳು ನಿರ್ಧರಿಸಬೇಕು. ಇದರಲ್ಲಿ ಭಿನ್ನಾಭಿಪ್ರಾಯ ಮೂಡಿದರೆ ಆಗ್ಗೆ ವೈಸರಾಯರು ತಮ್ಮ ತೀರ್ಮಾನವನ್ನು ತಿಳಿಸುವರು. ಜೂನ್ ೨ನೇ ತಾ॥ ಆರಂಭವಾಗುವ ಸಂಧಾನದಲ್ಲಿ ವೈಸರಾಯರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ವರ್ತಿಸಲು ಬ್ರಿ॥ ಸರ್ಕಾರವು ಅನುಮತಿ ಇತ್ತಿದೆ. ಅವರು ಗುರುವಾರ ಲಂಡನ್ನಿನಿಂದ ಭಾರತಕ್ಕೆ ಹಿಂದಿರುಗಲಿದ್ದಾರೆಂದು ಗೊತ್ತಾಗಿದೆ—ಎಂಬುದಾಗಿ ರಾಯಿಟರ್ ರಾಜಕೀಯ ವಾರ್ತಾದಾರರು ತಿಳಿಸಿರುತ್ತಾರೆ.

ಮುಸ್ಲಿಂ ವಿದ್ಯಾಭ್ಯಾಸಕ್ಕೆ ಅಂಚೆ ಇಲಾಖೆಯ ನಿಧಿ

ಅಂಚೆ ಇಲಾಖೆಯ ಸೇವಿಂಗ್ಸ್ ಬ್ಯಾಂಕ್ ಲೆಕ್ಕದಲ್ಲಿ ಹಣವನ್ನು ಶೇಖರಿಸಿಟ್ಟು ಬಡ್ಡಿಯನ್ನು ಕೇಳದೆ ಇರುವ ಮುಸ್ಲಿಮರ ಮೊಬಲಗನ್ನು ಮುಸ್ಲಿಮರ ವಿದ್ಯಾಭ್ಯಾಸಕ್ಕೆ ಉಪಯೋಗಿಸಲು ಕೇಂದ್ರ ಸರ್ಕಾರದವರು ಸಮ್ಮತಿಸಿದ್ದಾರೆ. ಕೇಂದ್ರ ಶಾಸನ ಸಭೆಗಳ ಮುಸ್ಲಿಂ ಸದಸ್ಯರ ಸಮಿತಿಯೊಂದನ್ನು ನೇಮಿಸಿ ಅದಕ್ಕೆ ಈ ನಿಧಿಯನ್ನು ಒಪ್ಪಿಸಲಾಗುವುದು.

ಕಲ್ಲಿದ್ದಲು ಗಣಿ ಕೆಲಸಕ್ಕೆ ಪ್ರೊಫೆಸರುಗಳು

ರಜಾಕಾಲದಲ್ಲಿ ಕಲ್ಲಿದ್ದಲು ಗಣಿಯಲ್ಲಿ ಸ್ವಯಂ ಸೇವಕರಾಗಿ ಕೆಲಸ ಮಾಡಲು ಬ್ರಿಟನ್ನಿನ ಆಕ್ಸ್‌ಫರ್ಡ್, ಕೇಂಬ್ರಿಜ್ ಮತ್ತು ಬ್ರಿಸ್ಟಲ್ ವಿಶ್ವವಿದ್ಯಾಲಯಗಳ ಪದವೀಧರರೂ, ಪ್ರೊಫೆಸರುಗಳೂ ಮುಂದೆ ಬಂದಿದ್ದಾರೆ. ಇವರುಗಳಿಗೆಲ್ಲಾ ಸರ್ಕಾರಿ ಶಾಲೆಯಲ್ಲಿ ಗಣಿ ಕೆಲಸದ ಶಿಕ್ಷಣವನ್ನು ಕೊಡಲಾಗುವುದು. ಇವರುಗಳು ಬೇಸಿಗೆಯಲ್ಲಿ ೩ ತಿಂಗಳ ಕಾಲ ಗಣಿಗಳಲ್ಲಿ ಕೆಲಸ ಮಾಡಿ ಕಲ್ಲಿದ್ದಲಿನ ಅಭಾವ ಪರಿಹರಿಸಲು ಪ್ರಯತ್ನಿಸುವರು.

ರಾಜಧಾನಿಗೆ ಮದ್ರಾಸ್ ಮಂತ್ರಿಗಳ ಆಗಮನ

ಮೈಸೂರು ೨೬

ಮದ್ರಾಸ್ ಸರ್ಕಾರದ ಗ್ರಾಮಾಭಿವೃದ್ಧಿ ಮಂತ್ರಿಗಳಾದ ಶ್ರೀ ಕೋದಂಡರಾಮಯ್ಯನವರು ಊಟಕ ಮಂಡಲದಿಂದ ಇದೇ ೩೦ನೇ ತಾ॥ ಮಧ್ಯಾಹ್ನ ೧೨ ಗಂಟೆಗೆ ಮೈಸೂರಿಗೆ ಆಗಮಿಸುವರು. ೩೧ನೇ ದಿನ ಮಧ್ಯಾಹ್ನ ೧ ಘಂಟೆಗೆ ಬೆಂಗಳೂರಿಗೆ ತೆರಳುವರು.

○ ನಿನ್ನೆ ಮೈಸೂರಿನಲ್ಲಿ ನಡೆದ ಫುಟ್‌ಬಾಲ್ ಫೈನಲ್ಸ್ ಪಂದ್ಯವು ಮೈಸೂರು ಒಲ್ಡ್ ಸಿಟಿ, ಆರ್. ಸಿ. ಗಳ ನಡುವೆ ನಡೆದು ಗೋಲುಗಳಾಗದೆ ಸಮವಾಯಿತು.

ಸಾಧ್ವಿ

ತಾ|| ೨೬-೫-೪೭ ಸೋಮವಾರ

ಪಾಕಿಸ್ತಾನಕ್ಕೆ ಸೇರಲು ಮೈಸೂರಿಗೆ ಆಹ್ವಾನವೇ ?

ಬ್ರಿಟಿಷ್ ಹಿಂದೂಸ್ತಾನವನ್ನು ಮಾತ್ರವೇ ಅಲ್ಲದೆ ಸಂಸ್ಥಾನಗಳನ್ನೂ ಸಹ ಪಾಕಿಸ್ತಾನ ಮತ್ತು ಹಿಂದೂಸ್ತಾನಗಳಿಗೆ ಹಂಚುವ ಸೂಚನೆಯನ್ನು ಮಿ|| ಜಿನ್ನಾರವರು ಹಿಂದೆಯೇ ಕೊಟ್ಟಿದ್ದರು. ಆದ್ದರಿಂದ ಕೆಲವು ಮುಸ್ಲಿಂ ಸಂಸ್ಥಾನಗಳ ಪ್ರಮುಖರು ಅವರನ್ನು ಭೇಟಿಮಾಡಿ ಈ ಬಗ್ಗೆ ಸಮಾಲೋಚನೆಯನ್ನೂ ನಡೆಸಿದ್ದರು. ಕೇವಲ ಮುಸ್ಲಿಂ ಸಂಸ್ಥಾನಗಳು ಮಾತ್ರ ಈ ಪ್ರಸಂಗದಲ್ಲಿ ತೊಡಗಿವೆಯೆಂಬ ಭಾವನೆಯು ಉಂಟಾಗಿತ್ತು. ಆದರೆ ಇದು ಇನ್ನೂ ಮುಂದೆ ಹೋಗಿರುವಂತಿದೆ. ಹಿಂದೂ ಸಂಸ್ಥಾನಗಳಿಗೂ ಈ ಗಾಳಿಯು ಬೀಸಿರುವಂತಿದೆ.

ಮೊನ್ನೆ ದಿನ ರಾಜಧಾನಿಯಲ್ಲಿ ನಡೆದ ಮುಸ್ಲಿಮರ ಸಭೆಯೊಂದರಲ್ಲಿ ಈ ವಿಚಾರದ ಅಂಕುರಾರ್ಪಣವು ಆಯಿತು. ಮೈಸೂರು ಸಂಸ್ಥಾನವು ಮುಂದೆ ಹಿಂದೂಸ್ಥಾನದ ಯೂನಿಯನ್ನಿನೊಡನೆ ಸೇರುವುದಕ್ಕಿಂತಲೂ, ಪಾಕಿಸ್ತಾನದೊಡನೆ ಸೇರುವುದೇ ಕ್ಷೇಮವೆಂದು ಸೂಚಿಸಲ್ಪಟ್ಟಿತು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಂಸ್ಥಾನದ ಮುಸ್ಲಿಂ ಲೀಗ್ ಅಧ್ಯಕ್ಷರಾದ ಮಿ|| ಮಹಮ್ಮದ್ ಸಂಘೀರವರು ಸಂಸ್ಥಾನದ ಮುಸ್ಲಿಮರ ಕುಂದುಕೊರತೆಗಳನ್ನು ವಿವರಿಸಿದರು. ಸಭೆಯಲ್ಲಿ ಅನೇಕ ನಿರ್ಣಯಗಳೂ ಆದುವು. ಅವುಗಳೆಲ್ಲವೂ ವಿಶೇಷವಾಗಿ ಅಖಿಲ ಭಾರತ ಮುಸ್ಲಿಂ ಲೀಗಿನ ನೀತಿಯನ್ನೇ ಅನುಸರಿಸುತ್ತವೆ. ಅವುಗಳ ವಿಷಯದಲ್ಲಿ ಸಾರ್ವಜನಿಕರ ಭಿನ್ನಾಭಿಪ್ರಾಯವು ಎಷ್ಟೇ ಇದ್ದರೂ ಅವುಗಳು ಒಂದು ರಾಜಕೀಯ ಸಂಘದ ತತ್ವ ಪ್ರತಿಪಾದನೆಯೆಂದು ಭಾವಿಸಬಹುದು.

ಆದರೆ ಮೈಸೂರು ಪಾಕಿಸ್ತಾನಕ್ಕೆ ಸೇರಬೇಕೆಂಬ ನೂತನ ಸೂಚನೆಯನ್ನು ಮಹಾಜನರು ತೀವ್ರವಾಗಿ ಪರ್ಯಾಲೋಚಿಸುವುದು ಅಗತ್ಯವಾಗಿದೆ. ನಮ್ಮ ಸರ್ಕಾರದವರು ಇನ್ನೂ ಈ ವಿಷಯದಲ್ಲಿ ಸರಿಯಾದ ಕಾರ್ಯಕ್ರಮವನ್ನು ಕೈಗೊಳ್ಳದೆ ಸಂದಿಗ್ಧ ಸ್ಥಿತಿಯಲ್ಲಿ ಇರುವುದೇ ಇಂತಹ ಪ್ರಚಾರಗಳಿಗೆ ಕಾರಣ. ಭಾರತ ರಾಜ್ಯಾಂಗ ಸಭೆಯಲ್ಲಿ ಮೈಸೂರು ಭಾಗ ವಹಿಸುವುದೆಂದೂ, ತಮ್ಮ ನೇತೃತ್ವದಲ್ಲಿ ಏಳು ಜನ ಪ್ರತಿನಿಧಿಗಳನ್ನು ಅಲ್ಲಿಗೆ ಕರೆದೊಯ್ಯುವುದಾಗಿಯೂ ದಿವಾನರು ಹೇಳಿ ಅನೇಕ ತಿಂಗಳುಗಳಾದುವು. ಆದರೆ ಇನ್ನೂ ಈ ಬಗ್ಗೆ ಪ್ರಭುತ್ವದವರು ಯಾವ ಕಾರ್ಯಕ್ರಮವನ್ನೂ ಕೈಗೊಂಡಿರುವುದಿಲ್ಲ.

ಇತರ ಅನೇಕ ಸಂಸ್ಥಾನಗಳು ಈಗಾಗಲೇ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸಿ ಅದರ ಕಾರ್ಯ ಕಲಾಪಗಳಲ್ಲಿ ಸಹಕರಿಸುತ್ತಿವೆ. ಮೈಸೂರು ಮಾತ್ರ ಇನ್ನೂ ಸಂದಿಗ್ಧ ಸ್ಥಿತಿಯಲ್ಲಿಯೇ ಇರುತ್ತದೆ.

ಹಿಂದೂಸ್ಥಾನವು ಎರಡು ಭಾಗಗಳಾಗಿ ಹಂಚಲ್ಪಡುವ ಸಂಭವವು ದಿನೇ ದಿನೇ ದೃಢಮೂಲವಾಗುತ್ತಿದೆ. ಆದರೂ ಯಾವ ಪ್ರದೇಶದಲ್ಲಿ ತಾವು ಸೇರಬೇಕೆಂಬ ನಿರ್ಣಯವನ್ನು ಮಾಡುವ ಹಕ್ಕು ಅಲ್ಲಿನ ಪ್ರಜೆಗಳಿಗೇ ಇರತಕ್ಕದೆಂಬ ತತ್ವವೂ ಅಂಗೀಕೃತವಾಗಿರುತ್ತದೆ. ಈ ತತ್ವವನ್ನೇ ಬರೋಡೆಯ ಮಹಾರಾಜರು ಮೊನ್ನೆ ಅಮೆರಿಕದಲ್ಲಿ ಕೊಟ್ಟ ಒಂದು ಹೇಳಿಕೆಯಲ್ಲಿ ಸ್ಪಷ್ಟಪಡಿಸಿರುತ್ತಾರೆ. ಅದನ್ನು ಎಲ್ಲ ರಾಜರುಗಳೂ ಅನುಸರಿಸುವುದು ಯುಕ್ತವಾಗಿರುತ್ತದೆ. ರಾಷ್ಟ್ರದ ವಿಭಜನೆಯು ಆಗಬೇಕಾದ ಸಂದರ್ಭದಲ್ಲಿ ಯಾವ ಭಾಗಕ್ಕೆ ತಾವು ಸೇರಬೇಕೆಂಬ ಹಕ್ಕು ಅಲ್ಲಿನ ಪ್ರಜೆಗಳಿಗೇ ಇರಬೇಕಾದುದು ಯುಕ್ತ. ಅದು ಬಿಟ್ಟು ಪ್ರಜೆಗಳನ್ನು ದನಗಳಂತೆ ಒಂದು ದೊಡ್ಡಿಯಿಂದ ಇನ್ನೊಂದು ದೊಡ್ಡಿಗೆ ವರ್ಗಾಯಿಸಲು ಸಾಧ್ಯವಿಲ್ಲ.

ಈ ವಿಷಯದಲ್ಲಿ ಮಾತ್ರವೇ ಅಲ್ಲದೆ ಸಂಸ್ಥಾನದ ಅಭ್ಯುದಯದ ಸಮಸ್ತ ವಿಷಯಗಳಲ್ಲಿಯೂ ಇದೇ ಪ್ರಜಾ ಸಮುದಾಯದ ಅಭಿಪ್ರಾಯವೇ ಅವುಗಳ ನಿರ್ಧಾರದ ಅಸ್ತಿಭಾರವಾಗಿರಬೇಕು. ಪ್ರಜಾಭಿಪ್ರಾಯವೇ ರಾಜರುಗಳ ಮತ್ತು ಪ್ರಭುತ್ವದ ಅಭೇದ್ಯವಾದ ರಕ್ಷಾ ಕವಚ. ಸಂಸ್ಥಾನದ ಎಪ್ಪತ್ತು ಲಕ್ಷ ಪ್ರಜೆಗಳ ಅಭಿಮತವನ್ನು ನಿರ್ಲಕ್ಷಿಸದೆ ಇನ್ನಾದರೂ ಆಳರಸರು ಕೂಡಲೇ ತಕ್ಕ ಕಾರ್ಯಕ್ರಮವನ್ನು ಕೈಗೊಂಡು ಮುಂದೆ ಒದಗಬಹುದಾದ ಅನರ್ಥ ಪರಂಪರೆಗಳನ್ನು ತಪ್ಪಿಸಲೆಂದು ನಾವು ಹಾರೈಸುತ್ತೇವೆ.

ವಾರ ಭವಿಷ್ಯ

(ತಾ|| ೨೬-೫-೪೭ ರಿಂದ ೩-೬-೪೭ರವರೆಗೆ)

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ- ಆರೋಗ್ಯ ಸಾಧಾರಣ, ಧನಲಾಭ ಕಡಿಮೆ. ಖರ್ಚು ಅಧಿಕ, ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ, ಮಿತ್ರರಿಂದ ಸಹಾಯ, ಪ್ರವಾಸ, ತಾ|| ೨೭, ೩೦ ಸಾಧಾರಣ, ಪ್ರವಾಸ

ವೃಷಭ- ಆರೋಗ್ಯ ಕೆಡುತ್ತದೆ, ಧನಲಾಭ ಉತ್ತಮ, ವ್ಯಾಪಾರದಲ್ಲಿ ಪ್ರಗತಿ ಅಧಿಕಾರಿ ವರ್ಗದವರಿಂದ ಸನ್ಮಾನ, ಉದ್ಯೋಗ ವ್ಯವಹಾರಗಳಲ್ಲಿ ಶತ್ರುಗಳಿಂದ ತಿರುಕುಳ. ತಾ|| ೨೮, ೩೧ ಚಿಂತೆ, ಕಲಹ

ಮಿಥುನ- ಶರೀರಸ್ಥಿತಿ ಸಾಧಾರಣ, ಧನಲಾಭ ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ಶತ್ರುಗಳಿಂದ ಕಿರುಕುಳ, ವ್ಯಾಪಾರದಲ್ಲಿ ನಷ್ಟ, ಧಾರ್ಮಿಕ ಕಾರ್ಯಗಳಲ್ಲಿ ಆಸಕ್ತಿ, ಮಂಗಳ ಕಾರ್ಯಗಳಿಗಾಗಿ ಪ್ರವಾಸ, ತಾ|| ೨೭, ೨೯ ಖರ್ಚು, ಸಂತೋಷ.

ಕಟಕ- ಆರೋಗ್ಯ ಸಾಧಾರಣ, ಧನಲಾಭ ಉತ್ತಮ, ಖರ್ಚು ಕಡಿಮೆ, ಮಾನಸಿಕ ಚಿಂತಾನಾಶ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಸನ್ಮಾನ, ಮಂಗಳಕಾರ್ಯಗಳಿಗಾಗಿ ಖರ್ಚು, ಸಾಧುದರ್ಶನ, ತಾ|| ೨೮, ೩೧ ಲಾಭ, ಮಿತ್ರಭೇಟಿ

ಸಿಂಹ- ಆರೋಗ್ಯ ಸಾಧಾರಣ, ಮಾನಸಿಕ ಚಿಂತೆ ಹೆಚ್ಚು. ಧಾರ್ಮಿಕ ಕಾರ್ಯಗಳಿಗಾಗಿ ಮತ್ತು ವಿಷಯಭೋಗಗಳಿಗಾಗಿ ಹೆಚ್ಚು ಖರ್ಚು, ವ್ಯಾಪಾರ ವ್ಯವಹಾರಗಳಲ್ಲಿ ಕಿರುಕುಳ, ಶತ್ರುಗಳಿಂದ ಅವಮಾನ, ಬಂಧುಗಳಿಂದ ತಿರಸ್ಕಾರ, ತಾ|| ೨೭, ೩೦ ಚಿಂತೆ, ಅಪಘಾತ

ಕನ್ಯಾ- ಆರೋಗ್ಯ ಸಾಧಾರಣ, ಧನಲಾಭ ಕಡಿಮೆ, ಖರ್ಚು ಅಧಿಕ, ಉದ್ಯೋಗ ವ್ಯವಹಾರಗಳಲ್ಲಿ ಸೋಲು, ಅಧಿಕಾರಿ ವರ್ಗದವರಿಂದ ತಿರಸ್ಕಾರ, ಶತ್ರುಗಳಿಂದ ಕೆಲಸಗಳಿಗೆ ಅಡಚಣೆ, ಕುಟುಂಬದವರಿಗೆ ಆರೋಗ್ಯ ಕೆಟ್ಟು ವೈದ್ಯಕೀಯ ವೆಚ್ಚ ಅಧಿಕವಾಗುವುದು, ಪ್ರವಾಸದಿಂದ ಅಪಘಾತವಾಗುವುದು, ತಾ|| ೨೭, ೩೦, ೧ ಲಾಭ, ಶಾಂತಿ

ತುಲಾ- ಆರೋಗ್ಯ ಕೆಡುತ್ತದೆ, ಧನಲಾಭ ಉತ್ತಮ, ಖರ್ಚು ಕಡಿಮೆ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರವರ್ಗದವರಿಂದ ಸನ್ಮಾನ, ಮಿತ್ರರಿಂದ ಸಹಾಯ, ಬಂಧುಗಳ ಆಗಮನದಿಂದ ಸಂತೋಷ, ತಾ|| ೨೯, ೧ ಸಾಧಾರಣ ಲಾಭ, ಶಾಂತಿ.

ವೃಶ್ಚಿಕ- ಆರೋಗ್ಯ ಸಾಧಾರಣ, ಧನಲಾಭ ಕಡಿಮೆ, ಖರ್ಚು ಮಿತಿಮೀರುವುದು, ವ್ಯಾಪಾರ ಉದ್ಯೋಗಗಳಲ್ಲಿ ಪ್ರಗತಿ ಅಧಿಕಾರಿವರ್ಗದವರಿಂದ ಸಹಾಯ ಮಿತ್ರರಿಂದ ಮನ್ನಣೆ, ಮಂಗಳಕಾರ್ಯಗಳಿಗಾಗಿ ಪ್ರವಾಸ, ತಾ|| ೨೭, ೩೦, ೧, ಲಾಭ, ಶಾಂತಿ.

ಧನಸ್ಸು- ಆರೋಗ್ಯ ಉತ್ತಮ, ಧನಲಾಭ ಸಾಧಾರಣ, ಖರ್ಚು ಅಧಿಕ ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ, ಅಧಿಕಾರಿವರ್ಗದವರ ಮತ್ತು ಮಿತ್ರರ ಸಹಾಯದಿಂದ ಕೆಲಸ ಕಾರ್ಯಗಳಲ್ಲಿ ಯಶ, ಪ್ರವಾಸದಿಂದ ಧನಲಾಭ, ತಾ|| ೨೭, ೩೦, ಲಾಭ, ಶಾಂತಿ

ಮಕರ- ಆರೋಗ್ಯ ಸಾಧಾರಣ, ಧನಲಾಭ ಕಡಿಮೆ, ವ್ಯವಹಾರಗಳಲ್ಲಿ ಶತ್ರುಗಳ ಕಿರುಕುಳ ಹೆಚ್ಚು, ಪ್ರವಾಸದಿಂದ ಅಪಘಾತ ಮತ್ತು ಧನಹಾನಿ ಯೋಚಿಸಿದ ಕಾರ್ಯಗಳಲ್ಲಿ ಸೋಲು ಬಂಧುಗಳಿಂದ ತಿರಸ್ಕಾರ, ತಾ|| ೨೮, ೩೦, ೧ ಲಾಭ, ಶಾಂತಿ

ಕುಂಭ- ಆರೋಗ್ಯ ಕೆಡುತ್ತದೆ, ಧನಲಾಭ ಸಾಧಾರಣ ಖರ್ಚು ಹೆಚ್ಚು, ಉದ್ಯೋಗ ವ್ಯವಹಾರಗಳಲ್ಲಿ ಯಶ, ಮಿತ್ರರಿಂದ ಸಹಾಯ, ಅಧಿಕಾರಿವರ್ಗದವರಿಂದ ಮನ್ನಣೆ, ತಾ|| ೨೮, ೩೧, ೧ ಲಾಭ, ಶಾಂತಿ.

ಮೀನ- ಆರೋಗ್ಯ ಉತ್ತಮವಾಗಿರುತ್ತದೆ ಧನಲಾಭ ಸಾಧಾರಣ, ಖರ್ಚು ಕಡಿಮೆ, ಉದ್ಯೋಗ, ವ್ಯವಹಾರಗಳಲ್ಲಿ ಪ್ರಗತಿ, ಬಂಧುಗಳಿಂದ ಸನ್ಮಾನ, ಮಂಗಳ ಕಾರ್ಯಗಳಿಗಾಗಿ ಖರ್ಚು ಮತ್ತು ಪ್ರವಾಸ, ತಾ|| ೩೦, ೧ ಚಿಂತೆ, ನಷ್ಟ.

ಕೊಚ್ಚಿ ಬಳಿ ೭ ಟನ್ ತೂಕದ ತಿಮಿಂಗಿಲ

ಬ್ರಿಟಿಷ್ ಕೊಚ್ಚಿಗೆ ೩೦ ಮೈಲಿ ದೂರದಲ್ಲಿ ಸಮುದ್ರದೊಳಗೆ ೭ ಟನ್ ತೂಕದ ಭಾರಿ ತಿಮಿಂಗಿಲವೊಂದನ್ನು ಹಿಡಿಯಲಾಗಿದೆ. ಇದರ ಉದ್ದ ೪೦ ಅಡಿ. ಇದರ ಕೊಬ್ಬಿನಿಂದ ೨೦೦ ಟಿನ್ ಎಣ್ಣೆಯನ್ನು ಸಹ ತೆಗೆಯಲಾಗಿದೆ.

ಸಮುದ್ರದೊಳಗೆ ವಿದ್ಯುಚ್ಛಕ್ತಿ ರೈಲು

ಡೋವರಿನಿಂದ ಕೆಲೆ ಬಂದರಿನ ವರೆಗೆ ಬ್ರಿಟಿಷ್ ಕಾಲುವೆಯ ಒಳಗಡೆ ಸುರಂಗ ಮಾರ್ಗದಲ್ಲಿ ವಿದ್ಯುಚ್ಛಕ್ತಿಯ ರೈಲನ್ನು ಓಡಿಸುವ ಕಾರ್ಯವು ಮತ್ತೆ ಆರಂಭವಾಗಿದೆ. ಬ್ರಿಟನ್ ಕಡೆಯಿಂದ ಒಂದೂಕಾಲು ಮೈಲಿ ಕಾಮಗಾರಿ ನಡೆದಿದೆ. ಫ್ರಾನ್ಸಿನ ಕಡೆಯುವ ಗೊತ್ತಾದ ಕಾಮಗಾರಿಯು ಪೂರ್ಣಗೊಂಡಿದೆ. ಇದಕ್ಕೆ ಸುಮಾರು ೧೦ ಕೋಟಿ ಪೌಂಡುಗಳ ವೆಚ್ಚ ತಗಲಬಹುದೆಂದು ಅಂದಾಜು ಮಾಡಲಾಗಿದೆ.

ಅಪೆರಾ ಟಾಕೀಸ್, ಮೈಸೂರು
೨೪-೫-೪೭ ರಿಂದ ೬ ನೇ ವಾರ
ರಾಜಕುಮಾರಿ
(ತಮಿಳು)

ರಾಜಕಮಲ್,
ತಾ|| ೨೪-೫-೪೭ ರಿಂದ
ಐದನೇ ವಾರ
ಪ್ರತಿ ದಿನ ೨ ಆಟಗಳು
ಕೃಷ್ಣವೇಣಿ ರಘುರಾಮಯ್ಯ

ಮೈಸೂರು ಸಿಲ್ಕು ಟರ್ಬನ್ ರಿಬ್ಬನ್ನುಗಳಿಗೆ
ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸಿಗೆ
ಭೇಟಿ ಕೊಡಿ

Edited printed and published by A. R. Nagarajan at the Sadhvi Press D. Subbaiah Road Mysore

25-5-47 ನೇ ತಾ|| ನಿಂದ ಜನಭರಿತವಾದ 4 ನೇ ವಾರ
ವುಡ್‌ಲ್ಯಾಂಡ್ಸ್ ಟಾಕೀಸ್, ಮೈಸೂರು.
★ 'ನಾವ್-ಇಬ್ಬರು' ★ (ತಮಿಳು)
ಪ್ರತಿ ದಿನ ಎರಡು ಆಟಗಳು
ಪ್ರತಿ ಶನಿವಾರ ಮತ್ತು ಭಾನುವಾರಗಳಲ್ಲಿ 3-30 ಕ್ಕೆ ಮ್ಯಾಟಿನಿ
ತಾರಾಗಣ:- ಟಿ.ಆರ್. ಮಹಾಲಿಂಗಂ, ಟಿ. ಎ. ಜಯಲಕ್ಷ್ಮಿ ಮತ್ತು ಬೇಬಿ ಕಮಲ

ರಿಜಿ. ನಂ. ೩೦೭ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಾಧ್ವಿ

ಸಂಪುಟ ೫] ಮಂಗಳವಾರ ೨೭—೫—೪೭ [ಸಂಚಿಕೆ ೨೪೭೭

ಭಾರತ ಯೂನಿಯನ್ನಿಗೆ ಪುದುಕೋಟೆ ಸಂಸ್ಥಾನ

ಗೂಂಡರಿಗೆ ಅಂಜಿ ಓಡಿ ಹೋಗಬಾರದು

ಸಂಜಾಬಿನ ಹಿಂದೂ ಮತ್ತು ಸಿಖ್ ಜನರು ಮತ್ತು ಮಕ್ಕಳನ್ನು ದೂರದ ಊರಿಗೆ ಕಳುಹಿಸಬಹುದು ಆದರೆ ಪುರುಷರು ಮಾತ್ರ ಸಂಘಟಿತರಾಗಿ ತಮ್ಮ ತಮ್ಮ ಸ್ಥಳಗಳಿಂದ ಚಲಿಸದೆ ಕೊಲೆ, ಸುಲಿಗೆ ಮತ್ತು ಕ್ರೂರಕೃತ್ಯಗಳನ್ನು ಪ್ರತಿಭಟಿಸಬೇಕು ಸರ್ಕಾರದ ಮೇಲೆ ಅವಲಂಬಿಸಬಾರದು. ಜನರೇ ಶಕ್ತಿಯು ದಬ್ಬಾಳಿಕೆಗೆ ಅಂಜಿ ಓಡಿ ಹೋದರೆ ಉಳಿದವರಲ್ಲಿಯು ಆತ್ಮ ವಿಶ್ವಾಸವು ಹಾಳಾಗುವುದು ಅಲ್ಲದೆ ಗೂಂಡಾಗಳ ಪ್ರೋತ್ಸಾಹವೆಷ್ಟೋ ಹೆಚ್ಚಾಗುವುದು. ಆದುದರಿಂದ ನಿರ್ಭಯರಾಗಿ ಕೈಕಾಲು ಬಿಡದೇ ಇಂಥ ಗೂಂಡಾಗಿರಿಯನ್ನು ವೀರರಂತೆ ಪ್ರತಿಭಟಿಸಬೇಕು—ಎಂಬುದಾಗಿ ಸ॥ ಪಟೇಲರು ಒಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

೨೫ ವರ್ಷಗಳ ನಂತರ ಮತ್ತೆ ಪಟ್ಟಾಭಿಷೇಕ

೧೯೨೧ ರ ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಬೊಂಬಾಯಿ ಗೌರ್ನರರ ಆಗಮನದ ಪ್ರಯುಕ್ತ ಕರೆಯಲಾಗಿದ್ದ ದರ್ಬಾರಿಗೆ ಹೋಗಲು ನಿರಾಕರಿಸಿದುದರಿಂದ ಕೃಷ್ಣಾಂಕಲಿ ಬಾಳ್ಪೂರು ಸಿಂಹಾಸನವನ್ನು ದರ್ಬಾರು ಗೋಪಾಲದಾಸರು ಕಳೆದುಕೊಂಡಿದ್ದರು ಪಂ॥ ನೆಹರೂ ಸ॥ ಪಟೇಲರ ಪ್ರಯತ್ನದಿಂದ ಅವರಿಗೆ ಆ ಪಟ್ಟವನ್ನು ಪುನಃ ಕೊಡಲಾಗಿದೆ ಅವರ ಮರು ಪಟ್ಟಾಭಿಷೇಕವು ಮೊನ್ನೆ ಜರುಗಿತು ಪ್ರಜೆಗಳು ಹೇಳಿದಂತೆ ರಾಜ್ಯಭಾರ ನಡೆಸುವುದಾಗಿ ಅವರು ಘೋಷಿಸಿದ್ದಾರೆ

ಬಿಸಿಲಿನ ಧಗೆಯಿಂದ ರೈಲಿನಲ್ಲೇ ಮರಣ

ಎಂ ಎಸ್. ಎಂ. ರೈಲ್ವೆ ಉದ್ಯೋಗಿಯಾದ ಮಿ॥ ಎಸ್. ಆ. ಏಕಸ್ ರವರು ಮದ್ರಾಸಿಗೆ ಮೊನ್ನೆ ಹಿಂದಿರುಗುತ್ತಿದ್ದಾಗ ರೈಲಿನ ಮೊದಲನೇ ತರಗತಿಯ ಗಾಡಿಯಲ್ಲಿ ಬಿಸಿಲ ಒತ್ತಡದಿಂದ ಮರಣ ಹೊಂದಿದರೆಂದು ವರದಿಯಾಗಿದೆ

ಬಲವಂತದ ಧಾನ್ಯ ಶೇಖರಣೆ

ಹಾಸನ ಜಿಲ್ಲಾ ಬಾಸೂರಿನ ಶ್ರೀಗಳಾದ ತಿಮ್ಮೇಗೌಡರು ಮತ್ತು ಬಾಣೇಗೌಡರು ಈ ರೀತಿ ಬರೆಯುತ್ತಾರೆ:—

ಕಳೆದ ೯ನೇ ತಾ॥ ಹಾಸನದ ಸಬ್ ಡಿವಿಜನ್ ಅಧಿಕಾರಿಗಳು ನಮ್ಮ ಮನೆಯಲ್ಲಿ ೨೫ ಮತ್ತು ೫೦ ಸೇರು ರಾಗಿಯನ್ನು ಬಿಟ್ಟು ೩೧ ಮತ್ತು ೪೫॥ ಪಲ್ಲ ರಾಗಿಯನ್ನು ಬಲವಂತದಿಂದ ವಶಪಡಿಸಿಕೊಂಡು ಹೋಗಿರುತ್ತಾರೆ ನಮ್ಮ ಅಹವಾಲನ್ನು ಕೇಳದೆ ಅನ್ಯಾಯ ಮಾಡಿರುತ್ತಾರೆ ಈ ವಿಚಾರವನ್ನು ಮೇಲಧಿಕಾರಿಗಳಿಗೂ, ದಿವಾನರಿಗೂ ಅರ್ಜಿ ಮಾಡಿಕೊಳ್ಳಲಾಗಿದೆ

೧॥ ಕೋಟಿ ರೂ. ದಂಗೆ ಪರಿಹಾರ ತೆರಿಗೆ

ಬೊಂಬಾಯಿ ನಗರದ ಆಸ್ತಿವಂತರು ಒಂದೂವರೆ ಕೋಟಿ ರೂಗಳ ದಂಗೆ ಪರಿಹಾರ ತೆರಿಗೆಯನ್ನು ಕೊಡಬೇಕೆಂದು ಸರ್ಕಾರವು ಆಜ್ಞೆ ಇತ್ತಿದೆ ಇದನ್ನು ಪುರಸಭೆಯು ವಸೂಲು ಮಾಡುವುದು ಇದಲ್ಲದೆ ಗಲಭೆಯ ಹಲವು ಪ್ರದೇಶಗಳ ಮೇಲೆ ೧। ಕೋಟಿ ರೂ ಗಳ ಪುಂಡುಗಂದಾಯವನ್ನು ಸರ್ಕಾರವು ಹೇರಿದೆ

ಪಾಕಿಸ್ತಾನ ವಿರುದ್ಧ ಗಾಂಧೀಜಿಯವರಿಗೆ ತಂತಿ

ಗ್ಲೋಬ್] ನೂರ್ ೨೩

ಮುಸ್ಲಿಂ ಲೀಗ್ ಅಧ್ಯಕ್ಷರಾದ ಮಿ॥ ಜಿನ್ನಾರವರ ವಿರುದ್ಧವಾಗಿ ಕೂಡಲೇ ಯುದ್ಧ ಹೂಡಬೇಕೆಂದು ಪಾಕಿಸ್ತಾನ್ ವಿರುದ್ಧ ಸಂಘದ ಕಾರ್ಯದರ್ಶಿಗಳಾದ ಶ್ರೀ॥ ಗೋಲ್ವೇಲ್ಕರ್ ಮತ್ತು ಶ್ರೀ॥ ವ್ರಜಲಾಲ ಆರ್ಯರು ಮಹಾತ್ಮ ಗಾಂಧಿಯವರಿಗೆ ತಂತಿ ಕಳುಹಿಸಿದ್ದಾರೆ ಎಂಟು ದಿನಗಳೊಳಗಾಗಿ ಸರಿಯಾದ ಉತ್ತರ ಕೊಡದಿದ್ದರೆ ಮಹಾತ್ಮ ಗಾಂಧಿಯವರ ದೆಹಲಿಯ ನಿವಾಸದ ಮುಂದೆ ಕಪ್ಪು ಬಾವುಟದ ಪ್ರದರ್ಶನದೊಡನೆ ಸತ್ಯಾಗ್ರಹ ನಡೆಸುವುದಾಗಿಯೂ ತಿಳಿಸಿದ್ದಾರೆ.

ಲಂಡನ್ ಕಡೆ ನೋಡಬಾರದು

ಭಾರತದ ಭವಿಷ್ಯದ ನಿರ್ಧಾರಕ್ಕಾಗಿ ಲಂಡನ್ನಿನ ಕಡೆ ನೋಡುವುದು ಅವಹೇಳನಕರವಾದುದು ವೈಸರಾಯರ ಆಗಮನವನ್ನು ಬಹಳ ಆಸಕ್ತಿಯಿಂದ ನಿರೀಕ್ಷಿಸುವುದು ಅನುಚಿತವಾದುದು ಕೋಟ್ಯನುಕೋಟಿ ಜನರ ಸತ್ಯಕವಾದ ಭಾರತದ ಸ್ವಾತಂತ್ರ್ಯವು ನಮ್ಮ ಮುಂದೆಯೇ ಇದೆ ಅದನ್ನು ತಿರಸ್ಕರಿಸುವ, ಅಥವಾ ಸ್ವೀಕರಿಸುವ ನಿರ್ಧಾರದ ಬಾಧ್ಯತೆ ನಮ್ಮದಾಗಿದೆ. ಸ್ವತಂತ್ರರಾಗಬೇಕೆಂಬ ನಮ್ಮ ನಿರ್ಧಾರವನ್ನು ಎದುರಿಸುವ ಶಕ್ತಿ ಇಡೀ ಜಗತ್ತಿನಲ್ಲೇ ಇಲ್ಲ—ಎಂಬುದಾಗಿ ಮಹಾತ್ಮ ಗಾಂಧಿಯವರು ಪ್ರಾರ್ಥನಾ ಸಭೆಯಲ್ಲಿ ತಿಳಿಸಿದ್ದಾರೆ

ಜಿಲ್ಲಾ ಬೋರ್ಡ್ ಕಾಂಗ್ರೆಸ್ ಪಕ್ಷ

ಮೈಸೂರು ಜಿಲ್ಲಾ ಬೋರ್ಡ್ ಕಾಂಗ್ರೆಸ್ ಪಕ್ಷದಿಂದ ಚುನಾಯಿತರಾಗಿರುವ ಸದಸ್ಯರುಗಳ ಸಭೆಯು ನಿನ್ನೆ ಶ್ರೀ ಸೂರ್ಯನಾರಾಯಣ ಪಂಡಿತರ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀಗಳಾದ ಹೆಚ್ ಎಂ ಚೆನ್ನಬಸಪ್ಪನವರನ್ನು ನಾಯಕರನ್ನಾಗಿಯೂ, ಪುಟ್ಟನಂಜಪ್ಪನವರನ್ನು ಉಪನಾಯಕರನ್ನಾಗಿಯೂ, ಒಕೆ ಮಾದಪ್ಪನವರನ್ನು ಕಾರ್ಯದರ್ಶಿಗಳನ್ನಾಗಿಯೂ, ಲಿಂಗಪ್ಪನವರನ್ನು ವಿಪ್ ಆಗಿಯೂ ಚುನಾಯಿಸಲಾಯಿತು. ಶ್ರೀಗಳಾದ ಎಂ ಎಲ್ ನಂಜರಾಜೇ ಅರಸ್ ಸೂರ್ಯನಾರಾಯಣ ಪಂಡಿತ್, ಹೆಚ್ ಕೆ ಕುಮಾರಸ್ವಾಮಿ, ಜಿ ಕೃಷ್ಣಮೂರ್ತಿ ಮತ್ತು ಹೆಜ್ಜಿಗೆ ಲಿಂಗಣ್ಣನವರುಗಳು ಪಕ್ಷದ ಸಹಾಯಕ ಸದಸ್ಯರುಗಳನ್ನಾಗಿ ಆರಿಸಿಕೊಳ್ಳಲಾಯಿತು.

ಆರ್ಥಿಕ ಸಮ್ಮೇಳನ

ಸ್ವ ಸು ವೊ] ಬೆಂಗಳೂರು ೨೭

೧೨ ವರ್ಷಗಳಿಂದ ನಿಂತು ಹೋಗಿದ್ದ ಮೈಸೂರು ಸಂಸ್ಥಾನದ ಆರ್ಥಿಕ ಸಮ್ಮೇಳನದ ಅಧಿವೇಶನವು ನಿನ್ನೆ ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರವರ ಅಧ್ಯಕ್ಷತೆಯಲ್ಲಿ ಪಿಕ್ಸಿ ಹಾಲಿನಲ್ಲಿ ನಡೆಯಿತು ದಿವಾನರು ಮಾತನಾಡುತ್ತಾ ಸಮ್ಮೇಳನದಿಂದ ಆಗಿರುವ ನಾನಾ ಕಾರ್ಯನೆಗಳ ಅಭಿವೃದ್ಧಿಯನ್ನು ಪ್ರಶಂಸಿಸಿದರು ವಿದ್ಯಾಭ್ಯಾಸದ ಪುನರ್ವ್ಯವಸ್ಥೆ ಅತ್ಯಗತ್ಯವೆಂದೂ ಹೇಳಿದರು ಹೆಚ್ಚು ಆಹಾರ ಬೆಳೆಯುವ ಬಗ್ಗೆ ವಿಶೇಷ ಗಮನ ಕೊಡಬೇಕೆಂದೂ, ಈ ವಿಚಾರದಲ್ಲಿ ಬಂದಿರುವ ವರದಿಗಳನ್ನು ಸರ್ಕಾರದವರು ಪರಿಶೀಲಿಸಿ ಸೂಕ್ತ ವ್ಯವಸ್ಥೆಯನ್ನು ಮಾಡಲಿದ್ದಾರೆಂದೂ ತಿಳಿಸಿದರು

ನಿನ್ನೆ ದಿವಾನರೊಡನೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ॥ ಕೆ ಸಿ ರೆಡ್ಡಿಯವರು ಭೇಟಿ ನಡೆಸಿದರು ಈ ಬಗ್ಗೆ ಪ್ರಕಟಣೆ ಇನ್ನೂ ಹೊರಬಿದ್ದಿಲ್ಲ

ಮಹಾರಾಜಾ ಕಾಲೇಜಿನಲ್ಲಿ ಉಪಾಧ್ಯಾಯರಾಗಿರುವ ಶ್ರೀ॥ ಕೆ. ಮಂಚೇಗೌಡರನ್ನು ಮಾಹೆಯಾನ ೧೫೦ ರೂಪಾಯಿ ಸಂಬಳದ ಮೇಲೆ ಆರ್ಥಿಕ ಸಮ್ಮೇಳನದ ಅ॥ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಲಾಗಿದೆ

ಸೊಸೈಟಿ ಡೈರೆಕ್ಟರುಗಳು

ಮೈಸೂರು ಕೋ-ಆಪರೇಟಿವ್ ಸೊಸೈಟಿಗೆ ಈ ಕೆಳಗೆ ಕಂಡವರು ಡೈರೆಕ್ಟರುಗಳಾಗಿ ಚುನಾಯಿತರಾಗಿರುತ್ತಾರೆ:-ಶ್ರೀಗಳಾದ ಎಸ್ ಚೆನ್ನಸ್ವಾಮಿಶೆಟ್ಟಿ, ಟಿ ಎಸ್ ರಾಜಗೋಪಾಲಯ್ಯಂಗಾರ್. ಜಿ ಆರ್ ಜೋಸ್ಯರು, ಜಿ ವಿ ಸೂರ್ಯನಾರಾಯಣಶೆಟ್ಟಿ, ಎಸ್ ರಾಜಗೋಪಾಲಯ್ಯಂಗಾರ್, ಬಿ ಎಸ್ ರುದ್ರಪ್ಪ, ಬಿ ಆರ್ ಲಕ್ಷ್ಮಣಶೆಟ್ಟಿ, ಜಿ ವಿ ದೇಶಿಕಾಚಾರ್, ಟಿ ಕೃಷ್ಣರಾವ್, ಎಂ ಆರ್ ಸಿ ಬಸಪ್ಪ ಕೆ ರಾಮಸ್ವಾಮಯ್ಯಂಗಾರ್, ಎಸ್ ಮೇಲುಸಿಂಗ್, ಜಿ ಸಿಂಗಮ್ಮ, ಎ ಕೃಷ್ಣಮೂರ್ತಿರಾವ್ ಮತ್ತು ಎಂ ಎಸ್ ನಾಗಪ್ಪ

ಹರಿಕಥೆ

ಲಕ್ಷ್ಮೀಪುರಂ ಮೊಹಲ್ಲಾ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ದೇವಸ್ಥಾನದಲ್ಲಿ ನಾಳೆಯಿಂದ ಪ್ರತಿ ದಿನ ಸಂಜೆ ೬॥ ಯಿಂದ ೮॥ ವರೆವಿಗೆ ಶ್ರೀ ಭಕ್ತವಿಜಯ ಮತ್ತು ಮಹಾಭಾರತ ಕಥೆಗಳನ್ನು ಅರುಣಗಿರಿನಾಥ ಭಾರತಿಗಳವರು ಹರಿಕಥಾರೂಪವಾಗಿ ಅನುವಾದ ಮಾಡುತ್ತಾರೆ. ಸರ್ವರಿಗೂ ಆಹ್ವಾನವುಂಟು.

ಪುದುಕೋಟೆ ಸಂಸ್ಥಾನವು ಭಾರತದ ಯೂನಿಯನ್ನಿಗೆ

ಭಾರತದ ರಾಜ್ಯಾಂಗ ಸಭೆ ಮತ್ತು ಯೂನಿಯನ್ನಿಗೆ ಸೇರಲು ಪುದುಕೋಟೆ ದರ್ಬಾರಿನವರು ನಿರ್ಧರಿಸಿ, ಬಂಗನಪಲ್ಲಿ ಮತ್ತು ಸಂದೂರ್ ಸಂಸ್ಥಾನಗಳ ಜೊತೆಗೆ ತಮ್ಮ ಸಂಸ್ಥಾನವನ್ನು ಸೇರಿಸಿ ರಾಜ್ಯಾಂಗ ಸಭೆಯಲ್ಲಿ ಒಂದು ಸ್ಥಾನವನ್ನು ಕೊಡುವಂತೆ ನರೇಂದ್ರ ಮಂಡಲಿ ಮತ್ತು ರಾಜ್ಯಾಂಗ ಸಭೆಯನ್ನು ಪ್ರಾರ್ಥಿಸಿದ್ದಾರೆಂದು ಅಲ್ಲಿನ ದಿವಾನರಾದ ಮಿ॥ ಪಿ ಅಲೆಗ್ಸಾಂಡರವರು ತಿಳಿಸಿದ್ದಾರೆ ಸಣ್ಣ ಸಂಸ್ಥಾನಗಳು ರಾಜ್ಯಾಂಗ ಸಭೆಗೆ ಸೇರದೆ ಸ್ವತಂತ್ರವಾಗಿ ಬಾಳಲಾರವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ ಸಂಸ್ಥಾನದಲ್ಲಿ ಸುಧಾರಣೆಯನ್ನು ಜಾರಿಗೆ ತರುವ ವಿಚಾರವನ್ನು ದರ್ಬಾರಿನವರು ಪರಿಶೀಲಿಸುತ್ತಿದ್ದಾರೆಂದು ಅವರು ಹೇಳಿದ್ದಾರೆ

ಸಂಸ್ಥಾನಗಳೊಡನೆ ಬ್ರಿಟಿಷ್ ಸಂಬಂಧ

ಸಂಸ್ಥಾನಗಳಲ್ಲಿರುವ ಬ್ರಿ॥ ರೆಸಿಡೆನ್ಸಿಗಳನ್ನು ಈ ವರ್ಷಾಂತ್ಯದೊಳಗಾಗಿ ರದ್ದುಗೊಳಿಸಿದ ಮೇಲೂ ಬ್ರಿಟನೊಡನೆ ಸಂಸ್ಥಾನಗಳಿಗೆ ಸಂಬಂಧವಿರುವುದೆಂದೂ, ಸಂಸ್ಥಾನಗಳಲ್ಲಿ ಬ್ರಿಟಿಷ್ ಮಧ್ಯವರ್ತಿ ಅಧಿಕಾರಿಗಳನ್ನು ನೇಮಿಸಲಾಗುವುದೆಂದೂ ಹೇಳಲಾಗಿದೆ

ತಾಂಡನ್‌ರ ರಾಜೀನಾಮೆ

ತಮ್ಮ ಅಭಿಪ್ರಾಯಗಳನ್ನು ನಿರ್ಭಯವಾಗಿ ತಿಳಿಸಲು ತಮ್ಮ ಅಧಿಕಾರ ಸ್ಥಾನವು ಅಡ್ಡಿಯಾಗಿರುವುದರಿಂದ ಸಂಯುಕ್ತ ಪ್ರಾಂತ ಶಾಸನ ಸಭೆಯ ಅಧ್ಯಕ್ಷ ಪದವಿಗೆ ಬಾಬು ಪುರುಷೋತ್ತಮದಾಸ ಟಾಂಡನರವರು ರಾಜೀನಾಮೆ ಸಲ್ಲಿಸಲು ನಿರ್ಧರಿಸಿದ್ದಾರೆ.

ದ್ರಾವಕದಿಂದ ಹುಡುಗರಿಗೆ ಹೆಚ್ಚು ಬುದ್ಧಿ

ಗ್ಲೋಬ್] ಲಂಡನ್ ೨೬

ಅಮೆರಿಕ ಸಂಯುಕ್ತ ಸಂಸ್ಥಾನದ ವೈಜ್ಞಾನಿಕರು ಗ್ಲೂಟಾಮಿಕ್ ಎಂಬ ಒಂದು ಬಗೆಯ ದ್ರಾವಕವನ್ನು ಕಂಡು ಹಿಡಿದಿದ್ದಾರೆ. ಇದನ್ನು ಮಕ್ಕಳಿಗೆ ಕುಡಿಸುವುದರಿಂದ ಅವರಿಗೆ ಬುದ್ಧಿಯು ಹೆಚ್ಚಾಗುವುದು. ಆದರೆ ನಿಯಮಿತ ಪ್ರಮಾಣಕ್ಕಿಂತ ಸ್ವಲ್ಪ ಹೆಚ್ಚಾಗಿ ಸೇವಿಸಿದರೂ ಸಹ ನಿದ್ರೆಯಿಲ್ಲದಂತಾಗುವುದು

ಉದಾರ ಸಹಾಯ

ಮೈಸೂರು ಅರಮನೆ ಕಂಟ್ರಾಕ್ಟರ್ ಶ್ರೀ ಸಿ ಚಲುವಾಚಾರ್ಯರು ಕಳೆದ ೨೫ ನೇ ತಾ॥ ನಡೆದ ತಮ್ಮ ಮಗಳ ವಿವಾಹದ ಸಂದರ್ಭದಲ್ಲಿ ಮೈಸೂರ ವಿಶ್ವಕರ್ಮ ವಿದ್ಯಾರ್ಥಿನಿಲಯಕ್ಕೆ ೫೦ ರೂ ಉದಾರ ಸಹಾಯ ಮಾಡಿದ್ದಾರೆ

ಟೇಬಲ್ ಟೆನಿಸ್ ಪಂದ್ಯ

ಮೈಸೂರು ರೈಲ್ವೆ ಟೇಬಲ್ ಟೆನಿಸ್ ಟೋರ್ನಮೆಂಟಿನ ಸಿಂಗಲ್ಸ್‌ನಲ್ಲಿ ಶ್ರೀ ಎಂ ಎಸ್ ಅನಂತರಾಮರವರು ಶ್ರೀ ಸಿ ಎಸ್ ರಂಗಸ್ವಾಮಯ್ಯಂಗಾರ್ಯರನ್ನು ಸೋಲಿಸಿದರು ಡಬ್ಬಲ್ಸಿನಲ್ಲಿ ಕೆ ಶಿವರಾಮಯ್ಯ ಮತ್ತು ಓ ಎಸ್ ಎಸ್ ಅಯ್ಯಂಗಾರ್ಯರು ಶ್ರೀಗಳಾದ ಸಿ ಎಸ್ ರಂಗಸ್ವಾಮಯ್ಯಂಗಾರ್ ಮತ್ತು ಕೆ ರಾಮಚಂದ್ರರವರನ್ನು ಸೋಲಿಸಿದರು ರೈಲ್ವೆ ಜನರಲ್ ಮ್ಯಾನೇಜರಾದ ಶ್ರೀ ಎಂ ವೆಂಕಟೇಶರವರು ಬಹುಮಾನಗಳನ್ನು ಹಂಚಿದರು.

ಸಾಧ್ವಿ

ತಾ॥ ೨೭-೫-೪೭ ಮಂಗಳವಾರ

ಒಪ್ಪೆಯ ಪದ್ಧತಿಯಲ್ಲಿ

——

ಅಂತೆ ಇಲಾಖೆಯಲ್ಲಿ ಹಣವನ್ನಿಟ್ಟು ಬಿಡ್ಡಿ ತೆಗೆದುಕೊಳ್ಳದೆ ಇರುವ ಮುಸ್ಲಿಮರ ಹಣವನ್ನು ಒಂದು ಪ್ರತ್ಯೇಕ ನಿಧಿಯಾಗಿ ವಿರ್ಗಡಿಸಿ, ಅದನ್ನು ಆ ಜನಾಂಗದವರ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸುವಂತೆ ಇಂಡಿಯಾ ಸರ್ಕಾರದವರ ಒಂದು ವ್ಯವಸ್ಥೆಯನ್ನು ಮಾಡಿರುತ್ತಾರೆ ಹಲವು ಮುಸ್ಲಿಂ ಪ್ರಮುಖರು ಈ ಬಗ್ಗೆ ಆಗಾಗ್ಗೆ ಒತ್ತಾಯ ಪಡಿಸುತ್ತಿದ್ದರೆಂಬುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ ಆದರೆ ಈ ಪದ್ಧತಿಯು ಒಪ್ಪೆಯಾದುದಲ್ಲವೆಂಬುದನ್ನು ಬೇರೆ ಹೇಳಬೇಕಾಗಿಲ್ಲ

ಇನ್ನು ಮುಂದೆ ಈ ದೇಶದಲ್ಲಿರುವ ಅಲ್ಪಸಂಖ್ಯಾತರಾದ ಇತರೆ ಕೋಮಿನವರೂ ಸಹ ಇದೇ ರೀತಿ ಕೇಳಲು ತೊಡಗಿದರೆ ಅದರಂತೆ ಪ್ರತ್ಯೇಕ ನಿಧಿಗಳನ್ನು ವಿರ್ಗಡಿಸಬೇಕಾಗುವುದು ಇವುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ನೂರಾರು ಸಂಸ್ಥೆಗಳನ್ನೂ ಸಹ ಸ್ಥಾಪಿಸಬೇಕಾಗುವುದು ಇದರಿಂದ ಯಾರಿಗೂ ಪ್ರಯೋಜನವಾಗದೆ ಹೋಗಬಹುದು

ಪ್ರಕೃತದಲ್ಲಿ ಭಾರತ ಕೇಂದ್ರ ಸರ್ಕಾರದಲ್ಲಿರುವ ಹಣಕಾಸಿನ ಮಂತ್ರಿಗಳು ಮುಸ್ಲಿಮರಾದುದರಿಂದ ಈ ಬಗೆಯ ವ್ಯವಸ್ಥೆಗೆ ಅವರು ಅವಕಾಶ ಕೊಟ್ಟಿರುವರೆಂಬ ಅನುಮಾನಕ್ಕೂ ಅವಕಾಶವಾಗಿರುತ್ತದೆ ಅಲ್ಲದೆ ಆ ಸರ್ಕಾರವು ಒಂದು ಸಂಯುಕ್ತ ಮಂತ್ರಿಮಂಡಲವಾಗಿರದೆ ಸಚಿವರ ಜಂಟೀ ಜವಾಬ್ದಾರಿಯೂ ಇಲ್ಲದಿರುವುದರಿಂದ ಒಬ್ಬೊಬ್ಬ ಮಂತ್ರಿಯೂ ಒಂದೊಂದು ನೀತಿಯನ್ನು ಅನುಸರಿಸಲು ಅವಕಾಶವಾಗಿರುತ್ತದೆ ಈ ಪದ್ಧತಿಯನ್ನು ಇತರ ಮಂತ್ರಿಗಳು ಅನುಮೋದಿಸ ಬಹುದಲ್ಲವೆಂದೂ ಧಾರಾಳವಾಗಿ ಹೇಳಬಹುದು

ಸರ್ಕಾರಗಳಲ್ಲಿ ನಾನಾ ವಿಧವಾದ ಹಣಗಳು ರೆವೆನ್ಯೂ ರೂಪದಲ್ಲಿ ಒಂದು ಸೇರುತ್ತವೆ. ಅವುಗಳಲ್ಲಿ ವಾರಸುದಾರರಿಲ್ಲದೆ ಅಥವಾ ಬೇರೆ ಕಾರಣಗಳಿಂದ ಅನೇಕ ಹಣಗಳು ಸರ್ಕಾರಕ್ಕೇ ಸೇರಿಹೋಗುವುದುಂಟು. ಅಂತಹ ಹಣಗಳನ್ನು ಸರ್ಕಾರದ ಸಾರ್ವತ್ರಿಕ ನಿಧಿಗೆ ಸೇರಿಸಿಕೊಳ್ಳುವುದು ವಾಡಿಕೆ ಅವುಗಳನ್ನು ಪ್ರತ್ಯೇಕವಾಗಿ ತೆಗೆದಿಡುವ ಪದ್ಧತಿಯು ಎಲ್ಲಿಯೂ ಇರುವುದಿಲ್ಲ ಒಂದು ವೇಳೆ ತೆಗೆದಿಟ್ಟರೂ ಅವುಗಳನ್ನು ಯಾವುದಾದರೊಂದು ಕೋಮಿನ ಸಲುವಾಗಿಯೇ ವಿನಿಯೋಗಿಸುವ ಪದ್ಧತಿಯ ಇರುವುದಿಲ್ಲ ಈಗ ಈ ಪದ್ಧತಿಯನ್ನು ಜಾರಿಗೆ ತಂದು ಒಂದು ಪ್ರಗತಿ ವಿರೋಧಕವಾದ ಮೇಲ್ಪಂಕ್ತಿಯನ್ನು ಹಾಕಲಾಗಿದೆ ಆದರೆ ಮುಸ್ಲಿಂ ಲೀಗಿನವರ ಅಪ್ರೀತಿಗೆ ಪಾತ್ರರಾಗದಂತೆ ವರ್ತಿಸುವ ನೀತಿಗೆ ಇದು ಅನುಗುಣವಾಗಿಯೇ ಇರುತ್ತದೆ

ಸರ್ಕಾರದ ಹಣಕಾಸಿನ ಆಡಳಿತದಲ್ಲಿ ಕೋಮು ವಾರು ಪಕ್ಷಪಾತವು ಇರುವುದು ಶ್ರೇಯಸ್ಕರವಲ್ಲ

Edited printed and published by A. R. Ra... at the Sadhvi Press D. Subbaiah's Road Mysore

ಆಹಾರ ಸಮಸ್ಯೆ ಬಗೆಹರಿಯದಿದ್ದರೆ ೩ ನೇ ಯುದ್ಧ

ಪ್ರಪಂಚ ಆಹಾರ ಸಮಿತಿಯೊಂದು ಏರ್ಪಟ್ಟು ಉತ್ಪನ್ನವನ್ನು ಹೆಚ್ಚಿಸದಿದ್ದರೆ ಮತ್ತೊಂದು ಮಹಾಯುದ್ಧವು ಅನಿವಾರ್ಯವಾಗುವುದೆಂದು ಸಂಯುಕ್ತ ರಾಷ್ಟ್ರಗಳ ವ್ಯವಸಾಯದ ಡೈರೆಕ್ಟರ್ ಜನರಲ್ಲರಾದ ಸರ್ ಜಾನ್ ಬಾಯ್ಡ್ ಆರ್ರು ಹೇಳಿರುತ್ತಾರೆ ಶಾಂತಿಗೆ ಆಹಾರವೇ ಆಧಾರ. ರಾಜಕೀಯ ಅಥವಾ ಗಡಿಗಳ ನಿರ್ಣಯದಿಂದ ಶಾಂತಿ ದೊರೆಯುವುದಿಲ್ಲ ಎಲ್ಲ ರಾಷ್ಟ್ರಗಳೂ ಯುದ್ಧಕ್ಕಾಗಿ ತೋರಿಸುತ್ತಿದ್ದ ಉತ್ಸಾಹವನ್ನು ಆಹಾರ ಸಮಸ್ಯೆಯ ಪರಿಹಾರಕ್ಕೂ ಉಪಯೋಗಿಸಿದರೆ ಬರುವ ವರ್ಷ ಆಹಾರದ ಸಮಸ್ಯೆ ಬಗೆಹರಿಯುವುದು ಎಂದು ಹೇಳಿ ಮಹಾ ರಾಷ್ಟ್ರಗಳು ಇದಕ್ಕೆ ಗಮನ ಕೊಡುವುದರ ಬದಲು ತಮ್ಮ ಉತ್ಪತ್ತಿಯ ಪೂರದ ಒಂದು ಭಾಗವನ್ನು ಯುದ್ಧ ಸಿದ್ಧತೆಗಾಗಿ ಪೋಲುಮಾಡುತ್ತಿರುವುದನ್ನು ಟೀಕಿಸಿರುವರು

ಪಾಕಿಸ್ತಾನವು ಸೈನ್ಯವನ್ನು ಪೋಷಿಸಲಾರದು

ಭಾರತದ ವಿಭಜನೆ ಅನಿವಾರ್ಯವಾದರೆ ಸೈನ್ಯವನ್ನೂ ಸಹ ವಿಭಾಗಿಸಲೇ ಬೇಕು ಇದುವರೆಗೆ ಪಂಜಾಬಿನಿಂದಲೇ ಹೆಚ್ಚು ಜನರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲಾಗಿದೆ ರಾವಲ್ಪಿಂಡಿ ಮತ್ತು ಮುಲ್ತಾನ ಜಿಲ್ಲೆಗಳಿಂದ ಹೆಚ್ಚು ಮಂದಿ ಮುಸ್ಲಿಂ ಸೈನಿಕರನ್ನು ಸೇರಿಸಲಾಗಿದೆ ಇವರನ್ನೆಲ್ಲಾ ಇಟ್ಟುಕೊಳ್ಳಲು ಪಾಕಿಸ್ತಾನಕ್ಕೆ ಹಣ ಸಿಗಲಾರದು. ಇದರ ಕಷ್ಟವನ್ನು ಮುಸ್ಲಿಮರು ಕ್ರಮೇಣ ಅರಿಯುವರು ಪಾಕಿಸ್ತಾನದಿಂದ ಒಟ್ಟಿನಲ್ಲಿ ಮುಸ್ಲಿಮರಿಗೇ ಹಾನಿ ಎಂಬುದಾಗಿ ಭಾರತ ಸರ್ಕಾರದ ರಕ್ಷಣಾ ಮಂತ್ರಿ ಸ॥ ಬಲದೇವಸಿಂಗರು ಹೇಳಿಕೆಯಿತ್ತಿದ್ದಾರೆ

ಇಂತಹ ಪದ್ಧತಿಗಳು ಬೆಳೆದಂತೆಲ್ಲಾ ಸಮಾಜಕ್ಕೆ ವಿಶೇಷ ಅನರ್ಥವೇ ಸಂಭವಿಸುವುದು ದಾನ ಧರ್ಮಗಳೂ, ಪರೋಪಕಾರಗಳೂ ಕೇವಲ ಸಂಕುಚಿತವಾದ ಕೋಮುವಾರು ದೃಷ್ಟಿಯಿಂದ ಆಗುವುದಕ್ಕೆ ಬದಲು ಸಾರ್ವತ್ರಿಕವಾಗಿ ನಡೆಯಲು ಪ್ರೋತ್ಸಾಹವನ್ನು ಕೊಡುವುದೇ ಸರ್ಕಾರಗಳ ನೀತಿಯಾಗಿರಬೇಕು

ಅಸ್ಸಾಂ ವಿಭಜನೆಗೆ ಗೌರ್ನರರ ವಿರೋಧ

ಅಸ್ಸಾಂ ಪ್ರಾಂತ್ಯವು ವಿಭಾಗವಾಗದೆ ಅಖಂಡವಾಗಿರಬೇಕೆಂದು ಅಲ್ಲಿನ ಗೌರ್ನರಾದ ಸರ್ ಅಕ್ಬರ್ ಹೈದರಿಯವರು ತಿಳಿಸಿ ಸಿಲ್ಹೆಟ್ ಮತ್ತು ಗೋಪಾಲಪುರ ಜಿಲ್ಲೆಗಳನ್ನು ಬಂಗಾಳಕ್ಕೂ ಅಸ್ಸಾಂ ಪ್ರಾಂತ್ಯವನ್ನು ಪೂರ್ವ ಪಾಕಿಸ್ತಾನಕ್ಕೂ ಸೇರಿಸಬೇಕೆಂಬ ಸೂಚನೆಯನ್ನು ವಿರೋಧಿಸಿದ್ದಾರೆ ಲೀಗಿನವರು ತಮ್ಮ ಚಳುವಳಿಯನ್ನು ನಿಲ್ಲಿಸದರೆ ಜಮೀನು ಹಿಡುವಳಿ ಕಾನೂನಿನ ಬಗ್ಗೆ ಒಪ್ಪಂದಕ್ಕೆ ಬರಬಹುದೆಂದೂ ಹೇಳಿದ್ದಾರೆ.

ಕಾಶ್ಮೀರಿಗಳಿಗೆ ರಾಷ್ಟ್ರಪತಿಗಳ ಹಿತೋಕ್ತಿ

ಕಾಶ್ಮೀರದ ಅರಸರು ಆ ಸಂಸ್ಥಾನವನ್ನು ತ್ಯಜಿಸಿ ಹೊರಡಬೇಕು-ಎಂದು ಅಲ್ಲಿನ ಪ್ರಜೆಗಳು ಹೂಡಿರುವ ಚಳುವಳಿಯನ್ನು ಟೀಕಿಸಿ ರಾಷ್ಟ್ರಪತಿ ಆಚಾರ್ಯ ಕೃಪಲಾನಿಯವರು ಒಂದು ಹೇಳಿಕೆಯನ್ನಿತ್ತಿದ್ದಾರೆ

ಕಾಶ್ಮೀರದ ರಾಜರು ತಮ್ಮ ಸಂಸ್ಥಾನವನ್ನು ರಕ್ತದ ಕೋಡಿ ಹರಿಸಿಯಾಗಲಿ, ಅಥವಾ ಆಕ್ರಮಣದಿಂದಲಾಗಲೀ ಪಡೆದಿಲ್ಲ ಬ್ರಿಟಿಷರಿಂದ ೭೦ ಲಕ್ಷ ರೂ ಗಳಿಗೆ ಅದನ್ನು ಕೊಂಡುಕೊಂಡಿದ್ದಾರೆ ಅವರೂ ಭಾರತೀಯರೇ, 'ಬ್ರಿಟಿಷರೇ ತೊಲಗಿ' ಎಂಬ ಉದ್ಗಾರವು ಕಾಶ್ಮೀರದ ಅರಸರಿಗೆ ಅನ್ವಯಿಸುವುದಿಲ್ಲ ಅವರ ಆಶ್ರಯದಲ್ಲಿ ಪ್ರಜಾಸರ್ಕಾರವನ್ನು ಕೇಳುವುದು ಸಾಧುವಾಗಿದೆ ಎಂಬುದಾಗಿ ಅವರು ತಿಳಿಸಿರುತ್ತಾರೆ.

ಮುಸ್ಲಿಂ ಪ್ರಾಂತ್ಯಗಳ ವಿಭಜನೆಗೆ ಪ್ರಜಾಭಿಪ್ರಾ...

ಭಾರತದ ಭವಿಷ್ಯವನ್ನು ಭಾರತೀಯರೇ ನಿರ್ಧರಿಸಿಕೊಳ್ಳಬೇಕೆಂದು ವೈಸರಾಯ್ ಜೂನ್ ೨ ನೇ ತಾರೀಖಿನ ಸಮ್ಮೇಳನ... ಭಾರತದ ಮುಖಂಡರಿಗೆ ತಿಳಿಸುವರೆಂದು ಹೇಳಲಾಗಿದೆ ಅವರು ಸೂಚಿಸುವ ... ಜನೆಯು ಸರ್ವೇಸಾಧಾರಣವಾಗಿ... ಮತ್ತು ಸಾಮೂಹ್ಯ ಮುಖ್ಯ ವಿಷಯಗಳೂ ... ವಾಗುವಂತೆಯೂ ಇರುವುದೆಂದು ... ಯಾಗಿದೆ ಮುಸ್ಲಿಮರು ಬಹು ಸಂ... ತರಾಗಿರುವ ಪ್ರಾಂತ್ಯಗಳಲ್ಲಿ ವಿಭಜನೆಗೆ ... ದಾಭಿಪ್ರಾಯವನ್ನು ತೆಗೆದುಕೊಳ್ಳ... ವುದೆಂದೂ ಗೊತ್ತಾಗಿದೆ.

ಸ್ವಾಮಿಗಳ ವಿಮಾನ ಪ್ರಯಾಣ ಶಾಸ್ತ್ರಸಮ್ಮತ...

ಗ್ಲೋಬ್] ದೆಹಲಿ

ಹಿಂದೂ ಧರ್ಮ ಸಂಘದ ಸ್ವಾಮಿ ಕರಪಾತ್ರಿಜೀಯವರು ಲಾಹೋರಿನಿಂದ ದೆಹಲಿಗೆ ವಿಮಾನದಲ್ಲಿ ಆಗಮಿಸಿದರು ಅವರ... ಯಮುನಾ ನದಿಯ ದಡದಲ್ಲಿ ಬಿಡಾರ... ತಿರುವ ೩೦೦ ಮಂದಿ ಸಾಧುಗಳು ಸ್ವಾ... ಸಿದರು ಪುರಾತನ ಕಾಲದಲ್ಲಿ ವಿಮಾನವಿದ್ದಿತೆಂಬ ನಂಬಿಕೆಯನ್ನು ... ಪಡದಿರುವುದರಿಂದ ಸ್ವಾಮಿಗಳು ವಿಮಾನ ಪ್ರಯಾಣ ಮಾಡಿದುದರಲ್ಲಿ ಶಾಸ್ತ್ರವಿರುದ್ಧವಾದ ನಡವಳಿಕೆ ಯಾವುದೂ ಇಲ್ಲವೆಂದು ಒಬ್ಬ ಸಾಧುಗಳು ತಿಳಿಸಿದ್ದಾರೆ.

ಕೃತಜ್ಞತೆಗಳು

ಮೈಸೂರು ಕೋ-ಆಪರೇಟಿವ್ ಸೊಸೈಟಿ ಮೆಂಬರುಗಳಿಗೆ

ಎಂದಿನಂತೆ ಈ ಬಾರಿಯೂ ನನ್ನನ್ನು ಡೈರೆಕ್ಟರಾಗಿ ಚುನಾಯಿಸಿದ್ದಕ್ಕಾಗಿ ವಿಶ್ವಾಸಪೂರ್ವಕವಾಗಿ ವಂದಿಸುತ್ತೇನೆ

ನನ್ನಿಂದ ತಮಗೆ ಯಾವ ಸೇವೆ ಬೇಕಾದಾಗ್ಯೂ ನನಗೆ ತಿಳಿಸಿದರೆ, ಮಾಡಲು ಸದಾ ಸಿದ್ಧನಾಗಿರುತ್ತೇನೆಂಬ ವಿಷಯವನ್ನು ವಿನಯದಿಂದ ತಿಳಿಸುತ್ತೇನೆ

ತಮ್ಮ ವಿಶ್ವಾಸಿ,

ಜಿ. ವಿ. ಸೂರ್ಯನಾರಾಯಣ ಶೆಟ್ಟಿ,

ಜ್ಯೂಯೆಲರ್ ಅಂಡ್ ಕ್ಲಾತ್ ಮರ್ಚೆಂಟ್, ಸಯ್ಯಾಜಿ ರಾವ್ ರೋಡ್, ಮೈಸೂರು

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

೨೫-೫-47 ನೇ ತಾ॥ ನಿಂದ ಜನಭರಿತವಾದ 4 ನೇ ವಾರ

ವುಡ್‌ಲ್ಯಾಂಡ್ಸ್ ಟಾಕೀಸ್, ಮೈಸೂರು.

★ 'ನಾಮ್-ಇರುವರು' ★

(ತಮಿಳು)

ಪ್ರತಿ ದಿನ ಎರಡು ಆಟಗಳು

ಪ್ರತಿ ಶನಿವಾರ ಮತ್ತು ಭಾನುವಾರಗಳಲ್ಲಿ 3-30 ಕ್ಕೆ ಮ್ಯಾಟಿನಿ.

ತಾರಾಗಣ -ಟಿ ಆರ್. ಮಹಾಲಿಂಗಂ, ಬಿ. ಎ. ಜಯಲಕ್ಷ್ಮಿ ಮತ್ತು ಬೇಬಿ ಕಮಲ

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ

— ನಮ್ಮಲ್ಲಿ ವಿಚಾರಿಸಿ. :—

. ಕೆ ಎಸ್ ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.

ಶ್ರೀ ಕೃಷ್ಣಾ ಜ್ಯೂಯೆಲರಿ ಮಾರ್ಟ್,

ಅಶೋಕಾ ರಸ್ತೆ, ಮೈಸೂರು.

ಸ್ಥಾಪಿತ ೧೯೩೭ : : ಫೋನ್ ೪೧೧.

ರಾಜಕಮಲ್,

ತಾ॥ ೨೩-೪-೪೭ ರಿಂದ

ಐದನೇ ವಾರ

ಪ್ರತಿ ದಿನ ೩ ಆಟಗಳು

ಕೃಷ್ಣವೇಣಿ

ರಘುರಾಮಯ್ಯ

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 8 ಕಾಸು

ಸಂಪುಟ ೫] ಬುಧವಾರ ೨೮—೫—೪೭ [ಸಂಚಿಕೆ ೨೪೮

ಪ್ರತಿನಿಧಿ ಸಭೆಯಲ್ಲಿ ಕಾಂ|| ಸಭಾ ಪರಿತ್ಯಾಗ

ಸಂಸ್ಥಾನವು ರಾಜ್ಯಾಂಗ ಸಭೆಯಲ್ಲಿ ಸೇರುವಬಗ್ಗೆ ಸಂಶಯ?

ಸಂಪೂರ್ಣ ಪಾನ ನಿರೋಧಕ್ಕಾಗಿ ಸಿದ್ಧತೆ

ಪ್ರ|| ಸಭೆಯಲ್ಲಿ ದಿವಾನರ ಭಾಷಣ

(ವಿಶೇಷ ವರದಿಗಾರರಿಂದ ಫೋ)

ಬೆಂಗಳೂರು ೨೮

ಈ ದಿನ ಮಧ್ಯಾಹ್ನ ಸರ್ ಪುಟ್ಟಣ್ಣ [ಚೆಟ್ಟಿ] ಪುರ ಭವನದಲ್ಲಿ ಪ್ರ|| ಪ್ರ|| ಸಭೆಯು [ಬೇಸಿಗೆ] ಅಧಿವೇಶನವು ದಿವಾನರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಪದ್ಧತಿಯಂತೆ ದಿವಾನರು ಸದಸ್ಯರುಗಳಿಗೆ ಸುಖಾಗಮನವನ್ನು ಕೋರಿ ಭಾಷಣ ಮಾಡಿ[ದರು]. ಹೊಸ ಸದಸ್ಯರುಗಳು ರಾಜಭಕ್ತಿ ಪ್ರಮಾಣವನ್ನು ಸ್ವೀಕರಿಸಿದರು. ಕಾರ್ಯದರ್ಶಿಗಳು ವರದಿಯನ್ನೊಪ್ಪಿಸಿ ಪ್ರಭುಗಳಿಂದ ಸಮ್ಮತಿ ದೊರೆತಿರುವ ಶಾಸನಗಳ [ಬಗ್ಗೆ] ನಿರೂಪಿಸಿದರು.

ದಿವಾನರು ತಮ್ಮ ಭಾಷಣದಲ್ಲಿ ಸಂಸ್ಥಾನದ ಸರ್ವತೋಮುಖವಾದ ಪ್ರಗತಿಯ ವಿವರವನ್ನು ಪ್ರಸ್ತಾಪಿಸಿದರು. ಸದಸ್ಯರೆಲ್ಲರ ಸ್ವಾಗತವನ್ನು ಬಯಸಿ, ಸಂಸ್ಥಾನದ [ಮುಂದಿ]ರುವ ಸಮಸ್ಯೆಗಳನ್ನು ಬಗೆಹರಿಸಲು [ಅವರ] ಸಹಕಾರವನ್ನು ಕೋರಿದರು. ಈ ವರೆಗೆ ಸಂಸ್ಥಾನಕ್ಕೆ ಬಂದಿರುವ ಆದಾಯಕ್ಕಿಂತಲೂ ಈ ಸಾರಿ ಹೆಚ್ಚಾಗಿ ಬಂದಿದೆ [ಎಂದು] ತಿಳಿಸಿದರು. ಇದಕ್ಕೆ ತಾತ್ಕಾಲಿಕವಾದ ವಿದ್ಯಮಾನಗಳೇ ಕಾರಣವೆಂದು [ಹೇಳಿ]ದರು.

ಆಹಾರ ಸರಬರಾಜಿನ ವ್ಯವಸ್ಥೆಗಾಗಿ ಸರ್ಕಾರದವರು ೧೪೫ ಲಕ್ಷ ರೂಪಾಯನ್ನು [ಹೆಚ್ಚಾ]ಗಿ ವೆಚ್ಚಮಾಡಬೇಕಾಯಿತೆಂದು [ದಿ]ವಾನರು ಹೇಳಿದರು. ಶಾಸನ ಸಭೆಗಳ [ಮ]ತ್ತು ಪಾನ ನಿರೋಧ ಸಮಿತಿಯ ಅಭಿಪ್ರಾಯಗಳನ್ನು ಅಂಗೀಕರಿಸಿ ಸಂಪೂರ್ಣ ಮದ್ಯಪಾನ ನಿರೋಧವೇ ಸರ್ಕಾರದ ನೀತಿ [ಎ]ಂದು ಒಪ್ಪಿರುವುದಾಗಿ ದಿವಾನರು ತಿಳಿಸಿದರು. ಸಮಿತಿಯವರ ಸಲಹೆಯಂತೆ ಪ್ರತಿ ವರ್ಷವೂ ಶೇ ೫೦ ರಷ್ಟು ಶೇಂದಿ ಮರಗಳನ್ನು ಕತ್ತರಿಸುವುದಲ್ಲದೆ ೫ ವರ್ಷಗಳಲ್ಲಿ ಸಂಪೂರ್ಣ ಪಾನ ನಿರೋಧವು ಜಾರಿಗೆ ಬರುವಂತೆ ಮಾಡುವುದಾಗಿ ಹೇಳಿದರು.

ಯುದ್ಧಾನಂತರದ ಯೋಜನೆಗಳನ್ನು ದಿವಾನರು ವಿವರಿಸಿದರು. ಸಂಬಳ ಸಮಿತಿಯವರ ಸಲಹೆಯಂತೆ ನೌಕರರಿಗೆ ಸೂಕ್ತ ಪರಿಹಾರ ಕೊಡುವುದಾಗಿ ತಿಳಿಸಿದರು. ವರದಿಯು ಬರುವವರೆಗೆ ಹಂಗಾಮಿ ಪರಿಹಾರವನ್ನು ಕೊಡಲಾಗಿದೆಯೆಂದೂ ಸೂಚಿಸಿದರು. ನೀರಾವರಿ ಮತ್ತು ಕೈಗಾರಿಕೆ ಬಾಬುಗಳ ಕಾರ್ಯಕ್ರಮಗಳನ್ನು ವಿವರಿಸಿ ಹೇಳಿದರು.

ಬರುವ ವರ್ಷ ಸಂಸ್ಥಾನಕ್ಕೆ ೧೦ ಕೋಟಿ ೧೭ ಲಕ್ಷ ರೂಪಾಯಿ ಹುಟ್ಟುವಳಿ ಬರುವುದೆಂದೂ, ೧೦ ಕೋಟಿ ೧೩ ಲಕ್ಷ ರೂ. ವೆಚ್ಚವಾಗಿ ೪ ಲಕ್ಷ ರೂ ಉಳಿತಾಯವಾಗುವುದೆಂದೂ ಅಂದಾಜಾಗಿದೆ. ವಿದ್ಯಾಭ್ಯಾಸಕ್ಕಾಗಿ ೪೦ ಲಕ್ಷ ರೂಗಳನ್ನು ಹೆಚ್ಚಾಗಿ ಒದಗಿಸಲಾಗಿದೆ. ವ್ಯವಸಾಯ, ಗ್ರಾಮಾಭಿವೃದ್ಧಿ ನೀರಾವರಿ ಕಾಮಗಾರಿಗಳಿಗೂ ವಿಶೇಷ ದ್ರವ್ಯವನ್ನು ಕೊಡಲಾಗಿದೆ. ನೆರೆಯ ಪ್ರಾಂತದೊಡನೆ ಸಹಕರಿಸಿ ಜಲಾಶಯಗಳ ನಿರ್ಮಾಣವನ್ನು ಕೈಗೊಳ್ಳಲಾಗಿದೆ. ಕೈಗಾರಿಕೆ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಅಂಗೀಕರಿಸಲಾಗಿದೆ. ಬೆಂಗಳೂರು-ಮೈಸೂರು ರೈಲ್ವೆಗೆ ವಿದ್ಯುಚ್ಛಕ್ತಿ ಹಾಕಲು ಸರ್ವೆ ನಡೆಯುತ್ತಿದೆ. ಈ ವರ್ಷದ ಅಂತ್ಯದಲ್ಲಿ ಇವಕ್ಕೆ ಬೇಕಾದ ಸಾಮಗ್ರಿಗಳಿಗಾಗಿ, ಬ್ರಿಟಿಷ್ ಸಂಸ್ಥೆಯೊಂದಕ್ಕೆ ಆರ್ಡರನ್ನು ಕೊಡುವ ನಿರೀಕ್ಷಣೆ ಇದೆ.

ಸರ್ಕಾರಿ ನೌಕರರ ಕೆಲಸದ ಭದ್ರತೆ ಮತ್ತು ಪ್ರತಿಫಲದ ವಿಷಯಗಳನ್ನು ತೀವ್ರವಾಗಿ ಪರ್ಯಾಲೋಚಿಸಲಾಗುತ್ತಿದೆ. ಸಂಬಳವನ್ನು ಹೆಚ್ಚಿಸುವುದರಿಂದಲೇ ಪರಿಹಾರವು ದೊರೆಯಲಾರದು. ಸಾಮಗ್ರಿಗಳನ್ನು ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದೇ ನಿಜವಾದ ಪರಿಹಾರ—ಎಂಬುದಾಗಿ ದಿವಾನರು ನುಡಿದರು.

ರಾಜಕೀಯ ಪರಿಸ್ಥಿತಿ ವಿಚಾರದಲ್ಲಿ ಅವರು ಹೀಗೆ ಹೇಳಿದರು: —

ಹಲವು ದಿನಗಳಿಂದ ನಡೆಯುತ್ತಿರುವ ಕಾರ್ಯ ಕಲಾಪಗಳು ಕೆಲವರಿಗೆ ನಿರುತ್ಸಾಹವನ್ನೂ, ಬೇಸರವನ್ನೂ ಉಂಟುಮಾಡಿರುವಂತಿದೆ. ವಿದ್ಯಮಾನಗಳ ಸರಣಿಯನ್ನು ಅವರು ಗಮನಿಸಬೇಕೆಂದು ನಾನು ಕೋರುತ್ತೇನೆ. ನನ್ನ ಪ್ರಯತ್ನಗಳಲ್ಲಿ ನಾನು ಸಂಪೂರ್ಣ ಪ್ರಾಮಾಣಿಕನಾಗಿರುತ್ತೇನೆ. ಎಲ್ಲರ ಸಹಕಾರವನ್ನೂ ನಾನು ಬಯಸುತ್ತೇನೆ. ಎಲ್ಲರಲ್ಲಿಯೂ ಸಾಧ್ಯವಾದಷ್ಟು ಹೆಚ್ಚು ಪ್ರಮಾಣದ ಒಪ್ಪಂದ ಉಂಟಾಗಲು ನಾನು ಪ್ರಯತ್ನಿಸುತ್ತೇನೆ. ಕಾಲಹರಣ ಮಾಡುವುದು ನನ್ನ ಉದ್ದೇಶವಲ್ಲ. ರಾಜ್ಯಾಂಗ ನಿರ್ಮಾಣವು ಒಂದು ಮಕ್ಕಳಾಟಿಕೆಯಲ್ಲ. ಸಣ್ಣ ಸಸಿಯನ್ನು ನೆಟ್ಟು ಪೋಷಿಸುವಂತೆ ಅದನ್ನು ಬೆಳೆಸಬೇಕು. ಅದ್ದರಿಂದ ಸದ್ಯದಲ್ಲಿಯೇ ನಾನು ಒಂದು ಸಣ್ಣ ಸಲಹಾ ಸಮಿತಿಯನ್ನು ನೇಮಿಸಿ ಮುಂದಿನ ಸುಧಾರಣೆಗಳ ಬಗ್ಗೆ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕೆಂದಿದ್ದೇನೆ. ಅದಕ್ಕೆ ಎಲ್ಲರ ಸಹಕಾರವನ್ನೂ ಕೋರುತ್ತೇನೆ.

ಭಾರತ ರಾಜ್ಯಾಂಗ ಸಭೆಯ ವಿಚಾರವಾಗಿ ದಿವಾನರು ಈ ರೀತಿ ನುಡಿದರು:—

ಬ್ರಿ|| ನಿಯೋಗದವರ ಯೋಜನೆಯನ್ನು ಮೈಸೂರು ಅಂಗೀಕರಿಸಿ ಭಾರತ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುವುದಾಗಿ ಕಳೆದ ನವರಾತ್ರಿಯಲ್ಲಿಯೇ ನಾನು ತಿಳಿಸಿದ್ದೆನು. ಶ್ರೀಮನ್ಮಹಾರಾಜರವರ ಅಪ್ಪಣೆಯಂತೆ ನನ್ನ ನಾಯಕತ್ವದಲ್ಲಿಯೇ ಮೈಸೂರಿನ ಪ್ರತಿನಿಧಿಗಳನ್ನು ಆ ಸಭೆಗೆ ಕೊಂಡೊಯ್ಯುವುದಾಗಿಯೂ ತಿಳಿಸಿದ್ದೆನು. ಆದರೆ ಈಚಿನ ವಿದ್ಯಮಾನಗಳು ಈ ಪ್ರಯತ್ನಕ್ಕೆ ಅಡಚಣೆಯನ್ನು ತಂದು ಒಂದು ಬಗೆಯ ಅನಿಶ್ಚಿತ ಪರಿಸ್ಥಿತಿಯನ್ನುಂಟುಮಾಡಿವೆ. ಬರಲಿರುವ ಹಲವು ವಾರಗಳಲ್ಲಿ ಮಹತ್ತರವಾದ ಪ್ರಕಟಣೆಗಳು ಆಗಲಿವೆ. ಇದುವರೆಗೆ ನಡೆದಿರುವ ವಿದ್ಯಮಾನಗಳನ್ನೆಲ್ಲಾ ಬದಲಾಯಿಸುವ ಪರಿಸ್ಥಿತಿಯು ಏರ್ಪಟ್ಟರೂ ಏರ್ಪಡಬಹುದು. ಆದರೆ ಹಾಗೆ ಆಗದಿರಲೆಂದು ನಾನು ದೃಢವಾಗಿ ಆಶಿಸುತ್ತೇನೆ. ಮೈಸೂರು ರಾಜ್ಯಾಂಗ ರಚನಾ ಕಾರ್ಯದಲ್ಲಿ ಭಾಗವಹಿಸಲು ಅವಕಾಶ ಉಂಟಾಗಲೆಂದು ಪ್ರಾರ್ಥಿಸುತ್ತೇನೆ. ಈ ವಿಷಯದಲ್ಲಿ ಹೆಚ್ಚಿನ ವಿವರಗಳನ್ನು ಹೇಳುವುದಕ್ಕಿಂತಲೂ ಇನ್ನು ಸ್ವಲ್ಪ ಕಾಲ ಕಾದು ನೋಡುವುದೇ ವಿವೇಕಪೂರಿತವಾದ ಮಾರ್ಗ. ಮೈಸೂರಿನ ಪ್ರತಿನಿಧಿಗಳನ್ನು ಭಾರತ ರಾಜ್ಯಾಂಗ ಸಭೆಗೆ ಕರೆದುಕೊಂಡು ಹೋಗಿ ಅಲ್ಲಿ ಉಪಯುಕ್ತವಾದ ಸೇವೆಯನ್ನು ಸಲ್ಲಿಸಲು ಅವಕಾಶವಾದೀತೆಂದೇ ನಾನು ನಂಬುತ್ತೇನೆ.

ಮೈಸೂರು ಸಿಟಿ ರೇಷನಿಂಗ್

A ನಂ R 681/46-47.

೧೯೪೭ ನೇ ಇಸವಿ ಮೇ ಮಾಹೆ ೩೧ ನೇ ತಾರೀಖಿನ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರೀ ಡಿಪೋ ಮೊದಲ್ಗೊಂಡು ಸಬ್ ಗೋಡೌ, ವರ್ತಕರ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಾಸ್ತಾನುಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಟ್ಟಿರುತ್ತವೆ.

ಅಬ್ದುಲ್ ರಜಾಕ್,

ರೇಷನಿಂಗ್ ಆಫೀಸರು,

ತಾ|| ೨೭-೫-೪೭ ಮೈಸೂರು ಸಿಟಿ

ಬಂಗಲೆ ಮಾರಾಟಕ್ಕಿದೆ

ಮೈಸೂರು ವಾಣೀವಿಲಾಸ ಮೊಹಲ್ಲಾ ... ರೋಡು ೨೭೦ ನೇ ನಂಬರು ಬಂಗಲೆ ಗ್ಯಾರೇಜ್, ಮತ್ತು ಔಟ್ ಹೌಸು ... ವಿಸ್ತೀರ್ಣ ೩೦೦೦ ಚದರ ಗಜಗಳು ... ಕಾಂಪೌಂಡಿನಲ್ಲಿ ತೆಂಗಿನ ಗಿಡಗಳೂ ... ಮತ್ತು ಹೂವಿನ ಗಿಡಗಳೂ ಇವೆ ... ವಿಚಾರಗಳನ್ನು ಕೆಳಗೆ ಕಂಡವರಿಂದ ... ಯಬಹುದು

ಕೆ. ಅನಂತರಾಮಯ್ಯ,

೨೭೦, ೧೦ ನೇ ಕ್ರಾಸ್ ರೋಡು, ವಾಣೀವಿಲಾಸ ಮೊಹಲ್ಲಾ, ಮೈಸೂರು

ರೆಡ್ಡಿ-ದಿವಾನ್ ಭೇಟಿ

ಸರ್ಕಾರಿ ಪ್ರಕಟಣೆ

ಸ್ವಂ ಸು ಫೋ] ಬೆಂಗಳೂರು ೨೮

ಮೊನ್ನೆ ಸಂಜೆ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಸಿ. ರೆಡ್ಡಿ, ಕಾರ್ಯದರ್ಶಿಗಳಾದ ಶ್ರೀ ಎ. ಜಿ. ರಾಮಚಂದ್ರರಾವ್ ಮತ್ತು ಶ್ರೀ ಚನ್ನಿಗರಾಮಯ್ಯನವರು ದಿವಾನರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ಬಗ್ಗೆ ಈ ರೀತಿ ಪ್ರಕಟಣೆಯು ಹೊರಟಿದೆ:—

ಶ್ರೀ ಕೆ ಹನುಮಂತಯ್ಯನವರ ಬಿಡುಗಡೆ, ಪ್ರತಿಬಂಧಕಾಜ್ಞೆಗಳು, ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಅಧಿಕಾರಿಗಳ ಕೈವಾಡ, ಮುಂತಾದ ವಿಚಾರದಲ್ಲಿ ಚರ್ಚೆ ನಡೆಯಿತು. ಇವುಗಳನ್ನೆಲ್ಲಾ ಜಾಗರೂಕತೆಯಿಂದ ಪರಿಶೀಲಿಸುವುದಾಗಿ ದಿವಾನರು ಹೇಳಿದರು.

ರಾಜ್ಯಾಂಗ ಸಭೆಗೆ ಮೈಸೂರು ಸೇರುವ ವಿಚಾರವನ್ನು ದೆಹಲಿ ಸಮ್ಮೇಳನಕ್ಕಿಂತ ಮುಂಚಿತವಾಗಿ ಹೇಳುವುದು ಸರಿಯಲ್ಲವೆಂದೂ, ಜವಾಬ್ದಾರಿ ಸರ್ಕಾರದ ವಿಚಾರದಲ್ಲಿ ಈಗ ಹೇಳಿರುವುದಕ್ಕೆ ಹೆಚ್ಚಾಗಿ ಏನನ್ನೂ ಸೇರಿಸಬೇಕಾಗಿಲ್ಲವೆಂದೂ, ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸುವ ವಿಚಾರದಲ್ಲಿ ಆ ದೃಷ್ಟಿಯಿಂದ ವಿಷಯವನ್ನು ಪರಿಶೀಲಿಸಿಲ್ಲವೆಂದೂ, ಜಿಲ್ಲಾ ಬೋರ್ಡ್ ಅಧ್ಯಕ್ಷ ಚುನಾವಣೆಯಲ್ಲಿ ಅಧಿಕಾರಿಗಳು ಓಟು ಮಾಡದಿರುವ ವಿಚಾರವನ್ನು ತಮ್ಮ ಸಹೋದ್ಯೋಗಿಗಳೊಡನೆ ಚರ್ಚಿಸಿ ದೆಹಲಿಗೆ ಹೋಗುವ ಮುನ್ನ ತಿಳಿಸುವುದಾಗಿಯೂ, ದಿವಾನರು ಉತ್ತರವಿತ್ತರು.

ನವರತ್ನ ರಾಮರಾಯರಿಗೆ ಜುಲ್ಮಾನೆ

ಮೈಸೂರು ೨೮

ರಾಜಸೇವಾ ಪ್ರಸಕ್ತ ನವರತ್ನ ರಾಮರಾಯರೂ, ಅವರ ಮಕ್ಕಳಾದ ಶ್ರೀ|| ಮಾಧವರಾಯರೂ ತಮಗೆ ಮಾನನಷ್ಟ ಮಾಡಿದರೆಂಬುದಾಗಿ ಮೈ|| ಗೌ|| ರೇಷ್ಮೆ ನೆಯ್ಗೆ ಕಾರ್ಖಾನೆಯ ಜನರಲ್ ಮ್ಯಾನೇಜರ್ ಮಿಸ್ ಅರೀಫುಲ್ಲಾ ಮೆಳ್ಳೆಯವರು ತಂದಿದ್ದ ಮೊಕದ್ದಮೆಯಲ್ಲಿ ಮೊದಲನೆಯ ಮ್ಯಾಜಿಸ್ಟ್ರೇಟರಾದ ಶ್ರೀ|| ಎಲ್. ಮುನಿಸ್ವಾಮಯ್ಯನವರು ಈ ದಿನ ತೀರ್ಪಿತ್ತು ಆಪಾದಿತರಿಬ್ಬರೂ ತಪ್ಪಿತಸ್ಥರೆಂದು ನಿರ್ಧರಿಸಿ ಶ್ರೀ|| ನವರತ್ನ ರಾಮರಾಯರಿಗೆ ೨೦೦ ರೂ. ಮತ್ತು ಎಂ. ಮಾಧವರಾಯರಿಗೆ ೩೦೦ ರೂ ಜುಲ್ಮಾನೆ, ತಪ್ಪಿದರೆ ೧೫ ದಿನಗಳ ಸಜಾವನ್ನು ವಿಧಿಸಿದರು.

ಕಾಂಗ್ರೆಸ್ ಪಕ್ಷದವರ ಸಭಾ ಪರಿತ್ಯಾಗ

ಸ್ವಂ ಸು ಫೋ] ಬೆಂಗಳೂರು ೨೮

ಈ ದಿನ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರಾದ ಸರ್ ರಾಮಸ್ವಾಮಿ ಮೊದಲಿಯಾರರು ಭಾಷಣ ಮಾಡಲು ಎದ್ದಾಗ ಕಾಂಗ್ರೆಸ್ ಪಕ್ಷದ ಉಪನಾಯಕರಾದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಹೇಳಿಕೆಯೊಂದನ್ನಿತ್ತು ತಮ್ಮ ಪಕ್ಷದ ನಾಯಕರಾದ ಶ್ರೀ ಕೆ ಹನುಮಂತಯ್ಯನವರು ಬಂಧಿಸಲ್ಪಟ್ಟಿರುವುದನ್ನೂ, ಮೈಸೂರು ರಾಜ್ಯಾಂಗ ಸಭೆಗೆ ಸೇರದಿರುವುದನ್ನೂ ಪ್ರತಿಭಟಿಸುವ ಸಲುವಾಗಿ ತಮ್ಮ ಪಕ್ಷದವರು ಸಭಾ ಪರಿತ್ಯಾಗ ಮಾಡುವರೆಂದು ತಿಳಿಸಿದರು. ಅನಂತರ ಕಾಂಗ್ರೆಸ್ ಪಕ್ಷದ ಸುಮಾರು ೧೩೦ ಮಂದಿ ಸದಸ್ಯರು ಹೊರಗೆ ಹೋಗಿ ಒಂದೂವರೆ ಘಂಟೆಯ ತರುವಾಯ ಸಭೆಗೆ ವಾಪಸು ಬಂದರು.

ಸಾಧ್ವಿ

ತಾ|| ೨೮-೫-೪೭ ಬುಧವಾರ

ದಿವಾನರ ಭಾಷಣದ ಸಂದಿಗ್ಧತೆ

ಈ ದಿನ ಆರಂಭವಾದ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರು ಮಾಡಿದ ಭಾಷಣವು ಸಂದಿಗ್ಧತೆಯಿಂದ ಕೂಡಿರುವುದಕ್ಕಾಗಿ ವಿಷಾದಿಸಬೇಕಾಗಿದೆ. ಭಾರತ ರಾಜ್ಯಾಂಗ ಸಭೆಯಲ್ಲಿ ಮೈಸೂರು ಸಂಸ್ಥಾನವು ಭಾಗ ವಹಿಸುವ ವಿಚಾರದಲ್ಲಿ ಅವರು ಇನ್ನೂ ಸಂಶಯಾವಸ್ಥೆಯಲ್ಲಿಯೇ ಇರುತ್ತಾರೆ. ಸಭೆಯಲ್ಲಿ ಮೈಸೂರು ಸೇರುವುದೆಂಬುದನ್ನು ಖಚಿತವಾಗಿ ಅವರು ಹೇಳುವುದಿಲ್ಲ. ಸೇರುವುದಿಲ್ಲವೆಂದೂ ಸಹ ಹೇಳಲಾರರು. ಸದ್ಯದಲ್ಲಿಯೇ ಆಗಲಿರುವ ಬ್ರಿಟಿಷ್ ಸರ್ಕಾರದ ಘೋಷಣೆಯನ್ನು ತಾಳ್ಮೆಯಿಂದ ಕಾದು ನೋಡಬೇಕೆಂದು ಅವರು ಹೇಳಿರುವ ಮಾತುಗಳು ಯಾವ ದೇಶಾಭಿಮಾನಿಗಳಿಗೂ ರುಚಿಸಲಾರವು.

ಶ್ರೀಮನ್ಮಹಾರಾಜರವರ ಅಭಿಪ್ರಾಯದಂತೆ ಮೈಸೂರು ಸಂಸ್ಥಾನವು ಭಾರತ ರಾಜ್ಯಾಂಗ ಸಭೆಯಲ್ಲಿ ಸೇರುವುದಾಗಿಯೂ, ತಮ್ಮ ನಾಯಕತ್ವದಲ್ಲಿ ಮೈಸೂರಿನ ಪ್ರತಿನಿಧಿಗಳು ಅದರಲ್ಲಿ ಭಾಗ ವಹಿಸುವುದಾಗಿಯೂ ಕಳೆದ ನವರಾತ್ರಿ ಅಧಿವೇಶನದಲ್ಲಿಯೇ ತಾವು ತಿಳಿಸಿದ್ದ ವಿಚಾರವನ್ನು ದಿವಾನರು ಪ್ರಸ್ತಾಪಿಸಿರುವರು. ಅದರ ಕೂಡಲೆ ಬ್ರಿಟಿಷ್ ಹಿಂದೂಸ್ಥಾನದಲ್ಲಿ ನಡೆದ ವಿದ್ಯಮಾನಗಳಿಂದ ಪರಿಸ್ಥಿತಿಯು ಬದಲಾಯಿಸಿರುವುದಾಗಿ ಅವರು ಹೇಳಿರುವರು.

ಭರತಖಂಡದಲ್ಲಿ ಮಹತ್ತರವಾದ ಬದಲಾವಣೆಗಳಾಗುತ್ತಿರುವ ಈ ಸಮಯದಲ್ಲಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಸಾವಧಾನವಾಗಿ ಕಾದು ನೋಡುವಂತೆ ದಿವಾನರು ಸೂಚಿಸಿರುವರು. ಎಂದ ಮೇಲೆ ರಾಜ್ಯಾಂಗ ಸಭೆಯಲ್ಲಿ ಸೇರುವುದೂ, ಬಿಡುವುದೂ ನೆನ್ನೆದಿನ ವಾರ ಬ್ರಿಟಿಷ್ ಸರ್ಕಾರದ [illegible] ಹೊರಡಿಸುವ ಘೋಷಣೆಯನ್ನು ಅವಲಂಬಿಸುತ್ತದೆಂದು ಭಾವಿಸಬೇಕು. ಆದರೂ ಮೈಸೂರು ಸಂಸ್ಥಾನವು ರಾಜ್ಯಾಂಗ ಸಭೆಯಲ್ಲಿ ಭಾಗ ವಹಿಸಲು ಅಡ್ಡಿಯಾಗುವ ಯಾವ ಸನ್ನಿವೇಶವೂ ಉದ್ಭವಿಸಲಾರದೆಂದು ದಿವಾನರು ಆಶಿಸಿದ್ದಾರೆ. ಇದೊಂದು ಸಾಧಾರಣ ಬಯಕೆಯೇ [illegible] ಅದರೆ ಮೈಸೂರಿನ ವಿದ್ಯಮಾನಗಳ ಪರಿಣಾಮ [illegible] ಸಂಸ್ಥಾನದ ಪರಿಸ್ಥಿತಿಯ [illegible] ಸ್ಪಂದಿಸುವುದು [illegible] ಸಮರ್ಪಕವಲ್ಲ.

ಇದೇ [illegible] ಇಬ್ಬಗ ಮಾಡುವ ಪ್ರಯತ್ನದಲ್ಲಿ [illegible] ತೊಡಗಿ [illegible] ಸಹ ಪ್ರಜೆಗಳ ಅಭಿ

ಮೈಸೂರು ಸಿಲ್ಕು

ಹಿಂಬರ್ಣ್ ರಿಬ್ಬನ್ನುಗಳಿಗೆ

ಪ್ರಭಾತ್ ಬ್ಯಾಂಗಲ್ಸ್

ಸ್ಟೋರ್ಸಿಗೆ

ಭೇಟಿ ಕೊಡಿ

Edited, printed and published by A. R. Nagarajan at the Sadhvi Press D. Subbaiah Road Mysore

ಮಹದಂಶವೇ ಸ್ವಾಂತ ವರ್ಗೀಕರಣವನ್ನು ಮಾಡಬೇಕೆಂಬ ತತ್ವವನ್ನು ಸಕಲರೂ ಅಂಗೀಕರಿಸಿರುತ್ತಾರೆ. ಬ್ರಿಟಿಷರು ಅಧಿಕಾರವನ್ನು ತ್ಯಜಿಸಿ ಹೊರಟು ಹೋಗುವ ಉದ್ದೇಶವಾದರೂ ಪ್ರಜೆಗಳಿಗೆ ಅಧಿಕಾರವನ್ನು ವಹಿಸುವುದೇ ಆಗಿರುತ್ತದೆ. ಬರೋಡಾ ಮಹಾರಾಜರೂ ಸಹ ಇದೇ ತತ್ವವನ್ನೇ ಎತ್ತಿ ಹಿಡಿದು ಪ್ರಜೆಗಳ ಅಭಿಮತದಂತೆ ತಮ್ಮ ಸಂಸ್ಥಾನದ ಕಾರ್ಯನೀತಿಯನ್ನು ನಿರ್ಧರಿಸುವುದಾಗಿ ಹೇಳಿರುತ್ತಾರೆ. ಈ ನೀತಿಯೇ ಸಕಲ ನರೇಂದ್ರರುಗಳಿಗೂ ಅನುಕರಣೀಯವಾಗಿರುತ್ತದೆ.

ಸಂಸ್ಥಾನದ ಭವಿಷ್ಯ ಹಿತ ಸಾಧನೆಗಾಗಿ ಭಾರತ ರಾಜ್ಯಾಂಗದಲ್ಲಿ ಸೇರುವುದಾಗಿ ಒಂದು ಬಾರಿ ನಿರ್ಧರಿಸಿ ಆ ವಿಷಯದಲ್ಲಿ ಎರಡನೆಯ ಆಲೋಚನೆಯನ್ನು ಮಾಡುವುದು ಮೈಸೂರಿನಂತಹ ದೊಡ್ಡ ಸಂಸ್ಥಾ

ರಾಜಕಮಲ್,

ತಾ|| ೨೩-೫-೪೭ ರಿಂದ

ಐದನೇ ವಾರ

ಪ್ರತಿ ದಿನ ೨ ಆಟಗಳು

ಕೃಷ್ಣವೇಣಿ ರಘುರಾಮಯ್ಯ

ನದ ಘನತೆಗೆ ತಕ್ಕುದಲ್ಲ. ಈಗಾಗಲೇ ಕೊಚ್ಚಿ, ಬರೋಡ, ಬಿಕನೀರ್ ಇವೇ ಮುಂತಾದ ಅನೇಕ ಸಂಸ್ಥಾನಗಳು ತಮ್ಮ ನಿರ್ಧಾರವನ್ನು ಮಾಡಿ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸುತ್ತಿವೆ. ಮೈಸೂರು ಇನ್ನೂ ಸಂದಿಗ್ಧಾವಸ್ಥೆಯಲ್ಲಿರುವುದು ಸ್ವಲ್ಪವೂ ಸರಿಯಲ್ಲ. ಈ ಮೊದಲೇ ಮಾಡಿದ್ದ ನಿರ್ಣಯದಂತೆ ಮೈಸೂರಿನಿಂದ ಚುನಾಯಿತ ಪ್ರತಿನಿಧಿಗಳನ್ನು ಕಳುಹಿಸಲು ಕೂಡಲೇ ಕಾರ್ಯಕ್ರಮವನ್ನು ಕೈಗೊಳ್ಳುವುದು ಯುಕ್ತವಾಗಿದೆ.

ಸಂಸ್ಥಾನದ ಆದಾಯವು ಎಂದಿಗಿಂತಲೂ ಈ ವರ್ಷ ಹೆಚ್ಚು ಸುಮಾರು ೧೧ ಕೋಟಿ ರೂಪಾಯಿನಷ್ಟು ಆಗಿರುತ್ತದೆ. ವೆಚ್ಚವನ್ನು ಕಳೆದು ಮೂರು ಲಕ್ಷ ರೂಪಾಯಿನ ಉಳಿತಾಯವೂ ಕಂಡು ಬಂದಿದೆ. ಅದಕ್ಕೆ ವಿಶೇಷ ಕಾರಣಗಳೇನೂ ಇಲ್ಲವೆಂದು ದಿವಾನರೇ ಹೇಳಿರುತ್ತಾರೆ. ಹೆಚ್ಚಿನ ವರಮಾನ ಬಂದಿರುವುದರಿಂದ ಸಂಸ್ಥಾನದ ಅಭಿವೃದ್ಧಿ ಕಾರ್ಯಗಳನ್ನು ಸಮರ್ಪಕವಾಗಿ ಸಾಗಿಸಲು ಸಹಾಯವಾಗುವುದು.

ಮದ್ಯಪಾನವನ್ನು ನಿಲ್ಲಿಸುವ ವಿಷಯದಲ್ಲಿ ದಿವಾನರು ಹೇಳಿರುವ ಮಾತುಗಳು ಗಮನಾರ್ಹವಾಗಿವೆ. ಪಾನ ನಿರೋಧ ಸಮಿತಿಯವರ ಸಲಹೆಯನ್ನು ಅಂಗೀಕರಿಸಿ ಸಂಸ್ಥಾನದಲ್ಲಿ ಇನ್ನು ೫ ವರ್ಷದೊಳಗಾಗಿ ಸಂಪೂರ್ಣ ಪಾನ ನಿರೋಧವನ್ನು ಜಾರಿಗೆ ತರಲು ಸರ್ಕಾರದವರು ನಿರ್ಧರಿಸಿರುವುದು ಅಭಿನಂದನೀಯವಾದ ವಿಷಯ. ಇದಕ್ಕನುಗುಣವಾಗಿ ಪ್ರತಿ ವರ್ಷವೂ ಕೆಲವು [illegible] ರಗಳನ್ನು ಕಡಿಮೆ ಮಾಡಲಾಗುವುದೆಂದು ದಿವಾನರು ಹೇಳಿರುತ್ತಾರೆ. ಇನ್ನು [illegible] ದಾದರೂ ಪಾನ ನಿರೋಧ ಕಾರ್ಯವು ಕೇವಲ ಪ್ರಾಯೋಗಿಕವಾಗಿರದೆ [illegible] ಜಾರಿಗೆ ಬರಲೆಂದು ನಾವು [illegible] ತ್ತೇವೆ.

ಚಾಮುಂಡೇಶ್ವರೀ ಟಾಕೀಸ್

28-5 47 ರಿಂದ ಪ್ರತಿ ದಿನ

೩ ಆಟಗಳು

ನೀವುಗಳು ನಿರೀಕ್ಷಿಸುತ್ತಿದ್ದ ಚಲನ ಚಿತ್ರವು ಇಂದಿನಿಂದ ಪ್ರದರ್ಶಿಸಲ್ಪಡುತ್ತದೆ

"ರತನ್"

-:ಪಾತ್ರ:-

ಸ್ವರ್ಣಲತಾ, ಕರನ್ ದಿವಾನ್, ವಾಸ್ತಿ

● ಮದುವೆಯಾದ ೨ ವರ್ಷದೊಳಗೆ ಮಗು ಜನಿಸಿದರೆ, ತಾಯಿಗೆ ಅವಳ ೩ ತಿಂಗಳ ಸಂಬಳದಷ್ಟು ಹಣವನ್ನು ವಿಶೇಷ ಬೋನಸ್ಸಾಗಿ ಫ್ರಾನ್ಸಿನಲ್ಲಿ ಕೊಡುತ್ತಿರುವುದರಿಂದ ಅಲ್ಲಿ ಮಕ್ಕಳ [illegible] ಜಾಸ್ತಿಯಾಗುತ್ತಿರುವುದಾಗಿ ವರದಿಯ [illegible]

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ವುಂಡ್‌ಲ್ಯಾಂಡ್ ಟಾಕೀಸ್, ಮೈಸೂರು

25-5-47 ರಿಂದ

ಚಿಕ್ಕರಿಂದ ೪ ನೇ ವಾರ

ಪ್ರತಿ ದಿನ ೨ ಆಟಗಳು

ಶನಿವಾರ ಮತ್ತು ಭಾನುವಾರ ಮ್ಯಾಟಿನಿ ಆಟ ಉಂಟು

* ನಾವು ಇಬ್ಬರು (ತಮಿ[illegible]

:ಪಾತ್ರ:-

ಟಿ ಆರ್ ಮಹಾಲಿಂಗಂ, ಜಯಲಕ್ಷ್ಮಿ, ಟಿ ಆರ್ ರಾಮಚಂದ್ರ, ಮುಂತಾದವ

ಪೋ||. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಗುರುವಾರ ೨೯—೫—೪೭ [ಸಂಚಿಕೆ ೨೪೯

ದಿವಾನರ ಭೇಟಿ ಬಗ್ಗೆ ಕಾಂಗ್ರೆಸ್ಸಿಗೆ ಅತೃಪ್ತಿ

ಮತ್ತೆ ಸಭಾ ಪರಿತ್ಯಾಗ

ಸರ್ಕಾರಿ ಮಸೂದೆಗಳಲ್ಲಿ ಕಾಂಗ್ರೆಸ್ಸು ಭಾಗವಹಿಸುವುದಿಲ್ಲ

(ಫೋ||] ಬೆಂಗಳೂರು ೨೮

ಪ್ರತಿನಿಧಿಗಳ ಸಭೆಯ ನಿನ್ನೆಯ ಅಧಿವೇಶನದಲ್ಲಿ ಸರ್ಕಾರಿ ಮಸೂದೆಗಳು ಮಂಡಿಸಲ್ಪಟ್ಟಾಗ ಕಾಂಗ್ರೆಸ್ ಪಕ್ಷದ ಉಪನಾಯಕರಾದ ಮಾಲಹಳ್ಳಿ ಶ್ರೀ|| ಪಿ. ಸೀತಾರಾಮಯ್ಯನವರು ಈ ರೀತಿ ಹೇಳಿದರೆಂದು, ತಮ್ಮ ಪಕ್ಷದ ಸದಸ್ಯರೊಡನೆ ಮತ್ತೆ ಸಭಾ ಪರಿತ್ಯಾಗ ಮಾಡಿದರು:—

ಸಂಸ್ಥಾನದಲ್ಲಿ ರಾಜ್ಯಾಂಗ ಸುಧಾರಣೆಯನ್ನು ಜಾರಿಗೆ ತರುವ ಬಗ್ಗೆ ಸಲಹೆಗಳನ್ನು ಕೊಡುವಂತೆ ಶ್ರೀಮನ್ಮಹಾರಾಜರವರು ವಿ... ಒಪ್ಪಣೆ ಮಾಡಿ ನಾಲ್ಕು ತಿಂಗಳು ... ಆದರೂ ಇದುವರೆವಿಗೆ ಅ... ಯಾವ ವಿಚಾರಣೆ ... ಇಲ್ಲ. ಸರ್ಕಾರವು ... ನೀತಿಯನ್ನು ಅನುಸರಿಸುತ್ತಿಲ್ಲ. ... ಕಾಲದ ಸ್ಥಿತಿಗತಿಗಳನ್ನನುಸರಿಸಿ ಸರ್ಕಾರವು ತನ್ನ ವರ್ತನೆಯನ್ನು ಬದಲಾಯಿಸಿಕೊಂಡಿಲ್ಲ. ಪ್ರಜೆಗಳ ಅಭಿಪ್ರಾಯ ... ಪುರಸ್ಕಾರ ದೊರೆಯುತ್ತಿಲ್ಲ. ಹಳೇ ... ಪದ್ಧತಿಗೇ ಸರ್ಕಾರವು ಅಂಟಿಕೊಂಡಿದೆ. ಈಗಿನ ಸರ್ಕಾರದಲ್ಲಿ ಪ್ರಜೆಗಳಿಗೆ ವಿಶ್ವಾಸವಿಲ್ಲ. ಇದನ್ನು ಕ್ರಮಬದ್ಧವಾದ ರೀತಿಯಲ್ಲಿ ಪ್ರಕಟಿಸಲು ಕಾಂಗ್ರೆಸ್ ಪಕ್ಷದವರು ಸರ್ಕಾರಿ ಮಸೂದೆಗಳ ಚರ್ಚೆಯಲ್ಲಿ ಭಾಗವಹಿಸುವುದಿಲ್ಲ. ಆದುದರಿಂದ ನನ್ನ ಪಕ್ಷದವರೂ ಸಭೆಯನ್ನು ಬಿಟ್ಟು ಹೋಗುತ್ತೇವೆ.

ನಂತರ ಹಣಕಾಸಿನ ಕಾರ್ಯದರ್ಶಿಗಳಾದ ಶ್ರೀ|| ಎಂ. ಶಾಮಣ್ಣನವರು ಮಂಡಿಸಿದ ... ಸಂಬಂಧಪಟ್ಟ ... ಮಂಡಿಸಿದ ಮೈಸೂರು ಸಂಸ್ಥಾನದ ... ಚರ್ಚೆಯಿಲ್ಲದೆ ಸಭೆಯಲ್ಲಿ ಅಂಗೀಕಾರವಾಯಿತು.

ದಿವಾನರ ಭಾಷಣವಾದ ನಂತರ ಶ್ರೀ|| ... ಲಿಂಗೇಗೌಡರು ಹಕ್ಕುಬಾಧ್ಯತಾ ಪ್ರಶ್ನೆಯೊಂದನ್ನು ಎತ್ತಿ ಕೋರ್ಟಿನಲ್ಲಿ ಸಾಕ್ಷಿ ... ಈ ಸಭೆಯ ಸದಸ್ಯರಾದ ... ಅವಮಾನವನ್ನುಂಟು ಮಾಡುವಂತೆ ... ಆರೋಪ ಮಾಡಿ... ಸಭೆಯ ಸದಸ್ಯರ ಹಕ್ಕು ... ಬಂದಿದೆಯೆಂದು ಹೇಳಿದರು. ಈ ವಿಚಾರವು ನ್ಯಾಯಾಸ್ಥಾನದ ... ಅದನ್ನು ... ಅದನ್ನು ... ದಿವಾನ ...

... ಸಭೆಯ ... ಕಾಂಗ್ರೆಸ್ ... ಶ್ರೀ ... ಕೊಳ್ಳಲ್ಪಡುವುದು.

... ರಾಜ್ಯಾಂಗ ... ಸಮಿತಿ ... ಪ್ರತಿನಿಧಿಗಳು ... ಭಾಗವಹಿಸ... ಅವರು ...

ಟೆಕ್ನಿಕಲ್ ವಿದ್ಯಾ ಸಮ್ಮೇಳನ

ದಿವಾನರ ಆರಂಭ ಭಾಷಣ

ಸ್ವಂ ಸು ಫೋ||] ಬೆಂಗಳೂರು ೨೮

ಭಾರತಕ್ಕೆ ಸ್ವಾತಂತ್ರ್ಯವು ಬರುವ ಕಾಲ ಸಮೀಪಿಸಿದೆ; ಬಂದೇ ಬರುತ್ತದೆ; ಇದರಲ್ಲಿ ಸಂದೇಹವೇ ಇಲ್ಲ. ಹಾಗೆ ಬಂದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ಮುಖ್ಯವಾದ ಕೆಲಸ. ತಮ್ಮ ಗೌರವದಿಂದ ಜೀವನವನ್ನು ... ಸುಖ ಸಂತೃಪ್ತಿಯಿಂದ ಬದುಕುವುದೇ ಸ್ವಾತಂತ್ರ್ಯದ ಹೆಗ್ಗುರುತು. ಇದಕ್ಕಾಗಿಯೇ ... ವಿದ್ಯೆಗಳಿಗೆ ಯುದ್ಧಾನಂತರದ ಯೋಜನೆಗಳಲ್ಲಿ ಅಗ್ರಸ್ಥಾನವನ್ನು ಕೊಡಲಾಗಿದೆ. ಈ ಕಾರ್ಯದಲ್ಲಿ ಯುವಕರ ಪಾತ್ರವನ್ನು ... ಹೇಳಿ ದಿವಾನ್ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರರು ಈ ದಿನ ಬೆಳಿಗ್ಗೆ ... ಭವನದಲ್ಲಿ ನಡೆದ ಅಖಿಲ ಭಾರತ ಟೆಕ್ನಿಕಲ್ ವಿದ್ಯಾರ್ಥಿಗಳ ಸಮ್ಮೇಳನವನ್ನು ಆರಂಭಿಸುತ್ತ ಹೇಳಿದರು.

ಮೈಸೂರು ರೈಲ್ವೆ ಆಡಳಿತ ಗಾರರಿಗೆ ನೋಟೀಸು

ಮೈಸೂರು ೨೮

ಸಂಸ್ಥಾನದ ರೈಲ್ವೆ ಕೆಲಸಗಾರರ ಸಂಘದವರು ರೈಲ್ವೆ ಜನರಲ್ ಮ್ಯಾನೇಜರ್‌ರವರಿಗೆ ಹಲವು ಬೇಡಿಕೆಗಳನ್ನು ಮುಂದಿಟ್ಟು ... ನೋಟೀಸ್ ... ಎಂದು ಗೊತ್ತಾಗಿದೆ. ಅದರಂತೆ ಸಂಬಳ ... ವೇತನ ... ಹಾಗೂ ಪ್ರತಿ ಕೆಲಸಗಾರನಿಗೂ ... ಕೊಡಬೇಕೆಂದೂ, ಸಂಬಳದ ... ಬೇಡಿಕೆಗಳನ್ನು ... ಹೊಂದಿರಬೇಕೆಂದೂ ... ತಿಳಿಸಲಾಗಿದೆ.

ಶ್ರೀ ಎಸ್. ... ದ ... ಮೂಲಕ ಶ್ರೀ|| ...

ಸ ಪ್ತ ಪು ಸ್ತ ಕ

... ಚಂದ್ರಗುಪ್ತ ವಿಜಯ ...

ಮಿತ್ರ ಮುದ್ರಣ ಕಂಪನಿ, ... ಬಿಲ್ಡಿಂಗ್ಸ್, ಮೈಸೂರು

ಲೋಯರ್ ಸೆಕೆಂಡರಿ ಪರೀಕ್ಷೆ ಫಲಿತಾಂಶ

ಸ್ವಂ ಸು ಫೋ||] ಬೆಂಗಳೂರು ೨೮

ಮೈಸೂರು ಮಾಧ್ಯಮಿಕ ಶಾಲಾ (ಎಲ್ ಎಸ್) ಪರೀಕ್ಷೆ ಫಲಿತಾಂಶವು ಜೂನ್ ೫ನೇ ... ಹೊರಬೀಳುವುದು.

ದಿವಾನರ ಭೇಟಿ ಬಗ್ಗೆ ಕಾಂಗ್ರೆಸ್ಸಿನ ಅಸಮಾಧಾನ

ಸ್ವಂ ಸು ಫೋ||] ಬೆಂಗಳೂರು ೨೮

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ಇತ್ತೀಚೆಗೆ ದಿವಾನರೊಡನೆ ಭೇಟಿ ನಡೆಸಿದ ನಂತರ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು ನೇರ ರಾಜ್ಯಾಂಗ ಸಭೆಯಲ್ಲಿ ಮೈಸೂರು ಸೇರುವ ವಿಚಾರ, ಜವಾಬ್ದಾರಿ ಸರ್ಕಾರದ ಯೋಜನೆ, ತಾತ್ಕಾಲಿಕ ಮಂತ್ರಿಮಂಡಲದ ರಚನೆ ಮುಂತಾದ ವಿಷಯಗಳಲ್ಲಿ ದಿವಾನರಿಂದ ಬಂದ ವಿವರಣೆಯು ಸಮರ್ಪಕವಾಗಿಲ್ಲವೆಂದು ಹೇಳಿ ಅಸಮಾಧಾನಸೂಚಕವಾದ ನಿರ್ಣಯಗಳನ್ನು ಮಾಡುತ್ತ ದಿವಾನರ ಜತೆ ನಡೆದ ಮಾತುಕತೆಯ ನಿರ್ಧಾರವು ತಿಳಿಯುವವರೆಗೆ ಕಾರ್ಯಕಾರಿ ಮಂಡಲಿಯು ... ಮುಂದೂಡಿದೆ.

ಜಿಲ್ಲಾಧಿಕಾರಿಗಳ ವರ್ಗ

ಸ್ವಂ ಸು ಫೋ||] ಬೆಂಗಳೂರು ೨೮

ಹಾಸನದ ಜಿಲ್ಲಾಧಿಕಾರಿಗಳಾದ ಶ್ರೀ ... ನಿರಂಜನರಾವ್ ಅರಸಿನವರು ... ತಿಂಗಳು ರಜಾ ಪಡೆದಿರುವುದರಿಂದ ಈ ಮುಂದೆ ಕಂಡಂತೆ ವರ್ಗಾವರ್ಗಿಗಳು ನಡೆದಿವೆ:-

... ಕಾರ್ಯದರ್ಶಿಗಳಾದ ಶ್ರೀ|| ಜೆ. ಎಚ್. ಪಾಳೇಗಾರರು ಚಿತ್ರದುರ್ಗ ಜಿಲ್ಲಾಧಿಕಾರಿಗಳಾಗಿ; ಮೈಸೂರು ನಗರದ ನ್ಯಾಯಾಧೀಶರಾದ ಶ್ರೀ|| ಎಲ್. ಮುನಿಸ್ವಾಮಿ ಯವರು ಹಾಸನದ ಜಿಲ್ಲಾಧಿಕಾರಿಗಳಾಗಿ, ಕೋಲಾರದ ಲೇಬರ್ ಅಸಿಸ್ಟೆಂಟ್ ... ಅಬ್ದುಲ್ ... ಜಿಲ್ಲಾಧಿಕಾರಿಗಳಾಗಿ ... ಅಸಿಸ್ಟೆಂಟ್ ಕಾರ್ಯದರ್ಶಿಗಳಾದ ... ಜಿಲ್ಲಾಧಿಕಾರಿಗಳಾಗಿ ... ಅದೇ ಸ್ಥಳದಲ್ಲಿ ... ಚಿಕ್ಕಮಗಳೂರು ... ಎಕ್ಸಿಕ್ಯೂಟಿವ್ ... ಜಿಲ್ಲಾಧಿಕಾರಿಗಳಾಗಿ ... ಕೆಲಸವನ್ನು ವಹಿಸಿದೆ.

ಪುರಸಭಾ ಹೈಸ್ಕೂಲ್ ಉಪಾಧ್ಯಾಯರ ಸಂಬಳ

ಪ್ರತಿನಿಧಿ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ. ಸು ಫೋ||] ಬೆಂಗಳೂರು ೨೮

ಮುನಿಸಿಪಲ್ ಹೈಸ್ಕೂಲುಗಳ ಉಪಾಧ್ಯಾಯರುಗಳಿಗೆ ಸರ್ಕಾರಿ ಉಪಾಧ್ಯಾಯರಂತೆ ಸಂಬಳಗಳನ್ನು ಕೊಡಬೇಕೆಂಬ ಬಗ್ಗೆ ನೆಲಮಂಗಲದ ಶ್ರೀ|| ಎಂ. ಶಿವಣ್ಣೇಗೌಡರು ಕೇಳಿದ ಪ್ರಶ್ನೆಗೆ ಶ್ರೀ|| ಜೆಚ್ ಎಸ್ ಪಾಳೇಗಾರರು ಉತ್ತರವಿತ್ತು ಸಾರ್ವಜನಿಕರು ಹೆಚ್ಚಿಗೆ ಧನ ಸಹಾಯ ಮಾಡಿದರೆ ಅವರ ಸಂಬಳ ಹೆಚ್ಚಿಸಲಾಗುವುದೆಂದು ಹೇಳಿದರು.

ನಿಲುವಳಿ ಸೂಚನೆ ತಳ್ಳಿಹಾಕಲಾಯಿತು

ಭಾರತ ರಾಜ್ಯಾಂಗಸಭೆಗೆ ಮೈಸೂರು ಇನ್ನೂ ಸೇರದಿರುವ ಬಗ್ಗೆ ಕಾಂಗ್ರೆಸ್ ಪಕ್ಷದವರು ನಿಲುವಳಿ ಸೂಚನೆಯನ್ನು ಮಂಡಿಸಿದ್ದರು. ಮುಂದಿನ ವಿಚಾರವನ್ನು ಇದು ಊಹಿಸುವುದಾಗಿದೆಯೆಂದೂ, ಈ ವಿಚಾರದಲ್ಲಿ ಒಂದು ಬಾರಿಗೇ ನಿರ್ಣಯವಿರುವುದರಿಂದ ಸದಸ್ಯರು ಅಗ್ಗಿ ಚರ್ಚೆ ನಡೆಸಬಾರದೆಂದೂ ಹೇಳಿ ನಿಲುವಳಿ ಸೂಚನೆಯನ್ನು ದಿವಾನರು ತಳ್ಳಿಹಾಕಿದರು.

ಮೂರನೇ ಬಾರಿ ಸಭಾ ಪರಿತ್ಯಾಗ

ಪ್ರಶ್ನೋತ್ತರಗಳಾದ ನಂತರ ಸರ್ಕಾರಿ ಮಸೂದೆಗಳನ್ನು ತೆಗೆದುಕೊಂಡಾಗ ಕಾಂಗ್ರೆಸ್ ಪಕ್ಷದವರು ಈ ದಿನ ಮತ್ತೆ ಸಭಾ ಪರಿತ್ಯಾಗ ಮಾಡಿದರು.

ಕಾಂಗ್ರೆಸ್ ಪಕ್ಷದ ಅಧಿಕಾರಿ ವರ್ಗ

ಮುಂದಿನ ಸಾಲಿಗೆ ಪ್ರತಿನಿಧಿ ಸಭೆಯ ಕಾಂಗ್ರೆಸ್ ಪಕ್ಷದ ಅಧಿಕಾರಿ ವರ್ಗದವರ ಚುನಾವಣೆಯು ನಿನ್ನೆ ನಡೆದು, ಶ್ರೀಗಳಾದ ಬಿ. ಎಸ್. ಗುಪ್ತರವರು ಉಪನಾಯಕರಾಗಿಯೂ, ಎ. ಎಸ್. ಜೋಸೆಫ್ ಮತ್ತು ಕೆ. ಚಾಮರಾಜಯ್ಯಂಗಾರರು ಕಾರ್ಯದರ್ಶಿಗಳಾಗಿಯೂ, ಎಂ. ವಿ. ಕೃಷ್ಣಪ್ಪನವರು ವಿಪ್ ಆಗಿಯೂ, ಚುನಾಯಿತರಾಗಿದ್ದಾರೆ.

ಸಂಸ್ಥಾನದಲ್ಲಿ ಬಟ್ಟೆ ಹಂಚಿಕೆ

ಪ್ರಜಾಪ್ರತಿನಿಧಿ ಸಭೆಯಲ್ಲಿ ಪ್ರಶ್ನೆ

ಸ್ವಂ ಸು ಫೋ||] ಬೆಂಗಳೂರು ೨೮

ಸಂಸ್ಥಾನದಲ್ಲಿ ಬಟ್ಟೆ ಸರಬರಾಜು ಮತ್ತು ಹಂಚಿಕೆಯ ಬಗ್ಗೆ ಪ್ರಿನ್ಸ್‌ಟೌನ್ ಶ್ರೀ|| ಶ್ರೀ ಎಂ. ... ಗೌಡರು ಈ ದಿನ ಪ್ರತಿನಿಧಿ ಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿದರು. ಸಿವಿಲ್ ಸರಬರಾಜು ಇಲಾಖೆ ಕಾರ್ಯದರ್ಶಿಗಳು ಈ ರೀತಿ ಉತ್ತರವಿತ್ತರು:—

ಕಳೆದ ಅಕ್ಟೋಬರ್ ... ವರೆಗೆ ಸಂಸ್ಥಾನದ ಮಿಲ್ಲುಗಳಲ್ಲಿ ... ಬೇಲು ಬಟ್ಟೆ ತಯಾರಾಗಿದೆ ... ಲೂಮ್ ... ತಯಾರಾದ ಬಟ್ಟೆಯ ವಿವರವು ಸಿದ್ಧವಾಗಿಲ್ಲ ... ಬಟ್ಟೆ ... ಮಾಡಲಾಗುತ್ತಿದೆ ... ಬೇಲು ... ಬಟ್ಟೆ ... ಕೊಡುಗೆ ... ನಮ್ಮಲ್ಲಿ ... ಕಳೆದ ... ತಿಂಗಳಲ್ಲಿ ... ಬೇಲು ... ಬಟ್ಟೆ ... ಪ್ರತಿಯೊಬ್ಬ ... ಬಟ್ಟೆ ... ಸರ್ಕಾರದ ಗಮನಕ್ಕೆ ಬಂದಿಲ್ಲ.

ಸಾಧ್ವಿ

ತಾ|| ೨೯-೫-೪೭ ಗುರುವಾರ

ಸಲಹಾ ಸಮಿತಿ ಬೇರೆ ಏಕೆ ?

ಸಂಸ್ಥಾನದ ರಾಜಕೀಯ ಸುಧಾರಣೆಗಳ ಬಗ್ಗೆ ಶ್ರೀ ನ. ನ್ಯಾಯಾಂಜರವರ ಅಪ್ಪಣೆ ಯ. ಮೇರೆ ದಿವಾನರು ಪ್ರಮುಖ ವ್ಯಕ್ತಿಗಳೊಡನೆ ಸಮಾಲೋಚನೆ ನಡೆಸುತ್ತಿರುವ ರಷ್ಟೆ ಇವುಗಳು ಇನ್ನೂ ಮುಕ್ತಾಯವಾದಂತೆ ಕಾಣುವುದಿಲ್ಲ ಎಂದಿಗೆ ಮುಕ್ತಾಯವಾಗುವುವೋ ಅದೂ ಗೊತ್ತಿಲ್ಲ ಪ್ರಮುಖ ಸಂಸ್ಥೆಗಳ ಪ್ರತಿನಿಧಿಗಳೊಡನೆ ಈಗಾಗಲೇ ಅವರು ಅನೇಕ ಬಾರಿ ಮಾತುಕತೆ ನಡೆಸಿದ್ದಾರೆ. ನಾವು ಸೂಚಿಸಲಿರುವ ಸುಧಾರಣೆಗಳ ಸ್ವರೂಪವನ್ನೂ ಸಹ ಸ್ವಲ್ಪ ಮಟ್ಟಿಗೆ ಹೊರಗೆಡಹಿದ್ದಾರೆ ಹೀಗಿದ್ದರೂ ತಮ್ಮ ಅಪೈದು ಸಲಹೆಗಳನ್ನು ಕೊಡುವುದಕ್ಕೆ ಮುಂಚೆ ಎಲ್ಲ ವರ್ಗಗಳ ಪ್ರತಿನಿಧಿಗಳನ್ನೂ ಒಳಗೊಂಡ ಸಲಹಾ ಸಮಿತಿಯೊಂದನ್ನು ರಚಿಸುವುದಾಗಿ ದಿವಾನರು ಇತ್ತೀಚೆಗೆ ಹೇಳಿರುತ್ತಾರೆ

ಇಂತಹ ಸಮಿತಿಗೆ ಅಗತ್ಯವೇನೂ ಕಾಣುವುದಿಲ್ಲ ಶ್ರೀಮನ್ಮಹಾರಾಜರವರಿಗೆ ದಿವಾನರು ತಮ್ಮ ಸಲಹೆಗಳನ್ನು ಕೊಡಬೇಕಾಗಿದೆ ದಿವಾನರು ಪ್ರಮುಖ ವ್ಯಕ್ತಿಗಳ ಮತ್ತು ಸಂಸ್ಥೆಗಳವರ ಸಲಹೆಗಳನ್ನು ತೆಗೆದುಕೊಂಡಿರುತ್ತಾರೆ ಅಲ್ಲದೆ ಪತ್ರಿಕೆಗಳಲ್ಲಿಯೂ, ಸಭೆಗಳಲ್ಲಿಯೂ ಮತ್ತು ಲಿಖಿತಮೂಲಕವೂ ಈಗಾಗಲೇ ಅನೇಕ ಸಲಹೆಗಳು ಬಂದಿರುತ್ತವೆ ಇದರ ಮೇಲೆ ಇನ್ನೂ ಸಲಹಾ ಸಮಿತಿಯನ್ನು ರಚಿಸುವುದು ಕೇವಲ ಅಪ್ರಯೋಜಕ

ಈಗಾಗಲೇ ಈ ವಿಚಾರದಲ್ಲಿ ಏಕೇಕ ಕಾಲಹರಣವಾಗಿರುತ್ತದೆ ಇದಕ್ಕಾಗಿ ದಿವಾನರೂ ಸಹ ಪರಿತಾಪ ಪಟ್ಟಿರುತ್ತಾರೆ ಇದುವರೆಗೆ ತೆಗೆದುಕೊಂಡಿರುವ ಸಲಹೆಗಳಲ್ಲದೆ ಇನ್ನೂ ಮುಂದೆಯೂ ಸಲಹೆಗಳಿಗಾಗಿ ಸಮಿತಿಯನ್ನು ರಚಿಸುತ್ತ ಹೋಗುವುದು ಇನ್ನೂ ಹೆಚ್ಚಿನ ಕಾಲಹರಣಕ್ಕೆ ಅವಕಾಶವಾಗುವುದು

ಪ್ರಸ್ತುತದಲ್ಲಿ ಪ್ರಜಾ ಪ್ರತಿನಿಧಿ ಸಭೆಯು ನಡೆಯುತ್ತಿದೆ ಅದರಲ್ಲಿ ಎಲ್ಲ ವರ್ಗಗಳ ಪ್ರತಿನಿಧಿಗಳೂ ಇರುತ್ತಾರೆ ದಿವಾನರಿಗೆ ಇನ್ನೂ ಹೆಚ್ಚಿನ ಸಲಹೆಗಳ ಅವಶ್ಯಕತೆಯು ಇದ್ದ. ಬಂದರೆ ಈ ಸಭೆಯಲ್ಲಿಯೇ ಇದಕ್ಕಾಗಿ ಒಂದು ದಿವಸ ವಿಶೇಷ ಚರ್ಚೆಯನ್ನು ಏರ್ಪಡಿಸಿ ಪ್ರತಿನಿಧಿಗಳ ಅಭಿಪ್ರಾಯಗಳನ್ನು ತೆಗೆದುಕೊಳ್ಳಬಹುದು ಈ ಅಧಿವೇಶನದ ಸಮಯದಲ್ಲಿಯೇ ಉಭಯ ಶಾಸನ ಸಭೆಗಳ ಜಂಟೀ ಅಧಿವೇಶನವನ್ನು ಸೇರಿಸಿ ರಾಜ್ಯಾಂಗ ಸಭೆಗೆ ಮೈಸೂರಿನ ಪ್ರತಿನಿಧಿಗಳನ್ನು ಆರಿಸಿ ಕಳುಹಿಸಬೇಕೆಂದು ಮಹಾಜನರು ನಿರೀಕ್ಷಿಸಿದ್ದರು ಪ್ರಭುತ್ವದವರ ಉದಾರ ನೀತಿಯ ಗುರುತಾಗಿ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ|| ಹನುಮಂತಯ್ಯನವರನ್ನು ಬಿಡುಗಡೆ ಮಾಡಬೇಕೆಂದು ನಾವು ಸೂಚಿಸಿದ್ದೆವು. ಆದರೆ ಸರ್ಕಾರದವರು ಈ ಬಗೆಯ ಏರ್ಪಾಡುಗಳೊಂದನ್ನೂ ಮಾಡಿರುವುದಿಲ್ಲ

ಇತರ ಸಂಸ್ಥಾನಗಳು ಈಗಾಗಲೇ ನಿರ್ಧಾರಕ್ಕೆ ಬಂದು ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಕಾರ್ಯ ಕ್ರಮಗಳನ್ನೂ ಕೈಗೊಂಡಿವೆ ಸಣ್ಣ ಪುಟ್ಟ ಸಂಸ್ಥಾನಗಳೂ ಸಹ ತಮ್ಮ ತಮ್ಮಲ್ಲೇ ಗುಂಪುಗಳನ್ನು ಮಾಡಿಕೊಂಡು ಮುಂದುವರಿಯುತ್ತಿವೆ. ಮೈಸೂರು ಮಾತ್ರ ಇನ್ನೂ ಸಂದಿಗ್ಧ ಪರಿಸ್ಥಿತಿಯಲ್ಲಿಯೇ ಇರುವುದು ಅತ್ಯಂತ ಶೋಚನೀಯ

ಸಂಸ್ಥಾನದ ಸುಧಾರಣೆಗಳ ಬಗ್ಗೆ ಹೊಸದಾಗಿ ಸಮಿತಿಗಳನ್ನು ರಚಿಸುವುದಾಗಿ ಅನವಶ್ಯಕ ದೂರದೇ ಸಂಸ್ಥಾನದ ಅಂತಸ್ತಿಗೆ ತಕ್ಕುದಾದ ರಾಜ್ಯಾಂಗವನ್ನು ನಾವು ಸೂಚಿಸುವುದಾಗಿ ದಿವಾನರು ಹೇಳಿದ್ದಾರೆ ಪ್ರಜೆಗಳ ಪುರಸ್ಕಾರಕ್ಕೆ ಅರ್ಹವಾದ ಸಲಹೆಗಳನ್ನು ಕೊಡುವುದಾಗಿ ಸೂಚಿಸಿದ್ದಾರೆ. ಒಂದು ಬಗೆಯ ಜವಾಬ್ದಾರೀ ಸರ್ಕಾರದ ಪದ್ಧತಿಯನ್ನು ಸೂಚಿಸುವುದಾಗಿಯೂ ತಿಳಿಸಿದ್ದಾರೆ ಈಗಾಗಲೇ ಪ್ರಮುಖ ನಾಯಕರುಗಳ ಅಭಿಪ್ರಾಯಗಳು ಅವರ ಮುಂದೆ ಇವೆ. ಇದರಿಂದ ದಿವಾನರು ಇನ್ನೂ ತಡಮಾಡದೆ ಸಂಸ್ಥಾನದ ಪ್ರಗತಿ ಪರವಾದ ಶಕ್ತಿಗಳ ಅಭಿಪ್ರಾಯಕ್ಕೆ ಅನುಗುಣವಾಗಿ ಕೂಡಲೇ ಕಾರ್ಯ ಕ್ರಮವನ್ನು ಕೈಗೊಂಡು ಸಂಸ್ಥಾನದಲ್ಲಿ ಪ್ರಜಾ ಪ್ರಭುತ್ವವು ನೆಲೆಗೊಳ್ಳುವುದಕ್ಕೂ, ಭಾರತ ರಾಜ್ಯಾಂಗ ರಚನೆಯಲ್ಲಿ ಮೈಸೂರು ಯುಕ್ತವಾದ ಪಾತ್ರವನ್ನು ವಹಿಸುವುದಕ್ಕೂ ತಕ್ಕ ಏರ್ಪಾಡನ್ನು ಮಾಡುವುದು ವಿಹಿತವಾಗಿರುತ್ತದೆ

ಇಂಡೋಚೀಣಾ ಯುದ್ಧ ಮುಂದುವರಿಯುವುದು

ಇಂಡೋಚೀಣದಲ್ಲಿನ ಯುದ್ಧವನ್ನು ನಿಲ್ಲಿಸುವ ಬಗ್ಗೆ ಒಪ್ಪಂದಕ್ಕೆ ತಯಾರಿರುವುದಾಗಿ ವಿಯಟ್‌ನಾಂ ರಿಪಬ್ಲಿಕಿನ ಅಧ್ಯಕ್ಷರು ಫ್ರೆಂಚ್ ಸರ್ಕಾರಕ್ಕೆ ಸೂಚಿಸಿದ್ದರು ಯಾವ ಷರತ್ತೂ ಇಲ್ಲದೆ ಶರಣಾಗತರಾದರೆ ಒಪ್ಪಂದವನ್ನು ಪರಿಶೀಲಿಸಲಾಗುವುದೆಂದು ಫ್ರೆಂಚ್ ಸರ್ಕಾರವು ಉತ್ತರವಿತ್ತುದನ್ನು ವಿಯಟ್‌ನಾಂ ಅಧ್ಯಕ್ಷ ಡಾ|| ಹೊ ಚಿಮಿನ್‌ರು ತಿರಸ್ಕರಿಸಿ ಸಂಪೂರ್ಣ ಸ್ವಾತಂತ್ರ್ಯವು ದೊರಕುವವರೆಗೆ ಯುದ್ಧವು ಮುಂದುವರಿಯುವುದೆಂದು ಘೋಷಿಸಿದ್ದಾರೆ.

ಪಂಜಾಬು ಸಿಖ್ಖರಿಗೆ ಸೇರಬೇಕು

ಬ್ರಿಟಿಷರು ಭಾರತವನ್ನು ಬಿಟ್ಟು ಹೋದ ಮೇಲೆ ಸಂಸ್ಥಾನಗಳಿಗೆ ಅಧಿಕಾರವನ್ನು ಕೊಡಲಾಗುವುದು ಪಂಜಾಬ್ ಸ್ವಾತಂತ್ರ್ಯವನ್ನು ಬ್ರಿಟಿಷರು ಸಿಖ್ಖರಿಂದ ವಶಪಡಿಸಿಕೊಂಡರು. ಆದ್ದರಿಂದ ಆ ಸ್ವಾತಂತ್ರ್ಯವನ್ನು ಬ್ರಿಟಿಷರು ಸಿಖ್ಖರಿಗೇ ಬಿಟ್ಟು ಕೊಟ್ಟು ಹೋಗಬೇಕು- ಎಂಬುದಾಗಿ ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಿಗಳಾದ ಸರ್ದಾರ್ ಬಲದೇವ ಸಿಂಗರು ತಿಳಿಸಿದ್ದಾರೆ.

ಪ್ರಜಾ ಸಂಖ್ಯೆಗನುಗುಣವಾ ಮುಸ್ಲಿಮರಿಗೆ ನೌಕರಿ

ಸಂಯುಕ್ತ ಪ್ರಾಂತ್ಯದಲ್ಲಿ ಇದುವರೆಗೆ ಸರ್ಕಾರಿ ನೌಕರಿಯಲ್ಲಿ ಮುಸ್ಲಿಮರಿಗೆ ಶೇ. ೩೦ ರಷ್ಟು ಸ್ಥಾನಗಳನ್ನು ಕೊಡಲಾಗುತ್ತಿತ್ತು. ಈಗ ಅದನ್ನು ಅವರ ಪ್ರಜಾ ಸಂಖ್ಯೆಯ ಪ್ರಮಾಣಕ್ಕನುಸಾರವಾಗಿ ಕೊಡಲು ಅಲ್ಲಿನ ಮಂತ್ರಿ ಮಂಡಲ ನಿರ್ಧರಿಸಿದೆಯೆಂದು ತಿಳಿದು ಬಂದಿದೆ

ಬೇಕಾದವರು ವಿಚಾರಿಸಿ

ಮೈಸೂರು ಚಾಮರಾಜಪುರಂ(?) (ಕೃಷ್ಣವನಂ) ಯಲ್ಲಿ ಭಾವಿ, ದೀಪ, ಗ್ಯಾರೇಜ್, ಔಟ್‌ಹೌಸ್ ಇದ್ದು ೬೦ ರೂ ಬಾಡಿಗೆ ಬರುವ ಪೂರ್ತಾ ಮದ್ರಾಸ್ ತಾರಸಿ ಮನೆ

ಬಿ. ಎಸ್. ಸುಬ್ಬರಾವ್,
ಜಗನ್ಮೋಹನ ಬಂಗ್ಲೆ ಎದುರು,
ಮೈಸೂರು.

RAJKAMA

Morning Shows from 30-5
for 4 days daily at 10-30 a

Appointment with Crime

Edited printed and published A. R. Nagarajan at the Sadhvi P. D. Subbaiah Road Mysore

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್

ಅಶೋಕಾ ರಸ್ತೆ, ಮೈಸೂರು : : ಫೋನ್ 4

ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳು ಹೊಸ ನಮೂನೆಯಲ್ಲಿ ನಮ್ಮಲ್ಲಿ ಸಿದ್ಧವಾಗಿರುತ್ತವೆ. ಆರ್ಡರ್ ಪದಾರ್ಥಗಳಿಗೆ ಹೆಚ್ಚಿನ ಗಮನ ಕೊಡಲಾಗುತ್ತದೆ.

ಕೆ. ಎಸ್ ಶ್ರೀಕಂಠಶೆಟ್ಟಿ, ಪ್ರೊಪ್ರೈಟರ್

★ ವುಡ್‌ಲ್ಯಾಂಡ್ಸ್, ಮೈಸೂರು ★

25-5-47 ರಿಂದ
ಚಿಕ್ಕಿರಿದ ೪ ನೇ ವಾರ
ಪ್ರತಿ ದಿನ ೨ ಆಟಗಳು
ಶನಿವಾರ ಮತ್ತು ಭಾನುವಾರ
ಮ್ಯಾಟಿನಿ ಆಟ ಉಂಟು

★ ನಾವು-ಇಬ್ಬರು ★ (ತಮಿಳು)

-:ಪಾತ್ರ:-
ಟಿ ಆರ್ ಮಹಾಲಿಂಗಂ,
ಜಯಲಕ್ಷ್ಮಿ, ಟಿ ಆರ್
ರಾಮಚಂದ್ರ ಮುಂತಾದವರು

ರಾಜಕಮಲ್,
ತಾ|| ೩೦-೫-೪೭ ರಿಂದ
ಆರನೇ ವಾರ
ಪ್ರತಿ ದಿನ ೨ ಆಟಗಳು

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶುಕ್ರವಾರ ೩೦—೫—೪೭ [ಸಂಚಿಕೆ ೨೫೦

ಪ್ರತಿನಿಧಿ ಸಭೆಯಲ್ಲಿ ಇಂದು ಕೋರಂ ಇರಲಿಲ್ಲ

ಶ್ವೇತಾಂಬರ ಮುನಿಗಳ ಆಗಮನ

ಮೈಸೂರು ೩೦

ಶ್ರೀ ಶ್ವೇತಾಂಬರ ಜೈನ ಮುನಿಗಳಾದ ಶ್ರೀ ಚೇತನಾಜಿ ಮತ್ತು ಶ್ರೀ ಶ್ರೀ ... ಮುನಿಜಿ ಮಹಾರಾಜರವರು ಬೊಂಬಾಯಿ ಪ್ರಾಂತ್ಯದಿಂದ ಕಾಲ್ನಡಿಗೆಯಲ್ಲಿ ಹೊರಟು ೬೦೦ ಮೈಲಿಗಳ ದೂರ ೫ ತಿಂಗಳ ಸಂಚಾರ ಮಾಡಿ ಹೈದರಾಬಾದ್ ಸಂಸ್ಥಾನದ ಪ್ರವಾಸವನ್ನು ಮುಗಿಸಿಕೊಂಡು ನಿನ್ನೆ ಬೆಳಗ್ಗೆ ರಾಜಧಾನಿಗೆ ಆಗಮಿಸಿದರು

ಸ್ಮೃತಿ ಸಮ್ಮೇಳನಕ್ಕೆ ಪ್ರತಿನಿಧಿ

... ಪುರದಲ್ಲಿ ಜೂನ್ ೬ ಮತ್ತು ೭ ನೇ ತಾ|| ಗಳಲ್ಲಿ ನಡೆಯುವ ಅಖಿಲ ಭಾರತ ಸ್ಮೃತಿ ಫೆಡರೇಷನ್ನಿಗೆ ಮೈಸೂರು ... ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ|| ಎ. ಎಲ್ ... ಅವರು ಅಲ್ಲಿಗೆ ತೆರಳಲಿರುವರು.

ನಾಮದೇವ ಸಮಾಜಕ್ಕೆ ದಾನ

ಮೈಸೂರು ಬಟ್ಟೆ ವ್ಯಾಪಾರಿಗಳಾದ ಶ್ರೀ ... ರಾಜಪ್ಪರಾಯರು ತಮ್ಮ ಕುಮಾರಿ ... ಲಕ್ಷ್ಮೀಬಾಯಿಯನ್ನು ಹಂಪರದ ಶ್ರೀ ... ರಾಜಪ್ಪನವರ ಕುಮಾರ ಚಿ|| ಶ್ರೀಧರರವರಿಗೆ ಕೊಟ್ಟು ಶ್ರೀರಂಗಪಟ್ಟಣದಲ್ಲಿ ನಡೆಸಿದ ಮದುವೆಯ ಸಂದರ್ಭದಲ್ಲಿ ವಧು ಮತ್ತು ವರನ ಕಡೆಯವರು ಮೈಸೂರು ನಾಮದೇವ ... ಕ್ಕೆ ೨೦ ರೂ ಗಳ ದಾನವಿತ್ತಿದ್ದಾರೆ ... ದಲಿಯಾರರ ವಿದ್ಯಾರ್ಥಿ ನಿಲಯ ... ಸಂತೇಪೇಟೆಯ ವ್ಯಾಪಾರಿಗಳಾದ ಶ್ರೀ ... ವೀರಭದ್ರ ಮೊದಲಿಯಾರರು ತಮ್ಮ ... ಮಿನ ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಉಚಿತ ನಿಲಯವೊಂದನ್ನು ಸ್ಥಾಪಿಸಿದ್ದಾರೆ ಅಪೇಕ್ಷೆ ಇರುವ ವಿದ್ಯಾರ್ಥಿಗಳು ಜೂನ್ ೭ ನೇ ತಾ|| ನೊಳಗೆ ೩೦೦, ... ವಿಲಾಸ ಅಗ್ರಹಾರ, ಮೈಸೂರು ಎಂಬ ವಿಳಾಸಕ್ಕೆ ಅರ್ಜಿ ಹಾಕಿಕೊಳ್ಳಬೇಕೆಂದು ... ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಾನಂದ ಮೊದಲಿಯಾರರು ತಿಳಿಸಿದ್ದಾರೆ

ಪ್ರದೋಷ ಸಂಗೀತ

ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರದಲ್ಲಿ ಪ್ರದೋಷದ ಪ್ರಯುಕ್ತ ನಾಳೆ ಸಂಜೆ ೬|| ಘಂಟೆಗೆ ಧಾರ್ವಾಡದಿಂದ ಬಂದಿರುವ ಪ್ರೊ|| ಎಸ್ ಟಿ. ಮೊಹಿಯುದ್ದೀನ್ ರವರಿಂದ ಸಿತಾರ್ ವಾದ್ಯವೂ, ಎ. ಕೆ ಸಾಹೇಬರ ತಬಲವೂ ನಡೆಯುತ್ತವೆ

ಉಚಿತ ಹಿಂದೀ ತರಗತಿಗಳು

ದೊಡ್ಡಪೇಟೆಯಲ್ಲಿರುವ ವೈಶ್ಯ ಯುವಕ ಸಂಘದಲ್ಲಿ ಜೂನ್ ೧ ರಿಂದ ಪ್ರತಿದಿನ ಸಂಜೆ ೬ ರಿಂದ ಹಿಂದೀ ತರಗತಿಗಳು ನಡೆಯುತ್ತವೆ ರಾಷ್ಟ್ರ ಭಾಷಾ ಪ್ರೇಮಿಗಳೆಲ್ಲರೂ ಇದರ ಉಪಯೋಗ ಪಡೆಯಬೇಕೆಂದು ಪ್ರಾರ್ಥಿಸಲಾಗಿದೆ

ಬಂಗಲೆ ಮಾರಾಟಕ್ಕಿದೆ

ಮೈಸೂರು ... ವಾಣೀವಿಲಾಸ ಮೊಹಲ್ಲಾ ... ರೋಡು ... ನೇ ನಂಬರು ಬಂಗಲೆ, ಗ್ಯಾರೇಜ್ ಮತ್ತು ಔಟ್ ಹೌಸು ... ವಿಸ್ತೀರ್ಣ ೩೦೦೦ ಚದರ ಗಜಗಳು. ಕಾಂಪೌಂಡಿನಲ್ಲಿ ತೆಂಗಿನ ಗಿಡಗಳೂ ... ಮತ್ತು ಹೂವಿನ ಗಿಡಗಳೂ ಇವೆ ... ವಿಚಾರಗಳನ್ನು ಕೆಳಗೆ ಕಂಡವರಿಂದ ಪಡೆಯಬಹುದು

ಕೆ. ಅನಂತರಾಮಯ್ಯ,

... ೧೦ ನೇ ಕ್ರಾಸ್ ರೋಡು, ವಾಣೀವಿಲಾಸ್ ಮೊಹಲ್ಲಾ, ಮೈಸೂರು

ತೊಗರೀಬೇಳೆ ಅಭಾವ

ನಿಲುವಳಿ ನಿರ್ಣಯದ ಅಂಗೀಕಾರ

ಸ್ವಂ ಸು. ಪ್ರೋ|] ಬೆಂಗಳೂರು ೩೦

ಸಂಸ್ಥಾನ ಮತ್ತು ಬೆಂಗಳೂರು ನಗರಗಳಲ್ಲಿ ತಲೆದೋರಿರುವ ತೊಗರೀಬೇಳೆ ಅಭಾವದ ಬಗ್ಗೆ ಕಾಂಗ್ರೆಸ್ ಪಕ್ಷದ ಶ್ರೀ|| ಕೆ ಶಾಮರಾಜಯ್ಯಂಗಾರ್ಯರು ನಿನ್ನೆ ಪ್ರತಿನಿಧಿ ಸಭೆಯಲ್ಲಿ ಸೂಚಿಸಿದ ನಿಲುವಳಿ ಸೂಚನೆಗೆ ಸಭೆಯು ಅಂಗೀಕಾರವನ್ನಿತ್ತಿತು ಶ್ರೀಗಳಾದ ಭೂಪಾಳಂ ಚಂದ್ರಶೇಖರಯ್ಯ, ತಂಗರಲಿಂಗೇಗೌಡ ಮತ್ತು ದಾಸಪ್ಪನಾಯುಡ್ ಮುಂತಾದವರು ಮಾತನಾಡಿ ತೊಗರೀಬೇಳೆ ಸಿಗುವುದು ಬಹಳ ಕಷ್ಟವಾಗಿದೆಯೆಂದೂ ೧ ಸೇರಿಗೆ ಒಂದು ಅಥವಾ ಒಂದೂ ಕಾಲು ರೂಪಾಯಿ ಕೊಟ್ಟರೂ ದೊರೆಯುತ್ತಿಲ್ಲವೆಂದೂ ಹೇಳಿದರು. ಸರ್ಕಾರದವರು ಈ ಬಗ್ಗೆ ಯಾವ ಏರ್ಪಾಡನ್ನೂ ಮಾಡಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಂತೂ ಈ ಅಭಾವ ಹೇಳತೀರದಾಗಿದೆ ಹಾಸನದ ಜಿಲ್ಲೆಗೆ ಒಬ್ಬ ವ್ಯಾಪಾರಿಗೆ ಮಾತ್ರ ರಹದಾರಿ ಕೊಡಲಾಗಿದೆ; ಆಗಲಾದರೂ ಸರ್ಕಾರದವರು ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು—ಎಂದು ಅವರುಗಳು ತಿಳಿಸಿದರು

ನಿಲುವಳಿ ಸೂಚನೆಯನ್ನು ಶ್ರೀ ಎಫ್ ಸಿ ದೇವರಾಜೇ ಅರಸಿನವರು ವಿರೋಧಿಸಿದರು. ಬೇಳೆ ಬೆಳೆಯೇ ಕಡಿಮೆಯಾಗಿರುವುದರಿಂದ ಸರ್ಕಾರದವರು ಏನು ತಾನೇ ಮಾಡಲು ಸಾಧ್ಯ ? ಅವರು ತಮ್ಮ ಕೈಲಾದುದನ್ನೆಲ್ಲಾ ಮಾಡಿಯೇ ಇದ್ದಾರೆಂದು ಶ್ರೀ ಅರಸಿನವರು ವಾದಿಸಿದರು

ಸರ್ಕಾರದ ಅಹಾರ ಕಾರ್ಯದರ್ಶಿಗಳಾದ ಶ್ರೀ ಕೆ ಶ್ರೀನಿವಾಸನವರು ಈ ರೀತಿ ಉತ್ತರವಿತ್ತರು:—ಪ್ರತಿವರ್ಷವೂ ೩೨ ರಿಂದ ೩೬ ಸಾವಿರದ ಟನ್ ತೊಗರಿಬೇಳೆ ನಮ್ಮ ಸಂಸ್ಥಾನಕ್ಕೆ ಬೇಕಾಗುತ್ತದೆ. ಆದರೆ ನಮ್ಮಲ್ಲಿ ೧೨ ರಿಂದ ೧೩ ಸಾವಿರ ಟನ್ ಮಾತ್ರ ಬೆಳೆಯಾಗಿದೆ ಈ ಸಾರಿ ಹೊರಗಡೆಯಿಂದ ಬಹಳ ಕಡಮೆ ಬೇಳೆ ಬಂದಿದೆ ಡಾ|| ರಾಜೇಂದ್ರ ಪ್ರಸಾದರು ಬಂದಿದ್ದಾಗ ಅವರ ಕೂಡ ಈ ವಿಚಾರವನ್ನು ಪ್ರಸ್ತಾಪಿಸಲಾಯಿತು. ಉತ್ತರದೇಶದಲ್ಲಿ ಗೋಧಿ ಬೆಳೆ ಕೆಟ್ಟುಹೋದುದರಿಂದ ಅವರು ತೊಗರಿಬೇಳೆಯನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ ಇಲ್ಲಿ ದ್ವೇಳೆ ಬೆಳೆ ಕಡಮೆಯಾಗಿ ಹೊರಗಿನಿಂದ ಸಾಮಾನು ಬಾರದಿರುವುದರಿಂದಲೇ ಈ ಅಭಾವ ಉಂಟಾಗಿದೆ ವರ್ತಕರಂತೆ ಧಾನ್ಯವನ್ನು ಕೊಂಡು ವ್ಯಾಪಾರ ಮಾಡುವುದು ಸರ್ಕಾರದವರಿಗೆ ಸಾಧ್ಯವಿಲ್ಲ ಸರಬರಾಜು ಉತ್ತಮಪಡಿಸಲು ಸರ್ಕಾರದವರು ಸಾಧ್ಯವಾದದ್ದನ್ನೆಲ್ಲಾ ಮಾಡುವರು ಸಧ್ಯದಲ್ಲೇ ಸಂಸ್ಥಾನಕ್ಕೆ ಒಂದು ಸಾವಿರ ಟನ್ ಉದ್ದಿನಬೇಳೆ ಬರಲಿದೆ-ಎಂದು ಹೇಳಿದರು ಓಟಿಗೆ ಹಾಕಿದಾಗ ನಿಲುವಳಿ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಸರಬರಾಜು ಕೆಲಸ ನಡೆಯುವ ವ್ಯವಸ್ಥೆಗಳು ಮತ್ತು ಇತರ ವಿಚಾರಗಳಿಗೆ ಸಂಬಂಧಪಟ್ಟ ಹಂಗಾಮಿ ಅಧಿಕಾರಗಳ ಮಸೂದಾ ಕಾನೂನು ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು

— —

ಜೂನ್ ೨ ನೇ ತಾ|| ನಡೆಯುವ ಸಮ್ಮೇಳನದಲ್ಲಿ ಭಾಗ ವಹಿಸಲು ದಿವಾನರು ನಿನ್ನೆ ರಾತ್ರಿ ದೆಹಲಿಗೆ ಪ್ರಯಾಣ ಬೆಳೆಸಿದರು

ಹುಜೂರು ಸೆಕ್ರೆಟರಿಗಳಾದ ಶ್ರೀ ಟಿ. ರಾಮಯ್ಯನವರಿಗೆ ಮತ್ತೆ ಎರಡು ತಿಂಗಳ ರಜಾ ಮಂಜೂರಾಗಿದೆ.

ರಾಜ್ಯಾಂಗ ಸಭೆಗೆ ಇನ್ನೊಂದು ಸಂಸ್ಥಾನ

ಗ್ಲೋಬ್] ಕೊಚಿನ್ ೨೯

ತ್ರಾವಣಕೋರ್ ಸಂಸ್ಥಾನವು ಭಾರತ ರಾಜ್ಯಾಂಗ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಿರುವುದಾಗಿ ಅಲ್ಲಿನ ಸರ್ಕಾರದ ವಿಶೇಷ ಪ್ರಕಟಣೆ ಹೊರಟಿದೆ ಅಲ್ಲಿನ ಮಹಾರಾಜರು ವಿಮಾನದಲ್ಲಿ ಲಂಡನ್ನಿಗೆ ಹೋಗಿ, ದೇಶೀಯ ಸಂಸ್ಥಾನಗಳಿಗೂ, ಭಾರತ ಸರ್ಕಾರ ಅಥವಾ ಸರ್ಕಾರಗಳಿಗೂ ನಡೆಯುವ ರಾಜ್ಯಾಂಗದ ಮಾತುಕತೆಗಳನ್ನು ವೀಕ್ಷಿಸುವರು

47-48 ನೇ ವರ್ಷದ ಹೈಸ್ಕೂಲು ೨ ನೇ ತರಗತಿಯ ಪಠ್ಯಪುಸ್ತಕ

ಚಂದ್ರಗುಪ್ತ ವಿಜಯ

ಎರಡನೇ ಮುದ್ರಣ ಸಿದ್ಧವಾಗಿದೆ.

ಮಿತ್ರ ಮತ್ತು ಕಂಪೆನಿ,

ಲ್ಯಾನ್ಸ್ ಡೌನ್ ಬಿಲ್ಡಿಂಗ್ಸ್, ಮೈಸೂರು

ಮೈಸೂರು ಸಿಲ್ಕ್

ಟರ್ಬನ್ ರಿಬ್ಬನ್ನುಗಳಿಗೆ

ಪ್ರಭಾತ್ ಬ್ಯಾಂಗಲ್ಸ್

ಸ್ಟೋರಿಗೆ

ಭೇಟಿ ಕೊಡಿ

ಕೋರಂ ಇಲ್ಲದೆ ಸಭೆ ಮುಂದುವರಿಯಿತು

ಪ್ರಜಾಪ್ರತಿನಿಧಿ ಸಭೆಯಲ್ಲಿ ಕ್ರಿಯಾಲೋಪ

ಸ್ವಂ ಸು ಪ್ರೋ|] ಬೆಂಗಳೂರು ೩೦

ಪ್ರಜಾಪ್ರತಿನಿಧಿ ಸಭೆಯು ಇಂದು ಮಧ್ಯಾಹ್ನ ೧೨-೨೦ಕ್ಕೆ ಡಾ|| ರಾಯರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಸಭೆಗೆ ಕಾಂಗ್ರೆಸ್ ಪಕ್ಷದವರೂ ಮತ್ತು ಸ್ವತಂತ್ರರಲ್ಲಿ ಕೆಲವರೂ ಬಂದಿರಲಿಲ್ಲ. ಪ್ರಶ್ನೋತ್ತರಗಳು ಆರಂಭವಾದ ಕೂಡಲೇ ಶ್ರೀ|| ಭೂಪಾಳಂ ಚಂದ್ರಶೇಖರಯ್ಯನವರು ಸಭೆಗೆ ಒಂದು ಕ್ರಿಯಾಲೋಪವನ್ನು ಎತ್ತಿ ಸಭೆಯಲ್ಲಿ ಕೋರಂ ಇಲ್ಲವೆಂದೂ ಸಭೆ ನಡೆಯಬೇಕೆಂದೂ ಹೇಳಿದರು. ಪ್ರಶ್ನೆ ಯೊಂದು ನಡೆಯುತ್ತಿರುವಾಗ ಮಧ್ಯದಲ್ಲಿ ಈ ಕ್ರಿಯಾಲೋಪ ಬಂದಿದೆಯೆಂದೂ ಚರ್ಚೆಯಲ್ಲಿರುವ ಪ್ರಶ್ನೆ ಮುಗಿದ ಕೂಡಲೇ ಅದನ್ನು ಪರಿಶೀಲಿಸಬಹುದೆಂದು ಅಧ್ಯಕ್ಷರು ತಿಳಿಸಿದರು.

ಕಾಂಗ್ರೆಸ್ ಪಕ್ಷದ ಉಪನಾಯಕರಾದ ಶ್ರೀ|| ಗುಪ್ತರವರು ನಂತರ ಏಕಾಂಗಿಯಾಗಿ ಸಭೆಯನ್ನು ಪ್ರವೇಶಿಸಿ ಸಭೆಯಲ್ಲಿ ಕೋರಂ ಇಲ್ಲವೆಂದು ಕ್ರಿಯಾಲೋಪ ಸೂಚಿಸಿದರು. ಶ್ರೀ|| ಭೂಪಾಳಂರವರಿಗಿತ್ತ ಉತ್ತರವನ್ನೇ ಅಧ್ಯಕ್ಷರು ಇವರಿಗೂ ಕೊಟ್ಟರು

ಸಭಾ ಪರಿತ್ಯಾಗ

ಕ್ರಿಯಾಲೋಪವನ್ನು ಸದಸ್ಯರು ಯಾವ ಸಮಯದಲ್ಲಿಯಾದರೂ ತರಬಹುದೆಂದೂ ಅದು ಕಾನೂನು ಸಮ್ಮತವಾದುದೆಂದೂ, ಅಧ್ಯಕ್ಷರು ಅದನ್ನು ಈ ರೀತಿ ತಳ್ಳಿ ಹಾಕುವುದು ಕ್ರಮಬದ್ಧವಲ್ಲವೆಂದೂ ಹೇಳಿ ತಮ್ಮ ಪ್ರತಿಭಟನೆಯನ್ನು ಸೂಚಿಸಲು ತಾವು ಸಭಾ ಪರಿತ್ಯಾಗ ಮಾಡ ಬೇಕಾಗಿದೆ ಎಂದು ಹೇಳಿ ಶ್ರೀ ಗುಪ್ತರು ಸಭೆಯಿಂದ ಹೊರಟುಹೋದರು.

ಶ್ರೀ ಭೂಪಾಳಂರವರು ಮತ್ತೆ ಪುನಃ ತಮ್ಮ ಸೂಚನೆಯನ್ನು ಪ್ರಸ್ತಾಪಿಸಿ ಕೊಂಡರು: ಈ ಮಧ್ಯೆ ಲೀಗ್ ಪಕ್ಷದ ನಾಯಕರಾದ ಎ || ಬಶೀರ್‌ರವರು ಮಾತನಾಡಿ, ಕೋರಮು ಇರದ ಹೊರತಲ್ಲಿ ಶ್ರೀ ಭೂಪಾಳಂರವರು ಹಲವು ಸದಸ್ಯರನ್ನು ಸಭೆಗೆ ಬಾರದಂತೆ ಹೊರಗಡೆ ತಡೆದಿದ್ದರೆಂದೂ, ಸದಸ್ಯರ ಹಕ್ಕುಬಾಧ್ಯತೆಗಳನ್ನು ಅಧ್ಯಕ್ಷರು ಕಾಪಾಡಬೇಕೆಂದೂ ಯಾವುದೋ ಹಿನ್ನೆಲೆಯಿಂದ ಈ ಕೆಲಸಗಳು ನಡೆಯುತ್ತಿವೆಯೆಂದೂ ಹೇಳಿದರು.

ಸುಮಾರು ೧೨-೫೦ ರ ಸಮಯದಲ್ಲಿ ಪ್ರಶ್ನೆ ಮುಗಿದ ತರುವಾಯ ಅಧ್ಯಕ್ಷರು ಸಭೆಯ ಸದಸ್ಯರ ಎಣಿಕೆ ನಡೆಸಿ ಕೋರಂ ಇದೆಯೆಂದು ... ಸಭೆಯನ್ನು ... ಗಂಟೆಗೆ ಮುಂದುವರಿಸಿದರು

ಇಂದು ಕ್ರಿಯಾಲೋಪದಿಂದ ಮುಸ್ಲಿಂ ಸದಸ್ಯರಿಗೆ ಅಸಮಾಧಾನವಾಗಿ ... ಸಭೆಯನ್ನು ೧ ರಿಂದ ... ಗಂಟೆ ವರೆಗೆ ನಡೆಸದಿರುವ ಬಗ್ಗೆ ಈ ಅಸಮಾಧಾನ ಉಂಟಾಗಿದೆಯೆಂದು ... ಕಾಂಗ್ರೆಸ್ ಪಕ್ಷದ ಹಂಗಾಮಿ ನಾಯಕರಾದ ಶ್ರೀ ಗುಪ್ತರವರು ಕೇಳಿಕೆಯೊಂದನ್ನಿತ್ತು ಕೋರಂ ಇಲ್ಲದಾಗಲೂ ಸಭೆ ನಡೆದುದು ಅಕ್ರಮವೆಂದು ಹೇಳಿದ್ದಾರೆ.

ಸ್ತ್ರೀಯರಿಗೆ ಇಂಜನಿಯರಿಂಗ್ ಶಿಕ್ಷಣ

ಪ್ರಾಚ್ಯ ದೇಶಗಳಲ್ಲಿಲ್ಲದ ಅತ್ಯಂತ ಪ್ರಗತಿಪರವಾದ ಒಂದು ... ಇಂಜನಿಯರಿಂಗ್ ಕಾಲೇಜಿಗೆ ಸ್ತ್ರೀಯರನ್ನು ಸೇರಿಸಿಕೊಳ್ಳಲಾಗುವುದು.

ಸಾಧ್ವಿ

ತಾ|| ೩೦-೫-೪೭ ಶುಕ್ರವಾರ

ಕಾಂಗ್ರೆಸ್ಸಿನ ಅತೃಪ್ತಿ

ದಿವಾನರೊಡನೆ ಮೈಸೂರು ಕಾಂಗ್ರೆಸ್ ಅಧ್ಯಕ್ಷರು ನಡೆಸಿದ ಭೇಟಿಯ ಪರಿಣಾಮವು ಕಾಂಗ್ರೆಸ್ಸಿಗೆ ತೃಪ್ತಿಯನ್ನುಂಟುಮಾಡಿಲ್ಲವೆಂದು ತಿಳಿದುಬಂದಿದೆ. ಕಾಂಗ್ರೆಸ್ಸಿನವರು ಕೇಳಿದ ಯಾವ ಅಂಶಗಳಿಗೂ ದಿವಾನರಿಂದ ಸಮರ್ಪಕವಾದ ವಿವರಣೆಯು ದೊರೆಯದಿದ್ದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಈ ಬಗ್ಗೆ ಕಾಂಗ್ರೆಸ್ಸು ದೀರ್ಘವಾದ ಹೇಳಿಕೆಯೊಂದನ್ನು ಹೊರಡಿಸಿರುತ್ತದೆ.

ಕಾಂಗ್ರೆಸ್ ಅಧ್ಯಕ್ಷರೊಡನೆ ಎರಡನೆಯ ಭೇಟಿ ನಡೆಸಿದ ವೇಳೆ ದಿವಾನರು ಕೊಟ್ಟ ಹೇಳಿಕೆಯೊಂದರಲ್ಲಿ ಒಂದು ಬಗೆಯ ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸಬೇಕೆಂಬುದೇ ತಮ್ಮ ಉದ್ದೇಶವೆಂದೂ, ಚುನಾಯಿತ ಮಂತ್ರಿಗಳ ಆಡಳಿತವನ್ನು ನಡೆಸಬೇಕೆಂದೂ ಸೂಚಿಸಿದ್ದರು. ಈ ಹೇಳಿಕೆಯು ಸ್ವಲ್ಪ ಮಟ್ಟಿಗೆ ಸಮಾಧಾನವನ್ನುಂಟುಮಾಡುವಂತಿತ್ತು. ಡಾ|| ರಾಜೇಂದ್ರಪ್ರಸಾದರೂ ಸಹ ಈ ಹೇಳಿಕೆಯು ಪ್ರಾಮಾಣಿಕತೆಯಿಂದ ಕೂಡಿದೆಯೆಂದು ಮೆಚ್ಚಿಕೆಯನ್ನು ಸೂಚಿಸಿದ್ದರು. ಇದಾದ ನಂತರ ಮೂರನೆಯ ಬಾರಿ ಭೇಟಿ ನಡೆದ ವೇಳೆ ಕಾಂಗ್ರೆಸ್ಸಿಗೆ ಅತೃಪ್ತಿಯುಂಟಾಗಲು ಪ್ರಬಲವಾದ ಕಾರಣಗಳಿರಬೇಕು.

ಮೂರನೆಯ ಭೇಟಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರು ಜವಾಬ್ದಾರೀ ಸರ್ಕಾರದ ಸ್ವರೂಪವನ್ನು, ತಾತ್ಕಾಲಿಕ ಮಂತ್ರಿಮಂಡಲದ ಆವಶ್ಯಕತೆಯನ್ನೂ, ಭಾರತ ರಾಜ್ಯಾಂಗ ಸಭೆಯಲ್ಲಿ ಸೇರಬೇಕಾದ ಅಗತ್ಯವನ್ನೂ ಒತ್ತಾಯಪಡಿಸಿದರು. ಆದರೆ ಇವ್ಯಾವುದಕ್ಕೂ ಸಮಾಧಾನಕರವಾದ ಉತ್ತರವು ಬಂದಿರುವುದಿಲ್ಲ. ಜವಾಬ್ದಾರೀ ಸರ್ಕಾರದ ವಿಷಯದಲ್ಲಿ ಹೆಚ್ಚಿಗೆ ಏನನ್ನೂ ಹೇಳಲು ಸಾಧ್ಯವಿಲ್ಲವೆಂದು ದಿವಾನರು ತಿಳಿಸಿರುವರು. ತಾತ್ಕಾಲಿಕ ಮಂತ್ರಿಮಂಡಲದ ವಿಚಾರವು ತಮ್ಮ ದೃಷ್ಟಿಪಥದಲ್ಲಿ ಇರಲಿಲ್ಲವೆಂದೂ ಹೇಳಿರುವರು. ರಾಜ್ಯಾಂಗ ಸಭೆಯಲ್ಲಿ ಸೇರುವ ವಿಚಾರವನ್ನು ಮುಂದಕ್ಕೆ ತಳ್ಳಿ ಹಾಕಿರುವರು. ಇದಲ್ಲದೆ ಇತರ ಸಣ್ಣ ಪುಟ್ಟ ತಾತ್ಕಾಲಿಕ ವಿಚಾರದಲ್ಲಿಯೂ ಯಾವ ಸಮರ್ಪಕವಾದ ಉತ್ತರವೂ ಬಂದಿರುವುದಿಲ್ಲ. ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ|| ಹನುಮಂತಯ್ಯನವರನ್ನು ಖುಲಾಸೆ ಮಾಡಿರುವುದಿಲ್ಲ. ಸರ್ಕಾರದವರ ಮನೋವೃತ್ತಿಯಲ್ಲಿ ಯಾವ ಬದಲಾವಣೆಯೂ ಆಗಿರುವ ಸೂಚನೆಯೇ ಇರುವುದಿಲ್ಲ. ಆದುದರಿಂದ ಕಾಂಗ್ರೆಸ್ಸು ಅತೃಪ್ತಿಯನ್ನು ಸೂಚಿಸಿ ನಿರ್ಣಯ ಮಾಡುವುದರಲ್ಲಿ ಆಶ್ಚರ್ಯವಿಲ್ಲ.

ಮೈಸೂರು ಕಾಂಗ್ರೆಸ್ಸು ಸಂಸ್ಥಾನದ ಅತ್ಯಂತ ಹಿರಿದಾದ ಮತ್ತು ಪ್ರಜಾಭಿಪ್ರಾಯವನ್ನು ಪ್ರತಿಬಿಂಬಿಸುವ ಸಂಸ್ಥೆ. ತನ್ನ ತ್ಯಾಗ ಮತ್ತು ಸೇವೆಗಳಿಂದ ಸರ್ಕಾರದ ಅಂಗೀಕಾರವನ್ನು ಸಹ ಅದು ಪಡೆದಿರುವುದು. ಅದರ ತೃಪ್ತಿ, ಸಮಾಧಾನಗಳೇ ದೇಶದ ವಿಶೇಷ ಭಾಗದ ಜನರ ತೃಪ್ತಿ, ಸಮಾಧಾನಗಳೆಂಬುದನ್ನು ಮರೆಯಲಾಗದು.

ಮುಂದೆ ಜಾರಿಗೆ ತರಲಿರುವ ಸುಧಾರಣೆಗಳ ಪೂರ್ವ ಸೂಚನೆಯು ಇಂದೇ ಆಗಬೇಕು. ಜನಾನುರಾಗವನ್ನು ಪಡೆದ ಮಂತ್ರಿಮಂಡಲವೇ ಜನಾಭಿಪ್ರಾಯಕ್ಕೆ ಅನುಗುಣವಾದ ರಾಜ್ಯಾಂಗವನ್ನು ರೂಪಿಸಬಲ್ಲುದು. ಇನ್ನು ಮುಂದಾದರೂ ಪ್ರಭುತ್ವದವರು ಹೃದಯ ಪರಿವರ್ತನೆಯನ್ನು ಮಾಡಿಕೊಂಡು ಉದಾರ ನೀತಿಯನ್ನನುಸರಿಸಿ, ಸಂಸ್ಥಾನದಲ್ಲಿ ಪ್ರಜಾ ವಿಶ್ವಾಸಪಾತ್ರವಾದ ಆಡಳಿತವನ್ನು ಸ್ಥಾಪಿಸಲು ಸಹಕಾರಿಗಳಾಗಲೆಂದು ಹಾರೈಸೋಣ.

ಚಾಮುಂಡೇಶ್ವರೀ ಟಾಕೀಸ್
28-5-47 ರಿಂದ ಪ್ರತಿ ದಿನ
೩ ಆಟಗಳು
ಶೀಘ್ರಗಳು ನಿರೀಕ್ಷಿಸುತ್ತಿದ್ದ ಚಲನ ಚಿತ್ರವು ಇಂದಿನಿಂದ ಪ್ರದರ್ಶಿಸಲ್ಪಡುತ್ತದೆ
"ರತನ್"
-:ಪಾತ್ರ:-
ಸ್ವರ್ಣಲತಾ, ಕರನ್ ದಿವಾನ್, ವಾಸ್ತಿ

Morning Shows on 31, 1st and at 10-30 a. m.
Wicked Lady

RAJKAMAL
Morning Shows from 30-5-47 for 4 days daily at 10-30 a m
Appointment with Crime

ರಾಜಕಮಲ್,
ತಾ|| ೩೦-೫-೪೭ ರಿಂದ
ಆರನೇ ವಾರ
ಪ್ರತಿ ದಿನ ೩ ಆಟಗಳು
ಕೃಷ್ಣವೇಣಿ
ರಘುರಾಮಯ್ಯ

ಸಾಧ್ವಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಶ್ರೀ
ಗಣೇಶಾ ಟಾಕೀಸ್
21-5-47 ರಿಂದ ಪ್ರತಿದಿನ 3 ಆಟಗಳು
ನೆಪ್ಚೂನ್ ಫಿಲಂಸ್‌ರವರ
ಸಿಲ್ವರ್ ಕ್ವೀನ್
-: ಪಾತ್ರ :-
ಮಾಧುರಿ ನವೀನಚಂದ್ರ

Morning Shows on 31, 1 and 2 at 10-30 a m
Sherlock Holmes in Washington
Starring:-Basil Rathbone
Nigel Bruce

Edited printed and published by A. R. Nagarajan at the Sadhvi Press D. Subbaiah Road Mysore

★ ವುಡ್ ಲ್ಯಾಂಡ್ಸ್, ಮೈಸೂರು ★

25-5-47 ರಿಂದ
ತಿಕ್ಕಿರಿದ ೪ ನೇ ವಾ
ಪ್ರತಿ ದಿನ ೩ ಆಟಗಳ
ಶನಿವಾರ ಮತ್ತು ಭಾನುವಾ
ಮ್ಯಾಟಿನಿ ಆಟ ಉಂಟು
★ ನಾವು- ಇಬ್ಬರು (ತಮಿ
-:ಪಾತ್ರ:-
ಟಿ. ಆರ್. ಮಹಾಲಿಂಗಂ, ಜಯಲಕ್ಷ್ಮಿ, ಟಿ. ಆರ್. ರಾಮಚಂದ್ರ ಮುಂತಾದವ

ಫೋ. ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೫] ಶನಿವಾರ ೩೧—೫—೪೭ [ಸಂಚಿಕೆ ೨೫೧

ವೈಸರಾಯರು ನಿನ್ನೆ ವಾಪಸು ಆಗಮಿಸಿದರು

೧೬ ರ ಯೋಜನೆಯನ್ನು ಬದಲಾಯಿಸಕೂಡದು

ಬ್ರಿಟಿಷ್ ಮಂತ್ರಿಗಳ ನಿಯೋಗದವರು ೧೬ ನೇ ತಾ|| ಹೊರಡಿಸಿದ ಯೋಜನೆಯನ್ನು ಕಾಂಗ್ರೆಸ್ಸೂ ಮತ್ತು ಬ್ರಿಟಿಷ್ ಸರಕಾರವೂ ಅಂಗೀಕರಿಸಿವೆ. ಈಗ ಬ್ರಿಟಿಷ್ ಸರಕಾರವು ಅದರಿಂದ ದೂರವಾಗಿ ಹೊಸ ಯೋಜನೆಯನ್ನು ಮುಂದಿಡಿಸಿದಲ್ಲಿ ಅದು ವಿಶ್ವಾಸಘಾತಕತನವಾಗುವುದು. ಏನೇ ಆಗಲಿ ಎಲ್ಲ ಕಡೆಯೂ ಬೆಂಕಿಯು ಸುತ್ತುಗಟ್ಟಿದರೂ ಜನರು ಗಾಬರಿಯಿಂದಲಾಗಲೀ, ಹೆದರಿಕೆಯಿಂದಲಾಗಲೀ ಓಡಿಹೋಗಬಾರದು ಎಂಬುದಾಗಿ ಮಹಾತ್ಮ ಗಾಂಧಿಯವರು ಪ್ರಾರ್ಥನಾ ಸಭೆಯಲ್ಲಿ ತಿಳಿಸಿದ್ದಾರೆ. ಶಾಂತಿ ಭಂಗಕಾರರನ್ನು ಸರ್ವವಿಧದಲ್ಲಿಯೂ ಎದುರಿಸುವುದಾಗಿ ಅವರು ಹೇಳಿದ್ದಾರೆ.

ಲಂಡನ್ನಿಗೆ ಮತ್ತೊಮ್ಮೆ ವೈಸರಾಯರ ಭೇಟಿ

ವೈಸರಾಯರು ಜೂನ್ ೩ ನೇ ತಾ|| ದಿಲ್ಲಿಯಲ್ಲಿ ನಡೆಯುವ ನಾಯಕರ ಸಮ್ಮೇಳನದಲ್ಲಿ ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ವರ್ತಿಸಲು ವಿಶೇಷ ಅಧಿಕಾರಗಳೊಡನೆ ಈ ದಿನ ಲಂಡನ್ನಿನಿಂದ [illegible] ಯುವರು. ಸಮ್ಮೇಳನವಾದ ನಂತರ ಅವರು ಪುನಃ ಲಂಡನ್ನಿಗೆ ತೆರಳಬಹುದೆಂದು ಹೇಳಲಾಗುತ್ತಿದೆ.

ಸ್ತ್ರೀಯರು ಪೋಲೀಸ್ ಹುದ್ದೆಗೆ

ರೈಲು, ರಸ್ತೆ, ಪೇಟೆ ಮತ್ತು ಇತರ ಎಲ್ಲ ಸಾರ್ವಜನಿಕ ಸ್ಥಳಗಳಲ್ಲಿ ಸ್ತ್ರೀಯರಿಗೆ ಉಂಟಾಗಬಹುದಾದ ತೊಂದರೆಗಳಿಂದ ಅವರನ್ನು ರಕ್ಷಿಸಲು ಪ್ರಾಂತ್ಯದಲ್ಲಿ ಸ್ತ್ರೀ ಪೋಲೀಸ್ ದಳವನ್ನು ನಿರ್ಮಿಸಬೇಕು-ಎಂಬುದಾಗಿ ಅಲಹಾಬಾದ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಪ್ರೊಫೆಸರಾದ ಶ್ರೀ ರುದ್ರರವರು ಸಂಯುಕ್ತ ಪ್ರಾಂತ ಸರ್ಕಾರಕ್ಕೆ ಸಲಹೆ ಇತ್ತಿರುವರೆಂದು ವರದಿಯಾಗಿದೆ.

ಪ್ರಸಿದ್ಧ ಪತ್ರಿಕೆ.

ಬಾಡಿಗೆ ಗಾಡಿಗಳನ್ನು ಇಟ್ಟಿರುವ ಸರ್ವರಿಗೂ ತಿಳಿಯಪಡಿಸುವುದೇನೆಂದರೆ:- ಮೈಸೂರು ಸಿಟಿ ಮುನಿಸಿಪಲ್ ಸರಹದ್ದಿನೊಳಗೆ ಬೀಳಬಹುದಾದ ಕಚರಾವನ್ನು ಪ್ರತಿ ದಿನವೂ ಮುನಿಸಿಪಲ್ ಸೂಯೇಜ್ ಮತ್ತು ಕಂಪೋಸ್ಟ್ ಫಾರಂಗೆ ಸಾಗಿಸಲು ಇಷ್ಟಪಡುವ ಗಾಡಿ ಮಾಲೀಕರುಗಳು ಈ [illegible] ಯಾಯ್ತು ಒಂದು ವಾರದೊಳಗೆ ಈ ಕೆ[illegible]ಗೆ ರುಜುಮಾಡಿರುವವರ ರೂಬರೂ ಕೆಲಸದ ದಿನಗಳಲ್ಲಿ ಮಧ್ಯಾಹ್ನ ೨ ಘಂಟೆಯಿಂದ ೪ ಘಂಟೆಯೊಳಗೆ ಹಾಜರಾಗಿ ತಮ್ಮ ಷರತ್ತುಗಳನ್ನು ತಿಳಿಸಿ ಮುನಿಸಿಪಾಲಿಟಿಯು ನಿಯಮಿಸಿದಂತೆ ಕೆಲಸ ಮಾಡುವುದಕ್ಕೆ [illegible] ಬಾರದಲ್ಲಿಯೂ ತಿಳುವಳಿಕೆ ಹೊಂದಿ ಒಪ್ಪಿಗೆಯಾದವರು ಸರಿಯಾದ ಮುಚ್ಚಳಿಕೆ [illegible]ದು ಕೊಟ್ಟು ಠೇವಣಿ ಮೊಬಲಗು [illegible]ವಾಗುವಂತೆ ಮುನಿಸಿಪಲ್ ಟ್ರೆಷರಿಯಲ್ಲಿ ಕಟ್ಟಿ ರಶೀತಿ ಪಡೆದು ಕೆಲಸಕ್ಕೆ ಹಾಜರಾಗಬಹುದೆಂಬದಾಗಿ ಈ ಮೂಲಕ ತಿಳಿಯಪಡಿಸಿದೆ.

ಇ. ಅನಂತರಾವ್,

ಹೆಲ್ತ್ [illegible]

ಹೊರಗಿನ ಬಂಡವಾಳಕ್ಕೆ ವಿರೋಧ

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಧಾರ

ಸ್ವಂ.ಸು.] ಬೆಂಗಳೂರು ೩೦

ಮೈಸೂರು ಸಂಸ್ಥಾನಕ್ಕೆ ಹೊರಗಿನವರ ಬಂಡವಾಳವು ಕೆಲವು ಷರತ್ತುಗಳಿಗೊಳಪಟ್ಟು ಬರಬಹುದೆಂದು ಆರ್ಥಿಕ ಸಮ್ಮೇಳನದಲ್ಲಿ ದಿವಾನರು ಸೂಚಿಸಿದುದನ್ನು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತೀವ್ರವಾಗಿ ವಿರೋಧಿಸಿ ನಿರ್ಣಯಮಾಡಿದೆ. ಪ್ರಜಾಸರ್ಕಾರವು ಮಾತ್ರ ಇದನ್ನು ನಿರ್ಧರಿಸಬಹುದೆಂದೂ, ಜವಾಬ್ದಾರಿರಹಿತವಾದ ಈಗಿನ ಮಂತ್ರಿಮಂಡಲವು ಈ ಕಾರ್ಯನೀತಿಯನ್ನು ಗೊತ್ತುಮಾಡುವುದು ಸಾಧುವಲ್ಲವೆಂದೂ ಮತ್ತು ಅದಕ್ಕೆ ಪ್ರಜೆಗಳು ಬಂಧಿತರಾಗುವುದಿಲ್ಲವೆಂದೂ ತಿಳಿಸಿದರು.

ಸಂಸ್ಥಾನಗಳಲ್ಲಿ ರೆಸಿಡೆನ್ಸಿಗಳನ್ನು ವಜಾ ಮಾಡುತ್ತಿರುವುದನ್ನು ಸ್ವಾಗತಿಸಿ ಅವರ ಬದಲು ಮಧ್ಯವರ್ತಿ ಅಧಿಕಾರಿಗಳನ್ನು ನೇಮಿಸುವುದನ್ನು ವಿರೋಧಿಸಿ, ಸಂಯುಕ್ತ ಭಾರತದಲ್ಲಿ ಸಂಸ್ಥಾನಗಳ ಸ್ಥಾನಮಾನಗಳನ್ನು ಪ್ರಜೆಗಳೇ ನಿರ್ಧರಿಸಿಕೊಳ್ಳುವಂತೆ ಆಗಬೇಕು-ಎಂಬುದಾಗಿ ಮತ್ತೊಂದು ನಿರ್ಣಯವನ್ನು ಮಾಡಿದೆ.

ಪುರಸಭಾ ಭವನದಲ್ಲಿ ಕತ್ತೆಗಳ ಮೆರವಣಿಗೆ

ಅಲಹಾಬಾದಿನ ಕತ್ತೆಗಳ ಜೀವನ ಭತ್ಯವನ್ನು ಹೆಚ್ಚಿಸುವ ಬಗ್ಗೆ ನಡೆದ ವಿನೋದ ಪ್ರಸಂಗವು ಈ ರೀತಿ ವರದಿಯಾಗಿದೆ. ಅಲ್ಲಿನ ಅಗಸರು ತಮ್ಮ ಕತ್ತೆಗಳಿಗೆ ಜೀವನ ಭತ್ಯವನ್ನು ಹೆಚ್ಚಿಸಬೇಕೆಂದು ಅನೇಕಸಲ ಅರ್ಜಿ ಸಲ್ಲಿಸಿದ್ದರೂ ಯಾವ ಪರಿಹಾರವೂ ದೊರಕಿರಲಿಲ್ಲ. ಕಳೆದ ವಾರ ಪುರಸಭೆಯ ಬಡ್ಜೆಟ್ ಅಧಿವೇಶನವು ನಡೆಯುತ್ತಿದ್ದಾಗ ಈ ಅಗಸರು ತಮ್ಮ ಕತ್ತೆಗಳೊಡನೆ ಮೆರವಣಿಗೆಯಲ್ಲಿ ಬಂದು ಪುರಸಭಾ ಭವನದ ಆವರಣದೊಳಕ್ಕೆ ೨೪ ಕತ್ತೆಗಳನ್ನು ಓಡಿಸಿದರು. ಕತ್ತೆಗಳ ಕಿರಿಚಾಟದಿಂದ ಸಭೆಯಲ್ಲಿ ಕೋಲಾಹಲ ಉಂಟಾಗಿ ಸಭೆಯನ್ನು ನಡೆಸುವುದೇ ಅಸಾಧ್ಯವಾಯಿತು. ಅಗಸರು ಹೇಳಿದ ಷರತ್ತುಗಳಿಗೆಲ್ಲಾ ಒಪ್ಪಿ ರಾಜಿಮಾಡಿಕೊಳ್ಳಲು ಪೌರಸಭೆಯವರು ನಿರ್ಧರಿಸಿ ಕತ್ತೆಗಳಿಗೆ ಹೆಚ್ಚಿನ ಭತ್ಯವನ್ನು ಮಂಜೂರ್ಮಾಡಿ ಆಯವ್ಯಯ ಪಟ್ಟಿಯಲ್ಲಿ ಸೇರಿಸಿದರು.

ಪುರಸಭಾಧಿವೇಶನವು ಮತ್ತೆ ಮುಂದುವರಿಯಿತು

ಮೈಸೂರು ೩೧

ಅಧ್ಯಕ್ಷರ ಮೇಲೆ ಅವಿಶ್ವಾಸ ಸೂಚಿಸಿ ಬಂದಿದ್ದ ನಿರ್ಣಯವನ್ನು ಪರಿಶೀಲಿಸಲು ೬-೫-೪೭ ರಲ್ಲಿ ಉಪಾಧ್ಯಕ್ಷರು ಕರೆದಿದ್ದ ಸಭೆಯ ಕಾರ್ಯಕಲಾಪಗಳನ್ನು ಅಧ್ಯಕ್ಷರು ಇನ್ನೂ ವರದಿಯ ಪುಸ್ತಕದಲ್ಲಿ ಸೇರಿಸಿಲ್ಲವಾಗಿ ಈ ದಿನ ಮಧ್ಯಾಹ್ನ ಸೇರಿದ್ದ ಪುರಸಭೆಯ ಬಡ್ಜೆಟ್ ಅಧಿವೇಶನವು ಯಾವ ಕೆಲಸವನ್ನೂ ಮಾಡದೆ ಇದೇ ೧೧ನೇ ತಾ||ಗೆ ಮುಂದುವರೆಯಿತು.

ವಿದ್ಯಾರಣ್ಯ ಸ್ಮಾರಕೋತ್ಸವ

ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ ನಾಳೆ ಶ್ರೀ ವಿದ್ಯಾರಣ್ಯರ ಸ್ಮಾರಕೋತ್ಸವವು ನಡೆಯುವುದು. ಸಂಜೆ ೬ ಘಂಟೆಗೆ ಬ್ರ|| ಶ್ರೀ|| ನವೀನಂ ವೆಂಕಟೇಶ ಶಾಸ್ತ್ರಿಗಳು ಶ್ರೀ ವಿದ್ಯಾರಣ್ಯರಿಂದಾಗಿರುವ ಲೋಕೋಪಕಾರವನ್ನು ಕುರಿತು ಉಪನ್ಯಾಸ ಮಾಡುವರು.

ಖಾದಿ ನೇಯ್ಗೆ ಶಿಕ್ಷಣ

ನಾಳಿದ್ದು ಸಾಯಂಕಾಲ ೬ ಗಂಟೆಗೆ ದೇವರಾಜ ಮೊಹಲ್ಲಾ ದಿವಾನರ ಅಗ್ರಹಾರದಲ್ಲಿರುವ [illegible] ಸದನದಲ್ಲಿ ಖದ್ದರ್ ಸೊಸೈಟಿಯ ಆಶ್ರಯದಲ್ಲಿ ಖಾದಿ ನೇಯ್ಗೆ ಕೆಲಸವನ್ನೂ ಶಿಕ್ಷಣವನ್ನೂ ಪ್ರಾರಂಭಿಸಲಾಗುವುದು.

ಮೈಸೂರು ಜಿಲ್ಲಾಬೋರ್ಡಿನ ನಾಮಕರಣ ಸದಸ್ಯರು

ಸ್ವಂ ಸು ಪ್ರೋ] ಬೆಂಗಳೂರು ೩೧

ಶ್ರೀಗಳಾದ ಎಲ್ ಬಸವರಾಜ್, ಎಸ್. ಎಂ. ಸಿದ್ದಯ್ಯ, ಡಾ|| ಜೆ. ಎಸ್. ಲೋಗೋ, ಕೌಲಂದೆಯ ಎಂ. ಜಿ. ಮಹಮದ್ ಸಾಹೇಬ್, ಎಸ್. ಸಿ. ದೇವರಾಜೇ ಅರಸ್, ಹುಚ್ಚೇಗೌಡ ಮತ್ತು ಬಸವಶೆಟ್ಟಿ ಇವರುಗಳನ್ನು ಪುನಸ್ರಚಿತವಾದ ಮೈಸೂರು ಜಿಲ್ಲಾಬೋರ್ಡಿಗೆ ಸರ್ಕಾರದವರು ನಾಮಕರಣ ಮಾಡಿದ್ದಾರೆ.

ಹಾಸನ ಜಿಲ್ಲೆಯ ಆಹಾರ ರೇಷನಿಂಗ್ ವಿಚಾರದಲ್ಲಿ ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿ, ಆಹಾರದ ಡೈರೆಕ್ಟರು ಅಲ್ಲಿಗೆ ತೆರಳಿ, ವಿವರವಾಗಿ ಎಲ್ಲಾ ಅಂಶಗಳ ಪರಿಶೀಲನೆಯನ್ನು ನಡೆಸಿ, ಜನಗಳಿಗೆ ಎಷ್ಟು ದವಸವನ್ನು ಬಿಡಬೇಕೆಂಬುದನ್ನು ನಿರ್ಧರಿಸುವರೆಂದೂ, ಅಲ್ಲಿಯವರೆಗೆ ಸರ್ಕಾರವು [illegible] ಲಾಗಿದೆ.

ಹರಿಜನರೆಲ್ಲರೂ ಕಾಂಗ್ರೆಸ್ಸಿಗೆ ಸೇರಬೇಕು

ಮದ್ರಾಸ್ ಮಂತ್ರಿಗಳಾದ ಕೂರ್ಮಯ್ಯನವರ ಹಿತೋಕ್ತಿ

ಮೈಸೂರು ೩೧

ಮದ್ರಾಸಿನ ಅಭಿವೃದ್ಧಿ ಶಾಖಾ ಸಚಿವರಾದ ಶ್ರೀ ಕೂರ್ಮಯ್ಯನವರು ನಿನ್ನೆ ಶ್ರೀ ಉದಕಮಂಡಲದಿಂದ ಇಲ್ಲಿಗೆ ಆಗಮಿಸಿ ಸರ್ಕಾರದ ಅತಿಥಿಗಳಾಗಿ ಲಲಿತಾ ನಿವಾಸದಲ್ಲಿ ಬಿಡಾರ ಮಾಡಿದ್ದಾರೆ. ಅವರು ಈ ದಿನ ಬೆಳಗ್ಗೆ ಹರಿಜನಕೇರಿಗೆ ಭೇಟಿ ಇತ್ತರು. ಮಧ್ಯಾಹ್ನ ೧೧-೪೫ ಕ್ಕೆ ಕಾಂಗ್ರೆಸ್ ಕಛೇರಿಗೆ ಆಗಮಿಸಿ ಕೆಲಸಗಾರರೊಡನೆ ಸಂಭಾಷಣೆ ನಡೆಸಿದರು. ಮಂತ್ರಿಗಳು ಮಾತನಾಡಿ ಹರಿಜನರ ಅಭಿವೃದ್ಧಿಯು ಕಾಂಗ್ರೆಸ್ಸಿನಿಂದಲೇ ಸಾಧ್ಯವೆಂದು ಹೇಳಿದರು. ಪ್ರತ್ಯೇಕ ಚುನಾವಣೆಯು ಹೆಸರೇ ಇಲ್ಲದಂತಾಗಿ ಹೋಗುವುದೆಂದರು. ಎಲ್ಲಾ ಹರಿಜನರೂ ಕಾಂಗ್ರೆಸ್ಸಿಗೆ ಸೇರಬೇಕೆಂದು ಬೋಧಿಸಿದರು. ಕಾರ್ಯದರ್ಶಿಗಳಾದ ಶ್ರೀ ಟಿ. ನರಸಿಂಹಯ್ಯಂಗಾರ್ಯರು ವಂದನೆಗಳನ್ನರ್ಪಿಸಿದರು. ಮಂತ್ರಿಗಳು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಚನ್ನಯ್ಯನವರ ಆತಿಥ್ಯವನ್ನು ಸ್ವೀಕರಿಸಿ ಮಧ್ಯಾಹ್ನ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ವೈಸರಾಯರ ಆಗಮನ

ವೈಸರಾಯರಾದ ಲಾರ್ಡ್ ಮೌಂಟ್ ಬ್ಯಾಟನ್ನರು ಪತ್ನೀ ಸಮೇತರಾಗಿ ನಿನ್ನೆ ಬೆಳಗ್ಗೆ ಲಂಡನ್ನಿನಿಂದ ಕರಾಚಿಗೆ ಆಗಮಿಸಿ, ನಿನ್ನೆ ರಾತ್ರಿ ದೆಹಲಿಯನ್ನು ತಲುಪಿದರು. ಅವರು ಸೋಮವಾರಕ್ಕಿಂತ ಮುಂಚಿತವಾಗಿ ಹಲವು ಪ್ರಮುಖ ನಾಯಕರೊಡನೆ ಪೂರ್ವಭಾವಿ ಮಾತುಕತೆ ನಡೆಸುವರೆಂದು ಹೇಳಲಾಗಿದೆ.

ರೇಡಿಯೋ ಮೂಲಕ ಮದುವೆ

ಅಮೆರಿಕದ ಯುವತಿಯೊಬ್ಬಳೊಡನೆ ಸೈಗಾನಿನ ಸಿಪಾಯಿಯೊಬ್ಬನ ಮದುವೆಯನ್ನು ಫೆಡರಲ್ ಕಮ್ಯೂನಿಕೇಷನ್ ಕಮಿಷನ್ನಿನವರು ರೇಡಿಯೋ ಮೂಲಕ ನೆರವೇರಿಸಿದುದಾಗಿ ವರದಿಯಾಗಿದೆ.

ಸೌದೆ ಅಭಾವದ ಬಗ್ಗೆ ನಿಲುವಳಿ ಸೂಚನೆ

ಪ್ರತಿನಿಧಿ ಸಭೆಯಲ್ಲಿ ಇಂದಿನ ಕಾರ್ಯಕಲಾಪ

ಸ್ವಂ.ಸು.ಪ್ರೋ] ಬೆಂಗಳೂರು ೩೧

ಪ್ರಜಾಪ್ರತಿನಿಧಿ ಸಭೆಯು ಇಂದು ಡಾ|| ರಾಮಯ್ಯರವರ ಅಧ್ಯಕ್ಷತೆಯಲ್ಲಿ ಆರಂಭವಾದ ಕೂಡಲೇ ಕಾ|| ಪಕ್ಷದ ಉಪನಾಯಕರಾದ ಶ್ರೀ|| ಟಿ. ಎಸ್. ಗುಪ್ತರವರು ಹಕ್ಕು ಬಾಧ್ಯತಾ ಪ್ರಶ್ನೆಯೊಂದನ್ನು ಎತ್ತಿ ನಿನ್ನೆ ತಾವು ಶೂನ್ಯವೇಳೆಯಾದ ಕಾಲದಲ್ಲಿ ಹಾಸ್ಯ ಅಡಚಣಾ ವಿಧಾನವನ್ನು ಅನುಸರಿಸಿದುದಾಗಿ ಅಧ್ಯಕ್ಷರು ಭಾವಿಸಿದರೆಂದು ಪತ್ರಿಕೆಯೊಂದರಲ್ಲಿ ವರದಿಯಾಗಿದೆ. ಅಧಿಕಾರಿ ವರದಿಯಲ್ಲಿ ಇಂಗ್ಲೀಷಿನಲ್ಲಿ ನಮೂದಾಗಿದ್ದರೆ ಅದನ್ನು ಕಡತದಿಂದ ತೆಗೆಯಬೇಕೆಂದೂ, ಇದು ಹಕ್ಕು ಬಾಧ್ಯತೆಯ ಪ್ರಶ್ನೆಯೆಂದೂ ಹೇಳಿದರು. ಶ್ರೀ|| ಪೂಣಚ್ಚನವರು ಅದನ್ನು ಸಮರ್ಥಿಸಿದರು. ಅಧ್ಯಕ್ಷರು ತಮ್ಮ ನಿರ್ಣಯವನ್ನು ತಿಳಿಸುವುದಾಗಿ ಹೇಳಿದರು.

ಬೆಂಗಳೂರು ನಗರ[illegible] ಬಿಲ್ಲು ಮತ್ತು ಸೌದೆ ಅಭಾವವನ್ನು ಪರಿಶೀಲಿಸಲು ಶ್ರೀ|| [illegible] ಜನಗಳು [illegible] ಬಾಧಪಡುತ್ತಿರುವ [illegible]

ಸಾಧ್ವಿ

ತಾ|| ೩೧-೫-೪೭ ಶನಿವಾರ

ಮಹಾತ್ಮರ ಉದ್ಗಾರ

ಜೂನ್ ಎರಡನೇ ತಾರೀಖು ವೈಸರಾಯರ ಹೊಸ ಘೋಷಣೆಯಾಗುವ ಸಂದರ್ಭದಲ್ಲಿ ಗಲಭೆಗಳಾಗಬಹುದೆಂಬ ವಿಚಾರವಾಗಿ ಮಹಾತ್ಮ ಗಾಂಧಿಯವರು ದೇಶದ ಜನರಿಗೆ ಮುನ್ನೆಚ್ಚರಿಕೆಯನ್ನಿತ್ತಿದ್ದಾರೆ. ಬ್ರಿಟಿಷ್ ಸರ್ಕಾರದ ಘೋಷಣೆಯು ಏನೇ ಇರಲಿ, ಅದರಿಂದ ಯಾರೂ ಉದ್ರೇಕಗೊಳ್ಳಬಾರದೆಂದು ತಿಳಿಸಿದ್ದಾರೆ. ಭಾರತದ ಭವಿಷ್ಯವನ್ನು ನಿರ್ಧರಿಸುವವರು ಭಾರತೀಯರೇ ಹೊರತು ಬ್ರಿಟಿಷರಲ್ಲವೆಂಬ ದೃಢ ವಿಶ್ವಾಸವನ್ನು ಪಡೆಯ ಬೇಕೆಂದು ಸೂಚಿಸಿದ್ದಾರೆ.

ಇಷ್ಟಾದರೂ ಸಹ ಆ ದಿನ ಗಲಭೆಗಳು ನಡೆಯಬಹುದೆಂಬ ಶಂಕೆಯು ಜನಾಬ್ಜಿನ್ನಾರವರಿಗೂ ಅಧಿಕಾರಿಗಳಿಗೂ ಮತ್ತು ಪ್ರಮುಖರುಗಳಿಗೂ ಇರುವಂತಿದೆ. ಅದನ್ನು ತಡೆಗಟ್ಟಲು ವಿಶೇಷ ಸೈನ್ಯ ಸಿದ್ಧತೆಗಳೂ ಸಹ ಆಗುತ್ತಿವೆ. ಬಂಗಾಳಾ ಗೌರ್ನರರು ಇದನ್ನು ಬಹಿರಂಗವಾಗಿಯೇ ತಿಳಿಯಪಡಿಸಿರುತ್ತಾರೆ. ಪಂಜಾಬಿನಲ್ಲಿಯೂ ಸಹ ತಕ್ಕ ಬಂದೋಬಸ್ತುಗಳು ನಡೆದಿರುತ್ತವೆ.

ಮಹಾತ್ಮರು ಹಿಂದೂಗಳಿಗೆ ವಿಶೇಷವಾದ ಮನವಿಯೊಂದನ್ನು ಮಾಡಿಕೊಂಡಿದ್ದಾರೆ. ಮುಸಲ್ಮಾನರೆಲ್ಲರೂ ತಮ್ಮ ರಕ್ತ ಬಂಧುಗಳೆಂದೂ, ಅವರನ್ನು ಕೊಂದರೆ ತಮ್ಮನ್ನು ಕೊಂದಂತೆಯೇ ಎಂದೂ ಮಹಾತ್ಮರು ಹೇಳಿ ಕಳಕಳಿಯಿಂದ ವಾದಗಳಿಂದ ವರ್ತಿಸಬೇಕೆಂದು ಕೋರಿದ್ದಾರೆ. ದೇಶದಲ್ಲಿ ಇನ್ನೊಂದು ಅನರ್ಥ ಪರಂಪರೆಗಳು ಸಂಭವಿಸಿ ಇಡೀ ರಾಷ್ಟ್ರವನ್ನೇ ಸಹ ಇಬ್ಭಾಗ ಮಾಡುವ ಪ್ರಯತ್ನದಲ್ಲಿ ಮುಸ್ಲಿಂ ಲೀಗಿನವರು ತೊಡಗಿರುವಾಗಲೂ ಮಹಾತ್ಮರ ಬಾಯಿಂದ ಬಂದಿರುವ ಈ ಉದ್ಗಾರಗಳು ಅವರ ಮಹಿಮೆಯನ್ನು ಸಾರುತ್ತಿವೆ. ಹಿಂಸೆಯಿಂದ ಹಿಂಸೆಯನ್ನು ನಿವಾರಿಸಲು ಸಾಧ್ಯವಿಲ್ಲವೆಂಬುದೇ ಮಹಾತ್ಮರ ಅಭಿಮತ. ಕಳೆದ ಮಹಾ ಯುದ್ಧವೂ ಸಹ ಇದನ್ನೇ ಸ್ಪಷ್ಟ ಪಡಿಸಿರುತ್ತದೆ. ದೇಶದಲ್ಲಿ ಇಂದು ವ್ಯಾಪಿಸಿರುವ ಕೋಮುವಾರು ವ್ಯಾಧಿಯನ್ನು ನಿವಾರಿಸಲು ಹಿಂಸೆಯಿಂದ ಸಾಧ್ಯವಿಲ್ಲವೆಂಬುದು ಮಹಾತ್ಮರ ದೃಢ ವಿಶ್ವಾಸ. ಶತ್ರುಗಳನ್ನೂ ಸಹ ಸೋದರರಂತೆ ಭಾವಿಸುವುದು ಉತ್ತಮ ಪುರುಷರ ಲಕ್ಷಣ. ಇದರಿಂದ ತಾತ್ಕಾಲಿಕವಾಗಿ ತೊಂದರೆಯು ಕಂಡು ಬಂದರೂ ಪರಿಣಾಮದಲ್ಲಿ ಒಳ್ಳೆಯದೇ ಆಗುವುದು. ಆದ್ದರಿಂದ ಸರ್ವ ಕಾಲದಲ್ಲಿಯೂ ಮಹಾತ್ಮರ ಹಿತವಚನದಂತೆ ಭಾರತೀಯರೆಲ್ಲರೂ ನಡೆಯುವುದೇ ಶ್ರೇಯಸ್ಕರವಾಗಿರುತ್ತದೆ.

ಸೂಕ್ಷ್ಮ ಚಂದ್ರಗ್ರಹಣ

ಆಸ್ಥಾನ ಮಹಾವಿದ್ವಾನ್ ಶ್ರೀ ಸಂಪತ್ ಕೃಷ್ಣ ಜೋಯಿಸರು ಈ ರೀತಿ ಬರೆಯುತ್ತಾರೆ:—

ಜೂನ್ ೩ ನೇ ತಾ|| ಮಂಗಳವಾರ ರಾತ್ರಿ ೧೨ ಘಂಟೆ ೨೭ ನಿಮಿಷಕ್ಕೆ ಸೂಕ್ಷ್ಮ ಚಂದ್ರಗ್ರಹಣವು ಸ್ಪರ್ಶವಾಗಿ ೧ ಘಂಟೆ ೪ ನಿಮಿಷಕ್ಕೆ ಮೋಕ್ಷವಾಗುವುದು. ರಾತ್ರಿ ೧೨ ಘಂ ೮ ಮೇಲೆ ತರ್ಪಣಾದಿಗಳನ್ನು ಪ್ರಾರಂಭಿಸಿ ೧ ೪ ರೊಳಗೆ ಮುಗಿಸಬೇಕು. ಮಧ್ಯಾಹ್ನ ೩-೨೭ ರೊಳಗೆ ಭೋಜನವನ್ನು ಮಾಡಬಹುದು. ಜ್ಯೇಷ್ಠಾ ನಕ್ಷತ್ರ ಮತ್ತು ವೃಶ್ಚಿಕ ರಾಶಿಯವರು ಶಾಂತಿಯನ್ನು ಮಾಡಿಕೊಳ್ಳುವುದು ಶ್ರೇಯಸ್ಕರ.

ಗಾಂಧೀಜಿಯವರಿಗೆ ಬ್ರಿ|| ಕಂಪೆನಿಯ ಹೊಸ ಗಡಿಯಾರ

೨೫ ವರ್ಷಗಳಿಂದ ಅವಿಚ್ಛಿನ್ನವಾಗಿ ಸೇವೆ ಸಲ್ಲಿಸಿದ ಮಹಾತ್ಮ ಗಾಂಧಿಯವರ ಗಡಿಯಾರವು ಕಳೆದು ಹೋದುದನ್ನು ಕೇಳಿ ಬ್ರಿಟನ್ನಿನ ಕಂಪೆನಿಯೊಂದು ಗಾಂಧೀಜಿಯವರಿಗೆ ಹೊಸ ಗಡಿಯಾರವನ್ನು ಕಳುಹಿಸಿಕೊಟ್ಟಿದೆ. ಕಳೆದು ಹೋದ ಗಡಿಯಾರದಂತೆಯೇ ಇದೂ ಸಹ ಶ್ರದ್ಧೆಯಿಂದ ದೀರ್ಘ ಕಾಲ ಮಹಾತ್ಮರ ಸೇವೆಯನ್ನು ಸಲ್ಲಿಸಲೆಂದು ಸಂಸ್ಥೆಯು ಹಾರೈಸಿದೆ.

ಗಂಟೆಗೆ ೬೭೦ ಮೈ[ಲು] ಹೋಗುವ ವಿಮಾ[ನ]

[ಲಂಡನ್]

ಜರ್ಮನ್ ಮಾದರಿಯ ರಾಕೆಟ್ ವಿಮಾನವೊಂದು ಗಂಟೆಗೆ ೬೭೦ ವೇಗದಿಂದ ಹಾರಿ ಪ್ರಪಂಚದ ರೆಕಾರ್ಡ್ ಸ್ಥಾಪಿಸಿದೆ. ಇದು ಬ್ರಿಟಿಷರು ಸ್ಥಾಪಿಸಿದ್ದ ಪ್ರಪಂಚದ ರೆಕಾರ್ಡನ್ನು ಮುಂದು ಕ್ಕಿಂತ ೪೦ ಮೈಲಿ ಹೆಚ್ಚು ವೇಗ [ದಲ್ಲಿ] ಹೋಗುವುದು.

ಶ್ರೀ ಗಣೇಶಾ ಟಾಕೀಸ್

31-5-47 ರಿಂದ ಪ್ರತಿದಿನ 3 ಆಟಗಳು

ನೆಪ್ಚ್ಯೂನ್ ಫಿಲಂಸ್‌ರವರ

ಸಿಲ್ವರ್ ಕ್ವೀನ್

-: ಪಾತ್ರ :-

ಮಾಧುರಿ ನವೀನಚಂದ್ರ

Morning Shows on 31, 1 and 2 at 10-30 a m

Sherlock Holmes in Washington

Starring:-Basil Rathbone Nigel Bruce.

ರಾಜಕಮಲ್

ತಾ|| ೩೦-೫-೪೭ ರಿಂದ

ಆರನೇ ವಾರ

ಪ್ರತಿ ದಿನ ೩ ಆಟಗ[ಳು]

ಕೃಷ್ಣವೇಣಿ ರಘುರಾಮಯ್ಯ

ಚಾಮುಂಡೇಶ್ವರೀ ಟಾಕೀಸ್

28-5-47 ರಿಂದ ಪ್ರತಿ ದಿನ ೩ ಆಟಗಳು

ನೀವುಗಳು ನಿರೀಕ್ಷಿಸುತ್ತಿದ್ದ ಚಲನ ಚಿತ್ರವು ಇಂದಿನಿಂದ ಪ್ರದರ್ಶಿಸಲ್ಪಡುತ್ತದೆ

"ರತನ್"

-: ಪಾತ್ರ :-

ಸ್ವರ್ಣಲತಾ, ಕರನ್‌ದಿವಾನ್, ವಾಸ್ತಿ

Mornig Shows on 31, 1st 2nd at 10-30 a m.

Wicked Lady

RAJKAMAL

Morning Shows from 30-5-47 for 4 ... days at 10-30 a m

Appointment with Crime

ಪ್ರತಿ ನಿತ್ಯ ...

ಅಪೆರಾ ಟಾಕೀಸ್, ಮೈಸೂರು

೩೧-೫-೪೭ ರಿಂದ ೭ ನೇ ವಾರ

ರಾಜಕುಮಾರಿ

(ತಮಿಳು)

ನಿಮಗೆ ಬೇಕಾಗಬಹುದಾದ ಅಥವಾ ನೀವು ಮಾರಬಹುದಾದ ಚಿನ್ನ, ಬೆಳ್ಳಿ ಮತ್ತು ಕಲ್ಲಿನ ಆಭರಣಗಳಿಗೆ

—: ನಮ್ಮಲ್ಲಿ ವಿಚಾರಿಸಿ. :—

. ಕೆ ಎಸ್. ಶ್ರೀಕಂಠ ಶೆಟ್ಟಿ, ಪ್ರೊಪ್ರೈಟರ್.

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,

ಅಶೋಕ ರಸ್ತೆ, ಮೈಸೂರು.

ಸ್ಥಾಪಿತ ೧೯೩೦. : : ಫೋನ್

ವುಡ್‌ಲ್ಯಾಂಡ್ಸ್, ಮೈಸೂರು

1-6-47 ರಿಂ[ದ]

ತಿಕ್ಕಿರಿದ ೫ ನೇ ವಾ[ರ]

ಪ್ರತಿ ದಿನ ೩ ಆಟಗ[ಳು]

ಶನಿವಾರ ಮತ್ತು ಭಾನು[ವಾರ] ಮ್ಯಾಟಿನಿ ಆಟ ಉಂಟು

ನಾವು ಇಬ್ಬರು

(ಕನ್ನಡ)

-: ಪಾತ್ರ :-

ಟಿ ಆರ್ ಮಹಾಲಿಂಗ[ಂ] ಜಯಲಕ್ಷ್ಮಿ, ಟಿ ಆರ್ ರಾಮಚಂದ್ರ ಮುಂತಾದ[ವರು]

Edited printed and published by A. R. Nagarajan at the Sadhvi Press D. Subbaiah Road. Mysore